KARNATAKA STATE ARCHIVES

KARNATAKA
STATE
ARCHIVES

KARNATAKA
STATE
ARCHIVES

KARNATAKA
STATE
ARCHIVES

KARNATAKA
STATE
ARCHIVES

ARS 34 APP 82

NAVAYUGA KANNADA WEEKLY

FROM 15-2-1951

Contd. from ROLL No 142

ARS 34 APP 82

NAVAYUGA KANNADA WEEKLY

FROM 15-2-1951

Contd. from ROLL No 142

ARS 34 APP 82

NAVAYUGA KANNADA
WEEKLY

FROM 15-2-1951 Contd. from
ROLL No 142

ARS 34 APP 82

NAVAYUGA KANNADA
WEEKLY

FROM 15-2-1951 Contd. from
ROLL No 142

Roll No
143

Roll No.
143

Roll No.
143

ವಾರದ ಭವಿಷ್ಯ

ತಾರೀಕು 8-2-51 ರಿಂದ | ತಾರೀಕು 14-2-51 ರವರೆಗೆ

ಮೇಷ—ಇಂದಿನ ಗ್ರಹಸ್ಥಿತಿಯು ಅತ್ಯುತ್ತಮವಾಗಿರುವದು. ಯಾವ ಉದ್ಯೋಗವನ್ನು ಕೈಕೊಂಡರೂ ವಿಜಯವು ನಿಮ್ಮದಾಗಿ ಕಟ್ಟುಬಿಟ್ಟ ಗಂಟನಂತಿರುವುದು. ಸಂಪದ್ಭಾಗವು ಅತ್ಯುತ್ಕೃಷ್ಟ ಸ್ಥಿತಿಗೆ ಬರಲಿದೆ. ರಾಜಕೀಯ ಕ್ಷೇತ್ರದಲ್ಲಿ ಕೀರ್ತಿಯೂ ಸಮಾಜದಲ್ಲಿ ಮಾನಮನ್ನಣೆಗಳೂ ಲಭಿಸುವವು. ಮಿತ್ರವರ್ಗದವರಿಂದ ನಾನಾ ತರದ ಸಹಾಯವು ಲಭಿಸುವದು. ಶತ್ರು ಜನರು ಹೇಳಹೆಸರಿಲ್ಲದಂತಾಗುವರು. ದೇಹಾರೋಗ್ಯ ಗೃಹಸುಖ ಮನೋಸೌಖ್ಯದಿಗಳಿಗೆ ಯಾವ ತೆರನಾದ ಭಂಗವೂ ಕಾಣಿಸಲೊಲ್ಲದು. ತಾ. 8, 11, 15, 13 ಈ ದಿನಗಳಲ್ಲಿ ನಾನಾ ವಿಧ ಲಾಭಭೋಗ ಸುಖಗಳು ಲಭಿಸುವವು.

ವೃಷಭ—ಕಳೆದ ವಾರಕ್ಕಿಂತ ಈ ವಾರವು ಕೊಂಚ ಉತ್ತಮವಿರುವದು. ಕೆಲವೊಂದು ಕಾರ್ಯಗಳಲ್ಲಾದರೂ ನೀವು ವಿಜಯವನ್ನು ಹೊಂದಲಿರುವಿರಿ. ಆದರೂ ನಿಮ್ಮ ಹಣದ ಬಿಕ್ಕಟ್ಟು ಕಡಿಮೆಯಾಗಲೊಲ್ಲದು. ಆತ್ಮೀಯರ ವಿಯೋಗವುಂಟಾಗಲಿದೆ. ಮಿತಭಾಷಿಗಳಾಗಿದ್ದಷ್ಟೂ ಒಳ್ಳಿತು. ಕಾರಣ ನಿಷ್ಕಾರಣವಾಗಿ ಜನರೊಡನೆ ಕಲಹವಾಗುವ ಯೋಗವಿದೆ. ಪ್ರವಾಸದ ನಿಮಿತ್ತ ಹೆಚ್ಚಿನ ಧನವ್ಯಯವಾಗಲಿದೆ. ಮಾತ್ರವಲ್ಲ ನಿಮ್ಮವರೇ ನಿಮಗೆ ವಿರೋಧಿಗಳಂತೆ ವರ್ತಿಸಲಿರುವುದರಿಂದ ತಾ. 11, 12, 13 ಈ ದಿನಗಳನ್ನು ಬಹಳ ಜಾಗರೂಕತೆಯಿಂದ ಕಳೆಯಬೇಕಾಗುವದು.

ಮಿಥುನ—ಗ್ರಹಬಲವು ಸಂತೃಪ್ತಿಕರವಿರುವದು. ನಿಶ್ಶಕ್ತರಾಗಳಾದ ನೀವು ಕೈಗೊಂಡ ಹಲವಾರು ಕಾರ್ಯಗಳು ಕೊನೆಗೊಂಡಲಿವೆ. ನೌಕರಿ ವ್ಯಾಪಾರ ಮೊದಲಾದ ಉದ್ಯಮಗಳಲ್ಲಿ ಒಳ್ಳೆಯ ಪ್ರತಿಫಲ ದೊರೆವುದು. ಆದರೆ ದೇಹಾರೋಗ್ಯದ ಮಟ್ಟಿಗೆ ಈ ವಾರವು ಬಹಳ ಪ್ರತಿಕೂಲವಿದೆ. ಲೇವಾದೇವಿ ನಿಮಿತ್ತವಾಗಿ ಕೋರ್ಟಿಗೆ ಹೋಗುವ ಪ್ರಸಂಗ ಒದಗಬಹುದು. ಆರ್ಥಿಕ ಮುಗ್ಗಟ್ಟಿನಿಂದ ಮುಕ್ತರಾದ ನಿಮಗೆ ವಾರದ ಆದ್ಯಂತ ದಿನಗಳು ಕೊಂಚ ಪ್ರತಿಕೂಲವಾಗಿ ಕಾಣಬಹುದು.

ಕರ್ಕಟಕ—ಬೇರೆ ಹಂಗಿಲ್ಲದೆ ಕಾರ್ಯ ಸಾಧಿಸುವ ಶಕ್ತಿ ನಿಮಗಿದ್ದರೂ ಈ ವಾರದಲ್ಲಿ ಅನೇಕ ಕಷ್ಟನಷ್ಟಗಳಿಗೆ ಸಿಲುಕಲಿರುವಿರಿ. ವಿವೇಕದ ದೌರ್ಬಲ್ಯದಿಂದಾಗಿ ಹಲವರೊಡನೆ ಜಗಳವಾದೀತು. ಈಪ್ಸಿತ ವಸ್ತುಗಳು ಕಾಲದಲ್ಲಿ ಲಭಿಸದಿರುವುದರಿಂದ ಮಾನಸಿಕ ಚಿಂತೆ ಹೆಚ್ಚುವದು. ಶತ್ರುಜನರ ಹಾವಳಿಯಿಂದ ಧನಮಾನಗಳಿಗೆ ಅನಿರೀಕ್ಷಿತ ಪ್ರಯಾಣ, ದೇಹಾಲಸ್ಯ ಇತ್ಯಾದಿ ಅನಿಷ್ಟಗಳು ಕಾಣಿಸಬಹುದು. ಆದರೂ ವಾರಾಂತ್ಯದ 3 ದಿನಗಳಲ್ಲಿ ಗೃಹಸುಖ ಸ್ತ್ರೀಧನಪ್ರಾಪ್ತಿ ಮಿತ್ರರ ಬೆಂಬಲದಿಂದಾಗಿ ವಿಜಯವನ್ನೂ ಹೊಂದಲಿರುವಿರಿ.

ಸಿಂಹ—ಸದುದ್ಯೋಗದಲ್ಲಿ ತೊಡಗಿ ಕಳೆದ ವಾರ ಪ್ರಯತ್ನಕ್ಕೆ ಬೇಕಾದ ಫಲಲಭಿಸಲಿದೆ. ನೌಕರ ಜನರು ಭಡತಿಯನ್ನು ಹೊಂದಲಿರುವರು. ಸಮಾಜದಲ್ಲಿ ಒಳ್ಳೆ ಮಾನಮನ್ನಣೆಗಳು ಲಭಿಸುವವು. ಆದರೆ ಸ್ತ್ರೀಯರಿಂದಾಗಿ ಕಲಹ ಜನಾಪವಾದವನ್ನು ಕೇಳುವ ಯೋಗವಿದೆ. ಅರ್ಧಾಂಗಿಯೊಂದಲೂ ಕೂಡ ನಿತ್ಯ ಕಲಹವಾಗಬಹುದು. ನೀವೆಷ್ಟೇ ದುಡಿದರೂ ಕೂಡ ದಿನಾಂತ್ಯದಲ್ಲಿ ರಿಕ್ತ ಹಸ್ತರಾಗುವಿರಿ. ವಾರದ ಆದ್ಯಂತ ದಿನಗಳು ಇತರ ದಿನಗಳಿಗಿಂತ ಉತ್ತಮವಿವೆ.

ಕನ್ಯಾ—ಗ್ರಹಚಾರವು ಪ್ರಬಲವಾಗಿ ಕಾಡುತ್ತಿದೆ. ದೇಹಾಲಸ್ಯದ ದೆಸೆಯಿಂದಾಗಿ ಹಿಡಿದ ಕಾರ್ಯವನ್ನು ಮಧ್ಯದಲ್ಲಿ ಕೈಬಿಡುವ ಪ್ರಸಂಗ ಬರಲಿದೆ. ಆಂತರಿಕ ಶತ್ರುಗಳ ಭಯವಧಿಕವಾಗುವದು. ಹೆಂಡತಿ ಮಕ್ಕಳೂ ಕೂಡ ಪ್ರತಿಕೂಲವಾಗಿ ವರ್ತಿಸಲಿರುವರು. ಗೃಹಕಲಹಗಳು ದಿನೇ ದಿನೇ ಹೆಚ್ಚಲಿವೆ. ವ್ಯಾಪಾರದಲ್ಲಿ ನಷ್ಟವಾದೀತು. ಶ್ರಮಜೀವಿಗಳಿಗೂ ನೌಕರಿ ವರ್ಗದವರಿಗೂ ಯತ್ನಕ್ಕೆ ತಕ್ಕ ಫಲ ದೊರೆಯದು. ವಾರಾದಿಯ 3 ದಿನಗಳು ಕೊಂಚ ಉತ್ತಮವಿರುವವು.

ತುಲಾ—ನಿಸರ್ಗಕಾರಕ ಶುಭರಾದ ಗುರು ಬುಧ, ಶುಕ್ರರು ನಿಮ್ಮ ಮೇಲೆ ಕೃಪಾದೃಷ್ಟಿಯನ್ನು ಬೀರಿರುವುದರಿಂದ ಈ ವಾರವು ನಿಮಗೆ ಹೆಚ್ಚಿನ ಶುಭದಾಯಿಯಾಗಿ ಪರಿಣಮಿಸಲಿದೆ. ಹಳೆಯ ವರೆ ಕಷ್ಟಗಳ ಕಾಟದಿಂದಾಗಿ ಆಗಾಗ ರೋಗಬಾಧೆಗಳು ಪ್ರಾಪ್ತವಾಗುವವಾದರೂ ದೈವಾನುಗ್ರಹದಿಂದ ನೀವು ಪಾರಾಗುವಿರಿ. ಆರ್ಥಿಕ ಪರಿಸ್ಥಿತಿಯು ಉತ್ತಮ ಮಟ್ಟಕ್ಕೆ ಬರುವದು. ಸಂಸಾರದಲ್ಲಿ ಕಾಹಿಲೆ ಕಸಾಲೆಗಳು ಕಾಣಿಸಬಹುದು. ಬಂಧುಮಿತ್ರರ ನೆರವು ಚೆನ್ನಾಗಿರತಕ್ಕ ನಿಮಗೆ ತಾ. 9ರಿಂದ 13ರವರೆಗೂ ಧನಪ್ರಾಪ್ತಿ ವಿಜಯ ಸುಖಗಳು ಲಭಿಸುವವು.

ವೃಶ್ಚಿಕ—ಬಲವಾಗಿ ಬೇರೂರಿರುವ ನಿಮ್ಮ ಮನೋರೋಗವು ದಿನದಿನಕ್ಕೂ ಪ್ರಬಲವಾಗುತ್ತಾ ಬರುವದು. ಬಂಧುಜನರು ನಿಷ್ಕಾರಣವಾಗಿ ಕಲಹಪ್ರಿಯರಾಗುವರು. ಕುಜನರ ಮೈತ್ರಿಯು ನಿಮ್ಮ ಕೀರ್ತಿಗೆ ಕಳಂಕ ತರಲಿದೆ. ರಾಜಕೀಯ ಕ್ಷೇತ್ರದಲ್ಲಿ ಪರಾಭವ ಹೊಂದುವ ಯೋಗವಿದೆ. ಉತ್ಪತ್ತಿಗಿಂತ ವ್ಯಯವು ಅಧಿಕವಾಗುವುದರಿಂದ ಆರ್ಥಿಕ ಮುಗ್ಗಟ್ಟಿನಿಂದ ಬಳಲುವಿರಿ. ವಿದ್ಯಾರ್ಥಿಗಳಿಗೆ ಕಾಲವು ಪ್ರತಿಕೂಲವಾಗಿದೆ. ಶ್ರಮಜೀವಿಗಳಿಗೂ ವೈದ್ಯ ವ್ಯಾಪಾರಿಗಳಿಗೂ ಕಾಲವು ಉತ್ತಮವಾಗಿರುವದು. ವಾರಾಂತ್ಯದ 3 ದಿನಗಳು ಇಷ್ಟಾರ್ಥಗಳನ್ನು ಪೂರೈಸಲು ಸಮರ್ಥವಾಗಿವೆ.

ಧನು—ಕಷ್ಟಪರಂಪರೆಗಳಲ್ಲಿ ಸಿಲುಕಿ ಕಂಗಾಲಾದ ನಿಮಗೆ ಒಂದಿನಿತು ಆಲಂಬನ ದೊರೆತಂತಾಗಿದೆ. ಅಭೀಷ್ಟದಂತೆ ಕಾರ್ಯವು ನೆರವೇರುವುದು. ಬಂಧುಮಿತ್ರರ ಸಹಕಾರ ಬಲದಿಂದಾಗಿ ಶತ್ರುಗಳನ್ನು ಜಯಿಸುವಿರಿ. ಗೃಹಸುಖವು ಉತ್ತಮವಿದೆ. ಖರ್ಚುಗಳು ಹಲವಾರಿದ್ದರೂ ಅವನ್ನು ಸುಧಾರಿಸುವಷ್ಟರ ಉತ್ಪತ್ತಿಯು ನಿಮಗಿರುವದು. ಕೆಲವು ನಿಮ್ಮ ಮನಸ್ಸು ಕಡಿವಾಣವಿಲ್ಲದ ಕುದುರೆಯಂತೆ ವಿಹರಿಸೀತು. ವಾತದೋಷದಿಂದ ಆರೋಗ್ಯಕ್ಕೆ ಸ್ವಲ್ಪ ಧಕ್ಕೆಯಿದೆ. ವಾರದ ಆದ್ಯಂತ ದಿನಗಳು ಸುಖಲಾಭವಿಜಯದಾಯಿಗಳು.

ಮಕರ—ಪಿತ್ತೋಷ್ಣಗಳ ಆಧಿಕ್ಯದಿಂದಾಗಿ ನಿಮ್ಮ ಆರೋಗ್ಯಕ್ಕೆ ಹಾನಿಯಿದೆ. ಹೆಚ್ಚಿನ ಕಾಲವನ್ನು ಮಾರ್ಗಕ್ರಮಣದಲ್ಲಿ ಕಳೆಯಬೇಕಾಗುವುದು. ನಿಸ್ಪೃಹ ಭಾಗಿಗಳಾದ ನಿಮಗೆ ಹೆಚ್ಚಿನವರೊಡನೆ ಕಲಹವಾಗುವದು. ಸಾಂಸಾರಿಕ ತಾಪತ್ರಯಗಳು ದಿನೇ ದಿನೇ ಹೆಚ್ಚುತ್ತಾ ಬರುವವು. ಆದಾಯಕ್ಕಿಂತ ದ್ವಿಗುಣವಾಗಿ ಖರ್ಚಾಗುವದರಿಂದ ಹಣದ ಬಿಕ್ಕಟ್ಟಿನ ದೆಸೆಯಿಂದಾಗಿ ಸಾಲಮಾಡಬೇಕಾಗುವದು. ಕುಟುಂಬಿಕರ ಬೆಂಬಲವುಳ್ಳ ನಿಮಗೆ ತಾ. 9, 10 ಈ ದಿನಗಳಲ್ಲಿ ನಿಮ್ಮ ಮನೋರಥಗಳು ಈಡೇರಲಿರುವವು.

ಕುಂಭ—"ಜೀವತ್ಯರ್ಥದರಿದ್ರೋಪಿ ಧೀದರಿದ್ರೋ ನ ಜೀವತಿ" ಹಣದ ದಾರಿದ್ರ್ಯವನ್ನು ಹೊಂದಿದವನೊಂದು ವೇಳೆ ಜೀವಿಸ್ಯಾನು, ಬುದ್ಧಿ ದರಿದ್ರನು ಜೀವಿಸಲಾರನೆಂದು ಹಿರಿಯರೆಂದಿರುವರು. ಸದ್ಯ ನಿಮ್ಮಲ್ಲಿ ಇವೆರಡರ ದಾರಿದ್ರ್ಯವೂ ಇರುವುದರಿಂದ ದಿನಯಾಪನೆಯು ಅತೀವ ಕಷ್ಟವಾದೀತು. ಅಷ್ಟೇ ಪ್ರೇಮ ವಿರಹ, ಶತ್ರುಜನರ ಉಪಟಳ, ಹಣದ ಅಭಾವ, ಗೃಹ ತಾಪತ್ರಯ ಇತ್ಯಾದಿ ಅನಿಷ್ಟ ಪರಂಪರೆಗಳು ನಿಮ್ಮನ್ನು ಕಾಡಲಿವೆಯಾದರೂ ತಾ. 8, 12, 13 ಅಷ್ಟೊಂದು ಅನಿಷ್ಟಕಾರಿಗಳಾಗಲಾರವು.

ಮೀನ—ಇದಿನ ಗ್ರಹಸ್ಥಿತಿಯು ತೀರಾ ಕೆಳಮಟ್ಟದ್ದಾಗಿರುವದು. ಮಿತಭಾಷಿಯಾಗಿದ್ದರೂ ಕೂಡ ಕಲಹ ನಿಷ್ಠುರಗಳು ತಪ್ಪಲಾರವು. ದೈಹಿಕ ಮಾನಸಿಕ ಸುಖಶಾಂತಿಗಳಿಂದ ಮುಕ್ತರಾದ ನಿಮಗೆ ಸ್ವಪ್ನದಲ್ಲೂ ಸುಖವು ದುರ್ಲಭವೆಂದರೆ ತಪ್ಪಾಗದು. ಆಪ್ತೇಷ್ಟವರ್ಗದವರೇ ನಿಮ್ಮನ್ನು ವಂಚಿಸಲಿರುವರು. ಅನಿರೀಕ್ಷಿತವಾದ ಪ್ರವಾಸದಿಂದ ಕಷ್ಟನಷ್ಟಾದಿಗಳನ್ನು ಹೊಂದುವಿರಿ. ಯಾವ ಭಾಗದಲ್ಲೂ ಶ್ರೇಯಸ್ಸು ಕಾಣಸಿಗದು. ತಾ. 9, 10, 14, ಇವು ಹೆಚ್ಚಿನ ಅಪಾಯಕಾರಿಗಳು.

ಟೈಪು ರೀ ಕ್ಯಾಸ್ಟಿಂಗ್ ಛಾರ್ಜನ್ನು ಅರ್ಧಕ್ಕಿಂತ
ಹೆಚ್ಚಾಗಿ ಉಳಿಸಿಕೊಳ್ಳಿ

ಆಧುನಿಕ ಯಂತ್ರ ಸಾಧನಗಳಿಂದ ಸುಸಜ್ಜಿತವಾದ
ಮೈಸೂರು ಟೈಪು ಫೌಂಡರಿಯಲ್ಲಿ ಪ್ರಿಂಟಿಂಗ್ ಟೈಪುಗಳನ್ನು (ಕನ್ನಡ) ರೀಕ್ಯಾಸ್ಟ್ ಮಾಡಿಸುವುದರಿಂದ
ವಿಪರೀತ ಉಳಿತಾಯವಾಗುತ್ತದೆ

ಸಾವಿರ ಪೌಂಡು ಮತ್ತು ಹೆಚ್ಚಿಗೆ	ಐನೂರು ಪೌಂಡು ಮತ್ತು ಹೆಚ್ಚಿಗೆ
ಪೌಂಡಿಗೆ 0—10—0	ಪೌಂಡಿಗೆ 0—12—0

ಸೇಲ್ಸ್ ಟ್ಯಾಕ್ಸ್, ಪ್ಯಾಕಿಂಗ್ ಮತ್ತು ಫಾರ್ವರ್ಡಿಂಗ್ ಛಾರ್ಜು ಮುಫತ್ತು

ಇಂದೇ ವಿವರಗಳಿಗೆ ಬರೆಯಿರಿ: ಮ್ಯಾನೇಜರ್,
ಮೈಸೂರು ಟೈಪು ಫೌಂಡರಿ,
ಬೆಂಗಳೂರು-2

ಕೆಲವೇ ಪ್ರತಿಗಳು ಉಳಿದಿವೆ! ತ್ವರೆ ಮಾಡಿರಿ!
ಮನೆಯೊಂದಾದಲ್ಲಿ ಇರಲೇಬೇಕಾದ ಪುಸ್ತಕ
"ಮನೆ-ಮದ್ದು"
ಬರೆದವರು:- ಡಾಕ್ಟರ್ ಕೋಡ್ಗಲ್ ವೆಂಕಟರಾಯರು, ಎಲ್ ಐ ಎಮ್., ಉಡುಪಿ.
ಸುಮಾರು 200 ಕಾಯಿಲೆಗಳಿಗೆ ... 1000 ಸುಲಭ ಮನೆ-ಮದ್ದುಗಳು!
ಮಕ್ಕಳ ಮತ್ತು ಹೆಂಗಸರ ಕಾಯಿಲೆಗಳ ಚಿಕಿತ್ಸೆ, ಶಿಶು ಸಂರಕ್ಷಣೆ,
ಗರ್ಭಿಣಿ, ಬಾಣಂತಿಯರ ಚಿಕಿತ್ಸೆ, ಇತರರ ಸಾಮಾನ್ಯ ಎಲ್ಲಾ ಕಾಯಿಲೆಗಳಿಗೆ
ಸುಲಭ ಚಿಕಿತ್ಸೆಗಳನ್ನು ರೋಗಗಳ ಕಾರಣ, ಲಕ್ಷಣ, ಶುಶ್ರೂಷೆ, ಪಥ್ಯಾಪಥ್ಯ
ವಿಚಾರ ಸಹಿತ ಸರಳವಾಗಿ ವಿವರಿಸಿರುವ ಪುಸ್ತಕ. ಮನೆಯ ಕ್ರಮವನ್ನು ವಿಸ್ತಾರವಾಗಿ
ವಿವರಿಸಿದೆ. ಮದ್ರಾಸು ಸರಕಾರದಿಂದಲೇ ಮೊದಲಾದ ಕಡೆಗಳಿಂದ ಬಹುಮಾನ
ಪಡೆದ ಪುಸ್ತಕ. ಇದುವರೆಗೆ ಕನ್ನಡದಲ್ಲಿ ಇಂತಹ ಪುಸ್ತಕ ಪ್ರಕಟವಾಗಿಲ್ಲ.
ಒಂದು ಪ್ರತಿ ನಿಮ್ಮ ಬಳಿ ಇದ್ದರೆ ಒಬ್ಬ ಡಾಕ್ಟರ್ ಇದ್ದಂತೆಯೆ ಸರಿ.
ಇಂದೇ ನಿಮ್ಮ ಪ್ರತಿಗಳಿಗೆ ಬರೆಯಿರಿ: ಬೆಲೆ ರೂ. 2—0—0.
ವಿ. ಪಿ. ದ್ವಾರ 2—6—0.
ಪ್ರತಿಗಳು ನಿಮ್ಮೂರ ಪುಸ್ತಕ ವ್ಯಾಪಾರಿಗಳಲ್ಲಿ ಸಿಗದಿದ್ದರೆ,
ನವಭಾರತ ಪುಸ್ತಕ ಭಂಡಾರ, ಉಡುಪಿ ಇವರಿಗೆ ಬರೆಯಿರಿ.

— ಮಕ್ಕಳನ್ನು ಹಡೆಯುವುದು ಸಾಕು —
ಅಶಕ್ತ ಸ್ತ್ರೀಯರಿಗೆ **ಬರ್ಥ ಕಂಟ್ರೋಲ** ರೋಗಗ್ರಸ್ತ ಹೆಣ್ಣು ಮಕ್ಕಳಿಗೆ
ಏಳು ದಿವಸ ಈ ಮಾತ್ರೆಗಳನ್ನು ಸೇವನ ಮಾಡಿದರೆ ಮುಂದೆ ಖಂಡಿತವಾಗಿ ಮಕ್ಕಳಾಗುವದಿಲ್ಲ ಸ್ತ್ರೀಯರು ಪ್ರತಿತಿಂಗಳು ಸರಿಯಾಗಿ ಮುಟ್ಟಾಗುತ್ತಾರೆ. ಅಲ್ಲದೆ ಸ್ತ್ರೀಯರ ಬಿಳೇರಗು, ಪ್ರದರರೋಗ, ಹೊಲಿಕುಟ್ಟು ಗುಣವಾಗಿ ಸ್ತ್ರೀಯು ಗರ್ಭಿಣಿಯಾಗುವದಿಲ್ಲ. ಈ ಔಷಧವನ್ನು ಸೇವಿಸುವ ಕ್ರಮ: ಪ್ರತಿದಿವಸ ಮುಂಜಾನೆ ಗುಳಿಗೆ ಮಧ್ಯಾಹ್ನಕ್ಕೆ ಗುಳಿಗೆ, ಸಂಜೆಗೆ ಗುಳಿಗೆಯಂತೆ ಊಟದ ಮೊದಲು ತಕ್ಕೊಳ್ಳಬೇಕು. ಏಳುದಿವಸ ಈ ಔಷಧವನ್ನು ಬಿಸಿನೀರಿನಲ್ಲಿ ಸೇವಿಸಬೇಕು.
ಪಥ್ಯ:—ಹರಿವೆಪಲ್ಲೆ ಬಿಡಬೇಕು. 7 ದಿವಸ ಸಂಪೂರ್ಣ ಔಷಧದ ಕಿಮ್ಮತ್ತು ರೂಪಾಯಿ 5—0—0 ಪೋಸ್ಟ ಚಾರ್ಜು ಬೇರೆ.
ಮಾಲಕರು:—ಬಾಲಪ್ಪಾ ಫಕೀರಪ್ಪಾ, ದಾವಣಗೇರಿ
ಆಯುರ್ವೇದ ಔಷಧಾಲಯ ಗದಗ-ಸಿಟಿ.
ಏಜಂಟರು:—ಹುಬ್ಬಳ್ಳಿ ಧಾರವಾಡ—ಹುಬ್ಬಳ್ಳಿ, ಗದಗ, ಬಾಗಲಕೋಟೆ ಧಾರವಾಡ ನಿಜಾಮರ—ಬಾವಪ್ಪ ಇಚ್ಛಲಿಂಗಪ್ಪ ಇಂದರವಾಣಿಕರ ಬಿಜಾಪುರ ನಂಜುಂಡೇಶ್ವರ ಮೂರ್ತಿ ದಾವಣಗೇರಿ
ದಾವಣಗೇರಿ:—ದಾವಣಗೇರಿ ಪ್ರೆಸ್ ಬಿ ಎಲ್ ಕವಲಿಬಾಯಿ, ಕೆಮಿಸ್ಟ, ಹಾವೇರಿ, ಬ್ಯಾಡಗಿ

Edited, Printed & Published By K. H Shetty At The Navayuga Press, Udipi, S.India

Regd. No. M. 3618

LICENCE No. 31
Licensed to Post without Prepayment

Estd 1921 ಸ್ಥಾಪನೆ
31ನೇ ವರ್ಷ

15—2—1951

Founder: **Sri A. B. Shetty,**
Minister for Agriculture & Veterinary.

ವರ್ಷ ೩೧
ವಾರ ೨೩

NAVAYUGA
WEEKLY

POST BOX NO. 22
UDIPI, S. K.

Vol. 31
No. 23

'ನಾವು ಬಡವರು' ಎಂದಾಗ ಬಹುಮಂದಿ ತಮ್ಮ ಸ್ಥಿತಿಗತಿಯನ್ನು ಹೊಂದಿಕೊಂಡು 'ನಿಜ'ವೆನ್ನುತ್ತಾರೆ. ಬಡತನ ದಾರಿದ್ರ್ಯಗಳಿಗೆ ತವರಾದ ಭಾರತ ದೇಶದಲ್ಲಿ ಈ ಸಾಲಿಗೆ ಸೇರುವ ಜನಸಂಖ್ಯೆ ಅಪರಿಮಿತವಾಗಿದೆ. ಒಂದಲ್ಲ ಒಂದು ರೀತಿಯಿಂದ ಜನ ಅಸುಖಿಗಳಾಗಿದ್ದಾರೆ. ಜೀವನ ನಿರ್ವಹಣ ಅಸಾಧ್ಯವೆಂದು ನಾವು ಲೆಕ್ಕಹಾಕುವದಾದರೆ ಅದು ಬಡತನದಿಂದಲೇ. ಮನೆಯ ಶಾಂತಿಯನ್ನು ಕಾಯ್ದುಕೊಳ್ಳಲಾಗದ ಜನ ಲೋಕದ ಶಾಂತಿಯನ್ನು ಕಾಯ್ದುಕೊಳ್ಳುವದಾದರೂ ಹೇಗೆ? ಇತರ ದೇಶಗಳನ್ನವಲೋಕಿಸಿದರೆ ನಮ್ಮ ಜೀವನ ಎಷ್ಟು ನಿಕೃಷ್ಟ ಎಂಬುದರ ಅರಿವಾಗದೆಯಿರದು. ಕೃಷಿಯೇ ಮುಖ್ಯ ಉದ್ಯಮವಾಗಿರಬೇಕಾದ ಹಿಂದೂಸ್ಥಾನದಲ್ಲಿ ಅದಿನ್ನೂ ಕುಂಠಿತವಾಗಿರುತ್ತದೆ. ತಮ್ಮ ಕುಲಕಸುಬನ್ನು ಮರೆತು ಪೇಟೆಯ ವಿಲಾಸಜೀವನದ ಚಪಲವನ್ನಿಟ್ಟುಕೊಂಡವರೇ ಬಹಳಮಂದಿ. ಶಕ್ತಿಮೀರಿ ವಿದ್ಯೆಯನ್ನು ಮುಂದುವರಿಸುವ ದೇಶದ ತರುಣರು ಉಚ್ಚಾಧಿಕಾರದ ಹಂಬಲಿಗರಾಗಿದ್ದಾರೆ, ಎಲ್ಲರೂ ಒಂದೇ ಕಸಬಿಗೆ ಮುಗಿಬೀಳುವ ಅತಿಯಾಸೆಯ ಫಲವಾಗಿ ನಿರುದ್ಯೋಗದ ಭೂತ ಪರ್ವತಾಕಾರದಂತೆ ಬೆಳೆದು ನಮ್ಮ ಮುಂದೆ ನಿಂತಿದೆ. ಉದ್ಯೋಗಿಕರಂಗದಲ್ಲಿ ಸಾಕಷ್ಟು ಪ್ರಗತಿಯಿಲ್ಲದೆ ಈ ತರುಣರ ವಿದ್ಯೆಯು ಸಫಲತೆಯಾಗುವದಾದರೂ ಹೇಗೆ? ವಿಪುಲವಾಗಿ ಬೆಳೆಯುತ್ತಿರುವ ಜನಸಂಖ್ಯೆಯೊಡನೆ ಬಡತನವೂ ಜೊತೆಗೆ ಬೆಳೆಯುತ್ತಲಿದೆ. ಅನೇಕ ರೀತಿಯ ಉದ್ಯಮಗಳ ಉತ್ಕರ್ಷತೆಯ ವಿನಹ ಈ ಸಮಸ್ಯೆ ಬಗೆಹರಿಯುವಂತಿಲ್ಲ.

ಜೀವನನಿರ್ವಹಣಕ್ಕೆ ಅನ್ನ ಬಟ್ಟೆಗಳೇ ಪ್ರಾಮುಖ್ಯವಾಗಲಾರವು. ಅನುಕೂಲ ಪರಿಸ್ಥಿತಿಗಳೇ ಸಹಕಾರಿಗಳಾಗಲಾರವು. ಸಂಪತ್ತಿದ್ದರೆ ಮೋಜಿನ ಜೀವನ ನಡೆಸುವದು ಕಷ್ಟವೇನಲ್ಲ. ಇದ್ದ ಮೂಲವನ್ನು ಕರಗಿಸುವದರಲ್ಲಿ ವಿಶೇಷ ಬುದ್ಧಿ ಕುಶಲತೆ ಅವಶ್ಯವಿಲ್ಲ. ಜೀವನವೆಂದರೇನು? ಸುಖವಾಗಿ ತಾನು ತನ್ನ ಸಂಸಾರವನ್ನು ಸಾಗಿಸಿಕೊಂಡು ಹೋಗುವುದೇ? ಕೈತುಂಬ ಹಣಸಿಕ್ಕುವಂತಿದ್ದರೆ ಯಾರಿಗೆ ಬದುಕು ಮಾಡಲು ಸಾಧ್ಯವಿಲ್ಲ?

ದೇಶದ ಬಹುಪಕ್ಷ ಜನ ಅನುಕೂಲ ಪರಿಸ್ಥಿತಿಯಿಲ್ಲದೆ ಬಡತನವನ್ನಪ್ಪಿಕೊಂಡರೆ ಸಾಮೂಹಿಕವಾಗಿ ಇಡಿಯ ರಾಷ್ಟ್ರದ ಜನಾಂಗ ಇನ್ನೊಂದು ರೀತಿಯ ಬಡವರಾಗಿದ್ದಾರೆ. ಅಗರ್ಭ ಶ್ರೀಮಂತರೂ, ಮಾಲಿಕರೂ, ರಾಜರುಗಳೂ, "ನಾವು ದೊಡ್ಡವರು—ಬಡವರಲ್ಲ" ಎನಬಹುದು. ಆದರೆ ಅವರನ್ನೂ ಸೇರಿಸಿಕೊಂಡು 'ನಾವು ಬಡವರು' ಎಂದಿದೇನೆ. ಅಂದರೆ ನಾವು ಅಳೆಯುತ್ತಿರುವ ಮಾನದಂಡ ತಿಳಿವಿನ ಹಾಗೂ ಆತ್ಮಿಕ ಶಕ್ತಿಯನ್ನಳೆಯುವಂತಹದು.

ನಮ್ಮ ತಿಳಿವಿನ ಮಟ್ಟ ಬಹಳ ಸಂಕುಚಿತವಾದುದು ಗಾಳಿಗೊಡ್ಡಿದ ಸೊಡರಿನಂತೆ ಸ್ಥಿರವಲ್ಲ. ಯಾವುದೇ ಧ್ಯೇಯಗಳು ಈ ಚಂಚಲ ಮನೋವೃತ್ತಿಯಿಂದ ಗುರಿಮುಟ್ಟದೆ ಮಣ್ಣು ಮುಕ್ಕುತ್ತಲಿವೆ. ಇಷ್ಟವನ್ನು ಪಡೆಯುವ ಹಂಬಲಿಗರು ನಾವಾಗಿದ್ದೇವೆ. ಕಷ್ಟವನ್ನು ಎದುರಿಸುವ ಕೆಚ್ಚು ನಮ್ಮಲ್ಲಿಲ್ಲ. ಬಾಯಿಯಲ್ಲಿ ಆದರ್ಶವನ್ನು ಹೇಳಬಲ್ಲೆವು; ಕೆಲವೇಳೆ ತೋರಿಸಬಲ್ಲೆವು. ಆದರೆ ಕಾರ್ಯತಃ ಮಾಡಿತೋರಿಸಲಾರೆವು. ಮಾತಿಗೂ ಕೃತಿಗೂ ಸರಿದೂಗದ ನಡತೆಗಳೇ ಬಹಳವಾಗಿವೆ. ಮಾತು ಹೃದಯವನ್ನು ವಂಚಿಸಿ ಮಾನಸಿಕ ದಿವಾಳಿತನವನ್ನು ತೆಗೆದಿದೆ. ನಾಲಗೆ ಸಡಿಲಾದ ಹಾಗೆ ಆತ್ಮಿಕ ಶಕ್ತಿಯ ಬಡತನ ಹೆಚ್ಚುತ್ತದೆ.

ಗಾಂಧೀಜೀ ತೋರಿಸಿದ ದಾರಿ ಜಗತ್ತಿಗೆ ಆದರ್ಶವಾದರೂ—ನಮ್ಮನ್ನು ಪಾರತಂತ್ರ್ಯದಿಂದ ಪಾರುಮಾಡಿತಾದರೂ—ಅವರ ತತ್ವವನ್ನನುಸರಿಸುವ ಸಹನಶೀಲ ಮನೋವೃತ್ತಿ ಇಂದು ನಮಗಿಲ್ಲ. ಭಾರತ ವಿಭೂತಿಪುರುಷರ—ಶಾಂತಿಪ್ರಿಯರ ತವರೂರು. ಬದುಕಿನಾದರ್ಶವನ್ನು ಸಾರುವಂತಹ ತತ್ವಬೋಧನೆಗಳು ನಮ್ಮಲ್ಲಿವೆ. ನಮ್ಮ ಹಿಂದಿನವರ ಬುದ್ಧಿಮತ್ತೆಯನ್ನು ಸೂಚಿಸುವ ಮೈಲುಗಲ್ಲುಗಳಿವೆ. ಆದರೆ ನಾವು ಅದನ್ನೆಲ್ಲ ಮರೆತು ಕೇವಲ ಬಾಯಿಚಪಲವನ್ನು ತೀರಿಸಿಕೊಳ್ಳುವದರಲ್ಲಿ ಕಾಲಹರಣಮಾಡುತ್ತಲಿದ್ದೇವೆ. ಪಾಶ್ಚಾತ್ಯರ ರಾಜನೀತಿಯನ್ನು ಖಂಡಿಸುವಲ್ಲಿ ಹಿಂದುಮುಂದೆ ನೋಡವುದಿಲ್ಲ ಆದರೆ ಅವರ ಶಿಸ್ತು ಸಂಘಟನೆಗಳನ್ನು ನಾವು ವಿವೇಚಿಸುವುದಿಲ್ಲ. ಇನ್ನೊಬ್ಬರ ಮೇಲೆ ತಪ್ಪು ಹೊರಿಸುವುದರಲ್ಲೂ, [illegible] ಟೀಕೆ ಮಾಡುವದರಲ್ಲೂ, ಹಾಗೆಯೇ [illegible]ದರಲ್ಲೂ, ನಾವು ಬಹಳ ಬುದ್ಧಿವಂತರು. ಹಾಗೆಯೇ ಉತ್ತಮ ಗುಣಗಳನ್ನು ಹೇಳುವುದಕ್ಕೂ, ಯಥಾರ್ಥವಾದುದನ್ನು ಹೇಳುವದಕ್ಕೂ ಬುದ್ಧಿಶೂನ್ಯರು; ಅತ್ಯಂತ ಬಡವರು. ಪರಗುಣ ಗ್ರಹಿಸುವಷ್ಟು ಹೃದಯಶುದ್ಧತೆ ನಮಗಿಲ್ಲ. ಪರನಿಂದೆ ಅವಹೇಳನೆ ಮಾಡುವವರಲ್ಲೇ ಪಾಂಡಿತ್ಯ ಪ್ರದರ್ಶನವಾಗುತ್ತದೆ! ಕೆಟ್ಟಗುಣವನ್ನಷ್ಟೇ ಎತ್ತಿತೋರಿಸುವ ಪಕ್ಷದಲ್ಲಿ ಯಾರೂ ಪರಿಪೂರ್ಣನಾಗಿ ತೋರಲಾರ! ಉತ್ತಮವಾದ ಕೆಲವು ಗುಣಗಳನ್ನಾದರೂ ಎತ್ತಿಹಿಡಿಯುವ ವಿಶಾಲ ಮನಸ್ಸು ನಮ್ಮದಾಗಿರಬೇಕು. ಅಂದರೇನೇ ನಾವು ಸರಿಯಾದ ಮಾರ್ಗದರ್ಶನ ಮಾಡಿದಂತಾಗುತ್ತದೆ. ಆದರಿಂದು ನಾವು ಕಾಣುತ್ತಿರುವದು ಮನೋದೌರ್ಬಲ್ಯವನ್ನೇ ವಿಶಾಲ ಮನಸ್ಸಿನ ಬಡತನವನ್ನೇ.

'ಬಡತನವೆ ಧನವೆನಗೆ ಕೊಡಲಾಪೆ ವೇಂ ನಿನಗೆ ಕಂಬನಿಗಳೆಂದುಗೆ ಚಾಚುವೆನು ನಿನ್ನಡಿಗೆ'. ಎಂದು ಹಾಡಿದ್ದಾನೆ. ಶ್ರೀಮಂತಿಕೆ ಸಾಮರ್ಥ್ಯದಿಂದ ಸುಖವಾಗಿರಬಹುದಾದ ರಾಷ್ಟ್ರಗಳು ಬುದ್ಧಿ ಸಂಪನ್ನವೂ ಆಗಿದ್ದರೆ ಜಗತ್ತು ಯುದ್ಧಕಾರ್ಮೋಡಗಳಿಂದ ತಪಿಸಬೇಕಾದ ಪ್ರಸಂಗ ಬರುತ್ತಿರಲಿಲ್ಲ. ಅಂದರೆ ಇಲ್ಲಿಯೂ 'ಬುದ್ಧಿಯ ಬಡತನ'ವಿದೆ.

ಬುದ್ಧಿಶಾಲಿಗಳಿಂದ ತುಂಬಿದ ದೇಶ ಜಗತ್ತಿನ ಪ್ರಬಲರಾಷ್ಟ್ರವಾಗಬಲ್ಲುದು. ತನ್ನ ದೇಶದಲ್ಲಿ ಶಾಂತಿಯನ್ನು ಕಾಯ್ದುಕೊಳ್ಳಬಲ್ಲುದು.

ಸತ್ಯ ಅಹಿಂಸೆಗಳಿಂದ ರಾಷ್ಟ್ರವನ್ನು ಆಳುವ ಧ್ಯೇಯವಾದಿಗಳು ನಾವು- ನಾವು ಸ್ವಾತಂತ್ರ್ಯಗಳಿಸಿದ್ದು 'ಅಹಿಂಸೆ'ಯಿಂದಲೇ ಆದರೆ ಇಂದು ಸರಕಾರ [illegible]ದಲ್ಲಿ ಅರುವತ್ತುಪಾಲು ಸೈನ್ಯಕ್ಕಾಗಿ ಬಳಸುತ್ತಲಿವೆ ಧ್ಯೇಯ ಸಾಂಕೇತಿಕವಾಗಿ ಉಳಿದಿದೆ ಪರಸ್ಪರ ಒಳಗೆ ಅನ್ಯೋನ್ಯಸ್ವಭಾವ[illegible]ವಿದ್ದರೆ ಈ ಪರಿಸ್ಥಿತಿಯೊದಗುತ್ತಿರಲಿಲ್ಲ. ತಪ್ಪುಗ್ರಹಿಕೆ, ಜಾತೀಯಭಾವನೆಗಳೆಲ್ಲ ಶಕ್ತಿಹಿರಿಯುವಂತೆ ಮಾಡಿವೆ. ಉತ್ತಮ ಆದರ್ಶಗಳಿಂದ ಭಾರತದೇಶದ ಕೀರ್ತಿಯನ್ನು ಜಗತ್ತಿಗೆ ಸಾರಿದ ಅಶೋಕ, ಬುದ್ಧ, ರಾಮಕೃಷ್ಣ ಪರಮಹಂಸ, ವಿವೇಕಾನಂದ, ಮಹಾತ್ಮಾ ಗಾಂಧೀ ಮೊದಲಾದವರ ತತ್ವಗಳಿಂದು ಕೇವಲ 'ಬಾಯಿಬಲ'ಗಳಾಗಿವೆ. ಹೃದಯಿಕವಾಗಿಯಾಗಲೀ— ಕಾಯಕರೂಪದಲ್ಲಾಗಲೀ ಅದರ ಆಚರಣೆ ನಡೆಯು

"ಬೇರೆ ಶಾಸ್ತ್ರಗಳನ್ನೋದಿದರೇನು? ಗೀತೆಯನ್ನು ಚೆನ್ನಾಗಿ ಓದಬೇಕು"—(ವರಾಹ ಪುರಾಣ)

ಗೀತೆಯ ಕೈಗನ್ನಡಿ

(ಭಗವದ್ಗೀತೆಯ ಮೂಲ ಶ್ಲೋಕ ಮತ್ತು ಕನ್ನಡ ಅನುವಾದ)

● ಅನುವಾದಕರು—ದಿ| ಹೊಸಕೆರೆ ಚಿದಂಬರಯ್ಯನವರು ●

ಈ ಗ್ರಂಥದಲ್ಲಿ ಗೀತೆಯ ಮೂಲವೆಲ್ಲ ಇರುವುದಲ್ಲದೆ ಮೂಲದಲ್ಲಿ ಸಹಜವಾಗಿ ಕಾಣಬರುವ ಅರ್ಥವೂ ಮಾತುಗಾರಿಕೆಯು ಮಾತುಗಳ ರೂಪದಲ್ಲೇ ಭಟ್ಟಿಯಾಗಿ ಎದ್ದು ಕಾಣುವುದು.

400ಕ್ಕೂ ಮಿಕ್ಕ ಪುಟಗಳು! ಬೆಲೆ 0—12—0.

ಒಂದು ರೂಪಾಯಿಯನ್ನು ಕಳುಹಿಸಿದರೆ ಒಂದು ಪ್ರತಿಯನ್ನು ಬುಕ್‌ಪೋಸ್ಟಿನಿಂದ ಕಳಿಸಲಾಗುವುದು.

ಪ್ರತಿಗಳು ಸಿಗುವ ಮುಖ್ಯ ಸ್ಥಳ—

ನವಯುಗ ಪ್ರೆಸ್, ಉಡುಪಿ ದ. ಕನ್ನಡ

ಪ್ರಸಿದ್ಧ ಪುಸ್ತಕ ವ್ಯಾಪಾರಿಗಳಲ್ಲೆಲ್ಲ ದೊರೆಯುತ್ತದೆ.

ವಾರದ ಭವಿಷ್ಯ

ತಾರೀಕು 8-2-51 ರಿಂದ — ತಾರೀಕು 14-2-51 ರವರೆಗೆ

ಮೇಷ—ಇಂದಿನ ಗ್ರಹಸ್ಥಿತಿಯು ಅತ್ಯುತ್ತಮವಾಗಿರುವದು. ಯಾವ ಉದ್ಯೋಗವನ್ನು ಕೈಕೊಂಡರೂ ವಿಜಯವು ನಿಮ್ಮ ಪಾಲಿಗೆ ಕಟ್ಟಿಟ್ಟ ಗಂಟಿನಂತಿರುವುದು. ಸಂಪದ್ಭಾಗವು ಅತ್ಯುತ್ತಮ ಸ್ಥಿತಿಗೆ ಬರಲಿದೆ. ರಾಜಕೀಯ ಕ್ಷೇತ್ರದಲ್ಲಿ ಕೀರ್ತಿಯೂ ಸಮಾಜದಲ್ಲಿ ಮಾನಸನ್ಮಾನಗಳೂ ಲಭಿಸುವವು. ಮಿತ್ರವರ್ಗದವರಿಂದ ನಾನಾ ತರದ ಸಹಾಯವು ಲಭಿಸುವದು. ಶತ್ರು ಜನರು ಹೇಳಹೆಸರಿಲ್ಲದಂತಾಗುವರು. ದೇಹಾರೋಗ್ಯ ಗೃಹಸುಖ ಮನೋನೆಮ್ಮದಿಗಳಿಗೆ ಯಾವ ತೆರನಾದ ಭಂಗವೂ ಕಾಣಿಸಲಾರದು. ತಾ. 8, 11, 15, 13 ಈ ದಿನಗಳಲ್ಲಿ ನಾನಾ ವಿಧ ಲಾಭಭೋಗ ಸುಖಗಳು ಲಭಿಸುವವು

ವೃಷಭ—ಕಳೆದ ವಾರಕ್ಕಿಂತ ಈ ವಾರವು ಕೊಂಚ ಉತ್ತಮವಿರುವದು, ಕೆಲವೊಂದು ಕಾರ್ಯಗಳಲ್ಲಾದರೂ ನೀವು ವಿಜಯವನ್ನು ಹೊಂದಲಿರುವಿರಿ. ಆದರೂ ನಿಮ್ಮ ಹಣದ ಬಿಕ್ಕಟ್ಟು ಕಡಿಮೆಯಾಗಲೊಲ್ಲದು. ಆತ್ಮೀಯರ ವಿಯೋಗವುಂಟಾಗಲಿದೆ. ಮಿತಭಾಷಿಗಳಾಗಿದ್ದಷ್ಟೂ ಒಳ್ಳಿತು. ಕಾರಣ ನಿಷ್ಕಾರಣವಾಗಿ ಜನರೊಡನೆ ಕಲಹವಾಗುವ ಯೋಗವಿದೆ. ಪ್ರವಾಸದ ನಿಮಿತ್ತ ಹೆಚ್ಚಿನ ಧನವ್ಯಯವಾಗಲಿದೆ. ಮಿತ್ರರಲ್ಲ ನಿಮ್ಮವರೇ ನಿಮಗೆ ವಿರೋಧಿಗಳಂತೆ ವರ್ತಿಸಲಿರುವುದರಿಂದ ತಾ. 11, 12, 13 ಈ ದಿನಗಳನ್ನು ಬಹಳ ಜಾಗರೂಕತೆಯಿಂದ ಕಳೆಯಬೇಕಾಗುವದು.

ಮಿಥುನ—ಗ್ರಹಬಲವು ಸಂತೋಷತೃಪ್ತಿಕರವಿರುವದು. ನಿಶ್ಚಿತ್ತಗಳಾದ ನೀವು ಕೈಗೊಂಡ ಹಲವಾರು ಕಾರ್ಯಗಳು ಕೊನೆಗೊಳ್ಳಲಿವೆ. ನೌಕರಿ ವ್ಯಾಪಾರ ಮೊದಲಾದ ಉದ್ಯಮಗಳಲ್ಲಿ ಒಳ್ಳೆಯ ಪ್ರತಿಫಲ ದೊರೆವುದು. ಆದರೆ ದೇಹಾರೋಗ್ಯದ ಮಟ್ಟಿಗೆ ಈ ವಾರವು ಬಹಳ ಪ್ರತಿಕೂಲವಿದೆ. ಲೇವಾದೇವಿ ನಿಮಿತ್ತವಾಗಿ ಕೋರ್ಟಿಗೆ ಹೋಗುವ ಪ್ರಸಂಗ ಒದಗಬಹುದು. ಆರ್ಥಿಕ ಮುಗ್ಗಟ್ಟಿನಿಂದ ಮುಕ್ತರಾದ ನಿಮಗೆ ವಾರದ ಆದ್ಯಂತ ದಿನಗಳು ಕೊಂಚ ಪ್ರತಿಕೂಲವಾಗಿ ಕಾಣಬಹುದು.

ಕರ್ಕಟ—ಘೋರ ಹೆಂಗಿಲ್ಲದೆ ಕಾರ್ಯ ಸಾಧಿಸುವ ಶಕ್ತಿ ನಿಮಗಿದ್ದರೂ ಈ ವಾರದಲ್ಲಿ ಅನೇಕ ಕಷ್ಟನಷ್ಟಗಳಿಗೆ ಸಿಲುಕಲಿರುವಿರಿ. ವಿವೇಕದ ದೌರ್ಬಲ್ಯದಿಂದಾಗಿ ಹಲವರೊಡನೆ ಜಗಳವಾದೀತು. ಈಪ್ಸಿತ ವಸ್ತುಗಳು ಕಾಲದಲ್ಲಿ ಲಭಿಸದಿರುವುದರಿಂದ ಮಾನಸಿಕ ಚಿಂತೆ ಹೆಚ್ಚುವದು ಶತ್ರುಜನರ ಹಾವಳಿಯಿಂದ ಧನಮಾನಗಳಿಗೆರಡಕ್ಕೂ ಅನಿರೀಕ್ಷಿತ ಪ್ರಮಾಣ ದೇಹಾಲಸ್ಯ ಇತ್ಯಾದಿ ಅನಿಷ್ಟಗಳು ಕಾಣಿಸಬಹುದು. ಆದರೂ ವಾರಾಂತ್ಯದ 3 ದಿನಗಳಲ್ಲಿ ಗೃಹಸುಖ ಸ್ತ್ರೀಧನಪ್ರಾಪ್ತಿ ಮಿತ್ರರ ಬೆಂಬಲದಿಂದಾಗಿ ವಿಜಯವನ್ನೂ ಹೊಂದಲಿರುವಿರಿ

ಸಿಂಹ—ಸದ್ಯದಲ್ಲಿ ಕೈಕೊಳ್ಳುವ ಪ್ರಯತ್ನಕ್ಕೆ ಅನುಕೂಲ ಫಲಲಭಿಸಲಿದೆ. ನೌಕರಿ ಜನರು ಬಡತಿಯನ್ನು ಹೊಂದಲಿರುವರು ಸಮಾಜದಲ್ಲಿ ಒಳ್ಳೆ ಮಾನಮನ್ನಣೆಗಳು ಲಭಿಸುವವು. ಆದರೆ ಸ್ತ್ರೀಯರಿಂದಾಗಿ ಕಲಹ ಜನಾಪವಾದವನ್ನು ಕೇಳುವ ಯೋಗವಿದೆ. ಆರ್ಥಿಕದೃಷ್ಟಿಯಿಂದಲೂ ಕೂಡ ನಿತ್ಯ ಕಲಹವಾಗಬಹುದು. ನೀವೆಷ್ಟೇ ದುಡಿದರೂ ಕೂಡ ವಿನಾಕಾರಣದಲ್ಲಿ ರಿಕ್ತ ಹಸ್ತರಾಗುವಿರಿ. ವಾರದ ಅನ್ಯಂತ ದಿನಗಳು ಇತರ ದಿನಗಳಿಗಿಂತ ಉತ್ತಮವಿವೆ.

ಕನ್ಯಾ—ಗ್ರಹಚಾರವು ಪ್ರಬಲವಾಗಿ ಕಾಡುತ್ತಿದೆ. ದೇಹಾಲಸ್ಯದ ದೆಸೆಯಿಂದಾಗಿ ಹಿಡಿದ ಕಾರ್ಯವನ್ನು ಮಧ್ಯದಲ್ಲಿ ಕೈಬಿಡುವ ಪ್ರಸಂಗ ಬರಲಿದೆ. ಅಂತರಿಕ ಶತ್ರುಗಳ ಭಯ ಅಧಿಕವಾಗುವದು, ಹೆಂಡತಿ ಮಕ್ಕಳೂ ಕೂಡ ಪ್ರತಿಕೂಲವಾಗಿ ವರ್ತಿಸಲಿರುವರು. ಗೃಹಕಲಹಗಳು ದಿನೇ ದಿನೇ ಹೆಚ್ಚಲಿವೆ. ವ್ಯಾಪಾರದಲ್ಲಿ ನಷ್ಟವಾದೀತು. ಶ್ರಮಜೀವಿಗಳಿಗೂ ನೌಕರಿ ವರ್ಗದವರಿಗೂ ಯತ್ನಕ್ಕೆ ತಕ್ಕ ಫಲ ದೊರೆಯದು ವಾರಾದಿಯ 3 ದಿನಗಳು ಕೊಂಚ ಉತ್ತಮವಿರುವವು

ತುಲಾ—ನಿಸರ್ಗತಃ ಶುಭರಾದ ಗುರು ಬುಧ, ಶುಕ್ರರು ನಿಮ್ಮ ಮೇಲೆ ಕೃಪಾದೃಷ್ಟಿಯನ್ನು ಬೀರುತ್ತಿರುವುದರಿಂದ ಈ ವಾರವು ನಿಮಗೆ ಹೆಚ್ಚಿನ ಸುಖದಾಯಕವಾಗಿ ಪರಿಣಮಿಸಲಿದೆ. ಹಳೆಯ ನರ ಪಿಡಿಯ ಕಾಟದಿಂದಾಗಿ ಆಗಾಗ ತೊಂದರೆಗಳು ಪ್ರಾಪ್ತವಾಗುವದಾದರೂ ವೈದ್ಯೋಪಚಾರದಿಂದ ನೀವು ಪಾರಾಗುವಿರಿ. ಆರ್ಥಿಕ ಪರಿಸ್ಥಿತಿಯು ಉತ್ತಮ ಮಟ್ಟಕ್ಕೆ ಬರುವದು. ಸಂಸಾರದಲ್ಲಿ ಕಾಹಿಲೆ ಕಸಾಲೆಗಳು ಕಾಣಿಸಬಹುದು ಬಂಧುಮಿತ್ರರ ನೆರವು ಚೆನ್ನಾಗಿರತಕ್ಕ ನಿಮಗೆ ತಾ. 9ರಿಂದ 13ರವರೆಗೂ ಧನಪ್ರಾಪ್ತಿ ವಿಜಯ ಸುಖಗಳು ಲಭಿಸುವವು

ವೃಶ್ಚಿಕ—ಬಲವಾಗಿ ಬೇರೂರುವ ನಿಮ್ಮ ಮನೋರೋಗವು ದಿನದಿನಕ್ಕೂ ಪ್ರಬಲವಾಗುತ್ತಾ ಬರುವದು ಬಂಧುಜನರು ನಿಷ್ಕಾರಣವಾಗಿ ಕಲಹಪ್ರಿಯರಾಗುವರು ಕುಜನರ ಮೈತ್ರಿಯು ನಿಮ್ಮ ಕೀರ್ತಿಗೆ ಕಳಂಕ ತರಲಿದೆ. ರಾಜಕೀಯ ಕ್ಷೇತ್ರದಲ್ಲಿ ಪರಾಭವ ಹೊಂದುವ ಯೋಗವಿದೆ, ಉತ್ಪತ್ತಿಗಿಂತ ವ್ಯಯವು ಅಧಿಕವಾಗುವುದರಿಂದ ಆರ್ಥಿಕ ಮುಗ್ಗಟ್ಟಿನ ಬಳಲುವಿರಿ ವಿದ್ಯೋಪಜೀವಿಗಳಿಗೆ ಕಾಲವು ಪ್ರತಿಕೂಲವಾಗಿದೆ. ಶ್ರಮಜೀವಿಗಳಿಗೂ ವೈದ್ಯವ್ಯಾಪಾರಿಗಳಿಗೂ ಕಾಲವು ಉತ್ತಮವಾಗಿರುವದು ವಾರಾಂತ್ಯದ 3 ದಿನಗಳು ಇಷ್ಟಾರ್ಥಗಳನ್ನು ಪೂರೈಸಲು ಸಮರ್ಥವಾಗಿವೆ

ಧನು—ಕಷ್ಟಪರಂಪರೆಗಳಲ್ಲಿ ಸಿಲುಕಿ ಕಂಗಾಲಾದ ನಿಮಗೆ ಒಂದಿನಿತು ಅವಲಂಬನ ದೊರೆತಂತಾಗಿದೆ. ಅಭೀಷ್ಟದಂತ ಕಾರ್ಯವು ನೆರವೇರುವುದು. ಬಂಧುಮಿತ್ರರ ಸಹಕಾರ ಬಲದಿಂದಾಗಿ ಶತ್ರುಗಳನ್ನು ಜಯಿಸುವಿರಿ. ಗೃಹಸುಖವು ಉತ್ತಮವಿದೆ. ಖರ್ಚುಗಳು ಹಲವಾರಿದ್ದರೂ ಅವನ್ನು ಸುಧಾರಿಸುವಷ್ಟರ ಉತ್ಪತ್ತಿಯು ನಿಮಗಿರುವದು. ಕೆಲವನ್ನು ಮನಸ್ಸು ಕಡಿವಾಣವಿಲ್ಲದ ಕುದುರೆಯಂತೆ ವಿಹರಿಸೀತು. ವಾತದೋಷದಿಂದ ಆರೋಗ್ಯಕ್ಕೆ ಸ್ವಲ್ಪ ಧಕ್ಕೆಯಿದೆ, ವಾರದ ಆದ್ಯಂತ ದಿನಗಳು ಸುಖಲಾಭವಿಜಯದಾಯಿಗಳು.

ಮಕರ—ಪಿತ್ತೋಷ್ಣಗಳ ಆಧಿಕ್ಯದಿಂದಾಗಿ ನಿಮ್ಮ ಆರೋಗ್ಯಕ್ಕೆ ಹಾನಿಯಿದೆ. ಹೆಚ್ಚಿನ ಕಾಲವನ್ನು ಮಾರ್ಗಕ್ರಮಣದಲ್ಲಿ ಕಳೆಯಬೇಕಾಗುವುದು. ನಿಷ್ಠುರಭಾಗಿಗಳಾದ ನಿಮಗೆ ಹೆಚ್ಚಿನವರೊಡನೆ ಕಲಹವಾಗುವದು. ಸಾಂಸಾರಿಕ ತಾಪತ್ರಯಗಳು ದಿನೇ ದಿನೇ ಹೆಚ್ಚುತ್ತಾ ಬರುವವು. ಆದಾಯಕ್ಕಿಂತ ದ್ವಿಗುಣವಾಗಿ ಖರ್ಚಾಗುವದರಿಂದ ಹಣದ ಬಿಕ್ಕಟ್ಟಿನ ದೆಸೆಯಿಂದಾಗಿ ಸಾಲಮಾಡಬೇಕಾಗುವದು. ಕುಟುಂಬಿಕರ ಬೆಂಬಲವುಳ್ಳ ನಿಮಗೆ ತಾ. 9, 10 ಈ ದಿನಗಳಲ್ಲಿ ನಿಮ್ಮ ಮನೋರಥಗಳು ಈಡೇರಲಿರುವುವು.

ಕುಂಭ—"ಜೀವತ್ಯರ್ಥದರಿದ್ರೋಽಪಿ ಧೀದರಿದ್ರೋ ನ ಜೀವತಿ" ಹಣದ ದಾರಿದ್ರ್ಯವನ್ನು ಹೊಂದಿದವನೊಂದು ವೇಳೆ ಜೀವಿಸ್ಯಾನು, ಬುದ್ಧಿದರಿದ್ರನು ಜೀವಿಸಲಾರನೆಂದು ಹಿರಿಯರೆಂದಿರುವರು, ಸದ್ಯ ನಿಮ್ಮಲ್ಲಿ ಇವೆರಡರ ದಾರಿದ್ರ್ಯವೂ ಇರುವುದರಿಂದ ದಿನದೂಡುವಿಕೆಯು ಅತೀವ ಕಷ್ಟವಾದೀತು. ಅಪ್ತೇಷ್ಟರ ವಿರಹ, ಶತ್ರುಜನರ ಉಪಟಳ, ಹಣದ ಅಭಾವ, ಗೃಹ ತಾಪತ್ರಯ ಇತ್ಯಾದಿ ಅನಿಷ್ಟ ಪರಂಪರೆಗಳು ನಿಮ್ಮನ್ನು ಕಾಡಲಿವೆಯಾದರೂ ತಾ 8, 12, 13 ಅಷ್ಟೊಂದು ಅನಿಷ್ಟಕಾರಿಗಳಾಗಲಾರವು.

ಮೀನ—ಇಂದಿನ ಗ್ರಹಸ್ಥಿತಿಯು ತೀರಾ ಕೆಳಮಟ್ಟದ್ದಾಗಿರುವದು. ಮಿತಭಾಷಿಯಾಗಿದ್ದರೂ ಕೂಡ ಕಲಹ ನಿಷ್ಠುರಗಳು ತಪ್ಪಲಾರವು. ದೈಹಿಕ ಮಾನಸಿಕ ಸುಖಶಾಂತಿಗಳಿಂದ ಮುಕ್ತರಾದ ನಿಮಗೆ ಸ್ವಪ್ನದಲ್ಲೂ ಸುಖವು ದುರ್ಲಭವೆಂದರೆ ತಪ್ಪಾಗದು. ಅಪ್ತೇಷ್ಟವರ್ಗದವರೇ ನಿಮ್ಮನ್ನು ವಂಚಿಸಲಿರುವರು ಅನಿರೀಕ್ಷಿತವಾದ ಪ್ರವಾಸದಿಂದ ಕಷ್ಟನಷ್ಟಾದಿಗಳನ್ನು ಹೊಂದುವಿರಿ. ಯಾವ ಭಾಗದಲ್ಲೂ ಶ್ರೇಯಸ್ಸು ಕಾಣಿಸಿಗದು. ತಾ. 9, 10 14, ಇವು ಹೆಚ್ಚಿನ ಅಪಾಯಕಾರಿಗಳಲ್ಲ.

ಟೈಪು ರೀ ಕ್ಯಾಸ್ಟಿಂಗ್ ಛಾರ್ಜನ್ನು ಅರ್ಧಕ್ಕಿಂತ ಹೆಚ್ಚಾಗಿ ಉಳಿಸಿಕೊಳ್ಳಿ

ಆಧುನಿಕ ಯಂತ್ರ ಸಾಧನಗಳಿಂದ ಸುಸಜ್ಜಿತವಾದ ಮೈಸೂರು ಟೈಪು ಫೌಂಡರಿಯಲ್ಲಿ ಪ್ರಿಂಟಿಂಗ್ ಟೈಪುಗಳನ್ನು (ಕನ್ನಡ) ರೀಕ್ಯಾಸ್ಟ್ ಮಾಡಿಸುವುದರಿಂದ ವಿಪರೀತ ಉಳಿತಾಯವಾಗುತ್ತದೆ

ಸಾವಿರ ಪೌಂಡು ಮತ್ತು ಹೆಚ್ಚಿಗೆ	ಐನೂರು ಪೌಂಡು ಮತ್ತು ಹೆಚ್ಚಿಗೆ
ಪೌಂಡಿಗೆ 0—10—0	ಪೌಂಡಿಗೆ 0—12—0

ಸೇಲ್ಸ್ ಟ್ಯಾಕ್ಸ್, ಪ್ಯಾಕಿಂಗ್ ಮತ್ತು ಫಾರ್ವರ್ಡಿಂಗ್ ಛಾರ್ಜ ಮುಫತ್ತು

ಇಂದೇ ವಿವರಗಳಿಗೆ ಬರೆಯಿರಿ: ಮ್ಯಾನೇಜರ್,

ಮೈಸೂರು ಟೈಪು ಫೌಂಡರಿ,

ಬೆಂಗಳೂರು-2

ಕೆಲವೇ ಪ್ರತಿಗಳು ಉಳಿದಿವೆ! ತ್ವರೆ ಮಾಡಿರಿ!

ಮನೆಯೊಂದಾದಲ್ಲಿ ಇರಲೇಬೇಕಾದ ಪುಸ್ತಕ

"ಮನೆ-ಮದ್ದು"

ಬರೆದವರು:- ಡಾಕ್ಟರ್ ಕೊರಡ್ಕಲ್ ವೆಂಕಟರಾಯರು, ಎಲ್ ಐ ಎಮ್., ಉಡುಪಿ.

ಸುಮಾರು 200 ಕಾಯಿಲೆಗಳಿಗೆ ... 1000 ಸುಲಭ ಮನೆ-ಮದ್ದುಗಳು!

ಮಕ್ಕಳ ಮತ್ತು ಹೆಂಗಸರ ಕಾಯಿಲೆಗಳ ಚಿಕಿತ್ಸೆ, ಶಿಶು ಸಂರಕ್ಷಣ, ಗರ್ಭಿಣಿ, ಬಾಣಂತಿಯರ ಚಿಕಿತ್ಸೆ, ಇತರರ ಸಾಮಾನ್ಯ ಎಲ್ಲಾ ಕಾಯಿಲೆಗಳಿಗೆ ಸುಲಭ ಚಿಕಿತ್ಸೆಗಳನ್ನು ರೋಗಗಳ ಕಾರಣ, ಲಕ್ಷಣ, ಸುಶ್ರೂಷೆ, ಪಥ್ಯಾಪಥ್ಯ ವಿಚಾರ ಸಹಿತ ಸರಳವಾಗಿ ವಿವರಿಸಿರುವ ಪುಸ್ತಕ. ಪಂಗಿಯ ಕ್ರಮವನ್ನು ವಿಸ್ತಾರವಾಗಿ ವಿವರಿಸಿದೆ. ಮದ್ರಾಸು ಸರಕಾರದಿಂದಲೇ ಮೊದಲಾದ ಕಡೆಗಳಿಂದ ಬಹುಮಾನ ಪಡೆದ ಪುಸ್ತಕ. ಇದುವರೆಗೆ ಕನ್ನಡದಲ್ಲಿ ಇಂತಹ ಪುಸ್ತಕ ಪ್ರಕಟವಾಗಿಲ್ಲ ಒಂದು ಪ್ರತಿ ನಿಮ್ಮ ಬಳಿ ಇದ್ದರೆ ಒಬ್ಬ ಡಾಕ್ಟರ್ ಇದ್ದಂತೆಯೆ ಸರಿ.

ಇಂದೇ ನಿಮ್ಮ ಪ್ರತಿಗಳಿಗೆ ಬರೆಯಿರಿ. ಬೆಲೆ ರೂ. 2—0—0. ವಿ. ಪಿ. ದ್ವಾರ 2—6—0.

ಪ್ರತಿಗಳು ನಿಮ್ಮೂರ ಪುಸ್ತಕ ವ್ಯಾಪಾರಿಗಳಲ್ಲಿ ಸಿಗದಿದ್ದರೆ, ನವಭಾರತ ಪುಸ್ತಕ ಭಂಡಾರ, ಉಡುಪಿ. ಇವರಿಗೆ ಬರೆಯಿರಿ.

— ಮಕ್ಕಳನ್ನು ಹಡೆಯುವುದು ಸಾಕು —

ಅಶಕ್ತ ಸ್ತ್ರೀಯರಿಗೆ ಬರ್ಥ ಕಂಟ್ರೋಲ ರೋಗಗ್ರಸ್ತ ಹೆಣ್ಣು ಮಕ್ಕಳಿಗೆ

ಏಳು ದಿವಸ ಈ ಮಾತ್ರೆಗಳನ್ನು ಸೇವನ ಮಾಡಿದರೆ ಮುಂದೆ ಖಂಡಿತವಾಗಿ ಗರ್ಭವಾಗುವದಿಲ್ಲ ಸ್ತ್ರೀಯರು ಪ್ರತಿತಿಂಗಳು ಸರಿಯಾಗಿ ಮುಟ್ಟಾಗುತ್ತಾರೆ. ಅಲ್ಲದೆ ಸ್ತ್ರೀಯರ ಬಿಳೆಸೆರಗು, ಪ್ರದರರೋಗ, ಹೊಲಿಕುಟ್ಟು ಗುಣವಾಗಿ ಸ್ತ್ರೀಯು ಗರ್ಭವತಿಯಾಗುವದಿಲ್ಲ. ಈ ಔಷಧವನ್ನು ಸೇವಿಸುವ ಕ್ರಮ: ಪ್ರತಿದಿವಸ ಮುಂಜಾನೆ ೧ ಗುಳಿಗೆ ಮಧ್ಯಾಹ್ನಕ್ಕೆ ೧ ಗುಳಿಗೆ, ಸಂಜೆಗೆ ೧ ಗುಳಿಗೆಯಂತೆ ಊಟದ ಮೊದಲು ತಕ್ಕೊಳ್ಳಬೇಕು ಏಳುದಿವಸ ಈ ಔಷಧವನ್ನು ಬಿಸಿನೀರಿನಲ್ಲಿ ಸೇವಿಸಬೇಕು.

ಪಥ್ಯ:—ಹರವೀನಲ್ಲಿ ಬಿಡಬೇಕು. ೭ ದಿವಸ ಸಂಪೂರ್ಣ ಔಷಧದ ಕಿಮ್ಮತ್ತು ರೂಪಾಯಿ 5—0—0. ಪೋಸ್ಟ್ ಚಾರ್ಜ ಬೇರೆ.

ಮಾಲಕರು:—ಬಾಲಪ್ಪಾ ಫಕೀರಪ್ಪಾ, ದಾವಣಗೇರಿ

ಆಯುರ್ವೇದ ಔಷಧಾಲಯ ಗದಗ-ಸಿಟಿ.

ಏಜಂಟರು:—ಹುಬ್ಬಳ್ಳಿ ಧಾಮಣೆ,—ಹುಬ್ಬಳ್ಳಿ, ಗದಗ, ಬಾಗಲಕೋಟೆ ಧಾರವಾಡ ವಿಜಾಪುರ—ಜ್ಞಾನಪ್ಪ, ... ಧಾರವಾಡಕರ ವಿಜಾಪುರ ನಂಜುಡೇಶ್ವರ ಮೂರ್ತಿ ದಾವಣಗೇರಿ ದಾವಣಗೇರಿ:—ದಾವಣಗೇರಿ ಪ್ರೆಸ್ ಆರ್ ಎಲ್ ಕಮಲದಾಸ ,ಕೆಮಿಸ್ಟ, ಹಾವೇರಿ, ಬ್ಯಾಡಗಿ

EDITED, PRINTED & PUBLISHED BY K. H SHETTY AT THE NAVAYUGA PRESS, UDIPI, S.INDIA.

20—2—1951

Regd. No M. 3618
LICENCE No. 31
Licensed to Post without Prepayment

Estd 1921 ಸ್ಥಾಪಿತ
31ನೇ ವರ್ಷ

15—2—1951
Founder Sri A. B. Shetty,
Minister for Agriculture & Veterinary.



ವರ್ಷ ೩೦
ವಾರ ೨೩

NAVAYUGA
WEEKLY

POST BOX NO. 22
UDIPI, S. K.

Vol. 31
No 23

'ನಾವು ಬಡವರು' ಎಂದಾಗ ಬಹುಮಂದಿ ತಮ್ಮ ಸ್ಥಿತಿಗತಿಯನ್ನು ಹೊಂದಿಕೊಂಡು 'ನಿಜ'ವೆನ್ನುತ್ತಾರೆ. ಬಡತನ ದಾರಿದ್ರ್ಯಗಳಿಗೆ ತವರಾದ ಭಾರತ ದೇಶದಲ್ಲಿ ಈ ಸಾಲಿಗೆ ಸೇರುವ ಜನಸಂಖ್ಯೆ ಅಪರಿಮಿತವಾಗಿದೆ. ಒಂದಲ್ಲ ಒಂದು ರೀತಿಯಿಂದ ಜನ ಅಸುಖಿಗಳಾಗಿದ್ದಾರೆ. ಜೀವನ ನಿರ್ವಹಣ ಕಷ್ಟಸಾಧ್ಯವೆಂದು ನಾವು ಲೆಕ್ಕಹಾಕುವದಾದರೆ ಅದು ಬಡತನದಿಂದಲೇ. ಮನೆಯ ಶಾಂತಿಯನ್ನು ಕಾಯ್ದುಕೊಳ್ಳಲಾಗದ ಜನ ಲೋಕದ ಶಾಂತಿಯನ್ನು ಕಾಯ್ದುಕೊಳ್ಳುವದಾದರೂ ಹೇಗೆ? ಇತರ ದೇಶಗಳನ್ನವಲೋಕಿಸಿದರೆ ನಮ್ಮ ಜೀವನ ಎಷ್ಟು ನಿಕೃಷ್ಟ ಎಂಬುದರ ಅರಿವಾಗದೆಯಿರದು. ಕೃಷಿಯೇ ಮುಖ್ಯ ಉದ್ಯಮವಾಗಿರಬೇಕಾದ ಹಿಂದೂಸ್ಥಾನದಲ್ಲಿ ಅದಿನ್ನೂ ಕುಂಠಿತವಾಗಿರುತ್ತದೆ. ತಮ್ಮ ಕುಲಕಸುಬನ್ನು ಮರೆತು ಪೇಟೆಯ ವಿಲಾಸಜೀವನದ ಚಪಲವನ್ನಿಟ್ಟುಕೊಂಡವರೇ ಬಹಳಮಂದಿ. ಶಕ್ತಿಮೀರಿ ವಿದ್ಯೆಯನ್ನು ಮುಂದುವರಿಸುವ ದೇಶದ ತರುಣರು ಉಚ್ಚಾಧಿಕಾರದ ಹಂಬಲಿಗರಾಗಿದ್ದಾರೆ. ಎಲ್ಲರೂ ಒಂದೇ ಕಸಬಿಗೆ ಮುಗಿಬೀಳುವ ಅತಿಯಾಸೆಯ ಫಲವಾಗಿ ನಿರುದ್ಯೋಗದ ಭೂತ ಪರ್ವತಾಕಾರದಂತೆ ಬೆಳೆದು ನಮ್ಮಮುಂದೆ ನಿಂತಿದೆ. ಉದ್ಯೋಗಿಕರಂಗದಲ್ಲಿ ಸಾಕಷ್ಟು ಪ್ರಗತಿಯಿಲ್ಲದೆ ಈ ತರುಣರ ವಿದ್ಯೆಯು ಸಫಲತೆಯಾಗುವದಾದರೂ ಹೇಗೆ? ವಿಪುಲವಾಗಿ ಬೆಳೆಯುತ್ತಿರುವ ಜನಸಂಖ್ಯೆಯೊಡನೆ ಬಡತನವೂ ಜೊತೆಗೆ ಬೆಳೆಯುತ್ತಲಿದೆ. ಅನೇಕ ರೀತಿಯ ಉದ್ಯಮಗಳ ಉತ್ಕರ್ಷತೆಯು ವಿನಹ ಈ ಸಮಸ್ಯೆ ಬಗೆಹರಿಯುವಂತಿಲ್ಲ.

ಜೀವನನಿರ್ವಹಣಕ್ಕೆ ಅನ್ನ ಬಟ್ಟೆಗಳೇ ಪ್ರಾಮುಖ್ಯವಾಗಲಾರವು. ಅನುಕೂಲ ಪರಿಸ್ಥಿತಿಗಳೇ ಸಹಕಾರಿಗಳಾಗಲಾರವು. ಸಂಪತ್ತಿದ್ದರೆ ಯೋಜಿತ ಜೀವನ ನಡೆಸುವದು ಕಷ್ಟವೇನಲ್ಲ. ಇದ್ದ ಮೂಲವನ್ನು ಕರಗಿಸುವದರಲ್ಲಿ ವಿಶೇಷ ಬುದ್ಧಿ ಕೌಶಲತೆ ಆವಶ್ಯವಿಲ್ಲ. ಜೀವನವೆಂದರೇನು? ಸುಖವಾಗಿ ತಾನು ತನ್ನ ಸಂಸಾರವನ್ನು ಸಾಗಿಸಿಕೊಂಡು ಹೋಗುವದೇ? ಕೈತುಂಬ ಹಣವಿಕ್ಕುವಂತಿದ್ದರೆ ಯಾರಿಗೆ ಬದುಕು ಮಾಡಲು ಸಾಧ್ಯವಿಲ್ಲ?

ದೇಶದ ಬಹುಪಕ್ಷ ಜನ ಅನುಕೂಲ ಪರಿಸ್ಥಿತಿಯಿಲ್ಲದೆ ಬಡತನವನ್ನಪ್ಪಿಕೊಂಡರೆ ಸಾಮೂಹಿಕವಾಗಿ ಇಡಿಯ ರಾಷ್ಟ್ರದ ಜನಾಂಗ ಇನ್ನೊಂದು ರೀತಿಯ ಬಡವರಾಗಿದ್ದಾರೆ. ಆಗರ್ಭ ಶ್ರೀಮಂತರೂ, ಮಹಾಶಿಕರೂ, ರಾಜರುಗಳೂ, "ನಾವು ದೊಡ್ಡವರು—ಬಡವರಲ್ಲ" ಎನಬಹುದು. ಆದರೆ ಅವರನ್ನೂ ಸೇರಿಸಿಕೊಂಡು 'ನಾವು ಬಡವರು ಎಂದಿದ್ದೇನೆ. ಅಂದರೆ ನಾವು ಅಳೆಯುತ್ತಿರುವ ಮಾನದಂಡ ತಿಳಿವಿನ ಹಾಗೂ ಆತ್ಮಿಕ ಶಕ್ತಿಯನ್ನಳೆಯುವಂತಹದ.

ನಮ್ಮ ತಿಳಿವಿನ ಮಟ್ಟ ಬಹಳ ಸಂಕುಚಿತವಾದುದು. ಗಾಳಿಗೊಡ್ಡಿದ ಸೊಡರಿನಂತೆ ಸ್ಥಿರವಲ್ಲ. ಯಾವುದೇ ಧ್ಯೇಯಗಳು ಈ ಚಂಚಲ ಮನೋವೃತ್ತಿಯಿಂದ ಗುರಿಮುಟ್ಟದೆ ಮಣ್ಣು ಮುಕ್ಕುತ್ತಲಿವೆ. ಇಷ್ಟವನ್ನು ಪಡೆಯುವ ಹಂಬಲಿಗರು ನಾವಾಗಿದ್ದೇವೆ. ಕಷ್ಟವನ್ನು ಎದುರಿಸುವ ಕೆಚ್ಚು ನಮ್ಮಲ್ಲಿಲ್ಲ. ಬಾಯಿಯಲ್ಲಿ ಆದರ್ಶವನ್ನು ಹೇಳಬಲ್ಲೆವು; ಕೆಲವೇಳೆ ತೋರಿಸಬಲ್ಲೆವು. ಆದರೆ ಕಾರ್ಯತಃ ಮಾಡಿತೋರಿಸಲಾರೆವು. ಮಾತಿಗೂ ಕೃತಿಗೂ ಸಂದೂಗದ ನಡತೆಗಳೇ ಬಹಳವಾಗಿವೆ. ಮಾತು ಹೃದಯವನ್ನು ವಂಚಿಸಿ ಮಾನಸಿಕ ದಿವಾಳಿತನವನ್ನು ತೆರೆದಿಡೆ ನಾಲಗೆ ಸಡಿಲಾದ ಹಾಗೆ ಆತ್ಮಿಕ ಶಕ್ತಿಯ ಬಡತನ ಹೆಚ್ಚುತ್ತದೆ.

ಗಾಂಧೀಜೀ ತೋರಿಸಿದ ದಾರಿ ಜಗತ್ತಿಗೆ ಆದರ್ಶವಾದರೂ—ನಮ್ಮನ್ನು ಪಾರತಂತ್ರ್ಯದಿಂದ ಪಾರುಮಾಡಿತಾದರೂ—ಅವರ ತತ್ತ್ವವನ್ನನುಸರಿಸುವ ಸಹನಶೀಲ ಮನೋವೃತ್ತಿ ಇಂದು ನಮಗಿಲ್ಲ. ಭಾರತ ವಿಭೂತಿಪುರುಷರ—ಶಾಂತಿಪ್ರಿಯರ ತವರೂರು. ಬದುಕಿನಾದರ್ಶವನ್ನು ಸಾರುವಂತಹ ತತ್ತ್ವಬೋಧನೆಗಳು ನಮ್ಮಲ್ಲಿವೆ. ನಮ್ಮ ಹಿಂದಿನವರ ಬುದ್ಧಿಮತ್ತೆಯನ್ನು ಸಾರುವ ಮೈಲುಗಲ್ಲುಗಳಿವೆ. ಆದರೆ ನಾವು ಅದನ್ನೆಲ್ಲಾ ಮರೆತ. ಕೇವಲ ಬಾಹ್ಯ ಚಪಲವನ್ನು ತೀರಿಸಿಕೊಳ್ಳುವದರಲ್ಲಿ ಕಾಲಹರಣಮಾಡುತ್ತಲಿದ್ದೇವೆ. ಪಾಶ್ಚಾತ್ಯರ ರಾಜನೀತಿಯನ್ನು ಖಂಡಿಸುವಲ್ಲಿ ಹಿಂದುಮುಂದೆ ನೋಡುವದಿಲ್ಲ. ಆದರೆ ಅವರ ಶಿಸ್ತು ಸಂಘಟನೆಗಳನ್ನು ನಾವು ವಿವೇಚಿಸುವುದಿಲ್ಲ. ಇನ್ನೊಬ್ಬರ ಮೇಲೆ ತಪ್ಪು ಹೊರಿಸುವುದರಲ್ಲೂ, ಅಪಪ್ರಚಾರ ಮಾಡುವದರಲ್ಲೂ, ಟೀಕೆ ಮಾಡುವದರಲ್ಲೂ, ಹಾಳಾಗ[illegible]ರಲ್ಲೂ, ನಾವು ಬಹಳ ಬುದ್ಧಿವಂತರು. ಹಾಗೆಯೆ ಉತ್ತಮ ಗುಣಗಳನ್ನು ಹೇಳುವುದಕ್ಕೂ, ಯಥಾರ್ಥವಾದುದನ್ನು ಹೇಳುವದಕ್ಕೂ ಬುದ್ಧಿಶೂನ್ಯರು, ಅತ್ಯಂತ ಬಡವರು. ಪರಗುಣ ಗ್ರಹಿಸುವಷ್ಟು ಹೃದಯಶುದ್ಧತೆ ನಮಗಿಲ್ಲ. ಪರನಿಂದೆ ಅವಹೇಳನೆ ಮಾಡುವಷ್ಟರಲ್ಲೇ ಪಾಂಡಿತ್ಯ ಪ್ರದರ್ಶನವಾಗುತ್ತದೆ! ಕೆಟ್ಟಗುಣವನ್ನಷ್ಟೇ ಎತ್ತಿತೋರಿಸುವ ಪಕ್ಷದಲ್ಲಿ ಯಾರೂ ಪರಿಪೂರ್ಣರಾಗಿ ತೋರಲಾರರು! ಉತ್ತಮವಾದ ಕೆಲವು ಗುಣಗಳನ್ನಾದರೂ ಎತ್ತಿಹಿಡಿಯುವ ವಿಶಾಲ ಮನಸ್ಸು ನಮ್ಮದಾಗಿರಬೇಕು. ಅಂದರೇನೇ ನಾವು ಸರಿಯಾದ ಮಾರ್ಗದರ್ಶನ ಮಾಡಿದಂತಾಗುತ್ತದೆ. ಆದರಿಂದು ನಾವು ಕಾಣುತ್ತಿರುವದು ಮನೋದೌರ್ಬಲ್ಯವನ್ನೇ ವಿಶಾಲ ಮನಸ್ಸಿನ ಬಡತನವನ್ನೇ.

'ಬಡತನವೆ ಧನವೆಮಗೆ ಕೊಡಲಾಪೆ ಪೇಂ ನಿನಗೆ ಕಂಬನಿಗಳಂದುಗೆ ಚಾಮರವೆಪ್ಪ ಕ್ಷಿತೀಶನಿಗೆ' ಎಂದು ಹಾಡಿದ್ದಾನೆ. ಶ್ರೀಮಂತಿಕೆ ಸಾಮರ್ಥ್ಯದಿಂದ ಸುಖವಾಗಿರಬಹುದಾದ ರಾಷ್ಟ್ರಗಳು ಬುದ್ಧಿಸಂಪನ್ನವೂ ಆಗಿದ್ದರೆ ಜಗತ್ತು ಯುದ್ಧ ಕಾರ್ಮೋಡಗಳಿಂದ ಕವಿಯಬೇಕಾದ ಪ್ರಸಂಗ ಒದಗುತ್ತಿರಲಿಲ್ಲ. ಅಂದರೆ ಇಲ್ಲಿಯೂ 'ಬುದ್ಧಿಯ ಬಡತನ'ವಿದೆ.

ಬುದ್ಧಿಶಾಲಿಗಳಿಂದ ತುಂಬಿದ ದೇಶ ಜಗತ್ತಿನ ಪ್ರಕಾಶಸ್ತಂಭವಾಗಬಲ್ಲುದು. ತನ್ನ ದೇಶದಲ್ಲಿ ಶಾಂತಿಯನ್ನು ಕಾಯ್ದುಕೊಳ್ಳಬಲ್ಲುದು.

ಸತ್ಯ ಅಹಿಂಸೆಗಳಿಂದ ರಾಷ್ಟ್ರವನ್ನು ಆಳುವ ಧ್ಯೇಯವಾದಿಗಳು ನಾವು- ನಾವು ಸ್ವಾತಂತ್ರ್ಯಗಳಿಸಿದ್ದು 'ಅಹಿಂಸೆ'ಯಿಂದಲೇ. ಆದರೆ ಇಂದು ಸರಕಾರ ನಾನಾರಂಗದಲ್ಲಿ ಅರುವತ್ತು ಪಾಲು ಸೈನ್ಯಕ್ಕಾಗಿ ಬಳಸುತ್ತಲಿದೆ. ಧ್ಯೇಯ ಸಾಂಕೇತಿಕವಾಗಿ ಉಳಿದಿದೆ. [illegible] ರೋಗಿಗೆ ಅನ್ಯೋನ್ಯ [illegible] ಈ ಪರಿಸ್ಥಿತಿಯೊದಗುತ್ತಿರಲಿಲ್ಲ. ತಪ್ಪುಗ್ರಹಿಕೆ, ಜಾತೀಯ ಭಾವನೆಗಳೆಲ್ಲ ಶಕ್ತಿಹೀನಯನಂತೆ ಮಾಡಿವೆ. ಉತ್ತಮ ಆದರ್ಶಗಳಿಂದ ಭಾರತದೇಶದ ಕೀರ್ತಿಯನ್ನು ಜಗತ್ತಿಗೆ ಸಾರಿದ ಅಶೋಕ, ಬುದ್ಧ, ರಾಮಕೃಷ್ಣ ಪರಮಹಂಸ ವಿವೇಕಾನಂದ, ಮಹಾತ್ಮಾ ಗಾಂಧೀ ಮೊದಲಾದವರ ತತ್ತ್ವಗಳಿಂದು ಕೇವಲ 'ಬಾಯಿಬಲ'ಗಳಾಗಿವೆ. ಹೃದಯ[illegible] [illegible]ವಲ್ಲ. [illegible] ಅದರ ಆಚರಣೆ ನಡೆಯು-

"ಬೇರೆ ಶಾಸ್ತ್ರಗಳನ್ನೋದುವದರಿಂದೇನು? ಗೀತೆಯನ್ನು ಚೆನ್ನಾಗಿ ಓದಬೇಕು"—(ವರಾಹ ಪುರಾಣ)

ಗೀತೆಯ ಕೈಗನ್ನಡಿ

(ಭಗವದ್ಗೀತೆಯ ಮೂಲ ಶ್ಲೋಕ ಮತ್ತು ಕನ್ನಡ ಅನುವಾದ)

● ಅನುವಾದಕರು—ಡಿ। ಹೊಸಕೇರಿ ಚಿದಂಬರಯ್ಯನವರು ●

ಈ ಗ್ರಂಥದಲ್ಲಿ ಗೀತೆಯ ಮೂಲವೆಲ್ಲ ಇರುವುದಲ್ಲದೆ ಮೂಲದಲ್ಲಿ ಸಹಜವಾಗಿ ಕಾಣಬರುವ ಅರ್ಥವು ಮಾತುಗಾರಿಕೆಯ ಮಾತುಗಳ ರೂಪದಲ್ಲೇ ಭಕ್ತಿಯಾಗಿ ಎದ್ದು ಕಾಣುವುದು

400ಕ್ಕೂ ಮಿಕ್ಕಿ ಪುಟಗಳು! ಬೆಲೆ 0—12—0

ಒಂದು ರೂಪಾಯಿಯನ್ನು ಕಳುಹಿಸಿದರೆ ಒಂದು ಪ್ರತಿಯನ್ನು ಬುಕ್‌ಪೋಸ್ಟಿನಿಂದ ಕಳಿಸಲಾಗುವುದು

ಪ್ರತಿಗಳು ಸಿಗುವ ಮುಖ್ಯ ಸ್ಥಳ—

ನವಯುಗ ಪ್ರೆಸ್, ಉಡುಪಿ ದ. ಕನ್ನಡ

ಪ್ರಸಿದ್ಧ ಪುಸ್ತಕ ವ್ಯಾಪಾರಿಗಳಲ್ಲೆಲ್ಲ ದೊರೆಯುತ್ತದೆ.

ಶಾಂತಿಪ್ರಿಯರ—

ಕಾಯಕವೇ ಕೈಲಾಸ

ಅವರು ಖ್ಯಾತಿಗೆ ಬಂದುದು ತಮ್ಮ ಸೇವಾ ಜೀವನದ ಮಹತ್ತಿಕೆಯಿಂದ. ಜನಬಲದಲ್ಲಿ ಅವರದೊಂದು ಪುಟ್ಟ ಸಮಾಜ: ಬರೀ ಎರಡು ಲಕ್ಷ ಮಂದಿ ಕೂಡಿ ಉಂಟಾದುದು. ಕ್ವೇಕರರು ಎಂದು ಅವರನ್ನು ಕರೆಯುತ್ತಾರೆ. ಜಗತ್ತಿನ ಪ್ರತಿಯೊಂದೆಡೆಯಲ್ಲಿಯೂ ಜನತಾ ಸೇವೆ ಮತ್ತು ಲೋಕಶಾಂತಿಗಾಗಿ ದುಡಿಯುವ ಅವರ ತಂಡಗಳಿವೆ. "ಅಮೇರಿಕೆಯ ಗೆಳೆಯರ ಸೇವಾ ಸಮಿತಿ" ಎಂಬುದೀಗ ಈ ಕ್ವೇಕರರ ಚಟುವಟಿಕೆಯ ಮೂಲಾಧಾರವಾಗಿದೆ. ನಿರಾಶ್ರಿತರ ಪುನರ್ನಿವೇಶನ ಮತ್ತು ಸಹಾಯದ ಕೆಲಸವನ್ನು ಮನಮಾರೆ ಮಾಡಿದುದಕ್ಕಾಗಿ ಈ ಸಂಸ್ಥೆಗೆ ೧೯೪೭ರ "ನೋಬಲ್" ಶಾಂತಿ ಪಾರಿತೋಷಕ"ವನ್ನು ಕೊಡಲಾಯಿತು. ಪಾಲೆಸ್ತೈನದ ಅಂತರ್ಯುದ್ಧದ ಕಾಲದಲ್ಲಿ ನಿರಾಶ್ರಿತರ ಯೋಗಕ್ಷೇಮಗಳನ್ನು ವಿಚಾರಿಸಿ ನೋಡಿಕೊಳ್ಳಲು ಕ್ವೇಕರರ ತಂಡಕ್ಕೆ ಯುಕ್ತ ರಾಷ್ಟ್ರ ಸಂಸ್ಥೆಯು ಕರೆಕಳುಹಿಸಿತು. ಚೈನಾ, ಮೆಕ್ಸಿಕೋ, ಯುರೋಪು ಮತ್ತು ಭಾರತದಲ್ಲಿ ಸಹ ಕ್ವೇಕರರ ಚಟುವಟಿಕೆ ಅವ್ಯಾಹತವಾಗಿ ನಡೆಯುತ್ತಿರುವುದನ್ನು ನಾವು ಕಾಣಬಹುದು. ಸಮಾಜಸೇವೆ ಮತ್ತು ಶಾಂತಿ ಪ್ರಿಯತೆಯೇ ಕ್ವೇಕರರ ವೈಶಿಷ್ಟ್ಯವಾಗಿದೆ.

ಯಾರೊಬ್ಬರ ಅಂಕೆಗೆ ಒಳಪಟ್ಟು ಕೆಲಸ ಮಾಡುವುದು ಕ್ವೇಕರರಿಗೆ ಬೇಕಾಗಿಲ್ಲ. ಎಂತಲೇ ಅವರು ಯಾವ ಸರಕಾರದ ಆದೇಶದಂತೆಯೂ ನಡೆಯುವುದಿಲ್ಲ. ಹೀಗಿದ್ದರೂ ದೇಶಗಳಲ್ಲಿ ಅಶಾಂತಿ ತಲೆದೋರಿದಾಗ, ಬಿಕ್ಕಟ್ಟಿನ ಕಠಿಣ ಪ್ರಸಂಗಗಳು ಉದ್ಭವಿಸಿಕೊಂಡಾಗ, ಅವುಗಳ ನಿವಾರಣೆಯಲ್ಲಿ ಕ್ವೇಕರರು 'ತುಂಬು ನೆರವ'ನ್ನು ವಿಪುಲವಾಗಿ ಬಳುಸುತ್ತಾರೆ. ಇಂತಹ ಕರೆ ಎಂದರೆ, ಸ್ವತಃ ಕ್ವೇಕರರಿಗೂ ಪ್ರಾಣ; ಅವರು ಅದಕ್ಕೆ "ಇಗದು" ಎಂದುದೇ ಇಲ್ಲ. ಮನುಷ್ಯನ ನಡವಳಿಕೆಯೇ ಆತನನ್ನು ರೂಪಿಸುವುದು, ಉನ್ನತಿಯ ಪಥದಲ್ಲಿ ಮುನ್ನಡೆಸುವುದು ಎಂಬುದಿವರ ಮತ. ಇದರಿಂದ ಏನು ಕೆಲಸ ಮಾಡಬೇಕಿದ್ದರೂ, ಅದನ್ನು ಬಾಯಿ ಮಾತಿನಿಂದ ವಿವರಿಸಿ ಹೇಳಲು ತೊಡಗದೆ, ನೇರಾಗಿ ಕಾರ್ಯರಂಗಕ್ಕೇ ಅವರು ಧುಮುಕುವರು; ಕೆಲಸ ಮಾಡುವರು.

ಸುಲಭ-ಸರಳ ಮಾದರಿ

ಅವರ ಜೀವನದಲ್ಲಿ ಒಂದು ಆದರ್ಶವಿದೆ. ಪ್ರತಿಯೊಬ್ಬನಲ್ಲಿಯೂ "ಆತ್ಮಜ್ಯೋತಿ" ಎಂಬುದಿರುವುದು. ಈ ಜ್ಯೋತಿಯು ಸತ್ಯ, ಧರ್ಮ ಮತ್ತು ನ್ಯಾಯವಾದುದನ್ನು ನೋಡಬಲ್ಲುದು; ಗ್ರಹಿಸಬಲ್ಲುದು ಮತ್ತು ಅದರಂತೆ ತನ್ನ ವರ್ತನೆಯನ್ನು ಇಟ್ಟುಕೊಳ್ಳಲೂ ಬಲ್ಲುದು —ಎಂಬುದಾಗಿ ಕ್ವೇಕರರು ತಿಳಿಯುತ್ತಾರೆ. ಕೆಲವರ ಆ "ದಿವ್ಯ ಪರಂಜ್ಯೋತಿ"ಯ ಒಂದು ಅಣು. ನಮ್ಮ ಆತ್ಮಜ್ಯೋತಿ ಎಂದರೆ, ಉಳಿದವರು ತಮ್ಮ ಸಹೋದರರು ಮತ್ತು ಸಮಾಜದ ಕಡೆಗಿರುವ ಆತ್ಮೀಯತಾ ಭಾವವೇ, ತುಂಬಿ ಆದರಿಸುವ ವಾತ್ಸಲ್ಯವೇ ಈ ಅಪೂರ್ವ ಬೆಳಕು; ಚೈತನ್ಯ ಎನ್ನಬಹುದು. ಈ ಜ್ಯೋತಿಯು ಮಾತ್ರ ಅವರವರ ಸೊತ್ತಲ್ಲ. ಲೋಕದ ಎಲ್ಲ ಮತೀಯ ಸಮುದಾಯಿಗಳಲ್ಲಿಯೂ ಇದು ಸದಾ ಬೆಳಗುತ್ತಿದ್ದು, ಸತ್ಯನಿತ್ಯದ ದಾರಿಯಲ್ಲಿ ಜನರನ್ನು ನಡೆಸುವುದು

ಜೀವನಕ್ಕೆ ಒಂದು ಅರ್ಥವಿದ್ದರೆ, ಅದು ನಮ್ಮ ಕೆಲಸದಲ್ಲಿ ಒಡೆದು ಮೂಡಿ, ವ್ಯಕ್ತವಾಗುತ್ತದೆ ಎಂಬಂಥ ವಿಚಾರಲಹರಿ ಕ್ವೇಕರರದು. ನಮ್ಮ ಕಾರ್ಯಕಲಾಪಗಳಿಂದ ನೇರಾಗಿ ಮತ್ತು ಅದೇ ಕ್ಷಣ ಇತರ ಜೀವಿಗಳಿಗೂ ಒಂದಲ್ಲ ಒಂದು ರೀತಿಯಿಂದ ಸಹಾಯವಾದರೆ, ಈ ಸಹಾಯದ ಮೊತ್ತವೇ ಕೆಲಸದ, ಎಂದರೆ ಜೀವನದ, ಬೆಲೆ ನಿರ್ಧರಿಸುವುದು.

ನಿತ್ಯ ಜೀವನದ ಸರಳತೆಯ ಮಟ್ಟಿಗೆ ಕ್ವೇಕರರ ನಡವಳಿಕೆಯೇ ಆದರ್ಶಪ್ರಾಯವಾದುದಾಗಿದೆ. ಅವರ ಉಡುಗೆ-ತೊಡುಗೆ ಎಲ್ಲವೂ ಸಾದಾ ರೀತಿಯವು. ಕ್ವೇಕರರಿಗೆ ಪ್ರಾರ್ಥನಾ ಮಂದಿರಗಳು ಇವೆ. ಆದರೆ ಅಲ್ಲಿ ಯಾವ ಸೌಕರ್ಯ ಸಾಧನಗಳೂ ಇಲ್ಲ; ಪೂಜಾಸಾಮಗ್ರಿ ವಿಶೇಷಗಳೂ ಇಲ್ಲ. ಪವಿತ್ರ ವಚನಗಳನ್ನು ಪಠಿಸಲು ಪ್ರತ್ಯೇಕ ಪಾದ್ರಿಯೂ ಅಲ್ಲಿರುವುದಿಲ್ಲ. ಎಲ್ಲವೂ ಮೌನವಾಗಿ ನಡೆಯುವುದು. ಹಾಗೆಂದು ಪ್ರಾರ್ಥನೆಯ ಕಾಲದಲ್ಲಿ ಯಾರಿಗಾದರೂ ನಾಲ್ಕು ಒಳ್ಳೆಯ ಮಾತುಗಳನ್ನು ಆಡಬೇಕೆಂಬ ಬಯಕೆಯಾದರೆ, ಅವನು ತನ್ನ ಸ್ಫೂರ್ತಿಯ ಮಾತುಗಳಿಂದ ಉಳಿದವರನ್ನು ಆಹ್ಲಾದಗೊಳಿಸುವುದಕ್ಕೆ ಯಾವದೇ ಆಕ್ಷೇಪ, ನಿರ್ಬಂಧಗಳೂ ಇರುವುದಿಲ್ಲ. ಅವನ ಏನೊಂದೂ ಅಭ್ಯಂತರ ಅಡಚಣೆಗಳಿಲ್ಲದೆ ಮಾತನಾಡಬಹುದು. ಅವರವರ ಮಟ್ಟಿಗೆ ಎಲ್ಲರೂ ಸ್ವತಂತ್ರರು.

ಕ್ವೇಕರರಲ್ಲಿ ನಾಮಕರಣ ಮುಂತಾದ ಪದ್ಧತಿಗಳೂ ಇರುವುದಿಲ್ಲ. ಪ್ರತಿಯೊಂದರ ಉಪಯೋಗ ಮತ್ತು ಯೋಗ್ಯತೆಗಳು ಅವನವನ ಸೇವೆಯ ಮತ್ತು ಕಾರ್ಯದ ಪ್ರಮಾಣವನ್ನು ಹೊಂದಿಕೊಂಡಿದೆ; ಎಂದಮೇಲೆ, ಇಂತಹ ಸಂಪ್ರದಾಯದ ಕಾರ್ಯಾಚರಣೆಗಳಿಂದ ದೊರಕುವ ಪುರುಷಾರ್ಥವಾದರೂ ಏನು? ಅದು ವ್ಯರ್ಥ ಕಾಲಹರಣಕ್ಕೆ ಒಂದು ನೊಂದು ಕಾರಣವಾಗಬಹುದು. ಇಂತಹ ಸರಳತೆಯನ್ನು ಅವರ ಮದುವೆಯ ಸಮಾರಂಭದಲ್ಲಿಯೂ ಕಾಣುತ್ತೇವೆ. ವಧೂವರರು ವಿವಾಹವಿಧಿಯ ಮಂತ್ರವನ್ನು ಪರಸ್ಪರ ಉಚ್ಚರಿಸಿ ಲಗ್ನವಾಗುವರು. ಪುರೋಹಿತರ ಆಗತ್ಯ ಬಿದ್ದುದೇ ಇಲ್ಲ. ಎಲ್ಲವೂ ಸುಲಭ-ಸರಳ!

ಓಡಿಬಂದ ನಿರಾಶ್ರಿತರು

ಕ್ವೇಕರರು ಕ್ರಿಸ್ತ ಸಮಾಜದಿಂದ ಸಿಡಿದು ನಿಂತ ಒಂದು ವರ್ಗದ ಜನರು. ಅವರ ಮೂಲಪುರುಷ ಜಾರ್ಜ ಫೋಕ್ಸ ಎಂಬವನು, ರಾಜನಿಷ್ಠೆ ತೋರಿಸುವುದು, ಚರ್ಚಗೆ ಕಾಣಿಕೆ ಮತ್ತು ಗೇಣಿ ಕೊಡುವುದು ಇವೆಲ್ಲವೂ ಶುದ್ಧ ಅನಗತ್ಯದ ವಿಷಯಗಳು; ಯಾರಿಗೂ ಯಾರ ಹಂಗೂ ಇಲ್ಲ; ಯಾರ ಮೇಲೆ ಒಡೆತನ ಮಾಡಲೂ ಒಬ್ಬನಿಗೆ ಹಕ್ಕಿರುವುದಿಲ್ಲ—ಎಂಬಂತಹ ವಿಚಾರದವನಾಗಿದ್ದ. ಇವನ ಈ ರೀತಿಯ ವಿಚಾರಸರಣಿ ಆಗಿನ ರಾಜನೀತಿಗೆ 'ಸರಿ' ಎಂದು ತೋರಲಿಲ್ಲ. ಪರಿಣಾಮವಾಗಿ ಜಾರ್ಜಫೋಕ್ಸನ ಮತ್ತು ಅವನ ಅನುಯಾಯಿಗಳ ಸಾಮೂಹಿಕ ಕೊಲೆಯು ನಡೆಯಿತು. ಇಂಥ ಧಾರ್ಮಿಕ ಅತ್ಯಾಚಾರದಿಂದ ಪ್ರಾಣ ಉಳಿಸುವ ಸಲುವಾಗಿ ಎಷ್ಟೋ ಜನರು ದೇಶಾಂತರಗಳಿಗೆ ಓಡಿಹೋದರು. ಕ್ವೇಕರ ಮಂಡಳದ ಮೊದಲಿನ ಇಬ್ಬರು ಮಹಿಳೆಯರು ಹೀಗೆ ಪ್ರಥಮತಃ ಓಡಿಬಂದು ಮೊತ್ತ ಮೊದಲಬಾರಿಗೆ ಅಮೇರಿಕಾದ ನ್ಯೂ ಇಂಗ್ಲಂಡ ಪ್ರದೇಶಕ್ಕೆ ಬಂದಿಳಿದರು. ಆದರೆ ದುರ್ದೈವವೆಂಬಂತೆ ಕೂಡಲೇ ಸೆರೆ ಹಿಡಿಯಲ್ಪಟ್ಟರು. ಯಾರೇ ಆಗಲಿ, ಅವರು ಕ್ವೇಕರರಾಗಿದ್ದರೆ ಸಾಕು, ನ್ಯೂ ಇಂಗ್ಲಂಡ ಪ್ರದೇಶದಲ್ಲಿ ಕಾಲೂರಗೊಡದೆಂಬ ಪ್ರತಿಬಂಧಾಜ್ಞೆಯು ಅಮಲಿನಲ್ಲಿ ಬಂತು. ಆದರೂ ನಿರಾಶ್ರಿತರು ತಂಡತಂಡವಾಗಿ ಬಂದು ನ್ಯೂ ಜೆರ್ಸಿ ಪ್ರದೇಶದಲ್ಲಿ ನೆಲೆನಿಲ್ಲಲು ತೊಡಗಿದರು. ಮುಂದೆ ಕೆಲವು ಕಾಲದ ಬಳಿಕ ಶ್ರೀಮಂತನಾದ ವಿಲಿಯಮ್ ಪೆನ್ ಎಂಬವನು ಪೆನ್‌ಸಿಲ್‌ವೇನಿಯಾದಲ್ಲಿ ಸ್ವಲ್ಪ ಆಸ್ತಿಯನ್ನು ಪಡೆದನು. ಇವನು ಸ್ವತಃ ಕ್ವೇಕರನಾಗಿದ್ದುದರಿಂದ ಅಲ್ಲಿ ಕ್ವೇಕರ ಸಮಾಜದ ಸದಸ್ಯರು ನೆಲೆನಿಲ್ಲಲು ಅನುಕೂಲ ಕಲ್ಪಿಸಿಕೊಟ್ಟನು. ದಿನ ಕಳೆದಂತೆ ಇವರ ಸಂಖ್ಯೆಯು ಬೆಳೆಯುತ್ತಾ ಬಂದಿತು. ಹಾಗೆಯೇ ಸಹಾಯಕ್ಕಾಗಿ ಮತ್ತು ಆಶ್ರಯಕ್ಕೆಂದು ಅಲ್ಲಿಗೆ ಓಡಿ ಬರುವವರ ಸಂಖ್ಯೆಯೂ ಎಣಿಕೆಗೆ ಮೀರಿ, ಹೆಚ್ಚಿತು. ಕ್ವೇಕರರ ಪರಿವಾರವು ಈಗ ಏಳು ಸಾವಿರಕ್ಕೆ ಏರಿತು.

ತ್ತಿಲ್ಲ. ಅಂದರೆ ಅದನ್ನು ಅಭ್ಯಸಿಸುವ ಇಲ್ಲವೆ ಕಾರ್ಯಗತವಾಗಿ ಮಾಡುವ ಸಾಹಸಬುದ್ಧಿ ತಮ್ಮಲ್ಲಿಲ್ಲ. ಪರಂಪರೆಯಿಂದಲೂ ಅವರು ದೇಶಕ್ಕಾಗಿ ಮಾಡಿದ ಸಾಹಸವನ್ನು ದೇಶ ಸ್ವತಂತ್ರ್ಯವಾಗಿ ನಮ್ಮ ಕೈಗೆ ಬಂದಮೇಲೂ ಆ ಕೆಲಸ ಮಾಡುತ್ತಿಲ್ಲ. ಅದಕ್ಕೆ ವಿರುದ್ಧವಾದ ಕಾರ್ಯವನ್ನೇ ಆಚರಿಸಿ ಧವಳ ಕೀರ್ತಿಗೆ ಅಪಚಾರವನ್ನು ಮಾಡುವಂತಿದೆ. ಇದು ಯಾಕೆ ಹೀಗೆ? ನಾವು ಎಲ್ಲಿ ತಪ್ಪಿದ್ದೇವೆ? ನಮ್ಮಲ್ಲೇನು ಕೊರತೆ? ಎಂದರೆ ನಮಗೆ ಉತ್ತರ ರೂಪವಾಗಿ ದೊರೆಯುವುದು "ಬುದ್ಧಿಮಾಂದ್ಯ ಬಡತನ"ವೊಂದೇ. ಆ ವಿಷಯದಲ್ಲಿ "ನಾವು ಬಡವರು".

"ಜೀವತ್ಕರ್ಷ ದಾರಿದ್ರ್ಯಪೀಡಿತರ ದ್ರೋಣಜೀವಿತ" ದುಷ್ಪ್ರಭಾವದಿಂದ ಯಾರಾದರೂ ಬದುಕಬಹುದೇನೋ! ಆದರೆ ಬುದ್ಧಿದರಿದ್ರನು ಎಂದೂ ಬದುಕಲಾರ.

ಪ್ರಧಾನ ಕಾರ್ಯಾಲಯ: ಉಡುಪಿ. ಸ್ಥಾಪನೆ: ೧೯೩೫

ದಿ ಕೆನರಾ ಮ್ಯೂಚುವಲ್ ಎಶ್ಯೂರೆನ್ಸ್
ಕಂಪೆನಿ, ಲಿಮಿಟೆಡ್,

ಇದುವೇ

ಪಾಲಿಸಿದಾರರ ನಂಬಿಕೆ ಹೆಚ್ಚಿಸುವ ಹೆಸರು

ಅಲ್ಲದೆ

ಸ್ಥಾಪಿತವಾದಂದಿನಿಂದಲೂ ಲಾಭ (ಬೋನಸ್)
ಹಂಚಿದ ಕಂಪೆನಿ.

The Canara Mutual Assurance Co, Ltd.

H. O. UDIPI (SOUTH INDIA) ESTD: 1935.

ಅಮೃತಾಂಜನ

ತಲೆವೇದನೆ, ಶಿರೋವೇದನೆ, ಉಳುಕು ಕುತ್ತಿಗೆ, ಭುಜ ಹಲ್ಲು ವೇದನೆಗಳಿಗೂ, ಎದೆನೋವು, ಗಾಯಗಳು, ಚಾತುಕೊಳ್ಳುವುದು, ಚೇಳುವಿಷ ಮುಂತಾದವು, ರಕ್ತವಾತ, ನೆಗಡಿ, ಮೊದಲಾದ ಎಲ್ಲಾ ರೋಗಗಳಿಗೂ ಸಿದ್ಧೌಷಧ

REGD

ಹುಳು ಕಡ್ಡಿ ಪುಡಿ ನಮ್ಮಲ್ಲಿ ಸಿಕ್ಕುತ್ತದೆ

ಅಮೃತಾಂಜನ ಲಿಮಿಟೆಡ್

ಮದರಾಸು.

ಬೊಂಬಾಯಿ ಮತ್ತು ಕಲ್ಕತ್ತ.

ಮೌನಸೇವೆ

ಸಮಾಜದ ನಡುವೆ

ಅಮೇರಿಕಾದಲ್ಲಿ ಫ್ರೆಂಚ ಮತ್ತು ಇಂಡಿಯಾನರ ವಿರುದ್ಧ ಇಂಗ್ಲಿಷ ಸರಕಾರವು ಯುದ್ಧ ಹೂಡಿದಾಗ, ಅವರು ಕ್ವೇಕರರನ್ನೂ ಯುದ್ಧಕ್ಕೆ ನೆರವು ನೀಡಬೇಕೆಂಬು ತುಂಬ ಒತ್ತಾಯಪಡಿಸಿದರು. ಸ್ವಾಭಾವಿಕವಾಗಿ ಅಹಿಂಸೆಯಲ್ಲಿ ಶ್ರದ್ಧೆ ಮತ್ತು ಯುದ್ಧದ ಕುರಿತು ಅಸಮಾಧಾನ ಹಾಗೂ ಜಿಗುಪ್ಸೆ ಹಾಗೂ ಯುದ್ಧ ಮಾಡುವುದೇ ಅನ್ಯಾಯ ಎಂಬ ತಿಳುವಳಿಕೆ ಇದ್ದ ಕ್ವೇಕರರು ಅದರಲ್ಲಿ ಭಾಗವಹಿಸುವುದೆಂದರೆ, ಊಹನೆಗೆ ನಿಲುಕದ ಸಂಗತಿ! ಅದರೂ ಯುದ್ಧದ ಕೋಲಾಹಲದಿಂದ ಲೋಕವೇ ಮರೆತು ನಿಂತಾಗ, ಅದರಿಂದಾಗಿ ತೀವ್ರವಾದ ಮಾರ್ಪಾಟುಗಳು ಸಂಭವಿಸುತ್ತಿರುವಾಗ, ಇವರು ಮಾತ್ರ ಮೌನವಾಗಿ ಉಳಿಯುವುದಾದರೂ ಸಾಧ್ಯವೆ? ಕ್ರಮೇಣ ಕ್ವೇಕರರು ಸಾಮಾಜಿಕ ಉನ್ನತಿಗೆ ಸಹಾಯಕವಾದ ಏನಾದರೂ ಉತ್ತಮ ಸುಧಾರಣೆಯ ಕಾರ್ಯದಲ್ಲಿ ತೊಡಗುವ ನಿರ್ಧಾರಕ್ಕೆ ಬಂದರೆನ್ನಬಹುದು. ರಾಜಕೀಯದ ಹೆಸರಿನಲ್ಲಿ ನಡೆಯುವ ಅನೀತಿಯನ್ನು ಅವರು ಖಂಡಿಸಿದರು; ಜನರಲ್ಲಿ ಜಾಗ್ರತಿಯನ್ನೂ ವಿವೇಕೋದಯವನ್ನೂ ಉಂಟು ಮಾಡಿದರು. ತಮ್ಮ ಸ್ವಂತ ಖರ್ಚಿನಿಂದ ಶಾಲಾ ದಾಲೇಖುಗಳನ್ನು ತೆರೆದು, ಅವುಗಳ ಮೂಲಕ ಜನರಲ್ಲಿ ಭ್ರಾತೃಭಾವವನ್ನೂ, ನ್ಯಾಯ ಮತ್ತು ಶಾಂತಿ ಪ್ರಿಯತೆಯನ್ನೂ, ಸೇವೆಗಾಗಿ ಮಮತೆಯನ್ನೂ ಹುಟ್ಟಿಸಿದರು. ತಮ್ಮ ಎಡೆಬಿಡದ ಸದುಪಯೋಗಿ ಚಟುವಟಿಕೆಗಳಿಂದ ಅವರು ಜನಮನ್ನಣೆಗೆ ಪಾತ್ರರಾದರು. ತಮ್ಮ ಆ ದಿನಗಳಲ್ಲಿಯೇ ಕ್ವೇಕರರು ಜಗತ್ಪ್ರಸಿದ್ಧಿಗೆ ಬಂದರೆನ್ನಬಹುದು.

ಮೊದಲನೆಯ ಜಾಗತಿಕ ಯುದ್ಧದಲ್ಲಿ ಅಮೇರಿಕಾ ಭಾಗವಹಿಸಿತ್ತು. ಶಾಂತಿಪ್ರಿಯರಾದ ಕ್ವೇಕರರು ಅದರಲ್ಲಿ ನೇರಾಗಿ ಭಾಗವಹಿಸುವುದು ಸಾಧ್ಯವಿರಲಿಲ್ಲ. ಆದರೆ ತಮ್ಮ ಮೂಲದ ನಂಬಿಕೆ ಮತ್ತು ಕಾಪಾಡಿಕೊಂಡು ಬಂದ ಘನತೆಗೆ ಕುಂದು ಬಾರದಂತೆ ನಡೆಯಲು ಒಂದು ಅನುಕೂಲವಾದ ಉತ್ತಮ ಉಪಾಯ ಅವರ ನೆರವಿಗೆ ಬಂದಿತು. ಯುದ್ಧದಲ್ಲಿ ಗಾಯಗೊಂಡವರ ಸೇವೆ, ನಿರಾಶ್ರಿತರಾದವರ ಯೋಗಕ್ಷೇಮ, ರೋಗಪೀಡಿತರ ಆರೈಕೆ, ಅಧಿಕ ಆಹಾರ ಉತ್ಪಾದನೆಗಾಗಿ ದುಡಿಯುವುದು ಅಗತ್ಯವಿದ್ದೆಡೆಗಳಿಗೆ ಆಹಾರದ ಸರಬರಾಜು ಮಾಡುವುದು—ಮುಂತಾದ ಲೋಕಕಲ್ಯಾಣಕಾರಿ ಉಪಕ್ರಮವನ್ನು ಅವರು ಕೈಗೊಂಡರು. ಅದರಲ್ಲಿ ಯಶಸ್ವಿಯಾದುದು ಮಾತ್ರವಲ್ಲ, ಎಲ್ಲರ ಮುಕ್ತಕಂಠದ ಪ್ರಶಂಸೆಗೂ ಪಾತ್ರರಾದರು. ಅವರ "ಅಮೇರಿಕನ್ ಗೆಳೆಯರ ಸೇವಾಸಮಿತಿ"ಯು ಇದೇ ಕಾಲದಲ್ಲಿ ಉದಯವಾಯಿತು. ಜಗತ್ತಿನ ಪ್ರತಿಯೊಂದು ದೇಶದ ಸ್ಥಿತಿಗತಿಗಳನ್ನು ಸುಧಾರಿಸುವುದಕ್ಕೆ ಮತ್ತು ಸಮಾಜ ಸುಧಾರಣೆಯ ಕಾರ್ಯದಲ್ಲಿ ನೆರವಾಗಲು, ಈ ಸಮಿತಿಯು ಶಕ್ತಿಮೀರಿ ಪ್ರಯತ್ನಿಸುತ್ತದೆ. ಅದು ತೆಗೆದುಕೊಳ್ಳುವ ಪರಿಶ್ರಮವು ನಿಜಕ್ಕೂ ಪ್ರಶಂಸನೀಯ.

ಮಹಾನುಭಾವರು

ರೋಗ ರುಜಿನಗಳನ್ನು ತಡೆಗಟ್ಟಲು ನೆರವಾಗುವುದು, ನಿರಾಮಯ ಸುಧಾರಣೆಯಲ್ಲಿ ಯಥಾಶಕ್ತಿ ಸಹಯೋಗ ನೀಡುವುದು, ವಿದ್ಯಾಕೇಂದ್ರಗಳನ್ನು ಪುಕ್ಕಟೆಯಾಗಿ ತೆರೆದು ಜನರಲ್ಲಿ ಸತ್ಯನಿತ್ಯವಾದ ಹಾಗೂ ಯಥಾರ್ಥವಾದ ಜ್ಞಾನ ಪ್ರಸಾರ ಮಾಡುವುದು, ದೇಶದೇಶಗಳ ನಡುವೆ ಶಾಂತಿ ಮತ್ತು ಸೌಹಾರ್ದತೆಯು ಸ್ಥಾಪಿತವಾಗಿ ಸ್ನೇಹ ಬೆಳೆಸುವುದು— ಇನ್ನೂ ಇಂತಹ ಹತ್ತು ಹಲವಾರು ಉದ್ಯಮಗಳು ಕ್ವೇಕರರ ಚಟುವಟಿಕೆಯ ನಿದರ್ಶನ. ಇದಕ್ಕಾಗಿ ಕೆಲಸಮಾಡುವ ಸಂಸ್ಥೆಗಳು ಅಮೇರಿಕಾದಿಂದ ಲಂಡನ, ಜಾಂಜಿಬಾರ್, ಟೋಕಿಯೋದ ವರೆಗೂ ಪಸರಿಸಿವೆ. ಇವುಗಳಲ್ಲಿ ಕೆಲಸ ಮಾಡುವವರಿಗೆ ಅವರ ವೆಚ್ಚದ ಹೊರತು ಬೇರೆ ಬಿಡಿಕಾಸೂ ದೊರೆಯುವುದಿಲ್ಲ. ಸಕಲರೂ ಸುಖಿಗಳಾಗಬೇಕು; ಲೋಕಕಲ್ಯಾಣವಾಗಬೇಕು—ಎಂಬ ಉನ್ನತ ಆದರ್ಶವಿರುವ ಮಹಾನುಭಾವರೇ ಈ ಸಂಸ್ಥೆಯಲ್ಲಿ ಕೆಲಸ ಮಾಡುವರು. ಭಾರತದ ಪುರಾತನ ಆದರ್ಶ ಮತ್ತು ಸಂಸ್ಕೃತಿಗೆ ಪೋಷಕವಾಗುವ ಇಂಥದೊಂದು ಸಹಯೋಗದ ಸಮಾಜದ ರಚನೆ ಇಂದಿನ ದಿನದಲ್ಲಿ ತೀರ ಅಗತ್ಯದ ವಿಷಯವಾಗಿದೆ ಎಂದು ಯಾವ ವಿಚಾರಶೀಲನಿಗೂ ಹೊಳೆಯದಿರಲಾರದು. ಆದರೆ ಅದಕ್ಕೆ ಬೇಕಾದ ಕರ್ತೃತ್ವ ಶಕ್ತಿ ನಮ್ಮೆಲ್ಲರ ಎದೆಯೊಳಗಿಂದ ಹೊರಹೊಮ್ಮಿ ಬರಬೇಕು; ಕ್ರಿಯಾತ್ಮಕ ಆಚರಣೆಯಲ್ಲಿ ತೊಡಗಬೇಕು; ಅಷ್ಟೆ.

—ಕಾರ್ತಿಕೇಯ

Notice

ಉಡುಪಿ ಡಿ. ಮು. ಕೋರ್ಟಿನಲ್ಲಿ

O. P. No. 3/1951

1 ಪುರುಷೋತ್ತಮ ಕಾಮತ್ತು
2 ರಾಮಚಂದ್ರ ಕಾಮತ್ತು } ಕೈಲಾಸನರಸಿಂಹ ಕಾಮತ್ತರ ಮಗಂದಿರು.

— ಅರ್ಜಿದಾರರು —

ಉಡುಪಿ ತಾಲೋಕು ಬಾಳಕುದ್ರು ಗ್ರಾಮದ ಹಂಗಾರಕಟ್ಟೆಯಲ್ಲಿರುವವರು—

ಈ ಮೂಲಕ ಸರ್ವಜನರಿಗೆ ತಿಳಿಯಪಡಿಸುವದೇನಂದ್ರೆ:-

ಅರ್ಜಿದಾರರ ತಾಯಿಯು ಆಕೆ ಉಡುಪಿ ಕ್ಯಾಟಿಯಲ್ಲಿ ತಾ. 23-11-50ರಲ್ಲಿ ಮೃತಪಟ್ಟ ಸಾವಿತ್ರಿಯಾನೆ ಲಕ್ಷ್ಮಿ ಅಮ್ಮಗೆ ಬರತಕ್ಕ ಸದ್ರಿ ಅರ್ಜಿಯಲ್ಲಿ ವಿವರಿಸಿದ(ಬೇರಿಕು) ಡಿಪೋಜಿಟುಗಳ ವ್ಯವೇಜು ವಸೂಲು ಮಾಡುವದೆ ಸದ್ರಿ ಸಾವಿತ್ರಿಯಾನೆ ಲಕ್ಷ್ಮಿ ಅಮ್ಮನು ತಾರೀಖು 3-11-39ರಲ್ಲಿ ರಿಜಿಸ್ಟ್ರಿ ಸಹಿ ಬರದಿಟ್ಟ ವಿಲ್ ನಾಮೆ ಪ್ರಕಾರ ಹಕ್ಕುದಾರರಾದ ಅರ್ಜಿದಾರರು ಸಕ್ಸೆಶನ್ ಸರ್ಟಿಫಿಕೇಟು ಅಪೇಕ್ಷಿಸಿ ಕೊಟ್ಟು ದೂರಿದ ಸದ್ರಿ ಅರ್ಜಿಯು ಸದ್ರಿ ಕೋರ್ಟಿನಲ್ಲಿ ತಾ. 3-3-51ಕ್ಕೆ ತನಿಕೆಗೆ ಇರುವದ್ರಿಂದ ಆ ಕುರಿತು ಆಕ್ಷೇಪ ಹೇಳತಕ್ಕವರು ಸದ್ರಿ ತಾರೀಕಿನ ದಿವ್ಸ ಸದ್ರಿ ಅರ್ಜಿ ಸದರಿ ಸದ್ರಿ ಕೋರ್ಟಿನ ಮುಂದೆ ಸ್ವತಃ ಅಥವಾ ವಕೀಲರ ಮುಖಾಂತ್ರ ಹಾಜರಾಗಿ ತಮ್ಮ ಆಕ್ಷೇಪಗಳನ್ನು ವ್ಯಾಹೀರು ಮಾಡಿಕೊಳ್ಳಬೇಕಾಗಿ ಈ ಮೂಲಕ ಎಲ್ಲಾ ಜನರಿಗೆ ತಿಳಿಯಪಡಿಸೋಣಾಗುತ್ತದೆ.

H. Ramanath Pai
Advocate for Petitioners
Dated 5-2-1951 UDIPI, S. K.

For Life Insurance

CONSULT

THE NEW GUARDIAN OF INDIA
LIFE INSURANCE CO. LTD.
(Established 1934)

Chairman: Sri M. Ct. M. Chidambaram Chettiyar

A Policy in this progressive Life Office is a good investment; its Agency is a valuable business connection.

MANGALORE BRANCH:
K. S. R. Road,
Hampanakatta, MANGALORE.

HEAD OFFICE:
"United India Life Bldg",
P B No 142, MADRAS.

ಭಾರತದ ಬಹುದೊಡ್ಡ ನಗರವಾದ ಬೊಂಬಾಯಿಯಲ್ಲಿ
ಗ್ರಾಹಕರ ತೃಪ್ತಿಯನ್ನೇ ಧ್ಯೇಯವಾಗಿಟ್ಟುಕೊಂಡಿರುವ
ಕನ್ನಡಿಗರಿಂದಲೇ ನಡೆಸಲ್ಪಡುತ್ತಿರುವ ಉನ್ನತವಾದ ರಾಷ್ಟ್ರೀಯ ಸಂಸ್ಥೆ—

ದಿ ನೇಶನಲ್ ಜನರಲ್ ಸ್ಟೋರ್ಸ್

(ಡಿಸ್ಪೆನ್ಸಿಂಗ್ ಕೆಮಿಸ್ಟ್ಸ ಮತ್ತು ಡ್ರಗ್ಗಿಸ್ಟ್ಸ)

8 ಎ, ಮೆಹರ್ವಾನ್ ಬಿಲ್ಡಿಂಗ್ಸ್, Opp: His Master's Voice
ಸರ್ ಫಿರೋಜ್ ಷಾ ಮೇಥಾ ರೋಡು, ಫೋರ್ಟ, ಬೊಂಬಾಯಿ.

ಇಲ್ಲಿ ದೇಶ-ವಿದೇಶಗಳಿಂದ ಎಲ್ಲಾ ತರದ ಔಷಧಗಳನ್ನೂ ಇತರ ಜನೋಪಯೋಗಿ ಸಾಮಾನುಗಳನ್ನೂ ರಖಂ ಅಗಿ ತಂದು ಆಕರ್ಷಕ ಬೆಲೆಗೆ ವಿತರಣೆಮಾಡಲಾಗುತ್ತದೆ.

ಅನುದಿನದ ಉಪಯೋಗಕ್ಕೆ ಅಗತ್ಯವಾದ ಸಾಹಿತ್ಯಗಳೂ ಶಾಸ್ತ್ರೀಯ ಟಾನಿಕುಗಳೂ ವಿಟಮಿನ್ ಆಹಾರ ವಸ್ತುಗಳೂ ಮುಲಾಮುಗಳೂ, ಸುವಾಸನಾ ದ್ರವ್ಯಗಳೂ ರಖಂ ಆಗಿಯೂ ಚಿಲ್ಲರೆಯಾಗಿಯೂ ಸುಲಭ ದರದಲ್ಲಿ ದೊರೆಯುತ್ತವೆ.

ವಿ. ಸೂ.— ಪರಸ್ಥಳಗಳ ಆರ್ಡರುಗಳನ್ನು ಸ್ವೀಕರಿಸಲಾಗುವುದು.
ಹೆಚ್ಚಿನ ಮಾಹಿತಿಗಳಿಗೆ ಬರೆಯಿರಿ

ಎಂ. ಮೆಂಡೋಸ, ಮಾಲಕ.

M Mendosa,
Proprietor.

THE NATIONAL GENERAL STORES
Importers, Exporters, Dispensing Chemists & Druggists.
General Merchants & Commission Agents,
8A Mherwan Buildings, Opp: His Master's Voice,
Sir Phirozsha Mehta Road, Fort, Bombay.

ಋತುಸ್ರಾವ ನಿಂತಿತು

'ಕುಮಾರಿ' ಬಿಲ್ಲೆಗಳನು ಉಪಯೋಗಿಸಿದರೆ ಹದಗೆಟ್ಟ ಋತುಸ್ರಾವವಾಗುವುದು, ಹೊಟ್ಟೆಗೆ ಬರುವುದು, ಈ ಔಷಧ ಸೇವನೆಯಿಂದ ಶೀಘ್ರ ಗುಣಹೊಂದಬಹುದು, ಯಾವ ಬಾಧಕವೂ ಇಲ್ಲ. ಸಾವಿರಾರು ಮಂದಿಗೆ ಖಾತ್ರಿ ಗುಣವಾಗಿದೆ. ಬೆಲೆ; ರೂ 3-; ಸ್ಪೆಶಲ್ ರೂ. 5- ಅಧಿಕಾಧಿಕ ಸ್ಪೆಶಲ್ ರೂ, 8-[ವಿ. ಪಿ. ಖರ್ಚು ಪ್ರತ್ಯೇಕ.]

MIS. D. DEVEE, F. DS. (N. J.)
Tollygunge CALCUTTA.
ಸ್ತ್ರೀತಜ್ಞರು ಕಲಾಕಾಂತ, ಮಂಗಳೂರು

ನಿಮಗೆ
ಇಂಗ್ಲಿಷ್ ಕಲಿಯಬೇಕೆ?
ಹಾಗಿದ್ದರೆ



ಕೊರಡ್ಕಲ್ ಶ್ರೀನಿವಾಸರಾವ್ ವಿರಚಿತ

ಸುಲಭದಲ್ಲಿ ಇಂಗ್ಲಿಷ್

English Made Easy

ಎಂಬ
ಇಂಗ್ಲಿಷ್ ಸ್ವಯಂಬೋಧಿನಿ ಪುಸ್ತಕ ಅತ್ಯುಪಯುಕ್ತವಾದುದು.
ಬೆಲೆ ರೂ. 1-8-0.
ವಿ. ಪಿ. ದ್ವಾರ ರೂ. 1-14-0
ಪ್ರತಿಗಳು ನಮ್ಮಲ್ಲಿ ಪುಸ್ತಕ ವ್ಯಾಪಾರಿಗಳಲ್ಲಿ ಸಿಗದಿದ್ದರೆ, ಕೆಳಗಿನ ವಿಳಾಸಕ್ಕೆ ಬರೆಯಿರಿ.

ನವಭಾರತ ಪುಸ್ತಕ ಭಂಡಾರ,
ಉಡುಪಿ

ಪ್ರಥಮ ಜನಗಣನೆ

ಭಾರತ ದೇಶ ಸ್ವಾತಂತ್ರ್ಯ [illegible] ಒ ನೊದಲನೇ ದಾಗ ಈ [illegible] ಯುತ್ತಲಿದೆ [illegible] ಜನಗಣನೆ ಪಡೆ [illegible] ದು ಸಮಾಜ [illegible] ೧೯೩೧ರಲ್ಲಿ ನಡೆದ [illegible] ಗಣತಿಯ [illegible] ಪ್ರತಿ ಪ ವಿರುದ್ಧ ಚಳವಳಿಯು [illegible] ಯಿದ್ದುದರಿಂದ ಜನ [illegible] ಈ ಬಗೆಯ ಜನಗಣತಿಯಿಂದ [illegible] ದೋ ರೀತಿಯ ಸ್ವಾರ್ಥವನ್ನು [illegible] ಟ್ಟುಕೊಂಡಿದ್ದಾರೆನ್ನುವ ಕಲ್ಪನೆ ಜನರಲ್ಲಿ ಇತ್ತು. ಆಗ ಸರಕಾರ ಯಾವ ಸೂಚನೆ ಕಾರ್ಯ ಕೈಗೊಂಡರೂ [illegible] ದೆಯೆಂದು ಅದಕ್ಕೆ ವಿರುದ್ಧವಾಗಿ ವರ್ತಿಸು ತ್ತಿದ್ದರು. ಜನಗಣನ [illegible] ವರು [illegible] ದ್ದರು. [illegible] ಕಾರಣಗಳಿದ್ದವು [illegible] ಜನಗಣನೆಯ [illegible] ಯಿತು.

ಜನಗಣನೆ ೯ ಫೆಬ್ರುವರಿ [illegible] ರಿಂದ ಮಾರ್ಚ ತಿಂಗಳ ೧ನೇ ತಾರೀಖಿನ ರಾತ್ರಿಯ ವರೆಗೆ [illegible] ಗಳಲ್ಲಿ ದೇಶದ್ಯಂತ ನಡೆಯುವ [illegible] ಈ ಕಾರ್ಯ [illegible] ಕೋಟಿ ಜನರ ಜನಗಣನೆಯು ನಡೆಯಲಿದೆ. [illegible] ದೃಷ್ಟಿಯಿಂದ ಜನಗಣನೆಯು [illegible] ವ್ಯಕ್ತಿಗೆ [illegible] ತಿಳಿದುಕೊಳ್ಳಲಾಗುತ್ತದೆ. ಗಣನೆಕಾರರು [illegible] ಪ್ರಶ್ನೆಗಳಿಗೆ [illegible] ಯಾವ [illegible]

[illegible] ಉತ್ತರಿಸುವವರ [illegible] ಬೇಕೆಂಬ [illegible] ಪ್ರಶ್ನೆಗಳಿಗೆ ವಿರುದ್ಧವಾದ ಉತ್ತರ [illegible] ವ್ಯಕ್ತಿಗಳನ್ನು ಮರೆಮಾಚು [illegible] ಉದ್ದೇಶ ಇಂದು ಇಂದಿನ [illegible] ರೀತಿಯ [illegible] ಯಾಗಬೇಕು [illegible] ಇಂದಿನ ಜನಗಣನೆಯಲ್ಲಿದ್ದ ಅಜ್ಞಾನ-ಅನುಮಾನಗಳನ್ನು ಇಲ್ಲಿ ತೋರಿಸಿದರೆ [illegible] ಶಿಕ್ಷೆಗೆ ಒಳಪಡುವರು [illegible] ಪೇಟೆಯಲ್ಲಿ [illegible]

ಈ ಬಾರಿಯ ಜನಗಣನೆಯ ಮಹತಿ [illegible] ಅರಿತುಕೊಳ್ಳಬೇಕಾಗಿದೆ. [illegible] ಹಿತಚಿಂತನೆ [illegible] ಅವಶ್ಯಕವಾಗಿದೆ. [illegible] ಜನ [illegible] ಎಂಬುದೆ [illegible] ಜನಗಣನೆಯು [illegible] ಪರಿಶೀಲಿಸಬಹುದು. [illegible]

[illegible] ದೇಶದ ಜನಜೀವನದ ಮಟ್ಟ [illegible] ಗಿರುತ್ತದೆ. ಎನ್ನದಿಂದ [illegible] ಜನ [illegible] ಇನ್ನಷ್ಟು [illegible] ಜನಗಣನೆಯ [illegible] ಬಿಟ್ಟಿದೆ.

[illegible] ನಮ್ಮಮಾಗಿ [illegible] ಮುಂದ [illegible] ನೋಡಬೇಕಾಗಿ [illegible] ಪರಿಶೀಲನೆ. [illegible]

[illegible] ಇವೆಲ್ಲವನ್ನು ತಿಳಿದುಕೊಳ್ಳಬೇಕಾಗಿದೆ ಈ ಮಾರ್ಗದಿಂದ [illegible] ಕಾರ್ಯ ಕೈಗೊಳ್ಳುವ ಯೋಜನೆ [illegible]. ಪ್ರಜೆಗಳ ಜೀವನ ಮಟ್ಟವನ್ನೇರಿಸುವದಕ್ಕೂ, ಆಹಾರ [illegible] ಕೊರತೆಯನ್ನು ನೀಗಿಸುವದಕ್ಕೂ, ಭಾರತ ದೇಶದ [illegible] ಸಂಸ್ಕೃತಿಯ [illegible] ಸ್ಥಿತಿಗೆ [illegible] ಗಣನೆ ಮುಖ್ಯವಾಗಿದೆ. [illegible] ಜನತೆಯು ಹಿತಕ್ಕಾಗಿ [illegible]

ಜನಗಣನೆಯಿಂದ ಆರ್ಥಿಕ ಸ್ಥಿತಿಯನ್ನು [illegible] ಮಾಡುವುದರಿಂದ ಕೆಲವರ ಕಲ್ಪನೆಯಿದೆ [illegible] ಅಜ್ಞಾನಿಗಳು ಜನರಲ್ಲಿ [illegible]. ಜನಗಣನೆಯಿಂದ [illegible] ಜನಗಣನೆಯ ಮುಖ್ಯ ಉದ್ದೇಶ [illegible]

[illegible] ಜನಗಣನೆಯ [illegible] ಜನಗಣನೆ [illegible] ಇದು ಅತ್ಯಂತ [illegible] ನಮಗೆ [illegible]

[illegible] ಜನ [illegible] ಮಾಡಿ [illegible]

[illegible] ಆಗಿದ್ದರೂ [illegible] ಮಾಡುತ್ತಾ [illegible] ನಾವು ಮರೆಯುದಿರೋಣ. ಆ [illegible] ಇಲ್ಲಿಯೂ [illegible] ಅಕ್ರಮಸಬೇಕು. [illegible] ಸಿಕ್ಕಿಸ್ವಪ್ರಯೋಜನವನ್ನು ಮಾಡಿಕೊಳ್ಳಬಾರದು. ಅಲಕ್ಷ ಮಾಡಿದರೆ ಮುಂದೆ ಕನ್ನಡ ನೆಲ ಇನ್ನಷ್ಟು ಹರಿದು ಹಂಚಿ ಹೋಗಬಹುದು.

ಅಂತೂ ಜನಗಣನೆಯಲ್ಲಿ ಸಂಗ್ರಹಿಸುವವರನ್ನು ಉತ್ತರಿಸುವವರೂ ಪ್ರಾಮಾಣಿಕರಾದರೇನೇ ಎಲ್ಲವೂ ಸುಸೂತ್ರವಾಗಿ ಜರಗೀತು.

ರಾಷ್ಟ್ರೀಯ ಮನೋಭಾವನೆಯಿಂದ ಜನಗಣನೆಯ ಕಾರ್ಯವನ್ನು ಮಾಡುವವರಿಗೆ ಜನಸಮರ್ಪಕವಾದ ಉತ್ತರವನ್ನಿತ್ತು ಅವರೊಡನೆ ವಿನಯದಿಂದ ನಡೆದುಕೊಳ್ಳಬೇಕು. ಗಣನೆ ಮಾಡುವವರು ಪ್ರಾಮಾಣಿಕತನದಿಂದಲೂ, ವಿಶೇಷ ಆಸಕ್ತಿಯಿಂದಲೂ, ತಕ್ಕಂತೆ ಸಹನೆಯಿಂದಲೂ, ವಿನಯವಾದ ಮಾರ್ಗದಿಂದಲೂ ವರ್ತಿಸಬೇಕು. ಇಂದಲೇ ಜನಗಣನೆಯು ಮಹತ್ವ ಫಲಿಸಬಹುದೀತು.

[illegible] ಪ್ರಧಾನ ಯಾತ್ರಿ [illegible]
ಸ್ಥಾಪಿತ 1906
ಭಾರತದೊಳಗೆ 40ಕ್ಕಿಂತಲೂ ಹೆಚ್ಚು ಶಾಖೆಗಳು
ಬಹಳ [illegible] ಬ್ಯಾಂಕರರು [illegible]

ಹೀರ್ಸಿಯಲ್ ಇಂಜಿನುಗಳು
ಉತ್ತಮ ತರಗತಿಯ 12/15 ಹಾರ್ಸಪವರ
ಜರ್ಮನ ಹೊರಿಝೊಂಟಲ್
ಇಂಜಿನ. ಬರಿ 800 R. P. M.
ಬೋರ್ ಬೇರಿಂಗ, ಎರಡು ಫ್ಲಾಯ್ ವೀಲ್, "ಬೋಶ್" ಪಂಪ ಹಾಗೂ ಏಟ ಮಾಯಿಜರ ಮ ಅನ್ನೇಕ ಗುಣಉಳ್ಳವು
ಬೆಲೆ ರೂ. 3400/-
ಮುಂಬಾಯಿ ಡಿಲಿವರ
The Vijay Engineering Co. Ltd.
Mazagaon. Bombay 10.

THE BOMBAY LIFE ASSURANCE COMPANY, LTD.
ದಿ ಬೊಂಬೆ ಲೈಫ್ ಎಶ್ಯೂರನ್ಸ ಕಂಪನಿ ಲಿಮಿಟೆಡ್
(ಸ್ಥಾಪನೆ: 1908)
ಅತ್ಯಂತ [illegible] ಸಂಸ್ಥೆಗಳಲ್ಲೊಂದು
[illegible]
[illegible] ಏಜೆನ್ಸಿ [illegible]
[illegible]
ಮುಂಬಯಿ, [illegible], ಬೆಂಗಳೂರು, [illegible], ತ್ರಿವೇಂದ್ರಮ್,
[illegible]
[illegible]
[illegible] ನಮ್ಮ ಸೇವೆಯನ್ನು [illegible]
[illegible] ನಮ್ಮ ಪ್ರತಿನಿಧಿಯನ್ನು [illegible]
[illegible] ಶಾಖೆಗಳಿಗೆ [illegible]



ಹೊಸತೊಂದು ತಯಾರಿಕೆಯ ಪ್ರಕಟನೆ
ಎಸ್ಟ್ರೇಲಾ
ರಜಿಸ್ಟರ್ಡ್ ಟ್ರೇಡ ಮಾರ್ಕ
ESTRELA
III-ನಂಬರ್
ಮೆಂಟಲ್
[illegible] ಗಳಿಂದ ಕಂತ್ರ ಮೂಲಕ ಹೊಸೆಯಲ್ಪಟ್ಟುದು
ಎಸ್ಟ್ರೇಲಾ ಬಿಟಿಡೀಸ್ ಲಿಮಿಟೆಡ್,
[illegible] ರೋಡ್, ಬೊಂಬಾಯಿ [illegible]
[illegible] ಕಲ್ಕತ್ತ, [illegible] ದಿಲ್ಲಿ, ನಾಗಪುರ, ಮದ್ರಾಸ್.

ಈ ವಾರದಲ್ಲೇನಂತೆ?

ಕೊರಿಯಾ ರಂಗ

ಕೊರಿಯಾ ರಣರಂಗದಲ್ಲಿ ಕಮ್ಯೂನಿಸ್ಟರ ವರ್ಚಸ್ಸು ತಗ್ಗುತ್ತಲಿದೆ. ದಕ್ಷಿಣ ಕೊರಿಯಾದವರು ಕಮ್ಯೂನಿಸ್ಟರು ಆಕ್ರಮಿಸಿದ ಒಂದೊಂದೇ ಸ್ಥಳಗಳನ್ನು ಸ್ವಾಧೀನಗೊಳಿಸುತ್ತಿದ್ದಾರೆ. ಬ್ರಿಟಿಷ್, ಅಮೇರಿಕಾ, ಟರ್ಕಿ ಹಾಗೂ ಸಂ. ರಾ. ಸೈನಿಕರು ಹಾನ ನದಿಯ ದಂಡೆಯಲ್ಲಿ ನೆಲೆನಿಂತಿರುವರು. ಕಮ್ಯೂನಿಸ್ಟರ ಸಾಮೂಹಿಕ ಸಂಘಟನಾ ಸ್ಥಳಗಳ ಮೇಲೆ ಅತ್ಯಂತ ತೀವ್ರ ರೂಪದ ಧಾಳಿಯನ್ನು ನಡೆಸಿದ್ದರ ಫಲವಾಗಿ ಅವರು ಸಿವೋಲ ಬಿಟ್ಟು ೨೫ ಮೈಲು ಹಿಂದೆ ಸರಿದಿದ್ದಾರೆ. ಪಶ್ಚಿಮ ರಣರಂಗದಿಂದ ಹಿಂದೆ ಬಂದ ಸುಮಾರು ಎಂಟು ಸಾವಿರ ಕಮ್ಯೂನಿಸ್ಟರು ಯಾವುದೋ ಸಮಾಲೋಚನೆಯಲ್ಲಿ ಒಂದೆಡೆ ಮಗ್ನರಾಗಿದ್ದಾಗ ಸಂ. ರಾ. ದಳದವರು ಹೋಗಿ ಗುಂಡಿನ ಸುರಿಮಳೆಗೈದರು. ಈಚೆಗೆ ಯುದ್ಧರಂಗದಲ್ಲಿ ಕಮ್ಯೂನಿಸ್ಟರ ಬಲವು ದಿನದಿಂದ ದಿನಕ್ಕೆ ಕುಗ್ಗುತ್ತ ಬರುತ್ತಲಿದೆ.

ಕಾಶ್ಮೀರ ಸಮಸ್ಯೆ

ಕಾಶ್ಮೀರದ ಪ್ರಶ್ನೆಯು ಈ ವಾರದಲ್ಲಿ ಭದ್ರತಾ ಸಮಿತಿಯ ಮುಂದೆ ಬರಲಿದೆ. ಕಾಮನ್‌ವೆಲ್ತ್ ಸಭೆ ಇದಕ್ಕೆ ಪರಿಹಾರರೂಪವಾದ ಮಾರ್ಗದರ್ಶನ ಮಾಡುವಲ್ಲಿ ಪೂರ್ತಿ ಪರಾಜಯವನ್ನು ಹೊಂದಿದರೂ ಅದರಲ್ಲಿ ಪರಿಹಾರರೂಪವಾಗಿ ಬಂದಿರುವ ಸೂಚನೆಗಳೇ ಇಲ್ಲಿಯೂ ಮುಂದೆ ಬರುವ ಸಂಭವವಿರುತ್ತದೆ. ಕೊರಿಯಾಯುದ್ಧದ ವಿಚಾರದಲ್ಲಿ ಯು. ಯನ್. ಓ. ಚೀನಾ ಆಕ್ರಮಣಕಾರಿ ರಾಷ್ಟ್ರವೆಂದು ಸಾರಿದ ವಿಚಾರದಲ್ಲಿ ಭಾರತ ವಿರುದ್ಧ ಧೋರಣೆ ವಹಿಸಿದ್ದರ ಫಲವಾಗಿಯೂ ಭಾರತದ [illegible] ಒಲವು ಕಮ್ಯೂನಿಸ್ಟ ಚೀನಾದ ಕಡೆಗಿರುವುದರಿಂದಲೂ, ಪಾಕಿಸ್ತಾನಿಗಳ ಭಾರತ ವಿರುದ್ಧ ಅಪಪ್ರಚಾರದಿಂದಲೂ ಕಾಶ್ಮೀರ ಪ್ರಶ್ನೆ ಇನ್ನೂ ಸ್ವಲ್ಪ ಜಟಿಲವಾಗಬಹುದೋ ಏನೋ! ಕಳೆದ ಬಾರಿಯ ಮಧ್ಯಸ್ಥಗಾರರಾದ ಸರ್ ಡಿಕ್ಸನ್ನರು ಕಾಶ್ಮೀರ ತಂಟೆಯನ್ನು ಬಗೆಹರಿಸುವಲ್ಲಿ ಸೋಲನ್ನೊಪ್ಪಿಕೊಂಡರೂ ಕೆಲವು ವಿಚಾರಗಳನ್ನು ಉಲ್ಲೇಖಿಸಿರುತ್ತಾರೆ. ಕಾಶ್ಮೀರದಲ್ಲಿ ಪಾಕಿಸ್ತಾನವು ಆಕ್ರಮಕ ರಾಷ್ಟ್ರವೆಂಬುದನ್ನು ಸ್ಪಷ್ಟೀಕರಿಸಿದ್ದಾರೆ. ಆದರೆ ಕೊನೆಗೆ ಭದ್ರತಾ ಸಮಿತಿಯು ಆಡಳಿತಕ್ಕೆ ಬಿಟ್ಟುಕೊಡಿ ಎಂದು ಹೇಳಿದಂಶವನ್ನು ಮಾತ್ರ ಎರಡು ರಾಷ್ಟ್ರವೂ ವಿರೋಧಿಸಿರುತ್ತದೆ. ತಿರುಗಿ ಕಾಮನ್‌ವೆಲ್ತ್ ಸಭೆಯಲ್ಲಿ ಜನಮತಾನುಸಾರವಾಗಿ ಇದನ್ನು ನಿರ್ಣಯಿಸಬೇಕೆಂಬುದನ್ನು ಸರ್ವ ಸಾಮಾನ್ಯ ಎಲ್ಲ ರಾಷ್ಟ್ರವೂ ಸಮರ್ಥಿಸಿದ್ದವು. ಭಾರತ ಪಾಕಿಸ್ತಾನಗಳೆರಡೂ ಒಪ್ಪಿದ್ದವು. ಆದರೆ ಕಾಶ್ಮೀರದಲ್ಲಿ ಆ ಕಾಲಕ್ಕೆ ಸಂ. ರಾ. ದಳಗಳುಗಳನ್ನು ಇಡಬೇಕೆನ್ನುವ ಮಾತು ಮುಂದೆ ಬಂದುದರಿಂದ ಭಾರತ ಒಪ್ಪಿಗೆ ಕೊಡುವುದಾಗಲಿಲ್ಲ. ಈಗ ಭದ್ರತಾ ಸಮಿತಿ ಅದೇ ತತ್ವವನ್ನು ಹಿಡಿಯುವುದೇ? ಕೊರಿಯ ಪ್ರಕರಣದಲ್ಲಿ ಅತ್ಯವಸರ ಕಾರ್ಯವನ್ನು ಕೈಗೊಂಡ ಸಮಿತಿ ಕಾಶ್ಮೀರ ಸಮಸ್ಯೆ ಅದಕ್ಕಿಂತಲೂ ಹಳೆಯದಾಗಿದ್ದರೂ ನಿರ್ದಿಷ್ಟವಾದ ಗೊತ್ತು ಗುರಿಯನ್ನು ಕಂಡುಕೊಂಡಿಲ್ಲ. ಕೊರಿಯದ ಕುರಿತು ಅದರ ಧೋರಣೆಯನ್ನು ನಾವು ಅವಲೋಕಿಸಿ ಅದೇ ನ್ಯಾಯದಂತೆ ಕಾಶ್ಮೀರವನ್ನು ನೋಡುವುದಾದರೆ ಪಾಕಿಸ್ತಾನವನ್ನು ಆಕ್ರಮಕ ರಾಷ್ಟ್ರವೆಂದು ಕರೆಯುವದರಲ್ಲಿ ಯಾವ ಅನ್ಯಂತರವೂ ಇಲ್ಲ. ಅಂತೂ ಕಾಶ್ಮೀರದ ಪ್ರಶ್ನೆ ಈ ವಾರಾಂತ್ಯದೊಳಗೆ ಭದ್ರತಾ ಮಂಡಲದ ಚರ್ಚೆಯಲ್ಲಿ ಯಾವ ಸ್ವರೂಪವನ್ನು ಹೊಂದುತ್ತದೆಂಬುದನ್ನು ನೋಡಲಿದೆ.

ಭಾರತಕ್ಕೆ ಆಹಾರ

ಭಾರತವು ಅಮೇರಿಕದೊಡನೆ ಕೇಳಿಕೊಂಡಿದ್ದ ೨೦ ಲಕ್ಷಟನ್ ಗೋಧಿಯನ್ನು ಕೊಡಮಾಡುವಲ್ಲಿ ಹಿಂದಿನ [illegible] ಹರ್ಬರ್ಟ್ ಹೂವರರು ವಿಶೇಷ ಮುತುವರ್ಜಿ ವಹಿಸಿದ್ದರ ಫಲವಾಗಿ ಅಧ್ಯಕ್ಷ ಟ್ರುಮನರು ಭಾರತದ ಬೇಡಿಕೆಯನ್ನು ಮನ್ನಿಸಿ ಆಹಾರವನ್ನು ಕಳಿಸಬೇಕೆಂದು ಕಾಂಗ್ರೆಸ್ಸಿಗೆ ಶಿಫಾರಸು ಮಾಡಿರುತ್ತಾರೆ, ನ್ಯೂಯಾರ್ಕ್ ಟಾಯಿಮ್ಸ್ ಮತ್ತು ಹೆರಾಲ್ಡ್ ಟ್ರಿಬ್ಯೂನ್ ಪತ್ರಿಕೆಗಳು ಹೂವರರ ಸೂಚನೆಯನ್ನು ಸಮರ್ಥಿಸಿರುತ್ತವೆ. ಷಿಕ್ಯಾಗೋದ ಸಾಮ್ಯವಾದಿ ಪತ್ರಿಕೆಯು ಭಾರತದ ಆಹಾರ ಬಿಕ್ಕಟ್ಟನ್ನು ರಾಜಕೀಯ ಕಾರಣದಿಂದ ಕಡೆಗಣಿಸದೆ ಮಾನವೀಯತೆಯ ಕುರುಹಾಗಿ ಸಹಕಾರವಾಡಬೇಕೆಂದು ಬರೆದಿದೆ. ಕೆನಡಾ ಕೂಡಾ ತನ್ನ ಶಕ್ತಿಗೆ ಹೊಂದಿಕೊಂಡು ಭಾರತಕ್ಕೆ ಆಹಾರವನ್ನು ಕಳಿಸುವ ಯೋಜನೆಯಲ್ಲಿದೆ. ಈ ಸಂದರ್ಭಸಾಧಿಸಿ ಪಾಕಿಸ್ತಾನಿಗಳು "ಅಮೇರಿಕೆಯು ಆಹಾರವನ್ನು ಇಂಡಿಯಕ್ಕೆ ಕೊಡಬಾರದು. ಅವರು ಪಾಕಿಸ್ತಾನಿಗಳ ಮೇಲೆ ಸೇಡುತೀರಿಸಿಕೊಳ್ಳುವದಕ್ಕೆ ಇದನ್ನು ಸಂಗ್ರಹಿಸುತ್ತಾರೆ" ಎಂದ ಅಪಪ್ರಚಾರ ಮಾಡುತ್ತಲಿದ್ದಾರೆ. ಅಂತೂ ಭಾರತಕ್ಕೆ ಸದ್ಯವೇ ಅಮೇರಿಕೆಯಿಂದಲೂ ಇನ್ನಿತರ ರಾಷ್ಟ್ರಗಳಿಂದಲೂ ಆಹಾರ ಧಾನ್ಯಗಳು ಬರುವ ನಿರೀಕ್ಷೆಯಿದೆ.

ಮಲಬಾರು ಸಾಗುವಳಿ ಮಸೂದೆ

ಮದ್ರಾಸಿನ ಈ ವಾರದ ಪ್ರಮುಖ ವಿಚಾರವೆಂದರೆ ಮಲಬಾರಿನ ಹೊಲ ಸಾಗುವಳಿ ಮಸೂದೆಯ ಚರ್ಚೆ. ಈ ಹೊಸ ಮಸೂದೆಯಿಂದ ರೈತನಿಗೆ ಅರ್ಧದಷ್ಟು ಹುಟ್ಟುವಳಿ ಸಿಗುವಂತಾಗಿದೆ. ಈ ಜಮೀನದಾರೀ ಪದ್ಧತಿಯ ಕುರಿತ ವಿರೋಧ ಸೂಚನೆಗಳೂ ಸಮಾರು ಒಂಭತ್ತು ತಿದ್ದುಪಡಿಗಳೂ ಬಂದಿದ್ದವು. ಆದರೆ ಅವೆಲ್ಲವನ್ನೂ ತಿರಸ್ಕರಿಸಿ ಈ ಮಸೂದೆಯನ್ನು ಶಾಸನ ಸಭೆಯು ಅಂಗೀಕರಿಸಿದೆ. ನಾಲ್ಕು ದಿವಸಗಳ ಚರ್ಚೆಯ ನಂತರ ಸರಕಾರ ಈ ತೀರ್ಮಾನಕ್ಕೆ ಬಂದಿರುತ್ತದೆ. ಕೊನೆಗೆ ಎಲ್ಲರೂ ಮಾನ್ಯ ಮಾಡಿದರೂ ಕೆ. ಟಿ. ನಂಬಿಯಾರರು ಬಲವಾದ ವಿರೋಧವನ್ನು ಪ್ರದರ್ಶಿಸಿದ್ದರು. ಜಮೀನುದಾರರಿಗೆ ಸರಕಾರ ಹಾಗೂ ಕಾಂಗ್ರೆಸ್ ಪಕ್ಷದವರಿಂದ ಭಯಂಕರ ಅನ್ಯಾಯವಾಗಿದೆಯೆಂದೂ, ಜಮೀನುದಾರರಿಗೆ ಪರಿಹಾರ ವ್ಯವಸ್ಥೆ ಮಾಡದ [illegible] ಸಂಧರ್ಭದ, ಅವರು ಹೇಳಿಕೆಯನ್ನಿತ್ತಿದ್ದಾರೆ. ಇದು ಕಾಂಗ್ರೆಸ್ಸಿನ ಬಹುದೊಡ್ಡ ಅನ್ಯಾಯವಾಗಿದೆಯಲ್ಲದೆ ಆಶ್ವಾಸನೆಯ ಉಪೇಕ್ಷೆಯೂ ಆಗಿದೆಂದು ತನ್ನ ರಾಜೀನಾಮೆಯ ಸಂದರ್ಭದಲ್ಲಿ ಹೇಳುತ್ತಾರೆ.

ನೇಪಾಳದಲ್ಲಿ ಒಡಂಬಡಿಕೆ.

ಭಾರತ ಮುಖ್ಯಮಂತ್ರಿ ನೆಹ್ರೂರವರ ಸಂಧಾನ ಸೂಚನೆಯ ಫಲಶ್ರುತಿಯೆಂದು ನೇಪಾಳದಲ್ಲಿ ಶಾಂತಿ ಬರುವಂತಾಗಿದೆ. ನೇಪಾಳದ ರಾಜಕೀಯ ಹಾಗೂ ಕಾಂಗ್ರೆಸು ಪಕ್ಷಗಳಲ್ಲಿ ಒಡಂಬಡಿಕೆಯಾಗುತ್ತಲಿದೆ. ನೇಪಾಳ ಕಾಂಗ್ರೆಸ್ಸಿನ ಅಧ್ಯಕ್ಷರಾದ ಎಂ. ಪಿ. ಕೊಯಿರಾಲರವರು ತಮ್ಮ ಪಕ್ಷದ ಸದಸ್ಯರ ಹೆಸರನ್ನು ಅರಸ ತ್ರಿಭುವನರಿಗೆ ಒಪ್ಪಿಸಿರುತ್ತಾರೆ. ತಾತ್ಕಾಲ ಸರಕಾರದಲ್ಲಿ ಕಾಂಗ್ರೆಸ್ ಪಕ್ಷದ ಪ್ರತಿನಿಧಿಗಳಿಗೆ ಗೃಹಖಾತೆ, ಅರ್ಥಖಾತೆ, ಉದ್ಯಮ ಹಾಗೂ ವಾಣಿಜ್ಯ ಖಾತೆ ಒಪ್ಪಿಸಲ್ಪಡುವದೆಂದೂ, ವಿದೇಶ, ಆರೋಗ್ಯ, ಸಂರಕ್ಷಣಾ ಹಾಗೂ ಶಿಕ್ಷಣ ಖಾತೆಗಳು ಸರಕಾರಿ ಪ್ರತಿನಿಧಿಗಳಿಗೆ ಕೊಡಲ್ಪಡುವದೆಂದೂ ತಿಳಿಯುವುದು. ಅರಸ ತ್ರಿಭುವನರು ತಾ. ೧೫ಕ್ಕೆ ಕಾಠಮಾಂಡುವಿಗೆ ಹೋಗಿ ರಾಷ್ಟ್ರಸುಧಾರಣೆಯ ಕುರಿತು ಪ್ರಕಟಣೆ ಹೊರಡಿಸಿ ೧೦ ಜನರ ತಾತ್ಕಾಲ ಸರಕಾರವನ್ನು ಸ್ಥಾಪಿಸಿ ಮಂತ್ರಿಗಳ ಪ್ರತಿಜ್ಞಾ ವಿಧಿ ನಡೆಸುವರು. ರಾಣರ ಗುಂಪಿಗೂ ಕಾಂಗ್ರೆಸ್ ಪಕ್ಷಕ್ಕೂ ಆದ ಘರ್ಷಣೆಯನ್ನು ಶಾಂತ ಮಾರ್ಗದಿಂದ ಬಗೆಹರಿಸುವಲ್ಲಿ ಭಾರತ ಮುಖ್ಯ ಪಾತ್ರವನ್ನು ವಹಿಸಿರುತ್ತದೆ. ಇದರಿಂದ ಉಭಯ ರಾಷ್ಟ್ರದಲ್ಲಿ ನಿಕಟವಾದ ಸ್ನೇಹ ಸೌಹಾರ್ದ ಬೆಳೆಯಬಹುದಾಗಿದೆ.

ವಿವಿಧ ಪಾತ್ರೆಗಳು



ಯಾವತ್ತೂ ವಿಧದ ಬೆಳ್ಳಿ ತಾಮ್ರ ಹಿತ್ತಾಳೆ, ಕಂಚು ಮೊದಲಾದುವುಗಳ ವಿವಿಧ ಪಾತ್ರೆಗಳೂ ಸಾಮಾನುಗಳೂ ಒಟ್ಟಾಗಿಯೂ ಚಿಲ್ಲರೆಯಾಗಿಯೂ ದೊರೆಯುತ್ತವೆ.

ಅಲ್ಪಂಜೆ ವ್ಯಾಸಾಚಾರ್ಯ,
ರಥಬೀದಿ, ಉಡುಪಿ

ದಮ್ಮು ಹೋದರೆ ತಿರುಗಿ ಬಾರದು

ಪುರೋಹಿತ ಶ್ವಾಸಹಾರಿ

ಡಾ. ಪುರೋಹಿತ ಫಾರ್ಮಸೀ
ಕೊಲ್ಹಾಪುರ



ಮಾರಾಟಕ್ಕೆ
ಸದಾ ಸಿದ್ಧವಾಗಿವೆ.

ಎರಡರಿಂದ ಐದು ಕುದುರೆ ಶಕ್ತಿಯುಳ್ಳ ನೀರಿನ ಪಂಪುಗಳು, ತರಹೆವಾರು ಹೊಂಡ ತೆಗೆಯುವ, ಸಾಗುವಳಿ ಭೂಮಿಗೆ ನೀರು ಹಾಯಿಸುವ, ಕೇಂದ್ರದಿಂದ ದೂರ ಕ್ಷೇತ್ರಕ್ಕೆ ನೀರು ಚಿಮುಕಿಸುವ ಮತ್ತು Visconsin ಎಂಜನಿಗಳು ನಮ್ಮಲ್ಲಿ ಮಾರಾಟಕ್ಕೆ ಸದಾಸಿದ್ಧವಿವೆ.

ಹೆಚ್ಚಿನ ಮಾಹಿತಿಗೆ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.

Enquire: **Auncudur Trading Company,**
Fathma Manzil, Colaba Road, **BOMBAY 5.**

THE VIJAYA BANK, LTD.,

Vijaya Cash Certificates

"Spend less and Save more" shall be the Motto of every Indian Citizen

Vijaya Cash Certificates are the safest and best media for a discriminating investor They mature on the expiry of three years and carry interest at 4½%

Rules on application at any of our following Offices

HEAD OFFICE: **Kadri Road, Mangalore**

Branches: Udipi, Kaup, Coondapoor, Karkala, Brahmavar, Kasaragod, Byndoor, City Mangalore, Puttur, Bombay, Kanhangad & Mercara.

B. Manjaya Hegde,
Advocate & President, District Board S. Kanara.
CHAIRMAN.

ಗುರುವಾರ, ಉಡುಪಿ. ೧೫-೨-೫೧

ದ. ಕ. ವಿದ್ಯಾರ್ಥಿ ಸಮ್ಮೇಳನ

ದ. ಕ. ಜಿಲ್ಲಾ ವಿದ್ಯಾರ್ಥಿ ಸಮ್ಮೇಳನವು ಕಳೆದ ವಾರ ಉಡುಪಿಯ ಪೀಪಲ್ಸ್ ಹಾಲಿನಲ್ಲಿ ಜರಗಿತು. ಈ ಸಮ್ಮೇಳನದಲ್ಲಿ ವಿದ್ಯಾರ್ಥಿಗಳ ಕುರಿತೂ, ದೇಶದ ಪರಿಸ್ಥಿತಿಯ ಕುರಿತೂ ಮಾತುಕತೆಗಳು ನಡೆದುವು. ಸ್ವತಂತ್ರಭಾರತದಲ್ಲಿ ವಿದ್ಯಾರ್ಥಿಗಳ ಹೊಣೆ ಯಾವುದು? ರಾಜಕೀಯದಲ್ಲಿ ಅವರು ಪಾತ್ರ ವಹಿಸಬಹುದು? ಎನ್ನುವ ವಿಚಾರವನ್ನು ಧರ್ಮಜರೂ, ಮಹಾತ್ಮಾ ಗಾಂಧಿಯವರೂ ಸೂಚಿಸಿದ್ದರು. ವಿದ್ಯಾರ್ಥಿಗಳು ಇಂದು ಯಾವ ಸ್ವರೂಪದಲ್ಲಿ ಭಾಗ ವಹಿಸುತ್ತಲಿದ್ದಾರೆಂಬುದನ್ನು ನಾವು ಯೋಚಿಸಬೇಕಾಗಿದೆ. ಉಡುಪಿಯ ಸಮ್ಮೇಳನ ಹೆಚ್ಚಿನ ರಾಜಕೀಯ ಚಟುವಟಿಕೆಯನ್ನು ಮಾಡದೆ ಹೋದರೂ ಪ್ರಕ್ರಿಯೊಂದು. ವಿಚಾರದಲ್ಲೂ ರಾಜಕೀಯದ ಹಿನ್ನೆಲೆಯಿದ್ದೇಯಿತ್ತು. ಅತಿಥಿಗಳಾಗಿ ಬಂದ ಶ್ರೀ. ಬಿ. ಸಿ. ವರ್ಗಿಸರು ಭಾರತದ ಜನತನಕ್ಕೆ ಇಲ್ಲಿಯ ಜಮೀನ್ದಾರಿ ಪದ್ಧತಿಯ ಕಾರಣ; ಜಮೀನ್ದಾರೀ ಪದ್ಧತಿ ಅಗುವ ತನಕ ರೈತನಿಗೆ ಹೊಲದ ಒಡೆತನ ಸಿಗುವ ತನಕ ಈ ಪರಿಸ್ಥಿತಿ ತಿಳಿಯಾಗದು ಎಂಬುದಾಗಿ ಹೇಳಿದರು. [illegible] ಬಂದವಾಳಶಾಹೀ ಮನೋವೃತ್ತಿಯಿಂದ ದೇಶ ಶಾಂತಿಯನ್ನು ಗಳಿಸಿಕೊಳ್ಳಲಿಲ್ಲವೆಂದರು. ಆಳವಾದ ಅಭ್ಯಾಸದಿಂದ ಸಮರ್ಥನೆ ಮಾಡಿದ ಅವರ ವಿಚಾರವನ್ನು ಯಾರೂ ಅಲ್ಲಗಳೆಯುವಂತಿಲ್ಲ. ಇಂತಹ ರೀತಿಯ ಪರಿಸ್ಥಿತಿಯನ್ನು ವಿಮರ್ಶೆಮಾಡದೆ ನಾವು ಸರಕಾರವನ್ನಾಗಲೀ ಮಂತ್ರಿಗಳನ್ನಾಗಲೀ ಟೀಕಿಸುವುದು ರಾಜಕೀಯದಲ್ಲಿ ನಮಗಿರುವ ಅಜ್ಞಾನವನ್ನು ತೋರಿಸಿದಂತಾಗಿದೆ ಎಂಬುದನ್ನು ಶ್ರೀ ವರ್ಗಿಸರು ಒಪ್ಪಿದ್ದರೆ. ಒಂದು ಕಾಲದ ವರೆಗೆ ವಿಚಾರ ಪರಿಪೂರ್ಣವಾದ ತಮ್ಮ ಮಾತುಗಳಿಂದ ರಾಜಕೀಯ ವಿಮರ್ಶೆಯನ್ನೇ ಮಾಡಿದರು. ಅಧ್ಯಕ್ಷರು [illegible] ಅನುಮೋದಿಸುವವರ [illegible] ವಿದ್ಯಾರ್ಥಿಗಳು ಮಾಡಬೇಕಾದ [illegible] [illegible] ಪ್ರದರ್ಶನದ [illegible] ವಿದ್ಯಾರ್ಥಿಗಳ ಕರ್ತವ್ಯ [illegible] ನಿರ್ದೇಶಿಸಲಿಲ್ಲ.

[illegible] ಶರದಲ್ಲಿ [illegible] ಶ್ಯಾಮ ಕಡೆಯುತ್ತಲಿದೆ” ಎನ್ನುವ [illegible] ಬಂತು. ಅಂದರೆ ಈ ಸಮ್ಮೇಳನದ ಮೂಲ ಉದ್ದೇಶವೇನು? ಎಂಬುದನ್ನು ನಾವು ಅರಿತುಕೊಳ್ಳಬೇಕಾಗಿದೆ. ವಿದ್ಯಾರ್ಥಿಗಳು ಈ ಕಾಲದಲ್ಲಿ ದೇಶದಲ್ಲಿ ನಡೆಯುತ್ತಿರುವ ಅನ್ಯಾಯಗಳ ನ್ನು ತಮ್ಮದೇ ಆದ ದೃಷ್ಟಿ ಕೋನದಿಂದ ನೋಡಿ ರಾಜಕೀಯದಲ್ಲೂ ತಮಗೆ ಪ್ರಾಬಲ್ಯ ಸಿಗಬೇಕೆಂದು ಬಯಸಿದ್ದರೆ ಅದು ಅನ್ಯಾಯವಲ್ಲ. [illegible] ವಿದ್ಯಾರ್ಥಿ ಸಂಘಗಳು [illegible] ತಂದುಕೊಳ್ಳಬಹುದು. ಜಾತೀಯ [illegible] ಕಾಂಗ್ರೆಸ್ ಕೋಟ್ಟು ತೀರ್ಮಾನಕ್ಕೆ ವಿರುದ್ಧವಾಗಿ ವಿದ್ಯಾರ್ಥಿಗಳು ಪ್ರದರ್ಶನ ಮಾಡಿದ್ದರಲ್ಲಿ ಯಾವ ನೈತಿಕತೆಯೂ ಪುರುಷಾರ್ಥವೂ ಇರಲಿಲ್ಲ. ಇಂದು ವಿದ್ಯಾರ್ಥಿಗಳು ರಾಜಕೀಯದಲ್ಲಿ ಆ ದೇಶ ಕೂಡುವುದೆಂದರೆ ಆಸ್ತಿ ತಪ್ಪಿದ್ದನ್ನು ಹಿಂದುಮುಂದೆ ಆಲೋಚಿಸದೆ ಟೀಕಿಸುವುದು, ಪ್ರತಿಭಟಿಸುವುದೂ ಆಗಿರುತ್ತದೆ. ತಮ್ಮ ಹಕ್ಕು ಬಾಧ್ಯತೆಗಳು—ಸಾರ್ವಜನಿಕ ಹಕ್ಕು ಬಾಧ್ಯತೆಗಳೂ ರಾಜಕೀಯದ ಹೋರಾಟವೆಂದುಕೊಳ್ಳುವ ವಿದ್ಯಾರ್ಥಿಗಳು, ತಂವು ಕಲಿಯುವ ಸಂಸ್ಥೆಗೂ, ಅಧ್ಯಾಪಕರಿಗೂ, ಗುರುಗಳಿಗೂ, ಯಾವ ರೀತಿಯ ಶಿಸ್ತುಯನ್ನೂ ವಿಧೇಯತನವನ್ನೂ ಪ್ರದರ್ಶಿಸುತ್ತಿದ್ದಾರೆನ್ನುವುದನ್ನು ತಮ್ಮ ಅಂತರಂಗದಲ್ಲಿ ಸರಿಯಾಗಿ ಪರಾಮರ್ಶಿಸಿಕೊಳ್ಳಲಿ. ನಮ್ಮ ಧುರೀಣರ ಕಾರ್ಯ ಪರಾಕ್ರಮತೆಯನ್ನೂ ಚರಿತ್ರೆಯನ್ನೂ ಮನಸ್ವಾಗಿ ಎತ್ತಿ ತೋರಿಸುವ ವಿದ್ಯಾರ್ಥಿಮಿತ್ರರು ತಮ್ಮ ಕಾರ್ಯದಲ್ಲಿ ಎಷ್ಟು ಮಟ್ಟಿಗೆ ಕರ್ತವ್ಯ [illegible] ಜ್ಞತೆಗೆ ಪಾತ್ರರೆಂಬುದನ್ನು ಚಿಂತಿಸದ [illegible]. ಇಂದು ಹೈಸ್ಕೂಲ್ ಕಾಲೇಜುಗಳಲ್ಲಿ [illegible] ರುವ ಅನಾರಂಭಾವವನ್ನು ವಿಶ್ಲೇಷಿಸಿದ [illegible] ವಿದ್ಯಾರ್ಥಿಗಳು ಆಲೋಚಿಸಬೇಕು. [illegible] ವಿದ್ಯಾರ್ಥಿಗಳಿಂದ ಎಂಬುದನ್ನು [illegible] ಅಲ್ಲಗಳೆಯುವಂತಿಲ್ಲ [illegible] ಧುರೀಣರಾಗಿ ಬರುವ ವಿದ್ಯಾರ್ಥಿಗಳು ಇಂದು ವಿದ್ಯಾಭ್ಯಾಸದಲ್ಲಿ [illegible] ಕಲಿತು [illegible] ಜ್ಞಾನ [illegible] ದೇಶ [illegible] ದಲ್ಲಿ [illegible] ದೇಶದ ಏಳ್ಗೆಯುಂಟಾಗಲು ಬಂದು [illegible] ಕೊಳ್ಳುವ ಈ ಅಲ್ಪ ಮತಿಯ ರಾಜಕೀಯ ಚಟುವಟಿಕೆಯಿಂದ ತಮ್ಮನ್ನು ಆ ಪಾದ ಉಜ್ವಲ ಭವಿಷ್ಯವನ್ನು ಕಲ್ಪಿಸಿಕೊಂಡು ಎವ ದೇಶವನ್ನು ವಂಚಿಸುವಂತಿದೆ. ವಿದ್ಯಾರ್ಥಿಗಳು [illegible] ಕೆಲಸವನ್ನು ಅಭ್ಯಸಿಸಬೇಕೇ ವಿನಹ [illegible] ರಾಜಕೀಯ ಸಂತೋಷವನ್ನು ಮಾಡಬಾರದು.

ಈ ವಾರದ ಸಮ್ಮೇಳನದಲ್ಲಿನ ಪಾಠ [illegible] ದ [illegible] ದೇಶದ ಅಂಶವನ್ನು ಸ್ಪಷ್ಟೀಕರಿಸದೆ ಅದರಲ್ಲಿ [illegible] ಗಂಭೀರವಾಗಿ ಜವಾಬ್ದಾರಿಯಿಂದ [illegible] ವಿದ್ಯಾರ್ಥಿ ಮಿತ್ರರು ಮುಖ್ಯವಾಗಿ ಯೋಚಿಸಬೇಕಾಯಿತು. ಈ ಬಾರಿಯ ಸಮ್ಮೇಳನವು ಅನವಶ್ಯವಾದ ವಿಶೇಷ ಟೀಕೆ ಟಿಪ್ಪಣಿಗಳಿಗೆ ಎಡೆಯಿರದೆ ಸಮ್ಮೇಳನ ಸಾಮಾನ್ಯ ಮಟ್ಟಿಗೆ ಯಶಸ್ವಿಯಾಯಿತೆಂದೇ ಹೇಳಬೇಕು. ಶಾಂತಿಮಾರ್ಗದಲ್ಲಿ ನೆಹ್ರೂರವರ ಮುಂದಾಳ್ತನವನ್ನು ಪ್ರಶಂಸಿಯೂ, ಜಿಲ್ಲೆಯ ಕಾಲೇಜುಗಳೆಲ್ಲಾ ಕರ್ನಾಟಕ ವಿಶ್ವವಿದ್ಯಾಲಯಕ್ಕೆ ಸೇರಿಸಲ್ಪಡಬೇಕೆಂಬುದಾಗಿಯೂ, ರಾಜಕೀಯ ಕರ್ನಾಟಕ ಏಕೀಕರಣದ ಅವಶ್ಯಕತೆಯ ಬಗ್ಗೆಯೂ, ಠರಾವುಗಳನ್ನು ತಂದು ಮಂಜೂರುಗೊಳಿಸಿದ್ದನ್ನು ನಾವು ಶ್ಲಾಘಿಸದಿರಲಾರೆವು.

ವಿದ್ಯಾರ್ಥಿಗಳು ಪ್ರತ್ಯೇಕವಾಗಿ ಮಾಡಬೇಕಾದ ಸೇವೆಯೆಂದರೆ ವಿದ್ಯೆಯನ್ನು ಕಲಿತು ಅಪಾರ ಜ್ಞಾನಸಂಪನ್ನರಾಗುವುದು. ಕಾರ್ಯಶೀಲರಾಗಿ ಮನದಲ್ಲಿ ಮಾಡುವ ರಾಜಕೀಯ ಹುಮ್ಮಸ್ಸುಗಳು ಕ್ರಾಂತಿಗೆ ಅಪ್ಪಿಸಿದರೂ ನೇರ್ಪಾಗಿ ಪ್ರವೇಶಿಸುವುದು ಸರಿಯಲ್ಲವೆಂದು ನೊಂದು. ದೇಶದ ಸ್ವಾತಂತ್ರ್ಯಕ್ಕಾಗಿ ಹೋರಾಡಿದ ಮಹನೀಯರ ತ್ಯಾಗ, ಸಹನಶೀಲ ಗುಣಗಳನ್ನು ಅರಿತು, ಉಜ್ವಲ ಪರಂಪರೆಯ ಸಾಂಸ್ಕೃತಿಕ ಹಿನ್ನೆಲೆಯ ಪುನರುಜ್ಜೀವನ ಕಾರ್ಯದಲ್ಲಿ ಮುಖ್ಯವಾದ ಭಾಗವನ್ನು ವಹಿಸಲಿದೆಯೆಂಬುದನ್ನು ಮರೆಯಬಾರದು.

ಹಾರುವ ಕಿಡಿಗಳು

ಉಡುಪಿಯಲ್ಲೊಂದು ಇಲೆಕ್ಟ್ರಿಕ್ ಸಪ್ಲೈ ಕೋಪರೇಶನ್ ಇದೆ; ಅದರ ಸಪ್ಲೈಗೆ ಮಾತ್ರ ರೇಶನ್!

೦೦

ಬೇಕಾದಾಗ 'ಕರೆಂಟ್' ಇಲ್ಲ; ದೊರೆಯುವ ಕರೆಂಟಿಗೂ -[ದುಬಾರಿ ದರದ] 'ಜೀವ' ಇಲ್ಲ. ಬೀದಿಗೆ ದೀಪಗಳಿಲ್ಲ. ಹೊಸ ಕನೆಕ್ಷನ್ ಅಂತೂ ದೊರೆಯುವುದೇ ಇಲ್ಲ.

೦೦

ಉಳ್ಳವರಿಗೆ 'ಪಾರ್ಸೆಲ್', ಕೂಳು ತಪ್ಪುವುದಿಲ್ಲ; ಮುನ್ಸಿಪಾಲಿಟಿಯ ದೂಳೂ ತಪ್ಪುವುದಿಲ್ಲ.

೦೦

ಬೇಡುವುದೂ ಒಂದು ಕಲೆ, ಬೇಡಲು ಬಂದವರನ್ನು ಖುಶಿಮಾಡಿ ಕಳುಹಿಸುವುದು ಅದಕ್ಕೂ ದೊಡ್ಡ ಕಲೆ.

೦೦

ಬೇಡಲು ಹೋದವರು ತುಂಬ ಅನುಭವಗಳನ್ನು ಪಡೆಯುತ್ತಾರೆ; ತುಂಬ ಮಾತುಗಳನ್ನು ಕೇಳಬೇಕಾಗುತ್ತದೆ.

೦೦

ಬೇಡಲು ಬಂದವರಿಗೆ 'ಉಂಟು', 'ಇಲ್ಲ', ಎಂದಿಷ್ಟೇ ಸಾಕು; 'ಲೆಕ್ಚರ್' ಮಾತ್ರ ಬೇಡ

೦೦

ಸಾಧನೆಯಿಂದ ಕೆಲಸ ಪೂರ್ತಿ; ಬೋಧನೆಯಿಂದ ವಿಪತ್ತು ಪ್ರಾಪ್ತಿ.

೦೦

ಅಮಲು ಪದಾರ್ಥ ಅಮಲಿಗಿಂತಲೂ ಅಧಿಕಾರದ ಅಮಲು ಅಧಿಕ, ಆದರೆ ಮೊದಲಿನದು ಇಳಿಯುತ್ತದೆ, ಎರಡನೆಯದು ಇಳಿಸುತ್ತದೆ.

೦೦

ಉಡುಪಿಯು ಹಲವರನ್ನು ಮೇಲೇರಿಸಿದೆ. ಆದರೆ ಅಮಲೇರಿದವರನ್ನು ಈಗಲೂ ಕೆಳಗಿಳಿಸುತ್ತಿದೆ.

೦೦

ಹಸಂಗೆ 'ಅಧಿಕಾರಿ'ಯಾಗಿ ಜನಚಾಕರಿ ಸಲಿಸುವವನು ಬಾಳಿಯಾನು

೦೦

ನಾಲಗೆಯಿಂದಲೆ ಬಳಗ; ನಾಲಗೆಯಿಂದಲೇ ಕಾಳಗ.

೦೦

ಉದರ ಪೋಷಣೆಗೆ ಉಪಕಮನವಿದೆ, 'ಉಪ್ಪರಿಗೆ' ಕಟ್ಟರೆ ಮದ್ದಿಲ್ಲ,

೦೦

ಮಾಡುವುದು ಜನಸೇವೆಯ ಘೋಷಣೆ ಸಾಧಿಸುವುದು ಉದರ ಪೋಷಣೆ.

೦೦

ಪರದೂಷಣೆ ಮಾಡುವಾಗ ಕಿವಿಗಳು ಅರಳುತ್ತವೆ; ಅವೇ ದೂಷಣೆಗಳು ನಮ್ಮ ಕಡೆಗೆ ಬರುವಾಗ ಕಣ್ಣು ಕಿಡಿಗಳು ಹಾರುತ್ತವೆ

೦೦

ಪರರದೋಷ ನೋಡಲು ಭೂತ ಕನ್ನಡಿ. ತಮ್ಮದನ್ನು ನೋಡಲು ಕೈಗನ್ನಡಿಯೂ ಬೇಡ

೦೦

ಅಲ್ಪಜ್ಞ ತಾನೇ ಸರ್ವಜ್ಞನೆಂಬ ಅಹಂಭಾವ ಪಡುತ್ತಾನೆ. ತಿಳುವು ಹೆಚ್ಚಿದಂತೆ ತನ್ನದ ಅರಿವು ಪಡೆಯುತ್ತಾನೆ.

೦೦

ಸಮಾಧಾನವುಂಟೋ ಜೀವನದಲ್ಲಿ ಸುಖವುಂಟು

೦೦

ಹೊರಗಿನಿಂದ ಮಿಂಚಿಸುವ ನಟನೆ; ಒಳಗಿಂದ ಮಿಂಚಿಸುವ ಸಾಧನೆ.

ಉಡುಪಿ

ಮುನ್ಸಿಪಲ್ ಕೌನ್ಸಿಲು ಸಭೆಯು

ಇದೇ ತಾ. 10ರಲ್ಲು ಸಂಜೆ ಚೆಯರ್‌ಮನ್ ಶ್ರೀ ಯು. ಎಸ್. ನಾಯ್ಕರ ಅಧ್ಯಕ್ಷತೆಯಲ್ಲಿ ಜರಗಿತು. ಪಶು ಆಸ್ಪತ್ರೆಯೊಂದನ್ನು ಜರೂರು ತೆರೆಯುವಂತೆ ಮದ್ರಾಸು ಸರಕಾರವನ್ನು ಕೇಳಿಕೊಳ್ಳಲಾಯಿತು. ಮುನ್ಸಿಪಲ್ ರಸ್ತೆಗಳಲ್ಲಿ ಇಲೆಕ್ಟ್ರಿಕ್ ದೀಪಗಳನ್ನು ಹಾಕುವ ಕುರಿತು ಶ್ರೀ ಟಿ. ರಮೇಶಪ್ಪನವರು ತಂದ ನಿರ್ಣಯದ ಕುರಿತು ತುರುಸಿನ ಚರ್ಚೆ ನಡೆಯಿತು. ಸರ್‌ಚಾರ್ಜ ಫೀಸನ್ನು ಮನ್ನಾ ಮಾಡುವಂತೆ ಸರಕಾರವನ್ನು ಕೇಳಿಕೊಂಡ ನಿರ್ಣಯಕ್ಕೆ ಸರಕಾರದ ಉತ್ತರ ಬಂದನಂತರ ಈ ನಿರ್ಣಯವನ್ನು ಪುನಹ ಆಲೋಚಿಸುವುದೆಂದಾಯಿತು.

ತಾಲೂಕು ಆಹಾರ ಸಮಿತಿ ಸಭೆ

ಯು—ಇದೇ ತಾ. 12ರಲ್ಲು ತಾಲೂಕು ಕಚೇರಿಯಲ್ಲಿ ಸಬ್ ಕಲೆಕ್ಟರ್ ಶ್ರೀ ಟಿ. ಎಸ್. ತಿಮ್ಮಪ್ಪ ಸೆಟ್ಟರ ಅಧ್ಯಕ್ಷತೆಯಲ್ಲಿ ಜರಗಿತು. ಸೀದಾ ಪದ್ಧತಿ ರದ್ದಾದ ಪ್ರದೇಶಗಳಲ್ಲಿ ಅಕ್ಕಿ ಸರಾಗವಾಗಿ ಕಾಮಗಾರಿ ಜನರಿಗೆ ದೊರೆಯುವಂತೆ ಲೈಸೆನ್ಸು ಪಡೆದ ವ್ಯಾಪಾರಿಗಳು ಸೇರಿಗೆ ಒಂಭತ್ತಾಣೆಯಂತೆ ಮಾರಲು ಅನುಕೂಲ ವಾತಾವರಣ ಕಲ್ಪಿಸಿ ಕೊಡುವಂತೆ ಜಿಲ್ಲಾ ಕಲೆಕ್ಟರರನ್ನು ವಿನಂತಿಸಲಾಯಿತು.

ಶಿಕ್ಷಣ ಸಪ್ತಾಹಾಚರಣೆ-ತಾ 9ರ

ಲ್ಲಿ ಟ್ರೈನಿಂಗ್ ಶಾಲೆಯಲ್ಲಿ ಜರಗಿದ ವಯಸ್ಕರ ಶಿಕ್ಷಣ ಸಪ್ತಾಹಚರಣೆಯ ಪ್ರಚಾರ ಉಪಸಮಿತಿಯ ಸಭೆಸೇರಿ ಈ ಕೆಳಗಿನ ಕಾರ್ಯಕ್ರಮವು ನಿರ್ಣಯಿಸಲ್ಪಟ್ಟಿದೆ. ತಾ 17ನೇ ಸಂಜೆ 4-30ಕ್ಕೆ ಟ್ರೈನಿಂಗ್ ಶಾಲೆಯಿಂದ ಬೋರ್ಡ್ ಹೈಸ್ಕೂಲಿಗೆ ಸಾರ್ವಜನಿಕ ಮೆರವಣಿಗೆಯಾಗಿ, ಡಾ| ಟಿ. ಮಾಧವ ಪೈಗಳ ಅಧ್ಯಕ್ಷತೆಯಲ್ಲಿ ಸಭೆಜರಗಿ ಭಾಷಣಗಳು, ತಾ 19ನೇ ಸಂಜೆ 5 30ಕ್ಕೆ ವಯಸ್ಕರ ಶಿಕ್ಷಣ ಪ್ರೇಮಿಗಳ ಸಭೆ, ಭಾಷಣಗಳು ತಾ 20ನೇ ಸಂಜೆ 5-30ಕ್ಕೆ ವಕೀಲ್ ಶ್ರೀ ಕೆ. ಜೆ. ಬಲ್ಲಾಳರ ಅಧ್ಯಕ್ಷತೆಯಲ್ಲಿ ಸಭೆ ಮತ್ತು ಭಾಷಣ 6-30ಕ್ಕೆ ವಿವಿಧ ವಿನೋದಾವಳಿಗಳು

ಕೋರಡ್ಕಲ್ ಸ್ಮಾರಕ ಸಮಿತಿಯು

ಸಭೆಯೊಂದು ತಾ. 12ರಲ್ಲಿ 'ನವಯುಗ'ಆಫೀಸಿನಲ್ಲಿ ಶ್ರೀ ಟಿ. ಅನಂತ ಪೈಗಳ ಅಧ್ಯಕ್ಷತೆಯಲ್ಲಿ ಜರಗಿ, ಆಯವ್ಯಯಗಳ ಪರಿಶೀಲನೆ ಮತ್ತು ಮುಂದಿನ ಕಾರ್ಯಯೋಜನೆ ನಿರ್ಣಯಿಸಲ್ಪಟ್ಟಿತು.

Notice

ದ ಕ ಜಿಲ್ಲಾ ಕಾಸ್ರಗೋಡು
ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ

R. I. A. 370/1951

ಕ್ರಮಸಂಖ್ಯೆ 289/1950

ನೆಫಿಸಾದಿ —ವಾದಿಳು
ಮಂಜುಮ್ಮ ಕೂಡಾ 2 ಜನರು
—ಪ್ರತಿವಾದಿರು

ಪಮ್ಮಾವತಿ, ಕೃಷ್ಣ ನ್ಯಾಕರ ಹೆಂಡ್ತಿ ಮ ಉಗ್ರಾಣ ವೆಂಕಟ್ರಮಣರ ಮಗಳು, ಕಾಸ್ರಗೋಡು ತಾಲೂಕು ಅಣಕಿಂಡಿ ಗ್ರಾಮದಲ್ಲಿ ಯಿರುವವಳು.

—ನಪ್ಲಮೆಂಟು 2ನೇ ಪ್ರತಿವಾದಿಳು.
ಯವಳಿಗೆ

ವಾದಿಳು ದಾಖಲು ಮಾಡಿರುವ ಮೇಲಿನ ರಿದೆಮುಶನ (redemption) ವ್ಯಾಜ್ಯದಲ್ಲಿ ಮೇಲ್ಕಂಡ 2ನೇ ಪ್ರತಿವಾದಿಳನ್ನು ಸಪ್ಲಮೆಂಟು 2ನೇ ಪ್ರತಿವಾದಿಳಾಗಿ ಸೇರಿಸಿ ಸದರಿ ವ್ಯಾಜ್ಯವು ತಾರೀಕು 19 2-1951ನೇಗೆ ತನ್ನಗೆ ನಿಶ್ಚಯಿಸಿ ಯುವರ್ದ್ರಿಂದಾ ಸದ್ರಿವ್ಯಾಜ್ಯಗೆ ಸದಾ ಸಪ್ಲಮೆಂಟು 5ನೇ ಪ್ರತಿವಾದೀಳು ಕೋರ್ಟಿಗೆ ಹಾಜ್ರು ಆಗುವರೆ ತಪ್ಪಿದ್ದಲ್ಲಿ ಅವಳನ್ನು ಯೆಕ್ಸಪಾರ್ಟ ಡಿಕ್ಲರ ಮಾಡಿ ವ್ಯಾಜ್ಯವನ್ನು ಮುಂದಂಸೋಣಾದೀತು.

Abdul Khader,
Advocate for Plaintiff
Kasaragod 12-2-51

ದಕ್ಷಿಣ ಕನ್ನಡ ಜಿಲ್ಲಾ ವಿದ್ಯಾರ್ಥಿ ಸಮ್ಮೇಳನ, ಉಡುಪಿ

ತಾ. 11-2 51ನೇ ಆದಿತ್ಯವಾರ ದಕ್ಷಿಣ ಕನ್ನಡ ಜಿಲ್ಲೆಯ ವಿದ್ಯಾರ್ಥಿಗಳ ಮಹಾ ಸಮ್ಮೇಳನ ಒಂದು ಉಡುಪಿಯ ಹೀರಬೈಲ್ ಹಾಲಿನಲ್ಲಿ ಜರಗಿತು. ಉಡುಪಿಯಲ್ಲಿ ಜರಗಿದ ವಾರ್ಷಿಕ ಕೂಟದ ಮಹಾ ಸಮ್ಮೇಳನದ ನಂತರ ಜರಗಿದ ಸಮ್ಮೇಳನವೆಂದರೆ ಇದು ಎರಡನೆಯದು. ಜಿಲ್ಲೆಯ ಬೇರೆ ಬೇರೆ ಭಾಗದಿಂದ ಸುಮಾರು ೭೫ ಪ್ರತಿನಿಧಿಗಳು ಹಾಜರಿದ್ದರು. ಇದೊಂದು ಯಶಸ್ವೀ ಸಮ್ಮೇಳನವೆಂದು ಪ್ರತಿನಿಧಿಗಳು, ಪ್ರೇಕ್ಷಕರು ತಮ್ಮ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.

ತಾ. 11-2-51ನೇ ದಿನದ ಬೆಳಿಗ್ಗೆ ೮ ಗಂಟೆಗೆ ಧ್ವಜಾರೋಹಣ ಕಾರ್ಯವನ್ನು ಶ್ರೀ ಎಚ್. ಸುಂದರರಾವ್ ಎಂ. ಎ; ಅವರು ನೆರವೇರಿಸುತ್ತಾ ಭಾರತದ ವಿದ್ಯಾರ್ಥಿಗಳು ಸತ್ಪ್ರಜೆಗಳಾಗಿ ಬಾಳಬೇಕೆಂದೂ, ಶಿಸ್ತು, ಸಂಘಟನೆಗಳ ವಿಚಾರದಲ್ಲಿ ಅತ್ಯಂತ ಜಾಗೃತರಾಗಿದ್ದು ಯಾವ ರಾಜಕೀಯ ಪಕ್ಷಪಂಗಡಗಳಿಗೆ ಬಲಿಯಾಗದಂತೆ ನೋಡಿಕೊಳ್ಳಬೇಕೆಂದೂ, ತಮ್ಮ ತಮ್ಮ ಜವಾಬ್ದಾರಿಯನ್ನು ಅರಿತು ದೇಶದ ಹಿತದೃಷ್ಟಿಯಿಂದ ದುಡಿಯಬೇಕೆಂದು ಬೋಧಿಸಿದರು. ಆ ಮೇಲೆ ಘಂಟೆ ೧೦ರಿಂದ ೧೨ರ ತನಕ ವಿದ್ಯಾರ್ಥಿ ಪ್ರತಿನಿಧಿಗಳು ಸಭೆಸೇರಿ ವಿವಿಧ ಠರಾವುಗಳನ್ನು ಚರ್ಚಿಸಿ ಮಂಜೂರು ಮಾಡಿದರು.

ಸ್ವಾರಸ್ಯಯುಕ್ತವಾದ ಈ ಚರ್ಚೆಯನ್ನು ಕೇಳಲು ಹಲವಾರು ಮಂದಿ ಪ್ರೇಕ್ಷಕರು ಹಾಜರಿದ್ದರು. ದೀರ್ಘ ಚರ್ಚೆಗಳ ನಂತರ ಸಭೆಯಲ್ಲಿ ಈ ಕೆಳಗಿನ ಪ್ರಾಮುಖ್ಯ ಠರಾವುಗಳು ಮಂಜೂರಾದುವು.

ಸಾನೇ ಗುರೂಜಿ, ಯೂಸುಫ್ ಮೆಹರಾಲಿ, ಥಕ್ಕರ್ ಬಾಪಾ, ಸರ್ದಾರ್ ಪಟೇಲರ ಮರಣಕ್ಕಾಗಿ ದುಃಖಸೂಚಕ ಠರಾವುಗಳನ್ನು ಅಧ್ಯಕ್ಷರೇ ಮುಂದೆ ತಂದು ಮಂಜೂರು ಮಾಡಿಸಿದರು. ಶಾಂತಿ ಮತ್ತು ವಿದ್ಯಾರ್ಥಿಗಳ ಹಕ್ಕುಬಾಧ್ಯತೆಗಳಿಗೆ ಸಂಬಂಧಪಟ್ಟ ಎರಡು ಅಫೀಶಿಯಲ್ ಠರಾವುಗಳನ್ನು ಕಾರ್ಯದರ್ಶಿಯವರೇ ಮುಂದೆ ತಂದರು. ಈ ಸಮ್ಮೇಳನವು ಜಗತ್ತಿನಲ್ಲಿ ಸಂಪೂರ್ಣ ಶಾಂತಿ ಬಯಸುತ್ತದೆ ಮಾತ್ರವಲ್ಲದೆ ನೆಹರೂರವರ ಮುಂದಾಳ್ತನದಲ್ಲಿ ನಡೆಯುತ್ತಿರುವ ಶಾಂತಿ ಸಂಧಾನಕ್ಕೆ ತನ್ನ ಸಂಪೂರ್ಣ ಸಹಕಾರವನ್ನು ವ್ಯಕ್ತಪಡಿಸುತ್ತದೆ" ಎನ್ನುವ ಠರಾವನ್ನೂ "ಶಾಲಾ ಕಾಲೇಜುಗಳ ವಿದ್ಯಾಭ್ಯಾಸವು ಸರ್ವರಿಗೂ ಸಿಗುವಂತಾಗಬೇಕು. ಶಾಲಾ ಸಂಬಳ ಅತೀ ಕಡಿಮೆಯಾಗಿದ್ದು ಎಲ್ಲಾ ವಿದ್ಯಾಸಂಸ್ಥೆಗಳಲ್ಲಿಯೂ ಒಂದೇ ತೆರನಾದ ಸಂಬಳ ಪದ್ಧತಿ ಇರತಕ್ಕದ್ದು, ಶಾಲೆ, ಕಾಲೇಜಿನಲ್ಲಿ ಇಂದು ಕಲಿಸಲ್ಪಡುವ ಒಂದೇ ರಾಜಕೀಯ ಪಕ್ಷವನ್ನು ಹೊಗಳತಕ್ಕ ಹಾಗೂ ಜಾತಿ ಧರ್ಮಗಳನ್ನು ಪ್ರಸಾರ ಮಾಡತಕ್ಕ ವಿಷಯವನ್ನು ಕಲಿಸುವುದನ್ನೂ ಪಾಠಪುಸ್ತಕಗಳಲ್ಲಿ ಪ್ರಚಾರ ಮಾಡುವುದನ್ನೂ ನಿಲ್ಲಿಸಬೇಕು. ಮತ್ತು ನಮ್ಮ ಜಿಲ್ಲೆಯ ಶಾಲಾ ಕಾಲೇಜುಗಳೆಲ್ಲಾ ಕರ್ನಾಟಕ ವಿಶ್ವವಿದ್ಯಾಲಯಕ್ಕೆ ಸೇರಿಸಲ್ಪಡಬೇಕು ಅಥವಾ ದಕ್ಷಿಣ ಕನ್ನಡಕ್ಕೇ ಹೊಸತಾಗಿ ಒಂದು ವಿಶ್ವವಿದ್ಯಾಲಯ ತೆರೆಯಬೇಕು ..... ಇತ್ಯಾದಿ ವಿಷಯಗಳನ್ನು ಕಾಣಿಸಲ್ಪಟ್ಟ ಠರಾವುಗಳು ದೀರ್ಘಚರ್ಚೆಯ ನಂತರ ಬಹುಮತದ ಅಭಿಪ್ರಾಯಕ್ಕೆ ತರಲ್ಪಟ್ಟವು. ಉಡುಪಿ ಸಂಸ್ಕೃತ ಕಾಲೇಜ್ ವಿದ್ಯಾರ್ಥಿಗಳ ಅಂಗೀಧಾರಣೆ ಚಳವಳಿಗೆ ತನ್ನ ಸಂಪೂರ್ಣ ಸಹಕಾರ ವ್ಯಕ್ತಪಡಿಸಿ ಹಾಗೂ ಅದರ ಬಗ್ಗೆ ನೇಮಿಸಲ್ಪಟ್ಟ ಕಮಿಟಿಯು ಆದಷ್ಟು ಬೇಗನೆ ನಿರ್ಣಯ ಕೊಡಬೇಕೆ ಹೊರತು ೩ ತಿಂಗಳಾವಧಿ ಒಳಗೆ ಪೂರೈಸಬೇಕೆಂದು, ಇದು ಆದಷ್ಟು ಬೇಗನೆ ಬಗೆಹರಿಯದಿದ್ದರೆ ಈ ಸಮ್ಮೇಳನವು ಜಿಲ್ಲೆಯ ವಿದ್ಯಾರ್ಥಿಸಂಘದ ಕಾರ್ಯಕಾರಿ ಸಮಿತಿಗೆ ಯೋಗ್ಯಕ್ರಮ ಕೈಗೊಳ್ಳುವ ಅಧಿಕಾರ ವೀಯುವುದೆಂದು" ಠರಾವು ಮೂಲಕ ವ್ಯಕ್ತಪಡಿಸಲಾಯಿತು.

ಇನ್ನು ರಾಜಕೀಯ ಕರ್ನಾಟಕ ಏಕೀಕರಣದ ಬಗ್ಗೂ, ಜಾತೀಯತೆಯ ನಾಶದ ಬಗ್ಗೂ, ವಿದ್ಯಾರ್ಥಿಗಳ ಹಲವಾರು ನ್ಯಾಯಬದ್ಧ ಬೇಡಿಕೆಗಳ ಬಗ್ಗೆಯೂ ಠರಾವುಗಳು ಮಂಜೂರಾದುವು.

ಪ್ರತಿನಿಧಿಗಳ ಸಭೆ ಮುಗಿದ ನಂತರ ೧-೩೦ಕ್ಕೆ ಭಾಷಣ ಸ್ಪರ್ಧೆಯು ನಡೆದು ಇಂಗ್ಲಿಷ್ ಭಾಷಣ ಸ್ಪರ್ಧೆಯಲ್ಲಿ ಕೆ. ಶ್ರೀನಿವಾಸರಾವ್ ಅವರು ಪ್ರಥಮ ಸ್ಥಾನವನ್ನೂ, ಎಚ್. ಗಣೇಶ್ ಅವರು ದ್ವಿತೀಯ ಸ್ಥಾನವನ್ನೂ ಪಡೆದರು. ಕನ್ನಡ ಭಾಷಣ ಸ್ಪರ್ಧೆಯಲ್ಲಿ ಎಚ್. ಗಣೇಶ್ ಅವರು ಪ್ರಥಮ ಸ್ಥಾನವನ್ನೂ, ಕೆ. ವರದರಾಜ ಬಲ್ಲಾಳರು ದ್ವಿತೀಯ ಸ್ಥಾನವನ್ನು ಪಡೆದರು.

ಸಂಜೆ ೪-೩೦ಕ್ಕೆ ಶ್ರೀ ಮಂಜೇಶ್ವರ ರಾಮಸ್ವಾಮಿ ಬಿ. ಎ., ಎಲ್. ಎಲ್. ಬಿ. ಅವರ ಅಧ್ಯಕ್ಷತೆಯಲ್ಲಿ ಬಹಿರಂಗ ಅಧಿವೇಶನ ಜರಗಿತು. ಸ್ವಾಗತಾಧ್ಯಕ್ಷ ಶ್ರೀ ಎಂ. ಜಿ. ಹೆಗ್ಡೆಯವರು ಸಮ್ಮೇಳನಕ್ಕೆ ಬಂದಿರುವ ಪ್ರತಿನಿಧಿಗಳಿಗೂ, ಪ್ರೇಕ್ಷಕರಿಗೂ, ಅತಿಥಿಗಳಿಗೂ ಸ್ವಾಗತ ಕೋರಿ ಸ್ವಾರಸ್ಯಯುಕ್ತವಾಗಿಯೂ ಮಾತಾಡಿದರು. ನಂತರ ದ. ಕ. ಜಿಲ್ಲಾ ವಿದ್ಯಾರ್ಥಿ ಸಂಘದ ಕಾರ್ಯದರ್ಶಿ ಶ್ರೀ ಶ್ರೀನಿವಾಸ ಉಪಾಧ್ಯಾಯರು ಅನೇಕ ಮೇಧಾವಿಗಳಿಂದ ಬಂದ ಶುಭಸಂದೇಶಗಳನ್ನು ಓದಿ ಹೇಳಿದರು ಮತ್ತು ವರದಿವಾಚನ ಕೂಡಾ ನಡೆಸಿದರು. ಗತವರ್ಷದ ವರದಿಯಲ್ಲಿ ಸಂಘದ ಚಟುವಟಿಕೆ ಬಹಳ ಶಕ್ತವಾಗಿದೆ ಎಂದು ವ್ಯಕ್ತವಾಗುತ್ತದೆ. ಈ ಕಾರ್ಯಕ್ರಮಗಳ ನಂತರ ಕಲ್ಲಿಕೋಟೆಯಿಂದ ಆಗಮಿಸಿದ್ದ "ಸೌರಭ" ಸಂಪಾದಕ ಬಿ. ಸಿ. ಪಣಿಕ್ಕರರು ಉದ್ಘಾಟನಾ ಭಾಷಣ ಮಾಡಿದರು. ಅವರ ಸ್ವಾರಸ್ಯವಾದ ಭಾಷಣ ಎಲ್ಲರನ್ನೂ ಒಮ್ಮೆಗೆ ದಂಗುಬಡಿಸಿಬಿಟ್ಟಿತು. ಅವರು ತಮ್ಮ ಭಾಷಣದಲ್ಲಿ ದೇಶದ ಈ ದಿನಾದಲ್ಲಿ ಬಂಡವಾಳಶಾಹಿ ಆರ್ಥಿಕ ಪದ್ಧತಿ ಶಾಪವೇ ಹೊರತು ವರವಲ್ಲ. ಸಿರಿವಂತಿಕೆ, ಧನಿ ಬಡವರೆಂಬ ಪದ್ಧತಿ ಸಂಪೂರ್ಣ ನಿರ್ಮೂಲವಾಗದ ಹೊರತು ಜಗತ್ತಿಗೆ ಶಾಂತಿ ಸಿಗಲಾರದು. ಅಮೇರಿಕದ ಬಂಡವಾಳಶಾಹಿ ಪದ್ಧತಿಯಿಂದಾಗಿಯೇ ಅಲ್ಲಿಂದು ಎಷ್ಟೋ ಮಿಲಿಯ ನಿರುದ್ಯೋಗಿಗಳಾಗಿದ್ದಾರೆ. ದೇಶದ ಸರ್ವತೋಮುಖ ಅಭಿವೃದ್ಧಿಗೆ ಆರ್ಥಿಕ ಸಮತೆ ಇಲ್ಲದೆ ಹೋದರೆ ಈ ಜಾತೀಯತೆ, ಧರ್ಮ, ಲಂಚ, ವಂಚನೆ, ನಿರುದ್ಯೋಗ, ಬಡತನ ನಾಶವಾಗಲಾರದೆಂದು ಎಚ್ಚರಿಸಿದರು. ನಂತರ ಶ್ರೀಮತಿ ಉಮಾಸುಂದರಿ ಬಿ.ಎ., ಬಿ.ಟಿ. ಯವರು ಸ್ತ್ರೀಯರ ಪ್ರಾಮುಖ್ಯತೆ ಕುರಿತೂ, ಶ್ರೀ ಮಹಾಬಲ ಭಂಡಾರಿ ಬಿ. ಎ., ಎಲ್. ಎಲ್. ಬಿ; ಅವರು ವಿದ್ಯಾರ್ಥಿಗಳ ಕರ್ತವ್ಯದ ಕುರಿತೂ, ಐ. ಲೋಕನಾಥ ಬಿ.ಎ; ಅವರು ಭವಿಷ್ಯತ್ತಿನಲ್ಲಿ ವಿದ್ಯಾರ್ಥಿಗಳು ಮಾಡತಕ್ಕ ಕಾರ್ಯವೇನು ಎನ್ನುವ ವಿಚಾರವಾಗಿಯೂ, ಕೆ. ಕೆ. ಹರಿದಾಸಭಟ್ಟ ಬಿ.ಎ. (ಆನರ್ಸ್) ಅವರು ವಿದ್ಯಾರ್ಥಿಗಳು ತಮ್ಮ ವಿದ್ಯಾಭ್ಯಾಸವನ್ನು ಕಡೆಗಣಿಸಬಾರದೆಂದೂ ಹೇಳಿದರು. ಕೊನೆಗೆ ಅಧ್ಯಕ್ಷರ ದೀರ್ಘ ಹಾಗೂ ಸ್ವಾರಸ್ಯಯುಕ್ತ ಭಾಷಣದಿಂದ ಸಭಾಂತ್ಯವಾಯಿತು.

ವಿವಿಧವಿನೋದಾವಳಿ ಕಾರ್ಯಕ್ರಮಗಳಲ್ಲಿ ಮಂಗಳೂರು ಸರಕಾರೀ ಕಾಲೇಜಿನವರು "ಪುನರ್ಜನ್ಮ" ನಾಟಕವನ್ನೂ, ಉಡುಪಿಯ ಕಲಾಕಾರರು "ದೇವದಾಸಿ" ನಾಟಕವನ್ನೂ ಪ್ರದರ್ಶಿಸಿದರು. ಶ್ರೀಗಳಾದ ಪದ್ಮನಾಭ ಶೆಟ್ಟಿ ಮತ್ತು ಬುರ್ಹಾನ್ ಸಾಹೇಬರ ಹಾಸ್ಯ ಕಾರ್ಯಕ್ರಮಗಳು ಉತ್ತಮವಾಗಿದ್ದುವು.

—ಒಬ್ಬ ಪ್ರೇಕ್ಷಕ

NOTICE

In the Court of the District Munsif of Karkala

O. S. No 565 of 1950.

Shrinivasa Pejathaya and another— Plaintiffs.

and

Mukhyaprana Bhatta and others— Defendants

To

No. 2 Shrinivasa Bhatta, No 3 Rama Bhatta, sons of Gururaya Bhatta. No. 5 Vadiraja Bhatta, No. 6 Shridhara Bhatta, sons of Krishna Bhatta. All are residing at Muddakarimatam, Vaikom Taluk, Travancore State.

Please take notice that the abovesaid suit filed by the plaintiffs for recovering Rs. 541-1-9 due on a deed or further charge executed by Subraya Bhatta in their favour for Rs 1000-0-0 on 28-8 1931 is posted in the above court for your appearance to 27 2-1951. You are hereby informed that you are to appear before the court on that date at 11 A. M. and contest the same failing which the case will be proceeded in your absence.

By order of the court.

Sd. H. K. Gopalkrishna Rao

Vakil for plaintiffs

Karkala, Dated 11-2-1951.

Nambiar's

ARYA VAIDYA SALA

UDIPI

Ideal House for Ayurvedic Treatment.

T. N. Kelu Nambiar,

Vaidya

ನಿಮಗಿದು ಗೊತ್ತೇ?

ನಿಮ್ಮ ಮನೆಯಲ್ಲಿ ಆಗಾಗ ಆಗಮಿಸುವ ವಾತರೋಗದ ಉಪದ್ರವಗಳಾದ- ಉದರಶೂಲೆ, ಕಟಿಶೂಲೆ. ಮೈಕೈಗಳಲ್ಲಿ ನೋವು, ಜಡತೆ, ಅಜೀರ್ಣ, ಹೊಟ್ಟೆಯುಬ್ಬರ, ಅಗ್ನಿಮಾಂದ್ಯ ಮುಂತಾದ ಎಲ್ಲಾ ಉಪದ್ರವಗಳಿಗೂ ರಾಮಬಾಣ ಯಾವುದು ಗೊತ್ತೇ? ಕಳೆದ ಇಪ್ಪತ್ತೈದು ವರುಷಗಳ ವಿಶಾಲ ಅನುಭವದಿಂದ ಸಶಾಸ್ತ್ರೀಯವಾಗಿ ತಯಾರಿಸಲ್ಪಟ್ಟ—

ಸ್ವದೇಶಿ ಔಷಧ ಭಂಡಾರ (ರಿಜಿಸ್ಟರ್ಡ್)

ಪ್ರೋ. ಕುಂಜಾಲು, ದ. ಕ.

ಇವರ 'ಧನ್ವಂತರೀ ಮಾತ್ರೆ'ಗಳು ಮಾತ್ರ

ಕೇವಲ ನಾಲ್ಕಾಣೆಯ ಅಂಚೆಚೀಟನ್ನು ಕಳುಹಿಸಿ ಆರು ಮಾತ್ರೆಗಳ ಒಂದು ಪ್ಯಾಕೇಟನ್ನು ಪಡೆದು ಅದರ ಶೀಘ್ರ ಪರಿಣಾಮಕಾರೀ ಗುಣಗಳನ್ನು ಕಂಡುಕೊಳ್ಳಬಾರದೇಕೆ? ಇಂದೇ ಬರೆಯಿರಿ

ನಿಡಂಬೂರು ಗ್ರಾಮಪಂಚಾಯತಬೋರ್ಡು ಖಾರಿ ಮತ್ತು ಮಾರ್ಕೆಟು ಗುತ್ತಿಗೆಗಳ ಏಲಂ ಪ್ರಕಟಣೆ.— ಈ ಬೋರ್ಡಿನ ಬಂಕೇರಕಟ್ಟ ಖಾರಿಯ ಮತ್ತು ಕಿನ್ನಿಮೂಲ್ಕಿ ದಿನವಹಿ ಮೀನು ಮಾರ್ಕೆಟಿನ ಶೀಲು ವಸೂಲಿಯ ಸ್ವಾತಂತ್ರ್ಯದ ಗುತ್ತಿಗಳನ್ನು ತಾ 1-4-1951ರಿಂದ ತಾ 31-3-1952 ರವರೆಗಿನ ಒಂದು ವರ್ಷದ ಮುಟ್ಟಿಗೆ ಮಾತ್ರ ಈ ಬೋರ್ಡಿನ ಪ್ರೆಸಿಡೆಂಟರು ಇದೇ ತಾ. 21-2-1951ನೇ ಬುಧವಾರ ಸಂಜೆ ಗಂಟೆ 4ಕ್ಕೆ ಈ ಬೋರ್ಡಿನ ಆಫೀಸಿನಲ್ಲಿ ಬಹಿರಂಗವಾಗಿ ಪ್ರತ್ಯೇಕವಾಗಿ ಏಲಂ ಮಾಡುವುದಾಗಿ ಈ ಮೂಲಕ ಎಲ್ಲರಿಗೂ ತಿಳಿಸಲಾಗಿದೆ.

ಬಂಕೇರಕಟ್ಟ ಖಾರಿಯ ಕುರಿತು ರೂ. 100/ರನ್ನೂ ಕಿನ್ನಿಮೂಲ್ಕಿ ಮೀನು ಮಾರ್ಕೆಟಿನ ಕುರಿತು ರೂ 50/- ಪ್ರಥಮ ಬಾಡುಗಳ ಮೊಬಲಗುಗಳಾಗಿ ನಿರ್ಣಯಿಸಿದೆ.

ಆಯ ಗುತ್ತಿಗಳ ಏಲಂ ಪ್ರಾರಂಭಿಸುವ ಮೊದಲು ಪ್ರತಿಯೊಂದು ಗುತ್ತಿಯ ಕುರಿತು ರೂ. 5/-ರ ಪ್ರತ್ಯೇಕ ಪ್ರಥಮ ಠೇವಣಾತಿಗಳನ್ನು ಏಲಮಿಗೆ ನಿಲ್ಲುವ ಪ್ರತಿಯೊಬ್ಬ ಬಿಡ್ಡರನೂ ಪ್ರೆಸಿಡೆಂಟರ ಬಳಿ ಕಟ್ಟಿಯೇ ಆ ನಂತರ ಬಿಡ್ಡು ಮಾಡಲು ತೊಡಗತಕ್ಕದ್ದು; ಮತ್ತು ಅದೇ ಸಮಯ ತನ್ನ ತನ್ನ ಆಸ್ತಿಯ ಕುರಿತು ತನ್ನ ತನ್ನ ಗ್ರಾಮದ ಪಟೇಲರಿಂದ ಪಡೆದ ಒಂದು ಸರ್ಟಿಫಿಕೇಟನ್ನೂ ಹಾಜರು ಪಡಿಸತಕ್ಕದ್ದು. ಅತ್ಯಂತ ಅಧಿಕ ಬಿಡ್ಡನ್ನೇ ಬೋರ್ಡಿನ ಅನುಮೋದನಕ್ಕೆ ಒಳಪಟ್ಟು ಪ್ರೆಸಿಡೆಂಟರು ಕಾಯಂ ಮಾಡುವರು. ಸೋತ ಬಿಡ್ಡರ ಠೇವಣಾತಿಯ ಮೊಬಲಗುಗಳನ್ನು ಏಲಂ ಮುಗಿದೊಡನೆ ಅವರಿಗೆ ಹಿಂದಿರುಗಿಸಲಾಗುವುದು.

ಏಲಂ ಕಾಯಂ ಆದ ಬಿಡ್ಡರನು ಏಲಂ ಮುಗಿದೊಡನೆ ತನ್ನ ಹೆಸರಲ್ಲಿ ಕಾಯಂ ಆದ ಏಲಂ ಮೊಬಲಗಿನ ಅರ್ಧಾಂಶವನ್ನು ಪ್ರೆಸಿಡೆಂಟರಿಗೆ ತೆತ್ತು ರಶೀದಿ ಪಡೆಯುವುದಲ್ಲದೆ, ಮಿಕ್ಕ ಅರ್ಧಾಂಶವನ್ನು ಸರಿಯಾದ 6 ತಿಂಗಳ ಕಂತುಗಳಿಂದ ತಾ. 30-4 1951ರ ಬಳಿಕ ಪ್ರತಿ ತಿಂಗಳ ಕೊನೆಯ ತಾರೀಕಿಗೆ (ಅದು ಆದಿತ್ಯವಾರವಾದರೆ, ಅದರ ಹಿಂದಿನ ಶನಿವಾರವೇ) ತೆತ್ತು ಬರುವ ಕುರಿತೂ, ಕಂತು ತಪ್ಪಿದಲ್ಲಿ ತಪ್ಪಿದ ತಾರೀಕಿಗೆ … ರೂ 5-ರ ದಂಡನೆಯೊಂದಿಗೆ ತೆರುವ ಕುರಿತೂ, ತನ್ನ ಗುತ್ತಿಗೆ ಸಂಬಂಧಿಸಿದ ಎಲ್ಲ ಶರ್ತಗಳನ್ನೂ ಅನುಸರಿಸಿ ನಡೆಯುವ ಕುರಿತೂ, ನಿರ್ದಿಷ್ಟವಾದ ಫಾರಮಿನಲ್ಲಿ ತಕ್ಕ … ತನ್ನ ಖರ್ಚಿನಿಂದ ಒಂದು ಕರಾರನ್ನು ಬೋರ್ಡಿನ ಅನುಮೋದನಕ್ಕೆ … ಬೋರ್ಡಿಗೆ ಬರೆದು ಕೊಡತಕ್ಕದ್ದು. ತಪ್ಪಿದಲ್ಲಿ ಅವನು ಕಟ್ಟಿದ ಈ ಮೇಲೆ ಹೇಳಿದ ಠೇವಣಾತಿಗಳನ್ನು ಅವನು ಕಳಕೊಳ್ಳುವುದಲ್ಲದೆ, ಅವನ ಗುತ್ತಿಯ … ಪುನ ಏಲಮಿನಲ್ಲಿ ಬೋರ್ಡಿಗೆ ಆಗಬಹುದಾದ ಎಲ್ಲಾ ನಷ್ಟಗಳನ್ನು … ಬೋರ್ಡಿಗೆ ತೆರಲು ಬದ್ಧನಾಗಿರತಕ್ಕದ್ದು; ಮತ್ತು ತಾ. 1-4 1951ಕ್ಕೆ ತನ್ನ ಗುತ್ತಿಯನ್ನು … ಅನರ್ಹನಾಗತಕ್ಕದ್ದು.

ಗುತ್ತಿಯದಾರನು … ಶರ್ತಗಳನ್ನು … ತನ್ನ ಗುತ್ತಿಗೆ ಸಂಬಂಧಿಸಿದ … ಅವನು … ಬೋರ್ಡಿನ ಆಫೀಸಿನಲ್ಲಿ ಕೇಳಿ ತಿಳಕೊಳ್ಳತಕ್ಕದ್ದು.

ಎಚ್. ರಾಜಗೋಪಾಲ ಅಲ್ಪಾರ್,

ಪ್ರೆಸಿಡೆಂಟ್

ನಿಡಂಬೂರು ಗ್ರಾಮಪಂಚಾಯತಬೋರ್ಡು ಕಚೇರಿ. ತಾ. 12 2 1951

ಪೆರ್ಡೂರು ತಾ. 6-2-1951 ರ ಸಂಜೆ ಶ್ರೀ ಮಂತ ಎಸ್. ಸುಬ್ರಹ್ಮಣ್ಯ ಶಾಸ್ತ್ರಿ ಅಳಕೆಯವರ ಕಲಿಸುವ ಅವರದೇ ಉಪಾಧ್ಯಾಯ ನಿತ್ಯ ಪಠನ, ... ಅವಿಗ ಅಭಿಮಾನಿಗಳು ಮತ್ತು ವಿದ್ಯಾರ್ಥಿ ಇವರ ಅಧ್ಯಕ್ಷತೆಯಲ್ಲಿ ... ಪುಣ್ಯದಿನವು ಆಚರಿಸಲ್ಪಟ್ಟಿತು. ... ಒಂದು ... ಭಗವನ್ನಾಮ ಸಂಕೀರ್ತನ ... ವು ಜರಗಿದ ಬಳಿಕ, ಅಧ್ಯಕ್ಷರು, ... ಕನ್ನಡಕ್ಕೆ ಹಾಗೂ ಕನ್ನಡ ಜನತೆಗೆ ಮಾಡಿದ ಮಹೋಪಕಾರದ ಕುರಿತು ಭಾಷಣವಿತ್ತರು. ... ಅಬಳಿಕ ಸುಬ್ರಹ್ಮಣ್ಯ ... ಜೀವನ ಚರಿತ್ರೆಯ ... ಕಥಾ ಕಾಲಕ್ಷೇಪವು ಜರಗಿ ಪೂಜೆ ಪ್ರಸಾದ ವಿತರಣೆಯಾದೊಡನೆ ಸಮಾರಂಭವು ಕೊನೆಗೊಂಡಿತು.

ವಿಶ್ವೇಶಪ್ರ ನಗರ; ಇನ್ನಂಜೆ:— ... ಲ್ಲಿಯ ಯಸ್. ವಿ ... ಹೈಸ್ಕೂಲಿನ (Residential) ಅಧ್ಯಾಪಕ ವರ್ಗದವರ ... ಸಮಾರಂಭವು ತಾ 7 2 51 ರಂದು ಶ್ರೀ. ಕೆ ... ಶಿವರಾಮ ... ರವರ ಅಧ್ಯಕ್ಷತೆಯಲ್ಲಿ ವಿಜೃಂಭಣೆಯಿಂದ ಜರಗಿತು. ಶ್ರೀ ಸೋದೆ ಮಠದ ಶ್ರೀ ಶ್ರೀಗಳವರು, ಅನೇಕ ವಿದ್ವಾಂಸ ಮಹನೀಯರು ಗಳೂ ಸಭೆಯನ್ನಲಂಕರಿಸಿದ್ದರು. ... ದ ಕಾರ್ಯ ಕ್ರಮಗಳ ಅನಂತರ ಶ್ರೀ ಅಧ್ಯಕ್ಷರು ತಮ್ಮ ಭಾಷಣದಲ್ಲಿ ಆಧುನಿಕ ವಿದ್ಯಾರ್ಥಿಗಳ ಕರ್ತವ್ಯಗಳನ್ನೂ ಅಧ್ಯಾಪಕರುಗಳ ಜವಾಬ್ದಾರಿಯನ್ನೂ ಸವಿಸ್ತಾರವಾಗಿ ವಿವರಿಸಿದರು. ಶಾಲಾವಿದ್ಯಾರ್ಥಿಗಳು ... ವರಪ್ರದಾನ" ಎಂಬ ಐತಿಹಾಸಿಕ ಸಂಗೀತ ನಾಟಕವನ್ನೂ "... ಮದ್ದು" ಎಂಬ ಹಾಸ್ಯರಸ ಪ್ರಧಾನವಾದ ತುಳು ಸಂಗೀತ ನಾಟಕವನ್ನೂ ಜನಮನರಂಜನೆಯಾಗುವಂತೆ ಅಭಿನಯಿಸಿ ತೋರಿಸಿದರು ಅಲ್ಲದೆ ಇದರೊಂದಿಗೆ ... ಹೈಸ್ಕೂಲಿನ ವಿದ್ಯಾರ್ಥಿನಿಯರಿಂದ "ಶ್ರೀ ಕಾಂತ"ರ ... ನಾಟಕವೂ ಸುಂದರವಾಗಿ ಪ್ರದರ್ಶಿಸಲ್ಪಟ್ಟಿತು.

ಕುಂಬಳೆ— ತಾ. 3-2-1951 ... ಫೆ ... ಕ್ರಿಕೆಟ್ ... ಶ್ರೀ ಎ ಆರ್ ... ಅಧ್ಯಕ್ಷತೆಯಲ್ಲಿ ಜರಗಿತು.

ಬೈಲೂರು — ... ಗಾಂಧಿ ಸ್ಮಾರಕ ಸಂಘದ ಆಶ್ರಯದಲ್ಲಿ ಇದೇ ತಾ 5ರಲ್ಲು ಶ್ರೀ ... ಪ್ರಮುಖರು ... ವಿಷಯದಲ್ಲಿ ಭಾಷಣವಿತ್ತರು. ಶ್ರೀ ... ಅಧ್ಯಕ್ಷತೆವಹಿಸಿದ್ದರು.

ಕುಂಬಳೆ ಫಿರ್ಕಾದಲ್ಲಿ ಜರಗಿದ ಮುಖ್ಯ ಕೆಲಸಗಳ ಸಾರಾಂಶ:— ... ಜನವರಿಯಲ್ಲಿ ಮೂರು ಫಿರ್ಕಾಗಳಲ್ಲಿಯೂ ಆರೋಗ್ಯದ ವಿಷಯ ಪ್ರಚಾರ ಕಾರ್ಯವು ಕೈಕೊಳ್ಳಲ್ಪಟ್ಟಿತು. ... ದಲ್ಲಿ ಒಂದು ... ಜನ ... ತೆರೆಯಲ್ಪಟ್ಟಿತು. ... ಕ್ಷೇತ್ರಕ್ಕೆ ರೈತರ ಒಂದು ತಂಡವನ್ನು ಸಂದರ್ಶನಕ್ಕೆ ಕರೆದುಕೊಂಡು ಹೋಗಲಾಯಿತು. ಯಂತ್ರದ ಸಹಾಯದಿಂದ 4 ಎಕ್ರೆ ಜಾಗೆಯು ಸಮತಟ್ಟು ಮಾಡಲ್ಪಟ್ಟಿತು. ... ಕೆರೆದುರಸ್ತಿಗೆ ರೂ. 200/ ಮತ್ತು ... ಕಟ್ಟಕ್ಕೆ ರೂ. 350/- ಮಂಜೂರು ಸಾಲವಾಗಿರುತ್ತದೆ. 2 ಜೇನುಗೂಡುಗಳು ಇಡಲ್ಪಟ್ಟವು ... ಕೆಲಸದ ಕೇಂದ್ರದಲ್ಲಿ ... ಅನುಕೂಲವಾದ ಮಾಗೆಗಳು ತಯಾರಿಸಲ್ಪಟ್ಟವು. ಅನೇಕ ವಿನೋದಗಳು ಏರ್ಪಡಿಸಲ್ಪಟ್ಟವು.

ಉಪ್ಪಿನಂಗಡಿ— ಶ್ರೀ ಸಹಸ್ರ ಲಿಂಗೇಶ್ವರ ದೇವಸ್ಥಾನದಲ್ಲಿ ಮಖೆಜಾತ್ರೆಯು ತಾ. 20 2 51ಕ್ಕೆ ಪ್ರಾರಂಭವಾಗುವುದೆಂದು ಆಡಳ್ತೆ ಮೊಕ್ತೇಸರ ಶ್ರೀ ಬಿ ಬಾಲಕೃಷ್ಣ ರೈಗಳು ತಿಳಿಸುತ್ತಾರೆ.

ಹಳ್ಳಿ ಪ್ರದೇಶದಲ್ಲಿ ಹಸುಗೆ ರದ್ದತಿ ಮತ್ತು ಆಹಾರ ಪರಿಸ್ಥಿತಿ

ಜನತೆಯಲ್ಲಿ ದ. ಕ. ಜಿಲ್ಲಾ ಕಾಂಗ್ರೆಸ್ ಕಮಿಟಿಯ ವಿನಂತಿ.

ತಾ. 3 3 ... ರಲ್ಲಿ ಡಾ. ಕೆ. ಯನ್. ಆಳ್ವರ ಅಧ್ಯಕ್ಷತೆಯಲ್ಲಿ ಸೇರಿದ ದ. ಕ. ಜಿಲ್ಲಾ ಕಾಂಗ್ರೆಸ್ ಕಮಿಟಿಯ ಕಾರ್ಯಕಾರಿ ಮಂಡಳಿಯ ಸಭೆಯಲ್ಲಿ, ಹಳ್ಳಿ ಪ್ರದೇಶದಲ್ಲಿ ಹಸುಗೆಯ ರದ್ದತಿ ಮಾಡಿ ಉಂಟಾಗಿರುವ ಪರಿಸ್ಥಿತಿಯ ಕುರಿತು ಆಳವಾಗಿ ವಿಚಾರಿಸಲಾಯಿತು.

ಜಿಲ್ಲೆಯ ಪ್ರಾಮುಖ್ಯ (ಪ್ರಥಮ) ಬೆಳೆಯ ಭತ್ತವನ್ನು ಸಂಪೂರ್ಣ ಸಂಗ್ರಹಿಸಿದ ಮೇಲೆ ಹಳ್ಳಿಗಳಲ್ಲಿ; ಮೊದಲಾಗಿ ಏನೂ ತಿಳಿಸದೆ ಹಠಾತ್ತಾಗಿ ಹಸುಗೆ ನಿಲ್ಲಿಸಿದುದು, ಅತ್ಯಂತ ಶೋಚನೀಯವಿರುತ್ತದೆ. ಮತ್ತು ಜಿಲ್ಲೆಯನ್ನು ಸ್ವಾವಲಂಬಿಯಾಗಿ ಈಗ ಪರಿಗಣಿಸಿರುವುದು, ಅಸ್ವಾಭಾವಿಕವಿರುತ್ತದೆಂದು ಕಮಿಟಿಯ ಅಭಿಪ್ರಾಯ ಇರುತ್ತಾದಾಗ್ಯೂ ಹಳ್ಳಿ ಪ್ರದೇಶದ ಹಸುಗೆ ರದ್ದತಿಯಿಂದ ಕಟ್ಟಕಡೆಗೆ ಪರಿಣಾಮ ಒಳ್ಳೆಯದಾಗುವುದೆಂದು ಕಮಿಟಿಯ ಅಭಿಮತವಿರುತ್ತದೆ.

ಹಳ್ಳಿಗಳಲ್ಲಿ ಹಸುಗೆ ರದ್ದತಿಯಾದುದರಿಂದ ಮೂರನೆಯ ಬೆಳೆಯ ಪ್ರಮಾಣವು ಹೆಚ್ಚಿರುವುದೆಂಬುವುದು ಸಂತೋಷದ ವಿಷಯವಿದೆ. ಹಳ್ಳಿಗಳಲ್ಲಿ, ಆಯಾ ಪ್ರದೇಶದಲ್ಲಿ ಆಹಾರ ಸಂಬಂಧವಾಗಿ ಉಂಟಾಗುವ ಪರಿಸ್ಥಿತಿಯನ್ನು, ಕಾಂಗ್ರೆಸ್ ಕಮಿಟಿಗಳವರು ಭೂಮಾಲಿಕರು ಇತರ ಜನರು ಮತ್ತು ಸರಕಾರಿ ನೌಕರರು ಪರಸ್ಪರ ಸಹಕರಿಸಿ ಹತೋಟಿಗೆ ತರುವ ವ್ಯವಸ್ಥೆ ಮಾಡುವುದು ಅತ್ಯಗತ್ಯವಾಗಿದೆ, ಆದುದರಿಂದ ಜಿಲ್ಲಾ ಕಾಂಗ್ರೆಸ್ ಕಮಿಟಿಯವರು ಸಾರ್ವಜನಿಕರೊಡನೆ ಶೀಘ್ರ ವಿನಂತಿ ಮಾಡಿಕೊಳ್ಳಲು ನಿರ್ಧಾರ ಮಾಡಿರುತ್ತಾರೆ.

ಜನತಾ ಸರಕಾರದಲ್ಲಿ ಜನತೆಯ ಹಕ್ಕುಗಳು ಹೇಗೆ ಹೆಚ್ಚಿವೆಯೋ ಅದೇ ರೀತಿ ಜವಾಬ್ದಾರಿಯೂ ಅಧಿಕವಾಗಿದೆ. ಪ್ರತಿಯೊಂದಕ್ಕೂ ಸರಕಾರದ ಕಡೆಗೇನೇ ಕಣ್ಣುನೀಡಿಕೊಂಡಿದ್ದು, ಅದನ್ನು ಟೀಕಿಸಿ ಮಾತಾಡುವ ಮನೋವೃತ್ತಿಯನ್ನು ಕಡಿಮೆ ಮಾಡಿ ಜನರು ತಮ್ಮ ನೆರೆಕರೆಯವರ ಮತ್ತು ತಮ್ಮ ಕರ್ತವ್ಯಗಳ ಕಡೆಗೆ ಗಮನವಿತ್ತರೆ ದೇಶದ ಇಂದಿನ ಹೆಚ್ಚಿನ ಸಮಸ್ಯೆ ಮತ್ತು ಸಂಕಷ್ಟಗಳು ಸುಲಭವಾಗಿ ದೂರವಾಗಬಹುದು. ಆದುದರಿಂದ ಹಳ್ಳಿ ಪ್ರದೇಶಗಳ ಕಾಂಗ್ರೆಸ್ ಕೆಲಸಗಾರರು, ಕೃಷಿಕಾರರು, ವರ್ಗದಾರರು ಮತ್ತು ಇತರ ಜನಸಾಮಾನ್ಯರು ಅನುಕೂಲ ಕಾರ್ಯಕ್ಷೇತ್ರವನ್ನು ಅರಿತು ಸದ್ರಿ ಕ್ಷೇತ್ರದ ಆಹಾರ ಸರಬರಾಯಿ ಮತ್ತು ಅಧಿಕ ಆಹಾರ ಉತ್ಪತ್ತಿಯೇ ಮೊದಲಾದ ಕೆಲಸಗಳ ಬಗ್ಗೆ ಜವಾಬ್ದಾರಿಯುಳ್ಳ ಅನಧಿಕಾರಿ ಜನತಾ ಸಮಿತಿಗಳನ್ನು ರಚಿಸಿ ಕೆಲಸಮಾಡಬೇಕಾಗಿ ವಿನಂತಿ.

ಈ ಸಮಿತಿಯವರು ತಮ್ಮ ಪ್ರದೇಶದಿಂದ ಕೇವಲ ಲಾಭದ ವ್ಯಾಪಾರಕ್ಕಾಗಿ ಅಕ್ಕಿಯು ಹೊರಹೋಗದಂತೆ ಜನಮತದ ಬೆಂಬಲದಿಂದ ನಿಲ್ಲಿಸಲೆತ್ನಿಸಬೇಕು, ಆಯಾ ಪ್ರದೇಶದ ಭೂಮಾಲಿಕರಾಗಲೀ ಕೃಷಿಕರಾಗಲೀ ಊರಿನ ಆವಶ್ಯಕತೆಗಿಂತ ಹೆಚ್ಚಿನ ಅಕ್ಕಿಯನ್ನು ಸಂಗ್ರಹಿಸಿ ಅಡಗಿಸಿಟ್ಟು ಕಳ್ಳಪೇಟೆಯಲ್ಲಿ ವಿಪರೀತ ಬೆಲೆಗೆ ಮಾರುವುದನ್ನು ತಡೆಹಾಕಬೇಕು. ತಮ್ಮ ಊರಿನ ಬಡಬಗ್ಗರಿಗೆ ಬೇಕಾಗುವಷ್ಟು ಅಕ್ಕಿಯನ್ನು ನ್ಯಾಯವಾದ ಬೆಲೆಗೆ ಕೊಂಡುಕೊಂಡು ಸಂಗ್ರಹಿಸಿ ಮಿತವಾದ ಲಾಭವನ್ನು ಮಾತ್ರ ಇಟ್ಟುಕೊಂಡು, ಚಿಲ್ಲರೆ ಮಾರುವ ವ್ಯವಸ್ಥೆ ಮಾಡತಕ್ಕದ್ದು. ಆಯಾ ಪ್ರದೇಶದಲ್ಲಿ ಹೆಚ್ಚಿಗೆ ಉಳಿಯುವ ಅಕ್ಕಿಯ ಪ್ರಮಾಣವನ್ನು ಸಂಬಂಧಪಟ್ಟ ಅಧಿಕಾರಿಗಳಿಗೆ ತಿಳಿಸಿ, ಪರ್ಮಿಟ್ ಪಡೆದವರಿಗೆ ಮಾತ್ರ ಹೊರಗೆ ಕಳುಹಿಸಬೇಕು.

ತಮ್ಮ ಪ್ರದೇಶದಲ್ಲಿ ಆದಷ್ಟು ಹೆಚ್ಚು ಧವಸಧಾನ್ಯಗಳನ್ನೇ ಕೃಷಿಕರು ಬೆಳೆಸುವಂತೆ ಯೋಜನಾ ಕಾರ್ಯಕ್ರಮವನ್ನು ಕೈಕೊಳ್ಳಬೇಕು. ಈ ಎಲ್ಲಾ ಕಾರ್ಯಗಳಿಗೆ ಬೇಕಾದ ಹೆಚ್ಚಿನ ಮಾಹಿತಿ ಮತ್ತು ಸಲಹೆಯಲ್ಲಿ ಸರಕಾರಿ ನೌಕರರಿಂದಲೂ ಮೇಲಿನ ಕಾಂಗ್ರೆಸ್ ಕಮಿಟಿಗಳಿಂದಲೂ ಪಡೆಯತಕ್ಕದ್ದು.

ಈ ರೀತಿ ಜನರೇ ಆಹಾರ ಸಮಿತಿಗಳನ್ನು ಸ್ಥಾಪಿಸಿ ಸಂಘಟಿತ ಪ್ರಯತ್ನ ಮಾಡದಿದ್ದಲ್ಲಿ ಪರಿಸ್ಥಿತಿಯು ಹದಗೆಟ್ಟು, ಮುಂದಿನ ಮಳೆಗಾಲದಲ್ಲಿ ಎಲ್ಲೆಲ್ಲಿಯೂ ಹಾಹಾಕಾರ ಏಳುವ ಸಂಭವವಿರುವುದು. ಆದುದರಿಂದ ಜನರು ಮುಂಜಾಗ್ರತೆ ತೆಗೆದುಕೊಂಡು ಕೆಲಸಮಾಡುವುದು ಆವಶ್ಯವಿದೆ. ಜನತೆ ಆಹಾರ ಸಮಿತಿಗಳನ್ನು ನೇಮಿಸಿದ ವಿಷಯವನ್ನು ಜಿಲ್ಲಾ ಕಲೆಕ್ಟರರಿಗೂ, ಜಿಲ್ಲಾ ಕಾಂಗ್ರೆಸ್ ಕಮಿಟಿಗೂ ತಿಳಿಸಬೇಕಾಗಿ ವಿನಂತಿ.

ಕೆ. ಕೆ. ಶೆಟ್ಟಿ,
ಪ್ರಧಾನ ಕಾರ್ಯದರ್ಶಿ
ದ. ಕ ಜಿಲ್ಲಾ ಕಾಂಗ್ರೆಸ್ ಕಮಿಟಿ
ಮಂಗಳೂರು, ತಾ. ೯—೨—೧೯೫೧

ಟೈಪು ರೀ ಕ್ಯಾಸ್ಟಿಂಗ್ ಛಾರ್ಜನ್ನು ಅರ್ಧಕ್ಕಿಂತ ಹೆಚ್ಚಾಗಿ ಉಳಿಸಿಕೊಳ್ಳಿ

ಆಧುನಿಕ ಯಂತ್ರ ಸಾಧನಗಳಿಂದ ಸುಸಜ್ಜಿತವಾದ ಮೈಸೂರು ಟೈಪು ಫೌಂಡರಿಯಲ್ಲಿ ಪ್ರಿಂಟಿಂಗ್ ಟೈಪುಗಳನ್ನು (ಕನ್ನಡ) ರೀಕ್ಯಾಸ್ಟ್ ಮಾಡಿಸುವುದರಿಂದ ವಿಪರೀತ ಉಳಿತಾಯವಾಗುತ್ತದೆ.

ಸಾವಿರ ಪೌಂಡು ಮತ್ತು ಹೆಚ್ಚಿಗೆ ಪೌಂಡಿಗೆ 0—10—0 | ಐನೂರು ಪೌಂಡು ಮತ್ತು ಹೆಚ್ಚಿಗೆ ಪೌಂಡಿಗೆ 0—12—0

ಸೇಲ್ಸ್ ಟ್ಯಾಕ್ಸ್, ಪ್ಯಾಕಿಂಗ್ ಮತ್ತು ಫಾರ್ವರ್ಡಿಂಗ್ ಛಾರ್ಜ ಮುಫತ್ತು.

ಹೆಚ್ಚಿನ ವಿವರಗಳಿಗೆ ಬರೆಯಿರಿ. ಪಿ. ಜಿ. ಬಸಪ್ಪ, ಪಾರ್ಟನರ್

ಮೈಸೂರು ಟೈಪು ಫೌಂಡರಿ,
ಬೆಂಗಳೂರು-2

NOTICE

In the Court of the District Munsif of Karkala

O. S. No. 564 of 1950

Shrinivasa Pejathaya and another — Plaintiffs

and

Mukhyaprana Bhatta and others — Defendants.

To

No. 2 Shrinivasa Bhatt, No 3 Rama Bhatta, sons of Guruy Bhatta, No 5 Vadiraja Bhatta, No 6 Shridhara Bhatta, sons of Krishna Bhat all residing at Muddakarumatam, Vaikom Taluk, Travancore State.

Please take notice that the above said suit filed by the plaintiffs for possession of the immoveable properties, mesne profits and rents, as per term lease dated 4-3 1925 is posted in the above court for your appearance to 27 2-1951. You are hereby informed that you are to appear before the court on that date at 11 A. M and contest the same failing which the case will be proceeded in your absence

By order of the court,
Sd. H K Gopalkrishna Rau
Vakil for plaintiffs.
Karkala, Dated 11-2 51.

"ಗೋಪಾಲ ಭೇಷಜಾಶ್ರಮ" ಮಂಗಳೂರು.

(ಸ್ಥಾಪನೆ 1910)

ಸ್ಥಾಪಕರು:-ಆಯುರ್ವೇದ ಭೂಷಣ ಯಂ ಸಿ. ಶಾಸ್ತ್ರೀ,

ಬಾಣಂತಿಯರ ಸಲುವಾಗಿಯೇ ಪೇಟೆ ಮತ್ತು ಹಳ್ಳಿ ಪ್ರಕೃತಿಯ ದೇಹಸ್ಥಿತಿಯನ್ನು ಪರೀಕ್ಷಿಸಿ ತಯಾರಿಸಲ್ಪಟ್ಟ ಅಮೋಘವಾದ ... ರಸಾಯನ ಅಲ್ಪ ಮೌಲ್ಯದಿಂದ ಬಡವರಿಗೂ, ಭಾಗ್ಯಶಾಲಿಗಳಿಗೂ ಸುಲಭವಾಗಿರುವುದು.

ಇವರ ಜನಜೀವನಾತು ಎಂಬ ... ರಸಾಯನ



ಹೆಚ್ಚಿನ ಮಾಹಿತಿಗೆ—ಡಾ। ಯಂ ಸಿ. ಶಾಸ್ತ್ರೀ, ಯಲ್. ಐ
ಕೊಡಿಯಾಲಬೈಲ ಪೋಸ್ಟು, (ಮಂಗಳೂರು)
ಪ್ರತಿನಿಧಿ:—ಡಾ। ಐ. ಕೆ. ಶಿವರಾಮರಾವ್, ಕುಂಜಿಬೆಟ್ಟು, ಉಡುಪಿ.

Approved from by the Govt. of Mysore Certificated by the Agent of the Govt of Cylone & Indian.

ಪೆರ್ಡೂರು ತಾ 6-2-1951 ರಂದು ಕಲಜಾಗ್, ಶ್ರೀಯುತ ಎಸ್. ಸುಬ್ರಹ್ಮಣ್ಯ ಶಾಸ್ತ್ರಿ "ಕೀರ್ತನ ಕಂಠೀರವ" ಇವರಿಂದ ಊರವರ ನೆರವು ಪಡೆದ, ಪಿ. ವಿ ನೇತ್ರ ಅಡಿಗ "ಶಿರೋಮಣಿ ಮತ್ತು ವಿದ್ವಾನ್" ಇವರ ಅಧ್ಯಕ್ಷತೆಯಲ್ಲಿ ಪುರಂದರ ದಾಸರ ಪುಣ್ಯದಿನವು ಆಚರಿಸಲ್ಪಟ್ಟಿತು. ಸುಮಾರು ಒಂದು ಗಂಟೆಯ ಕಾಲ ದಾಸರ ಭಗವನ್ನಾಮ ಸಂಕೀರ್ತನಾ ಕಾರ್ಯಕ್ರಮವು ಜರಗಿದ ಬಳಿಕ, ಅಧ್ಯಕ್ಷರು, ದಾಸರು ಕನ್ನಡಕ್ಕೆ ಹಾಗೂ ಕನ್ನಡ ಜನತೆಗೆ ಮಾಡಿದ ಮಹೋಪಕಾರದ ಕುರಿತು ಭಾಷಣವಿತ್ತರು. ಆಬಳಿಕ ಸುಬ್ರಹ್ಮಣ್ಯ ಶಾಸ್ತ್ರಿಗಳ, ಪುರಂದರ ದಾಸರ ಜೀವನ ಚರಿತ್ರೆಯ ಕುರಿತು ಹರಿಕಥಾ ಕಾಲಕ್ಷೇಪವು ಜರಗಿ ಪೂಜಾ ಪ್ರಸಾದ ವಿತರಣೆಯಾದೊಡನೆ ಸಮಾರಂಭವು ಕೊನೆಗೊಂಡಿತು.

ವಿಶ್ವೇಂದ್ರ ನಗರ; ಇನ್ನಂಜೆ:- ಇಲ್ಲಿಯ ಯಸ್. ವಿ. ಯಂಚ್ ಹೈಸ್ಕೂಲಿನ (Residential) ಆಶ್ರಮವಾಸಿಕ ವರ್ಧಂತ್ಯುತ್ಸವ ಸಮಾರಂಭವು ತಾ 7 2-51 ರಂದು ಶ್ರೀ. ಕೋಟ ಶಿವರಾಮ ಕಾರಂತರ ಸನ್ಮಾನ್ಯ ಅಧ್ಯಕ್ಷತೆಯಲ್ಲಿ ವಿಜೃಂಭಣೆಯಿಂದ ಜರಗಿತು, ಶ್ರೀ ಸೋದೆ ಮಠದ ಶ್ರೀ ಶ್ರೀಗಳವರೂ, ಅನೇಕ ವಿದ್ವಾಂಸ ಮಹನೀಯರುಗಳೂ ಸಭೆಯನ್ನಲಂಕರಿಸಿದ್ದರು. ಕ್ರಮವಾದ ಕಾರ್ಯಕ್ರಮಗಳ ಅನಂತರ ಶ್ರೀ ಅಧ್ಯಕ್ಷರು ತಮ್ಮ ಮಾತಿನಲ್ಲಿ ಆಧುನಿಕ ವಿದ್ಯಾರ್ಥಿಗಳ ಕ್ರಮಕರ್ತವ್ಯಗಳನ್ನೂ ಅಧ್ಯಾಪಕರುಗಳ ಹೊಣೆಗಾರಿಕೆಯನ್ನೂ ಸರಸವಾಗಿ ವಿವರಿಸಿದರು. ಶಾಲಾವಿದ್ಯಾರ್ಥಿಗಳು "ವೀರ ವರಭೂಪವ" ಎಂಬ ಐತಿಹಾಸಿಕ ಸಂಗೀತ ನಾಟಕವನ್ನೂ "ಮಾಮತ್ತನ ಮದ್ದ್" ಎಂಬ ಹಾಸ್ಯರಸ ಪ್ರಧಾನವಾದ ತುಳು ಸಂಗೀತ ನಾಟಕವನ್ನೂ ಜನಮನರಂಜನೆಯಾಗುವಂತೆ ಅಭಿನಯಿಸಿ ತೋರಿಸಿದರು. ಅಲ್ಲದೆ ಇದರೊಂದಿಗೆ ನೆರೆದ "ಪಿ. ಜಿ. ತಿಲ" ಹೈಸ್ಕೂಲಿನ ವಿದ್ಯಾರ್ಥಿನಿಯರಿಂದ "ಶ್ರೀಕಾಂತ"ರ "ಕಿಸಾಗೋತಮಿ" ಎಂಬ ನಾಟಕವೂ ಸುಂದರವಾಗಿ ಪ್ರದರ್ಶಿಸಲ್ಪಟ್ಟಿತು.

ಕುಂಬಳೆ—ಇದೇ ತಾ 6ರಲ್ಲಿ ಇಲ್ಲಿಯ ಹೋಟೆಲಿ ಫಿವಿ ಲಿ ಎಲ್. ಇ ಶಾಲಾ ವರ್ಧಂತ್ಯುತ್ಸವವು ಕಲೆಕ್ಟರ್ ಶ್ರೀ ಎ ಆರ್ ರಂಜಿತ್ತರ ಅವರ ಅಧ್ಯಕ್ಷತೆಯಲ್ಲಿ ಜರಗಿತು.

ಚಿತ್ರಲೂರು—ಸ್ಥಳೀಯ ಗಾಂಧಿ ಸ್ಮಾರಕ ಸಂಘದ ಆಶ್ರಯದಲ್ಲಿ ಇದೇ ತಾ 5ರಲ್ಲಿ ಶ್ರೀ ಕರಂತ ಪ್ರಭುನವರು ಅಸ್ಪೃಶ್ಯತೆ ಎಂಬ ವಿಷಯದಲ್ಲಿ ಭಾಷಣವಿತ್ತರು. ಶ್ರೀ ಕಾಂತಾಚಾರ್ಯರು ಅಧ್ಯಕ್ಷತೆವಹಿಸಿದ್ದರು.

ಕುಂಬಳೆ ಫಿರ್ಕಾದಲ್ಲಿ ಜರಗಿದ ಮುಖ್ಯ ಕೆಲಸಗಳ ಸಾರಾಂಶ:—ಕಳೆದ ಜನವರಿಯಲ್ಲಿ ಮೂರು ಫಿರ್ಕಾಗಳಲ್ಲಿಯೂ ಆರೋಗ್ಯದ ವಿಷಯ ಪ್ರಚಾರ ಕಾರ್ಯವು ಕೈಕೊಳ್ಳಲ್ಪಟ್ಟಿತು. ಬೇಲದಲ್ಲಿ ಒಂದು ಹರಿಜನ ಶಾಲೆಯು ತೆರೆಯಲ್ಪಟ್ಟಿತು. ಕಂಕನಾಡಿ ಕೃಷಿ ಕ್ಷೇತ್ರಕ್ಕೆ ರೈತರ ಒಂದು ತಂಗಡವನ್ನು ಸಂದರ್ಶನಕ್ಕೆ ಕರೆದುಕೊಂಡು ಹೋಗಲಾಯಿತು. ಯಂತ್ರದ ಸಹಾಯದಿಂದ 4 ಎಕ್ರೆ ಬಾಗೆಯ ಸಮತಟ್ಟು ಮಾಡಲ್ಪಟ್ಟಿತು. ಮಿರೋಳದ ಕೆರೆದುರಸ್ತಿಗೆ ರೂ. 200/ ಮತ್ತು ಉಜಿರೆಳ್ಯಾರು ಕಟ್ಟಕ್ಕೆ ರೂ. 350/-ಮಂಜೂರಾಗುವ ಸಾಲವಾಗಿರುತ್ತದೆ. 2 ಜೇನುಗೂಡುಗಳು ಇಡಲ್ಪಟ್ಟಿತು. ಉಡಿಗೆ ಕೆಲಸದ ಕೇಂದ್ರದಲ್ಲಿ ಹಾಡೇಸಕ್ಕೆ ಕಳುಹಿಸಲಿಕ್ಕೆ ಅನುಕೂಲವಾದ ಹುಡಿಗೆಗಳು ತಯಾರಿಸಲ್ಪಟ್ಟವು. ಅನೇಕ ವಿನೋದಗಳು ಏರ್ಪಡಿಸಲ್ಪಟ್ಟವು.

ಉಪ್ಪಿನಂಗಡಿ— ಶ್ರೀ ಸಹಸ್ರಲಿಂಗೇಶ್ವರ ದೇವಸ್ಥಾನದಲ್ಲಿ ಮಹಾಜಾತ್ರೆಯು ತಾ. 20 2-51ಕ್ಕೆ ಪ್ರಾರಂಭವಾಗುವುದೆಂದು ಆಡಳಿತ ಮೊಕ್ತೇಸರ ಶ್ರೀ ಬಿ ಬಾಲಕೃಷ್ಣ ರೈಗಳು ತಿಳಿಸುತ್ತಾರೆ.

ಹಳ್ಳಿ ಪ್ರದೇಶದಲ್ಲಿ ಹಸುಗೆ ರದ್ದತಿ ಮತ್ತು ಆಹಾರ ಪರಿಸ್ಥಿತಿ

ಜನತೆಯಲ್ಲಿ ದ ಕ ಜಿಲ್ಲಾ ಕಾಂಗ್ರೆಸ್ ಕಮಿಟಿಯ ವಿನಂತಿ.

ತಾ ೨-೨-೫೧ರಲ್ಲಿ ಡಾ. ಕೆ. ಯನ್. ಅಳ್ವರ ಅಧ್ಯಕ್ಷತೆಯಲ್ಲಿ ಸೇರಿದ ದ. ಕ. ಜಿಲ್ಲಾ ಕಾಂಗ್ರೆಸ್ ಕಮಿಟಿಯ ಕಾರ್ಯಕಾರಿ ಮಂಡಳಿಯ ಸಭೆಯಲ್ಲಿ, ಹಳ್ಳಿ ಪ್ರದೇಶದಲ್ಲಿ ಹಸುಗೆಯ ರದ್ದತಿ ಮಾಡಿ ಉಂಟಾಗಿರುವ ಪರಿಸ್ಥಿತಿಯ ಕುರಿತು ಆಳವಾಗಿ ವಿಚಾರಿಸಲಾಯಿತು.

ಜಿಲ್ಲೆಯ ಪ್ರಾಮುಖ್ಯ (ಪ್ರಥಮ ಬೆಳೆಯ ಭತ್ತವನ್ನು ಸಂಪೂರ್ಣ ಸಂಗ್ರಹಿಸಿದ ಮೇಲೆ ಹಳ್ಳಿಗಳಲ್ಲಿ; ಮೊದಲಾಗಿ ಏನೂ ತಿಳಿಸದೆ ಹಠಾತ್ತಾಗಿ ಹಸುಗೆ ನಿಲ್ಲಿಸಿದುದು, ಅತ್ಯಂತ ಶೋಚನೀಯವಿರುತ್ತದೆ. ಮತ್ತು ಜಿಲ್ಲೆಯು ಪರಾವಲಂಬಿಯಾಗಿ ಈಗ ಪರಿಗಣಿಸುವುದು, ಆಶ್ಚರ್ಯಕರವಿರುತ್ತದೆಂದು ಕಮಿಟಿಯ ಅಭಿಪ್ರಾಯ ಇರುತ್ತಾದರೂ ಹಳ್ಳಿ ಪ್ರದೇಶದ ಹಸುಗೆ ರದ್ದತಿಯಿಂದ ಕಟ್ಟಕಡೆಗೆ ಪರಿಣಾಮ ಒಳ್ಳೆಯದಾಗುವುದೆಂದು ಕಮಿಟಿಯ ಅಭಿಮತವಿರುತ್ತದೆ.

ಹಳ್ಳಿಗಳಲ್ಲಿ ಹಸುಗೆರದ್ದತಿಯಾದುದರಿಂದ ಮೂರನೆಯ ಬೆಳೆಯ ಪ್ರಮಾಣವು ಹೆಚ್ಚಲು ಪ್ರವೆಂಬುವುದು ಸಂತೋಷದ ವಿಷಯವಿದೆ. ಹಳ್ಳಿಗಳ , ಆಯಾ ಪ್ರದೇಶದಲ್ಲಿ ಆಹಾರ ಸಂಬಂಧವಾಗಿ ಉಂಟಾಗುವ ಪರಿಸ್ಥಿತಿಯನ್ನು, ಕಾಂಗ್ರೆಸ್ ಕಮಿಟಿಗಳವರು ಭೂಮಾಲಿಕರು ಇತರ ಜನರು ಮತ್ತು ಸರಕಾರಿ ನೌಕರರು ಪರಸ್ಪರ ಸಹಕರಿಸಿ ಹತೋಟಿಗೆ ತರುವ ವ್ಯವಸ್ಥೆ ಮಾಡುವುದು ಅತ್ಯಗತ್ಯವಾಗಿದೆ, ಆದುದರಿಂದ ಜಿಲ್ಲಾ ಕಾಂಗ್ರೆಸ್ ಕಮಿಟಿಯವರು ಮುಖಂಡರೊಡನೆ ಶೀಘ್ರ ವಿನಂತಿ ಮಾಡಿಕೊಳ್ಳ ನಿರ್ಧಾರ ಮಾಡಿರುತ್ತಾರೆ.

ಜನತಾ ಸರಕಾರದಲ್ಲಿ ಜನತೆಯ ಹಕ್ಕುಗಳು ಹೇಗೆ ಹೆಚ್ಚುವವೋ ಅದೇ ರೀತಿ ಜವಾಬ್ದಾರಿಯೂ ಅಧಿಕವಾಗಿದೆ. ಪ್ರತಿಯೊಂದಕ್ಕೂ ಸರಕಾರದ ಕಡೆಗೇನೇ ಕಣ್ಣು ನೇಡಿಕೊಂಡಿದ್ದು, ಅದನ್ನು ಟೀಕಿಸಿ ಮಾತಾಡುವ ಮನೋವೃತ್ತಿಯನ್ನು ಕಡಿಮೆ ಮಾಡಿ ಜನರು ತಮ್ಮ ನೆರೆಕೆರೆಯವರ ಮತ್ತು ತಮ್ಮ ಕರ್ತವ್ಯಗಳ ಕಡೆಗೆ ಗಮನವಿತ್ತರೆ ದೇಶದ ಇಂದಿನ ಹೆಚ್ಚಿನ ಸಮಸ್ಯೆ ಮತ್ತು ಸಂಕಷ್ಟಗಳು ಸುಲಭವಾಗಿ ದೂರವಾಗಬಹುದು ಆದುದರಿಂದ ಹಳ್ಳಿ ಪ್ರದೇಶಗಳ ಕಾಂಗ್ರೆಸ್ ಕೆಲಸಗಾರರು, ಕೃಷಿಕಾರರು, ವರ್ಗದಾರರು ಮತ್ತು ಇತರ ಜನಸಾಮಾನ್ಯರು ಅನುಕೂಲ ಕಾರ್ಯಕ್ಷೇತ್ರವನ್ನು ಆರಿಸಿ ಸದ್ರಿ ಕ್ಷೇತ್ರದ ಆಹಾರ ಸರಬರಾಯಿ ಮತ್ತು ಅಧಿಕ ಆಹಾರ ಉತ್ಪತ್ತಿಯೇ ಮೊದಲಾದ ಕೆಲಸಗಳ ಬಗ್ಗೆ ಜವಾಬ್ದಾರಿಯುಳ್ಳ ಅನಧಿಕಾರಿ ಜನತಾ ಸಮಿತಿಗಳನ್ನು ರಚಿಸಿ ಕೆಲಸಮಾಡಬೇಕಾಗಿ ವಿನಂತಿ.

ಈ ಸಮಿತಿಯವರು ತಮ್ಮ ಪ್ರದೇಶದಿಂದ ಕೇವಲ ಲಾಭದ ವ್ಯಾಪಾರಕ್ಕಾಗಿ ಅಕ್ಕಿಯು ಹೊರಹೋಗದಂತೆ ಜನಮತದ ಬೆಂಬಲದಿಂದ ನಿಷ್ಕರ್ಷಿಸಬೇಕು, ಆಯಾ ಪ್ರದೇಶದ ಭೂಮಾಲಿಕರಾಗಲೀ ಕೃಷಿಕರಾಗಲೀ ಊರಿನ ಆವಶ್ಯಕತೆಗಿಂತ ಹೆಚ್ಚಿನ ಅಕ್ಕಿಯನ್ನು ಸಂಗ್ರಹಿಸಿ ಅಡಗಿಸಿಟ್ಟು ಕಳ್ಳಪೇಟೆಯಲ್ಲಿ ವಿಪರೀತ ಬೆಲೆಗೆ ಮಾರುವುದನ್ನು ತಡೆಹಾಕಬೇಕು ತಮ್ಮ ಊರಿನ ಬಡಬಗ್ಗರಿಗೆ ಬೇಕಾಗುವಷ್ಟು ಅಕ್ಕಿಯನ್ನು ನ್ಯಾಯವಾದ ಬೆಲೆಗೆ ಕೊಂಡುಕೊಂಡು ಸಂಗ್ರಹಿಸಿ ಮಿತವಾದ ಲಾಭವನ್ನು ಮಾತ್ರ ಇಟ್ಟುಕೊಂಡು, ಚಿಲ್ಲರೆ ಮಾರುವ ವ್ಯವಸ್ಥೆ ಮಾಡತಕ್ಕದ್ದು. ಆಯಾ ಪ್ರದೇಶದಲ್ಲಿ ಹೆಚ್ಚಿಗೆ ಉಳಿಯುವ ಅಕ್ಕಿಯ ಪ್ರಮಾಣವನ್ನು ಸಂಬಂಧಪಟ್ಟ ಅಧಿಕಾರಿಗಳಿಗೆ ತಿಳಿಸಿ, ಪರ್ಮಿಟ್ ಪಡೆದವರಿಗೆ ಮಾತ್ರ ಹೊರಗೆ ಕಳುಹಿಸಬೇಕು.

ತಮ್ಮ ಪ್ರದೇಶದಲ್ಲಿ ಆದಷ್ಟು ಬೇಕಾದ ಧವಸಧಾನ್ಯಗಳನ್ನೇ ಕೃಷಿಕರು ಬೆಳೆಸುವಂತೆ ಯೋಜನಬದ್ಧ ಕಾರ್ಯಕ್ರಮವನ್ನು ಕೈಕೊಳ್ಳಬೇಕು, ಈ ಎಲ್ಲಾ ಕಾರ್ಯಗಳಿಗೆ ಬೇಕಾದ ಹೆಚ್ಚಿನ ಮಾಹಿತಿ ಮತ್ತು ಸಲಹೆಯಲ್ಲಿ ಸರಕಾರಿ ನೌಕರರಿಂದಲೂ ಮೇಲಿನ ಕಾಂಗ್ರೆಸ್ ಕಮಿಟಿಗಳಿಂದಲೂ ಪಡೆಯತಕ್ಕದ್ದು.

ಈ ರೀತಿ ಜನರೇ ಆಹಾರ ಸಮಿತಿಗಳನ್ನು ಸ್ಥಾಪಿಸಿ ಸಂಘಟಿತ ಪ್ರಯತ್ನ ಮಾಡದಿದ್ದಲ್ಲಿ ಪರಿಸ್ಥಿತಿಯು ಇದಕ್ಕಿಂತ, ಮುಂದಿನ ಮಳೆಗಾಲದಲ್ಲಿ ಎಲ್ಲೆಡೆಯೂ ಹಾಹಾಕಾರ ಏಳುವ ಸಂಭವವಿರುವುದು. ಆದುದರಿಂದ ಜನರು ಮುಂಜಾಗ್ರತೆ ತೆಗೆದುಕೊಂಡು ಕೆಲಸಮಾಡುವುದು ಅವಶ್ಯವಿದೆ. ಜನತೆ ಆಹಾರ ಸಮಿತಿಗಳನ್ನು ಸ್ಥಾಪಿಸಿದ ವಿಷಯವನ್ನು ಜಿಲ್ಲಾ ಕಲೆಕ್ಟರಿಗೂ, ಜಿಲ್ಲಾ ಕಾಂಗ್ರೆಸ್ ಕಮಿಟಿಗೂ ತಿಳಿಸಬೇಕಾಗಿ ವಿನಂತಿ.

ಕೆ ಕೆ. ಶೆಟ್ಟಿ,
ಪ್ರಧಾನ ಕಾರ್ಯದರ್ಶಿ
ದ. ಕ ಜಿಲ್ಲಾ ಕಾಂಗ್ರೆಸ್ ಕಮಿಟಿ.
ಮಂಗಳೂರು, ತಾ. ೯-೨-೧೯೫೧

NOTICE

In the Court of the District Munsif of Karkala.

O. S. No. 564 of 1950

Shrinivasa Pejathaya and another — Plaintiffs.

and

Mukhyaprana Bhatta and others— Defendants.

To

No 2 Shrinivasa Bhatta, No 3 Rama Bhatta, sons of Gururaya Bhatta. No 5 Vadiraja Bhatta, No 6 Shridhara Bhatta, sons of Krishna Bhatta All are residing at Muddukatimatam, Vaikom Taluk, Travancore State.

Please take notice that the abovesaid suit filed by the plaintiffs for possession of the immoveable properties, mesne profits and rents, as per term lease dated 4-3 1945 is posted in the above court for your appearance to 27 2-1951. You are hereby informed that you are to appear before the court on that date at 11 A. M. and contest the same failing which the case will be proceeded in your absence.

By order of the court,

Sd. H K Gopalkrishna Rau
Vakil for plaintiffs.

Karkala, Dated 11-2-51.

ಟೈಪು ರೀ ಕ್ಯಾಸ್ಟಿಂಗ್ ಛಾರ್ಜನ್ನು ಅರ್ಧಕ್ಕಿಂತ ಹೆಚ್ಚಾಗಿ ಉಳಿಸಿಕೊಳ್ಳಿ

ಆಧುನಿಕ ಯಂತ್ರ ಸಾಧನಗಳಿಂದ ಸುಸಜ್ಜಿತವಾದ ಮೈಸೂರು ಟೈಪು ಫೌಂಡರಿಯಲ್ಲಿ ಪ್ರಿಂಟಿಂಗ್ ಟೈಪುಗಳನ್ನು (ಕನ್ನಡ) ರೀಕ್ಯಾಸ್ಟ್ ಮಾಡಿಸುವುದರಿಂದ ವಿಪರೀತ ಉಳಿತಾಯವಾಗುತ್ತದೆ

ಸಾವಿರ ಪೌಂಡು ಮತ್ತು ಹೆಚ್ಚಿಗೆ ಪೌಂಡಿಗೆ **0—10—0**

ಐನೂರು ಪೌಂಡು ಮತ್ತು ಹೆಚ್ಚಿಗೆ ಪೌಂಡಿಗೆ **0—12—0**

ಸೇಲ್ಸ್ ಟ್ಯಾಕ್ಸ್, ಪ್ಯಾಕಿಂಗ್ ಮತ್ತು ಫಾರ್ವಡಿಂಗ್ ಛಾರ್ಜ ಮುಫತ್ತು.

ಹೆಚ್ಚಿನ ವಿವರಗಳಿಗೆ ಬರೆಯಿರಿ. ಪಿ. ಜಿ. ಬಸಪ್ಪ, ಪಾರ್ಟನರ್

ಮೈಸೂರು ಟೈಪು ಫೌಂಡರಿ,
ಬೆಂಗಳೂರು-2

"ಗೋಪಾಲ ಭೇಷಜಾಶ್ರಮ" ಮಂಗಳೂರು.

(ಸ್ಥಾಪನೆ 1910)

ಸ್ಥಾಪಕರು:-ಆಯುರ್ವೇದ ಭೂಷಣ ಯಂ. ವಿ. ಶಾಸ್ತ್ರೀ,

ಬಾಣಂತಿಯರ ಸಲುವಾಗಿಯೇ ದೇಶ ಮತ್ತು ಪ್ರಕೃತಿಯ ದೇಹಸ್ಥಿತಿಯನ್ನು ಗಣಿಸಿ ತಯಾರಿಸಲ್ಪಟ್ಟ ಅಮೋಘವಾದ ಗುಣದ್ಯವ ರಸಾಯನ ಅಲ್ಪ ಮೌಲ್ಯದಿಂದ ಬಡವರಿಗೂ, ಭಾಗ್ಯಶಾಲಿಗಳಿಗೂ ಸುಲಭವಾಗಿರುವುದು.

ಇವರ ಪ್ರಸವೋಪಾತು ಎಂಬ ಸೂತಿಕಾ ರಸಾಯನ



ಹೆಚ್ಚಿನ ಮಾಹಿತಿಗೆ—ಡಾ| ಯಂ. ವಿ. ಶಾಸ್ತ್ರೀ, ಯಲ್. ಐ
ಕೊಡಿಯಾಲಬೈಲ ಪೋಸ್ಟು, (ಮಂಗಳೂರು)
ಸ್ಥಾನಿಕ ಸ್ಥಳ:—ಡಾ| ಐ. ಕೆ. ಶಿವರಾಮರಾವ್, ಕುಂಜಿಬೆಟ್ಟು ಉಡುಪಿ.

Approved from by the Govt. of Mysore Certificated by the Agent of the Govt of Cylone & Indian.

ಮಂಗಳೂರು

ಮಂಗಳೂರಲ್ಲಿ ಶ್ರೀಮತಿ ಭವಾನಿ ರಾಮರಾಯರ ಚಟುವಟಿಕೆಗಳು

ಇದೇ ತಾ. 2ರಲ್ಲು ಅಖಿಲ ಭಾರತ ಮಹಿಳಾ ಪರಿಷತ್ತಿನ ಮುಂದಾಳುಗಳಾದ ಶ್ರೀಮತಿ ಭವಾನಿ ಬೆನಗಲ್ ರಾಮರಾಯರು ಮಂಗಳೂರಿಗೆ ಆಗಮಿಸಿದರು. ತಾ. 3ರಲ್ಲು ಬೆಳಗ್ಗೆ ಪಂಡಿತ ಮುಕ್ತಾಬಾಯಿ ಮೊದಲಾದವರೊಂದಿಗೆ ಬಾಲಿಕಾಶ್ರಮವನ್ನು ಸಂದರ್ಶಿಸಿದಾಗ ಶ್ರೀ ಎಮ್. ವೆಂಕಟೇಶ ಪೈಗಳು ಅವರನ್ನು ಸ್ವಾಗತಿಸಿದರು. ನಂತರ ಸೈಂಟ್ ಎಲೋಸಿಯಸ್ ಕಾಲೇಜಿನ ಇಗರ್ಜಿಯನ್ನು ಕಂಡುಕೊಂಡು ಕಂಕನಾಡಿಯ ಬಾಲಿಕಾಶ್ರಮಕ್ಕೆ ಭೆಟ್ಟಿಯಿತ್ತರು. ಅಂದು ಸಂಜೆ ಶ್ರೀ ರಾಮಕೃಷ್ಣ ವಿದ್ಯಾರ್ಥಿನಿ ಭವನವನ್ನು ಸಂದರ್ಶಿಸಿದರು. ಮರುದಿನ ಅವರು ಡಿ. ಸಿ. ಮಿಶನ್ ಸಂಸ್ಥೆಯನ್ನು ನೋಡಿಕೊಂಡು ಉಳ್ಳಾಲಕ್ಕೆ ಹೋಗಿ ಹಿಂತಿರುಗಿದರು. ತಾ 5ರಲ್ಲು ಮೂಡಬಿದ್ರೆ, ಕಾರ್ಕಳ ಕೇಂದ್ರಗಳನ್ನು ಸಂದರ್ಶಿಸಿದರು.

ತಾ. 6ರಲ್ಲು ಶ್ರೀಮತಿ ರಾಮರಾಯರು ಜೆಪ್ಪುವಿನಲ್ಲಿರುವ ಭಗಿನೀ ಸಮಾಜದ ಶಿಶುವಿಹಾರವನ್ನು ಸಂದರ್ಶಿಸಿ, ರಾಮನ್ ವೆಲ್ತ್‌ನವರ ಹಂಚು ಕಾರ್ಖಾನೆಯನ್ನು ನೋಡಿ ಅಲ್ಲಿ ಕೆಲಸ ಮಾಡುವ ಸ್ತ್ರೀಯರ ಸ್ಥಿತಿಗತಿಗಳ ಮಾಹಿತಿ ಪಡೆಕೊಂಡರು. ಸಂಜೆ ಸೈಂಟ್ ಆಗ್ನೆಸ್ ಕಾಲೇಜಿನ ವಾರ್ಷಿಕ ದಿನಾಚರಣೆಯ ಅಧ್ಯಕ್ಷಸ್ಥಾನವನ್ನು ವಹಿಸಿದರು. ಕಾಲೇಜು ಪ್ರಿನ್ಸಿಪಾಲ್ ಮದರ್ ಎಮ್ ಗ್ರೇಶಿಯಾರವರು ಸ್ವಾಗತವಿತ್ತರು. ತಾ. 7ರಲ್ಲು ಸಂಜೆ ಬೆಸೆಂಟ್ ಬಾಲಿಕಾ ಪಾಠಶಾಲೆಯಲ್ಲಿ ವಿದ್ಯಾರ್ಥಿಗಳಿಗೆ ತಮ್ಮ ಪರದೇಶದ ಪ್ರವಾಸಗಳ ಕುರಿತು ಅನುಭವವೀಯುತ್ತಾ ಇಂಗ್ಲಿಷರ ಶಿಸ್ತು, ನಿಯಮಗಳನ್ನು ಪ್ರಶಂಸಿಸಿದರು. ರಾತ್ರಿ ಭಗಿನಿ ಸಮಾಜದವರಿತ್ತ ಸತ್ಕಾರ ಕೂಟದಲ್ಲಿ ಭಾಗವಹಿಸಿದರು. ತಾ 8ರಲ್ಲು ಸೈಂಟ್ ಆನ್ಸ್ ತರಬೇತಿ ಶಾಲೆ, ಕೆನರಾ ಹೈಸ್ಕೂಲಿನ ಮತ್ತು ಸಂಗ್ರಹಾಲಯ ಮಹಿಳಾ ಸಭೆ ಮತ್ತು ಸೇವಾ ಸಮಾಜದವರ ಕೇಂದ್ರಗಳನ್ನು ನೋಡಿದರು. ಸಂಜೆ ಈಶ್ವರಾನಂದ ಮಹಿಳಾ ಸೇವಾಶ್ರಮದ ಪ್ರಾರ್ಥನೆಯಲ್ಲಿ ಭಾಗವಹಿಸಿದರು. ತಾ 9ರಲ್ಲು ಬೆಳಗ್ಗೆ ಬೆಸೆಂಟ್ ಬಾಲಿಕಾ ಪಾಠಶಾಲೆಯ ನೂತನ ಕಟ್ಟಡವನ್ನು ನೋಡಿದ ನಂತರ ವಿದ್ಯಾರ್ಥಿನಿಯರಿಗೆ ಹಿತೋಪದೇಶವನ್ನಿತ್ತರು. [illegible] ಸೇವೆಗಾಗಿ ಸ್ತ್ರೀಯರು ನಮ್ಮ ದೇಶದ ಒಳಿತಿಗಾಗಿ ಎಂದು ಸೂಚಿಸಿದರು. ಡಾ। ಎಮ್. ಕೇಶವ ಪೈಗಳು ಸ್ವಾಗತಿಸಿದರು. ಶ್ರೀಮತಿ ಕೆ. ರಾಧಾ. ಎಲ್. ರಾವ್‌ರು ಧನ್ಯವಾದಗಳನ್ನರ್ಪಿಸಿದರು.

ಕಟ್ಟಡ ಪ್ರವೇಶೋತ್ಸವ ಬೆಸೆಂಟ್ ಶಾಲೆಯ ಹೊಸ ಕಟ್ಟಡದ ಪ್ರವೇಶೋತ್ಸವವು ತಾ 9ರಂದು ಸಂಜೆ ಶ್ರೀ ಚಿತ್ರಾಪುರದ ಶ್ರೀ ಆನಂದಾಶ್ರಮ ಸ್ವಾಮಿಗಳವರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀಮತಿ ರಾಮರಾಯರು ತಮ್ಮ ಉದ್ಘಾಟನಾ ಭಾಷಣದಲ್ಲಿ, ದಕ್ಷಿಣ ಕನ್ನಡದವರ ಕಾರ್ಯದಕ್ಷತೆಯನ್ನು ಕೊಂಡಾಡಿ ಇಂತಹ ಶಾಲೆಗಳು ಹೆಚ್ಚಾಗಬೇಕೆಂದರು. ಬೆಸೆಂಟ್ ಮಾತೆಯೇ ಮೊದಲಾದವರು ಪ್ರಾರಂಭಿಸಿದ ಶಿಕ್ಷಣದ ಕೆಲಸವನ್ನು ಮುಂದರಿಸಬೇಕೆಂದು ಹೇಳಿ ಕಟ್ಟಡವನ್ನು ತೆರೆದರು. ಸಭಾಧ್ಯಕ್ಷ ಸ್ವಾಮಿಯವರು ಮಾತನಾಡುತ್ತಾ, ಇಂದಿನ ಕಾಲದಲ್ಲಿ ಸ್ತ್ರೀಯರು ವಿದ್ಯಾವಂತರಾಗಿ ಆ ಮೂಲಕ ಮುಂದಿನ ಜನಾಂಗವು ವಿದ್ಯಾವಿನಯ ಸಂಪನ್ನವಾಗಬೇಕಾಗುವುದು ಅಗತ್ಯವಿರುವುದರಿಂದ ಮತ್ತು ಆ ಕಾರ್ಯದಲ್ಲಿ ತಮಗೆ ಆಸಕ್ತಿಯಿರುವುದರಿಂದ ಮಾರ್ಗದರ್ಶನ [illegible] ಈ ಕಾರ್ಯವೇಗಳು ಒಪ್ಪಿದೆನೆಂದು ಹೇಳಿ ಶುಭಾಶೀರ್ವಾದವನ್ನು ಹರಸಿದರು.

ಹೊಸಕಟ್ಟಡಕ್ಕೆ ರೂಪಾಯಿ 70,000 ತಗಲಿತೆಂದೂ ರೂಪಾಯಿ 30,000 ಸರಕಾರದಿಂದ ಗಳಿಸುವೆಂದೂ ಉಳಿದುದನ್ನು ಸಾಲವಾಗಿ ಎತ್ತಲಾಗಿದೆಯೆಂದೂ ಎಲ್ಲರೂ ಸಹಾಯ ನೀಡಬೇಕೆಂದು ಡಾ। ಎಮ್. ಕೇಶವ ಪೈಗಳು ತಮ್ಮ [illegible] ಭಾಷಣದಲ್ಲಿ ಹೇಳಿದರು.

ವಿದ್ಯಾರ್ಥಿ ಸಂಘದ ವಾರ್ಷಿಕೋತ್ಸವ— ಮಂಗಳೂರು ಗವರ್ನ್‌ಮೆಂಟ್ ಆರ್ಟ್ಸ್ ಕಾಲೇಜಿನ ವಿದ್ಯಾರ್ಥಿ ಸಂಘದ ವಾರ್ಷಿಕೋತ್ಸವವು ಇದೇ ತಾ. 5ರಲ್ಲು ಕೊಡಗಿನ ಸರಕಾರಿ ರೆವಿನ್ಯೂ ಕಮಿಶನರ್ ಶ್ರೀ ಸಿ. ಎಮ್. ಗಂಗಪ್ಪನವರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀ ಗೋವಿಂದ ಪೈ ನಂಬಿಯಾರರು ವರದಿವಾಚನ ಮಾಡಿದರು. ಶ್ರೀಗಳಾದ ಪಿ. ಸಿ. ವಿಶ್ವನಾಥನ್ ಮತ್ತು ಎಲ್. ಫರ್ನಾಂಡಿಸ್ ಸಂಘಕ್ಕೂ ಕಾಲೇಜಿಗೂ ಶುಭ ಹೇಳಿದರು. ಶ್ರೀ ಜಗನ್ನಾಥ ಶೆಟ್ಟಿ ಮತ್ತು ಪ್ರಿನ್ಸಿಪಾಲರಾದ ಆ. ಜೆ. ಜೇಕಬ್ ಅವರು ಉತ್ತರವಿತ್ತರು. ನಮ್ಮ ಮುಂದಿನ ಜನಾಂಗ ಬೆಂಬಲಿಗರಾಗಿ ನಿಲ್ಲಬೇಕಲ್ಲದೆ ಅವರನ್ನು ಟೀಕಿಸುವುದು ಒಳ್ಳೆಯದಲ್ಲವೆಂದು ಅಧ್ಯಕ್ಷರು ತಮ್ಮ ಭಾಷಣದಲ್ಲಿ ಹೇಳಿದರು. ಶ್ರೀ ಎಮ್. ದಮೋದರ ಸುವರ್ಣರು ಧನ್ಯವಾದಗಳನ್ನರ್ಪಿಸಿದರು.

ರಾಷ್ಟ್ರೀಯ ಉಳಿತಾಯವಾರದ ಸಲುವಾಗಿ ಇದೇ ತಾ 4ರಲ್ಲು ಗಣಪತಿ ಹೈಸ್ಕೂಲಿನಲ್ಲಿ ಜಿಲ್ಲಾ ಕಲೆಕ್ಟರ್ ಶ್ರೀ ಎ. ಆರ್. ರಾಜರತ್ನಂ ಅವರ ಅಧ್ಯಕ್ಷತೆಯಲ್ಲಿ ಸಾರ್ವಜನಿಕ ಸಭೆಯೊಂದು ಜರಗಿತು. ಶ್ರೀಮತಿ ಬಿ. ಪ್ರಿಟೊ ವ ಸ್ತು ಶ್ರೀ ಎಮ್. ವೆಂಕಟೇಶ ಪೈಗಳು ಸಂದರ್ಭೋಚಿತ ಮಾತುಗಳನ್ನಾಡಿದರು. ಕುಮಾರಿ ನಳಿನಾಬಾಯಿ ಮತ್ತು ಕುಮಾರಿ ಹಿರಾಕ್ಷಿಯವರ ನೃತ್ಯಗಳಾದ ನಂತರ ಜಿಲ್ಲಾ ಉಳಿತಾಯ ಯೋಜನಾಧಿಕಾರಿ ಸ್ವಾಗತಕರಾದ ಶ್ರೀ ಬಿ ಎಸ್ ಪಾಟೀಲ್, ಅವರು ಧನ್ಯವಾದಗಳನ್ನರ್ಪಿಸಿದರು.

ಮಂಗಳೂರಿನಲ್ಲಿ ಶ್ರೀ ರಾಮಕೃಷ್ಣ ವಿದ್ಯಾರ್ಥಿ ಭವನದ ವಾರ್ಷಿಕ ದಿನಾಚರಣೆಯು ಇದೇ ತಾ 4ರಲ್ಲು ಧರ್ಮಸ್ಥಳ ಶ್ರೀ ಮಂಜಯ್ಯ ಹೆಗ್ಗಡೆಯವರ ಅಧ್ಯಕ್ಷತೆಯಲ್ಲಿ ಜರಗಿತು. ಭವನದ ಸುಪರಿಂಟೆಂಡೆಂಟರಾದ ಎಡ್ವಕೇಟ್ ಶ್ರೀ ಬಿ. ಬಿ. ಶೆಟ್ಟಿಯವರು ಸ್ವಾಗತ ಭಾಷಣ ಮಾಡಿದರು. ಕಾರ್ಯದರ್ಶಿ ಶ್ರೀ ಎಮ್. ಕಟ್ಟಣ್ಣ ರೈಗಳು ವರದಿ ವಾಚನ ಮಾಡಿದರು. ಎಡ್ವಕೇಟ್ ಶ್ರೀ ಕೆ. ನಾರಾಯಣ ರೈಗಳು ಸ್ವಸ್ತಿವಾಚನ ಮಾಡಿದರು. ಶ್ರೀ ಪಿ. ಸುಂದರ ಹೆಗ್ಗಡೆಯವರು ಉತ್ತರವಿತ್ತರು. ಅಧ್ಯಕ್ಷರ ಭಾಷಣ, ವಿವಿಧ ವಿನೋದಾವಳಿಗಳಾದ ನಂತರ ಕಾರ್ಯದರ್ಶಿ ಸುಂದರ ಹೆಗ್ಗಡೆಯವರು ಧನ್ಯವಾದಗಳನ್ನರ್ಪಿಸಿದರು.

ಮೆದ್ರಾಸಿನ ಪತ್ರ— ಮದ್ರಾಸಿನ ಗವರ್ನ್‌ಮೆಂಟ್ ಕಾಲೇಜ್ ಒಫ್ ಇಂಡಿಯನ್ ಮೆ. ಸಿ. ಐ ಎಮ್. ವಿಭಾಗದ ಎರಡು ನೂರು ಮಂದಿ ವಿದ್ಯಾರ್ಥಿಗಳು ಇದೇ ತಾ. 5ರಿಂದ ಮೂರು ದಿವಸಗಳ ಸಂಪನ್ನು ಹೂಡಿರುವರು. ತಮ್ಮ ನ್ಯಾಯಬದ್ಧವಾದ ಕೇಳಿಕೆಗಳೆಲ್ಲವನ್ನೂ ಸರಕಾರವು ನಿರಾಕರಿಸಿದುದರಿಂದ ಅಸಮಾಧಾನಹೊಂದಿದ ವಿದ್ಯಾರ್ಥಿಗಳು ತಮ್ಮ ವಿರೋಧವನ್ನು ತೋರಿಸುವರೆ ಈ ರೀತಿಯ ಸಂಪನ್ನು ಹೂಡಬೇಕಾಗಿ ಬಂತು. ತಮ್ಮ ಕೇಳಿಕೆಗಳನ್ನು ಸರಕಾರವು ಇನ್ನೊಮ್ಮೆ ಪರಿಶೀಲಿಸಿ ನ್ಯಾಯ ಸಮ್ಮತವಾದ ಉತ್ತರವನ್ನು ಇದೇ ತಾ. 11ರೊಳಗೆ ಕೊಡುವಂತೆ ಆರೋಗ್ಯಮಂತ್ರಿಗಳ ಮಾರ್ಗವಾಗಿಯೂ ಮುಖ್ಯಮಂತ್ರಿಗಳಲ್ಲಿ ನಿವೇದಿಸಿಕೊಂಡಿರುವರು ಈ ಅವಧಿಯಲ್ಲಿ ಸರಕಾರವು ಸರಿಯಾದ ಉತ್ತರವನ್ನು ಕೊಡದಿದ್ದರೆ ತಕ್ಕ ಬೇರೆ ಕಾರ್ಯಕ್ರಮವನ್ನು ಕೈಕೊಳ್ಳಬೇಕೆಂದಿರುವರು. ತಮ್ಮ ಚಟುವಟಿಕೆಗಳಿಗಾಗಿ ಒಂದು ಕ್ರಿಯಾ ಸಮಿತಿಯನ್ನು ವಿದ್ಯಾರ್ಥಿಗಳು ಸ್ಥಾಪಿಸಿ ತನ್ಮೂಲಕ ತಮ್ಮ ಕಾರ್ಯಕಲಾಪಗಳನ್ನು ಮುಂದೊತ್ತಲಿರುವರು. ತಾರೀಕು 5 ಮತ್ತು 6ರಲ್ಲು ಸಂಪು ಶಾಂತವಾಗಿ ನಡೆದಿತ್ತು. ಎಲ್. ಐ ಎಮ್. ವಿಭಾಗದ ವಿದ್ಯಾರ್ಥಿಗಳು ತರಗತಿಗೆ ಹೋಗುತ್ತಿರುವರು ಎಂದು ತಿಳಿಯಬರುತ್ತದೆ.

ಉಡುಪಿಗೆ ಹೋಗಬೇಕು! ಅಲ್ಲಿ ಉಳಿದುಕೊಳ್ಳುವುದೆಲ್ಲಿ?

ರಾಯಲ್ ಮಹಾಲಿನಲ್ಲಿ

ಬಸ್ ಸ್ಟೇಂಡಿಗೆ ಅತಿ ಸಮೀಪ! ಕೃಷ್ಣಮಠಕ್ಕೆ ದೂರವಿಲ್ಲ!

ವ್ಯಾಪಾರವ್ಯವಹಾರ ವಿಹಾರಸ್ಥಳಗಳಿಗೆಲ್ಲ ಕೇಂದ್ರ!

ನಿಮ್ಮ ಸ್ನಾನ, ಊಟ, ಉಪಹಾರ, ವಿಶ್ರಾಂತಿ, ಶಯನ ಇವೆಲ್ಲಕ್ಕೂ ಪ್ರಸನ್ನ ಸನ್ನಿವೇಶ ಕರೆದರೆ ಓಗೊಡುವ ನೌಕರ ವರ್ಗ!

ಹೋಟೆಲಿಗೆ ಉಡುಪಿ ಬ್ರಾಹ್ಮಣ ಅಡಿಗೆಯವರಿರುವರು, ಇನ್ನೇನು ಬೇಕು ಹೇಳಬೇಕೇ?

ಪ್ರೊಪ್ರೈಟರ್:— ಕೆ. ವೆಂಕಟ್ರಮಣಭಟ್.

For up-to-date Lodging & Boarding

ROYAL MAHAL,

UDIPI S. Kanara

ಸುಲಭ ದರದಲ್ಲಿ

ಅಚ್ಚುಕಟ್ಟಾದ

ಮುದ್ರಣಕ್ಕೆ

ನವಯುಗ ಪ್ರೆಸ್,

ಉಡುಪಿ.

ದಕ್ಷಿಣ ಕನ್ನಡ
ಜಿಲ್ಲಾ ಜಡ್ಜರ ಕೋರ್ಟಿನಲ್ಲಿ
O. P. No. 9/1950.

ನರ್ಸಿಶೆಟ್ಟಿ, ಬೆಂಕುಶೆಟ್ಟಿರ ಮಗಳು ಮಂಗಳೂರು ತಾಲೂಕು ಕವತ್ತಾರು ಗ್ರಾಮದಲ್ಲಿರುವವರು. —ಅರ್ಜಿದಾರರು.

ಅಚ್ಚುಶೆಟ್ಟಿ, ಚೆಂನುಶೆಟ್ರಿ ಹೆಂಡ್ತಿ, ಮಂಗಳೂರು ತಾಲೂಕು ಹಜ್ಮಾಡಿ ಗ್ರಾಮದ ಗರಡಿಮನೆ ಎಂಬಲ್ಲಿರುವವಳು. —ಪ್ರತಿವಾದಿಯು.

ನೋಟೀಸು

ಮೇಲೆ ಹೆಸರು ಕಾಣಿಸಿದ ಅರ್ಜಿದಾರಳು ತನ್ನ ಮೈನರು ಮಕ್ಕಳು [1] ನಾರಾಯಣ ಶೆಟ್ಟಿ, [2] ರಾಜೀವಿ ಇವರ ಬಗ್ಗೆ ತನ್ನನ್ನು ಗಾರ್ಡಿಯನ್ನಾಗಿ ನೇಮಕ ಮಾಡಬೇಕಾಗಿ ಈ ಕೋರ್ಟಿನಲ್ಲಿ ದಾಖಲು ಮಾಡಿದ ಸದ್ರಿ ಅರ್ಜಿಯು ತಾ. 24-2-1951ನೇ ಪೂರ್ವಾಹ್ನ ಗಂಟೆ 11ಕ್ಕೆ ಸದ್ರಿ ಕೋರ್ಟಿನಲ್ಲಿ ತನಿಖೆಗೆ ಇಟ್ಟಿರುತ್ತದೆ. ಆದ್ದರಿಂದ ಸದ್ರಿಯವಳನ್ನು ಗಾರ್ಡಿಯನ್ ಆಗಿ ನೇಮಿಸುವ ವಿಷಯದಲ್ಲಿ ಆಕ್ಷೇಪ ಹೇಳಲಿಕ್ಕಿರುವವರು ತಮ್ಮ ಆಕ್ಷೇಪಗಳನ್ನು ಆದಕ್ಕೆ ಮುಂಚಿತವಾಗಿ ಕೋರ್ಟಿನಲ್ಲಿ ದಾಖಲು ಮಾಡತಕ್ಕದ್ದು. ತಪ್ಪಿದ್ದಲ್ಲಿ ಅರ್ಜಿದಾರಳು ಅಪೇಕ್ಷಿಸಿದಂತೆ ಅವಳನ್ನು ಕ್ರಮಪ್ರಕಾರ ಗಾರ್ಡಿಯನ್ ನೇಮಕ ಮಾಡಲಾಗುವುದು.

ಮಂಗಳೂರು,
ತಾ. 12-2-51.
B. B Shetty,
ಅರ್ಜಿದಾರಳ ಕಡೆ ವಕೀಲ

ಕಿರಿಯರ ಪ್ರಪಂಚ'ದ ಪ್ರಕಟಣೆಗಳು

ಕೊರ್ಡೇಲ್ ಶ್ರೀನಿವಾಸ ರಾಯರಿಂದ –		ಕನ್ಯಕೆಯ ನೋಗನಲ್ಲಿ [ಕಾದಂಬರಿ]	8–0–0
ನಂದಾದೀಪ [ಸಣ್ಣ ಕತೆಗಳು]	0–14–0	ಇತರ	
ಭಾರತೀಯ ಕತೆಗಳು	0–14–0		
ಮೂರು ರೂಪಕಗಳು	0–14–0	ಕಾವ್ಯ ಸಾಮ್ರಾಜ್ಯ [ಕವನ ಸಂಗ್ರಹ]	1–4–0
ಎಸ್. ವೆಂಕಟರಾಜರಿಂದ		ಮಧುವನ [ಕಥಾಸಂಗ್ರಹ]	3–0–0
ರಂಗಭೂಮಿ [ನಾಟಕ]	0–8–0	ನಾತಕತೆಗಳು [ಕಥಾ ಸಂಗ್ರಹ]	0–3–0
ಅರಳದ ಗಂಗೆ [ಸಣ್ಣ ಕತೆಗಳು]	1–12–0	ನೀಲಾಂಬರ [ನಾಟಕ]	0–8–0
ಕವಿತಾಕಾಮಿನಿ [ಕವನಗಳು]	2–0–0	ನಗೆಮಿಂಚುಗಳು [ಕೆ. ವಿ. ಬಿ.]	0–14–0
ಸಪ್ತಸಾಗರ [ಸಣ್ಣ ಕತೆಗಳು]	0–12–0	ಅನ್ನದೇವರು ಮತ್ತು ಇತರಕತೆಗಳು [ಕೆ. ಕೆ. ಪೈ]	1–0–0
ಕೆ ಕೆ. ಶೆಟ್ಟಿರಿಂದ—		ಭಾರತದಲ್ಲಿ ಜಾತಿಭೇದ	1–0–0
ಸಾವಿರ ಪಿಶಾಚಿ [ನಾಟಕ]	0–5–0	ವಿಶ್ವದ ಸ್ವಾತಂತ್ರ್ಯ ವೀರರು [ಎಂ. ಎ. ಪೈ]	0–12–0
ಕುಶಲವ [ನಾಟಕ]	0–6–0	ಸ್ವಾತಂತ್ರ್ಯ ವೀರಾವತರಣ [ಇಂದಿರಾ ಬಾಯಿ]	1–1–0
ವ್ಯಭಿಚಾರಿಣಿಯಾರು [ನಾಟಕ]	1–0–0	ದೇವರ ಸಂಗ್ರಹ [ಕೆ. ಶೀನ ಶೆಟ್ಟಿ]	1–8–0
ಪಂಚ್ರಗಂಡನಾಚಕ [ಪ್ರಹಸನ]	0–4–0	ಕದಂಬ [ಸಂಸ್ಕೃತಿ ಯ ರಾಜರಾವ್]	1–4–0
ಮಾರುಕಪಟ್ಟು [ಪ್ರಹಸನ]	0–4–0	ಪ್ರಕಾಶ [,,]	2–0–0
ದೇಶಭಕ್ತ [ನಾಟಕ]	1–4–0	ಜನಿವಾರ [ವಿಠಲರಾವ್ ಗುಡ್ಡಪ್ಪ]	1–8–0
ಪ್ರೇಮವಿಜಯ [ನಾಟಕ]	1–0–0	ಸ್ವತಂತ್ರ ಜೀವನೋಪಾಯ	0–3–0

—ನವಭಾರತ ಪುಸ್ತಕ ಭಂಡಾರ, ಉಡುಪಿ—

ಸ್ವೀಕಾರ-ವಿಮರ್ಶೆ

೧ ರಾಷ್ಟ್ರಕವಿ ಗೋವಿಂದ ಪೈ—ಲೇಖಕರು: ಶ್ರೀ ಕಯ್ಯಾರ ಕಿಞ್ಞಣ್ಣ ರೈ. ಪೆರಡಾಲ, ದ. ಕ. ಬೆಲೆ: ರೂ. ೦-೧೨-೦

ಕರ್ನಾಟಕದ ಉತ್ತಮ ಕವಿಗಳೂ ಸಂಶೋಧಕರೂ, ಮದ್ರಾಸು ಸಂಸ್ಥಾನದಿಂದ 'ರಾಷ್ಟ್ರಕವಿ' ಎಂದು ಬಿರುದಾಂಕಿತರೂ ಆದ ಮಂಜೇಶ್ವರ ಶ್ರೀ ಗೋವಿಂದ ಪೈಗಳವರ ಬಹುಮುಖ ಸಾಹಿತ್ಯದ ದರ್ಶನವನ್ನು ಶ್ರೀ ರೈಗಳವರು ಒದಗಿಸಿದ್ದಾರೆ. ಇದನ್ನೇ ನಾವು ಪೈಗಳವರ ಜೀವನ ಚರಿತ್ರೆಯೆಂದರೆ ಸರಿಯಾದೀತೋ ಏನೋ! ಏಕೆಂದರೆ ಅರ್ಧ ಶತಮಾನದಿಂದೀಚಿನ ಅವರ ಜೀವನವೆಲ್ಲ ಕನ್ನಡ ಸಾಹಿತ್ಯಕ್ಕಾಗಿಯೇ ಕಳೆದಿದೆ. ಸಾಹಿತ್ಯ-ರಚನ-ಸಂಶೋಧನೆಗಳೇ ಅವರ ಜೀವನದ ವೈಶಿಷ್ಟ್ಯ. 'ಗಿಳಿವಿಂಡು' 'ಗೊಲ್ಗೊಥಾ' 'ಹೆಬ್ಬೆರಳು' 'ನಂದಾದೀಪ' 'ವೈಶಾಖಿ' ಇವು ಕನ್ನಡ ತಾಯಿಗೆ ಮುಡಿಪಾಗಿ ಸಲ್ಲಿಸಿದ ಕವಿಹೃದಯ ಕಮಲಗಳು. ಹಲವು ಭಾಷೆಗಳ ಜ್ಞಾನವಾದ ಅನುಭವಪೂರ್ಣ ಶ್ರೀ ಪೈಗಳ ಸಾಹಿತ್ಯ ಹಲವು ರೀತಿಯ ವೈವಿಧ್ಯತೆಗಳಿಂದ ಕೂಡಿದ್ದಾಗಿರುತ್ತದೆ. ಸಾಹಿತ್ಯವು ಎಷ್ಟು ಪರಿಪೂರ್ಣವೋ—ಎಷ್ಟು ಪರಿಪಕ್ವವೋ—ಜೀವನವೂ ಅಷ್ಟೇ ಸಂಪೂರ್ಣವಾದುದು. ಅಷ್ಟೇ ಪರಿಪಕ್ವವಾದುದು. ಕರ್ನಾಟಕದ ಹಿರಿಯ ಕಿರಿಯ ಸಾಹಿತಿಗಳಿಗೆ ಮಂಜೇಶ್ವರಕ್ಕೆ ಹೋಗುವುದೆಂದರೆ ಎಲ್ಲಿಲ್ಲದ ಆನಂದ; ಪೈಗಳೊಡನೆ ಮಾತನಾಡುವುದೆಂದರೆ ಎಲ್ಲಿಲ್ಲದ ಕುತೂಹಲ. ಎಲ್ಲರನ್ನು ಬರಮಾಡಿಕೊಂಡು ಮಾರ್ಗದರ್ಶನ ಮಾಡುವುದೂ ತತ್ವಚಿಂತನೆ ಮಾಡುವುದೂ ಪೈಗಳವರ ಘನ ವ್ಯಕ್ತಿತ್ವದ ಹಿರಿಯ ಗುಣವೆಂದೇ ಹೇಳಬೇಕು. ಸಾಹಿತ್ಯ ಸೃಷ್ಟಿಯಿಂದಲೂ ಸಂಶೋಧನಾ ಕಾರ್ಯದಿಂದಲೂ ಕರ್ನಾಟಕ ನಾಡಿಗೆ ಸಲ್ಲಿಸಿದ ಶ್ರೀ ಪೈಗಳವರ ಅಮೂಲ್ಯ ಸೇವೆ ಸಾಟಿಯಿಲ್ಲದ್ದು. ಕನ್ನಡಿಗರ ಮಹಾನಿಧಿಯಾದ ಶ್ರೀ ಪೈಗಳ ಸಾಹಿತ್ಯಸತ್ವವನ್ನು ಹೀರಲು ಸಾಮರ್ಥ್ಯವುಳ್ಳಂತಹ ಶ್ರೀ ಕಯ್ಯಾರ ಕಿಞ್ಞಣ್ಣ ರೈಗಳೇ ಇಲ್ಲಿ ಚೆನ್ನಾಗಿ ವಿಮರ್ಶೆ ಮಾಡಿರುತ್ತಾರೆ.

"ರಾಷ್ಟ್ರಕವಿ ಗೋವಿಂದ ಪೈ" ಎಂದು ಪುಸ್ತಕಕ್ಕೆ ಹೆಸರಿಟ್ಟು; ಕವಿಯ ಜೀವನದ ಕುರಿತು ಹೆಚ್ಚೇನೂ ಹೇಳದೆ ಕಾವ್ಯರಸಾಸ್ವಾದನೆಯ ಕಾರ್ಯವನ್ನಷ್ಟೇ ಮಾಡಿರುತ್ತಾರೆ. ಶ್ರೀ ಪೈಗಳವರ ಜೀವನವೇ ಕಾವ್ಯಮಯವಾದುದರಿಂದ ಜೀವನದ ಕುರಿತು ಹೇಳತಕ್ಕದ್ದಾದರೂ ಏನಿದೆ? ಸುಂದರವಾದ ಮುದ್ರಣ, ಆಕರ್ಷಕವಾದ ಶ್ರೀ ಪೈಗಳವರ ಪಡಿಯಚ್ಚು ಪುಸ್ತಕಕ್ಕೆ ಹೆಚ್ಚಿನ ಶೋಭೆಯನ್ನಿತ್ತಿದೆ. ಇಂತಹ ಕೃತಿಯ ಸಮಾಲೋಚನೆ ಇದುವರೆಗೆ ಕನ್ನಡದ ದುರ್ಭಾಗ್ಯವೋ ಹೆಚ್ಚೇ ನೋಡಿಲ್ಲವೋ ತಿಳಿಯೆ.

೨ ಪ್ರಾಂತವಾದ— ಲೇಖಕರು ಎಸ್. ಎಮ್. ಹುನಶಾಳ, ಎಮ್. ಎ., ಬಿ. ಟಿ. ಮಾಂಟೆಗೊಮರಿ ಶಿವಪುರ ಬ್ರಿಡ್ಜ್, ಧಾರವಾಡ ಬೆಲೆ ರೂ. ೧-೦-೦.

ಭಾಷಾವಾರು ಪ್ರಾಂತರಚನೆಯ ಅವಶ್ಯಕತೆಯ ಕುರಿತಾದ ಪ್ರಬಂಧವಿದು. ಮಹಾತ್ಮಾ ಗಾಂಧಿಯವರೂ ಕಾಂಗ್ರೆಸ್ಸೂ ಭಾಷಾವಾರು ಪ್ರಾಂತರಚನೆ ಮಾಡುವುದರಿಂದ ಆಯಾಯ ಭಾಷೆ ಸಂಸ್ಕೃತಿಗಳು ಬೆಳಗುವವೆಂದು ಅಭಿಪ್ರಾಯಪಟ್ಟು ಅದನ್ನು ಕಾಂಗ್ರೆಸ್ಸು ಅಧಿಕಾರಕ್ಕೆ ಬಂದ ಕೂಡಲೇ ನಡೆಸಿಕೊಡುವದೆಂದು ವಚನ ಕೊಟ್ಟಿದ್ದರು. ಈಗ ಕಾಂಗ್ರೆಸ್ಸು ಅಧಿಕಾರಕ್ಕೆ ಬಂದು ನಾಲ್ಕು ವರ್ಷವಾಗುತ್ತ ಬಂತು. ಭಾಷಾವಾರು ಪ್ರಾಂತರಚನೆ ಕೂಗು ಕೇಳಬಂತು. ಕನ್ನಡ ಪ್ರಾಂತದ ಏಕೀಕರಣವಾಗಬೇಕೆಂದು ಮಹಾರಾಷ್ಟ್ರ, ಆಂಧ್ರ, ತಮಿಳ, ಕೇರಳ ಮೊದಲಾದವರಿಗಿಂತ ತೀಕ್ಷ್ಣವಾದ ರೀತಿಯಲ್ಲಿ ಪ್ರಾಂತೀಕರಣಕ್ಕೆ ಹೆಚ್ಚು ಕಾವು ಬರುವಂತೆ ಹಲವು ಎಂ. ಎಲ್. ಎ.ಗಳೂ ಒಬ್ಬ ಮಂತ್ರಿಯೂ ಹೊರಗೆ ಬಂದರು. ಇವನ್ನು ಕಾಂಗ್ರೆಸ್ಸಿನ ಹಿರಿಯ ಮುತ್ಸದ್ದಿಗಳಾದ ನೆಹರೂ, ಪಟೇಲ್ ಮೊದಲಾದವರು ತಮ್ಮ ವ್ಯಕ್ತಿತ್ವಕ್ಕೆ ಗೌರವವನ್ನು ತರದ ಮಾತಿನಿಂದ ಟೀಕೆ ಮಾಡಿದರು. ಉಚ್ಛ ಸಂಸ್ಕೃತಿಯಿಂದಲೂ, ಕಲೆಸಾಹಿತ್ಯಗಳಿಂದಲೂ ಪ್ರಖ್ಯಾತವಾದ ಕನ್ನಡದ ಕೂಗನ್ನು ತಮ್ಮ ನಾಯಕರು ನಿರ್ದಾಕ್ಷಿಣ್ಯವಾಗಿ ಖಂಡಿಸಿಬಿಟ್ಟರು. ದೊಡ್ಡವರೂ ಅಪರಾಧ ಮಾಡುತ್ತಾರೆನ್ನುವದಕ್ಕೆ ಇದಕ್ಕೆ ಮಿಗಿಲಾದ ಬೇರೆ ಸಾಕ್ಷಿ ಬೇಕಾಗಿಲ್ಲ. ಆ ಬಳಿಕ ರಾಜೀನಾಮೆಯನ್ನಿತ್ತ ಸದಸ್ಯರು ಎಷ್ಟು ಶೀಘ್ರವಾಗಿ ರಾಜೀನಾಮೆಯನ್ನಿತ್ತರೋ ಅಷ್ಟೇ ಶೀಘ್ರವಾಗಿ ಹಿಂದೆ ತೆಗೆದುಕೊಂಡುಬಿಟ್ಟರು. ಹೀಗೆ ಪ್ರಾಂತೀಯ ಭಾವನೆ ಕುಗ್ಗುತ್ತಾ ಬರೇ ಕನ್ನಡಿಯೊಳಗಿನ ಗಂಟಿನಂತೆ ಉಳಿದಿದೆ. ಪ್ರಾಂತವಾದರೇನು ಅನುಕೂಲ? ಕೇಂದ್ರದ ಆಡಳಿತಕ್ಕೆ ಧಕ್ಕೆ ಬರಬಹುದೆ? ಹೊಸ ಪ್ರಾಂತಗಳು ಕೊರತೆಯ ಪ್ರಾಂತವಾದರೆ ಅದಕ್ಕೇನು ಪರಿಹಾರ? ಎನುವ ವಿಚಾರವಾಗಿ ಶ್ರೀ ಎಸ್. ಎಮ್. ಹುನಶಾಳರು ಕೂಲಂಕುಷ ವಿಮರ್ಶೆಮಾಡಿ ಯಥಾರ್ಥ ಚಿತ್ರವೊಂದನ್ನು ನಮ್ಮ ಕಣ್ಣಮುಂದೆ ಇಟ್ಟಿರುತ್ತಾರೆ. ಪ್ರಾಂತವಾದ ನಿನ್ನೆ ಇಂದಿನದಲ್ಲ. ರಷ್ಯಾ ಒಂದೇ ರಾಜಕೀಯ ಕಟ್ಟುನಿಟ್ಟಿನಲ್ಲಿ ಐಕ್ಯಮತ್ಯವುಳ್ಳಂತಹ ರಾಷ್ಟ್ರವೆಂದು ಹೇಳುವದಾದರೂ ಅಲ್ಲಿಯೂ ಹಲವಾರು ಸಂಪ್ರದಾಯ ಭಾಷಾ ಸಂಸ್ಕೃತಿಗಳುಳ್ಳ ಬೇರೆ ಬೇರೆ ಪ್ರಾಂತಗಳಿವೆ. ಅವಕ್ಕೆ ಸಾಕಷ್ಟು ಸ್ವಾತಂತ್ರ್ಯವೂ ಇದೆ. ಆದರೆ ನಮ್ಮ ಧುರೀಣರು ಇನ್ನೂ ಮೀನಮೇಷ ಎಣಿಸುತ್ತಾರೆ. ಕಾಂಗ್ರೆಸು ಹಿಂದೆ ವಚನಕೊಟ್ಟುದನ್ನು ಮರೆತು ತನ್ನ ವಚನಭ್ರಷ್ಟತನಕ್ಕೆ ದೇಶದ ಪರಿಸ್ಥಿತಿ—ಪ್ರಾಂತದಿಂದುಂಟಾಗುವ ಆರ್ಥಿಕ ದಿಕ್ಕಟ್ಟು—ಮುಂತಾದ ಅರ್ಥಶೂನ್ಯವಾದ ಕಾರಣ ಕೊಡುತ್ತಿರುವ ಅಂಶವನ್ನು ಹುನಶಾಳರು ಸ್ಪಷ್ಟವಾಗಿ ಉಲ್ಲೇಖಿಸಿದ್ದಾರೆ. ಪ್ರಾಂತ ನಿರ್ಮಾಣದಿಂದ ಆರ್ಥಿಕ ರೀತಿಯಿಂದಾಗಲೀ, ಸಾಂಸ್ಕೃತಿಕ ರೀತಿಯಿಂದಾಗಲೀ, ಯಾವುದೇ ರೀತಿಯ ತೊಡಕು ಪ್ರಾಂತ ನಿರ್ಮಾಣದಿಂದುಂಟಾಗದೆಂಬುದನ್ನು ಎಲ್ಲವನ್ನೂ ಚೆನ್ನಾಗಿ ಅಭ್ಯಸಿಸಿ ಸಮರ್ಥನೆ ಮಾಡಿದಾರೆ. ಹೇಳಬೇಕಾದಂಶವನ್ನು ವ್ಯಕ್ತಿಗಾಂಧೀಯರಿಕ್ಕೆ ಅಳುಕದೆ ನೇರಾಗಿ ಸ್ಪಷ್ಟವಾಗಿ ಹೇಳಿದಾರೆ. ಹಲವೆಡೆ ಪತೀಲರಂತಹ ವ್ಯಕ್ತಿಗಳ ರಾಜಕೀಯ ಬುದ್ಧಿಚಾತುರ್ಯದ ಮೇಲೆ ಕಟುಟೀಕೆ ಸ್ವಲ್ಪ ಹೆಚ್ಚು ಎನಿಸಬಹುದು ಆದರೆ ಅದು ಅನಿವಾರ್ಯ. ರಾಜಕೀಯ ನೀತಿ ಅನ್ಯಾಯದ ಹಿಡಿಯುವಾಗಲೂ ವ್ಯಕ್ತಿಪೂಜೆ ಸಲ್ಲದು. ಯಾವುದನ್ನು ಟೀಕೆ ಮಾಡಿದ್ದಾರೋ—ಅಂಧಾನುಕರಣ ರಾಜಕೀಯವೆಂದಿದಾರೋ—ಅವೆಲ್ಲವಕ್ಕೂ ಆಧಾರದೊಡನೆಲ್ಲಿ ಪರಿಹಾರ ಹೇಳಿರುತ್ತಾರೆ. ಇಂದಲ್ಲ ನಾಳೆ ಭಾಷಾವಾರು ಪ್ರಾಂತರಚನೆಯ ಘಟನೆಯನ್ನು ಹೊಂದಿಕೊಂಡು ಪ್ರಾಂತರಚನೆ ಆಗಲೇ ಬೇಕು ಆಗಿಯೆ ಆಗುತ್ತದೆ. ಅಲ್ಲಿಯವರೆಗೆ ಕನ್ನಡದ ಜನ ತಮ್ಮಪಾಲಿನ ಕರ್ತವ್ಯವನ್ನು ಮರೆಯಬಾರದು. ಶ್ರೀ ಹುನಶಾಳರ "ಪ್ರಾಂತವಾದ" ಸರಿಯಾದ ಮಾರ್ಗದರ್ಶನ ಮಾಡಬಲ್ಲದೆಂಬುದರಲ್ಲೇನೂ ಸಂದೇಹವಿಲ್ಲ. ಹೀಗೆಯೆ ಸತ್ವಪೂರ್ಣವಾದ ಕೃತಿಯನ್ನು ಕನ್ನಡಿಗರಿಗೆ ಶ್ರೀ ಹುನಶಾಳರು ನೀಡಲೆಂದು ಹಾರೈಸುತ್ತೇವೆ.

—ಪೈಲ್.

ಮೂಲ್ಕಿ ಬೇಂಕ್,
ಲಿಮಿಟೆಡ್, ಮೂಲ್ಕಿ.
1921ರಲ್ಲಿ ಸ್ಥಾಪಿತವಾಗಿ 29 ವರುಷಗಳಿಂದ ಊರ ಜನರ ಹಿತಕ್ಕಾಗಿ ಡಿಪೋಸಿಟ್ ಗಳಿಕ್ಕೆ ನ್ಯಾಯವಾದ ಬಡ್ಡಿಯಿಂದಲೂ, ಸಾಲದ ಹಣಕ್ಕೆ ಅತೀ ಕಡಿಮೆ ದರದ ಬಡ್ಡಿಯಿಂದಲೂ ಜನ ಹಿತಸಾಧನೆಯನ್ನು ಮಾಡುತ್ತಿರುವುದು

The Moolky Bank Ltd.,
Moolky, S K

ಬ್ರೂಕ್ ಬಾಂಡ್ ಚಹಾ
ವನ್ನೇ ನೀವು ಏತಕ್ಕೆ
ಒತ್ತಿ ಕೇಳಬೇಕೆಂಬುದಕ್ಕೆ
5
ಕಾರಣಗಳು

1 ಇದು ಶುದ್ಧವಾದ ಮಾಗಿ ತೋಟಗಳಲ್ಲಿ ಕಟ್ಟಿ ಮೊಹರು ಮಾಡಲ್ಪಟ್ಟಿರುತ್ತದೆ
2 ಬ್ರೂಕ್ ಬಾಂಡ್ ಎಂಬ ಹೆಸರೇ ಅದರ ಗುಣದ ಭರವಸೆ.
3 ಶೀಘ್ರವಾಗಿ ಬಿಸಿ ಹಿಡಿಸು ಅದರ ಪೂರ್ಣ ರುಚಿಯನ್ನು ನಿಮಗೆ ಕೊಡುತ್ತದೆ
4 ಬ್ರೂಕ್ ಬಾಂಡ್ ಚಹಾ ಇತರ ಚಹಾಗಳಿಗಿಂತ ದೂರವಾಗಿ ಹೆಚ್ಚು ಕಪ್ಪುಗಳನ್ನು ಕೊಡುತ್ತದೆ.
5 ಉತ್ತಮ ಚಹಾಯು ಮಿಶ್ರಣವು ಉತ್ತಮ ರುಚಿಯನ್ನು ನೀಡುತ್ತದೆ.

ಹಕ್ಕೀನೋಟ

೧ ಶ್ರೀ ಕೃಷ್ಣ ಪಂಚಾಂಗ ಉಡುಪಿ (ಖರ ನಾಮ ಸಂವತ್ಸರದ್ದು) ಪ್ರಕಾಶಕರು: ವೆಬ್ಸ್ಟರ್ ಪ್ರೆಸ್, ಉಡುಪಿ. ಬೆಲೆ ರೂ. ೦—೬—೦

ವರ್ಷದಿಂದ ವರ್ಷಕ್ಕೆ ಜನಪ್ರಿಯವಾಗುತ್ತ ಬರುವ ಶ್ರೀ ಕೃಷ್ಣ ಪಂಚಾಂಗವು ಈ ಬಾರಿಯೂ ಸುಂದರಾಕೃತಿಯ ರೂಪದಲ್ಲಿ ಹೊರಬಂದಿರುತ್ತದೆ. ಶ್ರೀ ಲಕ್ಷ್ಮೀನಾರಾಯಣ ಅಡಿಗ ಶಿರೋಮಣಿ ಮತ್ತು ಧರ. ನಾರಾಯಣಾಚಾರ್ಯರೇ ಮೊದಲಾದ ಪಂಡಿತ ಮಾನ್ಯರ ವಿದ್ವತ್ಪೂರ್ಣ ಅನುಭವದಿಂದ ಪಂಚಾಂಗ ಅತ್ಯಂತ ಪರಿಷ್ಕಾರ ಆಗಿರುತ್ತದೆ. ಹೆಚ್ಚು ವ್ಯಾಪಕತೆಯನ್ನು ಹೊಂದಿದ ಈ ಪಂಚಾಂಗಕ್ಕೆ ಅಪಾರ ಬೇಡಿಕೆ ಹೆಚ್ಚೆಂದು ತೋರುತ್ತದೆ.

೨ ಹಿಂದೀ ಪ್ರಾರಂಭಿಕ ಶಿಕ್ಷಾ ಲೇಖಕರು ಮತ್ತು ಪ್ರಕಾಶಕರು ಶ್ರೀ ಕೃಷ್ಣ ಸ್ವಾಮಿ, ಭಾಗ್ಯೋದಯ ಕಾರ್ಯಾಲಯ, ಗೋರೆ ಒಬೆಲ್ ಬಲ್ಲಪು ಸಿ. ಪಿ. ಬೆಲೆ ರೂ. ೦-೧೦-೦

ಇಂಗ್ಲಿಷ ಬಲ್ಲವರಿಗೆ ಹಿಂದಿಯನ್ನು ಸುಲಭರೀತಿಯಲ್ಲಿ ಕಲಿಯಬಹುದಾದ ಉಪಯುಕ್ತ ಪಾಠಗಳಿವೆ. ಪಾಠಗಳು ಅತ್ಯಂತ ಸರಳವೂ, ಕುತೂಹಲ ಪೂರ್ಣವೂ ಆಗಿರುತ್ತವೆ. ಇಂಗ್ಲಿಷ್ ಬಲ್ಲ ಹಿಂದೀ ಪ್ರೇಮಿಗಳಿಗೆ ಹೆಚ್ಚಿನ ಪ್ರಯೋಜನವನ್ನು ಈ 'ಹಿಂದೀ ಪ್ರಾರಂಭಿಕ ಶಿಕ್ಷಾ'ದಿಂದ ಪಡೆಯಬಹುದು.

ಪಾರದ ಹರಟೆ

ಶ್ರೀ. 'ಯು. ವಿ'

ಪ್ರಿಯವಾಚಕರೇ,

ಈ ಸಲ ಸಾರ್ವಜನಿಕ ಆರೋಗ್ಯದ ವಿಷಯವಾಗಿ ಕಾರ್ಯದರ್ಶಿಯಾದ ನಾನು ಬರೆಯಬೇಕೆಂದು ನಮ್ಮ ಅಧ್ಯಕ್ಷರು ಅಪ್ಪಣೆಕೊಟ್ಟಿದ್ದಾರೆ. ಆ ಪ್ರಕಾರ ನಾನು ಬರೆಯುತ್ತೇನೆ. ನಾನೇನೂ ಒಬ್ಬ ವೈದ್ಯನಲ್ಲ; ಡಾಕ್ಟರ್, ಹಕೀಮನೂ ಅಲ್ಲ. ಆದರೂ ಸಾರ್ವಜನಿಕ ಆರೋಗ್ಯದ ವಿಚಾರ ಎಲ್ಲರೂ ತಿಳಿಯಬೇಕಾದಷ್ಟು ನನಗೂ ಗೊತ್ತಿದೆ. ಆದುದರಿಂದ ಬರೆಯುತ್ತಿದ್ದೇನೆ. ಒಂದು ರೋಗ ತಗಲಿದ ನಂತರ ಏನುಮಾಡಬೇಕೆಂದು ನಾವು ವೈದ್ಯರ ಹತ್ತಿರ ಬಾಟ್ಲಿ ಹಿಡಕೊಂಡು ಹೋಗಿ, ಔಷಧ ತರುತ್ತೇವೆ ಎನ್ನಿ. ರೋಗ ಬಾರದಂತೆ ಯತ್ನಿಸುವುದು ನಮ್ಮೆಲ್ಲರ ಕರ್ತವ್ಯವಲ್ಲವೇ? ರೋಗಗಳು ಬಾರದಂತೆಯೇ ನೋಡಿಕೊಳ್ಳುವುದು ಸಾಧ್ಯವೆಂದು ನಾನನ್ನುವುದಿಲ್ಲ. ಆದರೆ ನಾವು ಜಾಗರೂಕರಾಗಿದ್ದರೆ ಅನೇಕ ರೋಗಗಳನ್ನು ತಡೆಗಟ್ಟಬಹುದೆಂದು ನಾನು ನಂಬುತ್ತೇನೆ. ನಮ್ಮ ಜಾಗ್ರತೆಯಿಂದ ರೋಗಗಳನ್ನು ದೂರಮಾಡುವುದು ನಮ್ಮೆಲ್ಲರ ಕರ್ತವ್ಯ ಎಂದೆನಲ್ಲಾ. ನಮ್ಮ ದುರ್ವರ್ತನೆ ದುರಾಚಾರದಿಂದ ನಿರಪರಾಧಿಗಳಾದ ಇತರರ ಅನಾರೋಗ್ಯಕ್ಕೆ ನಾವು ಕಾರಣರಾದರೆ ಅದು ಅರನೇ ಮಹಾಪಾತಕವೆಂದು ನಾನನ್ನುತ್ತೇನೆ. ಸಾಧ್ಯವಿದ್ದರೆ ನಾವು ಇತರರಿಗೆ ಸಹಾಯ ಮಾಡಬೇಕು. ಇಲ್ಲದಿದ್ದರೆ ನಮ್ಮಿಂದಾಗಿ ಇತರರಿಗೆ ಹಾನಿಯಾದರೂ ಆಗದಂತೆ ನೋಡಿಕೊಳ್ಳಬೇಕೆಂದು ನಾವು ತಿಳಿದುಕೊಳ್ಳಬೇಕು. ಇಷ್ಟು ಪ್ರಸ್ತಾವನೆಯನ್ನು ಹೇಳಿ ಮಾನ್ಯ ಅಧ್ಯಕ್ಷರು ನನಗೆ ವಿಧಿಸಿರುವ ಈ ಕಾರ್ಯಕ್ಕೆ ನಾನು ತೊಡಗುತ್ತೇನೆ. ಅಧ್ಯಕ್ಷರು ಬರೆಯುವಾಗ ವಿಚಾರದೊಂದಿಗೆ ವಿನೋದವನ್ನೂ ಸೇರಿಸಿ, ಸ್ವಾರಸ್ಯವಾಗಿ ಬರೆಯುತ್ತಾರೆ. ವಿನೋದವೆಂಬುದು ನನ್ನ ಹತ್ತಿರ ಬರಲಾರದು. ಅಲ್ಲದೆ ನೋಡುವಾಗ ಅಲ್ಪವೆಂದು ಕಂಡರೂ ಇದೊಂದು ಗಂಭೀರವಾದ ವಿಚಾರ. ವಾಚಕರೆಲ್ಲರೂ ಓದಿ ತಿಳಿದುಕೊಂಡು ನೆನಪಿಟ್ಟುಕೊಳ್ಳಬೇಕೆಂದು ಬರೆದ ವಿಚಾರ. ಆದುದರಿಂದ ಇದರಲ್ಲಿ ವಿನೋದ ಕಂಡುಬಾರದಿದ್ದರೆ ವಾಚಕರು ಮನ್ನಿಸಬೇಕು. ಆದರೆ ದಯವಿಟ್ಟು ಓದಬೇಕೆಂದು ವಿನಯಪೂರ್ವಕವಾಗಿ ಪ್ರಾರ್ಥಿಸುತ್ತಿದ್ದೇನೆ.

ನನ್ನ ಹತ್ತಿರ ಕೇಳಿದರೆ–ನಮ್ಮ ಹಿರಿಯರು ಯಾವುದನ್ನು ಎಂಜಲು ಮುಟ್ಟಬೇಡಿ, ತುಳಿಯಬೇಡಿ, ತಿನ್ನಬೇಡಿ ಎಂದು ಹೇಳುತ್ತಿದ್ದರೋ ಅದನ್ನು ನಾವು ಈಗ ಮುಟ್ಟುತ್ತೇವೆ, ತುಳಿಯುತ್ತೇವೆ, ತಿಳಿದೋ ತಿಳಿಯದೆಯೋ ತಿನ್ನುತ್ತಲೂ ಇದ್ದೇವೆ. ನಮ್ಮ ಈ ದುರಾಚಾರವೇ ಸಾರ್ವಜನಿಕ ಅನಾರೋಗ್ಯಕ್ಕೆ ಮುಖ್ಯ ಕಾರಣವೆಂದು ನಾನನ್ನುತ್ತೇನೆ. ಎಂಜಲನ್ನು ಯಾರು ಮುಟ್ಟುತ್ತಾರೆ ತುಳಿಯುತ್ತಾರೆ ಮತ್ತು ತಿನ್ನುತ್ತಾರೆ ಎಂದು ನೀವು ಕೇಳುತ್ತೀರೋ ಒಳ್ಳೆದು ನಾನು ಹೇಳುತ್ತೇನೆ. ಈಗಿನ ಸುಧಾರಣೆ ಕಾಲದಲ್ಲಿ ಎಲ್ಲರೂ ಅದನ್ನು ಮಾಡುತ್ತಿದ್ದಾರೆ. ಮಾನ, ಮರ್ಯಾದೆ, ಲಜ್ಜೆ, ನಾಚಿಕೆಯಿಲ್ಲದೆ ನಮ್ಮಲ್ಲಿ (ಎಲ್ಲರೂ ಅನ್ನುತ್ತೇನೆ ಬೇಡ) ಹೆಚ್ಚಿನವರು ಇತರರ ಎಂಜಲನ್ನು ಮುಟ್ಟುತ್ತೇವೆ, ತುಳಿಯುತ್ತೇವೆ ಅಲ್ಲದೆ ತಿನ್ನುತ್ತೇವೆ. ಇದಲ್ಲದೆ ಇದಕ್ಕಿಂತಲೂ ಹೆಚ್ಚು ಮಾನಮರ್ಯಾದೆ ಲಜ್ಜೆ ನಾಚಿಕೆಯಿಲ್ಲದವರು ತಮ್ಮ ಎಂಜಲನ್ನು ಇತರರು ಮುಟ್ಟಲಿ ತುಳಿಯಲಿ ಬೇಕಿದ್ದರೆ ತಿನ್ನಲಿ ಎಂದು ಸಾರ್ವಜನಿಕ ಸ್ಥಳಗಳಲ್ಲಿ ಬಿಸಾಡುತ್ತಾರೆ. ಮತ್ತು ಸಾರ್ವಜನಿಕರ ಅನಾರೋಗ್ಯಕ್ಕೆ ಕಾರಣರಾಗುತ್ತಾರೆ. ಅಂತಹ ಮಹಾ ಪಾಪಿಗಳು ನಮ್ಮಲ್ಲಿ ಬೇಕಾದಷ್ಟಿದ್ದಾರೆ. ಏನು ಕಾರ್ಯದರ್ಶಿಗಳಿಗೆ ಬಹಳ ಸಿಟ್ಟುಬಂದಂತಿದೆ ಎನ್ನುತ್ತೀರಾ? ಸಾರ್ವಜನಿಕರ ಈ ದುರ್ವರ್ತನೆಯನ್ನು ನೋಡಿ ನನಗೆ ಸಹಿಸಲಿಕ್ಕೆ ಕಷ್ಟವಾಗುತ್ತಿದೆ. ನೀವು ಕ್ಷಮಿಸಬೇಕು.

ಉಗುಳಿ ಉಗುಳಿ ರೋಗ (ಉಳಿದ ಸಂಗತಿ ಹಾಗಿರಲಿ) ಎಂದು ನಮ್ಮ ಉಪಾಧ್ಯಾಯರು ನಮಗೆ ಸಾವಿರ ಸಲ ಕೋಪಿಸಿ ಬರೆಯಿಸಿದ್ದಾರಲ್ಲವೇ? ಕಂಡಕಂಡಲ್ಲಿ ಉಗುಳುವುದು ರೋಗಗಳಿಗೆ ಕಾರಣವೆಂದು ನಮಗೆ ಇನ್ನೂ ತಿಳಿಯದೇ? ನಾವೆಲ್ಲರೂ ಸುಧಾರಕರು ಹೌದು; ನಾಗರಿಕರೂ ಹೌದು. ದಾರಿಯಲ್ಲಿ ನಡೆಯುವಾಗ ಎಲ್ಲಿ ಎಂಜಲು ಇದೆ ಎಂದು ನೋಡಿ ಕಪ್ಪೆಗಳಂತೆ ಹಾರುತ್ತಾ ನಡೆಯುವ ಮತ್ತು ಆಕಸ್ಮಾತ್ತಾಗಿ ಎಂಜಲು ತುಳಿದುಬಿಟ್ಟರೆ ಕೆರೆ ಕಂಡಕೂಡಲೇ ಕಪ್ಪೆಗಳಂತೆ ಮುಳುಗುವ ಸನಾತನಿ ಮುದುಕರನ್ನು ನೋಡಿ ನಗಾಡುವ ಪ್ರಗತಿಶೀಲರೂ ಹೌದು. ಆದರೆ ನಿರ್ಲಕ್ಷದಿಂದ ಇತರರ ಎಂಜಲನ್ನು ತುಳಿದು ಕಾಲುತೊಳಕೊಳ್ಳದೆ ಅಡಿಗೆ ಮನೆಯವರೆಗೂ ಹೋಗುತ್ತಿರುವ ಪ್ರಗತಿಶೀಲರೂ ನಾವೇ. ದಾರಿಯಲ್ಲಿ ಬಿದ್ದಿರುವ ಎಂಜಲನ್ನು ತುಳಿದು ನಮ್ಮ ಆರೋಗ್ಯವನ್ನು ಹಾಳುಮಾಡಿಕೊಳ್ಳುವ ಮೂರ್ಖರೂ ನಾವೇ. ಮನೆಯಲ್ಲಿ ರುದ್ಧವಾಗಿರುವ ಹೆಂಗಸರು ಮಕ್ಕಳಿಗೆ ಮಾರ್ಗದಲ್ಲಿ ಬಿದ್ದಿರುವ ಎಂಜಲನ್ನು ತಂದು ಹಂಚಿಕೊಡುವ ಮಹಾ ಪಾಪಿಗಳೂ ನಾವೇ. ಎಂಜಲನ್ನು ದೂರಮಾಡಬೇಕೆಂದು ತಿಳಿಯದ ನಾವು ಮತ್ತೆ ವಿದ್ಯಾವಂತರು ವಿಚಾರಿಗಳು ಎನ್ನುವುದು ಹೇಗೆ? ಇತರರನ್ನು ಕೊಂದವರಿಗೆ ಫಾಶಿ ಶಿಕ್ಷೆ ವಿಧಿಸುತ್ತಾರೆ. ಸಾರ್ವಜನಿಕರು ನಡೆಯುವಲ್ಲಿ ಎಂಜಲು ಉಗುಳಿ ಅದರಿಂದ ಅನೇಕ ನಿರಪರಾಧಿಗಳನ್ನು ಕೊಲ್ಲಲೆತ್ನಿಸುವ ಪಾಪಿಗಳಿದ್ದಾರಲ್ಲ. ಅವರನ್ನು ಫಾಶಿಗೆ ಕೊಡುವುದಲ್ಲ, ಅದಕ್ಕಿಂತಲೂ ಹೆಚ್ಚಿನ ಶಿಕ್ಷೆಯಿರುವುದಾದರೆ ಅವರಿಗೆ ಕೊಡಬೇಕೆಂದು ನನಗೆ ತೋರುತ್ತದೆ. ಒಬ್ಬನನ್ನು ಕೊಂದವನು ಅವನು ಏನೋ ಕ್ರೋಧದ ಪರಮಾವಧಿಯಿಂದ ಅನರ್ಥಮಾಡಿಬಿಡುತ್ತಾನೆ. ಕೊಲ್ಲಲ್ಪಟ್ಟವನೂ ಅವನ ಸಿಟ್ಟನ್ನು ಉದ್ರೇಕಿಸಲಿಕ್ಕೆ ಕಾರಣನಿರುತ್ತಾನೆ. ಆದುದರಿಂದ ಕೊಂದವನಿಗಾದರೂ ಫಾಶಿಯಿಂದ ಉಳಿಸಿ ಅಂದಮಾನಿಗೆ ಕಳುಹಿಸಬಹುದು. ಸಾರ್ವಜನಿಕ ರಸ್ತೆಗಳಲ್ಲಿ ಬೇಕೆಂತಲೇ ಉಗುಳುವವರಿದ್ದಾರಲ್ಲ. ಅವರನ್ನು ಫಾಶಿಗೆ ಕೊಡಬೇಕೆಂದು ನಮ್ಮ ದಯಾಳು ಸರಕಾರವು ವಿಧಿಸುವುದಾದರೆ ನಾನು ಅಂತವರ ಕಡೆಯಿಂದ ರಿಯಾಯತಿ ಕೇಳಲಾರೆ. ಅವರಿಗೆ ನಡೆಯುವಾಗ ದಾರಿಯಲ್ಲಿ ಉಗುಳುವ ದುರ್ಬುದ್ಧಿ ಎಲ್ಲಿಂದ ಪ್ರಾಪ್ತಿಯಾಯಿತು. ಒಂದು ವೇಳೆ ಉಗುಳುವ ಅವಶ್ಯ ಬಂದರೂ ರಸ್ತೆಯ ಎರಡೂ ಕಡೆಗಳಲ್ಲಿ ಚರಂಡಿಗಳು ಇವೆ ಅವುಗಳಲ್ಲಿ ಉಗುಳಬಾರದೇ? ಜನರನ್ನು ಉಗುಳಿಸಬೇಕೆಂತಲೇ ಬೀಡಗಳನ್ನು ತಯಾರಿಸಿಟ್ಟಿರುತ್ತಾರೆ ಅಲ್ಲದೆ ಬೇಕಿದ್ದರೂ ಬೇಡವಾದರೂ ಒಂದು ಬೀಡ ತೆಗೆದುಕೊಂಡು ಜಗಿದು ಸಾವಿರಾರು ಜನರು ತಿರುಗಾಡುವ ರಸ್ತೆಯ ಮಧ್ಯದಲ್ಲಿ ಗಾಡಿ ಎತ್ತುಗಳು ನಡೆ ನಡೆಯುತ್ತಿರುವಾಗ ಮುಖ್ಯ ಮಾಡುತ್ತಾ ಹೋಗುವಂತೆ ಉಗುಳುತ್ತಾ ಹೋಗುವವರಿಗೆ ಯಾವ ಶಿಕ್ಷೆ ವಿಧಿಸಿದರೂ ಸಾಲದು. ನಾನು ಮಾತಾಡುವುದೇ ಯಾವಾಗಲೂ ಹೀಗೆ–ಅನ್ನಿ. ತಾವು ದೊಡ್ಡ ಜ್ಞಾನಿಗಳಂತೆ ಮಾತಾಡುವುದು. ನಡತೆ ಆಚಾರ ಮೂರ್ಖರದು. ಇದನ್ನು ಸಹಿಸಲಿಕ್ಕೆ ನನ್ನಿಂದಾಗದು. ಆದುದರಿಂದಲೇ ನಾನು ಅಧ್ಯಕ್ಷರ ಕೂಡೆ ಕೇಳಿಕೊಂಡಿದ್ದೆ ನನ್ನನ್ನು ಈ ಕಾರ್ಯಕ್ಕೆ ಹಚ್ಚಬೇಡಿ ಎಂದು. ಆದರೂ ನಾವೆಲ್ಲರೂ ತಿಳಿದವರು ತಿಳಿಯಬೇಕು ಎಂದು ಅಪೇಕ್ಷಿಸುವವರು ನನಗೆ ಯಾರ ಮೇಲೂ ದ್ವೇಷ ಇಲ್ಲವಷ್ಟೆ, ಮಾತು ಸ್ವಲ್ಪ ಕಠಿಣ ನನ್ನ ಸ್ವಭಾವವೇ ಹಾಗೆನ್ನಿ. ಅಂತೂ ನೀವು ವೀಳ್ಯದೆಲೆ ಜಗಿದು ಉಗುಳುವುದನ್ನು ಸ್ವಲ್ಪ ಕಡಿಮೆ ಮಾಡಿರಿ. ಉಗುಳುತ್ತಿರುವುದು ನಮ್ಮ ಆರೋಗ್ಯಕ್ಕೆ ಕೆಟ್ಟದು. ಈ ಉಗುಳುವ ರೋಗ ನಿಮಗೆ ಮೊದಲೇ ಅಂಟಿಕೊಂಡಿದ್ದರೆ ಸರಿ, ಉಗುಳಿರಿ. ರಸ್ತೆಯ ಮಧ್ಯದಲ್ಲಿ ಸಾವಿರಾರು ಜನರು ನಡೆಯುವಲ್ಲಿ ನಿಲ್ಲುವಲ್ಲಿ ಉಗುಳಬೇಡಿರಿ. ರಸ್ತೆಯ ಚರಂಡಿಗಳಲ್ಲಿ ಉಗುಳಿರಿ, ಇತರರ ಸರ್ವನಾಶಕ್ಕೆ ನೀವು ಕಾರಣರಾಗಬೇಡಿರಿ ಅನಂತ ಪಾಪವನ್ನು ಕಟ್ಟಿಕೊಳ್ಳಬೇಡಿರಿ ಎಂದು ನಾನು ವಾಚಕರ ಕೂಡೆ ವಿನಯಪೂರ್ವಕವಾಗಿ ಕೇಳಿಕೊಳ್ಳುತ್ತೇನೆ.

ಅನೇಕ ಕಡೆಗಳಲ್ಲಿ "ಉಗುಳುವುದು ನಿಷೇಧಿಸಲ್ಪಟ್ಟಿದೆ" ಎಂದು ಬೋರ್ಡ ನೋಡಿದ್ದೇನೆ. ಇಷ್ಟೇ ಸಾಲದು 'ಸಾರ್ವಜನಿಕ ಸ್ಥಳಗಳಲ್ಲಿ ಉಗುಳುವುದು ಮಹಾಪಾಪಗಳಲ್ಲೊಂದು' ಎಂದು ಸಾರ್ವಜನಿಕ ಎಲ್ಲಾ ಕಡೆಗಳಲ್ಲಿಯೂ ಬೋರ್ಡ ಹಾಕಬೇಕೆಂದು ನಮ್ಮ ಡಿಸ್ಟ್ರಿಕ್ಟ ಪಂಚಾಯತ ಬೋರ್ಡುಗಳು ಮುನ್ಸಿಪಾಲಿಟಿಯವರ ಕೂಡೆ ನಾವು ಒತ್ತಾಯಮಾಡಬೇಕು. ಬಸ್ಸು ಸ್ಟೇಶನುಗಳಲ್ಲಿ ಸಿನೆಮಾ ಹಾಲುಗಳಲ್ಲಿ ಮತ್ತಿತರ ಸಾರ್ವಜನಿಕರು ಸೇರುವಲ್ಲಿ ಉಗುಳುವುದರಿಂದ ಬರುವ ಅನಾಹುತಗಳು ಯಾವುವೆಂದು ಕರಪತ್ರಗಳನ್ನು ಹಂಚಬೇಕೆಂದು ನನಗೆನಿಸುತ್ತಿದೆ ಸಾರ್ವಜನಿಕ ಸ್ಥಳಗಳಲ್ಲಿ ಉಗುಳುವವರನ್ನು ಶಿಕ್ಷಿಸಲಾಗುವುದು ಎಂಬುದನ್ನು ಜನಜನಿತವಾಗಿ ಪ್ರಕಟಿಸಬೇಕು. ರಸ್ತೆಯಲ್ಲಿ ಉಗುಳುವವರನ್ನು ಸಾರ್ವಜನಿಕ ಶತ್ರುಗಳೆಂದೆನಿಸಿ ಪಕ್ಕಾಗಿ ಹಿಡಿದು ಸ್ಟೇಶನಿಗೆ ಕೊಂಡು ಹೋಗುವಂತೆ ಪೋಲೀಸು ಬಂಧುಗಳಿಗೆ ಅಧಿಕಾರ ಕೊಡಬೇಕು. ಸರಕಾರದವರೂ ಸಾರ್ವಜನಿಕರೂ ಸಹಾನುಭೂತಿ ಮತ್ತು ಸಹಾಯಕೊಟ್ಟರೆ ಸಾರ್ವಜನಿಕ ಸ್ಥಳಗಳಲ್ಲಿ ಉಗುಳುವ ದುರಾಭ್ಯಾಸವನ್ನು ನಿಲ್ಲಿಸುವುದು ಅಷ್ಟೊಂದು ಪ್ರಯಾಸವಾಗಲಿಕ್ಕಿಲ್ಲ. ಸಿಕ್ಕಿದ ಕಡೆಗಳಲ್ಲಿ ಉಗುಳುವುದು ನಾಚಿಕೆಗೇಡು ಮಹಾ ಪಾಪವೆಂದರೆ ಅರ್ಥವಾಗದ ಪ್ರಾಣ್ಯಾತ್ಮರು ನಮ್ಮಲ್ಲಿ ಅನೇಕರಿದ್ದಾರೆ. ಅವರಿಗೆ ಸ್ಟೇಶನಿಗೆ ಎಳೆದುಕೊಂಡು ಹೋದರೆ ಮಾತ್ರ ಅಪರಾಧವೆಂದು ತಿಳಿಯುತ್ತದೆ. ಆದುದರಿಂದ ಈಗಿರುವ ಕಾನೂನುಗಳು ಸಾಲದಿದ್ದರೆ ಅಂತವರನ್ನು ಪ್ರತಿಬಂಧಿಸುವುದಕ್ಕಾಗಿ ಇನ್ನೊಂದು ಕಾನೂನನ್ನಾದರೂ ನಿರ್ಮಿಸಬೇಕೆಂದು ನಾವು ನಮ್ಮ ಎಸೆಂಬ್ಲಿ ಮೆಂಬರ ಕೂಡೆ ಕೇಳಿಕೊಳ್ಳಬೇಕು.

ಸಾರ್ವಜನಿಕ ಸ್ಥಳಗಳಲ್ಲಿ ಉಗುಳುವುದನ್ನು ನಿಲ್ಲಿಸುವುದು ಅಷ್ಟೊಂದು ಸುಲಭವಲ್ಲದಿದ್ದರೂ ಎಂಜಲು ತುಳಿಯದಂತೆ ನೋಡಿಕೊಳ್ಳುವುದು ಸುಲಭವಿದೆ. ಸಾರ್ವಜನಿಕ ಸ್ಥಳಗಳಲ್ಲಿ ತಿರುಗಾಡುವವರು (ಗಂಡಸರು ಹೆಂಗಸರು ಮಕ್ಕಳು) ಎಲ್ಲರೂ ಪಾದರಕ್ಷೆಯಿಲ್ಲದೆ ನಡೆಯಬಾರದು. ಮುಳ್ಳು ಇರುವ ಸ್ಥಳಗಳಲ್ಲಿ ಪಾದರಕ್ಷೆಯಿಲ್ಲದೆ ನಡೆಯಬಾರದು ಎಂದು ನಮಗೆ ತಿಳಿದಿದೆಯಲ್ಲವೇ? ಹಾಗೆಯೇ ಮುಳ್ಳಿಗಿಂತಲೂ ಅಪಾಯಕರವಾದ ಎಲ್ಲಾ ರೋಗಗಳ ಪ್ರಚಾರಕ್ಕೂ ಕಾರಣವಾದ ಎಂಜಲನ್ನು ನಮ್ಮ ಪಾದಗಳಿಗೆ ತಗಲದಂತೆ ಮೆಟ್ಟು ಹಾಕಿಕೊಳ್ಳಬೇಕೆಂದು ಪ್ರತ್ಯೇಕ ಹೇಳಬೇಕೇ? ಪಾದರಕ್ಷೆಗಳನ್ನು ಹಾಕಿಕೊಳ್ಳುವುದು ಫೇಶನಿಗಾಗಿ ಎಂದು ಕೆಲವರ ತಪ್ಪು ಗ್ರಹಿಕೆಯಿದೆ. ಅದರಲ್ಲಿ ಸ್ವಲ್ಪ ಫೇಶನೂ ಇರಬಹುದು. ಉಪಯೋಗವೂ ಇದೆ; ಅಷ್ಟೇ ಅಲ್ಲ, ಅವಶ್ಯಕತೆಯೂ ಇದೆ.

ಪಾದರಕ್ಷೆಗಳನ್ನು ಕೊಂಡುಕೊಳ್ಳುವುದಕ್ಕೆ ಅನುಕೂಲತೆ ಇಲ್ಲದವರೂ ಇದ್ದಾರೆ. ಅಂತವರು ರಸ್ತೆಗಳಲ್ಲಿ ನಡೆಯುವಾಗ ಎಂಜಲು ತುಳಿಯದಂತೆ ಜಾಗ್ರತೆಯಿಂದ ನಡೆಯಬೇಕು. ಮತ್ತು ತಿರುಗಾಡಿ ಮನೆಗೆ ಬಂದವರು ಸೀದಾ ಬಾವಿಕಟ್ಟೆಗೋ ಬಚ್ಚಲು ಕೊಟ್ಟಿಗೆಗೋ ಹೋಗಿ ಕೈಕಾಲು ತೊಳೆದುಕೊಂಡೇ ಒಳಗೆ ಹೋಗಬೇಕು. ರಸ್ತೆಯಿಂದ ಬಂದವರು ಕೈಕಾಲು ತೊಳೆಯದೆ ಸೀದಾ ಅಡಿಗೆ [illegible] ಹೋಗುವಂತಹ ಪಾಪಿಗಳನ್ನು ತಡೆಗಟ್ಟಲೇ ಬೇಕು. ಅವರಿಂದಲೇ ಊರಿನಲ್ಲಿ ಹರಡಿರುವ ರೋಗಗಳು ಮನೆಯೊಳಗೂ ಬರುತ್ತವೆ. ಅತಿಥಿಗಳು ಬಂದಾಗ ಕೈಕಾಲು ತೊಳೆಯಲಿಕ್ಕೆ ಪ್ರಥಮತಃ ಅವರಿಗೆ ಒಂದು ತಂಬಿಗೆ ನೀರು ಕೊಡುವ ಪದ್ಧತಿ ನಮ್ಮಲ್ಲಿತ್ತು. ಕೈಕಾಲು ತೊಳೆಯದೆ ಇನ್ನೊಬ್ಬರ ಮನೆಗೆ ಹೋಗುವುದು ಅಪರಾಧವೆಂದು ಎಲ್ಲರಿಗೂ ತಿಳಿದಿತ್ತು ಹಿಂದಿನ ಹೆದ್ದರ ಕಾಲದಲ್ಲಿ.

ಇತರರ ಎಂಜಲನ್ನು ಮುಟ್ಟುವವರು ಮತ್ತು ತಿನ್ನುವವರೂ ನಮ್ಮಲ್ಲಿದ್ದಾರೋ ಎಂದು ಕೇಳಿದಿರಲ್ಲಾ ಇದ್ದಾರೆ ಅನೇಕರು ಇದ್ದಾರೆ. ಈ ವಿಷಯದ ಹರಟೆ (ಇದು ಹರಟೆಯೋ? ನಮ್ಮ ಅಧ್ಯಕ್ಷರು ಹಾಗೆ ಹೆಸರು ಕೊಟ್ಟಿದ್ದರಿಂದ ಹರಟೆ ಎಂದೆ) ಬರುವ ವಾರದಲ್ಲಿ. ಬರಹ ನಿಮಗೆ ರುಚಿಸದಿದ್ದರೆ ತಿಳಿಸಿರಿ. ನಮಸ್ಕಾರ.

ಪ್ರೀತಿ ಇರಲಿ,

ಗೊನೋರಿಯಾ ಪರಮಾರೋಗ ಉಷ್ಣ ರೋಗಕ್ಕೆ ಔಷಧ

೭ ದಿವಸಗಳಲ್ಲಿ ಈ ರೋಗ ಗುಣ ಹೊಂದುವದು ಗ್ಯಾರಂಟೀ

ಶರೀರದಿಂದ ಕೀವು ಬರುತ್ತಿದ್ದರೆ, ಧೋತರಕ್ಕೆ ಹಳದೀ ಡಾಗು ಹತ್ತುತ್ತಿದ್ದರೆ, ಶರೀರದಿಂದ ಬಾವು. ಶರೀರದ ತೊಗಲು ಹಿಂದಕ್ಕೆ ಸರಿಯದಿದ್ದರೆ, ಶರೀರದ ಸುತ್ತ ಕೆರೆಯುವಾಗಿದ್ದರೆ,....ಚಟ್ಟಿ ಬಿದ್ದಿದ್ದರೆ, ಉಷ್ಣದಿಂದ ಚೀಲು ಇಳಿದಿದ್ದರೆ, ಉಬ್ಬು ಆಗಿದ್ದರೆ, ಮೂಲವ್ಯಾಧಿ, ಭಗೇಂದ್ರ, ಗಂಡಮಾಲಿ, ಕೈಕಾಲು ಶೂಲಿ, ಅರ್ಧಾಂಗವಾಯು ನಡುಸೋಯುವದು ಸ್ತ್ರೀಯರ ಬಿಳೆಂಪು ಸೆರಗು ಹೋಗುತ್ತಿದ್ದರೆ, ಕೊಲಿಕಟು ಗರ್ಮಿಯಿಂದ ಗರ್ಭಕೋಶ ನಾಶಹೊಂದಿದ್ದರೆ, ಸರಿಯಾಗಿ ಭೇದಿಯಾಗದಿದ್ದರೆ, ಮೂತ್ರ ಉರಿಯುತ್ತಿದ್ದರೆ, ಈ ಎಲ್ಲಾ ಬೇನೆಗಳಿಗೆ ಈ ನಮ್ಮ ಔಷಧವು ಇರುವುದು. ಮೊದಲ ದಿವಸ ಬೆಳಗ್ಗೆ ೧ ಗುಂಜ ಪ್ರಮಾಣ ಔಷಧ ಅರ್ಧತೊಲಿ ತುಪ್ಪದಲ್ಲಿ ತಕ್ಕೊಳ್ಳಬೇಕು ಮೊದಲ ದಿವಸ ಮಾತ್ರ ಮುಂಜಾನೆ ಸಂಜೆ ಎರಡು ಸಾರೆ ತಕ್ಕೊಳ್ಳಬೇಕು. ಮುಂದೆ ಪ್ರತಿ ದಿವಸ ಬೆಳಗ್ಗೆ ಒಂದೇ ಸಾರೆ ೭ ದಿವಸ ಸೇವಿಸಬೇಕು. ಈ ಔಷಧವನ್ನು ಬೇಸಿಗೆಯಲ್ಲಿ ತುಪ್ಪದಲ್ಲಿ, ಥಂಡಿ ಮಳೆಗಾಲದಲ್ಲಿ ಜೇನತುಪ್ಪದಲ್ಲಿ ತಕ್ಕೊಳ್ಳಬೇಕು. ಪಥ್ಯ: ಹುಳಿಖಾರ, ಬದನೆಕಾಯಿ, ಒಳ್ಳೆಣ್ಣೆ ಬಿಡಬೇಕು.

ಬಾಟ್ಲಿ ೧ಕ್ಕೆ ೩ರೂ. ಪೋಸ್ಟ ಚಾರ್ಜ ೮ ಆಣೆ

ಏಜಂಟರು:—ಗದಗ:—ಗದಗ ಫಾರ್ಮಸಿ, ಹುಬ್ಬಳ್ಳಿ:—ಹುಬ್ಬಳ್ಳಿ ಫಾರ್ಮಸಿ, ಬಾಗಲಕೋಟೆ:–ಬಾಗಲಕೋಟೆ ಫಾರ್ಮಸಿ, ಧಾರವಾಡ:–ಧಾರವಾಡ ಫಾರ್ಮಸಿ, ದಾವಣಗೇರಿ: ದಾವಣಗೇರಿ ಪ್ರೆಸ್. ನಂಜುಡೇಶ್ವರ ಸ್ಟೋರ್ಸ ದಾವಣಗೇರಿ.

ಪತ್ರವ್ಯವಹಾರ ಮಾಡತಕ್ಕ ಮಾಲಕರ ವಿಳಾಸ.

ರೇವಣಸಿದ್ಧಪ್ಪ ಹಾಲಪ್ಪ ದಾವಣಗೇರಿ,

ಆಯುರ್ವೇದ ಔಷಧಾಲಯ, ಗದಗ.

ವಾರದ ಭವಿಷ್ಯ

ತಾರೀಕು 15-2-51 ರಿಂದ — ತಾರೀಕು 21-2-51 ರವರೆಗೆ

ಮೇಷ—ಇಂದಿನ ನಿಮ್ಮ ಭವಿಷ್ಯವು ಅತ್ಯುತ್ತಮ ಸ್ಥಿತಿಯಲ್ಲಿರುವುದು. ಇಂತಹ ಸುಸಂಧಿಯಲ್ಲಿ ನೀವು ವ್ಯರ್ಥ ಕಾಲಯಾಪನೆ ಮಾಡದೆ ಉದ್ಯಮದಲ್ಲಿ ಮುಂದುವರಿಯಿರಿ. ನಿಮ್ಮ ಅದೃಷ್ಟವು ತಾನಾಗಿಯೇ ನಿಮ್ಮನ್ನು ಸೆಳೆದುಕೊಂಡು ಮುಂದುವರಿಯುವದು. ನೀವು ಬಯಸುವದಕ್ಕಿಂತಲೂ ಅಧಿಕವಾದ ಫಲವು ಅನಾಯಾಸದಿಂದ ನಿಮ್ಮ ಕೈಸೇರಲಿದೆ. ಸಮಾಜದಲ್ಲಿ ಕೀರ್ತಿ ಮನ್ನಣೆಗಳನ್ನು ಗಳಿಸುವಿರಿ. ಸರ್ವಾತ್ಮನಾ ಹಿತಕಾರಿಯಾದ ಇಂತಹ ಸಮಯವು ಸದ್ಯ ಲಭಿಸುವದು ದುರ್ಲಭವೇ ಸರಿ. ತಾ. 16, 17, 18, 21 ಅನುಕೂಲ

ವೃಷಭ—ಇಂದೀಗ ನಿಮ್ಮ ಲಾಭಸ್ಥಾನವನ್ನು ಉಚ್ಚರಾದ ಶುಕ್ರಾಚಾರ್ಯರು ಪ್ರವೇಶಿಸುವರು. ಅಂದಮೇಲೆ ನಿಮ್ಮ ಆರ್ಥಿಕ ಬಿಕ್ಕಟ್ಟುಗಳೆಲ್ಲವು ರವಿಯಿಂ ಕಂಡ ಕತ್ತಲೆಗಳಂತೆ ದೂರ ಸರಿವವು. ರಾಜಕೀಯ ರಂಗದಲ್ಲಿ ನಿಮ್ಮ ಇಷ್ಟಾರ್ಥವು ಅನಾಯಾಸದಿಂದ ನೆರವೇರುವದು. ಗೃಹತಾಪತ್ರಯಗಳು ಹಲವಾರಿದ್ದರೂ ತತ್ಕಾಲಿಕದಲ್ಲಿ ಉಪಶಮನಹೊಂದುವವು. ಆರೋಗ್ಯವು ಸುಧಾರಿಸುವದು. ನೀಚ ಜನರೊಡನೆ ಕಲಹವಾದೀತು. ವ್ಯಾಪಾರ ವ್ಯವಹಾರಗಳಲ್ಲಿ ಅಧಿಕವಾದ ಫಲಪ್ರಾಪ್ತಿಯುಂಟು. ತಾ 15, 19, 20ರಲ್ಲಿ ನಿಮ್ಮ ಅಭೀಷ್ಟವು ಸುಲಭವಾಗಿ ಈಡೇರುವದು.

ಮಿಥುನ—ಪ್ರತಿಯೊಂದು ಕಾರ್ಯಗಳಿಗೂ ಶತ್ರುಗಳಿಂದಾಗಿ ವಿಘ್ನವು ಬರಲಿದೆ. ಆದರೆ ಗುರ್ವನುಗ್ರಹವೊಂದು ಪ್ರಬಲವಾಗಿರಲು ನಿಮಗೆ ಅವು ತೃಣಪ್ರಾಯವೇ ಸರಿ. ಶರೀರದಲ್ಲಿ ಕೊಂಚ ಆಲಸ್ಯ ನಿಶ್ಶಕ್ತಿಗಳು ಕಂಡುಬರುವವು. ಹಣದ ನಿಮಿತ್ತ ಚಿಕ್ಕಪುಟ್ಟ ಕಲಹವಾಗಬಹುದು. ಮನಶ್ಚಾಂಚಲ್ಯದ್ದೆಸೆಯಿಂದ ಅಧಿಕ ವ್ಯಯಕ್ಕೊಳಗಾಗುವಿರಿ. ವಾಕ್ಕಲಹವು ಅನಿವಾರ್ಯವಾಗಿರುವ ಈ ಕಾಲದಲ್ಲಿ ಮೌನದಾಗಿರುವದು ಲೇಸು. ಅನಿರೀಕ್ಷಿತ ಧನಾಪ್ತಿಯ ಯೋಗವಿದೆ, ತಾ. 16, 17, 18, 21 ಈ ದಿನಗಳಲ್ಲಿ ಸುಖ, ಭೋಗ ವಿಜಯಗಳನ್ನು ಪಡೆಯುವಿರಿ.

ಕರ್ಕಾಟಕ—ನರನಿಗೆ ಚಿಂತೆಯೇ ಮೃತ್ಯು, ಸಂತೋಷವೇ ಯೌವನವೆಂದಿರುವರು ಪ್ರಾಜ್ಞರು. ಇಂದು ನಿಮ್ಮ ಅನಿಷ್ಟಸ್ಥಾನವಾದ ಅಷ್ಟಮದಲ್ಲಿ ರವಿ ಕುಜಗುರುಗಳಿರುವವು ಹಿಂಸೆ ಹಲವಾರುತರದ ತಾಪತ್ರಯಗಳಿಗೆ ಸಿಲುಕಿ ವಿಶೇಷವಾದ ಚಿಂತೆಗೊಳಗಾಗುವಿರಿ, ಆದಕಾರಣ ಯಾವುದನ್ನು ಮಾಡಬೇಕು ಯಾವುದನ್ನು ಮಾಡಬಾರದೆಂಬೀ ವಿವೇಕವು ಕೂಡಾ ನಿಮ್ಮಲ್ಲುಳಿಯದೆ ಕೆಲವೊಮ್ಮೆ ಉದಾಸೀನರಾಗಿ ಕುಳಿತುಕೊಳ್ಳುವಿರಿ. ಆದರೂ ಸುಖಲಾಭ ಪತಿಯು ಉಚ್ಚನಾಗಿ ಭಾಗ್ಯದಲ್ಲಿರುವುದರಿಂದ ಹಣದ ಬಿಕ್ಕಟ್ಟುಂಟಾಗದು. ಮನಶಾಂತಿಯೂ ಲಭಿಸೀತು. ತಾ. 15, 19, 20 ಅನುಕೂಲ-

ಸಿಂಹ—ಶುಭಗ್ರಹರು ನಿಮಗನುಕೂಲರಾಗಿ ನಿಂತಿರುವ ಕಾರಣ ಈ ವಾರವೂ ನಿಮಗೆ ಉತ್ತಮವಾಗಿದೆಯೆನ್ನಬೇಕಾಗಿದೆ. ಆದಕಾರಣ ಸಂಸಾರವು ಸುಖಮಯವಾಗಿರುವುದು. ಪಶುಭೃತ್ಯಾದಿ ಪರಿವಾರವರ್ಗವೂ, ಪತ್ನೀ ಪುತ್ರರೂ ನಿರಾಮಯರಾಗಿರುವರು. ಧವಸಧಾನ್ಯಗಳ ವ್ಯಾಪಾರಗಳಲ್ಲಿ ಉತ್ತಮವಾದ ಫಲಾಪ್ತಿಯಿದೆ. ಹಿಡಿದ ಕಾರ್ಯಗಳು ಬಹ್ವಂಶ ಕೊನೆಗೊಂಡುವವು ಆದರೆ ಉದರ ಶೂಲೆಯೊಂದು ನಿಮ್ಮನ್ನು ಆಗಾಗ ಪೀಡಿಸಲಿದೆ. ತಾ. 19, 20, ಒಳ್ಳೆಯದಲ್ಲ-

ಕನ್ಯಾ—ದಿನಗಳುರುಳಿದಂತೆ ಅದೃಷ್ಟವು ಹ್ರಾಸವಾಗುತ್ತಾ ಬರುತ್ತಿದೆ, ಅನಿವಾರ್ಯಗಳಿಂದ ಕಷ್ಟನಷ್ಟಗಳು ಪ್ರಾಪ್ತವಾಗುವವು. ಕೈಯಲ್ಲಿ ಕಾಸಿರುವವರ ಬಂಧುಮಿತ್ರರೆಲ್ಲರೂ ಇರುವರು. ಅದು ಮುಗಿಯುತ್ತಲಂದಂತೆ ಇವರು ತೆಳ್ಳಗಾಗುವರು, ಗೃಹಕೃತ್ಯದಲ್ಲಿನ ಅವ್ಯವಸ್ಥೆಯಿಂದಾಗಿ ಸಂಸಾರದಲ್ಲಿ ಸುಖವಿರದು. ಮನೋರೋಗವು ದಿನೇದಿನೇ ಪ್ರಬಲವಾಗುವದು. ಸ್ತ್ರೀಜನರಿಂದಾಗಿ ಕಷ್ಟನಿಷ್ಠುರ ಅಪವಾದಗಳಿಗೆ ಸಿಲುಕುವಿರಿ. ಆದರೂ ನಿಮ್ಮ ದುಡಿಮೆಯು ಪ್ರಕೃತ ಉತ್ತಮವಿರುವುದರಿಂದ ವಾರಾಂತ್ಯದ 5 ದಿನಗಳು ಅನುಕೂಲವಾಗಿ ಪರಿಣಮಿಸುವವು-

ತುಲಾ— ಉದ್ಯೋಗದಲ್ಲಿ ಕೊಂಚ ಜಾಗ್ರತೆಯಿಂದ ವರ್ತಿಸಬೇಕಾಗಿದೆ. ಹಿತಶತ್ರುಗಳು ನಿಮ್ಮನ್ನು ಹಲವಾರು ವಿಧದಿಂದ ಅಧಃಪತನಗೈಯಲು ಸಮಯ ಸಾಧಿಸುತ್ತಿಹರು. ವ್ಯಾಪಾರಾದಿಗಳಲ್ಲಿ ನಷ್ಟವುಂಟಾದೀತು. ವಿದ್ಯೋಪಜೀವಿಗಳಿಗೆ ಪ್ರಕೃತದ ಸಮಯವು ಅನುಕೂಲವಿರುವದು. ನಿರೀಕ್ಷೆಗಿಂತ ಅಧಿಕ ಫಲ ಲಾಭವಿದೆ. ಕೀರ್ತಿ ಶ್ರೇಯಸ್ಸುಗಳೂ ಲಭಿಸುವವು. ಆರೋಗ್ಯದ ವಿಚಾರದಲ್ಲಿ ಕೊಂಚ ಜಾಗರೂಕತೆಯಿಂದಿರಬೇಕಾಗಿದೆ. ವಾರಾಂತ್ಯದ 3 ದಿನಗಳು ಅನುಕೂಲವಿವೆ.

ವೃಶ್ಚಿಕ— ಮನೋದೌರ್ಬಲ್ಯದಿಂದಾಗಿ ಹಲವಾರು ಕಾರ್ಯಗಳಲ್ಲಿ ಪರಾಭವಹೊಂದುವಿರಿ. ಅಧಿಕಾರಿಗಳ ಭಯಕ್ಕೆ ಸಿಲುಕಿದ ನಿಮಗೆ ಮೇಲಿಂದ ಮೇಲೆ ಕಷ್ಟನಷ್ಟಗಳು ಪ್ರಾಪ್ತವಾಗುವವು. ಸಂಸರ್ಗದೋಷದಿಂದಾಗಿ ಜನತೆಯ ತಿರಸ್ಕಾರಕ್ಕೊಳಗಾಗಲಿರುವಿರಿ. ಬಂಧುವರ್ಗದವರೂ ನಿಮ್ಮಿಂದ ದೂರಾಗಿರುವರು, ಹಿಡಿದ ಉದ್ಯಮದಲ್ಲಿ ಸಾಕಷ್ಟು ಫಲ ಪ್ರಾಪ್ತಿಯಿದ್ದರೂ ಅಧಿಕ ಖರ್ಚುಗಳಿರುವುದರಿಂದ ಹಣದ ಬಿಕ್ಕಟ್ಟುಂಟಾಗುವದು. ತಾ. 15, 21 ಈ ದಿನಗಳಲ್ಲಿ ಸ್ತ್ರೀಧನ ಇಷ್ಟಸಿದ್ಧಿ ವಿಜಯಗಳಿವೆ.

ಧನು— ಶರಿಸ್ಥಿಯಲ್ಲಿ ಬಹುಮಟ್ಟಿಗೆ ಸುಧಾರಣೆ ಹೊಂದುವಿರಿ. ಉದ್ಯೋಗದಲ್ಲಿ ಪ್ರಗತಿಯಿದೆ. ಸಮಾಜದಲ್ಲಿ ಒಳ್ಳೆ ಹೆಸರನ್ನು ಕೇಳುವಿರಿ, ಕಾರ್ಯಕುಶಲರಾದ ನಿಮಗೆ ಶತ್ರುಗಳು ತಲೆಬಾಗುವರು. ಗೃಹಸುಖ ಮನಶ್ಶಾಂತಿಯುತರಾದ ನಿಮಗೆ ಖರ್ಚಿಗಿಂತ ದ್ವಿಗುಣಿತವಾದ ಧನಲಾಭವಿದೆ. ಹಿಂದಿನ ಸಾಲ ಕಡಗಳಿಂದ ಮುಕ್ತರಾಗಿ ಸುಖದಿಂದ ಕಾಲ ಕಳೆವಿರಿ. ವಾರಾದಿಯ 3 ದಿನಗಳು ಅನುಕೂಲವಿವೆ.

ಮಕರ—ಚಂಚಲಚಿತ್ತರಾದ ನಿಮಗೆ ಯಾವ ಕಾರ್ಯವನ್ನೂ ಕೊನೆತನಕ ಮಾಡುವ ಸ್ಥಿರತೆಯಿಲ್ಲವು. ಅತಿ ಏವ ಹಟ್ಟಾಗಿ ನಷ್ಟಕ್ಕೀಳೇ ಸಿಲುಕುವಿರಿ. ಮಾತುಮಾತಿಗೆ ಜಗಳಗಂಟಿಕ್ಕುವ ದುರ್ಲಕ್ಷಣ ಕಾಣುತ್ತಿವೆ ಆಪ್ತೇಷ್ಟರಲ್ಲೂ ವಿಶ್ವಾಸವು ಮಾಯವಾಗಿ ಸಂಶಯಕ್ಕೆಡೆಯುಂಟುಮಾಡುವುದು. ಆರೋಗ್ಯದ ಬಗ್ಗೆ ಹೆಚ್ಚಿನ ನಿಗಾ ತಕ್ಕೊಳ್ಳಬೇಕಾದುದು ಅಗತ್ಯ ತಾ. 16ರಿಂದ 20ರ ತನಕದ ದಿನಗಳು ಹೆಚ್ಚಿನ ಅನಿಷ್ಟಕಾರಿಗಳಲ್ಲ.

ಕುಂಭ—ಇತರ ಎಲ್ಲಾ ಗ್ರಹರೂ ಪ್ರತಿಕೂಲರಾಗಿದ್ದರೂ ಸುಖಭಾಗ್ಯಪತಿಗಳಾದ ಶುಕ್ರಾಚಾರ್ಯರು ನಿಮ್ಮ ಧನಸ್ಥಾನದಲ್ಲಿ ಉಚ್ಚರಾಗಿದ್ದ ಪ್ರಯುಕ್ತ ನಿಮಗಾವ ತರನಾದ ಚಿಂತೆಗೂ ಅವಕಾಶವಿಲ್ಲ. ಸಾಕಷ್ಟು ಧನ ಮನಸ್ಸಿಗೆ ನೆಮ್ಮದಿ ಇವುಗಳಿದ್ದ ಮೇಲೆ ಮತ್ತೇನು ಬೇಕು ನರನಿಗೆ. ಆದರೂ ಜನರೊಡನೆ ನಿಷ್ಠುರವಾಗುವ ಹಲವಾರು ಸಂದರ್ಭಗಳು ಗಂಟು ಬೀಳುವುದರಿಂದ ಜಾಗ್ರತೆಯಿಂದ ವ್ಯವಹಾರ ಮಾಡಿರಿ, ಆರೋಗ್ಯದ ಮಟ್ಟಿಗೂ ಜಾಗ್ರತೆಯಿರಲಿ. ವಾರಾಂತ್ಯದ 3 ದಿನಗಳು ಅನುಕೂಲ.

ಮೀನ— ಉತ್ಪತ್ತಿಗಿಂತ ದ್ವಿಗುಣವಾದ ಖರ್ಚುಗಳು ನಿಮ್ಮನ್ನು ಬಾಧಿಸುವವು. ಆದರೆ ನೀವು ಸ್ವಂತ ಉಪಭೋಗಗಳಿಗೇನೂ ಕಡಿಮೆಮಾಡಿಕೊಳ್ಳಲಾರಿರಿ. ಮನೆಯಲ್ಲಿನ ಅವ್ಯವಸ್ಥೆಯಿಂದಾಗಿ ನಿತ್ಯ ಕಲಹ ತಪ್ಪದು. ಆರೋಗ್ಯಕ್ಕೆ ಹಾನಿಯಿದೆ ಸ್ತ್ರೀಯರ ಆಗ್ರಹಕ್ಕೆ ಸಿಲುಕುವಿರಿ. ಪಿತ್ಥದೋಷದಿಂದಾಗಿ ನಿದ್ರೆಗೆ ಭಂಗವುಂಟಾಗುವುದು. ಸದಾ ಪರ್ಯಟನದಲ್ಲೇ ಕಾಲ ಕಳೆವಿರಿ. ಗುರುಹಿರಿಯರ ಕೋಪಕ್ಕೆ ಸಿಲುಕಿದ ನಿಮಗೆ ತಾ. 15, 21 ರಲ್ಲಿ ಧನಾಪ್ತಿ ಬಹುಮಾನ ವಿಜಯಗಳಿವೆ.

— ಮಕ್ಕಳನ್ನು ಹಡೆಯುವುದು ಸಾಕು —

ಅಶಕ್ತ ಸ್ತ್ರೀಯರಿಗೆ **ಬರ್ಥ ಕಂಟ್ರೋಲ** ರೋಗ ಗ್ರಹಸ್ತ ಹೆಣ್ಣು ಮಕ್ಕಳಿಗೆ

ಏಳು ದಿವಸ ಈ ಮಾತ್ರೆಗಳನ್ನು ಸೇವನೆ ಮಾಡಿದರೆ ಮುಂದೆ ಖಂಡಿತವಾಗಿ ಮಕ್ಕಳಾಗುವದಿಲ್ಲ. ಸ್ತ್ರೀಯರು ಪ್ರತಿತಿಂಗಳು ಸರಿಯಾಗಿ ಮುಟ್ಟಾಗುತ್ತಾರೆ. ಅಲ್ಲದೆ ಸ್ತ್ರೀಯರ ಬಿಳೆರೋಗ, ಪ್ರದರರೋಗ, ಹೊಲಿಕಟ್ಟು ಗುಣವಾಗಿ ಸ್ತ್ರೀಯರು ಗರ್ಭಿಣಿಯಾಗುವದಿಲ್ಲ. ಈ ಔಷಧವನ್ನು ಸೇವಿಸುವ ಕ್ರಮ: ಪ್ರತಿದಿವಸ ಮುಂಜಾನೆ ಗುಳಿಗೆ ಮಧ್ಯಾಹ್ನಕ್ಕೆ ಗುಳಿಗೆ, ಸಂಜೆಗೆ ಗುಳಿಗೆಯಂತೆ ಊಟದ ಮೊದಲು ತಕ್ಕೊಳ್ಳಬೇಕು. ಏಳುದಿವಸ ಈ ಔಷಧವನ್ನು ಬಿಸಿನೀರಿನಲ್ಲಿ ಸೇವಿಸಬೇಕು.

ಪಥ್ಯ:—ಹರವೀವಲ್ಲಿ ಬಿಡಬೇಕು. 7 ದಿವಸ ಸಂಪೂರ್ಣ ಔಷಧದ ಕಿಮ್ಮತ್ತು ರೂಪಾಯಿ 5—0—0. ಪೋಷ್ಟ ಚಾರ್ಜು ಗಿ॥ ಅಣೆ

ಮಾಲಕರು:—ಹಾಲಪ್ಪಾ ಫಕೀರಪ್ಪಾ ದಾವಣಗೇರಿ

ಆಯುರ್ವೇದ ಔಷಧಾಲಯ ಗದಗ-ಬೆಟಗೇರಿ

ಏಜೆಂಟರು:—ಹುಬ್ಬಳ್ಳಿ ಭೀಮಾಗ್ರಾ,—ಹುಬ್ಬಳ್ಳಿ, ಗದಗ, ಬಾಗಲಕೋಟೆ ಧಾರವಾಡ ವಿಜಾಪುರ-ಅನ್ನಪ್ಪ ಸಿದ್ದಲಿಂಗಪ್ಪ ಧಾರವಾಡಕರ ವಿಜಾಪುರ ನಂಜುಂಡೇಶ್ವರ ಮೆಡಿಕಲ್ ದಾವಣಗೇರಿ ದಾವಣಗೇರಿ:—ದಾವಣಗೇರಿ ಸ್ಟೋರ್ಸ್ ಆರ್ ಎಲ್ ಅನಂತಾಚಾರ ಕೆಮಿಸ್ಟ, ಹಾವೇರಿ, ಬ್ಯಾಡಗಿ

ಕೆಲವೇ ಪ್ರತಿಗಳು ಉಳಿದಿವೆ! ತ್ವರೆ ಮಾಡಿರಿ!

ಮನೆಯೊಂದರಲ್ಲಿ ಇರಲೇಬೇಕಾದ ಪುಸ್ತಕ

"ಮನೆ-ಮದ್ದು"

ಬರೆದವರು:- ಡಾಕ್ಟರ್ ಕೊರಡ್ಕಲ್ ವೆಂಕಟರಾಯರು, ಎಲ್.ಐ.ಎಮ್., ಉಡುಪಿ.

ಸುಮಾರು 200 ಕಾಯಿಲೆಗಳಿಗೆ ... 1000 ಸುಲಭ ಮನೆ-ಮದ್ದುಗಳು!

ಮಕ್ಕಳ ಮತ್ತು ಹೆಂಗಸರ ಕಾಯಿಲೆಗಳ ಚಿಕಿತ್ಸೆ, ಶಿಶು ಸಂರಕ್ಷಣ, ಗರ್ಭಿಣಿ, ಬಾಣಂತಿಯರ ಚಿಕಿತ್ಸೆ, ಇತರ ಸಾಮಾನ್ಯ ಎಲ್ಲಾ ಕಾಯಿಲೆಗಳಿಗೆ ಸುಲಭ ಚಿಕಿತ್ಸೆಗಳನ್ನು ರೋಗಗಳ ಕಾರಣ, ಲಕ್ಷಣ, ಸುಶ್ರೂಷೆ, ಪಥ್ಯಾಪಥ್ಯ ವಿಚಾರ ಸಹಿತ ಸರಳವಾಗಿ ವಿವರಿಸಿರುವ ಪುಸ್ತಕ. ಪಂಗಿಯ ಕ್ರಮವನ್ನು ವಿಸ್ತಾರವಾಗಿ ವಿವರಿಸಿದೆ. ಮದ್ರಾಸು ಸರಕಾರದಿಂದಲೇ ಮೊದಲಾದ ಕಡೆಗಳಿಂದ ಬಹುಮಾನ ಪಡೆದ ಪುಸ್ತಕ. ಇದುವರೆಗೆ ಕನ್ನಡದಲ್ಲಿ ಇಂತಹ ಪುಸ್ತಕ ಪ್ರಕಟವಾಗಿಲ್ಲ. ಒಂದು ಪ್ರತಿ ನಿಮ್ಮ ಬಳಿ ಇದ್ದರೆ ಒಬ್ಬ ಡಾಕ್ಟರ್ ಇದ್ದಂತೆಯೆ ಸರಿ.

ಇಂದೇ ನಿಮ್ಮ ಪ್ರತಿಗಳಿಗೆ ಬರೆಯಿರಿ: ಬೆಲೆ ರೂ. 2-0-0. ವಿ. ಪಿ. ದ್ವಾರ 2-8-0.

ಪ್ರತಿಗಳು ನಿಮ್ಮೂರ ಪುಸ್ತಕ ವ್ಯಾಪಾರಿಗಳಲ್ಲಿ ಸಿಗದಿದ್ದರೆ, ನವಭಾರತ ಪುಸ್ತಕ ಭಂಡಾರ, ಉಡುಪಿ. ಇವರಿಗೆ ಬರೆಯಿರಿ.

Notice

ಕುಂದಾಪುರ ಡಿ ಮು. ಕೋರ್ಟಿನಲ್ಲಿ

O. S. 145/1950

R. I. A 1749/1950

H. ನಾರಾಯಣ ಭಟ್ಟ. —ವಾದಿ

ಶೇಕುಂಜ ಸಾಹೇಬ ವಗೈರಾ —ಪ್ರತಿವಾದಿ

ಪ್ರತಿವಾದಿ:- 2. ಗಿರಿಜಾಬಾಯಿ, ಕೊಪ್ಪನ್ಯಾಕನ ಮಗಳು ಕುಂದಾಪುರ ಕಸಬಾ ಗ್ರಾಮ. 3 ಅನಂತಮ್ಮ ಅಕ್ಕಾಲಿ, ಪಟ್ಟಂಗಿಡಿ ಪರಮೇಶ್ವರ ಅಕ್ಕಾಲಿಗ್ರಾಮ. ಹೆಮ್ಮಾಡಿ ಗ್ರಾಮ, ಕುಂದಾಪುರ ತಾಲ್ಲೂಕು, ಇವರಿಗೆ-

ವಾದಿಯು ಪ್ರತಿವಾದಿರಮೇಲೆ ಪಡೆದ O.S. 145/1950ನೇ ಡಿಕ್ರಿ ಪ್ರಕಾರ ಬರತಕ್ಕ ಹಣಗಳನ್ನು ಪ್ರತಿವಾದಿರ ಜಾಬ್ತಿ ಸ್ಥಿರಾಸ್ತಿ ಯೇಲಂಸಿಂದ ಡಿಕ್ರಿ ಪಡೆಯುವರೇ ವಾದಿಯು ದಾಖಲು ಮಾಡಿದ ಮೇಲ್ಕಂಡ ಪ್ಯಾನಲ್ ಡಿಕ್ರಿ ಅರ್ಜಿಯು ತನಿಖೆಯು ತಾರೀಕು 24-2 1951 ಕ್ಕೆ ಇರುತ್ತದೆ. ಆ ಕುರಿತು ನಿಮ್ಮದೇನಾದ್ರು ಆಕ್ಷೇಪವಿದ್ದಲ್ಲಿ ಸದ್ರಿ ದಿವಸ ಮೇಲ್ಕಂಡ ಕೋರ್ಟಿನಲ್ಲಿ ಹಾಜ್ರು ಆಗಿ ಬ್ಯಾಹೀರು ಮಾಡಿಕೊಳ್ಳತಕ್ಕದ್ದು. ತಪ್ಪಿದ್ದಲ್ಲಿ ಯೇಕಪಕ್ಷವಾಗಿ ತೀರ್ಮಾನಿಸಲಾದೀತು. ಎಂಬುದಾಗಿ ಕೋರ್ಟು ಹುಕುಂ ಪ್ರಕಾರ ನಿಮಗೆ ಯೀ ಮೂಲಕ ತಿಳಿಸೋಣಾಗುತ್ತದೆ.

K. Raghunatha Shenai
Pleader for Plaintiffs
COONDAPOOR, 8-2-1951

ಲಕ್ಷ್ಮೀ ಸೆಂಟಾಲ್ ಮಾತ್ರೆ

ಇದರ ಉಪಯೋಗದಿಂದ ಬಹುಕಾಲದ ಮೇಹ, ಪ್ರಮೇಹ, ಮೂತ್ರದ ಉರಿ, ಮೂತ್ರ ಕೃಚ್ಛ್ರ, ಮೂತ್ರದೊಡನೆ ಯಾಮುಂದಾಗಿ ಬಿಳುಪು, ಅರಸಿನ, ಕೆಂಪು ಈ ವರ್ಣಗಳಲ್ಲಿ ಕೀವು ಹೋಗುವುದು; ತೊಡೆ ಸಂದಿನಲ್ಲಿ ನೋವು, ಕಾಲ ಗಂಟುಗಳಲ್ಲಿ ವೇದನೆ, ಕಣ್ಣಿನಲ್ಲಿ ಕೀವು ಬರುವದು, ಶರೀರದಲ್ಲಿ ಉಷ್ಣತೆ, ಸ್ಪರ್ಶೇಂದ್ರಿಯ ಇವೆಲ್ಲಾ ಖಾತ್ರಿಯಾಗಿ ಗುಣಹೊಂದುವುದು.

ಡಬ್ಬಿ ಒಂದಕ್ಕೆ ರೂ. 2-0-0

ಏಜಂಟ್:—

ಶಾ ಕಂಪೆನಿ, ಮಂಗಳೂರು

EDITED, PRINTED & PUBLISHED BY K. H. SHETTY AT THE NAVAYUGA PRESS, UDIPI, S. INDIA

Regd. No. M. 3618 | Estd 1921 ಸ್ಥಾಪನೆ 31ನೇ ವರ್ಷ | 22-2-1951

LICENCE No. 31
Licensed to Post without Prepayment

Founder. Sri A. B. Shetty,
Minister for Agriculture & Veterinary.

ವರ್ಷ ೩೦
ವಾರ ೨೪

NAVAYUGA
WEEKLY

POST BOX NO. 22
UDIPI, S. K.

Vol. 31
No. 24

ವಿಜ್ಞಾನ ಏನು ಮಾಡಿತು?

"ಮಾನವೀಯತೆಯನ್ನು ನಾಶ ಮಾಡಿತು" ಎನ್ನುತ್ತೇನೆ ನಾನು. ಜಗತ್ತೇ ವಿಜ್ಞಾನದಲ್ಲಿ ಮಗ್ನವಾಗಿರುವಾಗ—ವಿಜ್ಞಾನದ ಬಲದಿಂದಲೇ ಜನಜೀವನ ರೂಪುಗೊಳ್ಳುತ್ತಿರುವಾಗ— ಜೀವನದಲ್ಲಿ ಅದರ ಆವಶ್ಯಕತೆ ಹೆಚ್ಚುತ್ತಲಿರುವಾಗ—ನನ್ನ ವಾದ ತೀರ ಅಜ್ಞಾನದ್ದೆಂದು ಅಥವಾ ಹತ್ತನೆಯ ಶತಮಾನದ ಮನೋವೃತ್ತಿಯದ್ದೆಂದು ತೋರಿದರೂ ತೋರಬಹುದು. ಪ್ರಗತಿ ಪಥದಲ್ಲಿ ಮುನ್ನಡೆಯುತ್ತಿರುವ ಈ ವಿಜ್ಞಾನ ಯುಗದಲ್ಲಿ ನಾನೊಬ್ಬ ಅಜ್ಞಾನಿಯೆಂದಾದರೂ ಸರಿಯೇ; ನನ್ನ ವಾದವನ್ನು ವಿಮರ್ಶೆ ಮಾಡಿದ ಬಳಿಕವೇ ಹಾಗೆ ಸಿದ್ಧಾಂತಿಸಬೇಕೆಂದು ಸೂಚಿಸುತ್ತೇನೆ.

ಮನುಷ್ಯನ ಹುಟ್ಟುಸಾವಿನ ಒಂದು ವಿಷಯವನ್ನು ಬಿಟ್ಟು ಉಳಿದದ್ದನ್ನೆಲ್ಲ ವಿಜ್ಞಾನವಶಪಡಿಸುತ್ತದೆಂದರೆ ವಿಜ್ಞಾನದ ಶಕ್ತಿಯ ಬೇರೆ ನಾವೇನೂ ಹೇಳಬೇಕಾಗಿಲ್ಲ. ಸಾವಿರಾರು ಮೈಲು ದೂರದಲ್ಲಿರುವ ವಿಚಾರಗಳನ್ನು ನಾವಿಲ್ಲಿ ಕೇಳುತ್ತೇವೆ; ಮಾತನಾಡುತ್ತೇವೆ; ಆದೇಶ ಕೊಡುತ್ತೇವೆ. ಸರ್. ಮೇಕಾರ್ಥರ್ ವಾಶಿಂಗಟನ್ನಿನಲ್ಲಿಯೋ—ಅಮೇರಿಕಾದಲ್ಲಿಯೋ ಕೂತು ಸಾವಿರಾರು ಮೈಲಾಚೆಯ ಯುದ್ಧರಂಗದ ಮೇಲಿನ ಸೈನಿಕರಿಗೆ ಆದೇಶಮಾಡಬಲ್ಲ. ಕೇವಲ ನಿಮಿಷಗಳ ಅಂತರದಲ್ಲಿ ಲಕ್ಷಲಕ್ಷ ಜನರನ್ನು ಸರ್ವನಾಶ ಮಾಡಬಲ್ಲ! ಖಡ್ಗವನ್ನೋ— ಫುರಾಣಿಯನ್ನೋ— ಫಿರಂಗಿಯನ್ನೋ ಉಪಯೋಗಿಸುವುದಾದರೆ ಜಗತ್ತಿನ ರಾಷ್ಟ್ರಗಳು ಹೀಗೆ ತಿರುಗಿ ತಿರುಗಿ ಯುದ್ಧ ಮಾಡಿ ಮಾನವ ಜೀವನವನ್ನು ಹಾಳುಗೆಡಹುತ್ತಿದ್ದಿಲ್ಲ. ಆದರೆ ಈ ಹಾಳು ವಿಜ್ಞಾನ ವಿಜ್ಞಾನಿಗಳನ್ನೂ, ಅದರ ಉಪಾಸಕರಾದ ರಾಜಕಾರಣಿಗಳನ್ನೂ ಯುದ್ಧ ಮಾಡದೆ ವಿಶ್ರಮಿಸಲು ಬಿಡುವಂತಿಲ್ಲ! ದ್ವಿತೀಯ ಮಹಾಯುದ್ಧದ ಕಿಡಿ ಆರುವ ಮೊದಲೇ ಮೂರನೆಯ ಮಹಾಯುದ್ಧವನ್ನು ಆಹ್ವಾನಿಸುವಷ್ಟು ಶಕ್ತಿಸಾಮರ್ಥ್ಯವನ್ನು ಗಳಿಸಿಕೊಟ್ಟದ್ದು ಯಾವುದು?—ವಿಜ್ಞಾನ! ದ್ವಿತೀಯ ಮಹಾಯುದ್ಧದಲ್ಲಿ ಗೆದ್ದದ್ದು ಯಾವುದು? ನ್ಯಾಯವೋ—ಜನದ ಸಾಮರ್ಥ್ಯವೋ— ರಾಜಕಾರಣಿಗಳ ಬುದ್ಧಿಮತ್ತೆಯೋ?—ವಿಜ್ಞಾನ! ನಿರುಪದ್ರವಿಗಳನ್ನೂ, ಹಾಲುಹಸುಳೆಗಳನ್ನು ನಿರ್ದಾಕ್ಷಿಣ್ಯವಾಗಿ ಮಣ್ಣುಮುಕ್ಕಿಸಿದ್ದು ಯಾವುದು? ಲಕ್ಷ ಲಕ್ಷ ಜನರ ಜೀವಾಪಹರಣ ಮಾಡಿದ ಅಟಂ ಬಾಂಬು ಏನು ಮಾಡಿತು? ಏನು ಸಾರಿತು?— ವಿಜ್ಞಾನದ ವಿರಾಟ್ ದರ್ಶನವನ್ನಲ್ಲವೇ? ಈಗ ಮೂರನೆಯ ಮಹಾಯುದ್ಧದ ಭದ್ರವಾದ ತಳಹದಿಯಾದರೂ ಯಾವುದು? ಅಟಂ ಬಾಂಬಲ್ಲವೇ?

ವಿಜ್ಞಾನ ತೋರಿಸಿಕೊಟ್ಟ ದುರ್ಮಾರ್ಗ—ಈ ದುಷ್ಟ ಬುದ್ಧಿ - ಈಗ ಮಾನವ ಕೋಟಿಯ ಮಾನವೀಯ ಶಕ್ತಿಯ ಸಮೂಲ ನಾಶಕ್ಕೆಯೇ ನಿಂತಿದೆ. ಮಾನವನ ಬುದ್ಧಿಮತ್ತೆ—ಆತ್ಮಿಕ ಶಕ್ತಿ—ನೈತಿಕತೆಗಳಿಗೆ ಉಳಿಗಾಲವಿಲ್ಲವಿನ್ನು! ಶಾಂತಿ ಸಮಾಧಾನಗಳು ಯುದ್ಧವನ್ನು ವಿರೋಧಿಸುತ್ತವೆಯಾದರೂ ವಿಜ್ಞಾನದ ದುರಹಂಕಾರ ಎಲ್ಲ ಸೂಚನೆಗಳನ್ನು ಧಿಕ್ಕರಿಸಿ ತನ್ನ ಶಕ್ತಿಚಾಲನೆ ಮಾಡುತ್ತಲಿದೆ. ಅಂದರೆ ಇಂದು ಲೋಕದಲ್ಲಿ ಗೆಲ್ಲುವುದು; ನೀತಿಯಲ್ಲ; ಶಾಂತಿಯಲ್ಲ, ವಿಜ್ಞಾನ!

ಶಾಸ್ತ್ರಕಾರರೂ, ಬುದ್ಧಿಶಾಲಿಗಳೂ, ಸುಸಂಸ್ಕೃತರೂ, ಇರುವಲ್ಲಿ ಶಾಂತಿ ಸಮಾಧಾನಗಳೇ ಮೂಡಿ ಬರುವ ಕಾಲವೊಂದಿತ್ತು. ಆದರಿಂದು ಆ ಭರವಸೆ ಉಳಿದಿಲ್ಲ. ವಿಜ್ಞಾನದ ಮುಂದೆ ಯಾವ ಬುದ್ಧಿಮತ್ತೆಯೂ, ಯಾವ ನೀತಿಜ್ಞಾನವೂ- ತಾತ್ವಿಕ ವಿಚಾರವೂ—ತಲೆಯೆತ್ತಿ ನಿಲ್ಲಲಾರದು! ಈ ವಿಜ್ಞಾನ ಯುಗದಲ್ಲೂ ಅಹಿಂಸೆಯ ಪ್ರಚಾರವನ್ನು ಮಾಡ ಹೊರಟರೆ ಅವನ ಅಜ್ಞಾನಕ್ಕೆ ಹುಚ್ಚರಾಸ್ಪತ್ರೆಯ ಹೊರತು ಅನ್ಯ ಮಾರ್ಗವಿರಲಾರದು.

ಅಹಿಂಸಾವಾದಿ ಗಾಂಧೀಜಿ ತಾನು ನೂರಇಪ್ಪತ್ತು ವರ್ಷ ಬದುಕುತ್ತೇನೆಂದು ಆಶೆ ಕಟ್ಟಿಕೊಂಡಿದ್ದರೂ ನಾಥೂರಾಮ ಗೋಡ್ಸೆ ಆಯುಷ್ಯದಲ್ಲಿ ಎಪ್ಪತ್ತು ವರ್ಷ ಕಡಿತಮಾಡಿ ಅವರ ಇತಿಹಾಸವನ್ನೇ ಬದಲಿಸಿಬಿಟ್ಟ! ಗಾಂಧೀಜಿ ಇಚ್ಛಿಸಿದಂತೆ ಈ ವರೆಗೆ ಬದುಕಿ ಉಳಿಯುವದಾದರೆ ಅವರ ಸ್ಥಿತಿ ಶೋಚನೀಯವಾಗುತ್ತಿತ್ತು! ಕ್ಷೇತ್ರಗುಣ ಹೊಂದಿಕೊಂಡು ಫಲಪ್ರಾಪ್ತಿಯಿರುವಂತೆ ಚರ್ಯೆ— ಪ್ರಾಮಾಣಿಕ ಬುದ್ಧಿಯನ್ನು ಹೊಂದಿಕೊಂಡು [ಗಾಂಧೀಜೀಯ ಮಾರ್ಗ ಒಪ್ಪಿದ್ದವರ ಹೃದಯದಲ್ಲಿ ಎಷ್ಟೆಷ್ಟರ ಮಟ್ಟಿಗೆ ಯಾವ ಯಾವ ರೀತಿಯಲ್ಲಿ ನೆಲೆನಿಂತಿದೆಯೋ—ಮಂತ್ರಿಗಳ ನಾಲಿಗೆಯಲ್ಲಿ ಸಲೀಸಾಗಿ ಹೇಗೆ ನಲಿದಾಡುತ್ತದೆಯೋ— ಅಷ್ಟರಮಟ್ಟಿನ ಆದರ ಮನ್ನಣೆಯಾಗಲೀ, ಮಾರ್ಗದರ್ಶನ ಮಾಡುವಲ್ಲಿ ಅತ್ಯಂತ ಪ್ರಯೋಜನಕಾರಿಯಾದ ಆ ನಾಮವೂ ಇಂದು ಉಳಿಯುತ್ತಲಿಲ್ಲ. ಆದುದರಿಂದ ಗೋಡ್ಸೆ ಮಾಡಿದ್ದು ತಪ್ಪೆಂದು ನಾವು ಸಿದ್ಧಾಂತಿಸುವುದಾದರೂ ಗಾಂಧೀಜಿ ಆ ಲೋಕದಲ್ಲಿ ನಮ್ಮ ಪಾಡನ್ನು ನೋಡಿ 'ಗೋಡ್ಸೆ ಉಪಕಾರ ಮಾಡಿದ' ಎನ್ನಬಾರದೇನೋ! ಅವರನ್ನಗಲಿದ ಇಷ್ಟು ಶೀಘ್ರದಲ್ಲಿಯೇ ಅವರ ಹೆಸರನ್ನು ಉಚ್ಚರಿಸುತ್ತಲೆ—ವಿಜ್ಞಾನದ ಕಡೆಗೆ ಬಹಳ ಜೋರಾಗಿ ಓಡುತ್ತಲಿದ್ದೇವೆ. ದೇಶದಲ್ಲಿ 'ಉಣಲಿಕ್ಕೆ ಅನ್ನವಿಲ್ಲ, ಉಡಲಿಕ್ಕೆ ಬಟ್ಟೆಯಿಲ್ಲ' ಎನ್ನುವಾಗ ಅಸ್ತ್ರಶಸ್ತ್ರಗಳಿಗಾಗಿ ನೂರರಲ್ಲಿ ಐವತ್ತು ಪಾಲು ವ್ಯಯಿಸುತ್ತಲಿದ್ದೇವೆ. ಹೀಗೆ ತಿಳಿದೂ ತಿಳಿದೂ ತತ್ವಬಾಹಿರರಾಗುವುದು ಅಜ್ಞಾನದಿಂದಲ್ಲ; ವಿಜ್ಞಾನದ ಹೆದರಿಕೆಯಿಂದ ಎಂಬುದನ್ನು ಮರೆಯದಿರೋಣ.

ಅಮೇರಿಕೆಯು ಕೋಟಿಗಟ್ಟಲೆ ಹಣವನ್ನು ವ್ಯಯಿಸುತ್ತಲಿದೆ. ಅದರ ಪ್ರಯೋಗವನ್ನೂ ನಡೆಸುತ್ತಲಿದೆ. ದಿನದಿಂದ

THE UNITED KARNATKA
INSURANCE COMPANY LIMITED,
United Karnatak Buildings, DHARWAR.
Established: 1929.
ಕಳೆದ 20 ವರ್ಷಗಳಿಂದಲೂ ಸದಾ ಜನತಾಸೇವೆ ಮಾಡುತ್ತಿದೆ.

ದಿ ಸೆಕ್ಯೂರಿಟಿ ಪ್ರೊವಿಡೆಂಟ್ ಇನ್ಶೂರೆನ್ಸ್ ಕಂಪನಿ, ಲಿಮಿಟೆಡ್.
ಹಸನ್ ಚೇಂಬರ್ಸ್, ಪಾರ್ಸಿಬಜಾರ್ ಸ್ಟ್ರೀಟ್,
ಬೊಂಬಾಯಿ 1.

ದಿ ಕೆನರಾ ಇಂಡಸ್ಟ್ರಿಯಲ್ ಎಂಡ್ ಬ್ಯಾಂಕಿಂಗ್ ಸಿಂಡಿಕೇಟ್, ಲಿಮಿಟೆಡ್ ಉಡುಪಿ, ಇದರ ಶಾಖಾ ಕಚೇರಿಗಳಾದ ಕುಂದಾಪುರ, ಬಾರಕೂರು, [illegible] ಬ್ರಹ್ಮಾವರ, [illegible] ಅಥವಾ ಭಟ್ಕಳ [illegible] ಗಳಲ್ಲಿಯೇ [illegible] ಕಂಪೆನಿಯ ಪೋಲಿಸಿ [illegible] ಗಳನ್ನು [illegible] ನಾವು ನಮ್ಮ ಪೋಲಿಸಿದಾರರನ್ನು ವಿನಂತಿಸುತ್ತೇವೆ.

ಬಂಟ್ವಾಳದ ಶ್ರೀ ಎ. [illegible] ಶೆಟ್ಟಿ [illegible] ಭಟ್ಕಳ [illegible] ಶ್ರೀ [illegible] ನಮ್ಮ ಕಂಪೆನಿಯ [illegible] ಪೋಲಿಸಿದಾರರಿಗೆ [illegible] ನಮ್ಮಲ್ಲಿ [illegible] ಆವರ್ಬ್ಬರೊಡನೆ [illegible] ಪ್ರೀಮಿಯಮ್ [illegible] ಗಿಯದೆ.

Manager
The Security Provident
Insurance Co Ltd, BOMBAY

ದಿನಕ್ಕೆ ವಿಜ್ಞಾನದಿಂದಾಗುವ ಪ್ರಗತಿಯನ್ನು ಕಂಡು ಹೆಮ್ಮೆ ಪಡುತ್ತಲಿವೆ. ಹೀಗೆ ವ್ಯಯಿಸಿ, ವಿಜ್ಞಾನ ಸಿದ್ಧಿಯನ್ನು ಪಡೆಯುವದರ ಪುರುಷಾರ್ಥವಾದರೂ ಏನು? ಇತರ ದೇಶಗಳನ್ನು ಬಗ್ಗಿಸಿ ಇಲ್ಲವೆ ಧ್ವಂಸಮಾಡಿ ತಾವು ಮೆರೆಯಬೇಕೆಂಬ ಲಾಲಸೆ ಕಾರಣವಲ್ಲವೇ? ಇದರ ಈ ಬಯಕೆ ಇಲ್ಲವೆ ವಿಜ್ಞಾನದ ಪ್ರಗತಿ, ಬೇರೆ ದೇಶಗಳ ಕಣ್ಣನ್ನು ಕೋರೆಯುತ್ತದೆ. ರಷ್ಯಾ ಕೂಡಾ ಪ್ರತಿಯಾಸ್ತ್ರ ಹುಡುಕುವದರಲ್ಲಿ ಮಗ್ನವಾಗಿದೆ

ಇದನ್ನು ನೋಡಿ ತಾನೇ ಗೆಲ್ಲಬೇಕೆಂಬ ಕೆಚ್ಚು ಅದರಲ್ಲಿ ಮೂಡಿಸುತ್ತದೆ. ಹೀಗೆ ಒಂದು ರಾಷ್ಟ್ರ ಇನ್ನೊಂದು ರಾಷ್ಟ್ರದೊಡನೆ ತಪ್ಪು ತಿಳಿವಳಿಕೆಯನ್ನು ಹುಟ್ಟಿಸಿ ಯುದ್ಧಭೀತಿಯನ್ನು ನಿರ್ಮಿಸುತ್ತದೆ. ಭೀತಿಯನ್ನು ನಿರ್ಮಿಸುವದೂ ಪರಿಹರಿಸುವುದೂ ವಿಜ್ಞಾನವೇ ಹೊರತು ಬೇರೇನೂ ಅಲ್ಲ. ರಾಜಕಾರಣಿಗಳ ಬೌದ್ಧಿಕ ವಿಚಾರಗಳು ಪ್ರಾಮಾಣ್ಯವಾಗುವಂತಿದ್ದರೆ ಕೋರಿಯದಲ್ಲಿಂದು ಯುದ್ಧ ಘರ್ಷಣೆ ಹೆಚ್ಚುತ್ತ ಹೋಗುವ ಪ್ರಸಂಗ ಬರುತ್ತಿರಲಿಲ್ಲ. ಮಾನವ ವಿಜ್ಞಾನದ ಸಂಗಮುಷ್ಟಿಯೊಳಗೆ ಸೇರಿಕೊಂಡು ಅದರ ದಾಸಾನುದಾಸನಾಗಿದ್ದಾನೆ. ಅನುದಿನದ ತನ್ನ ಜೀವನವನ್ನು ಕೂಡಾ ವಿಜ್ಞಾನ ವೈಚಿತ್ರ್ಯಗಳಿಗೆ ಧಾರೆಯೆರೆಯುತ್ತಲಿದ್ದಾನೆ.

ಸಣ್ಣಪುಟ್ಟ ಅಂಶಗಳಲ್ಲಿ ವಿಜ್ಞಾನ ಮಾಡಿದ ಕಾರ್ಯಗಳನ್ನು ಪ್ರಶಂಸಿಸಿ ಮಾನವನ ಏಳ್ಗೆಯೇ ಅದರಿಂದ ಎಂದು ಹೇಳುವವರು ನಮ್ಮಲ್ಲಿ ಬಹಳ ಮಂದಿ. ಕೋಟ್ಯಂತರ ಜನರ ಜೀವನವನ್ನು ಹಾಳುಗೆಡಹಿದ ಈ ವಿಜ್ಞಾನ ಜನತೆಯ ಜೀವನಾವಶ್ಯಕತೆಯಾದ ಕಡೆಗಳಲ್ಲಿ ಏಕೆ ಹರಿಯಲಿಲ್ಲ? ವಿನಾಶ ಕಾರ್ಯವಷ್ಟೇ ಅದರ ಕಾರ್ಯವೆಂದು ನಾವು ಜಗತ್ತಿನಲ್ಲಾಗುವ ಮಹಾವಿಪ್ಲವದಿಂದ ಅರಿತುಕೊಳ್ಳಬಹುದಲ್ಲವೇ? ಅದರಿಂದ ಅಷ್ಟೇ ಜನರನ್ನು ಉಳಿಸುವ ಪುಣ್ಯಕಾರ್ಯವನ್ನು ಮಾಡಿದ ದಾಖಲೆಗಳು ನಮ್ಮಲ್ಲಿಲ್ಲ! ಸರ್ವಶಕ್ತಿಸಂಪತ್ತುಗಳನ್ನು ಸೂರೆಗೊಳ್ಳುವ ಅಟಂಬಾಂಬನ್ನು ವಿಜ್ಞಾನ ಜಗತ್ತಿಗೆ ನೀಡದೆ ಹೋಗಿದ್ದರೆ ಆ ಸಂಪತ್ತು ಶಕ್ತಿಗಳು ಮಿಲಿಯಾಂತರ ಜನರ ಜೀವನವನ್ನು ಸುಗಮವಾಗಿಸಬಹುದಾಗಿತ್ತಲ್ಲವೇ? ಆದರೆ ಬದಲಾಗಿ ತನ್ನ ಅಸುರೀ ಶಕ್ತಿಯಿಂದ ಮಹಾಪ್ರಳಯವನ್ನೇ ತಂದ ಈ ಅಟಂ ಬಾಂಬು ಇರುವ ತನಕ ಜಗತ್ತಿನಲ್ಲಿ ಶಾಂತಿಯೆಂಬುದು ಕನಸಿನ ಮಾತೇ. ಹಳೆಯ ಕಾಲದ ಗತ ವೈಭವಗಳನ್ನು ನೆನೆಸಿದರೆ ಅಜ್ಞಾನ, ಅಂಧಶ್ರದ್ಧೆಗಳು ಮಾನವನಲ್ಲಿ ತುಂಬಿದ್ದರೂ ನ್ಯಾಯ, ನೀತಿ ಮಂತ್ರ ಅಭಿಪ್ರಾಯೈಕ್ಯ ಮನ್ನಣೆ ಸಿಕ್ಕುತ್ತಿತ್ತು! ಅದರಿಂದು ವಿಜ್ಞಾನವನ್ನು ಬಲಿಸಿಕೊಳ್ಳುವದಕ್ಕಿಂತ ಮಿಗಿಲಾದ ಮಹತ್ವದ್ದು ಬೇರೇನೂ ಇರುವುದಿಲ್ಲ.

ಮನುಷ್ಯನನ್ನು ವಿಜ್ಞಾನವು ಗುಲಾಮನನ್ನಾಗಿ ಮಾಡಿಕೊಂಡಿರುತ್ತದೆ. ಗತಕಾಲದ ವೀರರ ಪೌರುಷ ಸಾಮರ್ಥ್ಯಗಳು ಶೂನ್ಯವಾಗಿವೆ. ವಿಜ್ಞಾನವಲ್ಲವಾದ್ದರೆ ಮಾನವ ಶೀತಾ ಅಸ್ಥಿರ. ವಿಜ್ಞಾನದ ಹೊರತು ಆತನಿಂದೇನೂ ಆಗದಿದೆ. ಹಿಂದಿನ ಕಾಲಮಾನದ ಜನತೆಯ ಸ್ವಾವಲಂಬೀ ಜೀವನವನ್ನು ಆತ ಎಂದೂ ನಡೆಸಲಾರ.

ಹೀಗೆ ತನ್ನ ಅಸುರೀ ಶಕ್ತಿಯಿಂದ ಜಗತ್ತನ್ನು— ಮಾನವ ಕೋಟಿಯನ್ನು— ತನ್ನೆಡೆಗೆ ಆಕರ್ಷಿಸಿಕೊಂಡ ವಿಜ್ಞಾನದ ಕುರಿತು ನಾನು ಹೇಳಿದಂತವನ್ನು 'ಪ್ರಗತಿಶೀಲ' ಜನತೆ ಇದು ನನ್ನಲ್ಲಿರುವ ಅಜ್ಞಾನ ಎನಲೂಬಹುದು. ಆದರೆ ಅಂತಹ ವಿನಾಶಕಾರೀ ಕಾರ್ಯವೇ ವಿಜ್ಞಾನದ ಪ್ರಗತಿಯಾದರೆ ಜಗತ್ತಿಗೆ ಅದರಿಂದೇನೂ ಆಗದೆ ಹೋದರೆ— ಬಹು ಮಂದಿ ಅರ್ಹರು ಒಟ್ಟಿಗಳಲ್ಲಿದೆ ಪರಿತಪಿಸುವ ಈ ಕಾಲದಲ್ಲಿ "ಅಪೇಕ್ಷಿಸಾಸ್ತಿ— ಪರೀಕ್ಷಿಸಿ ಕರೋತಿ"- ಎಂದು ಅಟಂಬಾಂಬನ್ನು ಪರೀಕ್ಷಾರ್ಥವಾಗಿ ಪ್ರಯೋಗಿಸುವವರಿದೆ— ಅಂತಹ ವಿಜ್ಞಾನಿಗಳೂ, ವಿಜ್ಞಾನವೂ ಕಾಡಿಯ ಅಟಂ ಬಾಂಬಿಗಿಂತಲೂ ಭಯಾನಕವಾದ ಬಾಂಬು ಸಿಡಿದು ಒಮ್ಮೆಯ ಸರ್ವನಾಶವಾಗಲಿ ಎನ್ನುತ್ತೇನೆ. ಹಿರೋಶಿಮಾದ ಲಕ್ಷ್ಯಾಪ ಲಕ್ಷ ಜನರ ಶಾಪ ಇವರ ಮೇಲೆ ಇರುವಾಗ ಒಂದಲ್ಲ ಒಂದುದಿನ ವಿಜ್ಞಾನ ಅಪ್ಪು ಮಾಡಿಯೇ ಮಾಡಿತು. ವಿಚಾರವಂತರಾದ ಗಾಂಧೀಜಿ ಶ್ರೀರ ವಾದ ಲಕ್ಷ್ಯಕ್ಕೆ ಬಂದೀ ಹೋದುದನ್ನು ನೋಡಿ ಮಾಗ ದಾಗಾಗುವುದೇ ಸ್ಲೇವ ವೆಂದು ತೋರುತ್ತದೆ.

ಆಹಾರವೂ ಅಜ್ಞಾನವೂ

ಆಹಾರದ ಕುರಿತು ಭಾರತ ಸರಕಾರ ಪ್ರಕಟಿಸಿದ ಸಕಾಲಿಕ ಧೋರಣೆಯನ್ನು ನಾವು ಲಕ್ಷಿಸಿದರೆ ಒಂದು ಗಂಡಾಂತರದಿಂದ ನಾವು ಪಾರಾದೆವೆಂದು ಸಮಾಧಾನ ತಂದುಕೊಳ್ಳಬಹುದಾಗಿದೆ. ಇಂತಹ ಸಮಯದಲ್ಲಿ ಪರಿಸ್ಥಿತಿ ಇನ್ನಷ್ಟು ಗಂಭೀರವಾಗುವಂತೆ ಪ್ರೋತ್ಸಾಹಿಸುವುದು-ಪಕ್ಷಗಳ ಲಕ್ಷಣವಲ್ಲ. ಈಗ ದೇಶಾದ್ಯಂತ ವ್ಯಾಪಿಸಿರುವ ಆಹಾರದ ಕೊರತೆಯನ್ನು ಎಲ್ಲರೂ ತ್ಯಾಗ ಸಹನೆಗಳ ಮೂಲಕ ಎದುರಿಸಬೇಕಾಗಿದೆ. ಈಗಿನ ಪರಿಸ್ಥಿತಿಯನ್ನು ಯಾವ ಸರಕಾರ ಬಂದರೂ ಸುಧಾರಿಸಲಾರದು. ಸಾಧ್ಯಾಸಾಧ್ಯತೆಯ ಕುರಿತು ಯಾರಾದರೂ ಹೇಳುವದಾದರೆ ಅದು ಕೇವಲ ಅಪಪ್ರಚಾರದ ಕಲುಷವಾಗಿ.

ಸರಕಾರದೊಡನೆ

ಜನವರಿ ತಿಂಗಳ ಮೊದಲಲ್ಲಿ ಸರಕಾರದ ಕೂಡೆ ಆರು ಲಕ್ಷ ಟನ್ ಆಹಾರ ಧಾನ್ಯಗಳ ಸಂಗ್ರಹವಿತ್ತು. ನೀರಾವನ್ನು ಹಾಗೆಯೆ ಮುಂದುವರಿಸುತ್ತಿದ್ದರೆ ಅತಿ ಶೀಘ್ರದಲ್ಲಿ ಬಂಗಾಲವನ್ನು ಅಪ್ಪಿಕೊಳ್ಳುವ ಗಂಭೀರ ಸ್ಥಿತಿಯು ಬರಬಹುದಿತ್ತು. ನೀರಾದಲ್ಲಿ ಕಡಿತವನ್ನುಂಟು ಮಾಡಿದುದರಿಂದ ಫೆಬ್ರುವರಿ ಕೊನೆಗೆ ಎಂಟು ಲಕ್ಷದ ವರೆಗೆ ಸಂಗ್ರಹ ಕೂಡಿತು. ಮಾರ್ಚ್ ತಿಂಗಳಿಗೆ ಅದೇ ಉಳಿತಾಯ ಹನ್ನೆರಡು ಲಕ್ಷ ಟನ್ ಆಗಬಹುದು. ಅಷ್ಟಕ್ಕೆ ಪರದೇಶದಿಂದ ಸಾಕಷ್ಟು ಆಮದು ಮಾಡಿಕೊಳ್ಳುವ ಶೀಘ್ರ ಪ್ರಯತ್ನ ನಡೆಯುತ್ತಲಿದೆ.

ಹೊರದೇಶದಿಂದ

ಅಮೇರಿಕೆಯಿಂದ ಕೇಳಲಾದ ಇಪ್ಪತ್ತು ಲಕ್ಷ ಟನ್ ಆಹಾರ ಧಾನ್ಯಗಳನ್ನು ಅಮೇರಿಕದ ಕಾಂಗ್ರೆಸ್ಸು, ಸೆನೇಟೂ ಒಪ್ಪಿರುತ್ತದೆ. ಅತ್ಯವಸರದ ಈ ಬೇಡಿಕೆಯನ್ನು ಅಮೇರಿಕೆಯು ಶೀಘ್ರವಾಗಿ ಕಳುಹಿಸದೆ ತಡಮಾಡಿಕೊಂಡಿರುವದಕ್ಕೆ ಭಾರತ ದೇಶದ ವಿದೇಶಾಂಗ ನೀತಿಯೇ ಕಾರಣವಾಗಿರುತ್ತದೆ. ಕಮ್ಯೂನಿಸ್ಟ ಚೀನಾ ಆಕ್ರಮಕ ರಾಷ್ಟ್ರವೆಂದು ಸಾರುವ ವಿಶ್ವಸಂಸ್ಥೆಯ ಗೊತ್ತುವಳಿಯನ್ನು ಪ್ರತ್ಯಕ್ಷ ವಿರೋಧಿಸಿ ಕಮ್ಯೂನಿಸ್ಟ ಚೀನಾದ ಒಲವಿನಲ್ಲೇ ಭಾರತದ ನಿಲುಮೆಯಿರುವುದರಿಂದ ಅಮೇರಿಕಾ ಮೀನ ಮೇಷ ಎನ್ನುವಂತಾಯಿತು. ಆದರೂ ಅಧ್ಯಕ್ಷ ಟ್ರೂಮನ್ ಪರಿಸ್ಥಿತಿಯ ಲಾಭವನ್ನು ಪಡೆಯುವುದರಲ್ಲಿ ಮಹಾ ಚತುರರು. ಅಮೇರಿಕೆಯು ಪ್ರಯೋಗಶೀಲವೇನೆಂಬುದನ್ನು ವಿಳಂಬಾವಕಾಶದಲ್ಲಿ ತೋರಿಸಿಕೊಟ್ಟು, ಈಗ "ನಾನು ಭಾರತದ ಜನತೆಯ ಹಸಿವಿನ ಪ್ರಶ್ನೆಯನ್ನು ಅತ್ಯಂತ ಆಸ್ಥೆಯಿಂದ ಲಕ್ಷಿಸಿ ಅವರ ಬಗೆಗೆ ಕನಿಕರಪಡುವವನಿದ್ದೇನೆ. ನಮ್ಮ ರಾಜನೀತಿಯು ಧೋರಣೆಯೇನಿದ್ದರೂ ಅದನ್ನು ನೋಡುವ ಕಾಲವೂ, ವಿಷಯವೂ ಇದಲ್ಲ. ಸ್ವಾತಂತ್ರ್ಯನಂತರ ಹಲವಾರು ಸಮಸ್ಯೆಗಳನ್ನು ಎದುರಿಸುವ ದುರ್ಧರ ಪ್ರಸಂಗ ಅದಕ್ಕೆ ಬಂತು. ಇಂತಹ ಸಂದರ್ಭದಲ್ಲಿ ತಡವರಿಸುವುದು ಸರಿಯಲ್ಲ. ಅದನ್ನು ಶೀಘ್ರ ಕಳಿಸುವಂತೆ ಕಾಂಗ್ರೆಸಿಗೆ ಸಿಫಾರಸು ಮಾಡುತ್ತೇನೆ" ಎಂಬ ಅಧ್ಯಕ್ಷ ಟ್ರೂಮನರು ಭಾರತದ ಜನತೆಯಲ್ಲಿ ಆಕೆ ಮಾಡುವಂತೆ ಮಾಡಿರುತ್ತಾರೆ. ಭಾರತದ ಬೇಡಿಕೆ ಇಪ್ಪತ್ತು ಲಕ್ಷ ಟನ್. ಆದರೆ ಸದ್ಯ ಅಮೇರಿಕಾ ಕೊಡ ಮಾಡಿದ್ದು ಹತ್ತು ಲಕ್ಷ ಟನ್ ಮಾತ್ರ. ಅದೂ ಅಲ್ಲದೆ ಯುಕ್ತ ರಾಷ್ಟ್ರ ಸಂಘದ 'ಮಕ್ಕಳ ಸಂಘ'ವು 240000 ಡಾಲರಿನ ಆಹಾರವನ್ನು ಭಾರತ ದೇಶದ ಮಕ್ಕಳಿಗೆ ಕಳುಹಿಸಿಕೊಡುವ ನಿರ್ಣಯ ಮಾಡಿರುತ್ತದೆ.

ಚೀನಾದಿಂದಲೂ ಐವತ್ತು ಸಾವಿರ ಟನ್ ಆಹಾರ ಧಾನ್ಯಗಳು ಮಾರ್ಚ್ ತಿಂಗಳ ಮಧ್ಯದಲ್ಲಿ ಭಾರತಕ್ಕೆ ಬರಲಿವೆ. ಫೆಬ್ರುವರಿ ತಿಂಗಳ 10ಕ್ಕೆ ಚೈನಾದಿಂದ ಆಹಾರ ಧಾನ್ಯಗಳನ್ನು ತುಂಬಿಕೊಂಡು ಹೊರಟ ಹಡಗು ಫೆಬ್ರುವರಿ 28ಕ್ಕೆ ಮದ್ರಾಸಿನ ಬಂದರದಲ್ಲಿ 9000 ಟನ್ನಿನಷ್ಟು ಮದ್ರಾಸು ಪ್ರಾಂತದ ಹಂಚಿಕೆಗಾಗಿ ಇಳಿಸಲಿರುವದು. ಇತ್ತ ಪಾಕಿಸ್ತಾನವಲ್ಲೂ 350,000 ಟನ್ ಆಹಾರ ಸಂಗ್ರಹವಿರುವದರಿಂದ ಅದೂ ಕೊಡಲು ಮುಂದೆ ಬರಬಹುದಾಗಿ

THE VIJAYA BANK, LTD.,

Vijaya Cash Certificates

"Spend less and save more" shall be the Motto of every Indian Citizen.

Vijaya Cash Certificates are the safest and best media for a discriminating investor. They mature on the expiry of three years and carry interest at 4½%

Rules on application at any of our following Offices.

HEAD OFFICE: **Kadri Road, Mangalore**

Branches:- Udipi, Kaup, Coondapoor, Karkala, Brahmavar, Kasaragod, Byndoor, City-Mangalore, Puttur Bombay, Kanhangad & Mercara.

B. Manjaya Hegde,
Advocate & President, District Board S. Kanara.
CHAIRMAN.

ಜೀವವಿಮೆಗಾಗಿ

ವಿಚಾರಿಸಿರಿ

ನ್ಯೂ ಗಾರ್ಡಿಯನ್ ಒಫ್ ಇಂಡಿಯಾ
ಲೈಫ್ ಇನ್ಶೂರೆನ್ಸ್ ಕೋ. ಲಿಮಿಟೆಡ್.
(ಸ್ಥಾಪನೆ: 1934)

ಚೆಯರ್‌ಮೆನ್: ಶ್ರೀ. ಎಮ್. ಸಿಟಿ ಎಮ್. ಚಿದಂಬರಮ್ ಚೆಟ್ಟಿಯಾರ್

ಪ್ರಗತಿ ಪಥದಲ್ಲಿರುವ ಈ ವಿಮಾ ಸಂಸ್ಥೆಯ ಪೊಲಿಸಿ ಪಡೆಯುವುದೆಂದರೆ ಅದೊಂದು ಉತ್ತಮ ವಿನಿಯೋಗ. ಅಂತೆಯೇ ಅದರ ಏಜನ್ಸಿ ಸಂಪರ್ಕವನ್ನಿಟ್ಟುಕೊಳ್ಳುವುದೂ ಅಮೂಲ್ಯ ವ್ಯವಹಾರವಾಗಿದೆ.

ಮಂಗಳೂರು ಶಾಖೆ:
ಕೆ. ಎಸ್. ರಾವ್. ರೋಡು,
ಹಂಪನಕಟ್ಟೆ, ಮಂಗಳೂರು.

ಕೇಂದ್ರ ಕಾರ್ಯಾಲಯ:
"ಯುನೈಟೆಡ್ ಇಂಡಿಯಾ ಲೈಫ್ ಬಿಲ್ಡಿಂಗ್" ಪೋಸ್ಟು ಬಾಕ್ಸ್ ನಂಬ್ರ 142
ಮದ್ರಾಸು.

ದೆ. ಸುಮಾರು 150,000 ಟನ್ನು ಭಾರತಕ್ಕೆ ಕೊಡಬಹುದೆಂದು ಪಾಕಿಸ್ತಾನ ಆಹಾರಖಾತೆಯ ಉಪ ಕಾರ್ಯದರ್ಶಿಗಳು ಹೇಳಿರುತ್ತಾರೆ.

ಬಂದರದಲ್ಲಿ

ಆಹಾರದ ಬಿಕ್ಕಟ್ಟಿನ ಭೀತಿಯನ್ನು ಹುಟ್ಟಿಸುವ ಜನಕ್ಕೆ ಭಾರತದ ದೇಶ ದಿನಾ ಆಮದು ಮಾಡಿಕೊಳ್ಳುವ ವಿಚಾರ ತಿಳಿದಂತಿಲ್ಲ. ಸಂಕಟವನ್ನು ಟೀಕಿಸುವಾಗ ಈ ಸಂಖ್ಯೆಗಳನ್ನು ಹೇಳುತ್ತಲೇ ಇಲ್ಲ. ಈ ರಭಸದ ಆಯಾತದ ಕ್ರಮದಿಂದಲೂ, ಸಂಗ್ರಹದಿಂದಲೂ ನಾವು ಧೃತಿಗೆಡದೆ ಸಹನೆಯಿಂದ ಸರಕಾರದೊಡನೆ ವರ್ತಿಸುವುದು ಮುಖ್ಯವಾಗಿದೆ. 1950ರ ಡಿಸೆಂಬರ ತಿಂಗಳಲ್ಲಿ ನಲುವತ್ತ ನಾಲ್ಕು ಹಡಗುಗಳೂ, ಜನವರಿಯಲ್ಲಿ ಮೂವತ್ತೆಂಟು ಹಡಗುಗಳೂ, ಆಹಾರ ಧಾನ್ಯಗಳನ್ನು ತುಂಬಿಕೊಂಡು ಭಾರತಕ್ಕೆ ಬಂದಿವೆ. ಫೆಬ್ರುವರಿ ತಿಂಗಳಲ್ಲಿ ಅದಕ್ಕಿಂತಲೂ ಹೆಚ್ಚಿನ ಪರಿಮಿತಿಯಲ್ಲಿ ಬರಲಿವೆ. ಫೆಬ್ರುವರಿ ಹಾಗೂ ಮಾರ್ಚ್ ಈ ಎರಡು ತಿಂಗಳ ಅಂತರದಲ್ಲಿ 41-47 ಹಡಗುಗಳು ಆಹಾರಧಾನ್ಯಗಳನ್ನು ತುಂಬಿಕೊಂಡು ಬರಲಿವೆ. ಎಲ್ಲ ಹಡಗಗಳೂ ಹೆಚ್ಚು ಕಡಿಮೆ ಎಂಟು ಸಾವಿರ ಟನ್‌ಗಳಿಂದ ಒಂಬತ್ತು ಸಾವಿರ ಟನ್ನುಗಳ ವರೆಗಿನ ಆಹಾರವನ್ನು ತರುತ್ತವೆ. ಅಂದರೆ ಈ ಲೆಕ್ಕಾಚಾರದಲ್ಲಿ ಫೆಬ್ರುವರಿ ಮಾರ್ಚ್ ತಿಂಗಳಲ್ಲಿ ಕ್ರಮವಾಗಿ 370,000 ಮತ್ತು 319,000 ಟನ್ ಆಹಾರಧಾನ್ಯಗಳನ್ನು ಪಡೆದಂತಾಗುತ್ತದೆ.

ಪಾ. ಸದಸ್ಯರ ಅಜ್ಞಾನ

ದೇಶದಲ್ಲಿ ಅನ್ನ ಸಮಸ್ಯೆಯ ಕುರಿತು ತಿಳಿದೂ ತಿಳಿಯದೆಯೂ ಹಲವರು ಟೀಕಿಸುತ್ತಿದ್ದಾರೆ, ಪಾರ್ಲಿಮೆಂಟಿನ ಸದಸ್ಯರು ಅದಕ್ಕಿಂತಲೂ ಕಡಿಮೆ ತರಹದ ಮಾರ್ಗವನ್ನನುಸರಿಸುತ್ತಿದ್ದಾರೆ, ಜಗತ್ತಿಗೇ ಆದರ್ಶವಾದ ನೆಹರೂರವರ ವಿದೇಶಾಂಗ ನೀತಿಯನ್ನು ವಿರೋಧಿಸುವ ಮಹಾಕಾರ್ಯವೆಂದು ಪಾರ್ಲಿಮೆಂಟಿನ ನಲುವತ್ತಮೂರು ಸದಸ್ಯರು ವರ್ತಿಸಿದಂತಿದೆ. ಉಳಿದೆಲ್ಲ ರಾಷ್ಟ್ರಗಳಿಗಿಂತ ಭಾರತ ದೇಶದ ವಿದೇಶದ ಸಂಪರ್ಕ, ಸೌಹಾರ್ದವೂ, ವಿಶೇಷ ಬುದ್ಧಿ ಮತ್ತೆಯಿಂದ ಕೂಡಿದ್ದೂ ಆಗಿರುತ್ತದೆ. ನೆಹರೂರವರ ಮಾರ್ಗದರ್ಶನವನ್ನು ಜಗತ್ತಿನ ಮಹಾರಾಜಕಾರಣಿಗಳು ಶ್ಲಾಘಿಸುತ್ತಿರುವಾಗ— ಉಚ್ಚಾದರ್ಶಗಳನ್ನು ಮೆಚ್ಚುತ್ತಿರುವಾಗ ಈ ನಲುವತ್ತಮೂರು ಮಂದಿ ಸದಸ್ಯರ ಚಿತ್ತಕ್ಕೆ 'ಅವರಿಗಿಂತಲೂ ನಾವು ಬುದ್ಧಿವಂತರೆಂಬ ಅಜ್ಞಾನ ಕವಿದದ್ದಕ್ಕೆ ನಾಚಬೇಕಾಗಿದೆ. ಸರಕಾರದ ಯಾವುದೇ ಸದಸ್ಯನಿಗೆ ಯಾವ ಸಮಾಚಾರವನ್ನು ತಿಳಿಸದೆ, ಅಮೇರಿಕದ ಆಹಾರಧಾನ್ಯದ ಕೊಡುಗೆಯ ಬಗ್ಗೆ ಕೃತಜ್ಞತೆಯ ಸಂದೇಶವನ್ನು ಕಳಿಸುವ ದುಡುಕುತನವನ್ನು ಈ ನಲವತ್ತಮೂರು ಮಂದಿಯೂ ಮಾಡಿರುತ್ತಾರೆ. ಹೀಗೆ ವಿದೇಶಾಂಗ ರಾಜಕಾರಣದಲ್ಲಿ ಸದಸ್ಯರೇ ಕೈಹಾಕಿ ನಡೆಸುವುದಾದರೆ ಆ ಇಲಾಖೆಯ ಭಾರವನ್ನು ಹೊತ್ತವನ ಕರ್ತವ್ಯವಾದರೂ ಏನು? ಇಚ್ಛಾನುಸಾರವಾಗಿ ಹೀಗೆ ವರ್ತಿಸುವದರಿಂದ ಸ್ವಾತಂತ್ರ್ಯದ ದುರುಪಯೋಗ ಮಾಡಿದಂತಾಗಿಲ್ಲವೇ? ಅಮೇರಿಕೆಯು ಆಪತ್ತಿನಲ್ಲಿ ಭಾರತಸರಕಾರಕ್ಕೆ ಆಹಾರವನ್ನು ನೀಡಿದ್ದಕ್ಕೆ ತಾನು ಕೃತಜ್ಞತೆಯನ್ನು ಸಲ್ಲಿಸುವಷ್ಟರ ಮಟ್ಟಿನ ವ್ಯವಹಾರ ಜ್ಞಾನವಿಲ್ಲದ್ದಾಗಲಿಕ್ಕಿಲ್ಲ. ಬೇರೆಯವರೊಡನೆ ಸ್ನೇಹ ಸಂಪರ್ಕಗಳನ್ನು ಬೆಳೆಸುವಲ್ಲಿ ಭಾರತದ ರಾಜನೀತಿ ಆದರ್ಶವಾದುದು! ಸಾಮಾನ್ಯ ಜನರಿಗೆ ನೀತಿಯನ್ನು ಹೇಳುವ ಈ ಸದಸ್ಯರುಗಳು ತಮ್ಮ ವರ್ತನೆಗಳ ಕಡೆಗೆ ಗಮನ ಕೊಡದೆ ಹೋದುದು ನಿಜವಾಗಿಯೂ ಸೋಜಿಗದ ಸಂಗತಿ.

ಈ ಅಜ್ಞಾನ ಪ್ರದರ್ಶನದಿಂದ ಸರಕಾರದೊಳಗೆ ಶಿಸ್ತು ಸಂಘಟನೆಗಳು ಶಿಥಿಲವಾಗುತ್ತವೆಯೆಂದು ಜನ ಭಾವಿಸಿದರೆ ಆಶ್ಚರ್ಯವೇನಿಲ್ಲ. ಸರಕಾರಕ್ಕೆ ನಿಷ್ಠೆ ತೋರಿಸುವಲ್ಲಿ ಸದಸ್ಯರೆ ತಪ್ಪಿ ನಡೆದರೆ ಸಾಮಾನ್ಯ ಜನರ ಪಾಡೇನು?

ಅನುಚಿತವಾದ ಈ ಘೋಷಣೆಯನ್ನು ಕೈಗೊಂಡ ಪಾರ್ಲಿಮೆಂಟ ಸದಸ್ಯರ ಅಜ್ಞಾನಕ್ಕೆ ನಿಜಕ್ಕೂ ಮರುಗಬೇಕಾಗಿದೆ. ಇದರಲ್ಲಿ ಹುಡುಗಾಟಿಕೆ ಬುದ್ಧಿಯ ದುಡುಕು ಪ್ರದರ್ಶನಕ್ಕಿಂತ ಹೆಚ್ಚಿನದನ್ನು ನಾವೇನೂ ಕಾಣುವಂತಿಲ್ಲ. ದೇಶದ ಸ್ಥಿತಿ ಗಂಭೀರವಾಗಿರುವಾಗ ಜನತೆಯ ಪ್ರತಿನಿಧಿಗಳಾದ ಸದಸ್ಯರು ಹೀಗೆ ಹಾಸ್ಯಕರ ವಿಚಾರದಲ್ಲಿ ಸಮಯವನ್ನು ಹಾಳುಮಾಡಿ ಗೊಂದಲಮಯ ವಾತಾವರಣವನ್ನುಂಟು ಮಾಡುತ್ತಲಿದ್ದಾರೆ. ಒಳಾಡಳಿತದಲ್ಲಿ ಮಾತ್ರವಲ್ಲ ಪರರಾಷ್ಟ್ರದಲ್ಲಿಯೂ ಇದು ಗಂಡಾಂತರಕಾರಿಯಾಗಿರುತ್ತದೆ. ದೇಶದ ಹಿತಚಿಂತನೆಯಲ್ಲಿ ಕಾಲ ಕಳೆಯುವ ಬದಲು ಹೀಗೆ ಅಧಿಕ ಪ್ರಸಂಗಿತನ— ಕುಹಕ ರೀತಿಯ ಪ್ರಶ್ನೆ ಪರಿಹಾಸ್ಯಕರ ಪ್ರಕರಣಗಳನ್ನೇ ಮುಂದೆ ತರುವದರಲ್ಲೇ ತಮ್ಮ ಬುದ್ಧಿಯ ಪ್ರದರ್ಶನ ಮಾಡುವ ಸನ್ನಿವೇಶವನ್ನು ನಾವು ಆಗಾಗ ನೋಡುತ್ತೇವೆ. ಅಂತೆಯೇ ಅಮೇರಿಕೆ ಕಳಿಸಿರುವ ಸಂದೇಶವು ಮಕ್ಕಳಾಟಿಕೆಯದ್ದು ಸದಸ್ಯರ ಮನೋ ಮಟ್ಟವನ್ನು ಪ್ರದರ್ಶಿಸುವಂತಹದ್ದೂ ಆಗಿರುತ್ತದೆಂಬುವನ್ನು ಬೇರೆ ಹೇಳಬೇಕಾಗಿಲ್ಲ.

ಸ್ವಲ್ಪ ಬಂಡವಾಳದಲ್ಲಿ

ಒಂದು ಉಪಯುಕ್ತ ಹಾಗೂ ಲಾಭಕರ ಉದ್ಯೋಗ.

ಸೋಪ್ ಮಿಲ್, ಎಣ್ಣೆಯ ಮಿಲ್ ಅಥವಾ ಟಿನ್ ಯಾ ತಗಡಿನಿಂದ ಅನೇಕ ವಸ್ತುಗಳನ್ನು ಸುಲಭದಲ್ಲಿ ತಯಾರಿಸಿರಿ.

ವಿವರದ ಬಗ್ಗೆ ಬರೆಯಿರಿ:

The Vijay Engineering Co. Ltd.

Mazagaon, **Bombay 10.**

ಅವರು ಹೇಳಿದ್ದೇನು?

ಪತ್ರಿಕೋದ್ಯಮದ ದುರುಪಯೋಗ

“ನಮ್ಮ ಪತ್ರಿಕೆಗಳು ತಮ್ಮ ಸಾರ್ವಜನಿಕ ಕರ್ತವ್ಯವನ್ನು ಸನ್ಮಾರ್ಗದಿಂದ ನೆರವೇರಿಸಿದ ಬಗ್ಗೆ ನಾನು ನನ್ನ ಪ್ರಶಂಸೆಯನ್ನು ವ್ಯಕ್ತಪಡಿಸದಿರಲಾರೆ. ನಮ್ಮಲ್ಲಿ ಪತ್ರಿಕಾ ಸ್ವಾತಂತ್ರ್ಯವು ಸಂಪೂರ್ಣವಿದ್ದು ನೀತಿನಿಯಮದ ಕಾನೂನುಗಳನ್ನನುಸರಿಸಿ ಯಾವುದೇ ಪತ್ರಿಕೆಯು ಸರಕಾರವನ್ನು ಯಾವುದೇ ರೀತಿ ಟೀಕಿಸಲು ಸ್ವತಂತ್ರವಿದೆ. ನಮ್ಮಲ್ಲಿ ಸರಕಾರೀ ಪತ್ರಿಕೆಯಿಲ್ಲ. ಸರ್ವಸಾಮಾನ್ಯವಾಗಿ ಪತ್ರಿಕೆಗಳ ವರ್ತನೆಯ ಬಗ್ಗೆ ನಾನು ತೃಪ್ತಿಯನ್ನು ವ್ಯಕ್ತಪಡಿಸಿದರೂ ದೇಶದಲ್ಲಿಯ ಬೇರೆ ಬೇರೆ ಭಾಗಗಳಲ್ಲಿಯ ಹಲವು ಪತ್ರಿಕೆಗಳು ಯಾವ ಮಟ್ಟಕ್ಕೂ ನಿಲುಕದಷ್ಟು ಕೀಳು ರೀತಿಯಲ್ಲಿ ವರ್ತಿಸುತ್ತಿವೆಯೆಂದು ನಾನು ಹೇಳಬೇಕಾಗಿದೆ. ಈ ಪತ್ರಿಕೆಗಳ ಮಟ್ಟವು ಕೆಳಗಿಳಿದಿದ್ದನ್ನು ನೋಡಿ ನನಗೆ ತೀರ ವಿಷಾದವೆನಿಸಿದೆ.

ಸರಕಾರ ಮತ್ತು ಮಂತ್ರಿಗಳ ನಡುವೆ ತಿಕ್ಕಾಟ ಉದ್ಭವಿಸಿವೆಯೆಂದೂ ನನ್ನ ಮಂತ್ರಿ ಮಂಡಳದ ಹಲವು ಸದಸ್ಯರು ನನ್ನೊಡನೆ ಸಹಕರಿಸುತ್ತಿಲ್ಲವೆಂದೂ ಈ ಪತ್ರಿಕೆಗಳು ಸುಳ್ಳು ಸುದ್ದಿಯನ್ನು ಪ್ರಕಟಿಸಿ ಬರೆಯುತ್ತವೆ. ಈ ಹೀನ ಮತ್ತು ಸುಳ್ಳು ಪ್ರಚಾರವನ್ನು ಬಯಲಿಗೆಳೆಯುವುದು ನನ್ನ ಕರ್ತವ್ಯವಾಗಿದೆ. ಈ ಪ್ರಕಟವಾದ ಸುದ್ದಿಗಳು ಪೂರ್ತಿ ಸುಳ್ಳಿರುವವೆಂದೂ ನನ್ನ ಮಂತ್ರಿಮಂಡಳ ಮತ್ತು ಸರಕಾರಗಳಲ್ಲಿರುವಷ್ಟು ಸಹಕಾರವು ಯಾವುದೇ ರಾಷ್ಟ್ರದ ಯಾವುದೇ ಸರಕಾರಗಳಲ್ಲಿ ಕಂಡುಬರುತ್ತಿಲ್ಲವೆಂದೂ ನಾನು ಸ್ಪಷ್ಟಪಡಿಸಬಯಸುತ್ತೇನೆ.

ನಮ್ಮಲ್ಲಿಯ ಕೆಲ ಪತ್ರಿಕೆಗಳು ಕೀಳು ಮಟ್ಟಕ್ಕಿಳಿದದ್ದು ಹೊಣೆಗಾರ ಮತ್ತು ಗೌರವಯುತ ಪತ್ರಿಕೋದ್ಯಮಕ್ಕೆ ಕುಂದು ತರುವಂತಹದಾಗಿದೆ. ಇದರಿಂದ ದೇಶದಲ್ಲಿಯ ಸಾರ್ವಜನಿಕ ಜೀವನಕ್ಕೆ ಹಾನಿಯಾಗುವದರಿಂದ ಹಿಂದುಸ್ಥಾನದಲ್ಲಿಯ ಪತ್ರಿಕಾ ಪ್ರಪಂಚದ ಧುರೀಣರು ಈ ವಿಚಾರವನ್ನು ಆಳವಾಗಿ ವಿಚಾರಿಸಬೇಕು.” ಪಾರ್ಲಿಮೆಂಟಿನಲ್ಲಿ ಭಾಷಣಮಾಡುತ್ತಾ ಮಹಾಮಂತ್ರಿ ನೆಹರೂರವರು ಹೇಳಿದರು.

ಕೀಳುಮಟ್ಟದ ಹೊಲಸು ಭಾಷೆಗಳಿಂದ ವೈಯಕ್ತಿಕ ಟೀಕೆಗಳನ್ನು ಮಾಡಿ ಕೀರ್ತಿಗಳಿಸುವ ಪತ್ರಿಕೆಗಳಿಗೆ ನೆಹರೂರವರ ಮಾತು ತುಂಬ ಸಿಡಿತವನ್ನುಂಟುಮಾಡಬಹುದು. ಸಾರ್ವಜನಿಕರಲ್ಲಿ ತಪ್ಪು ಗ್ರಹಿಕೆಗಳನ್ನು ಹುಟ್ಟಿಸಿ ತಮ್ಮ ಸ್ವಾರ್ಥವನ್ನು ಸಾಧಿಸಿಕೊಳ್ಳುವ ಸ್ವೇಚ್ಛಾಚಾರವೃತ್ತಿ ನಮ್ಮಲ್ಲಿ ಬೆಳೆಯುತ್ತಲಿದೆ. ಪತ್ರಿಕಾ ಸಂಪಾದಕನಲ್ಲಿರಬೇಕಾದ ಲೋಕ ವ್ಯವಹಾರ ಜ್ಞಾನ—ರಾಜಕೀಯ ವಿಚಾರಗಳ ಯಥಾರ್ಥದ ತಿಳುವು—ಸ್ವಲ್ಪವೂ ಇಲ್ಲದೆ ಟೀಕೆ ಮಾಡುವ ಪ್ರವೃತ್ತಿ ಬೆಳೆಯುತ್ತಲಿದೆ. ಅಂತಹ ಹೊಣೆಗೇಡಿ ಪತ್ರಿಕಾಕರ್ತರಿಗೆ ಬಾತ್ಮಿಯನ್ನು ಕೊಡುವವರೂ ಅದೇ ಜಾತಿಯ ಅಸಂಬದ್ಧ ಪ್ರಲಾಪಿಗಳೇ! ಸುಳ್ಳು ಸುದ್ದಿಯನ್ನು ಕೊಟ್ಟು ಸಾರ್ವಜನಿಕ ಜೀವನದಲ್ಲಿ ಗೊಂದಲವನ್ನೆಬ್ಬಿಸುವುದೂ ಕೆಲಸಗಾರರೂ ಮಾಲಿಕರೊಳಗೆ ವೈಮನಸ್ಸನ್ನು ಹುಟ್ಟಿಸಿ ಕತ್ತಿಕಟ್ಟುವಂತೆ ಮಾಡುವುದೂ, ಜಾತೀಯ ಸ್ವಾರ್ಥ ಮನೋವೃತ್ತಿಯಿಂದ ಸತ್ಯದ ವಿಪರ್ಯಾಸವನ್ನು ಪ್ರಕಟಿಸುವುದೂ ಈ ಅಲ್ಪಮತಿಯ ಪತ್ರಿಕೋದ್ಯೋಗಿಗಳ ಅನುದಿನದ ಕೆಲಸವಾಗಿರುತ್ತದೆ. ಬಾತ್ಮೀದಾರನಾದವನು ನೂರಾರು ಮೈಲಾಚೆಯಿಂದ ಸುದ್ದಿ ಕಳಿಸುವಂತಿದ್ದರೆ ಅವನು ಕೂಡಾ ಸ್ಥಳೀಯರನ್ನು ಹೆದರಿಸಿಯೋ, ಟೀಕಿಸಿಯೋ—ಅವಮಾನಿಸಿಯೊ ಸುದ್ದಿ ಕಳಿಸಿ ತನ್ನ ಸ್ವಾರ್ಥವನ್ನು ಸಾಧಿಸಿಕೊಳ್ಳುತ್ತಾನೆ ನೆಹರೂ ಹೇಳಿದಂತೆ ಎಲ್ಲ ಜನತೆಗೂ ತಿಳಿಯುತ್ತಲಿದೆ. ಕೇವಲ ಒಬ್ಬ ಅಪಕ್ವ ಮನೋವೃತ್ತಿಯ ಸಂಪಾದಕ— ಇನ್ನೊಬ್ಬ ಅರೆಹುಚ್ಚ ಬಾತ್ಮೀದಾರನೊಂದಿಗೆ ಇಲ್ಲವೆ ಅದೇ ಕೀಳ್ಮಟ್ಟದ ಬಾಲಿಶವಾದ ಅಶ್ಲೀಲ ಬರಹಗಾರನೊಂದಿಗೆ ಲೋಕದ ಜನಸ್ನೇಹ ಅಳೆಯಲು ಹೋದವನಾದರೆ ಅದಕ್ಕಿಂತ ಮಿಗಿಲಾದ ದೇಶಕಂಟಕ ಕಾರ್ಯ ಬೇರೇನಿದೆ? ತನಗಾಗದವರ ಮಾನಹಾನಿ ಮಾಡುವ ಭರದಲ್ಲಿ ಇದು ಸಾರ್ವಜನಿಕ ವಿಷಯವೋ— ಬೇರೆಯವರಿಗೆ ಇದರಿಂದ ಉಪಕಾರವಿದೆಯೋ— ಎಂಬುದನ್ನು ಲಕ್ಷಿಸುವುದಿಲ್ಲ. ವೈಯಕ್ತಿಕ ಜೀವನ ಬೇರೆ, ಪತ್ರಿಕಾಜೀವನ ಬೇರೆ. ಖಾಸಗೀ ಜೀವನದಲ್ಲಾಗುವ ವಿಕಾರವನ್ನು ತೋರಿಸಲು ಪತ್ರಿಕೆಗಳಿರುವುದಲ್ಲ. ಈ ಬಗೆಯ ಬೇಜವಾಬ್ದಾರಿ ಪತ್ರಿಕೋದ್ಯಮ ಬೆಳೆಯುತ್ತಿರುವುದು ದುರ್ದೈವ, ಇದರಿಂದ ಸನ್ಮಾರ್ಗದಲ್ಲಿ ನಡೆಯುವ ಪತ್ರಿಕಾಕರ್ತರಿಗೂ ಧಕ್ಕೆಯುಂಟಾಗುತ್ತದೆ. ಅಸಹ್ಯ ಪ್ರಚೋದನೆಯಿಂದ ಜನತೆಯಲ್ಲಿ ಜಿಗುಪ್ಸೆ, ಅನಾದರಗಳು ಹುಟ್ಟುವುದು ಸ್ವಾಭಾವಿಕ! ದೊಡ್ಡವರು ಸುಲಿಗೆಗಾರರು ದರೋಡೆಕಾರರು ಎಂದು ಟೀಕಿಸುವ ಈ ಪಾತಕದಲ್ಲಿ ಬಡವರಿಂದ ಪತ್ರಿಕೆಯ ನೂರೆಂಟರ ಮೋಸ ಅನ್ಯಾಯವಾಗಿ ಹಣ ಸುಲಿಯುವುದಕ್ಕೆ ಈ ರೀತಿಯ 'ಸ್ಟಂಟ್' ಮಾಡುತ್ತಲಿದ್ದಾರೆ. ಅತ್ತ ದೊಡ್ಡವರ ಎಂಜಲಿಗೆ ಕೈ ಚಾಚುವವರೂ ಇವರೇ. ಇಂದಿನ ಎಲ್ಲವೂ ಗೊತ್ತುಗುರಿಯಿಲ್ಲದ ಅರಾಜಕತೆಯ ಪತ್ರಿಕೋದ್ಯಮ! ಆಳವಾದ ಅಭ್ಯಾಸಬಲದಿಂದ ಜನಕ್ಕೆ ಸರಿಯಾದ ಮಾರ್ಗದರ್ಶನ ಮಾಡಬಲ್ಲ ಹಲವು ಪತ್ರಿಕೆಗಳು ನಮ್ಮಲ್ಲಿರುವುದಕ್ಕಾಗಿ ಹೆಮ್ಮೆಪಡಬೇಕಾಗಿದೆ. ಜನತೆಯಲ್ಲಿ ಕಲುಷಿತ ವಾತಾವರಣವನ್ನು ನಿರ್ಮಾಣ ಮಾಡಿ, ಅಭಿರುಚಿಯನ್ನು ಕೆಡಿಸುವ ಪತ್ರಿಕೋದ್ಯಮದಿಂದ ದೇಶದ ಕಲ್ಯಾಣವಾಗದು.

Nambiar's

ARYA VAIDYA SALA

UDIPI

Ideal House for Ayurvedic Treatment.

T. N. Kelu Nambiar,
Vaidya.

ವೀತನಾಮೀ ಜನನಾಯಕ

ಹೋ-ಚಿ-ಮಿನ

ದೂರದ ಇಂಡೋ ಚೀನಾದ ಕುರಿತು ನಮಗೆ ತಿಳಿದಿರುವುದು ಬಹಳ ಅಲ್ಪ. ಅಲ್ಲಿಯ ಬಿದಿರಿನ ಗುಡಿಸಲುಗಳು, ಧಾನ್ಯದ ಹಸುರು ಹೊಲಗಳು, ಬುದ್ಧದೇವನ ವಿಶಾಲ ಹಾಗೂ ಸುಂದರ ಪ್ರತಿಮೆಗಳು, ಕಲೆ ಮತ್ತು ಸೌಂದರ್ಯ ಸಂಪನ್ನವಾಗಿದ್ದರೂ ಬಡತನವನ್ನೇ ಉಣ್ಣುವ ಜನತೆ-ಇವುಗಳ ಪರಿಚಯ ನಮಗಿದೆಯೆ? ಹಾಗೆಯೆ ಇಂಡೋ ಚೀನಾದ ಜನಶಕ್ತಿಯನ್ನು ಕೆಣಕಿ, ತನ್ನ ಸ್ವಾತಂತ್ರ್ಯ ಮತ್ತು ಅಧಿಕಾರಗಳಿಗಾಗಿ ಜನತೆಯನ್ನು ವಿದೇಶೀಯರ ಎದುರಿಗೆ ಎತ್ತಿಕಟ್ಟಿದ ಮಹಾ ಪುರುಷನ ಹೆಸರನ್ನಾದರೂ ನಾವು ಕೇಳಿರುವುದು ಸುಳ್ಳು! ಹೋ-ಚಿ-ಮಿನ ಎಂಬುದು ನಮಗೆ ನೂತನವಾದ ಹೆಸರೇ ಅಲ್ಲವೆ?

ಜೀವನೋತ್ಸರ್ಗದ ಕುರುಹು

ಶತಮಾನಗಳಿಂದ ಫ್ರಾನ್ಸಿನ ದಾಸ್ಯ ಸಂಕೋಲೆಯಿಂದ ಬಿಗಿಯಲ್ಪಟ್ಟ ಇಂಡೋ ಚೀನಾದ ಜನತೆಗೆ ಕ್ರಾಂತಿಗಾಗಿ ಅಂತಃಸ್ಫೂರ್ತಿಯನ್ನೂ, ಆತ್ಮ ವಿಶ್ವಾಸವನ್ನೂ ಗಳಿಸಿಕೊಟ್ಟವನು ಮಹಾಕವಿ ಫನ್-ಬೋಇ-ಚಾವು. ಅವನ ಕ್ರಾಂತಿ ಗೀತೆಗಳು ಜನತೆಯ ನರನಾಡಿಗಳಲ್ಲಿ ಉತ್ಸಾಹದುಂಬಿಸಿದ್ದುದನ್ನು ಕಂಡು ಸರಕಾರ ಅವನನ್ನು ಗಡೀಪಾರು ಮಾಡಿತು. ಈ ಕವಿ ಜಪಾನಿಗೆ ತೆರಳಿ, ಅಲ್ಲಿಂದಲೇ ತನ್ನ ವೀರ ಕವಿತೆಗಳನ್ನು ಇಂಡೋ ಚೀನಾದ ಜನತೆಗೆ ಹಂಚಿದ-ಡಬಲ್ ರೊಟ್ಟಿಗಳ ನಡುವೆ ಗೀತ ಬರೆದ ಕಾಗದಗಳನ್ನಿಟ್ಟು, ಜಪಾನಿನಿಂದ ಹಡಗು ಮೂಲಕ ತನ್ನ ಮಾತೃಭೂಮಿಗೆ ರವಾನಿಸುತ್ತಿದ್ದು ಯಾರಿಗೂ ಸುಳಿವು ಹತ್ತದಂತೆ! ಎಂಥ ಉಜ್ವಲದೇಶ ಪ್ರೇಮ!

ಚಾವುನ ಗೀತಗಳ ಪ್ರಭಾವ ಬಾಲಕ ಹೋ-ಚಿ-ಮಿನನ ಮೇಲೆ ಅಚ್ಚೊತ್ತಿಯೇ ನಿಂತವು. ಬಾಲ್ಯದಿಂದಲೇ ಹೋ-ಚಿ-ಮಿನನು ಶಾಂತಿ ಪ್ರಿಯನೂ ಅಧ್ಯಯನ ಶೀಲನೂ, ಭಾವುಕನೂ ಆಗಿದ್ದನು. ಹಾಗೆಯೇ ದೇಶದಲ್ಲಿ ಅವನಿಗೆ ತುಂಬ ಶ್ರದ್ಧೆ ಇತ್ತು. ಮಹಾ ಕವಿ ಚಾವು ಇವನನ್ನು ಜಪಾನಿಗೆ ಒಯ್ಯಲು ಬಯಸುತ್ತಿದ್ದ. ಆದರೆ ಸ್ವತಃ ಹೋ-ಚಿ-ಮಿನನಿಗೆ ಯೂರೋಪು ಯಾತ್ರೆ ಮಾಡುವ ಬಯಕೆ ಇತ್ತು. ಆದುದರಿಂದ ಹಡಗಿನ ಅಡಿಗೆ ಮನೆಯಲ್ಲಿ ಪಾತ್ರೆ ತೊಳೆಯುವ, ಎಂಜಲು ಬಿಸುಡುವ, ಮೇಜು ಒರಸುವ ಎಲ್ಲ ಕೆಲಸಗಳನ್ನು ಮಾಡುತ್ತಾ, ತನ್ನ ೧೫ನೇ ವಯಸ್ಸಿನಲ್ಲಿ ಪಶ್ಚಿಮಾಭಿಮುಖವಾಗಿ ಹೊರಟು ನಿಂತ.

ಹಡಗಿನಲ್ಲಿ ಅವನಿಗೆ ವಿರಾಮವೆಂಬುದೇ ಅಲ್ಪವಾಗಿತ್ತು. ಆದರೆ ಅವನಲ್ಲಿ ಜ್ಞಾನಾರ್ಜನೆಯ ಅಭಿಲಾಷೆ ಉದ್ದೀಪ್ತವಾಗಿತ್ತು; ಅದರ ಕುರಿತಾದ ಆಸ್ಥೆ ತುಂಬಿ ಉಕ್ಕುತ್ತಿತ್ತು. ಎಂತಲೇ ಹಡಗಿನಲ್ಲಿದ್ದ ಇಬ್ಬರು ಹೊಸ ಸ್ನೇಹಿತರಿಗೆ ತನ್ನ ಮಾತೃಭಾಷೆಯನ್ನು ಕಲಿಸುತ್ತಾ, ಅವರಿಂದ ಫ್ರೆಂಚ ಭಾಷೆ ಕಲಿತುಕೊಳ್ಳಲು ಅವನು ಎಡೆ ಮಾಡಿಕೊಂಡನು. ಮುಂಜಾನೆ ಆರರಿಂದ ರಾತ್ರಿ ಹತ್ತರ ವರೆಗೆ ದುಡಿದರೂ ಅವನಿಗೆ ಆಲಸ್ಯವಾಗಲೀ ಬೇಸರವಾಗಲೀ ಹತ್ತಲಿಲ್ಲ. ಇದು ಜೀವನೋತ್ಸರ್ಗದ ಚಿಹ್ನೆಯೇ ಸರಿ.

ಮನದ ಮರುಕ

ಈ ವರೆಗೆ ಫ್ರಾನ್ಸಿನ ಜನತೆ ಎಂದರೆ, ಎತ್ತರದ ಮನೆಗಳಲ್ಲಿ ವಾಸಿಸುವವರು, ಸುಪ್ಪತ್ತಿಗೆಯಲ್ಲೇ ಪವಡಿಸುವವರು, ಪಕ್ವಾನ್ನವನ್ನೇ ಉಂಬವರು ಎಂಬ ಚಿತ್ರ ಹೋ-ಚಿ-ಮಿನನ ಕಣ್ಣೆದುರು ಇದ್ದಿತ್ತೋ ಏನೋ. ಆದರೆ ಮಾರ್ಸೇಲಿಯ ಬಂದರಲ್ಲಿ ಅವನ ದೃಷ್ಟಿ ಸಂಮಾರ್ಜನಗೊಂಡಿತು- ಸ್ವಪ್ನವೂ ಆಯಿತು.. ಬಂದರಿನಲ್ಲಿ ಹಡಗು ನಿಂತೊಡನೆಯೇ ಗಿರಾಕಿಗಳ ಬೇಟೆಗೆಂದು ಮುತ್ತಿದ ಕೊಳಕು ಉಡುಗೆಯ ಮಲಿನ ವೇಶ್ಯೆಯರನ್ನು ಕಂಡು ಕಂಡು ಹೋ-ಚಿ-ಮಿನನ ಹೃದಯ ಉದ್ವೇಗಗೊಂಡಿತು; ಮನಸ್ಸು ಕಾತರವಾಯಿತು. ಅವನು ಒಮ್ಮೆಗೇ ಅತ್ತುಬಿಟ್ಟನು.

ಯುದ್ಧ ಕಾಲದಲ್ಲಿ ಅವನು ಲಂಡನಿಗೆ ತೆರಳಿ, ಅಲ್ಲಿಯ ಸುಪ್ರಸಿದ್ಧ "ಕಾರ್ಲ್ಟನ್" ಹೊಟೆಲಿನಲ್ಲಿ ಅಡಿಗೆಮನೆ ಸೇರಿದನು, ಅಲ್ಲಿಯ ವೈಭವದ ಮುಂದೆ ಹೋ-ಚಿ-ಮಿನ ತನ್ನ ನಾಡಿನ ದುರ್ಗತಿಯನ್ನು ತುಲನೆ ಮಾಡುತ್ತಿದ್ದ. ಒಂದು ದಿನ ಏನೋ ಸಮಾರಂಭದ ಬಳಿಕ, ಎಂಜಲು ಕೂಡಿಸುವುದು ನಡೆದಿತ್ತು. ಹೋ-ಚಿ-ಮಿನ ಎಂಜಲನ್ನು ಬಿಸಾಡದೆ ಒಟ್ಟುಮಾಡುತ್ತಿದ್ದುದನ್ನು ಕಂಡು ಹೊಟೆಲಿನವನಿಗೆ ಆಶ್ಚರ್ಯವಾಯಿತು. ಆಗ ಹೋ-ಚಿ-ಮಿನ "ಇದನ್ನು ನಮ್ಮೂರ ಬಡ ಭಿಕಾರಿಗಳಿಗಾದರೂ ಹಂಚುತ್ತೇನೆ. ವ್ಯರ್ಥ ಹಾಳಾಗುವುದಲ್ಲವೆ?" ಎಂದುಸುರಿದನಂತೆ!

ಯುದ್ಧದ ಬಳಿಕ ಅವನು ತಿರುಗಿ ಫ್ರಾನ್ಸಿಗೆ ಬಂದ. ಆ ಸಮಯದಲ್ಲಿ ಅವನಿಗೆ ರಾಜಕೀಯದ ಜ್ಞಾನವೇ ಇರಲಿಲ್ಲ- ಎಂದಾದರೊಮ್ಮೆ ಸಮಾಜವಾದಿಗಳ ಸಭೆಗಳಿಗೆ ಅವನು ಹೋಗುತ್ತಿದ್ದ. ಮತ್ತು ತನ್ನ ಮಾತೃಭೂಮಿಯ ಹೀನದೆಶೆಯ ಕಡೆಗೆ ಜನರ ಮನಸ್ಸನ್ನು ಆಕರ್ಷಿಸುತ್ತಿದ್ದ. ಅವರ ಸಹಾನುಭೂತಿಗಾಗಿ ಪ್ರಯತ್ನಿಸುತ್ತಿದ್ದ. ಹೀಗೇ ಸಂದರ್ಭ ಒಂದಾಗ ಅವನಿಗೆ ಫ್ರಾನ್ಸಿನ ಸಮಾಜವಾದೀ ಮುಖಂಡರ ಸಂಪರ್ಕವಾಗಿ, ಪರಿಚಯ ಬೆಳೆಯಿತು. ಫ್ರೆಂಚ ಭಾಷೆಯ "ಲೇ ಪಾಪುಲೇಯರ್" ಎಂಬ ಪತ್ರಿಕೆ ಇವನಿಂದ ಇಂಡೋಚೀನಾದ ಸಮಸ್ಯೆಗಳ ಮೇಲೆ ಲೇಖನಗಳನ್ನು ಯಾಚಿಸಿತು. ಆದರೆ ದುರ್ದೈವವೆಂಬಂತೆ ಹೋ-ಚಿ-ಮಿನನಿಗೆ ಐದಾರು ಪಂಕ್ತಿಗಳಿಗಿಂತ ಹೆಚ್ಚು ಫ್ರೆಂಚ ಭಾಷೆಯಲ್ಲಿ ಬರೆಯುವುದು ಸಾಧ್ಯವಾಗುತ್ತಿರಲಿಲ್ಲ. ಈ ಕುಂಟು ಪಂಕ್ತಿಗಳನ್ನೇ ಪರಿಷ್ಕರಿಸಿ ಆ ಪತ್ರಿಕೆಯವರು ಪ್ರಕಟಿಸುತ್ತಿದ್ದರು.

ಸಾಹಿತಿಯಾಗಿ

ಈ ಸಂದರ್ಭದಲ್ಲಿ ಅವನೊಂದು ವ್ಯಂಗ್ಯ ನಾಟಕ "ಬಿದಿರಿನ ಡಬ್ಬಿ" ಬರೆದ, ಫ್ರೆಂಚ ಸರಕಾರದ ಕೈಗೊಂಬೆಯಂತಿದ್ದ ರಾಜನೊಬ್ಬನನ್ನು ಕುರಿತ ನಾಟಕವಿದು. ಎಂತಲೇ ಸರಕಾರ ಇದನ್ನು ಪ್ರತಿಬಂಧಿಸಿತು. ಆದರೆ ಪ್ರತಿಬಂಧವನ್ನು ಮುರಿದು "ಕ್ಲಬ್ ದು ಫೋಬುರ್ಗ" ದವರು ನಾಟಕವನ್ನು ಆಡಿಯೇ ಆಡಿದರು. ಹೋ-ಚಿ-ಮಿನನಿಗೆ ಎಲ್ಲೆಡೆಯಿಂದಲೂ ಪ್ರಶಂಸೆ ಬಂತು; ಕೀರ್ತಿ ಬಂತು. ಅವನು ಮುಂದೆ ತನ್ನದೇ ಆದ "ಪಾರಿಯಾ" ಎಂಬ ಸಾಪ್ತಾಹಿಕ ಪತ್ರವನ್ನು ಸಂಪಾದಿಸಿದನು. ಮುಂದೆ ಕೆಲವರ್ಷಗಳಲ್ಲಿ ಅವನು ತನ್ನ ಪತ್ರದ ಕಾರ್ಯಾಲಯಕ್ಕೆ ಬೀಗ ಹಾಕಿ, ಹೇಳದೆ ಕೇಳದೆ ಫ್ರಾನ್ಸಿನಿಂದ ಪಲಾಯನ ಮಾಡಿದನು-

ಒಂದು ಸಣ್ಣ ರಶ್ಯನ್ ಹಡಗಿನಲ್ಲಿ ಹತ್ತಿ ಲೆನಿನನ ದರ್ಶನಾಕಾಂಕ್ಷಿಯಾಗಿ ಅವನು ತೆರಳುತ್ತಿದ್ದಾಗ, ಎರಡು ದಿನಗಳ ಹಿಂದೆಯೇ ಲೆನಿನನ ಮರಣ ಘಟಿಸಿದ ಸಂಗತಿ ತಿಳಿಯಿತು- ಹೋ-ಚಿ-ಮಿನನು ಕ್ರೆಮ್ಲಿನದಲ್ಲಿ ಒಂದು ಶವದ ಪೆಟ್ಟಿಗೆಯಲ್ಲಿ ಮಲಗಿದ್ದ ಲೆನಿನನ್ನು ಕಂಡನು! ಅಷ್ಟೇ, ಅವನು ಇಡೀ ರಶಿಯಾವನ್ನು ಸುತ್ತುತ್ತಾ, ಅಲ್ಲಿಯ ಸಾಮಾಜಿಕ ಜನಜೀವನದ ಅಧ್ಯಯನದಲ್ಲಿ ನಿರತನಾದನು. ಫ್ರಾನ್ಸಿನಲ್ಲಿ ಅವನಿಗೆ ಎರಡು ಮಕ್ಕಳ ಸ್ನೇಹವಾಗಿತ್ತು. ಅವರ ಸ್ನೇಹದ ದ್ಯೋತಕವಾಗಿ ಅವನು ಮಕ್ಕಳ ಶಿಕ್ಷಣ, ಮನರಂಜನೆ, ಪಾಲನೆ ಪೋಷಣೆ ಆಟ ವಿನೋದಗಳ ಕುರಿತು ಹೆಚ್ಚಿನ ಆಸಕ್ತಿಯಿಂದ ಅಭ್ಯಾಸ ಮಾಡುತ್ತಿದ್ದ.

ಜನತೆಯ ನಡುವೆ

ಇಂಡೋ ಚೀನಾ ಅವನನ್ನು ತನ್ನೆಡೆಗೆ ಕರೆಯುತ್ತಿತ್ತು. ಅವನು ಚೀನಾದ ಮಾರ್ಗವಾಗಿ ಸ್ವದೇಶಕ್ಕೆ ಹಿಂತಿರುಗಲು ನಿಶ್ಚಯಿಸಿದ. ಆದರೆ ಕೆಂಟನ್ನಿಗೆ ಬರುವಾಗ ಕೈಯಲ್ಲೊಂದು ಬಿಡಿಕಾಸೂ ಉಳಿಯಲಿಲ್ಲ. ಪೇಪರು, ಸಿಗರೇಟುಗಳನ್ನು ಜನರಿಗೆ ಮಾರಿ, ಅದರಿಂದ ಉಪಜೀವಿಸಬೇಕಾಯಿತು. ಈ ಸಮಯದಲ್ಲಿ ಸನ್‌ಯಾತ್‌ಸೇನನ ಸಂಪರ್ಕ ಅವನಿಗಾಯಿತು. ಅವನ ರಾಜನೀತಿಯ ಸಲಹೆಗಾರನಾದ ಬೋರೋಡಿನನ ಸೆಕ್ರೆಟರಿಯಾಗಿ ಹೋ-ಚಿ-ಮಿನ ಕೆಲಸಕ್ಕೆ ಸೇರಿದ. ಆದರೆ ಅದೂ

ಭಾರತದ ಬಹುದೊಡ್ಡ ನಗರವಾದ ಬೊಂಬಾಯಿಯಲ್ಲಿ
ಗ್ರಾಹಕರ ತೃಪ್ತಿಯನ್ನೇ ಧ್ಯೇಯವಾಗಿಟ್ಟುಕೊಂಡಿರುವ
ಕನ್ನಡಿಗರಿಂದಲೇ ನಡೆಸಲ್ಪಡುತ್ತಿರುವ ಉನ್ನತವಾದ ರಾಷ್ಟ್ರೀಯ ಸಂಸ್ಥೆ—

ದಿ ನೇಶನಲ್ ಜನರಲ್ ಸ್ಟೋರ್ಸ್

(ಡಿಸ್ಪೆನ್ಸಿಂಗ್ ಕೆಮಿಸ್ಟ್ಸ್ ಮತ್ತು ಡ್ರಗ್ಗಿಸ್ಟ್ಸ್)
8 ಎ, ಮೆಹರ್ವಾನ್ ಬಿಲ್ಡಿಂಗ್ಸ್, Opp: His Master's Voice
ಸರ್ ಫಿರೋಜ್ ಶಾ ಮೆಹತಾ ರೋಡು, ಫೋರ್ಟ, ಬೊಂಬಾಯಿ.

ಇಲ್ಲಿ ದೇಶ-ವಿದೇಶಗಳಿಂದ ಎಲ್ಲಾ ತರದ ಔಷಧಗಳನ್ನೂ ಇತರ ಜನೋಪಯೋಗಿ ಸಾಮಾನುಗಳನ್ನೂ [illegible] ಆಕರ್ಷಕ ಬೆಲೆಗೆ ವಿತರಣೆ ಮಾಡಲಾಗುತ್ತದೆ.
ಆಸ್ಪತ್ರೆಯ ಉಪಯೋಗಕ್ಕೆ ಅಗತ್ಯವಾದ ಸಾಹಿತ್ಯಗಳೂ ಮತ್ತು ಟಾನಿಕ್ಕುಗಳೂ ವಿಟಮಿನ್ ಆಹಾರ ವಸ್ತುಗಳೂ ಮಾಲಾಮುಗಳೂ, ಸುವಾಸನಾ ದ್ರವ್ಯಗಳೂ ರಖಂ ಆಗಿಯೂ ಚಿಲ್ಲರೆಯಾಗಿಯೂ ಸುಲಭ ದರದಲ್ಲಿ ದೊರೆಯುತ್ತವೆ.
ವಿ. ಪಿ.. ಪಾರ್ಸ್ಲುಗಳ ಆರ್ಡರುಗಳನ್ನು ಸ್ವೀಕರಿಸಲಾಗುವುದು.
ಪಟ್ಟಿಸ ಮಾಹಿತಿಗಳಿಗೆ ಬರೆಯಿರಿ.

ಎಂ. ಮೆಂಡೋಸ, ಮಾಲಕ.
M. Mendosa, Proprietor.

THE NATIONAL GENERAL STORES
Importers Exporters, Dispensing Chemists & Druggists,
General Merchants & Commission Agents,
8A Mherwan Buildings, Opp: His Master's Voice,
Sir Phirozsha Mehta Road, **Fort, Bombay.**

ಪ್ರಧಾನ ಕಾರ್ಯಾಲಯ: ಉಡುಪಿ.   ಸ್ಥಾಪನೆ: ೧೯೩೫

ದಿ ಕೆನರಾ ಮ್ಯೂಚುವಲ್ ಎಶ್ಯೂರೆನ್ಸ್
ಕಂಪೆನಿ, ಲಿಮಿಟೆಡ್,
ಇದುವೇ
ಪಾಲಿಸಿದಾರರ ನಂಬಿಕೆ ಹೆಚ್ಚಿಸುವ ಹೆಸರು
ಅಲ್ಲದೆ
ಸ್ಥಾಪಿತವಾದಂದಿನಿಂದಲೂ ಲಾಭ (ಬೋನಸ್)
ಹಂಚಿದ ಕಂಪೆನಿ.

The Canara Mutual Assurance Co, Ltd.
H. O. **UDIPI** (SOUTH INDIA)   **ESTD: 1935.**

ಸ್ವಲ್ಪ ಕಾಲ ಮಾತ್ರ. ೧೯೨೫ರಲ್ಲಿ ಸನ್ ಯತ್ ಸೇನನು ಮೃತಗೊಳ್ಳಲು, ಬೋರೋದಿನನಿಗೆ ಗಲ್ಲಿನ ಶಿಕ್ಷೆಯಾಯಿತು. ಆಗ ಹೋ-ಚಿ-ಮಿನ ತಲೆತಪ್ಪಿಸಿಕೊಂಡು, ಮರೆಯಾಗಬೇಕಾಯಿತು.

ಆದರೆ ಗುಪ್ತಚಾರರ ಧಾಳಿಯಿಂದ ಅವನು ತಲೆ ಉಳಿಸಿಕೊಳ್ಳುವುದು ದುಸ್ಸಾಧ್ಯವಾಗಿತ್ತು. ವೀತನಾಮದ ಒಂದು ನದಿಯ ತೀರದ ಹಳ್ಳಿಯ ಕೃಷಕ ಜನರ ನಡುವೆ ಬೆರೆತು, ಅವರಲ್ಲಿ ಜಾಗ್ರತಿಯನ್ನುಂಟು ಮಾಡಲು ಮೊದಲು ಮಾಡಿದ. ಅವರಿಗೆ ಓದು ಬರಹ ಕಲಿಸುವುದು, ಸದ್ಯದ ಸ್ಥಿತಿಯ ಕೂಲಂಕುಷ ಪರಿಚಯ ಮಾಡಿಸುವುದು, ವೀರ ಗೀತೆಗಳನ್ನು ಹಾಡಿ ಮನರಂಜಿಸುವುದು ಅವನ ಕಾರ್ಯಕ್ರಮವಾಗಿತ್ತು. ಹಾಗೆಯೆ ತನ್ನ ಮೆಚ್ಚಿನ ಲೇಖಕರು—ಶೇಕ್ಸ್‌ಪಿಯರ್, ಡಿಕನ್ಸ್, ಲೂಹ್‌ಸುನ್, ಅನತೋಲ್ ಫ್ರಾನ್ಸ್, ಟಾಲ್‌ಸ್ಟಾಯ್ ಅವರ ಪುಸ್ತಕಗಳೂ ಅವನಿಗೆ ಪ್ರಿಯವಾಗಿದ್ದುವು ಹೀಗೆ ವೀತನಾಮಿ ಜನತೆಯಲ್ಲಿ ಒಂದು ಹೊಸ ಹುರುಪು ಮಾಡುತಿದ್ದಾಗ, ಈ ನಾಗರಿಕ-ಭ್ರಾಂತಿಯಾಗಿ ಅಲೆದಾಡುತ್ತಿದ್ದ. ಜನತೆಯ ಮುಕ್ತಿಗಾಗಿ ಹಾತೊರೆಯುತ್ತಿದ್ದ. ದೇಶದ ಸ್ವಾತಂತ್ರ್ಯದ ಕನಸು ಕಾಣುತ್ತಿದ್ದ, ಜನ ಸೌಭಾಗ್ಯದ ದರ್ಶನ ಪಡೆಯುತಿದ್ದ. ಫ್ರಾನ್ಸಿನ ತನ್ನ ಬಾಲಕ ಗೆಳೆಯರು ತನ್ನ ಜೀವನಾಡಿಯಲ್ಲಿ ಸಮಾವೇಶಗೊಂಡಂತೆ ಅನುಭವ ಆತನಿಗಾಗಾಗ ಆಗುತ್ತಿತ್ತು.

ಕ್ರಾಂತಿ ವೀರ

ಹೀಗೆ ಹಲಸಂದರ್ಭಗಳಲ್ಲಿ ಬೇಕು-ಬೇಡಗಳ ನಡುವೆ ವಿವಶನಾಗುವ ಪ್ರಸಂಗ ಬಂದರೂ ಅವನು ಬೆದರಲಿಲ್ಲ. ಮುಂದೊಂದು ದಿನ ಕರಾಳವಾಗಿ ಎದುರು ಬಂತು. ವೀತನಾಮಿ ನಾಯಕ ನ್ಯೂವನ್ ಥಾಯ್ ಮತ್ತವನ ಸಂಗಾತಿಗಳನ್ನು ಗಲ್ಲಿನ ಕಂಬಕ್ಕೆ ತೂಗಾಡಿಸಿದರು. ಹೋ-ಚಿ-ಮಿನನ ಎದೆಕಲ್ಲಣಗೊಂಡಿತು; ಮನಸ್ಸು ಉನ್ಮತ್ತವಾಯಿತು— ನೇರಾಗಿ ಕ್ರಾಂತಿರಂಗಕ್ಕೆ ಅವನು ಧುಮುಕಿಯೇ ಬಿಟ್ಟನು!

ಎರಡನೆ ಮಹಾ ಯುದ್ಧವೂ ಮುಗಿಯಿತು—ಎತ್ತೆತ್ತ ನೋಡುವಾಗ ಸ್ವತಂತ್ರ ವೀತನಾಮಿ ಧ್ವಜವು ಗಗನದಲ್ಲಿ ಹಾರಾಡುತ್ತಿದೆ! ಅದರ ಎದುರು ವಿದೇಶಿಯರ ಕುತಂತ್ರ, ಕುಹಕಗಳು ಮಣ್ಣುಗೂಡುತ್ತಿವೆ. ಇಂದಿಗೂ ಇದೇ ಹಾಡು—ಫ್ರಾನ್ಸಿನ ದಬ್ಬಾಳಿಕೆಯಾಗಲೀ, ಅಮೆರಿಕದ ಸಹಾಯಕ ಅತ್ಯಾಚಾರವಾಗಲೀ ವೀತನಾಮಿ ಜನತೆಯನ್ನು ನಾಶಗೊಳಿಸುವ ಶಕ್ತಿ ಇಟ್ಟುಕೊಂಡಿಲ್ಲ

ದುಃಖ, ಸಂಘರ್ಷ, ಕಟುತ್ವ ಮತ್ತು ವಿರೋಧಗಳ ಈ ದೀರ್ಘ ಕಾಲಾವಧಿಯಲ್ಲಿ ಹೋ-ಚಿ-ಮಿನನ ಬಾಳ್ವೆಯು ಸಂದಿದೆ. ಅವನು ತನ್ನ ಬದುಕಿನಲ್ಲಿ ಅನುಪಮವಾದ ಶಿಕ್ಷಣವನ್ನು ಪಡೆದಿದ್ದಾನೆ. ಸ್ವಾತಂತ್ರ್ಯದ ಆಶೆ ತಿರಸ್ಕಾರಕ್ಕೆ ಅರ್ಹವಲ್ಲ; ವಿಶ್ವಪ್ರೇಮ ಮಾನವ್ಯದ ಹೆಗ್ಗುರುತು; ಮತ್ತು ಜಗತ್ತಿನ ವಿಚಾರವಂತರೆಲ್ಲರೂ ಒಂದೇ ಸೂತ್ರದಲ್ಲಿ ಸಮಾವೇಶವಾಗುತ್ತಾರೆ ಎಂದವನು ಪದೇ ಪದೇ ಹೇಳುವುದುಂಟು. ಅವನು ಪುಸ್ತಕ ಓದಿ ಪೂರ್ಣ ಪಂಡಿತನಾಗಲಿಲ್ಲ. ಜೀವನದಲ್ಲಿ ಅಪೂರ್ವ ಅನುಭವ ಪಡೆದು ಸ್ವಂತ ಜ್ಞಾನವನ್ನು ಬೆಳೆಸಿಕೊಂಡನು. ಎಂತಲೇ, ಅವನಲ್ಲಿ ವಿಚಾರ ಸಂಕೀರ್ಣತೆಯಾಗಲೀ, ಮಾನಸಿಕ ಅಪ್ರಬುದ್ಧತೆಯಾಗಲೀ ಕಂಡು ಬರುವುದಿಲ್ಲ. ಯಾರೋ ಒಬ್ಬರು ಚೀನಾದಲ್ಲಿ "ನೀನು ಕಮ್ಯೂನಿಸ್ಟನೋ, ಸನ್‌ಯಾತ್‌ಸೇನಿಸ್ಟನೋ?" ಎಂದು ಹುಚ್ಚು ಪ್ರಶ್ನೆ ಮಾಡಿದರಂತೆ ಅದಕ್ಕವನ ಉತ್ತರ—

ಆದರ್ಶ ದರ್ಶನ

"ಕಾಂಫ್ಯೂಶಿಯಸ್‌ನಿಂದ ನಾನು ಕಲಿತುದು ವ್ಯಕ್ತಿಯ ನೈತಿಕ ಮಟ್ಟ ಕಾಪಾಡಬೇಕೆಂಬ ಮಾತನ್ನು; ಯೇಸುವಿನಿಂದ ಉದಾರ ಬುದ್ಧಿ; ಮಾರ್ಕ್ಸ್ ವಾದದಿಂದ ಉದಾರತೆಯ ಸೂತ್ರ; ಮತ್ತು ಸನ್‌ಯಾತ್‌ಸೇನನ ಸಿದ್ಧಾಂತಗಳಿಂದ ಉದಾರತೆ ಮತ್ತು ಸ್ವೀಕೃತಿಯ ರಾಷ್ಟ್ರೀಯ ಮುಖ ಇಷ್ಟು ಮಂದಿ ವಿಚಾರವಂತರಲ್ಲಿ ಒಂದೇ ಭಾವನೆ ಕಂಡು ಬರುವುದಿಲ್ಲವೆ? ಅವರೆಲ್ಲರೂ ಇಂದು ಇರುತಿದ್ದರೆ ಒಟ್ಟಿಗೆ ದುಡಿಯುತಿದ್ದರು ಎಂದೇ ನನ್ನ ಭಾವನೆ. ಆಗಲೇ ಜೀವನಕ್ಕೊಂದು ಸಂಪೂರ್ಣತ್ವ ವಸ್ತು ಬರುತಿತ್ತು."

ಕ್ರಾಂತಿಯ ಸರ್ವೋಚ್ಚ ಪ್ರತೀಕ ಎಂದರೆ ಇದೇ ಅಲ್ಲವೆ? ಬದುಕೇ ಸೇವೆಯಲ್ಲಿ ಮುಳುಗಿರುವಾಗ, ಮನಸ್ಸು ಶುದ್ಧ ವಿಚಾರಗಳಲ್ಲಿ ತಲ್ಲೀನವಾದಾಗ, ಹೃದಯ ಬಡಜನತೆಯ ಕಡೆ ಸಹಾನುಭೂತಿಯಿಂದ ತುಂಬಿದಾಗ ಕ್ರಾಂತಿಯ ಮೊದಲ ಪಾಠ ನಾವು ಕಲಿಯುತ್ತೇವೆ. ಹೋ-ಚಿ-ಮಿನ ಕೇವಲ ಜನನಾಯಕನಲ್ಲ—ಅವನಲ್ಲಿ ಕವಿಯ ಕೋಮಲ ಮನೋಭಾವ, ನಾಟಕಕಾರನ ವ್ಯಂಗ್ಯವೂ ಇದೆ. ಎಂತಲೇ ಅವನ ಬದುಕು ಕ್ರಾಂತಿಯ ಕೊಡಲಿ ಮಸೆಯಲು ಸನ್ನದ್ಧವಾಯಿತು.

(ಆಯ್ಕೆ)

—ಕಾರ್ತಿಕೇಯ

ವಿವಿಧ ಪಾತ್ರೆಗಳು

ಯಾವತ್ತೂ ವಿಧದ ಬೆಳ್ಳಿ, ತಾಮ್ರ, ಹಿತ್ತಾಳೆ, ಕಂಚು ಮೊದಲಾದುವುಗಳ ವಿವಿಧ ಪಾತ್ರೆಗಳೂ ಸಾಮಾನುಗಳೂ ರಖಂ ಚಿಲ್ಲರೆಯಾಗಿಯೂ ದೊರೆಯುತ್ತವೆ.

ಕಲ್ಯಾಣಿ ಪ್ರಾಸಾಚಾರ್ಯ,
ರಥಬೀದಿ, ಉಡುಪಿ

ಮೂಲ್ಕಿ ಬೇಂಕ್,

ಲಿಮಿಟೆಡ್, ಮೂಲ್ಕಿ.

1921ರಲ್ಲಿ ಸ್ಥಾಪಿತವಾಗಿ 29 ವರುಷಗಳಿಂದ ಊರ ಜನರ ಹಿತಕ್ಕಾಗಿ ಡಿಪೋಸಿಟ್ ಹಣಕ್ಕೆ ನ್ಯಾಯವಾದ ಬಡ್ಡಿಯಿಂದಲೂ, ಸಾಲದ ಹಣಕ್ಕೆ ಅತೀ ಕಡಿಮೆ ದರದ ಬಡ್ಡಿಯಿಂದಲೂ ಜನ ಹಿತಸಾಧ್ಯನ್ನು ಮಾಡುತ್ತಿರುವುದು

The Moolky Bank Ltd.,
Moolky, S. K

"ಬೇರೆ ಶಾಸ್ತ್ರಗಳನ್ನೋದಿದರೇನು? ಗೀತೆಯನ್ನು ಚೆನ್ನಾಗಿ ಓದಬೇಕು"—(ವರಾಹ ಪುರಾಣ)

ಗೀತೆಯ ಕೈಗನ್ನಡಿ

(ಭಗವದ್ಗೀತೆಯ ಮೂಲ ಶ್ಲೋಕ ಮತ್ತು ಕನ್ನಡ ಅನುವಾದ)

● ಅನುವಾದಕರು—ದಿ। ಹೊಸಕೆರೆ ಚಿದಂಬರಯ್ಯನವರು ●

ಈ ಗ್ರಂಥದಲ್ಲಿ ಗೀತೆಯ ಮೂಲವೆಲ್ಲ ಇರುವುದಲ್ಲದೆ ಮೂಲದಲ್ಲಿ ಸಹಜವಾಗಿ ಕಾಣಬರುವ ಅರ್ಥವೂ ಮಾತುಗಾರಿಕೆಯು ಮಾತುಗಳ ರೂಪದಲ್ಲೇದ ಭಟ್ಟಿಯಾಗಿ ಎದ್ದು ಕಾಣುವುದು.

400ಕ್ಕೂ ಮಿಕ್ಕ ಪುಟಗಳು! ಬೆಲೆ 0—12—0.

ಒಂದು ರೂಪಾಯಿಯನ್ನು ಕಳುಹಿಸಿದರೆ ಒಂದು ಪ್ರತಿಯನ್ನು ಬುಕ್‌ಪೋಸ್ಟಿನಿಂದ ಕಳಿಸಲಾಗುವುದು.

ಪ್ರತಿಗಳು ಸಿಗುವ ಮುಖ್ಯ ಸ್ಥಳ:—

ನವಯುಗ ಪ್ರೆಸ್, ಉಡುಪಿ ದ. ಕನ್ನಡ

ಪ್ರಸಿದ್ಧ ಪುಸ್ತಕ ವ್ಯಾಪಾರಿಗಳಲ್ಲೆಲ್ಲ ದೊರೆಯುತ್ತದೆ.

ಸುಲಭ ದರದಲ್ಲಿ
ಅಚ್ಚುಕಟ್ಟಾದ
ಮುದ್ರಣಕ್ಕೆ
ನವಯುಗ ಪ್ರೆಸ್,
ಉಡುಪಿ.

Approved from by the Govt. of Mysor Certificated by the Agent of the Govt of Cylone & Indian.

ಟೈಪು ರೀ ಕ್ಯಾಸ್ಟಿಂಗ್ ಛಾರ್ಜನ್ನು ಅರ್ಧಕ್ಕಿಂತ ಹೆಚ್ಚಾಗಿ ಉಳಿಸಿಕೊಳ್ಳಿ

ಆಧುನಿಕ ಯಂತ್ರ ಸಾಧನಗಳಿಂದ ಸುಸಜ್ಜಿತವಾದ ಮೈಸೂರು ಟೈಪು ಫೌಂಡರಿಯಲ್ಲಿ ಪ್ರಿಂಟಿಂಗ್ ಟೈಪುಗಳನ್ನು (ಕನ್ನಡ) ರೀಕ್ಯಾಸ್ಟ್ ಮಾಡಿಸುವುದರಿಂದ ವಿಪರೀತ ಉಳಿತಾಯವಾಗುತ್ತದೆ.

ಸಾವಿರ ಪೌಂಡು ಮತ್ತು ಹೆಚ್ಚಿಗೆ	ಐನೂರು ಪೌಂಡು ಮತ್ತು ಹೆಚ್ಚಿಗೆ
ಪೌಂಡಿಗೆ **0—10—0**	ಪೌಂಡಿಗೆ **0—12—0**

ಸೇಲ್ಸ್ ಟ್ಯಾಕ್ಸ್, ಪ್ಯಾಕಿಂಗ್ ಮತ್ತು ಫಾರ್ವರ್ಡಿಂಗ್ ಛಾರ್ಜ ಮುಫತ್ತು.

ಇಂದೇ ವಿವರಗಳಿಗೆ ಬರೆಯಿರಿ: ಬಿ. ಡಿ. ಬಸಪ್ಪ, ಪಾರ್ಟನರ್

ಮೈಸೂರು ಟೈಪು ಫೌಂಡರಿ,
ಬೆಂಗಳೂರು-೨

ಮಾರಾಟಕ್ಕೆ
ಸದಾ ಸಿದ್ಧವಾಗಿವೆ.

ಎರತರಿಂದ ಐದು ಕುದುರೆ ಶಕ್ತಿಯುಳ್ಳ ನೀರಿನ ಪಂಪುಗಳು, ತರಹೆವಾರು ಹೊಂದ ತೆಗೆಯುವ ಸಾಗ್ವಳ್ಳಿ ಭೂಮಿಗೆ ನೀರು ಹಾಯಿಸುವ, ಕೇಂದ್ರದಿಂದ ದೂರ ಕ್ಷೇತ್ರಕ್ಕೆ ನೀರು ಚಿಮುಕಿಸುವ ಮತ್ತು Visconsin ಎಂಜಿನಿಗಳು ನಮ್ಮಲ್ಲಿ ಮಾರಾಟಕ್ಕೆ ಸದಾ ಸಿದ್ಧವಿವೆ.

ಹೆಚ್ಚಿನ ಮಾಹಿತಿಗೆ ಈ ಕೆಳಗಣ ವಿಳಾಸಕ್ಕೆ ಬರೆಯಿರಿ.

Enquire:- **Auncudur Trading Compay,**
Fathma Manzil, Colaba Road. **BOMBAY 5.**

ಚಂದಾ ವಿವರ
ವರ್ಷಕ್ಕೆ ರೂ. 5-12—0
6 ತಿಂಗಳಿಗೆ ರೂ. 3—0—0

ಗುರುವಾರ, ಉಡುಪಿ, ೨೨-೨-೫೧

ವಯಸ್ಕರ ಶಿಕ್ಷಣ ಸಪ್ತಾಹ

ವಯಸ್ಕರ ಶಿಕ್ಷಣ ಸಮಿತಿಯ ವಿವಿಧ ಕಾರ್ಯಕ್ರಮಗಳು ಈಗ್ಗೆ ಒಂದು ವಾರದಿಂದ ನಡೆಯುತ್ತಲಿವೆ. ನಿರಕ್ಷರತೆಯನ್ನು ಹೋಗಲಾಡಿಸುವ ಮತ್ತು ವಯಸ್ಕರನ್ನು ವಿದ್ಯಾವಂತರನ್ನಾಗಿ ಮಾಡುವ ಈ ಕಾರ್ಯವು ಬಹುಸಂಖ್ಯಾಕ ಅವಿದ್ಯಾವಂತರುಳ್ಳ ನಮ್ಮ ದೇಶಕ್ಕೆ ನಿಜವಾಗಿಯೂ ಅತ್ಯಾವಶ್ಯಕವಾಗಿದೆ. ಆದರಲ್ಲೂ ಬರುವ ಮಹಾಚುನಾವಣೆಯ ಕಾಲಕ್ಕೆ ಇದರ ಪರಿಣಾಮ ಮತ್ತು ಆವಶ್ಯಕತೆಗಳು ನಮಗೆ ಮನವರಿಕೆಯಾಗದಿರಲಾರದು. ನಿರಕ್ಷರತೆಯನ್ನು ಹೋಗಲಾಡಿಸುವ ಈ ಪ್ರಚಾರ ಕಾರ್ಯದಲ್ಲಿಂದು ವಯಸ್ಕರ ಶಿಕ್ಷಣ ಸಮಿತಿಯು ಸಾಧಿಸಿದ ಪ್ರಗತಿಯನ್ನು ನಾವು ಅಭಿನಂದಿಸದಿರಲಾರೆವು. ಇಂತಹ ಕಾರ್ಯಗಳಲ್ಲಿ ಸರಕಾರಕ್ಕಿಂತ ಹೆಚ್ಚು ಹೇಳಿ ಕೇಳುವವರೂ ಕೇಳುವವರೂ ಜವಾಬ್ದಾರರಾಗಿರುತ್ತಾರೆ. ಕಲಿಸುವವನಲ್ಲಿ ಹೇಳಿಕೊಡುವ ಬುದ್ಧಿ ಚಾತುರ್ಯಗಳಿದ್ದು— ಕೇಳುವವನಲ್ಲಿ ಶ್ರದ್ಧೆ, ತಿಳಿದುಕೊಳ್ಳಬೇಕೆಂಬ ತೀವ್ರ ಕಾಂಕ್ಷೆಯಿದ್ದರೇನೇ ಫಲಕಾರಿಯಾದೀತು. ಬಲಾತ್ಕಾರದ ಇಲ್ಲವೆ ಅರೆ ಮನಸ್ಸಿನ ಕಾರ್ಯಪ್ರವೃತ್ತಿಯಿಂದ ಏನೂ ಸಾಧಿಸಿದಂತಾಗುವುದಿಲ್ಲ. ಮುಖ್ಯವಾಗಿ ನಮ್ಮಲ್ಲಿ ಬಡತನ ದಾರಿದ್ರ್ಯಗಳು ಬಡವನನ್ನೂ ಬಲ್ಲದವನನ್ನೂ ಕುಗ್ಗಿಸುತ್ತಿವೆ. ಇದರ ಮುಂದೆ ಯಾವ ಆದರ್ಶಗಳೂ ತಲೆಯೆತ್ತಿ ನಿಲ್ಲಲಾರವು. ಇಂತಹ ಸಂದರ್ಭಗಳಲ್ಲಿ ಹೇಳಿಕೊಡುವವನಿಗೆ ನ್ಯಾಯವಾದ ಆರ್ಥಿಕ ರೀತಿಯ ಪ್ರೋತ್ಸಾಹವನ್ನು ಕೊಡದೆ ಗತ್ಯಂತರವಿಲ್ಲ. ಹಾಗೆ ಪ್ರಚಾರ ಮಾಡುವ ಪ್ರತಿಯೊಬ್ಬನೂ ಹಲವು ರೀತಿಯ ವಿಷಯಗಳ ಜ್ಞಾನವನ್ನು ಪಡೆದವನಾಗಿರಬೇಕು. ಧಾರ್ಮಿಕ, ರಾಜಕೀಯ ವಿಚಾರಗಳನ್ನರಿತವನಿದ್ದು ಅವಿದ್ಯಾವಂತರಲ್ಲಿ, ಸಂಕುಚಿತತೆಯಿಂದ ನಮ್ಮ ದೇಶವನ್ನು ಹೇಗೆ ಬಲಯುತವನ್ನಾಗಿ ಮಾಡಬಹುದೆಂಬುದನ್ನು ತಿಳಿಸುವ ಪ್ರತಿಭಾಸಂಗನ್ನನಾಗಿರಬೇಕು. ಎಲ್ಲಾ ವಿಚಾರಗಳಲ್ಲಿಯೂ ತಕ್ಕಮಟ್ಟಿನ ಜ್ಞಾನವಿರಬೇಕು. ತನ್ನಲ್ಲಿರುವ ವಿದ್ಯಾಸಂಪತ್ತಿನಿಂದ—ಪ್ರತಿಭೆಯಿಂದ ವಯಸ್ಕರ ಒಲವನ್ನು ಗಳಿಸುವ ಯೋಗ್ಯತೆ ಉಳ್ಳವನಿಂದ ಮಾತ್ರ ಇದು ಸಾಧ್ಯವೆಂಬುದನ್ನು ನಾವು ಮರೆಯಬಾರದು.

ನಮ್ಮ ಪ್ರಾಂತದಲ್ಲೀಗ ಸುಮಾರು 750 ವಯಸ್ಕರ ಶಿಕ್ಷಣ ಸಮಿತಿಗಳಿದ್ದು ಮುಂದಿನ ಎರಡು ವರ್ಷಗಳೊಳಗಾಗಿ 1680 ಸಮಿತಿಯನ್ನೇರ್ಪಡಿಸಲಾಗುವುದೆಂದು ತಿಳಿದು ಬರುತ್ತದೆ. ವಯಸ್ಕರ ಶಿಕ್ಷಣದ ತತ್ತ್ವಗಳನ್ನು ಸಾರುವಂತಹ ಸಭೆಗಳು ಪದವೀಧರರ ತರಬೇತಿ ನಡೆಯುತ್ತಲಿವೆ. ಚಿತ್ರಪ್ರದರ್ಶನಗಳೂ ನಡೆಯುತ್ತಲಿವೆ. ಆದರೆ ಇನ್ನೆಲ್ಲ ಮುಂದೆ ಕೆಲಸ ಮಾಡಬಲ್ಲವುಗಳು. ಸದ್ಯ ಅದರ ಆವಶ್ಯಕತೆಯ ಕುರಿತು ಸಾರ್ವಜನಿಕರೂ, ವಿದ್ಯಾವಂತರೂ, ವಿಶೇಷವಾಗಿ ಉತ್ಸಾಹ ಯುವಕರೂ ಪ್ರೋತ್ಸಾಹವನ್ನು ಅವಶ್ಯವಾಗಿ ನೀಡಬೇಕಾಗಿದೆ. ರಾಷ್ಟ್ರೋನ್ನತಿಯ ಮುಖ್ಯ ಕಾರ್ಯಗಳಲ್ಲಿ ನಿರಕ್ಷರತೆಯನ್ನು ಹೋಗಲಾಡಿಸುವುದೂ ಒಂದಾಗಿರುತ್ತದೆ.

ಆವಶ್ಯಕತೆಯ ಕುರಿತಾಗಿ ಹೇಳುವಾಗ ವಯಸ್ಕರ ಶಿಕ್ಷಣದಲ್ಲಿಯ ಕೆಲವು ಕೊರತೆಗಳನ್ನು ಹೇಳುವುದು ಅನಿವಾರ್ಯ. ಯಾವುದೇ ವಿಷಯದ ಮೂಲೋದ್ದೇಶದ ಸರಿಯಾದ ಜ್ಞಾನವನ್ನು ಮಾಡಿಕೊಳ್ಳದೆ 'ಗೋವಿಂದನು ಗೋವಿಂದಾ' ಎನ್ನುವುದರಲ್ಲಿ ಅರ್ಥವಿಲ್ಲ. ವಯಸ್ಕರ ಶಿಕ್ಷಣಕ್ಕೆ ಸಂಬಂಧಿಸಿದ ಈ ಎಂಟುದಿನದ ಹಲವು ಸಮಾರಂಭಗಳನ್ನು ಲಕ್ಷಿಸಿದರೆ ಅಲ್ಲಿನ ಚಟುವಟಿಕೆಗಳು ಕೇವಲ ಪ್ರದರ್ಶನವೆನ್ನುವಂತೆ ಭಾಸವಾಗುತ್ತಲಿವೆ. ಹೇಳುವವರೂ ಕೇಳುವವರೂ ವಿದ್ಯಾವಂತರೇ ಆಗಿದ್ದು ಅವಿದ್ಯಾವಂತರ ಸಂಖ್ಯೆ ಬಹಳ ಕಡಿಮೆ. ಚಟುವಟಿಕೆಯಲ್ಲೂ ಭಾಷಣವೊಂದನ್ನು ಬಿಟ್ಟರೆ ಉಳಿದದ್ದೆಲ್ಲ ಆ ತತ್ತ್ವಕ್ಕೆ ಸಂಬಂಧಿಸದ ಮನರಂಜನೆಗಳೇ. ಈ ಬಗೆಯ ಆಚರಣೆಯಿಂದ ನಾವೇನೂ ಪ್ರಗತಿಯನ್ನು ಸಾಧಿಸಿದಂತಾಗುವುದಿಲ್ಲ. ಅದಕ್ಕೆ ಸಂಬಂಧಿಸಿದ ಇಲ್ಲವೇ ಅದನ್ನು ಮೂಲೋದ್ದೇಶವನ್ನಾಗಿಟ್ಟುಕೊಂಡ ಕಾರ್ಯಕ್ರಮಗಳನ್ನು ಮಾಡಿ ಅದಷ್ಟು ಮಂದಿ ಅವಿದ್ಯಾವಂತರ ದೃಷ್ಟಿಯನ್ನು ಆ ಕಡೆಗೆ ಹರಿಯುವಂತೆ ಮಾಡಬೇಕು. ಎಲ್ಲ ವಿಷಯಗಳಲ್ಲೂ ಯಥಾರ್ಥ ಜ್ಞಾನವನ್ನು ತೋರಪಡಿಸುವ ಕಲಾನೈಪುಣ್ಯತೆ ಇರಬೇಕು.

ಇಂತಹ ಸಂದರ್ಭದಲ್ಲಿ ಮೈಸೂರು ವಯಸ್ಕರ ಶಿಕ್ಷಣ ಸಮಿತಿಯವರ ಕಾರ್ಯದಕ್ಷತೆಯನ್ನು ನಾವು ನೆನೆದುಕೊಳ್ಳುವುದು ಅವಶ್ಯವಾಗಿದೆ. ಅಲ್ಲಿನ ವಯಸ್ಕರ ಸಮಿತಿಯು ಹಲವು ರೀತಿಯ ಪ್ರಚಾರ ಪ್ರಕಟಣೆ-ಚಟುವಟಿಕೆ ಕಾರ್ಯಕ್ರಮಗಳಿಂದ ತುಂಬ ಪ್ರಗತಿಯನ್ನು ಸಾಧಿಸಿದೆ. ಡಿ. ವಿ. ಜಿ., ವಿ. ಸೀ. ಮುಂತಾದವರಿಂದ ಚಿಕ್ಕ ಚಿಕ್ಕ ಪುಸ್ತಕಗಳನ್ನು ಬರೆಯಿಸಿ ಸಾಹಿತ್ಯದಲ್ಲಿ ವಿಶೇಷ ಆಸಕ್ತಿಯನ್ನು ಹುಟ್ಟಿಸುವಂತೆ ಮಾಡಿರುತ್ತದೆ. ಆ ವಿಭಾಗದಲ್ಲಿ ಒಳ್ಳೆಯ ಪ್ರಭಾವೀ ವ್ಯಕ್ತಿಗಳನ್ನೇ ಸರಕಾರ ಆರಿಸಿಕೊಂಡಿರುತ್ತದೆ. ವಯಸ್ಕರ ಶಿಕ್ಷಣದವರ ಪ್ರಚಾರ ಮಾಲೆಯ ಕಿರಿಯ ಪುಸ್ತಕಗಳು ಉಳಿದ ಸಂಸ್ಥೆಗಳಿಗೆ ಆದರ್ಶವಾಗಿರುತ್ತವೆ. ನಮಗೂ ಅದು ಮಾದರಿಯಾಗದೇ?

ವಿದ್ಯಾವಂತರಾದವರೂ, ಪದವೀಧರರೂ, ಕಾಲೇಜು ವಿದ್ಯಾರ್ಥಿಗಳೂ ಈ ಕಾರ್ಯದಲ್ಲಿ ಮುಂದೆಬರಬೇಕಾಗಿದೆ. ಹಳ್ಳಿ ಹಳ್ಳಿಗಳಲ್ಲಿಯೂ ಪಟ್ಟಣಗಳಲ್ಲಿಯೂ ನಾನಾಬಗೆಯ ಭಾಷಣಗಳ, ಚಟುವಟಿಕೆಗಳ ಮೂಲಕ ಸಾಕ್ಷರತೆಯ ಆವಶ್ಯಕತೆಯ ಕುರಿತು ಪ್ರಚಾರ ಮಾಡಬೇಕು. ವಿದ್ಯಾರ್ಥಿಗಳು (Each one teach one" ಕಲಿತವರು ಕಲಿಸಬೇಕು ಎನುವ ತತ್ತ್ವದಂತೆ ಲೋಕ ಕಲ್ಯಾಣದ ಈ ಕಾರ್ಯದಲ್ಲಿ ಬದ್ಧಕಂಕಣರಾಗಬೇಕು. ವಯಸ್ಕರ ಶಿಕ್ಷಣ ಸಮಿತಿಯವರು ಈವರೆಗೆ ಸಾಧಿಸಿದ ಪ್ರಗತಿಯನ್ನು ನೆನೆದುಕೊಂಡು ಮುಂದಕ್ಕೆ ಇದಕ್ಕಿಂತಲೂ ತೀವ್ರಗತಿಯಿಂದ ಮುನ್ನಡೆದು ನೂರಕ್ಕೆ ನೂರು ಜನ ಅಕ್ಷರಸ್ಥರಾಗುವಂತೆ ಮಾಡಲೆಂದು ಹಾರೈಸುತ್ತೇವೆ.

ಕುರ್ಶಿದ್‌ಲಾಲರ ನಿಧನ

ಕೇಂದ್ರ ಸರಕಾರದ ಸಂಪರ್ಕ ಶಾಖೆಯ ಉಪಮಂತ್ರಿ ಕುರ್ಶಿದಲಾಲರ ಅನಿರೀಕ್ಷಿತ ನಿಧನದಿಂದ ಸರಕಾರಕ್ಕೆ ತುಂಬಬಾರದ ಹಾನಿಯಾದಂತಾಗಿದೆ. 17ನೆಯ ತಾರೀಕಿನ ರಾತ್ರಿ ಹೃದಯ ವಿಕಾರದಿಂದ ಬಳಲಿದರು. ಬಳಿಕ 18ನೆಯ ತಾರೀಕಿನ ದಿನ ವಿಲ್ಲಿಂಗ್ಡನ್ ಆಸ್ಪತ್ರೆಗೆ ಒಯ್ಯಲಾಯಿತು. ಮೊದಲಿಗೆ ಕೊಂಚ ಪ್ರಕೃತಿ ಸುಧಾರಿಸಿದರೂ ಬಳಿಕ ಒಮ್ಮೆಯೆ ಹೃದಯ ವಿಕಾರದಿಂದ ವಿಧಿವಶರಾದರು.

1903ರಲ್ಲಿ ಜನಿಸಿದರು. ಲಕ್ನೋ ಯುನಿವರ್ಸಿಟಿಯಲ್ಲಿ ತನ್ನ ವಿದ್ಯಾಭ್ಯಾಸವನ್ನು ಪೂರೈಸಿದರು. 1926ರಲ್ಲಿ ಡೆಹರಾಡೂನಿನಲ್ಲಿ ವಕೀಲೀ ಕೆಲಸ ನಡೆಸಿದರು. ನಾಲ್ಕು ವರ್ಷದ ಮೇಲೆ ಕಾಂಗ್ರೆಸ್ಸಿನಲ್ಲಿ ಸೇರಿಕೊಂಡು ಮೂರು ನಾಲ್ಕು ಬಾರಿ ಜೈಲಿಗೂ ಹೋದರು. ಡೆಹರಾಡೂನಿನ ಕಾಂಗ್ರೆಸ್ ಕಮಿಟಿಯ ಅಧ್ಯಕ್ಷನಾಗಿಯೂ, ಮುನ್ಸಿಪಲ್ ಚೆಯರಮೆನರಾಗಿಯೂ ಬಹಳ ಕಾಲ ಕೆಲಸ ಮಾಡಿದರು. ಡೆಹರಾಡೂನಿನ ಮುನಿಸಿಪಲ್ ಕಾರ್ಯಾಲಯದಿಂದ ರಾಷ್ಟ್ರೀಯ ಧ್ವಜವನ್ನು ಕಿತ್ತೊಗೆಯಬೇಕೆಂಬ ನಿರ್ಣಯವನ್ನು ಯುರೋಪಿಯನ್ ಮತ್ತು ಮುಸ್ಲಿಮ ಪಕ್ಷಗಳು ಒಪ್ಪಿಕೊಂಡಾಗ ತನ್ನ ಸ್ಥಾನಕ್ಕೆ ರಾಜಿಯನ್ನಿತ್ತು ಹೊರಬಂದರು.

1946ರಲ್ಲಿ ಕುರ್ಶಿದಲಾಲರು ಕೇಂದ್ರ ಸರಕಾರದ ಪಾರ್ಲಿಮೆಂಟ್ ಸದಸ್ಯನಾಗಿ ಚುನಾಯಿತರಾದರು. 1948ರಲ್ಲಿ ಸಂಪರ್ಕ ಶಾಖೆಯ ಉಪಮಂತ್ರಿಯಾಗಿ ಸೇವೆ ಕೈಗೊಂಡರು.

ಪಾಕಿಸ್ತಾನದ ಹೈಕಮಿಶನರನ್ನಾಗಿ ಕೇಂದ್ರ ಸರಕಾರ ಶ್ರೀ ಕುರ್ಶಿದ್ ಲಾಲರನ್ನು ನೇಮಿಸಿತ್ತು; ಅದಕ್ಕವರು ಒಪ್ಪಿಯೂ ಇದ್ದರು. ಬರುವ ತಿಂಗಳ ಕೊನೆಯಲ್ಲಿ ಆ ಕಾರ್ಯವನ್ನು ವಹಿಸಿಕೊಳ್ಳುವ ನಿರೀಕ್ಷೆಯೂ ಇತ್ತು. ಆದರೆ ದೈವಕ್ಕೆ ಅದು ಸಂಬರಲಿಲ್ಲವೋ—ಏನೋ! ಅರ್ಧದಲ್ಲಿಯೇ ಅವರನ್ನೊಯ್ದಿತು.

ತನ್ನ ಕಾರ್ಯನಿಷ್ಠೆಯಿಂದ ಸರಕಾರದ ಹಾಗೂ ಜನತೆಯ ವಿಶ್ವಾಸವನ್ನು ಗಳಿಸಿದ್ದರು. ಎಂತಹ ಕಠಿಣ ಪ್ರಸಂಗದಲ್ಲೂ ವಿಚಾರಪರವಶರಾದವರಲ್ಲ. ಸಂಪರ್ಕ ಶಾಖೆಯ ಹಲವು ರೀತಿಯ ಸುಧಾರಣೆಗಳಿಗೆ ಮಾನ್ಯ ಕುರ್ಶಿದಲಾಲರೇ ಕಾರಣರಾಗಿರುತ್ತಾರೆ. ತಾನು ಕೈಕೊಂಡ ಕಾರ್ಯವನ್ನು ದೇಶಸೇವಾದೃಷ್ಟಿಯಿಂದಲೂ, ಅತ್ಯಂತ ಉತ್ಸಾಹದಿಂದಲೂ, ಬುದ್ಧಿವಂತಿಕೆಯಿಂದಲೂ ಕುರ್ಶಿದಲಾಲರು ಪೂರೈಸುತ್ತಿದ್ದರು. ಈ ರೀತಿಯ ಕಾರ್ಯತತ್ಪರತೆಯಿಂದ ಎಲ್ಲರ ಪ್ರೀತ್ಯಾದರಗಳಿಗೆ ಪಾತ್ರರಾಗಿದ್ದರು. ಅವರ ಜೀವಮಾನದಲ್ಲಿ ನಾವು ಇನ್ನೂ ಅನೇಕ ಅಧಿಕಾರಗಳನ್ನು ಕಟ್ಟಿಕೊಂಡಿರುವಾಗಲೇ ಅವರು ನಮ್ಮಿಂದ ದೂರಾದರು. ಮುಂದಕ್ಕೆ ಅವರಿಂದ ಹೆಚ್ಚಿನ ಸೇವೆಯನ್ನು ದೇಶ ಪಡೆಕೊಳ್ಳಬಹುದೆನ್ನುವ ಕಾಲಕ್ಕೆಯೆ ಅನಿರೀಕ್ಷಿತವಾಗಿ ನಮ್ಮನ್ನಗಲಿಬೇರಾದರು. ಜೀವನ ಶಾಶ್ವತವಲ್ಲವಾದರೂ ಇಷ್ಟು ಶೀಘ್ರ—ಅನಿರೀಕ್ಷಿತವೆಂದು ಯಾರೂ ಭಾವಿಸಲು ಸಾಧ್ಯವೇ? ಅಂತಲೇ ನಾವು ಹೆಚ್ಚು ದುಃಖಿತರಾಗಿದ್ದೇವೆ; ದೇಶವೂ ಕೂಡ! ಮಡದಿ, ಮಕ್ಕಳ ಶೋಕ, ಇದಕ್ಕಿಂತಲೂ ಮಿಗಿಲಾದದ್ದೆಂದು ಬೇರೆ ಹೇಳಬೇಕಾಗಿಲ್ಲ. ದೇಶ ಸೇವೆಯಲ್ಲಿ ತನ್ನ ಜೀವನ ಸಾಫಲ್ಯವನ್ನು ಗಳಿಸಿಕೊಂಡ ಶ್ರೀ ಲಾಲರ ಆತ್ಮಕ್ಕೆ ಚಿರಶಾಂತಿಯಿರಲಿ!

ಹಾರುವ ಕಿಡಿಗಳು

ಹಂದಿಯ ಹೊಟ್ಟೆ ದೊಡ್ಡದಾದರೇನು, ಕಲ್ಲಿನ ಸ್ವಲ್ಪ ಜಾಸ್ತಿ ತಿನ್ನೀತು; ಆಡು ಬಡಕಲಾದರೂ ಪುಷ್ಟಿಕರ ಹಾಲು ಕೊಟ್ಟೀತು

೦೦

ಹಾಳಿತಕ್ಕೆ ಕತ್ತರಿ ಪ್ರಯೋಗವಾಗಬೇಕು; ಉನ್ಮಾದಕ್ಕೆ ಅರ್ಧಚಂದ್ರ ಪ್ರಯೋಗವಾಗಬೇಕು

೦೦

ಭಂಗಿ ದಾಂಧಿಗನಾದರೆ ಸ್ವಲ್ಪ ದೊಡ್ಡ ಬಾಲ್ದಿ ಹೊತ್ತಾನು; ಆಳುವವ ಕೃಶನಾದರೂ ಹಲವರಿಗೆ ಅನ್ನವಿತ್ತಾನು,

೦೦

ಅಶ್ವಶಾಲೆ ಸೇರಿದೊಡನೆ ಕತ್ತೆ ಕುದುರೆ ಆದೀತೆ? ಹಟ್ಟಿ ಹೊಕ್ಕಾಕ್ಷಣ ಹಂದಿ ಕಾಮಧೇನು ಆದೀತೆ?

೦೦

ರಥವೆ ಸರಿದು ಹೋಗುವಾಗ ಗಣಪತಿ ಇಲಿ; ಕಸ ಸರಿದು ಹೋಗುವಾಗ ಲಕ್ಷಿಸಿಯಾನೆ?

೦೦

ಬತ್ತ ಕುಟ್ಟಿದರೆ ಉಪ್ಪಾದ ಅಕ್ಕಿ ಆದೀತು; ಅಲ್ಪನಿಗೆ ಆಶ್ರಯನಿತ್ತರೆ ಮಾನಭಂಗವೇ ಆದೀತು.

೦೦

ಉದ್ದ ಬೆಳೆದ ಕೂದಲನ್ನು ಕತ್ತರಿಸಿದರೆ ತಲೆಯನ್ನೇ ಕತ್ತರಿಸಿದಂತಲ್ಲ; ಕಾವಿನ ಹಳತು ಜಾರಿದರೆ ಕಾಲೇ ಕಡಿದಂತಲ್ಲ.

೦೦

ಕಾಲ್ತೊಡಕಿನ ಬಳ್ಳಿ ಎಷ್ಟೇ ಸ್ವತಂತ್ರವಾಗುವೆನೆಂದರೂ ಸಿಂಟವಾಗದು; ಬೇವಿನ ಮರ ಎಂದೂ ಸಿಹಿ ಫಲಕೊಡದು.

೦೦

ದೀದೀ ಬಸವಗೆ ಮಾನದ ಮಾತೇನು? ಬೂದೀ ನಾಯಿಗೆ ಗಾದಿಯ ಗೊಡವೆಯೇನು?

೦೦

ಆಳುವವನಿಗೆ ಏಳಲಾಗದಿದ್ದರೂ ತಿನ್ನಲಿಕ್ಕೆ ಬೇಕಾದ ಬಲ ಇದೆ; ತೂತಾದರೂ ಕೊಡ ತುಂಬುವ ಶಕ್ತಿ ಇದೆ. ಮೂಕ ಆಳು ಮಾಲಿಯನ್ನೇ ಸೇರಬೇಕಾದೀತು.

೦೦

ಸಮುದ್ರವು ಗರ್ಜಿಸುತ್ತದೆ. ಸಮುದ್ರದಿಂದಲೇ ಆವಿ ಆಗಿ ಹೋಗಿ ಆದ ಮೋಡವೂ ಗರ್ಜಿಸುತ್ತದೆ; ಮೊದಲದು ಸ್ವಾಭಾವಿಕ; ನಿರಂತರ, ಎರಡನೇದು ಅಸ್ವಾಭಾವಿಕ, ಕ್ಷಣಿಕ.

೦೦

ಆರೆಭ್ರಾಂತ ಎಷ್ಟೇ ಅರಚಿದರೂ ಕ್ವಾಕಳೆ ಟ್ಟಬೇಕಲ್ಲದೆ ಆಧ್ವನಿಗೆ ಹಾನಿಯೇನು? ಮದಿಭ್ರಾಂತ ಎಷ್ಟೇ ಗೀಚಿದರೂ ಮಸಿಯ ನಾಶವಲ್ಲದೆ ಆಳುವವನಿಗೆ ಹಾಳೇನು?

೦೦

ಹಾಲಿಗೆ ಹುಳಿಬಿದ್ದರೆ ಮೊಸರೇ ಆದೀತು, ಅರ್ಥನಿಗೆ ಕಷ್ಟ ಬಂದರೆ ಕೊನೆಯಲ್ಲಿ ಸುಖವೇ ದೊರಕೀತು. ಆದರೆ ಹಿಳಿಗೆ ಹುಳಿ ಬಂದರೆ ಹುಳವೇ ಆದಾನು.

೦೦

ಸಿಂಹದ ಗುಹೆಯಲ್ಲಿ ನರಿ ಹೋಗಿ ಅವಿತುಕೊಂಡರೂ ಅಲ್ಲಿ ಏಡಿ ಕಾಲನ್ನೇ ಹಿಡಿದೀತು; ಸಿಂಹ ಎಲ್ಲಿ ಹೋಗಿದ್ದರೂ ಆನೆಯನ್ನೇ ಅರಸೀತು.

೦೦

ಮರ್ಕಟನಿಗೆ ಮಕುಟವಿಟ್ಟೇ ಕಾಣಿಸಿದರೂ ಕಾಚೇಷ್ಟೆ ಬಿಡುವುದುಂಟೆ? ಅಧಮನಿಗೆ ಯೋಗ್ಯ ಸ್ಥಾನ ಕೊಟ್ಟರೂ ಅಲ್ಪ ಬುದ್ಧಿ ಬಿಡುವುದುಂಟೆ?

೦೦

ಹಾವಿನ ಮುಂದೆ ಕಪ್ಪೆ ಹೆಡೆಅರಳಿಸುತ್ತಿದೆ; ಆನೆಯ ಮುಂದೆ ಶ್ವಾನ ಬೊಗಳುತ್ತಿದೆ.

೦೦

ಎಟುಕದ ದ್ರಾಕ್ಷಿ ಹುಳಿಯಾದೀತು; ಸಿಗದ ಪ್ರಸಾದ ಎಂಜಲಾದೀತು.

೦೦

ನೋಡುವ ಕಣ್ಣೇ ಇಲ್ಲದ ಕುರುಡನಿಗೆ ಕನ್ನಡಿಯೆಲ್ಲಿಂದ? ಚಲಿಸುವ ಹೃದಯವೇ ಇಲ್ಲದ ನಿಶಾಚರನಿಗೆ ದಯವೆಲ್ಲಿಂದ?

೦೦

ಅರೆಮರುಳ ಎಷ್ಟೇ ಅರಚಿದರೂ ಅವನ 'ದಮ್ಮೇ' ಖಾಲಿಯಾದೀತಲ್ಲದೆ ಅರ್ಥನಿಗೆ ಕೊಡಕಿಲ್ಲ; ಹುಂಭಗ್ನ ಎಷ್ಟೇ ಗೀಚಿದರೂ ಮಸಿಯ ನಾಶವಲ್ಲದೆ ಅಳುವವನಿಗೆ ಹಾಳಿಲ್ಲ.

೦೦

ಕಳೆಯೆಂದು ತಿಳಿದೊಡನೆ ಕಿತ್ತೊಗೆಯಲು ದಾಕ್ಷಿಣ್ಯ ಬೇಡ; ಹಾಲೆರೆದಲ್ಲಿ ಕಚ್ಚಲು ಬರುವ ಹಾವಿಗೆ ಕನಿಕರ ಬೇಡ.

೦೦

ಬೇಲಿಯೂ ಹೊಲ ಮೇಯುವುದಿದೆ; ಆಶ್ರಯ ಹೊಂದಿದವನೇ ಅಭಟಿಸುವುದಿದೆ.

ಉಡುಪಿ

ವರ್ಷಾವಧಿ ಪಂದ್ಯಾಟ—ಸ್ಥಳೀಯ ಮಹಾತ್ಮಾಗಾಂಧಿ ಮೆಮೋರಿಯಲ್ ಕಾಲೇಜಿನ ವರ್ಷಾವಧಿ ಪಂದ್ಯಾಟ ಸ್ಪರ್ಧೆಯು ಇದೇ 17ರಲ್ಲು ಗಾಂಧಿ ಮೈದಾನದಲ್ಲಿ ನಡೆಯಿತು. ಶ್ರೀ ಕೊಟ್ಟಾರ್ ಪದ್ಮನಾಭ ಪೈಗಳವರು ಸಮಾರಂಭದ ಅಧ್ಯಕ್ಷತೆ ವಹಿಸಿದ್ದು ಸ್ಪರ್ಧೆಯಲ್ಲಿ ಗೆದ್ದವರಿಗೆ ಬಹುಮಾನಗಳನ್ನು ಹಂಚಿದರು.

ವಿವಿಧ ವಿನೋದಾವಳಿ-ಇದೇ ತಾ 18ರಲ್ಲು ಮಹಾತ್ಮಾಗಾಂಧಿ ಮೆಮೋರಿಯಲ್ ಕಾಲೇಜಿನ ಪೋಲ್ಟ್ರಗತಿಯ ವಿದ್ಯಾರ್ಥಿಗಳು ಕಾಲೇಜಿಗೆ ವಿದಾಯವನ್ನೀಯುವ ಸಮಾರಂಭವನ್ನೇರ್ಪಡಿಸಿದರು. ತತ್ಸಂಬಂಧ ರಾತ್ರಿ ನಾಟಕ, ಲಾವಣಿ, ಯಕ್ಷಗಾನ ಕಾಲಕ್ಷೇಪಗಳಿದ್ದುವು.

ವಯಸ್ಕರಶಿಕ್ಷಣ ಸಪ್ತಾಹವು-ಇದೇ 17ರಲ್ಲು ಸಂಜೆ ಬೋರ್ಡ್ ಹೈಸ್ಕೂಲ್ ಟೀಚರ್ಸ್ ಹಾಲಿನಲ್ಲಿ ಡಾ। ಟಿ ಮಾಧವ ಪೈಗಳ ಅಧ್ಯಕ್ಷತೆಯಲ್ಲಿ ಪ್ರಾರಂಭವಾಯಿತು. ಶ್ರೀಗಳಾದ ಕೆ. ಎಲ್. ಎನ್. ಉಪಾಧ್ಯ ಮತ್ತು ಎಮ್. ವಿ. ಹೆಗ್ಡೆಯವರು ಸಂದರ್ಭೋಚಿತ ಭಾಷಣಗಳನ್ನಿತ್ತರು. ಎರಡನೆಯ ದಿವಸ ಪ್ರಿನ್ಸಿಪಾಲ್ ಶ್ರೀ ಎಚ್. ಸುಂದರ ರಾಯರು ಶೈಕ್ಷಣಿಕ ವಸ್ತು ಪ್ರದರ್ಶನವನ್ನು ತೆರೆದರು. ಕುಂದಾಪುರ ಸಬ್ ಕಲೆಕ್ಟರ್ ಶ್ರೀ ಪಿ. ಎಸ್. ತಿಮ್ಮಪ್ಪ ಶೆಟ್ಟರು ಸಭಾಧ್ಯಕ್ಷತೆ ವಹಿಸಿದ್ದು ಇಂತಹ ವಸ್ತು ಪ್ರದರ್ಶನಗಳ ಪ್ರಯೋಜನ, ವಯಸ್ಕರ ಶಿಕ್ಷಣ ಸಪ್ತಾಹದ ನಿಜವಾದ ಪರಿಣಾಮ, ಈ ಬಗ್ಗೆ ವಿದ್ಯಾರ್ಥಿಗಳು ಕೈಕೊಳ್ಳತಕ್ಕ ಕಾರ್ಯಕ್ರಮ ಮುಂತಾದ ವಿಷಯಗಳನ್ನೆತ್ತಿ ಭಾಷಣವಿತ್ತರು. ಬೋರ್ಡ್ ಹೈಸ್ಕೂಲ್ ಹೆಡ್ಮಾಸ್ಟರ್ ಶ್ರೀ ಕೆ. ಸಂಜೀವ ಶೆಟ್ಟರು ಧನ್ಯವಾದಗಳನ್ನರ್ಪಿಸಿದರು.

ಪರಿಯಾಳ ಯಾನೆ ಪರೆಲ್ ಮಡಿಯಾಳ—ಸ್ವತಂತ್ರ ಭಾರತದ ಪ್ರಥಮ ಜನಗಣನೆ ಈಗಾಗಲೇ ಪ್ರಾರಂಭವಾಗಿದೆಯಷ್ಟೆ. 'ಮಡಿವಾಳ, ಮಡ್ಡಲ ಅಥವಾ ಕ್ಷೌರಿಕ' ಎಂದು ಈಗ ವಾಡಿಕೆಯಲ್ಲಿರುವುದನ್ನು ಮನ್ನಾಮಾಡಿ 'ಪರಿಯಾಳ ಯಾನೆ ಪರೆಲ್ ಮಡಿಯಾಳ್' ಎಂಬುದಾಗಿ ಜನಗಣನೆಯಲ್ಲಿ ದಾಖಲುಮಾಡಿಸಬೇಕಾಗಿ ಮುಂಬಯಿಯ ಪರಿಯಾಳ ಹಿತೈಷಿಸಂಘದ ಕಾರ್ಯದರ್ಶಿಗಳು ಸ್ವಜಾತಿಬಾಂಧವರನ್ನು ಕೇಳಿಕೊಂಡಿದ್ದಾರೆ.

ಆಗಮನ-ಕೊಯಮುತ್ತೂರು ಸರ್ಕಲಿನ ಡಿಪ್ಯುಟಿ ಡೈರೆಕ್ಟರ್ ಶ್ರೀ ಸಿ. ಎಸ್. ಸುಬ್ರಹ್ಮಣ್ಯ ಐಯ್ಯರ್ ಅವರು ಕಳೆದ ವಾರ ಉಡುಪಿಗೆ ಬಂದಿದ್ದು ಒಡಗಬೆಟ್ಟು, ಶಿವಳ್ಳಿ, ಮಣಿಪುರ, ಪುತ್ತಿಗೆ, ಮಣಿಪಾಲ, ಕೊಡವೂರು ಮೊದಲಾದ ಗ್ರಾಮಗಳನ್ನು ಸಂದರ್ಶಿಸಿ, ಸರಕಾರಿ ಗೊಬ್ಬರ ಮತ್ತು ಸರಕಾರೀ ಭತ್ತದ ಬೀಜಗಳನ್ನು ಉಪಯೋಗಿಸಲಾದ ಗದ್ದೆ ಪ್ರದೇಶಗಳನ್ನು ಸಂದರ್ಶಿಸಿದರು. ಶ್ರೀ ಐಯ್ಯರ ಜತೆಯಲ್ಲಿ ಸ್ಥಳೀಯ ಎಗ್ರಿಕಲ್ಚರಲ್ ಡೆಮೋನ್ಸ್ಟ್ರೇಟರ್ ಶ್ರೀ ಬಿ. ಶ್ರೀನಿವಾಸ ರಾಯರು ಇದ್ದುಕೊಂಡು ಆಯಾಯ ಹಳ್ಳಿಯ ಮಾಹಿತಿಯನ್ನು ಕೊಟ್ಟರು.

ಸಿನೇಟ ಚುನಾವಣೆ—ಮದ್ರಾಸು ಸಿನೇಟಿನಲ್ಲಿ ಉಡುಪಿ ಮಂಗಳೂರು ಮುನಿಸಿಪಾಲಿಟಿಗಳಿಗಿರುವ ಒಂದು ಸೀಟಿಗೆ ಉಡುಪಿ ಕೌನ್ಸಿಲಿನ ಸದಸ್ಯ ಶ್ರೀ ಟಿ. ರಮೇಶ ಪೈಗಳು ಅವಿರೋಧವಾಗಿ ಆರಿಸಲ್ಪಟ್ಟಿರುವರು.

ತಿದ್ದುಪಡಿ:—ಕಳೆದ ಸಂಚಿಕೆಯಲ್ಲಿ ಪ್ರಕಟವಾದ ಉಡುಪಿ ಡಿ। ಮು। ಕೋರ್ಟಿನ O. P. 3/51ನೇ ನೋಟೀಸಿನಲ್ಲಿ ಕೈಲಾತಿ ಎಂಬುದನ್ನು ಕೈಲ/ಬಾಡಿ ಎಂತ ಓದುವುದು.

ಲೋಕಾಂತ

ಕೊರಿಯಾ ರಣರಂಗ

ಚೇಚಾನದಲ್ಲಿ ಉತ್ತರ ಕೊರಿಯಾದ ಕಮ್ಯೂನಿಸ್ಟರು ಸಂಯುಕ್ತ ರಾಷ್ಟ್ರ ಸಂಘದ ಸೈನಿಕರ ಮೇಲೆ ಧಾಳಿ ಮಾಡಿರುವುದರಿಂದ ಯು. ರಾ. ಸಂಘದ ಸೈನ್ಯಕ್ಕೆ ತುಂಬ ಗಂಡಾಂತರ ಪ್ರಾಪ್ತಿಯಾಗಿರುತ್ತದೆ.

೩೮ನೆಯ ಅಕ್ಷಾಂಶವನ್ನು ದಾಟುವ ವಿಚಾರದಲ್ಲಿ ಯುರೋಪದ ಮುಖ್ಯ ಎರಡು ರಾಷ್ಟ್ರಗಳಲ್ಲಿ ಭಿನ್ನಾಭಿಪ್ರಾಯವಿದ್ದ ಹಾಗಿದೆ. ಯುದ್ಧವನ್ನು ಹಬ್ಬಗೊಳಿಸಲಪೇಕ್ಷಿಸುವವರಿಗೆ ೩೮ನೆಯ ಅಕ್ಷಾಂಶ ದಾಟದಂತೆ ತಡೆಗಟ್ಟುವುದೇ ಮುಖ್ಯವಾಗಿರುತ್ತದೆ. ಅದನ್ನು ಅತಿಕ್ರಮಿಸುವುದೆಂದರೆ ಪ್ರತ್ಯಕ್ಷ ಯುದ್ಧ ಸಾರಿದಂತೆಯೇ! ಈ ರೇಖೆಯನ್ನು ದಾಟುವದನ್ನು ಬ್ರಿಟನಿನ ಪ್ರಧಾನಿ ಅಟ್ಲಿಯವರು ಬಲವಾಗಿ ವಿರೋಧಿಸಿದ್ದಾರೆ. ಆದರೆ ಅಧ್ಯಕ್ಷ ಟ್ರೂಮನ್ ದಾಟುವುದೂ ಬಿಡುವುದೂ ಜನ್. ಮೇಕಾರ್ಥರರ ಇಚ್ಛೆಗೆ ಸಂಬಂಧಿಸಿದ್ದೂ ಎನ್ನುತ್ತಾರೆ. ಯುದ್ಧರಂಗದಲ್ಲಿ ಸೋಲು-ಗೆಲು ಸಮನಾಗಿ ಎರಡು ಕಡೆಗೂ ಆಗುತ್ತಲಿದೆ. ೩೮ನೆಯ ಅಕ್ಷಾಂಶವನ್ನು ದಾಟುವ ನಿರ್ಣಯದಿಂದ ಮುಂದೆ ಯುದ್ಧವೋ—ಸಂಧಾನವೋ ಎಂಬುದನ್ನು ನೋಡಲಿದೆ.

ಫೋರ್ಮೋಸಾಕ್ಕೆ ಶಸ್ತ್ರಾಸ್ತ್ರಗಳು

ಫೋರ್ಮೋಸಾಕ್ಕೆ ೫ ಕೋಟಿ ಡಾಲರುಗಳ ಶಸ್ತ್ರಾಸ್ತ್ರಗಳನ್ನು ಕೊಡುವ ಯೋಜನೆಯನ್ನು ಅಮೇರಿಕೆಯು ಮಾಡುತ್ತಲಿದೆ. ಈ ವರೆಗೆ ಒಂದು ಮಿತಿಯಲ್ಲಿ ಕಳಿಸುತ್ತಿದ್ದು ಈಗ ರಾಷ್ಟ್ರೀಯ ಚೀನಿಯರನ್ನು ತನ್ನ ಒಲವಿನೊಳಗೆ ಸೇರಿಸಿಕೊಂಡು ಶಸ್ತ್ರಸನ್ನದ್ಧರನ್ನಾಗಿ ಮಾಡುವಂತೆ ಅಮೇರಿಕ ಹಂಚಿಕೆ ಹೂಡಿದೆ. ಯುದ್ಧೋಪಕರಣಗಳು ಇಂಡೋ ಚೀನಕ್ಕೆ ಹೋಗದ ಹಾಗೆ ಮಿಲಿಟರಿ ಸಲಹೆಗಾರರು ಜಾಗ್ರತೆ ವಹಿಸುವಂತೆ ಅಧ್ಯಕ್ಷ ಟ್ರೂಮನ್ನರು ಆದೇಶವಿತ್ತಿದ್ದಾರೆ.

ನೇಪಾಳದಲ್ಲಿ ನಡುಗಾಲ ಸರಕಾರ

ನೇಪಾಳದ ಅರಸರಾದ ತ್ರಿಭುವನರು ಕಾಟ್ಮಾಂಡುವಿನಲ್ಲಿ ನಡುಗಾಲ ಸರಕಾರವನ್ನಾರಂಭಿಸಿ ನೇಪಾಳದ ಇತಿಹಾಸದಲ್ಲಿ ನೂತನ ಸುಧಾರಣೆಯನ್ನು ಮಾಡಿದರು. ತನ್ನ ಹಿರಿಯರಿಂದ ಈ ತನಕ ನೇಪಾಳದಲ್ಲಾದ ಮಹತ್ವದ ರಾಜ್ಯಭಾರ ಕ್ರಮಗಳನ್ನು ವಿವರಿಸಿ ಈಗ ಜನತೆಯ ಪ್ರೀತಿಪಾತ್ರರಾದವರಿಗೆ ಪ್ರಾಮುಖ್ಯ ಸ್ಥಾನವನ್ನು ಸರಕಾರದಲ್ಲಿ ಕೊಡಲಾಗಿದೆ ಎಂದರು. ಕಾಂಗ್ರೆಸ್ ಪ್ರತಿನಿಧಿಗಳೂ ರಾಣಾಕ ತಲೆಮಾರಿನವರೂ ಒಂದಾಗಿ ರಾಷ್ಟ್ರದ ರಾಜ್ಯಭಾರವನ್ನು ಹೊತ್ತಿರುವುದರಿಂದ ನೇಪಾಳದಲ್ಲಿ ಶಾಂತಿಸೌಹಾರ್ದಮಯ ವಾತಾವರಣ ತಲೆದೋರಬಹುದು. ರಾಣಾರ ಪಂಗಡದವರೂ ಕಾಂಗ್ರೆಸ್ಸಿನ ಪಕ್ಷದವರೂ ಒಳ್ಳೆಯ ಮುತ್ಸದ್ದಿತನದಿಂದ ವರ್ತಿಸಿ ಉಳಿದ ರಾಷ್ಟ್ರಗಳಿಗೆ ಆದರ್ಶಪ್ರಾಯರಾಗಿದ್ದಾರೆ.

ಕಾಶ್ಮೀರದ ಪ್ರಶ್ನೆ

ಅತ್ಯವಸರದಿಂದ ತೀರ್ಮಾನವಾಗಬೇಕೆಂದು ಹಟಹಿಡಿದ ಪಾಕಿಸ್ಥಾನದ 'ಕಾಶ್ಮೀರದ' ವಿಚಾರವು ಇನ್ನೂ ಭದ್ರತಾ ಸಮಿತಿಯಲ್ಲಿ ಬಂದಿರದೆ ತೆರೆಮರೆಯಲ್ಲಿ ಹಲವು ತಲೆ ತಿನ್ನುತ್ತಲಿದೆ. ಬರುವ ಬುಧವಾರ ಸಮಿತಿ ಈ ವಿಚಾರವನ್ನು ಎತ್ತಿಕೊಳ್ಳಲಿದೆ.

ಪಾಕಿಸ್ತಾನದೊಡನೆ ಮಾತುಕತೆ

ಕಳೆದ ವಾರ ಕರಾಚಿಗೆ ತೆರಳಿದ್ದ ಶ್ರೀ ಎನ್. ಪಿಳ್ಳೆಯವರೂ, ವಾಣಿಜ್ಯ ಶಿಷ್ಟಮಂಡಳದವರೂ ತಮ್ಮ ವಿಚಾರ ವಿನಿಮಯದಿಂದ ಪ್ರಗತಿ ಸಾಧಿಸಿದ್ದಾರೆಂದು ತಿಳಿದು ಬಂದಿದೆ. ಎರಡು ರಾಷ್ಟ್ರಗಳೊಳಗಿನ ವ್ಯಾಪಾರದ ಕುರಿತು ಮಹತ್ವದ ಒಡಂಬಡಿಕೆಯಾಗುವ ಲಕ್ಷಣ ಕಂಡು ಬರುತ್ತಲಿದೆ. ಲಿಯಾಖತ್ ಅಲೀಖಾನ್ ಹಾಗೂ ಪಿಳ್ಳೆಯವರೊಳಗೆ ಬಿಚ್ಚುಮನಸ್ಸಿನ ಮಾತುಕತೆ ನಡೆದಿದೆ. ಈ ವ್ಯಾಪಾರ ಒಪ್ಪಂದದಿಂದ ಉಭಯ ರಾಷ್ಟ್ರಗಳೊಳಗಿನ ಹಲವು ಸಮಸ್ಯೆಗಳು ಸುಗಮವಾಗಬಹುದೆಂದು ರಾಜಕೀಯ ವರ್ಗಗಳು ಅಭಿಪ್ರಾಯಪಡುತ್ತವೆ. ಭಾರತಕ್ಕೆ ಪಾಕಿಸ್ತಾನವು 300,000 ಟನ್ ಆಹಾರವನ್ನು ಕೊಡುವ ಭರವಸೆಯನ್ನಿತ್ತಿದೆ. ಅದರಲ್ಲಿ 150,000 ಟನ್ನಿನಷ್ಟು ಜೋಳ, ಗೋಧಿ, ಅಕ್ಕಿಗಳನ್ನು ಈಗ ಕೊಟ್ಟು ಉಳಿದ 150,000 ಟನ್ನಿನಷ್ಟು ಹೊಸ ಬೆಳೆಯ ನಂತರ ಕೊಡುವದೆಂದು ತಿಳಿಯುತ್ತದೆ. ಭಾರತದಿಂದ ಪಾಕಿಸ್ತಾನಕ್ಕೆ ಸಣಬೂ, ಕಲ್ಲಿದ್ದಲು, ಜವಳಿ, ಮುಂತಾದವುಗಳು ಸಿಗುವವು. ಉಪ್ಪು ಸಿಗುವ ಸಂಭವವೂ ಇದೆ. ಅಂತೂ ಇದರ ಪೂರ್ತಿ ಪಾಠ ಬರುವ ಸೋಮವಾರ ಜರಗಲಿರುವ ವಾಣಿಜ್ಯ ಒಪ್ಪಂದಗಳ ಪರಿಪತ್ರದ ನಂತರ ತಿಳಿಯಬಹುದಾಗಿದೆ.

ಜನಗಣನೆಯಲ್ಲಿ ವಂಚನೆ

ಜನಗಣನೆಯ ಕಾಲದಲ್ಲಿ ಬೆಳಗಾವಿ ಮತ್ತು ಬಳ್ಳಾರಿ ಜಿಲ್ಲೆಗಳಲ್ಲಿ ಕನ್ನಡಿಗರಿಗೆ ಮಹದನ್ಯಾಯವಾಗಿದೆಯೆಂದು ಕರ್ನಾಟಕ ಪ್ರಾಂತೀಯ ಕಾಂಗ್ರೆಸು ಕಮಿಟಿ ಅಭಿಪ್ರಾಯಪಟ್ಟಿರುತ್ತದೆ. ಬೆಳಗಾವಿ ಜಿಲ್ಲೆಯ ಶಹಪುರ ಮತ್ತು ನಿಪ್ಪಾಣಿ, ಬಳ್ಳಾರಿ ಜಿಲ್ಲೆಯ ಬಳ್ಳಾರಿ, ಮತ್ತು ವಿವಾದಾಸ್ಪದ ತಾಲೂಕುಗಳಾದ ಆಲೂರು ಅದವಾನಿ ಮತ್ತು ರಾಯದುರ್ಗಗಳಲ್ಲಿ ಇದು ವರೆಗಿನ ಜನಗಣನೆಯಲ್ಲಿ ವಿವಂಚನೆ ಯಾದಂತೆ ತೋರಿ ಬರುತ್ತದೆ. ಸರಿಯಾಗಿರುವವೋ ಹೇಗೆಂಬ ವಿಚಾರದಲ್ಲಿ ತಪಾಸಣೆ ನಡೆಸಬೇಕು. ಇಲ್ಲವೆ ತಿರುಗೊಮ್ಮೆ ನ್ಯಾಯವಾದ ರೀತಿಯಲ್ಲಿ ಜನಗಣನೆ ನಡೆಸಬೇಕೆಂದು ಸಮಿತಿಯು ಸೂಚಿಸಿರುತ್ತದೆ.

ಕಾಂಗ್ರೆಸ್ಸಿಗರಲ್ಲಿ ಐಕಮತ್ಯಬೇಕು

ಕಾನ್ಪುರದ ಕಾಂಗ್ರೆಸ್ ಕಾರ್ಯಕರ್ತರ ನಡುವೆ ಮುಖ್ಯ ಮಂತ್ರಿ ನೆಹ್ರೂರವರು "ಕಾಂಗ್ರೆಸ್ಸಿಗರ ಸಾಮಾನ್ಯವಾದ ವಿಚಾರಗಳಲ್ಲಿ ಭಿನ್ನಾಭಿಪ್ರಾಯವನ್ನು ತಾಳಿ ಬೇರೆ ಪಂಗಡವನ್ನು ಕಟ್ಟುವುದು ವಿಷಾದಕರ. ಎಲ್ಲರೂ ಐಕಮತ್ಯದಿಂದ ದುಡಿದು ಕಾಂಗ್ರೆಸ್ ಪ್ರಬಲ ಸಂಸ್ಥೆಯಾಗುವಂತೆ ಮಾಡಬೇಕಾಗಿದೆ. ಸ್ವಾತಂತ್ರ್ಯ ಸಂಗ್ರಾಮ ಕಾಲದಲ್ಲಿದ್ದ ಸ್ಫೂರ್ತಿಸಾಹಸಗಳನ್ನಿಂದು ತಿರುಗೊಮ್ಮೆ ಪ್ರತಿಷ್ಠಾಪಿಸಿಕೊಳ್ಳಬೇಕು." ಎಂದರು.

ತ್ಯಾಗಿಯವರಿಗೆ ಮಂತ್ರಿಪದ

ಭಾರತ ಸರಕಾರದಲ್ಲಿ ಹೊಸತಾಗಿ ಸಹಾಯಕ ಮಂತ್ರಿಗಳಾಗಿ ಮಹಾವೀರ ತ್ಯಾಗಿಯವರು ನೇಮಕ ಹೊಂದಿರುವರು. ಅವರ ಪ್ರತಿಜ್ಞಾವಿಧಿಯು ಮೊನ್ನೆ ಹನ್ನೆರಡಕ್ಕೆ ಜರಗಿತು. ಮಹಾವೀರ ತ್ಯಾಗಿಯವರು ಆರ್ಥಿಕ ಶಾಖೆಯಲ್ಲಿ ಕೆಲಸ ಮಾಡುವರು.

ರೈಲ್ವೆಗಳ ಸಮೀಕರಣ

ಸೌತ್ ಇಂಡಿಯನ್ ರೈಲ್ವೆ, ಮದ್ರಾಸ್ ಮರಾಠಾ ರೈಲ್ವೆ ಮತ್ತು ಮೈಸೂರು ರೈಲ್ವೆಗಳನ್ನು ಒಂದುಗೂಡಿಸಿ ಅದಕ್ಕೆ ಸದರ್ನ್ ರೈಲ್ವೆ ಇಲ್ಲವೆ ದಕ್ಷಿಣ ರೈಲ್ವೆಯೆಂದು ಹೆಸರಿಸಲಾಗುವುದು. ಇದರ ಮುಖ್ಯ ಕಚೇರಿಯು ಮದ್ರಾಸಿನಲ್ಲಿದ್ದು ಹುಬ್ಬಳ್ಳಿ ತಿರುಚಿನಾಪಳ್ಳಿಗಳಲ್ಲಿ ಉಪಶಾಖೆ ತೆರೆಯಲಾಗುವುದು. ಇದು ಎಪ್ರಿಲ ತಿಂಗಳ ೧ನೇ ತಾರೀಖಿನಿಂದ ಅಸ್ತಿತ್ವಕ್ಕೆ ಬರಲಿದೆ.

ನ್ಯಾಯಮೂರ್ತಿಗಳ ಕೊಲೆಯ ಯತ್ನ

ಮೈಸೂರು ಹೈಕೋರ್ಟಿನ ನ್ಯಾಯಮೂರ್ತಿಗಳಾದ ಮೇದಪ್ಪನವರನ್ನು ವಿಷಹಾಕಿ ಕೊಲ್ಲುವ ಹಂಚಿಕೆಯೊಂದು ಜನವರಿ ತಿಂಗಳ ೨೯ಕ್ಕೆ ನಡೆಯಿತು. ಅದರಲ್ಲಿ ಮರ್ಕ್ಯುರಿ ಕ್ಲೋರಾಯಿಡ್ ಎಂಬ ತೀಕ್ಷ್ಣ ವಿಷವನ್ನು ಬೆರೆಸಿ ಕೊಡಲಾಯಿತು. ಕಾಫಿಯ ಮಧ್ಯದಲ್ಲಿಯೇ ಅವರಿಗೆ ತಿಳಿದು ಬಂತು. ಮನೆಯವರು ಹೊರಗೆ ಹೋಗಿರುವ ಕಾಲದಲ್ಲಿ ಈ ಬಗೆಯ ಕಾರಸ್ಥಾನ ನಡೆಯಿತು. ಈ ಸಂದರ್ಭದಲ್ಲಿ ಸುಪ್ರಸಿದ್ಧ ವಕೀಲರಾದ ಎಲ್. ಎಸ್. ರಾಜುರವರನ್ನು ಮೊದಲ್ಗೊಂಡು ಆರುಮಂದಿ ಪ್ರತಿಷ್ಠಿತ ವ್ಯಕ್ತಿಗಳನ್ನು ಬಂಧಿಸಲಾಗಿದೆ. ಸತ್ಯ ಹಾಗೂ ನ್ಯಾಯವನ್ನು ಹೇಳುವುದು ಯಾವಾಗಲೂ ಗಂಡಾಂತರ ಎನ್ನುವ ತತ್ವವನ್ನು ಇದು ಕಲಿಸಬಹುದೇ?

ಮಂಗಳೂರು

ಅನ್ನ ಪ್ರಶ್ನೆಯ ಸಮಸ್ಯೆ, ಇದೇ ತಾ 11ರಲ್ಲು ಮಂಗಳೂರಿನ ಕೆಂಕನ ಡಿಸ್ಪೆನ್ಸರಿಯಲ್ಲಿ ಮಹಾ ಜನ ಸಭೆಯೊಂದು ಶ್ರೀ ಎಮ್. ಎಸ್. ಶ್ರೀನಪ್ಪರ ಅಧ್ಯಕ್ಷತೆಯಲ್ಲಿ ಜರಗಿತು. ಡಾ॥ ಎಮ್, ಎಸ್ ರಮಣ, ಬಿ ಭಾ॥ ನಜರತ್, ಶ್ರೀಗಳಾದ ಎಲ್ವಿನ್ ಲೋಬೊ, ಗೋಪಾಲ ಸಾಲಿನ್ಸ, ಜೆ. ಬಿ. ಡಿ. ಸೋಜ ಮೊದಲಾದವರು ಇಲ್ಲಿನ ಆಹಾರದ ಶೋಚನೀಯ ಪರಿಸ್ಥಿತಿಯ ಕುರಿತು ಮಾತನಾಡಿ ಸರಕಾರವು ಕೆ ದುನಿನೆಂದು ಜೀವದ್ದನ್ನು ಕೊಡದಿರುವುದು ವಿಷಾದಕರವೆಂದರು. ಅನ್ನ ಪ್ರಶ್ನೆ ಸಮಸ್ಯೆಯ ಪರಿಹಾರದ ಕುರಿತು ಈ ಕೆಳಗಣ ನಿರ್ಣಯಗಳಾದುವು. 1 ಈಗ ಕೊಡುತ್ತಿರುವ ಏಳು ಟನ್ನು ಅಕ್ಕಿಯಿಂದ ಬದುಕುವುದೇ ಕಷ್ಟವಾದುದರಿಂದ ಈಗಿನ ರೇಶನ್ ಪದ್ಧತಿ ಇರುವಂತೆ ಬಿಟ್ಟು ವ್ಯಾಪಾರಸ್ಥರು ಅಕ್ಕಿ ತರುವಂತಹ ವ್ಯವಸ್ಥೆ ಮಾಡಬೇಕು 2 ಈ ಜಿಲ್ಲೆಯು ಸರಕಾರವು ಸ್ವಾವಲಂಬಿಯೆಂದು ವಿಭಾಗಿಸಿರುವುದರಿಂದ, ಕೂಡಲೇ ಎಲ್ಲಾ ರೀತಿಯ ನಿಯಂತ್ರಣಗಳನ್ನು ತೆಗೆದು ಹಾಕಿ ರೇಶನ್ ಪದ್ಧತಿಯನ್ನು ರದ್ದುಗೊಳಿಸಿ; ಜಿಲ್ಲೆಯಿಂದ ಹೊರಗೆ ಅಕ್ಕಿ, ಭತ್ತ ಹೋಗದಂತೆ ತಡೆಗಟ್ಟುವುದನ್ನೂ ಜಿಲ್ಲೆಯ ಮಟ್ಟಿಗಾದ ಸರಕಾರವು ಇವನ್ನೂ ಪ್ರಯೋಗಿಸಬೇಕು 3 ಸರಕಾರವು ಈಗಿರುವ ಎಲ್ಲ ನಿಯಂತ್ರಣಗಳನ್ನು ತೆಗೆದು ಹಾಕಿ ಪರದೇಶಗಳಿಂದ ವ್ಯಾಪಾರಸ್ಥರು ಆಹಾರ ಧಾನ್ಯ ತಂದು ಮಾರುವಂತೆ ಮಾಡಬೇಕು. ಈ ನಿರ್ಣಯಗಳನ್ನು ಕೇಂದ್ರದ ಹಾಗೂ ಪ್ರಾಂತದ ಮಂತ್ರಿಗಳೂ ಜಿಲ್ಲಾ ಕಲೆಕ್ಟರರೇ ಕಳುಹಿಸಲ್ಪಡುವುದು. ಈ ನಿರ್ಣಯಗಳಿಗಾಗಿ ಜಿಲ್ಲಾ ಕಲೆಕ್ಟರರನ್ನು ಕಾಣುವುದಕ್ಕಾಗಿಯೂ ಇತರ ಕಾರ್ಯವೆಸಗುವುದಕ್ಕಾಗಿಯೂ ಶ್ರೀಯುತರು ಎಮ್. ಎಸ್. ಶ್ರೀನಪ್ಪ, ಎಮ್. ಎಸ್. ಎ. ರಮಣ್ ಎನ್. ಗೋಪಾಲ ಸಾಲಿನ್ಸ, ಪಿ. ಫೆರ್ನಾಂಡೀಸ್, ಜೆ. ಬಿ ಡಿ. ಸೋಜ ಮೊದಲಾದವರಿರುವ ಉಪಸಮಿತಿಯೊಂದು ನೇಮಿಸಲಾಯಿತು.

ವಾರ್ಷಿಕೋತ್ಸವ- ಸೈಂಟ್ ಎಲೋಶಿಯಸ್ ಕಾಲೇಜಿನ ಕರ್ನಾಟಕ ಸಂಘದ ವಾರ್ಷಿಕೋತ್ಸವವು ಇದೇ ತಾ. 16ರಲ್ಲು 'ಜಯಂತಿ' ಪತ್ರಿಕೆಯ ಸಂಪಾದಕರಾದ ಶ್ರೀ ಬೆಟಗೇರಿ ಕೃಷ್ಣಶರ್ಮರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀ ಟಿ. ಗೋಪಾಲಕೃಷ್ಣ ಭಟ್ಟರು ಸ್ವಾಗತಭಾಷಣ ಮಾಡಿದರು. ಕಾರ್ಯದರ್ಶಿ ಶ್ರೀ ಪಿ. ಶ್ರೀನಿವಾಸರಾಯರು ವರದಿ ವಾಚನ ಮಾಡಿದ ನಂತರ ಶ್ರೀ ವೈಲಾಯರು ಸ್ವಾಗತನ ಮಾಡಿದರು. ಶ್ರೀ ನಾರಾಯಣ ಹೆಗ್ಡೆಯವರು ಉತ್ತರವಿತ್ತರು. ನಂತರ ಶ್ರೀ ಸಚ್ಚಿದಾನಂದರಾಯರು ಭಾರತದಿಂದ ಕೆಲವು ಪದ್ಯಗಳನ್ನು ಹಾಡಿದರು. ಬಳಿಕ ಪೆರಾಲ ಮಹಾಜನ ಸಂಸ್ಕೃತ ಕಾಲೇಜಿನ ಮುಖ್ಯೋಪಾಧ್ಯಾಯರು 'ಸಾಹಿತ್ಯ ಮೊಗಸಾಲೆ' ಎಂಬ ವಿಚಾರವಾಗಿಯೂ, ಪೆರಾಲ ನವಜೀವನ ಹೈಸ್ಕೂಲಿನ ಶ್ರೀ ಕೆ. ಕೆ. ರೈಗಳು 'ಸಾಹಿತ್ಯದ ಸೃಷ್ಟಿ ದೃಷ್ಟಿ' ಎಂಬ ವಿಷಯವಾಗಿಯೂ ಮಾತನಾಡಿದರು. ಅಧ್ಯಕ್ಷರು ತಮ್ಮ ಭಾಷಣದಲ್ಲಿ ಮೊದಲಿನಿಂದಲೂ ಕರ್ನಾಟಕಕ್ಕೆ ಮಂಗಳೂರು ಬಳಿಕೊಳ್ಳುತ್ತಿದ್ದುದನ್ನು ಹೇಳುತ್ತ, ಈ ಜಿಲ್ಲೆ ಇಡಿಯ ಕರ್ನಾಟಕಕ್ಕೆ ಸಲ್ಲಿಸಿದ ಸೇವೆಯನ್ನು ಸ್ಮರಿಸಿದರು. ನಾವು ಪಡೆದ ಸ್ವರಾಜ್ಯ ಧರ್ಮವನ್ನು ಬಿಟ್ಟುದರಿಂದ ನಾವಿಂದು ಈ ಪಾಡು ಪಡುತ್ತಿದ್ದೇವೆ ಎಂದು ಹೇಳುತ್ತ, ಕರ್ನಾಟಕ ಸಂಘಕ್ಕೆ ಶುಭಕೋರಿದರು. ಶ್ರೀ ಎಮ್. ಪಿ. ನಾರಾಯಣಶೆಟ್ಟರು ಧನ್ಯವಾದಗಳನ್ನರ್ಪಿಸಿದ ನಂತರ ಸಮಾರಂಭ ಕೊನೆಗೊಂಡಿತು.

ಉಪನ್ಯಾಸ—ಮಂಗಳೂರಿನ ಬಿ. ಟಿ. ಕಾಲೇಜಿನಲ್ಲಿ ಇದೇ ತಾ. 12ರಲ್ಲು ಶ್ರೀ ಬೆಟಗೇರಿ ಕೃಷ್ಣಶರ್ಮರು ಜಾನಪದ ಗೀತಗಳಲ್ಲಿರುವ ವಿಶೇಷತೆಯನ್ನು ಶಿಕ್ಷಣದ ದೃಷ್ಟಿಯಲ್ಲಿ ವಿವರಿಸಿದರು. ಆ ದಿನದ ಸಭೆಗೆ ಪ್ರಿನ್ಸಿಪಾಲ್ ಶ್ರೀ ಪಡುಕೋಣೆ ರಮಾನಂದರಾಯರು ಅಧ್ಯಕ್ಷರಾಗಿ ಭಾಷಣಕರ್ತರನ್ನು ಸ್ವಾಗತಿಸಿ ಅಭಿನಂದಿಸಿದರು.

ಸಮಾಜ ಸೇವಾ ಸಂಘದ ವಾರ್ಷಿಕೋತ್ಸವ ಮಂಗಳೂರ ಸೈಂಟ್ ಎಲೋಶಿಯಸ್ ಕಾಲೇಜಿನ ಸಮಾಜ ಸೇವಾ ಸಂಘದ ಮೂರನೆ ವಾರ್ಷಿಕೋತ್ಸವವು ಇದೇ ತಾ 14ರಲ್ಲು ಜಿಲ್ಲಾ ಬೋರ್ಡ್ ಅಧ್ಯಕ್ಷ ಶ್ರೀ ಬಿ. ಮಂಜಯ್ಯ ಹೆಗ್ಗಡೆಯವರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀ ಎ. ಸಿ ಮಥಾಯಿಸರವರ ಸ್ವಾಗತ ಮಾಡಿದ ಮೇಲೆ ಕಾರ್ಯದರ್ಶಿಗಳು ವರದಿಯನ್ನೋದಿದರು. ಈ ಸಂಘದ ನೇತೃತ್ವದಲ್ಲಿ 5 ತರಗತಿಗಳಿರುವ ಎರಡು ವಯಸ್ಕರ ಶಿಕ್ಷಣ ಕೇಂದ್ರಗಳು ಕೆಲಸ ಮಾಡುತ್ತಿವೆ, ಸಂಘವು ವಾಮಂಜೂರು, ಹರೇಕಳ ಗ್ರಾಮಗಳನ್ನೂ ತಮ್ಮ ಸೇವಾ ಕೇಂದ್ರವಾಗಿ ಆರಿಸಿ ಕೆಲಸಮಾಡುತ್ತಿದೆ. ಸದಸ್ಯರು ಅಲ್ಲಿಗೆ ಹೋಗಿ ನೈರ್ಮಲ್ಯದ ಕಾರ್ಯ ಮಾಡುವಲ್ಲದೆ ಬಡ ವಿದ್ಯಾರ್ಥಿಗಳಿಗೆ ಸ್ಲೇಟು, ಕಡ್ಡಿ, ಪೆನ್ಸಿಲು; ಸಾಬೂನು ಇತ್ಯಾದಿಗಳನ್ನು ಕೊಟ್ಟಿರುತ್ತಾರೆ. ಮತ್ತು ಹಳ್ಳಿಗರಿಗೆ ವೈದ್ಯಕೀಯ ಸಹಾಯವನ್ನೂ ಒದಗಿಸಿ ಕೊಟ್ಟಿರುತ್ತಾರೆ. ವಾಮಂಜೂರು ಹರೇಕಳ ಗ್ರಾಮಗಳಿಗೆ ಒಂದು ಅಭಿವೃದ್ಧಿ ಸಂಘವನ್ನು ಸ್ಥಾಪಿಸಿ ಆ ಮೂಲಕ ಗ್ರಾಮ ಅಭಿವೃದ್ಧಿಯಾಗಲು ಈ ಸಂಘವು ಪ್ರಯತ್ನಿಸುತ್ತಿದೆ ಈ ಸಂಘದ ಪ್ರಯತ್ನದಿಂದಾಗಿಯೇ ವಾಮಂಜೂರಲ್ಲಿ ಒಂದು ಹಾ॥ ಪ್ರಾ ಶಾಲೆಯಾಗುವ ವ್ಯವಸ್ಥೆಯಾಗಿದೆ. ಕಾರ್ಯದರ್ಶಿಗಳು ವರದಿ ಓದಿದ ಬಳಿಕ ಶ್ರೀಗಳಾದ ಬಿ ಗಂಗಾಧರದಾಸ್ ಯು. ಎಸ್. ಪರಶುರಾಮ ನಾಯಕ್, ಡಾ॥ ಕೆ. ನಾಗಪ್ಪ ಆಳ್ವ ಮೊದಲಾದವರು ಸೇವಾ ಸಂಘದ ಸದಸ್ಯರನ್ನು ಅವರ ಕೆಲಸಗಳಿಗಾಗಿ ಶ್ಲಾಘಿಸಿದರು. ಸಂಘದ ಸೇವಾ ಕಾರ್ಯದಲ್ಲಿ ಹೆಚ್ಚಿನ ಭಾಗವಹಿಸಿದ ಕೆಲವು ಸದಸ್ಯರಿಗೆ ಸರ್ಟಿಫಿಕೇಟು ಹಂಚಲಾಯಿತು. ಅಧ್ಯಕ್ಷರ ಭಾಷಣವಾಗಿ ಸಮಾರಂಭ ಕೊನೆಗೊಂಡಿತು

ವಯಸ್ಕರ ಶಿಕ್ಷಣ ಸಪ್ತಾಹವು ಮಂಗಳೂರಲ್ಲಿ ಇದೇ ತಾ. 17ರಲ್ಲು ಮಿಲಾಗ್ರಿಸ್ ಹೈಸ್ಕೂಲಿನಲ್ಲಿ ಜಿಲ್ಲಾ ಜಡ್ಜರಾದ ಶ್ರೀ ಸಿ ಕೃಷ್ಣಮೂರ್ತಿಯವರಿಂದ ಉದ್ಘಾಟಿಸಲ್ಪಟ್ಟಿತು ಎರಡನೆ, ಮೂರನೆ ದಿನಗಳಲ್ಲಿ ಶ್ರೀಗಳಾದ ದೇಜು ಉಚ್ಚಿಲ, ಕೆ. ಕೆ. ಶೆಟ್ಟಿ, ಎನ್. ಎಸ್. ಕಿಲ್ಲೆ ಮೊದಲಾದವರ ಭಾಷಣ, ನಾಟಕ, ಪ್ರದರ್ಶನ, ಮೆರವಣಿಗೆ ಇತ್ಯಾದಿ ಕಾರ್ಯಕ್ರಮಗಳಾದುವು. ತಾ. 20 ರಲ್ಲಿ ಧ್ವಜ ವಿಕ್ರಯದ ಕಾರ್ಯಕ್ರಮವಿತ್ತು.

ಶೋಚನೀಯ ಮರಣ— ಇದೇ ತಾ. 12ರಲ್ಲು ರಾತ್ರಿ ಮಂಗಳೂರಿನ ವೆಂಕಟ್ರಮಣ ದೇವಳದ ರಥೋತ್ಸವದ ವೇಳೆಯಲ್ಲಿ ಬಾಲಕನೊಬ್ಬನು ರಥದಡಿಯಲ್ಲಿ ಬಿದ್ದು ಜಖಂಗೊಂಡನು. ಒಡನೆಯೇ ಆತನನ್ನು ಆಸ್ಪತ್ರೆಗೊಯ್ಯಲಾಯಿತು. ಆದರೆ ಆತನು ದಿನಾಂಕ 14ರಲ್ಲು ಮರಣಪಟ್ಟನೆಂದು ತಿಳಿದು ಬರುತ್ತದೆ.

ಸಿಡುಬು-ನಗರದ ಕೆಲವು ಭಾಗಗಳಲ್ಲಿ ಸಿಡುಬುರೋಗ ತಲೆಯೆತ್ತಿ ಕೆಲವರಿಗೆ ಸೋಂಕಿದೆ ಆಗಿದೆ.

ಪೊಪ್ಯುಲರ್ ಇನ್ಶೂರೆನ್ಸ್ ಕಂಪೆನಿ ಲಿಮಿಟೆಡ್: ಈ ವಿಮಾ ಸಂಸ್ಥೆಯು 1950ನೆ ಡಿಸೆಂಬರ ತಾ 31ಕ್ಕೆ ಅಂತ್ಯವಾಗುವ ವರುಷದಲ್ಲಿ ರೂಪಾಯಿ 31,03,000 ಮೌಲ್ಯದ ವಿಮೆಯನ್ನು ಪೂರ್ಣಗೊಳಿಸಿರುವುದು. (1949ನೆ ವರ್ಷದ ಸಂಖ್ಯೆಯು ರೂಪಾಯಿ 30,09,650)

ಹಿಂದೀ ಪರೀಕ್ಷಾ ಕೇಂದ್ರಗಳು: ಇದೇ ತಾ 24, 25, 26ರಲ್ಲು ದಕ್ಷಿಣ ಭಾರತ ಹಿಂದೂಸ್ಥಾನಿ ಪ್ರಚಾರ ಸಭಾ, ಮದ್ರಾಸು, ಇದರ ನೇತೃತ್ವದಲ್ಲಿ ಪ್ರಾಥಮಿಕ, ಮಧ್ಯಮ, ಮತ್ತು ರಾಷ್ಟ್ರಭಾಷಾ ಪರೀಕ್ಷೆಗಳು ಮಂಗಳೂರ ಕೆನರಾ ಹೈಸ್ಕೂಲ್‌ನಲ್ಲಿಯೂ ಪ್ರವೇಶಿಕ, ವಿಶಾರದ ಮತ್ತು ಪ್ರವೀಣ ಪರೀಕ್ಷೆಗಳು ಬೆಸೆಂಟ್ ನೇಶ. ಲ್ ಗರ್ಲ್ಸ್ ಹೈಸ್ಕೂಲಿನಲ್ಲಿಯೂ ಜರಗಲಿರುವವು.

ಕುಂದಾಪುರ ಬೋರ್ಡ್ ಹೈಸ್ಕೂಲಿನ ಸ್ಕೂಲ್ ಡೇ ಸಮಾರಂಭವು ಇಲ್ಲಿಯ ಪ್ರಿನ್ಸಿಪಾಲ್ ಡಿ॥ ಮುನ್ಸಿಫ್ ಶ್ರೀ ಕೆ. ಸೀತಾರಾಮ ರಾಯರ ಅಧ್ಯಕ್ಷತೆಯಲ್ಲಿ ಇತ್ತೀಚೆಗೆ ಯಶಸ್ವಿಯಾಗಿ ಜರಗಿತು. ಹಳೆ ವಿದ್ಯಾರ್ಥಿ ಸಂಘದ ವಾರ್ಷಿಕೋತ್ಸವವೂ ಡಿಪ್ಯುಟಿ ಕಲೆಕ್ಟರ್ ಶ್ರೀ ಪಿ ಎಸ್. ತಿಮ್ಮಪ್ಪ ಸೆಟ್ಟರ ಅಧ್ಯಕ್ಷತೆಯಲ್ಲಿ ನೆರವೇರಿತು. ಕಾರ್ಕಳದ ಡಿ॥ ಮುನ್ಸಿಫ್ ಶ್ರೀ ಕೆ. ಚಂದ್ರಶೇಖರ ಹೆಗ್ಗಡೆಯವರು ಸ್ವಸ್ತಿವಾಚನ ಮಾಡಿದರು ಆರಂಭದಲ್ಲಿ ಎಡ್ವೊಕೇಟ್ ಶ್ರೀ ಮಂಜಯ್ಯ ಸೆಟ್ಟರಿಂದ ಸ್ವಾಗತ ಭಾಷಣವೂ ಶ್ರೀ ಮುತ್ತಯ್ಯ ಹೆಗ್ಡೆಯರಿಂದ ವರದಿವಾಚನವೂ ನಡೆಯಿತು. ರಾತ್ರಿ ನಾಟಕ ವಿನೋದಾವಳಿಗಳೂ ಲಘು ಉಪಹಾರವೂಯಿತ್ತು.

ಪುತ್ತೂರು ಆಲೆಟ್ಟಿ ಗ್ರಾಮದ ಕಾಡುಗಳಲ್ಲಿ ದೊಡ್ಡ ಜಾತಿಯ ಎರಡು ಹುಲಿಗಳು ಕೂಡಿಕೊಂಡು ಜಾನುವಾರುಗಳನ್ನು ಹಿಡಿದು ತಿನ್ನುತ್ತಿದ್ದುವು. ಈ ಪೈಕಿ ಒಂದು ಹುಲಿಯನ್ನು ಶ್ರೀ ಕುಡೆಕಲ್ಲು ಅಪ್ಪಯ್ಯ ಗೌಡರು ಇದೇ ತಾ 13ರಲ್ಲು ಗುಂಡಿಟ್ಟು ಕೊಂದರು ಅಂತೆಯೇ ಶ್ರೀ ಮುತ್ತಪ್ಪ ರೈಗಳು ತಾ 11ರಲ್ಲು ಮುಗಿರೆ ರೆವಿನ್ಯೂ ಕಾಡಿನಲ್ಲಿದ್ದ ಎರಡು ಹುಲಿಗಳನ್ನೂ ತನ್ನ ಕೋವಿಯಿಂದ ಕೊಂದರು.

ಕಾಸರಗೋಡು ಸ್ಥಳೀಯ ಶ್ರೀ ಮಲ್ಲಿಕಾರ್ಜುನ ದೇವಸ್ಥಾನದಲ್ಲಿ ಇದೇ ತಾ 8, 9, 10ರಲ್ಲು ಮೈಸೂರಿನ ಪ್ರಸಿದ್ಧ ಗಮಕಿಗಳಾದ ಶ್ರೀ ಕೆ. ಕೃಷ್ಣರಾಯರು ಭಾರತ ಪ್ರವಚನವನ್ನು ಇಲ್ಲಿಯ ಗೆಳೆಯರ ಬಳಗದ ಆಶ್ರಯದಲ್ಲಿ ನಾಂಗಮಗೈದು ಮಾಡಿದರು.

ಸ್ತ್ರೀಯರಲ್ಲಿ ಗುಡಿ ಕೈಗಾರಿಕೆಗಳನ್ನು ಪ್ರೋತ್ಸಾಹಿಸುವುದಕ್ಕಾಗಿ ಒಂದು ಸಹಕಾರ ಸಂಘವನ್ನು ಸ್ಥಾಪಿಸುವರೆ ಇದೇ ತಾ 10 ರಲ್ಲು ಡಾ॥ ಮಿಸೆಸ್. ಎಸ್. ಕೋಮಾಸ್ ಅವರ ಅಧ್ಯಕ್ಷತೆಯಲ್ಲಿ ಸ್ತ್ರೀಯರ ಸಭೆಯೊಂದು ಜರಗಿತು. ಸಂಘದ ಉದ್ದೇಶಗಳನ್ನು ಡಿಪ್ಯುಟಿ ರಿಜಿಸ್ಟ್ರಾರ್ ಶ್ರೀ ಪಿ. ಸಂಕಪ್ಪನವರೂ ಸೀನಿಯರ್ ಇನ್ ಸ್ಪೆಕ್ಟರ್ ಶ್ರೀ ಬಿ. ರಾಮಚಂದ್ರರಾಯರು ವಿವರಿಸಿದರು. ತಹಶಿಲ್ದಾರ್ ಶ್ರೀ ಕೆ. ಎನ್. ರಾಯರು ಮಾತನಾಡಿದ ನಂತರ ಸಂಘಸ್ಥಾಪಿಸಲಾಯಿತು.

ಕಟಪಾಡಿ-ಶೈಕ್ಷಣಿಕ ಪ್ರವಾಸವನ್ನು ಕೈಕೊಂಡು ಈಚೆಗೆ ಇಲ್ಲಿಗೆ ಬಂದಿದ್ದ ಕಾರ್ಕಳ ಎಸ್. ವಿ ಟಿ. ಗರ್ಲ್ಸ ಮತ್ತು ಬೋರ್ಡ್ ಹೈಸ್ಕೂಲಿನ ಮಕ್ಕಳಿಗೆ ಶ್ರೀ ಪಿ. ಲಕ್ಷ್ಮೀನಾರಾಯಣ ನಾಯ್ಕರು ಮತ್ತು ಭುವನೇಂದ್ರ ಪ್ರೊಫೆಸ್ಸರ್‌ನವರು ಉಪಾಹಾರಗಳನ್ನಿತ್ತು ಸತ್ಕರಿಸಿದರು.

ಬಾರಕೂರು—ಸ್ಥಳೀಯ ಭಂಡಾರಕೇರಿ ಮಠದಲ್ಲಿ ಮಧ್ವಮತದ ಸರ್ವೋತ್ತಮತ್ವವನ್ನು ಪ್ರತಿಪಾದಿಸುವ ಪಂಡಿತರ ಸಭೆಯು ಇದೇ ತಾ. 13, 14, 15ರಲ್ಲು ಜರಗಿತು. ಕರ್ನಾಟಕದ ಅನೇಕ ಭಾಗಗಳಿಂದ ವಿದ್ವಾಂಸರು ಬಂದಿದ್ದರು. ವಿದ್ಯಾರ್ಥಿಗಳಿಗೆ ಮಧ್ವಮತ ಗ್ರಂಥಗಳಲ್ಲಿ ಪರೀಕ್ಷೆ ನಡೆಯಿತು. ಪಂಡಿತರ ಭಾಷಣಗಳಾದುವು. ಶ್ರೀ ಭಂಡಾರಕೇರಿ ಮಠದ, ಶ್ರೀ ಪೇಜಾವರ ಮಠದ ಶ್ರೀ ಪಾದಂಗಳವರು ಸ್ವಾಮಿಗಳವರು ವಿಷ್ಣು ಸರ್ವೋತ್ತಮತ್ವದ ಕುರಿತು ಉಪನ್ಯಾಸಗಳನ್ನು ಮಾಡಿದರು. ಪಂಡಿತ ಮತ್ತು ವಿದ್ಯಾರ್ಥಿವೃಂದಕ್ಕೆ ಯೋಗ್ಯತಾನುಸಾರ ಸಂಭಾವನೆ ಕೊಡಲಾಯಿತು.

ಉಡುಪಿಗೆ ಹೋಗಬೇಕೇ! ಆದರೆ ಉಳಿದುಕೊಳ್ಳುವುದೆಲ್ಲಿ?

ರಾಯಲ್ ಮಹಾಲಿನಲ್ಲಿ

ಬಸ್ ಸ್ಟೇಂಡಿಗೆ ಅತಿ ಸಮೀಪ! ಕೃಷ್ಣಮಠಕ್ಕೆ ದೂರವಿಲ್ಲ!

ವ್ಯಾಪಾರ ವ್ಯವಹಾರ ವಿಹಾರಸ್ಥಳಗಳಿಗೆಲ್ಲ ಕೇಂದ್ರ!

ನಿಮ್ಮ ಸ್ನಾನ, ಊಟ, ಉಪಹಾರ, ಬೈಠಕ್, ಶಯನ ಇವಕ್ಕೆಲ್ಲ ಉತ್ತಮ ವ್ಯವಸ್ಥೆ

ಕರೆದರೆ ಓಗೊಡುವ ನೌಕರ ವರ್ಗ!

ಮೇಲಾಗಿ ಉಡುಪಿ ಬ್ರಾಹ್ಮಣರ ಅಡಿಗೆ, ತಿಂಡಿತಿನಸು, ಇವುಗಳ ರುಚಿರುಚಿ ಹೇಳಬೇಕೆ?

ಪ್ರೊಪ್ರೈಟರ್:— ಕೆ. ವೆಂಕಟ್ರಮಣಭಟ್.

For up-to-date Lodging & Boarding

ROYAL MAHAL,

UDIPI, S. Kanara.

ನಿಮಗಿದು ಗೊತ್ತೇ?

ನಿಮ್ಮ ಮನೆಯಲ್ಲಿ ಆಗಾಗ ಆಗಮಿಸುವ ವಾತರೋಗದ ಉಪದ್ರವಗಳಾದ— ಉದರಶೂಲೆ, ಕಟಿಶೂಲೆ, ಕೈಕಾಲುಗಳಲ್ಲಿ ನೋವು, ಜಡತೆ, ಅಜೀರ್ಣ, ಹೊಟ್ಟೆಯುಬ್ಬರ, ಅಗ್ನಿಮಾಂದ್ಯ ಮುಂತಾದ ಎಲ್ಲಾ ಉಪದ್ರವಗಳಿಗೂ ರಾಮಬಾಣ ಯಾವುದು ಗೊತ್ತೇ? ಕಳೆದ ಇಪ್ಪತ್ತೈದು ವರುಷಗಳ ವಿಶಾಲ ಅನುಭವದಿಂದ ಸಶಾಸ್ತ್ರೀಯವಾಗಿ ತಯಾರಿಸಲ್ಪಟ್ಟ—

ಸ್ವದೇಶಿ ಔಷಧ ಭಂಡಾರ (ರಿಜಿಸ್ಟರ್ಡ್)

ಪೋ. ಕುಂಜಾಲು, ದ. ಕ.

ಇವರ 'ಧನ್ವಂತರೀ ಮಾತ್ರೆ'ಗಳು ಮಾತ್ರ.

ಕೇವಲ ನಾಲ್ಕಾಣೆಯ ಅಂಚೆಚೀಟನ್ನು ಕಳುಹಿಸಿ ಆರು ಮಾತ್ರೆಗಳ ಒಂದು ಪ್ಯಾಕೇಟನ್ನು ಪಡೆದು ಅದರ ಶೀಘ್ರ ಪರಿಣಾಮಕಾರೀ ಗುಣಗಳನ್ನು ಕಂಡುಕೊಳ್ಳಬಾರದೇಕೆ? ಇಂದೇ ಬರೆಯಿರಿ.

ಸಹಕಾರಿ ಸಂಘಗಳಿಗೆ—

ಮುನ್ಸಿಫ್ ಕೋರ್ಟುಗಳಿಗೆ—

ವರ್ತಕರಿಗೆ—ಶಾಲೆಗಳಿಗೆ—

ಬೇಕಾಗುವ ರಿಜಿಸ್ಟರುಗಳು,

ರಶೀದಿ ಪುಸ್ತಕಗಳು,

ಫಾರ್ಮುಗಳೂ, ಎಕೌಂಟ್ ಪುಸ್ತಕಗಳೂ ದೊರೆಯುತ್ತವೆ.

ನವಯುಗ ಪ್ರೆಸ್ ಉಡುಪಿ.

"ಸ್ವಾತಂತ್ರ್ಯ ಬಂತು. ನಮ್ಮದೇ ಸರಕಾರಗಳು ಅಧಿಕಾರದ ಗದ್ದುಗೆಯನ್ನೇರಿದವು. ಆದರೆ ದೇಶದ ಪರಿಸ್ಥಿತಿ ಇನ್ನೂ ಸರಿಗೊಂಡಿಲ್ಲ. ಉಣಲು ಅನ್ನ, ಉಡಲು ವಸ್ತ್ರ, ಉಳಕೊಳ್ಳಲು ಮನೆ ಇವೇ ಮೊದಲಾದ ಮಾನವನ ಮೂಲಭೂತ ಅವಶ್ಯಕತೆಗಳೂ ದೊರೆಯದೆ ಬಳಲುವುದೂ ಒಂದು ಸ್ವಾತಂತ್ರ್ಯವೇ? ಇವುಗಳನ್ನು ಒದಗಿಸಿಕೊಡಲಾರದುದೂ ಒಂದು ಸರಕಾರವೇ?" ಈ ಉದ್ಗಾರಗಳನ್ನು ಇಂದು ನಾವು ದಿನಂಪ್ರತಿ ಕೇಳುತ್ತಿದ್ದೇವೆ. ಹಾದಿ, ಹೊಟೇಲು, ವೇದಿಕೆ, ಪತ್ರಿಕೆ ಮೊದಲಾದವುಗಳಲ್ಲಿ ಇವೇ ಮಾತು. ಇವೇ ವಿಮರ್ಶೆ. ಇವುಗಳ ಜೊತೆಗೆ ಇನ್ನೂ ಕೆಲವಾತುಗಳು ಕೇಳಿಬರುತ್ತಿವೆ. ಅವು ಈ ಪರಿಸ್ಥಿತಿಗೆ ಕಾರಣ ಮತ್ತು ಪರಿಹಾರ. ಈ ಕೊನೆಯ ಮಾತನ್ನಾಡುವವರಲ್ಲಿ ಎರಡು ಬಣಗಳಿವೆ. ಒಂದು ಬಣ ಎನ್ನುತ್ತಿದೆ "ಈ ಎಲ್ಲಾ ಅನಾಹುತವೂ ಬ್ರಿಟಿಷ್ ಸರಕಾರ ತೆರಳಿದುದರಿಂದಲೇ! ಬಿಳಿಯರ ಸರಕಾರ ಇರುವಾಗ ಇಂತು ಇತ್ತೇನು? ನಮ್ಮ ಸರಕಾರಗಳಿಗಿಂತ ಹಿಂದಿನ ಸರಕಾರ ಸಾವಿರ ಪಾಲು ಮೇಲು" ಎಂದು. ಇನ್ನೊಂದು ಬಣ ಎನ್ನುತ್ತಿದೆ "ಈ ಎಲ್ಲಾ ಅವ್ಯವಸ್ಥೆಗಳಿಗೆ ಕಾರಣ ಇಂದಿನ ಸರಕಾರ. ಎಲ್ಲವೂ ಸರಿಹೋಗಿ ರಾಷ್ಟ್ರ ಶಾಂತಿ ತುಷ್ಟಿಪುಷ್ಟಿಗಳ ತವರುಮನೆಯಾಗಲು ಈ ಸರಕಾರವನ್ನು ಉರುಳಿಸಿ ನಮ್ಮ ಪಕ್ಷವನ್ನು ಅಧಿಕಾರದ ಗದ್ದುಗೆಗೆ ಏರಿಸುವುದೊಂದೇ ದಾರಿ" ಎಂದು.

ನಮ್ಮ ಉನ್ನತಿ ಯಾರಿಂದ?

ಲೇಖಕರು— ಏಸ ಲಕ್ಷ್ಮೀನಾರಾಯಣ ಆಳ್ವ

ಇಲ್ಲಿ ನಾವು ಮೊದಲನೇ ಬಣದವರ ಕುರಿತಾಗಿ ವಿಚಾರಿಸುವುದು ಅಗತ್ಯವಿಲ್ಲ. ಅವರು ನಿರಾಶಾವಾದಿಗಳು. ಅವರ ಸುಖ ಸಂತೋಷಗಳ ಸ್ವರ್ಗ ಬಿಳಿಯರ ಹಿಂದಿನಿಂದಲೇ ನಡೆದುಬಿಟ್ಟಿವೆ. ಈಗ ಎಲ್ಲವೂ ಬರಿದು; ತೆರವು! ಅವರ ಮುಂದೂ ಕತ್ತಲೆಯೇ. ಅಂತೆಂದೇ ಕಾಲದ ಹಿಂದುಳಿದ ಈ ನಿರಾಶಾವಾದಿಗಳ ಮಾತು ಇಲ್ಲಿ ಅನಗತ್ಯ ಎಂದುದು.

ಇನ್ನು ಎರಡನೇ ಬಣದವರ ಮಾತು. ಅವರ ಮಾತಿನಂತೆ ದೇಶದ ಎಲ್ಲಾ ಅಪೂರ್ಣತೆ ಅವ್ಯವಸ್ಥೆಗಳಿಗೆ ಅವರ ಪಕ್ಷ ಪಟ್ಟವೇರದಿರುವುದೇ ಕಾರಣ. ಅವರ ಪಕ್ಷ ಅಧಿಕಾರಕ್ಕೆ ಬಂದರೆ ಸ್ವರ್ಗ ಲೋಕದ ನಂದನವನವನ್ನೇ ಎಳೆದು ತರುತ್ತದೆ! ಹೊನ್ನಿನ ಮಳೆ ಬೀಳುತ್ತದೆ! ಹಾಲ್ಜೇನುಗಳ ಪ್ರವಾಹ ಹರಿಯುತ್ತದೆ ನಾಡಿನಲ್ಲಿ! ಈ ಮಾತಿನವರುಲ್ಲರು ಮೊದಲನೇ ಬಣದವರಂತೆ ನಿರಾಶಾವಾದಿಗಳಲ್ಲವೇನೋ ನಿಜ. ಆದರೆ......?

ಈ ಎರಡನೇ ಬಣದಲ್ಲೂ ಎರಡು ವರ್ಗಗಳಿವೆ. ಒಂದು ಅಜ್ಞರದು, ಇನ್ನೊಂದು ಜಾಣರದು. ತಿಳಿಯದಿದವರ ಅಥವಾ ಹಾದಿಬೀದಿಯ ಮಾತುಕೇಳಿ ಮಾತಾಡುವ ಅರಿಯದ ಜನತೆ. ಇನ್ನೊಂದು ಎಲ್ಲವನ್ನೂ ತಿಳಿದು ತಮ್ಮದೋ ಯಾ ತಮ್ಮ ಪಕ್ಷದ್ದೋ ಲಾಭಕ್ಕಾಗಿ ಪರಿಸ್ಥಿತಿಯ ಸದುಪಯೋಗ ಪಡೆಯುವ ಮಂದಿ.

ಇಲ್ಲೂ ನಾವು ಮೊದಲನೇ ವರ್ಗದವರ ವಿಚಾರ ಚರ್ಚಿಸುವ ಆವಶ್ಯವಿಲ್ಲ. ಅವರಿಗೆ ನಿಜಸ್ಥಿತಿಯ ಅರಿವಿರುವುದಿಲ್ಲ. ಪಾಪ! ತಾವೇ ತಿಳಿದುಕೊಳ್ಳುವನಿತು ವಿದ್ಯೆ ಜ್ಞಾನಗಳಿರುವುದಿಲ್ಲ. ಇಂತಿರುವಾಗ ಅವರು ಹೇಳಿದವರ ಬೆನ್ನಹಿಂದೆ ಸಾಗಿ ಅವರ ಮಾತನ್ನೇ ಪ್ರತಿಧ್ವನಿಸುವುದರಲ್ಲಿ ಆಶ್ಚರ್ಯವಿಲ್ಲ. ಅವರ ಕುರಿತು ನಾವು ಕನಿಕರಪಡಬೇಕು. ಅವರನ್ನು ಕಂಡು ನಮ್ಮ ದೇಶದ ಅವಿದ್ಯೆ ಅಜ್ಞಾನಗಳ ಬಗೆಗೆ ದುಃಖ ಪಡಬೇಕು ಅಷ್ಟೆ.

ಎರಡನೇ ವರ್ಗವಾದರೋ ಎಲ್ಲವನ್ನೂ ಅರಿತ ಸಂದರ್ಭಸಾಧಕರ ತಂಡ ಸ್ವಾರ್ಥಿಗಳ ಗುಂಪು. ಇವರಲ್ಲೂ ಎರಡು ವಿಧದ ಜನ ಇದ್ದಾರೆ. ಒಂದು ತನ್ನದೇ ಲಾಭಕ್ಕಾಗಿ ಜಣಗಾಡುವವರು, ಇನ್ನೊಂದು ಪಕ್ಷದ ಲಾಭಕ್ಕಾಗಿ. ದೇಶದ ದೃಷ್ಟಿಯಿಂದ ಎರಡೂ ಒಂದೇ. ಇಬ್ಬರೂ ದೇಶವನ್ನು ಬಲಿಕೊಡಲು ಸಿದ್ಧರೇ. ಬೇದವಿಷ್ಟೇ ಒಬ್ಬರು ತಮಗಾಗಿ, ಇನ್ನೊಬ್ಬರು ಪಕ್ಷಕ್ಕಾಗಿ. ಅಂತೂ ತಮ್ಮ ಲಾಭದ ಮುಂದೆ ಅವರು ಯಾವುದನ್ನೂ ಯೋಚಿಸುವುದಿಲ್ಲ. ಆದರೆ ಪ್ರಚಾರ ಮಾಡುತ್ತಾರೆ "ಪ್ರಪಂಚದ ಸುಖಶಾಂತಿಗಳೇ ನಮ್ಮ ಧ್ಯೇಯ!" ಎಂದು ಈ ಸುಳ್ಳು ಪ್ರಚಾರದ ಮೂಲಕವೇ ಅವರು ಅಜ್ಞ ಜನತೆಯನ್ನು ಅಡ್ಡಹಾದಿ ಹಿಡಿಯಿಸಿ ತಮ್ಮ ಕಾರ್ಯವನ್ನು ಸಾಧಿಸಿಕೊಳ್ಳುತ್ತಾರೆ.

ಹೀಗೆನ್ನುವಾಗ ಇಂದಿನ ಸರಕಾರ ದೇಶದಲ್ಲಿ ಹಾಲ್ಜೇನಿನ ಹೊಳೆ ಹರಿಯಿಸಿದೆ ಎಂದಾಗಲೀ ನಮಗೆ ಮುಕ್ತಿಯೊಂದಾಗಲೀ ನಾವು ಹೇಳುತ್ತಿಲ್ಲ.

ಹಾಗಾದರೆ ನಮ್ಮ ಉನ್ನತಿ ಯಾರಿಂದ?

ಒಂದು ದೇಶದ ಉನ್ನತಿಯಾಗ ಬೇಕಾದರೆ ಜನರು ಉತ್ಸಾಹಿಗಳಾಗಿ ಸರಕಾರಗಳಿಗೆ ಸಕ್ರಿಯ ಸಹಕಾರ ನೀಡದೆ ನಿರ್ವಾಹವಿಲ್ಲ. ದೇಶದ ಪ್ರಗತಿಯಲ್ಲಿ ಸಾಮಾನ್ಯ ಜನತೆಯ ಪಾತ್ರ ಹಿರಿದು. ಬಹಳ ಹಿರಿದು. ಜನರ ಕ್ರಿಯಾಶೀಲತೆಯೇ ದೇಶದ ಪ್ರಗತಿಯನ್ನು ಸಾಧಿಸಬಲ್ಲದು. ಹೀಗೆ ವ್ಯಕ್ತಿಯ ಉನ್ನತಿಯೇ ದೇಶದ ಪ್ರಗತಿ, ದೇಶದ ಪ್ರಗತಿಯೇ ವ್ಯಕ್ತಿಯ ಉನ್ನತಿ. ಇದನ್ನೇ ಸ್ವಾಮಿ ವಿವೇಕಾನಂದರು "ವ್ಯಕ್ತಿಯ ಹಿತವನ್ನು ಉಳಿಸಿಕೊಳ್ಳುವುದಕ್ಕಾಗಿಯೇ ಒಬ್ಬನು ಮೊದಲು ಸಮಷ್ಟಿಯ ಹಿತವನ್ನು ನೋಡುತ್ತಾನೆ. ದೇಶದ ಹಿತದಲ್ಲಿ ವ್ಯಕ್ತಿಯ ಸುಖ ಅಡಗಿದೆ" ಎಂದು ತಮ್ಮ ವರ್ತಮಾನ ಭಾರತ ಎಂಬ ಪ್ರಬಂಧದಲ್ಲಿ ಬರೆದಿದ್ದಾರೆ.

ಅಂತಿದ್ದರೆ ನಾವು ನಮ್ಮ ಉನ್ನತಿಯನ್ನು ಸಾಧಿಸಿಕೊಳ್ಳುವುದರಿಂದಲೇ ದೇಶವನ್ನೂ ಎತ್ತಬಲ್ಲೆವು. ಆದರೆ ನಮ್ಮ ಉನ್ನತಿಯ ಮಾರ್ಗ ತಾತ್ಕಾಲಿಕ ಯಾ ರಾಜಕೀಯವಾಗಿದಾರದು, ಅಂತಾದರೆ ಎಲ್ಲವೂ ತಿರುವುಮುರುವಾದೀತು. ನಮ್ಮ ಹಾದಿ ಸಾತ್ವಿಕವಾಗಬೇಕು. ನಾವು ನಡೆಯಬೇಕಾದ ಹಾದಿಯನ್ನು ಇನ್ನಾರಾದರೂ ನಡೆದು ನಮ್ಮನ್ನು ಗುರಿಸೇರಿಸಬಲ್ಲರೇ? ನಾವು ಗುರಿಸೇರಬೇಕಿದ್ದರೆ ನಾವೇ ನಡೆಯಬೇಕು. ನಮ್ಮ ಉನ್ನತಿಯನ್ನು ನಾವೇ ಸಾಧಿಸಿಲ್ಲದೆ ತೀರದು. ಇದನ್ನೇ ಗೀತೆಯಲ್ಲಿ "ನಮ್ಮ ಉದ್ಧಾರವನ್ನು ನಾವೇ ಸಾಧಿಸಿಕೊಳ್ಳಬೇಕು" ಎಂದಿದೆ. ಆದುದರಿಂದಲೇ ನಾವು ಸೋಮಾರಿಗಳಾಗದೆ ದಿನರಾತ್ರಿ ದುಡಿಯಬೇಕು. ಸ್ವಾಮಿ ರಾಮ ಕೃಷ್ಣಾನಂದರು ಒಮ್ಮೆ ಹೇಳಿದ್ದಾರೆ. "ಎಂದೆಂದಿಗೂ ಸೋಮಾರಿಯಾಗಬೇಡ ಸೋಮಾರಿತನವೇ ಹೀನ ಆಲೋಚನೆಗೆ ಮೂಲ. ನಿನ್ನ ಕರ್ತವ್ಯ ಪರಾಯಣತೆಯಲ್ಲಿ ಜಾಗ್ರತನಾಗಿರು. ಒಳಗಿರುವ ಸೋಮಾರಿತನವನ್ನೆಲ್ಲ ತೊಡೆದು ಹಾಕು. ಉದ್ವೇಗದಿಂದ ಏನೂ ಪ್ರಯೋಜನವಿಲ್ಲ. ಕಷ್ಟಪಟ್ಟು ಸಾಧನೆಮಾಡು. ನಿನ್ನ ಸ್ವಂತ ಶಕ್ತಿಯ ಮೇಲೆ ನಿಲ್ಲು. ಯಾರು ತಾವೇ ಕೆಲಸ ಮಾಡುವರೋ ಅವರಿಗೆ ದೇವರೇ ಸಹಾಯಮಾಡುವನು" ಎಂದು ಈ ಮಾತುಗಳು ನಮ್ಮ ಚಿತ್ತದ ಭಿತ್ತಿಯಲ್ಲಿ ಅಚ್ಚೊತ್ತಿದಂತೆ ಅಚ್ಚಳಿಯದೆ ಉಳಿಯಬೇಕು. ಎಂತಹ ಬಿರುಗಾಳಿ ಮಳೆಗಳಲ್ಲೂ ಕಾಂತಿಗುಂದದೆ ಪಜ್ವಲಿಸುವ ಜ್ಞಾನದ ಬೆಳಕೂ, ಎಂತಹ ಗಂಡಾಂತರ ಪರಿಸ್ಥಿತಿಯಲ್ಲೂ ದಿಕ್ಕೆಡದೆ ದುಡಿದು ಬಾಳುವ ಕೆಚ್ಚೂ ನಮ್ಮಲ್ಲಿರಬೇಕು. ಅಂತಿದ್ದರೆ ನಮ್ಮ ಉನ್ನತಿಯೂ ದೇಶದ ಪ್ರಗತಿಯೂ ಜತೆಗೂಡಿ ನಡೆದೀತು. ಇವುಗಳನ್ನು ಗಳಿಸುವುದಕ್ಕಾಗಿ ನಾವು ಹಗಲಿರುಳು ಶ್ರಮಿಸೋಣ. ಇದಕ್ಕಾಗಿ ಬೇರೆ— ಅದು ವ್ಯಕ್ತಿ, ಪಕ್ಷ, ಸಮಾಜ, ಸರಕಾರ ಯಾವುದೇ ಇರಲಿ— ಮೊಗ ನೋಡುತ್ತಾ ಕುಳಿತುಕೊಳ್ಳುವುದು ಹೇಡಿತನ ಮತ್ತು ಹಾಸ್ಯಾಸ್ಪದ. ಪರರನ್ನು ನಂಬಿ ಕುಳಿತರೆ ನಮ್ಮ ಉನ್ನತಿ ಗಗನ ಕುಸುಮವಾದೀತು. ನಮ್ಮ ಉನ್ನತಿಯನ್ನು ನಾವೇ ಸಾಧಿಸಬೇಕು ನಾವೇ ಸಾಧಿಸಬಲ್ಲೆವು.

"ಗೋಪಾಲ ಭೇಷಜಾಶ್ರಮ" ಮಂಗಳೂರು.

(ಸ್ಥಾಪನೆ 1910)

ಸ್ಥಾಪಕರು:- ಆಯುರ್ವೇದ ಭೂಷಣ ಯಂ. ವಿ. ಶಾಸ್ತ್ರೀ,

ಬಾಣಂತಿಯರ ಸಲುವಾಗಿಯೇ ದೇಶ ಮತ್ತು ಪ್ರಕೃತದ ದೇಹಸ್ಥಿತಿಯನ್ನು ನಿರ್ಣೈಸಿ ತಯಾರಿಸಲ್ಪಟ್ಟ ಅಮೋಘವಾದ ಮಧುರದ್ರವ ರಸಾಯನ. ಅಲ್ಪ ಮಾಲ್ಯದಿಂದ ಬಡವರಿಗೂ, ಭಾಗ್ಯಶಾಲಿಗಳಿಗೂ ಸುಲಭವಾಗಿರುವುದು.

ಇವರ ನವಜೀವಾತು ಎಂಬ ಸೂತಿಕಾ ರಸಾಯನ

ಹೆಚ್ಚಿನ ಮಾಹಿತಿಗೆ— ಡಾ| ಯಂ ಸಿ. ಶಾಸ್ತ್ರೀ, ಯಲ್. ಐ.
ಕೊಡಿಯಾಲಬೈಲ ಪೋಸ್ಟು, (ಮಂಗಳೂರು)
ಸ್ಥಾನಿಕ ಸ್ವರು:— ಡಾ| ಐ. ಕೆ. ಶಿವರಾಮರಾವ್, ಕುಂಜಿಬೆಟ್ಟು, ಉಡುಪಿ.

ಗೊನೋರಿಯಾ ಪರಮಾರೋಗ ಉಷ್ಣ ರೋಗಕ್ಕೆ ಔಷಧ

೭ ದಿವಸಗಳಲ್ಲಿ ಈ ರೋಗ ಗುಣ ಹೊಂದುವದು ಗ್ಯಾರಂಟಿ
ಶರೀರದಿಂದ ಕೀವು ಬರುತ್ತಿದ್ದರೆ, ಮೂತ್ರಕ್ಕೆ ಹೋದಾಗ ಹತ್ತುತ್ತಿದ್ದರೆ, ಶರೀರದಿಂದ ಬಾವು ಶರೀರದ ತೊಗಲು ಹಿಂದಕ್ಕೆ ಸರಿಯದಿದ್ದರೆ, ಶರೀರದ ಸುಳ್ಳು ಭಾಗವಾಗಿದ್ದರೆ.... ಚಟ್ಟಿ ಬಿದ್ದಿದ್ದರೆ, ಉಷ್ಣದಿಂದ ಚೀರು ಇಳಿದಿದ್ದರೆ, ಉಷಾಚು ಆಗಿದ್ದರೆ, ಮೂಲವ್ಯಾಧಿ, ಭಗೇಂದ್ರ, ಗಂಡಮಾಲಿ, ಕೈಕಾಲು ಸೂಲಿ, ಅರ್ಧಾಂಗವಾಯು ಸಮುಸೋಯುವದು ಸ್ತ್ರೀಯರ ಬಿಳಿಕೆಂಪು ಸೆರಗು ಹೋಗುತ್ತಿದ್ದರೆ, ಹೊಲಿಕಟು ಗರ್ಭಿಯಿಂದ ಗರ್ಭಕೋಶ ನಾಶಹೊಂದಿದ್ದರೆ, ಸರಿಯಾಗಿ ಭೇದಿಯಾಗದಿದ್ದರೆ, ಮೂತ್ರ ಉರಿಯುತ್ತಿದ್ದರೆ, ಈ ಎಲ್ಲಾ ಬೇನೆಗಳಿಗೆ ಈ ನಮ್ಮ ಔಷಧವು ಇರುವುದು. ಮೊದಲ ದಿವಸ ಬೆಳಿಗ್ಗೆ ೧ ಗಂಜಿ ಪ್ರಮಾಣ ಔಷಧ ಅರ್ಧತೊಲಿ ತುಪ್ಪದಲ್ಲಿ ತಕ್ಕೊಳ್ಳಬೇಕು ಮೊದಲ ದಿವಸ ಮಾತ್ರ ಮುಂಜಾನೆ ಸಂಜೆ ಎರಡು ಸಾರೆ ತಕ್ಕೊಳ್ಳಬೇಕು. ಮುಂದೆ ದಿನ ದಿವಸ ಬೆಳಿಗ್ಗೆ ಒಂದೇ ಸಾರೆ ೭ ದಿವಸ ಸೇವಿಸಬೇಕು. ಈ ಔಷಧವನ್ನು ಬೇಸಿಗೆಯಲ್ಲಿ ತುಪ್ಪದಲ್ಲಿ, ಥಂಡಿ ಮಳೆಗಾಲದಲ್ಲಿ ಜೇನತುಪ್ಪದಲ್ಲಿ ತಕ್ಕೊಳ್ಳಬೇಕು. ಪಥ್ಯ: ಹುಳಿ, ಖಾರ, ಬದನೆಕಾಯಿ, ಒಳ್ಳೆಣ್ಣೆ ಬಿಡಬೇಕು.

ಬಾಟ್ಲಿ ೧ಕ್ಕೆ ೫ರೂ. ಪೋಸ್ಟ ಚಾರ್ಜ ೮ ಆಣೆ

ಏಜೆಂಟರು:— ಗದಗ:— ಗದಗ ಫಾರ್ಮಸಿ, ಹುಬ್ಬಳ್ಳಿ:— ಹುಬ್ಬಳ್ಳಿ ಫಾರ್ಮಸಿ, ಬಾಗಲಕೋಟೆ:- ಬಾಗಲಕೋಟೆ ಫಾರ್ಮಸಿ, ಧಾರವಾಡ:- ಧಾರವಾಡ ಫಾರ್ಮಸಿ, ದಾವಣಗೇರಿ: ದಾವಣಗೇರಿ ಪ್ರೆಸ್. ನಂಜುಂಡೇಶ್ವರ ಮೆಡಿಕಲ್ ದಾವಣಗೇರಿ.

ಪತ್ರವ್ಯವಹಾರ ಮಾಡತಕ್ಕ ಮಾಲಕರ ವಿಳಾಸ.
ಶಿವಬಸಿದ್ದಪ್ಪ ಹಾಲಪ್ಪ ದಾವಣಗೇರಿ,
ಆಯುರ್ವೇದ ಔಷಧಾಲಯ, ಗದಗ.



ಪಂಚಾಯತ ಬೋರ್ಡು,
ಗ್ರಾಮ ಕಮಿಟಿ, ಶಾಲಾ ಕಾಲೇಜು
ಮೊದಲಾದವುಗಳ

ಲೈಬ್ರರಿಗಳಿಗೆ

ಬೇಕಾಗುವ ಕರ್ನಾಟಕದ ಎಲ್ಲಾ ಭಾಗಗಳ ಕನ್ನಡ ಪುಸ್ತಕಗಳು ನಮ್ಮಲ್ಲಿ ದೊರೆಯುತ್ತವೆ.

ವಿಚಾರಿಸಿ:—
ನವಭಾರತ ಪುಸ್ತಕ ಭಂಡಾರ
ಉಡುಪಿ ಅಥವಾ
ನವಯುಗ ಪ್ರೆಸ್, ಉಡುಪಿ.

ವಾರದ ಹರಟೆ

ಶ್ರೀ ‘ಯು. ವಿ.’

ಈ ನಮ್ಮ ದೇಶದಲ್ಲಿ ಎಲ್ಲೆಲ್ಲಿಯೂ ಜನಗಣತಿ ಆಗುತ್ತಿದೆ. ಇದು ಮಾರ್ಚಿ ೧೫ ವರೆಗಿದೆ. ಇಷ್ಟರೊಳಗೆ ಜನಗಣತಿ ಮಾಡುವವರು ನಿಮ್ಮಲ್ಲಿಗೆ ಒಂದೆರಡು ಸಲ ಬಂದಿರಬೇಕು. ನಿಮ್ಮ ಹೆಸರು, ಪ್ರಾಯ, ಮದುವೆಯಾಗಿದೆಯೋ, ಓದುಬರಹ ಗೊತ್ತಿದೆಯೋ, ಜೀವನೋಪಾಯ ಏನಿದೆ ಎಂದೆಲ್ಲಾ ಪ್ರಶ್ನೆಗಳನ್ನು ಕೇಳಿ ಉತ್ತರ ಬರೆದುಕೊಂಡಿರಬೇಕು. ಹೀಗೆ ಹತ್ತು ವರುಷಕ್ಕೊಮ್ಮೆ ಜನಗಣತಿ ಮಾಡುವ ಕ್ರಮವಿದೆ.

೦೦೦

ಹತ್ತು ವರ್ಷಕ್ಕೊಮ್ಮೆ ಜನಗಣತಿ ಮಾಡುವುದರ ಉಪಯೋಗ ಈಗ ಎಲ್ಲರಿಗೂ ತಿಳಿದಿದೆ. ಒಂದು ರಾಷ್ಟ್ರದ ಆಡಳಿತೆಯನ್ನು ಸುಸೂತ್ರವಾಗಿ ನಡೆಯಿಸಬೇಕಾದರೆ ಆ ರಾಜ್ಯದಲ್ಲಿರುವ ಜನರೆಷ್ಟು? ಅವರ ಉದ್ಯೋಗವೇನು? ಇತ್ಯಾದಿ ವಿಷಯಗಳು ಅವಶ್ಯವಿದೆ. ಮನೆಯಲ್ಲಿ ಊಟಕ್ಕೆ ಎಷ್ಟು ಜನರಿದ್ದಾರೆಂದು ತಿಳಿದರೇನೇ ವರ್ಷಕ್ಕೆ ಊಟಕ್ಕೆ ಎಷ್ಟು ಅಕ್ಕಿ ಒದಗಿಸಬೇಕೆಂದು ಮನೆಯ ಯಜಮಾನನಿಗೆ ಅರಿಯುವುದು. ಒಂದು ಶಾಲೆಯಲ್ಲಿ ಓದುವ ಹುಡುಗರೆಷ್ಟು ಎಂಬ ಅಂದಾಜು ಇಲ್ಲದ ಉಪಾಧ್ಯಾಯನು ಆ ಶಾಲೆಯ ಆಡಳಿತೆಯನ್ನು ಸರಿಯಾಗಿ ನಡೆಯಿಸಲಾರನು.

೦೦೦

ನಮ್ಮ ದೇಶದಲ್ಲಿ ಈ ಶತಮಾನದ ಆದಿಯಲ್ಲಿ ೩೦ ಕೋಟಿ ಜನರಿದ್ದರು. ನಂತರ ೪೦ ಕೋಟಿ ಜನರಾದರು. ಆಗ ದೇಶ ವಿಭಾಗವಾಯಿತು, ಸುಮಾರು ೧೦ ಕೋಟಿ ಜನರಿರುವ ಭಾಗವನ್ನು ಪಾಕಿಸ್ತಾನವೆಂದು ಉಳಿದ ಭಾಗವನ್ನು ಭಾರತವೆಂದು ಕರೆದರು. ಭಾರತದ ಒಂದಂಶವನ್ನು ಪ್ರತ್ಯೇಕಿಸಿದ ಮೇಲೂ ಉಳಿದ ಭಾಗವು ಭಾರತವಾಗಿರುವುದು ಹೇಗೆಂದು ಕೆಲವರು ಪ್ರಶ್ನಿಸುತ್ತಾರೆ. ೪೦ ಕೋಟಿ ಜನರಿರುವಲ್ಲಿಂದ ೧೦ ಕೋಟಿ ಜನರನ್ನು ಪ್ರತ್ಯೇಕಿಸಿದರೂ ಪುನಃ ನಮ್ಮಲ್ಲಿ ೪೦ ಕೋಟಿ ಜನರೇ ಇರುತ್ತಾರೆ. ಆದುದರಿಂದಲೇ ಉಳಿದ ಅಂಶವು ಭಾರತವೆಂದೇ ಕರೆಯಲ್ಪಟ್ಟಿದೆ.

೦೦೦

ಉಳಿದ ಯಾವ್ವದರಲ್ಲಿ ಕೊರತೆಯಿದ್ದರೂ ನಮ್ಮ ದೇಶದಲ್ಲಿ ಜನಸಂಖ್ಯೆಗೆ ಎಂದೂ ಕೊರತೆಯಿಲ್ಲವೆನ್ನಬೇಕು. ಮೊತ್ತಮೊದಲು ಇದೊಂದು ಸಂತೋಷದ ವಿಷಯವಾಗಿದ್ದರೂ ಆಹಾರದ ಕೊರತೆಯಿರುವ ಈ ಕಾಲದಲ್ಲಿ ಇದೂ ಒಂದು ಸಮಸ್ಯೆಯೇ ಆಗಿದೆ. ಆಹಾರದ ಅಭಾವ ಹೆಚ್ಚಾಗಬಾರದಾದರೆ ಜನಸಂಖ್ಯೆಯೂ ಏರಬಾರದು. ಗಂಡ ಹೆಂಡಂದಿರ ಒಂದು ಸಂಸಾರದಲ್ಲಿ ಎರಡಕ್ಕಿಂತ ಹೆಚ್ಚು ಮಕ್ಕಳಾಗಬಾರದು. ಸರ್. ವಿಶ್ವೇಶ್ವರಯ್ಯನವರು ಮೊನ್ನೆ ಬೆಂಗಳೂರಲ್ಲಿ ಕೊಟ್ಟ ಭಾಷಣದಲ್ಲಿ ಒಂದು ಕುಟುಂಬದಲ್ಲಿ ಎರಡು ಜನ ಮಕ್ಕಳಿಗಿಂತ ಹೆಚ್ಚು ಇರುವುದು ಈಗಿನ ಸ್ಥಿತಿಯಲ್ಲಿ ಸಾಧ್ಯವಿಲ್ಲವೆಂದರು. ಇಬ್ಬರಿರುವಲ್ಲಿ ಅವರ ನಂತರ ಇನ್ನಿಬ್ಬರು ಬರಬಹುದು. ಅವರ ಸ್ಥಾನದಲ್ಲಿ ಎಂಟು ಹತ್ತು ಜನರನ್ನಿಟ್ಟು ಹೋಗುವುದು ನ್ಯಾಯವೇ? ಎಂದು ಅವರ ಪ್ರಶ್ನೆ.

೦೦೦

ಜನಸಂಖ್ಯೆ ಏರಿದಂತೆಯೇ ಆಹಾರ ಸಾಮಗ್ರಿಗಳು ಏರುತ್ತವೆಯೇ? ಆಹಾರ ಸಾಮಗ್ರಿಗಳು ಬೆಳೆಯುವ ಗದ್ದೆಗಳ ವಿಸ್ತೀರ್ಣ ಏರುತ್ತಿದೆಯೇ? ಫಲ ಪೈರುಗಳು ಮೊದಲಿನಷ್ಟೇ ಇರುವುದಾದರೆ ತಿನ್ನುವವರ ಸಂಖ್ಯೆಯೂ ಮೊದಲಿನಷ್ಟೇ ಇರಬೇಕಲ್ಲವೇ? ಉಂಟು ಮಾಡಿದ ದೇವರು ಊಟವ ಕೊಡಲಾರನೇ? ಎಂದು ಪ್ರಶ್ನಿಸುವುದು ಸರಿ. ಪೈರು ಬೆಳೆಯುವ ವಿಸ್ತೀರ್ಣವನ್ನು ಹೆಚ್ಚಿಸುತ್ತಾ ಹೋಗಿ ಸಾಕಷ್ಟು ಆಹಾರ ಬೆಳೆಯಿಸಿದರೆ ಅದು ಸರಿ; ಇಲ್ಲದೆ ಹೋದರೆ ದೇವರಾದರೂ ಏನು ಮಾಡಲಾಪನು?

೦೦೦

ಆಹಾರ ಸಮಸ್ಯೆಯು ಭಾರತದಲ್ಲಿರುವಷ್ಟು ಕಠಿಣ ಭೂಲೋಕದಲ್ಲಿ ಎಲ್ಲಿಯೂ ಇರಲಾರದು. ಇದಕ್ಕೆ ನಮ್ಮಲ್ಲಿ ಜನಸಂಖ್ಯೆಯು ಅನರ್ಥವಾಗಿ ಏರುತ್ತಿರುವುದು ಒಂದೇ ಕಾರಣವಲ್ಲ. ಭಾರತದ ವಿಭಜನೆಯೂ ಒಂದು ಮುಖ್ಯ ಕಾರಣವಿದೆ. ದೇಶದ ವಿಭಜನೆ ಯಾಗುವಾಗ ಫಲವತ್ತಾದ ಭಾಗವು ಹೆಚ್ಚಾಗಿ ಪಾಕಿಸ್ತಾನಕ್ಕೆ ಹೋಯಿತು, ಪಾಕಿಸ್ತಾನದ ಜನರು ಬಹಳವಾಗಿ ಇಲ್ಲಿಗೆ ಬಂದರು, ಆಹಾರ ಬೆಳೆಯುವ ಸ್ಥಳ ಪಾಕಿಸ್ತಾನದಲ್ಲಿ ಆಯಿತು, ಉಳಿಯಿತು ಆಹಾರ ತಿನ್ನುವ ಜನರು ಭಾರತದಲ್ಲಿ ಹೆಚ್ಚಾದರು. ಈಗ ಭಾರತದವರು ಪಾಕಿಸ್ತಾನದವರ ಕೂಡೆ ಆಹಾರ ಬೇಡುವ ಕಾಲಬಂದಿದೆ.

೦೦೦

ಒಂದು ಮನೆಯಲ್ಲಿ ಅಣ್ಣ ತಮ್ಮಂದಿರು ಅವರ ಹೆಂಡಂದಿರು ಮಕ್ಕಳೊಡನೆ ಅನೇಕ ವರುಷಗಳಿಂದ ಸುಖವಾಗಿ ಜೀವಿಸಿ ಬರುತ್ತಿದ್ದರು. ಅಣ್ಣನ ಸಂಸಾರ ದೊಡ್ಡದು ಅವನಿಗೆ ತುಂಬಾ ಜನ ಮಕ್ಕಳಿದ್ದರು ತಮ್ಮನ ಸಂಸಾರ ಸಣ್ಣದು ಅಕಸ್ಮಾತ್ತಾಗಿ ಅಣ್ಣತಮ್ಮಂದಿರೊಳಗೆ ಜಗಳ ಬಂತು, ತಮ್ಮನ ಹಟ ಮೇಲಾಯಿತು, ಜಗಳ ಬಾಯಿಂದ ಕೈವರೆಗೂ ಮುಟ್ಟಿತು. ಅಣ್ಣ ಯೋಚಿಸಿದ ‘ಇನ್ನು ನಾವು ಒಟ್ಟಿಗೆ ಇರುವುದು ಸಾಧ್ಯವಿಲ್ಲ, ತಮ್ಮನಿಗೆ ಒಂದಂಶ ಆಸ್ತಿಯನ್ನು ಬಿಟ್ಟುಕೊಟ್ಟು ಪ್ರತ್ಯೇಕ ಇರುವುದು ಒಳ್ಳೆಯದು ಎಂತ.’ ಅಣ್ಣ ತನಗೆ ಹೆದರುತ್ತಿದ್ದಾನೆ. ನನಗೆ ಇದೇ ಸಮಯ ಎಂದು ತಮ್ಮ ತನಗೆ ಬೈಲು ಗದ್ದೆಗಳು ಕೆರೆ ತೋಟ ತನ್ನ ಪಾಲಿಗೆ ಬೇಕು ಎಂದು ಕೇಳತೊಡಗಿದ. ತಮ್ಮನ ಕಾಟ ತಡಿಯಲಾರದೆ ಅಣ್ಣ ಆಯಿತು, ಬೈಲು ಗದ್ದೆಗಳು ಕೆರೆತೋಟ ನಿನಗೇನೇ, ಹೆಚ್ಚು ಅಂಶವಿರಲಿ ಎಂದು ಹೇಳಿ ತಮ್ಮನಿಗೆ ಪಾಲು ಕೊಟ್ಟ, ಪಾಲು ಸಿಕ್ಕಿದ ಕೂಡಲೇ ಮೊದಲು ಮನೆಯಲ್ಲಿ ಒಟ್ಟಿಗೆ ಇರುತ್ತಿದ್ದು ಪಾಲಾಗುವಾಗ ತಮ್ಮನ ಒಟ್ಟಿಗೆ ಇರಬೇಕೆಂದು ನಿಶ್ಚಯಿಸಿದ್ದ ಕೆಲವರು ಸಂಬಂಧಿಕರನ್ನು ತಮ್ಮ ಅಣ್ಣನ ಮನೆಗೆ ಓಡಿಸಿಬಿಟ್ಟ. ಅಣ್ಣ ಸಾಧು ಪ್ರಕೃತಿಯವ ತಮ್ಮನ ಮನೆಯಿಂದ ಓಡಿಸಿದವರನ್ನೆಲ್ಲಾ ತನ್ನಲ್ಲಿಯೇ ಇರಿಸಿಕೊಂಡ. ಪರಿಣಾಮವಾಗಿ ಅಣ್ಣನ ಮನೆಯಲ್ಲಿದ್ದವರಿಗೆ ಅಣ್ಣನ ಪಾಲಿಗೆ ಬಂದ ಗದ್ದೆಗಳಲ್ಲಿ ಬೆಳೆದ ಆಹಾರ ಸಾಲದೆ ಹೋಯಿತು. ತಮ್ಮ ತನ್ನ ಸಣ್ಣ ಕುಟುಂಬ ಪೋಷಣೆಯನ್ನು ತನ್ನ ಫಲವತ್ತಾದ ಆಸ್ತಿಯ ಉತ್ಪತ್ತಿಯಿಂದ ಪೂರೈಸಿ ಸುಖವಾಗಿದ್ದಾನೆ, ತನ್ನ ಪಾಲಿನ ಆಸ್ತಿಯಿಂದ ತನ್ನ ಜನರನ್ನು ಸಾಕಲಾರದೆ ತಮ್ಮನ ಕೂಡೆ ಜಾಸ್ತಿಯಾಗಿದ್ದ ಆಹಾರವನ್ನು ಸಾಲ ಕೊಡಬೇಕೆಂದು ಈಗ ಅಣ್ಣ ಕೇಳುತ್ತಿದ್ದಾನೆ, ಹಾಗಾಯಿತು ಭಾರತದ ಅವಸ್ಥೆ, ಬಂದುದೆಲ್ಲ ಬರಲಿ, ಗೋವಿಂದನ ದಯೆ ನಮಗಿರಲಿ, ಎನ್ನುತ್ತಿದ್ದಾನೆ ಅಣ್ಣ.

೦೦೦

ತಮ್ಮನಿಗೆ ಆಸ್ತಿಯಲ್ಲಿ ಪಾಲು ಬಿಟ್ಟು ಕೊಡುವಾಗ ನೋಡಿಕೊಳ್ಳಬೇಕಿತ್ತು. ಔದಾರ್ಯಕ್ಕೂ ಅಂತ್ಯವಿರಬೇಕು ಎಂದು ಅಣ್ಣನ ಕಡೆಯವರು ಅನ್ನುತ್ತಿದ್ದಾರೆ. ಅಣ್ಣ ಭವಾರಾಯ. ‘ಕೆಡುವ ಕರ್ತ ಬೇರೆ ಇರುತಿರೆ ಬಿಡು ಬಿಡು ಚಿಂತೆಯನು’ ಎಂದು ಅಣ್ಣ ಪುರಂದರ ದಾಸರ ಪದ ಹಾಡುತ್ತಿದ್ದಾನೆ ಆ ತತ್ವ ಪುರಂದರ ದಾಸರ ಕಾಲಕ್ಕಾಯಿತು, ಆಗ ಬೇಕಾದಷ್ಟು ಆಹಾರವಿತ್ತು, ಈಗಿನ ರೇಶನ್ ಕಾಲಕ್ಕೆ ಅದು ಸರಿ ಬಂದೀತೇ?

೦೦೦

ಈಗ ಎಲ್ಲರೂ ಅಧಿಕ ಆಹಾರ ಬೆಳೆಯಿಸಬೇಕಂತೆ ನೂರಲ್ಲಿ ತೊಂಬತ್ತು ಜನಕ್ಕೆ ಗದ್ದೆಗಳೇ ಇಲ್ಲ, ಗದ್ದೆಯಿದ್ದಲ್ಲಿ ನೀರಿಲ್ಲ, ಬೇಕಾದಾಗ ಮಳೆಯೂ ಇಲ್ಲ, ಯಾರ ಗದ್ದೆಯಲ್ಲಿ ಯಾವ ನೀರಿನ ಸಹಾಯದಿಂದ ಆಹಾರ ಬೆಳೆಯಿಸಲಿ, ಎಂದು ನಾವು ಕೇಳಿದರೆ ನಮ್ಮ ಮಂತ್ರೀಶ್ವರ ಮುನ್ನಿಗಳು ಹೇಳುತ್ತಿದ್ದಾರೆ—ಒಹೋ ಮಳೆಯಿಲ್ಲದಿರಲು ಕಾಡು ಗುಡ್ಡಗಳಲ್ಲಿ ಮರಯಿಲ್ಲದಿರುವುದೇ ಕಾರಣ ಆದುದರಿಂದ ಕಾಡು ಗುಡ್ಡಗಳಲ್ಲಿ ಗಿಡಗಳನ್ನು ಬೆಳೆಯಿಸಿರಿ, ವನಮಹೋತ್ಸವ ಮಾಡಿರಿ, ಎನ್ನುತ್ತಿದ್ದಾರೆ. ಇನ್ನು ನಾವು ಕಾಡು ಗುಡ್ಡಗಳಲ್ಲಿ ಗಿಡಗಳನ್ನು ನಟ್ಟು ಅವು ದೊಡ್ಡ ಮರಗಳಾಗಿ ಅದರಿಂದ ಸಾಕಷ್ಟು ಮಳೆ ಬಂದು ನಮ್ಮ ಬೆಟ್ಟು ಗದ್ದೆಗಳಲ್ಲಿ ಬೆಳೆಯಾಗಿ ನಾವು ಸುಖವಾಗಿ ಜೀವಿಸ ಬಹುದಲ್ಲವೇ ಆದರೆ ಹೋದರೆ ಹತ್ತೀ ಬೆಳೆದರೆ ಅಜ್ಜೀನಿಗೊಂದು ಪಟ್ಟೆ ಸೀರೆ ಎಂದು ಮೊಮ್ಮಗ ಸಾಯುವ ಅಜ್ಜಿಗೆ ಸಮಾಧಾನ ಹೇಳಿದ್ದನಂತೆ- ಬಂದುದೆಲ್ಲ ಬರಲಿ, ಗೋವಿಂದನ ದಯೆ ನಮಗಿರಲಿ

ಮಂಗಳೂರು— ಇಲ್ಲಿಯ ಮ್ಯಾಡಲಿನ್ ಹೆಣ್ಮಕ್ಕಳ ಹೈಸ್ಕೂಲಿನ ವರ್ಧಂತಿಯು ಪುರಜನರ ಪ್ರೋತ್ಸಾಹದಿಂದ ಇದೇ ತಾ. 17-2-51 ರಲ್ಲು ಮಂಗಳೂರು ಮುನಿಸಿಪಲ್ ಚೆಯರ್‌ಮೆನ್ ಶ್ರೀ ಎಲ್. ಸಿ. ಪ್ಯಾಸರ ಅಧ್ಯಕ್ಷತೆಯಲ್ಲಿ ವಿಜೃಂಭಣೆಯಿಂದ ಜರಗಿತು. ಶಾಲೆಯ ಪ್ರಧಾನ ಕನ್ನಡ ಪಂಡಿತ ಶ್ರೀ ಕೆ. ಆರ್. ಭಟ್ಟರು ಶಾಲಾ ವರದಿಯಲ್ಲಿ ಶಾಲೆಯ ಕಾರ್ಯಕಲಾಪಗಳನ್ನು ತಿಳಿಸಿ, ಶಾಲೆಯಲ್ಲಿನ ಪ್ರಯೋಗಶಾಲೆಯ ಉಪಕರಣಗಳ ಕೊರತೆಯನ್ನು ಹೇಳಿ, ದಾನಿಗಳ ಸಹಕಾರ ಕೋರಿದರು. ಅಧ್ಯಕ್ಷರು ತಮ್ಮ ಭಾಷಣದಲ್ಲಿ ವಿದ್ಯಾದಾನದ ಮಹತ್ವವನ್ನು ಒತ್ತಿಹೇಳಿ, ಈ ಪುಣ್ಯ ಕಾರ್ಯವನ್ನು ಹಲವಾರು ಶಾಲೆಗಳನ್ನು ನಡೆಸುವುದರ ಮೂಲಕ ಮಾಡುತ್ತಿರುವ ಶಾಲಾ ಮೆನೇಜರ್ ರೆ! ಫಾ! ಎಫ್. ಸಿ. ಮಸ್ಕರೇನ್ಹಸರನ್ನು ಕೊಂಡಾಡಿದರು. ಶಾಲಾ ಮಕ್ಕಳು ತಮ್ಮದೇ ಆದ ದಿಗ್ದರ್ಶನ, ವೇಷಭೂಷಣಗಳಿಂದ ಕನ್ನಡ, ಕೊಂಕಣ ಪ್ರಹಸನಗಳು ಇನ್ನಿತರ ವಿನೋದಾವಳಿಗಳನ್ನು ಆಡಿತೋರಿಸಿದರು. ಧನ್ಯವಾದಾರ್ಪಣೆ, ರಾಷ್ಟ್ರ ಗೀತೆಗಳೊಂದಿಗೆ ಕಾರ್ಯಕ್ರಮ ಕೊನೆಗೊಂಡಿತು.

ನೋಟೀಸು

ಉಡುಪಿ ಡಿ. ಮುನ್ಸಿಫ ಕೋರ್ಟಿನಲ್ಲಿ

O. P. 6/1951

ಶೃಂಗಾರಮ್ಮ-ನಂದಳಿಕೆ ಕೃಷ್ಣರಾಯರ ವಿಧವೆ, ಉಡುಪಿ ತಾಲ್ಲೂ ಬಳಸಾವಿರ ಮಾಗಣೆ ಹೇರೂರು ಗ್ರಾಮದಲ್ಲಿರುವವರು.

—ಅರ್ಜಿದಾರಳು.

ಮತ್ತು

ಬಾಬುರಾವ್-ಕಿಟ್ಟಣಯ್ಯನವರ ಮಗ, ಕಾರ್ಕಳ ತಾಲೂಕು ನಂದಳಿಕೆ ಗ್ರಾಮದ ಕಂಚೋಡಿಯಲ್ಲಿರುವವರು, (ತನ್ನ ಕುಟುಂಬದ ಯಜಮಾನನಾಗಿ ಸಹ)

— ಯೆದಿ

ಯೆದ್ರಿಯು ಮಗ ವ ಅರ್ಜಿದಾರಳ ಗಂಡ ತಾ 13-5-50ರಲ್ಲಿ ಉಡುಪಿ ತಾಲ್ಲೂ ಅಲೆವೂರು ಗ್ರಾಮದಲ್ಲಿ ಅಕಸ್ಮಾತ್ ಮರಣಪಟ್ಟ ನಂದಳಿಕೆ ಕೃಷ್ಣರಾಯರು ದಿ ಬೊಂಬೇ ಲ್ಯಾಫ್ ಎಶ್ಯೂರೆನ್ಸ್ ಕಂಪೆನಿ ಲಿಮಿಟೆಡ್‌ನಲ್ಲಿ ಪಡೆದ ನಂಬ್ರ 1369-8ನೇ ಪೋಲಿಸಿ ಬಾಬ್ತು ಪಡಕೊಳ್ಳತಕ್ಕ ಹಣವನ್ನು ಪಡೆಯುವರೆ ತಾನೊಬ್ಬಳೇ ಬಾಧ್ಯಸ್ಥಳೆಂತಲೂ ಆ ಕುರಿತು ತನಗೆ ಒಂದು ವಾರೀಸು ಸರ್ಟಿಫಿಕೇಟು ಕೊಡಬೇಕಾಗಿ ಮನವಿಮಾಡಿ ಕೇಳಿದ ಮೇಲ್ಕಂಡ ಅರ್ಜಿಯು ಈ ಕೋರ್ಟಿನಲ್ಲಿ ತಾ. 17-3-51ರಲ್ಲು ತನಿಖೆಗೆ ಇಟ್ಟಿರುತ್ತದೆಂತಲೂ, ಆ ಕುರಿತು ಆಕ್ಷೇಪವುಳ್ಳವರು ಸದ್ರಿ ಕೋರ್ಟಿನಲ್ಲಿ ಸದ್ರಿ ದಿನ ಹಗಲು ಘಂಟೆ 10-45ಕ್ಕೆ ಹಾಜರಾಗಿ ತಮ್ಮ ಆಕ್ಷೇಪಗಳನ್ನು ಪ್ಯಾಟೀಸು ಮಾಡಬೇಕೆಂತಲೂ ಈ ಮೂಲಕ ಸರ್ವ ಜನರಿಗೆ ತಿಳಿಸಲಾಗುತ್ತದೆ.

(By order of Court)

K. Vittal Nayak,

Vakil for Petitioner.

UDIPI, 19-2-51.

ಶ್ರೀ ರಾಮಕೃಷ್ಣ ಥಿಯೇಟರ್ ಲಿಮಿಟೆಡ್, ಉಡುಪಿ

ನಡಿಯುವ ಚಿತ್ರ: ಟಿ. ಎಲ್. ವಿ. ವಸಂತ, ಎಂ. ವಿ ರಾಜಮ್ಮ ನಟಿಸಿರುವ

ಜೈಮಿನಿ ಚಿತ್ರ **ಮದನ-ಕಾಮ-ರಾಜನ್**

ತಾರೀಕು 23—2—1951ರಿಂದ

ಫಿಲ್ಮಿಸ್ತಾನವರ **ಸರ್ಗಮ್**

ರೆಹನಾ, ರಾಜಕಪೂರ್

ಅನಂತರ: ಜೆಮಿನಿಯವರ

ಅಪೂರ್ವ ಸಹೋದರರು

NOTICE.

ಕುಂದಾಪುರ ಡಿ. ಮು. ಕೋರ್ಟಿನಲ್ಲಿ

S. C. 899/1950.

ವಾದಿರು-ಶ್ರೀ ಭಂಡಾರಕೇರಿ ಮಠದ ಶ್ರೀ ವಿದ್ಯಾಮಾನ್ಯತೀರ್ಥ ಶ್ರೀಪಾದಂಗಳವರು.

ಪ್ರತಿವಾದಿರು-1) ತೇಜಪ್ಪ ಸೆಟ್ಟಿ

2) ವೆಂಕಪ್ಪ ಸೆಟ್ಟಿ

ಉಡುಪಿ ತಾಲ್ಲೂ ಕಾವಡಿ ಗ್ರಾಮದಲ್ಲಿರುವ ಅಂತಯ್ಯ ಸೆಟ್ರ ಅಳಿಯ 2ನೇ ಪ್ರತಿವಾದಿ ವೆಂಕಪ್ಪ ಸೆಟ್ರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ.

ಪ್ರತಿವಾದಿರು ವಾದಿಗೆ ತಾ. 21-4-49 ರಲ್ಲು ರೂ. 205-0-0ಕ್ಕೆ ಬರಕೊಟ್ಟ ಡಿಮಾಂಡು ನೋಟಿನ ಬಾಬ್ತು ಹಣಬಡ್ಡಿ ಬರ ಮಾಡಿಕೊಳ್ಳುವರೆ ವಾದಿರು ಪ್ರತಿವಾದಿರ ಮೇಲೆ ಬಾಖ್ಲು ಮಾಡಿದ ಮೇಲಿನ ದಾವೆಯು ತಾ. 28-2-51ಕ್ಕೆ ಮೇಲಿನ ಕೋರ್ಟಿನಲ್ಲಿ ತನಿಖೆಗೆ ಇಟ್ಟಿರುತ್ತದೆ. ಕುರಿತು ಆ ದಿನಾದರೂ ಆಕ್ಷೇಪಣೆಗಳಿದ್ದರೆ ಆ ತಾರೀಕಿಗೆ ಮೇಲಿನ ಕೋರ್ಟಿನ ಮುಂದೆ ಹಗಲು 11 ಗಂಟೆಗೆ ಹಾಜರಾಗಿ ಪ್ಯಾಟೀಸು ಮಾಡಿಕೊಳ್ಳತಕ್ಕದ್ದು ಎಂಬ ಸಂಗ್ತಿ ಈ ಮೂಲಕ ತಿಳಿಯಪಡಿಸಲ್ಪಡುತ್ತದೆ.

N S Parameshwariah

Advocate for Plaintiff.

COONDAPOOR, Date 11-2-1951.

೧ ತರಕಾರಿ ಮತ್ತು ಅವುಗಳನ್ನು ಬೆಳೆಯುವ ಬಗೆ—ಲೇಖಕರು: ಶ್ರೀ ಸಿ. ವಿ. ರಾವ್. ಪ್ರಕಾಶಕರು: ಅತ್ರೇಯ ಜನರಲ್ ಏಜೆನ್ಸಿ 34, ಸಂಸ್ಕೃತ ಬಿಲ್ಡಿಂಗ್ಸ್, ಶ್ರೀ ನರಸಿಂಹ ರಾಜಾಸ್ಟ್ರೀಟ್, ಬೆಂಗಳೂರು ನಗರ. ಬೆಲೆ ರೂ. 2-0-0

ಆಹಾರಕೊರತೆಯ ಈ ಕಾಲದಲ್ಲಿ ತರಕಾರಿಯನ್ನು ಹೆಚ್ಚುಹೆಚ್ಚಾಗಿ ಬೆಳೆಸುವ ಅವಶ್ಯಕತೆ ನಮಗೆ ಬಂದಿರುತ್ತದೆ. ತೋಟಗಾರಿಕೆಯನ್ನು ಮಾಡುವ ಕಲೆಯನ್ನು ಶ್ರೀ ಸಿ ವಿ. ರಾಯರು ಇಲ್ಲಿ ನಮಗೆ ಸರಳವಾಗಿಯೂ ಅತ್ಯಂತ ನಾಜೂಕವಾಗಿಯೂ, ತಿಳಿಸುತ್ತಾರೆ. «ವನಮಹೋತ್ಸವ" "ಹೆಚ್ಚು ಆಹಾರವನ್ನು ಬೆಳೆಸಿರಿ" ಎನ್ನುವ ವ್ಯರ್ಥ ಪ್ರಚಾರಕ್ಕಿಂತ ಎಷ್ಟೋ ಪರಿಣಾಮಕಾರಿಯಾಗಿದೆ ಈ ಸಂಗ್ರಹ. ತೋಟಗಾರಿಕೆಯನ್ನು ಪಾಶ್ಚಾತ್ಯ ರಾಷ್ಟ್ರದಲ್ಲೂ ಅತ್ಯಂತ ಉತ್ಸಾಹದಿಂದ ಮಾಡುತ್ತಾರೆ. ನಮ್ಮ ದೇಶದಲ್ಲಿ ಹಳ್ಳಿಯಲ್ಲೇನೋ ಸ್ವಲ್ಪ ಮಟ್ಟಿಗೆ ನಡೆಯುತ್ತಾರೆ. ಆದರೆ ಪಟ್ಟಣದಲ್ಲಿರುವವರು ಕೊಂಡು ತಿನ್ನುವದರಲ್ಲೇ ತೃಪ್ತರಾಗುತ್ತಾರೆಯೆ ಹೊರತು, ತಮ್ಮ ಮನೆಯ ಸುತ್ತಮುತ್ತಲಿನ ಜಾಗದಲ್ಲಿ ಏನನ್ನೂ ಮಾಡುವುದಿಲ್ಲ. ಸಸ್ಯಗಳಿಗೆ ಇಲ್ಲವೆ ತರಕಾರಿಗಳಿಗೆ ಬೇಕಾದ ಗೊಬ್ಬರ, ಹವೆ, ರೋಗದ ಲಕ್ಷಣ, ಬಿತ್ತುವ ಕ್ರಮ, ಮೊದಲಾದುವುಗಳನ್ನು ಚೆನ್ನಾಗಿ ಚಿತ್ರಿಸಲಾಗಿದೆ. ಕೃಷಿ ಹಾಗೂ ತರಕಾರಿಯನ್ನು ಮಾಡುವವರಿಗೆ ಉಪಯುಕ್ತವಾದ ಸಂಗ್ರಹವಿದು. ಶ್ರೀಮಾನ್ ಸಿ. ವಿ. ರಾಯರ ಈ ಕೃತಿಯು ಅಮೂಲ್ಯ

ಪ್ರಕಟಣೆ

ಉಪ್ಪಿ ನಸಲಾ ಕೋಳದ ಪೇಟೆಯಲ್ಲಿರುವ ಗೋಪಾಲ ನಾಯ್ಕನ ಮಗ ಅಪ್ಪು ನಾಯ್ಕ ಎಂಬವನು ಹೆಡ್ಡನೂ, ತಿಳುವಳಿಕೆ ಇಲ್ಲದವನೂ ಆಗಿದ್ದು ಅವನಿಗೆ ಅವನ ತಮ್ಮ ಮುತ್ತ ಯಾನೆ ಮೋನ ನಾಯ್ಕನು ದುರ್ಬೋಧನೆ ಕೊಟ್ಟು ಪುಸಲಾಯಿಸಿ ಸದ್ರಿ ಅಪ್ಪು ನಾಯ್ಕನ ಆಸ್ತಿಗಳ ಬಾಬ್ತು ಒಂದು ದಸ್ತಾವೇಜು ಬರ್ಸಿ ಕೊಂಡಿದ್ದಾನೆಂತ ವರ್ತಮಾನ ಇದೆ. ಸದ್ರಿ ಅಪ್ಪು ನಾಯ್ಕನ ಹೆಂಡ್ತಿ ಮಕ್ಕಳನ್ನು ಸಹ ಸದ್ರಿ ಮುತ್ತ ನಾಯ್ಕನು ಇಲ್ಲಿಂದ ಓಡಿಸಿ ಅವರಿಗೆ ಸಹ ಮೋಸಕೊಡಬೇಕೆಂಬ ಇರಾದೆಯಿಂದ ದಸ್ತಾವೇಜುಮಾಡಿಕೊಳ್ಳುವ ಸಂದರ್ಭದಲ್ಲಿ ಅಂಥಾ ದಸ್ತಾವೇಜು ಕಾನೂನಿಗೂ, ನೀತಿಗೂ ವಿರೋಧವಾದ್ದೂ ಮತ್ತು ಅದು ಸಿಂಧಾಗ ತಕ್ಕದ್ದಲ್ಲ ಎಂತ ಈ ಮೂಲಕ ತಿಳಿಸೋಣಾಗಿದೆ.

ಮಾವನ ನಾಯ್ಕನ ರುಜು
ಕೋಳದ ಪೇಟೆ, 17-2-51

ಅಮೃತಾಂಜನ

ತಲೆವೇದನೆ, ಶಿರೋವೇದನೆ, ಉಳುಕು ಕುತ್ತಿಗೆ, ಭುಜ ಹಲ್ಲು ವೇದನೆಗಳಿಗೂ, ಎದೆನೋವು, ಗಾಯಗಳು, ಚಾಚುಕೊಳ್ಳುವುದು, ಚೇಳುವಿಷಮುಂತಾದವು, ಪಕ್ಷವಾತ, ಮೊದಿವೆ ಮೊದಲಾದ ಎಲ್ಲಾ ರೋಗಗಳಿಗೂ ಸಿದ್ಧೌಷಧ

REGD
ಕುಳು ಕಡ್ಡಿ ಮದ್ದು ಸಮ್ಮಲ್ಲಿ ಸಿಕ್ಕುತ್ತದೆ
ಅಮೃತಾಂಜನ ಲಿಮಿಟೆಡ್
ಮದರಾಸು.
ಬೊಂಬಾಯಿ ಮತ್ತು ಕಲ್ಕತ್ತ.

ಸ್ವೀಕಾರ—ವಿಮರ್ಶೆ

ಲಾಭವನ್ನು ಎಲ್ಲರೂ ಪಡೆಯುವಂತಾಗಲಿ.

೨ ಬದುಕಿನ ಆದರ್ಶ—ಲೇಖಕರು: ಶ್ರೀ ಸಿ. ನ್ಯಾಸರಾಯ ಬಲ್ಲಾಳರು ಪ್ರಕಾಶಕರು: ಶ್ರೀ ವಿ. ಆರ್. ಪ್ರಭು, ಹಂಸ ಸಾಹಿತ್ಯ ಮಾಲಾ, ಕೆಮರಾ ಬುಕ್ಸ್ ಅಂಡ್ ನ್ಯೂಸ್ ಏಜನ್ಸಿ 389, ಲ್ಯಾಮಿಂಗ್ಟನ್ ರೋಡ್ ಮುಂಬಯಿ 12 ಬೆಲೆ: ರೂ. ೧-೮-೦

ಬದುಕಿನ ಆದರ್ಶ ಆರು ಕತೆಗಳಿಂದ ಕೂಡಿದ ಒಂದು ಸಂಗ್ರಹ. ಹೆಚ್ಚುಕಡಿಮೆ ಎಲ್ಲ ಕತೆಗಳಲ್ಲೂ ರಾಜಕೀಯ ಹಿನ್ನೆಲೆಯಿರುತ್ತವೆ. ಬದುಕಿನಲ್ಲಿ ಪ್ರತಿಯೊಬ್ಬನಿಗೂ ಒಂದೊಂದು ಆದರ್ಶವಿರುತ್ತದೆ. ಆ ಆದರ್ಶಗಳು ಜೀವನದುದ್ದಕ್ಕೂ ಬದುಕುವಂತಾದರೆ ಅತನ ಜೀವನ ಪರಿಪೂರ್ಣವೆಂದೇ ಹೇಳಬೇಕು. ಆದರೆ ಬಡತನ ದಾರಿದ್ರ್ಯಗಳಿಗೆ ತವರಾದ ನಮ್ಮ ದೇಶದಲ್ಲಿ ಜೀವನ ಜಂಜಾಟದ ನಡುವೆ ಬದುಕುವದಾದರೂ ಹೇಗೆ? ಹಣ ತಾತ್ಕಾಲಿಕವಾದ್ದು ಜೀವನಾವಶ್ಯಕತೆಗೆ ಅದುವೆ ಮುಖ್ಯವಾಗಲಾರದೆಂದು ನಾವು ತತ್ವ ಮಾಡಿದರೂ ಸಾಯುವ ತನಕ ಬದುಕುವದಕ್ಕೆ ಅದು ಅನಿವಾರ್ಯ. ಶ್ರೀಮಂತಿಕೆ ಶ್ರೀಮಂತರನ್ನೇ ನಿರ್ಮಿಸುವದೂ, ಬಡತನ ಬಡವನನ್ನೇ ನಿರ್ಮಿಸುವುದೂ ನಮ್ಮ ರೂಢಿಯಾಗಿದೆ. ಇದರ ನಡುವೆ ಮಧ್ಯಮ ವರ್ಗದ ಜನ ತಮ್ಮ ಆದರ್ಶವನ್ನು ಹಿಡಿದುಕೊಂಡು ಬದುಕುವ ಆಶೆಯಿಲ್ಲ. ಈ ಎಲ್ಲ ಸಮಸ್ಯೆಗಳನ್ನು ಶ್ರೀ ಬಲ್ಲಾಳರು ತಮ್ಮ ಆರು ಕತೆಗಳಲ್ಲಿ ತೋರಿಸಿಕೊಟ್ಟಿದ್ದಾರೆ; ಇಲ್ಲವೆ ನಮಗೆ ಹಾಗೆ ತೋರುತ್ತದೆ ಎನ್ನೋಣ! ಜೀವನದಲ್ಲಿಯೂ, ರಾಜಕೀಯದಲ್ಲಿಯೂ, ಆದರ್ಶಗಳು ಬಹಳಕಾಲ ಬದುಕುವುದಿಲ್ಲವೆನ್ನುವದಕ್ಕೆ "ಮುಗಿದ ಯುದ್ಧ" «ಬದುಕಿನ ಆದರ್ಶ"ಗಳು ಸಾಕ್ಷಿಯಾಗಿರುತ್ತವೆ.

ಭಾರತ ವಿಭಜನಾ ಕಾಲದಲ್ಲುಂಟಾದ ಜಾತೀಯ ಮಹಾ ದುರಂತಗಳ ಚಿತ್ರಣ 'ಬದುಕಿನ ಆದರ್ಶ'. ಆಗಿನ ಸತ್ಯಚಿತ್ರವನ್ನು ಬದುಕಿನಾದರ್ಶದಲ್ಲಿ ಬಣ್ಣಿಸಲಾಗಿದೆ. ಆದರೆ ಕತೆ ಮನಸ್ಸನ್ನು ಕೆರಳಿಸುವದಕ್ಕಿಂತ ಹೆಚ್ಚಿನ ಕಾರ್ಯವನ್ನೇನೂ ಮಾಡುವುದಿಲ್ಲ. ಮಾಲತಿ ರಾಧಾಕಾಂತ ಬದುಕಿನಲ್ಲಿಯ ಆದರ್ಶ ಸಾಂಕೇತಿಕವಾಗಿ ಬಂದಿದೆಯೆ ವಿನಹ ಸಮಗ್ರವಾಗಿಯಾಗಿ ಅಲ್ಲ.

ಬಂಧುಗಳಿಗಿಂತ ಸ್ನೇಹಿತರೇ ಆತ್ಮೀಯರಾಗಿ ಜೀವನದ ಸುಖದುಃಖಗಳಲ್ಲಿ ಭಾಗಿಗಳಾಗುವುದು ಹೆಚ್ಚು! ಪರವೂರಿನಲ್ಲಿ ಒಂದೇ ಭಾಷೆಯ ಮತ್ತು ಸಂಸ್ಕೃತಿಯ ಜನ ಒಂದೇ ಕುಟುಂಬದವರೆಂಬಂತೆ ಬದುಕುವಮಾನವೀಯತೆಯನ್ನು 'ಮುಗಿದ ಯುದ್ಧ'ದಲ್ಲಿ ಧಾರಾಳವಾಗಿ ಕಾಣಬಹುದು. ಜೀವನಕ್ಕೆ ಸಾಮೀಪ್ಯ ಉಳ್ಳಂತಹ ಸನ್ನಿವೇಶಗಳವು! ಸಂಗ್ರಹದಲ್ಲಿ ಉಳಿದೆಲ್ಲ ಕತೆಗಳಿಂದ 'ಮುಗಿದ ಯುದ್ಧ' ಸತ್ವಪೂರ್ಣವೂ, ಹೃದಯ ಸ್ಪರ್ಶಿಯೂ ಆಗಿರುತ್ತದೆ.

ಹಲವು ರೀತಿಯ ಸಂಕಷ್ಟಗಳಿಂದ ಜೀವನ ಸಫಲಗೊಳ್ಳುವುದೂ ಉಂಟು; 'ವಿಫಲಗೊಳ್ಳುವುದೂ ಉಂಟು. ಶ್ರೀ ಬಲ್ಲಾಳರ ಕತೆಗಳು 'ವಿಫಲಗೊಳ್ಳುವದೇ ಜಾಸ್ತಿ' ಎನುವ ಸಂದೇಶವನ್ನು ಸಾರುತ್ತವೆ. ಕಷ್ಟವನ್ನಾಗಲೀ ಇಷ್ಟವನ್ನಾಗಲೀ ಸವಕಾಗಿಯೂ, ಲಲಿತವಾಗಿಯೂ ಹೃದಯಂಗಮವಾಗಿಯೂ ಚಿತ್ರಿಸಬಲ್ಲ ಸಾಮರ್ಥ್ಯ ಈ ಸಂಗ್ರಹದಲ್ಲಿ ನಾವು ಕಂಡುಕೊಳ್ಳಬಹುದಾಗಿದೆ. ಇದಕ್ಕಿಂತಲೂ ಉತ್ತಮ ಸಾಹಿತ್ಯವನ್ನು ಶ್ರೀ ಬಲ್ಲಾಳರು ರಚಿಸಬಲ್ಲರೆಂಬುದಕ್ಕೆ 'ಬದುಕಿನಾದರ್ಶ' ಮೈಲುಗಲ್ಲಾಗಿರುತ್ತದೆ.

—ಎಸ್ಸೆಲ್

ಬ್ರೂಕ್ ಬಾಂಡ್ ಚಹಾ
ವನ್ನೇ ನೀವು ಏತಕ್ಕೆ
ಒತ್ತಿ ಕೇಳಬೇಕೆಂಬುದಕ್ಕೆ
5
ಕಾರಣಗಳು

1. ಅದು ಮಲಿನವಾಗದ ಹಾಗೆ ಪೊಟ್ಟಣಗಳಲ್ಲಿ ಕಟ್ಟಿ ಮೊಹರು ಮಾಡಲ್ಪಟ್ಟಿರುತ್ತದೆ.
2. ಬ್ರೂಕ್ ಬಾಂಡ್ ಎಂಬ ಹೆಸರೇ ಅದರ ಗುಣದ ಭರವಸೆ.
3. ಶೀಘ್ರವಾಗಿ ಮಾರಲ್ಪಡುವಿಕೆಯು ಅದರ ಪೂರ್ಣ ತಾಜಾತನವನ್ನು ನಿಶ್ಚಯಿಸುತ್ತದೆ.
4. ಬ್ರೂಕ್ ಬಾಂಡ್ ಚಹಾ ಇತರ ಬೇರೆ ಪದಾರ್ಥಗಳಿಂದ ದೂರವಾಗಿವೆಯೆಂಬ ಭರವಸೆಯನ್ನು ಕೊಡುತ್ತವೆ.
5. ಉತ್ತಮ ಶಾಸ್ತ್ರೀಯ ಮಿಶ್ರಣವು ಉತ್ತಮ ರುಚಿಯನ್ನು ನಿರ್ಣಯಿಸುತ್ತದೆ.

ಹಕ್ಕೀ ನೋಟ

೧. ಪ್ರಭಾತ ವಾರ್ಷಿಕ ವಿಶೇಷ ಸಂಚಿಕೆ—ಸಂಪಾದಕರು ಶ್ರೀ ಕುಡ್ಪಿ ವಾಸುದೇವ ಶೆಣೈ. ಮಂಗಳೂರು. ಬೆಲೆ ರೂ ೧—೮—೦

ಹಾಡಿಕೆಯಂತೆ ಈ ಬಾರಿಯ ಪ್ರಭಾತ ವಿಶೇಷಾಂಕವನ್ನು ಹೊರಡಿಸಿದೆ. ಕನ್ನಡೇತರ ವಿಷಯ ವೈವಿಧ್ಯಗಳಿಂದ ಕೂಡಿರುತ್ತದೆ. ಶ್ರೀಗಳಾದ ಮಂಜೇಶ್ವರ ಗೋವಿಂದ ಪೈ, ರಂಭಾ-ಜೋಶಿ, ಎಂ. ವಿ. ಸೀತಾರಾಮಯ್ಯ, ಸಿ. ಕೆ. ನಾಗರಾಜರಾಯ,ದ. ಕೃ. ಭಾರದ್ವಾಜ, ಕೆ. ಎಸ್. ಸವಣೂರ, ಜಿ. ವರದರಾಜರಾವ್, ಎಚ್. ಎಸ್. ಪಾಟೀಲ, ಪಾಂಡೇಶ್ವರ ಗಣಪತಿರಾವ್, ಐ. ರಾಮಕೃಷ್ಣ ಬಾರ್ ಮುಂತಾದವರ ಬರಹಗಳಿವೆ.

೨ ವಿಶ್ವಕರ್ಮ (ಪ್ರಜಾರಾಜ್ಯ ವಜ್ರೋತ್ಸವ ಸಂಚಿಕೆ) ಸಂಪಾದಕರು: ಮ. ಗಂಗಾಧರ ಮೂರ್ತಿ ಶಾಸ್ತ್ರಿ, ಮಂಡಿಮೊಹಲ್ಲಾ ಮೈಸೂರು,

ವಿಶ್ವಕರ್ಮದ ಈ ವಿಶೇಷ ಸಂಚಿಕೆಯಲ್ಲಿ ವಿದ್ವತ್ಪೂರ್ಣ ಬರಹಗಳಿವೆ. ಪ್ರತಿಯೊಂದು ಲೇಖನವೂ ಒಂದಲ್ಲ ಒಂದು ಬಗೆಯಿಂದ ಸಂಗ್ರಾಹ್ಯವಾಗಿರುತ್ತದೆ. ಉತ್ತಮ ವಿಚಾರಗಳನ್ನು ಕೊಟ್ಟು ಜ್ಞಾನವಿಕಸನ ಕಾರ್ಯವನ್ನು ಮುಂದೆ ಮಾಡುತ್ತಿರಲೆಂದು ಹಾರೈಸುತ್ತೇವೆ.

೩ ಶಾಸ್ತ್ರಸಿದ್ಧ ಶ್ರೀ ಕೃಷ್ಣ ಜಂಬಾಂಗ (ಖರ ಸಂವತ್ಸರದ್ದು) ಸಂಪಾದಕರು: ಕರಿಂಕ ಕೃಷ್ಣ ಒಪ್ಪಂತಾಯ ಮತ್ತು ಮಣ್ಣೂರು ರಾಮಚಂದ್ರಾಚಾರ್ಯ, ಜೋತಿಷ್ಯ ಶಿರೋಮಣಿ. ಪ್ರಕಾಶಕರು: ಕರಿಂಕ ಕೃಷ್ಣ ಒಪ್ಪಂತಾಯ ಪಟ್ಟ ದ.ಕ. ಬೆಲೆ ರೂ. 0—6—0

ನೂತನ ದೃಕ್ಸಿದ್ಧಾಂತ ಪ್ರಕಾರ ರಚಿಸಿದ ಈ ಪಂಚಾಂಗದಲ್ಲಿ ವಾರ್ಷಿಕ ರಾಶಿಫಲ, ಹಬ್ಬಗಳ ಪಟ್ಟಿ, ಮುಂತಾದ ನೂತನ ವಿಚಾರಗಳೂ ಇರುತ್ತವೆ.

ವಾರದ ಭವಿಷ್ಯ

ತಾರೀಕು 22-2-51 ರಿಂದ | ತಾರೀಕು 28-2-51 ರವರೆಗೆ

ಮೇಷ—ಸರ್ವಾತ್ಮನಾ ಸುಖಿಯ ಯುವಾಗಿದ್ದ ನಿಮ್ಮ ಜೀವನದಲ್ಲಿ ಇಂದು ಸ್ವಲ್ಪ ಏರುಪೇರುಗಳು ಕಾಣಿಸಬಹುದು. ಪಿತ್ತದೋಷದಿಂದಾಗಿ ನೇತ್ರಪೀಡೆ, ಸ್ತ್ರೀಯರಿಂದ ಕಲಹ, ರಾಜಕೀಯ ಕಾರ್ಯನಿಮಿತ್ತ ವ್ಯರ್ಥ ಧನವ್ಯಯವೂ ಆಗಬಹುದು. ಪತ್ನೀ ಪುತ್ರ ಮಿತ್ರಾದಿಗಳಿಂದ ಕೂಡಿದ ನಿಮ್ಮ ಸಾಂಸಾರಿಕ ಜೀವನವು ಸುಖಮಯವಾಗಿರುವದು. ತಾ. 24, 25, 26, 27 ಈ ದಿನಗಳಲ್ಲಿ ಸುಖವಿಜಯಭೋಗಲಾಭಗಳು ಲಭಿಸುವವು.

ವೃಷಭ—"ದುಃಖಸ್ಯಾನಂತರಂ ಸುಖಂ" ಎಂಬ ಲೋಕೋಕ್ತಿಯಂತೆ ಹಲವು ಸಮಯದಿಂದ ಕಷ್ಟಪರಂಪರೆಗಳನ್ನನುಭವಿಸುತ್ತಿದ್ದ ನಿಮಗೆ ಇಂದೀಗ ಸುಸಮಯವು ಸನ್ನಿಹಿತವಾಗಿರುವುದು. ಪ್ರತಿಯೊಂದು ಕಾರ್ಯವೂ ನಿಮ್ಮಿಚ್ಛೆಯಂತೆ ಕೊನೆಗೊಂಡುವದು. ಮಿತ್ರರ ಬೆಂಬಲ ಜನತೆಯ ಆದರಾತಿಥ್ಯಗಳನ್ನು ಪಡೆವ ನಿಮ್ಮ ಸಂಪದ್ಭಾಗವು ಅತ್ಯುತ್ತಮ ಸ್ಥಿತಿಗೆ ಬಂದಿದೆ. ವಾರಾಂತ್ಯದ 3 ದಿನಗಳು ಅನುಕೂಲಗಳಿವೆ.

ಮಿಥುನ—ಭಾಗ್ಯಸ್ಥಾನದ ಗುರುವನ್ನು ಹೊರತು ಉಳಿದೆಲ್ಲಾ ಗ್ರಹರೂ ಪ್ರತಿಕೂಲರಾಗಿರುವುದರಿಂದ ಶತ್ರುಗಳ ಪೀಡೆಯಿಂದಾಗಿ ಕಾರ್ಯಭಂಗ ಧನಹಾನಿಯಾಗಲಿದೆ. ಆರ್ಥಿಕ ದುರವಸ್ಥೆ, ಪತ್ನೀಪುತ್ರರ ವಿರಹ, ಅಪ್ರೇಷ್ಯರ ವಿಯೋಗ ಇತ್ಯಾದಿ ದುಃಖಕ್ಕೀಡಾದ ನಿಮಗೆ ಮಾತುಮಾತಿಗೆ ಕಲಹ, ಸ್ತ್ರೀನಿಮಿತ್ತ ಅವಮಾನಾದಿಗಳು ಸಂಭವಿಸುವ ಯೋಗವಿದೆ ತಾ. 22, 23, 28 ರಲ್ಲಿ ಗುರುಕೃಪೆಯಿಂದಾಗಿ ಧನಾಪ್ತಿ, ವಿಜಯ, ಸ್ತ್ರೀ ಸುಖಗಳು ಲಭಿಸುವವು

ಕರ್ಕಟ—ಶುಭಾಶುಭಗ್ರಹರು ಸಮಬಲರಿರುವುದರಿಂದ ನೀವೀ ವಾರದಲ್ಲಿ ಮಿಶ್ರಫಲವನ್ನು ಪಡೆಯಲಿರುವಿರಿ ಕೇವಲ ಆತ್ಮಶಕ್ತಿಯಿಂದ ಶತ್ರುಗಳನ್ನು ಜಯಿಸಿ ಕಾರ್ಯವಿಜಯ, ಧನವಸನಾದಿಗಳ ಲಾಭವನ್ನು ಪಡೆಯಲಿರುವಿರಿ. ಆದರೆ ಮನೋರೋಗ, ದೇಹಬಾಧೆಗಳು ಪ್ರಬಲವಾಗಿ ಪೀಡಿಸಲಿವೆ. ಅನಿರೀಕ್ಷಿತ ಪ್ರಯಾಣ ಸಂಭವಿಸುವದು. ತಾ 24, 25ರಲ್ಲಿ ಆಕಸ್ಮಿಕ ಧನಲಾಭ ವಿಜಯ ಸುಖಗಳನ್ನು ಪಡೆವಿರಿ.

ಸಿಂಹ—ನಿಮ್ಮ ಅದೃಷ್ಟವು ಈ ವಾರದಲ್ಲಿ ಸ್ವಲ್ಪ ಕೆಟ್ಟಿರುವುದರಿಂದ ಹಿಂದಿನಂತೆ ದಿನಗಳು ಸುಗಮವಾಗಿ ಸಾಗಲಾರವು ವಿರೋಧಿ ಜನರ ಪೀಡೆಯಿಂದಾಗಿ ಧನಮಾನಾದಿಗಳಿಗೆ ಧಕ್ಕೆ ಬರಲಿದೆ ಉತ್ಪತ್ತಿಗಿಂತ ದ್ವಿಗುಣ ವ್ಯಯವಾಗುವದು. ಆಕಸ್ಮಿಕ ಪ್ರವಾಸ, ದೇಹಾಲಸ್ಯ, ವಿಜಾತಿಯರೊಡನೆ ಕಲಹದ ಸಂಭವವೂ ಇದೆ. ಆದರೆ ಗುರ್ವನುಗ್ರಹವು ಬಲವತ್ತರವಿರುವುದರಿಂದ ತಾ. 22, 23, 26, 27 ರಲ್ಲಿ ಮನ್ನಣೆ, ಕಾರ್ಯವಿಜಯ, ಧನಲಾಭಗಳಾಗುವವು.

ಕನ್ಯಾ—ಕೆಟ್ಟನಂತೆ ನಿಮ್ಮ ಗೃಹತಾಪತ್ರಯಗಳು ದೂರವಾಗುವವು. ಉದ್ಯೋಗದಲ್ಲಿ ಸಾಕಷ್ಟು ಉತ್ತಮ ಫಲಾಪ್ತಿಯಿದೆ. ಆದರೂ ಆತ್ಮೀಯರ ವಿಯೋಗ, ನೇತ್ರೋದರ ಪೀಡೆ, ವ್ಯಾಪಾರದಲ್ಲಿ ಅನಿರೀಕ್ಷಿತವಾಗಿ ಸಂಭವಿಸುವ ನಷ್ಟ ಇವುಗಳಿಂದ ನೀವು ಸದಾ ಮನೋರೋಗಕ್ಕೆ ಗುರಿಯಾಗುವಿರಿ. ಸ್ತ್ರೀ ನಿಮಿತ್ತವಾಗಿ ಅನಿಷ್ಟ ಅಪವಾದಾದಿಗಳಿಗೆ ಸಿಲುಕುವ ಸಂಭವವಿದೆ. ತಾ. 24, 25, 28 ಇತರ ದಿನಗಳಿಗಿಂತ ಉತ್ತಮ.

ತುಲಾ— ಧೈರ್ಯ ಸಾಹಸಗಳಲ್ಲೂ ಬುದ್ಧಿಶಕ್ತಿಯಲ್ಲೂ ಅದ್ವಿತೀಯರಿರುವಿರಿ. ಸದ್ಯ ನಿಮ್ಮ ಸಂಕಲ್ಪಗಳು ಅನಾಯಾಸದಿಂದ ನೆರವೇರುವವು. ಸಾಂಪತ್ತಿಕ ಸ್ಥಿತಿಯೂ ಅತ್ಯುತ್ತಮ ಸ್ಥಿತಿಯಲ್ಲಿರುವುದು. ಆದರೆ ಗೃಹತಾಪತ್ರಯಗಳು ಮಾತ್ರ ಮೇಲಿಂದ ಮೇಲೆ ಪೀಡಿಸಲಿವೆ. ವ್ಯಯಗತ ಶನಿಯೂ ಕೋಟಾನರ್ಥಗಳಿಗೆ ಗುರಿಮಾಡಲಿರುವನು. ತಾ. 24, 25, 26 ರಲ್ಲಿ ಅಧಿಕ ವ್ಯಯ, ದೇಹಾಲಸ್ಯವು ತೋರಿಬಂದೀತು.

ವೃಶ್ಚಿಕ— ಮಿಶ್ರಫಲದಾಯಿಯಾದ ಈ ವಾರದಲ್ಲಿ ಶ್ರಮಜೀವಿಗಳಿಗೂ, ವ್ಯಾಪಾರಿ ಜನರಿಗೂ ನೌಕರವರ್ಗದವರಿಗೂ ಶ್ರಮಕ್ಕಿಂತ ಅಧಿಕವಾದ ಫಲವು ಲಭಿಸುವದು. ಕೆಲವೊಮ್ಮೆ ಶತ್ರುಪೀಡೆಯಿಂದಾಗಿ ಕಾರ್ಯಹಾನಿಯುಂಟಾದೀತು. ಕುಟುಂಬದ ಅನಾರೋಗ್ಯದ ದೆಸೆಯಿಂದಾಗಿ ಹೆಚ್ಚಿನ ನಿಮ್ಮ ದುಡಿಮೆಯು ವೈದ್ಯರ ಕೈಸೇರಲಿದೆ. ಆಪ್ತೇಷ್ಟರಲ್ಲಿ ಮನಸ್ತಾಪವುಂಟಾದೀತು. ತಾ. 26 27 ಧನಮಾನಗಳಿಗೆ ಹಾನಿಕಾರಿಯಿದೆ.

ಧನು— ಒಂದೊಮ್ಮೆ ತಾಪತ್ರಯಗಳಿಂದ ಮುಕ್ತರಾಗಿ ಸ್ವಲ್ಪ ಚೇತರಿಸಿದ ನಿಮಗೆ ಪುನಃ ಆರ್ಥಿಕ ಬಿಕ್ಕಟ್ಟು, ದೇಹಾಲಸ್ಯ, ಶತ್ರುಪೀಡೆಗಳುಂಟಾಗಹತ್ತಿವೆ ಜನರ ಅಪವಾದಗಳಿಗೆ ಸಿಲುಕುವಿರಿ. ಕುಮಾರ್ಗಗಾಮಿಯಾದ ನಿಮ್ಮ ಮನಸ್ಸು ಕಡಿವಾಣವಿಲ್ಲದ ಕುದುರೆಯಂತಾಗುವದು. ಆದರೂ ಮಿತ್ರಜನರ ಬೆಂಬಲಯುಕ್ತರಾದ ನಿಮಗೆ ಹೆಚ್ಚಿನ ಕಾರ್ಯಗಳಲ್ಲಿ ವಿಜಯವು ಲಭಿಸಲಿದೆ. ತಾ. 24, 25, 26, 27 ಈ ದಿನಗಳು ಅನುಕೂಲವಿವೆ.

ಮಕರ—ದೈವಬಲಯುಕ್ತರಾದ ನಿಮಗೆ ಜನತೆಯಲ್ಲಿ ಗೌರವಾದರಗಳು ಲಭಿಸುವವು. ನಿರುದ್ಯೋಗಿಗಳು ಕೂಡಾ ಸಮುದ್ಯಮ ಪ್ರವೃತ್ತರಾಗುವರು. ನೀಚಜನರಿಂದ ಲಾಭವಾಗುವದು. ವಿದ್ಯಾರ್ಥಿಜೀವಿಗಳಿಗೆ ಕಾಲವು ಸುಖದಾಯಿಯಾಗಲಿದೆ, ಆದರೆ ನಿಮ್ಮ ಮನೋದೌರ್ಬಲ್ಯದಿಂದಾಗಿ ಆಪ್ತಜನರಲ್ಲೂ ಅವಿಶ್ವಾಸವುಂಟಾಗಲಿದೆ ವಾರಾಂತ್ಯದ 3 ದಿನಗಳಲ್ಲಿ ಇಷ್ಟಸಿದ್ಧಿ, ಸುಖ, ನಾನಾ ತೆರನಾದ ಲಾಭಗಳುಂಟಾಗುವವು.

ಕುಂಭ—ಕಾಲವು ಬಹಳ ವಿಪರೀತ ಸ್ಥಿತಿಗೆ ಬಂದಿರುವದು. ಮಾತು ಮಾತಿಗೆ ಕಲಹವಾಗುವದು. ಪುರಸ್ಕಾರ ಹೊಂದಿದ ಕಡೆಗಳಲ್ಲಿ ನೀವಿಂದು ತಿರಸ್ಕಾರವನ್ನು ಪಡೆಯುವಿರಿ. ಪತ್ನೀಪುತ್ರರಿಂದ ವಿರಹವುಂಟಾದೀತು. ಅಧಿಕಾರಿ ವರ್ಗದವರ ಆಗ್ರಹಕ್ಕೆ ಸಿಲುಕಿ ಕಷ್ಟನಷ್ಟಗಳನ್ನು ಹೊಂದುವಿರಿ. ಆದರೂ ಧನಸ್ಥಾನಗತನಾದ ಉಚ್ಚಶುಕ್ರನು ನಿಮ್ಮನ್ನು ಕೈಹಿಡಿದು ಸಲಹಲಿರುವನು. ತಾ. 22, 23, 28 ಈ ದಿನಗಳಲ್ಲಿ ಧನಮಾನಗಳನ್ನು ಪಡೆವಿರಿ.

ಮೀನ— ಅನಿಷ್ಟ ಪರಂಪರೆಗಳು ಸಮುದ್ರದಲೆಗಳಂತೆ ಬರುವವು. ಎಷ್ಟೇ ಶ್ರಮವಹಿಸಿ ದುಡಿದರೂ ಖರ್ಚನ್ನು ಸುಧಾರಿಸಿಕೊಳ್ಳುವದು ಕಷ್ಟವಾಗುವದು. ಪ್ರಯಾಣದಲ್ಲಿ ಪ್ರಾಪ್ತವಾಗತಕ್ಕ ಕಷ್ಟನಷ್ಟಗಳೂ, ದೇಹಾಯಾಸವೂ ನಿಮ್ಮನ್ನು ಸದ್ಯ ಕಲೆಯೊತ್ತದಂತೆ ಮಾಡಲಿದೆ. ವಾರಾದಿಯ 4 ದಿನಗಳಲ್ಲಿ ಸ್ವಂತಭೋಗಕ್ಕೆ ಕೊರತೆಯಾಗದು.

ಕೆಲವೇ ಪ್ರತಿಗಳು ಉಳಿದಿವೆ! ತ್ವರೆ ಮಾಡಿರಿ!

ಮನೆಯೊಂದಾದಲ್ಲಿ ಇರಲೇಬೇಕಾದ ಪುಸ್ತಕ

"ಮನೆ-ಮದ್ದು"

ಬರೆದವರು:. ಡಾಕ್ಟರ್ ಕೋಡ್ಕಲ್ ವೆಂಕಟರಾಯರು, ಎಲ್ ಐ ಎಮ್., ಉಡುಪಿ.

ಸುಮಾರು 200 ಕಾಯಿಲೆಗಳಿಗೆ ... 1000 ಸುಲಭ ಮನೆ-ಮದ್ದುಗಳು!

ಮಕ್ಕಳ ಮತ್ತು ಹೆಂಗಸರ ಕಾಯಿಲೆಗಳ ಚಿಕಿತ್ಸೆ, ಶಿಶು ಸಂರಕ್ಷಣ, ಗರ್ಭಿಣಿ, ಬಾಣಂತಿಯರ ಚಿಕಿತ್ಸೆ, ಇತರರ ಸಾಮಾನ್ಯ ಎಲ್ಲಾ ಕಾಯಿಲೆಗಳಿಗೆ ಸುಲಭ ಚಿಕಿತ್ಸೆಗಳನ್ನು ರೋಗಗಳ ಕಾರಣ, ಲಕ್ಷಣ, ಶುಶ್ರೂಷೆ, ಪಥ್ಯಾಪಥ್ಯ ವಿಚಾರ ಸಹಿತ ಸರಳವಾಗಿ ವಿವರಿಸಿರುವ ಪುಸ್ತಕ. ಹಂಗೆಯ ಕ್ರಮವನ್ನು ವಿಸ್ತಾರವಾಗಿ ವಿವರಿಸಿದೆ. ಮದ್ರಾಸು ಸರಕಾರದಿಂದಲೇ ಮೊದಲಾದ ಕಡೆಗಳಿಂದ ಬಹುಮಾನ ಪಡೆದ ಪುಸ್ತಕ. ಇದುವರೆಗೆ ಕನ್ನಡದಲ್ಲಿ ಇಂತಹ ಪುಸ್ತಕ ಪ್ರಕಟವಾಗಿಲ್ಲ. ಒಂದು ಪ್ರತಿ ನಿಮ್ಮ ಬಳಿ ಇದ್ದರೆ ಒಬ್ಬ ಡಾಕ್ಟರ್ ಇದ್ದಂತೆಯೆ ಸರಿ.

ಇಂದೇ ನಿಮ್ಮ ಪ್ರತಿಗಳಿಗೆ ಬರೆಯಿರಿ: ಬೆಲೆ ರೂ. 2-0-0.
ವಿ. ಪಿ. ದ್ವಾರ 2-6-0.

ಪ್ರತಿಗಳು ನಿಮ್ಮೂರ ಪುಸ್ತಕ ವ್ಯಾಪಾರಿಗಳಲ್ಲಿ ಸಿಗದಿದ್ದರೆ,
ನವಭಾರತ ಪುಸ್ತಕ ಭಂಡಾರ, ಉಡುಪಿ. ಇವರಿಗೆ ಬರೆಯಿರಿ.

— ಮಕ್ಕಳನ್ನು ಹಡೆಯುವುದು ಸಾಕು —

ಅರಕ್ತ ಸ್ತ್ರೀಯರಿಗೆ **ಬರ್ಥ್ ಕಂಟ್ರೋಲ** ರೋಗಗ್ರಸ್ತ ಹೆಣ್ಣು ಮಕ್ಕಳಿಗೆ

ಏಳು ದಿವಸ ಈ ಮಾತ್ರೆಗಳನ್ನು ಸೇವನ ಮಾಡಿದರೆ ಮುಂದೆ ಖಂಡಿತವಾಗಿ ಮಕ್ಕಳಾಗುವದಿಲ್ಲ ಸ್ತ್ರೀಯರು ಪ್ರತಿತಿಂಗಳು ಸರಿಯಾಗಿ ಮುಟ್ಟಾಗುತ್ತಾರೆ. ಅಲ್ಲದೆ ಸ್ತ್ರೀಯರ ಎಳೆರೋಗ, ಪ್ರದರರೋಗ, ಹೊಲಿಕುಟ್ಟು ಗುಣವಾಗಿ ಸ್ತ್ರೀಯು ಗರ್ಭಿಣಿಯಾಗುವದಿಲ್ಲ. ಈ ಔಷಧವನ್ನು ಸೇವಿಸುವ ಕ್ರಮ: ಪ್ರತಿದಿವಸ ಮುಂಜಾನೆ ಗುಳಿಗೆ ಮಧ್ಯಾಹ್ನಕ್ಕೆ ಗುಳಿಗೆ, ಸಂಜೆಗೆ ಗುಳಿಗೆಯಂತೆ ಊಟದ ಮೊದಲು ತಕ್ಕೊಳ್ಳಬೇಕು. ಏಳುದಿವಸ ಈ ಔಷಧವನ್ನು ಬಿಸಿನೀರಿನಲ್ಲಿ ಸೇವಿಸಬೇಕು.

ಪಥ್ಯ:—ಹರವೀಳಲ್ಲಿ ದಿನಬೇಕು. 7 ದಿವಸ ಸಂಪೂರ್ಣ ಔಷಧದ ಕಿಮ್ಮತ್ತು ರೂಪಾಯಿ 5-0-0 ಪೋಸ್ಟ ಚಾರ್ಜ ಬೇರೆ

ಚಾಲಕರು:—ಬಾಲಪ್ಪಾ ಫಕೀರಪ್ಪಾ ದಾವಣಗೇರಿ

ಆಯುರ್ವೇದ ಔಷಧಾಲಯ ಗದಗ-ಬೆಟಿ-

ದಾಸಂದಿರು:—ಹುಬ್ಬಳ್ಳಿ ಧಾರವಾಡ,—ಹುಬ್ಬಳ್ಳಿ, ಗದಗ, ಬಾಗಲಕೋಟೆ ಧಾರವಾಡ ವಿಜಾಪುರ—
ಬೆಳಗಾವಿ ಸಿದ್ಧಲಿಂಗಪ್ಪ ಧಾರವಾಡರ ವಿಜಾಪುರ ಸಂಜುದೇಶ್ವರ ಮೂರ್ತಿ ದಾವಣಗೆರೆ-
ದಾವಣಗೆರೆ:—ದಾವಣಗೆರೆ ಪ್ರೆಸ್ ... ಎಲ್ ಕನ್ನಟ್ಟಾ, ಶೆಟಿಸ್, ಹಾವೇರಿ, ಬ್ಯಾಡಗಿ,

ನಿಮಗೆ
ಇಂಗ್ಲಿಷ್ ಕಲಿಯಬೇಕೆ?
ಹಾಗಿದ್ದರೆ

ಕೋರಡ್ಕಲ್ ಶ್ರೀನಿವಾಸ ರಾವ್ ವಿರಚಿತ

ಸುಲಭದಲ್ಲಿ ಇಂಗ್ಲಿಷ್

English Made Easy

ಎಂಬ

ಇಂಗ್ಲಿಷ್ ಸ್ವಯಂಬೋಧಿನಿ ಪುಸ್ತಕ ಅಚ್ಚುಹಾಕಲ್ಪಟ್ಟಿದೆ.

ಬೆಲೆ ರೂ. 1-8-0.

ವಿ. ಪಿ ದ್ವಾರ ರೂ 1-14-0

ಪ್ರತಿಗಳು ನಿಮ್ಮೂರ ಪುಸ್ತಕ ವ್ಯಾಪಾರಿಗಳಲ್ಲಿ ಸಿಗದಿದ್ದರೆ, ಕೆಳಗಿನ ವಿಳಾಸಕ್ಕೆ ಬರೆಯಿರಿ,

ನವಭಾರತ ಪುಸ್ತಕ ಭಂಡಾರ,
ಉಡುಪಿ

ಋತುಸ್ರಾವ ನಿಂತಿತು

'ರುಪವಾರಿ' ಪಿಲ್ಸ್‌ಗಳನು ಉಪಯೋಗಿಸಿದರೆ ಹದಕಟ್ಟು ಋತುಸ್ರಾವವಾಗುವುದು. ಹಕೋಟಿಗೆ ಬರುವುದು, ಈ ಔಷಧ ಸೇವನೆಯಿಂದ ತೀವ್ರ ಗುಣಹೊಂದಬಹುದು, ಯಾವ ಬಾಧಕವೂ ಯಿಲ್ಲ. ಸಾವಿರಾರು ಮಂದಿಗೆ ಖಾತ್ರಿ ಗುಣವಾಗಿದೆ- ಬೆಲೆ; ರೂ. 3-; ಸ್ಪೆಶಲ್ ರೂ. 5- ಅಧಿಕಾಧಿಕ ಸ್ಪೆಶಲ್ ರೂ. 8-[ವಿ. ಪಿ ಹನ್ನೆರಡಾಣೆ ಪ್ರತ್ಯೇಕ.]

Mrs D. DEVEE, F. D8. (N. J.)
Tollygunge CALCUTTA.
ಸ್ಟಾಕಿಸ್ಟರು ಪಪಾ ಕಂಪೆನಿ, ಮಂಗಳೂರು

ಲಕ್ಷ್ಮೀ ಸೆಂಟಾಲ್ ಮಾತ್ರೆ

ಇದರ ಉಪಯೋಗದಿಂದ ಬಹುಕಾಲದ ಮೇಹ, ಪ್ರಮೇಹ, ಮೂತ್ರದ ಉರಿ, ಮೂತ್ರ ಕೃಚ್ಛ್ರ. ಮೂತ್ರದೊಡನೆ ಯಾ ಮುಂದಾಗಿ ಬಿಳುಪು, ಅರಸಿನ, ಕೆಂಪು ಈ ವರ್ಣಗಳಲ್ಲಿ ಕೀವು ಹೋಗುವುದು, ತೊಡೆ ಸಂದಿನಲ್ಲಿ ನೋವು, ಕಾಲ ಗಂಟುಗಳಲ್ಲಿ ವೇದನೆ, ಕಣ್ಣಿನಲ್ಲಿ ಕೀವು ಬರುವುದು, ಶರೀರದಲ್ಲಿ ಉಷ್ಣತೆ, ಸ್ವಪ್ನೇಂದ್ರಿಯ ಇವೆಲ್ಲಾ ಖಾತ್ರಿಯಾಗಿ ಗುಣಹೊಂದುವುದು.

ಡಬ್ಬಿ ಒಂದಕ್ಕೆ ರೂ. 2-0-0

ಏಜಂಟ್:—

ಶಾ ಕಂಪೆನಿ, ಮಂಗಳೂರು

EDITED, PRINTED & PUBLISHED BY K. H SHETTY AT THE NAVAYUGA PRESS, UDIPI, S.INDIA.

Regd. No. M. 3618 | Estd 1921 ಸ್ಥಾಪನೆ 31ನೇ ವರ್ಷ | 1—3—1951

LICENCE No. 31
Licensed to Post without Prepayment

Founder: Sri A. B. Shetty, Minister for Agriculture & Veterinary.

ನವಯುಗ

ವರ್ಷ ೩೧ ವಾರ ೨೫ | NAVAYUGA WEEKLY | POST BOX NO. 22 UDIPI, S. K. | Vol. 31 No. 25

ದುಡ್ಡಿಲ್ಲದಿರುವುದೇ ದೊಡ್ಡಾಪರಾಧ

"ಹಣವಿಲ್ಲದವನೊಬ್ಬ ಹೆಣ ಕಂಡ್ಯಾ" ಎಂದು ಪುರಂದರದಾಸರು ಅದರ ಮಹಿತಿಯನ್ನು ಹಾಡಿರುತ್ತಾರೆ. 'ಸರ್ವೇ ಜನಾಃ ಕಾಂಚನಂ ಮಾಶ್ರಯಂತಿ' ಎಲ್ಲರೂ ದುಡ್ಡನ್ನೇ ಆಶ್ರಯಿಸುತ್ತಾರೆ. 'Money makes many things' ಎನ್ನುವ ಮಾತುಗಳೆಲ್ಲ ದುಡ್ಡಿನ ಹಿರಿಮೆಯನ್ನು ಸಾರುತ್ತವೆ. 'ಹಣದಿಂದೇನು ವಣ್ಣು ಗುಣವೇ ಮುಖ್ಯ'— "ಸಂಪತ್ತು ಸ್ಥಿರವಲ್ಲ, ತಾತ್ಕಾಲಿಕ" ಎಂದು ತತ್ವವನ್ನಾಡುವವರಾದರೂ ಹಣವಿಲ್ಲದೆ ಈ ಭೂಮಿಯ ಮೇಲೆ ಗಾಳಿ ನೀರನ್ನು ಸೇವಿಸಿಕೊಂಡು ಇರುತ್ತೇವೆಂದರಾಗದು. ಸರ್ವಬಿಟ್ಟ ಸನ್ಯಾಸಿಯಾದವನಿಗೂ ಹಣ ಬೇಕು. ಅವನು ಬೇರೊಬ್ಬನಿಂದ ಸಾಲ ಪಡೆಯುವದಿಲ್ಲ ಕಾರಣ ಅವನಿಗೆ ಬೇರೆ ಯಾವರು ಸಾಲ ಕೊಡುವುದಿಲ್ಲ. ಜ್ಞಾನವೇ ಸಂಪತ್ತು ಎಂದು ಮೂಗು ಹಿಡಿದು ದೇವತ್ವವನ್ನು ಪಡೆಯಲು ಹೊರಟ ಮಹಾ ಪುರುಷರು ಹಣವನ್ನು ಪ್ರತ್ಯಕ್ಷವಾಗಿ ಬಯಸದಿದ್ದರೂ, ಕಾಣಿಕೆಯ ರೂಪದಿಂದಲೂ, ಆಶ್ರಮ ಮಾರಗಳ ಆರ್ಕೃಕೆಯ ಕಾರಣದಿಂದಲೂ ಹಣವನ್ನು ಸ್ವೀಕರಿಸುತ್ತಿರುವರು. ಅರವಿಂದ ಘೋಷರ ಆಶ್ರಮ ಪಾಂಡಿಚೇರಿಯಲ್ಲಿ ಬೆಳೆದು ಪಟ್ಟಣದ ಸುಮಾರು ಭಾಗವನ್ನು ಆಕ್ರಮಿಸಿಕೊಂಡಾಗ-ಫ್ರೆಂಚ ಸರಕಾರ ಇನ್ನು ಸ್ಥಳ ಕೊಡಬಾರದೆಂದಿತಂತೆ. ಅಂತೂ ಆಶ್ರಮದೊಳಗಿನ ಶಾಂತಿಗೆ—ಅಚ್ಚುಕಟ್ಟಿನ ಜೀವನಕ್ಕೆ—ಲಕ್ಷಗಟ್ಟಲೆಯ ನಿಧಿಯನ್ನು ಅರವಿಂದರ ಬಗ್ಗೆ ಮಾತೆಯವರು ಸ್ವೀಕರಿಸುತ್ತಿದ್ದರು. ಹಾಗೆಯೇ ರಮಣ ಮಹರ್ಷಿ ಆಶ್ರಮ, ಕಾಂಞಂಗಾಡಿನ ರಾಮದಾಸಾಶ್ರಮ ಇವೆಲ್ಲ ಆಧ್ಯಾತ್ಮಿಕವಾದಿಗಳ ಆಶ್ರಮಗಳಾದರೂ ದುಡ್ಡಿಲ್ಲವಾದರೆ ಅವು ಉಸಿರಾಡಲಾರವು. ಅಂತೆಯೇ ನಮ್ಮಲ್ಲಿಯ ಮಠಗಳು ಕೂಡಾ ಇವರು ಕೂಡಾ ದೈವಿಕ ಮಾರ್ಗವನ್ನು ಹಿಡಿದವರು. ಸಂಸಾರದ ಸಂಪರ್ಕವನ್ನು ಕಡಿದುಕೊಂಡೇ ಸನ್ಯಾಸ ತೆಗೆದುಕೊಂಡರೂ, ಮಠಕ್ಕೆ ಸಾವಿರಗಟ್ಟಲೆಯ ಆಸ್ತಿಪಾಸ್ತಿಯಿರುವುದಾದರೂ, ಬಹಿಷ್ಕೃತ ಗೇಣಿ ಬಾಕಿಮಾಡಿಕೊಂಡರೆ ಮರುದಿನ ಕಾಯಿದೆಕಾನೂನು ಎಲ್ಲ ಆತನ ಮೇಲೆ ಜ್ಯಾರಿಯಾಗಿಯೇ ಆಗುತ್ತದೆ. ಧರ್ಮದ ಹೆಸರಿನಲ್ಲಿ ಕೋರ್ಟುಗಳನ್ನು ಹತ್ತಿಯೇ ಹತ್ತುತ್ತಾರೆ. ಅಂದರೆ ಸರ್ವಬಿಟ್ಟ ಸನ್ಯಾಸಿಗೂ ಹಣದವಶ್ಯಕತೆ ಬಹಳ. ಹಾಗೆಯೇ ರಾಷ್ಟ್ರಗಳಲ್ಲಿಯೂ ಸಂಪತ್ತಿನ ಹಿರಿಮೆಯಿಲ್ಲದಿದ್ದರೆ ಯಾವ ತತ್ವಕ್ಕೂ ಮನ್ನಣೆಯಿಲ್ಲ. ಶ್ರೀಮಂತ ರಾಷ್ಟ್ರದ ಮುಂದೆ ಹಠವಿಡಿಯಾರಾಷ್ಟ್ರವಾಗಬಹುದು ಬೇರೆ ರಾಷ್ಟ್ರಗಳ ಭೀತಿ ಇದ್ದೇ ಇರುತ್ತದೆ. ಹೀಗೆಯೇ ಹಣದ ಅವಶ್ಯಕತೆ ಎಲ್ಲ ರಾಷ್ಟ್ರಗಳಿಗೂ ಇದೆ. ಹಣವಿಲ್ಲದೆ ಹೋದರೆ ಇಂದಿನ ಜಗತ್ತಿನಲ್ಲಿ ಏನೂ ಮಾಡುವಂತಿಲ್ಲ.

ದೇಶದಲ್ಲಿ ಈ ಪಕ್ಷಪಂಗಡಗಳು ಏಕೆ ಹುಟ್ಟುತ್ತಲಿವೆ? ಸರಕಾರವನ್ನು ಏಕೆ ಉರುಳಿಸುವ ಯತ್ನ ಮಾಡುತ್ತಿವೆ? ಇದಕ್ಕೆ ಮೂಲಕಾರಣವೇನೆಂಬುದನ್ನು ಆಮೂಲಾಗ್ರ ವಿಚಾರ ಮಾಡಿದರೆ ದುಡ್ಡಿನ ಅಭಾವವೇ ಕಾರಣ. "ಜನತೆಯ ಜೀವನ ನಿಕೃಷ್ಟಾವಸ್ಥೆಗೆ—ಸರಕಾರದ ಅಜಾಗ್ರತೆಯೇ ಕಾರಣ—ಇಂದಿನ ಸರಕಾರ ಹಾಲಿಗೆ—ದಬ್ಬಾಳಿಕೆ ನಡೆಸುತ್ತಿದೆ" —ಎಂದು ಟೀಕಿಸಿ ನೂತನ ಪಕ್ಷವನ್ನು ಕಟ್ಟಿ ತಾವು ಮುಖ್ಯರಾಗಿ ಮುಖ್ಯ ಹುದ್ದೆಯನ್ನು ಪಡೆಯಬೇಕೆಂಬ ದೂರದೃಷ್ಟಿ ಅದರಲ್ಲಿ ಇಲ್ಲದಿಲ್ಲ. ಕೆಲವು ಹಿರಿಯ ಧುರೀಣರಿಗೆ ಅಂತಹ ಸಂಕುಚಿತ ದೃಷ್ಟಿ ಇಲ್ಲದಿರಬಹುದು. ಹಾಗಿರಲು ಕಾರಣವೇನೆಂದರೆ ಜನ ಅವರಿಗೆ ಸಾವಿರ ಸಾವಿರ ರುಪಾಯಿಯ ಥೈಲಿಯನ್ನು ಕೊಟ್ಟರೆ ಅವರಿಗೆ ಹಣದ ಮೇಲೆ ಕೈಯಾಡಿಸಬಹುದು. ಸ್ವಂತದ್ದಾಗಬಹುದು. ಸ್ವಂತದ್ದಾಗದೇ ಹೋದರೂ ಜೀವನ ಸುಖಮಯವಾಗಿ ಸಾಗಬಹುದಲ್ಲಾ. ಹಾಗೆಯೇ ಒಂದು ಪಕ್ಷ ಹುಟ್ಟಿದರೆ ಹಲವು ಜನ ಅದರ ಹೆಸರಲ್ಲಿ ಜೀವನ ನಡೆಸುತ್ತಾರೆ ಪಕ್ಷಕ್ಕಾಗಿ ಹೆಂಬಲಕೆ ಮಾಡಿ ಹಣಪೆಟ್ಟುವುದೂ ಅವರೆದುರು

ಅಖಿಲ ಭಾರತ ಕೃಷಿ ಕೈಗಾರಿಕೆ, ಕಲಾಪ್ರದರ್ಶನ ಮತ್ತು ಫನ್‌ಫೇರ್

ದಕ್ಷಿಣ ಕನ್ನಡ ಬಿಲ್ಲವ ಯೂನಿಯನಿನ ವಿದ್ಯಾನಿಧಿಯ ಸಹಾಯಾರ್ಥವಾಗಿ

ತಾ. 1—3—51 ರಿಂದ 31—3—51ರ ವರೆಗೆ

ಮಂಗಳೂರು ಕುದ್ರೋಳಿಯಲ್ಲಿರುವ ಶ್ರೀ ಗೋಕರ್ಣನಾಥ ದೇವಸ್ಥಾನದ ಎದುರುಗಡೆ ಆಕರ್ಷಣೀಯವಾಗಿ ಪ್ರೇಕ್ಷಣೀಯವಾಗಿ ಜರಗಲಿದೆ.

ಅತ್ಯಪರೂಪ ಮತ್ತು ಮನಸೂರೆಗೊಳ್ಳುವ ಸುಸಂಧಿ—ಮಂಗಳೂರಲ್ಲಿ ಇದೀಗ ಪ್ರಥಮಬಾರಿ
ಎಂತಹ ಸಂದರ್ಭದಲ್ಲೂ ಈ ಸನ್ನಿವೇಶವನ್ನು ಕಳಕೊಳ್ಳಬೇಡಿರಿ.

ಭಾರತದಾದ್ಯಂತದಿಂದ ಬರುವ ಔದ್ಯೋಗಿಕ, ಒಕ್ಕಲತನ ಮತ್ತು ಕಲಾಪ್ರದರ್ಶನಗಳು! ಮಂಗಳೂರಿನ ಮಾತ್ರವಲ್ಲ, ಜಿಲ್ಲೆಯ ನಾಗರಿಕರಿಗೆ ಒಂದು ಸುಸಂದರ್ಭ!

ಅಖಿಲಭಾರತ ಕೃಷಿಕೈಗಾರಿಕೆ, ಕಲಾಪ್ರದರ್ಶನ ಮತ್ತು ಗ್ರೇಂಡ್ ಫನ್‌ಫೇರ್

ಸುಪ್ರಸಿದ್ಧ ಶ್ರೀ ಹಲಗೇರಿ ಹಾಲ ಸಿದ್ಧೇಶ್ವರ ನಾಟಕ ಮಂಡಳಿಯವರ ಸಾಮಾಜಿಕ, ಪೌರಾಣಿಕ ನಾಟಕಗಳು, ಪ್ರೊಫೆಸರ್ ಎಮ್. ಪಿ ರೋಯ್ ಇವರ ಇಂದ್ರಜಾಲಗಳು, ಶ್ರೀಮತಿ ಮತ್ತು ಶ್ರೀಯುತ ಜೋರ್ಜ್ ಹಾಗೂ ಅವರ ಕೂಟದವರ ಸರ್ಕಸ್ ಆಟಗಳು! ಇತ್ಯಾದಿ, ಇತ್ಯಾದಿ.

ವ್ಯವಸ್ಥಾಪಕ ಮಂಡಳಿಯವರು ಪ್ರದರ್ಶನ ಸ್ಥಳದಲ್ಲಿ ದೇಶೀ ಹಾಗೂ ವಿದೇಶೀ ಸಂಗೀತ, ನೃತ್ಯ, ನಾಟಕ ಫೆನ್ಸಿಡ್ರೆಸ್ಸು ಮತ್ತು ಮಲ್ಲಯುದ್ಧ, ಕಲಾವಿದರೊಳಗೆ ಸ್ಪರ್ಧೆಯನ್ನೇರ್ಪಡಿಸಲಿರುವರು. ಉಮೇದ್ವಾರರುಗಳು ವ್ಯವಸ್ಥಾಪಕರಿಗೆ ಒಡನೆ ಬರೆದು ತಾರೀಕನ್ನು ನಿಶ್ಚಯಿಸಿಕೊಳ್ಳಬೇಕಾಗಿದೆ.

ಬಾಡಿಗೆಯಿಲ್ಲ! ಪ್ರವೇಶಧನವಿಲ್ಲ!
ಆದರೆ
ಯೋಗ್ಯತಾನುಸಾರ ಪದಕಗಳೂ, ಸರ್ಟಿಫಿಕೇಟುಗಳೂ ಕೊಡೋಣಾಗುವವು.

ಆಲ್ ಇಂಡಿಯಾ ಎಕ್ಸಿಬಿಶನ್ ಆಫೀಸು,
ಜಯಂತ್ ಬಿಲ್ಡಿಂಗ್, ಹಂಪನಕಟ್ಟೆ, ಮಂಗಳೂರು.

ಆತ್ಮಸಾಕ್ಷಿಗೆ ವಿರೋಧವಾಗಿ ಬೇರೆಯವರನ್ನು ಟೀಕಿಸಿ ಸ್ವಪಕ್ಷವನ್ನು ಸಮರ್ಥಿಸಿಕೊಳ್ಳುವುದೂ ದುಡ್ಡಿಗಾಗಿಯೆ ಎಂಬುದನ್ನು ನಾವು ಮರೆಯದಿರೋಣ. ತನ್ನ ಬದುಕನ್ನು ಸಾಗಿಸಲಾಗದವ ಲೋಕದ ಜನರ ಹಿತಚಿಂತನೆಗೇಕೆ ಹೋಗುತ್ತಾನೆ? ಅಂದರೆ ತನ್ನ ಬಾಯಿಬಲದಿಂದ ಪಕ್ಷವನ್ನು ಉಳಿಸಿಕೊಳ್ಳಬೇಕಾಗಿದೆ. ಪಕ್ಷ ದೊಡ್ಡದಾದ ಹಾಗೆ ಪಕ್ಷಕ್ಕೆ ಶಕ್ತಿ ಹೆಚ್ಚಾದ ಹಾಗೆ —ಆರ್ಥಿಕ ಶಕ್ತಿಯೂ ವೃದ್ಧಿಗೊಳ್ಳುತ್ತದೆ. ಪಕ್ಷ ಬಡಕಿದರೆ ದುಡ್ಡಾಯಿತು; ದುಡ್ಡಿದ್ದರೆ ಕಾರ್ಯಕರ್ತ ಬದುಕುತ್ತಾನೆ. ಇದುವೆ ಮೂಲತತ್ವ. ಉಳಿದ ಆದರ್ಶಗಳು ತೋರಿಕೆಯ ಮಟ್ಟಿಗೆ. ಕ್ಷಣಕ್ಷಣಕ್ಕೆ ತಲೆದೋರುವ ಮುಷ್ಕರಗಳ ಕಾರಣವೂ ಹಣದ ಕೊರತೆಯಾದಾಗಿರುತ್ತದೆ.

ಹಾಗೆಯೆ ಇಂದಿನ ಜನಜೀವನ ಕೂಡಾ ದುಡ್ಡಿನ ತಕ್ಕಡಿಯಲ್ಲಿ ಸಮನಾಗಿರದೆ ಡೋಲಾಯಮಾನವಾಗಿ ತೂಗಾಡುತ್ತಲಿದೆ. ದುಡ್ಡಿದ್ದರೇನೇ ಘನವಾದ ಸ್ಥಾನಮಾನಗಳು- ನ್ಯಾಯ ತೀರ್ಮಾನಗಳೂ ಕೂಡಾ. ಕೋರ್ಟು ಕಚೇರಿಗಳೆಂದರೇನು? ದುಡ್ಡಿನ ಬಲಾತ್ಕಾರದಿಂದ ಸುಳ್ಳನ್ನು ಸಾಧಿಸುವ ವಾದಭೂಮಿಯೆಂದು ಭಾಸವಾಗುವುದಿಲ್ಲವೇ? ಅವಿದ್ಯಾವಂತನಾದರೂ ಅವನನ್ನು ಗಡಿಮೀರಿ ಆದರಿಸುವ ಗೌರವಿಸುವ ಸಂದರ್ಭಗಳು ಹೊಸತೇನಲ್ಲ! ಒಬ್ಬ ವ್ಯಕ್ತಿಯಲ್ಲಿ ಯಾವ ರೀತಿಯ ರಾಷ್ಟ್ರೀಯ ಮನೋವೃತ್ತಿಯಿರಲಿ— ಉದಾತ್ತವಾದ ಧ್ಯೇಯಗಳಿರಲಿ—ಲಲಿತವಾದ ಕಲೆಗಳಿರಲಿ —ದುಡ್ಡುಳ್ಳವನ ಮುಂದೆ ಶೋಭಿಸುವಂತಿಲ್ಲ. ಸ್ವಾರ್ಥದ ಹೊರತು ಯಾವ ನೈತಿಕತೆಯೂ, ರಾಷ್ಟ್ರೀಯ ಭಾವನೆಯೂ ದೇಶಸೇವಾ ದೃಷ್ಟಿಯೂ ಇಲ್ಲದ ಇಂತಹ ಶ್ರೀಮಂತಜನ ರಾಜಕೀಯ ರಂಗದಲ್ಲಿಯೋ—ಇನ್ನಿತರ ಕಡೆಯಲ್ಲಿಯೋ ತುಂಬಿ ದೇಶದಲ್ಲೆಲ್ಲ ಗೊಂದಲಮಯ ವಾತಾವರಣವನ್ನು ನಿರ್ಮಿಸುತ್ತಲಿದ್ದಾರೆ. ಹಣವಿಲ್ಲದವನೊಬ್ಬ ಎಷ್ಟೇ ಸಹೃದಯಿಯಾಗಿದ್ದರೂ, ನಿಷ್ಠಾವಂತನಾಗಿದ್ದರೂ, ಕಷ್ಟವಾದಿಯಾಗಿದ್ದರೂ ಜನ ನಂಬುವುದಿಲ್ಲ. ಒಬ್ಬ ಶ್ರೀಮಂತ ಸಾವಿರಾರು ರೂಪಾಯಿಗಳನ್ನು ಸಾಲ ತೆಗೆದು ವರ್ಷ ಕಾಲ ಕೊಡದೆ ಹೋದರೂ "ಆ ದುಡ್ಡು ನಿಧಿಯಿದ್ದ ಹಾಗೆ ಎಲ್ಲಿಗೆ ಹೋಗುತ್ತೆ" ಎಂದು ಭಾವಿಸುತ್ತಾರೆ. ಆದರೆ ಒಬ್ಬ ಬಡವ ಸಾಲ ತೆಗೆದು ಐದಾರು ರೂಪಾಯಿ ಸಾಲ ತೆಗೆದುಕೊಂಡರೆ ಅಂತಃಕರಣಪೂರ್ವಕವಾಗಿಯೂ ವಂಚನೆಯ ಯೋಚನೆ ಮಾಡದಿರುವವನಾದರೂ 'ಬಡವ' ಎನ್ನುವ ತತ್ವದ ಮೇಲೆ ಅದೇ ದಿನದೊಳಗೆ ಜಬರದಸ್ತು ಮಾಡಿ ವಸೂಲು ಮಾಡುತ್ತಾರೆ. ಹಣವುಳ್ಳವ ಅವಿಚಾರ ಮಾಡಿದರೂ ವ್ಯವಹಾರ ರಂಗದಲ್ಲಿ ಹಲವು ಸಂಸಾರಗಳ ಕುತ್ತಿಗೆ ಕೊಯ್ದಾದರೂ ಜನ ಹಾಗೂ ಕಾನೂನು ದೃಷ್ಟಿಯಲ್ಲಿ ಶುದ್ಧ! ಹಣವಿಲ್ಲದವ ಸ್ವಲ್ಪ ತಪ್ಪಿ ನಡೆದರೂ ಕಾಯಿದೆ ಕಾನೂನುಗಳು ಶಿಕ್ಷಿಸಿಯೇ ಶಿಕ್ಷಿಸುತ್ತವೆ. ಅಂದರೆ ಕಾಯಿದೆ ಕಾನೂನುಗಳೆಲ್ಲ ಇರುವುದು ಬಡವರ ಮೇಲೆ ಸವಾರಿ ಮಾಡುವುದಕ್ಕಾಗಿಯೇ. ಹೀಗೆ ದುಡ್ಡಿನ ಆವಶ್ಯಕತೆ ಮಾನವ ಜೀವನದಲ್ಲಿ ಬಹು ಪ್ರಾಮುಖ್ಯತೆಯನ್ನು ಪಡೆದಿದೆ. ಈ ಬಗೆಯ ಶ್ರೀಮಂತಿಕೆಯ ಆರಾಧನೆಯಿಂದ ಜನರಲ್ಲಿ ಮುಂದಕ್ಕೆ 'ದೇವರಂತೆ' ಪೂಜಿಸುವ ಅಂಧಾನುಕರಣೆ ಬಂದರೂ ಬರಬಹುದೋ ಏನೋ! ದುಡ್ಡಿದ್ದವರೊಡನೆ ಹೃದಯ ನಿವೇದಿಸಿಕೊಂಡರೂ ಅಪರಾಧ, ಅವಿಧೇಯತನ—ಎಂದು ದುಡ್ಡಿಲ್ಲದವರನ್ನು ಹಿಂಸೆಪಡಿಸುವುದನ್ನು ನೋಡುವಾಗ ಅಂತಹ ಜನಕ್ಕೆ 'ದುಡ್ಡಿಲ್ಲದಿರುವುದೇ ದೊಡ್ಡಾಪರಾಧ' ಎನ್ನುವದೇ ಒಂದು ಕಾಯಿದೆಯಾಗಬಹುದೋ ಏನೋ!

ಬುದ್ಧಿ ಬೇಡ ತಲೆಯಿದ್ದರೆ ಸಾಕು!

ಕಳೆದ ವಾರ ಉಡುಪಿಯ ಮಹಾತ್ಮಾ ಗಾಂಧೀ ಮೆಮೋರಿಯಲ್ ಕಾಲೇಜಿನ ವಾರ್ಷಿಕೋತ್ಸವ ಸಮಾರಂಭದಲ್ಲಿ ಮದ್ರಾಸಿನ ವಿದ್ಯಾಸಚಿವ ಶ್ರೀ ಮಾಧವ ಮೆನನ್‌ರವರು ಅಧ್ಯಕ್ಷಸ್ಥಾನದಿಂದ ಹೀಗೆ ಹೇಳಿದರು: "ಪ್ರಜಾಪ್ರಭುತ್ವವೆಂದರೆ ತಲೆಗಣನೆಯು ಹೊರತು ತಲೆಯೊಳಗಿನ ವಿಚಾರಗಳಾಗಲಾರವು." ಇದೇ ಮಾತನ್ನು ರಥಬೀದಿಯಲ್ಲಿ ವಯಸ್ಕರ ಶಿಕ್ಷಣದ ಪ್ರಚಾರಸಭೆಯಲ್ಲಿಯೂ 'ಪ್ರಜಾಪ್ರಭುತ್ವವೆಂದರೆ ತಲೆಗಳ ಗಣನೆಯೆ. ತಲೆಯೊಳಗಿನ ವಿಚಾರಗಳ ಗಣನೆ ಎಂದೂ ಆಗದು" ಎಂದ ಮಾತನ್ನು ವಿದ್ಯೆಬಲ್ಲವರೂ ಅರಿಯದವರೂ 'ಅಕ್ಷರಸ್ಥರಾಗಿ ಏನೂ ಪ್ರಯೋಜನವಿಲ್ಲ ಲೆಕ್ಕಕ್ಕೆ ತಲೆ ಮಾತ್ರ ಇದ್ದರೆ ಸಾಕು' ಎಂದು ಅರ್ಥಮಾಡಿಕೊಳ್ಳಬಹುದೇ? ತಲೆಗಣನೆ ಮಾತ್ರ ನಡೆಯುವದಾದರೆ ಲಕ್ಷಗಟ್ಟಲೆ ಹಣ ಸುರಿದು ಈ ವಯಸ್ಕರ ಶಿಕ್ಷಣವನ್ನೇಕೆ ಆರಂಭಿಸಬೇಕು? 'ಅವರವರ ತಲೆಗಳನ್ನು ಜಾಗ್ರತೆಯಾಗಿ ಉಳಿಸಿಕೊಳ್ಳಿ" ಎಂದಷ್ಟೇ ನಮ್ಮ ಮಂತ್ರಿವರ್ಯರು ಹೇಳಬಹುದಾಗಿತ್ತು. ಕಾಲೇಜಿನ ವಿದ್ಯಾರ್ಥಿಗಳ ಮುಂದೆಯೂ ಇದೇ ಶಂಖವನ್ನು ಊದಿದ್ದರು ಮಂತ್ರಿವರ್ಯರು. ವಿದ್ಯಾರ್ಥಿಗಳು 'ವಿಚಾರ ಬೇಡ ತಲೆಯಿರಲಿ' ಎಂದುದನ್ನು ಯಥಾರ್ಥವಾಗಿ ಆಚರಣೆಗೆ ತರುವುದಾದರೆ ಕಾಲೇಜಿನ ಹಾಗೂ ಅಧ್ಯಾಪಕರುಗಳ ಅವಶ್ಯಕತೆ ಬೀಳಲಾರದು. ಅಂತೂ ಮಂತ್ರಿಗಳು ಮಾತನಾಡುವುದು ತಲೆಗಳ ವಿಚಾರವೆಂದ ಮೇಲೆ ವಿಚಾರವಂತರ ಪಾದಕ್ಕೆಡೆಯಿಲ್ಲ. ಎಲ್ಲವೂ ಅದನ್ನು ಹೊರತು ಕೇವಲ ತಲೆಯು ಪ್ರಧಾನವೆಂದ ಮೇಲೆ ಬೇರೇನೂ ಹೇಳಬೇಕಾಗಿಲ್ಲ. ಒಂದು ವೇಳೆ ನಾವು ಮಂತ್ರಿವರ್ಯರ ವಾದವನ್ನು ಟೀಕಿಸುವದಾದರೂ "ಬುದ್ಧಿ ಹೆಚ್ಚಾಯಿತು" ಎಂದು ಅವರು ಉತ್ತರಿಸಬಹುದು. ಅಂದರೆ ಅವರು ಹೇಳುವ ಹಾಗೆ ನಮಗೆ ತಲೆಗಳು ಮಾತ್ರ ಇರಬೇಕೇ ಹೊರತು ಬುದ್ಧಿಯಿರಕೂಡದು.

ಮಠಗಳ ಕುರಿತು ಮಂತ್ರಿಗಳ ಟೀಕೆ

ಮಾನ್ಯ ಮಂತ್ರಿಗಳು ಕಾಲೇಜಿನಲ್ಲಿ ಉಡುಪಿಯ ಎಂಟು ಮಠಗಳ ಕುರಿತು ಆದೇ ಧೋರಣೆಯ ಮಾತನ್ನಾಡಿದಾರೆ. ಮಂತ್ರಿಗಳ ಮೊದಲಿನ ಉದ್ದೇಶ ಸಾಧನೆಯನ್ನು ತಾನು ಸ್ವತಹ ಮಾದರಿಯಾಗಿ ತೋರಿಸಿ ಕೊಟ್ಟಿದ್ದಾರೆಂಬುದಕ್ಕೆ ಕೆಳಗಿನ ಮಾತುಗಳು ಸಾಕಷ್ಟು ಸಾಕ್ಷಿ ಕೊಡುತ್ತವೆ. "ಉಡುಪಿಯಲ್ಲಿ ಅಷ್ಟಮಠಗಳು ಇವೆ. ಅವರಿಗೆ ಹೇರಳ ಸಂಪತ್ತೂ ಇದೆ. ಆವರು ಅದರ ಸದುಪಯೋಗವನ್ನು ಮಾಡುತ್ತಿಲ್ಲ. ಅವರೇಕೆ ಈ ಕಾಲೇಜಿಗೆ ಸಹಾಯ ಮಾಡಕೂಡದು? ಈ ಕಾಲೇಜನ್ನು ತಾವೇ ನಡೆಸಿಕೊಂಡು ಬರಲು ಸಾಧ್ಯವಿಲ್ಲವೇ? ಮದ್ರಾಸಿನ ಶಾರದಾ ವಿಶ್ವವಿದ್ಯಾಲಯಕ್ಕೆ ಈ ಮಠಗಳವರು ಸಹಾಯ ಮಾಡಿರುತ್ತಾರೆ, ಆದರೆ ಇಲ್ಲಿಯೆ ಇರುವ ಕಾಲೇಜಿಗೆ ತಮ್ಮ ಸಂಪತ್ತನ್ನು ಉಪಯೋಗಿಸಲಾಗದೆ? ಇಂತಹ ಉತ್ತಮ ಕಾರ್ಯಕ್ಕೆ ನೀಡದ ಮಠಗಳವರು ತಮ್ಮ ಸಂಪತ್ತನ್ನು ಅನಾವ್ರಯವಾಗಿ ವ್ಯಯಿಸುವರು... ಮದ್ರಾಸಿನಲ್ಲಿ ಮಠಗಳಿಗೆ ತರುವ ಬಿಲ್ಲನ್ನು ವ್ಯರ್ಥವಾಗಿ ವಿರೋಧಿಸುತ್ತಾರೆ."

ಮಠಾಧಿಪತಿಗಳು ಇಂದು ತಮ್ಮಲ್ಲಿಯ ಸಂಪತ್ತನ್ನು ಸದ್ವಿನಿಯೋಗಗೊಳಿಸುತ್ತಾರೆಂದಾಗಲೀ — ದಾನಧರ್ಮಾದಿಗಳಿಂದ ಕಾಲಕಾಲದಿಂದ ಬಂದ ಸಂಪ್ರದಾಯಗಳನ್ನು ಕಾಪಾಡಿಕೊಂಡು ಬಂದಿದ್ದಾರೆಂದಾಗಲೀ ನಾವು ವಾದಿಸುತ್ತಿಲ್ಲ. ಮಠಾಧಿಪತಿಗಳು ಮನಸ್ಸು ಮಾಡಿದರೆ ಹಲವಾರು ಸಾಂಸ್ಕೃತಿಕ ಚಟುವಟಿಕೆಗಳನ್ನೋ— ಸಾರ್ವಜನಿಕ ಸಹಾಯವನ್ನೋ — ಇನ್ನಿತರ ಉತ್ತಮವಾದ ಕಾರ್ಯಗಳನ್ನೋ ಮಾಡಬಹುದಾಗಿದೆ. ದೇಶ ಕಾಲ ಪರಿಸ್ಥಿತಿಯನ್ನು ಹೊಂದಿಕೊಂಡು ಯಾವೊಂದು ಬದಲಾವಣೆಯನ್ನೂ — ಸುಧಾರಣೆಯನ್ನೂ ಮಾಡದೆ ಹಿಂದಿನ ಭಕ್ತಜನಾದಿಗಳು ಮಠಕ್ಕೆ ಬಿಟ್ಟ ಆಸ್ತಿಪಾಸ್ತಿಗಳನ್ನು ತಾವೂ, ತಮಗೆ ಬೇಕಾದವರೂ ತಿಂದು ಅಲಸಿಗರಾಗುವ ನಿದರ್ಶನಗಳನ್ನು ನಾವು ಮರೆಯುವಂತಿಲ್ಲ. ಆದರೂ ಮಠಾಧಿಪತಿಗಳು ಮಾನ್ಯ ಮಂತ್ರಿಗಳು ಹೇಳುವಷ್ಟು ಕಾರ್ಯಪರಾನ್ಮುಖರಾಗಿಲ್ಲವೆಂಬುದನ್ನು ವಸ್ತುಸ್ಥಿತಿಯನ್ನರಿತ ನಾವು ಹೇಳಬಲ್ಲೆವು. ದಕ್ಷಿಣ ಭಾರತದ ಇತರ ಹಲವು ಮಠಗಳಲ್ಲಿ ಲಕ್ಷಗಟ್ಟಲೆಯ ಆದಾಯವಿರುವಂತಹವೂ ಇವೆ. ಅವುಗಳ ಸಂಪತ್ತಿಗೆ ಅಷ್ಟ ಮಠಗಳ ಸಂಪತ್ತನ್ನು ಸರಿದೂಗಿಸಲಾಗದು. ಮಂತ್ರಿವರ್ಯರು ಮಠಾಧಿಪತಿಗಳು ಮಹಾತ್ಮಾಗಾಂಧೀ ಕಾಲೇಜಿಗೆ ಸಹಾಯಮಾಡಲಿ ಎನ್ನುವದನ್ನು ಸೂಚಿಸಬಹುದಾಗಿತ್ತು; ಬದಲಾಗಿ ತನಗೆ ಮಠಗಳ ವಿಚಾರದಲ್ಲಿರುವ ಅಜ್ಞಾನವನ್ನೂ ಪ್ರದರ್ಶಿಸಿದ್ದಾರೆ. ವಸ್ತುಸ್ಥಿತಿಯನ್ನರಿತುಕೊಳ್ಳದೆಯೇ ದಕ್ಷಿಣ ಭಾರತದಲ್ಲಿಯೆ ಪ್ರಾಮುಖ್ಯವಾದ ಪುಣ್ಯಭೂಮಿಯಾದ ಉಡುಪಿಯ ಅಷ್ಟಮಠಗಳ ಟೀಕೆಯನ್ನು ಮಾಡುವುದು ಉಚಿತವಲ್ಲ. ನಿಜವಾಗಿಯೂ ಇಂದು ಮಠಗಳ ಸ್ಥಿತಿ ಏನೆಂಬುದನ್ನು ನಾವು ವಿಮರ್ಶೆ ಮಾಡೋಣ. ಮಠಾಧಿಪತಿಗಳು ಗಾಂಧೀ ಕಾಲೇಜಿಗೆ ಸಹಾಯ ಮಾಡಿದ್ದನ್ನು ಸೂಚಿಸದೆ ಸಹಾಯವೇ ಮಾಡಿಲ್ಲವೆಂಬಷ್ಟು ಮಟ್ಟಿನ ತಪ್ಪು ತಿಳುವಳಿಕೆಯನ್ನು ಜನತೆಯಲ್ಲಿ ಮೂಡುವಂತೆ ಮಾಡುತ್ತಾರೆ. ಆದರೂ ನಾವು ಯಥಾರ್ಥವದುದನ್ನು ಬಯಲಿಗೆಳೆಯಬೇಕಾಗಿದೆ.

ಅವರು-

ಮಹಾತ್ಮಾ ಗಾಂಧೀ ಕಾಲೇಜಿಗೆ

The Canara Mutual Assurance Co., Ltd.,
Head office: UDIPI, (S. India.)

NOTICE IS HEREBY GIVEN that the Sixteenth Ordinary General Meeting of the Company will be held at the Company's Registered Office at "Canara Mutual Building", Udipi, on Monday the 30th April, 1951 at 3 P. M. to transact the following business:—

1. To receive and adopt the Annual Report, Audited Statement of Accounts and Balance Sheet for the year ending 31st December, 1950.
2. To approve the action of the Board in appointing Janab H. S. Hussain Saheb, B. A., B. L., M. L. A., as a Director of the Company under Article 44.
3. To elect a Director in place of Dr. K. L. Aithala who retires by rotation and is eligible for re-election under Article 37.
4. To elect a Director in place of Sri P. P. Rao who retires by rotation and is eligible for re-election under Article 37.
5. To appoint an Auditor or Auditors for the year 1951 and to fix the remuneration payable to him or them. The last year's Auditors, Sri A. Umanath Rao, B. A., G. D. A., Dip. Econ., F. C. A., Mangalore-3 and Sri U. Varadaraja Nayak, B. A., A. C. A., "Loretto Villa," Mangalore-3, retire and are eligible for re-appointment.
6. To transact any other business which may be brought before the meeting with the permission of the Chairman.

N. B.- If a member is unable to attend the meeting he may appoint any other member as his proxy and the instrument appointing him must be duly stamped, signed and attested and should be in the prescribed form (Vide Article No. 32) and should reach the Head Office not less than 72 hours before the time appointed for holding the meeting.

(By order of the Board)

Dated at Udipi, 20th Jan. 1951 — **T. R. A. Pai**, *Managing Director.*

ಹೇಳಿದ್ದೇನು?

ಸುಮಾರು ಎಂಟೊಂಬತ್ತು ಸಹಸ್ರ ರೂಪಾಯಿ ಮಠಗಳಿಂದ ಸಂದಿರುತ್ತದೆ. ಮಠಾಧಿಪತಿಗಳು ದಾನ ಇಲ್ಲವೆ ಧರ್ಮವೆಂದು ಬೇರೆಯವರಿಗೆ ಕೊಡಬೇಕಾದರೆ ಎಂಡೋಮೆಂಟನ್ನು ಕೇಳಬೇಕು. ನಿಯಮಿತವಾದ ಮಠದ ಸ್ವಂತ ಖರ್ಚಿನ ಹೊರತು ಅವರು ಮಾಡುವ ದಾನಧರ್ಮಗಳು ಎಂಡೋಮೆಂಟಿನ ಪರವಾನಿಗೆಯ ಮೇಲೆಯೇ ನಡೆಯಬೇಕು. ಪಂಕ್ತಿಗೆ, ಪರಾಡ, ಸಹಾಯವೆಂದು ಸಹಸ್ರಾರು ಜನ ಬರುತ್ತಾರೆ ಎಲ್ಲರಿಗೂ ಯಥಾನುಶಕ್ತಿ ಮಠದವರು ಕೊಡದೇ ಇಲ್ಲ. ಮಠದಲ್ಲಿ ದಿನವಹಿ ನಡೆಯುವಂತಹ ಖರ್ಚನ್ನು ಸಂಪ್ರದಾಯಕವಾಗಿ ನಡೆಸಿಕೊಂಡು ಬರಬೇಕಾದುದರಿಂದಲೂ, ಎಂಡೋಮೆಂಟಿನವರು ಹಿಂದಿನ ಕಚೇರಿಗಳ ಮೇಲೆ ವಿಶೇಷ ಬಿಗಿ ಹಿಡಿದುದರಿಂದಲೂ ಮಠಾಧಿಪತಿಗಳು ಧರ್ಮಖರ್ಚನ್ನು ಇಚ್ಛೆಗೆ ಸರಿಯಾಗಿ ಮಾಡಲು ಬರುವಂತಿಲ್ಲ.

ಮಠಗಳು ಏನೂ ಮಾಡುತ್ತಿಲ್ಲವೆಂದು ಟೀಕಿಸುವ ವೇಳೆ ನಲುವತ್ತು ವರ್ಷಗಳಿಂದ ನಡೆಸಿಕೊಂಡು ಬಂದಿರುವ ಸಂಸ್ಕೃತ ಕಾಲೇಜಿನ ವಿಚಾರವಾಗಿ ಮಂತ್ರಿವರ್ಯರು ಒಂದೇ ಒಂದು ಮಾತನ್ನು ಉಲ್ಲೇಖಿಸದೇ ಇದ್ದದ್ದು ನಿಜವಾಗಿಯೂ ವಿಷಾದಕರ. ಸಂಸ್ಕೃತ ಕಾಲೇಜು ಮದ್ರಾಸು ಪ್ರಾಂತದ ಇತರ ಸಂಸ್ಕೃತ ಕಾಲೇಜುಗಳಿಗಿಂತ ಉತ್ತಮ ಶ್ರೇಣಿಯದ್ದೆಂದು ಖ್ಯಾತಿ ಪಡೆದಿರುತ್ತದೆ. ಪ್ರತಿವರ್ಷವೂ ಅಲ್ಲಿನ ವಿದ್ಯಾರ್ಥಿಗಳಿಗೆ ಊಟ ವಸತಿ ಪುಕ್ಕಟೆಯಾಗಿ ಮಠದವರು ಕೊಡುತ್ತಲಿದ್ದಾರೆ. ವರ್ಷಕ್ಕೆ ಸುಮಾರು ಏಳೆಂಟು ಸಹಸ್ರ ರೂಪಾಯಿಯನ್ನು ಸಂಸ್ಕೃತ ಕಾಲೇಜಿಗೆ ಅಷ್ಟಮಠಗಳವರು ಕೊಡುತ್ತಲಿದ್ದಾರೆ. ಈಗ ಹೊಸತಾಗಿ ಕಟ್ಟುತ್ತಲಿರುವ ಕಟ್ಟಡಕ್ಕೆ ಎರಡು ಲಕ್ಷದಷ್ಟು ವೆಚ್ಚ ಮಾಡಿರುತ್ತಾರೆ. ಇದರಲ್ಲಿ ಸಾರ್ವಜನಿಕರದ್ದೂ ಇರಬಹುದಾದರೂ ವೃಂದಾವನಸ್ಥ ಫಲಿಮಾರು ಮತ್ತು ಅದಮಾರು ಮಠದ ಶ್ರೀಪಾದಂಗಳವರ ವಿಶೇಷ ಶ್ರಮವಿಲ್ಲದೆ ಹೋಗುತ್ತಿದ್ದರೆ ಕಾಲೇಜಿನ ಕಟ್ಟಡ ಈ ರೂಪಕ್ಕೆ ಬರುತ್ತಿರಲಿಲ್ಲ. ಅಷ್ಟ ಮಠಾಧಿಪತಿಗಳ ಕೃಪೆಯಿಂದಲೇ ಸಂಸ್ಕೃತ ಕಾಲೇಜು ನಲುವತ್ತು ವರ್ಷಗಳಿಂದ ನಡೆದುಕೊಂಡು ಬರುತ್ತಲಿದೆ. ಇದು ಸುಲಭದ ಕೆಲಸವೇನೂ ಅಲ್ಲ. ಮಂತ್ರಿಗಳಿಗೆ ಇಂತಹದೊಂದು ಕಾಲೇಜು ಉಂಟೆಂಬುದೇ ಗೊತ್ತಿಲ್ಲವೇನೋ!

ಸೋದೆ ಮಠದವರೂ, ಅದಮಾರು ಮಠದವರೂ ಎರಡು ಹೈಸ್ಕೂಲ್‌ಗಳನ್ನು ನಡೆಸುವ ಕಾರ್ಯದಲ್ಲಿ ಮುಂದೆ ಬಂದಿರುತ್ತಾರೆ. ಸೋದೇ ಮಠದವರ ಮಹಾಯತ್ನದ ಫಲವಾಗಿ ಇನ್ನಂಜೆಯ ಹೈಸ್ಕೂಲಿಂದ ಸಹಸ್ರಾರು ವಿದ್ಯಾರ್ಥಿಗಳಿಗೆ ವಿದ್ಯಾದಾನವಾದಂತಾಗಿದೆ. ಅಲ್ಲದೆ ಇನ್ನಂಜೆ ಶಾಂತ ವಾತಾವರಣದಿಂದ ಕೂಡಿದ್ದು ವಿದ್ಯಾರ್ಜನೆಗೆ ಹೇಳಿಸಿದ ಸ್ಥಳವಾಗಿರುತ್ತದೆ. ಅದಮಾರು ಮಠಾಧಿಪತಿಗಳಾದ ಶ್ರೀ ಅದಮಾರು ಶ್ರೀಗಳವರು ಹೈಸ್ಕೂಲೊಂದನ್ನು ಆರಂಭ ಮಾಡಿರುತ್ತಾರಲ್ಲದೆ ಪಡುಬಿದ್ರೆಯಲ್ಲಿ ಸಂಸ್ಕೃತ ಪಾಠಶಾಲೆಯೊಂದನ್ನು ಬಹಳ ಕಾಲದಿಂದ ನಡೆಸಿಕೊಂಡು ಬರುತ್ತಲಿದ್ದಾರೆ. ಪೇಜಾವರ ಮಠದವರು ರಾಮಕುಂಜ ಎಂಬಲ್ಲಿನ ಸಂಸ್ಕೃತ ಪಾಠಶಾಲೆಗೂ ಸಹಾಯ ನೀಡುತ್ತಲಿದ್ದಾರೆ.

ಎರಡು ವರ್ಷಕ್ಕೊಮ್ಮೆ ನಡೆಯುವ ಪರ್ಯಾಯ ಕಾಲಕ್ಕೆ ಪರ್ಯಾಯ ಕೂತುಕೊಳ್ಳಬಹುದಾದ ಪ್ರತಿಯೊಬ್ಬ ಸ್ವಾಮಿಯವರಿಗೂ ಎರಡು ವರ್ಷದ ಮಧ್ಯಕಾಲದಲ್ಲಿ ಎರಡು ಮೂರು ಲಕ್ಷ ರೂ. ಖರ್ಚು ಆಗುತ್ತದೆ. ಎಂಡೋಮೆಂಟಿನವರು ಇಷ್ಟನ್ನು ಕೊಡಲೊಪ್ಪುವುದಿಲ್ಲ. ಪರ್ಯಾಯದ ವೇಳೆಯ ಕಾಲಕ್ಕೆ ಎಪ್ಪತ್ತೆಂಬತ್ತು ಸಹಸ್ರ ರೂಪಾಯಿಗಳ ಸಾಲದ ಹೊರೆ ಅವರ ಮೇಲೆ ಬೀಳುತ್ತದೆ. ಇದನ್ನು ಮಾನ್ಯ ಮಂತ್ರಿಗಳು ಲಕ್ಷಿಸಿದಾರೆಯೇ? ಸಂಪತ್ತಿಗೆ ಸರಿಯಾಗಿ ಖರ್ಚಿನ ದಾರಿಯನ್ನೂ ನಾವು ಲಕ್ಷಿಸಬೇಡವೇ? ಹಲವು ರೀತಿಯ ದಾನ–ಬೇಡಿಕೆಗಳು ದಿನಬರುತ್ತಲಿವೆ. ಅವಕ್ಕೆ ಮಠದವರು ಸಹಾಯ ನೀಡದೆಯಿಲ್ಲ. ಮೇಲಿನ ಕಚೇರಿಗಳಿಗೆ ಮಠಗಳಿಗಿರುವ ಸಂಪತ್ತನ್ನು ನಾವು ಉದಾಹರಿಸಿದರೂ ಈಗಿನ ಪೇಟೆ ಬೆಲೆಯ ಕಾಲದಲ್ಲಿ ಆದಾಯ ಬಹಳವಾಗಲಾರದೆಂಬುದನ್ನು ವಿಚಾರವಂತರಾರೂ ಅಲ್ಲಗಳೆಯುವಂತಿಲ್ಲ.

ಮಂತ್ರಿಮಹಾಶಯರು ಮದ್ರಾಸಿನ ಶಾರದಾ ವಿದ್ಯಾಲಯಕ್ಕೆ ಮಠಗಳವರು ಕೊಟ್ಟ ಅಂಕವನ್ನು ಎತ್ತಿ ಹೇಳಿದ್ದಾರೆ. ಆ ಕೊಡುಗೆ ಒಂದು ಬಗೆಯು. ರಾಮಕೃಷ್ಣ ಮಿಶನಿನವರಿಂದ ನಡೆಯಲ್ಪಡುವ ಶಾರದಾ ವಿದ್ಯಾಲಯದ ಕಾರ್ಯವನ್ನು ಪ್ರಶಂಸಿಸುವದಾದರೂ ಮಠಾಧಿಪತಿಗಳು ನಾವು ಮೆಚ್ಚುವ ರೀತಿಯಲ್ಲಿ ಕೊಟ್ಟದ್ದಲ್ಲ. ರಾಮಕೃಷ್ಣ ಮಿಶನಿನ ಅಧ್ಯಕ್ಷರು ಎಂಡೋಮೆಂಟಿನ ಮುಖ್ಯಾಧಿಕಾರಿಗಳ ಆಪ್ತರಾಗಿದ್ದುದರಿಂದ ಎಂಡೋಮೆಂಟಿನವರು ಶಾರದಾ ವಿದ್ಯಾಲಯಕ್ಕೆ ಸಹಾಯ ಮಾಡುವದಾದರೆ ತಮ್ಮದೇನೂ ಅಭ್ಯಂತರವಿಲ್ಲ. ನೀವು ಅದಕ್ಕೆ ಅತ್ಯಗತ್ಯವಾಗಿ ಸಹಾಯ ಮಾಡಬೇಕೆಂಬ ಸರ್ಕಲರನ್ನು ಹೊರಡಿಸಿದ್ದರು. ಆ ಸರ್ಕಲರಿನ ಮೇರೆಗೆ ಮಠಾಧಿಪತಿಗಳು ಕೊಟ್ಟಿರುತ್ತಾರೆಯೆ ಹೊರತು ಇನ್ನಾವ ಕಾರಣದಿಂದಲೂ ಅಲ್ಲ. ಉಡುಪಿಯ ಸಂಸ್ಕೃತ ಕಾಲೇಜಿನ ಅಧ್ಯಾಪಕರ ವೇತನ ಬಹಳ ಕಡಿಮೆಯಲ್ಲಿದ್ದು ಅದನ್ನು ಹೆಚ್ಚಿಸುವರೇ ಮಠದವರು ಮುಂದೆ ಬಂದರೂ ಎಂಡೋಮೆಂಟಿಗೆ ಬಾರಿ ಬಾರಿ ಬರೆದುಕೊಂಡರೂ ಇನ್ನೂ ಸಮರ್ಪಕವಾದ ಉತ್ತರ ಬಾರದ ದಾಖಲೆಗಳು ನಮ್ಮ ಮುಂದಿವೆ. ನಮ್ಮ ವಿದ್ಯಾ ಸಚಿವರಿಗೆ ಈ ಅಂಶ ತಿಳಿಯದಿರಲು ಸಾಧ್ಯವಿಲ್ಲ. ಏಕೆಂದರೆ ಅವರು ಒಬ್ಬ ವಿದ್ಯಾಸಚಿವರಲ್ಲದೆ ಕಾಯಿದೆ ಮಂತ್ರಿಗಳೂ ಕೂಡಾ ಆಗಿರುತ್ತಾರೆ.

ಮದ್ರಾಸಿನಲ್ಲಿ ಕೂತು ಉಡುಪಿಯ ಮಠಗಳ ಮೇಲೆ ಎಂಡೋಮೆಂಟಿನವರು ಹೊರಡಿಸುವ ಹಲವು ಸರ್ಕಲರುಗಳು ನಿಜವಾಗಿಯೂ ಹಾಸ್ಯಾಸ್ಪದವಾಗಿರುತ್ತವೆ. ಮಠಗಳಿಗೆ ಬೀಗಗಳು ಬೇಕಾಗಿದ್ದರೆ ಅದನ್ನು 'ಇಂತಹ' ಕಂಪೆನಿಯಿಂದಲೇ ಪಡೆದುಕೊಳ್ಳಿ—ಸಿಮೆಂಟನ್ನು 'ಈ' (ಇಂಥ) ಕಂಪನಿಯಿಂದಲೇ ಪಡೆದುಕೊಳ್ಳಿ [illegible] ಖರ್ಚು ಮಾಡು [illegible] ಗಳನ್ನು ಉಪಯೋಗಿಸಿ [illegible] ಸಿನ ವ್ಯವಸಾಯ ಏಕೆ ಮಾಡಬಾರದು! ಮುಂತಾದ ಸೂಚನೆಗಳು ಅದರಲ್ಲಿವೆ. ಅಂದರೆ ಕಸ್ತೂರಿಯ ಕಟ್ಟುನಿಟ್ಟಿನ ಅಧಿಕಾರವನ್ನು ಚಲಾಯಿಸುವ ಎಂಡೋಮೆಂಟಿನ ಕೈಗಳಿಗೆ ಮಠಾಧಿಪತಿಗಳು ಹೀಗೆ ವರ್ತಿಸಬೇಕೆಂದು. ಒಂದು ಸಮಸ್ಯೆಯೇ. ಮದ್ರಾಸಿನ ಶಾರದಾ ವಿದ್ಯಾಲಯಕ್ಕೆ ಸಹಾಯ ಮಾಡಿ ಎಂದು ಸರ್ಕಲರು ಹೊರಡಿಸಿದವರು—ಉಡುಪಿಯ ಸಂಸ್ಕೃತ ಕಾಲೇಜಿಗೆ ಕೊಡಲು ಮೀನ ಮೇಷ ಎಣಿಸುತ್ತಿರುವುದೇಕೆ? ತಮಗೆ ಯೋಗ್ಯವಾದ ಒಂದು [illegible] ಪಡೆಯುವಂತಿದ್ದರೂ [illegible] ಕವಾಗಿದ್ದರೆ, ಎಂಡೋಮೆಂಟಿನ [illegible] ಯಿಂದಲೇ ತರಿಸಬೇಕೇ? ಹೀಗೆ ನಿರ್ದೇಶಿಸುವ ಉದ್ದೇಶವಾದರೂ ಏನಿರಬಹುದು? [illegible] ನಿಂದ ನಡೆಸು [illegible] ಆದರೆ [illegible]

([illegible])

THE CANARA MUTUAL ASSURANCE COMPANY, LTD.

Head Office: UDIPI, (S. India)

Summary of Balance Sheet and Revenue Account of the Company in respect of total business.

Revenue Account for the year ending 31-12-1950.

Particulars	Rs.	As.	Ps.	Particulars	Rs	As	Ps
Claims & Surrenders less reinsurances	8,17,783	1	6	[illegible]	51,89,403	0	9
Expenses of Management including Commission	3,96,754	4	5	[illegible]	16,78,012	14	0
Bad Debts	Nil			Interest dividends and rents less Income-tax	1,64,464	12	0
Other Items	11,300	5	0	[illegible] Income	7,349	8	0
Transfer to Investment Reserve Fund	1,22,000	0	0				
Balance of Fund at the end of the year	61,91,192	1	10				
TOTAL	70,3[illegible]	12	9	TOTAL	70,39,229	12	9

Balance Sheet as at 31-12-1950.

Liabilities	Rs.	As.	Ps.	Assets	Rs.	As.	Ps.
Life Insurance Fund	61,91,193	1	10	Government Securities	34,74,907	5	0
Investment Reserve Fund	1,62,100	0	0	Other Approved Securities	7,98,170	6	0
Loans and Advances	Nil			Fictitious Items and bad Assets	Nil		
Outstanding Claims	1,90,152	7	0	Approved Investments & other Assets	24,23,631	7	4
Other Liabilities	1,58,964	9	6				
TOTAL	67,03,709	2	4	TOTAL	67,03,709	2	4

UDIPI,
20-1-1951.

T. R. A. Pai
Managing Director.

ಲೋಕಾಂತ

ಕಮ್ಯೂನಿಸ್ಟರ ಸೋಲು?

ಕೊರಿಯಾ ರಣರಂಗದ ಪರಿಸ್ಥಿತಿಯು ಈಚೆಗೆ ಐದು ದಿನಗಳಿಂದ ಡೋಲಾಯಮಾನ ಸ್ಥಿತಿಯಲ್ಲಿದ್ದು ಈಗ ಕಮ್ಯೂನಿಸ್ಟರ ಪಾಲಿಗೆ ಸೋಲಾಗುವ ಲಕ್ಷಣಗಳು ಕಂಡು ಬರುತ್ತಲಿವೆ. ಕೊರಿಯಾ ಯುದ್ಧಾರಂಭದಿಂದ ಈ ವರೆಗೆ ಲಕ್ಷ ಲಕ್ಷ ಕಮ್ಯೂನಿಸ್ಟರು ಯುದ್ಧರಂಗದಲ್ಲಿ ಮಡಿದಿದ್ದಾರೆ. ದಣಿಬಾ ತಿಂಗಳೊಂದರಲ್ಲಿಯೇ ಇರುವತ್ತು ಸಾವಿರಕ್ಕೂ ಮಿಕ್ಕಿ ಕಮ್ಯೂನಿಸ್ಟರು ಸಾವು ನೋವಿಗೆ ತುತ್ತಾಗಿರುತ್ತಾರೆ. ಜನರಲ್ ಮೆಕಾರ್ಥರರ ವರದಿಯಂತೆ ನಾವು ಊಹಿಸುವದಾದರೆ ಕಮ್ಯೂನಿಸ್ಟರ ತೀವ್ರವಾದ ಪ್ರತಿಭಟನೆ ಮುಂದಕ್ಕೆ ಬರಬಹುದಾದ ಆಪತ್ತನ್ನು ಎದುರಿಸಲಸಾಧ್ಯವಾದ ಕಾರಣವೇ ಇರಬೇಕೆಂದು ಗೊತ್ತಾಗುತ್ತದೆ. ಕಮ್ಯೂನಿಸ್ಟರಲ್ಲಿ ಪ್ರತಿಕೂಲ ಹವೆ ಮತ್ತು ರೋಗಗಳು ಹಬ್ಬಿರುವದರಿಂದ ವಿಶೇಷ ಹುಮ್ಮಸ್ಸು ಸ್ವಾಭಾವಿಕವಾಗಿ ಕುಗ್ಗಿದಂತಾಗಿದೆ. ಮಂಚೂರಿಯ ಗಡಿ ಪ್ರದೇಶದಲ್ಲಿ ಯು. ರಾ. ಸಂಘದ ವಿಮಾನ ಪ್ರತಿಭಟನೆಯ ಫಲವಾಗಿ ಕಮ್ಯೂನಿಸ್ಟರು ಘೋರ ಕಷ್ಟಗಳನ್ನೆದುರಿಸಬೇಕಾದ ಪ್ರಸಂಗ ಒದಗಿತು. ಆ ವಿಮಾನಗಳು ಹಿಂಸಕವೂ ಆಗಿರುತ್ತವೆ. ಸಿಯೋಲವನ್ನು ತಮ್ಮ ಶಕ್ತಿಗೆ ಹಾಕಿ ಸ್ವಾಧೀನ ಪಡೆದುಕೊಳ್ಳಬೇಕೆಂದು ಸಂಘದ ದಳಗಳು ಒಳ್ಳೆ ಪ್ರಯತ್ನಿಸಿದವು. ಕಮ್ಯೂನಿಸ್ಟರ ಸಿಯೋಲವನ್ನು ಉಳಿಸಿಕೊಳ್ಳುವುದರ ಸಲುವಾಗಿ ಘೋರವಾದ ಕದನವನ್ನಾರಂಭಿಸಿದ್ದಾರೆ. ಎರಡು ಪಕ್ಷಗಳೊಳಗೆ ತೀವ್ರವಾದ ಕಾದಾಟ ನಡೆದಿರುವದಾದರೂ ಸಿಯೋಲವನ್ನು ಕಮ್ಯೂನಿಸ್ಟರು ಕೈಬಿಟ್ಟು ಹೋಗಲಿಲ್ಲ.

ಮಧ್ಯರಂಗದ ಪಶ್ಚಿಮ ತುದಿಯಲ್ಲಿ ಹನ್ನೆರಡು ಸಾವಿರ ಕಮ್ಯೂನಿಸ್ಟರು ಯುದ್ಧ ಸನ್ನದ್ಧರಾಗಿ ಕುಳಿತಿದ್ದು ಹಾನ ನದಿಯ ದಂಡೆಯ ಮೇಲೆ ತೀವ್ರ ತರದ ದ್ವಂದ್ವ ಯುದ್ಧ ನಡೆದಿರುತ್ತದೆ. ಯು. ರಾ. ಸಂಘದ ಸೈನಿಕರು ಅಸಂಖ್ಯಾತವಾದ ವಿಮಾನಗಳಲ್ಲಿ ನೂರಿಪ್ಪತ್ತು ಟನ್ ಬಾಂಬುಗಳನ್ನು ಸುರಿಸಿ ಕಮ್ಯೂನಿಸ್ಟರಿಗೆ ವಿಶೇಷ ಹಾನಿ ತಟ್ಟುವಂತೆ ಮಾಡುತ್ತಾರೆ. ಹೋಯಿಂಗಸಾಂಗ ನಗರದ ಹತ್ತಿರ ಮಧ್ಯರಂಗದಲ್ಲಿ ಯು. ರಾ. ಸಂಘದ ದಳಗಳ ಧಾಳಿಯಿಂದ ಮುನ್ನುಗ್ಗುವ ವೇಳೆ 5000 ಸಾವಿರ ಕಮ್ಯೂನಿಸ್ಟರು ಪ್ರತಿಯಾಗಿ ಏಟುಕೊಟ್ಟರೂ ಕೊನೆಗೆ ಪಲಾಯನ ಮಾಡಬೇಕಾದ ಪ್ರಸಂಗ ಬಂದೊದಗಿತು.

ಅಮೇರಿಕದ ವರಿಷ್ಠ ಸೇನಾಧಿಕಾರಿಗಳಾದ ಜನರಲ್ ಲಾಟನ್ ಜೆ. ಕಾಲಿನ್ಸರು ಕೊರಿಯದಲ್ಲಿಯ ಯು. ರಾ. ಸಂಘದ ಸೈನ್ಯಗಳ ಮೇಲೆ ಚೀನೀ ಕಮ್ಯೂನಿಸ್ಟರ ನೌಕೆ ಯಾ ವಿಮಾನ ಮೂಲಕ ಧಾಳಿ ಮಾಡಿದರೆ ನಾವು ಚೀನದ ಮೇಲೆ ನೌಕೆ ಮತ್ತು ವಿಮಾನಗಳಿಂದ ಪ್ರತಿಧಾಳಿ ಮಾಡದಿರಲಾರೆವೆಂದು ಹೇಳಿರುತ್ತಾರೆ. ಆದರೂ ಈಗಿನ ವಾತಾವರಣವನ್ನು ಅವಲೋಕಿಸಿದರೆ ಕಮ್ಯೂನಿಸ್ಟರು ಅಮೇರಿಕಾ, ಯು. ರಾ. ಸಂಘ, ಕಾಮನವೆಲ್ತ್ ಮೊದಲಾದ ದಳಗಳ ಪ್ರತಿಭಟನೆಯಿಂದ ಗೆಲ್ಲುವದು ಅಸಂಭವನೀಯವೆಂದು ತೋರುತ್ತದೆ. ರಾಷ್ಟ್ರಗಳೊಳಗಿನ ಸ್ಥಿತಿಗತಿಯು ಯಾವ ಸೂಚನೆಯೂ ಇಲ್ಲಿ ಕಾರ್ಯಗತವಾಗಿರದೆ ಸೋಲು ಗೆಲವು ಕೇವಲ ಯುದ್ಧಾಧಿಕಾರಿಗಳ ಬಲಾಬಲಗಳ ಮೇಲೆ ಹೊಂದಿಕೊಂಡಿರುವ ಲಕ್ಷಣ ಕಾಣುತ್ತಲಿದೆ. ಅಂತಲೆ ಅಮೇರಿಕೆಯ ಅಧಿಕಾರಿಗಳಿಂದು ಕಮ್ಯೂನಿಸ್ಟ ಸರಕಾರದ ಮೇಲೆ ಏರಿ ಹೋಗುವದಕ್ಕೆ ಯಾವ ನಿರ್ಬಂಧವನ್ನೂ ನಾವು ಉಲ್ಲಂಘಿಸಿದಂತಾಗುವದಿಲ್ಲವೆಂಬ ದಾಟಿ ತಾವೇ ಯುದ್ಧನೀತಿಯನ್ನು ಸಾರುತ್ತಲಿದ್ದಾರೆ.

ರಶಿಯದಿಂದ ಬ್ರಿಟಿಷರ ಟೀಕೆ

ಯುದ್ಧಾನಂತರ ಕಾಲದಲ್ಲಿ ರಶಿಯವು ಅನುಸರಿಸುತ್ತಿರುವ ಧೋರಣೆ ಖಂಡನಾರ್ಹವಾಗಿದೆಂದು ಬ್ರಿಟಿಶರು ಬರೆದ ಪತ್ರಕ್ಕೆ ರಶಿಯ ಇಂದು ಸ್ಪಷ್ಟವಾಗಿ ಉತ್ತರಿಸಿಯದೆ. ಬೋನ್‌ದಲ್ಲಿ ಪಶ್ಚಿಮ ಜರ್ಮನಿ ಸರಕಾರ ಸ್ಥಾಪಿಸಿದ್ದು, ರಶಿಯವನ್ನು ಕೇಳದೆ ಪಶ್ಚಿಮ ಜರ್ಮನಿಯಲ್ಲಿಯ ಬ್ರಿಟಿಷ್ ಫ್ರೆಂಚ್ ಮತ್ತು ಅಮೇರಿಕನ್ ಪ್ರದೇಶಗಳನ್ನು ಒಂದೇ ಆಡಳಿತಕ್ಕೆ ತಂದುದಲ್ಲದೆ, ಜರ್ಮನಿಯನ್ನು ನಿಃಶಸ್ತ್ರಗೊಳಿಸುವ ಬದಲು ಶಸ್ತ್ರೀಕರಿಸಿ ಅದನ್ನು ಆಕ್ರಮಣದ ಠಾಣೆಯನ್ನಾಗಿ ಮಾಡಿದ್ದು, ಬ್ರಿಟಿಶ್ ಸರಕಾರದ ಮಹದನ್ಯಾಯವೆಂದು ಉತ್ತರಿಸಿಯದೆ. ಕಮ್ಯೂನಿಸ್ಟ ರಾಜ್ಯವನ್ನು ಸ್ಥಾಪಿಸಲು ರಷ್ಯವು ಹವಣಿಸುತ್ತಿದೆನ್ನುವ ಬ್ರಿಟಿಷ್ ಸರಕಾರದ ಮಾತು ನಿಂದಾಸ್ಪದವಾದುದು. ಮಲಯಾ ಮತ್ತಿತರ ಕಡೆಯಲ್ಲಾದ ವಿಮೋಚನಾ ಚಳುವಳಿಯು ಅಲ್ಲಿಯ ಜನತೆಯಿಂದಲೇ ಆಯಿತಲ್ಲದೆ ರಷ್ಯದ ಪ್ರೇರಣೆಯಿಂದಲ್ಲ. ಜಗತ್ತಿನಲ್ಲಿ ಭೂಕಂಪವಾದರೆ ಅದು ರಷ್ಯದಿಂದಲೇ ಆಯಿತೆಂದು ಹೇಳುವಷ್ಟು ಅಸಂಬದ್ಧ ಪ್ರಲಾಪಮಾಗುತ್ತಿವೆ. ಬ್ರಿಟನದ ಹೇಳಿಕೆ ಎಂಬುದಾಗಿ ರಶಿಯವು ಬ್ರಿಟಿಶರನ್ನು ಟೀಕಿಸಿಯದೆ.

ಋತುಸ್ರಾವ ನಿಂತಿತು

'ಕುಮಾರಿ' ಗುಳಿಗೆಗಳನ್ನು ಉಪಯೋಗಿಸಿದರೆ ತಪ್ಪಿದ ಋತುಸ್ರಾವವಾಗುವುದು ಪಕೋಟಿಗೆ ಬರುವುದು, ಈ ಔಷಧ ಸೇವನೆಯಿಂದ ತೀವ್ರ ಗುಣಹೊಂದಬಹುದು, ಯಾವ ಬಾಧಕವೂ ಇಲ್ಲ. ಸಾವಿರಾರು ಮಂದಿಗೆ ಖಾತ್ರಿ ಗುಣವಾಗಿದೆ- ಬೆಲೆ: ರೂ. 3-; ಸ್ಪೆಶಲ್ ರೂ. 5- ಅಧಿಕಾಧಿಕ ಸ್ಪೆಶಲ್ ರೂ. 8- [ವಿ. ಪಿ. ಖರ್ಚು ಪ್ರತ್ಯೇಕ.]

Mrs P. DEVEE, F DS (N J.)
Tollygunge CALCUTTA
ಸ್ಟಾಕಿಸ್ಟರು ಕಜಾಕಂಪೆನಿ, ಮಂಗಳೂರು

ಸ್ವಲ್ಪ ಬಂಡವಾಳದಲ್ಲಿ

ಒಂದು ಉಪಯುಕ್ತ ಹಾಗೂ ಲಾಭಕರ ಉದ್ಯೋಗ.

ಸೋಪ್ ಮಿಲ್, ಎಣ್ಣೆಯ ಮಿಲ್ ಅಥವಾ ಟಿನ್ ಯಾ ತಗಡಿನಿಂದ ಅನೇಕ ವಸ್ತುಗಳನ್ನು ಸುಲಭದಲ್ಲಿ ತಯಾರಿಸಿರಿ

ವಿವರದ ಬಗ್ಗೆ ಬರೆಯಿರಿ:

The Vijay Engineering Co. Ltd
Mazagaon, **Bombay 10.**

(೩ನೇ ಪುಟದಿಂದ ಮುಂದುವರಿದದ್ದು)

ಬೇಕು. ಅಂದರೆ ಅವರ ಒಲವು ಇದ್ದ ಕಡೆಗೆ ನಾವು ವಾಲಬೇಕೆಂದರ್ಥವಾಗುವುದಿಲ್ಲವೆ?

ಈ ಅಂಶಗಳೆಲ್ಲ ಸಾರ್ವಜನಿಕರ ದೃಷ್ಟಿಗೆ ಬೀಳುತ್ತಿಲ್ಲ. ಅಂತರಿಕ ಪರಿಸ್ಥಿತಿಯನ್ನವಲೋಕಿಸದ ಅಸಂಪೂರ್ಣ ಟೀಕೆಗಳೇ ಬಹಳ ಬಹಳವಾಗಿ ಬರುತ್ತಲಿವೆ. ನಮ್ಮ ಮಂತ್ರಿಗಳು ಈ ವಿಚಾರ ಯಾವುದನ್ನೂ ತಿಳಿಯದೆ-ಮಠಾಧಿಪತಿಗಳು ದಾನವಾಗಿ ಕಾಲೇಜಿಗೆ ಕೊಟ್ಟಿರುವದನ್ನು ಸ್ಮರಿಸದೇ ಕೇವಲ ಟೀಕೆಯಿಂದಲೇ ಕಾಲಹರಣ ಮಾಡಿದ್ದನ್ನು ನೋಡುವಾಗ ಅವರಿಗೆ ಆ ವಿಚಾರದಲ್ಲಿರುವ ಅಜ್ಞಾನಕ್ಕೆ ಖೇದಪಡಬೇಕಾಗಿದೆ. ಜಾತೀಯ ಸಂಕುಚಿತ ಭಾವನೆಯನ್ನಿಟ್ಟುಕೊಂಡು ಬೇಕೆಂತಲೇ ಈ ಸಂಸ್ಥೆಯನ್ನು ಅವಮಾನಗೊಳಿಸುವದು ಮಂತ್ರಿಗಳ ಉದ್ದೇಶವಿರಬಹುದೆಂದು ಉಳಿದವರು ಭಾವಿಸಲೆಡೆಯದೆ. ಅವರು ಕೊಟ್ಟ ಸಲಹೆ ಸದ್ಬುದ್ಧಿಯದೋ-ಸ್ವಾರ್ಥಹಮೊಂದಿಗೆ ಕೇಳಿಬಂದದ್ದೋ ಎನುವ ಶಂಕೆ ಮೂಡುತ್ತಲಿದೆ.

ಕಾಯದೆ ಮಂತ್ರಿಗಳಾದ ಶ್ರೀ ಮೆನನರು ಇನ್ನಾದರೂ ಈ ವಿಚಾರವನ್ನು ವಿಕಾರವಿಲ್ಲದ ಮನಸ್ಸಿನಿಂದ ನ್ಯಾಯಪಕ್ಷಪಾತಿಯಾಗಿ ವಿಮರ್ಶೆಮಾಡಬಹುದಾಗಿದೆ. ವಿವೇಚನೆಯಿಲ್ಲದ ಟೀಕೆ ವ್ಯರ್ಥಾಲಾಪವಲ್ಲವೇ? ಹೊಣೆಯುಳ್ಳವರಿಗೆ ಇದು ಶೋಭಿಸದೆಂದು ನಮ್ಮಭಿಪ್ರಾಯ.

"ತಿಳುವಳಿಕೆ ಮುಖ್ಯವಲ್ಲ; ಕಲೆ ಮುಖ್ಯ" ಎನ್ನುತ್ತಾರೆ ಮಂತ್ರಿ ಮೆನನ್ನರು. ನಾವು "ಎರಡೂ ಕೊಂಚ ಇದ್ದರೆ ಒಳ್ಳಿತ" ಎನ್ನುತ್ತೇವೆ

ಬೇಂಕಿಂಗ್ ಸಂಬಂಧದ ಎಲ್ಲಾ ಸಮಸ್ಯೆಗಳಿಗೆ

ದಿ ವಿಜಯಾ ಬೇಂಕ್ ಲಿಮಿಟೆಡ್

ಇವರ ಸಲಹೆ ಕೇಳಿರಿ

ಹೆಡ್ ಆಫೀಸು : . : : ಮಂಗಳೂರು

ಮಡಿಕೇರಿಯಲ್ಲಿ ಒಂದು ಶಾಖೆಯೂ ಬೊಂಬಾಯಿಯಲ್ಲಿ ಒಂದು ಶಾಖೆಯೂ ಜಿಲ್ಲೆಯೊಳಗೆ ಹಲವು ಶಾಖೆಗಳೂ ಇವೆ.

ಸ್ಥಿರ ಠೇವಣಾತಿಗಳ ಮೇಲೆ ಆಕರ್ಷಕವಾದ ದರದ ಬಡ್ಡಿಯು ಕೊಡಲ್ಪಡುವುದು	ತಕ್ಕದಾದ ಜವಾಬ್ದಾರಿಗಳ ಮೇಲೆ ಸುಲಭವಾದ ಶರ್ತಗಳಲ್ಲಿ ಸಾಲಗಳು ಕೊಡಲ್ಪಡುವುವು.

ಸಾಲಿಯಾನ ಸೇಕಡಾ 4½ರ ಬಡ್ಡಿ ಗಳಿಸುವ ಮೂರು ವರ್ಷದ ಅವಧಿಯ ವಿಜಯಾ ಕೇಶ್ ಸರ್ಟಿಫಿಕೇಟುಗಳ ಮೇಲೆ

ಹಣವನ್ನು ಹಾಕಿರಿ

ಬಿ. ಮಂಜಯ್ಯ ಹೆಗ್ಗಡೆ,
(ದ. ಕ. ಜಿಲ್ಲಾ ಬೋರ್ಡ್ ಪ್ರೆಸಿಡೆಂಟ್)
ಡೈರೆಕ್ಟರ್ ಬೋರ್ಡಿನ ಅಧ್ಯಕ್ಷರು.

ಭಾರತದ ಬಹುದೊಡ್ಡ ನಗರವಾದ ಬೊಂಬಾಯಿಯಲ್ಲಿ
ಗ್ರಾಹಕರ ತೃಪ್ತಿಯನ್ನೇ ಧ್ಯೇಯವಾಗಿಟ್ಟುಕೊಂಡಿರುವ
ಕನ್ನಡಿಗರಿಂದಲೇ ನಡೆಸಲ್ಪಡುತ್ತಿರುವ ಉನ್ನತವಾದ ರಾಷ್ಟ್ರೀಯ ಸಂಸ್ಥೆ—

ದಿ ನೇಶನಲ್ ಜನರಲ್ ಸ್ಟೋರ್ಸ್

(ಡಿಸ್ಪೆನ್ಸಿಂಗ್ ಕೆಮಿಸ್ಟ್ಸ ಮತ್ತು ಡ್ರಗ್ಗಿಸ್ಟ್ಸ)
8 ಎ, ಮೆಹರ್ವಾನ್ ಬಿಲ್ಡಿಂಗ್ಸ್, Opp: His Master's Voice
ಸರ್ ಫಿರೋಜ್ ಷಾ ಮೆಹ್ತಾ ರೋಡು, ಫೋರ್ಟ, ಬೊಂಬಾಯಿ.

ಇಲ್ಲಿ ದೇಶ-ವಿದೇಶಗಳಿಂದ ಎಲ್ಲಾ ತರದ ಔಷಧಗಳನ್ನೂ ಇತರ ಜನೋಪಯೋಗಿ ಸಾಮಾನುಗಳನ್ನೂ ತರಿಸಿ ಆಕರ್ಷಕ ಬೆಲೆಗೆ ವಿತರಿಸಲಾಗುತ್ತದೆ.

ಅನುನಿತ್ಯದ ಉಪಯೋಗಕ್ಕೆ ಅಗತ್ಯವಾದ ಸಾಧನಗಳೂ ಮತ್ತು ಟಾನಿಕುಗಳೂ ವಿಟಮಿನ್ ಆಹಾರ ವಸ್ತುಗಳೂ ಮುಲಾಮುಗಳೂ, ಸುವಾಸನಾ ದ್ರವ್ಯಗಳೂ ರಖಂ ಆಗಿಯೂ ಚಿಲ್ಲರೆಯಾಗಿಯೂ ಸುಲಭ ದರದಲ್ಲಿ ದೊರೆಯುತ್ತವೆ.

ವಿ. ಪಿ.- ಪರಸ್ಥಳಗಳ ಆರ್ಡರುಗಳನ್ನು ಸ್ವೀಕರಿಸಲಾಗುವುದು
ಹೆಚ್ಚಿನ ಮಾಹಿತಿಗಳಿಗೆ ಬರೆಯಿರಿ.

ಎಂ. ಮೆಂಡೋಸ, ಮಾಲಕ.

M. Mendosa,
Proprietor.

THE NATIONAL GENERAL STORES

Importers, Exporters, Dispensing Chemists & Druggists,
General Merchants & Commission Agents,
8A Mherwan Buildings, Opp: His Master's Voice,
Sir Phirozsha Mehta Road, **Fort, Bombay.**

ಸ್ವಾತಂತ್ರ್ಯಕ್ಕಾಗಿ ಆತ್ಮತ್ಯಾಗ

ಅಮೇರಿಕೆಯು ಭಾರತ ದೇಶಕ್ಕೆ ಆಹಾರ ಧಾನ್ಯಗಳನ್ನು ಶೀಘ್ರವಾಗಿ ಕೊಡುವದೇ ಭಾರತದಲ್ಲಿ ಅಮೇರಿಕೆಯ ರಾಯಭಾರಿಗಳಾದ ಶ್ರೀ ಹೆಂಡರಸನ್ನರು ಅಮೇರಿಕೆಯ ಪ್ರ. ಪ್ರ ಸಮಿತಿಗೊಂದು ಸಂದೇಶ ಕಳಿಸಿರುವರು. ಆ ಸಂದೇಶದಲ್ಲಿ “ತಮ್ಮ ರಾಜಕೀಯ ಇಲ್ಲವೇ ಆರ್ಥಿಕ ಸ್ವಾತಂತ್ರ್ಯವನ್ನು ಮಾರಿಕೊಳ್ಳುವದಕ್ಕಿಂತಲೂ ಭಾರತೀಯರು ಉಪವಾಸದಿಂದ ಸಾಯುವದನ್ನೇ ಬಯಸುವರು... ಭಾರತವು ಶೀಘ್ರ ಆಹಾರ ಸಂಕಟದಲ್ಲಿರುವಾಗ ಅಮೇರಿಕೆಯು ಮರೆ ಹೊಕ್ಕರೆ ಅಮೇರಿಕೆಯು ಸಹಾಯ ನೀಡಬೇಕೆಂಬುದು ಎರಡೂ ರಾಷ್ಟ್ರಗಳ ಸ್ನೇಹ ಸಂವರ್ಧನೆಗೆ ಸಹಾಯಕವಾಗುವುದು” ಎಂಬುದಾಗಿ ಹೇಳಿರುವರು.

ರೈಲ್ವೆ ಪ್ರಯಾಣ ದರಹೆಚ್ಚಿತು

ಭಾರತ ಸರಕಾರ ರಾಷ್ಟ್ರೀಕರಿಸಿದ ಹಲವು ಉದ್ಯಮಗಳಲ್ಲಿ ರೈಲ್ವೆ ಇಲಾಖೆಯೂ ಒಂದಾಗಿರುತ್ತದೆ. ಇನ್ನು ಉಳಿದಾಯ ಉಳ್ಳಂತಹ ಉದ್ದಿಮೆ ಬೇರಾವುದೂ ಇರಲಾರದು. ಇನ್ನು ಕೆಲವು ಉದ್ಯಮಗಳ ರಾಷ್ಟ್ರೀಕರಣದಲ್ಲಿ ಸರಕಾರ ಕೈಹಾಕ್ಕಿಕೊಂಡರೂ ರೈಲ್ವೆಯ ರಾಷ್ಟ್ರೀಕರಣದಿಂದ ಸುಮಾರು ಕದಿನಾಲ್ಕು ಕೋಟಿ ರೂಪಾಯಿ ಮೇಲ್ಪಟ್ಟು ಉಳಿತಾಯವಾಗಿರುತ್ತದೆ. ಕಮ್ಯೂನಿಸ್ಟರು ವಿಧ್ವಂಸಕ ಕಾರ್ಯದ ನಿಮಿತ್ತ ಸುಮಾರು ಇಂಜಿನು ವ್ಯಾಗೀನುಗಳು ಹಾಳಾದುವು. ಅದಲ್ಲದೆ ದ್ದರೆ ಇನ್ನೂ ಕೊಂಚ ಸುಧಾರಿಸಬಹುದಾಗಿತ್ತು. ಯುದ್ಧಕಾಲಾನಂತರದ ರೈಲ್ವೆ ಪ್ರಯಾಣದ ಹೀನ ಪರಿಸ್ಥಿತಿಯು ದೂರವಾಗಿ ರಾಷ್ಟ್ರೀಕರಣವಾದಂದಿನಿಂದ ಪ್ರಯಾಣಿಕರ ಸೌಕರ್ಯವನ್ನು ಹೆಚ್ಚಿಸಿಯೂ, ನಿಯಮಿತ ಕಾಲಕ್ಕೆ ಸರಿಯಾಗಿ ರೈಲುಗಳ ಹೊರಡಿಸಿಯೂ ಜನತೆಯ ವಿಶ್ವಾಸಕ್ಕೆ ಪಾತ್ರರಾಗಿರುತ್ತಾರೆ.

ಇಷ್ಟು ಉಳಿತಾಯವಿರುವದಾದರೂ ರೈಲ್ವೆ ಇಲಾಖೆಯಲ್ಲಿ ಮುಂದೆ ಮಾಡಬಹುದಾದ ಸುಧಾರಣೆಗಳಿಗೆ ಈ ಉಳಿತಾಯ ಸಾಲದೆಂದು ಸಾರಿಗೆ ಮಂತ್ರಿಗಳಾದ ಶ್ರೀ ಗೋಪಾಲಸ್ವಾಮಿ ಅಯ್ಯಂಗಾರರು ಹೇಳಿರುತ್ತಾರೆ. ಅಂತಲೆ ರೈಲ್ವೆ ದರಗಳನ್ನು ಇದೇ ಎಪ್ರಿಲ್ ಒಂದನೇ ತಾರೀಕಿನಿಂದ ಒಂದು ಮೈಲಿಗೆ ಮೂರನೆಯ ವರ್ಗದ ದರದಲ್ಲಿ ಒಂದು ಪೈಯಂತೆ, ಇಂಟರದ ದರದಲ್ಲಿ ಒಂದುವರೆ ಪೈಯಂತೆ, ಎರಡನೆ ವರ್ಗದ ದರದಲ್ಲಿ ಎರಡು ಪೈಗಳಂತೆ, ಒಂದನೇ ವರ್ಗದ ದರದಲ್ಲಿ ಎರಡು ಪೈಗಳಂತೆ, ಒಂದನೇ ವರ್ಗದ ದರದಲ್ಲಿ ಮೂರು ಪೈಗಳಂತೆ ದರವನ್ನು ಏರಿಸುವ ನಿರ್ಧಾರವನ್ನು ಮಾಡಿರುತ್ತಾರೆ. ಇಷ್ಟು ಉಳಿತಾಯವಿರುವ ಸಮಯದಲ್ಲಿ ಸಾರ್ವಜನಿಕರಿಗೆ ಇನ್ನೂ ಹೊರಲಾರದ ಹೊರೆಯನ್ನು ಹಾಕುವುದು ಸರಿಯಾಗದು. ಪಾರ್ಲಿಮೆಂಟಿನ ಹಲವು ಸದಸ್ಯರುಗಳು ಇದಕ್ಕೆ ವಿರೋಧ ಸೂಚಿಸಿದರೂ ನಮ್ಮ ಮಂತ್ರಿಗಳು ಬಿಡಾಯವನ್ನು ತೋರದೆ ದರವನ್ನು ಸಾರ್ವಜನಿಕರ ಮೇಲೆ ಹೇರಿ ಜನತೆಯ ಅವಿಶ್ವಾಸಕ್ಕೆ ಪಾತ್ರರಾಗಿರುತ್ತಾರೆ. ಭಾರತದಲ್ಲಿಯ ದರವು ಇತರ ದೇಶಗಳಿಗಿಂತ ಬಹಳ ಕಡಿಮೆಯಾಗಿರುತ್ತದೇನೋ ನಿಜ. ಒಂದು ಮೈಲಿಗೆ ಬ್ರಿಟನ್ನಿನಲ್ಲಿ ೨೬ ಪೈ, ಫ್ರಾನ್ಸಿನಲ್ಲಿ ೧೮ ಪೈ, ಅಮೇರಿಕೆಯಲ್ಲಿ ೨೨ ಪೈ, ಸ್ವಿಜರ್ಲೆಂಡದಲ್ಲಿ ೩೩ ಪೈ, ಇಟಲಿಯಲ್ಲಿ ೧೦ ಪೈ, ಕೆನಡಾದಲ್ಲಿ ೨೦ ಪೈಗಳಷ್ಟು ಧಾರಣೆಗಳಿವೆ. ಆದರೆ ಅಲ್ಲಿಯ ಜನರ ಜೀವನ ಮಟ್ಟವೂ ಉತ್ತಮವಾಗಿರುತ್ತದೆ. ನಮ್ಮ ದೇಶದ ಜನಕ್ಕೆ ಇದು ಕೊಂಚ ಹೆಚ್ಚೇ ಎನ್ನಬೇಕು. ಹಾಗೂ ದರ ಏರಿಸುವದಿದ್ದರೆ ಒಂದನೇ, ಎರಡನೇ, ಮತ್ತು ಇಂಟರ ತರಗತಿಗಳಿಗೆ ಏರಿಸಿ, ಮೂರನೆಯ ವರ್ಗದಲ್ಲಿ ಸಾಮಾನ್ಯ ಜನರ ಪ್ರಯಾಣ ಸೌಕರ್ಯಕ್ಕಾಗಿ ದರವನ್ನು ಏರಿಸದೇ ಇರಬಹುದಿತ್ತು. ರೈಲ್ವೆ ಇಲಾಖೆಯು ಪ್ರಗತಿಶೀಲವಾದ ಅಂಶಗಳು ಆಶಾದಾಯಕಗಳಾಗಿದ್ದರೂ, ವಿಶೇಷ ದರದ ಭಾರವು ನಿರಾಶೆಯನ್ನುಂಟುಮಾಡುತ್ತವೆ.

ಮೈತ್ರಿಯ ಶುಭ ಚಿಹ್ನೆ

ಭಾರತ–ಪಾಕಿಸ್ತಾನಗಳೊಳಗೆ ನಡೆಯುತ್ತಿದ್ದ ವ್ಯಾಪಾರ ಒಪ್ಪಂದದ ಮಾತುಕತೆಯು ಸಂತೃಪ್ತಿಕರವಾಗಿ ಮುಕ್ತಾಯಗೊಂಡು 26ನೇ ಸೋಮವಾರದ ದಿನ ಎರಡು ರಾಷ್ಟ್ರಗಳೂ ಒಪ್ಪಿತದ ಅಂಕಿತವನ್ನು ಹಾಕಿದವು. ಈ ಒಡಂಬಡಿಕೆ ಪೂರ್ಣ ವಿವರವನ್ನು ಬರುವ ಸೋಮವಾರ ಸಂಜೆ ೬ಕ್ಕೆ ದಿಲ್ಲಿ ಮತ್ತು ಕರಾಚಿಯಲ್ಲಿ ಏಕಕಾಲದಲ್ಲಿ ಪ್ರಕಟಪಡಿಸಲಾಗುವದು. ಈ ಒಡಂಬಡಿಕೆಯನ್ವಯ ಭಾರತವು ಪಾಕಿಸ್ಥಾನಕ್ಕೆ ಕಲ್ಲಿದ್ದಲು, ಉಕ್ಕು, ಜವಳಿ ಮತ್ತು ಸಿಮೆಂಟನ್ನು ಪೂರೈಸಬೇಕೆಂದೂ, ಪಾಕಿಸ್ತಾನ ಭಾರತಕ್ಕೆ ಸೆಣಬು, ಹತ್ತಿ, ಮತ್ತು ಆಹಾರಧಾನ್ಯಗಳನ್ನು ಕೊಡತಕ್ಕದ್ದೆಂದೂ ಕರಾರಾಗಿರುತ್ತದೆ. ಇನ್ನೂ ಅನೇಕ ಸರಕುಗಳ ಅನಿರ್ಬಂಧ ಆಯಾತ ನಿರ್ಯಾತ ನಡೆಯತಕ್ಕದ್ದೆಂದೂ ನಿರ್ಧರಿಸಲಾಗಿದೆ. ಈ ಒಡಂಬಡಿಕೆಯ ವ್ಯಾಪ್ತಿಯು ಹದಿನಾರು ತಿಂಗಳ ವರೆಗಿರುತ್ತದೆ.



Approved from by the Govt. of Mysore Certificated by the Agent of the Govt of Cylone & Indian.

ನೋಟೀಸು

ಕಾಸರಗೋಡು ಡಿ. ಮು. ಕೋರ್ಟಿನಲ್ಲಿ.

ಕ್ರಮ ನಂಬ್ರ 251/1950.

ವಿಷ್ಣುದೇವ ಪೂಜಿತ್ತಾಯ ಕೇಶವದೇವ ಪೂಜಿತ್ತಾಯರ ಮಗ, ಅರಿಕ್ಕಾಡಿ ಗ್ರಾಮದಲ್ಲಿರುವವ —ವಾದಿ.

ಮತ್ತು

1) ಲಕ್ಷ್ಮೀನಾರಾಯಣದೇವ ಪೂಜಿತ್ತಾಯ, ಸೀತಾರಾಮದೇವ ಪೂಜಿತ್ತಾಯರ ಮಗ, ಬುದ್ಧಿಸ್ವಸ್ಥತೆಯಿಲ್ಲದವ– ಈತನ ಗಾರ್ಡಿಯನ್ ಶಂಕರನಾರಾಯಣದೇವ ಪೂಜಿತ್ತಾಯ, ಸುಬ್ರಾಯದೇವಪೂಜಿತ್ತಾಯರ ಮಗ–ಕಂಬಾರು ಗ್ರಾಮದಲ್ಲಿರುವವ. (2) ಲಕ್ಷ್ಮೀಅಂಮ, 1ನೇ ಪ್ರತಿವಾದಿ ಲಕ್ಷ್ಮೀನಾರಾಯಣದೇವ ಪೂಜಿತ್ತಾಯರ ಹೆಂಡತಿ, ಅರಿಕ್ಕಾಡಿ ಗ್ರಾಮದಲ್ಲಿ ಶ್ರೀವಲ್ಲಭದೇವ ಪೂಜಿತ್ತಾಯರ ಮನೆಯಲ್ಲಿರುವವಳು. —ಪ್ರತಿವಾದಿಯು.

ಇವರೊಳಗೆ

2ನೇ ಪ್ರತಿವಾದಿ ಲಕ್ಷ್ಮೀಅಂಮನಿಗೂ ಇತರ ಎಲ್ಲಾ ಜನರಿಗೂ ತಿಳಿಸುವುದೇನಂದರೆ.–

1ನೇ ಪ್ರತಿವಾದಿ ಮತ್ತು ಆತನ ತಂದೆ ಮೃತಪಟ್ಟ ಸೀತಾರಾಮದೇವ ಪೂಜಿತ್ತಾಯರೂ ಕೂಡಾ 2 ಜನರು ವಾದಿಗೆ ತಾರೀಖು 20-7-1933ರಲ್ಲಿ ರೂಪಾಯಿ 1400-0-0 ಕ್ಕೆ ಬರೆಕೊಟ್ಟ ಆಧಾರ ದಸ್ತ್ರಾವೇಜು ಪ್ರಕಾರ ಬರತಕ್ಕ ಅಸಲು ಬಡ್ಡಿ ಆ ವಚನ ಪೈಕಿ ರೂಪಾಯಿ 700-0-0 ವ ಅದರ ಬಡ್ಡಿ, ಕೋರ್ಟು ಖರ್ಚು ವಗೈರೆ ಬರಮಾಡಿಕೊಳ್ಳುವದೆ ದಾಖಲು ಮಾಡಿದ ಮೇಲ್ಕಂಡ ವ್ಯಾಜ್ಯವು ತಾರೀಖು 7-3-1951ಕ್ಕೆ ತನಿಖೆಗೆ ಇಟ್ಟಿರುತ್ತದೆ. ಆ ದಿವಸ ನೀವು ಮೇಲ್ಕಂಡ ಕೋರ್ಟಿನಲ್ಲಿ ಹಾಜರಾಗಿ ನಿಂದು ಆಕ್ಷೇಪಣೆಗಳನ್ನು ಹೇಳಿಕೊಳ್ಳಲು ತಪ್ಪಿದರೆ ನಿಂಮ ಮೇಲೆ ಏಕಪಾರ್ಟಿತೀರ್ಮಾನವಾದೀತು ತಿಳಿದಿರುವದು

(By order of Court)

(Sd.) S. Lakshman Rao,
Vakil for Plaintiff.

ಕಾಸರಗೋಡು, 24-2-1951.



ಮಾರಾಟಕ್ಕೆ ಸದಾ ಸಿದ್ಧವಾಗಿವೆ.

ಎರಡರಿಂದ ಐದು ಕುದುರೆ ಶಕ್ತಿಯುಳ್ಳ ನೀರಿನ ಪಂಪುಗಳು, ತರಹೆವಾರು ಹೊಂಡ ತೆಗೆಯುವ, ಸಾಗ್ವಳ್ಳಿ ಭೂಮಿಗೆ ನೀರು ಹಾಯಿಸುವ, ಕೇಂದ್ರದಿಂದ ದೂರ ಕ್ಷೇತ್ರಕ್ಕೆ ನೀರು ಚಿಮಿಕಿಸುವ ಮತ್ತು Wisconsin Clington, Petter ಎಂಜಿನ್ನುಗಳು ನಮ್ಮಲ್ಲಿ ಮಾರಾಟಕ್ಕೆ ಸದಾಸಿದ್ಧವಿವೆ.

ಹೆಚ್ಚಿನ ಮಾಹಿತಿಗೆ ಈ ಕೆಳಗಣ ವಿಳಾಸಕ್ಕೆ ಬರೆಯಿರಿ.

Enquire–

Auncudur Trading Company,
Fathma Manzil, Colaba Road, **BOMBAY 5.**

THE BOMBAY LIFE ASSURANCE COMPANY, LTD.

ದಿ ಬೊಂಬೆ ಲ್ಯಾಫ್ ಎಶ್ಯೂರೆನ್ಸ್ ಕೋ., ಲಿಮಿಟೆಡ್

(ಸ್ಥಾಪನೆ: 1908)

ಅತ್ಯಲ್ಪ ಖರ್ಚಿನಿಂದ ಅತ್ಯಧಿಕ ಲಾಭವನ್ನೀಯುವ ಅಗ್ರಗಣ್ಯ ವಿಮಾ ಸಂಸ್ಥೆಗಳಲ್ಲೊಂದು

ಪ್ರಧಾನ ಏಜಂಟರು:

ಕೊಚ್ಚಿಕಾರ್ ಬ್ರದರ್ಸ್, ಲಿಮಿಟೆಡ್ ಉಡುಪಿ.

ಇವರ ಶಾಖಾ ಕಚೇರಿಗಳು:-

ಬೊಂಬಾಯಿ, ಮದ್ರಾಸು, ಬೆಂಗಳೂರು, ಕೊಯಮುತ್ತೂರು, ತ್ರಿವೇಂಡ್ರಮ್, ಕಲ್ಲಿಕೋಟೆ ಮತ್ತು ಮಂಗಳೂರು.

ಕಳೆದ ಮುವತ್ತೆಂಟು ವರುಷಗಳಿಂದ ವಿಮಾ ಕ್ಷೇತ್ರದಲ್ಲಿ ಸತತ ದುಡಿದವರಾದ ನಾವು ಜನಾಂಗದ ಶ್ರೇಯೋಭಿವೃದ್ಧಿಯ ಕಡೆಗೆ ನಮ್ಮ ನಮ್ರ ಸೇವೆಯನ್ನು ಸಲ್ಲಿಸಬೇಕೆಂಬುದೇ ನಮ್ಮ ಹೆಗ್ಗಳಿಕೆಯ ಮಾತು.

ವಿಮಾ ಮಾಹಿತಿಗಳಿಗಾಗಲೀ, ಪ್ರಾತಿನಿಧ್ಯ ಪಡೆಯಲಿಕ್ಕಾಗಲೀ ದಯವಿಟ್ಟು ನಮಗಾಗಲೀ ಅಥವಾ ನಮ್ಮ ಶಾಖೆಗಳಿಗಾಗಲೀ ಬರೆಯಿರಿ.

ಸುಲಭ ದರದಲ್ಲಿ
ಅಚ್ಚುಕಟ್ಟಾದ
ಮುದ್ರಣಕ್ಕೆ
ನವಯುಗ ಪ್ರೆಸ್,
ಉಡುಪಿ.

NOTICE.

ಕಾಸರಗೋಡು ಡಿ. ಮು. ಕೋರ್ಟಿನಲ್ಲಿ

O. S. No. 432/1950.

P. ಸಂಜೀವರಾವ್, P. ವೆಂಕಟ್ರಾಯರ ಮಗ, ಮಂಗಳೂರು ಸಬ್‌ಕೋರ್ಟು O.S. No. 122/34ನೇ ವ್ಯಾಜ್ಯದಲ್ಲಿ ನೇಮಕಪಟ್ಟ ರಿಸೀವರ್, ಮಂಗಳೂರು ತಾಲೂಕು ಮಂಗಳೂರು ಕಸಬದಲ್ಲಿ —ವಾದಿ

ಮತ್ತು

1) ವ್ಯಂಗೂರ ಕೆಂಚನ್ನಾಯರ, ಅಪ್ಪೆಯಾನೆ ಅಂಬುನ್ನಾಯರ ಅಳಿಯ ವ ಅಕ್ಕು ಅರಮನ ಮಗ.

2) ಕೋರನ್ನಾಯರ, ಮುಲ್ಲಚೇರಿ ಚತ್ತುನ್ನಾಯರ ಅಳಿಯ, ಉಟ್ಟಿರಿ ಅನ್ನಾಸ ಮಗ.

3) ಅಂದುಕ್ಕ ಯಾನೆ ಅಬ್ದುಲ್ಲ ಕಾದ್ರಬ್ಯಾರಿ, ಕೋಳೊಟೆ ಮಂಮುಂಞ ಬ್ಯಾರಿ ಮಗ.

4) ಅಬ್ದುಲ್ಲ ಕುಂಞಿ ಬ್ಯಾರಿ, ಕೋಳೋಟ ಮೊಯಿದು ಕುಂಞಿ ಬ್ಯಾರಿಗಳ ಮಗ,

1-3ನೇ ಯವರು ತೆಕ್ಕಿಲ ಗ್ರಾಮದಲ್ಲಿಯೂ, 2ನೇ ಯವನು ನಾಲ್‌ಬಂಗ್ಯ ಗ್ರಾಮದಲ್ಲಿಯೂ 4ನೇ ಯವನು ಮುಳಿಯಾರು ಗ್ರಾಮದಲ್ಲಿಯೂ ಇರುವವರು.

ಮೇಲ್ಕಂಡ ವ್ಯಾಜ್ಯದ 1ನೇ ಪ್ರತಿವಾದಿ ವಗೈರೆಯು ವಾದಿಗೆ ತಾರೀಖು 13-6-1940ರಲ್ಲಿ ಬರೆಕೊಟ್ಟ ಬಾಲಗೇಣಿ ಚೀಟಿನ ಆಧಾರದ ಮೇಲೆ ಅನುಭವಿಸಬರುವ ಆಸ್ತಿ ಸ್ವಾಧೀನತೆಗೂ ಗೇಣಿ ಬಾಕಿಗೂ ದಾಖಲುಮಾಡಿದ ಮೇಲ್ಕಂಡ ವ್ಯಾಜ್ಯವು ತನಿಖೆ ಬಗ್ಗೆ ತಾರೀಖು 7-3-1951ಕ್ಕೆ ಇಟ್ಟಿರುವ ಸಂಗತಿ ಈ ಮೂಲಕ ತಿಳಿಸಲಾಗುತ್ತದೆ ;

(Sd) K. Kamalaksha Kamath.
Advocate for Plaintiff

Kasaragod, 22-2-1951.

ಚಂದಾ ವಿವರ
ವರ್ಷಕ್ಕೆ ರೂ. 5-12—0
6 ತಿಂಗಳಿಗೆ ರೂ. 3—0—0

ಗುರುವಾರ, ಉಡುಪಿ, ೧-೩-೫೧

ದುರ್ದೈವೀ ಕಾಶ್ಮೀರ

ಮೂರು ವರ್ಷಗಳಿಂದ ತೊಳಲುತ್ತಿರುವ ಕಾಶ್ಮೀರ ಸಮಸ್ಯೆಯು ತೀರಿ ಮೂರು ತಿಂಗಳ ಕಾಲ ಇನ್ನೊಬ್ಬ ಆಂಗ್ಲನ ತೀರ್ಮಾನವನ್ನು ನಿರೀಕ್ಷಿಸಬೇಕಾಗಿದೆ. ಸರ್. ಡಿಕ್ಸನ್ನರ ಸೂಚನೆ, ಕಾಮನವೆಲ್ತ್ ಮಂತ್ರಿಗಳ ಸಮಾಲೋಚನೆ, ಈಗಿನ ಆಂಗ್ಲೋ ಅಮೇರಿಕನ್ನರ ಸೂಚನೆ ಇವೆಲ್ಲವೂ ಆ ಸಮಸ್ಯೆಯನ್ನು ಇನ್ನಷ್ಟು ಜಟಿಲವಾಗುವಂತೆ ಮಾಡಿದವು. ಸಮಯ ಕಳೆದಂತೆಲ್ಲ ಹಿಂದಿನ ಮುಖ್ಯ ವಿಚಾರಗಳ ಮರೆವು ಆಗುತ್ತ ಬರುತ್ತಲಿದೆ. ಕಾಶ್ಮೀರದಲ್ಲಿ ಪಾಕಿಸ್ತಾನ ನಡೆಸಿದ ಆಕ್ರಮಣವನ್ನು ಸಂ. ರಾ. ಸಂಘದಂತಹ ಒಂದು ಹಿರಿಯ ಸಂಸ್ಥೆ ಸ್ಪಷ್ಟವಾಗಿ ಹೇಳಿ ಆದೇಶ ಕೊಡಲು ಅಂಜಿದ್ದು ನಿಜವಾಗಿಯೂ ದುಃಖದ ಸಂಗತಿ. ಪಾಕಿಸ್ತಾನ ಹಾಗೂ ಕಾಶ್ಮೀರ ಆಜಾದ ದಳಗಳು ಪ್ರತ್ಯಕ್ಷ ಯುದ್ಧವನ್ನು ಸಾರುತ್ತಿರುವಾಗ ಪಾಕಿಸ್ತಾನ ಆಕ್ರಮಣಕಾರಿಯೆಂದು ಸ್ಪಷ್ಟ ಇರುವಾಗ ಸಂ. ರಾ. ಸಂಘವೇಕೆ ತೀಕ್ಷ್ಣವಾದ ಕಾರ್ಯ ಕೈಗೊಳ್ಳಬಾರದು? ಕಮ್ಯೂನಿಸ್ಟ್ ಚೀನಾವನ್ನು ಆಕ್ರಮಕ ರಾಷ್ಟ್ರವೆಂದು ಸಾರುವಲ್ಲಿ ಸಂ. ರಾ. ಸಂಘವೇಕೆ ಅಷ್ಟು ಮುಂತುವರ್ಜಿ ವಹಿಸಿತು? ಈಗ ಕಾಶ್ಮೀರ ಪ್ರಶ್ನೆಯನ್ನು ಎತ್ತಿಕೊಂಡು ಮೀನ ಮೇಷ ಎಣಿಸುವ ಉದ್ದೇಶವಾದರೂ ಏನು? ಬೇಕೆಂತಲೇ ದೀರ್ಘ ಮಾಡಿ ಯಾವುದೋ ದುರುದ್ದೇಶವನ್ನು ಸಾಧಿಸುವ ಹಂಚಿಕೆ ಸಂ. ರಾ. ಸಂಘ ಇಟ್ಟುಕೊಂಡಿರಬಹುದೇ?

ಆಂಗ್ಲೋ ಅಮೇರಿಕನ್ನರ ಗೊತ್ತುವಳಿ ಹಿಂದಿನ ಸೂಚನೆಯನ್ನು ಇನ್ನಷ್ಟು ಕಠಿಣ ಮಾಡಿ ಭಾರತ ಪಾಕಿಸ್ತಾನಗಳೊಳಗಿನ ಮೈತ್ರಿಗೆ ಭಂಗ ತರುವಂತಹ ಪರಿಸ್ಥಿತಿಯನ್ನು ತಂದೊಡ್ಡಿದೆ. ಕಾಶ್ಮೀರ ಹಾಗೂ ಜಮ್ಮೂ ಜನತೆಗಳ ಅಸ್ತಿತ್ವಾಂಶವನ್ನೇ ಅಲ್ಲಗಳೆಯುವಷ್ಟರ ಮಟ್ಟಿನ ಅನೇಕ ತನ್ನ ಗೊತ್ತುವಳಿಯಲ್ಲಿ ತೋರಿಸಿದೆ. ಇಂದಿನ ಸೂಚನೆಗಳನ್ನು ಭಾರತ ಪಾಕಿಸ್ತಾನಗಳು ಒಪ್ಪುವ ಲಕ್ಷಣವಿಲ್ಲ. ಹಾಗೆ ಒಪ್ಪುವದಾದರೂ ಕಾಶ್ಮೀರದ ಭದ್ರತೆಗೂ ಮೂಲಭೂತ ಹಕ್ಕಿಗೂ ಧಕ್ಕೆ ಬರದೆಯಿರದು. ಆತ್ಮ ಗೌರವವನ್ನು ಕಳೆದುಕೊಂಡು ಬದುಕುವದನ್ನು ವೀರ ಕಾಶ್ಮೀರೀ ಜನತೆ ಒಪ್ಪದು.

ಗೊತ್ತುವಳಿಯಲ್ಲಿ ಮುಖ್ಯವಾದ ಅಂಶಗಳೆಂದರೆ ಕಾಶ್ಮೀರ ಹಾಗೂ ಜಮ್ಮು ಜನತೆಯ ಹಕ್ಕುಭಾಧ್ಯತೆಗಳ ಅಪಹರಣ! ಸರ್. ಡಿಕ್ಸನ್ನರ ಸ್ಥಾನದಲ್ಲಿ ಇನ್ನೊಬ್ಬ ಅಧಿಕಾರಿಯನ್ನು ನೇಮಿಸಿ ಈ ಸಮಸ್ಯೆಯನ್ನು ಮೂರು ತಿಂಗಳೊಳಗೆ ವರದಿ ಮಾಡಬೇಕೆಂದು ಗೊತ್ತುವಳಿಯು ಸೂಚಿಸಿದೆ. ಆ ಅಧಿಕಾರಿಗೆ ಡಿಕ್ಸನ್ನರಿಗಿಂತ ಹೆಚ್ಚಿನ ಸ್ವಾತಂತ್ರ್ಯಾಧಿಕಾರಗಳು ಕೊಡಲ್ಪಟ್ಟಿವೆ. ಸಾರ್ವಜನಿಕ ಮತಗಣನೆಯಿಂದ ಕಾಶ್ಮೀರೀ ಜನತೆ ತಾವು ಯಾವ ಪಕ್ಷ ಸೇರಿಕೊಳ್ಳಬಹುದೆಂಬ ಒಂದೇ ಸಮಸ್ಯೆ ಈ ವರೆಗಿತ್ತು. ಆದರೆ ಆಂಗ್ಲೋ ಅಮೇರಿಕನ್ನರ ಗೊತ್ತುವಳಿ "ಬಹುಮತವನ್ನು ಲಕ್ಷಿಸುವದಾದರೂ ಆರ್ಥಿಕ, ಭೌಗೋಲಿಕ ಪರಿಸ್ಥಿತಿಯೂ ಮುಖ್ಯವಾಗಿರುತ್ತದೆ" ಎಂದು ಹೇಳಿರುವದರಿಂದ ಆ ಅಂಶ ಮಹತ್ವ ಮುಕ್ಕಿತು. ಇದರಿಂದ ಕಾಶ್ಮೀರೀ ಜನತೆಯು ಸಂಪೂರ್ಣ ಸ್ವಾತಂತ್ರ್ಯವನ್ನು ಕಸಿದುಕೊಂಡಂತಾಗಿದೆ. ಮತಗಣನೆಯ ಕಾಲದಲ್ಲಿ ಸಂ. ರಾ. ದಳಗಳನ್ನು ಕಾಶ್ಮೀರದಲ್ಲಿ ಇರಿಸಬೇಕೆಂದು ಡಿಕ್ಸನ್ನರು ಈ ಮೊದಲೇ ಸೂಚಿಸಿದ್ದರು. ಅದನ್ನು ಭಾರತ ಸರಕಾರವು ಬಲವಾಗಿ ವಿರೋಧಿಸಿತ್ತು. ಅದೇ ಸ್ರಕ್ತಿ ಈಗ ಗೊತ್ತುವಳಿಯಲ್ಲಿ ಮಂಡಿಸಲಾಗಿದೆ. ಡಿಕ್ಸನ್ನರ ಪರಿಷ್ಕೃತ ಸೂಚನೆಗಳ ಪಾಲನೆ, ನೂತನಾಧಿಕಾರಿಯ ಆದೇಶವನ್ನು ಮಾನ್ಯ ಮಾಡಿ ಅತನೊಡನೆ ಸಹಕರಿಸುವುದೂ, ಕಾಶ್ಮೀರವನ್ನು ಸಂಪೂರ್ಣ ನಿಃಶಸ್ತ್ರೀಕರಿಸಿ ಸ. ರಾ. ದಳಗಳನ್ನು ಕಾಯ್ದಿರಿಸುವುದೂ ಮುಖ್ಯವಾದ ಅಂಶವಾಗಿರುತ್ತವೆ. ಇದರ ಜೊತೆಗೆ ಇನ್ನೊಂದು ಅಧಿಕಪ್ರಸಂಗ ನಡೆದಿದೆ. ಘಟನಾ ಸಮಿತಿ ಮುಖಾಂತರ ತಮ್ಮ ಭವಿಷ್ಯವನ್ನು ತಾವೇ ನಿರ್ಧರಿಸಿಕೊಳ್ಳುವ ಕಾಶ್ಮೀರ ಸರಕಾರದ ಮೂಲಭೂತ ಹಕ್ಕನ್ನು ಗೊತ್ತುವಳಿಯಲ್ಲಿ ಕಡೆಗಣಿಸಲಾಗಿದೆ. ಇದು ಆಂಗ್ಲೋ ಅಮೇರಿಕಾನರ ರಾಜಕೀಯ ಕುಟಿಲ ನೀತಿ!

ಹಿಂದೂ ದೇಶವನ್ನು ವಿಭಜನೆ ಮಾಡಿದುದರ ಫಲದಿಂದಾಗಿ ಈ ಸಮಸ್ಯೆ ಎರಡು ರಾಷ್ಟ್ರಗಳ ಅಂತರಿಕ ಶಾಂತಿ ಸೌಹಾರ್ದಕ್ಕೆ ತೊಡಕಾಗಿ ನಿಲ್ಲುವಂತಾಗಿದೆ. ಈಗ ಈ ಗೊತ್ತುವಳಿಯ ಮೂಲ ಸ್ವರೂಪವನ್ನು ಕೂಲಂಕುಷ ವಿಮರ್ಶೆ ಮಾಡುವದಾದರೆ ಕಾಶ್ಮೀರದ ವಿಭಜನೆಯು ಅನಿವಾರ್ಯವೇ— ಎಂದು ಭಾಸವಾಗುತ್ತದೆ. ಗೊತ್ತುವಳಿಯ ಮೂರನೆಯ ಭಾಗದಲ್ಲಿ "ಭೌಗೋಲಿಕ ಆರ್ಥಿಕ ವಿಚಾರವನ್ನು ಅಲಕ್ಷಿಸತಕ್ಕದ್ದಲ್ಲ" ಸೂಚಿಸಿದ ಈ ಅಂಶ ಅದನ್ನು ಪುಷ್ಟೀಕರಿಸುತ್ತದೆ. ಒಬ್ಬರನ್ನೊಬ್ಬರು ತಿಳಿದು ಬಾಳುವ ಬದಲು ಒಡೆದು ಆಳುವ ನೀತಿಯನ್ನು ಅವರ ಚಾಣಾಕ್ಷತತ್ವದಂತೆ ತೋರಿಸಿಯೇ ಬಿಟ್ಟರು.

ಸಂ. ರಾ. ಸಂಘ ಸರಿಯಾದ ಮಾರ್ಗದರ್ಶನ ಮಾಡೀತೆಂದು ಈ ವರೆಗೆ ನಿರೀಕ್ಷಿಸಿಕೊಂಡಿದ್ದ ಕಾಶ್ಮೀರಿ ಜನತೆಗೆ ಇದರಿಂದ ಅತ್ಯಂತ ಖೇದವ ಗಿದೆ. ಹೊಸ ರೂಪವನ್ನು ತಾಳಿ ಬಂದಿರುವ ಆಂಗ್ಲೋ ಅಮೇರಿಕನ್ನರ ಗೊತ್ತುವಳಿ ವಿಘಾತಕವಾಗಿರುತ್ತದೆ. ಅದನ್ನು ಮಾನ್ಯ ಮಾಡುವದಾದರೆ ಕಾಶ್ಮೀರದಲ್ಲಿ ತಿರುಗಿ ಗೊಂದಲಮಯ ವಾತಾವರಣ ಉಂಟಾಗದೇ ಇರದು. ಭಾರತವು ಇದನ್ನು ಒಪ್ಪುವಂತಿಲ್ಲ. ಕಾಮನವೆಲ್ತ್ ಮಂತ್ರಿಗಳ ಸಭೆಯಲ್ಲಿ ಅನೌಪಚಾರಿಕ ಕಾಶ್ಮೀರದ ಮಾತು ಬಂದಾಗ ನೆಹ್ರೂರವರು ತನ್ನ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾಗ್ಯೂ ಆಂಗ್ಲೋ ಅಮೇರಿಕಾನರು ಅದೇ ಗೊತ್ತುವಳಿಯನ್ನು ಎತ್ತಿ ಹಿಡಿದುದು ವಿಷಾದಕರ! ಕಾಶ್ಮೀರದ ಭವಿತವ್ಯವನ್ನು ಭಾರತ ಪಾಕಿಸ್ತಾನಗಳೇ ಬಗೆಹರಿಸಿಕೊಳ್ಳಬಲ್ಲವು. ಬೇರೆಯವರಿಂದ ಸರಿಯಾದ ಮಾರ್ಗದರ್ಶನ ದೊರಕೀತೆನ್ನುವ ಸದಾಶೆಯನ್ನು ಮುಂದೆ ಇಟ್ಟುಕೊಳ್ಳುವುದರಲ್ಲಿ ಅರ್ಥವಿಲ್ಲ. ಸಂ. ರಾ. ಸಂಘ ಕೊಡುವ ನ್ಯಾಯದಿಂದ ಕಾಶ್ಮೀರೀ ಜನತೆಯ ಆಕಾಂಕ್ಷೆಗಳು ಈಡೇರುವಂತೆಯೂ ಇಲ್ಲ; ಭಾರತ ಪಾಕಿಸ್ತಾನಗಳೊಳಗಿನ ಬಿಕ್ಕಟ್ಟು ಪರಿಹಾರವಾಗುವಂತೆಯೂ ಇಲ್ಲ. ಈಗಿನ ಗೊತ್ತುವಳಿಯು ಪಾಕಿಸ್ತಾನಕ್ಕೆ ಸ್ವಲ್ಪ ಮಟ್ಟಿಗೆ ಅನುಕೂಲವಾಗಿರುವುದರಿಂದ ಅದು ಒಪ್ಪಿದರೂ ಒಪ್ಪಬಹುದು. ಭಾರತ ತಿದ್ದುಪಡಿಯಿಲ್ಲದೆ ಇಡಿಯ ಗೊತ್ತುವಳಿಯನ್ನು ಒಪ್ಪಲಾರದೆಂದು ನಂಬುತ್ತೇವೆ.

ದಿ ಕೆನರಾ ಮ್ಯೂಚುವಲ್ ಎಶ್ಯೂರೆನ್ಸ್ ಕಂಪೆನಿ ಲಿಮಿಟೆಡ್

ಪ್ರಸಿದ್ಧ ಉಡುಪಿಯ ಪ್ರಧಾನ ಕಾರ್ಯಾಲಯವಾಗಿ ಉಳ್ಳ ಕೆನರಾ ಮ್ಯೂಚುವಲಿನ ತಾ. 31-12-50ಕ್ಕೆ ಅಂತ್ಯವಾಗುವ ಹದಿನಾರನೇ ವರುಷದ ಪ್ರಗತಿಪರವಾದ ವರದಿಯನ್ನು ಪರಿಶೀಲಿಸಲು ಆತ್ಯಾನಂದವಾಗುತ್ತದೆ. ಸಂಕ್ಷಿಪ್ತ ವರದಿಯು ಇದೇ ಸಂಚಿಕೆಯ ಇನ್ನೊಂದು ಕಡೆಯಲ್ಲಿ ಪ್ರಕಟಗೊಂಡಿದೆ. ವರದಿಯ ವರ್ಷದಲ್ಲಿ ಹೊಸತಾಗಿ ಬಂದ ಮತ್ತು ವರ್ಷಾರಂಭದಲ್ಲಿ ತೀರ್ಮಾನಕ್ಕೆ ಬಾಕಿ ಉಳಿದ ವಿಮಾಅರ್ಜಿಗಳ (Proposals) ಮೌಲ್ಯವು ರೂ. 66,20,600-0-0ಆಗಿತ್ತು. ಇದರಲ್ಲಿ ರೂ. 57,01,000-0-0 ಮೌಲ್ಯದ ಹೊಸ ಪೋಲಿಸಿಗಳನ್ನು ಕೊಡಲಾಗಿರುತ್ತದೆ. ಉಳಿದ ವಿಮಾ ಅರ್ಜಿಗಳ ಪೈಕಿ ಕೆಲವು ತಿರಸ್ಕರಿಸಲ್ಪಟ್ಟಿವೆ. ಕೆಲವು ವರ್ಷಾಂತ್ಯದಲ್ಲಿ ಸ್ವೀಕಾರಕ್ಕೆ ಬಾಕಿಯಿಡಲ್ಪಟ್ಟಿವೆ. ವರದಿಯ ವರ್ಷದಲ್ಲಿ ವಿಮಾಕಂತು (Premium)ಗಳ ಮೂಲಕ ರೂಪಾಯಿ16,78,012-14-0ಮತ್ತು ಬಡ್ಡಿ ಮ ಇನ್ನಿತರ ಮೂಲಗಳಿಂದ ರೂಪಾಯಿ1 71,813-14 0ಜಮೆಯಾಗಿದೆ. ತಿದ್ದುಪಡಿ ಮಾಡಲ್ಪಟ್ಟ ವಿಮಾ ಕಾನೂನಿನ ಇಪ್ಪತ್ತೈದನೇ ನಿಯಮದಂತೆ ಆಡಳಿತ ವೆಚ್ಚದ ಪ್ರಮಾಣವು ವಿಮಾ ಕಂತುಗಳ ಉತ್ಪತ್ತಿಯ ಸೇಕಡಾ 10·93ರಷ್ಟು ಆಗಿರುತ್ತದೆ. ವರ್ಷಾಂತ್ಯದಲ್ಲಿ ಕ್ಷೇಮನಿಧಿ ರೂಪಾಯಿ1,62,100-0-0ಅಲ್ಲದೇ ಜೀವವಿಮಾ ನಿಧಿಯು 6191192-1-10ಗೆ ಏರುತ್ತದೆ. ಸರಕಾರಿ ಮತ್ತು ಇತರ ಭದ್ರತೆಗಳ ಬೆಲೆಯ ಏರಿಳಿತದ ಫಲುವಾಗಿ ವರದಿ ವರ್ಷದಲ್ಲಿ ಕ್ಷೇಮನಿಧಿಗೆ ರೂಪಾಯಿ 122000-0-0 ವರ್ಗಾಯಿಸಲ್ಪಟ್ಟು, ಜೀವವಿಮಾ ನಿಧಿಗೆ ಬಿಕ್ ರೂಪಾಯಿ 1001789-1-1 ಸಹಾ ಸೇರಿಸಲಾಗಿರುತ್ತದೆ.

ಪರಿಷ್ಕೃತ ಹೊಸ ವಿಮಾ ಕಾನೂನು ಜ್ಯಾರಿಗೆ ಬಂದ ಮೇಲೆ ಪ್ರಕಟಿಸಲ್ಪಟ್ಟ ಈ ಪ್ರಥಮ ವರದಿಯು ಸರ್ವತೋಮುಖವಾದ ಅಭಿವೃದ್ಧಿಯನ್ನು ಸೂಚಿಸುತ್ತಿರುವುದು ಅಭಿನಂದನೀಯವಿದೆ. ಸಂಸ್ಥೆಯ ಪ್ರಗತಿಗಾಗಿ ಸದ್ದಿಲ್ಲದೆ ಶ್ರದ್ಧಾಪೂರ್ವಕವಾಗಿಯೂ ಅವಿರತವಾಗಿಯೂ ದುಡಿಯುತ್ತಿರುವ ಮೆನೇಜಿಂಗ್ ಡೈರೆಕ್ಟರ್ ಶ್ರೀ ಟಿ. ಅರ್. ಎ. ಪೈಗಳು ಶ್ಲಾಘನಾರ್ಹರು. ಅಲ್ಲದೆ ಗ್ರಾಮಾಂತರಗಳಲ್ಲಿ ಕೂಡ ವಿಮಾ ಸಂದೇಶವನ್ನು ಸಾರಿ ವಿಮಾ ಕ್ಷೇತ್ರವನ್ನು ವಿಸ್ತರಿಸುವಂತೆ ನೆರವಾಗಿ ನಿಂತು ಸಂಸ್ಥೆಯ ಸಂವೃದ್ಧಿಗೆ ಕಾರಣರಾದ ಚೀಫ್ ಏಜಂಟರಾದ ದಿ ಕಮರ್ಶಿಯಲ್ ಕಾರ್ಪೊರೇಶನ್ ಆಫ್ ಇಂಡಿಯಾ ಲಿಮಿಟೆಡ್ ಇವರ ಪರಿಶ್ರಮವೂ ಪ್ರಶಂಸನೀಯವಿದೆ. ಉಡುಪಿಗೂ ಜಿಲ್ಲೆಗೂ ತಮ್ಮ ಬಹುಮುಖ ಕಾರ್ಯೋದ್ಯಮಗಳಿಂದ ಜೀವಕಳೆಯನ್ನು ತುಂಬಿ ಉಡುಪಿಯ ಹೆಸರನ್ನು ನಾಲ್ದೆಸೆಗೂ ಕೇಳುವಂತೆ ಮಾಡಿದ ಪಿ. ಎ. ಪೈ ಸಹೋದರರಿಂದ—ಮುಖ್ಯವಾಗಿ ಪ್ರತಿಭಾ ಮತ್ತು ಪ್ರಭಾವಶಾಲಿ ಡಾ| ಟಿ ಮಾಧವ ಪೈಗಳಿಂದ 1935ರಲ್ಲಿ ಸ್ಥಾಪಿಸಲ್ಪಟ್ಟು ಕೆಲವೇ ವರ್ಷಗಳಲ್ಲಿ ಜನಾದರ ಗಳಿಸಿ ಅತ್ಯಂತ ಯಶಸ್ವಿಯಾಗಿ ಉನ್ನತಿಯನ್ನೈದಿದ ಈ ಸಂಸ್ಥೆಯು ಸಮಗ್ರ ಭಾರತದಲ್ಲಿಯೇ ಪ್ರಮುಖಸ್ಥಾನವನ್ನು ಪಡೆಯುವಂತಾಗಲೆಂದು ಹಾರೈಸುತ್ತೇವೆ.

ಹಾರುವ ಕಿಡಿಗಳು

'ನ ಭೂತೋ ನಭವಿಷ್ಯತಿ' ಎಂಬಂತೆ ನಡೆಯಿತು ಧರ್ಮಸ್ಥಳದ ನಡಾವಳಿ! ಭಾರತದ ಬೇರೆ ಯಾವ ಭಾಗದಲ್ಲಿಯೂ ಅಪೂರ್ವವಾದ ಇಂತಹ ಧರ್ಮದ ನಡವಳಿಯು ಆಚಂದ್ರಾರ್ಕವಾಗಿ ನಡೆಯಲಿ

೦೦

ಧರ್ಮಸ್ಥಳದ ಮಂಜುನಾಥ ಮಾತು ಬಿಡನಂತೆ, ತಿರುಪತಿಯ ವೆಂಕಟ್ರಮಣ ಕಾಸು ಬಿಡನಂತೆ; ಆದರೆ ನಮ್ಮ ಭಕ್ತರು ಇಬ್ಬರನ್ನೂ ಬಿಡರಂತೆ

೦೦

ಸಿಗಲಾರದ ಕೈಲಾಸ ನರಕವಾಗಿ ತೋರುವುದುಂಟು ನುಂಗಲಾರದ ಭಂಗಾರ ಕಬ್ಬಿಣವಾಗಿ ಕಾಣುವುದುಂಟು;

೦೦

ಮಸಿಯನ್ನು ತೊಳೆದಷ್ಟೂ ಕಪ್ಪೇ ಅದೀತು, ಅಲ್ಪನಿಗೆ ಆಶ್ರಯವಿತ್ತಷ್ಟೂ ಅಪಾಯವೇ ಬಂದೀತು

೦೦

ಕೊಳೆತ ಹಣ್ಣನ್ನು ಮುಚ್ಚಿ ಒಳಗಿಟ್ಟು ಯಾರೂ ಪೂಜಿಸಲಾರರು, ಚರಂಡಿಗೆಸೆಯುತ್ತಾರೆ. ಕೊಳೆತ ಬುದ್ಧಿಯವನನ್ನು ಮುಚ್ಚಿ ಒಳಗಿಟ್ಟು ಯಾರೂ ಪೋಷಿಸಲಾರರು ತಿರಸ್ಕರಿಸುತ್ತಾರೆ.

೦೦

ಕಾದ ಕಾವಲಿಯಲ್ಲಿ ಎಷ್ಟೇ ಹಸಿ ಬಿದ್ದರೂ ಆರಿ ಹೋದೀತು, ಅಣ್ಣನ ಮೇಲೆ ಸ್ವಾರ್ಥಸ್ವ ತಾಯಿಯೊಬ್ಬಳೆಷ್ಟೇ ಅಪಪ್ರಚಾರ ಮಾಡಿದರೂ ತಾನಾಗಿ ಹಾರಿ ಹೋದೀತು

೦೦

ಕಾಲ ಬದಲಾದ ಮೇಲೆ ಕಣಿಸುವ ಹವ್ಯಾಸದಿಂದೇನು? ಮುತ್ತು ಒಡೆದ ಮೇಲೆ ಮತ್ತೆ ಜೋಡಿಸುವ ಪ್ರಯತ್ನದಿಂದೇನು?

೦೦

ಶ್ವಾನ ಜಾತರೆ ಆನೆಯಾದೀತೆ? ಆನೆ ಕರಗಿದರೆ ಶ್ವಾನವೆನಿಸೀತೆ?

೦೦

ಕಾಳೋರಗಳನ್ನು ಒಳಗಿರಿಸಿ ಸುಖನಿದ್ರೆ ಮಾಡುವೆನೆಂದರಾಗದು, ಅಥವಾ ಕದೀಮನನ್ನು ಅದರಿಸಿ ವ್ಯವಹರಿಸುವೆನೆಂದರಾಗದು.

೦೦

ಗುಂಪಿನಲ್ಲಾಗಲಿ, ಗುಟ್ಟಿನಲ್ಲಾಗಲಿ ಕಳವು ವಂಚನೆ ಮಾಡಿದವ ಕೊಂಪೆ ಸೇರುತ್ತಾನೆ; ಉಂಡಮನೆಗೆ ಎರಡು ಬಗೆದು ದೂಷಿಸುವವ ನಶಿಸಿ ಹೋಗುತ್ತಾನೆ

೦೦

ಕೈಕೆಸರಾದರೆ ಬಾಯಿಗೆ ಮೊಸರೆಂತು ಎಂಬ ವಾದ ಬೇಡ, ಅಳಾಗಿ ದುಡಿದವ ಅರಸಾಗಿ ಉಣ್ಣುವುದೆಂತು ಎಂಬ ತರ್ಕಬೇಡ.

೦೦

ಸ್ವಾತಂತ್ರ್ಯಮಾನಕ್ಕೆ ಬೇಕು ಎಲ್ಲರಿಗೂ 'ಸೀಟು'! ಜನ ಸೇವೆಗೆ ಅಗುವುದು ಹೊತ್ತು ಗೀಟು.

೦೦

ನೆಟ್ಟದೆಲ್ಲಾ ಬದುಕೀತೆಂಬ ಭ್ರಮೆ ಬೇಡ; ಬಿಟ್ಟದ್ದೆಲ್ಲಾ ಬಿಟಿಸೀತು ಎಂಬ ಕನಸು ಬೇಡ.

೦೦

ನೆರೆಮನೆ ಬಿದ್ದರೆ ಕರುಳಟ್ಟರೆ ಕಿಕ್ಕ ಹಾಗವಾಯಿತೆಂಬ ಕುಹ ಬೇಡ, ನೆರವಾದವ ನಶಿಸಿ ಹೋದರೆ ತನ್ನ ಸ್ಥಾನ ಭದ್ರವಾಯಿತೆಂಬ ಭ್ರಮೆ ಬೇಡ.

೦೦

ಸ್ವಾರ್ಥ ಬಿಟ್ಟಲ್ಲದೆ ಬಿಟ್ಟೊಪ್ಪಿ ಇಟ್ಟೇನು? ಹೃದಯವಿಲ್ಲದೆ ಎದೆ ಅಗಲ ಇದ್ದೇನು?

೦೦

ಪಾಲಿಗರನ್ನು ವಂಚಿಸಿದರೆ ಕಾರಾಗೃಹ ತಪ್ಪುವುದುಂಟೆ? ಸಾಲಿಗರನ್ನು ವಂಚಿಸಿದರೆ ಕಣ್ಣಾಸೂರು ತಪ್ಪುವುದುಂಟೆ?

ಉಡುಪಿ

ಮುನಿಸಿಪಲ್ ಕೌನ್ಸಿಲು ಸಭೆಯು-ಕಳೆದ ತಾ. 24ರಲ್ಲಿ ಸಂಜೆ ವೈಸ್ ಛೇರ್ಮನ್ ಶ್ರೀ ಎ. ಬಿ. ಕೃಷ್ಣರಾಜರ ಅಧ್ಯಕ್ಷತೆಯಲ್ಲಿ ಜರಗಿತು. ಮೋಟಾರ್ ಬಸ್ಸುಗಳು ಓಡಾಡುವ ರಸ್ತೆಗಳಿಗೆ ನೀರು ಹಾಕಬೇಕೆಂಬ ನಿರ್ಣಯವಾಯಿತು. ಮೋಟಾರ್ ವಾಹನಗಳು ಮುನಿಸಿಪಲ್ ಕ್ಷೇತ್ರದಲ್ಲಿ ಗಂಟೆಗೆ ಹದಿನೈದು ಮೈಲುಗಳಿಗಿಂತ ಜಾಸ್ತಿ ವೇಗದಲ್ಲಿ ಹೋಗಕೂಡದೆಂಬ ನಿರ್ಣಯವೂ ಸ್ವೀಕೃತವಾಯಿತು. ಈ ಎರಡು ಗೊತ್ತುವಳಿಗಳ ಜನ್ಮದಾತರು ಶ್ರೀ ಕೆ. ಕೆ. ಪೈಗಳವರು.

ಹಾಂಗಾಳದಲ್ಲಿ ಮೋಟಾರ್ ಅಪಘಾತ—ಮೋಟಾರ್ ಕ್ಲೀನರ್ ಗುಟ್ಟಿಪೂಜಾರಿ ಎಂಬಾತನು ಕಳೆದ ತಾ. 25ರಲ್ಲಿ ಬೆಳಿಗ್ಗೆ M D X 1635 ನಂಬ್ರದ ಮೋಟಾರ್ ಕಾರಿನ ಮುಂದಿನ ಸೀಟಿನಲ್ಲಿ ಕುಳಿತುಕೊಂಡು ಬರುತ್ತಿದ್ದಾಗ ಹಾಂಗಾಳದ ಸಮೀಪ ಸದ್ರಿ ಕಾರಿನ ಮುಂದಿನ ಸೀಟಿನ ಬಾಗಿಲು ತೆರೆಯಲ್ಪಟ್ಟ ದೆಸೆಯಿಂದಾಗಿ ಆತನು ಕೆಳಗೆ ಎಸೆಯಲ್ಪಟ್ಟನು. ಈತನನ್ನು ಚಿಕಿತ್ಸೆಗಾಗಿ ಉಡುಪಿ ಆಸ್ಪತ್ರೆಗೆ ತರುವಾಗ ಮಧ್ಯದಾರಿಯಲ್ಲಿ ಮರಣಪಟ್ಟನು. ಕಾರಿನ ಡ್ರೈವರ್ ಮಣ್ಣುಸೇರಿಗಾರನು ಕೈದು ಮಾಡಲ್ಪಟ್ಟು ನಂತರ ಜಾಮೀನು ಮೇಲೆ ಬಿಡಲ್ಪಟ್ಟಿರುವನು.

ಸರ್ಜನ್ ಜನರಲ್ಲರ ಆಗಮನ—ಮದ್ರಾಸು ಸರಕಾರದ ಸರ್ಜನ್ ಜನರಲ್ ಡಾ। ಜೆ. ಸಿ. ಡೇವಿಡ್, ಅವರು ಕಳೆದ ತಾ. 19ರಲ್ಲಿ ಉಡುಪಿಗೆ ಬಂದು ಸ್ಥಳೀಯ ಆಸ್ಪತ್ರೆಯನ್ನು ಬೇಡಿಮಿಶನ್ ಆಸ್ಪತ್ರೆಯನ್ನು ಸಂದರ್ಶಿಸಿದರು. ಇವರ ಜತೆಯಲ್ಲಿ ದ. ಕ. ಜಿಲ್ಲಾ ಮೆಡಿಕಲ್ ಆಫೀಸರ್ ಡಾ। ಎ. ಗೋಪಾಲನ್ ನಂಬಿಯಾರರೂ ಬಂದಿದ್ದರು.

ಸ್ಕೂಲ್ ಡೇ ಸಮಾರಂಭ—ಕಟಪಾಡಿಯ ಎಸ್. ವಿ. ಎಸ್. ಹೈಸ್ಕೂಲಿನ ಸ್ಕೂಲ್ ಡೇ ಸಮಾರಂಭವು ಕಳೆದ ತಾ. 23ರಂದು ಕುಂದಾಪುರ, ಸಬ್ ಕಲೆಕ್ಟರ್ ಶ್ರೀ ಪಿ. ಎಸ್. ತಿಮ್ಮಪ್ಪ ಸೆಟ್ಟರ ಅಧ್ಯಕ್ಷತೆಯಲ್ಲಿ ಜರಗಿತು. ಶಾಲಾ ಹೆಡ್ಮಾಸ್ಟರ್ ಶ್ರೀ ಪಿ. ರಾಮದಾಸ ನಾಯ್ಕರು ಸ್ವಾಗತ ಭಾಷಣಮಾಡಿ ಶಾಲಾ ವರದಿಯನ್ನೋದಿದರು. ಶ್ರೀ ಎಮ್. ಉಪೇಂದ್ರ ಕಿಣಿಯರು ಶಾಲಾ ಸ್ವಸ್ತಿವಾಚನ ಮಾಡಿದರು. ಅಧ್ಯಕ್ಷರು ಬಹುಮಾನಗಳನ್ನು ಹಂಚಿದನಂತರ ಶಾಲಾ ಹಳೆ ವಿದ್ಯಾರ್ಥಿ ಸಂಘವನ್ನು ಸ್ಥಾಪಿಸಿ ಭಾಷಣ ಮಾಡಿದರು. ಶ್ರೀ ಕೆ. ಆರ್. ಶೆಟ್ಟಿಯವರಿಂದ ಧನ್ಯವಾದಾರ್ಪಣೆಯಾಗಿ ವಿವಿಧ ವಿನೋದಾವಳಿಗಳಿಂದ ಸಭೆಯು ಕೊನೆಗೊಂಡಿತು. ಅಂದು ಬೆಳಿಗ್ಗೆ ಶಾಲಾ ಮಕ್ಕಳೊಳಗೆ ಪಂದ್ಯಾಟಗಳು ಜರಗಿದವು. ಮಾತ್ರವಲ್ಲದೆ ಶಾಲಾ ಮಕ್ಕಳಿಗೆ ಉಪಹಾರವೂ ಕೊಡಲಾಯಿತು.

ವರ್ಧಂತ್ಯುತ್ಸವ—ಸರಕಾರಿ ಉಪಾಧ್ಯಾಯರ ತರಬೇತಿ ಶಾಲೆಯ ವರ್ಧಂತಿಯು ತಾ. 24-2-51ರಲ್ಲಿ ಶ್ರೀ ಆರೂರು ಲಕ್ಷ್ಮೀನಾರಾಯಣ ರಾಯರ ಅಧ್ಯಕ್ಷತೆಯಲ್ಲಿ ವಿವಿಧ ಕಾರ್ಯಕ್ರಮಗಳಿಂದ ವಿಜೃಂಭಣೆಯಿಂದ ಜರಗಿತು. ಹಳೆ ವಿದ್ಯಾರ್ಥಿ ಸಂಘದ ಮಹಾಸಭೆಯು ಮರುದಿನ ನೆರವೇರಿಸಲ್ಪಟ್ಟಿತು.

ಕಾಸರಗೋಡು

ಕುರುಡರ ಶಾಲೆ—ದ. ಕ. ಜಿಲ್ಲಾ ಕಾಸರಗೋಡಿನಲ್ಲಿ ರೈಲ್ವೆ ಸ್ಟೇಶನಿಂದ ಸುಮಾರು 2 ಫರ್ಲಾಂಗು ದೂರದಲ್ಲಿ, ಮದ್ರಾಸ್ ಪ್ರಾಂತ್ಯದ ಕನ್ನಡಿಗರಲ್ಲಿ ಬಡವರಾದ ಎಲ್ಲಾ ಜಾತಿಯವರ ಕುರುಡ ಬಾಲಕ ಬಾಲಕಿಯರ ಉದ್ಧಾರಕ್ಕೋಸ್ಕರ ಸರಕಾರದವರು ಒಂದು ಶಾಲೆಯನ್ನು ಸ್ಥಾಪಿಸಿ, ಸದ್ರಿ ಮಕ್ಕಳಿಗೆ ಧರ್ಮಾರ್ಥ ಊಟ, ವಸತಿ, ಮತ್ತು ವಿದ್ಯಾಭ್ಯಾಸ ಕೊಡುತ್ತಿರುವರು. ನಮ್ಮ ಸರಕಾರದ ಕುರುಡರ ಉದ್ಧಾರ ಕಾರ್ಯವು ಜಯಪ್ರದವಾಗುವಂತೆ ಕುರುಡರ ಹೆತ್ತವರು ಯಾ ರಕ್ಷಕರು ಅಂತಹ ಮಕ್ಕಳನ್ನು ಸದ್ರಿ ಶಾಲೆಗೆ ಸೇರಿಸುವ ಕುರಿತಾಗಿ ಮಾಹಿತಿಬೇಕಾಗಿ ಕುರುಡರ ಹಿತೈಷಿಗಳೊಬ್ಬರು ಬರೆಯುತ್ತಾರೆ.

ಮಂಗಳೂರು

ಸರಕಾರಿ ಮಾಧ್ಯಮಿಕ ತರಬೇತಿ ಶಾಲೆಯ ವರ್ಧಂತಿಯು ಕಳೆದ ತಾ. 21ರಲ್ಲಿ ಸಂಜೆ ಶ್ರೀ ಯು. ಕಣ್ಣಪ್ಪನವರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀ ರಾಮಚಂದ್ರ ಉಡುಪರು ಮಾಡಿದ ಸ್ವಸ್ತಿವಾಚನಕ್ಕೆ ಕಾರ್ಯದರ್ಶಿ ಶ್ರೀ ಪಿ. ಸುಂದರ ಸೆಟ್ಟರು ಉತ್ತರವಿತ್ತರು. ಮುಖ್ಯೋಪಾಧ್ಯಾಯರು ಶಾಲಾ ವರದಿಯನ್ನೋದಿದರು. ಬಹುಮಾನ ವಿತರಣ, ಅಧ್ಯಕ್ಷ ಭಾಷಣ, ವಿವಿಧ ವಿನೋದಾವಳಿಗಳೊಂದಿಗೆ ಸಭಾಂತ್ಯವಾಯಿತು.

ನೂಲಿನ ವ್ಯಾಪಾರದ ಲೈಸೆನ್ಸ್—ಇದೇ ಮಾರ್ಚ ಅಂತ್ಯಕ್ಕೆ ಹಿಂದಿನ ಲೈಸೆನ್ಸಿನ ಅವಧಿಯು ಮುಗಿಯುವುದರಿಂದ, 1951-52ನೆ ಇಸವಿಗೆ ಲೈಸೆನ್ಸು ಅಪೇಕ್ಷಿಸುವವರು ಫೀ ಹಾಗೂ ಆದಾಯ್ಪರಿಗೆಯ ಸರ್ಟಿಫಿಕೇಟಿನೊಂದಿಗೆ ತಾ. 31-3-51ರೊಳಗೆ ಜಿಲ್ಲಾ ಕಲೆಕ್ಟರಿಗೆ ತಮ್ಮ ಅರ್ಜಿ ತಲಪುವಂತೆ ಕಳುಹಿಸಿಕೊಡಬೇಕೆಂಬ ಪ್ರಕಟನೆ ಹೊರಟಿದೆ.

ಹೊಸ ಕಟ್ಟಡ ಪ್ರವೇಶೋತ್ಸವ—ಮಂಗಳೂರಿನ ಮೊಗವೀರ ಸಾಹಿತ್ಯ ಸಂಘದ ಹೊಸಕಟ್ಟಡದ ಪ್ರವೇಶೋತ್ಸವವು ಕಳೆದ ತಾ. 23ರಲ್ಲಿ ಶ್ರೀ ಕೆ. ಆರ್. ಕಾರಂತರ ಅಧ್ಯಕ್ಷತೆಯಲ್ಲಿ ಫಿಶರೀಸ್ ಇಲಾಖೆಯ ಡ್ಯಾರೆಕ್ಟರ್ ಶ್ರೀ ಕೆ. ಎ. ಅನಂತರಾಮನ್ ಅವರಿಂದ ನೆರವೇರಿಸಲ್ಪಟ್ಟಿತು. ಡಾ। ಎಸ್. ಚಂದಾವರು ಸ್ವಾಗತ ಭಾಷಣ ಮಾಡಿ ಡೈರೆಕ್ಟರಿಗೆ ಮಾನಪತ್ರ ಒಪ್ಪಿಸಿದರು. ಡೈರೆಕ್ಟರರು ಉತ್ತರವೀಯುತ್ತಾ ಮೀನಿನ ವ್ಯಾಪಾರದಲ್ಲಿ ಸರಕಾರವು ಮಾಡಲಿರುವ ಯೋಜನೆಗಳನ್ನು ತಿಳಿಸಿದರು. ಸಮಾಜದಲ್ಲಿ ಒಗ್ಗಟ್ಟು ಬೆಳೆದು ಸಂಘದ ಮೂಲಕ ಸಮಾಜದ ಅಭಿವೃದ್ಧಿಯಾಗಲೆಂದು ಶ್ರೀಗಳಾದ ಬಿ. ಎಮ್. ಇಂಗಳಾಯ, ನಾರಾಯಣದಾಸ, ಶ್ರೀರಂಗಕರ್ಕೇರ, ಅಪ್ಪಯ್ಯ ದೇಂಗಡ್ತ, ಶ್ರೀಮತಿ ಹೊನ್ನಮ್ಮ, ಕುಮಾರಿ ಉಮಾ ಬಾಯಿ ಮೊದಲಾದವರು ಮಾತನಾಡಿದರು. ಅಧ್ಯಕ್ಷರು ತಮ್ಮ ಭಾಷಣದಲ್ಲಿ, ಮೂವತ್ತು ವರುಷಗಳ ಹಿಂದಿಗಿಂತ ಇಂದು ಮೊಗವೀರ ಸಮಾಜವು ಸುಧಾರಣೆ ಹೊಂದಿದೆ ಎಂದರು. ಮೀನಿನ ವ್ಯವಸಾಯ ಮಾಡುವವರಿಗೆ ಉತ್ತಮ ಭವಿಷ್ಯವಿರುವುದರಿಂದ ಮೊಗವೀರರು ಮುಂದೆ ಬರಬೇಕೆಂದೂ ಒಗ್ಗಟ್ಟಿನಿಂದಿರಬೇಕೆಂದೂ ಹೇಳಿದರು. ಧನ್ಯವಾದಾರ್ಪಣೆ, ವಿನೋದಗಳಿಂದ ಸಭಾಂತ್ಯವಾಯಿತು.

ನವಯುಗದ

ಚಂದಾ ಹಣ ಬಾಕಿ ಇರುವವರು ದಯಮಾಡಿ ಅದನ್ನು ಬೇಗನೆ ಕಳುಹಿಸಿಕೊಡುವಂತೆ ಈ ಮೂಲಕ ಅಪೇಕ್ಷಿಸಲಾಗುತ್ತದೆ. ಸಕಾಲದಲ್ಲಿ ಚಂದಾಹಣ ಕಳುಹಿಸಿ ಕೊಡದಿದ್ದರೆ ನಾವು ಮಾಡುವ ವಿ. ಪಿ.ಯನ್ನು ಅಗತ್ಯ ಸ್ವೀಕರಿಸಿಕೊಳ್ಳುವಂತೆ ವಿನಂತಿ. ಈಗ ವಿ. ಪಿ. ಇಂಟಿಮೇಶನ್ ಕೊಟ್ಟು 5 ದಿನಗಳ ವರೆಗೆ ಮಾತ್ರ ವಿ. ಪಿ.ಯನ್ನು ಟಪ್ಪಾಲು ಕಚೇರಿಯಲ್ಲಿ ಇರಿಸಿಕೊಳ್ಳುವುದರಿಂದ ಇಂಟಿಮೇಶನ್ ತಲಪಿದೊಡನೆ ಅದನ್ನು ಬಿಡಿಸಿಕೊಳ್ಳಬೇಕಾಗುತ್ತದೆ.

—ಮೆನೇಜರ್.

ನೋಟೀಸು

ಉಡುಪಿ ಡಿ. ಮು. ಕೋರ್ಟಿನಲ್ಲಿ
O.P. 8/1951

ಭಾಗೀರಥಿ ಅಮ್ಮ, ಬೆಳ್ಳೆ ಮದ್ದುರಾಯ ಸಾಮಗರ ವಿಧವೆ, ಉಡುಪಿ ಕಸಬಾ ಪಳಿತಾಡಿ ವಾರ್ಡಿನಲ್ಲಿ ರುವವರು, ಮತ್ತು 6 ಜನರು ಕೂಡ —ಅರ್ಜಿದಾರರು.

1ನೇ ಅರ್ಜಿದಾರರ ಗಂಡ, ಮತ್ತು ಅರ್ಜಿದಾರರ ತಂದೆ ತಾ. 24—11 -50ರಲ್ಲಿ ಪಳಿತಾಡಿ ವಾರ್ಡಿನಲ್ಲಿ ಮೃತಪಟ್ಟಿರುವ ಬೆಳ್ಳೆ ಮದ್ದುರಾಯ ಸಾಮಗರ ಬಾಬ್ತು ಸದ್ರಿ ಅರ್ಜಿಯಲ್ಲಿ ಕಾಣಿಸಿದ ಜೀವ ವಿಮಾ ಪೋಲಿಸಿಗಳ ಪ್ರಕಾರ ಬರತಕ್ಕ ಯಾವತ್ತು ಹಣಗಳನ್ನು ಪಡೆಯಲು ತಾವು ಹಕ್ಕುದಾರರೆಂತಲೂ, ತಮ್ಮೆಲ್ಲರ ಪರವಾಗಿ ತಮ್ಮ ಕುಟುಂಬದ ಈಗಿನ ಯಜಮಾನರಾದ 2ನೇ ಅರ್ಜಿದಾರ ವಾದಿರಾಜ ಸಾಮಗರ ಹೆಸರಿಗೆ ಒಂದು ವಾರೀಸು ಸರ್ಟಿಫಿಕೇಟು ಕೊಡಬೇಕೆಂತಲೂ ಅಪೇಕ್ಷಿಸಿ, ಕೊಟ್ಟ ಮೇಲ್ಕಂಡ ಅರ್ಜಿಯು ಈ ಕೋರ್ಟಿನಲ್ಲಿ ತಾ 22—3 —51ರಲ್ಲು ವಿಚಾರಣೆಗೆ ಇಟ್ಟಿರುತ್ತದೆಂತಲೂ, ಆ ಕುರಿತು ಆಕ್ಷೇಪವುಳ್ಳವರು ಸದ್ರಿ ದಿನ ಹಗಲು 10-30ಕ್ಕೆ ಈ ಕೋರ್ಟಿನ ಮುಂದೆ ಹಾಜರಾಗಿ ಆಕ್ಷೇಪಗಳನ್ನು ಜ್ಯಾಹೀರು ಮಾಡಬಹುದಾಗಿ ಈ ಮೂಲಕ ಸರ್ವ ಜನರಿಗೆ ತಿಳಿಸಲಾಗುತ್ತದೆ.

(By order of Court)

K. Vittal Naik,
Vakil for Petitioners

Udipi, 27-2-51

ಶ್ರೀ ರಾಮಕೃಷ್ಣ ಥಿಯೇಟರ್ ಲಿಮಿಟೆಡ್, ಉಡುಪಿ

ತಾರೀಖು 2—3—1951ರಿಂದ

ಜೆಮಿನಿಯವರ ಅಪೂರ್ವ ಚಿತ್ರ

ಅಪೂರ್ವ ಸಹೋದರರು

ಅಥವಾ

ಸ್ಟ್ರೇಂಜ್ ಬ್ರದರ್ಸ್

ಎಮ್. ಕೆ. ರಾಧಾ, ನಾಗೇಂದ್ರ ರಾವ್, ಭಾನುಮತಿ ಮೊದಲಾದವರು

ನಿರ್ದೇಶಿಸಿದ—ಚಹೇಜ್, ಸಮಾಧಿ, ವಂಜಾಪುರ್ ಇತ್ಯಾದಿ.

For Life Insurance

CONSULT

THE NEW GUARDIAN OF INDIA
LIFE INSURANCE CO. LTD.
(Established 1934)

Chairman: Sri M. Ct. M. Chidambaram Chettiyar

A Policy in this progressive Life Office is a good investment; its Agency is a valuable business connection.

MANGALORE BRANCH:
K. R. Road,
Hampankatta, MANGALORE.

HEAD OFFICE:
"United India Life Bldg",
P. B. No. 142, MADRAS.

ನೋಟೀಸು

ಕುಂದಾಪುರ ಡಿ. ಮು. ಕೋರ್ಟಿನಲ್ಲಿ
C. S. 22/48 of Koteshwar
P. O., S. E. P. 892/1950

ಕೆ. ಸುಬ್ರಾಯ ಮಂಜ —ವಾದಿ.
ಮಂಜು ಸೋಜ —ಪ್ರತಿವಾದಿ.

ಕುಂದಾಪುರ ತಾಲ್ಲೂಕು ಕೋಟೇಶ್ವರ ಬೋರ್ಡ್ ಹಯರ್ ಎಲಿಮೆಂಟರಿ ಶಾಲಾ ಮಾಸ್ತರ್ ಮಂಜು ಸೋಜರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ

ಸದ್ರಿ ಅಮಲ್ಜಾರಿಯ ವ್ಯವಹರಣೆಯಲ್ಲಿ ಅಮಲ್ಜಾರಿಯಲ್ಲಿ ಕೇಳಿದ ಹಣ ಬರಮಾಡಿಕೊಳ್ಳುವರೆ ವಾರಂಟು ಕೊಡಿಸಬೇಕೆಂತ ಅಜೀದಾರನು ದಾಖಲು ಮಾಡಿದ ಮೇಲಿನ ಅಲ್ಲಾರಿ ಅರ್ಜಿಯು ತಾ. 6—3—1951ಕ್ಕೆ ಮೇಲಿನ ಕೋರ್ಟಿನಲ್ಲಿ ... ಇದೆ, ಆ ಕುರಿತು ನಿಮಗೇನು ಆಕ್ಷೇಪಣೆ ಇದ್ದರೆ ಆ ತಾರೀಕಿಗೆ ಮೇಲಿನ ಕೋರ್ಟಿನ ಮುಂದೆ ಹಾಜ್ರಾಗಿ ಜ್ಯಾಹೀರು ಮಾಡಿಕೊಳ್ಳತಕ್ಕದ್ದು. ಎಂಬ ಸಂಗತಿ ಈ ಮೂಲಕ ತಿಳಿಯಪಡಿಸಿರುತ್ತದೆ.

N. S. Parameshwariah,
Advocate for Petr.
Coondapoor, Date 23-2-51

ಪಂಚಾಯತ ಬೋರ್ಡು,
ಗ್ರಾಮ ಕಮಿಟಿ,ಶಾಲಾ ಕಾಲೇಜು
ಮೊದಲಾದುವುಗಳ

ಲೈಬ್ರೆರಿಗಳಿಗೆ

ಬೇಕಾಗುವ ಕರ್ನಾಟಕದ ಎಲ್ಲಾ ಭಾಗಗಳ ಕನ್ನಡ ಪುಸ್ತಕಗಳು ನಮ್ಮಲ್ಲಿ ದೊರೆಯುತ್ತವೆ.

ವಿಚಾರಿಸಿ:—
ನವಭಾರತ ಪುಸ್ತಕ ಭಂಡಾರ
ಉಡುಪಿ ಅಥವಾ
ಮಂಗಳೂರು

ಮಂಗಳೂರು

ಶ್ರೀಮತಿ ಸಾಕಮ್ಮನವರ ನಿಧನ- ಮೈಸೂರಿನ ಪ್ರಮುಖ ಕಾಫೀ ಪ್ಲಾಂಟರ್ ಮತ್ತು ವ್ಯಾಪಾರಸ್ಥರಾಗಿದ್ದ ಡಿ. ಸಾಕಮ್ಮನವರು ತಾ. 22-2-51ರಲ್ಲಿ ನಿಧನಗೊಂಡಿರುವ ವಾರ್ತೆಯು ಬಂದಿದೆ. ಇವರು ಕೊಡಗಿನವರಾಗಿದ್ದು ಅನೇಕ ಸಾರ್ವಜನಿಕ ಚಟುವಟಿಕೆಗಳಲ್ಲಿ ಭಾಗವಹಿಸಿ ಜಿಲ್ಲಾ ಬೋರ್ಡಿನ ಅಧ್ಯಕ್ಷರಾಗಿ ಕೂಡಾ ಇದ್ದರು. ಅತ್ಯಂತ ದಾನಿಗಳಾಗಿದ್ದರು. ಅಖಿಲ ಭಾರತದ ಕಾಫಿ ಉತ್ಪಾದನೆಯಲ್ಲಿ ಎರಡನೇ ಸ್ಥಾನ ಅವರದ್ದಾಗಿತ್ತು.

ಅಕಾಲ ನಿಧನ- ಬೆಳ್ತಂಗಡಿಯ ಮೆಜಿಸ್ಟ್ರೇಟರಾಗಿದ್ದ ಜನಾಬ್ ಅಹಮ್ಮದರವರು ತಾ. 23-2-51ರಲ್ಲು ಧರ್ಮಸ್ಥಳದಿಂದ ಹಿಂದಿರುಗಿ ಬರುವಾಗ ಹೃದಯಸ್ತಂಭನದಿಂದ ತೀರಿಹೋದರೆಂದು ತಿಳಿದುಬರುತ್ತದೆ.

ದುರ್ಮರಣ- 'ಪ್ರೊವಿನ್ಶಿಯಲ್'ನ ನೂತನ ಕಟ್ಟಡದಲ್ಲಿ ಕೆಲಸಮಾಡುತ್ತಿದ್ದ ಕೆಲಸಗಾರನೊಬ್ಬನು ತಾ. 22-2-51ರಲ್ಲಿ ಮಹಡಿಯಿಂದ ಕೆಳಗೆ ಬಿದ್ದು ಆಸ್ಪತ್ರೆಯಲ್ಲಿ ಮರಣ ಹೊಂದಿದನೆಂದು ಗೊತ್ತಾಗಿದೆ.

ಕುಂದಾಪುರ ಡಿವಿಜನಿನ ರೆಂಟ್ ಕಂಟ್ರೋಲ್‌ರವರ ಕೋರ್ಟಿನಲ್ಲಿ

H. R. C. P. ನಂಬ್ರ 13/1951

Sri ಬಿ. ವಾಸುದೇವರಾವ್, —ಅರ್ಜಿದಾರ

ಮತ್ತು

1. ಬಿ. ಶ್ರೀನಿವಾಸ ನಾಯ್ಕ, ಕೂಡಾ —ಎದ್ರಿರು

1ನೇ ಎದ್ರಿ ಬಿ ಶ್ರೀನಿವಾಸ ನಾಯ್ಕ, ನಾಗಪ್ಪ ನಾಯ್ಕರ ಮಗ Now residing at Dadar, Bombay, No. 28 (His permenent address:- Fish Market Road, Udipi.)

1ನೇ ಎದ್ರಿಯು ತಾನು ಅರ್ಜಿದಾರಗೆ ಕೊಡತಕ್ಕ ತಿಂಗಳುಗಟ್ಲೆ ಬಾಡಿಗೆಯನ್ನು ಕೊಡದೆ ಬಾಕಿಮಾಡಿಕೊಂಡಿರುವದ್ರಿಂದಲೂ, ಬಾಡಿಗೆಗೆ ಕಾರಣವಾದ ಕಟ್ಟೋಣಗಳ ಕೆಲಅಂಶವನ್ನು ಪರರಿಗೆ ಕೊಟ್ಟಿರುವುದ್ರಿಂದಲೂ ಬಾಡಿಗೆಗೆ ಕಾರಣವಾದ ಉಡ್ಪಿ ಮುನ್ಸಿಪಲ್ ನಂಬ್ರ 6-2-118 ವ 6-2-119ನೇ ಕಟ್ಟಡಗಳ ಸ್ವಾಧೀನತೆ ಕೇಳಿ ಅರ್ಜಿದಾರನು ದಾಖಲುಮಾಡಿದ ಅರ್ಜಿಯು ಮೇಲ್ಕಂಡ ಕೋರ್ಟಿನಲ್ಲಿ 12-3-51ಕ್ಕೆ ತನ್ಖಿಗೆ ಇಟ್ಟಿರುತ್ತದೆ. 1ನೇ ಎದ್ರಿಯು ಆಕ್ಷೇಪ ಇದ್ದರೆ ಸದ್ರಿ ತಾರೀಕಿನ ದಿವ್ಸ ಬೆಳಿಗ್ಗೆ 11ಗಂಟೆಗೆ ಉಡ್ಪಿ ಮೊಕ್ಕಾಮಿನಲ್ಲಿ ಹಾಜ್ರಾಗಿ ಜ್ಯಾಹೀರು ಮಾಡಿಕೊಳ್ಳತಕ್ಕದ್ದು. ತಪ್ಪಿದ್ರೆ ಸದ್ರಿ ಅರ್ಜಿಯು ಏಕಪಕ್ಷವಾಗಿ ತೀರ್ಮಾನಿಸಲ್ಪಡುವುದು—

(By order of the Court)

B. Vasudeva Rao,
Petitioner.

ಉಡ್ಪಿ ತಾ. 26-2-51

ಪ್ರಕಟಣೆ

ಕೋಟೇಶ್ವರ ಪಂಚಾಯತ ಬೋರ್ಡು

ಈ ಬೋರ್ಡು ವ್ಯವಹಾರ ಕ್ಷೇತ್ರಕ್ಕೆ ಒಳಪಟ್ಟ ಕೆಮ್ಮಣ್ಣು ಹಸ್ತವಾರು ಸಂತೆ, ದಿನಬಳಕೆಯ ಮೀನು ಮಾರ್ಕೆಟು ಮತ್ತು ಪಡುಕುದ್ರು ಬಾಗಿಲಲ್ಲಿ ಕಡಾ 1951ನೇ ಇಸವಿ ಎಪ್ರಿಲ್ ತಾರೀಖು 1ರಿಂದ 1952ನೇ ಇಸವಿ ಮಾರ್ಚ ತಿಂಗಳ ತಾರೀಖು 31ರ ವರೆಗೆ ವಸೂಲು ಮಾಡುವ ಸ್ವಾತಂತ್ರ್ಯವನ್ನು ಇದೇ ಮಾರ್ಚ್ ತಿಂಗಳ 15ನೇ ಗುರುವಾರ ಸಾಯಂಕಾಲ ಘಂಟೆ 4ಕ್ಕೆ ಕೆಮ್ಮಣ್ಣು ಜಾಯಿಂಟ್ ಎಲಿಮೆಂಟ್ರಿ ಶಾಲಾ ಕಟ್ಟಡದಲ್ಲಿ ಪ್ರತ್ಯಪ್ರತ್ಯೇಕ ಬಹಿರಂಗ ಏಲಂ ಮಾಡಲಾಗುವುದು. ಏಲಮಿನ ಶರತ್ತು ವಗೈರೆ ಇತರ ವಿವರಗಳನ್ನು ಸದರಿ ಬೋರ್ಡು ಆಫೀಸಿನಲ್ಲಿ ತಿಳಿದುಕೊಳ್ಳಬಹುದು ಎಂತ ಈ ಮೂಲಕ ಎಲ್ಲಾ ಜನರಿಗೆ ತಿಳಿಯಪಡಿಸಲಾಗುತ್ತದೆ.

ಪಡುಕುದ್ರು ವೆಂಕಟಕೃಷ್ಣ ರಾವ್,
ಪ್ರೆಸಿಡೆಂಟ್,
ಕೋಟೇಶ್ವರ ಪಂಚಾಯತ ಬೋರ್ಡು.

ಪಡುಕೋಟೇಶ್ವರ, ತಾರೀಖು 1ನೇ ಮಾರ್ಚ್ 1951

ಬಿ. ಟಿ. ಕಾಲೇಜಿನ ವರ್ಧಂತ್ಯುತ್ಸವವು ಕಳೆದ 20 ಲ್ಲಿ. ಮದ್ರಾಸು ಸರಕಾರದ ವಿದ್ಯಾಮಂತ್ರಿಗಳಾದ ಶ್ರೀ. ಕೆ. ಮಾಧವ ಮೆನೋನ್‌ರವರ ಅಧ್ಯಕ್ಷತೆಯಲ್ಲಿ ಜರಗಿತು. ಪ್ರಿನ್ಸಿಪಾಲ್ ಶ್ರೀ ಪಡುಕೋಣೆ ರಮಾನಂದ ರಾಯರು ಸ್ವಾಗತ ಭಾಷಣ ಮಾಡಿ ವರದಿಯನ್ನೋದಿದರು. ಶ್ರೀಮತಿ ಕುಟ್ಟಿ ಅಮ್ಮಾಳ್‌ರವರು ಬಹುಮಾನ ವಿತರಣೆ ಮಾಡಿದರು. ಶ್ರೀ ಎಮ್, ಎಸ್, ಏಕಾಂಬರ ರಾಯರು ಕಾಲೇಜಿನ ಸ್ವಸ್ತಿವಾಚನ ಮಾಡಿದರು. ವಿದ್ಯಾರ್ಥಿ ಪಾರ್ಲಿಮೆಂಟಿನ ಮುಂದಾಳು ಶ್ರೀ ಎಚ್. ಪಿ. ಹಂದೆಯವರು ಉತ್ತರವಿತ್ತರು. ಅಧ್ಯಕ್ಷ ಮಂತ್ರಿಗಳು ಮಾತನಾಡುತ್ತಾ ಅಧ್ಯಾಪಕ ವರ್ಗಕ್ಕೆ ಈಗ ಕೊಡುವ ಸಂಬಳವು ಯಾವ ವಿಧದಿಂದಲೂ ಕಡಿಮೆಯಲ್ಲವೆಂಬುದನ್ನು ಸಮರ್ಥನೆ ಮಾಡಿ ಕೊನೆಗೆ ಕಾಲೇಜಿಗೆ ಶುಭವನ್ನು ಕೋರಿದರು. ಶ್ರೀ ಅಂಚನ್‌ರವರು ಧನ್ಯವಾದಗಳನ್ನರ್ಪಿಸಿದನಂತರ ವಿವಿಧ ವಿನೋದಗಳಾದುವು.

ಕುಸ್ತಿ ಪಂದ್ಯಾಟ— ಕಳೆದ ತಾ. 18ರಲ್ಲು ಸ್ಥಳೀಯ ಮಿಲಾಗ್ರಿಸ್ ಹೈಸ್ಕೂಲಿನಲ್ಲಿ ಶ್ರೀ ಸಂಕಪ್ಪಸೆಟ್ಟಿ ಮತ್ತು ಶ್ರೀ ಶಂಕರರಾವ್ ಇವರೊಳಗೆ ಕುಸ್ತಿಪಂದ್ಯಾಟ ನಡೆಯಲಾಗಿ ಗೆಲ್ಲುವವನು ಶ್ರೀ ಸೆಟ್ಟರು ಗೆದ್ದರೆಂದೂ, ಅಧ್ಯಕ್ಷರು ಶ್ರೀ ಶಂಕರರಾಯರು ಗೆದ್ದರೆಂದೂ ತೀರ್ಮಾನಕೊಟ್ಟಿರುವರಂತೆ

ಹಿಂದೂ ಕೋಡು ಮಸೂದೆ— ಹಿಂದೂ ಕೋಡು ಮಸೂದೆಯ ಸಮಾಲೋಚನೆಗಾಗಿ ಕಾಂಗ್ರೆಸ್ ಕಚೇರಿಯಲ್ಲಿ ಶ್ರೀ ಎಸ್. ಶಂಕರಆಳ್ವರ ಅಧ್ಯಕ್ಷತೆಯಲ್ಲಿ ಸಭೆಯೊಂದು ಈಚೆಗೆ ಜರಗಿತು. ಈ ಸಭೆಯಲ್ಲಿ ಹಿಂದೂ ಕೋಡು ಮಸೂದೆಗೂ ಅಳಿಯ ಸಂತಾನಕ್ಕೂ ಇರುವ ಸಂಬಂಧವನ್ನು ಚರ್ಚಿಸಲಾಯಿತು. ಈ ಕುರಿತು ಹಲವರ ಭಾಷಣಗಳಾಗಿ ಕೊನೆಗೆ ಡಿಲ್ಲಿಗೊಂದು ಶಿಷ್ಟ ಮಂಡಲವನ್ನು ಕಳುಹಿಸುವ ನಿರ್ಧಾರವಾಯಿತು.

ವಾರ್ಷಿಕೋತ್ಸವ- ಮಂಗಳೂರಿನ ಬಂಟರಯಾನೆ ನಾಡವರ ಸಂಘದ ನೇತೃತ್ವದಲ್ಲಿರುವ ಶ್ರೀ ರಾಮಕೃಷ್ಣ ವಿದ್ಯಾರ್ಥಿನಿ ಭವನದ ವಾರ್ಷಿಕ ವರ್ಧಂತಿಯು ಕಳೆದ ತಾ. 18ರಲ್ಲು ಸಂಜೆ ಜಿಲ್ಲಾ ಕಲೆಕ್ಟರ್ ಶ್ರೀ ಎ. ರಾಜರತ್ನಂ ಅವರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀಮತಿ ಶಾಂಭವಿ ಪೂಂಜರು ಸ್ವಾಗತ ಭಾಷಣ ಮಾಡಿದನಂತರ ಕುಮಾರಿ ರುಕ್ಮಿಣಿಯವರು ವರದಿಯನ್ನೋದಿದರು. ಭವನದಲ್ಲೀಗ ಏಳು ಜಾತಿಯ ವಿದ್ಯಾರ್ಥಿನಿಯರಿರುವರೆಂದೂ ಅದರಲ್ಲಿ ಒಂದು ಜಾತಿಯು ಹರಿಜನರೆಂದೂ ವರದಿಯಲ್ಲಿ ಹೇಳಲಾಗಿತ್ತು. ಕುಮಾರಿ ಎಮ್. ಎ. ಮಾಲತಿಯವರು ಸ್ವಸ್ತಿವಾಚನ ಮಾಡಿದರು. ಕುಮಾರ ವೈ. ರಾಜೀವ ಸೆಟ್ಟಿಯವರು ಉತ್ತರವಿತ್ತರು. ಶ್ರೀಮತಿ ರಾಜರತ್ನಂ ಅವರು ಬಹುಮಾನ ವಿತರಣೆ ಮಾಡಿದನಂತರ, ಅಧ್ಯಕ್ಷರ ಭಾಷಣ, ಧನ್ಯವಾದಾರ್ಪಣೆ, ವಿವಿಧ ವಿನೋದಾವಳಿಗಳಾಗಿ ವಾರ್ಷಿಕೋತ್ಸವವು ಕೊನೆಗೊಂಡಿತು.

ಶ್ರೀ ಧರ್ಮಸ್ಥಳದಲ್ಲಿ ಮಹಾಪಟ್ಟಾವಳಿಯು ಕಳೆದ ತಾ. 15ರಿಂದ 22ರ ತನಕ ಶ್ರೀ ಡಿ. ಮಂಜಯ್ಯ ಹೆಗ್ಡೆ. ಎಮ್. ಎಲ್. ಸಿ. ಅವರ ಸರ್ವಾಧಿಕಾರತ್ವದಲ್ಲಿ ಲೋಪದೋಷಗಳಿಲ್ಲದೆ ಅಭೂತಪೂರ್ವ ಅತ್ಯಂತ ವೈಭವದಿಂದ ಯಶಸ್ವಿಯಾಗಿ ಜರಗಿತು. ಶ್ರೀಕ್ಷೇತ್ರದೇವಿಯ ಶ್ರೀ ಮಂಜುನಾಥ ಸ್ವಾಮಿಗೆ ಶತರುದ್ರಾಭಿಷೇಕ, ಚಂದ್ರನಾಥ ಬಸದಿಯಲ್ಲಿ ಜೈನಮತ ಸಂಬಂಧವಾದ ಆರಾಧನೆಗಳೂ, ರಾತ್ರಿ ಶ್ರೀ ಮಂಜುನಾಥ ದೇವರು ಮೆರವಣಿಗೆಯಿಂದ ಬೇರೆ ಬೇರೆ ಕಟ್ಟೆಗಳಿಗೆ ವೈಭವದಿಂದ ಬಿಜಯಂಗೈದ ದೀಪೋತ್ಸವಗಳೂ ನಡೆದುವು. ಸಾಧಾರಣ ಅರ್ಧಲಕ್ಷ ರೂಪಾಯಿಗಳಿಗೂ ಹೆಚ್ಚು ಖರ್ಚು ತಗಲಬಹುದಾದ ಬೆಳ್ಳಿ ಚಿನ್ನದಿಂದ ನಿರ್ಮಿಸಲಾದ ಪಾಲಕಿ ಬಂಡಿಯೊಂದನ್ನು ದೈವಜ್ಞ ಬ್ರಾಹ್ಮಣ ಸಮಾಜದವರು ತಾ. 17ರಲ್ಲು ಶ್ರೀ ದೇವರಿಗೊಪ್ಪಿಸಿದರು ಈ ಬಂಡಿಯು ಪುತ್ತೂರಿನ ಶ್ರೀ ಮಹಾಲಿಂಗಾಚಾರಿ ಎಂಬವರಿಂದ ಅತ್ಯಂತ ಕಲಾಪೂರ್ಣವಾಗಿ ರಚಿಸಲ್ಪಟ್ಟಿರುತ್ತದೆ. ಮಹಾನಡಾವಳಿಯ ಹೆಚ್ಚಿನ ವಿವರಗಳನ್ನು ಈ ಸಂಚಿಕೆಯು ಇನ್ನೊಂದೆಡೆಯಲ್ಲಿ ಕೊಡಲಾಗಿದೆ. ಅಂತೂ ಈ ಮಹಾ ನಡಾವಳಿ ಸತ್ಕಾರ್ಯಕ್ಕೆ ನಾಲ್ಕಾರು ಲಕ್ಷ ರೂಪಾಯಿ ವೆಚ್ಚವಾಗಬಹುದು. ಎಂದು ಹೇಳಲಾಗುತ್ತಿದೆ.

ನಂದಳಿಕೆ— ತಾ. 17-2-51ರಲ್ಲಿ ಬೋರ್ಡು ಹಾಯರ್ ಎಲಿಮೆಂಟರಿ ಶಾಲಾ ವರ್ಧಂತಿಯು ಶ್ರೀ ಎಚ್. ಮೈಕ ಬಿ. ಎ. ಎಲ್. ಟಿ. ಯವರ ಅಧ್ಯಕ್ಷತೆಯಲ್ಲಿ ವಿವಿಧ ಕಾರ್ಯಕ್ರಮಗಳಿಂದ ಜರಗಿತು. ಕವಿ ಮುದ್ದಣನ ತೈಲ ಚಿತ್ರ ಅನಾವರಣ ಸಮಾರಂಭವೂ ಜರಗಿತು.

ಬೈಂದೂರು— ಸರ್ಕಲ್ ಕಾಂಗ್ರೆಸ್ ಕಮಿಟಿಯ ಸಭೆಯು ತಾ. 18-2-51ರಲ್ಲಿ ಶ್ರೀ ಬಿ. ಆರ್. ಕುಂಬಳೆಯವರ ಅಧ್ಯಕ್ಷತೆಯಲ್ಲಿ ಜರಗಿ, ಬೈಂದೂರಲ್ಲಿ ರಿಲೀಫ್ ಹಸಿಗೆ ಅಂಗಡಿಯನ್ನು ತೆರೆಯಬೇಕೆನ್ನುವ ಇತ್ಯಾದಿ ನಿರ್ಣಯಗಳಾದುವು.

ಕೋಟೇಶ್ವರ— ತಾ. 20-2-51ರಲ್ಲಿ ವಯಸ್ಕರ ಶಿಕ್ಷಣ ಸಪ್ತಾಹ ದಿನಾಚರಣೆಯು ಶ್ರೀ ಎಮ್. ಎಮ್. ಹೆಗ್ಡೆ, ಬಿ. ಎ. ಎಲ್‌ಎಲ್. ಬಿ. ಇವರ ಅಧ್ಯಕ್ಷತೆಯಲ್ಲಿ ಜರಗಿ, ಶ್ರೀ ಕೆ. ಸೀತಾರಾಮ ಅತ್ತಾವರ ಟಿ. ಶಂಕರರಾವ್, ಬಿ. ಎ. ಎಲ್. ಟಿ., ಕೆ. ನಾರ್ಣಪ್ಪಹೆಬ್ಬಾರ ಮೊದಲಾದವರ ಸಂದರ್ಭೋಚಿತ ಭಾಷಣಗಳಾದುವು. ಶ್ರೀ ಸಿ. ಅಣ್ಣಪ್ಪ ಚಡಗ ಇವರಿಂದ ಕುಂದಾಪುರ ಕೇಂದ್ರದಲ್ಲಿ ವಯಸ್ಕರ ಶಿಕ್ಷಣ ಶಾಲೆಯನ್ನು ತೆರೆಯಲು ನಿರ್ಧಾರವಾಗಿ ಧನ್ಯವಾದಗಳೊಂದಿಗೆ ಸಭಾಂತ್ಯವಾಯಿತು.

ಮುಂಬಯಿ— "ರಾಜಾಪುರ ಸಾರಸ್ವತ ಸಂಘದ ವಾರ್ಷಿಕ ಸಭೆಯು ತಾ. 15-3-51ಕ್ಕೆ ಜರಗಲಿರುವುದಾಗಿ ಸಂಘದವರು ತಿಳಿಸುತ್ತಾರೆ

ಮದ್ರಾಸು— "ಉಡುಪಿ ತಾಲೂಕ್ ಕರ್ನಾಟಕ ಸಂಘ ಮದ್ರಾಸು"- ಈ ಸಂಘದ ವರ್ಧಂತಿ ಉತ್ಸವವು ಶ್ರೀ ಬಿ. ಲಕ್ಷ್ಮಪ್ಪಶೆಟ್ಟಿಗಳ ಅಧ್ಯಕ್ಷತೆಯಲ್ಲಿ ತಾ. 23-2-51ರಲ್ಲಿ ಜರಗಿತು. ಶ್ರೀ ಮಂಜಯ್ಯ ಸೆಟ್ಟಿ ಬಿ. ಎ. ಅವರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀ ಮಂಜಯ್ಯ ಶೆಟ್ಟಿ ಬಿ. ಎ. ಅವರ ಸ್ವಾಗತ ಭಾಷಣವಾದ ಮೇಲೆ ಶ್ರೀ ಶಂಕರ ಭಟ್ ಬಿ. ಎ., ಬಿ. ಎಲ್. ಅವರು ಬೋಧಪ್ರದವಾದ ಭಾಷಣ ಮಾಡಿದರು. ಶ್ರೀ ಎಚ್. ನರಸಿಂಹ ಶೆಟ್ಟಿ ಬಿ. ಎ., ಇವರ ಸ್ವಸ್ತಿವಾಚನವಾದ ಬಳಿಕ ರಾಮಚಂದ್ರ ಭಟ್ಟ ಬಿ. ಎ., ಅವರು ಉತ್ತರವಿತ್ತರು. ಶ್ರೀ ಚಿತ್ತರಂಜನ ದಾಸರು ಧನ್ಯವಾದಗಳನ್ನಿತ್ತರು.

Nambiar's

ARYA VAIDYA SALA

UDIPI

Ideal House for Ayurvedic Treatment.

T. N. Kelu Nambiar,
Vaidya

ಗೊನೋರಿಯಾ ಪರಮಾರೋಗ ಉಷ್ಣ ರೋಗಕ್ಕೆ ಔಷಧ

೭ ದಿವಸಗಳಲ್ಲಿ ಈ ರೋಗ ಗುಣ ಹೊಂದುವದು ಗ್ಯಾರಂಟೀ

ಶರೀರದಿಂದ ಕೀವು ಬರುತ್ತಿದ್ದರೆ, ಧೋತರಕ್ಕೆ ಹಳದೀ ಡಾಗು ಹತ್ತುತ್ತಿದ್ದರೆ, ಶರೀರದಿಂದ ಬಾವು. ಶರೀರದ ತೊಗಲು ಹಿಂದಕ್ಕೆ ಸರಿಯದಿದ್ದರೆ, ಶರೀರದ ತುತ್ತು ಗಾಯವಾಗಿದ್ದರೆ,....ಚಟ್ಟಿ ಬಿದ್ದಿದ್ದರೆ, ಉಷ್ಣದಿಂದ ಜೇರು ಇಳಿದಿದ್ದರೆ, ಉಡುಚು ಆಗಿದ್ದರೆ, ಮೂಲವ್ಯಾಧಿ, ಭಗೇಂದ್ರ, ಗಂಡಮಾಲಿ, ಕೈಕಾಲು ಶೂಲಿ, ಅರ್ಧಾಂಗವಾಯು ನಡುನೋಯುವದು ಸ್ತ್ರೀಯರ ಬಿಳಿಕೆಂಪು ಸೆರಗು ಹೋಗುತ್ತಿದ್ದರೆ, ಶೂಲಿಕಟ್ಟು ಗರ್ಮಿಯಿಂದ ಗರ್ಭಕೋಶ ನಾಶಹೊಂದಿದ್ದರೆ, ಸರಿಯಾಗಿ ಭೇದಿಯಾಗದಿದ್ದರೆ, ಮೂತ್ರ ಉರಿಯುತ್ತಿದ್ದರೆ, ಈ ಎಲ್ಲಾ ಬೇನೆಗಳಿಗೆ ಈ ನಮ್ಮ ಔಷಧವು ಇರುವುದು. ಮೊದಲ ದಿವಸ ಬೆಳಿಗ್ಗೆ ೧ ಗುಂಜಿ ಪ್ರಮಾಣ ಔಷಧ ಅರ್ಧತೊಲೆ ತುಪ್ಪದಲ್ಲಿ ತೆಕ್ಕೊಳ್ಳಬೇಕು ಮೊದಲ ದಿವಸ ಮಾತ್ರ ಮುಂಜಾನೆ ಸಂಜೆ ಎರಡು ಸಾರೆ ತೆಕ್ಕೊಳ್ಳಬೇಕು. ಮುಂದೆ ದಿನ ದಿವಸ ಬೆಳಿಗ್ಗೆ ಒಂದೇ ಸಾರೆ ೭ ದಿವಸ ಸೇವಿಸಬೇಕು:- ಈ ಔಷಧವನ್ನು ಬೇಸಿಗೆಯಲ್ಲಿ ತುಪ್ಪದಲ್ಲಿ, ಥಂಡಿ ಮಳೆಗಾಲದಲ್ಲಿ ಜೇನತುಪ್ಪದಲ್ಲಿ ತೆಕ್ಕೊಳ್ಳಬೇಕು. ಪಥ್ಯ: ಹಸೀಖಾರ, ಕುಂಬಳಕಾಯಿ, ಒಳ್ಳೆಣ್ಣೆ ಬಿಡಬೇಕು.

ಬಾಟ್ಲಿ ೧ಕ್ಕೆ ೫ರೂ. ಪೋಸ್ಟ ಖರ್ಚ ೮ ಆಣೆ

ಏಜೆಂಟರು:—ಗದಗ:—ಗದಗ ಫಾರ್ಮಸಿ, ಹುಬ್ಬಳ್ಳಿ:—ಹುಬ್ಬಳ್ಳಿ ಫಾರ್ಮಸಿ ಬಾಗಲಕೋಟೆ:-ಬಾಗಲಕೋಟೆ ಫಾರ್ಮಸಿ, ಧಾರವಾಡ:-ಧಾರವಾಡ ಫಾರ್ಮಸಿ, ದಾವಣಗೇರಿ: ದಾವಣಗೇರಿ ಪ್ರೆಸ್. ನಂಜುಡೇಶ್ವರ ಮೂರ್ತಿ ದಾವಣಗೇರಿ.

ಪತ್ರವ್ಯವಹಾರ ಮಾಡತಕ್ಕ ಮಾಲಕರ ವಿಳಾಸ

ರೇವಣಸಿದ್ಧಪ್ಪ ಹಾಲಪ್ಪ ದಾವಣಗೇರಿ,

ಆಯುರ್ವೇದ ಔಷಧಾಲಯ, ಗದಗ.

ದಮ್ಮು ಹೋದರೆ ತಿರುಗಿ ಬಾರದು



ಪುರೋಹಿತ ಶ್ವಾಸಾರಿ

ಇದೊಂದೇ ೩೦ ವರ್ಷ ಸತತವಾಗಿ ಪ್ರಖ್ಯಾತವೂ ಅನುಭವಸಿದ್ಧವೂ ಆದ ದಾಕ್ತರೀ ಔಷಧವು ಇದು ಕೂಡಲೇ ಅಂದರೆ ಕೊಟ್ಟು ಸಾವಕಾಶವಾಗಿ ದಮ್ಮನ್ನು ನಿಟ್ಟಿಗೆ ಮಾಡುವದು, ಔಷಧ ತೆಗೆದುಕೊಳ್ಳುತ್ತಿರುವಾಗಲೇ ಕೆಮ್ಮು ಹೋಗುವದು, ಶ್ವಾಸ ಕಡಿಮೆಯಾಗುವದು, ಬಲವು ಹೆಚ್ಚಾಗುವುದು, ಶ್ವಾಸನಳಿಗಳು ಗಟ್ಟಿಯಾಗುವವು ಆಮೇಲೆ ದಮ್ಮು ತಿರುಗಿ ಬಾರದ ಅನುಭವವೂ ಆಗುವುದು. ರೂ. ೩ು, ೬ು, ೧೧, ತಿಮ್ಮ್ಸಿನಲ್ಲಿ ಎಲ್ಲಾ ಅಂಗಡಿಗಳಲ್ಲಿ ಸಿಗುವುದು.

ಮಾರಾಟಗಾರರು

ಡಾ. ಪುರೋಹಿತ ಫಾರ್ಮಸೀ
ಕುಷ್ಟಗಿ.

ಮಹಾತ್ಮಾ ಗಾಂಧೀ ಮೆಮೋರಿಯಲ್ ಕಾಲೇಜಿನ ವಾರ್ಷಿಕೋತ್ಸವ

ವಿದ್ಯಾರ್ಥಿ ಪ್ರಿಯ . ...
ಪ್ರಿನ್ಸಿಪಾಲ್ ಎಚ್. ಸುಂದರ ರಾವ್

ನಮ್ಮ ಉಡುಪಿಯ ಎಂ. ಜಿ. ಎಂ. ಕಾಲೇಜಿನ ವಾರ್ಷಿಕೋತ್ಸವವು ದಿನಾಂಕ ೨೧-೨-೫೧ರಂದು ಮದರಾಸು ರಾಜ್ಯದ ವಿದ್ಯಾಮಂತ್ರಿ ಮಾನ್ಯ ಮಾಧವ ಮೆನೋನ್ ಅವರ ಅಧ್ಯಕ್ಷತೆಯಲ್ಲಿ ಯಶಸ್ವಿಯಾಗಿ ಜರಗಿತು. ಆರಂಭದಲ್ಲಿ ಡಾ। ಸುಂದರರಾಮಯ್ಯ ಅವರು ಸ್ವಾಗತಭಾಷಣಮಾಡುತ್ತ ವಿದ್ಯಾಮಂತ್ರಿಗಳನ್ನು ಪ್ರಶಂಸಿಸಿದ ಬಳಿಕ ಪ್ರಿನ್ಸಿಪಾಲ ಸುಂದರರಾಯರು ವಾರ್ಷಿಕ ವರದಿಯನ್ನೊಪ್ಪಿಸಿದರು.

ಕಾಲೇಜು ಇನ್ನೂ ಶೈಶವಾವಸ್ಥೆಯಲ್ಲಿದ್ದರೂ ಜಿಲ್ಲೆಯ ಉತ್ತರಭಾಗದ ವಿದ್ಯಾ ಅವಶ್ಯಕತೆಯನ್ನು ಪೂರೈಸುವುದರಲ್ಲಿ ಬದ್ಧಕಂಕಣವಾಗಿರುವುದೆಂದೂ, ಸುಮಾರು ೯೦೦ ವಿದ್ಯಾರ್ಥಿಗಳು ಓದುತ್ತಿದ್ದಾರೆಂದೂ, ಹಳಬರು ಅಧ್ಯಾಪಕರು ಕೆಲವರು ಬಿಟ್ಟುಹೋದರೂ ಹೊಸಬರು ಬಂದಿರುವರೆಂದೂ, ಕಾಲೇಜಿನ ರಚನೆಯ ಪರಿಚಯ ಮಾಡಿಸಿದರು. ಅಲ್ಲಿಂದ ಕಾಲೇಜನ್ನು ಈ ವರ್ಷ ಪ್ರೀತಿಯಿಂದ ಸಂದರ್ಶಿಸಿದ ಬೆನಗಲ್ ಸಂಜೀವರಾವ್, ಸಿ. ಆರ್. ಶ್ರೀನಿವಾಸನ್, ಡಾ। ಡಿ. ಗೋಪಾಲ, ಶಿವಲಿಂಗಪ್ಪ, ತಿರುಮಲರಾವ್, ದಿ। ಮುಕುಂದರಾವ್ ಲಾಲ್, ಡಾ। ಉಡುಪ, ಡಾ। ಕೊಪ್ಪನ್, ಲೇಡಿ ರಾಮರಾವ್ ಮೊದಲಾದವರಿಗೆ ಕೃತಜ್ಞತೆಯನ್ನರ್ಪಿಸಿದರು. ಎರಡು ವರ್ಷದ ಮಗುವಾದ ಕಾಲೇಜು ತನ್ನ ಸಂಪ್ರದಾಯವನ್ನು ತನ್ನ ಮುಖಾಂತರವೇ ಬೆಳೆಸಿಕೊಳ್ಳಬೇಕು. ಬರಿಯ ಶೈಕ್ಷಣಿಕ ಕಾರ್ಯಭಾಗದಲ್ಲಿ ಮಾತ್ರವಲ್ಲದೆ, ಮಾನವ ಸಂಪರ್ಕ ಬಾಂಧವ್ಯಗಳಿಗೆ ಆಸ್ಪದವೀಯುವಲ್ಲಿಯೂ ಉಚಿತವೂ, ಸಮುನ್ನತವೂ ಆದ ಕಟ್ಟುಕಟ್ಟಳೆ, ರೀತಿರಿವಾಜುಗಳ ಸೃಷ್ಟಿಯನ್ನು ಸಂಪಾದಿಸಬೇಕಾಗಿದೆ. ಈ ಕೆಲಸದಲ್ಲಿ ವ್ಯವಸ್ಥಾಪಕ ಮಂಡಳಿಯೂ, ಅಧ್ಯಾಪಕವೃಂದವೂ, ವಿದ್ಯಾರ್ಥಿಸಂಘವೂ, ಸಾರ್ವಜನಿಕರೂ ಕೂಡುವ್ಯವಹರಿಸುವ ನೀತಿಯನ್ನನುಸರಿಸಿದರೆ ನೈಜ ಸ್ವಾತಂತ್ರ್ಯಕ್ಕೂ ಶಿಸ್ತಿಗೂ ಇರಬೇಕಾದ ಹಿತಮಿತ್ರ್ಯಕ್ಕೆಗೂ ಪ್ರಶಂಸೆಗೂ ಇರುವಂಥ ಸಾಮರಸ್ಯ, ವ್ಯಕ್ತಿಪರ ಮಾಗ೯ದರ್ಶಕೆಗೂ ಸಾಮೂಹಿಕ ಶ್ರೇಯೋಭಿವೃದ್ಧಿಗೂ ಇರಬೇಕಾದ ಸಂಬಂಧನ ಸಂಭವಿಸುವುದು ಸಾಧ್ಯವೆಂದು ಪ್ರಿನ್ಸಿಪಾಲರು ಮನಗಂಡರು. ಕಾಲೇಜು ಸಂಘಗಳ ಚಟುವಟಿಕೆಗಳ ವಿವರವನ್ನು ಕೇಳಿದಾಗ ಉದಿತೋದಿತವಾಗುವ ಒಂದು ವಿದ್ಯಾ ಮಂದಿರದಲ್ಲಿರಬೇಕಾದ ಸರ್ವ ಉತ್ಸಾಹವೂ ಚೈತನ್ಯವೂ ಎಂ. ಜಿ. ಎಂ. ಕಾಲೇಜಿನಲ್ಲಿ ನೆಲೆಗೊಂಡಿದೆ ಎಂದು ನಂಬಬಹುದಾಗುತ್ತದೆ. ವಿದ್ಯಾರ್ಥಿಗಳು ಪಟ್ಟಣದ ಭಾರತೀಯ ವಿದ್ಯಾರ್ಥಿಗಳಂತೆ ಪರೀಕ್ಷೆಯಲ್ಲಿ ಹಿಂದುಳಿದವರಾಗಿಲ್ಲವೆಂದೂ ಅವರ ಸಂಖ್ಯೆ ಶೇಕಡ ೮೫ ರಿಂದ ಹೆಚ್ಚೆಂದು ಡಾ। ಕೆ. ಎಲ್. ಐತಾಳರು ಬೋಧಿಸಿದ್ದುದು ಆಶ್ಚರ್ಯಂಗರು ತೃಪ್ತಿಕರವಲ್ಲವಾದರೂ, ಸಾಹಿತ್ಯಿಕ ಶಿಕ್ಷಣದಲ್ಲಿ ಅವರು ತೋರುತ್ತಿರುವ ಆಸ್ಥೆಯೂ ವಿವಿಧ ಪಂದ್ಯಾಟಗಳಲ್ಲಿ ಅವರು ತೋರಿದ ಉತ್ಸಾಹವೂ ಅಭಿನಂದನೀಯವಾಗಿರುತ್ತದೆ.

ಕಾಲೇಜಿನಿಂದ ಈ ವರ್ಷ ಪ್ರಸ್ಥಾನವಾಗುವ ವಿದ್ಯಾರ್ಥಿಗಳ ಪರವಾಗಿ ಕುಮಾರ ಮೋಹನದಾಸ ಶೆಟ್ಟಿ ಹಾಗೂ ಕುಮಾರಿ ಮುಕ್ತಾ ಅವರು ಸ್ವಸ್ತಿವಾಚನವನ್ನು ಮಾಡಿದ ಬಳಿಕ ಪಿ. ರಮಾನಂದ ರಾಯರು ಅವರಿಗೆ ಸಮರ್ಪಕವಾದ ಉತ್ತರವನ್ನಿತ್ತರು. ಪಾರಿತೋಷಕಗಳ ವಿತರಣೆಯಾದ ಬಳಿಕ ಶ್ರೀ ಕೆ. ಬಿ. ರಾಮಕೃಷ್ಣರಾವ್, ಬಿ. ಎ. (ಆನರ್ಸ್) ಅವರು ಧನ್ಯವಾದ ಸಮರ್ಪಣೆ ಮಾಡಿದರು.

ವಿವಿಧ ವಿನೋದಾವಳಿ ಎಂಬ ಪದಪುಂಜ್ಯವು ತೀರ ಸಾಮಾನ್ಯವಾಗಿ ಬಿಟ್ಟು ತನ್ನ ಅರ್ಥವನ್ನು ಕಳೆದುಕೊಂಡಿದ್ದರೂ, ಅಂದು ರಾತ್ರಿ ೧೧ರ ತನಕ ನಡೆದ ನಾಟಕಗಳ ದರ್ಶನವು ಅಪೂರ್ವವಾಗಿತ್ತೆಂಬುದನ್ನು ದರ್ಶಕರ ಶಾಂತಿ ಸಮಾಧಾನಗಳಿಂದಲೇ ತಿಳಿಯಬಹುದಾಗಿತ್ತು.

ಕಾಲೇಜಿನ ಪ್ರಾಧ್ಯಾಪಕರು Box and Cox ಎಂಬ ಹಾಸ್ಯಭರಿತ ಏಕಾಂಕವನ್ನಾಡಿ ತೋರಿಸಿದರು. ನಾಟಕದ ಸಂಪೂರ್ಣಾರ್ಥ ಗ್ರಹಣಕ್ಕೆ ಸ್ವತಃ ಆಂಗ್ಲ ಭಾಷೆಯೇ ಅವರೋಧವೆನಿಸಿದರೂ, ಕೆ. ಶಿ. ಮಂದಾರಪಟ್ಟರು Cox ಆಗಿ ತೋರಿದ ಉತ್ತಮ ನಟನೆ ಯುಸಿಕ್ತರು ಜತೆಗಾರರಾದ ರಾಮರಾಯರು ಬಹಳ ಹಿಂದಕ್ಕೇನೂ ಉಳಿಯಲಿಲ್ಲ. ಎರಡನೆಯ ಏಕಾಂಕ ವಿಕ್ಟರ್ ಹ್ಯೂಗೋ ಬರೆದ ಮಹಾ ಕಾದಂಬರಿ ‘ಲೇ ಮಿಝರಾಬ್ಲ್’ಯ ಒಂದು ಪ್ರಸಂಗದಿಂದ ಸನ್ನಿವೇಶ. ಕಳ್ಳನೊಬ್ಬ ನೆರೆಮನೆಯಿಂದ ಕದ್ದು ಬಂದು ಸಾಧು ಸಂತನಾದ ಪಾದ್ರಿಯೊಬ್ಬನ ಕೊಠಡಿ ಹೊಕ್ಕಿದನು, ಪಾದ್ರಿಯ ಬಂದು ಮಾತುಗಳಿಂದ ಮರುಳಾಗಿ, ಅವನನ್ನು ಕೊಲ್ಲಲಾರದಿದ್ದರೂ ಅವನ ಬೆಳ್ಳಿಯ ದೀಪಗಳನ್ನು ಕದ್ದುಕೊಳ್ಳುತ್ತಾನೆ. ಪೋಲೀಸರಿಗೆ ಸಿಕ್ಕಿ ಪಾದ್ರಿಯ ಎದೆ ಬಂದಾಗ ಪಾದ್ರಿ ದೀಪಗಳನ್ನು ತಾನೇ ಕಳ್ಳನಿಗೆ ಕೊಟ್ಟುದಾಗಿ ಹೇಳಿ ಕಳ್ಳನ ದೇಹವನ್ನೂ, ಆತ್ಮವನ್ನೂ ರಕ್ಷಿಸುತ್ತಾನೆ. ಕಾಲೇಜಿನ ವಿದ್ಯಾರ್ಥಿ ನಟರಾದ ಅವಿನಾಶ ಅಡಪ್ಪುದ ಹಾಗೂ ವೇಣುಗೋಪಾಲ ಶೆಟ್ಟಿ ಇವರು ನಾಟಕವನ್ನು ನೊಗಸಾಗಿ ಆಡಿ ತೋರಿಸಿದರು. ಆದರೆ ಇಡಿಯ ಸಮಾರಂಭಕ್ಕೆಯೇ ಕಳಸವಿಟ್ಟಂತಾದುದು ‘ಬೊಂಬಾಯಿಯ’. ಅಂದರೆ ಕನ್ನಡ ನಾಟಕವಲ್ಲ. ‘ಬೊಂಬಾಯಿ’ದ ನವಿಯ ಸನ್ನಿವೇಶಗಳಿಂದ ಸ್ವಾಭಾವಿಕವಾದ ಸಂವಾದದಿಂದಲೂ ತುಂಬಿ ಬರುವ ರಸಮಯ ಯಂಥ ಒಂದು ನಾಟಕ ಮುಖ್ಯ ಆನಂದ ಎನ್ನದೆ ಒಂದೊಂದು ಪಾತ್ರವೂ ಇಡಿ ನಾಟಕದ ದೃಷ್ಟಿಯಿಂದ ಆತ್ಯುತ್ತಮ ನಟನೆಯನ್ನು ತೋರಿದಂಥ ಸಂಘಶಕ್ತಿ ತೀರಾ ಅಪೂರ್ವವಾದುದು. ಉಡುಪಿಯ ನಾಗರಿಕರು ‘ಬಹದ್ದೂರ್ ಗಂಡ’ ನೋಡಿದ ಬಳಿಕ ಪರಿಪೂರ್ಣತೆಗೆ ಸಮೀಪವಾಗಿರುವ ನಾಟಕವನ್ನನುಭವಿಸಿದುದು ಕಾಲೇಜು ದಿನಾಚರಣೆಯ ‘ಬೊಂಬಾಯಿ’ ಇಂದಾಗಲೇ ಎಂದು ನಿರ್ವಿವಾದವಾಗಿ ಹೇಳಬಹುದು. ಪ್ರಥಮ ಬಹುಮಾನ ಸಲುವ ಯೋಗ್ಯತೆಯುಳ್ಳ ಯಾವ ಪಾತ್ರಗಳೂ ಇದರಲ್ಲಿಲ್ಲ, ಒಬ್ಬೊಬ್ಬನ ಸಲುವೇಕಾದ್ದೇ ಇಡೀ ನಾಟಕಕ್ಕೆ. ಒಂದಿನಿತೂ ನ್ಯೂನತೆಯಿಲ್ಲದೆ ತುಂಬುಪ್ರಾಣದವಾಗಿ ವರ್ತಿಸಿದ ರಾಜಶೇಖರ ಶೆಟ್ಟಿ, ಹಂಗಸನ್ನೂ ಹೆಂಗಸಾಗಿ ಅಭಿನಯಿಸಿದ ಕಾರಂತ, ಪೆತ್ತಪ್ಪಿಯ ಪಾತ್ರದಲ್ಲಿ ಉಪಾಧ್ಯ, ತಂದೆಗಳ ಪಾತ್ರದಲ್ಲಿ ಮಯ್ಯ ಮತ್ತು ವ್ಯಾಸುಭಾಗ— ಸರ್ವರೂ ಸಶಕ್ತರಾಗಿ ಅಭಿನಯಿಸಿ ನಾಟಕಕ್ಕೇ ಯಶಸ್ಸು ತಂದಿದ್ದಾರೆ. ಕಲಾಶಾಲೆಯ ಭವಿಷ್ಯವನ್ನು ಉಜ್ವಲವಾಗಿ ಎಳೆದಿದಾರೆ.

ಕಾಲೇಜಿನ ಪ್ರಕೃತ ಕಟ್ಟಡವನ್ನು ಕಂಡು ಯಾರೂ ನಿರಾಶರಾಗಬೇಕಾದ್ದಿಲ್ಲ. ನವ ಪ್ರಾಣದ ನಗರಿಯಲ್ಲಿ ಭರದಿಂದ ನಿರ್ಮಿತವಾಗುತ್ತಿರುವ ‘ವಿದ್ಯಾ ಭವನ’ [illegible] ನಮ್ಮ ಕಾಲೇಜಿನ ಭವಿಷ್ಯಕ್ಕೆ ಸಾಕ್ಷಿಯಾಗಿದೆ. ಬರುವ ವರ್ಷದಿಂದ ವಿಜ್ಞಾನದ ಶಾಖೆಯೂ ತೆರೆಯಲಿದೆ. ಪರಿಪೂರ್ಣವಾದ ಇಂಟರ್ ಕಾಲೇಜಾಗುವುದು. ಸಾವಿರಾರು ರೂಪಾಯಿ ವೆಚ್ಚದ ವೈಜ್ಞಾನಿಕ ಉಪಕರಣಗಳೂ, ಗ್ರಂಥಾಲಯಗಳೂ ಬರಲು ಆರಂಭಿಸಿವೆ. ಬರುವ ಜೂನ್ ಮಾಹೆಯಲ್ಲಿ ಕಾಲೇಜು ಸಗರಿಗಿಂತ ಒಂದು ಪ್ರಗತಿಯ ಹೆಜ್ಜೆ ಮುಂದಿಡುವುದರಲ್ಲಿ ಸಂದೇಹವಿಲ್ಲ.

— ಎಸ್ಸೆಲ್

ದಕ್ಷಿಣ ಕನ್ನಡ ಜಿಲ್ಲಾ ಜಡ್ಜರ ಕೋರ್ಟಿನಲ್ಲಿ.

ಮೃತಪಟ್ಟ H. ದೇಜಪ್ಪ ಶೆಟ್ರ ಸಾಲದ ದಾವಿನಲ್ಲಿ.

O P No. 16/1951.

1) ನರ್ಸಿ ಶೆಡ್ತಿ

2) ನಾರಾಯಣ ಶೆಟ್ಟಿ, (3) ರಾಜೀವಿ ಮಾನರು. ಇವರ ಕ್ಷೇಮಚಿಂತಕಳು ನರ್ಸಿ ಶೆಡ್ತಿ. — ಅರ್ಜಿದಾರರು.

ಮತ್ತು

ಅಚ್ಚು ಶೆಡ್ತಿ, ಚೆನ್ನು ಶೆಟ್ರ ಹೆಂಡತಿ—ಮಂಗಳೂರು ತಾಲೂಕು ಪೆಜತ್ತಾಡಿ ಗ್ರಾಮದ ಗರಡಿಮನೆ ಎಂಬಲ್ಲಿರುವವಳು

—ರೆಸ್ಪಾಂಡೆಂಟಳು.

ಸದ್ರಿ ಅರ್ಜಿದಾರರು ಈ ಮೂಲಕ ಸರ್ವರಿಗೂ ತಿಳಿಸುವುದೇನೆಂದರೆ—

ಮೇಲ್ಕಾಣಿಸಿದ ಮೃತ H ದೇಜಪ್ಪ ಶೆಟ್ಟಿಗೆ Warden Insurance Co. ದಿಂದ ಬರತಕ್ಕ ಪೊಲಿಸಿ ಹ್ಯಾವೇಜನ್ನು ವಸೂಲು ಮಾಡುವರೆ ತನಗೆ ಸಕ್ಸೆಶನ್ ಸರ್ಟಿಫಿಕೇಟು ಕೊಡಬೇಕಾಗಿ ಸದ್ರಿ ಮೃತನ ಆಸ್ತಿಯಾಸ್ತಿನೇ ಅಂಶದ ನ್ಯಾಯವಾದ ಹಕ್ಕುದಾರರಾದ ಮೃತನ ಮಕ್ಕಳಾದ 2-3ನೇ ಅರ್ಜಿದಾರರ ಬಗ್ಗೆ 1ನೇಯವಳು ಕ್ಷೇಮಚಿಂತಕಳಾಗಿ ಸದ್ರಿ ಕೋರ್ಟಿನಲ್ಲಿ ತಾರೀಕು 21-12 1950ರಲ್ಲಿ ದಾಖಲ್ಮಾಡಿದ ಸದ್ರಿ ಅರ್ಜಿಯು ಇನ್ನೇ ಇಸವಿ ಬರುವ ಮಾರ್ಚ ತಾ. 12ನೇ ದಿವಸ ಪೂರ್ವಾಹ್ನ 11 ಘಂಟೆಗೆ ಈ ಕೋರ್ಟಿನ ಮುಂದೆ ತನಿಖೆಗೆ ಇಟ್ಟಿರುತ್ತದೆ. ಈ ವಿಷಯದಲ್ಲಿ ಆಕ್ಷೇಪ ಹೇಳತಕ್ಕವರು ತಮ್ಮ ಆಕ್ಷೇಪಗಳನ್ನು ಈ ಕೋರ್ಟಿಗೆ ಸದ್ರಿ ತಾರೀಕಿನಲ್ಲಿ ಯಾ ಅದಕ್ಕೆ ಮೊದಲು ಹಾಜರುಮಾಡತಕ್ಕದ್ದು. ತಪ್ಪಿದಲ್ಲಿ ಸದ್ರಿ ಅರ್ಜಿದಾರರು ಅಪೇಕ್ಷಿಸಿದ ಸರ್ಟಿಫಿಕೇಟು ಕೊಡಲ್ಪಡುತ್ತದೆ ಎಂದು ಈ ಮೂಲಕ ಸರ್ವರಿಗೂ ತಿಳಿಸಲಾಗಿರುವುದು.

(By order of the Court)

B. Balakrishna Shetty.

Advocate for Petitioners.

ಮಂಗಳೂರು, ತಾ. 19-2 1951.

"ಗೋಪಾಲ ಭೇಷಜಾಶ್ರಮ" ಮಂಗಳೂರು.

(ಸ್ಥಾಪನೆ 1910)

ಸ್ಥಾಪಕರು:-ಆಯುರ್ವೇದ ಭೂಷಣ ಯಂ ಎ ಶಾಸ್ತ್ರೀ,

ಬಾಣಂತಿಯರ ಸಲುವಾಗಿಯೇ ದೇಶ ಮತ್ತು ಪ್ರಕೃತದ ದೇಹಸ್ಥಿತಿಯನ್ನು ನಿರ್ಣೈಸಿ ತಯಾರಿಸಲ್ಪಟ್ಟ ಅಮೋಘವಾದ ಮಧುರದ್ರವ ರಸಾಯನ. ಅಲ್ಪ ಮೌಲ್ಯದಿಂದ ಬಡವರಿಗೂ, ಭಾಗ್ಯಶಾಲಿಗಳಿಗೂ ಸುಲಭವಾಗಿರುವುದು

ಇವರ ನವಜೀವಾತು ಎಂಬ ಸೂತಿಕಾ ರಸಾಯನ

ಪೆಟ್ಟಿಗ ಮಾಲಿಕರು—ದಿ। ಯಂ ಸಿ. ಶಾಸ್ತ್ರೀ, ಯಲ್ ಐ.
ಕೊಡಿಯಾಲಬೈಲ ಪೋಸ್ಟು, (ಮಂಗಳೂರು)
ಸ್ಥಳಿಕ್ಕ ಏಜಂಟು— ಡಾ। ಬಿ. ಕೆ ಶಿವರಾಮರಾವ್, ಕುಂಜಿಬೆಟ್ಟು, ಉಡುಪಿ

ನಿಮಗಿದು ಗೊತ್ತೇ?

ನಿಮ್ಮ ಮನೆಯಲ್ಲಿ ಆಗಾಗ ಆಗಮಿಸುವ ವಾತರೋಗದ ಉಪದ್ರವಗಳಾದ ಉದರಶೂಲೆ, ಕಟಿಶೂಲೆ, ಕೈಕಾಲುಗಳಲ್ಲಿ ನೋವು, ಜಡತೆ, ಅಜೀರ್ಣ, ಉದರೋಬ್ಬರ, ಅಗ್ನಿಮಾಂದ್ಯ ಮುಂತಾದ ಎಲ್ಲಾ ಉಪದ್ರವಗಳಿಗೂ ರಾಮಬಾಣ ಯಾವುದು ಗೊತ್ತೇ? ಕಳೆದ ಇಪ್ಪತ್ತೈದು ವರುಷಗಳ ವಿಶಾಲ ಅನುಭವದಿಂದ ಶಾಸ್ತ್ರೀಯವಾಗಿ ತಯಾರಿಸಲ್ಪಟ್ಟ—

ಸ್ವದೇಶಿ ಔಷಧ ಭಂಡಾರ (ರಿಜಿಸ್ಟರ್ಡ್)
ಪ್ರೋ ಕುಂಜಾಲು, ದ. ಕ.

ಇವರ 'ಧನ್ವಂತರೀ ಮಾತ್ರೆ'ಗಳು ಮಾತ್ರ

ಕೇವಲ ನಾಲ್ಕಾಣೆಯ ಅಂಚೆಚೀಟಿನ್ನು ಕಳುಹಿಸಿ ಆರು ಮಾತ್ರೆಗಳ ಒಂದು ಪ್ಯಾಕೇಟನ್ನು ಪಡೆದು ಅವರ ಶೀಘ್ರ ಪರಿಣಾಮಕಾರೀ ಗುಣಗಳನ್ನು ಕಂಡುಕೊಳ್ಳಬಾರದೇಕೆ? ಇಂದೇ ಬರೆಯಿರಿ.

ಸಿದ್ಧ ಪಾತ್ರೆಗಳು



[illegible] ನಮ್ಮಲ್ಲಿ ಎಲ್ಲಾ ವಿಧದ ಪಾತ್ರೆಗಳನ್ನು ಸಿದ್ಧವಾಗಿಟ್ಟು [illegible] ಯೋಗ್ಯ ದರದಲ್ಲಿ ಮಾರಾಟ ಮಾಡಲಾಗುತ್ತದೆ.
[illegible]

ಧರ್ಮಸ್ಥಳದ ಮಹಾನಡಾವಳಿ

(ಒಂದ ಸಣ್ಣ ಪ್ರವಾಸ ವೃತ್ತ)

ನಮ್ಮ ಜಿಲ್ಲೆಯ ಪ್ರಸಿದ್ಧ ಯಾತ್ರಾಕ್ಷೇತ್ರಗಳಲ್ಲೊಂದಾದ ಧರ್ಮಸ್ಥಳದ ಹೆಸರು ಕನ್ನಡ ನಾಡಿನ ಜನರಿಗೆ ಹೊಸತೇನೂ ಅಲ್ಲ. ಪ್ರಕೃತಿಯ ಮನೋಹರ ದೃಶ್ಯಾವಲಿಯ ಮಧ್ಯೆ ಶೋಭಿಸುವ ಈ ಸ್ಥಳ ಕಲೋಪಾಸಕರ ಕಣ್ಣಿಗೂ ಒಂದು ಹಬ್ಬವನ್ನೊದಗಿಸುವುದು. ಇಲ್ಲಿ ನಡೆದ ಸಂತತವಾದ ದಾನಧರ್ಮ, ಭಾವುಕ ಜನಗಳ ಕಾಮಧೇನುವಾದ ಮಂಜುನಾಥ ಸ್ವಾಮಿಯ ಸನ್ನಿಧಾನ, ಧರ್ಮದೇವತೆಗಳು, ಅಣ್ಣಪ್ಪನೆಂಬ ದೈವ ಇವುಗಳ ಪ್ರಭಾವ ಇವುಗಳಿಂದ ನಾನಾ ಮೂಲೆಗಳ ಜನಗಳನ್ನು ನಿಸ್ಸಂಶಯವೂ ಆಕರ್ಷಿಸುವ ಈ ಪುಣ್ಯಸ್ಥಳವನ್ನು ಒಮ್ಮೆ ನೋಡಿ ಬರುವ ಆಸೆ ನನಗೆ ಬಹುದಿನಗಳಿಂದ ಇತ್ತು. ಈ ಸಲದ ಮಹಾನಡಾವಳಿಯ ಸಮಯಕ್ಕೆ ಸರಿಯಾಗಿ ಅಲ್ಲಿಗೆ ಹೋಗುವ ಸುಯೋಗವೂ ಒದಗಿ ಬಂತು.

ಧರ್ಮಸ್ಥಳ ಒಂದು ವಿಶಿಷ್ಟ ಸಂಸ್ಕೃತಿಯುಳ್ಳ ಕೇಂದ್ರ. ಒಂದು ದೃಷ್ಟಿಯಿಂದ ಇದು ಕೌಲಿಕಾರರ ರಾಜ್ಯ! ಏಕೆಂದರೆ ಇಲ್ಲಿ ಮಂಜುನಾಥ ಸ್ವಾಮಿಗಿಂತ ಅಣ್ಣಪ್ಪ ದೈವದ ಮೇಲೆಯೇ ಜನಸಾಮಾನ್ಯರ ಭಯ-ಶ್ರದ್ಧೆ. ಇಲ್ಲಿ ನಡೆಯತಕ್ಕ ವಿಧಿ ವಿಧಾನಗಳಲ್ಲೂ ದೇವರಿಗೂ ದೈವಗಳಿಗೂ ಸರಿಸಮವಾದ ವಿಧಾನಗಳುಂಟು. ಸತ್ವ ಮತ್ತು ರಜೋ ಗುಣಗಳೆರಡನ್ನು ಆರಾಧಿಸುವ ಈ ಕ್ರಮ ಇಲ್ಲಿಯದೇ ವೈಶಿಷ್ಟ್ಯ! ಮಹಾ ನಡಾವಳಿ ಎಂದರೆ ಪ್ರಧಾನವಾಗಿ ಇಲ್ಲಿಯ ದೈವಗಳಿಗೆ ನಡೆಸುವ ನಿಯಮದ ಸೇವೆ. ಜಂಟಿಯಾಗಿ ಸ್ವಾಮಿಯ ಸನ್ನಿಧಿಯಲ್ಲೂ ಬೇರೆ ವಿಧಿಗಳುಂಟು. ೧೨ ವರ್ಷಗಳಿಗೊಮ್ಮೆ ನಡೆವ ಈ ಜಾತ್ರೆ ಈ ಬಗೆ ೪೨ ವರ್ಷಗಳಿಂದ ನಡೆದುದಿಲ್ಲವಂತೆ. ವಿರಳವಾಗಿ ನಡೆವ ಈ ಜಾತ್ರೆಗೆ ಕರ್ನಾಟಕದ ಎಲ್ಲ ಮೂಲೆಗಳಿಂದಲೂ ಲಕ್ಷಾಂತರ ಜನರು ಒಂದು ಕೃತಾರ್ಥರಾಗುತ್ತಾರೆ.

ಒಂದು ವಾರ ನಡೆವ ಈ ಮಹಾ ನಡಾವಳಿಯ ಕಾಲದಲ್ಲಿ ನಾನು ಒಂದು ದಿನ ಶ್ರೀ ಕ್ಷೇತ್ರಕ್ಕೆ ಹೋಗಿಬಂದೆ. ಈ ಜಾತ್ರೆಯ ದಿನಗಳಲ್ಲಿ ಧರ್ಮಸ್ಥಳದಲ್ಲಿ ಮೃಷ್ಟಾನ್ನ ಭೋಜನಕ್ಕೆ ಬರಗಾಲವೆ ಇಲ್ಲ! ಯಾವ ಜಾತಿಮತಗಳ ನಿರ್ಬಂಧವಿಲ್ಲದೆ ದಿನವೂ 30 ಸಾವಿರಕ್ಕೆ ಮೇಲ್ಪಟ್ಟು ಜನರು ಊಟಮಾಡುತ್ತಿದ್ದರು. ಒಂದು ವಾರದ ವರೆಗೆ ನಡೆದ ಈ ಅತ್ಯಸಮಾರಾಧನೆಯೊಂದು ಮಹಾಯಜ್ಞವೆ ಹೌದು! ಸಾಲದುದಕ್ಕೆ ಒಂದುವಾರವೂ ನಿರಂತರವಾಗಿ ಸಕ್ಕರೆ ಪಾನಕದಿಂದ ತಣಿಸುವುದು ಬೇರೆಯೆ ಇತ್ತು! ಈ ಅಭಾವದ ದಿನಗಳಲ್ಲಿ ನಡೆದ ಈ ದಾನಧರ್ಮಕ್ಕೆ ಇನ್ನೆಲ್ಲಿಯೂ ಸಾಟಿಯಿಲ್ಲ!

ದೇವಾಲಯದ ಒಳಗೂ ವೇದಘೋಷ ಮಂತ್ರಘೋಷಗಳಿಂದ ಸನಾತನ ಸಂಸ್ಕೃತಿಯ ದಿವ್ಯ ವೈಭವವನ್ನು ನೆನಪಿಗೆತರುತ್ತಾ ವಾತಾವರಣವೆ ಪವಿತ್ರವಾಗಿತ್ತು. ದೇವರ ಸಂದರ್ಶನಾದಿಗಳನ್ನು ಮುಗಿಸಿ ಹೊರಗೆ ಬಂದೆವು.

ಹೊರಗೋ-ಜನರ ಮಹಾಸಾಗರ! ಯಾವುದೋ ಒಂದು ಮಹಾ ನಗರದಂಥ ಗದ್ದಲ. ಲಕ್ಷಾಂತರ ಜನಗಳ ಹೃದಯವನ್ನು ಕಲಕಿ ಆಕರ್ಷಿಸಿದ ಈ ಸ್ಥಳದ ಗೌರವವನ್ನು ವಿಸ್ಮಯದಿಂದಲೂ ಕುತೂಹಲದಿಂದಲೂ ಭಕ್ತಿಯಿಂದಲೂ, ಅಭಿಮಾನದಿಂದಲೂ ಸ್ಮರಿಸುತ್ತಾ ಆ ಜನಸ್ತೋಮದ ನಡುವೆ ನುಗ್ಗಿಕೊಂಡು ಇತರ ಪ್ರೇಕ್ಷಣೀಯ ಸ್ಥಳಗಳನ್ನು ನೋಡಿದ್ದಾಯಿತು.

ನಾವು ಹೋದ ದಿವಸ ಕರ್ನಾಟಕದ ಹಿರಿಯ ಸಾಹಿತಿಗಳಾದ ಶ್ರೀಗಳಾದ ಡಿ. ವಿ. ಜಿ. ಕಾರಂತ, ಶ್ರೀರಂಗ, ತಿ. ನಂ. ಶ್ರೀ, ಮಿರ್ಜಿ ಅಣ್ಣಾರಾಯ, ಮುಂತಾದವರ ಭಾಷಣಮಾಲೆಯ ಕಾರ್ಯಕ್ರಮವಿತ್ತು. ಭಾಷಣಕಾರರೆಲ್ಲರೂ ಉದ್ದಾಮ ವಿದ್ವಾಂಸರು. ಎಂತಲೆ ಅವರು ಕನ್ನಡ ಸಾಹಿತ್ಯದ ವಿವಿಧ ಅಂಗೋಪಾಂಗಗಳ ಕುರಿತು ಸಾರವತ್ತಾಗಿ ಭಾಷಣ ಮಾಡಿದರು. ಶ್ರೀ ಡಿ. ವಿ. ಜಿ. ಯವರ ಧರ್ಮದ ಕುರಿತಾದ ಕೊನೆಯ ಭಾಷಣವಂತೂ ಅತ್ಯಂತ [illegible] ಶೋಭಕವಾಗಿತ್ತು. ನಮ್ಮ ಮಠದಲ್ಲಿ ಕಾವಿಬಟ್ಟೆ ಧರಿಸಿ ಕುಳಿತಿರುವವರ ನಾಲಿಗೆಗೆ ಈ ಶಕ್ತಿಯು ವೇಕವಾದರೂ ಸಿದ್ಧಿಸಿದ್ದರೆ. [illegible] ಕೊನೆಗೆ ಶ್ರೀಮತಿ ಸುಂದರಮ್ಮನವರೂ ಶ್ರೀಮತಿ ಚೊಕ್ಕಮ್ಮನವರೂ ಸೊಗಸಾಗಿ ಹಾಡಿದರು. ಚಿಕ್ಕದೊಂದು ಭರತನಾಟ್ಯವೂ ಇತ್ತು. "ಸಂಗೀತಮಪಿ ಸಾಹಿತ್ಯಂ ಸರಸ್ವತ್ಯಾಸ್ತನದ್ವಯಂ"- ಎಂತ ಹಿಂದಿನವರು ಹೇಳಿದ್ದಾರೆ! ನವುಗದರ ದರ್ಶನವಾಯಿತು!!

ನಾವು ಆದಿಯಿಂದ ಅಂತ್ಯದ ತನಕ ನಿಂತಿಲ್ಲ. ಆದರೆ ಪ್ರತಿದಿನವೂ ಒಂದೇ ರೀತಿಯ ಸುವ್ಯವಸ್ಥೆ ಇದ್ದಿತೆಂದೂ, ಒಳಗೆ ದೇವತಾ ಕಾರ್ಯಗಳು ಇದ್ದಂತೆ ಹೊರಗೆ ಕಲೋಪಾಸನೆ ವಿವಿಧ ರೀತಿಯಿಂದ ಜರಗುತ್ತಾ ಇದ್ದುವೆಂದೂ ಕೇಳಿದೆವು. ಒಟ್ಟಿನಲ್ಲಿ ಈ ಮಹಾನಡಾವಳಿ ಕರ್ನಾಟಕದ ಒಂದು ಅಭೂತಪೂರ್ವವಾದ ಉತ್ಸವವಾಗಿ ನಡೆಯಿತು.

ಈ ಸಂದರ್ಭದಲ್ಲಿ ಶ್ರೀ ಕ್ಷೇತ್ರಕ್ಕೆ ಹೋಗಿ ಬಂದ ನನಗೆ ಅಲ್ಲಿಯ ಒಂದು ವ್ಯಕ್ತಿಯ ವ್ಯಕ್ತಿತ್ವವನ್ನು ಎಷ್ಟು ಕೊಂಡಾಡಿದರೂ ಅಲ್ಪವೆ ಎನಿಸುತ್ತದೆ. ಅವರೇ ಶ್ರೀ ಧರ್ಮಸ್ಥಳ ಮಂಜಯ್ಯ ಹೆಗ್ಗಡೆಯವರು. ಅವರ ಸೌಜನ್ಯ, ವಿದ್ವತ್ಪ್ರೀತಿ, ದೈವಭಕ್ತಿ, ಕಲಾಪ್ರೇಮ, ಜನಸೇವಾಸಕ್ತಿ ಇವುಗಳಿಗೆ ಸಮಕಾಲೀನ ಸಮಾಜದಲ್ಲಿ ಸಂದೊರೆಯಾದುದು ದೊರೆಯಲಾರದು. ಇಂಥ ಹಿರಿಯ ಜೀವ ನಾಡಿಗೆಯೆ ಭೂಷಣ. ಇಂಥ ಜೀವಿಗಳ ಜೀವನತಪಸ್ಸಿನಿಂದಲೇ ಲೋಕದ ಕಲ್ಯಾಣ ಸಾಧನೆಯಾಗಬೇಕಾಗಿದೆ. ಶ್ರೀ ಹೆಗಡೆಯವರಿಗೆ ದೀರ್ಘಾಯುರಾರೋಗ್ಯೈಶ್ವರ್ಯಾದಿ ಭಾಗ್ಯಗಳನ್ನಿತ್ತು ಸಂತತವೂ ನಡೆಸುವಂತೆ ಶ್ರೀ ಮಂಜುನಾಥಸ್ವಾಮಿಯ ಸನ್ನಿಧಿಯಲ್ಲಿ ಕನ್ನಡ ಜನಪದದ ಹರಕೆಯುಂಟು!

ನಾವು ನೋಡಬೇಕಾದ್ದನ್ನೆಲ್ಲ ನೋಡಿ, ಮರಳಿಬಂದರೂ ಧರ್ಮಸ್ಥಳದ ಹೆಸರು ನಮ್ಮ ಸ್ಮೃತಿಪಟಲದಿಂದ ಅಳಿಯುವಂತಿಲ್ಲ. ಅಲ್ಲಿಯ ನಾನಾ ತರದ ವ್ಯವಸ್ಥೆಗಳನ್ನು ಕಂಡಾಗ ಮನಸ್ಸಿಗೆ ತುಂಬ ಸಂತೋಷವೆನಿಸಿತು. ಮುಂದಿನಲ್ಲೂ ಇಂಥದೇ ಜಾತ್ರೆ ನೆರೆಯುತ್ತದೆ. ಅದೂ ಎರಡು ವರ್ಷಗಳಿಗೊಮ್ಮೆ- ಇಲ್ಲಿಯೂ ಧರ್ಮಸ್ಥಳದಂತೆ ಸರ್ವ ಜನಕರಿಗೆ ಊಟದ ಏರ್ಪಾಡು, ಮತ್ತು ಅಲ್ಲಿಯ ಜಾತ್ರೆಯ ಮಟ್ಟಿನ ವ್ಯವಸ್ಥೆ, ಅಲ್ಲಿಯಂತೆ ಜನರ ಜ್ಞಾನಾಭಿವೃದ್ಧಿಗೆ ಸಾಧಕಗಳಾದ ಇತರ ಕಾರ್ಯಕ್ರಮಗಳನ್ನು ಅಳವಡಿಸಿಕೊಂಡರೆ ಎಷ್ಟು ಚೆನ್ನಾಗಿದ್ದೀತು ಎಂಬ ವಿಚಾರ ಮನಸ್ಸನ್ನು ಆಗಾಗ ಕೊರೆಯದೆ ಇಲ್ಲ! ಯಾರಾದರೂ ಈ ಮಾತಿನ ಕಡೆ ಗಮನವೀಯುತ್ತಾರೇ ?

— ಬನ್ನಂಜೆ.

ನೋಟೀಸು

ಕುಂದಾಪುರ ಡಿ ಮು ಕೋರ್ಟಿನಲ್ಲಿ

O P. No. 6/1951

ಅರ್ಜಿದಾರಳು — ದುರ್ಗಮ್ಮ ರೆಂಗ್ಸ್ನ

ಎದುರು— ಸುಬ್ರಾಯ ಸೇರಿಗಾರ ಸಹಾ 2 ಜನರು

ಈ ಮೂಲಕ ಸರ್ವ ಜನರಿಗೆ ತಿಳಿಯಪಡಿಸುವುದೇನೆಂದ್ರೆ—

ಮೇಲ್ಕಂಡ ಅರ್ಜಿ ವ್ಯವಹಾರದಲ್ಲಿ ಅರ್ಜಿದಾರಳ ಗಂಡ ಹೂವಿನಕೆರೆ ತಿಮ್ಮಪ್ಪ ಸೇರಿಗಾರನು ಕುಂದಾಪುರ ಕಸಬು ಗ್ರಾಮದಲ್ಲಿ ತಾ. 20-9-1949ರಲ್ಲು ಮೃತಪಟ್ಟಿರುತ್ತಾನೆ. ಮೃತನು ವ ಅರ್ಜಿದಾರಳು ಪಟ್ಟಿಗೆ ಕುಂದಾಪುರ ಕಸಬಾ ಗ್ರಾಮದಲ್ಲಿ ನಡಿಸುತ್ತಿದ್ದ ಕಾಫಿ ಹೊಟೇಲ ವ್ಯಾಪಾರದ ವ್ಯವಹಾರದ ಸಂಬಂಧ ಅರ್ಜಿಯಲ್ಲಿ ಕಾಣಿಸಿದ ಕಾರಣಗಳಿಂದ ಹೊರಗಿನಿಂದ ಬರತಕ್ಕ ಸಾಲ ವಸೂಲಿ ಕುರಿತು ಮೃತನ ವಾರಿಸುದಾರಳಾಗಿ ತನಗೆ ವಾರಿಸ್ ಸರ್ಟಿಫಿಕೇಟು ಕೊಡಿಸಬೇಕಾಗಿ ದಾಖಲು ಮಾಡಿದ ಮುಕದ್ದಮೆ ಅರ್ಜಿಯು ತಾರೀಕು 5-3-1951ನೇ ದಿವಸ ತನಿಖೆಗೆ ಇಡೋಣಾಗಿಯದೆ. ಆದ್ದರಿಂದ ಸದ್ರಿ ತಾರೀಕಿನ ದಿವಸ ಆಕ್ಷೇಪಗಳೇನಾದರೂ ಇದ್ದ ಪಕ್ಷದಲ್ಲಿ ಆ ದಿವಸ ಹಾಜರಾಗಿ ದಾಖಲು ಮಾಡಿಕೊಳ್ಳಬೇಕಾಗಿ ಈ ಮೂಲಕ ಸರ್ವರಿಗೂ ತಿಳಿಯಪಡಿಸೋಣಾಗಿಯದೆ.

Y. Manjaya Shetty,

ಅರ್ಜಿದಾರಳ ಕಡೆ ಎಡ್ವೊಕೇಟ್.

ಮೊಕ್ಕಾಂ: ಕುಂದಾಪುರ, ತಾ 20-2 1951

Notice

ಕಾಸರಗೋಡು ಡಿ ಮು ಕೋರ್ಟಿನಲ್ಲಿ

R E P. No 237/1950

in

O. S No 211/1946

ಆಗಸ ಬಾಬು —ಅರ್ಜಿದಾರ.

ಮತ್ತು

ಶ್ರೀ ದುರ್ಗಾಪರಮೇಶ್ವರಿ ದೇವಸ್ಥಾನದ ಟ್ರಸ್ಟಿಗಳ } ಡಿಫೆಂಡೆಂಟ್ರು

ಇವರೊಳಗೆ

ಸದ್ರಿ ಅರ್ಜಿಯು 4 ಮತ್ತು 5ನೇ ಡಿಫೆಂಡೆಂಟರಿಗೆ ನೋಟೀಸು ತಾ 9 2 51

4ನೇ ಡಿಫೆಂಡೆಂಟ ಎಸ್, ಕುಂಜಾಬು ನಂಬ್ಯಾರ್, ಮಾಣಿ ಅಮ್ಮನ ಮಗ ಮತ್ತು ಕೃಷ್ಣನ್ ನಂಬ್ಯಾರ ಅಳಿಯ

5ನೇ ಡಿಫೆಂಡೆಂಟ ರಾಮಯ್ಯ ಬಲ್ಲಾಳ, ಪಟೇಲ ರಾಮಚಂದ್ರ ಬಲ್ಲಾಳರ ಅಳಿಯ, ಕಾಸರಗೋಡು ತಾಲ್ಲೂಕ ಕಾರ್ಡ್ಕ ಗ್ರಾಮ ದಲ್ಲಿರುವವರು.

ಅರ್ಜಿದಾರನು ದಾಖಲು ಮಾಡಿದ ಮೇಲ್ಕಂಡ ಅಪ್ಲಿಕ್ಯಾಶನು ತಾ. 8-3 1951ಕ್ಕೆ ಡಿಫೆಂಡೆಂಟರಿಗೆ ನೋಟೀಸಿಗೆ ಇಟ್ಟಿರುತ್ತದೆ. ಸದ್ರಿ ಡಿಫೆಂಡೆಂಟರು ಆ ದಿವಸ ಈ ಕೋರ್ಟ ಮುಂದೆ ಹಾಜರಾಗಿ ಉತ್ತರವನ್ನು ದಾಖಲು ಮಾಡುವರೆ ತಪ್ಪಿದ್ರೆ ಸದ್ರಿಯವರನ್ನು ಏಕಪಕ್ಷ ಮಾಡಿ ವಾರಂಟಿಗೆ ಹುಕುಂ ಆಗುವದು ಎಂತ ಈ ಮೂಲಕ ತಿಳಿಸೋಣಾಗುತ್ತದೆ.

(Sd) **K. Ganesh Rao,**

B A ,L.L B

Vakil for Petitioner

Kasaragod, Dated 22-2-1951.

ದಿ ವಿಜಯಾ ಬ್ಯಾಂಕ್, ಲಿಮಿಟೆಡ್; ಬೈಂದೂರು.

ಏಲಂ ನೋಟೀಸು

ಈ ಕೆಳಗೆ ಹೆಸರು ಕಾಣಿಸಿದ ಮಹಾಶಯರು ನಮ್ಮ ಬ್ಯಾಂಕಿನಿಂದ ಚಿನ್ನಾಭರಣಗಳ ಆಧಿನ ಮೇಲೆ ಪಡೆದ ಸಾಲವನ್ನು ಮರುಪಾವತಿ ಮಾಡುವರೆ ರಿಜಿಸ್ಟ್ರಿ ನೋಟೀಸು ಮೂಲಕ ಕೇಳಿಕೊಂಡಾಗ್ಯೂ ಅಸಲು-ಮ-ಬಡ್ಡಿ, ಯಾವುದನ್ನೂ ಈ ತನಕವೂ ಕೊಡದೆ ಇರುವುದರಿಂದ ಸದ್ರಿಯವರು ನಮ್ಮಲ್ಲಿ ಇಡಿಟ್ಟಿರುವ ಚಿನ್ನಾಭರಣ ನಗಗಳನ್ನು ಇದೇ ಮಾರ್ಚ ತಿಂಗಳ ತಾರೀಕು 17ನೇ ಶನಿವಾರ ಅಪರಾಹ್ನ ಗಂಟೆ 2ಕ್ಕೆ-ಯಾ-ಬ್ಯಾಂಕಿಗೆ ಯುಕ್ತ ಕಂಡ ಇತರ ದಿನಗಳಲ್ಲಿ ಪುನ ನೋಟೀಸು ಕೊಡದೇನೇ ಬಹಿರಂಗವಾಗಿ ಬ್ಯಾಂಕಿನ ವಠಾರದಲ್ಲಿ ಹರಾಜುಮಾಡಲಾದೀತು. ತಿಳಿದಿರಲಿ.

ಸಾಲದ ಪಂಜಾ ನಂಬ್ರ	ಹೆಸರು ಮತ್ತು ವಿಳಾಸ	ಅಸಲು ಮೊಬಲಗು
89 1/-6	ಜನಾಬ್ ಶಿರೂರು ಸಯ್ಯದ್ ಮಹಮ್ಮದ್ ಸಾಹೇಬ್, ಸೈಯದ್ ಮೈದಿನ್ ಸಾಹೇಬರ ಮಗ, ಕೇರಿ, ಶಿರೂರು	ರೂ. ಆ ಪೈ. 226-0-0
516/47-8	ಶ್ರೀ ಕಲ್ಲಾಗ್ರಹಿತ್ಲು ಕೊಸ್ಸ್ವಂ ಸಜ್ರಸ್, ಸಿಂಗಲ್ ನಜ್ರತರ ಮಗ, ಪಡುವರಿಗ್ರಾಮ, ಪಡುವರಿ	12-4-0
652/47-8	ಕಲ್ಲಂಕ ವೆಂಕಟ್ರಮಣ ಉಗ್ರಾಣಿ, ಪರಮೇಶ್ವರ ಆಚಾರಿಯ ಮಗ ಬಿಜೂರು ಗ್ರಾಮ, ಬಿಜೂರು	50-1-0
521/17-8	ನಾಗೋಡಿ ಅಪ್ಪಣ್ಣಯ್ಯ, ಕಣ್ಣಯ್ಯನವರ ಮಗ, ನಾಗೋಡಿ ಗ್ರಾಮ, ಕೊಲ್ಲೂರು ಪೋಸ್ಟು.	201-0-0
820/17-6	ಗೋವಿಂದಕಾಮತ ಆಲಿವಕೋಡಿ ದುರ್ಗನಮಗ, ತಾರಾಪತಿ, ಪಡುವರಿ	10-4-[illegible]
281/18-9	ಶ್ರೀ S ನಾಗಪ್ಪ ಒಂಡಾರಿ, ಗೌರಿ ಒಂಡಾರಿಯ ಮಗ, ಪೇಲ ಬಚ್ಚೆ, ಶಿರೂರು ಗ್ರಾಮ, ಶಿರೂರು	60-8-0
114/48 9	ಶ್ರೀ ಸೋಗನಮಾರ್ಗ ಕಾಮತ್, ದಾಸನ ಮಗ, ತಾರಾಪತಿ, ಪಡುವರಿ.	93-8-0
423 48-9	ಶ್ರೀಮತಿ ಜುಲಿಯಾನ್ ಫೆರ್ನಾಂಡಿಸ್, ಸಲ್ವಾದೋರ್ ಫೆರ್ನಾಂಡಿಸರ ಹೆಂಡತಿ, ಬೀಯಾರ, ಬೈಂದೂರು	6-4 0
519/18 9	ಶ್ರೀ ಯು ಕೃಷ್ಣಪ್ಪ ಸೆಟ್ಟಿ, ಮಂಜಯ್ಯ ಸೆಟ್ಟರ ಅಳಿಯ, ಕುಪ್ಪಯ್ಯ ಸೆಟ್ಟರ ಮನೆ, ಉಪ್ಪುಂದ	100-8-0
601/48-9	ರಾಮಕೃಷ್ಣ ಸೇರಿಗಾರ, ಮುಲ್ಕಯ್ಯ ಸೇರುಗಾರರ ಮಗ, ಮಯ್ಯಾಡಿ ಬೈಂದೂರು	70-8-0
475/48-9	ಕಂಪಾನ್ ಲಾದ್ರಿಕ್, ಕೊಸ್ಸ್ವಂ ನಜ್ರತರ ಹೆಂಡತಿ, ಕಲ್ಲಾಗ್ರ ಹಿತ್ಲು, ಪಡುವರಿ	25-4 0
673/48-9	ಶ್ರೀ ಕೋಟಿ ಸುಬ್ರಾಯ ಸೇರುಗಾರ ದಾಸಪ್ಪ ಸೇರುಗಾರರ ಮಗ, ಪಡುವರಿ ಗ್ರಾಮ, ಕೋಟಿ ಬಾಗಿಲು, ಪಡುವರಿ	35-4-0
864/18-9	ಶ್ರೀ ಮಂಜ ಬಿಲ್ಲವ, ವೆಂಕ್ಟಪೂಜಾರಿಯ ಅಳಿಯ, ಶಿರೂರು ಗ್ರಾಮ, ಶಿರೂರು	50-4 0
857/48-9	ಶ್ರೀ ಮಹಾಬಲಯ್ಯ, ಸುಬ್ರಾಯ ಹೆಗ್ಡೆಯ ಮಗ, ಲಿಂಗದ ಕೈ ಕೋಟೆ, ಶಿರೂರು ಗ್ರಾಮ, ಕೊಲ್ಲೂರು, ಪೋಸ್ಟು.	70-8-0

ಬೈಂದೂರು 22—2—1951 } ಎಚ್ ರಾಜೀವ ಸೆಟ್ಟಿ, ಏಜಂಟ್

ಸಹಕಾರಿ ಸಂಘಗಳಿಗೆ—
ಮುನ್ಸಿಫ್ ಕೋರ್ಟುಗಳಿಗೆ—
ವರ್ಗದಾರರಿಗೆ—ಶಾಲೆಗಳಿಗೆ—
ಬೇಕಾಗುವ ರಿಜಿಸ್ಟ್ರಿಗಳು,
ರಶೀದಿ ಪುಸ್ತಕಗಳು,
ಫಾರ್ಮುಗಳೂ, ಎಕೌಂಟ್ ಪುಸ್ತಕಗಳೂ ದೊರೆಯುತ್ತವೆ.
ನವಯುಗ ಪ್ರೆಸ್ ಉಡುಪಿ.

29-3-1951

ವಾರದ ಹರಟೆ

ಶ್ರೀ ...ಯು. ವಿ.

ಕಳೆದ ವಾರದಲ್ಲಿ ನಾವು ಜನಗಣನೆಯಲ್ಲಿ ಪ್ರಾರಂಭಿಸಿ ಆಹಾರದ ಅಭಾವಕ್ಕಾಗಿ ಸಂತತಿ ಪ್ರತಿಬಂಧದ ವರೆಗೆ ಬಂದು ಮುಟ್ಟಿದ್ದೆವಷ್ಟೆ. ಈ ಸಲ ಸಂತತಿ ಪ್ರತಿಬಂಧದ ವಿಷಯ ಸ್ವಲ್ಪ ಹರಟೆ ಹೊಡೆದು ಮುಂದೆ ಸಾಗಬೇಕೆಂದು ಯೋಚಿಸಿದ್ದೇನೆ.

ಸಂತತಿಯನ್ನು ಕಂಟ್ರೋಲ ಇಟ್ಟುಕೊಳ್ಳಬೇಕೆಂದು ಸ್ತ್ರೀ ಪುರುಷರೆಲ್ಲರೂ ನಿರ್ವಿವಾದವಾಗಿ ಒಪ್ಪುತ್ತಾರೆಂಬುದಕ್ಕೆ ನಮ್ಮ ವಾರ ಪತ್ರಿಕೆಗಳಲ್ಲಿ ಆ ವಿಷಯ ಸಾಲುಸಾಲಾಗಿ ಬರುತ್ತಿರುವ ಪ್ರಕಟಣೆಗಳೇ ಸಾಕ್ಷಿ. ಈ ಪ್ರಕಟಣೆಗಳಿಗೆ ಸಾಕಷ್ಟು ಉತ್ತೇಜನ ಬಾರದಿದ್ದರೆ ಅವುಗಳು ವಾರವಾರಕ್ಕೆ ಮುಂದುವರಿಯಲಾರದಷ್ಟೆ. ಉದಾಹರಣೆಗಾಗಿ ನಮ್ಮ ಪ್ರಜಾಮತದ ಒಂದು ಪ್ರತಿಯನ್ನು ತೆಗೆದುಕೊಂಡು ಜಾಹೀರಾತುಗಳನ್ನು ಓದುತ್ತಾ ಹೋಗಿರಿ. ಬಹಿರಂಗವಾಗಿ ಬರ್ಥಕಂಟ್ರೋಲದ ಪ್ರಯೋಗಗಳು ಸಾಕಷ್ಟಿವೆ. ಸ್ತ್ರೀಯರು ಹೆತ್ತು ಸೋತಿದ್ದರೆ ಅಥವಾ ಸಾಕಷ್ಟು ಆರೋಗ್ಯವಂತರಾಗಿಲ್ಲದಿದ್ದರೆ ಅವರ ಆರೋಗ್ಯವನ್ನು ಕಾಪಾಡಲಿಕ್ಕಾಗಿ ಮಾತ್ರೆಗಳಿವೆ. ಅವುಗಳನ್ನು ಸೇವಿಸುವ ಕ್ರಮ ಮತ್ತು ಅದರಿಂದ ಏನೊಂದೂ ದೇಹಕ್ಕೆ ಅಪಾಯವಿಲ್ಲವೆಂಬ ಭರವಸೆ ಬೇರೆಯಿದೆ ಇನ್ನು ಪ್ರಕೃತಿಯು ಮರೆತುಬಿಟ್ಟರೆ 'ಮುಟ್ಟುನಿಂತರೆ' ಸ್ತ್ರೀಯರು ಅಷ್ಟೊಂದು ಗಾಬರಿಯಾಗತಕ್ಕದ್ದೇನೂ ಇಲ್ಲ. ಯಾವ ಕಾರಣದಿಂದ ಮುಟ್ಟು ನಿಂತಿರಲಿ, ಎಷ್ಟೇ ತಿಂಗಳು ದಾಟಿರಲಿ ಚಿಂತೆಯಿಲ್ಲ ಒಂದೆರಡು ಮಾತ್ರೆಗಳಿಂದ ಎಂದಿನಂತೆ ಮುಟ್ಟಾಗುವುದು, ಅಲ್ಲದೆ ಈ ಔಷಧಿಯನ್ನು ಗರ್ಭಿಣಿಯರು ಸೇವಿಸಬಾರದು ಎಂಥ ಕಟ್ಟಾಜ್ಞೆ. ಸೇವಿಸಿದರೆ ಗರ್ಭಸ್ರಾವವಾಗುವುದು ಎಂಬ ಎಚ್ಚರಿಕೆ ಬೇರೆ. ಇದು ಸಾಲದಿದ್ದರೆ ಹೀಗೆ ಗರ್ಭಸ್ರಾವವಾದರೂ ಕೆಟ್ಟ ಪರಿಣಾಮವೇನೂ ಬರಲಾರದು ಎಂಬ ನಿರ್ಭಯದ ಮಾತು ಬೇರೆ ಇಷ್ಟೆಲ್ಲಾ ದ್ರಾವಿಡ ಪ್ರಾಣಾಯಾಮ ಮಾಡಿ ಸುತ್ತುವುದಕ್ಕಿಂತ ಸೀದಾ ಮಾರ್ಗದಲ್ಲಿ ಗರ್ಭಸ್ರಾವ ಆಗಬೇಕೆನ್ನುವ ಸ್ತ್ರೀಯರು ನಿರ್ಭಯವಾಗಿ ಈ ಮದ್ದನ್ನು ಸೇವಿಸಬಹುದೆಂದು ಏಕೆ ಹೇಳಬಾರದು? ಎಂದು ಪ್ರಶ್ನಿಸುತ್ತೀರಾ? ಅದಕ್ಕೆ ಕಾರಣವಿದೆ ಈ 'ಬರ್ಥಕಂಟ್ರೋಲ' ವೆಂಬುದು ಬಹಿರಂಗವಾಗಿ ಯಾರಿಗೂ ಬೇಡವಾಗಿದೆ. ಎಲ್ಲರೂ ಸಾಧುಸಂತರೇ. ಪ್ರಕೃತಿಯ ನಿಯಮಕ್ಕೆ ವಿರೋಧ ಮಾಡುವುದರಲ್ಲಿ ಭ್ರೂಣಹತ್ಯದಷ್ಟು ದೊಡ್ಡ ಪಾಪಕೃತ್ಯ ಇನ್ನೊಂದಿಲ್ಲವೆಂದು ಹೇಳಿ ಕಿವಿಗೆ ಹೂಡಕೊಳ್ಳುವವರೇ. ಒಳಗಿಂದೊಳಗೆ ಎಲ್ಲರಿಗೂ ಒಂದೆರಡು ಅಲ್ಲದಿದ್ದರೆ ಮೂರು ನಾಲ್ಕಕ್ಕಿಂತ ಮ... ಬೇಡವಾಗಿದೆ ಇಲ್ಲ, ಈ ಪ್ರಯೋಗಗಳು ಯಾ... ...ಯದೆ ಹೀಗೆ ಮಕ್ಕಳ ಸಂಖ್ಯೆ ಮನೆಯಲ್ಲಿ ಏರುತ್ತಾ ಹೋದರೆ ದೇವರು ಕೊಟ್ಟ ಮಕ್ಕಳು ಯಾರಿಗೆ ಬೇಡವಾಗಿದೆ? ಅದರ ಮೇಲೆ ಉಂಟು ಮಾಡಿದ ದೇವರು ಊಟ ಕೊಡಲಾರನೇ? ಎಂಬ ಸಮಾಧಾನ ಬೇರೆಯಿದೆ. ತಂದೆತಾಯಿಗಳಿಗೆ ಬೇಡವೆಂದೆನಿಸಿದ್ದರೂ ಹುಟ್ಟಿ ಬೆಳೆದು ದೊಡ್ಡವರಾದರೂ ಭಾರತದ ಮಾತೆಯ ಸೇವೆಗಾಗಿ ಅವತರಿಸಿದವರೇ ವಿನಾ ಭಾರತದ ಆಹಾರ ಸಮಸ್ಯೆಯನ್ನು ಇನ್ನಷ್ಟು ಕಠಿಣ ಸ್ಥಿತಿಗೆ ತರಬೇಕೆಂದು ಒಳನುಗ್ಗಿದವರಲ್ಲವೆನ್ನಿ. ಭಾರತವನ್ನು ಹೊರಗಿನಿಂದ ಯಾವ ರಾಷ್ಟ್ರದವರಾದರೂ ಒಳನುಗ್ಗಲಿಕ್ಕೆ ಪ್ರಯತ್ನಿಸಿದರೆ ಅವರನ್ನು ಎದುರಿಸಿ ಭಾರತಮಾತೆಯನ್ನು ಕಾಪಾಡಲಿಕ್ಕಾಗಿ ಹುಟ್ಟಿರುವ ವೀರಪುತ್ರರೋ ವೀರ ಮಹಿಳೆಯರೋ ವಿನಾ ಯಾರೂ ಅನ್ನಕ್ಕೆ ದಂಡ ಭೂಮಿಗೆ ಭಾರವಾದವರು ಯಾರೂ ನಮ್ಮಲ್ಲಿಲ್ಲ. ಆ ಮಾತು ಬೇರೆ ಭಾರತವನ್ನು ವಿಭಾಗಿಸಿ ಇನ್ನು ನಮಗೆ ಯಾವ ಕಷ್ಟಗಳೂ ಬರಲಾರವೆಂದು ನಾವು ಒಮ್ಮೆ ಕಣ್ಣಿಗೆ ಕಾಣಿಸಿದ್ದೆವು. ಪಾಕಿಸ್ತಾನದಲ್ಲಿರಬೇಕೆಂದು ನಿಶ್ಚಯಿಸಿದ್ದ ಲಕ್ಷೋಪಲಕ್ಷ ಜನರನ್ನು ಪಾಕಿಸ್ತಾನಿಗಳು ನಮ್ಮಲ್ಲಿಗೆ ಓಡಿಸಿದಿಟ್ಟರಷ್ಟೆ. ಓಡಿಬಂದು, ಒಳ ನುಗ್ಗಿದ ನಮ್ಮ ನಿರಾಶ್ರಿತ ಬಂಧುಗಳನ್ನು ನಾವು ಒಳಗೆ ಬನ್ನಿ ಎನ್ನಬೇಕಲ್ಲವೇ? ಅವರ ಊಟ ವಸತಿಯ ವ್ಯವಸ್ಥೆ ಮಾಡಲಿಲ್ಲವೇ? ಬೇಡವೆಂದರೂ ಒಳನುಗ್ಗಿದವರನ್ನು 'ಹೊರಗೆ ಹೋಗಿ" ಎನ್ನಲು ಆಗುವುದಿಲ್ಲ. ಅನ್ನ ಹಾಕದೆ ಉಪವಾಸ ಹಾಕಲಿಕ್ಕೂ ನಮಗೆ ಮನಸ್ಸು ಬರುವುದಿಲ್ಲ. ಇದು ನಮ್ಮ ಔದಾರ್ಯ. ಹಾಗೆ ನಮ್ಮ ಹತ್ತಿರ ಹೇಳದೆ ಕೇಳದೆ ಅವತರಿಸುವ ಸಂತತಿಯವರನ್ನು ನಾವು ಕಂಟ್ರೋಲ್ ಮಾಡಬೇಕೆಂದು ಎಷ್ಟು ಎಣಿಸಿದರೂ ಅದು ಆಗತಕ್ಕದ್ದೇ ಆಗುತ್ತದೆ ಆದರೂ ಇತರರ ಆಪತ್ತಿನಿಂದ ಹಣ ಸಂಪಾದಿಸಬೇಕೆಂದಿರುವ ವ್ಯಾಪಾರಿಗಳು ಮುಟ್ಟು ನಿಂತರೆ ಕಾರಣವೇನೇ ಇರಲಿ ಸಮಯ ಎಷ್ಟೇ ಆಗಿರಲಿ ಭಯ ಪಡಬೇಡಿರಿ. ಗರ್ಭಸ್ರಾವ ಆಗಬೇಕಿದ್ದರೆ ನಮಗೆ ಬರೆಯಿರಿ ಎಂದು ಬಹಿರಂಗವಾಗಿ ಹೇಳಲು ನಾಚಿ ಅಥವಾ ನಮ್ಮ ವಾರಪತ್ರಿಕೆಗಳಲ್ಲಿ ಕ್ರಮವಾಗಿ (ಅಕ್ರಮವಾಗಿ ಎನ್ನಬಹುದಿತ್ತು) ಜಾಹೀರಾತುಗಳನ್ನು ಕೊಡುತ್ತಿದ್ದಾರೆ. ಸಾವಿರಾರು ಸ್ತ್ರೀಯರು ಈ ಔಷಧಿಗಳನ್ನು ತರಿಸುತ್ತಿದ್ದಾರೆ. ಪರಿಣಾಮವಾಗಿ ರೋಗ ಹಿಡಿದು ಸಾಯುತ್ತಿದ್ದಾರೆ

ನಾನು ಪ್ರಜಾಮತವನ್ನು ಒಂದೇ ಹೇಳಿದೆನೆಂದು ಯಾರೂ ಯೋಚಿಸಲಾರರಷ್ಟೆ. ನಾನು ಇದನ್ನು ಬರೆಯುತ್ತಿದ್ದಾಗ ನನ್ನ ಮೇಜಿನ ಮೇಲೆ ಪಾಪ ಆ ಪ್ರಜಾಮತ ಇತ್ತು ಅದನ್ನೇ ಉದಾಹರಣೆಗೆ ಕೊಟ್ಟೆನಷ್ಟೆ. ಇಂತಹ ಜಾಹೀರಾತುಗಳನ್ನು ಹಾಕುವುದು ಧರ್ಮವಲ್ಲವೆಂದು ಎಣಿಸುವ ಪುಣ್ಯಾತ್ಮ ಪತ್ರಿಕೆಗಳು ನಮ್ಮಲ್ಲಿ ಇಲ್ಲವೆನ್ನಿ ಪ್ರಜಾಮತ ಸಾಮಾನ್ಯ ಎಲ್ಲರೂ ಓದುವ ಪತ್ರಿಕೆಯಾದುದರಿಂದ ಇದರಲ್ಲಿ ಈ ರೀತಿಯ ಜಾಹೀರಾತು ಜಾಸ್ತಿ ಇರಲಿಕ್ಕೆ ಕಾರಣ ಇಂಗ್ಲಿಷಿನಲ್ಲಿ ಸಂಡೇ ಟೈಮ್ಸ್ ಇದೆಯಲ್ಲವೆ? ಮುಂದಿನ ಕವರಿನಿಂದ ಕಡೇ ಕವರಿನ ವರೆಗೆ ಪ್ರಕೃತಿ ಮರೆತುಬಿಟ್ಟರೆ ಏನು ಮಾಡಬೇಕೆಂಬ ಜಾಹೀರಾತುಗಳನ್ನು ಒಮ್ಮೆ ಕೂಡಿಸಿ ನೋಡಿರಿ. ಭಯಂಕರವಿದೆ. ಈ ರೀತಿಯ ಜಾಹೀರಾತುಗಳನ್ನು ಪತ್ರಿಕೆಗಳು ಪ್ರಕಟಿಸುವುದು ಅಕ್ರಮವೆಂದು ನಾನೆನ್ನುವುದಿಲ್ಲ. ನಮ್ಮ ದಯಾಳು ಸರಕಾರವಿದೆಯಲ್ಲವೇ? ಅದು ಅಕ್ರಮವೆಂದು ಹೇಳುವಷ್ಟು ಕಾಲ ಏಕೆ ಪ್ರಕಟಿಸಬಾರದು?

ಸಂತತಿಯನ್ನು ಕಂಟ್ರೋಲಲ್ಲಿಟ್ಟುಕೊಳ್ಳಬೇಕೆಂದು ಎಲ್ಲರಿಗೂ ಗೊತ್ತಿದೆ. ಹೇಗೆಂಬುದೇ ಎಲ್ಲರ ಪ್ರಶ್ನೆ ಪ್ರಕೃತಿ ಎಂದೂ ಮರೆಯುವುದಿಲ್ಲ. ಅದು ನಿಯಮದಂತೆ ನಡೆಯುತ್ತದೆ. ಹಾಲಿಗೆ ಹೆಪ್ಪು ಹಾಕಿದರೆ ಮೊಸರಾಗುವದು. ಇದನ್ನು ಪ್ರಕೃತಿಯು ಎಂದೂ ಮರೆಯುವುದಿಲ್ಲ. ಬಿತ್ತಿದ ಬೀಜವು ಮೊಳೆಯುವುದು. ಫಲವತ್ತಾದ ಭೂಮಿಯಲ್ಲಿ ಬೀಜ ನಟ್ಟು ಅದು ಮೊಳಕೆ ಬಂದರೆ ಪ್ರಕೃತಿಯು ಮರೆತಿದೆ ಎಂದು ಮರುಗುವ ಕೃಷಿಕನನ್ನು ಏನೆನ್ನಬೇಕು, ತೋಟದಲ್ಲಿ ತೆಂಗಿನ ಮರವು ಕ್ರಮವಾಗಿ ಫಲ ಕೊಡುತ್ತದೆ ನೀರು ಹಾಕದೆ ಗುಡ್ಡೆಯಲ್ಲಿ ನೆಟ್ಟ ಮರದಲ್ಲಿಯೂ ಫಲಬರುತ್ತದೆ ಫಲಬಾರದ ಮರವು ರೋಗ ಹಿಡಿದದ್ದಾಗಿರಬೇಕೆಂದು ಸ್ಪಷ್ಟವಲ್ಲವೇ? ಹೀಗಿರಲು ಆರೋಗ್ಯದಿಂದಿರುವ ಸ್ತ್ರೀಯರು ಗರ್ಭವತಿಯರಾಗದಂತೆ ಔಷಧಿ ತೆಗೆದುಕೊಳ್ಳಲು ಸಾಧ್ಯವಿಲ್ಲವೆಂದು ಯಾರಿಗೆ ತಿಳಿಯದು? ತೆಂಗಿನ ಮರವು ಕಾಲಕಾಲಕ್ಕೆ ಫಲಬಿಡದಂತೆ ಮಾಡಬೇಕಿದ್ದರೆ ಅದಕ್ಕೆ ಕೊಡಬೇಕಾದ್ದು ಔಷಧಿಯಲ್ಲ ವಿಷ ಫಲಬಿಡದಂತೆ ಮಾಡುವ ಪ್ರಯೋಗದಿಂದ ಮರವೇ ಕ್ರಮೇಣ ನಾಶಹೊಂದುವುದೆಂದು ನನ್ನಂತಹ ಪೆದ್ದನಿಗೂ ಅರ್ಥವಾದೀತು.

ಅವರೆ ಬುದ್ಧಿವಂತನಾದ ಮನುಷ್ಯನು ಪ್ರಕೃತಿಯ ಅನೇಕ ಪರಿಣಾಮಗಳನ್ನು ತಪ್ಪಿಸಿಕೊಂಡಿರುವನು. ಮಳೆ ಬಿಸಿಲಿನ ಬಾಧೆಯನ್ನು ತಪ್ಪಿಸಲಿಕ್ಕಾಗಿ ಮನೆಕಟ್ಟಿಕೊಂಡಿರುವನು ತನ್ನನ್ನು ತಿನ್ನಲೆತ್ನಿಸುವ ಮೃಗಗಳನ್ನು ಆಯುಧಗಳಿಂದ ಹೊಡೆದು ಕೊಲ್ಲಲೆತ್ನಿಸುವನು. ಅಪಕ್ವವಾದ ಕಾಯಿಗಳನ್ನು ತಿಂದರೆ ಅಜೀರ್ಣವಾಗದಂತೆ ಅವುಗಳನ್ನ ತಿನ್ನಲಿಕ್ಕೆ ಕಲಿತಿರುವನು. ಮುಂದೆ ಸಾಗಿ ಈಗ ಆಕಾಶದಲ್ಲಿ ಹಾರಾಡುವ, ಸಮುದ್ರಗಳಲ್ಲಿ ಈಜಾಡುವ ಅಸಾಧ್ಯ ವಿದ್ಯೆಗಳನನ್ನು ಕಲಿತಿರುವನೆನ್ನಿ ಹಾಗೆಯೇ ಸ್ವಾಭಾವಿಕವಾಗಿ ನಡೆಯುತ್ತಿರುವ ಸಂತತಿಯನ್ನು ಹತೋಟಿಯಲ್ಲಿಟ್ಟುಕೊಳ್ಳಲಿಕ್ಕೂ ಕೆಲವು ಸಾಧನಗಳನ್ನು ಕಂಡು ಹುಡುಕಿರುವನು. ಆ ವಿಷಯದಲ್ಲಿ ಇನ್ನೂ ಶೋಧಗಳನ್ನು ನಡೆಯಿಸುತ್ತಾ ಇದ್ದಾನೆ. ಈ ಶೋಧಗಳನ್ನು ಅರಿತು ಅವುಗಳ ಪ್ರಯೋಜನವನ್ನು ಹೊಂದಬೇಕು. ಸ್ವಭಾವಕ್ಕೆ ತಕ್ಕ ಪರಿಣಾಮಗಳಾಗದಂತೆ ತಪ್ಪಿಸಿಕೊಳ್ಳಲೆತ್ನಿಸಬೇಕು ವಿನಾ ನಾವು ಪ್ರಕೃತಿಯೊಂದಿಗೆ ಯುದ್ಧಮಾಡಿಗೆಲ್ಲಲಾರೆವು. ವಾಯುವಿಮಾನದಿಂದ ಕೆಳಗೆ ಹಾರಬೇಕೆಂದಿರುವವನು ಕೆಳಗೆ ಬರುವ ವೇಗವನ್ನು ಕಡಿಮೆ ಮಾಡಲಿಕ್ಕಾಗಿ ಪೆರಚೂಟು ಎಂಬ ವಿಮಾನ ಕೊಡೆಯನ್ನು ಹಿಡಕೊಂಡು ಕೆಳಗೆ ಇಳಿಯಬೇಕಲ್ಲದೆ ಬೇರೆಯಾವ ಉಪಾಯವಿರಲಾರದು. ಪ್ರಕೃತಿಯು ನಿಯಮದಂತೆ ನಡೆಯುತ್ತಲೇ ಇದೆ. ವಿಮಾನ ಕೊಡೆಯಿಲ್ಲದೆ ಹಾರುವವನು ಕೆಳಗೆಬಿದ್ದು ಧ್ವಂಸ ಆಗಲೇ ಬೇಕು. ವಿಜ್ಞಾನಿಯು ಕಂಡು ಹುಡುಕಿರುವ ಸಾಧನೆಗಳು ಜನಸಾಮಾನ್ಯರಿಗೆ ಸಿಗುವಂತೆ ಮಾಡುವುದು ಯಾರ ಕೆಲಸ? ಸಂಶೋಧವರು ವಿಮಾನಗೊಡೆಯಿಲ್ಲದೆಯೇ ಕೆಳಗೆ ಹಾರಬಹುದೆಂದು ಒಬ್ಬನು ಪ್ರಕಟಿಸಿದರೆ ಅದನ್ನು ಪ್ರತಿಬಂಧಿಸುವುದೂ ಸರಕಾರದ ಕೆಲಸ.

ಈ ವಿಷಯ ಇನ್ನೂ ಸ್ವಲ್ಪ ಹೇಳ ಬೇಕೆಂದಿದ್ದೆ. ಮ್ಯಾನೇಜರನ್ನು ಬಂದು ನಿಂತಿದ್ದಾರೆ ಈಗಲೇ ಬರೆದುದನ್ನು ಪೋಸ್ಟಲ್ಲಿ ಹಾಕದಿದ್ದರೆ ಬರುವ ಗುರುವಾರದದು ನಿಮಗೆ ಸಿಗಲಾರದು. ಕ್ಷಮಿಸಿರಿ. ದೇವರು ನಡೆಸಿದರೆ ಬರುವ ವಾರದಲ್ಲಿ ನೋಡುವ ನಮಸ್ಕಾರ.

ಪ್ರೀತಿಯ...

ಉಡುಪಿಗೆ ಹೋಗಬೇಕು! ಆದರೆ ಉಳಿದುಕೊಳ್ಳುವುದೆಲ್ಲಿ?

ರಾಯಲ್ ಮಹಾಲಿನಲ್ಲಿ

ಬಸ್ ಸ್ಟೇಂಡಿಗೆ ಅತಿ ಸಮೀಪ! ಕೃಷ್ಣಮಠಕ್ಕೆ ದೂರವಿಲ್ಲ!

ವ್ಯಾಪಾರವ್ಯವಹಾರ ವಿಹಾರಸ್ಥಳಗಳಿಗೆಲ್ಲ ಕೇಂದ್ರ!

ನಿಮ್ಮ ಸ್ನಾನ, ಊಟ, ಉಪಹಾರ, ಬ್ಯೆರಕ್, ಶಯನ ಇವಕ್ಕೆಲ್ಲ ಉತ್ತಮ ವ್ಯವಸ್ಥೆ

ಕರೆದರೆ ಓಗೊಡುವ ನೌಕರರ ವರ್ಗ!

ಮೇಲಾಗಿ ಉಡುಪಿ ಬ್ರಾಹ್ಮಣರ ಅಡಿಗೆ, ತಿಂಡಿತಿನಸು, ಇವುಗಳ ರುಚಿರುಚಿ ಹೇಳಬೇಕೆ?

ಪ್ರೊಪ್ರಯಿಟರ್:— ಕೆ. ವೆಂಕಟ್ರಮಣಭಟ್.

For up-to-date Lodging & Boarding

ROYAL MAHAL,

UDIPI. S. Kanara.

— ಮಕ್ಕಳನ್ನು ಹಡೆಯುವುದು ಸಾಕು —

ಅಶಕ್ತ ಸ್ತ್ರೀಯರಿಗೆ **ಬರ್ಥ ಕಂಟ್ರೋಲ** ರೋಗ ಗ್ರಸ್ತ ಹೆಣ್ಣು ಮಕ್ಕಳಿಗೆ

ಏಳು ದಿವಸ ಈ ಮಾತ್ರೆಗಳನ್ನು ಸೇವನ ಮಾಡಿದರೆ ಮುಂದೆ ಖಂಡಿತವಾಗಿ ಮಕ್ಕಳಾಗುವದಿಲ್ಲ ಸ್ತ್ರೀಯರು ಪ್ರತಿತಿಂಗಳು ಸರಿಯಾಗಿ ಮುಟ್ಟಾಗುತ್ತಾರೆ ಅಲ್ಲದೆ ಸ್ತ್ರೀಯರ ಬಿಳೇರಗು, ಪ್ರದರರೋಗ, ಹೊಟ್ಟೆಕುಟ್ಟು ಗುಣವಾಗಿ ಸ್ತ್ರೀಯು ಗರ್ಭಿಣಿಯಾಗುವದಿಲ್ಲ ಈ ಔಷಧವನ್ನು ಸೇವಿಸುವ ಕ್ರಮ. ಪ್ರತಿದಿವಸ ಮುಂಜಾನೆ ೧ಗುಳಿಗೆ ಮಧ್ಯಾಹ್ನಕ್ಕೆ ೧ಗುಳಿಗೆ, ಸಂಜೆಗೆ ೧ಗುಳಿಗೆಯಂತೆ ಊಟದ ಮೊದಲು ತಕ್ಕೊಳ್ಳಬೇಕು ಏಳುದಿವಸ ಈ ಔಷಧವನ್ನು ಬಿಸಿನೀರಿನಲ್ಲಿ ಸೇವಿಸಬೇಕು.

ಪಥ್ಯ:— ಹುರಿದಿರುವಲ್ಲಿ ಬಿಡಬೇಕು. ೭ ದಿವಸ ಸಂಪೂರ್ಣ ಔಷಧದ ಕಿಮ್ಮತ್ತು ರೂಪಾಯಿ 5—0—0 ಪೋಸ್ಟ ಚಾರ್ಜ ೧೨ ಆಣೆ

ಮಾಲಕರು:— ಹಾಲಪ್ಪ ಫಕೀರಪ್ಪ ದಾವಣಗೇರಿ

ಆಯುರ್ವೇದ ಔಷಧಾಲಯ ಗದಗ-ಸಿಟಿ.

ಏಜಂಟರು:— ... ... ದಾವಣಗೇರಿ ... ... ನಂಜುಂಡೇಶ್ವರ ಮೆಡಿಕಲ್ ಹಾಲ ದಾವಣಗೇರಿ

ದಾವಣಗೇರಿ:— ದಾವಣಗೇರಿ ಪ್ರೆಸ್ ... ಕೆಮಿಸ್ಟ್, ಹಾವೇರಿ, ಬ್ಯಾಡಗಿ

ಲಕ್ಷ್ಮೀ

ಸೆಂಟಾಲ್ ಮಾತ್ರೆ

ಇದರ ಉಪಯೋಗದಿಂದ ಬಹುಕಾಲದ ಮೇಹ, ಪ್ರಮೇಹ, ಮೂತ್ರದ ಉರಿ, ಮೂತ್ರ ಕೃಚ್ಛ್ರ, ಮೂತ್ರದೊಡನೆ ಯಾವುದಾಗಿ ಬಿಳುಪು, ಅರಿಸಿನ, ಕೆಂಪು ವರ್ಣಗಳಲ್ಲಿ ಕೀವು ಹೋಗುವುದು, ತೊಡೆ ಸಂದಿನಲ್ಲಿ ನೋವು, ಕಾಲು ಗಂಟುಗಳಲ್ಲಿ ವೇದನೆ, ಕಣ್ಣಿನಲ್ಲಿ ಕೀವು ಬರುವುದು, ಶರೀರದಲ್ಲಿ ಉಷ್ಣತೆ, ಸ್ವಪ್ನಸ್ಖಲನ ಇವೆಲ್ಲಾ ಖಾತ್ರಿಯಾಗಿ ಗುಣಹೊಂದುವುದು

ಡಬ್ಬಿ ಒಂದಕ್ಕೆ ರೂ. ೨—೦—೦

ಏಜಂಟ್:—

ಬಿ ಕಂಪೆನಿ ಮಂಗಳೂರು

ತಾರೀಕು 1-3-51 ರಿಂದ **ವಾರದ ಭವಿಷ್ಯ** ತಾರೀಕು 7-3-51ರ ವರೆಗೆ

ಮೇಷ— ಈ ವಾರವು ನಿಮ್ಮ ಭಾಗಕ್ಕೆ ಅತ್ಯುತ್ತಮವಿರುವದು. ವಿದ್ಯೋದ್ಯೋಗಿಗಳಿಗೂ ಕೂಡ ದಿನಗಳು ಸುಖಮಯವಾಗುವವು ಆರ್ಥಿಕ ಪರಿಸ್ಥಿತಿಯು ಬಹಳಮಟ್ಟಿಗೆ ಸುಧಾರಿಸಲಿದೆ, ಪ್ರತಿಯೊಂದು ಕಾರ್ಯದಲ್ಲೂ ವಿಜಯವು ನಿಮ್ಮ ಪಾಲಿಗೆ ಲಭಿಸುವದು. ಕೆಲವೊಮ್ಮೆ ಪಿತ್ಥದೋಷದಿಂದಾಗಿ ದೇಹದಲ್ಲಿ ಅನಾರೋಗ್ಯ ತೋರಿದರೂ ವಾರಾಂತ್ಯದ 4 ದಿನಗಳು ಸುಖದಾಯಿಗಳಿವೆ.

ವೃಷಭ—ಅಲ್ಪ ಶ್ರಮದಿಂದ ಅಧಿಕ ಫಲವನ್ನು ಪಡೆವಿರಿ. ಜನತೆಯ ಬೆಂಬಲ ಆಪ್ತೇಷ್ಟರ ಸಹಕಾರಗಳಿಂದ ಕೂಡಿದ ನಿಮಗೆ ಸರ್ವತ್ರ ಗೌರವಾದರಗಳು ಲಭಿಸುವವು. ಶತ್ರುವರ್ಗದವರು ಮಿತ್ರರಾಗುವರು. ಗೃಹಕೃತ್ಯ ಸಂಬಂಧವಾದ ಕೆಲವೊಂದು ವಿಚಾರಗಳು ನಿಮ್ಮ ಮನೋನೆಮ್ಮದಿಗೆ ಭಂಗವುಂಟುಮಾಡಲಿವೆ. ತಾ. 1, 6, 7 ಅತ್ಯುತ್ತಮವಿವೆ.

ಮಿಥುನ—ದೈವವು ಒಹಳ ದುರ್ಬಲವಿರುವದು. ಮನಃಶಾಂತಿಗೆ ಕಲಹವಾಗಲಿದೆ. ಲೇವಾದೇವಿ ನಿಮಿತ್ತವಾಗಿ ಕೋರ್ಟಿನ ಮನೆಗೆ ತಿರುಗುವ ಪ್ರಸಂಗ ಬರಬಹುದು. ವಿರೋಧಿಗಳ ಉಪಟಳದಿಂದಾಗಿ ನಿಮ್ಮ ಹೆಚ್ಚಿನ ಕಾರ್ಯಕಲಾಪಗಳು ಅರ್ಧದಲ್ಲೇ ಕೈಬಿಡುವಂತಾದರೂ, ಸುಂಗುರುಗಳ ಅನುಗ್ರಹದಿಂದ ವಾರಾದಿಯ 3 ದಿನಗಳಲ್ಲಿ ವಿಜಯಿಗಳಾಗುವಿರಿ.

ಕರ್ಕಾಟಕ— ಸುಖದುಃಖಗಳೂ ಲಾಭನಷ್ಟಗಳೂ ಮಿಶ್ರವಾಗಿರುವವು. ಪ್ರಬಲರಾದ ವಿರೋಧಿಗಳನ್ನೂ ಎದುರಿಸುವ ಆತ್ಮಶಕ್ತಿಯುಳ್ಳ ನಿಮಗೆ ಆಕಸ್ಮಿಕ ಧನಪ್ರಾಪ್ತಿಯುಂಟಾಗುವದು, ದುಡಿಮೆಗಿಂತ ಅಧಿಕವಾದ ಫಲಪ್ರಾಪ್ತಿಯಿದ್ದರೂ ಪರ್ಯಟನ ಸ್ವದೇಹಅನಾರೋಗ್ಯ ನಿಮಿತ್ತ ಹೆಚ್ಚಿನ ಧನವ್ಯಯವಾದೀತು. ತಾ. 2, 3, 4, 5, ಈ ದಿನಗಳಲ್ಲಿ ಸುಖಮಯ ನ ನಿಜಯಗಳು ಲಭಿಸಲಿವೆ.

ಸಿಂಹ—ಶನಿಕುಜರು ವಿಶೇಷತಃ ಅನಿಷ್ಟಸ್ಥಾನಗತರಾಗಿರುವುದರಿಂದ ಎಷ್ಟು ದುಡಿದರೂ ಕೈಯಲ್ಲಿ ಕಾಸುಳಿಯದು. ಶತ್ರುಗಳು ನಾನಾ ತೆರದಿಂದ ಪೀಡಿಸುವರು, ದೇಹಾಲಸ್ಯ ಪ್ರವಾಸಗಳು ಮೇಲಿಂದ ಮೇಲೆ ಸಂಭವಿಸುತ್ತಿದ್ದರೂ ಗುರ್ವನುಗ್ರಹವನ್ನು ಪಡೆದ ನಿಮಗೆ ವಾರಾಂತ್ಯದ 4 ದಿನಗಳಲ್ಲಿ ಇಷ್ಟಸಿದ್ಧಿ ವಿಜಯ ಮನಶ್ಶಾಂತಿ ಲಭಿಸೀತು.

ಕನ್ಯಾ—ಗೃಹಕೃತ್ಯದ ಪರಿಸ್ಥಿತಿಯು ಚೆನ್ನಾಗಿರದು ಅನುದಿನವು ಕಲಹ ತಪ್ಪಲಾರದು. ಆಹಾರ ದೋಷದಿಂದಾಗಿ ಆರೋಗ್ಯವು ಕೆಡುವುದು. ಮಾತ್ರವಲ್ಲ ಮನಸ್ಸಿಗೂ ನೆಮ್ಮದಿಯಿರದು. ಉದ್ಯಮಿಗಳಿಗೆ ಪ್ರಮುಖ್ಯಚಿತವಾದ ಫಲವಿದೆಯಾದರೂ ಖರ್ಚು ಹೆಚ್ಚುವುದರಿಂದ ಹಣದ ಬಿಕ್ಕಟ್ಟಿಗೆ ಸಿಲುಕುವಿರಿ. ತಾ. 1, 6, 7 ಇತರ ದಿನಗಳಿಗಿಂತ ಉತ್ತಮ.

ತುಲಾ—ಕಷ್ಟಸಾಧ್ಯವಾದ ಕಾರ್ಯವನ್ನು ಕೂಡಾ ಅನಾಯಾಸದಿಂದ ಪೂರೈಸುವಿರಿ. ಆಪ್ತೇಷ್ಟರು ಗುರುಹಿರಿಯರು ಇವರ ಬೆಂಬಲವುಳ್ಳ ನಿಮಗೆ ಸಾಮಾಜಿಕ ರಾಜಕೀಯ ಕ್ಷೇತ್ರಗಳಲ್ಲಿ ವಿಜಯವಿದೆ, ಆದರೆ ಸಾಂಸಾರಿಕ ಪರಿಸ್ಥಿತಿಯು ಉತ್ತಮವಿಲ್ಲದ್ದರಿಂದಲೂ ಅನಿರೀಕ್ಷಿತ ಅನರ್ಥಗಳೊದಗುವದರಿಂದಲೂ ತಾ 1, 4, 5, 6, 7 ಈ ದಿನಗಳು ಕಷ್ಟದಾಯಿಗಳಾದಾವು.

ವೃಶ್ಚಿಕ— ಕಳೆದ ದಿನಗಳಿಗಿಂತ ಈ ವಾರವು ನಿಮ್ಮ ಭಾಗಕ್ಕೆ ಉತ್ತಮವಿದೆ ನೌಕರಿ ವ್ಯಾಪಾರ ಮೊದಲಾದವುಗಳಲ್ಲಿ ಅಧಿಕವಾದ ಫಲಪ್ರಾಪ್ತಿಯಿದೆ. ಬಂಧುವರ್ಗದವರಿಂದ ಅನಿಷ್ಟಗಳೊದಗಬಹುದಾದರೂ ಧೈರ್ಯದಿಂದ ಪಾರುಗಾಣುವ ಎದೆಗಾರಿಕೆಯು ನಿಮ್ಮಲ್ಲಿರುವುದು ಖರ್ಚಿಗೆ ತಕ್ಕ ಉತ್ಪತ್ತಿಯಿರುವುದು. ತಾ. 2, 3, 6, 7 ಈ ದಿನಗಳಲ್ಲಿ ಧನವಂತರಿಗೆ ಧಕ್ಕೆ ಆಪ್ತಜನರಲ್ಲಿ ವಿರೋಧವುಂಟಾದೀತು.

ಧನು—ನಿಮ್ಮ ಮನೋರಥವು ಈಡೇರದು. ಕುಜನರ ಸಂಸರ್ಗದಿಂದಾಗಿ ನಷ್ಟಕಷ್ಟಗಳನ್ನನುಭವಿಸುವಿರಿ. ಮನೋದೌರ್ಬಲ್ಯದಿಂದಾಗಿ ಹಿಡಿದ ಕಾರ್ಯವನ್ನು ಕೊನೆಗೊಳಿಸುವ ಶಕ್ತಿಯಿಲ್ಲದೆ ಅರ್ಧದಲ್ಲಿ ಕೈಬಿಟ್ಟು ನಷ್ಟಕ್ಕೆ ಗುರಿಯಾದೀರಿ ಉದ್ಯೋಗಿಗಳಿಗೆ ಸ್ಥಾನಚಲನೆಯ ಯೋಗವಿದೆ ವಾತಕಫದೋಷದಿಂದಾಗಿ ಆರೋಗ್ಯ ಕೆಡಲಿದೆ. ತಾ 2, 3, 6, 7 ಇದ್ದುದರಲ್ಲಿ ಉತ್ತಮವಿದೆ.

ಮಕರ—ದೈವಬಲದಿಂದಾಗಿ ನಿಮ್ಮ ಕಾರ್ಯ ಕಲಾಪಗಳು ನಿರರ್ಗಲವಾಗಿ ಮುಂದೆ ಸಾಗುವವು. ಸಂಕಲ್ಪವು ಕಿಂಚಿತ್ತೂ ವ್ಯರ್ಥವಾಗದು. ಹಲವಾರು ವಿಧದಿಂದ ಧನಾಗಮವಾಗಲಿದೆ. ನಿಮ್ಮ ಧೈರ್ಯ ಸ್ಥೈರ್ಯಗಳಿಗೆ ಬೆದರಿದ ಶತ್ರುಗಳು ಶರಣು ಬರುವರು. ತಾ 2, 3, 6, 7ರಲ್ಲಿ ನೇತ್ರಪೀಡೆ ವಿಶ್ವಾಸಿಗರಿಂದ ವಂಚನೆಯೂ ನಡೆವ ಸಂಭವವಿದೆ.

ಕುಂಭ— ಕ್ಷಣಕಾಲ ನಿಂತಲ್ಲಿ ನಿಲ್ಲಲು ನಿಮಗೆ ಅವಕಾಶವಿರದು. ಆರ್ಥಿಕ ಮುಗ್ಗಟ್ಟು ಬಹುವಾಗಿ ಪೀಡಿಸಲಿದೆ. ಚಿಕಿತ್ಸೋಪೇಕ್ಷ ವಿಕಾರದಿಂದಾಗಿ ದೇಹದಾರೋಗ್ಯವು ಕೆಡುವುದು. ಗೃಹಶಾಪತ್ರಯಗಳು ಸುತ್ತಲಿಂದಲೂ ಪೀಡಿಸಲಿವೆ. ಆದರೂ ಕುಟುಂಬಿಕರ ಸಹಕಾರವು ಚೆನ್ನಾಗಿರುವುದರಿಂದ ದಿನಯಾಪನೆಯು ಸುಗಮವಾಗುವದು. ತಾ. 4, 5 ಒಳ್ಳೆಯದಲ್ಲ.

ಮೀನ—ಶುಕ್ರಾಚಾರ್ಯರನ್ನು ಹೊರತು ಮಿಕ್ಕೆಲ್ಲಾ ಗ್ರಹರೂ ಪ್ರತಿಕೂಲರಾಗಿರುವರು. ನಿಮ್ಮ ದುಡಿಮೆಯ 3 ಪಾಲು ಖರ್ಚಾಗಿಸುವವು. ಯಾವ ಕಾರ್ಯದಲ್ಲೂ ಉತ್ಪತ್ತಿಗಿಂತ ಖರ್ಚು ಅಧಿಕವಾಗಲಿದೆ. ಪ್ರಯಾಣದಲ್ಲಿ ಹೆಚ್ಚಿನ ನಷ್ಟಕಷ್ಟಗಳು ಪ್ರಾಪ್ತವಾಗುವ ಯೋಗವಿರುವುದರಿಂದ ಅಂಥವುಗಳನ್ನು ಕೈಬಿಡುವದೊಳ್ಳಿತು. ದೇಹ ಮನಸ್ಸುಗಳಿಗೆ ಎಳ್ಳಷ್ಟೂ ಸುಖಶಾಂತಿಯೆಂಬುದಿಲ್ಲವು. ಆದರೂ ತಾ. 2, 3, 4, 5 ಈ ದಿನಗಳಲ್ಲಿ ಸೋದರವರ್ಗದವರ ಬೆಂಬಲವನ್ನು ಪಡೆದು ಕಿಂಚಿತ್ಸುಖಿಗಳಾಗುವಿರಿ.

ಪ್ರಕಟಣೆ

ನವಯುಗದ ತಾ. 22-2-1951ನೇ ಸಂಚಿಕೆಯ 11ನೇ ಪುಟದಲ್ಲಿ ನನ್ನ ತಮ್ಮ ವಾಮನ ನಾಯ್ಕನು ಜ್ಯಾಹೀರು ಮಾಡಿದ ಪ್ರಕಟಣೆಯ ಮತಲಬುಗಳು ತೀರಾ ಸುಳ್ಳು ಮತ್ತು ದ್ವೇಷ ವ ಕಲಹಕರದ್ದು. ನನ್ನ ವ ಆವನ ಒಳಗೆ ಈಗ ಕನ್ನಿಯಲ್ಲಿ ಬಾಕಿ ಇರುವ ವ್ಯವಹರಣೆಯ ದೆಸೆಯಿಂದ ಆವನು ಸದ್ರಿ ಪ್ರಕಟಣೆಯನ್ನು ಜ್ಯಾಹೀರು ಮಾಡಿದ್ದಾಗಿರುತ್ತದೆ, ಸದ್ರಿ ವಾಮನ ನಾಯ್ಕನು ನನ್ನ ವಗೈರೆಯುರ ಮೇಲೆ ಮಾಡಿದ ಉಡುಪಿ ದಿ. ಮು. ಕೋರ್ಟಿನ O. S. ನಂಬ್ರ 350/1942ನೇ ವ್ಯಾಜ್ಯದಲ್ಲಿ ತಾ. 7-10-1942 ರಲ್ಲಿ ಆದ ಡಿಕ್ರಿ ಪ್ರಕಾರ ನನ್ನ ಹಿಸೆಗೆ ವಿಂಗಡ್ಸಿದ ಆಸ್ತಿಗಳು ಮತ್ತು ಕೆಲವು ಚರಸೊತ್ತುಗಳು ವಗೈರೆಗಳ ಕುಂತು ನನ್ನ ಕಾಲದ ನಂತರ ಆಗತಕ್ಕ ವಿಲೆವಾರಿಗಳನ್ನು ನಾನು ಸೌಖ್ಯದಲ್ಲಿಯೂ ಸ್ವಸ್ಥಚಿತ್ತದಲ್ಲಿಯೂ ಇರುವ ಸಮಯದಲ್ಲಿಯೇ ಮಾಡಿಇಡಬೇಕೆಂತ ನನಗೆ ಕಂಡು ಬಂದುದರಿಂದ ನನ್ನ ಸಂಪೂರ್ಣ ಹಕ್ಕಿನದ್ದಾಗಿರುವ ಸದ್ರಿ ಸ್ಥಿರಾಸ್ತಿಗಳು ವಗೈರೆ ಸಹಾ ನಾನು ಕಾಲವಾದ ಕೂಡಲೆ ನನ್ನ ಖಾಸಾ ತಮ್ಮ ,ಮುತ್ತಯ್ಯನಿಗೆ ಸಿಗಬೇಕೆಂತ ನನ್ನ ಮನೋಗತದಂತೆ ತಾ. 19-2-1951ನೆ ರಿಜಿಸ್ಟ್ರಿ ವೀಲು ಬರೆದಿರುವೆನು. ನಾನು ವಿಲೆವಾರಿ ಮಾಡುತ್ತೇನೆ ನಾನು ಹೆಡ್ಡನು ವ ತಿಳುವಳಿಕೆ ಇಲ್ಲದವನು ಎಂಬುದು ಸರಿಯಲ್ಲ. ನನ್ನನ್ನು ಪುಸಲಾಯಿಸಿ ನಾನು ಸದ್ರಿ ವೀಲನ್ನು ಬರೆದಿಟ್ಟುದಲ್ಲ. ಸದ್ರಿ ಮುತ್ತನು ನನ್ನ ಹೆಂಡತಿ ಮಕ್ಕಳನ್ನು ಓಡಿಸಿದ್ದಾನೆಂಬುದು ನಿಜವಲ್ಲ. ಈಗ ಸುಮಾರು 13 ವರ್ಷಗಳಿಂದ ನನ್ನ ಹೆಂಡತಿ ಎಲ್ಲಿ ಇದ್ದಾಳೆ ಎಂಬುದೇ ಗೊತ್ತಿಲ್ಲ. ನನಗೆ ಮಕ್ಕಳಿಲ್ಲ. ನನ್ನ ಸದ್ರಿ ಸ್ಥಿರಾಸ್ತಿ ವಗೈರೆಗಳನ್ನು ನನ್ನ ಇಷ್ಟವಿದ್ದಂತೆ ವಿಲೆವಾರಿ ಮಾಡಲು ಯಾವ ತರದ ಆತಂಕ ವ ಅಭ್ಯಂತರವಿರುವುದಿಲ್ಲ. ಯಾ ಅಂತಾ ವಿಲೆವಾರಿಯನ್ನು ಆಕ್ಷೇಪಿಸಲು ಯಾರೂ ಆರ್ಹರಲ್ಲ.

। ಈ ಎಡಹೆಬ್ಬೆಟ್ಟು ಅಪ್ಪಣ್ಣಯ್ಯನ ರುಜು

ಕೋಳದಪೇಟೆ, ಉಡುಪಿ.
ತಾ. 23-2-1951

'ಇಂಗ್ಲಿಷ್ ಕಲಿಯಲಿಲ್ಲವಲ್ಲಾ' ಎಂದು ಚಿಂತಿಸುವವರಿಗಾಗಿ
ದಿ। ಕೊರಡ್ಕಲ್ ಶ್ರೀನಿವಾಸರಾಯರಿಂದ ಬರೆಯಲ್ಪಟ್ಟ

ಸುಲಭದಲ್ಲಿ ಇಂಗ್ಲಿಷ್

ENGLISH MADE EASY

ತಮ್ಮಷ್ಟಕ್ಕೆ ತಾವೇ ಇಂಗ್ಲಿಷ್ ಕಲಿತುಕೊಳ್ಳಲಿಕ್ಕಾಗುವ
ಆಂಗ್ಲ ಸ್ವಯಂಬೋಧಿನಿ. ಬೆಲೆ ರೂ. 1—8—0

ಮನೆಯೊಂದಾದಲ್ಲಿ ಇರಲೇ ಬೇಕಾದ ಅತ್ಯುಪಯುಕ್ತ ಪುಸ್ತಕ
ಡಾ। ಕೊರಡ್ಕಲ್ ವೆಂಕಟರಾಯರಿಂದ ಬರೆಯಲ್ಪಟ್ಟ

ಮನೆ ಮದ್ದು

HOME REMEDIES

200 ಕಾಹಿಲೆಗಳಿಗೆ 1000 ಮನೆ ಮದ್ದುಗಳನ್ನು ವಿವರಿಸುವ
ಅತ್ಯಪೂರ್ವ ನೂತನ ಗೃಹವೈದ್ಯ. ಬೆಲೆ ರೂ. 2 0 0

ದಿ। ಹೊಸಕೆರೆ ಚಿದಂಬರಯ್ಯನವರಿಂದ ಅನುವಾದಿಸಲ್ಪಟ್ಟ

ಗೀತೆಯ ಕೈಗನ್ನಡಿ

ಪ್ರತಿಯೊಬ್ಬರೂ ಅಗತ್ಯವಾಗಿ ಓದಿ ಮನನಮಾಡತಕ್ಕ
ಭಗವದ್ಗೀತೆಯ ಮೂಲ ಶ್ಲೋಕ ಮತ್ತು ಸರಳ ಕನ್ನಡ ಅನುವಾದ

400ಕ್ಕೂ ಮಿಕ್ಕಿ ಪುಟಗಳು ಬೆಲೆ: 0-12-0

ಸಿಗುವ ಮುಖ್ಯ ಸ್ಥಳಗಳು:

(1) ನವಯುಗ ಪ್ರೆಸ್, ಉಡುಪಿ,
(2) ನವಭಾರತ ಪುಸ್ತಕ ಭಂಡಾರ ಉಡುಪಿ.

(ನಮ್ಮಲ್ಲಿ ಸಿಗುವ ಪುಸ್ತಕಗಳ ಯಾದಿಗೆ ಬರೆಯಿರಿ.)

ಅಮೃತಾಂಜನ

ತಲೆನೋವು, ಶಿರೋವೇದನೆ, ಉಳುಕು
ಶುಂಠಿಗೆ, ಭುಜ ಹಲ್ಲು ವೇದನೆಗಳಿಗೂ, ಎದೆನೋವು, ಗಾಯಗಳು, ಜಾತುಕೊಳ್ಳುವುದು,
ಚೇಳವಿಷಮುಂತಾದವು, ಪಕ್ಷವಾತ, ನೆಗಡಿ,
ಮೊದಲಾದ ಎಲ್ಲಾ ರೋಗಗಳಿಗೂ ಸಿದ್ಧೌಷಧ



REGD

ಜುಳು ಕಡ್ಡಿ ಮದ್ದು ನಮ್ಮಲ್ಲಿ ಸಿಕ್ಕುತ್ತದೆ

ಅಮೃತಾಂಜನ ಲಿಮಿಟೆಡ್

ಮದರಾಸು.

ಬೊಂಬಾಯಿ ಮತ್ತು ಕಲ್ಕತ್ತ.

ಮೂಲ್ಕಿ ಬೇಂಕ್,

ಲಿಮಿಟೆಡ್, ಮೂಲ್ಕಿ.

1921ರಲ್ಲಿ ಸ್ಥಾಪಿತವಾಗಿ 29 ವರುಷಗಳಿಂದ ಊರ ಜನರ ಹಿತಕ್ಕಾಗಿ ಡಿಪೋಸಿಟ್ ಹಣಕ್ಕೆ ನ್ಯಾಯವಾದ ಬಡ್ಡಿಯಿಂದಲೂ, ಸಾಲದ ಹಣಕ್ಕೆ ಅತೀ ಕಡಿಮೆ ದರದ ಬಡ್ಡಿಯಿಂದಲೂ ಜನ ಹಿತಸಾಧಯನ್ನು ಮಾಡುತ್ತಿರುವುದು

The Moolky Bank Ltd.,
Moolky, S. K.

EDITED, PRINTED & PUBLISHED BY K. H. SHETTY AT THE NAVAYUGA PRESS, UDIPI, S.INDIA

Regd. No M 3618

LICENCE No. 31
Licensed to Post without Prepayment

Estd 1921 ಸ್ಥಾಪನೆ
31ನೇ ವರ್ಷ

8-3-1951

Founder: Sri A B Shetty,
Minister for Agriculture & Veterinary.

ನವಯುಗ

ಸ್ವಾಧೀನ ಭಾರತ

ವರ್ಷ ೩೧
ವಾರ ೨೫

NAVAYUGA
WEEKLY

POST BOX NO. 22
UDIPI, S. K.

Vol 31
No 25

ಬಾಳಲಾರದ ಆದರ್ಶಗಳು

ಭಾರತ ಸರಕಾರ ಗಾಂಧೀ ತತ್ವದ ಪುರಸ್ಕಾರವಾಗಿ ಮದ್ಯಪಾನ ನಿಷೇಧವನ್ನು ಮಾಡಿತು. ಎಲ್ಲಕ್ಕಿಂತ ಮೊದಲಾಗಿ ಮದ್ರಾಸು ಮಂತ್ರಿ ಮಂಡಳ ಮದ್ರಾಸು ಪ್ರಾಂತದ ಹಲವು ಜಿಲ್ಲೆಗಳಲ್ಲಿ ಆಚರಣೆಗೆ ತಂದಿತು. ಕೊನೆಗೆ ಇಡಿಯ ಪ್ರಾಂತದಲ್ಲಿಯೂ ನಿಷೇಧದ ವ್ಯಾಪ್ತಿಯನ್ನು ಜ್ಯಾರಿಗೆ ತಂದಿತು. ಮದ್ಯಪಾನದಿಂದ ಮನೆಮಾರುಗಳನ್ನು ಕಳಕೊಂಡು ಎಷ್ಟೋ ಸಂಸಾರಗಳು ನಿರ್ಗತಿಕವಾಗಿರಬಹುದು. ಎಷ್ಟೋ ಸಂಸಾರದಲ್ಲಿ ಅನುದಿನವೂ ದಾರುಣವಾದ ಪರಿಸ್ಥಿತಿಯೂ ಬಂದಿರಬಹುದು. ಅಂತಲೇ ಗಾಂಧೀಜಿ ಅದಕ್ಕೆ ತನ್ನ ವಿರೋಧವನ್ನು ಸೂಚಿಸಿದ್ದರು. ಅಸ್ಪೃಶ್ಯತಾ ನಿವಾರಣೆ-ಮದ್ಯಪಾನನಿರೋಧ-ಈ ಎರಡು ಅಂಶಗಳು ಅವರ ಮುಖ್ಯ ಉದ್ದೇಶಗಳಾಗಿದ್ದರೂ ಭಾರತ ಜನಾಂಗದ ಜೀವನವನ್ನು ಬೆಳಗಬಲ್ಲ ಇತರ ಆದರ್ಶಗಳೂ ಇದ್ದುವೆಂಬುದನ್ನು ನಾವು ಮರೆಯುವಂತಿಲ್ಲ. ಕಾಂಗ್ರೆಸ್ ಸರಕಾರ ಅಧಿಕಾರಕ್ಕೆ ಬಂದಕೂಡಲೇ ಅಸ್ಪೃಶ್ಯತಾ ನಿವಾರಣೆಯನ್ನು ಜ್ಯಾರಿಗೆ ತಂದಿತು. ಹಲವು ದೇವಸ್ಥಾನಗಳಿಗೆ ನಮ್ಮ ಮಂತ್ರಿವರ್ಯರು ಕೆಲವೇ ಮಂದಿ ಹರಿಜನರನ್ನು ಪ್ರವೇಶಗೊಳಿಸುವದರ ಮೂಲಕ ಗಾಂಧೀಜೀಯ ಆಚರಣೆಯನ್ನು ಮಾಡಿದ್ದರು. ಈಗ ಮೂರು ನಾಲ್ಕು ವರ್ಷ ಕಳೆಯಿತು. ಅಸ್ಪೃಶ್ಯತಾ ನಿವಾರಣೆಯು ಮಾತು ಹಳತಾಗಿದೆ. ಈಗೆ ಎಲ್ಲೂ ಪ್ರವೇಶವಾದಂತಿಲ್ಲ. ಅಲ್ಲದೆ ಹಿಂದೆ ಪ್ರವೇಶಮಾಡಿದಲ್ಲಿ ಹರಿಜನರು ಎಲ್ಲರೊಡನೆ ಕೂಡಿಕೊಂಡು ಬರುವದಕ್ಕೆ ಅಭ್ಯಂತರವಿಲ್ಲವೆಂಬುದು ನ್ಯಾಯದ ಮೂಲಕವಾಗಿ ಇರುವದಾದರೂ ಸರಾಗವಾಗಿ ಬರುತ್ತಿಲ್ಲ. ಹರಿಜನರ ಉದ್ಧಾರದ ಘಣತೊಟ್ಟವರೂ ಗಾಂಭೀರ್ಯ ಬಿಟ್ಟು ಅವರೊಡನೆ ಬೆರೆಯುತ್ತಿಲ್ಲವೆನ್ನುವುದು ಸ್ಪಷ್ಟವಾಗಿ ತಿಳಿಯುತ್ತಲಿದ್ದೇವೆ. ಗಾಂಧೀಜೀ 'ಇನ್ನೊಂದು ಜನ್ಮಕ್ಕೆ ನಾನು ಹರಿಜನನಾಗಿಯೇ ಜನ್ಮವೆತ್ತಲು ಇಚ್ಛಿಸುತ್ತೇನೆ" ಎಂದು ಹರಿಜನರ ಬಗೆಗೆ ತನಗಿರುವ ಆತ್ಮೀಯ ಭಾವನೆಯನ್ನು ವ್ಯಕ್ತಪಡಿಸಿದಾರೆ. ಅಂದರೆ ಗಾಂಧೀಜಿಯವರ ಅಭಿಪ್ರಾಯದಲ್ಲಿ ಹರಿಜನರನ್ನು ತೀರ ಹತ್ತಿರವಾಗಿ ಬಳಸಿಕೊಳ್ಳುವದರಿಂದ ಆ ಜನಾಂಗದ ಬಗ್ಗೆ ಇರುವ ಅನಾದರ ಕಡಿಮೆಯಾಗಬಹುದೆಂಬುದೇ ಆಗಿತ್ತು. ಇಂದು ಹರಿಜನ ಉದ್ಧಾರದ ಕುರಿತು ಕಾರ್ಯವೇನೋ ಮಂದಗತಿಯಿಂದಲಾದರೂ ಸಾಗುತ್ತಲಿದೆ. ಕಾಂಗ್ರೆಸ್ಸಿನ ತತ್ವದಂತೆ ಇತರ ಜನರೊಡನೆ ಸಂಪರ್ಕ ಹೆಚ್ಚಾಗಿ ಬೆಳೆಯುತ್ತಿಲ್ಲ. ಭಾರತದ ಎಷ್ಟೋ ದೇವಾಲಯಗಳು ಹರಿಜನರ ಪಾಲಿಗೆ ಈಗಲೂ ಮುಕ್ತವಾಗಿರುವದಿಲ್ಲ. ಈಚೆಗೆ ಆ ಧ್ವನಿ ನಮಗೆ ಕೇಳಿಸುತ್ತಲೂ ಇಲ್ಲ!

ಎರಡನೆಯದಾಗಿ ಮದ್ಯಪಾನ-ನಿಷೇಧ ಕಾರ್ಯ. ಇದು ಪಾಲನೆಗಾಗಿ ಭಾರತ ಸರಕಾರ ಹಲವಾರು ರೀತಿಯ ಸಮಸ್ಯೆಗಳನ್ನು ಎದುರಿಸಿದ್ದನ್ನು ನಾವು ಮರೆಯುವಂತಿಲ್ಲ. ಆದರೆ ಸರಕಾರ ಸಾಧಿಸಿದ್ದೇನೆಂಬುದು ಮಾತ್ರ ಒಂದು ಸಮಸ್ಯಾತ್ಮಕ ವಿಚಾರವೇ ಆಗಿರುತ್ತದೆ. ಮದ್ಯಪಾನ ನಿಷೇಧದಿಂದ ಪ್ರಾಪ್ತವಾಗಿರುವ ವಿದ್ಯಮಾನಗಳನ್ನವಲೋಕಿಸಿದರೆ ಇಷ್ಟಕ್ಕಿಂತ ಅನಿಷ್ಟಗಳೇ ಹೆಚ್ಚೆಂಬುದು ನಮಗೆ ಮನವರಿಕೆಯಾಗದಿರದು. ಉತ್ತಮಾದರ್ಶವನ್ನು ಹಿಡಿದುಕೊಂಡು ಕಾಯಿದೆ ಕಾನೂನುಗಳನ್ನೇನೋ ಮಾಡಬಹುದು. ಆದರೆ ಅವನ್ನು ಪಾಲಿಸುವವರೂ ಜ್ಯಾರಿಗೆ ತರುವವರೂ ಎಷ್ಟರ ಮಟ್ಟಿನ ಪ್ರಾಮಾಣಿಕತನವನ್ನು ತೋರಬಹುದೆಂಬುದೇ ಮಹಾ ಸಮಸ್ಯೆ. ಮದ್ಯಪಾನ ನಿರೋಧವನ್ನು ಹಲವರು ಶಾಸ್ತ್ರೀಯವಾಗಿಯೂ, ಇನ್ನು ಕೆಲವರು ರಾಜಕೀಯವಾಗಿಯೂ, ಮತ್ತೆ ಕೆಲವರು ಘನಸ್ಥಿತಿಯ ಕಾರಣವಾಗಿಯೂ ನಿಷೇಧಿಸಬಹುದು. ಆದರೆ ಅಂತರಿಕವಾಗಿಯೂ ವೈಯುಕ್ತಿಕವಾಗಿಯೂ ಭಿನ್ನಾಭಿಪ್ರಾಯ ಉಳ್ಳವರಾಗಿದ್ದಾರೆ. ಈವರೆಗೆ ಬಂದಿರುವ ತನ್ನ ಈ ಚಟವನ್ನು ಒಮ್ಮಿಂದೊಮ್ಮೆಗಾಗಿ ಬಹಿಷ್ಕರಿಸಿದರೂ, ಕಾಂಗ್ರೆಸ್ಸಿನ ಗಾದಿಯಲ್ಲಿ ಇಲ್ಲವೆ ರಂಗದಲ್ಲಿದ್ದುಕೊಂಡು ಪರೋಪದೇಶದ ಪಾಂಡಿತ್ಯ ಪ್ರದರ್ಶನವಮಾಡಿದರೂ, ಒಳಗಿಂದೊಳಗೆ ಸುರಾದೇವಿಯ ಆರಾಧಕರಾಗಿರುವ ಮಹನೀಯರು ಬಹಳ ಇವೆ. ಮದ್ಯಪಾನ ಮಾಡುವುದು ಕೆಟ್ಟದೆಂಬುವುದು ಎಲ್ಲರಿಗೂ ತಿಳಿದಿದೆ. ಆದುದರಿಂದ ಕಾಂಗ್ರೆಸ್ ಸರಕಾರದ ಈ ಕಾರ್ಯವನ್ನು ಒಂದು ವೇಳೆ ನಾವು ಟೀಕಿಸದಾದರೂ ತಕ್ಕದ ಕಾರಿತಾಗಿಯಲ್ಲ; ಆ ತತ್ವವನ್ನು ಪಾಲಿಸಲಾಗದ ಅಸಮರ್ಥತೆಯನ್ನು! ಕೋಟಿಗಟ್ಟಲೆ ರೂಪಾಯಿಗಳನ್ನು ಇದರಿಂದಾಗಿ ಕಳೆದುಕೊಂಡು ಬಲವಾದ ಆರ್ಥಿಕ ಪೆಟ್ಟಿನ ಪರಿಹಾರಾರ್ಥವಾಗಿ ಇತರ ಕರಗಳನ್ನು ಜನರ ಮೇಲೆ ಹೇರುವದರ ಮೂಲಕ ಸರಕಾರ ತಾನು ಸುಧಾರಿಸಿಕೊಂಡಿರುವದಾದರೂ ಜನತೆಗೆ ಹೊರಲಾರದ ಭಾರವನ್ನು ಬಲಾತ್ಕಾರವಾಗಿ ಹೇರಿದಂತಾಗಿದೆ. ಪ್ರತಿಯೊಂದು ವಸ್ತುಗಳಿಗೂ ದಿನದಿಂದ ದಿನಕ್ಕೆ ಏರುತ್ತಿರುವ ಅತಿಧಾರಣೆಯು ಈ ಕಾಲದಲ್ಲಿ ಜನತೆಯ ಜೀವನ ನಿಕೃಷ್ಟಸ್ಥಿತಿಗೆ ಇಳಿಯುತ್ತಲಿದೆ. ಅದರಲ್ಲೂ ಸರಕಾರ ಹೇರುವ ಕರಗಳು ಬಡವರ ಮೇಲೆಯೇ ಹೆಚ್ಚಾಗಿ ಬೀಳುತ್ತಲಿವೆ.

ಈ ಮದ್ಯಪಾನ ನಿಷೇಧದಿಂದ ಕೋಟ್ಯಾಂತರ ರೂಪಾಯಿಯನ್ನು ಕಳೆದುಕೊಳ್ಳುವುದು ಮಾತ್ರವಲ್ಲದೆ ತಿರುಗಿ ಅಬಕಾರಿ ಇಲಾಖೆಗೆ ಇನ್ನು ಹಲವು ಕೋಟಿಗಳ ವ್ಯರ್ಥ ಖರ್ಚು ಬೇರೆ. ಜನತೆಯಲ್ಲಿ ವಿದ್ಯಾಬುದ್ಧಿ ಬೆಳೆದು ತಾತ್ವಿಕವಾಗಿಯೆ ಅವರನ್ನು ತಿರುಗಿಸಬೇಕೇ ಹೊರತು ದಬ್ಬಾಳಿಕೆಯಿಂದ ಇಂತಹದ ಕ್ಷಟವನ್ನು ನಿಲ್ಲಿಸುವುದು. ಶುದ್ಧ ಮೂರ್ಖತನವೇ ಸರಿ. ಮದ್ಯಪಾನ ನಿರೋಧದ ಈ ಎರಡು ಮೂರು ವರ್ಷಗಳಲ್ಲಿ ಸರಕಾರೀ ಪ್ರಕಟಣೆ-ಪ್ರಚಾರ ವೈಖರಿಗಳಲ್ಲಿ ಪ್ರ



THE UNITED KARNATKA
INSURANCE COMPANY LIMITED
United Karnatak Buildings, DHARWAR.
Established, 1929.
ಕಳೆದ 20 ವರ್ಷಗಳಿಂದಲೂ ಸದಾ ಜನತಾಸೇವೆ ಮಾಡುತ್ತಿದೆ.

ದಿ ಸೆಕ್ಯೂರಿಟಿ ಪ್ರೊವಿಡೆಂಟ್ ಇನ್ಶೂರೆನ್ಸ್ ಕಂಪೆನಿ ಲಿಮಿಟೆಡ್,
ಹರ್ಕ್ ಚೇಂಬರ್ಸ್, ಪಾರ್ಸಿಬಜಾರ್ ಸ್ಟ್ರೀಟ್,
ಬೊಂಬಾಯಿ 1.

ದಿ ಕೆನರಾ ಇಂಡಸ್ಟ್ರಿಯಲ್ ಎಂಡ್ ಬ್ಯಾಂಕಿಂಗ್ ಸಿಂಡಿಕೇಟ್ ಲಿಮಿಟೆಡ್, ಉಡುಪಿ, ಇದರ ದ. ಕ. ಜಿಲ್ಲೆಯೊಳಗಿನ ಕಚೇರಿಗಳು ... ತಿಂಗಳ ಪ್ರೀಮಿಯಮ್ ಹಣಗಳನ್ನು ... ನಮ್ಮ ... ವಿನಂತಿಸುತ್ತೇವೆ.

... ಶ್ರೀ ಎ. ... ಶ್ರೀ ಕೆ. ... ನಮ್ಮ ಕಂಪೆನಿಯ ... ವಿಶ್ವಾಸಾರ್ಹ ... ನಮ್ಮಲ್ಲಿ ... ಅವರಿಬ್ಬರೊಡನೆ ಯಾವುದೂ ಪ್ರೀಮಿಯಮ್ ಹಣ ಕೊಡಬಾರದಾಗಿ ... ಗಿರುತ್ತದೆ.

Manager
The Security Provident
Insurance Co Ltd, BOMBAY.

ಗತಿಯ ಪ್ರದರ್ಶನವಾಗುತ್ತಿದೆಯೇ ಹೊರತು ಯಥಾರ್ಥವಾಗಿ ನೋಡುವುದಾದರೆ ಯಾವ ಪ್ರಗತಿಯೂ ಆಗಲಿಲ್ಲ. ಕಳ್ಳಸಂತೆಯ ನಿರ್ಮಾಣವಾಗುತ್ತಲೇ ಇದೆ—ಬೇಕಾದವರಿಗೆ ಸಾಕಷ್ಟು ಸರಬರಾಯಿಯೂ ಆಗುತ್ತಲಿದೆ—ಆದರೆ ಧಾನ್ಯವಾತ್ರ ಹೆಚ್ಚು ಆಷ್ಟೆ! ಹೀಗೆ ಗುಪ್ತಸರಾಯಿಯ ತಯಾರಿ ನಿಮಿತ್ತವಾಗಿ ಬೆಲ್ಲಕ್ಕೂ ಬ್ಲಾಕ್ ಮಾರ್ಕೆಟು ಮಾಡುವ ಪ್ರಸಂಗ ಬಂದಿದೆ. ಅಕ್ಕಿ ಆಹಾರ ಧಾನ್ಯಗಳು ಬೆಳೆಯುವಲ್ಲಿ ಕಬ್ಬಿನ ವ್ಯವಸಾಯವೇ ಹೆಚ್ಚಾಗಿ ಸಾಗುತ್ತಲಿದೆ. ಇದೂ ಸ್ವಲ್ಪ ಮಟ್ಟಿಗೆ ಇಂದಿನ ಆಹಾರ ಕೊರತೆಗೆ ಕಾರಣವಾಗುತ್ತದೆ. ಈ ಹಿಂದೆ ಅಲ್ಲಿ ಇಲ್ಲಿ ಗುತ್ತಿಗೆಗಳು ಇದ್ದರೆ ಇಂದು ಮನೆಮನೆಯಲ್ಲಿ ಕಾಡು ಗುಡ್ಡಗಳಲ್ಲಿ—ಹೊಳೆಯ ದಿಣ್ಣೆಗಳಲ್ಲಿ—ಇನ್ನೂ ಎಲ್ಲೆಲ್ಲಿಯೋ ಅದು ಹರಡಿಕೊಂಡು ಹೋಗಿದೆ. ಅದನ್ನು ತಯಾರಿಸುವ ಜನಕ್ಕೆ ಎಷ್ಟರ ಮಟ್ಟಿನ ತಾತ್ಸಾರ ಭಾವನೆಯಿದೆಯೆಂಬುದನ್ನು ಅಲ್ಲಿ ಇಲ್ಲಿ ಆಬಕಾರಿ ಇಲಾಖೆಯವರ ಮೇಲೆ ರಾಕ್ಷಸರಂತೆ ಎರಗಿಬಂದ ಉದ್ರಸನ್ನಿವೇಶಗಳಿಂದ ನಾವರಿತುಕೊಳ್ಳಬಹುದು. ಒಂದುವೇಳೆ ಹಿಡಿದು ತಂದರೂ ತಯಾರಿಸಿದ ವ್ಯಕ್ತಿ ತಾನು ಮಾಡಿದ್ದನ್ನು ಸೀದಾ ಒಪ್ಪಿಕೊಳ್ಳುತ್ತಾನೆ. ಕಾಯಿದೆಯ ಮೂಲಕ ಅವನು ಮುಂದೆ ಹೋಗಿ ಹಣವ್ಯರ್ಥ ಮಾಡದೆ ನ್ಯಾಯಾಧೀಶರುಗಳು ಮಾಡಬಹುದಾದ ದಂಡವನ್ನು ಕೂಡಲೇ ಕಟ್ಟಿ, ತಿರುಗಿ ಬಂದು ಮರೂಪಟ್ಟು ಅದನ್ನು ತಯಾರಿಸಿ ವಿಕ್ರಯಿಸಿ ಹೋದ ಹಣವನ್ನು ತಿರುಗಿ ಗಳಿಸಿಕೊಳ್ಳುತ್ತಾನೆ. ಸರಕಾರ ಎಷ್ಟೇ ಮುತುವರ್ಜಿ ವಹಿಸಿದ ಕಠಿಣವಾದ ಪ್ರತಿಬಂಧವನ್ನು ಮಾಡಿದರೂ ಕುಡುಕರ ಮೇಲೆ ಔದಾರ್ಯವನ್ನು ತೋರುವ ಹಲವು ಅಧಿಕಾರಿ ಡಾಕ್ಟರುಗಳು ಹಲವುವೇಳೆ ಸರಕಾರದ ಪ್ರಯತ್ನಕ್ಕೆ ಕೊಡಲಿಯೇಟನ್ನು ಹಾಕುತ್ತಾರೆ. ಬಹಳ ಬಹಳವಾಗಿ ಪ್ರಯತ್ನಮಾಡಿ ಶೋಧಿಸಿ ಕುಡುಕನೋರ್ವನನ್ನು ಕರೆತಂದರೆ "ಇದು ನೀಲಗಿರಿ ಎಣ್ಣೆಯ ವಾಸನೆ ಬರುತ್ತದೆ" "....ಹೌದೋ, ಅಲ್ಲವೋ ಎನ್ನುವ ಒಂದು ವಾಸನೆ" "....ಈ ವಾಸನೆ ಮಧ್ಯಸೇವನೆಯಿಂದಾಯಿತೆನ್ನುವದಕ್ಕೆ ಬರುವುದಿಲ್ಲ" ಎಂದು ಸರ್ಟಿಫಿಕೇಟುಗಳನ್ನು ಕೊಟ್ಟುಬಿಟ್ಟು ಆ ಕುಡುಕನನ್ನು ಮುಕ್ತಮಾಡುವದಾದರೆ ಅಬಕಾರಿ ಇಲಾಖೆಯವರು ಮಾಡುವದಾದರೂ ಏನು? ಪ್ರಮುಖ ವ್ಯಕ್ತಿಗಳು ಪರಿಮಿತವಾಗಿ ಸೇವಿಸುವದಕ್ಕೆ ಕೂಡ ಸರ್ಟಿಫಿಕೇಟುಗಳು ಬೇಕಿವೆ; "ಇವರಿಗೆ ಅರುತಿ ಸಿಗೂಮ್ಮೆ ಕುಡಿಯದಿದ್ದರೆ ದೇಹದಲ್ಲಿಯ ಕಠಿಣವ್ಯಾಧಿ ಮರಳಿ ಬಂದು ಜೀವಕ್ಕೆ ಸಂಚಕಾರ ಬರುವಸಂಭವವಿದೆ"....ಇದು ವಿಚಿತ್ರರೀತಿಯ ಉಬ್ಬಸ, ದಿನಕ್ಕೆ ನಾಲ್ಕು ಸಲ ಸೇವಿಸುವದರ ಹೊರತು ಅನ್ಯ ಮಾರ್ಗವೇ ಇಲ್ಲ" ಈ ಬಗೆಯ ಸರ್ಟಿಫಿಕೇಟುಗಳು ಕಾಯಿದೆ ರೂಪದಲ್ಲಿ ಇಲ್ಲವೆ ಸಾಧಾರಣವಾಗಿ ಕುಡಿತಕ್ಕೆ ಪ್ರೋತ್ಸಾಹಿಸುತ್ತವೆ! ಸರಕಾರ ಹೌದೋ ಅಲ್ಲವೋ ಎನ್ನುವ ಪ್ರಶ್ನೆಗೆ ನಾವು ಉತ್ತರ ಬೇರೆ ಹೇಳಬೇಕಾದಂತಿಲ್ಲ.

ಅಂತೂ ಸರಕಾರ ಒಳ್ಳೆಯದ ಆದರ್ಶವನ್ನು ಪಾಲಿಸಬೇಕೆಂದು ಮುಕ್ತ ಮಾಡಿದರೂ—ಗಾಂಧಿಜೀ ತತ್ವವನ್ನು ಉಳಿಸುವದಕ್ಕೆ ಅವಿರತ ಹೋರಾಡಿದರೂ ಜನತೆ ಸಹಕಾರ ನೀಡುತ್ತಿಲ್ಲ. ಇದರಿಂದ ನಾವಿಂದು ಯಾರನ್ನು ದೂರುವಂತೆಯೂ ಇಲ್ಲ. ಒಳ್ಳೆಯದನ್ನು ಮಾಡ ಹೇಳುವುದಷ್ಟೇ ಸರಕಾರದ ಕೆಲಸ. ಪಾಲಿಸುವುದೂ ಬಿಡುವುದೂ ಪ್ರಜೆಗಳ ಇಷ್ಟ, ಎನ್ನುವಂತಾಗಿದೆ ಹೀಗೆ ಶಾಸನ ಶಿಥಿಲಗೊಳ್ಳುವುದರ ಕಾರಣ ಸರಕಾರಕ್ಕೂ ಜನತೆ ಎರಡಕ್ಕೂ ಹಾನಿಕರವೆಂಬುದನ್ನು ನಾವು ಮರೆಯದಿರೋಣ. ಮದ್ಯಪಾನ ನಿರೋಧದ ಈ ಬಗೆ ಪ್ರತಿಷ್ಟೆಯನ್ನು ಹಿಡಿದು ಕೊಂಡು ಸರಕಾರ ಬಡ ಜನತೆಯ ಮೇಲೆ—ಉಚ್ಚ ಸ್ಥಿತಿಗೇರುವ ಉದ್ಯಮಗಳ ಮೇಲೆ—ನಿರ್ದಾಕ್ಷಿಣ್ಯವಾದ ಕರವನ್ನು ಹೇರುವುದರಲ್ಲಿ ಯಾವ ಪುರುಷಾರ್ಥವಿದೆ? ದೇಶಾದ್ಯಂತ ಉಂಟಾಗಿರುವ ಅನ್ನ ಬಟ್ಟೆಗಳ ಬರಗಾಲದ ಈ ದುರ್ಧರ ಪ್ರಸಂಗದಲ್ಲಿ ಮದ್ಯಪಾನದಿಂದ ಉಂಟಾಗುವ ಕೋಟ್ಯಂತರ ಹಣವನ್ನು ಕೃಷಿಯ ಅಭಿವೃದ್ಧಿಗೆ ಉಪಯೋಗಿಸಿ ಸ್ವಾವಲಂಬಿಗಳಾಗುತ್ತಿದ್ದರೆ ನಮ್ಮ ಸ್ಥಿತಿ ಇಷ್ಟು ಹೀನವಾಗುತ್ತಿರಲಿಲ್ಲವೆನ್ನುವದು ಬಹಳ ಮಟ್ಟಿಗೆ ನಿಜವಾದ ಮಾತು! ಮದ್ಯಪಾನ ನಿರೋಧದ ಯಶಸ್ವಿಯಾಗುವಂತಿದ್ದರೆ— ನಿಜವಾಗಿಯೂ ನಾವು ದೇಶದ ಏಳ್ಗೆಗಾಗಿ ತ್ಯಾಗಮಾಡಲೇಬೇಕು. ಆದರೆ ಈ ಮೂರು ವರ್ಷಗಳ ಅಂತರದಲ್ಲಿ ಇದರ ಪೂರ್ತಿ ಪತನವಾಗಿದೆ. ಆದರಿಂದ ಆರ್ಥಿಕ ನೋಲೊಂದು ಹೊರತು ಬೇರೇನನ್ನೂ ನಾವು ಕಾಣುವಂತಿಲ್ಲ. ಜನತೆಯಲ್ಲಿ ತಿಳುವಳಿಕೆ ಹೆಚ್ಚಿ, ಸಾವಧಾನವಾಗಿ ಮಧ್ಯಪಾನವನ್ನು ಬಹಿಷ್ಕರಿಸುವದರಿಂದಲೇ ಇದು ಸಾಧ್ಯ! ಅದರಿಂದ ನಾವು ಯಾವ ಕಾಯಿದೆ ಕಾನೂನನ್ನು ತಂದರೂ ಪ್ರಗತಿಯನ್ನು ಹೊಂದಲಾರೆವು! ಅಸ್ಪೃಶ್ಯತಾ ನಿವಾರಣೆಯ ಪಾಡೂ ಅಷ್ಟೆ!

ಸ್ವಾತಂತ್ರ್ಯಕ್ಕೆ ನಾವು ಕೇವಲ ಆದರ್ಶಗಳ ಆರಾಧಕರಾಗಿದ್ದೇವೆ. ಈ ಬಗೆಯ ಆರಾಧನೆಯಿಂದ ಸಿದ್ಧಿಯನ್ನು ಪಡೆಯಬೇಕೆಂಬುದು ಕೇವಲ ಹುಚ್ಚು ಕಲ್ಪನೆ! ಭಾವನಾ ಪರವಶರಾಗಿ ಆಡುವ ನಮ್ಮ ಆದರ್ಶಗಳು ಒಂದೂ ಬದುಕಲಾರವು! ಜೀವನದ ಮಟ್ಟ ಉತ್ತಮಗೊಳ್ಳದೆ— ಸಾಂಸ್ಕೃತಿಕ ಚಟುವಟಿಕೆ ಹೆಚ್ಚಾಗದೆ— ಜನ ತಮ್ಮನ್ನು ತಾವು ತಿಳಿಕೊಳ್ಳುವಷ್ಟು ವಿಚಾರವಂತರಾಗದೇ— ಮೇಲಿನ ಆದರ್ಶಗಳು ತಾತ್ವಿಕವಾಗಿ ಉಳಿದಾವೇ ಹೊರತು ಕಾರ್ಯರೂಪದಲ್ಲಿ ಬರಲಾರವ! ಆ ವರೆಗೆ ಬಳಲಾರದ ಈ ಆದರ್ಶಗಳಿಂದ ಜನಜಾಗ್ರತಿಯಾದೀತೆಂದು ಭಾವಿಸುವುದು ಬರಿಯ ಭ್ರಾಂತಿ!

ಸುಲಭ ದರದಲ್ಲಿ
ಅಚ್ಚುಕಟ್ಟಾದ
'ಮುದ್ರಣಕ್ಕೆ
ನವಯುಗ ಪ್ರೆಸ್,
ಉಡುಪಿ.

ಮಾರಾಟಕ್ಕೆ
ಸದಾ ಸಿದ್ಧವಾಗಿವೆ.



ಎರಡರಿಂದ ಐದು ಕುದುರೆ ಶಕ್ತಿಯುಳ್ಳ ನೀರಿನ ಪಂಪುಗಳು, ತರಹೆವಾರು ಹೊಂಡ ತೆಗೆಯುವ, ಸಾಗ್ವಳಿ ಭೂಮಿಗೆ ನೀರು ಹಾಯಿಸುವ, ಕೇಂದ್ರದಿಂದ ದೂರ ಕ್ಷೇತ್ರಕ್ಕೆ ನೀರು ಚಿಮುಕಿಸುವ ಮತ್ತು Wisconsin Clington, Petter ಎಂಜಿನಿಗಳು ನಮ್ಮಲ್ಲಿ ಮಾರಾಟಕ್ಕೆ ಸದಾಸಿದ್ಧವಿವೆ.

ಹೆಚ್ಚಿನ ಮಾಹಿತಿಗೆ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.

Enquire - **Auncudur Trading Compay,**
Fathma Manzil, Colaba Road, **BOMBAY 5**

ಅಮೃತಾಂಜನ
ತಲೆನೋವು, ಶಿರೋವೇದನೆ, ಉಳುಕು ಕುತ್ತಿಗೆ, ಭುಜ ಹಲ್ಲು ವೇದನೆಗಳಿಗೂ, ಎದೆನೋವು, ಗಾಯಗಳು, ಬಾತುಕೊಳ್ಳುವುದು, ಚೇಳುವಿಷಮುಂತಾದವು, ಪಕ್ಷವಾತ, ಮೊಡವೆ, ಮೊದಲಾದ ಎಲ್ಲಾ ರೋಗಗಳಿಗೂ ಸಿದ್ಧೌಷಧ



REGD
ಹುಳು ಕಡ್ಡಿ ಮುದ್ದು ನಮ್ಮಲ್ಲಿ ಸಿಕ್ಕುತ್ತದೆ
ಅಮೃತಾಂಜನ ಲಿಮಿಟೆಡ್
ಮದರಾಸು.
ಬೊಂಬಾಯಿ ಮತ್ತು ಕಲ್ಕತ್ತ.

ಭಾರತದ ಒಹುದೊಡ್ಡ ನಗರವಾದ ಬೊಂಬಾಯಿಯಲ್ಲಿ
ಗ್ರಾಹಕರ ತೃಪ್ತಿಯನ್ನೇ ಧ್ಯೇಯವಾಗಿಟ್ಟುಕೊಂಡಿರುವ
ಕನ್ನಡಿಗರಿಂದಲೇ ನಡೆಸಲ್ಪಡುತ್ತಿರುವ ಉನ್ನತವಾದ ರಾಷ್ಟ್ರೀಯ ಸಂಸ್ಥೆ—

ದಿ ನೇಶನಲ್ ಜನರಲ್ ಸ್ಟೋರ್ಸ್

(ಡಿಸ್ಪೆನ್ಸಿಂಗ್ ಕೆಮಿಸ್ಟ್ ಮತ್ತು ಡ್ರಗ್ಗಿಸ್ಟ್)
8 ಎ, ಮೆಹರ್ವಾನ್ ಬಿಲ್ಡಿಂಗ್, Opp: His Master's Voice
ಸರ್ ಫಿರೋಜ್ ಷಾ ಮೆಹ್ತಾ ರೋಡು, ಫೋರ್ಟ್, ಬೊಂಬಾಯಿ.

ಇಲ್ಲಿ ದೇಶ-ವಿದೇಶಗಳಿಂದ ಎಲ್ಲಾ ತರದ ಔಷಧಗಳನ್ನೂ ಇತರ ಜನೋಪಯೋಗಿ ಸಾಮಾನುಗಳನ್ನೂ ತರಿಸಿ ಆಕರ್ಷಕ ಬೆಲೆಗೆ ವಿತರಣೆಮಾಡಲಾಗುತ್ತದೆ.

ಅನುದಿನದ ಉಪಯೋಗಕ್ಕೆ ಅಗತ್ಯವಾದ ಸಾಹಿತ್ಯಗಳೂ ಪುಸ್ತಕಗಳೂ ವಿಟಮಿನ್ ಆಹಾರ ವಸ್ತುಗಳೂ ಮುಲಾಮುಗಳೂ, ಸುವಾಸನಾ ದ್ರವ್ಯಗಳೂ ರಬ್ಬರಿನ ಸಾಮಾನುಗಳೂ ಚಿಲ್ಲರೆಯಾಗಿಯೂ ಸುಲಭ ದರದಲ್ಲಿ ದೊರೆಯುತ್ತವೆ.

ವಿ. ಪಿ.- ಪಾರ್ಸಲ್‌ಗಳ ಆರ್ಡರುಗಳನ್ನು ಸ್ವೀಕರಿಸಲಾಗುವುದು.
ಹೆಚ್ಚಿನ ಮಾಹಿತಿಗೆ ಬರೆಯಿರಿ.

ಎಂ. ಮೆಂಡೋಸ,
ವ್ಯಾಲಕ.

M Mendosa,
Proprietor.

THE NATIONAL GENERAL STORES
Importers Exporters, Dispensing Chemists & Druggists.
General Merchants & Commission Agents.
8A Mherwan Buildings, Opp: His Master's Voice,
Sir Phirozsha Mehta Road, **Fort, Bombay.**

ಪ್ರಧಾನ ಕಾರ್ಯಾಲಯ: ಉಡುಪಿ. ಸ್ಥಾಪನೆ: ೧೯೩೫

ದಿ ಕೆನರಾ ಮ್ಯೂಚುವಲ್ ಎಶ್ಯೂರೆನ್ಸ್
ಕಂಪೆನಿ, ಲಿಮಿಟೆಡ್,

ಇದುವೇ

ಪಾಲಿಸಿದಾರರ ನಂಬಿಕೆ ಹೆಚ್ಚಿಸುವ ಹೆಸರು

ಅಲ್ಲದೆ

ಸ್ಥಾಪಿತವಾದಂದಿನಿಂದಲೂ ಲಾಭ (ಬೋನಸ್)
ಹಂಚಿದ ಕಂಪೆನಿ.

The Canara Mutual Assurance Co, Ltd.
H. O. UDIPI (SOUTH INDIA) ESTD: **1935.**

ಅವರು ಹೇಳಿದ್ದೇನು?

ಕೇಂದ್ರ ಸರಕಾರದಲ್ಲಿ ಗೊಬ್ಬರ ಪ್ರಕರಣವೊಂದು ಬಹಳ ಸ್ವಾರಸ್ಯವಾಗಿ ಬೆಳಕಿಗೆ ಬಂದಿರುತ್ತದೆ. ಪ್ರಸಿದ್ಧ ಕಾದಂಬರಿಗಾರರಾದ ಶ್ರೀ ಮುನ್ಷಿಯವರು ಸಾಹಿತ್ಯಿಕವಾಗಿ ಕನ್ನಡೇ ಆದ ಒಂದು ತಾಂತ್ರಿಕ ಕತೆಯನ್ನು ಪಾರ್ಲಿಮೆಂಟಿನ ಮುಂದಿಟ್ಟರು. ಸಾರ್ವಜನಿಕ ಹಣವನ್ನು ಹಾಳುಮಾಡುವ ಇಲ್ಲವೆ ದುರ್ವಿನಿಯೋಗಗೊಳಿಸುವ ಪ್ರಕರಣಗಳು ಮದ್ರಾಸು ಮೊದಲಾದ ಪ್ರಾಂತಗಳಲ್ಲಿ ಕಂಡು ಕೇಂದ್ರದಲ್ಲಿಯೂ ಅದು ತಲೆಯೆತ್ತಿದ್ದು ನಿಜವಾಗಿಯೂ ಶೋಚನೀಯ ವಿಚಾರ. ಒಂದು ಕೋಟಿ ರೂಪಾಯಿಯ ಪ್ರಕರಣದಲ್ಲಿ ತುರುಸಿನ ಚರ್ಚೆ ಬಂದಾಗ ಆ ಪ್ರಶ್ನೆ ಅಲ್ಲಿಯೇ ಕೂಲಂಕುಷ ಪರಿಶೀಲನೆಗೆಂದು ಮರೆಯಾಯಿತು. ತಿರುಗಿ ಮುನ್ಷಿಯವರು ಸ್ಪಷ್ಟೀಕರಣವೆಂದು ಹೇಳಿದ್ದು ಅಸ್ವಾಭಾವಿಕವೂ—ಅಸ್ಪಷ್ಟವೂ ಅನನುಭವೀವೂ ಆದ ಕಟ್ಟುಕಥೆಯನ್ನೇ! ಸುಳ್ಳು ಹೇಳುವದಕ್ಕೂ ಚಾಲಕ ಬೇಕು. ಸುಂದರ ನಾಟಕ, ಕತೆಗಳನ್ನು ಬರೆಯಬಲ್ಲವರು ತಾನೊಂದು ಕಲ್ಪನಾ ರಾಜ್ಯವನ್ನು ನಿರ್ಮಿಸಬಹುದು. ಆದರೆ ಯಥಾರ್ಥವಾದ ವಿಚಾರ ಮರೆಮಾಚುವದಕ್ಕೆ ಆ ಕಲ್ಪನಾಲಹರಿ ಉಪಯೋಗಕ್ಕೆ ಬೀಳುವಂತಿಲ್ಲ. ಪಾರ್ಲಿಮೆಂಟಿನಲ್ಲಿ ಮಾನ್ಯ ಮುನ್ಷಿಯವರು ಕೋಟಿ ರೂಪಾಯಿ ಗೊಬ್ಬರ ವಿಚಾರದಲ್ಲಿ ಕೊಟ್ಟ ಹೇಳಿಕೆ ಅಂತಹ ಕಲ್ಪನೆಯದೋ ಎಂದು ಭಾಸವಾಗುತ್ತಲಿದೆ. ವನಮಹೋತ್ಸವದ ಕುರಿತೂ, ಆಹಾರದ ಕುರಿತೂ ಮುನ್ಷಿಯವರು ಜಮಾಯಿಸಿದ ಭಾಷಣಗಳ ಮಾಲಿಕೆಯಷ್ಟೋ ಕೃಪಣರಾದ ನಮಗೆ ಇದೇನೂ ಹೊಸತಲ್ಲ. ಮಾತನಾಡಬೇಕಾದ ವಿಚಾರಗಳ ಸಂಪೂರ್ಣ ಜ್ಞಾನವಿಲ್ಲದಿದ್ದರೂ ಆ ವಿಚಾರದ ಕುರಿತು ನಿರರ್ಗಳವಾಗಿ ಮಾತನಾಡುವ ಕಲೆ ಶ್ರೀ ಮುನ್ಷಿಯವರಿಗೆ ಚೆನ್ನಾಗಿ ಸಾಧಿಸಿದೆ. ಆದುದರಿಂದ ನಾವು ವಿಮರ್ಶೆ ಮಾಡುವುದಾದರೂ ಮಾತಿನ ಮಹತ್ವಕ್ಕೆ ಕುರಿತಾಗಿಯೆ ಹೊರತು ಪ್ರಾಮಾಣಿಕತನದ ಕುರಿತಲ್ಲ.

ಪ್ರಾಂತ ಸರಕಾರದ ಗೊಬ್ಬರ ಇಲಾಖೆಯ ಮುಖ್ಯ ಅಧಿಕಾರಿಗಳಾದ ಶ್ರೀ ಸಿ. ಡಿ. ಸ್ವಾಮಿಯವರು [illegible] ರೂಪಾಯಿಯನ್ನು ಗೊಬ್ಬರದ ಪ್ರಕರಣದಿಂದ ಸರಕಾರಕ್ಕೆ ಮೋಸವಾದ ದಾಖಲೆಗಳು ಸಿಕ್ಕಿವೆ. ಶ್ರೀ ಮುನ್ಷಿಯವರು ಅಧಿಕಾರಕ್ಕೆ ಬಂದಾಗ ಓರ್ವನು ಸಿ. ಡಿ. ಸ್ವಾಮಿಯವರ ಗುಪ್ತವಾದ ವ್ಯವಹಾರವನ್ನು ಅವರಿಗೆ ಪತ್ರ ಮುಖೇನ ತಿಳಿಸಿದನು. ಆದರೆ ಕೋರ್ಟಿನ ಮುಂದೆ ಸಾಕ್ಷಿ ನುಡಿಯಲು ಒಪ್ಪಲಿಲ್ಲ. ಹಾಗೆಯೆ ಆ ವ್ಯವಹಾರದಲ್ಲಿ ಭಾಗವಹಿಸಿರುವ ಇನ್ನೋರ್ವ ವರ್ತಕನನ್ನು ವಿಚಾರದ ಕುರಿತಾಗಿ ಸಾಕಷ್ಟು ದಾಖಲೆಗಳನ್ನು ಕೊಡಲಿಕ್ಕೆ ಕೇಳಿದ್ದರ ಫಲವಾಗಿ ಎರಡು ಮೂರು ವಿಚಾರಗಳನ್ನು ಬಯಲಿಗೆಳೆದನಾದರೂ ಪ್ರತ್ಯಕ್ಷವಾಗಿ ಸಾಕ್ಷಿನುಡಿಯಲು ಮುಂದೆ ಬರಲಿಲ್ಲ. ಕೊನೆಗೆ ಸರಕಾರದ ಕಡೆಯಿಂದ ಸಮಿತಿಯೊಂದು ಏರ್ಪಟ್ಟು ಆಪಾದನಾ ಪತ್ರವೊಂದನ್ನು ರಚಿಸಲಾಯಿತು. ಅದನ್ನು ಶ್ರೀ ಸಿ. ಡಿ. ಸ್ವಾಮಿಯವರಿಗೆ ಕಳಿಸಿದಾಗ "ನಾನು ತಪ್ಪಿತಸ್ಥನೋ ಅಲ್ಲವೊ ಎನ್ನುವ ವಿಚಾರ ನನಗೆ ಗೊತ್ತಿಲ್ಲ. ನಿಮಗೆ ಸರಿತೋರಿದ ಶಿಕ್ಷೆಯನ್ನು ಕೊಡಬಹುದು. ಇದಕ್ಕಿಂತ ಹೆಚ್ಚು ನಾನು ಏನು ಹೇಳಲೂ ಸಿದ್ಧನಿಲ್ಲ!" ಎಂದು ಉತ್ತರಿಸಿದರು. ಇಷ್ಟರಿಂದಲೇ ಶ್ರೀ ಸ್ವಾಮಿಯವರನ್ನು ಕೆಲಸದಿಂದ ನಿವೃತ್ತಗೊಳಿಸಲಾಯಿತು. ಆದರೆ ಬೇರಾವ ಕ್ರಮವನ್ನೂ ಕೈಗೊಳ್ಳಲಿಲ್ಲ. ಹಣಖಾತೆಯ ಪರವಾನಿಗೆ ಇಲ್ಲದೆ ಸಹಾಯ ಕಾರ್ಯದರ್ಶಿಯವರು ಹಣಕೊಟ್ಟ ವಿಚಾರವಾಗಿ ಅವರ ಸ್ಪಷ್ಟೀಕರಣ ಕೇಳಲು ಪ್ರತ್ಯಕ್ಷವಾಗಿ ಉತ್ತರಿಸಲು ಸಾಧ್ಯವಿಲ್ಲ. ಆಹಾರ ಕಮಿಶನರಿಗೂ ಈ ಪ್ರಕರಣ ಗೊತ್ತಿದೆಯೆಂದು ತನ್ನ ಉರವನ್ನು ಬೇರೆಯವರ ತಲೆಗೆ ಸೇರಿಸಿದರು. ಕೊನೆಗೆ ಸಹಾಯಕಾರ್ಯದರ್ಶಿಯು ಸ್ವೇಚ್ಛಾನುವೃತ್ತಿಗೆ ಸರಿಯಾಗಿ ಯಾವ ಕ್ರಮವನ್ನು ತೆಗೆದುಕೊಳ್ಳಬೇಕೆಂದು ಯೋಚಿಸಿ, ಯೋಚಿಸಿ "ಸರಕಾರ ತುಂಬ ಅಸಂತೃಪ್ತಿಯನ್ನು ತಾಳಿದೆ" ಎನ್ನುವ ಸಾಮ್ಯಾರೀತಿಯ ಶಿಕ್ಷೆಯನ್ನು ವಿಧಿಸುವದಕ್ಕಿಂತ ಬೇರೇನೂ ಮಾಡಲಿಲ್ಲ. ಕಂಟ್ರಾಕ್ಟರುಗಳಿಗೆ ಸರಕಾರೀ ಗೊಬ್ಬರವನ್ನು ಮಾರುವ ಗುತ್ತೇದಾರಿಯ ಪರವಾನಿಗೆ ಕೊಟ್ಟ ಪ್ರಕರಣವೂ ಬೆಳಕಿಗೆ ಬಂತು.

ಮೇಲಿನಂಶಗಳನ್ನು ಶ್ರೀ ಮುನ್ಷಿಯವರು ಸಾಹಿತ್ಯಿಕವಾಗಿ ಹೇಳಿದರು. ಒಂದು ಕೋಟಿರೂಪಾಯಿಯ ವಂಚನೆಮಾಡಿ "ನೀವು ಇಷ್ಟಬಂದಹಾಗೆ ನನ್ನ ವಿಚಾರದಲ್ಲಿ ನಡೆದು ಕೊಳ್ಳಬಹುದೆಂದು' ಹೇಳಿ ಉದ್ಧಟತನವನ್ನು ಪ್ರಕಟಿಸಿದವನಿಗೆ ಕೆಲಸದ ಅಪಹರಣ ಮಾಡುವದಷ್ಟೇ ಪ್ರತಿಕ್ರಿಯೆಯಾದೀತೇ? ಸಾಮಾನ್ಯಪ್ರಕರಣಗಳನ್ನು ಹಿಡಿದು ಕಠಿಣ ಶಿಕ್ಷೆಯನ್ನು ವಿಧಿಸುವ ಸರಕಾರ ಅಷ್ಟಕ್ಕೆಯೆ ಬಿಟ್ಟುಬಿಡುವುದು ಸಾರ್ವಜನಿಕ ದೃಷ್ಟಿಯಲ್ಲಿ ಸಮರ್ಪಕವೆನಿಸಲಾರದು. ಸರಕಾರದ ಬೊಕ್ಕಸದಿಂದ ಅಪ್ಪಣೆಯಿಲ್ಲದೆ ಹಣವನ್ನು ವಿನಿಯೋಗಿಸಿ "ಸ್ವಲ್ಪ ದುಡುಕಿದ್ದಾಯಿತು." ಎಂದು ತಲೆ ಮರೆಸಿಕೊಂಡವನ ಮೇಲೂ ಸರಕಾರ ಏನನ್ನೂ ಮಾಡಿಲ್ಲ. ಲಂಚಗುಳಿತನ ಸಮೂಲ ನಾಶವಾಗಬೇಕೆಂದು ಸರಕಾರ ತೀವ್ರವಾದ ಕಾರ್ಯಕ್ರಮ ಕೈಗೊಳ್ಳುತ್ತಿರುವಾಗ ಈ ರೀತಿಯ ಅವ್ಯಾಪಾರಗಳು ತಲೆದೋರುತ್ತಿರುವುದು ತೀರಾ ವಿಷಾದಕರ. ಮಂತ್ರಿ ಮುನ್ಷಿಯವರು "ಸ್ವಾಮಿಯವರು ತಪ್ಪಿತಸ್ಥರು ಹೌದೋ ಅಲ್ಲವೋ ಆ ವಿಚಾರ ಬೇರೆ ನೀವು ಇಚ್ಛೆಬಂದ ಹಾಗೆ ಶಿಕ್ಷಿಸಬಹುದು ಎಂದಿರುವ ಪ್ರಯುಕ್ತ ಪ್ರಕರಣವನ್ನು ಮುಂದೆ ತರುವುದು ದುಸ್ತರವಾಗಿದೆ ....ಸಹಾಯಕ ಕಾರ್ಯದರ್ಶಿಯು ಹಣಖಾತೆಯ ಅನುಮತಿಯಿಲ್ಲದೆ ಕೊಟ್ಟಿದ್ದಕ್ಕೆ ಸರಕಾರದ ವಿಷಾದ ಪ್ರದರ್ಶಿಸಿದೆ ಅಲ್ಲದೆ ಈಗ ಆತ ರಜೆಯ ಮೇಲಿದ್ದಾನೆ" ಎಂದು ಅವರೇ ವರದಿಯನ್ನು ಹೇಳಿರುತ್ತಾರೆ ಇಂತಹ ವಿಚಾರದಲ್ಲಿ ಸರಕಾರ ಕೈಗೊಳ್ಳುವದಿಷ್ಟೇ ಕಾರ್ಯಕ್ರಮವೇ ಎಂದು ತಿಳಿದು ಉಳಿದವರು ಲಂಚದ ಭೀತಿಯ ಪರಿಹಾರಕ್ಕೆ ಉತ್ತಮ ನಿದರ್ಶನವನ್ನಾಗಿಟ್ಟುಕೊಳ್ಳಬಹುದಲ್ಲವೇ? ಇಷ್ಟು ದೊಡ್ಡ ಮೊತ್ತದಲ್ಲಿ ವಂಚನೆ ನಡೆದ ವಿಚಾರವನ್ನು ಜನ ಕುತೂಹಲವಾಗಿ ನಿರೀಕ್ಷಿಸಿದ್ದನ್ನು ಮಂತ್ರಿ ಮುನ್ಷಿಯವರು ಇನ್ನಷ್ಟು ಕುತೂಹಲಿಗಳಾಗಿ ಸರಕಾರದ ಕಡೆಗೆ ನೋಡುವಂತೆ ಮಾಡಿದ್ದಾರೆ. ಅದಕ್ಕಿಂತ ಹೆಚ್ಚಿನದನ್ನು ಅವರೇನು ಮಾಡುವಂತಿದೆ? "ಸರ್ವಂ ಲಂಚಮಯಂ ಜಗತ್"

ವಯಸ್ಸಿನ ಮೇಲೆ ರಿಯಾಯಿತಿ!....

ಮದ್ರಾಸು ಸರಕಾರದ ಕೆಲವು ಮಂತ್ರಿಗಳ ಮೇಲೆ ಆರೋಪವನ್ನು ಹೊರಿಸಿದ ಶ್ರೀ ಪ್ರಕಾಶರ ಮೇಲೆ ಶಿಸ್ತುಭಂಗ ಕ್ರಮವನ್ನು ಕೈಕೊಳ್ಳುವ ಪ್ರಕರಣವೊಂದನ್ನು ಅಖಿಲ ಭಾರತ ಕಾಂಗ್ರೆಸ್ ಸಮಿತಿಯು ಅವರಿಗೆ ವಯಸ್ಸು 81 ತುಂಬಿರುವುದರಿಂದ ಹಿಂದೆ ತೆಗೆದು ಕೊಂಡಿತಂತೆ. ಮಾತಿನಿಂದ ಅರ್ಥಕಟ್ಟಿ 'ವಯಸ್ಸಾಯಿತು....' ಎಂದು ಕನಿಕರ ತಾಳುತ್ತದೆ. ಮದ್ರಾಸು ಶಾಸನ ಸಭೆಯ ಕಾಂಗ್ರೆಸ್ ಪಕ್ಷದವರು ಶ್ರೀ ಪ್ರಕಾಶರ ಮೇಲೆ ನಿಂದಾವ್ಯಂಜಕ ಗೊತ್ತುವಳಿಯನ್ನು ಸ್ವೀಕರಿಸಿರುತ್ತಾರೆ ಜೊತೆಯಲ್ಲಿ ಅವರ ಅನುಯಾಯಿಗಳನ್ನು ಟೀಕಿಸಲಾಗಿದೆ ಅದಕ್ಕೆ ಪ್ರತಿಯಾಗಿ ಶ್ರೀ ಪ್ರಕಾಶರು "ಮಂತ್ರಿಗಳ ಮೇಲೆ ಆರೋಪವನ್ನು ಹೊರಿಸಿದ ಬಗೆ ನನ್ನ ಮೇಲೆ ನಿಂದ್ಯಾವ್ಯಂಜಕ ಗೊತ್ತುವಳಿಯನ್ನು ಶಾಸನ ಸಭೆಯವರು ಹೊರಿಸಿರುತ್ತಾರೆ ಇದು ಕೇವಲ ಅಂಜುಬುರುಕತನದ್ದು. ನಾನು ಆರೋಪಿಸಿದಾಗಲೇ ರಾಜಿನಾಮೆ ಕೊಡಬೇಕಾಗಿತ್ತು. ಆದಕ್ಕೆ ಕೊಟ್ಟ ಮಂತ್ರಿಮಂಡಲ ಕೊಟ್ಟ ರಾಜಿನಾಮೆಯನ್ನು ನಾನು ಉದಾಹರಿಸಬಲ್ಲೆ!.... ಅ. ಭಾ. ಕಾಂಗ್ರೆಸ್ ಸಮಿತಿಯವರು ನನ್ನನ್ನು ಕಾಂಗ್ರೆಸಿನಿಂದ ಹೊರಹಾಕುವುದಕ್ಕೆ ನನ್ನ ವೃದ್ಧಾಪ್ಯ ಕಾರಣವೆನ್ನುತ್ತಾರೆ. ನನಗೆ ಅವರು ಹೇಳುವ ಹಾಗೆ 81 ವರ್ಷವಾಗಿಲ್ಲ. ಯಾವುದೇ ವಿಚಾರದಲ್ಲಾದರೂ ತರುಣರು ನನ್ನೊಡನೆ ಸ್ಪರ್ಧೆಗೆ ನಿಲ್ಲಬಹುದೆಂದು ಆಹ್ವಾನಿಸುತ್ತೇನೆ. ಕಾಂಗ್ರೆಸ್ಸಿನವರು ನನ್ನ ಆರೋಪದ ಮೇಲೆ ಶಿಸ್ತಿನ ಕ್ರಮ ಕೈಗೊಳ್ಳುವದಕ್ಕೆ ವಯಸ್ಸನ್ನು ಮುಂದೆ ಮಾಡಿದ್ದು ಹಾಸ್ಯಾಸ್ಪದ." ಎಂದಿದ್ದಾರೆ.

ಪ್ರಕಾಶರ ಮೇಲೆ ಶಿಸ್ತನ್ನು ತೆಗೆದುಕೊಳ್ಳುವ ಈ ಕ್ರಮದಲ್ಲಿ ಕಾಂಗ್ರೆಸ್ ಸಮಿತಿಯು ಬಹಳ ಬುದ್ಧಿಯನ್ನು ಪ್ರಯೋಗಿಸಿತು. ಪ್ರಕಾಶರು ತ್ರಿಮೂರ್ತಿಗಳ ವಾದಿಯನ್ನು ಕಡೆಗಣಿಸಿ ಮಂತ್ರಿಗಳ ಆಪಾದನೆಯನ್ನು ಮತ್ತಷ್ಟು ಸ್ಪಷ್ಟೀಕರಿಸಿದ್ದರಲ್ಲಿ ಶಕ್ಯಾಂತರವಿಲ್ಲದೆ ಇಲ್ಲ. ನೆಹ್ರೂ, ಪಟೇಲ್, ಪ್ರಸಾದರ ತೀರ್ಪಿನ ಮೇಲೆ ಈ ಮಾತು ಬಂದದ್ದರಿಂದ ನಿವೃತ್ತಿಯಿಲ್ಲದ ಪ್ರಕಾಶರ ಆರೋಪವನ್ನು ಖಂಡಿಸಲೇಬೇಕಾಯಿತು. ಸತ್ಯ ನಿವೇದನೆಗಿಂತ ಹೆಚ್ಚಿನ ಪ್ರಶ್ನೆ ತ್ರಿಮೂರ್ತಿಗಳ ವರದಿಗೆ ಭಂಗಬರಬಾರದೆಂಬುದೇ ಆಗಿತ್ತು. ಅಂತಲೇ ಕಾಂಗ್ರೆಸ್ ಸಮಿತಿಯು ತನ್ನ ಪ್ರತೀಕಾರವನ್ನು ಎಚ್ಚರರೂಪವಾಗಿ ತಿಳಿಸಿತು. ಇಂತಹ ಸನ್ನಿವೇಶದಲ್ಲಿ ನೆಹ್ರೂರವರು ಅವರ ಮೇಲೆ ಶಿಸ್ತುಕ್ರಮ ಕೈಗೊಳ್ಳುವುದನ್ನು ವಿರೋಧಿಸಿದ್ದನ್ನು ನಾವು ವಿಶೇಷವಾಗಿ ಲಕ್ಷಿಸಬೇಕು. ಕಾಂಗ್ರೆಸಿನ ಅತ್ಯಂತ ನಿಷ್ಠಾವಂತ ಕಾರ್ಯಕರ್ತ ಪ್ರಕಾಶರು ಎಂಬುದನ್ನು ಅವರು ಚೆನ್ನಾಗಿ ಅರಿತಿದ್ದಾರೆ. ಅಲ್ಲದೆ ಪ್ರಕಾಶರ ಆರೋಪಗಳನ್ನು ಲಕ್ಷ್ಯಪೂರ್ವಕವಾಗಿ ನೋಡಿದ್ದರಿಂದಲೇ ಅಂತಹ ತೀಕ್ಷ್ಣ ಪ್ರಸಂಗಗಳೆಡೆಗೊಡಲಿಲ್ಲ. ಪ್ರಕಾಶರದು ಪೂರ್ತಿ ಕಟ್ಟುಕಥೆಯಲ್ಲವೆಂಬುದು ವಿಚಾರವಂತ ಜನಕ್ಕೆ ತಿಳಿಯದೆಯಿಲ್ಲ. ನ್ಯಾಯಾಲಯನೆಗೆ ಬಂದ ರಂಗರಾಜನ್ ಕೇಸು. [illegible] ಸರಕಾರದ ಯೋಗಕ್ಷೇಮವನ್ನು ಆಲೋಚಿಸಿ ಮೇಲಕ್ಕೆ ವರದಿ ಮಾಡಿದ್ದರ ಫಲವಾಗಿ ತ್ರಿಮೂರ್ತಿಗಳು [illegible] ವಾದಕ್ಕೆ ಒಪ್ಪಿಬಿಟ್ಟರು. ಪ್ರತಿಷ್ಠೆಯ ಮೂಲದ ತಪ್ಪು ಒಪ್ಪಿನ ಪ್ರಶ್ನೆ ಮತ್ತೆ ಉಳಿಯುವಂತಿಲ್ಲ. ಆ ಒಣ ಪ್ರತಿಷ್ಠೆಗೆ ಗಂಟುಬಿದ್ದ ಕಾಂಗ್ರೆಸ್ 'ಕೋಲೆ [illegible] ಬಾಂಡ್ [illegible]' ಎನ್ನುವ ಧೋರಣೆ ವಹಿಸಿದೆ. ಸತ್ಯಶೋಧನೆಯಿಂದ [illegible] ಹರಣ

ಮೂತ್ರಸ್ರಾವ ನಿಂತಿತು

'ಕುಮಾರಿ' ಬಿಲ್ಲೆಗಳನು ಉಪಯೋಗಿಸಿದರೆ ಹದಗೆಟ್ಟ ಮೂತ್ರಸ್ರಾವವಾಗುವುದು, ಹಿಕೋಟಿಗೆ ಬರುವುದು, ಈ ಔಷಧ ಸೇವನೆಯಿಂದ ತೀವ್ರ ಗುಣಹೊಂದಬಹುದು, ಯಾವ ಬಾಧಕವೂಯಿಲ್ಲ. ಸಾವಿರಾರು ಮಂದಿಗೆ ಖಾತ್ರಿ ಗುಣವಾಗಿದೆ-ಬೆಲೆ; ರೂ. 3-1 ಸ್ಪೆಶಲ್ ರೂ. 5-ಅಧಿಕಾಧಿಕ ಸ್ಪೆಶಲ್ ರೂ. 8 [ಪಿ. ಪಿ. ಹನ್ನೆರಡಾಣೆ ಪ್ರತ್ಯೇಕ.]

Mrs P. DEVEE, P 38 (N. J.)
Tollygunge CALCUTTA
ಸ್ವಾಕಿಸ್ಟರು ಶಹಾಕಂಪೆನಿ, ಮಂಗಳೂರು

ನಿಮಗಿದು ಗೊತ್ತೇ?

ನಿಮ್ಮ ಮನೆಯಲ್ಲಿ ಆಗಾಗ ಆಗಮಿಸುವ ವಾತರೋಗದ ಉಪದ್ರವಗಳಾದ-ಉದರಶೂಲೆ, ಕಟಿಶೂಲೆ, ಮೈಕೈಗಳಲ್ಲಿ ನೋವು, ಜಡತೆ, ಅಜೀರ್ಣ, ಹೊಟ್ಟೆಯುಬ್ಬರ, ಅಗ್ನಿಮಾಂದ್ಯ ಮುಂತಾದ ಎಲ್ಲಾ ಉಪದ್ರವಗಳಿಗೂ ರಾಮಬಾಣ ಯಾವುದು ಗೊತ್ತೇ? ಕಳೆದ ಇಪ್ಪತ್ತೈದು ವರುಷಗಳ ವಿಶಾಲ ಅನುಭವದಿಂದ ಸಶಾಸ್ತ್ರೀಯವಾಗಿ ತಯಾರಿಸಲ್ಪಟ್ಟ—

ಸ್ವದೇಶಿ ಔಷಧ ಭಂಡಾರ (ರಿಜಿಸ್ಟರ್ಡ್)
ಪ್ರೋ ಕುಂಜಾಲು. ದ ಕ.
ಇವರ 'ಧನ್ವಂತರೀ ಮಾತ್ರೆ'ಗಳು ಮಾತ್ರ

ಕೇವಲ ನಾಲ್ಕಾಣೆಯ ಅಂಚೆಚೀಟನ್ನು ಕಳುಹಿಸಿ ಆರು ಮಾತ್ರೆಗಳ ಒಂದು ಪ್ಯಾಕೇಟನ್ನು ಪಡೆದು ಅದರ ತೀವ್ರ ಪರಿಣಾಮಕಾರೀ ಗುಣಗಳನ್ನು ಕಂಡುಕೊಳ್ಳಬಾರದೇಕೆ? ಇಂದೇ ಬರೆಯಿರಿ.

ಮದ್ರಾಸು ಮುಂಗಡ ಪತ್ರ

ಮದ್ರಾಸು ಸರಕಾರದ ಮುಂಗಡ ಪತ್ರವನ್ನು ಅರ್ಥಸಚಿವರಾದ ಶ್ರೀ ಗೋಪಾಲ ರೆಡ್ಡಿಯವರು ಶಾಸನ ಸಭೆಯಲ್ಲಿ ಮಂಡಿಸಿದರು. ಪ್ರಾಯಶಃ ಉಳಿದೆಲ್ಲ ಪ್ರಾಂತಗಳ ಆಯವ್ಯಯ ಪತ್ರಕ್ಕಿಂತ ಮದ್ರಾಸು ಸರಕಾರದ ಪತ್ರವು ಅತ್ಯಂತ ಆಶಾದಾಯಕವಾಗಿರುತ್ತದೆಂದು ತೋರುತ್ತದೆ. ಶ್ರೀ ರೆಡ್ಡಿಯವರ ಮುಂಗಡಪತ್ರದಲ್ಲಿ ಕೇವಲ 23 ಲಕ್ಷ ರೂಪಾಯಿ ಕೊರತೆಯಾಗಿರುತ್ತದೆ. 1951–1952ರ ಮುಂಗಡ ಪತ್ರದಲ್ಲಿ ಆದಾಯ 5963 ಲಕ್ಷ, ವ್ಯಯ 60,30 ಲಕ್ಷ ರೂ. ಆಗಿರುತ್ತದೆ. 67 ಲಕ್ಷ ರೂ.ಗಳ ಕೊರತೆಯನ್ನು ಕಾಣಿಸಲಾಗಿದ್ದರೂ ಆ ಕೊರತೆಯನ್ನು ಮುಂದೆ ಉತ್ಪನ್ನಕರ ರೂಪದಲ್ಲಿ ಮದ್ರಾಸು ಸರಕಾರಕ್ಕೆ ದೊರೆಯುವ ೪೪ ಲಕ್ಷ ರೂ.ಗಳಿಂದ ಸಾಮಾನ್ಯವಾಗಿ ಪರಿಹರಿಸಿಕೊಳ್ಳಬಹುದಾದ್ದರಿಂದ ಉಳಿದ ಕೊರತೆ ಅಷ್ಟೇನೂ ಆಗಲಾರದ ಕಾರಣ ಹೊಸ ಕರಭಾರವನ್ನು ಮುಂಗಡ ಪತ್ರದಲ್ಲಿ ಕಾಣಿಸಿರಲಿಲ್ಲ. ಆಗಾಗಲೇ ಗತ ವರ್ಷದ ಕರಭಾರವನ್ನು ಜನತೆಯ ಮೇಲೆ ಹೇರಲಾಗಿದೆ. ಈಗ ನಾಟಕದ ಮೇಲೆ ಹೇರಿದ ಮನರಂಜನೆಯ ಕರಭಾರವನ್ನು ಮಂತ್ರಿಗಳು ರದ್ದುಗೊಳಿಸಿದ್ದಾರೆ. ಇದರಿಂದ ಮಂತ್ರಿಗಳು ಬಹಳ ಔದಾರ್ಯ ತೋರಿಸಿದ್ದಾರೆನ್ನಲಾಗುವುದಿಲ್ಲ. ಏಕೆಂದರೆ ನಾಟಕಗಳು ಹೆಚ್ಚಾಗಿ ನಡದು, ಸರಕಾರಕ್ಕೆ ಇದರಿಂದೇನೂ ಬಾಧಕ ಬರುತ್ತಿರಲಿಲ್ಲ. ಕಷ್ಟಪಟ್ಟು ಆ ಕಲೆಯ ಊರ್ಜಿತಕ್ಕೆ ಹೂಟ ಕಲವರಿಗೆ ವಜ್ರಾಘಾತವಾದಂತಾಗಿತ್ತು. ಇಂದು ಮಂತ್ರಿಗಳು ಅದರ ಮೇಲಿನ ಕರವನ್ನು ತೆಗೆದುದರಿಂದ ಸರಕಾರಕ್ಕೆ ನಷ್ಟವೂ ಇಲ್ಲ, ಸಾರ್ವಜನಿಕರಿಗೆ ಲಾಭವೂ ಇಲ್ಲ. ಇನ್ನು ಪತ್ರಿಕೆಗಳ ಮೇಲಿನ ಮಾರಾಟ ಕರದ ಹಣಬರಹವೂ ಅಷ್ಟೆ. ನಮ್ಮ ಪ್ರಾಂತದಲ್ಲಿ ಹೆಚ್ಚು ಉತ್ಪನ್ನವುಳ್ಳಂತಹ ಪತ್ರಿಕೆಗಳು ಕೆಲವೇ ಆಗಿರುತ್ತವೆ. ಹಿಕ್ಕುಳಿದವುಗಳು ತಮ್ಮ ಕಾಲ ಮೇಲೆ ತಾವು ನಿಲ್ಲುವಷ್ಟು ಸ್ವಾವಲಂಬಿಗಳೂ ಆಗಿಲ್ಲ. ಆದುದರಿಂದ ಇದರಿಂದಲೂ ಸರಕಾರಕ್ಕೆ ಪ್ರಾಪ್ತಿ ಕಡಿಮೆ. ಅಂತಲೇ ಪತ್ರಿಕೆಗಳ ಮೇಲಿನ ಮಾರಾಟಕರವನ್ನೂ ರದ್ದುಗೊಳಿಸಲಾಗಿದೆ. ಮೂರನೆಯದಾಗಿ ಕೈಮಗ್ಗದ ಅರಿವೆ ಮೇಲಿನ ಮಾರಾಟಕರದಲ್ಲಿ ಕಡಿತವನ್ನುಂಟುಮಾಡಿದ ವಿಚಾರ. ಕೈಮಗ್ಗದ ಉದ್ಯಮದಲ್ಲಿಯ ಜನರ ಪಾಡಂತೂ ಚಿಂತಾಜನಕವಾಗಿರುತ್ತದೆ. ಇಂತಹ ವೇಳೆ ಅರಿವೆ ಮೇಲಿನ ಮಾರಾಟಕರದಲ್ಲಿ ಅರ್ಧಕ್ಕೆ ಇಳಿಸಿದಂತವನ್ನು ನಾವು ಪ್ರಶಂಸಬೇಕಾಗಿದೆ.

ಸರಕಾರದ ಇತರ ಚಟುವಟಿಕೆಗಳಲ್ಲಿ ಸ್ವಲ್ಪ ಮಟ್ಟಿಗೆ ಪ್ರಗತಿ ಕಾಣುತ್ತಲಿದೆಯಾದರೂ ಹಲವಾರು ವಿಷಯಗಳಲ್ಲಿ ವ್ಯಯಿಸಿದ್ದಕ್ಕೆ ತಕ್ಕುದಾದ ಪ್ರತಿಫಲವೇನೆಂಬುದು ಸಮಸ್ಯೆಯೇ ಆಗಿರುತ್ತದೆ. ಕೆಲವು ಕೈಗಾರಿಕೋದ್ಯಮಗಳಿಗಾಗಿ, ನೀರಾವರಿ ಯೋಜನೆಗಳಿಗಾಗಿ, ವಿದ್ಯುಚ್ಛಕ್ತಿಯ ಸಂಬಂಧವಾಗಿ ವ್ಯಯಿಸಿದಂತ ಮುಂದಕ್ಕೆ ಅವರ ಪರಿಣಾಮವನ್ನು ಪರೀಕ್ಷಿಸಬಹುದೇ ಹೊರತು, ಈಗಲ್ಲ. ವಿದ್ಯಾ ಇಲಾಖೆಯಲ್ಲಿ ಪ್ರಗತಿ ಕಾಣುತ್ತಲಿದೆ. ಆದರೆ ನಿರ್ದಿಷ್ಟವಾದ ಧೋರಣೆಯಿಲ್ಲದೆ ಹೆಚ್ಚಿನ ವಿದ್ಯಾಭ್ಯಾಸ ಮಾಡುವವರಿಗೆ ತಕ್ಕುದಾದ ಮಾರ್ಗದರ್ಶನವಿಲ್ಲ. ಎಲ್ಲ ವಿಭಾಗಗಳಲ್ಲೂ ಶೀಘ್ರಗಾಮಿತ್ವ ಕಾಣುತ್ತದೆಯಾದರೂ ಸಾಧಿಸಿದ್ದು ಬಹಳ ಕಡಿಮೆಯಾಗಿರುತ್ತದೆ.

ಸಾರ್ವಜನಿಕ ಆರೋಗ್ಯ ರಕ್ಷಣೆಗಾಗಿ ಹೆಚ್ಚಿನ ಜಾಗ್ರತೆಯನ್ನು ತೆಗೆದುಕೊಳ್ಳಲಾಗಿದೆ. 1945–46ರಲ್ಲಿ ಔಷಧಿಗಾಗಿ 234 ಲಕ್ಷ ರೂ. ವ್ಯಯ ಮಾಡಿದ್ದರೆ 1950–51ರಲ್ಲಿ 450 ಲಕ್ಷ ರೂ.ಗಳನ್ನು ವೃದ್ಧಿಗಾಗಿ ಉಪಯೋಗಿಸಿಯದೆ ಹಲವಾರು ಕಡೆಗಳಲ್ಲಿ ನೂತನ ಆಸ್ಪತ್ರೆಗಳು ರೂಪುಗೊಂಡು ಸಾರ್ವಜನಿಕರ ರಕ್ಷಣೆಯಲ್ಲಿ ಒಳ್ಳೆಯ ಕೆಲಸ ಮಾಡುತ್ತಿವೆ.

ಎಲ್ಲಕ್ಕಿಂತಲೂ ಹೆಚ್ಚಿನ ವ್ಯಯವೆಂದರೆ ಪೋಲೀಸು ಖಾತೆಯದ್ದು. ಅಹಿಂಸೆಯಿಂದಲೇ ಶಾಂತಿ ಎನುವ ತತ್ವ ಮಾತಿನಲ್ಲೇ ಉಳಿದಿದೆ. ನಮ್ಮ ಸ್ವಾತಂತ್ರ್ಯಕ್ಕೆ ಅಹಿಂಸಾಸ್ತ್ರ ಮುಖ್ಯವಾದರೂ ಗಳಿಸಿದ ಸ್ವಾತಂತ್ರ್ಯವನ್ನು ಉಳಿಸಿಕೊಳ್ಳುವದಕ್ಕೆ ಅದು ಮುಖ್ಯವಾಗಲಿಲ್ಲ. ಸ್ವಾತಂತ್ರ್ಯ ಸಿಕ್ಕ ಈ ಅಲ್ಪ ಸಮಯದಲ್ಲಿ ಹಲವಾರು ದುಷ್ಟ ಶಕ್ತಿಗಳು ಸ್ವಾರ್ಥವನ್ನು ಸಾಧಿಸಿಕೊಳ್ಳುವುದಕ್ಕಾಗಿ ಸರಕಾರಕ್ಕೆ ಕೀಟಲೆ ಕೊಡುತ್ತಿದ್ದವು. ಇಂತಹ ಸನ್ನಿವೇಶದಲ್ಲಿಯೂ ನಾವು ಮೂಗು ಹಿಡಿದು ದ್ರಾವಿಡ ಪ್ರಾಣಾಯಾಮ ಮಾಡುವಂತಿಲ್ಲ. ಕಾಶ್ಮೀರ, ಹೈದರಾಬಾದು ಪ್ರಕರಣಗಳಿಂದ ನಾವು ತುಂಬ ಅನುಭವವನ್ನು ಪಡೆದಿದ್ದೇವೆ. ಇಂಥ ವೇಳೆ ಇಂತಹ ದುಷ್ಟ ಕಾಪಳಿಯ ಮುಂದೆ ಅಹಿಂಸಾವಾದಿಗಳಾಗಿ ಕುಳಿತರೆ ನಮ್ಮ ಸ್ವಾತಂತ್ರ್ಯವನ್ನು ಬೇರೆಯವರು ಕಸಿದು ಕೊಳ್ಳುವುದು ಮಾತ್ರವಲ್ಲದೆ; ದೇಶದಲ್ಲಿ ಅರಾಜಕತೆಯುಂಟಾದೀತು. ಲೋಕದಲ್ಲಿಯೆ ಮಹಾ ವಿಪ್ಲವವನ್ನುಂಟುಮಾಡಿಂತಕ್ಕ ಕಮ್ಯೂನಿಸ್ಟರ ಉಪಟಳ ಭಾರತಕ್ಕೂ ತಪ್ಪಲಿಲ್ಲ. ಕಮ್ಯೂನಿಸ್ಟರ ವಿಧ್ವಂಸಕ ಕಾರ್ಯಗಳಿಂದ ಭಾರತ ಸರಕಾರಕ್ಕೆ ತುಂಬ ಹಾನಿಯಾಗಿದೆ. ರೈಲ್ವೆಯನ್ನು ಕಡಿಹಿ ನಿರುಪದ್ರವಿಗಳ ಜೀವಾಪಹರಣ ಮಾಡುವದೂ, ಕೊಳ್ಳೆಹೊಡೆಯುವ ದರೋಡೆಗಳ ಮೂಲಕ ಹಲವು ಸಂಸಾರಗಳನ್ನು ನಿರ್ಮೂಲ ಮಾಡುವದೂ ಅವರ ಅನುದಿನದ ಕಾರ್ಯವಾಗಿರುತ್ತದೆ. ಆದುದರಿಂದಲೇ ಭಾರತ ಸರಕಾರ ಶೇಕಡಾ 60ರಷ್ಟು ರಕ್ಷಣಾಖಾತೆಗೆ ವ್ಯಯಿಸುತ್ತಲಿದೆ. ಮದ್ರಾಸು ಪ್ರಾಂತ್ಯವೂ ಕೂಡಾ ಉಳಿದೆಲ್ಲಕ್ಕಿಂತ ಹೆಚ್ಚಾಗಿ ಪೋಲೀಸ್ ಇಲಾಖೆಗೆ ವ್ಯಯಮಾಡುತ್ತದೆ. ಮೂರು ಪಟ್ಟಿನಷ್ಟು ಹೆಚ್ಚಾಗಿದ್ದು ವಿಷಾದ ಎನ್ನುವದಾದರೂ ಅನಿವಾರ್ಯವಾಗಿರುತ್ತದೆ. ಕಲ್ಕತ್ತಾದ ಹಾಗೆಯೇ ಮದ್ರಾಸು ಪ್ರಾಂತದ ಹಲವು ಜಿಲ್ಲೆಗಳಲ್ಲಿ ಕಮ್ಯೂನಿಸ್ಟರ ಹಾವಳಿ ಅತಿಯಾಗಿರುತ್ತದೆ. ಇದನ್ನು ಹತೋಟಿಯಲ್ಲಿಡುವದಕ್ಕಾಗಿ ಹೆಚ್ಚಿನ ಜಾಗ್ರತೆಯನ್ನು ಪೋಲೀಸ ಇಲಾಖೆಯು ವಹಿಸಿರುತ್ತದೆ. 1945–46ರಲ್ಲಿ ಪೋಲೀಸು ಇಲಾಖೆಗೆ 300 ಲಕ್ಷ ಸಂದಾಯವಾಗುವಲ್ಲಿಂದು 700 ಲಕ್ಷ ರೂ. ಸಲ್ಲುತ್ತಲಿದೆ!

ಆಹಾರದ ವಿಚಾರದಲ್ಲಿ ಮದ್ರಾಸು ಯಾವಾಗಲೂ ಕೊರತೆಯದ್ದಾಗಿರುತ್ತದೆ. ಸ್ವಾವಲಂಬಿಯಾಗಬೇಕಾದರೆ ನೀರಾವರಿ ಯೋಜನೆ ಚೆನ್ನಾಗಿ ಬೇಕು. ಮದ್ರಾಸು ಸರಕಾರ ಬಾವಿಯನ್ನು ತೋಡುವದರ ಸಲುವಾಗಿಯೂ ಕೋಟಿ ಹಣವನ್ನು ವಿನಿಯೋಗಿಸಿದೆ. ಆದರೆ ಬಡ ರೈತನಿಗೆ ಅದರಿಂದಾದ ಉಪಯೋಗವೆಷ್ಟೆಂಬುದರ ಕುರಿತು ಯಾರೂ ವಿಚಾರಿಸಿದಂತಿಲ್ಲ. ಹಣವುಳ್ಳವರೂ ಸರಕಾರದ ಮಂಜೂರಿಯಿಂದ ಸ್ವ ಉಪಯೋಗಕ್ಕೆ ಬೇರಾಗುವಲ್ಲಿ ಬಾವಿಗಳನ್ನು ಕಟ್ಟಿಸಿದವುಗಳ ಸಂಖ್ಯೆ ಬಹಳವಿದೆ. ಇಂತಹ ಬಾವಿಗಳನ್ನು ಕಟ್ಟಿಸುವಲ್ಲಿ ಇಲ್ಲವೆ ದುರಸ್ತಿಮಾಡುವಲ್ಲಿ ತುಂಬ ಹಣವನ್ನು ಸರಕಾರ ಕಳೆದುಕೊಂಡಿದೆ. ಹಾಗೆಯೇ ವನಮಹೋತ್ಸವ—ಅಧಿಕಾರಿಗಳ ಬೆಳೆಸುವಿಕೆಗಳಿಗಾಗಿ ವ್ಯರ್ಥ ಮಾಡಿದ್ದರಿಂದ ಯಾವ ಪ್ರಾಪ್ತಿಯೂ ಆಗಲಾರದು. ಬಾವಿಗೆ ವ್ಯಯಿಸಿದ ಹೆಚ್ಚಿನಂಶವು 'ಬಾವಿಗೇ ಬಿತ್ತು' ಎನ್ನುವಂತಾಗಿದೆ.

ಈ ಬಾರಿಯ ಮುಂಗಡ ಪತ್ರದಲ್ಲಿ ಕೆರೆ ದುರಸ್ತಿಗೆ 150 ಲಕ್ಷ, ಅಧಿಕ ಆಹಾರ ಉತ್ಪಾದನೆಗಾಗಿ 70 ಲಕ್ಷ, ಬರಗಾಲಪೀಡಿತ ಪ್ರದೇಶದ ಕಂದಾಯ ಮಾಫಿಮಾಡುವದಕ್ಕೆ 50 ಲಕ್ಷ, ಟ್ಯೂಬಬಾವಿ ತೋಡಲು 11 ಲಕ್ಷ, 7600 ನೀರಾವರಿ ಬಾವಿ ತೋಡಿಸಲು 38 ಲಕ್ಷ ರುಪಾಯಿಗಳನ್ನು ಹಂಚುವ ನಿರ್ಧಾರವನ್ನು ಸರಕಾರ ಮಾಡಿರುತ್ತದೆ.

1951–53ರಲ್ಲಿ ವಿದ್ಯುಚ್ಛಕ್ತಿ ಹಾಗೂ ನೀರಾವರಿ ಯೋಜನೆಗಾಗಿ ಸರಕಾರಕ್ಕೆ 48 ಕೋಟಿ ರೂ.ಗಳು ಬೇಕಾಗುವವು. ಸರಕಾರದೊಡನಿರುವ ಅವಶ್ಯಕ ನಿಧಿಯಿಂದ ಬಹಳ ಅಪೇಕ್ಷಿಸುವಂತಿಲ್ಲವಾದ್ದರಿಂದ, ಕೇಂದ್ರ ಸರಕಾರವನ್ನು ಯಾಚಿಸಬೇಕಾಗುತ್ತದೆ. ಕೇಂದ್ರ ಸರಕಾರವೂ ಮದ್ರಾಸು ಸರಕಾರ ಅಪೇಕ್ಷಿಸಿದಷ್ಟು ನೀಡುವ ಸ್ಥಿತಿಯಲ್ಲಿಲ್ಲದಿರುವದರಿಂದ ಸಾರ್ವಜನಿಕರಿಂದ ಸಾಲಪಡೆಯುವ ಪ್ರಸಂಗ ಬರಲೂ ಬಹುದು.

UDIPI MUNICIPALITY
Tender Notice

Sealed tenders will be received by the undersigned upto 4 p. m. on 30-3-51 for the following works.

Name of work	Amount of Estimate	Tender deposit.
1. Maintenance of Town roads East block	Rs. 6000/-	Rs. 300/-
2. Maintenance of Town roads West block	Rs. 3300/-	Rs 165/-

Full Particulars as to conditions of contract etc. may be obtained from the Municipal office during office hours on working days.

Municipal Office, Udipi, Dated 8—3—1951. **A. S D'souza,** Commissioner

ಜೀವವಿಮೆಗಾಗಿ

ವಿಚಾರಿಸಿರಿ

ನ್ಯೂ ಗಾರ್ಡಿಯನ್ ಒಫ್ ಇಂಡಿಯಾ
ಲೈಫ್ ಇನ್ಶೂರೆನ್ಸ್ ಕೋ ಲಿಮಿಟೆಡ್.

(ಸ್ಥಾಪನೆ: 1934)

ಚೆಯರ್‌ಮೆನ್: ಶ್ರೀ. ಎಮ್. ಸಿಟಿ ಎಮ್. ಚಿದಂಬರಮ್ ಚೆಟ್ಟಿಯಾರ್

ಪ್ರಗತಿ ಪಥದಲ್ಲಿರುವ ಈ ವಿಮಾ ಸಂಸ್ಥೆಯ ಪೊಲಿಸಿ ಪಡೆಯುವುದೆಂದರೆ ಅದೊಂದು ಉತ್ತಮ ವಿನಿಯೋಗ. ಅಂತೆಯೇ ಅದರ ಏಜನ್ಸಿ ಸಂಪರ್ಕವನ್ನಿಟ್ಟುಕೊಳ್ಳುವುದೂ ಅಮೂಲ್ಯ ವ್ಯವಹಾರವಾಗಿದೆ.

ಮಂಗಳೂರು ಶಾಖೆ: ಕೆ. ಎಸ್. ರಾವ್. ರೋಡು, ಹಂಪನಕಟ್ಟೆ, ಮಂಗಳೂರು.

ಕೇಂದ್ರ ಕಾರ್ಯಾಲಯ: "ಯುನೈಟೆಡ್ ಇಂಡಿಯಾ ಲೈಫ್ ಬಿಲ್ಡಿಂಗ್" ಪೋಸ್ಟ್ ಬಾಕ್ಸ್ ನಂಬ್ರ 142 ಮದ್ರಾಸು.

ಸ್ವಲ್ಪ ಬಂಡವಾಳದಲ್ಲಿ

ಬಹು ಉಪಯುಕ್ತ ಹಾಗೂ ಲಾಭಕರ ಉದ್ಯೋಗ.

ಸೋಪ್ ವಿಲ್, ಎಣ್ಣೆಯ ಮಿಲ್ ಅಥವಾ ಟಿನ್ ಯಾ ಕಾಗದಿಂದ ಅನೇಕ ವಸ್ತುಗಳನ್ನು ಸುಲಭದಲ್ಲಿ ತಯಾರಿಸಿರಿ.

ವಿವರದ ಬಗ್ಗೆ ಬರೆಯಿರಿ:

The Vijay Engineering Co. Ltd.

Mazagaon, **Bombay 10.**

ಲೋಕಾಂತ

ಕೊರಿಯಾದಲ್ಲಿ

ಕೊರಿಯಾ ರಣರಂಗದಲ್ಲಿ ಕಳೆದ ವಾರದಂತೆ ಈ ವಾರವೂ ಕಮ್ಯೂನಿಸ್ಟರಿಗೆ ಸೋಲೇ ಪ್ರಾಪ್ತವಾಗುತ್ತಲಿದೆ. ಮಧ್ಯ ಕೊರಿಯಾದಲ್ಲಿ ಬ್ರಿಟಿಷರ ಪಡೆಯೊಂದು 3,000 ಗಜ ಮುನ್ನುಗ್ಗಿದೆ. ಅಮೆರಿಕೆಯ ಪಡೆಗಳು ಇನ್ನೊಂದು ಕಡೆಯಿಂದ ನಾಲ್ಕು ದಿನದಿಂದೀಚೆ 20 ಮೈಲು ಮುನ್ನುಗ್ಗಿ ಬಂದಿರುತ್ತಾರೆ. ಅಮೆರಿಕನ್ನರು 38ನೇ ಅಕ್ಷಾಂಶ ರೇಖೆಗೆ 25 ಮೈಲು ದೂರದಲ್ಲಿದ್ದಾರೆ. ಅಮೆರಿಕೆಯ ಇನ್ನೊಂದು ಪಡೆಯು ತೀಕ್ಷ್ಣವಾದ ಯುದ್ಧಕ್ರಮವನ್ನು ಕೈಗೊಂಡದ್ದರಿಂದ ಕಮ್ಯೂನಿಸ್ಟರು ವಿಶೇಷ ಗಂಡಾಂತರಕ್ಕೆ ಒಳಪಟ್ಟಿರುತ್ತಾರೆ.

ಪಾಶ್ಚಾತ್ಯರಾಷ್ಟ್ರಗಳ ಮಾತು....

ಪ್ಯಾರಿಸದಲ್ಲಿ ಜರಗಲಿರುವ ಪಾಶ್ಚಾತ್ಯ ರಾಷ್ಟ್ರಗಳ ಮಾತುಕತೆಗಳಿಗೆ ಬ್ರಿಟಿಷ್, ಫ್ರಾನ್ಸ್, ರಶ್ಯ ಮತ್ತು ಅಮೆರಿಕಾದ ಪ್ರತಿನಿಧಿಗಳು ಪ್ಯಾರಿಸದಲ್ಲಿ ಕೂಡಿರುತ್ತಾರೆ. ಮಾತುಕತೆಗಳ ಪರಿಣಾಮವನ್ನು ಮುಂದಕ್ಕೆ ನೋಡಲಿದೆ.

ಅಮೆರಿಕೆಯ ಪ್ರತಿಭಟನೆ

ಪಾಶ್ಚಿಮಾತ್ಯ ರಾಷ್ಟ್ರಗಳೊಡನೆ ರಶಿಯಕ್ಕಿಂತಲೂ ಹೆಚ್ಚಿನ ಶಸ್ತ್ರ ಸೈನ್ಯದಳವಿದೆಯೆಂಬ ರಶಿಯಾದ ದೂರನ್ನು ಅಮೆರಿಕೆಯು ಅಲ್ಲಗಳೆದು ರಶಿಯವು ಪಡೆದ ಶಸ್ತ್ರಾಂಶವನ್ನು ಮೂರನೆಯ ನ್ಯಾಯಸ್ಥರಿಂದ ಶೋಧಿಸಬಹುದೆಂದು ಆಹ್ವಾನಕೊಟ್ಟಿರುತ್ತದೆ.

ನೇಪಾಳದಿಂದ ಸಂದೇಶ

ನೇಪಾಳದ ಅರಸರಾದ ತ್ರಿಭುವನರು ನಮ್ಮ ರಾಷ್ಟ್ರಾಧ್ಯಕ್ಷರಿಗೊಂದು ಸಂದೇಶ ಕಳಿಸಿರುತ್ತಾರೆ. ಸಂದೇಶದಲ್ಲಿ ತನಗೂ ತನ್ನ ಸಂಗಾತಿಯವರಿಗೂ ಭಾರತ ಸರಕಾರವಿತ್ತ ಆದರ ಸತ್ಕಾರಕ್ಕಾಗಿ ಕೃತಜ್ಞತಾಪೂರ್ವಕವಾದ ಅಭಿನಂದನೆಗಳನ್ನು ಸೂಚಿಸಿರುತ್ತಾರೆ. ಅದಕ್ಕೆ ರಾಜೇಂದ್ರ ಪ್ರಸಾದರು "ಎರಡು ರಾಷ್ಟ್ರಗಳೊಳಗೆ ಸ್ನೇಹ ಸೌಹಾರ್ದಗಳು ವೃದ್ಧಿಗೊಳ್ಳುತ್ತಿರುವದಕ್ಕೆ ತುಂಬ ಅಭಿಮಾನ ಪಡುತ್ತೇನೆ" ಎಂದುತ್ತರಿಸಿದ್ದಾರೆ.

ಇಂಡೋನೇಶಿಯಾ

ಭಾರತ ಇಂಡೋನೇಶಿಯಾಗಳೊಳಗೆ ಮೈತ್ರಿತ್ವದ ಒಪ್ಪಂದ ನಡೆಯಿತು. ಉಭಯ ರಾಷ್ಟ್ರಗಳ ಶಾಶ್ವತ ಮೈತ್ರಿ ಪರಸ್ಪರ ಹಿತದ ಸಲುವಾಗಿ ಉಳಿಯುವದಕ್ಕಾಗಿ ಎರಡು ರಾಷ್ಟ್ರಗಳು ಒಪ್ಪಂದಕ್ಕೆ ಸಹಿಹಾಕಿದವು. ಇಂಡೋನೇಶಿಯವು ಪಾಕಿಸ್ತಾನದೊಡನೆಯೂ ಇಂತಹ ಒಪ್ಪಂದವನ್ನು ಮಾಡಿಕೊಂಡಿರುತ್ತದೆ.

ಭಾರತದ ಬಗ್ಗೆ ಅಪಪ್ರಚಾರ

ಪಾಕಿಸ್ತಾನದ ಪರವಾಗಿ ಪ್ರಚಾರ ಮಾಡುವ "ಕಾಶ್ಮೀರಿ ಫರ್ಸಾಡ್" ಎಂಬ ಕಥಾನಕ ಚಿತ್ರವೊಂದನ್ನು ಇಂಗ್ಲಂಡಿನ ವೆಸ್ಟ್ ಎಂಡ್ ಸಿನೇಮಾಥಿಯೇಟರದಲ್ಲಿ ತೋರಿಸಲಾಯಿತು. 'ಕಾಶ್ಮೀರೀ ಫರ್ಸಾಡ್' ಚಿತ್ರದಲ್ಲಿ ಭಾರತದ ಮೇಲೆ ವಿದೇಶದ ಜನರು ತಪ್ಪು ಭಾವನೆಯನ್ನು ಕಲ್ಪಿಸಿಕೊಳ್ಳುವ ದಾಟಿಗೆ ಪ್ರಚಾರ ಮಾಡಲಾಗುತ್ತದೆ.

ಆಹಾರ ನೂಲು

ಮದ್ರಾಸು ಶಾಸನ ಸಭೆಯಲ್ಲಿ ಮಂಗಳವಾರ ಬಜೆಟ್ಟಿನ ಚರ್ಚೆ ನಡೆದು ಆಹಾರ ಹಾಗೂ ನೂಲಿನ ಕೊರತೆಯ ಕುರಿತು ಸರಕಾರವನ್ನು ಟೀಕೆ ಮಾಡಿದ್ದಕ್ಕೆ, ಮಂತ್ರಿ ಗೋಪಾಲರೆಡ್ಡಿಯವರು ಕೊರತೆಗೆ ಸ್ವಲ್ಪ ಮಟ್ಟಿಗೆ ಪ್ರಾಂತೀಯ ಸರಕಾರ ಕಾರಣವಾದರೂ ಬಹುಮಟ್ಟಿಗೆ ಕೇಂದ್ರಸರಕಾರದ್ದಾಗಿರುತ್ತದೆಂದು ಹೇಳಿದರು.

ಭಾರತದ ನಿರಾಕರಣೆ

ಕಾಶ್ಮೀರೀ ಸಮಸ್ಯೆಯ ನಿವಾರಣೆಗಾಗಿ ಆಂಗ್ಲೋ ಅಮೆರಿಕನರು ಮುಂದೆ ತಂದಿರುವ ಠರಾವಿನ ಸೂಚನೆಯನ್ನು ಭಾರತವು ನಿರಾಕರಿಸಿತು. ಆಂಗ್ಲೋ ಅಮೆರಿಕನ ಗೊತ್ತುವಳಿಯನ್ನು ನೋಡಿದಾಗ ಅದು ಭಾರತ–ಪಾಕಿಸ್ತಾನಗಳಿಗಾಗಿ ಸಂಯುಕ್ತ ರಾಷ್ಟ್ರಸಂಘವು ನೇಮಿಸಿದ ಸಮಿತಿಯು ಉಭಯತರ ಸಮ್ಮತಿಯಿಂದ ಕೈಗೊಂಡ ನಿರ್ಣಯಗಳಿಗೆ ವಿರುದ್ಧವಾಗಿದೆ ಎಂಬುದು ಕಂಡು ಬರುವಂತಿದೆ. ಹಿಂದಿನ ಈ ಪರಿಣಾಮಾಪೇಕ್ಷೆಯಿಂದ ಕೆಲ ಆಶ್ವಾಸನೆಗಳು ದೊರೆತಲ್ಲಿ ಭಾರತ ಸರಕಾರವು ಒಪ್ಪಿಗೆಯನ್ನಿತ್ತಿದ್ದ 1948 ಹಾಗೂ 1949 ಜನವರಿಯ ಗೊತ್ತುವಳಿಗಳಿಗೆ ಈಗಿನ ಗೊತ್ತುವಳಿಯು ಭಿನ್ನವಾಗಿರುವ ಪ್ರಯುಕ್ತ ಈ ಗೊತ್ತುವಳಿಯನ್ನು ಸ್ವೀಕರಿಸಲು ಸಾಧ್ಯವಿಲ್ಲವೆಂದು ಭಾರತದ ಪರವಾಗಿ ಶ್ರೀ. ಬಿ ಎನ್. ರಾಯರು ಹೇಳಿದರು.

ಬ್ರಿಟನವೂ ಪತ್ರಿಕೆಯೂ

ಬ್ರಿಟನಿನಲ್ಲಿ ಸಾವಿರ ಜನಸಂಖ್ಯೆಗೆ ೬೦೦ ಪತ್ರಿಕೆಗಳ ಮಾರಾಟವಿದೆ. ಉಳಿದ ರಾಷ್ಟ್ರಗಳ ವೃತ್ತಪತ್ರಿಕೆಗಳ ಸಂಖ್ಯೆಯು ಬ್ರಿಟನಕ್ಕಿಂತ ಕಡಿಮೆಯಾಗಿದೆ. ಲಕ್ಸಂಬರ್ಗದಲ್ಲಿ ೪೪೫, ಸ್ವೀಡನಿನಲ್ಲಿ ೪೯೭, ಸ್ವಿಜರ್‌ಲೆಂಡದಲ್ಲಿ ೩೫೮, ಅಮೆರಿಕದಲ್ಲಿ ೩೫೪, ಭಾರತದಲ್ಲಿ ೬, ಬ್ರಹ್ಮದೇಶದಲ್ಲಿ ೭, ಥಾಯಿಲೇಂಡದಲ್ಲಿ ೪, ಪಾಕಿಸ್ತಾನದಲ್ಲಿ ೩, ಅಫಘಾನಿಸ್ಥಾನದಲ್ಲಿ ೧. ಹೀಗೆ ಪತ್ರಿಕೆಗಳ ಮಾರಾಟ ಒಂದು ನಾಡಿನ ಜನಸಂಖ್ಯೆಗೆ ಇರುವದು. ವ್ಯಕ್ತಿಸ್ವಾತಂತ್ರ್ಯದ ಸಂಗದ ಪ್ರಾಸ್ತಾವಿಕೆಯ ಕಾಲದಲ್ಲಿ ಈ ಲೆಕ್ಕಗಳು ಮುಂದಬಂದವು.

ಕ್ರೀಡಾ ಸಮ್ಮೇಳನ

ದಿಲ್ಲಿಯ ಹೊಸ ರಾಷ್ಟ್ರೀಯ ಕ್ರೀಡಾಂಗಣದಲ್ಲಿ ಏಶಿಯಾದ ಮೊದಲನೆಯ ಕ್ರೀಡಾ ಸಮ್ಮೇಳನವನ್ನು ಏಶಿಯಾ ಕ್ರೀಡಾ ಸಂಸ್ಥೆಯವರು ಜರಗಿಸಿದರು. ರಾಷ್ಟ್ರಾಧ್ಯಕ್ಷರು ಈ ಸಮಾರಂಭವನ್ನು ಉದ್ಘಾಟಿಸಿದರು. ಈ ಸಮಾರಂಭಕ್ಕೆ ಕೇಂದ್ರ ಸರಕಾರದ ಎಲ್ಲ ಮಂತ್ರಿಗಳು ವಿವಿಧ ರಾಯಭಾರ ವರ್ಗದವರು ಪಾರ್ಲಿಮೆಂಟಿನ ಸದಸ್ಯರು ಬಂದಿದ್ದರು. ಏಶಿಯನ್ ರಾಷ್ಟ್ರಗಳ 500 ಆಟಗಾರರು ಇದರಲ್ಲಿ ಭಾಗವಹಿಸಿದ್ದರು. ಇಂಥಹ ಸಮ್ಮೇಳನವು ನಾಲ್ಕು ವರ್ಷಗಳಿಗೊಮ್ಮೆ ಒಂದೊಂದು ಏಶಿಯನ್ ರಾಷ್ಟ್ರಗಳಲ್ಲಿ ಕೂಡುವಂತೆ ಗೊತ್ತಾಗಿರುತ್ತದೆ. ಈ ಸಂದರ್ಭದಲ್ಲಿ ನೆಹರೂರವರು ಮಾತನಾಡುತ್ತಾ "ಇಂದು ಜಗತ್ತಿನಲ್ಲಿ ದ್ವೇಷವು ಎಲ್ಲೆಡೆಯಲ್ಲಿಯೂ ಕಂಡು ಬರುತ್ತದೆ. ಈ ದ್ವೇಷವನ್ನು ಕಡಿಮೆ ಮಾಡುವ ಶಕ್ತಿಗಳನ್ನು ಸಂಘಟಿಸಿ ಸೌಹಾರ್ದ ಹಾಗೂ ಸದ್ಭಾವಗಳನ್ನು ಸಾಧಿಸುವದು ಅವಶ್ಯವಿದೆ. ಈ ಬಗೆಯ ಅಂತರ್‌ರಾಷ್ಟ್ರೀಯ ಸಹಕಾರವನ್ನು ಇಂಥ ಏಶಿಯನ್ ಕ್ರೀಡಾಪಟುಗಳು ಆಟಸ್ಪರ್ಧೆಯ ರೀತಿಯಲ್ಲಿ ಸಾಧಿಸಬಲ್ಲವು" ಎಂದು ಹೇಳಿದರು.

ಮದ್ರಾಸಿಗೆ ಅಕ್ಕಿ

ಚೈನಾದಿಂದ ಮದ್ರಾಸು ಪ್ರಾಂತಕ್ಕಾಗಿ 18,000 ಟನ್ ಅಕ್ಕಿಯನ್ನು ಸಾಗಿಸಿಕೊಂಡು ಎರಡು ಹಡಗುಗಳು ಹೊರಟಿವೆ. ಈ ತಿಂಗಳೊಳಗಾಗಿ ಮದ್ರಾಸಿಗೆ ಬಂದು ತಲುಪುವ ನಿರೀಕ್ಷೆಯಿದೆ.

ಝೆಕ್ ರಾಯಭಾರಿಯು ಕಣ್ಮರೆ

ಭಾರತದಲ್ಲಿ ಝೆಕೋಸ್ಲೋವಾಕಿಯದ ರಾಯಭಾರಿಗಳಾಗಿದ್ದ ಡಾ| ಬಿ ಜಿ. ಕ್ರಾಟೋಚಿಲಾ ಕಳೆದ ಗುರುವಾರ ಮುಂಜಾನೆ ತಮ್ಮ ಸಿಬ್ಬಂದಿಗಳಿಗಾರಿಗೂ ತಿಳಿಸದೆ ಪರಾರಿಯಾಗಿರುತ್ತಾರೆ. ಅವರ ಪಲಾಯನದ ಕುರಿತು ಝೆಕೋಸ್ಲೋವೇಕಿಯಾ ರಾಯಭಾರ ಕಚೇರಿಯ ಪತ್ರಕಾರನು ಒಂದು ಸಂದರ್ಶನದಲ್ಲಿ ಅವರಿಗೆ ಪ್ರೇಗಕ್ಕೆ ಹಿಂದಿರುಗಲು ಝೆಕ್ ಸರಕಾರ ಆಜ್ಞಾಪಿಸಿತ್ತು. ಅವರು ಗುರುವಾರ ಮುಂಜಾನೆ ತಮ್ಮ ಕುಟುಂಬದೊಡನೆ ಯಾರಿಗೂ ತಿಳಿಸದೆ ಹೋಗಿರುವುದರಿಂದ ತಮ್ಮ ಹುದ್ದೆಗೆ ರಾಜೀನಾಮೆ ಕೊಟ್ಟಂತೆಯೆ ಎಂದು ತಿಳಿಯಬೇಕಾಗಿದೆ. ಅವರ ಈ ವರ್ತನೆಯನ್ನು ದೇಶದ್ರೋಹವೆಂದು ತಿಳಿಯಬೇಕೆಂದು ಇಲ್ಲಿಯ ಇತರ ನೌಕರರ ಅಭಿಪ್ರಾಯವಾಗಿದೆ ಎಂದಿರುವನು.

ಕೇಂದ್ರದಿಂದ ನೂಲು

ಕೇಂದ್ರ ಸರಕಾರವು ಮದ್ರಾಸು ಪ್ರಾಂತಕ್ಕೆ ಕೊಡಮಾಡಿದ 18,805 ಬೇಲು ನೂಲುಗಳ ಪೈಕಿ 17,9?8 ಬೇಲುಗಳನ್ನು ಮದ್ರಾಸಿಗೆ ಕೊಟ್ಟಿರುತ್ತದೆ. ಬಾಕಿ ಉಳಿದ ನೂಲಿನಂಶವನ್ನು ಶೀಘ್ರದಲ್ಲೇ ಕೊಡುವ ನಿರೀಕ್ಷೆಯಿದೆ.

ದಾಮೋದರ ಕಣಿವೆ

ಭಾರತ ಸರಕಾರದ ಮುಖ್ಯ ಯೋಜನೆಗಳಲ್ಲೊಂದಾದ ದಾಮೋದರ ಕಣಿವೆಯ ಪರಿಷತ್ತೊಂದು ದಿಲ್ಲಿಯಲ್ಲಿ ಜರಗಿತು. ಶ್ರೀ ಗಾಡ್‌ಗೀಳ, ಬಿ. ಸಿ. ರಾಯ್, ಬಂಗಾಳ ಮಜುಮದಾರ್, ಎ. ಎನ್. ಸಿನ್ಹಾ ಮೊದಲಾದವರು ಇದರಲ್ಲಿ ಮುಖ್ಯವಾಗಿ ಭಾಗವಹಿಸಿದ್ದರು. ದಾಮೋದರ ಕಾರ್ಪೋರೇಶನಿನವರು ಈ ವರೆಗೆ ನಡೆದ ಕಾರ್ಯವನ್ನೂ ಮುಂದೆ ಮಾಡಬಹುದಾದ ಕಾರ್ಯಗಳನ್ನೂ ವಿವರಿಸಲಾಯಿತು.

NOTIFICATION

Sealed quotations will be received by the undersigned upto 4 P. m. on 19-3-51 for the supply of petrol and lubricants required for the use of municipal lorries for 1951-52.

Any particulars as to the Conditions of the contract may be obtained from the municipal office during office hours on working days.

A. S. D'Souza
Commissioner.

MUNICIPAL OFFICE, UDIPI.
Dated 2—3—51.

ಬೇಂಕಿಂಗ್ ಸಂಬಂಧದ ಎಲ್ಲಾ ಸಮಸ್ಯೆಗಳಿಗೆ
ದಿ ವಿಜಯಾ ಬೇಂಕ್ ಲಿಮಿಟೆಡ್
ಇವರ ಸಲಹೆ ಕೇಳಿರಿ

ಹೆಡ್ ಆಫೀಸು : : : : ಮಂಗಳೂರು

ಮಡಿಕೇರಿಯಲ್ಲಿ ಒಂದು ಶಾಖೆಯೂ ಬೊಂಬಾಯಿಯಲ್ಲಿ ಒಂದು ಶಾಖೆಯೂ ಜಿಲ್ಲೆಯೊಳಗೆ ಹಲವು ಶಾಖೆಗಳೂ ಇವೆ.

ನಿರಖು ಠೇವಣಾತಿಗಳ ಮೇಲೆ ಆಕರ್ಷಕವಾದ ದರದ ಬಡ್ಡಿಯು ಕೊಡಲ್ಪಡುವುದು	ತಕ್ಕುದಾದ ಜವಾಬ್ದಾರಿಗಳ ಮೇಲೆ ಸುಲಭವಾದ ಶರ್ತಗಳಲ್ಲಿ ಸಾಲಗಳು ಕೊಡಲ್ಪಡುವುವು

ಸಾಲಿಯನ್ ಸೇಕಡಾ 4½ರ ಬಡ್ಡಿ ಗಳಿಸುವ ಮೂರು ವರ್ಷದ ಅವಧಿಯ ವಿಜಯಾ ಕ್ಯಾಶ್ ಸರ್ಟಿಫಿಕೇಟುಗಳ ಮೇಲೆ
ಹಣವನ್ನು ಹಾಕಿರಿ

THE VIJAYA BANK, LTD.,

ಬಿ. ಮಂಜಯ್ಯ ಹೆಗ್ಗಡೆ,
(ದ. ಕ. ಜಿಲ್ಲಾ ಬೋರ್ಡ್ ಪ್ರೆಸಿಡೆಂಟ್)
ಡೈರೆಕ್ಟರ್ ಬೋರ್ಡಿನ ಅಧ್ಯಕ್ಷರು

ವಿವಿಧ ಪಾತ್ರೆಗಳು



ಯಾವತ್ತು ವಿಧದ ದೀಪ, ತಾಮ್ರ, ಹಿತ್ತಾಳೆ, ಕಂಚು ಮೊದಲಾದುವುಗಳ ವಿವಿಧ ಪಾತ್ರೆಗಳೂ ಸಾಮಾನುಗಳೂ ಯೋಗ್ಯಬೆಲೆಯಾಗಿ ದೊರೆಯುತ್ತವೆ.
ಕಲ್ಯಾಣಿ ಮ್ಯಾನುಫ್ಯಾಕ್ಚರ್ಸ್,
ರಥಬೀದಿ, ಉಡುಪಿ



Approved from the Govt. of Mysore
Certificated by the Agent of the Govt of Ceylon & India.

ಚಂದಾ ವಿವರ
ವರ್ಷಕ್ಕೆ ರೂ. 5-12-0
6 ತಿಂಗಳಿಗೆ ರೂ. 3-0-0

ಗುರುವಾರ, ಉಡುಪಿ, ೮-೩-೫೧

ಸಹಜ ಪರಿಸ್ಥಿತಿ

ಪ್ರಧಾನಮಂತ್ರಿ ಜವಾಹರಲಾಲ ನೆಹ್ರೂರವರು ಮುಂಬಯಿಯ ಸಾರ್ವಜನಿಕ ಸಭೆಯಲ್ಲಿ ಮನನೀಯ ವಿಚಾರಗಳನ್ನು ಉಲ್ಲೇಖಿಸಿರುತ್ತಾರೆ. ಮುಂಬರುವ ಚುನಾವಣೆಯಲ್ಲಿ ತಮ್ಮ ಪ್ರಭಾವವನ್ನು ಬೀರುವದಕ್ಕಾಗಿ ಹಲವು ಪಕ್ಷಗಳು ಸರಕಾರವನ್ನು ವಿನಾಶಾತ್ಮಕ ಟೀಕೆಗೆ ಗುರಿಪಡಿಸುತ್ತಿರುವಂಶವನ್ನು ನೆಹ್ರೂರವರು ಎತ್ತಿ ಹೇಳುತ್ತಾರೆ. "ಕೆಲವು ಸಮಾಜವಾದಿಗಳು ನನ್ನ ಸರಕಾರವು ದೇಶದಲ್ಲಿಯ ಎಲ್ಲ ವಿಷಯಗಳನ್ನು ಸಮಾಜೀಕರಿಸಬೇಕೆಂದೂ ಉದ್ದಿಮೆಗಳು ರಾಷ್ಟ್ರೀಕರಿಸಲೇಕೆಂದೂ ಹೇಳುತ್ತಿದ್ದಾರೆ. ನನ್ನಂತಹ ಸಮಾಜವಾದಿಗಳು ಇನ್ನೊಬ್ಬರೂ ಇಲ್ಲ. ಆದರೆ ಬರೇ ಮಾತಾಡುವವರನ್ನು ಅನುಸರಿಸುವ ಇಚ್ಛೆ ನನಗಿಲ್ಲ. ಕೃತಿ, ವಿಧಾಯಕ ಕೃತಿ, ನನನಗೆ ಬೇಕು. ಇವುಗಳನ್ನು ಕಾರ್ಯರೂಪಕ್ಕೆ ತರಬೇಕು. ಬರೇ ಮಾತನಾಡುವದರಿಂದ ಏನೂ ಪ್ರಯೋಜನವಿಲ್ಲ. ಮುಖ್ಯ ಬೇಕಾದ್ದು ಕೃತಿ" ನೆಹ್ರೂ ಹೇಳಿದಂಶವನ್ನು ಇಂದಿನ ಟೀಕಾಕಾರರು ಲಕ್ಷಿಸಬೇಕು. ಯಾವ ಉದ್ದಿಮೆಯನ್ನು ರಾಷ್ಟ್ರೀಕರಿಸಬೇಕು- ಯಾವುದು ತತ್ಕಾಲಕ್ಕೆ ಅಸಾಧ್ಯವೆಂಬುದು ಸರಕಾರ ವಿವೇಚಿಸದೇ ಇಲ್ಲ. ಗಾಳಿ ಬೀಸಿದತ್ತ ತೂರಿಕೊಳ್ಳುವ ದುರ್ಬಲಚಿತ್ತರಾದವರು ಟೀಕೆಯನ್ನವಲಂಬಿಸುವದರಿಂದ ಯಾವುದೂ ಸಿದ್ಧಿಸುವಂತಿಲ್ಲ. ದೇಶದಲ್ಲಿ ಯಾವುದರ ಕೊರತೆ ಇದೆಯೆಂದು ನೋಡಿಕೊಂಡು ಅಂತಹ ಸಮಯಕ್ಕೆ ಆ ವಿಚಾರದಲ್ಲಿ ಜನತೆಯು ಮುಂದೆ ಸಂಕಟವನ್ನು ಟೀಕಿಸುತ್ತಾರೆ. ಆಹಾರ ಕೊರತೆಯಾದಾಗ- ನೂಲಿನ ಬರ ಬಂದಾಗ- ಪರಿಸ್ಥಿತಿಯನ್ನು ಅವಲೋಕಿಸದೆ ಸಮಯ ಸಾಧಿಸಿ ಸರಕಾರವನ್ನು ಟೀಕಿಸುವದಕ್ಕೆ ಇಂತಹ ಜನ ಸ್ವಲ್ಪವೂ ಹಿಂದು ಮುಂದೆ ನೋಡುವುದಿಲ್ಲ. ವಿನಾಶಾತ್ಮಕ ಟೀಕೆಯಲ್ಲಿ ಕಾಲಹರಣ ಮಾಡುವುದು ಮಾತ್ರವಲ್ಲದೆ ಕೆಲಸಗಾರರಲ್ಲಿ ತಪ್ಪು ಕಲ್ಪನೆಯನ್ನು ಹುಟ್ಟಿಸಿ ಮುಷ್ಕರದ ಮೂಲಕ ದೇಶಾದ್ಯಂತ ಗೊಂದಲವನ್ನೆಬ್ಬಿಸುವ ದೇಶದ್ರೋಹಾತ್ಮಕ ಕಾರ್ಯವನ್ನು ಮಾಡಿದ ದಾಖಲೆಗಳು ಬಹಳ ಬಹಳವಾಗಿ ಕಾಣುತ್ತಲಿವೆ. ದೇಶದ ಸಾಂಪತ್ತಿಕ ವಿಚಾರದಲ್ಲಿ ಭಾರತ ಸರಕಾರ ವಹಿಸಿದ ಧೋರಣೆಯನ್ನು ಸ್ವಲ್ಪವೂ ಚಿಂತಿಸದೆ ವ್ಯರ್ಥವಾಗಿ ಟೀಕಿಸಲಾಗುತ್ತಲಿದೆ.

ದಿನದಿಂದ ದಿನಕ್ಕೆ ಜನಸಂಖ್ಯೆ ವಿಪುಲವಾಗಿ ಬೆಳೆಯುತ್ತಲಿದೆ. ಆ ಸಂಖ್ಯೆಗೆ ಸರಿಯಾಗಿ ಉತ್ಪಾದನೆ ನಡೆಯುತ್ತಿಲ್ಲ. ಆಹಾರದ ಅಭಾವವು ತಲೆದೋರುವುದು ಸ್ವಾಭಾವಿಕವೇ ಆಗಿರುತ್ತದೆ. ಸರಕಾರವಾದರೂ ಇದನ್ನು ಅಲಕ್ಷಿಸಿಲ್ಲ. ಒಕ್ಕಲತನ ವ್ಯವಸಾಯಕ್ಕೆ ತುಂಬ ಉತ್ತೇಜನ ಕೊಟ್ಟಿರುತ್ತದೆ. ಕಳೆದ ವರ್ಷಕ್ಕಿಂತ ಅದರಲ್ಲಿ ಸುಧಾರಣೆಯನ್ನು ಕಾಣುತ್ತಲಿದೇವೆ. ಹಿಂದೂಸ್ಥಾನದ ಪ್ರಮುಖ್ಯ ಹನ್ನೆರಡು ನದಿಗಳ ದೊಡ್ಡ ಅಣೆಕಟ್ಟಿಗಾಗಿ ನೆಹ್ರೂರವರು ಆಹರ್ನಿಶಿ ಚಿಂತಿಸುತ್ತಿದೇನೆಂದಿದ್ದಾರೆ. ಅಣೆಕಟ್ಟುಗಳ ಮುಖೇನ ಒಕ್ಕಲಿಗನು ವ್ಯವಸಾಯವನ್ನು ಹೆಚ್ಚಾಗಿ ಮಾಡಬಲ್ಲ. ಇದರಿಂದ ಹೆಚ್ಚಿನ ಆಹಾರವನ್ನು ಉತ್ಪಾದಿಸಬಹುದು. ಇತರ ಕೃಷಿಗಳನ್ನೂ ಮಾಡಬಹುದಾಗಿದೆ. ಟೆನೆಸಿ ಕಂಪನಿಯ ಯೋಜನೆಯನ್ನು ನಾವಿಂದು ಮಾದರಿಯಾಗಿಟ್ಟುಕೊಳ್ಳಬಹುದು. ಅದರಲ್ಲೂ ಹಿಂದುಸ್ಥಾನವು ನೀರಾವರಿಯೋಜನೆಯಿಂದ ಉತ್ತಮ ಲಾಭವನ್ನು ಪಡೆಯಬಲ್ಲದೆಂಬುದನ್ನು ಲಿಲಿಯಂಥ ಲಾ ಹೇಳಿದಂಶವನ್ನು ನೆನೆಯಬೇಕು. ಇಂತಹ ಅಣೆಕಟ್ಟಿನಿಂದ ಸಾಗುವಳಿ ಮಾತ್ರವಲ್ಲದೆ ವಿದ್ಯುಚ್ಛಕ್ತಿಯ ಮೂಲಕ ಉದ್ದಿಮೆಗಳನ್ನೂ, ಕೈಗಾರಿಕೆಗಳನ್ನೂ ಕಟ್ಟಬಹುದು. ಕೇವಲ ಒಂದೆರಡು ವರ್ಷಗಳಲ್ಲಿ ಇಂತಹ ಲಾಭವನ್ನು ಭಾರತ ಪಡೆಯಲಿದೆ. ಈಗ ಕೆಲಸಕ್ಕೆ ತೊಡಗಿರುವ ಈ ಮಹಾಕಾರ್ಯಕ್ಕೆ ಸರಕಾರ ಕೋಟಿಗಳ ಹಣವನ್ನು ವ್ಯಯಮಾಡಿದೆ. ಇದರ ಫಲ ಇಂದೇ ಸಿಗಬೇಕೆಂದರೆ ಆಗದು. ಆ ವರೆಗೆ ಸ್ವಲ್ಪ ಮಟ್ಟಿನ ತ್ಯಾಗವಾಡಬೇಕಾಗುತ್ತದೆ. ಇದನ್ನು ಲಕ್ಷಿಸದೆ ಟೀಕೆ ಮಾಡುವವರು ನಿಜವಾಗಿಯೂ ವಿಘಾತುಕರು.

ಸರಕಾರದಲ್ಲಿ ಅನೇಕ ಕುಂದುಕೊರತೆಗಳಿರಬಹುದು. ಮಹತ್ವದ ವಿಚಾರಗಳಲ್ಲಿ ತೊಡಗುವಾಗ ಒಮ್ಮೊಮ್ಮೆ ಅಚಾತುರ್ಯದಿಂದ ತಪ್ಪು ನಡೆದರೂ ನಡೆದಿರಬಹುದು. ಆದರೆ ಈ ನಾಲ್ಕು ವರ್ಷಗಳಲ್ಲಿ ಸರಕಾರ ಸಾಧಿಸಿದ್ದನ್ನು ನಾವು ಮರೆಯಬಾರದು. ಸ್ವಾತಂತ್ರ್ಯ ಸಿಕ್ಕ ಇಷ್ಟು ಶೀಘ್ರ ಸಮಯದಲ್ಲಿ ಯಾವುದೇ ಸರಕಾರ ಬಂದಿದ್ದರೂ ಉಸಿರಾಡುತ್ತಿರಲಿಲ್ಲ. ಪರಿಸ್ಥಿತಿಯನ್ನು ಹತೋಟಿಯಲ್ಲಿಟ್ಟುಕೊಂಡು ಹಲವಾರು ಗಂಡಾಂತರಗಳನ್ನೆದುರಿಸಿದಂಶವನ್ನು ವಿಚಾರವಂತರಾರೂ ಅಲ್ಲಗಳೆಯುವಂತಿಲ್ಲ. ಆದುದರಿಂದ ವ್ಯರ್ಥ ಟೀಕೆಯಲ್ಲಿ ಕಾಲಹರಣವನ್ನು ಮಾಡುವದರಲ್ಲಿಯೂ, ಟೀಕೆ ಮಾಡುವವರಿಗೆ ಪ್ರೋತ್ಸಾಹ ಕೊಡುವದರಲ್ಲಿಯೂ ಗಂಭೀರವಾಗಿ ಆಲೋಚಿಸಬೇಕು.

ಮುಂಬಯಿಯಲ್ಲಿ ನೆಹ್ರೂ ಸೂಚಿಸಿದಂಶಗಳು ಮನನೀಯವಾದಂಥವುಗಳು. ಭಾರತದ ವಿದೇಶಾಂಗ ನೀತಿಯಲ್ಲಿ ನೆಹ್ರೂರವರು ಒಳ್ಳೆಯ ಬುದ್ಧಿವಂತಿಕೆಯನ್ನು ಪ್ರದರ್ಶಿಸಿದ್ದಾರೆ. ಅವರ ಪ್ರಭಾವೀ ವ್ಯಕ್ತಿತ್ವದ ಫಲವಾಗಿ ಅಂತರ್ರಾಷ್ಟ್ರೀಯ ರಂಗದಲ್ಲಿ ಭಾರತದ ನಿಲುಮೆ ಮರ್ಯಾದಿತವಾಗಿರುತ್ತದೆ. ನೆಹ್ರೂರವರು ಹೇಳುವಂತೆ ಪ್ರಕೃತ ಪರಿಸ್ಥಿತಿಯಲ್ಲಿ ಸರಕಾರಕ್ಕೆ ಸಂಪೂರ್ಣ ಸಹಕಾರ ಕೊಡುವುದಕ್ಕಿಂತ ಮಿಗಿಲಾದ ದೇಶಹಿತಕಾರ್ಯವಿರುವುದಿಲ್ಲ.

ಹಾರುವ ಕಿಡಿಗಳು

ರಸ್ತೆಗೆ ಸರಿಯಾಗಿ ನೀರಿಲ್ಲ; ಗಾಳಿಬೆಳಕಿಗೆ ಸರಿಯಾಗಿ 'ಕರೆಂಟ್' ಇಲ್ಲ; ಜತೆಗೆ ಮಾರ್ಚ್ ತಿಂಗಳಲ್ಲಿಯೇ ಸಹಿಸಲಾರದ ಕಡುಬೇಸಗೆಯ ಸೆಖೆ ಪ್ರಾರಂಭವಾಗಿ ಪ್ರಕೃತಿಯೂ ಮುನಿದಿದೆಯಲ್ಲ!

ooo ooo

ಮೊದಲು ನೀರು ಹಾಕುತ್ತಿದ್ದ ಕೆಲವು ರಸ್ತೆಗಳ ಬದಲು ಈಗ ಕೆಲವು ಹೊಸ ರಸ್ತೆಗಳಿಗೆ ನೀರು ಹಾಕುತ್ತಿದ್ದಾರೆ. ಇಷ್ಟಾದರೂ ಪ್ರಯತ್ನ ಪಡುತ್ತಾರಲ್ಲಾ ನಮ್ಮ ಕೌನ್ಸಿಲರುಗಳು!

ooo ooo

ನಗರ ಸಭೆಗಳಿಗೆ ಜೀವದಾನವಾಗಿದೆ; ನೆನೆಟೆದ ಅವಧಿ ಮೂರೇ ವರ್ಷಗಳಲ್ಲಿ ಮುಗಿದು ಹೊಸ ಉತ್ಸಾಹೀ ತರುಣರೊಬ್ಬರ ಆಯ್ಕೆಯಾಗಿದೆ; ಇವರಾದರೂ ತನ್ನ ಮೊದಲ ಮೂರು ವರ್ಷಗಳ ಅವಧಿಯಲ್ಲಿ ಹೇಳತಕ್ಕ ಕಾರ್ಯಮಾಡಿ ಮೂರು ಆರಿಸಿಬರುವಂತಾಗಲಿ

ooo ooo

ನಮ್ಮಲ್ಲಿ ಎಂ. ಎಲ್. ಎ. ಆಗುವ 'ಯೋಗ್ಯರು' ನೂರಾರು ಮಂದಿ! ಆದರೆ ಇರುವ ಸೀಟುಗಳು ಮಾತ್ರ ಬೆರಳೆಣಿಕೆಯಷ್ಟು! ದೊಡ್ಡ ಫಜೀತಿ!

ooo ooo

ಉಡುಪಿಯ ಸಂಪ್ರದಾಯ ಕ್ರಮದಂತೆ ಮದ್ರಾಸಿಗೆ ಬೇಕಾಗುವ ಎಲ್ಲಾ ಎಂ. ಎಲ್. ಎ. ಗಳೂ ಒಂದೊಂದೇ ಜಿಲ್ಲೆಯಿಂದ 'ಟರ್ನ್' ಪ್ರಕಾರ ಆರಿಸಿಬರುವಂತಾದರೆ- ಅದರಲ್ಲೂ ಮೊದಲ 'ಚಾನ್ಸ್' ನಮ್ಮ ಜಿಲ್ಲೆಗೇ ಬರುವಂತಾದರೆ ಹೇಗಿದೀತು! ಈ ಬಗ್ಗೆ ನಮ್ಮ ಅಖಂಡ ಮುಖಂಡರು ಯೋಚಿಸಿಯಾರೆ?

ooo ooo

ಮೊದಲ ಒಬ್ಬನು ಪ್ರಸಿದ್ಧಿಗೆ ಬರಬೇಕಾಗಿದ್ದರೆ ಬಹಳ ಪ್ರಯಾಸವಿತ್ತು; ಬಹಳ ಕಾಲ ಹೋಗುತ್ತಿತ್ತು. ಅವನು ಬಹಳ ಕೆಲಸವನ್ನು ಮಾಡಬೇಕಾಗಿತ್ತು- ಈಗಲಾದರೆ ನಾಲ್ಕು ಪತ್ರಿಕಾ ಪ್ರಕಟಣೆಗಳನ್ನು ಹೊರಡಿಸಿ, ನಾಲ್ಕು ಸಭೆಗಳಲ್ಲಿ ಮಾತನಾಡಿ, ನಾಲ್ಕು ಮುಖಂಡರನ್ನು ಬೈದು, ನಾಲ್ಕು ಫಂಡುಗಳನ್ನು ಮಾಡಿಬಿಟ್ಟರಾಯಿತು.

ooo ooo

ಅಂದು ಸ್ವತಂತ್ರಗಳಿಸಲಿಕ್ಕೆ ತ್ಯಾಗವಮಾಡಲು ಹಲವರಾದರು, ಇಂದು ಅದನ್ನು ಅನುಭವಿಸುವವರು ಬರೀ ಕೆಲವರು. ಮಾತ್ರ-ಒಂದೇ ದುಡ್ಡಿದ್ದವರು, ಒಂದೇ 'ನಾಲಿಗೆ' ಇದ್ದವರು, ಒಂದೇ 'ಲೇಖನಿ' ಇದ್ದವರು, ನಿಜವಾದ ದೇಶಸೇವಕರನ್ನು ಕೇಳುವವರಿಲ್ಲ.

ooo ooo

ಸಿದ್ಧಿಗಾರರ ಕೈಯಲ್ಲಿ ಹಾಲು ಹಾಳಾಗಬಾರದೆಂದಿಲ್ಲ; ಗುದ್ದುಮುದ್ದಾಗಬಾರದೆಂದಿಲ್ಲ.

ooo ooo

ತಿಳಿಯದ ಸರಕಾರ ಕಾನೂನು ಮಾಡುತ್ತದೆ; ತಿಳಿಯದ ಜನ ದುಡ್ಡು ಕೊಡುತ್ತದೆ; ತಿಳಿದ ಕೆಲವರಿಗೆ ಇದೇ ಸುವರ್ಣ ಸಂಧಿಯಾಗುತ್ತದೆ.

ನೀತಿಯ ಬಲ ಕುಂದಿದಾಗ ಜಾತೀಯತೆಯನ್ನು ಕೆರಳಿಸಿ ಬಿಡುತ್ತಾರೆ. ಸಂಧಿಸಾಧಕರು;

ooo ooo

ಜೈಲಿಗೆ ಹೋದಾಕ್ಷಣ ಗಾಂಧೀ ತತ್ವದಂತೆಯೇ ನಡೆಯುತ್ತಾರೆ ಎಂದಿಲ್ಲ; ಗಾಂಧೀ ತತ್ವ ಕೊಲೆಯಾಗುವುದೂ ಹೆಚ್ಚಾಗಿ ಅವರಿಂದಲೇ.

ooo ooo

ವರ್ಷಗಟ್ಟಲೆ ಪತ್ರಿಕೆ ಕಳುಹಿಸಿದರೂ ಚಂದಾ ಬರುವುದಿಲ್ಲವೆನ್ನುತ್ತಾರೆ ಸಂಪಾದಕರು. ಕೆಲವೊಮ್ಮೆ ಚಂದಾ ತೆತ್ತರೂ ಪತ್ರಿಕೆ ಬರುವುದಿಲ್ಲವೆನ್ನುತ್ತಾರೆ ಚಂದಾದಾರರು.

ooo ooo

ಉದರ ಪೋಷಣೆಯಾಗದಿದ್ದ ಊರಿನ ಉದ್ಧಾರಕ್ಕೆ ಹೊರಡಬಾರದೆಂದಿಲ್ಲ; ಊರಿನ ಉದ್ಧಾರಕರೆಂದೇ ಉದರಪೋಷಣೆ ಮಾಡಿಕೊಳ್ಳಬಾರದೆಂದಿಲ್ಲ.

ooo ooo

ಕತ್ತಲಾಗುವಾಗ ಕಾಗೆ ಕೂಗಲಾಗದೆಂದರಾಗುತ್ತದೆಯೆ? ಕಷ್ಟಬರುವಾಗ ಕಾಪುರುಷ ದೂಷಿಸಬಾರದೆಂದರಾಗುತ್ತದೆಯೆ?

ooo ooo

ದುರ್ಭೀತಿ ಹುಟ್ಟಿಸಿ ಗಿಟ್ಟಿಸಿಕೊಂಡೇನೆಂಬ ದುಸ್ಸಾಧನೆ ಬೇಡ; ಬಿದ್ದರೂ ಯುಕ್ತಿಚಾತುರ್ಯ ಪ್ರಯೋಗದಿಂದ ಗೆದ್ದೇನೆಂಬ ಭ್ರಾಂತಿ ಬೇಡ.

ಪ್ರಕಟಣೆ

ಕಟಪಾಡಿ ಪಂಚಾಯತಬೋರ್ಡು

ಈ ಪಂಚಾಯತ ಬೋರ್ಡಿಗೆ ಸೇರಿದ ಮಾರ್ಕೆಟು, ಇಳಿಯುವ ಸ್ಥಳ (Jetty) ಮತ್ತು ಮಟ್ಟುಕಡವು ಇವುಗಳಲ್ಲಿ 1951ನೇ ಎಪ್ರಿಲ್ 1ರಿಂದ 1952ನೇ ಇಸವಿ ಮಾರ್ಚ 31ರ ವರೆಗೆ ಒಂದು ವರ್ಷದ ವರೆ ವಸೂಲು ಮಾಡುವ ಹಕ್ಕನ್ನು ಇದೇ ಮಾರ್ಚ ತಿಂಗಳ ತಾರೀಖು 15ನೇ ಗುರುವಾರ ಮಧ್ಯಾಹ್ನ ಗಂಟೆ 3ಕ್ಕೆ ಪಂಚಾಯತಬೋರ್ಡು ಆಫೀಸಿನಲ್ಲಿ ಬಹಿರಂಗವಾಗಿ ಏಲಂ ಸಿಕಿ ಮಾಡಲಾಗುವುದು.

ಹೆಚ್ಚಿನ ಮಾಹಿತಿ ಬಗ್ಗೆ ಪಂಚಾಯತಬೋರ್ಡು ಆಫೀಸಿನಲ್ಲಿ ವಿಚಾರಿಸಿರಿ.

ವೈ. ನಾರಾಯಣ ಹೆಗ್ಡೆ,
ಪ್ರಸಿಡೆಂಟ್.

ಪಂಚಾಯತ ಬೋರ್ಡು ಆಫೀಸು,
ತಾರೀಖು 6-3-'51.

ಪ್ರಕಟಣೆ

ಕುಂಜಾಲು ಪಂಚಾಯತ್ ಬೋರ್ಡಿನ ಸರಹದ್ದಿಗೊಳಪಟ್ಟ ಹಪ್ತೆವಾರು ಸಂತೆಗಳನ್ನೂ ನೀಲಾವರ ಗ್ರಾಮದ ಕಡವುಗಳನ್ನೂ ಬರುವ ತಾ. 1-4-1951ರಿಂದ ತಾ. 31-3-1952ರ ವರೇಗೆ ಒಂದು ವರುಷದ ಫೀಸು ವಸೂಲು ಮಾಡುವ ಸ್ವತಂತ್ರವನ್ನು ಇದೇ ತಿಂಗಳ ತಾ. 26-3-1951ನೇ ಸೋಮವಾರ ಅಪರಾಹ್ನ ಗಂಟೆ 2ಕ್ಕೆ ಕುಂಜಾಲು ಪಂಚಾಯತ್ ಬೋರ್ಡ್ ಆಫೀಸಿನಲ್ಲಿ ಸದ್ರಿ ಪಂಚಾಯತ್ ಬೋರ್ಡ್ ಪ್ರಸಿಡೆಂಟರು ಬಹಿರಂಗವಾಗಿ ಪ್ರತ್ಯಪ್ರತ್ಯೇಕವಾಗಿ ಏಲಂ ಮಾಡಲಿರುವರು. ಏಲಮಿನ ಶರತ ವಗೈರೆ ಇತರ ವಿಷಯಗಳನ್ನು ಸದರಿ ಬೋರ್ಡು ಆಫೀಸಿನಲ್ಲಿ ತಿಳಿದುಕೊಳ್ಳಬಹುದು. ಅಗತ್ಯ ಸಂದರ್ಭದಲ್ಲಿ ಏಲಂ ಮುಂದರಿಸುವದೇ, ಯಾ ಪುನಃ ಏಲಂ ಮಾಡುವದೇ ಪ್ರಸಿಡೆಂಟರಿಗೆ ಅಧಿಕಾರವಿದೆ ಎಂಬ ವಿಷಯ ತಿಳಿಸಲಾಗುತ್ತದೆ.

ಇರ್ವತ್ತೂರು ಸದಾಶಿವ ಸೆಟ್ಟಿ,
ಪ್ರಸಿಡೆಂಟ್.

ಉಡುಪಿ

ಹಿಂದೂ ಮಹಾಜನ ಸಭೆಯೊಂದು ಇದೇ ತಾ. ೧೮ರಲ್ಲು ಉಡುಪಿ ಶ್ರೀ ಕೃಷ್ಣ ಮಠದ ವಸಂತ ಮಂಟಪದಲ್ಲಿ ಪರ್ಯಾಯ ಶ್ರೀ ಶಾಖಾರು ಸ್ವಾಮಿಗಳವರ ಅಧ್ಯಕ್ಷತೆಯಲ್ಲಿ ಜರಗಿತು. ಮದ್ರಾಸು ಎಸೆಂಬ್ಲಿ ಮತ್ತು ಕೌನ್ಸಿಲುಗಳಲ್ಲಿ ಪಾಸಾದ ಹಿಂದೂ ರಿಲೀಜಿಯಸ್ ಎಂಡೋವ್ಮೆಂಟ್ ಬಿಲ್ಲನ್ನು ಬಲವಾಗಿ ವಿರೋಧಿಸಲಾದುದಲ್ಲದೆ ಅದಕ್ಕೆ ಒಪ್ಪಿಗೆ ಕೊಡದಂತೆ ರಾಷ್ಟ್ರಾಧ್ಯಕ್ಷ ಪ್ರಸಾದರನ್ನು ಕೇಳಿಕೊಳ್ಳಬೇಕೆಂದಾಯಿತು. ಮೈಸೂರು ಸಭೆಯಲ್ಲೂ ಸದ್ಯವೇ ಬರಲಿರುವ ಇಂತಹ ಬಿಲ್ಲನ್ನು ಪ್ರತಿಭಟಿಸಿ ಅದು ಪಾಸಾಗದಂತೆ ಮೆಂಬರರು ವಿರೋಧಿಸಬೇಕಾಗಿ ಅವರೆಲ್ಲರನ್ನು ವಿನಂತಿಸುವ ನಿರ್ಣಯವು ಕೂಡಾ ಆಯಿತು. ಧರ್ಮ ಸಂಸ್ಥೆಗಳ ಸ್ಥಿತಿಗತಿ, ಸ್ಥಾನಮಾನಗಳ ಕುರಿತು ಅನುಭವ ಕೊಡುವರೆ ಒಂದು ರಾಷ್ಟ್ರಮಂಡಲವನ್ನು ದಿಲ್ಲಿಗೆ ಕಳುಹಬೇಕೆಂದಾಯಿತು.

ಕಟ್ಟಡ ಸಭೆ— ಉಡುಪಿ ಮುನಿಸಿಪಲ್ ಕೌನ್ಸಿಲರ್ಸ್ ಹ್ಯಾಸ್ಟೆಲು ಕಮಿಟಿಯ ಸಭೆಯು ತಾ. ೩ರಲ್ಲು ಉಪಾಧ್ಯಕ್ಷ ಡಾ| ಎಸ್. ಆರ್. ಪೈಗಳ ಅಧ್ಯಕ್ಷತೆಯಲ್ಲಿ ಜರಗಿತು. ಮುನಿಸಿಪಾಲಿಟಿಯಿಂದ ಸಾಕಷ್ಟು ಹಣ ದೊರೆತರೆ ಕಟ್ಟಡವನ್ನು ಬೇಗನೆ ಪೂರ್ಣಗೊಳಿಸಿ ಕೌನ್ಸಿಲಿಗೆ ಬಿಟ್ಟುಕೊಡಲು ಸಾಧ್ಯವಿದೆ ಎಂಬಬಗ್ಗೆ ನಿರ್ಣಯವಾಯಿತು.

ಸ್ಕೌಟ್ ರೇಲಿ— ಭಾರತ ಸ್ಕೌಟ್ ಗೈಡ್ಸ್ ಕಾರ್ಯಕಾರಿ ಮಂಡಳಿಯ ಸಭೆಯು ತಾ. ೧-೩-೧೯೫೧ರಲ್ಲಿ ಡಾ| ಎಸ್. ಆರ್. ಪೈಗಳ ಅಧ್ಯಕ್ಷತೆಯಲ್ಲಿ ಜರಗಿ ತಾ ೨೫-೩-೧೯೫೧ಕ್ಕೆ ಎಲ್ಲಾ ದಳಗಳ ಸ್ಕೌಟ್ ರೇಲಿಯನ್ನು ಜರಗಿಸಬೇಕೆಂದಾಯ್ತು. ಅಸಿಸ್ಟಾಂಟ್ ಡಿಸ್ಟ್ರಿಕ್ಟ್ ಕಮಿಶನರಾದ ಶ್ರೀ ಟಿ ರಘುಪತಿ ಪೈಗಳು ಮದ್ರಾಸು ಸಿನೆಟಿಗೆ ಆರಿಸಿ ಬಂದುದಕ್ಕಾಗಿ ಅವರನ್ನು ಅಭಿನಂದಿಸಲಾಯ್ತು.

ಬೋರ್ಡ್ ಹೈಸ್ಕೂಲಿನಲ್ಲಿ— ಎಸ್. ಎಸ್. ಎಲ್. ಸಿ. ವಿದ್ಯಾರ್ಥಿಗಳನ್ನು ಬೀಳ್ಕೊಡುವ ಸಮಾರಂಭವು ಕಳೆದ ತಾ. ೨೬, ಮತ್ತು ೨೭ರಲ್ಲಿ ಶ್ರೀ ಕೆ. ಸಂಜೀವ ಶೆಟ್ಟಿ ಅಧ್ಯಕ್ಷತೆಯಲ್ಲಿ ವಿವಿಧ ಕಾರ್ಯಕ್ರಮಗಳಿಂದ ಜರಗಿತು. ಶ್ರೀಗಳಾದ ಎ. ಸುಂದರ ಹೆಗ್ಡೆ, ಸದಾಶಿವ ರಾವ್, ಗಾರ್ನೆಟ್ ರೇಗೊ, ಸಿ. ಆರ್ ಕಾಮತ್, ಕುಮಾರಿ ಜಯಂತಿ, ಯು, ಮೋಹನದಾಸ್ ಮೊದಲಾದ ವಿದ್ಯಾರ್ಥಿಗಳ ಭಾಷಣಗಳಾದುವು, ಕೆ, ವಿಠಲ ಶೆಣೈ ಮತ್ತು ಅಧ್ಯಕ್ಷರ ಹಿತೋಪದೇಶಗಳಾಗಿ ಸಭಾಂತ್ಯವಾಯಿತು

ಕೆನರಾ ಮ್ಯೂಚುವಲ್— ಭಾರತ ಸರಕಾರದವರು ಪ್ರಕಟಿಸಿದ 1950ನೇ ಭಾರತೀಯ ವಿಮಾ ವರ್ಷ ಪುಸ್ತಕದ ಮೇರೆಗೆ 1949ರಲ್ಲಿ ಹಿಂದುಸ್ಥಾನದಲ್ಲಿ 184 ಜೀವ ವಿಮಾ ಕಂಪೆನಿಗಳಿದ್ದುವು ಅವುಗಳಲ್ಲಿ ವಿಮಾ ಗಣನೆ ನಡೆಸಿದ 176 ಕಂಪೆನಿಗಳಲ್ಲಿ 111 ಕಂಪೆನಿಗಳು ಮಾತ್ರ ಲಾಭವನ್ನು ತೋರಿಸಿವೆ. 111 ಕಂಪೆನಿಗಳಲ್ಲಿ ಕೇವಲ 46 ಕಂಪೆನಿಗಳಿಗೆ ಮಾತ್ರ ಲಾಭ ಅಥವಾ ಬೋನಸ್ಸು ಹಂಚಲು ಸಾಧ್ಯವಾಗಿದೆ. ಇಂಥಾ 46 ಕಂಪೆನಿಗಳಲ್ಲಿ 2 ಕೋಟಿ ರೂಪಾಯಿಗೂ ಹೆಚ್ಚು ಜೀವವಿಮಾ ವ್ಯವಹಾರ ಚಾಲ್ತಿಯಲ್ಲಿದ್ದು ಸೇಕಡಾ 2½ಯಾ ಅದಕ್ಕೂ ಕಡಿಮೆ ಬಡ್ಡಿಯ ದರದಲ್ಲಿ ವಿಮಾ ಗಣನೆಗೊಳಗಾದ ಕಂಪೆನಿಗಳು ಬರೇ 11 ಮಾತ್ರ. ಇವುಗಳಲ್ಲಿ 'ಕೆನರಾ ಮ್ಯೂಚುವಲ್' ವಿಮಾ ಕಂಪೆನಿಯು ಒಂದು ಎಂಬುದು ಗಣನೀಯ ಮತ್ತು ಗಮನೀಯ ವಿಚಾರ.

ಡಾ| ಕೆ. ಮಾಧವ ಪೈಗಳ ಕರ್ನಾಟಕ ಸಂಚಾರ:- ಕೆನರಾ ಇಂಡಸ್ಟ್ರೀಯಲ್ ಎಂಡ್ ಬೇಂಕಿಂಗ್ ಸಿಂಡಿಕೇಟಿನ ಅಧ್ಯಕ್ಷರಾದ ಟಿ ಮಾಧವ ಪೈಗಳು ಇತ್ತೀಚೆಗೆ ತಮ್ಮ ಶಾಖೆಗಳ ಪರಿಶೀಲನೆಗಾಗಿಯೂ, ಗಿರಾಕಿಗಳ ಸ್ನೇಹ ಸೌಹಾರ್ದ ಸಂವರ್ಧನೆಗಾಗಿಯೂ ಕರ್ನಾಟಕದ ಪ್ರವಾಸವನ್ನು ಕೈಗೊಂಡಿದ್ದು, ಹುಬ್ಬಳ್ಳಿ ಗದಗ, ಬಿಜಾಪುರ ಮೊದಲಾದ ಕೇಂದ್ರಗಳಿಗೆ ಭೆಟ್ಟಿ ಇತ್ತು ಹೋದಲ್ಲೆಲ್ಲಾ ಸಂಭ್ರಮ ಸ್ವಾಗತ ಪಡೆಯುತ್ತಿರುವರು. ವಿಚಾರಪೂರ್ಣ ಭಾಷಣಗಳಿಂದ ಜನಜಾಗೃತಿಯನ್ನುಂಟು ಮಾಡುತ್ತಿರುವರು. ಇವರ ಈ ಪ್ರವಾಸವು ಉಡುಪಿಯ ಹಿರಿಮೆಯನ್ನು ಹೆಚ್ಚಿಸುವುದರಲ್ಲಿ ಅನುಮಾನವಿಲ್ಲ.

ವಿಪರೀತ ಸೆಖೆ— ಕೆಲವು ದಿನಗಳಿಂದ ಎಪ್ರಿಲ್, ಮೇ ತಿಂಗಳುಗಳಲ್ಲಿ ತೋರಿಬರುವಂಥಾ ವಿಶೇಷ ಸೆಖೆಯು ಪ್ರಾರಂಭವಾಗಿರುತ್ತದೆ. ಇದರಿಂದ ಮಳೆಯು ಬೇಗನೇ ಬರಬಹುದೆಂದು ನಿರೀಕ್ಷಿಸಲಾಗಿದೆ.

ಶಿವಶರಣ ಸಭೆ— ದ. ಕ. ಜಿಲ್ಲಾ ಶಿವಶರಣರ 13ನೇ ವಾರ್ಷಿಕೋತ್ಸವವು ಜಂಗಮರ ಮಠದಲ್ಲಿ ತಾ. ೬ರಲ್ಲಿ ಶ್ರೀ ಟಿ. ರಮೇಶ ಪೈಗಳ ಅಧ್ಯಕ್ಷತೆಯಲ್ಲಿ ಜರಗಿ ಹಲವು ಭಾಷಣಗಳಾದುವು.

ದ. ಕ. ಜಿಲ್ಲಾ ಜಡ್ಜರ ಕೋರ್ಟಿನಲ್ಲಿ

O. P. No. 19 & 22/1951

ಸುಂದರಿ ಸಂಜೀವಿ ಯಾನೆ ಸರಸ್ವತಿ ಬ್ಯಾ —ಅರ್ಜಿದಾರಳು

ಮತ್ತು

1. ನಾರಾಯಣಗಡಿಯಾರ, 2, ದೇವಕಮ್ಮ ರೈಸಾಂಡೆಂಟರು.

ಮೃತ ಪಟ್ಟ ಬೆಜ . . . ಜೀವ ಮಂಜುನಾಥ ಗಡಿಯಾರರಿಗೆ ಬರತಕ್ಕ ಸಾಲಗಳನ್ನು ವಸೂಲು ಮಾಡುವ ಬಗ್ಗೆ ಸದ್ರಿ ಮೃತನ ವಿಧವೆ, ಸುಂದರಿ ಸಂಜೀವಿ ಯಾನೆ ಸರಸ್ವತಿ ಬ್ಯಾಯು ತನ್ನ ಮೈನರ್ ಮಕ್ಕಳು 1, ಸುಂದರಿ 2, ದೇವಿದಾಸ— ಇವರ ಗಾರ್ಡಿಯನ್ನಳಾಗಿ ತನ್ನನ್ನು ನೇಮಿಸಬೇಕಾಗಿ ಸದ್ರಿ O. P. 19/1951ನೇ ಅರ್ಜಿಯನೂ ಮೃತನಿಗೆ ಬರಲಿಕ್ಕಿರುವ ಸಾಲಗಳನ್ನು ವಸೂಲು ಮಾಡುವರೆ ತನಗೆ ಸಕ್ಸೆಶನ್ ಸರ್ಟಿಫಿಕೇಟು ಕೊಡಿಸ ಬೇಕಾಗಿ ಸದ್ರಿ O. P. No 22/1951ನೇ ಅರ್ಜಿ ಕೂಡಾ ದಾಖಲು ಮಾಡಿರುತ್ತಾಳೆ. ಸದ್ರಿ 2 ಅರ್ಜಿಗಳನ್ನು ಈ ಕೋರ್ಟ ಮುಂದೆ ತಾರೀಕು 21—3—1951ನೇ ಪೂರ್ವಾಹ್ನ 11 ಗಂಟೆಗೆ ತನಿಖೆಗೆ ಇಟ್ಟಿರುವುದರಿಂದ ಇದಕ್ಕೆ ಆಕ್ಷೇಪಿಸತಕ್ಕವರು ಖುದ್ದಾಯೂ ವಕೀಲರದ್ವಾರ ಸದ್ರಿ ತಾರೀಕಿನಲ್ಲು ಕೋರ್ಟ ಮುಂದೆ ಹಾಜರಾಗಿ ತಮ್ಮ ಆಕ್ಷೇಪಗಳನ್ನು ದಾಖಲ್ಲು ಮಾಡತಕ್ಕದ್ದು ಎಂತ ಈ ಮೂಲಕ ಸರ್ವಜನರಿಗೂ ತಿಳಿಸೋಣಾಗಿದೆ

B. B. Shetty
Advocate for Petitioner

ಮಂಗಳೂರು ತಾ 6-3-1951

ಸುಳ್ಳು ಹೇಳುವವರಾರು?

ಸುಳ್ಳು ಹೇಳುವ ವಿಧಾನವನ್ನು ನಾವು ಚೆನ್ನಾಗಿ ಒಪ್ಪಿಕೊಂಡಿದ್ದೇವೆ. ನಮ್ಮ ಅನುದಿನದ ಜೀವನ ಸಂಗ್ರಾಮದಲ್ಲಿ ಸುಳ್ಳು ಹೇಳುವದನ್ನು ಒಂದು ಉಪಾಯವನ್ನಾಗಿಟ್ಟುಕೊಂಡಿರುತ್ತೇವೆ. ಬಡವರು ಹೊಟ್ಟೆಗಿಲ್ಲದ ಪಾಡಿಗೆ ನಾನಾ ರೀತಿಯಲ್ಲಿ ಸುಳ್ಳು ಹೇಳಿ ಜೀವಿಸುತ್ತಾರೆ. ಸಂಸಾರ ನಡೆಸಲಾಗದೆ ಕದಿಯಲೂ ಪ್ರಾರಂಭಿಸುತ್ತಾರೆ ಸುಳ್ಳು ಹೇಳುವದನ್ನು ವಹಾವಾಸವನ್ನಾಗಿ(?) ತಿಳಿದವರು. ಸುಳ್ಳು ಹೇಳುವದರಿಂದಲೇ ಕಾಯಿದೆ ಕಾನೂನುಗಳು ಹೆಚ್ಚುತ್ತಲಿವೆ. ಉಪದೇಶ ಮಾಡುವವರೂ ತಪ್ಪಿತಸ್ಥನೆಂದು ಸಿದ್ಧಾಂತ ಕೊಡುವ ನ್ಯಾಯಾಧಿಪತಿಗಳೂ ಸುಳ್ಳಿನ ಮಾಲಿಕೆಯ ಆಧಾರದಿಂದಲೇ ತೀರ್ಪು ಕೊಡುವುದಿಲ್ಲವೇ?

ಅಸತ್ಯವನ್ನು ನುಡಿಯುವವರು ಸಾಮಾನ್ಯ ಜನರೆಂದು ನಮ್ಮಲ್ಲಿ ವಾಡಿಕೆಯಿದೆ. ಯಥಾರ್ಥವಾಗಿ ಹೇಳುವುದಾದರೆ ಅದನ್ನು ಹೆಚ್ಚಾಗಿ ಬಳಕೆಯಲ್ಲಿ ತರುವವರು ಬುದ್ಧಿಯುಳ್ಳವರೇ ಆಗಿರುತ್ತಾರೆನ್ನಬೇಕು. ಬಡವರ ಇಲ್ಲವೆ ಸಾಮಾನ್ಯರ ಮೇಲೆ ಬೆದರುತೋರಿಸುವ ಎಲ್ಲವರುಕೂಡ ಸುಳ್ಳಿನಿಂದಲೇ ಸ್ಥಾನಮಾನವನ್ನು ಗಳಿಸಲೆತ್ನಿಸುತ್ತಾರೆ ನಮ್ಮ ಮಂತ್ರಿವರ್ಯರು ಬಂದಾಗ ನಾವು ಸಂಕ ಬೇಕು, ಆಸ್ಪತ್ರೆಬೇಕು, ಬಾವಿ ಬೇಕು, ಇನ್ನು ಏನೇನೋ ಬೇಕು ಎಂತ ಹೇಳುತ್ತೇವೆ ಮಂತ್ರಿಗಳು ನಮ್ಮ ಮನಸ್ಸು ನೋಯಿಸದ ಹಾಗೆ ಆಗದೆ ಇರುವ ಕಾರ್ಯವೆಂದು ತಮಗೆ ತಿಳಿದಿದ್ದರೂ "ಇದನ್ನು ನಾನು ಜ್ಞಾಪಕದಲ್ಲಿಟ್ಟುಕೊಂಡು ತಿಮ್ಮ ಕೇಳಿಕೆಯನ್ನು ನಡೆಸುವದರಲ್ಲಿ ನಾನು ಯತ್ನ ಮಾಡದಿರಲಾರೆ." ಎಂದು ಹೇಳುತ್ತಾರೆ. ಈ ರೀತಿಯ ಹಲವಾರು ಮಾನಪತ್ರಗಳಿಗೆ ಇದೇ ರೀತಿಯ ಭರವಸೆಕೊಟ್ಟು ಏನನ್ನೂ ಮಾಡದೆ ಇರುವದನ್ನು ನಾವು ಈಗಲೂ ಕಾಣುತ್ತಿಲ್ಲವೇ? ಅಂದರೆ ಇದು ರಾಜಕೀಯ ಸುಳ್ಳಾಗುತ್ತದೆ.

ತನ್ನ ಅಜಾಗರೂಕತೆಯಿಂದ ಪ್ರಮಾದ ನಡೆದುಹೋದರೆ ತಾನು ತಪ್ಪಿತಸ್ಥನೆಂದು ಒಪ್ಪಿಕೊಳ್ಳದ ಕ್ರೀಡಾದಕ್ಷತೆಯನ್ನಿಟ್ಟುಕೊಂಡವರು ಸುಳ್ಳುಹೇಳಿ ಘನಸ್ಥಿಕೆಯನ್ನು ಳಿಸಿಕೊಳ್ಳಲು ಯತ್ನಿಸುವದುಂಟು! ಅವರು ತಮ್ಮ ಮಾತಿನಮುಳ್ಳತನದಿಂದ ಇನ್ನೊಬ್ಬರ ಮೇಲೆ ಇಲ್ಲವೆ ತನಗಾಗದವರ ಮೇಲೆ ಸಾಹಿತಿಕವಾಗಿಯೂ, ನಾಜೂಕಾಗಿಯೂ ಸುಳ್ಳಿನ ಕಂತೆಗಳನ್ನು ಹೇರಿ ತಾನು "ಸಂಭಾವಿತ"ನೆನುವ ಚಿತ್ರವೊಂದನ್ನು ಕಲ್ಪಿಸುತ್ತಾರೆ. ಕಲ್ಪಿತ ಕಟ್ಟುಕತೆಗಳೇ ಅವರ ಸುಳ್ಳಿನ ತಳಹದಿ. ಇಂತವರ ಬಲೆಗೆ ಬಹಳ ಮಂದಿ ಸುಲಭವಾಗಿ ಬಲಿಬೀಳುವದುಂಟು. ಇದು ಘನಸ್ತಿಕೆಗಾಗಿ ಹೇಳುವ ಸಾಹಿತಿಕ ಸುಳ್ಳು

ನಮ್ಮಲ್ಲಿ ಕಾಯಿಲೆಗಳಾದರೆ ಕೋರ್ಟ ಕಚೇರಿಗಳಿಗೆ ಶಾಲಾ ಕಾಲೇಜುಗಳಿಗೆ ಹೋಗುವವರಿಗೆ ತೊಂದರೆಬರುವದುಂಟು. ಆಗ ಸರ್ಟಿಫಿಕೇಟು ಕೊಡಬೇಕಾಗುತ್ತದೆ. ಆದರೆ ಯಥಾರ್ಥವಾಗಿ ಹೀಗೆ ನಡೆಯುವುದು ಸೇಕಡಾ 25 ಸಂದರ್ಭಗಳಾದರೆ ಉಳಿದ 75 ಅಂಶ ಸುಳ್ಳಿನ ಉದಾಹರಣೆಗಳೇ ಆಗಿರುತ್ತವೆ ಕೋರ್ಟಿಗೆ ತಪ್ಪಿಸಲು, ಕಾಲೇಜಿಗೆ ಪರಿಹಾರ ಹೇಳಲೂ ಡಾಕ್ಟರ ಸರ್ಟಿಫಿಕೇಟುಗಳು ರಾಮಬಾಣ. ಆ ಸರ್ಟಿಫಿಕೇಟನ್ನು ಹೊರತ್ತು ಎಷ್ಟೇ ಸತ್ಯನಿವೇದನೆ ಮಾಡಿಕೊಂಡರೂ ಅದು ಸಿಂಧುವಾಗಲಾರದು. ಅದಕ್ಕೆ ಸರ್ಟಿಫಿಕೇಟಿನ ಸುಳ್ಳು ಸಾಕ್ಷಿ ಬೇಕೇ ಬೇಕು. ಕೆಲಾದಿನಗಳು ಕಡಿಮೆಯಾದರೆ ಕೆಲಾಧಿಕಾರಿಗಳು ಮೊದಲಾಗಿ ಡಾಕ್ಟರರ ಸರ್ಟಿಫಿಕೇಟನ್ನು ತರಲು ಹೇಳುತ್ತಾರೆ. ಅಂತೆಯೇ ಕೋರ್ಟ ಕಚೇರಿಗಳ ಹಣಬರಹವೂ. ಇವೂ ಅನಾರೋಗ್ಯದ ನಿಮಿತ್ತ ಹೇಳುವ ಆರೋಗ್ಯಖಾತೆಯ ಸುಳ್ಳು!

ಜಗೆಯ ಪ್ರಪಂಚದಲ್ಲಿ ಹುಟ್ಟಿದ ಪ್ರತಿಯೊಬ್ಬನೂ ಸಾಯುವ ವರೆಗೆ ಸುಖವಾಗಿರುವದರ ಸಲುವಾಗಿ ಸುಳ್ಳುಹೇಳದೆ ಇಲ್ಲ. ವ್ಯವಹಾರ ರಂಗದಲ್ಲಿ ಸುಳ್ಳು ಇಲ್ಲದೆಹೋದರೆ ವ್ಯವಹಾರ ನಡೆಯುವಂತೆಯೂ ಇಲ್ಲ.

ಬರುವ ವಾರ

ಶ್ರೀ ಕೆ. ಗುರುರಾಜ ಉಡುಪರ

"ಅವಿಭಕ್ತ ಕುಟುಂಬ ಪದ್ಧತಿ"

ಬರಲಿದೆ.

ಶ್ರೀ ರಾಮಕೃಷ್ಣ ಥಿಯೇಟರ್ ಲಿಮಿಟೆಡ್, ಉಡುಪಿ
ನಡಿಯುವ ಚಿತ್ರ:
ಜೆಮಿನಿಯವರ ಅಪೂರ್ವ ಚಿತ್ರ
ಅಪೂರ್ವ ಸಹೋದರರು
ಅಥವಾ
ಸ್ಟ್ರೇಂಜ್ ಬ್ರದರ್ಸ್
ಎಮ್. ಕೆ. ರಾಧಾ, ನಾಗೇಂದ್ರ ರಾವ್, ಭಾನುಮತಿ ಮೊದಲಾದವರು
ತಾರೀಕು 15—3—1951ರಿಂದ
ನೆನಪಿರಲಿ! ಪ್ರತಿಯೊಬ್ಬ ವಿದ್ಯಾರ್ಥಿಯೂ ನೋಡಬೇಕಾದ
ಚಾರ್ಲ್ಸ್ ಡಿಕನ್ಸರವರ ಅಮೃತ ಕಾದಂಬರಿ.
ಟೇಲ್ ಓಫ್ ಟು ಸಿಟೀಸ್ TALE OF TWO CITIES

The New Karnataka Provident Ins. Co. Ltd.
Head office UDIPI S. K.
Invites applications from influential persons of either sex to work as Inspectors for South Kanara & Mysore State on decent salary & Commission with excellent prospectus of promotions as Branch Managers on permanent basis in our fourthcoming expension scheme
Apply or see in person,
M. H. Shetty,
Manager at Head Office.

ಮಂಗಳೂರು

ಅಖಿಲ ಭಾರತ ಕೈಗಾರಿಕಾ ಪ್ರದರ್ಶನ ಮತ್ತು ವಿನೋದಕೂಟ— ದಕ್ಷಿಣ ಕನ್ನಡ ಜಿಲ್ಲಾ ಬಿಲ್ಲವ ಯೂನಿಯನಿನ ಶಿಕ್ಷಣ ನಿಧಿಯ ಸಹಾಯಾರ್ಥವಾಗಿ ಏರ್ಪಡಿಸಲ್ಪಟ್ಟ ಈ ಪ್ರದರ್ಶನದ ಉದ್ಘಾಟನೆಯು ತಾ ೧ರಲ್ಲಿ ಜಿಲ್ಲಾ ಜಡ್ಜರಾದ ಶ್ರೀ ಸಿ. ಕೃಷ್ಣಮೂರ್ತಿಯವರ ಹಸ್ತದಿಂದ ನೆರವೇರಿಸಲ್ಪಟ್ಟಿತು. ಜಿಲ್ಲಾ ಕಲೆಕ್ಟರ್ ಶ್ರೀ ಎ. ಆರ್. ರಾಜರತ್ನಂ. ಅವರು ಈ ಸಮಾರಂಭದ ಅಧ್ಯಕ್ಷತೆ ವಹಿಸಿದ್ದರು. ಶ್ರೀ. ಎಂ ಗಿರಿಯಪ್ಪನವರ ಸ್ವಾಗತ ಭಾಷಣವಾದ ಮೇಲೆ ಶ್ರೀ ಬಿ. ಗಂಗಾಧರ ದಾಸರು ಬಿಲ್ಲವ ಶಿಕ್ಷಣ ನಿಧಿಯ ಕುರಿತಾದ ವರದಿಯನ್ನು ಒಪ್ಪಿಸಿದರು ಶ್ರೀ ಕೆ. ಸದಾನಂದ ಹೆಗ್ಡೆಯವರೂ, ಶ್ರೀ ಎಮ್. ಎಸ್. ಸುವರ್ಣನವರೂ ಸಂದರ್ಭೋಚಿತ ಭಾಷಣ ಮಾಡಿದರು. ಶ್ರೀ ಎ ಎಮ್. ಶಾಲಿವಾಹನರ ಸಂಗೀತ ಕಚೇರಿಯು ನಡೆಯಿತು.

ಸಂಚಾರ— ಅಖಿಲ ಭಾರತ ಧರ್ಮ ಸಂಘದ ಸ್ಥಾಪಕರಾದ ಶ್ರೀ ಕರಪಾತ್ರಿ ಸ್ವಾಮಿಗಳು ದಕ್ಷಿಣ ಕನ್ನಡದಲ್ಲಿ ತಾ 13ರಿಂದ 3 ದಿನ ಸಂಚಾರ ಮಾಡಲಿರುವರು ಎಂದು ತಿಳಿದು ಬರುತ್ತದೆ.

ಕೃಷಿಕರ ಹಿತರಕ್ಷಣೆಯು— ಕುರಿತು ಕಳೆದ ತಾ 19ರಲ್ಲಿ ಮಂತ್ರಿ ಶ್ರೀ ಕೆ. ಮಾಧವ ಮೆನನರು ಮಂಗಳೂರಿಗೆ ಬಂದಿದ್ದಾಗ ಜಿಲ್ಲಾ ಕಾಂಗ್ರೆಸ್ ಕಮಿಟಿ ಮತ್ತು ಕೃಷಿಕ ಸಂಘದ ಪರವಾಗಿ ಡಾ॥ ಯು. ಪಿ. ಮಲ್ಯ, ಡಾ॥ ಕೆ. ಎಸ್ ಅಳ್ವ, ಶ್ರೀ ಕೆ. ಕೆ. ಸೆಟ್ಟಿಯವರು ಪ್ರಶ್ನಿಸಿದಾಗ ಬೇಗನೆ ಕೃಷಿಕರ ಹಿತರಕ್ಷಣೆಗಾಗಿ ವ್ಯವಸ್ಥೆ ಮಾಡುವುದಾಗಿ ತಿಳಿಸಿರುವರೆಂದು ತಿಳಿಯಲಾಗಿದೆ.

ಶ್ರೀ ರಂಗರ ಭಾಷಣ— ಧರ್ಮಸ್ಥಳಕ್ಕೆ ಬಂದಿದ್ದ ಆರ್. ವಿ. ಜಹಗೀರದಾರರು ಮಂಗಳೂರಿಗೆ ಬಂದಿದ್ದು ತಾ 24ನೇ ಸಂಜೆ ಪ್ರಗತಿಮಂಡಳದ ನೇತೃತ್ವದಲ್ಲಿ ಇಂದಿನ ಪರಿಸ್ಥಿತಿಯಲ್ಲಿ ಸಾಹಿತಿಗಳ ಜವಾಬ್ದಾರಿಕೆಯ ಕುರಿತು ವಿಚಾರ ಪರಿಪೂರ್ಣವಾದ ಭಾಷಣ ಮಾಡಿದರು. ಈಗಿನ ಸಂಧಿಕಾಲದಲ್ಲಿ ಪ್ರತಿಯೊಂದು ವಿಚಾರವೂ ಸ್ವಾರ್ಥ ಮತ್ತು ಸಂಕುಚಿತತೆಯಿಂದ ಕೂಡಿದ್ದಾಗಿರುವುದೆಂದೂ, ಒಂದು ಕಾಲದಲ್ಲಿ ಅತ್ಯಂತ ತ್ಯಾಗ ಮಾಡಿದ ಕಾಂಗ್ರೆಸ್ಸಿಗರು ಸಹಾ ಇಂದು ತುಂಬಾ ಸ್ವಾರ್ಥಿಗಳಾಗಿ ತೋರುತ್ತಿರುವರೆಂದೂ, ಸ್ವತಂತ್ರ ಭಾರತದಲ್ಲಿ ಪ್ರಜಾಪ್ರಭುತ್ವ: ಸ್ವಾತಂತ್ರ್ಯ, ಇತ್ಯಾದಿಗಳು ಅಭಾಸವಾಗುತ್ತಲಿರುವುದೆಂದೂ, ಇದನ್ನು ತಿದ್ದಬೇಕಾದರೆ ನಿಸ್ವಾರ್ಥ, ನಿರ್ಭೀತ್ಯ ಸಾಹಿತಿಗಳು ಮುಂದೆ ಬರಬೇಕೆಂದು ಹೇಳಿದರು ಕಾರ್ಯದರ್ಶಿ ಶ್ರೀ ಎಮ್. ...ಪ್ಪನವರು ಧನ್ಯವಾದಗಳನ್ನಿತ್ತರು.

ದ. ಕ ಜಿಲ್ಲಾ ಬಂಟರ ಯಾನೆ ನಾಡವರ ಸಂಘ— ಇದರ ವಾರ್ಷಿಕ ಮಹಾಸಭೆಯು ತಾ 11-3-51ನೇ ಆದಿತ್ಯವಾರ ಸಂಜೆ ಗಂಟೆ 4ಕ್ಕೆ ಡಾ॥ ಎಚ್. ವಿ. ಅಡಪರ ಅಧ್ಯಕ್ಷತೆಯಲ್ಲಿ, ಶ್ರೀ ರಾಮಕೃಷ್ಣ ವಿದ್ಯಾರ್ಥಿ ಭವನದಲ್ಲಿ ಜರಗುವುದಾಗಿಯೂ, ಅದಕ್ಕೆ ಸಮ್ಮಂಧಪಟ್ಟ ಸರ್ವರು ಬರಬೇಕಾಗಿಯೂ ಸಂಘದ ಕಾರ್ಯದರ್ಶಿಗಳಾದ ಶ್ರೀ ಕೆ. ಸದಾನಂದ ಹೆಗ್ಡೆಯವರು ತಿಳಿಸುತ್ತಾರೆ.

ಬಂದರಗಳ ವಿಶೇಷ ಅಧಿಕಾರಿಗಳ ಆಗಮನ— ವಿಶಾಖಪಟ್ಟಣದ ಬಂದರಾಧಿಕಾರಿಗಳಾಗಿರುವ ಶ್ರೀ ಎಸ್. ನಂಜುಂಡಯ್ಯನವರು ಭಾರತ ಸರಕಾರದ ಸಣ್ಣ ಪುಟ್ಟ ಬಂದರುಗಳ ವಿಶಿಷ್ಟ ಅಧಿಕಾರಿಗಳಾಗಿ ನೇಮಿಸಲ್ಪಟ್ಟಿದ್ದು, ಈ ಸಂಬಂಧದ ಮಾಹಿತಿಗಳನ್ನು ಪಡೆಯಲು ಕಳೆದ ತಾ 24ರಲ್ಲಿ ಮಂಗಳೂರಿಗೆ ಬಂದಿದ್ದಾರೆ. ತಾ 28ರಲ್ಲಿ ವಾಣಿಜ್ಯ ಸಂಘದವರು ಅವರನ್ನು ಕರೆಸಿ ಉಪಚರಿಸಿದರು. ಶ್ರೀ ವಿ. ಎಸ್. ಕುಡ್ವರು ಮಂಗಳೂರು ಬಂದರಿನ ಮಾಹಿತಿಯನ್ನು ವಿವರಿಸಿದರು, ಅತಿಥಿಗಳು ಮಂಗಳೂರಿಗೆ ತಮ್ಮಿಂದಾದ ಸೇವೆ ಮಾಡುತ್ತೇವಾಗಿ ತಿಳಿಸಿದರು

ಮಹಾಸಭೆ— ಟೀಚರ್ಸ್ ಗಿಲ್ಡಿನ ವಾರ್ಷಿಕ ಮಹಾಸಭೆಯು ಕಳೆದ ತಾ 25ರಲ್ಲಿ ಎಲೋಶಿಯಸ್ ಕೋಲೇಜಿನಲ್ಲಿ ರೆ. ಫಾದರ್ ಬ್ಲ್ಯೂ. ಎಫ್. ಸಿಕೇರರ ಅಧ್ಯಕ್ಷತೆಯಲ್ಲಿ ಜರಗಿ ವರದಿವಾಚನವಾಗಿ ಅಧ್ಯಾಪಕವರ್ಗಕ್ಕೆ ಸಂಬಳ ಏರಿಸುವುದರ ಆವಶ್ಯಕತೆ ಕುರಿತು ಅಭಿಪ್ರಾಯವಾಯಿತು, ಎಲ್ಲಾ ಅಧ್ಯಾಪಕರೂ ಒಟ್ಟಾಗಿ ದಕ್ಷಿಣ ಭಾರತ ಅಧ್ಯಾಪಕ ಸಂಘಕ್ಕೆ ಬೆಂಬಲವೀಯಬೇಕೆಂದಾಯಿತು.

ಸೆಕ್ಯುಲರ್ ಕಾಂಗ್ರೆಸ್ ಸದಸ್ಯರ ಸಭೆಯು— ಕಳೆದ ತಾ 27ರಲ್ಲಿ ಜಿಲ್ಲಾ ಕಾಂಗ್ರೆಸ್ ಕಚೇರಿಯಲ್ಲಿ ಶ್ರೀ ಕೆ. ಕೆ. ಶೆಟ್ಟರ ಅಧ್ಯಕ್ಷತೆಯಲ್ಲಿ ಜರಗಿ ಹೊಸ ಕಾರ್ಯಕಾರಿ ಮಂಡಳಿಗೆ ಶ್ರೀಗಳಾದ ಎ. ಆರ್. ಕಕ್ಕೇರ (ಅಧ್ಯಕ್ಷ) ಎಚ್. ಕೆ. ತಿಂಗಳಾಯ (ಉಪಾಧ್ಯಕ್ಷ) ಬಿ. ಬಿ. ಶೆಟ್ಟಿ (ಕೋಶಾಂಚಿ) ಬಿ. ಎಸ್. ಭಾಸ್ಕರ ರೈ (ಕಾರ್ಯದರ್ಶಿ) ಕೇಶವ ಮಿಜಾರ್ (ಜೊತೆ ಕಾರ್ಯದರ್ಶಿ) ಮತ್ತು ಬಿ. ಶಂಕರ ಭಟ್ಟ ವೆಂಕಟ್ರಮಣ ಹೆಗ್ಡೆಯವರು ಸದಸ್ಯರಾಗಿ ಆರಿಸಲ್ಪಟ್ಟಿರುವರು.

ಕಲ್ಲಡ್ಕ— ಕಳೆದ ತಾ. 28ರಲ್ಲಿ ಆಕಸ್ಮಿಕ ಬೆಂಕಿಯಿಂದ ಕೆಲವು ಅಂಗಡಿಗಳೂ, ಮನೆಗಳೂ ಸುಟ್ಟು, ಕೆಲವು ಬಡಕುಟುಂಬಗಳಿಗೆ ನಷ್ಟ ಉಂಟಾಗಿದೆ.

ಕಾನಾಡು— ಕೃಷಿಕ ಸಂಘದವರು ಕೋಳಿ ಅಂಕ ನಿಷೇಧ ಕಾರ್ಯಕ್ರಮವನ್ನು ಕೈಗೊಂಡಿದ್ದು ಆ ಮೂಲಕ ಆಸುಪಾಸಿನಲ್ಲಿ ಎಲ್ಲಾ ಕೋಳಿ ಅಂಕವು ಕಡಿಮೆಯಾಗುತ್ತಿದೆ, ಇತ್ತೀಚೆಗೆ ಕೆಲವರು ದೊಡ್ಡ ಕೋಳಿ ಅಂಕ ನಡಿಸಬೇಕೆಂದಿದ್ದಾಗ ಶ್ರೀ ರುಕ್ಮಯ್ಯ ಪೂಜಾರಿಯವರು ಉಪವಾಸ ಮಾಡಿ, ಅದ ನ್ನು ನಿಲ್ಲಿಸಿರುತ್ತಾರೆ.

ಪಂಡಿತರು— ತಾ. 25-2-1951ರಲ್ಲಿ ಬೋರ್ಡ್ ಜ್ಯೂನಿಯರ್ ಎಲಿಮೆಂಟರಿ ಶಾಲೆಯ ಹಳೆ ವಿದ್ಯಾರ್ಥಿ ಸಂಘದ ವಾರ್ಷಿಕೋತ್ಸವವು ಡಾಕ್ಟರ್ ಕೆ ಕೆ ರೈಯವರ ಅಧ್ಯಕ್ಷತೆಯಲ್ಲಿ ಜರಗಿತು. ಕೆ. ಕೆ. ಪೂಜಾರಿ (ಫಿಲ್ಮ್ ಆರ್ಟಿಸ್ಟ್ ಬೊಂಬಾಯಿ) ಇವರ ಸಿತಾರ ಮತ್ತು ಕೊಳಲು ವಾದನದೊಂದಿಗೆ ಹಳೆ ವಿದ್ಯಾರ್ಥಿಗಳಿಂದ ಭಕ್ತಪುರಂದರನೆಂಬ ಕನ್ನಡ ಸಂಗೀತ ನಾಟಕ, ನೂತನ ರೀತಿಯ 'ಮಾಯ್ಪ' ಎಂಬ ತುಳು ಸಂಗೀತ ನಾಟಕ ಮತ್ತು ವಿವಿಧ ವಿನೋದಾವಳಿಗಳು ಪ್ರದರ್ಶಿಸಲ್ಪಟ್ಟವು.

ಪೆರ್ಡೂರು— ಶ್ರೀ ಅನಂತ ಪದ್ಮನಾಭ ದೇವಸ್ಥಾನದಲ್ಲಿ ಮಹಾ ರಥೋತ್ಸವವು ತಾ. 12-3-51ರಿಂದ ಮೊದಲ್ಗೊಂಡು ತಾ. 19-3-51ರ ತನಕ ಜರಗಲಿರುವುದಾಗಿ ಎಕ್ಸಿಕ್ಯೂಟಿವ್ ಆಫೀಸರ್ ಶ್ರೀ ಎ. ಕೃಷ್ಣಯ್ಯ ಹೆಗ್ಡೇರು ತಿಳಿಸುತ್ತಾರೆ.

ಬಾರ್ಕೂರು ಕುದುರು ಮಠದಲ್ಲಿ ಶ್ರೀ ಶಂಕರ ಜಯಂತಿ ಸಭಾ ಸಂಬಂಧವಾದ ಕಾರ್ಯಕ್ರಮಗಳು ತಾ 10 ಮತ್ತು 11-5-51ರಲ್ಲಿ ನಡೆಯಲಿರುವುವು.

ಕಾರ್ಕಳ— ಶ್ರೀ ಗೋಮಟೇಶ್ವರ ಮಹಾ ಮಸ್ತಕಾಭಿಷೇಕವು ಎಪ್ರಿಲ್ ತಾ. 22ರಿಂದ 11 ದಿನಗಳವರೆಗೆ ಜರಗಲಿರುವುದೆಂದು ತಿಳಿದು ಬರುತ್ತದೆ.

ಬಸ್ರೂರು— ಹಿಂದೂ ಹಾಯರ್ ಎಲಿಮೆಂಟರಿ ಶಾಲೆಯ ವಾರ್ಷಿಕ ಉತ್ಸವವು ತಾ. ೪-೩-೫೧ರಲ್ಲಿ ಶ್ರೀ ಟಿ ಎಸ್. ತಿಮ್ಮಪ್ಪ ಸೆಟ್ಟಿ ಡಿಪ್ಟಿ ಕಲೆಕ್ಟರ್ ಇವರ ಅಧ್ಯಕ್ಷತೆಯಲ್ಲಿ ವಿವಿಧ ಕಾರ್ಯಕ್ರಮಗಳಿಂದ ಯಶಸ್ವಿಯಾಗಿ ಜರಗಿತು. ಅದೇ ದಿನ ಹಳೆ ವಿದ್ಯಾರ್ಥಿ ಸಂಘದ ವಾರ್ಷಿಕ ಕೂಡಾ ನೆರವೇರಿತು.

— ಮಕ್ಕಳನ್ನು ಹಡೆಯುವುದು ಸಾಕು —

ಅಶಕ್ತ ಸ್ತ್ರೀಯರಿಗೆ **ಬರ್ಥ ಕಂಟ್ರೋಲ** ರೋಗ ಗ್ರಹಸ್ತ ಹೆಣ್ಣು ಮಕ್ಕಳಿಗೆ

ಏಳು ದಿವಸ ಈ ಮಾತ್ರೆಗಳನ್ನು ಸೇವನ ಮಾಡಿದರೆ ಮುಂದೆ ಖಂಡಿತವಾಗಿ ಮಕ್ಕಳಾಗುವದಿಲ್ಲ. ಸ್ತ್ರೀಯರು ಪ್ರತಿತಿಂಗಳು ಸರಿಯಾಗಿ ಮುಟ್ಟಾಗುತ್ತಾರೆ. ಅಲ್ಲದೆ ಸ್ತ್ರೀಯರ ಬಿಳಿಸೆರಗು, ಪ್ರದರರೋಗ, ಹೊಟ್ಟೆಕುಟ್ಟು ಗುಣವಾಗಿ ಸ್ತ್ರೀಯು ಗರ್ಭಿಣಿಯಾಗುವದಿಲ್ಲ. ಈ ಔಷಧವನ್ನು ಸೇವಿಸುವ ಕ್ರಮ: ಪ್ರತಿದಿವಸ ಮುಂಜಾನೆ ೧ ಗುಳಿಗೆ ಮಧ್ಯಾಹ್ನಕ್ಕೆ ೧ ಗುಳಿಗೆ, ಸಂಜೆಗೆ ೧ ಗುಳಿಗೆಯಂತೆ ಊಟದ ಮೊದಲು ತಕ್ಕೊಳ್ಳಬೇಕು. ಏಳುದಿವಸ ಈ ಔಷಧವನ್ನು ಬಿಸಿನೀರಿನಲ್ಲಿ ಸೇವಿಸಬೇಕು.

ಪಥ್ಯ:— ಹರವೀಲ್ಲೆ ಬಿಡಬೇಕು. ೭ ದಿವಸ ಸಂಪೂರ್ಣ ಔಷಧದ ಕಿಮ್ಮತ್ತು ರೂಪಾಯಿ 5—0—0. ಪೋಸ್ಟ ಚಾರ್ಜು ೧೨ ಆಣೆ.

ಮಾಲಕರು:— ಹಾಲಪ್ಪಾ ಫಕೀರಪ್ಪಾ, ದಾವಣಗೇರಿ
ಆಯುರ್ವೇದ ಔಷಧಾಲಯ ಗದಗ-ಬೆಟಗೇರಿ.

ಏಜಂಟರು:— ... ಧಾರವಾಡ ... ಗದಗ, ಬಾಗಲಕೋಟ ... ಸಂಜೀವೇಶ್ವರ ಮೆಡಿಕಲ್ ಹಾಲ ದಾವಣಗೇರಿ— ದಾವಣಗೇರಿ ಪ್ರೆಸ್ ... ಕೆಮಿಸ್ಟ, ಹಾವೇರಿ, ಬ್ಯಾಡಗಿ

ಉಡುಪಿಗೆ ಹೋಗಬೇಕು! ಆದರೆ ಉಳಿದುಕೊಳ್ಳುವುದೆಲ್ಲಿ?

ರಾಯಲ್ ಮಹಾಲಿನಲ್ಲಿ

ಬಸ್ ಸ್ಟೇಂಡಿಗೆ ಅತಿ ಸಮೀಪ! ಕೃಷ್ಣಮಠಕ್ಕೆ ದೂರವಿಲ್ಲ!
ವ್ಯಾಪಾರವ್ಯವಹಾರ ವಿಹಾರಸ್ಥಳಗಳಿಗೆಲ್ಲ ಕೇಂದ್ರ!
ನಿಮ್ಮ ಸ್ನಾನ, ಊಟ, ಉಪಹಾರ, ಟೈಫಿನ್, ಶಯನ ಇವಕ್ಕೆಲ್ಲ ಉತ್ತಮ ವ್ಯವಸ್ಥೆ
ಕರೆದರೆ ಓಗೊಡುವ ನೌಕರರ ವರ್ಗ!
ಮೇಲಾಗಿ ಉಡುಪಿ ಬ್ರಾಹ್ಮಣರ ಅಡಿಗೆ, ತಿಂಡಿತಿನಸು, ಇವುಗಳ ರುಚಿಯ ಬಗ್ಗೆ ಹೇಳಬೇಕೆ?
ಪ್ರೊಪ್ರೈಟರ್:— ಕೆ. ವೆಂಕಟ್ರಮಣಭಟ್ಟ

For up-to-date Lodging & Boarding
ROYAL MAHAL,
UDIPI. S. Kanara

ಕೋಟೆ— ವಿವೇಕ ಹೈಸ್ಕೂಲಿನ ವಾರ್ಷಿಕೋತ್ಸವವು ಉಡುಪಿ ಎಮ್. ಜಿ. ಎಮ್. ಕೋಲೇಜಿನ ಪ್ರಿನ್ಸಿಪಾಲ್ ಶ್ರೀ ಎಚ್. ಸುಂದರ ರಾಯರ ಅಧ್ಯಕ್ಷತೆಯಲ್ಲಿ ಯಥಾಸಾಂಗವಾಗಿ ನೆರವೇರಿತು. ದೀಕ್ಷಿತ ವೆಂಕಟಕೃಷ್ಣ ಸೋಮಯಾಜಿಯವರಿಂದ ಸ್ವಸ್ತಿವಾಚನವಾಯ್ತು. ಶ್ರೀ ಕೋಟ ಶಿವರಾಮ ಕಾರಂತರು ಶ್ರೀ ದ. ರಾ. ಬೇಂದ್ರೆಯವರ ಭಾವಚಿತ್ರ ಅನಾವರಣ ಮಾಡಿದರು. ಅಧ್ಯಕ್ಷರ ಭಾಷಣವಾದ ಮೇಲೆ ವಿವಿಧ ವಿನೋದಾವಳಿಗಳು ನಡೆದುವು.

ಭದ್ರಾವತಿ— ದಿನಾಂಕ 11-2-51ನೇ ಆದಿತ್ಯವಾರ ಭದ್ರಾವತಿ ಪೇಪರ್ ಮಿಲ್ಲಿನ ಆಶ್ರಯದಲ್ಲಿ ರಾತ್ರಿ 9ಗಂಟೆಯಿಂದ 1ಗಂಟೆಯವರೆಗೆ ಒಂದು ಯಕ್ಷಗಾನ ಸಮಾರಂಭ ನಡೆದಿತ್ತು ಸದ್ರಿ ಸಮಾರಂಭದಲ್ಲಿ ಮಂಗಳೂರಿನ ಶ್ರೀಗಳಾದ ಕೆ. ಬಾಲಕೃಷ್ಣರಾವ್ ಎಡ್ವಕೇಟ್, ಕೆ. ಶಂಕರನಾರಾಯಣ ಶಾಸ್ತ್ರಿ, ಟಿ. ಗೋಪಾಲಕೃಷ್ಣ ಭಟ್ ಮತ್ತು ಎಸ್. ಎಸ್. ಕಿಲ್ಲೆಯವರು ಭಾಗವಹಿಸಿದ್ದರು. ಭಾಗವತರು ಶ್ರೀ ಕೆ ಮಹಾಬಲ ಸೋಂದರು ಮತ್ತು ಮೃದಂಗವಾದಕರು ಶ್ರೀ ಅಶ್ವರಪ್ಪಯ್ಯನವರು ಅಂದಿನ ಪ್ರಸಂಗ "ಕರ್ಣಾವಸಾನ" ಭದ್ರಾವತಿಯ ಮಹಾಜನರನೇಕರು ಸಭೆಗೆ ಬಂದು ಸದ್ರಿ ಸಮಾರಂಭವನ್ನು ತುಂಬಾ ಮೆಚ್ಚಿದರು

ದಿನಾಂಕ 12-2-51ನೇ ಸೋಮವಾರ ಸಂಜೆ ಗಂಟೆ 6ಕ್ಕೆ ಭದ್ರಾವತಿ ಪೇಪರ್ ಮಿಲ್ಲಿನ ಆಶ್ರಯದ ಶ್ರೀ ಕೃಷ್ಣನ ಕುರಿತು ಮಂಗಳೂರಿನ ಶ್ರೀ ಎಸ್. ಎಸ್. ಕಿಲ್ಲೆಯವರ ಭಾಷಣವಿತ್ತು. ಪೇಪರ್ ಮಿಲ್ಲಿನ ಚೇರ್ಮನ್ ಶ್ರೀ ಸಿ. ಆರ್. ಬಾಲಕೃಷ್ಣನ್ ಬಿ. ಎ. ಇವರು ಅಧ್ಯಕ್ಷತೆ ವಹಿಸಿದ್ದರು. ಧಾರ್ಮಿಕ ರಾಜಕೀಯ ಮತ್ತು ಸಾಮಾಜಿಕ ರಂಗಗಳಲ್ಲಿ ಶ್ರೀ ಕೃಷ್ಣನ ಸ್ಥಾನ ಮತ್ತು ಲೀಲೆಗಳ ಕುರಿತು ಶ್ರೀ ಕಿಲ್ಲೆಯವರು ಸಾಮಾನ್ಯ 2ಗಂಟೆಯ ವರೆಗೆ ಮಾತಾಡಿದ್ದರು.

ಪ್ರಕಟಣೆ

ಈ ಮೂಲಕ ಎಲ್ಲಾ ಜನರಿಗೆ ತಿಳಿಯಪಡಿಸುವದೇನೆಂದರೆ:—

ಪರ್ಕಳ ಪಂಚಾಯತ ಬೋರ್ಡಿನ ವಾರಸಂತೆ, ದಿನವಹಿ ಮೀನು ಮಾರ್ಕೇಟು ಮತ್ತು ಗಾಡಿಚಾವಡಿಗಳಲ್ಲಿ 1951ನೇ ಎಪ್ರಿಲು ತಾರೀಕು 1ರಿಂದ 1952ನೇ ಮಾರ್ಚ ತಾರೀಕು 31ರವರೇಗೆ ಪೂರ್ತಿ ಒಂದು ವರ್ಷದಲ್ಲಿ ಸುಂಕ ವಸೂಲು ಮಾಡುವ ಹಕ್ಕನ್ನು ಪ್ರತ್ಯೇಕ ಪ್ರತ್ಯೇಕವಾಗಿ ಬೋರ್ಡು ಆಫೀಸಿನಲ್ಲಿ ಇದೇ ಮಾರ್ಚ ತಾರೀಕು 16ನೇ ಶುಕ್ರವಾರ ಸಾಯಂಕಾಲ ಗಂಟೆ 3ಕ್ಕೆ ಪ್ರಾರಂಭವಾಗಿ ಬಹಿರಂಗವಾಗಿ ಏಲಂ ಮಾಡಲಾಗುವುದು.

ಹೆಚ್ಚಿನ ಏಲಂ ಶರ್ತ—ನಿಬಂಧನೆಯು ಮಾಹಿತಿಬಗ್ಗೆ ಬೋರ್ಡು ಆಫೀಸಿನಲ್ಲಿ ನೋಟೀಸು ಬೋರ್ಡಿನಲ್ಲಿ ಹಾಕಿರುವ ವಿವರವಾದ ಆಯಾಯ ಪ್ರಕಟಣೆಯನ್ನು ನೋಡಿ—ಯಾ—ಮುಖತಾ ವಿಚಾರಿಸಿ ತಿಳಿಯಬಹುದು.

ಬಿ. ಹಿರಿಯಣ್ಣ ಹೆಗ್ಡೆ,
ಪ್ರೆಸಿಡೆಂಟ್,
ಪಂಚಾಯತ್ ಬೋರ್ಡ ಆಫೀಸು,
ಪರ್ಕಳ ತಾ. 2-3 1951

ಸಹಕಾರಿ ಸಂಘಗಳಿಗೆ—
ಮುನ್ಸಿಫ್ ಕೋರ್ಟುಗಳಿಗೆ—
ವರ್ತಕರಿಗೆ—ಶಾಲೆಗಳಿಗೆ—
ಬೇಕಾಗುವ ರಿಜಿಸ್ಟ್ರಗಳು,
ರಶೀದಿ ಪುಸ್ತಕಗಳು,
ಫಾರ್ಮುಗಳೂ, ಎಕೌಂಟ್
ಪುಸ್ತಕಗಳೂ ದೊರೆಯುತ್ತವೆ.

ನವಯುಗ ಪ್ರೆಸ್ ಉಡುಪಿ.

ಸ್ವೀಕಾರ-ವಿಮರ್ಶೆ

ಮುಂಜಾವಿನಿಂದ ಮುಂಜಾವು

(ಕಾದಂಬರಿ) ಲೇಖಕರು ಶ್ರೀ ತ. ರಾ. ಸು. ಪ್ರಕಾಶಕರು ಆನಂದ ಬ್ರದರ್ಸ್, ಬೆಂಗಳೂರು. ಬೆಲೆ ರೂ. ೨-೧೨-೦

ಪತ್ರಿಕೋದ್ಯೋಗಿಯೊಬ್ಬನ ಜೀವನ ಚಿತ್ರವಿದು. ಲಕ್ಷ್ಮಣ ಬಂಡಹವನ್ನು ಜೀವನಕ್ಕಾಗಿ ಬಳಸಿಕೊಂಡವ. 'ಕರ್ನಾಟಕ ಕೇಸರಿ'ಯಲ್ಲಿ ಸಹಸಂಪಾದಕನಾಗಿದ್ದುಕೊಂಡು ಕೆಲಸ ಮಾಡುತ್ತಾನೆ. “ಪೇಟಿಮಾತೇನಪ್ಪೇ” ಎನುವ ಟೀಕಾತ್ಮಕ ಕಾಲಂವನ್ನು ಪ್ರಾರಂಭಮಾಡಿ ಕ್ರಾಂತಿಯನ್ನೆಬ್ಬಿಸಿಬಿಟ್ಟ. ವಿಷಯಸ್ವಾತಂತ್ರ್ಯದ ಪ್ರಶ್ನೆ ಬರುತ್ತದೆ. ಸಾಹಿತ್ಯದ ಗಂಧಗಾಳಿಯಿಲ್ಲದ ಪ್ರಧಾನ ಸಂಪಾದಕರಿಗೂ ಲಕ್ಷ್ಮಣನಿಗೂ ಮತಭೇಧ ಹುಟ್ಟಿ, ಅಲ್ಲಿಂದ ಹೊರ ಬೀಳುತ್ತಾನೆ. ಬಳಿಕ ದೇವದೂತ ಪತ್ರಿಕೆಯಲ್ಲಿ ಸ್ವಲ್ಪ ಸಮಯ ನಿಲ್ಲುತ್ತಾನೆ. ಅಲ್ಲೂ ಮೊದಲಿನ ಪಾಡೇ! ಪತ್ರಿಕೋದ್ಯೋಗಿಗಳ ಸಂಘವನ್ನು ಸ್ಥಾಪಿಸಬೇಕೆಂದು ಹವಣಿಸಿ ವಿಫಲಗೊಂಡು ತಿರುಗಿ ದೇವದೂತಕ್ಕೆ ಸೇರಬೇಕಾಗುತ್ತದೆ. ಇಷ್ಟರಲ್ಲಿ ಹಲವಾರು ಸಮಸ್ಯೆಯನ್ನು ಆತ ಎದುರಿಸಬೇಕಾಗುತ್ತದೆ. ಜೀವನದ ಒಂದು ಭಾಗ ನೀರಸವಾದರೂ ಇನ್ನೊಂದು ಭಾಗ ರತ್ನಮ್ಮನ ಒಲವು ಆವನ ಬಾಳಿಗೆ ಸಮಾಧಾನವನ್ನು ತಂದುಕೊಡುತ್ತಿತ್ತು. ಮದುವೆಯಾದ ಹೆಣ್ಣುಮಗಳು ಪತಿಯಿಂದ ಪಡೆಯಲಾಗದ ಸುಖವನ್ನು ಲಕ್ಷ್ಮಣನಿಂದಪಡೆಯುತ್ತಾಳೆ. ಕೊನೆಗೆ ಲಕ್ಷ್ಮಣನಿಗೆ ಅವನ ಬರಹವೇ ಮೃತ್ಯುವಾಗುತ್ತದೆ. ದುಷ್ಟರು ಬೀದಿ ಗೂಂಡಾಗಳಿಂದ ಚೂರಿಹಾಕಿಸುವರು, ಲಕ್ಷ್ಮಣ ಅದೇ ಇರಿತದಿಂದ ಸಾಯುತ್ತಾನೆ. ಲಕ್ಷ್ಮಣನ ಸಾವು ರತ್ನಮ್ಮನ ಶಕ್ತಿಗೆಗೂ ಉರುಳಾಯಿತು. ಇದು ಕತೆ.

ಪತ್ರಿಕೋದ್ಯೋಗಿಗಳು ಎಂದರೆ ಎಲ್ಲರಿಕ್ಕಿಂತ ಮಹತ್ವವುಳ್ಳವರು, ಅವರು ಹೊರಗೆಡಹುವ ಉದಾತ್ತವಾದ ವಿಚಾರಲಹರಿಯಂತೆ ಜೀವನವೂ ಕೂಡಾ ಹಾಗೆಯೆ ಉದಾತ್ತವೂ ವಿಲಾಸಪೂರ್ಣವೂ ಆಗಿರಬೇಕೆಂಬ ಕಲ್ಪನೆ ಹಲವರಲ್ಲಿದೆ. ಇನ್ನು ಹಲವರು “ಯಾವುದಕ್ಕೂ ಬಾರದ ಸೋಮಾರಿಗಳು, ನಿರುದ್ಯೋಗಿಗಳು” ಎನ್ನುವುದೂ ಉಂಟು. ಜನ ಅವರನ್ನು ಮೆಚ್ಚುತ್ತಾರೆ ವಿಷಯ ಸ್ವಾರಸ್ಯವನ್ನು ಕಂಡು ಬೆನ್ನುತಟ್ಟುತ್ತಾರೆ. ಆದರೆ ಪತ್ರಿಕೋದ್ಯೋಗಿಯ ಆಂತರಿಕ ಜೀವನವನ್ನವಲೋಕಿಸುವುದಿಲ್ಲ. ಲಕ್ಷ್ಮಣನ ಬರಹ ಜನಾನುರಾಗವನ್ನು ಪಡೆದು ಪತ್ರಿಕೆಯು ಅಂತಸ್ತು ಏರಿದರೆ ಅದರ ಲಾಭ-ಕೀರ್ತಿ ಮಾಲಕನಿಗೆ ಹೊರತು ಅವನಿಗಲ್ಲ. ಮೈಮುಸ್ಸನ್ನು ಕಡಿಸಿಕೊಂಡು ಆತ ಸಂಪಾದಿಸುವದಾದರೂ ಕೇವಲ 30-40ನ್ನು! ಅದರಲ್ಲೂ ಶ್ರೀಮಂತರ ಕೈಗೊಂಬೆಗಳಾಗಿ ಲೇಖನಿಯ ದುರುಪಯೋಗಗೊಳಿಸುವ ಆತ್ಮ ವಂಚನೆಯ ಕಾರ್ಯವನ್ನೂ ಮಾಡಬೇಕಾಗುತ್ತದೆ. ಲೋಕದ ಅನ್ಯಾಯವನ್ನು ಟೀಕಿಸಹೋದರೆ ತಿಂಗಳಿಗೆ ಬರುವ ಮೂವತ್ತು ರುಪಾಯಿಗೆ ಧಕ್ಕೆ ಬರುತ್ತದೆ. ಬಂಡಗಾರನೇನ್ನು ಯಾವ ಉದ್ದಿಮೆಗಾರರೂ ಸ್ವಾಗತಿಸುವಂತಿಲ್ಲ.

ಲಕ್ಷ್ಮಣ ಆದರ್ಶವಾದಿ ಸತ್ಯವಾದಿ ಮನಸ್ಸಿಗೆ ಕಂಡದ್ದನ್ನು ನೇರಾಗಿ ಹೇಳುವ ಸ್ವಭಾವ. ಅಂತಲೇ ಆವನು ಶ್ರೀಮಂತರ ಅವಕೃಪೆಗೆ ಪಾತ್ರನಾಗಿ ಒಂದು ದಿನ ಅವರ ಕೈನಾಂಗಲಂಬಲೇ ಮೃತ್ಯು ಮುಖವನ್ನು ಕಾಣುತ್ತಾನೆ ಪ್ರತಿಕೂಲ ಸನ್ನಿವೇಶಗಳ ದೆಸೆಯಿಂದಲೋ ಏನೋ ಉದಾತ್ತ ಧ್ಯೇಯದೊಂದಿಗೆ ಒರಟು ಸ್ವಭಾವವೂ ಅವನಲ್ಲಿ ಮನೆಮಾಡಿಕೊಂಡಿತ್ತು. ಮಾಲೀಕನೊಡನೆ ಒಮ್ಮೆಯೆ ನಿಷ್ಠುರವಾಗಿ ಮಾತನಾಡುವ ಸನ್ನಿವೇಶಗಳು ನಮಗೆ ಸ್ವಲ್ಪ ಹೆಚ್ಚೆಂದು ಕಾಣುತ್ತದೆ ಸಾಮಾನ್ಯ ವಿಚಾರಗಳನ್ನು ತೆಗೆದುಕೊಂಡು ಉದ್ಧಟತನವನ್ನು ಪ್ರದರ್ಶಿಸುವುದು ಶಿಸ್ತಿನ ನೀತಿಯಲ್ಲಿ ಸರಿಯಲ್ಲ. ಮಾಲಿಕ ಪತ್ರಿಕೆಯ ಸರ್ವಲಾಭಗಳನ್ನು ನಮ್ಮ ರಕ್ತವನ್ನು ಹೀರಿ ಪಡೆಯುತ್ತಾನೆಂದು ಲಕ್ಷ್ಮಣ ಭಾವಿಸುವದಾದರೂ ಮಾಲಿಕ ಹಲವಾರು ಕುತ್ತಗಳನ್ನು ಎದುರಿಸಿ, ಕೈಸುಟ್ಟುಕೊಂಡು ಹತ್ತಾರು ಜನರ ಹೊಟ್ಟೆ ಹೊರುವ ಭಾರವನ್ನೂ ನಡೆಸಬೇಕಾಗಿದೆ. ಒಂದೆರಡು ಕಡೆ ಆ ಬಗೆಯ ಮಾತುಕತೆಗಳು ಒಂದೇ ಮಾಲಿಕರ ಬಗೆಗೆ ಸದಭಿಪ್ರಾಯವನ್ನು ತೋರುವಂತಹದು ಬಹಳ ಕಡಿಮೆ. ಕನ್ನಡದಲ್ಲಿ ಪತ್ರಿಕಾ ಕರ್ತರ ಪಾಡನ್ನು ನೆನೆದರೆ ನಮಗದು ಅರ್ಥವಾದೀತು.

ಇನ್ನು ಲಕ್ಷ್ಮಣ ರತ್ನಮ್ಮನೊಡನೆ ಇಟ್ಟುಕೊಂಡಿರುವ ಸಂಬಂಧ. ಲೋಕದ ನ್ಯಾಯ ಇಲ್ಲವೇ ಶೀಲದ ಮಾನದಂಡದಿಂದ ಅಳೆಯುವದಾದರೆ ಮಹಾಪಾಪ! ಇರಲು ಆಶ್ರಯಕೊಟ್ಟು ಆದರದಿಂದ ನೋಡಿದ ವಾಸುದೇವರಾಯರ ಹೆಂಡತಿ ರತ್ನಮ್ಮನೊಡನೆ ಸಂಬಂಧವನ್ನು ಬೆಳೆಸುವದು ಮೂಲಕ ಅವರಿಗೆ ವಂಚನೆಯಾಡಿದಂತಾಗಿದೆ ಎನಬಹುದು. ಆದರೆ ರತ್ನಮ್ಮನಿಗೆ ಗಂಡನಿಂದ ಆ ಸುಖವಿಲ್ಲದಾಗ ಲಕ್ಷ್ಮಣನನ್ನು ತಾನಾಗಿ ಒಲಿಸಿಕೊಂಡಳು. ಪತಿಯಲ್ಲಿ ಪಡೆಯಲಾಗದ ಆ ಸುಖ ಯಾವುದೆಂಬುದು ಕೊನೆಯತನಕವೂ ನಮಗೆ ತಿಳಿಯುವುದಿಲ್ಲ. ಅತ್ಯಂತ ಉದಾರಿಗಳೂ, ಸಮಾಧಾನಿಗಳೂ ಆದ ವಾಸುದೇವರಾಯರಿಗೆ ಈ ರೀತಿ ವಂಚನೆ ಮಾಡುವುದು ಯುಕ್ತವೇ? ಎನುವ ಪ್ರಶ್ನೆ ರತ್ನಮ್ಮ ಲಕ್ಷ್ಮಣರ ಅಸ್ವಾಭಾವಿಕ ಸರಸ ಸಲ್ಲಾಪಗಳಲ್ಲಿ ಮೂಡುತ್ತದೆ. ಅವರೊಳಗಿನ ಸ್ನೇಹ ಅಷ್ಟು ಗಾಢವಾಗಿ ಬೆಳೆಯಲು ಕಾರಣ ಪ್ರೇಮವೋ-ಕಾಮವೋ ಎನುವುದು ಸರಿಯಾಗಿ ಕಾಣುವುದಿಲ್ಲ. ಆದರೆ ಲೇಖಕರು ಅನಿರೀಕ್ಷಿತವಾದ ಆ ಸನ್ನಿವೇಶಗಳನ್ನೇ ಪವಿತ್ರ ಪ್ರೇಮವೆಂದು ಕರೆದು ಕೊನೆಗೆ ಲಕ್ಷ್ಮಣ ಸಾಯುವ ಕಾಲಕ್ಕೆ ರತ್ನ ಕುತ್ತಿಗೆಗೆ ಉರುಳು ಹಾಕಿಕೊಂಡು ಸಾಯುವದರ ಮೂಲಕ ಧೃಢಮಾಡಿ ಕೊಟ್ಟಿರುತ್ತಾರೆ ರತ್ನ ಲಕ್ಷ್ಮಣನಿಗಾಗಿ ತುಂಬ ತವಕಪಡೆಯುತ್ತಿದ್ದಳು, ಹಾತೊರೆಯುತ್ತಿದ್ದಳು. ಹಲವು ರೀತಿಯಲ್ಲಿ ಶುಶ್ರೂಷೆ ಮಾಡುತ್ತಿದ್ದಳು ಕೈಹಿಡಿದ ಗಂಡನಿಗೆ ತೋರುವ ಪ್ರೀತಿ ಗೌರವಗಳಿಗಿಂತ ಹೆಚ್ಚಿನದನ್ನು ಲಕ್ಷ್ಮಣನಲ್ಲಿ ತೋರಿಸುತ್ತಿದ್ದಳು. ಇದು ಏಕಾಗಿ? ಅವನ ಸಾಹಿತ್ಯದಭಿರುಚಿಯ ಮೋಹವೂ ಅಲ್ಲ; ರೂಪಲಾವಣ್ಯಕ್ಕೂ ಅಲ್ಲ; ಶ್ರೀಮಂತಿಕೆಗೂ ಅಲ್ಲ; ಕೇವಲ ದೈಹಿಕ ಇಚ್ಛೆಯನ್ನು ಪೂರೈಸಿಕೊಳ್ಳುವದಕ್ಕಾಗಿ ಎಂದು ತೋರುತ್ತದೆ. ನೈತಿಕವಾಗಿ ಇದು ತಪ್ಪಾದರೂ ಹಣದ ಮುಖವನ್ನೇ ನೋಡಿ ಹೆಣ್ಣುಬಾಳನ್ನು ಮಣ್ಣುಗೂಡಿಸುವ ಸಮಾಜಕ್ಕೆ ಇದು ಸರಿಯಾದ ಉತ್ತರವೇ ಆಗಿದೆ. ಲಕ್ಷ್ಮಣನೂ ಒಬ್ಬ ಮನುಷ್ಯ. ಹಸಿವು ಬಾಯಾರಿಕೆ ಇದ್ದಹಾಗೆ ಅವನಿಗೂ ಕಾಮದ ತೃಪ್ತಿ ಇದೆ. ಇದು ಸ್ವಾಭಾವಿಕ. ಹೆಣ್ಣು ತಾನಾಗಿ 'ತಾನು ಜೀವನದಲ್ಲಿ ಅತೃಪ್ತೆ' ಎಂದಾಗ ಅವನು ತನ್ನಿಚ್ಛೆಯಂತೆ ನಡೆಯುತ್ತಾನೆ, ಎರಡು ಹೃದಯಗಳಿಗೂ ಈವರೆಗೆ ಬದುಕಿನಲ್ಲಾಗದ ಆನಂದ ಸಂತೃಪ್ತಿಗಳು ಮೂಡುತ್ತವೆ. ಇದು ಪ್ರಕೃತಿದತ್ತವಾದ ಗುಣ, ಇದರ ಮುಂದೆ ಶೀಲಾಶ್ಲೀಲದ ಪ್ರಶ್ನೆ ನಿಲ್ಲಲಾರದು.

“ಮುಂಜಾವಿನಿಂದ ಮುಂಜಾವು” ಕನ್ನಡದಲ್ಲಿಯ ಇತರ ಕಾದಂಬರಿಗಳಿಗಿಂತ ಭಿನ್ನವಾಗಿದೆ. ಪತ್ರಿಕೋದ್ಯೋಗಿಗಳ ಜೀವನದ ಕುರಿತಾದ ಸಮಗ್ರಚಿತ್ರವೊಂದು ಈ ತನಕ ಬಂದಿಲ್ಲ. ತ. ರಾ. ಸು. ರವರು ಆ ಕಾರ್ಯವನ್ನು ಮಾಡಿದ್ದಾರೆ. ಪ್ರತಿಭಾ ಸಂಪನ್ನವಾದ ತನ್ನ ವಾಕ್ಸರಣಿಯಿಂದ ಮೊದಲಿಂದ ಕೊನೆಯ ತನಕವೂ ಓದುಗರನ್ನು ತನ್ನೆಡೆಗೆ ಸೆಳೆದುಕೊಳ್ಳುತ್ತಾರೆ. ಪತ್ರಿಕೋದ್ಯೋಗಿಯ ಜೀವನದ ಒಳನೋಟವನ್ನು ಚಿತ್ರಿಸುವದರಲ್ಲಿ ಶ್ರೀ ತ. ರಾ. ಸು. ಕೃತಾರ್ಥರಾಗಿದ್ದಾರೆ. ಕನ್ನಡ ಜನತೆ ಕಲಾಗಾರರಿಗೆ ನೀಡುವ ಸಹಾನುಭೂತಿ ಎಂತಹದೆಂಬುದನ್ನು ಇದರಿಂದ ಅರ್ಥಮಾಡಿಕೊಳ್ಳಬೇಕು. ಧನವಂತಿಕೆಯ ಪ್ರಭಾವದಿಂದ ಮಣ್ಣುಮುಕ್ಕುತ್ತಿರುವ ನಮ್ಮ ಆದರ್ಶಗಳನ್ನು ಬಡಪಾಯಿ ಪತ್ರಿಕೋದ್ಯಮಿಯೊಬ್ಬನು ಆತ್ಮಸಾಕ್ಷಿಗೆ ಸರಿಯಾಗಿ ಕಾಪಾಡಿಕೊಂಡು ಬರುವಲ್ಲಿ ಜೀವವನ್ನೇ ಧಾರೆಯೆರೆದ ಒಂದು ದುರಂತ ಚಿತ್ರವನ್ನು ತ. ರಾ. ಸು. ನಮ್ಮ ಮುಂದಿಟ್ಟಿರುತ್ತಾರೆ. ದಕ್ಷಿಣೋತ್ತರ ಗದ ಪರಿಪೂರ್ಣವಾದ ಚಿತ್ರವೆಂಬುದನ್ನು ಪತ್ರಿಕೋದ್ಯಮದಲ್ಲಿರುವ ಪ್ರತಿಯೊಬ್ಬರೂ ಒಪ್ಪಿಯೇ ಒಪ್ಪುತ್ತಾರೆ; ಉಳಿದವರು ಪತ್ರಿಕೋದ್ಯಮಿಗಳ ವಾಸ್ತವಿಕವಾದ ಈ ಪಾಡಿಗೆ ಕನಿಕರ ಪಡುವಂತಾದರೆ ತ. ರಾ. ಸು. ರವರ ಶ್ರಮ ಸಾರ್ಥಕ.

ಎರಡು ಮುಷ್ಟಿ ಕಥೆಗಳು

(ಮಕ್ಕಳ ಸಚಿತ್ರ ಕತೆಗಳು) ಚಿತ್ರಗಾರ ಮತ್ತು ಲೇಖಕರು: ಶ್ರೀ ಮಾದರ ಚಿಟ್ಟು ರಂಗರಾಯರು- ಪ್ರಕಾಶಕರು: ಯು. ಆರ್. ಶೆಣೈ ಎಂಡ್ ಸನ್ಸ್, ಮಂಗಳೂರು. ಬೆಲೆ ೦-೮-೦

ಮಕ್ಕಳಿಗಾಗಿ ಬರೆದಂತಹ ಹತ್ತು ಕತೆಗಳು ದೊಡ್ಡವರ ಕುತೂಹಲವನ್ನೂ ಕೆರಳುತ್ತವೆ. ಪ್ರತಿಯೊಂದು ಕತೆಗಳನ್ನೂ ಮಕ್ಕಳ ಮನಸ್ಸನ್ನು ಸೂರೆಗೊಳ್ಳುವ ಮುಗ್ಧಮಾತಿನಿಂದ ಹೆಣೆದಿದ್ದಾರೆ ಲೇಖಕರು, ಕತೆಗೆ ಹೊಂದಿಕೆಯಾದ ಚಿತ್ರಗಳು ಲಕ್ಷಣವಾಗಿಯೂ ಅತ್ಯಂತ ಸ್ವಾರಸ್ಯವಾಗಿಯೂ ಇರುತ್ತವೆ. ಚಿತ್ರ ಇನ್ನು ದೊಡ್ಡದಾಗಿದ್ದರೆ ಒಳ್ಳೆತಾಗಬಹುದಾಗಿತ್ತು. ಕತೆಯು ತಾಂತ್ರಿಕವಾಗಿದ್ದು ಮಕ್ಕಳು ಇದರಿಂದ ಯಥೇಚ್ಛವಾಗಿ ಆನಂದಿಸಬಹುದಾಗಿದೆ. ಇಂತಹ ಅಮೂಲ್ಯ ಕಿರುಹೊತ್ತಿಗೆಯನ್ನು ಬರೆದು ಪ್ರಕಟಿಸಿದ ಲೇಖಕ ಮತ್ತು ಪ್ರಕಾಶಕರು ಅಭಿನಂದನಾರ್ಹರು, ಇಂತಹ ಕೃತಿಗಳು ಇನ್ನೂ ಹೆಚ್ಚುಹೆಚ್ಚಾಗಿ ಬರಲೆಂದು ಹಾರೈಸುತ್ತೇವೆ.

— ಎಸ್ಸೆಲ್

ಹಕ್ಕೀ ನೋಟ

೧ ಶ್ರೀ ಶಂಕರ ಜಯಂತೀ ಸಭಾ— (ಚತುರ್ಥಾಧಿವೇಶನದ ವರದಿ) ಶ್ರೀಮಾನ್ ಬಾಳೇ ಕುದುರು ಶ್ರೀಮಠ, ಹಂಗಾರ ಕಟ್ಟೆ, ದ. ಕ.

ದಕ್ಷಿಣ ಕನ್ನಡದ ಬಾಳೆಕುದುರು ಮಠದ ಶ್ರೀ ಸ್ವಾಮಿಯವರ ನೇತೃತ್ವದಲ್ಲಿ ಅವರ ಶಿಷ್ಯಂದಿರು ನಡೆಸಿಕೊಂಡು ಬರುತ್ತಿರುವ ಶ್ರೀ ಶಂಕರ ಜಯಂತೀ ಸಭೆಯ ನಾಲ್ಕನೆಯ ವರ್ಷದ ವರದಿಯನ್ನು ಆಹ್ಲಾದದಿಂದ ಸ್ವೀಕರಿಸಿದ್ದೇವೆ. ಅದ್ವೈತ ವೇದಾಂತತತ್ವ ಪ್ರಚಾರವೇ ಮುಖ್ಯ ಉದ್ದೇಶವಾಗಿಯುಳ್ಳ ಈ ಸಭೆಯು ನಾನಾ ಮುಖದ ಚಟುವಟಿಕೆಯನ್ನು ನಡೆಸುತ್ತದೆ. ಸಭೆಯು ಇಂತಹ ತಾತ್ವಿಕ ವಿಚಾರಗಳಿಂದ ಜನಜಾಗೃತಿಯನ್ನುಂಟು ಮಾಡಲೆಂದು ಹಾರೈಸುತ್ತೇವೆ.

೨ ಶ್ರೀಈಶ್ವರ ಸಂವತ್ಸರಸ್ಯ ಪಂಚಾಂಗಂ—ಲೇಖಕರು ಮತ್ತು ಪ್ರಕಾಶಕರು, ಶ್ರೀ ಶ್ರೀಪತಿ ನರಸಿಂಹ ಭಿಡೆಗಳು. ಪ್ರಧಾನ ಕಾರ್ಯಾಲಯ ಕೋಟ, ದ. ಕ. ಬೆಲೆ ರೂ. 0-8-0

ಸೂರ್ಯಸಿದ್ಧಾಂತರೀತ್ಯಾ ಗುಣಿಸಿ ಬರೆದ ಈ ಪಂಚಾಂಗ ಪರಿಷ್ಕಾರವಾಗಿರುತ್ತದೆ, ಕೊನೆಯಲ್ಲಿ “ಕಾಲಧರ್ಮ” ಎನುವ ಲೇಖನವೊಂದು ಯಾವುದೋ ವ್ಯಕ್ತಿ ಅಭಿಪ್ರಾಯವನ್ನಿಟ್ಟುಕೊಂಡು ಬರೆದಂತಿದೆ. ಪಂಚಾಂಗದ ದೃಷ್ಟಿಗೆ ಅದು ಭೂಷಣವಲ್ಲ, ಬೆಲೆ ಎಂಟಾಣೆ ಮಿತವಾಗಿಯೂ ಹೆಚ್ಚು.

ಲಕ್ಷ್ಮೀ ಸೆಂಟಾಲ್ ಮಾತ್ರೆ

ಇದರ ಉಪಯೋಗದಿಂದ ಒಹುಕಾಲದ ಮೇಹ, ಪ್ರಮೇಹ, ಮೂತ್ರದ ಉರಿ, ಮೂತ್ರ ಕೃಚ್ಛ್ರ, ಮೂತ್ರದೊಡನೆ ಯಾ ಮುಂದಾಗಿ ಬಿಳುಪು, ಅರಸಿನ, ಕೆಂಪು ಈ ವರ್ಣಗಳಲ್ಲಿ ಕೀವು ಹೋಗುವುದು, ತೊಡೆ ಸಂದಿನಲ್ಲಿ ನೋವು, ಕಾಲ ಗಂಟುಗಳಲ್ಲಿ ವೇದನೆ, ಕಣ್ಣಿನಲ್ಲಿ ಕೀವು ಬರುವುದು, ಶರೀರದಲ್ಲಿ ಉಷ್ಣತೆ, ಸ್ವಪ್ನೇಂದ್ರಿಯ ಇವೆಲ್ಲಾ ಖಾತ್ರಿ ಯಾಗಿ ಗುಣಹೊಂದುವುದು.

ಡಬ್ಬಿ ಒಂದಕ್ಕೆ ರೂ. ೨—0—0

ಸಿಗುವ್—

ಶಾ ಕಂಪೆನಿ, ಮಂಗಳೂರು

ಗೊನೋರಿಯಾ ಪರಮಾರೋಗ ಉಷ್ಣ ರೋಗಕ್ಕೆ ಔಷಧ

೭ ದಿವಸಗಳಲ್ಲಿ ಈ ರೋಗ ಗುಣ ಹೊಂದುವದು ಗ್ಯಾರಂಟೀ

ಸಿರಿ ರವಿಂದ ಕೀವು ಬರುತ್ತಿದ್ದರೆ, ಧೋತರಕ್ಕೆ ಹಳದಿ ದಾಗು ಹತ್ತುತ್ತಿದ್ದರೆ, ...ರದಿಂದ ಬಾವು ಬರೇದ ತೊಗಲು ಹಿಂದಕ್ಕೆ ಸರಿಯದಿದ್ದರೆ, ಶರೀರದ ಸಿತ್ತು ಭಾರವಾಗಿದ್ದರೆ,... ಚಟ್ಟ ಬಿದ್ದಿದ್ದರೆ, ಉಷ್ಣದಿಂದ ಚೀರು ಕಳೆದಿದ್ದರೆ, ಉಡುಚುರಿಗಿದ್ದರೆ, ಮೂತ್ರವ್ಯಾಧಿ, ಭಗೇಂದ್ರ, ಗಂಡುಮಾಲೆ, ಕೈಕಾಲು ಶೂಲಿ, ಅರ್ಧಾಂಗವಾಯು ನಡುನೋಯ ಮದು ಸ್ತ್ರೀಯರ ಬಿಳಿಕೆಂಪು ಸೆರಗು ಹೋಗುತ್ತಿದ್ದರೆ, ಗೊಲಿಕ ಟಿ. ಗರ್ಭಿಯಿಂದ ಗರ್ಭಕೋಶ ನಾಶಹೊಂದಿದ್ದರೆ, ಸರಿಯಾಗಿ ಭೇದಿಯಾಗದಿದ್ದರೆ, ಮೂತ್ರ ಉರಿಯುತ್ತಿದ್ದರೆ, ಈ ಎಲ್ಲಾ ಬೇನೆಗಳಿಗೆ ಈ ನಮ್ಮ ಔಷಧವು ಇರುತ್ತದೆ. ಮೊದಲ ದಿವಸ ಬೆಳಿಗ್ಗೆ ೧ ಗಂಟೆ ಪ್ರಮಾಣ ಔಷಧ ಅರ್ಧತೊಲೆ ತುಪ್ಪದಲ್ಲಿ ತಕ್ಕೊಳ್ಳಬೇಕು ಮೊದಲ ದಿವಸ ಮಾತ್ರ ಮುಂಜಾನೆ ಸಂಜೆ ಎರಡು ಸಾರೆ ತಕ್ಕೊಳ್ಳಬೇಕು. ಮುಂದೆ ಪರ ದಿವಸ ಬೆಳಗ್ಗೆ ಒಂದೇ ಸಾರೆ ೭ ದಿವಸ ಸೇವಿಸಬೇಕು.- ಈ ಔಷಧವನ್ನು ಬೇಸಿಗೆಯಲ್ಲಿ ತುಪ್ಪದಲ್ಲಿ, ಥಂಡಿ ಮಳೆಗಾಲದಲ್ಲಿ ಜೇನತುಪ್ಪದಲ್ಲಿ ತಕ್ಕೊಳ್ಳಬೇಕು. ಪಥ್ಯ: ಹುಳಿಖಾರ, ಕುಂಬಳಕಾಯಿ, ಒಳ್ಳೆಣ್ಣೆ ಬಿಡಬೇಕು.

ಬಾಟ್ಲಿ ೧ಕ್ಕೆ ೩ರೂ. ಪೋಸ್ಟ ಖರ್ಚ ೮ ಆಣೆ

ಏಜೆಂಟರು:—ಗದಗ:—ಗದಗ ಫಾರ್ಮಸಿ, ಹುಬ್ಬಳ್ಳಿ:—ಹುಬ್ಬಳ್ಳಿ ಫಾರ್ಮಸಿ ಬಾಗಲಕೋಟೆ:-ಬಾಗಲಕೋಟೆ ಫಾರ್ಮಸಿ, ಧಾರವಾಡ:-ಧಾರವಾಡ ಫಾರ್ಮಸಿ, ದಾವಣಗೇರಿ: ದಾವಣಗೆರೆ ಪ್ರೆಸ್. ನಂಜುಡೇಶ್ವರ ಮಾರ್ಕೆ ದಾವಣಗೇರಿ.

ಪತ್ರವ್ಯವಹಾರ ಮಾಡತಕ್ಕ ಮಾಲಕರ ವಿಳಾಸ

ರೇವಣಸಿದ್ಧಪ್ಪ ಹಾಲಪ್ಪ ದಾವಣಗೇರಿ,

ಆಯುರ್ವೇದ ಔಷಧಾಲಯ, ಗದಗ.

ಪ್ರಿಯ ವಾಚಕರೇ,

ಭ್ರೂಣಹತ್ಯವು ಮಹಾ ಪಾಪವೆಂದು ನಮ್ಮ ಧರ್ಮಶಾಸ್ತ್ರವು ಹೇಳುತ್ತಿದೆ. ಧರ್ಮಶಾಸ್ತ್ರಕ್ಕೆ ಹೆದರದವರೂ ಇಂಡಿಯನ್ ಪಿನಲ್‌ಕೋಡಿಗೆ ಹೆದರುತ್ತಾರಷ್ಟೆ. ಪಿನಲ್‌ಕೋಡಿನಲ್ಲಿ ಭ್ರೂಣಹತ್ಯವು ಅಪರಾಧವೆಂದು ಸಾಗಿ ಹೇಳುತ್ತಿದೆ. ಗರ್ಭವತಿಯಾದ ಸ್ತ್ರೀಯು ಬೇಕೆಂತಲೇ ಗರ್ಭಸ್ರಾವ ಆಗುವಂತೆ ಮಾಡಿಕೊಂಡರೆ ಅಥವಾ ಗರ್ಭವತಿಯಾದ ಸ್ತ್ರೀಯ ಗರ್ಭ ನಾಶವಾಗುವಂತೆ ಇನ್ನಾರಾದರೂ ಮಾಡಿದ್ದಾದರೆ ಅಂಥವರಿಗೆ ಮೂರು ವರ್ಷದ ವರೆಗೆ ಶಿಕ್ಷೆಕೊಡಬಹುದು. ಗರ್ಭ ಚಲನೆಯಾದ ಮೇಲೆ ಅಂದರೆ ಗರ್ಭಕ್ಕೆ ನಾಲ್ಕೈದು ತಿಂಗಳು ಪ್ರಾಯವಾದ ನಂತರ ಗರ್ಭನಾಶವಾಗುವಂತೆ ಮಾಡಿದವರಿಗೆ ಏಳು ವರ್ಷದ ವರೆಗೆ ಶಿಕ್ಷೆ ವಿಧಿಸಬಹುದು. ಗರ್ಭವತಿಯಾದ ಸ್ತ್ರೀಯ ಒಪ್ಪಿಗೆಯಿಲ್ಲದೆ ಅವಳ ಗರ್ಭ ನಾಶವಾಗುವಂತೆ ಮಾಡಿದವರನ್ನು ಜೀವಾಂತ್ಯದ ವರೆಗೆ ಶಿಕ್ಷೆಗೆ ಗುರಿಪಡಿಸಬಹುದು. ಗರ್ಭ ನಾಶಮಾಡುವ ಪ್ರಯತ್ನದಿಂದಾಗಿ ಗರ್ಭಿಣಿಗೆ ಮರಣ ಸಂಭವಿಸಿದರೆ ಹಾಗೆ ಮಾಡಿದವರಿಗೆ ಹತ್ತು ವರುಷಗಳ ವರೆಗೆ ಶಿಕ್ಷೆ. ಗರ್ಭಿಣಿಯ ಒಪ್ಪಿಗೆಯಿಲ್ಲದೆ ಅವಳ ಗರ್ಭ ನಾಶಮಾಡಲಿಕ್ಕೆ ಪ್ರಯತ್ನಿಸಿ ಅದರಿಂದಾಗಿ ಅವಳ ಮರಣವಾದರೆ ಅಂತವರಿಗೆ ಜೀವಾಂತ್ಯದ ವರೆಗೆ ಶಿಕ್ಷೆ ಕೊಡಬಹುದು ಎಂದು ನಮ್ಮ ಇಂಡಿಯನ್ ಪಿನಲ್‌ಕೋಡು ಸಾರುತ್ತಿದೆ. ಗರ್ಭನಾಶ ಮಾಡುವ ಪ್ರಯತ್ನವನ್ನು ನಮ್ಮ ಸರಕಾರದವರು ಇಷ್ಟು ಕಠಿಣವಾಗಿ ಖಂಡಿಸಿರುವಾಗ, ಯಾವ ಕಾರಣಗಳಿಂದಲೇ ಆಗಿರಲಿ ಮುಟ್ಟು ನಿಂತಿದ್ದರೆ ಅಥವಾ ತಡವಾಗಿದ್ದರೆ ಈ ಔಷಧಿಯು ೨೪ ಗಂಟೆಯ ಒಳಗೆ ಸ್ತ್ರೀಯರನ್ನು ಬಹಿಷ್ಠೆಯರನ್ನಾಗಿ ಮಾಡುವುದು, ಗರ್ಭಿಣಿಯರು ಸೇವಿಸಿದರೆ ಗರ್ಭಪಾತವಾಗುವುದು ಎಂದು ಕೆಲವು ಅನಾಮಿಕ ಔಷಧಿಗಳನ್ನು ನಮ್ಮ ನಾಡ ಪತ್ರಿಕೆಗಳಲ್ಲಿ ಬಹಿರಂಗವಾಗಿ ಪ್ರಕಟಿಸುವ ಧೈರ್ಯ ಅವರಿಗೆ ಎಲ್ಲಿಂದ ಬರುತ್ತದೆ? ನಮ್ಮ ಸರಕಾರವು ಎಚ್ಚರದಿಂದಿದೆಯೋ ನಿದ್ರೆ ಮಾಡಿದೆಯೋ ಅಥವಾ ಈ ರೀತಿಯಲ್ಲಿ ಆಹಾರ ಸಮಸ್ಯೆ ಅದಷ್ಟು ಪರಿಹಾರವಾಗಲಿ ಎಂದು ಕಣ್ಣುಮುಚ್ಚಿಕೊಂಡಿದೆಯೋ ಹೀಗೆ ಪ್ರಕಟಿಸುತ್ತಿರುವ ವೈದ್ಯರು ಗರ್ಭಪಾತಕ್ಕೆ ಉತ್ತೇಜನಕೊಡುತ್ತಿರುತ್ತಾರೆಂಬುದಕ್ಕೆ ಸಂಶಯವಿದೆಯೋ? ಸರಕಾರದವರು ಮಾಡಿರುವ ಶಾಸನವನ್ನು ಬಹಿರಂಗವಾಗಿ ಉಲ್ಲಂಘಿಸುವ ಇಂತಹ ಪ್ರಕಟಣೆಗಳನ್ನು ನಿಲ್ಲಿಸುವುದು ಸರಕಾರಕ್ಕೆ ಸಾಧ್ಯವಿಲ್ಲವೇ?

ಧರ್ಮಶಾಸ್ತ್ರವನ್ನು ಮತ್ತು ಸರಕಾರದ ನಿಯಮಗಳನ್ನು ನಿರ್ಲಕ್ಷ್ಯವಾಗಿ ಉಲ್ಲಂಘಿಸಲು ಹೆದರದ ಜನರು ನಮ್ಮಲ್ಲಿ [illegible] ಗಟ್ಟಿಯಲ್ಲಿದ್ದಾರೆನ್ನಿ. ಈ ರೀತಿಯಲ್ಲಿ ಸಂತತಿಯನ್ನು ನಿರೋಧಿಸುವುದು ಆರೋಗ್ಯ ದೃಷ್ಟಿಯಿಂದ ಬಹಳ ಹಾನಿಕರವೆಂದೂ ಇವರಿ

ವಾರದ ಹರಟೆ

ಶ್ರೀ "ಯು. ವಿ"

ಗೆ ಅರ್ಥವಾಗದೇ? ಸಂತತಿಯನ್ನು ಕಂಟ್ರೋಲಲ್ಲಿಡಬೇಕೆನ್ನುವವರು ಕೆಲವರು ಹೇಗೂ ಮರ್ಯಾದೆಯನ್ನು ಉಳಿಸಿಕೊಳ್ಳಬೇಕೆನ್ನುವವರು ಹಲವರು ಹೀಗೆ ಅನೇಕರು ಈ ರೀತಿಯ ಜಾಹೀರಾತುಗಳ ಒಳಗೆ ಬಿದ್ದು ತಮ್ಮ ಆರೋಗ್ಯವನ್ನು ಕಳೆದುಕೊಂಡು ಜೀವಾಂತ್ಯದವರೆಗೂ ರೋಗದಿಂದ ನರಳುತ್ತಿರುವುದು ನಮಗೆ ತಿಳಿದ ವಿಷಯ. ಈ ಜಾಹೀರಾತುಗಳನ್ನು ಅನೇಕರು ಸಂಪೂರ್ಣ ನಂಬಿ ಗುಟ್ಟಿನಲ್ಲಿ ಔಷಧಿ ತರಿಸುತ್ತಾರೆ. ಅದರಿಂದಾಗುವ ಅನಾಹುತಗಳನ್ನು ಯಾರೊಡನೆಯೂ ಹೇಳಲಾರದೆ ಸಾಯುತ್ತಾರೆ. ಈ ಪ್ರಯೋಗಗಳನ್ನು ಸರಕಾರದವರು ಡಾಕ್ಟರಿಂದ ಪರೀಕ್ಷಿಸಿ ಅವುಗಳ ಪರಿಣಾಮವನ್ನು ಬಹಿರಂಗಗೊಳಿಸಿ ಪ್ರಜೆಗಳನ್ನು ರಕ್ಷಿಸುವುದು ಅವರ ಕೆಲಸವೆಂದು ನನಗನಿಸುತ್ತದೆ.

ನಮ್ಮ ಜನರು ಸಂತತಿಯನ್ನು ಕಂಟ್ರೋಲಲ್ಲಿಟ್ಟುಕೊಳ್ಳಬೇಕೆಂದು ಬಹಳ ಆತುರದಲ್ಲಿದ್ದಾರೆಂಬುದು ಸ್ಪಷ್ಟವಿದೆ. ಅದು ಹೇಗೆ ಸಾಧ್ಯವೆಂಬುದು ಮಾತ್ರ ಅವರಿಗೆ ತಿಳಿಯದಾಗಿದೆ. ಮುಟ್ಟು ನಿಂತ ನಂತರ ಪುನಃ ಬಹಿಷ್ಠೆಯಾಗಲಿಕ್ಕೆ ಏನು ಉಪಾಯವೆಂದು ಜಾಹೀರಾತುಗಳನ್ನು ನೋಡಿ ಪ್ರಯೋಜನವಿಲ್ಲ. ಜಾಹೀರಾತುಗಳಲ್ಲಿ ಹೇಳಿದಂತೆ ನಡೆದರೂ ಸರ್ವನಾಶವಾಗುವುದು, ವಿನಾ ಬೇರೇನೂ ಉಪಕಾರವಾಗಲಾರದು. ಸಂತತಿ ಕಂಟ್ರೋಲಿಗೆ ಉತ್ತಮ ಉಪಾಯವೆಂದರೆ ಮಹಾತ್ಮಾ ಗಾಂಧಿಯವರು ಹೇಳಿದುವಂತೆ ಬೇಕಾದಷ್ಟು ಮಕ್ಕಳಾದ ಕೂಡಲೇ ಬ್ರಹ್ಮಚರ್ಯವ್ರತವನ್ನಾಚರಿಸುವುದು. ಆದರೆ ಇದು ಮಹಾತ್ಮರಿಗೆ ಮಾತ್ರ ಸಾಧ್ಯ. ಸಾಮಾನ್ಯ ಜನರು ಅನುಸರಿಸಬಹುದಾದ ಉಪಾಯಗಳು ಬೇರೆಯೇ ಇವೆ. ಬೀಜ ಮೊಳಕೆ ಒಡೆದನಂತರ ಅದನ್ನು ನಾಶಮಾಡುವ ಪಾಪಕೃತ್ಯಕ್ಕಿಂತ ಮೊಳಕೆ ಬಾರದಂತೆ ನೋಡಿಕೊಳ್ಳುವ ಶಾಸ್ತ್ರೀಯ ಕ್ರಮವಿದೆ. ಈ ಕ್ರಮವನ್ನು ಅಭ್ಯಸಿಸಿದವರಿದ್ದಾರೆ. ಇನ್ನೂ ಈ ಶೋಧನೆಗಳು ನಡೆಯುತ್ತಾ ಇವೆ. ಈ ವಿಧಾನದಿಂದ ಸಂತತಿಯನ್ನು ಕಂಟ್ರೋಲ್ ಮಾಡುವ ಕ್ರಮ ಪಾಶ್ಚಾತ್ಯರಿಗೆ ಗೊತ್ತಿದೆ. ಪಾಶ್ಚಾತ್ಯ ದೇಶಗಳಲ್ಲಿ ಸಂತತಿ ಹತೋಟಿಯಲ್ಲಿರುವುದಾದರೆ ಅದು ಈ ಶಾಸ್ತ್ರೀಯ ಪ್ರಯೋಗದಿಂದ ವಿನಾ ನಮ್ಮ ದೇಶದಲ್ಲಿ ಪ್ರಚಾರದಲ್ಲಿರುವ ಅಶಾಸ್ತ್ರೀಯ ಹಾನಿಕರ ಪ್ರಯೋಗದಿಂದಲ್ಲ. ನಮ್ಮ ದೇಶದಲ್ಲಿ ಮಾತ್ರ ಈ ರೀತಿಯ ಶಾಸ್ತ್ರೀಯ ಪ್ರಯೋಗ ಬೇಡವಾಗಿದೆ. ಈ ಪ್ರಯೋಗಗಳನ್ನು ಸರಕಾರದವರು ಪ್ರೋತ್ಸಾಹಿಸಬಾರದೆಂದು, ನಮ್ಮ ಎಲ್ಲಾ ಮತಗಳ ಸನಾತನಿಗಳೂ ಅನ್ನುತ್ತಿದ್ದಾರೆ. ಹಾಗೆ ಮಾಡಿದರೆ ಸ್ತ್ರೀ ಪುರುಷರ ನಡತೆ ಹಾಳಾಗುತ್ತದೆ. ವ್ಯಭಿಚಾರಕ್ಕೆ ಆಸ್ಪದ ಕೊಟ್ಟಂತಾಗುತ್ತದೆ ಎಂದು ಸನಾತನಿಗಳು ಬೊಬ್ಬಿಡುತ್ತಿದ್ದಾರೆ. ಆದುದರಿಂದಲೇ ನಮ್ಮ ವೈದ್ಯರು ಪತ್ರಿಕೆಗಳಲ್ಲಿ ಗರ್ಭಪಾತಮಾಡುವ ಪ್ರಯೋಗಗಳನ್ನು ಪ್ರಕಟಿಸುತ್ತಿದ್ದಾರೆ. ಶಾಸ್ತ್ರೀಯ ಕ್ರಮದಿಂದ ಸಂತತಿಯನ್ನು ಕಂಟ್ರೋಲ್ ಮಾಡುವ ರೀತಿಯನ್ನು ಪ್ರಕಟಿಸುವುದರ ಬದಲಾಗಿ ನಮ್ಮ ಸರಕಾರವು ಈ ಅನಾಹುತದ ಪ್ರಕಟನೆಗಳನ್ನು ನೋಡಿಯೂ ನೋಡದಂತೆ ಕಣ್ಣು ಮುಚ್ಚಿ ಕುಳಿತಿದೆ.

ನಮ್ಮ ಸರಕಾರವು ಬ್ರಹ್ಮಚರ್ಯದ ಮಹತ್ವವನ್ನು ಎಷ್ಟು ಬೇಕಾದರೂ ಸಾರಲಿ. ಆದರೆ ಬ್ರಹ್ಮಚರ್ಯವನ್ನು ಅನುಸರಿಸಲಾರದ ಸಾಮಾನ್ಯರಿಗೆ ಸಂತತಿ ಕಂಟ್ರೋಲಿನ ಶಾಸ್ತ್ರೀಯ ಕ್ರಮವನ್ನು ಪ್ರಚಾರಮಾಡಲಿ. ಅದಕ್ಕೆ ಬೇಕಾದ ಪುಸ್ತಕಗಳನ್ನು ಪ್ರಕಟಿಸಲಿ. ಬೇಕಾದ ಸಾಮಗ್ರಿಗಳನ್ನೂ ಅನುಕೂಲತೆಗಳನ್ನೂ ಒದಗಿಸಲಿ. ಬ್ರಹ್ಮಚರ್ಯವನ್ನು ಪಾಲಿಸಲಾರದ ಜನರು ಆರೋಗ್ಯವಂತರಾಗಿರಲು ಬೇಕಾದ ಸಹಾಯ ಸರಕಾರದಿಂದಲೇ ಆಗಬೇಕು. ಈ ವಿಚಾರವನ್ನು ನಮ್ಮ ವಿದ್ಯಾವಂತ ಜನರು ಸರಕಾರದೊಡನೆ ಮುಚ್ಚುಮರೆಯಿಲ್ಲದೆ ಸ್ಪಷ್ಟವಾಗಿ ಹೇಳಬೇಕು. ನಮ್ಮ ಆರೋಗ್ಯ ಇಲಾಖೆಯು ಈ ವಿಚಾರದಲ್ಲಿ ಸಾಕಷ್ಟು ಜಾಗ್ರತೆ ತಗೆದುಕೊಳ್ಳಬೇಕು. ನಮ್ಮ ಪ್ರಾಂತ್ಯದ ಆರೋಗ್ಯ ಮಂತ್ರಿಗಳು ಡಾಕ್ಟರಾಗಿದ್ದಾರೆ. ಅವರು ಈ ವಿಚಾರಕ್ಕೆ ಗಮನ ಕೊಡಬೇಕೆಂದು ನಾವು ಕೇಳಿಕೊಳ್ಳಬೇಕು. ಬಹಿರಂಗ ಸಂತೆಯಲ್ಲಿ ಸಾಮಗ್ರಿಗಳು ದೊರೆಯದಿದ್ದುದರಿಂದಲೇ ಕಳ್ಳಸಂತೆ ಪ್ರಚಾರಕ್ಕೆ ಬಂದಿದೆ. ಬಹಿರಂಗ ಸಂತೆಯಲ್ಲಿ ಸಾಮಗ್ರಿಗಳು ದೊರೆಯುವಂತೆ ಮಾಡುವುದರಿಂದಲೇ ನಾವು ಕಳ್ಳ ಸಂತೆಯನ್ನು ನಿರ್ಮೂಲ ಮಾಡಬಹುದು. ಹಣ್ಣು ತಿಂದು ಮುಷ್ಟಿಕ್ಕಾಗಿ ಚೂರಿಯನ್ನು ತಯಾರಿಸುತ್ತಾರೆ. ಅಂತಹ ಚೂರಿಯಿಂದ ಇತರರ ಕೊರಳನ್ನು ಕತ್ತರಿಸುವವರೂ ಅನೇಕರಿದ್ದಾರೆ. ಇದರಿಂದಾಗಿ ಚೂರಿಗಳನ್ನು ತಯಾರಿಸುವುದು ತಪ್ಪೆಂದು ಏನನ್ನುವುದಿಲ್ಲ. ಸಂತತಿ ಕಂಟ್ರೋಲಿನ ಪ್ರಯೋಗದಿಂದ ವ್ಯಭಿಚಾರದ ಪರಿಣಾಮವನ್ನು ತಪ್ಪಿಸಿಕೊಳ್ಳುವವರು ಇರಬಹುದು. ಅಂತವರು ಇಲ್ಲದಿದ್ದರೆ ಇನ್ನೊಂದು ವಿಧದಿಂದ ತಮ್ಮ ಪಾಪ ಕೃತ್ಯವನ್ನು ಆಗಿಸಬಲ್ಲರು. ಪಾಪಿಗಳಿಗೆ ಹೆದರಿ ವಿಜ್ಞಾನದ ಉಪಯೋಗವನ್ನು ಅಡಗಿಸಬೇಕಿಲ್ಲ.

ಇಂಗ್ಲೀಷ್ ಶಾಲೆಯ ಮಕ್ಕಳು ಮೈದಾನದಲ್ಲಿ ಗುಂಪುಗೂಡಿ ಆಟವಾಡುತ್ತಿದ್ದರಂತೆ. ಅವರಲ್ಲಿ ಅತೀ ದೊಡ್ಡ ಸುಳ್ಳು ಹೇಳುವವನು ಯಾರೆಂದು ಅವರೊಳಗೆ ಸ್ಪರ್ಧೆ. ಅತೀ ದೊಡ್ಡ ಸುಳ್ಳು ಹೇಳಿದವನಿಗೆ ಒಂದು ನಾಯಿಮರಿಯನ್ನು ಇನಾಮಾಗಿ ಕೊಡಬೇಕೆಂದು ನಿರ್ಣಯಿಸಿದ್ದರಂತೆ. ಮತ್ತು ಒಬ್ಬನಿಗಿಂತ ಮಿಗಿಲಾದ ಸುಳ್ಳುಕತೆಯನ್ನು ಇನ್ನೊಬ್ಬನು ಹೇಳುತ್ತಾ ಇದ್ದನಂತೆ. ಇಂಗ್ಲೀಷ್ ಗುರುಗಳು ಮಕ್ಕಳ ಈ ಗಲಾಟೆಯನ್ನು ನೋಡಿ ಹತ್ತಿರ ಬಂದರು. ಮಕ್ಕಳೇ ಏನು ಗಲಾಟೆ ಮಾಡುತ್ತಿದ್ದೀರೆಂದು ಕೇಳಿದರು. ಮಕ್ಕಳು ಇದ್ದುದನ್ನು ಹೇಳಿದರು. ಸುಳ್ಳು ಕತೆ ಹೇಳುವುದರಲ್ಲಿ ನಮ್ಮಲ್ಲಿ ಯಾರು ಗಟ್ಟಿಗರು ಎಂದು ಸ್ಪರ್ಧಿಸುತ್ತಿದ್ದೇವೆ ಎಂದರು. ಪ್ರಾಯ ಸಂದ ಗುರುಗಳು ಹುದ್ದು(?) ಮಕ್ಕಳೇ. ನಿಮ್ಮ ಈ ಸ್ಪರ್ಧೆಯನ್ನು ಕೇಳಿ ನನಗೆ ಬಹಳ ಆಶ್ಚರ್ಯವಾಗಿದೆ. ನಾನು ನಿಮ್ಮ ಪ್ರಾಯದವನಿದ್ದಾಗ ಸುಳ್ಳು ಎಂಬುವುದೇ ನನಗೆ ತಿಳಿದಿರಲಿಲ್ಲ ಎಂದರು. ಮಕ್ಕಳೆಲ್ಲರೂ ನಕ್ಕರು. ಎಷ್ಟು ನಿಂತು ಇನಾಮು ಗುರುಗಳಿಗೆ ಸಲ್ಲಬೇಕು. ಗುರುಗಳೇ ಗೆದ್ದರು. ಎನ್ನುತ್ತಾ ನಾಯಿಮರಿಯನ್ನು ಅವರಿಗೆ ಕೊಟ್ಟರಂತೆ. ಹೀಗೆ ಜನರ ಸಂಘಕ್ಕೆ ತಾನೊಬ್ಬ ಯೋಗ್ಯನೆಂದು ಗದ್ದು ಬರುವ ಕಾಲದಾಟಿದೆ. ಎಲ್ಲರ ಗುಟ್ಟು ಎಲ್ಲರಿಗೂ ಗೊತ್ತಿದೆ. ಎಲ್ಲರಿಗೂ ಬೇಕಾದ ವಿಷಯದಲ್ಲಿ ಬಹಿರಂಗ ಕ್ರಮವೇ ಮೇಲು. ಬರುವ ವಾರ ನಮ್ಮ ಪತ್ರಿಕೆಗಳಲ್ಲಿ ಬರುತ್ತಿರುವ ಇತರ ಜಾಹಿರಾತುಗಳ ವಿಚಾರ ಬರೆಯುತ್ತೇನೆ. ನಮಸ್ಕಾರ.

ಪ್ರೀತಿ ಇರಲಿ.

ದಮ್ಮು ಹೋದರೆ ತಿರುಗಿ ಬಾರದು



[illegible]
ಡಾ. ಪುರೋಹಿತ ಫಾರ್ಮಸೀ
ಕೊಲ್ಲಾಪುರ.

"ಗೋಪಾಲ ಭೇಷಜಾಶ್ರಮ" ಮಂಗಳೂರು.

(ಸ್ಥಾಪನೆ 1910)

ಸ್ಥಾಪಕರು:- ಆಯುರ್ವೇದ ಭೂಷಣ ಯಂ. ವಿ. ಶಾಸ್ತ್ರೀ,

ಇವರ ನವಜೀವಾತು ಎಂಬ ಸೂತಿಕಾ ರಸಾಯನ

ಬಾಣಂತಿಯರ ಸಲು [illegible] ಬೇಕ ಮತ್ತು ಪ್ರಕೃತದ ದೇಹಸ್ಥಿತಿಯನ್ನು ನಿರ್ಣೈಸಿ ತಯಾರಿಸಲ್ಪಟ್ಟ ಅಮೋಘವಾದ ಮಧುರದ್ರವ ರಸಾಯನ. ಅಲ್ಪ ಮೌಲ್ಯದಿಂದ ಬಡವರಿಗೂ, ಭಾಗ್ಯಶಾಲಿಗಳಿಗೂ ಸುಲಭವಾಗಿರುವುದು.



ಹೆಚ್ಚಿನ ಮಾಹಿತಿಗೆ—ಡಾ॥ ಯಂ. ಸಿ. ಶಾಸ್ತ್ರೀ, ಯಲ್. ಐ
ಕೊಡಿಯಾಲಬೈಲ ಪೋಸ್ಟು, (ಮಂಗಳೂರು)
ಸ್ಥಾನಿಕ ಸ್ಥರು:— ಡಾ॥ ಐ. ಕೆ. ಶಿವರಾಮರಾವ್, ಕುಂಜಿಬೆಟ್ಟು, ಉಡುಪಿ.

Nambiar's

ARYA VAIDYA SALA

UDIPI

Ideal House for Ayurvedic Treatment

T. N. Kelu Nambiar,
Vaidya.

Notification

Sealed tenders will be received by the undersigned upto 4 p m on 19 3-51 for ordinary kerosine and petromax street-lighting and for supply on hire of petromax lights for the year 1951-52.

Any particulars as to the conditions of contract may be obtained from the Municipal office during office hours on working days.

A. S. D'Souza,
Commissioner

Municipal Office Udipi.
Dated 2—3—1951.

ವಾರದ ಭವಿಷ್ಯ

ತಾರೀಕು ೭-೩-೫೧ ರಿಂದ — ತಾರೀಕು ೧೩-೩-೫೧ರವರೆಗೆ

ಮೇಷ ನಿಮ್ಮ ಸಂಕಲ್ಪದಂತೆ ಸಕಲ ಕಾರ್ಯಗಳೂ ನೆರವೇರುವವು. ಉದ್ಯೋಗದಲ್ಲಿ ಪ್ರಗತಿಯನ್ನೈದುವಿರಿ. ಜನಧನ ಬೆಂಬಲದಿಂದ ಕೂಡಿದ ನಿಮಗೆ ಸರ್ವತ್ರ ಸನ್ಮಾನಾದಿಗಳು ಲಭಿಸುವವು. ಗೃಹಕಾಪತ್ಯಗಳಿಂದ ಮುಕ್ತರಾಗಿ ಸುಖದಿಂದ ಕಾಲಯಾಪನೆ ಮಾಡತಕ್ಕ ನಿಮಗೆ ಮಧ್ಯೆ ನೇತ್ರಪೀಡೆ ಸ್ತ್ರೀ ಕಲಹಾದಿಗಳು ಕಾಣಬಹುದು. ತಾ 10, 11, 12 ಅತ್ಯುತ್ತಮ ದಿನಗಳು

ವೃಷಭ ಪ್ರಯತ್ನಕ್ಕಿಂತ ದ್ವಿಗುಣವಾದ ಫಲಪ್ರಾಪ್ತಿಯಿದೆ. ಸನ್ಮಿತ್ರರ ಬೆಂಬಲದಿಂದ ಕೂಡಿದ ನಿಮಗೆ ರಾಜಕೀಯ ರಂಗದಲ್ಲಿ ವಿಜಯವು ಕಟ್ಟಿಟ್ಟ ಗಂಟಿನಂತಿರುವದು. ದೇಹಾರೋಗ್ಯ ಸಂತಾನ ಭಾಗ್ಯಗಳು ಉತ್ತಮ ಸ್ಥಿತಿಗೆ ಬರಲಿವೆ. ವಿದ್ಯಾರ್ಥಿಗಳಿಗೂ ಕದುಪ ಜೀವಿ ಜನರಿಗೂ ದಿನಗಳು ಸುಖಮಯವಾಗಲಿವೆ. ತಾ 11, 12ರಲ್ಲಿ ಗೃಹಚ್ಛಿದ್ರನಿಮಿತ್ತ ಚಿಂತಾಕಲಹಗಳಿಗೆ ಗುರಿಯಾಗಲಿರುವಿರಿ

ಮಿಥುನ ಕಾಲವು ನಿಮಗೆ ತುಂಬಾ ಪ್ರತಿಕೂಲವಾಗಿ ಪರಿಣಮಿಸುವದು. ಅನಿರೀಕ್ಷಿತವಾದ ಆರ್ಥಿಕ ಮುಗ್ಗಟ್ಟು ನಿಮ್ಮನ್ನು ಗಂಡಾಂತರದಲ್ಲಿ ಸಿಲುಕಿಸಲಿದೆ. ವಾತಪಿತ್ಥ ಸಂಬಂಧವಾದ ಕಾಹಿಲೆಗಳು ಕಂಡುಬರಲಿವೆ ಯಾವ ಕಾರ್ಯವನ್ನು ಕೈಕೊಂಡರೂ ನೀರಿನಲ್ಲಿ ಮಾಡಿದ ಹೋಮದಂತೆ ವಿಫಲವಾಗುವದು. ಜನತೆಯೊಡನೆ ನಿಷ್ಠುರ ಕಲಹಗಳು ತಪ್ಪಲಾರವು. ಆದರೂ ವಾರಾದಿಯ 5ದಿನಗಳಲ್ಲಿ ಗುರ್ವನುಗ್ರಹದಿಂದ ಹೆಚ್ಚಿನ ವಿಪತ್ತಿಗೆ ಸಿಲುಕಲಾರಿರಿ.

ಕರ್ಕಾಟ ನಿಮ್ಮ ಖರ್ಚುವೆಚ್ಚಗಳ್ನು ಆದಾಯವನ್ನತಿಕ್ರಮಿಸಲಾರವು. ನಡುದ್ಯಮದಲ್ಲಿ ಒಳ್ಳೇ ಫಲವನ್ನು ಪಡೆವಿರಿ. ಹಿಡಿದ ಕಾರ್ಯವನ್ನು ಕೊನೆಗೊಳಿಸಿ ಕೃತಕೃತ್ಯರಾಗುವಿರಿ, ಆದರೆ ಆರೋಗ್ಯದ ಮಟ್ಟಿಗೆ ಈ ಕಾಲವು ಪ್ರತಿಕೂಲವಿರುವದು. ಮನೆಯಾಕೆಯು ನಿತ್ಯಕಲಹ ಮಾಡುವಳು. ಪರ್ಯಟನದಲ್ಲಿ ಕಷ್ಟ ನಷ್ಟಗಳು ಪ್ರಾಪ್ತವಾದಾವು. ಆದರೂ ವಾರಾಂತ್ಯದ 4ದಿನಗಳು ಸುಖಲಾಭಕರಗಳಿವೆ.

ಸಿಂಹ ಗೃಹ ಸುಖವು ಉತ್ತಮದಿರುವದು. ಸಮಾಜದಲ್ಲಿ ಗೌರವಾದರಗಳು ಲಭಿಸಲಿವೆ. ವ್ಯಾಪಾರಿಗಳಿಗೂ ನೌಕರಿ ಜನರಿಗೂ ಅಧಿಕ ಫಲಲಾಭವಾದೀತು. ಆದರೆ ವ್ಯಾಪಾರ್ಯಟನಕ್ಕೆ ಸಿಲುಕಲಿರುವಿರಿ. ಶತ್ರುಜನರು ಪ್ರತೀಕಾರಾಸಕ್ತರಾಗುವರು, ಎಷ್ಟೇ ದುಡಿದರೂ ದಿನಾವಸಾನದಲ್ಲಿ ಹಣಹೋಗಿ ಬರಿಗೈಯಾಗಲಿದೆ. ವಾರಾದಿಯ 5 ದಿನಗಳಲ್ಲಿ ರಾಜಭಯ ಉದರಶೂಲೆ ಇತ್ಯಾದ್ಯನಿಷ್ಟಗಳು ಕಾಣಿಸ ಬಹುದು.

ಕನ್ಯಾ ನಿಮ್ಮ ತನುಮನಗಳಿಗೆ ಸ್ವಪ್ನದಲ್ಲೂ ಸುಖಶಾಂತಿಗಳು ಲಭಿಸಲಾರವೆಂದರೆ ತಪ್ಪಾಗಲಾರದು. ಅಪ್ರೀಕ್ಷಿತ ವಿರಹವುಂಟಾಗುವದು. ಸ್ತ್ರೀಜನರಿಂದ ವಿಶೇಷತಃ ಅರ್ಧಾಂಗಿಯೊಡನೆ ಕಲಹವಾಗುವದು. ಆರ್ಥಿಕ ದಿಕ್ಕಟ್ಟಿನಿಂದಾಗಿ ತಲೆ ಮರಸಿಕೊಂಡು ತಿರುಗುವ ಪ್ರಸಂಗ ಒದಗೀತು ಆದರೂ ವಾರಾದಿಯ 3ದಿನಗಳು ಇದ್ದುದರಲ್ಲಿ ಕ್ಷೇಮವೆನಿಸೀತು.

ತುಲಾ ಗೃಹೋಪಕರಣಗಳು ಪೂರ್ಣವಾಗಿರುವುದರಿಂದ ದಿನಯಾಪನೆಯು ಸುಗಮವಾಗುವದು, ಸಾಹಸ ಸಾಧ್ಯವಾದ ಕಾರ್ಯಗಳಲ್ಲಿ ವಿಜಯಿಗಳಾಗುವಿರಿ. ಆಯುವ್ಯಯಗಳು ಸಮತೂಕದಲ್ಲಿ ನಿಲ್ಲಲಿವೆ ಆದರೆ ಆರೋಗ್ಯದ ಮಟ್ಟಿಗೆ ಉತ್ತಮವಿಲ್ಲ ವ್ಯಾಪಾರದಲ್ಲಿ ನಷ್ಟ ಸ್ತ್ರೀಯರಿಂದ ಕಲಹ ಗೃಹದಲ್ಲಿ ಅವ್ಯವಸ್ಥೆಗಳು ತಲೆದೋರಬಹುದು ವಾರಾಂತ್ಯದ 2ದಿನಗಳು ಅನಿಷ್ಟಕಾರಿಗಳು.

ವೃಶ್ಚಿಕ ವಿಪತ್ಪರಂಪರೆಗಳು ಮೇಲಿಂದ ಮೇಲೆ ಬಂದರೂ ಧೈರ್ಯಗೆಡದೆ ಮುಂದಡಿಯಿಡತಕ್ಕ ನಿಮಗೆ ಈ ವಾರದಲ್ಲಿ ಬಂಧುವರ್ಗದವರಿಂದಲೂ ಸೇವಕ ಜನರಿಂದಲೂ ಪುತ್ರಾದಿಗಳಿಂದಲೂ ಧನಲಾಭವಾಗುವ ಯೋಗವಿದೆ ಸಮಯಕ್ಕೆ ವಸ್ತುಗಳು ಲಭಿಸದೆ ತೊಂದರೆಗೆ ಸಿಲುಕುವಿರಿ. ಶತ್ರುಜನರ ಪೀಡೆಯಿಂದ ಮನಃಶಾಂತಿಗೆ ಭಂಗಬರುವುದಾದರೂ ವಾರಾಂತ್ಯದ 4ದಿನಗಳು ಸುಖದಾಯಿಗಳಿವೆ.

ಧನು ಕುಜನರ ಮೋಸಜಾಲಕ್ಕೆ ಸಿಲುಕಿ ಕಷ್ಟ ನಷ್ಟಗಳನ್ನು ಹೊಂದುವಿರಿ. ಖರ್ಚು ಆದಾಯವನ್ನತಿಕ್ರಮಿಸುವುದರಿಂದ ಹೆರವರ ಕೂಡೆ ಸಾಲಕಡ ಮಾಡುವ ಪ್ರಸಂಗ ಬರಲಿದೆ. ವಿದ್ಯಾಕೀರ್ತಿಗಳಿಗೆ ಹಾನಿಯಿದೆ. ಆರ್ಥಿಕ ಮುಗ್ಗಟ್ಟು ಪ್ರಬಲವಾಗಿರುವದಾದರೂ ದೇಹ ಮನಸ್ಸುಗಳಿಗೆ ಸುಖಶಾಂತಿಯಿದೆ. ವಾರಾಂತ್ಯದ 2ದಿನಗಳು ಸಾಕಷ್ಟು ಉತ್ತಮವಿದೆ.

ಮಕರ ವಿನಾಕಾರಣ ಪ್ರವಾಸಮಾಡುವ ಪ್ರಸಂಗ ಬರಲಿವೆ. ಮನಶ್ಚಾಂಚಲ್ಯದಿಂದಾಗಿ ಆಪ್ತಜನತೆಯಲ್ಲೂ ಅವಿಶ್ವಾಸವುಂಟಾದೀತು. ಆದರೆ ನಿಮ್ಮ ಪ್ರತಿಯೊಂದು ಕಾರ್ಯ ಕಲಾಪಗಳೂ ನಿರರ್ಗಳವಾಗಿ ಮುಂದೋಗುವವು. ನಿರೀಕ್ಷೆಗಿಂತ ಹೆಚ್ಚಿನ ಫಲವು ಅನಾಯಾಸದಿಂದ ಲಭಿಸುವದು, ಗೃಹಕಾಪತ್ಯಗಳಿಂದ ಮುಕ್ತರಾದ ನಿಮಗೆ ವಾರಾದಿಯ 3ದಿನಗಳು ಸರ್ವೋತ್ಕೃಷ್ಟಗಳಾಗಿವೆ.

ಕುಂಭ ಧನಸ್ಥಾನಗತನಾದ ಉಚ್ಚ ಶುಕ್ರನನ್ನು ಹೊರತಾಗಿ ಮಿಕ್ಕುಳಿದ ಎಲ್ಲಾ ಗ್ರಹರೂ ಪ್ರತಿಕೂಲರಾದ ಕಾರಣ ಹೆಜ್ಜೆ ಹೆಜ್ಜೆಗೂ ಶತ್ರುಜನರ ಹಾವಳಿಯಿಂದ ವಿಘ್ನಗಳು ತಪ್ಪಲೊಲ್ಲವು. ವಾತಕಫದೋಷದಿಂದಾಗಿ ದೇಹಕ್ಕೆ ಸುಖವಿರದು. ಅನಿರೀಕ್ಷಿತ ಅಪಾಯಗಳು ಪ್ರಾದುರ್ಭವಿಸುವವು, ಆದರೂ ಆರ್ಥಿಕ ಭಾಗದಲ್ಲಿ ಏನೂ ಕೊರತೆಯುಂಟಾಗದು. ತಾ 10 11, 12 ಇತರ ದಿನಗಳಿಗಿಂತ ಉತ್ತಮ.

ಮೀನ ವಣಿಗ್ವರ್ಗವೊಂದನ್ನುಳಿದು ಇತರ ಎಲ್ಲಾ ಜನವೃಂದಕ್ಕೂ ಈವಾರವು ಅನಿಷ್ಟಕಾರಿಯಾಗಿರುವದು. ದಿನದಲ್ಲಿ ಹೆಚ್ಚಿನ ಸಮಯವನ್ನು ಮಾರ್ಗದಲ್ಲೇ ಕಳೆಯಬೇಕಾಗುವುದು. ವಿನಾಕಾರಣ ನಿಷ್ಠುರಕಲಹಗಳುಂಟಾಗುವವು. ವಾಹನಾದಿಗಳ ಯಾನವು ಅಪಾಯಕಾರಿಯಿದೆ. ಹಣದ ಬಿಕ್ಕಟ್ಟು ವಿಶೇಷವಾಗಿದ್ದರೂ ಅನ್ನೋಪಭೋಗಕ್ಕೆ ಏನೂ ಕೊರತೆಯುಂಟಾಗಲಾರದು. ತಾ 8, 9, 13, 14, ಈದಿನಗಳು ಸ್ವಲ್ಪ ಅನುಕೂಲವಿವೆ.

ನೋಟೀಸು

ದ. ಕ. ಜಿಲ್ಲಾ ಸಬೋರ್ಡಿನೇಟ್ ಜಡ್ಜರ ಕೋರ್ಟಿನಲ್ಲಿ

R. E. P. 172/1950
in O. P. 96/1943

ಕೊರಗ ಕೂಡಾ —ಅರ್ಜಿದಾರ

ಮತ್ತು

ಸುಬ್ಬಕ್ಕ ಶೆಡ್ತಿ ಕೂಡಾ —ಡಿಕ್ರೀಹೊಂದಿಂಟವರು.

ಕುಂದಾಪುರ ತಾಲ್ಲೂಕು ವಕ್ವಾಡಿ ಗ್ರಾಮದ ಹಲ್ಲಾರಿನಲ್ಲಿರುವ ನಾಗಮ್ಮ ಶೆಡ್ತಿ ಮಕ್ಕಳು, ಸುಬ್ಬಕ್ಕ ಶೆಡ್ತಿ, ಕೃಷ್ಣಮ್ಮ ಶೆಡ್ತಿ, ಪದ್ಮಯ್ಯ ಶೆಟ್ಟಿ, ರುಕ್ಕಯ್ಯ ಶೆಟ್ಟಿ, ಮಹಾಬಲ ಶೆಟ್ಟಿ, ಮತ್ತು ಸುಬ್ಬಕ್ಕ ಸೆಡ್ತಿ, ಮಕ್ಕಳು ಶೀನಪ್ಪ ಶೆಟ್ಟಿ, ಕಮಲಮ್ಮ ಶೆಡ್ತಿ, ನರಸಿಂಹ ಸೆಟ್ಟಿ, ಚಂದಯ್ಯ ಶೆಟ್ಟಿ, ಮತ್ತು ಕೃಷ್ಣಮ್ಮ ಸೆಡ್ತಿ ಮಕ್ಕಳು ಸುಬ್ಬಣ್ಣ ಶೆಟ್ಟಿ, ವೆಂಕಪ್ಪ ಶೆಟ್ಟಿ, ನಾಗಮ್ಮ ಶೆಡ್ತಿ ಮತ್ತು ಸುಬ್ಬಕ್ಕ ಶೆಡ್ತಿ ತನ್ನ ಬಗ್ಗೂ ಮತ್ತು ತನ್ನ ಪ್ರಾಪ್ತ ವಯಸ್ಕರಲ್ಲದ ಮಕ್ಕಳು ಲಕ್ಷ್ಮಿ ಮತ್ತು ರಾಮಣ್ಣ ಇವರ ಗಾರ್ಡಿಯನಳಾಗಿ ಸಹಾ--

ಮೇಲೆ ಕಾಣಿಸಿದ ಅರ್ಜಿದಾರರು ನಿಲಂ ಇಸ್ತಿಹಾರಿನಲ್ಲಿ ಕಾಣ್ಸಿದ ಆಸ್ತಿಯನ್ನು ವಿಕ್ರಯದ ಬಗ್ಗೆ ಅರ್ಜಿ ಮಾಡಿದ್ದಾರೆ. ಸದ್ರಿ ಆಸ್ತಿಯನ್ನು ದ. ಕ. ಸೆಂಟ್ರಲ್ ನಾಜರ ಆಫೀಸಿನಲ್ಲಿ ಬಹಿರಂಗವಾಗಿ 1951ನೇ ಇಸ್ವಿ ಮಾರ್ಚ ತಿಂಗಳ 19ನೇ ತಾರೀಕು ಹಗಲು 11ಗಂಟೆಗೆ ಏಲಂಗೆ ಇಟ್ಟಿರುವದ್ರಿಂದ ಸದ್ರಿ ದಿವಸ ನೀವು ಖುದ್ದಾಗಿ ಯಾ ವಕೀಲರ ಮುಖಾಂತ್ರ ಹಾಜರಾಗಿ ಮನವಿ ಮಾಡಿಕೊಳ್ಳತಕ್ಕದ್ದು. ತಪ್ಪಿದ್ರೆ ಸದ್ರಿ ಆಸ್ತಿಯನ್ನು ನಿಮ್ಮ ಉಜ್ರು ಶಿವಾಯ ಏಲಂ ಮಾಡಲಾದೀತು ಎಂತ ಕೋರ್ಟು ಹುಕುಂ ಪ್ರಕಾರ ಪ್ರಕಟಿಸಲಾಗಿಯದೆ.

(Sd.) B. Manjaya Hegde.
Advocate for Petitioners

ಮಂಗಳೂರು, 1-2-1951.

'ಇಂಗ್ಲಿಷ್ ಕಲಿಯಲಿಲ್ಲವಲ್ಲಾ' ಎಂದು ಚಿಂತಿಸುವವರಿಗಾಗಿ
ಕೊರಡ್ಕಲ್ ಶ್ರೀನಿವಾಸರಾಯರಿಂದ ಬರೆಯಲ್ಪಟ್ಟ

ಸುಲಭದಲ್ಲಿ ಇಂಗ್ಲಿಷ್

ENGLISH MADE EASY

ತಮ್ಮಷ್ಟಕ್ಕೆ ತಾವೇ ಇಂಗ್ಲಿಷ್ ಕಲಿತುಕೊಳ್ಳಲಿಕ್ಕಾಗುವ ಆಂಗ್ಲ ಸ್ವಯಂಬೋಧಿನಿ. ಬೆಲೆ ರೂ. 1—8—0

ಮನೆಯೆಂದಾದಲ್ಲಿ ಇರಲೇ ಬೇಕಾದ ಅತ್ಯುಪಯುಕ್ತ ಪುಸ್ತಕ
ಡಾ| ಕೊರಡ್ಕಲ್ ವೆಂಕಟರಾಯರಿಂದ ಬರೆಯಲ್ಪಟ್ಟ

ಮನೆ ಮದ್ದು

HOME REMEDIES

200 ಕಾಹಿಲೆಗಳಿಗೆ 1000 ಮನೆ ಮದ್ದುಗಳನ್ನು ವಿವರಿಸುವ
ಅತ್ಯಪೂರ್ವ ನೂತನ ಗೃಹವೈದ್ಯ. ಬೆಲೆ ರೂ. 2 0 0

ದಿ| ಹೊಸಕೆರೆ ಚಿದಂಬರಯ್ಯನವರಿಂದ ಅನುವಾದಿಸಲ್ಪಟ್ಟ

ಗೀತಾಮೃತ ಕೃಷ್ಣ...

ಪ್ರತಿಯೊಬ್ಬರೂ ಅಗತ್ಯವಾಗಿ ಓದಿ ಮನನಮಾಡತಕ್ಕ
ಭಗವದ್ಗೀತೆಯ ಮೂಲ ಶ್ಲೋಕ ಮತ್ತು ಸರಳ ಕನ್ನಡ ಅನುವಾದ

400ಕ್ಕೂ ಮಿಕ್ಕಿ ಪುಟಗಳು ಬೆಲೆ: 0-12-0

ಸಿಗುವ ಮುಖ್ಯ ಸ್ಥಳಗಳು:

(1) ನವಯುಗ ಪ್ರೆಸ್, ಉಡುಪಿ,

(2) ನವಭಾರತ ಪುಸ್ತಕ ಭಂಡಾರ ಉಡುಪಿ.

(ನಮ್ಮಲ್ಲಿ ಸಿಗುವ ಪುಸ್ತಕಗಳ ಯಾದಿಗೆ ಬರೆಯಿರಿ)

ನೋಟೀಸು

ಕಾರ್ಕಳ ಡಿ. ಮು. ಕೋರ್ಟಿನಲ್ಲಿ

O. P. No. 5/1951

1. ಸುಂದರಿ ಸೆಡ್ತಿ
2. ರತಿ ಸೆಡ್ತಿ } ಬೊಮ್ಮ ಸೆಡ್ತಿರ ಮಗಳಂದಿರು.

ಉಡುಪಿ ತಾಲ್ಲೂಕು ಕಂತಾವರ ಗ್ರಾಮದ ಪಡುಯಿರಂದಾಡಿ ಮನೆಯಲ್ಲಿರುವವರು— } ಅರ್ಜಿದಾರರು

ಮತ್ತು

ಮಹಾಬಲ ಸೆಟ್ಟಿ ಬೊಮ್ಮ ಸೆಡ್ತಿರ ಮಗ ವ ಅರ್ಜಿದಾರರ ತಮ್ಮ, ಉಡುಪಿ ತಾಲ್ಲೂಕು ಕಂತಾವರ ಗ್ರಾಮದ ಪಡುಯಿರಂದಾಡಿ ಮನೆಯಲ್ಲಿರುವ— } ಎಡ್ರಿ.

ಇವರೊಳಗೆ

ಅರ್ಜಿದಾರರ ವ ಎಡ್ರಿಯ ಅಣ್ಣ ಮೃತ ಪಟ್ಟ ಕೆ. ಸದಾಶಿವ ಶೆಟ್ಟಿಗೆ ದಿ ಓರಿಯಂಟಲ್ ಗವರ್ನಮೆಂಟ್ ಸೆಕ್ಯುರಿಟಿ ಲೈಫ್ ಎಶ್ಶುರೆನ್ಸ್ ಕಂಪೆನಿ ಲಿಮಿಟೆಡ್ ಬೊಂಬ್ಬಾಯಿದರ ನಂಬ್ರ 952584ನೇ ಪೋಲಿಸಿ ಮೇರೆಗೆ ಬರಬೇಕಾದ 1033-3-0 ಮತ್ತು ದಿ ಸೆಂಟ್ರಲ್ ಬೆಂಕ್ ಒಫ್ ಇಂಡಿಯಾ ಲಿಮಿಟೆಡ್ ಬೊಂಬಾಯಿ ಇವರ ನಂಬ್ರ 123299ನೇ ಪಾಸ್‌ಬುಕು ಮೇರೆಗೆ ಹೋಮ್ ಸೇವಿಂಗ್ (Safe) ಸೇಫ್ ಎಕೌಂಟು ಬಾಬ್ತು ಬರ ರೂಪಾಯಿ 914-8-0 ಬರ ಮಾಡಿಕೊಳ್ಳುವರೆ ಅರ್ಜಿದಾರರ ವ ಎಡ್ರಿಯ ಭಾಗದ ಕುಟುಂಬದ ಮೆನೇಜರಾದ ನೇಅರ್ಜಿದಾರರ ಹೆಸರಲ್ಲಿ ಸಕ್ಸೆಸನ್ ಸರ್ಟಿಫಿಕೇಟು ಕೊಡಬೇಕಾಗಿ ಅರ್ಜಿದಾರರು ದಾಖಲು ಮಾಡಿದ ಮೇಲಿನ ಅರ್ಜಿಯು ಮೇಲ್ಕಂಡ ಕೋರ್ಟಿನಲ್ಲಿ ತಾರೀಕು 17-3 1951ರಲ್ಲು ಬೆಳಿಗ್ಗೆ 10ಗಂಟೆಗೆ ತನಿಖೆಗೆ ಇಟ್ಟಿರುವದರಿಂದ ಆ ವಿಷಯದಲ್ಲಿ ಆಕ್ಷೇಪಣೆಯಿದ್ದವರು ಅದರವರ ಆಕ್ಷೇಪಣೆಗಳನ್ನು ಹಾಜರಾಗಿ ಪ್ಲೀಡು ಮಾಡಿಕೊಳ್ಳಬಹುದೆಂಬದಾಗಿಯೂ, ತಪ್ಪಿದ್ದಲ್ಲಿ ಸದರಿ ಅರ್ಜಿಯು ಗೈರುಹಾಜರಿಯಲ್ಲಿ ತೀರ್ಮಾನಿಸಲ್ಪಡುತ್ತದೆಂಬದಾಗಿಯೂ, ಈ ಮೂಲಕ ಸರ್ವಜನರಿಗೂ ತಿಳಿಯಪಡಿಸಲಾಗುತ್ತದೆ.

A. N. Sitaramachar
Pleader for Petitioners

KARKALA,
ತಾರೀಕು 23-2-51

Regd. No. M. 3618
Estd. 1921 ಸ್ಥಾಪಿತ
31ನೇ ವರ್ಷ
29-3-1951
15-3-1951
LICENCE No. 31
Licensed to Post without Prepayment
Founder: Sri A. B. Shetty,
Minister for Agriculture & Veterinary.

ನವ ಯುಗ

ವರ್ಷ ೩೧
ವಾರ ೨೭
NAVAYUGA
WEEKLY
POST BOX NO. 22
UDIPI, S. K.
Vol 31
No. 27

ಪರೋಪದೇಶಗಳು

"ಪರೋಪದೇಶೇ ಪಾಂಡಿತ್ಯಂ" ಎಂಬ ನಾಣ್ನುಡಿಯನ್ನು ಎಲ್ಲರೂ ಅರಿತಿದ್ದಾರೆ. ಬೇರೆಯವರಿಗೆ ಬುದ್ಧಿ ಹೇಳುವುದಕ್ಕೆ ಪರೋಪದೇಶ ಎನ್ನುತ್ತಾರೆ. ಈ ರೀತಿಯ ಉಪದೇಶಗಳು ಬಹಳ ರೀತಿಯಲ್ಲಿ ಬಳಕೆಯಲ್ಲಿವೆ. ಗುರು ಶಿಷ್ಯರಿಗೆ ಮಾಡುವ ಉಪದೇಶ, ರಾಜ ಪ್ರಜೆಗಳಿಗೆ ಮಾಡುವ ಉಪದೇಶ, ಒಂದು ರಾಷ್ಟ್ರ ಇನ್ನೊಂದು ರಾಷ್ಟ್ರಕ್ಕೆ ಮಾಡುವ ಉಪದೇಶ, ಧರ್ಮಾಧಿಕಾರಿ ಜನಕ್ಕೆ ಮಾಡುವ ಉಪದೇಶ ಹೀಗೆಯೇ ಇನ್ನೂ ಹಲವಾರಿವೆ. ತಿಳಿದವರು ಇಲ್ಲವೆ ಜ್ಞಾನವಂತರು ಬೇರೆಯವರಿಗೆ ಉಪದೇಶ ಮಾಡಿ ಸರಿಯಾದ ಮಾರ್ಗದರ್ಶನ ಮಾಡುವಂತಹದು ವಾಡಿಕೆಯಾಗಿದೆ. ಸಂಸ್ಕಾರಗೊಂಡ ವ್ಯಕ್ತಿತ್ವವೂ, ಉಜ್ವಲವಾದ ವಿಷಯಜ್ಞಾನವೂ, ನಿಸ್ವಾರ್ಥ ಬುದ್ಧಿಯೂ ಉಪದೇಶ ಮಾಡುವವನಲ್ಲಿರಬೇಕಾದ ಹಿರಿಯ ಗುಣಗಳು. ತನ್ನಲ್ಲೇ ಅಜ್ಞಾನ ತುಂಬಿದ್ದರೆ ಬೇರೆಯವರನ್ನು ಹೇಗೆ ಸನ್ಮಾರ್ಗಕ್ಕೆ ಹಚ್ಚಿಯಾನು? ಅವರ ಸಂಶಯ ಸಂದೇಹಗಳನ್ನು ನಿವಾರಿಸಲೂ ಬರುವಂತಿಲ್ಲ. ಉಪದೇಶ ಕೊಡುವಂತಹ ವಿಶಿಷ್ಟ ಸಂಪ್ರದಾಯವು ಮಾನವ ಜನಾಂಗದಲ್ಲಿ ಅತ್ಯಂತ ಪ್ರಾಮುಖ್ಯತೆಯನ್ನು ಪಡೆದುಕೊಂಡು ಬಂದಿರುತ್ತದೆ. ಪ್ರತಿಯೊಂದು ಪಂಥದವರಲ್ಲಿಯೂ ಚಿಕ್ಕಂದಿನಲ್ಲಿ ಉಪದೇಶಕೊಡುವ ಪದ್ಧತಿಯಿದೆ. ಗುರುವು ಆ ಮಹಾ ಕಾರ್ಯವನ್ನು ಮಾಡುತ್ತಾನೆ. ಮುಗ್ಧವಾದ ಮನಸ್ಸಿನ ಮೇಲೆ ಮಾನವೀಯ ಗುಣಾದರ್ಶಗಳ ಮುದ್ರೆಯೊತ್ತುವ ಗುರುವಿನ ಸ್ಥಾನ ಬಹು ದೊಡ್ಡದು. ಬಾಳುವೆಯ ಘನವಾದ ಉದ್ದೇಶವೇನೆಂಬುದನ್ನು ಸೂಚಿಸುತ್ತಾನೆ. ಹಿಂದಿನ ಕಾಲದಲ್ಲಿ ಧೀರರೂ ವೀರರೂ ಆಗಿದ್ದ ಪುರಾಣ ಪ್ರಸಿದ್ಧ ವ್ಯಕ್ತಿಗಳ ಜೀವನವನ್ನವಲೋಕಿಸಿದರೆ ಉಪದೇಶದ ಮಹತ್ವ ತಿಳಿಯುತ್ತದೆ. ಅಂದಿನ ಗುರುಕುಲವೆಂದರೆ ದೇಶದ ಸತ್ಪ್ರಜೆಯನ್ನಾಗಿ ಮಾಡುವ ಒಂದು ಗರಡಿಯೆಂದೇ ಹೇಳಬಹುದು. ಪವಿತ್ರವಾದ ವಾತಾವರಣದಲ್ಲಿ ಜ್ಞಾನಾರ್ಜನೆಯಲ್ಲಿ ಜೀವನದ ಮೊದಲ ಭಾಗವನ್ನು ಕಳೆದವರ ಜೀವನ ಜಾಜ್ವಲ್ಯಮಾನವಾಗಿದ್ದುದನ್ನು ನಾವು ಹೇಗೆ ಮರೆತೇವು? ಆಗಿನ ಗುರುಶಿಷ್ಯರ ಸಂಬಂಧ ಜೀವನ ಸಿದ್ಧಿ ಮುಂದಿನ ಪೀಳಿಗೆಗೆ ಆದರ್ಶವಾಗುತ್ತಿತ್ತು!

ಇಪ್ಪತ್ತನೆಯ ಶತಮಾನದ ನವನಾಗರಿಕರು ನಾವು. ಪ್ರಗತಿಪಥದಲ್ಲಿ ಮುನ್ನಡೆಯುತ್ತಿದ್ದೇವೆ. ಆಗಿನಕಾಲದ ಜನಾಂಗವನ್ನು 'ಅಸಂಸ್ಕೃತ-ಅನಾಗರಿಕ'ವೆಂದು ಹೇಳಿಸುವಷ್ಟು ಸುಧಾರಕರಾಗಿದ್ದೇವೆ. ಬಲ್ಲವರಿಂದ ತಿಳಿದುಕೊಳ್ಳುವಂತಹದು ಹಿಂದಿನ ಕ್ರಮವಾದರೆ ಉಳ್ಳವರಿಂದ ಸಾಲಪಡೆಕೊಳ್ಳುವುದು ಇಂದಿನ ಧರ್ಮವಾಗಿದೆ. ಹಣದ ಮಟ್ಟಿಗೆ ಇನ್ನೊಬ್ಬರನ್ನು 'ದೇಹಿ' ಎಂದೇವೇ ಹೊರತು ಜ್ಞಾನವಂತನ ಮಟ್ಟಿಗೆ ತಗ್ಗಿ ನಡೆಯಲಾರೆವು. ಹಣಕ್ಕಿದ್ದ ಮಾನ್ಯತೆ ಗುಣಕ್ಕಿಲ್ಲ! ವಿದ್ಯಾಬುದ್ಧಿಯ ಬಲದಿಂದ ಜ್ಞಾನವಂತನಾದವನು ಮಾತ್ರ ಉಪದೇಶ ಮಾಡುತ್ತಿದ್ದರೆ ಇಂದು ಹಣವುಳ್ಳ ಶ್ರೀಮಂತನು ಮಾತ್ರ ಅದನ್ನು ಮಾಡುತ್ತಾನೆ. ಅವನು ಹೇಳುವುದೇ ವೇದವಾಕ್ಯವಾಗುತ್ತದೆ.

ಬೇರೆಯವರಿಗೆ ಉಪದೇಶಮಾಡಿ ಮಾರ್ಗಪ್ರದರ್ಶನ ಮಾಡುವವರ ಸಂಖ್ಯೆ ಹೆಚ್ಚಾಗಿ ಕೇಳುವವರ ಸಂಖ್ಯೆ ಕ್ಷಯಿಸುತ್ತಲಿದೆ. ಕಾರಣ ಇಂದಿನ ಉಪದೇಶಗಳು ಕೇವಲ ವಾಡಾಗಂಬರವಾಗಿವೆಯೇ ಹೊರತು ವ್ಯಕ್ತಿತ್ವದ ಮೇಲೆ ಪರಿಣಾಮವನ್ನುಂಟು ಮಾಡುತ್ತಿಲ್ಲ. ಮುಖ್ಯವಾಗಿ ಉಪದೇಶ ಮಾಡುವವನಲ್ಲಿ ಉಪದೇಶ ಮಾಡುವ ತತ್ವಗಳ ಆಚರಣೆಯಿರಬೇಕು. [illegible]ತೆ ನಡೆಯುವ ಮನೋಧರ್ಮ ಅವರಲ್ಲಿರಬೇಕು. ಧರ್ಮ ಪೀಠದಲ್ಲಿ ಕುಳಿತು ತತ್ವ ಹೇಳುವವರು ಅವರ ವೈಯಕ್ತಿಕ ಜೀವನದಲ್ಲಿ ಪರಿಶುದ್ಧರಾಗಿರದೆ ಕಲಂಕಿತರಾಗಿದ್ದರೆ ಅಂತಹರ ಉಪದೇಶ ಬೋರ್ಗಲ್ಲ ಮೇಲೆ ನೀರು ಸುರಿದಂತೆಯೇ ಸರಿ. ವಿಷಯದ ಅನುಭವವಿಲ್ಲದ ಅಧ್ಯಾಪಕನು ಪಾಠಹೇಳತೊಡಗಿದರೆ ತುಂಬ ಅಧ್ಯಯನಪಡುವದಕ್ಕಿಂತ ಹೆಚ್ಚಿನ ಪ್ರಾಪ್ತಿಯಾಗುವಂತಿಲ್ಲ. ಜನಾಕರ್ಷಕ ಭಾಷಾಶೈಲಿಯುಳ್ಳ ಬರಹಗಾರ ವೈಯಕ್ತಿಕ ಇಲ್ಲದೆ ಪಾಪಿಗೇ ಜೀವನದ ವಿಕೃತ ಸ್ವರೂಪವನ್ನೇ ಉಪದೇಶ ಮಾಡಿದರೆ ಜನ ಅಪಾಯಪಡದೆ ಇರರು. ಸತ್ವವಿದ್ದರೂ ಸಾಲದು; ಅದನ್ನು ಸದುಪಯೋಗ ಗೊಳಿಸುವ ಸಹೃದಯಬೇಕು. ರಾಜಕೀಯರಂಗದಲ್ಲೂ ನ್ಯಾಯ ಹಾಗೂ ನೈತಿಕವಾದ ಆದೇಶವಿಲ್ಲವೆ ಹೋದರೆ ಅರಾಜಕತೆಯುಂಟಾಗದೇ ಇರದು.

ವೇದೋಪನಿಷತ್ತುಗಳು ಎಂತಹ ಉಜ್ವಲ ಉಪದೇಶವನ್ನು ಮಾಡುತ್ತಲಿವೆ? ಮಹಾತ್ಮಾಗಾಂಧಿಯವರ ಉಪದೇಶದಿಂದ ಕೋಟಿಕೋಟಿ ಜನ ಸದ್ಭಾವನೆಯಿಂದ ಏಕೆ ತಲೆತಗ್ಗಿಸುತ್ತಿದ್ದರು? ಎಂದರೆ, ಅವೆಲ್ಲ ನಿಸ್ವಾರ್ಥವಾದಂತಹ ಉಪದೇಶಗಳು. ಉಪದೇಶಮಾಡುವವನ ತ್ರಿಕರಣಶುದ್ಧಿಯೇ ಅವನ ಉಪದೇಶದ ಫಲಶ್ರುತಿ! ನಮ್ಮ ದೇಶದ ಜನಪ್ರಿಯನಾಯಕರ ಉಪದೇಶ ದೇಶದಲ್ಲುಂಟುಮಾಡುವ ಪರಿಣಾಮಗಳನ್ನು ಅವಲೋಕಿಸಿದರೆ ನಿಸ್ವಾರ್ಥ ಬುದ್ಧಿಯೇ ಅದಕ್ಕೆ ಮುಖ್ಯವೆಂದು ತಿಳಿಯದೆ?

ಅಮೇರಿಕಾಧ್ಯಕ್ಷ ಟ್ರೂಮನ್ "ಇತರ ರಾಷ್ಟ್ರಗಳನ್ನು ಉಚ್ಛ್ರಾಯಸ್ಥಿತಿಗೆ ತರುವದಕ್ಕಾಗಿ ಅಮೇರಿಕಾ ತನ್ನ ಸಹಾಯದ ಕೈನೀಡುತ್ತಲಿದೆ" ಎನ್ನುತ್ತಾರೆ. ಈ ಉಪದೇಶ ಎಷ್ಟು ಆಭಾಸಪೂರ್ಣವಾಗಿದೆಯೆನ್ನುವುದಕ್ಕೆ ಪ್ರತ್ಯಕ್ಷದ ಅಮೇರಿಕೆಯ ಧೋರಣೆ ಸಾಕು! ಸಾಲಕೊಟ್ಟು ಮೂಲವನ್ನೇ ನುಂಗುವ ಅಮೇರಿಕನರ ಮರ್ಕಟನ್ಯಾಯ ಯಾರಿಗೆ ಗೊತ್ತಿಲ್ಲ? ಅಮೇರಿಕೆ ತನ್ನಲ್ಲಿರುವ ಸಂಪತ್ತನ್ನು ತನ್ನ ಉಪದೇಶದಂತೆ ಇತರ ರಾಷ್ಟ್ರಗಳ ಅಭಿವೃದ್ಧಿಗೆ ಕೊಡುತ್ತಿದ್ದರೆ ಜಗತ್ತಿನಲ್ಲಿಂದು ಸ್ವಲ್ಪ ಮಟ್ಟಿಗಾದರೂ ಸುಖಶಾಂತಿಗಳು ಲಭಿಸುತ್ತಿದ್ದವು. ಇದ್ದ ಸಂಪತ್ತನ್ನು ಅಟಂಬಾಂಬಿಗೆ ಉಪಯೋಗಿಸಿ ಮಾನವ ಕೋ

'ಇಂಗ್ಲಿಷ್ ಕಲಿಯಲಿಲ್ಲವಲ್ಲಾ' ಎಂದು ಚಿಂತಿಸುವವರಿಗಾಗಿ
ದಿ| ಕೊರಡ್ಕಲ್ ಶ್ರೀನಿವಾಸರಾಯರಿಂದ ಬರೆಯಲ್ಪಟ್ಟ

ಸುಲಭದಲ್ಲಿ ಇಂಗ್ಲಿಷ್

ENGLISH MADE EASY

ತಮ್ಮಷ್ಟಕ್ಕೆ ತಾವೇ ಇಂಗ್ಲಿಷ್ ಕಲಿತುಕೊಳ್ಳಲಿಕ್ಕಾಗುವ
ಆಂಗ್ಲ ಸ್ವಯಂಬೋಧಿನಿ. ಬೆಲೆ ರೂ. 1—8—0

ಮನೆಯೆಂದಾದಲ್ಲಿ ಇರಲೇ ಬೇಕಾದ ಅತ್ಯುಪಯುಕ್ತ ಪುಸ್ತಕ
ಡಾ| ಕೊರಡ್ಕಲ್ ವೆಂಕಟರಾಯರಿಂದ ಬರೆಯಲ್ಪಟ್ಟ

ಮನೆ ಮದ್ದು

HOME REMEDIES

200 ಕಾಹಿಲೆಗಳಿಗೆ 1000 ಮನೆ ಮದ್ದುಗಳನ್ನು ವಿವರಿಸುವ
ಅಪೂರ್ವ ನೂತನ ಗೃಹವೈದ್ಯ. ಬೆಲೆ ರೂ. 2 0 0

ದಿ| ಹೊಸಕೆರೆ ಚಿದಂಬರಯ್ಯನವರಿಂದ ಅನುವಾದಿಸಲ್ಪಟ್ಟ

ಗೀತೆಯ ಕೈಗನ್ನಡಿ

ಪ್ರತಿಯೊಬ್ಬರೂ ಅಗತ್ಯವಾಗಿ ಓದಿ ಮನನಮಾಡತಕ್ಕ
ಭಗವದ್ಗೀತೆಯ ಮೂಲ ಶ್ಲೋಕ ಮತ್ತು ಸರಳ ಕನ್ನಡ ಅನುವಾದ
400ಕ್ಕೂ ಮಿಕ್ಕಿ ಪುಟಗಳು ಬೆಲೆ: 0-12-0

ಸಿಗುವ ಮುಖ್ಯ ಸ್ಥಳಗಳು:
(1) ನವಯುಗ ಪ್ರೆಸ್, ಉಡುಪಿ,
(2) ನವಭಾರತ ಪುಸ್ತಕ ಭಂಡಾರ ಉಡುಪಿ.
(ನಮ್ಮಲ್ಲಿ ಸಿಗುವ ಪುಸ್ತಕಗಳ ಯಾದಿಗೆ ಬರೆಯಿರಿ.)

ಟಿಯ ವಿನಾಶಕ್ಕೆ ಹೇತುವಾದ ಮಹಾ ವಿಪ್ಲವದ ಪುರಸ್ಕರ್ತರಾಗಿದ್ದಾರೆ. "ಶಾಂತಿ-ನ್ಯಾಯ-ಸಮತೆ" ಎನುವ ಇವರ ಪರೋಪದೇಶ ಎಷ್ಟು ಅಭಾಸಪೂರ್ಣವಾದದ್ದು? ಇಂದು ಯುದ್ಧ ಯಾರಿಗೆ ಬೇಕಾಗಿದೆ? ದ್ವಿತೀಯ ಯುದ್ಧದಿಂದ ಇನ್ನೂ ಚೇತರಿಸದ ಜನಾಂಗ ಮೂರನೆಯ ಮಹಾ ಯುದ್ಧವನ್ನು ಸ್ವಾಗತಿಸೀತೇ? ಅದು ಬೇಕಾದದ್ದು ಅಮೇರಿಕಾಕ್ಕೆ. ಅಂತಲೆ ಎಲ್ಲರೂ ಅದಕ್ಕೆ ಕೈಗುಟ್ಟಬೇಕು. ಇದು ಅಮೇರಿಕಾ ಮಾಡುವ ಪರೋಪದೇಶ. ಇನ್ನೊಬ್ಬರಿಗೆ ನ್ಯಾಯನೀತಿ ಹೇಳುವ ಈ ಜನಕ್ಕೆ ತಮ್ಮ ಕಾಲಬುಡದಲ್ಲಿಯೆ ನಡೆಯುತ್ತಿರುವ ಅನೀತಿ ಕಾಣುತ್ತಲೇ ಇಲ್ಲ.

ಕೋಟಿಗಟ್ಟಲೆ ಜನ ಆಹಾರವಿಲ್ಲದೆ ಸಾಯುವ ಭೀಕರ ಪರಿಸ್ಥಿತಿ ಭಾರತಕ್ಕೆ ಬಂದಿರುವಾಗ ವಿಪುಲವಾದ ಆಹಾರಧಾನ್ಯ ಉಳ್ಳಂತಹ ಅಮೇರಿಕಾ ಭಾರತದ ಬೇಡಿಕೆಯನ್ನು ಇಷ್ಟುದೂರ ವಿವೇಚಿಸಬೇಕಾಯಿತೇ? ಬೇರೆಯವರ ಹಿತವನ್ನು ಘನಮುಟ್ಟ ಚಿಂತಿಸುವ ಶ್ರೇಷ್ಠಜನವೆಂಬ ಅಮೇರಿಕಾನರ ಸೌಹಾರ್ದ- ಸಮಾನತೆ- ಸದ್ಭಾವನೆಗಳೆಲ್ಲಿಗೆ ಹೋದವು? ಪ್ರಾಯಃ ಮನುಷ್ಯನಿಗೆ ಸಾವಿಗಿಂತ ಮಿಗಿಲಾಗದ ಆಪತ್ತು ಬೇರಿಲ್ಲ. ಭಾರತದ ಜನ ಅಂತಹ ಆಪತ್ತನ್ನೆದುರಿಸಬೇಕಾದ ಪ್ರಸಂಗ ಇದು. ಅಮೆರಿಕಾದ ಔದಾರ್ಯದ ಸತ್ವ ಪರೀಕ್ಷೆ ಮಾಡಲು ಇದಕ್ಕಿಂತ ಉತ್ತಮವಾದ ಸಂದರ್ಭ ಬೇರೆಯಿಲ್ಲ. "ಸಿಮೀಟನ ನಿರಾಕರಣೆ- ಕಾಂಗ್ರೆಸ್ಸಿನ ಸಮ್ಮತಿ- ಟ್ರೂಮನರ ಸಂದೇಶ-ಆಚಿನ್‌ಸನರ ಬುದ್ಧಿವಾದ — ಹೂವರ ಉಪಚಾರ" ಇಷ್ಟೆಲ್ಲ ಕಾರಣಗಳು ಬೇಕೇ? ಆಹಾರವಿಲ್ಲದೆ ಹಾಹಾಕಾರವೆದ್ದಿರುವಾಗ ಇವರ ಸಮಾಲೋಚನೆಯೇ? ಇವರ ಮಂತ್ರಾಲೋಚನೆ ಸಾಗುವಾಗ ಇಲ್ಲಿಯ ಜನ ಇಹಯಾತ್ರೆಯನ್ನು ಮುಗಿಸಿದರೆ ನಾಳೆ ಅವರು ಸತ್ತ ಮೇಲೆ ಸಹಾನುಭೂತಿಯನ್ನು ತೋರಿಸಿ, ತಮ್ಮ ಪಾಂಡಿತ್ಯ ಪ್ರದರ್ಶನ ಮಾಡುವದಕ್ಕೆ ಖಂಡಿತ ಮರೆಯಲಾರರು!

ಉಪದೇಶಗಳೆಲ್ಲ ಹೀಗೆಯೆ. ಬೇರೆಯವರಿಗೆ ಹೇಳುವದಕ್ಕೆ ಮಾತ್ರ; ಸ್ವತಃ ಮಾಡಿತೋರಿಸುವದಕ್ಕಲ್ಲವೆಂದಾಯಿತು. ಎಲ್ಲ ರಂಗದಲ್ಲೂ ಪರೋಪದೇಶದ ಪಾಂಡಿತ್ಯ ಪ್ರದರ್ಶನ ನಡೆಯುತ್ತದೆ. ಭಾರತ ಸರಕಾರ ಕೂಡ ಇದಕ್ಕೆ ಅಪವಾದವಲ್ಲ. ಬೇರೆಯವರಿಗೆ ಸಂಧಾನಮಾಡಿಸುವಲ್ಲಿ ಭಾರತದ ನೈಪುಣ್ಯ ಭದ್ರವಾದರೂ ತನ್ನೊಳಗಿರುವ ಭಿನ್ನಾಭಿಪ್ರಾಯವನ್ನೊಂದಾಗಿಸುವಲ್ಲಿ ಯಾವ ಪ್ರಯತ್ನವೂ ಫಲಿಸಿದಂತಿಲ್ಲ. ಬ್ರಿಟನನ್ನು ನಾವು ಯಾವ ವಿಷಯಕ್ಕಾಗಿ ದೂಷಿಸುವೆವೋ ಅಂತಹ ಹಲವಾರು ವಿಚಾರಗಳು ಇಂದು, ನಮ್ಮದೇ ಸರಕಾರ ಇರುವಾಗಲೂ ಸುರಕ್ಷಿತವಾಗಿ ಬದುಕಿಕೊಂಡಿರುತ್ತವೆ. ಜನಹಿತಕ್ಕೆಂದು ಮಾಡುವ ಪ್ರತಿಯೊಂದು ಸೂಚನೆಯೂ ಬಂಡವಳಿಗಾರರ ಹಾಗೂ ಲಂಚತೆಗೆದುಕೊಳ್ಳುವವರ ಕೈಯಲ್ಲಿ ಮಣ್ಣುಮುಕ್ಕುತ್ತಲಿದೆ.

ಮುಖ್ಯವಾಗಿ ಉಪದೇಶಮಾಡುವವನಲ್ಲಿ ಮಾತನ್ನು ಕೃತಿಯ ರೂಪದಲ್ಲಿ ತರುವ ಅಚಲಶ್ರದ್ಧೆಯಿರಬೇಕು. ತಿಳಿದವರೆಲ್ಲ ಆದರಂತೆ ನಡೆಯುವವೆಂದರೆ ಬಹುದೊಡ್ಡ ತ್ಯಾಗವಮಾಡಬೇಕಾಗುತ್ತದೆ. ಇಲ್ಲವಾದರೆ ಇಂತಹ ಉಪದೇಶಗಳು ಜನತೆಯ ಮೇಲೆಯೂ ಪರಿಣಾಮಮಾಡುವಂತಿಲ್ಲ. "ಓದುವುದು ಶಾಸ್ತ್ರ ಇಕ್ಕುವುದು ಗಾಳ" ಎನ್ನುವ ಗಾದೆ ಉಪದೇಶ ಹೇಳುವವರ ದ್ವಿಮುಖ ಧೋರಣೆಯಿಂದಲೇ ಹುಟ್ಟಿರಬೇಕು.

ನಿಮಗಿದು ಗೊತ್ತೇ?

ನಿಮ್ಮ ಮನೆಯಲ್ಲಿ ಆಗಾಗ ಆಗಮಿಸುವ ವಾತರೋಗದ ಉಪದ್ರವಗಳಾದ— ಉದರಶೂಲೆ, ಕಟಿಶೂಲೆ, ಮೈಕೈಗಳಲ್ಲಿ ನೋವು, ಜಡತೆ, ಅಜೀರ್ಣ, ಹೊಟ್ಟೆಯುಬ್ಬರ, ಅಗ್ನಿಮಾಂದ್ಯ ಮುಂತಾದ ಎಲ್ಲಾ ಉಪದ್ರವಗಳಿಗೂ ರಾಮಬಾಣ ಯಾವುದು ಗೊತ್ತೇ? ಕಳೆದ ಇಪ್ಪತ್ತೈದು ವರುಷಗಳ ವಿಶಾಲ ಅನುಭವದಿಂದ ಸಶಾಸ್ತ್ರೀಯವಾಗಿ ತಯಾರಿಸಲ್ಪಟ್ಟ—

ಸ್ವದೇಶಿ ಔಷಧ ಭಂಡಾರ (ರಿಜಿಸ್ಟರ್ಡ್)

ಪ್ರೋ ಕುಂಜಾಲು, ದ. ಕ.

ಇವರ **'ಧನ್ವಂತರೀ ಮಾತ್ರೆ'ಗಳು** ಮಾತ್ರ

ಕೇವಲ ನಾಲ್ಕಾಣೆಯ ಅಂಚೆಚೀಟನ್ನು ಕಳುಹಿಸಿ ಆರು ಮಾತ್ರೆಗಳ ಒಂದು ಪ್ಯಾಕೇಟನ್ನು ಪಡೆದು ಅದರ ಶೀಘ್ರ ಪರಿಣಾಮಕಾರೀ ಗುಣಗಳನ್ನು ಕಂಡುಕೊಳ್ಳಬಾರದೇಕೆ? ಇಂದೇ ಬರೆಯಿರಿ.



ಮಾರಾಟಕ್ಕೆ ಸದಾ ಸಿದ್ಧವಾಗಿವೆ.

ಎರಡರಿಂದ ಐದು ಕುದುರೆ ಶಕ್ತಿಯುಳ್ಳ ನೀರಿನ ಪಂಪುಗಳು, ತರಹೆವಾರು ಹೊಂಡ ತೆಗೆಯುವ ಸಾಗ್ವಳ್ಳಿ ಭೂಮಿಗೆ ನೀರು ಹಾಯಿಸುವ, ಕೇಂದ್ರದಿಂದ ದೂರ ಕ್ಷೇತ್ರಕ್ಕೆ ನೀರು ಚಿಮುಕಿಸುವ ಮತ್ತು Visconsin Clington, Pitter ಎಂಜಿನಿಗಳು ನಮ್ಮಲ್ಲಿ ಮಾರಾಟಕ್ಕೆ ಸದಾಸಿದ್ಧವಿವೆ.

ಹೆಚ್ಚಿನ ಮಾಹಿತಿಗೆ ಈ ಕೆಳಗಣ ವಿಳಾಸಕ್ಕೆ ಬರೆಯಿರಿ.

Enquire— **Auncudur Trading Company,**
Fathma Manzil, Colaba Road, **BOMBAY 5.**

ಜಾಫ್ರುಲ್ಲಾ ಖಾನರ—

ಭದ್ರತಾ ಸಮಿತಿಯಲ್ಲಿ ಪಾಕಿಸ್ತಾನದ ಪ್ರತಿನಿಧಿಯಾದ ಸರ್ ಜಾಫ್ರುಲ್ಲಾ ಖಾನರು, ಕಾಶ್ಮೀರ ವಿವಾದದ ಕುರಿತು ಕುಚೋದ್ಯವೂ, ದ್ವೇಷ ಭಾವನೆಯನ್ನು ಇನ್ನಷ್ಟು ಬೆಳೆಸುವಂತಹದೂ, ಅಸತ್ಯಪೂರ್ಣವಾದಂತಹದೂ ಆದ ಮಾತುಗಳಲ್ಲಿ ಸುದೀರ್ಘ ಹೇಳಿಕೆಯನ್ನಿತ್ತಿದ್ದಾರೆ. ತನ್ನ ವಾಕ್ಚಾತುರ್ಯ ಬಲದಿಂದ ವಿಷಯವನ್ನು ಹಾರಿಸಿ ಮಾತನಾಡುವ ಕಲೆ ಸರ್ ಜಾಫ್ರುಲ್ಲಾಖಾನರಿಗೆ ಸಾಧಿಸಿದಷ್ಟು ಸಮಿತಿಯ ಇನ್ನಾವ ಸದಸ್ಯನಿಗೂ ಸಾಧಿಸಿಲ್ಲವೆನ್ನಬೇಕು. ಈ ಹಿಂದೆ ಕಲುಷಿತವಾದ ಮಾತನ್ನು ಕೇಳಿದವರಿಗೆ ಈಗ ಅವರು ಹೇಳುತ್ತಿರುವ ಕಲ್ಪಿತ ಕಟ್ಟುಕತೆಯು ಅಯಥಾರ್ಥವೆಂದು ಗೊತ್ತಿಲ್ಲದೇ ಇಲ್ಲ. ಜಾತೀಯ ದ್ವೇಷವನ್ನು ಹುಟ್ಟಿಸಿ ಕಾಶ್ಮೀರದ ಪ್ರಶ್ನೆ ಇನ್ನಷ್ಟು ಕಠಿಣವಾಗುವಂತೆ ಮಾಡುತ್ತಿರುವ ಖಾನರ ವಾದವನ್ನು ವಿಚಾರವಂತರಾರೂ ಒಪ್ಪುವಂತಿಲ್ಲ.

ಆಂಗ್ಲೋ ಅಮೇರಿಕಾನರು ಸೂಚಿಸಿದಂಶವನ್ನು ಖಾನರೂ ಸಾಮಾನ್ಯ ಒಪ್ಪಿಗೆ ಕೊಟ್ಟಿರುತ್ತಾರೆ. ಭಾರತ ಸರಕಾರ ಒಪ್ಪಿಗೆ ಕೊಡದ ಇರಲು ಆದರ ಮೂಲೋದ್ದೇಶ ಮುಸ್ಲೀಮರನ್ನ ಪಾಕಿಸ್ತಾನಕ್ಕೆ ಓಡಿಸಿ ಹಿಂದು ಮತ್ತು ಸಿಕ್ಖರನ್ನ ಕಾಶ್ಮೀರದಲ್ಲಿ ತುಂಬಿಸುವುದೇ ಆಗಿರುತ್ತದೆ ಎಂದು ಭಾರತ ಸರಕಾರವನ್ನು ಟೀಕೆ ಮಾಡಿದ್ದಾರೆ. ಭಾರತ ಮತ್ತು ಪಾಕಿಸ್ತಾನಗಳ ಸೈನ್ಯಗಳು ಅಲ್ಲಿಂದ ಕಾಲ್ತೆಗೆಯದ ಹೊರತು ಕಾಶ್ಮೀರದಲ್ಲಿ ಸಾರ್ವತ್ರಿಕ ಮತಗಣನೆ ಸಾಧ್ಯವಿಲ್ಲ ಆದುದರಿಂದ ಸಂ. ರಾ. ಸೈನ್ಯ ಪಡೆಯು ಅಲ್ಲಿ ನ್ಯಾಯವಾದ ಮತಗಣನೆಗಾಗಿ ನಿಲ್ಲಬೇಕು. ಘಟನಾ ಸಮಿತಿಯನ್ನು ರಚಿಸಿ ಕಾಶ್ಮೀರ ತನ್ನ ಭವಿತವ್ಯವನ್ನು ನಿಷ್ಕರ್ಷಿಸುವ ಹಕ್ಕುಳ್ಳದ್ದಾಗಕೂಡದು" ಈ ಮಾತುಗಳು ಆಂಗ್ಲೋ ಅಮೇರಿಕಾನರ ಸೂಚನೆಗಳೇ ಆಗಿರುತ್ತವೆ. ಇದನ್ನು ಭಾರತವು ಈ ಮೊದಲೇ ನಿರಾಕರಿಸಿದೆ. ತಿರುಗಿ ಖಾನರು ಪುಷ್ಟೀಕರಿಸುತ್ತಿರುವುದು ವಿಚಿತ್ರವಾಗಿದೆ. ಇದರಿಂದ ಉಭಯರಾಷ್ಟ್ರಗಳೊಳಗಿನ ಮತಭೇದ ಪರಿಹಾರವಾಗುವಂತಿಲ್ಲ. ಭಾರತ ನಿರಾಕರಿಸಿದಂಶವನ್ನು ಆಗಬೇಕೆಂದು ಹಟ ಸಾಧಿಸಿ ಆಂಗ್ಲೋ ಅಮೇರಿಕಾನರ ಬಲವನ್ನು ಗಳಿಸಿಕೊಳ್ಳುವ ಖಾನರ ಬುದ್ಧಿ ಮತ್ತೆ ನಿಜವಾಗಿಯೂ ಹಾಸ್ಯಾಸ್ಪದ!

ಕಾಶ್ಮೀರದಲ್ಲಿ ಭಾರತ ಅಕ್ರಮ ಪ್ರವೇಶ ಮಾಡಿದೆಯೆಂದು ಖಾನರು ಹೇಳುವ ಮಾತಿನಲ್ಲಿ ಯಾವ ರೀತಿಯ ತಥ್ಯಾಂಶವು ಇರುವುದಿಲ್ಲ. 1947ರಲ್ಲಿ ಪಾಕಿಸ್ತಾನವು ಕಾಶ್ಮೀರವನ್ನು ನುಂಗುವ ಹಂಚಿಕೆಯನ್ನು ಮಾಡಿ, ತನ್ನ ಜಾತೀಯ ಬುದ್ಧಿಯಂತೆ ಕಾಶ್ಮೀರೀ ಜನತೆಯ ಮೇಲೆ ಏರಿಬಂದರು. ಹಾಗೆ ಬಂದವರು ಪಾಕಿಸ್ತಾನಿಗಳಾಗಿರದೆ ದರೋಡೆಗಾರರೆನ್ನುವುದು ಹುಚ್ಚು ಕಲ್ಪನೆ. ಒಳಿಕ ಬಂದ ಮಧ್ಯಸ್ಥಗಾರರು ಪಾಕಿಸ್ತಾನವು ಪ್ರತ್ಯಕ್ಷ ಆಕ್ರಮಣಕಾರ್ಯ ನಡೆಸುತ್ತಿರುವದನ್ನು ಲಕ್ಷಿಸದೇ ಇಲ್ಲ. ಸರ್ ಡಿಕ್ಸನ್ನರೂ ಪಾಕಿಸ್ತಾನವು ಆಕ್ರಮಕ ರಾಷ್ಟ್ರವೆಂಬುದನ್ನು ಒಪ್ಪಿರುತ್ತಾರೆ. ಪಾಕಿಸ್ತಾನಗಳ ಅಸಹನೀಯವಾದ ಪಾಶವೀಕೃತ್ಯಕ್ಕೆ ಕಾಶ್ಮೀರೀ ಜನತೆ ಸೋತು ಭಾರತ ಸರಕಾರಕ್ಕೆ ಮೊರೆಯಿಟ್ಟರು. ಆ ಮೇಲೆಯೇ ಭಾರತ ಸರಕಾರ ಮಹಾರಾಜರ ಹಾಗೂ ಕಾಶ್ಮೀರ ಜನತೆಯ ಬೇಡಿಕೆಯನ್ನು ನೈತಿಕ ದೃಷ್ಟಿಯಿಂದ ಮನ್ನಿಸಬೇಕಾಯಿತು. ಯಥಾರ್ಥವನ್ನು ಮರೆ ಮಾಚುವುದಕ್ಕೆ ಜಾಫ್ರುಲ್ಲಾರು "ಕಾಶ್ಮೀರದಲ್ಲಿ ಹಿಂದುಗಳ ಒಳಸಂಚು ನಡೆದಿದೆ ಭಾರತ ಸರಕಾರ ಹಾಗೂ ಕಾಶ್ಮೀರದ ಹಿಂದೂ ಮಹಾರಾಜ ಇವರೊಳಗೆ ಒಳಸಂಚು ನಡೆದುದರ ಫಲವಾಗಿ ಕಾಶ್ಮೀರೀ ಜನತೆ ಇಂತಹ ದುರಂತಕ್ಕೆ ತುತ್ತಾಗಬೇಕಾಯಿತು. ಭಾರತದ ಧುರೀಣರು ಇಲ್ಲ ಒಂದು ಅಲ್ಪನ ರಾಜನನ್ನು ಕಾಶ್ಮೀರದ ನೇತೃತ್ವಕ್ಕಾಗಿ ಒತ್ತಾಯಪಡಿಸುತ್ತಿದ್ದರು. ಶೇಖ್ ಅಬ್ದುಲ್ಲಾ ಭಾರತದ ಕೈಗೊಂಬೆಯಾಗಿದ್ದು ಕಾಶ್ಮೀರವನ್ನು ಅನ್ಯಾಯವಾಗಿ ಭಾರತಕ್ಕೆ ಸೇರಿಸುವ ಹಂಚಿಕೆಯನ್ನು ಮಾಡಿದ ದುಷ್ಟಲೆಗಳು ಪಾಪಿಷ್ಠರು" ಎಂಬುದನ್ನು ಉದಾಹರಿಸಿದ್ದಾರೆ.

ತನ್ನ ಕುದುರೆಗೆ ಮೂರೇ ಕಾಲೆಂದು ವಾದಿಸುವ ಖಾನರ ಒಣಡಂಭಕ್ಕೆ ಇದೊಂದು ಉದಾಹರಣೆಯಾದೀತೇ ವಿನಹ ಯಥಾರ್ಥವಾಗಿಯಲ್ಲ.

ತನ್ನ ಮಾತಿನ ಬಸಲಾನ್ನು ತೀರಿಸಿಕೊಂಡ ಮೇಲೆ ಪಾಕಿಸ್ತಾನಕ್ಕೆ ಬೇಕಾದಂಶವನ್ನು ಹೀಗೆ ಸೂಚಿಸಿದರು: ಹೆಚ್ಚಿನ ಅಧಿಕಾರವುಳ್ಳ ಮಧ್ಯಸ್ಥನನ್ನು ನೇಮಿಸಬೇಕು. ಮತಗಣನೆಯು ಕಾಲಕ್ಕೆ ಉಭಯರಾಷ್ಟ್ರಗಳ ವರ್ಚಸ್ಸನ್ನು ಪ್ರಯೋಗಿಸುವಂತಹ ಸೈನ್ಯಗಳಲ್ಲಿರಕೂಡದು. ಇದನ್ನು ಆದಷ್ಟು ಶೀಘ್ರ ಭದ್ರತಾ ಸಮಿತಿ ತೀರ್ಮಾನಿಸಬೇಕು. ಭಾರತ ಕಾಶ್ಮೀರದಲ್ಲಿ ತನ್ನ ಧಿಕಾರವನ್ನು ಚಾಲೂ ಮಾಡಿ ಬಲವಾದ ಇಚ್ಛೆಯನ್ನಿಟ್ಟುಕೊಂಡಿರುವದರಿಂ

ದಿ ಸೆಕ್ಯೂರಿಟಿ ಪ್ರೊವಿಡೆಂಟ್ ಇನ್ಸೂರೆನ್ಸ್ ಕಂಪೆನಿ ಲಿಮಿಟೆಡ್,
ಹಸನ್ ಚೇಂಬರ್ಸ್, ಪಾರ್ಸಿ ಬಜಾರ್ ಸ್ಟ್ರೀಟ್,
ಬೊಂಬಾಯಿ 1.

ದಿ ಕೆನರಾ ಇಂಡಸ್ಟ್ರಿಯಲ್ ಎಂಡ್ ಬೇಂಕಿಂಗ್ ಸಿಂಡಿಕೇಟ್ ಲಿಮಿಟೆಡ್, ಉಡುಪಿ, ಇದರ ಶಾಖಾ ಕಚೇರಿಗಳಾದ ಕೋಟೇಶ್ವರ, ಬಾರಕೂರು, ಬಸ್ರೂರು, ಬ್ರಹ್ಮಾವರ, ಕೊಕ್ಕರ್ಣೆ, ಕುಂದಾಪುರ ಅಥವಾ ಭಟ್ಕಳ ಕೇಂದ್ರಗಳಲ್ಲಿಯೇ ಮೇಲಿನ ಕಂಪೆನಿಯ ಪೋಲಿಸಿದಾರರು ತಂತಮ್ಮ ಪ್ರೀಮಿಯಮ್ ಕಂತುಗಳನ್ನು ಪಾವತಿಮಾಡಬೇಕಾಗಿ ನಾವು ನಮ್ಮ ಪೋಲಿಸಿದಾರರನ್ನು ವಿನಂತಿಸುತ್ತೇವೆ.

ಬಾರಕೂರಿನ ಶ್ರೀ ಎ. ರಾಜೀವಶೆಟ್ಟಿ ಮತ್ತು ಭಟ್ಕಳ ಮಾರುಕೇರಿಯ ಶ್ರೀ ಕೆ. ರಾಮ ಪುರಾಣಿಕರು ನಮ್ಮ ಕಂಪೆನಿಯ ಕೆಲವೊಂದು ಪೋಲಿಸಿದಾರರಿಗೆ ವಿಶ್ವಾಸಘಾತುಕ ಮಾಡಿರುವುದಾಗಿ ನಮ್ಮಲ್ಲಿ ವರದಿಯಿರುವುದರಿಂದ ಅವರಿಬ್ಬರೊಡನೆ ಯಾರೂ ಪ್ರೀಮಿಯಮ್ ಹಣ ಕೊಡಬಾರದಾಗಿ ಇದ ಸೂಚಿಸಲಾಗಿದೆ.

Manager
The Security Provident Insurance Co. Ltd, BOMBAY.

—ತಿರುಬೊಬ್ಬೆ

ದಲೇ ಸೈನ್ಯವನ್ನು ಹಿಂತೆಗೆದುಕೊಳ್ಳುವುದಕ್ಕೆ ಅವಕ್ಕೆ ವಿರೋಧವನ್ನು ಸೂಚಿಸುತ್ತದೆ. ಇನ್ನು ವಿಳಂಬ ಮಾಡುವದರಿಂದ ಏಶ್ಯಾದ ಶಾಂತಿಗೆ ಗಂಡಾಂತರವಿದೆಯೆಂಬುದನ್ನು ಮರೆಯಬಾರದು. ವಿಶೇಷಾಧಿಕಾರವುಳ್ಳವನ ನೇಮಕ ಶೀಘ್ರದಲ್ಲಾಗಲಿ.

ಅಂತೂ ಏನಕೇನ ಪ್ರಕಾರೇಣ ಪಾಕಿಸ್ತಾನಕ್ಕೆ ಕಾಶ್ಮೀರದ ತೀರ್ಮಾನ ಅತ್ಯಂತ ಶೀಘ್ರವಾಗಬೇಕೆಂದಾಯಿತು. ಅಂತಲೇ ಆದರಿಂದ ಅಂತರಾಷ್ಟ್ರೀಯ ಶಾಂತಿಗೆ ಗಂಡಾಂತರವಿದೆಯೆನ್ನುವ ಬೆದರಿಕೆಯನ್ನೂ ನಮ್ಮ ಸಾಹೇಬರು ಮುಂದೆ ಮಾಡಿರಬೇಕು.!

ಬಿ. ಎನ್. ರಾಯರ ಉತ್ತರ

ಜಾಫ್ರುಲ್ಲಾ ಖಾನರು, 75 ನಿಮಿಷ ಮಾತನಾಡಿದ್ದಕ್ಕೆ ಭಾರತದ ಪ್ರತಿನಿಧಿ ಶ್ರೀ ಬಿ. ಎನ್. ರಾಯರು ಕೇವಲ 35 ನಿಮಿಷದಲ್ಲಿ ಉತ್ತರಿಸಿದ್ದಾರೆ. ಸ್ವಾರ್ಥಾಲಾಪಕ್ಕೆ ಉತ್ತರಕೊಡದೆ ಮುಖ್ಯವಾದ ಹಲವಂಶಗಳನ್ನೆತ್ತಿಕೊಂಡು ವಿಚಾರ ಸಂಪೂರ್ಣವಾಗಿ ಮಾತನಾಡಿದರು, ಅನವಶ್ಯಕವಾದ ಯಾವ ವಿಚಾರವನ್ನೂ ಅವರು ಎತ್ತಿಕೊಂಡಿಲ್ಲ. ಬಿ. ಎನ್. ರಾಯರು ಪಾಕಿಸ್ತಾನದ ಪ್ರತಿನಿಧಿಯ ಹಲವು ಉಪದ್ವ್ಯಾಪಗಳನ್ನು ಖಂಡಿಸಿದರು. "1947 ಅಕ್ಟೋಬರ ತಿಂಗಳು 24ಕ್ಕೆ ಸೈನ್ಯ ಸಹಾಯವನ್ನು ಯಾಚಿಸುವ ಬಿನ್ನಹವೊಂದು ಭಾರತ ಸರಕಾರಕ್ಕೆ ಬಂದಿತು. ಅಕ್ಟೋಬರ 26ಕ್ಕೆ ಧಾಳಿಗಾರರು ಕಾಶ್ಮೀರದ ರಾಜಧಾನಿಯಲ್ಲಿ ಲೂಟಿ ಅನಾಹುತವನ್ನು ಮಾಡಿದರು. ಕಾಶ್ಮೀರದ ಪರಿಸ್ಥಿತಿ ಚಿಂತಾಜನಕವಾಗಿರುವಾಗಲೇ ನಾವು ಅಲ್ಲಿಗೆ ಸೈನ್ಯವನ್ನು ಕಳಿಸುವ ನಿರ್ಧಾರವನ್ನು ಮಾಡಿದೆವು. ಅಕ್ಟೋಬರ 27ಕ್ಕೆ ವಿಮಾನದ ಮೂಲಕ ಸೈನ್ಯವನ್ನು ಕಳಿಸಿದೆವು. ಕಾಶ್ಮೀರದ ಜನಾನುರಾಗವನ್ನು ಗಳಿಸಿದಂತಹ ಶೇಖ ಅಬ್ದುಲ್ಲಾರನ್ನು ಅಲ್ಲಿನ ಮಹಾರಾಜರು ಜವಾಬ್ದಾರಿಯುತ ಸರಕಾರವನ್ನು ರಚಿಸುವಂತೆ ಕೇಳಿಕೊಂಡರು. ಅಂತಲೇ ಶೇಖ ಅಬ್ದುಲ್ಲಾರವರು ಕಾಶ್ಮೀರ ಪಾಕಿಸ್ತಾನ ಇಲ್ಲವೆ ಭಾರತದೊಡನೆ ಸೇರ್ಪಡೆಗೊಂಡ ವಿಚಾರದಲ್ಲಿ ಕೈಹಾಕಬೇಕಾಯಿತು. ಆ ವಿಚಾರವನ್ನು ಪರ್ಯಾಲೋಚಿಸುತ್ತಿರುವಾಗಲೇ ಕಾಶ್ಮೀರವನ್ನು ಬಲಾತ್ಕಾರದಲ್ಲಿ ಸೇರ್ಪಡಗೊಳ್ಳುವಂತೆ ಮಾಡುವ ಉಗ್ರ ಸ್ವರೂಪದ ಧಾಳಿಯನ್ನು ಪಾಕಿಸ್ತಾನವು ಮಾಡಿತು. ಇಷ್ಟಿದ್ದೂ ಪಾಕಿಸ್ತಾನದ ಪ್ರತಿನಿಧಿ ಭಾರತ ಆಕ್ರಮಕ ರಾಷ್ಟ್ರವೆಂದು ದೂರಿದ್ದಾನೆ. ಅಂತರರಾಷ್ಟ್ರೀಯ ನಿಯಮವನ್ನು ಮೀರಿ ನಾವು ವರ್ತಿಸಿದ್ದೇವೆಂದು ವಾದಿಸಿದ್ದಾನೆ. ಅಂತರರಾಷ್ಟ್ರೀಯ ಶಾಂತಿ ಭಂಗದ ನಿಯಮವನ್ನು ಉಲ್ಲಂಘಿಸಿದವರಾರೆಂದು ನಾವು ಸ್ಪಷ್ಟೀಕರಿಸಬೇಕಾಗಿದೆ. ದುರ್ಬಲರಾಷ್ಟ್ರದ ಮೇಲೆ ಧಾಳಿಗಾರರು ಎರಗಿ ಹೋಗುವಾಗ ನಾವು ತಡೆಯಲು ಹೋದರೆ ಆಕ್ರಮಣವೇ? ಸಕಲ ಯುದ್ಧೋಪಕರಣಗಳನ್ನು ಒದಗಿಸಿಕೊಟ್ಟು ಧಾಳಿಗಾರರಿಗೆ ಪ್ರೋತ್ಸಾಹ ನೀಡುತ್ತಿರುವ ಪಾಕಿಸ್ತಾನಿಗಳ ಈ ವರ್ತನೆ ಆಕ್ರಮಣವಲ್ಲವೇ? ಆಕ್ರಮಣಗಾರರನ್ನು ಕಡೆನಿಲ್ಲಿಸಿದ ನಂತರ ನಮ್ಮ ಸೈನ್ಯಸಂಖ್ಯೆಯಲ್ಲಿ ನೂರಕ್ಕೆ 25ಕ್ಕಿಳಿಸಿದನಂತರವೂ ಆಕ್ರಮಣ ನಮ್ಮದಾದೀತೇ? ಅಂತರಾಷ್ಟ್ರೀಯ ಕಾಯಿದೆಯನ್ನು ಭಂಗಿಸಿ ಧಾಳಿಗಾರರಿಗೆ ಅಪ್ರತ್ಯಕ್ಷವಾಗಿ ಸಹಾಯನೀಡಿದ್ದು ಆಕ್ರಮಣವಲ್ಲವೇ? ಬೇರೆ ದೇಶದಲ್ಲಿ ತನ್ನ ಸೈನ್ಯವನ್ನು ಬಲಾತ್ಕಾರವಾಗಿ ನಿಲ್ಲಿಸುವ ಹವ್ಯಾಸ ಪಾಕಿಸ್ತಾನಕ್ಕೆ ಏಕೆ ಬೇಕಿತ್ತು? ಕಾಶ್ಮೀರದ ಘಟನಾ ಸಮಿತಿಯ ರಚನೆಯನ್ನು ಆಕ್ರಮಣವೆಂದು ಹೆಸರಿಸುತ್ತಿರುವ ಪಾಕಿಸ್ತಾನದ ಪ್ರತಿನಿಧಿ ಕಾಶ್ಮೀರವನ್ನು ಆಪೋಶನತೆಗೆದುಕೊಳ್ಳಲು ಬೇಕಾದ ಪ್ರಚಾರದ ರಂಜನೆಯನ್ನು ಏನೆನ್ನುತ್ತಾನೆ? ಇಂತಹ ಪ್ರತ್ಯಕ್ಷ ಪ್ರಮಾಣದ ದಾಖಲೆಗಳು ನಮ್ಮ ಕಣ್ಣ ಮುಂದಿರುವಾಗ ಭಾರತವೇ ಆಕ್ರಮಣ ಮಾಡಿದೆಯೆಂದು ಪಾಕಿಸ್ತಾನ ಪ್ರತಿನಿಧಿ ವಾದಿಸುತ್ತಿರುವುದು ಸೋಜಿಗದ ಸಂಗತಿ! ಘಟನಾ ಸಮಿತಿಯನ್ನು ನಾವು ರಚಿಸಿದ್ದಕ್ಕೆ ಟೀಕೆ ಮಾಡಿರುವುದು ವಸ್ತುಸ್ಥಿತಿಯ ಅಜ್ಞಾನದಿಂದೆನ್ನುತ್ತೇನೆ. ಭಾರತದ ರಾಜ್ಯಾಂಗದಲ್ಲಿ ಇದೇ ಬಗೆಯ ಘಟನಾ ಸಮಿತಿಯನ್ನು ಮಾಡಲಾಗಿದೆ. ಕಾಶ್ಮೀರ ಪ್ರಸ್ತುತದಲ್ಲಿ ಭಾರತದ ಒಂದಂಗವಾಗಿರುವದರಿಂದ ಅಲ್ಲಿಯೂ ಘಟನಾ ಸಮಿತಿಯನ್ನು ರಚಿಸುವುದು ನ್ಯಾಯಬದ್ಧವೇ ಆಗಿರುತ್ತದೆ. ಕಾಶ್ಮೀರದವರಾಗಿಯೆ ಇಂತಹ ಕಾರ್ಯ ಕೈಗೊಂಡದ್ದರೆ ಹಾಗೆ ಟೀಕಿಸಬಹುದಾಗಿತ್ತು. ಭಾರತ ಸರಕಾರವು ನ್ಯಾಯಬದ್ಧ ಧ್ಯೇಯವನ್ನೆಂದೂ ಬದಲಿಸದು. ಮೊದಲನೆಯದಾಗಿ ವಿದೇಶದ ಸೈನ್ಯವನ್ನು ಕಾಶ್ಮೀರ ಇಲ್ಲವೆ ಭಾರತದ ಯಾವುದೇ ಭಾಗದಲ್ಲಿ ಪ್ರವೇಶ ಮಾಡುವದನ್ನು ನಾವು ಒಪ್ಪಲಾರೆವು. ಎರಡನೆಯದಾಗಿ 1948ನೇ ಅಗಸ್ಟ, 1949ನೇ ಜನವರಿಯ ಗೊತ್ತುವಳಿಯಂತೆ ವಿದೇಶದ ಸೈನ್ಯವನ್ನು ತರುವ ಅವಶ್ಯಕತೆಯನ್ನು ನಾವು ಕಾಣುವುದಿಲ್ಲ. ಮೂರನೆದಾಗಿ ಮಧ್ಯಸ್ಥಿಕೆಯ ಹೆಸರಿನಲ್ಲಿ ಕಂದ 1948--1949ರಲ್ಲಿ ನಿರ್ಣಯಿಸಿದ್ದನ್ನು ಪುನರುಚ್ಚಾರ ಮಾಡುವುದು ಯುಕ್ತವಾಗಿಲ್ಲವೆಂದು ಭಾರತದ ಅಭಿಪ್ರಾಯವಿರುತ್ತದೆ. ಈ ವಾರ್ಷಿಕ ಸಭೆಯಲ್ಲಿ ಮನಸ್ಸಿಲ್ಲದ ಮನಸ್ಸಿನಿಂದ ಭಾಗವಹಿಸುತ್ತಿದ್ದೇನೆ. ನಾವೆಲ್ಲ ಶಾಂತಿಯನ್ನು ಬಯಸುತ್ತೇವೆನೋ ನಿಜ; ಆದರೆ ಅನುಕೂಲ ಪರಿಸ್ಥಿತಿಯಿಲ್ಲದೆ ಅದು ಸಾಧ್ಯವೇ? ಸಾವಿರಾರು ವರ್ಷಗಳಿಂದ ಒಂದಾಗಿದ್ದ ದೇಶವನ್ನು ವಿಭಜಿಸಿದ್ದರ ಫಲವಾಗಿ ಇಂತಹ ಸಮಸ್ಯೆಗಳು ಹುಟ್ಟಬರುವದು ಸ್ವಾಭಾವಿಕ. ವಿಚ್ಛೇದನದಿಂದುಂಟಾದ ಭಾರತ ಪಾಕಿಸ್ತಾನಗಳೊಳಗೆ ಉದ್ಭೂತವಾದ ನೂತನ ಸಮಸ್ಯೆಯನ್ನು ಬಗೆಹರಿಸಲು ಸಮಿತಿಯು ಒಳ್ಳೆಯ ಮುತ್ಸದ್ದಿತನವನ್ನು ಪಯೋಗಿಸಬೇಕಾಗಿದೆ."

ಗ್ಯಾರಂಟೀಯಾದ ಶುಚಿತ್ವ

ಗ್ಯಾರಂಟೀಯಾದ ಶುದ್ಧತೆ

ಅಗ್ಗವಾಗಿ ಸಿಗುವ ಪತ್ರ ಪಟ್ಟಿಗಳಲ್ಲಿ ಕಟ್ಟಿದಂಥ ಚಹಗಳನ್ನು ಕೊಂಡು ವ್ಯಾಪಾರಿ ನಷ್ಟಕ್ಕೆ ಒಳಗಾಗಬಹುದು. ಪ್ರತಿಯೊಂದು ಬ್ರೂಕ್ ಬಾಂಡ್ ಪೊಟ್ಟಣದಲ್ಲಿರುವ ಚಹವು ರುಚಿ ಮತ್ತು ಶುದ್ಧತೆಯ ಭರವಸೆ ಕೊಡುವುದಲ್ಲದೆ ನಳಿಸದಂತೆ ಹಾಗೆ ಕಾಪಾಡಲ್ಪಟ್ಟಿರುತ್ತದೆ. ಪ್ರತಿಯೊಂದು 2 ಔನ್ಸ್ ಪೊಟ್ಟಣದಿಂದ 30 ದೊಡ್ಡ ಕಪ್ಪುಗಳಿಗೆ ಆಗುವಷ್ಟು ಚಹ ಮಾಡಬಹುದು.

ನೀವು ಉತ್ತಮ ಗುಣ ಮತ್ತು ಸ್ವಾದವನ್ನು ಅಪೇಕ್ಷಿಸುವುದೇ ಆದರೆ ನೀವು ಕೊಳ್ಳಬೇಕಾದ್ದು

ಬ್ರೂಕ್ ಬಾಂಡ್ ಚಹಾ

BB/50/LOT/101

ಪ್ರಕಟಣೆ

ತಾರೀಕು 22-2-1951 ಮತ್ತು 8-3-51ನೇ ನವಯುಗ ಪತ್ರಿಕೆಯಲ್ಲಿ ದಿ ಸೆಕ್ಯೂರಿಟಿ ಪ್ರೊವಿಡೆಂಟ್ ಇನ್ಸೂರೆನ್ಸ್ ಕಂಪೆನಿಯ ಮೆನೇಜರರು ಪ್ರಕಟಿಸಿದ ಪ್ರಕಟಣೆಯನ್ನು ನೋಡಿ ಆಶ್ಚರ್ಯ ಪಡುತ್ತೇನೆ.

ಸದ್ರಿ ಪ್ರಕಟಣೆಯು ಕೇವಲ ಅನಾಧಾರದ್ದೂ ಮತ್ತು ಅನ್ಯಾಯದ್ದೂ ಅಲ್ಲದೆ ಅತ್ಯಂತ ದುರುದ್ದೇಶಯುಕ್ತವಾದುದ್ದು ಆಗಿರುತ್ತದೆ, ಕಾರಣ ಸದ್ರಿ ಕಂಪೆನಿಗೆ ನನ್ನ ಮುಖಾಂತರದಿಂದ ರೂಪಾಯಿ ಎಂಟು ಲಕ್ಷಕ್ಕೂ ಮಿಕ್ಕಿದ ಕಂಪ್ಲೀಟು ಬಿಸಿನೆಸ್ಸನ್ನೂ, ರೂಪಾಯಿ 770-0-0 ಪ್ರೀಮಿಯರ್ ಕಲೆಕ್ಷನ್‌ನ್ನೂ ಬರೇ ಎರಡು ವರುಷ ಅವಧಿಯಲ್ಲಿ ದುಡಿದುಕೊಟ್ಟು ಈ ಕಡೆಯಲ್ಲಿ ಈ ಕಂಪೆನಿಯನ್ನು ಪ್ರಚಾರಕ್ಕೆ ತಂದದ್ದಾಗಿರುತ್ತದೆ. ಅಲ್ಲದೆ ನಾನೆ ಕೂಡಾ ಈ ಕಂಪೆನಿಯಲ್ಲಿ ರೂಪಾಯಿ ಒಂದು ಸಾವಿರಕ್ಕೆ ವಿಮಾದಾರನೂ ಆಗಿರುತ್ತೇನೆ.

ಮತ್ತು ಈ ಸದ್ರಿ ಮೆನೇಜರರು ನನ್ನ ಬಾಬ್ತು ಬಾಕಿ ಇರುವ ಧಾರಾಳ ಕಮಿಶನ್‌ನನ್ನು ದಗಾಪಡಿಸುವ ಕೆಟ್ಟ ಇರಾದೆಯಿಂದ ನನ್ನ ಕಾರ್ಯದಲ್ಲಿ ಅನೇಕ ತೊಡಕುಗಳನ್ನು ತಂದೊಡ್ಡುವುದರ ಪರಿಣಾಮದಿಂದಾಗಿ ನಾನು ರಾಜಿನಾಮೆಕೊಟ್ಟು ನನ್ನ ಬಾಕಿ ಇರುವ ಕಮಿಶನ್‌ನನ್ನು ಬರಮಾಡಿಕೊಳ್ಳುವರೆ ಕಾಯಿದೆ ಪ್ರಕಾರ ಉದ್ಯುಕ್ತರಾದುದನ್ನು ತಿಳಿದು ಮುಂಚಿತವಾಗಿ ತನ್ನ ಕಾರ್ಯಸಾಧನೆಗಾಗಿ ಇಂಥಾ ಅನಾಧಾರವಾದ ಅಪಪ್ರಚಾರವನ್ನು ಮಾಡಲು ಉಪಕ್ರಮಿಸಿದ್ದಾಗಿರುತ್ತದಲ್ಲದೆ ಬೇರೇನೂ ಕಾರಣ ಕಂಡುಬರುವುದಿಲ್ಲ.

ವಿಶ್ವಾಸಘಾತಕ ಮಾಡಿದ್ದಾರೆಂಬ ಪದಬಂಧ ಮಾತ್ರಕ್ಕೆ ಅಪವಾದಿಯೆಂದಾಗುವುದೆಂತಾದರೆ ಇದೊಂದು ಮಹಾ ದೊಡ್ಡ ಅಸ್ತ್ರವೆಂದೇ ಭಾವಿಸಬೇಕು. ಯಾವ ತರದ ಮಾತಿಯೇ ಬಂದಾಗಲೂ ಅದನ್ನು ಪರಿಶೀಲಿಸಿ ಪರಿಗಣಿಸಬೇಕಾದುದ್ದು ಮಾನವನ ಕರ್ತವ್ಯವಾಗಿರುತ್ತಾ ನನ್ನ ಮಾನ್ಯ ಮೆನೇಜರರು ಇದು ದೊಡ್ಡ ಮಹಾ ಅಸ್ತ್ರವೆಂದು ತಿಳಿದು ಪ್ರಯೋಗಿಸಿದುದು ನೋಡುವಾಗ ಅವರ ಮನೋವೃತ್ತಿಯು ಕಾಣಾಗಿ ಸ್ಪಷ್ಟವಾಗುವುದು. ಇದರಿಂದ ಏನೂ ಪ್ರಯೋಜನ ದೊರೆಯಲಾರದು ಎಂಬುದನ್ನು ತಿಳಿದಿರಲಿ

ಇನ್ನಾದರೂ ಸದ್ರಿ ಮೆನೇಜರರು ಇಂಥಾ ಅನಗತ್ಯದ ಕಾರ್ಯದಲ್ಲಿ ಮುಂದೊಡಗುವುದರ ಬದಲು ಕಂಪೆನಿಯ ಹಿತದೃಷ್ಟಿಯಿಂದ ಅಗತ್ಯವುಳ್ಳ ಕಾರ್ಯದತ್ತ ಕಡೆ ಗಮನಿಸುವುದು ಉತ್ತಮ.

A. Rajeeva Shetty.
Insurance Representative
P. O. Berkur, S. K.

ಅವರು ಹೇಳಿದ್ದೇನು?

ಲಿಯಾಖತರ ಟೀಕೆಯು

ಪಾಕಿಸ್ತಾನದ ಮುಖ್ಯಮಂತ್ರಿ ಲಿಯಾಖತರು ಭಾರತ–ಪಾಕಿಸ್ತಾನ ವ್ಯಾಪಾರೀ ಒಪ್ಪಂದವಾದ ಬಳಿಕ ಭಾರತದ ಕುರಿತು ಅಣಕವಾಡಿದ್ದರು: "ಪಾಕಿಸ್ತಾನಕ್ಕೆ ಆರಂಭದಲ್ಲಿ ಸರಕಾರೀ ನೌಕರರಿಗೆ ಸಂಬಳ ಕೊಡುವುದೇ ಕಷ್ಟವಾಗುತ್ತಿತ್ತು. ಆದರೆ ಈಗ ಪಾಕಿಸ್ತಾನದ ಆರ್ಥಿಕ ಸುಧಾರಣೆ ಅಸಾಧಾರಣವಾಗಿದೆ. ಭಾರತ ಸರಕಾರವು ವ್ಯಾಪಾರವನ್ನು ನಿಲ್ಲಿಸಿ ನಮ್ಮನ್ನು ಹಣ್ಣು ಮಾಡುವ ಯತ್ನ ನಡೆಸಿತು. ಪಾಕಿಸ್ತಾನದ ರೂಪಾಯಿಯ ಮೌಲ್ಯವನ್ನು ಒಪ್ಪದೆ ತನ್ನ ಹಟವನ್ನೇ ಸಾಧಿಸಿತು. ಈಗಲಾದರೂ ಪಾಕಿಸ್ತಾನ ತನ್ನ ಧೋರಣೆಯನ್ನು ಬದಲಿಸಲಿಲ್ಲ. ಈಗ ಭಾರತವು ತನ್ನ ಹಟವನ್ನು ಬಿಟ್ಟು ವ್ಯಾಪಾರ ಒಪ್ಪಂದಕ್ಕೆ ಬಂದಿರುತ್ತದೆ. ಪಾಕಿಸ್ತಾನದ ಜನಜೀವನ ಭಾರತ ಜನಜೀವನಕ್ಕಿಂತ ಎಷ್ಟೋ ಮಿಗಿಲಾಗಿದೆ. ಪಾಕಿಸ್ತಾನದ ಮಿಲಿಟರಿ ಇಲಾಖೆಯು ಚೇತೋಹಾರಿಯಾದ ಪ್ರಗತಿಯನ್ನು ಸಾಧಿಸಿದೆ. ಅದರ ಕಾರ್ಯದಕ್ಷತೆಯು ಅಸಾಮಾನ್ಯವಾದುದು."

ಹೌದು ಈಗ ಲಿಯಾಖತರ ಮಾತಿನ ಅರ್ಥ ನಮಗಾಗುತ್ತಲಿದೆ. ಪಾಕಿಸ್ತಾನದ ಸೈನ್ಯಖಾತೆಯು ಮುಖ್ಯಾಧಿಕಾರಿಯನ್ನೂ ಇನ್ನಿತರ ಪ್ರಮುಖ ಅಧಿಕಾರಿಗಳನ್ನು ಬಂಧಿಸಿದ್ದು ನೋಡುವಾಗ ಅವರ ಕಾರ್ಯದಕ್ಷತೆ ಅಸಾಧಾರಣವಾಗಿತ್ತೆಂಬುದು ಲಿಯಾಖತರ ಹಾಗೆಯೇ ನಾವೂ ಕಾಣುತ್ತಲಿದ್ದೇವೆ. ಯಥಾ ರಾಜಾ ತಥಾ ಪ್ರಜಾ ಎನ್ನುವ ಹಾಗೆಯೆ ದೇಶದ ಮೇಲೆ ಕತ್ತಿ ಕಟ್ಟಿಯೇ ಕೆಲಸ ಸಾಧಿಸುವ ಲಿಯಾಖತರ ಹುಟ್ಟುಗುಣಕ್ಕೆ ಸರಿಯಾಗಿಯೇ ಅವರ ಅನುಯಾಯಿಗಳು ಮಾಡಿದರು. ಲಿಯಾಖತರಂತೆ ಹಾಗೆಯೆ ಅವರ ಅನುಯಾಯಿಗಳು ಮಾಡಿದ ಕಾರ್ಯವನ್ನು 'ಅಸಾಧಾರಣ–ಶ್ಲಾಘನೀಯ' ಎನ್ನಲೇ ಬೇಕು! ಸುಖಶಾಂತಿಯಿಲ್ಲದೆ ನರಳಾಡುವ ಪಾಕಿಸ್ತಾನದ ಒಳಗೆ ನಡೆಯುವ ಕಾರಸ್ಥಾನವನ್ನು ಅರಿಯದೇನೇ ಭಾರತವನ್ನು ನಂಜಿನ ಮಾತಿನಿಂದ ಹೀಯಾಳಿಸುವ ಲಿಯಾಖತರು, ಪಾಕಿಸ್ತಾನದ ಜನತೆಯ ಸ್ಥಿತಿ ಎಂತಹ ಅಸ್ಥಿರತೆಯುಳ್ಳದೆಂಬುದಕ್ಕೆ ಈ ಉದಾಹರಣೆಯೊಂದೇ ಸಾಕು. ನ. ಸು. ತ.

ಉಳಿದ ಬುದ್ಧಿಯನ್ನು ಬ್ರಿಟಿಷರು ಎರಡು ಬಣವಾಗಿ ಲೀಗಿನವರಿಗೆ ಹರಿದು ಹಂಚಿಕೊಟ್ಟಿದ್ದನ್ನು ಲಿಯಾಖತರು ಇಂದೂ ತಿಳಿಯದಂತೆ ನಟಿಸುತ್ತಾರೆ. ದೇಶವಿಭಜನೆಗೊಂಡದ್ದರ ಫಲವಾಗಿಯೂ, ಅನ್ಯಟ್ಟಿಗಳ ಕೊರತೆಯಿಂದಾಗಿಯೂ ಭಾರತ ಜನ ಹಲವು ರೀತಿಯ ಕಷ್ಟಗಳನ್ನು ಸಹಿಸುತ್ತಿದ್ದಾರೆ. ಸರಕಾರದಲ್ಲಿ ನಿಷ್ಠಾವಂತರಾಗಿದ್ದಾರೆ. ಪಾಕಿಸ್ತಾನದಲ್ಲಿಯ ಹಾಗೆ ಸರಕಾರವನ್ನೇ ಬುಡಮೇಲುಗೊಳಿಸುವ ಕಾರಸ್ಥಾನ ಇಲ್ಲಿ ನಡೆದಿಲ್ಲ. ಲಿಯಾಖತರ ನಿರಂಕುಶ ಪ್ರಭುತ್ವದ ಫಲವಾಗಿ ಇಂತಹ ಗಂಭೀರ ಪರಿಸ್ಥಿತಿಯು ಉದ್ಭವವಾಯಿತೆಂಬುದನ್ನು ನಮ್ಮ ಹಾಗೆಯೇ ಲಿಯಾಖತರು ಇನ್ನಾದರೂ ತಿಳಿಯುವಂತಾಗಲಿ!

ಚುನಾವಣೇ ಪ್ರಚಾರ.

"ಭಾರತವು ಪಾಕಿಸ್ತಾನದೊಡನೆ ಮಾಡಿಕೊಂಡ ವ್ಯಾಪಾರ ಒಪ್ಪಂದದಂತಹ ಅವಮಾನಕರ ಒಪ್ಪಂದ ಬೇರೊಂದಿಲ್ಲ. ಇಂಥ ಒಪ್ಪಂದವೇ ಬೇಕಾಗಿದ್ದರೆ ಒಡು ದಿನಗಳ ಹಿಂದೆ ಮಾಡಿಕೊಂಡು ಜನರ ದುಃಖವನ್ನಾದರೂ ನೀಗಿಸಬಹುದಾಗಿತ್ತು. ಯಾವ ಕಾರಣದಿಂದ ಈ ಒಪ್ಪಂದ ಮಾಗಿರಲಿ ಎಲ್ಲರ ಮನಸ್ಸಿನಲ್ಲಿ ಇದರ ಬಗ್ಗೆ ಅಸಮಾಧಾನ ಮೂಡಿದೆ. ಮುಖ್ಯಮಂತ್ರಿ ಆಹಾರದ ಕುರಿತು ಘೋಷಿಸಿದ್ದರೂ ಭಾರತ ಆಹಾರ ವಿಷಯದಲ್ಲಿ ಸ್ವಾವಲಂಬಿಯಾಗಲಿಲ್ಲ. ಇಡಿಯ ದೇಶವೇ ಜಗತ್ತಿನೆದುರು ಭಿಕ್ಷುಕನಂತೆ ಕೈಯೊಡ್ಡಿ ನಿಂತಿದೆ. ಇಂತಹ ಸನ್ನಿವೇಶದಲ್ಲಿ ಪಕ್ಷಪಂಗಡಗಳ ಚಟುವಟಿಕೆಯನ್ನೇ 'ಸಿಬು ಹಯೋ' ವಿಲ್ಲ ಭಾರತವೀಗ ಹಸಿವಿನ ಗಂಡಾಂತರವನ್ನು ಎದುರಿಸಬೇಕಾಗಿದೆ. ಒಪ್ಪತ್ತು ಊಟಸಿಗದ ಜನರು ಇರುವಾಗ ಅವರು ಶಾಂತರೀತಿಯಿಂದ ಇರುವುದಾದರೂ ಹೇಗೆ?" ಶ್ಯಾಮಪ್ರಸಾದ ಮುಖರ್ಜಿಯವರ ಮಾತಿನಲ್ಲಿ ಸತ್ಯಾಂಶವಿದ್ದಾದರೂ ಪ್ರಚಾರದ ಎಲ್ಲರಂತೆ ಟೀಕೆ ಮಾಡುದ್ದೇಶದಿಂದ ಹೊರಟದ್ದಾಗಿದೆ. ಪಾಕಿಸ್ತಾನದೊಡನೆ ವ್ಯಾಪಾರ ಮಾಡಿದ್ದು ಅವಮಾನಕರವೆನ್ನುತ್ತ ಆಹಾರವಿಲ್ಲದೆ ಜಗತ್ತಿನ ಮುಂದೆ ಜನ ಭಿಕ್ಷೆ ಬೇಡುವಂತಾಗಿದೆ ಎನ್ನುತ್ತಾರೆ. ಪಾಕಿಸ್ತಾನದೊಡನೆ ವ್ಯಾಪಾರ ಒಪ್ಪಂದವನ್ನು ಮಾಡಿಕೊಂಡಿರುವದರಿಂದ ಆಪತ್ತಿನಲ್ಲಿ ಆಹಾರವನ್ನು ಪಡೆಯುವಂತಾಗಿದೆ. ಸೆಣಬು ಹತ್ತಿ ಮೊದಲಾದ ಸರಕುಗಳು ಅತ್ಯಾವಶ್ಯಕವಾಗಿವೆ. ಸಂಕಟ ಸಮಯದಲ್ಲಿ ಒಪ್ಪಂದಮಾಡಿಕೊಂಡದ್ದು ಮುತ್ಸದ್ದಿತನದ್ದಾಗಿರುತ್ತದೆ. ಇಲ್ಲದೇ ಹೋಗಿದ್ದರೆ ಆಹಾರದಭಾವದಿಂದ ಎಷ್ಟೋ ಗಂಡಾಂತರ ಪರಿಸ್ಥಿತಿಯುದ್ಭವಿಸುತ್ತಿತ್ತು. ಆಗ ಶ್ರೀ ಮುಖರ್ಜಿಯವರೇ ಸರಕಾರವನ್ನು ಬಲವಾಗಿ ಟೀಕಿಸುತ್ತಿದ್ದರು. ಹಿಂದೂ ಮಹಾಭಿಮಾನಿಯಾದ ಮುಖರ್ಜಿಯವರಂತಹ ಜಾತೀಯ ಸಂಕುಚಿತ ಮನೋವೃತ್ತಿಯುಳ್ಳವರು ಮಾತ್ರ ಇಂತಹ ಟೀಕೆ ಮಾಡಿಯಾರೇ ವಿನಹ ಪರಿಸ್ಥಿತಿಯನ್ನರಿತವರು ಶ್ಲಾಘಿಸದೆ ಇರರು! ಇಷ್ಟು ಶೀಘ್ರದಲ್ಲಿ ಸ್ವಾವಲಂಬಿಯಾಗುವದಾದರೂ ಹೇಗೆ? ವಿಪುಲವಾಗಿ ಬೆಳೆಯುತ್ತಿರುವ ಜನಸಂಖ್ಯೆ—ಪ್ರಕೃತಿ ಪ್ರಕೋಪದಿಂದುಂಟಾದ ಆಹಾರದ ಕೊರತೆ ಇವನ್ನೆಲ್ಲ ಲಕ್ಷಿಸಬೇಕು. ಸರಕಾರ ಕೈಗೊಂಡಿರುವ ನಿಯೋಜನೆ ಮಿಂಚಿನ ವೇಗದಲ್ಲಿ ಪೂರೈಸುವಂತಹದಲ್ಲ. ಟೆನಸಿ ಕಂಪಾದ (T.V.A)ವೇ ಮೊದಲಾದ ನಿಯೋಜನೆಗೆ ಎಷ್ಟು ಸಮಯ ತಗಲಿತೆಂಬುದನ್ನು ಮುಖರ್ಜಿಯವರು ವಿವೇಚಿಸಬೇಕು. ಪಕ್ಷಪಂಗಡಗಳ ಚಟುವಟಿಕೆಯ ಮೇಲೆ ಸರಕಾರ ಕಣ್ಣಿಟ್ಟುದರ ಕುರಿತು ಮುಖರ್ಜಿಯವರು ಟೀಕಿಸಿದ್ದಾರೆ. ಹಿಂದೂ ಮಹಾಸಭೆಯಂತಹ ಜಾತೀಯ ಸ್ವಾರ್ಥಗಳಿಂದ ದೇಶದ ಆಂತರಿಕ ಶಾಂತಿ ಕೆಟ್ಟಿಲ್ಲವೆನ್ನುವದಕ್ಕೆ ಮುಖರ್ಜಿಯವರಿಗೆ ಬೇಕಷ್ಟು ದಾಖಲೆಗಳಿವೆ. ಜಗತ್ತಿನ ಮಹಾ ವಿಭೂತಿ ಪುರುಷನನ್ನು ಕೊಂದ ಕೊಲೆಗಡುಕತನ ಹಿಂದೂ ಮಹಾಸಭೆ ಹಾಗೂ ಆರೆಸ್ಸೆಸ್ಸಿನ ವರ್ತನೆಯಿಂದಲೇ ಆಯಿತೆಂಬುವದನ್ನು ಜಗತ್ತು ಎಂದೂ ಮರೆಯಲಾರದು. ಇಂತಹ ಕಾರ್ಯವನ್ನ ಕಮ್ಯೂನಿಸ್ಟರೂ ಮಾಡಿಲ್ಲ, ಮುಸಲ್ಮಾನರೂ ಮಾಡಿಲ್ಲ. ತಿರುಗಿ ಈಗ ರಾಜಕಾರಣದಲ್ಲಿ ತಮ್ಮ ವರ್ಚಸ್ಸನ್ನು ಬೀರುವದಕ್ಕಾಗಿ ಈ ಜಾತೀಯ ವಾದಿಗಳು ಮುಂದೆ ಬರುತ್ತಲಿದ್ದಾರೆ. ಸರಕಾರವನ್ನು ಟೀಕಿಸುವದರ ಮೂಲಕ ಜನರ ರಾಗವನ್ನು ಗಳಿಸಬಹುದೆಂಬ ಹಂಬಲ ಕಟ್ಟಿಕೊಂಡಿರುತ್ತಾರೆ. ಅಂತಲೇ ಮುಖರ್ಜಿಯವರು ಆ ಕಾರ್ಯವನ್ನು ಸಂದರ್ಭ ಸಾಧಿಸಿ ಮಾಡಿದ್ದಾಗಿರಬಹುದು. ಇವೆಲ್ಲ ಮುಂದೆ ಬರಬಹುದಾದ ಚುನಾವಣಾ ಪ್ರಚಾರವೇ ಹೊರತು ವಿವೇಕದ ವಿಮರ್ಶೆಯಲ್ಲ.

ಲೆಕ್ಕಗಳು ಸುಳ್ಳು ಹೇಳುತ್ತಿವೆ.

ಕೇಂದ್ರದ ಪಾರ್ಲಿಮೆಂಟಿನಲ್ಲಿ ನೂಲಿನ ಕುರಿತಾಗಿ ಶ್ರೀ ಎಚ್. ವಿ. ಕಾಮತರು ಮಂತ್ರಿ ಹರೇಕೃಷ್ಣ ಮೆಹತಾಬರನ್ನು ಪ್ರಶ್ನಿಸಿದರು. ಅದರಲ್ಲೂ ಮದ್ರಾಸಿನಲ್ಲಿ ನೂಲಿನ ಕೊರತೆಯಿಂದಾದ ಗಂಭೀರ ಪರಿಸ್ಥಿತಿಯನ್ನು ಮಂತ್ರಿಗಳ ಗಮನಕ್ಕೆ ತಂದರು. ಮದ್ರಾಸಿಗೆ ಕೇಂದ್ರದಿಂದ ಕಳಿಸಿದ ನೂಲಿನ ವಿಚಾರವಾಗಿಯೂ ರೇಶ್ಮೆಯ ವಿಚಾರವಾಗಿಯೂ ಶ್ರೀ ಕಾಮತರು ಪ್ರಶ್ನಿಸಿರುತ್ತಾರೆ. ಅದಕ್ಕೆ ಮಂತ್ರಿಗಳು "1951ರ ಜನವರಿ ತಿಂಗಳಲ್ಲಿ 17000 ಬೇಲುಗಳನ್ನು ಫೆಬ್ರುವರಿಯಲ್ಲಿ 18801 ಬೇಲುಗಳನ್ನು ಮಾರ್ಚಿನಲ್ಲಿ 19,037 ಬೇಲುಗಳನ್ನೂ ಏಪ್ರಿಲ್ ತಿಂಗಳಲ್ಲಿ 22,500 ಬೇಲುಗಳನ್ನೂ ಕೊಡಬಹುದೆಂದು ಮದ್ರಾಸಿಗೆ ಭರವಸೆ ಕೊಟ್ಟಿರುತ್ತೇನೆ. ಜನವರಿ ತಿಂಗಳಲ್ಲಿ 15,407 ಬೇಲನ್ನೂ ಫೆಬ್ರುವರಿ ತಿಂಗಳಲ್ಲಿ 17700 ಬೇಲುಗಳನ್ನು ಮಾತ್ರ ಕಳಿಸಲು ಸಾಧ್ಯವಾಯಿತು. ಉಳಿದ ಮಾರ್ಚ ಮತ್ತು ಏಪ್ರಿಲ್ ತಿಂಗಳ ಕೊಡುಗೆಯನ್ನು ಶೀಘ್ರವಾಗಿ ಕಳಿಸುವ ಪ್ರಯತ್ನ ಮಾಡಲಾಗಿದೆ. ರೇಶ್ಮೆ ನೂಲನ್ನು ಆಮದು ಮಾಡಿಕೊಳ್ಳುವದಕ್ಕೆ ಮದ್ರಾಸಿಗೆ ಯಾವ ರೀತಿಯ ನಿರ್ಬಂಧವೂ ಹಾಕಿಲ್ಲ. ರೇಶ್ಮೆಯ ಮೇಲೆ ಕಂಟ್ರೋಲ್ ಇರುವುದಿಲ್ಲ."

ಮಂತ್ರಿಗಳ ಈ ಹೇಳಿಕೆಯನ್ನು ಮದ್ರಾಸಿನ ನೂಲಿನ ವ್ಯಾಪಾರಿಗಳ ಅಸೋಸಿಯೇಶನಿನ ಕಾರ್ಯದರ್ಶಿಯು ಈ ರೀತಿ ಅಲ್ಲಗಳೆದಿದ್ದಾರೆ. "ಪಾರ್ಲಿಮೆಂಟಿನಲ್ಲಿ

ಭಾರತದ ಬಹುದೊಡ್ಡ ನಗರವಾದ ಬೊಂಬಾಯಿಯಲ್ಲಿ
ಗ್ರಾಹಕರ ತೃಪ್ತಿಯನ್ನೇ ಧ್ಯೇಯವಾಗಿಟ್ಟುಕೊಂಡಿರುವ
ಕನ್ನಡಿಗರಿಂದಲೇ ನಡೆಸಲ್ಪಡುತ್ತಿರುವ ಉನ್ನತವಾದ ರಾಷ್ಟ್ರೀಯ ಸಂಸ್ಥೆ—

ದಿ ನೇಶನಲ್ ಜನರಲ್ ಸ್ಟೋರ್ಸ್

(ಡಿಸ್ಪೆನ್ಸಿಂಗ್ ಕೆಮಿಸ್ಟ್ಸ್ ಮತ್ತು ಡ್ರಗ್ಗಿಸ್ಟ್ಸ್)
8 ಎ, ಮೆರ್ವಾನ್ ಬಿಲ್ಡಿಂಗ್ಸ್, pp: His Master's Voice
ಸರ್ ಫಿರೋಜ್ ಶಾ ಮೇಹತಾ ರೋಡು, ಫೋರ್ಟ್, ಬೊಂಬಾಯಿ.

ಇಲ್ಲಿ ದೇಶ–ವಿದೇಶಗಳಿಂದ ಎಲ್ಲಾ ತರದ ಔಷಧಗಳನ್ನೂ ಇತರ ಜನೋಪಯೋಗಿ ಸಾಮಾನುಗಳನ್ನೂ ತರಿಸಿ ಅತಿ ಕಡಿಮೆ ಬೆಲೆಗೆ ವಿಕ್ರಯಿಸಲಾಗುತ್ತದೆ.

ಆಸ್ಪತ್ರೆಯ ಉಪಯೋಗಕ್ಕೆ ಅಗತ್ಯವಾದ ಸಾಧನಗಳೂ ಮತ್ತು ಟಾನಿಕುಗಳೂ ವಿಟಮಿನ್ ಆಹಾರ ವಸ್ತುಗಳೂ ಮುಲಾಮುಗಳೂ, ಸುವಾಸನಾ ದ್ರವ್ಯಗಳೂ ರಖಂ ಆಗಿಯೂ ಚಿಲ್ಲರೆಯಾಗಿಯೂ ಸುಲಭ ದರದಲ್ಲಿ ದೊರೆಯುತ್ತವೆ.

ವಿ. ಪಿ.– ಪಾರ್ಸಲ್‌ಗಳ ಆರ್ಡರುಗಳನ್ನು ಸ್ವೀಕರಿಸಲಾಗುವುದು.
ಹೆಚ್ಚಿನ ಮಾಹಿತಿಗಳಿಗೆ ಬರೆಯಿರಿ.

ಎಂ. ಮೆಂಡೋಸ, ಪ್ರೊಪ್ರೈಟರ್.
M Mendosa,
Proprietor.

THE NATIONAL GENERAL STORES
Importers, Exporters, Dispensing Chemists & Druggists,
General Merchants & Commission Agents,
8A Merwan Buildings, Opp: His Master's Voice,
Sir Phirozsha Mehta Road, **Fort, Bombay.**

THE BOMBAY LIFE ASSURANCE COMPANY, LTD.
ದಿ ಬೊಂಬೆ ಲೈಫ್ ಎಶ್ಯೂರೆನ್ಸ್ ಕೋ., ಲಿಮಿಟೆಡ್
(ಸ್ಥಾಪನೆ: 1908)

ಅತ್ಯಲ್ಪ ಖರ್ಚಿನಿಂದ ಅತ್ಯಧಿಕ ಲಾಭವನ್ನೀಯುವ
ಅಗ್ರಗಣ್ಯ ವಿಮಾ ಸಂಸ್ಥೆಗಳಲ್ಲೊಂದು

ಪ್ರಧಾನ ಏಜಂಟರು:

ಕೊಚ್ಚಿಕಾರ್ ಬ್ರದರ್ಸ್, ಲಿಮಿಟೆಡ್ ಉಡುಪಿ.

ಇವರ ಶಾಖಾ ಕಚೇರಿಗಳು:
ಬೊಂಬಾಯಿ, ಮದ್ರಾಸು, ಬೆಂಗಳೂರು, ಕೊಯಮುತ್ತೂರು, ತ್ರಿವೆಂಡ್ರಮ್,
ಕಲ್ಲಿಕೋಟೆ ಮತ್ತು ಮಂಗಳೂರು.

ಕಳೆದ ಮೂವತ್ತೆಂಟು ವರುಷಗಳಿಂದ ವಿಮಾ ಕ್ಷೇತ್ರದಲ್ಲಿ ಸತತ ದುಡಿದವರಾದ ನಾವು ಜನಾಂಗದ ಶ್ರೇಯೋಭಿವೃದ್ಧಿಯ ಕಡೆಗೆ ನಮ್ಮ ನಮ್ರ ಸೇವೆಯನ್ನು ಸಲ್ಲಿಸಿರುತ್ತೇವೆಂಬುದೇ ನಮ್ಮ ಹೆಗ್ಗಳಿಕೆಯ ಮಾತು.

ವಿಮಾ ಮಾಡಲಿಕ್ಕಾಗಲೀ, ಪ್ರಾತಿನಿಧ್ಯ ಪಡೆಯಲಿಕ್ಕಾಗಲೀ
ದಯಮಾಡಿ ನಮಗಾಗಲೀ ಅಥವಾ ನಮ್ಮ ಶಾಖೆಗಳಿಗಾಗಲೀ ಬರೆಯಿರಿ.

ಲೋಕಾಂತ

ಪಾಕ್ ಸೈನ್ಯಾಧಿಕಾರಿಯ ಬಂಧನ

ಕಳೆದ ವಾರದ ಮಹತ್ವದ ಘಟನೆಯೆಂದರೆ ಪಾಕಿಸ್ತಾನದ ಮುಖ್ಯ ಸೈನ್ಯಾಧಿಕಾರಿಯ ಬಂಧನವಾಗಿರುತ್ತದೆ. ಪಾಕ್ ಸೇನಾಧಿಪತಿ ಮೇಜರ್ ಜನರಲ್ ಅಕಬರ ಖಾನ ಮತ್ತು ಅವರ ಹೆಂಡತಿಯನ್ನೂ ರಾವಲಪಿಂಡಿಯಲ್ಲಿ ಬಂಧಿಸಲಾಗಿದೆ. ಇವರ ಅನುಯಾಯಿಗಳಾದ ಬ್ರಿಗೇಡಿಯರ್ ಲತೀಫ್ ಮತ್ತು ಫೈಜ್ ಅಹಮ್ಮದರನ್ನೂ ಬಂಧಿಸಲಾಯಿತು. ಪಾಕಿಸ್ತಾನದ ಮುಖ್ಯ ಸೈನ್ಯಾಧಿಪತಿಯ ಈ ಬಂಧನ ವಿಚಾರವು ಪಾಕಿಸ್ತಾನದ ಜನತೆಗೆ ಅತ್ಯಂತ ಆಶ್ಚರ್ಯಕರವಾಗಿರುತ್ತದೆ. ಅನಿರೀಕ್ಷಿತವಾದ ಈ ಘಟನೆಯಿಂದ ಗಂಭೀರ ಪರಿಸ್ಥಿತಿಯುಂಟಾಗಿದೆ. ಸೈನ್ಯಾಧಿಪತಿಯ ಬಂಧನಕ್ಕೆ ಲಿಯಾಖತರು ಆತನು ಸರಕಾರವನ್ನು ಉರುಳಿಸುವ ಸಂಚಿಕೆಯನ್ನು ಮಾಡಿದ್ದೇ ಕಾರಣವಾಗಿರುತ್ತದೆ ಎಂದಿದ್ದಾರೆ. 'ಪಾಕಿಸ್ತಾನ ಟಾಯಿಮ್ಸ್' ಪತ್ರಿಕೆಯೊಂದನ್ನು ಬಿಟ್ಟು ಉಳಿದೆಲ್ಲ ಪತ್ರಿಕೆಗಳು ಈ ವಿಚಾರವಾಗಿ ಹೆಚ್ಚಿನ ಪ್ರಾಮುಖ್ಯ ಕೊಟ್ಟು ವಿಶೇಷ ಸಂಚಿಕೆಯನ್ನು ಹೊರಡಿಸಿವೆ. ಮುಖ್ಯ ಮಂತ್ರಿ ಲಿಯಾಖತರು ಈ ಘಟನೆಯ ಕುರಿತು "ಪಾಕಿಸ್ತಾನ ಸರಕಾರವನ್ನು ಬುಡ ಮೇಲಾಗಿಸುವ ಈ ಸಂಚಿಕೆ ಸ್ವಲ್ಪ ಸಮಯದ ಮುಂಚಿತವಾಗಿ ತಿಳಿದದ್ದು ಸುದೈವವೆಂದೇ ಹೇಳಬೇಕು. ವಿಳಂಬವಾಗುತ್ತಿದ್ದರೆ ಪಾಕಿಸ್ತಾನದ ಆಂತರಿಕ ಭದ್ರತೆ ಸಂಪೂರ್ಣ ಕೆಟ್ಟು ಹೋಗುತ್ತಿತ್ತು. ಪಾಕಿಸ್ತಾನದ ಶತ್ರುಗಳ ಈ ಕಾರ್ಯ ಖಂಡನಾರ್ಹವಾದದ್ದು. ಈ ಸಂಚಿಕೆಯಲ್ಲಿ ಮುಖ್ಯ ಪಾತ್ರವನ್ನು ವಹಿಸಿರುವ ಇಬ್ಬರು ಅಧಿಕಾರಿಗಳ ಮೇಲೆ ಉಗ್ರಕ್ರಮ ತೆಗೆದುಕೊಳ್ಳಬೇಕಾದ ಪ್ರಸಂಗ ಬಂದದ್ದಕ್ಕೆ ನಾನು ಅತ್ಯಂತ ಖೇದಪಡುತ್ತೇನೆ. ಅವರು ಮಾಡಿದ ಕಾರಸ್ಥಾನವನ್ನು ನಾನು ಸಾರ್ವಜನಿಕ ಸುರಕ್ಷಿತತೆಯ ನಿಮಿತ್ತ ಗುಪ್ತವಾಗಿಯೇ ಇಡಬೇಕಾಗಿದೆ. ಈ ಕಾರ್ಯದಲ್ಲಿ ಇಡೀ ರಾಷ್ಟ್ರದ ಮತ್ತು ಸೈನ್ಯದ ಒಲವು ನನ್ನ ಪಾಲಿಗಿದೆ ಎನ್ನುವ ಭರವಸೆ ನನಗಿದೆ" ಎಂದು ಹೇಳಿರುತ್ತಾರೆ. ಪಾಕಿಸ್ತಾನದ ನಿಷ್ಠಾವಂತ ಸೇವಕರಾದ ಅಕಬರಖಾನರು ಇಂತಹ ಕಾರ್ಯವನ್ನು ಮಾಡಿಯಾರೆಂದು ನಾನೆಂದೂ ಭಾವಿಸುವುದಿಲ್ಲ ಎಂದು ಪಾಕಿಸ್ತಾನ ಪಾರ್ಲಿಮೆಂಟಿನ ಸದಸ್ಯರಾದ ಅವರ ಅತ್ತೆಯವರು ಆಶ್ಚರ್ಯ ವ್ಯಕ್ತಗೊಳಿಸಿದ್ದಾರೆ

ಅಮೇರಿಕೆಯ ಆಹಾರ

ಬಹಳ ಸಮಯದಿಂದ ನಿರೀಕ್ಷಿಸುತ್ತಿರುವ ಅಮೇರಿಕೆಯ ಆಹಾರದ ಕೊಡುಗೆಯು ಇನ್ನೂ ಒಂದು ತೀರ್ಮಾನಕ್ಕೆ ಬಂದಿರುವುದಿಲ್ಲ. ಭಾರತ ಕೇಳಿದ ಎರಡು ಮಿಲಿಯ ಟನ್ ಆಹಾರದ ಬಹ್ವಂಶ ಸಿಗುವ ಭರವಸೆ [illegible] ತಿ ಹೆಚ್ಚಾದದ್ದು ವಿಷಾದಕರ. ಹೀಗಾಗುವುದಕ್ಕೆ ಶ್ರೀ ಕುಮಾರಪ್ಪನವರು ಅಮೇರಿಕೆಯಲ್ಲಿ ಕೊಟ್ಟ ಭಾಷಣವೇ ಕಾರಣವಾಗಿರುತ್ತದೆ. "ಭಾರತದ ಪ್ರತಿನಿಧಿಯು ಕಮ್ಯೂನಿಸ್ಟರ ಪುರಸ್ಕರ್ತ ಮಾತ್ರವಲ್ಲ ಅಮೇರಿಕದ ದ್ವೇಷಿಯೂ ಹೌದು" ಎಂದು ಕಾಂಗ್ರೆಸ್ಸಿನ ಹಲವು ಸದಸ್ಯರು ಅಭಿಪ್ರಾಯ ಪಟ್ಟಿರುತ್ತಾರೆ. ಶ್ರೀ ಕುಮಾರಪ್ಪನವರ ವೈಯಕ್ತಿಕ ಹೇಳಿದ ಮಾತಿಗೆ ನಾವು ಹೊಣೆಗಾರರಾಗಲಾರೆವೆಂದು ಭಾರತ ಸರಕಾರ ಸೂಚಿಸಿದೆಯಾದರೂ ಕಾಂಗ್ರೆಸ್ಸಿನಲ್ಲಿಯೂ, ಸರಕಾರಿ ವರ್ಗದಲ್ಲಿಯೂ ತೀವ್ರವಾದ ವಿರೋಧ ಸೂಚನೆಗಳುಂಟಾಗಿವೆ. ಸದ್ಯ ಯಾವುದೇ ನಿರ್ಧಾರವನ್ನು ಹೇಳುವ ಚಿಹ್ನೆ ಕಾಣುವಂತಿಲ್ಲ. ಕುಮಾರಪ್ಪನವರ ಭಾಷಣದ ಪ್ರತಿಕ್ರಿಯೆಯೇ ಆಹಾರಧಾನ್ಯಗಳ ಕೊಡುಗೆಯ ವಿಳಂಬಕ್ಕೆ ಮುಖ್ಯ ಕಾರಣವಾಗಿದೆಯೆಂದು ಹೇಳಲಾಗಿದೆ.

ಮಾಲನ್ನರ ಆಕ್ರೋಶ

ದಕ್ಷಿಣ ಆಫ್ರಿಕದ ಹಿಂದಿಯರ ಸಮಸ್ಯೆಯನ್ನು ಆಫ್ರಿಕ ಭಾರತ-ಪಾಕಿಸ್ತಾನಗಳ ಪ್ರತಿನಿಧಿಗಳನ್ನು ಸೇರಿಸಿ ಬಿಡಿಸತಕ್ಕದ್ದೆಂದು ಯು. ರಾ. ಸಂಘ ಸೂಚಿಸಿದ್ದನ್ನು ಡಾ| ಮಾಲನ್ನರು ಯು. ರಾ. ಸಂಘಕ್ಕೆ ದ. ಆಫ್ರಿಕದ ಹಿಂದೀಯರ ವಿಚಾರದಲ್ಲಿ ಕೈ ಹಾಕುವ ಅಧಿಕಾರವೇ ಇಲ್ಲವೆಂದು ನಿರಾಕರಿಸಿದ್ದಾರೆ. ಮಹಾತ್ಮಾ ಗಾಂಧಿಯ ನಿಕಟವರ್ತಿಗಳಾದ ಪೋಲೆಕರವರು: "ದಕ್ಷಿಣ ಆಫ್ರಿಕೆಯಲ್ಲಿ ವಾಸಿಸುವ ಹಿಂದೀಯರಲ್ಲಿ ನೂರಕ್ಕೆ 90 ಜನ ಅಲ್ಲಿ ಜನಿಸಿದವರಿರುವರು. ಆದರೂ ಅವರಿಗೆ ನಾಗರಿಕತ್ವದ ಹಕ್ಕು ಕೊಡಲಾಗಿಲ್ಲ. ಇದಕ್ಕೆ ಹಿಂದೀಯರು ಶ್ವೇತವರ್ಣೀಯರಾಗಿರದೆ ಕೀಳು ಜಾತಿಯವರೆಂಬ ಒಂದೇ ಕಾರಣವಾಗಿರುತ್ತದೆ. ಈ ಜನರ ಹಿತಸಂಬಂಧದಲ್ಲಿ ಭಾರತ ಪಾಕಿಸ್ತಾನ ಭಾಗವಹಿಸಿ ತೀರ್ಮಾನಿಸುವದು ನ್ಯಾಯವೇ ಆಗಿದೆ. ಇದು ಆಫ್ರಿಕೆಯ ಆಂತರಿಕ ಪ್ರಶ್ನೆ ಎಂದಿಗೂ ಆಗುವಂತಿಲ್ಲ. ದಿವಂಗತ ಜನರಲ್ ಸ್ಮಟ್ಸ್‌ರು 1942ರಲ್ಲಿ ವರ್ಣದ್ವೇಷ ಮಸೂದೆಯು ದ. ಆಫ್ರಿಕೆಯ ಪಾರ್ಲಿಮೆಂಟಿನಲ್ಲಿ ಬಂದಾಗ ಈ ಮಸೂದೆಯು ಒಣ ಹುಲ್ಲಿನ ಮೇಲೆ ಉರಿಯುವ ದೀವಟಿಗೆಯನ್ನಿಟ್ಟಂತಾಗುವದೆಂದರು. ಮಾಲನ್ನರ ಈ ಧೋರಣೆ ಅಸಮಂಜಸವಾಗಿರುತ್ತದೆ" ಎಂದಿರುವರು.

ಮಂತ್ರಿವರ್ಯರಾದ ಮೆಹತಾಬರು ಹತ್ತಿ ಮತ್ತು ರೇಶ್ಮೆಯ ನೂಲಿನ ಕುರಿತು ಕೊಟ್ಟ ಹೇಳಿಕೆ ಅಸತ್ಯಪೂರ್ಣವಾಗಿರುತ್ತದೆ. ರೇಶ್ಮೆಯ ನೂಲಿನ ಆಯಾತಕ್ಕೂ ವ್ಯಾಪಾರಕ್ಕೂ ಯಾವ ನಿರ್ಬಂಧವೂ ಕಂಟ್ರೋಲೂ ಇರುವುದಿಲ್ಲವೆಂದಿರುತ್ತಾರೆ. ಜನವರಿ ತಿಂಗಳ 7ರಲ್ಲಿ ಮದ್ರಾಸಿಗೆ ಮಂತ್ರಿಗಳು ಬಂದಾಗ ಹಾಗಾಗುತ್ತದೆಂದು ಹೇಳಿದ್ದರು. ನಾವು ಜನವರಿ ತಿಂಗಳಲ್ಲಿ ರೇಶ್ಮೆ ನೂಲಿನ ಆಯಾತ ಅನಿರ್ಬಂಧವಾಗಿಯೂ ಕಂಟ್ರೋಲ್ ಇಲ್ಲದೆಯೂ ವ್ಯವಹರಿಸುವದಕ್ಕೆ ಅನುಮತಿಯನ್ನೀಯಬೇಕೆಂದು ಕೇಳಿಕೊಂಡದ್ದಕ್ಕೆ ಯಾವ ಉತ್ತರವೂ ಸರಕಾರದಿಂದ ಬಂದಿರುವುದಿಲ್ಲ. ರೇಶ್ಮೆಯ ಮೌಲ್ಯದ ಕುರಿತು ಮೆಹತಾಬರು ವಿವಿಧ ಲೆಕ್ಕಾಚಾರ ಹೊಂದಿಕೆಯಾಗಿರುವುದಿಲ್ಲ." ಮೇಲಿನ ಎರಡು ಹೇಳಿಕೆಯೂ ವಿರುದ್ಧಾಭಿಪ್ರಾಯವನ್ನು ಕೊಡುತ್ತವೆ. ಜನಾನುರಾಗವನ್ನು ಗಳಿಸುವದಕ್ಕೋಸ್ಕರ ಮಂತ್ರಿಗಳು ಪಾರ್ಲಿಮೆಂಟಿನಲ್ಲಿಯೂ ಹೊರಡೆಯಲ್ಲಿಯೂ ಹೇಗೆ ಮಾತನಾಡುತ್ತಾರೆಂಬುದನ್ನು ನಾವು ತಿಳಕೊಳ್ಳಬಹುದಾಗಿದೆ. ಇಲ್ಲಿ ಎಲ್ಲಿಯೋ ಅಸತ್ಯವಿದೆ, ಮಂತ್ರಿಗಳು ಸುಳ್ಳು ಹೇಳಿಯಾರೇ ಲೆಕ್ಕ ಸುಳ್ಳು ಹೇಳುತ್ತಿರಬೇಕು! ಎಲ್ಲವೂ ಲೆಕ್ಕದಲ್ಲೇ ಹೆಚ್ಚುಕಡಿಮೆ.!

For Life Insurance

CONSULT

THE NEW GUARDIAN OF INDIA

LIFE INSURANCE CO LTD,

(Established 1934)

Chairman Sri M. Ct. M. Chidambaram Chattiyar

A Policy in this progressive Life Office is a good investment; its Agency is a valuable business connection.

MANGALORE BRANCH:
K. S R. Road,
Hampankatta, MANGALORE.

HEAD OFFICE:
"United India Life Bldg",
P. B. No. 142, MADRAS.

ಸ್ವಲ್ಪ ಬಂಡವಾಳದಲ್ಲಿ

ಒಂದು ಉಪಯುಕ್ತ ಹಾಗೂ ಲಾಭಕರ ಉದ್ಯೋಗ.

ಸೋಪ್ ಮಿಲ್, ಎಣ್ಣೆಯ ಮಿಲ್ ಅಥವಾ ಟಿನ್ ಯಾ ತಗಡಿನಿಂದ ಅನೇಕ ವಸ್ತುಗಳನ್ನು ಸುಲಭದಲ್ಲಿ ತಯಾರಿಸಿರಿ.

ವಿವರದ ಬಗ್ಗೆ ಬರೆಯಿರಿ:

The Vijay Engineering Co. Ltd.

Mazagaon, **Bombay 10.**

ಪ್ರಧಾನ ಕಾರ್ಯಾಲಯ: ಉಡುಪಿ. ಸ್ಥಾಪನೆ: ೧೯೩೫

ದಿ ಕೆನರಾ ಮ್ಯೂಚುವಲ್ ಎಶ್ಯೂರೆನ್ಸ್ ಕಂಪೆನಿ, ಲಿಮಿಟೆಡ್,

ಇದುವೇ

ಪಾಲಿಸಿದಾರರ ನಂಬಿಕೆ ಹೆಚ್ಚಿಸುವ ಹೆಸರು

ಅಲ್ಲದೆ

ಸ್ಥಾಪಿತವಾದಂದಿನಿಂದಲೂ ಲಾಭ (ಬೋನಸ್) ಹಂಚಿದ ಕಂಪೆನಿ.

The Canara Mutual Assurance Co, Ltd.

H. O. UDIPI. (SOUTH INDIA) ESTD: 1935.

ಬೇಂಕಿಂಗ್ ಸಂಬಂಧದ ಎಲ್ಲಾ ಸಮಸ್ಯೆಗಳಿಗೆ

ದಿ ವಿಜಯಾ ಬೇಂಕ್ ಲಿಮಿಟೆಡ್

ಇವರ ಸಲಹೆ ಕೇಳಿರಿ

ಹೆಡ್ ಆಫೀಸು : : : : ಮಂಗಳೂರು

ಮಡಿಕೇರಿಯಲ್ಲಿ ಒಂದು ಶಾಖೆಯೂ ಬೊಂಬಾಯಿಯಲ್ಲಿ ಒಂದು ಶಾಖೆಯೂ ಜಿಲ್ಲೆಯೊಳಗೆ ಹಲವು ಶಾಖೆಗಳೂ ಇವೆ.

ನಿಯಮಿತ ಠೇವಣಾತಿಗಳ ಮೇಲೆ ಆಕರ್ಷಕವಾದ ದರದ ಬಡ್ಡಿಯು ಕೊಡಲ್ಪಡುವುದು	ತಕ್ಕುದಾದ ಜವಾಬ್ದಾರಿಗಳ ಮೇಲೆ ಸುಲಭವಾದ ಶರ್ತಗಳಲ್ಲಿ ಸಾಲಗಳು ಕೊಡಲ್ಪಡುವುವು.

ಸಾಲಿಯಾನ ಸೇಕಡಾ 4½ರ ಬಡ್ಡಿ ಗಳಿಸುವ ಮೂರು ವರ್ಷದ ಅವಧಿಯ ವಿಜಯಾ ಕೇಶ್ ಸರ್ಟಿಫಿಕೇಟುಗಳ ಮೇಲೆ

ಹಣವನ್ನು ಹಾಕಿರಿ

THE VIJAYA BANK, LTD.,

ಬಿ. ಎಂಜಯ್ಯ ಹೆಗ್ಗಡೆ,
(ದ. ಕ. ಜಿಲ್ಲಾ ಬೋರ್ಡ ಪ್ರೆಸಿಡೆಂಟ್)
ಡೈರೆಕ್ಟರ್ ಬೋರ್ಡಿನ ಅಧ್ಯಕ್ಷರು.

ಚಂದಾ ವಿವರ
ವರ್ಷಕ್ಕೆ ರೂ. 5–12—0
6 ತಿಂಗಳಿಗೆ ರೂ. 3—0—0

ಗುರುವಾರ, ಉಡುಪಿ, ೧೫-೩-೫೧

ಟೀಕೆ ನಿಲ್ಲಲಿ!

ಭಾರತ ಕೇಂದ್ರ ಸರಕಾರದ ಮುಂಗಡ ಪತ್ರದಮೇಲೆ ಆಗುತ್ತಿರುವ ಟೀಕೆಯ ಸುರಿಮಳೆಯನ್ನೂ ಕಾಣುತ್ತಿಲ್ಲ. ಪಾರ್ಲಿಮೆಂಟಿನ ಸದಸ್ಯರೂ ಇತರ ಪಕ್ಷದವರೂ ಸರಕಾರದ ಧೋರಣೆಯನ್ನು ಬಲವಾಗಿ ಟೀಕಿಸುವದರಲ್ಲೇ ಕಾಲಹರಣಮಾಡುವುದು ತುಂಬ ಸೋಜಿಗದ ಸಂಗತಿ. ಟೀಕೆ ಮಾಡಬಾರದೆಂದು ನಮ್ಮ ವಾದವಲ್ಲ; ವಿಧಾಯಕವಾದ ಟೀಕೆ ಬೇಕು. ಸರಕಾರ ಅಂತಹ ಟೀಕೆಗಳಿಂದ ತನ್ನ ತಪ್ಪುಗಳನ್ನು ತಿದ್ದಿಕೊಳ್ಳಬಹುದಾಗಿದೆ ಆದರೆ ಪ್ರತಿಯೊಬ್ಬರೂ ವಸ್ತುಸ್ಥಿತಿಯನ್ನರಿಯದೆ ವೃಥಾ ಟೀಕೆ ಮಾಡಿ ಗೊಂದಲವನ್ನೆಬ್ಬಿಸುವುದು ಸರಕಾರಕ್ಕೆ ಘಾತುಕವಾಗಿರುತ್ತದೆ. ಮುಂಗಡ ಪತ್ರದ ಟೀಕೆಯಲ್ಲಿ ಹೆಚ್ಚಾಗಿ ಬಡವರ ಮೇಲೆ-ಮಧ್ಯಮವರ್ಗದವರ ಮೇಲೆ ಹೊರಲಾರದ ಕರಭಾರ ಬಿದ್ದಿದೆಯೆಂಬುದೇ ಆಗಿರುತ್ತದೆ. ಈ ಬಗೆಯ ಪ್ರಚಾರದಿಂದ ಸರಕಾರಕ್ಕೆ ಬಡವರ ಮೇಲೆ ಯಾವ ಕನಿಕರವೂ ಇರುವುದಿಲ್ಲ—ಬಂಡವಳಗಾರರಿಗೇ ಸರಕಾರ ಪ್ರೋತ್ಸಾಹ ನೀಡುತ್ತಲಿದೆ—ಎನುವ ಕಲ್ಪನೆಯನ್ನು ನಮ್ಮ ಟೀಕಾಕಾರರು ಹುಟ್ಟಿಸುತ್ತಾರೆ. ಇಂತಹ ಟೀಕೆಗಳ ಉದ್ದೇಶಗಳು ಹೆಚ್ಚಾಗಿ ಸರಕಾರದ ಅಸಮರ್ಥತೆಯನ್ನು ಎತ್ತಿ ತೋರಿಸಿ ಸ್ವಪಕ್ಷವನ್ನು ಸಮರ್ಥಿಸುವ ಧೋರಣೆಯದ್ದಾಗಿರುತ್ತದೆ. ಇಂತಹ ವಿಚಾರದಲ್ಲಿ ನಾವು ಗಂಭೀರವಾಗಿ ಆಲೋಚಿಸಬೇಕು. ಸರಕಾರ ಆಹಾರ ವಿಚಾರದಲ್ಲಿ ಸ್ವಾವಲಂಬಿಯಾಗಿಲ್ಲ ಎನ್ನುತ್ತಾರೆ ಟೀಕಾಕರ್ತರು. ಆಹಾರದ ಕೊರತೆಯನ್ನು ನೀಗುವದಕ್ಕಾಗಿ ಭಾರತ ಸರಕಾರ ಕೈಗೊಂಡಿರುವ ದಾಮೋದರ ಕೊಳ್ಳದಂತಹ ಮಹಾಯೋಜನೆಯ ಅತಿವ್ಯಯದ ಮಹಾ ಹೊಣೆಯನ್ನು ಅವರು ಲಕ್ಷಿಸಿದಂತಿಲ್ಲ. ದಾಮೋದರ ಕೊಳ್ಳಕ್ಕೆ ಭಾರತ ಸರಕಾರವು ಮೊದಲಿಗೆ 55 ಕೋಟಿ ವೆಚ್ಚ ತಗಲಬಹುದೆಂದು ಅಂದಾಜು ಮಾಡಿತ್ತು. ಆದರೆ ಇಂದು ಆ ಮಹಾ ಯೋಜನೆಗೆ 110 ಕೋಟಿ ಬೇಕಾಗಬಹುದೆಂದು ಸರಕಾರಕ್ಕೆ ಕಂಡಿದೆ; ಇದು ಅನಿವಾರ್ಯ. ಇಂತಹ ಒಂದು ಯೋಜನೆಯು ಸಂಪೂರ್ಣತೆಯನ್ನು ಹೊಂದುವದರಿಂದ ಭಾರತವು ಆಹಾರ, ಮತ್ತು ಇತರ ಕೈಗಾರಿಕೆಗಳಲ್ಲಿ ಸ್ವಾವಲಂಬಿಯಾಗಬಲ್ಲದು. ಅದರಿಂದ ಪ್ರಾಪ್ತವಾಗುವ ವಿದ್ಯುಚ್ಛಕ್ತಿಯಿಂದ ಅನೇಕ ಉದ್ಯಮಗಳು ಚೇತರಿಸಿಕೊಳ್ಳಬಲ್ಲವು. ಈ ಯೋಜನೆಗೆ ಕೈಗೊಳ್ಳುವದಕ್ಕಾಗಿ ಸರಕಾರ ವೆಚ್ಚಮಾಡಬೇಕಾದುದು ನ್ಯಾಯವೇ ಆಗಿರುತ್ತದೆ. ಹಾಗಾದರೆ ಆ ಹಣವನ್ನು ಎಲ್ಲಿಂದ ಎತ್ತಿಕೊಳ್ಳಬೇಕು? ಜನತೆಯಿಂದ ತಾನೆ!

ರೈಲ್ವೆ ಮುಂಗಡಪತ್ರದ ಮೇಲೂ ವಿಶೇಷ ಟೀಕೆ ಮಾಡಲಾಗಿದೆ. ರೈಲ್ವೆಯಿಂದ ಹೆಚ್ಚಿನ ಉಳಿತಾಯವೇನೋ ಆಗಿದೆ ನೂತನ ರೈಲ್ವೆ ಮಾರ್ಗವನ್ನು ಹಾಕುವದಕ್ಕೂ, ರೈಲ್ವೆಗಳನ್ನು ಬೆಳೆಸುವದಕ್ಕೂ, ಹೊಸ ವ್ಯವಸ್ಥೆಯನ್ನು ಮಾಡುವದಕ್ಕೂ ಆ ಉಳಿತಾಯ ಸಾಕಾದೀತೇ? ಈ ಉಳಿತಾಯದ ಮೇಲೆ ರೈಲ್ವೆ ಕೆಲಸಗಾರರು ತಮ್ಮ ಆಶಯಗಳನ್ನು ಮುಂದೆ ಮಾಡಿ ಮುಷ್ಕರದ ಬೆದರಿಕೆಯನ್ನು ಹಾಕುತ್ತಲಿದ್ದಾರೆ. ಜೈಪ್ರಕಾಶ ನಾರಾಯಣರೇ ಇದರ ಪುರಸ್ಕರ್ತರಾಗಿರುತ್ತಾರೆ. ಆದುದರಿಂದ ರೈಲ್ವೆಯ ದರದಲ್ಲಿ ಕೊಂಚ ಸುಧಾರಣೆ ಮಾಡಲಾಗಿದೆ. ಅದೂ ಕೂಡಾ ಮಧ್ಯಮ ವರ್ಗದವರ ಮೇಲೆ ಭಯಂಕರ ಹೊರೆ ಹಾಕಿದಂತಾಗಿದೆ ಎಂದು ಟೀಕಿಸುತ್ತಾರೆ ಹಲವರು. ಬಡ ಭಾರತದಲ್ಲಿ ಮಧ್ಯಮ ವರ್ಗ ಹಾಗೂ ಬಡವರೆಂದು ಕರೆಯುವವರೇ ಬಹೇಕವಾಗಿದ್ದಾರೆನ್ನುವದನ್ನು ನಮ್ಮ ಟೀಕಾಕರ್ತರು ಅರಿತಂತಿಲ್ಲ. ಶ್ರೀಮಂತರೆಂದು ಕರೆಯಬಹುದಾದವರು ಕಲವೇ ಮಂದಿ ಇರುತ್ತಾರೆ. ಬಂಡವಳಗಾರರ ಮೇಲೆ ಬಿದ್ದಿರುವ ಕರವಾದರೂ ಅಲ್ಪವಾಗಿರುವುದಿಲ್ಲ ಒಂದು ವೇಳೆ ಎಲ್ಲ ಕರವನ್ನು ಅವರ ಮೇಲೆ ಹೇರುವದಾದರೂ ಮಧ್ಯಮ ವರ್ಗದ ಸುಧಾರಣೆಯಾಗದು. ಆದುದರಿಂದ ಮಧ್ಯಮ ಇಲ್ಲವೆ ಬಡವರ ಮೇಲೆ ವಿಶೇಷ ಕರ ಹಾಕಲಾಗಿದೆಯೆನ್ನುವದರಲ್ಲಿ ಯಾವ ಅರ್ಥವೂ ಇಲ್ಲ. ಇಂತಹ ಮಹಾಯೋಜನೆಯಿಂದಾಗಲೀ-ಇತರ ಸುಧಾರಣೆಯಿಂದಾಗಲೀ ದೊರಕಬಹುದಾದ ಸೌಲಭ್ಯಗಳು ಬಂಡವಳಗಾರರಿಗೂ ಅಲ್ಲ, ಸರಕಾರಕ್ಕೂ ಅಲ್ಲ; ಬಡ ಜನತೆಗೇ ಎಂಬುದನ್ನು [illegible] ಮರೆಯದಿರೋಣ. ಮದ್ರಾಸು ಸರಕಾರ ತುಂಗಭದ್ರಾ ಅಣೆಕಟ್ಟಿನಂತಹ ನೀರಾವರಿ ಯೋಜನೆಯನ್ನು ಕೈಗೊಂಡಿದ್ದು ಅದಕ್ಕೆ ಬೇಕಾದ ಹಲವಂಶ ಹಣವನ್ನು ಜನರಿಂದ ಸಾಲದ ರೂಪದಲ್ಲಿ ಪಡಕೊಳ್ಳುವ ನಿರ್ಧಾರವನ್ನು ಮಾಡಿರುತ್ತದೆ. ಪ್ರಾಂತದ ಜಿಲ್ಲೆಗಳ ಸುಧಾರಣೆಯನ್ನು ಕೈಗೊಂಡಿರುವ ಅಂಶವನ್ನು ಶ್ಲಾಘಿಸದಿರಲಾರೆವು. ಮದ್ರಾಸು ಸರಕಾರದ ಜಿಲ್ಲಾ ಅಭಿವೃದ್ಧಿಯ ಯೋಜನೆಯಿಂದ ಬಡ ರೈತನು ಹೆಚ್ಚಿನ ಲಾಭವನ್ನು ಪಡೆಯಬಹುದಾಗಿದೆ ಇದನ್ನೆಲ್ಲ ನಾವು ಚೆನ್ನಾಗಿ ವಿಮರ್ಶೆ ಮಾಡಬೇಕು. ವ್ಯರ್ಥವಾಗಿ ಟೀಕೆ ಮಾಡುವದರಿಂದ ಯಾವ ಕಾರ್ಯವನ್ನೂ ಸಾಧಿಸಿದಂತಾಗುವುದಿಲ್ಲ. ಭಾರತ ಸರಕಾರದ ಸದ್ಯದ ಧೋರಣೆಯನ್ನಷ್ಟೇ ಟೀಕೆಗೆ ಗುರಿಮಾಡಿ ಮುಂದೆ ಆಗಬಹುದಾದ ಜನೋಪಯೋಗೀ ಯೋಜನೆಗೆ ಕೊಡಲಿಯೇಟು ಕೊಟ್ಟಂತಾಗುತ್ತದೆ. ಟೀಕೆಯ ಮೂಲಕ ಜನತೆಯಲ್ಲಿ ಭೀತಿಯಲ್ಲಿ ಹುಟ್ಟಿಸುವುದು ಬುದ್ಧಿವಂತರ ಲಕ್ಷಣವಲ್ಲ. ಎಲ್ಲದಕ್ಕೂ ಸೈರಣೆ ಅವಶ್ಯವಾಗಿರುತ್ತದೆ. ಗಾಂಧೀಜೀಯ ತತ್ವದ ಮೂಲಪ್ರೇರಣೆ ಇದೇ ಆಗಿರುತ್ತದೆ. ಸಣ್ಣಪುಟ್ಟ ವಿಚಾರಗಳಲ್ಲಿ ತ್ಯಾಗ, ಸಹನಾಶೀಲರಾಗದೇ ಹೋದರೆ ಧ್ಯೇಯವನ್ನು ಮುಟ್ಟಲಾರೆವು. ಸರಕಾರ ತಪ್ಪಿದಲ್ಲಿ ಟೀಕೆಯಾಗಲಿ—ಆದರೆ ಟೀಕೆ ವಿಕಾರ ಮನಸ್ಸಿನದ್ದಾಗಿರದೆ ವಿಮರ್ಶಾಪೂರ್ವಕವಾಗಿರಲಿ! ಸರಕಾರದ ಮಹತ್ವದ ಯೋಜನೆಗೆ ಅದು ಪೋಷಕವಾಗಿರಲಿ.

ಹಾರುವ ಕಿಡಿಗಳು

ಎಲ್ಲೆಲ್ಲಿಯೂ ಆರ್ಥಿಕ ಮುಗ್ಗಟ್ಟು, ಬೇಹದ ಬಿಗ್ಗಟ್ಟು; ಇದರಿಂದಾಗಿಯೇ ಹೊಸ ಹೊಸ ಕರತೆರಿಗೆಗಳ ನಿರ್ಮಾಣ, ಇದ್ದವುಗಳ ಏರಿಕೆ; ಜನತೆಯಲ್ಲೆಲ್ಲಾ ಅತೃಪ್ತಿಯ ಮೊಳಕೆ.

೦೦

ಅತೃಪ್ತಿಯ ದೆಸೆಯಿಂದಾಗಿ ಕಾರ್ಯಪಟುತ್ವ ಕುಂದಿದೆ; ಹೇಜವಾಬ್ದಾರಿತನ ಬೆಳೆದಿದೆ.

೦೦

ತಕ್ಕ 'ಎಫಿಸಿಯನ್ಸಿ' ಇದ್ದರೆ ಅರ್ಧದಷ್ಟು ಸಿಬಂದಿಯನ್ನು ಕಡಿಮೆಮಾಡಲಿಕ್ಕಾಗದೆ? ವಿಳಂಬವೂ ಹೋಗಿ ಉಳಿತಾಯವಾಗದೆ? ಸರಕಾರ ಈ ಕುರಿತು ಯೋಚಿಸಿದರಾಗದೆ?

೦೦

ಆರ್ಥಿಕ ಮುಗ್ಗಟ್ಟಿನಿಂದ ಮುಂದೊಡ್ಡಿ ಎಷ್ಟೋ ಜನಹಿತ ಕಾರ್ಯಗಳು ಬಾಕಿ ಇಡಲ್ಪಡುತ್ತವೆ; ಮಂಜೂರಾಗಿ ಸಿದ್ಧತೆಗಳಾದವುಗಳೂ ಮುಂದರಿಸಲ್ಪಡುತ್ತಿವೆ.

೦೦

ನಮ್ಮ ನಗರಸಭೆಯ ಅವಸ್ಥೆಯೂ ಅಷ್ಟೆ; ಆರ್ಥಿಕ ದುಸ್ಥಿತಿಯ ಕಾರಣವೆಂದುಕೊಂಡು ಕೆಲವೊಂದು ಕಾರ್ಯಗಳು ಮುಂದೆ ಹಾಕಲ್ಪಟ್ಟಿವೆ.

೦೦

ಪೂರ್ವ ಸಿದ್ಧತೆಯೆಲ್ಲವೂ ಆಗಿದ್ದ ಭುಜಂಗ ರಾವ್ ರಸ್ತೆಯ ವಿಸ್ತರಣಾ ಕಾರ್ಯ ಅವುಗಳಲ್ಲೊಂದು; ರಸ್ತೆಯಲ್ಲೆಲ್ಲಾ ಜಲ್ಲಿ- ಕಲ್ಲು ಎಂದೂ ಬಂದು ಬಿದ್ದಿದ್ದರೂ ಮಾರ್ಚಿಯಲ್ಲಾಗುವುದೆಂದಿದ್ದ 'ಕಾರ್' ರೋಡಿನ ಕೆಲಸ ಇನ್ನೊಂದು.

೦೦

ಇನ್ನು ಸ್ವಂತ ಕಟ್ಟಡಕ್ಕೆಂದು ಅಸ್ತಿವಾರ ಕಲ್ಲು ಹಾಕಿ ದಶಮಾನಗಳೇ ಕಳೆದಿವೆ.

೦೦

ಇಲೆಕ್ಷನ್ ಕಾಲದ ಉತ್ಸಾಹ, ಧೋರಣೆಗಳೆಲ್ಲಾ ದಿನದಿಂದ ದಿನಕ್ಕೆ ಮಾಯವಾದಂತಿದೆ; ಕೆಲವೊಂದು ಬಾರಿ ಮಿಟಿಂಗಿಗೆ 'ಕೋರಂ' ಕೂಡಿಸಿಗುವುದು ಕಷ್ಟವೆನ್ನಲಾಗಿದೆ.

೦೦

ವಿದ್ಯುದ್ದೀಪಗಳಿಂದ ವಿಮೋಚನೆ ಹೊಂದಿದ ಉಡುಪಿ ರಸ್ತೆಗಳು ಗ್ಯಾಸ್ ದೀಪಗಳಿಂದ ಕೆಲವು ತಿಂಗಳುಗಳಿಂದ ಕಂಗೊಳಿಸುತ್ತಿವೆ. ಜನಸಂಚಾರ ಕಡಿಮೆಯಾಗಿರುವ ಬೃಹ್ಮಗಿರಿಯಂತಹ ರಸ್ತೆಗಳಲ್ಲಿ ಬೇಕಿರುವಾಗಲೇ ಗ್ಯಾಸ್ ದೀಪಗಳು ಬೇಗ ಕೊಡಗಿ ಎಣ್ಣೆಯಿದ್ದಷ್ಟು ಉರಿದು ಕತ್ತಲೆಯಲ್ಲಿ ಬೇಗನೆ ಮಾಯವಾಗುತ್ತಿವೆಯಂತೆ.

೦೦

ನಗರಸಭೆಯವರು ಮಾರ್ಕೆಟ್ ಬೆಲೆಯಂತೆ ಕಟ್ಟಡಗಳ ಟೇಕ್ಸನ್ನು ಏರಿಸಿದರು. ಅದು ಹೆಚ್ಚಾಯಿತೆಂದು ಕೆಲವರು ಪುನರಾಲೋಚನೆಗಾಗಿ ಅರ್ಜಿ ಮಾಡಿದರು. ಏರಿಸುವಾಗಲೂ, ರಿವಿಜನ್ ಮಾಡುವಾಗಲೂ ಏಕಮಾನ ದಂಡದಿಂದ ಮಾಡಲ್ಪಟ್ಟಂತಿಲ್ಲವೆಂಬ ಮಾತು ಹೇಳಿದ್ದರೂ ರಿವಿಜನ್ ಅರ್ಜಿಗೆ 6–7 ತಿಂಗಳುಗಳ ಮೊದಲೇ ಕವಿ ಕನರ ಹುಕುಂ ಆಗಿದ್ದರೂ ಅವು ಕೆಲವರಿಗೆ ಈಗ ಜಾರಿಯಾಗುತ್ತಿವೆ ಅದರೊಡನೆ 1950ನೇ ಸಪ್ಟಂಬರ ಮತ್ತು 1951ನೇ ಮಾರ್ಚಿಯೊಳಗೆ ತೆರಿಕೆಕ್ಕೆ ಟೇಕ್ಸಿನ ಡಿಮಾಂಡ್ ನೋಟೀಸುಗಳೂ ಜಾರಿಯಾಗುತ್ತವೆ. ಮೂರು ಒಂದೇ ಬಾರಿ ಜಾರಿಯಾಗುತ್ತಿವೆ!

೦೦

ಇನ್ನು ಕೌನ್ಸಿಲಿಗೆ ಅಪೀಲು ಮಾಡಬೇಕೆಂದಿರುವವರು ಎರಡೂ ಕಂತಿನ ಏರಿಕೆಯ ತೆರಿಗೆಯನ್ನು ತೆತ್ತು ಮತ್ತೆ ಅಪೀಲು ಮಾಡಿದರಾಯಿತು!,

೦೦

ಸಪ್ಟೆಂಬರದ ಡಿ। ನೋಟೀಸು ಸಕಾಲದಲ್ಲಿ ಬಂದಿದ್ದರೆ ಒಂದೇ ಕಂತನ್ನು ಕಟ್ಟಿ ಅಪೀಲು ಮಾಡುತ್ತಿದ್ದರಾಗುತ್ತಿತ್ತು. ಇದನ್ನು ತಪ್ಪಿಸಿದ ಕೀರ್ತಿ, ಜನಹಿತ ಸಾಧಿಸುವ ಮಾದರಿ ನಮ್ಮ ನಗರ ಸಭೆಗೆ!

೦೦

ಮಿತವ್ಯಯದ ಕೂಗೆದ್ದ ಈ ಕಾಲದಲ್ಲಿ ಅತೃಪ್ತಿ ಅಳಿಯಲಿ; 'ಎಫೀಶಿಯನ್ಸಿ' ಬೆಳೆಯಲಿ, ಸರಕಾರ ಈ ಕುರಿತು ಕಾರ್ಯಕ್ರಮ ತೊಡಗಲಿ.

೦೦

ಮಿತವ್ಯಯದ ಸೂಚನೆಯಾಗಿ ಅಂಚೆ ಜವಾನರ ಅರು ಮೊಳದ ಮುಂಡಾಸು ಹೋಗಿ ಅರೆ ಮೊಳದ ಟೊಪ್ಪಿ ಬಂದಿದೆ.

೦೦

ಇನ್ನು ಉದ್ದ ಇಜಾರ ಹೋಗಿ ಗಿಡ್ಡ ಚಡ್ಡಿಯೂ ಬರಬಹುದು

೦೦

ನಮ್ಮಲ್ಲಿ ಸ್ವನಿರ್ಮಿತ ಮುಖಂಡರ ಸಂಖ್ಯೆ ನಾಯಿಕೊಡೆಗಳಂತೆ ಬೆಳೆಯುತೊಡಗಿದೆ. ಸ್ಥಾನಮಾನ, ಲಾಭಲೋಭಕ್ಕಾಗಿ ಅವರು ಬೇಕಾದಾಗ ಬೇಕಾದ ಬಣ್ಣ ಹಾಕಬಲ್ಲರು; ಯಾವ ಪಕ್ಷವನ್ನೂ ಸೇರಬಲ್ಲರು. ಹಳ್ಳಿ—ಡಿಲ್ಲಿಗೆ ಹಾರಬಲ್ಲರು.

Notice

ಪುತ್ತೂರು ಡಿ. ಮು. ಕೋರ್ಟಿನಲ್ಲಿ

O. S. No. 495/1950.

ಡಾಕ್ಟರ್ ಕೆ. ದಾಸಪ್ಪ ರೈ —ವಾದಿ.

ರಾಮಂಣ ರೈ, ಕೊಳ್ತಿಗೆ ಕೆಳಗಿನ ಮನೆ ನರಿಂಗ ರೈ ಅಳಿಯ, ಪುತ್ತೂರು ತಾಲೂಕು ಮುಟ್ನೂರ್ ಗ್ರಾಮ. —ಪ್ರತಿವಾದಿ,

ಸದ್ರಿ ಪ್ರತಿವಾದಿ ರಾಮಂಣ ರೈಗೆ—

ಮೇಲಿನ ವಾದಿಯು ನಿಂಮ ಮೇಲೆ ಮಾಡಿದ ಮೊಕದ್ದಮೆಯು ತಾ. 20-3-51ಕ್ಕೆ ತನಿಖೆಗ ಇಟ್ಟಿರುವುದರಿಂದ ಆ ಕುರಿತು ನಿಂಮ ಅಕ್ಷೇಪಗಳಿದ್ದರೆ ಸದ್ರಿ ಪ್ಯಾದಿಗೆ ಕೋರ್ಟು ಮುಂದೆ ಹಾಜರಾಗಿ ಉದಹರ್ಸಿಕೊಳ್ಳತಕ್ಕದ್ದು. ತಪ್ಪಿದ್ದ ನಿಂಮ ಗೈರುಹಾಜರಿಯಿಂದ ನಂಬ್ರವನ್ನು ತೀರ್ಮಾನಿಸಲಾದೀತೆಂತಲೂ ಕೋರ್ಟು ಹುಕುಂ ಪ್ರಕಾರ ತಿಳಿಯಪಡಿಸಲಾಗಿಯದೆ.

Sd. B. Narayana Baliga,
Advocate,

Puttur 12-2-51.

ಉಡುಪಿ

ಮುನಿಸಿಪಲ್ ಕೌನ್ಸಿಲು ಸಭೆಯು ಇದೇ ತಾ 10ರಲ್ಲು ಸಂಜೆ ಚೆಯರ್‌ಮನ್ ಶ್ರೀ ಯು. ಎಸ್. ನಾಯ್ಕರ ಅಧ್ಯಕ್ಷತೆಯಲ್ಲಿ ಜರಗಿತು. ಎಪ್ರಿಲ್ ತಿಂಗಳಾರಂಭದಿಂದ ಶುಚಿತ್ವ, ವಿದ್ಯೆ, ಬೆಳಕು, ನೀರು, ಚರಂಡಿ ಮೊದಲಾದುವುಗಳ ಬಗ್ಗೆ ವಸೂಲು ಮಾಡುವ ತೆರಿಗೆಯ ಹೊಸದಂಗಗಳನ್ನು ಸರಕಾರವು ನಿರ್ಧರಿಸಿಕೊಟ್ಟಪಟ್ಟಿಯಂತೆ ವಸೂಲು ಮಾಡುವುದೆಂದಾಯಿತು. ಭುಜಂಗರಾವ್ ರಸ್ತೆಯನ್ನು ವಿಸ್ತರಣ ಮಾಡುವ ಯೋಜನೆಯನ್ನು ಪ್ರಕೃತ ಆರ್ಥಿಕ ಮುಗ್ಗಟ್ಟಿನಿಂದ ಬಾಕಿ ಇಡಲಾಯಿತು. ಮುನಿಸಿಪಲ್ ಕ್ಷೇತ್ರವನ್ನು 13 ವಾರ್ಡುಗಳನ್ನಾಗಿ ವಿಂಗಡಿಸಿ ಕಾದಿಟ್ಟ ಎರಡು ಸೀಟುಗಳನ್ನು ಅಂಬಲಪಾಡಿ ಮತ್ತು ಗುಂಡಿಬೈಲು ವಾರ್ಡುಗಳಿಗೆ ಒಂದೊಂದು ಅಧಿಕ ಸ್ಥಾನದಂತೆ ವಿಂಗಡಿಸುವುದೆಂದಾಯಿತು. ಮುನಿಸಿಪಲ್ ಲ್ಯಾಟ್ರಿಯನ್ನು ಕೆಲವೊಂದು ಶರ್ತಗಳಿಂದ ಸ್ಥಳೀಯ ಲ್ಯಾಟ್ರಿನ್ ಅಧಿಕಾರಕ್ಕೆ ಬಿಟ್ಟುಕೊಡಬಹುದೆಂದಾಯಿತು.

ತಾಲೂಕು ಆಹಾರ ಸಮಿತಿಸಭೆಯು– ಇದೇ ತಾ. ೨ರಲ್ಲು ಸಂಜೆ ತಾಲೂಕು ಕಚೇರಿಯಲ್ಲಿ ಸಬ್ ಕಲೆಕ್ಟರ್ ಶ್ರೀ ಪಿ. ಎಸ್. ತಿಮ್ಮಪ್ಪ ಸೆಟ್ಟರ ಅಧ್ಯಕ್ಷತೆಯಲ್ಲಿ ಜರಗಿತು. ತಾಲೂಕು ಸಪ್ಲೈ ಆಫೀಸರರು ತಾಲೂಕಿನ ಆಹಾರ ಧಾನ್ಯಗಳ ಸ್ಥಿತಿಗತಿಗಳನ್ನು ವಿವರಿಸಿದರು. ಹೋಟೆಗಳ ಮೂಲಕ ಈ ಕಡೆಯ ಅಕ್ಕಿ ಪರಜಿಲ್ಲೆಗೆ ಸಾಗುತ್ತಿದೆ ಎಂದು ವರ್ತಮಾನ ಹೊರಟದ್ದು ನಿಜವೇ ಎಂದು ಶ್ರೀ ಬಾಳ್ಕಟ್ಟ ದೀ. ಕೃಷ್ಣಯ್ಯ ಹೆಗ್ಡೆಯವರು ಪ್ರಶ್ನಿಸಿದರು. ವರ್ತಮಾನವು ಸಂಪೂರ್ಣ ಸುಳ್ಳೆಂದು ಹೇಳಲು ಅಸಾಧ್ಯವಾದರೂ ಇಲಾಖೆಯ ಕಡೆಯಿಂದ ತಕ್ಕ ನಿಗಾ ತೆಗೆದುಕೊಂಡಿದೆ ಎಂದು ಉತ್ತರ ದೊರೆಯಿತು. ಅಂತೂ ಮಳೆಗಾಲ ಪ್ರಾರಂಭವಾದೊಡನೆ ಅಕ್ಕಿ ಸಾಗಾಟಕ್ಕೆ ವಿನಾ ಅಸ್ಪದವಿಲ್ಲವೆಂದು ಓರ್ವ ಅಧಿಕಾರಿಗಳು ಸದಭಿಪ್ರಾಯವನ್ನಿತ್ತರು. ಆಹಾರ ಸಮಿತಿಯ ಸಭೆಯು ಇದೇ ಕೊನೆಯದಾದುದರಿಂದ ಅಧ್ಯಕ್ಷರು ಮೆಂಬರರ ಸಹಾಯವನ್ನು ಅಭಿನಂದಿಸಿ ಮುಂದೆಯೂ ಸಂದರ್ಭಾನುಸಾರ ಮೆಂಬರರ ಸಹಕಾರವನ್ನು ಅಪೇಕ್ಷಿಸಿದರು. ಈ ಸಮಿತಿಯ ಕಾರ್ಯಕಲಾಪಗಳು ಸಮರ್ಪಕವೆಂದು ಸಂತೋಷಪಟ್ಟರು.

ಪ್ರಮಾಣ ಪತ್ರ ವಿತರಣೋತ್ಸವ– ಶ್ರೀ ಎ. ಲಕ್ಷ್ಮೀನಾರಾಯಣ ಶೆಣೈಯವರಿಂದ ಸ್ಥಾಪಿಸಲ್ಪಟ್ಟ ಉಡುಪಿಯ ರಾಷ್ಟ್ರಭಾಷಾ ಶಿಕ್ಷಣ ಶಿಬಿರದ ಪ್ರಮಾಣ ಪತ್ರ ವಿತರಣೋತ್ಸವವು ಇದೇ ತಾ 11ರಲ್ಲು ಸಂಜೆ ಮಹಾತ್ಮಾಗಾಂಧಿ ಮೆಮೋರಿಯಲ್ ಕಾಲೇಜು ಕಟ್ಟಡದಲ್ಲಿ ಶ್ರೀ ಟಿ. ಅನಂತ ಪೈಗಳವರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀ ಗುರುದತ್ತರಿಂದ ಪ್ರಮಾಣ ಪತ್ರಗಳು ವಿತರಿಸಲ್ಪಟ್ಟನಂತರ ಶ್ರೀಗಳಾದ ಕು. ಶಿ ಹರಿದಾಸ್ ಭಟ್, ಬನ್ನಂಜೆ ರಾಮಾಚಾರ್ಯ, ಎಸ್. ಎಲ್. ನಾರಾಯಣ ಭಟ್, ಮೊದಲಾದವರು ಹಿಂದೀ ಭಾಷೆಯ ಸ್ಥಾನಮಾನಗಳ ಕುರಿತು ಮಾತನಾಡಿದರು, ಶ್ರೀ ರಾಮನಾಥ ಸ್ವಾಮಿಯವರ ಧನ್ಯವಾದಾರ್ಪಣೆಯೊಂದಿಗೆ ಸಭಾಂತ್ಯವಾಯಿತು.

ಸ್ಕೀಮು ಯೋಜನೆಗೆ ತಡೆಯಾಜ್ಞೆ—ಉಡುಪಿಯ ಶ್ರೀ ವೀರೂಬು ಮಾರ್ಕೆ ಸ್ಕೀಮು ಜ್ಯಾರಿಮಾಡಬೇಕೆಂದು ಮದ್ರಾಸಿನ ಹಿಂದೂ ರಿಲೀಜಿಯಸ್ ಎಂಡೋವ್ಮೆಂಟ್ ಬೋರ್ಡಿನ ಅಧ್ಯಕ್ಷರು ಯೋಜನೆ ಮಾಡಿದ್ದರು. ಈ ಕುರಿತು ಶ್ರೀ ಮಠದ ಕಡೆಯಿಂದ ಹೈಕೋರ್ಟಿಗೆ ಅರ್ಜಿ ದಾಖಲಾಗಿದ್ದು ಬೋರ್ಡಿಗೆ ಸ್ಟೇ ಆರ್ಡರು ಹೈಕೋರ್ಟಿನಿಂದ ಕೊಡಲಾಗಿದೆ. ಸ್ಕೀಮು ಜ್ಯಾರಿ ಮಾಡುವಷ್ಟರ ಕೆಲಮಟ್ಟಿಗೆ ಉಡುಪಿಯ ಮಠಗಳು ಒಂದಿಲ್ಲವೆಂದು ಜನತೆಯು ಅಂಬೋಣವಿದೆ.

ಶಿವರಾತ್ರಿ ಉತ್ಸವ--ಮಹತೋಭಾರ ಶ್ರೀ ಮುಚನಂತೇಶ್ವರ-ಚಂದ್ರೇಶ್ವರ ಸ್ವಾಮಿಗೆ ಇದೇ ತಾ 10ರಲ್ಲು ಶಿವರಾತ್ರಿ ಸಂಬಂಧದ ಮಹಾ ರಥೋತ್ಸವವು ಮೆನೇಜಿಂಗ್ ಟ್ರಸ್ಟಿ ವಕೀಲ್ ಶ್ರೀ ಪಿ. ವಿ. ಆಚಾರ್ಯರ ನೇತೃತ್ವದಲ್ಲಿ ಸಾಂಗವಾಗಿ ಜರಗಿತು.

The Udipi Bank Ltd., Kallianpur.

ದಿ ಉಡುಪಿ ಬೇಂಕ್ ಲಿಮಿಟೆಡ್, ಕಲ್ಯಾಣಪುರ

ಜಾಹೀರು ನೋಟೀಸು.

ಈ ಕೆಳಗೆ ಹೆಸರು ಕಾಣಿಸಿದವರು ಈ ಬ್ಯಾಂಕಿನಲ್ಲಿ ಅಡವಿಟ್ಟ ನಗಗಳ ಆಧಾರದ ಮೇಲೆ ಪಡಕೊಂಡ ಸಾಲಗಳ ಬಾಬ್ತು ಅಸಲು ಅವೇಜು, ಬಡ್ಡಿ ವ ಇತರ ಖರ್ಚುಗಳನ್ನು ಕ್ಲಪ್ತವಾಯ್ದೆಗೆ ಸಲಾಯಿಸದೆ ಇದ್ದುದರಿಂದ ಅವರಿಗೆ ಬಿಟ್ಟ ರಿಜಿಸ್ಟ್ರೀ ನೋಟೀಸುಗಳೂ ಜ್ಯಾರಿಯಾದರೂ ಅವೇಜು ಅಸಲು ಕೊಡದೆ ಇದ್ದುದರಿಂದ ಸದರಿ ಲೋನುಗಳ ಬಾಬ್ತು ಈಡಿಟ್ಟ ನಗಗಳನ್ನು ಇದೇ ಬರುವ ತಾರೀಕು 24-3-1951ನೇ ಶನಿವಾರ ಹಗಲು ಘಂಟೆ 10ಕ್ಕೆ ನಮ್ಮ ಬೇಂಕಿನ ಆಫೀಸಿನಲ್ಲಿ ಬಹಿರಂಗವಾಗಿ ಏಲಂ ಮಾಡಲಾಗುವುದು. ಯಾವ ಕಾರಣದಿಂದಲಾದರೂ ಏಲಂ ಅದೇ ದಿವಸ ಮಾಡಲು ಅನಾನುಕೂಲವಾದರೆ ಬ್ಯಾಂಕಿಗೆ ಯುಕ್ತ ಕಂಡ ದಿವಸಕ್ಕೆ ಪುನಃ ನೋಟೀಸು ಕೊಡದೇನೆ ಮುಂದುವರಿಸಲಾಗುವುದು. ತಿಳಿದಿರಲಿ

ಲೋನು ನಂಬ್ರ	ಹೆಸರು ಮತ್ತು ವಿಳಾಸ.	ಅಸಲು ಅವೇಜು
166/48	ಜಿ. ಎಚ್. ಕೊಟಿಯಾನ್, ಹುವಯ್ಯನ ಮಗ, ಟೀಚರ್ ಕುದ್ರುಬೆಟ್ಟು, ಉಪ್ಪೂರು.	ರೂ. ಆ. ಪೈ. 125-0-0
301/48	ಕೆ. ವಾಸುದೇವ ಭಟ್ಟ, ಕೆ. ನರಸಿಂಹ ಭಟ್ಟರ ಮಗ, ಮಾರುತೀವಿಥಿಕ, ಉಡುಪಿ.	95-0-0
414/18	ಹಸನ್ ಸಾಹೇಬ, ಇಸೂಬ್ ಸಾಹೇಬರ ಮಗ, ಬಗ್ಗರ್ ಬೆಟ್ಟು, ಮೂಡು ತೋನ್ಸೆ ಕಲ್ಯಾಣಪುರ.	15-0-0
180/49	ಕೆ. ಆರ್. ಮಲ್ಲಿ, ಕೆ. ಎಸ್. ಮುಕ್ಷಯವರ ಮಗ, ಕಲ್ಯಾಣಪುರ.	70-0-0
184/49	ಚಲ್ಲ ಪೂಜಾರಿ, ಬಾಬ ಪೂಜಾರಿಯ ಅಳಿಯ, ಮೂಡು ತೋನ್ಸೆ, ಕಲ್ಯಾಣಪುರ.	10-0-0
190/49	ಕೆ. ಸಾಂತಯ್ಯ ನಾಯ್ಕ, ಅಣ್ಣಪ್ಪ ನಾಯ್ಕರ ಮಗ, ಪೋರ್ಟ್ ಕಂಪೌಂಡು, ಕಲ್ಯಾಣಪುರ.	30-0-0
357/49	ಇಬ್ರಾಹಿಮ್ ಸಾಹೇಬ್, ಹಸನ್ ಸಾಹೇಬರ ಮಗ, ಮುಚರಂಟಿ, ಕಲ್ಯಾಣಪುರ.	244-0-0
375/49	ಎಗ್ನೆಸ್ ಕೊಡೆರ್, ಆಲ್ಬರ್ಟ್ ನೊರೊನ್ಹಾರ ಹೆಂಡತಿ, ಇಗರ್ಜಿ ಬಳಿ, ಕಲ್ಯಾಣಪುರ.	10-0-0
427/49	ಇಬ್ರಾಹಿಮ್ ಸಾಹೇಬ, ಹಸನ್ ಸಾಹೇಬರ ಮಗ, ಮುಚರಂಟಿ, ಕಲ್ಯಾಣಪುರ.	70-0-0
47/50	ಇಬ್ರಾಹಿಮ್ ಸಾಹೇಬ, ಹಸನ್ ಸಾಹೇಬರ ಮಗ, ಮುಚರಂಟಿ, ಕಲ್ಯಾಣಪುರ.	35-0-0
49/50	ಟಿ. ಕೃಷ್ಣಪ್ಪ, ತನ್ನ ಪೂಜಾರಿಯ ಅಳಿಯ, ತೋನ್ಸೆ ಈಸ್ಟ್, ಕಲ್ಯಾಣಪುರ	198-0-0
63/50	ರುಕ್ಮ ಬಂಗೇರಗಾತಿ ರಾಂತಿ ಬಂಗೇರಗಾತಿಯ ಮಗಳು ಮುತ್ತೂರು, ಕಲ್ಯಾಣಪುರ.	12-0-0
157/50	ಇಬ್ರಾಹಿಮ್ ಸಾಹೇಬ, ಹಸನ್ ಸಾಹೇಬರ ಮಗ ಮುಚರಂಟಿ ಕಲ್ಯಾಣಪುರ.	35-0-0
160/50	ಕೃಷ್ಣ ಮರಕಾಲ, ಅಪ್ಪಣ್ಣ ಮರಕಾಲನ ಅಳಿಯ, ಕುದ್ರುಬೆಟ್ಟು ಉಪ್ಪೂರು.	30-0-0
172/50	ಟಿ. ಎಸ್. ಮಹಮ್ಮದ್ ಹುಸೇನ್ ಟಿ. ಎಸ್. ಅಬ್ದುಲ್ ರಹಿಮಾನ ಸಾಹೇಬರ ಮಗ, ಮುಚರಂಟ ಕೊಡಿ, ಬೆಂಗ್ರೆ ಹಂಗಾರಕಟ್ಟೆ	260-0-0
190/50	ಟಿ. ಎಸ್ ಮಹಮ್ಮದ್ ಹುಸೇನ್, ಟಿ. ಎಸ್. ಅಬ್ದುಲ್ ರಹಿಮಾನ್ ಸಾಹೇಬರ ಮಗ, ಮುಚರಂಟ್ ಕೋಡಿ ಬೆಂಗ್ರೆ, ಹಂಗಾರಕಟ್ಟೆ.	250-0-0
269/50	ಕ್ಲಾರ್ಡ್ ಅಂದ್ರಾದೆ, ಡಿ. ಆರ್. ಜೊಸೆಫ್ ಅಂದ್ರಾದೆಯವರ ಮಗ, ಕಲ್ಯಾಣಪುರ.	275-0-0
303/50	ಕ್ಲಿಫರ್ಡ್ ಅಂದ್ರಾದೆ, ಡಿ ಆರ್. ಜೊಸೆಫ್ ಅಂದ್ರಾದೆಯವರ ಮಗ ಕಲ್ಯಾಣಪುರ.	65-0-0
376/50	ಎಮ್. ಕಾಳಪ್ಪ ಶೆಟ್ಟಿ, ಸೂರಣ್ಣ ಸೆಟ್ರ ಅಳಿಯ ಮೂಡು ತೋನ್ಸೆ, ಕಲ್ಯಾಣಪುರ	30-0-0

Kallianpur,
Date 14-3-1951.

H M. Shenoi,
ಏಜೆಂಟ

ಕಟಪಾಡಿ— ಇಲ್ಲಿಯ ಅಸುಪಾಸಿನ ಗ್ರಾಮಗಳ ಕೃಷಿಕ ಜನರ ಮಹಾಸಭೆಯು ಇದೇ ಬರುವ ದಿನಾಂಕ 1-4-51ನೇ ಆದಿತ್ಯವಾರ ಅಪರಾಹ್ನ ಗಂಟೆ 2ಕ್ಕೆ ಸ್ಥಳೀಯ ಬ್ರಹ್ಮಶ್ರೀ ನಾರಾಯಣಗುರುಸ್ವಾಮಿ ಸೇವಾ ಸಮಿತಿಯ ಕಟ್ಟಡದ ವಠಾರದಲ್ಲಿ ಜಿಲ್ಲಾ ಬೋರ್ಡು ಸದಸ್ಯರಾದ ಶ್ರೀ ಕೆ. ಕೃಷ್ಣಮೂರ್ತಿರಾವ್ ಕುಂಜೂರು, ಇವರ ಅಧ್ಯಕ್ಷತೆಯಲ್ಲಿ ಜರಗಲಿಕ್ಕಿರುವುದೆಂದು ಸಭೆಯ ಸ್ವಾಗತ ಕಮಿಟಿಯ ಸದಸ್ಯರು ತಿಳಿಸುತ್ತಾರೆ.

ಫಿರ್ಕಾಭಿವೃದ್ಧಿಯ ಕಾರ್ಯಗಳು

ಕುಂಬಳೆ ಫಿರ್ಕಾ: ಪೆರ್ಡಾಲ ಗ್ರಾಮಸೇವಾ ಸಂಘವು ರೀ ಕೈತಾನರ ನೇತೃತ್ವದಲ್ಲಿ ರಚನಾತ್ಮಕ ಕಾರ್ಯಕರ್ತರ ಶಿಬಿರವನ್ನು ಮೂರು ದಿನಗಳ ತನಕ ನಡೆಸಿತು. ಶ್ರೀ ಕೆ. ಶ್ರೀನಿವಾಸ ನಾಯ್ಕರ ಸಹಾಯದಿಂದ ಎಣ್ಮಕಜೆ ಗ್ರಾಮದಲ್ಲಿ ಒಂದು ಮಾರ್ಗದ ಕೆಲಸವು ಮುಗಿಸಲ್ಪಟ್ಟಿತು. ಇದರ ಖರ್ಚಿನಲ್ಲಿ ಅರ್ಧಕ್ಕಿಂತ ಹೆಚ್ಚಿನಂಶವನ್ನು ಗ್ರಾಮಸ್ಥರೇ ವಹಿಸಿದ್ದಾರೆ. 'ಬುಲ್ ಗ್ರೇಡರ್' ಯಂತ್ರದ ಸಹಾಯದಿಂದ ಮೂರು ಎಕ್ರೆ ಜಾಗವನ್ನು ಸಮತಟ್ಟಾಗಿ ಮಾಡಲಾಯಿತು. ಅಖಿಲಭಾರತ ಚರಕಾಸಂಘದ ಕಾರ್ಯದರ್ಶಿಗಳಾದ ಶ್ರೀ ಕೃಷ್ಣದಾಸ್ ಗಾಂಧಿಯವರು ಈ ಕೇಂದ್ರವನ್ನು ಸಂದರ್ಶಿಸಿ ಪ್ರಾದಿಪ್ರಚಾರವನ್ನು ಮಾಡಿದರು.

ಮಂಜೇಶ್ವರ ಫಿರ್ಕಾ: ಇಲ್ಲಿ ನಾಲ್ಕು ಗಾಡಿರಸ್ತೆಗಳ ಕೆಲಸವು ಮುಗಿಸಲ್ಪಟ್ಟಿತು. ಈ ಕಾರ್ಯದ ಹೆಚ್ಚಿನ ವೆಚ್ಚವನ್ನು ಗ್ರಾಮಸ್ಥರೇ ವಹಿಸಿದ್ದಾರೆ.

ಮೂಲ್ಕಿ ಫಿರ್ಕಾ—ಮುಂಡ್ಕೂರು ಗ್ರಾಮಸೇವಾ ಸಂಘವು ಗ್ರಾಮಾಭಿವೃದ್ಧಿ ಸಭೆಯ ಸಮಯದಲ್ಲಿ ಒಂದು ಪ್ರದರ್ಶನವನ್ನು ಏರ್ಪಡಿಸಿತ್ತು. ಮೂರು ಫಿರ್ಕಾಗಳಲ್ಲಿಯೂ ವಿದ್ಯಾ ಇಲಾಖೆಯವರ ಸಹಕಾರದಿಂದ ವಯಸ್ಕರ ಶಿಕ್ಷಣ ಸಪ್ತಾಹವು ಜರಗಿಸಲ್ಪಟ್ಟಿತು.

ಪೆರಡಾಲ (ಬದಿಯಡ್ಕ) ನವಜೀವನ ಹೈಸ್ಕೂಲಿನ ಸೀನಿಯರ್ ಕನ್ನಡ ಪಂಡಿತರಾದ ಶ್ರೀ ಕೆ. ಕೆ. ರೈ, ವಿದ್ವಾನ್ ಮತ್ತು ಅದೇ ಶಾಲೆಯ ಚರಿತ್ರೆ ಅಧ್ಯಾಪಕರಾದ ಶ್ರೀ ಕೆ. ಕೃಷ್ಣರಾವ್ ಬಿ ಎ, ಇವರುಗಳನ್ನು ಮೆನೇಜ್‌ಮೆಂಟಿನವರು ಕೆಲಸದಿಂದ ನಿವೃತ್ತಿಗೊಳಿಸಿದ್ದಾರೆ. ಅಧ್ಯಾಪಕ ಸಂಘವೂ ವಿದ್ಯಾ ಇಲಾಖೆಯವರೂ ಈ ವಿಚಾರದಲ್ಲಿ ಶ್ರದ್ಧೆಯಿಂದ ಕೆಲಸವಹಿಸಿ ವಿಚಾರಣೆಯಾಗುವಂತೆಯೂ, ಅಧ್ಯಾಪಕರಿಗೆ ನ್ಯಾಯದೊರೆಯುವಂತೆಯೂ ಮಾಡಬೇಕಾಗಿದೆ ಎಂದು ಬಾತ್ಮೀದಾರರೊಬ್ಬರು ಬರೆಯುತ್ತಾರೆ.

ವಿವಿಧ ಪಾತ್ರೆಗಳು



ಆಧುನಿಕ ವಿಧದ ಬೆಳ್ಳಿ, ತಾಮ್ರ, ಹಿತ್ತಾಳೆ, ಕಂಚು ಮೊದಲಾದುವುಗಳ ವಿವಿಧ ಪಾತ್ರೆಗಳೂ ಸಾಮಾನುಗಳೂ ರಖಂ ಆಗಿಯೂ ಚಿಲ್ಲರೆಯಾಗಿಯೂ ದೊರೆಯುತ್ತವೆ.

ಕಲ್ಯಾಂಜೆ ವ್ಯಾಪಾರಸ್ಥರ,
ರಥಬೀದಿ, ಉಡುಪಿ

ಶ್ರೀ ರಾಮಕೃಷ್ಣ ಥಿಯೇಟರ್ ಲಿಮಿಟೆಡ್, ಉಡುಪಿ

ತಾರೀಕು 14—3—1951ರಿಂದ

ರಾಮಭಕ್ತ ಹನುಮಾನ್ (ಹಿಂದಿ)

ಅನಂತರ:

ಶಾಂತಾರಾಮ ಕೃತ **ದಹೇಜ್** ಪೃಥ್ವಿರಾಜ್, ಜಯಶ್ರೀ



Approved form by the Govt. of Mysore
Certificated by the Agent of the Govt of
Ceylon & Indian,

ಮಂಗಳೂರು

ದ. ಕ. ಜಿಲ್ಲಾ ಬೋರ್ಡಿನ ಸಭೆಯು- ಇತ್ತೀಚೆಗೆ ಕಾಸರಗೋಡಿನಲ್ಲಿ ಶ್ರೀ ಬಿ ಮಂಜಯ್ಯ ಹೆಗ್ಡೆಯವರ ಅಧ್ಯಕ್ಷತೆಯಲ್ಲಿ ಜರಗಿತು. ಸಭೆಗೆ ಹಾಜರಾಗದೆ ಮೆಂಬರಿಕೆಯನ್ನು ಕಳೆದುಕೊಂಡ ಶ್ರೀಗಳಾದ ಎಮ್. ಉಮೇಶರಾವ್, ಜೆ ಎನ್. ಎ. ಪೋರ್ಟ್ಸ್, ಶ್ರೀಮತಿಗಳಾದ ಗಿರಿಜಾ ಹೆಗ್ಗಡ್ತಿ ಮತ್ತು ಬಿ. ಪ್ರಫುಲ್ಲ ಹೆಗ್ಗಡೆ ಇವರ ಮೆಂಬರಿಕೆಯನ್ನು ಊರ್ಜಿತಗೊಳಿಸಲಾಯಿತು. ವೇಣೂರು-ನಾರಾವಿ ರಸ್ತೆಯನ್ನು ಬೋರ್ಡಿನ ಸ್ವಾಧೀನ ಪಡೆದು ದುರಸ್ತಿ ಮಾಡಿಸಬೇಕೆಂದಾಯಿತು. ಕಾರ್ಕಳದ ಕೆ. ಪಿ. ಮುಳಿಯಂದ ಪ್ರಭುಗಳ ರಾಜೀನಾಮೆಯನ್ನು ಸ್ವೀಕರಿಸಲಾಯಿತು. 'ಭಾರತ ಸ್ಕೌಟ್ಸ್ ಮತ್ತು ಗೈಡ್ಸ್' ಸಂಘದ ಜಿಲ್ಲಾ ಶಾಖೆಗೆ ಒಂದು ನೂರು ರೂಪಾಯಿ ಸಹಾಯನೀಡಬೇಕೆಂದಾಯಿತು. ನಂತರ ಅಡೂರು, ಮುಲ್ಕಿ, ಕಳಚೆ, ಮಿತ್ತಬಾಗಿಲು, ಬಂದಿಕಡ್ಕ, ಬೋಳ್ಯರು ಯೆತ್ತಾಡಿ, ದೇಲಂತಬೆಟ್ಟು, ಅಡ್ಯ, ಮುಚ್ಚೂರು ಅಂಜಾರು, ಕುಚ್ಚೂರು, ದೊಂಪದ ಪಲಿಕೆ, ಕಲ್ಮಂಜ ಮತ್ತು ಬಡಂಜೆಯ ಬೋರ್ಡ್ ಎಲಿಮೆಂಟರಿ ಶಾಲೆಗಳನ್ನು ಬುನಾದಿ ಶಾಲೆಗಳನ್ನಾಗಿ ಮಾರ್ಪಡಿಸಲು ಒಪ್ಪಿಗೆ ಕೊಡಲಾಯಿತು. ಉಳ್ಳಾಲ ಗ್ರಾಮದ ಬೋರ್ಡ್ ಶಾಲೆಯನ್ನು ತಾವು ನಡೆಸಿಕೊಂಡು ಬರುವುದಾಗಿ ಮಂಗಳೂರು ಬಿಷಪರು ಬರೆದ ಪತ್ರದ ಚರ್ಚೆಯಾಗಿ ಅವರ ಕೋರಿಕೆಯನ್ನು ನಿರಾಕರಿಸಲಾಯಿತು.

ಕಳ್ಳ ಶರಾಬಿನ ಹುಡುಕಾಟ— ಇದೇ ತಾ. 7ರಲ್ಲು ಮಂಗಳೂರಿನ ಅಸಿಸ್ಟಂಟ್ ಪ್ರೊಹಿಬಿಷನ್ ಅಧಿಕಾರಿಗಳ ನಾಯಕತ್ವದಲ್ಲಿ ಉಪ್ಪಿನ ಮೊಗರು, ಮುನ್ನೂರು, ಅಂಬಲಮೊಗರು ಗ್ರಾಮಗಳಲ್ಲಿ ಹರಿಯುವ ನೇತ್ರಾವತಿ ಹೊಳೆದಂಡೆಯ ಹೊಯಿಗೆಯಲ್ಲಿ ಕಳ್ಳ ಶರಾಬಿನ ಹುಡುಕಾಟ ನಡೆದಾಗ ಸುಮಾರು 300 ಗೆಲನ್‌ಗಳಷ್ಟು ಶರಾಬು ದೊರಕಿದ್ದು, ಅಧಿಕಾರಿಗಳು ಮುಂದಿನ ತನಿಖೆ ನಡೆಸುತ್ತಲಿದ್ದಾರೆ.

ಜಿಲ್ಲಾ ವೈಮಾನಿಕ ಹಾಗೂ ನಾವಿಕ ಬೋರ್ಡಿನ ತ್ರೈಮಾಸಿಕ ಸಭೆಯು ಇದೇ ತಾ. 27ರಲ್ಲು ಅಪರಾಹ್ನ 3 ಗಂಟೆಗೆ ಜಿಲ್ಲಾ ಕಲೆಕ್ಟರರ ಆಫೀಸಿನಲ್ಲಿ ಜರಗಲಿರುವುದು.

In the Court of the District Munsif of Mangalore
O. S. No 528/1950

Between
C. A. Cunha —Plaintiff.
and
Joseph Pinto —Defendant.

To
The defendant Joseph Pinto son of Shimao Pinto residing at present in Murnadpeta of Coorg and formerly in Muda village of Mangalore Taluq

Take notice that the above suit filed by the plaintiff against you for possession arrears of rent and mesne profits in respect of Survey No. 244/2 Eastern postion with the buildings and trees standing there on is posted for hearing at 11 A. M on 21-3-1951. If you fail to appear in person or by pleader the suit will be proceeded with exparte

(By order of the Court.)
B. Srinivasa Pai
Vakil for Plaintiff
Mangalore, 26—2—1951.

ದ ಕ. ಜಿಲ್ಲಾ ಬೇಂಕ್ ನೌಕರರ ಸಭೆಯು—ಇದೇ ತಾ 4ರಲ್ಲು [illegible]ನಾಥ ಮೆಮೋರಿಯಲ್ ಹಾಲಿನಲ್ಲಿ ಇಂಪೀರಿಯಲ್ ಬೇಂಕಿನ ಮಾಜಿ ಖಜಾಂಚಿ ಶ್ರೀ ಎಸ್. ಎಸ್. ಶೆಟ್ಟಿ, ಅವರ ಅಧ್ಯಕ್ಷತೆಯಲ್ಲಿ ಜರಗಿತು. ಬೇಂಕ್ ನೌಕರರನ್ನು ಕೆಲಸದಿಂದ ತೆಗೆದುಹಾಕುವುದು, ಅಪಾದನೆ ಹೊರಿಸುವುದು, ಬೇಂಕ್ ಟ್ರಿಬ್ಯೂನಲ್ ಎವಾರ್ಡನ್ನು ಇನ್ನೂ ಆಚರಣೆಗೆ ತಾರದಿರುವುದು ಮೊದಲಾದ ವಿಷಯಗಳನ್ನೆತ್ತಿ ಹಲವರ ಮಾತುಗಳಾದುವು. ಕೊನೆಗೆ ಜಿಲ್ಲಾ ಬೇಂಕ್ ನೌಕರರ ಸಂಘಸ್ಥಾಪನೆಯ ಬಗ್ಗೆ ತಾತ್ಕಾಲಿಕ ಕಮಿಟಿಯೊಂದರ ರಚನೆಯಾಯಿತು.

ರೈಲ್ವೆ ಎಡ್ವೈಸರಿ ಬೋರ್ಡಿನ ಸಭೆಯು ಇದೇ ತಾ 3ರಲ್ಲು ಮಂಗಳೂರಲ್ಲಿ ಜರಗಿತು ಮಂಗಳೂರು ಎಕ್ಸ್‌ಪ್ರೆಸ್ ರೈಲು ಇಲ್ಲಿಂದ ಇನ್ನೂ ತಡವಾಗಿ ಹೊರಡುವ ಹಾಗೂ ಇಲ್ಲಿಗೆ ಇನ್ನೂ ಬೇಗನೆ ಬಂದು ಸೇರುವ ಕುರಿತು ಚರ್ಚೆನಡೆದು ಕೊನೆಗೆ ಬರುವ ಎಪ್ರಿಲ್ ತಿಂಗಳಿಂದ ಈ ರೈಲು ಅರ್ಧಗಂಟೆ ತಡವಾಗಿ ಹೊರಡುವ ಹಾಗೂ ಅರ್ಧಗಂಟೆ ಮುಂದಾಗಿ ಬಂದು ಸೇರುವ ಕುರಿತು ನಿರ್ಧಾರಗಳಾದುವು. ಹೀಗೆಯೆ ಜನತಾ ಎಕ್ಸ್‌ಪ್ರೆಸ್ ರೈಲು ಬರುವ ಎಪ್ರಿಲ್ ತಿಂಗಳ ನಂತರ ಮದ್ರಾಸಿನವರೆಗೆ ಓಡದೆ ಈರೋಡಿನಲ್ಲೇ ಅದನ್ನು ಕೊನೆಗೊಳಿಸುವ ಕುರಿತಾಗಿಯೂ ನಿರ್ಧರಿಸಲಾಯಿತು.

ಕೆನರಾ ವಾಣಿಜ್ಯ ಸಂಘದಲ್ಲಿ ಇದೇ ತಾ. 3ರಲ್ಲು ಸಂಜೆ ರೈಲ್ವೆ ಅಡ್ವೈಸರಿ ಬೋರ್ಡಿನ ಸದಸ್ಯರ ಗೌರವಾರ್ಥವಾಗಿ ಸಭೆಯೊಂದು ಜರಗಿತು. ದ. ಭಾ. ರೈಲ್ವೆ ಜನರಲ್ ಮೆನೇಜರ್ ಶ್ರೀ ರಾಮಾನುಜಂ, ಪ್ರಧಾನ ಟ್ರಾಫಿಕ್ ಮೆನೇಜರ್ ಜೋಸೆಫ್ ಮತ್ತು ಅಡ್ವೈಸರಿ ಬೋರ್ಡಿನ ಕೆಲ ಸದಸ್ಯರೂ ಬಂದಿದ್ದರು. ವಾಣಿಜ್ಯಸಂಘದ ಅಧ್ಯಕ್ಷ ಶ್ರೀ ಎಫ್. ಎಕ್ಸ್ ಡಿ. ಪಿಂಟೊ ಗೈರುಹಾಜರಾದುದರಿಂದ ಶ್ರೀ ಬಿ ವೈಕುಂಠ ಬಾಳಿಗರು ಅಧ್ಯಕ್ಷತೆವಹಿಸಿ ಅತಿಥಿಗಳನ್ನು ಸ್ವಾಗತಿಸಿದರು. ಸಂಘದ ಕಾರ್ಯದರ್ಶಿಗಳು ಸಂಘದ ಪರವಾಗಿ ಕೆಲವು ಸೂಚನೆಗಳನ್ನೀಯುತ್ತಾ, ಮಂಗಳೂರು ಎಕ್ಸ್‌ಪ್ರೆಸ್ ರೈಲು ಈಗ ಹೊರಡುವುದಕ್ಕಿಂತ ಒಂದು ಗಂಟೆ ನಾದರೂ ತಡವಾಗಿ ಹೊರಟು, ಬರುವುದು ಒಂದು ಗಂಟೆ ಮೊದಲಾಗಬೇಕು, ಈ ಎಕ್ಸ್‌ಪ್ರೆಸ್ ರೈಲಿನಲ್ಲಿ ಎರಡನೆ ತರಗತಿಯ ಡಬ್ಬಿನ ಸ್ಥಳಾನುಕೂಲತೆ ಕಲ್ಪಿಸಬೇಕು. ಅದು ಅಸಾಧ್ಯವಾದಲ್ಲಿ ಜನತಾ ಎಕ್ಸ್‌ಪ್ರೆಸ್‌ನಲ್ಲಾದರೂ ಎರಡನೆ ತರಗತಿಯ ಒಂದು ಬಂಡಿ ಜೋಡಿಸಬೇಕೆಂದೂ, ಸ್ಟೇಶನಿನ ಹೊರಗೆ ಕಾರು ನಿಲ್ಲಿಸಲು ಇನ್ನೂ ಹೆಚ್ಚು ಸ್ಥಳ ಒದಗಿಸಬೇಕು, ಬಂದರಿನಲ್ಲಿರುವ ಗೂಡ್ಸ್ ಆಫೀಸಿನಲ್ಲಿಯೂ ಕಾರು ಹಾಗೂ ಲೋರಿ ನಿಲ್ಲಿಸಲು ಅನುಕೂಲ ಕಲ್ಪಿಸಬೇಕು. ರೈಲ್ವೆ ಅಡ್ವೈಸರಿ ಬೋರ್ಡನ್ನು ವಿಸ್ತರಿಸಿ ಅದರಲ್ಲಿ ಮಂಗಳೂರಿನ ವ್ಯಾಪಾರವರ್ಗದವರಿಗೂ ಸ್ಥಾನವಿರುವಂತಾಗಬೇಕು, ಮಂಗಳೂರು ಹಾಸನ ರೈಲ್ವೆ ಸಂಯೋಜನೆಯಿಂದ ಮಲೆನಾಡಿನ ಅಭಿವೃದ್ಧಿಗೆ ತುಂಬ ಅನುಕೂಲವಾಗುವುದು. ಎಂದು ಮೊದಲಾಗಿ ಸೂಚಿಸಿದರು. ಶ್ರೀ ರಾಮಾನುಜಂ ಹಾಗೂ ಜೋಸೆಫ್‌ರವರು ತಕ್ಕ ಉತ್ತರಕೊಡುತ್ತ, ಅಡ್ವೈಸರಿ ಬೋರ್ಡಿನ ವಿಸ್ತಾರ ಹಾಗೂ ಹಾಸನ ಮಂಗಳೂರು ರೈಲ್ವೆ ಯೋಜನೆ ನಮಗೆ ಸಂಬಂಧಿಸಿದುದಲ್ಲ, ಆ ಕುರಿತು ಸರಕಾರವನ್ನು ಒತ್ತಾಯಿಸಬೇಕು. ಇತರ ವಿಷಯಗಳ ಕಡೆಗೆ ಗಮನಕೊಡಲಾಗುವುದೆಂದರು. ಅಂತ್ಯದಲ್ಲಿ ಸಕ್ಕರೆಯ ರವಾನೆಯಲ್ಲಾಗುವ ಕಳ್ಳಾಟಿಕೆಯ ಕುರಿತು ಕೆಲವೊಂದು ಸದಸ್ಯರು ವಿವರಿಸಿದರು. ಧನ್ಯವಾದಾರ್ಪಣೆಯೊಂದಿಗೆ ಸಭಾಂತ್ಯವಾಯಿತು.

ದ. ಕ. ಜಿಲ್ಲೆಯ ಜನಸಂಖ್ಯೆ— ಈ ಬಾರಿಯ ಗಣನೆಯಂತೆ ದಕ್ಷಿಣಕನ್ನಡ ಜಿಲ್ಲೆಯ ಜನಸಂಖ್ಯೆ 17ಲಕ್ಷ3½ಸಾವಿರ. 1941ನೆ ವರ್ಷದಲ್ಲಿ ಈ ಜಿಲ್ಲೆಯ ಜನಸಂಖ್ಯೆ 15,23,516 ಆಗಿತ್ತು.

ಕಳ್ಳಸಂತೆಯಲ್ಲಿ ಗಾಡಿಪಟ್ಟೆ ಮಾರಾಟದ ಪ್ರತಿಫಲ— ಕೃಷಿಕರ ಉಪಯೋಗಾರ್ಥವಾಗಿ ಕೃಷಿ ಇಲಾಖೆಯ ಮೂಲಕ ಒದಗಿಸಲು ತರಿಸಲ್ಪಟ್ಟಿದ್ದ ಕೆಲವು ಸಾವಿರ ಮಣ ಉಕ್ಕಿನ ಗಾಡಿಪಟ್ಟಿಗಳನ್ನೂ ಪ್ರತ್ಯೇ ಕೃಷಿ ಇಲಾಖೆಯ ಕೆಲವು ನೌಕರರ ಸಹಾಯದಿಂದ ಅನೀತಿಯಿಂದ ಪಡೆದು ಕಳ್ಳಸಂತೆಯಲ್ಲಿ ಹೊರಜಿಲ್ಲೆಗಳಲ್ಲಿ ಮಾರಾಟ ಮಾಡಿದ ಮೂರು ಆರೋಪಗಳ ಮೇಲೆ ಇಸ್ಮಾಯಿಲ್ ಮುಹಮ್ಮದ್ ಎಂಬ ಒಂದರದ ವ್ಯಾಪಾರಿಯೊಬ್ಬನಿಗೆ ಪ್ರತಿ ಆರೋಪದ ಮೇಲೆ ಆರಾರು ತಿಂಗಳ ಕಠಿಣ ಸಜೆ ಮತ್ತು ಮೂರು ಆರೋಪಗಳ ಮೇಲೆ ಒಟ್ಟು ರೂಪಾಯಿ 2250 ಜುಲ್ಮಾನೆ ತಪ್ಪಿದ್ದಲ್ಲಿ 14 ತಿಂಗಳ ಕಠಿಣ ಸಜೆ ಎಂಬುದಾಗಿಯೂ ಅವನಿಂದ ಕಳ್ಳಸಂತೆಯಲ್ಲಿ ಗಾಡಿಪಟ್ಟಿಗಳನ್ನು ಪಡೆಕೊಂಡ ಆರೋಪದ ಮೇಲೆ ತಿರುಪೂರದ ಎಮ್. ರಾಮಸ್ವಾಮಿ ಗೌಡರ್ ಎಂಬ ವ್ಯಾಪಾರಿಗೆ ರೂ 500 ಜುಲ್ಮಾನೆ ತಪ್ಪಿದ್ದಲ್ಲಿ 4 ತಿಂಗಳ ಕಠಿಣ ಸಜೆ ಎಂಬುದಾಗಿ ಸ್ಪೆಶಲ್ ಕ್ಲಾಸ್ ಮೆಜಿಸ್ಟ್ರೇಟ್ ಕಳ್ಳಸಂತೆ ಮೊಕದ್ದಮೆಗಳ ಬಗ್ಗೆ ನೇಮಕ ಶ್ರೀ ಜಿ. ನಾರಾಯಣ ಹೆಗ್ಡೆಯವರಿಂದ ಇತ್ತೀಚೆಗೆ ವಿಧಿಸಲಾಗಿದೆ.

ಇದೇ ಸಂಬಂಧವಾಗಿ ಇಸ್ಮಾಯಿಲ್ ಅಹಮ್ಮದ್, ವಾಮನ, ರಾಜೀವ ಸುವರ್ಣ, ಶಿವಪ್ಪ ಗೌಡ, ಪಿ. ಸಿ. ಕೇರ ಐತಪ್ಪ ಶೆಟ್ಟಿ, ಜಬ್ಬ ಯಾನೆ ಮೊಯಿದಿನಬ್ಬ ಮತ್ತು ಬಿ. ರಾಮಮೋಹನ ರೈ (ಇವರಲ್ಲಿ 3, 4, 6, ಮತ್ತು 8ನೆ ಆಪಾದಿತರು ಮಾತ್ರಾರು ಕೃಷಿ ಇಲಾಖೆಗೆ ಸಂಬಂಧಿಸಿದವರು) ಇವರನ್ನು ಸೆಶನ್ಸ್ ಕೋರ್ಟಿಗೆ ಕಮಿಟ್ ಮಾಡಲಾಗಿದೆ.

ದ ಕ. ಜಿಲ್ಲಾ ಕಾಂಗ್ರೆಸ್ ಕಾರ್ಯಕಾರಿ ಮಂಡಳಿಯ ಸಭೆಯು ಇದೇ ತಾ. 9ರಲ್ಲು ಸಂಜೆ ಡಾ। ಕೆ. ಎನ್. ಆಳ್ವರ ಅಧ್ಯಕ್ಷತೆಯಲ್ಲಿ ಜರಗಿತು ಸಭಾರಂಭದಲಿ ಸರಕಾರಿ ನೌಕರರು ಕೆಲವರು ರಾಜಕೀಯದಲ್ಲಿ ಕೈಹಾಕಿ ಕಾಂಗ್ರೆಸಿನ ವಿರೋಧಿಗಳಿಗೆ ಪ್ರೋತ್ಸಾಹ ಕೊಡುವ ಕುರಿತು ದೀರ್ಘ ಚರ್ಚೆ ನಡೆಯಿತು. ಕಾಂಗ್ರೆಸಿಗರು ಕೂಡಾ ಈ ಸಂದಿಗ್ಧ ಸಮಯದಲ್ಲಿ ಶಿಸ್ತು, ಮತ್ತು ಒಕ್ಕಟ್ಟಿನಿಂದ ವರ್ತಿಸಿ ಕಾಂಗ್ರೆಸ್ ವಿರೋಧಿ ಶಕ್ತಿಗಳು ಬಲವಂತವಾಗದಂತೆ ಜಾಗರೂಕರಾಗಬೇಕೆಂಬ ಅಭಿಪ್ರಾಯವಾಯಿತು ಇದೇ ಜಿಲ್ಲೆಯಲ್ಲಿ ಕಾಂಗ್ರೆಸಿನ ಶಕ್ತಿಯನ್ನು ಬಲಗೊಳಿಸಲು ಕಾರ್ಯಕಾರಿ ಮಂಡಳಿಯು ಬರುವ ಮುಂದಿನ ಎಪ್ರಿಲ್ ತಿಂಗಳ ಮೂರನೇ ವಾರದಿಂದ ಜಿಲ್ಲಾ ಸಂಚಾರ ಕಾರ್ಯಕ್ರಮವನ್ನು ಕೈಕೊಳ್ಳಬೇಕೆಂದು ನಿರ್ಧರಿಸಲಾಯಿತು. ಅಲ್ ಇಂಡಿಯಾ ಕಾಂಗ್ರೆಸ್ ಕಮಿಟಿಯ ಅಹಮ್ಮದಾಬಾದ್ ಅಧಿವೇಶನದ ಐಕ್ಯ ನಿರ್ಣಯವನ್ನೂ, ಆ ಕುರಿತಾದ ಕರ್ನಾಟಕ ಪ್ರಾಂತಿಕ ಕಾಂಗ್ರೆಸ್ ಕಮಿಟಿಯ ಠರಾವನ್ನು ಕಾರ್ಯರೂಪಕ್ಕೆ ತರಲು ಜಿಲ್ಲೆಯ ಸರ್ಕಲ್ ಕಾಂಗ್ರೆಸ್ ಕಮಿಟಿಗಳ ಅಭಿಪ್ರಾಯವನ್ನು ಪಡೆಯಬೇಕೆಂದಾಯಿತು. ಪ್ರತ್ಯೇಕ ಕಾಂಗ್ರೆಸ್ ಕಮಿಟಿಗಳ ಬದಲಿಗೆ ತಾಲೂಕು ಕಾಂಗ್ರೆಸ್ ಕಮಿಟಿಗಳನ್ನು ರಚಿಸುವುದು ಅಗತ್ಯವೆಂದು ನಿರ್ಣಯಿಸಲಾಯಿತು. ರಾಜಕೀಯ ಸಂತ್ರಸ್ತರಿಗೆ ಭೂದಾನಮಾಡುವ ಕೆಲಸವು ಇನ್ನೂ ಹೆಚ್ಚು ನಡೆಯಬಾಕಿಯಿರುವುದರಿಂದ ಆ ಬಗ್ಗೆ ನೇಮಿಸಲಾದ ವಿಶೇಷ ಸಿಬಂಧಿಯನ್ನು ಪೂರಾ ಕೆಲಸ ಮುಗಿಯುವ ತನಕ [illegible] ಸರಕಾರವನ್ನು ಕೇಳಿಕೊಳ್ಳಲಾಯಿತು. ಜಿಲ್ಲಾ ಕಾಂಗ್ರೆಸ್ ಕಮಿಟಿಗಿರುವ ಹಣದ ಕೊರತೆಯನ್ನು ಹೋಗಲಾಡಿಸುವುದಕ್ಕೆ ಎತ್ತುವಳಿಯ ಕಾರ್ಯಕ್ರಮ ಕೈಕೊಳ್ಳಬೇಕೆಂದಾಯಿತು

ದಿ ಕಥೋಲಿಕ್ ಬ್ಯಾಂಕ್, ಲಿಮಿಟೆಡ್, ಕುಂದಾಪುರ.

ಯೇಲಂ ನೋಟೀಸು.

ಈ ಮೂಲಕ ಜಾಹೀರುಪಡಿಸುವುದು ಯೇನೆಂದ್ರೆ, ಈ ಕೆಳಗೆ ಕಾಣ್ಸಿದ ಸಾಲಗಳಲ್ಲಿ ಅಡವಿಟ್ಟ ನಗಗಳನ್ನು ಬಿಡಿಸಬೇಕಾಗಿ ರಿಜಿಸ್ಟ್ರಿ ನೋಟೀಸಿನ ಮುಖಾಂತ್ರ ತಿಳಿಸಿದರೂ, ಬಿಡಿಸದೆ ಯಿದ್ದುದರಿಂದ, ಸದ್ರಿ ಸಾಲಗಳಲ್ಲಿರುವ ಚಿನ್ನಾಭರಣಗಳನ್ನು ತಾ. 27 3 1951ರಲ್ಲು ಮಧ್ಯಾಹ್ನ ಗಂಟೆ 12ಕ್ಕೆ ಬೇಂಕಿನ ಆಫೀಸಿನಲ್ಲಿ ಬಹಿರಂಗವಾಗಿ ಯೇಲಂ ನಡೆಸಲಾಗುವುದು

ಸಾಲದ ನಂಬ್ರ	ಸಾಲ ಪಡೆದವರ ಹೆಸರು	ಸಾಲ ಪಡೆದ ತಾರೀಕು	ಸಾಲದ ಮೊಬಲಗು
24/ 921 K	ನರಸಿಂಹ ಸೇಟ್-ಶರಾಫ್ ಕುಂದಾಪುರ.	12- 3-1949	20-0-0
24/ 979	,, ,,	23- 3-1949	100-0-0
24/10 1	,, ,,	12- 4-1949	60 0 0
25/ 183	,, ,,	9- 8-1949	90-0-0
25/ 451	,, ,,	4-10-1949	57-0-0
26/ 38	,, ,,	16- 1 1950	50-0-0
26/ 176	,, ,,	28- 2 1950	70-0-0
26/ 268	,, ,,	21- 3-1950	60-0-0
26/ 350	,, ,,	8- 4-1950	520-0-0
2 / 450	,, ,,	3- 5-1950	25-0-0
26/ 612	,, ,,	26- 5-1950	45-0-0
26/ 647	,, ,,	30- 5-1950	310-0-0
26/ 651	,, ,,	31- 5-1950	45-0-0
26/1588	,, ,,	12-10-1950	165-0-0
24/ 905	ಬಿಕ್ಕೆ ಮಾರ್ವಿ-ಮುದ್ದುಗುಡ್ಡೆ ಕುಂದಾಪುರ.	9- 3-1949	15 0 0
24/1094	ಮತಾಯಸ್ ಕರ್ವಾಲೊ ಆನಗಳ್ಳಿ ಕುಂದಾಪುರ.	23- 4-1949	100-0-0

The Catholic Bank Ltd.,
Coondapoor, 10-3-1951

I Menezes
Agent



ಮದ್ರಾಸು

ಇಲ್ಲಿಯ ಟ್ರಿಪ್ಲಿಕೇನ್‌ನಲ್ಲಿರುವ ಉಡುಪಿ ಶ್ರೀಕೃಷ್ಣ ಮಂದಿರದಲ್ಲಿ ಇದೇ ತಾ. 19ರಿಂದ 28ರ ತನಕ ಶ್ರೀ ವಾದಿರಾಜ ಸ್ವಾಮಿಗಳವರ ಆರಾಧನಾ ಮಹೋತ್ಸವವು ಜರಗಲಿರುವುದು. ತಾ. 21ರಿಂದ ತಾ. 25ರ ತನಕ ಶ್ರೀ ವಾದಿರಾಜಸ್ವಾಮಿ ವಿದ್ವತ್ ಸಭೆಯು ಜರಗಿ ಹಲವರ ಧಾರ್ಮಿಕ ಉಪನ್ಯಾಸಗಳು, ಸಂಗೀತ, ಹರಿಕಥಾ ಕಾಲಕ್ಷೇಪಾದಿಗಳು ನೆರವೇರಲಿರುವವು.

ಅಣ್ಣಾಮಲೆ ನಗರ—ಅಣ್ಣಾಮಲೆ ವಿದ್ಯಾಪೀಠದ ಕೆಮಿಕಲ್ ಸೊಸೈಟಿಯು ಕಡೇ ವಂದನಾರ್ಪಣ ಆರ್ಥರ್ ಸ್ಮಿತ್‌ವಾಚನವನ್ನು ಮದ್ರಾಸು ಸರಕಾರದ ಕೃಷಿಮಂತ್ರಿ ಶ್ರೀ ಎ. ಬಿ ಶೆಟ್ಟರು ಇದೇ ತಾ.4ರಲ್ಲಿ ಮಾಡುತ್ತಾ ಮುಂದೆ ಬರಲಿರುವ ವಿಷಯಗಳ ರೂಪರೇಖೆಗಳನ್ನು ವಿವರಿಸಿದರು. ಶ್ರೀ ತಿಂಗಳೆ ಕರುಣಾಕರ ಹೆಗ್ಡೆಯವರು ಪರಿಚಯಿಸಿದರು. ಡಾ। ಎಸ್. ಎಸ್. ಎಸ್. ರಾಮಾನುಜಂ ಅವರು ಅಧ್ಯಕ್ಷತೆ ವಹಿಸಿದ್ದರು. ವೈಸ್ ಚಾನ್ಸಲರ್ ಅವರು ಸ್ವಾಗತಭಾಷಣವಿತ್ತರು. ಡಾ। ವಿ ಬಾಲಯ್ಯನವರು ಧನ್ಯವಾದಗಳನ್ನರ್ಪಿಸಿದರು.

ಮುಂಬಯಿ

ದಿ ಉಡಿಯಾವರ ಬಿಲ್ಲವ ಮಹಾಜನ ಸಂಘ, ಶಾಖೆ ಮುಂಬಯಿ ಇದರ 6ನೇ ವಾರ್ಷಿಕ ಮಹಾಸಭೆಯು ತಾ. 4 3-51ರಲ್ಲಿ ಶ್ರೀ ಯು.ಪಿ ಕುಂದರ್ ಇವರ ಅಧ್ಯಕ್ಷತೆಯಲ್ಲಿ ಸಿ. ಜೆ. ಶಹ ಕಂಪೆನಿಯ ವಠಾರದಲ್ಲಿ ಜರಗಿ

ನೋಟೀಸು

ಶಿರ್ವಾ ಪಂಚಾಯತ್ ಬೋರ್ಡಿಗೆ ಒಳಪಟ್ಟ ಮಂಚಕಲ್ಲು ಸಂತೆ ಮಾರ್ಕೆಟಿನಲ್ಲಿ ಮತ್ತು ದಿನಚರಿ ಮಾರ್ಕೆಟಿನಲ್ಲಿ ತಾ 1-4-51 ರಿಂದ 31-3-52ರ ವರೆಗೆ ಒಂದು ವರ್ಷದಲ್ಲಿ ಕರ ವಸೂಲು ಮಾಡುವ ಸ್ವಾತಂತ್ರ್ಯವನ್ನು ಇದೇ ಬರುವ ತಾರೀಕು 26-3-51ನೇ ಸೋಮವಾರ ದಿನ ಸಾಯಂಕಾಲ ಗಂಟೆ 4ಕ್ಕೆ ಪಂಚಾಯತ್ ಬೋರ್ಡ್ ಆಫೀಸಿನಲ್ಲಿ ಬಹಿರಂಗವಾಗಿ ಏಲಂ ಮಾಡಲಾಗುವುದು. ಏಲಂ ಶರ್ತ ವಗೈರೆಯನ್ನೂ ಪಂಚಾಯತ ಬೋರ್ಡಿನ ಬಹಿರಂಗ ಪ್ರಕಟಣಾದಿಗಳಿಂದ ವ, ಸ್ವತಹ ಆಫೀಸಿನಲ್ಲಿ ಬಂದು ತಿಳಿಯಬಹುದು. ಎಂಬ ಸಂಗ್ತಿ ಉಮೇದ್ವಾರ ಹಾಗೂ ಸಮಸ್ತ ಜನರಿಗೆ ಈ ಮೂಲಕ ತಿಳಿಸಲಾಗುತ್ತದೆ.

ಯಸ್ ಅಂಣಯ್ಯ ಹೆಗ್ಡೆ,
ಪ್ರೆಸಿಡೆಂಟ್
ಪಂಚಾಯತ್ ಬೋರ್ಡ್, ಶಿರ್ವಾ.
ಪಂಚಾಯತ್ ಬೋರ್ಡ್ ಆಫೀಸು,
ಶಿರ್ವಾ, ತಾ. 3-3 1951.

NOTICE

ಕಾಸರಗೋಡು ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ

O. S No 523/1948
R. E. P. 578/1950

ಮಹಮ್ಮದ್ ಬ್ಯಾರಿ —ಅರ್ಜಿದಾರ
Vs
1) ಎಡೆಯಾಲ್ಯಂ ಮಾಧವಿ ಅಮ್ಮ } ಪ್ರತಿವಾದಿ
2) ರಾಮಚಂದ್ರ ನಾಯರ್ } ಗಳು.

ಇವರೊಳಗೆ

ಮೇಲ್ಕಂಡ ಅಮ್ಮಜ್ಜಿ ಪ್ರಕರಣದಲ್ಲಿ ರೆಸ್ಪಾಂಡೆಂಟ್ಸ್ ಬಾಬ್ತು ಸ್ಥಿರಾಸ್ತಿಗಳ ಏಲಂ ಕುರಿತು ಅಟ್ಯಾಚ್ ಮಾಡಲ್ಪಟ್ಟಿದ್ದ ಏಲಂ ಮುಸ್ತಹ್ಕಾರು ಮಂಜೂರಾತಿ ಕುರಿತು ದಾಖಲು ಮಾಡಿದ ಮೇಲ್ಕಂಡ ಅಮ್ಮಜ್ಜಿಯು ತಾರೀಖು 24-3-1951ಕ್ಕೆ ಕಳ್ಳಿಗೆ ಇಟ್ಟಿರುವ ಸಂಗ್ತಿ ಈ ಮೂಲಕ ತಿಳಿಸಲಾಗಿಯದೆ.

B Padmanab,
B.A B.L
Advocate for Petitioner
Kasaragod, 9-3-1951

ಸಲ್ಪಟ್ಟಿತು. ಗತವರ್ಷದ ವರದಿ ಮತ್ತು ಆಯವ್ಯಯದ ಪಟ್ಟಿಯನ್ನು ಮಂಜೂರು ಮಾಡಿ, ಬಾಕ್ಕಿ ವರ್ಷಕ್ಕೆ ಕಾರ್ಯನಿರ್ವಾಹಕ ಸಮಿತಿಯ ಚುನಾವಣೆಯನ್ನು ನಡೆಸಲಾಯಿತು.

ಹಿರಿಯಡ್ಕ ನಾಲ್ಕುಪಟ್ಟಿ ಮೊಗವೀರ ಪರಸ್ಪರ ಸಹಾಯಕ ಸಂಘದ—ವಿಶೇಷ ಮಹಾಸಭೆಯೊಂದು ತಾ. 25-2 51ರಲ್ಲಿ ಕೋಟೆಯೊಳಗಣ ಬ್ರೂಸ್ ರಸ್ತೆಯಲ್ಲಿರುವ ದೋಂಬೆ ಹೌಸಿನಲ್ಲಿ ಕೂಡಿ, ಸಂಘದ ತಿದ್ದುಪಡಿಮಾಡಿದ ಕ್ರಮನಿಬಂಧನೆಯನ್ನು ಮಂಜೂರು ಮಾಡಿರುವುದಲ್ಲದೆ, ಸ್ವಜಾತಿ ಮುಂದಾಳುಗಳಲ್ಲೊಬ್ಬರಾದ ಬಪ್ಪನಾಡು ಶ್ರೀ ಯಂ. ಕೆ. ಬಸಪ್ಪನವರ ನಿಧನಕ್ಕಾಗಿ (ತಾ. 10 2-51) ಸಂತಾಪ ಸೂಚಕ ರಿಂಯಾಲ್ಯೂಷನ್ ಮಾಡಲಾಯಿತು.

ಮೈಸೂರು

ಮಾಂಟಿಸ್ಸೋರಿ ಕ್ರಮದಲ್ಲಿ ಶಿಕ್ಷಣ – ಸುಪ್ರಸಿದ್ಧ ಶಿಶು-ಶಿಕ್ಷಣ ನಿಪುಣರಾದ ಮೇಡಾಂ ಮಾಂಟಿಸ್ಸೋರಿಯವರ ಶಿಕ್ಷಣ ವಿಧಾನದ ಪದ್ಧತಿಯ ಪ್ರಕಾರ ಮೈಸೂರು ನಗರದಲ್ಲಿ ಬರುವ ಮೇ ತಿಂಗಳಿಂದ ಸೆಪ್ಟಂಬರ್ ತಿಂಗಳ ವರೆಗೂ, ಮಹಿಳೆಯರಿಗೂ, ಪುರುಷರಿಗೂ ಶಿಶು ಶಿಕ್ಷಣವನ್ನು ಕೊಡಲು ಏರ್ಪಡಿಸಲಾಗಿದೆ. ಮೇಡಾಂ ಮಾಂಟಿಸ್ಸೋರಿಯವರ ಸ್ವಂತಪ್ರತಿನಿಧಿಯಾದ ಸಿ। ಎ. ಎಂ. ಜೂಸ್ಟರ್‌ರವರು ಮತ್ತು ಅವರ ಅನುಯಾಯಿಗಳು 150 ಜನರಿಗೆ ಶಿಕ್ಷಣವನ್ನು ಕೊಡಲು ಏರ್ಪಡಿಸುತ್ತಾರೆ. ಈ ಶಿಕ್ಷಣವು ಶಿಶುವಿಹಾರವನ್ನು ನಡೆಸಲಪೇಕ್ಷಿಸುವವರಿಗೂ, ಮಕ್ಕಳ ಶಿಕ್ಷಣದಲ್ಲಿ ಆಸಕ್ತಿಯುಳ್ಳವರಿಗೂ ಉಪಯುಕ್ತವಾಗಿರುತ್ತದೆ. ಶಿಕ್ಷಣದಲ್ಲಿ ತೇರ್ಗಡೆಯಾದವರಿಗೆ ಪ್ರಶಸ್ತಿಪತ್ರಗಳು ಕೊಡಲ್ಪಡುತ್ತವೆ. ಈ ಶಿಕ್ಷಣವನ್ನು ಪಡೆಯಲಪೇಕ್ಷಿಸುವವರು ಹೆಚ್ಚು ಮಾಹಿತಿಗಳನ್ನು ಬರೆದು ತಿಳಿಯಬಹುದು.

S R. Krishna Murthy,
Organising Secretary,
Indian Montessori Training Course,
Ramavilas, MYSORE.

ನಿಡಂಬೂರು ಪಂಚಾಯತಬೋರ್ಡ್ ಟೆಂಡರುಗಳ ಬಗ್ಗೆ ನೋಟೀಸು

ಬಿಡ್ಡರುಗಳಿಲ್ಲದುದರಿಂದ ಏಲಂ ಆಗದ ಈ ಬೋರ್ಡಿನ ಕಿನ್ನಿಮೂಲ್ಕಿಯ ದಿನವಹಿ ಮಾರ್ಕೆಟಿನ ಫೀಸು ವಸೂಲಿಯು 1951-52ನೇ ವರ್ಷದ ಗುತ್ತಿಗೆಯ ಕುರಿತು 5 5ರೂಪಾಯಿಗಳ ಧ್ರವು ಠೇವಣಾತಿಯೊಂದಿಗೆ ತಾ. **24-3-1951**ರ ಸಂಜೆ ಗಂಟೆ **5**ರೊಳಗೆ ಈ ಆಫೀಸಿಗೆ ಮುಟ್ಟುವಂತೆ ಟೆಂಡರುಗಳನ್ನು ಆಹ್ವಾನಿಸಲಾಗಿದೆ. ... ಅದೇ ಸಂಜೆಯ 5 30ಕ್ಕೆ ಈ ಟೆಂಡರುಗಳನ್ನು ಪ್ರಸಿಡೆಂಟರು ಒಡೆದುನೋಡುವರು. ಅತ್ಯಧಿಕ ಮೊತ್ತದ ಟೆಂಡರುಗಳು ಮಾತ್ರವೇ ಅಂಗೀಕರಿಸಲಾಗುವವು.

ಎನ್ ರಾಜಗೋಪಾಲಕೃಷ್ಣರಾವ್,
ಪ್ರೆಸಿಡೆಂಟ್,
ನಿಡಂಬೂರು ಪಂಚಾಯತ ಬೋರ್ಡು
ತಾ. 8ನೆಯ ಮಾರ್ಚ 1951

ಸ್ವೀಕಾರ— ವಿಮರ್ಶೆ

ಬೀದಿಯ ದೀಪ—(ಕಾದಂಬರಿ) ಲೇಖಿಕೆಯರು:— ಶಾರದಾ ದೇವಿ. ಪ್ರಕಾಶಕರು: ಕನ್ನಡ ಪ್ರಪಂಚ ಪ್ರಕಾಶನ, ಗಣಪತಿ ಹ್ಯಾನ್ಸ್‌ಸ್ಕೂಲ್ ರಸ್ತೆ, ಬೆಂಗಳೂರು. ಬೆಲೆ ರೂ ೧—೪—೦

ಭಾಗೀರಥಿ ಬ್ರಾಹ್ಮಣ ಕನ್ಯೆ. ತಾನು ಮೆಚ್ಚಿದಾತ ಕೈಹಿಡಿದರೂ ಬಾಳಿನ ಮೊದಲಲ್ಲೇ ನಡುನೀರಿನಲ್ಲಿ ಕೈಬಿಡುತ್ತಾನೆ. ಬಾಗಿರಥಿ ವಿಧವೆಯಾಗುತ್ತಾಳೆ. ವಯೋಗುಣಕ್ಕೆ ಸರಿಯಾಗಿ ಅವಳಿಗೂ ಲೋಕದ ಸುಖವನ್ನು ಪಡೆಯುವ ಹಂಬಲ ಮೂಡುತ್ತದೆ. ಗಂಡನು ಕಂಡತಿ ಸತ್ತರೆ ಬೇರೆಯವಳ ಕೈಹಿಡಿದು ಸುಖಿಸುತ್ತಾನೆ, ಇತರ ಕೆಲವು ಜಾತಿಯಲ್ಲಿ ಹೆಣ್ಣು ಎರಡನೆಯ ಮದುವೆ ಮಾಡಿಕೊಂಡು ವಿಲಾಸಜೀವನ ನಡೆಸುತ್ತಾಳೆ. ಆದರೆ ಬ್ರಾಹ್ಮಣರ ಜಾತಿಯು ತಾನು ಬಾಳಿನುದ್ದಕ್ಕೂ ತನ್ನೆದೆಯ ನೂರಾರು ಸವಿಕನಸುಗಳನ್ನು ನುಂಗಿಕೊಂಡು ಮೂಲೆ ಹಿಡಿದು ಕೂತುಕೊಳ್ಳಬೇಕೇ? ಎನ್ನುವ ಭ್ರಾಂತಿ ಭಾಗಿರಥಿಯಲ್ಲಿ ಮೂಡುತ್ತದೆ. ಸುತ್ತಿ ಆಕೆ ತನ್ನ ಧೈರ್ಯವನ್ನು ಪ್ರಾರ್ಥಿಸಿಕೊಳ್ಳುವುದಕ್ಕೆ ಅಂತೋನಿಯನ್ನು ಮದುವೆಯಾಗಿ ಕ್ರಿಸ್ತಾನರ ಜಾತಿಗೆ ಸೇರುತ್ತಾಳೆ. ಮೊದಲನೆಯ ಗಂಡನ ಮಗ ಕಿಟ್ಟುವು ಬಹಳ ಕಷ್ಟದಿಂದ ಅಜ್ಜನೊಡನೆ ಜೀವನ ನಡೆಸಿ ಕೊನೆಗೊಂದು ದಿನ ದೈವರ ಹಾಗೂ ದಲಿತರ ನಾಯಕನಾಗುತ್ತಾನೆ. ಅವನ ಬರಹವನ್ನು ಮೆಚ್ಚಿದ ವಿಮಲ ಅವನನ್ನು ವರಿಸುತ್ತಾಳೆ. ಇದು 'ಬೀದಿಯ ದೀಪದ' ಕತೆ.

"ತರುಣ ವಯಸ್ಸಿನಲ್ಲಿ ಸುಖಪಡುವುದೇ ಮನುಷ್ಯಜೀವನದ ತತ್ವವನ್ನು ನಾವಿಲ್ಲಿ ಕಾಣುತ್ತೇವೆ. ಲೇಖಕಿಯರೇ ಹೇಳಿದ ಪದಕ್ಕಾಗಿ ... ಮನೆತನವನ್ನೆಲ್ಲ ತೊರೆದು ವ್ಯಕ್ತಿಯಾಗಿ ಭಾಗಿ ಪರಿವರ್ತಿಸುವುದು ಅಷ್ಟೊಂದು ಸಮಂಜಸವಾಗಿ ತೋರುವುದಿಲ್ಲ. ಜೀವನದಲ್ಲಿ ಎಷ್ಟೇ ಭ್ರಾಂತಿಯಾದರೂ ಹಲವಾರು ವರ್ಷಗಳಿಂದ ಬಂದ ಸಂಸ್ಕೃತಿ, ಮನೆತನವನ್ನು ಮರೆತು, ಸಾಮಾನ್ಯ ಮೋಟರ್ ಕೆಲಸಗಾರನೊಬ್ಬನಲ್ಲಿ ಪ್ರೇಮಾಭಿಕ್ಷೆ ಯಾಚಿಸಿ, ಅವನನ್ನೇ ಮದುವೆಯಾಗುವುದು ಉತ್ತಮ ಆದರ್ಶವಾಗಲಾರದು. ವ್ಯಕ್ತಿಯಾ ಅಂತೋನಿಯೊಡನೆ ಸಂಸಾರ ಮಾಡಿಕೊಂಡಿರುವಾಗ ಮಗನಿಗಾಗಿ ಕಾತರಿಸುವುದೂ, ತಂದೆ ತಾಯಂದಿರ್ಯ್ಕ ಮಗನಿಗಾಗಿ ಕೊರಗುವುದೂ, ಕಿಟ್ಟು ತಾಯಿಗಾಗಿ ಹಂಬಲಿಸುವುದು ಹೃದಯಸ್ಪರ್ಶಿಯಾದ ಸನ್ನಿವೇಶಗಳು! ಭಾಗೀರಥಿಯ ಕತೆ ಅರ್ಧದಲ್ಲೇ ನಿಂತು ಕಿಟ್ಟುವಿನ ಜೀವನವನ್ನು ಅತಿ ಶೀಘ್ರವಾಗಿ ರೂಪಿಸಿದ ಹಾಗೆ ತೋರುತ್ತದೆ. ಆತ ಬರಹಗಾರನಾಗುವುದೂ, ಜನನಾಯಕನಾಗುವುದೂ ಅನಿರೀಕ್ಷಿತ ಕೊಂಚಮಟ್ಟಿಗೆ ಅಸ್ವಾಭಾವಿಕವೂ ಹೌದು. ಕಿಟ್ಟುವು ಜನಪ್ರಿಯನಾಗುವವರೆಲ್ಲೇ ಕತೆ ಮುಗಿಯುತ್ತದೆ. ಭಾಗಿ ಇಲ್ಲವೆ ಅವಳ ಕುರಿತು ಏನೂ ತಿಳಿಯುವುದಿಲ್ಲ. ಸಮಾಜದ ಹಲವಾರು ಸಮಸ್ಯೆಗಳನ್ನು ವಿಮರ್ಶೆ ಮಾಡುವದಕ್ಕಿಂತ ಮಿಗಿಲಾದ ಆದರ್ಶವಾಗಲೀ ಕಥಾತಂತ್ರವಾಗಲೀ ಇಲ್ಲಿ ನಾವು ಕಾಣುವಂತಿಲ್ಲ. ಕೊನೆಯ ಭಾಗವಂತೂ ತೀರ ನೀರಸವಾಗಿರುತ್ತದೆ. ಅಂತೂ ಒಮ್ಮೆ ಓದಬಹುದಾದ ಕಾದಂಬರಿ.

ಸುಗಂಧ—(ಕವಿತಾ ಸಂಗ್ರಹ) ಕವಿಗಳು: ಶ್ರೀ ಪಾಂಡೇಶ್ವರ ಗಣಪತಿರಾವ್; ಪ್ರಕಾಶಕರು: ಜಿ. ಆರ್. ಪಾಂಡೇಶ್ವರ, ಹುಬ್ಬಳ್ಳಿ ಬೆಲೆ ರೂ. ೧—೪—೦.

ಸುಗಂಧ ಉತ್ತಮೋತ್ತಮವಾದ ಕವಿತೆಗಳ ಸಂಗ್ರಹ. ಇದರಲ್ಲಿರುವ 52 ಕವಿತೆಗಳೂ ಒಂದಲ್ಲ ಒಂದು ರೀತಿಯಿಂದ ಉತ್ತಮ ಪಾದಂಕಗಳೇ. ಅದರಲ್ಲೂ 'ಪ್ರಣಯ ಭಾಷಿತ' 'ಸಾಹಿತ್ಯಯೋಗಿ ಶ್ರೀನಿವಾಸ' 'ಬೆಳಕಿನ ಕವಿ ಬೇಂದ್ರೆ' 'ರಾಮಾಯಣ ದರ್ಶನಕ್ಕೆ' 'ಏನೋ ತಡಬಾಯಿತೆನೆ' 'ಡಿ.ವಿ.ಜಿ.' 'ದಾರಿ' 'ಚಿತ್ರವ್ಯಾಕರಣ ಕಂಡಿದೆ' 'ಎನಿತು ರಮ್ಯವೋ ಹರಿಯ ಸ್ವರೂಪ' 'ಸಿಂಪಿ' ಈ ಹತ್ತು ಕವಿತೆಗಳಂತೂ ಕವಿಯ ಹೃದಯಶೀಲತೆಯನ್ನು ಮೀರಿಟ್ಟವೆ. ಕವಿತೆಗಳೆಲ್ಲ ಲಲಿತವೂ, ಭಾವಗರ್ಭಿತವೂ ಆಗಿದ್ದು, ಹೃದಯವನ್ನು ಕಲಕುವಷ್ಟು ಆತ್ಮೀಯವಾಗಿರುತ್ತವೆ. ಸುಸಂಸ್ಕಾರ ಉಳ್ಳಂತಹ ಉತ್ತಮ ವಿಚಾರಗಳೇ ಕವಿತೆಯ ಮೂಲಕ ಹೊರಟು ಬಂದಿವೆ. ಧಾರ್ಮಿಕ, ಲೌಕಿಕ, ಆಧ್ಯಾತ್ಮಿಕವಾದ ವಿಚಾರವನ್ನು ಉದಾತ್ತವಾಗಿ ಚಿತ್ರಿಸಿದ ಹಾಗೆ ಪ್ರೇಮ-ಆಶೆ-ನಿರಾಶೆಗಳನ್ನು ಅಷ್ಟೇ ರಸವತ್ತಾಗಿ ಚಿತ್ರಿಸಿವಾರೆ. ಪ್ರತಿಭಾಸಂಪನ್ನವಾದ ಕಾವ್ಯಲಕ್ಷಣವನ್ನು ಈ ಕೆಳಗಿನ ಕವಿತೆಗಳಲ್ಲಿ ಕಾಣಬಹುದಾಗಿದೆ.

ಅಸ್ಪಂ ಧೂತಂಕದ ಕುರಿತಾಗಿ ಕವಿಯ ಮನಸ್ಸು ಕಲ್ಪಿಸಿಕೊಂಡಿದೆ:

ಪ್ರಳಯ ರುದ್ರ ಪಾರೋಳಿಯಿಂದ
ಅಗ್ನಿಗಂಗೆ ಇಳಿದಳೆ?
ಮನುಜ ಕುಲದ ಪಾಪವೃದಿದ
ಬೆಂಕಿಯಿಂದ ತೊಳೆದಳೆ?
ಕೆಟ್ಟದೊಳ್ಳಿದೆಂಬ ಭೇದ
ಜ್ಞಾನ ವಿಕೃತಿ ಅಯಿಸಿತೆ?
ನವಸೃಷ್ಟಿಯ ಸಂಕಲ್ಪೊಯ್ದು
ಮೂಲ ಪ್ರಕೃತಿ ಬಯಸಿತೆ?

ಮಾಸ್ತಿಯವರ ಕುರಿತು ಕವಿ:

"ನೀನಿತ್ತುದೇ ಅನ್ನ ನೀ ಮುಟ್ಟಿದುದೆ ಚಿನ್ನ!
ಕನ್ನಡಾಂಬೆಯು ಮಾಡಿಗುತಿಯ ರನ್ನ ಸಂಪನ್ನ!
ಚೆನ್ನಕೇಶವ ಮೂರ್ತಿದಯೆಗೈದು ಸತ್ಕೀರ್ತಿ
ಕನ್ನಡಕೆ ನೀ ನಿತ್ಯ ಮಂಗಳದ ಸತ್ಕೀರ್ತಿ"

ಡಿ. ವಿ. ಜಿ. ಯವರ ಕುರಿತು ಕವಿ:

"ಮಾತಿನ ಮುತ್ತಿನ ಮಳೆಯು
ನ್ನೋತು ಕವಚಕರೆದ ಹಿರಿಯ ನಿಸ್ಸದೆ
ಯೋಳ್ಪೀಂ
ಮಾತೆ ಶರಸ್ವತಿ ನಯನದ
ಜ್ಯೋತಿರ್ಮಣಿಕಳ ರೂಪಿದ್ದಯೊಂಬು
ಜೆನಿಸಿದುದು!"

ದೇವರ ಕುರಿತಾಗಿ ಕವಿ:

"ಆಟವಾಡಲೆಂದು ಮಾಯೆಯ ಮುಸುಕಿನ
ನಾಟ್ಯರೂಪಿದೀ ಸುಂದರ ಧರೆಯ
ಕೋಟ್ಯನುಕೋಟಿ ಜೀವಿಗಳೊಳು ನಗುತಿಹ
ನಾಟಕವಿಲ್ಲದ ಮಂಧಾರ ಮಾಧವನ"

ಹೀಗೆಯೇ ಕವಿ ನಾನಾ ಬಗೆಯಲ್ಲಿ ಕಾವ್ಯಸಲಿಲವನ್ನು ಹರಿಸಿ ಬಿಟ್ಟಿದ್ದಾರೆ. ಶ್ರೀ ಪಾಂಡೇಶ್ವರರ ಇತರ ಕವಿತೆಯನ್ನೋದಿ ಆನಂದಿಸಿದ ಜನ ಇಲ್ಲಿ ಅದಕ್ಕಿಂತಲೂ ಮಿಗಿಲಾದ ಸಂತೋಷಾನುಭವವನ್ನು ಪಡೆಯಬಲ್ಲರು! ಪಾಂಡೇಶ್ವರರು ಇನ್ನೂ ಇಂತಹ ಕೃತಿಗಳನ್ನು ಕನ್ನಡಕ್ಕೆ ನೀಡುವಂತಾಗಲೆಂದು ಹಾರೈಸುತ್ತೇವೆ.

—ಎಸ್ಕೆಲ್

UDIPI MUNICIPALITY
Tender Notice

Sealed tenders will be received by the undersigned upto 4 p. m. on 30-3-1951 for the following works

Name of the Work	Amount of estimate	Tender deposit
Forming road FF in the Central ward T. P. Scheme area.	Rs. 5420/-	Rs 275/-

Full Particulars as to conditions of contract etc may be obtained from the Municipal Office during Office hours on working days.

Municipal Office, Udipi } (Sd) A. S D'souza
Dated, 8-3-1951 } Commissioner.

ವಾರದ ಹರಟೆ

— ಶ್ರೀ "ಮು. ವಿ."

ಒಂದು ದೇಶದ ಜನರ ಸಂಸ್ಕೃತಿಯನ್ನು ಅಲ್ಲಿಯ ಪತ್ರಿಕೆಗಳಲ್ಲಿ ಪ್ರಕಟವಾಗುವ ಜಾಹೀರಾತುಗಳನ್ನು ನೋಡಿ ಹೇಳಬಹುದೆನ್ನುತ್ತಾರೆ. ಆ ದೃಷ್ಟಿಯಿಂದ ನಮ್ಮಲ್ಲಿಯ ವಾರಪತ್ರಿಕೆಗಳಲ್ಲಿರುವ ಜಾಹೀರಾತುಗಳನ್ನೆಲ್ಲಾ ಪರಕೀಯನೊಬ್ಬನು ನೋಡಿದರೆ ನಮ್ಮ ಜನರು ನಾಗರಿಕರೆಂದು ಹೇಳಲಾರನು. ಜನರಲ್ಲಿರುವ ತಪ್ಪುಭಾವನೆ, ಅಂಧಶ್ರದ್ಧೆ, ಇವನ್ನೆಲ್ಲಾ ಈ ಜಾಹೀರಾತುಗಳು ತೆರೆದು ತೋರುತ್ತವೆ.

ಉದಾಹರಣೆಗಾಗಿ ಮದ್ರಾಸಿನ ಒಂದು ವಾರಪತ್ರಿಕೆಯನ್ನು ತೆಗೆದುಕೊಳ್ಳುವಾ. ಈ ಪತ್ರಿಕೆಯನ್ನು ಬಹಳ ಜನ ಓದುವವರಿದ್ದಾರೆ. ನಮ್ಮ ಪ್ರಾಂತ್ಯದಲ್ಲಿ ಅಲ್ಲದೆ ಇತರ ಪ್ರಾಂತ್ಯಗಳಲ್ಲಿಯೂ ಇದೊಂದು ಜನಪ್ರಿಯಪತ್ರಿಕೆ. ಅದರ ಜಾಹೀರಾತುಗಳನ್ನೇ ಕುರಿತು ಈ ಸಲ ಹರಟೆ ಹೊಡೆಯಬೇಕೆಂದಿದ್ದೇನೆ. ಅದರಲ್ಲಿರುವ ಸಿನೆಮಾ ಆಟಗಳು ಔಷಧಿಗಳು, ಟೇಂಕುಗಳು, ಪಾಟುಗಳು ಇತ್ಯಾದಿ ಉಪಯುಕ್ತ ಸಾಮಗ್ರಿಗಳ ಜಾಹೀರಾತುಗಳ ಕುರಿತು ನಾನು ಹೇಳುವುದಲ್ಲ, ಅವೆಲ್ಲಾ ಬೇಕಾದದ್ದೇ ಅನ್ನಿ. ಅದರಲ್ಲಿ ಹೊಸರೀತಿಯ ಕೆಲವು ಜಾಹೀರಾತು ಇದೆ. ಒಂದು ಕನ್ನಡಕ ಸಿಗುವುದಂತೆ, ಅದರಲ್ಲಿ ಒಂದು ಕಣ್ಣಲ್ಲಿ ನೋಡಿದರೆ ಸಂಪೂರ್ಣವಾಗಿ ವಸ್ತ್ರಧರಿಸಿರುವ ಸ್ತ್ರೀಯರು ಕಾಣುತ್ತಾರಂತೆ ಇನ್ನೊಂದು ಕಣ್ಣಲ್ಲಿ ನೋಡಿದರೆ ಸ್ತ್ರೀಯರು ಧರಿಸಿಕೊಂಡಿರುವ ವಸ್ತ್ರಗಳೆಲ್ಲಾ ಮಾಯವಾಗುವವಂತೆ. ಕ್ರಯ ಬರೇ ೨ರೂಪಾಯಿಯಂತೆ. ಇದನ್ನು ತರಿಸುವವರಿಗೆ ಸುಂದರ ಹುಡುಗಿಯರ 120ಚಿತ್ರಗಳು ಪುಕ್ಕಟೆಯಾಗಿ ಸಿಗುವಂತೆ ಕೆಳಗೆ ವಿಳಾಸಕೊಟ್ಟಿದೆ ಇನ್ನೊಂದು ಜಾಹೀರಾತು ಹೀಗಿದೆ. 17ರಿಂದ 25ರ ವರೆಗಿನ ತರುಣಿಯರ ಗುಟ್ಟಿನ ಚಿತ್ರಗಳು ಜೊತೆಗೆ ವಿವರ. ಈ ಮರ್ಯಾದೆ ಕ್ರಮಕ್ಕೆ ವಿರೋಧವಿದೆ ಪ್ರತಿಯೊಬ್ಬನು ನೋಡತಕ್ಕ ಚಿತ್ರಗಳು ಇದೇ ಪುಸ್ತಕಕ್ಕೆ ರೂ 2-8-0 ವಿಳಾಸವಿದೆ. ಮೂರನೇ ಜಾಹಿರಾತು, 200 ತರುಣ ತರುಣಿಯರ ಗುಟ್ಟಿನ ಚಿತ್ರಗಳಿರುವ ಕೋಕಶಾಸ್ತ್ರ, ವಿವಾಹಿತರೆಲ್ಲರೂ ಓದತಕ್ಕ ಗ್ರಂಥ. ಗುಟ್ಟಿನಲ್ಲಿ ಓದಿ ಸಂತೋಷಪಡತಕ್ಕದ್ದು. ಶಯ್ಯಾಗೃಹದಲ್ಲಿಡಬೇಕಾದ ಚಿತ್ರಗಳು ಉಚಿತವಾಗಿ ಕೊಡಲಾಗುವುದು. ಈ ರೀತಿಯ ಜಾಹೀರಾತುಗಳು ನಮ್ಮ ಯುವಕ ಯುವತಿಯರನ್ನು ಮರುಳುಗೊಳಿಸಿ ಅವರ ಹಣವನ್ನು ಎತ್ತಿ ಹಾಕುವ ಉದ್ದೇಶದವುಗಳೆಂದು ಯಾರಿಗೆ ಅರಿಯದು?

ಇನ್ನೊಂದು ರೀತಿಯ ಜಾಹೀರಾತುಗಳು ಜ್ಯೋತಿಷ್ಯದ ಧಿಕ್ಕರಿಗಾಗಿವೆ, ಮಹಾರಾಜರುಗಳಿಂದ ಹೈಕೋರ್ಟು ಜಡ್ಜರಿಂದ ಭವಿಷ್ಯವನ್ನು ತಪ್ಪಿಲ್ಲದೆ ಹೇಳಿದುದಕ್ಕಾಗಿ ಚಿನ್ನದ ಪದಕಗಳನ್ನು ಬಹುಮಾನವಾಗಿ ಪಡೆದ ಪ್ರಸಿದ್ಧ ಜೋತಿಷಿಗಳೊಬ್ಬರು, ತಿಂಗಳ ಭವಿಷ್ಯಕ್ಕೆ ರೂ 10/- ಜಾತಕಕ್ಕೆ ರೂ. 5/- ಮೂರು ಪ್ರಶ್ನೆಗಳ ಉತ್ತರಕ್ಕೆ ರೂ. 2/- ವಿಳಾಸ ಇದೆ. ಭಾರತದ ಅತ್ಯಂತ ಪ್ರಸಿದ್ಧ ತಾಂತ್ರಿಕ ಯೋಗಿಯೊಬ್ಬರ ಜಾಹೀರಾತು—ಇಂಗ್ಲೆಂಡಿನ ಮಹಾರಾಜರಿಂದ ಇತ್ತು ಭೂಲೋಕದ ಇತರ ಪ್ರಸಿದ್ಧ ಪುರುಷರಿಂದ ಹೊಗಳಲ್ಪಟ್ಟವರು. ಇಂಗ್ಲೆಂಡ್, ಅಮೇರಿಕಾ, ಆಸ್ಟ್ರೇಲಿಯಾ, ಚೈನಾ, ಜಪಾನ್, ಮಲೆಯಾ, ಜಾವಾ, ಸಿಂಗಾಪುರ ಇತ್ಯಾದಿ ಭೂಲೋಕದ ಎಲ್ಲಾ ಸ್ಥಳಗಳಿಂದ ಅಪೇಕ್ಷಿಸದೆ ಸಾವಿರಾರು ಸರ್ಟಿಫಿಕೇಟುಗಳನ್ನು ಪಡೆದವರು, ಅತೀ ದೊಡ್ಡ ಜೋತಿಷ್ಯರು ಮತ್ತು ಕೈ ಪರೀಕ್ಷೆಯವರು ಇವರ ಅದ್ಭುತ ಯೋಗ ಮತ್ತು ತಂತ್ರ ಶಕ್ತಿಯಿಂದ ಯಾರೊಬ್ಬನ ಭೂತವರ್ತಮಾನ ಮತ್ತು ಭವಿಷ್ಯವನ್ನು ತಿಳಿಯ ಬಲ್ಲವರು ಮತ್ತು ಅದೇ ಶಕ್ತಿಯಿಂದ ಡಾಕ್ಟರುಗಳು ವೈದ್ಯರು ನಿರಾಶೆಯಿಂದ ಬಿಟ್ಟ ರೋಗಗಳನ್ನು ಗುಣಪಡಿಸಬಲ್ಲವರು. ದುಷ್ಟಗ್ರಹಗಳ ಬಾಧೆಯಿಂದ ಮನುಷ್ಯರನ್ನು ತಪ್ಪಿಸಬಲ್ಲವರು. ಕಠಿಣ ವ್ಯಾಜ್ಯಗಳನ್ನು ಗುಣಪಡಿಸಬಲ್ಲವರು. ಬರಬಹುದಾದ ಗಂಡಾಂತರಗಳನ್ನು ಮತ್ತು ಬಡತನವನ್ನು ಇಲ್ಲದಂತೆ ಮಾಡಿ, ಮಕ್ಕಳಿಲ್ಲದಿರುವಿಕೆ ಮತ್ತು ಕುಟುಂಬದ ಅಸೌಖ್ಯವನ್ನು ತಪ್ಪಿಸಬಲ್ಲವರು, ಇವರಲ್ಲಿರುವ ಕವಚಗಳನ್ನು ಕೊಂಡುಕೊಂಡವರು ವಿಶೇಷ ದ್ರವ್ಯವನ್ನು ಹೊಂದುವರು. ಒಂದು ಕವಚಕ್ಕೆ ರೂ. 7-10-0 ತಕ್ಷಣ ಫಲಕೊಡುವ ಕವಚಕ್ಕೆ ರೂ. 29-11-0 ಜೀವಮಾನವೆಲ್ಲಾ ವಿಶೇಷ ಫಲದಾಯಕ ಕವಚಕ್ಕೆ ರೂ. 129-11-0 ಇನ್ನೊಂದು ಕವಚವಿದೆ. ಇದನ್ನು ಧರಿಸಿದವನು ಸರ್ವಿಸಿನಲ್ಲಿ ಪ್ರಮೋಶನ್ ಪಡೆಯುತ್ತಾನೆ. ಅಧಿಕಾರಿಗಳ ಪ್ರೀತಿಗೆ ಪಾತ್ರನಾಗುತ್ತಾನೆ. ಸಿವಿಲ್ ಕ್ರಿಮಿನಲ್ ವ್ಯಾಜ್ಯಗಳಲ್ಲಿ ಗೆಲ್ಲುವರೆ ಇದು ಅದ್ವಿತೀಯ ಸಾಧನ. ಭವಲ್ ಸನ್ಯಾಸಿಯು ವ್ಯಾಜ್ಯದಲ್ಲಿ ಗೆದ್ದುದು ಈ ಕವಚ ಧರಿಸಿದುದರಿಂದಲೇ. ಬೆಲೆ ರೂ. 9-2-0ರಿಂದ ಹಿಡಿದು ರೂ. 184-4-0ರ ವರೆಗೆ. ಮೋಹಿನಿ ಕವಚ ಎಂದೊಂದಿದೆ. ನೃಸಿಂಹ ಕವಚ ಎಂದು ಮತ್ತೊಂದು, ಸರಸ್ವತಿ ಕವಚ ಬೇರೊಂದು ವಿಳಾಸ ಇದೆ.

ಒಂದೂವರೆ ಪುಟದಷ್ಟು ಒಂದು ಅತೀದೊಡ್ಡ ಜಾಹೀರಾತು ಇದೆ. ಭವಿಷ್ಯವನ್ನು ಹೇಳುವ ರೋಗಗಳನ್ನು ಗುಣಮಾಡುವ ಮಾಯಾ ಸ್ತ್ರೀಯೊಬ್ಬಳ ಜಾಹೀರಾತು. ಭಾರತದಿಂದ ಮತ್ತು ಅನ್ಯದೇಶಗಳಿಂದ ಕೇಳದೆಯೇ ಬಂದಿರುವ ಸಾವಿರಾರು ಯೋಗ್ಯತಾ ಪತ್ರಗಳು ಸೂಕ್ಷ್ಮವಾಗಿ ಅದರಲ್ಲಿ ಕಾಣಬರುತ್ತವೆ. ಯೋಗ್ಯತಾ ಪತ್ರಗಳನ್ನು ಕೊಟ್ಟಿರುವವರ ಭಾವಚಿತ್ರಗಳು ಸಾಲುಸಾಲಾಗಿ ಇವೆ. ಈವರೆಗೆ ಈ ಮಾಯಾಸ್ತ್ರೀಯು ಹೇಳಿದ ಭವಿಷ್ಯಗಳು ನಡೆದವೆ ಎಂದು ರುಜುಪಡಿಸುವ ರಿಕಾರ್ಡುಗಳು ಇವೆ. ಯಾವ್ಯಾವ ಕವಚಕ್ಕೆ ಎಷ್ಟೆಷ್ಟು ಪ್ರತಿಫಲವೆಂಬ ಪಟ್ಟಿ ಬೇರೆಯೇ ಇದೆ. ಇಷ್ಟು ರಿಕಾರ್ಡು ಮುಂದಿರುವಾಗ ಯಾವ ಜಡ್ಜನಾದರೂ ಇದನ್ನು ನಂಬದಿರಲು ಸಾಧ್ಯವಿಲ್ಲವಷ್ಟೆ. ವಿಳಾಸ ಮತ್ತು ಬೇರೆ ವಿವರ ಸ್ಪಷ್ಟವಾಗಿ ಬರೆದರೆ ಕಳೆದ ವಾರ ನಾನು ಹೇಳಿರುವ ಮುಂದೆ ಬರುವ ಕಷ್ಟಗಳನ್ನು ತಪ್ಪಿಸಲಿಕ್ಕಾಗಿ ಮುಟ್ಟು ನಿಂತಿರುವ ಸ್ತ್ರೀಯರು ಯಾವ ಕಾಲದಲ್ಲಿಯೂ ಧೈರ್ಯದಿಂದ ತೆಗೆದುಕೊಳ್ಳಬಹುದಾದ ಮಾತ್ರೆಗಳ, ಯಾವ ಕಾರಣದಿಂದಲಾದರೂ ಮುಟ್ಟು ನಿಂತು ಯಾವ ಔಷಧವೂ ನಾಟದೆ ಕಷ್ಟದಲ್ಲಿ ಬಿದ್ದಿರುವ ಸ್ತ್ರೀಯರು ತಕ್ಕೊಂಡು ತಕ್ಷಣದಲ್ಲೇ ಮುಟ್ಟಾಗಬಹುದಾದ ಮೊದಲು ಯುರೋಪು ಖಂಡದಲ್ಲಿ ಮಾತ್ರವಿದ್ದು ಈಗ ಭಾರತದಲ್ಲೂ ದೊರೆಯುವ ಮಾತ್ರೆಗಳು ಸುಂದರಿಯರಾದ ಸ್ತ್ರೀಯರು ಒಂದು ವರುಷಕ್ಕೆ ಅಥವಾ ಎಂದೆಂದಿಗೂ ಮುಟ್ಟು ನಿಂತುಹೋಗುವ ಹೆದರಿಕೆಯಿಲ್ಲದೆ ಯೌವನವನ್ನು ಕಾಪಾಡಿಕೊಂಡಿರಬಹುದಾದ ಔಷಧಿಗಳ ಜಾಹೀರಾತುಗಳು ಇವೆಯಲ್ಲವೇ? ಅವು ಇಲ್ಲದೆ ಹೋದರೆ ನಮ್ಮ ವಾರಪತ್ರಿಕೆಗಳು ನಡೆಯುವುದು ಹೇಗೆ?

ಆಗಲಿ. ಈ ರೀತಿಯ ಜಾಹೀರಾತುಗಳು ಪತ್ರಿಕೆಗಳಲ್ಲಿದ್ದರೆ ಅದನ್ನು ಓದುವವರು ಅನಾಗರಿಕರೆಂದು ಹೇಗಾಗುತ್ತಾರೆ? ಎಂದು ಕೆಲವರು ಪ್ರಶ್ನಿಸಬಹುದು. ಈ ಪತ್ರಿಕೆಗಳನ್ನು ಓದುವವರೆಲ್ಲರೂ ಅನಾಗರಿಕರೆಂದು ನಾನನ್ನಲಿಲ್ಲ. ಇವುಗಳನ್ನೆಲ್ಲಾ ಓದಿ ನಂಬಿಕೊಂಡು ಅವುಗಳಲ್ಲಿ ಬರೆದ ಕವಚಗಳನ್ನೋ, ತಾಯಿತಗಳನ್ನೋ, ಮಾತ್ರೆಗಳನ್ನೋ ಸದಾ ತರಿಸುತ್ತಿರುವ ಗಿರಾಕಿಗಳು ಯಥೇಷ್ಟವಾಗಿ ನಮ್ಮಲ್ಲಿದ್ದಾರೆಂಬುದು ಸಾಲುಸಾಲಾಗಿ ಬರುತ್ತಿರುವ ಈ ಜಾಹೀರಾತುಗಳಿಂದ ಸ್ಪಷ್ಟವಷ್ಟೆ. ಹಾಗಿದ್ದರೆ ನಮ್ಮ ಪ್ರದೇಶವು ಇಂತಹ ಕುರುಡು ನಂಬಿಕೆಯ ತಿಳುವಳಿಕೆಯಿಲ್ಲದ ಹೆಡ್ಡ ಜನರಿಂದ ಕೂಡಿಕೊಂಡಿದೆ ಎಂದು ಹೊರಗಿನವನೊಬ್ಬನು ತಿಳಿದುಕೊಂಡರೆ ತಪ್ಪೇನು? ಅಂತಹ ಗಿರಾಕಿಗಳು ಸಾಕಷ್ಟಿರುವುದರಿಂದಲೇ ತಾವು ಜಾಹೀರಾತುಗಳನ್ನು ಪತ್ರಿಕೆಗಳಲ್ಲಿ ಕೊಡುತ್ತಿದ್ದೇವೆ ಎಂದು ಅವರೆಂದಾರು. ನಿಜ, ಗಿರಾಕಿಗಳಿರುವುದರಿಂದಲೇ ಜಾಹೀರಾತು, ಜಾಹೀರಾತಿನಿಂದಾಗಿ ಹೊಸಹೊಸ ಗಿರಾಕಿಗಳು. ಹೀಗೆಲ್ಲಾ ನಡೆಯುತ್ತದೆ.

ಇದಲ್ಲದೆ ನಮ್ಮ ಪತ್ರಿಕೆಗಳಲ್ಲಿ ಹೆಚ್ಚಾಗಿ ವಾರಪತ್ರಿಕೆಗಳಲ್ಲಿ ವಾರಭವಿಷ್ಯ, ರಾಶಿಫಲ ಇವೆಲ್ಲಾ ತುಂಬಿಹೋಗಿದೆ ಪ್ರಥಮತಃ ಇದನ್ನೆಲ್ಲಾ ಖಂಡಿಸುತ್ತಿದ್ದ ಸುಧಾರಕ ಪತ್ರಿಕೆಗಳೂ ಪತ್ರಿಕೆಗಳ ಪುಟವನ್ನು ಕಳಿವೇ ಮಾಡಬೇಕೆಂದು ನಿರುಪಾಯರಾದ ಈ ತುಷ್ಟಿಕಾಲದಲ್ಲಿಯೂ ಒಂದು ಪುಟವನ್ನು ವಾರದ ಭವಿಷ್ಯಕ್ಕಾಗಿ ಕಾದಿಡುತ್ತಾರೆ. ವಿಶೇಷ ಸಂಚಿಕೆಗಳಲ್ಲಿ ಭವಿಷ್ಯ ವಿಶೇಷವಾಗಿದೆ. ತಮ್ಮ ಸ್ವಂತ ಅಭಿಪ್ರಾಯ ಬೇರೆಯಿದ್ದರೂ ಗಿರಾಕಿಗಳಿಗಾಗಿ ವಾರಭವಿಷ್ಯವನ್ನು ಪ್ರಕಟಿಸಲೇ ಬೇಕಾಗಿದೆ ಯಾವ ವರ್ತಮಾನದಲ್ಲಿ ಏನೊಂದೂ ಉತ್ಸಾಹವಿಲ್ಲದಿದ್ದರೂ ವಾರಭವಿಷ್ಯಕ್ಕಾಗಿಯೇ ಪತ್ರಿಕೆಗಳನ್ನು ಕೊಂಡುಕೊಳ್ಳುವವರು ಎಷ್ಟು ಜನರಿಲ್ಲ? ವಾರಭವಿಷ್ಯ ಆ ಪತ್ರಿಕೆಗಿಂತ ಈ ಪತ್ರಿಕೆಯಲ್ಲಿ ಒಳ್ಳೇದು, ಇದರಿಂದ ಅದು ಸರಿ ಎಂದು ಸಿಗುವ ಎಲ್ಲಾ ಪತ್ರಿಕೆಗಳನ್ನೂ ಓದುವವರಿಲ್ಲವೇ? ಇಂತಹ ವಿದ್ಯಾರ್ಥಿಗಳು ನಮ್ಮಲ್ಲಿ ಬೇಕಾದಷ್ಟಿರುವಾಗ ವಾರಭವಿಷ್ಯವನ್ನು ಏಕೆ ಪ್ರಕಟಿಸುತ್ತೀರೆಂದು ನಮ್ಮ ಪತ್ರಿಕೆಗಳ ಕೂಡೆ ನಾವು ಪ್ರಶ್ನಿಸಿ ಪ್ರಯೋಜನವೇನು? ಎಲ್ಲಾ ವರ್ತಮಾನಗಳನ್ನು ಬಿಟ್ಟು ಬಿಟ್ಟು ವಾರದ ಭವಿಷ್ಯ ಎಂದು ಹೆಸರಿಟ್ಟು ಒಂದು ವಾರಪತ್ರಿಕೆ ಹೊರಟರೂ ಅದಕ್ಕೆ ಸಾಕಷ್ಟು ಗಿರಾಕಿಗಳು ಸಿಕ್ಕುವರೆಂದು ನಂಬಬಹುದು. ಎಲ್ಲರೂ ಭವಿಷ್ಯವನ್ನು ನಂಬುವವರೇ ವಿನಾ ಭೂತ ವರ್ತಮಾನ ಅವರಿಗೆ ಬೇಡವಾಗಿದೆ.

ಇದರಿಂದಲೇ ನಾನು ಮೊದಲಾಗಿ ಹೇಳಿದೆ. ಒಂದು ಪ್ರದೇಶದ ಸಂಸ್ಕೃತಿ ಪ್ರಗತಿ ಅಲ್ಲಿಯ ಪತ್ರಿಕೆಗಳನ್ನು ಮುಖ್ಯವಾಗಿ ಅವುಗಳಲ್ಲಿರುವ ಜಾಹೀರಾತುಗಳನ್ನು ನೋಡಿ ತಿಳಿಯಬಹುದು ಎಂದು. ಬರುವ ವಾರ ವಾರಭವಿಷ್ಯದ ವಿಚಾರ ಹರಟೆ ಪ್ರಾರಂಭಿಸಬಹುದೇ? ಕಳೆದ ಎರಡು ವಾರಗಳಿಂದ ನಾವು ಜನಗಣನೆ ಆಹಾರ ಸಮಸ್ಯೆ, ಸಂತತಿ ಕಂಟ್ರೋಲ ಈ ವಿಚಾರದಲ್ಲಿ ಮಾತಾಡಿಕೊಂಡಿದ್ದೆವಷ್ಟೆ. ಈ ವಿಚಾರಗಳಿಗೆ ಈಗ ಪ್ರಾಮುಖ್ಯತೆ ಬರುತ್ತಿದೆ. ಆಹಾರ ಸಮಸ್ಯೆಯ ವಿಷಯ ಮಾತಾಡುತ್ತಾ ಶ್ರೀ ಜವಾಹರಲಾಲರು ಮುಂಬಾಯಿಯಲ್ಲಿ ಮೊನ್ನೆ ಅಂದರು "ಆಹಾರವನ್ನು ಹೆಚ್ಚು ಹೆಚ್ಚಾಗಿ ಬೆಳೆಸಿರಿ. ಇಲ್ಲದಿದ್ದರೆ ಸಂತತಿ ಉತ್ಪಾದನೆ ಪ್ರತಿಬಂಧಿಸಿರಿ" ಎಂದು ಶ್ರೀ ಜವಾಹರಲಾಲರು ಅಂದ ಮೇಲೆ ಆ ವಿಷಯ ಎಲ್ಲರ ಮನಸ್ಸಿಗೂ ಹಿಡಿಯುವುದಿದೆ. ಸದ್ಯದಲ್ಲೇ ನಮ್ಮ ದೇಶದಲಿ ಸಂತತಿ ಪ್ರತಿಬಂಧಿಸಲು ಹೇಗೆ ಸಾಧ್ಯವೆಂದು ವಿಚಾರಿಸಲು ಒಂದು ಕಮಿಟಿ ನಿಯಮಿಸಲ್ಪಡಲಿಕ್ಕೂ ಸಾಕು. ಆರೋಗ್ಯ ಇಲಾಖೆಯ ಮನಸ್ಸು ಆ ಕಡೆಗೆ ಹರಿಯಬಹುದು. ಆ ವಿಷಯ ಬೇಕಾದ ಕಾರ್ಯಕ್ರಮವನ್ನು ಸರಕಾರದವರು ಕೈಗೊಳ್ಳಲೂ ಬಹುದು. ಏನಾದರೊಂದು ವ್ಯವಸ್ಥೆ ಮಾಡದೆ ಬಿಡಬಹುದಾದ ಪ್ರಶ್ನೆಯಲ್ಲವೆಂದು ಈಗ ಎಲ್ಲರಿಗೂ ತಿಳಿದಿದೆ.

ಈಗ ಹರಟೆಯು ಪ್ರಬಂಧದಂತೆಯೇ ನಡೆಯುತ್ತಿದೆ. ಹರಟೆಯಲ್ಲಿ ಬೇಕಾದ ವಿನೋದಗಳು ಕಡಿಮೆಯಾಗುತ್ತಿವೆ. ಬರೇ ಕಾಲಕ್ಷೇಪಕ್ಕಾಗಿ ಓದುವ ವಿಚಾರಗಳಿಲ್ಲ ಎಂಬ ದೂರು ಬರುತ್ತಿದೆ ಹಾಗೆಂದು. ಬರುವ ವಾರದಿಂದ ಈ ದೂರು ನಮ್ಮ ಲಕ್ಷ್ಯಕ್ಕೆ ತೆಗೆದುಕೊಳ್ಳಲಾಗುವುದು ನಮಸ್ಕಾರ

ಪ್ರೀತಿಯರಲಿ.

ಗೊನೋರಿಯಾ ಪರಮಾರೋಗ ಉಷ್ಣ ರೋಗಕ್ಕೆ ಔಷಧ

೭ ದಿವಸಗಳಲ್ಲಿ ಈ ರೋಗ ನಿರ್ಮೂಲನಮಾಡುವುದು ಗ್ಯಾರಂಟಿ

ಶರೀರದಿಂದ ಕೀವು ಬರುತ್ತಿದ್ದರೆ, ಮೂತ್ರಕ್ಕೆ ಹೋದಾಗ ಉರಿ ಹತ್ತುತ್ತಿದ್ದರೆ, ಶರೀರದಿಂದ ರಕ್ತ ಸೋರಿದ ಹುಣ್ಣುಗಳು ಹಿಂದಕ್ಕೆ ಸರಿಯುತ್ತಿದ್ದರೆ, ಶರೀರದ ಸಾಕ್ಷ್ಯ ಕಾಣುವಾಗಿದ್ದರೆ,.... ಚಳಿ ಬಿದ್ದಿದ್ದರೆ, ಉಷ್ಣದಿಂದ ಜ್ವರ ಬಂದಿದ್ದರೆ, ಉರಿ ಆಗಿದ್ದರೆ, ಮೂಲವ್ಯಾಧಿ, ಭಗಂದ್ರ, ಗಂಡಮಾಲಿ, ಕೈಕಾಲು ಶೂಲಿ, ಆಘಾತಂಗ ವಾಯು ರಕ್ತಸೋರುವದು ಸ್ತ್ರೀಯರ ಬಿಳಿಸೆರಗು ಹೋಗುತ್ತಿದ್ದರೆ, ಗರ್ಭಾಶಯದಿಂದ ಗರ್ಭಕೋಶ ನಷ್ಟವಾಗಿದ್ದರೆ, ಸರಿಯಾಗಿ ಋತು ಆಗದಿದ್ದರೆ, ಮೂತ್ರ ಉರಿಯುತ್ತಿದ್ದರೆ, ಈ ಎಲ್ಲಾ ಬೇನೆಗಳಿಗೆ ಈ ನಮ್ಮ ಔಷಧವು ಇರುವದು. ಮೊದಲ ದಿವಸ ಬೆಳಿಗ್ಗೆ ೧ ಗಂಟೆ ಪ್ರಮಾಣ ಔಷಧ ಅರ್ಧಸೇರು ತುಪ್ಪದಲ್ಲಿ ತಕ್ಕೊಳ್ಳಬೇಕು ಮೊದಲ ದಿವಸ ಮಾತ್ರ ಮುಂಜಾನೆ ಸಂಜೆ ಎರಡು ಸಾರೆ ತಕ್ಕೊಳ್ಳಬೇಕು. ಮುಂದೆ ದಿನ ದಿನಸ ಬೆಳಿಗ್ಗೆ ಒಂದೇ ಸಾರೆ ೭ ದಿವಸ ಸೇವಿಸಬೇಕು.- ಈ ಔಷಧವನ್ನು ಬೇಸಿಗೆಯಲ್ಲಿ ತುಪ್ಪದಲ್ಲಿ, ಥಂಡಿ ಮಳೆಗಾಲದಲ್ಲಿ ಜೇನತುಪ್ಪದಲ್ಲಿ ತಕ್ಕೊಳ್ಳಬೇಕು. ಪಥ್ಯ: ಹುಳಿಖಾರ, ಬದನೆಕಾಯಿ, ಒಳ್ಳೆಣ್ಣೆ ಬಿಡಬೇಕು.

ಬಾಟ್ಲಿ ೧ಕ್ಕೆ ರೂ.   ಪೋಸ್ಟ ಖರ್ಚ ೮ ಆಣೆ

ಏಜೆಂಟರು:—ಗದಗ:—ಗದಗ ಫಾರ್ಮಸಿ, ಹುಬ್ಬಳ್ಳಿ:—ಹುಬ್ಬಳ್ಳಿ ಫಾರ್ಮಸಿ ಬಾಗಲಕೋಟಿ:-ಬಾಗಲಕೋಟಿ ಫಾರ್ಮಸಿ, ಧಾರವಾಡ:-ಧಾರವಾಡ ಫಾರ್ಮಸಿ, ದಾವಣಗೇರಿ: ದಾವಣಗೇರಿ ಪ್ರೆಸ್. ನಂಜುಡೇಶ್ವರ ಮೂರ್ತಿ ದಾವಣಗೇರಿ.

ಪತ್ರವ್ಯವಹಾರ ಮಾಡತಕ್ಕ ಮಾಲಕರ ವಿಳಾಸ.

ರೇವಣಸಿದ್ದಪ್ಪ ಹಾಲಪ್ಪ ದಾವಣಗೇರಿ,

ಆಯುರ್ವೇದ ಔಷಧಾಲಯ, ಗದಗ-

ಮುಪ್ಪಿನ ಸ್ವಾಪ್ನ ನಿಂತಿತು

'ಅಮರ' ಗುಳಿಗೆಗಳನ್ನು ಉಪಯೋಗಿಸಿದರೆ ಹದಿಹರೆಯ ಯುವಕಸ್ವಾಸ್ಥ್ಯವಾಗುವದು, ಚೆಲುವಿಗೆ ಬರುವುದು, ಈ ಔಷಧ ಸೇವನೆಯಿಂದ ತೀವ್ರ ಗುಣಹೊಂದಬಹುದು, ಯಾವ ಬಾಧೆಯೂ ಇಲ್ಲ. ಸಾವಿರಾರು ಮಂದಿಗೆ ಖಾತ್ರಿ ಗುಣವಾಗಿದೆ- ಬೆಲೆ; ರೂ. 3-; ಸ್ಪೆಶಲ್ ರೂ. 5- ಅಧಿಕಾಧಿಕ ಸ್ಪೆಶಲ್ ರೂ. 8- [ವಿ. ಪಿ. ಹನ್ನೆರಡಾಣೆ ಪ್ರತ್ಯೇಕ.]

MIS P. DEVEE, F DS (N. J.)

Tollygunge CALCUTTA

ಕ್ಯಾಥಿಸ್ಟರು ಶಹಾ ಕಂಪೆನಿ, ಬೆಂಗಳೂರು

'ಅಂತರಂಗ'

ಮಾಸಪತ್ರಿಕೆಯನ್ನು

ತಪ್ಪದೆ ಓದಲು ಮರೆಯದಿರಿ.

ಅವಿಭಕ್ತ ಕುಟುಂಬ ಪದ್ಧತಿ

ಕೆ. ಗುರುರಾಜ ಉಡುಪ, ಬಿ.ಎಸ್‌ಸಿ.

ನಮ್ಮಲ್ಲಿ ಬಳಕೆಯಲ್ಲಿ ಬಂದ ಹಲವಾರು ಪದ್ಧತಿಗಳಲ್ಲಿ ಅವಿಭಕ್ತ ಕುಟುಂಬ ಪದ್ಧತಿಯೂ ಒಂದು. ಮನೆಗೊಬ್ಬ ಯಜಮಾನ, ಅವನ ಜತೆಯಲ್ಲಿ ತಂಗಿ, ತಮ್ಮಂದಿರೂ, ಮಕ್ಕಳೂ ಸೊಸೆಯರೂ, ತಂದೆತಾಯಿ, ದೊಡ್ಡ ತಂದೆ ದೊಡ್ಡ ತಾಯಿ, ಅಜ್ಜ ಅಜ್ಜಿ ಮೊದಲಾದವರೆಲ್ಲರೂ ಒಂದೇ ಮನೆಯಲ್ಲಿ ಯಾವ ವಿಭಾಗವನ್ನೂ ಮಾಡಿಕೊಳ್ಳದೆ ಇರುವಂತಹ ಕುಟುಂಬವನ್ನೇ ಅವಿಭಕ್ತ ಎಂದರೆ ವಿಭಾಗವಾಗದ ಕುಟುಂಬವೆನ್ನುತ್ತೇವೆ. ಹಳ್ಳಿಗಳಿಂದ ಕೂಡಿದ ನಮ್ಮ ಭಾರತದ ಸಂಸ್ಕೃತಿಯಲ್ಲಿ ಮಧ್ಯಯುಗದಿಂದಲೂ ಇದೇ ತೆರನಾದ ಪದ್ಧತಿಯೇ ರೂಢಿಯಾಗಿದೆ. ಅಳಿಯ ಸಂತಾನ ಅಥವಾ ಮರುಮಕ್ಕತ್ತಾಯವು ಕಟ್ಟಳೆಯು ಜಾರಿಯಲ್ಲಿರುವ ಕನ್ನಡ ಹಾಗೂ ಕೇರಳದ ಜಿಲ್ಲೆಗಳಲ್ಲಿ ಇಂತಹ ದೊಡ್ಡದೊಡ್ಡ ಕುಟುಂಬಗಳು ಈಗಲೂ ಕಾಣಸಿಗುವುವು.

ಆದರೆ ಪಾಶ್ಚಾತ್ಯ ಸಂಸ್ಕೃತಿ ಇದಕ್ಕೆ ತೀರ ವಿರುದ್ಧವಾದುದು. ನಮ್ಮದು ಹಳ್ಳಿ ಪ್ರಧಾನವಾದರೆ ಅವರದು ನಗರ ಪ್ರಧಾನವಾದುದು. ದೊಡ್ಡ ನಗರಗಳನ್ನು ಕಟ್ಟಿಕೊಂಡು ಅಲ್ಲಿನ ಯಂತ್ರಗಳಲ್ಲಿ ದುಡಿಯುವುದು, ಉದ್ಯಮರಂಗದಲ್ಲಿ ಮೈಮುರಿದು ಕೆಲಸ ಮಾಡುವುದು ಅವರಿಗೆ ಹಿಡಿಸುವುದು. ನಗರಗಳಲ್ಲಿ ಅಂತಹ ದೊಡ್ಡ ಮನೆ ಕುಟುಂಬಗಳನ್ನು ಕಟ್ಟಿಕೊಂಡಿರಲು ತೀರ ಅಸಾಧ್ಯ. ಸರಿಯಾದ ಅನುಕೂಲವು ಲಭಿಸದು. ಹಾಗಾಗಿ ಮಕ್ಕಳು ಬಲಿತು ಸ್ವತಂತ್ರ ಜೀವನೋಪಾಯವನ್ನು ಕೈಕೊಳ್ಳಲು ಶಕ್ತರಾದರೆಂದರೆ ತಂದೆತಾಯಿಗಳಿಂದ ಬೇರೆಯಾಗಿ ತಮ್ಮ ಒಲವಿನಾಕೆಯೊಂದಿಗೆ ಒಂದು ಹೊಸ ಸಂಸಾರವನ್ನು ಹೂಡುವರು. ಹಾಗಾಗಿ ಒಂದು ಮನೆಯಲ್ಲಿ ಅಲ್ಲಿ ವಾಸಿಸುವರೆಂದರೆ ತಂದೆತಾಯಿ ಮತ್ತು ಸಣ್ಣಪುಟ್ಟ ಮಕ್ಕಳು ಅಷ್ಟೆ.

ಕ್ರಮೇಣ ಪಾಶ್ಚಿಮಾತ್ಯ ಪದ್ಧತಿಯ ಬಿರುಗಾಳಿಯು ಬೀಸುತ್ತ ನಮ್ಮ ಈ ಪದ್ಧತಿಯೆಂಬ ಭವ್ಯಗೋಪುರವನ್ನು ಒಡೆಯಲು ಮಾಡುವಂತಾಯಿತು. ಪರಿಣಾಮವಾಗಿ ನಮ್ಮಲ್ಲೂ ನಗರಗಳು, ಅತಿ ದೊಡ್ಡ ಉದ್ಯಮಗಳೂ ಹುಟ್ಟಿ ಬೆಳೆದುಬಂದವು. ನಮ್ಮ ಹಳ್ಳಿಗಳಿಂದ ಒಂದೇ ಸವನೆ ಮಂದಿ ಉದ್ಯೋಗದ ಆಸೆಯಿಂದ ನಗರದೆಡೆಗೆ ಧಾವಿಸಿದರು. ದೊಡ್ಡ ಹುದ್ದೆಗಳನ್ನು ಗಳಿಸಿಕೊಂಡವರು ಅದೇ ನಗರದಲ್ಲಿಯೇ ಮನೆ ಮಾಡತೊಡಗಿದರು. ಕೂಲಿಗಾರರೂ ತಮ್ಮ ಹೆಚ್ಚಿನ ಸಮಯವನ್ನು ನಗರಗಳಲ್ಲೇ ಕಳೆಯಲು ಮೊದಲು ಮಾಡಿದರು. ಈ ಮಹಾ ಆಘಾತದಿಂದಾಗಿ ತೀವ್ರವಾಗಿ ನಮ್ಮಲ್ಲಿನ ಅವಿಭಕ್ತ ಕುಟುಂಬಗಳು ಮಾಯವಾಗತೊಡಗಿವೆ. ನಮ್ಮ ಪೂರ್ವಿಕರು ಕಟ್ಟಿದ ಭವ್ಯವಾದ ಸಮಾಜವೇ ಬಿರುಕು ಬಿಡುವಂತಾಗಿದೆ.

ಮುಖ್ಯವಾಗಿ ಈ ರೀತಿಯ ಸಮಾಜ ಪದ್ಧತಿಯು ಕೃಷಿಜೀವನಕ್ಕೆ ಚೆನ್ನಾಗಿ ಹೊಂದಿಕೊಂಡಿದೆ ಎನ್ನಬಹುದು. ವಿಭಾಗವಾಗದಿರುವ ವಿಶಾಲವಾದ ಕೃಷಿಕ್ಷೇತ್ರಗಳು, ವಿಸ್ತಾರವಾದ ಗದ್ದೆಗಳ ಸಾಗುವಳಿಗಾಗಿ ಮನೆಯಲ್ಲಿ ಜನಗಳ ಸಂಖ್ಯೆಯೂ ಹೆಚ್ಚುತ್ತದೆ. ಇದರಿಂದಾಗಿ ಗದ್ದೆಗಳಿಗೆ ಸಾಕಷ್ಟು ಗೊಬ್ಬರವೂ ಸಿಗುವುದು. ಸಾಕಷ್ಟು ಮೇವು ಅಕ್ಕಿಯ ತವುಡುಗಳ ಪೂರೈಕೆಯು ಇರುವುದರಿಂದಾಗಿ ದನಕರುಗಳನ್ನೂ ಎಮ್ಮೆಗಳನ್ನೂ ಸಾಕಬಹುದಾದ್ದರಿಂದ ಹಾಲು, ಮೊಸರು, ತುಪ್ಪ ಮೊದಲಾದ ಹೈನದ ಉತ್ಪತ್ತಿಯೂ ಸಮೃದ್ಧವಾಗಿ, ಮನೆಯ ಆಹಾರದಲ್ಲಿ ಹೆಚ್ಚಿನ ಪೌಷ್ಟಿಕ ಆಹಾರಾಂಶಗಳೂ ಸೇರಿಕೊಂಡಿರಬಹುದಾಗಿದೆ. ಗದ್ದೆಯನ್ನು ಉಳುವಾಗಲೂ ಶಕ್ತಿಯುತವಾದ ಕೋಣ, ಎತ್ತುಗಳಿರುವುದರಿಂದ ಅದು ಚೆನ್ನಾಗಿ ಉತ್ತು ಬಿತ್ತಲ್ಪಟ್ಟು ಕೃಷಿಯಿಂದ ಬರುವ ಉತ್ಪತ್ತಿಯೂ ಹೇರಳವಾಗಿರುವುದು. ಮನೆಯಲ್ಲಿ ದುಡಿಯುವವರ ಸಂಖ್ಯೆಯೂ ಸಾಕಷ್ಟು ಇದ್ದೇ ಇರುತ್ತದೆ. ಸಮಾಜದ ಕಲ್ಯಾಣ, ಏಳಿಗೆಯನ್ನೇ ಗುರಿಯಾಗಿಟ್ಟುಕೊಂಡು ಅಲ್ಲಿನ ಮಂದಿ ಉತ್ಸಾಹಿಗಳಾಗಿ ದುಡಿದು ಒಂದು ರೀತಿಯ ಸಮತೆಯು ಅಲ್ಲಿ ನೆಲೆನಿಲ್ಲುವುದಕ್ಕೆಡೆಯಿದೆ. ದುಡಿತವೇ ಜೀವನದ ಮೂಲಮಂತ್ರ ಎಂದವರು ತಿಳಿದುಕೊಂಡು ಒಬ್ಬರಿಗೊಬ್ಬರು ಸಹಾಯವನ್ನು ನೀಡಿ ಸಹಕಾರ ಬುದ್ಧಿಯಿಂದ ಸಮಾಜದ ಅಭಿವೃದ್ಧಿಗಾಗಿ, ಪ್ರಗತಿಗಾಗಿ ಹೋರಾಡುವರು.

ಅಂತಹ ಸಮಾಜದಲ್ಲಿ ಮಕ್ಕಳು ಮುದುಕರ ಸಂಖ್ಯೆಯು ಹೆಚ್ಚಿದ್ದರೂ ಇತರರ ಶ್ರಮಜೀವನದ ಫಲವಾಗಿ ಅವರು ಒಂದು ಹೊರೆಯಂತೆ ತೋರಲಾರರು. ಬದಲಾಗಿ ಮುದುಕರು ತಮ್ಮ ಅನುಭವಯುಕ್ತವಾದ ಹಿತವಚನವನ್ನು ಹೇಳುವುದನ್ನು ದುಡಿಯುವವರು ಶ್ರದ್ಧೆಯಿಂದ ಕೇಳಿ ಅವರನ್ನು ತಾಯಿಯೋ ಅಜ್ಜಿಯೋ ಎಂಬ ಪೂಜ್ಯಭಾವದಿಂದಾಗಿ ನೋಡುವಂತಾಗುವುದು. ಅದಲ್ಲದೆ ದುಡಿಯುತ್ತಿರುವವರ ಮಕ್ಕಳ ಪಾಲನೆ, ಮನೆಯಲ್ಲಿನ ಅಡಿಗೆ ಮಾಡುವುದೇ ಮೊದಲಾದ ಸಣ್ಣಪುಟ್ಟ ಕೆಲಸವನ್ನು ಅಂತಹ ಮುದುಕರು ಮಾಡಿಕೊಂಡು ಆ ಸಮಾಜದ ವ್ಯಕ್ತಿಗಳ ಸಹಾಯಕರಾಗಿ, ಕೈದೀವಿಗೆಯಾಗಿ ಅವರು ಬಾಳುವರು.

ನೆರೆಯಿಂದಾಗಿ ಬೆಳೆಯುನಾಶ ಅಥವಾ [illegible] ಯಿಂದಾಗಿ ಆ ಕುಟುಂಬಕ್ಕೆ ಆರ್ಥಿಕ ದುರವಸ್ಥೆಯು ಬಂದರೂ ಅದನ್ನು ಎದುರಿಸುವ ಶಕ್ತಿಯು ಅವರಿಗಿದ್ದೇ ಇರುತ್ತದೆ. ಅಂತಹ ದುರವಸ್ಥೆಯು ಕುಟುಂಬದ ಎಲ್ಲ ವ್ಯಕ್ತಿಗಳ ಮೇಲೆ ಹಂಚಿ ಬಿದ್ದಂತಾಗುವುದು. ಒಂದೆರಡು ಗದ್ದೆಗಳ ಬೆಳೆ ಹಾಳಾದರೂ ಉಳಿದವುಗಳಲ್ಲಿನ ಅಧಿಕೋತ್ಪತ್ತಿಯಿಂದಾಗಿ ಅಪಾರ ನಷ್ಟ ಒದಗಿ ಬರಲಾರದು. ಹೇಗಿದ್ದರೂ ಆರ್ಥಿಕ ಪರಿಸ್ಥಿತಿಯನ್ನು ಸುಧಾರಿಸಲಿಕ್ಕಾಗಿ ಆಸ್ತಿಯನ್ನೇ ಮಾರಾಟಮಾಡುವ ಪರಿಸ್ಥಿತಿ ಎಂದೂ ಬರಲಾರದು. ಅಂತಹ ಕುಟುಂಬದಲ್ಲಿ ನಡೆಯುತ್ತಿದ್ದ ಮದುವೆ ಮುಂಜಿ ಮೊದಲಾದ ಸಮಾರಂಭಗಳು ನಡೆದು ಸದಾಕಾಲ ಅಲ್ಲಿ ಸುಖಸಂಪತ್ತು ಸಮೃದ್ಧಿ ಇರಲು ಸಾಧ್ಯವಿದೆ. ಒಂದು ಸಮತಾವಾದೀ ರಾಷ್ಟ್ರದ ಕಿರು ಉದಾಹರಣೆಯಾಗಬಹುದು, ಸೂಕ್ಷ್ಮರೂಪವಾಗಬಹುದು. ಅಂತಹದೊಂದು ಕುಟುಂಬ. ಇಂತಹ ಸುವ್ಯವಸ್ಥಿತಿಯು ತುಂಬಿ ತುಳುಕುತ್ತಿರುವ ಭದ್ರವಾದ ಕುಟುಂಬಗಳೇ ದೇಶದ ಭದ್ರವಾದ ಅಸ್ತಿವಾರವಾಗುವುದರಲ್ಲಿ ಸಂಶಯವಿರಲಾರದು.

ಆದರೆ "ಸಮತಾವಾದಿ ರಾಷ್ಟ್ರದಲ್ಲಿರುವಂತೆ ಇಂತಹ ಕುಟುಂಬಗಳಲ್ಲಿ ವ್ಯಕ್ತಿಯ ವಿಕಾಸಕ್ಕೆ ಎಡೆಯಿರಲಾರದು. ವ್ಯಕ್ತಿವ್ಯಕ್ತಿಗಳಲ್ಲಿ ದ್ವೇಷಾಸೂಯೆಗಳೂ, ಭಿನ್ನಾಭಿಪ್ರಾಯಗಳೂ ತೋರಿಬರುವವಾದ್ದರಿಂದ ಅಂತಹ ಕುಟುಂಬದಲ್ಲಿ ಎಂದೆಂದಿಗೂ ಸುಖಶಾಂತಿಗೆ ಎಡೆಯಿರಲಾರದು" ಎಂಬ ಕೂಗು ಕೆಲವೆಡೆಯಿಂದ ಕೇಳಿಬರಬಹುದು. ವಿಭಕ್ತ ಕುಟುಂಬ ಪದ್ಧತಿಯನ್ನು ಸರಿಯೆಂದು ಹೇಳುವಂತಹವರ ಕಡೆಯಿಂದ. ಆದರೆ ಮೇಲೆ ಹೇಳಿದ ರೀತಿಯ ಪದ್ಧತಿಯ ಅಪಾರ ಪ್ರಯೋಜನವನ್ನು ಸುಲಕ್ಷಿಸುವಾಗ ಅದರಲ್ಲಿ ಬರುವ ಕುಂದು ಕೊರತೆಗಳು ಬರಿ ಕ್ಷುಲ್ಲಕವೆಂದು ತೋರಿ ಬರದಿರಲಾರದು. ಆದುದರಿಂದ ಅಂತಹ ಕುಟುಂಬದಲ್ಲಿ ತಿಳುವಳಿಕೆಯುಳ್ಳಂತಹ ವ್ಯಕ್ತಿಗಳು ಅಲ್ಲಿ ಏಳಬಹುದಾದ ಸಣ್ಣಪುಟ್ಟ ಒಳಜಗಳಗಳನ್ನು, ಕಿರುಕುಳಗಳನ್ನು ಅಲ್ಲಿಯೇ ಮುರಿದು ಕುಟುಂಬದ ಸಾಮೂಹಿಕ ಬೆಳವಣಿಗೆಗೆ ಅವರು ನೆರವಾಗಬೇಕು, ಅದರ ದಾರಿಯನ್ನು ಸುಗಮವಾಗಿಸಬೇಕು.

ಬದಲಾಗಿ ವ್ಯಕ್ತಿಯ ಪೂರ್ಣ ವಿಕಾಸಕ್ಕೆ ಎಡೆಕೊಟ್ಟಂತಹ ವಿಭಕ್ತ ಕುಟುಂಬದ ಜೀವಿಗಳ ಕಷ್ಟಕಾರ್ಪಣ್ಯಗಳನ್ನೂ ದುಗುಡದುಮ್ಮಾನಗಳನ್ನೂ ಕಂಡಾಗ ಅವಿಭಕ್ತ ಕುಟುಂಬದಲ್ಲಿ ಕಂಡುಬರುವ ಕುಂದು ಕೊರತೆಗಳು ಇದಕ್ಕಿಂತ ನೂರುಪಾಲು ಮೇಲೆನ್ನಿಸುವುದು. ತಂದೆಗೆ ಐದುಮಂದಿ ಗಂಡು ಮಕ್ಕಳೆಂದಿಟ್ಟುಕೊಳ್ಳುವ. ಕೆಲವು ವೇಳೆ ತಂದೆ ಇರುವಾಗಲೇ ಇನ್ನು ಕೆಲವೆಡೆ ತಂದೆಯ ಮರಣಾನಂತರ ಅವನ ಆಸ್ತಿಯು ಐದು ಪಾಲಾಗುವುದು. ಬೇರೆಬೇರೆ ಗದ್ದೆಗಳನ್ನು ಪಾಲುಮಾಡುವಾಗ ಅದರಲ್ಲಿ ಹೆಚ್ಚು ಕಡಿಮೆಯಾದೀತೆಂದು ಕೆಲವು ತಿಳಿಗೇಡಿಗಳು ಪ್ರತಿಗದ್ದೆಯನ್ನೂ ಪಾಲುಮಾಡುವ ಕಿರುಕುಳಕ್ಕೂ ಹೋಗುವ ಸಂದರ್ಭಗಳೂ ಬರುವುವು. ಹೀಗಾಗಿ ಮನೆಯ ಸರ್ವ ಚರಸೊತ್ತನ್ನೂ ಐದುಪಾಲು ಕೊನೆಗೆ ಭವ್ಯವಾದ ಒಂದೇ ಮನೆಯ ಬದಲು ಐದು ಸಣ್ಣ ಗುಡಿಸಲುಗಳು ಮೇಲೇಳುವುವು. ಬೇರೆಬೇರೆ ಎತ್ತುಗಳನ್ನು ಕಟ್ಟಿಕೊಂಡು ಬೇರೆಬೇರೆ ಬೇಸಾಯ ಆರಂಭ, ಭೂಮಿಯ ವಿಸ್ತಾರ ಕಡಿಮೆಯಾದದ್ದರಿಂದಾಗಿ ಅವರ ಸಲಕರಣೆಗಳೂ ಸಣ್ಣವಾಗುತ್ತ ಬಂದಂತೆ ಅವುಗಳ ಯೋಗ್ಯತೆಯೂ ಕಡಿಮೆಯಾಗುತ್ತ ಬರುವುವು. ಬಡಕಲಾದ ಎತ್ತು (ಅವಕ್ಕೆ ಸಾಕಷ್ಟು ಮೇವಿನ ಪೂರೈಕೆ ಇಲ್ಲದ್ದರಿಂದಾಗಿ) ಗಳಿಂದ ಸಾಕಷ್ಟು ಗೊಬ್ಬರವೂ ಸಿಗದೆ ಉತ್ತುಬಿತ್ತುವ ಕಾರ್ಯವೂ ಸರಿಯಾಗಿ ಜರಗದೆ ತೀವ್ರವಾಗಿ ಗದ್ದೆಯ ಉತ್ಪತ್ತಿ ಅರ್ಧದಷ್ಟಾಗುವುದು. ಗದ್ದೆಯಿಂದು, ಅಸ್ಕಳ, ಈ ತೋಟ ಎಂದು ದಾಯಾದಿಗಳಲ್ಲಿ ಕೆಲವೆಡೆ ಜಗಳಕ್ಕಾರಂಭವಾದರೆ ಮತ್ತೆ ಅದು ಕೋರ್ಟಿನ ಕಟ್ಟೆಯಲ್ಲಿ ತೀರ್ಮಾನ. ಕೆಲವೆಡೆ ಅದು ಹೈಕೋರ್ಟಿನ ವರೆಗೆ ಹೋಗುವುದೂ ಇದೆ. ತಮ್ಮ ಪೂರ್ವಜರು ಗಳಿಸಿಟ್ಟ ಆಸ್ತಿಪಾಸ್ತಿ ತಮ್ಮವರಾರಿಗೂ ಸಿಗದೆ ಮೂರನೆಯವರ ಕಿಸೆಯ ಪಾಲಾಗುವುದು. ಹೀಗಾಗಿ ಸಾಲದ ಬಾಧೆ ಕೊನೆಗೆ ಆಸ್ತಿಯನ್ನೇ ಮಾರುವ ಸಂದರ್ಭಗಳು ಎಷ್ಟೋ ಬರುವುವು. ತಮ್ಮೊಳಗಿನ ಕಲಹಗಳಿಂದಾಗಿ ಹತ್ತಿರದ ಶ್ರೀಮಂತನೊಬ್ಬನು ಆ ಆಸ್ತಿಯನ್ನು ಕೊಂಡುಕೊಂಡು ತನ್ನ ಬೊಕ್ಕಸವನ್ನು ತುಂಬಿಸುವಂತಾಗುವುದು. ಒಬ್ಬನ ಗದ್ದೆಗೆ ಇನ್ನೊಬ್ಬನ ಕೋಳಿ ಹೋಯಿತೆಂದು, ಅವನ ಗದ್ದೆಗೆ ಮತ್ತೊಬ್ಬನ ದನ ಬಂದಿತೆಂದು ಸದಾ ಕಲಹ ದ್ವೇಷಗಳು ಅಂತಹ ಕುಟುಂಬಗಳಲ್ಲಿ ತಪ್ಪಿದ್ದೇ ಅಲ್ಲ. ಹೀಗಾಗಿ ಎಲ್ಲೆಲ್ಲೂ ಅತೃಪ್ತಿ ಅಸಮಾಧಾನಗಳೇ ಎದ್ದು ತೋರುವುವು. ಅಂತಹ ಸಣ್ಣ ಕುಟುಂಬಗಳಲ್ಲಿನ ಮಕ್ಕಳು ಮುದುಕರನ್ನು ಸಾಕುವ ಭಾರ ದೊಡ್ಡದಾಗಿ ತೋರಿ ಅಂತಹವರು ಇತರರ ತಿರಸ್ಕಾರಕ್ಕೆಡೆಯಾಗುತ್ತಾರೆ. ದೊಡ್ಡ ಆಘಾತವನ್ನೆದುರಿಸುವ ಶಕ್ತಿ ಸಾಹಸಗಳು ಇಲ್ಲದಂತಾಗುವುವು.

ಪಾರ್ಲಿಮೆಂಟಿನಲ್ಲಿ ಈಗಲೀಗ ಚರ್ಚಿಸಲ್ಪಡುತ್ತಿರುವಂತಹ ಹಿಂದುಕೋಡ್ ಬಿಲ್ ಇಂತಹ ಅವಿಭಕ್ತ ಕುಟುಂಬ ಪದ್ಧತಿಗೆ ಮತ್ತೊಂದು ದೊಡ್ಡ ಕೊಡಲಿ ಏಟು. ಇಷ್ಟರವರೆಗೆ ಗಂಡು ಮಕ್ಕಳಲ್ಲಿ ಮಾತ್ರ ಪಾಲಾಗುತ್ತ ಹೋದರೆ ಇನ್ನು ಮುಂದೆ ತಂದೆಯ ಸ್ಥಿರಚರ ಸೊತ್ತುಗಳು ಮತ್ತಷ್ಟು ಹೆಚ್ಚು ಪಾಲಾಗಬೇಕಾಗುವುದು. ಪ್ರತಿಪಾಲಿಗೆ ಬರುವ ಆಸ್ತಿಯ ಅಂಶವು ಕಡಿಮೆಯಾಗುತ್ತ ಬಂದಂತೆ ಅವರೊಳಗಿನ ಕಲಹಗಳು ಮತ್ತಷ್ಟು ಹೆಚ್ಚುತ್ತ ಹೋಗುವುವು. ಅದಲ್ಲದೆ ಅಳಿಯ ಸಂತಾನ ಪದ್ಧತಿಯಂತೆ ಆಸ್ತಿಯನ್ನು ಮಾರುವ ಹಕ್ಕು ಮನೆಯ ಯಜಮಾನನಿಗೆ ಇಲ್ಲದೆ ಈ ರೀತಿಯ ಕುಟುಂಬಗಳು ಉಳಿಯುವಂತಾಗಿದ್ದರೂ ಮೇಲೆ ಹೇಳಿದ ಬಿಲ್ ಈ ಎಲ್ಲಾ ಕಟ್ಟಳೆಗಳನ್ನೂ ಹೇಳಹೆಸರಿಲ್ಲದಂತೆ ಮಾಡುವುದಾದ್ದರಿಂದ ಇಂತಹ ಅವಿಭಕ್ತ ಕುಟುಂಬಗಳೇ ಮಾಯವಾದವು.

ನಮ್ಮ ರಾಷ್ಟ್ರಾಧ್ಯಕ್ಷರು ಇಂತಹ ಒಂದು ದೊಡ್ಡ ಕುಟುಂಬದ ಒಡೆಯರಾಗಿದ್ದಾರೆ. ಹೀಗಿರುವಾಗ ಇಂತಹ ಕುಟುಂಬಗಳು ನಾಶವಾಗದಂತೆ ನಮ್ಮ ಪೂರ್ವಜರು ಕಟ್ಟಿದ ಸುಸ್ಥಿರ ಸಮಾಜವು ಹಾಳಾಗದಂತೆ ನಾವು ಬೇಗನೆ ಸೂಕ್ತ ಉಪಾಯಗಳನ್ನು ಕೈಕೊಳ್ಳುವುದವಶ್ಯಕ.

ಅಮೃತಾಂಜನ

ತಲೆವೇದನೆ, ಶಿರೋವೇದನೆ, ಉಳುಕು ಕುತ್ತಿಗೆ, ಭುಜ ಹಲ್ಲು ವೇದನೆಗಳಿಗೂ, ಎದೆನೋವು, ಘಾಯಗಳು, ಬಾತುಕೊಳ್ಳುವುದು, ಚೇಳವಿಷಮುಂತಾದವು, ಪಕ್ಷವಾತ, ನೆಗಡಿ. ಮೊದಲಾದ ಎಲ್ಲಾ ರೋಗಗಳಿಗೂ ಸಿದ್ಧೌಷಧ



REGD

ಹುಳು ಕಡ್ಡಿ ಮದ್ದು ನಮ್ಮಲ್ಲಿ ಸಿಕ್ಕುತ್ತದೆ

ಅಮೃತಾಂಜನ ಲಿಮಿಟೆಡ್

ಮದರಾಸು.

ಬೊಂಬಾಯಿ ಮತ್ತು ಕಲ್ಕತ್ತ.

Nambiar's

ARYA VAIDYA SALA

UDIPI

Ideal House for Ayurvedic Treatment.

T. N. Kelu Nambiar,
Vaidya.

ನೋಟೀಸು

ಕಾಸರಗೋಡು ಡಿಸ್ಟ್ರಿಕ್ಟ್ ಮುನ್ಸಿಫ ಕೋರ್ಟಿನಲ್ಲಿ

S. C. No. 259/1950

B. K. ಅಬ್ದುಲ್ಲ ಬ್ಯಾರಿ, ಎಳೆಂಜ ಮಮ್ಮು ಬ್ಯಾರಿ ಮಗ ಕಾಸರಗೋಡು ತಾಲೂಕು ಚಂಗಳ ಗ್ರಾಮದಲ್ಲಿರುವವನು } ವಾದಿ.

ಮತ್ತು

ಮೈದಿಂಕುಂಜ ಬ್ಯಾರಿ ಅಬು ಬ್ಯಾರೀರ ಮಗ, ಪೆರುಂಬಳೆ ಗ್ರಾಮದ ಕುಂಜಾರಿಯದಲ್ಲಿರುವವನು. } ಪ್ರತಿವಾದಿ.

ಇವರೊಳಗೆ

ಪ್ರತಿವಾದಿಯು ವಾದಿಗೆ ತಾ 12-11-49 ರಲ್ಲಿ ರೂ. 100/ಕ್ಕೆ ಬರೆಕೊಟ್ಟ ಪ್ರೋನೋಟಿನ ಅಸಲು ಬಡ್ಡಿ ವಸೂಲು ಮಾಡುವರೆ ವಾದಿಯು ದಾಖಲು ಮಾಡಿದ ಮೊಕದ್ದಮೆ ವ್ಯಾಜ್ಯವು ತಾರೀಖು 22-3-1951ಕ್ಕೆ ತನಿಖೆಗೆ ಇಟ್ಟಿರುತ್ತದೆ. ಸದ್ರಿ ವ್ಯಾಜ್ಯಕ್ಕೆ ಪ್ರತಿವಾದಿಯು ಕೋರ್ಟು ಮುಂದೆ ಹಾಜರಾಗುವರೆ ತಪ್ಪಿದರೆ ಅವನ ಗೈರು ಹಾಜರಿಯಿಂದ ವ್ಯಾಜ್ಯ ತೀರ್ಮಾನಿಸಲ್ಪಡುವದೆಂಬ ಸಂಗತಿ ಈ ಮೂಲಕ ತಿಳಿಸಲಾಗಿದೆ.

Sd/- B S Kakkilaya,
Advocate for pltf.
KASARGOD, -3-1951

ತಾರೀಕು 15-3-51 ರಿಂದ

ವಾರದ ಭವಿಷ್ಯ

ತಾರೀಕು 21-3-51 ರವರೆಗೆ

ಮೇಷ— ಒಂದೊಮ್ಮೆಗೆ ಗ್ರಹದಲ್ಲಿ ಬದಲಾವಣೆ ಹೊಂದಿದಂತೆ ನಿಮ್ಮ ಜೀವನದಲ್ಲೂ ಪರಿವರ್ತನೆಯುಂಟಾಗಲಿರುವದು. ವ್ಯಯ ಸ್ಥಾನದಲ್ಲಿ ಗ್ರಹತ್ರಯರ ಸಮಾಗಮವಾದ್ದರಿಂದ ವ್ಯರ್ಥ ಖರ್ಚುಗಳು ಹೆಚ್ಚಲಿವೆ. ಶತ್ರುಜನರಿಂದ ಪರಾಭವವುಂಟಾದೀತು. ದೇಹ ಪ್ರಕೃತಿಯು ಕೆಡಲಿದೆ. ಮಾನಸಿಕ ಸುಖ ಸುಖಶಾಂತಿಗೆ ಸ್ವಲ್ಪ ಭಂಗವಿರಬಹುದು. ತಾ. 16, 17ರಲ್ಲಿ ವಿಜಯ, ಲಾಭ, ಸ್ಥಾನಮಾನಗಳು ಲಭಿಸುವವು.

ವೃಷಭ— ಇಂದಿನ ಗ್ರಹಸ್ಥಿತಿಯು ಉತ್ತಮವಿರುವದು. ನಾನಾರೀತಿಯಿಂದ ಹಣವು ನಿಮ್ಮ ಕೈಸೇರಲಿದೆ, ಜನತೆಯ ಸಹಕಾರ ಮಿತ್ರರ ಬೆಂಬಲ ಬಂಧುಗಳ ಸಹಾಯಗಳಿಂದ ಕೂಡಿದ ನಿಮಗೆ ಹೆಚ್ಚಿನ ಕಾರ್ಯಗಳಲ್ಲಿ ವಿಜಯ ಲಾಭವಿದೆ, ತಂದೆ ಮಕ್ಕಳಲ್ಲೂ ಸ್ವಾಮಿ ಸೇವಕರಲ್ಲೂ ಕಿಂಚಿತ್ ಘರ್ಷಣೆಯುಂಟಾಗುವದಾದರೂ ತಾ. 15, 18, 19, 20 ಈ ದಿನಗಳು ಅನುಕೂಲವಾಗಿವೆ

ಮಿಥುನ—ನಿಮ್ಮ ಸಂಕಲ್ಪವು ನಿರ್ವಿಘ್ನದಿಂದ ನೆರವೇರುವದು. ದೇಹ ಮನಸ್ಸುಗಳಿಗೆ ಸುಖಶಾಂತಿಯು ಲಭಿಸಲಿದೆ. ಹಿಂದಿನ ಸಾಲಕಡಗಳಿಂದ ಇಂದು ಮುಕ್ತರಾಗುವಿರಿ. ಸರ್ವತ್ರ ಸ್ಥಾನಮಾನಗಳು ಲಭಿಸುವವು. ಗೃಹ ಪರಿವಾರದಲ್ಲಿ ಏನೊಂದು ಕೊರತೆಯೂ ಕಾಣಿಸಲಾರದು. ಆದರೂ ಕೆಲವೊಮ್ಮೆ ಮನಸ್ಸು ಚಾಪಲ್ಯಹೊಂದಿ ವ್ಯರ್ಥವಾದ ನಷ್ಟಗಳಿಗೆ ಗುರಿಮಾಡಲಿದೆ. ತಾ. 16, 17, 21 ಅತ್ಯುತ್ತಮವಿವೆ.

ಕರ್ಕಟ— ಅಕಸ್ಮಾತ್ತಾಗಿ ಹಲವಾರು ಬದಲಾವಣೆಗಳು ನಿಮ್ಮ ಜೀವನದಲ್ಲಿ ಕಾಣಿಸಿಕೊಳ್ಳಲಿವೆ. ಕನಸಿನಲ್ಲೂ ಎಣಿಸದ ಖರ್ಚುವೆಚ್ಚಗಳುಬಂದೊದಗಲಿವೆ. ಎಷ್ಟೊಂದು ಮಿತಭಾಷಿಯಾಗಿದ್ದರೂ ಕಲಹವು ಅನಿವಾರ್ಯವಾಗಿ ಪರಿಣಮಿಸುವದು. ಮಾತ್ರವಲ್ಲ ಹಣದ ಬಿಕ್ಕಟ್ಟಿನಿಂದಾಗಿ ಬಹಳ ಪೇಚಾಟಕ್ಕೆ ಸಿಲುಕುವಿರಿ. ಆದರೂ ಏನೇ ಬಂದರೂ ಬ-ಲಂಬ ಎದೆಗಾರಿಕೆಯುಳ್ಳ ನಿಮಗೆ ತಾ. 15, 18, 19, 20 ಇವು ಅನುಕೂಲವಿವೆ.

ಸಿಂಹ—ಶುಭಗ್ರಹರೆಲ್ಲರೂ ಈ ವಾರದಲ್ಲಿ ನಿಮ್ಮ ಮೇಲೆ ಪ್ರಸನ್ನರಾಗಿರುವ ಕಾರಣ ಬಹುಮಟ್ಟಿನ ನಿಮ್ಮ ತಾಪತ್ರಯಗಳು ನಿವೃತ್ತಿಹೊಂದುವವು. ಖರ್ಚಿಗೆ ತಕ್ಕ ಆದಾಯ, ಸಮುದ್ಯಮದಲ್ಲಿ ಪ್ರಗತಿ, ಸಜ್ಜನ ಸಹವಾಸಿಗಳಾದ ನಿಮಗೆ ಶತ್ರುಜನರ ಪೀಡೆ ಅರ್ಧಾಂಗಿಯೊಡನೆ ಕಲಹಗಳು ಆಗಾಗ ಪ್ರಾಪ್ತವಾದಾವು, ತಾ. 18, 19, ಬಿಟ್ಟುಳಿದ ದಿನಗಳು ನಿಮ್ಮ ಬಯಕೆಯನ್ನೀಡೇರಿಸುವವು-

ಕನ್ಯಾ—ದಿನಯಾಪನೆಯು ಅತೀವ ದುಃಸಾಧ್ಯವಾದೀತು. ಸರ್ವತ್ರ ವಿರೋಧವುಂಟಾಗುವದು ಹಿಡಿದ ಕಾರ್ಯಗಳನ್ನು ಅರ್ಧದಲ್ಲೇ ಕೈಬಿಡುವಿರಿ, ಖರ್ಚು ಮಿತಿಮೀರುವದು ತನುಪೀಡೆ ಮನೋರೋಗಗಳು ಪ್ರಬಲವಾಗುವವು. ವಿದ್ಯಾರ್ಥಿಗಳಿಗೆ ಅಭ್ಯಾಸಕ್ಕೆ ತುಂಬಾ ಎಡರುತೊಡರುಗಳುಂಟಾಗುವವು. ವಾರದ ಆದ್ಯಂತ ದಿನಗಳು ವಿಶೇಷ ಅನಿಷ್ಟಕಾರಿಗಳಾಗಿವೆ.

ತುಲಾ—ದೈವವು ಅನುಕೂಲ ಸ್ಥಿತಿಗೆ ಬಂದಿರುವುದು, ಆಲಸಿಗರಾಗದೆ ಉದ್ಯಮ ಪ್ರವೃತ್ತರಾಗಿ ಮನೋರಥವನ್ನು ಈಡೇರಿಸಿಕೊಳ್ಳಲು ಸುಸಮಯವು ಸನ್ನಿಹಿತವಾಗಿರುವುದು, ನಿಮ್ಮ ಕಾರ್ಯಕೌಶಲ್ಯಕ್ಕೆ ಮೆಚ್ಚಿದ ಶತ್ರುಜನರೂ ನಿಮ್ಮ ಮೈತ್ರಿಯನ್ನು ಯಾಚಿಸುವರು. ಆವ ಭಾಗದಲ್ಲೂ ನಿಮಗೆ ಕೊರತೆ ಕಾಣದಾದರೂ ಮನಸ್ಸಿಗೆ ನೆಮ್ಮದಿಯೊಂದಿರಲಾರದು ವಾರಾಂತ್ಯದ 4 ದಿನಗಳು ಸುಖಸಾಧಕಗಳಾಗಿವೆ.

ವೃಶ್ಚಿಕ—ಆತ್ಮೀಯರ ವಿಯೋಗದಿಂದಲೂ ಶತ್ರುಗಳ ಪೀಡೆಯಿಂದಲೂ ನೊಂದ ನಿಮ್ಮ ಮನಕ್ಕೆ ಸಂಸಾರಿಕ ತಾಪತ್ರಯಗಳು ಮತ್ತಷ್ಟು ಬೇಗೆಯನ್ನುಂಟುಮಾಡಲಿವೆ. ಶಕ್ತಿ ಮೀರಿ ದುಡಿಯುವಿರಾದರೂ ಹಣದ ಬಿಕ್ಕಟ್ಟು ದಿನೇ ದಿನೇ ಪ್ರಬಲವಾಗಲಿದೆ. ಕ್ಷುಲ್ಲಕ ವಿಷಯಗಳಿಗಾಗಿ ಬಂಧುಜನರೊಡನೆ ಕಲಹವಾದೀತು. ವಾರದ ಆದ್ಯಂತ ದಿನಗಳು ಇತರ ದಿನಗಳಷ್ಟು ಕಷ್ಟಾನಿಷ್ಟದಾಯಿಗಳಾಗಲಾರವು.

ಧನು—ಆಪ್ತೇಷ್ಟರು ಬಂಧುವರ್ಗದವರು ಇವರ ಸಹಕಾರದಿಂದಾಗಿ ನಿಮ್ಮ ಕಾರ್ಯಕಲಾಪಗಳು ಸುಖಸಾಧ್ಯವಾಗುವವು. ಶತ್ರುಗಳ ಪೀಡೆಯಿಂದ ಮುಕ್ತರಾಗುವಿರಿ. ಆದರೂ ದೇಹಾಲಸ್ಯ ಕಾರ್ಯಬಾಹುಳ್ಯದಿಂದಾಗಿ ಸದಾ ದುಃಖಭಾಗಿಗಳಾಗಲಿರುವಿರಿ ಯತ್ನಕ್ಕುಚಿತವಾದ ಫಲಲಾಭವಿದ್ದರೂ ಖರ್ಚನ್ನು ಪೂರೈಸಲು ಅಶಕ್ತರಾದ ನಿಮಗೆ ತಾ. 15, 16, 17 ಈ ದಿನಗಳಲ್ಲಿ ಇಷ್ಟಸಿದ್ಧಿಯಾಗಲಿದೆ.

ಮಕರ—ನಿಮ್ಮ ಪ್ರಯತ್ನವು ಎಳ್ಳಷ್ಟು ವಿಫಲವಾಗದು. ಎಂತಹ ಪ್ರಬಲ ಶತ್ರುವನ್ನೂ ಕೂಡ ತೃಣಪ್ರಾಯವಾಗಿ ಗೆಲ್ಲುವಿರಿ. ದೈಹಿಕ, ಮಾನಸಿಕ ನೆಮ್ಮದಿಗಳಿಂದ ಕೂಡಿದ ನಿಮಗೆ ಮಿತ್ರರು ಬಂಧುಗಳು ಗೃಹಪರಿವಾರಗಳೂ ಅನ್ಯೋನ್ಯವಾಗಿರುವವು. ವಾರದ ಆದ್ಯಂತ ದಿನಗಳು ಅಷ್ಟೊಂದು ಹಿತಕರವಲ್ಲ.

ಕುಂಭ— ಕಳೆದ ವಾರಕ್ಕಿಂತ ಕೊಂಚ ಸುಧಾರಿಸುವಿರಿ ನೀವೀ ವಾರದಲ್ಲಿ, ನೌಕರಿ ವ್ಯಾಪಾರಾದಿ ಉದ್ಯಮಗಳಲ್ಲಿ ತೃಪ್ತಿಕರವಾದ ಫಲ ಹೊಂದುವಿರಿ. ಅನಿರೀಕ್ಷಿತಗಳಿಂದ ಆದಾಯಗಳು ಒದಗುವ ಸಂಭವವಿದೆ. ದೂರದ ಪ್ರವಾಸವು ಗಂಟು ಬೀಳಲಿರುವುದು, ಖರ್ಚಿನ ಭಾಗಗಳು ಮುಂಚಿಗಿಂತ ಕಡಿಮೆಯಾದರೂ ಆರ್ಥಿಕ ಬಿಕ್ಕಟ್ಟು ಹೆಚ್ಚಿನಂಶ ಸುಧಾರಿಸಲೊಲ್ಲದು. ವಾರಾಂತ್ಯದ 4 ದಿನಗಳಲ್ಲಿ ಹೊಸ ಮಿತ್ರರ ಸಮಾಗಮ ಧನಮಾನಗಳ ಲಾಭವಾಗಲಿದೆ.

ಮೀನ—ದುರ್ದೈವವು ಪ್ರಬಲವಾಗಿ ಪೀಡಿಸುತ್ತಿರುವದು, ಆಕಸ್ಮಿಕ ಅಪಘಾತಗಳುಂಟಾದಾವು ವಿನಾಕಾರಣ ಜನರೊಡನೆ ಕಲಹವಾಗಲಿದೆ. ಧನಜನಬೆಂಬಲವಿಲ್ಲದ ನಿಮ್ಮ ಹಲವಾರು ಕಾರ್ಯಗಳು ಮಧ್ಯದಲ್ಲೇ ನಿಂತುಹೋಗುವವು. ಸ್ಥಾನಚಲನೆಯು ಯೋಗವಿರುವುದು. ಶತ್ರುಜನರ ಪೀಡೆಯು ಹೆಜ್ಜೆಹೆಜ್ಜೆಗೂ ನಿಮಗೆ ತಪ್ಪಲಾರದು. ವಾರದ ಆದ್ಯಂತ ದಿನಗಳು ಉಳಿದ ದಿನಗಳಿಗಿಂತ ಕೊಂಚ ಸುಖದಾಯಿಗಳಾಗಲಿವೆ.

ಮೂಲ್ಕಿ ಬೇಂಕ್,
ಲಿಮಿಟೆಡ್, ಮೂಲ್ಕಿ.
1921ರಲ್ಲಿ ಸ್ಥಾಪಿತವಾಗಿ 29 ವರುಷಗಳಿಂದ ಊರ ಜನರ ಹಿತಕ್ಕಾಗಿ ಡಿಪೋಸಿಟ್ ಹಣಕ್ಕೆ ನ್ಯಾಯವಾದ ಬಡ್ಡಿಯಿಂದಲೂ, ಸಾಲದ ಹಣಕ್ಕೆ ಅತೀ ಕಡಿಮೆ ದರದ ಬಡ್ಡಿಯಿಂದಲೂ ಜನ ಹಿತಸಾಧನೆಯನ್ನು ಮಾಡುತ್ತಿರುವುದು
The Moolky Bank Ltd.,
Moolky, S K.

ಉಡುಪಿಗೆ ಹೋಗಬೇಕು! ಆದರೆ ಉಳಿದುಕೊಳ್ಳುವುದೆಲ್ಲಿ?
ರಾಯಲ್ ಮಹಾಲಿನಲ್ಲಿ
ಬಸ್ ಸ್ಟೇಂಡಿಗೆ ಅತಿ ಸಮೀಪ! ಕೃಷ್ಣ ಮಠಕ್ಕೆ ದೂರವಿಲ್ಲ!
ವ್ಯಾಪಾರವ್ಯವಹಾರ ವಿಹಾರಸ್ಥಳಗಳಿಗೆಲ್ಲ ಕೇಂದ್ರ!
ನಿಮ್ಮ ಸ್ನಾನ, ಊಟ, ಉಪಹಾರ, ಬೈರಕ್, ಶಯನ ಇವಕ್ಕೆಲ್ಲ ಉತ್ತಮ ವ್ಯವಸ್ಥೆ
ಕರೆದರೆ ಓಗೊಡುವ ನೌಕರರ ವರ್ಗ!
ಮೇಲಾಗಿ ಉಡುಪಿ ಬ್ರಾಹ್ಮಣರ ಅಡಿಗೆ, ತಿಂಡಿತಿನಸು, ಇವುಗಳ ರುಚಿರುಚಿ ಹೇಳಬೇಕೆ?
ಪ್ರೊಪ್ರೈಟರ್:— ಕೆ. ವೆಂಕಟ್ರಮಣಭಟ್.
For up-to-date Lodging & Boarding
ROYALMAHAL,
UDIPI S. Kanara

ಲಕ್ಷ್ಮೀ
ಸೆಂಟಾಲ್ ಮಾತ್ರೆ
ಇದರ ಉಪಯೋಗದಿಂದ ಬಹುಕಾಲದ ಮೇಹ, ಪ್ರಮೇಹ, ಮೂತ್ರದ ಉರಿ, ಮೂತ್ರ ಕೃಚ್ಛ್ರ, ಮೂತ್ರದೊಡನೆ ಯಾ ಮುಂದಾಗಿ ಬಿಳುಪು, ಅರಸಿನ, ಕೆಂಪು ಈ ವರ್ಣಗಳಲ್ಲಿ ಕೀವು ಹೋಗುವುದು, ತೊಡೆ ಸಂದಿನಲ್ಲಿ ನೋವು, ಕಾಲ ಗಂಟುಗಳಲ್ಲಿ ವೇದನೆ, ಕಣ್ಣಿನಲ್ಲಿ ಕೀವು ಬರುವುದು, ಶರೀರದಲ್ಲಿ ಉಷ್ಣತೆ, ಸ್ವಪ್ನೇಂದ್ರಿಯ ಇವೆಲ್ಲಾ ಖಾತ್ರಿಯಾಗಿ ಗುಣಹೊಂದುವುದು.
ಡಬ್ಬಿ ಒಂದಕ್ಕೆ ರೂ. 2—0—0
ಏಜಂಟ್:—
ಶಾ ಕಂಪೆನಿ, ಮಂಗಳೂರು.

— ಮಕ್ಕಳನ್ನು ಹಡೆಯುವುದು ಸಾಕು —
ಅಶಕ್ತ ಸ್ತ್ರೀಯರಿಗೆ ಬರ್ಥ ಕಂಟ್ರೋಲ ರೋಗ ಗ್ರಹಸ್ತ ಹೆಣ್ಣು ಮಕ್ಕಳಿಗೆ
ಏಳು ದಿವಸ ಈ ಮಾತ್ರೆಗಳನ್ನು ಸೇವನ ಮಾಡಿದರೆ ಮುಂದೆ ಖಂಡಿತವಾಗಿ ಮಕ್ಕಳಾಗುವದಿಲ್ಲ. ಸ್ತ್ರೀಯರು ಪ್ರತಿತಿಂಗಳು ಸರಿಯಾಗಿ ಮುಟ್ಟಾಗುತ್ತಾರೆ. ಅಲ್ಲದೆ ಸ್ತ್ರೀಯರ ಬಿಳೇರಗು, ಪ್ರದರರೋಗ, ಹೊಲಿಕುಟ್ಟು ಗುಣವಾಗಿ ಸ್ತ್ರೀಯು ಗರ್ಭಿಣಿಯಾಗುವದಿಲ್ಲ. ಈ ಔಷಧವನ್ನು ಸೇವಿಸುವ ಕ್ರಮ: ಪ್ರತಿದಿವಸ ಮುಂಜಾನೆ ೧ ಗುಳಿಗೆ ಮಧ್ಯಾಹ್ನಕ್ಕೆ ೧ ಗುಳಿಗೆ, ಸಂಜೆಗೆ ೧ ಗುಳಿಗೆಯಂತೆ ಊಟದ ಮೊದಲು ತಕ್ಕೊಳ್ಳಬೇಕು. ಏಳುದಿವಸ ಈ ಔಷಧವನ್ನು ಬಿಸಿನೀರಿನಲ್ಲಿ ಸೇವಿಸಬೇಕು.
ಪಥ್ಯ:—ಹರವೀಪಲ್ಲೆ ಬಿಡಬೇಕು. ೭ ದಿವಸ ಸಂಪೂರ್ಣ ಔಷಧದ ಕಿಮ್ಮತು ರೂಪಾಯಿ 5—0—0. ಪೋಸ್ಟ ಚಾರ್ಜ ೧೨ ಆಣೆ.
ಮಾಲಕರು:—ಹಾಲಪ್ಪಾ ಫಕೀರಪ್ಪಾ ದಾವಣಗೇರಿ
ಆಯುರ್ವೇದ ಔಷಧಾಲಯ ಗದಗ-ಸಿಟಿ-
ಏಜಂಟರು:—ಹುಬ್ಬಳ್ಳಿ ಧಾರವಾಡ,—ಹುಬ್ಬಳ್ಳಿ, ಗದಗ, ಬಾಗಲಕೋಟೆ ಧಾರವಾಡ ವಿಜಾಪೂರ—
ಬಸಪ್ಪ ಸಿದ್ಧಲಿಂಗಪ್ಪ ಧಾರವಾಡಕರ ಬಜಾರ ಸಂಗಮೇಶ್ವರ ಮೂರ್ತಿ ದಾವಣಗೇರಿ
ದಾವಣಗೇರೆ:—ದಾವಣಗೇರಿ ಪ್ರೆಸ್, ... ಎಲ್ ಕಮಲಾಕರ ,ಕೆಮಿಸ್ಟ, ಹಾವೇರಿ, ಬ್ಯಾಡಗಿ

"ಗೋಪಾಲ ಭೇಷಜಾಶ್ರಮ" ಮಂಗಳೂರು.
(ಸ್ಥಾಪನೆ 1910)
ಸ್ಥಾಪಕರು:-ಆಯುರ್ವೇದ ಭೂಷಣ ಯಂ. ವಿ. ಶಾಸ್ತ್ರೀ,
ಇವರ
ನವಜೀವಾತು
ಎಂಬ
ಸೂತಿಕಾ ರಸಾಯನ
ಬಾಣಂತಿಯರ ಸಲುವಾಗಿಯೇ ದೇಶ ಮತ್ತು ಪ್ರಕೃತದ ದೇಹಸ್ಥಿತಿಯನ್ನು ನಿರ್ಣೈಸಿ ತಯಾರಿಸಲ್ಪಟ್ಟ ಅಮೋಘವಾದ ಮಧುರದ್ರವ ರಸಾಯನ. ಅಲ್ಪ ಮೌಲ್ಯದಿಂದ ಬಡವರಿಗೂ, ಭಾಗ್ಯಶಾಲಿಗಳಿಗೂ ಸುಲಭವಾಗಿರುವುದು.

ಹೆಚ್ಚಿನ ಮಾಹಿತಿಗೆ—ಡಾ! ಯಂ. ಸಿ. ಶಾಸ್ತ್ರೀ, ಯಲ್. ಐ.
ಕೊಡಿಯಾಲಬೈಲ ಪೋಸ್ಟು, (ಮಂಗಳೂರು)
ಸ್ಟಾಕಿಸ್ಟರು:—ಡಾ। ಐ. ಕೆ. ಶಿವರಾಮರಾವ್, ಕುಂಜಿಬೆಟ್ಟು, ಉಡುಪಿ.

EDITED, PRINTED & PUBLISHED BY K. H. SHETTY AT THE NAVAYUGA PRESS, UDIPI, S.INDIA.

gRed. No M. 3618
LICENCE No. 31
Licensed to Post without Prepayment
Estd 1921 ಸ್ಥಾಪನೆ
31ನೇ ವರ್ಷ
22-3-1951
Founder. Sri A. B. Shetty,
Minister for Agriculture & Veterinary.
ನವ ಯುಗ
ಸ್ವಾಧೀನ ಭಾರತ
ವರ್ಷ ೩೧ ವಾರ ೨೮
NAVAYUGA WEEKLY
POST BOX NO. 22
UDIPI. S. K.
Vol. 31
No. 28

ಈ ಆರ್ಭಟಗಳೇಕೆ?

ಕಳೆದ ದ್ವಿತೀಯ ಮಹಾಯುದ್ಧದ ಮೂಲಪುರುಷ ಹಿಟ್ಲರನ ವಿಚಾರ ನಾವು ಮರೆಯುವಂತಿಲ್ಲ. ಅವನು ಯುದ್ಧದಲ್ಲಿ ಪರಾಜಿತನಾದರೂ, ತಾನೇ ಜೀವವನ್ನು ತೆತ್ತರೂ ಅವನಮೇಲೆ ನಮಗೆ ಯಾವುದೋ ಒಂದು ರೀತಿಯ ಸಹಾನುಭೂತಿಯಿದ್ದೇ ಇದೆ. ಧ್ಯೇಯ ಬೇರಾದರೂ ತನ್ನ ದೇಶ ಹಾಗೂ ಜನತೆಯ ಮೇಲೆ ಅತನಿಗಿದ್ದ ಸ್ವಾಭಿಮಾನವನ್ನು ಮೆಚ್ಚಬೇಕಾಗಿದೆ. ಈಗಿನ ರಾಜಕೀಯ ಧುರೀಣರಲ್ಲಿ ತಾನು-ತನ್ನ ಪಕ್ಷ ಎನುವ ಸಂಕುಚಿತ ಭಾವನೆಗಳೇ ಕಾಣುತ್ತಿವೆಯೆ ಹೊರತು ದೇಶಕ್ಕಾಗಿ ಚಿಂತಿಸುವ ಶ್ರದ್ಧೆ ಕಡಿಮೆ. ಹಿಟ್ಲರ ಹಟವಾದಿ. ಜಗತ್ತಿನ ಒಡೆಯನಾಗಿ ನಾಜೀ ಶಕ್ತಿಯನ್ನು ಬೆಳೆಸಬೇಕೆಂಬ ಮಹತ್ವಾಕಾಂಕ್ಷೆಯುಳ್ಳವನಾಗಿದ್ದ. ಅದೇ ಧ್ಯೇಯವನ್ನಿಟ್ಟುಕೊಂಡು ಯುದ್ಧವನ್ನು ಸಾರಿದ್ದರೂ ಈಗ ಶಾಂತಿಸಮಿತಿ ಎಂದು ನ್ಯಾಯ ಹೇಳುತ್ತಾ ವಾಮಮಾರ್ಗವನ್ನು ತುಳಿಯುತ್ತಿರುವ ಪಾಶ್ಚಾತ್ಯ ರಾಷ್ಟ್ರಗಳ ರಾಜನೀತಿಗಿಂತ ಅವನದು ನ್ಯಾಯಪಕ್ಷವಾದಂತಹದ್ದಾಗಿತ್ತು. ನಿರಂಕುಶ ಪ್ರಭುತ್ವವನ್ನು ಅತ ಬಯಸಿದ್ದೂ ತನ್ನ ಹಟವನ್ನು ಸಾಧಿಸುವದಕ್ಕಲ್ಲ; ಇಡಿಯ ರಾಷ್ಟ್ರದ ಐಕ್ಯತೆಗಾಗಿ. ಆ ಬಗೆಯ ದೇಶಾಕಾಂಕ್ಷೆ ಇದ್ದುದರಿಂದಲೇ ನಾಜೀ ಜನತೆಯಲ್ಲಿ ಐಕ್ಯತೆಯನ್ನು ಗಳಿಸಿಕೊಂಡ. ಅಷ್ಟು ದೀರ್ಘಕಾಲ ಇತರ ರಾಷ್ಟ್ರಗಳೊಡನೆ ಕಾದಾಡಿದ. ತಾನು ತನ್ನ ಬೆಂಬಲಿಗನ್ನು ಕಿರಿದಾಗಿ ಜಗತ್ತಿನ ಪ್ರಬಲ ರಾಷ್ಟ್ರಗಳು ಅತನ ಮೇಲೆ ಎರಬಂದು ಸೋಲಾದರೆ ಅದು ಸೋಲಲ್ಲ, ಆದರೂ ಹಿಟ್ಲರ ಕೊನೆಯ ತನಕವೂ ಸೋಲನ್ನೊಪ್ಪಿಕೊಳ್ಳಲಿಲ್ಲ. "ಜಗತ್ತಿನಲ್ಲಿ ಬೇರೆಲ್ಲಾ ಜನಾಂಗಗಳನ್ನು ಮೆಟ್ಟಿ ನಾಜೀ ತತ್ವವೊಂದೇ ಉಳಿಯುವಂತೆ ಮಾಡಬೇಕು. ನಾಜೀ ಶಕ್ತಿಗೆ ಮಾತ್ರ ಅದು ಸಾಧ್ಯ. ನಾಜಿಗಳು ಜಗತ್ತಿನ ಶ್ರೇಷ್ಠ ಜನಾಂಗವೆಂಬುದನ್ನು ನಮ್ಮ ಶಕ್ತಿ ಸಾಹಸದಿಂದ ತೋರಿಸಬೇಕು. ನಮ್ಮ ಯಶಸ್ಸಿಗಾಗಿ ಕೊನೆಯುಸಿರಿನತನಕವೂ ನಾವು ಕಾದಾಡಬೇಕು. ಶತ್ರುಗಳು ನಾವು ಸೋತೆವೆಂದು ಹೆಮ್ಮೆಪಡುತಲಿದ್ದಾರೆ. ಜಗತ್ತಿನಲ್ಲಿ ಅತ್ಯಂತ ಪ್ರತಾಪಶಾಲಿಯಾದ ಅಸ್ತ್ರವೊಂದನ್ನು ನಾನು ಕೊನೆಯದಾಗಿ ಉಪಯೋಗಿಸುತ್ತೇನೆ. ಇದರಿಂದಾಗಿ ಆಗುವ ಅನಾಹುತವನ್ನು ಊಹಿಸಲಸಾಧ್ಯ. ಈ ನನ್ನ ಕೊನೆಯ ಅಸ್ತ್ರಪ್ರಯೋಗಕ್ಕೆ ದೇವರು ಕ್ಷಮಿಸಲಿ" ಎಂದು ಹಿಟ್ಲರ ಆರ್ಭಟಿಸಿದ- ಅತನು ಹೇಳಿದಂತಹ ಪ್ರಳಯಕಾರೀ ಅಸ್ತ್ರವೊಂದು ಈಗಲೋ ಇನ್ನೊಂದು ಗಳಿಗೆಯಲ್ಲೋ ಬೀಳಲಿದೆ ಎಂದು ಜನ ಗಾಬರಿಪಡುತ್ತಿರುವಾಗಲೇ ಹಿಟ್ಲರ ತೀರಿಹೋದ. ಅತನ ಅನುಯಾಯಿಗಳು ಸೆರೆಸಿಕ್ಕಿದ-ಸುದ್ದಿಯನ್ನೇ ಜನ ಕೇಳಿದರು. ಅಂದರೆ ಕೊನೆಯಲ್ಲಿ ಹಿಟ್ಲರನಿಗೆ ತನ್ನ ಅಸಮರ್ಥತೆ ತಿಳಿಯುತ್ತ ಬಂದಿದೆ. ಜರ್ಮನಿಯು ಗೆಲುವ ಲಕ್ಷಣ ಕಾಣದಿರುವಾಗಲೇ ಇಂತಹ ಆರ್ಭಟ ಕೊಟ್ಟು ಬಿಟ್ಟ. ಒಳಗಿನ ಭೀತಿ ಬಹಿರಂಗದಲ್ಲಿ ಆರ್ಭಟಗೊಳ್ಳುತ್ತದೆ. ತನ್ನಲ್ಲಿ ಶಕ್ತಿ ಇಲ್ಲದಾಗ ಇಂತಹ ಆರ್ಭಟ ಬರುವುದು ಸ್ವಾಭಾವಿಕ! ಅದು ಟೊಳ್ಳು ಬೆದರಿಕೆಯೆಂದು ನಮಗೆ ಮನವರಿಕೆಯಾದ ಮೇಲೂ ಆವನ ವ್ಯಕ್ತಿತ್ವದ ಮೇಲೆ ಗಂಭೀರಭಾವನೆಯಿದೆ.

ಇದು ಹಳೆಯ ಮಾತಾಯಿತು. ಈಗ ನಡೆಯುತ್ತಿರುವ ಯುದ್ಧರಂಗದಲ್ಲಿಯೂ ಅದೇ ಬಗೆಯ ಧೋರಣೆಯನ್ನು ಕಾಣುತ್ತಲಿದ್ದೇವೆ. ಕಳೆದ ದಶಂಬರ ತಿಂಗಳಲ್ಲಿ ಕೊರಿಯ ಯುದ್ಧರಂಗದಲ್ಲಿ ಅಮೇರಿಕಾ ದಿನದಿಂದ ದಿನಕ್ಕೆ ಪರಾಭವ...ಿತ. ಸರ್ ಮೆಕಾರ್ಥರರು ದ್ವಿತೀಯ ಮಹಾಯುದ್ಧದಲ್ಲಿ ಗಳಿಸಿದ ಕೀರ್ತಿಗೆ ಕಳಂಕವನ್ನು ತರುವಂತಿತ್ತು. ಆಗ ಸರ್ ಮೇಕಾರ್ಥರು ತನ್ನ ಸೈನಿಕರಿಗೆ "ಕ್ರಿಸ್ ಮಸ್‌ಗೆ ಹಿಂತಿರುಗಬೇಕು" ಎಂದು ಆರ್ಭಟಿಸಿದರು. ಯುದ್ಧದಲ್ಲಿ ಜಯ ತಮಗೆ ಕಟ್ಟಿಟ್ಟದ್ದು ಎನುವ ಜಂಬ ಅವರಾತನಲ್ಲಿತ್ತಾದರೂ ಒಳಗಿನ ಗುಟ್ಟು ಶಿವನೇ ಬಲ್ಲ! ತಾನು ಯುದ್ಧದಲ್ಲಿ ಕಮ್ಯೂನಿಷ್ಟರನ್ನು ಸೋಲಿಸಿ ತಮ್ಮ ಸೈನಿಕರನ್ನು ಮನೆಗೆ ಕಳಿಸಿಯೇನು ಎನುವ ಭರವಸೆ ಅವರಲ್ಲಿಲ್ಲ. ಹುರಿದುಂಬಿಸುವುದಕ್ಕಾಗಿಯೆ ಅಂತಹ ಆರ್ಭಟ! ಯಾವಾಗಲೂ ಸ್ವಸಾಮರ್ಥ್ಯ ಕಡಿಮೆಯಾದಲ್ಲಿ ಇಂತಹ ಆರ್ಭಟಗಳು ಕಾಣುತ್ತವೆ. ತನ್ನಲ್ಲಿರುವ ಕುಂದುಕೊರತೆಯನ್ನು ಮರೆಮಾಡುವುದಕ್ಕಾಗಿಯೂ ಇದೇ ರೀತಿಯ ಆರ್ಭಟವನ್ನು ಹಾಕುವುದುಂಟು.

ಮೊನ್ನೆ ಮೊನ್ನೆ ಲಿಯಾಖತ್ ಅಲಿ ಖಾನರು ಪಾಕಿಸ್ತಾನದ ರಾಜಕೀಯ ನೀತಿ ಆದರ್ಶಪ್ರಾಯವಾಗಿದೆಯೆಂದೂ, ಭಾರತದೇಶಕ್ಕಿಂತ ಸುಖಸಂತೋಷದಲ್ಲಿದ್ದಾರೆಂದೂ ಹೇಳಿರುತ್ತಾರೆ. ಅಲ್ಲಿಯ ಮಿಲಿಟರಿ ಇಲಾಖೆ 'ಅಸಾಧಾರಣ'ವೆಂದು ಕೊಂಡಾಡಿದರು. ಅವರು ಹೇಳಿ ಹತ್ತು ದಿನ ಪೂರ್ತಿ ಆಗಿಲ್ಲ ಪಾಕಿಸ್ತಾನ ಸರಕಾರವನ್ನೇ ಬುಡಮೇಲುಮಾಡುವ ಭಯಂಕರ ಘಟನೆಗಳು ಕಂಡುಬಂದವು. ಪಾಕಿಸ್ತಾನದೊಳಗೆ ಇಂದು ಐಕ್ಯಮತ್ಯವಿಲ್ಲ. ಮುಸ್ಲಿಂಲೀಗಿನ ಹೊರತು ಮತ್ತಾವ ಪಕ್ಷಪಂಗಡಗಳು ತಲೆಎತ್ತುವುದನ್ನು ಲಿಯಾಖತರು ಸಹಿಸುವುದಿಲ್ಲ. ಖಾನ್ ಸಹೋದರರನ್ನು ಬಹಳ ಕಾಲದಿಂದ ಜೈಲಿನಲ್ಲಿ ಕೊಳೆಯಲು ಹಾಕಿದೆ. ಇಷ್ಟು ಮಾತ್ರವಲ್ಲ ವಾಕ್ ಸ್ವಾತಂತ್ರ್ಯ, ಪತ್ರಿಕಾ ಸ್ವಾತಂತ್ರ್ಯ, ಪಕ್ಷ ಸ್ವಾತಂತ್ರ್ಯಗಳಿರುವುದಿಲ್ಲ. ಈ ಎಲ್ಲ ಪರಿಸ್ಥಿತಿಗಳು ಪಾಕಿಸ್ತಾನದಲ್ಲೂ ಎರಡು ಬಣವಾಗಿ ರಾಜಕೀಯಾಂದೋಲನವನ್ನುಂಟುಮಾಡಲು ಶಕ್ತಿವೆ. ಮುಖ್ಯವಾಗಿ ಲಿಯಾಖತರ ಹಟಯೋಗವನ್ನು ಹೆಚ್ಚಿನವರು ಮೆಚ್ಚುವುದಿಲ್ಲ. ಆದುದರಿಂದಲೇ ಅಲ್ಲಿ ಉಚ್ಛ ಅಧಿಕಾರಿಗಳಲ್ಲಿ ಭಿನ್ನಾಭಿಪ್ರಾಯಗಳು ಹುಟ್ಟಿವೆ. ಪಾಕಿಸ್ತಾನದೊಳಗಿನ ಆಂತರಿಕ ಅಶಾಂತಿಯನ್ನು ಇಲ್ಲವೆ ಬಿಕ್ಕಟ್ಟನ್ನು ಲಿಯಾಖತರು ಚೆನ್ನಾಗಿ ಅರಿತಿದ್ದರೂ ತೋರಿಕೆಯ ಮಟ್ಟಿಗೆ ಬೇರೆ ರೀತಿಯಲ್ಲೇ ಆರ್ಭಟವನ್ನು ಕೊಟ್ಟರು. ಹಾವಿನಲ್ಲಿ ವಿಷವಿಲ್ಲದಿದ್ದರೂ ಹೆಡೆಯನ್ನರಳಿಸಿ ಭುಸುಗುಟ್ಟುವದಕ್ಕೇನೂ ಕಡಿಮೆಯಿಲ್ಲ. ದೌರ್ಬಲ್ಯವನ್ನು ತೋರಗೊಡಿಸುವದಕ್ಕೆ ಆರ್ಭಟವೇ ಪರಮೌಷಧ!

ಭದ್ರತಾ ಸಮಿತಿಯಲ್ಲಿ ಕಾಶ್ಮೀರದ ಕುರಿತು ಜಾಫ್ರುಲ್ಲಾಖಾನರು ಆರ್ಭಟ ಕೊಟ್ಟಿದ್ದು ನಮ್ಮ ನೆನಪಿನಲ್ಲಿದೆ. ಅವರು ಯಾವಾಗಲೂ ಆರ್ಭಟ ಕೊಡುವುದೇ ವಿನಹ ಯಥಾರ್ಥವಾದುದನ್ನು ಹೇಳುವುದೆಂಬುದೇ ಇಲ್ಲ. ಕಾಶ್ಮೀರದಲ್ಲಿ ಪಾಕಿಸ್ತಾನ ನಡೆಸಿದ ಕಾರಸ್ಥಾನ ಯಾರಿಗೆ ಗೊತ್ತಿಲ್ಲ? ಸ್ವಯಂ ಜಾಫ್ರುಲ್ಲಾ ಎನರಿಗೇ ಕಾಶ್ಮೀರದ ವಿಚಾರ ತಾನು ಕಲ್ಪಿಸಿ ಕಟ್ಟಿದ ಕತೆ ಸಾಕೇ? ತಮ್ಮ ಅನುಚಿತ ಧೋರಣೆಯನ್ನು ಮರೆಮಾಚುವುದಕ್ಕೆ-ಎನುವ ಶಂಕೆಮೂಡಿರಬೇಕು. ಮೊದಲಿಂದಲೂ ಇದೇ ಬಗೆಯ ಆರ್ಭಟದಿಂದ ಕಾಶ್ಮೀರದಲ್ಲಿ ತಮ್ಮ ಆಕ್ರಮಣವನ್ನು ಅಲ್ಲಗಳೆದು ಅಧಿಕಾರವನ್ನು ತಿರಸ್ಕರಿಸುವದಕ್ಕಾಗಿ ಯತ್ನಿಸುತ್ತಿದ್ದರು. ನಿಜವಾಗಿಯೂ ಇದು ಪರಿಸ್ಥಿತಿಗೆ ವಿರೋಧವಾದದು.

ಹೀಗೆಯೆ ಎಲ್ಲರಂಗಗಳಲ್ಲೂ ಈ ಆರ್ಭಟದ ಕಾರ್ಯಸಾಗುತ್ತಲೇ ಇದೆ. ವ್ಯಕ್ತಿಯ ಜೀವನದಲ್ಲೂ ಇದು ಪಾದ ಹೊಕ್ಕ



THE UNITED KARNATKA
INSURANCE COMPANY LIMITED,
United Karnatak Buildings, DHARWAR.
Established 1929.
ಕಳೆದ 20 ವರ್ಷಗಳಿಂದಲೂ ಸದಾ ಜನತಾಸೇವೆ ಮಾಡುತ್ತಿದೆ.

ಎ. ಕೆ. ಗೋಪಾಲನ್ ದಾವೆಯಲ್ಲಿ

ಮದ್ರಾಸು ಹ್ಯಾಕೋರ್ಟಿನಲ್ಲಿ ನಡೆಯುತ್ತಿರುವ ಎ. ಕೆ. ಗೋಪಾಲನ್ ವಿಚಾರಣೆಯು ಅತ್ಯಂತ ಸ್ವಾರಸ್ಯವೂ ಕುತೂಹಲಪೂರ್ಣವೂ ಆಗುತ್ತದೆ. ಕಮ್ಯೂನಿಸ್ಟ ಮುಖಂಡ ಎ. ಕೆ. ಗೋಪಾಲನ್‌ರನ್ನು ನಾಲ್ಕುವರ್ಷಗಳಿಂದ ಬಂಧನದಲ್ಲಿಟ್ಟಿರುವದರಿಂದ ಎ. ಕೆ. ಗೋಪಾಲನ್ ತನ್ನ ಬಿಡುಗಡೆಯಾಗಬೇಕೆಂದೂ ಇಷ್ಟು ದೀರ್ಘಕಾಲ ಯಾವ ವಿಚಾರಣೆಯೂ ಇಲ್ಲದೆ ತನ್ನನ್ನು ಕಾರಾಗೃಹದಲ್ಲಿಡುವುದು ನ್ಯಾಯುವಲ್ಲವೆಂದೂ ಕೇಳಿಕೊಂಡಿದ್ದಾರೆ. ಎ. ಕೆ. ಗೋಪಾಲನ್ ಕೇಳಿಕೆಯನ್ನು ಮದ್ರಾಸು ಹ್ಯಾಕೋರ್ಟು ವಿಚಾರಣೆಗೆ ತೆಗೆದುಕೊಂಡು ಎ. ಕೆ. ಗೋಪಾಲನ್‌ರನ್ನು ಬಂಧ ಮುಕ್ತಮಾಡಿತು. ಹೊಸಕಾಯಿದೆ ಆಧಾರದಿಂದ ಮದ್ರಾಸ್ಸಿನಲ್ಲಿಯೇ ಕೋರ್ಟಿನಿಂದ ಹೊರಬಂದಲ್ಲೇ ತಿರುಗಿ ಬಂಧಿಸಲಾಯಿತು. ಈ ಪ್ರಕರಣದಿಂದ ಹ್ಯಾಕೋರ್ಟಿಗೂ ಸರಕಾರಕ್ಕೂ ನಡುವೆ ಹಲವು ಸಮಸ್ಯೆಗಳು ಮೂಡಿವೆ. ಅದರ ಸಾರಾಂಶವನ್ನಷ್ಟೇ ಇಲ್ಲಿ ಕೊಡಲಾಗಿದೆ.

ಎ. ಕೆ. ಗೋಪಾಲನ್ನರನ್ನು 1947 ಡಿಸಂಬರ ತಿಂಗಳಲ್ಲಿ ಬಂಧಿಸಲಾಯಿತು. 1948ರ ಜನವರಿಯಲ್ಲಿ ಅವರ ಮೇಲೆ ದಾವೆಯನ್ನು ಹೂಡಲಾಯಿತು. ಫೆಬ್ರುವರಿ ತಿಂಗಳಲ್ಲಿ ಇನ್ನೊಂದು ಆಪಾದನೆಯನ್ನು ತರಲಾಯಿತು. ಕ್ರಾಂತಿಕಾರಕ ಭಾಷಣಗಳೇ ಕಾರಣವೆಂದು ಹೇಳಲಾಗಿದೆ.

ಎ. ಕೆ. ಗೋಪಾಲನ್ ಕಮ್ಯೂನಿಸ್ಟರ ಮುಖಂಡನಾಗಿದ್ದುಕೊಂಡು ಕ್ರಾಂತಿಕಾರಕ ಚಟುವಟಿಕೆಗಳ ಮೂಲಕ ಸರಕಾರಕ್ಕೆ ಕೇಡುಕೊಡುವ ಹಿನ್ನೆಲೆಯನ್ನು ನಿರ್ಮಿಸಿದ್ದರು. ಇವರ ನಾಯಕತ್ವದಿಂದ ಸಾವಿರಾರು ಕಮ್ಯೂನಿಸ್ಟರು ಸಂಘಟಿತರಾಗಿದ್ದರೆಂದು ಸರಕಾರಕ್ಕೆ ತಿಳಿದಿದೆ. ಈ ಮನುಷ್ಯನನ್ನು ಹೊರಗೆ ಬಿಡುವುದರಿಂದ ಕಮ್ಯೂನಿಸ್ಟರ ಪಕ್ಷವನ್ನು ಇನ್ನಷ್ಟು ಹೆಚ್ಚಾಗಿ ಸಾರ್ವಜನಿಕಜೀವನದಲ್ಲಿ ಗೊಂದಲವೇಳಬಹುದೆನ್ನುವ ವಿಚಾರ ಸರಕಾರದ ಅಭಿಪ್ರಾಯವಾಗಿರುತ್ತದೆ. ಅಂತಲೇ ನಾನಾ ತರದ ಆಪಾದನೆಗಳ ಮೂಲಕ ಈ ಭಯಂಕರ ವ್ಯಕ್ತಿಯನ್ನು ಬಂಧನದಲ್ಲಿಟ್ಟಿರುತ್ತದೆ. ಹ್ಯಾಕೋರ್ಟು ಕೂಡಾ ಇವರ ದಾವೆಯನ್ನು ಪರಿಶೀಲಿಸದೆ ಕೆತ್ತೊಗೆದಿತ್ತು. 1950ರಲ್ಲಿ ಕಮ್ಯೂನಿಸ್ಟರ ಮೇಲಿನ ಪ್ರತಿಬಂಧವನ್ನು ಕಿತ್ತೊಗೆಯಲಾಗಿ ಮದ್ರಾಸ್ಸಿನ ಎಲ್ಲಾ ಕಮ್ಯೂನಿಸ್ಟರೂ ಬಂಧನಮುಕ್ತರಾದರೆನ್ನಬಹುದು. ಆದರೆ ಗೋಪಾಲನ್ನರನ್ನು ಬಿಡುಗಡೆ ಮಾಡಲಿಲ್ಲ. ಆ ಕಾರಣವನ್ನು ಗೋಪಾಲನ್ ಹ್ಯಾಕೋರ್ಟಿನ ಮುಂದೆ ಮಂಡಿಸಿದ್ದರೆ ಮುಖ್ಯ ನ್ಯಾಯಮೂರ್ತಿಗಳು ವಿಚಾರಣೆ ನಡೆಸಿತು.

ಫೆಬ್ರುವರಿ ತಿಂಗಳ 22ರಲ್ಲಿ ಹೈಕೋರ್ಟು ತನ್ನ ತೀರ್ಮಾನವನ್ನು ಕೊಟ್ಟಿತು. ತೀರ್ಪನ್ನು ಕೊಡುವ ಮುನ್ನ ಸರಕಾರೀ ವಕೀಲರು ತೀರ್ಪನ್ನು ಮುಂದೆ ಹಾಕಬೇಕೆಂದು ಶ್ರೀ ನ್ಯಾಯಾಧೀಶರನ್ನು ಕೇಳಿಕೊಂಡರು. ಏಕೆಂದರೆ ಹೊಸ ಶಾಸನಕ್ಕೆ ಅಧ್ಯಕ್ಷರ ಒಪ್ಪಿಗೆಯನ್ನು ಪಡೆದು ಜಾರಿಗೆ ಬಂದಿರುತ್ತದೆ. ಮದ್ರಾಸು ಸರಕಾರಕ್ಕೆ ಈ ದಿನ ಮುಂಜಾನೆ ಆ ಸೂಚನೆ ಬಂದಿರುತ್ತದೆ ಎಂದರು.

ಅದಕ್ಕೆ ಮುಖ್ಯ ನ್ಯಾಯಾಧೀಶರಾದ ಶ್ರೀ ರಾಘವರಾಯರು "ನಾನೀದಿನ ಮುಂಜಾನೆ ಪತ್ರಿಕೆಯನ್ನು ನೋಡಿದ್ದೆ; ಆದರೆ ಆ ಸುದ್ದಿ ಬಂದ ಹಾಗಿಲ್ಲ."

ಕುಟ್ಟಿ ಕೃಷ್ಣಮೆನನ್ (ಸರಕಾರೀ ವಕೀಲ) "ಇದಿನ ಬೆಳಗ್ಗೆ 10 ಗಂಟೆಗೆ ಅಧ್ಯಕ್ಷರು ಒಪ್ಪಿಗೆಯನ್ನಿತ್ತರು. ಕೇಂದ್ರ ಸರಕಾರದಿಂದ 'ಪ್ರೋಗ್ರಾಮ' ಮೂಲಕ ಹಿಂದಿನ ರಾತ್ರಿ ಬಂದಿದೆ."

ರಾಘವರಾವ್ (ಮುಖ್ಯ ನ್ಯಾಯಾಧೀಶರ): "ಆ ಆಕ್ಟಿನ ಪ್ರತಿಯು ತಮಗೆ ದೊರಕಿದೆಯೇ?"

ಸರಕಾರೀ ವಕೀಲರಾದ ಕುಟ್ಟಿ ಕೃಷ್ಣ ಮೆನನ್ನರು ಟೈಪು ಮಾಡಿದ ಪ್ರತಿಯೊಂದನ್ನು ಹಾಜರುಪಡಿಸಿದರು.

ಆಗ ಎರಡನೇ ಮುಖ್ಯನ್ಯಾಯಾಧೀಶರಾದ ಸತ್ಯನಾರಾಯಣ ರಾಯರು "ಅದು ಅಧಿಕೃತ ಪ್ರತಿಯೇ? ಆಗಿಲ್ಲವಾದರೆ ನಾವದನ್ನು ಲಕ್ಷಿಸುವಂತಿಲ್ಲ."

ಮೆನನ್: "ಅಧಿಕೃತ ಪ್ರತಿಯನ್ನು ಪಡೆಯುವ ಅವಕಾಶವಿದುವರೆಗೆ ದೊರೆತಿಲ್ಲ. ಇದರ ಆವಶ್ಯಕತೆಯೂ ಕಾಣಲಿಲ್ಲ. ಮಾನ್ಯ ನ್ಯಾಯಾಧೀಶರು ಇನ್ನು ಸ್ವಲ್ಪ ಸಮಯದವರೆಗೆ ಈ ವಿಚಾರವನ್ನು ಮುಂದೆ ತೀರ್ಪನ್ನು ಕೊಡುವದನ್ನು ಸ್ಥಗಿತಗೊಳಿಸಬೇಕೆಂದು ಸರಕಾರದ ಪರವಾಗಿ ಕೇಳಿಕೊಳ್ಳುತ್ತೇನೆ."

ಸತ್ಯನಾರಾಯಣರಾವ್: "ಅಧಿಕೃತ ಪ್ರತಿಯಲ್ಲದೆ ನಾವು ಆ ಕಾನೂನನ್ನು ಕೈಗೊಳ್ಳುವಂತಿಲ್ಲ. ನಾವು ಆ ವಿಷಯದಲ್ಲಿ ಯೋಚಿಸುವುದೂ ಶಕ್ಯವಲ್ಲ. ಸಾಧಾರಣವಾದ ಸೂಚನೆಯಂತೆ ವರ್ತಿಸುವದು ನ್ಯಾಯಸಮ್ಮತವೆಂದು ಭಾವಿಸಬಹುದೇ?"

ಮೆನನ್: "ಸರಕಾರ ನನಗೆ ಹಾಗೆ ಸೂಚಿಸಿದೆ; ಮಾನ್ಯ ನ್ಯಾಯಾಧೀಶರುಗಳು ಸ್ವಲ್ಪ ತಡೆಯಬೇಕೆಂಬುದಾಗಿ. ಕಾಯಿದೆ ಜಾರಿಯಲ್ಲಿರುವಾಗ ತಾವು ಕೊಡುವ ತೀರ್ಪಿನ ಪರಿಣಾಮವಾದರೂ ಏನಾಗಬಹುದು?"

ರಾಘವರಾವ್: "ಕ್ರಿಮಿನಲ್ ಮೊಕದ್ದಮೆಗಳಲ್ಲಿ ಕಾಯಿದೆ ಕಾನೂನುಗಳು ಹಸ್ತಕ್ಷೇಪ ಮಾಡುವದು ಕ್ರಿಮಿನಲ್ ಮೊಕದ್ದಮೆಗಳಲ್ಲಿ ಹಾಗೆ ವರ್ತಿಸುವುದು ಮುಖ್ಯವಾಗಿರುತ್ತದೆ. ಅಂತಲೇ ನಾವೊಂದು ತೀರ್ಮಾನಕ್ಕೆ ಬಂದಿದ್ದೇವೆ. ದೀರ್ಘ ಕಾಲದ ಬಂಧನವು ಅನ್ಯಾಯದ್ದಾಗಿರುತ್ತದೆ. ಈಗಿನ ಹೊಸಕಾನೂನು ಏನು ಹೇಳುತ್ತದೆಂದು ನಮಗೆ ಗೊತ್ತಿಲ್ಲ. ಅದು ಹೀಗೆ ಆಕ್ರಮಿಸುವದದನ್ನು ನ್ಯಾಯವೆಂದು ಹೇಳಬಹುದೇ?"

ಮೆನನ್: "ಹೊಸಕಾಯಿದೆಯ ಪ್ರಕಾರ ಅದು ನ್ಯಾಯ ಸಮ್ಮತವಾಗುತ್ತದೆ."

ಸತ್ಯನಾರಾಯಣ ರಾವ್: "ನ್ಯಾಯಸಮ್ಮತವಲ್ಲದ್ದನ್ನು ನ್ಯಾಯವೆಂದು ಮಾಡುತ್ತದೆಯೆ? ನಿಜವು ನಾವು ಈ ಬಂಧನವು ಕಾಯಿದೆವಿರುದ್ಧವೆಂದು ತೀರ್ಮಾನಿಸುವ ನಿರ್ಧಾರಕ್ಕೆ ಬಂದಿರುತ್ತೇವೆ. ಹೊಸ ಕಾನೂನು ಕೂಡಾ ಇಂತಹದ್ದನ್ನು ನ್ಯಾಯ ಸಮ್ಮತವೆಂದು ಹೇಳುತ್ತದೆಂದು ನಾವು ಭಾವಿಸುವುದಿಲ್ಲ."

ಮೆನನ್: "ಅನ್ಯಾಯ್ಯವು ನ್ಯಾಯಕರ ಅದು ನ್ಯಾಯವಾಗಿರುತ್ತದೆಯೆ, ಅನ್ಯಾಯವಾಗಿರುತ್ತದೆಯೋ ಎಂಬುದನ್ನು ಆಮೇಲೆ ತಿಳಿಯಬಹುದೆಂದು ನಾನು ಸೂಚಿಸಲೇ?"

ಸತ್ಯನಾರಾಯಣರಾವ್: "ಇದು ಅಧಿಕೃತ ಪ್ರತಿ ಅಲ್ಲ. ಅಧಿಕೃತವಲ್ಲದ ಟೈಪು ಕಾಪಿಯನ್ನು ನ್ಯಾಯಾಲಯ ಮನ್ನಿಸದು. ಅದರ ಆಧಾರದಿಂದೇನೂ ತೀರ್ಮಾನಿಸಲು ಬರುವಂತಿಲ್ಲ. ಕಾಯಿದೆಯೊಂದೇ ನಮಗೆ ಮುಖ್ಯವಾಗಿದೆ."

ಮೆನನ್: "ನನ್ನ ಕಾರ್ಯವನ್ನು ನಾನು ಮಾಡಿದೆ"

ಸರಕಾರೀ ವಕೀಲರಾದ ಶ್ರೀ ಕುಟ್ಟಿಕೃಷ್ಣ ಮೆನನ್ನರು ಭಾರತಸರಕಾರ ಅಧಿವೇಶನ ಪಾಸು ಮಾಡಿದ ಹೊಸ ಕಾನೂನಿನನ್ವಯ ದೀರ್ಘಕಾಲ ಬಂಧನದಲ್ಲಿಡಬಹುದು. ಆದುದರಿಂದ ಆ ಹೊಸ ಕಾನೂನಿನನ್ವಯ ಎ. ಕೆ. ಗೋಪಾಲನ್ನರ ಮೇಲೆ ಕೊಡಬಹುದಾದ ತೀರ್ಪನ್ನು ಮುಂದೆ ಹಾಕಬೇಕೆಂದು ಕೇಳಿಕೊಂಡರು. ಮುಖ್ಯ ನ್ಯಾಯಾಲಯವು ಅಧಿಕೃತವಾದ ಹೊಸ ಕಾನೂನಿನ ಪ್ರತಿಯು ಮುಂದಿರಿಸಲಿಕ್ಕಿಲ್ಲದೆ ತನ್ನ ತೀರ್ಪನ್ನು ಕೊಟ್ಟಿತು.

ತೀರ್ಪು

ನ್ಯಾಯಮೂರ್ತಿ ಸತ್ಯನಾರಾಯಣರಾಯರ ತೀರ್ಮಾನದ ಸಾರ: "ಬಂಧನದ ಆಪಾದಿತನು 1950ರಲ್ಲಿ ಕಮ್ಯೂನಿಸ್ಟ ಪಕ್ಷದ ಮೇಲಿನ ನಿಷೇಧಾಜ್ಞೆಯನ್ನು ತೆಗೆದುಕೊಂಡಿತು. ಮದ್ರಾಸ್ಸು ನ್ಯಾಯಾಲಯವು ಇನ್ನಿತರ ಕೋರ್ಟುಗಳು ನನ್ನ ವಿಮೋಚನಾ ಅರ್ಜಿಯನ್ನು ನಿರಾಕರಿಸಿವೆ. ಕೋರ್ಟು ತನಗೆ ನ್ಯಾಯವನ್ನು ತೋರಿಸಿಕೊಡಬೇಕು, ಬಿಡುಗಡೆ ಮಾಡಬೇಕು ಎಂದಿದಾನೆ. 19[illegible] ನಂತರದ ಹೊಸಕಾನೂನಿನನ್ವಯ ಯಾವ ಆಪಾದಿತನನ್ನೇ ಆಗಲಿ ಬಂಧಿಸಿದ [illegible]ದು ವರ್ಷದೊಳಗೆ ವಿಚಾರಣೆಗೆ ಗುರಿಪಡಿಸದೇ ಕಾರಾಗೃಹದಲ್ಲೇ ಬಂಧಿಸಿಡುವ[illegible]

ಗಿದೆ. ತನ್ನ ದೋಷ ಇಲ್ಲವೆ ಅಪರಾಧವನ್ನು ಮರೆಮಾಚುವುದಕ್ಕೂ, ತನ್ನ ದೋಷವನ್ನು ಎತ್ತಿತೋರಿಸುವವನಿಗೂ ವಿರುದ್ಧವಾಗಿ ವರ್ತಿಸುವುದುಂಟು. ತನ್ನ ಪಾಪದ ಕೊಡತುಂಬಿ ಹೋದರೂ ಕತ್ತಲಲ್ಲಾದದ್ದು ಬೆಳಕಿಗೆ ಬರುವುದಾದರೆ ಆಗ ತನ್ನ ಮಾನ ಉಳಿಸಿಕೊಳ್ಳುವುದಕ್ಕೂ ಕೆಲವು ವೇಳೆ ತನ್ನ ಮೇಲಿನವರಾದವನ್ನು ಹಾರಿಸಿಬಿಡುವದಕ್ಕೂ ಅರ್ಥವಿಸುವುದು ವಾಡಿಕೆಯಾಗಿದೆ. [illegible]ವಾಗಿ ವಂಚನೆ — ತನ್ನ [illegible]ನಿಂದ ಇತರರ ವಚ್ಚಸ್ಸು ಬೀಳದಂತೆ ಮಾಡುವುದು — ತನಗಾಗದವನ ದೋಷಾರೋಪಣೆ ಮಾಡುವುದು — ದೇಶಪ್ರೇಮದ ಮಾನ ಹಾರಿಕೆಯಿಂದಲೇ ತನ್ನ ಶ್ರೇಯಸ್ಸನ್ನು ಹೆಚ್ಚಿಸಿಕೊಳ್ಳುವುದೂ ಈ ಅರ್ಥಬಿಡುವದರ ಮುಖ್ಯೋದ್ದೇಶವಾಗಿರುತ್ತದೆ. ಎಲ್ಲಿ ಕೊಳಕು ಇದೆಯೋ—ಎಲ್ಲಿ ವಂಚನೆಯಿದೆಯೋ—ಎಲ್ಲಿ ಅಪಪ್ರಚಾರ ಇದೆಯೋ—ಅಲ್ಲಲ್ಲ ಈ ಅರ್ಥಬಿಡುವ ಅರ್ಥಗಳನ್ನು ಮರೆಮಾಚುವದಕ್ಕೆ ಪ್ರಯೋಗಿಸಲ್ಪಡುತ್ತವೆ.

IN THE HIGH COURT OF JUDICATURE AT MADRAS
Ordinary Original Civil Jurisdiction

O. P. No. [illegible] of 1951

In the matter of the Indian Companies Act 1913
and
In the matter of the Western Agencies, Ltd.

The Western Agencies Ltd., Mangalore ... Petitioner

NOTICE is hereby given that a Petition under section 12 of the Indian Companies Act 1913 for confirmation of an alteration of the Memorandum of Association of the Petitioner Company was presented by the Company on the 20th day of February 1951 and that the said Petition is directed to be heard before the Judge sitting in chambers on the 23rd day of April, 1951. Any person desirous of supporting or opposing the making of an order as prayed in the Petition should appear at the time of hearing by himself or by his Advocate, and a copy of the Petition will be furnished to any person requiring the same by the undersigned on payment of the regulated charge for the same.

1-A, Thomas Road,
T. Nagar, Madras-17.
13-3-1951

A. Narayana Pai,
Advocate for the Petitioner.

NOTE: Any person who intends to appear on the hearing of the said Petition must serve on or send by post to the above-named notice of his intention so to do. The notice must state the name and address of the person or if a firm the name and address of the firm and must be signed by the person or firm or his or their Advocate and must be served or if posted must be sent by post so as to reach the abovenamed not later than 3 O'Clock in the afternoon of 22nd April 1951.

ಮೂಡಿದ ಸ್ವಾರಸ್ಯ ವಿಚಾರಗಳು.

ಆಶ್ರಮವಾಗಿರುತ್ತದೆ. ಆದರೆ ಸರಕಾರಕ್ಕೆ ಹಲಸಂದರ್ಭಗಳಲ್ಲಿ ಆ ಆಕ್ಟಿನಲ್ಲಿ ಬದಲಾವಣೆ ಮಾಡುವದು ಆವಶ್ಯಕಾದರೆ ಬದಲಾವಣೆಯ ಸವಲತ್ತೂ ಇರುತ್ತದೆ. ಹೀಗೆ ನಾಲ್ಕುವರ್ಷಗಳಿಂದ ಪ್ರಬಲವಾದ ಕಾರಣವಿಲ್ಲದೆ ಬಂಧನದಲ್ಲಿರಿಸಿ ಬಿಡುಗಡೆ ಮಾಡುವದಕ್ಕೆ ಆ ಕಾಯಿದೆ ಸಹಾಯಕವಾದರೂ ಈ ಕಾಯಿದೆಯಿಂದ ಸಾರ್ವಜನಿಕ ಸ್ವಾತಂತ್ರ್ಯವನ್ನು ಇಲ್ಲವೆ ಹಕ್ಕನ್ನು ಬಲಾತ್ಕಾರವಾಗಿ ಅಪಹರಿಸಿದಂತಾಗುತ್ತದೆ. ಸರಕಾರೀ ವಕೀಲರು ಆ ಕಾನೂನಿನಂತೆ ಅವನನ್ನು ಕಾಲ ಕಾಲಕ್ಕೆ ಕಾರಾಗೃಹದಲ್ಲಿಡಲಾಗಿದೆ ಎನ್ನುತ್ತಾರೆ. ಆದರೆ ಕಾನೂನಿನಲ್ಲಿ ಇಂತಿಷ್ಟೇ ಕಾಲದ ವರೆಗೆ ಬಂಧಿಸಬೇಕೆಂಬ ನಿರ್ದೇಶವೇನೂ ಇರುವುದಿಲ್ಲ. ಆದುದರಿಂದ ನಾವು ಬಂಧ ಮುಕ್ತತೆಯ ಕುರಿತು ತೀರ್ಮಾನಿಸುವದಾದರೆ ಆ ಕಾಯಿದೆಗೆ ವಿರೋಧವಾಗುವಂತಿಲ್ಲ. ಸರಕಾರವು ಒಂದು ನಿರ್ದಿಷ್ಟ ಸಮಯ ಸೂಚಿಸದೆ ಇದ್ದುದರಿಂದ ಇದೊಂದು ಬಿಡಿಸಲಾಗದ ಸಮಸ್ಯೆಯು ಆಗಿ ಉಳಿದಿರುತ್ತದೆ. ಅದನ್ನು ನಾವು ಬಗೆಹರಿಸಬೇಕಾಗಿದೆ. ಇನ್ನು ಮುಂದಕ್ಕೆ ಸಂಶಯ ತಿರುಗಿ ತಲೆ ಎತ್ತಬಾರದು. ಹೆಚ್ಚೆಂದರೆ ಒಂದು ವರ್ಷವೆಂದು ಕಾಯಿದೆ ಹೇಳುತ್ತದೆ. ಅದರೊಳಗೆ ಬಿಡಬಹುದಾದ ಸಮಯವನ್ನೇನೂ ಆ ಕಾಯಿದೆ ಹೇಳುತ್ತಿಲ್ಲ. ಹೀಗಾಗಿ ಅಪಾದಿತನ ಕೇಳಿಕೆಯಿಂದಾಗಿ ಹೊಸ ಸಮಸ್ಯೆ ಹುಟ್ಟುವುದು ನ್ಯಾಯವೂ, ಸ್ವಾಭಾವಿಕವೂ ಆಗಿರುತ್ತದೆ. ಇಲ್ಲಿ ಸರಿಯಾದ ಮಾರ್ಗದರ್ಶನ ಮಾಡುವದು ನಮ್ಮ ಕರ್ತವ್ಯವಾಗಿರುತ್ತದೆ. ಅಂತಲೆ ಅವನನ್ನು ನಾವು ಬಂಧಮುಕ್ತನನ್ನಾಗಿ ಮಾಡುವಂತೆ ನಿರ್ದೇಶಿಸಿದ್ದೇನೆ."

ಎರಡನೇ ಮುಖ್ಯ ನ್ಯಾಯಾಧೀಶರಾದ ಶ್ರೀ ರಘುವರಾಯರೂ ಕೂಡ ಮೇಲಿನದನ್ನು ಸಮರ್ಥಿಸಿ ಕೂಡಲೇ ಎ. ಕೆ. ಗೋಪಾಲನ್ನರನ್ನು ಬಿಡುಗಡೆಮಾಡಬೇಕೆಂದು ತೀರ್ಪನ್ನು ಕೊಟ್ಟರು.

ಹೈಕೋರ್ಟ ತನ್ನ ತೀರ್ಪಿತ್ತನಂತರ ಸರಕಾರೀ ವಕೀಲರು ಹೊಸ ಕಾನೂನು ಮಂಜೂರಾದ ಅಂಶವನ್ನು ನ್ಯಾಯಾಧೀಶರ ಗಮನಕ್ಕೆ ತಂದ ವಿಚಾರವಾಗಿ ಈ ಕೆಳಗಿನಂಶವನ್ನು ತಮ್ಮ ತೀರ್ಪಿನಲ್ಲಿ ಹೀಗೆ ಹೇಳಿರುವರು: "ನಾವು ತೀರ್ಪನ್ನು ಕೊಡುವ ತಕ್ಕ ಸಮಯದಲ್ಲಿ ಸರಕಾರೀ ವಕೀಲರು ಹೊಸಕಾನೂನಿಗೆ ಅಧ್ಯಕ್ಷರ ಸಮ್ಮತಿ ದೊರಕಿ ಇಂದಿನಿಂದಲೇ ಜಾರಿಗೆ ಬರುವದರಿಂದ ನಮ್ಮ ತೀರ್ಪನ್ನು ಮುಂದೆ ಹಾಕಬೇಕೆಂದು ಕೇಳಿಕೊಂಡಿದ್ದಾರೆ. ಅವರು ಅಧಿಕೃತ ಪ್ರತಿಯನ್ನು ತೋರಿಸದೆ ಟೈಪ್ ಮಾಡಿದ ಪ್ರತಿಯನ್ನು ಹಾಜರು ಪಡಿಸಿರುತ್ತಾರೆ. ಅನಧಿಕೃತ ಪ್ರತಿಯನ್ನು ನ್ಯಾಯಾಲಯವು ಮಾನ್ಯ ಮಾಡುವುದು ಶಕ್ಯವಿಲ್ಲದ ಕಾರಣ ನಾವು ನಮ್ಮ ತೀರ್ಪನ್ನು ಮುಂದುವರಿಸುವದಕ್ಕೆ ನಿರಾಕರಿಸಿದೆವು." ತೀರ್ಪಿತ್ತನಂತರ ಎ. ಕೆ. ಗೋಪಾಲನ್‌ರವರು ಪೋಲೀಸರ ಅನುಮತಿಯಿಲ್ಲದೆ ಸೀದಾಗಿ ಹೋಗಬಹುದೇ ಎಂದಾಗ ನ್ಯಾಯಾಧೀಶರು ಹೋಗುವದಕ್ಕೆ ಯಾವ ಅಭ್ಯಂತರವೂ ಇರುವುದಿಲ್ಲ ಎಂದರು. ಗೋಪಾಲನ್ ಕೋರ್ಟನ್ನು ಬಿಟ್ಟು ಹೋದರು

ಬಿಡುಗಡೆಯಾದ ಮರುಕ್ಷಣದಲ್ಲಿಯೇ ಹೊಸ ಕಾನೂನಿನನ್ವಯ ಮದ್ರಾಸು ಸರಕಾರ ತಿರುಗಿ ಎ. ಕೆ. ಗೋಪಾಲರನ್ನು ಬಂಧಿಸಿ ಕಡ್ಲೂರು ಸೆಂಟ್ರಲ್ ಜೈಲಿಗೊಯ್ಯಿತು.

ಬಿಡುಗಡೆಯ ತೀರ್ಪನ್ನು ಕೊಟ್ಟ ಕೂಡಲೇ ಕೋರ್ಟನ್ನು ದಾಟಿ ಬರುವಾಗಲೇ ತಿರುಗಿ ಬಂಧಿಸುವ ಈ ಕಾಯಿದೆ ಸ್ವರೂಪವು ವಿಚಿತ್ರವಾದದ್ದೆಂದೇ ಹೇಳಬೇಕು. ಹೈಕೋರ್ಟಿನ ತೀರ್ಪನ್ನು ಈ ರೀತಿಯಲ್ಲಿ ಭಂಗಿಸುವದು ಗೌರವಾಸ್ಪದವಾದಂತಹದಲ್ಲ. ಹೊಸ ಕಾಯ್ದೆ ಮಂಜೂರಿಗೊಂಡದ್ದು ಅದೇ ದಿನ ಮುಂಜಾನೆ. ಅಧಿಕೃತವಾಗಿ ಬರೆದ ಇದ್ದುದನ್ನು ಕೋರ್ಟು ಅಲ್ಲಗಳೆದ ಮೇಲೆ ಸರಕಾರವಾದರೂ ಹೇಗೆ ಅಧಿಕೃತ ಆಜ್ಞೆ [illegible] ಹೈಕೋರ್ಟ ಕೊಟ್ಟ ತೀರ್ಮಾನದಂತೆ ಬಿಡುಗಡೆಮಾಡಲಾಗಿ ಹೊಸ ಕಾಯಿದೆಯನ್ವಯ ಬಂಧಿಸಲಾಯಿತೆಂದು ಸರಕಾರ ಹೇಳುವದಾದರೂ ತಿರುಗಿ ಬಂಧಿಸಿದ್ದಕ್ಕೆ ಹೊಸ ಕಾಯಿದೆಯ ಅಧಿಕೃತ ಪ್ರಮಾಣಪತ್ರವಿಲ್ಲದೆಯೆ ನಡೆಸಿತೆನ್ನುವದು ಸ್ಪಷ್ಟವಾಗುತ್ತದೆ. ಈ ಕುರಿತು ಹೈಕೋರ್ಟಿನ ನ್ಯಾಯಾಧೀಶರಾದ ಶ್ರೀ ಸತ್ಯನಾರಾಯಣರಾಯರು ವೈಯಕ್ತಿಕವಾಗಿ ಪತ್ರಿಕಾ ಹೇಳಿಕೆ ಕೊಟ್ಟಿರುತ್ತಾರೆ. ಅದರಲ್ಲಿ ಸರಕಾರದ ಉಚ್ಚ ಅಧಿಕಾರಿಗಳೂ ಸರಕಾರೀ ವಕೀಲರೂ ಸೇರಿಕೊಂಡು ಹೈಕೋರ್ಟು ಇತ್ತ ತೀರ್ಮಾನಕ್ಕೆ ಅಪಚಾರ ಮಾಡಿರುತ್ತಾರೆ. ತೀರ್ಮಾನದ ಮರುಕ್ಷಣದಲ್ಲಿ ಎ. ಕೆ. ಗೋಪಾಲನ್ನರನ್ನು ತಿರುಗಿ ಬಂಧಿಸುವದು ಸರಕಾರೀ ವಕೀಲರಿಗೆ ಚೆನ್ನಾಗಿ ಗೊತ್ತಿತ್ತು ಎಂಬಂತೆ ಹೇಳಿರುತ್ತಾರೆ. ಈ ಮಧ್ಯಂತರದಲ್ಲಿ ಸರಕಾರೀ ವಕೀಲರಾದ ಕುಟ್ಟಿಕೃಷ್ಣ ಮೆನನ್ನರ ಸ್ಥಾನಕ್ಕೆ ಶ್ರೀ ವಿ. ಕೆ. ತಿರುವೆಂಕಟಾಚಾರಿಯವರು ಬಂದರು. ಹೈಕೋರ್ಟು ಬಿಡುಗಡೆಯ ತೀರ್ಪಿನ ಬೆನ್ನಲ್ಲೇ ತನ್ನನ್ನು ತಿರುಗಿ ಬಂಧಿಸಿದ ಸರಕಾರದ ಅನುಚಿತ ಧೋರಣೆಯನ್ನು ಎತ್ತಿಕೊಂಡು ತಿರುಗಿ ಎ. ಕೆ. ಗೋಪಾಲನರವರು ಹೈಕೋರ್ಟಿಗೆ ತನ್ನ ದೂರನ್ನು ಕೊಟ್ಟರು.

ಮಾರ್ಚ 12ಕ್ಕೆ ಹೈಕೋರ್ಟ ಎ. ಕೆ. ಗೋಪಾಲನ್ನರ ಮೊಕದ್ದಮೆಯನ್ನು ವಿಚಾರಣೆಗೆ ತೆಗೆದುಕೊಂಡಿತು. ಪ್ರಕೃತ ಸರಕಾರೀ ವಕೀಲರಾದ ಶ್ರೀ ವಿ. ಕೆ. ತಿರುವೆಂಕಟಾಚಾರ್ಯರು ಸರಕಾರಕ್ಕೆ ಹೊಸ ಆಕ್ಟಿನ ಪ್ರಕಾರ ಗೋಪಾಲರನ್ನು ಬಂಧಿಸುವುದು ಅವಶ್ಯವಾಗಿತ್ತು. ಕಾಯಿದೆಯನ್ನು ಪಾಲಿಸುವ ಉದ್ದೇಶದಿಂದ ಹಾಗೆ ಮಾಡಲಾಗಿದೆಯೇ ಹೊರತು ಕೋರ್ಟನ್ನು ಅವಮಾನಿಸುವ ಉದ್ದೇಶ ಅದಕ್ಕಿರಲಿಲ್ಲ. ನೂತನ ಕಾಯಿದೆಯ ಮೂಲಕ ಇದನ್ನು ಬಗೆಹರಿಸಬೇಕೆನ್ನುವದೇ ಸರಕಾರದಪೇಕ್ಷೆ ಇರುತ್ತದೆಯಲ್ಲದೆ ಇತರ ಯಾವ ತಪ್ಪು ಗ್ರಹಿಕೆಗಳಿಲ್ಲವೆನ್ನುವದರಲ್ಲಿ ನಾನು ಕೋರ್ಟಿಗೆ ಭರವಸೆಕೊಡುವವನಿದ್ದೇನೆ. ಸರಕಾರ ನ್ಯಾಯಾಪಕ್ಷಪಾತಿಯಾಗಿದೆ ಇನ್ನಾವ ದುರುದ್ದೇಶವೂ ಇರುವುದಿಲ್ಲ ಎಂದರು. ಸತ್ಯನಾರಾಯಣರಾವ್: "ಹೊಸ ಕಾಯಿದೆಯಂತೆ ಬಂಧಿಸಿದ್ದು ಸರಿ ಎಂದು ವಾದಿಸುವುದಕ್ಕೆ ಮಾತ್ರ ನೀವು ಹೊಣೆಗಾರರಾಗಿದ್ದೀರಿ. ಅಂದರೆ ಅದಷ್ಟೇ ನಿಮ್ಮ ಕಾರ್ಯಕ್ಷೇತ್ರವಾಗಿರುತ್ತದೆ. ಆದರೆ ಕೋರ್ಟು ಈ ವಿಚಾರದಲ್ಲಿ ಹೇಗೆ ಮುಂದುವರಿಸಬೇಕೆಂಬುದನ್ನು ನಾವು ನಿಷ್ಕರ್ಷಿಸಬೇಕಾಗಿದೆ."

ಹಿಂದಿನ ಸರಕಾರೀ ವಕೀಲರಾದ ಕುಟ್ಟಿಕೃಷ್ಣ ಮೆನನ್ನರು ನಡುವೆ ತನಗೆ ತನ್ನ ಹೇಳಿಕೆಯನ್ನು ಕೋರ್ಟಿನ ಮುಂದೆ ತರಲು ಪರವಾನಿಗೆಯನ್ನು ಬಯಸಿದರು. ಆ ಹೇಳಿಕೆ ಶ್ರೀ ಸತ್ಯನಾರಾಯಣರಾಯರು ಪತ್ರಿಕೆಗಳಿಗೆ ಕೊಟ್ಟ ಪ್ರಕಟಣೆಯನ್ನು ಪ್ರತಿಭಟಿಸುವಂತಹದಾಗಿತ್ತು. ಕುಟ್ಟಿಕೃಷ್ಣಮೆನನ್ನರ ಆರೋಪದಿಂದಾಗಿ ಕೋರ್ಟಿನಲ್ಲೊಂದು ಮಾತಿನ ಯುದ್ಧ ನಡೆಯಿತೆಂದೇ ಹೇಳಬೇಕು. ಕುಟ್ಟಿಕೃಷ್ಣಮೆನನ್ನರ ನಿರಾಧಾರ ಆರೋಪವನ್ನು ಬಯಲಿಗೆಳೆಯುವಂತಹ ಒಂದು ಸಂದರ್ಭವನ್ನು ಮುಂದಿನ ಸಂಚಿಕೆಯಲ್ಲಿ ವಿವರಿಸಲಾಗುವುದು. ಅಷ್ಟರೊಳಗೆ ಎ. ಕೆ. ಗೋಪಾಲನ್‌ರವರ ತೀರ್ಪು ಬಂದಿದೆ.

ನೋಟೀಸು

ಶಿರ್ಸಿ ಪಂಚಾಯ್ತ್ ಬೋರ್ಡಿಗೆ ಒಳಪಟ್ಟ ಪೇಟೆಗಳಲ್ಲಿಯ ಸಂತೆ ಮಾರ್ಕೆಟಿನಲ್ಲಿ ಮತ್ತು ದಿನಚರಿ ಮಾರ್ಕೆಟಿನಲ್ಲಿ ತಾ. 1-4-51 ರಿಂದ 31-3-52ರ ವರೆಗೆ ಒಂದು ವರ್ಷದ ಪಟ್ಟಿ ವಸೂಲು ಮಾಡುವ ಸ್ವಾತಂತ್ರ್ಯವನ್ನು ಇದೇ ಬರುವ ತಾರೀಖು 26-3-51 ನೇ ಸೋಮವಾರ ದಿನ ಸಾಯಂಕಾಲ ಗಂಟೆ 4ಕ್ಕೆ ಪಂಚಾಯ್ತ್ ಬೋರ್ಡ್ ಆಫೀಸಿನಲ್ಲಿ ಬಹಿರಂಗವಾಗಿ ಏಲಂ ಮಾಡಲಾಗುವುದು. ಏಲಂ ಶರ್ತ ವಗೈರೆಯನ್ನು ಪಂಚಾಯ್ತ ಬೋರ್ಡಿನ ಬಹಿರಂಗ ಪ್ರಕಟಣಾದಿಗಳಿಂದ ಪ, ಸ್ವತಃ ಆಫೀಸಿನಲ್ಲಿ ಬಂದು ತಿಳಿಯಬಹುದು. ಎಂಬ ಸಂಗ್ತಿ ಉಮೇದ್ವಾರ ಹಾಗೂ ಸಮಸ್ತ ಜನರಿಗೆ ಈ ಮೂಲಕ ತಿಳಿಸಲಾಗುತ್ತದೆ.

ಯಸ್. ಅಣ್ಣಯ್ಯ ಹೆಗ್ಡೆ,
ಪ್ರೆಸಿಡೆಂಟ್.
ಪಂಚಾಯ್ತ್ ಬೋರ್ಡ್, ಶಿರ್ಸಿ.

ಪಂಚಾಯ್ತ್ ಬೋರ್ಡ್, ಆಫೀಸು,
ಶಿರ್ಸಿ, 3-3-51

ಪ್ರಧಾನ ಕಾರ್ಯಾಲಯ: ಉಡುಪಿ. ಸ್ಥಾಪನೆ: ೧೯೩೫

ದಿ ಕೆನರಾ ಮ್ಯೂಚುವಲ್ ಎಶ್ಯೂರೆನ್ಸ್
ಕಂಪೆನಿ, ಲಿಮಿಟೆಡ್,

ಇದುವೇ

ಪಾಲಿಸಿದಾರರ ನಂಬಿಕೆ ಹೆಚ್ಚಿಸುವ ಹೆಸರು

ಅಲ್ಲದೆ

ಸ್ಥಾಪಿತವಾದಂದಿನಿಂದಲೂ ಲಾಭ (ಬೋನಸ್)
ಹಂಚಿದ ಕಂಪೆನಿ.

The Canara Mutual Assurance Co, Ltd.

H. O. UDIPI. (SOUTH INDIA) ESTD: 1935.

ಭಾರತದ ಬಹುದೊಡ್ಡ ನಗರವಾದ ಬೊಂಬಾಯಿಯಲ್ಲಿ
ಗ್ರಾಹಕರ ತೃಪ್ತಿಯನ್ನೇ ಧ್ಯೇಯವಾಗಿಟ್ಟುಕೊಂಡಿರುವ
ಕನ್ನಡಿಗರಿಂದಲೇ ನಡೆಸಲ್ಪಡುತ್ತಿರುವ ಉನ್ನತವಾದ ರಾಷ್ಟ್ರೀಯ ಸಂಸ್ಥೆ—

ದಿ ನೇಶನಲ್ ಜನರಲ್ ಸ್ಟೋರ್ಸ್

(ಡಿಸ್ಪೆನ್ಸಿಂಗ್ ಕೆಮಿಸ್ಟ್ ಮತ್ತು ಡ್ರಗ್ಗಿಸ್ಟ್)

8 ಎ, ಮೆಹರ್ವಾನ್ ಬಿಲ್ಡಿಂಗ್ಸ್, Opp: His Master's Voice
ಸರ್ ಫಿರೋಜ್ ಶಾ ಮೆಹ್ತಾ ರೋಡು, ಫೋರ್ಟ, ಬೊಂಬಾಯಿ.

ಇಲ್ಲಿ ದೇಶ-ವಿದೇಶಗಳಿಂದ ಎಲ್ಲಾ ತರದ ಔಷಧಗಳನ್ನೂ ಇತರ ಜನೋಪಯೋಗಿ ಸಾಮಾನುಗಳನ್ನೂ ರಿಯಾಯಿತಿ ಆಕರ್ಷಕ ಬೆಲೆಗೆ ವಿತರಣೆ ಮಾಡಲಾಗುತ್ತದೆ.

ಅನುದಿನದ ಉಪಯೋಗಕ್ಕೆ ಅವಶ್ಯವಾದ ಸಾಹಿತ್ಯಗಳೂ ಮತ್ತು ಟಾನಿಕ್‌ಗಳೂ ವಿಟಮಿನ್ ಆಹಾರ ವಸ್ತುಗಳೂ ಮುಲಾಮುಗಳೂ, ಸುವಾಸನಾ ದ್ರವ್ಯಗಳೂ [illegible] ಆಗಿಯೂ ಚಿಲ್ಲರೆಯಾಗಿಯೂ ಸುಲಭ ದರದಲ್ಲಿ ದೊರೆಯುತ್ತವೆ.

ವಿ. ಪಿ. [illegible] ಆರ್ಡರುಗಳನ್ನು ಸ್ವೀಕರಿಸಲಾಗುವುದು.
ಹೆಚ್ಚಿನ ಮಾಹಿತಿಗಳಿಗೆ ಬರೆಯಿರಿ.

ಎಂ ಮೆಂಡೋಸ, ಮ್ಹಾಲಿಕ. **M Mendosa,** Proprietor.

THE NATIONAL GENERAL STORES

Importers Exporters, Dispensing Chemists & Druggists.
General Merchants & Commission Agents.
8A Mherwan Buildings, Opp: His Master's Voice,
Sir Phirozsha Mehta Road, **Fort, Bombay.**

ಟೀಕೆಗಳಿಗೆ ಸ್ವಾಗತ!

ಪ್ರಧಾನ ಮಂತ್ರಿ ಶ್ರೀ ಜವಾಹರಲಾಲ್ ನೆಹ್ರೂರವರು ಪಾರ್ಲಿಮೆಂಟಿನಲ್ಲಿ ಪಾರ್ಲಿಮೆಂಟು ಸದಸ್ಯರ ಟೀಕೆಗಳಿಗೆ ಸಮರ್ಪಕವಾದ ಉತ್ತರ ಕೊಡುತ್ತಾ, ದೇಶದ ಏಳಿಗೆಗಾಗಿ ಸರಕಾರ ಸಾಧಿಸಿದ ಪ್ರಗತಿಯನ್ನು ವಿವರಿಸಿದರು. ಈಚೆಗೆ ಎಲ್ಲ ವಿಚಾರಕ್ಕೂ ಎಲ್ಲ ಸದಸ್ಯರಿಂದಲೂ ಬಿರುಸಾದ ಮಾತುಗಳಿಂದ ಟೀಕೆ ನಡೆದಿರುತ್ತದೆ. ಮಾನ್ಯ ಮುಖ್ಯಮಂತ್ರಿಗಳು ಯಥಾರ್ಥವಾದ ಒಂದು ಚಿತ್ರವನ್ನು ಸದಸ್ಯರ ಅವಗಾಹನೆಗೆ ತಂದು ಮಾನ್ಯ ಸದಸ್ಯರ ವಿಧಾಯಕ ಟೀಕೆಯನ್ನು ವಿಶೇಷ ಮುತ್ಸದ್ದಿತನದಿಂದ ನಾನು ಯೋಚಿಸುತ್ತೇನೆಂದರು. ಶ್ರೀ ಕೃಪಲಾನಿಯವರ ವಿಮರ್ಶಾತ್ಮಕ ಟೀಕೆಯನ್ನು ನಾನು ಮೆಚ್ಚುತ್ತೇನೆಂದರು, ಮತ್ತೆ ನೆಹ್ರೂರವರು:

“ಪರಿಸ್ಥಿತಿಯ ಪರಿಪೂರ್ಣ ಜ್ಞಾನವುಳ್ಳಂತಹ ಮಾನ್ಯ ಸದಸ್ಯರ ಟೀಕೆಗಳನ್ನು ನಾನು ಸ್ವಾಗತಿಸುತ್ತೇನೆ. ಆದರೆ ಟೀಕೆ ಮಾಡುವವರು ಅದರ ಪೂರ್ಣ ಚಿತ್ರವೊಂದನ್ನು ತಮ್ಮ ಕಣ್ಣ ಮುಂದಿಟ್ಟುಕೊಂಡು ವಿಚಾರ ತಕ್ಕಡಿಯಲ್ಲಿ ತೂಗಿನೋಡಬೇಕು. ನಾವು ಎದುರಿಸಬೇಕಾದ ಕಠಿಣ ಪ್ರಸಂಗಗಳನ್ನು ಬಗೆಹರಿಸುವಲ್ಲಿ ಮಾನ್ಯ ಸದಸ್ಯರು ಸಲಹೆ ನೀಡಲಿ. ನಮ್ಮ ಮುಂದೆ ಹಲವು ತೊಂದರೆಗಳಿವೆಯೆನ್ನೋದು ನಿಜ; ಆದರೆ ಈ ಬಗೆಯ ಸಾಮಾನ್ಯ ತೊಡಕುಗಳು ಜಗತ್ತಿನ ಪ್ರತಿಯೊಂದು ರಾಷ್ಟ್ರಕ್ಕೂ ಇದ್ದದ್ದೇ, ನೀವು ಕರೆಯುವ ಬಂಡವಾಳಶಾಹೀ, ಸೋಶಲಿಸ್ಟ್ ಮತ್ತು ಕಮ್ಯೂನಿಸ್ಟ್ ರಾಷ್ಟ್ರಗಳಲ್ಲೂ ಕೂಡಾ ಈ ತೊಂದರೆಗಳು ಇದ್ದೇ ಇವೆ. ಆದುದರಿಂದ ನಾವು ಕೊಂಚ ವಿವೇಕವನ್ನು ತಾಳುವುದು ಬಹಳ ಮುಖ್ಯವಾಗಿರುತ್ತದೆ. ವಿಧಾಯಕ ರೀತಿಯ ಸಲಹೆಯನ್ನು ನೀಡುವ ಪಕ್ಷದಲ್ಲಿ ನಮ್ಮ ಮುಂದಿರುವ ಗಂಡಾಂತರ ಪರಿಸ್ಥಿತಿಯನ್ನು ಸುಲಭವಾಗಿ ಪರಿಹರಿಸಿಕೊಳ್ಳಬಹುದು. ನನ್ನ ಸ್ವಾನುಭವದಿಂದ ಹೇಳುವುದಾದರೆ ಈ ಎಲ್ಲ ಅನಿಷ್ಟಗಳು ತಾತ್ಕಾಲಿಕವಾಗಿವೆ ಎನ್ನುತ್ತೇನೆ.

ಇಂತಹ ಮಾನದಂಡದಿಂದಲೇ ಬೇರೆ ರಾಷ್ಟ್ರವನ್ನು ನಾವು ಅಳೆಯುವದಾದರೆ ನಾವು ಎಷ್ಟೋ 'ಸ್ವಾವಲಂಬಿಗಳು—ಎಷ್ಟೋ ಸುಧಾರಿತರು ಎನ್ನಬೇಕು.

ಆಚಾರ್ಯ ಕೃಪಲಾನಿಯವರು ಸರಕಾರದ ಅಸ್ಥಿರತೆಯ ಕುರಿತಾಗಿ ಬಹಳ ನೊಂದಿದ್ದಾರೆ. ಅದರಲ್ಲೂ ಲಂಚಗುಳಿತನ—ಅನ್ಯಾಯಗಳ ಕುರಿತು ಅವರು ಖೇದಗೊಂಡ ವಿಚಾರದಲ್ಲಿ ನನಗೂ ಸಹಾನುಭೂತಿಯಿದೆ. ಸಾನವರ ವಾದವನ್ನು ಮೆಚ್ಚುತ್ತೇನೆ. ಅವರ ಹಾಗೆಯೆ ನಮಗೂ ಹಲವು ಆದರ್ಶಗಳಿರುತ್ತವೆ. ಆ ಆದರ್ಶಗಳು ಎಂದು ಗುರಿಮುಟ್ಟುವುದಿಲ್ಲವೋ—ಆಗ ಖೇದ ಉಂಟಾಗುವುದು ಸ್ವಾಭಾವಿಕ. ಬೇರೆಯವರಿಗಿಂತ ನಾವು ಕಷ್ಟಜೀವಿಗಳೆಂದು ಒಪ್ಪಿಕೊಳ್ಳೋಣ. ಏಕೆಂದರೆ ನಮ್ಮ ಸುತ್ತಮುತ್ತ ದುಷ್ಟ ಶಕ್ತಿಗಳ ಹಾವಳಿ ತುಂಬ ಇವೆ. ನನ್ನ ಕಣ್ಣ ಮುಂದೆ ದೇಶದ ಪರಿಪೂರ್ಣ ಚಿತ್ರವಿದೆ. ದೇಶದ ಹಲವು ಸಂಸ್ಕೃತಿಯ ಜನರ ಜೀವನವನ್ನು ಅವಲೋಕಿಸುವ— ಮತ್ತು ಯೋಗಕ್ಷೇಮವನ್ನು ತಿಳಿದುಕೊಳ್ಳುವ ಸುಸಂದರ್ಭಗಳು ನನಗೆ ದೊರಕಿದ್ದವು. ಸ್ವಾತಂತ್ರ್ಯದಿಂದಾದ ಸಿಹಿಕಹಿ ಅನುಭವಗಳೆಂದನ್ನೂ ಆ ಜನರು ನನ್ನೊಡನೆ ಹೇಳಿದ್ದುಂಟು—

ಅವರು ಹೇಳಿದ್ದೇನು?

ನಾವು ಸ್ವಾತಂತ್ರ್ಯ ಗಳಿಸಿದ ನಾಲ್ಕು ವರ್ಷಗಳಲ್ಲಿ ದೇಶದ ಹೊರಗಿನಿಂದಲೂ ಹಲವು ಜನರು ನಮ್ಮಲ್ಲಿಗೆ ಬರುತ್ತಿರುವುದನ್ನು ನೋಡುತ್ತಲಿದ್ದೇನೆ. ಅವರು ಬರುತ್ತಿರುವುದು ಇಲ್ಲಿಯ ಸಿಂಹಾವಲೋಕನ ಮಾಡುವದಕ್ಕೆಂಬುದು ನನಗೆ ಚೆನ್ನಾಗಿ ತಿಳಿದಿದೆ. ನಮ್ಮ ದೇಶ ಹಿಂದೆ ಹೇಗಿತ್ತು? ಈಗ ಹೇಗಿದೆ ಎಂಬುದನ್ನು ವಿಮರ್ಶೆಮಾಡುವಲ್ಲಿ ಅವರದು ನ್ಯಾಯವಾದ ಮಾರ್ಗವೆಂಬುದನ್ನು ಮರೆಯಬಾರದು. ಅವರು ನಮ್ಮ ಪರಾಜಯವನ್ನು ಲೆಕ್ಕಿಸುವುದಿಲ್ಲ; ನಾವು ಈ ವರೆಗೆ ಸಾಧಿಸಿದ್ದನ್ನಷ್ಟೇ ಅವಲೋಕಿಸುತ್ತಾರೆ. ನೂರಾರು ಸಲ ನಾವು ತಪ್ಪಿದವಾದರೂ ದೇಶದ ಏಳ್ಗೆಗಾಗಿ ಕೈಗೊಂಡ ಒಳ್ಳಿತಾದ ಅಂಶವನ್ನು ಜ್ಞಾಪಿಸಿಕೊಳ್ಳೋಣ.

ನೀರಾವರೀ ಯೋಜನೆಯ ಕುರಿತು ನಾವು ವ್ಯಯಿಸುತ್ತಿರುವ ಅಂಶವನ್ನು ಹಲವರು ಬಲವಾಗಿ ಟೀಕೆ ಮಾಡಿದ್ದಾರೆ. ಮುಂಬಯಿ ಸರಕಾರದ ಜಾಲಿನ ಪೂರೈಕೆಯ ಕುರಿತೂ ಅದೇ ರೀತಿಯ ಮಾತು ಬಂದಿರುತ್ತವೆ. ಇವೆಲ್ಲ ನಾಳಿನ ಆಲೋಚನೆಯಿಲ್ಲದೆ ಆ ದಿನದ ಅಂಶವುಗಳೆನ್ನುತ್ತೇನೆ. ಮೂರು ನಾಲ್ಕು ವರ್ಷಗಳೊಳಗೆ ನೀರಾವರೀ ಯೋಜನೆಯ ಫಲಿತಾಂಶವನ್ನು ಪಡೆಯಲು ಸಾಧ್ಯವಿದೆಯೇ? ಇಂದಿನ ಕಷ್ಟಪರಂಪರೆಗಳ ನಡುವೆ ನಾಳಿನದನ್ನು ಚಿಂತಿಸುವುದು ಎಲ್ಲರ ಕರ್ತವ್ಯವಾಗಿರುತ್ತದೆ. ಇಂದಿನ ಪರಿಸ್ಥಿತಿಯನ್ನು ವಿವೇಚಿಸುವಾಗ ನಾಳಿನ ದಿನಗಳನ್ನು ಮರೆಯುವುದು ಸಾಧ್ಯವೇ? ಇಂದಿಗಿಂತಲೂ ನಾಳಿನ ದಿನ ಅತಿ ಪ್ರಾಮುಖ್ಯವೆಂದು ನಾನು ಭಾವಿಸುತ್ತೇನೆ. ಇಂದಿನ ದಿನವನ್ನು ಮರೆತಿದ್ದೇನೆಂದರ್ಥವಲ್ಲ; ಆದರೂ ನಾಳಿನ ದಿನ ಆಶಾದಾಯಕವೂ, ಅತ್ಯಂತಾವಶ್ಯಕವೂ ಆಗಿರುತ್ತದೆ. ಏಕೆಂದರೆ ಆ ಶುಭದಿನಗಳಿಗಾಗಿ ನಾವಿಂದೇ ಭದ್ರ ತಳಹದಿಯನ್ನು ಹಾಕಿರುತ್ತೇವೆ. ಅಂತಲೇ ನಾಳಿನ ದಿನಗಳಿಗಾಗಿ ನಾನು ತುಂಬ ಆತುರಗೊಂಡಿದ್ದೇನೆ.

ದುರ್ದೈವದಿಂದಾಗಿ ಇಲ್ಲಿಯ ಕೆಲಸಗಾರರು ಇತರ ದೇಶದ ಕೆಲಸಗಾರರಂತೆ ಚೆನ್ನಾಗಿ ದುಡಿಯುತ್ತಿಲ್ಲ. ಈಗಿನ ಹಲವಾರು ಸಮಸ್ಯೆಗಳು ಅತ್ಯಂತಾಸಕ್ತಿಯಿಂದ ಕೆಲಸ ಮಾಡುವದರಿಂದಲೇ ಬಗೆಹರಿಯಬಲ್ಲದೆಂಬುದನ್ನು ಮಾನ್ಯ ಸದಸ್ಯರು ಜ್ಞಾಪಕದಲ್ಲಿಟ್ಟುಕೊಳ್ಳಬೇಕು. ಯುರೋಪು, ಚೈನಾ ಮತ್ತು ಜಪಾನು ಮುಂತಾದ ರಾಷ್ಟ್ರಗಳಲ್ಲಿ ಜನ ಶ್ರಮವಹಿಸುತ್ತಿರುವುದನ್ನು ಕಣ್ಣಾರೆ ನೋಡಿಯೇ ಈ ಮಾತನ್ನು ಹೇಳುತ್ತಲಿದೇನೆ. ಭಾರತದ ಬಡಪಾಯಿ ಕೆಲಸಗಾರರನ್ನು ಮೂದಲಿಸಲಾರೆ. ಆದರೆ ಹೆಚ್ಚಾಗಿ ನಮ್ಮಲ್ಲಿಯ ಕೆಲಸಗಾರರು ಆಲಸಿಗರಾಗಿದ್ದಾರೆ. ದೇಶದಲ್ಲಿ ಅನ್ನಾಭಾವ, ಮತ್ತಿತರ ಕಷ್ಟಗಳಿರುವಾಗ ಉತ್ಸವ ಹಾಗೂ ಇನ್ನಿತರ ಹಬ್ಬಗಳನ್ನು ಆಚರಿಸುವ ವಿಚಾರ ವಿಷಾದ ಮತ್ತು ನಿಂದನೀಯ.

ನಾವು ಈ ಮೂವತ್ತು ವರ್ಷಗಳನ್ನು ದೇಶಕ್ಕಾಗಿ ಸವೆಸಿದೆವು. ಈಗ ನಾವು ನಮ್ಮ ಜೀವನದ ಸಂಜೆಯ ಹೊತ್ತಿನಲ್ಲಿ ಸಾಗುತ್ತಲಿದ್ದೇವೆ. ಕಳೆದುಹೋದ ದಿನಗಳನ್ನು ನಮ್ಮ ಆದರ್ಶಗಳ ಪಾಲನೆಗಾಗಿ ಬಹಳವಾಗಿ ತ್ಯಾಗಮಾಡಿದೆವು. ಮುಂದಾದರೂ ನಮ್ಮ ಧ್ಯೇಯ ಅದೇ ಆಗಿರುತ್ತದೆ. ಧ್ಯೇಯವಾದಿಗಳು ಗುರಿಮುಟ್ಟುವಲ್ಲಿ ಅನೇಕ ರೀತಿಯ ತ್ಯಾಗ—ಸಹನೆಯನ್ನು ತೋರಿಸುವುದು ಅತ್ಯಗತ್ಯವಾಗಿರುತ್ತದೆ.”

ಮಾನ್ಯ ಮುಖ್ಯ ಮಂತ್ರಿಯವರ ಹೃದಯ ನಿವೇದನೆಯ ಈ ಮಾತುಗಳು ಹೊಣೆಯರಿಯದೆ ಮಾತನಾಡುವವರಿಗೆ ಸರಿಯಾದ ಉಪದೇಶವನ್ನು ಮಾಡುತ್ತವೆ. ಮುಖ್ಯ ಮಂತ್ರಿಯವರ ಕುರಿತು ಜನತೆ ಯಾವಾಗಲೂ ಅತ್ಯಂತ ನಿಷ್ಠೆಯನ್ನು ತೋರಿಸುತ್ತ ಬಂದಿದೆ. ಈಗಲಾದರೂ ಈ ಪ್ರಾಮಾಣಿಕ ವ್ಯಕ್ತಿಯ ಮಾತುಗಳು ದೇಶದಲ್ಲಿ ಪರಿಣಾಮಗೊಂಡಷ್ಟು ಇನ್ನಾರ ಮಾತೂ ಪರಿಣಾಮಗೊಳ್ಳಲಾರವು. ಈಚೆಗೆ ಗಡಿಮೀರಿ ಟೀಕೆಗಳ ಸುರಿಮಳೆಗಳಾಗುತ್ತಿರುವದನ್ನು ನೆಹ್ರೂರವರು ಶಾಂತಚಿತ್ತದಿಂದ ಆಲಿಸಿದ್ದಾರೆ. ಅಲ್ಲದೆ ಅವುಗಳಲ್ಲಿ ಸರಕಾರಕ್ಕೆ ಯೋಗ್ಯವಾದವುಗಳನ್ನು ಶ್ಲಾಘಿಸಿದ್ದಾರೆ. ಯಾರು ಟೀಕೆಯನ್ನು ಸರಕಾರದ ಶುದ್ಧೀಕರಣಕ್ಕೆ ಬಳಸಿಕೊಂಡಿದ್ದಾರೆನ್ನುವುದು ನೆಹ್ರೂರವರಿಗೆ ಮನವರಿಕೆಯಾಗಿದೆ. ಅಂತಹ ವಿಧಾಯಕ ಟೀಕೆಗಳನ್ನು ಒಪ್ಪಿಕೊಂಡು ಸಮಸ್ಯೆಯನ್ನು ಲಘುವಾಗಿಸಿದ್ದು ನೆಹ್ರೂರವರ ನಿಸ್ವಾರ್ಥ ಹಾಗೂ ಮುತ್ಸದ್ದಿತನದ ದ್ಯೋತಕವಾಗಿದೆ. ಸರಕಾರದ ಯೋಜನೆಗಳಲ್ಲಿ ಅನುಭವ ಇದ್ದೂ ಇಲ್ಲದೆಯೂ, ಹಲವು ರೀತಿಯ ಬಿಕ್ಕಟ್ಟು ಉಂಟಾಗಿದೆ. ಇಂತಹ ಸಂದರ್ಭದಲ್ಲಿ ಸರಕಾರ ಜಾರಿಬಿದ್ದ ಅಂಶವನ್ನಷ್ಟೇ ಎತ್ತಿಕೊಂಡು ಬಲವಾಗಿ ಆರೋಪಿಸುವ ಮಹಾನುಭಾವರು ಒಳಿತಾದ ಕೆಲವಂಶವನ್ನೂ ಜ್ಞಾಪಕಮಾಡಿಕೊಳ್ಳಲೆಂದು ನೆಹ್ರೂರವರು ಸೂಚಿಸಿದ್ದು ನ್ಯಾಯವೇ ಆಗಿರುತ್ತದೆ. ಟೀಕೆಗಳು ಹದ್ದುಮೀರಿ ಹೋಗುವದರಿಂದ ಜನತೆಯಲ್ಲಿ ಸರಕಾರದ ಕುರಿತು ತಪ್ಪು ಕಲ್ಪನೆ ಮೂಡುವುದು ಮಾತ್ರವಲ್ಲದೆ ಹೊರಗಿನವರಿಗೆ ನಮ್ಮ ದೌರ್ಬಲ್ಯವನ್ನು ತೋರಿಸಿಕೊಟ್ಟಂತಾಗುತ್ತದೆ. ಈ ಹೊಣೆಯನ್ನು ವಿಚಾರವಂತರು ಆಲೋಚಿಸಬೇಕಾಗಿದೆ. ವಿಧಾಯಕ ಟೀಕೆಗಳು ಇರಲಿ; ಆದರೆ ವಿವೇಕರಹಿತವಾದದ್ದಕ್ಕೆ ಬಹಿಷ್ಕಾರವಿರಲಿ.

ಜೀವವಿಮೆಗಾಗಿ

ವಿಚಾರಿಸಿರಿ

ನ್ಯೂ ಗಾರ್ಡಿಯನ್ ಒಫ್ ಇಂಡಿಯಾ

ಲಿ ಲ್ಯಾಫ್ ಇನ್ಶ್ಯೂರೆನ್ಸ್ ಕೋ ಲಿಮಿಟೆಡ್.

(ಸ್ಥಾಪನೆ: 1934)

ಚೆಯರ್‌ಮೆನ್: ಶ್ರೀ. ಎಮ್. ಸಿಟಿ. ಎಮ್. ಚಿದಂಬರಮ್ ಚೆಟ್ಟಿಯಾರ್

ಪ್ರಗತಿ ಪಥದಲ್ಲಿರುವ ಈ ವಿಮಾ ಸಂಸ್ಥೆಯ ಪೋಲಿಸಿ ಪಡೆಯುವುದೆಂದರೆ ಅದೊಂದು ಉತ್ತಮ ವಿನಿಯೋಗ. ಅಂತೆಯೇ ಅದರ ಏಜನ್ಸಿ ಸಂಪರ್ಕವನ್ನಿಟ್ಟುಕೊಳ್ಳುವುದೂ ಅಮೂಲ್ಯ ವ್ಯವಹಾರವಾಗಿದೆ.

ಮಂಗಳೂರು ಶಾಖೆ:
ಕೆ. ಎಸ್. ರಾವ್. ರೋಡು,
ಹಂಪನಕಟ್ಟೆ, ಮಂಗಳೂರು.

ಕೇಂದ್ರ ಕಾರ್ಯಾಲಯ:
"ಯುನೈಟೆಡ್ ಇಂಡಿಯಾ ಲ್ಯಾಫ್ ಬಿಲ್ಡಿಂಗ್ ಪೋಸ್ಟು ಬಾಕ್ಸ್ ನಂಬ್ರ 142
ಮದ್ರಾಸು.

ಬೇಂಕಿಂಗ್ ಸಂಬಂಧದ ಎಲ್ಲಾ ಸಮಸ್ಯೆಗಳಿಗೆ

ದಿ ವಿಜಯಾ ಬೇಂಕ್ ಲಿಮಿಟೆಡ್

ಇವರ ಸಲಹೆ ಕೇಳಿರಿ

ಹೆಡ್ ಆಫೀಸು : : : : ಮಂಗಳೂರು

ಮಡಿಕೇರಿಯಲ್ಲಿ ಒಂದು ಶಾಖೆಯೂ ಬೊಂಬಾಯಿಯಲ್ಲಿ ಒಂದು ಶಾಖೆಯೂ ಜಿಲ್ಲೆಯೊಳಗೆ ಹಲವು ಶಾಖೆಗಳೂ ಇವೆ.

ನಿರಖು ಠೇವಣಾತಿಗಳ ಮೇಲೆ ಆಕರ್ಷಕವಾದ ದರದ ಬಡ್ಡಿಯು ಕೊಡಲ್ಪಡುವುದು

ತಕ್ಕುದಾದ ಜವಾಬ್ದಾರಿಗಳ ಮೇಲೆ ಸುಲಭವಾದ ಶರ್ತಗಳಲ್ಲಿ ಸಾಲಗಳು ಕೊಡಲ್ಪಡುವುವು.

ಸಾಲಿಯನ್ ನೇಕಡಾ 4½ರ ಬಡ್ಡಿ ಗಳಿಸುವ ಮೂರು ವರ್ಷದ ಅವಧಿಯ ವಿಜಯಾ ಕೇಶ್ ಸರ್ಟಿಫಿಕೇಟುಗಳ ಮೇಲೆ

ಹಣವನ್ನು ಹಾಕಿರಿ

THE VIJAYA BANK, LTD.,

ಬಿ. ಮಂಜಯ್ಯ ಹೆಗ್ಗಡೆ,
(ದ. ಕ. ಜಿಲ್ಲಾ ಬೋರ್ಡ್ ಪ್ರೆಸಿಡೆಂಟ್
ಡೈರೆಕ್ಟರ್ ಬೋರ್ಡಿನ ಅಧ್ಯಕ್ಷರು.

ಲೋಕಾಂತ

ಕೊರಿಯಾ ಯುದ್ಧ

ಯು. ರಾ. ಸಂಘದ ಸೈನ್ಯಗಳು ೩೮ನೇ ಅಕ್ಷಾಂಶಕ್ಕೆ ಹತ್ತಿರ ಹತ್ತಿರವಾಗುತ್ತಲಿವೆ. ಅಮೆರಿಕೆಯ ಎಂಟನೆ ದಳವು ೩೮ನೇ ಅಕ್ಷಾಂಶದ ದಕ್ಷಿಣ ಭಾಗದ ಹತ್ತು ಮೈಲು ದೂರದಲ್ಲಿದೆ. ಕಮ್ಯೂನಿಸ್ಟರು ಯು. ರಾ. ಸಂಘದ ದಳಗಳನ್ನು ಕೊರಿಯಿಂದ ಹೊರಹಾಕುವ ಛಲವನ್ನು ಇನ್ನೂ ಬಿಟ್ಟಂತಿಲ್ಲ. ಯು. ರಾ. ಸಂಘದ ಭೂವ್ಯಾಕಾಶ ದಳಗಳ ಧೀರ ಧಾಳಿಯಿಂದ ಕಂಗೆಟ್ಟ ಚೀನಿಯರು ತಮ್ಮ ಸೈನ್ಯಗಳನ್ನು ಹಿಂದೆ ಬರಮಾಡಿಕೊಂಡು, ಮಂಚೂರಿಯಾದಿಂದ ಹೊಸ ಪಡೆಯನ್ನು ನಿರ್ಮಿಸಿ ರಣರಂಗಕ್ಕೆ ತರುವ ಉದ್ದೇಶವನ್ನಿಟ್ಟುಕೊಂಡಂತಿದೆ. ಅವಕ್ಕೆ ಕೊಂಚ ಕಾಲಾವಕಾಶ ಬೇಕಾಗಿರುವುದರಿಂದ ಹಲವು ಸೈನ್ಯಗಳನ್ನು ಹಿಂದು ಕರೆಸಿಕೊಳ್ಳಲಾಗಿವೆ. ೩೮ನೇ ಅಕ್ಷಾಂಶದ ವರೆಗೆ ಮುನ್ನುಗ್ಗಿ ಮತ್ತೆ ಶಾಂತಿಸಂಧಾನಗಳು ನಡೆಯಬಹುದೋ ಏನೋ ಎಂಬ ಆಕಾಂಕ್ಷೆ ಹಾಗೂ ನಿರೀಕ್ಷೆಯಿರುವಂತೆ ತೋರುತ್ತದೆ. ಆದರೆ ಮೆಕಾರ್ಥರ ಸೈನಶಕ್ತಿಯನ್ನು ವಿರೋಧಿಸುವ ಸಾಮರ್ಥ್ಯ ಕಮ್ಯೂನಿಸ್ಟರಿಗಿದೆ. ಈಗ ಕೊರಿಯದಲ್ಲಿಯ ಪರಿಸ್ಥಿತಿಯನ್ನವಲಂಬಿಸಿ ಇನ್ನಾದರೂ ಶಾಂತಿಯುತ ಮಾರ್ಗವನ್ನನುಸರಿಸುವುದು ಉಚಿತವೆಂದು ಶ್ರೀ. ಬಿ. ಎನ್. ರಾಯರ ಅಭಿಪ್ರಾಯವಿದೆ. ಯು. ರಾ. ಸಂಘದಿಂದಾಗಲಿ ಚೀನಾ ಸರಕಾರದಿಂದಾಗಲಿ, ಸಂಯುಕ್ತ ರಾಷ್ಟ್ರ ಸಂಘದ ಸದ್ಭಾವ ಸಮಿತಿಯಿಂದಾಗಲಿ, ಮೂಲಭೂತ ಸೂಚನೆಯು ಮುಂದೆ ಬರಬೇಕು. ಆ ಪಕ್ಷದಲ್ಲಿ ಭಾರತವು ಪೆಂಕಿಂಗ್‌ದಲ್ಲಿ ತನ್ನ ವರ್ಚಸ್ಸನ್ನು ಬೀರಬಲ್ಲದೆಂಬುದಾಗಿ ಅಭಿಪ್ರಾಯಪಟ್ಟಿರುತ್ತಾರೆ.

ಆಹಾರೋತ್ಪಾದನೆಯ ಯೋಜನೆ

ಕೇಂದ್ರ ಸರಕಾರವು ಭಾರತದಲ್ಲಿ ತಲೆದೋರಿರುವ ಅನ್ನಾಭಾವದ ಪರಿಸ್ಥಿತಿಯನ್ನು ನಿವಾರಿಸಲು ಬಹಳವಾಗಿ ಯತ್ನಿಸುತ್ತಲಿದೆ. ಕಳೆದ ತಿಂಗಳು ಹೆಚ್ಚು ಆಹಾರ ಉತ್ಪಾದನೆ ಮಾಡುವುದಕ್ಕಾಗಿ ಇಪ್ಪತ್ತೈದು ಯೋಜನೆಗಳನ್ನು ಕೇಂದ್ರ ಸರಕಾರ ಮಂಜೂರು ಮಾಡಿತು. ಈ ಯೋಜನೆಗಳಿಗಾಗಿ 38ಲಕ್ಷ ರೂಪಾಯಿಗಳ ಸಹಾಯ ಧನವನ್ನೂ 50 ಲಕ್ಷ ರೂ. ಗಳಿಗೂ ಮೇಲ್ಪಟ್ಟು ಸಾಲವನ್ನೂ ಕೊಡಲಾಗುವದಲ್ಲದೆ ಆಹಾರ ಬೋನಸ್ ನಿಧಿಯಿಂದ ೪೯ ಲಕ್ಷ ರೂ.ಗಳನ್ನು ವೆಚ್ಚ ಮಾಡಲಾಗುವುದು. 1951ನೇ ಜನವರಿಯಿಂದ ಮಾರ್ಚ್ ತಿಂಗಳ ವರೆಗೆ 47500 ಟನ್ನು ಉಕ್ಕು ಕಬ್ಬಿಣವನ್ನು ಒಕ್ಕಲತನ ಸಾಧನೆಗೆ ಬೇರೆ ಬೇರೆ ಪ್ರಾಂತಗಳಿಗೆ ಹಂಚಲಾಗಿದೆ. ಮದ್ರಾಸು ಪ್ರಾಂತಕ್ಕೆ 1000 ಡೀಜಲ್ ಇಂಜಿನುಗಳನ್ನು ತರಿಸಲು ವಿಶೇಷ ಅನುಮತಿಯನ್ನು ಕೊಡಲಾಗಿದೆ. ಅಲ್ಲದೆ ಪಂಪು ಸೆಟ್ಟುಗಳನ್ನು ಒಕ್ಕಲಿಗರಿಗೆ ಬಾಡಿಗೆ ಕೊಡಲು ಮದ್ರಾಸು ಸರಕಾರವು ಈ ಇಂಜಿನುಗಳನ್ನುಪಯೋಗಿಸುವುದು

ದಿ ಸೆಕ್ಯೂರಿಟಿ ಪ್ರೊವಿಡೆಂಟ್
ಇನ್ಶ್ಯೂರೆನ್ಸ್ ಕಂಪೆನಿ ಲಿಮಿಟೆಡ್,
ಹಸನ್ ಚೇಂಬರ್ಸ್, ಕಾಶಿ ಬಜಾರ್ ಸ್ಟ್ರೀಟ್,
ಬೊಂಬಾಯಿ 1.

ದಿ ಕೆನರಾ ಇಂಡಸ್ಟ್ರಿಯಲ್ ಎಂಡ್ ಬೇಂಕಿಂಗ್ ಸಿಂಡಿಕೇಟ್ ಲಿಮಿಟೆಡ್, ಉಡುಪಿ, ಇದರ ಶಾಖಾ ಕಚೇರಿಗಳಾದ ಕೋಟೇಶ್ವರ, ಬಾರ್ಕೂರು, ಬಸ್ರೂರು, ಬ್ರಹ್ಮಾವರ, ಕೊಕ್ಕರ್ಣೆ, ಕುಂದಾಪುರ ಅಥವಾ ಭಟ್ಕಳ ಕೇಂದ್ರಗಳಲ್ಲಿಯೇ ನಮ್ಮ ಕಂಪೆನಿಯ ಪೋಲಿಸಿದಾರರು ತಮ್ಮ ಪ್ರೀಮಿಯಮ್ ಕಂತುಗಳನ್ನು ಜಮಾ ಮಾಡಬೇಕಾಗಿ ನಾವು ನಮ್ಮ ಪೋಲಿಸಿದಾರರನ್ನು ವಿನಂತಿಸುತ್ತೇವೆ.

ಬಾರ್ಕೂರಿನ ಶ್ರೀ ಎ. ರಾಜೀವಶೆಟ್ಟಿ ಮತ್ತು ಭಟ್ಕಳ ಮಾರುಕೇರಿಯ ಶ್ರೀ ಕೆ. ರಾಮ ಪುರಾಣಿಕರು ನಮ್ಮ ಕಂಪೆನಿಯ ಕೆಲವೊಂದು ಪೋಲಿಸಿದಾರರಿಗೆ ವಿಶ್ವಾಸಘಾತುಕ ಮಾಡಿರುವುದಾಗಿ ನಮ್ಮಲ್ಲಿ ವರದಿಯಿರುವುದರಿಂದ ಅವರಿಬ್ಬರೊಡನೆ ಯಾರೂ ಪ್ರೀಮಿಯಮ್ ಹಣ ಕೊಡಬಾರದಾಗಿ ಸಹ ಸೂಚಿಸಲಾಗಿದೆ.

Manager

The Security Provident
Insurance Co. Ltd., BOMBAY.

ಗವರ್ನರರ ಆಹಾರ ಚರ್ಚೆ

ಮಾರ್ಚ್ ತಿಂಗಳ 17ರಲ್ಲಿ ದಿಲ್ಲಿಯಲ್ಲಿ ಗವರ್ನರ ಮತ್ತು ರಾಜಪ್ರಮುಖರ ಪರಿಷತ್ತು ಸೇರಿತ್ತು. ಡಾ. ರಾಜೇಂದ್ರ ಪ್ರಸಾದರು ಅಧ್ಯಕ್ಷತೆಯನ್ನು ವಹಿಸಿದ್ದರು. ಈ ಸಭೆಯು ಶ್ರೀ. ಜವಾಹರಲಾಲ ನೆಹ್ರೂ, ಶ್ರೀ ದೇಶಮುಖ, ಶ್ರೀ ಮುನಶಿ, ಮತ್ತು ಚುನಾವಣಾ ಕಮೀಶನರಾದ ಶ್ರೀ ಸೇನರು ವಿಶೇಷ ಆಮಂತ್ರಣದ ಮೇರೆ ಉಪಸ್ಥಿತರಾಗಿದ್ದರು. ಪ್ರಾಂತಗಳ ಆಹಾರ ಆರ್ಥಿಕ ಹಾಗೂ ಮುಂಬರುವ ಚುನಾವಣೆಯ ಕುರಿತು ಎರಡು ದಿನ ಸಮಾಲೋಚನೆ ನಡೆಯಿತು.

ಸಾಂಸ್ಕೃತಿಕ ಸಂಘ

ದಿಲ್ಲಿಯಲ್ಲಿ ಸೇರಿದ ಅ. ಭಾ. ಸಾಂಸ್ಕೃತಿಕ ಸಮ್ಮೇಲನವು ನಾಲ್ಕು ದಿನಗಳಲ್ಲಿ ತನ್ನ ಕಾರ್ಯಗಳನ್ನು ಸಾಂಗವಾಗಿ ನೆರವೇರಿಸಿತು. ಭಾರತವು ಹಲವು ಸಂಸ್ಕೃತಿಯುಳ್ಳ ದೇಶ. ಆದರೂ ಎಲ್ಲ ಸಂಸ್ಕೃತಿಗಳೂ ಸಮನ್ವಯಗೊಂಡು ದೇಶದ ಕೀರ್ತಿ ಹೆಚ್ಚುತ್ತಿವೆ. ಭಿನ್ನ ಭಿನ್ನ ಜನಾಂಗವಿರುವಲ್ಲಿ ಭಿನ್ನ ಭಿನ್ನ ಸಂಸ್ಕೃತಿಗಳಿರುವುದು ಸ್ವಾಭಾವಿಕ. ಆದರೆ ಭಿನ್ನ ಸಂಸ್ಕೃತಿ ಇದ್ದರೂ ನಾವೆಲ್ಲ ಭಾರತೀಯರು ಎನ್ನುವ ತತ್ವವನ್ನು ಸಾರುವ ಉಚ್ಚ ಸಂಸ್ಕೃತಿಯಲ್ಲಿ ಐಕ್ಯಮತ್ಯವಿದೆ. ಈ ಬಗೆಯ ಸಾಂಸ್ಕೃತಿಕ ಸಮ್ಮೇಲನದಿಂದಲೂ ಸಾಂಸ್ಕೃತಿಕ ಸಂಘದಿಂದಲೂ ಜನತೆಯಲ್ಲಿ ಐಕ್ಯಮತ್ಯ ಬೆಳೆದು ಉಚ್ಚಾದರ್ಶಗಳು ತಲೆದೋರಬಹುದಾಗಿದೆ. ಸರಕಾರೇತರ ಸಾಂಸ್ಕೃತಿಕ ಸಂಘವೊಂದನ್ನು ಸ್ಥಾಪಿಸಬೇಕೆಂದು ಮೊನ್ನಿನ ಸಮ್ಮೇಲನ ನಿರ್ಣಯಿಸಿತು. ಎಲ್ಲ ಪ್ರಾದೇಶಿಕ ಭಾಷೆಗಳ ಪುಸ್ತಕಗಳನ್ನು ಬೇರೆ ಭಾಷೆಗಳಲ್ಲಿ ಮತ್ತು ವಿದೇಶ ಭಾಷೆಗಳಲ್ಲಿ ಪರಿವರ್ತನೆ ಮಾಡುವ ಮತ್ತು ಹಂಚುವ ಏರ್ಪಾಡು ಮಾಡುವುದು ಇದರ ಮುಖ್ಯ ಉದ್ದೇಶವಾಗಿರುತ್ತದೆ. ಆಗಾಗ ಸಾಹಿತಿಗಳ ಹಾಗೂ ಕಲಾವಿದರ ಪರಿಷತ್ತನ್ನು ನಡೆಸುವದೂ, ಸಾಮಾಜಿಕ ಸಮಾರಂಭವನ್ನು ನೆರವೇರಿಸುವುದೂ ಸಂಘದ ಇನ್ನೊಂದು ಉದ್ದೇಶವಾಗಿರುತ್ತದೆ. ಹದಿನೆಂಟು ಮಂದಿ ಸದಸ್ಯರುಳ್ಳ ಈ ಕಾರ್ಯಕಾರೀ ಸಮಿತಿಗೆ ಶ್ರೀ ಮುನ್ಶಿಯವರು ಅಧ್ಯಕ್ಷರಾಗಿಯೂ, ಶ್ರೀ ಶಂಕರರಾವ್ ದೇವೋ ಮತ್ತು ಎಂ. ಸತ್ಯನಾರಾಯಣ ಇವರು ಕಾರ್ಯದರ್ಶಿಗಳಾಗಿರುತ್ತಾರೆ.

ಕಾಶ್ಮೀರಿಗಳಿಗೆ ಪಾಕಿಸ್ತಾನ ಬೇಡ:

ಕಾಶ್ಮೀರದ ಉಪಮುಖ್ಯ ಮಂತ್ರಿಗಳಾದ ಬಕ್ಷಿ ಗುಲಾಂ ಮಹಮ್ಮದರು: ಕಾಶ್ಮೀರಿಗಳು ಪಾಕಿಸ್ತಾನದವರ ಧಾಂಡಾಟಿಕೆಗೆ ರೋಸಿ 1947ರಲ್ಲೇ ಭಾರತಕ್ಕೆ ಸೇರುವ ಮನಸ್ಸು ಮಾಡಿದ್ದರು. ಹಾಗೆ ಅವರಿಗೆ ಪಾಕಿಸ್ತಾನಕ್ಕೆ ಸೇರುವ ಇಚ್ಛೆ ಇರುತ್ತಿದ್ದರೆ ಆಗಿನ ದಾಳಿಗಾರರೊಡನೆ ಅವರು ಸೇರಿಕೊಳ್ಳುತ್ತಿದ್ದರು. ಅವರ ಮನೋನಿರ್ಧಾರವನ್ನರಿತ ಮೇಲೆ ಸಾರ್ವತ್ರಿಕ ಮತಗಣನೆಯ ಅವಶ್ಯಕತೆ ಕಾಣುವುದಿಲ್ಲ. ಆಂಗ್ಲೋ ಅಮೆರಿಕನರ ಗೊತ್ತುವಳಿಯನ್ನು ನಿಷೇಧಿಸುವ ಮುಖ್ಯವಾದ ಮಂಡಲದಲ್ಲಿ ಸೇರಿದ ಸಭೆಯಲ್ಲಿ ಮಂತ್ರಿಗಳು ಹೀಗೆ ಹೇಳಿದರು.

ಮದ್ರಾಸಕ್ಕೆ ಆಹಾರ

ಕೇಂದ್ರ ಸರಕಾರವು ಮದ್ರಾಸಕ್ಕೆ ವಾರ್ಷಿಕ ಕೊಡುಗೆಯಿಂದ ಒಂದು ಲಕ್ಷ ಟನ್ ಆಹಾರ ಧಾನ್ಯವನ್ನು ಹೆಚ್ಚಾಗಿ ಕೊಡುವ ಭರವಸೆಯನ್ನಿತ್ತಿದೆ. ಕೇಂದ್ರ ಸರಕಾರವು ಮದ್ರಾಸಿಗೆ ಕೊಡಮಾಡಿದ ೩ ಲಕ್ಷ ಟನ್ ಆಹಾರಧಾನ್ಯದಲ್ಲಿ ಕೇವಲ 39000 ಟನ್ ಆಹಾರವನ್ನಷ್ಟೇ ಮದ್ರಾಸು ಪಡೆದಿರುತ್ತದೆ. ಅವುಗಳಲ್ಲಿ 5000 ಟನ್ ಅಕ್ಕಿ, 13000 ಟನ್ ಗೋಧಿ, 21,000 ಮಿಲ್ಲೆಟ್ಸುಗಳಿವೆ.

9055 ಟನ್ ಅಕ್ಕಿಯನ್ನು ತುಂಬಿಕೊಂಡು ಮೊಡೆಸಾ ಎಂಬ ಚೀನೀ ಹಡಗವು ಮಾರ್ಚ ತಿಂಗಳ ೧೬ಕ್ಕೆ ಮದ್ರಾಸಕ್ಕೆ ಬಂದಿರುತ್ತದೆ. ಈ ಅಕ್ಕಿಯಲ್ಲಿ ಹೈದರಾಬಾದ್ ಮತ್ತು ಸ್ಟೇಟ್ ಮಾರ್ಕೆಟಿಗೆ ಹೋಗಿ ಮದ್ರಾಸಿಗೆ 6255 ಮಾತ್ರ ಉಳಿಯುತ್ತದೆ

ಗ್ಯಾರಂಟೀಯಾದ ಶುಚಿತ್ವ

ಗ್ಯಾರಂಟೀಯಾದ ಶುದ್ಧತೆ

ಅಗ್ಗವಾಗಿ ಸಿಗುವ ಮತ್ತು ಪೊಟ್ಟಣಗಳಲ್ಲಿ ಕಟ್ಟದಿರುವ ಚಹಗಳನ್ನು ಕೊಂಡು ವ್ಯರ್ಥವಾಗಿ ನಷ್ಟಕ್ಕೆ ಒಳಗಾಗಬೇಡಿ. ಪ್ರತಿಯೊಂದು ಬ್ರೂಕ್ ಬಾಂಡ್ ಪೊಟ್ಟಣದಲ್ಲಿರುವ ಚಹವು ರುಚಿ ಮತ್ತು ಶುದ್ಧತೆಯ ಭರವಸೆ ಕೊಡುವುದಲ್ಲದೆ ಮಲಿನವಾಗದ ಹಾಗೆ ಕಾಪಾಡಲ್ಪಟ್ಟಿರುತ್ತದೆ. ಪ್ರತಿಯೊಂದು 2 ಔನ್ಸ್ ಪೊಟ್ಟಣದಿಂದ 30 ಸೊಗಸಾದ ಕಪ್ಪುಗಳಿಗೆ ಆಗುವಷ್ಟು ಚಹ ಮಾಡಬಹುದು.

ನೀವು ಉತ್ತಮ ಗುಣ ಮತ್ತು ಸ್ವಾದವನ್ನು ಅಪೇಕ್ಷಿಸುವುದೇ
ಆದರೆ ನೀವು ಕೊಳ್ಳಬೇಕಾದ್ದು

ಬ್ರೂಕ್ ಬಾಂಡ್ ಚಹಾ

88/50 LOT/101

ಚಂದಾ ವಿವರ
ವರ್ಷಕ್ಕೆ ರೂ. 5-12-0
6 ತಿಂಗಳಿಗೆ ರೂ. 3-0-0

ಗುರುವಾರ, ಉಡುಪಿ, ೨೨-೩-೫೧

ಶಿಕ್ಷಕರ ಸ್ಥಾನಮಾನ

ದಿಲ್ಲಿ ಪ್ರಾಂತಿಕ ಶೈಕ್ಷಣಿಕ ಸಮ್ಮೇಲನದ ಅಧ್ಯಕ್ಷ ಸ್ಥಾನದಿಂದ ಪಾರ್ಲಿಮೆಂಟಿನ ಅಧ್ಯಕ್ಷರಾದ ಶ್ರೀ ಜಿ. ವಿ. ಮಾವಳಣಕರರು "ಶಿಕ್ಷಣದ ಮಹತಿಯನ್ನು ನಾವಿನ್ನೂ ಅರಿತಿಲ್ಲ. ಶಾಲಾಕಾಲೇಜುಗಳ ಸಂಖ್ಯೆ ಹೆಚ್ಚಾಗುವುದರಿಂದಲೇ ಶಿಕ್ಷಣದ ಪ್ರಗತಿಯೆಂದು ಭಾವಿಸುತ್ತೇವೆ. ಇಂದಿನ ಶಿಕ್ಷಣ ಕ್ರಮದಲ್ಲಿ ಸತ್ವವಿರುವುದಿಲ್ಲ. ವಿಶ್ವಾವಲೋಕನಮಾಡುವ ದೃಷ್ಟಿಕೋನ ನಮ್ಮಲ್ಲಿರಬೇಕು. ಕಲಿಯುತಕ್ಕ ಅಂಶ ಶಾಲೆಯಲ್ಲಿ ಮಾತ್ರವಲ್ಲ ಹೊರಗೂ ಇದೆಯೆಂಬುದನ್ನು ನಾವು ಮರೆತಿದ್ದೇವೆ. ಅಧ್ಯಾಪಕರ ವೇತನ ಬಹಳ ನಿಕೃಷ್ಟವಾಗಿರುತ್ತದೆ." ಎಂದು ಟಿಪ್ಪಣಿ ಕೊಡಿಸಿದ್ದಾರೆ.

ದೇಶವು ಪ್ರಗತಿ ಪಥದಲ್ಲಿ ಮುನ್ನಡೆಯಬೇಕಾದರೆ ವಿದ್ಯಾವಂತ ಜನ ಹೆಚ್ಚಾಗಬೇಕು. ಎಲ್ಲರೂ ವಿದ್ಯಾಬುದ್ಧಿಯನ್ನು ಕಲಿತು ವಿಚಾರವಂತರಾದರೇನೇ ದೇಶಕ್ಕೆ ಶಕ್ತಿ ಬರುತ್ತದೆ. ನಾಗರೀಕತೆಯ ತುಟ್ಟತುದಿಯನ್ನು ಮುಟ್ಟಿದ ದೇಶಗಳಲ್ಲೆಲ್ಲ ವಿದ್ಯಾವಂತರೇ ಹೆಚ್ಚಾಗಿದ್ದುಕೊಂಡು ಪ್ರತಿಯೊಬ್ಬರೂ ರಾಜಕೀಯ ಹಾಗೂ ಇತರ ವಿಚಾರಗಳನ್ನು ಬಲ್ಲವರಾಗಿರುತ್ತಾರೆ. ಬಲ್ಲವರ ಸಂಖ್ಯೆ ಹೆಚ್ಚಾದಹಾಗೆ ದೇಶದ ನೈತಿಕ ಮಟ್ಟ ಹೆಚ್ಚಾಗುತ್ತದೆ. ಅಂಜಿಕೆ-ಅಜ್ಞಾನಗಳು ದೂರವಾಗಿ ಶಾಂತಿಗಳು ತಲೆದೋರುತ್ತವೆ. ಆಹಾರದ ನಂತರ ಮುಖ್ಯವಾದ ಪ್ರಶ್ನೆಯೆಂದರೆ ಶಿಕ್ಷಣವೇ ಎಂದು ಅಧ್ಯಕ್ಷರು ಹೇಳಿದ ಮಾತು ಅಕ್ಷರಶಃ ನಿಜವಾಗಿರುತ್ತದೆ.

ದೇಶವನ್ನು ಉಚ್ಛ್ರಾಯ ಸ್ಥಿತಿಗೆ ತರಬಲ್ಲ ಹೊಣೆ ಶಿಕ್ಷಕರ ಮೇಲಿದೆ. ಅವರು ಜನತೆಗೆ ಜೀವನದಲ್ಲಿ ಒಂದು ಧ್ಯೇಯವನ್ನು ಕಲ್ಪಿಸಿಕೊಟ್ಟು, ಮಾರ್ಗದರ್ಶನ ಮಾಡಬಲ್ಲವರು. ಇಡಿಯ ದೇಶದ ಚುಕ್ಕಾಣಿ ಅವರ ಕೈಯಲ್ಲಿದೆ. ಎಳೆಯ ಮಕ್ಕಳ ಮುಗ್ಧ ಮನಸ್ಸಿನ ಮೇಲೆ ದೇಶಪ್ರೇಮ-ವಿಶಾಲದೃಷ್ಟಿಯ ಮಹತ್ವವನ್ನು ಒಪ್ಪುವಾಗಿ ಮುದ್ರೆಯೊತ್ತಿ, ಮತ್ತೆ ಹಿರಿಯರಾದ ಮೇಲೆ ಕಾರ್ಯೋನ್ಮುಖರಾಗುವಂತೆ ಹುರಿದುಂಬಿಸುವ ಅವರ ಕಾರ್ಯ ಉಳಿದೆಲ್ಲ ರಾಜಕೀಯ ಧುರೀಣರಿಗಿಂತ ಶ್ರೇಷ್ಠ ಹಾಗೂ ಪರಿಣಾಮಕಾರಿಯಾಗಿದೆ. ಆದರೆ ಅಧ್ಯಾಪಕರ ಈ ಗುರುತರವಾದ ಹೊಣೆಯನ್ನರಿತವರೆಷ್ಟು ಮಂದಿ? "ಒಗ್ಗಿದವನಿಗೆ ಗುದ್ದು ಜಾಸ್ತಿ" ಎನುವ ಹಾಗೆ ಸೌಮ್ಯ ರೀತಿಯಲ್ಲಿ ತಮ್ಮ ಪಾಡನ್ನು ತೋಡಿಕೊಂಡರೆ ಸರಕಾರ ಲಕ್ಷಿಸುವುದಿಲ್ಲ. ಮುಷ್ಕರ ಸತ್ಯಾಗ್ರಹವನ್ನು ಮಾಡಿದ ಕೂಡಲೇ ಒಂದು ಮಾರ್ಗ ತೋರಿಸುತ್ತದೆ. ಶಿಕ್ಷಕರೂ ಸರಕಾರದೊಡನೆ ಸೌಮ್ಯ ರೀತಿಯ ಬೇಡಿಕೆಯನ್ನು ಮುಂದೆ ಮಾಡಿದ್ದುಂಟು. ಆದರೆ ಸರಕಾರ ಸಹಾನುಭೂತಿಯನ್ನು ತೋರಿದ ದಾಖಲೆಗಳು ಬಹಳ ಕಡಿಮೆ. ಅಂತಲೆ ಅಧ್ಯಾಪಕರ ಪಾಡಿಂದು ಬಹಳ ಹೀನ ಮಟ್ಟಕ್ಕಿಳಿದಿದೆ. ಸರಕಾರ ಇತರ ಯೋಜನೆಗಳಿಗೆ ಹಣವನ್ನು ವ್ಯಯಿಸುವ ಅವಶ್ಯಕತೆಯ ನಡುವೆ ಅಧ್ಯಾಪಕರ ಜೀವನಾವಶ್ಯಕತೆಗಳನ್ನು ಸ್ವಲ್ಪವೂ ಲಕ್ಷಿಸದಿರುವುದು ಶೋಚನೀಯ. ತಮ್ಮ ಕಸಬಿನ ಮೇಲೆ ಸರಕಾರ ಹಾಗೂ ಜನತೆ ಅಸಡ್ಡೆಯನ್ನು ತಾಳಿದುದರಿಂದಲೇ ಇಂದು ಅಧ್ಯಾಪಕನು ತನ್ನ ಕಾರ್ಯದಲ್ಲಿ ಆಲಸಿಗನಾಗಿದ್ದಾನೆ. ಶಿಕ್ಷಣದಲ್ಲಿ ಯಾವುದೇ ತರದ ಪ್ರಗತಿ ಕಾಣುವುದಕ್ಕೆ-ಕಲಿಸುವ-ಕಲಿಯುವವರಲ್ಲಿ ವಿದ್ಯೆಯ ಕಡೆಗೆ ವಿಲಕ್ಷಣವಾದ ಅನಾದರ ಬೆಳೆಯುತ್ತಲಿದೆ. ವಿದ್ಯಾಲಯಗಳಲ್ಲಿ ಈ ರೀತಿಯ ಅವ್ಯವಸ್ಥೆ-ಅಸಂತೃಪ್ತಿ ತಲೆದೋರುತ್ತಿರುವುದು ದೇಶದ ಉಚ್ಛ್ರಾಯ ಸ್ಥಿತಿಯ ದೃಷ್ಟಿಯಿಂದ ಯೋಗ್ಯವಲ್ಲ ಸ್ಥಿತಿಯೆಂದು ಇಲಾಖೆಯವರೂ ವೇತನದ ಕುರಿತಾಗಿ ಪರಿಶೀಲನೆ ನಡೆದಿದ್ದರೂ ವಿದ್ಯಾಲಯಗಳಲ್ಲಿ ವಿಶೇಷ ಪರಿಶೀಲನೆಯಾಗಲೀ ಪ್ರಗತಿಯಾಗಲೀ ಆಗಲಿಲ್ಲ. ದೇಶದ ಭವಿತವ್ಯ ಅವರ ಕೈಯಲ್ಲಿದೆ ಎಂಬುದನ್ನು ನಾವು ಚೆನ್ನಾಗಿ ಅರಿತಿರಬೇಕು. ಈಗಿನ ವಿದ್ಯಾಭ್ಯಾಸ ಕ್ರಮದಲ್ಲಿ ಬದಲಾವಣೆ ಮಾಡಿ ಆಧುನಿಕ ವಿದ್ಯಾಭ್ಯಾಸ ಕ್ರಮ ಜಾರಿಯಾಗಬೇಕು. ಹಾಗೆ ನಾವು ಸುಧಾರಣೆಯನ್ನು ಬಯಸುವವರಾದರೆ—ಅಧ್ಯಾಪಕರ ಅತ್ಯಂತ ನಿಕೃಷ್ಟಾವಸ್ಥೆಯ ವೇತನದ ವಿಚಾರದಲ್ಲಿ ವಿಶೇಷ ಸುಧಾರಣೆಮಾಡಲೇ ಬೇಕು. ಅಂದರೇನೇ ಪ್ರತಿಯೊಬ್ಬ ಅಧ್ಯಾಪಕನೂ ತನ್ನ ಕಾರ್ಯದಲ್ಲಿ ಹೆಚ್ಚಿನ ನಿಷ್ಠೆ ಶ್ರದ್ಧೆಗಳನ್ನು ತೋರಿಸಬಲ್ಲ.

ವಯಸ್ಕರ ಶಿಕ್ಷಣಕ್ಕೆಂದು ಸರಕಾರ ಹೇರಳ ವ್ಯಯ ಮಾಡುತ್ತಲಿದೆ. ಇದರಿಂದ ಪ್ರಗತಿ ಅಷ್ಟೇನೂ ಆಶಾದಾಯಕವಾಗಿಲ್ಲ. ಪ್ರಚಾರ ಮಾಡಿದ ಕ್ಷಣ—ಭಾಷಣಗಳನ್ನು ಜಮಾಯಿಸಿದ ಕ್ಷಣ—ಯಾರೂ ವಿದ್ಯಾವಂತರಾಗುವುದಿಲ್ಲ. ಅನಕ್ಷರಸ್ಥರೊಡನೆ ಬೆರೆತು ಆತ್ಮೀಯರಂತೆ ವರ್ತಿಸಿ ಸಾವಧಾನವಾಗಿ ಅವರಿಗೆ ಸಾಕ್ಷರತೆಯ ಅವಶ್ಯಕತೆಯ ಕುರಿತು ಒತ್ತಿ ಹೇಳಬೇಕು. ಇಂತಹ ಸಂದರ್ಭಗಳಲ್ಲಿ ಕೇಳುವವನಿಗಿಂತಲೂ ಹೇಳಿಕೊಡುವವನಲ್ಲಿ ಹೆಚ್ಚಿನ ಉತ್ಸಾಹ, ಕಾರ್ಯಾಸಕ್ತಿ, ಸಹನೆ ಅವಶ್ಯಕವಾಗಿರುತ್ತದೆ. ಅಂತಹ ಹೊಣೆಯನ್ನು ಅಧ್ಯಾಪಕರು ಮಾತ್ರ ಹೊರಬಲ್ಲರು. ಹೇಳಿಕೊಡುವ ಕಲೆ ಅವರಿಗೆ ಸಾಧಿಸಿದಷ್ಟು ಬೇರಾರಿಗೂ ಸಾಧ್ಯವಿಲ್ಲ. ತಮ್ಮ ಕಾರ್ಯಕ್ಕೆ ತಕ್ಕುದಾದ ಪ್ರತಿಫಲ ದೊರಕುವದಾದರೆ ಅದರಲ್ಲಿ ಅವರು ವಿಶೇಷ ಉತ್ಸುಕತೆಯನ್ನು ತಾಳುವುದು ಸ್ವಾಭಾವಿಕ. ಅದರಲ್ಲೂ ವಯಸ್ಕರ ವಿದ್ಯಾಭ್ಯಾಸದ ಕ್ರಮವು ಪೇಟೆಗಳಿಗಿಂತ ಹಳ್ಳಿಗೆ ಅವಶ್ಯಕವಾಗಿರುತ್ತದೆ. ಏಕೆಂದರೆ ಪೇಟೆಯಲ್ಲಿ ವಿದ್ಯೆಯನ್ನು ತಿಳಿಯದವರು ಬಲ್ಲವರಿಂದ ತಮಗೆ ಬೇಕಾದ ಕಾರ್ಯಗಳನ್ನು ಮಾಡಿಸಿಕೊಳ್ಳಬಹುದು. ಹಳ್ಳಿಯಲ್ಲಾದರೆ ಹಾಗಲ್ಲ. ಒಂದು ಪತ್ರವೆಂದರೆ ಎರಡೋ ಮೂರೋ ಮೈಲು ದೂರದ ಪೇಟೆಗೆ ಹೋಗಿ ಓದಿಸಿಕೊಳ್ಳಬೇಕಾಗುತ್ತದೆ. ಉತ್ತರ ಬರೆಯಬೇಕಾದರೂ ವಿದ್ಯಾವಂತರಿಗಾಗಿ ಬಹಳ ಸಮಯ ಕಾಯಬೇಕಾಗುತ್ತದೆ. ಸಾಮಾನ್ಯ ರೀತಿಯ ಕೈಪಟ್ಟಿ, ಪ್ರೋನೋಟು-ರಶೀದಿ ಮುಂತಾದವುಗಳನ್ನು ಬರೆಯಬೇಕಾದರೂ ಅದಕ್ಕಾಗಿ ಹಣ ತೆರಬೇಕು. ಅಕ್ಷರಜ್ಞಾನವಿಲ್ಲದವರಿಂದ ಹೆಬ್ಬೆಟ್ಟು ನಿಶಾನೆಗಳನ್ನು ತೆಗೆದುಕೊಂಡು ಮಾಡುವ ವಂಚನೆ ಈಗಲೂ ಕಡಿಮೆಯಾಗಿಲ್ಲ. ಆದುದರಿಂದ ಪೇಟೆಗಿಂತ ವಯಸ್ಕರ ಶಿಕ್ಷಣದ ಪ್ರಸಾರದ ಹೆಚ್ಚಿನ ಅವಶ್ಯಕತೆ ಹಳ್ಳಿಗೇ ಆಗಿರುತ್ತದೆ. ಹಳ್ಳಿಯ ಶಾಲೆಗಳ ಅಧ್ಯಾಪಕರು "ಯಥಾ ದಕ್ಷಿಣಾ ತಥಾ ಪ್ರದಕ್ಷಿಣಾ" ಎನುವ ಸೂಕ್ತಿಗೆ ಆದರ್ಶರಾಗಿರುತ್ತಾರೆ. ಕೆಲವೆಡೆ ಹಾಜರಿಯಲ್ಲಿ ಮಾತ್ರ ಅಧ್ಯಾಪಕರು ಕಾಣಿಸಿಕೊಂಡು ಊರಿನ ವ್ಯವಹಾರದಲ್ಲೇ ಕಾಲಹರಣ ಮಾಡುವುದು ವಾಡಿಕೆಯಾಗಿರುತ್ತದೆ. ಶಾಲಾ ಅಧಿಕಾರಿಗಳು ಬರುವ ಕಾಲಕ್ಕೆ ಸುವ್ಯವಸ್ಥಿತ ರೀತಿಯ ನಟನೆ ನಡೆಸಿಬಿಡುತ್ತಾರೆ. ಹೆಚ್ಚಾಗಿ ಹಳ್ಳಿಯಲ್ಲಿ ಶಾಲೆಯೆಂಬುದು ಅಧ್ಯಾಪಕರಿಗೆ ಉಪಕಸುಬಾಗಿ ಬಿಟ್ಟಿದೆ. ದಿನವಿಡೀ ಇತರ ವ್ಯವಹಾರದಲ್ಲಿ ತನ್ನ ಬುದ್ಧಿವಂತಿಕೆಯನ್ನು ಉಪಯೋಗಿಸುತ್ತಾ ಶಾಲಾ ಶಿಕ್ಷಣದ ಆಸ್ಥೆ ಕಡಿಮೆಯಾಗುತ್ತ ಬರುವುದು ಸ್ವಾಭಾವಿಕ. ಇದರಿಂದಾಗಿ ಕಲಿಯುವ ಮಕ್ಕಳಿಗೂ ವಿದ್ಯೆಯಲ್ಲಿ ತಾತ್ಸಾರ—ಆಲಸ್ಯ ಆ ಎಳೆಯ ವಯಸ್ಸಿನಲ್ಲೇ ಮೂಡುತ್ತದೆ. ಎಳೆಯದರಲ್ಲೇ ಅಭಿರುಚಿ ಕೆಟ್ಟು ಹೋದರೆ ಮುಂದೆ ಬೆಳೆದ ಮೇಲೆ ಸಂಸಾರ ತಾಪತ್ರಯದ ನಡುವೆ ಅದರ ಆವಶ್ಯಕತೆ ಯಾರಿಗಾಗುವದನ್ನುವುದು. ಹುಚ್ಚಾಗೇನೆ. ಮತ್ತೆ ವಯಸ್ಕರ ಶಿಕ್ಷಣವೆಂದು ಹೇಳಿಕೊಡುವ ಮುನ್ನ ಚಿಕ್ಕ ವಯಸ್ಸಿನಲ್ಲೇ ತಳಹದಿಯನ್ನು ಭದ್ರವಾಗಿರಿಸುವುದು ಶಿಕ್ಷಕನ ಮುಖ್ಯ ಕರ್ತವ್ಯವಲ್ಲವೇ?

ಈ ವಿಚಾರದಿಂದ ಹಳ್ಳಿಯ ಬಡಪಾಯಿ ಉಪಾಧ್ಯಾಯನ ಮೇಲೆ ಸವಾರಿ ಮಾಡಿದಂತಾದೀತು. ಆದರೆ ಇಂದು ಆತನಿಗೆ ಲಭಿಸುತ್ತಿರುವ ಅಲ್ಪ ವೇತನದಿಂದ ಇಷ್ಟಕ್ಕಿಂತ ಹೆಚ್ಚಿನದನ್ನೇನೂ ಮಾಡುವಂತಿಲ್ಲ. ಬೇರೆಯ ಕಸಬನ್ನು ಮಾಡದೆ ಈ ಅಲ್ಪ ವೇತನದಲ್ಲೇ ಆದರ್ಶವನ್ನು ಕಾಪಾಡಿಕೋ ಎಂದು ಹೇಳುವದಕ್ಕಿಂತ ಆತ್ಮಹತ್ಯೆ ಮಾಡಿಕೋ ಎಂದು ಹೇಳುವುದು ಲೇಸು. ಅತಿ ಧಾರಣೆಯ ಈ ಕಾಲದಲ್ಲಿ ಜೀವನ ನಡೆಸುವದೇ ದುಸ್ತರವಾಗಿರುವಾಗ ಆದರ್ಶ ಸ್ಥಿತಿ ಯಾವುದೂ ಬದಲಾಗದ.

"ಸಿಪಾಯಿಯ ವೇತನಕ್ಕಿಂತಲೂ ನಮ್ಮ ವೇತನ ನಿಕೃಷ್ಟವಾಗಿರುತ್ತದೆ. ಜಗತ್ತಿನ ಯಾವೆಡೆಯಲ್ಲಿಯೂ ಈ ದುರ್ಗತಿ ಇರಲಾರದು" ಎಂದು ಶಿಕ್ಷಣ ಇಲಾಖೆಯ ಕಾರ್ಯದರ್ಶಿಗಳಾದ ಡಾ। ತಾರಾಚಂದರು ಹೇಳಿರುತ್ತಾರೆ. ಈ ಮಾತಿನಿಂದ ಯಾವ ವಿಚಾರವಂತನಿಗೂ ಖೇದವಾಗದಿರದು. ಸರಕಾರ ಇನ್ನಾದರೂ ಈ ವಿಚಾರದಲ್ಲಿ ಸೂಕ್ತ ಮಾರ್ಗವನ್ನು ಕೈಗೊಳ್ಳಲಿ! ಶಿಕ್ಷಕರ ವೇತನದಲ್ಲಿ ಸುಧಾರಣೆಯನ್ನು ಮಾಡದೆ ಶಿಕ್ಷಕರಲ್ಲಿರುವ ಯಾವ ಕುಂದು ಕೊರತೆಯನ್ನೂ ಎತ್ತಿ ಹೇಳುವಂತಿಲ್ಲ. ಅಂತಲೇ ಶಿಕ್ಷಕರ ವೇತನದಲ್ಲಿ ಸುಧಾರಣೆಯಾಗಲಿ ಎನ್ನುತ್ತೇವೆ. ಜೊತೆಗೆ ಶ್ರೀ ಮಾವಳಣಕರ ಹಾಗೂ ಶ್ರೀ ತಾರಾಚಂದರ ಸೂಕ್ತ ಸಲಹೆಗಳನ್ನು ಘನ ಸರಕಾರ ಕೂಡಲೇ ಕಾರ್ಯರೂಪದಲ್ಲಿ ತರುವಂತಾಗಲೆಂದೂ ಹಾರೈಸುತ್ತೇವೆ.

ಹಾರುವ ಕಿಡಿಗಳು

ಪ್ರಾಣಿಬಲಿ ನಿಷೇಧ, ಮಧ್ಯಪಾನ ನಿಷೇಧ, ಹರಿಜನ ಮಂದಿರ ಪ್ರವೇಶ, ಕಾಳಸಂತೆ ನಿರ್ಮೂಲನ ಇತ್ಯಾದಿ ಎಲ್ಲಕ್ಕೂ ಕಾನೂನೇನೋ ಇದೆ; ಆದರೆ ಯಾವುದೂ ಸರಿಯಾಗಿ ನಿಲ್ಲದೆ ಎಲ್ಲೆಲ್ಲಿಯೂ ಕಾನೂನುಭಂಗವೇ ನಡೆಯುತ್ತಿದೆ.

oo

ಕಾನೂನಿನಿಂದಲೇ ಸಾಧಿಸಿಕೊಳ್ಳಬಹುದಾಗಿದ್ದರೆ ಇಷ್ಟರಲ್ಲೇ ರಾಮರಾಜ್ಯವೂ ಬರುತ್ತಿತ್ತು; ಆದರೆ ಜನರ ಮನೋವೃತ್ತಿ ತಿದ್ದಲ್ಪಡದೆ ಯಾವುದೂ ಸಾಧ್ಯವಿರುವಂತೆ ತೋರುವುದಿಲ್ಲ.

oo

ನಡೆದುಕೊಂಡು ಬರುತ್ತಿದ್ದುದೆಂಬ ಕಾರಣದಿಂದ ಎಂತಹ ದುಷ್ಟ ಪದ್ಧತಿಯನ್ನಾದರೂ ಜನರು ಒಮ್ಮೆಲೇ ಬಿಡಲು ಸಿದ್ಧರಿಲ್ಲ; ಆದರೆ ಜನಜಾಗ್ರತಿಯಾದಂತೆ ಅದು ಸಡಿಲಾಗುತ್ತ ಒಂದು ಕ್ರಮೇಣ ನಿಂತು ಹೋಗಬಹುದು.

oo

ಒಂದು ಕಾಲದಲ್ಲಿ ಕಾಪು ಪಾರ್ಟಿಗಳ ಅಥವಾ ಗುಡಿಸಾರಿಗಳ ಮೇಲಾಟ ವಿಪರೀತವಾಗಿ ಒಂದು ಹೋಗಿ ಎರಡಾಗಿತ್ತು; ಎರಡು ಹೋಗಿ ಮೂರಾಗಿತ್ತು. ಪುಣ್ಯಕ್ಕೆ ನಾಲ್ಕನೆ ಗುಡಿ ಏಳಲಿಲ್ಲ. ಈಗ ಮೊದಲಿನಷ್ಟು ಮೇಲಾಟ ತೋರಬಾರದಿದ್ದರೂ ಕಾರಿಕೋಳಗಳ ಕಡಿದಾಟ ಅಷ್ಟೇನೂ ಕಡಿಮೆಯಾದಂತಿಲ್ಲ- ಜನರ ಔತಣ ಚೆನ್ನಾಗಿಲ್ಲವಾದರೂ ಮಾರಿಗೌತಣ ಕ್ರಮಪ್ರಕಾರ ನಡೆಯುತ್ತಲೇ ಇದೆ.

oo

ಪ್ರತಿ ವರುಷದ ಕಾನೂನನ್ನೇ ಗಣಿಸದ ಮಂದಿ ಅಧಿಕಾರವಿಲ್ಲದ ಅಧಿಕಾರಿಗಳ ಪ್ರಕಟಣೆಯನ್ನು ಲಕ್ಷಿಸಿಯಾರೆ? ಜ್ಞಾನ ಪ್ರಸಾರ ಸಮಿತಿಯವರಾದರೂ ಕಾಪಿಗೆ ಹೋಗಿ ಪ್ರಸಾರಕಾರ್ಯ ಮಾಡಿಯಾರೆ?

oo

ಉಡುಪಿಯ ಕೆಲ ರೇಶನ್ ಡಿಪೋಗಳಲ್ಲಿ ಈ ಬಾರಿ 'ಉಮಿ' ಜರಿತ ಅಕ್ಕಿ ವಿತರಣೆಯಾಗಿದೆಯೆಂಬ ದೂರಿದ್ದಿದೆ. ಈ ವರೆಗೆ ಕಲ್ಲು, ಮಣ್ಣು, ಹುಡಿ, ಜಲ್ಲಿ, ತೌಡು

ಕುಂದಾಪುರ ಡಿ. ಮು. ಕೋರ್ಟಿನಲ್ಲಿ

O. P. 22/1951

ಅರ್ಜಿದಾರಳು— ಅಂತಮ್ಮ ಹೆಡ್ತಿ, ಬರ್ಮೋತ್ತರ ಶೆಟ್ಟಿ ವಿಧವೆ ಮ ಹೆಬ್ಬಾಡಿಗುಂಡಿ ಗದ್ದೆಮನೆ ಮುತ್ತಕ್ಕ ಹೆಡ್ತಿರ ಮಗಳು, ಉಡುಪಿ ತಾಲ್ಲೂಕ ಹಗ್ಗುಂಜೆ ಗ್ರಾಮದ ಹೆಬ್ಬಾಡಿಯಲ್ಲಿರುತ್ತಾಳೆ

ಎದ್ರು— ಯಾರಿಲ್ಲ

ಈ ಮೊಲ್ಕ ಯಿಲ್ಲಾ ಜನರಿಗೆ ತಿಳಿಯಪಡಿಸುವುದೇನೆಂದರೆ

ಅರ್ಜಿದಾರಳ ಗಂಡ ಹಾಲಿ ಮೃತಪಟ್ಟಿರುವ ಬರ್ಮೋತ್ತರ ಶೆಟ್ಟಿಯು ತನ್ನ ಹಕ್ಕಿನ ವಿಶಿಷ್ಟ ಸ್ಥಿರ ಚರಸೊತ್ತುಗಳ ಕುರಿತು ಅರ್ಜಿದಾರಳ ಹೆಸ್ರಲ್ಲಿ ತಾ. 14-4-44ರಲ್ಲು ರಿಜಿಸ್ಟ್ರಿಸಿ ಬರೆದಿಟ್ಟ ವೀಲು ಪ್ರಕಾರ ಕುಂದಾಪುರ ಡಿ. ಮು. ಕೋರ್ಟ ಕ್ರಿಮಿನಂಬ್ರ 143/46 ನೇ ದಾವೆಯ ಕ್ರೆಡಿಟಿನಲ್ಲಿರುವ ಹಣಗಳನ್ನು ಕೋರ್ಟಿನಿಂದ ಪಡಕೊಳ್ಳುವ ಹಾಗೆ ಅರ್ಜಿದಾರಳ ಹೆಸ್ರಲ್ಲಿ ವಾರೀಸು ಸರ್ಟಿಫಿಕೇಟು ಕೊಡಿಸಬೇಕೆಂತ ವಗೈರೆ ಕಾರ್ಣ ದಾಖಲು ಮಾಡಿದ ಮೇಲಿನ ಅರ್ಜಿ ತಾ 3-4-51ನೇ ದಿನ ಬೆಳಿಗ್ಗೆ 11ಗಂಟೆಗೆ ಮೊಲ್ಕಾಣುವ ಕೋರ್ಟಿನಲ್ಲಿ ತನಿಗೆ ಯಿಟ್ಟಿದೆ ಎಂಬ ಸಂಗ್ತಿ ಈ ಮೊಲ್ಕ ಯಿಲ್ಲಾ ಜನರಿಗೆ ತಿಳಿಸಲಾಗಿಯದೆ.

B. S. Shetty,
Vakil for Petitioner
COONDAPOOR 19-3-51

ವಸ್ತ್ರವಿದ್ದರೆ ಉಪ್ಪು ಬಂದಿಲ್ಲವಂತೆ. ಅಕ್ಕಿಯೊಡನೆಯೇ ಇದ್ದ ಉಪ್ಪು ಈ ವರೆಗೆ ಬಾರದುದೊಂದು ಆಶ್ಚರ್ಯವೇ ಸರಿ

oo

ಇಂತಹ ಅಕ್ಕಿ ಎಲ್ಲಿಯ ಮಿಲ್ಲಿನಿಂದಲೇ ಬರಲಿ, ಅದನ್ನು ಕಣ್ಣು ಮುಚ್ಚಿ ಕೊಡಕೊಂಡು ಹಂಚುವವರಿಗೇನನ್ನ ಬೇಕು? ರೇಶನ್ ಪಡೆಯಬಂದ ಹೆಂಗಸರು ಮುಗ್ಗಿದ ಇದೇನೆಂದು ಕೇಳಿದರೆ ಬುಚ್ಚಿ ಮಾತಾಡಿ ಅಟ್ಟಿಸುವ, ಹುಡುಗರಿಗೆ ಹೊಡೆಯಲಿಕ್ಕೂ ಬರುವ ನೌಕರರಿಗೇನನ್ನ ಬೇಕು?

oo

ರೇಶನ್ ಪಡೆಯಲಿಕ್ಕೆ ದಿನಾ ಧರ್ಮ ಕಾಯಬೇಕು, ಕೊಟ್ಟದನ್ನ ಪಡೆಯಬೇಕು, ಬೈಗಳನ್ನೂ ಕೇಳಬೇಕು, ಈ ರೀತಿಯಲ್ಲೂ ರೇಶನ್ ಮುಂದರಿಯಲೇ ಬೇಕು!

oo

ರೇಶನ್ ಬಂದಾಗಲೂ ಕೂಗ! ಹೋದಾಗಲೂ ಕೂಗ! ಪುನಃ ಬಂದಾಗಲೂ ಕೂಗ! ಈಗ ಹಳ್ಳಿಗಳ ರೇಶನ್ ತೀರಿ ಹೋದಾಗಲೂ ಕೂಗ! ಇಂತಹ ಕೂಗು ಬೇಗನೆ ಹೋಗುವಂತಾಗುತ್ತಿದ್ದರೆ!

oo

ನಮ್ಮದು ಕೊಂಕಣೆಯ ಜಲ್ಲೆ; ಕೂರಗಿನ ಆಹಾರ ನಮಗೆ ಬರಲೇ ಬೇಕು. ಸಿಜತಿಹಾರ ಸರಿಯಾಗಿ ಸಿಗುವ ವ್ಯವಸ್ಥೆಯಾದರೆ ಸಾಲದ? ಬೇಡದ ಕಾರ್ಡರಕ್ಕಿಯೆ ಬೇಕೆ?

oo

ಜನರ ಉದ್ಧಾರ ಮಾಡುವೆವೆಂದು ಎಷ್ಟೋ ಜನರು ಮುಂದೆ ಬಗೆಹರಿದ್ದರು, ಎಷ್ಟೋ ಪ್ರಕಟಣೆ ಪ್ರಕಟಿಸಿದರೂ, ಲೆಕ್ಚರ್ ಹೊಡೆದರೂ, ಡೆಪ್ಯುಟೇಶನ್ ಹೋದರೂ ಜನರ ಉದ್ಧಾರವಾದಂತೆ ತೋರುವುದಿಲ್ಲ. ಆ ಕೆಲ ಉದ್ಧಾರಕರೇನೋ ಗಟ್ಟಿಯಾದಂತೆ ಕಾಣುತ್ತದೆ.

oo

ಎಷ್ಟೋ ಪ್ರಚಾರ, ಎಷ್ಟೋ ಸಮಿತಿಸ್ಥಾಪನೆ ಮಾಡಿದರೂ ಆಹಾರ ಉತ್ಪತ್ತಿ ಹೆಚ್ಚಿದಂತಿಲ್ಲ; ಯಾವ ಪ್ರಚಾರ, ಸರಿಯಾದ ಆಹಾರ ಇಲ್ಲದಿದ್ದರೂ ಜನಸಂಖ್ಯೆ ಕಡಮೆಯಾದಂತಿಲ್ಲ.

oo

ತೆಂಗಿನ ಪಿಕಲಾಟದಿಂದ ಯಾರಿಗೂ ನೆಮ್ಮದಿಯುಂಟಾದಿದೆಯೆ? ಬಡ ಬೀಡಿವ್ಯಾಪಾರಿಗಳೂ ಈ ಬೀಡಿ ತೆರಿಗೆಯ ಘಟಿತೆಗೊಳಗಾಗಿದ್ದಾರೆ. ತಾಲೂಕು ಚೇರಿಗೆ, ಇನ್ಸ್‌ಪೆಕ್ಟರ ಆಫೀಸಿಗೆ ಓಡಾಡುತ್ತಲೇ ಇದ್ದಾರೆ.

oo

ಬೀಡಿ ವ್ಯಾಪಾರಿಯೊಂದೊಡನೆ ರೂ. 50/– ತೆಂಗಿ ತೆತ್ತು ಲೈಸನ್ಸ್ ಪಡೆಯಬೇಕಾಗಿದೆಯಂತೆ; ಬೀಡಿಯ ದರವೂ ಈಗಾಗಲೇ ಏರಿದೆಯಂತೆ.

ಪ್ರಕಟಣೆ

ಉಡುಪಿ ತಾಲೂಕು ಕಾಪು ಪಂಚಾಯತ್ ಬೋರ್ಡಿಗೆ ಒಳ್ಪಟ್ಟ ಪಕ್ಕನಾಡು ವ, ದಿನವಹಿ ಮಾರ್ಕೆಟುಗಳಲ್ಲಿ ತಾರೀಖು 1-4-51 ರಿಂದ ತಾರೀಖು 31-3-52ರವರೆಗೆ ಸುಂಕ ವಸೂಲು ಮಾಡುವ ಮತ್ತು ಮಾರ್ಕೆಟು ಸ್ಟಾಲುಗಳನ್ನು ಪೂರ್ವೋಕ್ತ ಅವಧಿಯ ವರ್ಷದಲ್ಲಿ ಸ್ವಾಧೀನತೆಯಿಂದ ಉಪಯೋಗಿಸುವ ಸ್ವತಂತ್ರವನ್ನು ಇದೇ ಬರುವ ತಾ 26-3-51 ನೇ ಸೋಮವಾರ ಅಪರಾಹ್ನ ಘಂಟೆ 2 ರ ಪಂಚಾಯತ್ ಬೋರ್ಡು ಆಫೀಸಿನಲ್ಲಿ ಪ್ರೆಸಿಡೆಂಟರವರಿಂದ್ಯಯಾ, ಅವರು ಅಧಿಕೃತರನ್ನಾಗಿ ಮಾಡುವವರಿಂದ ಬಹಿರಂಗವಾದ ಏಲಂ ಮೂಲಕ ಮಾರಾಟ ಮಾಡೋಣಾಗುತ್ತದೆ. ಸದ್ರಿ ಏಲಂ ಶರತ್ತುಗಳ ಕುರಿತು ಬೇಕಾದ ಆನುಭವವನ್ನು ಪಂಚಾಯತ್ ಬೋರ್ಡ್ ಆಫೀಸಿನಲ್ಲಿ ಓದಿಕೊಳ್ಳಬಹುದು ಎಂಬ ಸಂಗತಿಯನ್ನು ಈ ಮೂಲಕ ತಿಳಿಸೋಣಾಗುತ್ತಿದೆ.

ಕಾಪು ಮಂಜುನಾಥ ಶೆಣೈ
ಪ್ರೆಸಿಡೆಂಟ್ ಪಂಚಾಯತ ಬೋರ್ಡ್ ಕಾಪು
ಕಾಪು. ತಾ. 20-3-51

ಉಡುಪಿ

ಹೊಟ್ಟು ಮಿಶ್ರಿತ ಅಕ್ಕಿವಿತರಣೆ: ತಾ 18ರಲ್ಲಿ ಇಲ್ಲಿಯ ಕೆಲವು ರೇಶನ್ ಅಂಗಡಿಗಳಲ್ಲಿ ಹೊಟ್ಟುಮಿಶ್ರಿತ ಅಕ್ಕಿ ವಿತರಣೆ ಯಾದುದರಿಂದ ಜನತೆಯಲ್ಲಿ ಅಸಮಾಧಾನ ಉಂಟಾಗಿದೆಯೆಂದೂ ಸಾಧಾರಣ ಒಂದು ಸೇರು ಅಕ್ಕಿಯಲ್ಲಿ ಒಂದು ಪಾವಿನಷ್ಟು ಹೊಟ್ಟು ಸಿಗುತ್ತಿತ್ತೆಂದೂ ಈ ಕುರಿತು ಕೆಲವರು ರೇಶನಿಂಗ್ ಅಧಿಕಾರಿಗಳಿಗೆ ಸ್ಯಾಂಪಲು ತೋರಿಸಿದೂರುಕೊಟ್ಟಿರುವರೆಂದೂ ತಿಳಿದುಬರುತ್ತದೆ.

ಶ್ರೀ ಕರಪಾತ್ರಜೀ ಸ್ವಾಮಿಗಳ ವರು– ಇದೇ ತಾ. 10ರಲ್ಲಿ ಬೆಳಗ್ಗೆ 11 ಗಂಟೆಗೆ ಕಾರ್ಕಳದ ಕಾರ್ಯಕ್ರಮವನ್ನು ಮುಗಿಸಿಕೊಂಡು ಉಡುಪಿಗೆ ಆಗಮಿಸಿದರು.

ಸಂಜೆ ರಥಬೀದಿಯಲ್ಲಿ ಸಿದ್ಧಗೊಳಿಸಲ್ಪಟ್ಟ ಸಭಾಂಗಣದಲ್ಲಿ ಶ್ರೀ ಕರಪಾತ್ರಜೀಯವರಿಗೆ ಮಾನಪತ್ರ ವೀಯಲಾಯಿತು. ರಾಮರಾಜ್ಯ ಪರಿಷತ್ತು, ಅದರ ಗೊತ್ತುಗುರಿಗಳೇನೆಂಬುದನ್ನು ವಿವರಿಸಿ ಗೋವಧೆ ನಿಷೇಧಬೇಕೆಂದೂ ಹಿಂದೂ ಕೋಡಿನಲ್ಲಿ ದೋಷಗಳಿರುವುದರಿಂದ ಅದು ಸ್ವೀಕಾರಾರ್ಹವಲ್ಲವೆಂದೂ ಹೇಳಿದರು. ಹೊಸ ಚುನಾವಣೆಯಲ್ಲಿ ರಾಮರಾಜ್ಯ ಪರಿಷತ್ತಿನ ಕಡೆಯಿಂದ ಹುರಿಯಾಳುಗಳನ್ನು ನಿಲ್ಲಿಸುವ ಸಂಭವನೀಯತೆಯೆಂದೂ ಭಾಷಣ ಮಾಡಿದರು.

ಕಾಪು ಮಾರಿಪೂಜೆ– ಪ್ರಾಣಿಬಲಿಯನ್ನು ನಿಷೇಧಿಸಿ ಮದ್ರಾಸು ಸರಕಾರದವರು ಕಾನೂನು ಮಾಡಿರುತ್ತಾರೆ. ಈ ಕಾನೂನನ್ನು ಕೂಡಲೇ ನಮ್ಮ ಜಿಲ್ಲೆಯಲ್ಲಿಯೂ ಜ್ಯಾರಿಗೆ ತಂದು ಕಾಪಿನಲ್ಲಿ ಇದೇ ತಾ 26 ಮತ್ತು 27ಕ್ಕೆ ನಡೆಯಲಿರುವ ಮಾರಿಪೂಜೆಯಲ್ಲಿ ಪ್ರಾಣಿಬಲಿಯನ್ನು ನಿಲ್ಲಿಸಲು ಸರಕಾರದವರಿಗೆ ಮನವಿ ಹೋಗಿದೆ. ಅದಾದರಿಂದ ಈ ಮಾರಿಪೂಜೆಯಲ್ಲಿ ಮಹಾ ಜನರು ಪ್ರಾಣಿಬಲಿಯನ್ನು ಅರ್ಪಿಸದೆ ಸಾತ್ವಿಕ ಆಹಾರವನ್ನು ಅರ್ಪಿಸಬೇಕಾಗಿ ಪ್ರಾಣಿಬಲಿ ಜ್ಞಾನ ಪ್ರಚಾರಕ ಸಂಘದ ಕಾರ್ಯದರ್ಶಿ ವಕೀಲ್, ಶ್ರೀ ಎಮ್. ಎಸ್. ಅಧಿಕಾರಿಯು ವಿನಂತಿಸುತ್ತಾರೆ.

ಡಾ । ಟಿ ಮಾಧವ ಪೈಗಳು ತಮ್ಮ ಯಶಸ್ವೀ ಪ್ರವಾಸವನ್ನು ತೀರಿಸಿಕೊಂಡು ಕಳೆದವಾರದಲ್ಲಿ ಹಿಂತಿರುಗಿ ಬಂದಿರುವರು. ಇವರು ಗದಗ್, ಬಾಗಲಕೋಟೆ, ಬಿಜಾಪುರ ಕೊಲ್ಹಾಪುರ, ಸಿಕಂದರಾಬಾದ್, ಬೆಜವಾಡ, ಗುಂಟೂರು, ನರಸಾರಾಪೇಟ್, ತಾಡಪತ್ರಿ, ಅನಂತಪುರ, ಬಳ್ಳಾರಿ, ಹೊಸಪೇಟೆ ಮೊದಲಾದ ಕಡೆಗಳಿಗೆ ಹೋದಾಗ ಅಲ್ಲಲ್ಲಿಯ ವಾಣಿಜ್ಯ ಸಂಘದವರೂ ಇತರ ಸಂಸ್ಥೆಗಳವರೂ ಮಾನಪತ್ರವನ್ನು ಅರ್ಪಿಸಿ ಸನ್ಮಾನಿಸಿದುದಲ್ಲದೆ ಆ ಜನರು ಸ್ವಯಂಸ್ಫೂರ್ತಿಯಿಂದ ಮಹಾತ್ಮಾ ಗಾಂಧೀ ಮೆಮೋರಿಯಲ್ ಕಾಲೇಜಿಗೆ ಸುಮಾರು ರೂ. 3200/- ನಿಧಿ ಸಂಗ್ರಹಿಸಿ ಕೊಟ್ಟಿರುವರೆಂದೂ ತಿಳಿದುಬರುತ್ತದೆ. ಡಾ। ಪೈಗಳು ವಾಣಿಜ್ಯ ಸಂಘಗಳಲ್ಲಿ ಭಾಷಣ ಮಾಡಿ ವಿಧಾಯಕ ಕಾರ್ಯಕ್ರಮಗಳಲ್ಲಿ ಮುಂದರಿಸಿಕೊಂಡು ಹೋಗಬೇಕೆಂದೂ ಪ್ರತಿಯೊಂದಕ್ಕೂ ಸರಕಾರವನ್ನೇ ಹೊಣೆಮಾಡಿ ಅದನ್ನೇ ಅವಲಂಭಿಸಿಕೊಂಡಿರಬಾರದೆಂದೂ ಕಾಲೇಜುಗಳಲ್ಲಿ ಉಪನ್ಯಾಸ ಮಾಡಿ ಕಾಲೇಜು ವಿದ್ಯಾರ್ಥಿಗಳ ಕರ್ತವ್ಯ, ಅವರಿಂದ ಸಮಾಜಕ್ಕೆ ಸಲತಕ್ಕ ಸೇವೆ ಇತ್ಯಾದಿಗಳನ್ನು ವಿವರಿಸಿರುವರೆಂದು ತಿಳಿದು ಬರುತ್ತದೆ.

ಶ್ರೀ ರಾಮಕೃಷ್ಣ ಥಿಯೇಟರ್ ಲಿಮಿಟೆಡ್, ಉಡುಪಿ.
ತಾರೀಖು 22-3-1951ರಿಂದ
ದಾದಾ
ಶೇಖ್ ಮುಖ್ತಾರ್, ಮನ್ವರ್ ಸುಲ್ತಾನ್
ಬರುವ ಚಿತ್ರ:
ಜ್ಯುಪಿಟರ್‌ರವರ
"ಮಂಜೂರ್"

ಮಹಾತ್ಮಾ ಗಾಂಧೀ ಮೆಮೋರಿಯಲ್ ಕಾಲೇಜ್, ಉಡುಪಿ.

ವಿಜ್ಞಾಪನೆ

ಸುಮಾರು 70 ಹೈಸ್ಕೂಲುಗಳಿಂದ ದಕ್ಷಿಣ ಕನ್ನಡದಲ್ಲಿ ತೀವ್ರವಾಗಿ ಬೆಳೆಯುತ್ತಿರುವ ಉಚ್ಚ ಶಿಕ್ಷಣದ ಸೌಕರ್ಯಕ್ಕಾಗಿ ಈ ಕಾಲೇಜು ಎರಡು ವರ್ಷಗಳ ಹಿಂದೆ ಜಿಲ್ಲೆಯ ಉತ್ತರಾರ್ಧದ ಕೇಂದ್ರದಲ್ಲಿ ಸ್ಥಾಪಿಸಲ್ಪಟ್ಟಿದೆ. ಈ ಕಾಲೇಜು ಜನತಾ ಸೇವೆಯನ್ನು ಉತ್ತಮತರದಲ್ಲಿ ಮತ್ತು ಸರ್ವಾನುಕೂಲತೆಯಿಂದ ಮಾಡಲಿಕ್ಕೆ ಜನಧನ ಸಹಾಯವು ಅತ್ಯಾವಶ್ಯಕವಾಗಿದೆ. ನೀವು ವಿದ್ಯಾ ವಿಷಯಕ್ಕೆ ಮಾಡುವ ಸೇವೆಯೆಂದರೆ ದೇಶದ ಸಂಸ್ಕೃತಿಯ ಅಭಿವೃದ್ಧಿಗೆ ಸಹಾಯಮಾಡಿದಂತೆ ಮತ್ತು ನಮ್ಮ ತರುಣ ತರುಣಿಯರ ಜೀವನ ಸಾರ್ಥಕತೆಗೆ ಅನುಕೂಲತೆಯನ್ನು ಒದಗಿಸಿಕೊಟ್ಟಂತೆ ಎಂಬುದರಿಂದಲೇ ನೀವು ಕೊಡುವ ಎಷ್ಟು ಸಹಾಯವಾದರೂ ಗಣಿಸಲ್ಪಡುತ್ತದೆ. ನೀವು ಈ ಸದುದ್ದೇಶಕ್ಕೆ ಸಹಾಯ ಮಾಡುವುದರಿಂದ ಇತರರಿಗೂ ಸಹಾಯ ಮಾಡುವಂತೆ ಉಚ್ಚ ಮಾದರಿಯನ್ನು ಹಾಕಿಕೊಟ್ಟಂತಾಗುವುದು.

ಈ ಕಾಲೇಜು ಪ್ರಜಾಸತ್ತೆಯ ತಳಹದಿಯ ಮೇಲೆ ಪರಿಶುದ್ಧ ವಿಶ್ವಸ್ಥರಿರುವ ಸಂಸ್ಥೆಯಾಗಿ ಸಂಸ್ಥಾಪನೆಯಾಗಿದೆ. ರೂಪಾಯಿ 30 0-0 ಯೂ ಹೆಚ್ಚಿಗೆ ಸಹಾಯ ಮಾಡಿದ ಓಟರಿಂದಲೇ ಮೂರು ವರ್ಷಗಳಿಗೊಮ್ಮೆ ಚುನಾಯಿಸಲ್ಪಡುವ ಸದಸ್ಯರಿಂದೊಡಗೂಡಿದ ಮಹಾತ್ಮಾ ಗಾಂಧೀ ಮೆಮೋರಿಯಲ್ ಕಾಲೇಜು ಟ್ರಸ್ಟಿನ ಕೈಯಲ್ಲಿ ಇದರ ಆಡಳಿತ ಸೂತ್ರವಿದೆ. ಸದ್ಯ ಇದು ದ್ವಿತೀಯ ಶ್ರೇಣಿಯ ಕಾಲೇಜಾಗಿದೆ. ಬರುವ ಶಾಲಾ ವರ್ಷದಿಂದಲೇ ವಿಜ್ಞಾನ ತರಗತಿಗಳು ತೆರೆಯಲ್ಪಟ್ಟು ಪ್ರಥಮ ಶ್ರೇಣಿಯ ಕಾಲೇಜಾಗಲು ಸರ್ವ ಪ್ರಯತ್ನಗಳನ್ನೂ ಮಾಡಲಾಗುತ್ತಿದೆ. ಜಿಲ್ಲೆಯ ಇತರ ಕಾಲೇಜುಗಳಲ್ಲಿ ಕಲಿಸಲ್ಪಡದ ವಿಷಯಗಳನ್ನು ಪ್ರಾರಂಭಿಸಿ ಇದರ ಉಪಯುಕ್ತತೆಯನ್ನು ಹೆಚ್ಚಿಸುವಂತೆ ನೋಡಿಕೊಳ್ಳುವುದೂ ಆಡಳಿತ ಮಂಡಳಿಯ ಉದ್ದೇಶವಿದೆ.

1) ಸರಕಾರಿ ಭದ್ರತೆಯಲ್ಲಿ ವಿನಿಯೋಗಿಸುವ 3 ಲಕ್ಷ ರೂಪಾಯಿಗಳ ಎಂಡೋಮೆಂಟಿನ ಪೈಕಿ ರೂ. 2 ಲಕ್ಷದ 25 ಸಾವಿರವನ್ನು ಮದ್ರಾಸು ಯುನಿವರ್ಸಿಟಿಯಲ್ಲಿ ಠೇವಣಿಯಾಗಿ ಇಡಲಾಗಿದೆ. 2) ರೂಪಾಯಿ 20,000-0-0ಗಳ ವೆಚ್ಚದಿಂದ ಕಾಲೇಜು ಲೈಬ್ರರಿಯನ್ನು ಸಜ್ಜುಗೊಳಿಸಿಕೊಳ್ಳಲಾಗಿದೆ (3) ಕಾಲೇಜು ಕಟ್ಟಡದ ನಿರ್ಮಾಣ ಕಾರ್ಯವನ್ನು ಕೈಕೊಳ್ಳಲಾಗಿದೆ. ಪ್ರತಿ ಆದಿತ್ಯವಾರ ತಮ್ಮ ದೇಹ ಶ್ರಮದ ಸಹಾಯವನ್ನು ನಾಗರಿಕರು ಈ ಸತ್ಕಾರ್ಯಕ್ಕೆ ಕೊಟ್ಟು ಸಹಕರಿಸುತ್ತಿದ್ದಾರೆ.

ಸರಕಾರವು ಮಾಡಿದ ಸಹಾಯ:– (1) ಕಾಲೇಜು ಕಟ್ಟಡ, ವಿದ್ಯಾರ್ಥಿ ನಿಲಯ ಮತ್ತು ಆಟದ ಬಯಲಿಗಾಗಿ ಉಡುಪಿ ನಗರ ಸಭೆಯ ಸರಹದ್ದಿನೊಳಗೆ ಸಗ್ರಿಗುಡ್ಡೆಯಲ್ಲಿ 32½ ಎಕ್ರೆ ಸ್ಥಳವನ್ನು ಉಚಿತವಾಗಿ ಕೊಟ್ಟಿರುತ್ತದೆ. (2) ಕಾಲೇಜಿಗೆ ಶಿಕ್ಷಣ ಧನಸಹಾಯವನ್ನೂ, ರೂಪಾಯಿ 10,000-0-0 ಲೈಬ್ರರಿ ಗ್ರಾಂಟನ್ನೂ, ರೂ. 50,000-0-0 ಬಿಲ್ಡಿಂಗ್ ಗ್ರಾಂಟನ್ನೂ ಮಂಜೂರು ಮಾಡಿದೆ.

ಇದೇ ಮಾರ್ಚಿಯೊಳಗೆ ನಾವು ಮಾಡಬೇಕಾದ ಕೆಲಸ– 1) ಮದ್ರಾಸು ಯುನಿವರ್ಸಿಟಿಯಲ್ಲಿ 3 ಲಕ್ಷಕ್ಕೆ ಭರ್ತಿಯಾಗುವಂತೆ ಇನ್ನೂ ರೂ. 75,000-0 0 ಡಿಪಾಜಿಟ್ ಇಡಬೇಕಾಗಿದೆ. (2) ಸುಮಾರು ರೂ. 2,50,000-0-0 ಅಂದಾಜು ಖರ್ಚಿನಲ್ಲಿ ಇದೇ ಜೂನು ಅಂತ್ಯದಲ್ಲಿ ಕಾಲೇಜು ಕಟ್ಟಡವನ್ನು ಪೂರ್ತಿಗೊಳಿಸಬೇಕಾಗಿದೆ. ಇದರಲ್ಲಿ ಸುಮಾರು ರೂ. 75,000-0-0 ವನ್ನು ಸರಕಾರವು ಕೊಡಬಹುದು. (3) ರೂ. 30,000-0-0ರೊಳಗೆ ಲೆಬೊರೇಟರಿಯನ್ನು ಒದಗಿಸಿಕೊಳ್ಳಬೇಕಾಗಿದೆ.

ಆದ್ದರಿಂದ ಮಹಾತ್ಮಾ ಗಾಂಧೀ ಮೆಮೋರಿಯಲ್ ಕಾಲೇಜಿಗೆ ನಿಮ್ಮ ಅತ್ಯುದಾರ ಧನಸಹಾಯವನ್ನು ಮಾಡಿರಿ.
ಬೊಂಬಾಯಿಯಲ್ಲಿ ಈ ವರೆಗೆ ಸಹಾಯ ಮಾಡಿದ ಮಹನೀಯರು–

ಡಾ। ಎ ವಿ. ಬಾಳಿಗ ಎಫ್, ಆರ್. ಸಿ. ಎಸ್ (Eng.)	ರೂ	25,000
(ನಗದು ರೂ 13,000 ಮತ್ತು ದಿವಂಗತ ಅನಂತ ಬಾಳಿಗರ ಸ್ಮಾರಕ ಫಂಡಿನಿಂದ ರೂ 12,000 ಮೌಲ್ಯದ ಕೆನರಾ ಬ್ಯಾಂಕ್ ಇನ್ವೆಸ್ಟ್‌ಮೆಂಟಿನ ಪಾಲುಗಳು)		
ಡಾ। ಯು ಆರ್. ರಾವ್.	ರೂ	2,001
ದಿ ಇಂಡೋಬರ್ಮಾ ಕಮರ್ಶಿಯಲ್ ಕೋರ್ಪೊರೇಶನ್	,,	2,251
ಬರ್ಮಾ ಶೆಲ್ ಡಿಸ್ಟ್ರಿಬ್ಯೂಟರ್ಸ್	,,	1002
ಶ್ರೀ ಮೋಹನ್‌ಲಾಲ್ ಎಸ್. ಶಾ, ಬಿ. ಎಸ್‌ಸಿ	,,	1001
ಶ್ರೀ ರಾಘವೇಂದ್ರ ರಾವ್, ಶಾರದಾ ಭವನ	,,	1001
ಶ್ರೀ ಜಗನ್ನಾಥ ಜೆ. ಪಟೇಲ್	,,	1000
ಶ್ರೀ ಕೆ ದೇವದಾಸ ಬಾಳಿಗ	,,	1000
ಶ್ರೀ ಪಿ. ನಾರಾಯಣಾಚಾರ್ಯರ ಮೂಲಕ ರೇಸ್‌ಕೋರ್ಸಿನ ಬೋನಾರ ಟಿಕ್ಕೆಟ್	,,	1000
ಅನಾಮಧೇಯ	,,	1000
ಶ್ರೀ ಬೋಳ ನರಸಿಂಹ ಕಾಮತ್	,,	601
ಶ್ರೀ ದಾಮೋದರ ಶೆಣೈ ಮತ್ತು ಸಹೋದರರು	,,	550
ಶ್ರೀ ಕಸ್ತೂರಿ ನಾಗೇಶ ಪೈ ಎಂಡ್ ಕೋ ಲಿಮಿಟೆಡ್	,,	505
ಶ್ರೀ ರೆಂಜಾಳ್ ಅನಂತಪ್ರಭು ಶೆಣೈ, ಕೆನರಾ ಸ್ಟೋರ್ಸ್	,,	501
ಶ್ರೀ ಗೋಕರ್ಣ ಮಠಾಧೀಶ ಶ್ರೀ ಮದ್ ದ್ವಾರಕಾನಾಥ ತೀರ್ಥ ಸ್ವಾಮಿಜಿ	,,	501
ಶ್ರೀ ವೆಂಕಟ್ರಾವ್ ಎ. ಪೈ	,,	500
ಶ್ರೀ ಡಾ। ಎ, ಕೆ ಪೈ, ಎಮ್. ಬಿ. ಎಂಡ್. ಬಿ. ಎಸ್	,,	500
ಶ್ರೀ ಕುಡ್ವ ಭುಜಂಗ ರಾವ್	,,	500
ಅನಾಮಧೇಯ (ಎಸ್ ಕೆ.)	,,	500
ಶ್ರೀ ಉಮೇದಚಂದ್ ಕಾಶೀರಾಮ್ ಎಂಡ್ ಕೋ	,,	500
ಶ್ರೀ ವೆಂಕಟದಾಸ್ ನಾರಾಯಣ ಪ್ರಭು ಗ	,,	460
ಶ್ರೀ ಗಳಾದ ಕೆ. ಜೆ ಪೈ ಟಿ. ಎ. ಪೈ ಮತ್ತು ವಿ. ಎ. ಪೈಗಳ ಮುಖಾಂತರ ಬಿಲ್ಲರೆ ವಸೂಲಿಗಳ ಜುಮ್ಲಾ	,,	453
ಶ್ರೀ ಪಾಲನ್ ಸೋಜ್‌ಪಾಲ್ ಎಂಡ್ ಕೋ	,,	251
ಶ್ರೀ ಕೆ ಎಚ್. ಸಂಗಾವಿ	,,	251
ಶ್ರೀ ಎಮ್. ಶೇಷಗಿರಿ ರಾಯರ ಬಗ್ಗೆ ಅವರ ಮಗ ಶ್ರೀ ಎಮ್. ಸಂಜೀವ ರಾವ್	,,	251
ಶ್ರೀ ಇನಾಜ್ ಎ. ಖಾದರ್	,,	250
ಶ್ರೀ ರಂಚೋಡದಾಸ್ ಭಾಟ್ಲ ಎಂಡ್ ಕೋ	,,	250
ಶ್ರೀ ಖಾರ್ ವಾಮನ ಶೆಣೈ	,,	201
ಶ್ರೀ ಎಮ್. ಎಸ್. ರಾವ್, ನೆವಿಪೆಲ್ಲೆಸ್	,,	201
ಡಾ। ಎನ್, ಡಿ. ಕಾಂಚನ್	,,	200
ಶ್ರೀ ಬಾಪು ಸಾಹೇಬ್ ದೇಸಾಯಿ ಎಂಡ್ ಬ್ರದರ್ಸ್	,,	151
ಶ್ರೀ ಎಮ್. ಎಸ್. ಪೈ	,,	105
ಶ್ರೀ ಜಿ. ಕೆ. ಗುಪ್ತ, ಬಿ. ಕಾಮತ್	,,	101
ಶ್ರೀ ಗೋಪಾಲ ರಾವ್ ಉಗ್ರಾಣಕರ್	,,	101
ಶ್ರೀ ನಾರಾಯಣದಾಸ್ ರಾಂಚೋಡದಾಸ್	,,	101
ಶ್ರೀ ಎಲ್. ಬಿ. ಮಾಲ್ಯನಿ	,,	101
ಶ್ರೀ ಯು. ಶೇಷರಾವ್ ಮತ್ತು ಯು. ವೆಂಕಟರಾವ್	,,	101
ಶ್ರೀ ಯು. ಬಿ. ಉಪಾಧ್ಯ	,,	101
ಶ್ರೀ ಡಾ। ಎಸ್. ಎಸ್. ರಾವ್	,,	101
ಶ್ರೀ ಕೆ. ಎಲ್. ವಿ. ನಾಯಕ್	,,	101
ಶ್ರೀ ರಾಜ ಶ್ರೀ ಕೃಷ್ಣ ವಾಸುದೇವ ಎಂಡ್ ಕೋ	,,	101
ಶ್ರೀ ಕಲ್ಯಾಡಿ ಆನಂದರಾವ್	,,	101
ಶ್ರೀ ಟಿ. ಎಸ್. ರಾವ್. ಕನ್ನಡಾರಾ ಹೌಸ್	,,	101
ಅನಾಮಧೇಯ	,,	101
ಶ್ರೀ ಶಾಂತಪ್ಪ ವೆಂಕಪ್ಪ ಸಟ್ಟಿ	,,	100
ಶ್ರೀ ಬಿ. ಜೆ. ಶೆಟ್ಟಿಗಾರ್	,,	100
ಶ್ರೀ ಪಿ. ಎಸ್. ಪೈ ಎಂಡ್ ಕೋ	,,	100
ಶ್ರೀ ಮುರಳೀಧರ್ ಪಿತಾಂಬರ ಪ್ರಭು	,,	100
ಶ್ರೀ ರಘುನಾಥ ವಿ ಕಾಮತ್	,,	100
ಶ್ರೀ ಅಪ್ಪ ಅಚ್ಯುತ ಶೆಣೈ	,,	100
ಶ್ರೀ ಎಮ್. ಅನಂತರಾಯ ಪ್ರಭು	,,	100
ಚಿಲ್ಲರೆ ಸಂಗ್ರಹ	,,	287

ಮಂಗಳೂರು

ಶ್ರೀ ಶ್ರೀಕರಪಾತ್ರಿ ಸ್ವಾಮಿಜಿ ಯವರು:- ಇದೇ ತಾ. 14ರಲ್ಲು ಸಂಜೆ ಮಂಗಳೂರಿನ ಕೇಂದ್ರ ಮೈದಾನದಲ್ಲಿ ಬಾಸ ಅಖಿಲಯುತ್ತ ಅಖಿಲಭಾರತ ಧರ್ಮ ಸಂಘ, ರಾಮರಾಜ್ಯ ಪರಿಷತ್ತು ಮತ್ತು ಮಹಿಳಾ ಸಭೆಗಳ ಕುರಿತು ಪ್ರಸ್ತಾಪಿಸಿದರು. ಭಾರತದಲ್ಲಿ ಖಿಲವಾಗುತ್ತಿರುವ ಧರ್ಮವನ್ನು ಉಳಿಸುವುದೇ ಅಖಿಲಭಾರತ ಧರ್ಮ ಸಂಘದ ಧ್ಯೇಯವು. ಧರ್ಮದ ವಿಜಯಕ್ಕಾಗಿ, ಅಧರ್ಮ ನಾಶಕ್ಕಾಗಿ ಹೋರಾಡುವುದೇ ತಮ್ಮ ಸಂಸ್ಥೆಗಳ ಗುರಿಯೆಂದರು. ಗೋವಧೆ, ಹಿಂದೂ ಕೋಡು ಮಸೂದೆಗಳನ್ನು ಖಂಡಿಸಿ ಮಾತನಾಡಿದರು. ಶ್ರೀ ಬಿ. ಕೆ. ಗೋವಿಂದ ಭಟ್ಟರು ಮಂಗಳೂರ ಜನತೆಯ ಪರವಾಗಿ ಸ್ವಾಮಿಜಿಯವರಿಗೆ ಸ್ವಾಗತವನ್ನಿತ್ತರು. ಶ್ರೀ ಕೃಷ್ಣ ಪೂಜಾರಿಯವರು ಧನ್ಯವಾದಗಳನ್ನರ್ಪಿಸಿದರು. ಸ್ವಾಮೀಜಿಯವರು ಸ್ಥಳೀಯ ಕೆಲವು ದೇವಸ್ಥಾನಗಳನ್ನು ಸಂದರ್ಶಿಸಿದರು. ರಾತ್ರಿ ವೆಂಕಟರಮಣ ದೇವಸ್ಥಾನದಲ್ಲಿ ಪುರಪ್ರಮುಖರ ಸಭೆಯಲ್ಲಿ ತಮ್ಮ ಸಂಘಟನೆಗಳ ಕುರಿತು ಮಾತನಾಡಿದರು.

ಜಿಲ್ಲೆಯಲ್ಲಿ ಸಾರ್ವತ್ರಿಕ ರೇಶನ್ ಕ್ಕಾಗಿ ಬರಬೇಕೆನ್ನುವ ನಿರ್ಣಯವೊಂದು ಈಚೆಗೆ ಮಂಗಳೂರಲ್ಲಿ ಶ್ರೀ ಎಮ್. ಆರ್. ಭಟ್ಟರ ಅಧ್ಯಕ್ಷತೆಯಲ್ಲಿ ಜರಗಿದ ಸಭೆಯಲ್ಲಿ ಸ್ವೀಕೃತವಾಯಿತು. ಶ್ರೀಗಳಾದ ಕಡೆಂಗೋಡ್ಲು ಶಂಕರ ಭಟ್, ಡಾ. ಎಮ್. ಎಸ್. ಶಾಸ್ತ್ರಿ, ಎಮ್. ನಾರಾಯಣ ಮೂರ್ತಿ, ಬಿ. ಕೆ. ಗೋವಿಂದ ಭಟ್, ಬಿ. ಎಮ್. ಇದಿನಬ್ಬ ಮೊದಲಾದವರು ಭಾಷಣವಿತ್ತರು.

ಶಿಕ್ಷಣ ಸಮಿತಿ ಸ್ಪೆಶಲ್ ಸಭೆ— ದಕ್ಷಿಣ ಕನ್ನಡ ಜಿಲ್ಲಾ ಶಿಕ್ಷಣ ಖಾತೆಯ ಸ್ಥಾಯಿ ಸಮಿತಿಗೆ ರಾಜಿನಾಮೆಯಿತ್ತ ಶ್ರೀ ಕೆ. ಹಿ. ಮುಳ್ಳುಂದ ಪ್ರಭು ಮತ್ತು ಸೈದು ಹಾಜಿಯರಿಂದ ಸ್ಥಾನ ತೆರವಾದ ಶ್ರೀ ಎಸ್. ಎ. ಫಡ್ಕಾರ ಇವರ ಸ್ಥಾನದಲ್ಲಿ ಇಬ್ಬರು ಸದಸ್ಯರ ಚುನಾವಣೆಯು ಇದೇ ತಾ 26 ನೆ ಸೋಮವಾರ ಜಿಲ್ಲಾ ಬೋರ್ಡು ಆಫೀಸಿನಲ್ಲಿ ಜರಗಲಿರುವ ಸ್ಪೆಶಲ್ ಸಭೆಯು ನಡೆಯುವುದು. ಜಿಲ್ಲಾ ಬೋರ್ಡಿನ ಸಾಮಾನ್ಯ ಸಭೆಯು ಅದೇ ದಿನ ಬೆಳಿಗ್ಗೆ ಸೇರುವುದು

ಜಿಲ್ಲಾ ಬೋರ್ಡು ಅಧ್ಯಕ್ಷರ ಸಂಚಾರ— ದ. ಕ ಜಿಲ್ಲಾ ಬೋರ್ಡ ಅಧ್ಯಕ್ಷ ಶ್ರೀ ಬಿ. ಮಂಜಯ್ಯ ಹೆಗ್ಡೆಯವರು ಈಚೆಗೆ ಶಿರ್ವಕ್ಕೆ ಹೋಗಿ, ಅಲ್ಲಿ ಜಿಲ್ಲಾ ಬೋರ್ಡಿನವರು ಮಂಜೂರು ಮಾಡಿದ ಹೆರಿಗೆ ವಾರ್ಡನ್ನು ತೆರೆದರು ಡಾ ಫಾ ಗೊನ್ಸಾಲ್ವಿಸ್, ಅವರು ಸಮಾರಂಭದ ಅಧ್ಯಕ್ಷತೆ ವಹಿಸಿದ್ದರು. ಶಿರ್ವದ ಪ್ರಯಾಣಿಕರ ಬಂಗ್ಲೆ ಕೆಲ ಸಮಯದಿಂದ ಯಾರೂ ತಂಗಿಕೊಳ್ಳದ ಕಾರಣ ಅಲ್ಲಿನ ಉಪಕರಣಗಳ ಇತರವನ್ನು ಮನ್ನಾಮಾಡಿ, ಕಸಗುಡಿಸುವ ಹಾಗೂ ಕಾವಲಿನ ಬಗ್ಗೆ, ತಿಂಗಳಿಗೆ ಎಂಟು ರೂಪಾಯಿ ಸಂಬಳದ ಒಬ್ಬನ ನೇಮಕವಾಗಲಿಯುತು ಅಲ್ಲಿಂದ ಅವರು ಉಡುಪಿಗೆ ಬಂದು ಹಿರಿಯಡ್ಕಕ್ಕೆ ಹೋಗಿ ಅಲ್ಲಿ ಹೈಸ್ಕೂಲು ಕಟ್ಟಡದ ಕೆಲಸ ನಡೆಯುತ್ತಿರುವುದನ್ನು ನೋಡಿದರು ನಂತರ ಕಾರ್ಕಳಕ್ಕೆ ಹೋದರು ಶ್ರೀ ಮುಕುಂದ ಪ್ರಭುಗಳವರು ಅಲ್ಲಿಯ ಹೈಸ್ಕೂಲ್ ಕಂಪೌಂಡಿಗೆ ತಮ್ಮ ಸ್ವಂತ ಖರ್ಚಿನಿಂದ ಗೋಡೆ ಹಾಕಿಸುವುದನ್ನು ನೋಡಿ ಸಂತೋಷಪಟ್ಟರು

ಸಾಂಕ್ರಾಮಿಕ ರೋಗಗಳು— ಸಿಡುಬು, ವಿಷಮ ಜ್ವರಗಳ ಹಾವಳಿ ನಗರದ ಹಲವು ಕಡೆಗಳಲ್ಲಿ ಕಂಡುಬಂದಿವೆ. ರೋಗ ಪ್ರತಿಬಂಧಕವಾಗು, ಇಂಜೆಕ್ಷನ್‌ಗಳನ್ನು ಚುಚ್ಚುವ ಕಾರ್ಯಕ್ರಮ ನಡೆಯುತ್ತಿದೆ

ಆತ್ಮಹತ್ಯೆ— ಮ. ಶ್ರೀನಿವಾಸ ದೇವಸ್ಥಾನ ರಸ್ತೆಯಲ್ಲಿ ವಾಸವಾಗಿದ್ದ ಶ್ರೀ ಮಿಟಾರ ಪರಮಂಜ ಕಾಮತರ ಏಳೆಯ ಮಗ ಪತ್ನಿ ಮತ್ತು ಕುಮಾರರು ಒಂದುವರೆ ಪ್ರಾಯದ ಮಗು, ಇವರ ಶವಗಳು ತಾ. 15ರಲ್ಲು ಮಣಿತೋಟದ ಭಾವಿಯಲ್ಲಿ ಕಾಣಸಿಕ್ಕಿದ್ದವು. ಶವಪರೀಕ್ಷೆ ನಡೆದು ಮತ್ತೆ ಸಂಸ್ಕಾರಕ್ಕೆ ಬಿಟ್ಟುಕೊಡಲಾಯಿತು.

ಜಾನಪದ ಕಲಾಮಂಡಲಿ— ಕಳೆದ ತಾ. 11ಲ್ಲು ರಘುನಾಥ ಮೆಮೋರಿಯಲ್ ಹಾಲಿನಲ್ಲಿ ಶ್ರೀ ಬೇಲಗದ್ದೆ ಅಪ್ಪಯ್ಯನವರ ಅಧ್ಯಕ್ಷತೆಯಲ್ಲಿ ನಾಟಕ ಕಲೆಯ ಕುರಿತು ಭಾಷಣ ನಡೆಯಿತು. ಶ್ರೀ ಇದಿನಬ್ಬನವರು ಕ್ರಾಂತಿಕಾರಕ ನಾಟಕಗಳು ಜಾಸ್ತಿಯಾಗಬೇಕೆಂದರು ಶ್ರೀಗಳಾದ ಪಿ ಕೆ ನಾರಾಯಣ ರಾಘವೇಂದ್ರ ರಾವ್, ಸೀತಾರಾಮ ಕೊಲ್ಲೂರ್‌ಕರ್ ಮೊದಲಾದವರೂ ಮಾತನಾಡಿದರು ಸಾಹಿತಿಯು ಯಾವ ಪಕ್ಷಪಂಗಡದಲ್ಲೂ ಇರದೆ ತನ್ನದೆ ಆದ ಒಂದು ಉತ್ತಮ ದೃಷ್ಟಿಯಿಂದ ಸಾಹಿತ್ಯವನ್ನು ರಚಿಸಿ, ನಟಿಸಿ ಮುಂದೆ ಬರಬೇಕೆಂದು ಅಧ್ಯಕ್ಷರು ಹೇಳಿದರು ಕಾರ್ಯದರ್ಶಿಗಳ ಧನ್ಯವಾದಾರ್ಪಣೆಯೊಂದಿಗೆ ಸಭಾಂತ್ಯವಾಯಿತು.

ಮೈಲುಗಾಡಿಯ ವೇಳಾ ಬದಲಾವಣೆ— ಮದ್ರಾಸಿನಿಂದ ಮಂಗಳೂರಿಗೆ ಬರುವ ಮೈಲ್‌ಗಾಡಿಯು ಬರುವ ಎಪ್ರಿಲ್ ತಾ. 1ರಿಂದ ಇಲ್ಲಿಗೆ ಸಂಜೆ 5 20ಕ್ಕೆ ಬಂದು ಬೆಳಿಗ್ಗೆ 8 50ಕ್ಕೆ ಹೊರಡುವ ವ್ಯವಸ್ಥೆ ಮಾಡಲಾಗುವುದೆಂದು ತಿಳಿದುಬರುತ್ತದೆ.

ನಾಟ್ಯಕಲಾ ಪ್ರದರ್ಶನ:— ದ. ಕ ಜಿಲ್ಲಾ ಕರ್ನಾಟಕ ಶಿವ ಸೇವಾ ಸಮಿತಿಯ ಸಹಾಯಾರ್ಥವಾಗಿ ಇದೇ ತಾ 11ರಲ್ಲು ಸ್ಥಳೀಯ ಗಣಪತಿ ಹೈಸ್ಕೂಲಿನಲ್ಲಿ ಕೇರಳದ ಪ್ರಸಿದ್ಧ ನರ್ತಕಿ ಕುಮಾರಿ ಶಾಂತಾ ಮತ್ತು ಬಳಗದವರ ನೃತ್ಯಕಲಾ ಪ್ರದರ್ಶನ ಮತ್ತು ರೇಡಿಯೋ ಗಾಯಕ ಶ್ರೀ ಕೆ ವಾಸುದೇವನ್ ಮತ್ತು ಬಳಗದವರ ಗಾಯನ ಕಚೇರಿಯೂ ನಡೆಯಿತು. ಮಂಗಳೂರು ಟೌನ್ ಕಾಂಗ್ರೆಸ್, ಕಮಿಟಿ ಉಪಾಧ್ಯಕ್ಷ ಶ್ರೀ ಎಚ್. ಕೃಷ್ಣಪ್ಪ ತಿಂಗಳಾಯರು ಅಧ್ಯಕ್ಷತೆ ವಹಿಸಿದ್ದರು

ಸತ್ಕಾರ ಕೂಟ— ಇದೇ ತಾ 12ರಲ್ಲು ಸಂಜೆ ಸ್ಥಳೀಯ ಗವರ್ನಮೆಂಟ್, ಸೆಕೆಂಡರಿ ಟ್ರೈನಿಂಗ್ ಶಾಲೆಯಲ್ಲಿ ಇದೇ ನಿಲಯದಲ್ಲಿ ಎರಡು ವರ್ಷಗಳ ತರಬೇತಿಯನ್ನು ಮುಗಿಸಿ ಇದೇ ತಿಂಗಳಲ್ಲಿ ಸರಕಾರಿ ಪರೀಕ್ಷೆಗೆ ಕುಳಿತುಕೊಳ್ಳಲಿರುವ ವಿದ್ಯಾರ್ಥಿ ಅಧ್ಯಾಪಕರನ್ನು ಬೀಳ್ಕೊಡುವ ಸಮಾರಂಭವು ಶ್ರೀ ರಾಮಯ್ಯ ನಾಯಕರ ಅಧ್ಯಕ್ಷತೆಯಲ್ಲಿ ಜರಗಿತು. ಲಘು ಉಪಾಹಾರದ ನಂತರ ವಿದ್ಯಾರ್ಥಿ ಅಧ್ಯಾಪಕರು ಕೆಲವರು ಮಾತನಾಡಿದರು ಶ್ರೀ ಹಿ ಸಿ ಐತಾಳ ರ ಉತ್ತರರೂಪವಾಗಿ ಕೆಲವು ಮಾತುಗಳನ್ನಾಡಿ ಮುಂಬರುವ ಪರೀಕ್ಷೆಯಲ್ಲಿ ಯಶಸ್ಸನ್ನು ಕೋರಿದರು

ಹಿಂದ್ ಕುಷ್ಠ ನಿವಾರಣ ಸಂಘ:- ಈ ಸಂಘದ ಜಿಲ್ಲಾ ಶಾಖೆಯ ಎರಡನೆ ಸಭೆಯು ಜಿಲ್ಲಾ ಕಲೆಕ್ಟರ್ ಹಾಗೂ ಅಧ್ಯಕ್ಷ ರಾವ್ ಬಿ ಎ. ಆರ್. ರಾಜರತ್ನಂ, ಅವರ ಅಧ್ಯಕ್ಷತೆಯಲ್ಲಿ ಈಚೆಗೆ ಜರಗಿತು ಡಾ. ಎ. ಎಸ್ ಕೊಲಂಬೋ ಅವರು ಸಂಘದ ಕಾರ್ಯದರ್ಶಿಯಾಗಿಯೂ ಶ್ರೀ ಎಮ್. ವೆಂಕಟೇಶ ಪೈಗಳು ಖಜಾಂಚಿಯಾಗಿಯೂ ಆರಿಸಲ್ಪಟ್ಟರು ನಂತರ ಪಾಸಾದ ನಿರ್ಣಯಗಳು:- ಕುಷ್ಠರೋಗದ ಚಿಕಿತ್ಸೆ ಮತ್ತು ಸರ್ವೆಯ ಬಗ್ಗೆ ಒಂದು ಆರೋಗ್ಯ ಪಥಕವನ್ನು ಲೆಪೊರೆಟೋಯ ಸೌಕರ್ಯ ಸಹಿತವಾಗಿ ಈ ಜಿಲ್ಲೆಗೆ ನೇಮಕವಾಗಬೇಕೆಂದು ಸರಕಾರವನ್ನು ಕೇಳಿಕೊಳ್ಳುವುದು. ಇದರ ಕಾರ್ಯಾಲಯ ಶಿರ್ವದಲ್ಲಿರತಕ್ಕದು. ಕುಷ್ಠರೋಗದ ಚಿಕಿತ್ಸೆಯಲ್ಲಿ ತರಬೇತಿ ಪಡೆಯುವ ಬಗ್ಗೆ ಸರಕಾರಿ ಮತ್ತು ಜಿಲ್ಲಾ ಬೋರ್ಡಿನ ಗ್ರಾಮಾಂತರಗಳಲ್ಲಿಯ ಮೆಡಿಕಲ್ ಆಫೀಸರುಗಳಲ್ಲಿ ಇಪ್ಪತ್ತೈದು ಮಂದಿಯನ್ನು ಸ್ಥಳೀಯ ತಂಕನಾಡಿ ಸೈಂಟ್ ಜೋಸೆಫ್ ಕುಷ್ಠರೋಗಿಗಳ ಆಸ್ಪತ್ರೆಗೆ ಕಳುಹಿಸುವಂತೆ ಜಿಲ್ಲಾ ಮೆಡಿಕಲ್ ಆಫೀಸರರನ್ನು ಕೇಳಿಕೊಳ್ಳುವುದು ಜಿಲ್ಲೆಯ ಹಳ್ಳಿಗಳಲ್ಲಿರುವ ಬೋರ್ಡು ಎಲಿಮೆಂಟರಿ ಶಾಲೆಗಳ ಮತ್ತು ಸೆಕೆಂಡರಿ ಶಾಲೆಗಳ ಸಮೀಪವಿರುವ ಮೆಡಿಕಲ್ ಆಫೀಸರು ಈ ಶಾಲೆಗಳಿಗೆ ಸಂದರ್ಶನವಿತ್ತು ಮಕ್ಕಳನ್ನು ಪರೀಕ್ಷಿಸಿ ಕುಷ್ಠರೋಗದ ಸರ್ವೆಕೆಲಸಕ್ಕೆ ಸಹಾಯಕವಾಗುವ ವರದಿಯನ್ನು ಜಿಲ್ಲಾ ಮೆಡಿಕಲ್ ಆಫೀಸರಿಗೆ ಒದಗಿಸುವಂತೆ ಮಾಡಲು ಸ್ಥಳೀಯ ಮೆಡಿಕಲ್ ಸಂಘವು ಜಿಲ್ಲಾ ಬೋರ್ಡು ಅಧ್ಯಕ್ಷರೊಡನೆ ಸಹಕರಿಸಿ, ಏರ್ಪಾಡು ಮಾಡಬೇಕೆಂದು ವಿನಂತಿಸಿಕೊಳ್ಳುವುದು ಸಂಘದ ಕೆಲಸಗಳನ್ನು ನಿರ್ವಹಿಸಲು ಬೇಕಾಗುವ ಧನಸಂಗ್ರಹದ ಬಗ್ಗೆ ಒಂದು ಉಪಸಮಿತಿಯನ್ನು ನೇಮಿಸಲಾಯಿತು.

'ಅಂತರಂಗ'
ಮಾಸಪತ್ರಿಕೆಯನ್ನು
ತಪ್ಪದೆ ಓದಲು ಮರೆಯದಿರಿ.

ವಿವಿಧ ಪಾತ್ರೆಗಳು



ಉತ್ತಮವಾದ್ದು ವಿಧದ ಬೆಳ್ಳಿ ತಾಮ್ರ ಹಿತ್ತಾಳೆ ಕಂಚು ಮೊದಲಾದುವುಗಳ ವಿವಿಧ ಪಾತ್ರೆಗಳೂ ಸಾಮಾನುಗಳೂ ರಖಂ ಚಿಲ್ಲರೆಯಾಗಿಯೂ ದೊರೆಯುತ್ತವೆ.

ಕಲ್ಮಂಜೆ ವ್ಯಾಸಾಚಾರ್ಯ,
ರಥಬೀದಿ, ಉಡುಪಿ

ಮುತ್ತುಸ್ರಾವ ನಿಂತಿತು

'ಕುಸುಮ' ಪಿಲ್ಲಿಗಳನು ಉಪಯೋಗಿಸಿದರೆ ಹದಿನೆಪ್ಪು ಮುತ್ತುಸ್ರಾವವಾಗುವುದು, ಹಸಿವೆಯಿಗೆ ಬಲವಾದು, ಈ ಔಷಧ ಸೇವಿಸುವುದ ತೀವ್ರ ಗುಣಹೊಂದಬಹುದು, ಯಾವ ಬಾಧಕವೂ ಇಲ್ಲ. ಸಾಧಿರಾದು ಮುಂದಿಗೆ ಶಾಶ್ವತ ಗುಣವಾಗಿದೆ- ಬೆಲೆ; ರೂ. 3 ; ಸ್ಪೆಶಲ್ ರೂ. 5 ಅಧಿಕಾಧಿಕ ಸ್ಪೆಶಲ್ ರೂ. 8-[ವಿ. ಪಿ ಹಣ್ಮೆರಡಾಣೆ ಪ್ರತ್ಯೇಕ.]

MIS P. DEVEE, F DS (A. J.)
Tollygunge CALCUTTA
ಸ್ಟಾಕಿಸ್ಟರು ಶಹಾಕಂಪೆನಿ, ಮಂಗಳೂರು

IN THE HIGH COURT OF JUDICATURE AT MADRAS
Ordinary Original Civil Jurisdiction.
O P No 61 of 1951.

In the matter of the Indian companies Act, 1913
and
In the matter of the Southern Land Trust, Ltd,

The Southern Land Trust, Ltd, Mangalore —Petitioner

NOTICE is hereby given that a petition under section 12 of the Indian Companies Act 1913 for confirmation of an alteration of the Memorandum of Association of the Petitioner Company was presented by the Company on the 20th day of February 1951 and that the said petition is directed to be heard before the Judge sitting in Chambers on the 23rd day of April 1951 Any person desirous of supporting or opposing the making of an order as prayed in the Petition should appear at the time of hearing by himself or by his Advocate, and a copy of the petition will be furnished to any person requiring the same by the undersigned of payment of the regulated charge for the same

1-A, Thomas Road,
T Nagar, Madras 17
13—3—1951.

A. Narayana Pai,
Advocate for the Petitioner.

NOTE. Any person who intends to appear on the hearing of the said Petition must serve on or send by post to the abovenamed notice of his intention so to do. The notice must state the name and address of the person or if a firm the name and address of the firm and must be served or if posted must be sent by post so as to reach the abovenamed not later than 3 O'Clock in the afternoon 22nd April 1951.

Sri B Manjayya Hegde, B A B L.,
President District Board, S Kanara

Applications are invited from persons who possess the qualifications prescribed in Rule 13 of Madras Educational Rules for appointment as under:

1) Graduate Assistants (Maths, Science, & History)
2) Physical Training Instructor.
3) Physical Training Instructress.
4) Secondary Grade Assistants
5) Drawing Masters.
6) Craft Instructors
7) Agricultural Instructor (with B Sc Ag qualifications in the scale of pay of Rs. 100-5-10-EB-10-120).

Candidates should state their age, community details of the qualifications and past experience if any.

Applications accompanied by Treasury receipts or money orders acknowledgement for Rs. 2/- being the application fee in respect of item Nos. 1, 2, 3, 6 & 7 and Re. 1-0-0 in respect of item Nos. 4 & 5 should reach the undersigned on or before 15—5—1951.

(*Sd*) **B. Manjayya Hegde,**
President,
District Board, South Kanara
S. K. Dt. Board Office,
Mangalore, 14-3-51

ಮಂಜೇಶ್ವರ—ಮಂಜೇಶ್ವರ ಸರ್ಕಲ್ ಕಾಂಗ್ರೆಸ್ ಕಮಿಟಿ ಸದಸ್ಯರ ಸಭೆಯು ಇದೇ ತಾ. 10ರಲ್ಲಿ ಶ್ರೀ ಬಿ. ದೇವಪ್ಪ ಆಳ್ವರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀ ಎಮ್. ಅಮೃತ ಕೃಷ್ಣರಾಯರು ಅಧ್ಯಕ್ಷರಾಗಿಯೂ, ಶ್ರೀಗಳಾದ ಎ. ಕೆ. ಶಿರೂಲ್ ಸಾಹೇಬ್ ಮತ್ತು ಬಿ. ದೇವಪ್ಪ ಆಳ್ವರು ಉಪಾಧ್ಯಕ್ಷರುಗಳಾಗಿಯೂ ಶ್ರೀ ಕೆ. ಮಾಧವ ಶೈಗಳು ಕಾರ್ಯದರ್ಶಿಯವರಾಗಿಯೂ, ಶ್ರೀಗಳಾದ ಗಂಗಾಧರ ಪೈ, ಅಣ್ಣಯ್ಯ ಸೆಟ್ಟಿ ಜತೆಕಾರ್ಯದರ್ಶಿಗಳಾಗಿಯೂ, ಶ್ರೀ ಎ. ಪೈದ್ಯರ್ ಕೋಶಾಧಿಕಾರಿಯಾಗಿಯೂ ಆರಿಸಲ್ಪಟ್ಟರು.

ಫಿರ್ಕಾ ಡಿವೆಲಪ್‌ಮೆಂಟ್ ಸಭೆಯು ಇದೇ ತಾ. 10ರಲ್ಲಿ ಜಿಲ್ಲಾ ಕಲೆಕ್ಟರ್ ಶ್ರೀ ಎ. ಆರ್. ರಾಜರತ್ನಂ ಅವರ ಅಧ್ಯಕ್ಷತೆಯಲ್ಲಿ ಜರಗಿತು.

ಹಿರಿಯಡಕ—ಸ್ಥಳೀಯ ಗಾಂಧಿ ಮೈದಾನಿನಲ್ಲಿ ಇದೇ ತಾ. ೯ರಲ್ಲಿ ಸಂಜೆ ಋಷಿ ಬೋಧೋತ್ಸವವು ಶ್ರೀ ಬಿ. ಮಹಾಬಲ ಸೆಟ್ಟರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀಗಳಾದ ಲಕ್ಷ್ಮೀನಾರಾಯಣ ನೆಲ್ಲಿ, ಮಂಜುನಾಥ ಶೆಣೈ, ಗಣಪಯ್ಯ ಸೆಟ್ಟಿ, ಎಮ್. ಅನಂತ ಶೆಣೈ ಮೊದಲಾದವರು ಶ್ರೀ ದಯಾನಂದ ಸರಸ್ವತಿಯವರ ತತ್ವವಿಚಾರಗಳನ್ನೆತ್ತಿ ಮಾತನಾಡಿದರು.

ಪುತ್ತೂರು—ಕೆಳನಾಡು ಮತ್ತು ನಾಲೆತ್ತೂರು ಗ್ರಾಮಗಳ ಬಗ್ಗೆ ಕೊಳನಾಡಿನಲ್ಲಿ ಒಂದು ಟಪ್ಪಾಲು ಕಟ್ಟೆಯು ಕಳೆದ ತಾ. 28ರಲ್ಲಿ ತೆರೆಯಲಾಗಿದೆ.

ಕಿನ್ನಿಗೋಳಿ—ಇದೇ ತಾ. 3ರಲ್ಲಿ ಸಂಜೆ ಇಲ್ಲಿಯ ಇಂಪೀರಿಯಲ್ ಟೂರಿಂಗ್ ಟಾಕೀಸ್ ಇದರ ಉದ್ಘಾಟನಾ ಸಮಾರಂಭವನ್ನು ಶ್ರೀ ಎಸ್. ಎಸ್. ಕಿಲ್ಲೆಯವರು ನೆರವೇರಿಸುತ್ತಾ ಚಲಚ್ಚಿತ್ರಗಳಿಂದ ಜನತೆ ಪಡೆಯಬಹುದಾದ ಪ್ರಯೋಜನಗಳನ್ನು ವಿವರಿಸಿದರು. ಜಿಲ್ಲಾ ಬೋರ್ಡ್ ಮೆಂಬರ್ ಡಾ। ಚೆಂಪನವರು ಧನ್ಯವಾದಗಳನ್ನರ್ಪಿಸಿದರು.

ಬಸ್ರೂರು—ಹಿಂದೂ ಹೈಸ್ಕೂಲಿನ ವಾರ್ಷಿಕೋತ್ಸವದಲ್ಲಿ ಡಾ। ಭುಜಂಗ ಹೆಗ್ಡೆಯವರ ಸ್ವಸ್ತಿವಾಚನ, ಶ್ರೀಗಳಾದ ಎಚ್. ಕೋಟ್ಯಣ್ಣ ಸೆಟ್ಟಿ, ಟಿ. ಆರ್. ಶೆಣೈ, ಶ್ರೀಗಳಾದ ಎಚ್. ಲಕ್ಷ್ಮೀನಾರಾಯಣ ಕಾಮತ್ ಮೊದಲಾದವರ ಭಾಷಣಗಳಿದ್ದುವು.

ಶಂಕರನಾರಾಯಣ—ತಾ 10-3-51 ರಲ್ಲಿ ಸ್ಥಳೀಯ ಬೋರ್ಡ್ ಹಾಯರ್ ಎಲಿಮೆಂಟರಿ ಶಾಲಾ ವಠಾರದಲ್ಲಿ ದ. ಕ. ಜಿಲ್ಲಾ ಬೋರ್ಡ್ ಸದಸ್ಯರಾದ ಕುಂದಾಪುರ ವಿದ್ವತ್ ಶ್ರೀ ಕೆ. ಸೂರಪ್ಪ ಸೆಟ್ಟರ ಸನ್ಮಾನ್ಯ ಅಧ್ಯಕ್ಷತೆಯಲ್ಲಿ 'ಪ್ಲೇಫೆಸ್ಟಿವಲ್' ಉಂಟು

ಯಾಗಿ ಜರಗಿಸಲ್ಪಟ್ಟಿತು. ಪ್ರಾರ್ಥನೆ ರಾಷ್ಟ್ರಧ್ವಜಾರೋಹಣದ ಮೇಲೆ ಶಂಕರನಾರಾಯಣ, ಸಿದ್ದಾಪುರ, ಹಳ್ಳಿಹೊಳೆ, ಉಳ್ಳೂರು, ಅಂಪಾರು ಶಾಲೆಗಳ ಮಕ್ಕಳು ವಿವಿಧ ಆಟ, ಪ್ರಹಸನ, ವಿನೋದಗಳಿಂದ ಸಭಿಕರನ್ನು ಆನಂದಗೊಳಿಸಿದರು. ಶಂಕರನಾರಾಯಣ ಶಾಲಾ ಮುಖ್ಯ ಉಪಾಧ್ಯಾಯರೂ ಮಾಸ್ಟರ್ ಶೇಷಪ್ಪ ಹೆಗ್ಡೆಯೂ ಸಬ್‌ಇನ್ಸ್‌ಪೆಕ್ಟರ್ ಬಿ. ಕೆ. ಅಡಿಗಳೂ ಭಾಷಣವಿತ್ತರು. ಊರವರು ಇನಾಮುಗಳನ್ನು ತಂದು ಹಂಚಿದರು. ಸಿಹಿತಿಂಡಿ ಹಂಚಿದ ಮೇಲೆ ಅಧ್ಯಕ್ಷರು ಅಮೋಘವಾದ ಭಾಷಣವಿತ್ತರು. ಮಂಗಳ ಗೀತೆಯೊಡನೆ ಸಭೆಯು ಚದರಿತು.

ಮುಂಡ್ಕೂರು—ಇಲ್ಲಿಯ ಬೋರ್ಡ್ ಹಾ. ಎ. ಶಾಲಾ ವರ್ಧಂತಿ ಉತ್ಸವವು ತಾ 22-2-51 ರಲ್ಲಿ ಮಾನ್ಯ ಜಿಲ್ಲಾ ಕಲೆಕ್ಟರ್ ಎ. ಆರ್. ರಾಜರತ್ನಂ ಬಿ. ಎ. ಇವರ ಅಧ್ಯಕ್ಷತೆಯಲ್ಲಿ ಜರಗಿತು. ಅಂದು ಬೆಳಗ್ಗೆ ಧ್ವಜಾರೋಹಣವು ಶ್ರೀ ಡಾ। ಎಸ್. ಚಂಪ ಇವರಿಂದ ನೆರವೇರಿಸಲ್ಪಟ್ಟಿತು. ಅನಂತರ ಶಾಲಾ ಬಾಲಕರ ಆಟದ ಪಂದ್ಯಾಟಗಳು ಛದ್ಮವೇಷಗಳು ಸಂಗೀತ ಮೊದಲಾದ ವಿನೋದಗಳಲ್ಲದೆ ವಸ್ತುಪ್ರದರ್ಶನವು ಶ್ರೀ ಡಾ। ಯು. ಪಿ. ಮಲ್ಯ. ಎಂ. ಎಲ್. ಎ. ಇವರ ದಿವ್ಯಹಸ್ತದಿಂದ ನೆರವೇರಿಸಲ್ಪಟ್ಟಿತು. ಅಪರಾಹ್ನ ಘಂಟೆ 2ಕ್ಕೆ ಜಿಲ್ಲಾ ಕಲೆಕ್ಟರವರ ಅಧ್ಯಕ್ಷತೆಯಲ್ಲಿ ಗ್ರಾಮಾಭಿವೃದ್ಧಿ ಕಮಿಟಿಯ ಸಾರ್ವಜನಿಕ ಸಭೆಯು ಜರಗಿತು. ಸಾಯಂಕಾಲ ಘಂಟೆ 5ಕ್ಕೆ ಪುನಃ ಶಾಲಾವರ್ಧಂತಿ ಉತ್ಸವದ ಬಗ್ಗೆ ಸಾರ್ವಜನಿಕ ಸಭೆಯು ಕಿಕ್ಕಿರಿದು ಸೇರಿತು. ಪ್ರಾರ್ಥನಾ ನಂತರ ಮಾನ್ಯ ಜಿಲ್ಲಾ ಕಲೆಕ್ಟರರು ಶಾಲಾ ಹೊರಗಡೆ ಕಟ್ಟಲ್ಪಟ್ಟ ಭವ್ಯವಾದ ಸ್ಟೇಜಿನಲ್ಲಿ ಅಧ್ಯಕ್ಷ ಸ್ಥಾನವನ್ನು ವಹಿಸಿದರು. ಮುಖ್ಯೋಪಾಧ್ಯಾಯರಿಂದ ಶಾಲಾ ವರದಿ ವಾಚನವಾಯಿತು. ನಂತರ ಸ್ವಸ್ತಿವಾಚನ, ಸಭಿಕರ ಭಾಷಣಗಳಾದುವು. ಮಾನ್ಯ ಜಿಲ್ಲಾ ಕಲೆಕ್ಟರರು ತಮ್ಮ ದಿವ್ಯಹಸ್ತದಿಂದ ವಿದ್ಯಾರ್ಥಿ ಬಾಲಕರಿಗೆ ಇನಾಮುಗಳನ್ನು ಹಂಚಿದರು. ಶಾಲಾ ಬಾಲಕಿಯರು ಕನ್ನಡ ಸಂಗೀತ ನಾಟಕವನ್ನು, ಬಾಲಕರು ಸಂಗೀತ ಸಹಿತ

ಯಕ್ಷಗಾನ ನಾಟಕವನ್ನು ಅಲ್ಲದೆ ತುಳು ಪ್ರಹಸನವನ್ನೂ ಯಶಸ್ವಿಯಾಗಿ ಅಭಿನಯಿಸಿ ತೋರಿಸಿದ ಬಳಿಕ ರಾಷ್ಟ್ರಗೀತೆಯೊಂದಿಗೆ ಕಾರ್ಯಕ್ರಮಗಳೆಲ್ಲವೂ ಮುಕ್ತಾಯಹೊಂದಿದವು. ಅಧ್ಯಕ್ಷರು ತಮ್ಮ ಭಾಷಣದಲ್ಲಿ-ವಿದ್ಯೆಗೆ ಸಮ್ಬಂಧಪಟ್ಟ ವಿವಿಧ ಶಾಖೆಗಳಲ್ಲಿ ಮಕ್ಕಳಿಗೆ ತರ್ಬೇತು ಕೊಡಲು ಈ ಶಾಲೆಯು ತೆಗೆದುಕೊಳ್ಳುವ ಪ್ರಯತ್ನವನ್ನು ಅಭಿನಂದಿಸಿದರು.

ಕಾರ್ಕಳ ಕಾಂಗ್ರೆಸ್ ಕಮಿಟಿಯ ಉಪಚುನಾವಣೆ—ಕಾರ್ಕಳ ಸರ್ಕಲ್ ಕಾಂಗ್ರೆಸ್ ಕಮಿಟಿಯು ಒಟ್ಟು 25ಸ್ಥಾನಗಳ ಪೈಕಿ ಇನ್ನೂ 8ಸ್ಥಾನಗಳು ಖಾಲಿಯಿರುವುದರಿಂದ ಸದ್ರಿ ಸೀಟುಗಳಿಗೆ ಇದೇ ತಾ. 24ನೆ ಶನಿವಾರ ಬೆಳಗ್ಗೆ 10ಗಂಟೆಯಿಂದ ಅಪರಾಹ್ನ 2ಗಂಟೆಯ ತನಕ ಕಾರ್ಕಳ ಸರ್ಕಲ್ ಕಾಂಗ್ರೆಸ್ ಕಮಿಟಿ ಆಫೀಸಿನಲ್ಲಿ ನಾಮ ಪತ್ರಗಳನ್ನು ಪಾರ್ಟಿಗಳ ಪಂತಿಗೆ ರೂಪಾಯಿ ಒಂದು ಮತ್ತು ಚುನಾವಣೆ ರೂಪಾಯಿ ಒಂದು ಸಮೇತ ಚುನಾವಣಾ ಅಧಿಕಾರರಿಂದ ಸ್ವೀಕರಿಸಲಾಗುವುದೆಂದು ಜಿಲ್ಲಾ ರಿಟರ್ನಿಂಗ್ ಆಫೀಸರರು ತಿಳಿಸುತ್ತಾರೆ. ನಾಮ ಪತ್ರಗಳನ್ನೂ ಹೆಚ್ಚಿನ ಮಾಹಿತಿಯನ್ನೂ ಕಾರ್ಕಳ ಸರ್ಕಲ್ ಕಾಂಗ್ರೆಸ್ ಕಮಿಟಿಯಿಂದ ಪಡೆಯಬಹುದು.

ಸುಬ್ರಹ್ಮಣ್ಯ- ದ. ಕ. ಜಿಲ್ಲೆಗೆ ಶ್ರೀ ಶೃಂಗೇರಿ ಮಠದ ಧರ್ಮಾಧಿಕಾರಿಗಳ ಆಗಮನ—ಕಳೆದ ವ್ಯಯ ಸಂವತ್ಸರದಲ್ಲಿ ಶ್ರೀ ಕುಕ್ಕೆ ಸುಬ್ರಹ್ಮಣ್ಯ ಕ್ಷೇತ್ರದಲ್ಲಿ ಶ್ರೀ ಚಂದ್ರ ಮೌಳೀಶ್ವರ ದೇವತಾ ಪ್ರತಿಷ್ಠೆ ನಡೆಸಲು ಏರ್ಪಾಡಾಗಿತ್ತು. ಕಾರಣಾಂತರದಿಂದ ಆಗ ಕಾರ್ಯವು ನಿಂತುಹೋಯಿತು. ಮುಂಬರುವ ಖರ ಸಂವತ್ಸರದ ವೈಶಾಖ ಮಾಸದಲ್ಲಿ ಪ್ರತಿಷ್ಠೆ ಮಾಡಿಸಲು ಶ್ರೀ ಜಗದ್ಗುರು ಮಹಾಸ್ವಾಮಿಗಳವರು ಅಪ್ಪಣೆ ಮಾಡಿದಂತೆ ಶ್ರೀ ಮಠದ ಧರ್ಮಾಧಿಕಾರಿಗಳಾದ ವೇ. ಬ್ರ। ವಿದ್ವಾನ್ ಪಂಡಿತ ಕೆ. ಶೇಷ ಶಾಸ್ತ್ರಿಗಳವರು ಬ್ರಹ್ಮ ಮಾಸಕ್ಕೆ ಪುತ್ತೂರು ತಾಲೂಕಿಗೆ, ಶ್ರೀ ಮಠದ ಶಿಷ್ಯ ಜನರ ಧಾರ್ಮಿಕ ಯೋಗಕ್ಷೇಮದ ವಿಚಾರಕ್ಕಾಗಿ ಮತ್ತು ಕಾ

ಣಿಕೆ ವಸೂಲಿ ಇತ್ಯಾದಿ ಕಾರ್ಯಗಳಿಗಾಗಿ ಬರಲಿರುವರು ಎಂದು ಜಿಲ್ಲಾ ಮಠ ಮುದ್ರಾಧಿಕಾರಿಗಳಾದ ಡಾ। ಐ. ಕೆ. ಟಿ. ಶರ್ಮರು ತಿಳಿಸುತ್ತಾರೆ.

ಬಾರ್ಕೂರು:—ಇಲ್ಲಿಯ ಶ್ರೀ ಪಂಚಲಿಂಗೇಶ್ವರ ದೇವಸ್ಥಾನದ ರಥೋತ್ಸವ ಕಾರ್ಯಕ್ರಮಗಳು ತಾ 7-4-51 ರಲ್ಲಿ ಪ್ರಾರಂಭವಾಗಿ ತಾ 14-4-51 ರಲ್ಲಿ ಓಕುಳಿ ಉತ್ಸವ, ಅವಭೃಥಗಳಿಂದ ಕೊನೆಗೊಳ್ಳಲಿರುವುದು.

ಪುತ್ತೂರು—ದ. ಕ. ಜಿಲ್ಲಾ ಬಂಟರ ಯಾನೆ ನಾಡವ ಸಮಾಜದ ಸುಪ್ರಸಿದ್ಧ ಬಾಕ್ರಬೈಲು ಕುಟುಂಬದ ಶ್ರೀಮಾನ್ ಸರ್ವೆಕೋಡಿ ಚೆನ್ನಮ್ಮನವರು ತಮ್ಮ ಪುತ್ತೂರು ನಿವಾಸದಲ್ಲಿ ತಾ. 10-3-51 ರಲ್ಲಿ ದೈವಾಧೀನರಾದುದು ವಿಷಾದಕರವಿದೆ. ಅವರು ಹಿಂದೆ ಜಿಲ್ಲಾ ಬೋರ್ಡ್ ಸದಸ್ಯರಾಗಿದ್ದರು; ನಾಡವರು ಬಡಬಗ್ಗರಿಗೆ ಆಶ್ರಯದಾತೆಯಾಗಿದ್ದರು.

ಮುಂಬಯಿ

ಶ್ರೀ ರಜಕ ಸಂಘದ—ಹದಿನಾಲ್ಕನೇ ವಾರ್ಷಿಕ ಮಹಾ ಸಭೆಯು ತಾ. 11-3-51 ರಲ್ಲಿ ಕೋಟಿಯೋಳಗಣ 30/32 ಪೀರಹಮದ್ ರಸ್ತೆಯಲ್ಲಿ ಸಂಘದ ಅಧ್ಯಕ್ಷರಾದ ಶ್ರೀ ಎಮ್. ಡಿ. ಕುಸ್ತರ್ ಇವರ ಅಧ್ಯಕ್ಷತೆಯಲ್ಲಿ ಜರಗಿತು. ಸಂಘದ ಹಾಗೂ ಸಮಾಜದ ಉನ್ನತಿಯನ್ನು ಬಯಸಿ ಶ್ರೀಗಳಾದ ದೇವು ಯನ್. ಸಾಲಿಯಾನ್, ಪೂವಪ್ಪ ಕೆ. ಕುಂದರ್ ಮತ್ತು ಕಾಳಪ್ಪ ಎ. ಸಾಲಿಯಾನ್, ಬಿ. ಎ. ಇವರು ಭಾಷಣವಿತ್ತರು.

ಸಹಕಾರಿ ಸಂಘಗಳಿಗೆ—
ಮುನ್ಸಿಫ್ ಕೋರ್ಟುಗಳಿಗೆ—
ವರ್ಗದಾರರಿಗೆ—ಶಾಲೆಗಳಿಗೆ-
ಬೇಕಾಗುವ ರಿಜಿಸ್ಟ್ರಿಗಳು,
ರಶೀದಿ ಪುಸ್ತಕಗಳು,
ಫಾರ್ಮುಗಳೂ, ಎಕೌಂಟ್ ಪುಸ್ತಕಗಳೂ ದೊರೆಯುತ್ತವೆ.

ನವಯುಗ ಪ್ರೆಸ್ ಉಡುಪಿ.

ಅಮೃತಾಂಜನ

ತಲೆವೇದನೆ, ಶಿರೋವೇದನೆ, ಉಳುಕು ಕುತ್ತಿಗೆ, ಭುಜ ಹಲ್ಲು ವೇದನೆಗಳಿಗೂ, ಎದೆ ನೋವು, ಘಾಯಗಳು, ಬಾತುಕೊಳ್ಳುವುದು, ಕೀಟವಿಷಮುಂತಾದವು, ಪಕ್ಷವಾತ, ಮೊಡವೆ, ಮೊದಲಾದ ಎಲ್ಲಾ ರೋಗಗಳಿಗೂ ಸಿದ್ಧೌಷಧ

REGD

ಹುಳು ಕಡ್ಡಿ ಮದ್ದು ನಮ್ಮಲ್ಲಿ ಸಿಕ್ಕುತ್ತದೆ

ಅಮೃತಾಂಜನ ಲಿಮಿಟೆಡ್

ಮದರಾಸು

ಬೊಂಬಾಯಿ ಮತ್ತು ಕಲ್ಕತ್ತ.



ಮಾರಾಟಕ್ಕೆ ಸದಾ ಸಿದ್ಧವಾಗಿವೆ.

ಎರಡರಿಂದ ಐದು ಕುದುರೆ ಶಕ್ತಿಯುಳ್ಳ ನೀರಿನ ಪಂಪುಗಳು, ತರಹೆವಾರು ಹೊಂದ ತೆಗೆಯುವ, ಸಾಗ್ವಳ್ಳಿ ಭೂಮಿಗೆ ನೀರು ಹಾಯಿಸುವ, ಕೇಂದ್ರದಿಂದ ದೂರ ಕ್ಷೇತ್ರಕ್ಕೆ ನೀರು ಚಿಮಿಕಿಸುವ ಮತ್ತು Wisconsin Clington, Petter ಎಂಜಿನಿಗಳು ನಮ್ಮಲ್ಲಿ ಮಾರಾಟಕ್ಕೆ ಸದಾಸಿದ್ಧವಿವೆ

ಹೆಚ್ಚಿನ ಮಾಹಿತಿಗೆ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ

Enquire –

Auncudur Trading Company,

Fathma Manzil, Colaba Road, **BOMBAY 5.**

ನಿಮಗಿದು ಗೊತ್ತೇ?

ನಿಮ್ಮ ಮನೆಯಲ್ಲಿ ಆಗಾಗ ಆಗಮಿಸುವ ವಾತರೋಗದ ಉಪದ್ರವಗಳಾದ- ಉದರಶೂಲೆ, ಕಟಿಶೂಲೆ, ಮೈಕೈಗಳಲ್ಲಿ ನೋವು, ಜಡತೆ, ಅಜೀರ್ಣ, ಹೊಟ್ಟೆಯುಬ್ಬರ, ಅಗ್ನಿಮಾಂದ್ಯ ಮುಂತಾದ ಎಲ್ಲಾ ಉಪದ್ರವಗಳಿಗೂ ರಾಮಬಾಣ ಯಾವುದು ಗೊತ್ತೇ? ಕಳೆದ ಇಪ್ಪತ್ತೈದು ವರುಷಗಳ ವಿಶಾಲ ಅನುಭವದಿಂದ ಸಶಾಸ್ತ್ರೀಯವಾಗಿ ತಯಾರಿಸಲ್ಪಟ್ಟ—

ಸ್ವದೇಶಿ ಔಷಧ ಭಂಡಾರ (ರಿಜಿಸ್ಟರ್ಡ್)

ಪೋ ಕುಂಜಾಲು. ದ ಕ.

ಇವರ 'ಧನ್ವಂತರೀ ಮಾತ್ರೆ'ಗಳು ಮಾತ್ರ

ಕೇವಲ ನಾಲ್ಕಾಣೆಯ ಅಂಚೆಚೀಟನ್ನು ಕಳುಹಿಸಿ ಆರು ಮಾತ್ರೆಗಳ ಒಂದು ಪ್ಯಾಕೇಟನ್ನು ಪಡೆದು ಅದರ ಶೀಘ್ರ ಪರಿಣಾಮಕಾರೀ ಗುಣಗಳನ್ನು ಕಂಡುಕೊಳ್ಳಬಾರದೇಕೆ? ಇಂದೇ ಬರೆಯಿರಿ.

NOTICE.

In the Court of the

Subordinate Judge of South Kanara

R. E. P. No 335 of 1950.
O. S. No 111 of 1945.

Between

Krishnamma Petitioner.

and

Mahalaxmi alias Padmavathamma, minor guardian adlitem Srinivasa Bhatta Respondent.

Take notice that the immovable properties situated in Ilanthila village of Puttur Taluk comprised in S. No. 95/1, 2, 3, 4, 5 and 6 will be sold in public auction in the office of the Central Nazir of the District Court of South Kanara on **18-6-1951 at 11 A. M.** The upset price has been fixed at Rs 4000 liberty to bid at the action. For conditions of the sale and for details of the property the proclamation issued in the above execution may be referred

G. K. Govinda Bhat,
Adv. for petitioner.

Mangalore, 16-3-1951.

ಸ್ವೀಕಾರ—ವಿಮರ್ಶೆ

ವಿಧಿವಿಲಾಸ

ಲೇಖಕರು, ಶ್ರೀ ಟಿ. ವಿಶ್ವನಾಥ ರಾಯರು. ಪ್ರಕಾಶಕರು ಶ್ರೀ ಮೋಹನ ರಾವ್ ವಡ್ಡಾಲಿ ಸಂಜೀವಿನೀ ಪ್ರಕಾಶನ, ಹುಬ್ಬಳ್ಳಿ. ಬೆಲೆ ರೂ ೧-೦-೦.

ಟಿ. ವಿಶ್ವನಾಥರಾಯರು ಮುನ್ನುಡಿಯಲ್ಲಿ ಇದು ತನ್ನ ಮೊದಲ ಕಾದಂಬರಿಯೆಂದು ಸೂಚಿಸಿರುತ್ತಾರೆ. 'ವಿಧಿಲೀಲೆ' ಮೊದಲ ಯತ್ನವಾದರೂ ಉತ್ತಮವಾದ ಕಾದಂಬರಿಯನ್ನು ನೀಡಬಲ್ಲ ಕಥನ ಕಲೆಯನ್ನು ಇಲ್ಲಿ ಕಾಣಬಹುದಾಗಿದೆ. ವಿಧಿವಿಲಾಸ ಆಮೂಲಾಗ್ರ ಉತ್ತಮವಾಗಿಲ್ಲ. ಕಾದಂಬರಿಯಲ್ಲಿ ಬಂದಿರುವ ಹಲವು ಪಾತ್ರಗಳು ಹಲವು ರೀತಿಯ ಸಮಸ್ಯೆಯನ್ನು ತಂದೊಡ್ಡಿ ಕಾದಂಬರಿಯ ಓಟಕ್ಕೆ ತಡೆಯಾದಂತಿದೆ. ವಿಧಿವಿಲಾಸ ಅಷ್ಟೊಂದು ಉತ್ತಮವಾಗಿಲ್ಲವೆನ್ನುವಲ್ಲ ಮುಂದೆ ಉತ್ತಮ ಬರಹವನ್ನು ಬರೆಯಬಲ್ಲ ಸಾಹಿತ್ಯಸತ್ವವನ್ನು ಕಂಡು ಶ್ರೀ ಟಿ. ವಿಶ್ವನಾಥ ರಾಯರ ವಿಚಾರದಲ್ಲಿ ಆಶೆಕಟ್ಟಿಕೊಳ್ಳಬಹುದಾಗಿದೆ.

ಪ್ರತಿಧ್ವನಿ

(ಕವಿತಾ ಸಂಗ್ರಹ) ಲೇಖಕರು ಶ್ರೀ ಬಿ. ಡಿ. ಗಣಪತಿ ಪುಸ್ತಕ ದೊರೆಯುವ ಸ್ಥಳ ಕೊಡಗು ಪ್ರೆಸ್, ಮಡಿಕೇರಿ. ಬೆಲೆ ರೂ ೧-೦-೦

ಪ್ರತಿಧ್ವನಿ ಸಾಮಾನ್ಯತರದ ಕವಿತೆಗಳ ಸಂಗ್ರಹ. ಜೀವನ ಸಂದೇಶವನ್ನು ಸಾರುವ ಹಲವು ಉತ್ತಮ ಕವಿತೆಗಳೂ ಇರುತ್ತವೆ. ಮಾನಸಿಕ ಯಾತನೆಯ ಸನ್ನಿವೇಶಗಳನ್ನು ಚಿತ್ರಿಸುವಲ್ಲಿ ಶ್ರೀ ಗಣಪತಿಯವರು ತುಂಬ ಯಶಸ್ಸನ್ನುಗಳಿಸಿದಾರೆ. ಸ್ವಾನುಭವದ ಪರಿಗಳಿಂದ ಘಾಸಿಗೊಂಡ ಅನುಭವಗಳೇ ಹೆಚ್ಚಿಂದರೂ ಸರಿಯೇ. 'ವಿಶಾಲತೆ ಇರಲಿ' 'ಪ್ರೇಮಮೂರ್ತಿ ದೇವನು' 'ಪಥಿಕ' 'ಬಡತನ' 'ಕವಿ' 'ತಾಯಿ' 'ಪ್ರೇಮವನ ಹೊಲ್ಲ' ಈ ಏಳು ಕವಿತೆಗಳು ಇತರ ಕವಿತೆಗಳಿಗಿಂತ ಉತ್ತಮವಾದವುಗಳು. ಲಲಿತವಾದ ಕಾವ್ಯಶೈಲಿಯು ಭಾವಕ್ಕೆ ಪೋಷಕವಾಗಿದೆ.

ಹರಿಜನೋದ್ಧಾರ

(ಮೂರಂಕಗಳ ನಾಟಕ) ಲೇಖಕರು: ಶ್ರೀ ಹರಿದಾಸ ವಿದ್ವಾನ್, ಪ್ರಕಾಶಕರು: ವೀಣಾ ಪ್ರಕಟಣಾಲಯ, ಶಿರ್ಸಿ. ಬೆಲೆ: 0-14-0

ಹರಿಜನೋದ್ಧಾರ ಹತ್ತು ವರ್ಷಗಳ ಹಿಂದೆ ಬರೆದುದಾಗಿದೆ. ಆಗಿನ ಪರಿಸ್ಥಿತಿಯನ್ನು ಚಿತ್ರಿಸುತ್ತದೆ. ಆಗಿನ ನಾಟಕ ಇಲ್ಲವೆ ಕತೆಗಳಲ್ಲಿ ಬ್ರಾಹ್ಮಣನನ್ನು ತಂದು ಕೆಟ್ಟಕಾರ್ಯವ ಆತನಿಂದ ಮಾಡಿಸುವುದು ವಾಡಿಕೆಯಾಗಿತ್ತು. ಹಾಸ್ಯಬೇಕಾಗಿದ್ದರೆ-ದುರ್ನಡತೆಗೆ ಕಾರಣವಾದ ಪಾತ್ರಕ್ಕೆ ಜುಟ್ಟು ಜನಿವಾರ ತೊಡಿಸಿ, ಆತನಿಂದ ಆ ಕಾರ್ಯವನ್ನು ಮಾಡಿಸುತ್ತಿದ್ದರು. ಅದೇ ನೀತಿ ಇಲ್ಲಿಯೂ ಇದೆ. ಆದರೆ ಈಗ ಅಸ್ಪೃಶ್ಯತಾ ನಿವಾರಣೆಯು ಬಹಳ ರೀತಿಯಲ್ಲಿ ಸಾಧಾರಣೆಯಾಗಿದೆ. ಬ್ರಾಹ್ಮಣನೇ ಅದಕ್ಕೆ ತಡೆ ಹಾಕುತ್ತಾನೆಂಬುದನ್ನು ನಾವು ಒಪ್ಪಿಕೊಂಡರೂ ಉಳಿದವರು ತಮ್ಮ ಗಾಂಭೀರ್ಯವನ್ನು ಬಿಟ್ಟು ಹರಿಜನರಲ್ಲಿ ಔದಾರ್ಯವನ್ನು ಈಗಲೂ ತೋರುತ್ತಿಲ್ಲವೆನ್ನುವದನ್ನು ಮರೆಯಬಾರದು. ಹರಿಜನೋದ್ಧಾರ ಕೇವಲ ನಾಟಕೀಯದೃಷ್ಟಿಯಲ್ಲಿ ರುತ್ತದೆ ಈಗಿನ ವಾತಾವರಣಕ್ಕೆ ಅಷ್ಟೇನೂ ಹೊಂದಿಕೆಯಾಗಿರುವುದಿಲ್ಲ. ಅಂತೂ 1937ರಲ್ಲಿಯ ಶ್ರೇಷ್ಠ ನಾಟಕವೆನಲಡ್ಡಿಯಿಲ್ಲ.

— ಎಸ್ಸೆಲ್

ಹಕ್ಕೀ ನೋಟ

೧ ಬಹುಧಾನ್ಯ ಸಂವತ್ಸರಸ್ಯ ಪಂಚಾಂಗಂ ('ಉಡುಪಿ ಪಂಚಾಂಗಂ') ಲೇಖಕರು:-ಅಕ್ಕೂರು ಶ್ರೀನಿವಾಸ ದೇವ ಉಡುಪರು, ಪ್ರಕಾಶಕರು:-ಶ್ರೀ ರವಿಪ್ರಸಾದ ಜ್ಯೋತಿಷಾಲಯ ಕೊಯಂಬತ್ತೂರು. ಬೆಲೆ ರೂ 0-6-0

ಹಲವು ವರ್ಷಗಳಿಂದ ಪ್ರಖ್ಯಾತಿಗೊಂಡ 'ಉಡುಪಿ ಪಂಚಾಂಗಂ' ಇದರ ಬಹುಧಾನ್ಯ ಸಂವತ್ಸರದ ಪಂಚಾಂಗವು ಎಂದಿನಂತೆ ಅತ್ಯಮೂಲ್ಯವಾಗಿರುತ್ತದೆ. ಇದು ಕನ್ನಡದಲ್ಲಿ ಜನಪ್ರೀತವಾಗಿರುವುದು ಮಾತ್ರವಲ್ಲದೆ ತಮಿಳಿನಲ್ಲಿಯೂ ಜನಾನುರಾಗವನ್ನು ಗಳಿಸಿರುತ್ತದೆ. ಸುಂದರವೂ ಅತ್ಯಂತ ಪರಿಶುದ್ಧವೂ ಆದ ಪ್ರಭಾಕರ ಮುದ್ರಣಾಲಯದವರ ಕಲೆಯನ್ನು ಶ್ಲಾಘಿಸಬೇಕಾಗಿದೆ. ಸರ್ವವಿಷಯವನ್ನೊಳಗೊಂಡ ಈ ಪಂಚಾಂಗಕ್ಕೆ ಇಟ್ಟಿರುವ ಬೆಲೆ 0-6-0 ಕಮ್ಮಿಯೆಂದೇ ಹೇಳಬೇಕು. ಇಷ್ಟು ಶ್ಲಾಘಿಸುವಾಗ ಉತ್ತಮ ಪಂಚಾಂಗದಲ್ಲಿ ಕಾಣಬರುವ ಒಂದೇ ಒಂದು ದೋಷವನ್ನು ಹೇಳಬೇಕಾಗಿದೆ. ಅದೆಂದರೆ ಜಲಂಧರ ಸಿಟಿಯ ಹೊಲಸು ಜಾಹೀರಾತುಗಳ ಪ್ರಕಟನೆ ಜನತೆಯಲ್ಲಿ ತಪ್ಪುಕಲ್ಪನೆಯನ್ನುಂಟುಮಾಡಿ ದುಮಾರ್ಗಕ್ಕೆ ಹಚ್ಚುವ ಇಂತಹ ಜಾಹೀರಾತುಗಳು ಹೆಚ್ಚಾಗಿ ಎಲ್ಲ ಪತ್ರಿಕೆಗಳಲ್ಲಿರುವದಾದರೂ ಉಡುಪಿಯ ಪಂಚಾಂಗದಂತಹ ಅತ್ಯಮೂಲ್ಯ ಸಂಗ್ರಹದಲ್ಲಿರುವದು ನಿಜವಾಗಿಯೂ ಸೋಜಿಗದ ಸಂಗತಿ. ಶ್ರೀ ಉಡುಪರು ಮುಂದಿನ ವರ್ಷ ಈ ಕುಂದವನ್ನು ನಿವಾರಿಕೊಳ್ಳಲೆಂದು ಸೂಚಿಸುತ್ತೇವೆ.

೨ ವರ್ಧಂತ್ಯುತ್ಸವದ ವರದಿ (ಬಸ್ರೂರು ಹಿಂದೂ ಎಯ್ಡೆಡ್ ಹಾಯರ್ ಎಲಿಮೆಂಟರಿ ಶಾಲಾ) ಅಧ್ಯಕ್ಷ:-ಶ್ರೀ ಡೇನಿಸ್ ಪಿಂಟೋ.

ಬಸ್ರೂರ್ ಹಿಂದೂ ಸ್ಕೂಲ್ ಎಸೋಸಿಯೇಶನವರ ನೇತೃತ್ವದಲ್ಲಿ ನಡೆಯುವ ಮೇಲಿನ ಶಾಲೆಯು ಸಾಧಿಸಿದ ಪ್ರಗತಿಯು ವರದಿಯು ನಮ್ಮ ಕೈಸೇರಿದೆ. ಶಾಲೆಯು ನಾನಾ ಮುಖದ ಚಟುವಟಿಕೆಗಳನ್ನು ನಾವು ಶ್ಲಾಘಿಸುತ್ತೇವೆ.

೩. ಗಂಗಯ್ಯಸ್ಮಾರಕ ಫಂಡು (ಏಪ್ರಿಲ್ ೧೯೩೭ರಿಂದ ಮಾರ್ಚ್ ವರದಿ) ಸಂಚಾಲಕರು ಮಿತ್ರಪಟ್ಟಿ ಮೊಗವೀರ ಸಭಾ ಮುಂಬಯಿ.

ರಾತ್ರಿ ಶಾಲೆಯ ಮೂಲಕ ಧರ್ಮಾರ್ಥ ವಿದ್ಯಾಪ್ರಚಾರ-ಗ್ರಾಮದವರ ಹಿತಾರ್ಥ ಸಾರ್ವಜನಿಕ ವಾಚನಾಲಯ-ಭಗವದ್ಭಕ್ತಿಯ ಪ್ರೇರಕವಾಗಿ ಶ್ರೀರಾಮ ಭಜನಾ ಕಾರ್ಯವೇ ಮೊದಲಾದ ಉತ್ತಮ ಧ್ಯೇಯವನ್ನಿಟ್ಟುಕೊಂಡು ಕಾರ್ಯಮಾಡುತ್ತಿರುವ ಮೊಗವೀರ ಸಭಾದವರ ಎಂಟನೆಯ ವರ್ಷದ ವರದಿಯು ಆಶಾದಾಯಕವಾಗಿದೆ.

ನವೋದಯ—ವಿದ್ಯಾದಾಯಿನೀ ಹೈಸ್ಕೂಲ್ ವಿದ್ಯಾರ್ಥಿ ಸಂಸ್ಥೆಯ ಪತ್ರಿಕೆ, ವಿದ್ಯಾದಾಯಿನೀ ಹೈಸ್ಕೂಲ್ ಸುರತ್ಕಲ್.

ವಿದ್ಯಾದಾಯಿನೀ ಹೈಸ್ಕೂಲಿನ ವಿದ್ಯಾರ್ಥಿಗಳ ಈ ಸಂಚಿಕೆ ಅತ್ಯಂತ ಸುಂದರವಾಗಿದೆ. 'ಇದು ನುರಿತ ಲೇಖಕರ ಪತ್ರಿಕೆಯಲ್ಲ; ಹಳ್ಳಿಯ ಹದಿನಾರು ವರ್ಷದವರ ಬರಹ. ಅಷ್ಟೇನೂ ಒಳ್ಳೆದಿದ್ದೀತೆಂಬ ಹೆಮ್ಮೆ ನಮಗಿಲ್ಲ' ವೆನುವಂತೆ ಬರೆದಿದ್ದಾರೆ ಸಂಪಾದಕರು. ಸಂಚಿಕೆಯನ್ನು ಮೊದಲಿಂದ ತುದಿಯ ತನಕ ಓದಿದ ನಮಗೆ ಅಷ್ಟು ಎಳೆಯರು ಇಷ್ಟು ಬರೆಯಬಲ್ಲರೇ? ಎನುವ ಶಂಕೆ ಮೂಡುತ್ತದೆ. ವಿದ್ಯಾದಾಯಿನಿಯವರ ಈ ಕಾರ್ಯವನ್ನು ತುಂಬಾ ಶ್ಲಾಘಿಸುತ್ತೇವೆ.

ಮೂಲ್ಕಿ ಬೇಂಕ್,
ಲಿಮಿಟೆಡ್, ಮೂಲ್ಕಿ

1929ರಲ್ಲಿ ಸ್ಥಾಪಿತವಾಗಿ 21 ವರುಷಗಳಿಂದ ಊರ ಜನರ ಹಿತಕ್ಕಾಗಿ ಡಿಪೋಸಿಟ್ ಹಣಕ್ಕೆ ನ್ಯಾಯವಾದ ಬಡ್ಡಿಯಿಂದಲೂ, ಸಾಲದ ಹಣಕ್ಕೆ ಅತೀ ಕಡಿಮೆ ದರದ ಬಡ್ಡಿಯಿಂದಲೂ ಜನ ಹಿತಸಾಧಯನ್ನು ಮಾಡುತ್ತಿರುವುದು

The Moolky Bank Ltd.,
Moolky, S. K.

ಜಗತ್ಪ್ರಸಿದ್ಧ ಕಾದಂಬರಿ
'ಫಂಟಮಾರಾ'
ಕನ್ನಡದಲ್ಲಿಯೂ ಇದೆ.

ಬರೆದುದು: ಇಗ್ನೇಜಿಯೋ ಸಿಲೋನೆ,
ಅನುವಾದಿಸಿದುದು: ಕು. ಶಿ. ಹರಿದಾಸ ಭಟ್ಟ
ಬೆಲೆ: ಎರಡು ರೂಪಾಯಿ

'ಈ ಶತಮಾನದ ಅತ್ಯಂತ ಮರ್ಮಸ್ಪರ್ಶಿ ಕಾದಂಬರಿಗಳಲ್ಲೊಂದು... ..'
—ಕರ್ಮವೀರ.

'ಅವಮಾನದಿಂದು, ಅನ್ಯಾಯದಿಂದು ಯಾರೂ ತಗ್ಗಿ ನಡೆಯಬಾರದು ಎಂಬ ಧೀರವಾಣಿ ಸಿಲೋನೆಯದು'
—'ಸಂಗಾತಿ'

'......ಅಂಥ ಕೆಟ್ಟನ ಲೇಖನಿಯನ್ನು ಕನ್ನಡದ ವಾಣಿಯಲ್ಲಿ ಅದ್ದಿ ಶ್ರೀಮಾನ್‌ಭಟ್ಟರು ಈ ಅನುವಾದವನ್ನು ಮೂಲಗ್ರಂಥಕ್ಕೆಚ್ಯುತಿ ಇಲ್ಲವಂತೆ ಮಾಡಿದ್ದಾರೆ'
—'ಚಿತ್ರಗುಪ್ತ'

'ಎಲ್ಲರಿಗೂ ತಿಳಿಯುವಂತೆ ಸುಲಭ ಶೈಲಿಯಲ್ಲಿ ಕನ್ನಡಿಸಲಾಗಿದೆ. ರಾಜಕೀಯದಲ್ಲಿ ದುಡಿಯುವವರು, ರೈತರೊಂದಿಗೆ ಕೆಲಸಮಾಡುವವರು ಎಲ್ಲರೂ ಓದಲೇಬೇಕಾದ ಪುಸ್ತಕ'
—'ವಿಮರ್ಶಕ'

'K. S. Haridasa Bhat has done well in Translating silone's classic work 'FONTAMARA' into kannada. He might be said to have done it well too.'

'Bharat Jyothi'

'Mr. Haridasa Bhat has done the rendering so well that the characteristic futures of the original have been successfully reproduced. Mr. Bhat and the publishers anb to be Congratulated'

'Indian Express'

ಅಂದ ಮೇಲೆ ಇಂದೇ ಬರೆಯಿರಿ.
ನವಭಾರತ ಪುಸ್ತಕಭಂಡಾರ, ಉಡುಪಿ.

Nambiar's
ARYA VAIDYA SALA
UDIPI
Ideal House for Ayurvedic Treatment.
T. N. Kelu Nambiar,
Vaidya.

"ಗೋಪಾಲ ಭೇಷಜಾಶ್ರಮ" ಮಂಗಳೂರು.
(ಸ್ಥಾಪನೆ 1910)
ಸ್ಥಾಪಕರು-ಆಯುರ್ವೇದ ಭೂಷಣ ಯಂ. ವಿ. ಶಾಸ್ತ್ರೀ,

ಬಾಣಂತಿಯರ ಸಲುವಾಗಿಯೇ ದೇಶ ಮತ್ತು ಪ್ರಕೃತದ ದೇಹಸ್ಥಿತಿಯನ್ನು ನಿರ್ಣೈಸಿ ತಯಾರಿಸಲ್ಪಟ್ಟ ಅಮೋಘವಾದ ಮಧುರದ್ರವ ರಸಾಯನ. ಅಲ್ಪ ಮೂಲ್ಯದಿಂದ ಬಡವರಿಗೂ, ಭಾಗ್ಯಶಾಲಿಗಳಿಗೂ ಸುಲಭವಾಗಿರುವುದು.

ಇವರ ನವಜೀವಾತು ಎಂಬ ಸೂತಿಕಾ ರಸಾಯನ



ಹೆಚ್ಚಿನ ಮಾಹಿತಿಗೆ—ಡಾ। ಯಂ. ಸಿ ಶಾಸ್ತ್ರೀ, ಯಲ್. ಐ
ಕೊಡಿಯಾಲಬೈಲ ಪೋಸ್ಟು, (ಮಂಗಳೂರು)
ಸ್ವಾತಿಕಸ್ತರು:—ಡಾ। ಎ. ಕೆ. ಶಿವರಾಮರಾವ್, ಕುಂಜಿಬೆಟ್ಟು, ಉಡುಪಿ.

ವಾರದ ವರದಿ

ರಾಶಿ ಫಲದ ವಿಷಯ ಈ ಸಲದ ಲೇಖ ಬರೆಯುವುದಾಗಿ ಕಳೆದವಾರ ಹೇಳಿದ್ದೆ. ರಾಶಿ ಫಲ ಪತ್ರಿಕೆಗಳಲ್ಲಿ ಕೊಡುವುದು ಸುಧಾರಕರ ಅಥವಾ ವಿಚಾರಿಗಳ ಪತ್ರಿಕೆಯ ಲಕ್ಷಣವಲ್ಲವೆಂದೂ ನನ್ನ ಅಭಿಪ್ರಾಯವಿತ್ತು. ಏನೋ ವಾಚಕರ ಗ್ರಹಚಾರದಿಂದಾಗಿ ಪತ್ರಿಕೆಗಳೆಲ್ಲಾ ಒಂದೊಂದಾಗಿ ರಾಶಿಫಲ ಕೊಡಲಾರಂಭಿಸಿದವು. ನಮ್ಮ ನವಯುಗವು ತಾನು ವಿಚಾರಿಗಳ ಪತ್ರಿಕೆ- ರಾಶಿಫಲದಗೊಡವೆ ನಮಗೆ ಬೇಡವೆಂದು ಗಟ್ಟಿಯಾಗಿ ಕುಳಿತುಕೊಂಡಿತ್ತು. ಅದೂ ಕ್ರಮೇಣ ಒಂದು ಪುಟವನ್ನು ರಾಶಿಫಲಕ್ಕಾಗಿ ತೆಗೆದಿಟ್ಟಿತು. 'ಏನು ಸಂಪಾದಕರೇ' ನಿಮಗೂ ಈ ಗ್ರಹಚಾರ ಹಿಡಿಯಿತೇ? ಎಂದು ನಾನೊಮ್ಮೆ ಕೇಳಿದೆ- ಏನು ಮಾಡುವುದು ಸ್ವಾಮೀ ರಾಶಿಫಲವಿಲ್ಲದ ಪತ್ರಿಕೆ ವಾಚಕರಿಗೆ ಬೇಡವಾಗಿದೆ ಎಂದು ಅವರು ಉತ್ತರ ಕೊಟ್ಟರು. ವಾಚಕರನ್ನು ಸುಧಾರಿಸಿ ವಿಚಾರ ಮಾರ್ಗದಲ್ಲಿ ನಡೆಯಿಸಿಕೊಂಡು ಹೋಗುವುದು ಪತ್ರಿಕೆಗಳ ಕರ್ತವ್ಯವಾದರೂ, ಆದರೆ ಪತ್ರಿಕೆಗಳನ್ನು ವಾಚಕರು ಕೊಂಡು ಕೊಂಡು ಓದಬೇಕಾದರೆ ಅವರಿಗೆ ಬೇಕಾದುದನ್ನು ಪತ್ರಿಕೆಗಳು ಒದಗಿಸಿ ಕೊಡಬೇಕು. ಅಂಧ ಶ್ರದ್ಧೆಯನ್ನು ಹೋಗಲಾಡಿಸಿ ಜನರನ್ನು ವಿಚಾರ ಮಾರ್ಗಕ್ಕೆ ತರುವಸಾಧನ ಪತ್ರಿಕೆಗಳು. ವಿಚಾರ ಮಾರ್ಗದಲ್ಲಿರುವವರನ್ನು ಕ್ರಮೇಣ ಅಂಧ ಶ್ರದ್ಧೆಗೆ ಎಳೆದು ಕೊಂಡು ಹೋಗುವ ಕಾರ್ಯವೂ ಪತ್ರಿಕೆಗಳಿಗೆ ಸಿಗಬೇಕೇ? ಇದು ಗ್ರಹಚಾರವಲ್ಲದೆ ಮತ್ತೇನು!

ಇದನ್ನೆಲ್ಲಾ ನೋಡಿ ನಮ್ಮ ವಾಚಕರು ಸದಾ ಓದಿ ತಿಳಿದುಕೊಳ್ಳುವಂತೆ ನಾನೂ ಒಂದು ಹೊಸ ರೀತಿಯ ರಾಶಿಫಲ ಬರೆಯಬೇಕೆಂದಿದ್ದೇನೆ. ಈ ಕ್ರಮದಲ್ಲಿಯೂ ಮನುಷ್ಯ ಪ್ರಾಣಿಗಳನ್ನು (ಕ್ಲಾಸಿಫೈ) ಅವರ ಸ್ವಭಾವಕ್ಕನುಸಾರವಾಗಿ ಹನ್ನೆರಡು ರಾಶಿಗಳನ್ನಾಗಿ ವಿಭಾಗಿಸುತ್ತೇನೆ. ಗುಣ ಕರ್ಮ ವಿಭಾಗದಿಂದ ಶ್ರೀ ಕೃಷ್ಣಪರಮಾತ್ಮನು ಭಾರತದ ಹಿಂದುಗಳನ್ನು ಬ್ರಾಹ್ಮಣ ಕ್ಷತ್ರಿಯ ಹೀಗೆಂದು ನಾಲ್ಕು ವರ್ಣದವರನ್ನಾಗಿ ಮಾಡಿದನಷ್ಟೆ. ಹಾಗೆ ಸ್ವಭಾವ ಗುಣ ಈ ವಿಧದಿಂದ ನಾನು ಹನ್ನೆರಡು ರಾಶಿಗಳನ್ನಾಗಿ ಮಾಡಿಟ್ಟಿದ್ದೇನೆ ಇದನ್ನು ಓದುವ ಮೊದಲು ನೀವು ಯಾವ ರಾಶಿಗೆ ಸೇರಿದವರೆಂದು ನೀವು ನಿಮ್ಮ ಸ್ವಭಾವವನ್ನು ತಿಳಿದುಕೊಂಡು ಯೋಚಿಸಿ ಗೊತ್ತುಮಾಡಿಕೊಳ್ಳಬೇಕು. ಒಂದು ವೇಳೆ ಇದು ನಿಮ್ಮಿಂದ ಆಗದೆ ಹೋದರೆ (ಸಕೆಂಡರಿ ಅನೇಕರಿಗೆ ಅವರ ಸ್ವಭಾವ ಹೀಗೆಂದು ತಿಳಿದಿರುವುದಿಲ್ಲ) ನಿಮ್ಮ ಆಪ್ತರ ಕೂಡೆ ಕೇಳಿ ತಿಳಿದುಕೊಳ್ಳಬೇಕು.

ಮೊದಲನೆಯದಾಗಿ ಅಂದರೆ ನೂರರಲ್ಲಿ ಎಂಭತ್ತು ಜನ ಮೇಷ ರಾಶಿಯವರು. ಇವರಿಗೆ ಸ್ವಂತ ವಿಚಾರವೆಂದಿಲ್ಲ. ಇತರರನ್ನು ಹಿಂಬಾಲಿಸುವುದೇ ಅವರ ಸ್ವಭಾವ. ತಮ್ಮನ್ನು ಸಗ್ಗದಾಕಿ ಎಳೆದುಕೊಂಡು ಹೋಗುವವನು ತನ್ನ ಸ್ವಪ್ರಯೋಜನಕ್ಕಾಗಿ ಮಾರಿಗುಡಿಗೆ ಕರೆದು ಕೊಂಡುಹೋದರೂ ಅವರು ಅವನನ್ನು ಹಿಂಬಾಲಿಸುತ್ತಾರೆ. ಮತ್ತು ಅವನು ಹಾಡಿದ 'ಜಯ'ಗೆ ಕುಣಿದು ಕುಪ್ಪಳಿಸಿಕೊಂಡು ಹಾಡುತ್ತಾರೆ. ಈ ರಾಶಿಯವರಿಗೆ ಸ್ವಂತ ಅಭಿಪ್ರಾಯವೆಂದಿಲ್ಲ' ಯಾರನ್ನು ಎಲ್ಲರೂ ಹೊಗಳುತ್ತಾರೋ ಅಂತವರನ್ನು ಅವರೂ ಹೊಗಳುತ್ತಾರೆ. ಯಾರನ್ನು ಎಲ್ಲರೂ ದೂರುತ್ತಾರೋ ಅಂತವರನ್ನು ಈ ರಾಶಿಯವರು ದೂರುತ್ತಾರೆ. ಭೂಲೋಕದಲ್ಲಿ ಮೇಷರಾಶಿಯ ಮನುಷ್ಯ ಪ್ರಾಣಿಗಳು ಯಥೇಷ್ಟವಾಗಿ ಇರುವುದರಿಂದಲೇ ಪ್ರಪಂಚ ನಡೆಯುತ್ತದೆ. ವ್ಯಾಪಾರ ವಹಿವಾಟುಗಳು ಮಂತ್ರ ಮಾಯೆ ಎಲ್ಲವೂ ನಡೆಯುತ್ತದೆ. ಇವರನ್ನು ನೋಡಿಕೊಂಡೆ ಬುದ್ಧಿವಂತರು ಬದುಕುತ್ತಾರೆ.

ನೂರರಲ್ಲಿ ಇನ್ನು ಹತ್ತು ಮಂದಿ ವೃಷಭ ರಾಶಿಯವರು. ಅವರಿಗೆ ತಮ್ಮ ಆವಿಷ್ಕೆ ಅಶ್ರುತಿ ತಿಳಿದಿರುವುದಿಲ್ಲ. ತಾವು ಪ್ರತಿಷ್ಠೆಯುಳ್ಳ ರು ತಾವು ಯಾರನ್ನು ಎದುರಿಸಲು ಶಕ್ತರು ತಾವು ಯಾರಿಗೆ ಹೇಗೆ ಒಗ್ಗಿನಡೆಯಬೇಕು ಎಂಬ ದೇಹಬಲ ಅವರ ತಲೆಯಲ್ಲಿ ತುಂಬಿಕೊಂಡಿದೆ. ಆದರಿಂದ! ಅವರು ಹಾಳಾಗುತ್ತಿರುವುದು ಅವರಿಗೆ ತಿಳಿಯುವುದೇ ಇಲ್ಲ. ನಮ್ರತೆ ವಿವೇಕ ಎಂಬುದು ಅವರಿಗೆ ತಿಳಿಯದು. ಎದುರಾಗಿ ಬಂದವರನ್ನು ಕಾದಾಡಿ ಕಾದಾಡಿ ತಮ್ಮ ಕೊಂಬುಗಳನ್ನು ಮುರಿದುಕೊಳ್ಳುವ ಸ್ವಭಾವ ಈ ವೃಷಭ ರಾಶಿಯವರದು.

ಇನ್ನು ನೂರರಲ್ಲಿ ಉಳಿದ ಹತ್ತು ಮಂದಿ ಹತ್ತು ರಾಶಿಗೆ ಸೇರಿದವರು ಸ್ವಲ್ಪ ಪ್ರಯತ್ನ ಮಾಡಿ ಇವರಲ್ಲಿ ಮಿಥುನ ಕರ್ಕಾಟಕ ಸಿಂಹ ಕನ್ಯಾ ತುಲಾ ವೃಶ್ಚಿಕ, ಧನು ಮಕರ ಕುಂಭ ಮೀನ ಈ ರಾಶಿಯವರನ್ನು ಹುಡುಕಿ ತೆಗೆಯಬಹುದು. ಉದಾಹರಣೆಯಾಗಿ ಎಷ್ಟು ಕಷ್ಟಬಂದರೂ ಅಲ್ಪ ಕಾರ್ಯಕ್ಕೆ ಮನಸ್ಸು ಕೊಡದೆ ಗಂಭೀರವಾಗಿ ನ್ಯಾಯಮಾರ್ಗ ನಡೆಯುವ ಸಿಂಹ ರಾಶಿಯವರೂ ಎಲ್ಲವನ್ನೂ ವ್ಯಾಪಾರ ದೃಷ್ಟಿಯಿಂದಲೇ ನೋಡಿಕೊಂಡು ಯಾರಿಂದಲೂ ಲಾಭಹೊಂದಬೇಕೆನ್ನುವ ತುಲಾ ರಾಶಿಯವರೂ ಬೇರೆಯವರು ಎಂತಹ ಉಪಕಾರ ಮಾಡಿದರೂ ಅದನ್ನೆಲ್ಲಾ ಮರೆತು ತನಗೆ ಸಂದರ್ಭಬಂದಾಗ ಕಚ್ಚಲುಸಿದ್ಧರಿರುವ ವೃಶ್ಚಿಕ ರಾಶಿಯವರನ್ನು ಎಲ್ಲೆಲ್ಲಿಯೂ ಮೊದಲು ಸ್ವಭಾವವನ್ನು ಅಡಗಿಸಲಾರದ ಧನು ರಾಶಿಯವರನ್ನು ಯಾರ ಮೇಲೂ ಸಹಾನುಭೂತಿ ವಾಕ್ಯವಿಲ್ಲದೆ ಇತರ ದುಃಖದಲ್ಲಿ ತಾನೂ ಸಹಭಾಗಿಯಾಗಿದ್ದೇನೆಂದು ತೋರಿಸಿಕೊಳ್ಳುವ ಮಕರ ರಾಶಿಯವರನ್ನು ಯಾರ ಕೈಗೂ ಸಿಕ್ಕದೆ ತಾನು ತಪ್ಪಿಸಿಕೊಳ್ಳುವ ಸಮಯ ಸಂಭವದಲ್ಲಿ ಇತರ ಬಲೆಗೆ ಬಿದ್ದು ನರಳುವ ಮೀನ ರಾಶಿಯವರನ್ನು ನಾವು ನೋಡುತ್ತೇವೆ. ಆದರೆ ಮೇಲೆ ಹೇಳಿದ ರಾಶಿಗಳಲ್ಲಿ ತಾನು ಸ್ವತಃ ಯಾವ ರಾಶಿಗೆ ಸೇರಬೇಕಾದ ಪ್ರಾಣಿಯೆಂಬುದನ್ನು ತಿಳಿದುಕೊಳ್ಳಬೇಕು. ನಮ್ಮ ಸ್ವಭಾವವನ್ನು ನಾವು ತಿದ್ದಲಿಕ್ಕೆ ಪ್ರಯತ್ನ ಮಾಡಬೇಕು. ಸ್ವಭಾವವನ್ನು ತಿದ್ದುವುದು ಎಲ್ಲರಿಗೂ ಸಾಧ್ಯವಿದೆ ಹುಟ್ಟಿದಗಳಿಗೆಯೋ ನಮ್ಮ ರಾಶಿಯನ್ನು ನಿರ್ಣಯಿಸುವುದಿಲ್ಲ.

ನಮ್ಮ ಜನರಲ್ಲಿ ರಾಶಿ ಫಲನೋಡುವ ಹುಚ್ಚು ಹೋಗುವವರೆಗೆ ಕೆಲ ಜನರು ಎಂದೂ ಮುಂದೆ ಬರಲಾರರು. ಪತ್ರಿಕೆಗಳಿಗೆ ಸಾಕಷ್ಟು ಚಂದಾದಾರರು ಸಿಕ್ಕದ ಈ ಕಾಲದಲ್ಲಿ ಪಾರಮಾರ್ಥಕ್ಕೆ ಒಂದು ಸ್ಥಾನಕೊಡುತ್ತ — ಶಿಷ್ಟರಿಗೆ ಹಾಗೂ ವಿಚಾರವಂತರಿಗೆ ವಿಚಾರಿಗಳಿಗೆಲ್ಲಾ ವ್ಯಸನದ ವಿಷಯ. ವಾಚಕರು ನಮ್ಮ ನವಯುಗ ಸಂಪಾದಕರಕೂಡೆ ಸಿಟ್ಟಾಗಬೇಡಿ. ನವ ರಾಶಿಫಲದ ಹುಚ್ಚಿಲ್ಲ. ಆದಕ್ಕಾಗಿ ಹಾಳುಗುತ್ತಿರುವ ಒಂದು ಪುಟವು ಯೋಗ್ಯ ಅವಶ್ಯ ವಿಷಯಗಳಿಗಾಗಿ ದೊರೆಯಲಿ ಎಂದು ಏಕೆ ಸ್ಪಷ್ಟವಾಗಿ ಹೇಳಬಾರದು

ಸ್ವಲ್ಪ ಬಂಡವಾಳದಲ್ಲಿ

ಒಂದು ಉಪಯುಕ್ತ ಹಾಗೂ ಲಾಭಕರ ಉದ್ಯೋಗ.

ಸೋ ವಿಲ್, ಎಣ್ಣೆಯ ಪಿಲ್ ಅಥವಾ ಟಿನ್ ಯಾ ತಗಡಿನಿಂದ ಅನೇಕ ವಸ್ತುಗಳನ್ನು ಸುಲಭದಲ್ಲಿ ತಯಾರಿಸಿರಿ.

ವಿವರದ ಬಗ್ಗೆ ಬರೆಯಿರಿ:

The Vijay Engineering Co. Ltd

Mazagaon. **Bombay 10-**

ಅಳಿಯ ಸಂತಾನ ಮತ್ತು ಹಿಂದೂ ಕೋಡು

ತಾ. 8-3 5,ನೇ ನವಯುಗ ಪತ್ರಿಕೆಯಲ್ಲಿ ಶ್ರೀ ಭಾಸ್ಕರ ರೈಗಳವರ ಪ್ರಕಟಣೆಯಲ್ಲಿ ಅಳಿಯ ಸಂತಾನ ಬದಲು ಕಾರಣರಾದ ಕೆಲವರನ್ನು ಉದ್ದೇಶಿಸಿ ಬರೆದಂತೆ ಕಾಣುತ್ತದೆ.

1932ರ ಲಾಗಾಯ್ತು 1949ರ ವರೆಗೆ ಈಗಿನ ಅಳಿಯ ಸಂತಾನ ಆಕ್ಟು ಜಾರಿಗೆ ಬರುವರೆ ಪ್ರಯತ್ನಿಸಿದವರಲ್ಲಿ ನಾನೊಬ್ಬ. ಶ್ರೀ ಭಾಸ್ಕರ ರೈಗಳು ಹೇಳುವಂತೆ ಸ್ವಂತ ಲಾಭ ಕ್ಕೋಸ್ಕರ "ಕೆಲವು ಪ್ರಕರಣ"ಗಳನ್ನು ಸೇರಿಸಿಕೊಂಡದ್ದು ನಾನರಿಯೆ. ಈಗಿರುವ ಪ್ರಕರಣಗಳು ಅನೇಕ ವರ್ಷಗಳಿಂದ ಆಗಾಗ್ಗೆ ನೆರೆದ ಸಭೆಗಳ ಮತ್ತು ಸರ್ಕಾರ ಜಿಲ್ಲಿನ ಸಿಲೆಕ್ಟ ಕಮಿಟಿಯವರು ಈ ಜಿಲ್ಲೆಯಲ್ಲಿ ಸಂಗ್ರಹಿಸಿ ತೆಗೆದುಕೊಂಡ ಬಹುಮತದ ದೆಸೆಯಿಂದಾಗಿ ರೂಪಕ್ಕೆ ಬಂದವುಗಳು ಈ ಎಲ್ಲಾ ಕಾರ್ಯಗಳು ಬಹಿರಂಗವಾಗಿಯಲ್ಲದೆ ಗುಟ್ಟಿನಲ್ಲಿ ನಡೆದ ವಿಚಾರವಲ್ಲ. ಕೆಲವು ಪ್ರಕರಣಗಳು ಕೆಲವರಿಗೆ ಸರಿತೋರಲಿಕ್ಕಿಲ್ಲ. ಕೆಲವರಿಗೆ ಸರಿತೋರಿದ್ದು ಬಾಕಿಯವರಿಗೆ ಅನುಕೂಲವಾಗಿ ಕಾಣಲಿಕ್ಕಿಲ್ಲ. ಶತಮಾನಗಳಿಂದ ಅವಿಭಕ್ತವಾಗಿ ಉಳಿದ ಕುಟುಂಬಗಳನ್ನು ಪಾಲು ಮಾಡುವುದೆಂದರೆ ಕೆಲವರಿಗೆ ರುಚಿಸಲಿಕ್ಕಿಲ್ಲ. ಪಾಲುಮಾಡುವ ವಿಧಾನದಲ್ಲಿ ಬಲವಾದ ಎರಡು ಪಂಗಡಗಳು ಹಿಂದೆಯೂ ಇದ್ದುವು. ಇಂದೂ ಇವೆ. ಈ ಪೈಕಿ ಒಂದು ಪಂಗಡದವರೇ ಹಿಂದೂ ಕೋಡು ಬರುವ ಸಂದರ್ಭ ನೋಡಿ ಆ ಮೂಲಕ ಖಂಡಿತ ಮತ್ತು ತಲೆವಾರು ಪಾಲು ಮಾಡಿಕೊಳ್ಳಲು ಅಪೇಕ್ಷಿಸಿ, ದಿಲ್ಲಿಗೆ ಪ್ರಯಾಣ ಬೆಳೆಸುವುದು. ಶ್ರೀ ಭಾಸ್ಕರರೈಗಳು ಈ ಪಂಗಡಕ್ಕೆ ಸೇರಿರಬಹುದು. ಅಂತೂ ಅವರ ಪ್ರಕಟಣೆಯಿಂದ ಏನೂ ಸ್ಪಷ್ಟವಾಗುವುದಿಲ್ಲ ಅವರ ಅಭಿಪ್ರಾಯ ಸ್ಪಷ್ಟಪಡಿಸಿದ್ದರೆ ಅವರು ದಿಲ್ಲಿಯಲ್ಲಿ ಚರ್ಚಿಸುವ ರೂಪರೇಷೆಗಳನ್ನು ತಿಳಿಯಬಹುದಿತ್ತು. ಅವರ ಅಭಿಪ್ರಾಯದಲ್ಲಿ ಅಳಿಯಸಂತಾನ ಆಕ್ಟಿನಲ್ಲಿ ಬದಲಾವಣೆ ಬೇಕಾಗಿದ್ದರೆ ಅವು ಯಾವುದೆಂತ ಅವರು ಸೂಚಿಸಿದ್ದರೆ ಅಭಿಪ್ರಾಯ ಅವರ ಕಡೆಗೆ ಕಳುಹಿಸಿ ಕೊಡುವವರಿಗೆ ಅನುಕೂಲವಾಗುತ್ತಿತ್ತು. ಅಂಥಾ ಬದಲಾವಣೆ ಬೇಕಾಗಿದ್ದರೆ ಈಗಿನ ಆಕ್ಟು ತರಲಿಕ್ಕೆ ಪ್ರಯತ್ನಿಸಿದವರನ್ನು ವಿನಾ ಕಾರಣ ದೂಷಿಸುವ ಅವಶ್ಯವಿಲ್ಲವಿತ್ತು. ಎಲ್ಲಾ ಅಭಿಪ್ರಾಯಗಳನ್ನು ಅವರು ಶೇಖರಿಸಿ ದಿಲ್ಲಿಗೆ ಹೋದ ಮೇಲೆ ಯಾವ ಪಂಗಡದ ಕಡೆಯಿಂದ ಏನನ್ನು ವಾದಿಸುವರೆಂದು ಸ್ಪಷ್ಟವಾಗುವುದಿಲ್ಲ.

ಕಾನೂನು ಬದಲಾವಣೆಗಳು ಪ್ರಕಟವಾದ ನಂತರ ಆಕ್ಟು ರೂಪ ತಾಳುತ್ತದೆ. ಅಳಿಯ ಸಂತಾನ ಬಿಲ್ಲು ಸಾಕಷ್ಟು ಪ್ರಕಟವಾಗಿತ್ತು. ಆದರೆ ಈಗಿನ ಹೊಸ ರೂಪದಿಂದ ಹಿಂದೂ ಕೋಡು ಮಾತ್ರ ಪ್ರಕಟವಾಗುತ್ತಿಲ್ಲ. ಶ್ರೀ ನಿಜಲಿಂಗಪ್ಪನವರು ಈ ಜಿಲ್ಲೆಯಲ್ಲಿ ಪ್ರವಾಸ ಮಾಡಿದಾಗ ಮತ್ತು ಇದೇ ವಿಚಾರವನ್ನು ಅವರು ಚರ್ಚಿಸಿದ್ದಾಗ, ಈಗಿನ ಹೊಸ ರೂಪ ತಾಳಿದ ಹಿಂದೂಕೋಡು ಗಜೇಟಿನಲ್ಲಿ ಪ್ರಕಟವಾಗಬೇಕಾಗಿಯೂ, ಮತ್ತು ಅಳಿಯ ಸಂತಾನ ಆಕ್ಟು ಬದಲು ಮಾಡುವುದಾದರೆ ಆ ಬಗ್ಗೆ ಮದ್ರಾಸು ಸರಕಾರದವರು ಸಿಲೆಕ್ಟ್ ಕಮಿಟಿಯವರನ್ನು ಈ ಜಿಲ್ಲೆಗೆ ಕಳುಹಿಸಿ ಕೊಟ್ಟು ಜನತೆಯ ಅಭಿಪ್ರಾಯ ಕೇಳರಿಸಿದಂತೆಯೇ ಕೇಂದ್ರ ಸರಕಾರದವರೂ ಕೂಡ ಒಂದು ಸಿಲೆಕ್ಟ್ ಕಮಿಟಿಯನ್ನು ಈ ಜಿಲ್ಲೆಗೆ ಕಳುಹಿಸಿ ಜನತೆಯ ಅಭಿಪ್ರಾಯವನ್ನು ಶೇಖರಿಸಿಕೊಳ್ಳಬೇಕಾಗಿ ವಿನಂತಿ ಮಾಡಿದ್ದಲ್ಲಿ ಅವರು ತಮ್ಮ ಸಮ್ಮತಿಯನ್ನು ಸೂಚಿಸಿದಲ್ಲದೆ ಹಾಗೆ ಮಾಡುವುದಾಗಿ ಭರವಸೆ ಇತ್ತಿದ್ದರು. ಈ ಕೋಡು ಇನ್ನೂ ಗಜೇಟಿನಲ್ಲಿ ಪ್ರಕಟವಾಗಲಿಲ್ಲ. ಇಲ್ಲಿಯ ಕಾಂಗ್ರೆಸ್ ಕಮಿಟಿ ಸೆಕ್ರೆಟರಿಯವರು ಎಷ್ಟು ಪ್ರಯತ್ನ ಮಾಡಿದರೂ ಆ ಕೋಡಿನ ಒಂದು ನಕಲು ಕೂಡಾ ಇವತ್ತಿನ ವರೆಗೆ ದೊರಕಲಿಲ್ಲ. ಶ್ರೀ ಭಾಸ್ಕರ ರೈಗಳೂ ಖಂಡಿತ ಆ ಹಿಂದೂ ಕೋಡನ್ನು ನೋಡಿರಲಿಕ್ಕಿಲ್ಲ. ದಿಲ್ಲಿಗೆ ಹೋಗುವ ಮೊದಲು ಆ ಕೋಡನ್ನು ಪ್ರಕಟಿಸಿ ನಂತರ ಜನತೆಯ ಅಭಿಪ್ರಾಯ ಕೇಳಿದ್ದರೆ ಉತ್ತಮವಿತ್ತಲ್ಲವೆ? ಹಿಂದೂ ಕೋಡು ಏನೆಂದು ತಿಳಿಯದ ಜನತೆಯಿಂದ ಆ ಕೋಡಿನ ಮೇಲೆ ಅವರ ಅಭಿಪ್ರಾಯ ಮಾರ್ಚ ಆಖೇರಿ ಒಳಗೆ ತನ್ನಲ್ಲಿ ಕಳುಹಿಸಿ ಕೊಡಬೇಕೆಂದು ಶ್ರೀ ಭಾಸ್ಕರ ರೈಗಳವರ ಪ್ರಕಟಣೆಯು ಅವರು ಆಕ್ಷೇಪಿಸುವ ಗೂಢ ಸಭೆಗಳಿಗಿಂತ ಭಯಂಕರ ಕಾಣುತ್ತದೆ. ಜನತೆಯು ಅಭಿಪ್ರಾಯ ಸತ್ಯದೆಂಬುದಾಗಿ ಯಾರು ಆಲೋಚಿಸುತ್ತಿರುವುದು? ಜನತೆಯೇ ನಿರ್ಣಯಿಸಲಿ.

ಕೆ. ಬಿ. ಜಿನರಾಜ ಹೆಗ್ಡೆ.

ಗೊನೋರಿಯಾ ಮೇಹರೋಗ ಉಷ್ಣ ರೋಗಕ್ಕೆ ಔಷಧ

೭ ದಿವಸಗಳಲ್ಲಿ ಈ ರೋಗ ಗುಣ ಹೊಂದುವದು ಗ್ಯಾರಂಟೀ

ಲಿಂಗದಿಂದ ಕೀವು ಬರುತ್ತಿದ್ದರೆ, ಧೋತರಕ್ಕೆ ಹಳದೀ ಹಾಗು ಹತ್ತುತ್ತಿದ್ದರೆ, ಶರೀರದಿಂದ ಬಾವು ಶರೀರದ ತೊಗಲು ಹಿಂದಕ್ಕೆ ಸರಿಯದಿದ್ದರೆ, ಶರೀರದ ಸುತ್ತ ಘಾಯವಾಗಿದ್ದರೆ,... ಚಟ್ಟೆ ಬಿದ್ದಿದ್ದರೆ, ಉಷ್ಣದಿಂದ ನೀರು ಇಳಿದಿದ್ದರೆ, ಉರುಹು ಆಗಿದ್ದರೆ, ಮೂಲವ್ಯಾಧಿ, ಭಗೇಂದ್ರ, ಗಂಡಮಾಲಿ, ಕೈಕಾಲು ಶೂಲಿ, ಅರ್ಧಾಂಗ ವಾಯು ನರದೋಷ. ಮದು ಸ್ತ್ರೀಯರ ಬಿಳಿಕೆಂಪು ಸೆರಗು ಹೋಗುತ್ತಿದ್ದರೆ, ಸೆಲಿಂಬಾಟ: ಗರ್ಮಿಯಿಂದ ಗರ್ಭಕೋಶ ನಾಶಹೊಂದಿದ್ದರೆ, ಸರಿಯಾಗಿ ಭೇದಿಯಾಗದಿದ್ದರೆ, ಮೂತ್ರ ಉರಿಯುತ್ತಿದ್ದರೆ, ಈ ಎಲ್ಲಾ ಬೇನೆಗಳಿಗೆ ಈ ನಮ್ಮ ಔಷಧವು ಇರುವುದು. ಮೊದಲ ದಿವಸ ಬೆಳಿಗ್ಗೆ ೧ ಗುಂಜಿ ಪ್ರಮಾಣ ಔಷಧ ಅರ್ಧತೊಲೆ ತುಪ್ಪದಲ್ಲಿ ತಕ್ಕೊಳ್ಳಬೇಕು. ಮೊದಲ ದಿವಸ ಮಾತ್ರವೆ ಮುಂಜಾನೆ ಸಂಜೆ ಎರಡು ಸಾರೆ ತಕ್ಕೊಳ್ಳಬೇಕು. ಮುಂದೆ ಪ್ರತಿ ದಿವಸ ಬೆಳಿಗ್ಗೆ ಒಂದೇ ಸಾರೆ ೭ ದಿವಸ ಸೇವಿಸಬೇಕು. ಈ ಔಷಧವನ್ನು ಬೇಸಿಗೆಯಲ್ಲಿ ತುಪ್ಪದಲ್ಲಿ, ಥಂಡಿ ಸುಳಿಗಾಳಿಯಲ್ಲಿ ಜೇನತುಪ್ಪದಲ್ಲಿ ತಕ್ಕೊಳ್ಳಬೇಕು. ಪಥ್ಯ: ಹುಳಿ, ಖಾರ, ಬದನೆಕಾಯಿ, ಒಕ್ಕೊಡ್ಡೆ ಬಿಡಬೇಕು.

ಬಾಟ್ಲಿ ೧ಕ್ಕೆ ರೂ. ಪೋಸ್ಟು ಚಾರ್ಜ ೮ ಆಣೆ

ಏಜೆಂಟರು:—ಗದಗ:—ಗದಗ ಫಾರ್ಮಸಿ, ಹುಬ್ಬಳ್ಳಿ:—ಹುಬ್ಬಳ್ಳಿ ಫಾರ್ಮಸಿ ಬಾಗಲಕೋಟೆ:-ಬಾಗಲಕೋಟೆ ಫಾರ್ಮಸಿ, ಧಾರವಾಡ:-ಧಾರವಾಡ ಫಾರ್ಮಸಿ, ದಾವಣಗೇರಿ: ದಾವಣಗೇರಿ ಪ್ರೆಸ್. ನಂಜುಡೇಶ್ವರ ಮೆಡಿಕಲ್ ದಾವಣಗೇರಿ.

ಪತ್ರವ್ಯವಹಾರ ಮಾಡತಕ್ಕ ಮಾಲಕರ ವಿಳಾಸ.

ಶೀವಬಸಿದ್ಧಪ್ಪ ಹಾಲಪ್ಪ ದಾವಣಗೇರಿ,

ಆಯುರ್ವೇದ ಔಷಧಾಲಯ. ಗದಗ.

ತಾರೀಕು 22-3-51 ರಿಂದ

ವಾರದ ಭವಿಷ್ಯ

ತಾರೀಕು 28-3-51 ರವರೆಗೆ

ಮೇಷ— ನಿನ್ನ ಜೀವನದಲ್ಲಿ ಸ ಖ ದುಃಖಗಳು ರಾತ್ರಿ ಹಗಲುಗಳಂತೆ ಪರಿವರ್ತ ತಗಳಾಗುತ್ತಿರುವವು. ಕೆಲ ವಾರಗಳ ಹಿಂದೆ ಸುಖದ ತುತ್ತತುದಿಗೇರಿದ ನೀವು ಇಂದೀಗ ಬಹಳ ದುಃಖವನ್ನು ಸಹಿಸುವ ದುಃಸ್ಥಿತಿಗೆ ಬಂದಿರುವಿರಿ. ದುಡಿಮೆಯ ಇಮ್ಮಡಿ ವ್ಯಯ ವಾಗುವದು. ಅಧಿಕಾರಿಗಳ ಪೀಡೆಗೆ ಸಿಲು ಕುವಿರಿ. ಪರ್ಯಟನದಲ್ಲಿ ಹಲವಾರು ತೆರದ ಕಷ್ಟನಷ್ಟಗಳುಂಟಾಗಬಹುದು ಆದರೂ ತಾ. 23, 24, 25, 26 ಈ ದಿನಗಳಲ್ಲಿ ಸ್ವಲ್ಪ ನೆಮ್ಮದಿ ಶಾಂತಿಗಳು ಲಭಿಸುವವು.

ವೃಷಭ— ಶುಕ್ಲಪಕ್ಷದ ಚಂದ್ರನಂತೆ ನಿಮ್ಮ ಅದೃಷ್ಟವು ದಿನೇ ದಿನೇ ವೃದ್ಧಿಯನ್ನೈ ದುತ್ತಾ ಬರುತ್ತಲಿದೆ. ಮನದಲ್ಲಿ ನೆನೆದ ಕಾ ರ್ಯಗಳು ಯಾವುದೊಂದು ತರದ ವಿಘ್ನ ದ ಗಳಿಲ್ಲದೆ ಸಿದ್ಧಿ ಸುವವು. ಬಹುಮುಖದಿಂದ ಧನವು ನಿಮ್ಮ ಕೈಸೇರಲಿದೆ. ಸಾಮಾಜಿಕ ರಾಜಕೀಯ ರಂಗಗಳಲ್ಲಿ ವಿಜಯವು ನಿಮ್ಮ ಪಾಲಿಗೇನೇ. ವಾರಾಂತ್ಯದ 4 ದಿನಗಳು ಸ ರ್ವೋತ್ಕೃಷ್ಟಗಳಾಗಿವೆ.

ಮಿಥುನ— ಆಳಾಗಿ ದುಡಿದರೆ ಅರಸಾ ಗಿ ಉಣಬಹುದು ಎಂಬ ನಾಣ್ಣುಡಿಯನ್ನು ನೆ ನಪಿಗೆ ತಂದುಕೊಳ್ಳಿರಿ. ಉದ್ಯಮ ಶೀಲರಿಗೇ ವಾರವು ತೃಪ್ತಿಕರವಾದ ಫಲವೀಯಲಿದೆ. ಸತಿಸುತರ ವಿರಹ ಅಪ್ರೀಷ್ಟರ ವಿಯೋಗಗಳಿಂ ದ ಒಂದೊಮ್ಮೆಗೆ ಮನಸ್ಸು ತಲ್ಲಣಗೊಂಡ ರೂ ಕಷ್ಟಸಹಿಷ್ಣುಗಳಾದ ನೀವು ಕಂಗೆಡಬಾ ರಿರಿ. ತಾ. 22, 27, 28 ಈ ದಿನಗಳು ಇಷ್ಟ ದಾಯಿಗಳಾಗಿವೆ

ಕರ್ಕಟ— ಅನಿಷ್ಟ ಸ್ಥಾನವಾದಿ ಅ ಷ್ಟಮದಲ್ಲಿದ್ದು ಕಷ್ಟಕೊಡುತ್ತಿದ್ದ ಸುರಗುರು ಗಳು ಸ್ವಕ್ಷೇತ್ರವಾದ ಭಾಗ್ಯಸ್ಥಾನವನ್ನು ಈ ಗ ತಾನೇ ಪ್ರವೇಶಿಸುವರೆಂದಮೇಲೆ ಸದ್ಯ ನಿ ಮ್ಮ ಭಾಗ್ಯಕ್ಕೆಣೆಯಿಲ್ಲವು ಗೃಹಸುಖವು ಉ ತ್ತಮವಿದೆ. ಆರೋಗ್ಯದ ವಿಷಯದಲ್ಲಿ ಸ್ವಲ್ಪ ಜಾಗರೂಕರಾಗಿರುವದೊಳ್ಳಿತು. ಮಿತಭಾಷಿ ಯಾಗಿರುವದೂ ಲೇಸು ತಾ. 23,24 ಮಾತ್ರ ವಿಜಯಲಾಭಸುಖದಾಯಿಗಳಿವೆ.

ಸಿಂಹ— ದೈವವು ಅತೀವ ದುರ್ಬಲ ವಿರುವದು. ಆದಕಾರಣ ನಿಮ್ಮ ಪ್ರಯತ್ನಕ್ಕೆ ತಕ್ಕ ಫಲಸಿಗದು. ಮಾತ್ರವಲ್ಲ ಪೆಟ್ಟಿನ ಕಾ ರ್ಯಗಳು ವ್ಯರ್ಥವಾಗಲಿವೆ. ಸಾಂಸಾರಿಕ ತಾಪತ್ರಯಗಳು ಹೆಚ್ಚುವವು. ದೇಹದಾರೋ ಗ್ಯವು ಕೆಡಲಿದೆ ಚರ್ಮರೋಗಗಳೂ ಗಾ ಯಾದಿಗಳೂ ಕಾಣಿಸುವವು' ಪರ್ಯಟನದ ಲ್ಲಿ ಕಷ್ಟನಷ್ಟಗಳೂ ಗುರುಹಿರಿಯರೊಡನೆ ಮನಸ್ತಾಪವೂ ಉಂಟಾದೀತು ತಾ. 22, 25, 26 ಈ ದಿನಗಳಲ್ಲಿ ಪೆಟ್ಟಿನ ಅನಿಷ್ಟಗಳುಂ ಟಾಗಲಾರವು

ಕನ್ಯಾ— ಕಷ್ಟದಿನಗಳು ಕಳೆದು ಹೋ ದವು. ಉದ್ಯೋಗವ್ಯಾಪಾರಗಳಲ್ಲಿ ಪ್ರಮುಖ ಚಿತವಾದ ಫಲಪ್ರಾಪ್ತಿಯಿದೆ. ಆದರೆ ಶಾಯಕ ಸ್ವಜನಗಳಿಗೆ ದಿನಯಾಪನೆಯು ದುಸ್ತರವಾ ದೀತು. ಗಂಡಹೆಂಡರೊಳು ನಿತ್ಯಕಲಹವಾಗ ಲಿದೆ. ಅಪ್ರೀಷ್ಟರ ವಿಯೋಗದಿಂದಲೂ ಆ ರ್ಥಿಕ ತಗಾದೆಯಿಂದಲೂ ದುಃಖಭಾಗಿಗಳಾ ದ ನಿಮಗೆ ತಾ. 23, 24, 27, 28 ಆದಾಯ ಯಿಗಳಾಗಿವೆ.

ತುಲಾ— ನಿಮ್ಮ ಉದ್ಯಮವು ಯಾ ವೊಂದು ತರದ ವಿಘ್ನಗಳಿಲ್ಲದೆ ಸಾಗುವದು. ಆದರೆ ನಿರೀಕ್ಷಿಸಿದ ಫಲವು ಲಭಿಸಲಾರದು. ಕೋರ್ಟು ಕಛೇರಿಗಳ ಕಾರ್ಯಗಳಲ್ಲಿ ವಿಜ ಯವೂ ಕೀರ್ತಿಯೂ ಲಭಿಸಲಿದೆ. ಸ್ತ್ರೀನಿಮಿ ತ್ತವಾದ ಕಲಹ ನಷ್ಟಗಳೂ ಅಪವಾದಗಳೂ ಪ್ರಾಪ್ತವಾದಾವು ಮನೋರೋಗವು ಸದಾ ಪೀಡಿಸಲಿದೆ ತಾ. 22, 25, 26ರಲ್ಲಿ ಲಾಭ ಶತ್ರುಜಯ ಮಿತ್ರಸಮಾಗಮವಾದೀತು.

ವೃಶ್ಚಿಕ— ಪಶುಭೃತ್ಯರಿಂದಲೂ ಪು ತ್ರಕಳತ್ರಾದಿಗಳಿಂದಲೂ ಕೂಡಿದ ನಿಮ್ಮ ಸಂ ಸಾರದಲ್ಲಿಯಾವೊಂದು ಕೊರತೆಗಳಿಗವಕಾಶ ವಿಲ್ಲದಿದ್ದರೂ ತಂದೆಮಕ್ಕಳೊಳು ಗಂಡಹೆಂ ಡರೊಳು ಮತಭೇದದಿಂದಾಗಿ ಮನಸ್ತಾಪ ಹುಟ್ಟಲಿದೆ. ವಿದ್ಯೋದ್ಯೋಗಿಗಳಿಗೂ ವ್ಯಾ ಪಾರಿಗಳಿಗೂ ಪ್ರಯತ್ನಕ್ಕೆ ತಕ್ಕ ಫಲಸಿಗದು. ಆರ್ಥಿಕ ಬಿಕ್ಕಟ್ಟು ಮುಂಚಿನಂತೆ ಕಡಮೆ ಯಾಗುವದು. ತಾ. 25, 26 ಒಳ್ಳೆಯದಲ್ಲ.

ಧನು— ಆಯವ್ಯಯಗಳು ಸಮತೂ ಕದಲ್ಲಿ ನಿಲ್ಲುವವು. ಮಿತ್ರರು ಬಂಧುಬಳಗ ವರ್ಗದವರ ನೆರವು ಉತ್ತಮವಿರುವುದು. ಆರೋಗ್ಯದ ಮಟ್ಟಿಗೆ ಅಷ್ಟೊಂದು ಉತ್ತಮ ವಲ್ಲವು. ದುರ್ಜನರ ಸಹವಾಸದಿಂದಾಗಿ ಜ ನಾಪವಾದ ಕಷ್ಟಗಳನ್ನು ಹೊಂದುವಿರಿ. ಚಂ ಚಲವಾದ ನಿಮ್ಮ ಮನಸ್ಸಿಗೆ ನೆಮ್ಮದಿಯು ದುರ್ಲಭವಾಗುವದು. ತಾ. 22, 27, 28 ಈ ದಿನಗಳಲ್ಲಿ ರಾಜಭಯ ವ್ಯರ್ಥ ಖರ್ಚು ಕಾಣಲಿವೆ.

ಮಕರ— ನಿಮ್ಮ ದೇಹಾರೋಗ್ಯವು ಉತ್ತಮವಿರುವದು ಖರ್ಚಿಗೆ ತಕ್ಕ ಉತ್ಪ ತ್ತಿಯಿರುವುದರಿಂದ ಹಣದತೊಂದರೆಯು ಕಾಣಿಸದು. ನೌಕರ ಜನರಿಗೆ ಪ್ರಮುಖ ತಕ್ಕ ಫಲಸಿಗುವದು ಮಾತ್ರವಲ್ಲ ಅಧಿಕಾರಿ ಜನರ ಪೀಡೆಯೂ ತಪ್ಪದು. ಗೃಹತಾಪತ್ರಯಗಳಿಂ ದ ಮುಕ್ತರಾದ ನಿಮಗೆ ಆಪ್ತೇಷ್ಟರ ನೆರವು ಸಾಕಷ್ಟಿರುವುದರಿಂದ ಪ್ರಬಲರಾದ ವಿರೋಧಿ ಗಳನ್ನು ಗೆಲ್ಲುವಿರಿ. ವಾರಾಂತ್ಯದ 4 ದಿನಗಳಲ್ಲಿ ಇಷ್ಟಸಿದ್ಧಿ ಸುಖಲಾಭ ವಿಜಯಗಳುಂಟಾಗು ವವು.

ಕುಂಭ— ನಿಮ್ಮ ಪರಿಸ್ಥಿತಿಯು ಬಹು ಮಟ್ಟಿಗೆ ಸುಧಾರಿಸುವದು. ಶುಭಗ್ರಹರ ಸಂ ಪೂರ್ಣ ಬೆಂಬಲವನ್ನು ಪಡೆದ ನಿಮಗೆ ಸದು ದ್ಯಮದಲ್ಲಿ ಒಳ್ಳೆಯ ಫಲಪ್ರಾಪ್ತಿಯಿದೆ. ಮನೋರೋಗದಿಂದ ಮುಕ್ತರಾಗುವಿರಿ. ಆ ದರೆ ಪಿತ್ಥಶ್ಲೇಷ್ಮ ದೋಷದಿಂದ ದೇಹಾರೋ ಗ್ಯವು ಸರಿಯಿರದು. ಆಕಸ್ಮಿಕ ಪ್ರವಾಸ ಅ ನಿರೀಕ್ಷಿತ ಅಪಾಯಗಳವಕಾಶವಿದೆ. ತಾ. 22, 27, 28 ಅನುಕೂಲ.

ಮೀನ— ಅದೆಷ್ಟೋ ಭಾಗ್ಯಗಳಿದ್ದರೂ ಆರೋಗ್ಯ ಭಾಗ್ಯವಿಲ್ಲದ ಮೇಲೆ ಏನು ಪ್ರ ಯೋಜನ. ನೀವೆಷ್ಟೇ ಜಾಗರೂಕತೆಯಿಂದಿ ದ್ದರೂ ಕಫ ಪಿತ್ಥದೋಷದಿಂದ ಆರೋಗ್ಯ ಕೆಡುವದು. ಆರ್ಥಿಕ ಬಿಕ್ಕಟ್ಟೂ ಅತಿಯಾಗಿ ಬಾಧಿಸುವದು. ನಿಷ್ಠುರ ಭಾಷಿಗಳಾದ ನಿಮ ಗೆ ಆಪ್ತೇಷ್ಟರ ನೆರವೂ ದೊರೆಯಲಾರದು ಯಾವ ಭಾಗದಲ್ಲಿ ನೋಡಿದರೂ ನಿರಾಶೆ ಯೇ ಕಾಣಿಸುತ್ತಿರುವ ನಿಮಗೆ ತಾ. 22, 23 24ರಲ್ಲಿ ಹೆಚ್ಚು ಅನಿಷ್ಟಗಳುಂಟಾಗದು.

ನೋಟೀಸು

ಕಾರ್ಕಳ ಡಿ. ಮು. ಕೋರ್ಟಿನಲ್ಲಿ

O. P. No. 7/1951

ಗೌರಮ್ಮ ಕೂಡಾ —ಅರ್ಜಿದಾರರು

ಮತ್ತು

ಸದಾಶಿವ ಹೆಬ್ಬಾರ —ಎದ್ರಿ

ಇವರೊಳಗೆ–

ಸರ್ವಜನರಿಗೂ ಈ ಮೂಲಕ ತಿಳಿಯಪಡಿ ಸುವದೇನೆಂದರೆ–

ಕಾರ್ಕಳ ತಾಲ್ಲೂಕು ಬಾರ ಗ್ರಾಮದ ಶ್ರೀ ದುರ್ಗಾ ದೇವಿ ದೇವಸ್ಥಾನದ ಬಳಿ, ವಾಸವಾ ಗಿರುವ ಸೇಸಪ್ಪ ಹೆಬ್ಬಾರರ ಹೆಂಡತಿ ವ ಮೃತ ಡಿ. ಕುಮಾರ ಸ್ವಾಮಿ ಹೆಬ್ಬಾರರ ತಾಯಿ ಗೌರಮ್ಮ, ಸದ್ರಿ ಡಿ. ಕುಮಾರ ಸ್ವಾಮಿ ಹೆಬ್ಬಾರರ ತಂದೆ ಸೇಸಪ್ಪ ಹೆಬ್ಬಾರ ವ ಸದ್ರಿ ಡಿ. ಕುಮಾರಸ್ವಾಮಿ ಹೆಬ್ಬಾರರ ಸ ಹೋದರ ಶ್ರೀನಿವಾಸ ಹೆಬ್ಬಾರ], ಕೂಡಾ 3 ಜನರು ಸದ್ರಿ ಮೃತ ಡಿ. ಕುಮಾರಸ್ವಾಮಿ ಹೆಬ್ಬಾರರು ದಿ. ಕೆನರಾ ಮ್ಯೂಚುವಲ್ ಎಶ್ಯೂರೆನ್ಸ್ ಕಂಪೆನಿ ಲಿಮಿಟೆಡ್, ಹೆಡ್ ಆ ಫೀಸು, ಉಡುಪಿ. ಈ ಕಂಪೆನಿಯಲ್ಲಿ Policy No 16039ನೇಗೆ ರೂಪಾಯಿ 1000/ ರಕ್ಕೆ ಇನ್ಶೂರ್ ಮಾಡಿದ ಬಾಬ್ತು ಸದ್ರಿ ರೂ ಪಾಯಿ 1000/ ವ ಮುನಾಫೆ ವಸೂಲಿಮಾಡೆಯು ವರ ನೇ ಅರ್ಜಿದಾರರಿಗೆ ಸಕ್ಸೆಸ್ಸನ್ ಸರ್ಟಿಫಿ ಕೇಟು ಕೊಡಬೇಕಾಗಿ ಅರ್ಜಿದಾರರು ದಾಖಲು ಮಾಡಿರುವ ಸದ್ರಿ ಅರ್ಜಿಯ ವ ಸದ್ರಿ ಕೋರ್ಟಿ ನಲ್ಲಿ ತಾರೀಕು 3-4-1951ಕ್ಕೆ ಇಡೋಣಾ ಗಿಯದೆ, ಆಕ್ಷೇಪವುಳ್ಳವರು ಸದ್ರಿ ತಾರೀಕು 3-4-1951 ರಲ್ಲು ಬೆಳಗ್ಗೆ 10 ಗಂಟೆಗೆ ಹಾಜ ರಾಗಿ ತಮ್ಮ ಆಕ್ಷೇಪಗಳನ್ನು ಜ್ಯಾಹೀರು ಮಾಡಿಕೊಳ್ಳ ಬಹುದು ಎಂಬ ಸಂಗ್ತಿ ಈ ಮೂಲಕ ಸರ್ವಜನರಿಗೂ ತಿಳಿಸೋಣಾಗಿ ಯದೆ- ಕೋರ್ಟು ಹುಕುಂ ಪ್ರಕಾರ ಈ ನೋಟೀಸು ಪ್ರಕಟಿಸಿಯದೆ-

D. Venkatesh Bhat
ಅರ್ಜಿದಾರರ ಪರ ವಕೀಲ

ಕಾರ್ಕಳ, 11-3-1951

ಉಡುಪಿಗೆ ಹೋಗಬೇಕು! ಆದರೆ ಉಳಿದುಕೊಳ್ಳುವುದೆಲ್ಲಿ?

ರಾಯಲ್ ಮಹಾಲಿನಲ್ಲಿ

ಬಸ್ ಸ್ಟೇಂಡಿಗೆ ಅತಿ ಸಮೀಪ! ಕೃಷ್ಣಮಠಕ್ಕೆ ದೂರವಿಲ್ಲ!

ವ್ಯಾಪಾರವ್ಯವಹಾರ ವಿಹಾರಸ್ಥಳಗಳಿಗೆಲ್ಲ ಕೇಂದ್ರ!

ನಿಮ್ಮ ಸ್ನಾನ, ಊಟ, ಉಪಹಾರ, ಬೈರಕ್, ಶಯನ ಇವಕ್ಕೆಲ್ಲ ಉತ್ತಮ ವ್ಯವಸ್ಥೆ ಕರೆದರೆ ಓಗೊಡುವ ನೌಕರರ ವರ್ಗ!

ಮೇಲಾಗಿ ಉಡುಪಿ ಬ್ರಾಹ್ಮಣರ ಅಡಿಗೆ, ತಿಂಡಿತಿನಸು, ಇವುಗಳ ರುಚಿರುಚಿ ಹೇಳಬೇಕೆ?

ಪ್ರೊಪ್ರೈಟರ್ :— ಕೆ. ವೆಂಕಟ್ರಮಣಭಟ್.

For up-to-date Lodging & Boarding

ROYAL MAHAL,

UDIPI S. Kanara.

— ಮಕ್ಕಳನ್ನು ಹಡೆಯುವುದು ಸಾಕು —

ಅಶಕ್ತ ಸ್ತ್ರೀಯರಿಗೆ

ಬರ್ಥ ಕಂಟ್ರೋಲ

ರೋಗಗ್ರಸ್ತ ಹೆಚ್ಚು ಮಕ್ಕಳಿಗೆ

ಏಳು ದಿವಸ ಈ ಮಾತ್ರೆಗಳನ್ನು ಸೇವನ ಮಾಡಿದರೆ ಮುಂದೆ ಖಂಡಿತವಾಗಿ ಮಕ್ಕಳಾಗುವದಿಲ್ಲ. ಸ್ತ್ರೀಯರು ಪ್ರತಿತಿಂಗಳು ಸರಿಯಾಗಿ ಮುಟ್ಟಾಗುತ್ತಾರೆ. ಅಲ್ಲದೆ ಸ್ತ್ರೀಯರ ಬಿಳಿಸೆರಗು, ಪ್ರದರರೋಗ, ಹೊಲಿಕಟ್ಟು ಗುಣವಾಗಿ ಸ್ತ್ರೀಯು ಗರ್ಭಿಣಿ ಯಾಗುವದಿಲ್ಲ. ಈ ಔಷಧವನ್ನು ಸೇವಿಸುವ ಕ್ರಮ: ಪ್ರತಿದಿವಸ ಮುಂಜಾನೆ ಗುಳಿಗೆ ಮಧ್ಯಾಹ್ನಕ್ಕೆ ಗುಳಿಗೆ, ಸಂಜೆಗೆ ಗುಳಿಗೆಯಂತೆ ಊಟದ ಮೊದಲು ತಕ್ಕೊಳ್ಳ ಬೇಕು. ಏಳುದಿವಸ ಈ ಔಷಧವನ್ನು ಬಿಸಿನೀರಿನಲ್ಲಿ ಸೇವಿಸಬೇಕು.

ಪಥ್ಯ:— ಹೆರವೀಸಲ್ಲಿ ಬಿಡಬೇಕು. 7 ದಿವಸ ಸಂಪೂರ್ಣ ಔಷಧದ ಕಿಮ್ಮತ್ತು ರೂಪಾಯಿ 5—0—0. ಪೋಷ್ಟ ಚಾರ್ಜು ಬೇರೆ ಆಕೆ.

ಮಾಲಕರು:— ಹಾಲಪ್ಪಾ ಫಕೀರಪ್ಪಾ ದಾವಣಗೇರಿ

ಆಯುರ್ವೇದ ಔಷಧಾಲಯ ಗದಗ-ಸಿಟಿ.

ಏಜಂಟರು:—ಮಲ್ಲಪ್ಪ ಧಾಮಣಗಿ,—ಹುಬ್ಬಳ್ಳಿ, ಗದಗ ಬಂಗಳೂರು ಔಷಧಾಲಯ ವಿಜಾಪುರ— ಬಸಪ್ಪ ಅಕ್ಕೆಂಗನ್ನ ಧಾರವಾಡ ರಾಯಚೂರ ನಂಜುಂಡೇಶ್ವರ ಮೂರ್ತಿ ದಾವಣಗೇರಿ ದಾವಣಗೇರಿ:—ದಾವಣಗೇರಿ ಪ್ರೆಸ್ಸು ಶ್ರೀ ಎಲ್ ಶಂಭುಲಿಂಗ ,ಶಿವಮೊಗ್ಗ, ಹಾವೇರಿ ಬ್ಯಾಡಗಿ

ನೋಟೀಸು

ಕಾಸರಗೋಡು ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ

ಸ್ಯೂಟ್ ನಂಬ್ರ 9/1951

ಅಬ್ದುಲ್ಲ ಬ್ಯಾರಿ —ವಾದಿ

ಅಮದೆ ಬ್ಯಾರಿ, ಅಬ್ಬಾಸ ಬ್ಯಾರಿ ಮ 1, ಕಾಸರಗೋಡು ತಾಲೂಕು ಕಳಂಗಡ ಗ್ರಾಮದ ತ್ರೈರುವಕ್ಕದ ರುವವ. } ಪ್ರತಿವಾದಿ

ವಾದಿಯು ಪ್ರತಿವಾದಿಯಿಂದ ಬರಬೇಕಾ ದ ಪ್ರೊನೋಟಿನ ಅಸಲು ಬಡ್ಡಿ ಲೈವೆಜಿಗೆ ದಾಖಲು ಮಾಡಿದ ಸದ್ರಿ ವ್ಯಾಜ್ಯವು ತಾರೀಕು 2-4-1951ಕ್ಕೆ ಇಟ್ಟಿರುವ ಸಂಗ್ತಿ ತಿಳಿಸೋ ಣಾಗಿಯದೆ.

(Sd/.) P. Ahmad,
Advocate for Plaintiff.

ಕಾಸರಗೋಡು, 15-3-1951

ಲಕ್ಷ್ಮೀ

ಸೆಂಟಾಲ್ ಮಾತ್ರೆ

ಇದರ ಉಪಯೋಗದಿಂದ ಒಮ್ಮಕಾಲದ ಮೇಹ, ಪ್ರಮೇಹ, ಮೂತ್ರದ ಉರಿ, ಮೂತ್ರ ಕೃಚ್ಛ್ರ, ಮೂತ್ರದೊಡನೆ ಯಾ ಮುಂದಾಗಿ ಬಿಳುಪು, ಅರಸಿನ, ಕೆಂಪು ಈ ವರ್ಣಗಳಲ್ಲಿ ಕೀವು ಹೋಗುವುದು,ತೊಡೆ ಸಂದಿನಲ್ಲಿ ನೋವು, ಕಾಲ ಗಂಟುಗಳಲ್ಲಿ ವೇದನೆ, ಕಣ್ಣಿನಲ್ಲಿ ಕೀವು ಬರುವುದು, ಶರೀರದಲ್ಲಿ ಉಷ್ಣತೆ, ಸ್ವಪ್ನೇಂದ್ರಿಯ ಇವೆ ಲ್ಲಾ ಖಾತ್ರಿ ಯಾಗಿ ಗುಣಕೊಡುವುದು.

ಡಬ್ಬಿ ಒಂದಕ್ಕೆ ರೂ. 2—0—0

ಏಜಂಟ್—

ಶಾ ಕಂಪೆನಿ, ಮಂಗಳೂರು

EDITED, PRINTED & PUBLISHED BY K. H. SHETTY AT THE NAVAYUGA PRESS, UDIPI, S.INDIA.

Regd. No. M. 3618
LICENCE No. 31
Licensed to Post without Prepayment

Estd 192 ಸ್ಥಾಪನೆ
31ನೇ ವರ್ಷ

29—3—1951
Founder: Sri A. B. Shetty,
Minister for Agriculture & Veterinary.

ವರ್ಷ ೩೧
ವಾರ ೨೯

NAVAYUGA
WEEKLY

POST BOX NO. 22
UDIPI, S. K.

Vol. 31
No. 29

ಬಿತ್ತಿದ್ದು ಬೆಳೆಯುವಾಗ ಎಲ್ಲರಿಗೂ ತಾವೆಂದು ಅದರ ಫಲಉಣ್ಣುತ್ತೇವೆನ್ನುವ ಕುತೂಹಲ—ಆಶೆ ಆಕಾಂಕ್ಷೆಗಳಿರುವುದು ಸ್ವಾಭಾವಿಕವೇ ಆಗಿದೆ. ಬಿತ್ತಿದ್ದೆಲ್ಲಾ ಬೆಳೆಯಲಾರದು. ಬೆಳೆದದ್ದೆಲ್ಲಾ ಫಲಕೊಡಲಾರದು. ಮನುಷ್ಯನಲ್ಲಾಗಲೀ ಪಶುಪಕ್ಷಿಗಳಲ್ಲಾಗಲೀ, ಸಸ್ಯಾದಿಗಳಲ್ಲಾಗಲೀ, ಇದೇ ತತ್ವವನ್ನು ನಾವು ಕಾಣಬಹುದು. ತಂದೆ ತಾತ್ವಿಕನಾಗಿದ್ದು ಮಗ ತನ್ನ ಹಾಗೆ ಆದರ್ಶವಾದಿಯಾಗಬೇಕೆಂದು ಸಾಕಿ ಸಲಹಿ ಬೆಳೆಸಿದರೂ ಪ್ರಾಯಕ್ಕೆ ಬರುವಾಗ ತಂದೆ ಬಯಸಿದ್ದಕ್ಕೆ ವಿರೋಧವಾಗಿ ಆತನ ಕೀರ್ತಿಗೆ ಕಂಟಕಪ್ರಾಯನಾಗುವದೂ ಉಂಟು. ದನ, ನಾಯಿಗಳಲ್ಲೂ ಹುಟ್ಟಿನ ಪ್ರೀತಿ—ಉಪಕಾರವನ್ನು ಬಯಸಿ ಕೊನೆಗೆ ನಿರಾಶೆಗೊಳ್ಳುವ ಸಂದರ್ಭಗಳೆಷ್ಟೋ ಇವೆ. ಬಿತ್ತಿದ ಬೀಜ ಮೊಳೆತು ಹುಲುಸಾಗಿ ಬೆಳೆದು ಹೆಚ್ಚು ಫಲಕೊಟ್ಟೀತೆಂದು ಹಾರೈಸಿ ಬಳಿಕ ಅದು ಏನನ್ನೂ ಕೊಡದೆ ಹತಾಶರಾಗುವ ಸ್ಥಿತಿಯೂ ಇದೆ. "ಫಲಕೊಟ್ಟೀತು" "ಉಪಕಾರವಾದೀತು" "ಆಪತ್ತಿಗೆ ಬದ್ದೀತು" ಎಂದು ನಾವು ಬಿತ್ತುವ ಇಲ್ಲವೆ ಸಾಕುವ ಕಾರ್ಯವನ್ನು ಮಾಡಿಯೇ ಮಾಡುತ್ತೇವೆ. ಬಿತ್ತುವವರ ಉದ್ದೇಶ ಫಲಾಪೇಕ್ಷೆ— ಆ ನಿರೀಕ್ಷೆಯ ಕಾಲ ಸುಖಪೂರ್ಣವಾದುದು—ಕುತೂಹಲಪೂರ್ಣವಾದುದು! ಮತ್ತೆ ಫಲ ಸಿಗದೆ ಇದ್ದರೆ ಫಲಪ್ರಾಪ್ತಿಯ ನಿರೀಕ್ಷೆಯಲ್ಲಿ ಸುಖನಿದ್ದೆಯಿದೆ. ನಾಳೆ ನಿರಾಶೆಗೊಂಡುವವಂಗೂ ಆ ಸುಖವಿದೆ.

ಬಿತ್ತಿದ್ದರ ಫಲವನ್ನುಣ್ಣಲು ಬಿತ್ತಿದವರು ಉಳಿಯಬೇಕೆಂಬ ನಿಯಮವಿಲ್ಲ. ಹಲವರು ಬಿತ್ತಿದ್ದು ಅವರ ಕಾಲಕ್ಕಾಗದೆ ಅವರ ಮಕ್ಕಳು ಮರಿಮಕ್ಕಳ ಕಾಲಕ್ಕೆ ಆಗುತ್ತದೆ. ಬಡ್ಡಿಯಲ್ಲಿರುವ ಹಣ ತಮ್ಮ ಕಾಲಕ್ಕೆ ಮೂಲಕ್ಕಿಂತ ಹೆಚ್ಚಾಗದೇ ಇದ್ದರೂ ತಮ್ಮ ಮಕ್ಕಳ ಕಾಲಕ್ಕೆ ಬಡ್ಡಿಗೆ ಬಡ್ಡೀ—ಬಡ್ಡಿಗೆ ಬಡ್ಡಿಯಾಗಿ ದೊಡ್ಡಗಂಟೇ ಆಗುತ್ತದೆ. ಮಾಡಿಟ್ಟ ಆಸ್ತಿಪಾಸ್ತಿಯ ಕತೆಯೂ ಅಷ್ಟೇ! ಹಾಗೆಯೆ ತಂದೆ ಮಾಡುವ ಸಾಲದ ವಿಷವೃಕ್ಷ ಬೃಹದಾಕಾರವಾಗಿ ಬೆಳೆದು ಸಮೂಲನಾಶಕ್ಕೆ ಕಾರಣವಾಗುವುದೂ ಉಂಟು.

ಬ್ರಿಟಿಷರು ಮೊದಲಿಂದಲೂ ಒಡೆದು ಆಳುವ ನೀತಿಯನ್ನು ನಮಗೆ ಪಾಠ ಹೇಳಿದ್ದರು. ಅವರ ಕಾಲದಲ್ಲಿ ಅವರು ಬಿತ್ತಿದ ಬೀಜ ಮೊಳೆತು ಫಲ ಬಿಡಬೇಕಾದರೆ ಅರ್ಧ ಶತಮಾನದ ಕಾಲಬೇಕಾಯಿತು. ಹಿಂದುಸ್ಥಾನ ಒಂದಾಗಿದ್ದರೆ ತಮ್ಮ ಪ್ರಭುತ್ವ ಬಾಳಲಾರದೆಂದು ಮನಗಂಡು ನವರಲ್ಲಿ ಜಾತೀಯತೆಯ ಬೀಜವನ್ನು ಬಿತ್ತಿದ್ದರು. ಭಿನ್ನಾಭಿಪ್ರಾಯಗಳನ್ನು ಹುಟ್ಟಿಸಿ ರಾಷ್ಟ್ರಪ್ರೇಮಿಗಳ ನಾಯಕತ್ವದ ಶಕ್ತಿಯನ್ನಡಗಿಸಲು ಅವರಿಗಿದ್ದುದಿದೊಂದೇ ಸಾಧನ! ರಾಣಿ ಎಲಿಜಬೆತಳು "ಜಾತೀಯ ಸ್ಥಾನಮಾನದ ವಿಚಾರದಲ್ಲೂ, ಧಾರ್ಮಿಕ ವಿಚಾರದಲ್ಲೂ ನಾವು ಕೈಹಾಕಲಾರೆವು" ಎಂದು ಘೋಷಿಸಿದ್ದನ್ನು ನಮ್ಮಲ್ಲಿಯ ಶಿಷ್ಟವಂತರು ಬಹು ಆದರದಿಂದ ನೋಡಿದರು. ಈಗಲೂ 'ಜೋಲಿಯನ್ನು ಹೊತ್ತುಕೊಳ್ಳುವ ಗಾಂಧೀ ಭಕ್ತರಿಕ್ಕಿಂತ ಬ್ರಿಟಿಷರೇ ಆಗಬಹುದು." ಎಂದು ಧರ್ಮ ನೇತಾರರೆಂದೆನಿಸಿಕೊಂಡ ಹಲವರು ಹೇಳುತ್ತಾರೆ. ಗಾಂಧೀಜಿಯವರು ಜನತೆಯಲ್ಲಿ ಐಕ್ಯತೆಯನ್ನುಂಟು ಮಾಡಲು ಅಹರ್ನಿಶಿ ದುಡಿದರು. ಅವರ ಆದೇಶದ ಫಲವಾಗಿ ಜನತೆಯಲ್ಲಿ ನವ ಚೈತನ್ಯ ಮೂಡಿತು. ಕೋವರನ್ನ ಬಿ ಕೆಯಿತು. ಹೀಗಾಗುವುದು ಬ್ರಿಟಿಷರಿಗೆ ಇಷ್ಟವಿಲ್ಲ. ಅಂತಲೇ ಜಾತೀಯ ದ್ವೇಷದ ಬೀಜ ಬಿತ್ತಿದರು. 1942ರ ಸ್ವಾತಂತ್ರ್ಯಾಂದೋಲನ ಕಾಲದಲ್ಲಿ ಕಾಂಗ್ರೆಸ್ಸು ಬ್ರಿಟಿಷರ ಶತ್ರುವೆಂದು ಸಿದ್ಧವಾಯಿತು. ಆಗಲೇ ಮಹಮ್ಮದಾಲಿ ಜಿನ್ನಾ ಪಾಕಿಸ್ತಾನದ ಅಸ್ತಿವಾರವನ್ನು ಹಾಕಿದರು. ಕಾಂಗ್ರೆಸ್ಸಿಗರು ಜೈಲಿನಲ್ಲಿ ಕೊಳೆಯುತ್ತಿರುವಾಗ—ದೇಶದಲ್ಲೆಲ್ಲ ಅರಾಜಕತೆಯುಂಟಾದಾಗ ಜಿನ್ನಾನುಯಾಯಿಗಳು ಬ್ರಿಟಿಷರ ಆಸ್ಥೆಯುಂಡವರು. ಪಾಕಿಸ್ತಾನವನ್ನು ಪಡೆಯುವುದಕ್ಕೆ ಮುಸಲ್ಮಾನರು ಬ್ರಿಟಿಷರ ಬಲವನ್ನು ಗಳಿಸಿದರೆ ಬ್ರಿಟಿಷರು ಹಿಂದೂಸ್ಥಾನದ ಐಕ್ಯತೆಯನ್ನು ಕೆಡಿಸುವ ಇಲ್ಲವೆ ಒಡೆದು ಆಳುವ ಧೋರಣೆಗನುಸಾರವಾಗಿ ಮುಸಲ್ಮಾನರನ್ನು ಎತ್ತಿ ಹಿಡಿದರು. ಅತ್ಯಂತ ಮೇಧಾವಿಯೆಂದು ಖ್ಯಾತಿಗಳಿಸಿದ ರಾಜಗೋಪಾಲಾಚಾರ್ಯರು ಕೂಡಾ ಜಿನ್ನಾರ ವಾದವನ್ನು ಪುಷ್ಟೀಕರಿಸಿದ್ದರು. ಗಾಂಧೀಜಿ ಆತ್ಮೀಯನೆಂದು ಅಪ್ಪಿ ಹಿಡಿದರೂ ಜಿನ್ನಾರ ಮನಸ್ಸು ಒದಗಲಿಲ್ಲ ಸಣ್ಣ ವಿಚಾರವೆಂದು ಕಡೆಗಣಿಸಿದ್ದು ಕಡೆಗೆ ಅನಿವಾರ್ಯವೆಂದೇ ತೀರ್ಮಾನವಾಯಿತು; ಅಂತೆಯೇ ದೇಶದ ವಿಭಜನೆಯಾಯಿತು; ಗಾಂಧೀಜಿಯ ಮೈತ್ರಿಯ ಬೀಜ ವಿಷವೃಕ್ಷವೇ ಆಯಿತು. ಅಹಿಂಸೆಯ ಬೀಜ ರಕ್ತ ಕಾಲುವೆಯಲ್ಲಿ ಹರಿದು ಹೋಯಿತು. ಜಿನ್ನಾ ಬಿತ್ತಿದ್ದು ಮಾತ್ರ ಬೆಳೆಯಿತು.

ವಿಭಜನೆಯ ಕಾಲಕ್ಕೆ ಬ್ರಿಟಿಷರು ಕಾಶ್ಮೀರ ಜಗಳದ ಬೀಜವನ್ನು ಬಿತ್ತಿದ್ದು ಈಗ ಫಲಬಿಡುತ್ತಲಿದೆ. ಇಷ್ಟು ದೀರ್ಘ ಕಾಲದಲ್ಲಿಯೂ ಆ ಸಮಸ್ಯೆ ಬಗೆಹರಿಯಲಿಲ್ಲ. ವಿಚಾರಮಾಡಿದಂತೆಲ್ಲ ವಿನೋಚನೆಗೆ ವಿಘ್ನಗಳೇ ಬರುತ್ತಲಿವೆ. ಬ್ರಿಟಿಷರು ಬಿತ್ತಿದ ಜಾತೀಯ ದ್ವೇಷದ ಬೀಜ ಇಂದು ಕಾಶ್ಮೀರದಲ್ಲಿ ಬೆಳೆದು ನಿಂತಿದೆ. ಬಿತ್ತಿದ್ದೂ ಬೆಳೆಯುವಾಗ ಏನೆಲ್ಲಾ ಅನಾಹುತವಾಗುದೆಂಬುವದಕ್ಕೆ ಲಕ್ಷ ಲಕ್ಷ ಜನರ ಹತ್ಯಾಕಾಂಡವೇ ಸಾಕು ಉದಾಹರಣೆಗೆ!

ಎಷ್ಟೋ ಸಂಘ ಸಂಸ್ಥೆಗಳು ನಮ್ಮಲ್ಲಿವೆ. ಯಾರೋ ಬಿತ್ತಿದ್ದು ಮತ್ತೆ ಬರುವ ನಾವಿಂದು ಮುಂದಿಗೆ ಅದರ ಫಲ ಸಿಗುತ್ತದೆ. ಆದರೆ ಬಿತ್ತಿದ್ದು ಬೆಳೆಯುವ ತನಕ ಎಷ್ಟೋ ರೀತಿಯ ತ್ಯಾಗಮಾಡಬೇಕು. ಬಿತ್ತಿದವನ ಶ್ರದ್ಧಾಭಕ್ತಿಗಳೇ ಫಲಪ್ರಾಪ್ತಿಯ ಮೂಲವಾಗಿರುತ್ತವೆ; ಮೂಲದವನ ಸುಖದುಃಖವನ್ನು ಯಾರೂ ಕೇಳುವುದಿಲ್ಲ. ಆತ ಫಲವನ್ನುಣ್ಣುವಾಗ ಎಲ್ಲರಿಗೂ ಹೊಟ್ಟೆಯುರಿ....ಮತ್ಸರ ಈ ರೀತಿಯ ಸ್ವಾರ್ಥ ಸಂಕುಚಿತ ಮನೋಭಾವನೆಗಳಿಂದ ಎಷ್ಟೋ ಸಂಘಸಂಸ್ಥೆಗಳು ಮೊಳಕೆ ಬರುವಾಗಲೇ—ಇಲ್ಲ ಫಲ ಕೊಡುವ ಮೊದಲೇ ನಾಮಶೇಷವಾಗುತ್ತವೆ.

ಬುದ್ಧಿಶಾಲಿಗಳೆಂದು ಪೇಟಾವನ್ನಿಟ್ಟುಕೊಂಡವರು ಬೇರೆಯವರ ಮೇಲೆ ಬುದ್ಧಿವಂತಿಕೆಯ ಬಿರುಸು ಬಾಣಗಳನ್ನು ಬಿಡುವುದುಂಟು. ಕುಹಕೋದ್ಯ ಮಾಡುವುದುಂಟು. ಚುಚ್ಚು ಮಾತುಗಳಿಂದ ಕೆಣಕುವದುಂಟು, ಬೇರೆಯವರನ್ನು ಕಡಿವೆಯಲ್ಲಿ ನೋಡುವ ಈ ಹೀನವಾದ ವಿಷಬೀಜ ಬೆಳೆಯುವ ತನಕವೂ ಅಂತಹ ವ್ಯಕ್ತಿಗೆ ತನ್ನ ಫಲುಮೆಯ ಅರ್ಥವಾಗುವುದಿಲ್ಲ. ಅನುಕೂಲ ವಾತಾವರಣದೊಂದಿಗೆ ಬಿತ್ತಿದ್ದು ಮೊಳೆತು ಹೇಗೆ ದೊಡ್ಡದಾಗುತ್ತದೋ—ಹಾಗೆಯೇ ಬೇರೆಯವರನ್ನು ಹೀನೈಯಿಸುವ ಈ ಬೆಳೆ, ಬ

ಪ್ರಧಾನ ಕಾರ್ಯಾಲಯ: ಉಡುಪಿ. ಸ್ಥಾಪನೆ: ೧೯೩೫

ದಿ ಕೆನರಾ ಮ್ಯೂಚುವಲ್

ಎಶ್ಯೂರೆನ್ಸ್ ಕಂಪೆನಿ, ಲಿಮಿಟೆಡ್,

ಇದುವೇ

ಪಾಲಿಸಿದಾರರ ನಂಬಿಕೆ ಹೆಚ್ಚಿಸುವ ಹೆಸರು

ಅಲ್ಲದೆ

ಸ್ಥಾಪಿತವಾದಂದಿನಿಂದಲೂ ಲಾಭ (ಬೋನಸ್)

ಹಂಚಿದ ಕಂಪೆನಿ.

The Canara Mutual Assurance Co, Ltd.

H. O. UDIPI (SOUTH INDIA) ESTD: 1935.

ಎ. ಕೆ. ಗೋಪಾಲನ್ ದಾವೆಯಲ್ಲಿ

(ಕಳೆದ ಸಂಚಿಕೆಯಿಂದ)

ಕಳೆದ ಸಂಚಿಕೆಯಲ್ಲಿ ಎ. ಕೆ. ಗೋಪಾಲನರನ್ನು ಮದ್ರಾಸು ಹೈಕೋರ್ಟು ಬಿಡುಗಡೆ ಮಾಡಿದ ಕೇವಲ ಮೂರು ನಾಲ್ಕು ನಿಮಿಷದೊಳಗೆ ತಿರುಗಿ ಸರಕಾರ ಬಂಧಿಸಿದ ವಿಚಾರವನ್ನು ಬರೆದಿದ್ದೆವು. ಕೋರ್ಟಿನ ತೀರ್ಪಿಗೆ ವಿರುದ್ಧವಾದ ಮತ್ತು ಅಪಚಾರವನ್ನುಂಟುಮಾಡುವ ಸರಕಾರದ ಧೋರಣೆಯನ್ನು ನ್ಯಾಯಮೂರ್ತಿಗಳಾದ ಶ್ರೀ ಸತ್ಯನಾರಾಯಣ ರಾಯರು ಪತ್ರಿಕಾ ಹೇಳಿಕೆಗಳ ಮೂಲಕ ಖಂಡಿಸಿದ್ದರು. ಹಿಂದಿನ ಎಡ್ವಕೇಟ್ ಜನರಲ್ಲರಾದ ಕುಟ್ಟಿಕೃಷ್ಣ ಮೆನನ್ನರಿಗೂ ಇತರ ಮುಖ್ಯಾಧಿಕಾರಿಗಳಿಗೂ ಈ ಪುನರ್ಬಂಧನದ ವಿಚಾರ ತಿಳಿದಿತ್ತೆಂದು ಅವರು ಅಭಿಪ್ರಾಯ ಪಟ್ಟಿದ್ದರು. ಎಡ್ವಕೇಟ್ ಜನರಲ್ಲರಾದ ಕುಟ್ಟಿ ಕೃಷ್ಣ ಮೆನನ್‌ರು ಕೋರ್ಟಿನ ಮುಂದೆ ಶ್ರೀ ಸತ್ಯನಾರಾಯಣರಾಯರು ಪತ್ರಿಕೆಗಳಿಗೆ ಕೊಟ್ಟ ಹೇಳಿಕೆಯ ಕುರಿತು:

ಸನ್ಮಾನ್ಯ ಶ್ರೀ ಸತ್ಯನಾರಾಯಣರು ನನ್ನ ಹಾಗೂ ಇತರ ಸರಕಾರೀ ಉಚ್ಚ ಅಧಿಕಾರಿಗಳ ಮೇಲೆ ಜನತೆಯಲ್ಲಿ ತಪ್ಪು ತಿಳುವಳಿಕೆ ಹುಟ್ಟುವಂತಹ ಅಸತ್ಯ ಆರೋಪಗಳನ್ನು ಮದ್ರಾಸಿನ ಪ್ರಮುಖ ಪತ್ರಿಕೆಗಳಿಗೆ ಕೊಟ್ಟಿರುತ್ತಾರೆ. ಎಡ್ವೋಕೇಟ್ ಜನರಲ್ ಮತ್ತು ಇತರ ಸರಕಾರೀ ಅಧಿಕಾರಿಗಳು ಹೈಕೋರ್ಟಿನ ತೀರ್ಪನ್ನು ಅವಮಾನಿಸುವ ಹಂಚಿಕೆಯನ್ನು ಮಾಡಿರುತ್ತಾರೆಂಬ ವಾದ ಅವರದಾಗಿತ್ತು. ಕೇಂದ್ರದಲ್ಲಿ ಪಾರ್ಲಿಮೆಂಟಿನ ಮಂಜೂರಾತಿಗೊಂಡು ಅಧ್ಯಕ್ಷರ ಒಪ್ಪಿಗೆಯನ್ನು ಪಡೆದಂತಹ ಹೊಸ ಕಾಯಿದೆಯನ್ವಯ ಬಂಧಿಸಬೇಕಾಗಿತ್ತು. ಕೋರ್ಟಿನ ತೀರ್ಪನ್ನು ಉಲ್ಲಂಘಿಸುವ ಇಲ್ಲವೆ ಅವಮಾನಿಸುವ ಉದ್ದೇಶ ಸರಕಾರಕ್ಕಿದ್ದಿಲ್ಲ. ನ್ಯಾಯಾಧೀಶರು ತೀರ್ಪನ್ನು ಹೇಳುವ ದಿನವೇ ಹೊಸ ಕಾಯಿದೆಯ ಮೂಲ ಸ್ವರೂಪವನ್ನು ನ್ಯಾಯಾಧೀಶರ ಮುಂದಿಟ್ಟೆನು. ಆದರೆ ನ್ಯಾಯಾಧೀಶರು ಅದನ್ನು ಕಣ್ಣೆತ್ತಿ ನೋಡುವಷ್ಟು ಔದಾರ್ಯವನ್ನು ಸಹ ತೋರಿಸಲಿಲ್ಲ. ಇಂತಹ ಕಾಯಿದೆಯ ಅಪ್ರಮಾಣಿಕತನವನ್ನರಿತುಕೊಳ್ಳದೆ ನ್ಯಾಯಾಧೀಶರು ತಮ್ಮ ತೀರ್ಪನ್ನು ಓದಿಹೇಳಿಬಿಟ್ಟರು. ನ್ಯಾಯಾಧೀಶರ ತೀರ್ಪನ್ನಿತ್ತ ಕೇವಲ ಮೂರು ನಾಲ್ಕು ನಿಮಿಷದಲ್ಲೇ ಕೋರ್ಟಿನ ವರಾಂಡವನ್ನು ದಾಟುವಾಗಲೇ ನೂತನ ಕಾಯಿದೆಯ ಪ್ರಕಾರ ಎ. ಕೆ. ಗೋಪಾಲನರನ್ನು ತಿರುಗಿ ಬಂಧಿಸಿದ ವಿಚಾರ ತೀರ್ಪು ಕೊಡುವ ಮೊದಲೇ ನನಗೆ ಸಂಪೂರ್ಣ ಗೊತ್ತಿತ್ತೆಂದು ಮಾನ್ಯ ಸತ್ಯನಾರಾಯಣರಾಯರು ಅಭಿಪ್ರಾಯ ಪಟ್ಟಿರುತ್ತಾರೆ. ಇದು ತೀರಾ ಅಭಾಸ ಮಾತ್ರವಲ್ಲ ಸುಳ್ಳಿನ ಪರಮಾವಧೀ ಕೂಡಾ ಆಗಿದೆ.

ನ್ಯಾ. ಮೂರ್ತಿ ರಾಘವ ರಾವ್: ಅವರು "ಬಕುಟ" ನಿಮಗೆ ಆ ಆರ್ಡರಿನ ವಿಚಾರ ತಿಳಿದಿದೆಯೆಂದು ಸೂಚಿಸಿದ್ದರು. ಅದರಿಂದ ದಯಮಾಡಿ 'ಬಹುಶಃ' ಎಂಬುದನ್ನು ಸೇರಿಸಿರಿ.

ಕುಟ್ಟಿ ಕೃಷ್ಣ ಮೆನನ್: ನನ್ನ ಕೂಡೆ ಪತ್ರಿಕಾ ಪ್ರಕಟಣೆ ಇದೆ.

ಶ್ರೀ ರಾಘವ ರಾವ್: ನಿಮ್ಮ ಕೂಡೆ ಪತ್ರಿಕಾ ಪ್ರಕಟಣೆ ಇರಬಹುದು. ಆದರೆ ಅವರು ಹೇಳಿಕೆಯಲ್ಲಿ "ಬಹುಶಃ" ಎನ್ನುವ ವಾಕ್ಯದ ಪ್ರಯೋಗ ಮಾಡಿದ್ದನ್ನು ನಾನು ಚೆನ್ನಾಗಿ ಬಲ್ಲೆ.

ಕುಟ್ಟಿ ಕೃಷ್ಣ ಮೆನನ್: ಸನ್ಮಾನ್ಯ ಸತ್ಯನಾರಾಯಣರಾಯರು ನನ್ನ ವ್ಯಕ್ತಿತ್ವದ ಮೇಲೆ ಕಳಂಕವನ್ನು ತರುವಂಥ ಆಪಾದನೆಯನ್ನು ತಂದಿರುತ್ತಾರೆ. ಬಂಧಿಸುವ ಮುನ್ನ ಆ ಟಿಕ್ಕಿನ ಪೂರ್ತಿ ಪಾಠ ನನಗೆ ತಿಳಿಯದಿರಲು ಸಾಧ್ಯವಿಲ್ಲವೆಂದು ಅವರು ಹೇಳಿರುತ್ತಾರೆ. ಪೋಲೀಸ್ ಅಧಿಕಾರಿಯ ಕಿಸೆಯಲ್ಲಿ ಆರ್ಡರ್ ಇದ್ದರೆ ಸರಕಾರೀ ವಕೀಲನಿಗೆ ತಿಳಿದಿರಬೇಕೆಂದಿದೆಯೇ? ಸಾರ್ವಜನಿಕ ಕೇಸುಗಳಲ್ಲಿ ಪಾರ್ಟಿ ಪರ ವಹಿಸುವದಷ್ಟೇ ಅವನ ಕಾರ್ಯ; ಹೊರತು ಪೋಲೀಸು ಅಧಿಕಾರಿಗಳೊಡನೆ ಯಾವ ಸಂಪರ್ಕವೂ ಅವನಿಗಿರುವುದಿಲ್ಲ. ನಾನೂ ಮದ್ರಾಸು ಸರಕಾರ ಮತ್ತು ಅದರ ಉಚ್ಚಾಧಿಕಾರಿಗಳು ಇದರಲ್ಲಿ ಪಿತೂರಿಯೂ ಇರುವವೆಂದು ಹೇಳುವಲ್ಲಿ ಮಾನ್ಯ ನ್ಯಾಯಾಧೀಶರು ಸ್ವಲ್ಪವಾದರೂ ವಿಚಾರ ವಿಮರ್ಶೆ ಮಾಡಿದ್ದಾರೆಯೇ? ಮದ್ರಾಸು ಹೈಕೋರ್ಟಿನ ನ್ಯಾಯದ ನನ್ನ ಜವಾಬ್ದಾರಿಯ ಜೀವನದಲ್ಲಿ ಯಾವದೇ ರೀತಿಯ ಮರೆಮಾಚುವ ಪ್ರಸಂಗದಲ್ಲಾಗಲೀ — ಕಾಯಿದೆ ವಿರುದ್ಧವಾದುದರಲ್ಲಾಗಲೀ ಕೈ ಹಾಕಿದ್ದಿಲ್ಲವೆಂದು ಸ್ಪಷ್ಟೀಕರಿಸಬಲ್ಲೆ. ನ್ಯಾಯಾಧೀಶರು ಯಥಾರ್ಥ ವಿಚಾರ ಗಳನ್ನು ನನ್ನಿಂದ ಕೇಳಿ ಅನರ್ಥ ಹುಟ್ಟಿಸುವಂತಹ ಹೇಳಿಕೆಯನ್ನು ಕೊಡಬಾರದಾಗಿತ್ತು. ಸರಕಾರೀ ಶ್ರೇಷ್ಠ ಅಧಿಕಾರಿಗಳ ಕುರಿತು, ಇತರ ಸದಸ್ಯರ ಕುರಿತೂ ನಾನೇನನ್ನೂ ಹೇಳಬಯಸುವುದಿಲ್ಲ. ಅನುಚಿತವಾದ ಈ ಪ್ರಕಟಣೆಯನ್ನು ಕಡೆಗಣಿಸುವಷ್ಟು ಪ್ರಾಮಾಣಿಕತನ ಅವರಲ್ಲಿದೆಯೆಂದು ನಾನು ನಂಬಿದ್ದೇನೆ. ಇನ್ನಾದರೂ ಶ್ರೀ ಸತ್ಯನಾರಾಯಣರಾಯರಿಗೆ ಕೋರ್ಟಿನ ಹಾಗೂ ಅವರ ಘನತೆಗೆ ಕುಂದು ಬರದಂತೆ ವರ್ತಿಸುವುದು ಅತ್ಯಂತ ಜಾಣತನದ್ದಿದೆ. ತನ್ನ ಹೇಳಿಕೆಯನ್ನು ಹಿಂದೆ ತೆಗೆದುಕೊಂಡು ಪತ್ರಿಕೆಯಲ್ಲಿ ಅದರ ಯಥಾರ್ಥವನ್ನು ಪ್ರಕಟಿಸುವದೇ ಉತ್ತಮ ಪರಿಹಾರ ಮಾರ್ಗ. ಘನ ಸರಕಾರ ಹಾಗೂ ಶ್ರೇಷ್ಠ ಅಧಿಕಾರಿಗಳ ಕುರಿತಾಗಿ ಹೇಳುವದಾದರೆ ಕ್ಷಮೆಯಾಚಿಸುವದಕ್ಕಿಂತ ಉಚಿತವಾದಮಾರ್ಗ ಬೇರೆ ಇಲ್ಲವೆನ್ನುತ್ತೇನೆ."

ನ್ಯಾಯಾಧೀಶ ಶ್ರೀ ಸತ್ಯನಾರಾಯಣ ರಾವ್: ಶ್ರೀ ಸಿ. ರಾಮಚಂದ್ರನ್ (ಉಪಕಾರ್ಯದರ್ಶಿ)ರವರ ಎರಡನೇ ಪ್ರಮಾಣಪತ್ರ (Affidavit)ವನ್ನು ನೀವು ಓದಿರಬಹುದೆಂದು ಊಹಿಸುತ್ತೇನೆ.

ಮೆನನ್: ಇಲ್ಲ; ನನಗೆ ಗೊತ್ತಿರುವುದಿಲ್ಲ.

ಶ್ರೀ ಸತ್ಯನಾರಾಯಣ ರಾವ್: ಎರಡನೇ ಪ್ರಮಾಣ ಪತ್ರದಲ್ಲಿ "ಸರಕಾರವು ಕೋರ್ಟಿನ ಇತ್ತೀಚಿನ ತೀರ್ಪಿನನ್ವಯ ಬಿಡುಗಡೆ ಮಾಡಿದರೂ ಕಾಯಿದೆ ಸಲಹೆಗಾರರ ಸಲಹೆ ಮೇರೆಗೆ ಹೊಸ ಕಾನೂನಿನನ್ವಯ ಆಪಾದಿತನನ್ನು ಸ್ಥಾನಬದ್ಧತೆಗೊಳಿಸಲಾಗಿದೆ.' ಎಂದು ಹೇಳಲಾಗಿದೆ.

ಕುಟ್ಟಿ ಕೃಷ್ಣ ಮೆನನ್: ಆದರಿಂದಾಗಿ ಎಡ್ವೋಕೇಟ ಜನರಲ್ಲರಿಗೆ ಈ ಅನಿರೀಕ್ಷಿತ ಬಂಧನದ ವಿಚಾರವುಪೂರ್ವಭಾವಿಯಾಗಿ ತಿಳಿದಿತ್ತೆಂದು ಅರ್ಥವಾಗುತ್ತದೆಯೇ?

ಶ್ರೀ ಸತ್ಯನಾರಾಯಣರಾವ್: ಇದುವೆ ಸಮಸ್ಯಾತ್ಮಕ ವಿಚಾರ!

ಕುಟ್ಟಿ ಕೃಷ್ಣ ಮೆನನ್: ಸಮಸ್ಯಾತ್ಮಕ ವಿಚಾರಗಳ ಮೇಲೆ ಹೊಣೆಗೆಟ್ಟ ಅಭಿಪ್ರಾಯವನ್ನು ವ್ಯಕ್ತಪಡಿಸಬಾರದಾಗಿತ್ತು!

ಶ್ರೀ ಸತ್ಯನಾರಾಯಣ ರಾವ್: ಜವಾಬ್ದಾರಿಯುಳ್ಳ ಅಧಿಕಾರಿಯೇ ಹೇಳಿಕೆ ಕೊಟ್ಟಿರುತ್ತಾರೆಂಬುದು ತಮ್ಮ ಜ್ಞಾಪಕದಲ್ಲಿರಲಿ. ಪ್ರಮಾಣ ಪತ್ರದಲ್ಲಿ ಕಾಯಿದೆ ಸಲಹೆಗಾರರ (Legaladviser) ಸಂಪೂರ್ಣ ಚರ್ಚೆಯಾದ ನಂತರವೇ ಈ ಕ್ರಮವು ಕೈಗೊಂಡು ಹೊಸಕಾಯಿದೆಯನ್ವಯ ತಿರುಗಿ ಬಂಧಿಸಲಾಯಿತೆಂದು ಸ್ಪಷ್ಟೀಕರಿಸಲಾಗಿದೆ.

ಕು. ಮೆನನ್: ಎಡ್ವೋಕೇಟ್ ಜನರಲ್ಲನಿಗೆ ಹೊಸ ಆರ್ಡರ್ ಕಾಯಿದೆಗತವಾಗಿ ಆಚರಣೆ ಬರುವ ಅಂಶ ಗೊತ್ತಿದೆಯೆಂಬ ಅಭಿಪ್ರಾಯ ಅದರಿಂದಾಗಲು ಸಾಧ್ಯವಿದೆಯೇ?

ಶ್ರೀ ಸತ್ಯನಾರಾಯಣ ರಾವ್: ಇದು ಜಟಿಲವಾದ ಸಮಸ್ಯೆ. ವಿಶೇಷ ಹೊಣೆಯುಳ್ಳಂತಹ ಸರಕಾರೀ ಅಧಿಕಾರಿಯೊರ್ವನ ಹೇಳಿಕೆಯನ್ನು ಸತ್ಯವೋ—ಸುಳ್ಳೋ—ತಪ್ಪೋ ಸರಿಯೋ ಎಂದು ಕೋರ್ಟು ವಿಚಾರಿಸಿ ತಮಗೆ ವಿವರಿಸಿ ಹೇಳುವುದು ಕೋರ್ಟಿನ ಕರ್ತವ್ಯವೆಂದು ನಾನು ತಿಳಿಯಲಾರೆ.

ಕು. ಮೆನನ್: ನಾನು ಕೋರ್ಟನ್ನು ಬಿಟ್ಟು ತಪ್ಪತ್ತು ಸೆಕೆಂಡುಗಳ ಅಂತರವನ್ನು ಕೂಡಾ ದಾಟಿಲ್ಲ.

ಶ್ರೀ ಸತ್ಯನಾರಾಯಣರಾವ್: ನೀವು ಹೇಳಬೇಕಾದ್ದನ್ನೆಲ್ಲ ಹೇಳಿಯಾಯಿತೆಂದು ಭಾವಿಸುತ್ತೇನೆ. ನಾನದನ್ನು ಗಮನವಿಟ್ಟು ಕೇಳಿರುತ್ತೇನೆ. ಇದು ಈಗಿನ ವಿಚಾರಗಳ ಚರ್ಚಾ ಸ್ಥಾನವಲ್ಲ.

ಕು. ಮೆನನ್: ಮಾನ್ಯ ನ್ಯಾಯಾಧೀಶರು ನನ್ನ ವ್ಯಕ್ತಿತ್ವಕ್ಕೆ ಕುಂದು ಬರುವ ಹೇಳಿಕೆಯನ್ನು ಕೊಟ್ಟಿರುತ್ತೀರಿ.

ಶ್ರೀ ಸತ್ಯನಾರಾಯಣ ರಾವ್: ಸರಕಾರದ ಹೊಣೆಗಾರ ಅಧಿಕಾರಿಯೊಬ್ಬನು ಕಾಯಿದೆ ಸಲಹೆಗಾರ (Legal Advisar)ನ ಸುದೀರ್ಘ ಸಮಾಲೋಚನೆಯಿಂದಲೇ ತಿರುಗಿ ಬಂಧಿಸುವ ನೂತನ ಕಾಯಿದೆಯನ್ನು ಆಚರಣೆಗೆ ತರಲಾಗಿದೆಯೆಂದು ಪ್ರಮಾಣ ಪತ್ರವನ್ನು ಸಲ್ಲಿಸಿದ ಮೇಲೆ ನಿಮ್ಮನ್ನು ಕೇಳುವ ಅವಶ್ಯಕತೆ ನನಗೆ ತೋರುವುದಿಲ್ಲ. ನಿಮ್ಮ ವಾದವು ನನಗೆ ಅಗತ್ಯವಿಲ್ಲ. ಈ ವಿಚಾರದ ತನಿಖೆ ಕೋರ್ಟಿನ ಮುಂದೆ ಬೇಡ ನನ್ನ ತೀರ್ಪಿನ ಕುರಿತು ಕೇಳುವವರು ನೀವಲ್ಲ!

ಕು. ಮೆನನ್: ನಿಮ್ಮ ಕಾರಣಗಳು ಪ್ರಬಲವಾದವುಗಳಲ್ಲ. ಆದುದರಿಂದ ಪತ್ರಿಕಾ ಹೇಳಿಕೆಯನ್ನು ನೀವು ಅವಶ್ಯವಾಗಿ ಹಿಂತೆಗೆದುಕೊಳ್ಳಬೇಕು. ಕುರುಕ ಮನೋವೃತ್ತಿಯ ಮತ್ತು ಅವ್ಯವಹ

ರಸ್ಪರ ಪ್ರಶಂಸೆಯ, ಅಲ್ಪ ಮನೋವೃತ್ತಿಯ ವಾತಾವರಣದಿಂದ ಬೆಳೆದು ಒಂದು ದಿನ ವಿಷ ಫಲ ಕೊಟ್ಟೇ ಕೊಡುತ್ತದೆ. ತಾನು ತೋರಿಸಿದ್ದು ತನಗೆ ಇದಿರು ಗುವವುದುಂಟು. ತಾನು ಇತರರಿಗೆ ಬಿಟ್ಟ ವಾಗ್ಬಾಣ ತನಗೇ ತಿರುಗುವ ಸಂದರ್ಭದಲ್ಲಿ ತಾನು ಬಿತ್ತಿದ್ದರ ಫಲದ ಅರಿವಾಗುತ್ತದೆ. ಆಗ ತನ್ನ ಅಚಾತುರ್ಯಕ್ಕೆ ಪಶ್ಚಾತ್ತಾಪ ಪಡಬೇಕಾಗುತ್ತದೆ. ಬಿತ್ತಿದ್ದೊಂದು—ಬೆಳೆದದ್ದೊಂದಾಗುತ್ತದೆ. ಬಿತ್ತಿದ್ದು ಬೆಳೆಯುವಾಗ ಕಡುಕಾಗುವದೂ ಉಂಟು. "ಬಿತ್ತಿದ್ದನ್ನೇ ಪಡೆವ ನಾರಾಯಣ!"ಎಂದು ಜನ ಗೇಲಿಮಾಡಿದರೆ ಅಚ್ಚರಿಪಡುವಂತಹದೇನೂ ಇಲ್ಲ. ಅವು ಬಿತ್ತಿದ್ದರ ಫಲ ನಮಗೆ ಹೇಗಾಗುತ್ತದೋ—ಹಾಗೆಯೇ ದುಷ್ಟಲವು ಕೂಡಾ ನಮಗೆಯೇ ತಿರುಗುವದುಂಟು.

THE BOMBAY LIFE ASSURANCE COMPANY, LTD.
ದಿ ಬೊಂಬೆ ಲ್ಯಾಫ್ ಎಶ್ಯೂರೆನ್ಸ್ ಕೋ., ಲಿಮಿಟೆಡ್
(ಸ್ಥಾಪನೆ: 1908)
ಅತ್ಯಲ್ಪ ಖರ್ಚಿನಿಂದ ಅತ್ಯಧಿಕ ಲಾಭವನ್ನೀಯುವ
ಅಗ್ರಗಣ್ಯ ವಿಮಾ ಸಂಸ್ಥೆಗಳಲ್ಲೊಂದು
ಪ್ರಧಾನ ಏಜಂಟರು:
ಕೊಚ್ಚಿಕಾರ್ ಬ್ರದರ್ಸ್, ಲಿಮಿಟೆಡ್ ಉಡುಪಿ.
ಇವರ ಶಾಖಾ ಕಚೇರಿಗಳು:
ಬೊಂಬಾಯಿ, ಮದ್ರಾಸು, ಬೆಂಗಳೂರು, ಕೊಯಮುತ್ತೂರು, ತ್ರಿವೇಂದ್ರಮ್, ಕಲ್ಲಿಕೋಟೆ ಮತ್ತು ಮಂಗಳೂರು.
ಕಳೆದ ಮುವತ್ತೆಂಟು ವರುಷಗಳಿಂದ ವಿಮಾ ಕ್ಷೇತ್ರದಲ್ಲಿ ಸತತ ದುಡಿದವರಾದ ನಾವು ಜನಾಂಗದ ಶ್ರೇಯೋಭಿವೃದ್ಧಿಯ ಕಡೆಗೆ ನಮ್ಮ ನಮ್ರ ಸೇವೆಯನ್ನು ಸಲ್ಲಿಸಿರುತ್ತೇವೆಂಬುದೇ ನಮ್ಮ ಹೆಗ್ಗಳಿಕೆಯ ಮಾತು.
ವಿಮಾ ಮಾಡಲಿಕ್ಕಾಗಲೀ, ಪ್ರಾತಿನಿಧ್ಯ ಪಡೆಯಲಿಕ್ಕಾಗಲೀ
ದಯಮಾಡಿ ನಮಗಾಗಲೀ ಅಥವಾ ನಮ್ಮ ಶಾಖೆಗಳಿಗಾಗಲೀ ಬರೆಯಿರಿ.

ಮೂಡಿದ ಸ್ವಾರಸ್ಯ ವಿಚಾರಗಳು.

ರ್ಯವಾದ ನಿಮ್ಮ ಹೇಳಿಕೆ ನನ್ನ ವ್ಯಕ್ತಿತ್ವಕ್ಕೆ ಅವಮಾನಾರ್ಹವಾಗಿರುತ್ತದೆ. ನ್ಯಾಯಾಧೀಶರು ಹೇಳುವಂತಹ ದಾಖಲೆಗಳು ಅಸತ್ಯಪೂರ್ಣವಾದಂಥವುಗಳು— ಸತ್ಯಕ್ಕೆ ವಿರೋಧವಾದಂತಹುಗಳು.

ಶ್ರೀ ಸತ್ಯನಾರಾಯಣ ರಾವ್: ಈ ವಿಚಾರವನ್ನು ಉಪಕಾರ್ಯದರ್ಶಿಗಳಾದ ಶ್ರೀ ಸಿ. ರಾಮಚಂದ್ರನ್ನವರು ಪ್ರಮಾಣಪತ್ರದಲ್ಲಿ ನಮೂದಿಸಿರುತ್ತಾರೆ. ಈಗ ನೀವು ನಿಮ್ಮ ಹೇಳಿಕೆಯನ್ನು ಕೊಟ್ಟಿರುವಿರಿ; ಅದನ್ನೂ ಕೂಡಾ ತೆಗೆದುಕೊಳ್ಳಲಾಗಿದೆ. ಶ್ರೀ ಸಿ. ರಾಮಚಂದ್ರನ್‌ರವರ ಪ್ರಮಾಣಪತ್ರ ಯಥಾರ್ಥವಾಗಿದೆಂದು ನನ್ನ ಕಲ್ಪನೆಯಾಗಿದೆ. ಈಗ ನೀವು ಅದನ್ನು ಹಾಗಲ್ಲವೆಂದು ಅಲ್ಲಗಳೆಯುವಿರಾದರೆ ನಾವು ಆ ವಿಚಾರವನ್ನು ನಿಮ್ಮಿಂದ ತೆಗೆದುಕೊಳ್ಳಲು ಸಿದ್ಧರಿದ್ದೇವೆ.

ಶ್ರೀ ರಾಘವ ರಾವ್ (ಮುಖ್ಯ ನ್ಯಾಯಾಧೀಶರು): ವಿಚಾರವಂತರಾದ ನನ್ನ ಮಿತ್ರರ ಹೇಳಿಕೆಯನ್ನು ತೆಗೆದುಕೊಳ್ಳುವಂತೆ ನಾನು ನಿಮಗೆ ಸೂಚಿಸುವವನಿದ್ದೇನೆ.

ಶ್ರೀ ಸತ್ಯನಾರಾಯಣ ರಾವ್: ಅವರು ಪ್ರಮಾಣಪತ್ರದಲ್ಲಿ ತಪ್ಪು ವರದಿ ಮಾಡಿದ್ದರೆ ನಾವದಕ್ಕೆ ಹೊಣೆಗಾರರಾಗಲಾರೆವು.

ಕು. ಮೆನನ್: ಸರಕಾರಕ್ಕೆ ಹಲವು ಜನ ಕಾಯಿದೆ ಸಲಹೆಗಾರರು ಇದ್ದಾರೆಂಬುದನ್ನು ನ್ಯಾಯಾಧೀಶರ ಗಮನಕ್ಕೆ ತರುತ್ತೇನೆ.

ಶ್ರೀ ಸತ್ಯನಾರಾಯಣ ರಾವ್: ಬೇರೆ ಸಲಹೆಗಾರರಾರುವರೆಂಬುದನ್ನು ಕೋರ್ಟಿಗೆ ತಿಳುವಳಿಕೆ ಹೇಳುವ ಆವಶ್ಯಕವಿಲ್ಲ. ನಿಮ್ಮ ಹೇಳಿಕೆಯನ್ನು ಸ್ವೀಕರಿಸುವದಷ್ಟೇ ನಮ್ಮ ಕೆಲಸ. ನಾನು ಹೇಳಿಕೆಯಲ್ಲಿ ಆರೋಪಿಸಿದ ಅಂಶಗಳು ಸರಕಾರ ಹೊಣೆಗಾರ ಅಧಿಕಾರಿಯ ಪ್ರಮಾಣಪತ್ರದ ಆಧಾರದಿಂದಲೇ ಆಗಿರುತ್ತದೆ. ಸರಕಾರಕ್ಕೆ ಕಾಯಿದೆಗಾರರಾಗಿ ಬೇರಾರಿದ್ದಾರೆಂದು ವಿಚಾರಿಸುವ ಹವ್ಯಾಸ ನನಗೆ ಬೇಕಾಗಿಯೂ ಇಲ್ಲ.

ಕು. ಮೆನನ್: ನನ್ನ ಯಥಾರ್ಥ ನಿವೇದನೆಯ ಮೇಲಾದರೂ ನ್ಯಾಯಾಧೀಶರು ತಮ್ಮ ಹೇಳಿಕೆಯನ್ನು ಹಿಂದೆ ತೆಗೆದುಕೊಳ್ಳಬಹುದೇ?

ಮು. ನ್ಯಾಯಾಧೀಶ ರಾಘವರಾವ್: ನಾವೀಗ ನಿಮ್ಮ ಹೇಳಿಕೆಯನ್ನು ಸ್ವೀಕರಿಸಿದ್ದೇವೆ. ಮುಂದೆ ನಮ್ಮ ಹೇಳಿಕೆಯ ಕುರಿತಾಗಿ ವಿಮರ್ಶಿಸುವದಕ್ಕೆ ಅದು ಆವಶ್ಯವಾಗಿದೆ.

ಕು. ಮೆನನ್: ಮಾನ್ಯ ನ್ಯಾಯಾಧೀಶರ ವಾದವನ್ನು ಒಪ್ಪಿದೆ. ನನ್ನ ವಿನಯ ಪ್ರಾರ್ಥನೆಯೆಂದರೆ ನ್ಯಾಯಾಧೀಶರ (ಸತ್ಯನಾರಾಯಣರಾಯರ) ಹೇಳಿಕೆ ಅಯಥಾರ್ಥವಾಗಿದೆಯೆಂಬುದೇ.

ಶ್ರೀ ಸತ್ಯನಾರಾಯಣರಾವ್: ಈ ವಿಷಯದಲ್ಲಿ ನಾವೊಂದು ನಿರ್ಣಯಕ್ಕೆ ಬರುವವರಿದ್ದೇವೆ. ನಿಮ್ಮ ಹೇಳಿಕೆಯನ್ನು ಕೂಲಂಕುಷವಾಗಿ ಸರಕಾರದ ಪ್ರಮಾಣಪತ್ರದೊಂದಿಗೆ ವಿಮರ್ಶೆ ಮಾಡುತ್ತೇವೆ.

ಕು ಮೆನನ್: ಅದು ಅವಶ್ಯವೆಂದಾದರೆ ಮಾನ್ಯ ನ್ಯಾಯಾಧೀಶರು ತೀರ್ಪು ಕೊಡುವ ಕಾಲಕ್ಕೆ ತಿರುಗಿ ಪರಾಮರ್ಶಿಸೋಣವಾಗಲಿ.

ಸತ್ಯನಾರಾಯಣ ರಾವ್: ನಾವೂ ಆ ವಿಚಾರದಲ್ಲಿ ಆಲೋಚಿಸುತ್ತೇವೆ. ನೋಟಿಸು ಕೊಡಬೇಕಾಗುತ್ತದೋ ಹೇಗೆಂದು.

ಮಾರ್ಚ ತಿಂಗಳ 13ಕ್ಕೆ ತಿರುಗಿ ಕೋರ್ಟು ವಿಚಾರಣೆಗೆ ತೊಡಗಿತು. ನ್ಯಾಯಮೂರ್ತಿಗಳಾದ ಶ್ರೀ ರಾಘವ ರಾವ್ ಮತ್ತು ಶ್ರೀ ಸತ್ಯನಾರಾಯಣರಾಯರು ಎಡ್ವೋಕೇಟ್ ಜನರಲ್ಲರಾದ ಶ್ರೀ ವಿ. ಕೆ. ತಿರುವೆಂಕಟಾಚಾರಿಯವರೊಡನೆ ಪ್ರಮಾಣ ಪತ್ರದ ಸ್ಪಷ್ಟೀಕರಣವಾಗಬೇಕೆಂದು ಅಜ್ಞೆಯಿತ್ತರು ಹಿಂದಿನ ಎಡ್ವೋಕೇಟ್ ಜನರಲ್ಲರ ಬದಲು ಶ್ರೀ ವಿ. ಕೆ. ತಿರುಮಲಾಚಾರಿಯವರು ಎಡ್ವೋಕೇಟ ಜನರಲ್ಲರಾಗಿ ಬಂದಿರುತ್ತಾರೆ. ಪ್ರಮಾಣ ಪತ್ರದಲ್ಲಿ ನಮೂದಿಸಿರುವಂತೆ ಕಾಯಿದೆ ಸಲಹೆಗಾರರಾರೆಂಬುವ ವಿಚಾರದಲ್ಲಿ ಕೋರ್ಟು ವಿಶೇಷ ಆಸ್ಥೆಯನ್ನು ವ್ಯಕ್ತಪಡಿಸಿತು ಎರಡನೆ ಪ್ರಮಾಣಪತ್ರದ ಸಲಹೆಗಾರರನ್ನು ಈಗಿನ ಎಡ್ವೋಕೇಟ ಜನರಲ್ಲರಿಗೇಕೆ ತಿಳಿಸಲಿಲ್ಲ? ಸತ್ಯ ಹಾಗೂ ಪ್ರಾಮಾಣಿಕತನವನ್ನು ವಂಶಕ್ರಮದ ಸರಕಾರದ ಹಾಗೆ ನಮಗೂ ಇದೆ ಹೊಣೆಯು ಮುಟ್ಟಿಗೂ ಅಷ್ಟೇ. ಅದುದರಿಂದ ಪ್ರತಿಯೊಂದು ವಿಚಾರದ ಸ್ಪಷ್ಟೀಕರಣ ನಮಗೆ ಆವಶ್ಯ ಬೇಕಾಗಿದೆ. ಈ ಸಮಸ್ಯೆ ಪರಿಹರಿಸುವಲ್ಲಿ ಕೂಲಂಕುಷ ತಿಳಿಯದೇ ಹೋದರೆ ಸಮಸ್ಯೆ ಇನ್ನಷ್ಟು ಜಟಿಲವಾಗುವದೇ ಹೊರತು ಬಗೆಹರಿಯಲಾರದೆಂಬುದಾಗಿ ಕೋರ್ಟು ಅಭಿಪ್ರಾಯಪಟ್ಟಿತು.

ಶ್ರೀ ಸತ್ಯನಾರಾಯಣ ರಾವ್: ಮೇಲಿನ ವಿಚಾರಗಳನ್ನು ವರದಿ ಮಾಡುವಲ್ಲಿ ಹೆಚ್ಚಿನ ತೊಡಕೇನೂ ಇರುವುದಿಲ್ಲ. ಎಡ್ವೋಕೇಟ್ ಜನರಲ್ಲರಿಗೆ ಎಷ್ಟು ಸಮಯ ಬೇಕಾದೀತು ಪ್ರಮಾಣ ಪತ್ರವನ್ನು ಹಾಜರು ಪಡಿಸಲಿಕ್ಕೆ?

ಎಡ್ವೋಕೇಟ್ ಜನರಲ್: ಶುಕ್ರವಾರ ಮುಂಜಾನೆ (16–3–51) ಹಾಜರು ಪಡಿಸಬಲ್ಲೆ.

ಶ್ರೀ ಸತ್ಯನಾರಾಯಣ ರಾವ್: ಅಷ್ಟು ಸಮಯ ಕಾಯುವಂತಿಲ್ಲ. ನಾವು ಗುರುವಾರ ದಿನ ವಿಚಾರಣೆಗೆ ತೆಗೆದುಕೊಳ್ಳುವವರಿದ್ದೇವೆ. ಮತ್ತೂ ಆ ದಿನವೇ ತೀರ್ಪನ್ನು ಕೊಡುವವರಿದ್ದೇವೆ. ಅದೂ ಅಲ್ಲದೆ ಶ್ರೀ ಸಿ. ರಾಮಚಂದ್ರನವರು ಮದ್ರಾಸಿನಲ್ಲಿರುವಾಗಲೇ ಪ್ರಮಾಣ ಪತ್ರವನ್ನು ಹಾಜರು ಪಡಿಸುವದು ಮತ್ತಷ್ಟು ಸುಲಭವಲ್ಲವೇ?

ತಿರು ವೆಂಕಟಾಚಾರಿ (ಎಡ್ವೋಕೇಟ್ ಜನರಲ್): ಮಾನ್ಯ ನ್ಯಾಯಾಧೀಶರೇ, ನಾನು ಯಥಾರ್ಥವಾಗಿ ಹೇಳುವದಾದರೆ ನನಗೊಂದೂ ಇದರ ವಿಚಾರವನ್ನೂ ತಿಳಿದಿರುವುದಿಲ್ಲ ಎಡ್ವೋಕೇಟ್ ಜನರಲ್ಲನಾಗಿ ಬಂದದ್ದು ಈಚೆಗೆ. ಆದರೆ ಇಪ್ಪತ್ತಮೂರು ವರ್ಷಗಳಿಂದ ಸನ್ಮಾನ್ಯ ನ್ಯಾಯಾಧೀಶರಡಿಯಲ್ಲಿ ನಿಷ್ಠಾವಂತನಾಗಿ ದುಡಿದಿದ್ದೇನೆ. ಇಂತಹ ವಿಚಾರದಲ್ಲಿ ನಾನು ನನ್ನ ಪಾಲಾಗಿ ಹೆಚ್ಚಿನ ಜವಾಬುದಾರಿಕೆಯನ್ನು ಕೊಡಬಲ್ಲೆ, ಕೋರ್ಟಿಗೆ ಬೇಕಾದ್ದನ್ನು ಒದಗಿಸಿಕೊಡಬಲ್ಲೆ. ಎಲ್ಲದರಲ್ಲೂ ವಿಶ್ವಾಸ ನಂಬುಗೆ ಮುಖ್ಯ!

ಶ್ರೀ ಸತ್ಯನಾರಾಯಣ ರಾವ್: ನೀವೇನು ಹೇಳುವಿರೆಂಬುದು ನನಗರ್ಥವಾಗುವದಿಲ್ಲ. ಸಿ. ರಾಮಚಂದ್ರನವರಿಂದ ಹಾಜರು ಪಡಿಸಲ್ಪಟ್ಟ ಪ್ರಮಾಣಪತ್ರದ ಕೆಲವಂಶದ ಸ್ಪಷ್ಟೀಕರಣ ನನಗೆ ಬೇಕಾಗಿದೆ. ಈಗಲಾದರೂ ನಾನು ಹೇಳಿದಂಶದ ಅರ್ಥವಾಯಿತೋ? ಇದು ಅನವಶ್ಯವೆಂದು ನಿಮ್ಮಭಿಪ್ರಾಯವಲ್ಲ ತಾನೇ?

ಎಡ್ವೋಕೇಟ್ ಜನರಲ್: ಈ ವರೆಗಿನ ನನ್ನ ಹೇಳಿಕೆಯ ಮೇಲೆ ನ್ಯಾಯಾಧೀಶರಿಗೆ ವಿಷಯದ ಪರಿಪೂರ್ಣ ಜ್ಞಾನವಾಗಿರಬಹುದೆಂದು ಭಾವಿಸುತ್ತೇನೆ. ಸನ್ಮಾನ್ಯ ನ್ಯಾಯಾಧೀಶರಿಗೆ ಅತ್ಯಂತ ನಿಷ್ಠೆಯನ್ನು ತೋರಿ ನಡೆಯುವ ಭರವಸೆಯನ್ನು ಕೊಡುವವನಿದ್ದೇನೆ. ಸಾಮಾನ್ಯ ತರಹದ ತೊಡಕುಗಳು ಇದರಲ್ಲಿರುವ ಪ್ರಯುಕ್ತ ಹೆಚ್ಚಿನ ವಿಮರ್ಶೆ ಅನಗತ್ಯವೆಂಬುದೇ ನನ್ನ ಪ್ರಾರ್ಥನೆಯಾಗಿದೆ ನಾನು ನನ್ನ ಸ್ವಂತ ಜವಾಬುದಾರಿಯಿಂದ, ಅಕ್ರಮ ನಡೆದಿಲ್ಲವೆಂದು ತಿರುಗಿ ವಿಜ್ಞಾಪಿಸಿಕೊಳ್ಳುತ್ತೇನೆ.

ಸತ್ಯನಾರಾಯಣ ರಾವ್: ತೀರ್ಪಿಗೆ ಆವಶ್ಯಕವಾದ ಹಲವು ವಿಚಾರಗಳನ್ನು ನಾವು ಬಯಸುತ್ತೇವೆ. ಇದರಲ್ಲೂ ಔದಾರ್ಯ ತೋರಿಸಬೇಕೆಂದು ನಿಮ್ಮಭಿಪ್ರಾಯವೋ? ಇದು ಅವಶ್ಯವೆಂದು ನಿಮಗನಿಸುವುದಿಲ್ಲವೇ?

ಎಡ್ವೋಕೇಟ ಜನರಲ್: ನಾನದನ್ನು ಒದಗಿಸಿಕೊಡುತ್ತೇನೆ.

ಶ್ರೀ ರಾಘವ ರಾವ್: ನಿಮ್ಮಭಿಪ್ರಾಯದಲ್ಲಿ ಅದು ಅನವಶ್ಯಕವೆಂದಿರಬಹುದಲ್ಲವೇ?

ಎಡ್ವೋಕೇಟ್ ಜನರಲ್: ಮುಖ್ಯವಾಗಿ ಸಿ ರಾಮಚಂದ್ರನರವರು ನಾಳೆ ಮದ್ರಾಸನ್ನು ಬಿಟ್ಟು ಹೋಗುವವರಿದ್ದಾರೆ. ಅಂತಲೆ…

ರಾಘವ ರಾವ್: ಅದುದರಿಂದಲೇ ಶೀಘ್ರದಲ್ಲೇ ತೀರಲೆಂದು ಬಯಸುವುದು. ನಮಗೆ ಮುಖ್ಯವಾಗಿ ಸ್ಪಷ್ಟೀಕರಣ ಬೇಕಾಗಿರುವ ಅಂಶಗಳಿವು. ಕುಟ್ಟಿಕೃಷ್ಣ ಮೆನನ್‌ರು ತನಗೆ ಎರಡನೆ ಪ್ರತಿಬಂಧಕದ ಕಾನೂನು ತಿಳಿದೇ ಇಲ್ಲವೆಂದು ಹೇಳಿರುತ್ತಾರೆ. ಸರಕಾರದ ಪ್ರಮಾಣ ಪತ್ರದಲ್ಲಿ 'ಕಾಯಿದೆ ಸಲಹೆಗಾರರ ಸಲಹೆ ಮೇರೆಗೆ" ಎಂದು ನಮೂದಿಸಲಾಗಿದೆ. ಎಡ್ವೋಕೇಟ್ ಜನರಲ್ಲರು ಹೊರತು ಈ ಸಲಹೆ ಬಂದೀತೆ? ಅಥವಾ ಒಂದು ವೇಳೆ ಅವರಿಗೆ ತಿಳಿಯದೆ ಪ್ರತಿಬಂಧಿಸುವದಾದರೆ ಆ ವಿಚಾರವನ್ನು ಎಡ್ವೋಕೇಟ ಜನರಲ್ಲರಿಗೇಕೆ ತಿಳಿಸಲಿಲ್ಲ? ಅಂತಹ ಸಲಹೆಗಾರರಾದರೂ ಯಾರಿರಬಹುದು?

ಸತ್ಯನಾರಾಯಣ ರಾವ್: ನನಗೆ ಅಪ್ರಸಂಗಿಕ ವಿಚಾರವೊಂದೂ ಬೇಕಾಗಿಲ್ಲ. ಅಂತಹ ವಿಚಾರಗಳಿಂದಲೇ ಈ ಅವ್ಯವಸ್ಥೆಯುಂಟಾಯಿತು.

ಬೇಂಕಿಂಗ್ ಸಂಬಂಧದ ಎಲ್ಲಾ ಸಮಸ್ಯೆಗಳಿಗೆ

ದಿ ವಿಜಯಾ ಬೇಂಕ್ ಲಿಮಿಟೆಡ್

ಇವರ ಸಲಹೆ ಕೇಳಿರಿ

ಹೆಡ್ ಆಫೀಸು : : : : ಮಂಗಳೂರು

ಮಡಿಕೇರಿಯಲ್ಲಿ ಒಂದು ಶಾಖೆಯೂ ಬೊಂಬಾಯಿಯಲ್ಲಿ ಒಂದು ಶಾಖೆಯೂ ಜಿಲ್ಲೆಯೊಳಗೆ ಹಲವು ಶಾಖೆಗಳೂ ಇವೆ.

ಸಿರಮು ರೇಷನಾತಿಗಳ ಮೇಲೆ ಆಕರ್ಷಕವಾದ ದರದ ಬಡ್ಡಿಯು ಕೊಡಲ್ಪಡುವುದು	ತಕ್ಕುದಾದ ಜವಾಬ್ದಾರಿಗಳ ಮೇಲೆ ಸುಲಭವಾದ ಶರ್ತಗಳಲ್ಲಿ ಸಾಲಗಳು ಕೊಡಲ್ಪಡುವುವು.

ಸಾಲಿಯನ್ ಸೇಕಡಾ 4¼ರ ಬಡ್ಡಿ ಗಳಿಸುವ ಮೂರು ವರ್ಷದ ಅವಧಿಯ ವಿಜಯಾ ಕೇಶ್ ಸರ್ಟಿಫಿಕೇಟುಗಳ ಮೇಲೆ

ಹಣವನ್ನು ಹಾಕಿರಿ

THE VIJAYA BANK, LTD.,

ಬಿ. ಮಂಜಯ್ಯ ಹೆಗ್ಗಡೆ,
(ದ. ಕ. ಜಿಲ್ಲಾ ಬೋರ್ಡ್ ಪ್ರೆಸಿಡೆಂಟ್
ಡೈರೆಕ್ಟರ್ ಬೋರ್ಡಿನ ಅಧ್ಯಕ್ಷರು.

ಲಕ್ಷ್ಮೀ ಸೆಂಟಾಲ್ ಮಾತ್ರೆ

ಇದರ ಉಪಯೋಗದಿಂದ ಬಹುಕಾಲದ ಮೇಹ, ಪ್ರಮೇಹ, ಮೂತ್ರದ ಉರಿ, ಮೂತ್ರ ಕೃಚ್ಛ್ರ, ಮೂತ್ರದೊಡನೆ ಯಾ ಮುಂದಾಗಿ ಬಿಳುಪು, ಅರಸಿನ, ಕೆಂಪು ಈ ವರ್ಣಗಳಲ್ಲಿ ಕೀವು ಹೋಗುವುದು, ತೊಡೆ ಸಂದಿನಲ್ಲಿ ನೋವು, ಕಾಲ ಗಂಟುಗಳಲ್ಲಿ ವೇದನೆ, ಕಣ್ಣಿನಲ್ಲಿ ಕೀವು ಬರುವುದು, ಶರೀರದಲ್ಲಿ ಉಷ್ಣತೆ, ಸ್ವಪ್ನೇಂದ್ರಿಯ ಇವೆಲ್ಲಾ ಮಾತ್ರೆಯಾಗಿ ಗುಣಕೊಡುವುದು.

ಡಬ್ಬಿ ಒಂದಕ್ಕೆ ರೂ. 2—0—0

ಏಜಂಟ್—

ಶಾ ಕಂಪೆನಿ, ಮಂಗಳೂರು

ಶ್ರೀ ರಾಘವರಾವ್: ಎಡ್ವೋಕೇಟ್ ಜನರಲ್ಲರು ನಮಗೆ ಈ ವಿಚಾರಗಳ ಕುರಿತು ಸಮಂಜಸವಾದ ಉತ್ತರವನ್ನು ಸಾಧ್ಯವಾದರೆ ಸಂಗ್ರಹ ಮಾಡಿಕೊಡಲಿ!

ಎಡ್ವೋಕೇಟ್ ಜನರಲ್: ಅದಕ್ಕೇನೂ ಅಭ್ಯಂತರವಿಲ್ಲ. ರಾಯಿದೆ ಸಲಹೆಗಾರರೆಂದರೆ: ಎಡ್ವೋಕೇಟ್ ಜನರಲ್, ಸರಕಾರೀ ವಕೀಲ, ಕಾಯಿದೇ ಕಾರ್ಯದರ್ಶಿ.

ಶ್ರೀ ರಾಘವ ರಾವ್: ಎರಡನೇ ಪ್ರತಿಬಂಧಕ ಆರ್ಡರನ್ನು ಹಿಂದಿನ ಎಡ್ವೋಕೇಟ್ ಜನರಲ್ಲರಾದ ಕುಟ್ಟಿ ಕೃಷ್ಣ ಮೆನನ್ನರ ಗಮನಕ್ಕೆ ತರದೆಯೇ ತಯಾರಿಸಿದೆಯೆಂದು ನಿನ್ನಿನ ಅವರ ಹೇಳಿಕೆಯಿಂದ ವ್ಯಕ್ತವಾಗುತ್ತದೆ. ಅವರಿಗೇಕೆ ಅದನ್ನು ತೋರಿಸಲಿಲ್ಲ? ಎರಡನೇ ಪ್ರಮಾಣಪತ್ರವನ್ನು ಸಲಿಸಿರುವ ಸಿ. ರಾಮಚಂದ್ರನ್‌ರವರು ಅದನ್ನು ಇತ್ಯರ್ಥ ಗೊಳಿಸಲೇಬೇಕು.

ಎಡ್ವೋಕೇಟ ಜನರಲ್: ಸನ್ಮಾನ್ಯ ನ್ಯಾಯಾಧೀಶರೇ, ಹಲವು ದಿನಗಳಿಂದ ನನ್ನ ನಿದ್ದೆಗೆಡಿಸಿದ ವಿಚಾರವೆಂದರೆ ಇದೇ ಆಗಿರುತ್ತದೆ.

ಶ್ರೀ ರಾಘವ ರಾವ್: ನಿಜವಾಗಿಯೂ; ನಮಗಾ ವಿಚಾರದಲ್ಲಿ ಸಂದೇಹವೇ ಇಲ್ಲ.

ಎಡ್ವೋಕೇಟ್ ಜನರಲ್: ಸಿ. ರಾಮಚಂದ್ರನರು ಎಡ್ವೋಕೇಟ್ ಜನರಲರಿಗೆ ತಿಳಿಸದ ಪರಿಣಾಮವಾಗಿಯೇ ಈ ಎಲ್ಲ ಸಂದಿಗ್ಧ ಪರಿಸ್ಥಿತಿಯನ್ನೆಸ್ಪಕೊಳ್ಳಬೇಕಾಯಿತು. ಮಾನ್ಯ ನ್ಯಾಯಾಧೀಶರು ಏನಾದರೂ ಮಾರ್ಗದರ್ಶನ ಮಾಡುವ ಪಕ್ಷದಲ್ಲಿ....

ಶ್ರೀ ಸತ್ಯನಾರಾಯಣ ರಾವ್: ಮೊದಲು ಎತ್ತಿ ಹೇಳಿದಂಶಗಳ ಕುರಿತು ಸಮಾಧಾನಕರವಾದ ಉತ್ತರ ಬೇಕು. ಇಲ್ಲಿಗೆ ಬಾರಂಗಿ ಬಂದು ಏನಾದರೂ ಹೇಳಿ ಮತ್ತೆ "ನಾನು ಹಾಗೆ ಹೇಳಿದ್ದೇ ಇಲ್ಲ" ಎಂದು ಹೇಳುವವರ ಹೇಳಿಕೆ ಬೇಡ

ಎಡ್ವೋಕೇಟ್ ಜನರಲ್: ತಿರುಗೊಮ್ಮೆ ನ್ಯಾಯಾಧೀಶರ ಮುಂದೆ ಬಂದೆನಿಮಾಡಿಕೊಳ್ಳುವವನಿದ್ದೇನೆ. ಏನೆಂದರೆ ನಾನು ವೈಯಕ್ತಿಕವಾಗಿ ಇದರಲ್ಲಿ ಆಸಕ್ತಿ ವಹಿಸುವದರಿಂದ ತಿರುಗಿ ಸ್ಪಷ್ಟೀಕರಣಬೇಕಾದೀತೇ? ಎಂದು.

ಸತ್ಯನಾರಾಯಣ ರಾವ್: ನಾವೂ ಕೂಡಾ ಆ ಕುರಿತು ಯೋಚಿಸುತ್ತೇವೆ.

ಕೊನೆಗೆ ನ್ಯಾಯಾಧಿಪತಿಗಳು ಕೆಳಗಿನಂತೆ ರಾಪು ಮಂಜೂರು ಮಾಡಿದರು. ತೀರ್ಮಾನಕ್ಕೆ ಬರಬೇಕಾದ ಈ ಅಂಶದಲ್ಲಿ ಹಲವು ತೊಡಕು ಉದ್ಭವವಾಗಿರುವದರಿಂದ ಪ್ರಮಾಣಪತ್ರದ ಎರಡು ಮುದ್ದೆಗಳ ವಿಚಾರದಲ್ಲಿ ಸಿ. ರಾಮಚಂದ್ರನವರ ಸ್ಪಷ್ಟೀಕರಣ ಕೋರ್ಟಿಗೆ ಅವಶ್ಯಕವಾಗಿದೆ. ತೀರ್ಪು ಕೊಡುವ ಮುನ್ನ ಇದನ್ನು ಆತ್ಯಂತಾಸಕ್ತಿಯಿಂದ ಲಕ್ಷಿಸಬೇಕಾಗಿದೆ. 1) ಪ್ರತಿಬಂಧಕ ಕಾನೂನಿನ ಕಾಯಿದೆ ಸಲಹೆಗಾರರಾರು? ಎಲ್ಲಿ ಅವರು ಸಮಾಲೋಚನೆ ನಡಿಸಿ ತೀರ್ಮಾನಕ್ಕೆ ಬಂದರು? 2) ನಾವು ತೀರ್ಪು ಕೊಡುವ ಪೂರ್ವಭಾವಿಯಾಗಿ ನಮಗೇಕೆ ಹೊಸ ಕಾಯಿದೆಯನ್ನು ಪ್ರಯೋಗಿಸಿ ತಿರುಗಿ ಬಂಧಿಸುವ ವಿಚಾರವನ್ನು ತಿಳಿಸಲಿಲ್ಲ? ತೀರ್ಪು ಕೊಡುವ ಕಾಲಕ್ಕೆ ಕೋರ್ಟಿನಲ್ಲಿ ಹಾಜರಿದ್ದ ಹಿಂದಿನ ಎಡ್ವೋಕೇಟ್ ಜನರಲ್ಲರಾದ ಕುಟ್ಟಿ ಕೃಷ್ಣ ಮೆನನ್ನರಿಗೆ ತಿಳಿಸದಿರಲು ಕಾರಣವೇನು? ಈ ಮುಖ್ಯಾಂಶಗಳನ್ನು ಮಾರ್ಚ್ ತಿಂಗಳ 14ರ ಒಳಗೆ ಕೋರ್ಟಿಗೆ ಹಾಜರು ಪಡಿಸತಕ್ಕದ್ದು" ಎಂಬುದಾಗಿ ತೀರ್ಪು ಪಾಸುಮಾಡಿದರು.

ಕೊನೆಗೆ ನ್ಯಾಯಾಧಿಪತಿಗಳು ಈ ವಿಚಾರದ ತೀರ್ಪನ್ನು, ಶ್ರೀ ಎ. ಕೆ. ಗೋಪಾಲನ್ನರು ಸರಕಾರ ತಿರುಗಿ ಬಂಧಿಸಿದ್ದು ಅನುಚಿತವಾಗಿದ್ದು ಅದರ ಪುನರ್ವಿಮರ್ಶೆಯಾಗಬೇಕೆಂದು ಕೇಳಿಕೊಂಡ ಅರ್ಜಿಯ ತೀರ್ಪನ್ನು ಮಾರ್ಚ್ ತಿಂಗಳ 19ಕ್ಕೆ ಕೊಡುವದಾಗಿ ಅಪ್ಪಣೆಕೊಟ್ಟರು.

ಗೋಪಾಲನ್ನರ ಬಿಡುಗಡೆಯ ಆಜ್ಞೆ

ಮಾರ್ಚ್ 19ಕ್ಕೆ ಮದ್ರಾಸು ಹೈಕೋರ್ಟ್ ಶ್ರೀ ಎ. ಕೆ. ಗೋಪಾಲನ್ನರನ್ನು ಎರಡನೆ ಸ್ಥಾನಬದ್ಧತೆಯಿಂದ ಮುಕ್ತ ಮಾಡಿತು. ಸರಕಾರದ ವರ್ತನೆ ಖಂಡನಾರ್ಹವೆಂದು ತೀರ್ಪಿನಲ್ಲಿ ಹೇಳಲಾಗಿದೆ.

ಎ. ಕೆ. ಗೋಪಾಲನ್ನರು ತನ್ನ ವಿವೇಚನಾ ಅರ್ಜಿಯಲ್ಲಿ ಹೈಕೋರ್ಟು ಬಿಡುಗಡೆ ಮಾಡಿದ ಮರುಕ್ಷಣದಲ್ಲಿ ಮದ್ರಾಸು ಸರಕಾರ ತನ್ನನ್ನು ಬಂಧಿಸಿತು. ಆಗ ಅವರ ಕೂಡೆ ಯಾವ ಆರ್ಡರೂ ಇರಲಿಲ್ಲ ಸ್ವೇಚ್ಛಾನುವರ್ತಿಗಳಾಗಿ ನನ್ನನ್ನು ಬಂಧಿಸಿದ್ದಾರೆ. ತನ್ನ ಸ್ಥಾನಬದ್ಧತೆಯ ಆಜ್ಞೆಯು ಪ್ರಾಮಾಣಿಕತನದ್ದಾಗಿಲ್ಲ—ಅದು ಹೈಕೋರ್ಟ ತೀರ್ಪನ್ನು ಉಲ್ಲಂಘಿಸುವದರ ಸಲುವಾಗಿ ನಿರ್ಮಿತವಾದುದು. ಆದರಿಂದ ತನಗೆ ಸರಿಯಾದ ನ್ಯಾಯವನ್ನು ದಯಪಾಲಿಸಬೇಕೆಂದು ಅವರು ಯಾಚಿಸಿದ್ದರು.

ಹೈಕೋರ್ಟಿನ ತೀರ್ಪು

"ಎ. ಕೆ. ಗೋಪಾಲನ್ನರನ್ನು ಹಿಂದೆ ಯಾವ ಕಾರಣದ ಮೇಲೆ ಸ್ಥಾನಬದ್ಧತೆಯಲ್ಲಿಡಲಾಗಿತ್ತೋ—ಅದೇ ಕಾರಣವನ್ನು ಎರಡನೇ ಸ್ಥಾನಬದ್ಧತೆಗೆ ತೋರಿಸಲಾಗಿದೆ. ಗೋಪಾಲನ್ನರನ್ನು ಬಿಡುಗಡೆ ಮಾಡಿದರೆ ದ ಸರಕಾರಕ್ಕೆ ಬಂಬ ಗಂಡಾಂತರವಿದೆಯೆಂದು ಸರಕಾರ ಅಭಿಪ್ರಾಯಪಟ್ಟಿದೆ. ಅಂತಲೇ ಅವರನ್ನು ಇನ್ನೂ ಸ್ಥಾನಬದ್ಧತೆಯಲ್ಲಿಡುವ ಉದ್ದೇಶ್ಯವೆಂದು ಎಡ್ವೋಕೇಟ್ ಜನರಲ್ಲರು ವಾದಿಸಿದ್ದರು ಸರಕಾರ ಈ ಮೊದಲೇ ಹಾಗೆ ನಿರ್ಧರಿಸಿದ್ದರೆ ನಾವು ತೀರ್ಪು ಕೊಡುವ ಮುನ್ನ ಏಕೆ ತಿಳಿಸಬಾರದಾಗಿತ್ತು? ಸರಕಾರದ ಉಪಕಾರ್ಯದರ್ಶಿಗಳಾದ ಶ್ರೀ ಸಿ. ರಾಮಚಂದ್ರನವರು ತಮ್ಮ ಪ್ರಮಾಣಪತ್ರದಲ್ಲಿ ಹೊಸ ಕಾಯಿದೆಯನ್ನು ಜಾರಿಗೆ ತರುವ ಮುನ್ನ ಎಡ್ವೋಕೇಟ್ ಜನರಲ್ ಪಬ್ಲಿಕ್ ಪ್ರೊಸಿಕ್ಯೂಟರ್, ಕಾಯಿದೆ ಶಾಖೆಯ ಕಾರ್ಯದರ್ಶಿಯ ಸಲಹೆಯನ್ನು ಕೇಳಿದೆಯೆಂದು ಹೇಳುತ್ತಾರೆ. ಈ ಕಾಯಿದೆಯನ್ನು ಫೆಬ್ರುವರಿ 22ರ 10½ಗೆ ಸರಿಯಾಗಿ ಹೊರಡಿಸಲಾಯಿತೆಂದೂ, (ಅದೇ ಸಮಯಕ್ಕೆ ರಾಷ್ಟ್ರಪತಿಗಳ ಅಧ್ಯಕ್ಷರ ಒಪ್ಪಿಗೆ ಪಡೆದದ್ದು) ಆದರೆ ಆಗಲೇ ಜಾರಿಗೆ ತರುವ ವಿಚಾರವನ್ನು ಅವರ ಗಮನಕ್ಕೆ ತರುವದು ಸರಕಾರಕ್ಕೆ ಅವಶ್ಯವೆಂದು ತೋರಲಿಲ್ಲವೆಂದು ಹೇಳುವರು. (ಎಡ್ವೋಕೇಟ್ ಜನರಲ್ಲರಾಗಿದ್ದ ಕುಟ್ಟಿ ಕೃಷ್ಣ ಮೆನನ್‌ರು ತನಗೆ ಗೊತ್ತೇ ಇಲ್ಲ ಎಂದಿದ್ದರು) ಎ. ಕೆ. ಗೋಪಾಲನ್ನರು ಸರಕಾರದ ನೂತನ ಕಾಯಿದೆ ಪ್ರಾಮಾಣಿಕತನದಿಂದ ಕೂಡಿಂದೆ ಹೈಕೋರ್ಟಿನ ತೀರ್ಪನ್ನೆಲ್ಲ ಧಿಕ್ಕರಿಸುವಂತಹದಾಗಿದೆ ಎನ್ನುವದರಲ್ಲಿ ತತ್ತ್ವಾಂಶವಿಲ್ಲದೆ ಇಲ್ಲ. ನಾವು ತೀರ್ಪು ಕೊಡುವದನ್ನು ನಿರೀಕ್ಷಿಸಿಕೊಂಡು ಈ ಹೊಸ ಆಜ್ಞೆಯೊಡನೆ ಅಸಿಸ್ಟೆಂಟ್ ಪೋಲೀಸ್ ಕಮಿಶನರು ಇದ್ದುಕೊಂಡು ನಮಗೆ ಪೂರ್ವಭಾವಿಯಾಗಿ ತಿಳಿಸದೇ ಇದ್ದುದನ್ನು ನೋಡುವಾಗ ನಾವು ಬಂಧಮುಕ್ತ ಮಾಡಿದ ಮರುಕ್ಷಣದಲ್ಲಿಯೇ ಪುನರ್ಬಂಧಿಸುವ ಪೂರ್ವ ತೀರಿಕೆ ನಡೆದಿತ್ತೆಂದೇ ಹೇಳಬೇಕು. ಕಾಯಿದೆ ಸಲಹೆಯನ್ನು ಪಡೆದ ಸಂಶಯವೂ ಹೀಗೆ ವರ್ತಿಸಿದ್ದನ್ನು ನೋಡುವಾಗ ಈ ಮೊದಲೇ ವಿಚಾರ ಕಾಯಿದೆ ಸಲಹೆಗಾರರಿಗೂ ತಿಳಿದಿತ್ತೆಂದು ಭಾಸವಾಗುವುದಲ್ಲವೇ? ಒಂದು ವೇಳೆ ಕಾಯಿದೆ ಸಲಹೆಗಾರರ ಸಲಹೆ ಏಕೆ ಕೇಳಬೇಕಾಗಿತ್ತು? ಇದನ್ನೆಲ್ಲ ಪರಿಶೀಲಿಸುವಾಗ ಹೈಕೋರ್ಟಿನ ಆಜ್ಞೆಯನ್ನು ಉಲ್ಲಂಘಿಸಿ ಇಲ್ಲವೆ ಧಿಕ್ಕರಿಸಿ ಕೂಡಲೇ ಬಂಧಿಸಬೇಕೆಂಬ ಉದ್ದೇಶವಾಗಿತ್ತೆನ್ನುವದರಲ್ಲಿ ಯಾವ ಸಂದೇಹವೂ ಇಲ್ಲ.

ಅರ್ಜಿದಾರನು ಒಮ್ಮೆ ಸರಕಾರದ ಕೈ ತಪ್ಪಿ ಹೋದನೆಂದರೆ ತಿರುಗಿ ಅವನನ್ನು ಹಿಡಿಯುವದು ಬಹಳ ಕಷ್ಟಸಾಧ್ಯವಾದದ್ದು. ಅವನು ವಿಧ್ವಂಸಕ ಕಾರ್ಯಗಳ ಮೂಲಕ ಸರ್ವಜನಿಕರಲ್ಲಿ ಗೊಂದಲವೆಬ್ಬಿಸತ್ತಾನೆ. ಅರ್ಜಿದಾರನು ಈ ಅಪಾಯಕಾರೀ ವರ್ತನೆಯವನಾಗಿದ್ದುದರಿಂದಲೇ ಸರಕಾರ ಹೊಸ ಕಾಯಿದೆಯನ್ನು ಪ್ರಯೋಗಿಸಿತೆಂದು ಪ್ರಮಾಣಪತ್ರದಲ್ಲಿ ಹೇಳಲಾಗಿದೆ. ಈ ವಾದವೂ ತರ್ಕಬದ್ಧವಾದುದಲ್ಲ. ಏಕೆಂದರೆ ಸರಕಾರದ ಇಷ್ಟು ದೊಡ್ಡ ಪೋಲೀಸು ಪಡೆಗಳೂ, ಸಿ. ಐ. ಡಿಗಳೂ ಪ್ರಾಂತವಿಡೀ ಇರುವಾಗ ಯಾಕತಿತ್ ಒಬ್ಬ ವ್ಯಕ್ತಿಯ ಚಟುವಟಿಕೆಯ ಮೇಲೆ ಕಣ್ಣಿಟ್ಟು ಜಾಗ್ರತೆ ವಹಿಸಲಾರದೆ? ಹಲವು ನಿಮಿಷದ ಸ್ವಾತಂತ್ರ್ಯವನ್ನೂ ಕೊಡಲಾರದಷ್ಟು ಗಂಭೀರವಾಗಿದೆಯೇ? ಒಂದು ವೇಳೆ ಅವನಿಂದ ಕಠಿಣ ಪರಿಸ್ಥಿತಿ ಒದಗಿತೆಂತೆನ್ನೋಣ ಮದ್ರಾಸು ಸರಕಾರ ರಕ್ಷಣಾಯುತಿಗೆ ಅವನನ್ನು ಹತೋಟಿಯಲ್ಲಿಟ್ಟುಕೊಳ್ಳಲಾಗದಷ್ಟು ಅಸಮರ್ಥವಾಗಿದೆಯೆಂದು ಭಾವಿಸಬಹುದೇ? ಈ ಎಲ್ಲ ಕಾರಣಗಳಿಂದ ಹೊಸ ಕಾಯಿದೆಯ ಪ್ರಯೋಗವು ಹೈಕೋರ್ಟಿನ ತೀರ್ಪನ್ನು ನಿರರ್ಥಕಗೊಳಿಸುವದಕ್ಕಾಗಿಯೇ ಆಯಿತೆಂದು ಭಾಸವಾಗುವುದಿಲ್ಲವೇ? ಸರಕಾರವು ತನಗಿರುವ ಅಧಿಕಾರವನ್ನು ವಂಚನೆ ದುರುದ್ದೇಶಗಳಿಲ್ಲದೆ ಪ್ರಾಮಾಣಿಕತನದಿಂದ ಪ್ರಯೋಗಿಸಬೇಕು. ಸ್ವೇಚ್ಛೆಯಂತೆ ಕಾಯಿದೆಯನ್ನು ದುರುಪಯೋಗಿಸಕೂಡದು.

ನ್ಯಾಯದಂತೆ ವರ್ತಿಸುವದಾದರೆ ಗೋಪಾಲನ್ನರನ್ನು ಹೊಸ ಕಾಯಿದೆಯನ್ವಯ ತಿರುಗಿ ಬಂಧಿಸುವ ವಿಚಾರ ಸರಕಾರ ಮಾಡಿದೆಂದು ಕೋರ್ಟಿಗೇಕೆ ತಿಳಿಸಬಾರದಾಗಿತ್ತು? ನ್ಯಾಯಕ್ಕೆ ವಿರೋಧವಾಗಿ ವರ್ತಿಸಿದನ್ನು ನಾವು ಖಂಡಿಸಲೇಬೇಕು. ತೀರ್ಪು ಹೇಳಿದನಂತರ ಒಂದೇ ಕಾರಣದ ಮೇಲೆ ಹೊಸ ಕಾಯಿದೆಯನ್ನು ಹೇತುವನ್ನಾಗಿ ತೋರಿಸಿ ಬಂಧಿಸಿದ್ದು ಸರಿಯಲ್ಲವೆಂದು ಹೇಳುತ್ತೇವೆ. ಅಂತಲೇ ಎ. ಕೆ. ಗೋಪಾಲನ್ನರನ್ನು ಕೂಡಲೇ ಬಿಡುಗಡೆ ಮಾಡಬೇಕೆಂದು ತೀರ್ಮಾನಕ್ಕೆ ಬಂದಿದ್ದೇವೆ" ಶ್ರೀ ಗೋಪಾಲನರ ಬಿಡುಗಡೆಯಾಯಿತು. ಗೋಪಾಲನ್ನರು ಹಾಗೆ ಬಂಧಿಸಿದ್ದು ತನ್ನ ಮಾನಕ್ಕೆ ಕುಂದೆಂದು ಸರಕಾರದ ಹಲವು ಅಧಿಕಾರಿಗಳ ಮೇಲೆ ಮಾನನಷ್ಟದ ದಾವೆಯನ್ನು ಹೂಡಿದ್ದರು. ತಿರುಗಿ ಕೋರ್ಟ ಕೂಡಿದಾಗ ಅದನ್ನು ಹಿಂತೆಗೆದುಕೊಂಡರು. ಎಡ್ವೋಕೇಟ್ ಜನರಲ್ಲರ ವಿಚಾರವನ್ನು ಅವರೇ ತನ್ನಿಂದ ನ್ಯಾಯಾಧೀಶರಿಗೆ ಹಲವು ರೀತಿಯ ಮನನೋಯಿಸುವ ಮಾತು ಬಂದಿರಬಹುದು. ನನ್ನ ಇಪ್ಪತ್ತು ವರ್ಷ ಕೋರ್ಟು ವ್ಯವಹಾರದ ಅನುಭವದಿಂದ ಅದನ್ನೆಲ್ಲ ಮರೆಯಬೇಕು—ಆ ವಿಚಾರ ಇಲ್ಲಿಗೆ ಮುಕ್ತಾಯಗೊಳ್ಳಲೆಂದು ಹಾರೈಸಿದ್ದರಿಂದ ಆ ವಿಚಾರವೂ ಅಲ್ಲಿಗೆ ಮುಗಿಯಿತು.

ನಿರಾಶೆಗೆ ಒಳಗಾಗದಿರಿ!

ಉಬ್ಬಸ, ಕಫ, ಶ್ವಾಸರೋಗದಿಂದ ನೀವು ವಿಪರೀತ ಕಷ್ಟಪಡುತ್ತಿರಾದರೆ, ಹಲವಾರು ಔಷಧಿಗಳ ಸೇವನೆಯಿಂದ ನಿಮಗೆ ಗುಣವಾಗದಿದ್ದರೂ

ಆಶಾಭಂಗಕ್ಕೊಳಗಾಗದಿರಿ!

ಅಲ್ಪವೆಚ್ಚ-ಅಲ್ಪಾವಧಿಯೊಳಗೆ ನಿಮ್ಮ ಬಾಧೆಯನ್ನು ಶಮನಮಾಡುವ

ಖಾತ್ರಿ ಔಷಧಿಯು ನಮ್ಮಲ್ಲಿರುವುದು.

ಒಂದೇ ಒಂದು ಸೀಸೆಯನ್ನು ಕೊಂಡು, ಗುಣಪರೀಕ್ಷೆ ಮಾಡಿರಿ!

ಈ ಹೊಸ ಮದ್ದಿನಿಂದ ನಿಮಗೆ ಅದ್ಭುತ ಗುಣತೋರುವುದೆಂಬುದು ಖಂಡಿತ.

ಕೂಡಲೆ ಬರೆಯಿರಿ:—

ದಿ ನೇಶನಲ್ ಜನರಲ್ ಸ್ಟೋರ್ಸ್

(ಡಿಸ್ಪೆನ್ಸಿಂಗ್ ಕೆಮಿಸ್ಟ್ಸ್ ಮತ್ತು ಡ್ರಗ್ಗಿಸ್ಟ್ಸ್)

THE NATIONAL GENERAL STORES

Importers, Exporters, Dispensing Chemists & Druggists.
General Merchants & Commission Agents.
8A Mherwan Buildings, Opp: His Master's Voice,
Sir Phirozsha Mehta Road, Fort, Bombay.

ಸುಲಭ ದರದಲ್ಲಿ
ಅಚ್ಚುಕಟ್ಟಾದ
ಮುದ್ರಣಕ್ಕೆ
ನವಯುಗ ಪ್ರೆಸ್
ಉಡುಪಿ.

ಲೋಕಾಂತ

ರಶಿಯಾದೊಡನೆ ಯುದ್ಧವೆ?

ಕೊರಿಯಾ ರಣರಂಗದ ಪರಿಸ್ಥಿತಿಯು ಕೊನೆಯ ಮಟ್ಟಕ್ಕೆ ಬಂದು ನಿಂತಿದೆ. ಸಂ. ರಾ. ಸಂಘದ ಸೇನೆಗಳ ಪ್ರತಿಭಟನೆಯಿಂದ ಕಮ್ಯೂನಿಸ್ಟ ಚೀನಾದ ಸೈನಿಕರು ವಿಶೇಷ ಹಾನಿ ಮತ್ತು ಆಪಘಾತಕ್ಕೊಳಗಾಗಿರುವರು. ಆದರೂ ಜನರಲ್ ಮೆಕಾರ್ಥರು ಹೇಳುವಷ್ಟು ಅಸವ ಘಾತಿ ಅವರಲ್ಲಿ ಕಂಡುಬರುವುದಿಲ್ಲ. 38ನೇ ಅಕ್ಷಾಂಶವನ್ನು ಸಂ.ರಾ.ದಳಗಳು ಅವಶ್ಯವೆನಿಸಿದರೆ ಇಷ್ಟಬಂದಾಗ ದಾಟಬಹುದೆಂದು ಸೇನಾಧಿಪತಿಗಳಾದ ಮೆಕಾರ್ಥರು ಆದೇಶವನ್ನಿತ್ತಿದ್ದಾರೆ. ಕೊರಿಯದಲ್ಲಿ ಮೆಕಾರ್ಥರ ನಿರಂಕುಶ ಪ್ರಭುತ್ವ ಧೋರಣೆ ಬಹಳವಾಗಿ ಕಂಡು ಬರುತ್ತಲಿದೆ. 38ನೇ ಅಕ್ಷಾಂಶವನ್ನು ದಾಟುವ ಸಾಹಸವನ್ನು ಸಂ. ರಾ. ದಳಗಳು ಮಾಡುವದಾದರೆ ಮತ್ತೆ ಸಂಧಿ ಸಾಧಿಸುವದೆಂದರೆ ಸ್ವಪ್ನದ ಮಾತೇ ಸರಿ. ಎರಡೂ ಪಕ್ಷದವರು ಗಡಿಯನ್ನು ಮೀರದೆ ಶಾಂತಿಸಂಧಾನಗಳಿಗೆಡೆಯಿದೆಯೋ? ಎಂದು ಸಮಾಲೋಚನೆ ಮಾಡುವ ಸುವರ್ಣ ಸಂಧಿಯನ್ನು ಕಳೆದುಕೊಳ್ಳಬಾರದು. ದಕ್ಷಿಣ ಕೊರಿಯಾದ ಅಧ್ಯಕ್ಷರಾದ ಸಿಂಗ್‌ಮನ್ರು "38ನೆಯ ಅಕ್ಷಾಂಶದಲ್ಲಿ ಯುದ್ಧವನ್ನು ನಾವು ಸ್ಥಗಿತಗೊಳಿಸಿದರೂ ಕಮ್ಯೂನಿಸ್ಟರು ಯುದ್ಧ ವಿರಾಮದ ಆಜ್ಞೆಯನ್ನು ಪಾಲಿಸುವರೆಂದು ನಂಬಲು ಸಾಧ್ಯವಿಲ್ಲ" ಎಂದು ಹೇಳಿರುತ್ತಾರೆ. ಆದರೆ ಈಗಿನ ಪರಿಸ್ಥಿತಿಯನ್ನು ನೋಡಿದರೆ ಕಮ್ಯೂನಿಸ್ಟರು ಯುದ್ಧವಿರಾಮದಲ್ಲಿ ಆಸಕ್ತಿಯನ್ನು ತೋರಬಹುದಾಗಿದೆಂದು ತೋರುತ್ತದೆ. ಮೆಕಾರ್ಥರರೂ, ಸಿಂಗ್‌ಮನ್ನರೂ ಕೊನೆಯ ಮಟ್ಟಿಗೆ ಕಮ್ಯೂನಿಸ್ಟರನ್ನು ಯುದ್ಧಪ್ರೇಮಿಗಳೆಂದು ಕರೆದರೂ ಅವರೀರ್ವರೂ ಯುದ್ಧದಿಂದಲೇ ಸೋಲು ಗೆಲುವು ನಿಶ್ಚಯವಾಗಬೇಕೆಂಬ ಧೋರಣೆಯನ್ನೆಂದೂ ಅವರು ಬಿಡುವಂತಿಲ್ಲ. ಒಂದು ವೇಳೆ ಕಮ್ಯೂನಿಸ್ಟರು ಸಾವಧಾನವಾಗಿ ಒಪ್ಪುವದಾದರೂ ಸಂ. ರಾ. ದಳಗಳು 38ನೇ ಅಕ್ಷಾಂಶವನ್ನು ಅತಿಕ್ರಮಿಸುವ ಕುರಿತು ತಡೆದು ನಿಲ್ಲಿಸುವುದು ಅಸಂಭವವಿದೆ. ಜನರಲ್ ಮೆಕಾರ್ಥರು ಕಮ್ಯೂನಿಸ್ಟ್ ಸೈನ್ಯಾಧಿಕಾರಿಯೊಡನೆ ಸಂಧಾನದ ಮಾತುಕತೆ ನಡೆಸಲು ತಾನು ಸಿದ್ಧನಿದ್ದೇನೆಂದು ಪ್ರಕಟಣೆ ಕೊಟ್ಟಿದ್ದಾರೆ. ಸಂ. ರಾ. ಸಂಘದಲ್ಲಿ ಚೀನಾ ಆಕ್ರಮಕರಾಷ್ಟ್ರವೆಂದು ಜಾಹೀರು ಮಾಡಿ ಯುದ್ಧ ನಡೆಸಿದ ಮೇಲೆ ಮೆಕಾರ್ಥರ ಈ ಮಾತುಕತೆ ಎಷ್ಟರ ಮಟ್ಟಿಗೆ ಪರಿಣಾಮಕಾರಿಯಾದೀತೆಂದು ಊಹಿಸುವುದು ಶಕ್ಯವಿಲ್ಲ. ಮೆಕಾರ್ಥರ ಹೇಳಿಕೆ ವೈಯಕ್ತಿಕವಾಗಿದ್ದು ಅಮೇರಿಕೆಯು ಅದನ್ನು ಮಾನ್ಯಮಾಡುವ ಲಕ್ಷಣತೋರುವುದಿಲ್ಲ. ಅಲ್ಲದೆ ಮೆಕಾರ್ಥರ ಈ ಹೇಳಿಕೆಯು ತನ್ನ ಅಧಿಕಾರಕ್ಷೇತ್ರವನ್ನು ಮೀರಿದ್ದೆಂದು ಅಮೇರಿಕಾ ಅಭಿಪ್ರಾಯಪಟ್ಟಿರುತ್ತದೆ. ಜನರಲ್ ಮೆಕಾರ್ಥರು ಈ ಸಂಧಾನ ಪ್ರಕಟಣೆಯನ್ನು ಕೊನೆಯ ನಿರ್ಧಾರಕ್ಕಾಗಿಯೋ ಕೊಟ್ಟಿರೋ ಎಂಬಂತೆ ಭಾಸವಾಗುತ್ತಿದೆ. ಸಂ. ರಾ. ದಳವು ಇನ್ನೂ ಮುಂದುವರಿದು ಯಾಲೂ ನದಿಯನ್ನು ಸಮೀಪಿಸಿದರೆ ರಶಿಯ ನೇರವಾಗಿ ಯುದ್ಧದಲ್ಲಿ ತೊಡಗುವದು [illegible] ಯುದ್ಧವೆಂದೇ ಆರ್ಥ. ಅಂತಲೇ ಮೆಕಾರ್ಥರು ಸಂಧಾನದ ಪ್ರಕಟಣೆಯನ್ನು ಕೊಟ್ಟಿರಬೇಕು. ಅಂತೂ ಈ ಹೇಳಿಕೆ ಕೊಂಚಮಟ್ಟಿಗೆ ಸದುದ್ದೇಶದಿಂದ ಪ್ರೇರಿತವಾಗಿದ್ದರೂ ಬಹುಮಟ್ಟಿಗೆ ಮುಂದಾಗುವ ಭೀಕರ ಪರಿಸ್ಥಿತಿಯನ್ನು ತಡೆಯುವುದಕ್ಕಾಗಿ ಕೊಟ್ಟದ್ದಾಗಿದೆಯೆಂದು ನಾವು ಊಹಿಸಬಹುದಾಗಿದೆ

ಕಾಶ್ಮೀರದ ಬಗ್ಗೆ ಹೊಸ ಸೂಚನೆ

ಕಾಶ್ಮೀರ ಪ್ರಕರಣದ ಕುರಿತು ಭದ್ರತಾ ಸಮಿತಿಯು ನೂತನ ಮಾರ್ಗವನ್ನೊಂದು ಮುಂದೆ ಮಾಡಿದೆ. ಮುಖ್ಯವಾಗಿ ಡಿಕ್ಸನ್ನರ ಸೂಚನೆಯಾದ ನಿಸ್ಸೈನ್ಯೀಕರಣದ ತತ್ವಗಳನ್ನು ಯು. ರಾ. ಸಂಘದ ಪ್ರತಿನಿಧಿಯು ಅನುಸರಿಸಬೇಕೆಂಬುದನ್ನು ತೆಗೆದು ಹಾಕಲಾಗಿದೆ. ಹಾಗೆಯೇ ಕೆಲವು ಸೂಚನೆಗಳನ್ನು ಮೂಲ ಕರಡಿನಿಂದ ಕಿತ್ತು ಹಾಕಲಾಗಿದೆ. ನೂತನ ಸೂಚನೆಗಳು ಈ ರೀತಿಯಲ್ಲಿವೆ. 1) ಸರ್. ಡಿಕ್ಸನ್ನರ ರಾಜೀನಾಮೆಯನ್ನು ಸ್ವೀಕರಿಸಿ ಅವರ ನಿಷ್ಠಾವಂತ ಕಾರ್ಯವನ್ನು ಶ್ಲಾಘಿಸುವ ಅಭಿನಂದನೆಗಳು. 2) ಡಿಕ್ಸನ್ನರ ನಂತರ ಅವರ ಸ್ಥಾನಕ್ಕೆ ಯು. ರಾ. ಸಂಘದ ಬೇರೊಬ್ಬ ಪ್ರತಿನಿಧಿಯು ಆಯ್ಕೆ. 3) ಈ ಪ್ರತಿನಿಧಿಯು ಭಾರತ ಪಾಕಿಸ್ತಾನಗಳೊಡನೆ ವಿಚಾರ ವಿನಿಮಯ ಮಾಡಿ ಜಮ್ಮು ಕಾಶ್ಮೀರಗಳಲ್ಲಿ ನಿಸ್ಸೈನ್ಯೀಕರಣವನ್ನು ಯು. ರಾ. ಸಂಘದ 1948 ಮತ್ತು 1949ನೇ ನಿರ್ಣಯಗಳ ತತ್ವದಂತೆ ನಡೆಸಿಕೊಳ್ಳಬೇಕು. 4) ಯು. ರಾ. ಸಂಘದ ಪ್ರತಿನಿಧಿಯು ಈ ಕೆಲಸಗಳಲ್ಲಿ ಉಭಯ ರಾಷ್ಟ್ರಗಳು ವಿಶೇಷ ಸಹಕಾರವನ್ನು ನೀಡಬೇಕು. 5) ಪ್ರತಿನಿಧಿಯು ಈ ಉಭಯ ರಾಷ್ಟ್ರಗಳಲ್ಲಿ ತಾನು ಸಾಧಿಸಿದ ವಿಚಾರದ ಕುರಿತಾಗಿ ವರದಿಯನ್ನೊಪ್ಪಿಸಬೇಕು. ನಿಸ್ಸೈನ್ಯೀಕರಣವು ಆ ಅವಧಿಯೊಳಗೆ ಸಾಧ್ಯವಾಗದೆ ಹೋದರೆ ಉಭಯರೊಳಗಿನ ಮುಖ್ಯ ಭಿನ್ನಾಭಿಪ್ರಾಯಗಳನ್ನು ಭದ್ರತಾ ಸಮಿತಿಗೆ ಮೂರು ತಿಂಗಳೊಳಗಾಗಿ ವರದಿ ಮಾಡಬೇಕು. 6) ಯು. ರಾ. ಪ್ರತಿನಿಧಿಯು ನಡೆಸಬಹುದಾದ ಮಾತುಕತೆಗಳು ಫಲಿಸದೇ ಹೋದರೆ ಅಂತಹಲ್ಲೆಲ್ಲ ಭಿನ್ನಾಭಿಪ್ರಾಯಗಳನ್ನು ಪ್ರತಿನಿಧಿಯು ಅಂತರಾಷ್ಟ್ರೀಯ ನ್ಯಾಯಾಲಯದ ಅಧ್ಯಕ್ಷರಿಗೆ ವರದಿ ಮಾಡಬೇಕಾಗಿದೆ. ಅಧ್ಯಕ್ಷರು ಉಭಯ ಪಕ್ಷದವರ ಮತಭೇದಗಳನ್ನು ವಿಚಾರಿಸಿ ನೇಮಿಸುವ ಮಧ್ಯಸ್ಥ ಇಲ್ಲವೇ ಮಧ್ಯಸ್ಥ ಮಂಡಳದ ನಿರ್ಣಯವನ್ನು ಉಭಯ ಪಕ್ಷದವರು ಅಂಗೀಕರಿಸಬೇಕು. 7) ಮಿಲಿಟರಿ ನಿರೀಕ್ಷಣೆಯ ತಂಡವು ಯುದ್ಧವಿರಾಮದ ಮೇಲ್ವಿಚಾರಣೆಯನ್ನು ಮುಂದುವರಿಸಬೇಕು. 8) ಯುದ್ಧ ವಿರಾಮದ ಒಪ್ಪಂದಕ್ಕೆ ಯಾವುದೇ ರೀತಿಯ ಚ್ಯುತಿ ಬಾರದಂತೆ ನ್ಯಾಯ ಮತ್ತು ಶಾಂತಿಯನ್ನು ಕಾಪಾಡಿಕೊಳ್ಳುವಲ್ಲಿ ವಿಶೇಷ ಜಾಗ್ರತೆಯನ್ನು ಉಭಯ ರಾಷ್ಟ್ರಗಳೂ ವಹಿಸಬೇಕು. 9) ಈ ಗೊತ್ತುವಳಿಗನುಸರಿಸಿ ಪ್ರತಿನಿಧಿಗೆ ಅವಶ್ಯಕವಾದ ಎಲ್ಲ ವಿಧದ ಸಹಕಾರವನ್ನು ಪ್ರಧಾನ ಕಾರ್ಯದರ್ಶಿ ಕೊಡಬೇಕು. ಇದಿಷ್ಟು ಕಾಶ್ಮೀರ ಪ್ರಕರಣದ ಸಮಸ್ಯೆಯನ್ನು ಬಗೆಹರಿಸುವ ಬಗ್ಗೆಗಿನ ಸೂಚನೆಗಳು. ಈ ಸೂಚನೆಯು ಕೆಲಮಟ್ಟಿಗೆ ಸೌಮ್ಯವಾಗಿದ್ದು ಹಿಂದಿನ ಸೂಚನೆಗಳಿಂದ ಸ್ವಲ್ಪಮಟ್ಟಿಗೆ ಆಶಾದಾಯಕವಾಗಿದ್ದರೂ ಗೊತ್ತುವಳಿಯ 7 ಮತ್ತು 8 ನೆಯ ಸೂಚನೆಗಳು ಪ್ರಾಮಾಣಿಕತನದಿಂದ ಕಾರ್ಯಗತವಾಗಬಲ್ಲವೇ? ಎಂಬುದು ಸಮಸ್ಯಾಸ್ಪದ ವಿಚಾರ. ನಿಸ್ಸೈನ್ಯೀಕರಣಕ್ಕೆ ಭದ್ರತೆಯ ಜವಾಬುದಾರಿಯಿಲ್ಲದೆ ಭಾರತವು ಒಪ್ಪುವದು ಸಂಶಯಾಸ್ಪದ ವಿಚಾರ. ಉಳಿದ ವಿಚಾರಗಳಲ್ಲಿ ಭಾರತ ಸರಕಾರ ವಿಶೇಷ ಆಸಕ್ತಿಯನ್ನು ತೋರಿಸುತ್ತಿಲ್ಲವೆಂದು ದಿಲ್ಲಿಯ ಸರಕಾರೀ ವರ್ಗಗಳಿಂದ ತಿಳಿದು ಬರುತ್ತದೆ. ಪಾಕಿಸ್ತಾನವೂ ಕೂಡಾ ಈ ವರೆಗೆ ಯಾವ ಅಭಿಪ್ರಾಯವನ್ನೂ ವ್ಯಕ್ತಮಾಡಿಲ್ಲ.

ಆದರೆ ಪಾಕಿಸ್ತಾನವು ಕಾಶ್ಮೀರ ಪ್ರಕರಣದಲ್ಲಿ ಅತ್ಯಂತ ಆಸಕ್ತಿಯನ್ನು ವಹಿಸುವ ಅನಿವಾರ್ಯ ಪರಿಸ್ಥಿತಿಯಲ್ಲಿದೆ. ಪಾಕಿಸ್ತಾನದ ಉಚ್ಚ ಅಧಿಕಾರಿಗಳ ಬಂಧನದ ಮುಖ್ಯ ಕಾರಣ ಕಾಶ್ಮೀರದ ಪ್ರಕರಣವೆಂದು ಹಲವರ ಅಭಿಪ್ರಾಯವಿರುತ್ತದೆ. ಯುದ್ಧದಿಂದಲಾದರೂ ಕಾಶ್ಮೀರವನ್ನು ಪಡೆಯಬೇಕೆಂಬ ತೀವ್ರಾಕಾಂಕ್ಷೆ ಮಿಲಿಟರಿ ಅಧಿಕಾರಿಗಳಲ್ಲಿ ಮೂಡಿ ಮಿಲಿಟರಿ ಸರಕಾರವನ್ನು ಸ್ಥಾಪಿಸಿ ಅದರಿಂದ ಕಾಶ್ಮೀರವನ್ನು ವಶಮಾಡಿಕೊಳ್ಳಬೇಕೆಂಬ ಹಂಚಿಕೆ ನಡೆದಿತ್ತು. ಪಾಕಿಸ್ತಾನ ಸರಕಾರದ ಸಾವಧಾನ ಧೋರಣೆಯು ಕಾಶ್ಮೀರದಲ್ಲಿ ಆಸಕ್ತಿಯುಳ್ಳ ಉಗ್ರಗಾಮೀ ಮುಸಲ್ಮಾನರಿಗೆ ಸಹಿಸುತ್ತಿಲ್ಲ. ಮುಖ್ಯ ಸೇನಾಧಿಪತಿಯಾದ ಅಕ್ಬರಖಾನರು ಅಂತಹ ತೀವ್ರ ಪಕ್ಷದವರು. ಅಲ್ಲದೆ ಆಜಾದ ಕಾಶ್ಮೀರದ ಮುಖ್ಯ ಕೈವಾರಿಗಳು ಕೂಡಾ ಆಗಿದ್ದರು. ಕಾಶ್ಮೀರವನ್ನು ಪಾಕಿಸ್ತಾನಕ್ಕೆ ಸೇರಿಸಬೇಕೆಂಬ ಹಟವಾದೀ ಮುಸಲ್ಮಾನರ ಪಾಕಿಸ್ತಾನ ಸರಕಾರದ ಮೇಲಿನ ಅಸಂತೃಪ್ತಿ ದಿನದಿಂದ ದಿನಕ್ಕೆ ಬೆಳೆಯುತ್ತಲಿದೆ. ಕಾಶ್ಮೀರ ಎಲ್ಲಿ ಕೈಬಿಟ್ಟು ಹೋಗುವುದೋ ಎನ್ನುವ ಭೀತಿ ಅಲ್ಲಿ ತಲೆದೋರಿದ್ದರಿಂದ ಲೀ ಸರಕಾರಕ್ಕೆ ವಿರುದ್ಧವಾದ ಪ್ರತಿಕೂಲ ವಾತಾವರಣ ಉಂಟಾಗಿದೆ. ವಿದೇಶದ ಹಲವು ಪತ್ರಿಕೆಗಳು ಪಾಕಿಸ್ತಾನದೊಳಗಿನ ಅಸಂತುಷ್ಟಿಗೆ ಕಾಶ್ಮೀರ ಪ್ರಕರಣವು ಹೇತುವಲ್ಲದೆ, ಭಾರತ ಸರಕಾರ ಅಡ್ಡಗಾಲಿಡುವದು ಮುಖ್ಯ ಕಾರಣವೆಂದು ಬರೆದಿವೆ. ನೆಹರೂರವರು ವಿದೇಶಾಂಗ ನೀತಿಯು ಶಾಂತಿದಾಯಕವಾಗಿದ್ದರೂ ನೆರೆಯಲ್ಲಿ ನಡೆಯುವ ಹೋರಾಟವನ್ನು ಬಗೆಹರಿಸಲಾಗದಿದ್ದುದು ಸೋಜಿಗದ ಸಂಗತಿಯೆಂದೂ ವಾದಿಸಿವೆ.

ಶ್ರೀ ರಾಮಕೃಷ್ಣ ಥಿಯೇಟರ್ ಲಿಮಿಟೆಡ್. ಉಡುಪಿ

ತಾರೀಕು 27. 3. 1951ರಿಂದ

ಶೇಕ್ಸಪಿಯರ್ ಬರೆದ ನಾಟಕಗಳಲ್ಲಿ ಅತ್ಯುತ್ತಮವೆನಿಸಿದ

ಶೈಲಕ್ (ತಮಿಳು)

ಅನಂತರ: ಸೊಬಗಿನರಾಣಿ ಸುರಯ್ಯಾ ನಟಿಸಿರುವ

ನೀಲಿ.

ಬರುವುದು: ಬಡೀಬಹನ್, ಸಮಾಧಿ, ಬಾಲನಾಗಮ್ಮ

ತಪ್ಪದೆ ಓದಬೇಕಾದ ಮೂರು ಪುಸ್ತಕಗಳು.

ಲೇಖಕರು:—ಶ್ರೀ ಬಿ. ಡಿ ಗಣಪತಿ

ಕುಸುಮಾಚಯ	ಪತ್ರಾವಳಿ	ಪ್ರತಿಧ್ವನಿ
ನರ್ತಕಿ	ತೀರ್ಥಯಾತ್ರೆ	ಕಾವೇರಿ
ಆಸ್ಪತ್ರೆ	ಬಾಳಿನ ಗುರಿ	ಪ್ರೀತಿ
ಕಲಾವಿದ	ಜೈಲು ಅನುಭವ	ನಗು
ನ್ಯಾಯ	ಪ್ರೇಮ	ಸುಂದರಿ
ಕವಿಜೀವ	ವಿವಾಹ ಪದ್ಧತಿ	ಬಡತನ
ಮುರಳಿನ ಮನೆ	ಸಮಾಜ	ಕಹಳೆ
'ಅವು ನಾನು'	ಮಹಿಳೆಯರು	ಪಥಿಕ
ಮೊದಲಾದ ಹೃದಯಂಗಮವಾದ ೧೫ ಕಥೆಗಳು	ಮೊದಲಾದುವನ್ನು ಕುರಿತ ವಿಚಾರಪ್ರಚೋದಕ ೩೦ ರಾಗ ಪತ್ರಗಳು.	ಮೊದಲಾದ ಭಾವಪ್ರೋತ್ತೇಜಕ ೫೦ ಕವನಗಳು.

ಮೂರು ಪುಸ್ತಕಗಳ ಬೆಲೆ ರೂ ೫—೦—೦

ವ್ಯಾಪಾರಸ್ಥರಿಗೆ ಧಾರಾಳ ಕಮಿಶನ್ ಕೊಡಲಾಗುವದು.

ಪುಸ್ತಕ ದೊರೆಯುವ ಸ್ಥಳ— "ಕೊಡಗು ಪ್ರೆಸ್" ಮಡಿಕೇರಿ.

ಪಂಚಾಯತ ಬೋರ್ಡ,

ಗ್ರಾಮ ಕಮಿಟಿ, ಶಾಲಾ ಕೊಲೇಜ

ಮೊದಲಾದುವುಗಳ

ಲೈಬ್ರರಿಗಳಿಗೆ

ಬೇಕಾಗುವ ಕರ್ನಾಟಕದ ಎಲ್ಲಾ ಭಾಗಗಳ ಕನ್ನಡ ಪುಸ್ತಕಗಳು ನಮ್ಮಲ್ಲಿ ದೊರೆಯುತ್ತವೆ.

ವಿಚಾರಿಸಿ —

ನವಭಾರತ ಪುಸ್ತಕ ಭಂಡಾರ

ಉಡುಪಿ ಅಥವಾ

ನವಯುಗ ಪ್ರೆಸ್, ಉಡುಪಿ.

The Canara Industrial & Banking Syndicate, Limited.

Balance Sheet as at 31st December, 1950

Capital and Liabilities

	Rs.	As.	Ps.	Rs.	As.	Ps.
apital:						
UTHORISED						
6 000 'A' Class Ordinary Shares of Rs 100/- each ..	6 00,000	0	0			
1,80,000 'B' Class Ordinary Shares of Rs. 10/- each	18,00,000	0	0			
6 00,000 'C' Class Ordinary Shares of Re 1 each	6,00,000	0	0			
4,000 Six Per cent Cumulative Preference Shares of Rs 100 each	4 00,000	0	0			
2,20,000 Five per cent Cumulative Preference Shares of Rs 10 each ..	22,00,000	0	0			
	56,00,000	0	0			
SSUED						
6,000 'A' Class Ordinary Shares of Rs 100 each	6 00,000	0	0			
23,787 'C' Class Ordinary Shares of Re 1 each	23 787	0	0			
4,000 Six Per cent Cumulative Preference Shares of Rs 100 each	4,00 000	0	0			
2,20,000 Five Per cent Cumulative Preference Shares of Rs 10 each	22 00 000	0	0			
	32 23,787	0	0			
UBSCRIBED						
5,872 'A' Class Ordinary Shares of Rs. 100 each	5,87 200	0	0			
23 787 'C' Class Ordinary Shares of Re 1 each ...	23,787	0	0			
4,000 Six Per cent Cumulative Preference Shares of Rs 100 each	4,00 000	0	0			
2 20,000 Five Per cent Cumulative Preference Shares of Rs 10 each ..	22,00,000	0	0			
	32,10 987	0	0			
AID-UP:						
5,872 'A' Class Ordinary Shares out of which 366 shares called at Rs 30 each, 144 at Rs 10 each, 369 at Rs 50 each, 87 at Rs 60 each, 77 at 70 each, 82 at Rs 80 each, 26 at Rs 90 each. and 4,721 at Rs 100 each	5 26,800	0	0			
23,787 'C' Class Ordinary Shares of Re 1 each fully paid .	23 787	0	0			
4,000 Six per cent Cumulative Preference Shares of Rs. 100 each fully paid	4 00 000	0	0			
2,20,000 Five per cent Cumulative Preference shares out of which 30 174 Shares called at Re 1 each, 5 510 at Rs 2 each, 11,075 at Rs. 3 each, 11,039 at Rs 4 each, 3,028 at Rs 5 each, 76,559 at Rs. 6 each, 7 985 at Rs 7 each, 14,045 at Rs 8 each, 3,063 at Rs 9 each and 67,492 at Rs 10 each	13 63,871	0	0			
ADD: Calls received in advance on 5% Preference Shares. .	41 418	0	0	23,55,876	0	0
eserves.						
General Reserve ..	5 00,000	0	0			
Reserve Fund under Section 17 of the Banking Companies Act	2,00,000	0	0			
Contingent Reserve .... Rs. 2,00,000						
ADD. Investment Reserve 2 00 000						
[illegible]						
ADD: Transfer from Profit & Loss Account ,, 33,172	2,00,000	0	0	9,00,000	0	0
eposits and other Accounts						
Fixed and other time Deposits ..	1 9 351,043	14	5			
Savings Bank Deposits .	69 76 894	0	0			
Current Accounts and Contingency (unadjusted) Accounts	1 05,71,306	11	4	3,68 99,244	12	9
ue to Other Banks:						
PARTICULARS						
In the Provinces of India-secured by pledge of Government Securities				41,04,445	14	7
ills Payable:						
D Ds & T Ts payable and Pay-Slips issued				8,35,497	10	3
ills for collection-being Bills receivable (per contra)						
(i) Payable in any Province of India	39,29 663	12	3			
(ii) Payable outside the Provinces of India	1 63,356	15	0	10,93,020	11	3
cceptances & Endorsements for Customers (per contra)				1 97,358	0	0
ther Liabilities						
(i) Rebate ...	14 565	4	9			
(ii) Dividends unpaid ..	13 598	0	8			
(iii) Outstanding Charges ..	5 635	13	10			
(iv) Branch Adjustments	28 46 581	1	1	28,80,380	4	4
rofit and Loss Account:						
Profit as per last Balance Sheet .	4,11,957	8	8			
Less Appropriations thereof						
To Statutory Reserve .... Rs 1,00,000 0 0						
To Investment Reserve . ,, 30,000 0 0						
To Taxation Reserve .. ,, 1,41,119 13 0						
To Dividends ,, 1,36,607 4 [illegible]	4,07 727	1	2			
	4,230	7	6			
ADD NET PROFIT OF THE YEAR	4 20 538	14	11			
	4 24 769	6	5			
Less Transfer To Statutory Reserve Rs 1,00,000 0 0						
To Contingent Reserve ,, 33,172 0 0	1,33,172	0	0	2,91,597	6	5
NOTE Contingent Liability (Claims against the Bank not acknowledged as debts Rs 6,300 1 4)						
Total Rs ..				5,25,57,420	11	7

Property and Assets

	Rs.	As.	Ps.	Rs	As	Ps.
Cash						
In hand and with Reserve Bank of India ...	54,94,610	13	1			
Balances in Current Accounts with other Banks in the Provinces of India ..	22,10,158	10	8	77,04,769	7	9
Money at Call & Short Notice				16,00 000	0	0
Bills Discounted & Purchased						
(i) Payable in any Province of India ...	49,37,981	15	2			
(ii) Payable outside the Provinces of India ..	Nil			49 37,981	15	2
(Particulars as per separate Schedule attached)						
Investments						
(i) Securities of the Indian Central & Provincial Governments of the face value of Rs 1,29,47 100/- at cost	1,31 59 430	8	6			
(Approximate Market Value Rs 1,25,87,730-7-0)						
(ii) Post Office National Savings Certificates at cost ...	24,285	11	6			
(iii) Shares of the Industrial Finance Corporation of India and the Madras Industrial Investment Corporation, Ltd , at cost	60,000	0	0			
(iv) Shares of other Banks and other Companies at cost						
Ordinary Shares (fully paid) .. 29,959 1 0						
Preference Shares (fully paid) ... 4,412 8 0						
Deferred Shares (fully paid) ... 11 097 4 0	45,468	13	0			
(v) Deposits with Scheduled Bank earmarked for Staff Security ..	45 000	0	0	1,33 34,185	1	0
Loans, Advances, Cash Credits & Overdrafts						
(i) In the provinces of India ...	1 83,63,228	2	10			
(ii) Outside the Provinces of India ..	Nil			1 83,63,228	2	10
(Particulars as per separate Schedule attached)						
Bills for Collection. being bills Receivable per Contra:						
(i) Payable in any Province of India ...	39 29 663	12	3			
(ii) Payable outside the Provinces of India .	1 63 356	15	0	40,93,020	11	3
Acceptances & Endorsements of Customers per contra:				1,97,358	0	0
Premises:						
As per last Balance Sheet ..	1,79 511	11	6			
ADD Additions during the year ..	20,158	8	1			
	1,99,670	3	7			
LESS Depreciation to date	29,670	3	7	1,70,000	0	
Furniture, Fittings and Motor Cars:						
As per last Balance Sheet ..	3,74 489	3	11			
ADD Additions during the year ..	53,094	9	3			
	4 27,583	13	2			
LESS: Sales during the year ...	25,987	7	0			
	4,01 596	6	2			
LESS Depreciation to date	1,18 596	[illegible]	[illegible]	[illegible]		
[illegible]						
(ii) Stock of Stationery [illegible] (less Depreciation)	[illegible]					
(iii) Insurance Policies at Cost .	1,20 573	1	1			
(iv) Branch D Ds T. Ts Paid, Bills realised in transit pending adjustment, Clearing Vouchers, etc. ..	7,57,442	13	4			
(v) Sundries including prepaid expenses ...	41 331	6	1			
(vi) Incometax deducted at source and advanced under .. Section 18 A	5 51 398	6	4	18,30,949	2	11
Non-Banking Assets acquired in satisfaction of claims						
Immoveble properties as per last Balance Sheet .	99 730	14	8			
Add: Additions during the year .	1 078	12	0			
	1 00,809	10	8			
Less: Sales during the year	57 881	8	0	42,928	2	8
(An item of property is subject to a charge of Rs 2,000 and interest)						
Total Rs ..				5,25 57,420	11	7

Continued

The Canara Industrial & Banking Syndicate, Limited.

Dr **Profit & Loss Account for the Year Ended 31st December, 1950.** Cr.

EXPENDITURE	Rs.	As	Ps.	INCOME	Rs.	As.	Ps.
Interest paid on Deposits	6,10,287	7	9	By Interest and Discount (Less provision made during the year for Bad Debts)	19,56,864	3	10
Salaries & Allowances ... . (Including General Manager's Salary of Rs. 12,000 and Allowances of Rs. 6,000)	7,50,094	3	5	" Commission, Exchange & Brokerage	3,47,271	5	0
Chairman & Managing Director's Remuneration and Allowances	56,000	0	0	" Transfer from Silver Jubilee Bonus Fund	15,000	0	0
Directors' Sitting Fees and T. A.	12,311	11	6	" Income from Non-Banking Assets	3,989	10	7
Provident Fund Contributions	26,355	4	0	" Other Receipts	58,221	6	6
Rents, Taxes, Insurance and Lighting etc.	75,684	12	9				
Law Charges	5,282	2	9				
Postage, Telegrams, Stamps & Telephone	73,894	1	5				
Auditor's Fees	2,750	0	0				
Depreciation on Bank's Property	31 154	12	10				
Repairs to Bank's Property	3,957	10	0				
Stationery, Printing, Advertisement etc. ...	85,791	11	10				
Interest on Bank Borrowings	1,28,195	7	8				
Remittance, Exchange, Travelling and Car Expenses....	49,132	8	6				
Loss from Sale of Assets	1 381	14	1				
Other Expenses (including Donations of Rs. 20,929/-)	48,533	14	6				
NET PROFIT for the year	4,20,538	14	11				
Total Rs. ...	23,81,346	9	11	**Total Rs.**	23 81,346	9	11

UDIPI, ...h February 1951.

(Sd.) **H N. Pai,** *Chief Accountant.*

(Sd) **K. V. Shenoy,** *Secretary.*

(Sd.) **K. Gururaja Rao**, " **B. Padmanabha Pai**, " **K. Vittal Manjunath Kamath**, " **M. N. Prabhu Siroorkar**, (Sd.) **A. Lakshminarayana Rao**, " **V. V. Shanbhag**, " **P Padmanabha Rao**, " **L. H. Prabhu** — Directors.

(Sd) **T. M. A. Pai,** *Managing Director.*

(Sd) **T Anant Pai,** *General Manager.*

AUDITOR'S REPORT

[1] I beg to report that I have examined the foregoing Balance Sheet of the Canara Industrial & Banking Syndicate Ltd., as at 31st December, 1950 and the Profit & Loss Account for the ...ar ended that date with the Books & vouchers of the Head Office and the certified returns from the Branches and that I have visited the major Branches of the Bank during the year and have ...amined the Books and Accounts and cash and securities as at the time of my visit and that I have obtained all the information and explanations I have required. [2] In my opinion, such Balance ...eet and Profit & Loss Account are drawn up in conformity with the Law and the Balance Sheet exhibits a true and correct view of the state of affairs of the Bank according to the best of my ...formation and the explanations given to me and as shown by the Books of the Bank. Further, in my opinion, the Books of Account have been maintained by the Bank as required by Section 130 ... the Indian Companies Act [3] The information and explanations required by me have been found to be satisfactory. [4] The transactions of the Bank which have come to my notice have been ...thin the Powers of the Bank [5] The Returns received from the Branch Offices of the Bank have been found adequate for the purposes of the audit, and [6] The Profit & Loss Account shows a ...ue balance of the Profit and Loss for the period covered by such account

Camp: UDIPI,

...h February, 1951.

(Sd) *A. Umanath Rao,*
B. A., G. D. A., D. ECON. P. C. A.,
Chartered Accountant.
AUDITOR.

The Canara Industrial & Banking Syndicate, Limited.

Schedule of particulars required by the Banking Companies Act, 1949 (Act X of 1949) attached to and forming part of the

BALANCE SHEET AS AT 31ST DECEMBER, 1950.

	Bills Discounted and purchased		Loans Advances, Cash Credits & Overdrafts	
	Rs. As Ps.	Rs. As Ps.	Rs As Ps.	Rs. As. As.
(i) Debts considered good in respect of which the Bank is fully secured ..		23,47,859 8 10		1,70,98,008 9 0
(ii) Debts considered good for which the Bank holds no other security than the debtors' personal security .		8,28,823 10 8		3,78,424 5 1
(iii) Debts considered good secured by the personal liabilities of one or more parties in addition to the personal security of the debtors		17,61,298 11 8		8,86,795 4 3
(iv) Debts considered doubtful or bad not provided for .		Nil		Nil
(v) Debts due by Directors or officers of the Bank or any of them either severally or jointly with any other persons	590 10 0		18,136 4 11	
(vi) Debts due by Companies or firms in which the Directors of the Bank are interested as Directors, Partners or Managing Agents or in the case of Private Companies as members ..	9,992 15 9		7,09,683 12 0	
(vii) Maximum total amount of loans including temporary advances made at any time during the year to Directors or Managers or Officers of the Bank	3,000 0 0		51,788 6 4	
(viii) Maximum total amount of loans including temporary advances granted during the year to the Companies or firms in which the Directors of the Bank are interested as directors, partners or managing agents or in the case of private companies as members ..	30,945 0 11		7,45,113 12 7	
(ix) Due from Banks	37,812 11 0		91,563 12 2	
Total Rs ..		49,37,981 15 2		1,83,63,228 2 10

UDIPI, 4th Feb 1951

Sd.] K Gururaja Rao, " B Padmanabha Pai, " K Vittal Manjunath Kamath, " M. N Prabhu Siroorkar, Sd.] A. Lakshminarayana Rao, " V V Shanbhag, " P Padmanabha Rao, " L. H. Prabhu — Directors

Sd.] T. M A Pai, Managing Director

Sd.] K. V. Shenoy, Secretary.

Sd.] T Ananth Pai, General Manager.

Sd.] H. N. Pai, Chief Accountant.

Sd.] A. Umanath Rao, B A G D A D Econ., F.C.A, Chartered Accountant. — Auditor.

ಮಹಾತ್ಮಾ ಗಾಂಧೀ ಮೆಮೋರಿಯಲ್ ಕಾಲೇಜ್, ಉಡುಪಿ. —ಇವರ ವಿಜ್ಞಾಪನೆ.

ಸುಮಾರು 70 ಹಾ ಸ್ಕೂಲುಗಳಿಂದ ದಕ್ಷಿಣ ಕನ್ನಡದಲ್ಲಿ ಶೀಘ್ರವಾಗಿ ಬೆಳೆಯುತ್ತಿರುವ ಉಚ್ಚ ಶಿಕ್ಷಣದ ಸೌಕರ್ಯಕ್ಕಾಗಿ ಈ ಕಾಲೇಜು ಎರಡು ವರ್ಷಗಳ ಹಿಂದೆ ಜಿಲ್ಲೆಯ ಉತ್ತರಾರ್ಧದ ಕೇಂದ್ರದಲ್ಲಿ ಸ್ಥಾಪಿಸಲ್ಪಟ್ಟಿದೆ. ಈ ಕಾಲೇಜು ಜನತಾ ಸೇವೆಯನ್ನು ಉತ್ತಮ ಕಡದಲ್ಲಿ ಮತ್ತು ಸರ್ವಾನುಕೂಲತೆಯಿಂದ ಮಾಡಲಿಕ್ಕೆ ಜನಧನ ಸಹಾಯವು ಅತ್ಯಾವಶ್ಯಕವಾಗಿದೆ. ನೀವು ವಿದ್ಯಾ ವಿಷಯಕ್ಕೆ ಮಾಡುವ ಸೇವೆಯೊಂದರಿ ದೇಶದ ಸಂಸ್ಕೃತಿಯ ಅಭಿವೃದ್ಧಿಗೆ ಸಹಾಯವಾಗಿದಂತೆ ಮತ್ತು ಸಮಾಜದ ಕರ್ತವ್ಯದ ಜೀವನ ಸಾರ್ಥಕತೆಗೆ ಅನುಕೂಲತೆಯನ್ನು ಒದಗಿಸಿಕೊಟ್ಟಂತೆ ಎಂಬುದರಿಂದಲೇ ನೀವು ಕೊಡುವ ಎಷ್ಟು ಸಹಾಯವಾದರೂ ಗಣಿಸಲ್ಪಡುತ್ತದೆ. ನೀವು ಈ ಸದುದ್ದೇಶಕ್ಕೆ ಸಹಾಯ ಮಾಡುವುದರಿಂದ ಇತರರಿಗೂ ಸಹಾಯ ಮಾಡುವಂತೆ ಉಚ್ಚ ಮಾದರಿಯನ್ನು ಹಾಕಿಕೊಟ್ಟಂತಾಗುವುದು.

ಈ ಕಾಲೇಜು ಸಹಕಾರ ತತ್ವದ ಮೇಲೆ ಪರಿಶುದ್ಧ ವಿದ್ಯಾ ಸಂಸ್ಥೆಯಾಗಿ ಸಂಸ್ಥಾಪನೆಯಾಗಿದೆ. ರೂಪಾಯಿ 30—0—0 ಯ ಷೇರಿಗೆ ಸಹಾಯ ಮಾಡಿದ ಒಟ್ಟಿನಿಂದಲೇ ಮೂರು ವರ್ಷಗಳಿಗೊಮ್ಮೆ ಚುನಾಯಿಸಲ್ಪಡುವ ಸದಸ್ಯರಿಂದೊಡಗೂಡಿದ ಮಹಾತ್ಮಾ ಗಾಂಧೀ ಮೆಮೋರಿಯಲ್ ಕಾಲೇಜು ಟ್ರಸ್ಟಿನ ಕೈಯಲ್ಲಿ ಇದರ ಆಡಳಿತ ಸೂತ್ರವಿದೆ. ಸದ್ಯ ಇದು ದ್ವಿತೀಯ ಶ್ರೇಣಿಯ ಕಾಲೇಜಾಗಿದೆ. ಬರುವ ಜೂನ್ ವರ್ಷದಿಂದಲೇ ವಿಜ್ಞಾನ ಶಾಖೆಗಳು ತೆರೆಯಲ್ಪಟ್ಟು ಪ್ರಥಮ ಶ್ರೇಣಿಯ ಕಾಲೇಜಾಗಲು ಸರ್ವ ಪ್ರಯತ್ನಗಳನ್ನು ಮಾಡಲಾಗುತ್ತಿದೆ. ಜಿಲ್ಲೆಯ ಇತರ ಕಾಲೇಜುಗಳಲ್ಲಿ ಕಲಿಸಲ್ಪಡದ ವಿಷಯಗಳನ್ನು ಪ್ರಾರಂಭಿಸಿ ಇದರ ಉಪಯುಕ್ತತೆಯನ್ನು ಹೆಚ್ಚಿಸುವಂತೆ ನೋಡಿಕೊಳ್ಳುವುದೂ ಆಡಳಿತ ಮಂಡಳಿಯ ಉದ್ದೇಶವಿದೆ. (1) ಸರಕಾರೀ ಭದ್ರತೆಯಲ್ಲಿ ವಿನಿಯೋಗಿಸುವ 3 ಲಕ್ಷ ರೂಪಾಯಿಗಳ ಎಂಡೋಮೆಂಟಿನ ಪೈಕಿ ರೂ. 2 ಲಕ್ಷದ 25 ಸಾವಿರವನ್ನು ಮದ್ರಾಸು ಯುನಿವರ್ಸಿಟಿಯಲ್ಲಿ ಠೇವಣಾತಿ ಇಡಲಾಗಿದೆ [2] ರೂಪಾಯಿ 20,000—0—0ಗಳ ವೆಚ್ಚದಿಂದ ಕಾಲೇಜು ಲ್ಯಾಬ್ರರಿಯನ್ನು ಸಿಲಕರಿಸಿಕೊಳ್ಳಲಾಗಿದೆ [3] ಕಾಲೇಜು ಕಟ್ಟಡದ ನಿರ್ಮಾಣ ಕಾರ್ಯವನ್ನು ಕೈಕೊಳ್ಳಲಾಗಿದೆ. ಪ್ರತಿ ಅದಕ್ಕನುಸಾರವಾದ ದೇಣಿಗೆಯಾದ ಸಹಾಯವನ್ನು ನಾಗರಿಕರು ಈ ಸತ್ಕಾರ್ಯಕ್ಕೆ ಕೊಟ್ಟು ಸಹಕರಿಸುತ್ತಿದ್ದಾರೆ.

ಸರಕಾರವು ಮಾಡಿದ ಸಹಾಯ

1 ಕಾಲೇಜು ಕಟ್ಟಡ, ವಿದ್ಯಾರ್ಥಿ ನಿಲಯ ಮತ್ತು ಆಟದ ಬಯಲಿಗಾಗಿ ಉಡುಪಿ ನಗರ ಸಭೆಯ ಸರಹದ್ದಿನೊಳಗೆ ಸಗ್ರಿಗುಡ್ಡೆಯಲ್ಲಿ 32½ ಎಕ್ರೆ ಸ್ಥಳವನ್ನು ಉಚಿತವಾಗಿ ಕೊಟ್ಟಿರುತ್ತದೆ 2 ಕಾಲೇಜಿಗೆ ಶಿಕ್ಷಣ ಧನಸಹಾಯವನ್ನು, ರೂಪಾಯಿ 10,000-0-0 ಲ್ಯಾಬ್ರರಿ ಗ್ರಾಂಟನ್ನೂ, ರೂ. 50,000-0-0 ಬಿಲ್ಡಿಂಗ್ ಗ್ರಾಂಟನ್ನೂ ಮಂಜೂರು ಮಾಡಿದೆ.

ಇದೇ ಮಾರ್ಚಿಯೊಳಗೆ ನಾವು ಮಾಡಬೇಕಾದ ಕೆಲಸ

1 ಮದ್ರಾಸು ಯುನಿವರ್ಸಿಟಿಯಲ್ಲಿ 3 ಲಕ್ಷಕ್ಕೆ ಭರ್ತಿಯಾಗುವಂತೆ ಇನ್ನೂ ರೂ 75,000-0-0 ಡಿಪಾಜಿಟ್ ಇಡಬೇಕಾಗಿದೆ 2 ಸುಮಾರು ರೂ. 2,50,000-0-0 ಅಂದಾಜು ಖರ್ಚಿನಲ್ಲಿ ಇದೇ ಜೂನು ಅಂತ್ಯದಲ್ಲಿ ಕಾಲೇಜು ಕಟ್ಟಡವನ್ನು ಪೂರ್ತಿಗೊಳಿಸಬೇಕಾಗಿದೆ. ಇದರಲ್ಲಿ ಸುಮಾರು ರೂ 75,000-0-0ವನ್ನು ಸರಕಾರವು ಕೊಡತಕ್ಕದು 3 ರೂ 30,000-0-0ದೊಳಗೆ ಲೆಬೋರೇಟರಿಯನ್ನು ಒದಗಿಸಿಕೊಳ್ಳಬೇಕಾಗಿದೆ. ಆದ್ದರಿಂದ ಮಹಾತ್ಮಾ ಗಾಂಧೀ ಮೆಮೋರಿಯಲ್ ಕಾಲೇಜಿಗೆ ನಿಮ್ಮ ಅತ್ಯುದಾರ ಧನಸಹಾಯವನ್ನು ಮಾಡಿರಿ. (ನೂರು ರೂಪಾಯಿಯ ಮೇಲೆ ಕೊಟ್ಟವರ ಹೆಸರನ್ನು ಮಾತ್ರ ಈ ಪಟ್ಟಿಯಲ್ಲಿ ಕೊಡಲಾಗಿದೆ.)

ಮದ್ರಾಸಿನಲ್ಲಿ ಸಹಾಯ ಮಾಡಿದವರು

ಶ್ರೀಗಳಾದ	ರೂ
ಗೋವಿಂದರ ಧರ್ಮ ಶ್ರೀ ರಾಮಕೃಷ್ಣ ಹಾಲ್ ನಿರ್ಮಾಣಕ್ಕೆ	5000
ಡಾ. ಯು. ಕೃಷ್ಣರಾವ್, ಮದ್ರಾಸಿನ ಮಾಜಿ ಮೇಯರ್	1001
ಡಾ. ಕೊಟ್ಟಿಕಾರ್ ವಿಠಲದಾಸ್ ಪೈ	1000
ಡಾ। ಯು. ಎಲ್. ನಾರಾಯಣರಾವ್	1000
ಯು ಆರ್ ರಾಯರ ಮೂಲಕ ಚಿಲ್ಲರೆಯಾಗಿ ಸಂಗ್ರಹ	985
ಯು ಆರ್. ರಾವ್	501
ಕೆ ಎಸ್. ನಾರಾಯಣನ್, ಮೆನೇಜಿಂಗ್ ಪ್ರೊಪ್ರೈಟರ್, ನಾರಾಯಣನ್ ಎಂಡ್ ಕೋ	501
ಡಾ। ಕೆ. ವೆಂಕಟರಾವ್, ರಿಸರ್ಚ್ ಲೆಬೋರೆಟರಿ	500
ಜಿ. ಬಲರಾಮಯ್ಯ	500
ಕೆ. ಕೃಷ್ಣರಾವ್, ವುಡ್‌ಲ್ಯಾಂಡ್ಸ್ ಮದ್ರಾಸು	500
ಡಾ। ಕೆ. ಮಂಜುನಾಥ ಶೈ, ಡೈರೆಕ್ಟರ್, ಬನಾರಸ್ ಇನ್ಸ್‌ಟ್ಯೂಟ್	251
ಎ. ನಾರಾಯಣ ಪೈ	250
ಎ ಬಿ. ಶೆಟ್ಟಿ, ಕೃಷಿಇಲಾಖಾ ಮಂತ್ರಿ ಮದ್ರಾಸು	250
ಮೆಸರ್ಸ್ ಸುಂದರಮ್ ಮೋಟಾರ್ ಲಿಮಿಟೆಡ್	250
ಎಮ್. ವೀರಭದ್ರರಾವ್	200
ಎ. ವಿ. ಕೃಷ್ಣಮೂರ್ತಿ	200
ವಿ. ಎಸ್. ರಾಘವನ್	101
ಬೇಕಲ್ ರಾಮರಾಯರ ಸ್ಮರಣಾರ್ಥವಾಗಿ ಶ್ರೀ ಟಿ ಎಸ್. ಪೈ	101
ನಂದಲಾಲ್ ಚಟ್ಟಾವಿಯಾ	101
ಶ್ರೀ ಕಲ್ಯಾಡಿ ಗೋಪಾಲಕೃಷ್ಣರಾವ್	101
ವಿ. ದೊರೆಸ್ವಾಮಿ	101
ದಿ ಸರ್ವೋದಯ ಮೋಟಾರ್ ವರ್ಕ್ಸ್	100
ಶ್ರೀ ಕೇದನೆ ವೆಂಕಟಯ್ಯ	100
ಡಾ। ಜಿ. ಸೀತಾರಾಮ ಶಾಸ್ತ್ರಿ	100

ಮಂಗಳೂರಿನಲ್ಲಿ ಸಹಾಯ ಮಾಡಿದವರು

ಶ್ರೀಗಳಾದ	
ಉಳ್ಳಾಲ ನಾರಾಯಣ ಮಲ್ಯ	1005
ಕೆ. ನಂಜಪ್ಪ ಲಕ್ಷ್ಮಣ ಪಾಲ್	1001
ದಿ ಕಾಂಟಿನೆಂಟಲ್ ಮೋಟಾರ್ ಕಂಪೆನಿ ಲಿಮಿಟೆಡ್	1000
ಬಿ ವೈಕುಂಠ ಬಾಳಿಗ	1000
ವಿ ಎಸ್. ಕುಡ್ವ	1000
ದಿ ಯುನೈಟೆಡ್ ಟ್ರೇಡಿಂಗ್ ಕೋಪರೇಶನ್ ಎಂಡ್ ವರ್ಕ್‌ಶೋಪ್ ಲಿಮಿಟೆಡ್	600
ದಿ ಗ್ರೇಟ್ ಬಜಾರ್ ಬೀಡಿ ವರ್ಕ್ಸ್	505
ಮೆಸರ್ಸ್ ಜಿ ಜಿ ನರಸಿಂಹ ಪ್ರಭು ಎಂಡ್ ಬ್ರದರ್ಸ್	505
" ಕಾತೊಲಿಕ್ ಕೋಪರೇಶನ್	501
ಎಫ್. ಎಕ್ಸ್ ಡಿ. ಪಿಂಟೊ	501
ಎ. ಉಮಾನಾಥರಾವ್	351
ದಿ ಪಾಪ್ಯುಲರ್ ಇನ್ಶೂರೆನ್ಸ್ ಕೊ ಲಿಮಿಟೆಡ್	305
ದಿ ಸಿಟಿ ಪ್ರೆಸ್ ಲಿಮಿಟೆಡ್	255
ನಗರ ಶ್ರೀನಿವಾಸರಾವ್	255
ಮೆಸರ್ಸ್ ಉಳ್ಳಾಲ ವಾಸುದೇವ ಸುಬ್ರಾಯ ಮಲ್ಯ ಎಂಡ್ ಕೊ	255
" ಅಣ್ಣಪ್ಪ ಸುಬ್ರಾಯ ನಾಯಕ್ ಎಂಡ್ ಕೊ	255
" ವಿಠಲ್ ಎಂಡ್ ಕಂಪೆನಿ ಲಿಮಿಟೆಡ್	251
" ಚಂದ್ರಾಣ ಬ್ರದರ್ಸ್	251
ದಿ ಪಿ ವಿ ಎಸ್ ಬೀಡಿಸ್ ಲಿಮಿಟೆಡ್	251
ಸಾಹುಕಾರ್ ಎಮ್. ವೆಂಕಟೇಶ ಪೈ	250
ಉಳ್ಳಾಲ ಸುಬ್ರಾಯ ನಾಯಕ್	250
ಮೆಸರ್ಸ್ ಎಮ್ ಎ. ಕೃಷ್ಣ ನಾಯಕ್ ಎಂಡ್ ಕೊ	25[illegible]
" ಮಿಜಾರ್ ಗೋವಿಂದ ಅಣ್ಣಪ್ಪ ಪೈ ಎಂಡ್ ಸನ್ಸ್	250
" ಸಾಹುಕಾರ್ ರಾಮಪ್ಪ ನಾಯಕ್ ಎಂಡ್ ಕೊ	250
" ಪಬ್ಲಿಕ್ ಟಾರ್ ಕಂಪೆನಿ	250
ದಿ ಕೆನರಾ ಟೈಲ್ ವರ್ಕ್ಸ್ ಲಿಮಿಟೆಡ್	250
ಮೆಸರ್ಸ್ ಪಿ. ಎನ್. ಬಿ. ಭಂಡಾರಿ ಎಂಡ್ ಸನ್ಸ್	151
" ಉಳ್ಳಾಲ ಗೋಪಾಲಕೃಷ್ಣ ನಾಯಕ್ ಎಂಡ್ ಕೊ	105
" ಸಂಪಾಜೆ ಬೀಡಿ ವರ್ಕ್ಸ್	105
" ಕೆ. ಅಪ್ಪಯ್ಯ ಕ್ಯಾನುಭಾಗ ಎಂಡ್ ಕೊ	105
" ಸುಪೀರಿಯರ್ ಕಾರ್ ಬ್ರದರ್ಸ್	101
ಯು. ಆರ್. ಪೈ	101
ಆರ್. ಎಮ್. ಕಿಣಿ	101
ಎಮ್. ಗೋಪಾಲರಾವ್	101
ಶ್ರೀಮತಿ ಲಕ್ಷ್ಮೀದೇವಿ ಸುಜೀರ್	101
ಜೋಸೆಫ್ ವಿಕ್ಟರ್ ರಾವ್	101
ಮೆಸರ್ಸ್ ಸುಜೀರ್ ಕಾರ್ ಫೇರ್ ಹೌಸ್	101
ಪಿ. ಪಾಂಡುರಂಗ ಶೆಟ್ಟಿ	101

ಚಂದಾ ವಿವರ
ವರ್ಷಕ್ಕೆ ರೂ. 5-12—0
6 ತಿಂಗಳಿಗೆ ರೂ. 3-0—0

ಗುರುವಾರ, ಉಡುಪಿ, ೨೯-೩-೫೧

ಯಾರು ಹೊಣೆ?

ಸಂರಕ್ಷಣಾ ಶಾಖೆಯವರು ವಿಶೇಷ ಆರ್ಥಿಕ ಸಹಾಯವನ್ನು ಪಾರ್ಲಿಮೆಂಟಿನಲ್ಲಿ ಮಂಡಿಸಿದ್ದರ ಚರ್ಚೆಯಲ್ಲಿ ಸಾರ್ವಜನಿಕ ಹಣದ ಅಪವ್ಯಯದ ಹಲವು ದಾಖಲೆಗಳು ಬಂದಿವೆ. ಸರಕಾರದ ಪ್ರತಿಯೊಂದು ಇಲಾಖೆಯಲ್ಲೂ ಈ ರೀತಿ ಕೋಟಿಗಟ್ಟಲೆ ಹಣ ವ್ಯರ್ಥವಾಗುತ್ತ ಬರುತ್ತಿರುವುದು ಶೋಚನೀಯ. ಸಿದ್ಧಗೃಹಗಳಿಗಾಗಿ ಅಪ್ರನುಭವಿಕ ಕಂಪೆನಿಗಳೊಡನೆ ವ್ಯವಹಾರ ನಡೆಸಿದ್ದರ ಫಲವಾಗಿ ಅಲ್ಲಿಯೂ ಸರಕಾರ ಕೈಸುಟ್ಟುಕೊಳ್ಳಬೇಕಾಯಿತ. ಈಗ ಕಟ್ಟಿಕೊಂಡಿರುವ ಮನೆಗಳೂ ಹಲವು ಬಗೆಯ ನ್ಯೂನತೆಗಳಿಂದ ಕೂಡಿದಂಥವುಗಳಾಗಿವೆ. ಗೋಬ್ಬರ ಪ್ರಕರಣದಲ್ಲೂ ಗೊತ್ತುಗುರಿಯಿಲ್ಲದ ಧೋರಣೆಯಿಂದಲೂ, ಅಧಿಕಾರಿಗಳ ದುರುಪಯೋಗದ ದೆಸೆಯಿಂದಲೂ ಎರಡು ಕೋಟಿ ರೂಗಳ ಅಪವ್ಯಯವಾಯಿತು. ಗೊಬ್ಬರ ಪ್ರಕರಣದಲ್ಲಿ ನಿರಂಕುಶಮತಿಗಳಾಗಿ ವರ್ತಿಸಿ ಸರಕಾರದ ಹಣವನ್ನು ದುರುಪಯೋಗಗೊಳಿಸಿದ ಅಧಿಕಾರಿಗಳ ಮೇಲೆ ಯಾವ ಶಿಸ್ತನ್ನೂ ಕೈಗೊಳ್ಳದೇ ಇದ್ದದ್ದು ನಿಜವಾಗಿಯೂ ಸೋಜಿಗದ ಸಂಗತಿ! ಈಗ ರಕ್ಷಣಾ ಖಾತೆಯಲ್ಲಿ ಅಂತಹ ಪ್ರಮಾದಗಳು ನಡೆದದ್ದನ್ನು ಮಾನ್ಯ ಸದಸ್ಯರು ಬಯಲಿಗೆಳೆದಿದ್ದಾರೆ. ಸಂರಕ್ಷಣಾ ಖಾತೆಯು 1948ರಲ್ಲಿ ಇಂಗ್ಲಾಂಡದ ಕಂಪೆನಿಯೊಂದಿಗೆ 2000 ಜೀಪು ಕಾರುಗಳಿಗಾಗಿ ಕರಾರನ್ನು ಮಾಡಿಕೊಂಡಿತು. 2000 ಕಾರುಗಳ ಬೆಲೆ ಸಾಮಾನ್ಯ ಆರು ಲಕ್ಷ ಪೌಂಡುಗಳು. ಆದರೆ ಕಂಪೆನಿಯ ಒಟ್ಟು ಬಂಡವಾಳ 605 ಪೌಂಡುಗಳಾಗಿವೆ. ಸರಕಾರವು ಸ್ವಲ್ಪವೂ ವಿಮರ್ಶಿಸದೆ 1,72,000 ಪೌಂಡುಗಳನ್ನು ಮುಂಗಡವಾಗಿ ಕೊಟ್ಟಿತು. ಈ ವರೆಗೆ ಆ ಕಂಪೆನಿಯಿಂದ ಕೇವಲ 155 ಜೀಪ್ ಗಾಡಿಗಳು ಮಾತ್ರ ಬಂದಿವೆ. ಉಳಿದ ಹಣಕ್ಕೆ ಏನ ರೀತಿ ಗತಿ! ಇಷ್ಟು ಹೇರಳ ಹಣವನ್ನು ವ್ಯಯವಾಗುವಾಗ ಸೂಕ್ಷ್ಮವಾಗಿ ವಿಚಾರಿಸುವುದು ನ್ಯಾಯವಲ್ಲವೆ? ಈ ರೀತಿಯ ದುರ್ವ್ಯವಹಾರವನ್ನು ನಡೆಸಿದವರನ್ನು ಮನೆಗೆ ಕಳಿಸುವದಕ್ಕಿಂತ ಹೆಚ್ಚಿನ ಯಾವ ಕ್ರಮವನ್ನೂ ಸರಕಾರ ಅವರ ಮೇಲೆ ತೆಗೆದುಕೊಂಡಿಲ್ಲ. ಹಾಗೆಯೇ ಶಸ್ತ್ರಾಸ್ತ್ರಗಳ ಪೂರೈಕೆಯ ಸಲುವಾಗಿ ಇಂಗ್ಲಂಡದ ಇನ್ನೊಂದು ಕಂಪೆನಿಯೊಡನೆ ವ್ಯವಹಾರ ಮಾಡಲಾಗಿ ಅಲ್ಲಿಯೂ ಕೋಟಿಗಟ್ಟಲೆ ಹಣ ವ್ಯರ್ಥವಾಗಿದೆ. ಆ ಕಂಪೆನಿಯ ಮೂಲ 100 ಪೌಂಡು. ಆದರೆ ನಮ್ಮ ಸರಕಾರ ಬಯಸಿದ್ದು 20 ಲಕ್ಷ ಪೌಂಡುಗಳ ಶಸ್ತ್ರಾಸ್ತ್ರಗಳನ್ನು! ಅದರಿಂದಲೂ ಸರಕಾರ ಕಾಣದೆ ಹಾಕಿದ ಹಣ ಒಂದೆ ಬರುವ ಬಗೆ ಕಾಣುತ್ತಿಲ್ಲ. ಹೀಗೆ ಅನುಚಿತವಾದ ಮಾರ್ಗವನ್ನನುಸರಿಸುತ್ತಿರುವ ಅಧಿಕಾರಿಗಳನ್ನು ಮನೆಗೆ ಕಳಿಸುವಷ್ಟರಿಂದಲೇ ಪ್ರತೀಕಾರವೆಂದು ಸಂತೃಪ್ತಿಸಿದ್ದಂತಾಗದು. ಲಂಚ ಗುಳಿತನ ಮೊದಲಾದುದರಲ್ಲಿ ಕಡಿಮೆ ಮೊತ್ತದವರಿಗೂ ಸರಿಯಾದ ಶಿಕ್ಷೆ ಕೊಡುತ್ತಿರುವಾಗ ಅಪವ್ಯಯಗೊಳಿಸತಕ್ಕವರ ಕುರಿತು ಸರಕಾರ ಅಲಕ್ಷಿಸುತ್ತಿರುವುದು ಯೋಗ್ಯವಲ್ಲ. ಇಂತಹ ನಿದರ್ಶನಗಳು ಒಂದೆರಡಾದರೆ ಪ್ರಮಾದವೆನ್ನಬಹುದೇನೋ! ಆದರೆ ಸರ್ವಸಾಮಾನ್ಯ ಪ್ರತಿಯೊಂದು ಇಲಾಖೆಯಲ್ಲೂ ಈ ರೀತಿಯ ಸಾರ್ವಜನಿಕ ಹಣದ ದುರುಪಯೋಗ ನಡೆಯುತ್ತಿರುವುದನ್ನು 'ಪ್ರಮಾದ'ವೆಂದು ಹಾರಿಸಲು ಸಾಧ್ಯವಿಲ್ಲ. ಹೀಗೆ ವಿದೇಶೀಯ ಕಂಪೆನಿಗಳೊಡನೆ ವ್ಯವಹರಿಸುವಲ್ಲಿ ಸರಕಾರಕ್ಕೆ ಆಯಾ ದೇಶದ ಮುಖ್ಯ ತಜ್ಞರೊಡನೆ ಸಮಾಲೋಚಿಸಿ ಯೋಗ್ಯವಾಗೂ ಭದ್ರವಾದ ಕಂಪೆನಿಯೊಡನೆ ವ್ಯವಹಾರ ನಡೆಸಲು ಸಾಧ್ಯವಿಲ್ಲವೇ? ಭಾರತ ಸರಕಾರದ ಕಮೀಶನರು ಅಲ್ಲಿರುವಾಗ ಇಂತಹ ವಿಚಾರದಲ್ಲಿ ಅವರೇಕೆ ಸರಿಯಾದ ಸಲಹೆಯನ್ನು ಕೊಡಬಾರದಿತ್ತು? ಈ ಬಗೆಯ ಆರ್ಥಿಕ ಪೆಟ್ಟು ಸರ್ವಸಾಮಾನ್ಯ ಎಲ್ಲ ಇಲಾಖೆಯಲ್ಲೂ ತಲೆಯೆತ್ತಿದ್ದು ಸೋಜಿಗದ ವಿಚಾರ. ಸಂರಕ್ಷಣಾ ಖಾತೆಗೆ ಭಾರತ ಸರಕಾರ ನೂರಕ್ಕೆ 60ನ್ನು ವ್ಯಯಮಾಡುತ್ತಲಿದೆ: ಇಷ್ಟು ಹಣವನ್ನು ಬೇರಾವ ಖಾತೆಗೂ ಅದು ವ್ಯಯಮಾಡುತ್ತಿಲ್ಲ. ದೇಶದ ಭದ್ರತೆಯ ಕುರಿತು ಅದು ಅನಿವಾರ್ಯವೆಂದು ನಾವು ಒಪ್ಪುವದಾದರೂ ಹಲವಾರ ಉದ್ಯಮಗಳು ಕುಂಟುತ್ತಿರುವಾಗ ಸಂರಕ್ಷಣಾ ಖಾತೆ ಒಂದಕ್ಕೇ ಅಷ್ಟು ವ್ಯಯ ಸರಿಯೇ? ಎಂದು ತೋರುತ್ತದೆ. ಸಂರಕ್ಷಣ ಖಾತೆಯ ಧಕ್ಷತೆಯನ್ನು ನಾವು ಕೊಂಡಾಡಿರಲಾರೆವು. ಆದರೆ ಅದರ ಹೆಸರಿನಲ್ಲಿ 'ಸದೇವಾಯ ನ ಧರ್ಮಾಯ.' ಎನುವಂತೆ. ಕಾಣದ ಕೈಯೊಂದಕ್ಕೆ ಹಣ ಸೇರುವುದಕ್ಕೆ ನಾವು ವಿಷಾದಿಸದೇ ಇರಲಾಗದು.

ಈ ರೀತಿಯ ಅಪವ್ಯಯಕ್ಕೆ ಕೇವಲ ಅಧಿಕಾರಿಗಳು ಕಾರಣವೆಂದು ನಾವು ಹೇಳಲು ಸಾಧ್ಯವಿಲ್ಲ. ಬಾರಿಬಾರಿಗೂ ಇಂತಹ ದುರ್ಘಟನೆ ನಡೆಯುತ್ತಿರುವಾಗ ಸರಕಾರ ಯಾವ ಕಠಿಣ ಕ್ರಮವನ್ನೂ ತೆಗೆದುಕೊಳ್ಳದೇ ಇರುವುದರಿಂದಲೇ ಇಂತಹ ಸಮಸ್ಯೆಗಳು ಮತ್ತೆಮತ್ತೆ ತಲೆಯೆತ್ತುತ್ತಲಿವೆ. ಬ್ರಿಟಿಶ್ ಪಾರ್ಲಿಮೆಂಟು ದಿವಾಳಿಯವರನ್ನು ಗಲ್ಲಿಗೇರಿಸಬೇಕೆನ್ನುವ ನಾವು ಇಂತಹರು ಔದಾರ್ಯದ ಹಾದಿಯಲ್ಲಿ ಸಿಕ್ಕಿ ಬೀಳುವದರಲ್ಲಿ ಯಾವ ಔಚಿತ್ಯವೂ ಇಲ್ಲ, ಸರಕಾರದ ನಿರ್ವ್ಯಾಜ ರೀತಿಯ ಶಿಕ್ಷೆಯ ಧೋರಣೆಯೇ ಇಂತಹ ಪ್ರಮಾದಗಳಿಗೆ ಪ್ರೇರಕವಾಗಿದೆಯೆನ್ನುತ್ತೇವೆ. ಸರಕಾರವೇ ಇದಕ್ಕೆ ಹೊಣೆಯಲ್ಲದೆ ಅಧಿಕಾರಿಗಳಾಗಲೀ ಜನತೆಯಾಗಲೀ ಹೊಣೆಗಾರರಲ್ಲ.

ಬರುವ ವಾರ

ಹಿಂದೂ ಕೋಡು ಬಿಲ್ಲಿನ ಬಗೆಯ ಸಂಸ್ಥಾನ ಕಮಿಟಿಯವರು ಕೇಂದ್ರ ಸರಕಾರಕ್ಕೆ ಒಪ್ಪಿಸಲಿರುವ ಮನವಿ ಪ್ರಕಟವಾಗಲಿದೆ.

ಸಿಂಡಿಕೇಟ್ ಬೇಂಕ್

ಅಲ್ಪಾವಧಿಯಲ್ಲಿ ಅತ್ಯಂತ ಅಭಿವೃದ್ಧಿ ಹೊಂದಿ, ಕರ್ನಾಟಕದಲ್ಲೂ ಇತರ ಕಡೆಗಳಲ್ಲೂ "ಸಿಂಡಿಕೇಟ್" ಬ್ಯಾಂಕೆಂದು ಪ್ರಖ್ಯಾತವಾದ ದಿ ಕೆನರಾ ಇಂಡಸ್ಟ್ರಿಯಲ್ ಎಂಡ್ ಬ್ಯಾಂಕಿಂಗ್ ಸಿಂಡಿಕೇಟ್ ಲಿಮಿಟೆಡಿನ ತಾ 31-12 50ಕ್ಕೆ ಅಂತ್ಯವಾಗುವ ಪರಿಶೋಧಿಕ ಲೆಕ್ಕ ಪತ್ರಗಳನ್ನೊಳಗೊಂಡ 25ನೇ ವಾರ್ಷಿಕ ವರದಿಯು (ಈ ಸಂಚಿಕೆಯಲ್ಲಿ ಪ್ರಕಟವಾಗಿದೆ.) ಸರ್ವಪ್ರಗತಿಯನ್ನೂ ಸೂಚಿಸುತ್ತದೆನ್ನಲು ಸಂತೋಷವಾಗುತ್ತದೆ. ಇದರ ಚಂದಾ ವಿಕ್ರಿದ ಪಾಲುಭಂಡವಾಳವು ರೂ 32,10.987-0-0 ಇದ್ದು ತೆತ್ತ ಪಾಲು ಭಂಡವಾಳವು ರೂ 23,55 876-0-0 ಆಗಿರುತ್ತದೆ ರೂ 9,00,000 ರಿಸರ್ವ ಫಂಡು ಇದೆ. ವಂದಿ ವರ್ಷದಲ್ಲಿ ರೂ 23,81 346-0 0 ಗ್ರೋಸ್ ಮುನಾಫೆಯಾಗಿ, ಖರ್ಚು ಕಳೆದು 4,10,539 ರೂ ನೆಟ್ ಲಾಭವಾಗಿರುವುದು ಆನಂದದಾಯಕವಾಗಿದೆ ಇದರಲ್ಲಿ ರೂ, 1,33 172-0-0ನ್ನು ರಿಸರ್ವ ಫಂಡಿಗೆ ಸೇರಿಸಲಾಗಿದೆ ಪಾಲು ದಾರರಿಗೆ ಡಿವಿಡೆಂಡಾಗಿ ರೂ 40,741-0-0ನ್ನು ಹಂಚಲಾಗಿದೆ. ರೂ 37,000 ವನ್ನು ಸಿಬಂಧಿಗೆ ಬೋನಸಾಗಿ ಕೊಡಲಾಗಿದೆ

95,000ಕ್ಕೂ ಮಿಕ್ಕಿರುವ ಸಾರ್ವಜನಿಕ ಠೇವಣಾತಿದಾರರಿಂದ ರೂ, 3,68,99,215-0-0 ಠೇವಣಾತಿ ಇದೆಯೆಂಬುದೂ 1,33,732ಕ್ಕೂ ಅಧಿಕ ಗಿರಾಕಿಗಳಿಂದ ಒಟ್ಟು ವಹಿವಾಟವು ರೂ. 5,25,57,420-0-0 ಇದೆಯೆಂಬುದೂ ಬ್ಯಾಂಕಿನ ಭದ್ರತೆಯನ್ನೂ ಜನಪ್ರಿಯತೆಯನ್ನೂ ವ್ಯಕ್ತಗೊಳಿಸುತ್ತದೆ.

ಅತ್ಯಲ್ಪ ಭಂಡಾವಾಳದಲ್ಲಿ ಪ್ರಾರಂಭವಾದ "ಸಿಂಡಿಕೇಟು" ಪ್ರವರ್ಧಮಾನವಾಗಿ ಬೆಳೆಯುತ್ತಾ ಬಂದು ಇತ್ತೀಚೆಗೆ ಬೆಳ್ಳಿಯ ಹಬ್ಬವನ್ನು ಜರಗಿಸಿಕೊಂಡು ಪ್ರೌಢಾವಸ್ಥೆಗೆ ಮುಟ್ಟಿದ ವಿಚಾರ ನಮ್ಮ ವಾಚಕರ ಗೋಚರಕ್ಕೆ ಬಾರದುದಲ್ಲ. ಬ್ಯಾಂಕಿನ ಪ್ರಗತಿ, ಮತ್ತು ವಿಶ್ವವಿಖ್ಯಾತಿಗೆ ಮುಟ್ಟಿದ್ದು ಚಿನ್ನ ಎಂಬ ಖ್ಯಾತಿ ಪಡೆದವರೂ ಸತತ ಕಾರ್ಯನಿರತರಾಗಿ ಹೊತ್ತನ್ನೇ ನೋಡದ ಗಿಸಿದ್ದ ಸಮರ್ಥ ಸಾಧಕರೂ ಹಲವು ಸಂಸ್ಥೆಗಳ ಜನ್ಮದಾತರೂ ಆಗಿರುವ ಡಾಕ್ಟರ್ ಟಿ ಮಾಧವ ಪೈಗಳು ಚೆಯರ್‌ಮೇನ್ ಮತ್ತು ಮೆನೇಜಿಂಗ್ ಡೈರೆಕ್ಟರರಾಗಿ ಇರುವುದೇ ಮುಖ್ಯ ಕಾರಣವೆನ್ನಬಹುದು. ಡಾ| ಪೈಗಳ ಅರ್ಥಶಾಸ್ತ್ರ ನಿಪುಣತೆಯನ್ನು ಎಷ್ಟು ಕೊಂಡಾಡಿದರೂ ಸಾಲದು. ಪ್ರಗತಿಶೀಲರೂ ವಿಶಾಲ ಹಾಗೂ ಮೃದು ಹೃದಯಿಗಳೂ ಸದಾ ಹಸನ್ಮುಖಿಗಳೂ ಆರ್ಥಿಕ ಪ್ರಪಂಚದ ಆಳವಾದ ಅನುಭವವುಳ್ಳವರೂ ಧಕ್ಷರೂ ಆದ ಬ್ಯಾಂಕಿನ ಪ್ರಧಾನ ಸಂಚಾಲಕ ಶ್ರೀ. ಕೆ. ಅನಂತ ಪೈಗಳ ನೇತೃತ್ವದಲ್ಲಿ ಬ್ಯಾಂಕು ಭಾರತದಲ್ಲಿ ಒಂದು ವಿಶಿಷ್ಟ ಸ್ಥಾನವನ್ನು ಗಳಿಸುವುದರಲ್ಲಿ ಅನುಮಾನವಿರಲಾರದು. ಡ್ಯಾರೆಕ್ಟರ ಮಂಡಳಿಯ ಮತ್ತು ಸಿಬಂಧಿಯ ಪ್ರಯತ್ನವೂ ಕೊಂಡಾಡತಕ್ಕದೇ.

ಉಡುಪಿ

ಶ್ರೀ ಯು. ಸದಿಯ ಸಾಹುಕಾರರ ಔದಾರ್ಯ— ಸ್ಥಳೀಯ ಜನತಾ ಟ್ರಾನ್ಸ್‌ಪೋರ್ಟ್ ಕಂಪೆನಿಯ ಚೆಯರ್‌ಮ್ಯಾನರೂ ಉದ್ಯಾವರದ ಪ್ರಸಿದ್ಧ ಸಾಹುಕಾರರೂ ಆದ ಶ್ರೀ ಯು. ಸದಿಯ ಸಾಹುಕಾರರು ಕಂಪೆನಿಯ ಎಲ್ಲಾ ಸಿಬಂದಿಗಳಿಗೆ 10 ದಿನಗಳ ಬೋನಸ್ಸಾಗಿ ರೂ. 2235ನ್ನು ಕೊಟ್ಟಿರುತ್ತಾರಾಗಿ ತಿಳಿದು ಬರುತ್ತದೆ.

ಕಾಂಗ್ರೆಸ್ ಕಮಿಟಿ ಮಹಾಸಭೆಯು ಇದೇ ತಾ. 23ರಲ್ಲು ಎಡ್ವೋಕೇಟ್ ಶ್ರೀ ಬಿ. ಓಬಯ್ಯ ಹೆಗ್ಡೆಯವರ ಅಧ್ಯಕ್ಷತೆಯಲ್ಲಿ ಜರಗಿತು, ಶ್ರೀ ಕೆ. ನರಹರಿ ಕಾಮತರು ವರದಿಯನ್ನೋದಿದರು, ನಂತರ ಹೊಸ ವರುಷಕ್ಕೆ ಅಧ್ಯಕ್ಷರ ಚುನಾವಣೆ ನಡೆದು ಶ್ರೀ ಬಾಳ್ತಟ್ಟ ಬೀಡು ಕೃಷ್ಣಯ್ಯ ಹೆಗ್ಡೆರು ಐಕ್ಯಮತದಿಂದ ಅಧ್ಯಕ್ಷರಾಗಿ ಆರಿಸಲ್ಪಟ್ಟರು. "ಇದಾಗಿ ಶ್ರೀ ಬಿ. ಕೃಷ್ಣಯ್ಯ ಹೆಗ್ಡೆಯರು ಸಭಾಧ್ಯಕ್ಷತೆ ವಹಿಸಿ ಇತರ ಅಧಿಕಾರಿಗಳ ಮತ್ತು ಕಾರ್ಯನಿರ್ವಾಹಕರ ಚುನಾವಣೆ ನಡೆಯಿತು. ಶ್ರೀಗಳಾದ ಯು. ಮಂಜುನಾಥ ಕಲ್ಕೂರ [ಉಪಾಧ್ಯಕ್ಷ], ಕೆ. ನರಹರಿ ಕಾಮತ್ [ಜನರಲ್ ಸೆಕ್ರೆಟರಿ], ಎಮ್. ವಿ. ಹೆಗ್ಡೆ [ಜತೆ ಕಾರ್ಯದರ್ಶಿ], ಬಿ. ಕರುಣಾಕರ ಹೆಗ್ಡೆ [ಖಜಾನ್ಚಿ], ಕೆ ಶ್ರೀನಿವಾಸ ಪೈ, ಬಿ. ಓಬಯ್ಯ ಹೆಗ್ಡೆ, ಡಾ|| ಅಗ್ನಿಹೋತ್ರಿ, ಕೆ. ಬಾಲಕೃಷ್ಣ ಸೆಟ್ಟಿ, ಎ. ಕೃಷ್ಣಯ್ಯ ಹೆಗ್ಡೆ, ಯು. ಎಸ್. ಭಟ್, ಕೆ. ಆನಂದ ಹೆಗ್ಡೆ, ಎ. ಸಂಜೀವ ಹೆಗ್ಡೆ ಮತ್ತು ಕುಮಾರಿ ರೋಹಿಣಿ ಬಾಯಿ [ಕಾರ್ಯಕಾರೀ ಸಮಿತಿ ಸದಸ್ಯರು] ಯುವರು ಆರಿಸಲ್ಪಟ್ಟರು.

ಎಮ್. ಜಿ. ಎಮ್. ಕಾಲೇಜ್ನಲ್ಲಿ ಮುಂದಿನ ವರುಷದಿಂದ ಸಯನ್ಸ್ ಶಾಖೆಯನ್ನೂ ಬಿ. ಎ. ಕ್ಲಾಸನ್ನೂ ತೆರೆಯುವ ಸಾಧ್ಯಾಸಾಧ್ಯತೆ ಕುರಿತು ರಿಪೋರ್ಟ್ ಮಾಡುವರೆ ಮದ್ರಾಸು ಯುನಿವರ್ಸಿಟಿಯಿಂದ ಅಧಿಕೃತರಾದ ರೆವ್‌ಸಾಪೇಟ್ ಅಲೆಕ್ಸಾಂಡರ್ ಜ್ಞಾನಮುತ್ತು, ಶ್ರೀ ಎಮ್. ಮರಿಯಪ್ಪ ಭಟ್ ಮೊದಲಾದ ಏಳು ಮಂದಿ ಸದಸ್ಯರು ಇದೇ ತಾ. 22ರಲ್ಲು ಉಡುಪಿಗೆ ಆಗಮಿಸಿ ಭರದಿಂದ ಸಾಗುತ್ತಿರುವ ಕಾಲೇಜಿನ ಪಗ್ರಿಗುಡ್ಡೆಯ ನೂತನ ಕಟ್ಟಡ ನಿರ್ಮಾಣದ ಕೆಲಸವನ್ನು ಪರಿಶೀಲಿಸಿ, ಆಡಳಿತ ಮಂಡಳಿಯವರೊಡನೆ ವಿಚಾರವಿನಿಮಯ ನಡೆಸಿ ಮರುದಿನ ಹಿಂತೆರಳಿರುವದಾಗಿ ತಿಳಿದು ಬರುತ್ತದೆ.

Before the Rent Controller,
Puttur.

H. R. C: 14/1951

H. Mahammad Beary Petitioner
versus
1] Rama [2] Poyakare Abdul-rahiman [3] Arunachalam
—Respondents.

Notice to 1st respondent Ramason of Pappadachetti Jale, trader and Appalam maker, residing in Kasaragod Kasba.

Please take notice that the petitioner has filed a petition under the Madras Buildings [Lease & Rent] Control Act against the respondents and the said petition is posted to 12-4-51 for appearance of the 1st respondent, at Kasaragod. failing which the 1st respondent will be declared exparte and petition taken up for enquiry.

(By order of Court)

K. Narayana Nayak,
Advocate for petitioner.
Kasaragod, 26-3-1951.

ಮಂಗಳೂರು

ಜಿಲ್ಲಾ ವಾಣಿಜ್ಯ ಸಂಘಕ್ಕೆ ಭೇಟಿ: ಇದೇ ತಾ. 21ರಲ್ಲು ಜಿಲ್ಲಾ ವಾಣಿಜ್ಯ ಸಂಘದ ಕಚೇರಿಗೆ ಕೇಂದ್ರ ಸರಕಾರದ ರೆವಿನ್ಯೂ ಬೋರ್ಡಿನ ವಿಶೇಷಾಧಿಕಾರಿಗಳಾದ ಶ್ರೀ ಎಸ್. ಜಿ. ಹಿಂಟೋರಣರೂ, ಅಬ್ಕಾರಿ ಇಲಾಖೆಯ ಸುಪರಿಂಟೆಂಡೆಂಟ್ ಶ್ರೀ ಕೆ. ಡಿ. ಕರುಣ್, ಅವರೂ ಭೇಟಿಕೊಟ್ಟರು. ಶ್ರೀ ಶೃಂಗೇರಿ ವೆಂಕಟರಾಯ ಪೈಗಳು ಸ್ವಾಗತಿಸಿದ ಬಳಿಕ ಹೊಗೆಸೊಪ್ಪು, ಹುಡಿ, ಬೀಡಿಗಳ ಕೆಲವು ವ್ಯಾಪಾರಿಗಳ ಮೇಲೆ ಚರ್ಚೆಯಾಗಿ ಅತಿಥಿಗಳು ಉತ್ತರವಿತ್ತರು. ಶ್ರೀ ಕೆ. ಕೇಶವ ಶೆಣೈ ಧನ್ಯವಾದಗಳನ್ನರ್ಪಿಸಿದರು.

ಶ್ರೀ ಪಿ. ಎಸ್. ಕುಡ್ವರವರು

ಕಾಸರಗೋಡು ಡಿ. ಮು. ಕೋರ್ಟಿನಲ್ಲಿ

O. P. ನಂಬ್ರ 86/50

ಸುಬ್ರಹ್ಮಣ್ಯ ಭಟ್ಟ ಕೂಡಾ —ಅರ್ಜಿದಾರರು

ಮತ್ತು

ಕೇಶವ ಭಟ್ಟ ಕೂಡಾ —ರೆಸ್ಪಾಂಡೆಂಟರು

ಇವರೊಳಗೆ

2 ಮತ್ತು 3ನೇ ರೆಸ್ಪಾಂಡೆಂಟರಿಗೆ ನೋಟೀಸು—

ಕಾಸರಗೋಡು ತಾಲ್ಲೂಕು ಕುಡಾಲಮೇರ್ಕಳ ಗ್ರಾಮದ ಎಡಕ್ಕಾನ ನಾರಾಯಣ ಭಟ್ಟರ ಮಗ ಗೋಪಾಲಕೃಷ್ಣ ಭಟ್ಟ—2ನೇ ರೆಸ್ಪಾಂಡೆಂಟ್

ಸದ್ರೀ ತಾಲ್ಲೂಕು ಬಾಡೂರು ಗ್ರಾಮದಲ್ಲಿರುವ ಚೆಕ್ಕೆ ಸುಬ್ರಾಯ ಭಟ್ಟರ ಮಗ ರಾಮಯ ಭಟ್ಟ —3ನೇ ರೆಸ್ಪಾಂಡೆಂಟ್

ಮೇಲಿನ ವ್ಯವಹಾರದಲ್ಲಿ ಅರ್ಜಿದಾರರು ಪಾಲುಪಟ್ಟಿ ಶರ್ತ ಪ್ರಕಾರ ಕ್ರಯಚೀಟಿನ ಪ್ರತಿಫಲದಲ್ಲಿ ಬಾಕಿ ನಿಲ್ಲಿಸಿದ ಮರೆಯು ಪೂರ್ಣ ಸಂದಾಯಕ್ಕಾಗಿ ರೂಪಾಯಿ 372/- ಕೋರ್ಟಿಗೆ ಡಿಪೋಜಿಟ್ ಮಾಡಿ ಅರ್ಜಿಕೊಟ್ಟಿರುವುದರಿಂದ ಆ ಕುರಿತು ನಿಮಗೇನಾದರೂ ಆಕ್ಷೇಪಣೆಯುದ್ದ ಪಕ್ಷದಲ್ಲಿ ಅದನ್ನು ತಾರೀಖು 6-4-51ನೇ ದಿವಸ ಈ ಕೋರ್ಟಿನಲ್ಲಿ ಹಾಜರಾಗಿ ತಿಳಿಸಿಕೊಳ್ಳಬೇಕು. ಹಾಗೆ ಹಾಜರಾಗದಿದ್ದರೆ ಸದರಿ ವಿಷಯದಲ್ಲಿ ಏಕಪಕ್ಷವಾಗಿ ತೀರ್ಮಾನಿಸಲ್ಪಡುವುದು.

(By order of Court)

N. Venkatramana Bhat,

Advocate for Petrs.

Kasargod, 26-3-51.

ಪ್ರಕಟಣೆ.

ಈ ಮೂಲಕ ಎಲ್ಲಾ ಜನರಿಗೆ ತಿಳಿಯಪಡಿಸುವದೇನೆಂದರೆ—

ಪಣಂಬೂರು ಪಂಚಾಯತ ಬೋರ್ಡಿನ ದಿನವಹಿ ಬಿಜಾರು ಮಾರ್ಕೆಟಿನಲ್ಲಿ 1951ನೇ ಎಪ್ರಿಲು ತಾರೀಖು 1ರಿಂದ 1952ನೇ ಮಾರ್ಚಿ ತಾರೀಖು 31ರ ವರೆಗೆ ಪೂರ್ತಿ ಒಂದು ವರ್ಷದಲ್ಲಿ ಸುಂಕ ವಸೂಲು ಮಾಡುವ ಹಕ್ಕನ್ನು ವಹಿಸಿಕೊಳ್ಳುವರೆ ರೂಪಾಯಿ 210-0-0ಕ್ಕೆ ಟೆಂಡರು ಬಂದಿರುವ ಕಾರಣ ತಾ 23-3-1951ರಲ್ಲಿ ಮಾಡಿದ ಏಲಂನ್ನು ರದ್ದುಪಡಿಸಿ, ತಾ. 31-3-1951ನೇ ಶನಿವಾರ ಬೆಳಿಗ್ಗೆ ಗಂಟೆ 10ಕ್ಕೆ ಬೋರ್ಡು ಆಫೀಸಿನಲ್ಲಿ ಬಹಿರಂಗವಾಗಿ ಪುನಃ ಏಲಂ ಕರೆಯಲಾಗುವುದು.

ಅದ್ದರಿಂದ ಸದ್ರಿ ಟೆಂಡರು ನೋಟಲಗು ರೂಪಾಯಿ 210-0-0ಕ್ಕೆ ಮೇಲ್ಪಟ್ಟು ವಹಿಸಿಕೊಳ್ಳಲಿಕ್ಕೆ ಇಚ್ಛಿಸುವವರು, ಏಲಮಿನ ಕ್ಲಪ್ತ ಸಮಯಕ್ಕೆ ಬಂದು, ಏಲಂನಲ್ಲಿ ವಹಿಸಿಕೊಳ್ಳಬಹುದಾಗಿ ತಿಳಿಸಲಾಗುತ್ತದೆ.

ಏಲಮಿನ ಎಲ್ಲಾ ಶರ್ತ-ವ-ನಿಬಂಧನೆಗಳು ಈ ಹಿಂದಿನಂತೆಯೇ ಇವೆ. ಹೆಚ್ಚಿನ ವಿವರ ಬೋರ್ಡು ಆಫೀಸಿನಲ್ಲಿ ತಿಳಿಯಬಹುದು.

S. ಹಿರಿಯಣ್ಣ ಹೆಗ್ಡೆ,

ಪ್ರೆಸಿಡೆಂಟ್.

ಪಂಚಾಯತ ಬೋರ್ಡು ಆಫೀಸು,)

ಪಣಂಬೂರು, ತಾರೀಖು 24-3-51.)

ಮುಂದಿನ ಎಪ್ರಿಲ್ ತಿಂಗಳ ತಾ 1 ರಿಂದ ಮಂಗಳೂರಿಂದ ಹೊರಟು ಬಾಂಬೇ, ಇಂಗ್ಲೆಂಡು, ಅಮೇರಿಕಗಳ ಸಂಚಾರ ಮಾಡಿ ಆಗೋಸ್ತು ತಿಂಗಳಲ್ಲಿ ಹಿಂದೆ ಬರುವರು.

ಅಸಮಾರಿಷ್ಟಗಳ III A ಲೈಸನ್ಸನ್ನು ಪುನರುಜ್ಜೀವನಗೊಳಿಸಲು ಎರಡು ಆಣೆ ಅರ್ಜಿ ಚೀಟು ಹಚ್ಚಿದ ಅರ್ಜಿಯನ್ನು ಆಫೀಸು ಬಗ್ಗೆ ಒಂದು ರೂಪಾಯಿಯ ಪೋಸ್ಟಲ್ ಆರ್ಡರು ಸಹಿತ ಕೂಡಲೇ ಜಿಲ್ಲಾ ಕಲೆಕ್ಟರಿಗೆ ಕಳುಹಿಸಬೇಕಾಗಿದೆ.

ಜಿಲ್ಲಾ ಬೋರ್ಡು ಅಧ್ಯಕ್ಷ ಶ್ರೀ ಬಿ. ಮಂಜಯ್ಯ ಹೆಗ್ಡೆಯವರು ಇದೇ ತಾ 18ರಲ್ಲು ನೀಲೇಶ್ವರಕ್ಕೆ ಆಗಮಿಸಿ, ಅಲ್ಲಿಯ ಪೆರೋಲ್ ಬಜಾರ್ ರಸ್ತೆಯ ಉದ್ಘಾಟನೆ ನಡೆಸಿದರು. ಈ ರಸ್ತೆಗೆ ರೋಲ್ ವೆಲ್ ಫೇರ್ ಇಲಾಖೆಯವರಿಂದ ಇನ್ನೂರು ರೂಪಾಯಿ ಮಾತ್ರ ಮಂಜೂರಾಗಿದ್ದರೂ, ಉಳಿದ ಖರ್ಚನ್ನು ಗ್ರಾಮಸ್ಥರೇ ವಹಿಸಿದ್ದರು. ಜಿಲ್ಲಾ ಬೋರ್ಡಿನವರು ಅಲ್ಲೊಂದು ಚಿಕಿತ್ಸಾಲಯವನ್ನು ತೆರೆಯಲು ಸಮ್ಮತಿಸಿದರೆ ಅಲ್ಲಿಯ ಜನರು ಸುಮಾರು ಒಂದು ಲಕ್ಷ ರೂಪಾಯಿ ವ್ಯಯಿಸಿ ಆ ಚಿಕಿತ್ಸಾಲಯದ ಕಟ್ಟಡವನ್ನೂ ಅದಕ್ಕೆ ಬೇಕಾಗುವ ಸಲಕರಣೆಗಳನ್ನೂ ಪೂರೈಸುವರೆಂದು ಪ್ರಚುರ ಪಡಿಸಿ ವಾಗಿ ಸೂಚಿಸಲಾಯಿತು. ಈ ಭರವಸೆಯಂತೆ ಜನತೆಯು ನಡೆಯುವುದಾದರೆ ಸರಕಾರವಾಗಲೀ ಜಿಲ್ಲಾ ಬೋರ್ಡಾಗಲೀ ಆ ಸೂಚನೆಯನ್ನು ಪರಿಶೀಲಿಸುವುದಾಗಿ ಅಧ್ಯಕ್ಷರು ಆಶ್ವಾಸನೆಯಿತ್ತರು.

ಹಿಂದೂ ಕೋ-ಆಪರೇಟಿವ್ ಆಳಿಯ ಸಂತಾನ ಸಮಿತಿಯು ಇದೇ ತಾ. 17ರ ಸಭೆಯಲ್ಲಿ ನಿರ್ಣಯಿಸಿದಂತೆ ಶ್ರೀಗಳಾದ ಎ. ಶಂಕರ ಆಳ್ವ, ಕೆ. ಕೆ. ಶೆಟ್ಟಿ, ಬಿ. ಬಿ. ಶೆಟ್ಟಿ, ಬಿ ಎಸ್. ಭಾಸ್ಕರ ರೈ, ಬಿ ಆರ್. ಶೆಟ್ಟರು, ಅವರು ಇದೇ ತಾ 23ರಿಂದ 25ರ ತನಕ ಮಂಗಳೂರು, ಕಾರ್ಕಳ, ಕುಂದಾಪುರ, ಉಡುಪಿ ತಾಲೂಕುಗಳ ಬೇರೆ ಬೇರೆ ಕೇಂದ್ರಗಳಲ್ಲಿ ಅಭಿಪ್ರಾಯ ಸಂಗ್ರಹದ ಸಲುವಾಗಿ ಸಂಚರಿಸಿದರು.

ಜಿಲ್ಲಾ ಆಹಾರೋತ್ಪತ್ತಿ ಸಮಿತಿಯ ಸಭೆಯು ಇದೇ ತಾ. 17ರಲ್ಲಿ ಆ ಹಾರೋತ್ಪ ಜಿಲ್ಲಾ ಕಲೆಕ್ಟರರ ಕಚೇರಿಯಲ್ಲಿ ಶ್ರೀ ಆರ್. ಎ. ಗೋಪಾಲಸ್ವಾಮಿ, ಕಲೆಕ್ಟರ್ ಅವರ ಅಧ್ಯಕ್ಷತೆಯಲ್ಲಿ ಜರಗಿತು. ಆತುರಯಾದ ಕೃಷಿ ಯೋಜನೆಯಂತೆ (Intensive Cultivation Scheme) ಕಳೆದ ಸಭೆಯ ಬಳಿಕ ಕೈಕೊಳ್ಳಲಾದ ಕಾರ್ಯಕಲಾಪಗಳ ಪರಿಶೀಲನೆಯಾಯಿತು.

ತಾ. 24-2-51ರ ನಂತರ ಕೆಳಗಿನ ಗ್ರಾಮಗಳಲ್ಲಿ ಕೆರೆಗಳ ದುರಸ್ತಿಗಾಗಿ ಹಣ ಮಂಜೂರು ಮಾಡಲಾಯಿತು. ಕುಂದಾಪುರ ತಾಲೂಕಿನ ಗುಲ್ವಾಡಿ ಗ್ರಾಮದ ಒಂದು ಕೆರೆಗಾಗಿ ರೂ 1780, ಹಾಲ್ವಾಡಿ ಗ್ರಾಮದಲ್ಲಿ ಮ ಕೆರೆಗಾಗಿ ರೂ 1700, ಹಾಲಾಡಿ ಗ್ರಾಮದೊಂದು ಕೆರೆಗಾಗಿ ರೂ. 700, ಉಡುಪಿ ತಾಲೂಕಿನ ಮಣೂರು ಗ್ರಾಮದೊಂದು ಕೆರೆಗಾಗಿ ರೂ. 1090, ಪಾಂಡೇಶ್ವರ ಗ್ರಾಮದಲ್ಲಿನ ಕೆರೆಗಾಗಿ ರೂ. 535, ಬೆಳ್ವೆ ಗ್ರಾಮದಲ್ಲಿನ ಕೆರೆಗಾಗಿ ರೂಪಾಯಿ 975, ಕಾಡೂರು ಗ್ರಾಮದ ಕೆರೆಗಾಗಿ ರೂಪಾಯಿ 2300, ಹೊಸಾಳ ಗ್ರಾಮದಲ್ಲಿನ ಕೆರೆಗಾಗಿ ರೂಪಾಯಿ 2000, ಐರೋಡಿ ಗ್ರಾಮದ ಕೆರೆಗಾಗಿ ರೂಪಾಯಿ 1150, ಮಂಗಳೂರು ತಾಲೂಕಿನ ಅತಿಕಾರಿಬೆಟ್ಟು ಗ್ರಾಮದ ಕೆರೆಗಾಗಿ ರೂಪಾಯಿ 980, ಬಪ್ಪನಾಡು ಗ್ರಾಮದ ಕೆರೆಗಾಗಿ ರೂಪಾಯಿ 1860, ಹೀಗೆ ಈ ವರೆಗೆ ಒಟ್ಟು ಕೆರೆಗಳ ದುರಸ್ತಿಗಾಗಿ ರೂಪಾಯಿ 1,98,328 ಮಂಜೂರಾಗಿದ್ದು ಇದರಿಂದಾಗಿ ಒಟ್ಟು 1892·63 ಎಕ್ರೆಗಳನ್ನು ಅಭಿವೃದ್ಧಿಗೆ ನೀರೊದಗಿಸಲಾಗಿದೆ.

ಯಂತ್ರೋಪಕರಣಗಳ ಮೂಲಕ ನೀರೊದಗಿಸಿ ಆಹಾರೋತ್ಪಾದನೆಯನ್ನು ಈ ರೀತಿಯ ಲ್ಲಿಯೇ ಬೇರೆ ಬೇರೆ ರೀತಿಯ ಎಂಟು ಎಣ್ಣೆ ಇಂಜಿನುಗಳನ್ನು ಒದಗಿಸಲಾಗಿದೆ. ಇವುಗಳಿಂದೆಷ್ಟು ಪ್ರಯೋಜನವಾಯಿತೆಂದು ಹಾದಿಯಲ್ಲಿ ತಿಳಿಸಿಲ್ಲ. ಈ ಎಂಟು ಯಂತ್ರಗಳನ್ನು ಸರಕಾರವೇ ಒದಗಿಸಿತೋ? ಹಾಗಿದ್ದರೆ ಇವುಗಳ ಕೆಲಸ ಎಲ್ಲಿದೆ? ಇವುಗಳ ಕೆಲಸ ಎಷ್ಟಿದ್ದೀತು? ಎಂದು ಮುಂತಾದ ಶ್ರೀ ಕೆ. ಬಿ. ಜಿನರಾಜ ಹೆಗ್ಗಡೆಯವರ ಪ್ರಶ್ನೆಗಳಿಗೆ ಸರಿಯಾದ ಉತ್ತರ ಬರಲಿಲ್ಲ. 17 ಪಂಪುಗಳ ಸ್ಥಾಪನೆಯ ಕಾರ್ಯದಿಂದಾಗಿ 128·88 ಎಕ್ರೆಗಳಿಗೆ ನೀರೊದಗಿ 10 ಟನ್ ಆಹಾರ ಧಾನ್ಯಗಳ ಉತ್ಪತ್ತಿಯಾಗಿದೆಯೆಂದೂ ಉಳುವ ಮತ್ತು ಸಮತಟ್ಟಾಗಿಸುವ ಯಂತ್ರಗಳಿಂದಾಗಿ 925·24 ಎಕ್ರೆ ಜಮೀನಿನಲ್ಲಿ 60 ಟನ್ 1344 ಪೌಂಡುಗಳಷ್ಟು ಆಹಾರಧಾನ್ಯದ ಸಂಗ್ರಹವಾಗಿದೆಯೆಂದೂ ಬೇರೆ ಬೇರೆ ರೀತಿಯ ಗೊಬ್ಬರಗಳ ಹಂಚೋಣದಿಂದ ಸುಮಾರು 350 ಟನ್ ಟನ್ ಆಹಾರ ಧಾನ್ಯ ಹೊರಗಿದೆಯೆಂದೂ ವರದಿಯಲ್ಲಿ ತಿಳಿಸಲಾಗಿತ್ತು. ಈ ಅಂಕೆ ಸಂಖ್ಯೆಯ ವಿಚಾರವಾಗಿ ಶ್ರೀ ಕೆ. ಚಕ್ರಪ್ಪ ರೈಗಳೂ ಕೇಳಿದ ಪ್ರಶ್ನೆಗಳಿಗೂ ಸರಿಯಾದ ಉತ್ತರ ಬರಲಿಲ್ಲ. ಸಂಬಂಧಪಟ್ಟ ಅಧಿಕಾರಿಗಳು ಈ ರೀತಿಯ ಲೆಕ್ಕವನ್ನು ಸಂಗ್ರಹಿಸಿ ಒಟ್ಟು ಸಿ ನಮ್ಮ ಜಿಲ್ಲೆಯನ್ನು ಸ್ವಾವಲಂಬಿಯಾಗಿ ಮಾಡುತ್ತಿದ್ದಾರೆಂಬ ಅಭಿಪ್ರಾಯವಾಗುವುದರಲ್ಲಿ ಸಂದೇಹವಿಲ್ಲ. ಕೊನೆಯಲ್ಲಿ ಪಂಪುಗಳ ರಿಪೇರಿ ಬಗ್ಗೆ ಜಿಲ್ಲೆಯ ಕೇಂದ್ರದಲ್ಲಿ ಒಂದು ವರ್ಕ್‌ಶಾಪ್ ತೆರೆಯಬೇಕೆಂಬ ನಿರ್ಧಾರವಾಯಿತು.

ಹೇರೂರು—ಇಲ್ಲಿಯ ಶ್ರೀ ಮಹಾಲಿಂಗೇಶ್ವರ ದೇವಸ್ಥಾನದ ಶ್ರೀ ರಾಮ ಭಜನಾ ಮಂದಿರದಲ್ಲಿ ವರ್ಷಂಪ್ರತಿ ನಡೆಸುವ ಭಜನ ಸಪ್ತಾಹವು ಇದೇ ತಾ. 19ರಲ್ಲು ಪ್ರಾರಂಭವಾಗಿ ಅತಿ ವಿಜೃಂಭಣೆಯಿಂದ ಮರುದಿವಸ ಮಂಗಲಸ್ನಾನ, ಭೋಜನ ಉಪಹಾರ, ಹರಿಕಥಾ ಕಾಲಕ್ಷೇಪದೊಡನೆ ಮುಕ್ತಾಯವಾಯಿತು.

ಶಿರ್ವ—ಸ್ಥಳೀಯ ಹಿಂದೂ ಹೈಸ್ಕೂಲಿನ ಎಸ್. ಎಸ್. ಎಲ್. ಸಿ. ತರಗತಿಯ ವಿದ್ಯಾರ್ಥಿಗಳ ಸತ್ಕಾರ ಕೂಟವು ಇದೇ ತಾ. 13ರಲ್ಲು ಶ್ರೀ ಶಿವರಾಯರ ಅಧ್ಯಕ್ಷತೆಯಲ್ಲಿ ಜರಗಿತು ಶ್ರೀ ಟಿ. ಆರ್. ಹೆಗ್ಡೆಯವರ ವರದಿ ವಾಚನ, ಶ್ರೀಗಳಾದ ಕೆ. ಎಲ್. ಶರ್ಮ, ನಾರಾಯಣರಾವ್ ಮೊದಲಾದವರ ಭಾಷಣ, ಅಧ್ಯಕ್ಷರ ಹಿತೋಕ್ತಿಗಳಾದ ನಂತರ ಸಭೆಯು ಕೊನೆಗೊಂಡಿತು.

ಹಿರಿಯಡ್ಕ—ಸ್ಥಳೀಯ ಆರ್ಯ ಸಮಾಜದ ವಾರ್ಷಿಕೋತ್ಸವವು ಇದೇ ತಾ 18ರಲ್ಲು ಮಂಜೇಶ್ವರ ಸಬ್ ರಿಜಿಸ್ಟ್ರಾರ್, ಶ್ರೀ ಎ. ಕೆ. ನಾಯಕ, ಅವರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀಗಳಾದ ಮಂಜುನಾಥ ಶೆಣೈ, ಕೇಶವ ರಾಮಚಂದ್ರ ಶೆಟ್ಟಿ, ಬಸ್ತಿ ವಾಸಪ್ಪ ಶೆಣೈ, ಎಸ್. ಜಿ. ರಾವ್, ಅನಂತಪ್ಪ ಶೆಣೈ, ಮುಸ್ತಾರಿ ಕೃಷ್ಣಯ್ಯ ಶೆಟ್ಟಿ, ಗಣಪಯ್ಯ ಶೆಟ್ಟಿ, ಮೊದಲಾದವರು ಕಾಲೋಚಿತ ವಿಷಯಗಳನ್ನಾಡಿದರು. ಅಧ್ಯಕ್ಷರ ಭಾಷಣಾನಂತರ ದಾನಿಪಾಕದೊಂದಿಗೆ ಸಭಾಂಕ್ಯವಾಯಿತು.

ಉದ್ಯಾವರ—ಇದೇ ತಾ. 24 ಕ್ಕೆ ಉಡುಪಿಯಿಂದ ಬೆಳಗ್ಗೆ 7½ ಗಂಟೆಗೆ ಹೊರಟ ಸರ್ವಿಸ್ ಬಸ್ಸಿನ ಮುಂದಿನ ಚಕ್ರಗಳೆರಡು ಉದ್ಯಾವರ ಪೇಟೆ ಸರ್ವಿಸ್ ರಸ್ತೆಯಲ್ಲಿ ಹಾರಿ ಬಸ್ಸು ಚಾಲಕನಿಗೆ ಮೂಲೆಗೀಗ ಎದುರುಗಡೆಯ ತೋಟದ ಬೇಲಿ ಅದನ್ನು ಪ್ರತಿಭಟಿಸಿದುದರಿಂದ ಬಸ್ಸಿನಲ್ಲಿದ್ದವರ ಪ್ರಾಣಹಾನಿಯಾಗಲಿಲ್ಲ.

ಮಣಿಪಾಲ—ಎಸ್ಟೇಟ್ ಎಲಿಮೆಂಟರಿ ಶಾಲೆಯಲ್ಲಿ ತಾ. 23-3-51ರಲ್ಲಿ ವಾರ್ಷಿಕ ರಕ್ಷಕರ ಕೂಟದ ಸಭೆಯು ಉದ್ಯಾವರ ಹೆಲೋರ್ ರೇಂಜ್ ಶಾಲೆಗಳ ಡೆಪ್ಯುಟಿ ಇನ್ಸ್‌ಪೆಕ್ಟರವರ ಅಧ್ಯಕ್ಷತೆಯಲ್ಲಿ ವಿವಿಧ ಕಾರ್ಯಕ್ರಮಗಳೊಂದಿಗೆ ನೆರವೇರಿತು.

ಹೆಡೂರು—ಇಲ್ಲಿಯ ಅನಂತಪದ್ಮನಾಭ ದೇವರ ವರ್ಷಾವಧಿ ಜಾತ್ರೆಯು ತಾ. 12-3-51ರಿಂದ ಮೊದಲ್ಗೊಂಡು, ತಾ. 20ರಂದು ಬ್ರಹ್ಮಕುಂಭಾಭಿಷೇಕದೊಡನೆ ಪರಿಸಮಾಪ್ತಿಗೊಂಡಿತು ದೇವಸ್ಥಾನದ ಎಕ್ಸಿಕ್ಯುಟಿವ್ ಆಫೀಸರರಾದ ಶ್ರೀ A. ಕೃಷ್ಣಯ್ಯ ಹೆಗ್ಗಡೆಯವರ ಆಸಕ್ತಿ, ಶ್ರದ್ಧೆಯಿಂದಾಗಿ ಎಲ್ಲಾ ಕಾರ್ಯಕ್ರಮಗಳು ಕಾಲಕ್ಕೆ ಸರಿಯಾಗಿ ವಿಜೃಂಭಣೆಯಿಂದ ನಡೆಸಲ್ಪಟ್ಟವು.

ಪೊಳಲಿ—ಇಲ್ಲಿಯ ಶ್ರೀ ರಾಜರಾಜೇಶ್ವರೀ ಅಮ್ಮನವರ ಕಾಲಾವಧಿ ಮಹೋತ್ಸವ ಜಾತ್ರೆಯು ಇದೇ ತಾ. 19ರಲ್ಲು ಪ್ರಾರಂಭವಾಗಿದ್ದು ತಾ. 24, 29 ಮತ್ತು ಎಪ್ರಿಲ್ 3ರಲ್ಲು ರಾತ್ರಿ ದಂಡಮಾಲೋತ್ಸವಗಳು ನಡೆದು ಎಪ್ರಿಲ್ 6ನೇ ಶುಕ್ರವಾರ ಪ್ರಸಿದ್ಧ ಚೆಂಡಿನ ಮಹೋತ್ಸವ ಪ್ರಾರಂಭವಾಗಿ ತಾ. 10ರವರೆಗೆ ನಡೆದು ತಾ. 11ರಲ್ಲು ಮಹಾ ರಥೋತ್ಸವ ಮರುದಿನ ಅವಭೃತ ಸ್ನಾನ ಕಾರ್ಯಗಳು ಜರಗಲಿರುವವು.

ಕಟೀಲು—ಸೈಂಟ್ ಜೋಸೆಫ್ಸ್ ಎಂಬುಲೆನ್ಸ್ ಎಸೋಸಿಯೇಶನಿನ ವತಿಯಿಂದ ಡಾ। ಕೊಟ್ಟಾರಿ ಮೋಹನದಾಸ ಪೈಗಳ ನೇತೃತ್ವದಲ್ಲಿ 8 ವಾರ ಜರಗಿದ ಪ್ರಥಮ ಚಿಕಿತ್ಸೆ ತರಬೇತಿ ಕೇಂದ್ರದ ಮುಖ್ಯಾಯ ಸಮಾರಂಭವು ಡಾ। ಕೆ. ಎಲ್. ಐತಾಳರಿಂದ ಪರೀಕ್ಷೆಯಾಗಿ ತಾ. 25—3—51ರಲ್ಲಿ ಡಾ। ನಾಥನ ಪೈಗಳ ಅಧ್ಯಕ್ಷತೆಯಲ್ಲಿ ಯಶಸ್ವಿಯಾಗಿ ಜರಗಿತು. ಹಲವರ ಭಾಷಣಗಳಾದ ಮೇಲೆ ಅಧ್ಯಕ್ಷರು ಪ್ರಥಮ ಚಿಕಿತ್ಸೆಯ ಪ್ರಯೋಜನಾದಿಗಳನ್ನು ವಿವರಿಸಿ ಭೋದಪ್ರದ ಭಾಷಣವಿತ್ತರು.

ಸಹಕಾರಿ ಸಂಘಗಳಿಗೆ—

ಮುನ್ಸಿಫ್ ಕೋರ್ಟುಗಳಿಗೆ—

ವರ್ತಕರಿಗೆ—ಶಾಲೆಗಳಿಗೆ—

ಬೇಕಾಗುವ ರಿಜಿಸ್ಟರುಗಳು,

ರಶೀದಿ ಪುಸ್ತಕಗಳು,

ಫಾರ್ಮುಗಳೂ, ಎಕೌಂಟ್

ಪುಸ್ತಕಗಳೂ ದೊರೆಯುತ್ತವೆ.

ನವಯುಗ ಪ್ರೆಸ್ ಉಡುಪಿ.

ಕುಂದಾಪುರ ಡಿ ಮು. ಕೋರ್ಟಿನಲ್ಲಿ

S. C. 853/1950.

ವಾದಿ — ಮಂಜಪ್ಪ ಶೆಟ್ಟಿ.

ಪ್ರತಿವಾದಿ—ಬಚ್ಚು ಯಾನೆ ಮುತ್ತಯ್ಯ ಶೆಟ್ಟಿ

ಪ್ರತಿವಾದಿ—ಬಚ್ಚು ಯಾನೆ ಮುತ್ತಯ್ಯ ಶೆಟ್ಟಿ ಬಾಪ್ತು ನಾಗಪ್ಪ ಶೆಟ್ಟಿ ನೊಮ್ಮಗ, ಕುಂದಾಪುರ ತಾಲ್ಲೂಕು ಕೋಣಿ ಗ್ರಾಮದ ಕಟ್ಟೆರ ಹಾಡಿ ಮನೆಯಲ್ಲಿ ಇರುವರು.

ಸದ್ರಿ ಪ್ರತಿವಾದಿಗೆ ತಿಳಿಯಪಡಿಸುವುದೇನೆಂದ್ರೆ—

ನೀವು ವಾದಿಗೆ ತಾ. 22-11-1947ರಲ್ಲು ಬರಕೊಟ್ಟ ಡಿಮಾಂಡು ನೋಟಿನ ಅಸಲು ಬಡ್ಡಿ ಹಣದಲ್ಲಿ ಎಷ್ಟೂ ದರೂ ವಸೂಲು ಕೊಡದೆಯಿದ್ದ ಸಂಬಂಧ ವಾದಿಯು ಮಾಡಿದ ಮೇಲಿನ ದಾವೆಯು ತಾ. 11-4-1951ಕ್ಕೆ ನಿಶ್ಚಿಯಿಸಿದ್ದರ ಆ ಕುರಿತು ನಿಮ್ಮ ಆಕ್ಷೇಪವಿದ್ದರೆ ಆ ದಿನ ಹಗಲು 11 ಘಂಟೆಗೆ ಮೇಲಿನ ಕೋರ್ಟಿನಲ್ಲಿ ಹಾಜರಾಗಿ ಜಾಹೀರು ಮಾಡಿಕೊಳ್ಳತಕ್ಕದ್ದು ಎಂಬ ಸಂಗತಿ ತಿಳಿಸಿದೆ. ತಪ್ಪಿದರೆ ಏಕಪಕ್ಷತೀರ್ಮಾನವಾಗಲಾರದೀತು.

(By order of the Court)

Y. Tejappa Shetty,

Advocate for Plff.

Coondapoor, 22-3-51

ಸ್ವೀಕಾರ - ವಿಮರ್ಶೆ

ಅಮರ ಅಗಸ್ಟ್

ಲೇಖಕರು: ಶ್ರೀ ಅ. ನ. ಕೃಷ್ಣರಾಯರು, ಪ್ರಕಾಶಕರು: ಆನಂದ ಬ್ರದರ್ಸ್, ಬೆಂಗಳೂರು ೨. ಬೆಲೆ ರೂ. ೨-೦-೦

'ಅಮರ ಅಗಸ್ಟ್' ಶ್ರೀ ಅ. ನ. ಕೃಷ್ಣರಾಯರ ಇತರ ಕಾದಂಬರಿಗಳಿಗಿಂತ ಭಿನ್ನರೀತಿಯದಾಗಿರುತ್ತದೆ. ಉಳಿದ ಕಾದಂಬರಿಗಳಲ್ಲಿ ಸರಸವಿರಸವೂ ಇದೆ. ಅಮರ ಅಗಸ್ಟ್‌ನಲ್ಲಿ ಅನುಕಂಪವಿದೆ, ಕ್ರಾಂತಿಯಿದೆ. ಅಗಸ್ಟ್ ತಿಂಗಳ ನೆನಪು ಭಾರತಕ್ಕೆ ಎಂದೂ ಮರೆಯಾಗುವಂತಹದಲ್ಲ. ದೇಶದ ಬಂಧ ಮುಕ್ತತೆಗಾಗಿ ಹೋರಾಡಿ- ದೇಹವನ್ನು ತ್ಯಾಗಮಾಡಿದ ತರುಣ ತರುಣಿಯರ, ನಾಯಕರ ಸಾಹಸವನ್ನು ಯಾವ ದೇಶಪ್ರೇಮಿಯೂ ಮರೆಯುವಂತಿಲ್ಲ. ಶ್ರೀ ಅ. ನ. ಕೃಷ್ಣರಾಯರು ಆಗಿನ ದುರಂತರವನ್ನು ಚೆನ್ನಾಗಿ ಚಿತ್ರಿಸಿರುತ್ತಾರೆ- ಸಂದರ್ಭ ಸನ್ನಿವೇಶಗಳು ಹಿತಮಿತವಾಗಿರುತ್ತವೆ. 'ಅಗಸ್ಟ್ ತಿಂಗಳ' ಹೋರಾಟದ ಚಿತ್ರವೊಂದು ನಮ್ಮ ಮುಂದೆ ಇಟ್ಟಿರುವದಾದರೂ ಕುಗ್ರಾಮದಲ್ಲಿಯ ಹಲವಾರು ಜಾತಿಯ ಜನ, ಒಂದೇ ಕುಟುಂಬದವರಂತೆ ಗಾಂಧೀಜಿಯ ತತ್ವವನ್ನು ಕಾರ್ಯಗತವಾಗಿ ಮಾಡಿಕೊಂಡಿರುವ ಮಾನವೀಯ ವಿಶಿಷ್ಟ ಚಿತ್ರವೊಂದನ್ನು ಅದಕ್ಕಿಂತಲು ಮಿಗಿಲಾಗಿ ನಮ್ಮ ಮನಸ್ಸನ್ನು ಆಕರ್ಷಿಸಿಕೊಳ್ಳುತ್ತದೆ. ಕುಗ್ರಾಮದ ಜನಜೀವನದಲ್ಲಿಯ ಸೌಹಾರ್ದಭಾವ- ವಿಶಾಲಾಂತಃಕರಣ - ಸಾಂಘಿಕ ಮನೋವೃತ್ತಿ ಉತ್ತಮ ಆದರ್ಶವನ್ನು ತೋರಿಸಿದೆ. ದೊಡ್ಡಗೌಡರಂತಹ ಶ್ರೇಷ್ಠ ವ್ಯಕ್ತಿಗಳು ನಮ್ಮಲ್ಲಿ ನೂರಕ್ಕೆ ಒಬ್ಬಿಬ್ಬರಾದರೂ ಇರುತ್ತಿದ್ದರೆ ಇಂತಹ ದುಃಸ್ಥಿತಿ ಉಂಟಾಗದೆಂದು ಭಾಸವಾಗುತ್ತದೆ. ಜೀವನ ಸಂಗಾತಿ ಜೋಯಿಸರ ಬದುಕೂ ಅಷ್ಟೇನೆಯ-ಅಷ್ಟೇ ಪವಿತ್ರವಾದುದು- ದೊಡ್ಡಗೌಡರ ಉದಾರ ಮನಸ್ಸು-ಶಾಂತ ಸ್ವಭಾವ ಬಡಬಗ್ಗರ ಮೇಲಿರುವ ಅನುಕಂಪ-ಮೊದಲಾದ ವಿಶಿಷ್ಟ ಗುಣಗಳೇ ಆ ಇಡಿಯ ಗ್ರಾಮದ ಒಲವನ್ನು ಸೂರೆಗೊಂಡಿದ್ದುವು ಅಗಸ್ಟ್‌ನ ಕುರಿತು ಚಿತ್ರಣಕ್ಕಿಂತಲೂ ಈ ಸನ್ನಿವೇಶ ನಿಜವಾಗಿಯೂ ಹೃದಯ ಸ್ಪರ್ಶಿಯಾಗಿದೆ- ಮನೋಹರವಾಗಿದೆ. ಗೌಡರ ಕಾಲದಲ್ಲಿ ಕುಗ್ರಾಮದಲ್ಲಿ ಶಾಂತಿ ಸಮಾಧಾನಗಳು ನೆಲಸಿದ್ದವು; ಅದನ್ನು ನೆನೆಸಿಕೊಂಡರೆ 'ರಾಮರಾಜ್ಯ'ವೆಂದರೆ ಇದೇಯೇನೋ ಎನುವ ಕಲ್ಪನೆ ಉಂಟಾಗುತ್ತದೆ.

ಶ್ರೀ ಅ. ನ. ಕೃಷ್ಣರಾಯರ ಇತರ ಕಾದಂಬರಿಗಳನ್ನು ಮೆಚ್ಚಿದ ಜನ ಇದನ್ನು ಅದೇ ದೃಷ್ಟಿಯಿಂದ ಮೆಚ್ಚಲಾರರು ಅಂದರೆ ಇದರಲ್ಲಿ ಆಧ್ಯಾತ್ಮಿಕ ಹಾಗೂ ರಾಜಕೀಯದ ವರ್ಣನೆಯು ವಿಶೇಷವಾಗಿರುವುದರಿಂದ ತುಸು ಗಂಭೀರವಾಗಿ ತೋರಬಹುದು.

ಪೂಜಾ

(ಗದ್ಯಗೀತಗಳು.) ಬರೆದವರು ಶ್ರೀ ಸಿಂಪಿ ಲಿಂಗಣ್ಣನವರು ಸಂಪಾದಕರು: ಕುಲಕರ್ಣಿ ಬಿಂದುಮಾಧವ, ಬಾದಾಮಿ. ಬೆಲೆ: ರೂ. 0-12-0

ಪೂಜೆಯಲ್ಲಿ ದಣಿದಮನಸ್ಸಿನ ಮೇಲೆ,ಅಮೃತ ಸಿಂಚನ ಮಾಡಿದಾರೆ, ಶ್ರೀ ಸಿಂಪಿ ಲಿಂಗಣ್ಣನವರು. ಪ್ರತಿಯೊಂದು ಗದ್ಯಗೀತಗಳೂ ಹೃದಯವನ್ನು ಕಲುಕುತ್ತವೆ; ವಿಚಾರವೇರಿಸುವ ಪ್ರತಿಯೊಂದು ಗದ್ಯಗೀತವೂ ಭಾವನಾತ್ಮಕವಾಗಿದ್ದು ಆತ್ಮಿಕ ಶಕ್ತಿಯನ್ನು ಹೆಚ್ಚಿಸುವ ಕಾರ್ಯವನ್ನು ಚೆನ್ನಾಗಿ ಮಾಡುತ್ತದೆ. ಮನುಷ್ಯ ಬದುಕಿನಲ್ಲಿ ಕಷ್ಟದುಃಖಗಳನ್ನು ಎದುರಿಸಬೇಕಾದರೆ ಆಧ್ಯಾತ್ಮಿಕ ಬಲವು ಬಲವಾಗಿದ್ದರೇನೇ ಸಾಧ್ಯ! ಆಧ್ಯಾತ್ಮಿಕದ ಬೆಳಕು ಅತನಮೇಲೆ ಬೀಳಬೇಕಾದರೆ ಅತನ ಮನಸ್ಸು ಸುಸಂಸ್ಕೃತವಾಗಿರಬೇಕು. ಅಂದರೇನೇ ಹೃದಯಶುದ್ಧಿಯಾದೀತು. ಅಧ್ಯಾತ್ಮಿಕ ಬೆಳಕು ಜೀವನ ಅಂಧಕಾರವನ್ನು ತೊಲಗಿಸೀತು. ಶ್ರೀ ಸಿಂಪಿ ಲಿಂಗಣ್ಣನವರ 'ಪೂಜಾ' ಸರ್ವಸಾಮಾನ್ಯ ಉತ್ತಮವಾಗಿರುತ್ತದೆ.

ನನ್ನ ಕಲ್ಪನೆಯ ಸಮಾಜವಾದ

ಲೇಖಕರು: ಶ್ರೀ ಜಯ ಪ್ರಕಾಶ ನಾರಾಯಣರು, ಕನ್ನಡಿಸಿದವರು: 'ಸಮಾಜವಾದೀ' ರಾಭಂತರು. ಪ್ರಕಾಶಕರು: ಕರ್ನಾಟಕ ನ್ಯೂಸ್ ಪೇಪರ್ಸ್ ಮತ್ತು ಪಬ್ಲಿಕೇಶನ್ಸ್ ಲಿಮಿಟೆಡ್, 14, ಮಂಗಳೂರು ಸ್ಟ್ರೀಟ್ ಮುಂಬಯಿ 1. ಬೆಲೆ: ರೂ- ೦-೪-೦

ಸಮಾಜವಾದದ ಧ್ಯೇಯ ಧೋರಣೆಗಳನ್ನು ಸೂಕ್ಷ್ಮವಾಗಿ ಜೈಪ್ರಕಾಶನಾರಾಯಣರು ವಿವೇಚಿಸಿದ್ದಾರೆ. ದೇಶವನ್ನು ಉಚ್ಚ್ರಾಯಸ್ಥಿತಿಗೆ ತರಬಲ್ಲ ಹಲವು ಸುಧಾರಣೆಗಳು ಈ ವಾದದಲ್ಲಿ ಮಂಡಿಸಲಾಗಿವೆ. ಇಂತಹ ಆದರ್ಶಗಳು ಕಾರ್ಯಗತವಾಗಿ ಬಂದರೆ ಜನಜೀವನ ಸುಗಮವಾದೀತೆನುವ ಕಲ್ಪನೆ ಮೂಡುತ್ತದೆ. ಆದರ್ಶಗಳ ಆರಾಧಕರಾದ ನಾವೆಲ್ಲ ಅದರ ಸುಖಾನುಭವವನ್ನೆಂದು ಪಡೆದೇವೆಂಬುದೇ ಒಂದು ಸಮಸ್ಯೆ. ಕಾಂಗ್ರೆಸಿನ ಘಟನೆಯಲ್ಲೂ ಇಂತಹ ಉತ್ತಮ ಆದರ್ಶಗಳು ಇಲ್ಲದೆಯಿಲ್ಲ. ಯಾವುದೂ ಫಲಿಸದೇ ಇರುವದರಿಂದ ಆ ಕುರಿತು ನಮಗೆ ವಿಶೇಷ ಆಸ್ಥೆಯಿರುವುದಿಲ್ಲ. ಜಯಪ್ರಕಾಶರ ಈ ವಾದದಲ್ಲಿ ಸಾಗುವಳಿಯನ್ನು ಊರ್ಜಿತಾವಸ್ಥೆಗೆ ತರುವದರಿಂದಲೇ ಬಡರೈತನ ಉದ್ಧಾರ; ಅವನ ಉದ್ಧಾರವೇ ದೇಶದ ಉದ್ಧಾರವೆನುವಂಶ ಪ್ರಾಮುಖ್ಯವಾಗಿದೆ. ರಾಷ್ಟ್ರೀಕರಣದಿಂದ ಹೆಚ್ಚಿನ ಜನಕೆಗೆ ಉದ್ಯೋಗ ಸಿಕ್ಕಿ, ಸಂಪತ್ತು ಎಲ್ಲರಿಗೂ ಹಂಚಿದಂತಾಗುತ್ತದೆನ್ನುವ ವಾದ ಸಮಾಜವಾದಿಗಳದು. ಅಂತೂ ಜೈ ಪ್ರಕಾಶ ನಾರಾಯಣರ "ನನ್ನ ಕಲ್ಪನೆಯ ಸಮಾಜವಾದ" ಈ ಚಿಕ್ಕ ಹೊತ್ತಿಗೆ ಆ ವಾದ ಮೂಲ ತತ್ವವನ್ನು ಚೆನ್ನಾಗಿ ಪ್ರತಿಪಾದಿಸುತ್ತದೆ.

—ಎಸ್ಕೆಲ್

ಕುಂದಾಪುರ ಪಂಚಾಯ್ತ ಬೋರ್ಡ್ ಆಫೀಸಿನ ಎದುರು

ಅಜಂತ ಪ್ರಿಂಟರ್ಸ್ & ಪಬ್ಲಿಷರ್ಸ್

ಎಂಬ ಹೊಸ ಮುದ್ರಣಾಲಯವು ಈಗ ತಾನೆ ತೆರೆಯಲ್ಪಟ್ಟಿದೆ.

- ಇಲ್ಲಿ -

ಎಲ್ಲಾ ತರದ ಪ್ರಿಂಟಿಂಗ್. ಬುಕ್-ಬ್ಯಾಂಡಿಂಗ್ ವಗೈರೆ ಕೆಲಸಗಳನ್ನು ಸಕಾಲಕ್ಕೆ ಯೋಗ್ಯ ಬೆಲೆಗೆ ತಯಾರಿಸಿಕೊಡಲು ಸದಾ ಸಿದ್ಧರಿದ್ದೇವೆ. ಒಮ್ಮೆ ಆರ್ಡರು ಕೊಟ್ಟು ಪರೀಕ್ಷಿಸಿರಿ!!

ಕೆ. ಎಸ್. ಹೆಬ್ಬಾರ್,
ವ್ಯಾಪಾರಿಕರು.

For Life Insurance

CONSULT

THE NEW GUARDIAN OF INDIA
LIFE INSURANCE CO LTD.
(Established 1934)

Chairman Sri M. Ct. M. Chidambaram Chettiyar

A Policy in this progressive Life Office is a good investment; its Agency is a valuable business connection.

MANGALORE BRANCH:
Off K. S. R. Road,
Hampanakatta, MANGALORE

HEAD OFFICE:
"United India Life Bldg",
P B No 142, MADRAS

NOTICE.

ಕುಂದಾಪುರ ಡಿ ಮು. ಕೋರ್ಟಿನಲ್ಲಿ
S. C 77/51

ವಾದಿ —ಸುಬ್ಬಣ್ಣ ಸೆಟ್ಟಿ-
ಪ್ರತಿವಾದಿ— ಗುಮ್ಮಿಂಗ್ ದಾಲ್ಮೇದಿ ಸಹಾ

ಸದ್ರಿ ದಾವೆಯ 1 ಮತ್ತು 3ನೇ ಪ್ರತಿವಾದಿರಿಗೆ ತಿಳಿಯಪಡಿಸಿದ್ದು.

1 ನೇ ಪ್ರತಿವಾದಿ ಗುಮ್ಮಿಂಗ್ ದಾಲ್ಮೇದಿ, ಲೋರೆಸ್ ದಾಲ್ಮೇದಿ ಮಗ, ಕುಂದಾಪುರ ತಾಲ್ಲೂ ಹತ್ತಾಡಿ ಗ್ರಾಮದ ಕೆಳಾತಳಿ,

3ನೇ ಪ್ರತಿವಾದಿ— ರುಜಾರಿ ದಾಲ್ಮೇದಿ, 1 ನೇ ಪ್ರತಿವಾದಿ ಮಗ, ಕುಂದಾಪುರ ತಾಲ್ಲೂ ನಾಡಗ್ರಾಮದ ಚಿಕ್ಕಳಿ.

ವಾದಿಗೆ ನೀವು ಕೂಡಾ 3 ಜನರು ಬರೆದುಕೊಟ್ಟ ಡಿಮಾಂಡು ನೋಟಿನ ಬಾಬ್ತು ಬರತಕ್ಕ ಅಸಲು ಬಡ್ಡಿ ಖೈವೇಜು ರೂಪಾಯಿ 108-4-0 ನ್ನು ಬರಮಾಡಿಕೊಳ್ಳುವರೆ ವಾದಿ ದಾಖಲ್ಲು ಮಾಡಿದ ಮೇಲಿನ ದಾವೆ ತಾ. 2-4-51ಕ್ಕೆ ಇಟ್ಟಿದೆ. ಆ ಕುರಿತು ನಿಮ್ಮ ಉದಾಹರಣೆಯಿದ್ದರೆ ಸದ್ರಿ ದಿವಸ ಬೆಳಗ್ಗೆ ಗಂಟೆ 11ಕ್ಕೆ ಸದ್ರಿ ಕೋರ್ಟು ಮುಂದೆ ಹಾಜರಾಗಿ ತಿಳಿಸತಕ್ಕದ್ದು.

Y. Manjaya Shetty,
Advocate for Plff.
ತಾ. 25-3-51, ಮೊಕ್ಕಾಂ: ಕುಂದಾಪುರ.

ವಿವಿಧ ಪಾತ್ರೆಗಳು



ರಾವಕ್ಕೂ ವಿಧದ ಬೆಳ್ಳಿ, ತಾಮ್ರ, ಹಿತ್ತಾಳೆ, ಕಂಚು ಸಾಮಾನುಗಳ ವಿವಿಧ ಪಾತ್ರೆಗಳೂ ಸಾಮಾನುಗಳೂ ರಖಂ ಆಗಿಯೂ ಚಿಲ್ಲರೆಯಾಗಿಯೂ ದೊರೆಯುತ್ತವೆ.

ಕಲ್ಯಾಂಜಿ ವ್ಯಾಸಾಚಾರ್ಯ,
ರಥಬೀದಿ, ಉಡುಪಿ

ಋತುಸ್ರಾವ ನಿಂತಿತು

'ಕುಮಾರಿ' ಬಿಲ್ಲೆಗಳನು ಉಪಯೋಗಿಸಿದರೆ ಹದಿನೈದು ಋತುಸ್ರಾವವಾಗುವುದು, ಹಕೋಟಿಗೆ ಬರುವುದು, ಈ ಔಷಧ ಸೇವನೆಯಿಂದ ತೀವ್ರ ಗುಣಹೊಂದಬಹುದು, ಯಾವ ಬಾಧಕವೂ ಇಲ್ಲ. ಸಾವಿರಾರು ಮಂದಿಗೆ ಖಾತ್ರಿ ಗುಣವಾಗಿದೆ- ಬೆಲೆ; ರೂ. 3-1 ಸ್ಪೆಶ್ಯಲ್ ರೂ. 5- ಅಧಿಕಾಧಿಕ ಸ್ಪೆಶ್ಯಲ್ ರೂ. 8- [ವಿ. ಪಿ ಪಟ್ಟದಾರಿ ಪ್ರತ್ಯೇಕ.]

MIS. D. DEVEE, F. DB. (N. J.)
Tollygunge CALCUTTA
ಸ್ವಾತಿಕ್ಸ್ಪರು ಕಂಪಾಳಂಪನಿ, ಮಂಗಳೂರು



Approved from by the Govt. of Mysore Certificated by the Agent of the Govt of Cylon & Indian.

ಸ್ವಲ್ಪ ಬಂಡವಾಳದಲ್ಲಿ

ಒಂದು ಉಪಯುಕ್ತ ಹಾಗೂ ಲಾಭಕರ ಉದ್ಯೋಗ.

ಸ್ಟೀಲ್, ಎಣ್ಣೆಯ ಮಿಲ್ ಅಥವಾ ಟಿನ್ ಯಾ ತಗಡಿನಿಂದ ಅನೇಕ ವಸ್ತುಗಳನ್ನು ಸುಲಭದಲ್ಲಿ ತಯಾರಿಸಿರಿ.

ವಿವರದ ಬಗ್ಗೆ ಬರೆಯಿರಿ:

The Vijay Engineering Co. Ltd.
Mazagaon, **Bombay 10.**

EAST & WEST INSURANCE CO. LTD.
Fort, BOMBAY.

NOTICE

Notice having been given of the loss distruction or misplacement of Policy No. 38347 of the EAST & WEST INSURANCE Co. Ltd. Bombay on the life of Mr. Albert D'soza for Rs 750/- a duplicate policy will be issued unless objection is lodged with us within a fortnight from this date.

Sd/- **K. N. Samant,**
Manager.

ನಮ್ಮ ಜಿಲ್ಲೆಯ ಅಳಿಯ ಸಂತಾನಿಗರಿಗೆ ಹಿಂದೂಕೋಡು ಬೇಕೋ ಬೇಡವೋ ಎಂಬ ವಿವಾದ ಪುನಃ ಪ್ರಾರಂಭವಾಗಿದೆ. ಪತ್ರಿಕೆಗಳಲ್ಲಿ ಎರಡೂ ಪಕ್ಷದವರ ಪತ್ರಗಳು ಬರುತ್ತಿವೆ. ಒಮ್ಮೆ ಲಂಬೆಯವರ ನಮ್ಮ ಜೇರದ್ದೋ ಪರದೇಶದಿಂದ ಬಂದದ್ದೋ ಎಂಬ ಒಂದು ವಿವಾದ ಮದ್ರಾಸಿನ ಪತ್ರಿಕೆಯಲ್ಲಿ ಪ್ರಾರಂಭವಾಯಿತು. ಪ್ರಥಮಥ ಎರಡು ಪತ್ರಗಳಲ್ಲಿ ಲಂಬೆ ಹುಳಿಯ ಜನ್ಮಸ್ಥಾನದ ವಿಷಯ ಚರ್ಚಿಸಿದರು. ಅಷ್ಟರೊಳಗೆ ವಾದಿ ಪ್ರತಿವಾದಿಗಳು ಒಬ್ಬರನ್ನೊಬ್ಬರು ವ್ಯಕ್ತಿಶಃ ಟೀಕಿಸಲಾರಂಭಿಸಿದರು ಒಬ್ಬರನ್ನೊಬ್ಬರು ನಿಂದಿಸತೊಡಗಿದರು. ಸ್ವಲ್ಪ ಸಮಯದೊಳಗೆ ವಿವಾದಕ್ಕೆ ಕಾರಣವಾದ ವಿಷಯವೇ ಮರೆತುಹೋಯಿತು, ಪರಸ್ಪರ ನಿಂದೆಯೇ ಕಠಿಣವಾಯಿತು. ಅಷ್ಟರಲ್ಲಿ ಸಂಪಾದಕರು ವಾದ ವಿವಾದವನ್ನು ಅಲ್ಲೇ ಕೊನೆಗೊಳಿಸಿದರು. ಹಾಗೆ ಬಂದದೆ ನಮ್ಮಲ್ಲಿಯ ಈ ವಿವಾದ

೦೦೦ ೦೦೦

ಈರೀತಿಯ ವಿವಾದಗಳು ಪತ್ರಿಕೆಗಳಲ್ಲಿ ಬರುತ್ತಿದ್ದರೆ ಪತ್ರಿಕೆಗಳಿಗೆ ಸ್ವಲ್ಪ ಉಪಕಾರವಾಗುತ್ತದೆ. ಓದುಗರಲ್ಲಿ ಪತ್ರಿಕೆಗಳನ್ನು ಕೊಂಡುಕೊಂಡು ಓದಲಿಕ್ಕೆ ಉತ್ಸಾಹ ಬರುತ್ತದೆ. ಫ್ರಾನ್ಸಿನಲ್ಲಿ ಎರಡು ಪತ್ರಿಕೆಗಳಿದ್ದವಂತೆ. ಅವುಗಳೊಳಗೊಂದು ಕಠಿಣ ಜಗಳ ಪ್ರಾರಂಭವಾಯಿತಂತೆ. ಒಂದು ಪತ್ರಿಕೆಯ ಸಂಪಾದಕನು ಇನ್ನೊಂದು ಪತ್ರಿಕೆಯ ಸಂಪಾದಕನನ್ನು ಟೀಕಿಸಿದ. ನಂತರ ನಿಂದಿಸಿದ ಕೊನೆಗೆ ಬೈಯಲಿಕ್ಕೂ ಪ್ರಾರಂಭಿಸಿದ. ಈ ವಿವಾದವು ಮುಂದುವರಿದಂತೆ ಎರಡೂ ಪತ್ರಿಕೆಗಳನ್ನು

ವಾರದ ಹರಟೆ

ಕೊಂಡುಕೊಂಡು ಓದುವವರ ಸಂಖ್ಯೆಯು ವಿಶೇಷವಾಗಿ ಬೆಳೆಯಿತು ಓದುವವರ ಮನಸ್ಸಿನಲ್ಲಿ ಒಂದು ಪತ್ರಿಕೆಯ ಸಂಪಾದಕನಿಗೆ ಇನ್ನೊಂದು ಪತ್ರಿಕೆಯ ಸಂಪಾದಕನು ಎಲ್ಲಿಯಾದರೂ ದಾರಿಯಲ್ಲಿ ಸಿಕ್ಕಿದರೆ ಒಬ್ಬನನ್ನೊಬ್ಬನು ಕೊಂದುಹಾಕಿ ಕೊಳ್ಳಲಿಕ್ಕೆ ಸಾಕೆನ್ನುವಷ್ಟು ವಿರೋಧದ ಪಾತ್ರಗಳು ಬರುತ್ತಿದ್ದವು. ಅಷ್ಟರಲ್ಲಿ ಅಲ್ಲಿಯ ದೊರೆ ಒಬ್ಬ ಯೋಚಿಸಿದನು, ಇವರೊಳಗಿನ ಜಗಳವನ್ನು ಮುಂದುವರಿಸಲಿಕ್ಕೆ ಬಿಡಬಾರದು. ಇಬ್ಬರನ್ನು ಒಟ್ಟುಗೂಡಿಸಿ ಅವರೊಳಗೆ ರಾಜಿಮಾಡಿಸಬೇಕೆಂದು ಎಣಿಸಿ ಎರಡೂ ಪತ್ರಿಕೆಯ ಸಂಪಾದಕರಿಗೂ ತನ್ನಲ್ಲಿ ಔತಣಕ್ಕೆ ಆಮಂತ್ರಣಕೊಟ್ಟ. ಔತಣಕ್ಕೆ ನಿರ್ಣಯಿಸಿದ ಸಮಯ ಒಂದು ಪತ್ರಿಕೆಯ ಸಂಪಾದಕ ಬಂದ. ಇನ್ನೊಂದು ಪತ್ರಿಕೆಯ ಪತ್ರಿಕೆಯ ಸಂಪಾದಕ ಕಾಣಲಿಲ್ಲ. ದೊರೆ ಬಹಳ ಹೊತ್ತು ಕಾಯಬೇಕಾಯಿತು. ಕೊನೆಗೂ ಎರಡನೇ ಸಂಪಾದಕನು ಬಾರದೆ ಇದ್ದುದರಿಂದ ದೊರೆ ಬಂದ ಸಂಪಾದಕನ ಕೂಡೆ ಕೇಳಿದ- ನಿಮ್ಮ ಎದುರಾಳಿ ಪತ್ರಿಕೆಯ ಸಂಪಾದಕನು ಬಾರದಿರಲು ಕಾರಣವೇನಿರಬಹುದು? ನೀವಿಬ್ಬರೂ ಬಂದಿದ್ದರೆ ನಿಮ್ಮ ಪತ್ರಿಕೆಯ ಮೂಲಕವೇ ನಿಮ್ಮೊಳಗೆ ರಾಜಿಮಾಡಬೇಕೆಂದು ನನ್ನ ಇಚ್ಛೆಯಿತ್ತು ಎಂದ. ಬಂದ ಸಂಪಾದಕ ಹೇಳಿದ- ಸ್ವಾಮಿ, ಎರಡೂ ಪತ್ರಿಕೆಗಳ ಮಾಲಕನೂ ನಾನೇ. ಸಂಪಾದಕನೂ ನಾನೇ. ಈ ವಿವಾದ ಪ್ರಾರಂಭವಾಗುವವರೆಗಿನ ನನ್ನ ಒಂದು ಪತ್ರಿಕೆಯನ್ನು ಓದುವವರೇ ಇರಲಿಲ್ಲ. ಈ ವಿವಾದದಿಂದಾಗಿ ನನ್ನ ಎರಡು ಪತ್ರಿಕೆಗಳೂ ಸಾವಿರಗಟ್ಟಲೆ ಖರ್ಚಾಗುತ್ತಿದೆ. ಎಂದಿನಂತೆ ಹೀಗೆ ಪತ್ರಿಕೆಗಳಿಗೆ ಈ ರೀತಿಯ ಪತ್ರವ್ಯವಹಾರದಿಂದ ನಷ್ಟವಿಲ್ಲವೆನ್ನಿ.

೦೦೦ ೦೦೦

ಹಾಗಲ್ಲವಾದರೆ ಈ ವಿವಾದ ಏಕೆ ಬೇಕಿತ್ತು? ಅಳಿಯ ಕಟ್ಟು ನಮ್ಮ ಭಾರತದ ಒಂದು ಮೂಲೆಯ ಜನರು ಆಚರಿಸುವ ಕಟ್ಟು. ಹೀಗೆ ಒಂದೊಂದುಕಡೆ ಒಂದೊಂದು ವಿಚಿತ್ರ ಕಟ್ಟು ಇವೆ. ಒಂದೊಂದು ಕಡೆ ಒಂದೊಂದು ಕಟ್ಟು ಇರುವುದು ನಮ್ಮ ಹಿಂದೂ ಸಮಾಜಕ್ಕೆ ಭೂಷಣವೆಂದು ನಮ್ಮ ಭಾರತದ ಮುಖಂಡರು ಎಣಿಸಿ ಹಿಂದುಗಳೆಲ್ಲಾ ಒಕ್ಕಟ್ಟಿನಲ್ಲಿರುವಂತೆ ಹಿಂದೂ ಕೋಡು ಎಂದರೆ ಹಿಂದುಗಳು ಎಲ್ಲರೂ ಒಪ್ಪುವ ಒಂದು ಕಾನೂನು ಆಗಬೇಕೆಂದು ಯೋಚಿಸಿದ್ದಾರೆ ದಾಯಭಾಗ, ಮಿತಾಕ್ಷರ ಎಂಬ ಒಂದಕ್ಕೊಂದು ಪರಸ್ಪರ ವಿರೋಧವಾದ ಎರಡು ಕಾನೂನುಗಳು ನಮ್ಮ ದೇಶ

——ಶ್ರೀ "ಯು. ವಿ."——

ದಲ್ಲಿವೆ. ದಾಯಭಾಗದವರು ತಮ್ಮ ಕ್ರಮವೇ ಸರಿ ಎನ್ನುವವರು ಮಿತಾಕ್ಷರದವರು ತಮ್ಮದೇ ಸರಿಯೆನ್ನುವವರು ಆ ಎರಡು ಸಂಗಡದವರೂ ಹಾಗೂ ಒಟ್ಟಾಗಿ ಒಂದೇ ಕ್ರಮಕ್ಕೆ ಒಪ್ಪಿಕೊಳ್ಳುತ್ತಾರೆ ಹೀಗಿರುವಾಗ ನಮ್ಮಲ್ಲಿಯ ಒಂದು ಸಣ್ಣ ಪಂಗಡದವರ ವಿಚಿತ್ರ ಕಟ್ಟಿನ ಬಿಡುಗಡೆ ಬೇಡ ಎನ್ನುವರೇಕೆ?

೦೦೦ ೦೦೦

ಅಳಿಯಕಟ್ಟಿನ ಕ್ರಮವೇ ತಪ್ಪೆಂದು ನಾನನ್ನುವುದಿಲ್ಲ. ಒಬ್ಬನು ತನ್ನ ಮಕ್ಕಳ ಪೋಷಣೆಯ ಜವಾಬ್ದಾರಿ ತನ್ನ ಹೆಂಡತಿಗೇನೇ ಇರಲಿ. ಎಂದೆಣಿಸಿ ತನ್ನ ಸೊತ್ತುಗಳನ್ನು ತನ್ನ ಹೆಂಡತಿಯ ಹೆಸರಲ್ಲಿ ಕೊಡುವುದು ತಪ್ಪಲ್ಲ. ಗಂಡು ಮಕ್ಕಳು ಪ್ರಾಯಬಂದ ನಂತರ ಎಲ್ಲಾದರೂ ಹೋಗಿ ಜೀವನ ಮಾಡ್ಯಾರು ಗಂಡಕೊಟ್ಟ ಸೊತ್ತುಗಳು ತನ್ನ ಹೆಣ್ಣುಮಕ್ಕಳ ಪೋಷಣೆಗೇನೇ ಇರಲಿ ಎಂದು ತಾಯಿ ಎಣಿಸುವುದೂ ಸ್ವಾಭಾವಿಕವೇ. ತಾಯಿ ಬದುಕುವಷ್ಟು ಕಾಲ ಇದೆಲ್ಲಾ ಸರಿಯಾಗಿ ನಡೆದೀತು. ನಂತರ ಆಸ್ತಿ ಯಾರ ಕೈಯಲ್ಲಿ ಸಿಕ್ಕಿತೋ ಅವನು ಅದರ ಉತ್ಪತ್ತಿಯಿಂದ ತನ್ನ ಸಹೋದರಿಯರ ಮಕ್ಕಳು ಸುಖವಾಗಿ ಬದುಕಲಿ. ತನ್ನ ಮಕ್ಕಳು ಹೇಗಿದ್ದರೂ ಇರಲಿ ಎನ್ನುವುದು ಸ್ವಾಭಾವಿಕವಲ್ಲ. ಅವನ ತಂದೆಯು ತನ್ನ ಮಕ್ಕಳಿಗಾಗಿ ತಾನು ಸಂಪಾದಿಸಿದ ಆಸ್ತಿಯನ್ನು ತಾಯಿಯ ಹೆಸರಲ್ಲಿ ಹೇಗೆ ಮಾಡಿಟ್ಟಿದ್ದನೋ ಹಾಗೆಯೇ ತಾನು ಸಂಪಾದಿಸಿದ ಆಥವಾ ತನ್ನ ಕೈಗೆ ಬಂದ ಸೊತ್ತುಗಳನ್ನು ತನ್ನ ಮಕ್ಕಳಿಗಾಗಿ ತನ್ನ ಹೆಂಡತಿಯ ಹೆಸರಲ್ಲಿ ಮಾಡಿಟ್ಟರೆ ತಂದೆಯಂತೆಯೇ ಮಗನೂ ಮಾಡಿದಂತೆ. ಹೀಗೆ ಅನ್ಯಾಯ ಎಲ್ಲಿಂದ ಬಂತು? ತಂದೆ ಆಚರಿಸಿದ್ದು ಮಕ್ಕಳ ಕಟ್ಟು ಮಗ ಅನುಸರಿಸಿದ್ದು ಮಕ್ಕಳ ಕಟ್ಟೆಂತಾಯಿತಷ್ಟೆ. ಇದನ್ನು ಯೋಚಿಸಿ ನಮ್ಮ ಮುಖಂಡರು ಅಳಿಯ ಕಟ್ಟನ್ನು ಸ್ವಲ್ಪ ಸಡಿಲಿಸಿದರು. ತಾಯಿಯಿರುವಷ್ಟು ಕಾಲ ಅವಳ ಇಷ್ಟೆಯಂತೆಯೇ ಇರಲಿ. ಅನಂತರ ಮಕ್ಕಳು ಬೇಕಾದರೆ ಪಾಲುಮಾಡಿಕೊಂಡು ಮಕ್ಕಳ ಕಟ್ಟನ್ನೇ ಆಚರಿಸಲಿ ಎಂಬುದೇ ಅವರು ಹೇಳಿದ ಸುಧಾರಣೆ

೦೦೦ ೦೦೦

ಕೆಲವು ಗಂಡು ಮಕ್ಕಳಿಗೆ ಇದು ತೃಪ್ತಿಕರವಾಗಲಿಲ್ಲ. ಮಕ್ಕಳೆಂದರೆ ಗಂಡು ಹೆಣ್ಣು ಎಂಬ ಭೇದ ಇರಬಾರದು. ಹೆತ್ತವರು ಮಾಡಿಟ್ಟದ್ದು ಎಲ್ಲಾ ಮಕ್ಕಳಿಗೂ ಸರಿಸಮಾನವಾಗಿ ಸಿಕ್ಕಬೇಕು. ಸಹೋದರಿಯರಿಗೆ ಸಹೋದರರಂತೆಯೇ ಹಕ್ಕು ಇರಲಿ, ಸಹೋದರಿಯರ ಮಕ್ಕಳಿಗೆ ಹಕ್ಕು ಇರಬೇಕಾದರೆ ಸಹೋದರರ ಮಕ್ಕಳಿಗೂ ಸಿಗಬೇಡವೇ? ಮಕ್ಕಳೊಳಗೆ ಸರಿಯಾದ ಪಾಲು ಏಕೆ ಆಗಬಾರದು? ಎಂದು ಗಂಡು ಮಕ್ಕಳ ವಾದನೆ. ಇದನ್ನೂ ತಪ್ಪೆನ್ನಲು ಕಷ್ಟವಿದೆ. ಹೆಣ್ಣು ಮಕ್ಕಳ ಮೇಲಿರುವಷ್ಟೇ ಪ್ರೀತಿ ಗಂಡು ಮಕ್ಕಳ ಮೇಲೂ ಬೇಡವೇ? ಎಂದು ಅವರ ಪ್ರಶ್ನೆ. ಇಷ್ಟೇ ಸುಧಾರಣೆ ಸಾಕು ಎನ್ನುವುದೊಂದು ಪಾರ್ಟಿ. ಇನ್ನೂ ಸ್ವಲ್ಪಮುಂದುವರಿಸುವ ಎನ್ನುವುದೊಂದು ಪಾರ್ಟಿ ಅಷ್ಟೇ ಭೇದ. ಇದರಲ್ಲಿ ಒಬ್ಬರನ್ನೊಬ್ಬರು ದೂರಲಿಕ್ಕೆ ಏನಿದೆ?

೦೦೦ ೦೦೦

ಒಂದು ಔತಣಕ್ಕೆ ಎರಡು ಜನರಿಗೆ ಆಮಂತ್ರಣವಿತ್ತರಂತೆ ಒಬ್ಬ ಮಹಾ ವಿದ್ವಾಂಸ ಮತ್ತೊಬ್ಬ ಸಾಮಾನ್ಯ ಮನುಷ್ಯ ಹೆಚ್ಚು ಕಲಿತವನಲ್ಲ. ಮನೆಯವ ಇಬ್ಬರಿಗೂ ಯಥೇಷ್ಟ ಭೋಜನಹಾಕಿ ಎಂಟೆಂಟಾಣೆ ದಕ್ಷಿಣೆ ಕೊಟ್ಟನಂತೆ. ವಿದ್ವಾಂಸನಿಗೆ ಇದು ಹಿತಕಾಣಲಿಲ್ಲ. ಅವನೆಂದ- "ಇದು ಏನು ಅನ್ಯಾಯ ಆಕ್ಷ...ತಿ, ಪರಿಣತಿ, ದ್ರವ್ಯಾರ್ಥಿಲಾಸೆ ಈ ಯಾವ ದೋಷಗಳೂ ಇಲ್ಲದ ನನ್ನಂತಹ ಪಂಡಿತನಿಗೂ ಎಂಟಾಣೆ. ವಿದ್ಯೆಯ ಗಂಧಗಾಳಿಯಿಲ್ಲದ ಆ ಘಟಂಗನಿಗೂ ಎಂಟಾಣೆಯೇ! ಶಾಸ್ತ್ರವನ್ನು ಅರಿಯದ ಪಾಪಿಗಳು" ಎನ್ನುತ್ತಾ ಹೊರಟುಹೋದನಂತೆ.

ಅಮೃತಾಂಜನ

ತಲೆನೋವು, ಶಿರೋವೇದನೆ, ಉಳುಕು ಕುತ್ತಿಗೆ, ಭುಜ ಹಲ್ಲು ನೋವುಗಳಿಗೂ, ಎದೆ ನೋವು, ಗಾಯಗಳು, ಬಾತುಕೊಳ್ಳುವುದು, ಚೇಳುವಿಷಮುಂತಾದವು, ಪಕ್ಷವಾತ, ನೆಗಡಿ, ಮೊದಲಾದ ಎಲ್ಲಾ ರೋಗಗಳಿಗೂ ಸಿದ್ಧೌಷಧ

REGD

ಹುಳು ಕಡ್ಡಿ ಮುದ್ದು ನಮ್ಮಲ್ಲಿ ಸಿಕ್ಕುತ್ತದೆ

ಅಮೃತಾಂಜನ ಲಿಮಿಟೆಡ್

ಮದರಾಸು.

ಬೊಂಬಾಯಿ ಮತ್ತು ಕಲ್ಕತ್ತ.

ನಿಮಗಿದು ಗೊತ್ತೇ?

ನಿಮ್ಮ ಮನೆಯಲ್ಲಿ ಆಗಾಗ ಆಗಮಿಸುವ ವಾತರೋಗದ ಉಪದ್ರವಗಳಾದ—ಉದರಶೂಲೆ, ಕಟಿಶೂಲೆ, ಕೈಕಾಲುಗಳಲ್ಲಿ ನೋವು, ಜಡತೆ, ಅಜೀರ್ಣ, ಹೊಟ್ಟೆಯುಬ್ಬರ, ಅಗ್ನಿಮಾಂದ್ಯ ಮುಂತಾದ ಎಲ್ಲಾ ಉಪದ್ರವಗಳಿಗೂ ರಾಮಬಾಣ ಯಾವುದು ಗೊತ್ತೇ? ಕಳೆದ ಇಪ್ಪತ್ತೈದು ವರುಷಗಳ ವಿಶಾಲ ಅನುಭವದಿಂದ ಸಶಾಸ್ತ್ರೀಯವಾಗಿ ತಯಾರಿಸಲ್ಪಟ್ಟ—

ಸ್ವದೇಶಿ ಔಷಧ ಭಂಡಾರ (ರಿಜಿಸ್ಟರ್ಡ್)

ಪ್ರೋ ಕುಂಜಾಲು, ದ. ಕ.

ಇವರ 'ಧನ್ವಂತರೀ ಮಾತ್ರೆ'ಗಳು ಮಾತ್ರ.

ಕೇವಲ ನಾಲ್ಕಾಣೆಯ ಅಂಚೆಚೀಟನ್ನು ಕಳುಹಿಸಿ ಆರು ಮಾತ್ರೆಗಳ ಒಂದು ಪ್ಯಾಕೇಟನ್ನು ಪಡೆದು ಅದರ ಶೀಘ್ರ ಪರಿಣಾಮಕಾರೀ ಗುಣಗಳನ್ನು ಕಂಡುಕೊಳ್ಳಬಾರದೇಕೆ? ಇಂದೇ ಬರೆಯಿರಿ.

"ಗೋಪಾಲ ಭೇಷಜಾಶ್ರಮ" ಮಂಗಳೂರು.

(ಸ್ಥಾಪನೆ 1910)

ಸ್ಥಾಪಕರು:-ಆಯುರ್ವೇದ ಭೂಷಣ ಯಂ. ವಿ. ಶಾಸ್ತ್ರೀ,

ಬಾಣಂತಿಯರ ಸಲುವಾಗಿಯೇ ದೇಶ ಮತ್ತು ಪ್ರಕೃತವ ದೇಹಸ್ಥಿತಿಯನ್ನು ನಿರ್ದೇಶಿಸಿ ತಯಾರಿಸಲ್ಪಟ್ಟ ಅಮೋಘವಾದ ಮಧುರದ್ರವ ರಸಾಯನ. ಅಲ್ಪ ಮೌಲ್ಯದಿಂದ ಬಡವರಿಗೂ, ಭಾಗ್ಯಶಾಲಿಗಳಿಗೂ ಸುಲಭವಾಗಿರುವುದು.

ಇವರ **ನವಜೀವಾತು** ಎಂಬ **ಸೂತಿಕಾ ರಸಾಯನ**



ಹೆಚ್ಚಿನ ಮಾಹಿತಿಗೆ—ಡಾ| ಯಂ. ಪಿ. ಶಾಸ್ತ್ರೀ, ಯಲ್. ಐ ಕೊಡಿಯಾಲಬೈಲು ಪೋಸ್ಟು, (ಮಂಗಳೂರು)

ಸ್ಥಾನಿಕರು:—ಡಾ| ಬಿ. ಕೆ. ಶಿವರಾಮರಾವ್, ಕುಂಜಿಬೆಟ್ಟು, ಉಡುಪಿ.

ಉಡುಪಿಗೆ ಹೋಗಬೇಕೇ! ಆದರೆ ಉಳಿದುಕೊಳ್ಳುವುದೆಲ್ಲಿ?

ರಾಯಲ್ ಮಹಾಲಿನಲ್ಲಿ

ಬಸ್ ಸ್ಟೇಂಡಿಗೆ ಅತಿ ಸಮೀಪ! ಕೃಷ್ಣಮಠಕ್ಕೆ ದೂರವಿಲ್ಲ!

ವ್ಯಾಪಾರವ್ಯವಹಾರ ವಿಹಾರಸ್ಥಳಗಳಿಗೆಲ್ಲ ಕೇಂದ್ರ!

ನಿಮ್ಮ ಸ್ನಾನ, ಊಟ, ಉಪಹಾರ, ವಿಶ್ರಾಂತಿ, ಶಯನ ಇವಕ್ಕೆಲ್ಲ ಉತ್ತಮ ವ್ಯವಸ್ಥೆ ಕರೆದರೆ ಓಗೊಡುವ ನೌಕರರ ವರ್ಗ!

ಮೇಲಾಗಿ ಉಡುಪಿ ಬ್ರಾಹ್ಮಣರ ಅಡಿಗೆ,ತಿಂಡಿತಿನಸು, ಅವುಗಳ ರುಚಿರುಚಿ ಹೇಳಬೇಕೇ?

ಪ್ರೊಪ್ರೈಟರ್:— ಕೆ. ವೆಂಕಟ್ರಮಣಭಟ್.

For up-to-date Lodging & Boarding

ROYAL MAHAL,

UDIPI. S. Kanara.

ತಾರೀಕು 29-3-51 ರಿಂದ | **ವಾರದ ಭವಿಷ್ಯ** | ತಾರೀಕು 4-4-51ರ ವರೆಗೆ

ಮೇಷ—ನಿಮ್ಮ ಭಾಗ್ಯಪತಿಗಳಾದ ಬ್ರಹಸ್ಪತ್ಯಾಚಾರ್ಯರು ಇಂದೀಗ ವ್ಯಯಸ್ಥಾನವನ್ನು ಹೊಂದಿರುವರು. ಮಾತ್ರವಲ್ಲ ರವಿ ಕುಜ ಬುಧಾದಿಗಳೂ ಕೂಡ ಪ್ರತಿಕೂಲ ಸ್ಥಾನಾಪನ್ನರಾದ ಕಾರಣ ಈ ವಾರದಲ್ಲಿ ನಿಮಗೆ ಇಷ್ಟಕ್ಕಿಂತ ದ್ವಿಗುಣ ಅನಿಷ್ಟಗಳ ಭಯವಿದೆ, ಶತ್ರುಭಯ ಕಾರ್ಯಹಾನಿ ದೇಹಾಲಸ್ಯ ಆರ್ಥಿಕ ಮುಗ್ಗಟ್ಟು ಚಿಂತಾದಿಗಳಿಂದ ಸಹ ಪೀಡಿತರಾದ ನಿಮಗೆ ವಾರಾಂತ್ಯದ 5 ದಿನಗಳು ಸ್ವಲ್ಪ ಉತ್ತಮವಾಗಿರುವವು.

ವೃಷಭ—ಸಾಂಸಾರಿಕ ತಾಪತ್ರಯಗಳಿಗೆ ಸಿಲುಕಿ ನಿತ್ಯ ದುಃಖಕ್ಕೆ ಪೀಡಿತರಾಗಿರುವಿರಿ ಆದರೂ ನಿಮ್ಮ ಉದ್ಯಮದಲ್ಲಿ ಪ್ರಗತಿಯಿದೆ. ನೌಕರಿಯಲ್ಲಿ ಬಢತಿಯುಂಟಾಗುವದು. ಸತ್ಪುರುಷರ ಸಹವಾಸ ಮಿತ್ರಜನರ ಬೆಂಬಲದಿಂದ ಕೂಡಿದ ನಿಮಗೆ ಹೆಚ್ಚಿನ ಕಾರ್ಯಗಳಲ್ಲಿ ವಿಜಯಲಾಭವಿದೆ ಸ್ಥಾನಮಾನಗಳೂ ಲಭಿಸುವವು. ಪಿತ್ತೋಷ್ಣ ದೋಷದಿಂದ ಆರೋಗ್ಯಕ್ಕೆ ಧಕ್ಕೆಯಿದೆ. ತಾ. 3, 4 ಇಷ್ಟಸಾಧಕ ದಿನಗಳು.

ಮಿಥುನ—ನಿಮ್ಮ ಅದೃಷ್ಟವು ಬಹಳ ಚೆನ್ನಾಗಿರುವುದು. ಯಾವ ಕಾರ್ಯಕ್ಕೆ ಕೈಯಿಕ್ಕಿದರೂ ವಿಜಯವು ನಿಮ್ಮ ಪಾಲಿಗೇನೇ. ಸಾಮಾಜಿಕ ರಾಜಕೀಯ ರಂಗಗಳಲ್ಲಿ ವಿಜಯ ಕೀರ್ತಿ ಲಾಭಗಳನ್ನು ಗಳಿಸುವಿರಿ. ಸಂಪತ್ತಿಗವು ಉತ್ತಮ ಸ್ಥಿತಿಗೆ ಬರಲಿದೆ. ಆದರೆ ನಿಮ್ಮ ಮನಸ್ಸು ಬಹಳ ಚಂಚಲವಾಗಲಿದೆ ಮಾತ್ರವಲ್ಲ ಮಾರ್ಗತಪ್ಪಿ ನಡೆಯಲಿದೆ. ವಾರಾಂತ್ಯದ 2 ದಿನಗಳಲ್ಲಿ ಸ್ತ್ರೀ ಧನಸುಖ ಮಾನ ಭೂಷಣಾದಿಗಳು ಲಭಿಸುವವು.

ಕರ್ಕಾಟಕ—ಕಷ್ಟದ ದಿನಗಳು ದೂರವಾದವು. ನಿಮ್ಮ ಸಂಕಲ್ಪಗಳು ಸ್ವಪ್ರಯತ್ನದಿಂದಲೇ ಕಾರ್ಯರೂಪಕ್ಕೆ ಬರಲಿವೆ. ಯತ್ನಕ್ಕೆ ತಕ್ಕುದಾದ ಪ್ರತಿಫಲವು ಲಭಿಸುವದು. ಶತ್ರುಜನರ ಪೀಡೆಯಿಂದ ಮುಕ್ತರಾಗುವಿರಿ. ಕೆಲವೊಮ್ಮೆ ಹಣದ ಲೇವಾದೇವಿ ನಿಮಿತ್ತ ಚಿಕ್ಕಪುಟ್ಟ ಕಲಹಗಳುದ್ಭವಿಸುವವು. ಮಾತ್ರವಲ್ಲ ಮಾತು ಬಲ್ಲವನಿಗೆ ಜಗಳವಿಲ್ಲವೆಂಬ ಲೋಕೋಕ್ತಿಯಿದ್ದರೂ ಈ ವಾರದಲ್ಲಿ ವಾಕ್ಕಲಹವು ಬೇರೆ ನಿಮಗೆ ತಪ್ಪಲಾರದು, ವಾರಾದಿಯ 5 ದಿನಗಳು ಸರ್ವಾಭೀಷ್ಟಪ್ರದಗಳಿವೆ

ಸಿಂಹ—ದೈವವು ಕೆಲದಿನ ಪ್ರತಿಕೂಲವಾಗಿರುವದು. ಕಷ್ಟಪಟ್ಟು ದುಡಿದ ಧನವು ವ್ಯರ್ಥ ವ್ಯಯವಾಗುವದು. ಮಾತ್ರವಲ್ಲ ಹಣದ ಅಡಚಣಿಯಿಂದ ದಿನಯಾಪನೆಯು ಕಷ್ಟವಾಗಿ ಕಾಣಿಸುವದು. ಕಫ ಪಿತ್ತ ದೋಷದಿಂದಾಗಿ ಆರೋಗ್ಯವು ಕೆಡಲಿದೆ. ವಿದ್ಯಾರ್ಥಿಗಳಿಗೆ ಅಧ್ಯಯನ ಭಾಗಕ್ಕೆ ಹಲವಾರು ಎಡರುತೊಡರುಗಳುಂಟಾಗುವವು. ವಾರಾದಿಯ 2 ದಿನಗಳಲ್ಲಿ ಕಾರ್ಯಹಾನಿ ಪ್ರವಾಸಗಳ ಯೋಗವಿದೆ.

ಕನ್ಯಾ—ಶತ್ರುಗಳ ಪೀಡೆಯಿಂದಲೂ ಮನೋರೋಗದಿಂದಲೂ ಮುಕ್ತರಾದ ನಿಮಗೆ ನೌಕರಿ ವ್ಯಾಪಾರ ಮೊದಲಾದ ಉದ್ಯಮಗಳಲ್ಲಿ ಯತ್ನಕ್ಕಿಂತ ಹೆಚ್ಚಿನ ಫಲ ಲಭಿಸುವದು. ನೀವೆಷ್ಟೇ ದುಡಿದರೂ ದಿನಾಂತ್ಯದಲ್ಲಿ ಕೈಬರಿದಾಗುವದು ಪಿತ್ತದೋಷದಿಂದಾಗಿ ನಿದ್ರಾಭಾವ ದುಃಸ್ವಪ್ನಾದಿಗಳನ್ನು ಕಾಣುವಿರಿ. ಅನಿರೀಕ್ಷಿತ ಪ್ರವಾಸಗಳು ಸಂಭವಿಸಲಿವೆ. ವಾರಾಂತ್ಯದ 2 ದಿನಗಳಲ್ಲಿ ಧನಲಾಭ ಆರೋಗ್ಯಸುಖಗಳಿವೆ,

ತುಲಾ—ದಿನದಿಂದ ದಿನಕ್ಕೆ ಕ್ಷೀಣದಶೆಯನ್ನು ಹೊಂದುತ್ತಿರುವುದು ನಿಮ್ಮ ದೈವವು. ಆಧಿವ್ಯಾಧಿಗಳಿಂದಲೂ ಅನರ್ಥ ಪರಂಪರೆಗಳಿಂದಲೂ ಸದಾ ಪೀಡಿತರಾದ ನಿಮಗೆ ಸ್ವಪ್ನದಲ್ಲೂ ಸುಖವು ದುರ್ಲಭವೆನಿಸೀತು ಉತ್ಪತ್ತಿಯ ಮಾರ್ಗಗಳು ಅತ್ಯಲ್ಪವಿದ್ದು ಬಹುಮುಖದಿಂದ ಖರ್ಚುಗಳು ಪ್ರಾಪ್ತವಾಗುವುದರಿಂದ ಚಿಕ್ಕಚಿಕ್ಕವರೊಡನೆ ಸಾಲಕಡಗಳನ್ನು ಮಾಡುವ ಪರಿಸ್ಥಿತಿಯೊದಗಲಿದೆ. ತಾ. 29, 30 ಕಿಂಚಿದುತ್ತಮ.

ವೃಶ್ಚಿಕ—ರಾತ್ರಿ ಕಳೆದ ನಂತರ ಹಗಲು ನಿಶ್ಚಯವೆಂಬಂತೆ ನಿಮ್ಮ ದುರ್ದಿನಗಳು ದೂರವಾಗಿರುವುದರಿಂದ ಇಂದು ಹೆಚ್ಚಿನ ಸುಖಸೌಭಾಗ್ಯಗಳನ್ನು ಪಡೆಯಲಿರುವಿರಿ, ಎಂತಹ ಪ್ರಬಲ ಶತ್ರುವಾದರೂ ನಿಮ್ಮೆದುರಿನಲ್ಲಿ ಕೇಸರಿಯನ್ನು ಕಂಡ ಹರಿಣಗಳಂತೆ ಮಾಯವಾಗುವನು. ಹಿಂದಿನ ಸಾಲ ಕಡನಗಳಿಂದ ಮುಕ್ತರಾಗಿ ಕೈಯಲ್ಲಿ ಸಾಕಷ್ಟು ಧನಕನಕಗಳನ್ನು ಸಂಗ್ರಹಿಸುವಿರಿ. ತಾ. 31 1, 2, ಈ ದಿನಗಳಲ್ಲಿ ಗೃಹಸುಖ ವಿಜಯ ಸ್ಥಾನಮಾನಗಳು ಲಭಿಸುವವು.

ಧನು—ದಿನಗಳೆದಂತೆ ದುಃಖ ಕಷ್ಟಗಳು ಹೆಚ್ಚುತ್ತಾ ಬರುತ್ತಿವೆ ಯಾವ ಭಾಗದಲ್ಲಿ ನೋಡಿದರೂ ಆಶಾ ಕಿರಣಗಳೇ ಕಾಣಿಸಲೊಲ್ಲವು. ಬಂಧುವರ್ಗದವರಿಂದುಂಟಾದ ಮನಸ್ತಾಪವು ನಿಮ್ಮನ್ನು ಮತ್ತಷ್ಟು ಚಿಂತೆಗೀಡು ಮಾಡಲಿದೆ. ಸಂಸಾರದಲ್ಲಿನ ಕಾಹಿಲೆ ತಂದೆ ಮಕ್ಕಳೊಳಗಿನ ಜಗಳ ಗಂಡ ಹೆಂಡಿರಲ್ಲುಂಟಾದ ಮತಭೇದ ಇವುಗಳಿಂದಾಗಿ ಕೆಲವೊಮ್ಮೆ ವೈರಾಗ್ಯವನ್ನು ತಾಳುವಿರಿ. ಆದರೂ ತಾ. 26, 30, 3, 4 ಈ ದಿನಗಳಲ್ಲಿ ಹೆಚ್ಚಿನ ಕಷ್ಟ ಕಾಣಸದು.

ಮಕರ—ನಿರುದ್ಯೋಗಿಗಳು ಕೂಡ ಸದುದ್ಯಮ ಪ್ರವೃತ್ತರಾಗುವರು, ದುರ್ಜನರ ಸಹವಾಸದಿಂದಾಗಿ ವಿನಾಕಾರಣ ಅನಾವಶ್ಯವಾದ ಕಷ್ಟನಷ್ಟಗಳಿಗೆ ಗುರಿಯಾಗುವಿರಿ. ಬಂಧುವರ್ಗದವರ ಬೆಂಬಲದಿಂದಾಗಿ ಖರ್ಚಿಗೆ ಸಾಕಾಗುವಷ್ಟು ಧನವನ್ನು ದುಡಿಯುವಿರಿ. ವಾತದೋಷದಿಂದ ಸಂಧುಗೊಂಡುಗಳಲ್ಲಿ ನೋವು ಕಾಣಿಸಬಹುದು. ತಾ. 31, 1, 2, ಈ ದಿನಗಳಲ್ಲಿ ಮಿತ್ರಭೋಜನ ಭೋಗಲಾಭಗಳಿವೆ.

ಕುಂಭ—ಪರರ ಹಂಗು ದಾಕ್ಷಿಣ್ಯಗಳಿಗೆ ಸಿಲುಕದೆ ಸ್ವಯಂದುಡಿಯಲು ಶಕ್ತರಾಗುವಿರಿ. ನಿಮ್ಮ ಕಾರ್ಯಗಳು ನಿರರ್ಗಲವಾಗಿ ನೆರವೇರುವವು. ಮನೋದೌರ್ಬಲ್ಯದಿಂದಾಗಿ ಕೆಲವೊಮ್ಮೆ ಆಪ್ತೇಷ್ಟರಲ್ಲೂ ಅವಿಶ್ವಾಸವುಂಟಾದೀತು, ನೌಕರಿ ಜನರಿಗೆ ಅಧಿಕಾರಿಗಳ ಪೀಡೆಯು ಹೆಚ್ಚೀತು. ಹೆಂಡಿರು ಮಕ್ಕಳ ವಿರಹವೂ ಉಂಟಾಗಲಿದೆ. ತಾ. 29, 30, 3, 4 ಈ ದಿನಗಳಲ್ಲಿ ನಿಮ್ಮ ಅಭೀಷ್ಟಗಳು ಸಿದ್ಧಿಸಲಿವೆ.

ಮೀನ—ಕಷ್ಟಪಟ್ಟು ದುಡಿದುದೆಲ್ಲವೂ ನೀರಿನಲ್ಲಿ ಮಾಡಿದ ಹೋಮದಂತೆ ವ್ಯರ್ಥವಾಗುವದು. ಮನೋಧೈರ್ಯವು ಮಾಯವಾಗುವದು. ಶತ್ರುಜನರ ಪೀಡೆಯು ದಿನೇ ದಿನೇ ಹೆಚ್ಚುತ್ತಾ ಹೋಗಲಿದೆ. ಆಹಾರ ದೋಷದಿಂದಾಗಿ ಉದರಶೂಲೆಯು ಕಾಣಿಸುವದು. ಹೆಚ್ಚಿನ ಸಮಯವನ್ನು ಪರ್ಯಟನದಲ್ಲಿ ಕಳೆವಿರಿ. ಮಾತ್ರವಲ್ಲ ಅಧಿಕಾರಿ ಜನರ ಪೀಡೆಗೂ ಸಿಲುಕಲಿರುವಿರಿ. ವಾರಾಂತ್ಯದ 2 ದಿನಗಳನ್ನು ಬಿಟ್ಟು ಉಳಿದ ದಿನಗಳು ಸಾಕಷ್ಟು ಅನುಕೂಲಗಳುಂಟಾಗುವವು.

ಋತುಸ್ರಾವ ನಿಂತಿತು

'ಕುಮಾರಿ' ಬಿಲ್ಲೆಗಳನು ಉಪಯೋಗಿಸಿದರ ಹದತಪ್ಪಿ ಋತುಸ್ರಾವವಾಗುವುದು. ಹಠೋಟಿಗೆ ಬರುವುದು, ಈ ಔಷಧ ಸೇವನೆಯಿಂದ ತೀವ್ರ ಗುಣಹೊಂದಬಹುದು, ಯಾವ ಬಾಧಕವೂ ಇಲ್ಲ. ಸಾವಿರಾರು ಮಂದಿಗೆ ಖಾತ್ರಿ ಗುಣವಾಗಿದೆ—ಬೆಲೆ: ರೂ. 3-; ಸ್ಪೆಶಲ್ ರೂ. 5- ಅಧಿಕಾಧಿಕ ಸ್ಪೆಶಲ್ ರೂ. 8- [ವಿ. ಪಿ. ಹನ್ನೆರಡಾಣೆ ಪ್ರತ್ಯೇಕ.]

MIS. D. DEVEE, F. DS. (N. J.)
Tollygunge CALCUTTA,
ಸ್ಟಾಕಿಸ್ಟರು ಶಹಾ ಕಂಪೆನಿ, ಮಂಗಳೂರು

ಮೂಲ್ಕಿ ಬೇಂಕ್,
ಲಿಮಿಟೆಡ್, ಮೂಲ್ಕಿ.

1929ರಲ್ಲಿ ಸ್ಥಾಪಿತವಾಗಿ 21 ವರುಷಗಳಿಂದ ಊರ ಜನರ ಹಿತಕ್ಕಾಗಿ ಡಿಪೋಸಿಟ್ ಹಣಕ್ಕೆ ನ್ಯಾಯವಾದ ಬಡ್ಡಿಯಿಂದಲೂ, ಸಾಲದ ಹಣಕ್ಕೆ ಅತೀ ಕಡಿಮೆ ದರದ ಬಡ್ಡಿಯಿಂದಲೂ ಜನ ಹಿತಸಾಧಯನ್ನು ಮಾಡುತ್ತಿರುವುದು

The Moolky Bank Ltd.,
Moolky, S. K.

Nambiar's
ARYA VAIDYA SALA
UDIPI
Ideal House for Ayurvedic Treatment.
T. N. Kelu Nambiar,
Vaidya.

ಗೊನೋರಿಯಾ ಪರಮಾರೋಗ ಉಷ್ಣ ರೋಗಕ್ಕೆ ಔಷಧ

೭ ದಿವಸಗಳಲ್ಲಿ ಈ ರೋಗ ಗುಣ ಹೊಂದುವದು ಗ್ಯಾರಂಟೀ

ಶರೀರದಿಂದ ಕೀವು ಬರುತ್ತಿದ್ದರೆ, ಧೋತರಕ್ಕೆ ಹಳದೀ ಡಾಗು ಹತ್ತುತ್ತಿದ್ದರೆ ಶರೀರದಿಂದ ದಾವು. ಶರೀರದ ತೊಗಲು ಹಿಂದಕ್ಕೆ ಸರಿಯದಿದ್ದರೆ, ಶರೀರದ ಸುತ್ತ ಬಾವುವಾಗಿದ್ದರೆ,....ಚಟ್ಟೆ ಬಿದ್ದಿದ್ದರೆ, ಉಷ್ಣದಿಂದ ಚೀರು ಕಳವಿದ್ದರೆ, ಉರುಚು ಆಗಿದ್ದರೆ, ಮೂಲವ್ಯಾಧಿ, ಭಗೇಂದ್ರ, ಗಂಡುಮಾಲಿ, ಕೈಕಾಲು ಶೂಲಿ, ಅರ್ಧಾಂಗ ವಾಯು ನಡುನೋವು ಮದು ಸ್ತ್ರೀಯರ ಬಿಳಿಕೆಂಪು ಸೆರಗು ಹೋಗುತ್ತಿದ್ದರೆ, ಹೊಲಿಕಟ್ಟು ಗರ್ಮಿಯಿಂದ ಗರ್ಭಕೋಶ ನಾಶಹೊಂದಿದ್ದರೆ, ಸರಿಯಾಗಿ ಭೇದಿಯಾಗದಿದ್ದರೆ, ಮೂತ್ರ ಉರಿಯುತ್ತಿದ್ದರೆ, ಈ ಎಲ್ಲಾ ಬೇನೆಗಳಿಗೆ ಈ ನಮ್ಮ ಔಷಧವು ಇರುವುದು. ಮೊದಲ ದಿವಸ ಬೆಳಿಗ್ಗೆ ೧ ಗುಂಜ ಪ್ರಮಾಣ ಔಷಧ ಅರ್ಧತೊಲಿ ತುಪ್ಪದಲ್ಲಿ ತಕ್ಕೊಳ್ಳಬೇಕು ಮೊದಲ ದಿವಸ ಮಾತ್ರವ ಮುಂಜಾನೆ ಸಂಜೆ ಎರಡು ಸಾರೆ ತಕ್ಕೊಳ್ಳಬೇಕು. ಮುಂದೆ ದರ ದಿವಸ ಬೆಳಿಗ್ಗೆ ಒಂದೇ ಸಾರೆ ೭ ದಿವಸ ಸೇವಿಸಬೇಕು. ಈ ಔಷಧವನ್ನು ಬೇಸಿಗೆಯಲ್ಲಿ ತುಪ್ಪದಲ್ಲಿ, ಥಂಡಿ ಮಳೆಗಾಲದಲ್ಲಿ ಜೇನತುಪ್ಪದಲ್ಲಿ ತಕ್ಕೊಳ್ಳಬೇಕು. ಪಥ್ಯ: ಹುಳಿಖಾರ, ಕುಂಬಳಕಾಯಿ, ಒಳ್ಳೆಣ್ಣೆ ಬಿಡಬೇಕು.

ಬಾಟ್ಲಿ ೧ಕ್ಕೆ ೫ರೂ. ಪೋಸ್ಟ ಚಾರ್ಜ ೮ ಆಣೆ

ಏಜೆಂಟರು:—ಗದಗ:—ಗದಗ ಫಾರ್ಮಸಿ, ಹುಬ್ಬಳ್ಳಿ:—ಹುಬ್ಬಳ್ಳಿ ಫಾರ್ಮಸಿ ಬಾಗಲಕೋಟೆ:-ಬಾಗಲಕೋಟೆ ಫಾರ್ಮಸಿ, ಧಾರವಾಡ:-ಧಾರವಾಡ ಫಾರ್ಮಸಿ, ದಾವಣಗೇರಿ: ದಾವಣಗೇರಿ ಪ್ರೆಸ್. ನಂಜುಡೇಶ್ವರ ಮೂರ್ತಿ ದಾವಣಗೇರಿ.

ಪತ್ರವ್ಯವಹಾರ ಮಾಡತಕ್ಕ ಮಾಲಕರ ವಿಳಾಸ,
ರೇವಣಸಿದ್ಧಪ್ಪ ಶಾಲಪ್ಪ ದಾವಣಗೇರಿ,
ಆಯುರ್ವೇದ ಔಷಧಾಲಯ, ಗದಗ.

— ಮಕ್ಕಳನ್ನು ಹಡೆಯುವುದು ಸಾಕು —

ಅಶಕ್ತ ಸ್ತ್ರೀಯರಿಗೆ **ಬರ್ಥ ಕಂಟ್ರೋಲ** ರೋಗ ಗೃಹಸ್ಥ ಹೆಚ್ಚು ಮಕ್ಕಳಿಗೆ

ಏಳು ದಿವಸ ಈ ಮಾತ್ರೆಗಳನ್ನು ಸೇವನ ಮಾಡಿದರೆ ಮುಂದೆ ಖಂಡಿತವಾಗಿ ಮಕ್ಕಳಾಗುವದಿಲ್ಲ. ಸ್ತ್ರೀಯರು ಸ್ತ್ರೀತಿಂಗಳು ಸರಿಯಾಗಿ ಮುಟ್ಟಾಗುತ್ತಾರೆ. ಅಲ್ಲದೆ ಸ್ತ್ರೀಯರ ಬಿಳಿಸೆರಗು, ಪ್ರದರರೋಗ, ಹೊಲಿಕಟ್ಟು ಗುಣವಾಗಿ ಸ್ತ್ರೀಯು ಗರ್ಭವತಿಯಾಗುವದಿಲ್ಲ. ಈ ಔಷಧವನ್ನು ಸೇವಿಸುವ ಕ್ರಮ: ಪ್ರತಿದಿವಸ ಮುಂಜಾನೆ ೧ಗುಳಿಗೆ ಮಧ್ಯಾಹ್ನಕ್ಕೆ ೧ಗುಳಿಗೆ, ಸಂಜೆಗೆ ೧ಗುಳಿಗೆಯಂತೆ ಊಟದ ಮೊದಲು ತಕ್ಕೊಳ್ಳಬೇಕು. ಏಳುದಿವಸ ಈ ಔಷಧವನ್ನು ಬಿಸಿನೀರಿನಲ್ಲಿ ಸೇವಿಸಬೇಕು.

ಪಥ್ಯ:—ಹರವೀಪಲ್ಲೆ ಬಿಡಬೇಕು. ೭ ದಿವಸ ಸಂಪೂರ್ಣ ಔಷಧದ ಕಿಮ್ಮತ್ತು, ರೂಪಾಯಿ 5—0—0. ಪೋಸ್ಟ ಚಾರ್ಜ ೧೨ ಆಣೆ.

ಮಾಲಕರು:—ಶಾಲಪ್ಪಾ ಫಕೀರಪ್ಪಾ ದಾವಣಗೇರಿ
ಆಯುರ್ವೇದ ಔಷಧಾಲಯ ಗದಗ-ಸಿಟಿ.

ಏಜೆಂಟರು:—ಹುಬ್ಬಳ್ಳಿ ಫಾರ್ಮಸಿ,—ಹುಬ್ಬಳ್ಳಿ, ಗದಗ, ಬಾಗಲಕೋಟೆ ಧಾರವಾಡ ವಿಜಾಪುರ— ಶಾಸಪ್ಪ ಸಿದ್ಧಲಿಂಗಪ್ಪ ಧಾರವಾಡಕರ ವಿಜಾಪುರ ನಂಜುಡೇಶ್ವರ ಮೂರ್ತಿ ದಾವಣಗೇರಿ ದಾವಣಗೇರಿ:—ದಾವಣಗೇರಿ ಪ್ರೆಸ್ ಆರ್ ಎಲ್ ಕನುಲಾಲ ,ಕೆಮಿಸ್ಟ, ಹಾವೇರಿ ಬ್ಯಾಡಗಿ

EDITED, PRINTED & PUBLISHED BY K. H SHETTY AT THE NAVAYUGA PRESS, UDIPI, S.INDIA.

Regd. No. M. 3618
LICENCE No. 31
Licensed to Post without Prepayment

Estd. 1921 ಸ್ಥಾಪನೆ
31ನೇ ವರ್ಷ

5-4-1951

Founder: **Sri A. B. Shetty,**
Minister for Agriculture & Veterinary.

ವರ್ಷ ೩೧
ವಾರ ೩೦

NAVAYUGA
WEEKLY

POST BOX NO. 22
UDIPI, S. K.

Vol 31
No. 30

ಬಂಡವಳಗಾರರೂ-ಬಡವರೂ

ಜಗತ್ತಿನಲ್ಲಿ ಬಂಡವಳಶಾಹೀ ಹಾಗೂ ಬಡವರೊಳಗೆ ಹೋರಾಟ ನಡೆಯುತ್ತಲಿದೆ ಬಹಳ ಕಾಲದಿಂದ ಬೆಳೆದು ಬಂದಿರುವ ಸಾಮ್ರಾಜ್ಯ ಶಾಹೀ ಹಾಗೂ ಬಂಡವಳಗಾರಿಕೆಯ ನಿರಂಕುಶ ಮನೋವೃತ್ತಿ ಈಗಿನ ಪ್ರಜಾರಾಜ್ಯಗಳಲ್ಲೂ ಬದಲಾಗಲಿಲ್ಲ ಜನತೆಯಿಂದ ಆರಿಸಿಬಂದ ಪ್ರಜಾಪ್ರಭುತ್ವ ಸರಕಾರಗಳು ಕೆಲವೇ ಸಮಯದೊಳಗಾಗಿ ಜನತೆಯ ಅಸಂತೃಪ್ತಿಗೆ ಕಾರಣವಾಗಿ ಅಸ್ಥಿರಗೊಳ್ಳುವ ಲಕ್ಷಣ ಕಂಡುಬರುತ್ತಲಿವೆ. ಇದಕ್ಕೆ ಮುಖ್ಯಕಾರಣವೆಂದರೆ ಈ ಬಂಡವಳಗಾರರ ವಿಶ್ವಾಸಘಾತುಕ ಕಾರ್ಯವೆಂದೇ ಹೇಳಬೇಕು ಸ್ವಾರ್ಥವನ್ನು ಸಾಧಿಸುವುದಕ್ಕಾಗಿ ವೇಷವನ್ನು ಬದಲಾಯಿಸಿ ರಾಜಕೀಯಕ್ಕೆ ಧುಮುಕುವದು ವಾಡಿಕೆಯಾಗಿದೆ. ಅವರ ಹೊರಾಚರಣೆ-ದೇಶಸೇವಾದೃಷ್ಟಿಯು ನೋಟಗೆ ಜನ ಮರುಳಾಗಿ ಅವರೇ ನಮ್ಮ ಪ್ರತಿನಿಧಿಗಳೆಂದು ನಂಬಿ ಜನ ಮೋಸಹೋಗುತ್ತಾರೆ.

ಕಾಂಗ್ರೆಸ್ಸಿನಂತಹ ಉಚ್ಛಧ್ಯೇಯ ಉಳ್ಳಂತಹ ರಾಜಕೀಯ ಪಕ್ಷ ದೇಶದೊಳಗಿಲ್ಲವೆಂಬುದು ನಿರ್ವಿವಾದ. ಹಲವುರೀತಿಯ ತ್ಯಾಗ--ದೇಶಸೇವಾನಿಷ್ಠೆಯ ಕಾರ್ಯಗಳ ಮಹತ್ವದಿಂದ ಅದರ ತಳಹದಿ ಭದ್ರವಾಗಿದೆ. ದೇಶಕ್ಕಾಗಿಯೇ ಕಾಂಗ್ರೆಸ್ಸಿನ ಆದರ್ಶಕ್ಕಾಗಿಯೇ ತಮ್ಮ ಜೀವಮಾನವನ್ನು ಸವೆಯಿಸಿದ ಮಹಾನಾಯಕರು ನಮ್ಮಲ್ಲಿದ್ದಾರೆ. ತನ್ನ ಮುತ್ಸದ್ದಿತನದಿಂದ ಜಾಗತಿಕರಂಗದಲ್ಲಿ ಭಾರತದ ಧ್ವನಿಯನ್ನು ಎತ್ತಿ ಹೇಳಿದ ಜವಾಹರಲಾಲರ ವ್ಯಕ್ತಿತ್ವ ಉಳಿದೆಲ್ಲಾ ರಾಷ್ಟ್ರಗಳ ನಾಯಕರುಗಳಿಂದ ಶ್ರೇಷ್ಠವಾದುದು! ಆದರ್ಶಪ್ರಾಯವಾದುದು! ಮಹಾತ್ಮಾ ಗಾಂಧೀಜಿಯವರ ನಂತರ ಜನತೆಯ ಒಲವು ನೆಹ್ರೂ ಕಡೆಗೇ ಹೆಚ್ಚಾಗಿ ಹರಿದಿರುತ್ತವೆ. ಆದರೆ ಇಂದು ಹಲವು ಜನರು--ಹಲವು ಪಕ್ಷ ಪಂಗಡಗಳು ನೆಹ್ರೂರವರ ರಾಜಕೀಯ ತತ್ವವನ್ನು ಟೀಕಿಸುತ್ತಾರೆ "ನೆಹ್ರೂ ನಿರಂಕುಶವಾದಿ" "ಹಿಂದು ಮುಂದಿನ ಯೋಚನೆಯಿಲ್ಲದ ದುಡುಕುಸ್ವಭಾವಿ" "ಬಂಡವಳಗಾರರ ಕೈಗೊಂಬೆ" ಎಂದು ಉದಾಹರಿಸುವವರಿದ್ದಾರೆ. ಬಡವರ ಇಲ್ಲವೆ ಜನಸಾಮಾನ್ಯರ ಬಗ್ಗೆ ನೆಹರೂ ಸರಕಾರ ಭೀತಿ-ಕನಿಕರ ಪಟ್ಟಷ್ಟು ಯಾವ ಸೋಶಲಿಸ್ಟನಾಗಲೀ-ಯಾವ ಕಮ್ಯೂನಿಸ್ಟನಾಗಲೀ-ಪಟ್ಟಿತ್ತಿಲ್ಲವೆನ್ನುವದನ್ನು ನಾವು ಜ್ಞಾಪಕದಲ್ಲಿಟ್ಟುಕೊಳ್ಳಬೇಕು. ಕಾರ್ಯರೂಪಕ್ಕೆ ಬರಲಾರದಂತಹ ಹಲವು ಸುಧಾರಣೆಗಳನ್ನು ಎತ್ತಿತೋರಿಸಿ ಈಗಿನ ಸರಕಾರವನ್ನು ದೂಷಿಸುವದಷ್ಟೇ ಟೀಕಾಕರ್ತರ ಮುಖ್ಯಕಾರ್ಯವಾಗಿದೆ. ಲೋಕದ ಮುಂದೆ ನಿಂತಿರುವ ಕಠಿಣ ಸಮಸ್ಯೆಗಳನ್ನು ದಾಟಿಸುವ ಸಮಯದಲ್ಲಿ ಈ ಬಡಾಯಿಗಳು ಯಾವರೀತಿಯ ದೇಶಸೇವೆಯನ್ನೂ ಮಾಡಿದವರಲ್ಲ! ಜಾತೀಯ ದಂಗೆಯ ಫಲವಾಗಿ ಲಕ್ಷಲಕ್ಷ ಜನ ನಿರಾಶ್ರಿತರಾಗಿ ಭಾರತಕ್ಕೆ ಬಂದಾಗ ಇನ್ನೂ ನವ ಸರಕಾರವಾದರೂ ಎದೆಯೊಡೆದು ಕೊಳ್ಳುವ ಪ್ರಸಂಗ ಒದಗಿ ಇರಲಾರದು. ಅಂತಹ ಸನ್ನಿವೇಶದಲ್ಲಿ ಸರಕಾರಕ್ಕೆ ಸಹಕಾರ ನೀಡುವದಂತಿರಲಿ ಅಂತಹ ನಿರಾಶ್ರಿತರಲ್ಲಿ ಸರಕಾರಕ್ಕೆ ವಿರುದ್ಧವಾದ ಸಂಚನ್ನು ಹೂಡುವಂತೆ ಪ್ರೇರೇಪಿಸುವ ದೇಶದ್ರೋಹದ ಕಾರ್ಯವನ್ನು ನಮ್ಮ ಕೆಲವು ರಾಜಕೀಯ ನಾಯಕರು ಮಾಡಿದ್ದಾರೆ! ಇದರಿಂದ ಅವರ ದೃಷ್ಟಿಯೆಂತಹದೆಂಬುದು ಮನವರಿಕೆಯಾಗದಿರದು! ಕೆಲಸಗಾರರಿಗೆ ಸಂಬಳ ಹೆಚ್ಚಿಸಬೇಕೆಂದು ಕೆಲಸಗಾರರನ್ನು ಮುಷ್ಕರಕ್ಕೆ ಮುಂದೂಡಿ ಅಲ್ಲಿಂದ ಸರಕಾರ ಸಂಬಳ ಹೆಚ್ಚಿಸುವದಕ್ಕಾಗಿ ಕೊಂಚ ಕರಭಾರ ಹೆಚ್ಚಿಸಿದರೆ "ಬಡವರ ದ್ರೋಹಿ ಸರಕಾರ" "ಬಂಡವಳಗಾರರ ಕೈಗೊಂಬೆ ಸರಕಾರ" ಎಂದು ಹೇಳುವವರೂ ಇವರೇ. ಅಂತೂ ಈ ಪಕ್ಷಪಂಗಡಗಳ ನಾಯಕರ ಉದ್ದೇಶಸಾಧನೆ ಸ್ವಪಕ್ಷ ಸಮರ್ಥನೆಯೇ ಹೊರತು ಯಥಾರ್ಥ ಪರಿಶೀಲನೆಯಲ್ಲ!

ಈ ರೀತಿಯ ರಾಜಕೀಯ ಸರ್ಕಸ್ಸಿನಿಂದ ಹಣ್ಣಾಗುವವರಾರೆಂದರೆ ಬಡಜನತೆ! ವಸ್ತುಸ್ಥಿತಿಯ ಸರಿಯಾದ ಜ್ಞಾನವಿಲ್ಲದೆಯೂ, ಬಂಡವಾಳವಿಲ್ಲದ ಬಡಾಯಿಗಳಿಗೆ ಮರುಳಾಗಿ ಸುಲಭವಾಗಿ ಮಾರಿಕೊಳ್ಳುವ ಧೋರಣೆಯಿಂದಲೂ ಹಲವು ರೀತಿಯ ಕಷ್ಟವನ್ನನುಭವಿಸಬೇಕಾಗುತ್ತದೆ. ಸರಕಾರದೊಡನೆ ಸಹಕಾರವಿಲ್ಲ-- ಸಾಹುಕಾರನೊಡನೆ ಸಂಧಾನವಿಲ್ಲವೆಂದು ಇವರು ವಾದಿಸಹತ್ತಿ ಮುಷ್ಕರಹೂಡಿದರೆ ನಾಳಿನದಿನ ಅನ್ನಕೊಡುವವರು ಅವರೇ ವಿನಹ ಇಂತಹ ಪಕ್ಷವಾದಿಗಳಲ್ಲ! ಹೀಗೆ ದುರ್ಬೋಧನೆಗಳಿಂದ ಪ್ರೇರಿತರಾದ ಬಡಕೆಲಸಗಾರರು ಸರಕಾರ ಹಾಗೂ ಮಾಲಿಕರೊಡನೆ ಅನವಶ್ಯಕ ಪ್ರಸಂಗದಿಂದ ಸದಾ ಒಬ್ಬರನ್ನೊಬ್ಬರು ತಪ್ಪಾಗಿ ತಿಳಿದುಕೊಳ್ಳುವಂತಾಗಿದೆ. ತಪ್ಪು ಗ್ರಹಿಕೆ-ವಂಚನೆಯ ಭೀತಿ-ಹಟಸಾಧನೆಗಳಿಂದ ಯಾವ ರಾಷ್ಟ್ರಕ್ಕಾಗಲೀ ಸಂಸ್ಥೆಗಾಗಲೀ ಶುಭವಿಲ್ಲ

ಹುಟ್ಟುಗುಣ ಘಟ್ಟಹತ್ತಿದರೂ ಬಿಡದೆನ್ನುವಂತೆ ಬಂಡವಳಗಾರರು ಹಲವರು ಬ್ರಿಟಿಷರ ಕಾಲದಿಂದ ಬಂದ ತಮ್ಮ ಸ್ವಾರ್ಥಮನೋವೃತ್ತಿಯನ್ನು ಇನ್ನೂ ಬಿಡಲಿಲ್ಲ. ಸರಕಾರ ಮಾಡಬಹುದಾದ ಹೊಸ ಯೋಜನೆಗೆ ವಿರುದ್ಧವಾಗಿ ಯಾವ ಹಂಚಿಕೆಯನ್ನು ಹೂಡಿ, ತಮ್ಮ ಬಂಡವಳವನ್ನು ಬೆಳೆಸಬಹುದೆಂದು ಚಿಂತಿಸುತ್ತಾರೆ. ಹೀಗಾಗಿ ಇಂದಿನ ಹಲವಾರು ಕಾಯಿದೆ ಕಾನೂನುಗಳು ಬಂಡವಳಗಾರರಿಂದಾಗಿ ಮಣ್ಣುಮುಕ್ಕುತ್ತಲಿವೆ. ಬಂಡವಳಗಾರರು ಸುಲಿಗೆಗಾರರಾದರೆ ಅವರನ್ನು ದಂಡಿಸಬಾರದೇಕೆ? 'ಬ್ಲ್ಯಾಕ್ ಮಾರ್ಕೆಟ್' ಮಾಡಿ, ಬಡಜನತೆಯ ಜೀವಹಿಂಡುವ ಇಂತಹರನ್ನು ಸರಕಾರವೇಕೆ ಲಕ್ಷವಿಟ್ಟು ನೋಡಬಾರದು? ಎಂದು ಪ್ರಶ್ನಿಸುವವರೂ ಇದ್ದಾರೆ. ಆದರೆ ಇಂತಹ ಕಾರ್ಯಕ್ಕೆ ಸರಕಾರ ಇಲ್ಲವೆ ಶಿಕ್ಷಾರೂಪವಾದ ಕಾಯಿದೆಗಳು ಯಾವ ಪ್ರಯೋಜನಕ್ಕೂ ಬೀಳುವಂತಿಲ್ಲವೆನ್ನುವದು ಈ ಮೂರು ವರ್ಷಗಳಲ್ಲಿ ನಮಗೆ ಚೆನ್ನಾಗಿ ಮನವರಿಕೆಯಾಗಿದೆ. ಲಂಚಗುಳಿತನ, ಬ್ಲ್ಯಾಕ್‌ಮಾರ್ಕೆಟುಗಳು ನಿಲ್ಲಬೇಕಾದರೆ ಜನತೆಯ ಸಹಕಾರವಿಲ್ಲದೆ ಸಾಧ್ಯವಿಲ್ಲ. ಕಾಲಕಾಲಕ್ಕೆ ಕೆಲವು ವಸ್ತುಗಳ ಕೊರತೆಯಾಗಬಹುದೆಂದುಕೊಳ್ಳೋಣ. ಅದು ಜೀವನನಿರ್ವಹಣೆಕ್ಕೆ ಮುಖ್ಯವಲ್ಲವಾಗಿದ್ದರೂ ಜನ ಮಹಾಪ್ರಯತ್ನಮಾಡಿ ಎಲ್ಲಿದ್ದರೂ, ಎಷ್ಟು ಬೆಲೆಯನ್ನಾದರೂ ಕೊಟ್ಟು, ಸಂಗ್ರಹಿಸುವ ಮನಸ್ಸು ಮಾಡುತ್ತಾರೆ. ಬಂಡವಳಗಾರರ ಬ್ಲ್ಯಾಕ್‌ಮಾರ್ಕೆಟಿನ ಪುರಸ್ಕರ್ತರು ತಾವೆಂಬುದನ್ನು ಜನತೆ ಮರೆತೇ ಬಿಡುತ್ತದೆ ಇದು ಕಾಯಿದೆ ಭಂಗಮಾತ್ರವಲ್ಲ; ಬ್ಲ್ಯಾಕ್‌ಮಾರ್ಕೆಟಿನ ಅಭಿವೃದ್ಧಿಯ ಮೂಲಕೂಡಾಗಿರುತ್ತದೆ ಜನತೆಯೇ ತಮ್ಮ ಹೊಣೆಯನ್ನರಿಯದೇ ವರ್ತಿಸುವದಾದರೆ ಜನತಾ ಸರಕಾರವಾದರೂ ಏನುಮಾಡೀತು? ಜನತೆಯ ಸಹಕಾರವಿಲ್ಲದೆ ಜನತಾ

ಪ್ರಧಾನ ಕಾರ್ಯಾಲಯ: ಉಡುಪಿ. ಸ್ಥಾಪನೆ: ೧೯೩೫

ದಿ ಕೆನರಾ ಮ್ಯೂಚುವಲ್

ಎಶ್ಯೂರೆನ್ಸ್ ಕಂಪೆನಿ, ಲಿಮಿಟೆಡ್,

ಇದುವೇ

ಪಾಲಿಸಿದಾರರ ಸಂಚಿಕೆ ಹೆಚ್ಚಿಸುವ ಹೆಸರು

ಅಲ್ಲದೆ ಸ್ಥಾಪಿತವಾದಂದಿನಿಂದಲೂ

ಲಾಭ (ಬೋನಸ್) ಹಂಚಿದ ಕಂಪೆನಿ.

The Canara Mutual Assurance Co, Ltd.

H. O. UDIPI (SOUTH INDIA) ESTD: 1935.

ಸರಕಾರ ಬದುಕೀತೇ? ಬಂಡವಳಗಾರರನ್ನೂ ಸರಕಾರವನ್ನೂ ಟೀಕಿಸುವವರು ಇದನ್ನೇಕೆ ಲಕ್ಷಿಸುತ್ತಿಲ್ಲ?

ಹಲವುವೇಳೆ "ಸರಕಾರ, ಬಂಡವಳಗಾರರ ಕೈಗೊಂಬೆ" ಎಂದು ಜನ ಟೀಕಿಸುತ್ತಾರೆ. ದಿ ವಂಗತ ಪಟೇಲರು ಜಹ್ನಾಬಂಡವಳಗಾರರಮಿತ್ರರೆನ್ನುವಪವಾದವಿತ್ತು. ಅಂಥದೆಲ್ಲ ವಸ್ತುಸ್ಥಿತಿಯ ಅಜ್ಞಾನದಿಂದ ಹುಟ್ಟುವಂಥವುಗಳು. ಸಾಮಾನ್ಯ ಜನರನ್ನು ಒಲಿಸಿಕೊಳ್ಳುವಕ್ಕೆ ಕಾಂಗ್ರೆಸ್ಸಿಗರು ಬಂಡವಳಗಾರರೆಂದು ಘೋಷಿಸಿಕೊಳ್ಳುವದಕ್ಕಾಗಿ ಉದಾಹರಿಸುವಂಥವು. ಆದರೆ ಇಂದಿನ ಪರಿಸ್ಥಿತಿಯಲ್ಲಿ ಬಂಡವಾಳಗಾರರಿಗೂ ಸರಕಾರದಿಂದ ಸುಖವಿಲ್ಲ. ಕೇಂದ್ರ ಸರಕಾರದ ಯೋಜನೆಗಳೂ, ಕರಭಾರಗಳೂ, ಬಂಡವಳಗಾರರನ್ನು ಬದುಕಿಸುವದಕ್ಕಾಗಿಯಲ್ಲ; ಬಡವರನ್ನು ಉಳಿಸುವುದಕ್ಕಾಗಿ ಇರುತ್ತವೆ. ಪಟೇಲ್, ನೆಹ್ರೂರವರು ಬಂಡವಾಳಗಾರರ ಮಿತ್ರರಾಗಿದ್ದರೆ ಅದರ ಫಲವಾಗಿ ಸರಕಾರಕ್ಕೆ ಅವರಿಂದ ಸಹಕಾರ ಸಹಾಯವೂ ಸಿಕ್ಕಿರುತ್ತದೆ. ಬಂಡವಳಗಾರರ ನಿರ್ಮೂಲನಾಶವಾಗಬೇಕೆನ್ನುವ ರಹಸ್ಯದ ದಸ್ಯುಗಳೂ, ರಾಷ್ಟ್ರೀಕರಣವಾಗಬೇಕೆನ್ನುವ ಸೋಶಾಲಿಸ್ಟರೂ ಭಾರತದ ಬಂಡವಳಗಾರರ ಸದ್ಯದ ಸ್ಥಿತಿಗತಿಯನ್ನರಿತವರಾಗಿಲ್ಲ. ಉದ್ದಿಮೆಗಳು ಬಂಡವಳಗಾರರ ಕೈಯಿಂದ ತಪ್ಪಿ, ಜನತಾ ಸರಕಾರದ ಆಡಳಿತಕ್ಕೆ ಬಂದು, ಅಂದರೆ ರಾಷ್ಟ್ರೀಕರಣವಾಗುವದರಿಂದ ದೇಶಕ್ಕೆಷ್ಟೋ ಲಾಭವಿದೆ ಎನ್ನುವದರಲ್ಲಿ ಯಾವ ಸಂದೇಹವೂ ಇಲ್ಲ. ಆದರೆ ಈಗಿನ ಸ್ಥಿತಿಯಲ್ಲಿ ಹಾಗೆ ಮಾಡುವುದರಿಂದ ದೇಶಕ್ಕೆ ಕ್ಷೇಮವಾಗದು. ಕನಿಷ್ಠಪಕ್ಷ ಐದು ವರ್ಷಗಳಕಾಲವಾದರೂ ನಾವು ಕಾಯಬೇಕು. ಕೆಲವು ಪ್ರಾಂತಗಳು ಹಲವು ಕೆಲವು ಉದ್ಯಮಗಳಲ್ಲಿ ರಾಷ್ಟ್ರೀಕರಣದ ಅತ್ಯವಸರ ಸುಧಾರಣೆಯನ್ನು ಕೈಗೊಂಡು ಕೈಸುಟ್ಟುಕೊಂಡ ಪ್ರಕರಣಗಳು ನಮ್ಮ ಕಣ್ಣಮುಂದಿರುವಾಗ ಸದ್ಯಕ್ಕೆ ಬಂಡವಾಳಗಾರರ ಕೈಯಿಂದ ಕಸಿದುಕೊಳ್ಳುವದರಿಂದ ಯಾವ ಲಾಭವೂ ಆಗದು.

ಬಂಡವಳಗಾರರು ನಡೆಸುತ್ತಿರುವ ಸುಲಿಗೆಯನ್ನು ನಿಲ್ಲಿಸುವದಕ್ಕೆ ಹಲವುರೀತಿಯ ಕಾಯಿದೆ ಕಾನೂನುಗಳಿದ್ದರೂ ಅಂತಹರ ಮೇಲೆ ಅವುಗಳು ಜಾರಿಗಳಾಗದಿರಲು ಕಾರಣವೇನು? ಎನ್ನುವಂತಹದು ಸಮಸ್ಯಾತ್ಮಕ ವಿಚಾರವಾಗಿದೆ. ಇಂತಹ ಸಮಸ್ಯೆಬಂದಾಗಲೆಲ್ಲ ಜನತೆ ತಪ್ಪನ್ನು ತಿದ್ದಿಕೊಳ್ಳದೆ ಸರಕಾರವನ್ನು ಟೀಕಿಸುವದರಲ್ಲಿ ಹಿಂದು ಮುಂದು ನೋಡುವುದಿಲ್ಲ. ಬ್ಲಾಕ್ ಮಾರ್ಕೆಟಿಗೆ ಪ್ರೋತ್ಸಾಹಕೊಟ್ಟು, ಬಂಡವಳಗಾರರ ಬಂಡವಳ ಬೆಳೆಯುವಂತೆ ಮಾಡುವವರೂ ಅವರೇ. ಸರಕಾರದ ಶಿಸ್ತನ್ನು ಕಾಯಿದೆಯನ್ನು ಭಂಗಿಸುವವರೂ ಅವರೇ! ಮೇಲೆ ಸರಕಾರವನ್ನು ಟೀಕಿಸುವವರೂ ಅವರೇ. ಎಲ್ಲದಕ್ಕೂ ಸಹನೆ ತ್ಯಾಗಶೀಲ ಗುಣ ಮುಖ್ಯವಾಗಿದೆ. ಬ್ಲಾಕ್ ಮಾರ್ಕೆಟ್-ಲಂಚಗುಳಿತನಕ್ಕೆ ಜನತೆ ತಿಲಾಂಜಲಿಯನ್ನಿತ್ತರೆ ಅಂತಹ ದುರ್ವ್ಯಾಪಾರಗಳು ಹೇಗೆ ಬದುಕುತ್ತವೆ? ಆ ಕಾರ್ಯ ಸಾಮೂಹಿಕವಾಗಬೇಕಾದರೆ ಜನತೆಯೆ ಮುಂದೆ ಬರಬೇಕು.

ಹಿಂದಿನದು ಕ್ರೈಸ್ತ, ಇಂದಿನದು ತಾತ್ಕಾಲಿಕ-ಅಪಕ್ವಮನೋವೃತ್ತಿಯದು--ಅಲ್ಪಾಯುಷಿ ಎಂದು ಹಳಬರು ಹೊಸಬರ ಮೇಲೆ ಶ್ರೀಮದ್ಗಾಂಭೀರ್ಯ ತೋರಿಸುವುದುಂಟು! ತನ್ನ ಹೊರತು ಇವರಿಂದೇನೂ ಆಗದೆನ್ನುವ ದುರಹಂಕಾರ-ಅಜ್ಞಾನವೇ ಅವರ ಶ್ರೀಮದ್ಗಾಂಭೀರ್ಯಕ್ಕೆ ಕಾರಣವಾಗಿದೆ. ಈ ಬಂಡವಳಗಾರರ ಹಣಬರಹವೂ ಅಷ್ಟೇ ಆಗಿದೆ. ತಮ್ಮ ಹುಟ್ಟುಗುಣವನ್ನು ಬಿಡಲಾರದೆ ಬ್ರಿಟಿಷರ ಕಾಲದ ನಿರಂಕುಶ ಧೋರಣೆಯನ್ನೇ ಅನುಸರಿಸುತ್ತಿದ್ದಾರೆ. ಬಡಜನತೆಯನ್ನು ಸುಲಿಗೆ ಮಾಡುವುದರ ಮೂಲಕ ಸರಕಾರವನ್ನು ವಂಚಿಸುತಲಿದ್ದಾರೆ. ಕಾಂಗ್ರೆಸ್ಸಿನ ಭಕ್ತರೆಂದು ರಾಜಕೀಯದಲ್ಲಿ ಭಾಗವಹಿಸಿ ತಮ್ಮ ಸ್ವಾರ್ಥವನ್ನು ಸಾಧಿಸಿ ಕಾಂಗ್ರೆಸ್ಸಿನ ಉಚ್ಛಾದರ್ಶಗಳಿಗೆ ಬಣ್ಣ ಬಳೆದಿದ್ದಾರೆ. ಸರಕಾರದ ವಿರುದ್ಧ ಇವರು ನಡೆಸುವ ಕಾರಸ್ಥಾನದಿಂದಲೇ ಹಲವಾರು ಜಟಿಲ ಸಮಸ್ಯೆಗಳು ಉದ್ಭವಿಸಿವೆ. ಸರಕಾರಕ್ಕಿರುವ ಬಹುದೊಡ್ಡ ಶತ್ರುವೆಂದರೆ ಈ ಬಂಡವಳಗಾರರದು! ಹಿಂದಿನ ಚಟವನ್ನು ಮರೆತು ರಾಷ್ಟ್ರೀಯ ಅಭಿಮಾನದಿಂದ ವರ್ತಿಸಬೇಕಾಗಿದೆ. ಇದೇ ಧೋರಣೆಯನ್ನು ಅವರು ಮುಂದುವರಿಸುವದಾದರೆ ಇಂದಲ್ಲ ನಾಳೆ ಬಡಜನತೆಯು ಬೇರೊಂದು ಕಕ್ಷಸಂಗಡದೊಡನೆ ಸೇರಿಕೊಂಡು ವಿರುದ್ಧ ಹಂಚಿಕೆಯನ್ನು ಹೂಡಿದರೂ ಹೂಡಬಹುದು. ಅದರಲ್ಲೂ ಬಡವರೇ ಬಹಳವಾಗಿಯುಳ್ಳ ಭಾರತದಲ್ಲಿ ಅಂತಹದಕ್ಕೆ ಹೆಚ್ಚಿನ ಪ್ರಾಧಾನ್ಯಸಿಗುವ ಸಂಭವವಿದೆ. ಹಾಗಾಗದಿರಲೆಂದು ತಮ್ಮ ಹಾಗೆಯೆ ಬಂಡವಳಗಾರರು ತಿಳಿಯುವುದು ಅವಶ್ಯವಿದೆ.

ಅವರು ಹೇಳಿದ್ದೇನು?

"ಪಾರ್ಲಿಮೆಂಟು ಸದಸ್ಯರು ಚರ್ಚೆನಡೆಯುತ್ತಿರುವಾಗ ತಾವು ಆ ಕಡೆಗೆ ಹೆಚ್ಚಿನ ಗಮನವನ್ನು ಕೊಡದೆ ಆಲಸಿಗರಂತೆ ವರ್ತಿಸುತ್ತಿರುವ ವಿಚಾರ ಅತ್ಯಂತ ವಿಷಾದಕರವಾದುದು. ಚರ್ಚಾಸ್ಪದ ವಿಚಾರಗಳಲ್ಲಿ ಮಾನ್ಯ ಸದಸ್ಯರು ಭಾಗವಹಿಸುವ ಬದಲಾಗಿ ಮೇಳ್ಯದೆಲೆ ಜಗಿಯುವುದು, ಬೀಡಿಸೇದುವುದು, ಮಾತ್ರವಲ್ಲದೆ ಹಲವು ವೇಳೆ ನಿದ್ರಿಸುತ್ತಿರುವುದೂ ಪಾರ್ಲಿಮೆಂಟಿನ ಶಿಸ್ತಿಗೆ ಕುಂದುತರುವಂತಹದಾಗಿರುತ್ತದೆ. ಜನತಾ ಪ್ರತಿನಿಧಿಗಳಾದ ಸದಸ್ಯರು ಮಹತ್ವದ ಮತ್ತು ಅಮೂಲ್ಯವಾದ ಸನ್ನಿವೇಶವನ್ನು ಹೀಗೆ ದುರುಪಯೋಗಿಸುವದು ವಿಷಾದಕರ" ಎಂದು ಮುಂಬಯಿಯ ಪಾರ್ಲಿಮೆಂಟಿನ ಕುರಿತಾಗಿ ಪಾರ್ಲಿಮೆಂಟಿನ ಅಧ್ಯಕ್ಷರ ಅಭಿಪ್ರಾಯವನ್ನು ಟಾಯಿಮ್ಸ್ ಆಫ್ ಇಂಡಿಯಾ ಬರೆದಿದೆ.

ಈ ಬಗೆಯ ವೈಚಿತ್ರ್ಯಗಳು—ಬೇಜವಾಬುದಾರಿ ವರ್ತನೆಗಳು ಪಾರ್ಲಿಮೆಂಟು ಸದಸ್ಯರಲ್ಲಿ ಕಾಣುತ್ತಲಿವೆ. ಪ್ರಾಂತೀಯ ಸರಕಾರದ ಪಾರ್ಲಿಮೆಂಟು ಸಭೆಯಲ್ಲಿಯೂ ಕೇಂದ್ರದಲ್ಲಿಯೂ ಇಂತಹ ವರ್ತನೆಗಳನ್ನು ಪತ್ರಿಕೆಗಳ ಮೂಲಕ ನಾವು ಕೇಳುತ್ತೇವೆ. ನಾನಾರೀತಿಯ ಭರವಸೆಗಳನ್ನು ಕೊಟ್ಟು ಸ್ಥಾನಗಳಿಸಿಕೊಂಡ ಈ ಸದಸ್ಯರು ಕೇವಲ ಆಣಕಮಾಡುವದರಲ್ಲಿಯೂ ತಾರ್ಕಿಕ ಪ್ರಶ್ನೆಯನ್ನು ಹಾಕುವದರಲ್ಲಿಯೂ ತಮ್ಮ ಬುದ್ಧಿಮತ್ತೆಯನ್ನು ಪಯೋಗಿಸುತ್ತಲಿದ್ದಾರೆ. ತಾವು ವಿಮರ್ಶೆ ಮಾಡುವ ವಿಚಾರಗಳನ್ನು ಕೋಟಿಗಟ್ಟಲೆ ಜನಗಂಭೀರವಾಗಿ ಯೋಚಿಸುತ್ತಿದ್ದಾರೆನ್ನುವದನ್ನು ಮರೆತೇ ಬಿಡುತ್ತಾರೆ. ಕೆಲವು ಪ್ರಶ್ನೆಗಳನ್ನು ಓದಿದಾಗ ಪಾರ್ಲಿಮೆಂಟುಗಳ ಸ್ಥಾನಮಾನವೆಂತಹದೆನ್ನುವ ವಿಚಾರದಲ್ಲಿ ಸಮಗಸುಮಾನವುಂಟಾಗುತ್ತದೆ. ಮೊನ್ನೆ ಕೇಂದ್ರದಲ್ಲಿ ಮಾನ್ಯ ಗಾಡಗೀಳರು ದಿಲ್ಲಿಗೆ ಗಂಗಾಜಲದ ಸರಬರಾಯಿಯ ಕುರಿತುಮಾತನಾಡಿದಾಗ ನಮ್ಮವರೇ ಆದ ಶ್ರೀ ಎಚ್. ವಿ. ಕಾಮತರು "ಗಂಗಾಜಲ ನಮಗೆ ಬೇಕಿಲ್ಲ. ಅದು ಸಾಯುವ ಕಾಲಕ್ಕೆ ಬಾಯಿಗೆ ಬಿಡುವ ಜಲ. ಅಂತಹ ಪರಿಸ್ಥಿತಿಯು ನಮಗಾರಿಗೂ ಬಂದಿಲ್ಲ" ಎಂದು ಪ್ರತಿಭಟಿಸಿದರು. ನಗುವಿಗೆ ಮಿತಿಯಿರಬೇಕು. ಅದರೆ ಗಂಭೀರವಾದ ವಿಚಾರದ ಸಮಾಲೋಚನೆ ನಡೆಸುವಾಗ ಹೀಗೆ ಅಪ್ರಸ್ತುತವೂ—ತೀರ ಅಯೋಗ್ಯವೂ ಆದ ವಿಚಾರವನ್ನು ಎತ್ತಿಕೊಂಡು ವಿಷಯದ ಸಮರ್ಥನೆಯನ್ನು ದುರ್ಬಲಗೊಳಿಸುವದು ನ್ಯಾಯವಲ್ಲ. ಶ್ರೀ ಕಾಮತರು ಪ್ರಶ್ನಕಾರರಲ್ಲಿ ಅತ್ಯಂತ ಬುದ್ಧಿಶಾಲಿಗಳೆಂದು ಹೆಸರಾಗಿದ್ದಾರೆ. ಕೆಲವು ವೇಳೆ ಅವರ ಪ್ರಶ್ನೆಗಳು ತುಂಬ ಮೆಚ್ಚಿಕೆಯವುಗಳಾಗಿರುತ್ತವೆ. ಆದರೆ ಶ್ರೀ ಕಾಮತರು ಹಾಸ್ಯ ಮನೋವೃತ್ತಿಯ ಪ್ರಶ್ನೆಯನ್ನೇ ಹಾಕುವದು ಹೆಚ್ಚೆಂದು ಎಲ್ಲರೂ ತಿಳಿದಿದ್ದಾರೆ.

ಮದ್ರಾಸು ಶಾಸನ ಸಭೆಯಲ್ಲೂ ಹೈಕೋರ್ಟಿನ ಜಡ್ಜರ ಸ್ಥಾನಮಾನದ ಕುರಿತು ಹಲವು ಸದಸ್ಯರು ಗಾಂಭೀರ್ಯವನ್ನು ಬಿಟ್ಟು ವರ್ತಿಸಿದ್ದಾರೆ. ಇತ್ತೀಚೆಗೆ ಹೈಕೋರ್ಟು ನೀಡುತ್ತಿರುವ ತೀರ್ಪುಗಳು ಜಾತೀಯ ಸ್ವರೂಪದ ಭಾವನೆಗೆಡೆಮಾಡುವಂತೆ ಮಾನ್ಯ ಸದಸ್ಯರು ಎತ್ತಿಮಾತನಾಡಿರುತ್ತಾರೆ. ನ್ಯಾಯಮೂರ್ತಿಗಳ ವ್ಯಕ್ತಿತ್ವದಕುರಿತಾಗಿಯೂ ಇಂದಿನ ಹೈಕೋರ್ಟಿನ ಸ್ಥಾನಮಾನದ ಕುರಿತೂ ಹಲವು ಸದಸ್ಯರು ಕುಹಕರೀತಿಯ ಪ್ರಶ್ನೆಗಳು ಮುಂದೆ ಬಂದಿವೆ. ಆದರೆ ಅಧ್ಯಕ್ಷರು ನ್ಯಾಯಾಧೀಶರ ವೈಯಕ್ತಿಕ ಟೀಕೆಗಳಿಗೆ ಎಡೆಗೊಡದೆ ನಿಯಮ ಬಾಹ್ಯ ಮಾಡಿದ್ದು ನಿಜವಾಗಿಯೂ ಗೌರವಾಸ್ಪದ ವಿಚಾರ. ಕಾನೂನು ಮಂತ್ರಿಗಳಾದ ಶ್ರೀ ಮಾಧವ ಮೆನನ್ನರು,

"ನ್ಯಾಯಾಧಿಪತಿಗಳು ಸಾರ್ವಜನಿಕ ಅಂದರೆ ಸಾಂಸ್ಕೃತಿಕ ಸಭೆಯಲ್ಲಿ ಭಾಗವಹಿಸುವದನ್ನು ಹಲವು ಸದಸ್ಯರುಗಳು ಟೀಕಿಸಿದ್ದರಲ್ಲಿ ಅರ್ಥವಿಲ್ಲ. ರಾಜಕೀಯ ಹಿನ್ನೆಲೆಯಿಲ್ಲದ ಸಾಹಿತ್ಯಿಕವಾದ ಸಭೆಯಲ್ಲಿ ಅವರು ಭಾಗವಹಿಸಿದ್ದರಿಂದ ಹೈಕೋರ್ಟಿನ ಸ್ಥಾನಮಾನಕ್ಕೆ ಯಾವರೀತಿಯ ಕುಂದೂ ಬರಲಾರದು, ಅವರು ನಮ್ಮ ಹಾಗೆಯೇ ಮಾನವರು. ಸಭ್ಯರ ಸಭೆಗಳಲ್ಲಿ ಭಾಗವಹಿಸುವ ವಿಚಾರವನ್ನು ನಾನು ಶ್ಲಾಘಿಸುತೇನೆ. ಸದಸ್ಯರ ಟೀಕೆ ತಲೆಬುಡವಿಲ್ಲದ್ದು" ಎಂಬುದಾಗಿ ಉತ್ತರಿಸಿದ್ದು ನ್ಯಾಯವೇ ಆಗಿದೆ. ಇಂದು ಹಾಯ್ ಕೋರ್ಟುಗಳೂ ಸುಪ್ರೀಮ್ ಕೋರ್ಟುಗಳೂ ಸರಿಯಾದ ಮಾರ್ಗದರ್ಶನ ಮಾಡುತ್ತಿರುವ ವಿಚಾರದಲ್ಲಿ ಜನತೆಗೆ ಸಂಪೂರ್ಣ ವಿಶ್ವಾಸವಿದೆ. ನ್ಯಾಯಬದ್ಧವಾದ ಅಂಶದಲ್ಲಿ ನೇರಾದ ಮಾರ್ಗವನ್ನು ಹಾಯ್ ಕೋರ್ಟು ಮತ್ತು ಸುಪ್ರೀಮ್ ಕೋರ್ಟುಗಳೂ ಅಮೂಲ್ಯವಾದ ಸೇವೆಯನ್ನು ಸಲ್ಲಿಸುತ್ತಲಿವೆ. ಜಾತೀಯ ಸಂಕುಚಿತ ಮನೋವೃತ್ತಿಯ ಹಲವು ಸದಸ್ಯರು ಹೀಗೆ ಅಪಾರ್ಥವನ್ನು ಮಾನ್ಯ ನ್ಯಾಯಾಧಿಪತಿಗಳ ಮೇಲೂ, ಕೋರ್ಟುಗಳ ಮೇಲೂ ಹೊರಿಸುತ್ತಿರುವುದು ಅತ್ಯಂತ ವಿಷಾದಕರ. ತಮ್ಮ ಹೊಣೆ-ಸ್ಥಾನಮಾನದ ಅನುಭವ ಎಲ್ಲಕ್ಕಿಂತ ಮೊದಲು ಅವಶ್ಯಕವಾಗಿದೆ. ಸಾರ್ವಜನಿಕರು ಮಾನ್ಯ ಸದಸ್ಯರ ಸ್ಥಾನಮಾನದ ಕುರಿತು ಚಿಂತಿಸುವಷ್ಟು ಅವರ ಮಟ್ಟ ಕೆಳಗಿಳಿಯದಂತಾಗಲಿ!

ಜೀವವಿಮೆಗಾಗಿ

ವಿಚಾರಿಸಿರಿ

ನ್ಯೂ ಗಾರ್ಡಿಯನ್ ಒಫ್ ಇಂಡಿಯಾ

ಲೈಫ್ ಇನ್ಶೂರೆನ್ಸ್ ಕೋ ಲಿಮಿಟೆಡ್.

(ಸ್ಥಾಪನೆ: 1934)

ಚೆಯರ್‌ಮೆನ್: ಶ್ರೀ. ಎಮ್. ಸಿಟಿ. ಎಮ್. ಚಿದಂಬರಮ್ ಚೆಟ್ಟಿಯಾರ್

ಪ್ರಗತಿ ಪಥದಲ್ಲಿರುವ ಈ ವಿಮಾ ಸಂಸ್ಥೆಯ ಪೊಲಿಸಿ ಪಡೆಯುವುದೆಂದರೆ ಅದೊಂದು ಉತ್ತಮ ವಿನಿಯೋಗ. ಅಂತೆಯೇ ಅದರ ಏಜನ್ಸಿ ಸಂಪರ್ಕವನ್ನಿಟ್ಟುಕೊಳ್ಳುವುದೂ ಅಮೂಲ್ಯ ವ್ಯವಹಾರವಾಗಿದೆ.

ಮಂಗಳೂರು ಶಾಖೆ:
ಕೆ. ಎಸ್. ರಾವ್. ರೋಡು,
ಹಂಪನಕಟ್ಟೆ, ಮಂಗಳೂರು.

ಕೇಂದ್ರ ಕಾರ್ಯಾಲಯ:
"ಯುನೈಟೆಡ್ ಇಂಡಿಯಾ ಲೈಫ್ ಬಿಲ್ಡಿಂಗ್" ಪೋಸ್ಟು ಬಾಕ್ಸ್ ನಂಬ್ರ 142
ಮದ್ರಾಸು.

ಲಕ್ಷ್ಮೀ

ಸೆಂಟಾಲ್ ಮಾತ್ರೆ

ಇದರ ಉಪಯೋಗದಿಂದ ಬಹುಕಾಲದ ಮೇಹ, ಪ್ರಮೇಹ, ಮೂತ್ರದ ಉರಿ, ಮೂತ್ರ ಕೃಚ್ಛ್ರ, ಮೂತ್ರದೊಡನೆ ಯಾ ಮುಂದಾಗಿ ಬಿಳುಪು, ಅರಸಿನ, ಕೆಂಪು ಈ ವರ್ಣಗಳಲ್ಲಿ ಕೀವು ಹೋಗುವುದು, ತೊಡೆಸಂದಿನಲ್ಲಿ ನೋವು, ಕಾಲ ಗಂಟುಗಳಲ್ಲಿ ವೇದನೆ, ಕಣ್ಣಿನಲ್ಲಿ ಕೀವು ಬರುವುದು, ಶರೀರದಲ್ಲಿ ಉಷ್ಣತೆ, ಸ್ಪರ್ಶೇಂದ್ರಿಯ ಇವೆಲ್ಲಾ ಖಾತ್ರಿಯಾಗಿ ಗುಣಹೊಂದುವುದು.

ಡಬ್ಬಿ ಒಂದಕ್ಕೆ ರೂ. 2—0—0

ಏಜಂಟ್:—

ಶಾ ಕಂಪೆನಿ, ಮಂಗಳೂರು

ಲೋಕಾಂತ

ಕರ್ನಾಟಕ ವಿ. ವಿದ್ಯಾಲಯದ ಕಟ್ಟಡದ ಶಂಕುಸ್ಥಾಪನೆ

ಕರ್ನಾಟಕ ವಿಶ್ವವಿದ್ಯಾಲಯದ ಕಟ್ಟಡದ ಶಂಕುಸ್ಥಾಪನೆಯು ರಾಷ್ಟ್ರಾಧ್ಯಕ್ಷರಾದ ಡಾ| ರಾಜೇಂದ್ರ ಪ್ರಸಾದರ ದಿವ್ಯಹಸ್ತದಿಂದ ಧಾರವಾಡದ ಛೋಟಾ ಮಹಬಳೇಶ್ವರದಲ್ಲಿ ಮಾರ್ಚ 30ರಂದು ನೆರವೇರಿತು. ಈ ಸಮಾರಂಭದಲ್ಲಿ ಮುಂಬಯಿಯ ಪ್ರಧಾನ ಮಂತ್ರಿ ಬಿ. ಜಿ. ಖೇರ; ಕೇಂದ್ರ ಸರಕಾರದ ಉಪಮಂತ್ರಿ ಶ್ರೀ ದ. ಪ. ಕರಮರಕರರೂ ಇನ್ನಿತರ ಮಹನೀಯರೂ ಭಾಗವಹಿಸಿದ್ದರು. ಡಾ| ರಾಜೇಂದ್ರ ಪ್ರಸಾದರು ಸಮಾರಂಭ ಭಾಷಣದಲ್ಲಿ "ಭಾರತದಲ್ಲೆಲ್ಲಾ ವಿದ್ಯಾಸಂಸ್ಥೆಗಳು ಹೆಚ್ಚುತ್ತಿರುವ ಕಾಲದಲ್ಲಿ ಕನ್ನಡದಲ್ಲಿಯೂ ಸ್ವತಂತ್ರ ವಿಶ್ವವಿದ್ಯಾಲಯದ ಬಗ್ಗೆ ವಿಶೇಷ ಕಳಕಳಿಯಿರುವುದು ಆಶ್ಚರ್ಯವೇನಲ್ಲ. ನಿಮ್ಮ ಗತೇತಿಹಾಸವು ವೈಭವ ಪೂರ್ಣವಾಗಿದೆ. ನಿಮ್ಮ ಪ್ರಾಚೀನ ಕಾಲದ ಶಿಲ್ಪಕಲಾ ವೈಭವವು ಭಾರತದಲ್ಲಿಯೇ ಉನ್ನತವಾದದ್ದಿದೆ. ನಿಮ್ಮ ಜೀವನವೂ ಉನ್ನತವಾಗಿತ್ತು. ನಿಮ್ಮ ಪುರಾತನ ಸಂಪತ್ತಿನಿಂದ ನಿಮ್ಮ ವಿಶ್ವವಿದ್ಯಾಲಯವೂ ತನ್ನ ಅಭಿವೃದ್ಧಿಯನ್ನು ಹೊಂದಬಲ್ಲುದು" ಎಂದು ಅಪ್ಪಣೆ ಕೊಟ್ಟಿದಾರೆ.

ಕರ್ನಾಟಕ ಪ್ರಾಂತದ ಬೇಡಿಕೆ

ಕರ್ನಾಟಕ ಪ್ರಾಂತ ನಿರ್ಮಾಣದ ಆವಶ್ಯಕತೆಯ ಕುರಿತು ಡಾ| ರಾಜೇಂದ್ರ ಪ್ರಸಾದರಿಗೆ ಒಂದು ಮನವಿಯನ್ನು ಕರ್ನಾಟಕದ ಮುಖಂಡರು ಸಲ್ಲಿಸಿದರು. ಕರ್ನಾಟಕದ ಗಡಿನಿರ್ಣಯಕ ಕಮಿಟಿಯನ್ನು ನೇಮಿಸುವ ಕುರಿತೂ, ಮೈಸೂರಿನ ಧುರೀಣರನ್ನು ಕರ್ನಾಟಕ ಪ್ರಾಂತ ನಿರ್ಮಾಣಕ್ಕೆ ಮೈಸೂರಿನಿಂದ ಇರುವ ತಡೆಯನ್ನು ನಿವಾರಿಸಿಕೊಳ್ಳುವ ಹಾಗೂ ಒತ್ತಾಯಿಸುವ ಕುರಿತೂ, ಈ ಮನವಿಯಲ್ಲಿ ಅಂಕಿತ ಮಾಡಿಕೊಳ್ಳಲಾಗಿದೆ. ಭಾಷಾನುಗುಣ ಪ್ರಾಂತೀಕರಣಕ್ಕಾಗಿ ಮುಂಬಯಿ ಮದ್ರಾಸು ಪಾರ್ಲಿಮೆಂಟುಗಳಲ್ಲಿದ ಗೊತ್ತುವಳಿಯನ್ನು ರಾಷ್ಟ್ರಾಧ್ಯಕ್ಷರ ಅವಗಾಹನೆಗೆ ಆ ಮನವಿಯಲ್ಲಿ ತರಲಾಗಿದೆ. ಮನವಿ ತಂಡವರಲ್ಲಿ ಕೇಂದ್ರದ ಉಪ ಮಂತ್ರಿಗಳಾದ ದ. ಪ. ಕರಮರಕರರೂ, ಮುಂಬಯಿ ಕೃಷಿ ಇಲಾಖಾ ಮಂತ್ರಿಗಳಾದ ಶ್ರೀ ಎಂ. ಪಿ. ಪಾಟೀಲರೂ ಕ. ಪಿ. ಸಿ. ಸಿಯ ಅಧ್ಯಕ್ಷರಾದ ಶ್ರೀ ನಿಜಲಿಂಗಪ್ಪನವರೂ ಪಾರ್ಲಿಮೆಂಟಿನ ಸದಸ್ಯರುಗಳಾದ ಶ್ರೀಗಳಾದ ಕೆ. ಇ. ಪಾಟೀಲ, ಬಿ. ಡಿ. ಜತ್ತಿ, ಎಸ್. ಎಲ್. ಕಂಠಿ, ಮತ್ತು ಬಿ. ಎನ್. ಮನವಳ್ಳಿಯವರು ಮುಖ್ಯರಾಗಿದ್ದಾರೆ.

ಸೋಮನಾಥ ದೇವಾಲಯದ ಜೀರ್ಣೋದ್ಧಾರ

ಚಾರಿತ್ರಿಕವಾದ ಸೋಮನಾಥ ದೇವಾಲಯದ ಜೀರ್ಣೋದ್ಧಾರದ ಕಾರ್ಯವನ್ನು ಸರಕಾರ ಕೈಗೊಂಡಿದೆ. ಆ ಸಂದರ್ಭದಲ್ಲಿ ಘಜನಿ ಮಹಮ್ಮದನು ಸೋಮನಾಥ ದೇವಾಲಯದ ಸಕಲಸಂಪತ್ತುಗಳನ್ನು ಕೊಳ್ಳೆಹೊಡೆದುಕೊಂಡು ಹೋಗಿದ್ದರಲ್ಲಿ ಸೋಮನಾಥ ದೇವಾಲಯದ ವಜ್ರಖಚಿತವಾದ ಮಹಾ ದ್ವಾರವನ್ನು ಭಾರತಕ್ಕೆ ಹಿಂತಿರುಗಿ ಕೊಡುವದಾಗಿ ಅಫಘಾನಿ ಸರಕಾರವು ತಿಳಿಸಿದೆ. ದಿವಂಗತ ಪಟೇಲರು ಈ ಅಮೂಲ್ಯ ಮಹಾದ್ವಾರವನ್ನು ಹಿಂದೆಕಳಿಸಿಕೊಡಬೇಕೆಂದು ಅಫಘಾನಿ ಸರಕಾರದ ಮುಖ್ಯ ಮಂತ್ರಿಗೆ ಬರೆದಿದ್ದರು. "ಸಾಂಸ್ಕೃತಿಕ ಹಾಗೂ ಸಾಮಾಜಿಕ ವ್ಯವಹಾರಗಳಲ್ಲಿ ಭಾರತ ಅಫಘಾನಿಸ್ಥಾನಗಳೊಳಗಿನ ಮೈತ್ರಿಯ ಭದ್ರತೆಯ ದ್ಯೋತಕವಾಗಿ ನಾವಿದನ್ನು ಭಾರತಕ್ಕೆ ಹಿಂತಿರುಗಿಸುತ್ತೇವೆ" ಎಂದು ಅಫಘಾನಿ ಸರಕಾರ ಹೇಳಿದೆ.

ದಾಮೋದರ ಕಾಲುವೆ ಯೋಜನೆ

ಭಾರತ ಸರಕಾರದ ಪ್ರಾಮುಖ್ಯಯೋಜನೆಯಾದ ದಾಮೋದರ ಕಣಿವೆಯ ಕುರಿತು ಪಾರ್ಲಿಮೆಂಟು ಸುದೀರ್ಘ ಚರ್ಚೆ ನಡೆಸಿ 2,37,62,000 ರೂಪಾಯಿಗಳನ್ನು ಮಂಜೂರು ಮಾಡಿತು. ಹೆಚ್ಚು ಮೊತ್ತದಲ್ಲಿ ಹಣವಿನಿಯೋಗಿಸುವ ಡಿ. ವಿ. ಸಿಯ ಕುರಿತು ಶ್ರೀ ಪ್ರಕಾಶರು ಯಶಸ್ವಿಯಾಗಿ ನಡೆಸಿಕೊಡುವ ಸಂಪೂರ್ಣ ಭರವಸೆಯನ್ನಿತ್ತ ಮೇಲೆಯೇ ಪಾರ್ಲಿಮೆಂಟು ಒಪ್ಪಿಗೆ ಕೊಟ್ಟಿತು. ಈಗಾಗಲೇ ಬ್ರಿಟಿಶ್ ಮತ್ತು ಅಮೇರಿಕಗಳ ತಜ್ಞರಾದ ಇಂಜನೀರಿಯರುಗಳನ್ನು ಬರಮಾಡಿಕೊಂಡಿದೆ. ಈ ಯೋಜನೆಯಿಂದಾಗಿ ಭಾರತವು ನದಿಯ ನೀರುಗಳಿಂದ ಸಮೃದ್ಧವಾದ ಆಹಾರಧಾನ್ಯವನ್ನು ಬೆಳಸಿ ಆಹಾರದ ಕೊರತೆಯನ್ನು ನೀಗಿಸಬಹುದಾಗಿದೆ. ಅಲ್ಲದೆ ಇತರ ಉದ್ಯಮಗಳು ಅಭಿವೃದ್ಧಿಗೊಂಡು ಭಾರತವು ಸ್ವಾವಲಂಬಿಯಾಗಲು ಸಾಧ್ಯವಿದೆ.

ದಿಲ್ಲಿಯ ಮೇಲೆ ವಿದೇಶೀ ವಿಮಾನ

ಮಾರ್ಚ ತಿಂಗಳ 29ರಂದು ದಿಲ್ಲಿಯ ರಾಜಧಾನಿಯ ಮೇಲೆ ಸುಮಾರು 17000 ಅಡಿ ಎತ್ತರದಲ್ಲಿ ಅಪರಿಚಿತ ವಿಮಾನವೊಂದು ಹಾರಾಡಿತು. ಮೊದಲು ಭಾರತದೊಳಗಿನ ವಿಮಾನವೆಂದೇ ಭಾವಿಸಲಾಯಿತು. ನಮ್ಮ ವಿಮಾನವು ಬೆನ್ನಟ್ಟಿಹೋದಾಗ ಅದು 30,000 ಅಡಿ ಮೇಲಿಂದ ಹಾರಿಹೋಗಿ ಕಣ್ಮರೆಯಾಯಿತು. ಹೀಗೆ ಅನಿರೀಕ್ಷಿತವಾಗಿ ಭಾರತಸರಕಾರದ ಪರವಾನಿಗೆ ಇಲ್ಲದೆ ರಾಜಧಾನಿಯ ಮೇಲೆ ಹಾರಾಡಿದ ಕುರಿತು ಹಲವು ರೀತಿಯ ಸಂಶಯಗಳಿಗೆಡೆಯುಂಟಾಗಿದೆ. ಮೇಜರ್ ಜನರಲ್ ಹಿಮ್ಮತ್ಸಿಂಗರು ಪಾಕಿಸ್ತಾನ ಇಲ್ಲವೆ ರಷ್ಯಾದ ವಿಮಾನವಾಗಿರಬೇಕೆಂದೂ ಶಾಂತಿಯ ಸಮಯದಲ್ಲಿ ಹೀಗೆ ಹಾರಾಡಲು ಸಾಧ್ಯವಾಯಿತಲ್ಲದೆ ಯುದ್ಧಕಾಲದಲ್ಲಿ ಹೀಗೆ ಹಾರಾಡಲು ಬರುವಂತಿಲ್ಲವೆಂದು ಅಭಿಪ್ರಾಯ ವ್ಯಕ್ತಪಡಿಸಿದರು.

ಈಜಿಪ್ಟ್ ವ್ಯಾಪಾರ ಒಪ್ಪಂದ

ಭಾರತ ಈಜಿಪ್ಟ್‌ಗಳೊಳಗೆ ವ್ಯಾಪಾರ ಒಪ್ಪಂದವಾಗಿರುತ್ತದೆ. ಈ ಒಪ್ಪಂದದಂತೆ ಭಾರತವು ಈಜಿಪ್ಟಿನಿಂದ ಹತ್ತಿ, ನೂಲುಗಳನ್ನು ಆಮದು ಮಾಡಿಕೊಳ್ಳಬಹುದಾಗಿದೆ.

ದೋತ್ರ ಮತ್ತು ಸೀರೆಗಳು

ಮಂತ್ರಿ ಹರಿಕೃಷ್ಣ ಮೆಹತಾಬರು ಪಾರ್ಲಿಮೆಂಟಿನಲ್ಲಿ ಮಾತನಾಡುತ್ತ, ದೋತ್ರ ಮತ್ತು ಸೀರೆಗಳನ್ನು ಹೆಚ್ಚಾಗಿ ತಯಾರಿಸುವರೇ ಮಿಲ್ಲುಗಳಿಗೆ 40,000 ಬೇಲುಗಳನ್ನು ಒದಗಿಸಿಕೊಡಲಾಗುತ್ತದೆಂದರು.

ಭಾರತದಲ್ಲಿ ನ್ಯೂಸ್‌ಪ್ರಿಂಟಿನ ತಯಾರಿಕೆ.

ತಿರುವಾಂಕೂರಿನಲ್ಲಿ ವೃತ್ತಪತ್ರಗಳನ್ನು ಮಲ್ಬರಿಗಿಡದಿಂದ ತಯಾರಿಸುವ ಪ್ರಯೋಗವೊಂದನ್ನು ನಡೆಸಲಾಗ ಅದು ಯಶಸ್ವಿಯಾಗಿದೆಂದು ತಿಳಿದುಬರುತ್ತದೆ.

ಕ್ಷಮೆ ಯಾಚಿಸಿದರೆ ಗಡಿನಾಡ ಗಾಂಧಿಯ ಬಿಡುಗಡೆ

ಪಾಕಿಸ್ತಾನ ಉದ್ಭವಾದಂದಿನಿಂದಲೂ ಬಂಧನದಲ್ಲಿರಿಸಲಾದ ಗಡಿನಾಡ ಗಾಂಧೀ ಗಫೂರ್ ಖಾನರನ್ನೂ ಇನ್ನಿತರ ಕೆಂಪಂಗಿ ಧುರೀಣರನ್ನೂ ಬಿಡುಗಡೆ ಮಾಡುವ ವಿಚಾರದಲ್ಲಿ ಪಾಕಿಸ್ತಾನ ಸರಕಾರವು ಅವರಿಂದ ಪಾಕಿಸ್ತಾನ ಸರಕಾರಕ್ಕೆ ನಿಷ್ಠೆಯನ್ನು ತೋರುವ ಹಾಗೂ ತಮ್ಮ ಕೆಂಪಂಗಿ ಪಕ್ಷದ ಮುಖ್ಯೋದ್ದೇಶವನ್ನು ವ್ಯಕ್ತಪಡಿಸುವ ಮುಚ್ಚಳಿಕೆಯನ್ನು ಕೊಟ್ಟರೆ ಬಿಡುಗಡೆಯ ಮಾಡುವ ಕುರಿತು ಆಲೋಚಿಸಬಹುದೆಂದು ಪಾಕ್ ಪ್ರಾಂತೀಯ ಸರಕಾರಹೇಳಿದೆ.

ಆಡಳಿತದಲ್ಲಿ ದೋಷ

ದೇಶದ ಔದ್ಯೋಗಿಕ ಪ್ರಗತಿಯು ಕುಂಠಿತವಾಗಲು ಕೆಲವು ಅಧಿಕಾರಿಗಳ ಆಡಳಿತದಲ್ಲಿ ದುರ್ವ್ಯವಹಾರಗಳು ತಲೆಯೆತ್ತುವುದೇ ಮುಖ್ಯ ಕಾರಣವೆಂದು ಶ್ರೀ. ಎಂ. ವಿಶ್ವೇಶ್ವರಯ್ಯನವರು ಹೇಳಿದರು. ಅನುಭವವಿಲ್ಲದವನನ್ನು, ತನ್ನ ಹೊಣೆಯನ್ನು ನಿರ್ವಹಿಸಲಸಮರ್ಥನಾದವನನ್ನು ತಮಗೆ ಬೇಕಾದವರೆಂಬ ಕಾರಣದಿಂದ ಕೂಡ್ರಿಸುವುದರಿಂದಲೇ ಇಂತಹ ವಿಪತ್ತು ಬಂದೊದಗಿದೆಂದು ಅ. ಭಾ. ಕಾರಖಾನೆದಾರ ಸಂಘದ ವಾರ್ಷಿಕಾಧಿವೇಶನದ ಅಧ್ಯಕ್ಷಸ್ಥಾನದಿಂದ ಅಪ್ಪಣೆಕೊಟ್ಟರು.

ಸರಕಾರೀ ಕಟ್ಟಡಗಳು.

ಮದ್ರಾಸು ಸರಕಾರ ಸರಕಾರದ ನೌಕರರಿಗಾಗಿ ಮನೆಕಟ್ಟಿಕೊಡಲು ನಿಶ್ಚಯಿಸಿದೆ ಇದರಿಂದ ಖಾಸಗೀ ಮನೆಗಳಲ್ಲಿ ವಾಸಮಾಡುತ್ತಿರುವ ಸರಕಾರೀ ನೌಕರರಿಗಾಗಿ ವ್ಯಯವಾಗುವ ಎರಡುಲಕ್ಷರೂಪಾಯಿಗಳ ಉಳಿತಾಯವಾಗುವದಂತೆ.

42 ಜನರ ದುರ್ಮರಣ.

ಇಂದೋರ ತಿಯಾಗಂಜದ ಮೂರಂತಸ್ತಿನ ಮನೆಯೊಂದು ಕುಸಿದುಬಿದ್ದು ೪೨ ಜನರು ಮಡಿದರು. ಬೊಹ್ರಾಪಂಗಡದ 100 ಜನ ಸ್ತ್ರೀಯರು ಮೂರನೆಯ ಅಂತಸ್ತಿನಲ್ಲಿ ಪ್ರಾರ್ಥನೆಗೆ ಕೂಡಿದ್ದರು. ಆ ಭಾರವನ್ನು ತಡೆಯಲಾರದೆ ಕಟ್ಟಡವು ಕುಸಿಯಿತೆಂದು ಹೇಳಲಾಗಿದೆ.

ವೈಮಾನಿಕ 18ನೇ ವರ್ಧಂತಿ

ಎಪ್ರಿಲ್ ಒಂದನೇ ತಾರೀಕಿನ ಹಿಂದೀ ವೈಮಾನಿಕ ಪಡೆಯ 18ನೆಯ ವರ್ಷದ ಜನ್ಮೋತ್ಸವವು ದಿಲ್ಲಿಯಲ್ಲೂ ದೇಶದ ಇನ್ನಿತರ ಕಡೆಯಲ್ಲೂ ವಿಜೃಂಭಣೆಯಿಂದ ಆಚರಿಸಲಾಯಿತು. ರಾಷ್ಟ್ರಾಧ್ಯಕ್ಷ ರಾಜೇಂದ್ರ ಪ್ರಸಾದರೂ, ಮುಖ್ಯಮಂತ್ರಿ ಜವಾಹರಲಾಲರೂ, ರಕ್ಷಣಾ ಖಾತೆಯ ಮಂತ್ರಿಗಳೂ, ಪಾರ್ಲಿಮೆಂಟು ಸದಸ್ಯರೂ ಇದರಲ್ಲಿ ಭಾಗವಹಿಸಿದ್ದರು.



Approved from by the Govt of Mysore
Certificated by the Agent of the Govt of
Cylone & Indian

ಪಂಚಾಯತ ಬೋರ್ಡ,
ಗ್ರಾಮ ಕಮಿಟಿ, ಶಾಲಾ ಕಾಲೇಜು
ಮೊದಲಾದುವುಗಳ
ಲೈಬ್ರೆರಿಗಳಿಗೆ
ಬೇಕಾಗುವ ಕರ್ನಾಟಕದ ಎಲ್ಲಾ ಭಾಗಗಳ ಕನ್ನಡ ಪುಸ್ತಕಗಳು ನಮ್ಮಲ್ಲಿ ದೊರೆಯುತ್ತವೆ.
ವಿಚಾರಿಸಿರಿ:—
ನವಭಾರತ ಪುಸ್ತಕ ಭಂಡಾರ

ಕನ್ನಡ ಪತ್ರಿಕೆ
ಜ್ಯೋತಿ
ಪ್ರಕಟಣ ದಿನ 7-4-'51
ಸಂಪಾದಕ:- ಬಿ. ಎಸ್. ಭಾಸ್ಕರ ರೈ, ಎಡ್ವೊಕೇಟ್, ಮಂಗಳೂರು.
ಪ್ರತೀ ತಿಂಗಳ ತಾ. 7 ಮತ್ತು 21ಕ್ಕೆ ಪ್ರಕಟಣೆ.
ವಿಷಯ:—
1. ಈಗಿನ ಅಳಿಯ ಸಂತಾನ ಕಾನೂನು ಬೇಡ.
2. ಹಿಂದೂ ಕೋಡಿನ ತರ್ಜುಮೆ
3. ಶ್ರೀ| ಸದಾನಂದ ಹೆಗ್ಡೆಯವರಿಗೆ ಶ್ರೀ| ಭಾಸ್ಕರ ರೈಗಳ ಉತ್ತರ.
ಇತ್ಯಾದಿ.
ಬಿ ಭಾಸ್ಕರ ರೈ.
ಸಂಪಾದಕ.

ಮೆಕಾರ್ಥರ ತಂತ್ರ

ಸೇನಾಧಿಪತಿ ಮೆಕಾರ್ಥರ ಚಾಣಕ್ಯ ತಂತ್ರ ಬಯಲಾಗುತ್ತಿದೆ. ಕಳೆದವಾರ ಚೀನದೊಡನೆ ಅವರು ಸಂಧಾನವನ್ನು ಬಯಸಿ ಹೇಳಿಕೆಕೊಟ್ಟದ್ದನ್ನು ನೋಡುವಾಗ ನಿಜವಾಗಿಯೂ ಈ ಮನುಷ್ಯ ಶಾಂತಿಯನ್ನೂ ಬಯಸುತ್ತಾನೇನೋ ಎಂದು ಭಾವಿಸಿದ್ದೆವು. ಆದರೆ ಇಂದು ಮೆಕಾರ್ಥರ ಸಂಧಾನದ ಒಳಗುಟ್ಟು ಬಯಲಾಗಿದೆ. ಕಮ್ಯೂನಿಸ್ಟ ಚೀನವನ್ನು ಮರ್ದಿಸುವ ಹಂಚಿಕೆಯನ್ನು ಹಿಂದಿನಿಂದ ಮಾಡುತ್ತಾ ಸಂಧಾನದ ಮಾತನ್ನು ಮುಂದೆ ತಂದದ್ದು ನೋಡುವಾಗ ಬೆಕ್ಕು ಸನ್ಯಾಸಿಯಾದ ಕತೆಯು ಜ್ಞಾಪಕಬರುತ್ತದೆ. ಕಂಕುಳಲ್ಲಿ ದೊಣ್ಣೆ ಕೈಯಲ್ಲಿ ಶರಣಾರ್ಥಿ! ಚೀನದ ಮೇಲೆ ಪ್ರಬಲ ಧಾಳಿಯನ್ನು ಮಾಡಬೇಕೆಂಬ ಇಚ್ಛೆ ಮೆಕಾರ್ಥರರಿಗೆ ಬಲವಾಗಿದೆಯೆನ್ನುವದಕ್ಕೆ ಅಮೆರಿಕದ ಅಲನ್‌ರವರು ಜಪಾನ್ ಪತ್ರಿಕೆಯಲ್ಲಿ ಪ್ರಕಟಗೊಳಿಸಿದ ಅಂಶಗಳು ಸಾಕಷ್ಟು ಪುಷ್ಟಿಕೊಡುತ್ತವೆ.

ಚೀನದ ಮೇಲೆ ಭಯಂಕರ ದಾಳಿಯನ್ನು ಮಾಡುವ ಪೂರ್ವ ಸಿದ್ಧತೆ ನಡೆದಿರುತ್ತದೆ. ಪೋರ್ಮೋಸಾದಲ್ಲಿರುವ ಚೀನಿ ರಾಷ್ಟ್ರೀಯ ಸೈನಿಕರನ್ನು ಚೀನದಲ್ಲಿ ಎರಡನೇ ರಂಗದಲ್ಲಿ ನಿರ್ಮಾಣ ಕಾರ್ಯಕ್ಕೆ ಉಪಯೋಗಿಸಿಕೊಳ್ಳುವದು, ಅಮೇರಿಕೆಯ ವಿಮಾನ, ಹಾಗೂ ನೌಕೆಗಳ ಶಕ್ತಿಯನ್ನು ಹೆಚ್ಚಿಸಿ ಮೂರು ಲಕ್ಷ ಸೈನಿಕರನ್ನು ಚೀನದ ಮೇಲೆ ಎರಗುವಂತೆ ಸಂಘಟಿಸುವದ, ಇವೇ ಮೊದಲಾದ ವಿಚಾರಗಳು ಇದರ ಹಿನ್ನೆಲೆಯಲ್ಲಿ ನಡೆದದ್ದು ಕಂಡುಬರುತ್ತದೆ. ಅಲ್ಲದೆ ಜಪಾನನ್ನು ಪುನಃ ಶಸ್ತ್ರೀಕರಿಸುವ ಪ್ರಬಲ ಕಾರಣವಾದರೂ ಚೀನದ ವಿರುದ್ಧ ಕತ್ತಿ ಹಿಡಿಯುವದಕ್ಕಾಗಿಯೇ ಎಂಬುದಕ್ಕೆ ಬೇರೆ ಕಾರಣಬೇಕಾಗಿಲ್ಲ. ಈಗಾಗಲೇ ಜಪಾನದ 75,000 ಸಹಸ್ರ ಸೈನಿಕರಿಗೆ ಶಸ್ತ್ರಾಸ್ತ್ರಗಳ ಪೂರೈಕೆಯನ್ನು ಮಾಡಲಾಗಿದ್ದು ಯುದ್ಧಸನ್ನದ್ಧರಾಗುವಂತೆ ಪ್ರೇರೇಪಿಸಲಾಗಿದೆ. ಬ್ರಿಟನ್, ಫ್ರಾನ್ಸ್‌ಗಳೊಳಗೆ ಕಮ್ಯೂನಿಸ್ಟ ಚೀನವನ್ನು ಹತ್ತಿಕ್ಕುವ ಪ್ರಭಾವೀ ಚಟುವಟಿಕೆಯ ಕುರಿತು ಈ ನೊದಲೇ ವಿಮರ್ಶೆಮಾಡಲಾಗಿದೆಯಂತೆ.

ಬಂಡವಳಶಾಹೀ, ಅಮೇರಿಕಾನರ ಹಾಗೂ ಮೆಕಾರ್ಥರ ಈ ಕಾರಸ್ಥಾನ ಕಮ್ಯೂನಿಸ್ಟ ಚೀನಾಕ್ಕೆ ಸಂಪೂರ್ಣ ತಿಳಿದೇ ಮೆಕಾರ್ಥರು ಹೊರಡಿಸಿದ ಸಂಧಾನವನ್ನು ತೀಕ್ಷ್ಣ ಪ್ರತಿಭಟನೆಯಿಂದ ತಿರಸ್ಕರಮಾಡಲಾಗಿದೆ. ಮೆಕಾರ್ಥರ ಆಮಂತ್ರಣದ ಕುರಿತು ಪೇಕಿಂಗ್ ಆಕಾಶವಾಣಿಯು ಹೀಗೆ ಸಾರಿದೆ.

"ಬ್ರಿಟಿಶ್, ಅಮೆರಿಕದ ಸೈನ್ಯಗಳನ್ನು ಚೀನದ ಮೇಲೆ ಧಾಳಿಮಾಡುವದಕ್ಕಾಗಿ ಬಳಸಿಕೊಳ್ಳಲಾಗಿದೆ. ಚೀನದ ಮೇಲೆ ಯುದ್ಧಸಾರುವ ಯುದ್ಧಸಂಘಟನೆಮಾಡಿಕೊಂಡೇ ಮೆಕಾರ್ಥರು ಸಂಧಾನದ ಮಾತುಕತೆಗೆ ಆಮಂತ್ರಣವಿತ್ತಿದ್ದಾರೆ. ಮೆಕಾರ್ಥರ ಈ ಆಮಂತ್ರಣ ಜೊತೆಗೇಡಿತನ ದಷ್ಟೆ ಮಾತ್ರವಲ್ಲದೆ ಉತ್ತರಿಸುವಷ್ಟು ಮರ್ಯಾದಾಪೂರ್ಣ ಕೂಡಾ ಆಗಿಲ್ಲ. ಈ ಮೊದಲು ಅವರು ಮಾಡಿದ ಅರ್ಥಶೂನ್ಯ ಹೇಳಿಕೆಗಿಂತಲೂ ಇದು ನಿಕೃಷ್ಟವಾಗಿದೆ ಅಂತಲೇ ಅದನ್ನು ಕಸದ ಬುಟ್ಟಿಗೆಸೆಯಲಾಗಿದೆ. ಈ ಸಾಮ್ರಾಜ್ಯಶಾಹೀ ಆಕ್ರಮಣ ರಾಷ್ಟ್ರಗಳ ಇಚ್ಛೆ ಏನಿರಬಹುದೆಂಬುದನ್ನು ಮೊದಲೇ ನಾವು ಊಹಿಸಿದ್ದೆವು. ಈಗ ಅದರ ಪೂರ್ಣ ಪಾರ ನಮಗಾದಂತಾಯಿತು. ಬ್ರಿಟನ್, ಅಮೇರಿಕಾದ ಸೈನ್ಯಗಳು ಚೀನಾದಮೇಲೆ ಧಾಳಿಮಾಡುವ ಅಂಶವು ಗಂಭೀರ ಸ್ವರೂಪದ್ದು. ಇದರಿಂದಾಗಿ ನಾವು ನಮ್ಮ ಸೈನ್ಯವನ್ನು ಭದ್ರಗೊಳಿಸಿ ಶತ್ರುಗಳ ಪ್ರತಿಭಟನೆಗೆ ಶಕ್ತರಾಗಬೇಕು. ಚೀನಾದ ಮೇಲಾಗುವ ಭೀಕರ ಧಾಳಿಯ ಬಗ್ಗೆ ನಾವು ಎಷ್ಟು ಜಾಗ್ರತರಾಗಿದ್ದರೂ ಸಾಲದು. ಅಮೇರಿಕನ್ ವಿರೋಧ ಚಳುವಳಿ ಬಲಪಡಿಸಿ ನಾವು ಸಂಘಟಿತರಾಗಲೇ ಬೇಕು."

ಕಮ್ಯೂನಿಸ್ಟ್ ಚೀನದ ಈ ಖಂಡಿತವಾದ ಉತ್ತರವನ್ನು ನೋಡುವಾಗ ಇನ್ನು ಯುದ್ಧದ ಹೊರತು ಸಂಧಾನದ ಮಾತೇ ಇಲ್ಲವೆಂಬಂತಾಗಿದೆ. ಅಮೆರಿಕೆಯ ಚಾಣಕ್ಯನೀತಿಯಿಂದ ಕಮ್ಯೂನಿಸ್ಟ್ ಚೀನಾ ಪರಿಸ್ಥಿತಿಯನ್ನೆದುರಿಸುವುದೇ ಮುಖ್ಯವೆಂದು ತಿಳಿದಿದೆ.

ಯುದ್ಧದ ಪ್ರಮುಖ್ಯ ನಾಯಕರೂ, ಅಮೆರಿಕಾನರ ಪ್ರೀತಿಪಾತ್ರರೂ ಆದ ಮೆಕಾರ್ಥರು ಇಂದು ಅಮೆರಿಕಾದ ರಾಜಕೀಯ ವರ್ಗಗಳ ಅತೃಪ್ತಿಗಳಿಗೆ ಕಾರಣವಾಗುತ್ತಲಿದ್ದಾರೆ. ಯುದ್ಧರಂಗದಲ್ಲಿಯ ಅವರ ಆದೇಶಗಳು ನಿರಂಕುಶ ಪ್ರಭುತ್ವದ್ದಾಗಿರುತ್ತವೆ. ಅವರು ಕೊಟ್ಟ ಹೇಳಿಕೆಯ ಕುರಿತು ಗಂಭೀರಸ್ವರೂಪದ ಪ್ರತಿಕೂಲ

ಜಗತ್ತನ್ನಾವರಿಸಿರುವ–

ವಾತಾವರಣ ಹುಟ್ಟಿದೆ. ಅವರನ್ನು ಹಿಂದಕ್ಕೆ ಕರೆಸಿಕೊಳ್ಳಿ "ಈ ಹೇಳಿಕೆಯಿಂದ ಶತ್ರುದಳ ತಮ್ಮ ಸೈನ್ಯಬಲವನ್ನು ಹೆಚ್ಚಿಸಿ ಸಂಘಟಿಸಬಲ್ಲರು. ಮೆಕಾರ್ಥರರ ಈ ಕೃತ್ಯ ಜಾಣತನದ್ದಲ್ಲ" "ನಮ್ಮ ಗುಟ್ಟನ್ನು ಬೇರೆಯವರಿಗೆ ಕೊಟ್ಟಂತಾಗಿದೆ ಈ ಹೇಳಿಕೆಯಿಂದ: ಮೆಕಾರ್ಥರ ಈ ಚಿನಸ್ವೇಚ್ಛಾನುವರ್ತನೆ ಖಂಡನೀಯ" "ಅವರ ಅಧಿಕಾರ ಕ್ಷೇತ್ರವನ್ನು ಸಡಿಲು ಬಿಟ್ಟದ್ದರಿಂದಲೇ ಇಂತಹ ಪ್ರಮಾದವಾಯಿತು" ಎಂದು ನಾನಾ ಬಗೆಯ ಟೀಕೆ ಟಿಪ್ಪಣಿಗಳು ಮೆಕಾರ್ಥರ ಮೇಲೆ ಅಮೆರಿಕಾನ ರಾಜಕೀಯ ವರ್ಗಗಳಿಂದಲೇ ಆರಂಭವಾಗಿದೆ. ವಿಶೇಷವಾಗಿ ಬ್ರಿಟನು ಈ ವಿಚಾರದಲ್ಲಿ ಸಖೇದಾಶ್ಚರ್ಯವನ್ನ ವ್ಯಕ್ತಪಡಿಸಿಯದೆ. ಮೆಕಾರ್ಥರ ಸ್ವೇಚ್ಛಾನುವೃತ್ತಿಯನ್ನು 'ನ್ಯೂಸ್ ಕ್ರೋನಿಕಲ್' ಖಂಡಿಸಿ ಅವರನ್ನು ಹಿಂದೆಕರೆದುಕೊಳ್ಳಬೇಕೆಂದು ಬರೆದಿದೆ.

38ನೆಯ ಅಕ್ಷಾಂಶವನ್ನು ದಾಟುವ ವಿಚಾರದಲ್ಲಿ ಭಿನ್ನಾಭಿಪ್ರಾಯಗಳು ಕಂಡುಬರುತ್ತಿವೆ. ಶ್ರೀಮತಿ ರೂಜವೆಲ್ಟ್, ಅಮೆರಿಕಾದ ರಕ್ಷಣ ಖಾತೆಯ ಕಾರ್ಯದರ್ಶಿ ಜೋರ್ಜ್ ಮಾರ್ಶಲರೂ, ಇನ್ನಿತರ ರಾಜಕೀಯ ಧುರೀಣರು 38ನೆಯ ಅಕ್ಷಾಂಶವನ್ನು ದಾಟುವ ಸಾಹಸಮಾಡುವ ಪಕ್ಷದಲ್ಲಿ ತೃತೀಯ ಯುದ್ಧದ ಮಹಾದ್ವಾರವನ್ನ ತೆರೆದಂತೆಯೆ ಆಗುತ್ತದೆಂದು ಅಭಿಪ್ರಾಯ ಪಟ್ಟಿರುತ್ತಾರೆ. ಮೆಕಾರ್ಥರ ಮಾದ ಸಂಧಾನವನ್ನು–ಎಲ್ಲರೂ ಅಲಕ್ಷ್ಯಭಾವದಿಂದ ನೋಡುವ ಪರಿಸ್ಥಿತಿಯೊದಗಿದೆ. ಮೆಕಾರ್ಥರು ಸಂಧಾನದ ಮಾತುಕತೆಗೆ ಆಮಂತ್ರಣ ವಿತ್ತಿದ್ದರೂ ಅವರು ಶಾಂತಿಮಾರ್ಗವನ್ನನುಸರಿಸಬೇಕೆಂದು ಸದುದ್ದೇಶದಿಂದ ಪ್ರೇರಿತರಾದವರಲ್ಲವೆಂಬುದು ಈಗ ಸ್ಪಷ್ಟವಾಯಿತು.

ಅಧ್ಯಕ್ಷ ಟ್ರೂಮನರು ಸಂಯುಕ್ತರಾಷ್ಟ್ರಗಳಿಗೆ ಕೊರಿಯಾಯುದ್ಧವನ್ನು ಶಾಂತಿ ಸಂಧಾನಗಳ ಮೂಲಕ ಪರಿಹರಿಸಬಹುದೇ ಹೇಗೆಂಬ ವಿಚಾರದಲ್ಲಿ ಸಮಾಲೋಚನೆ ನಡೆಸುವದಕ್ಕೆ ಆಹ್ವಾನ ಕೊಟ್ಟಿರುತ್ತಾರೆ. ಕೊರಿಯಾ ರಣರಂಗದಲ್ಲಿ ಯಾವ ಯಾವ ರಾಷ್ಟ್ರಗಳ ಸೈನ್ಯಗಳು ಭಾಗವಹಿಸಿವೆಯೋ ಅವನ್ನೆಲ್ಲ ಯುದ್ಧ ಪರಿಹಾರದ ಮಾರ್ಗದರ್ಶನಕ್ಕಾಗಿ ಕೇಳಿಕೊಳ್ಳಲಾಗಿದೆ. ಈ ಪ್ರಕಟಣೆಯ ಬಗ್ಗೆ ಈಗಾಗಲೇ ಹಲವು ಪ್ರತ್ಯುತ್ತರಗಳೂ ಇನ್ನು ಕೆಲವು ಉಪಸೂಚನೆಗಳೂ ಬಂದಿವೆ ಈ ವಾರಾಂತ್ಯದೊಳಗೆ ಈ ರಾಷ್ಟ್ರಗಳು ಕೊರಿಯದ ಭವಿತವ್ಯದ ಕುರಿತು ಒಂದು ತೀರ್ಮಾನಕ್ಕೆ ಬರಲಿವೆ.

ಆಂಗ್ಲೋ ಅಮೇರಿಕನರ ಅಜ್ಞಾನ

ಕಾಶ್ಮೀರದ ಪರಿಷ್ಕೃತ ಗೊತ್ತುವಳಿಯ ಕುರಿತು ಪ್ರಧಾನ ಮುಖ್ಯ ಮಂತ್ರಿಯವರು ಆಗ್ರಾದಲ್ಲಿ: ಅಮೇರಿಕಾ ಮತ್ತು ಬ್ರಿಟನುಗಳ ಪ್ರತಿನಿಧಿಗಳು ಕೊಟ್ಟ ಹೇಳಿಕೆಯನ್ನು ನೋಡಿ ನನಗೆ ಅತ್ಯಂತ ವಿಷಾದವಾಗಿದೆ. ಬ್ರಿಟನಿನ ಪ್ರತಿನಿಧಿಯ ಹೇಳಿಕೆಯು ಕಾಶ್ಮೀರದ ವಸ್ತುಸ್ಥಿತಿಯ ವಿಚಾರದಲ್ಲಿ ಅವರಿಗಿರುವ ಅಜ್ಞಾನದ ಪರಮಾವಧಿಯನ್ನು ವ್ಯಕ್ತಪಡಿಸುತ್ತದೆ. ಆಂಗ್ಲೋ ಅಮೇರಿಕಾನರ ಪರಿಷ್ಕೃತ ಸೂಚನೆಗಳೂ ತಪ್ಪು ಮತ್ತು ಪ್ರಮಾದಗಳಿಂದ ಹೊರತಾಗಿಲ್ಲ. ಆಂಗ್ಲೋ ಅಮೇರಿಕಾನರು ತಿಳಿದೋ ತಿಳಿಯದೆಯೋ– ತಿರುಗಿ ಪ್ರಮಾದಗಳನ್ನು ಮಾಡುತ್ತಿರುವದಕ್ಕಾಗಿ ವ್ಯಥೆಪಡಬೇಕಾಗಿದೆ. ಈ ಗೊತ್ತುವಳಿಯು ಭಾರತವನ್ನು ಅವಮಾನಿಸುವಂತಹದಾಗಿದೆ. ಇದನ್ನು ಒಪ್ಪುವುದು ನಮಗೆ ಶಕ್ಯವೇ ಇಲ್ಲ." ಎಂದು ತಿರಸ್ಕಾರ ಸೂಚಿಸಿದ್ದಾರೆ.

ಪಾರ್ಲಿಮೆಂಟಿನ ಮುಂದೆ ಪ್ರಧಾನ ಮುಖ್ಯ ಮಂತ್ರಿಯವರು ಕೊಟ್ಟ ಹೇಳಿಕೆಯೂ ಮನನೀಯವಾದಂತಹುಗಳಾಗಿವೆ.

ಬೇಂಕಿಂಗ್ ಸಂಬಂಧದ ಎಲ್ಲಾ ಸಮಸ್ಯೆಗಳಿಗೆ

ದಿ ವಿಜಯಾ ಬೇಂಕ್ ಲಿಮಿಟೆಡ್

ಇವರ ಸಲಹೆ ಕೇಳಿರಿ

ಹೆಡ್ ಆಫೀಸು : : : : ಮಂಗಳೂರು

ಮಡಿಕೇರಿಯಲ್ಲಿ ಒಂದು ಶಾಖೆಯೂ ಬೆಂಗಳೂರಿನಲ್ಲಿ ಒಂದು ಶಾಖೆಯೂ ಜಿಲ್ಲೆಯೊಳಗೆ ಹಲವು ಶಾಖೆಗಳೂ ಇವೆ.

ನಿರಖು ಠೇವಣಾತಿಗಳ ಮೇಲೆ ಆಕರ್ಷಕವಾದ ದರದ ಬಡ್ಡಿಯು ಕೊಡಲ್ಪಡುವುದು.	ತಕ್ಕುದಾದ ಜವಾಬ್ದಾರಿಗಳ ಮೇಲೆ ಸುಲಭವಾದ ಶರ್ತಗಳಲ್ಲಿ ಸಾಲಗಳು ಕೊಡಲ್ಪಡುವುವು.

ಸಾಲಿಯನ್ ಸೇಕಡಾ 4½ರ ಬಡ್ಡಿ ಗಳಿಸುವ ಮೂರು ವರ್ಷದ ಅವಧಿಯ **ವಿಜಯಾ ಕೇಶ್ ಸರ್ಟಿಫಿಕೇಟುಗಳ** ಮೇಲೆ

ಹಣವನ್ನು ಹಾಕಿರಿ

THE VIJAYA BANK, LTD.,

ಬಿ. ಮಂಜಯ್ಯ ಹೆಗ್ಗಡೆ,
(ದ. ಕ. ಜಿಲ್ಲಾ ಬೋರ್ಡ್ ಪ್ರೆಸಿಡೆಂಟ್
ಡೈರೆಕ್ಟರ್ ಬೋರ್ಡಿನ ಅಧ್ಯಕ್ಷರು.

ಋತುಸ್ರಾವ ನಿಂತಿತು

'ಕುಮಾರಿ' ಬಿಲ್ಲೆಗಳನು ಉಪಯೋಗಿಸಿದರೆ ಹದತಪ್ಪಿ ಋತುಸ್ರಾವವಾಗುವುದು, ಪಕೋಟಿಗೆ ಬರುವುದು, ಈ ಔಷಧ ಸೇವನೆಯಿಂದ ತೀವ್ರ ಗುಣಹೊಂದಬಹುದು, ಯಾವ ಬಾಧಕವೂ ಇಲ್ಲ. ಸಾವಿರಾರು ಮಂದಿಗೆ ಖಾತ್ರಿ ಗುಣವಾಗಿದೆ– ಬೆಲೆ; ರೂ. 3-; ಸ್ಪೆಶ್ಯಲ್ ರೂ. 5- ಅಧಿಕಾಧಿಕ ಸ್ಪೆಶ್ಯಲ್ ರೂ. 8- [ಪ. ಖ ಪಸ್ಸಿರದಾತ ಪ್ರತ್ಯೇಕ.]

Mrs. D. DEVEE, F. DS. (N. J.)
Tollygunge CALCUTTA.
ಪ್ಯಾಕಿಸ್ಟರು ಶಹಾ ಕಂಪೆನಿ, ಮಂಗಳೂರು

ನೋಟೀಸು

ಉಡುಪಿ ಡಿ. ಮು ಕೋರ್ಟನಲ್ಲಿ

O. S. No. 33 of 1951
R. I. A. No. 384 of 51

ಮುಖ್ಯಪ್ರಾಣ ಪಾಟಾಳಿ ಕೂಡಾ. –ವಾದಿ

ಮತ್ತು

ಸಂಜೀವ ಹೆಗ್ಗಡೆ ಕೂಡಾ. –ಪ್ರತಿವಾದಿ.

ಇವರೊಳಗೆ

3ನೇ ಪ್ರತಿವಾದಿ– ಚಂದಯ್ಯ ಹೆಗ್ಗಡೆ ಕೆಪುಲ್ಲು ಹೆಗ್ಗಡ್ತಿಯರ ಮಗ, ಉಡುಪಿ ತಾಲ್ಲೂಕು ಕುಕ್ಕೆಹಳ್ಳಿ ಗ್ರಾಮದಲ್ಲಿ ಇರುವವ 3ನೇ ಪ್ರತಿವಾದಿ.

ಸದ್ರಿ 3ನೇ ಪ್ರತಿವಾದಿಗೆ:

ಮೇಲ್ಕಂಡ ದಾವೆಯು ವಾದಿಯು ನಿಮ್ಮ ಮೇಲೆ ಷ್ಲೇಂಟು ನಿವೃತ್ತಿಗೋಸ್ಕರ ದಾಖಲು ಮಾಡಿದ ಮೇಲ್ಕಂಡ ನಂಬ್ರವು ತಾ. 21-5-51ಕ್ಕೆ ತಸ್ತಿಗೆ ಇಡೋಣಾಗಿಯದೆ. ಆದುದರಿಂದ ಯಿದು ಬಾಬಿನಲ್ಲಿ ನಿಮ್ಮ ಉದಾಹರಣೆಯಿದ್ದ- ಮೇಲ್ಕಂಡ ತಾರೀಕು 24-5-51 ನೇ ದಿವಸ ಬೆಳಿಗ್ಗೆ 11 ಗಂಟೆಗೆ ಹಾಜರಾಗಿ ಜ್ಯಾಹೀರು ಮಾಡಿಕೊಳ್ಳತಕ್ಕದ್ದು. ಇದಕ್ಕೆ ತಪ್ಪಿದರೆ ಸದ್ರಿ ನಂಬ್ರವು ನಿಮ್ಮ ಯೆಕ್ಸ್‌ಪಾರ್ಟಿಯಿಂದ ತೀರ್ಮಾನಿಸಲಾಗುವುದು ಎಂಬುದು ಈ ಮೂಲಕ ತಿಳಿಸೋಣಾಗುವುದು.

K. J. Bailal,
Vakil for Plffs.

ತಾರೀಕು 31-3-51, ಉಡುಪಿ.

ಯುದ್ಧ ಕಾರ್ಮೋಡಗಳು

"ಮಧ್ಯಸ್ಥಗಾರನನ್ನು ನೇಮಿಸುವದನ್ನು ನಾವು ಸ್ವಾಗತಿಸುತ್ತೇವೆ. ಆದರೆ ಕಾಶ್ಮೀರದಲ್ಲಿ ಬೇರೆಯವರು ಅಧಿಕಾರ ಚಾಲು ಮಾಡುವದನ್ನು ನಾವು ಸಹಿಸುತ್ತಿಲ್ಲ. ಪರರಾಷ್ಟ್ರಗಳ ಸೈನ್ಯವನ್ನು ಹೊಕ್ಕಿಸುವ ವಿಚಾರದಲ್ಲಿಯೂ, ನಿಃಸ್ಸೈನ್ಯೀಕರಣದ ವಿಚಾರದಲ್ಲಿಯೂ ನಾವು ಹಿಂದಿನಿಂದಲೂ ವಿರೋಧವನ್ನು ಸೂಚಿಸುತ್ತ ಬಂದಿದ್ದೇವೆ. ಈಗ ಕಾಶ್ಮೀರ ಭಾರತದ ಸಂರಕ್ಷಣೆಯಲ್ಲಿ ರಾ.ವಾ.ಗ ಮುಖ್ಯವಾದ ಅಧಿಕಾರದಲ್ಲಿ ಬೇರೊಬ್ಬರಿಗೆ ಅಸ್ಪದಕೊಡುವುದು ನ್ಯಾಯವಾಗಲಿಕ್ಕಿಲ್ಲ. ಅಂತಲೇ ನಾವದನ್ನು ಸಂಪೂರ್ಣವಾಗಿ ತಿರಸ್ಕರಿಸಿದ್ದೇವೆ." ಎಂದಿದ್ದಾರೆ.

ಯು. ಎನ್. ನಲ್ಲಿ ಭಾರತದ ಪ್ರತಿನಿಧಿಯಾದ ಶ್ರೀ. ಬೆನಗಲ್ ನರಸಿಂಗರಾಯರು ಭಾರತದ ನಕಾರಾತ್ಮಕ ಉತ್ತರವನ್ನು ಮಂಡಿಸುತ್ತಾ, ವಿಚಾರ ವಿಮರ್ಶೆಯಾದಂತೆ ಭದ್ರತಾ ಸಮಿತಿಯು ಪಾಕಿಸ್ತಾನಕ್ಕೆ ಹೆಚ್ಚಿನ ಅಧಿಕಾರ ಪ್ರಾಪ್ತಿಯನ್ನು ಕಾಶ್ಮೀರದಲ್ಲಿ ಕಲ್ಪಿಸಿಕೊಡುತ್ತಲಿದೆ. ಈಗ ಆಂಗ್ಲೋ ಅಮೇರಿಕನರು ಮಾಡಿದ ಹೊಸ ಸೂಚನೆಗಳು 1948 ಆಗಸ್ಟಿನ ಭಾರತ ಮತ್ತು ಪಾಕಿಸ್ತಾನಗಳು ಸಮ್ಮತಿಸಿದ ಸೂಚನೆಯನ್ನು ಅಲ್ಲಗಳೆದಂತಾಗಿದೆ. ಅಂತಲೇ ನಾವೀ ಸೂಚನೆಯನ್ನು ಇದ್ದಕ್ಕಿದ್ದ ಹಾಗೆ ತಿರಸ್ಕರಿಸಿದೆವು." ಎಂದು ಹೇಳಿದ್ದಾರೆ

ಕಾಶ್ಮೀರ ಸಮಸ್ಯೆಯು ಮತ್ತಷ್ಟು ಜಟಿಲವಾಗುತ್ತ ಬರುತ್ತದೆಯೆ ಹೊರತು ಪರಿಹಾರವಾಗುವ ಲಕ್ಷಣಗಳು ಕಾಣುಬರುತ್ತಿಲ್ಲ. ತಿದ್ದುಪಡಿಯ ಈ ಮಸೂದೆಯ ಕುರಿತು ಪಾಕಿಸ್ತಾನ ಈ ತನಕ ತನ್ನಭಿಪ್ರಾಯವನ್ನು ವ್ಯಕ್ತಪಡಿಸದೆ ಹೋಗಿದ್ದರೂ ಪಾಕಿಸ್ತಾನದ ಮುಖ್ಯ ಮಂತ್ರಿ ಲಿಯಾಖತ್ ಖಾನರು ಭದ್ರತಾ ಮಂಡಳವು ಆಂಗ್ಲೋ ಅಮೇರಿಕನ್ ಗೊತ್ತುವಳಿಯನ್ನು ಪೂರ್ತಿ ಮತ್ತು ನ್ಯಾಯಬದ್ಧ ರೀತಿಯಲ್ಲಿ ಜ್ಯಾರಿಯಲ್ಲಿ ತರುವದನ್ನು ನಾನು ಸ್ವಾಗತಿಸುತ್ತೇನೆಂದು ಹೇಳಿರುತ್ತಾರೆ! ಜಫ್ರುಲ್ಲಾಖಾನರು ಭದ್ರತಾ ಸಮಿತಿಯ ಮುಂದೆ ಈ ತನಕ ತನ್ನ ಹೇಳಿಕೆಯನ್ನು ಕೊಡದೆ ಇದ್ದರೂ ಪಾಕಿಸ್ತಾನವು ಇವನ್ನು ಸ್ವಾಗತಿಸುವದರಲ್ಲಿ ಯಾವ ಅಭ್ಯಂತರವೂ ಇರುವುದಿಲ್ಲವೆಂಬುದಾಗಿ ಹೇಳಿರುವ ಪ್ರಯುಕ್ತ ಪಾಕಿಸ್ತಾನ ಒಪ್ಪುವ ಸಂಭವವೇ ಹೆಚ್ಚೆಂದು ಕಾಣುತ್ತದೆ. ಶ್ರೀ ನೆಹ್ರುರವರು ಹೇಳಿದಂತೆ ಈ ಗೊತ್ತುವಳಿಯು ಪಾಕಿಸ್ತಾನಕ್ಕೆ ಅನುಕೂಲವಾಗಿಯೇ ಇರುವದು. ಆದುದರಿಂದ ಪಾಕಿಸ್ತಾನವು ಈ ಸುವರ್ಣ ಸಂಧಿಯನ್ನು ಕಳೆದುಕೊಳ್ಳಲಾರದು.

ಮೂರು ವರ್ಷಗಳಿಂದ ಬಗೆಹರಿಸಲಾಗದೇ ಉಳಿದಿರುವಂತಹ ಸಮಸ್ಯೆಯನ್ನು ಬಿಡಿಸಲೇ ಬೇಕೆಂಬ ಛಲವನ್ನು ಎಲ್ಲಾ ರಾಷ್ಟ್ರಗಳೂ ತಾಳಿದಂತಿದೆ. ಮಧ್ಯಸ್ಥಗಾರನ ಮೂಲಕ ಈ ಸಮಸ್ಯೆಯನ್ನು ಬಗೆಹರಿಸುವ ಆಂಗ್ಲೋ ಅಮೇರಿಕನರ ಗೊತ್ತುವಳಿಯನ್ನು ಈ ಯುಕ್ತರಾಷ್ಟ್ರ ಸಂಘದ ಹೆಚ್ಚಿನ ಪ್ರತಿನಿಧಿಗಳು ಒಪ್ಪಿರುತ್ತವೆ. ಮಧ್ಯಸ್ಥಗಾರನು ಭಾರತ ಪಾಕಿಸ್ತಾನಗಳೊಳಗಿನ ತೊಡಕುಗಳನ್ನು 1948-49ರ ಗೊತ್ತುವಳಿಗನುಸಾರವಾಗಿ ತೀರ್ಮಾನಿಸಬೇಕೆಂದು ಗೊತ್ತುವಳಿಯಲ್ಲಿ ಸೂಚಿಸಲಾಗಿದೆ. ಈ ಗೊತ್ತುವಳಿಯು ಎಂಟು ಮತಗಳಿಂದ ಮಂಜೂರಾಯಿತು. ಸೋವಿಯಟ್ ಮತ್ತು ಯುಗೋಸ್ಲೋವಿಯಾದ ಪ್ರತಿನಿಧಿಗಳು ಮತದಾನ ಮಾಡಲಿಲ್ಲ. ಗೊತ್ತುವಳಿಯ ಕುರಿತು ಮಾತನಾಡಿದ ಎಲ್ಲ ರಾಷ್ಟ್ರಗಳೂ ಕಾಶ್ಮೀರ ಸಮಸ್ಯೆಯನ್ನು ಬಗೆಹರಿಸುವದಕ್ಕೆ ಈ ಗೊತ್ತುವಳಿಯೊಂದೇ ಉತ್ತಮವಾದ ಮಾರ್ಗವೆಂದು ಅಭಿಪ್ರಾಯಪಟ್ಟವೆ. ಫ್ರೆಂಚ್ ಪ್ರತಿನಿಧಿಯು "ಭಾರತ ಪಾಕಿಸ್ತಾನ ರಾಷ್ಟ್ರಗಳು ಭದ್ರತಾ ಸಮಿತಿಯು ಈ ಮೊದಲು ಆದೇಶ ಮಾಡಿದ ಯುದ್ಧವಿರಾಮ ಕ್ರಮವನ್ನು ಚೆನ್ನಾಗಿ ಪರಿಪಾಲಿಸಿವೆ. ವಿವೇಕದಿಂದ ಸಮಸ್ಯೆಯನ್ನು ಬಗೆಹರಿಸಿಕೊಳ್ಳುವದರಲ್ಲಿ ಅವರೀರ್ವರೂ ಕಾತುರರಾಗಿದ್ದಾರೆ. ಆದುದರಿಂದ ನಾವಿಂದು ಮಾಡಬಹುದಾದ ಮಾರ್ಗದರ್ಶನಕೂಡಾ ಒಳ್ಳೆಯ ಪರಿಣಾಮಕಾರಿಯಾದೀತೆಂದು ಭಾವಿಸುತ್ತೇನೆ" ಎಂದು ಅಭಿಪ್ರಾಯಪಟ್ಟನು. ಚೀನದ ಪ್ರತಿನಿಧಿಯು "ಜಮ್ಮು ಕಾಶ್ಮೀರದ ಘಟನಾ ಸಮಿತಿಯು ತನ್ನ ಭವಿತವ್ಯವನ್ನು ನಿರ್ಧರಿಸಿಕೊಳ್ಳುವ ಹಕ್ಕಿಂಥವುಗಳಾಗುವುದಿಲ್ಲ" ಎಂದು ಅಭಿಪ್ರಾಯಪಟ್ಟನು. ಬ್ರಿಟಿಷ್ ಪ್ರತಿನಿಧಿಯು "ಇಂತಹ ಸುಸಜ್ಜಿತನಾದ ಅತ್ಯಂತ ಯೋಗ್ಯವಾದ ಈ ಗೊತ್ತುವಳಿಯನ್ನು ತಿರಸ್ಕರಿಸುವದರಿಂದ ಸಂ.ರಾ.ಸಂಘಕ್ಕೆ ವಿಶೇಷ ಕಷ್ಟಕೊಟ್ಟಂತಾಗುವುದು. ಇದನ್ನು ಅಂಗೀಕರಿಸುವದರಿಂದ ಇಲ್ಲವೆ ಆಚರಣೆಯಲ್ಲಿ ತರುವದರಿಂದ ಕಾಶ್ಮೀರದಲ್ಲಿ ತಿರುಗಿ ಭಯಂಕರ ಪರಿಸ್ಥಿತಿಯುಂಟಾದೀತೆನ್ನುವ ಮಾತಿನಲ್ಲಿ ಹುರುಳಿಲ್ಲ. ತಮಗೆ ಇಷ್ಟತೋರುವ ಕಡೆಗೆ ಮತದಾನಮಾಡುವ ಸಂಪೂರ್ಣ ಸ್ವಾತಂತ್ರ್ಯ ಕಾಶ್ಮೀರಿಗಳಿಗಿರುವಾಗ ತಿರುಗಿ ಗಂಭೀರ ಪರಿಸ್ಥಿತಿ ಹೇಗೆ ತಲೆದೋರೀತು?" ಎಂದು ವಾದಿಸಿದ್ದಾನೆ.

ಕಾಶ್ಮೀರ ರಾಷ್ಟ್ರೀಯ ಪರಿಷತ್ತಿನ ಕಾರ್ಯಕರ್ತರ ಸಭೆಯಲ್ಲಿ ನೆಹ್ರುರವರು ಭಾರತದ ವಿರೋಧ ಸೂಚನೆ ಬಂದಾಗ್ಗೂ ಭದ್ರತಾ ಮಂಡಳವು ಈ ಗೊತ್ತುವಳಿಯನ್ನು ಅಂಗೀಕರಿಸಿದೆ. ಶಾಂತರೀತಿಯಿಂದ ಸಮಸ್ಯೆಯನ್ನು ಬಗೆಹರಿಸಲು ಸರ್ವವಿಧದ ಯತ್ನ ಮಾಡಲಾಗುವುದು. ಆದರೆ ಕಾಶ್ಮೀರದ ಜನತೆಯ ವಿರುದ್ಧ ಪಂಚಾಯತಿಯ ಯೋಜನೆಯನ್ನು ನಾವು ಮನ್ನಿಸುವಂತಿಲ್ಲ ಈ ಗೊತ್ತುವಳಿಯಿಂದಾಗುವ ಗಂಡಾಂತರವನ್ನು ನಾವು ಎದುರಿಸಲು ಸಿದ್ಧರಿದ್ದೇವೆ"ಎಂದು ಆಹ್ವಾನಿಸಿದ್ದಾರೆ. ಕಾಶ್ಮೀರೀ ಜನಮ್ಮಗಳ ಮುಖ್ಯ ಪ್ರಧಾನಿ ಶೇಕ್ ಅಬ್ದುಲ್ಲಾ "ನೆಹ್ರುರವರ ದಿಟ್ಟತನದ ಧೋರಣೆಯಿಂದ ನಮ್ಮ ಜನತೆಯ ಭವಿತವ್ಯವನ್ನು ಸುರಕ್ಷಿತವಾಗಿ ನಡೆಸಿಕೊಂಡೇವು. ನಾವಿರಾರು ವೈಲಾಚಿ ಕೊಡು ಕಾಶ್ಮೀರದ ನಿಜವಾದ ಮನೋಗತ ಮತ್ತು ಪರಿಸ್ಥಿತಿಯನ್ನವಲೋಕಿಸದೆ, ಅನುಚಿತವಾದ ಗೊತ್ತುವಳಿಯನ್ನು ಮಾಡಿದರೆ ನಾವು ಹೇಗೆ ಅದನ್ನು ಸ್ವಾಗತಿಸಿಯೇವು? ಜಾಗತಿಕ ಯುದ್ಧವಾದಲ್ಲಿ ಪಾಕಿಸ್ಥಾನವು ಯುದ್ಧರಂಗವಾಗಬೇಕೆಂಬ ಹಂಬಲದಿಂದ ಆಂಗ್ಲೋ ಅಮೇರಿಕನರು ಅತ್ತಡೆಗೆ ಒಲಿದಿದ್ದಾರೆ. ನೆಹ್ರುರವರ ಅಂತರಾಷ್ಟ್ರೀಯ ರಾಜಕೀಯ ಧೋರಣೆ ಅತ್ಯಂತ ಪರಿಶುದ್ಧವಾಗಿದೆ. ಹಿಂದಿನಿಂದಲೂ ಪಾಶ್ಚಾತ್ಯ ರಾಷ್ಟ್ರಗಳ ಕುಟಿಲನೀತಿಯನ್ನು ಅವರು ಖಂಡಿಸುತ್ತ ಬಂದಿದ್ದಾರೆ. ಏಶಿಯಾದ ರಾಷ್ಟ್ರಗಳ ಪುನರುದ್ಧಾನದ ವಿಚಾರ ಎತ್ತಿ ಮಾತನಾಡಿ ಜಾಗತಿಕ ರಾಜಕೀಯ ರಂಗದಲ್ಲಿ ಏಶಿಯಾಕ್ಕೆ ಶ್ರೇಷ್ಠಸ್ಥಾನವನ್ನು ಗಳಿಸಿಕೊಟ್ಟವರೆಂದರೆ ನೆಹ್ರುರವರೊಬ್ಬರೇ. ಭದ್ರತಾಮಂಡಳವು ಏಶಿಯದ ರಾಷ್ಟ್ರದ ಜನತೆಯನ್ನ ದನಗಳಂತೆ ನಡೆಸಿಕೊಳ್ಳುವುದು ಶೋಚನೀಯ ಕಾಶ್ಮೀರಿಗಳು ತಮ್ಮ ಭವಿತವ್ಯವನ್ನು ತಾವೇ ನಿರ್ಧರಿಸಿಕೊಳ್ಳಬೇಕಾಗಿದೆಯಲ್ಲದೆ ರಾಷ್ಟ್ರೀಯ ಪರಿಷತ್ತು, ಸಂಸ್ಥಾನದ ಒಡುಹೊಡ್ಡ ರಾಜಕೀಯ ಸಂಸ್ಥೆಯಾಗಿರುತ್ತದೆ, ಜನತೆಯ ಸಂಪೂರ್ಣ ಸಹಕಾರ ಅದಕ್ಕಿದೆಯೆಂಬುದನ್ನು ತೋರಿಸಿಕೊಡಬೇಕಾಗಿದೆ. ಭಾರತ ಹಾಗೂ ನೆಹ್ರುರವರು ಇರುವವರೆಗೆ ಕಾಶ್ಮೀರವು ಇನ್ನಾವ ರಾಷ್ಟ್ರದ ಅಡಿಯಾಳಾಗಿರಲು ಬಯಸುವದಿಲ್ಲ. ನಮ್ಮ ಭದ್ರತೆ ಹಾಗೂ ಅಸ್ತಿತ್ವಕ್ಕೆ ಗಂಡಾಂತರ ಬರುವ ಸಂದರ್ಭದಲ್ಲಿ ನಾನು ನಿಮಗೆ ಕರೆ ಕೊಡುವವನಿದ್ದೇನೆ. ಆಗ ನಿಮ್ಮ ಹೊಣೆಯನ್ನು ಚೆನ್ನಾಗಿ ಪಾಲಿಸಿರಿ" ಎಂದು ಹೇಳಿರುತ್ತಾರೆ.

ಪ್ರತಿಯೊಂದು ರಾಷ್ಟ್ರಗಳೂ ಈ ಗೊತ್ತುವಳಿಯ ಮೂಲಕ ಕಾಶ್ಮೀರದ ಪ್ರಶ್ನೆಯನ್ನು ಬಗೆಹರಿಸಲು ಪ್ರಯತ್ನಿಸಿವೆ. ಈಗಾಗಲೇ ಮಧ್ಯಸ್ಥಗಾರರಾರೆನುವ ವಿಚಾರದಲ್ಲಿ ತರ್ಕವಿತರ್ಕಗಳು ಎದ್ದಿವೆ. ಡಿಮೇಲೋ ಮಧ್ಯಸ್ಥಗಾರನಾಗಬಹುದೆಂದು ಹಬ್ಬಿದ ಸುದ್ದಿ ನಿರಾಧಾರವಾದುದೆಂದು ತಿಳಿದುಬಂದಿದೆ. ಮಧ್ಯಸ್ಥಗಾರನನ್ನು ನಿರ್ಣಯಿಸುವ ವಿಚಾರ ಈ ವರೆಗೂ ಸ್ಪಷ್ಟವಾಗಿಲ್ಲ. ಪಾಕಿಸ್ತಾನದ ಹೇಳಿಕೆಯನ್ನು ನೋಡಿಕೊಂಡು ಮುಂದಕ್ಕೆ ಅಂದರೆ ಒಂದು ವಾರದೊಳಗಾಗಿ ಮಧ್ಯಸ್ಥಗಾರನ ಹೆಸರನ್ನು ಸಂ. ರಾ. ಸಂಘವು ಸೂಚಿಸಲಿದೆ.

ಭಾರತದಿಂದ ನಕಾರಾತ್ಮಕ ಉತ್ತರ ಬಂದಿದ್ದರೂ ಮಧ್ಯಸ್ಥಗಾರನ ನೇಮಕದ ವಿಚಾರವನ್ನು ಭಾರತವು ಸ್ವಾಗತಿಸಿದೆ. ಭದ್ರತಾ ಸಮಿತಿಯು ಭಾರತದ ಮೂಲಭೂತ ಹಕ್ಕನ್ನು ಕಡೆಗಣಿಸಿ ಮಧ್ಯಸ್ಥಗಾರನಿಗೆ ವಿಶೇಷ ಹಕ್ಕನ್ನು ಕೊಡುವಂತಾದರೆ ಈ ಗೊತ್ತುವಳಿ ಹೇಗೆ ಕಾರ್ಯಗತವಾಗಬಹುದು? ಪಾಕಿಸ್ತಾನವು ಕಾಶ್ಮೀರದ ಒಂದು ಭಾಗದಲ್ಲಿಯೇ ನೆಲೆನಿಂತು ತನ್ನ ಸೇನನ್ನು ತೀರಿಸಲು ಹವಣಿಸುತ್ತಿರುವಾಗ ನಿಃಸ್ಸೈನ್ಯೀಕರಣದ ಕ್ರಮ ಸುರಕ್ಷಿತವಾಗಿ ನಡೆದೀತೆಂದು ಭಾವಿಸಲು ಸಾಧ್ಯವಿಲ್ಲ. ಪಾಕಿಸ್ತಾನವು ಆಕ್ರಮಕ ರಾಷ್ಟ್ರವಾಗಿದ್ದು ಈಗ ಅದಕ್ಕೆ ಭಾರತದಂತೆಯೇ ಸಮಾನಾಧಿಕಾರವನ್ನು ಆಂಗ್ಲೋ ಅಮೇರಿಕನರು ಒದಗಿಸಿಕೊಡುವುದು ಸರಿಯಾದ ರಾಜಕೀಯ ನೀತಿಯಾಗದು. ಆಂಗ್ಲೋ ಅಮೇರಿಕನರ ಈ ಗೊತ್ತುವಳಿಗೆ ಭದ್ರತಾ ಸಮಿತಿಯಲ್ಲಿ ಬಹುಮತ ಸಿಕ್ಕಿರುವುದಾದರೂ ಇದು ಸನ್ಮಾರ್ಗದರ್ಶನವೆಂದು ನಾವೆಂದೂ ಭಾವಿಸುವಂತಿಲ್ಲ. ಭದ್ರತಾ ಸಮಿತಿಯು ಎಂದೂ ಆಂಗ್ಲೋ ಅಮೇರಿಕನರ ಸಹಪದ್ದನ್ನು ಮೀರಿದ್ದಿಲ್ಲ; ಮೀರುವಂತೆಯೂ ಇಲ್ಲ. ಆಂಗ್ಲೋ ಅಮೇರಿಕನರ ವರ್ಚಸ್ಸಿನಿಂದ ನಡೆಯುವ ಭದ್ರತಾ ಸಮಿತಿಯು. ದಿನದಿಂದ ದಿನಕ್ಕೆ ನೈತಿಕ ಅಧಃಪತನವನ್ನು ಹೊಂದುತ್ತಿದೆ. ಚೀನಾವನ್ನು ಆಕ್ರಮಕ ರಾಷ್ಟ್ರವೆಂದು ಸಾರುವಲ್ಲಿ ಭದ್ರತಾ ಸಮಿತಿಯು ಸದಸ್ಯ ರಾಷ್ಟ್ರಗಳು ತಳೆದ ಧೋರಣೆಯೊಂದೇ ಸಾಕು. ಇಂದಾದರೂ ಅಷ್ಟೆ! ಭಾರತವು ಆಂಗ್ಲೋ ಅಮೇರಿಕನರ ಸಾಮ್ರಾಜ್ಯಶಾಹೀ ತತ್ವಕ್ಕೆ ಭದ್ರತಾ ಸಮಿತಿಯಲ್ಲಿ ವಿರೋಧಾಭಿಪ್ರಾಯ ಉಳ್ಳದಾಗಿದ್ದು ಕಮ್ಯೂನಿಸ್ಟ ಚೀನಾದ ಕಡೆಗೆ ವಾದಿಸಹತ್ತಿದಂದಿನಿಂದ ಆಂಗ್ಲೋ ಅಮೇರಿಕನರು ಭಾರತಕ್ಕೆ ಹಿತವಾದುದನ್ನು ಮಾಡಿಯಾರೆಂದು ನಂಬಲಿಕ್ಕೆ ಬರುವುದಿಲ್ಲ. ಅದಕ್ಕೆ ಬೆಂಬಲಿಗರಾಗಿ ಸಮ್ಮತಿಯನ್ನೀಯುವವರೂ ಅವರ ವರ್ಚಸ್ಸನ್ನು ಮೀರಿ ನಡೆಯುವವರೂ ಆಗಿಲ್ಲ

ಈ ಎಲ್ಲ ಸನ್ನಿವೇಶಗಳಿಂದ ಯುದ್ಧವು ತಿರಿ ಎಲ್ಲಿ ಹಾರುತ್ತದೋ ಎನ್ನುವ ಶಂಕೆ ದೇಶದಲ್ಲಿಂದು ಉದ್ಭವವಾಗಿದೆ. ಕೊರಿಯಾ—ಕಾಶ್ಮೀರಗಳೆರಡರಿಂದಲೂ ಅಂತಹ ವಿಪಚ್ಚಾಲ್ ಎಲ್ಲವಕಾಶವಿದೆ, ಯುದ್ಧ ಬೇಡವೆಂದರೂ ಅದರಿಂದ ದೇಶಕ್ಕೆ ಅಪಾರ ಹಾನಿಯದೆಯೆಂದರೂ "Peace only after the war"ಎನ್ನುವ ಚರ್ಚಿಲರ ಪ್ರಮಾಣ ಅನಿವಾರ್ಯವೆಂದಾದೀತೋ ಏನೋ!

THE
Canara Banking Corporation Limited.
(Incorporated in India with Limited Liability)

Estd : 1906 Head Office : UDIPI (S Kanara)

Applications are invited from Commerce Graduates for the posts of six Officer Trainees in the Bank. They will be paid Rs. 75/- per mensem during the period of training and as and when there are vacancies, will be absorbed in the regular service of the Bank in the first instance as probationers on Rs. 100/- p. m. as pay and dearness allowance according to rules.

Persons who have passed the Indian Institute of Bankers examinations and/or with previous banking experience will be preferred and may be started on higher salary.

Applications stating full particulars as to age, qualifications, previous experience if any, etc., along with testimonials and a bust photo, should be addressed to the General Manager to reach by 30-4-1951

Applicants must be prepared for an interview at their own expense.

UDIPI, 31-3-1951

V. R. Kamath, B.A., LL.B.
General Manager.

ಚಂದಾ ವಿವರ
ವರ್ಷಕ್ಕೆ ರೂ. 5-12-0
6 ತಿಂಗಳಿಗೆ ರೂ. 3-0-0

ಗುರುವಾರ, ಉಡುಪಿ, ೫-೪-೫೧

ಜಾತೀಯತೆ ಅಳಿಯಲಿ!

ಮದ್ರಾಸಿನಲ್ಲಿ ಜಾತೀಯ ವಾದಿಗಳ ಸಂಗಡವೊಂದು ಸಾರ್ವಜನಿಕರಿಂದ ಸರಕಾರದವರೆಗೂ ದೊಡ್ಡ ಧಾಂಧಲೆಯನ್ನೆಬ್ಬಿಸಿದೆ. ಹಲವು ಶತಮಾನಗಳಿಂದ ಭಾರತವು ಜಾತೀಯ ದ್ವೇಷದ ದುಷ್ಪರಿಣಾಮವನ್ನನುಭವಿಸುತ್ತಿರುವಾಗ, ಈಗ ದೇಶ ಸ್ವತಂತ್ರವಾಗಿ ನಮ್ಮದೇ ಸರಕಾರ ಬಂದಮೇಲೂ ಅಂತಹ ಜಾತೀಯ ಭೂತ ಮದ್ರಾಸಿನಲ್ಲಿ ತಲೆಯೆತ್ತಿದ್ದು ಖೇದಾವಹ ವಿಚಾರ. ಈ ಜಾತೀಯ ಭಾವನೆ ಸಾಮಾನ್ಯ ಜನರ ಮಾತ್ರವಾಗಿರದೆ ಸರಕಾರದಲ್ಲೂ ಕಂಡು ಬಂದಿರುವುದು ನಿಜವಾಗಿಯೂ ಶೋಚನೀಯ. ಸರಕಾರವು ಜಾತೀಯ ಧೋರಣೆಯಲ್ಲಿ ತಾನು ಆಸ್ಥೆವಹಿಸಿ ಭಾರತ ರಾಜ್ಯಘಟನೆಯನ್ನು ದುರ್ಬಲಗೊಳಿಸುವ ಅಧಿಕ ಪ್ರಸಂಗಿತನಕ್ಕೆ ಇಳಿದಂತಿದೆ. "ಹಿಂದುಳಿದವರನ್ನು ಮುಂದೆತರುವ" ತತ್ವವನ್ನು ತೋರಿಕೆಗೆ ಮುಂದಿಟ್ಟುಕೊಂಡು ಭಾರತದ ಯಾವ ಪ್ರಾಂತದಲ್ಲೂ ಇರದ ಜಾತೀಯ ಪಕ್ಷಪಾತವನ್ನು ಮದ್ರಾಸು ಸರಕಾರ ಕೈಗೊಂಡಿದೆ. ಸರಕಾರೀ ಉದ್ಯೋಗಗಳಲ್ಲೂ, ಕಾಲೇಜುಗಳಲ್ಲೂ ಜಾತಿವಾರು ನಿಯಮದಂತೆ ಸ್ಥಳಗಳನ್ನು ಕಾಯ್ದಿಡುವ ಮೂಲಕ ಸಮಾನ ಯೋಗ್ಯತೆಯುಳ್ಳವರ ಸ್ವಾತಂತ್ರ್ಯವನ್ನು ಕಸಿದುಕೊಳ್ಳಲಾಗಿದೆ. ಭಾರತ ಸರಕಾರದ ಹೊಸ ಘಟನೆಯಲ್ಲಿ ಜಾತಿ,ಲಿಂಗಭೇದವಿಲ್ಲದೆ ಪ್ರತಿಯೊಬ್ಬನಿಗೆ ಸಮಾನ ಯೋಗ್ಯತೆಯನ್ನೂ—ಸಮಾನ ಹಕ್ಕನ್ನೂ ಕಲ್ಪಿಸಿಕೊಡಲಾಗಿದೆ. ಆ ಘಟನೆಯಂತೆ ಕಾಲೇಜುಗಳಲ್ಲಿ ಸೇರುವ ವಿದ್ಯಾರ್ಥಿಗಳಿಗೆ ಜಾತಿಯು ತಡೆಯಾಗುವಂತಿಲ್ಲ. ಮದ್ರಾಸು ಕಾಲೇಜಿನಲ್ಲಿ ಜಾತೀಯ ಕಾರಣದಿಂದ ಸ್ಥಾನಕೊಡದೇ ಇದ್ದ ಪ್ರಯುಕ್ತ ಎರಡು ವಿದ್ಯಾರ್ಥಿಗಳು ಮದ್ರಾಸ್ ಹೈಕೋರ್ಟಿಗೆ ಹತ್ತಿದರು. ಹೈಕೋರ್ಟು ಮದ್ರಾಸು ಸರಕಾರದ ಧೋರಣೆ ತಪ್ಪೆಂದು ತೀರ್ಪು ಕೊಟ್ಟಿತು. ಇದಕ್ಕೆ ವಿರೋಧವಾಗಿ ಪ್ರಚಂಡ ಚಳುವಳಿ ಮದ್ರಾಸಿನಲ್ಲಿ ತಲೆಯೆತ್ತಿತು. ಕಾಯಿದೆ ಮಂತ್ರಿಗಳೇ ಇದಕ್ಕೆ ಅಸಮಾಧಾನ ಸೂಚಿಸಿದ್ದರು! ಜಾತೀಯ ದುರಂಧರರು ಗುಲ್ಲೆಬ್ಬಿಸಿದರು. ಸರಕಾರದ ಮನಸ್ಸನ್ನರಿತ ಪಚೆಯಪ್ಪ ಕಾಲೇಜಿನ ವಿದ್ಯಾರ್ಥಿಗಳು ಮೆರವಣಿಗೆ ಮಾಡಿದರು. ಸರಕಾರ ವರಿಷ್ಠ ನ್ಯಾಯಾಲಯಕ್ಕೆ ಒಯ್ದಿತು. ಇಂದು ವರಿಷ್ಠ ನ್ಯಾಯಾಲಯವು ಭಾರತದ ರಾಜ್ಯಘಟನೆಗೆ ವಿರುದ್ಧವಾದ ಧೋರಣೆಯನ್ನು ಮದ್ರಾಸು ಸರಕಾರ ತಾಳಿದ್ದನ್ನು ತಿಳಿಸಿ, "ವಿದ್ಯಾರ್ಥಿಗಳ ವಾದ, ಭಾರತ ನೂತನ ರಾಜ್ಯಘಟನೆಗೆ ಅನುಕೂಲವಾಗಿರುವದರಿಂದ ಅದನ್ನು ಮಾನ್ಯ ಮಾಡುತ್ತೇವೆ" ಎಂದಿದೆ. ಅರ್ಥಾತ್ ಮದ್ರಾಸ್ ಸರಕಾರ ಅಲ್ಲಿಯೂ ಪರಾಜಯವನ್ನು ಹೊಂದಿದಂತೆಯೇ ಆಯಿತು. ಇದಾದ ಮೇಲೂ ಸರಕಾರಕ್ಕೆ ಜ್ಞಾನೋದಯವಾದಂತಿಲ್ಲ; ತಿರುಗಿ ಕೇಂದ್ರಸರಕಾರಕ್ಕೆ ಹಿಂದುಳಿದವರ ಉದ್ಧಾರದ ಸಲುವಾಗಿ ಜಾತೀಯ ತಳಹದಿಯ ಮೇಲೆ ಸ್ಥಳಗಳನ್ನು ಕಾಯ್ದಿಡುವದರ ಸಲುವಾಗಿ ರಾಜ್ಯಘಟನೆಲ್ಲಿ ತಿದ್ದುಪಡಿಮಾಡಬೇಕೆಂದು ಕೇಳಿಕೊಳ್ಳುವ ಗೊತ್ತುವಳಿಯೊಂದನ್ನು ಮದ್ರಾಸು ಶಾಸನ ಸಭೆಯ ಹಲವು ಸದಸ್ಯರು ಶಾಸನ ಸಭೆಯ ಮುಂದೆ ತಂದಿರುತ್ತಾರೆ. ಕುಮಾರಸ್ವಾಮಿ ರಾಜಾರವರೇ ಇದರ ಧುರೀಣರು.

ಹೈಕೋರ್ಟು, ವರಿಷ್ಠ ನ್ಯಾಯಾಲಯದ ಹಾಗೂ ನ್ಯಾಯಾಧಿಪತಿಗಳ ಸ್ಥಾನಮಾನದ ಕುರಿತು ಪಾರ್ಲಿಮೆಂಟಿನ ಸದಸ್ಯರು ಅಗಾಧ ಪಾಂಡಿತ್ಯ ಪ್ರದರ್ಶನ ಮಾಡಿದ್ದಾರೆ. ವರಿಷ್ಠ ನ್ಯಾಯಾಲಯದ ತೀರ್ಪಿನಲ್ಲೂ ನ್ಯಾಯವನ್ನು ಕಾಣದ ಈ ಜಾತೀಯವಾದಿಗಳು ರಾಜ್ಯಘಟನೆಯನ್ನೇ ಬದಲಿಸಿ ತನ್ನ ಕುದುರೆಗೆ ಮೂರೇ ಕಾಲೆನ್ನುವ ವಾದವನ್ನು ಸಮರ್ಥಿಸುವ ಹಂಚಿಕೆ ಮಾಡಿದ್ದು ಹಾಸ್ಯಾಸ್ಪದ ವಿಚಾರ. ವರಿಷ್ಠ ನ್ಯಾಯಾಲಯದ ತೀರ್ಪಿನ ಕುರಿತೂ ಪ್ರಾಂತೀಯ ಸರಕಾರ ಪ್ರತಿಭಟಿಸುವ ಸ್ವಾತಂತ್ರ್ಯವಿರುವುದಾದರೆ—ತೀರ್ಪು ಮಾನ್ಯಮಾಡದೆ ಹೋದರೆ ಮದ್ರಾಸ್ ಕಾಯಿದೆ ಕಾನೂನುಗಳನ್ನು ಅರಬಿ ಸಮುದ್ರಕ್ಕೆಸೆಯುವುದೊಂದೇ ಉತ್ತಮ ಪರಿಹಾರ ಮಾರ್ಗ!

ಅಮೇರಿಕಾನರು ನೀಗ್ರೋಜನರನ್ನು ಗುಲಾಮರನ್ನಾಗಿ ಮಾಡಿಕೊಂಡದ್ದು ಮಾನವ ಕೋಟಿಗೇ ಅವಮಾನವೆನ್ನುವ ನಾವು—ದಕ್ಷಿಣ ಅಫ್ರಿಕೆಯ ವರ್ಣದ್ವೇಷವನ್ನು ಪ್ರತಿಭಟಿಸುವ ನಾವು—ನಮ್ಮ ಕಾಲಬುಡದಲ್ಲೇ ಇಂತಹ ವಿಷವೃಕ್ಷವನ್ನು ಬೆಳೆಸುವುದು ಯಾವ ನ್ಯಾಯ? ಒಬ್ಬರನ್ನೊಬ್ಬರು ತುಳಿದು ಜಾತೀಯ ಕಲಹವನ್ನುಂಟುಮಾಡುವ ವಾತಾವರಣವನ್ನು ನಿರ್ಮಿಸುತ್ತಿರುವುದು ವಿಷಾದದ ಸಂಗತಿ. ಜಾತೀಯ ಹೆಸರಿನಲ್ಲಿ ಮಾನನೀಯ ಹಕ್ಕನ್ನು ಮುರಿಯುವುದು ಹಿಂಸೆಯಲ್ಲವೇ?

ವರಿಷ್ಠ ನ್ಯಾಯಾಲಯದಲ್ಲಿ ಮುಖ್ಯ ನ್ಯಾಯಾಧೀಶರು: ಭಾರತದ ಎಲ್ಲ ಪ್ರಾಂತಗಳೂ ಜಾತ್ಯತೀತ ಧೋರಣೆಯನ್ನು ವಹಿಸುತ್ತಿರುವಾಗ ನಿಮ್ಮ ಪ್ರಾಂತವೇಕೆ ವ್ಯತಿರಿಕ್ತವಾಗಿ ನಡೆಯಬೇಕೆಂದಾಗ ನಮ್ಮ ಎಡ್ವೋಕೇಟ್ ಜನರಲ್ಲರು "ನಮ್ಮಲ್ಲಿ ಹಿಂದುಳಿದವರು ಬಹಳ" ಎಂದಿದ್ದಾರೆ. ಇಡಿಯ ಭಾರತದಲ್ಲಿಯೇ ಮದ್ರಾಸು ಪ್ರಾಂತದಲ್ಲಿ ಹಿಂದುಳಿದವರ ಸಂಖ್ಯೆ ಹೆಚ್ಚಿರುವದೂ ಅವರ ಉದ್ಧಾರಕ್ಕಾಗಿ ಬದ್ಧಕಂಕಣರಾಗಿ ಮದ್ರಾಸಿನ ಹಲವು ದ್ರಾವಿಡಕೂಟದವರ ಜೊತೆಗೆ ಸರಕಾರವೂ ಔದಾರ್ಯ ತೋರಿಸಿರುವುದೂ ಇದೊಂದು ವಿಚಿತ್ರ ಸಂಗತಿಯೇ ಸರಿ!

ಜಾತೀಯ ಕಲಹದಿಂದ ಭಾರತಕ್ಕಾದ ಕಷ್ಟ-ನಷ್ಟಗಳನ್ನವಲೋಕಿಸಿ ನಾವು ಇಂದು ಮದ್ರಾಸಿನಲ್ಲಿ ತಲೆಯೆತ್ತುತ್ತಿರುವ ಜಾತೀಯ ವಿಷವೃಕ್ಷವನ್ನು ಕಿತ್ತೊಗೆಯಬೇಕು. ಇದರಿಂದ ವಿನಾಶವೇ ಹೊರತು ಯಾವ ಪುರುಷಾರ್ಥವೂ ಆಗಲಾರದು! ಕಲುಷಿತ ವಾತಾವರಣವನ್ನು ನಿರ್ಮಿಸುತ್ತಿರುವ ಮತಾಂಧರೊಂದಿಗೆ ಸರಕಾರ ವಿವೇಕ ತಪ್ಪದಿರಲೆಂದೇ ನಮ್ಮ ಸೂಚನೆ.

ಹಾರುವ ಕಿಡಿಗಳು

ರಾಜಕೀಯ ಸಂತ್ರಸ್ತರಿಗೆ ಎರಡು ಮೂರು ವರ್ಷಗಳಿಂದಲೂ ಭೂದಾನವಾಗುತ್ತಲೇ ಇದೆ; ಅದರಲ್ಲಿಯೂ ಮೇಲಾಟ ಹಾರಾಟ ಕಾದಾಟಗಳೂ ನಡೆದಿವೆ.

೦೦ ೦೦ ೦೦

ಕೆಲವರಿಗೆ ಯಾವುದಕ್ಕೂ ಬಾರದ ಬರಿ ಗುಡ್ಡೆ, ಕೆಲವರಿಗೆ ಬತ್ತ ಬೆಳೆವ "ಮಜಕೂರ್" ಗದ್ದೆ, ಇನ್ನು ಕೆಲವರಿಗೆ ಸಾವಿರಾರು ರೂಪಾಯಿ ಬೆಲೆಬಾಳುವ ಮರಮಟ್ಟುಗಳಿರುವ ಕಾಡು!

೦೦ ೦೦ ೦೦

ಅಂದು ಸಂಕಷ್ಟಕ್ಕೊಳಗಾಗಿ ಸಂತ್ರಸ್ತರಾಗಿದ್ದರೆ ಇಂದು ಸಕಾಭ್ಯಮ್ಯಾಪಾರಿಗಳಾಗಿ ಕೆಲವರು ಸಂತ್ರಸ್ತರಾಗುತ್ತಿದ್ದಾರೆ.

೦೦ ೦೦ ೦೦

ಭೂದಾನ ಸಿಗುತ್ತದೆಂದಾಗ ಬರೇ 'ಸರ್ಟಿಫಿಕೇಟ್'ನಿಂದಲೇ ಸಂತ್ರಸ್ತರಾದವರೂ ಇದ್ದಾರೆ; ಅವರಿಗೂ ಭೂದಾನವಾಗಿದೆ, ಆಗುತ್ತಿದೆ.

೦೦ ೦೦ ೦೦

ಭೂದಾನ ಮಾಡುವ ಸರಕಾರವಿದುವಾಗ ವೈದ್ಯದಾನವೊ ಮನದಾನವೊ ಮಾಡುವುದೇನು ಮಹಾ?

೦೦ ೦೦ ೦೦

ನಮ್ಮಲ್ಲಿ ದಿನದಿಂದ ದಿನಕ್ಕೆ ಪತ್ರಿಕೆಗಳ ಸಂಖ್ಯೆ ಬೆಳೆಯುತ್ತಿದೆ; ಈಗಾಗಲೇ ಕೆಲ ಪತ್ರಿಕೆಗಳು ಹೊಸತಾಗಿ ಜನ್ಮತಾಳಿವೆ; ಇನ್ನು ಕೆಲವು ಸದ್ಯವೇ ಜನಿಸಲಿವೆ.

೦೦ ೦೦ ೦೦

ಸುಲಭದಲ್ಲಿ 'ದೊಡ್ಡವ'ರಾಗಬೇಕಾದರೆ ಪತ್ರಿಕಾವಾಲರಾಗುವುದೇ ಸುಲಭೋಪಾಯವೆಂದು ಕೆಲವರು ಗ್ರಹಿಸಿದಂತಿದೆ.

೦೦ ೦೦ ೦೦

ಇದ್ದವುಗಳ ಅವಸ್ಥೆ ನೋಡಿದರೆ ಬರುವವುಗಳ ಭವಿಷ್ಯ ನುಡಿವುದೇನೂ ಕಷ್ಟವಾಗಲಾರದು.

೦೦ ೦೦ ೦೦

ಒಂದು ಕಾಲದಲ್ಲಿ ಪತ್ರಿಕೋದ್ಯೋಗ ಪವಿತ್ರವೃತ್ತಿಯಾಗಿತ್ತು. ಇಂದೀಗ ಅದರ ದುರುಪಯೋಗವಾಗುತ್ತಿದೆ.

೦೦ ೦೦ ೦೦

ಇತ್ತೀಚೆಗೆ ಜರಗಿದ ಅಖಿಲಭಾರತ ಸಂಪಾದಕರ ಸಮ್ಮೇಲನದ ಸ್ಥಾಯೀ ಕಮಿಟಿಯ ಸಭೆಯಲ್ಲಿ ಮುಂಬಯಿಯ ಆದೊಂದು ಪತ್ರಿಕೆಯ ಲೇಖನಗಳ ಕುರಿತು ಪ್ರಸ್ತಾಪಬಂದಿತ್ತು.

೦೦ ೦೦ ೦೦

ಆ ಪತ್ರಿಕೆಯಲ್ಲಿ ಶಿರೋನಾಮಕ್ಕೂ ವಿಷಯಕ್ಕೂ ಏನೇನೂ ಸಂಬಂಧವಿಲ್ಲದ "ಸೂಳೆ ಮತ್ತು ಪೆಸಿರ್ಜೀ" ಇಂತಹದೇ 'ಹೆಡ್ಡಿಂಗ್'ನ ಲೇಖನಗಳು ಪ್ರಕಟವಾಗಿದ್ದುವಂತೆ.

೦೦ ೦೦ ೦೦

ಅಪಪ್ರಚಾರ, 'ಬ್ಲೇರ್ ಪ್ಮೆಲಿಂಗ್' ಇವೇ ಕೆಲಪತ್ರಿಕೆಗಳ 'ಮಟ್ಟ'ವಾಗಿರುವಂತೆ ತೋರುತ್ತದೆ.

೦೦ ೦೦ ೦೦

ಗಾಂಧಿಟೊಪ್ಪಿಯು ಆದೊಂದು ಕಾಲದಲ್ಲಿ ತ್ಯಾಗದ ಕುರುಹು ಆಗಿತ್ತು; ಇಂದು ಲಾಭದಾಯಕ ವ್ಯಾಪಾರದ ಚಿನ್ಹೆಯಾಗುತ್ತಿದೆ ಎಂಬ ದೂರಿದ್ದಿದೆ.

೦೦ ೦೦ ೦೦

ಕಾಂಗ್ರೆಸ್ ಶುದ್ಧೀಕರಣವಾಗಬೇಕೆಂಬ ಕೂಗು ಎಂದಿನಿಂದಲೂ ಇತ್ತು; ಆದರೆ ದಿನೇದಿನೇ ಅದು ಹೆಚ್ಚೆಚ್ಚು ಹೊಲಸಾಗುತ್ತಲೇ ಹೋಗುತ್ತಿವೆಯನ್ನಬಹುದು.

೦೦ ೦೦ ೦೦

ಯಾವ ಕೆಲಸವನ್ನೂ ಒಗ್ಗದವರು, ಏನನ್ನೂ ಸರಿಯಾಗಿ ಮಾಡಲಾರದವರು ಅಗ್ಗದ ಮುಖಂಡರಾಗಬಲ್ಲರು ಎಂಬ ದಾಖಲೆಗಳೀಗ ಹುಟ್ಟುತ್ತಿವೆ.

೦೦ ೦೦ ೦೦

ಒಳಗೆ ಕೊಳೆಯುತ್ತಿದೆಯಾದರೂ ಹೊರಗೆ ಹೊಳೆಸಿಕೊಳ್ಳುವ ಪ್ರಯತ್ನಗಳೂ ನಡೆಯುತ್ತಿವೆ.

೦೦ ೦೦ ೦೦

'ಜನಪ್ರಿಯತೆ'ಯ ಸೋಗಿನಲ್ಲಿ ಕೆಲವರು ಮನಸಾಕ್ಷಿಗೆ ವಿರೋಧದ ಕೆಲಸವನ್ನು ಮಾಡುತ್ತಿರುವುದು ಕಂಡುಬರುತ್ತದೆ.

೦೦ ೦೦ ೦೦

ಆದರ್ಶಲೋಕದಲ್ಲಿದ್ದುಕೊಂಡು ಸರಿಯಲ್ಲವೆಂದು ಯಾವುದನ್ನು ಸಾರುತ್ತಿದ್ದರೋ ಅದನ್ನೇ ಈಗ ಕೆಲವರು ವ್ಯವಹಾರ ಲೋಕದಲ್ಲಿ ಮಾಡುತ್ತ ದಿನಗಳೆಯುತ್ತಿದ್ದಾರೆ.

೦೦ ೦೦ ೦೦

ಅನ್ಯರನ್ನು ಟೀಕಿಸುವಾಗ ನಗುವವರೇ ತಮ್ಮನ್ನು ಟೀಕಿಸುವಾಗ ರೇಗಿ ರಂಪಾಟ ಮಾಡುತ್ತಿದ್ದಾರೆ.

೦೦ ೦೦ ೦೦

ಟ್ರೆಫಿಕ್ ಬೋರ್ಡಿನವರೇನೋ ಇತ್ತೀಚೆಗೆ ಕೆಲ ಹೊಸಬರಿಗೆ ಹೊಸಬಸ್ ಸರ್ವಿಸುಗಳ ಬಗ್ಗೆ ಲೈಸನ್ಸು ಕೊಡಕೊಡಗಿದ್ದಾರೆ, ಟ್ರೆಫಿಕ್ ಬೋರ್ಡಿನವರ ಮುಷ್ಟಿ ಸಡಿಲಾದಾರ ಕಂಪ್ಲೆಂಡಿನವರಾದರೂ ತಮ್ಮ ಔದಾರ್ಯವನ್ನು ಪ್ರದರ್ಶಿಸದೆ ಬಿಟ್ಟಾರೆ?

ಹೊಸ ಸರ್ವಿಸುಗಳು ಪ್ರಾರಂಭವಾದ ತಮ್ಮ ಲೈನಿನಲ್ಲಿ ಟಿಕೇಟುಗಳ ದರವನ್ನು ಈಗಲೇ ಇಳಿಸಿ ಬಿಟ್ಟಿದ್ದಾರೆ, ಉದಾ:- ಮಂಗಳೂರಿಂದ ಪುತ್ತೂರಿಗೆ 1-3-0 ಇದ್ದುದು 0-12-0 ಆಗಿದೆ. ಪ್ರಯಾಣಿಕರಿಗೆ ತುಂಬ ಸೌಕರ್ಯವಷ್ಟೆ!

ಮುಂಬಯಿ ಕನ್ನಡಿಗರಲ್ಲಿ ವಿನಂತಿ

ಬೇರೆ ಬೇರೆ ವ್ಯಾಪಾರ, ಉದ್ಯೋಗಗಳನ್ನು ಸುಸೂತ್ರವಾಗಿ ನಿರ್ವಹಿಸುತ್ತ ಮುಂಬಯಿಯಲ್ಲಿ ನೆಲೆನಿಂತಿರುವ ದಕ್ಷಿಣ ಕನ್ನಡಿಗರು 'ನವಯುಗ'ಕ್ಕೆ ಮೊದಲಿನಿಂದಲೂ ನೀಡುತ್ತಿರುವ ಪ್ರೋತ್ಸಾಹವು ಅಭಿನಂದನೀಯವಾದುದು. 'ನವಯುಗ'ದ ಪ್ರತಿನಿಧಿಗಳಾಗಿ ಶ್ರೀ ಕೆ. ಜಗನ್ನಾಥ ಶೆಟ್ಟರು ಕೆಲವು ವರ್ಷಗಳಿಂದ ವರ್ಷಂಪ್ರತಿ ಮುಂಬಯಿಗೆ ಬರುತ್ತಿದ್ದರು. ಆದರೆ ಕಾರಣಾಂತರಗಳಿಂದ ಕಳೆದ ವರ್ಷ ಬರಲಿಲ್ಲ. ಇದೀಗ ಅವರು ನವಯುಗದ ವ್ಯಾಪಕತೆಗಾಗಿ ಮುಂಬಯಿಗೆ ಬಂದಿರುತ್ತಾರೆ. ಅವರಿಗೆ ಮುಂಬಯಿ ಕನ್ನಡಿಗರು, ಮುಖ್ಯತಃ ಅಲ್ಲಿಯ ದಕ್ಷಿಣ ಕನ್ನಡಿಗರು ಸರ್ವ ಸಹಕಾರ, ಪ್ರೋತ್ಸಾಹಗಳನ್ನು ಕೊಟ್ಟು ನವಯುಗದ ಅಭಿವೃದ್ಧಿಗೆ ನೆರವಾಗಬೇಕಾಗಿ ವಿನಂತಿ.

ನವಯುಗ ಆಫೀಸು, ಉಡುಪಿ.

ಕೆ. ಹೊನ್ನಯ್ಯ ಶೆಟ್ಟಿ, ಸಂಚಾಲಕ, ಸಂಪಾದಕ.

ಉಡುಪಿ

ಮುನಿಸಿಪಲ್ ಕೌನ್ಸಿಲಿನ ಸಭೆಯು ಕಳೆದ ತಾ. 27ರಲ್ಲು ಸಂಜೆ ಚೆಯರ್‌ಮನ್ ಶ್ರೀ ಯು. ಎಸ್. ನಾಯ್ಕರ ಅಧ್ಯಕ್ಷತೆಯಲ್ಲಿ ಜರಗಿತು. ರಿವಿಜನ್ ಅರ್ಜಿ ಮೊದಲಾದ ಹೆಚ್ಚಿನ ಕೆಲಸಗಳನ್ನು ಪೂರೈಸುವರೆ ಎಪ್ರಿಲ್ ತಿಂಗಳಿಂದ ಮೂರು ತಿಂಗಳ ಅವಧಿಗೆ ಹಂಗಾಮಿ ಗುಮಾಸ್ತನ ನೇಮಕ ಮಾಡಬಹುದೆಂದಾಯಿತು. ಮುನಿಸಿಪಲ್ ನಾರ್ತ್ ಹುಡುಗಿಯರ ಶಾಲಾಕಟ್ಟಡ ಸಮಿತಿಯವರಿಗೆ ಕಟ್ಟಡದ ಬಗ್ಗೆ ಕೂಡಲೇ ರೂ. 4500 ಕೊಡಬಹುದಾಗಿ ನಿರ್ಣಯವಾಯಿತು. ಮುನಿಸಿಪಲ್ ನೌಕರಗಳ ಸಿಬಂದಿಗೆ ಬಾಧಿ ಪೋಷಾಕುಗಳ ಬಗ್ಗೆ ಹಣ ಮಂಜೂರಾಯಿತು.

ಸೆಂಟ್ರಲ್ ವಾರ್ಡಿನ ಟೌನ್ ಪ್ಲಾನಿಂಗ್ ಯೋಜನೆಗೊಳಗಾದವರ ಅಪೀಲು ಅರ್ಜಿಗಳ ತೀರ್ಮಾನವು ತಾ. 29ರಲ್ಲಿ ಸೇರಿದ ಸಭೆಯಲ್ಲಿ ನಡೆಯಿತು.

1950-51ನೇ ವರ್ಷದ ಕೊನೆಯ ಸಭೆಯು ಕಳೆದ ತಾ. 31ರಲ್ಲು ಶ್ರೀ ಎಚ್. ಎನ್. ನಾಯ್ಕರ ಅಧ್ಯಕ್ಷತೆಯಲ್ಲಿ ಜರಗಿತು. ಕೆಲವೊಂದು ಸರಕಾರಿ ಆರ್ಡರುಗಳನ್ನು ರಿಕಾರ್ಡ್ ಮಾಡಲಾಯ್ತು. ಮುನಿಸಿಪಲ್ ಪಾರ್ಕಿನ ಗಿಡಗಳಿಗೆ ನೀರುಹಾಕುವರೆ ಖರ್ಚು ಮಂಜೂರು ಮಾಡಲಾಯಿತು. ಹೊಸ ಮುಂಗಡ ಬಗ್ಗೆ ನಾಲ್ಕು ಕೂಲಿಯವರ ಇಸಮುಗಳು ಸೆಂಕ್ಷನ್ ಮಾಡಲಾದುವು.

ಸ್ಕೌಟ್ ರ್‍ಯಾಲಿ—ಸ್ಥಳೀಯ ಭಾರತ ಸ್ಕೌಟ್ಸ್ ಮತ್ತು ಗ್ಯಾಡ್ಸ್ ಇವರ ರ್‍ಯಾಲಿಯೊಂದು ಇದೇ ತಾ. 1ರಲ್ಲು ಸಂಜೆ ಬೋರ್ಡ್ ಹೈಸ್ಕೂಲು ವಠಾರದಲ್ಲಿ ಡಾ। ಕೆ. ಎಲ್. ಬಿಕಾಳರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀ ಟಿ. ಎ. ಪೈಗಳು ಸ್ವಾಗತ ಭಾಷಣಮಾಡಿದರು. ಶ್ರೀಗಳಾದ ಗೋಪಾಲ ಸೆಟ್ಟಿ ಮತ್ತು ಟಿ. ಎಲ್. ರಾಯರು ಸಂದರ್ಭೋಚಿತ ಮಾತುಗಳನ್ನಾಡಿದರು. ಡಾ। ಕೊಟ್ಟಾರಿ ಮೋಹನದಾಸ ಪೈಗಳು ಶಿಬಿರಾಗ್ನಿಯ ಉದ್ಘಾಟನ ಮಾಡಿದರು. ಸ್ಕೌಟ್ ಮತ್ತು ಗ್ಯಾಡ್ಸ್ ರವರ ವಿನೋದಾವಳಿಗಳಿಂದ ನಂತರ ಸಭಾಂತ್ಯವಾಯಿತು.

ಹೊಸ ಸಂಘಸ್ಥಾಪನೆ ಯೋಜನೆಗಳು.—ಉಡುಪಿಯಲ್ಲಿ ಹೌಸ್ ಬಿಲ್ಡಿಂಗ್ ಸೊಸೈಟಿ ಮತ್ತು ಹಾಲು ವಿತರಣೆ ಸಹಕಾರಿ ಸಂಘ ಸ್ಥಾಪನೆಯ ಕುರಿತು ಕಳೆದವಾರ ಉಡುಪಿ ಕೋಓಪರೇಟಿವ್ ಟೌನ್‌ಬೆಂಕ್ ಕಟ್ಟಡದಲ್ಲಿ ಡಾ। ಟಿ. ಎಮ್. ಎ. ಪೈಗಳವರ ಅಧ್ಯಕ್ಷತೆಯಲ್ಲಿ ಸಭೆಜರಗಿತು. ಈ ಎರಡೂ ಸಂಘಗಳು ಸದ್ಯವೇ ಡಿಪ್ಯುಟಿ ರಿಜಿಸ್ಟ್ರಾರರಿಂದ ರಿಜಿಸ್ಟ್ರಮಾಡಲ್ಪಟ್ಟು ಕಾರ್ಯ ಪ್ರಾರಂಭವಾಗಲಿರುವುದು.

ನಿರುದ್ಯೋಗ ಜಾಥ—ನಾಲಿನ ಅಭಾವದಿಂದಾಗಿ ನಿರುದ್ಯೋಗಿಗಳಾದ ಬುಡುಬಿಯ ನೇಕಾರರು ಕಳೆದ ತಾ 31ರಲ್ಲು ರಥಬೀದಿಯಲ್ಲಿ ಸಭೆಸೇರಿ ತಮ್ಮ ಹಾಲಹಾಲಿಗಳನ್ನು ಮಹಾಜನರ ಅವಗಾಹನೆಗೆ ತಂದರು. ದ. ಕ ಜಿಲ್ಲಾ ಕಲೆಕ್ಟರರನ್ನು ಕಂಡು ನ್ಯಾಯವಾದ ಕೋರಿಕೆಗಳನ್ನು ಅವರ ಮುಂದಿಟ್ಟು ನೇಕಾರರಲ್ಲಿ ಈಗ ಇರುವ ನಿರುದ್ಯೋಗವನ್ನು ಹೋಗಲಾಡಿಸುವ ಆದ್ಯಸನೆ ಪಡೆಯುವರೆ 30ಮಂದಿ ನೇಕಾರರ ಜಾಥವೊಂದು ಮಹಾಸಭೆ ಮುಗಿದ ನಂತರ ಜಯಕಾರಗಳೊಂದಿಗೆ ಕಾಲ್ನಡೆ ಮಾರ್ಗವಾಗಿ ಮಂಗಳೂರಿಗೆ ಪ್ರಯಾಣಬೆಳೆಸಿತು.

ಎಕೆಡೆಮಿ ಆಫ್ ಜನರಲ್ ಎಜ್ಯುಕೇಶನ್—ಇದರ ವಾರ್ಷಿಕ ಮಹಾಸಭೆಯು ತಾ. 31-3-51ರಲ್ಲಿ ಜರಗಿದಾಗ ಎಂ. ಜಿ. ಎಮ್. ಕಾಲೇಜಿಗೆ ಹಂಗಾಮಿಯಾಗಿ ತಮ್ಮ ಕಟ್ಟಡಗಳನ್ನು ಬಿಟ್ಟುಕೊಟ್ಟುದಕ್ಕಾಗಿ ನಗರ ಸಭಾಧ್ಯಕ್ಷ ಹಾಗೂ ಸದಸ್ಯರಿಗೂ ಪಿ ಜೆ ಯು. ಕ್ಲಬ್ಬಿನ ಆಡಳಿತ ಮಂಡಳಿ ಮತ್ತು ಮೆಂಬರರಿಗೂ ಆಭಾರ ಸೂಚಿಸಲಾಯಿತು. ಮತ್ತು ಎಂ. ಜಿ. ಎಂ. ಕಾಲೇಜ್ ಟ್ರಸ್ಟಿನ ಟ್ರಸ್ಟಿಗಳನ್ನೂ ಕಾಲೇಜ್ ಕಮಿಟಿಯ ಸದಸ್ಯರನ್ನೂ ಅವರು ಕಾಲೇಜಿಗಾಗಿ ಮಾಡಿದ ಕಾರ್ಯಗಳಿಗಾಗಿ ಅಭಿನಂದಿಸಲಾಯಿತು.

ಜಿಲ್ಲಾ ಆರೋಗ್ಯ ಮತ್ತು ಕೃಷಿ ಪರಿಷತ್ತನ್ನು— ಈ ತಿಂಗಳಾಂತ್ಯದಲ್ಲಿ ಇನ್ನಂಜೆಯಲ್ಲಿ ಜರಗಿಸುವ ಪೂರ್ವ ತಯಾರಿ ನಡೆದಿತ್ತಾದರೂ ತಾ. 1-4-51ರಲ್ಲಿ ಉಡುಪಿಯಲ್ಲಿ ಜರಗಿದ ಕಾರ್ಯಕಾರಿ ಸಭೆಯಲ್ಲಿ ಅದನ್ನು ಯುಕ್ತರೀತಿಯಾಗಿ ಜರಗಿಸುವ ಬಗ್ಗೆ ಅಕ್ಟೋಬರಕ್ಕೆ ಮುಂದರಿಸಲಾಗಿದೆ.

ದ. ಕ. ಜಿಲ್ಲಾ ಬೀಡಿ ಮಜೂರರ ದ್ವಿತೀಯ ಸಮ್ಮೇಳನ

ದ. ಕ. ಜಿಲ್ಲೆಯಾದ್ಯಂತ ಬೀಡಿ ಕೈಗಾರಿಕೆಯಲ್ಲಿ ಗಂಡಸರು, ಹೆಂಗಸರು, ಮಕ್ಕಳನ್ನು ದ 12,000ಕ್ಕೂ ಮಿಕ್ಕಿ ಮಜೂರರು ಜೀವನ ವೆಚ್ಚಕ್ಕೆ ಸರಿಯಾದ ಸಂಪಾದನೆ ಇಲ್ಲದೆ ಕಷ್ಟಕೋಟಲೆಗೆ ಗುರಿಯಾಗಿ ನರಳುತ್ತಿದ್ದಾರೆ. 1946ರಲ್ಲಿ ಸರಕಾರದಿಂದ ನೇಮಿಸಲ್ಪಟ್ಟ ನಾರಾಯಣಸ್ವಾಮಿ ನಾಯ್ಡುರವರ ವಿಚಾರಣಾ ಕಮಿಟಿ ತನ್ನ ವರದಿಯಲ್ಲಿ ಕೂಲಿದರ ಏರ್ಪಾಡು ಮಾಡಬೇಕೆಂದು ಶಿಫಾರಸು ಮಾಡಿದ್ದು ಮಾತ್ರವಲ್ಲ ಇದ್ದ ಮಜೂರಿಯಲ್ಲೇ ಕಡಿತವಾಗಿದೆ. ಅಲ್ಲದೆ ಇದೀಗ ಕೇಂದ್ರ ಸರಕಾರ ಹೊಸತೊಸ್ಸಿನ ಮತ್ತು ಬೀಡಿಯ ಮೇಲೆ ಹೇರಿರುವ ಕರಭಾರದಿಂದ ಬೀಡಿ ಕೈಗಾರಿಕೆಗೆ ದೊಡ್ಡ ಹೊಡೆತ ಬಿದ್ದಿದೆ. ಚಿಕ್ಕ ಪುಟ್ಟ ಬೀಡಿಮಾಲಕರು ಈ ಕರಭಾರವನ್ನು ಹೊರಲಾರದೆ ಕೆಲಸ ಕಡಿಮೆಗೊಳಿಸಿದ್ದಾರೆ. ಬೀಡಿಯ ಕ್ರಯ ಮಿತಿಮೀರಿ ಏರಿಕೊಂಡಿದೆ. ಮಜೂರರ ಕೂಲಿಯಲ್ಲಿ ಕಡಿತವಾಗುತ್ತಿದೆ. ಈ ಅನ್ಯಾಯವು ಕೂಡಲೆ ಕೊನೆಗೊಳ್ಳಲು ಬೇಕಾದ ಯೋಗ್ಯ ಕಾರ್ಯಕ್ರಮಗಳನ್ನು ನಿರ್ಣಯಿಸಲು ಬೇಕಾಗಿ ದ. ಕ. ಜಿಲ್ಲಾ ಬೀಡಿ ಮಜೂರರ ದ್ವಿತೀಯ ಸಮ್ಮೇಳನವನ್ನು ಇದೇ ತಿಂಗಳ ತಾ 22 ಮತ್ತು 23ರಂದು ಮಂಗಳೂರಲ್ಲಿ ಕರೆಯಲಾಗಿದೆ. ಆದುದರಿಂದ ಜಿಲ್ಲೆಯಾದ್ಯಂತವಿರುವ ಬೀಡಿಮಜೂರರೆಲ್ಲರೂ 4 ಆಣೆ ಕೊಟ್ಟು ಸ್ವಾಗತ ಸಮಿತಿಯ ಸದಸ್ಯರಾಗಿ ಸಮ್ಮೇಳನದ ಎಲ್ಲಾ ಕಾರ್ಯಕ್ರಮಗಳಲ್ಲಿಯೂ ಭಾಗವಹಿಸಿ ಯಶಸ್ವಿಗೊಳಿಸಬೇಕಾಗಿಯೂ ಮಹಾಜನರೂ ಸರ್ವರೀತಿಯ ಸಹಾಯ ಸಹಕಾರಗಳನ್ನಿತ್ತು ಸಮ್ಮೇಳನದ ಸಫಲತೆಗೆ ಬೇಕಾಗಿಯೂ ಸ್ವಾಗತ ಸಮಿತಿಯ ಕಾರ್ಯದರ್ಶಿಗಳು ವಿನಂತಿಸುತ್ತಾರೆ.



ನಿಮ್ಮ ಉಳಿತಾಯವನ್ನು ಇರಿಸಲಿಕ್ಕೆ
ದಿ ಕೆನರಾ ಇಂಡಸ್ಟ್ರಿಯಲ್ ಎಂಡ್
ಬ್ಯಾಂಕಿಂಗ್ ಸಿಂಡಿಕೇಟ್ ಲಿಮಿಟೆಡ್

ಮಹಾತ್ಮಾ ಗಾಂಧೀ ಮೆಮೋರಿಯಲ್ ಕಾಲೇಜ್, ಉಡುಪಿ.

ಉಡುಪಿಯಲ್ಲಿ ಸಹಾಯ ಮಾಡಿದವರು:—

ದಿ. ಕೆನರಾ ಇಂಡಸ್ಟ್ರಿಯಲ್ & ಬ್ಯಾಂಕಿಂಗ್ ಸಿಂಡಿಕೇಟ್ ಲಿಮಿಟೆಡ್(ಕೋಮರ್ಸ್ ಕ್ಲಾಸ್ ಮಾಡುವ ಬಗ್ಗೆ ಸಿಲ್ವರ್ ಜುಬ್ಲಿ ಮೆಮೋರಿಯಲ್ ಹಾಲ್ ಕಟ್ಟಿಸುವುದಕ್ಕೋಸ್ಕರ ರೂ	27,502 0 0
ಉಡುಪಿ ಸಂಯಾಯ ಪ್ರದರ್ಶನ ಸಮಿತಿ	24,264 8 3
ಡಾ. ಟಿ. ಯಂ. ಎ. ಪೈ ರೂ 10,000-0 0	
ನಗದಿ ಮತ್ತು ಬ್ಯಾಂಕ್ ನಾಲಾಂಗಳ ಮೂಲಕ	22,009 2 0
ಕೆನರಾ ಬ್ಯಾಂಕಿಂಗ್ ಕೋಪರೇಶನ್ ಲಿಮಿಟೆಡ್ ಕೋಲೇಜು ಲೈಬ್ರರಿಗಾಗಿ	10,000 0 0
ಕೆನರಾ ಮ್ಯೂಚುವಲ್ ಎಶ್ಯೂರೆನ್ಸ್ ಕೋ. ಲಿಮಿಟೆಡ್	8,012 0 0
ಶ್ರೀ ಟಿ.ಎ.ಪೈಮತ್ತುಶ್ರೀಮತಿಪ್ರೇಮಾಎ.ಪೈ	5000 0 0
ಸಿಂಡಿಕೇಟ್ ಮತ್ತು ಎಸೋಸ್ಟ ಬ್ಯಾಂಕುಗಳ ಸಿಬಂದಿ ಮೂಲಕ ಚಲ್ಲರೆ ಸಂಗ್ರಹ	4638 8 0
ಸೋದೆ ಮಠದ ಶ್ರೀ ವಿಶ್ವೋತ್ತಮ ತೀರ್ಥ ಶ್ರೀ ಪಾದಂಗಳವರು	3101 0 0
ಎಂ. ಜಿ. ಎಂ. ಕಾಲೇಜು ವಿದ್ಯಾರ್ಥಿಗಳಿಂದ ಚಿಲ್ಲರೆ ಸಂಗ್ರಹ	2227 0 0
ಹನುಮಾನ್ ಟ್ರಾನ್ಸ್‌ಪೋರ್ಟ್ ಕೊ. ಲಿಮಿಟೆಡ್	2000 0 0
ಮಹಾರಾಷ್ಟ್ರ ಎಪೆಕ್ಸ್ ಬ್ಯಾಂಕ್ ಲಿಮಿಟೆಡ್	2000 0 0
ಸದರ್ನ್ ಇಂಡಿಯಾ ಎಪೆಕ್ಸ್ ಬ್ಯಾಂಕ್ ಲಿಮಿಟೆಡ್	1601 0 0
ಕಲ್ಯಾಣಪುರ ವೆಂಕಟ್ರಾಯ ಪೈ ಎಂಡ್ ಸನ್ಸ್ ಮತ್ತು ಶ್ರೀ ಕೆ. ಕೆ. ಪೈಗಳಿಂದ	1251 0 0
ಉಡುಪಿ ವೀವರ್ಸ್ ಕೊ-ಓಪರೇಟಿವ್ ಸೊಸೈಟಿ	1450 0 0
ಕೊಟ್ಟಾರಿ ಟ್ರಸ್ಟ್ ಫಂಡ್ಸ್	1111 0 0
ಜನರಲ್ ಇನ್ವೆಸ್ಟ್‌ಮೆಂಟ್ಸ್ ಲಿಮಿಟೆಡ್	1050 0 0
ಉಪೇಂದ್ರ ಶ್ರೀನಿವಾಸ ನಾಯಕ್	1001 0 0
ಪುತ್ತಿಗೆಮಠದ ಶ್ರೀಮದ್ ಸುಧೀಂದ್ರತೀರ್ಥ ಶ್ರೀ ಪಾದಂಗಳವರು	1000 0 0
ಕಾಣೂರು ಮಠದ ವಿದ್ಯಾ ಸಮುದ್ರ ತೀರ್ಥ ಸ್ವಾಮಿಗಳವರು	1000 0 0
ಅಧಮಾರು ಮಠದ ವಿಬುಧೇಶ ತೀರ್ಥ ಸ್ವಾಮಿಗಳವರು	1000 0 0
ಪೇಜಾವರ ಮಠದ ವಿಶ್ವೇಶ ತೀರ್ಥ ಶ್ರೀಪಾದಂಗಳವರು	1000 0 0
ಡಾ। ಕೆ. ಯಲ್. ಬಿಕಾಳ	1250 0 0
ಡಾ। ಸುಂದರ ರಾವ್ ಪೈ	1000 0 0
ಅದಮಾರು ಲಕ್ಷ್ಮೀನಾರಾಯಣ ರಾವ್	1000 0 0
ಉಪೇಂದ್ರ ಅನಂತ ಪೈ	1000 0 0
ರಮೇಶ ಯು. ಪೈ	1000 0 0
T. R. ಎ. ಪೈ	1000 0 0
ಶ್ರೀಮತಿ ಟಿ. ಶಾಂತಾ ಬ್ಯಾ. ಪಿ. ಎ. ಪೈ	1000 0 0
ಕಲ್ಯಾಣಿ ವ್ಯಾಪಾರಿ ಕಾರ್	1000 0 0
ವಾಮನ ಸುಬ್ರಾಯ ಕಾಮತ್	1000 0 0
ಯು. ರಾಮಕೃಷ್ಣ ತಿಮ್ಮಪ್ಪ	1000 0 0
ಜನರಲ್ ಇನ್ವೆಸ್ಟ್‌ಮೆಂಟ್ ಎಂಡ್ ಕಮರ್ಶಿಯಲ್ ಕಾರ್ಪೋರೇಶನ್ ಲಿಮಿಟೆಡ್	750 0 0
ರಾಮಕೃಷ್ಣ ಬಿಸ್ಕೆಟ್ ಲಿಮಿಟೆಡ್	602 0 0
ಅನಂತ ಬಾಳಿಗ ಮೆಮೋರಿಯಲ್ ಫಂಡ್ ಪಾಲುಗಳ ಲಾಭಾಂಶ	570 0 0
ಪಾಂಗಾಳ ನಾಹುರಂಗ ನಾಯಕ್	505 0 0
ಕಮ್ಮರ್ಶಿಯಲ್ ಕೊರ್ಪೋರೇಶನ್ (ಇಂಡಿಯಾ) ಲಿಮಿಟೆಡ್	501 0 0
ಕೆನರಾ ಬ್ಯಾಂಕ್ ಇನ್ವೆಸ್ಟ್‌ಮೆಂಟ್ ಲಿಮಿಟೆಡ್	501 0 0
ಡಾ. ಪಿ. ರಾಘವೇಂದ್ರ ನಾಯಕ್	501 0 0
ಶಿವ ಅನಂತ ಭಟ್	501 0 0
ಕಲ್ಯಾಣ ಪರದಾ ಬ್ಯಾ. ಎ. ಪೈ	501 0 0
ಎಂ. ಆರ್. ಕಾಮತ್	500 0 0
ಕಲ್ಮಾಡಿ ಗುರುರಾಜ ರಾವ್	450 0 0
ಪಿ. ಪದ್ಮನಾಭ ರಾವ್	400 0 0
ಪಾಂಗಾಳ ನಾಯಕ್ ಬ್ಯಾಂಕ್ ಲಿಮಿಟೆಡ್	355 0 0
ಕೆನರಾ ಮೆಡಿಕಲ್ ಎಂಡ್ ಸರ್ಜಿಕಲ್ ಇನ್ಸ್ಟಿಟ್ಯೂಟ್	325 0 0
ಟಿ. ಯನ್ ಕೇಳು ನಂಬಿಯಾರ್	275 0 0
ಅಮ್ಮುಂಜೆ ಗಣಪತಿ ನಾಯಕ್ & ಸನ್ಸ್	255 0 0
ಸಚ್ಚಿದಾನಂದ	251 0 0
ದಿವಂಗತ ಕ್ಯಾಪ್ಟನ್ ಪಿ. ಆರ್. ರಾಯರ ನೆನಪಿಗಾಗಿ ಬ್ಯ ಸುಬಾಧಿ ಕರಿಂದ	251 0 0

(ಮುಂದರಿಯುವುದು)

ಮಂಗಳೂರು

ಜಿಲ್ಲಾ ಬೋರ್ಡಿನ ಸಭೆಯು ಕಳೆದ ತಾ. 26ರಲ್ಲಿ ಶ್ರೀ ಬಿ. ಮಂಜಯ್ಯ ಹೆಗ್ಗಡೆಯವರ ಅಧ್ಯಕ್ಷತೆಯಲ್ಲಿ ಜರಗಿತು. ಸಭಾರಂಭದಲ್ಲಿ ಶ್ರೀ ಎಚ್. ಎಸ್. ಜಗನ್ನಿವಾಸರ ಮೆಂಬರಿಕೆಯನ್ನು ಊರ್ಜಿತಗೊಳಿಸಲಾಯಿತು. ಮುಂದಾಣೆ ಮುಂತಾದ ಪಂಚಾಯತ ಬೋರ್ಡ್ ರಚಿಸಿದ ಒಂಭತ್ತು ಮೈಲು ರಸ್ತೆಯನ್ನು ದುರಸ್ತಿಗಾಗಿ ಬೋರ್ಡ್ ಸ್ವೀಕರಿಸಬೇಕೆಂದು ಮಂಜೇಶ್ವರದ ಶ್ರೀ ಮದನಂತೇಶ್ವರ ದೇವಾಲಯ ಶಾಲೆಯವರಿಗೆ ಆಟಕ್ಕಾಗಿ ಐದು ಎಕ್ರೆ ಸ್ಥಳ ಕೊಡುವುದೆಂದೂ ನಿರ್ಣಯವಾಯಿತು. ಬೈಂದೂರು, ಕುಂದಾಪುರ, ಉಡುಪಿ, ಮೂಲ್ಕಿ, ಕಾರ್ಕಳ, ಪುತ್ತೂರು, ಕಾಸರಗೋಡು ಹೈಸ್ಕೂಲುಗಳಿಗೆ ಉಪಕರಣಗಳಿಗಾಗಿ ರೂ. 28,142 ಮಂಜೂರಾಯಿತು. ಮೂಲ್ಕಿ, ಮಂಡ್ಯೂರು, ಪಡುಪಣಂಬೂರು, ಕಿನ್ನಿಗೋಳಿಗಳಲ್ಲಿ ವಯಸ್ಕರ ಶಾಲೆಗಳನ್ನು ತೆರೆಯುವ ನಿರ್ಣಯವಾಯಿತು.

ನಗರ ಸಭೆಯು—ಕಳೆದ ತಾ. 28ರಲ್ಲಿ ಜರಗಿದಾಗ ದಲವಾರು ಬಿಲ್‌ಗಳನ್ನು ಮಂಜೂರು ಮಾಡಲಾಯಿತು. ದೇರೆಬೈಲಿನಿಂದ ಮಲ ಹುಗಿಯುವುದನ್ನು ತಿರುವೈಲ್, ಕುಡುಪು, ಪಚ್ಚನಾಡಿ ಗ್ರಾಮಗಳಿಗೆ ವರ್ಗಾಯಿಸುವಾಗ ಅಲ್ಲಿನ ವರ್ಗದಾರರಿಗೆ ಕೊಡಬೇಕಾದ ಪರಿಹಾರ ದ್ರವ್ಯ ರೂಪಾಯಿ 30,638-7-1ನ್ನು ಮಂಜೂರು ಮಾಡಲಾಯಿತು. ಪುರಭವನ ಕಟ್ಟಲು ನಗರ ಸಭೆಯು ಕೇಳಿದ ಸ್ಥಳದಲ್ಲಿ ಸರಕಾರವು ಪೋಲೀಸ್ ಲ್ಯಾನ್ ಕಟ್ಟಲು ಅನುಮತಿ ಇತ್ತ ವಿಚಾರದಲ್ಲಿ ಈ ನಗರ ಸಭೆಯು ಹಿಂದಿನ ಗೊತ್ತುವಳಿಯಂತೆ ನಗರ ಸಭಾಧ್ಯಕ್ಷರು ಮುಖ್ಯಮಂತ್ರಿಗಳನ್ನು ಕಂಡು ಮಾತನಾಡಿದ ವಿಚಾರವನ್ನು ಸಭೆಗೆ ತಿಳಿಸಿದರು. ಆ ಮೇಲೆ ಈ ವಿಚಾರವಾಗಿ ಸರಕಾರಕ್ಕೊಂದು ಶಿಷ್ಟಮಂಡಲ ಒಯ್ಯಬೇಕೆಂಬ ನಿರ್ಣಯವಾಗಿ ಸಮಿತಿಯು ರಚನೆಯಾಯಿತು.

ಪೋಸ್ಟ್ ಮಾಸ್ಟರ್ ಜನರಲರ ಆಗಮನ—ಮದರಾಸು ಸರ್ಕಲ್ ಪೋಸ್ಟ್ ಮಾಸ್ಟರ್ ಜನರಲ್ ಶ್ರೀ ಸಿ. ಪಿ. ರಾಜನ್‌ರವರು ಕಳೆದ ತಾ. 30ರಲ್ಲಿ ಮಂಗಳೂರಿಗೆ ಆಗಮಿಸಿ, ತಾ. 31ರಲ್ಲಿ ಸಾಯಂಕಾಲ ಕೆನರಾ ಚೇಂಬರ್ ಒಫ್ ಕೊಮರ್ಸಿಗೆ ಭೇಟಿಕೊಟ್ಟರು. ಚೇಂಬರಿನ ಪರವಾಗಿ ಪಿ. ಎಮ್. ಜಿ ಯವರಿಗೆ ಒಂದು ಮನವಿಯು ಕೊಡಲ್ಪಟ್ಟುದರಲ್ಲಿ ಕಾರ್ಕಳ, ಕಾಸರಗೋಡ್, ಕುಂದಾಪುರ ಗಂಗೊಳ್ಳಿ ಮತ್ತು ಪುತ್ತೂರು ಈ ಕಡೆಗಳಲ್ಲಿ ಟೆಲಿಫೋನ್ ಕೊಲ್ ಆಫೀಸುಗಳನ್ನು ತೆರೆಯಬೇಕಾಗಿಯೂ, ಕಾರ್ಕಳ ಪಬ್ಲಿಕ್ ಕೊಲ್ ಆಫೀಸನ್ನು ಉಡುಪಿ ಆಫೀಸಿಗೆ ಸಂಬಂಧಿಸುವ ಬದಲಾಗಿ ನೇರಾಗಿ ಮಂಗಳೂರಿನೊಡನೆಯೇ ಸಂಬಂಧ ಏರ್ಪಡಿಸಬೇಕೆಂದೂ ಬೇಡಲಾಗಿ ನಿವೇದಿಸಲಾಗಿತ್ತು. ಕಾರ್ಕಳ–ಮಂಗಳೂರು ಸಂಬಂಧವನ್ನೇರ್ಪಡಿಸುವುದು ವ್ಯಯದ ದೃಷ್ಟಿಯಿಂದ ಹಾಗೂ ತೆರಬೇಕಾದ ಫೀ ದೃಷ್ಟಿಯಿಂದ ಹಿತಕರವಲ್ಲವೆಂದು ಪಿ. ಎಮ್. ಜಿ. ಯವರು ಅಪ್ಪಣೆ ಕೊಡಿಸಿದರು. ಮಂಗಳೂರು ಮುಂಬಯಿ ನೇರಿದ ಟೆಲಿಫೋನ್ ಸಂಬಂಧ ಮುಂತಾದ ವಿಚಾರಗಳಲ್ಲಿ ಪಿ ಎಮ್. ಜಿ. ಯವರು ತಕ್ಕ ಉತ್ತರಕೊಟ್ಟರು. ಚೇಂಬರಿನ ಅಧ್ಯಕ್ಷರಾದ ಶ್ರೀ ಎಫ್. ಎಕ್ಸ್. ಡಿ. ಪಿಂಟೋರವರು ಅಧ್ಯಕ್ಷತೆ ವಹಿಸಿದ್ದರು. ಮಿ। ಕಾಲ್ವಿನ್ ಶ್ರೀ ಗೋಪಾಲ ಸೆಟ್ಟಿ ಮೊದಲಾದವರು ಪ್ರಶ್ನೆಕರ್ತರಾಗಿದ್ದರು. ಗೌ। ಕಾರ್ಯದರ್ಶಿಗಳಲ್ಲೊಬ್ಬರಾದ ಶ್ರೀ ಕೆ. ಕೇಶವ ಶೆಣೈಯವರು ಧನ್ಯವಾದಗಳನ್ನರ್ಪಿಸಿದರು.

ಪಾನನಿರೋಧ ರಕ್ಷಕನ ಕೊಲೆ—ಕಳೆದ ತಾ. 25ರಂದು ರಾತ್ರಿ ಪಾನನಿರೋಧ ರಕ್ಷಕರದೊಂದು ದಳವು ಉಳ್ಳಾಲಕ್ಕೆ ಹೋಗಿ ವಿಶೇಷ ಶೋಧನಡಿಸುತ್ತಿರುವಾಗ ಒಂದು ಮನೆಯ ನೆರೆಯವರೆಲ್ಲ ಸೇರಿ ಕತ್ತಿ ದೊಣ್ಣೆಗಳಿಂದ ಈ ರಕ್ಷಕರ ಮೇಲೆ ಬಿದ್ದರು. ಇತ್ತಂಡದವರಿಗೆ ಕೈಕಾಳಗವಾದುದರಿಂದಾಗಿ ಹಲವರಿಗೆ ಗಾಯಗಳಾದುವು ಮುತ್ತಪ್ಪನೆಂಬ ಪಾನನಿರೋಧ ರಕ್ಷಕನು ತನಗಾದ ಗಾಯದಿಂದ ಅಲ್ಲಿಯೇ ಮೃತನಾದನು. ಈ ವಾರ್ತೆ ಮಂಗಳೂರಿಗೆ ತಲ್ಪಿದೊಡನೆ ಇಲ್ಲಿಂದ ಪೋಲೀಸ್ ಡೆಪ್ಯುಟಿ ಸುಪರಿಂಟೆಂಡೆಂಟರೂ ಪಾನನಿರೋಧ ಅಧಿಕಾರಿಗಳೂ ಪೋಲೀಸ್ ಪಡೆಯೊಂದಿಗೆ ಅಲ್ಲಿಗೆ ಧಾವಿಸಿದರು. ಈ ಸಂಬಂಧವಾಗಿ ಮೂರು ಮಂದಿಯ ದಸ್ತಗಿರಿಯಾಗಿದೆ ಕೆಲವರು ತಲೆಮರೆಸಿಕೊಂಡಿದ್ದಾರೆ ಮುಂದಿನ ತನಿಖೆ ನಡೆಯುತ್ತಿದೆ.

ಜಿಲ್ಲಾ ವಾಣಿಜ್ಯ ಸಂಘದ ಕಚೇರಿಗೆ—ಕಳೆದ ತಾ. 26ರಂದು ಮದ್ರಾಸು ಕೇಂದ್ರ ಅಬ್ಕಾರಿ ಕಲೆಕ್ಟರ್ ಶ್ರೀ ಕೃಷ್ಣನ್‌ರವರು ಭೇಟಿಯಿತ್ತಾಗ ಕಾರ್ಯದರ್ಶಿ ಶ್ರೀ ಕೆ ಕೇಶವ ಶೆಣೈಯವರು ಸ್ವಾಗತಿಸಿದರು. ಶ್ರೀ ಪಿ. ಆರ್. ಶೆಣೈಯವರು ದೇಶೀಯ ಮಂಚಿಗೆ ಬೋಂಡಿನ ಚೀಟುಗಳ ವಿಚಾರ, ಇಲ್ಲಿನ ಕಾಫಿ ವ್ಯಾಪಾರದ ವಿಚಾರವಾಗಿಯೂ ಇನ್ನು ಕೆಲವು ವ್ಯಾಪಾರದ ವಿಚಾರದ ಅನಾನುಕೂಲತೆಗಳನ್ನು ಅತಿಥಿಗಳ ಮುಂದಿಟ್ಟರು. ಅವರ ಭಾಷಣವಾದ ಮೇಲೆ ವಾಣಿಜ್ಯ ಸಂಘದ ಅಧ್ಯಕ್ಷ ಶ್ರೀ ಎಫ್. ಎಚ್. ಪಿಂಟೋರವರು ಅಭಿನಂದಿಸಿದರು.

ರೈಲ್ವೆ ವೇಳೆಯಲ್ಲಿ ಬದಲಾವಣೆ—ಇದೇ ಏಪ್ರಿಲ್ ತಾ 1ರಿಂದ ಮಂಗಳೂರಿನಿಂದ ಹೊರಡುವ ಹಾಗೂ ಇಲ್ಲಿಗೆ ತಲಪುವ ರೈಲ್ವೆ ವೇಳೆಗಳಲ್ಲಿ ಕೆಲವು ಬದಲಾವಣೆಗಳಿವೆ ಮಂಗಳೂರು ಎಕ್ಸ್‌ಪ್ರೆಸ್ ರೈಲು ಬೆಳಗ್ಗೆ 8 50ಕ್ಕೆ ಇಲ್ಲಿಂದ ಹೊರಟು ಸಂಜೆ 5 20ಕ್ಕೆ ಇಲ್ಲಿಗೆ ತಲಪುವುದು ಮೂರನೆಯ ತರಗತಿಯ ಜನತಾ ಎಕ್ಸ್‌ಪ್ರೆಸ್ ಇರೋಡಿನ ತನಕ ಮಾತ್ರ ಹೋಗುವುದು ಇದು ಸಂಜೆ 15ಕ್ಕೆ ಹೊರಡುವುದು. ಪೂರ್ವಾಹ್ನ 11-30ಕ್ಕೆ ಇಲ್ಲಿಗೆ ತಲಪುವುದು ಸಂಜೆ 6ಕ್ಕೆ ಹೋಗುವ ರೈಲು ಕಣ್ಣನೂರಿನ ವರೆಗೆ ಮಾತ್ರ ಹೋಗುವುದು. ಇದು ಬೆಳಗ್ಗೆ 8-35ಕ್ಕೆ ಇಲ್ಲಿಗೆ ತಲಪುವುದು. ಕಲ್ಲಿಕೋಟೆ ಪೆಸೆಂಜರ್ ಮಧ್ಯಾಹ್ನ 12-50ಕ್ಕೆ ಹೊರಟು ರಾತ್ರಿ 10-10ಕ್ಕೆ ಇಲ್ಲಿಗೆ ತಲಪುವುದು ಪೋದನೂರ್ ಪೆಸೆಂಜರ್ ರಾತ್ರಿ 3-53ಕ್ಕೆ ಇಲ್ಲಿಂದ ಹೊರಟು ಅಪರಾಹ್ನ 2 45ಕ್ಕೆ ಇಲ್ಲಿಗೆ ತಲಪುವುದು.

ರಾಜಕೀಯ ಸಂತ್ರಸ್ತರಿಗೆ ಭೂದಾನ ಕೊಡುವ ಸಮಿತಿಯು ಕಳೆದ ಸಭೆಯಲ್ಲಿ ಶ್ರೀಗಳಾದ ಬಿ. ಎಮ್. ಶೇನವ, ಸೀನ್ ಸಾಲಿಯಾನ್ ಎ. ಸಾಂತಪ್ಪ, ಸಿ. ಮರ್ಕಪ್ಪ ನಾಯಕ್, ಎನ್. ಕೆ. ಪುತ್ರನ್, ಬಾಬು ಎ. ಕೃಷ್ಣ ಚೇರ ಇವರಿಗೆ ಭೂಮಿ ಮಂಜೂರು ಮಾಡಲಾಯಿತು.

ವಾರ್ಷಿಕೋತ್ಸವ—ಬೊಕ್ಕಪಟ್ಣ ಮುನಿಸಿಪಲ್ ಹಾ। ಎ। ಶಾಲೆಯ ವಾರ್ಷಿಕೋತ್ಸವವು ಕಳೆದ ತಾ. 23ರಂದು ಮುನಿಸಿಪಲ್ ಕಮಿಶನರ್ ಶ್ರೀ ಎಮ್. ಸಂಜೀವ ತಳವಾರರ ಅಧ್ಯಕ್ಷತೆಯಲ್ಲಿ ಜರಗಿತು. ಶಾಲಾ ಮುಖ್ಯೋಪಾಧ್ಯಾಯ ಶ್ರೀ ಅಣ್ಣಾಜಿ ರಾಯರು ವರದಿ ಓದಿದರು. ಬಹುಮಾನ ವಿತರಣೆಯಾದ ಮೇಲೆ ನಾಟಕಾದಿ ವಿನೋದಗಳಾದುವು. ಅದೇ ದಿನ ಬೆಳಗ್ಗೆ ಶ್ರೀ ಮಿಜಾರ ಗೋವಿಂದ ಪೈಗಳು ಧ್ವಜಾರೋಹಣ ಮಾಡಿದರು.

ಬಹುಮಾನ ಪಡೆದ ಗ್ರಂಥಗಳು—ಮದ್ರಾಸು ಸರಕಾರದ ಪರವಾಗಿ 1950-51ರ ಉತ್ಕೃಷ್ಟ ಗ್ರಂಥಗಳಿಗೆ ದೊರೆತ ಬಹುಮಾನಗಳ ವಿವರಗಳು ಪ್ರಕಟವಾಗಿದ್ದು ಅವುಗಳಲ್ಲಿ ಬಹುಮಾನ ಪಡೆದ ಕನ್ನಡ ಗ್ರಂಥಗಳು ಈ ಕೆಳಗಿನವುಗಳೆಂದು ಗೊತ್ತಾಗಿದೆ; ಶ್ರೀ ಕೆ. ವಿಠಲ ಶೆಣೈ ಉಡುಪಿ, ಮತ್ತು ಡಾ। ಎಮ್. ವಿ. ಕಾಮತರ 'ಗರ್ಭಿಣಿ ಮತ್ತು ಶಿಶು'; ಶ್ರೀ ಪೈಲೂರು ಲಕ್ಷ್ಮೀನಾರಾಯಣ ರಾಯರು ಬರೆದ 'ಜೇನಿನ ವ್ಯವಸಾಯ'; ಡಾ। ಡಿ. ಕುಪ್ಪುಸ್ವಾಮಿಯವರ 'ಶಿಕ್ಷಣ ಮನೋವಿಜ್ಞಾನ'.

ಹೊಸ ಬಸ್ ಲೈಸೆನ್ಸುಗಳು—ಟ್ರಾಫಿಕ್ ಬೋರ್ಡ್ ಮೀಟಿಂಗು ಕಳೆದವಾರ ಜರಗಿದಾಗ ಮೂಡಬಿದರೆ ಮೊದಲಾದ ಒಂದೆರಡು ಕಡೆಗಳಿಗೆ ಹೊಸ ಸರ್ವಿಸುಗಳಿಗೆ ಅನುಮತಿ ದೊರೆಯಿತಾಗಿ ತಿಳಿದುಬರುತ್ತದೆ.

ಮಹಾಸಭೆ—ದ. ಕ. ಜಿಲ್ಲಾ ಮಾಲ್ಯರ ಯಾನೆ ಕುಲಾಲರ ಶ್ರೀ ರಾಮ ಸೇವಾ ಜಾತ್ಯಭ್ಯುದಯ ಸಂಘದ ಮಹಾಸಭೆಯು ಇದೇ ತಾ. 15ನೇ ಆದಿತ್ಯವಾರ ಪೂರ್ವಾಹ್ನ ಜಿಲ್ಲಾ ಬೋರ್ಡ್ ಆಫೀಸು ಬಳಿಯಲ್ಲಿರುವ ಶ್ರೀ ದೇವಿಯ ದೇವಸ್ಥಾನದಲ್ಲಿ ಜರಗುವುದಾಗಿ ಸಂಬಂಧಪಟ್ಟವರು ತಿಳಿಸುತ್ತಾರೆ.

ಕೆನರಾ ಹೈಸ್ಕೂಲಿನ ವಜ್ರೋತ್ಸವ—ಕೆನರಾ ಹೈಸ್ಕೂಲಿನ ವಜ್ರೋತ್ಸವವನ್ನು ಬರುವ ದಸಂಬರ ತಿಂಗಳಲ್ಲಿ ಸುಮಾರು ಮೂರು ವಾರಗಳ ವಿವಿಧ ಕಾರ್ಯಕ್ರಮಗಳನ್ನಿಟ್ಟುಕೊಂಡು ಜರಗಿಸಬೇಕಾಗಿ ನಿಶ್ಚಯವಾಗಿದ್ದು ಪ್ರದರ್ಶನಕ್ಕೆ ಸಂಬಂಧಿಸಿದ ಸಿದ್ಧತೆಗಳ ಬಗ್ಗೆ ಬೇರೆ ಬೇರೆ ಸಮಿತಿಗಳ ರಚನೆಯಾಗಿದೆ.

"ಅಂತರಂಗ"ವನ್ನು
ತಪ್ಪದೆ ಓದಲು ಮರೆಯದಿರಿ

ಶ್ರೀ ರಾಮಕೃಷ್ಣ ಥಿಯೇಟರ್ ಲಿಮಿಟೆಡ್. ಉಡುಪಿ
ನಡಿಯುವ ಚಿತ್ರ
ಜಯಂತ ದೇಸಾಯಿಯವರ
ತದ್‌ಬೀರ್
ಸೈಗಲ್, ಸುರೈಯ್ಯಾ ಮತ್ತು ರೆಹನಾ ಮೊದಲಾದವರು.
ತಾರೀಖು 7-4-51ರಿಂದ
ಫಿಲ್ಮಿಸ್ತಾನದವರ
ಪ್ರಗತಿಪರ ಪಾರಿತೋಷಕ.
ಸಮಾಧಿ
ಅಶೋಕ್‌ಕುಮಾರ್, ನಳಿನಿಜಯವಂತ್ ರಾವ್ ಮೊದಲಾದವರು.

Notice of Sale of Lorries

Five lorries belonging to the S. K. Central Co-operative Wholesale Stores Ltd, Mangalore(under private carrier permits) will be sold in public auction on Sunday, 15-4-1951 at 9-30 A. M. at the premises of the South Kanara Central Co-operative Bank Ltd., Kodialbail, Mangalore. The vehicles can be inspected during office hours from 10-4-51 to 14-4-51 at the sheds in Kandathapalli Lane, Bunder, Mangalore and at 9 A. M on 15—4—51 at the premises of the S K. C. C. Bank Ltd, Karnard Sadashiva Rao Road, Kodialbail, Mangalore.

Terms and Conditions of the sale with schedule of descriptions of the vehicles can be had from the Head Office of the Stores.

Head Office, Kodialbail, Mangalore, Date 2-4-51

(Sd) **M. Shiva Rau,**
President
S. K. C. C. W. STORES LTD,
Mangalore.

ನಿರಾಶೆಗೆ ಒಳಗಾಗದಿರಿ!
ಉಬ್ಬಸ, ಕಫ, ಶ್ವಾಸಕೋಶದಿಂದ ನೀವು ವಿಪರೀತ ಕಷ್ಟಪಡುತ್ತಿರಾದರೆ, ಹಲವಾರು ಅಮೌಲ್ಯ ಔಷಧಿಗಳ ಸೇವನೆಯಿಂದ ನಿಮಗೆ ಗುಣವಾಗದಿರುವುದಾದರೆ,
ಆಶಾಭಂಗಕ್ಕೊಳಗಾಗದಿರಿ!
ಅಲ್ಪವೆಚ್ಚ–ಅಲ್ಪಾವಧಿಯೊಳಗೆ ನಿಮ್ಮಬಾಧೆಯನ್ನು ಶಮನಮಾಡುವ
ಖಾತ್ರಿ ಔಷಧಿಯು ನಮ್ಮಲ್ಲಿರುವುದು.
ಒಂದೇ ಒಂದು ಸೀಸೆಯನ್ನು ಕೊಂಡು, ಗುಣಪರೀಕ್ಷೆಮಾಡಿರಿ!
ಈ ಹೊಸ ಮದ್ದಿನಿಂದ ನಿಮಗೆ ಅದ್ಭುತ ಗುಣತೋರುವುದೆಂಬುದು ಖಂಡಿತ.
ಕೂಡಲೆ ಬರೆಯಿರಿ:—
ದಿ ನೇಶನಲ್ ಜನರಲ್ ಸ್ಟೋರ್ಸ್
(ಡಿಸ್ಪೆನ್ಸಿಂಗ್ ಕೆಮಿಸ್ಟ್ ಮತ್ತು ಡ್ರಗ್ಗಿಸ್ಟ್)
8-A ಮೆಹರ್ವಾನ್ ಬಿಲ್ಡಿಂಗ್ಸ್, ಸರ್. ಫಿರೋಜ್ ಷಾ ಮೆಹತಾ ರೋಡು,
ಫೋರ್ಟ್, ಬೊಂಬಾಯಿ.
THE NATIONAL GENERAL STORES
Importers, Exporters, Dispensing Chemists & Druggists,
General Merchants & Commission Agents,
8A Mherwan Buildings, Opp: His Master's Voice,
Sir Phirozsha Mehta Road, **Fort, Bombay.**

ಹಿಂದೂಕೋಡು ಮಸೂದೆ ಮತ್ತು ಅಳಿಯಸಂತಾನ ಕುಟುಂಬಗಳು

(ಹಿಂದೂ ಕೋಡುವಾದಿ ಅಳಿಯಸಂತಾನಿಗರು ಕೇಂದ್ರ ಸರಕಾರಕ್ಕೆ ಒಪ್ಪಿಸಲಿರುವ ಮನವಿಯ ಸಾರಾಂಶ)

ಈಗ ಪಾರ್ಲಿಮೆಂಟಿನ ಮುಂದಿರುವ ಹಿಂದೂಕೋಡು ಮಸೂದೆಯು ಇನ್ನು ಸ್ವಲ್ಪ ಸಮಯದಲ್ಲಿಯೇ ಕಾನೂನಾಗಿ ಜಾರಿಗೆ ಬರುವುದೆಂದು ನಿರೀಕ್ಷಿಸಲಾಗಿದೆ. ಜಾತಿ, ಮತ, ಧರ್ಮವೇ ಮೊದಲಾದ ಯಾವ ಬೇಧವೂ ಇಲ್ಲದೆ ಪಾರಂಪರ್ಯ, ವಾರಿಸ್‌ಹಕ್ಕು, ಮದುವೆ ಇತ್ಯಾದಿಗಳ ಕುರಿತು ಹಿಂದೀ ನಾಗರಿಕರೆಲ್ಲರಿಗೂ ಒಂದೇ ಕಾನೂನು ಮಾಡುವ ಅಧಿಕಾರವನ್ನು ಹಿಂದೀ ರಾಜಕೀಯ ಘಟನಾ ಶಾಸನವು ಪಡೆದುಕೊಂಡಿರುತ್ತದೆ. ಹಿಂದೂಕೋಡು ಮಸೂದೆಯು ಆ ದಾರಿಯಲ್ಲಿ ಮೊದಲ ಹೆಜ್ಜೆ. ಪ್ರಥಮವಾರಾಗಿ ಎಲ್ಲಾ ಹಿಂದುಗಳಿಗೂ ಒಂದೇ ಸಮಾಜಿಕ ಕಾಯಿದೆ ಮಾಡುವುದೇ ಸರಕಾರದ ಪ್ರಕೃತದ ಅಭಿಪ್ರಾಯ. ದೇಶದ ಎಲ್ಲಾ ನಾಗರಿಕರೂ ಏಕರೂಪವಾಗಿ ಅನ್ವಯಿಸುವ ಸಾಮಾಜಿಕ ಕಾಯಿದೆಯನ್ನು ಮಾಡುವ ಆವಶ್ಯಕತೆಯನ್ನು ಎಷ್ಟು ಹೇಳಿದರೂ ಸಾಲದು. ವಸ್ತುತಃ ಅಂತಹ ಕಾಯಿದೆಯಿಂದ ದೇಶದ ಬೇರೆ ಬೇರೆ ಸಮಾಜ ಮತ್ತು ಪ್ರದೇಶಗಳೊಳಗಿನ ಭಿನ್ನಬೇಧವನ್ನು ನಿವಾರಿಸುವರೆ ಹೆಚ್ಚಿನ ಸಹಾಯವಾಗುವುದು.

ತಿದ್ದುಪಡಿ ಮಾಡಲ್ಪಟ್ಟು ಈಗ ಪಾರ್ಲಿಮೆಂಟಿನ ಮುಂದೆ ಬಂದಿರುವ ಹಿಂದೂಕೋಡು ಬಿಲ್ಲಿನ ಬೇರೆಬೇರೆ ಪ್ರಕರಣಗಳ ವಿಷಯದಲ್ಲಿ ಈಗ ಹೆಚ್ಚು ಮಟ್ಟಿನ ಒಮ್ಮತವಿರುವುದೆಂದು ತಿಳಿದುಬರುತ್ತದೆ. ಆದರೆ, ಮದ್ರಾಸ್ ಸರಕಾರವು ಈ ವಿಷಯದಲ್ಲಿ ಪ್ರತ್ಯೇಕ ದಾರಿಹಿಡಿದುದು ವಿಷಾದಕರವಾಗಿದೆ. ಆಸ್ತಿವಿಭಾಗ ಮತ್ತು ಕುಟುಂಬದ ಆಸ್ತಿಯ ಆದಾಯದ ವಿಷಯದಲ್ಲಿ ಅಳಿಯ ಸಂತಾನ ಸಮಾಜಗಳವರಿಗೆ, ಮದ್ರಾಸ್ ಅಳಿಯಸಂತಾನ ಕಾನೂನಿನ ಅತ್ಯಂತ ಚರ್ಚಾಸ್ಪದವಾದ ಪ್ರಕರಣಗಳೇ ಅನ್ವಯಿಸಿ, ಹಿಂದೂಕೋಡು ಆ ಸಂಬಂಧವಾಗಿ ಲಗಾವಾಗಬಾರದೆಂದು ಮದ್ರಾಸ್ ಸರಕಾರವು, ತನ್ನ ಮಂತ್ರಿಗಳ ಮೂಲಕ ಪ್ರಕಟಗೊಳಿಸಿರುತ್ತದೆ. ಇದು ಕೇವಲ ಅಪ್ರಾಗತಿಕ ಹೆಜ್ಜೆಯಿದ್ದು, ಹಿಂದೂಕೋಡಿನ ಮೂಲ ಉದ್ದೇಶಕ್ಕೇನೇ ಪ್ರತಿಬಂಧಕವಾಗಿರುತ್ತದೆ. ಕೆಲವು ವಿಷಯಗಳಲ್ಲಿ ಅಳಿಯಸಂತಾನ ಸಮಾಜಗಳಿಗೆ ಹಿಂದೂ ಕೋಡನ್ನು ಅನ್ವಯಿಸಿ, ಇನ್ನು ಕೆಲವು ವಿಷಯಗಳಲ್ಲಿ ಅಳಿಯಸಂತಾನ ಕಾನೂನನ್ನು ಲಗಾವು ಮಾಡುವುದರಿಂದ ಅತ್ಯಂತ ಪೇಚಿನ ಪರಿಸ್ಥಿತಿ ಉಂಟಾಗುವುದೆಂಬುದರಲ್ಲಿ ಸಂದೇಹವಿಲ್ಲ.

ಕಳೆದ ಒಂದೂವರೆ ವರ್ಷದಿಂದ ಈ ಅಳಿಯಸಂತಾನ ಕಾನೂನು ಜಾರಿಗೆ ಬಂದ ಪರಿಣಾಮವಾಗಿ ಹಲವು ಅಳಿಯಸಂತಾನ ಕುಟುಂಬಗಳು ಸಂಪೂರ್ಣವಾಗಿ ಶಿಥಿಲವಾಗಿವೆ. ಆಸ್ತಿಗಳ ಪಾಲಿಗಾಗಿ ಮಾಡಲ್ಪಟ್ಟಿರುವ ಹಲವು ವ್ಯಾಜ್ಯಗಳು ಯಾವ ತರದ ಇತ್ಯರ್ಥವೂ ಇಲ್ಲದೆ ತ್ರಿಶಂಕು ಅವಸ್ಥೆಯಲ್ಲಿವೆ. ಕೆಲವು ತವರುಗಳಿಗೆ ವಿಭಾಗಿಸಿ ಕೊಡಲ್ಪಟ್ಟಿರುವ ಪಾಲುಗಳು ಎಷ್ಟೊಂದು ವಿಪರೀತ ಪ್ರಮಾಣಕ್ಕೆ ಮುಟ್ಟಿರುವುವೆಂದರೆ ಅವನ್ನು ಕಾರ್ಯರೂಪದಲ್ಲಿ ಹಂಚಿಕೊಡುವುದೇ ಅಸಾಧ್ಯವಾಗಿದೆ. ಹಲವು ಸಂದರ್ಭಗಳಲ್ಲಿ ರಾಜಿಯಿಂದ ಪಾಲುಮಾಡಿಕೊಳ್ಳಿರೆಂದು ಕೋರ್ಟಿನವರೇ ಕೇಳಿಕೊಂಡುದಿದೆ.

1949ರ ಅಳಿಯಸಂತಾನ ಕಾನೂನಿನ ಅತಿದೊಡ್ಡ ದೋಷವೆಂದರೆ ಗಂಡಸರಿಗೆ ಕುಟುಂಬದ ಆಸ್ತಿಯಲ್ಲಿ ಕೇವಲ ಜೀವನಾಂಶ ಹಕ್ಕನ್ನು ಮಾತ್ರ ಕೊಟ್ಟಿರುವುದು. ಮಕ್ಕಳಿಲ್ಲದ 49 ವರ್ಷದ ಹೆಂಗಸು ಕುಟುಂಬದ ಆಸ್ತಿಯು ಪಾಲಾಗುವಾಗ ಇಚ್ಛಾನುಸಾರ [illegible] ಪಾಲು ಪಡೆಯುತ್ತಾಳೆ. ಆದರೆ ಎಷ್ಟೊಂದು ವಯಸ್ಸಿನ ಗಂಡಸಾದರೂ ಕೇವಲ ಜೀವನಾಂಶದ ಹಕ್ಕುಳ್ಳವನಾಗಿರುತ್ತಾನೆ. ಅಳಿಯಸಂತಾನ ಕಾನೂನಿನಿಂದಾಗಿ ಉಂಟಾಗಿರುವ ವಿಷಮತೆ ಇದು. ಹಿಂದೂಕೋಡು ಮಸೂದೆಯು ಬೇಗನೇ ಕಾನೂನಾಗಿ ಬರುವ ಸಂಭವವಿರುವುದರಿಂದ ಈ ನಡುವೆ ಅವಸರದಿಂದ ಅಳಿಯಸಂತಾನ ಕಾನೂನನ್ನು ತಿದ್ದಿ ಮುಂದೆ ಹಾಕುವುದು ಯುಕ್ತವೆಂದು ಅನೇಕರು ತಿಳಿಯಪಡಿಸಿದರೂ ಪ್ರಯೋಜನವಾಗಲಿಲ್ಲ. ಇದೀಗ ಜಿಲ್ಲೆಯ ಅನೇಕ ಕಡೆಗಳಲ್ಲಿ ಸಭೆ ನಡೆದು ಅಳಿಯಸಂತಾನ ಕಾನೂನನ್ನು ತೆಗೆದುಹಾಕಿ ಹಿಂದೂಕೋಡೇ ಅಳಿಯಸಂತಾನರಿಗೂ ಅನ್ವಯಿಸಬೇಕೆಂದು ಜನರು ಸ್ಪಷ್ಟವಾಗಿ ಅಭಿಪ್ರಾಯಪಟ್ಟಿರುತ್ತಾರೆ. ಅಳಿಯಸಂತಾನ ಕಾನೂನು ಜಾರಿಗೆ ಬಂದುದರಿಂದ ಉಂಟಾಗಿರುವ ಪರಿಣಾಮದ ಅನುಭವವುಳ್ಳ ಜಿಲ್ಲೆಯ ಬೇರೆಬೇರೆ ವಕೀಲ ಸಂಘಗಳವರು ಹಿಂದೂಕೋಡನ್ನೇ ಅಳಿಯಸಂತಾನರಿಗೂ ಅನ್ವಯಿಸುವುದೊಳ್ಳೆಯದೆಂದು ಅಭಿಪ್ರಾಯವಿತ್ತಿರುತ್ತಾರೆ.

ಕುಟುಂಬದ ಸೊತ್ತುಗಳಲ್ಲಿ ಅಳಿಯಸಂತಾನ ಕುಟುಂಬದ ಪ್ರತಿಯೊಬ್ಬ ಸದಸ್ಯನು ಸಮಾನ ಹಕ್ಕುಳ್ಳವನಾಗಿರುತ್ತಾನೆ. ಆದರೆ ಮೇಲೆ ಹಿಂದೂಕೋಡು ಮಸೂದೆಯು ಕಾನೂನಾಗಿ ಜಾರಿಗೆ ಬರುವ ದಿನದಿಂದ ಅಳಿಯಸಂತಾನದ ಪ್ರತಿಯೊಬ್ಬ ಸದಸ್ಯನು ಕುಟುಂಬದ ಆಸ್ತಿಯಲ್ಲಿ ಸಮಾನ ಮತ್ತು ಇಚ್ಛಾನುಸಾರ ಪಾಲು ಪಡೆಯತಕ್ಕದ್ದೆಂದು ನಿಯಮಿಸುವುದರಲ್ಲಿ ಯಾವ ಅನ್ಯಾಯವೂ ಇಲ್ಲ. ಆ ಮೇಲೆ ಎರಡನೇ ಪಾಲಾಗುವ ಹಿಂದೂಕೋಡಿನ ಕ್ರಮವನ್ನೇ ಅನುಸರಿಸಬಹುದು. ಈ ಕ್ರಮಕ್ಕೆ ಹೆಚ್ಚಿನ ಆಕ್ಷೇಪವೇನೂ ಇರಲಾರದು. ಯಾಕೆಂದರೆ 1949ರ ಅಳಿಯಸಂತಾನ ಕಾನೂನು ಜಾರಿಗೆ ಬರುವ ಮೊದಲು ಪ್ರತಿಯೊಬ್ಬನೂ ತಲೆವಾರು ಆಸ್ತಿಭಾಗವನ್ನು ಪಡೆಯುತ್ತಿದ್ದನು. ಅದನ್ನೇ ಈಗ ಇಚ್ಛಾನುಸಾರ ಮಾಡಿದರಾಯಿತು. ಅಳಿಯಸಂತಾನಿಗರಂತೆಯೇ ಮಾತೃ ಪರಂಪರೆಯನ್ನು ಅನುಸರಿಸುತ್ತಿರುವ ಮಲಬಾರಿನ ಮರುಮಕ್ಕತ್ತಾಯ ಕಟ್ಟಿನವರು 1934ರಷ್ಟು ಹಿಂದೆಯೇ ತಲೆವಾರು ಇಚ್ಛಾನುಸಾರ ಹಕ್ಕನ್ನು ಪಡೆದಿರುತ್ತಾರೆ. ಈ ರೀತಿ ಮಾಡಿದರೆ ಯಾವ ತೊಂದರೆ ಮತ್ತು ಗಲಾಟೆಯೂ ಇಲ್ಲದೆ ಅಳಿಯಸಂತಾನಿಗರನ್ನು ಹೊಸ ವ್ಯವಸ್ಥೆಗೆ ಹೊಂದಿಸುವ ಕೆಲಸವು ಸುಸೂತ್ರವಾಗಿ ನಡೆಯುವುದು.

ಈ ಕುರಿತು ಅಭಿಪ್ರಾಯ ಕೊಡಲಿರುವವರು ಮತ್ತು ಮನವಿಗೆ ಸಹಿಹಾಕಿದು ಕಳುಹಿಸಲಿಚ್ಛಿಸುವವರು, ಕೆ. ಕೆ. ಶೆಟ್ಟಿ, ಕಾರ್ಯದರ್ಶಿ ಹಿಂದೂಕೋಡು ವಾದಿ ಅಳಿಯಸಂತಾನ ಸಮಿತಿ, ಕೆನರಾ [illegible] ಮಂಗಳೂರು. ಇವರನ್ನು ಸ್ವತಃ ಕಂಡು, ಇಲ್ಲವೆ ಪತ್ರವ್ಯವಹಾರ ನಡೆಸಿ, ಮನವಿಯ ಪ್ರತಿಗಳನ್ನು ಪಡೆದು ಸಹಿಹಾಕಿ ಕಳುಹಿಸಬಹುದು.

ಸಹಕಾರಿ ಸಂಘಗಳಿಗೆ—
ಮುನ್ಸಿಫ್ ಕೋರ್ಟುಗಳಿಗೆ—
ವರ್ಗದಾರರಿಗೆ—ಶಾಲೆಗಳಿಗೆ-
ಬೇಕಾಗುವ ರಿಜಿಸ್ಟ್ರಿಗಳು,
ರಶೀದಿ ಪುಸ್ತಕಗಳು,
ಫಾರ್ಮುಗಳು, ಎಕೌಂಟ್
ಪುಸ್ತಕಗಳು ದೊರೆಯುತ್ತವೆ.
ನವಯುಗ ಪ್ರೆಸ್ ಉಡುಪಿ.

ಕೊರಂಗ್ರಪಾಡಿ—ತಾ. 27-3-51ರಲ್ಲಿ ಸ್ಥಳೀಯ ಶಿಶುವಿಜ್ಞಾನ ಪ್ರಸಾರ ಸದನದ ವಾರ್ಷಿಕೋತ್ಸವವು ಶ್ರೀ ಡಾ| ಟಬ್ಬ್ಸ್ ಸುಟರ ಅಧ್ಯಕ್ಷತೆಯಲ್ಲಿ ಜರಗಿತು. ವ್ಯವಸ್ಥಾಪಕರಾದ ಪಟೇಲ್ ಕೆ. ದೊಡ್ಡಣ್ಣ ಶೆಟ್ಟರ ಸ್ವಾಗತಭಾಷಣವಾದ ನಂತರ ಶ್ರೀ ಸಿ. ರಾಮಚಂದ್ರ ರಾಯರು ಭಕ್ತಿಯ ಬೆಳಕು ಈ ಕುರಿತು ಭಾಷಣವಿತ್ತರು. ಕಾರ್ಯಕಾರಿ ಸಮಿತಿಯ ಅಧ್ಯಕ್ಷರಾದ ಕೆ. ಪಿ ನಾರಾಯಣ ತಂತ್ರಿಗಳು ಸಂಘದ ಕಾರ್ಯಕ್ರಮದ ಕುರಿತು ಭಾಷಣವಿತ್ತರು, ನಂತರ ಕುಕ್ಕಿಕಟ್ಟೆ, ಬೈಲೂರು, ಪಡುಗುಡ್ಡೆ, ಶಾಲಾ ಬಾಲಕ ಬಾಲಕಿಯರ ವಿವಿಧ ವಿನೋದಾವಳಿಗಳು ಸಭಿಕರ ಮನಸ್ಸನ್ನು ಆಕರ್ಷಿಸುವಂತಿತ್ತು. ರಾತ್ರಿ ಉಡುಪಿ ಕ್ರೈಸ್ತ್ ಗರ್ಲ್ಸ್ ಸ್ಕೂಲ್ ಬಾಲಕಿಯರಿಂದ ನಾರದ ಸಂಸಾರವೆಂಬ ನಾಟಕ ಉತ್ತಮ ರೀತಿಯಲ್ಲಿ ಪ್ರದರ್ಶಿಸಲ್ಪಟ್ಟಿತು. ಉಡುಪಿ ತರಬೇತಿ ಶಾಲೆಯ ತರಬೇತಿ ವಿದ್ಯಾರ್ಥಿ ಅಧ್ಯಾಪಕರು "ಮುನ್ಸಿಪ ಮಂಡ್ಳಿ" ಎಂಬ ಒಂದು ಹಾಸ್ಯಪ್ರದವಾದ ನಾಟಕ ಜನಮನೋಹರವಾಗುವಂತೆ ಆಡಿತೋರಿಸಿದರು, ಈ ಶಿಶು ಸಮ್ಮೇಳನದಲ್ಲಿ ಕೊರಂಗ್ರಪಾಡಿ ವಿಠಲ ಶೆಟ್ಟರೂ, ತ್ಯಾಮ ಶೆಟ್ಟರೂ, ಬೋಳು ಅಮ್ಮಣ್ಣನವರೂ, ಕೆ. ರಘುರಾಮ ಶೆಟ್ಟರೂ ತುಂಬಾ ಶ್ರಮಪಟ್ಟಿದ್ದರು. ಮರುದಿವಸ ರಾತ್ರಿ ಬೊಂಬಾಯಿ ನೂತನ ಕರ್ನಾಟಕ ಸಂಗೀತ ಸಭಾ ಇವರು, ಶ್ರೀ ಕೆ. ದೊಡ್ಡಣ್ಣ ಶೆಟ್ಟಿ ವಿರಚಿತ, "ದ್ರೋಹಿ ಯಾರು?" ಎಂಬ ಸಾಮಾಜಿಕ ನಾಟಕವನ್ನು ಉತ್ತಮ ರೀತಿಯಲ್ಲಿ ಆಡಿ ತೋರಿಸಿದರು. ಈ ಎರಡು ದಿನದ ಕಾರ್ಯಕ್ರಮಗಳು, ಹಳ್ಳಿಗರಿಗೂ ನಾಗರಿಕರಿಗೂ ಅತ್ಯಾವಶ್ಯಕವೆಂದು ಸಭಿಕರಲ್ಲಿ ಹಲವರು ತಮ್ಮ ಹಿತೋಕ್ತಿಗಳನ್ನಿತ್ತರು.

ಮಾಯಿಪಾಡಿ:—ತಾ 30-3-51ನೇ ಮಂಜನಾಡಿ ಕಾಸರಗೋಡು ತಾಲೂಕು ಮಾಯಿಪಾಡಿ ಬೋರ್ಡ್ ಪ್ರಾಥಮಿಕ ಶಾಲಾ ಮಕ್ಕಳಿಂದ ಮರಿದಳದ "ದೀಕ್ಷಾಸ್ವೀಕಾರ" ಸಮಾರಂಭವು ಬುನಾದಿ ತರಬೇತಿ ಶಾಲಾ ಅಧ್ಯಾಪಕ ಶ್ರೀ ಶ್ಯಾಮಬಟ್, B SC B-T- ಇವರ ಅಧ್ಯಕ್ಷತೆಯಲ್ಲಿ ಶ್ರೀ ಕುಕ್ಕೇಹಳ್ಳಿ ತಾಕು ಶೆಟ್ಟಿ (ಅಡೇಲು) ಕಬ್‌ಮಾಸ್ಟರ್ ಇವರು ಮಕ್ಕಳಿಂದ ಮರಿದಳದ ದೀಕ್ಷೆ ಪಡೆದರು. ಈ ಸಭೆಗೆ ಮಕ್ಕಳ ಹೆತ್ತವರು ವಿದ್ಯಾಭಿಮಾನಿಗಳು ಸ್ಕೌಟ್ ಸಂಸ್ಥೆಯ ಉದ್ಯೋಗಸ್ಥರು ಹಾಜರಿದ್ದರು. ಧ್ವಜವಂದನೆಯಾಗಿ ಅಧ್ಯಕ್ಷರಿಂದ ಮರಿದಳಕ್ಕೆ 'ಮಹಾತ್ಮಾ ಮರಿವೀರದಳ' ಎಂಬ ಹೆಸರಿಡಲಾಗಿ ಬಳಿಕ ಮಂಗಳ ಕರ್ತವ್ಯ, ನಮ್ಮ ಸ್ವತಂತ್ರ ಹಿಂದೂ ದೇಶಕ್ಕೆ ಇಂತಹ ಮರಿಗಳ, ಸ್ಕೌಟುಗಳ ಆವಶ್ಯಕತೆ ಇನ್ನೇ ಮುಂತಾಗಿ ಸ್ವಾರಸ್ಯಯುತ ಭಾಷಣಮಾಡಿದರು. ಆಮೇಲೆ ಸಭೆಗೆ ಆಗಮಿಸಿದ ಮಹಾ ನಾಯಕರಲ್ಲಿ ಅನೇಕರು ಕೆಲವು ಹಿತೋಕ್ತಿಗಳಿಂದ ಕೂಡಿದ ಹಾಗೂ ಶಾಲಾ ಏಳಿಗೆಯ ಕುರಿತು ಭಾಷಣವಿತ್ತರು. ತರುವಾಯ ಅಧ್ಯಕ್ಷರಿಗೆ ಹಾಗೂ ನೆರೆದವರಿಗೆ ಧನ್ಯವಾದ ಸಮರ್ಪಣೆಯಾದ ಬಳಿಕ ಮಂಗಳ ಗೀತೆಯೊಂದಿಗೆ ಸಭೆ ಮುಗಿಯಿತು.

ಸ್ವಾಬರ ಕಟ್ಟೆ—ಕೇಂದ್ರದ ಶಾಲಾ ಹಬ್ಬದ ಆಟವು ಕೆ. ಜಗನ್ನಾಥ ಹೆಗ್ಡೆ, ಇವರ ಅಧ್ಯಕ್ಷತೆಯಲ್ಲಿ ವಿಜೃಂಭಣೆಯಿಂದ ನೆರವೇರಿತು. ಸ್ವಾಬರಕಟ್ಟೆ, ಶಿರಿಯಾರ, ಯಡ್ತಾಡಿ, ಜನಿವಾರಕಟ್ಟೆ ಶಾಲೆಯವರು ಸದ್ರಿ ಆಟದ ಸಮಾರಂಭಕ್ಕೆ ಭಾಗವಹಿಸಿದ್ದರು.

ಹಿರಿಯಡ್ಕ—ಇಲ್ಲಿಯ ಮಹತೋಭಾರ ಶ್ರೀ ವೀರಭದ್ರ ಸ್ವಾಮಿ ದೇವಳದಲ್ಲಿ ವರ್ಷಾವಧಿ ಜಾತ್ರೆಗೆ ನಡೆಯುವ ಸಾಂವತ್ಸರಿಕ ಉತ್ಸವವು ಇದೇ ತಾ 21ನೇ ಶನಿವಾರ ಧ್ವಜಾರೋಹಣದಿಂದ ಪ್ರಾರಂಭವಾಗಿ ತಾ. 26ನೆ ಗುರುವಾರ ದಿನ ಚಂಡಿಕಾ ಹೋಮ ಇತ್ಯಾದಿ ಕಾರ್ಯಕ್ರಮಗಳಿಂದ ಮುಕ್ತಾಯವಾಗಲಿರುವುದು. ತಾ 24ರಲ್ಲಿ ಮಹಾರಥೋತ್ಸವ ಜರಗುವುದು.

ಕುಂಬಳೆ—ಇಲ್ಲಿಯ ಆಸುಪಾಸಿನ ಗ್ರಾಮಗಳ ವಿದ್ಯಾರ್ಥಿಗಳ ಸೌಕರ್ಯಕ್ಕಾಗಿ ಹೈಸ್ಕೂಲು ಸ್ಥಾಪಿಸುವ ಕುರಿತು ಆಲೋಚಿಸುವರೆ ಸಾರ್ವಜನಿಕರ ಸಭೆಯೊಂದು ಕಳೆದ ತಾ. 25ರಲ್ಲು ಶ್ರೀ ಬಿ. ದೇವಪ್ಪ ಆಳ್ವರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀಗಳಾದ ಪಿ. ಸಿ. ಭಂಡಾರಿಗಳು ಅಧ್ಯಕ್ಷರಾಗಿಯೂ ಡಾ. ಕೆ. ಎಸ್. ನಾಯಕ್ ಮತ್ತು ರಘುನಾಥ ರಾವ್ ಜತೆಕಾರ್ಯದರ್ಶಿಗಳಾಗಿಯೂ ಇತರ ಹದಿನೈದು ಸದಸ್ಯರೂ ಇರುವ ಹೈಸ್ಕೂಲ್ ಕಮಿಟಿ ಸ್ಥಾಪಿಸಲಾಯಿತು.

ಕಾರ್ಕಳ—ಜಿಲ್ಲಾ ಬೋರ್ಡು ಅಧ್ಯಕ್ಷರು ಶ್ರೀ ಬಿ. ಮಂಜಯ್ಯಹೆಗ್ಗಡೆ ಕಳೆದ ತಾ 23ರಲ್ಲು ಬೆಳಗ್ಗೆ ಅಳಿಯೂರು ಮತ್ತು ಹೊಸ್ಮಾರು ಶಾಲೆಗಳನ್ನು ಸಂದರ್ಶಿಸಿ ನಾರಾವಿಗೆ ಹೋಗಿ ಅಲ್ಲಿಯ ಬೋರ್ಡು ಎಲಿಮೆಂಟರಿ ಶಾಲೆಯಲ್ಲಿ ಊರಿನ ಮತ್ತು ಆಸುಪಾಸಿನ ಗ್ರಾಮಸ್ಥರ ಕಡೆಯಿಂದ ಸದ್ರಿ ಶಾಲಾ ಕಮಿಟಿ ಅಧ್ಯಕ್ಷ ಶ್ರೀ ಕೆ. ಕೃಷ್ಣಭಟ್ಟರ ನೇತೃತ್ವದಲ್ಲಿ ಅರ್ಪಿಸಿದ ರಸ್ತೆ, ಸೇತುವೆ, ಔಷಧಾಲಯ ಸೂಲಗಿತ್ತಿ ಮುಂತಾದ ಅನುಕೂಲತೆಗಳ ವಿಷಯಗಳನ್ನೊಳಗೊಂಡ ಮನವಿಯೊಂದನ್ನು ಸ್ವೀಕರಿಸಿ, ಈ ಶಾಲೆಯನ್ನು ಮಲೆನಾಡು ಪ್ರಾಂತದ ಜನರ ಅನುಕೂಲತೆಗೋಸ್ಕರ ಮಾಧ್ಯಮಿಕ ತರಗತಿಗೇರಿಸುವ ಕುರಿತು ಒಂದು ಅರ್ಜಿಯನ್ನು ಸ್ವೀಕರಿಸಿ, ಕೆಲವು ಹಿತೋಕ್ತಿಗಳನ್ನೂ ಭರವಸೆಗಳನ್ನೂ ಹೇಳಿ ಮುಂದೆ ಪ್ರಯಾಣ ಬೆಳೆಸಿದರು.

ಮಧ್ಯಾಹ್ನ ಅಳದಂಗಡಿ ಹರಿಶ್ಚಂದ್ರ ರಾಜ ಅಜಿಲರ ಮುಂದಾಳುತ್ವದಲ್ಲಿ ಕಟ್ಟಿಸಿ ಬೋರ್ಡಿಗೆ ಒಪ್ಪಿಸಿಕೊಡಲಿರುವ ಶಾಲಾ ಕಟ್ಟೋಣದ ಮಂಜೂರಾತಿಯನ್ನು ಸ್ಪಷ್ಟಪಡಿಸಿ, ಅಲ್ಲಿಂದ ಕರಂಬಾರು, ಶಿರ್ಲಾಲು ಗ್ರಾಮಗಳ ಶಾಲಾ ಕಮಿಟಿ ಅಧ್ಯಕ್ಷ ಶ್ರೀ ಕೆ. ನಾರಾಯಣ ಹೆಬ್ಬಾರರ ಮುಂದಾಳುತನದಲ್ಲಿ ಕಟ್ಟಿಸಿ ಬೋರ್ಡಿಗೆ ಒಪ್ಪಿಸಿರುವ ತಾತ್ಕಾಲಿಕ ಶಾಲಾ ಕಟ್ಟೋಣದ ಪ್ರಾರಂಭೋತ್ಸವವನ್ನು ನೆರವೇರಿಸಿದರು.

ಕುಂದಾಪುರ—ಸರ್ಕಲ್ ಕಾಂಗ್ರೆಸು ಕಮಿಟಿಯ ಚುನಾವಣೆಯ, ಕಳೆದ ತಾ. 31-3-51ರಲ್ಲಿ ಪಾಸನ್ನಂದಿರದ ಬಳಿ ಕಾಂಗ್ರೆಸು ಕಮಿಟಿ ಸದಸ್ಯರ ಮಹಾಸಭೆಯು ಶ್ರೀ ಎಡ್ತರೆ ಮಂಜಯ್ಯ ಶೆಟ್ಟರ ಅಧ್ಯಕ್ಷತೆಯಲ್ಲಿ ನಡೆಯಿತು. ಹೊಸವರುಷದ ಬಗ್ಗೆ ಈ ಕೆಳಗಿನ ಮಹನೀಯರನ್ನು ಸರ್ವಸಮ್ಮತಿಯಿಂದ ಆರಿಸಲ್ಪಾತು. ಶ್ರೀ. ಕಟೀಲ್ ಬಾಬುರಾಯ ಯಾನೆ ಮಂಜುನಾಥ ಪೈ (ಅಧ್ಯಕ್ಷ) ಮೂಡಲಕಟ್ಟೆ ಮುತ್ತಯ್ಯ ಹೆಗ್ಡೆ (ಉಪಾಧ್ಯಕ್ಷ.) ಶ್ರೀ. ಎಸ್. ಎಸ್. ಪರಮೇಶ್ವರಯ್ಯ (ಕೋಶಾಧಿಕಾರಿ) ಶ್ರೀ ಎಡ್ತರೆ ಮಂಜಯ್ಯ ಶೆಟ್ಟಿ ಮತ್ತು ಶ್ರೀ ಕೊಳ್ಕೆಬೈಲು ಸೂರಪ್ಪಶೆಟ್ಟಿ (ಜೊತೆ ಕಾರ್ಯದರ್ಶಿಗಳು) ಶ್ರೀಗಳಾದ ಪ್ರಭಾಕರ ತೋಳಾರ ಬಿ. ಎಚ್. ಕೋಟಿಯಣ್ಣ ಶೆಟ್ಟಿ, ಕೆ. ನಾರಾಯಣ ಕಾಮತ್, ಕೆ. ಮಹಾಬಲ ಶೆಟ್ಟಿ, ಬಿ. ಎಸ್. ಸೂರಪ್ಪ ಶೆಟ್ಟಿ ಕಾಳು ಸಂಜೀವಶೆಟ್ಟಿ, ಬಿ. ಜಿ. ಶೆಣೈ, ಪಿ. ಶಿವರಾಮಶೆಟ್ಟಿ, ಜಿ. ವೇಣುಗೋಪಾಲನಾಯ್ಕ, ಬಿ ಎಸ್. ಸೀನಪ್ಪ ಶೆಟ್ಟಿ, (ಕಾರ್ಯ ನಿರ್ವಾಹಕ ಸಮಿತಿಯ ಸದಸ್ಯರು) ಆರಿಸುವಿಕೆಯ ಕೆಲಸ ನಡೆದ ಮೇಲೆ ಕಾಂಗ್ರೆಸಿನ ಅವಶ್ಯವುಳ್ಳ ಮುಂದಿನ ಕಾರ್ಯಗಳಿಗಾಗಿ ನೆರೆದ ಸಭೆಯಲ್ಲಿ ಪಂಕ್ತಿಗೆ ಪಕ್ಕೂಲು ಮಾಡಲ್ಯಾತು. ನಂತರ ಲಘು ಉಪಹಾರ ನಡೆದು ಸಭೆಯು ಮುಗಿಯಿತು.

ಸುಲಭ ದರದಲ್ಲಿ
ಅಚ್ಚುಕಟ್ಟಾದ
ಮುದ್ರಣಕ್ಕೆ
ನವಯುಗ ಪ್ರೆಸ್,
ಉಡುಪಿ.

ಶ್ರೀಮತಿ ಚಂಪಕಂದೊರೈ ರಾಜನ್ ಅವರು ಮದ್ರಾಸ್ ಮೆಡಿಕಲ್ ಕಾಲೇಜನ್ನು ಸೇರಬಯಸಿ ಅರ್ಜಿ ಹಾಕಿದಾಗ ಅದು ತಿರಸ್ಕರಿಸಲ್ಪಟ್ಟಿತ್ತು. ಸರಕಾರದ ಜಾತೀಯ ಆಜ್ಞೆಯು ತನ್ನ ಅರ್ಜಿ ತಿರಸ್ಕರಣೆಗೆ ಕಾರಣವೆಂದೂ ಜಾತಿ, ಕುಲ ಮೊದಲಾದವುಗಳನ್ನೆಣಿಸಿ ಕಾಲೇಜುಗಳಿಗೆ ಪ್ರವೇಶಕೊಡುವ ಕ್ರಮವು ತನ್ನ ಮೂಲಭೂತ ಹಕ್ಕಿಗೆ ವಿರೋಧವಿರುವುದರಿಂದ ಆ ಆಜ್ಞೆಗೆ ತಡೆಹಾಕಬೇಕೆಂದು ಶ್ರೀಮತಿಯವರು ಮದ್ರಾಸ್ ಹೈಕೋರ್ಟಿನ ಮುಂದೆ ದಾವೆ ಹೂಡಿದ್ದರು. ಮದ್ರಾಸ್ ಹೈಕೋರ್ಟು ಶ್ರೀಮತಿಯವರ ಸಾಧನೆಯನ್ನು ಮನ್ನಿಸಿ ತೀರ್ಮಾನ ಕೊಟ್ಟಿತ್ತು. ಆ ತೀರ್ಮಾನದ ಮೇಲೆ ಮದ್ರಾಸು ಸರಕಾರ ಸುಪ್ರೀಮ್ ಕೋರ್ಟಿಗೆ ಅಪೀಲು ಮಾಡಿತ್ತು. ಸುಪ್ರೀಮ್ ಕೋರ್ಟಿನ ತೀರ್ಮಾನವು ಶ್ರೀಮತಿಯವರ ವಾದವನ್ನು ಮನ್ನಿಸಿದೆ.

೦೦೦ ೦೦೦

ಮದ್ರಾಸ್ ಹೈಕೋರ್ಟಿನ ತೀರ್ಮಾನ ನ್ಯಾಯಸಮ್ಮತವಾಗದೆ ಅದರ ಮೇಲೆ ಅಪೀಲು ಮಾಡುವ ಅಗತ್ಯವಿಲ್ಲವೆಂದೂ ಕಾನೂನು ಪಂಡಿತರನೇಕರು ಮದ್ರಾಸು ಸರಕಾರಕ್ಕೆ ವಿವೇಕ ಹೇಳಿದ್ದರು. ಆದರೆ ಈ ರೀತಿಯ ಜಾತೀಯ ಆಜ್ಞೆಯಿಂದ ಲಾಭಹೊಂದುತ್ತಿದ್ದ ಕೆಲವು ಸಮಾಜಗಳ ಧುರೀಣರು ಅಪೀಲು ಮಾಡಲೇಬೇಕೆಂದು ಹಟಹಿಡಿದರು. ಅಲ್ಲಲ್ಲಿ ಭಾಷಣಕೊಟ್ಟರು ಕಾಲೇಜು ವಿದ್ಯಾರ್ಥಿಗಳನ್ನು ಹುರಿದುಂಬಿಸಿದರು. ವಿದ್ಯಾರ್ಥಿಗಳು 'ಸುಪ್ರೀಮ್ ಕೋರ್ಟಿಗೆ ಅಪೀಲುಮಾಡಿರಿ' ಎಂದು ಕೂಗುತ್ತಾ ಮೆರವಣಿಗೆ ಮಾಡಿದರು. ದ್ರಾವಿಡ ನಾಡಿನ ಮುಖಂಡರೂ ಈ ಚಳವಳಿಗೆ ಸೇರಿದರು. ಅಸೆಂಬ್ಲಿಯಲ್ಲಿ ಪ್ರಶ್ನೋತ್ತರಗಳಾದವು. ಅಪೀಲು ಮಾಡುತ್ತೇವೆಂದು ಸರಕಾರದವರು ಭರವಸೆ ಹೇಳಬೇಕಾಯಿತು. ಹಾಗೆಯೇ ಮಾಡಿದರು.

ವಾರದ ಹರಟೆ

ಶ್ರೀ "ಯು. ಪಿ."

೦೦೦ ೦೦೦

ಸುಪ್ರೀಮ್ ಕೋರ್ಟಿನ ಜಡ್ಜರು ನಮ್ಮ ಮದ್ರಾಸ್ ಸರಕಾರಿ ವಕೀಲರ ಕೂಡೆ ಕೇಳಿದರು:- ಅದೇನಯ್ಯಾ, ಭಾರತದ ಇತರ ಎಲ್ಲಾ ಪ್ರಾಂತ್ಯಗಳು ಜಾತ್ಯಾತೀತ ಧೋರಣೆಯನ್ನು ಅನುಸರಿಸುತ್ತಿದ್ದಾರೆ. ನಿಮ್ಮ ಪ್ರಾಂತ್ಯ ಮಾತ್ರ ಯಾರಿಗೂ ಬೇಡವಾದ ಹಳೇ ಸಂಪ್ರದಾಯಕ್ಕೆ ಅಂಟಿಕೊಂಡಿರುವುದು - ಎನ್ನುವಾಗ ನಮ್ಮ ವಕೀಲರು-ನಮ್ಮ-ಪ್ರಾಂತ್ಯದವು ಹಿಂದುಳಿದ ಸಮಾಜಗಳನ್ನು ಉದ್ಧಾರಮಾಡುವ ಧೋರಣೆಯದು' ಎಂದರು ಆಗ ಅರ್ಜಿದಾರರ ಪರ ವಕೀಲರು ಅಲ್ಲಾಡಿಯವರು- ಕೆಳಕೋರ್ಟಿನಲ್ಲಿ ಸರಕಾರದವರು ಹಿಂದುಳಿದ ಸಮಾಜವೆಂದರೆ ಬ್ರಾಹ್ಮಣೇತರರಲ್ಲಿ ಕೆಲವು ಸಮಾಜಗಳು ಮಾತ್ರ ಎಂದು ವಾದಿಸಿದ್ದಾರೆ. ಇಲ್ಲಿ ಬ್ರಾಹ್ಮಣೇತರರಲ್ಲಿಯೂ ಹಿಂದುಳಿದ ಸಮಾಜವೆಂದು ಸಾಧಿಸುತ್ತಾರೆ ಎಂದರು. ಜಡ್ಜರು ಕೇಳಿದರು:- ಹಿಂದುಳಿದವರೆಂದರೆ ಅದು ಜಾತಿಗಳನ್ನು ಅನುಸರಿಸಿ ಇದೆಯೆ? ಹಿಂದುಳಿದವರೆಂದರೆ ಮುಂದುವರಿಸದವರೆಂದೇ ಅರ್ಥವಿನಾ ಜಾತಿ, ಮತ, ಕುಲಗಳನ್ನು ಹೊಂದಿಕೊಂಡಿರಲಾರದು ಎಂದರು. ಮತ್ತೆ ಈ ವಿಚಾರದಲ್ಲಿ ಅರ್ಜಿದಾರರ ಕಡೆಯಿಂದ ವಾದಿಸುವ ಅಗತ್ಯವಿಲ್ಲ ಅವರ ವಾದ ಸರಿಯಾದದ್ದೆಂದು ತಮಗೆ ಸಮಾಧಾನವಾಗಿದೆ ಎಂದು ಹೇಳಿಬಿಟ್ಟರು.

೦೦೦ ೦೦೦

ಇದರೊಂದಿಗೆ ನೆಲ್ಲೂರಿನ ವಕೀಲರೊಬ್ಬರ ಅರ್ಜಿಯೂ ಇತ್ತು. ಅವರು ಮುನ್ಸಿಫ ಕೆಲಸಕ್ಕೆ ಅರ್ಜಿ ಹಾಕಿದ ಬ್ರಾಹ್ಮಣರು. ಜಾತಿಯ ಕಾರಣದಿಂದ ಅವರ ಅರ್ಜಿ ತಿರಸ್ಕರಿಸಲ್ಪಟ್ಟಿತ್ತು. ಅದು ತನ್ನ ಮೂಲಭೂತ ಹಕ್ಕಿಗೆ ವ್ಯತಿರಿಕ್ತವಾದ ವಕೀಲರ ಅರ್ಜಿ ಸರಕಾರದವರ ಅಧೋರಣೆ ಅನ್ಯಾಯವೆಂದೂ ತಾವು ನಿರ್ಧರಿಸುವದಾಗಿ ಜಡ್ಜರೆಂದರು. ಮತ್ತು ತನ್ನ ಧೋರಣೆಯನ್ನು ಆದಷ್ಟು ಬೇಗನೇ ಬದಲಾಯಿಸುವುದು ಉಚಿತವೆಂದು ಬುದ್ಧಿ ಹೇಳಿದರು.

೦೦೦ ೦೦೦

ಆದರೆ ಮದ್ರಾಸ್ ಸರಕಾರವು ಕಷ್ಟದಲ್ಲಿ ಬಿದ್ದಿದೆ ಏಕೆಂದರೆ ತಮಿಳ ನಾಡಿನ ಜನರಲ್ಲಿ ಜಾತಿದ್ವೇಷವು ಬೆಳೆದುಹೋಗಿದೆ. ಕೆಲವರು ಅದನ್ನು ಬಹಿರಂಗವಾಗಿ ವ್ಯಕ್ತಪಡಿಸುತ್ತಾರೆ. ಕೆಲವರು ಬುದ್ಧಿವಂತರು ಕಾರ್ಯದಲ್ಲಿ ಮಾತ್ರ ತೋರಿಸುತ್ತಿದ್ದಾರೆ. ಕುರುಡರ ಮಧ್ಯದಲ್ಲಿರುವವನು ಒಂದು ಕಣ್ಣನ್ನಾದರೂ ಮುಚ್ಚಿಕೊಂಡಿರಬೇಕಂತೆ. ಹಾಗಿದೆ ನಮ್ಮ ಕಾಂಗ್ರೆಸು ಮಂತ್ರಿಗಳ ಅವಸ್ಥೆ. ಕೇಂದ್ರ ಸರಕಾರದ ಉದಾರಧೋರಣೆಯನ್ನು ತೋರಿಸಬೇಕು. ತಮಿಳರ ಸಂಕುಚಿತ ದಾರಿಯಲ್ಲಿ ನಡೆಯಬೇಕು. ಒರಳಲ್ಲಿ ಕುಳಿತುಕೊಳ್ಳಬೇಕು. ಒನಕೆಯ ಪೆಟ್ಟು ತಪ್ಪಿಸಿಕೊಳ್ಳಬೇಕು.

ತಮಿಳರಲ್ಲಿ ಜ್ಞಾನೋದಯವಾಗುವಂತಿದೆ. ಮೊನ್ನೆ ಮದರಾಸಿನಲ್ಲಿ ಸಾರ್ವಜನಿಕರ ಸಭೆಸೇರಿತ್ತು. ದಕ್ಷಿಣ ಭಾರತವು ದ್ರಾವಿಡರಿಗೊಂದು ಪಾಕಿಸ್ತಾನದಂತೆಯೇ ಪ್ರತ್ಯೇಕ ರಾಜ್ಯಬೇಕು. ಅದರಲ್ಲಿ ಉತ್ತರ ಭಾರತೀಯರಿಗೇನೂ ಅಧಿಕಾರವಿರಕೂಡದು. ಎಂಬ ದ್ರಾವಿಡ ಧುರೀಣರ ಕೂಗನ್ನು ನಿಲ್ಲಿಸಿಬಿಡಬೇಕು ಜಾತಿದ್ವೇಷವನ್ನು ಬಿಟ್ಟುಬಿಡಬೇಕು. ಭಾರತದಲ್ಲಿ ರಾಜ್ಯಾಡಳಿತಗೋಸ್ಕರ ವಿಭಾಗಬೇಕೆಂತಾದರೆ ಭಾಷಾವಾರು ಪ್ರಾಂತರಚನೆ ಆಗಬೇಕು. ಸಂಸ್ಕೃತದ ಮೇಲಣ ತಿರಸ್ಕಾರ ಹೋಗಬೇಕು. ತಮಿಳರಿಗೂ ಒಂದು ಭಾಷಾವಾರು ಕ್ರಮದಲ್ಲಿ ಪ್ರಾಂತ್ಯವಿರಬೇಕು] ಎಂದು ನಿರ್ಣಯವಾಯಿತು.

೦೦೦ ೦೦೦

ಹೌದು ಭಾಷಾವಾರು ಪ್ರಾಂತ್ಯ ರಚನೆಯ ಪ್ರಶ್ನೆ ಪುನಃ ತಲೆಎತ್ತಿದಂತಿದೆ ಈ ವಿಷಯದಲ್ಲಿ ನಮ್ಮಲ್ಲಿ ಸಾಕಷ್ಟು ತಪ್ಪು ಅಭಿಪ್ರಾಯಗಳಿವೆ. ಇದೇ ವಿಷಯ ಬರುವ ವಾರದ ಹರಟೆಗೆ ತೆಗೆದುಕೊಳ್ಳಲೇ!

ನಮಸ್ಕಾರ,

ಪ್ರೀತಿಯಿರಲಿ.

ಪ್ರಕಟಣೆ

ಉಡುಪಿ ಡಿ. ಮು. ಕೋರ್ಟಿನಲ್ಲಿ

O. P. No- 12/1951

1 ಹಾಜಿರಾನ್ ಬಿ-ಬಡೇಬ್ಯಾ ಮ್ಯೊದಿನ್ ಸಾಹೇಬನ ವಿಧವೆ-

2 ದಾದಾಬಿ-ಜ್ಯಾನಾ ಮ್ಯೊದಿನ್ ಸಾಹೇಬನ ಹೆಂಡತಿ ಉಡ್ಪಿ ತಾಲೂಕು-ಕೊಡವೂರು ಗ್ರಾಮದ ಮಲ್ಪೆ, —ಅರ್ಜಿದಾರರು

ಈ ಮೂಲಕ ಸಮಸ್ತಜನರಿಗೆ ತಿಳಿಯಪಡಿಸುವದೇನಂದರೆ-

ಸದ್ರಿ ಅರ್ಜಿಯು 1ನೇ ಅರ್ಜಿದಾರಳ ಗಂಡ 2ನೇ ಅರ್ಜಿದಾರಳ ಸಹೋದರ- ಬಡೇ ಬ್ಯಾ ಮ್ಯೊದಿನ್ ಸಾಹೇಬನು ತಾ. 26-2-1951ರಲ್ಲಿ ಮೃತಪಟ್ಟಿರುವದ್ರಿಂದ. ಆತಗೆ ಬರತಕ್ಕ ಯುನ್ಶೂರೆನ್ಸ ಹಣ, ಸೇವಿಂಗ್ಸ ಬ್ಯಾಂಕ್ ಡಿಪೋಜಿಟು ಹಣ, ವಗೈರೆ ವಸೂಲುಪಡಿಯುವರೆ-ಮುಹಮುಡನ್ ಲೋ ಪ್ರಕಾರ. ಹಕ್ಕುದಾರರಾದ ತಮಗೆ ಸಕ್ಸೆಸ್ಸನ್ ಸರ್ಟಿಫಿಕೇಟು ಕೊಡಿಸಬೇಕಾಗಿ ಅರ್ಜಿದಾರರು ದಾಖಲುಮಾಡಿದ ಸದ್ರಿ ಅರ್ಜಿಯು ತಾರೀಕು 23-5-1951ಕ್ಕೆ ತನಿಖೆಗೆ ಯಿಡೋಣಾಗಿಯದೆ. ಆಕ್ಷೇಪ ಹೇಳತಕ್ಕವರು ಯಿದ್ದರೆ ಆ ದಿವಸ 10ಗಂಟೆಗೆ-ಮೇಲ್ಕಂಡ ಕೋರ್ಟಿನ ಮುಂದೆ ಹಾಜರಾಗಿ ಜಾಹೀರು ಮಾಡಿಕೊಳ್ಳತಕ್ಕದ್ದು-ಯೆಂಬ ಸಂಗ್ತಿ ಯಿದಾ ಮೂಲಕ ಪ್ರಕಟಿಸಲಾಗಿಯದೆ.

N. V. Kamath
Advocate for plaintiff

ಉಡ್ಪಿ, 3-4-1951

Notice.

In the Court of the Subordinate Judge of South Kanara.

R. E. P. No. 335 of 1950.
O. S. No. 111 of 1945.

Between

Krishnamma — Petitioner and

Mahalaxmi alias Padmavathi-amma, minor guardian adlitem Srinivasa Bhatta —Respondent.

Take notice that the immovable properties situated in Hanthila village of Puttur Taluk comprised in S. No. 95/1, 2, 3, 4, 5 and 6 will be sold in public auction in the office of the Central Nazir of the District Court of South Kanara on **18 6 1951 at 11 a. m.** The upset price has been fixed at Rs 4,000/. Persons interested in purchase of the properties are at liberty to bid at the auction. For conditions of the sale and for details of the property the proclamation issued in the above execution may be referred.

G. K. Govinda Bhat.
Adv. for petitioner.

Mangalore, 16-3-1951

THE PANGAL NAYAK BANK LIMITED.

Head Office] (Incorporated in 1920.) Udipi S K]

SEASON DEPOSITS are received and accepted on the following terms:—

For three, four or five months deposits at 3% p. a
For six, seven or eight months deposits at 3½% p. a
These are to be terminable by the 30th June 1951.
Interest is payable along with the principal at maturity.
Our THREE YEAR CASH CERTIFICATES bring to You a fair yeild: For particulars please ask for copy of Rules

Nambiar's
ARYA VAIDYA SALA
UDIPI
Ideal House for Ayurvedic Treatment.
T. N. Kelu Nambiar,
Vaidya

ಜಗತ್ಪ್ರಸಿದ್ಧ ಕಾದಂಬರಿ
'ಫಂಟಮಾರಾ'
ಕನ್ನಡದಲ್ಲಿಯೂ ಇದೆ.

ಬರೆದುದು: ಇಗ್ನೇಜಿಯೋ ಸಿಲೋನೆ,
ಅನುವಾದಿಸಿದುದು: ಕು ಶಿ ಹರಿದಾಸ ಭಟ್ಟ
ಬೆಲೆ: ಎರಡು ರೂಪಾಯಿ

'ಈ ಶತಮಾನದ ಅತ್ಯಂತ ಪ್ರಮುಖ ಸ್ಫೂರ್ತಿ ಕಾದಂಬರಿಗಳಲ್ಲೊಂದು ..' — ಕರ್ಮವೀರ

'ಅವಮಾನದಿದಿರು, ಅನ್ಯಾಯದಿದಿರು ಯಾರೂ ತಗ್ಗಿ ನಡೆಯಬಾರದು ಎಂಬ ಧೀರವಾಣಿ ಸಿಲೋನೆಯದು' —'ಸಂಗಾತಿ'

'...ಅಂಥ ಕೆಚ್ಚಿನ ಲೇಖನಿಯನ್ನು ಕನ್ನಡದ ಬಾಯಿಯಲ್ಲಿ ಆಡ್ಡಿ ಶ್ರೀಮಾನ್ ಭಟ್ಟರು ಈ ಅನುವಾದವನ್ನು ಮೂಲಗ್ರಂಥಕ್ಕೆ ಚ್ಯುತಿಇಲ್ಲದಂತೆ ಮಾಡಿದ್ದಾರೆ' — 'ಚಿತ್ರಗುಪ್ತ'

'ಎಲ್ಲರಿಗೂ ತಿಳಿಯುವಂತೆ ಸುಲಭ ಶೈಲಿಯಲ್ಲಿ ಕನ್ನಡಿಸಲಾಗಿದೆ ರಾಜಕೀಯದಲ್ಲಿ ದುಡಿಯುವವರು, ರೈತನೊಂದಿಗೆ ಕೆಲಸಮಾಡುವವರು ಎಲ್ಲರೂ ಓದಲೇಬೇಕಾದ ಪುಸ್ತಕ' —'ವಿಮರ್ಶಕ'

'K. . Haridasa Bhat has done well in Translating silone's classic work 'FONTAMARA' into kannada He might be said to have done it well too.' **'Bharat Jyothi'**

'Mr. Haridasa Bhat has done the rendering so well that the characteristic fatures of the original have been successfully reproduced. Mr. Bhat and the publishers anb to be Congratulated' **'Indian Express'**

ಅಂದ ಮೇಲೆ ಇಂದೇ ಬರೆಯಿರಿ.
ನವಭಾರತ ಪುಸ್ತಕಭಂಡಾರ, ಉಡುಪಿ.

ಮೂಲ್ಕಿ ಬೇಂಕ್,
ಲಿಮಿಟೆಡ್, ಮೂಲ್ಕಿ.
1929ರಲ್ಲಿ ಸ್ಥಾಪಿತವಾಗಿ 21 ವರುಷಗಳಿಂದ ಊರ ಜನರ ಹಿತಕ್ಕಾಗಿ ಡಿಪೋಸಿಟ್ ಹಣಕ್ಕೆ ನ್ಯಾಯವಾದ ಬಡ್ಡಿಯಿಂದಲೂ, ಸಾಲದ ಹಣಕ್ಕೆ ಅತೀ ಕಡಿಮೆ ದರದ ಬಡ್ಡಿಯಿಂದಲೂ ಜನ ಹಿತಸಾಧನೆಯನ್ನು ಮಾಡುತ್ತಿರುವುದು
The Moolky Bank Ltd.,
Moolky, S. K.

ಸ್ವೀಕಾರ-ವಿಮರ್ಶೆ

ಬೀಳದ ತೆರೆ

ಬರೆದವರು: ಕುಂ. ಸೌ. ಸುಶೀಲಾ ಜೋಶಿ. ಪ್ರಕಾಶಕರು: ಕಮಲದಿನ್ನಿ ಗುರುರಾಯರು ಸಂಪಾದಕರು, ಸಂಜೀವಿನೀ ಪ್ರಕಾಶನ ಹುಬ್ಬಳ್ಳಿ. ಬೆಲೆ ರೂ. 3-8-0.

ಮೊದಲಿಂದ ಕೇಶವರಾಯರು ತೀರುವ ವರೆಗೆ "ಬೀಳದ ತೆರೆ"ಯ ಒಟ್ಟು ಪಾತ್ರಗಾರಿಕೆ, ಅತ್ಯಂತ ಮಾರ್ಮಿಕವಾಗಿದ್ದು ಕತೆಗೆ ಒಟ್ಟಿಗೊಡುತ್ತದೆ. ಗಂಡಹೆಂಡಿರೊಳಗಿನ ಮಾತುಕತೆಗಳಾಗಲೀ-ಸಂಸಾರಲ್ಲಾಪಗಳಾಗಲೀ ಉಜ್ವಲ ಪ್ರೇಮದ ಸಂಕೇತಗಳಾಗಿವೆ. ಕೇಶವರಾಯರ ಮತ್ತು ರಮಾಬಾಯಿಯವರ ಸಂಸಾರಿಕ ಚಿತ್ರಣ ನಿಜವಾಗಿಯೂ ರಸವತ್ತಾಗಿದೆ. ಒಬ್ಬ ಹೆಂಗುಸೇ ಇನ್ನೊಬ್ಬ ಹೆಂಗುಸಿನ ಇಲ್ಲವೆ ಸಂಸಾರದ ಸವಿ ನೆನಪುಗಳನ್ನು ಚೆನ್ನಾಗಿ ಚಿತ್ರಿಸಬಲ್ಲಳೆಂಬುದಕ್ಕೆ ಸೌ. ಸುಶೀಲಾ ಜೋಶಿಯವರು ಸಾಕ್ಷಿಯಾಗಿದ್ದಾರೆ. ಕೇಶವರಾಯರು ರಮಾಬಾಯಿಯವರನ್ನಗಲುವ ವರೆಗಿನ ಚಿತ್ರಣದಲ್ಲಿ ಇದು ಮೊದಲ ಯತ್ನವೆಂದು ನಮಗೇನೂ ಭಾಸವಾಗುವದಿಲ್ಲ. ಬಳಿಕ ರಮಾಬಾಯಿಯವರು ಅನಂತನನ್ನು ಬಾಳಿನ ಬೆಳಕಾಗಿ ಜೀವ ಹಿಡಿದು ನಿಲ್ಲುವ ಸನ್ನಿವೇಶ ಮನೋವೇಧಕವಾಗಿರುತ್ತದೆ. ರಮಾಬಾಯಿಯಂತಹ ಸಾಧ್ವೀಮಣಿಯರ ಬದುಕೂ ಹೀಗಾಗಬೇಕೇ? ಎನಿಸುತ್ತದೆ. ಅನಂತನ ಜೀವನ ಅಸಮಗ್ರ, ಅಸ್ವಾಭಾವಿಕವಾಗಿದೆಯೆನ್ನದೆ ವಿಧಿಯಿಲ್ಲ. ಅವನು ದೇಶಸೇವೆಗಾಗಿ ಧುಮುಕುವ ಸನ್ನಿವೇಶಗಳಲ್ಲಿ ಅವನಲ್ಲಿ ಆದರ್ಶವನ್ನು ತೋರಿಸುವದಕ್ಕಾಗಿಯೇ ಎತ್ತಿಕೊಂಡ ಹಾಗೆ ತೋರುತ್ತವೆ. ಆದರ್ಶವನ್ನು ತೋರಿಸುವಲ್ಲಿ ಸರಕಾರಕ್ಕೆ ವಿರುದ್ಧ ಸಂಚುಹೂಡಿ ರಾಜಕೀಯಕ್ಕೆ ದುಮುಕುವ ಒಂದೇ ಚಿತ್ರಣಗಳು ಸರ್ವಸಾಮಾನ್ಯ ಎಲ್ಲ ಕಾದಂಬರಿಗಳಲ್ಲಿಯೂ ಕಾಣುತ್ತಲಿವೆ. ಅನಂತನ ಪಾತ್ರದಲ್ಲಿ ಆ ಲಕ್ಷಣವಿದೆ. ದೇಶಕ್ಕಾಗಿ ಹೋರಾಡುವ ಧೀರತನ ಅವನಲ್ಲಿ: ಇಲ್ಲವೆ ಅವನ ದಾಸ್ಯ(?)ತೆ ಸಾಲದೆನ್ನಬೇಕು. ಕೃಷ್ಣರಾಯರಿಗೂ ರಮಾಬಾಯಿಯವರಿಗೂ ಗುಪ್ತರೀತಿಯ ಸಂಬಂಧವಿದೆ ಎಂಬ ಬೀಗವಿಲ್ಲದ ಬಾಯಿಗಳ ಮಾತುಕೇಳಿ ಬಹಳ ವರ್ಷದಿಂದ ತಾಯಿಯೇ ಆಸರೆಯಾಗಿದ್ದ ಮಗನೂ, ಅದರಲ್ಲೂ ಬೆಳೆದು ಬುದ್ಧಿಶಾಲಿಯಾದ ಮೇಲೆ "ತಾಯಿ ಸೂಳೆ" ಎನುವಷ್ಟರ ಮಟ್ಟಿನ ದುರ್ಬಲನಾಗುವದು ತೀರಾ ಅಸ್ವಾಭಾವಿಕ. ಅಂತಹನಿಂದ ದೇಶೋದ್ಧಾರವಾದೀತೆಂದು ಭಾವಿಸುವುದು ಶುದ್ಧ ಹುಚ್ಚೇಸರಿ. ಅನಂತನ ಅಸ್ಥಿರತೆಯ ಕುರಿತು ನಾವು ಹೇಳಬೇಕಾದಂತಹವನ್ನು ಇಂದಿರಾಳ ಬಾಯಿಯಿಂದ ಲೇಖಕಿಯರೇ ನುಡಿಸಿದ್ದಾರೆ. ಕಾದಂಬರಿಯ ಕೊನೆಯು ವಿಚಿತ್ರವಾಗಿ ತೋರುತ್ತದೆ. ಇಷ್ಟು ಸುದೀರ್ಘ ಬರೆದವರು ನಿರ್ದಿಷ್ಟವಾದ ಗೊತ್ತುಗುರಿಯಿಲ್ಲದೆ ಬರೆದರೆ? ಎನುವ ಹಾಗೆ ಅನಿರೀಕ್ಷಿತವಾಗಿ ಕತೆ ಮುಕ್ತಾಯಗೊಳ್ಳುತ್ತದೆ. ಅನಂತ, ಇಂದಿರೆ, ಮತ್ತು ರಮಾಬಾಯಿಯವರನ್ನು ನಡುಹೊಳೆಯಲ್ಲಿ ಕೈಬಿಟ್ಟಂತೆ ಓದುಗರ ಪಾಲಿಗೆ "ಬೀಳದ ತೆರೆ" ಆಕಸ್ಮಿಕವಾಗಿ ಬಿದ್ದ(?) ತೆರೆ ಎನಿಸುತ್ತದೆ. ಅಂತೂ ಈ ಎಲ್ಲಾ ದೋಷಗಳು ಸಿಕ್ಕಷ್ಟವಾದಂತಹವುಗಳು ಕತೆಯಲ್ಲಿ ತಾಂತ್ರಿಕತೆಯಿಂದಿದ್ದರೂ ಕಾದಂಬರಿಗಿರಬೇಕಾದ ಪಾತ್ರಗಾರಿಕೆ ಮೊದಲಿಂದ ಕೊನೆಯ ತನಕವೂ ನಮ್ಮ ಮನವನ್ನಾಕರ್ಷಿಸುತ್ತದೆ. ಮುಂದೆ ಉತ್ತಮ ಕಾದಂಬರಿಯನ್ನು ಶ್ರೀಮತಿ ಸುಶೀಲಾ ಜೋಶಿಯವರು ನೀಡಬಲ್ಲರೆಂಬುದಕ್ಕೆ "ಬೀಳದ ತೆರೆ" ಮೈಲಿಗಲ್ಲಾಗಿರುತ್ತದೆ. "ಬೀಳದ ತೆರೆ"ಯ ಮೇಲೆ ಮುದ್ರಾರಾಕ್ಷಸನ ದಾಳಿ ಭಯಂಕರವಾಗಿದೆ, ತತ್ಫಲವಾಗಿ ಓದುಗರೂ ಕಾಟ ಪಡಬೇಕಾಗುತ್ತದೆ.

ಪತ್ರಾವಳಿ

ಬರೆದವರು: ಶ್ರೀ ಬಿ. ಡಿ. ಗಣಪತಿ. ಕೊಡಗು ಪ್ರೆಸ್, ಮಡಿಕೇರಿ. ಬೆಲೆ ರೂ. ೨-೦-೦

ಈ ಬಗೆಯ ಪತ್ರ ಲೇಖನಗಳು ಕನ್ನಡದಲ್ಲಿ ವಿರಳ ಶ್ರೀ ಸಿ. ಕೃಷ್ಣ ಅವರ "ಮುಗುದೆಯರ ಪತ್ರಗಳು" ಮತ್ತು ಇನ್ನೊಂದು ಅವರ ಪುಸ್ತಕವನ್ನು ಬಿಟ್ಟರೆ ಶ್ರೀ ಗಣಪತಿಯವರದ್ದೇ ಮುಖ್ಯವಾಗಿದೆಯೆನಬೇಕು. ಸಿ ಕೃಷ್ಣರವರ ಪತ್ರಸಂಕಲನಗಳು ಮದುವೆಯಾದ ಪತಿಪತ್ನಿಯರ ಸರಸಸಲ್ಲಾಪಗಳಾಗಿರುತ್ತವೆ. ಪತಿಪತ್ನಿಯರೊಳಗಿನ ಪ್ರೇಮಪೂರ್ಣಗಿಂತ ವಿಗಿಲಾದ ಲೋಕಾನುಭವ ಅದರಲ್ಲಿಲ್ಲ. ಶ್ರೀ ಬಿ ಡಿ ಗಣಪತಿಯವರ ಈ ಪತ್ರಲೇಖನವು ಮದುವೆಯಾಗುವ ಮುನ್ನ ಬರೆದುಕೊಂಡ ಪ್ರೇಮಪತ್ರಗಳು. ಮಾನಸಿ, ಗಣೇಶರೊಳಗೆ ಪವಿತ್ರ ಪ್ರೇಮವನ್ನುದ್ಭವಿಸಿ ಅವರ ಬಾಳಿನ ಮಂದಾರವನ್ನರಳಿಸುವ ಈ ಪತ್ರ ಕುಸುಮಗಳನ್ನು ಎಷ್ಟು ಓದಿದರೂ ಸಾಲದೆನ್ನುತ್ತದೆ. ಮಾನಸಿಯಾಗಲೀ-ಗಣೇಶನಾಗಲೀ ಒಬ್ಬರನ್ನೊಬ್ಬರು ಒಲಿಸಿಕೊಳ್ಳುವ ಉದ್ದೇಶಕ್ಕಾಗಿಯೇ ಈ ಪತ್ರಗಳನ್ನು ಬಳಸಿಕೊಂಡಿಲ್ಲ. ಹಲವು ಆದರ್ಶಗಳ-ನೈಸರ್ಗಿಕ ಸ್ಥಳಾವಗಳ ಮಿಲನವೇ ಅವುಗಳ ಶಕ್ತಿಸ್ವರೂಪವಾಗಿದೆ ಅಂತಲೇ ಈ ಪತ್ರಾವಳಿಗಳು ಪ್ರೇಮಬಾಯಾರಿಕೆಯಿಂದ ಬಳಲಿದಂತಹವಾಗಿರದೆ ನಿರ್ಮಲಾಂತಃಕರಣಗಳ ಸಂದೇಶವನ್ನು ಬೀರುವಂತಹವುಗಳಾಗಿರುತ್ತವೆ. ಅರುವತ್ತರಷ್ಟು ಪತ್ರಗಳಲ್ಲಿಯೂ ಉಚ್ಚಾದರ್ಶಗಳನ್ನಿಟ್ಟುಕೊಂಡು ಬಾಳಿನ ನೌಕೆಯನ್ನು ಸಾಗಿಸುವ ಮಹಾ ಬಯಕೆಗಳಿವೆ. ಒಂದಕ್ಕಿಂತ ಒಂದು ಹೆಚ್ಚು ಮುಂದಾಗಿ ಪತ್ರಗಳಲ್ಲಿ ಒಲವು ಸೂಸುತ್ತದೆ. ವಿವಾಹ ಸನ್ನಿವೇಶದಲ್ಲಿ ಹಣ, ಒಡವೆವಸ್ತುಗಳನ್ನು ಕೊಟ್ಟು ತಮ್ಮ ಅಂತಸ್ತಿನ ಕುರಿತು ಬೆನ್ನು ತಟ್ಟಿಕೊಳ್ಳುವವರಿಗೆ ಇದು ಆದರ್ಶಪಲ್ಲವಾದರೂ, ಮುಂದೆ ಉತ್ತಮ ಜನಾಂಗವನ್ನು ನಿರ್ಮಾಣಮಾಡಬಲ್ಲ ಧಂಪತಿಗಳಿಗೆ ಇಂತಹ ಸಾಂಸ್ಕೃತಿಕ ಮಿಲನ ಉತ್ತಮಾದರ್ಶವಾಗಿದೆ. ಸಮಾಜದಲ್ಲಾಗಲೀ-ಸಂಸಾರದಲ್ಲಾಗಲೀ ಹೆಣ್ಣು, ಗಂಡಿನ ಕಾರ್ಯದಲ್ಲಿ ಸಹಭಾಗಿಯಾಗಿದ್ದರೇನೆ-ಹೊಂದಿಕೊಂಡಿದ್ದರೇನೆ-ಶಾಂತಿಸಮಾಧಾನಗಳು ಕಲೆಯುತ್ತಿಯಾವು. ಬಾಳು ನಂದನವಾದೀತು. ಮುಖ್ಯವಾಗಿ ಒಬ್ಬರನ್ನೊಬ್ಬರು ತಿಳಿದು ಬಾಳುವದರಲ್ಲೇ ಇದೆ ಆ ಧರ್ಮ. ಶ್ರೀ ಬಿ. ಡಿ. ಗಣಪತಿಯವರ 'ಪತ್ರಾವಳಿ' ಆ ತತ್ವವನ್ನು ಚೆನ್ನಾಗಿ ಪ್ರತಿಪಾದಿಸಿದೆ.

—ಎಸ್ಸೆಲ್

ಹಕ್ಕೀ ನೋಟ

೧ ವಿಜಯ (ಮಾಸಪತ್ರಿಕೆ)

ಸಂಪಾದಕರು: ಧರ್ಮಪಾಲ ಬಿ. ವಿಜಯ ಕಾರ್ಯಾಲಯ, ಕಾರ್ಕಳ. ವಾ. ಚಂದಾ ರೂ. 3-0-0. ಬಿಡಿ ಪ್ರತಿ ಆ. 0-4-0.

ಕಾರ್ಕಳದ ಹೊಸ ಪತ್ರಿಕೆಯಿದು. 'ಕಲಾಸಿದ್ಧಿ' 'ಶ್ರೀಮಾನ್ ಬಿ. ಆರ್. ಕೆ. ಸಂದು ಬಿಡಿ' 'ಆರ್ಥಿಕ ಸ್ವಾತಂತ್ರ್ಯ' 'ಕಾರ್ಯ ಸಾಧನೆಯ ಕೆಲವು ಉಪಾಯಗಳು' ಈ ನಾಲ್ಕು ಬರಹಗಳು ವಿಚಾರಣೀಯವಾದಂತಹವುಗಳು. ಸಂಪಾದಕೀಯದಲ್ಲಿ ಸಂಪಾದಕರು ಕೊಟ್ಟ ಭರವಸೆ-ಘೋಷಣೆಗಳೆಲ್ಲ ಕಾರ್ಯಗತವಾಗಿ ಬರಲೆಂದು ಹಾರೈಸುತ್ತೇವೆ.

೨ ಕರ್ನಾಟಕ ಸಂಘ (ವಾರ್ಷಿಕವರದಿ)

ಅಧ್ಯಕ್ಷ್ಯರು: ಶ್ರೀ. ವಿ. ಎನ್. ಕುಡ್ವರು. ಕಾರ್ಯದರ್ಶಿಗಳು: ಶ್ರೀ ಕೆ. ವೈ ನಾರಾಯಣರಾವ್, ಶ್ರೀ ಈಶ್ವರಭಟ್, ೧೩, ವೀರಸ್ವಾಮಿ ಪಿಳ್ಳೈ ಸ್ಟ್ರೀಟ್, ಎಗ್ಮೋರ್, ಮದ್ರಾಸ್ ೮.

ಸುಮಾರು ಸಾವಿರದ ನಲುವತ್ತೇಳು ಸದಸ್ಯರ ಬಳಗವುಳ್ಳ ಈ ಸಂಘವು ವಿಧಾಯಕ ಕಾರ್ಯಕ್ರಮಗಳಿಂದ ಕನ್ನಡ ಸೇವೆಯನ್ನು ಮದ್ರಾಸಿನಂತಹ ಶಹರಿನಲ್ಲಿ ಮಾಡುತ್ತಿರುವುದು ಅಭಿನಂದನಾರ್ಹ ವಿಚಾರ. ಇದಿಯ ವರ್ಷದಲ್ಲಿ ಸಂಘ ಸಾಧಿಸಿದ ಮತ್ತು ಹಲವು ರೀತಿಯ ಕಲಾತ್ಮಕ ಚಟುವಟಿಕೆಯನ್ನು ನಡೆಸಿದ ಈ ಸಂಘದ ಕಾರ್ಯವನ್ನು ಶ್ಲಾಘಿಸುತ್ತೇವೆ.

೩ ರೀಯಲ್ ಇಂಕ್

ಭುವನೇಂದ್ರ ಪ್ರೊಡಕ್ಟ್ಸ್ ಲಿ., ಕಟಪಾಡಿ, ದ. ಕ.

ಭುವನೇಂದ್ರರವರ ಉತ್ಕೃಷ್ಟ ತಯಾರಿಕೆಯಾದ ಈ 'ರೀಯಲ್ ಇಂಕ್'ನ್ನು ಸಾದರದಿಂದ ಸ್ವೀಕರಿಸಿದ್ದೇವೆ. ಈ ಶಾಯಿಯಲ್ಲಿ ಬರೆದ ಬರಹಗಳು ಅತ್ಯಂತ ಲಕ್ಷಣವಾಗಿ ತೋರುತ್ತವೆ. ಪೆನ್ನುಗಳ ಉಪಯೋಗಕ್ಕೆ ಇವು ತಕ್ಕುದಾಗಿವೆ.

ದ. ಕ. ಕೃಷಿಕರ ಸಹಕಾರಿ ಮಾರಾಟ ಸಂಘ ಲಿಮಿಟೆಡ್,
ಮಂಗಳೂರು.

ನೋಟೀಸು

ಈ ಸಂಘದ ಬರುವ ಮಹಾಸಭೆಯನ್ನು ತಾರೀಖು 16 4-51ರಲ್ಲಿ ಸೋಮವಾರ ಅಪರಾಹ್ನ 4½ ಘಂಟೆಗೆ ಮಂಗಳೂರು ಸಹಕಾರಿ ಟೌನ್ ಬೇಂಕಿನ ಮಹಡಿಯಲ್ಲಿ ಜರಗಿಸುವುದಾಗಿ ನಿರ್ಣಯಿಸಿಯದೆ. ಎಲ್ಲಾ ಮೆಂಬರರು ಹಾಜರಾಗಬೇಕಾಗಿ ವಿನಂತಿ. ಕಾರ್ಯಕ್ರಮವನ್ನು ಕೆಳಗಡೆ ಕಾಣಿಸಲಾಗಿದೆ.

ಬಿ ಸೂ ಸಂಘದ ಪ್ರತಿನಿಧಿಗಳು ಆಯಾಯ ಸಂಘದ ಮಹಾಸಭೆ ಡೈರೆಕ್ಟರರ ಅಥವಾ ಪಂಚಾಯತ ಸಭೆಯ ನಿರ್ಣಯದ ಮಂಜೂರು ನಕಲನ್ನು ಮುಂದಾಗಿ ಕಳಿಸಿಕೊಡಬೇಕು, ಅಥವಾ ಬರುವಾಗ್ಯೆ ಅವರೊಡನೆ ತಂದು ಹಾಜರುಪಡಿಸಬೇಕಾಗಿ ಅಪೇಕ್ಷೆ.

ಕಾರ್ಯಕ್ರಮ

1 1949-50ನೇ ವರ್ಷದ ಬಾಬ್ತು ಡಿ ರಿಜಿಸ್ಟ್ರಾರವರ ಆಡಿಟು ಸರ್ಟಿಫಿಕೇಟು ಮತ್ತು ಆಡಳಿತ ಮಂಡಳಿಯವರ ವರದಿ

2 1950 51ನೇ ವರ್ಷದ ಬಾಬ್ತು ದುರಸ್ತಿಪಡಿಸಿದ ಆಯವ್ಯಯದ ಪಟ್ಟಿ ಮತ್ತು 51-52ನೇ ವರ್ಷದ ಬಾಬ್ತು ಅಂದಾಜು ಆಯವ್ಯಯದ ಪಟ್ಟಿ

3 ಸಂಘಕ್ಕೆ ಬರತಕ್ಕ ರೂಪಾಯಿ 10991-13-8ರಷ್ಟು ಕೆಟ್ಟ ಸಾಲಗಳನ್ನು ವಜಾ ಬರೆಯುವುದರ ಕುರಿತು.

4 ಸಂಘದ ನಂಬ್ರ 42A ಮತ್ತು 51Aನೇ ಉಪನಿಬಂಧನೆಗಳನ್ನು ವಜಾಮಾಡುವುದರ ಕುರಿತು

5 ಸಂಘದ 16ನೇ ಉಪನಿಬಂಧನೆ ಪ್ರಕಾರ ಡೈರೆಕ್ಟರರ ಚುನಾವಣೆ.

(ಅಪ್ಪಣೆ ಪ್ರಕಾರ)

ಮಂಗಳೂರು 23 3 1951

ಎ ಲಕ್ಷ್ಮೀನಾರಾಯಣ ರಾವ್, ಕಾರ್ಯದರ್ಶಿ.

ಅಮೃತಾಂಜನ

ತಲೆನೋವು, ಕಿವಿನೋವು, ಉಳುಕು ಕುತ್ತಿಗೆ, ಭುಜ ಹಲ್ಲು ವೇದನೆಗಳಿಗೂ, ಎದೆ ನೋವು, ಗಾಯಗಳು, ಚಾಕುಕೊಳ್ಳುವುದು, ಚೇಳುವಿಷಮುಂತಾದವು, ಪಕ್ಷವಾತ, ಮೊಡವೆ, ಮೊದಲಾದ ಎಲ್ಲಾ ರೋಗಗಳಿಗೂ ಸಿದ್ಧೌಷಧ

REGD

ಹುಳು ಕಡ್ಡಿ ಮದ್ದು ನಮ್ಮಲ್ಲಿ ಸಿಕ್ಕುತ್ತದೆ

ಅಮೃತಾಂಜನ ಲಿಮಿಟೆಡ್
ಮದರಾಸು.
ಬೊಂಬಾಯಿ ಮತ್ತು ಕಲ್ಕತ್ತ.

ಉಡುಪಿಗೆ ಹೋಗಬೇಕು! ಆದರೆ ಉಳಿದುಕೊಳ್ಳುವುದೆಲ್ಲಿ?

ರಾಯಲ್ ಮಹಾಲಿನಲ್ಲಿ

ಬಸ್ ಸ್ಟೇಂಡಿಗೆ ಅತಿ ಸಮೀಪ! ಕೃಷ್ಣಮಠಕ್ಕೆ ದೂರವಿಲ್ಲ!

ವ್ಯಾಪಾರವ್ಯವಹಾರ ವಿಹಾರಸ್ಥಳಗಳಿಗೆಲ್ಲ ಕೇಂದ್ರ!

ನಿಮ್ಮ ಸ್ನಾನ, ಊಟ, ಉಪಹಾರ, ಟ್ಯಿಫಿನ್, ಶಯನ ಇವಕ್ಕೆಲ್ಲ ಉತ್ತಮ ವ್ಯವಸ್ಥೆ ಕರೆದರೆ ಓಗೊಡುವ ನೌಕರರ ವರ್ಗ!

ಮೇಲಾಗಿ ಉಡುಪಿ ಬ್ರಾಹ್ಮಣರ ಅಡಿಗೆ, ತಿಂಡಿತಿನಸು, ಇವುಗಳ ರುಚಿರುಚಿ ಹೇಳಬೇಕೆ?

ಪ್ರೊಪ್ರೈಟರ್:— ಕೆ. ವೆಂಕಟ್ರಮಣಭಟ್.

For up-to-date Lodging & Boarding
ROYAL MAHAL,
UDIPI, S. Kanara.

ಸ್ವಲ್ಪ ಬಂಡವಾಳದಲ್ಲಿ
ಒಂದು ಉಪಯುಕ್ತ ಹಾಗೂ ಲಾಭಕರ ಉದ್ಯೋಗ.
ಸ್ಟೀಲ್ ಮಿಲ್, ಎಣ್ಣೆಯ ಮಿಲ್ ಅಥವಾ ಟಿನ್ ಯಾ ತಗಡಿನಿಂದ ಅನೇಕ ವಸ್ತುಗಳನ್ನು ಸುಲಭದಲ್ಲಿ ತಯಾರಿಸಿರಿ
ವಿವರದ ಬಗ್ಗೆ ಬರೆಯಿರಿ.
The Vijay Engineering Co. Ltd.
Mazagaon, Bombay 10.

ವಾರದ ಭವಿಷ್ಯ

ತಾರೀಕು 5-4-51 ರಿಂದ — ತಾರೀಕು 11-4-51 ರವರೆಗೆ

ಮೇಷ— ಇಳಿತಭರತಗಳಂತೆ ಹರಿವ ತೀವ್ರವಾಗುತ್ತಿರುವ ಈ ಜೀವನ ಸಂಗ್ರಾಮದಲ್ಲಿ ನಿಮಗೀಗ ಇಳಿತದ ಕಾಲವು ಪ್ರಾಪ್ತವಾಗಿರುವದು. ಆದುದರಿಂದ ನಿಮ್ಮ ಉದ್ಯೋಗದಲ್ಲಿ ಉತ್ಪತ್ತಿಗಿಂತ ಖರ್ಚು ಹೆಚ್ಚಾಗುತ್ತಾ ಬರುತ್ತಿದೆ. ಇದ್ದರಿಂದ ಎಲ್ಲಾ ಭಾಗದಲ್ಲೂ ಎಚ್ಚರವಾಗಿರುವುದು ಲೇಸು. ಪ್ರಯಾಣಾದಿಗಳನ್ನು ಸದ್ಯಕ್ಕೆ ಕಾದಿಡುವದೊಳ್ಳಿತು. ಆರೋಗ್ಯದ ಪಟ್ಟಿಗೆ ಬಲುಹಾಗಲೂ ಕಠಿಣಗಿರಿ. ತಾ, 7. 8. ಇದ್ದುದರಲ್ಲಿ ಉತ್ತಮವೆನಿಸುವದು.

ವೃಷಭ— ಹಲವಾರು ಖರ್ಚುಗಳು ನಿಮಗಿರುವನಾದರೂ ಉದ್ಯೋಗದಲ್ಲಿನ ಫಲವು ಉತ್ತಮವಿರುವುದರಿಂದ ಹಣದ ಅಡಚಣೆಯುಂಟಾಗದು. ಪಿತ್ತಜನ್ಯವಿಕಾರದಿಂದ ಆರೋಗ್ಯವು ಕೆಡುವುದಲ್ಲದೆ ನೇತ್ರಸಂಬಂಧವಾದ ದೋಷವು ತಲೆದೋರಲಿದೆ ವ್ಯಾಪಾರ ವ್ಯವಹಾರಗಳಲ್ಲಿ ಶತ್ರುಜನರ ವಿರೋಧವು ಹೆಚ್ಚಿದರೂ ದೈವಾನುಗ್ರಹದಿಂದ ಮುಕ್ತರಾಗುವಿರಿ. ತಾ, 5 6-10-11 ಈ ದಿನಗಳಲ್ಲಿ ಮಾನ ವಿಜಯ ಲಾಭಗಳುತ್ತಮ

ಮಿಥುನ— ಸುಖಸ್ಥಾನವನ್ನು ಹೊಂದಿದ ಶನಿಯನ್ನು ಹೊರತಾಗಿ ಉಳಿದ ಗ್ರಹರು ಶುಭಪ್ರದರಿರುವುದರಿಂದ ನೀವೀವಾರದಲ್ಲಿ ಕೀರ್ತಿಯುಶಸ್ಸುಗಳನ್ನು ಹೊಂದುವಿರಿ. ನಿಮ್ಮ ಸಾಹಸ ಕೃಂತಲೂ ದ್ವಿಗುಣವಾದ ಫಲವು ಲಭಿಸುವದು. ಯಾವ ಮಹತ್ಕಾರ್ಯವೇ ಇರಲಿ ಮುಂದಿಟ್ಟ ಹೆಜ್ಜೆಯನ್ನು ಹಿಂದಿಡಬೇಕಾಗಿ ಬರಲಾರದು. ವಾರಾಂತ್ಯದ 3 ದಿನಗಳಲ್ಲಿ ನಿಮ್ಮ ಮನಸ್ಸಿಗೆ ಸುಖಶಾಂತಿಗಳಿರಲಾರವು.

ಕರ್ಕಾಟ— ಈ ವಾರವು ನಿಷ್ಪನಿಷ್ಟ ಫಲಗಳಿಂದ ಸಮ್ಮಿಶ್ರವಾಗಿದ್ದು ಮಧ್ಯಮ ಫಲದಾಯಿಯಾಗಿರುವದು. ಗೃಹಸುಖಸ್ಥಾನ ಲಾಭಾದಿಗಳನ್ನು ಹೊಂದಿದ ನಿಮಗೆ ವಿರೋಧಿಗಳಿಂದ ಎಳ್ಳಷ್ಟು ಬಾಧೆಯುಂಟಾಗದು. ಆದರೆ ವಾಕ್ ಸಂಬಂಧವಾಗಿ ನಿಷ್ಠುರಕಲಹಗಳುಂಟಾದಾವು ವ್ಯಾಪಾರದಲ್ಲಿ ನಷ್ಟವುಂಟಾಗಬಹುದು. ವಾರಾಂತ್ಯದ 5 ದಿನಗಳಲ್ಲಿ ಅಧಿಕ ಆದಾಯ ಮಿತ್ರಸಮಾಗಮವು ಶರೀರಸುಖ ಹೊಂದುವಿರಿ

ಸಿಂಹ— ಕ್ಷಣದಿಂದ ಕ್ಷಣಕ್ಕೆಂಬಂತೆ ಕಷ್ಟನಷ್ಟಗಳು ಹೆಚ್ಚುತ್ತಾ ಬರುವವು. ಪ್ರಯತ್ನಕ್ಕೆ ತಕ್ಕುದಾದ ಸಲಾಭವಿಲ್ಲ. ಅನಿರೀಕ್ಷಿತಗಳಾದ ವ್ಯರ್ಥ ಖರ್ಚುಗಳುಂಟಾಗುವವು. ಈ ಕಾರಣದಿಂದಾಗಿ ಸಾಲಕಡಗಳನ್ನು ಮಾಡುವಿರಿ. ಗುರುಹಿರಿಯರಿಂದ ವಿರೋಧ. ಸೇವಕ ವರ್ಗದವರಿಂದ ನಷ್ಟ ಅವಮಾನಾದಿಗಳು ಉಂಟಾಗುವ ಯೋಗವಿದೆ ವಾರಾಂತ್ಯದ 2 ದಿನಗಳು ಕೊಂಚ ಉತ್ತಮವಿವೆ.

ಕನ್ಯಾ— ಸಾಡೇಸಾತ್ ಶನಿಯು ನಿಮ್ಮ ಜನ್ಮಸ್ಥಾನದಲ್ಲಿದ್ದರೂ ಇಂದೀಗ ಸುಖಪತಿಯಾದ ಬೃಹಸ್ಪತಿಗಳು ಸ್ವಸ್ಥಾನವನ್ನು ಹೊಂದಿ ಪೂರ್ಣದೃಷ್ಟಿಯನ್ನು ನಿಮ್ಮ ಮೇಲೆ ಬೀರಿರುವುದರಿಂದ ನಿಮ್ಮ ಜೀವನಾಕಾಶದಲ್ಲಿ ತುಂಬಿರುವ ವಿಪತ್ತುಗಳೆಂಬ ಮೋಡಗಳು ಪ್ರಚಂಡ ಮಾರುತನಿಗೆ ಸಿಲುಕಿ ದಿಗಂತಗಳಿಗೆ ಸರಿದ ಕಾರಣ ಸುದಿನಗಳು ನಿಮಗೆ ಪ್ರಾಪ್ತವಾಗಿವೆ. ವಾರದ ಕೊನೆಯ ಭಾಗದಲ್ಲಿ ಶತ್ರುಗಳ ಪೀಡೆ ಹೆಚ್ಚಿದರೂ ಧನಜನಬಲಿಯುತರಾದ ನಿಮಗೆ ಅದರಿಂದ ಸ್ವಲ್ಪವೂ ಹಾನಿಯಾಗದು.

ತುಲಾ— ದಿನಗಳು ತೀರ ಪ್ರತಿಕೂಲವಿರುವವು ನೌಕರಿ ದಂದೆ ಉದ್ಯೋಗಗಳಲ್ಲಿ ವಿರೋಧಗಳು ಹೆಚ್ಚುತ್ತಿದ್ದು ತತ್ಸಯುಕ್ತ ಮನೋರೋಗ ಪೀಡಿತರಾಗುವಿರಿ, ಕ್ಷಣಕಾಲವೂ ನಿಮ್ಮ ಮನಸ್ಸು ಸ್ಥಿರವಾಗಿ ಉಳಿಯಲಾರದು. ವಿಶೇಷತಃ ಸ್ತ್ರೀಜನರಿಂದುಂಟಾಗತಕ್ಕ ಕಲಹವಿರಹ ಅವಮಾನಾದಿಗಳಿಂದ ಸಂತಪ್ತರಾದ ನಿಮಗೆ ಆದಿಯ 4 ದಿನಗಳು ಕೊಂಚ ಸಹ್ಯವಿರುವವು.

ವೃಶ್ಚಿಕ— ನಿಮ್ಮ ಅಭಿಲಾಷೆಗಳು ಈ ವಾರದಲ್ಲಿ ನೆರವೇರಲಿವೆ. ಧೈರ್ಯಸ್ಥೈರ್ಯ ದಕ್ಷಯುಕ್ತಿಗಳಿಂದ ಕೂಡಿದ ನಿಮಗೆ ನಿಮ್ಮ ಪ್ರಯತ್ನಕ್ಕಿಂತಲೂ ಅಧಿಕವಾದ ಫಲವು ನಿಸ್ಸಂದೇಹವಾಗಿ ಪ್ರಾಪ್ತವಾಗಲಿದೆ. ಸಮಾಜದಲ್ಲಿ ಸ್ಥಾನಮಾನಗಳು ಲಭಿಸುವವು. ಸಾಂಸಾರಿಕ ಸುಖಕ್ಕೇನೂ ಕೊರತೆಯುಂಟಾಗದು ವಿದ್ಯಾರ್ಥಿಗಳಿಗೂ ತದುಪಜೀವಿ ಜನತೆಗೂ ಅತ್ಯುತ್ತಮವಿದೆ ಈ ವಾರವು. ವಾರಾಂತ್ಯದ 3 ದಿನಗಳು ಅನುಕೂಲವಿವೆ.

ಧನು— ಶ್ರಮಸಹಿಷ್ಣುಗಳೂ ಉದ್ಯಮಶೀಲರೂ ಆದ ನಿಮಗೆ ಈ ವಾರದಲ್ಲಿ ದೈವವು ವಿಶೇಷ ಪ್ರತಿಕೂಲವಿರುವುದರಿಂದ ಯಾವ ಉದ್ಯೋಗದಲ್ಲೂ ಆದಾಯಕ್ಕಿಂತ ವ್ಯಯವೇ ಅಧಿಕವಾಗಿ ಪರಿಣಮಿಸುವದು. ಮಾತ್ರವಲ್ಲ ಸಂಸಾರದಲ್ಲಿ ನಿತ್ಯಜನರ ಬಂಧುಜನರೊಡನೆ ಮನಸ್ತಾಪ ಗುರುಹಿರಿಯರಲ್ಲಿ ನಿಷ್ಠುರಾದಿಗಳು ಸಂಭವಿಸುವ ಯೋಗವಿದೆ. ವಾರಾದಿಯ 5 ದಿನಗಳಲ್ಲಿ ಮಾರ್ಗಾಯಾಸ ಕಾರ್ಯಭಂಗ ವಿರೋಧಾದಿಗಳುದ್ಭವಿಸುವವು.

ಮಕರ— ಉದ್ಯಮಶೀಲರಿಗೆ ಈ ವಾರವು ಅನಿಷ್ಟದಾಯಿಯಾಗದು. ಕೈಕೊಂಡ ಕಾರ್ಯಗಳಿಗೆ ವಿರೋಧಿ ಜನರಿಂದ ಹಲವಾರು ತರದ ವಿಘ್ನಗಳು ಬರುವವಾದರೂ ಬಹುತೇಕ ನಿಮ್ಮ ಕಾರ್ಯಗಳು ಯಶಸ್ವಿಯಾಗಲಿವೆ. ಆದಾಯ ವೆಚ್ಚಗಳು ಸಂತುಲಿತವಲ್ಲಿ ನಿಲ್ಲುವವು, ದೇಹಾರೋಗ್ಯಕ್ಕೆ ಸ್ವಲ್ಪಕೊಂದರೆಯುಂಟಾದೀತು. ವಾರಾಂತ್ಯದ 5 ದಿನಗಳಲ್ಲಿ ಪರ್ಯಟನ ಆಪ್ತಜನ, ವಿರೋಧ ವ್ಯರ್ಥ ಖರ್ಚುಗಳುದ್ಭವಿಸುವವು.

ಕುಂಭ— ಆರ್ಥಿಕ ಬಿಕ್ಕಟ್ಟು ಈ ವಾರದಲ್ಲಿ ದೂರವಾಗಲಿದೆ. ನೀಚಜನರಿಂದ ಧನ ಲಭಿಸುವದು. ಗೃಹಕಾರ್ಯಸತ್ರಯಗಳು ತಾನಾಗಿ ಕಡಿಮೆಯಾಗಲಿವೆ ರಾಜಕೀಯ ಅಧಿಕಾರಿಗಳ ಪೀಡೆ ಶತ್ರುಜನರಿಂದ ಭಯ ಆಪ್ತಜರೊಡನೆ ಅವಿಶ್ವಾಸ ಇತ್ಯಾದಿಗಳುಂಟಾಗುವ ಸಂಭವವಿದೆ ಭೂಸಂಬಂಧವಾದ ವ್ಯವಹಾರ ವ್ಯಾಪಾರಾದಿಗಳಲ್ಲಿ ಲಾಭವು ಉತ್ತಮವಿದೆ. ತಾ, 7 8, 9 ಅನುಕೂಲ.

ಮೀನ— ನಿಮ್ಮ ಆದಾಯವು ಅಷ್ಟೊಂದು ಉತ್ತಮವಾಗಿಲ್ಲವು. ಅನಿರೀಕ್ಷಿತವಾದ ಖರ್ಚುಗಳು ನಿಮ್ಮನ್ನು ದಂಗುಪಡಿಸಲಿವೆ. ಉಷ್ಣಪಿತ್ತಸಂಬಂಧವಾಗಿ ಆರೋಗ್ಯ ಕೆಡಲಿದೆ. ಪ್ರಮಚೀವಿಗಳಿಗಂತೂ ದಿನಯಾಪನೆಯು ಅತ್ಯಂತ ಕಷ್ಟದಾಯಿಯಾಗಿ ಪರಿಣಮಿಸಲಿವೆ. ನೌಕರಿ ಜನರಿಗೆ ಮತ್ತು ವ್ಯಾಪಾರಿಗಳಿಗೆ ಲಾಭವಿಲ್ಲದಿದ್ದರೂ ನಷ್ಟವಾಗಲಾರದು. ತಾ, 7. 8. 9 ಬಿಟ್ಟು ಉಳಿದ ದಿನಗಳಲ್ಲಿ ಭೋಗ ಸ್ಥಾನಮಾನಗಳು ಲಭಿಸುವವು

ವಿವಿಧ ಪಾತ್ರೆಗಳು



ಯಾವತರೂ ವಿಧದ ಬೆಳ್ಳಿ ತಾಮ್ರ ಹಿತ್ತಾಳೆ, ಕಂಚು ಮೊದಲಾದುವುಗಳ ವಿವಿಧ ಪಾತ್ರೆಗಳೂ ಸಾಮಾನುಗಳೂ ರಖಂ ಲಗಿಯೂ ಚಿಲ್ಲರೆಯಾಗಿಯೂ ದೊರೆಯುತ್ತವೆ.

ಕಲ್ಯಾಂಜೆ ವ್ಯಾಸಾಚಾರ್ಯ,
ರಥಬೀದಿ, ಉಡುಪಿ

ಗೊನೋರಿಯಾ ಪರಮಾರೋಗ ಉಷ್ಣ ರೋಗಕ್ಕೆ ಔಷಧ

೭ ದಿವಸಗಳಲ್ಲಿ ಈ ರೋಗ ಗುಣ ಹೊಂದುವದು ಗ್ಯಾರಂಟೀ

ಶರೀರದಿಂದ ಕೀವು ಬರುತ್ತಿದ್ದರೆ, ಧೋತರಕ್ಕೆ ಹಳದೀ ದಾಗು ಹತ್ತುತ್ತಿದ್ದರೆ, ಶರೀರದಿಂದ ಬಾವು ಶರೀರದ ಕೂಗಲು ಹಿಂದಕ್ಕೆ ಸರಿಯದಿದ್ದರೆ, ಶರೀರದ ಸುತ್ತು ಘಾಯವಾಗಿದ್ದರೆ,... ಹಟ್ಟೆ ಬಿದ್ದಿದ್ದರೆ, ಉಷ್ಣದಿಂದ ಚೀರು ಕಳೆದಿದ್ದರೆ, ಉರುಹು ಆಗಿದ್ದರೆ, ಮೂಲವ್ಯಾಧಿ, ಭಗೇಂದ್ರ, ಗಂಡುಮಾಲಿ, ಕೈಕಾಲು ಬೂಲಿ, ಅರ್ಧಾಂಗವಾಯು ನಡುನೋಯ ಮತ್ತು ಸ್ತ್ರೀಯರ ಬಿಳಿಯ ಸೆರಗು ರೋಗವಿದ್ದರೆ, ಕೊಲಕಟು ಗರ್ಭದಿಂದ ಗರ್ಭಕೋಶ ಸರಿಯಾದಿದ್ದರೆ, ಸರಿಯಾಗಿ ಭೇದಿಯಾಗದಿದ್ದರೆ, ಮೂತ್ರ ಉರಿಯುತ್ತಿದ್ದರೆ, ಈ ಎಲ್ಲಾ ಬೇನೆಗಳಿಗೆ ಈ ನಮ್ಮ ಔಷಧವು ಇರುವುದು. ಮೊದಲ ದಿವಸ ಬೆಳಿಗ್ಗೆ ೧ ಗುಂಜಿ ಪ್ರಮಾಣ ಔಷಧ ಅರ್ಧತೊಲೆ ತುಪ್ಪದಲ್ಲಿ ತೆಕೊಳ್ಳಬೇಕು ಮೊದಲ ದಿವಸ ಮಾತ್ರವೆ ಮುಂಜಾನೆ ಸಂಜೆ ಎರಡು ಸಾರೆ ತೆಕೊಳ್ಳಬೇಕು. ಮುಂದೆ ೬ ದಿವಸ ಬೆಳಿಗ್ಗೆ ಒಂದೇ ಸಾರೆ ೭ ದಿವಸ ಸೇವಿಸಬೇಕು. ಈ ಔಷಧವನ್ನು ಬೇಸಿಗೆಯಲ್ಲಿ ತುಪ್ಪದಲ್ಲಿ, ಥಂಡಿ ಮಳೆಗಾಲದಲ್ಲಿ ಜೇನತುಪ್ಪದಲ್ಲಿ ತೆಕೊಳ್ಳಬೇಕು ಪಥ್ಯ: ಹುಳಿ ಖಾರ, ಬದನೆಕಾಯಿ, ಒಳ್ಳೆಣ್ಣೆ ಬಿಡಬೇಕು.

ಬಾಟ್ಲಿ ೧ಕ್ಕೆ ಕ್ರಯ. ಪೋಸ್ಟ ಚಾರ್ಜ ೮ ಆಣೆ

ಏಜೆಂಟರು:—ಗದಗ:—ಗದಗ ಫಾರ್ಮಸಿ. ಹುಬ್ಬಳ್ಳಿ:—ಕೆ ಬ್ರಲ್ಲಿ ಫಾರ್ಮಸಿ ಬಾಗಲಕೋಟೆ:—ಬಾಗಲಕೋಟೆ ಫಾರ್ಮಸಿ, ಧಾರವಾಡ:—ಧಾರವಾಡ ಫಾರ್ಮಸಿ, ದಾವಣಗೇರಿ: ದಾವಣಗೇರಿ ಪ್ರೆಸ್. ನಂಜುಡೇಶ್ವರ ಮರ್ಚಂಟ ದಾವಣಗೇರಿ

ಪತ್ರವ್ಯವಹಾರ ಮಾಡತಕ್ಕ ಮಾಲಕರ ವಿಳಾಸ.

ರೇವಣಸಿದ್ಧಪ್ಪ ಹಾಲಪ್ಪ ದಾವಣಗೇರಿ,
ಆಯುರ್ವೇದ ಔಷಧಾಲಯ ಗದಗ.

"ಗೋಪಾಲ ಭೇಷಜಾಶ್ರಮ" ಮಂಗಳೂರು.

(ಸ್ಥಾಪನೆ 1910)

ಸ್ಥಾಪಕರು:-ಆಯುರ್ವೇದ ಭೂಷಣ ಯಂ. ವಿ. ಶಾಸ್ತ್ರೀ,

ಇವರ **ನವಜೀವಾಮೃತ** ಎಂಬ **ಸೂತಿಕಾ ರಸಾಯನ**

ಬಾಣಂತಿಯರ ಸಲುವಾಗಿಯೇ ದೇಶ ಮತ್ತು ಪ್ರಕೃತದ ದೇಹಸ್ಥಿತಿಯನ್ನು ನಿರೀಕ್ಷಿಸಿ ತಯಾರಿಸಲ್ಪಟ್ಟ ಅನೋಘವಾದ ಮಧುರದ್ರವ ರಸಾಯನ. ಅಲ್ಪ ಮೌಲ್ಯದಿಂದ ಬಡವರಿಗೂ, ಭಾಗ್ಯಶಾಲಿಗಳಿಗೂ ಸುಲಭವಾಗಿರುವುದು.



ಹೆಚ್ಚಿನ ಮಾಹಿತಿಗೆ—ಡಾ। ಯಂ. ಸಿ. ಶಾಸ್ತ್ರೀ, ಯಲ್. ಐ
ಕೊಡಿಯಾಲಬೈಲ ಪೋಸ್ಟು, (ಮಂಗಳೂರು)
ಸ್ಥಾನಿಕ ಸ್ಟಾಕಿಸ್ಟರು:—ಡಾ। ವಿ. ಕೆ. ಶಿವರಾಮರಾವ್, ಕುಂಜಿಬೆಟ್ಟು, ಉಡುಪಿ.

— ಮಕ್ಕಳನ್ನು ಹಡೆಯುವುದು ಸಾಕು —

ಅಶಕ್ತ ಸ್ತ್ರೀಯರಿಗೆ **ಬರ್ಥ ಕಂಟ್ರೋಲ** ರೋಗ ಗ್ರಹಸ್ತ ಹೆಣ್ಣು ಮಕ್ಕಳಿಗೆ

ಏಳು ದಿವಸ ಈ ಮಾತ್ರೆಗಳನ್ನು ಸೇವನ ಮಾಡಿದರೆ ಮುಂದೆ ಖಂಡಿತವಾಗಿ ಮಕ್ಕಳಾಗುವದಿಲ್ಲ ಸ್ತ್ರೀಯರು ಪ್ರತಿತಿಂಗಳು ಸರಿಯಾಗಿ ಮುಟ್ಟಾಗುತ್ತಾರೆ. ಅಲ್ಲದೆ ಸ್ತ್ರೀಯರ ಬಿಳೇಸೆರಗು, ಪ್ರದರರೋಗ, ಹೊಟ್ಟೆಕುಟ್ಟು, ಗುಣವಾಗಿ ಸ್ತ್ರೀಯು ಗರ್ಭಿಣಿಯಾಗುವದಿಲ್ಲ. ಈ ಔಷಧವನ್ನು ಸೇವಿಸುವ ಕ್ರಮ: ಪ್ರತಿದಿವಸ ಮುಂಜಾನೆ ೧ ಗುಳಿಗೆ ಮಧ್ಯಾಹ್ನಕ್ಕೆ ೧ ಗುಳಿಗೆ, ಸಂಜೆಗೆ ೧ ಗುಳಿಗೆಯಂತೆ ಊಟದ ಮೊದಲು ತೆಕೊಳ್ಳಬೇಕು. ಏಳುದಿವಸ ಈ ಔಷಧವನ್ನು ಮುಟ್ಟಾದ ನಂತರ ಸೇವಿಸಬೇಕು.

ಪಥ್ಯ:— ಹುಳಿ ಖಾರ ಬಿಡಬೇಕು. ೭ ದಿವಸ ಸಂಪೂರ್ಣ ಔಷಧದ ಕಿಮ್ಮತ್ತು ರೂಪಾಯಿ 5—0—0. ಪೋಸ್ಟ ಚಾರ್ಜ ೧೨ ಆಣೆ.

ಮಾಲಕರು:—ಹಾಲಪ್ಪ ಫಕೀರಪ್ಪ ದಾವಣಗೇರಿ
ಆಯುರ್ವೇದ ಔಷಧಾಲಯ ಗದಗ-ಸಿಟಿ.

ಏಜಂಟರು:—ಹುಬ್ಬಳ್ಳಿ ಫಾರ್ಮಸಿ,—ಹುಬ್ಬಳ್ಳಿ, ಗದಗ, ಬಾಗಲಕೋಟೆ ಧಾರವಾಡ ವಿಜಾಪುರ— ಚನಬಸಪ್ಪ ಸಿದ್ಧಲಿಂಗಪ್ಪ ಧಾರವಾಡಕರ ವಿಜಾಪುರ ನಂಜುಂಡೇಶ್ವರ ಮರ್ಚಂಟ ದಾವಣಗೇರಿ ದಾವಣಗೇರಿ:—ದಾವಣಗೇರಿ ಪ್ರೆಸ್ ಆರ್ ಎಲ್ ಕವಾಡ, ಕೆಮಿಸ್ಟ, ಹಾವೇರಿ ಬ್ಯಾಡಗಿ

EDITED, PRINTED & PUBLISHED BY K. H. SHETTY AT THE NAVAYUGA PRESS, UDIPI, S.INDIA.

Regd No M 3618 | Estd. 1921 ಸ್ಥಾಪನೆ | 12-4-1951
LICENCE No. 31
Licensed to Post without Prepayment
31ನೇ ವರ್ಷ
Founder Sri A. B. Shetty,
Minister for Agriculture & Veterinary.

ವರ್ಷ ೩೧
ವಾರ ೩೧
NAVAYUGA
WEEKLY
POST BOX NO. 22
UDIPI, S. K.
Vol 31
No 31

ತಾನು ತನ್ನವರು

ತಾನು ತನ್ನವರೆನ್ನುವ ದುರಭಿಮಾನ ಮನೆ ಮಠವನ್ನು ಹಾಳುಗೆಡಹುವದು ಮಾತ್ರವಲ್ಲ; ರಾಷ್ಟ್ರರಾಷ್ಟ್ರಗಳನ್ನೇ ಉರುಳಿಸುತ್ತದೆ. ಇತಿಹಾಸವನ್ನವಲೋಕಿಸಿದರೂ ಈ ತತ್ವ ನಮಗೆ ಮುಂದಟ್ಟಾಗದೇ ಇರದು!

ಆಂಗ್ಲೋ ಅಮೇರಿಕಾನರು ತಾವೇ ಜಗತ್ತಿನಲ್ಲಿ ಶ್ರೇಷ್ಠ, ಉಳಿದವರು ಕನಿಷ್ಠರೆಂದು ಹೆಮ್ಮೆ ಪಡುವವರು. ದ್ವಿತೀಯ ಯುದ್ಧದಲ್ಲೂ ಅವರದೇ ಮೇಲುಗೈ. ಈಗಲಾದರೂ ಕೊರಿಯಾ ಯುದ್ಧದ ಪ್ರಸಂಗದಲ್ಲೂ ತಾನು ತನ್ನವರೆಂಬ ದುರಭಿಮಾನದಿಂದಲೇ ಬ್ರಿಟನು ಅಮೇರಿಕೆ ಅಂದುದಕ್ಕೆ ಕೈಗೊಡುತ್ತ ಬಂದಿದೆ. ಅಮೇರಿಕೆಯ ಯುದ್ಧಧೋರಣೆಯಿಂದಾಗಿ ಬ್ರಿಟನು ರಷ್ಯದ ಪ್ರಕೋಪಕ್ಕೆ ಮೊದಲು ತುತ್ತಾಗಬೇಕಾಗುತ್ತದೆ. ದ್ವಿತೀಯ ಮಹಾಯುದ್ಧದಿಂದ ಬ್ರಿಟನಿನ್ನೂ ಚೇತರಿಸಿಕೊಂಡಿಲ್ಲ. ಅಮೇರಿಕೆ" ಸುಖ ಪ್ರಾಪ್ತವಾಗಲಿಕ್ಕೆ ಬ್ರಿಟನಿಗಿನ್ನೂ ಬಹಳ ಕಾಲಬೇಕು. ಅಂತಲೆ ಅದು ಮನಸ್ಸಿಲ್ಲದ ಮನಸ್ಸಿನಿಂದ ಯುದ್ಧಪ್ರಸಂಗದಲ್ಲಿ ಅಮೇರಿಕೆಯೊಡನೆ ಸಹಭಾಗಿಯಾಗಬೇಕಾಗಿದೆ. ತತ್ಫಲವಾಗಿ ನೈತಿಕವಾಗಿಯೂ ರಾಜಕೀಯ ತತ್ವದಂತೆಯೂ ಉಳಿದೆಲ್ಲ ರಾಷ್ಟ್ರಗಳೊಡನೆ ಸೌಹಾರ್ದ ಬೆಳೆಸಲು ಬರುವಂತಿಲ್ಲ. ಅಮೇರಿಕೆಗೆ ಬೇಡಾದ ರಾಷ್ಟ್ರಗಳೊಡನೆ ಬ್ರಿಟನಿನ ವರ್ಚಸ್ಸು ಹೆಚ್ಚಾಗಿ ಬೀಳುವಂತಿಲ್ಲ.

ಭದ್ರತಾ ಸಮಿತಿಯಲ್ಲಿ ಅಮೇರಿಕೆಯ ಸಮಾನ ಬಲದ ರಾಷ್ಟ್ರಕ್ಕಿಂತ ಶ್ರೇಷ್ಠರಾಗಿದ್ದರೂ ಅದರ ಇಚ್ಛೆಯನ್ನು ಮೀರಿ ವರ್ತಿಸುವ ರಾಷ್ಟ್ರಗಳು ಭದ್ರತಾ ಸಮಿತಿಯಲ್ಲಿಲ್ಲ. ಒಂದುವೇಳೆ ಇರುವದಾದರೂ ಆ ಸದಸ್ಯತನ ವ್ಯರ್ಥಪ್ರಾಯವೆಂದೇ ಹೇಳಬೇಕು. ರಷ್ಯಾ ಜಗತ್ತಿನ ಪ್ರಮುಖ ರಾಷ್ಟ್ರಗಳಲ್ಲೊಂದಾದರೂ, ಅದನ್ನು ಬಹಿಷ್ಕರಿಸಿ, ಸ್ವಾರ್ಥವನ್ನು ಸಾಧಿಸಿಕೊಳ್ಳುವ ನಿರಂಕುಶ ಪ್ರಭುತ್ವವನ್ನಿಂದು ಅಮೇರಿಕಾ ತೋರಿಸುತ್ತಲಿದೆ.

ಕೊರಿಯ ರಣರಂಗದಲ್ಲಿ 'ತಾನು ತನ್ನವರೆಂಬ' ದುರಭಿಮಾನ ಇರದೇ ಹೋಗುತ್ತಿದ್ದರೆ ಇಂದು ಈ ಪರಿಸ್ಥಿತಿ ಒದಗುತ್ತಿರಲಿಲ್ಲ. ಏಷ್ಯಾದ ರಾಷ್ಟ್ರಗಳ ಸೂಚನೆಯು ಯುದ್ಧ ನಿಲ್ಲಿಸುವುದಕ್ಕೆ ಪ್ರಥಮ ಸೋಪಾನವಾಗಿತ್ತು. "ತನ್ನವರಲ್ಲ" ಎಂಬ ದುರಹಂಕಾರ—ವರ್ಣದ್ವೇಷ—ಅದನ್ನು ಮನ್ನಿಸಲಿಲ್ಲ. ನೈತಿಕತೆಯ ದಿವಾಳಿತನದಿಂದ ಜಗತ್ತು ಮಹಾ ಪ್ರಳಯವನ್ನು ಎದುರಿಸುವ ದುರ್ಧರ ಪ್ರಸಂಗ ಬಂದರೂ ಬರಬಹುದು.

ಭದ್ರತಾ ಸಮಿತಿಯ ಮುಂದೆ ಕಾಶ್ಮೀರ ಪ್ರಶ್ನೆಯು 'ತಾನು ತನ್ನವರೆಂಬ' ದುರಭಿಮಾನದಿಂದ ಇನ್ನಷ್ಟು ಗಂಭೀರವಾದ ಸಮಸ್ಯೆಯನ್ನುಂಟುಮಾಡಿದೆ. ಪಾಕಿಸ್ತಾನದ ಮೇಲೆ ಇವರಿಗೇಕೆ ಅಭಿಮಾನವೆಂದರೆ ಅದಕ್ಕೆ ಮುಖ್ಯ ಎರಡು ಕಾರಣಗಳು. ಒಂದು: ಭಾರತ ರಾಜಕೀಯ ತಾತ್ವಿಕ ನೀತಿಗಳಲ್ಲಿ ಬಿಳಿಯರ ವಿರೋಧಿಯೆಂಬುದು. ಎರಡು: ಕಮ್ಯೂನಿಸ್ಟ್ ರಾಷ್ಟ್ರ ಪ್ರೇಮಿಯೆಂದು. ಈ ಎರಡು ಕಾರಣಗಳಿಂದ ಭಾರತವನ್ನು ಪ್ರತ್ಯಕ್ಷ ವಿರೋಧಿಸಲಾಗದೆ ಪಾಕಿಸ್ತಾನದ ಮೂಲಕ ಆ ಹಂಚಿಕೆಯನ್ನು ಹೂಡಲಾಗಿದೆ. 'ತಾನು ತನ್ನವರು' ಎನ್ನುವ ದುರಭಿಮಾನದಲ್ಲಿ ಆ ತತ್ವಕ್ಕೆ ವಿರೋಧ ಬರುವವರನ್ನೆಲ್ಲ ವಿರೋಧ ಮಾಡುವದೂ, ಗಂಡಾಂತರಕ್ಕೆಳಸುವುದೂ ಸ್ವಾರ್ಥಿಗಳ ಉದ್ದೇಶವಾಗಿದೆ. ನೆಹ್ರೂರವರನ್ನು ಗಡಿಮೀರಿ ಸ್ವಾಗತಿಸಿ ಗೌರವಿಸಿದ ಅಮೇರಿಕಾನರ—ಇಂದು ಅಪ್ರತ್ಯಕ್ಷವಾಗಿ ವಿರುದ್ಧ ಧೋರಣೆಯನ್ನು ತೋರಿದ ಒಳಗುಟ್ಟಾದರೂ ಏನು? ಭಾರತ 'ನಮ್ಮ ಬಂಧು' ಎಂದು ಹಸ್ತಲಾಘವವನ್ನು ಕೊಟ್ಟ ಬ್ರಿಟನ್ ಅಮೇರಿಕೆಯ ಹಾದಿಯನ್ನೇ ತುಳಿಯುವದರ ಔಚಿತ್ಯವಾದರೂ ಏನು? ಕಾಶ್ಮೀರ ಸಮಸ್ಯೆಯನ್ನು ಬಗೆಹರಿಸುವ ಗೊತ್ತುವಳಿಯನ್ನು ಪಾಕಿಸ್ತಾನಕ್ಕನುಕೂಲವಾಗುವಂತೆ ಮಂಡಿಸಲು ಕಾರಣವೇನು? ಎಲ್ಲಿ 'ತಮ್ಮವರಲ್ಲ' ಎನ್ನುವ ಭೇದಮಾತ್ರವಲ್ಲ, ತನಗಾಗದವರ ಸ್ನೇಹಿತನೆನ್ನುವದೇ ಮುಖ್ಯಕಾರಣವಾಗಿದೆ. ಬೇರೆಯವರನ್ನು ಶ್ರೀಮಂತಿಕೆಯ ಬಲದಿಂದ ದಾಸ್ಯದಲ್ಲಿಟ್ಟುಕೊಳ್ಳುವ ಆಂಗ್ಲೋ ಅಮೇರಿಕಾನರ ಕುಟಿಲ ನೀತಿಗೆ ಭಾರತ ಮಣಿಯದೇ ಇದ್ದುದು ಅಭಿಮಾನದ ಸಂಗತಿ!

ಭಾರತದ ಆಹಾರ ಪರಿಸ್ಥಿತಿ ತೀರ ಕೆಟ್ಟದಾಗ [illegible] ಆಹಾರ ಧಾನ್ಯವನ್ನು ಅಮೇರಿಕೆಯನ್ನು ಬೇಡಿದುದರ ಪರಿಣಾಮವೇನಾಯಿತು? ಅಮೇರಿಕೆಯು ಎರಡು ಮೂರು ತಿಂಗಳಿಂದ ಮೀನ ಮೇಷವೆಣಿಸಿತ್ತು, ಅದಕ್ಕೆ ಕೊಡುವ ಕಾರಣಗಳಾದರೂ ಎಂತಹ ನಾಚಿಕೆಗೇಡಿತನವು? "ತಾನು ತನ್ನವರು" ಎನ್ನುವ ದುರಭಿಮಾನಿಗಳಿಗೆ ಭಾರತವು ಬರಗಾಲದಿಂದ ಕಂಗಾಲಾಗುವುದು ನೋಡಬೇಕಾಗಿದೆ. ಆಂಗ್ಲ ಆಡಳಿತಿಯ ಕಾಲದಲ್ಲಿ ಬಂಗಾಲದಲ್ಲಾದ ಆಹಾರ ಅಭಾವದ ನರಬಲಿಯನ್ನಿಂದು ತಿರುಗಿ ಕಾಣಬೇಕಾಗಿದೆ. ಹಸಿದಾಗ ಅನ್ನ ಕೊಡದವರು ಹೊತ್ತಾಗಿ ಕೊಟ್ಟರೇನಾಯಿತು? ತಾವೇ ಶ್ರೇಷ್ಠ—ತಮ್ಮಿಂದಲೇ ಎಲ್ಲ ಎನ್ನುವ ಸ್ವಾರ್ಥದ ಬೆಂಕಿಗೆ, ರಷ್ಯಾ, ಕಮ್ಯೂನಿಸ್ಟ್ ಚೀನಾದ ಆಹಾರದ ಕೊಡುಗೆಯಿಂದ ತುಪ್ಪವೆರೆದಂತಾಗಿದೆ. ತಮಗಾಗದವರು ಹೀಗೆ ಪ್ರತ್ಯಕ್ಷವಾಗಿ ಸಹಕಾರ ನೀಡುವದರಿಂದ ತಮ್ಮ ಸ್ವಾಭಿಮಾನಕ್ಕೆ ಕುಂದೆಂಬುದು ಈಗ ಮನವರಿಕೆಯಾಗುತ್ತಲಿದೆ. ಕಾರ್ಯವಾದ ತಮ್ಮ ಅನೀತಿಯ ರಾಜಕಾರಣಕ್ಕೆ ಭಾರತವಿರುದ್ಧ ಹೇಳುವುದು ಮಾತ್ರವಲ್ಲ ಶತ್ರುವಿನ ಮಿತ್ರನಾಗುತ್ತ ಬರುತ್ತದೆ. ಸಹಿಸಲಾರದಿದೆ.

ಸರಕಾರದಲ್ಲೂ 'ತಾನು ತನ್ನವ'ರೆಂದು ಅಧಿಕಾರವನ್ನು ಕೊಟ್ಟ ಸಹಸ್ರ ಸಹಸ್ರ ರೂಪಾಯಿಗಳ ದುರುಪಯೋಗ ನಡೆಸಿದ ದಾಖಲೆಗಳೂ ಇವೆ! ಅಧಿಕಾರ ಬಂದಾಕ್ಷಣ 'ತನ್ನವರಿಗೆ' ಉದ್ಯೋಗವನ್ನೊದಗಿಸಿಕೊಟ್ಟು ಇತರರನ್ನು ಕಡೆಗಣಿಸುವದು ನಡೆಯುತ್ತಲೇ ಇದೆ. 'ತನ್ನವರೆಂಬ' ಒಂದೇ ಅಭಿಮಾನ ಹಳ್ಳಿಯಿಂದ ದಿಲ್ಲಿಯ ತನಕವೂ ಕಾಯಿದೆ ಕಾನೂನುಗಳ ಮೇಲೆ ಸವಾರಿ ಮಾಡಬಲ್ಲದು! ಪ್ರಾಮುಖ್ಯವಿಲ್ಲದ್ದಕ್ಕೆ ಪ್ರಾಮುಖ್ಯತೆಯನ್ನು ತಂದು ಕೊಡಬಲ್ಲುದು

ರಾಜಕೀಯ ರಂಗದಲ್ಲಿದ್ದಂತೆಯೇ ಸಾರ್ವಜನಿಕ ಜೀವನದಲ್ಲೂ 'ತಾನು ತನ್ನವ'ರೆಂಬ ದುರಭಿಮಾನವಿಲ್ಲದೆಯಿಲ್ಲ. ತಾನು ತನ್ನವರಿಗಾಗಿ ಕಾದಾಡುವ ಸನ್ನಿವೇಶಗಳೂ ನಮ್ಮಲ್ಲಿ ಕಡಿಮೆಯಿಲ್ಲ.

ಬೇರೆಯವರನ್ನು 'ತನ್ನವರಿಗಾಗಿ' ಕೋರ್ಟ್ ಕಚೇರಿಗಳ ಮೂಲಕ ಸಾಧಿಸಿಕೊಳ್ಳುವವರೆಷ್ಟು ಜನವಿಲ್ಲ? ಜನಜೀವನಕ್ಕೆ ಅನೇಕ ದಕ್ಕಟಗಳು ಕಾರಣಗಳಾಗಿದ್ದಂತೆಯೇ ಕೋರ್ಟ್ ಕಚೇರಿಯನ್ನು ಹತ್ತಿ ಹಟಸಾಧಿಸುವ ಈ ದುರಭಿಮಾನ ಮನೆಯನ್ನೇ ಕಳೆದುಕೊಂಡದ್ದಿಲ್ಲವೇ? ಆತ್ಮಸಾಕ್ಷಿಗೆ ವಿರೋಧವಾಗಿ 'ತಾನು ತನ್ನವರೆಂಬ' ಸ್ವಾರ್ಥ ಸಂಕುಚಿತತೆಯು ಜನಜೀವನದ ನೈತಿಕ ಮಟ್ಟದ ದಿವಾಳಿತೆಗೆ ಯುಕ್ತಿಸುವುದು ನಮ್ಮ ಒಡ್ಡಿದ ದೊಡ್ಡ ಆಪತ್ತೆಂದೇ ಹೇಳಬೇಕು.

ಪ್ರಧಾನ ಕಾರ್ಯಾಲಯ: ಉಡುಪಿ ಸ್ಥಾಪನೆ: ೧೯೩೫

ದಿ ಕೆನರಾ ಮ್ಯೂಚುವಲ್

ಎಶ್ಶ್ಯೂರೆನ್ಸ್ ಕಂಪೆನಿ, ಲಿಮಿಟೆಡ್,

ಇದುವೇ

ಪಾಲಿಸಿದಾರರ ನಂಬಿಕೆ ಹೆಚ್ಚಿಸುವ ಹೆಸರು

ಅಲ್ಲದೆ ಸ್ಥಾಪಿತವಾದಂದಿನಿಂದಲೂ

ಲಾಭ (ಬೋನಸ್) ಹಂಚಿದ ಕಂಪೆನಿ.

The Canara Mutual Assurance Co, Ltd.

H. O UDIPI (SOUTH INDIA) - ESTD. 1935.

ಕಾಯಿದೆಗಳೂ ಕಾರ್ಯಾಚರಣೆಯೂ

ಧೂಮ್ರಪಾನ ನಿಷೇಧವನ್ನು ಸಿನೇಮಾ ನಾಟಕ ರಂಗಗಳಲ್ಲಿ ನಿಷೇಧಿಸುವ ಕಾಯಿದೆಯೊಂದನ್ನು ಈ ಮೊದಲೇ ಮದ್ರಾಸು ಸರಕಾರ ಜಾರಿ ಮಾಡಿಯದೆ. ಒಂದು ವರ್ಷದ ಕಾಲಾವಧಿಯಲ್ಲಿ ನಿಷೇಧಾಜ್ಞೆಯು ಕಾರ್ಯಗತವಾಗಿ ಬರದೆ ಇದ್ದುದನ್ನು ಲಕ್ಷಿಸಿ, ಸರಕಾರ ತಿರುಗಿ ಅದನ್ನು ಮತ್ತಷ್ಟು ಕಠಿಣಗೊಳಿಸಿ ಜ್ಯಾರಿಯಲ್ಲಿ ತಂದಿರುತ್ತದೆ. ಈ ಕುರಿತು ಮದ್ರಾಸು ಶಾಸನ ಸಭೆಯಲ್ಲಿ ಚರ್ಚೆ ನಡೆಯಿತು. ಸಾರ್ವಜನಿಕ ಆರೋಗ್ಯವನ್ನು ಕೆಡಿಸುವಂತಹ ಧೂಮ್ರಪಾನವನ್ನು ಬಹಿಷ್ಕರಿಸಿದ್ದನ್ನು ಹಲವು ಸದಸ್ಯರು ಶ್ಲಾಘಿಸಿದರು. ಸಿನೇಮಾ ನೋಡುವುದೂ ಮನರಂಜನೆಗಾಗಿ, ಆ ಕಾಲದಲ್ಲಿ ಹೊಗೆಬತ್ತಿ ಸೇದುವುದೂ, ಮನೋಲ್ಲಾಸಕ್ಕಾಗಿ ಎಂದಮೇಲೆ ಇದನ್ನು ಸಾರ್ವಜನಿಕರ ಅಭಿಪ್ರಾಯವನ್ನೂ ಸಹಕಾರವನ್ನೂ ತೆಗೆದುಕೊಂಡೇ ಸರಕಾರ ಆಚರಣೆಯಲ್ಲಿ ತರುವುದು ಒಳ್ಳೆತಲ್ಲವೇ? ಎಂದು ಹಲವು ಸದಸ್ಯರು ವಾದಿಸಿದರು. ಇನ್ನು ಹಲವರು 'ವೀಳ್ಯದೆಲೆತಿನ್ನುವುದನ್ನೂ ನಿಷೇಧಿಸಬೇಕೆಂದು' ವಾದಿಸಿದರು. ಅಂತೂ ಹೊಗೆಬತ್ತಿಯನ್ನು ಸೀನೇಮಾ ನಾಟಕಗೃಹಗಳಲ್ಲಿ ಸೇದಿಸುವುದನ್ನು ಸಂಪೂರ್ಣ ನಿಷೇಧಿಸಿರುತ್ತದೆ.

ಸರಕಾರ ಕೈಕೊಂಡ ಧೋರಣೆಯನ್ನು ಯಾರೂ ಟೀಕಿಸುವಂತಿಲ್ಲ. ಸಿನೇಮಾ ಥಿಯೇಟರಿನೊಳಗೆ ಸೇದುವ ಚಟದಿಂದ ಪ್ರೇಕ್ಷಕರು ಎರಡು ಮೂರು ಘಂಟೆಗಳ ತನಕ ಪಡೆಯುವ ನರಕ ಯಾತನೆ ಹೇಳಲಾಗಲ್ಲ. ಆರೂನೂರು ಸಹಸ್ರ ಜನಕೂಡುವಲ್ಲಿ ವಿಪರೀತ ಸೇದುವ ಹೊಗೆಯು ತುಂಬಿ ದುರ್ಗಂಧವನ್ನುಂಟುಮಾಡುತ್ತದೆ ಮಾತ್ರವಲ್ಲದೆ ತಲೆಸಿಡಿತ ಇನ್ನಿತರ ಕಾಹಿಲೆಗಳಿಗೆ ಕಾರಣವಾಗುತ್ತದೆ ಅಭ್ಯಾಸವಿಲ್ಲದವರಂತೂ ಇದರಿಂದ ತುಂಬ ಕಷ್ಟಪಡಬೇಕಾಗುತ್ತದೆ. ಧೂಮ್ರಪಾನ ನಿಷೇಧದಿಂದ ನಮ್ಮ ಸಿನೇಮಾಗೃಹಗಳು ಕೊಂಚವಾದರೂ ಶುಧ್ಧಾವಿಸಬಹುದು. ಮನಸ್ಸಿನ ಬೇಸರವನ್ನು ಕಳೆಯುವುದಕ್ಕಾಗಿ ಬರುವ ಜನರೇ ನಮ್ಮಲ್ಲಿ ಹೆಚ್ಚಾಗಿದಾರೆ. ಅಲ್ಲಿ ಈ ಬಗೆಯ ನರಕ ಯಾತನೆಯನ್ನು ಪಡೆಯುವಂತಾದರೆ ಮನರಂಜನೆಯ ಮುಖ್ಯ ಉದ್ದೇಶವೇ ಕೆಟ್ಟಂತಾಗಬಹುದು. ಅಂತಲೇ ಸರಕಾರ ಈ ನಿಷೇಧಾಜ್ಞೆ ಸಾರ್ವಜನಿಕರ ವಿಶ್ವಾಸವನ್ನುಗಳಿಸಿತೆನ್ನುತ್ತೇವೆ.

ಸೆಕೆ ಹೆಚ್ಚಾಗಿಯುಳ್ಳಂತಹ ನಮ್ಮ ದೇಶಕ್ಕೆ ಸೇದುವ ಚಟ ಅನಿವಾರ್ಯವೇ? ಎಂದು ಸದಸ್ಯರೊಬ್ಬರು ಕೇಳಿದಂತ ಸಹಜವಾದುದೇ. ಏಕೆಂದರೆ ವಿದೇಶಗಳಲ್ಲಿಯು ಛಳಿಯ ಪ್ರದೇಶದಲ್ಲಿ ಇದರ ಅವಶ್ಯಕತೆ ಹೆಚ್ಚಾಗಿದೆ. ಆಹಾರ, ಹವಾಮಾನ, ಅದಕ್ಕನುಕೂಲವಾಗಿದೆ. ನಮ್ಮ ಜನದ ಆಹಾರನ್ನೂ ಬಹಳ ನಿಕೃಷ್ಟವಾಗಿದೆ. ಪೌಷ್ಟಿಕ ಆಹಾರಕೊರತೆಯೂ ನಮ್ಮ ಜನದ ದೌರ್ಬಲ್ಯಕ್ಕೆ ಮುಖ್ಯ ಕಾರಣವೆಂಬುದನ್ನು ನಾವು ಮರೆಯದಿರೋಣ. ಲಕ್ಷಲಕ್ಷ ಜನ ಕ್ಷಯರೋಗದಿಂದ ಸಾಯುತ್ತಿರುವ ಭಯಾನಕ ಪರಿಸ್ಥಿತಿಯು ನಮ್ಮ ದೇಶಕ್ಕೆ ಹೇಗೆ ಬಂತೆಂದರೆ ಮುಖ್ಯವಾಗಿ ಧೂಮ್ರಪಾನಮಾಡುವ ಈ ದುಃಶ್ಚಟದಿಂದಲೇ ಬಂದಿತೆಂದು ಧಾರಾಳವಾಗಿ ಹೇಳಬಹುದು ನಾಗರಿಕತೆ ಹೆಚ್ಚಾದಹಾಗೆ—ವಿದ್ಯಾಬುದ್ಧಿಯನ್ನು ಕಲಿತು ಸಾಧಾರಣ ಹೊಂದಿದವರು ಸೇದುವದನ್ನು ಬಹಿಷ್ಕರಿಸುತ್ತಾ ಬಂದಿದ್ದಾರೆ. ಆದರೆ ಅನಾಗರಿಕರಲ್ಲೂ—ಅವಿದ್ಯಾವಂತರಲ್ಲೂ, ಈ ಚಟ ಇಂದು ವಿಶೇಷವಾಗಿ ಹಬ್ಬಿದೆ. ನಗರದ ಹಲವು ದುಚ್ಛಟಗಳು ಹಳ್ಳಿಗಳಿದಿರುತ್ತವೆ ಗಂಜಿಯೂಟ ಮಾಡಿ ಮೈಮುರಿದು ಕೆಲಸಮಾಡಿ, ದೃಢಕಾಯರಾಗಿರುವ ರೈತರಿಂದು ಚಾ, ಕಾಫಿಗಳ ಚಟವನ್ನು ಅಭ್ಯಸಿಸಿದಾರೆ. ಚಿಕ್ಕಚಿಕ್ಕವರೂ ತಿಳಿದೂ, ತಿಳಿಯದೆಯೂ ಹೊಗೆಬತ್ತಿ ಸೇದುವದನ್ನು ಪರಿಪಾಠಮಾಡಿಕೊಂಡಿರುತ್ತಾರೆ. ಮಧ್ಯಪಾನ ನಿಷೇಧದಿಂದ ಉಳಿತಾಯವಾದ ಹಣ ಹೀಗೆ ಅನವಶ್ಯಕವಾದ ದುರಭ್ಯಾಸಗಳಿಗೆ ವಿನಿಯೋಗವಾಗುತ್ತ ಹಳ್ಳಿಯ ಜನರ ಜೀವನವನ್ನು ಕೆಡಿಸುತ್ತಲಿದೆ.

ಪೇಟೆ ಪಟ್ಟಣಗಳಲ್ಲಿ ಹಬ್ಬಿಕೊಂಡಿರುವ ಈ ಚಟವನ್ನು ಸರಕಾರ ನಿಷೇಧಿಸುವಂತಿಲ್ಲ. ಸಾರ್ವಜನಿಕರ ಆರೋಗ್ಯ ರಕ್ಷಣೆಗೆ ಹೊಗೆಬತ್ತಿ ಸೇವನೆಯ ನಿಷೇಧವೊಂದೇ ಉತ್ತಮ ಪರಿಹಾರ ಮಾರ್ಗ ಆದರೆ ಸರಕಾರ ಸರ್ವತ್ರ ಮದ್ಯಪಾನ ನಿಷೇಧದಂತೆಯೇ ಇದನ್ನು ನಿಷೇಧಿಸಲು ಬರುವಂತಿಲ್ಲ. ಸಣ್ಣ ಮಕ್ಕಳು ಅಂದರೆ ಹನ್ನೆರಡು ಹದಿನಾಲ್ಕು ವರ್ಷಗಳ ಹುಡುಗರು ಸೇದುವದನ್ನು ನಿಷೇಧಿಸುವದನ್ನು ಸರಕಾರ ಮನಗಂಡಿತ್ತು. ಆದರೆ ಅದು ಆಚರಣೆಯಲ್ಲಿನ್ನೂ ಬಂದಿಲ್ಲ. ಮುಖ್ಯವಾಗಿ ಎಲ್ಲದರಲ್ಲೂ ಸಾರ್ವಜನಿಕರ ಸಹಕಾರವಿಲ್ಲದೆ ಸರಕಾರ ಏನೂ ಮಾಡುವಂತಿಲ್ಲ.

ಸಿನೇಮಾ ಥಿಯೇಟರುಗಳಲ್ಲಿಯ ನಿಷೇಧ ಕಾಯಿದೆಯ ಅಜ್ಞೆಯೂ ಅಷ್ಟೆ! ಎಷ್ಟರ ಮಟ್ಟಿಗೆ ಪಾಲಿಸಲ್ಪಡಬಹುದೆಂಬುದೇ ಒಂದು ಸಮಸ್ಯೆಯಾಗಿರುತ್ತದೆ. ಈ ಹಿಂದಿನ ಸರಕಾರದ ಆಜ್ಞೆಯು ಪ್ರತ್ಯಕ್ಷವಾಗಿ ಅವಮಾನಗೊಳ್ಳುತ್ತಿರುವ ಸ್ಥಿತಿಯನ್ನು ನಾವು ಚೆನ್ನಾಗಿ ಅರಿತಿದ್ದೇವೆ. ಸಿನೇಮಾ ಆರಂಭದ ಮೊದಲು "ಸರಕಾರದ ಆಜ್ಞೆಯ ಮೇರೆಗೆ ಯಾರೂ ಥಿಯೇಟರಿನೊಳಗೆ ಹೊಗೆಬತ್ತಿ ಸೇದಕೂಡದು" ಎನುವ ಸ್ಲೈಡನ್ನು ಹಾಕುತ್ತಾರೆ. ನೂರಾರು ಜನರು ಸೇದುತ್ತಲಿರುವಾಗಲೇ ಇಂತಹ ಪ್ರದರ್ಶನ ನಡೆಯುತ್ತದೆ. ಹೀಗೆ ದಿನ ಸರಕಾರದ ಅಜ್ಞೋಲ್ಲಂಘನೆಯನ್ನು ಮಾಡುವವರಿಗೆ ಯಾರು ಎಚ್ಚರಿಸಬೇಕು—ಥಿಯೇಟರಿನ ಒಡೆಯರೋ, ಸರಕಾರವೋ ಎಂಬುದು ತಿಳಿಯದಾಗಿದೆ. ಮೊದಲು ಈ ಅಜ್ಞೆ ಬಂದಾಗ ಥಿಯೇಟರಿನ ಒಡೆಯರು ಸ್ಲೈಡು ಹಾಕಿದ ಮೇಲೂ, ತಾವೇ ಸ್ವತಹ ಬಂದು "ಸರಕಾರದ ಅಜ್ಞೆ ಇದೆ ಸೇದಬಾರದು" ಎಂದು ವಿನಯಪೂರ್ವಕವಾಗಿ ಕೇಳಿಕೊಂಡರೂ ಜನ ತಿರಸ್ಕರಿಸಿ ಅವರ ಮೇಲೆ ರೇಗಿದ ನಿದರ್ಶನಗಳೆಷ್ಟೋ ಇವೆ. ಬೇರೆ ಬೇರೆ ವಿಧಾನದಲ್ಲಿ ಕರಭಾರಗಳನ್ನು ಹೊರಬೇಕಾದ ಥಿಯೇಟರಿನ ಒಡೆಯರು ಉಸಿರುಹಿಡಿದು ನಿಲ್ಲುವುದೇ ಕಷ್ಟವಾಗಿರುವ ಈ ಪರಿಸ್ಥಿತಿಯಲ್ಲೂ ಪ್ರೇಕ್ಷಕರ ಇಚ್ಛೆಗೆ ವಿರೋಧವಾಗಿ ವರ್ತಿಸುವಂತಿಲ್ಲ. ಒಂದು ವೇಳೆ ಸೂಚಿಸಿದರಾದರೂ ಅದರ ಫಲಿತಾಂಶ ಪ್ರೇಕ್ಷಕರೊಡನೆ ನಿಷ್ಠುರ ದ್ವೇಷ ಕೆಲವು ವೇಳೆ ಕೈಕೈ ಹಾಗುವ ಪ್ರಸಂಗ ಮಾತ್ರ. ಹೀಗೆ ಸಾರ್ವಜನಿಕರ ನಡತೆ ಸರಕಾರದ ಆಜ್ಞೆಯು ಅವಮಾನಗೊಳ್ಳುತ್ತಿರುವುದು ಸರಕಾರೀ ಕಾನೂನುಗಳ ಘನತೆಯ ದೃಷ್ಟಿಯಿಂದ ಯೋಗ್ಯವಲ್ಲ! ಕಾರ್ಯರೂಪದಲ್ಲಿ ತರಲಾಗದ ಆಜ್ಞೆಯನ್ನು ಜನತೆಯ ಮೇಲೆ ಹೇರುವುದು ನ್ಯಾಯವೂ ಅಲ್ಲ!

ಬಸ್ಸುಗಳಲ್ಲೂ "Smoking is Strictly prohibbited" 'ಹೊಗೆಬತ್ತಿ ಸೇದುವದನ್ನು ನಿಷೇಧಿಸಲಾಗಿದೆ" ಎಂದು ಸೂಚನಾಪತ್ರವನ್ನು ಅಂಟಿಸಲಾಯಿತು. ಹಿಂದಿನಿಂದಲೂ ಮುಂದಿನಿಂದಲೂ ಎಲ್ಲರೂ ಸರಾಗವಾಗಿ ಸೇದುತ್ತಾರೆ. ಕೆಲವು ವೇಳೆ ಡ್ರೈವರ, ಕಂಡೆಕ್ಟರರೂ ಎಲ್ಲರೊಡನೆ ಸೇದುತ್ತಾರೆ. ಈಗಲೀಗ ಸೂಚೀಪತ್ರದ ಹೊರತು ಮಾತ್ರವರಲ್ಲಿ ಬರೆದುದು ಯಾವುದೂ ಕಾರ್ಯರೂಪದಲ್ಲಿ ನಡೆಯುವುದಿಲ್ಲ. ಈ ಎಲ್ಲ ಉದಾಹರಣೆಗಳಿಂದ ಸರಕಾರದ ನಿಷೇಧಾಜ್ಞೆಯನ್ನು ಟೀಕೆಮಾಡುವದು ನಮ್ಮ ಉದ್ದೇಶವಲ್ಲ. ಇಂತಹ ಅಜ್ಞೆಗಳನ್ನು ಪಾಲಿಸುವವರಾರು? ಪಾಲಿಸದೆ ಹೋದರೆ ಆ ಕಾಯಿದೆಗಳ ಗತಿಯೇನು? ಮುಂತಾದ ವಿಚಾರಗಳನ್ನ ಸರಕಾರ ತೀವ್ರವಾಗಿ ಚರ್ಚಿಸಿಯೇ ಹೊಸಕಾಯಿದೆಗಳನ್ನು ಜನತೆಯ ಮೇಲೆ ಹೇರಬೇಕೆಂದು ನಮ್ಮಭಿಪ್ರಾಯವಿರುತ್ತದೆ. ಹಿಂದು ಮುಂದೆ ನೋಡದೆ ಕಾಯಿದೆ-ಕಾನೂನುಗಳನ್ನು ಮಾಡುವಲ್ಲಿ ಮದ್ರಾಸಿಗರು ಹೆಸರಾದವರು. ಆದರೆ ಅದನ್ನು ಬರಕಾಸ್ತುಗೊಳಿಸುವಲ್ಲಿಯೂ ನಾವು ಅಗ್ರಗಣ್ಯರೆಂದು ನಗೆಗೀಡಾಗುವ ಪ್ರಸಂಗ ಬಂದಿರುತ್ತದೆ. ಈಗ ಶಿಕ್ಷೆಯ ಮೂಲಕ ಧೂಮ್ರಪಾನ ನಿಷೇಧವನ್ನು ಸಿನೇಮಾ ಹಾಗೂ ನಾಟಕರಂಗಗಳಲ್ಲಿ ಆಚರಣೆಗೆ ತರುವ ನಿರ್ಧಾರ ಸರಕಾರ ಮಾಡಿದೆ. ಅದು ಜನಹಿತಕಾಯಿದೆಯೂ ಹೌದು; ಜನಾನುರಾಗವನ್ನು ಪಡೆದೀತೋ ಹೇಗೆನ್ನುವ ವಿಚಾರದಲ್ಲಿ ಸದ್ಯ ನಾವೇನೂ ಹೇಳುವಂತಿಲ್ಲ! ಈ ವರೆಗಿನ ಕಾಯಿದೆಗಳಂತೆ ಅಪಹಾಸ್ಯಕ್ಕೀಡಾಗದೆ ಇದು ಕಾರ್ಯರೂಪದಲ್ಲಿ ಬಂದು ಸರಕಾರದ ಉದ್ದೇಶವನ್ನು ಪಾಲಿಸಲೆಂದು ಹಾರೈಸುತ್ತೇವೆ.

ಬೇಂಕಿಂಗ್ ಸಂಬಂಧದ ಎಲ್ಲಾ ಸಮಸ್ಯೆಗಳಿಗೆ

ದಿ ವಿಜಯಾ ಬೇಂಕ್ ಲಿಮಿಟೆಡ್

ಇವರ ಸಲಹೆ ಕೇಳಿರಿ

ಹೆಡ್ ಆಫೀಸು : : : : ಮಂಗಳೂರು

ಮಡಿಕೇರಿಯಲ್ಲಿ ಒಂದು ಶಾಖೆಯೂ ಬೊಂಬಾಯಿಯಲ್ಲಿ ಒಂದು ಶಾಖೆಯೂ ಜಿಲ್ಲೆಯೊಳಗೆ ಹಲವು ಶಾಖೆಗಳೂ ಇವೆ.

ನಿರಖು ಠೇವಣಾತಿಗಳ ಮೇಲೆ ಆಕರ್ಷಕವಾದ ದರದ ಬಡ್ಡಿಯು ಕೊಡಲ್ಪಡುವುದು,	ತಕ್ಕುದಾದ ಜವಾಬ್ದಾರಿಗಳ ಮೇಲೆ ಸುಲಭವಾದ ಶರ್ತಗಳಲ್ಲಿ ಸಾಲಗಳು ಕೊಡಲ್ಪಡುವುವು.

ಸಾಲಿಯನ್ ಸೇಕಡಾ 4½ರ ಬಡ್ಡಿ ಗಳಿಸುವ ಮೂರು ವರ್ಷದ ಅವಧಿಯ ವಿಜಯಾ ಕೇಶ್ ಸರ್ಟಿಫಿಕೇಟುಗಳ ಮೇಲೆ

ಹಣವನ್ನು ಹಾಕಿರಿ

THE VIJAYA BANK, LTD.,

ಬಿ. ಮಂಜಯ್ಯ ಹೆಗ್ಗಡೆ,
(ದ. ಕ. ಜಿಲ್ಲಾ ಬೋರ್ಡ್ ಪ್ರೆಸಿಡೆಂಟ್
ಡೈರೆಕ್ಟರ್ ಬೋರ್ಡಿನ ಅಧ್ಯಕ್ಷರು.

THE BOMBAY LIFE ASSURANCE COMPANY, LTD.

ದಿ ಬೊಂಬೆ ಲ್ಯಾಫ್ ಎಶ್ಯೂರೆನ್ಸ್ ಕೋ., ಲಿಮಿಟೆಡ್

(ಸ್ಥಾಪನೆ: 1908)

ಅತ್ಯಲ್ಪ ಖರ್ಚಿನಿಂದ ಅತ್ಯಧಿಕ ಲಾಭವನ್ನೀಯುವ ಅಗ್ರಗಣ್ಯ ವಿಮಾ ಸಂಸ್ಥೆಗಳಲ್ಲೊಂದು

ಪ್ರಧಾನ ಏಜಂಟರು:

ಕೊಚ್ಚಿಕಾರ್ ಬ್ರದರ್ಸ್, ಲಿಮಿಟೆಡ್ ಉಡುಪಿ.

ಇವರ ಶಾಖಾ ಕಚೇರಿಗಳು:-

ಬೊಂಬಾಯಿ, ಮದ್ರಾಸು, ಬೆಂಗಳೂರು, ಕೊಯಮುತ್ತೂರು, ತ್ರಿವೆಂಡ್ರಮ್, ಕಲ್ಲಿಕೋಟೆ ಮತ್ತು ಮಂಗಳೂರು.

ಕಳೆದ ಮುವತ್ತೆಂಟು ವರುಷಗಳಿಂದ ವಿಮಾ ಕ್ಷೇತ್ರದಲ್ಲಿ ಸತತ ದುಡಿದವರಾದ ನಾವು ಜನಾಂಗದ ಶ್ರೇಯೋಭಿವೃದ್ಧಿಯ ಕಡೆಗೆ ನಮ್ಮ ನಮ್ರ ಸೇವೆಯನ್ನು ಸಲ್ಲಿಸಿರುತ್ತೇವೆಂಬುದೇ ನಮ್ಮ ಹೆಗ್ಗಳಿಕೆಯ ಮಾತು.

ವಿಮೆ ಮಾಡಲಿಕ್ಕಾಗಲೀ, ಪ್ರಾತಿನಿಧ್ಯ ಪಡೆಯಲಿಕ್ಕಾಗಲೀ ದಯಮಾಡಿ ನಮಗಾಗಲೀ ಅಥವಾ ನಮ್ಮ ಶಾಖೆಗಳಿಗಾಗಲೀ ಬರೆಯಿರಿ.

ವನಮಹೋತ್ಸವದ ಬದಲು ಭೋಜನ ಮಹೋತ್ಸವ

ಕೇಂದ್ರ ಸರಕಾರದಲ್ಲಿ 'ಹೆಚ್ಚು ಆಹಾರ ಬೆಳೆಸಿರಿ' ಯೋಜನೆಯ ಕುರಿತು ತೀವ್ರವಾಗಿ ಚರ್ಚೆ ನಡೆಯಿತು. 'ವನಮಹೋತ್ಸವ' 'ಹೆಚ್ಚು ಆಹಾರ ಬೆಳೆಸಿರಿ' ಮುಂತಾದ ಪ್ರಚಾರಗಳಿಗಾಗಿ ಸರಕಾರ ಧಾರಾಳವಾಗಿ ವ್ಯಯಿಸಿದ ಹಣ ವ್ಯರ್ಥವಾಗಿದೆ ಎಂದು ಸದಸ್ಯರು ಟೀಕೆಮಾಡಿದ್ದಾರೆ. ಮಾನ್ಯ ಮುನ್ಷಿಯವರು ಆಹಾರೋತ್ಪಾದನೆ ಹಾಗೂ ಆಹಾರದ ಕುರಿತಾಗಿ ಕೊಡುವ ಪ್ರತಿಯೊಂದು ಭರವಸೆಯೂ ಕಾಗದದಲ್ಲಿಯೇ ಉಳಿಯುತ್ತದೆ ವಿನಹ ಹಸಿದವರಿಗೆ ಯಾವ ಪ್ರಯೋಜನವೂ ಅದರಿಂದ ಉಪಯೋಗವೂ ಲಭಿಸುತ್ತಿಲ್ಲ. ಸರಕಾರದ "ವನಮಹೋತ್ಸವ"ದ ಪ್ರಚಾರ "ಹಣ ಮಹೋತ್ಸವ"ದಂತೆಯೆ ಆಗಿರುತ್ತದೆ. ಅಧಿಕಾಹಾರೋತ್ಪಾದನೆಯ ಸಲುವಾಗಿ ಕಳೆದ ಮೂರು ವರ್ಷಗಳಿಂದ ಸುಮಾರು ಅರುವತ್ತು ಕೋಟಿ ರೂಪಾಯಿ ವ್ಯಯವಾಗಿರುತ್ತದೆ. ಇದಕ್ಕೆ ಸರಿಯಾಗಿ ನಾವು ಪಡೆದ ಆಹಾರವೆಂದರೆ ಕೇವಲ ಮೂವತ್ತು ಲಕ್ಷ ಟನ್! ಸಾಲದುದಕ್ಕೆ ಪ್ರತೀ ಎಕ್ಕರೆಯ ಉತ್ಪತ್ತಿಯು ಕಳೆದ ಹತ್ತು ವರ್ಷಗಳಿಂದ ಕಡಿಮೆಯಾಗುತ್ತ ಬಂದಿದೆ. ಸರಕಾರದವರ ಸವಿಸ್ತಾರ ಕರಣೆಯ ಧೋರಣೆಯಿಂದ ಅರುಲಕ್ಷ ಟನ್ ಹೆಚ್ಚು ಬರಬೇಕಾಗಿತ್ತು. ಆದರೆ ಕೇವಲ ಮೂರುಲಕ್ಷ ಬಂದಿರುತ್ತದೆ. ಹನ್ನೆರಡುಲಕ್ಷ ಹಣಬನ್ನು ಪಡೆಯಬಹುದೆಂದು ಆಶಿಸಿದ್ದಲ್ಲಿ ಎಂಟೇ ಲಕ್ಷ ಟನ್ ಹಣಬಿನಿಂದ ಆ ಆಶೆ ನೀಗಿಕೊಳ್ಳಬೇಕಾಗಿದೆ. ಸರಕಾರದ ಸ್ವಾವಲಂಬನೆಯ ಉದ್ದೇಶವು ಇನ್ನೂ ಸುಧಾರಿಸದೇ ಸಂಕುಚಿತವಾಗಿರುವುದು. ಅಧಿಕಾಹಾರೋತ್ಪನ್ನೆಯ ಕ್ರಮವು ಹೀಗೆ ನಿರಾಶಾಜನಕವಾದ ರೀತಿಯಲ್ಲಿ ಕ್ಷಯಿಸುತ್ತಿರಲು ಮುಖ್ಯವಾಗಿ ಸರಕಾರವೀಗ ಅನುಸರಿಸುತ್ತಿರುವ ಅಶಾಸ್ತ್ರೀಯ ಪದ್ಧತಿಯೇ ಕಾರಣವಾಗಿದೆ. ಸರಕಾರ ಒದಗಿಸಿಕೊಡುವ ಸೌಕರ್ಯ ಸ್ವಾಭಾವಿಕವಾಗಿ ಅಧಿಕಾಹಾರೋತ್ಪಾದನೆ ಯಾರು ಮಾಡುತ್ತಾರೊ ಅವರಿಗೆ ಸಲ್ಲುತ್ತಿಲ್ಲ, ಬಂಜರು ಪ್ರದೇಶಗಳನ್ನು ಅಭಿವೃದ್ಧಿಗೆ ತರುವಂತಹ ಮಾತಂತಿರಲಿ ಉಳುವ ಗದ್ದೆಗಳೇ ಬಂಜರು ಬೀಳುತ್ತಿರುವುದನ್ನು ಲಕ್ಷಿಸುವವರಿಲ್ಲವಾಗಿದೆ. ಬಾವಿ ತೋಡುವ–ಗೊಬ್ಬರ ಹಂಚುವ–ಬೀಜ ವಿತರಣೆ ಮಾಡುವ ವಿಭಾಗದಲ್ಲಿ ರೈತನಿಗೆ ಸರಿಯಾದ ಪ್ರಯೋಜನ ಲಭಿಸುತ್ತಿಲ್ಲ. ಅಲ್ಲದೆ ಆಹಾರೋತ್ಪಾದನೆಗಾಗಿ ಸರಕಾರ ನೀಡುತ್ತಿರುವ ಸಹಕಾರವು ಹಲವು ಮಾಲಿಕರ ಇಲ್ಲವೆ ಹೊಲದೊಡೆಯರ ಪಾಲಿಗೆ ಸೇರಿ ಅದರ ದುರುಪಯೋಗ ನಡೆಯುವ ನಿದರ್ಶನಗಳೆಷ್ಟೋ ಇವೆ.

ಇನ್ನೊಂದು ಸರಕಾರದ ಅಚಾತುರ್ಯ ಕಾರ್ಯವೆಂದರೆ ಆಹಾರ ಧಾನ್ಯಗಳ ಕ್ರಯವನ್ನು ಏರಿಸದೆ, ನಿಯಂತ್ರಿಸಲ್ಪಟ್ಟು ಉಳಿದ ಬೆಳೆಗಳ ಬೆಲೆಯು ನಿಯಂತ್ರಿಸಲ್ಪಡದೇ ಇರುವಂಥದ್ದು. ಉದ್ದು, ಹೆಸರು, ಎಣ್ಣೆಕಾಳು, ಕಬ್ಬು ಮುಂತಾದ ಯಾವುದೇ ಧಾನ್ಯಬೆಳೆಸಿದರೂ ಆ ಆಹಾರ ಧಾನ್ಯಕ್ಕಿಂತ ಮಿಗಿಲಾದ ಲಾಭ ಸಿಗುವಾಗ ಆಹಾರ ಧಾನ್ಯಗಳನ್ನಾರು ಬೆಳೆಸುತ್ತಾರೆ? ಸರಕಾರದ ಈ ಧೋರಣೆಯಿಂದಾಗಿ ಆಹಾರೋತ್ಪಾದನೆಯ ಮೂಲೋದ್ದೇಶಕ್ಕೆ ಕೊಡಲಿಯೇಟು ಕೊಟ್ಟಂತಾಗಿದೆ.

ನಗರಗಳಲ್ಲಿ ಕೂತುಮಾಡುವ ಪ್ರಚಾರ ಇಲ್ಲವೆ ವನಮಹೋತ್ಸವಗಳಿಂದ ಯಾವ ಕಾರ್ಯವೂ ಸಿದ್ಧಿಸುವಂತಿಲ್ಲ. ಹಳ್ಳಿಯಲ್ಲಿ ಉಳಿದ ಬಂಜರು ಬಿದ್ದಿರುವ ಹೊಲಗಳನ್ನು ಊರ್ಜಿತಗೊಳಿಸಿ ತನ್ಮೂಲಕ ಆಹಾರೋತ್ಪಾದನೆಯನ್ನುಂಟುಮಾಡಬಹುದೇ ಹೊರತು ನಗರದಲ್ಲಿ ಸಸಿನೆಡುವದರಿಂದಾಗಲೀ ಆದೇಶಕೊಡುವದರಿಂದಾಗಲೀ ಯಾವ ಉದ್ದೇಶವೂ ಫಲಿಸುವಂತಿಲ್ಲ. ಇದೇ ಧೋರಣೆಯನ್ನು ಮುಂದುವರಿಸಿದರೆ–ಸಂಪ್ರದಾಯಕ್ಕೆ ಶರಣುಹೋಗುವದಾದರೆ ಇನ್ನು ಹತ್ತು ವರ್ಷ ಕಳೆದರೂ ಆಹಾರ ಹೆಚ್ಚಾಗುವಂತೆಯೂ ಇಲ್ಲ; ಸ್ವಾವಲಂಬಿಗಳಾಗುವಂತೆಯೂ ಇಲ್ಲ.

ಸದ್ಯ ಆಹಾರದ ಪರಿಸ್ಥಿತಿ

ರಷ್ಯವು ಭಾರತ ಸರಕಾರಕ್ಕೆ 50,000 ಟನ್ ಗೋದಿಯನ್ನು ಕೊಡಲೊಪ್ಪಿರುತ್ತದೆ ಅಂತೆಯೇ ಕಮ್ಯೂನಿಸ್ಟ್ ಚೈನಾ ಒಂದು ಮಿಲಿಯ ಟನ್ ಆಹಾರವನ್ನು ಕೊಡಲೊಪ್ಪಿದೆ. ಚೈನಾದ ರಾಯಭಾರಿಯು "ಕಮ್ಯೂನಿಸ್ಟ್ ಚೈನಾದ ಜನತೆಯು ಭಾರತ ಜನಾಂಗದ ಹಸಿವೆಯ ಕುರಿತು ತುಂಬ ಸಹಾನುಭೂತಿಯುಳ್ಳವರಾಗಿರುತ್ತಾರೆ, ಚೀನಾ ಮತ್ತು ಭಾರತದೊಳಗೆ ಅನ್ಯೋನ್ಯ ಸಹಕಾರ ಮೈತ್ರಿಯನ್ನು ನಾವು ಈ ಕೊಡುಗೆಯ ಮೂಲಕ ಸ್ಥಿರಗೊಳಿಸುತ್ತೇವೆ" ಎಂದಿದ್ದಾನೆ. ಬರ್ಮಾವು ಭಾರತಕ್ಕೆ ಆಹಾರಧಾನ್ಯ ಕೊಡುವ ನಿರೀಕ್ಷೆಯಿದೆ. ದೀರ್ಘಾವಧಿಯ ವ್ಯಾಪಾರೀ ಒಪ್ಪಂದಕ್ಕಾಗಿ ಭಾರತದ ವಾಣಿಜ್ಯ ಪ್ರತಿನಿಧಿಗಳು ಅಲ್ಲಿಗೆ ಹೋಗುವವರಿದ್ದಾರೆ. ಬರ್ಮಾದ ಮಾತುಕತೆಯ ಫಲಿತಾಂಶದಿಂದ ಭಾರತವು ಬರ್ಮದಿಂದ ಆಹಾರ ಧಾನ್ಯವನ್ನು ಪಡೆಯಬಹುದಾಗಿದೆ.

ಅಮೇರಿಕೆಯು ಆಹಾರದ ಕುರಿತು ವಿಶೇಷ ಮಾತುಕತೆ ನಡೆದಿದೆ. ಭಾರತದ ಬೇಡಿಕೆಯನ್ನು ಮನ್ನಿಸಬೇಕೆಂದು ನಾನಾರೀತಿಯ ಪ್ರತಿಕ್ರಿಯೆಗಳು ಅಮೇರಿಕೆಯಲ್ಲಿಂದು ಮೂಡಿವೆ. ಟ್ರೂಮನರು ಎರಡುಬಾರಿ ಪ್ರತಿನಿಧಿ ಕಾಂಗ್ರೆಸ್ಸಿಗೂ ಅದನ್ನು ಶೀಘ್ರಗೊಳಿಸಬೇಕೆಂದು ಕೇಳಿಕೊಂಡರು. ಆದರಿನ್ನೂ ಪ್ರತಿನಿಧಿ ಸಭೆಯು ನಿರ್ದಿಷ್ಟವಾದ ಒಂದು ಧೋರಣೆಯನ್ನು ತಳೆದಿಲ್ಲ. ಕಾಂಗ್ರೆಸಿನಲ್ಲಿ ಕೊಡುಗೆಗೆ ಸ್ವಾಗತಸಿಕ್ಕಿದರೂ ಪ್ರಜಾಪ್ರತಿನಿಧಿ ಸಭೆಯಲ್ಲಿ ಹಲವು ವಿರೋಧಗಳು ಇನ್ನೂ ಕಂಡುಬರುತ್ತಿವೆ. ರಷ್ಯಾ ಮತ್ತು ಕಮ್ಯೂನಿಸ್ಟ್ ಚೀನಾ ಅತಿ ಶೀಘ್ರ ಆಹಾರಧಾನ್ಯದ ಕೊಡುಗೆಯನ್ನು ಮುಂದೆ ಮಾಡಿದುದರಿಂದ ಅಮೇರಿಕೆಯು ಇನ್ನೂ ಮೀನ ಮೇಷ ಎನ್ನುವದರಲ್ಲಿ ತನ್ನ ಆತ್ಮಗೌರವಕ್ಕೆ ಕುಂದೆಂಬುದು ಮನವರಿಕೆಯಾಗಿದೆ. ಅಂತಲೇ ತೀವ್ರವಾದ ಪ್ರತಿಕ್ರಿಯೆಗಳು ಕಂಡುಬರುತ್ತಿವೆ. ಅಮೇರಿಕೆಯ ರಾಜಧಾನಿಯ ಸಾವಧಾನ ಧೋರಣೆಯು ರಾಜಕೀಯ ಹಾಗೂ ಸಾರ್ವಜನಿಕ ವರ್ಗಗಳಲ್ಲಿ ಅಸಂತೃಪ್ತಿಯನ್ನುಂಟುಮಾಡಿದೆ. ಅಮೇರಿಕೆಯ ಹೊಣೆಗಾರ ಪತ್ರಿಕೆಗಳಾದ "ದಿ ನ್ಯೂಯಾರ್ಕ್ ಟೈಮ್ಸ್" 'ದಿ ನ್ಯೂಯಾರ್ಕ ಹೆರಾಲ್ಡ್' 'ವಾಶಿಂಗ್ಟನ್ ಪೋಸ್ಟ್" ಮೊದಲಾದವುಗಳು ಸಂಪಾದಕೀಯದ ಮೂಲಕವೂ, ಜಾಹೀರಾತಿನ ಮೂಲಕವೂ ಅಮೇರಿಕೆಯು ಕೂಡಲೇ ಆಹಾರ ಧಾನ್ಯವನ್ನು ಕಳಿಸಿಕೊಡುವಂತೆ ಸರಕಾರವನ್ನು ಒತ್ತಾಯಿಸಿವೆ. "ಕಾಶ್ಮೀರದ ನಿಲುವಿನಲ್ಲಿ ಭಾರತದ ಧೋರಣೆಯೇನಿದ್ದರೂ, 38ನೆಯ ಅಕ್ಷಾಂಶದ ಕುರಿತು ನೆಹರೂರವರ ಭಿನ್ನಾಭಿಪ್ರಾಯವಿದ್ದರೂ, ಯಾವುದೇ ರಾಜಕೀಯ ಮತಭೇದವಿದ್ದರೂ ಹಸಿದ ಜನರಿಗೆ ಅನ್ನವನ್ನು ನೀಡುವಲ್ಲಿ ಇದು ತಡೆಯಾಗಿ ನಿಲ್ಲಲಾರದು. ಈ ಸಂದಿಗ್ಧ ಪರಿಸ್ಥಿತಿಯಲ್ಲಿ ನಾವು ಭಾರತಕ್ಕೆ ಆಹಾರವನ್ನು ಕೊಡುವುದರಿಂದಲೇ ನಮ್ಮ ನಿಜವಾದ ಮೈತ್ರಿತ್ವವನ್ನು ಪ್ರದರ್ಶಿಸಿದಂತಾಗುವುದು' ಎಂದು 'ದಿ ನ್ಯೂಯಾರ್ಕ್ ಟೈಮ್ಸ್' ಬರೆದಿದೆ. ಅಂತೂ ಅಮೇರಿಕೆಯು ಆಹಾರವನ್ನು ಭಾರತಕ್ಕೆ ತಡವಾಗಿಯಾದರೂ ಕೊಡದಿರುವುದಿಲ್ಲ. ಭಾರತ ಸರಕಾರ ಸ್ವಾವಲಂಬನ ಧೋರಣದಿಂದ ಆಹಾರದ ಕೊರತೆಯನ್ನು ಎದುರಿಸದೇ ಕಾದಪ್ರಸಂಗ ಬಂದರೂ ಇತರ ನೆರೆಯ ರಾಷ್ಟ್ರಗಳ ಸಕಾಲಿಕವಾದ ಕೊಡುಗೆಯ ಫಲವಾಗಿ ಗಂಭೀರ ಪರಿಸ್ಥಿತಿಯೇನೂ ಉಂಟಾಗದು!

ಮದ್ರಾಸು ಪ್ರಾಂತಕ್ಕೆ ಹೆಚ್ಚಿನ ಆಹಾರಧಾನ್ಯವನ್ನು ಕೇಂದ್ರ ಸರಕಾರವು ಕೊಡಲು ಒಪ್ಪಿದೆಯೆಂದು ಮದ್ರಾಸಿನ ಆಹಾರಮಂತ್ರಿ ಶ್ರೀ ಕೋಟಿ ವಿಕ್ಟೋರಿಯಾರವರು ಪಾರ್ಲಿಮೆಂಟಿನ ಮುಂದೆ ಹೇಳಿದರು. ಏಪ್ರಿಲ್ ತಿಂಗಳಲ್ಲಿ ಕೊಡಬೇಕಾದ 33,000 ಟನ್ ಆಹಾರ ಧಾನ್ಯಗಳನ್ನು 41,000 ಸಾವಿರ ಟನ್ನಿನ ವರೆಗೆ ಹೆಚ್ಚಿಸಲಾಗಿದೆ. ಮುಂದೆ ಅಮೇರಿಕಾ, ರಷ್ಯಾ, ಅರ್ಜೆಂಟೈನ್, ಚೀನಾ, ಬರ್ಮಾ, ಮುಂತಾದ ಕಡೆಗಳಿಂದ ಆಹಾರ ಧಾನ್ಯ ಬಂದ ಮೇಲೆ ಇನ್ನೂ ಹೆಚ್ಚಿನ ಆಹಾರ ಧಾನ್ಯ ಮದ್ರಾಸಕ್ಕೆ ಬರಲಿದೆ. ಏಪ್ರಿಲ್ ತಿಂಗಳಲ್ಲಿ ಮದ್ರಾಸಿಗೆ ಬಂದ 33,000 ಆಹಾರ ಧಾನ್ಯದಲ್ಲಿ 10,000 ಟನ್ ಅಕ್ಕಿ, 12,000 ಟನ್ ಗೋಧಿ 11,000 ಜೋಳವಾಗಿರುತ್ತದೆ. ಆಹಾರಖಾತೆಯ ಕಾರ್ಯದರ್ಶಿಯವರು 1951ನೇ ಇಸವಿಯಲ್ಲಿ 5,00000 ಟನ್ ಆಹಾರವನ್ನು ಮದ್ರಾಸಿಗೆ ಕೊಡುವ ವಿಶೇಷ ಸವಲತ್ತನ್ನು ಕಲ್ಪಿಸಿ ಕೊಟ್ಟಿದ್ದಾರೆ. 800000ಟನ್ ಆಹಾರ ಧಾನ್ಯಗಳ ಉಳಿತಾಯ ಬರ್ಮ ಸರಕಾರಕ್ಕಿದೆಯೆಂದು ತಿಳಿಸಿದ್ದರಿಂದ ಅಲ್ಲಿಂದ ಅಕ್ಕಿಯೇ ಭಾರತ ಸರಕಾರಕ್ಕೆ ಬರುತ್ತದೆ. ಅದರಿಂದ ಮದ್ರಾಸಕ್ಕೂ ಅಕ್ಕಿಯ ಪಾಲುಸಿಗಬಹುದಾಗಿದೆ. ಕೇಂದ್ರ ಸರಕಾರವು ಒಂದು ಲಕ್ಷಟನ್ ಆಹಾರ ಧಾನ್ಯವನ್ನು ಮದ್ರಾಸಿಗೆ ಹೆಚ್ಚಾಗಿ ಸದ್ಯ ಕೊಡುವ ವಾಗ್ದಾನ ಮಾಡಿರುತ್ತದೆ. ಏಪ್ರಿಲ್ ತಿಂಗಳ ಆಗ್ಯಾಕು 7ಔನ್ಸಿನಿಂದ 8ಔನ್ಸಿನ ವರೆಗೆ ಹೆಚ್ಚಿಸಲಾದ ಅಂಶವು ಕೇಂದ್ರ ಸರಕಾರದ ಅನುಗ್ರಹದಿಂದಲೇ. ಒಂಭತ್ತು ಔನ್ಸಿನ ತನಕ ಏರಿಸುವ ಮನಸ್ಸು ಮದ್ರಾಸು ಸರಕಾರಕ್ಕಿರುವುದಾದರೂ ಅದನ್ನು ನಿರ್ಭಯವಾಗಿ ಹೇಳುವ ಧೈರ್ಯ ಕೇಂದ್ರ ಸರಕಾರದ ಕೊಡುಗೆಯನ್ನು ಹೊಂದಿಕೊಂಡಿದೆಂದು ಆಹಾರ ಮಂತ್ರಿಗಳು ಹೇಳುತ್ತಾರೆ. ಅಂತೂ ಆಹಾರದ ಅಭಾವವು ಮದ್ರಾಸಕ್ಕೆ ಇದಕ್ಕಿಂತ ಹೆಚ್ಚಾಗಿ ಮುಂದಕ್ಕೆ ಆಗಲಾರದೆಂಬುದು ಸದ್ಯ ಆಹಾರ ಸಂಚಾರದ ಕ್ರಮಗಳಿಂದ ಊಹಿಸಬಹುದು.

IN THE SERVICE OF THE COUNTRY
1925 1950
SAVINGS
BANK ACCOUNT
Financing of

PROVIDE EMPLOYMENT.
income
SAVINGS
Bank your Savings with
THE CANARA INDUSTRIAL & BANKING SYNDICATE LTD
ನಿಮ್ಮ ಉಳಿತಾಯವನ್ನು ಇರಿಸಲಿಕ್ಕೆ
ದಿ ಕೆನರಾ ಇಂಡಸ್ಟ್ರಿಯಲ್ ಎಂಡ್
ಬ್ಯಾಂಕಿಂಗ್ ಸಿಂಡಿಕೇಟ್ ಲಿಮಿಟೆಡ್

ಮದ್ರಾಸಿನಲ್ಲಿ ರಾಷ್ಟ್ರಾಧ್ಯಕ್ಷರು.

ರಾಷ್ಟ್ರಾಧ್ಯಕ್ಷ ರಾಜೇಂದ್ರ ಪ್ರಸಾದರಿಗೆ ಮದ್ರಾಸಿನಲ್ಲಿ ಅಭೂತಪೂರ್ವ ಸ್ವಾಗತ ಜನತೆಯಿಂದ. ಮೂರು ದಿನಗಳ ಅವರ ವಾಸ್ತವ್ಯವು ಮದ್ರಾಸಿಗರಲ್ಲಿ ವಿಶೇಷ ಅಭಿಮಾನ ಸಂತೋಷಗಳನ್ನುಂಟುಮಾಡಿದೆ. ಸಾರ್ವಜನಿಕ ಸಭೆಯಲ್ಲಿ ಸಮಯಕ್ಕಿಂತ ಮೊದಲಾಗಿಯೆ ನಾಗರೀಕರೆಲ್ಲ ರಾಷ್ಟ್ರಾಧ್ಯಕ್ಷರ ಭಾಷಣವನ್ನು ಕೇಳಲು ಕಿಕ್ಕಿರಿದು ನೆರೆದಿದ್ದರು. ಸಾರ್ವಜನಿಕರೊಡನೆ ನಗರದ ಮುಖ್ಯಾಧಿಕಾರಿಗಳು ಭಾಗವಹಿಸಿದ್ದರು. ಹೈಕೋರ್ಟಿನ ನ್ಯಾಯಾಧಿಪತಿಗಳೇ ಮೊದಲಾದ ಪ್ರತಿಷ್ಠಿತ ವ್ಯಕ್ತಿಗಳು ಆಗಮಿಸಿದ್ದರು. ಗವರ್ನರರೂ, ಮಹಾರಾಣಿಯವರೂ ನಗರಾಧಿಪತಿಗಳೂ ಸಭಾಸನದ ರಾಷ್ಟ್ರಾಧ್ಯಕ್ಷರ ಇಕ್ಕೆಡೆಯಲ್ಲಿ ಆಸೀನರಾಗಿದ್ದರು.

ಗವರ್ನರರ ಹಾಗೂ ನಗರಾಧ್ಯಕ್ಷರೊಡನೆ ರಾಷ್ಟ್ರಾಧ್ಯಕ್ಷರು ಸಭೆಯನ್ನು ಎದುರ್ಗೊಂಡಾಗ ಸಭಿಕರು 'ರಾಜೇಂದ್ರಪ್ರಸಾದರ್ ಕೀ ಜೈ' ಎಂದು ಘೋಷಿಸಿದರು. ಸಾಮೂಹಿಕವಾಗಿಯ 'ವಂದೇಮಾತರಂ' ರಾಷ್ಟ್ರಗೀತೆಯೊಂದಿಗೆ ಸಭಾರಂಭವಾಯಿತು. ನಗರಾಧಿಪತಿಗಳಾದ ಶ್ರೀ ಆರ್. ರಾಮನಾಥನ್ ಚೆಟ್ಟಿಯಾರರು ಸ್ವಾಗತ ಭಾಷಣವನ್ನು ಓದಿ ಹೇಳಿದರು. ಕಿಕ್ಕಿರಿದು ತುಂಬಿರುವ ಜನಸ್ತೋಮದ ನಡುವೆ ರಾಷ್ಟ್ರಾಧ್ಯಕ್ಷರು ಹಸನ್ಮುಖಿಯಾಗಿ ತಮ್ಮ ಭಾಷಣವನ್ನಾರಂಭಿಸಿದರು. ಸಹಸ್ರ ಸಹಸ್ರ ಜನರು ಶಾಂತಚಿತ್ತದಿಂದ ರಾಷ್ಟ್ರಾಧ್ಯಕ್ಷರ ಅನರ್ಘ್ಯ ಭಾಷಣವನ್ನು ಕೇಳಿದರು. ಡಾ॥ ರಾಜೇಂದ್ರ ಪ್ರಸಾದರು ಮಾತನಾಡುತ್ತಾ: ನಾನಿಲ್ಲಿಗೆ ಬಂದು ಸೇರಿದಾರಭ್ಯ ನಿಮ್ಮಿಂದ ಸತ್ಕಾರ, ಹಾರ್ದಿಕ ಸ್ವಾಗತಗಳನ್ನು ಸ್ವೀಕರಿಸುತ್ತಲಿದ್ದೇನೆ. ನೀವಿಂದು ಮಾಡುತ್ತಿರುವ ಹಾರ್ದಿಕ ಅಭಿನಂದನೆಗಳು ಒಬ್ಬ ರಾಷ್ಟ್ರಾಧ್ಯಕ್ಷನಿಗೆ ನೀವು ತೋರುವ ಪ್ರೀತ್ಯಾದರಗಳ ಕುರುಹಾಗಿವೆ. ಸ್ವಾತಂತ್ರ್ಯವನ್ನು ಪಡೆದ ಅಭಿಮಾನದಿಂದ ನೀವು ನಿಮ್ಮ ಪ್ರೀತಿಗರ್ಹನಾದವನೊಬ್ಬನನ್ನು ಆರಿಸಿದ್ದೀರಿ. ಇಂದು ಸಲ್ಲಿಸುತ್ತಿರುವ ಗೌರವಾದರಗಳು ಆತನನ್ನೇ ಸೇರುತ್ತದೆ ವಿನಹ ನನ್ನನ್ನಲ್ಲ.

'ನೀವು ನನಗೆ ಕೊಟ್ಟ ಮಾನಪತ್ರದಲ್ಲಿ ಮದ್ರಾಸ್ ಕಾರ್ಪೋರೇಶನಿನ ಮುಂದಿರುವ ಹಲವು ಸಂಕಷ್ಟಗಳನ್ನು ನನ್ನಲ್ಲಿ ಅರಿಕೆ ಮಾಡಿಕೊಂಡಿದ್ದೀರಿ. ಅಂತಹ ಸಂಕಷ್ಟಗಳು ನಿಮಗೆ ಮಾತ್ರವಲ್ಲ ನಮ್ಮ ದೇಶಕ್ಕೆ ಇರುವಂತಹ ಮಹಾ ಸಮಸ್ಯೆಯಾಗಿದೆಯೆಂದು ನಾನೆಣಿಸುತ್ತೇನೆ. ನಗರಗಳೆಲ್ಲ ಹಿಂದಿಗಿಂತ ಮೂರು ಪಾಲಷ್ಟು ದೊಡ್ಡದಾಗಿ ವಿಸ್ತಾರಗೊಂಡಿವೆ. ಹೀಗೆ ದೊಡ್ಡದಾಗಿ ಬೆಳೆದ ನಗರದ ಜನಸಂಖ್ಯೆಯೂ ಹಾಗೆಯೇ ಎರಡು ಮೂರು ಪಟ್ಟಾಗಿ ಬೆಳೆದಿದೆ. ಅಂದ ಮೇಲೆ ಕಷ್ಟಗಳು ನೂತನ ಸಮಸ್ಯೆಗಳೂ; ಅದರ ಜೊತೆಯಲ್ಲಿಯೇ ಬೆಳೆದು ಬರುವುದು ಸ್ವಾಭಾವಿಕ. ಆರ್ಥಿಕ ಸ್ಥಿತಿಕಟ್ಟಾಗ ಇಂತ ಸಮಸ್ಯೆಗಳು ಇನ್ನಷ್ಟು ಕಠಿಣವಾಗುತ್ತವೆ. ಆದುದರಿಂದ ಇಂತಹ ಸನ್ನಿವೇಶದಲ್ಲಿ ಪರಿಸ್ಥಿತಿಯನ್ನರಿಯುವಲ್ಲಿ ಮಹಾತ್ಯಾಗಿಗಳಾಗಬೇಕೆನ್ನುತ್ತೇನೆ. ನೀವು ಕಾರ್ಯತತ್ಪರರಾಗಿದ್ದು ಅವರಿಂದ ವಿಶೇಷ ಪ್ರಗತಿಯನ್ನು ಹೊಂದಿರುವದನ್ನು ನಾನು ಶ್ಲಾಘಿಸದಿರಲಾರೆ. ಹೀಗೆಯೇ ನೀವು ಪ್ರಗತಿ ಪಥದಲ್ಲಿ ಮುಂದುವರಿಯುವದಾದರೆ ಕೆಲವೇ ಸಮಯದೊಳಗಾಗಿ ಮದ್ರಾಸನ್ನು ಅಂತಹ ತೊಡಕುಗಳಿಂದ ಮುಕ್ತಮಾಡಬಲ್ಲಿರಿ.

ಕಾರ್ಪೊರೇಶನ್ ಎದುರಿಸ ಬೇಕಾದ ಪ್ರಸಂಗಗಳ ಕುರಿತು ಹೇಳುವದಾದರೆ ಸದ್ಯ ಸ್ವಾತಂತ್ರ್ಯ ವಿಚಾರವನ್ನು ನಾವು ಕುಸು ವಿಮರ್ಶಿಸಬೇಕೆನ್ನುತ್ತೇನೆ. ನಮ್ಮ ಸ್ವಾತಂತ್ರ್ಯ ಕೇವಲ ಮೂರು ವರ್ಷದ ಅಂತರದ್ದು; ಸಣ್ಣ ಗಿಡಗಳ ಹಾಗೆ ಅದರ ಸಲುವು. ಈಗ ಅದನ್ನು ಜಾಗ್ರತೆಯಿಂದ ಬೆಳೆಸುವ ಹಾಗೂ ರಕ್ಷಿಸುವ ಹೊಣೆ ಮಹತ್ವದ್ದಲ್ಲವೇ? ಹಲವು ವಿಚಾರಗಳಲ್ಲಿ ನಾವು ತಪ್ಪಿದಬಹುದು. ಅದಕ್ಕೆ ಮುಖ್ಯ ಕಾರಣವೆಂದರೆ ಒಮ್ಮುಖವಾದ ಧೋರಣೆಯಿಲ್ಲದೇ ಇರುವದಾದ್ದೇ. ನಮ್ಮಲ್ಲಿ ಒಂದೇ ಬಗೆಯ ಧೋರಣೆಯ ದೃಷ್ಟಿ ಬೇಕಾಗಿದೆ. ದೇಶವಿಭಜನೆಯಿಂದ ನಾವು ನಮ್ಮೆರಡು ರೆಕ್ಕೆಗಳನ್ನೇ ಕಳೆದುಕೊಂಡಂತಾಗಿದೆ.

ಹಿಂದೂಗಳ ಪ್ರಭುತ್ವದಲ್ಲಿ, ಅಂದರೆ ಬುದ್ಧ, ಹಾಗೂ ಮುಸ್ಲಿಮರ ಆಳುವಿಕೆಯಲ್ಲೂ, ಮತ್ತು ಬ್ರಿಟಿಶರ ಆಳುವಿಕೆಯ ಸಮಯದಲ್ಲಿ ಭಾರತ ಇದ್ದ ಸ್ಥಿತಿಗಿಂತ ಹೆಚ್ಚು ವಿಸ್ತಾರವೂ ಜನಸಂಖ್ಯೆ ಉಳ್ಳದ್ದೂ ಆಗಿರುತ್ತದೆ.

ನಾನು ತಮ್ಮೆಲ್ಲರೊಡನೆ ಒಗ್ಗಟ್ಟು ಮೈತ್ರಿಯೊಂದಿಗೆ ದೇಶದ ಸ್ವಾತಂತ್ರ್ಯವನ್ನು ರಕ್ಷಿಸಿಕೊಳ್ಳಬೇಕೆಂದು ಕಳಕಳಿಯಿಂದ ಕೇಳಿಕೊಳ್ಳುವವನಿದ್ದೇನೆ.

ಕಳೆದ ಮೂರು ವರ್ಷಗಳಿಂದ ಹಲವಾರು ಗಂಡಾಂತರ ಪರಿಸ್ಥಿತಿಗಳನ್ನು ಎದುರಿಸುತ್ತಲಿದೇವೆ. ಸ್ವಾತಂತ್ರ್ಯಬಂದ ಬಳಿಕ ನಾವು ಹಲವಾರು ಕಷ್ಟಪರಂಪರೆಗಳನ್ನಪ್ಪಿಕೊಂಡಿರುವದಾದರೂ ಕೇಂದ್ರ ಮತ್ತು ಪ್ರಾಂತೀಯ ಸರಕಾರಗಳು ಒಂದಾಗಿ ಅದನ್ನು ಎದುರಿಸಲು ಸಮರ್ಥವಾದುದಕ್ಕೆ ಹೆಮ್ಮೆ ಪಡಬೇಕು. ಎಲ್ಲಕ್ಕಿಂತಲೂ ಹೆಚ್ಚು ಗಂಭೀರ ಪ್ರಶ್ನೆಯೆಂದರೆ ಆಹಾರದ್ದು. ದೇಶದಲ್ಲೆಲ್ಲಾ ಆಕುರಿತು ಹಾಹಾಕಾರವೆದ್ದಿದೆ. ಸರಕಾರದ ಹೊಣೆ ಮಹತ್ವದ್ದಾಗಿದೆಯೆಂಬುದನ್ನು ನಾನು ಮರೆತಿಲ್ಲ. ನಾವು ಹೆಚ್ಚು ಸಂಖ್ಯೆಯಿಂದ ಆಹಾರವನ್ನು ಪರದೇಶಗಳಿಂದ ಆಮದುಮಾಡಿಕೊಳ್ಳುತ್ತಲಿದ್ದೇವೆ. ಹೆಚ್ಚು ಆಹಾರದ ಉತ್ಪಾದನೆಯ ಕಾರ್ಯದಲ್ಲಿ ಸರಕಾರ ಹೆಚ್ಚಿನ ಆಸ್ಥೆವಹಿಸಿದೆ. ಸರಕಾರ ಯಾವ ಪ್ರಯತ್ನಕೈಗೊಂಡರೂ ಜನತೆಯ ಸಹಕಾರ ಇಲ್ಲದೆ ಹೋದರೆ ಪರಿಸ್ಥಿತಿಯು ಸುಧಾರಿಸಲಾರದು. ಇಂತಹ ಸನ್ನಿವೇಶದಲ್ಲಿ ಸರಕಾರಕ್ಕೆ ಸಹಕಾರ ನೀಡುವದರಿಂದ ನಮ್ಮ ಕಠಿಣ ಪರಿಸ್ಥಿತಿಯು ತಿಳಿಯಾಗಬಹುದೆಂದು ನನ್ನಭಿಪ್ರಾಯವಿದೆ. ಅತ್ಯಂತ ಶೋಚನೀಯ ಪರಿಸ್ಥಿತಿಯು ದೇಶವನ್ನು ನಾನು ಬಲ್ಲೆ; ನಮ್ಮ ದೇಶದ ಹೀನಾಯವಾದ ಪರಿಸ್ಥಿತಿಯನ್ನೂ ನಾನು ಚೆನ್ನಾಗಿ ಬಲ್ಲೆ. ಇದನ್ನರಿತುಕೊಂಡೇ ಸರಕಾರ ತೊಂದರೆಯನ್ನು ನಿವಾರಿಸುವಷ್ಟು ಸಮರ್ಥವಾಗಿದೆಯೆಂದು ನಿಮಗೆ ಆಶ್ವಾಸನೆ ಕೊಡುವವನಿದ್ದೇನೆ.

ನಮ್ಮ ಆರ್ಥಿಕ ಪರಿಸ್ಥಿತಿ ಏನೇನೂ ಚೆನ್ನಾಗಿಲ್ಲ. ಕೊರತೆಯ ಮುಂಗಡ ಪತ್ರಗಳೇ ಕೇಂದ್ರ ಮತ್ತು ಪ್ರಾಂತೀಯ ಸರಕಾರದಲ್ಲಿ ಕಾಣುತ್ತಲಿವೆ. ಆದುದರಿಂದಲೇ ನಮ್ಮ ಧ್ಯೇಯವನ್ನು ನಾವು ಮುಟ್ಟಲು ಅಸಮರ್ಥರಾಗಿದ್ದೇವೆ. ನಮ್ಮ ಈ ಅಸಮರ್ಥತೆಯನ್ನು ಹೋಗಲಾಡಿಸಲು ನಾವೇನೂ ಹೊಸ ಕರಭಾರವನ್ನು ಸೇರಿಸಲಿಲ್ಲ. ಆದರೂ ಹಲವು ವಿಚಾರಗಳಲ್ಲಿ ಟೀಕೆಗಳ ಮೇಲೆ ಟೀಕೆ ನಮ್ಮ ಮೇಲೆ ನಡೆದಿದೆ. ಇಂತಹ ಟೀಕೆಗಳಿಂದ ನಾವು ಎದೆಗುಂದದೆ ನಮ್ಮ ಧ್ಯೇಯವನ್ನು ಸಾಧಿಸುವುದೇ ಮುಖ್ಯವಾಗಿದೆ. ಹೊಸ ಸರಕಾರ ಜನ್ಮತಾಳುವಾಗ ಇಂತಹ ಪರಿಸ್ಥಿತಿಗಳು ಜೊತೆಗೆ ಉಂಟಾಗುತ್ತವೆ ಎಂಬುದನ್ನು ನಾವು ಮರೆಯದಿರೋಣ. ಹೊಸತಾಗಿ ರೂಪುಗೊಂಡ ನಮ್ಮ ಸರಕಾರವೂ ಅಂತಹ ಪರಿಸ್ಥಿತಿಯನ್ನು ಎದುರಿಸಬೇಕಾದ ಪ್ರಸಂಗ ಬಂದಿದೆ. ನಾವು ಇದರಿಂದ ಉತ್ತೀರ್ಣರಾದೇವೆಂದರೆ ಪ್ರಬಲ ರಾಷ್ಟ್ರವೊಂದನ್ನು ಕಟ್ಟುತ್ತೇವೆನ್ನುವದರಲ್ಲಿ ಸಂದೇಹವಿಲ್ಲ' ಎಂದು ಹೇಳಿದರು.

ರಾಷ್ಟ್ರಾಧ್ಯಕ್ಷರು ಮದ್ರಾಸಿನ ಇನ್ನೂ ಇತರ ಸಂಸ್ಥೆಗಳನ್ನು ಸಂದರ್ಶಿಸಿದರು. ಮೂರು ದಿನಗಳ ವಾಸ್ತವ್ಯದಲ್ಲಿ ಹಲವಾರು ಕಡೆಯಲ್ಲಿ ಭಾಷಣ—ಮುಂತಾದ ಕಾರ್ಯಕ್ರಮಗಳು ಇರುತ್ತವೆ.

For Life Insurance

CONSULT

THE NEW GUARDIAN OF INDIA

LIFE INSURANCE CO LTD.

(Established 1934)

Chairman: Sri M. Ct. M. Chidambaram Chattiyar

A Policy in this progressive Life Office
is a good investment; its Agency
is a valuable business connection.

MANGALORE BRANCH:
K. S. R. Road,
Hampanakatta, MANGALORE.

HEAD OFFICE:
"United India Life Bldg",
P. B. No. 142, MADRAS.

ನಿರಾಶೆಗೆ ಒಳಗಾಗದಿರಿ!

ಉಬ್ಬಸ, ಕಫ, ಶ್ವಾಸಕೋಶದಿಂದ ನೀವು ವಿಪರೀತ ಕಷ್ಟಪಡುತ್ತಿರಾದರೆ, ಹಲವಾರು
ಅಮೂಲ್ಯ ಔಷಧಿಗಳ ಸೇವನೆಯಿಂದ ನಿಮಗೆ ಗುಣವಾಗದಿರುವುದಾದರೆ,

ಆಶಾಭಂಗಕ್ಕೊಳಗಾಗದಿರಿ!

ಅಲ್ಪವೆಚ್ಚ-ಅಲ್ಪಾವಧಿಯೊಳಗೆ ನಿಮ್ಮಬಾಧೆಯನ್ನು ಶಮನಮಾಡುವ

ಖಾತ್ರಿ ಔಷಧಿಯು ನಮ್ಮಲ್ಲಿರುವುದು.

ಒಂದೇ ಒಂದು ಸೀಸೆಯನ್ನು ಕೊಂಡು, ಗುಣಪರೀಕ್ಷೆಮಾಡಿರಿ!

ಈ ಹೊಸ ಮದ್ದಿನಿಂದ ನಿಮಗೆ ಅದ್ಭುತ ಗುಣತೋರುವುದೆಂಬುದು ಖಂಡಿತ.

ಕೂಡಲೆ ಬರೆಯಿರಿ:—

ದಿ ನೇಶನಲ್ ಜನರಲ್ ಸ್ಟೋರ್ಸ್

(ಡಿಸ್ಪೆನ್ಸಿಂಗ್ ಕೆಮಿಸ್ಟ್ಸ್ ಮತ್ತು ಡ್ರಗ್ಗಿಸ್ಟ್ಸ್)

8-A ಮೆಹರ್ವಾನ್ ಬಿಲ್ಡಿಂಗ್ಸ್, ಸರ್. ಫಿರೋಜ್ ಷಾ ಮೆಹತಾ ರೋಡು,

ಫೋರ್ಟ್, ಬೊಂಬಾಯಿ.

THE NATIONAL GENERAL STORES

Importers, Exporters, Dispensing Chemists & Druggists,

General Merchants & Commission Agents,
8A Mherwan Buildings, Opp: His Master's Voice,
Sir Phirozsha Mehta Road, Fort, Bombay.

ಅಳಿಯ ಸಂತಾನ ಕಾನೂನು

ಇದರ ಪ್ರತಿಗಳು ದೊರೆಯುತ್ತವೆ,
ಕನ್ನಡ ಪ್ರತಿಗೆ 0-8-0
ಇಂಗ್ಲಿಷ್ ಪ್ರತಿಗೆ 0-8-0
ಟಪ್ಪಾಲು ಖರ್ಚು 0-1-0 ಪ್ರತ್ಯೇಕ.
0-9-0 ಕಳುಹಿಸಿದರೆ ಒಂದು ಪ್ರತಿ ಕಳುಹಿಸಲ್ಪಡುವುದು.

ನವಯುಗ ಪ್ರೆಸ್, ಉಡುಪಿ.

ಹೊಸ ಪಂಚಾಯತುಗಳ ರಚನಾಕ್ರಮ.

1950ನೇ ಮದ್ರಾಸು ಗ್ರಾಮ ಪಂಚಾಯತ್ ಶಾಸನವು ಇದೇ ಏಪ್ರಿಲಿನಿಂದ ಜಾರಿಗೆ ಬರುವುದು, ಅದರಂತೆ ಜನಸಂಖ್ಯೆಯು 500 ಮತ್ತು ಹೆಚ್ಚಿರುವ ಪ್ರತಿ ಹಳ್ಳಿಗೆ ಒಂದು ಪಂಚಾಯತನ್ನು ರಚಿಸಲಾಗುವುದು. ಕಡಿಮೆ ಜನಸಂಖ್ಯೆಯುಳ್ಳ ಹಳ್ಳಿಗಳನ್ನು ಸಮೀಪದ ಹಳ್ಳಿಗಳೊಡನೆ ಸೇರಿಸಿಕೊಂಡು ಇಡೀ ಗುಂಪಿಗೆ ಒಂದೇ ಪಂಚಾಯತ್ ರಚಿಸಲ್ಪಡುವುದು. ಈಗ ನಮ್ಮ ಮದ್ರಾಸ ಸಂಸ್ಥಾನದಲ್ಲಿ ಒಟ್ಟು ಸುಮಾರು 8,335 ಪಂಚಾಯತುಗಳಿವೆ. 15,830 ಹಳ್ಳಿಗಳಿಗೆ ಇನ್ನು ಪಂಚಾಯತ್‌ಗಳು ರಚಿಸಲ್ಪಡಬೇಕು. ಈ ಪಂಚಾಯತ್‌ಗಳು ಕಡ್ಡಾಯವಾಗಿ ರಚಿಸಲ್ಪಡುವವು. ಈಗಿರುವಂತೆ ಸ್ಥಳೀಕ ನಿವಾಸಿಗಳ ಇಲ್ಲವೇ ಅಧಿಕಾರಿಗಳ ಇಚ್ಛೆಗೆ ಬಿಟ್ಟು ಬಿಡಲಾಗದು.

5000ಕ್ಕಿಂತಲೂ ಕಡಿಮೆಯಾಗದಷ್ಟು ಜನಸಂಖ್ಯೆಯು ಮೇಲೆ ಅಧಿಕಾರವಿರುವ ಹಾಗೂ ರೂಪಾಯಿ 10,000ಕ್ಕೆ ಕಡಿಮೆಯಾಗದಷ್ಟು ವಾರ್ಷಿಕ ಆದಾಯವಿರುವ ಪಂಚಾಯತ್‌ಗಳನ್ನು (ಕ್ಲಾಸ್ I) ಒಂದನೇ ವರ್ಗದ ಪಂಚಾಯತ್‌ಗಳನ್ನಾಗಿ ವಿಂಗಡಿಸಲಾಗುವುದು. ಉಳಿದವುಗಳೆಲ್ಲವೂ (ಕ್ಲಾಸ್ II) ಎರಡನೇ ವರ್ಗದ ಪಂಚಾಯತ್‌ಗಳು. ಸಾಮಾನ್ಯವಾಗಿ ಆಡಳಿತೆಯ ಹಿತದೃಷ್ಟಿಯಲ್ಲಿ ಅವಶ್ಯವೆಂದಾದರೆ ಒಂದನೇ ವರ್ಗದ ಪಂಚಾಯತ್‌ಗಳಿಗೆ ಎಕ್ಸಿಕ್ಯೂಟಿವ್ ಆಫೀಸರರನ್ನು ನೇಮಿಸಲಾಗುವದು.

ಕಾರ್ಯನಿರ್ವಾಹಕ ಅಧಿಕಾರಿ

ಪ್ರತಿಗ್ರಾಮವನ್ನು ಚುನಾವಣಾ ವಾರ್ಡುಗಳನ್ನಾಗಿ ವಿಂಗಡಿಸಿ, ರಹಸ್ಯ ಚುನಾವಣಾ ಕ್ರಮದಲ್ಲಿ ಪಂಚಾಯತ್‌ಗಳಿಗೆ ಸದಸ್ಯರನ್ನು ಆರಿಸಲಾಗುವುದು. ಪಂಚಾಯತಿಯು ಅಧ್ಯಕ್ಷರನ್ನು ಸದಸ್ಯರು ಅಂತಲ್ಲದೆ, ಮತದಾರರೆಲ್ಲರೂ ಪ್ರತ್ಯಕ್ಷವಾಗಿ ಚುನಾಯಿಸುವರು. ಉಪಾಧ್ಯಕ್ಷರನ್ನು ಮಾತ್ರ ಪಂಚಾಯತ್ ಸದಸ್ಯರು ಚುನಾಯಿಸುವರು. ಶೆಡ್ಯೂಲ್ಡ್ ಜಾತಿಗಳ ಸದಸ್ಯರ ಪಟ್ಟಿಗೆ ಮಾತ್ರ ಪಂಚಾಯತ್‌ಗಳಲ್ಲಿ ಸ್ಥಾನಗಳನ್ನು ಕಾದಿರಿಸಲಾಗುವುದು. ಅದು ಸಹ ಶಾಸನವು ಜಾರಿಗೆ ಬಂದಂದಿನಿಂದ ಹತ್ತು ವರುಷಗಳವರೆಗೆ ಮಾತ್ರ. ಯಾವುದೇ ಪಂಚಾಯತ ಪ್ರದೇಶಕ್ಕೆ ಸಂಬಂಧಿಸಿದ ಸಂಸ್ಥಾನದ ನ್ಯಾಯವಿಧಾಯಕ ಸಭೆಯ ಮತದಾರರ ಪಟ್ಟಿಯೇ ಆ ಪಂಚಾಯತಿಯ ಸದಸ್ಯರ ಚುನಾವಣೆಗೋಸ್ಕರದ ಮತದಾರರ ಪಟ್ಟಿಯಾಗಿರುವುದು. ಹೀಗೆ ಪಂಚಾಯತ್‌ಗಳಿಗೆ ಬೇಗನೇ ನಡೆಯಲಿರುವ ಸಾಮಾನ್ಯ ಚುನಾವಣೆಗಳು ವಯಸ್ಕರ ಮತಾಧಿಕಾರ ಕ್ರಮದಲ್ಲಿರುವುದು.

ಗ್ರಾಮಕೋರ್ಟುಗಳು ರದ್ದಾಗುವುವು

ಹೊಸಶಾಸನ ಪ್ರಕಾರ ಪಂಚಾಯತ್‌ಗಳು ಸಿವಿಲ್ ಮತ್ತು ಕ್ರಿಮಿನಲ್ ನ್ಯಾಯವ್ಯವಹರಣೆಯ ಕೆಲಸವನ್ನು ಸಹ 1888ನೇ ಮದ್ರಾಸ್ ಗ್ರಾಮಕೋರ್ಟುಗಳ ಶಾಸನ ಅನ್ವಯ ನಿರ್ಣಯಿಸಿಕೊಂಡು ಬರುವುವು. ಈಗಿರುವ ಗ್ರಾಮ ಕೋರ್ಟುಗಳನ್ನು ತೆಗೆದು ಹಾಕಲಾಗುವುದು. ಪಂಚಾಯತ್ ಪ್ರದೇಶದಲ್ಲಿ ಸಬ್ ರಿಜಿಸ್ಟ್ರಾರರ ಆಫೀಸಿಲ್ಲದಿದ್ದರೆ ಅಲ್ಲಿ ಎಕ್ಸಿಕ್ಯೂಟಿವ್ ಆಫೀಸರಿಗೆ ಕೆಲವು ನಿರ್ದಿಷ್ಟ ದಾಖಲೆ ಪತ್ರಗಳ ಪಟ್ಟಿಗೆ ರಿಜಿಸ್ಟ್ರೇಶನ್ ಆಫೀಸರರ ಅಧಿಕಾರಗಳನ್ನು ಒಪ್ಪಿಸಲಾಗುವುದು.

ಎಕ್ರೆಗೆ ಒಂಬತ್ತು ಅಕ್ಕಿ

ಯೋಗ್ಯ ಕೃಷಿಕ್ರಮಗಳನ್ನು ಅನುಸರಿಸಿದುದರಿಂದಲೂ ವಿಚಾರಪೂರ್ವಕ ಗೊಬ್ಬರ ಉಪಯೋಗಿಸಿದುದರಿಂದಲೂ ಪಶ್ಚಿಮ ಬಂಗಾಲದಲ್ಲಿ ಶ್ರೀ ಜೋಗೇಂದ್ರ ಚಂದ್ರಪಣಿ ಎಂಬವರು 1949–50ನೇ ಖಾರೀಫ್ ಬೆಳೆಯಲ್ಲಿ ಎಕ್ರೆಗೆ 73 ಮಣ 30 ಸೇರುಗಳಷ್ಟು ಭತ್ತ ಉತ್ಪತ್ತಿ ಪಡೆದಿರುತ್ತಾರೆ. ಹಿಂದುಸ್ಥಾನದಲ್ಲಿ ಸರಾಸರಿ ಉತ್ಪತ್ತಿ ಎಕ್ರೆಗೆ 12–5ಮಣಗಳಷ್ಟು.

ನಮ್ಮ ಪ್ರಜಾರಾಜ್ಯಾಧ್ಯಕ್ಷ ಡಾ। ರಾಜೇಂದ್ರ ಪ್ರಸಾದರವರಿಂದ ಕಳೆದ ತಿಂಗಳಲ್ಲಿ "ಕೃಷಿ ಪಂಡಿತ" ಎಂಬ ಗೌರವ ಬಿರುದುಗಳನ್ನು ಸ್ವೀಕರಿಸಿದವರಲ್ಲಿ ಶ್ರೀ ಜೋಗೇಂದ್ರ ಚಂದ್ರಪಣಿಯವರು ಒಬ್ಬರು. ಈ ಬಿರುದು ಪ್ರತಿವರ್ಷ ಬೆಳೆ ಸ್ಪರ್ಧಾ ಯೋಜನೆಯ ಪ್ರಕಾರ ಇಂಡಿಯನ್ ಕೌನ್ಸಿಲ್ ಆಫ್ ಎಗ್ರಿಕಲ್ಚರಲ್ ರೀಸರ್ಚ್ ಅವರಿಂದ ಕೊಡಲ್ಪಡುತ್ತದೆ. ಹಿಂದುಸ್ಥಾನದ ಕೃಷಿಗೆ ಗಣನೀಯ ಸಹಾಯ ನೀಡಿದವರಿಗೆ ಈ ಬಿರುದು ದೊರೆಯುತ್ತದೆ.

ಶ್ರೀ। ಪಣಿಯವರು ಮಿಡ್ನಾಪುರ ಜಿಲ್ಲೆಯ ಸುಪಿಯ ಎಂಬ ಹಳ್ಳಿಯಲ್ಲಿ ವಾಸಿಸುವ ಹುಟ್ಟು ರೈತರು. ಅವರಿಗೆ 31 ಎಕ್ರೆ ಜಮೀನ ಒಂದು ಜೋಡು ನೇಗಿಲು ಮತ್ತು ಎರಡು ಜೋಡು ಎತ್ತುಗಳಿವೆ. 1949ನೇ ವರ್ಷದ ಸ್ಪರ್ಧೆಗೆ ಶ್ರೀ। ಪಣಿಯವರು ತನ್ನ 13½ ಎಕ್ರೆ ಜಮೀನನ್ನು ಒಪ್ಪಿಸಿದರು. ಈ ವಿಸ್ತಾರವು ಅತೀ ಸಾರವತ್ತಾದುದೆಂದು ಎಲ್ಲರಿಗೂ ಗೊತ್ತು. ಇದು ತಗ್ಗು ಪ್ರದೇಶದಲ್ಲಿದೆ. ಬತ್ತದ ಬೆಳೆಯ ಸಮಯ ಇಲ್ಲಿ 5ರಿಂದ 6ಅಡಿಗಳಷ್ಟು ನೀರು ನಿಲ್ಲುತ್ತದೆ. ಈ ಗದ್ದೆಗಳನ್ನು ವಸಂತದಲ್ಲಿಯೂ, ಬೇಸಿಗೆಯ ಆರಂಭದಲ್ಲಿಯೂ ಉತ್ತು 4ಟನ್ನುಗಳಷ್ಟು ಹಟ್ಟಿಗೊಬ್ಬರ, ನಂತರ 240 ಪೌಂಡುಗಳಷ್ಟು ಎಲುಬು ಹುಡಿ ಹಾಕಿ ಕೃಷಿ ಇಲಾಖೆಯವರ ಸಲಹೆ ಮೇರೆಗೆ ಬೀಜಬಿತ್ತಿ ನಂಗೋಳಿಸಲಾಯಿತು. ಇಷ್ಟು ಮಾತ್ರವಲ್ಲದೆ ಮುಂಚಿನ ಬೆಳೆಯ ಕೊಯಿಲಿನ ನಂತರ ಗದ್ದೆಗಳಲ್ಲಿ ಉಳಿದ ಬೈಹುಲ್ಲನ್ನು ಉತ್ತು ಮಣ್ಣಿನೊಡನೆ ಮಿಶ್ರಮಾಡಲಾಗಿತ್ತು. ಎಪ್ರಿಲ್‌ನಲ್ಲಿ ಮೊದಲನೆ ಮಳೆ ಬಿದ್ದಾಗ ಭತ್ತದ ಬೀಜ ಬಿತ್ತಲಾಯಿತು. ಬಿತ್ತಿದ ಬತ್ತ ಅಭಿಮಾನ ಎಂಬ ತರದ್ದು ಅತ್ಯಧಿಕ ಉತ್ಪತ್ತಿ ಕೊಡುವ ಜಾತಿ.



ಇದೊಂದೇ ೨೦ ವರ್ಷ ನಿರಂತರವಾಗಿ ಪ್ರಖ್ಯಾತವೂ ಅನುಭವಸಿದ್ಧವೂ ಆದ ದಾಕ್ಷಿಣೀ ಔಷಧವು ಇದು ಕೂಡಲೇ ಶಾಂತಿ. ಕೊಟ್ಟು ಶಾಶ್ವತವಾಗಿ ದಮ್ಮನ್ನು ನಿಲ್ಲಿಸುವದು, ಔಷಧ ತೆಗೆದುಕೊಳ್ಳ ಹತ್ತಿದ ಕೂಡಲೇ ಕೆಮ್ಮು ಹೋಗುವದು, ಶೀತ ಕಡಿಮೆಯಾಗುವದು, ಪಚನವು ಹೆಚ್ಚಾಗುವುದು, ಪುಪ್ಪುಸಗಳು ಗಟ್ಟಿಯಾಗುವವು ಆ ಮೇಲೆ ದಮ್ಮು ಕಡಿದು ಹೋದ ಅನುಭವವೂ ಆಗುವುದು.
ರೂ. ೩॥, ೬॥, ೧೧, ಕಿಮ್ಮತ್ತಿನಲ್ಲಿ ಎಲ್ಲಾ ಕಡೆಯಲ್ಲಿ ಸಿಗುವುದು.
ತಯಾರಕರು
ದಾ. ಪುರೋಹಿತ ಫಾರ್ಮಸೀ
ಕೊಲ್ಹಾಪುರ.

ಅಮೃತಾಂಜನ

ತಲೆನೋವು, ಶಿರೋವೇದನೆ, ಉಳುಕು ಉರ್ತಿಗೆ, ಭುಜ ಹಲ್ಲು ವೇದನೆಗಳಿಗೂ, ಎದೆನೋವು, ಗಾಯಗಳು, ಬಾತುಕೊಳ್ಳುವುದು, ಚೇಳುವಿಷಮುಂತಾದವು, ಪಕ್ಷವಾತ, ಮೊಡವೆ. ಮೊದಲಾದ ಎಲ್ಲಾ ರೋಗಗಳಿಗೂ ಸಿದ್ಧೌಷಧ

REGD

ಕುಳು ಶಕ್ತಿ ಮತ್ತು ನಮ್ಮಲ್ಲಿ ಸಿಕ್ಕುತ್ತದೆ
ಅಮೃತಾಂಜನ ಲಿಮಿಟೆಡ್
ಮದರಾಸು.
ಬೊಂಬಾಯಿ ಮತ್ತು ಕಲ್ಕತ್ತ.

ಜಗತ್ಪ್ರಸಿದ್ಧ ಕಾದಂಬರಿ
'ಫಂಟಮಾರಾ'
ಕನ್ನಡದಲ್ಲಿಯೂ ಇದೆ.

ಬರೆದುದು: ಇಗ್ನೇಜಿಯೋ ಸಿಲೋನೆ,
ಅನುವಾದಿಸಿದುದು: ಕು. ಶಿ ಹರಿದಾಸ ಭಟ್ಟ.
ಬೆಲೆ: ಎರಡು ರೂಪಾಯಿ

'ಈ ಶತಮಾನದ ಅತ್ಯಂತ ಮರ್ಮಸ್ಪರ್ಶಿ ಕಾದಂಬರಿಗಳಲ್ಲೊಂದು .....' —ಕರ್ಮವೀರ

'ಅವಮಾನವಿದಿರು, ಅನ್ಯಾಯದಿದಿರು ಯಾರೂ ತಗ್ಗಿ ನಡೆಯಬಾರದು ಎಂಬ ಧೀರವಾಣಿ ಸಿಲೋನೆಯದು' —'ಸಂಗಾತಿ'

'..ಅಂಥ ಕೆಚ್ಚಿನ ಲೇಖಕನನ್ನು ಕನ್ನಡದ ಬಾಯಿಯಲ್ಲಿ ಆಡಿಸಿ ಶ್ರೀಮಾನ್ ಭಟ್ಟರು ಈ ಅನುವಾದವನ್ನು ಮೂಲಗ್ರಂಥಕ್ಕೆ ಚ್ಯುತಿಯಿಲ್ಲದಂತೆ ಮಾಡಿದ್ದಾರೆ' —'ಚಿತ್ರಗುಪ್ತ'

'ಎಲ್ಲರಿಗೂ ತಿಳಿಯುವಂತೆ ಸುಲಭ ಶೈಲಿಯಲ್ಲಿ ಕನ್ನಡಿಸಲಾಗಿದೆ. ರಾಜಕೀಯದಲ್ಲಿ ದುಡಿಯುವವರು, ರೈತರೊಂದಿಗೆ ಕೆಲಸಮಾಡುವವರು ಎಲ್ಲರೂ ಓದಲೇಬೇಕಾದ ಪುಸ್ತಕ' —'ವಿಮರ್ಶಕ'

'K. S. Haridasa Bhat has done well in Translating silone's classic work 'FONTAMARA' into kannada. He might be said to have done it well too.' 'Bharat Jyothi'

'Mr. Haridasa Bhat has done the rendering so well that the characteristic fatures of the original have been successfully reproduced. Mr. Bhat and the publishers anb to be Congratulated' 'Indian Express'

ಅಂದ ಮೇಲೆ ಇಂದೇ ಬರೆಯಿರಿ.
ನವಭಾರತ ಪುಸ್ತಕಭಂಡಾರ, ಉಡುಪಿ.

ಬಹುಕಾಲ ಬಾಳಿಕೆ ಬರುವಂತೆ ಅಸಾಧಾರಣವಾದ ಶಕ್ತಿ ಇದೆ.

ಎಸ್ಟ್ರೆಲಾ ಬ್ಯಾಟರಿಗಳು ದೀರ್ಘ ಕಾಲ ಬಾಳಿಕೆ ಬರುವವುಗಳೆಂದು ಪ್ರಸಿದ್ಧವಾಗಿವೆ. ಶುಷ್ಕ ಹಿಡಿಯುವಂತೆ ತಡೆಯುವುದು. ಪ್ರಕಾಶಮಾನವಾದ ಬೆಳಕು, ಇವೇ ಇವುಗಳ ವೈಶಿಷ್ಟ್ಯ.

ESTRELA
REGD TRADE MARK

ಎಸ್ಟ್ರೆಲಾ
ಕಲ್ಕತ್ತೆಯಲ್ಲಿ ನಿರ್ಮಿಸಲ್ಪಟ್ಟಿದೆ
ಎಸ್ಟ್ರೆಲಾ ಬ್ಯಾಟರೀಸ್ ಲಿಮಿಟೆಡ್
ಬೊಂಬಾಯಿ–19
ಶಾಖೆಗಳು: ಕಲ್ಕತ್ತ. ಡೆಲ್ಲಿ, ಮದ್ರಾಸ್, ಕಾನಪೂರ್, ನಾಗಪೂರ್.

ಚಂದಾ ವಿವರ
ವರ್ಷಕ್ಕೆ ರೂ. 5-12-0
6 ತಿಂಗಳಿಗೆ ರೂ. 3-0-0

ಗುರುವಾರ, ಉಡುಪಿ, ೧೨-೪-೫೧

ಪ್ರಚಾರ ಸಾಕು.

ಕೇಂದ್ರದ ಆಹಾರಮಂತ್ರಿ ಮಾನ್ಯ ಮುನ್ಷಿಯವರ 'ವನಮಹೋತ್ಸವ' 'ಹೆಚ್ಚು ಆಹಾರ ಬೆಳೆಸಿರಿ' ಎನ್ನುವ ಪ್ರಚಾರದ ಅರ್ಥಶೂನ್ಯ ನೆಗ್ಗಳಿಕೆಯನ್ನು ಕೇಳಿದ ಮೇಲೆ ರೇಶನಿನ ಯುಗದಲ್ಲಿ ಮಾತಿಗೂ ರೇಶನಾದರೆ ಒಳ್ಳಿತೆಂದು ನಮಗನ್ನಿಸುತ್ತದೆ. ಭಾರತಸರಕಾರಕ್ಕೆ(?)ಗೊಂಡಿರುವ ವನಮಹೋತ್ಸವ ಹಾಗೂ 'ಹೆಚ್ಚು ಆಹಾರಬೆಳೆಸಿರಿ' ಕಾರ್ಯದಿಂದ ಜನರ ಹಣ ವ್ಯಯವಾಗುವದರ ಹೊರತು ಇನ್ನಾವ ಪ್ರತಿಫಲವೂ ಇರುವುದಿಲ್ಲ. ಪ್ರತ್ಯಕ್ಷ ಪರಾಜಯ ಹೊಂದುತ್ತಿರುವ ಈ ಎರಡು ಯೋಜನೆಗಳನ್ನು ಮಾನ್ಯ ಸದಸ್ಯರು ಬಲವಾಗಿ ಟೀಕಿಸಿದರೂ, ಯಥಾರ್ಥವನ್ನು ಹೇಳಿದರೂ ಮಂತ್ರಿ ಮುನ್ಷಿಯವರಿಗೆ ಜ್ಞಾನೋದಯವಾಗಲಿಲ್ಲ. ಅದರಿಂದಾದ ಅಲ್ಪ ಪ್ರತಿಫಲದಿಂದ ತುಂಬ ಹಾನಿಯಾದ ಅಂಶವನ್ನು ಹಾರಿಸಿ ಮಾತನಾಡಿ ಲೆಕ್ಕಿಸಿದ್ದು ವಿಷಾದಕರ. ಈಗಲಾದರೂ ಶಾಸ್ತ್ರ ಮಾಡಿದ್ದೇ ಸರಿ ಎನ್ನುವ ಈ ಹಟವಾದಿಗೆ ಜ್ಞಾನೋದಯವಾಗಲಿಲ್ಲ. ವನಮಹೋತ್ಸವ ಕಾಲದಲ್ಲಿ ನೆಟ್ಟ ಸಸಿಗಳ ಸಂಖ್ಯೆಯನ್ನು ಮುಂದೆಮಾಡಿ ಅವೆಲ್ಲ ಈಗಲೂ ಬೆಳೆದುಕೊಂಡು ಇರುತ್ತಲಿವೆಯೆಂದಿದ್ದರೆ. ವನಮಹೋತ್ಸವದ ಯೋಜನೆಯಿಂದ ಆತ್ಮಹತ್ಯೆಯನ್ನು ಮಾಡಿಕೊಂಡ ಇಲ್ಲವೆ ಬಣಮಹೋತ್ಸವಕ್ಕೆ ಸಿದ್ಧವಾದ ಸಸಿಗಳ ಕಳೆಬರಗಳ ಮೇಲೆ ಮುನ್ಷಿಯವರ ದೃಷ್ಟಿ ಹರಿದಿಲ್ಲ. ದೊಡ್ಡದೊಡ್ಡ ನಗರದಲ್ಲಿ ಕೂತು ಸಸಿನೆಡುವದರಿಂದ ವನಬೆಳೆಯುತ್ತದೆನ್ನುವ ಈ ಭ್ರಾಂತಿ ಇನ್ನಾದರೂ ಹೋಗಲಿಲ್ಲ. ಮಾನ್ಯ ಸದಸ್ಯರು ಈ ಯೋಜನೆಯು ಕಾರ್ಯಗತವಾಗಿ ಬರದ್ದನ್ನು ಬಹುವ್ಯಥೆಯಿಂದ ನಿವೇದಿಸಿಕೊಂಡರೂ ಮಾನ್ಯ ಮುನ್ಷಿಯವರು ಅದನ್ನು ಕಡೆಗಣಿಸಿ ತನ್ನ ಹಟವನ್ನೇ ಎತ್ತಿ ಹಿಡಿದಿರುತ್ತಾರೆ. ಕಳೆದ ವರ್ಷ ನೆಟ್ಟ ಸಸಿಗಳು ಮುಂಬರುವ ವರ್ಷದ ಸಸಿಗಳ ಸಮಾಧಿಗೆ ತೆರಪು ಮಾಡಿಕೊಟ್ಟಿವೆ. ಸಸಿ ನೆಡುವದಕ್ಕಾಗಿ ಹಣ ವ್ಯಯ ಮಾಡುವದು ಮಾತ್ರವಲ್ಲದೆ ಅವುಗಳ ರಕ್ಷಣೆಗಾಗಿ ಇನ್ನಷ್ಟು ದುಬಾರಿ ವೆಚ್ಚಮಾಡಲಾಗಿದೆ. ಪ್ರಕೃತಿದತ್ತವಾದ ಗುಣದಂತೆ ಅದಾಗಿ ಪ್ರಾಣ ಬಿಟ್ಟರೆಯೂ ದೇವರೂ ಮಾಡುವಂತಿಲ್ಲ. ಅದನ್ನುಳಿಸುವ ಭಾರ ಶ್ರೀದೇವರಿಗೆ ಹೊರತು ಸರಕಾರಕ್ಕಿಲ್ಲಂದ ಬಂಜೇಕ್ಕಿ ಅದರೆ ಪ್ರಾಣಿಗಳಿಗೆ ಆಹಾರವಾಗಿ ದೊರಕಕೂಡದೆಂದು ಅದರ ರಕ್ಷಣೆಗಾಗಿ ಕಬ್ಬಿಣದ ಬೇಲಿಗಳನ್ನು ಹಚ್ಚಲಾಯಿತು ಕೆಲವು ಕಡೆಗಳಲ್ಲಿ. ನೆಟ್ಟ ಸಸಿಗಳು ಸಾಯುವತನಕ ಅವುಗಳ ರಕ್ಷಣೆಗಾಗಿ ಉಳಿದವು. ಮತ್ತೆ ಮಂಗ ಮಾಯವಾದವು. ಹೀಗೆ ಅಸಮ್ಮಯವಾದ ಚಿತ್ರವನ್ನು ಮುನ್ಷಿಯವರು ನೋಡಿಲ್ಲ. ಕಾಡೇ ಹೆಚ್ಚಾಗಿಯುಳ್ಳ ನಮ್ಮ ಹಿಂದೂಸ್ಥಾನದ ವನಸಂಪತ್ತಿನ ರಕ್ಷಣೆಗೆ ಯಾವ ಅಧಿಕಾರಿಯೂ ಗಮನವಿತ್ತಂತಿಲ್ಲ. ಹಳ್ಳಿಯಲ್ಲಿಯ ಸರಕಾರೀ ಕಾಡುಗಳಲ್ಲಿನ ಸಹಸ್ರಾರು ರುಪಾಯಿ ಬೆಲೆಬಾಳುವ ಮರಮುಟ್ಟುಗಳ ಕಳ್ಳಸಾಗಾಟ ಸರಾಗ ನಡೆಯುತ್ತಲಿರುವದನ್ನು ಕಂಡುಹಿಡಿಯಲು ಯಾವ ಅಧಿಕಾರಿಗೂ ಆಗಲಿಲ್ಲ! ಎಲ್ಲಿ ಜಾಗ್ರತೆ - ರಕ್ಷಣೆ-ಅವಶ್ಯವೋ ಅಲ್ಲಿ ಸರಕಾರದ ಲಕ್ಷವಿಲ್ಲ. ಕೇವಲ ವನಮಹೋತ್ಸವದಿಂದ ಕಾಲಹರಣ ಮಾಡುವ ಬಣ ಪ್ರಚಾರಕ್ಕಾಗಿ ಇನ್ನೂ ಇನ್ನೂ ಸರಕಾರ ಮನಸ್ಸು ಹಾಕುತ್ತಲಿದೆ.

'ಹೆಚ್ಚು ಆಹಾರ ಬೆಳೆಸಿರಿ' ಪ್ರಚಾರದ ಹಣೆಬರಹವೂ ಅಷ್ಟೆ! ಹೊಸ ಭಾವಿಗಳಿಗೆ ಹಣ--ಹಳೆಯ ಭಾವಿಗಳ ಜೀರ್ಣೋದ್ಧಾರಕ್ಕೆ ಹಣ--ಗೊಬ್ಬರಕ್ಕೆ ಹಣ--ಬೀಜಕ್ಕೆ ಹಣ--ಇನ್ನೂ ನಾನಾರೀತಿಯಲ್ಲಿ ಹೆಚ್ಚು ಆಹಾರ ಬೆಳೆಸುವ ಯೋಜನೆಗೆ ಹಣವ್ಯಯ ಮಾಡಲಾಗುತ್ತದೆ. ಇದರ ವಿನಿಯೋಗವೂ ಸರ್ವಸಾಧಾರಣ ಹಳ್ಳಿಯಲ್ಲಿಯೇ ಆಗುತ್ತದೆ. ಹೆಚ್ಚು ಆಹಾರ ಬೆಳೆಸಿರಿ ಯೋಜನೆಯ ಸಲವತ್ತು ಸಹಕಾರಗಳೇನಿವೆಯೋ ಸಹಜವಾಗಿ ಹೊಲದಲ್ಲಿ ದುಡಿಯುವ ರೈತನ ಪಾಲಿಗೆ ಹೋಗದೆ ಪ್ರತಿಷ್ಠಿತರಾದ ವಿಶೇಷ ವರ್ಚಸ್ಸುಳ್ಳವರ ಬಗಲಿಗೇ ಹೋಗುತ್ತದೆ. ಕೆಲವು ಗ್ರಾಮಗಳಲ್ಲಿ ಹಂಚಿದ ಗೊಬ್ಬರಗಳು ದುರ್ವ್ಯಯವಾಗಿರುವ ಪ್ರತ್ಯಕ್ಷ ದಾಖಲೆಗಳು ಕಂಡುಬಂದಿವೆ. ಇನ್ನು ಕೆಲವು ಕಡೆ ಆಹಾರಧಾನ್ಯವಲ್ಲದ ಕಬ್ಬು ಮೊದಲಾದವುಗಳಿಗೆ ಬಳಸಿಕೊಳ್ಳಲಾಗಿದೆ. ಬಾವಿಗೆ ಸರಕಾರ ಕೊಡುವ ಹಣ ನಿಜವಾಗಿಯೂ 'ಬಾವಿಗೆ ಬಿತ್ತು' ಎನ್ನುವ ಹಾಗೆ ವ್ಯರ್ಥವಾಗಿದೆ. ಇಂತಹ ಬಾವಿಗೆ ಹಣ ಪಡೆಯುವಲ್ಲಿಯೂ ದುಡ್ಡುಳ್ಳವರ ಮೇಲಾಟ ನಡೆದಿದೆ. ಸ್ವಯಂಉಪಯೋಗಕ್ಕಾಗಿ ಹಲವು ಕಟ್ಟಿದವು ಹಲವಾದರೆ ಅರ್ಧಮರ್ಧ ಕಟ್ಟಿ, ಪೂರ್ತಿ ಹಣ ಪಡೆದು ಕೊಂಡವುಗಳ ಪತ್ತೆ ಹಲವು. ಇವೆಲ್ಲಕ್ಕಿಂತಲೂ ಸ್ವಾರಸ್ಯವಾದ ವಿಚಾರವೆಂದರೆ ಹಳೆಯ ಬಾವಿಯ ದುರಸ್ತಿಯದು. ಹಲವು ಕಡೆಗಳಲ್ಲಿ ಭಾವಿಯ ಹುಲ್ಲನ್ನು ಚೆನ್ನಾಗಿ ತೆಗೆದು ಕಲ್ಲನ್ನು ಕೆರಸಿ, ಅಲ್ಲಿ ಇಲ್ಲಿ ಸಿಮೆಂಟಿನ ನಗಾರಿಯ ರೇಖೆಯನ್ನೆಳೆದು ಸರಕಾರದ ಹಣ ದುರುಪಯೋಗ ನಡೆಸಲಾಗಿದೆ. ಇಂತಹ ಸರಕಾರೀ ಹಣಗಳು ಬಡರೈತನ ಹಿತಕ್ಕೆ ಸಿಗುತ್ತದೆಂದಾಗಲೀ ಅದರಿಂದ ಹೆಚ್ಚು ಆಹಾರ ಬೆಳೆದೀತೆಂದಾಗಲೀ--ನಾವು ಭಾವಿಸುವುದು ಶುದ್ಧ ತಪ್ಪು. ಬಂಜರಿರುವ ಜಾಗವನ್ನು ಕೃಷಿಗಾಗಿ ಬಳಸಿಕೊಳ್ಳುವ ಮಾತಂತಿರಲಿ. ಕೃಷಿವಲಯವೇ

ಹಾರುವ ಕಿಡಿಗಳು

ನವಂಬರ--ದಶಂಬರಗಳಲ್ಲಿ ಸಾರ್ವತ್ರಿಕ ಚುನಾವಣೆಗಳು ನಡೆಯುತ್ತವೆ. ನಮ್ಮಲ್ಲಿ ಅದಕ್ಕಾಗಿ ಬೇಕಾದ 'ಚಲಾವಣೆ'ಗಳು ಎಂದೋ ಪ್ರಾರಂಭವಾಗಿವೆ.

೦೦

ಹಾಳು ಬೀಳುವ ಪ್ರಸಂಗಗಳೆಷ್ಟೋ ಈಗಲೂ ಇವೆಯೆಂದರೆ ಎಷ್ಟು ಖೇದವಾಗಬೇಕು- ಸರಕಾರ ಹಣನೀಡಿದ ಭಾವಿಗಾಗಿಯೂ-ಗೊಬ್ಬರಕ್ಕಾಗಿಯೂ- ಬೀಜಕ್ಕಾಗಿಯೂ ಸರಕಾರಕ್ಕೆ ಹಳ್ಳಿಯಿಂದ ಬರುವ ವರದಿ ವಸ್ತುಸ್ಥಿತಿಯನ್ನು ಸರಿಯಾಗಿ ಚಿತ್ರಿಸುವಂತಹದಾಗಿರುವುದಿಲ್ಲ. ವ್ಯಯಿಸಿದ ಹಣಕ್ಕೆ ಸರಿಯಾಗಿ ಇಂತಿಷ್ಟು ಹೆಚ್ಚು ಆಹಾರ ಬೆಳೆಯಿತೆಂದು ಹೇಳುವ ವರದಿಯಿಂದಲೇ 'ಬೆಳೆಯಿತೆನ್ನುವ ಲೆಕ್ಕವನ್ನು' ಸರಕಾರ ಸಿದ್ಧಾಂತ ಮಾಡಿಕೊಳ್ಳುತ್ತದೆ. ಅದರ ಯಥಾರ್ಥವೆಷ್ಟು – ಅಯಥಾರ್ಥವೆಷ್ಟೆಂಬುದನ್ನು ಹಳ್ಳಿಯ ಚಿತ್ರವನ್ನು ಬಲ್ಲವರೇ ಬಲ್ಲರು!

ಹೀಗೆ ಸರಕಾರದ ಹಣ ತಿಳಿದೂ ತಿಳಿಯದೆಯೂ ದುರ್ವ್ಯಯವಾಗುವದನ್ನು ಸರಕಾರದ ಗಮನಕ್ಕೆ ತಂದರೆ ಅದು ವಸ್ತುಸ್ಥಿತಿಯ ಅಜ್ಞಾನದಿಂದ ಹೇಳುವ ಟೀಕೆ ಎಂದಾಡೀತೇ? ಇದು ಸಾರ್ವಜನಿಕ ಹಣದ ದುರುಪಯೋಗವಲ್ಲವೇ? ಸರಕಾರದ ಉತ್ತಮಯೋಜನೆಯನ್ನು ಹಲವು ಸ್ವಾರ್ಥಿಗಳ ಕೈವಾಡದಿಂದ ಸಾಯುತ್ತಿರುವದನ್ನು ಕಂಡೂ ಸುಮ್ಮನಿರಬೇಕೇ? ಅಲ್ಲಿ–ಇಲ್ಲಿ ಅಲ್ಪ ಸ್ವಲ್ಪ ಹೆಚ್ಚಾಗಿ ಬೆಳೆದುದನ್ನು ನೆನಸಿ ಹೇರಳ ವ್ಯರ್ಥವಾಗುತ್ತಿರುವದನ್ನು ಮರೆಮಾಚಬೇಕೇ?

ಈ ಎಲ್ಲ ಪ್ರಮಾದಗಳನ್ನು ಅರಿತುಕೊಳ್ಳದೆಯೇ ಮಂತ್ರಿ ಮುನ್ಷಿಯವರು ತನ್ನ ವಾದವನ್ನು ಸಮರ್ಥಿಸುತ್ತಾ ಟೀಕಾಕಾರರ ಮೇಲೆ ಉರಿಗಾರಿದ್ದಾರೆ. ತಪ್ಪು ಸರಕಾರದ್ದಿರಲಿ– ಜನತೆಯದ್ದಿರಲಿ– ಅದನ್ನು ನೇರವಾಗಿ ಹೇಳಿ ಅಂತಹ ಪ್ರಮಾದಗಳಾಗದಂತೆ ಆಗ್ರಹ ತೊಡುವುದು ನಿಷ್ಪಕ್ಷಪಾತ(?)ವಂತ ಪ್ರಜೆಯ ಮುಖ್ಯ ಕರ್ತವ್ಯವೆಂದು ನಾವು ನಂಬಿದ್ದೇವೆ. 'ಹೆಚ್ಚು ಆಹಾರ ಬೆಳೆಸಿರಿ' ಹಾಗೂ "ವನಮಹೋತ್ಸವ"ಗಳ ಯೋಜನೆಯಲ್ಲಿ ತಪ್ಪುಗಳಿವೆ. ಈ ತಪ್ಪುಗಳು ವೃದ್ಧಿಗೊಂಡರೆ ಸಾರ್ವಜನಿಕರಿಗೆ ಉಪಕಾರವಾಗುವ ಬದಲು ಹಾನಿಯೇ ಆಗುವ ಸಂದರ್ಭವಿದೆ. ವಸ್ತುಸ್ಥಿತಿಯನ್ನರಿಯದೆ ಬರಿಯ ಪ್ರಚಾರ ಸಾಧನದಿಂದ ಯಾವ ಯೋಜನೆಯೂ ಬದುಕಲಾರದೆಂಬುದನ್ನು ನಾವು ಸ್ಪಷ್ಟೀಕರಿಸುವದು ಕಾಲೋಚಿತವೇ ಆಗಿದೆ.

ಒಳ್ಳೆಯ ನಾಣ್ಯಗಳೊಂದಿಗೆ ಕಳ್ಳ ನಾಣ್ಯಗಳೂ ಚಲಾವಣೆ ಆಗುವುದುಂಟು; ಚುನಾವಣೆ ಎಂದೊಡನೆ ರಕಾರಿ ಜನರೂ ಸೋಗು ಹಾಕುವುದುಂಟು.

೦೦

ಕೆಲವರಿಗೆ ಹೇಗಾದರೂ ಮಾಡಿ ತಾವು ಪ್ರಸಿದ್ಧಿಗೆ ಬರಬೇಕೆಂಬ ಹಂಬಲು; ಅದಕ್ಕಾಗಿ ಯಾರ ಮಾನಭಂಗ, ಬೈಗಳನ್ನೆಂದೆ ಮಾಡಲಿಕ್ಕೂ ಅವರು ಹೇಸುವುದಿಲ್ಲ.

೦೦

ಜೋಗುಳ ಹಾಡಿಗೆ ಎಚ್ಚತ್ತ ಮಗುವೂ ನಿದ್ರಿಸುತ್ತದೆ; ಬೈಗಳಹಾಡಿಗೆ ನಿದ್ರಿಸಿದವನೂ ಎಚ್ಚರಗೊಳ್ಳುತ್ತಾನೆ.

೦೦

ನಮ್ಮಲ್ಲಿ ಮಿಸ್. ಮೇಯೋಳ ಶಿಷ್ಯರಿಗೆ ದಾರಿದ್ರ್ಯವಿಲ್ಲ; ಒಬ್ಬರಿನ್ನೊಬ್ಬರನ್ನು 'ನೋಡಿ ಬಿಡುವವ'ರಿಗೂ ಕೊರತೆ ಇಲ್ಲ.

೦೦

ಗರ್ಜಿಸುವ ಸಿಂಹವಿರುವಲ್ಲಿ ಬೊಗಳುವ ನಾಯಿಗಳೂ ಇರುತ್ತವೆ; ಪ್ರಗತಿ ಪ್ರಸಿದ್ಧಿ ಪಡೆದವರನ್ನು ಮತ್ಸರಿಸಿ ದೂಷಿಸುವವರೂ ಇದ್ದಾರೆ.

೦೦

ಸ್ಥಿತಿಗತಿ ಕೆಟ್ಟಾಗ ಜನಸೇವೆಗೆ ಹೊರಡಬಾರದೆಂದಿಲ್ಲ; ಜಾತಿ–ನೀತಿ ಬಿಟ್ಟಾಗ ಪರವೂರು ಸೇರಬಾರದೆಂದಿಲ್ಲ.

೦೦

ತಮ್ಮ ಸ್ವಾಭಿಮಾನ ರಕ್ಷಣೆಗಿಂತ ಅನ್ಯರ ಮಾನಭಂಗ ಮಾಡುವುದರಲ್ಲಿ ಜನರಿಗೆ ಆಸಕ್ತಿ ಅಧಿಕ.

೦೦

ಕಾಗದ ಕಾಳಗದಿಂದ ಕಾರ್ಯಸಾಧನೆ ಮಾಡಿಕೊಳ್ಳುವವರೂ ಇದ್ದಾರೆ; ಬೈಗಳಿಂದಲೇ ಸ್ಥಾನಮಾನ ಗಳಿಸಿಕೊಳ್ಳುವವರೂ ಇದ್ದಾರೆ.

೦೦

ನಮ್ಮ ರಸ್ತೆಗಳಿಗೆ ನೀರು ಸರಿಯಾಗಿ ಬೀಳುವುದಿಲ್ಲ; ನಮ್ಮ ಡ್ರೈವರ್ ಬಂಧುಗಳಾದರೂ ಬಸ್ಸು ಕಾರುಗಳನ್ನು ಸ್ವಲ್ಪ ನಿಧಾನವಾಗಿ ಓಡಿಸುವ ಅಭ್ಯಾಸ ಮಾಡುವುದಿಲ್ಲ.

೦೦

ಬೇಸಿಗೆಯಲ್ಲಿ ಧೂಳು ಹಾರಿಸುವ ಹವ್ಯಾಸ; ಮಳೆಗಾಲದಲ್ಲಿ ಕೆಸರ ನೀರು ಹಾರಿಸುವ ಅಭ್ಯಾಸ ಕೆಲ ಡ್ರೈವರಿಗೆ ಇರುವಂತಿದೆ.

೦೦

ನಾಲಿಗೆಯಿಂದಲೇ ಧನ, ಜನ; ನಾಲಿಗೆಯಿಂದಲೆ ರಣ–ಮರಣ.

೦೦

ಬಹಿರಂಗದಲ್ಲಿ ಜನಸೇವಕರಂತೆ; ಅಂತರಂಗದಲ್ಲಿ ಸರ್ವಭುಂಜಕರಂತೆ.

೦೦

ಸಾವು-ನೋವು ತಪ್ಪುವುದುಂಟೆ? ಕಾವೇರದೆ ಬೆಣ್ಣೆ ಕರಗುವುದುಂಟೆ?

೦೦

"ಖಾಲಿ" ತಲೆಯ ಮೇಲೂ ಬಿಳಿಟೋಪಿ ಇರಬಹುದು; ಮುಂಗೋಪಿಯಲ್ಲೂ ಶಾಂತ ಗುಣ ಇರಬಹುದು.

೦೦

ಗೆಜ್ಜೆ ಕಟ್ಟಿದೊಡನೆ ಪಾತ್ರಿಯೇ ದೇವರಲ್ಲ; ಸ್ಥಾನದೊರೆತೊಡನೆ ತಾನೇ ಸರ್ವಸ್ವವಲ್ಲ.

೦೦

ಏರಿದ ಏಣಿಯನ್ನು ಝಾಡಿಸಲಾಗದು; ಮಾಡಿದ ಉಪಕಾರವನ್ನು ಮರೆಯಲಾಗದು.

ಮುಂಬಯಿ ಕನ್ನಡಿಗರಲ್ಲಿ ವಿನಂತಿ

ಬೇರೆ ಬೇರೆ ವ್ಯಾಪಾರ, ಉದ್ಯೋಗಗಳನ್ನು ಸುಸೂತ್ರವಾಗಿ ನಿರ್ವಹಿಸುತ್ತ ಮುಂಬಯಿಯಲ್ಲಿ ನೆಲೆನಿಂತಿರುವ ದಕ್ಷಿಣ ಕನ್ನಡಿಗರು 'ನವಯುಗ'ಕ್ಕೆ ಮೊದಲಿನಿಂದಲೂ ನೀಡುತ್ತಿರುವ ಪ್ರೋತ್ಸಾಹವು ಅಭಿನಂದನೀಯವಾದುದು. 'ನವಯುಗ'ದ ಪ್ರತಿನಿಧಿಗಳಾಗಿ ಶ್ರೀ ಕೆ. ಜಗನ್ನಾಥ ಶೆಟ್ಟರು ಕೆಲವು ವರ್ಷಗಳಿಂದ ವರ್ಷಂಪ್ರತಿ ಮುಂಬಯಿಗೆ ಬರುತ್ತಿದ್ದರು. ಆದರೆ ಕಾರಣಾಂತರದಿಂದ ಕಳೆದ ವರ್ಷ ಬರಲಿಲ್ಲ. ಇದೀಗ ಅವರು ನವಯುಗದ ವ್ಯಾಪಕತೆಗಾಗಿ ಮುಂಬಯಿಗೆ ಬಂದಿರುತ್ತಾರೆ. ಅವರಿಗೆ ಮುಂಬಯಿ ಕನ್ನಡಿಗರು, ಮುಖ್ಯತಃ ಅಲ್ಲಿಯ ದಕ್ಷಿಣ ಕನ್ನಡಿಗರು ಸರ್ವಸಹಕಾರ, ಪ್ರೋತ್ಸಾಹಗಳನ್ನು ಕೊಟ್ಟು ನವಯುಗದ ಅಭಿವೃದ್ಧಿಗೆ ನೆರವಾಗಬೇಕಾಗಿ ವಿನಂತಿ.

ನವಯುಗ ಆಫೀಸು, ಉಡುಪಿ } ಕೆ. ಹೊನ್ನಯ್ಯ ಶೆಟ್ಟಿ, ಸಂಚಾಲಕ, ಸಂಪಾದಕ.

ತೃತೀಯ ಮಹಾಯುದ್ಧ ಅಸಂಭವವಲ್ಲ!

38ನೇ ಅಕ್ಷಾಂಶವನ್ನು ಯು. ರಾ. ಸಂಘದ ದಳಗಳೂ ಕಮ್ಯೂನಿಸ್ಟ ದಳಗಳೂ ದಾಟಿ ಮಂಚೂರಿಯದ ಕಡೆಗೆ ನಡೆದಿವೆ. ಮಧ್ಯ ರಣರಂಗದಲ್ಲಿ ಕಮ್ಯೂನಿಸ್ಟರ ಘೋರ ಪ್ರತಿಭಟನೆಯನ್ನೆದುರಿಸಬೇಕಾಯಿತು. ಮಂಚೂರಿಯದ ಗಡಿಯಲ್ಲಿ ಕಮ್ಯೂನಿಸ್ಟರು ಪಾಶ್ಚಾತ್ಯರಲ್ಲದೆ ಇತರ ಸೈನ್ಯಗಳೂ ಅವರೊಡನೆ ಸೇರಿಕೊಂಡಂತಿವೆ. ಶತ್ರು ಪಕ್ಷದವರ ಟ್ಯಾಂಕು ಹಾಗೂ ಸೈನ್ಯಗಳ ಮೇಲೆ ಕಮ್ಯೂನಿಸ್ಟರು ಅಗ್ನಿವರ್ಷ ಗರೆದರೂ ಯು. ರಾ. ಕಾಮನವೆಲ್ತ್, ಆಸ್ಟ್ರೇಲಿಯನ್, ಅಮೇರಿಕನ್, ಗ್ರೀಕ್, ತುರ್ಕಿ ಮತ್ತು ದಕ್ಷಿಣ ಕೊರಿಯದ ಸೈನ್ಯಗಳು ತಮ್ಮ ಬಲಪ್ರಯೋಗವನ್ನು ನಡೆಸಿದ್ದನ್ನು ಅವರು ಸಹಿಸದಾದರು.

ಈಗ ಮಂಚೂರಿಯದ ಮೇಲೆ ಬಾಂಬು ಧಾಳಿಯನ್ನು ಮಾಡುವ ಪೂರ್ವಸಿದ್ಧತೆಯನ್ನು ಜನ್. ಮೆಕಾರ್ಥರರು ಮಾಡಿರುತ್ತಾರೆಂದು ತಿಳಿದುಬರುತ್ತದೆ. ಮೆಕಾರ್ಥರಿಗೆ ಮಂಚೂರಿಯದ ಮೇಲೆ ಬಾಂಬಿನ್ನೆಸೆಯುವ ಅಧಿಕಾರ ಕೊಟ್ಟ ವಿಚಾರವಾಗಿ ಹಲವು ರಾಷ್ಟ್ರಗಳಲ್ಲಿಯೂ ರಾಜಕೀಯ ವರ್ಗದಲ್ಲಿಯೂ ಅಸಂತೃಪ್ತಿಯನ್ನುಂಟುಮಾಡಿದೆ. ವೈರಿಯೆಲ್ಲಿದ್ದರೂ ಅದಕ್ಕೆ ತಕ್ಕ ಶಾಸ್ತಿಯನ್ನು ಕೈಗೊಳ್ಳಲು ಮೆಕಾರ್ಥರಿಗೆ ಸಂಪೂರ್ಣಾಧಿಕಾರ ಕೊಡಲಾಗಿದೆ ಎಂದು ವಾಶಿಂಗ್‌ಟನದ ಪತ್ರಿಕೆಗಳ ವರದಿಯಿಂದ ತಿಳಿದುಬರುತ್ತದೆ. ಅಂತೂ ಕಮ್ಯೂನಿಸ್ಟರು ದಿನದಿಂದ ದಿನಕ್ಕೆ ಹಿಮ್ಮೆಟ್ಟುತ್ತಲಿದ್ದಾರೆ. ಯು. ರಾ. ಸಂಘದ ಧಾಳಿಯನ್ನೆದುರಿಸಲು ಅವರು ಅಸಮರ್ಥರಾಗಿದ್ದಾರೆ. ಈ ನಡುವೆ ಏಶಿಯದ ರಾಷ್ಟ್ರಗಳು ಕೊರಿಯ ಸಂಧಾನದ ಮಾತುಕತೆಯಲ್ಲಿ ಆಸ್ಥೆಯನ್ನು ತಾಳಿರುತ್ತವೆ. 38ನೇ ಅಕ್ಷಾಂಶವನ್ನು ದಾಟಿ ಉತ್ತರ ಕೊರಿಯವನ್ನು ಬಹಳವಾಗಿ ಆಕ್ರಮಿಸುತ್ತಿರುವಾಗ ಇತ್ತಂಡದ ಸಂಧಾನ ಮಾತುಕತೆ ನಡೆಯುವುದು ಹಾಸ್ಯಾಸ್ಪದ ವಿಚಾರವಾಗಿದೆ. ಅಧ್ಯಕ್ಷ ಟ್ರೂಮನರು ಮೆಕಾರ್ಥರರಿಗೆ ಬೆಂಬಲಿಸಿಯವರ ಪೂರ್ಣ ಸ್ವಾಮಿತ್ವದ ಕುರಿತ. ಏನು ಹೇಳಿದ್ದರೂ ಮೂರನೆಯ ಮಹಾಯುದ್ಧದ ಭೀತಿ ತಪ್ಪಿಲ್ಲವೆಂಬದನ್ನು ಸ್ಪಷ್ಟೀಕರಿಸಿದಾರೆ. ಟ್ರೂಮನರ ಸೂಚನೆ ಒರಿಸು ಊಹೆಯಲ್ಲ. ಈಗ ನಡೆದಿರುವ ಯುದ್ಧ ಮೂರನೆಯ ಮಹಾಯುದ್ಧ ಪೀಠಿಕೆಯಲ್ಲವೇ? 38ನೆಯ ಅಕ್ಷಾಂಶ ದಾಟುವ ಉದ್ಘಾಟನದಿಂದಲೇ ಅದು ವ್ಯಕ್ತವಾಗುವುದಿಲ್ಲವೇ?

ಫ್ರೆಂಚ ನಿರೀಕ್ಷಕರು

ದಕ್ಷಿಣಭಾರತದ ಫ್ರೆಂಚ ವಸಾಹತುಗಳ ಪರಿಶೀಲನೆಗಾಗಿ ಮೂರು ನಿರೀಕ್ಷಕರು ಪಾಂಡಿಚೇರಿ ಹಾಗೂ ಮಾಹೆಗೆ ಬಂದಿರುವರು. ಈ ನಿರೀಕ್ಷಕರೊಡನೆ ಇಬ್ಬರು ಏಶಿಯನರನ್ನು ಸೇರಿಸಿಕೊಂಡು ಪರಿಸ್ಥಿತಿಯನ್ನವಲೋಕಿಸಬೇಕೆಂದು ಭಾರತದ ಅಭಿಪ್ರಾಯವಾಗಿತ್ತು. ಫ್ರೆಂಚ್ ವಸಾಹತುಗಳ ವಿಚಾರವಾಗಿ ಭಾರತ ಸರಕಾರ ಫ್ರೆಂಚ ಸರಕಾರದೊಡನೆ ಸ್ಪಷ್ಟೀಕರಣ ಹಾಗೂ ಮಾರ್ಗದರ್ಶನ ಕೇಳಿತು. ಆದರೆ ಫ್ರೆಂಚ ಸರಕಾರವು ತಾನಿತ್ತ ವಚನವನ್ನು ಪಾಲಿಸದೆ ತನ್ನ ಪ್ರತಿನಿಧಿಗಳನ್ನೇ ನೇಮಿಸಿ ಏಕಪಕ್ಷೀಯವಾಗಿ ನಿರೀಕ್ಷಕರನ್ನು ಕಳಿಸುತ್ತದೆ.

ಕಾಶ್ಮೀರದಲ್ಲಿ ಪ್ರತಿಕೂಲ ವಾತಾವರಣ

ಮೂರು ವರ್ಷಗಳಿಂದಲೂ ಯು. ರಾ. ಸಂಘದಿಂದ ಕಾಶ್ಮೀರ ಜಗಳ ಪರಿಹಾರವಾದೀತೆಂದು ನಿರೀಕ್ಷಿಸಿಕೊಂಡಿದ್ದ ಕಾಶ್ಮೀರೀ ಜನತೆ ಈಗ ಯು. ರಾ. ಸಂಘವು ತಳೆದಿರುವ ಧೋರಣೆಯಿಂದ ಕುಪಿತವಾಗಿದೆ. ಆಂಗ್ಲೋ ಅಮೆರಿಕಾ ನಿರ್ಣಯ ಪಾಕಿಸ್ತಾನಕ್ಕೆ ಅನುಕೂಲ ವಾತಾವರಣವನ್ನು ಕಲ್ಪಿಸಿಕೊಡುತ್ತ ಬರುತ್ತಲಿದ್ದಾರೆ. ಪಾಕಿಸ್ತಾನದ ಪ್ರತಿನಿಧಿಯು ಆಂಗ್ಲೋ ಅಮೆರಿಕಾನರ ಗೊತ್ತುವಳಿಯನ್ನು ಸಂಪೂರ್ಣ ಒಪ್ಪಿರುತ್ತಾನೆ. ಭಾರತವು ಸಂಪೂರ್ಣ ನಿರಾಕರಿಸಿದೆ. ಹೀಗಿದ್ದರೂ ಯು. ರಾ. ಸಂಘವು ಮಧ್ಯಸ್ಥನನ್ನು ಕಳಿಸುವ ಮನಸ್ಸು ಮಾಡಿರುತ್ತದೆ. ಈ ಹಿರಿಯ ಮಧ್ಯಸ್ಥಗಾರನಿಗೆ ಕೊಟ್ಟ ಸ್ವಾತಂತ್ರ್ಯವನ್ನುಗಳಿ— ಸಹಕಾರವನ್ನುಗಳೇ ಈಗ ಬರುವ ಮಧ್ಯಸ್ಥಗಾರನಿಗೆ ಭಾರತ ಸರಕಾರ ನೀಡುವ ಲಕ್ಷಣವಿಲ್ಲ. ಭಾರತದ ನಿಲುಮೆಯನ್ನು ಶ್ಲಾಘಿಸುವ ಯು. ರಾ. ಸಂಘದ ಗೊತ್ತುವಳಿಯನ್ನು ಖಂಡಿಸುವ ಸಭೆಗಳು ಭಾರತದ ಹಲವೆಡೆಗಳಲ್ಲಿ ನಡೆದಿವೆ. ಕಾಶ್ಮೀರದಲ್ಲಂತೂ ಮಧ್ಯಸ್ಥಗಾರನನ್ನು ನಿಷೇಧಿಸಿ ಹಿಂದೆ ಹೋಗಬೇಕೆಂದು ಸೂಚಿಸುವ ಚಳುವಳಿ ಹೂಡುವಂತೆ ಹಲವರು ನಿಶ್ಚಯಿಸಿದಾರೆ. ಮಧ್ಯಸ್ಥಗಾರನಿಗೆ "ಕರಿ ನಿಶಾನೆಯನ್ನು ಹಿಡಿಯಬೇಕು." ಎಸೆಂಬ್ಲಿ ಮಂಡಳದ ಸಹಕಾರವನ್ನು ನಿರಾಕರಿಸಬೇಕೆಂದೆನುವ ಚಳುವಳಿ ನಡೆಯುತ್ತಲಿದೆ. ಕಾಶ್ಮೀರೀ ಹಾಗೂ ಜಮ್ಮುಗಳ ಘಟನಾ ಸಮಿತಿಯು ತನ್ನ ಕಾರ್ಯವನ್ನು ಮುನ್ನಡೆಸುವುದೇ ನಮ್ಮ ಉದ್ದೇಶವೆಂದು ಕಾಶ್ಮೀರಿಗಳು ದೃಢ ನಿಶ್ಚಯ ಮಾಡಿರುತ್ತಾರೆ.

ಬಟ್ಟೆಯ ದರ ಏರಿಕೆ

ಭಾರತ ಹಾಗೂ ವಿದೇಶೀ ಹತ್ತಿಯ ಬೆಲೆಯಲ್ಲಿ ಹೆಚ್ಚುಕಡಿಮೆಯಾದುದರಿಂದ ಬಟ್ಟೆಯ ದರವನ್ನು ಏರಿಸಬೇಕಾಯಿತೆಂದು ಸರಕಾರೀ ಪ್ರಕಟಣೆಯಲ್ಲಿ ಹೇಳಲಾಗಿದೆ. ಕೇಂದ್ರ ಸರಕಾರದವರು 30ರಿಂದ 35ರ ವರೆಗೆ ಬೆಲೆಯನ್ನು ಏರಿಸಿರುತ್ತಾರೆ.

ಸರಕಾರಿ ನೌಕರರಿಗೆ ಬಹುಮಾನಗಳು

ಸರಕಾರೀ ನೌಕರರಿಗೆ ಮದುವೆ ಸಮಾರಂಭದಲ್ಲಿ ಉಡುಗೊರೆಯಾಗಿ ಬರುವ ವಸ್ತುಗಳ ಮೌಲ್ಯವು ರೂ 200ಕ್ಕಿಂತ ಮೀರಬಾರದೆಂದು ಪಾರ್ಲಿಮೆಂಟಿನ ಮುಂದೆ ರಾಜಗೋಪಾಲಾಚಾರ್ಯರು ಸರಕಾರದ ನಿರ್ಧಾರವನ್ನು ತಿಳಿಸಿದರು.

ಭಾರತ ಜಾಪಾನೀ ವ್ಯಾಪಾರ ಒಪ್ಪಂದ

ಜಾಪಾನು ಮತ್ತು ಭಾರತಗಳೊಳಗೆ ಹೊಸ ವ್ಯಾಪಾರೀ ಒಪ್ಪಂದದ ಮಾತುಕತೆಗಳು ಟೋಕಿಯೋದಲ್ಲಿ ನಡೆಯುತ್ತಿದೆ.

ಹಿಂದೀಯ ಶಿಷ್ಟಮಂಡಲಕ್ಕೆ ರಶಿಯದ ಆಹ್ವಾನ

ಭಾರತ ಶಿಷ್ಟಮಂಡಲವೊಂದಕ್ಕೆ ರಶಿಯಕ್ಕೆ ಭೆಟ್ಟಿಯನ್ನೀಯ ಬಹುದೆಂದು ರಶಿಯದಿಂದ ಆಹ್ವಾನ ಬಂದಿದೆ. ಮೇ ತಿಂಗಳೊಳಗಾಗಿ ಭಾರತ ಶಿಷ್ಟಮಂಡಳವು ರಶಿಯಕ್ಕೆ ಹೊರಡಲಿದೆ. ಎರಡು ಮೂರು ವಾರಗಳವರೆಗೆ ರಶಿಯದಲ್ಲಿ ನಿಲ್ಲುವ ನಿರೀಕ್ಷೆಯಿದೆ.

ಭಾರತದ ಮಕ್ಕಳಿಗೆ ಆಹಾರ

ಭಾರತದ ಮಕ್ಕಳಿಗಾಗಿ ಕೊಡಮಾಡಿದ 2000 ಟನ್ ಅಕ್ಕಿಯನ್ನು ಸಂಯುಕ್ತ ರಾಷ್ಟ್ರಸಂಘವು ಈಗ ಕಳಿಸುತ್ತಲಿದೆಂದು ಸರಕಾರೀ ಪ್ರಕಟಣೆಯಿದೆ.

ಸಂಜೀವ ರೆಡ್ಡಿಯವರ ರಾಜೀನಾಮೆ

ಮದ್ರಾಸ ಪ್ರಾಂತದ ಪಾನನಿರೋಧ ಮಂತ್ರಿ ಶ್ರೀ ಸಂಜೀವ ರೆಡ್ಡಿಯವರು ಆಂಧ್ರ ಪ್ರಾಂತದ ಕಾಂಗ್ರೆಸ್ ಅಧ್ಯಕ್ಷಪದಕ್ಕೆ ಸ್ಪರ್ಧಿಸುವ ಸಲುವಾಗಿ ತನ್ನ ಮಂತ್ರಿಪದಕ್ಕೆ ರಾಜೀನಾಮೆಯನ್ನಿತ್ತಿರುತ್ತಾರೆ.

ಮದ್ರಾಸಿನ ಜಾತೀಯ ಆಜ್ಞೆ ಅಕ್ರಮ

ಮದ್ರಾಸು ಸರಕಾರವು ಸರಕಾರೀ ನೌಕರರ ಆಯಿಕೆಯ ಸಂದರ್ಭದಲ್ಲಿ ಜಾತೀಯ ಧೋರಣೆಯನ್ನು ವಹಿಸುವುದು ಭಾರತ ರಾಜ್ಯಾಂಗ ಶಾಸನಕ್ಕೆ ವಿರುದ್ಧವಾಗಿರುವ ಪ್ರಯುಕ್ತ ಆ ಜಾತೀಯ ಧೋರಣೆಯ ಆಜ್ಞೆಯನ್ನು ಮಂಪೈ ನ್ಯಾಯಾಲಯವು ಅಕ್ರಮವೆಂದು ತೀರ್ಪಿತ್ತಿರುತ್ತದೆ.

ಅಂಚೆ ದರದಲ್ಲಿ ಹೆಚ್ಚಳ

ಕಾರ್ಡು ಕವರುಗಳನ್ನುಳಿದು ಮತ್ತೆಲ್ಲಾ ಅಂಚೆ ವ್ಯವಹಾರದಲ್ಲಿ ದರವನ್ನು ಹೆಚ್ಚಿಸಲಾಗುವದೆಂದು ಸಂಪರ್ಕ ಖಾತಾ ಮಂತ್ರಿ ಶ್ರೀ ಕಿದವಾಯಿಯವರು ಪಾರ್ಲಿಮೆಂಟಿನ ಮುಂದೆ ಹೇಳಿದರು. ಗ್ರಾಮಾಂತರಗಳಲ್ಲಿ ಹೊಸ ಅಂಚೇ ಖಾತೆಯನ್ನು ತೆರೆದುದರಿಂದಲೂ, ಹಾಗೆ ಇನ್ನಿತರ ಕಾಗದಪತ್ರಗಳಿಂದಲೂ ವೆಚ್ಚ ಹೆಚ್ಚಾದುದರಿಂದ ದರವನ್ನು ಹೀಗೆ ಅನಿವಾರ್ಯವಾಗಿ ಏರಿಸಬೇಕಾಗಿದೆಂದೂ ಅವರು ಹೇಳಿದರು.

ವರ್ಣದ್ವೇಷದ ಉಪವಾಸ

ದಕ್ಷಿಣ ಆಫ್ರಿಕೆಯ ಸರಕಾರವು ಯುರೋಪಿಯಾನರಲ್ಲದ ಜನಾಂಗದ ಬಗ್ಗೆ ಕೈಕೊಂಡ ಜಾತೀಯ ಭಾವನೆಯ ಕೃತಿಯ ನಿಷೇಧಾರ್ಥವಾಗಿ ಮಹಾತ್ಮಾಗಾಂಧಿಯವರ ಪುತ್ರರಾದ ಶ್ರೀ ಮಣಿಲಾಲ್ ಗಾಂಧಿಯವರು ದರ್ಬಾನಿನಲ್ಲಿ ಹದಿನಾಲ್ಕು ದಿನದ ಉಪವಾಸವನ್ನು ಕೈಗೊಂಡಿದ್ದಾರೆ.

ಸಾರ್ವಜನಿಕ ಮತಗಣನೆ

ಪಾರ್ಲಿಮೆಂಟಿನಲ್ಲಿ ಸಿ. ರಾಜಗೋಪಾಲಾಚಾರಿಯವರು ಹಿಂದುಳಿದ ವರ್ಗದವರ ರಕ್ಷಣೆಯನ್ನೂ ಸಾರ್ವಜನಿಕ ಚುನಾವಣೆಯಲ್ಲಿ ಪ್ರತಿಯೊಬ್ಬರಿಗೂ ಸಂಪೂರ್ಣ ಸ್ವಾತಂತ್ರ್ಯವನ್ನು ಸರಕಾರ ನೀಡುವ ಭರವಸೆಯನ್ನೂ ಇತ್ತಿದ್ದಾರೆ.

ಮಹಾರಾಜರುಗಳ ಆಕ್ರೋಶ

ಸರದಾರ ಪಟೇಲರು ನರೇಂದ್ರರಿಗಾಗಿ ಮಾಡಿರುವ ಆದೇಶವನ್ನು ನರೇಂದ್ರರ ಉಲ್ಲಂಘಿಸುವ ಹಂಚಿಕೆಯನ್ನು ಮಾಡಿರತ್ತಾರೆ. ಪಟೇಲರ ತತ್ವವನ್ನು ನಾವು ಸ್ವಲ್ಪವೂ ಬದಲಿಸಲಾರೆವು. ನರೇಂದ್ರರ ಗುಪ್ತ ಚಟುವಟಿಕೆಗಳ ಮೂಲಕ ಸರಕಾರದ ವಿರುದ್ಧ ಹಂಚಿಕೆಹೂಡಿರುವ ದಾಖಲೆಗಳು ನಮ್ಮಲ್ಲಿವೆ- ಅವರು ಪಟೇಲರ ಆದೇಶವನ್ನು ಮೀರುವದಾದರೆ ಉಗ್ರಕ್ರಮ ತೆಗೆದುಕೊಳ್ಳದಿರಲಾರೆವು. ಎಂದು ರಾಜಸ್ಥಾನ ಮಂತ್ರಿಗಳು ಹೇಳಿದರು. ನರೇಂದ್ರರ ಸಂಘದ ಅಧ್ಯಕ್ಷರಾದ ಬರೋಡೆಯ ಮಹಾರಾಜರು ಸಂಸ್ಥಾನ ಮಂತ್ರಿಗಳ ಹೇಳಿಕೆಯನ್ನು ಅಲ್ಲಗಳೆದು ತಾವು ಅಂತಹ ಗುಪ್ತ ಚಟುವಟಿಕೆ ಕಾರ್ಯನಡೆಸಿಲ್ಲನೆಂದರು.

ಉಡುಪಿ

ರಾಷ್ಟ್ರಭಾಷಾ ಶಿಕ್ಷಣ ಶಿಬಿರ— ಇದರ ವಾರ್ಷಿಕೋತ್ಸವ ಸಭೆಯು ತಾ. 8-4-5ರಲ್ಲಿ ಶ್ರೀ ಶಶಿಕಲಾ ದೇವಿ ಇವರ ಅಧ್ಯಕ್ಷತೆಯಲ್ಲಿ ಜರಗಿತು. ಉ. ಲಕ್ಷ್ಮೀನಾರಾಯಣ ಕಿಣಿ, V. S. ಶರ್ಮ, ಕುಮಾರ ಸ್ವಾಮಿ, ಮಾಧವ ಹೆಗ್ಡೆ, R. S. ಪೈ, ರಾಮ, ರತ್ನಾಕರ ಕಿಣಿ, ಶಾರದಾ ದೇವಿ, ಅನಸೂಯ, ವಸಂತೀ ಮೊದಲಾದವರ ಭಾಷಣ, ಸಂಗೀತ ವಿನೋದಗಳಾದುವು.

ಹವಾಮಾನ— ಸೆಖೆ ವಿಪರೀತವಾಗಿ, ಕೆಲವು ದಿನಗಳಿಂದ ಮೋಡ ಕವಿದಿದ್ದು ತಾ. 10ನೇ ರಾತ್ರಿ ಮಳೆಹನಿಗಳು ಬಿದ್ದಿರುತ್ತವೆ. ಬೇಗನೆ ಮಳೆಬರುವ ಸಂಭವ ತೋರುತ್ತಿದೆ.

ಸೈಂಟ್ ಸಿಸಿಲೀಸ್ ಕೋನ್ವೆಂಟ್ ಹೈಸ್ಕೂಲಿನ — ವರ್ಧಂತಿಯು ತಾ. 9-4-51ರಲ್ಲಿ ಡಾ। ಯುನ್ನೀರ್ ಶ್ರೀ ಟಿ. ಪಿ. ಬಿ. ಸಿ. ಕೊಲಾಸೋರವ ಅಧ್ಯಕ್ಷತೆಯಲ್ಲಿ ವಿಜೃಂಭಣೆಯಿಂದ ಜರಗಿತು. ವರದಿ ವಾಚನ, ಮಿ. ಕ್ ಕೊಲಾಸೋರವರಿಂದ ಬಹುಮಾನ ವಿತರಣೆಗಳಾದಮೇಲೆ ಇಂಗ್ಲಿಷ್, ಕನ್ನಡ ನಾಟಕ, ವಿವಿಧ ವಿನೋದಾವಳಿಗಳು ಯಶಸ್ವಿಯಾಗಿ ಜರಗಿದವು. ಅಧ್ಯಕ್ಷರ ಬೋಧಕ ಭಾಷಣ ಧನ್ಯವಾದಗಳೊಂದಿಗೆ ಸಭಾಂತ್ಯವಾಯಿತು.

ಕಡೆಕಾರು:— ಶ ಲಾ ಎಗುಂ ವೆ ಮಾನಿನಲ್ಲಿ ತಾ. 8-4-51ರಲ್ಲಿ ಶ್ರೀ. ವೆಂಕಟ ಸುಬ್ರಾಯ ಭಟ್ಟ ಅಧ್ಯಕ್ಷತೆಯಲ್ಲಿ ಕೂಡಿದ ಸಭೆಯಲ್ಲಿ ಅಕ್ಕಿ ಸರಿಯಾಗಿ ಸಿಕ್ಕುವುದಿಲ್ಲವೆಂದೂ ಅಧಿಕಾರಿಗಳು ಈ ಕುರಿತು ತಕ್ಕ ವ್ಯವಸ್ಥೆ ಮಾಡಬೇಕೆಂದೂ ಕೇಳಿಕೊಳ್ಳಲಾಯಿತು.

NAVAYUGA ENTERPRICE LIMITED. UDIPI.

NOTICE.

Application has been received by the above company for issuing to Sri S. R. Shetty, Udipi Ananda Bhavan, Nasik Road, Nasik District, a duplicate Share Certificate of 10 Shares in the Company upon the statement that the original certificate No. 381 for 10 Shares numbering from 1932 to 1941 has been lost. Notice is hereby given that if within two weeks from the date hereof no claim or representation is made in respect of the said original certificate to the Directors they will proceed to deal with the aforesaid application for duplicate share certificate.

K. H. Shetty
Managing director.

UDIPI, 9-4-51.

ಮಂಗಳೂರು

ಸಾರ್ವಜನಿಕ ದೇವಸ್ಥಾನಗಳೆಂದು ತೀರ್ಪು—ಉಡುಪಿ ಶ್ರೀ ಕೃಷ್ಣದೇವಸ್ಥಾನ, ಮೂಲ್ಕಿ ಮತ್ತು ಮಂಗಳೂರು ಶ್ರೀ ವೆಂಕಟರಮಣ ದೇವಸ್ಥಾನಗಳೂ ಸಾರ್ವಜನಿಕ ದೇವಸ್ಥಾನಗಳಲ್ಲ, ಆದುದರಿಂದ ಸರಕಾರದ ಹರಿಜನ ಪ್ರವೇಶ ಕಾನೂನು ಇವುಗಳಿಗೆ ಅನ್ವಯಿಸುವುದಿಲ್ಲ- ಎಂದು ಉಡುಪಿಯ ಅಷ್ಟ ಮಠಾಧಿಪತಿಗಳೂ ಮೂಲ್ಕಿಯ ಆರುಮಂದಿ ಆಡಳಿತ ಮೊಕ್ತೇಸರರೂ, ಮಂಗಳೂರಿನ ಮೂವರು ಭಜಕರೂ ಮಂಗಳೂರು ಎಡಿಶನಲ್ ಸಬ್‌ಕೋರ್ಟಿನಲ್ಲಿ ಹೂಡಿದ ದಾವೆಯು ಖಾರಿಜಿಯಾಗಿ ಆ ಮೂರು ದೇವಸ್ಥಾನಗಳೂ ಸಾರ್ವಜನಿಕವೆಂದು ಸಬ್ ಜಡ್ಜರಾದ ಶ್ರೀ ಟಿ. ಎಚ್. ಎಮ್. ಸದಾಶಿವಯ್ಯನವರು ತೀರ್ಪುಕೊಟ್ಟಿರುವರು. ಈ ದಾವೆಯ ವೆಚ್ಚದ ಮಟ್ಟಿಗೆ ಉಡುಪಿ ದೇವಸ್ಥಾನದವರು ಮಠದಿಂದ ತೆಗೆಯಬಹುದೆಂದೂ ಮಂಗಳೂರು, ಮೂಲ್ಕಿ ದೇವಸ್ಥಾನಗಳ ವಿಚಾರವಾಗಿ ದಾವೆ ಹೂಡಿದವರೇ ಖಾಸಗಿಯಾಗಿ ತೆರಬೇಕೆಂದೂ ತೀರ್ಪಿನಲ್ಲಿದೆ.

ಶ್ರೀ ಕಾರಂತರ ವಿದೇಶ ಪ್ರವಾಸ—ಮಾಜಿ ಕಂದಾಯ ಮಂತ್ರಿ ಶ್ರೀ ಕೆ. ಆರ್. ಕಾರಂತರು ಇದೇ ತಾ. 2ರಲ್ಲು ಮಂಗಳೂರಿಂದ ಹೊರಟು ಮುಂಬಯಿಗೆ ಹೋದರು. ಅಲ್ಲಿಂದ ಅವರು ಹಡಗುಹತ್ತಿ ಯುರೋಪ್, ಇಂಗ್ಲಂಡುಗಳ ಪ್ರವಾಸವಾಗಿ ಇನ್ನು ಎರಡು ತಿಂಗಳುಗಳ ಮೇಲೆ ಮರಳಿ ಬರಲಿರುವರು.

ವನಮಹೋತ್ಸವವು ಈ ವರ್ಷದಲ್ಲೂ ಆಚರಿಸಲ್ಪಡಬೇಕೆಂದು ಕೇಂದ್ರ ಸರಕಾರದ ಕೃಷಿಖಾತೆಯು ವ್ಯವಸ್ಥೆ ಮಾಡತೊಡಗಿದೆ. ಅದಕ್ಕನುಸಾರವಾಗಿ ಪ್ರಾಂತಿಕ ಸರಕಾರಗಳು ಕಾರ್ಯ ಕೈಕೊಳ್ಳುವ ವ್ಯವಸ್ಥೆಯಾಗಿದೆ. ಈ ವರ್ಷ ವನಮಹೋತ್ಸವವು ಜುಲಾಯಿ ತಿಂಗಳ ಮೊದಲನೇ ವಾರದಲ್ಲಿ ಜರಗಲಿರುವುದು. ಈ ವರ್ಷ ಮೂರು ಕೋಟಿಗಳಷ್ಟು ಸಸಿಗಳನ್ನು ನೆಡಬೇಕೆಂದು ಸರಕಾರದ ಯೋಜನೆಯಾಗಿದೆ.

ದ. ಕ. ಪ್ರಯಾಣಿಕರ ಸಂಘದ ಕಾರ್ಯಸಮಿತಿಯ ಜರೂರು ಸಭೆಯೊಂದು ಇದೇ ತಾ. 1ರಲ್ಲು ಸಂಜೆ ಜರಗಿದಾಗ ಈಗಿನ ಮೈಲು ಹೊರಡುವ ಮತ್ತು ತಲ್ಪುವ ಸಮಯದ ಚರ್ಚೆಯಾಗಿ ರಾತ್ರಿ 3-53ಕ್ಕೆ ಹೊರಡುವ ರೈಲು ಬೆಳಗಾದ ಮೇಲೆ ಹೊರಡಬೇಕೆಂದೂ, 12-50ಕ್ಕೆ ಹೊರಡುವ ರೈಲು 10 ಗಂಟೆಗೆ ಹೊರಡಬೇಕೆಂದೂ ರೈಲ್ವೆ ಅಧಿಕಾರಿಗಳನ್ನು ಕೇಳಿಕೊಳ್ಳುವ ಮತ್ತು ಜಿಲ್ಲೆಯ ಪ್ರಮುಖ ರಸ್ತೆಗಳ ಹೀನಸ್ಥಿತಿಯ ಕುರಿತು ಅಧಿಕಾರಿಗಳು ಗಮನ ಕೊಡಬೇಕೆನ್ನುವ ನಿರ್ಣಯಗಳಾದುವು.

ಪಾನ ನಿರೋಧ ಡಿಪ್ಟಿ ಕಮಿಶನರ್ ಶ್ರೀ ಡಿ. ವಿ. ಸುಬ್ಬರಾವ್, ಅವರು ಕಳೆದ ತಾ. 28ರಲ್ಲು ಮಂಗಳೂರಿಗೆ ಬಂದಿದ್ದು ಉಳ್ಳಾಲ ಸಮೀಪದಲ್ಲಾದ ಪಾನ ನಿರೋಧ ರಕ್ಷಕನ ಕೊಲೆಯ ಕುರಿತಾದ ವಿಚಾರಣೆಯನ್ನು ನಡಸಿ ತಾ. 31ರಲ್ಲು ಹಿಂತೆರಳಿದರು.

ಅವರು ತಾ. 29ರಂದು ಜಿಲ್ಲಾ ಕಲೆಕ್ಟರ್ ಶ್ರೀ ಎ ಆರ್. ರಾಜರತ್ನಂ ಮತ್ತು ಇತರ ಅಧಿಕಾರಿಗಳೊಂದಿಗೆ ಉಳ್ಳಾಲಕ್ಕೆ ಹೋಗಿ ಕೊಲೆಯಾದ ಸ್ಥಳವನ್ನು ಸಂದರ್ಶಿಸಿಕೊಂಡು ಬಂದಿರುತ್ತಾರೆ. ಮೃತನ ಬಂಧುಗಳೊಡನೆ ತಮ್ಮ ಸಂತಾಪವನ್ನು ವ್ಯಕ್ತಪಡಿಸಿ ಸರಕಾರದಿಂದ ಪರಿಹಾರ ದ್ರವ್ಯ ಸಿಗುವ ಪ್ರಯತ್ನ ಮಾಡುವೆನೆಂದೂ ತಿಳಿಸಿದ್ದಾರೆ.

ಪತ್ರಿಕಾ ಪ್ರತಿನಿಧಿಗಳಿಗಿತ್ತ ಭೇಟಿಯಲ್ಲಿ ಡಿಪ್ಟಿ ಕಮಿಶನರು ಪಾನ ನಿರೋಧದ ಶಾಸನ ಮಾಡಿದಂದಿನಿಂದ ಸರಕಾರದ ಕರ್ತವ್ಯವಾಯಿತೆಂದೂ, ಇನ್ನು ಮುಂದಿನ ಜವಾಬ್ದಾರಿಯು ಜನತೆಯದೆಂದೂ ತಿಳಿಸಿರುವರು. ನೀರಾವನ್ನು ತಯಾರಿಸುವ ವಿಚಾರದಲ್ಲಿ ಸರಕಾರದ ಗಮನವಿನ್ನೂ ಅತ್ತ ಸರಿದಿಲ್ಲವೆಂದರು.

ಗೋವೆ ಶರಾಬು — ಉಳ್ಳಾಲದ ಸಮೀಪ ಗೋವೆ ಶರಾಬಿನ ವ್ಯಾಪಾರ ನಡೆಯುತ್ತಿರುವ ಸುಳಿವು ಸಿಕ್ಕಿ, ಮಂಗಳೂರಿನ ಟೌನ್ ಪೋಲೀಸ್ ಸಬ್ ಇನ್ಸ್‌ಪೆಕ್ಟರ್ ಜನಾಬ್ ಸಿ. ಕೆ. ಮಾಹಿಮ್‌ರವರು ನಾಲ್ಕು ಮಂದಿ ಪೋಲೀಸರೊಂದಿಗೆ ರಾತ್ರಿ ದೋಣಿಯಲ್ಲಿ ಸಾಗಿಸುತ್ತಿದ್ದ 150 ಗೋವೆ ಶರಾಬು ಬಾಟ್ಲಿಗಳನ್ನು ಹಿಡಿದು, ನಾಲ್ವರನ್ನು ಬಂಧಿಸಿರುತ್ತಾರೆ. ಬಂಧಿಸಲ್ಪಟ್ಟ ಈ ನಾಲ್ವರು ಗೋವೆ ಶರಾಬಿನ ವ್ಯಾಪಾರವನ್ನು ಬಹಳ ಕಾಲದಿಂದಲೂ ಮಾಡುತ್ತಿದ್ದರೆಂದು ವಾರ್ತೆ ಈಗ ತಿಳಿಯುತ್ತದೆ.

ಮಂಗಳೂರು ನಗರ ಸಭೆಯು— ಇದೇ ತಾ. 6ರಲ್ಲು ಸಂಜೆ ಶ್ರೀ ಎಲ್. ಸಿ. ಪಾಯಸರ ಅಧ್ಯಕ್ಷತೆಯಲ್ಲಿ ಜರಗಿತು. ಹಲವಾರು ಕಣ-ಚರಂಡಿಗಳ ದುರಸ್ತಿಗಾಗಿ ಹಣ ಮಂಜೂರು ಮಾಡಲಾಯಿತು. ಶ್ರೀ ಕೆ. ಶಿವಲಿಂಗಪ್ಪ ಸೆಟ್ಟಿಯವರ ಅಪೀಲು ಅರ್ಜಿಯ ವಿಚಾರವಾಗಿ ಶ್ರೀ ಭಾಸ್ಕರರೈಗಳ ವರದಿಯನ್ನು ಸ್ವೀಕರಿಸಲಾಯಿತು. ಹಂಪನ್‌ಕಟ್ಟೆಯ ಮೋಟಾರ್ ನಿಲ್ದಾಣಕ್ಕೆ ತಾತ್ಕಾಲಿಕವಾಗ ಅಂದಾಜಿಗಿಂತ ಹೆಚ್ಚಿಗೆ ತಾರು ಹಾಕಲ್ಪಟ್ಟುದರಿಂದ ಹೆಚ್ಚಿಗೆ ಹಣ ಮಂಜೂರು ಮಾಡಬೇಕೆಂಬ ಕಂಟ್ರಾಕ್ಟರರ ಕೇಳಿಕೆಯನ್ನು ಸಭೆಯು ತಿರಸ್ಕರಿಸಿತು. ನಗರದ ಹೋಟೇಲುಗಳ ನೈರ್ಮಲ್ಯದ ವಿಚಾರವಾಗಿ ಆರೋಗ್ಯ ಸಮಿತಿಯು ಹೋಟೇಲುಗಳನ್ನು ಸಂದರ್ಶಿಸಿ ಕೂಡಲೆ ವರದಿಮಾಡಬೇಕೆಂದಾಯಿತು. ಮಂಗಳೂರಿನ ಹೋಟೇಲುಗಳು ಸಂಪೂರ್ಣತರವಾದ ಆರೋಗ್ಯನಿಯಮಗಳನ್ನು ಪಾಲಿಸುವುದಿಲ್ಲವೆಂಬ ವಿಚಾರವು ಚರ್ಚೆಯಲ್ಲಿ ಒಡೆದು ತೋರಿತು. ಬಸ್ತಿ ಗಾರ್ಡನ್ ಶಾಲೆಗೆ ಒಬ್ಬ ಹಾಯರ್ ಗ್ರೇಡ್ ಉಪಾಧ್ಯಾಯರನ್ನೂ ನೇಮಿಸಲಾಯಿತು.

ಕಾರ್ಡುದಾರರಿಗೆ ಹೆಚ್ಚಿನ ಸಕ್ಕರೆ ದ. ಕ. ಜಿಲ್ಲೆಯ ಎಲ್ಲ ಕಾರ್ಡುದಾರರಿಗೆ ಈ ತಿಂಗಳಲ್ಲಿ ಸೇಕಡಾ 50ರಷ್ಟು ಹೆಚ್ಚಿಗೆ ಸಕ್ಕರೆ ದೊರೆಯುವುದು. ಹೋಟೇಲುಗಳಿಗೆ ಒಮ್ಮೆಯೇ ಮೂರು ತಿಂಗಳ ಸಕ್ಕರೆ ಕೊಳ್ಳುವ ಸೌಲಭ್ಯವಿದೆ.

ಅಖಿಲಭಾರತ ಸುಪಾರಿ ಫೆಡರೇಶನ್ ಇದರ ಮಹಾಸಭೆಯು ಕಳೆದ ತಾ 24ರಲ್ಲು ಶ್ರೀ ಟಿ. ಎಮ್ ಮೊಟಂಸಾರ್ (ಶಿರ್ಸಿ) ಇವರ ಅಧ್ಯಕ್ಷತೆಯಲ್ಲಿ ಜರುಗಿತು. ಶಿವಮೊಗ್ಗದ ಶ್ರೀ ಶಂಕರಯ್ಯನವರು ಅಧ್ಯಕ್ಷರಾಗಿಯೂ ಶ್ರೀ ಟಿ. ಎಮ್ ಮೊಟಂಸಾರ್, ಅವರು ಉಪಾಧ್ಯಕ್ಷರಾಗಿಯೂ ಶ್ರೀ ಜಿ. ಕೆ. ಗೋವಿಂದ ಭಟ್ಟರು ಕಾರ್ಯದರ್ಶಿಯಾಗಿಯೂ ಆರಿಸಲ್ಪಟ್ಟರು. ಅಡಿಕೆ ವ್ಯವಸಾಯಕ್ಕೆ ಸಂಬಂಧಿಸಿದ ಠರಾವುಗಳು ಸ್ವೀಕೃತವಾದುವು.

ಮುಟ್ಟು—ಶ್ರೀ ವಿಷ್ಣು ಮೂರ್ತಿ ದೇವಸ್ಥಾನದ ಮಾಮೂಲು ರಥೋತ್ಸವವು ತಾ. 21-4-51ರಿಂದ ತಾ. 25-4-51ರ ವರೆಗೆ ಜರಗಲಿರುವುದು. ಈ ಸಮಯದಲ್ಲಿ ಯಕ್ಷಗಾನ, ಭಜನೆ, ಹರಿಕತೆ, ಬಯಲಾಟ ಭಾಷಣ ವಗೈರೆ ಕಾರ್ಯಕ್ರಮಗಳು ಇರುವವು ಎಂದು ಆಡಳ್ತೆ ಮೊಕ್ತೇಸರ್ ಶ್ರೀ ಎಂ. ಎಸ್. ಅಧಿಕಾರಿಗಳು ತಿಳಿಸುತ್ತಾರೆ.

ಹಿರಿಯಡ್ಕ— ತಾ. 7-4-51ರಲ್ಲಿ ಗಾಂಧೀ ಮೈದಾನದಲ್ಲಿ. ಕೆ. ಮಹಾಬಲ ಹೆಗ್ಡೆಯವರ ಅಧ್ಯಕ್ಷತೆಯಲ್ಲಿ ಸಭೆ ಸೇರಿ, ಯುಗಾದಿ ಹಬ್ಬ ಮತ್ತು ಆರ್ಯ ಸಮಾಜ ಸ್ಥಾಪನಾದಿನವನ್ನು ಆಚರಿಸಲಾಯಿತು. ಹಲವರ ಭಾಷಣಗಳಿದ್ದವು.

ಬೆಳ್ಳೆ:- ಪಿಲಿಯೂರು ಶ್ರೀ ರಾಮಕೃಷ್ಣ ಎಲಿಮೆಂಟರಿ ಶಾಲಾ ವಾರ್ಷಿಕ ದಿನಾಚರಣೆಯು ತಾ. 7—4—1951ರಲ್ಲಿ ಶ್ರೀ ಎಚ್. ಮೃತ ಬಿ. ಎ. ಎಲ್. ಟಿ. ಅವರ ಅಧ್ಯಕ್ಷತೆಯಲ್ಲಿ ಜರಗಿತು. ಮೆನೇಜರ್ ಕೆ. ಶಿವರಾವ್ ಇವರು ಶಾಲಾ ವರದಿಯನ್ನೋದಿದರು. ಹೆಡ್ಮಾಸ್ಟರ್ ಶ್ರೀ. ಮುದ್ದಣ್ಣ ಸೆಟ್ಟರೇ ಮೊದಲಾದವರ ಭಾಷಣಗಳಾದುವು. ವಕೀಲ್ ಶ್ರೀ ಎಸ್. ಸೀತಾರಾಮ್ ಆಚಾರ್ ಇವರು ಬಹುಮಾನ ವಿತರಣೆಯನ್ನು ಮಾಡಿದರು. ವಿವಿಧ ವಿನೋದಾವಳಿಗಳಾದ ಮೇಲೆ ಸಭಾಂತ್ಯವಾಯಿತು.

Notice

ಕುಂದಾಪುರದ ಮು. ಕೋರ್ಟಿನಲ್ಲಿ

S. C. No 715 /1950

ವಾದಿ — ಜಗನ್ನಾಥ ಸೆಟ್ಟಿ.

ಪ್ರತಿವಾದಿ—ರಾಮಣ್ಣ ಶೆಟ್ಟಿ ಕೂಡಾ.

2ನೇ ಪ್ರತಿವಾದಿ ಮಂಜಮ್ಮಶೆಡ್ತಿ, ಕಾವೇರಿ ಶೆಟ್ಟಿ ಮಗಳು, ಶಿವಮೊಗ್ಗಾ ಡಿಸ್ಟ್ರಿಕ್ಟ್ ಹೊಸನಗರ ತಾಲ್ಲೂಕು ಕೊಡೂರು.

ಸದ್ರಿ 2ನೇ ಪ್ರತಿವಾದಿಗೆ ತಿಳಿಯಪಡಿಸುವುದೇನೆಂದ್ರೆ:—

ವಾದಿಯು ಪೂರ್ವಾಧಿಕಾರಿ ಕೇಶವ್ರಿಂದ ರೂಪಾಯಿ 200-0-0ನ್ನು ಸಾಲವಾಗಿ ಪಡೆದು ತಾರೀಖು 11-9-1944ರಲ್ಲು ಬರೆಕೊಟ್ಟ ಪ್ರಮಾಣ ನೋಟಿನ ಹಣಬಡ್ಡಿಗಳ ಬಗ್ಗೆ ವಾದಿಯು ಸದ್ರಿ ದಾವಾ ಮಾಡಿರುವುದರಿಂದ ಅದರ ಕುರಿತು ನಿಮ್ಮದೇನಾದ್ರೂ ಆಕ್ಷೇಪವಿದ್ದಲ್ಲಿ ತಾ. 23-5-1951ನೇ ದಿವಸ ಹಗಲು 11 ಗಂಟೆಗೆ ಈ ಕೋರ್ಟು ಮುಂದೆ ಹಾಜರಾಗಿ ಜ್ವಾಹೀರು ಮಾಡಿಕೊಳ್ಳತಕ್ಕದ್ದು. ತಪ್ಪಿದ್ದಲ್ಲಿ ಏಕಪಕ್ಷವಾಗಿ ತೀರ್ಮಾನಿಸಲಾದೀತು ಎಂಬ ಸಂಗ್ತಿ ಕೋರ್ಟು ಹುಕುಂ ಪ್ರಕಾರ ನಿಮಗೆ ಈ ಮೂಲಕ ತಿಳಿಸೋದಾಗುತ್ತದೆ.

K Raghunatha Shenai,
Pleader for Pltf.

Coondapoor, 7-4-1951.

ನಿಮಗೆ
ಇಂಗ್ಲಿಷ್ ಕಲಿಯಬೇಕೆ?
ಹಾಗಿದ್ದರೆ

ಕೊರಡ್ಕಲ್ ಶ್ರೀನಿವಾಸ ರಾವ್ ವಿರಚಿತ

ಸುಲಭದಲ್ಲಿ ಇಂಗ್ಲಿಷ್

English Made Easy

ಎಂಬ ಇಂಗ್ಲಿಷ್ ಸ್ವಯಂಬೋಧಿನಿ ಪುಸ್ತಕ ಅತ್ಯುಪಯುಕ್ತವಾದುದು.
ಬೆಲೆ ರೂ. 1-8-0.
ವಿ. ಪಿ ದ್ವಾರ ರೂ 1-14-0.
ಪ್ರತಿಗಳು ಪ್ರಮುಖ ಪುಸ್ತಕ ವ್ಯಾಪಾರಿಗಳಲ್ಲಿ ಸಿಗದಿದ್ದರೆ, ಕೆಳಗಿನ ವಿಳಾಸಕ್ಕೆ ಬರೆಯಿರಿ,
ನವಭಾರತ ಪುಸ್ತಕ ಭಂಡಾರ,
ಉಡುಪಿ

ಶ್ರೀ ರಾಮಕೃಷ್ಣ ಥಿಯೇಟರ್ ಲಿಮಿಟೆಡ್, ಉಡುಪಿ
ತಾರೀಖು 13-4-51ರಿಂದ
ಜೆಮಿನಿ ಚಿತ್ರ
ಬಾಲನಾಗಮ್ಮ
ನಂತರ:- ಮೋಹಿನಿ, ದಿಲ್ಲಗಿ, ದುಲಾರಿ ಇತ್ಯಾದಿ

ಉಡುಪಿಗೆ ಹೋಗಬೇಕೇ! ಆದರೆ ಉಳಿದುಕೊಳ್ಳುವುದೆಲ್ಲಿ?
ರಾಯಲ್ ಮಹಾಲಿನಲ್ಲಿ
ಬಸ್ ಸ್ಟೇಂಡಿಗೆ ಅತಿ ಸಮೀಪ! ಕೃಷ್ಣಮಠಕ್ಕೆ ದೂರವಿಲ್ಲ!
ವ್ಯಾಪಾರವ್ಯವಹಾರ ವಿಹಾರಸ್ಥಳಗಳಿಗೆಲ್ಲ ಕೇಂದ್ರ!
ಶಿಮ್ಮ ಸ್ನಾನ, ಊಟ, ಉಪಹಾರ, ವೈರಿಕ್, ಶಯನ ಇವಕ್ಕೆಲ್ಲ ಉತ್ತಮ ವ್ಯವಸ್ಥೆ
ಕರೆದರೆ ಓಗೊಡುವ ಸೌಕರ ವರ್ಗ!
ಮೇಲಾಗಿ ಉಡುಪಿ ಬ್ರಾಹ್ಮಣರ ಅಡಿಗೆ, ತಿಂಡಿತಿನಸು, ಇವುಗಳ ರುಚಿರುಚಿ ಹೇಳಬೇಕೇ?
ಪ್ರೊಪ್ರೈಟರ್:— ಕೆ. ವೆಂಕಟ್ರಮಣಭಟ್ಟ.
For up-to-date Lodging & Boarding
ROYAL MAHAL,
UDIPI, S. Kanara.

ಸುಲಭ ದರದಲ್ಲಿ
ಅಚ್ಚುಕಟ್ಟಾದ
ಮುದ್ರಣಕ್ಕೆ
ನವಯುಗ ಪ್ರೆಸ್,
ಉಡುಪಿ.
ಲಗ್ನಪತ್ರಿಕೆಗಳನ್ನು ಬಹು ಬೇಗನೆ ತಯಾರಿಸಿ ಕೊಡಲಾಗುವುದು.

Approved from by the Govt. of Mysore
Certificated by the Agent of the Govt of Cylone & Indian.

ಕಟಪಾಡಿಯಲ್ಲಿ ಕೃಷಿಕರ ಮಹಾಸಭೆ

ಇದೇ ಏಪ್ರಿಲ್ ತಾ- 15ನ್ನು ಜಿಲ್ಲೆಯಲ್ಲೆಲ್ಲ ಕೃಷಿಕ ದಿನವಾಗಿ ಆಚರಿಸಲು ನಿರ್ಧಾರ-

ಮೊದಲೇ ಪ್ರಕಟವಾದಂತೆ ಇದೇ ಕಳೆದ ತಾ. 1ರಲ್ಲಿ ಕಟಪಾಡಿ ಮತ್ತು ಆಸುಪಾಸಿನ ಹಳ್ಳಿಗಳ ಕೃಷಿಕರ ಮಹಾಸಭೆಯೂ ಜಿಲ್ಲಾ ಬೋರ್ಡು ಸದಸ್ಯರಾದ ಶ್ರೀ ಕುಂಜಾರು ಕೃಷ್ಣಮೂರ್ತಿ ರಾಯರ ಅಧ್ಯಕ್ಷತೆಯಲ್ಲಿ ನಡೆಯಿತು. ಕೆ. ಮಂಜುನಾಥ ಶೆಣೈಯವರು ಸಭಿಕರನ್ನು ಸ್ವಾಗತಿಸಿ ಮತ್ತು ಸಭೆಯ ಉದ್ದೇಶವನ್ನು ವಿವರಿಸಿ ಮಾತಾಡಿದರು ಆ ಮೇಲೆ ಶ್ರೀ ಬಿ. ಆರ್. ಕರ್ಕೇರರು, ಒಕ್ಕಲುತನ ಮಸೂದೆಯನ್ನು ಮದ್ರಾಸ್ ಸರಕಾರವು ಜಾರಿಗೆ ತಾರದಿರುವುದರಿಂದ ರೈತರಿಗಾಗುವ ಅನನುಕೂಲದ ಕುರಿತು ಮಾತಾಡಿದರು. ಶ್ರೀ ಕೆ ಕೆ, ಶೆಟ್ಟಿ ಮಲ್ಪೆಯಿಂದ ಆರಂಭವಾದ ಕೃಷಿಕ ಚಳವಳಿಯ ಕಾರ್ಯಕಲಾಪ ಮತ್ತು ಉದ್ದೇಶವನ್ನು ಅದು ಈ ವರೆಗೆ ಸಾಧಿಸಿರುವ ಕೆಲಸವನ್ನು ಸೂಕ್ಷ್ಮವಾಗಿ ತಿಳಿಸಿ ಮುಂದೆ ಅದು ಮಾಡಬೇಕಾದ ಕೆಲಸದ ಕುರಿತು ಸೂಚನೆಗಳನ್ನಿತ್ತರು. ಆ ಮೇಲೆ ಬೊಂಬಾಯಿಯ ಕೃಷಿಕ ಸಂಘದ ಅಧ್ಯಕ್ಷ ಶ್ರೀ ಟಿ. ಕೆ. ಅಮೀನರು, ಬೊಂಬಾಯಿಯವರು ದಕ್ಷಿಣಕನ್ನಡ ಜಿಲ್ಲೆಯ ಕೃಷಿಕರಿಗೆ ಸಾಧ್ಯವಾದ ಸಹಾಯ ಮಾಡಲು ಸದಾ ಸಿದ್ಧರಿರುವರೆಂದು ಆಶ್ವಾಸನೆಯಿತ್ತರು. ಶ್ರೀಗಳಾದ ವಿಠ್ಠಲದಾಸ್, ಮುದ್ದುಮಾಸ್ಟರ್, ಕೆ. ಚೆನ್ನ, ಮುದ್ರಾಡಿ ಕೃಷ್ಣಯ್ಯ ಶೆಟ್ಟಿ, ಮರ್ಣೆ ಗೋವಿಂದ ಶೆಟ್ಟಿ, ಮರ್ಣೆದಾರರವರು ಮಾತಾಡಿದ ಮೇಲೆ ಶ್ರೀ ಎ. ಎಸ್. ಉಳಿಯಾರಗೋಳಿಯವರು ಸೂಚಿಸಿ, ಶ್ರೀ ಕೆ. ರಂಗನವರು ಅನುಮೋದಿಸಿ, ಈ ಕೆಳಗಿನ ಕಮಿಟಿ ಸರ್ವಾನುಮತದಿಂದ ಚುನಾಯಿತವಾಯಿತು. ಅಧ್ಯಕ್ಷರು ಕೊನೆಯಲ್ಲಿ, ಕೃಷಿಕರು ನಿಜವಾದ ಸಂಘಟನಾ ಬಲವುಳ್ಳವರಾದರೆ ಯಾವುದನ್ನೂ ಸಾಧಿಸಬಹುದೆಂದು ಸಂಘಟನೆಯ ಆವಶ್ಯಕತೆಯನ್ನು ಮನಗಾಣಿಸಿದರು

ಸಭಾಂತ್ಯದಲ್ಲಿ ಈ ಕೆಳಗಿನ ತಾತ್ಕಾಲಿಕ ಸಮಿತಿಯೊಂದನ್ನು ಚುನಾಯಿಸಲಾಯಿತು... ಶ್ರೀಗಳಾದ 1. ಗೋವಿಂದ ಶೆಟ್ಟಿ, ಮರ್ಣೆ, 2 ಸುಂದರ ಶೆಟ್ಟಿ, ಗುಡ್ಡೆ, 3 ಮಂಜುನಾಥ ಶೆಣೈ, ಕಾಪು, 4 ಅಟೇಲ್ ಅಮ್ಮಣ್ಣ, ಶೈಪುಂಡಾಲ್; 5 ಸ್ವೈ ಲಕ್ಷ್ಮಣ, 6 ಕೆ ಕೆ. ಪೂಜಾರಿ; 7 ಪ್ರಾಥಪು ಗೋವಿಂದ ಎ. ಮೆಂಡನ್; 8 ಕಾಪು ಪಡು ಹೊಸಮನೆ ರಾಮಣ್ಣ ಶೆಟ್ಟಿ; 9 ಕೆ ಮುದ್ದು ಮಾಸ್ಟರ್, 10 ಕೋಟೆ ವಿಲಿಯಂ ಸೋನ್ಸ್; 11 ಕೆ. ರಂಗ, ಕೋಟೆ, 12 ಸಲೋಮನ್ ಮೊಂತೇರೊ, ಮಟ್ಟು; 13 ಪೀಟರ್ ಡಿಸೋಜ, ಕೋಟೆ; ಶ್ರೀ ಕೆ. ರಂಗನವರನ್ನು ಈ ಕಮಿಟಿಯ ಪ್ರಸ್ತುತದ ಸಂಚಾಲಕರನ್ನಾಗಿ ನೇಮಿಸಲಾಯಿತು.

ಸಭೆಯಲ್ಲಿ ಮಂಜೂರಾದ ಠರಾವು:

"ಇಡೀ ಜಿಲ್ಲೆಯ ಕೃಷಿಕರು ಇದೇ ಏಪ್ರಿಲ್ ತಾ 15ನ್ನು 'ಕೃಷಿಕದಿನ'ವಾಗಿ ಆಚರಿಸಿ, ಮದ್ರಾಸ್ ಸರಕಾರವು ಸ್ಥಗಿತಗೊಳಿಸಿದ ಒಕ್ಕಲುತನ ರಕ್ಷಣಾ ಮಸೂದೆಯನ್ನು ದಕ್ಷಿಣಕನ್ನಡ ಜಿಲ್ಲೆಯಲ್ಲಿ ಕೂಡಲೆ ಜ್ಯಾರಿಗೆ ತರಬೇಕೆಂದು ಒತ್ತಾಯಪಡಿಸುವ ಮತ್ತು ಹಾಗೆ ಮಾಡದಿದ್ದರೆ ಅದರಿಂದಾಗಿ ಕೃಷಿಕರು ಶಾಂತ ಹಾಗೂ ನ್ಯಾಯಬದ್ಧ ಚಳವಳಿ ಹೂಡಬೇಕಾಗುವುದೆಂದು ಎಚ್ಚರಿಸಿ ಮದ್ರಾಸಿನ ಮುಖ್ಯಮಂತ್ರಿಗಳಿಗೆ ಮತ್ತು ಕಂದಾಯ ಮಂತ್ರಿಗಳಿಗೆ ತಂತಿ ಮೂಲಕ ತಿಳಿಸಬೇಕೆಂದು ಈ ಸಭೆಯು ನಿರ್ಧರಿಸುತ್ತದೆ"

ಕುಂಬಳೆ— ಎಪ್ರಿಲ್ ತಾ- ೧೧ರ ಗ್ರಾಮ ಕುಂಬಳೆಯಲ್ಲಿ ಕ್ಲಿಪ್ತ ಬೆಲೆಯಂಗಡಿಯನ್ನು ತೆರೆದಿರುತ್ತದೆ. ಸದ್ರಿ ಅಂಗಡಿಯಿಂದ ಸರಕಾರಿ, ಟಿನ್ಸ್ಯಲು, ಲೋಕಲ್ ಬೋರ್ಡು ನೌಕರರುಗಳಿಗೆ ಹಸ್ತ ಉದ್ಯೋಗಸ್ಥರು ಕೊಟ್ಟ ಆರ್ಡರ್ ಪ್ರಕಾರ ಆಕ್ಕಿ ಮತ್ತು ಕೊಡಲು ಏರ್ಪಾಟುಮಾಡಲಾಗಿದೆ.

ಮೊಗ್ರಾಲಿನ ವರ್ತಕರಲ್ಲೊಬ್ಬರಾದ ಜನಾಬ್ ಉಂಞಮ್ಮು ಸಾ ಮೊಗ್ರಾಲ್‌ನವರು ತಾ. ೫ರಂದು ರಾತ್ರಿ ತನ್ನ ಮಗಳ ಮನೆಯಲ್ಲಿ ಹೃದಯ ಸ್ಪಂದನದಿಂದ ತೀರಿಕೊಂಡಿರುವುದು ವಿಷಾದಕರವಿದೆ.

ಸಾರ್ವಜನಿಗೆ ಅಕ್ಕಿ ಭತ್ತ ಸಿಕ್ಕಲು ಕಷ್ಟಕರವಾಗಿದೆ. ಸ್ವಲ್ಪ ಸ್ವಲ್ಪ ಇದ್ದವರು ಮಿತಿ ಮೀರಿದ ಕ್ರಯಕ್ಕೆ ಮಾರುತ್ತಿರುವರಾಗಿಯೂ ತಿಳಿಯುತ್ತದೆ.

ಶುರಂಗಿ ಭೇಟಿ—ತಾ-15-4-1951 ನೇ ರವಿವಾರ ಸಾಯಂ ಘಂಟೆ 5-30ಕ್ಕೆ ಶ್ರೀ ರಾಮಾ ಹಾ. ಎ. ಶಾಲಾ 34ನೇ ವರ್ಧಂತ್ಯುತ್ಸವವು ಶ್ರೀ ದೇಜ ಉಚ್ಚಿಲ, ಬಿ. ಎ. ಎಲ್ ಟಿ ಇವರ ಸನ್ನಾನ್ಯ ಅಧ್ಯಕ್ಷತೆಯಲ್ಲಿ ಜರಗಲಿದೆ ಎಲ್ಲರಿಗೂ ಸ್ವಾಗತವಿದೆ.

ಋತುಸ್ರಾವ ನಿಂತಿತು

ಕುಂಪೂರಿ ಗುಳ್ಗೆಗಳನು ಉಪಯೋಗಿಸಿದರೆ ಹದಿನಾರು ಋತುಸ್ರಾವವಾಗುವುದು. ಹತ್ತೊತಿಗೆ ಬರುವುದು, ಈ ಔಷಧ ಸೇವನೆಯಿಂದ ತೀವ್ರ ಗುಣಹೊಂದಬಹುದು, ಯಾವ ಬಾಧಕವೂ ಇಲ್ಲ. ಸಾಬರಾದು ಮುಂದಿಗೆ ಶಾಶ್ವತಿ ಗುಣವಾಗಿದೆ- ಬೆಲೆ; ರೂ. 3-; ಸ್ಪೆಶಲ್ ರೂ. 5- ಅಧಿಕಾಧಿಕ ಸ್ಪೆಶಲ್ ರೂ. 8-[ವಿ. ಪಿ ಖರ್ಚು ಪ್ರತ್ಯೇಕ.]

MIS D. DEVEE, F. DS. (N. J.)
Tollygunge CALCUTTA
ಸ್ವಾತಿಕಸ್ಥರು ಶಿವಾಕಂಪನಿ, ಮಂಗಳೂರು

ಬದಿಯಡ್ಕದಲ್ಲಿ ಸತ್ಕಾರ ಸಭೆ— ಸ್ಥಳೀಯ ನವಜೀವನ ಹೈಸ್ಕೂಲಿನ ನಿವೃತ್ತ ಅಧ್ಯಾಪಕರಾದ ಶ್ರೀ ಕೆ. ಕೃಷ್ಣರಾವ್ ಬಿ.ಎ. ಇವರನ್ನು ಸತ್ಕರಿಸುವ ಸಲುವಾಗಿ ಪೆರಡಾಲ (ಬದಿಯಡ್ಕ) ಮತ್ತು ಅದರ ಆಸುಪಾಸಿನ ಗ್ರಾಮಗಳ ಮಹಾಜನರ ಸಭೆಯೊಂದು ಕಳೆದ ತಾ. 5ರಲ್ಲಿ ಬದಿಯಡ್ಕ ಪಂಚಾಯತ ಬೋರ್ಡು ಕಟ್ಟಡದ ಮುಂಬಾಗದಲ್ಲಿ ಜರಗಿತು. ಸುಮಾರು ಇನ್ನೂರೈವತ್ತಕ್ಕಿಂತಲೂ ಹೆಚ್ಚು ಮಂದಿ ಬಂದಿದ್ದರು. ಟೀಪಾರ್ಟಿ ಸತ್ಕಾರವು ಮುಗಿದ ಬಳಿಕ ಶ್ರೀ ಬಿ ಸಾಮದೇವ ಶೆಣೈಯವರ ಅಧ್ಯಕ್ಷತೆಯಲ್ಲಿ ಸಭೆ ಜರಗಿತು. ಶ್ರೀ ಪಿ. ಶ್ರೀಕೃಷ್ಣಭಟ್ಟರು ಪ್ರಾರ್ಥನೆ ಮಾಡಿ ಶ್ರೀ ಕೆ. ಕೃಷ್ಣರಾಯರಿಗೆ ಮಹಾಜನರ ಪರವಾಗಿ ತಯಾರಿಸಲ್ಪಟ್ಟಿದ್ದ ಮಾನಪತ್ರವನ್ನೋದಿದರು. ಅನಂತರ ಶ್ರೀಗಳಾದ ಸಿ. ಡಿ. ಮಂಜಯ್ಯರೈಗಳೂ, ಕೆ. ಶಂಕರನಾರಾಯಣ ಭಟ್ಟರೂ, ಕಡಂಬ ಗೋಪಾಲಕೃಷ್ಣಯ್ಯನವರೂ, ಸೂರ್ಯ ಮಾಸ್ತರರೂ ಶ್ರೀ ಕೃಷ್ಣರಾಯರ ವಿಷಯವಾಗಿ ಮಾತಾಡಿದರು. ಮಾನಪತ್ರಕ್ಕೆ ಉತ್ತರಕೊಡುತ್ತಾ ಶ್ರೀ ಕೃಷ್ಣರಾಯರು ಹೀಗೆಂದರು: "ನನ್ನ ಕುರಿತಾಗಿ ಹಲವು ಒಳ್ಳೆಯ ಮಾತುಗಳನ್ನು ಬರೆದಿರುತ್ತೀರಿ ಈ ಮಾತುಗಳೆಲ್ಲವೂ ಮಹಾಜನರ ಔದಾರ್ಯವನ್ನು ಸೂಚಿಸುತ್ತವೆ. ನಾನೇನಾದರೂ ಮಾಡಿರಬಹುದಾದ ಅಲ್ಪಸೇವೆಗೆ ಬೇರೆ ಸಂದರ್ಭಗಳಲ್ಲಾಗಿದ್ದರೆ ಇಂತಹ ಮಾನಪತ್ರವನ್ನು ನಾನು ಸ್ವೀಕರಿಸುತ್ತಿದ್ದಿಲ್ಲ. ಒಂದು ಪಕ್ಷದವರು ನನ್ನನ್ನು ಅವಹೇಳನಮಾಡುವ ಕಾರ್ಯದಲ್ಲಿ ನಿರತರಾಗಿರುವ ಈ ಕಾಲದಲ್ಲಿ ಮಹಾಜನರಿಗೆ ನನ್ನ ವಿಷಯದಲ್ಲಿ ಯಾವ ಅಭಿಪ್ರಾಯವಿದೆ ಎಂಬುದನ್ನು ಲೋಕದ ಮುಂದೆ ಸಾರುವುದಕ್ಕೆ ಇದೊಂದು ಉತ್ತಮ ಮಾರ್ಗವಾದ ಕಾರಣ ಈ ಮಾನಪತ್ರವನ್ನು ಸ್ವೀಕರಿಸಿದ್ದೇನೆ" ಮುಂತಾಗಿ ಹೇಳಿ ಗ್ರಾಮಸ್ಥರು ತಮ್ಮ ಹಿತಸಾಧನೆಗಾಗಿ ಒಕ್ಕಟ್ಟಿನಿಂದ ಪಕ್ಷಗಳ ದುಷ್ಟ ಶಕ್ತಿಗಳನ್ನಿದಿರಿಸಲು ಯತ್ನಿಸಬೇಕೆಂದರು ಶ್ರೀ ಗೋವರ್ಧನ ಶೆಣೈಯವರು ಅಧ್ಯಕ್ಷರಿಗೂ ಭಾಷಣಗಾರರಿಗೂ ಮತ್ತು ಮಹಾಜನರಿಗೂ ಧನ್ಯವಾದಗಳನ್ನು ಅರ್ಪಿಸಿದ ತರುವಾಯ ರಾಷ್ಟ್ರಗೀತೆಯೊಂದಿಗೆ ಸಭಾಂತ್ಯವಾಯಿತು.

ಅಂಪಾರು— ಇಲ್ಲಿಯ ಬೋರ್ಡ್ ಎಲಿಮೆಂಟರಿ ಶಾಲೆಯ ವರ್ಧಂತಿಯು ತಾ 8-4 51ರಲ್ಲಿ ಶ್ರೀ ಕೊಳ್ಕೆಬೈಲು ಸೂರಪ್ಪ ಶೆಟ್ಟಿ ಅಧ್ಯಕ್ಷತೆಯಲ್ಲಿ ವಿಜೃಂಭಣೆಯಿಂದ ಜರಗಿತು. ಪ್ರಾರ್ಥನೆ, ವಂದಿವಾಚನ, ಬಹುಮಾನ ವಿತರಣೆ, ನಡೆದ ತರುವಾಯ ಚಿಕ್ಕ ಮಕ್ಕಳ ವಿವಿಧ ವಿನೋದಗಳು ಮನರಂಜಕ ಹಾಸ್ಯಗಳು ಮುಂತಾದ ಆಟ-ಪಾಟಗಳು ಪ್ರದರ್ಶಿಸಲ್ಪಟ್ಟವು. ಶಾಲೆಯ ಆಟ-ಪಾಠಗಳನ್ನು ಕೊಂಡಾಡಿ ಶ್ರೇಯಸ್ಸು ಬಯಸಿ ಶ್ರೀ ಎಚ್ ಕೋಟಿಯಣ್ಣ ಶೆಟ್ಟಿ ಶ್ರೀ ಕೆ. ರಾಮಣ್ಣ ಶೆಟ್ಟಿ, ಶ್ರೀ ಕೆ. ಆನಂದ ಮಾಸ್ತರು, ಶ್ರೀ ಜನ್ನರು, ಶ್ರೀ ಕೆ. ಶೇಷಪ್ಪ ಹೆಗ್ಡೆಯವರು ಮಾತಾಡಿದರು, ಆ ಮೇಲೆ ಸಭಾಧ್ಯಕ್ಷರ ಸಾಲೋಚಿತವಾದ ಉಪಸಂಹಾರ ಭಾಷಣವು ನಡೆದು, ಚಂದ್ರಹಾಸ ಸಂಗೀತ ನಾಟಕವು ಜಯಶೀಲವಾಗಿ ಆಭಿನಯಿಸಲ್ಪಟ್ಟಿತು

ಪುತ್ತೂರು—ತಾಲೂಕ ಪಂಚಾಯತ ಬೋರ್ಡುಗಳ ಪರಿಷತ್ತು ಮದ್ರಾಸು ಸರಕಾರದ ಸ್ಥಳೀಯ ಆಡಳಿತ ಮತ್ತು ಸಹಕಾರ ಸಂಸ್ಥೆಗಳ ಮಾನ್ಯ ಮಂತ್ರಿ ಶ್ರೀ ಕೆ. ಚಂದ್ರಮೌಳಿಯವರ ಅನುಕೂಲಕ್ಕಾಗಿಯೂ, ಪರಿಷದವು ಮಾನ್ಯ ಮಂತ್ರಿಗಳ ಸಮ್ಮುಖದಲ್ಲೇ ಆಗುವದು. ಆವಶ್ಯ ಮತ್ತು ಪ್ರಯೋಜನವು ಕೃಷ್ಣಾಪುರದಿಂದಲೂ, ಪರಿಷತ್ತಿನ ಸ್ವಾಗತ ಸಮಿತಿಯವರ ಸರ್ವ ಸಮ್ಮತದಿಂದ ತಾರೀಕು 17-4-51ರಲ್ಲಿ ಜರಗತಕ್ಕದೆಂದು ನಿಶ್ಚಯಿಸಿದ್ದ ಪುತ್ತೂರು ತಾಲೂಕು ಪಂಚಾಯತ ಬೋರ್ಡುಗಳ ಪರಿಷದನ್ನು ತಾ. 9 5 51 ಕ್ಕೆ ಮುಂದರಿಸಿಟ್ಟದ್ದಾರೆ.

ಇನ್ನಂಜೆ— ಪ್ರೈವೇಟು ಹೈಸ್ಕೂಲಿನ ವಿದ್ಯಾರ್ಥಿಯಾಗಿದ್ದ ಶ್ರೀ ವಿಶ್ವನಾಥ ನಾಯ್ಕ ಎಂಬವರು ಕಳೆದ ತಾ. 29ರಲ್ಲು ರಾತ್ರಿ ಸ್ವಗ್ರಾಮವಾಗಿದ್ದ ಕಾಪಿನಲ್ಲಿ ಹೃದಯಸ್ತಂಭನದಿಂದ ಅಕಾಲ ಮೃತ್ಯುವಿಗೆ ತುತ್ತಾದುದು ಶೋಚನೀಯವಿದೆಯೆಂದೂ ಇವರು ವಿದ್ಯಾರ್ಥಿಯಾಗಿರುವಾಗ ಸ್ವಾರ್ಥಿಯಿಂದ ಕೆಲಸ ನಿರ್ವಹಿಸಿ ಅಧ್ಯಾಪಕರ ಪ್ರೀತಿಗೆ ಪಾತ್ರರಾಗಿದ್ದರೆಂದೂ ಶಾಲೆಯಲ್ಲಿ ದುಃಖ ಸೂಚಕ ಸಭೆಯನ್ನೇರ್ಪಡಿಸಿ, ಬಳಿಕ ಶಾಲೆಯನ್ನು ಅವರ ಸ್ಮಾರಕಾರ್ಥವಾಗಿ ಮುಚ್ಚಲಾಯಿತೆಂದೂ ಓಲವಿಸಗೆಳೆಯರೊಬ್ಬರು ಬರೆಯುತ್ತಾರೆ.

ದಕ್ಷಿಣ ಕನ್ನಡ ಜಿಲ್ಲಾ ವಿಧಾಯಕ ಕಾರ್ಯಕರ್ತರ ಪರಿಷತ್ತು— ಇದೇ ತಾ. 6-5-1951ನೇ ಆದಿತ್ಯವಾರ ದ. ಕ. ಜಿಲ್ಲಾ ವಿಧಾಯಕ ಕಾರ್ಯಕರ್ತರ ಪರಿಷತ್ತನ್ನು ಬಂಟವಾಳದಲ್ಲಿ ಜರಗಿಸುವ ವ್ಯವಸ್ಥೆಗಾಗಿ ಒಂದು ಸ್ವಾಗತ ಸಮಿತಿಯು ರಚಿಸಲ್ಪಟ್ಟಿದೆ. ಇದಕ್ಕೆ ಶ್ರೀ ಎಸ್- ಧರ್ಮಪಾಲ ಶೆಟ್ರಿ ಅಧ್ಯಕ್ಷ, ಶ್ರೀ ನಾರ್ಣ ಲಕ್ಷ್ಮೀನಾರಾಯಣ ಆಳ್ವರು ಮತ್ತು ಎಸ್. ಉಪೇಂದ್ರ ನಾಯಕರು ಜತೆಕಾರ್ಯದರ್ಶಿಗಳು, ಶ್ರೀ ಬಿ. ಪಾಂಡುರಂಗ ಬಾಳಿಗರು ಕೋಶಾಧಿಕಾರಿ, ಶ್ರೀಗಳಾದ ಬಿ. ಆನಂದ ರೈಗಳು, ಅನಂತ ಪಾಲರು ಮತ್ತು ಎನ್. ಕೇಶವ ಕುಡ್ವರು ಕಾರ್ಯಕಾರಿ ಸಮಿತಿಯ ಸದಸ್ಯರಾಗಿ ಆರಿಸಲ್ಪಟ್ಟಿದ್ದಾರೆ. ಈ ಪರಿಷತ್ತಿಗೆ ಶ್ರೀ ಹಿ. ರಾ. ಮಲ್ಲಣ್ಣನು ಅಧ್ಯಕ್ಷರಾಗಿ ಸರ್ವಸಮ್ಮತಿಯಿಂದ ನಿರ್ಣಯಿಸಲಾಯಿತು. ಅಖಿಲ ಭಾರತ ಚರಖಾಸಂಘದ ಅಧ್ಯಕ್ಷರಾದ ಧೀರೇಂದ್ರಭಾಯಿ ಮಜುಂದಾರರೂ ಈ ಸಮ್ಮೇಳನಕ್ಕೆ ಆಗಮಿಸಲಿದ್ದಾರೆ. ಉಳಿದ ವಿವರಗಳನ್ನು ಹಿಂದಿನಿಂದ ಪ್ರಕಟಿಸಲಾಗುವುದು ಎಂದು ಸ್ವಾ. ಸ. ಕಾರ್ಯದರ್ಶಿ ನಾರ್ಣ ಲಕ್ಷ್ಮೀನಾರಾಯಣ ಆಳ್ವರು ತಿಳಿಸುತ್ತಾರೆ.

ನೋಟೀಸು

ಉದಿಯಾವರ ಗ್ರಾಮದ ಸರ್ವೆನಂಬ್ರ 150=-8-ದಾಗಾಯಿ ಪೂರ್ವ ಅಂತ ಸೆಂಟ್ಸು 36ರ ಸ್ಥಳಕಟ್ಟಿಗೂ ಮನೆಗಳನ್ನು ನಾನು ತಾ.29-5-1942ರಲ್ಲಿ ನನ್ನ ಸ್ವಂತ ಹಣದಿಂದ ರೂಪಾಯಿ 480-0-0 ಕ್ಕಾದ್ಯ ಅನಂತ ಪದ್ಮನಾಭಯ್ಯನವರಿಂದ ಕ್ರಯಕ್ಕೆ ಪಡೆದು ಅದರಲ್ಲಿ ಹೇರಳ ಕೃಷಿಗಳನ್ನು ಮಾಡಿ ಸ್ವಂತ ವ ಸಂಪೂರ್ಣ ಹಕ್ಕಿನಿಂದ ಅನುಭವಿಸಿಕೊಂಡು ಬರುತ್ತೇನೆ. ಆದರೆ ಕಾರಣಾಂತರದಿಂದ ಸದ್ರಿ ಕ್ರಯ ಚೀಟನ್ನು ನನ್ನ ಮಗಳಾದ ಎಡಿತ್ ಕ್ರಿಸ್ಟಿನ ಫೆರ್ನಾಂಡಿಸಳ ಹೆಸರಿಗೆ ಬಿನಾಮೆಯಾಗಿ ಬರಾಯಿಸಿರುವುದಲ್ಲದೇ ಅವಳಿಗೆ ಕ್ರಯದ ಆಸ್ತಿಯಲ್ಲಿ ಯಾವ ತರದ ಹಕ್ಕು ಸಂಬಂಧವಿರುವುದಿಲ್ಲ. ಕ್ರಯ ಚೀಟಿನ ಪ್ರತಿಫಲದಲ್ಲಿ ಎಷ್ಟನ್ನಾದರೂ ಅವಳಿಗೆ ನಾನು ಕೊಟ್ಟಿದ್ದಿಲ್ಲ. ಆಸ್ತಿಯನ್ನು ಅನುಭವಿಸಿದ್ದೂ ಇಲ್ಲ. ಆದರೆ ಸುಮಾರು ಸಂದೂವರೆ ವರುಷಗಳ ಹಿಂದೆ ಲಗ್ನವಾಗಿದ್ದ ಸದ್ರಿ ನನ್ನ ಮಗಳು ಯುಕ್ತಿಯಾಗಿ ಬೋಂಬಾಯಿಯಿಂದ ಬಂದವಳು ಸದ್ರಿ ಆಸ್ತಿ ಕ್ರಯ ಚೀಟು ನಾನು ಸಂದಾಯವಮಾಡಿ ಪಡೆದ ವರಪಡಿಸಿದ ದಿವಾಂದ್ಯೋಟು, ನಾನು ಗೇಣಿ ಕೆಟ್ಟ ಪಡದ ರಶೀದಿಗಳನ್ನು ಸಹಾ ನನ್ನ ಗೈರು ಹಾಜರಿ ಸಮಯ ನನ್ನ ಮನೆಯಿಂದ ತೆಗೆದುಕೊಂಡು ಹೋಗಿ ಅವುಗಳ ಆಧಾರದ ಮೇಲೆ ಸದ್ರಿ ಆಸ್ತಿಯನ್ನು ಮತ್ತಾರಿಗೆ ಪರಾಧೀನ ಮಾಡುವರೆ ಆಲೋಚಿಸುತ್ತಿರುವ ಸಂಗತಿ ಅವಳ ಕಡೆಯಿಂದ ಅವಳ ವಕೀಲರು ತಾ. 27-2-51ರಲ್ಲಿ ಕೊಟ್ಟ ನೋಟೀಸಿನಿಂದ ತಿಳಿದುಬರುತ್ತದೆ. ನಾನು ಸದ್ರಿ ಸಂಗತಿಗಳನ್ನು ಖಂಡಿಸಿ ನನ್ನ ವಕೀಲರಿಂದ ಉತ್ತರಕೊಡಿಸಿರುತ್ತೇನೆ. ಆದುದರಿಂದ ಸದ್ರಿ ಆಸ್ತಿಯನ್ನು ಸದ್ರಿ ನನ್ನ ಮಗಳಿಂದ ಪರಾಧೀನ ಮಾಡಿಕೊಳ್ಳಬಾರದಾಗಿಯೂ ಹಾಗೆ ಅವಳು ಮಾಡಬಹುದಾದ ಪರಾಧೀನಗಳು ಸಿಂಧುವಾಗತಕ್ಕವುಗಳಲ್ಲವೆಂದೂ ನನ್ನ ಸಂಪೂರ್ಣ ಹಕ್ಕಿಗೆ ಬಾಧಿತಕ್ಕವುಗಳಲ್ಲವೆಂದೂ ಈ ಮೂಲಕ ಸರ್ವ ಜನರಿಗೂ ತಿಳಿಯಪಡಿಸಿಯದೆ.

ಪಾಲ್ಸಿಯಾನ್ ಫೆರ್ನಾಂಡಿಸ
ಉದಿಯಾವರ 9-4-51

THE PANGAL NAYAK BANK LIMITED.

Head Office] (Incorporated in 1920.) [Udipi S K

SEASON DEPOSITS are received and accepted on the following terms—

For three, four or five months deposits at 3% p. a

For six seven or eight months deposits at 3½% p. a

These are to be terminable by the 30th June 1951.

Interest is payable along with the principal at maturity.

Our THREE YEAR CASH CERTIFICATES bring to You a fair yeild: For particulars please ask for copy of Rules

Nambiar's
ARYA VAIDYA SALA
UDIPI
Ideal House for Ayurvedic Treatment.
T. N. Kelu Nambiar,
Vaidya.

ವಾರದ ಹರಟೆ

ಈ ವಾರದ ಹರಟೆ ಭಾಷಾವಾರು ಪ್ರಾಂತ್ಯರಚನೆಯ ವಿಷಯವಿರಬೇಕೆಂದು ಮೊದಲೇ ಹೇಳಿದ್ದೆನಲ್ಲವೇ! ಮುಖ್ಯವಾಗಿ ಕನ್ನಡ ಭಾಷೆ ಮಾತಾಡುವ ಜನರಿರುವ ಭಾಗಕ್ಕೊಂದು ಪ್ರತ್ಯೇಕ ರಾಜ್ಯಾಡಳಿತ ಬೇಕೆಂದು ಅಭಿಪ್ರಾಯ. ಈ ವಿಷಯ ಅನೇಕರು ಅನೇಕ ಕಡೆಗಳಲ್ಲಿ ಎಷ್ಟೋ ಸಲ ಹೇಳಿದ್ದಾರೆ, ಹೌದು. ಆದರೆ ನಮ್ಮ ಜನರಿಗೆ ಇದು ಇನ್ನೂ ಮನದಟ್ಟಾಗಲಿಲ್ಲವೆಂದು ನನಗನಿಸುತ್ತದೆ. ವಿಷಯ ತಿಳಿದು ಬೇಕೆಂತಲೇ ಇದಕ್ಕೆ ಅಡ್ಡಿ ಮಾತಾಡುವವರಿದ್ದಾರೆ, ಅವರನ್ನು ಸರಿದಾರಿಗೆ ತರಲು ಯಾರಿಂದಲೂ ಸಾಧ್ಯವಿಲ್ಲವೆನ್ನಿಸುತ್ತದೆ. ವಿಷಯ ಅರಿಯದೆ ಒಂದಕ್ಕೊಂದು ಮಾತಾಡುವವರಿದ್ದಾರಲ್ಲವೇ? ಅಂತವರಿಗೆ ವಿಷಯ ತಿಳಿಸಬೇಕಾಗಿದೆ.

ಕನ್ನಡ ಭಾಷೆ ಮಾತಾಡುವ ಜನ ಒಂದೇ ಕಡೆಯಲ್ಲಿದ್ದಾರೆ. ಒಂದು ಕಡೆಯಲ್ಲಿದ್ದ ಜನರೆಲ್ಲರೂ ಒಂದೇ ಭಾಷೆ ಮಾತಾಡುತ್ತಿರುವುದು ಸ್ವಾಭಾವಿಕ. ಭಾಷೆ ಒಂದನ್ನೆ ಮಾತಾಡುವ ಜನ ಪುರಾತನ ಕಾಲದಿಂದಲೂ ಒಂದೇ ಸಂಸ್ಕೃತಿಗೆ ಸೇರಿದವರೆಂದು ನಾವು ತಿಳಿದುಕೊಳ್ಳಬಹುದು. ಉದಾಹರಣೆಗಾಗಿ ನಮ್ಮ ಜಿಲ್ಲೆಯ ಉತ್ತರಕ್ಕಿರುವುದು ಉತ್ತರ ಕನ್ನಡ ಜಿಲ್ಲೆ, ದಕ್ಷಿಣಕ್ಕಿರುವುದು ಮಲಬಾರು ಜಿಲ್ಲೆ. ಪೂರ್ವಕ್ಕಿರುವದು ಕೊಡಗು ಮತ್ತು ಮೈಸೂರು. ದಕ್ಷಿಣಕ್ಕಿರುವ ಮಲಬಾರಿನವರು ಮಲೆಯಾಳಿ ಮಾತಾಡುತ್ತಾರೆ, ಉತ್ತರ ಪೂರ್ವಕ್ಕಿರುವವರು ನಮ್ಮಂತೆಯೇ ಕನ್ನಡ ಮಾತಾಡುವವರು. ಹೀಗಿರುವುದರಿಂದ ನಮ್ಮ ಜಿಲ್ಲೆ ಮತ್ತು ಮಲಬಾರು ಈ ಸರಕಾರಿ ಆಡಳಿತೆಯ ಮಟ್ಟಿಗೆ ಒಂದೇ ಪ್ರಾಂತ್ಯದಲ್ಲಿ ಸೇರಿದ್ದರೂ ಈ ಎರಡು ಜಿಲ್ಲೆಗಳು ಹಿಂದೆ ಒಂದೇ ಪ್ರಾಂತ್ಯಕ್ಕೆ ಸೇರಿಕೊಂಡಿರಲಿಲ್ಲವೆಂಬುದು ಸ್ಪಷ್ಟವಾಗುವುದು. ಉತ್ತರ ಕನ್ನಡ ಕೊಡಗು ಮೈಸೂರು ಸರಕಾರದ ಆಡಳಿತೆಯ ಮಟ್ಟಿಗೆ ಬೇರೆ ಬೇರೆಯಾಗಿದ್ದರೂ ಅವರೂ ನಮ್ಮ ಜಿಲ್ಲೆಯವರಂತೆ ಕನ್ನಡ ಮಾತಾಡುವವರಾದುದರಿಂದ ಒಮ್ಮೆ ಇವೆಲ್ಲಾ ಒಂದೇ ರಾಜಕೀಯ ಆಡಳಿತೆಗೆ ಸೇರಿಕೊಂಡಿದ್ದಿರಬೇಕೆಂದು ತಿಳಿಯುವುದು ಸುಲಭವಿದೆ, ನಮ್ಮ ಭಾರತವನ್ನು ಪರಕೀಯರು ಬಂದು ಆಕ್ರಮಿಸುವ ಮೊದಲು ನಮ್ಮಲ್ಲಿ ಭಾಷಾವಾರು ಪ್ರಾಂತ್ಯಗಳಿದ್ದವು. ಆಕ್ರಮಣವಾದಂತೆ ರಾಜ್ಯ ವಿಸ್ತರಿಸುತ್ತಾ ಹೋಯಿತು. ಆಗ ಭಾಷಾವಾರು ಕ್ರಮ ತಪ್ಪಿ ಹೋಯಿತು. ಪರಕೀಯರು ಭಾರತವನ್ನು ಬಿಟ್ಟುಹೋದೊಡನೆ ಅದು ಪುನಃ ಪೂರ್ವ ಸ್ಥಿತಿಗೆ ಬರಬಹುದೆಂದು ನಾವೆಲ್ಲರೂ ಆಶಿಸುತ್ತಿದ್ದುದು ಸ್ವಾಭಾವಿಕ.

ಹೀಗೆ ನಮ್ಮಲ್ಲಿದ್ದ ಭಾಷಾವಾರು ಪ್ರಾಂತ್ಯಕ್ರಮವನ್ನು ಯಾರಾದರೂ ಬೇಕೆಂತಲೇ ತಪ್ಪಿಸಹೋಗಿದ್ದಲ್ಲಿ ಅದು ತನ್ನಷ್ಟಕ್ಕೆ ಆಗಿಹೋಯಿತು. ಪುನಃ ಅದನ್ನು ಮೊದಲಿದ್ದ ಸ್ಥಿತಿಗೆ ತರಬೇಕೆನ್ನುವುದಕ್ಕೆ ನಾವು ಪ್ರಯತ್ನಿಸುತ್ತಿದ್ದೇವಷ್ಟೆ. ಆದುದರಿಂದ ಭಾಷಾವಾರು ಪ್ರಾಂತ್ಯರಚನೆಯಾಗಬೇಕೆಂದರೆ ಈ ವರೆಗೆ ಇಲ್ಲದಿದ್ದ ಯಾವುದಾದರೂ ಒಂದು ಹೊಸ ಅಧಿಕಪ್ರಸಂಗಕ್ಕೆ ನಾವು ಕೈಹಚ್ಚಿದ್ದೇವೆಂದು ಯಾರೂ ಎಣಿಸಬಾರದು. ಒಂದು ಗಡಿಬಿಡಿಯಲ್ಲಿ ಮನೆಯಲ್ಲಿದ್ದ ಸಾಮಾನುಗಳು ಸಿಕ್ಕಾಬಟ್ಟೆ ಚೆಲ್ಲಿ ಹೋಗಿದ್ದರೆ ಗಡಿಬಿಡಿ ಗಲಾಟೆ ಮುಗಿದ ಕೂಡಲೇ ನಾವು ಅದನ್ನು ಮೊದಲಿದ್ದ ಸ್ಥಾನದಲ್ಲಿ ಇಟ್ಟುಬಿಡುವಾ ಎಂದು ಹೊರಟರೆ ತಪ್ಪಿದೆಯೋ? ಕರ್ನಾಟಕ ಏಕೀಕರಣವೆಂದರೆ ನಮ್ಮಲ್ಲಿ ಇದೇನೊಂದು ಹೊಸ ವಹಿವಾಟು ಎನಿಸುತ್ತದೆ. ಇದಕ್ಕಿಂತಲೂ ಕನ್ನಡ ರಾಜ್ಯದ ಪುನರ್ವ್ಯವಸ್ಥೆ ಅಥವಾ ಕನ್ನಡಿಗರನ್ನು ಒಂದೇ ರಾಜ್ಯಾಡಳಿತೆಗೆ ಸೇರಿಸುವ ವ್ಯವಸ್ಥೆ ಎನ್ನಬಹುದು.

ನಮ್ಮ ಜಿಲ್ಲೆ ಉತ್ತರ ಕನ್ನಡ ಕೊಡಗು ಮೈಸೂರಿನಂತೆಯೇ ಮುಂಬಯಿ ಪ್ರಾಂತ್ಯಕ್ಕೆ ಸೇರಿಹೋದ ಇನ್ನು ಕೆಲವು ಜಿಲ್ಲೆಗಳು ಕನ್ನಡ ಮಾತಾಡುತ್ತಿವೆ. ಹೈದರಾಬಾದಿನ ಒಂದು ಅಂಶ ಕನ್ನಡ ಮಾತಾಡುತ್ತದೆ. ಈ ಭಾಗವನ್ನೆಲ್ಲಾ ಒಟ್ಟುಗೂಡಿಸಿ (ಅಲ್ಲ. ಇನ್ನೊಮ್ಮೆ ಒಂದೇ ಆಡಳಿತೆಗೆ ಸೇರಿಸಿ ಅನ್ನುವ) ಕನ್ನಡ ಭಾಷೆ ಮಾತಾಡುವ ಎಲ್ಲಾ ಪ್ರದೇಶಕ್ಕೊಂದು ಸರಕಾರಿ ಪ್ರಾಂತ್ಯವಾಗಬೇಕೆಂದು ಹೇಳಿದರೆ ಇದಕ್ಕೆ ಯಾರು ಏಕೆ ಅಡ್ಡಿ ಮಾತಾಡಬೇಕು? ಹೀಗೆ ಮಲಬಾರಿನಂತೆಯೇ ಕೊಚ್ಚಿ ತಿರುವಾಂಕೂರು ಪ್ರದೇಶಗಳೂ ಮಲಿಯಾಳಿ ಮಾತಾಡುತ್ತವೆ. ಮಲೆಯಾಳಿ ಮಾತಾಡುವ ಪ್ರದೇಶಕ್ಕೆ ಒಂದೇ ಆಡಳಿತೆ ಏಕೆ ಆಗಬಾರದು? ಅದೇನು? ಒಂದೇ ಭಾಷೆ ಮಾತಾಡುವ ಜನ ಒಟ್ಟಿಗೆ ಒಂದು ಆಡಳಿತೆಯಲ್ಲಿರಬಾರದೇಕೆ? ಸ್ಪಷ್ಟ ಮತ್ತು ಸ್ವಾಭಾವಿಕವಾದ ವಿಷಯವನ್ನು ಜನರಿಗೆ ಬೋಧಿಸಲಿಕ್ಕೂ ಇಷ್ಟು ಪ್ರಯಾಸವೇ? ಒಂದು ರಾಜ್ಯಾಡಳಿತೆಯಲ್ಲಿ ಒಬ್ಬರ ಭಾಷೆ ಇನ್ನೊಬ್ಬರಿಗೆ ಅರಿಯದ ಅನೇಕ ಭಾಷೆಯವರು ಇರುವುದಕ್ಕಿಂತ ಒಂದೇ ಭಾಷೆಯವರು ಇರುವುದು ಒಳ್ಳೇದು ಎಂದು ಬೇರೆ ವಿವರಿಸಬೇಕೇ?

ಒಂದು ರಾಜ್ಯಾಡಳಿತೆಯೊಳಗೆ ಅನೇಕ ಭಾಷೆಯವರು ಒಟ್ಟಾಗಿರುವುದು ಎಷ್ಟು ಕಷ್ಟವೆಂಬುದಕ್ಕೆ ಒಂದು ಚಿಕ್ಕ ಉದಾಹರಣೆ ಕೊಡುತ್ತೇನೆ. ನೋಡಿ, ನಮ್ಮ ಕನ್ನಡ ಮಾತಾಡುವ ಜನ ಎಷ್ಟು ಆಡಳಿತೆಗೆ ಸೇರಿಕೊಂಡಿದ್ದಾರೆ? ಇದರ ಪರಿಣಾಮವಾಗಿ ನಮ್ಮಲ್ಲಿ ಕನ್ನಡನಾಡಿನ ಎಲ್ಲರೂ ಓದಬಹುದಾದ ಒಂದು ಒಳ್ಳೆ ಕನ್ನಡ ಪತ್ರಿಕೆಯಿಲ್ಲ. ನಮ್ಮ ಜಿಲ್ಲೆಯ ನಾಲ್ಕಾರು ವಾರಪತ್ರಿಕೆಗಳು ನಮ್ಮ ಜಿಲ್ಲೆಯಲ್ಲಿ ಅಲ್ಲಲ್ಲಿ ನಡೆದ ವಿಷಯವನ್ನೆ ಪ್ರಕಟಿಸುತ್ತಿವೆ. ಹೊರಗಿನ ಸಮಾಚಾರ ಅವುಗಳಲ್ಲಿ ಕಡಿಮೆ. ಬರೆದರೂ ಉತ್ತರ ಕನ್ನಡದ ಸಮಾಚಾರ ಎಷ್ಟು ವಿಶೇಷದ್ದರಲಿ ದಕ್ಷಿಣ ಕನ್ನಡಕ್ಕೆ ಬೇಡವಾಗಿದೆ. ಮೈಸೂರು ಕೊಡಗಿನ ವಾರ್ತೆ ಅಲ್ಲಿಯವರಿಗೆ ರುಚಿಸುತ್ತದೆ ವಿನಾ ಇತರ ಭಾಗದವರಿಗೆ ಬೇಡವಾಗಿದೆ. ಹೀಗೆ ಕನ್ನಡ ನಾಡಿನಲ್ಲಿ ಒಂದೊಂದು ಆಡಳಿತೆಗೆ ಸೇರಿದ ಭಾಗಕ್ಕೊಂದು ಪತ್ರಿಕೆ. ಇಡೀ ಕನ್ನಡನಾಡು ಒಂದೇ ರಾಜ್ಯಾಡಳಿತೆಗೆ ಸೇರಿದರೆ ಪತ್ರಿಕೆಯನ್ನು ಓದುವವರ ಸಂಖ್ಯೆ ಏರುವುದು. ಉತ್ತಮ ಲೇಖಕರಿಗೆ ಸಂದರ್ಭ ದೊರೆಯುವುದು. ಒಂದು ಭಾಗದ ವಿಷಯದಲ್ಲಿ ಇನ್ನೊಂದು ಭಾಗದವರಿಗೆ ಉತ್ಸಾಹ ಹುಟ್ಟುವುದು.

ನಾನು ಬರೆಯುತ್ತಿರುವ ಈ ವಾರದ ಹರಟೆಯು ದೊಡ್ಡದಲ್ಲವೇ? ಇದನ್ನು ಕನ್ನಡ ಪ್ರಾಂತ್ಯದ ಎಲ್ಲಾ ಜನರು ಓದುವಂತಾಗುವುದು. ನನ್ನ ಬರಹದ ಸ್ವಾರಸ್ಯ ಎಲ್ಲಾ ಕನ್ನಡಿಗರಿಗೂ ಅರಿಯುವುದು. 'ಯು. ವಿ.' ರವರ ಹರಟೆಗಾಗಿ ಕನ್ನಡ ರಾಜ್ಯದಲ್ಲಿ ಎಲ್ಲರೂ 'ನವಯುಗ'ಕ್ಕಾಗಿ ಪ್ರತಿ ಗುರುವಾರ ಕಾಯುತ್ತಿರುವರು. ಕ್ಷಮಿಸಿರಿ.

ನಮಸ್ಕಾರ.

— "ಯು. ವಿ."

ಮೂಲ್ಕಿ ಬೇಂಕ್,
ಲಿಮಿಟೆಡ್, ಮೂಲ್ಕಿ.
1929ರಲ್ಲಿ ಸ್ಥಾಪಿತವಾಗಿ 21 ವರುಷಗಳಿಂದ ಊರ ಜನರ ಹಿತಕ್ಕಾಗಿ ಡಿಪೋಸಿಟ್ ಹಣಕ್ಕೆ ನ್ಯಾಯವಾದ ಬಡ್ಡಿಯಿಂದಲೂ, ಸಾಲದ ಹಣಕ್ಕೆ ಅತೀ ಕಡಿಮೆ ದರದ ಬಡ್ಡಿಯಿಂದಲೂ ಜನ ಹಿತಸಾಧನೆಯನ್ನು ಮಾಡುತ್ತಿರುವುದು
The Moolky Bank Ltd.,
Moolky, S. K.

ಹಿಂದು ಕೋಡು ಅಳಿಯ ಸಂತಾನ ಸಮಿತಿಯ ಸಂಚಾರ

ಹಿಂದುಕೋಡು ಅಳಿಯಸಂತಾನ ಸಮಿತಿಯ ಸದಸ್ಯರಾದ ಶ್ರೀಗಳಾದ ಎ. ಶಂಕರ ಆಳ್ವ ವಕೀಲ್, ಕೆ. ಕೆ. ಶೆಟ್ಟಿ, ಬಿ. ಬಿ. ಶೆಟ್ಟಿ ವಕೀಲ್, ಬಿ. ಆರ್. ಕರ್ಕೇರ, ಮತ್ತು ಬಿ. ಎಸ್. ಭಾಸ್ಕರ ರೈ, ವಕೀಲ್ ಇವರು ಶ್ರೀ ಮಹಾಬಲ ರೈಗಳೊಂದಿಗೆ ತಾ. ೨೯-೩-೫೧ನೇ ಬೆಳಿಗ್ಗೆ ಮಂಗಳೂರಿನಿಂದ ಹೊರಟು, ಗುರುಪುರ ಹಿಂದು ಹಾಯರ್ ಎಲಿಮೆಂಟರಿ ಶಾಲೆಯಲ್ಲಿ ಶ್ರೀ ಬಿ. ಪದ್ಮಯ ಆಳ್ವ ಜಿಲ್ಲಾಬೋರ್ಡು ಸದಸ್ಯ ಇವರ ನೇತೃತ್ವದಲ್ಲಿ ಸೇರಿದ ಸಭೆಯಲ್ಲಿ ಅಭಿಪ್ರಾಯ ವಿನಿಮಯ ಮಾಡಿದರು. ಶ್ರೀ ಶಂಕರಾಳ್ವರು, ಹಿಂದುಕೋಡಿನೊಂದಿಗೆ ಅಳಿಯಕಟ್ಟಿನವರೂ ಸೇರಿ ಹೊಂದಿ ನಡೆಯುವ ಅವಶ್ಯಕತೆಯನ್ನು ಮನಗಾಣಿಸಿದರು. ಅಳಿಯಕಟ್ಟಿನವರು ಹಿಂದುಕೋಡಿಗೆ ಸೇರುವಾಗ ಪ್ರಥಮ ತಲೆವಾರು ಇಚ್ಛಾನುಸಾರ ಪಾಲಾಗಿ ಆ ಮೇಲೆ ಹಿಂದುಕೋಡಿನಂತೆಯೇ ಪಾಲಾಗುವ ಅಭಿಪ್ರಾಯಕ್ಕೆ ನೆರೆದವರೆಲ್ಲರೂ ಸಮ್ಮತಿಯಿತ್ತರು.

ಗುರುಪುರದಿಂದ ಸಮಿತಿಯವರು ಮೂಡಬಿದ್ರೆಗೆ ಹೋಗಿ ಶ್ರೀ ಚಂದಪ್ಪ ಇಂದ್ರರೇ ಮೊದಲಾದವರನ್ನು ಕಂಡು ಚರ್ಚೆ ನಡಿಸಿದರು. ಶ್ರೀ ಧರಣಪ್ಪ ಅಧಿಕಾರಿ, ಶ್ರೀ ಶ್ರೀಧರ ಪಡಿವಾಳರೇ ಮೊದಲಾದವರು, ಹಿಂದುಕೋಡಿನೊಂದಿಗೆ ಅಳಿಯಸಂತಾನಿಗರನ್ನು ಸಂಪೂರ್ಣವಾಗಿ ಸೇರಿಸುವ ಪ್ರಯತ್ನಕ್ಕೆ ಸಂಪೂರ್ಣ ಬೆಂಬಲವಿತ್ತಿರುವರು.

ಮೂಡಬಿದ್ರೆಯಿಂದ ಸಮಿತಿಯವರು ಕಾರ್ಕಳಕ್ಕೆ ಹೋಗಿ ಶ್ರೀ ಪೆರೋಡಿ ರಾಮ ಸೆಟ್ಟಿ ವಕೀಲ್, ಶ್ರೀ ಪದ್ಮರಾಜ ಅರಿಗರು ಜೈನ ವಕೀಲ್, ಮೊದಲಾದವರೊಡನೆ, ಹಿಂದುಕೋಡು ಮತ್ತು ಅಳಿಯಸಂತಾನ ಕಾನೂನಿನ ಕುರಿತು ಚರ್ಚಿಸಿದರು. ಶ್ರೀ ಪದ್ಮರಾಜ ಅರಿಗರು, ಅಳಿಯಕಟ್ಟನ್ನು ಸಂಪೂರ್ಣವಾಗಿ ತೆಗೆದುಹಾಕಿ, ಅಳಿಯ ಸಂತಾನಿಗರೆಲ್ಲರೂ ಹಿಂದುಕೋಡಿಗೇನೇ ಸೇರುವುದರಿಂದಲೇ ಅವರ ಪ್ರಗತಿಯು ಸಾಧ್ಯವೆಂದು ಅಭಿಪ್ರಾಯವಿತ್ತು ಸಮಿತಿಯವರ ಪ್ರಯತ್ನಕ್ಕೆ ಸಂಪೂರ್ಣ ಬೆಂಬಲವೀಯುವ ಭರವಸೆ ಕೊಟ್ಟರು.

ಕಾರ್ಕಳದಿಂದ ಸಮಿತಿಯವರು ಅಜೆಕಾರಿಗೆ ಹೋಗಿ ಅಲ್ಲಿಯ ಪ್ರಮುಖ ಭೂಮಾಲಿಕರಾದ ಶ್ರೀ ನಾರಾಯಣ ಅಧಿಕಾರಿ ಮತ್ತು ಡಾ ಯು. ಕೃಷ್ಣ, ಶ್ರೀ ಎ. ಗೋಪಾಲ ಶೆಟ್ರೀ ಮೊದಲಾದವರೊಡನೆ ಅಭಿಪ್ರಾಯ ವಿನಿಮಯ ಮಾಡಿದರು. ಆ ಮೇಲೆ ಮುನಿಯಾಲಿಗೆ ಹೋಗಿ ಶ್ರೀಗಳಾದ ನಾರಾಯಣ ಆಜಿಲರು, ಮುದ್ರಾಡಿ ಕೃಷ್ಣ ಶೆಟ್ರೀ ಮೊದಲಾದವರೊಡನೆ ಮಾತುಕತೆ ನಡೆಸಿದರು. ಇಲ್ಲಿಂದ ಮುದ್ರಾಡಿಗೆ ಹೋಗಿ ಶ್ರೀ ನಾಗಪ್ಪ ಹೆಗ್ಗಡೆಯವರು ಮತ್ತು ಇನ್ನು ಕೆಲವರನ್ನು ಕಂಡು ಮಾತಾಡಿ ಹಾಲಾಡಿಗೆ ತೆರಳಿದರು. ಅಲ್ಲಿ ನೆರೆಕರೆಯ ಗ್ರಾಮಗಳ ಅಳಿಯಸಂತಾನಿಗರ ಸಭೆಯನ್ನು ಶ್ರೀ ಹಾಲಾಡಿ ಮಹಾಬಲ ಶೆಟ್ರು ನಡಿಸಿ ಸಮಿತಿಯವರಿಗೆ ಉತ್ಸಾಹಪರ ಸ್ವಾಗತವಿತ್ತರು. ಹಾಲಾಡಿಯಲ್ಲಿ ನೆರೆದವರೊಡನೆ ಅಭಿಪ್ರಾಯ ವಿನಿಮಯ ಮಾಡಿದ ಮೇಲೆ ಸಮಿತಿಯವರು ಕುಂದಾಪುರಕ್ಕೆ ತೆರಳಿ ಅಲ್ಲಿ ಶ್ರೀಗಳಾದ ಡಾ। ಬಿ. ಭುಜಂಗ ಹೆಗ್ಡೆ, ಬಿ. ರಾಮಣ್ಣ ಹೆಗ್ಡೆ, ಕೊಳ್ಕೆಬೈಲ್ ಸಂಜೀವ ಶೆಟ್ಟಿ ವಕೀಲ್, ವೈ. ಮಂಜಯ್ಯ ಶೆಟ್ಟಿ, ವಕೀಲ್, ಕೊಳ್ಕೆಬೈಲ್ ಸೂರಪ್ಪ ಶೆಟ್ಟಿ, ವಕೀಲ್, ಬಿ. ಮಂಜಯ್ಯ ಹೆಗ್ಡೆ ವಕೀಲ್ ಮೊದಲಾದವರ ಅಭಿಪ್ರಾಯ ಪಡೆದರು.

ತಾ. ೩೧ನೇ ಶನಿವಾರ ಅಪರಾಹ್ನ ಸಮಿತಿಯವರು ಬ್ರಹ್ಮಾವರಕ್ಕೆ ಬಂದು ಶ್ರೀ ಬಿ. ಜಗಜ್ಜೀವನದಾಸ್ ಶೆಟ್ರೀ ಮೊದಲಾದವರೊಡನೆ ಮಾತಾಡಿ ಸಂಜೆ ಉಡುಪಿಗೆ ಬಂದು ಅಲ್ಲಿಂದ ಪರ್ಕಳ, ಹಿರಿಯಡ್ಕಗಳಿಗೆ ಹೋಗಿ ಅಲ್ಲಿ ಡಾ। ಚಂದಪ್ಪ ಹೆಗ್ಡೆಯವರೇ ಮೊದಲಾದವರನ್ನು ಕಂಡು ಮಾತಾಡಿದರು. ಉಡುಪಿಯಲ್ಲಿ ಶ್ರೀಗಳಾದ ಬಿ. ಶೀನಪ್ಪ ಹೆಗ್ಡೆ ವಕೀಲ್, ಕೆ. ಸದಾಶಿವ ಶೆಟ್ಟಿ, ವಕೀಲ್, ಕೆ. ಭೋಜರಾಜ ಶೆಟ್ಟಿ ವಕೀಲ್, ಬಿ. ಹಿರಿಯಣ್ಣ ಹೆಗ್ಡೆ ವಕೀಲ್, ಕೆ. ಸಂಜೀವ ಶೆಟ್ಟಿ ಬಿ. ಎ., ಎಲ್. ಟಿ. ಮೊದಲಾದವರೊಡನೆ ಮಾತುಕತೆ ನಡಿಸಿ ತಾ. ೨೫ನೇ ಆದಿತ್ಯವಾರ ಪೂರ್ವಾಹ್ನ ಉದ್ಯಾವರಕ್ಕೆ ಹೋಗಿ ಸಾವ್ಕಾರ್ ಪದ್ಮನವರೇ ಮೊದಲಾದವರೊಡನೆ ಮಾತಾಡಿ ಸಮಿತಿಯವರು ಕಟಪಾಡಿಗೆ ಹೋದರು ಅಲ್ಲಿ ಶ್ರೀಗಳಾದ ಕೆ. ಮುದ್ದು ಸುವರ್ಣ ಕೆ. ಮಹಾಬಲ ಹೆಗ್ಡೆ ವಕೀಲ್, ಬಿ. ಸುಬ್ಬಯ್ಯ ಹೆಗ್ಡೆಯವರೇ ಮೊದಲಾದವರೊಡನೆ ಅಭಿಪ್ರಾಯವಿನಿಮಯ ಮಾಡಿದರು.

ಮಧ್ಯಾಹ್ನ ಶಿರ್ವಕ್ಕೆ ಹೋಗಿ ಶ್ರೀ ಮುದ್ದು ಶೆಟ್ರ ನೇತೃತ್ವದಲ್ಲಿ, ಆಸುಪಾಸಿನ ಅಳಿಯ ಸಂತಾನಿಗರ ಸಭೆ ನಡೆಯಿತು. ಶ್ರೀಗಳಾದ ಶಂಕರಾಳ್ವರು ಮತ್ತು ಕೆ. ಕೆ. ಶೆಟ್ರು, ಹಿಂದುಕೋಡಿಗೆ ಈ ಸಂದರ್ಭದಲ್ಲೇ ಅಳಿಯ ಸಂತಾನಿಗರು ಸಂಪೂರ್ಣವಾಗಿ ಸೇರುವ ಅವಶ್ಯಕತೆಯನ್ನು ವಿವರಿಸಿದರು. ಡಾ। ಕೆ. ಕೆ. ರೈ ಮತ್ತು ಡಾ। ವೈ. ರಾಜು ಶೆಟ್ರನ್ನು ಕಂಡು ಸಮಿತಿಯವರು ಪಡುಬಿದ್ರೆಗೆ ಹೋದರು. ಶ್ರೀ ಕರಿಯಣ್ಣ ಶೆಟ್ರು ಮತ್ತು ಡಾ। ಶ್ರೀನಿವಾಸ ಶೆಟ್ರು ಸಮಿತಿಯವರನ್ನು ಉತ್ಸಾಹದಿಂದ ಸ್ವಾಗತಿಸಿದರು. ಪಡುಬಿದ್ರೆಯಲ್ಲಿ ಸಭೆ ಮುಗಿಸಿ ಸಮಿತಿಯವರು ಮುಲ್ಕಿಗೆ ಹೋಗಿ ಅಲ್ಲಿಯ ಬಿಲ್ಲವ ಸಮಾಜ ಮಂದಿರದಲ್ಲಿ ಸಭೆ ನಡಿಸಿದರು. ಶ್ರೀಗಳಾದ ಕೆ. ರಂಗ, ಚೆನ್ನಯ ಪೂಜಾರಿಗಳೇ ಮೊದಲಾದವರು ಸಮಿತಿಯನ್ನು ಸ್ವಾಗತಿಸಿದರು. ಮುಲ್ಕಿಯ ಸಭೆ ಮುಗಿಸಿ ಸಮಿತಿಯವರು ಸುರತ್ಕಲ್ಲಿನ ಆಹಾರಸಂಬಂಧವಾದ ಸಭೆಯಲ್ಲಿ ಭಾಗವಹಿಸಿ ಶ್ರೀ ವಿಠ್ಠಲ ಶೆಟ್ರು ಮೊದಲಾದ ಅಳಿಯ ಸಂತಾನಿಗರೊಡನೆ, ಹಿಂದುಕೋಡಿಗೆ ಅಳಿಯ ಸಂತಾನಿಗರನ್ನು ಸೇರಿಸುವ ಕುರಿತು ಮಾತುಕತೆ ನಡಿಸಿದರು.

ಸಮಿತಿಯವರು ಸದ್ಯದಲ್ಲೇ ಮಂಗಳೂರು, ಪುತ್ತೂರು ಮತ್ತು ಕಾಸರಗೋಡು ತಾಲೂಕುಗಳಲ್ಲಿ ಸಂಚರಿಸಲಿರುವರು. ಮತ್ತು ಸುಮಾರು ಮೇ ತಿಂಗಳ ಆದಿಯಲ್ಲಿ ದಿಲ್ಲಿಗೆ ಡೆಪ್ಯುಟೇಶನ್ ಹೋಗಲಿರುವರು.

ಸ್ವಲ್ಪ ಬಂಡವಾಳದಲ್ಲಿ
ಒಂದು ಉಪಯುಕ್ತ ಹಾಗೂ ಲಾಭಕರ ಉದ್ಯೋಗ.
ಸೋ ಮಿಲ್, ಎಣ್ಣೆಯ ಮಿಲ್ ಅಥವಾ ಟಿನ್ ಯಾ ತಗಡಿನಿಂದ ಅನೇಕ ವಸ್ತುಗಳನ್ನು ಸುಲಭದಲ್ಲಿ ತಯಾರಿಸಿರಿ.
ವಿವರದ ಬಗ್ಗೆ ಬರೆಯಿರಿ:
The Vijay Engineering Co. Ltd
Mazagaon, Bombay 10.

ವಿವಿಧ ಪಾತ್ರೆಗಳು



ಯಾವತ್ತೂ ವಿಧದ ಬೆಳ್ಳಿ, ತಾಮ್ರ, ಹಿತ್ತಾಳೆ, ಕಂಚು ಮೊದಲಾದುವುಗಳ ವಿವಿಧ ಪಾತ್ರೆಗಳೂ ಸಾಮಾನುಗಳೂ ರಖಂ ಆಗಿಯೂ ಚಿಲ್ಲರೆಯಾಗಿಯೂ ದೊರೆಯುತ್ತವೆ.
ಕಲ್ಯಾಣಜಿ ವ್ಯಾಪಾರಾಲಯ,
ರಥಬೀದಿ, ಉಡುಪಿ

ಸ್ವೀಕಾರ-ವಿಮರ್ಶೆ

೧ ಕನ್ನಡ ಸಾಹಿತ್ಯ ಮತ್ತು ಸಂಸ್ಕೃತಿ

(ಸಾಹಿತ್ಯ ಮತ್ತು ಜೀವನ—ಭಾಗ ೨)

ಲೇಖಕರು:—ಶ್ರೀ ಅ. ನ. ಕೃಷ್ಣರಾಯರು. ಪ್ರಕಾಶಕರು: ಆನಂದ ಬ್ರದರ್ಸ್, ಬೆಂಗಳೂರು. 2

ಕನ್ನಡ ಸಾಹಿತ್ಯದ ನಾನಾಮುಖ ಪ್ರಗತಿಯನ್ನು ಶ್ರೀ ಅ. ನ. ಕೃಷ್ಣರಾಯರು ವಿಮರ್ಶೆ ಮಾಡಿದ್ದಾರೆ. ಆಧುನಿಕ ಸಾಹಿತ್ಯಗಳ ಕುರಿತು ಹೆಚ್ಚಾಗಿ ವಿಮರ್ಶೆ ಮಾಡಲಾಗಿದೆ, ಸಿಂಹಾವಲೋಕನದಲ್ಲಿ ಕನ್ನಡದ ಉತ್ತಮ ಹಾಗೂ ಹಿರಿಯ ಬರಹಗಾರರ ಬರಹ, ವ್ಯಕ್ತಿತ್ವಗಳ ಪರಿಚಯವಿದೆ. ಸಾಹಿತ್ಯಾಧಿಪತಿಯು ಬಲಾತ್ಕಾರದಿಂದ ಬರತಕ್ಕದ್ದಲ್ಲ ದೀರ್ಘ ಪ್ರಯತ್ನ, ಆಳವಾದ ಅನುಭವ ಮೊದಲಾದವುಗಳಿಂದಲೇ ರಸಗ್ರಾಹಿಯಾದಾನೆಂದು 'ರಸಾನುಭವ'ದಲ್ಲಿ ವಿಶೇಷಿಸಿದ್ದಾರೆ. ನಮಗೆಂತಹ ಸಾಹಿತ್ಯ ಬೇಕು? ಎಂದು ಹೇಳುವಲ್ಲಿ ಹೊಸ ಸಾಹಿತ್ಯಗಳ ವಿಚಾರ ವಿಮರ್ಶೆ ಚೆನ್ನಾಗಿ ನಡೆದಿದೆ. ಪ್ರಗತಿಶೀಲರು ಕನ್ನಡದ ಸಾಹಿತ್ಯವನ್ನು ಜೀವಂತವಾಗಿ ಉಳಿಸಿದ್ದಾರೆನ್ನುವವಾದ ಅಷ್ಟು ಸಮರ್ಪಕವಾಗಿಲ್ಲ. ಸುಮಾರು ನಾಲ್ಕೈದು ವರ್ಷಗಳ ಕೆಳಗೆ 'ಪ್ರಗತಿಶೀಲರು' ಎಂದು ಮುದ್ರೆಯೊತ್ತಿಕೊಂಡು ಹಲವರು ಸಾಹಿತ್ಯದಲ್ಲಿ ಕ್ರಾಂತಿಯಬ್ಬಿಸಿದರು. ತಾವು ನಾದಿಸುತ್ತಿರುವಂತ ಸದ್ಯದ ಸ್ಥಿತಿಯನ್ನು ಚಿತ್ರಿಸುವ ಸಾಹಿತ್ಯಗಳನ್ನು ಒದಗಿಸಿಕೊಟ್ಟರು. ಅವು ಹೆಚ್ಚಾಗಿ ಬಲಾತ್ಕಾರವಾಗಿ ತಾತ್ಕಾಲಿಕ ಸಮಸ್ಯೆಗಳ ಕುರಿತು ಬರೆದವುಗಳಾಗಿದ್ದು ನಿರ್ಜೀವ ಸಾಹಿತ್ಯಗಳೇ ಆಗಿದ್ದವು. 'ಪ್ರಗತಿಶೀಲ' ಎಂದು ಹೊರಬಂದ ಸಾಹಿತ್ಯಗಳಲ್ಲಿ ಈಹಿಂದೆ ಬರೆದ ಹೆಸರಾದ ಸಾಹಿತಿಗಳ ಕಾದಂಬರಿಯ ಪ್ರಗತಿಯ ಲಕ್ಷಣ ಕಂಡುಬಂದಿಲ್ಲ.

'ಪ್ರಗತಿಶೀಲ' ಎನುವ ಮುದ್ರೆಯೊಂದೇ ಅದನ್ನು ಸೂಚಿಸಬೇಕಾಗಿತ್ತು. ಪ್ರಗತಿಶೀಲ ಸಂಘದಿಂದ ಪ್ರಕಟಗೊಂಡ 'ರಸಋಷಿ'ಯನ್ನು ಉತ್ತಮ ಕಾವ್ಯವೆಂದು ತೋರಿಸುವ ಪ್ರಯತ್ನದಲ್ಲಿ ಪ್ರಗತಿಶೀಲ ಸಾಹಿತ್ಯದ ಪ್ರಚಾರೋದ್ದೇಶದ ಹೊರತು, ಬೇರಾವ ಮಹತ್ವವೂ ಅದರಲ್ಲಿಲ್ಲ. ಪ್ರಗತಿಶೀಲ ಸಾಹಿತ್ಯ ಎಂದೋ ಬಂದಿತ್ತು; ಈಗಲೂ ಬರುತ್ತಲಿದೆ ಅ. ನ. ಕೃಷ್ಣರಾಯರು ಪ್ರಗತಿಶೀಲರಾಗುವ ಮುನ್ನವೇ ಅವರ ಸಾಹಿತ್ಯದಲ್ಲಿ ಪ್ರಗತಿಶೀಲಗುಣ ಬಂದು ಹೋಗಿದೆ. ಆದರೆ ನಡುವೆ ಏನಕೇನ ಪ್ರಕಾರೇಣ ಪ್ರಸಿದ್ಧಿಗೆ ಬರುವ ಉದ್ದೇಶದಿಂದ ಹೊರಟ ಕೆಲವು 'ಪ್ರಗತಿಶೀಲ'ವೆಂಬುದು ಅಂತಃಸಾರವನ್ನು ಉತ್ತಮ ಆದರ್ಶವೆಂದೂ ಕನ್ನಡ ಸಾಹಿತ್ಯದಲ್ಲೊಂದು ಹೊಸ ಅಧ್ಯಾಯವೆಂದೂ, ಎತ್ತಿಹಿಡಿಯುವ ದಕ್ಷ ಅ. ನ. ಕೃಷ್ಣರಾಯರಂತವರು ಮನಸೋತುದು ಸೋಜಿಗದ ಸಂಗತಿ! ಇಂಥೊಂದು ವಿಚಾರವನ್ನು ಬಿಟ್ಟರೆ ಪುಸ್ತಕ ಪ್ರಬಂಧಗಳೂ ವಿಚಾರಪೂರ್ಣವಾದವುಗಳೆನ್ನಬೇಕು. ಸಾಹಿತ್ಯ ಸಮೀಕ್ಷೆಯು ಕನ್ನಡದ ದೃಷ್ಟಿಕೋನದಿಂದ ಉಪಯುಕ್ತ ವಿಚಾರಗಳನ್ನು ಸುಂದರವಾಗಿ ಎತ್ತಿ ತೋರಿಸಿದ್ದಾರೆ ಲೇಖಕರು. ಕೈಲಾಸಂ ಕುರಿತಾದ ವಿಚಾರವೂ, ಸಜೀವ ಸಾಹಿತ್ಯ, ಸಂಸ್ಕೃತಿಯ ಸಂದೇಶ—ಈ ಮೂರು ಲೇಖನಗಳು ಮನನೀಯವಾದಂತವುಗಳು.

೨ ಅವಳ ಹುಚ್ಚು

(ಆರು ಕತೆಗಳ ಸಂಗ್ರಹ) ಲೇಖಕರು: ದಿವಂಗತ ಜಿ. ಯರ್ಮಾಳ್ ರಾಮಕೃಷ್ಣ ಶೆಟ್ಟರು ಪ್ರಕಾಶಕರು: ಕನ್ನಡ ಪ್ರಪಂಚ ಪ್ರಕಾಶನ, ಗಣಪತಿ ಹೈಸ್ಕೂಲ್ ರಸ್ತೆ ಮಂಗಳೂರು. ಬೆಲೆ 0-11-0

ಈ ಸಂಗ್ರಹದಲ್ಲಿಯ ಆರು ಕತೆಗಳೂ ಹೆಣ್ಣಿನ ಬಾಳಿನ ಕುರಿತಾಗಿ ಹೇಳಿದಂಥವು ಪ್ರತಿಯೊಂದು ಕತೆಯಲ್ಲೂ ಹೆಣ್ಣು ಮನಸ್ಸಿನ ವ್ಯಾಕುಲತೆಯಿದೆ. 'ಅವಳ ಹುಚ್ಚು' ಸಂಗ್ರಹದಲ್ಲಿಯ ಉತ್ತಮ ಕತೆ. ಕಥಾಸಂವಿಧಾನ ಚೆನ್ನಾಗಿದೆ 'ಇಬ್ಬರು ಚಿತ್ರಗಾರರು' ಭಾವನಾತ್ಮಕ ಕತೆ ಕಲೆಗಾರನೊಬ್ಬನ ಮನಸ್ಸಿನ ಮೇಲಾಗುವ ಪ್ರಕೃತಿ ಲೀಲೆಗಳವು! ಆದರೆ ಕತಾವಸ್ತುವಿನಲ್ಲಿ ಜೀವವಿಲ್ಲ 'ರೂಪಗ್ರಾಹಿ'ಯಲ್ಲಿ ಸ್ವಾಭಾವಿಕ ಪ್ರೇಮದ ಚಿತ್ರಣವಿದೆಯಾದರೂ ಕತೆಯನ್ನು ಅನವಶ್ಯಕವಾಗಿ ದೀರ್ಘ ಬೆಳೆಸಿದಂತೆ ಕಾಣುತ್ತದೆ. 'ನಾಗರಿಕ ಹೆಣ್ಣು' ಕತೆಯಲ್ಲಿ ಉಳಿದ ಕತೆಗಳಿಗಿಂತ ಹೆಚ್ಚಿನ ಕಾವಿದೆ 'ಮನು ಸಂತೆ' ಸಂಸಾರದೊಳಗಿನ ಒಂದು ಸುಂದರ ಚಿತ್ರ. ಆರು ಕತೆಗಳಲ್ಲಿಯೂ ಕತಾವಸ್ತುವಿಗೆ ಹೆಚ್ಚಿನ ಪ್ರಾಧಾನ್ಯವಿದೆ, ಶೈಲಿ, ಸನ್ನಿವೇಶ ಚಿತ್ರಣಗಳಿಗೇನೇ ಮುಖ್ಯಸ್ಥಾನವನ್ನು ಕಲ್ಪಿಸಿಕೊಡಲಾಗಿದೆ. ಹೆಣ್ಣಿನ ಕೊರಗನ್ನು ಚಿತ್ರಿಸುವಲ್ಲಿ ಲೇಖಕರು ಯಶಸ್ವಿಯಾಗಿದ್ದಾರೆ ಹಲವು ಕಡೆ ಮಾತು ಬಹಳವೆನಿಸುತ್ತದಾದರೂ ಮಾತಿನಲ್ಲೊಂದು ಮಾಧುರ್ಯವಿದೆ. ಅಂತೂ 'ಅವಳ ಹುಚ್ಚು' ಒಮ್ಮೆ ಓದಬೇಕಾದ ಕತಾಸಂಗ್ರಹ.

೩ ಗುಲಾಬಿ

(ಹನ್ನೊಂದು ಕತೆಗಳ ಸಂಗ್ರಹ) ಲೇಖಕರು: ಶ್ರೀ ಟಿ. ವ. ಸಾಬಳೇಶ್ವರಂ ಭಟ್ಟರು. ಪ್ರಕಾಶಕರು: ಜಲಂಧರ ಪ್ರಕಟನಾಲಯ ಚಾಮರಾಜ ಪೇಟೆ, ಸಾಗರ ಬೆಲೆ 0-12-0

ಶ್ರೀ ಭಟ್ಟರ ಕತೆಗಳ ಕುರಿತು ಏನು ಹೇಳಬೇಕೆಂದೂ ತೋಚುವದಿಲ್ಲ. ಅವರಲ್ಲಿ ಬರೆಯುವ ಹುಮ್ಮಸ್ಸಿದೆ ಕತಾವಸ್ತುಗಳಿವೆ. ಜೊತೆಗೆ ಸ್ವಲ್ಪ ಸಮಯ ಕಡೆದು ಬರೆಯುವ ಸಹನೆ ಇದ್ದರೊಳ್ಳೆಕೆಂದು ನಮಗನ್ನಿಸುತ್ತದೆ. "ಪ್ರಿಯೇ ಹೀಗೇಕೆ ಮಾಡುವೆ ಒಂದು ಮಾತನ್ನೂ ಆಡುವುದಿಲ್ಲವೇ?" "ಹೇ ಪ್ರಿಯಾ, ನಾಥಾ, ನನ್ನಲ್ಲಿ ಪ್ರೀತಿಯುಳ್ಳರುವಿರೆಂದು ನಾನು ಹೇಗೆ ನಂಬಲಿ!" ಈ ರೀತಿಯ ಸಂಭಾಷಣೆಗಳು ಹತ್ತನೆಯ ಶತಮಾನದ ಕೆಲವು ನಾಟಕಗಳ ಸಂಭಾಷಣೆಯ ನೆನಪನ್ನು ತರುತ್ತವೆ. ಮುನ್ನುಡಿಕಾರರಾದ ಶ್ರೀ ಬ. ತಿ. ಲಿಂಗಪ್ಪನವರು "ಗುಲಾಬಿಗುಟ್ಟು ಗಾಳಿಗೆ ಗೊತ್ತಾಗುತ್ತೆ" ಎಂದು ಹೇಳಿ ಅದರ ಗುಣ ಓದುಗರೇ ನೋಡಿಕೊಳ್ಳಲೆಂದ ತನ್ನ ಭಾರವನ್ನು ತಪ್ಪಿಸಿಕೊಂಡಿದ್ದಾರೆ. ಹೊತ್ತು ಹೋಗದವರು ವಿನೋದಕ್ಕಾಗಿ ಇದನ್ನು ಎತ್ತಿಕೊಳ್ಳಬಹುದು.

೪ ವಿಮರ್ಶಕ (ರೈತ ಸಮ್ಮೇಳನ ವಿಶೇಷಾಂಕ)

ಸಂಪಾದಕ ಮತ್ತು ಪ್ರಕಾಶಕರು ನಂದಳಿಕೆ ವಿಠ್ಠಲದಾಸ್, ವಿಮರ್ಶಕ ಕಾರ್ಯಾಲಯ, ಉಡುಪಿ. ಬಿಡಿ ಸಂಚಿಕೆ ಬೆಲೆ ರೂ. 0-8-0.

'ವಿಮರ್ಶಕ' ರೈತ ಸಮ್ಮೇಳನ ವಿಶೇಷ ಸಂಚಿಕೆಯ ಕುರಿತು ಹೇಳುವದಕ್ಕೆ ತುಂಬ ಅಭಿಮಾನವೆನಿಸುತ್ತದೆ. ಇರುವ ನಲುವತ್ತು ಪುಟಗಳನ್ನು ಉತ್ತಮ ವಿಚಾರಗಳಿಗಾಗಿ ಮೀಸಲಾಗಿಟ್ಟು ಪತ್ರಿಕಾಧರ್ಮವನ್ನು ಕಾಪಾಡಿಕೊಂಡ ಸಂಪಾದಕರನ್ನು ಅಭಿನಂದಿಸಬೇಕಾಗಿದೆ. ಆದರೆ ಬಸವರಾಜ ಕಟ್ಟಿಮನಿಯವರ 'ತಾಯಿಯ ಶಾಪ' ದು. ರಾಜೇಪನವರ 'ಬಾಲಗೇಣಿ ರದ್ದಾಗಬೇಕು' ಈ ಎರಡು ಬರಹಗಳ ಕುರಿತು ನಾವೆರಡು ಮಾತು ಹೇಳಲೇಬೇಕಾಗುತ್ತದೆ. ಪ್ರಗತಿಶೀಲವೆಂದು ಸಂಪಾದಕರ ಮುದ್ರೆಯೊತ್ತಿದ ಈ ಕತೆ ಬರಿಯ ಬಯಲ ಭ್ರಾಂತಿಯದಾಗಿರುತ್ತದೆ. ಈ 'ಸಂತಿಭಾಷೆ' (Telegram language)ಯ ಕತೆಯು ಪ್ರಗತಿಶೀಲ ಸಾಹಿತ್ಯದ ಮಾದರಿಯೆಂದು ಎತ್ತಿಹಿಡಿಯುವ ಉದ್ದೇಶವಾದರೂ ಪಕ್ಷಪಾತದ ಕತೆಯೆಂಬ ಕಾರಣವಾಗಿರಬೇಕು. ದು. ರಾಜೇಪನವರು ಬಾಲಗೇಣಿ ಪದ್ಧತಿ ರದ್ದಾಗಬೇಕೆಂದು ವಾದಿಸುವಲ್ಲಿ ಇಲ್ಲಿ ರೈತ ಧನಿಕರೊಳಗಿನ ಸಂಬಂಧವನ್ನು ಅತ್ಯಾಕಾರ ಅಪಮಾನಗಳಲ್ಲಿ ಬಿಳಿಯರಿಗೂ ಕರಿಯ ನೀಗ್ರೋಗಳಿಗೂ ಇರುವ ದುಷ್ಟ ಗುಲಾಮ ಪದ್ಧತಿಯ ಸಂಬಂಧಕ್ಕೆ ಹೋಲಿಸಿದ್ದಾರೆ. 'ಶೋಷಕ' 'ದಬ್ಬಾಳಿಕೆ' 'ಅರಸುತನ' 'ಅಸುರೀಶಕ್ತಿ' 'ರಕ್ತಪಿಪಾಸ' 'ಮದನರಾಜ್ಯ' ಇಂತಹ ಮಾಮೂಲು ಶಬ್ದಗಳಿಂದ ಬಿಚ್ಚಿರುವಷ್ಟು ಭಯಾನಕ ಚಿತ್ರ ದ. ಕ. ಜಿಲ್ಲೆಯಲ್ಲಿಲ್ಲ. ಒಬ್ಬ ಅನುಭವವುಳ್ಳ ವ್ಯಕ್ತಿಯೇ ಇಂತಹ ಕಲಹ ಕುತೂಹಲವನ್ನೆಬ್ಬಿಸುವದು ನಿಜವಾಗಿಯೂ ಶೋಚನೀಯ ವಿಚಾರ. ಇದು ವಸ್ತುಸ್ಥಿತಿಗೆ ವಿರೋಧವಾದ ಪ್ರಚಾರ! ತಪ್ಪನ್ನು ಹೇಳಬೇಕು, ವಿಧಾಯಕ ಟೀಕೆ ಅವಶ್ಯ ಬೇಕು. ಆದರೆ ಸತ್ಯದ ವಿಪರ್ಯಾಸವನ್ನು ಸ್ವಪಕ್ಷ ಸಮರ್ಥನೆಗಾಗಿ ಬಳಸಿಕೊಳ್ಳಬಾರದು. ಹತ್ತು ಪುಟಗಳನ್ನಾವರಿಸಿಕೊಂಡ ಈ ಲೇಖನದ ಬಹ್ವಂಶಗಳು ಮೇಲಿನ ಸಶಕ್ತವಾದ 'ಮಾಮೂಲು' ಶಬ್ದಗಳಿಂದಲೂ, ಅಪ್ರಾಸಂಗಿಕ ವಿಷಯಗಳಿಂದಲೂ ಕೂಡಿದ್ದಾಗಿರುತ್ತದೆ. 'ಪ್ರಚಾರ ಸಾಹಿತ್ಯದ ಸಮರ್ಥನೆ' 'ಆಚಾರ್ಯ ನರೇಂದ್ರದೇವ' 'ಬೀದಿಯ ಸೂಳೆ' 'ನಾವು ಗೆಲುವೆವು' 'ನಾಸಿಕ್ಕೆ ಬಂದೇಕೆ?' 'ಮಾನವ ಸಮಾಜವಾದಿ ಬರ್ನಾರ್ಡ್ ಶಾ' 'ಜನ್ನನ ಯಶೋಧರ ಚರಿತೆ' ಈ ಏಳು ಬರಹಗಳು ವಿಚಾರಪೂರ್ಣ ಬರಹಗಳಾಗಿವೆ. ಪ್ರೋ॥ ಶೆಟ್ಟಿಯವರ ಕಲಾಪೂರ್ಣವಾದ ಬರ್ನಾರ್ಡ್ ಶಾ ಚಿತ್ರವು ಸಂಚಿಕೆಗೆ ವಿಶೇಷ ಕಳೆಯನ್ನು ಕೊಟ್ಟಿದೆ. ಈಗಿನ ತಾತ್ಕಾಲಿಕ ಮನರಂಜನೆಯ ಕೀಳ್ಮಟ್ಟದ ಸಾಹಿತ್ಯಗಳಿಗೆಡೆಕೊಡದೆ ಮನನೀಯ ಲೇಖನಗಳನ್ನೊದಗಿಸಿಕೊಟ್ಟ ಸಂಪಾದಕ ನಂದಳಿಕೆ ವಿಠ್ಠಲದಾಸರನ್ನು ನಾವು ಅಭಿನಂದಿಸದಿರಲಾರೆವು.

—ಎಸ್ಸೆಲ್-

ಸಹಕಾರಿ ಸಂಘಗಳಿಗೆ—
ಮುನ್ಸಿಫ್ ಕೋರ್ಟುಗಳಿಗೆ—
ವರ್ಗದಾರರಿಗೆ—ಶಾಲೆಗಳಿಗೆ—
ಬೇಕಾಗುವ ರಿಜಿಸ್ಟರುಗಳು,
ರಶೀದಿ ಪುಸ್ತಕಗಳು,
ಫಾರ್ಮುಗಳು, ಎಕೌಂಟ್
ಪುಸ್ತಕಗಳು ದೊರೆಯುತ್ತವೆ.

ನವಯುಗ ಪ್ರೆಸ್ ಉಡುಪಿ.

ಮಹಾತ್ಮಾ ಗಾಂಧೀ ಮೆಮೋರಿಯಲ್ ಕಾಲೇಜ್, ಉಡುಪಿ.

ಉಡುಪಿಯಲ್ಲಿ ಸಹಾಯ ಮಾಡಿದವರು:

(ಕಳೆದ ಸಂಚಿಕೆಯಿಂದ ಮುಂದುವರಿಸಿದ್ದು)

ಶ್ರೀಗಳಾದ	ರೂ.
ವಿ. ವಿ. ಶ್ಯಾನುಭಾಗ	251
ಕೊಚ್ಚಿಕಾರ್ ಪಾಂಡುರಂಗ ಪೈ	251
ಕೆ. ಅನಂತ ಸಟ್ಟಿ	251
ನಾನಾಲಾಲ್ ಗೋವಿಂದಜಿ ವೈದ್ಯ ಎಂಡ್ ಸನ್ಸ್	251
ಪಾಂಗಾಳ ಗಣೇಶ ನಾಯಕ್	250
ಎಕ್ಸ್‌ಪ್ರೆಸ್ ಪ್ರಿಂಟರ್ಸ್ ಲಿಮಿಟೆಡ್	250
ದಿ ಉಡುಪಿ ಕೋಪರೇಟಿವ್ ಟೌನ್ ಬ್ಯಾಂಕ್ ಲಿ.	250
ದಿ ಪ್ರಭಾಕರ ಪ್ರೆಸ್ ಲಿಮಿಟೆಡ್	250
ತಿಮ್ಮಣ್ಣ ಸಟ್ಟಿಗಾರ	250
ವಾಸುದೇವ ಜೋಗಪ್ಪ ಶೆಣೈ	205
ಟಿ. ರಾಮಕೃಷ್ಣ ಪೈ	200
ಕೆಪ್ಟನ್ ಎಸ್. ವೆಂಕಟ್ರಾವ್	200
ಅಮ್ಮುಂಜೆ ನಾರಾಯಣ ನಾಯಕ್	155
ಬಿ. ಕೆ. ಕೃಷ್ಣರಾವ್	151
ದೇಲಂಜೆ ಕೃಷ್ಣಯ್ಯ ಹೆಗ್ಡೆ	151
ಕೊಚ್ಚಿಕಾರ್ ಅಚ್ಯುತ ಪೈ	151
ಉಡುಪಿ ಕೋಪರೇಟಿವ್ ಸ್ಟೋರ್ಸ್ ಲಿಮಿಟೆಡ್	150
ಕುಂಜೂರು ರಾಮಕೃಷ್ಣ ರಾವ್	150
ವೆಂಕಟೇಶ ನಾಯಕ್, ಸುಖನಿವಾಸ	126

ಶ್ರೀಗಳಾದ	ರೂ
ಬಿ. ವಿಷ್ಣುಮೂರ್ತಿ ರಾವ್	126
ಎ. ಪಿ. ಕೃಷ್ಣರಾಜ	125
ಎ. ಆರ್. ಬರ್ನಾರ್ಡ್	125
ಕಲ್ಸಂಕ ನಾಗೇಶ ಪೈ ಎಂಡ್ ಬ್ರದರ್ಸ್	101
ವೆಂಕಟಕೃಷ್ಣ ಕುಕ್ಕಿಲ್ಲಾಯ	101
[illegible]	101
ಎ. ಸರ್ವೋತ್ತಮ ಕಿಣಿ	101
ಯು. ಶಿವರಾಯ ಶೇಟ್	101
ಪು. ಪುರುಷೋತ್ತಮಾಚಾರ್ಯ	101
ಶ್ರೀಮತಿ ಬಿ. ರಾಜಮ್ಮ	101
„ ಯಶೋದಮ್ಮ	101
„ ಅಂಬುಜಾಬಾಯಿ	101
ಶ್ರೀಗಳಾದ	
ಪರೋಡಿ ಪಾಂಡುರಂಗ ಪೈ ಅಂಡ್ ಬ್ರದರ್ಸ್	101
ಎಸ್. ಎಸ್. ಸೋಮಯಾಜಿ	101
ಅನಂತರಾಮಾಚಾರ್ಯ	101
ಯು. ಕೇಶವ ಕಾಮತ್	101
ಗೋರೆಕಾಳ ಪುಟ್ಟಣ್ಣ ಭಟ್	101
ಕೆ. ಶ್ರೀನಿವಾಸಾಚಾರ್ಯ	101
ಪಿ. ರಂಗನಾಚಾರ್ಯ	101
ಕೊಚ್ಚಿಕಾರ್ ವಾಸುದೇವ ಪೈ	101
ಅಲೆವೂರು ರಾಮಪ್ಪಯ್ಯ	101

ಶ್ರೀಗಳಾದ	ರೂ.
ಎಮ್. ಶ್ರೀನಿವಾಸ ಭಾಗವತ್	101
ಕೆ. ಶೀನ ಸಟ್ಟಿಗಾರ	101
ಎಸ್. ವೆಂಕಟರಾಜ	101
ಕೆ. ಕೆ. ಶ್ಯಾನುಭಾಗ ಎಂಡ್ ಸನ್ಸ್	101
ಕುಲಿಯಾಡಿ ದಯಾನಂದ ಪೈ ಎಂಡ್ ಕೊ.	101
ಕೊಚ್ಚಿಕಾರ್ ರಮಾನಾಥ ಪೈ	101
ಕಲ್ಸಂಕ ಶ್ರೀನಿವಾಸ ಪೈ	101
ಎಮ್. ಡಿ. ಕಾಮತ್, ಎಡ್ವೊಕೇಟ್	101
ಎಚ್. ತಿಮ್ಮಪ್ಪ ಹೆಗ್ಡೆ	101
ಪಾಂಗಾಳ ಗೋಪಾಲ ನಾಯಕ್	100
ಪರ್ಕಳ ರಾಮರಾಯ ಶೆಣೈ	100
ಸಿ. ರಾಯ ಬಲ್ಲಾಳ್, ಎಡ್ವೊಕೇಟ್	100
ಶ್ರೀಮತಿ ಪಡಿಯಾಡಿ ತುಂಗು ಸೇರಿಗಾರ್	100
Fl/Lt. ಯು. ಆರ್. ಆಚಾರ್ಯ	100
ಶ್ರೀಗಳಾದ	
ಬಿ. ಶೀನಪ್ಪ ಹೆಗ್ಡೆ, ಎಡ್ವೊಕೇಟ್	100
ಕೆ. ಜೆ. ಬಲ್ಲಾಳ್, ವಕೀಲ್	100
ಪಿ. ಬಿ. ಆಚಾರ್ಯ, ವಕೀಲ್	100
ಎಚ್. ಎಸ್. ಭಟ್ಟ	100
ಡಾ॥ ಕೆ. ಮೋಹನದಾಸ ಪೈ	100
ಶ್ರೀ ಎಮ್. ಎನ್. ಉಡುಪಿಕರ್	100

ತಾರೀಕು 12-4-51 ರಿಂದ

ವಾರದ ಭವಿಷ್ಯ

ತಾರೀಕು 19-4-51 ರವರೆಗೆ

ಮೇಷ—ಧನಲಾಭಪತಿಗಳಾದ ಶುಕ್ರಶನಿಗಳು ಸ್ವಕ್ಷೇತ್ರ ಉಚ್ಚಯ ಸ್ಥಾನಗತರಾಗಿರುವುದರಿಂದ ಈ ವಾರದಲ್ಲಿ ನಿಮ್ಮ ಆರ್ಥಿಕ ಸಂಪತ್ತು ಬಹುಮಟ್ಟಿಗೆ ಉತ್ತಮ ಮಟ್ಟಕ್ಕೆ ಬರಲಿದೆ. ಸದ್ವಿನಿಯೋಗದ ಸಲುವಾಗಿ ಕೆಲವಂಶ ಹಣವನ್ನು ವ್ಯಯಿಸುವಿರಿ. ಹೆಚ್ಚಿನ ಸಮಯವನ್ನು ಪರ್ಯಟನದಲ್ಲಿ ಕಳೆಯಬೇಕಾಗುವದು. ವಾಕ್ಕಲಹದ ನಿಮಿತ್ತ ತಿರಸ್ಕಾರ ವಂಚನೆಗಳಿಗೆ ಗುರಿಯಾದೀರಿ. ವಾರಾದಿಯ 2 ದಿನಗಳಲ್ಲಿ ಗೃಹಸುಖ, ವಿಜಯ, ಸ್ಥಾನಲಾಭವಿದೆ.

ವೃಷಭ—ದಿನದಿಂದ ದಿನಕ್ಕೆ ನಿಮ್ಮ ಗೃಹ ತಾಪತ್ರಯಗಳು ಹೆಚ್ಚುವವು. ಶತ್ರುಜನರ ಪೀಡೆಯಿಂದಾಗಿ ನಿಮ್ಮ ಹೆಚ್ಚಿನ ಕಾರ್ಯಗಳಿಗೆ ಭಂಗಬರುವದಾದರೂ ನಷ್ಟದಲ್ಲಿ ಬೀಳಲಾರಿರಿ. ಆರೋಗ್ಯವು ಕೆಡಲಿದೆ, ಮನೋರೋಗವು ಹೆಚ್ಚುವದು. ಆಪ್ತಮಿತ್ರರ ವಿರಹವುಂಟಾಗಲಿದೆ, ಶ್ರಮಜೀವಿಗಳಿಗೆ ದಿನ ಯಾಪನೆಯು ದುಃಸಹವಾದೀತು. ತಾ. 15, 16 ಇತರ ದಿನಗಳಿಗಿಂತ ಲೇಸಿರುವದು.

ಮಿಥುನ— ಇಂದಿನ ಗ್ರಹಸ್ಥಿತಿಯು ನಿಮಗೆ ತುಂಬಾ ಅನುಕೂಲವಾಗಿರುವದು. ಪ್ರತಿಯೊಂದು ಉದ್ಯಮದಲ್ಲಿಯೂ ನೆನೆದುದಕ್ಕಿಂತ ಅಧಿಕವಾದ ಫಲವು ಅನಾಯಾಸದಿಂದ ಲಭಿಸುವುದು. ಸಮಾಜದಲ್ಲಿ ಸ್ಥಾನಮಾನಗಳೂ ರಾಜಕೀಯ ಕ್ಷೇತ್ರದಲ್ಲಿ ವಿಜಯ, ಕೀರ್ತಿಗಳೂ ಲಭಿಸುವವು. ಇದರಿಂದ ಮನಸ್ಸಿಗೆ ನೆಮ್ಮದಿಯಿರದು. ತಾ. 12, 13, 17, 18 ವಿಜಯ, ಭೋಗ ಲಾಭದಾಯಿಗಳಾಗಿವೆ.

ಕರ್ಕಟ—ಯಾವ ಭಾಗದಲ್ಲಿ ನೋಡಿದರೂ ನಿಮಗೆ ಕುಂದುಕೊರತೆಗಳು ಕಾಣಿಸಲಾರವು. ನಿಮ್ಮ ಯಾವತ್ತು ಸಂಕಲ್ಪಗಳು ಏನೊಂದೂ ತರದ ವಿಘ್ನವಿದ್ರೋಹಗಳಿಲ್ಲದೆ ಅನಾಯಾಸದಿಂದ ಅಲ್ಪಾವಕಾಶದಲ್ಲೇ ಸಿದ್ಧಿಸಲಿವೆ. ಆರೋಗ್ಯ ಭಾಗ್ಯ ಆರ್ಥಿಕ ಸಂಪತ್ತುಗಳಿಂದ ಕೂಡಿದ ನಿಮಗೆ ದಿನಕಳೆದುದೇ ತಿಳಿಯಲೊಲ್ಲದು. ತಾ. 15, 16, ಈ ದಿನಗಳು ಸರ್ವೋತ್ಕೃಷ್ಟಗಳಾಗಿವೆ.

ಸಿಂಹ—ಸಕಲ ಗ್ರಹವೃಂದವೇ ನಿಮ್ಮ ಭಾಗಕ್ಕೆ ಪ್ರತಿಕೂಲವಾಗಿರುವದೀವಾರದಲ್ಲಿ. ಆದಕಾರಣ ಕನಸಿನಲ್ಲೂ ನೆನಸದ ಶೋಕ ತಾಪತ್ರಯಗಳು ನಿಮ್ಮನ್ನು ಪೀಡಿಸಲಿವೆ. ಕಫ, ವಾತ ದೋಷದಿಂದಾಗಿ ಆರೋಗ್ಯವು ಬಹ್ವಂಶ ಕೆಡುವದು. ಆದಾಯವು ಅಲ್ಪವಾಗಿದ್ದು ಅಧಿಕ ವ್ಯಯವಾಗುವುದರಿಂದ ಆರ್ಥಿಕ ಬಿಕ್ಕಟ್ಟಿಗೆ ಸಿಲುಕಿ ಪೇಚಾಡುವಿರಿ. ತಾ. 14, 15, 16 ಇವು ಅತೀವ ಕಷ್ಟದಾಯಿಗಳಿವೆ.

ಕನ್ಯಾ—ನಿಸರ್ಗತಃ ಸೌಮ್ಯರಾದ ಗುರು ಬುಧ ಶುಕ್ರರು ಮಾತ್ರ ನಿಮ್ಮ ಮಟ್ಟಿಗೆ ಅನುಕೂಲರಿರುವರು. ಆದರೂ ಆಯಕ್ಕಿಂತ ಅಧಿಕ ವ್ಯಯವಾದೀತು. ಮನೆಯಲ್ಲಿ ಪರಸ್ಪರ ಕಲಹವುಂಟಾದೀತು. ಶತ್ರುಜನರಿಂದ ಧನಮಾನಗಳಿಗೆ ಅಪಾಯವಿದೆ. ಚರ್ಮರೋಗಗಳು ಕಾಣಿಸಿಕೊಳ್ಳುವವು. ಆದರೂ ಗುರ್ವನುಗ್ರಹದಿಂದಾಗಿ ವಿಪತ್ತುಗಳಿಂದ ಅನಾಯಾಸವಾಗಿ ಪಾರಾಗುವಿರಿ. ವಾರಾದಿಯ 5 ದಿನಗಳು ಅನುಕೂಲವಾಗಿವೆ.

ತುಲಾ—ಶುಕ್ರಾಚಾರ್ಯರನ್ನುಳಿದು ಮಿಕ್ಕೆಲ್ಲಾ ಗ್ರಹರೂ ಪ್ರತಿಕೂಲರಾಗಿರುವ ಕಾರಣ ಬಹಳ ಕಷ್ಟದಿಂದ ವಾರವನ್ನು ಕಳೆಯಬೇಕಾಗುವದು. ವಿದ್ಯೋಪಜೀವಿಗಳ ಶ್ರಮಕ್ಕೆ ತಕ್ಕ ಫಲ ಲಭಿಸದು. ಕಾಯಕಷ್ಟ ಜೀವಿಗಳು ವ್ಯರ್ಥ ಪರಿಶ್ರಮವನ್ನು ಹೊಂದುವರು. ವ್ಯಾಪಾರಿ ವರ್ಗದವರ ಮಟ್ಟಿಗೆ ಈ ಕಾಲವು ತೃಪ್ತಿಕರವಿದೆ. ವಾರಾಂತ್ಯದ 4 ದಿನಗಳಲ್ಲಿ ಮಿತ್ರಭೇಟಿ ಸುಖಲಾಭಗಳು ಕಿಂಚಿತ್ ಕಾಣಿಸಬಹುದು.

ವೃಶ್ಚಿಕ—ಶುಕ್ಲಪಕ್ಷದ ಚಂದ್ರನಂತೆ ನಿಮ್ಮ ಅದೃಷ್ಟವು ದಿನೇದಿನೇ ವೃದ್ಧಿ ಹೊಂದುತಲಿದ್ದು ಇಂದೀಗ ಅತ್ಯುತ್ತಮ ಸ್ಥಿತಿಗೆ ಬಂದಿರುವುದು. ಯಾವ ಮಹತ್ಕಾರ್ಯವೇ ಇರಲಿ ಸುಲಭದಿಂದ ಕೃತಕೃತ್ಯರಾಗುವುದರಲ್ಲಿ ಸಂಶಯವಿಲ್ಲವು. ಬಂಧುಗಳು ಮಿತ್ರರು ಇವರ ನೆರವು ಉತ್ತಮವಿರುವದು. ಸಮಾಜದಲ್ಲೂ ರಾಜಸ್ಥಾನದಲ್ಲೂ ಸ್ಥಾನಮಾನಗಳು ಲಭಿಸುವವು. ವಾರಾಂತ್ಯವು ಅತ್ಯುತ್ತಮವಿದೆ.

ಧನು—ಈ ವಾರದಲ್ಲಿ ಅತೀವ ದುರ್ದೈವಿಗಳೆಂದರೆ ನೀವೇ ಸರಿ. ಸಂಪೂರ್ಣ ಗ್ರಹಮಂಡಲವೇ ನಿಮ್ಮನ್ನು ವಕ್ರದೃಷ್ಟಿಯಿಂದ ನೋಡುತ್ತಿರುವ ಕಾರಣ ಆಪ್ತೇಷ್ಟರು ಬಂಧುಗಳೂ ಕೂಡ ನಿಮ್ಮನ್ನು ದೂರವಾಗಿಸುವರು. ಅತ್ಯಲ್ಪಕಾರ್ಯದಲ್ಲೂ ಕೂಡಾ ಪರಾಭವ ಹೊಂದುವಿರಿ. ಗೃಹಕೃತ್ಯದ ಅವ್ಯವಸ್ಥೆಯಿಂದಾಗಿ ಸಂಸಾರದಲ್ಲೇ ಕೆಲವೊಮ್ಮೆ ವಿರಕ್ತಿಯುಂಟಾದೀತು. ವಾರಾಂತ್ಯದ 5 ದಿನಗಳಲ್ಲಿ ವಿಶೇಷ ಜಾಗರೂಕರಾಗಿರಿ.

ಮಕರ—ಈ ವಾರದಲ್ಲಿ ನಿಮಗೆ ಆಯಕ್ಕಿಂತ ದ್ವಿಗುಣ ವ್ಯಯವಾಗುವದು. ಆದರೂ ಬಂಧುಮಿತ್ರರ ಸಹಕಾರದಿಂದಾಗಿ ಕಾಲಯಾಪನೆಯು ಕಷ್ಟವಾಗಲಾರದು. ಹೆಚ್ಚಿನ ಕಾಲವನ್ನು ಪ್ರವಾಸದಲ್ಲಿ ಕಳೆಯಬೇಕಾಗುವದು. ಶತ್ರುಜನರ ಹಾವಳಿಯಿಂದಾಗಿ ಕೆಲವೊಂದು ಕಾರ್ಯಗಳನ್ನು ಅರ್ಧದಲ್ಲೇ ಕೈಬಿಡಬೇಕಾಗುವದು. ಪ್ರಕೃತಿಯೂ ಕೂಡ ಕೆಡಲಿದೆ. ವಾರಾದಿಯ 5 ದಿನಗಳು ಹೆಚ್ಚಿನ ಹಾನಿಕಾರಿಗಳಾಗಲಾರವು.

ಕುಂಭ—ಉದ್ಯೋಗದಲ್ಲಿ ಸಾಕಷ್ಟು ಪ್ರಗತಿಯನ್ನೈದುವಿರಿ. ನಿಮ್ಮ ಸಂಪದ್ಭಾಗವು ಉತ್ತಮ ಸ್ಥಿತಿಗೆ ಬರಲಿದೆ. ನೀಚಜನರಿಂದಲೂ ಮಕ್ಕಳುಗಳಿಂದಲೂ ಧನಾಗಮವಾಗುವದು. ನಿರುದ್ಯೋಗ ಸಮಸ್ಯಾ ಪೀಡಿತರೂ ಕೂಡ ಸದುದ್ಯಮದಲ್ಲಿ ಪ್ರವೃತ್ತರಾಗುವರು. ನೌಕರ ಜನರಿಗೆ ಅಧಿಕಾರಿಗಳಿಂದ ಪೀಡೆಯುಂಟಾದೀತು. ಪುತ್ರಕಳತ್ರರಿಂದ ವಿರಹವುಂಟಾಗಲಿದೆ. ವಾರಾಂತ್ಯದ 5 ದಿನಗಳು ಶ್ರೇಯಸ್ಕರಗಳಿವೆ.

ಮೀನ— ನಿಮ್ಮಲ್ಲಿನ ಧೈರ್ಯ ಸ್ಥೈರ್ಯಗಳು ಲೋಪವಾಗಿರುದರಿಂದ ಯಾವ ಕಾರ್ಯವನ್ನೂ ಸಾಧಿಸುವ ಶಕ್ತಿಯಿಲ್ಲದಾಗಿರುವದು. ಮನೋ ದೌರ್ಬಲ್ಯದಿಂದಾಗಿ ಮಿತ್ರರಲ್ಲೂ ಮನಸ್ತಾಪವುಂಟಾಗಬಹುದು. ಸರಕಾರಿ ಅಧಿಕಾರಿಗಳ ಪೀಡೆಗೆ ಸಿಲುಕುವಿರಿ. ಪಿತ್ತಶ್ಲೇಷ್ಮ ದೋಷದಿಂದ ಆರೋಗ್ಯ ಕೆಡುವದು. ಖರ್ಚಿಗೆ ಸಾಕಷ್ಟು ಉತ್ಪತ್ತಿಯಿರುವುದರಿಂದ ಹಣದ ಬಿಕ್ಕಟ್ಟು ಕಾಣಿಸದು. ತಾ. 17, 18 ಇದ್ದುದರಲ್ಲಿ ಉತ್ತಮ.

ಗೊನೋರಿಯಾ ಪರಮಾರೋಗ ಉಷ್ಣ ರೋಗಕ್ಕೆ ಔಷಧ

೭ ದಿವಸಗಳಲ್ಲಿ ಈ ರೋಗ ಗುಣ ಹೊಂದುವದು ಗ್ಯಾರಂಟೀ

ಶರೀರದಿಂದ ಕೀವು ಬರುತ್ತಿದ್ದರೆ, ಧೋತರಕ್ಕೆ ಹಳದೀ ಡಾಗು ಹತ್ತುತ್ತಿದ್ದರೆ, ಶರೀರದಿಂದ ಬಾವು. ಶರೀರದ ತೊಗಲು ಹಿಂದಕ್ಕೆ ಸರಿಯದಿದ್ದರೆ, ಶರೀರದ ಸುತ್ತು ಘಾಯವಾಗಿದ್ದರೆ,....ಚಟ್ಟಿ ಬಿದ್ದಿದ್ದರೆ, ಉಷ್ಣದಿಂದ ನೀರು ಇಳಿದಿದ್ದರೆ, ಉಡುಚು ಆಗಿದ್ದರೆ, ಮೂಲವ್ಯಾಧಿ, ಭಗೇಂದ್ರ, ಗಂಡುಮಾಲಿ, ಕೈಕಾಲು ಶೂಲಿ, ಅರ್ಧಾಂಗ ವಾಯು ನಡುನೋಯುವದು ಸ್ತ್ರೀಯರ ಬಿಳಿಕೆಂಪು ಸೆರಗು ಹೋಗುತ್ತಿದ್ದರೆ, ಹೊಲಿಕಟ್ಟು ಗರ್ಮಿಯಿಂದ ಗರ್ಭಕೋಶ ನಾಶಹೊಂದಿದ್ದರೆ, ಸರಿಯಾಗಿ ಭೇದಿಯಾಗದಿದ್ದರೆ, ಮೂತ್ರ ಉರಿಯುತ್ತಿದ್ದರೆ, ಈ ಎಲ್ಲಾ ಬೇನೆಗಳಿಗೆ ಈ ನಮ್ಮ ಔಷಧವು ಇರುವುದು. ಮೊದಲ ದಿವಸ ಬೆಳಿಗ್ಗೆ ೧ ಗುಂಜಿ ಪ್ರಮಾಣ ಔಷಧ ಅರ್ಧತೊಲಿ ತುಪ್ಪದಲ್ಲಿ ತಕ್ಕೊಳ್ಳಬೇಕು ಮೊದಲ ದಿವಸ ಮಾತ್ರವ ಮುಂಜಾನೆ ಸಂಜೆ ಎರಡು ಸಾರೆ ತಕ್ಕೊಳ್ಳಬೇಕು. ಮುಂದೆ ದರ ದಿವಸ ಬೆಳಿಗ್ಗೆ ಒಂದೇ ಸಾರೆ ೭ ದಿವಸ ಸೇವಿಸಬೇಕು. ಈ ಔಷಧವನ್ನು ಬೇಸಿಗೆಯಲ್ಲಿ ತುಪ್ಪದಲ್ಲಿ, ಥಂಡಿ ಮಳೆಗಾಲದಲ್ಲಿ ಜೇನತುಪ್ಪದಲ್ಲಿ ತಕ್ಕೊಳ್ಳಬೇಕು. ಪಥ್ಯ: ಹುಳಿಖಾರ, ಕುಂಬಳಕಾಯಿ, ಒಳ್ಳೆಣ್ಣೆ ಬಿಡಬೇಕು.

ಡಾಬ್ಲಿ ೧ಕ್ಕೆ ೫ರೂ. ಪೋಸ್ಟ ಚಾರ್ಜ ೮ ಆಣೆ

ಏಜೆಂಟರು:—ಗದಗ:—ಗದಗ ಫಾರ್ಮಸಿ, ಹುಬ್ಬಳ್ಳಿ:—ಹುಬ್ಬಳ್ಳಿ ಫಾರ್ಮಸಿ ಬಾಗಲಕೋಟೆ:—ಬಾಗಲಕೋಟೆ ಫಾರ್ಮಸಿ, ಧಾರವಾಡ:—ಧಾರವಾಡ ಫಾರ್ಮಸಿ, ದಾವಣಗೇರಿ: ದಾವಣಗೇರಿ ಪ್ರೆಸ್. ನಂಜುಡೇಶ್ವರ ಮೂರ್ತಿ ದಾವಣಗೇರಿ.

ಪತ್ರವ್ಯವಹಾರ ಮಾಡತಕ್ಕ ಮಾಲಕರ ವಿಳಾಸ,

ರೇವಣಸಿದ್ಧಪ್ಪ ಹಾಲಪ್ಪ ದಾವಣಗೇರಿ,

ಆಯುರ್ವೇದ ಔಷಧಾಲಯ. ಗದಗ.

ಲಕ್ಷ್ಮೀ ಸೆಂಟಾಲ್ ಮಾತ್ರೆ

ಇದರ ಉಪಯೋಗದಿಂದ ಬಹುಕಾಲದ ಮೇಹ, ಪ್ರಮೇಹ, ಮೂತ್ರದ ಉರಿ, ಮೂತ್ರ ಕೃಚ್ಛ್ರ, ಮೂತ್ರದೊಡನೆ ಯಾಮುಂದಾಗಿ ಬಿಳುಪು, ಅರಸಿನ, ಕೆಂಪು ಈ ವರ್ಣಗಳಲ್ಲಿ ಕೀವು ಹೋಗುವುದು, ತೊಡೆ ಸಂದಿನಲ್ಲಿ ನೋವು, ಕಾಲ ಗಂಟುಗಳಲ್ಲಿ ವೇದನೆ, ಕಣ್ಣಿನಲ್ಲಿ ಕೀವು ಬರುವುದು, ಶರೀರದಲ್ಲಿ ಉಷ್ಣತೆ, ಸ್ವಪ್ನೇಂದ್ರಿಯ ಇವೆಲ್ಲಾ ಖಾತ್ರಿಯಾಗಿ ಗುಣಹೊಂದುವುದು.

ಡಬ್ಬಿ ಒಂದಕ್ಕೆ ರೂ. 2—0—0

ಏಜಂಟ್ಸ್:—

ಶಾ ಕಂಪೆನಿ, ಮಂಗಳೂರು

"ಗೋಪಾಲ ಭೇಷಜಾಶ್ರಮ" ಮಂಗಳೂರು.

(ಸ್ಥಾಪನೆ 1910)

ಸ್ಥಾಪಕರು:-ಆಯುರ್ವೇದ ಭೂಷಣ ಯಂ. ವಿ. ಶಾಸ್ತ್ರೀ,

ಇವರ **ನವಜೀವಾತು** ಎಂಬ **ಸೂತಿಕಾ ರಸಾಯನ**

ಬಾಣಂತಿಯರ ಸಲುವಾಗಿಯೇ ದೇಶ ಮತ್ತು ಪ್ರಕೃತಿಯ ದೇಹಸ್ಥಿತಿಯನ್ನು ನಿರ್ಣೈಸಿ ತಯಾರಿಸಲ್ಪಟ್ಟ ಅಮೋಘವಾದ ಮಧುರದ್ರವ ರಸಾಯನ. ಅಲ್ಪ ಮೌಲ್ಯದಿಂದ ಬಡವರಿಗೂ, ಭಾಗ್ಯಶಾಲಿಗಳಿಗೂ ಸುಲಭವಾಗಿರುವುದು.

ಹೆಚ್ಚಿನ ಮಾಹಿತಿಗೆ—ಡಾ| ಯಂ. ಸಿ. ಶಾಸ್ತ್ರೀ, ಯಲ್. ಐ.

ಕೊಡಿಯಾಲಬೈಲ ಪೋಸ್ಟು, (ಮಂಗಳೂರು)

ಸ್ಥಾನಿಕರು:—ಡಾ| ಐ. ಕೆ. ಶಿವರಾಮರಾವ್, ಕುಂಜಿಬೆಟ್ಟು, ಉಡುಪಿ.

— ಮಕ್ಕಳನ್ನು ಹಡೆಯುವುದು ಸಾಕು —

ಅಶಕ್ತ ಸ್ತ್ರೀಯರಿಗೆ **ಬರ್ಥ ಕಂಟ್ರೋಲ** ರೋಗ ಗ್ರಹಸ್ತ ಹೆಣ್ಣು ಮಕ್ಕಳಿಗೆ

ಏಳು ದಿವಸ ಈ ಮಾತ್ರೆಗಳನ್ನು ಸೇವನ ಮಾಡಿದರೆ ಮುಂದೆ ಖಂಡಿತವಾಗಿ ಮಕ್ಕಳಾಗುವದಿಲ್ಲ. ಸ್ತ್ರೀಯರು ಪ್ರತಿತಿಂಗಳು ಸರಿಯಾಗಿ ಮುಟ್ಟಾಗುತ್ತಾರೆ. ಅಲ್ಲದೆ ಸ್ತ್ರೀಯರ ಬಿಳೆಸೆರಗು, ಪ್ರದರರೋಗ, ಹೊಲಿಕಟ್ಟು ಗುಣವಾಗಿ ಸ್ತ್ರೀಯು ಗರ್ಭಿಣಿಯಾಗುವದಿಲ್ಲ. ಈ ಔಷಧವನ್ನು ಸೇವಿಸುವ ಕ್ರಮ: ಪ್ರತಿದಿವಸ ಮುಂಜಾನೆ ೧ ಗುಳಿಗೆ ಮಧ್ಯಾಹ್ನಕ್ಕೆ ೧ ಗುಳಿಗೆ, ಸಂಜೆಗೆ ೧ ಗುಳಿಗೆಯಂತೆ ಊಟದ ಮೊದಲು ತಕ್ಕೊಳ್ಳಬೇಕು. ಏಳುದಿವಸ ಈ ಔಷಧವನ್ನು ಬಿಸಿನೀರಿನಲ್ಲಿ ಸೇವಿಸಬೇಕು.

ಪಥ್ಯ:—ಹರಿವೀಪಲ್ಲೆ ಬಿಡಬೇಕು. ೭ ದಿವಸ ಸಂಪೂರ್ಣ ಔಷಧದ ಕಿಮ್ಮತ್ತು ರೂಪಾಯಿ 5—0—0. ಪೋಸ್ಟ ಚಾರ್ಜು ೧೨ ಆಣೆ.

ಮಾಲಕರು:—ಹಾಲಪ್ಪಾ ಫಕೀರಪ್ಪಾ ದಾವಣಗೇರಿ

ಆಯುರ್ವೇದ ಔಷಧಾಲಯ ಗದಗ-ಸಿಟಿ.

ಏಜಂಟರು:—ಹುಬ್ಬಳ್ಳಿ ಫಾರ್ಮಸಿ,—ಹುಬ್ಬಳ್ಳಿ, ಗದಗ, ಬಾಗಲಕೋಟೆ ಧಾರವಾಡ ವಿಜಾಪುರ— ದಾನಪ್ಪ ಸಿದ್ಧಲಿಂಗಪ್ಪ ಧಾರವಾಡಕರ ವಿಜಾಪುರ ನಂಜುಡೇಶ್ವರ ಮೂರ್ತಿ ದಾವಣಗೇರಿ ದಾವಣಗೇರಿ:—ದಾವಣಗೇರಿ ಪ್ರೆಸ್ [illegible] ಎಲ್ ಕಮಲದಾಸ ಕೆಮಿಸ್ಟ, ಹಾವೇರಿ, ಬ್ಯಾಡಗಿ

EDITED, PRINTED & PUBLISHED BY K. H. SHETTY AT THE NAVAYUGA PRESS, UDIPI, S.INDIA.

Regd. No. M. 3618 | Estd. 1921 ಸ್ಥಾಪನೆ 31ನೇ ವರ್ಷ | 19—4—1951

LICENCE No. 31
Licensed to Post without Prepayment

Founder: Sri A. B. Shetty, Minister for Agriculture & Veterinary.

ನವ ಯುಗ
स्वाधीन भारत

ವರ್ಷ ೩೧ ವಾರ ೩೨ | NAVAYUGA WEEKLY | POST BOX NO. 22 UDIPI, S. K. | Vol. 31 No. 32

ಚಿಕ್ಕ ದೊಡ್ಡವರು

ಚಿಕ್ಕದೊಡ್ಡವರೆಂದರೆ ವಯೋಮಾನವನ್ನು ಹೊಂದಿಕೊಂಡು ಚಿಕ್ಕದೊಡ್ಡವರಲ್ಲ. ಶ್ರೀಮಂತರೂ ಬಡವರೂ ಎನ್ನುವದಕ್ಕೆ ಚಿಕ್ಕದೊಡ್ಡವರು ಎಂದಿದ್ದೇನೆ. ರಾಷ್ಟ್ರದ ಜನ ಜೀವನದ ಹೆಚ್ಚಿನ ಪುರಸ್ಕರ್ತರಾರೆಂಬುದನ್ನು ನಾವು ವಿವೇಚಿಸಿ ನೋಡಿದರೆ ಬಡವರೆಂದೇ ಹೇಳಬೇಕು. "ಚಿಕ್ಕ ದೊಡ್ಡವರು" ಎನ್ನುವ ಭೇದಭಾವ ನಮ್ಮಲ್ಲಿರುವುದು ಶ್ರೀಮಂತಿಕೆಯ ಗರ್ವದಿಂದಲೇ. ಚಿಕ್ಕವರ ಸಂಖ್ಯೆಯು ಬಹಳವಾಗಿ ದೊಡ್ಡವರ ಸಂಖ್ಯೆ ಪರಿಮಿತಿಯಲ್ಲಿರುವದನ್ನು ನಾವು ನೋಡುತ್ತೇವೆ. ಆದರೆ ಜಗತ್ತಿನ ಪ್ರಬಲ ರಾಜಕಾರಣ ಇಲ್ಲವೆ ಆಡಳಿತಾಧಿಕಾರ ಕಡಿಮೆ ಸಂಖ್ಯೆಯವರಾದ ದೊಡ್ಡವರ ಕೈಯಲ್ಲೇ ಇರುತ್ತದೆ, ಬಹುಸಂಖ್ಯೆಯವರಾದ ಬಡವರು ಅವರ ಅಧೀನಪಟ್ಟಿದ್ದಾರೆ. ಬಹುಸಂಖ್ಯಾಕರು ತಿರುಗಿ ನಿಂತರೆ ದೊಡ್ಡವರ ಗತಿ ಏನಾಗಬಹುದೆಂಬುದನ್ನು ನಾವು ಊಹಿಸುವುದು ಸ್ವಲ್ಪ ಕಷ್ಟವೇ ಸರಿ. ಇತಿಹಾಸದಲ್ಲಿ ಅಂತಃಘಟನೆ ಫ್ರಾನ್ಸ್, ಅಮೇರಿಕಾ, ಮುಂತಾದ ಕಡೆಗಳಲ್ಲಿ ನಡೆದರೂ ಕಡೆಗೆ ಆಡಳಿತ ಸಿಕ್ಕಿಕೊಂಡದ್ದು ದೊಡ್ಡವರ ಕೈಯಲ್ಲೇ. ಕೂಲಿಗಾರರ ರಾಷ್ಟ್ರವೆಂದು ಹೇಳಲಾಗುವ ಸಮತಾವಾದ ಉಳ್ಳಂತಹ ರಷ್ಯಾದಲ್ಲೂ ಚಿಕ್ಕ ದೊಡ್ಡವರ ಭೇದ ಇಲ್ಲವೆ ಇಲ್ಲ. ಆದರೆ ದೊಡ್ಡವರ ತಪ್ಪನ್ನು ಹೇಳುವ ಅಧಿಕಾರ ಯಾರಿಗೂ ಇರುವುದಿಲ್ಲ. ಸಮತಾವಾದ ಎಂದು ಹೇಳಿದರೂ ಸ್ಟಾಲಿನ್ ತತ್ವಕ್ಕೆ ವಿರುದ್ಧವಾದ ಯಾವ ವಾದವಾಗಲೀ—ತತ್ವವಾಗಲೀ ಅಲ್ಲಿ ತಲೆಯೆತ್ತುವಂತಿಲ್ಲ. ಒಂದೇ ಕಟ್ಟಿಗೆ ಎಲ್ಲರೂ ಬದ್ಧರಾಗಬೇಕು. ಇಲ್ಲವಾದರೆ ಅಲ್ಲಿ ಉಳಿಗಾಲವಿಲ್ಲ. ಆಡಳಿತದಲ್ಲೂ ದೊಡ್ಡವರ ವರ್ಚಸ್ಸೇ ಬಹಳವಾಗಿದೆ. ಆದರೆ ಅವರನ್ನು ದೊಡ್ಡವರೆಂದು ಹೆಸರಿಸುವಂತಿಲ್ಲ. [ಎಲ್ಲರಂತೆಯು 'ಸಮಾನ'ರೆಂದು ಕಾಣಲಾಗುತ್ತದೆ.

ಅಮೇರಿಕಾವಂತೂ ದೊಡ್ಡವರದೇ ರಾಜ್ಯ. ಆಳುವವರೂ ಕೇಳುವವರೂ ಎಲ್ಲರೂ ದೊಡ್ಡವರೇ ಆ ರಾಜ್ಯದಲ್ಲಿ. ಶ್ರೀಮಂತಿಕೆಗೆ ಅದು ಹೆಸರಾದ ದೇಶ. ಅಲ್ಲಿನ ಸಾಮಾನ್ಯ ಜನರೂ ತಾವು ಶ್ರೀಮಂತರೆಂದೇ ಭಾವಿಸಿಕೊಂಡಿದ್ದಾರೆ. ಹೀಗೆಯೇ ಎಲ್ಲರ ರಾಷ್ಟ್ರಗಳಲ್ಲೂ ದೊಡ್ಡವರ ವರ್ಚಸ್ಸಿನಲ್ಲಿ ರಾಜ್ಯಾಡಳಿತ ನಡೆಯುತ್ತಿದೆಯೆ ಹೊರತು ಚಿಕ್ಕವರ ವರ್ಚಸ್ಸಿನಿಂದಲ್ಲ. ಇದಕ್ಕೆ ಮುಖ್ಯ ಕಾರಣವೆಂದರೆ ಶ್ರೀಮಂತಿಕೆಯ ಪ್ರಭಾವಕ್ಕೆ ಇದಿರಾಗಿ ಜೀವನ ನಡೆಸುವ ಇಲ್ಲವೆ ಇದಿರಾಡುವ ಪೌರುಷ ಚಿಕ್ಕವರಲ್ಲಿ ಇಲ್ಲದಿರುವುದೇ ಆಗಿದೆ.

ಈ ರೀತಿಯ ಮತಭೇದ ಆಯಾಯ ದೇಶದೊಳಗಿನ ಜನತೆ ಸರಕಾರದಲ್ಲಿ ಮಾತ್ರವಲ್ಲ ಜಗತ್ತಿನ ರಾಷ್ಟ್ರರಾಷ್ಟ್ರಗಳಲ್ಲೂ ಇದೆ. ಇಂದು ಜಗತ್ತಿನ ರಾಷ್ಟ್ರಗಳಲ್ಲಿ ಚಿಕ್ಕ ದೊಡ್ಡತನದ ಮತಭೇದವನ್ನು ನಾವು ಕಾಣುತ್ತಲಿದ್ದೇವೆ. ಈ ರೀತಿಯ ಮತಭೇದದಲ್ಲಿ ಲೋಕಕ್ಕೆ ಯಾರಿಂದ ಉಪಕಾರ ಹೆಚ್ಚೆಂಬುದನ್ನು ನಾವಿಂದು ನೋಡಬೇಕಾಗಿದೆ.

ಬೇರೆಯವರಿಂದ ಪೂಜಿಸಿಕೊಂಡು, ಕೆಲಸಮಾಡಿಸಿಕೊಂಡೂ ಶ್ರೀಮದ್ಗಾಂಭೀರ್ಯವನ್ನು ತೋರಿಸುವದು ದೊಡ್ಡವರ ಲಕ್ಷಣ. ಬೇರೆಯವರಿಗೆ ತಮ್ಮಿಂದ ಉಪಕಾರವೆಂದರೆ ಮಾಡಿದ್ದಕ್ಕೆ ಪ್ರತಿಫಲಕೊಡುವದಷ್ಟೇ! ದುಡಿದದ್ದಕ್ಕೆ ಪ್ರತಿಫಲಕೊಡುವದಾದರೂ ಅವನು ಅವರೋಕ್ಷವಾಗಿ ತನ್ನ ದಾಸಾನುದಾಸನಾಗಿರಬೇಕೆಂದು ಬಯಸುತ್ತಾರೆ ದೊಡ್ಡವರು. ತಮ್ಮ ಕಷ್ಟ ನಿವಾರಣೆ—ಜೀವನೋಪಾಯಗಳಿಗಾಗಿ ಆತ್ಮಾಭಿಮಾನವನ್ನು ತಳೆದುಕೊಂಡು ದೊಡ್ಡವರ ಅಡಿಯಾಳಾಗಿರಬೇಕಾಗುತ್ತೆ. ಬಡವರು ಬಡವರಿಗೆ ಉಪಕಾರಕ್ಕೆ ಬದ್ಧರು—ಆತ್ಮೀಯತೆಯನ್ನು ತಾಳಿದಷ್ಟು ದೊಡ್ಡವರು ಬಡವರ ಮೇಲೆ ವಿಶ್ವಾಸ ತೋರುವುದಿಲ್ಲ. ಉಪಕಾರವಾಡುವುದಿಲ್ಲ. ಆಪತ್ತಿನಲ್ಲಾಗಲೀ—ಗಂಡಾಂತರದಲ್ಲಾಗಲೀ ಬಡವರಿಗೆ ಬಡವರೇ ಬೇಕಬೇಕು.

ಈ ತತ್ವ ಮಾನವಕೋಟಿಯಲ್ಲಿ ಜೇರೂರಿದೆ. ಅಂತೆಯೆ ರಾಷ್ಟ್ರೀಯ ಆಡಳಿತದಲ್ಲೂ ಚಿಕ್ಕ ದೊಡ್ಡ ರಾಷ್ಟ್ರಗಳೆಂಬ ಭೇದ ಭಾವನೆಯು ಬೆಳೆದಿದೆ. ಉದಾಹರಣೆ ಅಮೇರಿಕಾ ಜಗತ್ತಿನ ಶ್ರೀಮಂತರಾಷ್ಟ್ರ. ಅಗರ್ಭ ಶ್ರೀಮಂತಿಕೆಯಿದೆ. ಅದರಿಂದ ಜಗತ್ತಿಗೆ ಇಂದು ಏನು ಉಪಯೋಗವಿದೆ? ಎಲ್ಲವನ್ನೂ ತುಳಿದು ತಾನೇ ಏಕಚಕ್ರಾಧಿಪತ್ಯವನ್ನು ಪಡೆಯಬೇಕೆಂಬ ಹಂಬಲ ಪ್ರಬಲವಾಗಿರುವಂಥಾದ್ದು ಕಂಡು ಬಂದಿಲ್ಲವೇ? ಅದರ ಅನುಗ್ರಹಕ್ಕೆ ಪಾತ್ರವಾದ ಚಿಕ್ಕಚಿಕ್ಕ ರಾಷ್ಟ್ರಗಳು ತಮ್ಮ ಆತ್ಮಾಭಿಮಾನ ಕಳೆದುಕೊಂಡು ಅಮೇರಿಕಾ ಅಂದದ್ದನ್ನು ಇಷ್ಟವಿದ್ದಾಗಲೀ ಇಲ್ಲದೆಯಾಗಲೀ ಒಪ್ಪಿಕೊಳ್ಳಲೇ ಬೇಕಾಗಿದೆ. ದೊಡ್ಡವರ ದೊಡ್ಡಮರ್ಜಿಗೆ ಇಲ್ಲವೆ ದಾಕ್ಷಿಣ್ಯಕ್ಕೆ ಬಲಿಬಿದ್ದು ಆತ್ಮಘಾತುಕ ಕಾರ್ಯವನ್ನು ಮಾಡಿಕೊಳ್ಳುವ ನಿದರ್ಶನಗಳು ನಮ್ಮ ಕಣ್ಣ ಮುಂದಿವೆ. ಇದಕ್ಕೆ ವಿರುದ್ಧವಾದ ಅಭಿಪ್ರಾಯವನ್ನು ವ್ಯಕ್ತಪಡಿಸಿದ ಭಾರತ ಇಂದು ಅಮೇರಿಕೆಯೊಡನೆ ತಿರಸ್ಕರಿಸಲ್ಪಟ್ಟುಕೊಳ್ಳಬೇಕಾಗಿದೆ. ಅಮೇರಿಕೆಯೊಡನಿರುವ ವಿಪುಲವಾದ ಆಹಾರ ಧಾನ್ಯ ಹಸಿದವರ ಆಹಾರಕ್ಕೆ ಬೇಕು ತ್ತಿತ್ತು. ಆದರೆ ದೊಡ್ಡವರ ಮುಂದೆ ಚಿಕ್ಕವರ ದಿಟ್ಟತನ ಹೆಚ್ಚಾಯಿತು. ಅಂತಲೇ ನಮಗೆ ಅಮೇರಿಕೆ ಆಹಾರ ದಾನ್ಯದ ಕೊಡುಗೆಯು ಕಾರಿತ್ಯ ಹಿಂದುಮುಂದೆ ನೋಡುತ್ತಲಿದೆ.

ಅಮೇರಿಕೆಗಿಂತ ಚಿಕ್ಕವುಗಳಾದ ಇತರ ರಾಷ್ಟ್ರಗಳು ಭಾರತದ ಗಂಡಾಂತರ ಪರಿಸ್ಥಿತಿಯನ್ನವಲೋಕಿಸಿ ಕೂಡಲೇ ತಮ್ಮ ಶಕ್ತ್ಯಾನುಸಾರ ಸಹಾಯಾಪೇಕ್ಷಿಡುವು! ಒಡವರಿಗೆ ಬಡವರೇ ಬಂದುಬಳಗವೆನ್ನುವುದಕ್ಕೆ ಇದು ಉತ್ತಮ ಉದಾಹರಣೆಯಲ್ಲವೇ? ಅಮೇರಿಕೆಯೊಡನೆ ಮಾತುಕತೆ ನಡೆದು ತಿಂಗಳೆರಡು ಮಿಕ್ಕಿದರೂ ,ನ್ನೂ ಕೊಡುವ ಕುರಿತು ನಿರ್ದಿಷ್ಟ ತೀರ್ಮಾನವಿಲ್ಲ. ಇತರ ಚಿಕ್ಕ ಪುಟ್ಟ ರಾಷ್ಟ್ರಗಳ ಸಹಕಾರದಿಂದ ಭಾರತ ತನ್ನ ಗಂಡಾಂತರ ಪರಿಸ್ಥಿತಿಯನ್ನೆದುರಿಸಿತು, ಅವುಗಳು ತಮ್ಮ ತಮ್ಮ ಹೊಣೆಯನ್ನರಿತು ಕಾಲೋಚಿತವಾದ ಸಹಕಾರವನ್ನು ನೀಡಿದುದರಿಂದಲೇ ಲಕ್ಷ ಲಕ್ಷ ಜನರ ಜೀವವನ್ನ ರಕ್ಷಿಸಿದಂತಾಗಿದೆ. ದೊಡ್ಡವರ ದೊಡ್ಡ ಮರ್ಜಿಯನ್ನು ನಂಬಿ ಕುಳಿತಿದ್ದರೆ ಬರಗಾಲದ ಭೀಕರ ಘಟನೆಯನ್ನು ತಿರುಗಿ ನೋಡಬೇಕಾಗುತ್ತಿತ್ತೋ ಏನೋ!

ಜಗತ್ತಿನ ಸೂತ್ರವೇ ಹೀಗೆಯೇ ಏನೋ! ರಾಜಕೀಯ ರಂಗವನ್ನು ಬಿಟ್ಟು ಜನಜೀವನವನ್ನವಲೋಕಿಸಿದರೂ ಇದೇ ತತ್ವ ಕಾಣುತ್ತದೆ. "ದೊಡ್ಡವರ ಮನೆಗೆ ನೋಡಲಿಕ್ಕೆ ಹೋಗಬೇಕು; ಬಡವರ ಮನೆಗೆ ತಿನ್ನಲಿಕ್ಕೆ ಹೋಗಬೇಕು' ಎನ್ನುವ ಗಾದೆ ಅರ್ಥಪೂರ್ಣವಾದುದು. ದೊಡ್ಡವರು ಅವರಕ್ಕಿಂತ ದೊಡ್ಡವರನ್ನೇ ನೋಡುತ್ತಾರೆ. ಬಡವರನ್ನು ಕಣ್ಣೆತ್ತಿ ನೋಡುವಂತಿಲ್ಲ. ದುಡ್ಡು ಮತ್ತು ಮತ್ತು ದೊಡ್ಡವರಿಗೆ ಸೇರುತ್ತದೆ. ದೊಡ್ಡವರ ಮನೆಯಲ್ಲಿ ವಿಶೇಷವಾದರೆ ಬಡವರು ತಾವು ಕಷ್ಟಪಟ್ಟು ಅವರಿಗೆ ಕಪ್ಪಕಾಣಿಕೆ ಸಲ್ಲಿಸಬೇಕು. ಬಡವರಾದರೆ ಎಲ್ಲರೂ ಸುರಿಯುವವರೇ; ದೊಡ್ಡವರು ಒಂದರೆ 'ದೊಡ್ಡವರೆಂಬ' ಹಂಗಿನಿಂದ ಎಲ್ಲರಂಗದಲ್ಲೂ ಕೂಡಲೇ ಕೆಲಸಮಾಡಿ ಕೊಡುತ್ತಾರೆ ಬಡಕೈಕ

3ನೇ ಪುಟ ನೋಡಿರಿ.

ಪ್ರಧಾನ ಕಾರ್ಯಾಲಯ: ಉಡುಪಿ. ಸ್ಥಾಪನೆ: ೧೯೩೫

ದಿ ಕೆನರಾ ಮ್ಯೂಚುವಲ್
ಎಶ್ಯೂರೆನ್ಸ್ ಕಂಪೆನಿ, ಲಿಮಿಟೆಡ್,
ಇದುವೇ
ಪಾಲಿಸಿದಾರರ ನಂಬಿಕೆ ಹೆಚ್ಚಿಸುವ ಹೆಸರು
ಅಲ್ಲದೆ ಸ್ಥಾಪಿತವಾದಂದಿನಿಂದಲೂ
ಲಾಭ (ಬೋನಸ್) ಹಂಚಿದ ಕಂಪೆನಿ.

The Canara Mutual Assurance Co. Ltd.
H. O. UDIPI (SOUTH INDIA) ESTD: 1935.

ಶಿಕ್ಷಣದಲ್ಲಿ ಹೊಸ ದಾರಿ.

ಲೇಖಕರ: ಕೆ. ಗುರುರಾಜ ಉಡುಪ. ಬಿ. ಎಸ್‌ಸಿ.

ಬಡವನೊಬ್ಬನಿದ್ದಾನೆ. ಪಾಪ ಅವನಿಗೊಂದು ಸಣ್ಣ ಹೊದಿಯುವ ಬಟ್ಟೆ ಅದನ್ನು ಕಾಲಿಗೆ ಎಳೆದರೆ ತಲೆಗಿಲ್ಲ. ತಲೆಗೆ ಎಳೆದರೆ ಕಾಲಿಗೆ ಇಲ್ಲ. ಕಡು ಚಳಿ ಹವೆ. ಏನು ಮಾಡಿಯಾನು ಆ ದರಿದ್ರ ಜೀವಿ. ಹಾಗಾಗಿದೆ ನಮ್ಮ ಬಡ ಭಾರತದ ಸ್ಥಿತಿ. ಆಹಾರ ಧಾನ್ಯಗಳ ಕೊರತೆ, ಅಪಾರ ಕೊರತೆ ಬಂದಿದೆ. ದೇಶದ ಸಂರಕ್ಷಣೆಗಾಗಿ ವೆಚ್ಚಮಾಡಬೇಕಾದ ಅಸಾಮಾನ್ಯ ಖರ್ಚು ಇನ್ನೊಂದಿದೆ. ನೀರಾವರಿ ಯೋಜನೆ, ಮಹಾ ಉದ್ಯಮಗಳನ್ನು ಆರಂಭಿಸಲಿಕ್ಕಾಗಿ ನೆರೆ ನೀರಿನಂತೆ ಹರಿಯಬೇಕಾದ ಅಗಾಧ ಧನ ಮತ್ತೊಂದಿದೆ. ಇವೆಲ್ಲವೂ ಮುಖ್ಯವೇ. ಒಂದು ವಿಭಾಗದ ಹೆಚ್ಚು ಖರ್ಚೆಂದರೆ ಇನ್ನೊಂದನ್ನು ಅರ್ಧದಲ್ಲಿ ನಿಲ್ಲಿಸಿದೆ ಎಂದು ಅಭಿಪ್ರಾಯ. ಇಂತಹ ಮಹಾ ಸಮಸ್ಯೆಗಳ ಎದುರು ಶಿಕ್ಷಣ, ಆರೋಗ್ಯ ಮೊದಲಾದ ವಿಭಾಗಗಳು ಒಲಿಂಪಸ್ ಪರ್ವತದೆದುರಿನ ಸಣ್ಣ ಗುಡ್ಡದಂತೆ ಕಾಣುವುದು. ಆದರೆ ಇದೇ ಈ ಕಿರಿದಾಗಿ ತೋರುವ ವಿಭಾಗವೇ ದೇಶದ ನಿಜವಾದ ಏಳಿಗೆಯ ಕಾರಣವೆಂಬುದನ್ನು ನಾವು ಮರೆತಂತಿದೆ. ಇದೇ ಕಿರುಬೆಟ್ಟದ ಗರ್ಭದಲ್ಲಿಯೇ ವಜ್ರವೈಡೂರ್ಯಗಳು ಹುದುಗಿಕೊಂಡಿವೆ ಎಂಬುದನ್ನು ನಾವು ತಿಳಿದಿಲ್ಲ. ಆದರೆ ಅಂತಹ ವಜ್ರವು ಸುಲಭದಲ್ಲಿ ಸಿಗುವಂತಹುದಲ್ಲ. ಅದಕ್ಕಾಗಿ ಪರಿಶ್ರಮಿಸಿ ಬೆವರಿಳಿಸಿ ಗುಡ್ಡವನ್ನು ಅಗೆದು ಕಲ್ಲನ್ನು ಹೆಕ್ಕಿ ಅದನ್ನು ಶುದ್ಧ ಮಾಡಿ ಕೆತ್ತಿದಾಗ ಮಾತ್ರ ಅದರ ನಿಜ ಪ್ರಭೆಯು ಬೆಳಕಿಗೆ ಬರುತ್ತದೆ. ಹೊರತು ಮಣ್ಣಿನಿಂದಲೇ ಶುದ್ಧ ವಜ್ರವು ದೊರಕಲಾರದು. "Sound mind in a sound body" ಎಂದು ಆಂಗ್ಲ ಭಾಷೆಯಲ್ಲೂ Mens sano in corpore sano ಎಂದು ಲೇಟಿನಿನಲ್ಲೂ ದೈಹಿಕ ಹಾಗೂ ಮನಸ್ಸಿನ ಪ್ರಾಮುಖ್ಯತೆಯನ್ನು ಒತ್ತಿ ಹೇಳಿದ್ದಾರೆ. ಇಂತಹ ದೃಢಕಾಯರಾದವರ ಪ್ರಫುಲ್ಲಿತ ಮನಸ್ಸೇ ದೇಶದ ನಿಜ ಸಂಪತ್ತು. ಮುತ್ತು, ರತ್ನಗಳು, ವಜ್ರವೈಡೂರ್ಯಗಳು ಬೇರೆ ನಮಗೆ ಬೇಕೇ? ಆದರೆ ಅಂತಹ ಅಮೂಲ್ಯ ಸಂಪತ್ತು ಒಂದೆರಡು ವರ್ಷಗಳಲ್ಲಿ ಗಳಿಸುವಷ್ಟು ಸುಲಭವಲ್ಲ. ನಿಧಾನವಾಗಿ, ಯೋಗ್ಯ ಯೋಜನೆಯೊಂದರಂತೆ ದುಡಿಯಬೇಕಾಗಿದೆ.

ಆದರೆ ಸ್ವಾತಂತ್ರ್ಯದಿಂದೀಚೆಗಿನ ಶಿಕ್ಷಣ ಪ್ರಪಂಚದ ಪ್ರಗತಿಯು ತೀರ ಕುಂಠಿತವಾಗಿ ಬಿಟ್ಟಿದೆ. 1947ರಲ್ಲಿ ಆರಂಭವಾದ ನಮ್ಮ ಕಡ್ಡಾಯ ಶಿಕ್ಷಣದ ಯೋಜನೆಯೂ ಮೂಲೆ ಪಾಲಾಗಿದೆ. ಅದೇ ಸಂದರ್ಭದಲ್ಲಿ ಬಡ ವಿದ್ಯಾರ್ಥಿಗಳಿಗೆ ಒದಗಿಸುವ ಮಧ್ಯಾಹ್ನ ಊಟದ ಏರ್ಪಾಡೂ ನಿಂತೂ ಬಿಟ್ಟಿದೆ. ಪ್ರಾಥಮಿಕ ಶಿಕ್ಷಣಕ್ಕಾಗಿ ವ್ಯಯವಾಗುವ ಹಣ ದೇಶದಲ್ಲಿ ಬರೆ ಆರೂ ಕಾಲು ಕೋಟಿ. ಶಾಲಾ ಪ್ರಾಯದ 74 ಲಕ್ಷ ಮಕ್ಕಳಲ್ಲಿ ಬರೆ 42 ಲಕ್ಷ ಮಾತ್ರ ಶಿಕ್ಷಣವನ್ನು ಪಡೆದು ಉಳಿದವರು ವ್ಯರ್ಥ ಕಾಲಹರಣಮಾಡುವಂತಾಗಿದೆ. ಉಳಿದವರಿಗೆ ವಿದ್ಯಾಭ್ಯಾಸವನ್ನು ಕೊಡಿಸಲು ಬೇಕಾದ ಬರಿಯ ಮೂರೂ ಮುಕ್ಕಾಲು ಕೋಟಿ ರೂಪಾಯಿಯನ್ನು ವ್ಯಯಿಸಲು ನಾವು ಹಿಂಜರಿಯುತ್ತಿದ್ದೇವೆ. ಈ ರೀತಿಯ ಧೋರಣೆಯ ಪರಿಣಾಮವಾಗಿ ಕಡ್ಡಾಯ ಶಿಕ್ಷಣ ಯೋಜನೆಯು ಕಾರ್ಯರೂಪದಲ್ಲಿ ಇಷ್ಟು ಮಂದಗತಿಯಿಂದ ಮುಂದುವರಿದರೆ ನಮ್ಮ ಜನ ಅವಿದ್ಯೆಯಿಂದಾಗಿ ಅನಭಿಜ್ಞರಾಗಿ ಎಷ್ಟು ವರ್ಷ ಕಳೆಯಬೇಕೋ? ಕೇಂದ್ರದಲ್ಲಿನ ವಿದ್ಯಾಖಾತೆಯು ಅಂತೂ ಯಾವ ಅಧಿಕಾರವನ್ನೂ ತೋರಿಸುವಂತಿಲ್ಲ. ಕಾರಣ ಪ್ರಾಂತೀಯ ಸರಕಾರವೇ ಎಲ್ಲಾ ವಿಭಾಗದ ಮೇಲ್ವಿಚಾರವನ್ನೂ ತೆಗೆದುಕೊಂಡಿದೆ. ವಿದ್ಯಾಭಿವೃದ್ಧಿಗೆಂದು ಈ ವರ್ಷದ ಮುಂಗಡ ಪತ್ರಿಕೆಯಲ್ಲಿ ಮೂರು ಕೋಟಿ ರೂಪಾಯಿಯನ್ನು ಹೊಂದಿಸಿಕೊಳ್ಳಲು ಅದಾದರು ಪಟ್ಟ ಕಷ್ಟವೆಷ್ಟು? ತೊಟ್ಟ ಶ್ರಮವೆಷ್ಟು? ನಮ್ಮ ಆರ್ಥಿಕ ಮುಗ್ಗಟ್ಟಿನ ಪರಿಣಾಮವಿದಲ್ಲದೇ ಮತ್ತೇನು?

ರಶಿಯಾದೇಶದಲ್ಲಿ ರೂಪಾಯಿಗೆ ಹದಿನಾರಾಣೆ ಅನಕ್ಷರತೆಯೇ ತುಂಬಿಕೊಂಡಿದ್ದು ಬರೆ ಹದಿನೆಂಟು ವರ್ಷಗಳಲ್ಲಿ ಸರ್ವತ್ರ ಸಾಕ್ಷರತೆಯ ಪ್ರಚಾರವು ಎಷ್ಟು ಸಾಹಸದ ಕೆಲಸ- ಸಾಮ್ಯವಾದಿ ಪಕ್ಷದಲ್ಲಿರುವ ಆ ಜನರ ಸದುತ್ಸಾಹದ ಪಾರವನ್ನು ನಾವಿಂದು ಅಭ್ಯಾಸ ಮಾಡಬೇಕಾಗಿದೆ. ನಮ್ಮ ಸ್ವಾತಂತ್ರ್ಯದ 4 ವರ್ಷಗಳು ವ್ಯರ್ಥ ಕಳೆದು ಹೋಯಿತಲ್ಲಾ! ಕೆಲವೇ ಜಿಲ್ಲೆಗಳನ್ನಾದರೂ ಆರಿಸಿ ಅಲ್ಲಿ ಕಡ್ಡಾಯ ಶಿಕ್ಷಣದ (ಪ್ರಾಥಮಿಕ) ಯೋಜನೆಯನ್ನು ಕಾರ್ಯರೂಪಕ್ಕೆ ತರುತಿದ್ದರೆ ನಾವು ಆ ದಿಶೆಯಲ್ಲಿ ತುಂಬ ಮುಂದರಿಯುತ್ತಿದ್ದೆವು. ಒಮ್ಮೆಯೇ ಎಲ್ಲೆಡೆಯೂ ಈ ಯೋಜನೆ ಕಾರ್ಯರೂಪದಲ್ಲಿ ಬರಲು ಸಾಧ್ಯವಾಗದು. ಉಪಾಧ್ಯಾಯರ ಸಂಖ್ಯೆ ಸಾಕಷ್ಟಿರಲಾರದು. ಅದಕ್ಕಾಗಿ ಉಪಾಧ್ಯಾಯರುಗಳ ವೇತನದಲ್ಲಿ ಭಡತಿಯನ್ನು ತೋರಿಸುತ್ತ ಅವರ ತರಬೇತಿಯು ಹೆಚ್ಚಾಗಬಿದ್ದರೆ ಅವರ ತುಟ್ಟಿಯೂ ಕಂಡುಬರುವುದು ಖಂಡಿತ. ಹಾಗಾಗಿ ಹೊಸ ಯೋಜನೆಯು ಕಾರ್ಯರೂಪದಲ್ಲಿ ಪ್ರಾಥಮಿಕ ಶಿಕ್ಷಣದ ಕಡ್ಡಾಯ. ಪ್ರಥಮ ಸ್ಥಾನ ಗಳಿಸಬೇಕಾಗಿದೆ. ದೂರದಿಂದ ಬರುವ ಬಡವಿದ್ಯಾರ್ಥಿಗಳಿಗೆ ಊಟದ ಏರ್ಪಾಡು ಮಾಡಲು ಕಷ್ಟವಾದಲ್ಲಿ ಬರೆ ಹಾಲನ್ನಾದರೂ ಪೂರೈಸಬೇಕಾಗುವುದು. ಮಧ್ಯಾಹ್ನಕ್ಕೆ ಪೌಷ್ಟಿಕ ಆಹಾರವನ್ನು ಒದಗಿಸಿಕೊಡುವುದೂ ಬ್ರಿಟನಿನ ಪ್ರಾಥಮಿಕ ಶಿಕ್ಷಣದಲ್ಲಿ ಒಂದು ಭಾಗವಾಗಿದೆ. ಈ ರೀತಿಯ ಶಿಕ್ಷಣದಲ್ಲಿ (ಒಂದನೇ ತರಗತಿಯಿಂದ ಐದರ ತನಕ) ಆಳ ಅಭ್ಯಾಸಕ್ಕೆ ಅವಕಾಶ ಕಡಿಮೆಯಾದ ಕಾರಣ ಆಟದೊಡನೆ ಪಾಠದ ಬೆರಕೆಯಾಗುವುದು ಅಗತ್ಯ. ಇದೇ ತತ್ವವು ಮಹಾತ್ಮರ ಮೂಲ ಶಿಕ್ಷಣದಲ್ಲೂ ಸೇರಿಕೊಂಡಿದೆ. ನೂಲು ತೆಗೆಯುವುದು ಉಣ್ಣೆ ಹೆಣೆಯುವುದೇ ಮೊದಲಾದ ಕೈಗಾರಿಕೆಯು ಬರಿಯ ಆಟಕ್ಕಾಗಿಯೇ ಹೊರತು: ಇದರಲ್ಲಿ ಹೆಚ್ಚಿನ ಉತ್ತಮ ರೀತಿಯ ವಸ್ತುಗಳನ್ನು ನಮಗೆ ಪಡೆಯಲು ಸಾಧ್ಯವಿಲ್ಲ. ಹೀಗೆ ದೇಶದ ಎಲ್ಲೆಡೆಗಳಲ್ಲೂ ಒಂದೇ ರೀತಿಯಲ್ಲಿ ವಿದ್ಯಾಭ್ಯಾಸವು ಮುಂದರಿಯುತ್ತ ಕಡಿಮೆ. ಎಂದರೆ ಹತ್ತು ವರ್ಷದೊಳಗೆ ದೇಶದ ಎಲ್ಲ ಮಕ್ಕಳೂ ಪ್ರಾಥಮಿಕ ಶಿಕ್ಷಣವನ್ನು ಪಡೆಯುವಂತಾದರೆ ಎಷ್ಟು ಚೆನ್ನ!

ಹಾಯರ್ ಎಲಿಮೆಂಟರಿ ಕ್ಲಾಸುಗಳಲ್ಲಿ ಹೆಚ್ಚಿನ ವಿದ್ಯಾರ್ಥಿಗಳು ಅಭ್ಯಾಸವನ್ನು ಮುಂದರಿಸಿ ಅಲ್ಲಿಯೇ ನಿಲ್ಲಿಸುವ ಸಂದರ್ಭಗಳು ಹೆಚ್ಚಿವೆ. ಹಾಗಾದ್ದರಿಂದ ಈ ಸ್ಥಿತಿಯಲ್ಲಿ ವಿದ್ಯಾರ್ಥಿಗಳು ಸಾಧಾರಣ ಹದಿಮೂರು ವರ್ಷಪ್ರಾಯದವರಾಗುವುದರಿಂದ ಇವರಲ್ಲಿ ಹೆಚ್ಚಿನ ನೈಪುಣ್ಯತೆ, ಕೈಚಳಕ ಹೆಚ್ಚಿಕೊಂಡಿದೆ. ಇವರಿಂದ ಉತ್ತಮ ವಸ್ತುಗಳನ್ನು ಪಡೆಯಬಹುದಾಗಿದೆ. ಆದ್ದರಿಂದ ಅಷ್ಟರಲ್ಲೇ ವಿದ್ಯಾಭ್ಯಾಸವನ್ನು ನಿಲ್ಲಿಸುವವರ ಪ್ರಯೋಜನಕ್ಕಾಗಿ ಯೋಗ್ಯ ಗುಡಿ ಕೈಗಾರಿಕೆಯೊಂದರ ತರಬೇತಿಯನ್ನು ಕೊಡುವುದವಶ್ಯಕ. ಸಾಬೂನಿನ ತಯಾರಿ, ಕಾಗದದ ತಯಾರಿ; ಕೈಮಗ್ಗ, ಬಾಚಣಿಗೆಯ ತಯಾರಿ, ಮೊದಲಾದ ಸರಳ ಕೈಗಾರಿಕೆಯಲ್ಲಿ ಒಂದರಲ್ಲಿ ತರಬೇತಿ ಮಾಡಿ ಅಭ್ಯಾಸವನ್ನು ನಿಲ್ಲಿಸಿದರೂ ಮನೆಯಲ್ಲಿಯೇ ಸ್ವತಂತ್ರ ಜೀವನವನ್ನು ನಡೆಸುವಷ್ಟು ನೈಪುಣ್ಯತೆಯನ್ನು ಪಡೆಯಬಹುದಾಗಿದೆ. ಇಲ್ಲದಿದ್ದಲ್ಲಿ ಪ್ರತಿಯೊಬ್ಬ ನೂತನ ಜೀವನ ನಿರ್ವಹಣೆಗಾಗಿ ದೂರದ ನಗರಗಳಲ್ಲಿನ ಗಿರಣಿ, ಹೋಟೇಲುಗಳತ್ತ ಹೋಗಿ ಅಲ್ಲಿ ವಾಸಿಸಿಕೊಂಡು ಅಮೂಲ್ಯ ಆರೋಗ್ಯವನ್ನು ಕಳೆದುಕೊಳ್ಳುವ ಸಂದರ್ಭಗಳು ಹೆಚ್ಚಿವೆ. ಅದೂ ಅಲ್ಲದೆ ಹೀಗೆ ಬಿಸಿ ರಕ್ತದ ಯೋಗ್ಯ ತರುಣರು ಹಳ್ಳಿಯನ್ನು ಬಿಟ್ಟು ಹೋಗುವುದರಿಂದ ಅಲ್ಲಿನ ಜನಶಕ್ತಿ Human power ತುಂಬ ಕಡಿಮೆಯಾಗಿ ಕೆಲಸ ಮಾಡಲು ಜನರೇ ಸಿಗದಂತಾಗುವರು. ಉಳಿದವರಲ್ಲಿ ಪ್ರೌಢ ಶಿಕ್ಷಣವನ್ನು ಪಡೆಯುವಂತಹವರು ಭಾಷೆ, ಚರಿತ್ರೆ, ಭೂಗೋಳ ಪಾಠಗಳನ್ನು ಹೆಚ್ಚು ಅಭ್ಯಾಸ ಮಾಡಬಹುದು. ಹೀಗೆ ಈ ಮಜಲಿನಲ್ಲಿಯೇ ಶಿಕ್ಷಣದಲ್ಲಿ ಎರಡು ವಿಭಾಗ Biforcation ವನ್ನು ಮಾಡುವುದು ಉಚಿತ.

(ಮುಂದುವರಿಯುವುದು)

ಸಹಕಾರಿ ಸಂಘಗಳಿಗೆ— —
ಮುನ್ಸಿಫ್ ಕೋರ್ಟುಗಳಿಗೆ—
ವರ್ಗದಾರರಿಗೆ—ಶಾಲೆಗಳಿಗೆ—
ಬೇಕಾಗುವ ರಿಜಿಸ್ಟರುಗಳು,
ರಶೀದಿ ಪುಸ್ತಕಗಳು,
ಫಾರ್ಮುಗಳು, ಎಕೌಂಟ್
ಪುಸ್ತಕಗಳು ದೊರೆಯುತ್ತವೆ.

ನವಯುಗ ಪ್ರೆಸ್ ಉಡುಪಿ.

ಬೇಂಕಿಂಗ್ ಸಂಬಂಧದಕ್ಕೆ ಎಲ್ಲಾ ಸಮಸ್ಯೆಗಳಿಗೆ

ದಿ ವಿಜಯಾ ಬೇಂಕ್ ಲಿಮಿಟೆಡ್

ಇವರ ಸಲಹೆ ಕೇಳಿರಿ

ಹೆಡ್ ಆಫೀಸು : : : : ಮಂಗಳೂರು.

ಮಡಿಕೇರಿಯಲ್ಲಿ ಒಂದು ಶಾಖೆಯೂ ಬೊಂಬಾಯಿಯಲ್ಲಿ ಒಂದು ಶಾಖೆಯೂ ಜಿಲ್ಲೆಯೊಳಗೆ ಹಲವು ಶಾಖೆಗಳೂ ಇವೆ.

ನಿರಖು ಠೇವಣಾತಿಗಳ ಮೇಲೆ ಆಕರ್ಷಕವಾದ ದರದ ಬಡ್ಡಿಯು ಕೊಡಲ್ಪಡುವುದು.	ಶಕ್ಯವಾದ ಜವಾಬ್ದಾರಿಗಳ ಮೇಲೆ ಸುಲಭವಾದ ಶರ್ತಗಳಲ್ಲಿ ಸಾಲಗಳು ಕೊಡಲ್ಪಡುವುವು.

ಸಾಲಿಯಾನ್ ಸೇಕಡಾ 4½ರ ಬಡ್ಡಿ ಗಳಿಸುವ ಮೂರು ವರ್ಷದ ಅವಧಿಯ ವಿಜಯಾ ಕೇಶ್ ಸರ್ಟಿಫಿಕೇಟುಗಳ ಮೇಲೆ

ಹಣವನ್ನು ಹಾಕಿರಿ

THE VIJAYA BANK, LTD.,

ಬಿ. ವಂಂಜಯ್ಯ ಹೆಗ್ಗಡೆ,
(ದ. ಕ. ಜಿಲ್ಲಾ ಬೋರ್ಡ್ ಪ್ರೆಸಿಡೆಂಟ್
ಡೈರೆಕ್ಟರ್ ಬೋರ್ಡಿನ ಅಧ್ಯಕ್ಷರು.

ಜೀವವಿಮೆಗಾಗಿ

ವಿಚಾರಿಸಿರಿ

ನ್ಯೂ ಗಾರ್ಡಿಯನ್ ಒಫ್ ಇಂಡಿಯಾ
ಲೈಫ್ ಇನ್ಸೂರೆನ್ಸ್ ಕೋ ಲಿಮಿಟೆಡ್.

(ಸ್ಥಾಪನೆ: 1934)

ಚೆಯರ್‌ಮೆನ್: ಶ್ರೀ. ಎಮ್. ಸಿಟಿ. ಎಮ್. ಚಿದಂಬರಮ್ ಚೆಟ್ಟಿಯಾರ್

ಪ್ರಗತಿ ಪಥದಲ್ಲಿರುವ ಈ ವಿಮಾ ಸಂಸ್ಥೆಯ ಪೊಲಿಸಿ ಪಡೆಯುವುದೆಂದರೆ ಅದೊಂದು ಉತ್ತಮ ವಿನಿಯೋಗ. ಅಂತೆಯೇ ಅದರ ಏಜನ್ಸಿ ಸಂಪರ್ಕವನ್ನಿಟ್ಟುಕೊಳ್ಳುವುದೂ ಅಮೂಲ್ಯ ವ್ಯವಹಾರವಾಗಿದೆ.

ಮಂಗಳೂರು ಶಾಖೆ:
ಕೆ. ಎಸ್. ರಾವ್. ರೋಡು,
ಹಂಪನಕಟ್ಟೆ, ಮಂಗಳೂರು.

ಕೇಂದ್ರ ಕಾರ್ಯಾಲಯ:
"ಯುನೈಟೆಡ್ ಇಂಡಿಯಾ ಲೈಫ್ ಬಿಲ್ಡಿಂಗ್ ಫೋಸ್ಟ್ ಬಾಕ್ಸ್ ನಂಬ್ರ 142
ಮದ್ರಾಸು.

ಸರ್. ಮೆಕಾರ್ಥರನ್ನು ಕಿತ್ತೊಗೆಯಲಾಯಿತು!

1ನೇ ಪುಟದಿಂದ

ವ್ಯವಹಾರಿಯು ದುಡಿದು ತರಕಾರಿಯನ್ನೋ ಹಣ್ಣುಹಂಪಲನ್ನೋ ಬೆಳೆಸಿ ತಾನು ತಿನ್ನುವ ಮೊದಲು ಧನಿಗೆ ಪ್ರೀತಿಯಿಂದ ಸಲ್ಲಿಸುತ್ತಾನೆ. ಹೀಗಾಗಿ ದೊಡ್ಡವರಿಗೆ ಒಂದು ಪೈಯೂ ಖರ್ಚಾಗದೆ ದುಡ್ಡಿಗೆ ದುಡ್ಡು ಕೂಡಿ ಮತ್ತಷ್ಟು ಗಂಟು ದೊಡ್ಡದಾಗುತ್ತದೆ. ಮಹಾ ಉದಾರಿಗಳಾದ ಬಡವರು ಬಡವರಾಗಿಯೇ ಹೋಗುತ್ತಾರೆ. ಬಡವರಿಗೆ ಸಹಕಾರನೀಡುವವರಿಲ್ಲ- ಕಷ್ಟ ಕಾಣಿಕೆ ಕೊಡುವವರಿಲ್ಲ. ಸರಕಾರೀ ಕಚೇರಿಗಳಲ್ಲಿ ದಿನಗಟ್ಟಲೆ ಕಾದು ತುಂಬ ಖರ್ಚುಮಾಡಿ ತಮ್ಮ ಕಾರ್ಯವನ್ನು ಸಾಧಿಸಿಕೊಳ್ಳಬೇಕಾಗಿದೆ. ಬಡವರಿಗೆ ಉಪಕಾರ ಮಾಡುವವರು ಬಡವರೇ ಆಗಿರುತ್ತಾರೆ. ಹಾಗಾಗಲಿಕ್ಕೆ ಬಡವರ ಕಷ್ಟದುಃಖಗಳ ಅರಿವು ಬಡವರಿಗಾದಷ್ಟು ಬೇರೆಯವರಿಗಾಗದಿರುವುದೇ ಮುಖ್ಯ ಕಾರಣ. ಸರಕಾರದ ,ಕಾಯಿದೆ ಕಾನೂನುಗಳನ್ನು ಯಾರು ಪಾಲಿಸುವವರೆಂದರೆ ನಮ್ಮ ಬಡವರೇ! ಬಹು ಸಂಖ್ಯಾಕರು ಅವರೇ ಆಗಿರುವುದರಿಂದ ಅದರ ಪ್ರಯೋಗವೆಲ್ಲ ಅವರ ಮೇಲೆಯೇ ಆಗಿರುತ್ತದೆ.

ಹೀಗೆ ಜಗತ್ತು 'ಚಿಕ್ಕದೊಡ್ಡವರೆಂಬ' ಎರಡು ಪಂಗಡಗಳಿಂದ ಸಾಗುತ್ತಲಿದೆ. ಬಡವರು ಬಡವರಾಗಿರುವುದು—ದೊಡ್ಡವರ ದೃಷ್ಟಿಯಲ್ಲಿ ತಪ್ಪಾದರೆ ದೊಡ್ಡವರು ತೋರುವ ಸೈತಾನ ವೃತ್ತಿ ದೇವರ ದೃಷ್ಟಿಯ ಮಹಾಪರಾಧವೇ ಸರಿ!

ಅಮೃತಾಂಜನ

ತಲೆವೇದನ, ಶಿರೋವೇದನೆ, ಉಳುಕು ಕುತ್ತಿಗೆ, ಭುಜ ಹಲ್ಲು ವೇದನೆಗಳಿಗೂ, ಎದೆನೋವು, ಗಾಯಗಳು, ಬಾತುಕೊಳ್ಳುವುದು, ಚೇಳವಿಷಮುಂತಾದವು, ಪಕ್ಷವಾತ, ಮೊಡಿವೆ. ಮೊದಲಾದ ಎಲ್ಲಾರೋಗಗಳಿಗೂ ಸಿದ್ಧೌಷಧ



1 EGD

ಹುಳು ಕಡ್ಡಿ ಮದ್ದು ನಮ್ಮಲ್ಲಿ ಸಿಕ್ಕುತ್ತವೆ

ಅಮೃತಾಂಜನ ಲಿಮಿಟೆಡ್

ಮದರಾಸು.

ಬೊಂಬಾಯಿ ಮತ್ತು ಕಲ್ಕತ್ತ.

ಸ್ವಲ್ಪ ಬಂಡವಾಳದಲ್ಲಿ

ಒಂದು ಉಪಯುಕ್ತ ಹಾಗೂ ಲಾಭಕರ ಉದ್ಯೋಗ.

ಸೋ ಐ ಲ್, ಎಣ್ಣೆಯ ಮಿಲ್ ಅಥವಾ ಟಿನ್ ಯಾ ತಗಡಿನಿಂದ ಅನೇಕ ವಸ್ತುಗಳನ್ನು ಸುಲಭದಲ್ಲಿ ತಯಾರಿಸಿರಿ.

ವಿವರದ ಬಗ್ಗೆ ಬರೆಯಿರಿ:

The Vijay Engineering Co. Ltd.

Mazagaon. Bombay 10.

ಜನರಲ್ ಮೆಕಾರ್ಥರ ಪದಚ್ಯುತಿಯ ಅನಿರೀಕ್ಷಿತ ಸುದ್ದಿಯೊಂದು ಸದ್ಯದ ಆಶ್ಚರ್ಯದಾಗೂ ಸೋಜಿಗದ ಸಂಗತಿಯಾಗಿದೆ. ಸಂಯುಕ್ತ ರಾಷ್ಟ್ರಗಳು ಜನರಲ್ ಮೆಕಾರ್ಥರ ಆದೇಶವನ್ನು ಕೊಂಡಾಡುತ್ತಿದ್ದು ಅವರ ಪ್ರತಿಯೊಂದು ಕಾರ್ಯದಕ್ಷತೆಗೂ ತಮ್ಮ ಸಂಪೂರ್ಣ ಸಹಕಾರ ಕೊಡುತ್ತಲಿದ್ದು, ಒಮ್ಮೆಯೇ ಅವರನ್ನು ಯುದ್ಧರಂಗದಿಂದ ಕರೆಸಿಕೊಳ್ಳುವದು. ಮಾತ್ರವಲ್ಲದೆ ಅವರ ಅಧಿಕಾರವನ್ನು ಸಂಪೂರ್ಣ ಕಸಿದುಕೊಂಡದ್ದು ಪರಮಾಶ್ಚರ್ಯದ ಸಂಗತಿ. ಕೊರಿಯದಲ್ಲಿ ಸರ್ ಮೆಕಾರ್ಥರ ಕಾರ್ಯಪ್ರವೃತ್ತಿ ಅಧಿಕವಾಯಿತೆಂದೂ ಸಂಯುಕ್ತ ರಾಷ್ಟ್ರಗಳ ಆಜ್ಞೆಯನ್ನು ಮೀರಿ ಯುದ್ಧರಂಗದಲ್ಲಿ ಸ್ವೇಚ್ಛಾನುವೃತ್ತಿಯ ವರ್ತನೆಯನ್ನು ಪ್ರದರ್ಶಿಸಿದ್ದರಿಂದ ಅವರನ್ನು ಕೆಲಸದಿಂದ ಕಿತ್ತೊಗೆಯಲಾಯಿತೆಂದು ಅಧ್ಯಕ್ಷ ಟ್ರೂಮನರು ತಮ್ಮ ಹೇಳಿಕೆಯಲ್ಲಿ ಹೇಳಿರುತ್ತಾರೆ. ಮೆಕಾರ್ಥರು ಬಿಡುಗಡೆಗೆ ಸಂಯುಕ್ತರಾಷ್ಟ್ರ ಹಾಗೂ ಅಮೇರಿಕೆಯ ಘೋಷಣೆಗೆ ವಿರುದ್ಧವಾಗಿ ಕಾರ್ಯಕ್ರಮ ಕೈಗೊಂಡದ್ದೂ, ಚಿಯಾಂಗ ಕೈಶೇಕರ ರಾಷ್ಟ್ರೀಯ ಚೀನಾದ ಸೈನಿಕರನ್ನು ಕಮ್ಯೂನಿಸ್ಟ್ ಚೀನಾದ ಮೇಲೆ ಏರಿಹೋಗುವಂತೆ ಬಳಸಿಕೊಳ್ಳುವದೂ, ಕಮ್ಯೂನಿಸ್ಟ ಚೀನದಮೇಲೆ ತೀವ್ರತರವಾದ ಬಾಂಬುಯುದ್ಧವನ್ನು ಕೈಗೊಂಡು ಕಮ್ಯೂನಿಜಮನ್ನು ನಿರ್ಮೂಲ ನಾಶಮಾಡಬೇಕೆಂದು ಬಯಸಿದ್ದೂ, ಅಂತೆಯೆ ಮಂಚೂರಿಯದಮೇಲೆ ಬಾಂಬನ್ನೆಸೆಯಲು ತಾನು ತಾನೇ ಪ್ರವೃತ್ತನಾದದ್ದೂ ಮುಂತಾದವು ಮುಖ್ಯ ಕಾರಣಗಳಾಗಿರುತ್ತವೆ. ಮಂಚೂರಿಯದ ಮೇಲೆ ಪ್ರಚಂಡ ಬಾಂಬುಧಾಳಿಯನ್ನು ಕೈಗೊಳ್ಳುವ ವಿಚಾರದಲ್ಲಿ ತೀವ್ರ ಪ್ರತಿಭಟನೆಗಳು ಸಂಯುಕ್ತ ರಾಷ್ಟ್ರಗಳಲ್ಲಿ ಕಂಡುಬಂದಿವೆ. ಪ್ರಬಲ ವಿರೋಧವನ್ನು ಸೂಚಿಸುವಲ್ಲಿ ಬ್ರಿಟನ್ ಮುಖ್ಯವಾಗಿತ್ತು. ಅಮೇರಿಕೆಯು ಕಮ್ಯೂನಿಜಮದ ಕಡು ವಿರೋಧಿಯಾಗಿದ್ದರೂ ಬ್ರಿಟನ್‌ಆ ವಿರೋಧವನ್ನು ಕಮ್ಯೂನಿಜಮ್ಮದ ವೇಳೆ ತಾಳುವಂತಿಲ್ಲ. ಮಂಚೂರಿಯದ ಮೇಲೆ ಬಾಂಬು ಧಾಳಿಯಾದರೆ ರಷ್ಯವು ನೇರಾಗಿ ಯುದ್ಧದಲ್ಲಿ ತೊಡಗುವುದು. ರಷ್ಯವು ಯುದ್ಧಕ್ಕೆ ತೊಡಗಿದರೆ ಬ್ರಿಟನ್ ಮೊದಲಾಗಿ ಆತ್ಮಾಹುತಿ ಕೊಡಬೇಕಾಗುತ್ತದೆ. ಮಾತ್ರವಲ್ಲದೆ ಬ್ರಿಟನಿನಲ್ಲಿ ಕಮ್ಯೂನಿಸಮ್ಮದ ಅಭಿಮಾನಿಗಳು ಅಮೇರಿಕಗಿಂತ ಹೆಚ್ಚು ಸಂಖ್ಯೆಯಲ್ಲಿರುತ್ತಾರೆ. ಹೀಗಾಗಿ ಬ್ರಿಟನ್ ಅಮೇರಿಕೆಯನ್ನು ಜ| ಮೆಕಾರ್ಥರನ್ನು ಹಿಂದೆ ತರಿಸುವದರ ಮೂಲಕ ಯುದ್ಧವನ್ನು ನಿರೋಧಿಸಿತು! ರಾಷ್ಟ್ರೀಯ ಸೈನ್ಯವನ್ನು ಕಮ್ಯೂನಿಸ್ಟ್ ಚೀನಾದ ವಿರುದ್ಧ ಬಳಸಿಕೊಳ್ಳುವ ವಿಚಾರದಲ್ಲಿ ಇತರ ರಾಷ್ಟ್ರಗಳು ವಿರೋಧ ಸೂಚಿಸಿದ್ದವು. ಮಂಚೂರಿಯದ ಮೇಲೆ ಮೆಕಾರ್ಥರು ಮಾಡಿದ ಅಭಿಯೋಗವನ್ನು ಅರೆಮನಸ್ಸಿನಿಂದಲಾದರೂ ಮೆಚ್ಚುವವರು ಅಮೇರಿಕನರು! ಉಳಿದ ರಾಷ್ಟ್ರಗಳು ಪ್ರತಿಭಟಿಸುವಾಗ ಅಮೇರಿಕೆಗೆ ಸರ್ ಮೆಕಾರ್ಥರರನ್ನು ಹಿಂದೆ ಕರೆಸಿಕೊಳ್ಳುವುದು ಅನಿವಾರ್ಯವಾಯಿತು. ಇತ್ತೀಚಿನ ಅವರ ಕೃತಿಯಿಂದ ಅಸಂತುಷ್ಟವಾದ ರಾಷ್ಟ್ರಗಳ ವಾದವನ್ನು ಟ್ರೂಮನರು ಒಪ್ಪಿಕೊಂಡದ್ದು ಆಶ್ಚರ್ಯದ ಸಂಗತಿ. ಕಮ್ಯೂನಿಸ್ಟರನ್ನು ಸದೆಬಡಿಯಲು ಮೊದಲಿಂದ ಸಂಪೂರ್ಣಾಧಿಕಾರವನ್ನು ಕೊಟ್ಟ ಟ್ರೂಮನರು ಈಗ ಅವರನ್ನು ಪದಚ್ಯುತರನ್ನಾಗಿ ಮಾಡಿದ್ದು ಸ್ವಸಂತೋಷದಿಂದಲ್ಲ! ಮಂಚೂರಿಯದ ಮೇಲೆ ಬಾಂಬೆಸೆದರೆ ತೃತೀಯ ಮಹಾಯುದ್ಧ ಉದ್ಭವಿಸುವುದು ಸ್ವಾಭಾವಿಕ. ಆಗ ಉಳಿದ ರಾಷ್ಟ್ರಗಳು ಅಮೇರಿಕೆಯ ಔದಾರ್ಯದ ಉರುಳಲ್ಲಿ ಸಿಕ್ಕಿಕೊಂಡು ಆತ್ಮಹತ್ಯೆಯನ್ನು ಮಾಡಿಕೊಳ್ಳಲಾರವೆಂಬುದನ್ನು ಟ್ರೂಮನ್ ಚೆನ್ನಾಗಿ ಬಲ್ಲರು. ಈ ವರೆಗೆ ತಾನಿತ್ತ ಸಲುಗೆಯಿಂದ ಸರ್ ಮೆಕಾರ್ಥರ್ ಸಾಮಾನ್ಯವಾಗಿ ವಾಶಿಂಗಟನದ ಹಿತೋಪದೇಶವನ್ನು ಕೇಳುವಂಶವನ್ನು ಇಟ್ಟುಕೊಂಡಿರದೆ ತನ್ನದೇ ಕಾರುಭಾರು ನಡೆಸುವಂತಹ ಧೋರಣೆಯನ್ನಿಟ್ಟುಕೊಂಡರು. ತನ್ನ ಕೈಯೊಳಗಿನ ಕಡಿವಾಣ ತಪ್ಪುತ್ತೆಂದಮೇಲೆ ಟ್ರೂಮನ್ ಮನಸ್ಸಿಲ್ಲದ ಮನಸ್ಸಿನಿಂದ ಮೆಕಾರ್ಥರರನ್ನು ಪದಚ್ಯುತಗೊಳಿಸಿದರು. "ಸಂಯುಕ್ತ ರಾಷ್ಟ್ರಗಳ ತೀವ್ರ ಒತ್ತಾಯಕ್ಕಾಗಿ ಪ್ರತಿಭಾಶಾಲಿಯಾದ ಮೆಕಾರ್ಥರನ್ನು ಕಾರ್ಯನಿವೃತ್ತರನ್ನಾಗಿ ಮಾಡುವ ದುಃಖಸಂಗತಿಗೆ ನಾನು ಕೈಯಿಕ್ಕಬೇಕಾಯಿತು." ಎಂದು ಹೇಳಿರುತ್ತಾರೆ.

ಸಂಯುಕ್ತ ರಾಷ್ಟ್ರಗಳೂ ಏಷ್ಯಾ ರಾಷ್ಟ್ರಗಳೂ ಮೆಕಾರ್ಥರ ಪದನಿವೃತ್ತಿಯನ್ನು ಶ್ಲಾಘಿಸಬಹುದಾದರೂ ಅಮೇರಿಕೆಯು ವಿಶೇಷ ಕಳವಳವೆದ್ದಿದೆ. ರಿಪಬ್ಲಿಕನ್ ಡೆಮಾಕ್ರಟಿಕ್, ಪಕ್ಷಗಳಲ್ಲಿ ಟ್ರೂಮನ ಧೋರಣೆಯನ್ನ ವಿರೋಧಿಸುವ ಸಮರ್ಥಿಸುವವರ ಸಂಖ್ಯೆ ಸಮಸಮವಾಗಿರುತ್ತದೆ. ಮೆಕಾರ್ಥರರನ್ನು ತೆಗೆದುಹಾಕಿದ ನಿಮಿತ್ತ ಈಗಾಗಲೇ ಹಲವಾರು ಪ್ರತಿಕ್ರಿಯೆಗಳು ಅಮೇರಿಕೆಯಲ್ಲಿ ತಲೆದೋರಿವೆ. ಟ್ರೂಮನ್ನರಿಗೆ ನಿಷೇಧ ಸೂಚನೆಯ ತಂತಿಗಳ ಸಂಖ್ಯೆ ಅಪರಿಮಿತವಾಗಿವೆ. ಟ್ರೂಮನ ವಿರೋಧಪಕ್ಷದವರು ಈ ಸಂದರ್ಭದ ಉಪಯೋಗವನ್ನು ವಿರೋಧ ಪ್ರಚಾರಮಾಡುವದರ ಮೂಲಕ ಚೆನ್ನಾಗಿ ಉಪಯೋಗಿಸಿಕೊಳ್ಳುತ್ತಾರೆ.

ಮೆಕಾರ್ಥರ್ ಹುಟ್ಟುಯೋಧ! ಇದು ಅವರ ನಿರಂಕುಶ ಪ್ರಭುತ್ವವನ್ನು ಟೀಕಿಸುವದಾದರೂ ಅವರ ಅಪ್ರತಿಮ ಸಾಹಸವನ್ನೂ ಯುದ್ಧಕಲೆಯನ್ನೂ ಕೊಂಡಾಡಬೇಕಾಗಿದೆ. ದ್ವಿತೀಯ ಮಹಾಯುದ್ಧದಲ್ಲಿ ಜಪಾನನ್ನು ಅಂಕಿತದಲ್ಲಿಟ್ಟುಕೊಳ್ಳುವಲ್ಲಿ ತೋರಿಸಿದ ಸಾಹಸ ಅಸದೃಶವಾದುದು. ಹದಿನೈದು ವರ್ಷಗಳಿಂದಲೂ ತನ್ನ ಹುಟ್ಟೂರಿಗೆ ಕಾಲಿಡದೇ ಯುದ್ಧರಂಗವನ್ನೇ ತನ್ನ ವಸತಿಯನ್ನಾಗಿ ಮಾಡಿಕೊಂಡು ಸೈನಿಕರೇ ತನ್ನ ಬಂಧುಗಳೆಂದು ಭಾವಿಸಿ ಉಜ್ವಲ ಪ್ರಗತಿಯನ್ನು ಸಾಧಿಸಿದ ಮಹಾವೀರರವರು. ಅವರ ಸೇವಾ ಜೀವನದ ಕುರಿತು ಅಮೇರಿಕೆಯ ಜನಕ್ಕೆ ಮಾತ್ರವಲ್ಲ ಜಗತ್ತಿನ ಜನತೆಗೇ ಕುತೂಹಲವಿದೆ. ಪದಚ್ಯುತಿಯ ಸುದ್ದಿಯನ್ನು ಕೇಳಿ ಒಬ್ಬನು ಎದೆಯೊಡೆದು ಸತ್ತುಹೋದನಂತೆ. ಎಪ್ಪತ್ತರ ಗಡಿದಾಟಿದ ಮೇಲೂ ಅವರು ತೋರುತ್ತಿರುವ ಕೆಚ್ಚನ್ನು ಕಂಡು ಯಾರೂ ಬೆರಗಾಗಬೇಕು! ಆದರೆ ಎ.ಲಿ ರ ಅಧಿಕಾರದ ದುರುಪಯೋಗಪಡಿಸಿದ್ದು ಅಕ್ಷಮ್ಯ ಅಪರಾಧ! ಮಾನವೀಯ ಅಭಿಪ್ರಾಯಗಳನ್ನು ಕಡೆಗಣಿಸಿ ತೃತೀಯ ಮಹಾಯುದ್ಧದ ಭೀಕರ ಪರಿಸ್ಥಿತಿಯನ್ನು ನಿರ್ಮಾಣಮಾಡಿದ್ದನ್ನು ಯಾವ ವಿವೇಕಿಗಳೂ ಸಹಿಸರು! ಈ ವರೆಗೆ ಪಾಶ್ಚಾತ್ಯ ರಾಷ್ಟ್ರಗಳು ಏಷ್ಯಾದ ಸಕಾಲಿಕ ಸಲಹೆಯನ್ನು ಕಡೆಗಣಿಸುತ್ತ ಬಂದರೂ ಅತ್ಯವಸರ ಸಮಯದಲ್ಲಿಯೇ ಯೋಗ್ಯ ಕ್ರಮ ಕೈಗೊಂಡದ್ದು ಅನುಚಿತವೇ ಆಗಿದೆ!

ಸೈನ್ಯವರ್ಗಗಳಲ್ಲೂ ಮೆಕಾರ್ಥರ ಜಾಗದೆಯ ವಿಚಾರ ವಿವಾದವೂ ವಿಸ್ಮಯಕರವೂ ಆಗಿದೆ. ಜನರಲ್ ರಿಗ್ವೆಯವರು ಮೆಕಾರ್ಥರ ಸ್ಥಾನಕ್ಕೆ ಆರಿಸಲ್ಪಟ್ಟಿರುತ್ತಾರೆ. ಅವರೂ ಸೈನ್ಯವಿಭಾಗದಲ್ಲಿ ದೀರ್ಘಕಾಲ ಅನುಭವಿಗಳು. ಮೆಕಾರ್ಥರ ಸ್ಥಾನವನ್ನೇ ಯೋಗ್ಯರೆಂದು ಹೇಳುವಂತಿಲ್ಲವಾದರೂ ಮೆಕಾರ್ಥರ ನಂತರ ಅನುಭವಸ್ಥ ವ್ಯಕ್ತಿಯೆಂದರೆ ಅವರೇ. ಸರ್ ಮೆಕಾರ್ಥರನ್ನು ವಾಶಿಂಗಟನ್ನಿಗೆ ಕರೆಸಿ ವಿಚಾರಣೆ ನಡೆಸುವ ಸಿದ್ಧತೆ ಈಗಾಗಲೇ ನಡೆದಿದೆ. ವಾರದಲ್ಲೇ ಅವರು ಅಮೇರಿಕೆಗೆ ಬರುವಂತೆ ಆಹ್ವಾನಿಸಲಾಗಿದೆ. ಕಾಂಗ್ರೆಸ್ಸಿನವರೆದೆ ಅವರು ಹೇಳಿಕೆಕೊಡಬಹುದು. ಇಂ ಮೆಕಾರ್ಥರನ್ನು ಕುರಿತ ಸಮರವು ಸಾರ್ವತ್ರಿಕವಾದುದಾಗಿರುತ್ತದೆಂದೇ ಹೇಳಬೇಕು.

ದಿ ವಿಜಯಾ ಬೇಂಕ್ ಲಿಮಿಟೆಡ್, ಕಾರ್ಕಳ.

ಏಲಂ ನೋಟೀಸು

ಈ ಕೆಳಗೆ ಹೆಸರು ಕಾಣಿಸಿದ ಅಸಾಮಿಗಳು ಈ ಬೇಂಕಿನಿಂದ ಚಿನ್ನಾಭರಣಗಳ ಅಡವಿನ ಮೇಲೆ ಪಡಕೊಂಡ ಈ ಕೆಳಗೆ ನಮೂದಿಸಿದ ಸಾಲಗಳ ಅಸಲು ವ ಬಡ್ಡಿ ಇತ್ಯಾದಿಗಳನ್ನು ಬೇಂಕಿನ ಕ್ರಮ ಪ್ರಕಾರ ನೋಟೀಸು ವ ರಿಜಿಸ್ಟ್ರಿ ನೋಟೀಸು ಕೊಟ್ಟಾಗ್ಯೂ ಬಾಕಿಮಾಡಿಕೊಂಡಿರುವುದರಿಂದಲೂ ಕೆಲವರಿಗೆ ಕೊಟ್ಟ ನೋಟೀಸು ವ ರಿಜಿಸ್ಟ್ರಿನೋಟೀಸು ಕಾರಣಾಂತರದಿಂದ ವಾಪಾಸು ಬಂದಿರುವುದರಿಂದಲೂ ಸದ್ರಿ ಸಾಲಗಳ ಸಂಬಂಧ ಬೇಂಕಿಗೆ ಸಲ್ಲತಕ್ಕ ಪೂರಾ ಐವೇಜುಗಳನ್ನು ಇದೇ ತಾರೀಕು 26-4-51ನೇ ಗುರುವಾರದೊಳಗೆ ಸಲ್ಲಿಸದೆ ಇದ್ದಲ್ಲಿ ಸದ್ರಿಸಾಲಗಳಲ್ಲಿ ಅಡವಿಟ್ಟ ಚಿನ್ನಾಭರಣಗಳನ್ನು ಇದೇ ತಾರೀಕು 28-4-51ನೇ ಶನಿವಾರ ಮಧ್ಯಾಹ್ನ ಗಂಟೆ 1ಕ್ಕೆ ಯಾ ಬೇಂಕಿಗೆ ಯುಕ್ತ ತೋರುವ ಇನ್ನಿತರ ದಿನಗಳಲ್ಲಿ ಪುನಃ ನೋಟೀಸು ಕೊಡದೇನೇ ಈ ಬೇಂಕಿನ ಆಫೀಸಿನಲ್ಲಿ ಬಹಿರಂಗವಾಗಿ ಏಲಂ ಮಾಡಲ್ಪಡುವುದು ತಿಳಿದಿರಲಿ.

ಲೋನು ನಂಬ್ರ	ಅಡಿಟ್ಟವರ ಹೆಸರು ಮತ್ತು ವಿಳಾಸ.
724/47-8	ನೊನಯ ಹೆಗ್ಡೆ, ತಿಮ್ಮಯ್ಯ ಹೆಗ್ಡೇರ ಮಗ ಬೋರ್ಲ್‌ಜಾಡಿ ಗ್ರಾಮ, ಪೋಸ್ಟು ಬೈಲೂರು.
866/48-9	ಅಲ್ಬರ್ಟ ಡಿಸೋಜ, ಸಿಮಾವು ಡಿಸೋಜರ ಮಗ ಎಲತ್ತೂರು ಗ್ರಾಮ ಪೋಸ್ಟು ಅಂಗಳ.
201/49-950	ಬಿ. ಭುಜಂಗ ಹೆಗ್ಡೆ, ತಿಮ್ಮಪ್ಪ ಹೆಗ್ಡೇರ ಮಗ, ಜವುಳಿ ವ್ಯಾಪಾರಿ ಪಡ್ಡಣ.

Office of the Bank KARKALA. 13-4 1951 }

K. Gopalkrishna Shetty
Agent.

ಅವರು ಹೇಳಿದ್ದೇನು?

ಬಡೋದೆಯ ರಾಜರಿಗೆ ಅರ್ಧ ಚಂದ್ರ

ಬಡೋದೆಯ ಮಹಾರಾಜ ಗಾಯಕವಾಡರನ್ನು ಅವರ ಸ್ಥಾನದಿಂದ ತೆಗೆದು ಹಾಕಿ ಅವರ 21 ಪ್ರಾಯದ ಹಿರೀ ಮಗನನ್ನು ಆ ಸ್ಥಾನಕ್ಕೆ ನೇಮಿಸಲಾಗಿದೆಂದು ಭಾರತಸರಕಾರದ ಅಧ್ಯಕ್ಷರ ಆಜ್ಞೆಯನ್ನು ಶ್ರೀ ಜವಾಹರಲಾಲರು ಪಾರ್ಲಿಮೆಂಟಿನ ಮುಂದೆ ಓದಿ ಹೇಳಿದರು. ಬಡೋದೆಯ ಮಹಾರಾಜರು ಕೋಟಿಗಟ್ಟಲೆ ಸಾರ್ವಜನಿಕ ಹಣವನ್ನು ಅಪವ್ಯಯ ಮಾಡಿದ್ದರು. ಪ್ರಜೆಗಳ ಸುಖಕಷ್ಟಗಳನ್ನು ವಿಚಾರಿಸದೆ ಸ್ವೇಚ್ಛಾನುವೃತ್ತಿಯಿಂದ ವಿರಾಮಮಯ ಜೀವನ ನಡೆಸುತ್ತಿದ್ದರು. ತಮ್ಮ ಜೀವನವನ್ನೆಲ್ಲ ಪರದೇಶಗಳಲ್ಲಿ ಕುದುರೆ ಜೂಜು, ಇನ್ನಿತರ ವಿಲಾಸಪ್ರವೃತ್ತಿಗಳಲ್ಲಿ ಕಳೆಯುತ್ತಿದ್ದರು. ಈ ಬಗೆಯ ಸ್ವೇಚ್ಛಾನುವೃತ್ತಿಯು ಇನ್ನಿತರ ರಾಜರುಗಳಲ್ಲಿಯೂ ಕಂಡುಬಂದಿತ್ತು. ಬ್ರಿಟಿಷರ ಕಾಲದಲ್ಲಿ ಈ ರಾಜರುಗಳಿಗೆ ಯಥೇಚ್ಛವಾದ ಸ್ವಾತಂತ್ರ್ಯವನ್ನು ಕೊಟ್ಟದ್ದರಿಂದಲೇ ಈ ರಾಜರು ತಮ್ಮ ಜೊಣೆಗಾರಿಕೆಯನ್ನು ಮರೆತು ಭೋಗಜೀವನ ನಡೆಸಲು ಮನಸ್ಸು ಹಾಕಿದರು. ಹೀಗೆ ವಿಶೇಷ ತನ್ನ ಅಧಿಕಾರದ ದುರುಪಯೋಗ ಗೊಳಿಸಿದವರಲ್ಲಿ ಬಡೋದೆಯ ಮಹಾರಾಜರು ಸುಪ್ರಸಿದ್ಧರು! ಭಾರತ ಸರಕಾರ ಅಧಿಕಾರಕ್ಕೆ ಬಂದನಂತರ ಸರ್ದಾರ್ ಪಟೇಲರು ಸಂಸ್ಥಾನದೊಳಗಿನ ಅಸ್ಥಿರತೆಯನ್ನು ಕಂಡು; ಅವರನ್ನು ತನ್ನ ಮುಂಗಮುಷ್ಟಿಯೊಳಗೆ ತಂದರು. ಎಲ್ಲ ಸಂಸ್ಥಾನಗಳೂ ಭಾರತ ಸರಕಾರದ ಅಧಿಕಾರಕ್ಕೊಳಪಟ್ಟದ್ದರಿಂದ— ಈ ರಾಜರುಗಳ ಸ್ವೇಚ್ಛಾನವೃತ್ತಿಗೆ ಬಲವಾದ ಕೊಡಲಿಯೇಟು ಬಿತ್ತು. ತಮ್ಮ ಸ್ವಾರ್ಥಸಾಧನೆಗೆ ವಿರೋಧವಾದುದನ್ನು ಕಂಡು ಈ ರಾಜರುಗಳು ಕುಪಿತರಾದರು. ಆದರೆ ಸರ್ದಾರ್ ಪಟೇಲರ ಮುತ್ಸದ್ದಿತನದಿಂದ ಇವರ ಯಾವ ಕಾರ್ಯವೂ ಪ್ರಯೋಜನಕ್ಕೆ ಬರಲಿಲ್ಲ.

ನರೇಂದ್ರರ ಸಂಘದ ಅಧ್ಯಕ್ಷರಾಗಿದ್ದುಕೊಂಡು ಭಾರತ ಸರಕಾರಕ್ಕೆ ವಿರುದ್ಧ ಸಂಚನ್ನು ಹೂಡಬೇಕೆಂದು ಬಡೋದೆಯ ಮಹಾರಾಜರು ಗುಪ್ತಚಟುವಟಿಕೆಯನ್ನು ನಡೆಸಿದ್ದರು. ಬಡೋದೆಯನ್ನು ಮುಂಬಯಿಯಲ್ಲಿ ಲೀನಗೊಳಿಸಿದ್ದು ದೊಡ್ಡ ಪ್ರಮಾದವೆಂದು ಭಾರತ ಸರಕಾರದ ಧೋರಣೆಯನ್ನು ಕಟುವಾಗಿ ಟೀಕಿಸಿದ್ದನ್ನು ಭಾರತ ಸರಕಾರವು ಗಂಭೀರವಾಗಿ ಯೋಚಿಸುವವೆಂದೂ ಮುಂದೆ ಇಂತಹ ಹೂಣಿಗೇಡಿ ಕೆಲಸದಲ್ಲಿ ರಾಜರು ಕೈಹಾಕಿದರೆ ತೀಕ್ಷ್ಣ ಕ್ರಮ ತೆಗೆದುಕೊಳ್ಳಬೇಕಾಗುತ್ತದೆಂದೂ ಭಾರತ ಸರಕಾರ ಎಚ್ಚರಿಕೆ ಕೊಟ್ಟಿತ್ತು. ಆದರೆ ಗಾಯಕವಾಡರು ಇತರ ನರೇಂದ್ರರಿಂದೊಡಗೂಡಿ ವಿಧ್ವಂಸಕ ಕಾರ್ಯಗಳಲ್ಲೆ ತಲೆ ಹಾಕಿದ್ದು ಭಾರತ ಸರಕಾರದ ಗಮನಕ್ಕೆ ಬಂದದ್ದರಿಂದಲೂ ಭಾರತ ಸರಕಾರದ ಎಚ್ಚರಿಕೆಯನ್ನು ಕಡೆಗಣಿಸಿದ್ದರಿಂದಲೂ, ರಾಷ್ಟ್ರಾಧ್ಯಕ್ಷರು ಅವರನ್ನು ಪದಚ್ಯುತಿಗೊಳಿಸಿದ್ದಾರೆ. ಅವರ ಸ್ಥಾನದಲ್ಲಿ 21 ವರ್ಷ ಪ್ರಾಯದ ಹಿರಿಯ ಮಗ ಪತಹಸಿಂಗರನ್ನು ಕೂಡ್ರಿಸಲಾಗುವುದು. ಗಾಯಕವಾಡರು ಎಲ್ಲ ರೀತಿಯ ಹಕ್ಕುಬಾಧ್ಯತೆಗಳನ್ನು ಕಳೆದುಕೊಂಡಿರುವರು. ಅವರಿಗಿನ್ನು ಯಾವ ರೀತಿಯ ರಾಜಮನ್ನಣೆಯೂ ಸಲ್ಲುವಂತಿಲ್ಲ. ಗಾಯಕವಾಡರಿಗೆ ವರ್ಷಾಶನವೆಂದು ಕೊಡುತ್ತಿರುವ 26½ ಲಕ್ಷ ರೂಪಾಯಿಗಳು ಇನ್ನು ಸಿಗಲಾರವು. ಪತಹಸಿಂಗರಿಗೆ ವರ್ಷಾಶನವೆಂದು 10 ಲಕ್ಷ ಮಾತ್ರ ಸಿಗುವದು.

ಹಿಂದಿನ ರಾಜರುಗಳ ಧವಳ ಕೀರ್ತಿಗೆ ಕಳಂಕವನ್ನುಂಟುಮಾಡತಕ್ಕ ಈ ನರೇಂದ್ರರ ಕೃತಿಯು ಖಂಡನೀಯವಾದದ್ದು. ಇಲ್ಲಿಯ ಸಂಪತ್ತನ್ನು ಪರದೇಶಗಳಲ್ಲಿ ವಿಷಯಲೋಲುಪತೆಗಳಿಗಾಗಿ ವ್ಯಯಮಾಡುತ್ತಾ ಚರಿತ್ರಹೀನರಾದವರ ಮೇಲೆ ಭಾರತ ಸರಕಾರ ತೀವ್ರಕ್ರಮಕ್ಕೆ ಕೊಂಡದ್ದನ್ನು ವಿಚಾರವಂತರಾರೂ ಅಲ್ಲಗಳೆಯುವಂತಿಲ್ಲ. ಮುಂದಾದರೂ ನರೇಂದ್ರರ ನೈತಿಕ ಮಾರ್ಗವನ್ನನುಸರಿಸಲಿ. ಎಲ್ಲದಕ್ಕಿಂತ ಹೆಚ್ಚಾಗಿ ಭಾರತ ಸರಕಾರಕ್ಕೆ 16 ಲಕ್ಷರೂಪಾಯಿ ಗಾಯಕವಾಡರ ಪದಚ್ಯುತಿಯಿಂದ ಉಳಿತಾಯವಾದಂತಾಯಿತು.

ಮದ್ರಾಸಿನ ಮಾದರಿ

ಆಂಧ್ರಪ್ರಾಂತಾಧ್ಯಕ್ಷರ ಚುನಾವಣೆಯೊಂದು ಆಂಧ್ರದ ಇತಿಹಾಸದಲ್ಲೇ ಹೊಸಮಾದರಿಯದೆಂದು ಊಹಿಸುವಷ್ಟು ಕುತೂಹಲ ಪೂರ್ಣವಾಗಿಯಿದೆ. ರೆಡ್ಡೀ ಸರಕಾರದ ಧೋರಣೆಯ ನಗ್ನಚಿತ್ರವೊಂದನ್ನು ಮೊನ್ನಿನ ಅಧ್ಯಕ್ಷ ಚುನಾವಣೆಯಿಂದ ನಾವು ಅರಿತುಕೊಳ್ಳಬಹುದಾಗಿದೆ. ಕಾಂಗ್ರೆಸು ಜನತಾ ವಿಶ್ವಾಸವನ್ನೇಕೆ ಕಳೆದುಕೊಳ್ಳುತ್ತಲಿದೆಯೆನ್ನುವದಕ್ಕೆ ಇದೊಂದ ಉತ್ತಮ ಉದಾಹರಣೆ.

ಆಂಧ್ರ ಕಾಂಗ್ರೆಸ್ ಅಧ್ಯಕ್ಷ ಸ್ಥಾನಕ್ಕೆ ಉಮೇದುವಾರರಾಗಿ ನಿಂತ ಪ್ರೊ. ರಂಗಾ ಹಾಗೂ ಮದ್ಯಪಾನ ನಿರೋಧ ಮಂತ್ರಿ ಶ್ರೀ ಸಂಜೀವ ರೆಡ್ಡಿ ಈ ಇಬ್ಬರಲ್ಲಿ ಕೊನೆಯವರು ಐದು ಮತಗಳಿಂದ ಆರಿಸಿಬಂದಿರುತ್ತಾರೆ. 170 ಪ್ರತಿನಿಧಿಗಳಲ್ಲಿ 169 ಪ್ರತಿನಿಧಿಗಳು ಮಾತ್ರ ಮತದಾನ ಮಾಡಿದ್ದರು. ಸಂಜೀವ ರೆಡ್ಡಿಯವರಿಗೆ 87 ರಂಗಾರವರಿಗೆ 82 ಮತಗಳು ಬಂದಿದ್ದವು. ಎಸ್. ಕೆ. ಪಾಟೀಲ, ಕಲಾ ವೆಂಕಟರಾವ್, ಗೋಪಾಲ ರೆಡ್ಡಿ ಮುಂತಾದವರು ಭಾಗವಹಿಸಿದ್ದರು. ಅಧ್ಯಕ್ಷರ ಹೆಸರ ಸೂಚನೆಯನ್ನು ಮಾಡಬೇಕೆಂದು ಎಸ್. ಕೆ. ಪಾಟೀಲರು ಕೇಳಿಕೊಂಡಾಗ ಮದ್ರಾಸಿನ ಹಣಕಾಸಿನ ಮಂತ್ರಿವರ್ಯರಾದ ಗೋಪಾಲ ರೆಡ್ಡಿಯವರು ಸಂಜೀವ ರೆಡ್ಡಿಯವರ ಹೆಸರನ್ನು ಸೂಚಿಸಿದರು. ಅ. ಭಾ. ಕಾಂಗ್ರೆಸಿನ ಮುಖ್ಯ ಕಾರ್ಯದರ್ಶಿ ಕಲಾ ವೆಂಕಟರಾಯರು ಅನುಮೋದಿಸಿದರು. ಪ್ರೊ. ರಂಗಾರ ಹೆಸರನ್ನು ಜಿ. ನಾರಾಯಣರಾಯರು ಸೂಚಿಸಿ, ಟಿ. ಲೋಕಿರೆಡ್ಡಿಯವರು ಅನುಮೋದಿಸಿದರು. ಮತದಾನಕ್ಕಾರಂಭವಾಗಿ ಮೇಲಿನಂತೆ ಮತಗಳು ಬಿದ್ದವು. ಚುನಾವಣಾ ಸಮಾರಂಭಕ್ಕೆ 20,000 ಮೇಲ್ಪಟ್ಟು ಜನಕೂಡಿದ್ದರು. ಸುಸಜ್ಜಿತವಾದ ಪೋಲೀಸು ಸರ್ಪಕಾವಲನ್ನು ಸರಕಾರ ಮೊದಲಾಗಿಯೇ ಇಟ್ಟಿತ್ತು. ಕೇವಲ ಐದು ಮತಗಳಿಂದ ಅಧ್ಯಕ್ಷ ಸ್ಥಾನವನ್ನು ಗಳಿಸಿದ ಶ್ರೀ ಸಂಜೀವ ರೆಡ್ಡಿಯವರನ್ನು ಶ್ರೀ ಗೋಪಾಲ ರೆಡ್ಡಿಯವರು ಅಭಿನಂದಿಸಿದರು.

ಈ ಚುನಾವಣೆಯು ಹಿನ್ನಲೆಯಲ್ಲಿ ಸರಕಾರ ಹಿತಕರಿ ನಡೆಸಿದೆಯೆಂದು ಟಿ. ಪ್ರಕಾಶಮರೂ ಪ್ರೊ. ರಂಗಾರವರು ಅಭಿಪ್ರಾಯ ವ್ಯಕ್ತಪಡಿಸಿ ಕಾಂಗ್ರೆಸ್ಸನ್ನು ಸಂಪೂರ್ಣವಾಗಿ ತ್ಯಜಿಸಿಬಿಡುವ ನಿರ್ಧಾರವನ್ನು ಮಾಡಿರುತ್ತಾರೆ. ಸಂಜೀವ ರೆಡ್ಡಿ, ಎಸ್. ಕೆ. ಪಾಟೀಲ್, ಗೋಪಾಲ ರೆಡ್ಡಿ, ಕಲಾ ವೆಂಕಟರಾವ್ ಮೊದಲಾದವರು ಪ್ರಕಾಶಮರನ್ನು ರಂಗಾರನ್ನು ಅವರ ಅನುಯಾಯಿಗಳನ್ನೂ ಸಂಪೂರ್ಣ ಸಹಕಾರ ನೀಡಬೇಕೆಂದು ಕೇಳಿಕೊಂಡಿದ್ದರು. ಸಂಜೀವ ರೆಡ್ಡಿಯವರು ತನ್ನ ವಿಜಯ ಯಾತ್ರೆಯ ಆನಂದದಿಂದ ಮುಂದಕ್ಕೆ ಸಾರ್ವಜನಿಕ ಮತಗಣನೆಯಲ್ಲಿಯೂ ಆಂಧ್ರದ ಜನತೆ ಕಾಂಗ್ರೆಸಿನೊಡನೆ ಒಮ್ಮತದಿಂದ ಸಹಕಾರನೀಡಬಹುದೆಂದು ನಾನು ಸಂಪೂರ್ಣ ಭರವಸೆ ಕೊಡಬಲ್ಲೆ." ಎಂದು ಉದ್ಗಾರ ತೆಗೆದಿದ್ದಾರೆ. ಮದ್ಯಪಾನ ನಿಷೇಧದಲ್ಲಿ ಮದ್ರಾಸು ಅತ್ಯಂತ ಪ್ರಗತಿಯನ್ನು ಸಾಧಿಸಿದೆಯೆಂದು ಕೈಲುಹಿಟ್ಟ ಶ್ರೀ ರೆಡ್ಡಿಯವರ ಮಾತಿನ ಯಥಾರ್ಥತೆ ಎಷ್ಟೆಂಬುದನ್ನು ನಾವು ಚೆನ್ನಾಗಿ ಬಲ್ಲೆವು. ಪ್ರೊ. ರಂಗಾರವರನ್ನು ಕೇವಲ ಐದೇ ಮತಗಳಿಂದ ಗೆದ್ದ ಶ್ರೀ ರೆಡ್ಡಿಯವರ ವಿಜಯ ಮದ್ರಾಸಿನ ಹಲವು ಮಂತ್ರಿಗಳ ವರ್ಚಸ್ಸಿನಿಂದ ನಡೆಯಿತು ಎಂಬುದನ್ನು ನಾವು ಮರೆಯುವಂತಿಲ್ಲ. ಸಂಜೀವರೆಡ್ಡಿಯವರು ಮಂತ್ರಿಪದಕ್ಕೆ ರಾಜೀನಾಮೆಯನ್ನಿತ್ತು ಅಧ್ಯಕ್ಷ ಸ್ಥಾನಕ್ಕೆ ಅಪೇಕ್ಷಿತರಾಗಿ ಹೋರಾಡುವ ಔಚಿತ್ಯವಾದರೂ ಏನ? ಸಂಜೀವರೆಡ್ಡಿಯವರ ಸೋಲುಗೆಲುವಿನ ವಿಚಾರ ಡೋಲಾಯಮಾನವಾಗಿದ್ದರಿಂದಲೇ ಮುಖ್ಯ ಮಂತ್ರಿಗಳು ಅವರ ರಾಜೀನಾಮೆಯನ್ನು ಅವಾಮಾನತ್ತಾಗಿ ಇಟ್ಟಿದ್ದರು. ಇಲ್ಲಿ ಗೆದ್ದ ಸುದ್ದಿ ಬಂದ ಕೂಡಲೇ ಸ್ವೀಕಾರ ಮಾಡಲಾಯಿತು. ಪರಾಜಯವಾಗಿದ್ದರೆ "ಯಥಾ ಸ್ಥಾ ಉದ್ಯಾಸಯಹಾವಿ." ಎಂದು ತಿರುಗಿ ಆವಾಹನೆ ಮಾಡುತ್ತಿದ್ದರೆ!

ಗುಂಟೂರಿನ 26 ಮತದಾರರನ್ನು ಕೋರ್ಟು ನೋಟಿಸು ಕೊಟ್ಟು ತಡೆಹಾಕಿದ್ದನ್ನು ಪ್ರೊ. ರಂಗಾ ಮತ್ತು ಟಿ. ಪ್ರಕಾಶಮರು ತಮ್ಮ ಹೇಳಿಕೆಯಲ್ಲಿ ಸ್ಪಷ್ಟೀಕರಿಸಿದ್ದಾರೆ. ಈ ಇಪ್ಪತ್ತಾರು ಪ್ರತಿನಿಧಿಗಳಿಗೆ ತಡೆಹಾಕಿದ್ದರ ಫಲವಾಗಿಯೇ ಸಂಜೀವ ರೆಡ್ಡಿಯವರು ಆರಿಸಿಬರುವುದು ಸಾಧ್ಯವಾಯಿತು. ಅವರ ೩ ಮತದಾನಕ್ಕೆ

IN THE SERVICE OF THE COUNTRY
1925 1950
SAVINGS
&
BANK ACCOUNT
financing of
PROVIDE EMPLOYMENT.



income
&
SAVINGS
Bank your Savings with
THE CANARA INDUSTRIAL & BANKING SYNDICATE LTD.
ನಿಮ್ಮ ಉಳಿತಾಯವನ್ನು ಇರಿಸಲಿಕ್ಕೆ
ದಿ ಕೆನರಾ ಇಂಡಸ್ಟ್ರಿಯಲ್ ಎಂಡ್
ಬ್ಯಾಂಕಿಂಗ್ ಸಿಂಡಿಕೇಟ್ ಲಿಮಿಟೆಡ್

ಕಡಿಮೆ ಬೆಲೆ
ಮೇಲಾದ ವೈಶಿಷ್ಟ್ಯತೆ

ESTRELA
ಎಸ್ಟ್ರೆಲಾ
ಬಿಟರಿಗಳು
ಕತ್ತಲೆಯಲ್ಲಿ
ನಿಮ್ಮ ಮಾರ್ಗದರ್ಶಿ
ಎಸ್ಟ್ರೆಲಾ ಬ್ಯಾಟರೀಸ್ ಲಿ.,
ಬೊಂಬಾಯಿ-19
ಶಾಖೆಗಳು: ಕಲ್ಕತ್ತ, ಡೆಲ್ಲಿ, ಮದ್ರಾಸ್,
ಕಾನಪೂರ್, ನಾಗಪೂರ್.

ಲೋಕಾಂತ

ಕೊರಿಯಾರಂಗ.

ಜನರಲ್, ಮೆಕಾರ್ಥರ ಪದಚ್ಯುತಿಯ ನಂತರ ಕೊರಿಯದಲ್ಲಿ ಭಯಾನಕವಾದ ವಿಮಾನಯುದ್ಧ ನಡೆದು ಅಮೇರಿಕೆಯ ಹಲವು ವಿಮಾನಗಳನ್ನು ಭಸ್ಮಮಾಡಲಾಗಿದೆ. ಕಮ್ಯುನಿಸ್ಟರು 1300 ಸಂ. ರಾ. ಸೈನಿಕರನ್ನು ಸಂಹರಿಸಿ 10 ವಿಮಾನಗಳನ್ನು ನಿರ್ನಾಮಗೊಳಿಸಿದರೆಂದೂ ಪೆಂಕಿಂಗ್ ರೇಡಿಯೋದಿಂದ ಬಿತ್ತರಿಸಲಾಯಿತು.

ಯುದ್ಧ ತಿಳ್ಳಬಹುದೇ?

ಸಂ. ರಾ. ಸಂಘದ ಕಾರ್ಯದರ್ಶಿಗಳಾದ ಟ್ರಿಗ್ವಿಲೀಯವರು ಕೊರಿಯಾ ಯುದ್ಧವನ್ನು ಕೊನೆಗಾಣಿಸುವ ವಿಚಾರದಲ್ಲಿ ಎಲ್ಲ ರಾಷ್ಟ್ರಗಳೂ ಆತುರಗೊಂಡಿವೆಯೆಂದು ಹೇಳಿರುವರು. ಸಂಧಾನದಿಂದಲೇ ಬಗೆಹರಿಸುವ ಕುರಿತು ಸಮಾಲೋಚನೆ ನಡೆಯುತ್ತಲಿದ್ದು ತೃತೀಯ ಮಹಾಯುದ್ಧವಾಗಲಾರದೆಂದು ಅವರು ಅಭಿಪ್ರಾಯಪಟ್ಟಿರುತ್ತಾರೆ.

ಇರಾನಿನಲ್ಲಿ ಭೀಕರ ಗಲಭೆ.

ಇರಾನಿನ ಅಬಡಾನದಲ್ಲಿರುವ ಆಂಗ್ಲೋ ಇರಾಣಿಯನ್ ಎಣ್ಣೆ ಕಂಪೆನಿಯ ಕೆಲಸಗಾರ ಒಡೆಯರೊಳಗೆ ಭೀಕರ ಸ್ವರೂಪದ ಗಲಭೆಯೆದ್ದು ಹಲವು ಜೀವಹಾನಿಗಳಾದ ವರದಿ ಬಂದಿವೆ. ಬ್ರಿಟಿಷ ಆಫೀಸರ ಹಾಗೂ ಇನ್ನಿತರರು ಈ ಗಲಭೆಯಲ್ಲಿ ಮಡಿದಿರುವರು. ಹಿಂದೀಯರಿಗಾವ ರೀತಿಯ ನೋವಾಗಿಲ್ಲ. ಸದ್ಯ ಆ ಪ್ರದೇಶವನ್ನು ಮಿಲಿಟರಿ ಆಡಳಿತಕ್ಕೆ ಒಳಪಡಿಸಲಾಗಿದೆ. ತತ್ಕಾಲ ಕಂಪೆನಿಯನ್ನು ಮುಚ್ಚಲಾಗಿದೆ.

ಬೆವಿನ್ನರ ನಿಧನ.

ಬ್ರಿಟನ್ನಿನ ಮಾಜೀವಿದೇಶಖಾತೆ ಮಂತ್ರಿಯಾಗಿದ್ದ ಅರ್ನೆಸ್ಟ್ ಬೆವಿನ್ನರು ತನ್ನ ಅನಾರೋಗ್ಯದ ನಿಮಿತ್ತ ಕಳೆದ ತಿಂಗಳು ತನ್ನ ಮಂತ್ರಿಪದಕ್ಕೆರಾಜಿಯನಿತ್ತಿದ್ದರಷ್ಟೆ! ಮೊನ್ನೆ14ರಂದು ಹೃದ್ಬಾಧೆಯಿಂದ ಅವರು ನಿಧನ ಹೊಂದಿದರು.

ಮಣಿಲಾಲ ಗಾಂಧಿಯವರ ಪ್ರಕೃತಿ.

ವರ್ಣದ್ವೇಷದ ಕಾಯಿದೆಗೆ ವಿರುದ್ಧವಾಗಿ ಉಪವಾಸ ಕೈಗೊಂಡಿರುವ ಮಣಿಲಾಲ ಗಾಂಧಿಯವರು ದಿನದಿಂದ ದಿನಕ್ಕೆ ದುರ್ಬಲಗೊಳ್ಳುತ್ತ ಬರುವರು. ಇಂದಿಗೆ ಹತ್ತು ದಿನಗಳು ಕಳೆದವು.

ಶಾಕರ ವಿಶ್ವಾಸ ಘಾತುಕತನ.

ಕಾಶ್ಮೀರದ ಹಿಂದಿನ ಮಂತ್ರಿಗಳಾದ ಪಂಡಿತ ರಾಮಚಂದ್ರ ಕಾಕರು ಬಹಳ ಕಾಲದಿಂದಲೂ ಕಾಶ್ಮೀರವನ್ನು ಪಾಕಿಸ್ತಾನಕ್ಕೆ ಸೇರಿಸುವ ಹಂಚಿಕೆಯನ್ನು ಮಾಡಿದ್ದು ಈಗಲೂ ಜಲಂಧರವನ್ನು ತನ್ನ ಮುಖ್ಯ ರಾಣಿಯಾಗಿಟ್ಟುಕೊಂಡು ಅದೇ ವಿಶ್ವಾಸ ಘಾತುಕ ಕಾರ್ಯವನ್ನು ನಡೆಸುತ್ತಿದ್ದಾರೆಂದು ಶೇಕ್ ಅಬ್ದುಲ್ಲಾರವರು ಹೇಳಿದರು

ಅಕಬರಖಾನರ ವಿಚಾರಣೆ.

ಪಾಕಿಸ್ತಾನದ ವಿರುದ್ಧ ಕಾರಸ್ಥಾನ ನಡೆಸಿದ ಮೇಜರ್ ಜನರಲ್ ಅಕಬರಖಾನ ಹಾಗೂ ಮತ್ತಿತರರ ವಿಚಾರಣೆಯು ಫೆಡರಲ್‌ಕೋರ್ಟಿನ ಮೂವರು ನ್ಯಾಯಾಧೀಶರ ಮುಂದೆ ಗುಪ್ತರೀತಿಯಲ್ಲಿ ಜರಗಲಿರುವುದೆಂದು ತಿಳಿದುಬರುತ್ತದೆ.

ಸಿಂಹಳದ ನೂತನ ರಾಯಭಾರಿ.

ಸಿಂಹಳದಲ್ಲಿ ಭಾರತದ ರಾಯಭಾರಿಯಾಗಿ [ಮಲೆಯಾಳಿ 'ಮಾತೃಭೂಮಿ' ದೈನಿಕದ ಸಂಪಾದಕರಾದ ಕೆ. ಪಿ. ಕೇಶವ ಮೆನನ್ನರು ಭಾರತ ಸರಕಾರದಿಂದ ನೇಮಕಹೊಂದಿದ್ದಾರೆಂದು ತಿಳಿದುಬರುತ್ತದೆ.

ವಿ. ಪಿ. ಮೆನನ್ನರು ಒರಿಸ್ಸಾದ ಗವರ್ನರರಾದರು.

ಸಂಸ್ಥಾನ ಖಾತೆ ಕಾರ್ಯದರ್ಶಿಗಳಾದ ಶ್ರೀ[ವಿ. ಪಿ. ಮೆನನ್ನರು ತಾತ್ಕಾಲಿಕವಾಗಿ ಅಂವರಿ ಆಸಫ್ ಅಲ್ಲಿಯವರ ಮೂರು ತಿಂಗಳ ರಜಾಸಮಯದವೇಳೆ ಒರಿಸ್ಸಾದ ಹಂಗಾಮಿ ಗವರ್ನರರಾಗಿ ನೇಮಕಗೊಂಡಿದ್ದಾರೆ.

ಆಂಗ್ಲೋ ಅಮೇರಿಕಾನರೊಡನೆ ಭಾರತದ ವ್ಯಾಪಾರ.

ಅಕ್ಟೋಬರ 1949ರಿಂದ 1950ನೇ ದಶಂಬರದ ವರೆಗೆ ಭಾರತ ಸರಕಾರವು ಬ್ರಿಟನಿನಿಂದ 147ಕೋಟಿ ರೂಪಾಯಿಯ ಮತ್ತು ಅಮೇರಿಕೆಯಿಂದ 123 ಕೋಟಿ ರೂಪಾಯಿಯ ವಸ್ತುಗಳನ್ನು ಆಮದು ಮಾಡಿಕೊಂಡಿರುತ್ತದೆ. ಬ್ರಿಟನಿನ ವ್ಯವಹಾರದಿಂದ 56ಕೋಟಿಯ ಕೊರತೆಯೂ ಅಮೇರಿಕೆಯ ವ್ಯವಹಾರದಿಂದ 35ಕೋಟಿ ಉಳಿತಾಯವೂ ಆಗಿದೆ.

ರೈಲ್ವೆಗಳ ಸಮೀಕರಣ

ಕೇಂದ್ರ ಸರಕಾರದ ರೈಲ್ವೆ ಮತ್ತು ಸಾರಿಗೆ ಮಂತ್ರಿಗಳಾದ ಎನ್. ಗೋಪಾಲಸ್ವಾಮಿ ಅಯ್ಯಂಗಾರ್ಯರು ಹಿಂದೀ ರೈಲ್ವೆಗಳ ಪುನರ್ವರ್ಗೀಕರಣದ ಉದ್ಘಾಟನ ಮಾಡಿದರು. ಮದ್ರಾಸ ಮತ್ತು ಸದರ್ನ ಮರಾಠಾ, ಸೌತ್ ಇಂಡಿಯನ್ ಮತ್ತು ಮೈಸೂರು ಸಂಸ್ಥಾನ, ಈ ಮೂರನ್ನೊಳಗೊಂಡು ಈ ಗುಂಪನ್ನು ರಚಿಸಲಾಗಿದೆ.

ಸೋಮನಾಥ ಲಿಂಗದ ಸ್ಥಾಪನೆ.

ಸೋಮನಾಥ ಲಿಂಗವು ಸಿದ್ಧವಾಗಿ ಜಯಪುರದಿಂದ ಬಂದಿರುತ್ತದೆ, ಶಿಲಾಕಲ್ಲಿನಲ್ಲಿ ಕೊರೆದಿರುವ ಈ ಲಿಂಗವು 7½ ಅಡಿ ಎತ್ತರವಿದೆಂದು ತಿಳಿದುಬರುತ್ತದೆ ಸ್ಥಾಪನೆಯ ಕಾಲಕ್ಕೆ 20 ಸಹಸ್ರ ಜನ ಅತಿಥಿಗಳು 5 ಲಕ್ಷಜನ ಯಾತ್ರಿಕರು ಬರುವ ನಿರೀಕ್ಷೆಯಿದೆ.

ಭಾರತದ ಜನಸಂಖ್ಯೆ.

ಭಾರತದ 1951ನೆಯ ಜನ ಗಣತಿಯ ಪ್ರಕಾರ ಭಾರತದ ಜನಸಂಖ್ಯೆ 35 ಕೋಟಿ 68 ಲಕ್ಷಕ್ಕೂ ಮಿಕ್ಕಿದೆಯೆಂದು ಗೊತ್ತಾಗಿದೆ. ಸ್ತ್ರೀಯರಿಗಿಂತ ಪುರುಷರೇ ಅಧಿಕವಾಗಿದ್ದಾರೆ. ಆದರೆ ಮದ್ರಾಸ್, ಕೊಚ್ಚಿನ್, ಒಡಿಸಾ ಮುಂತಾದ ಪ್ರಾಂತಗಳಲ್ಲಿ ಸ್ತ್ರೀಯರ ಸಂಖ್ಯೆ ಅಧಿಕವಾಗಿವೆ. ಮದ್ರಾಸದ ಒಟ್ಟು ಜನಸಂಖ್ಯೆ 56,952332.

ಬಟ್ಟೆ ನೂಲಿನಲ್ಲಿ ಸುಧಾರಣೆ.

ನೂಲಿನ ನಿರ್ಯಾತವನ್ನು ಭಾರತಸರಕಾರವು ಸದ್ಯಕ್ಕೆ ನಿಲ್ಲಿಸಿರುತ್ತದೆ. ಕಳೆದ ಡಿಸೆಂಬರದಲ್ಲಿ 39000 ಬೇಲೂ 1951ರ ಜನವರಿಯಲ್ಲಿ 42000 ಬೇಲು ನೂಲಿನ ಉತ್ಪಾದನೆಯಾಗಿದೆ. ಇದೇ ಅಂದಾಜಿನಿಂದ ಬರುವ ಮಾರ್ಚತಿಂಗಳಲ್ಲಿ 56000 ಬೇಲು ದೊರೆಕಬಹುದಾಗಿದೆ. ಆದಷ್ಟು ಮಟ್ಟಿಗೆ ಬಟ್ಟೆಯ ವಿಚಾರದಲ್ಲಿ ಭಾರತವು ಸ್ವಾವಲಂಬಿಯಾಗಿರಬೇಕೆಂಬುದೇ ಭಾರತ ಸರಕಾರದ ಅಭಿಪ್ರಾಯವಾಗಿರುತ್ತದೆ.

ತಂಬಾಕು ವ್ಯಾಪಾರಿಗಳಿಗೆ ಸವಲತ್ತು

ತಂಬಾಕು ವ್ಯಾಪಾರಿಗಳಿಗಾಗುತ್ತಿರುವ ಹಲವಾರು ತೊಂದರೆಗಳು ಸರಕಾರದಗಮನಕ್ಕೆ ಬಂದಿದ್ದು ಅದರ ಪರಿಹಾರೋಪಾಯವನ್ನು [ಸರಕಾರ ಕೈಗೊಳ್ಳುವದೆಂದು ಕೇಂದ್ರದ ಅರ್ಥಕಮಂತ್ರಿ ಸಿ. ಡಿ. ದೇಶಮುಖರು ಪಾರ್ಲಿಮೆಂಟಿನಲ್ಲಿ ಹೇಳಿದರು.

ಬರಗಾಲ ಪೀಡಿತರಿಗೆ ಸಹಾಯ.

ಬಿಹಾರದ ಬರಗಾಲ ಪೀಡಿತರಿಗೆ ಸಹಾಯರೂಪದಲ್ಲಿ ಬಿಹಾರ ಸರಕಾರವು 5 ಕೋಟಿ ರೂಪಾಯಿಯನ್ನು ಹಂಚಿದೆ. ಪರಿಹಾರರೂಪದಲ್ಲಿ ಕೊಡಲಾಗುವ ಈ ಹಣವು ಉದ್ಯಮಗಳಿಗಾಗಿ ಹಂಚಲಾಗಿದೆ.

ಸಂಪೂರ್ಣ ಸ್ವಾತಂತ್ರ್ಯವಿರುತ್ತಿದ್ದರೆ ಇಂದು ಸಂಜೀವ ರೆಡ್ಡಿ [ಯಥಾಸ್ಥಾನಕ್ಕೇನೇ ಹೋಗಬೇಕಾಗಿತ್ತು. ಈ ರೀತಿಯ ಅನುಚಿತ ಧೋರಣೆಯನ್ನು ಪ್ರತ್ಯಕ್ಷವಾಗಿ ಆಚರಣೆಯಲ್ಲಿ ತಂದು ಸ್ವಾರ್ಥವನ್ನು ಸಾಧಿಸಿಕೊಳ್ಳುವದಾದರೆ ಕಾಂಗ್ರೆಸ್ಸಿನಲ್ಲಿ ಜನತೆ ವಿಶ್ವಾಸ ಇಡುವದಾದರೂ ಹೇಗೆ? ಅಹಿಂಸಾ ನೀತಿಯನ್ನು ಹೇಳುವ ನಮ್ಮ ಕಾಂಗ್ರೆಸ್ ಮಂತ್ರಿಗಳು ಸೈನಿಕ ಗಸ್ತಿನಿಂದ ಜನತೆಯನ್ನು ಹೆದರಿಸಬೇಕೇ? 26 ಮಂದಿಗೆ ದುಃಖದಾನ ಮಾಡುವ ಸಂಪೂರ್ಣ ಸ್ವಾತಂತ್ರ್ಯವನ್ನು ನೀಡುತ್ತಿದ್ದರೆ ಆಂಧ್ರದಲ್ಲಿ ಯಾರ ಮೇಲೆ ಬಲವು ಜಾಸ್ತಿ ಎನ್ನುವದು ಖಾತ್ರಿಯಾಗುತಿತ್ತು! ಆದರೆ ಬೇಲಿಯೇ ಎದ್ದು ಹೊಲ ಮೇಯುವ ಹೀನ ಪರಿಸ್ಥಿತಿ ಅಲ್ಲಿ ಉಂಟಾಯಿತು. ಈ ರೀತಿಯ ಕಲುಷಿತ ವಾತಾವರ ತಲೆಯೆತ್ತಿದ್ದರ ಫಲವಾಗಿಯೆ ಪ್ರಕಾಶಂ, ಪ್ರೊ. ರಂಗಾ ಮೊದಲಾದವರು ಕಾಂಗ್ರೆಸ್ಸನ್ನು ತ್ಯಜಿಸಬೇಕಾಗುವ [ಪ್ರಸಂಗ ಬಂದಿದೆ. ಅವರ ಜೊತೆಯಲ್ಲಿ ಪ್ರತಿಷ್ಠಿತರಾದ ಎಂ. ಎಲ್. ಎಗಳೂ ಕಾಂಗ್ರೆಸ್ ಸದಸ್ಯರೂ ಕಾಂಗ್ರೆಸ್ಸಿಗೆ ರಾಜಿನಾಮೆಯನಿತ್ತು ನೂತನ ಪಕ್ಷ ನಿರ್ಮಾಣದಲ್ಲಿ ಸೇರಿಕೊಂಡಿದ್ದಾರೆ. ಆಂಧ್ರದ ಈ ಪ್ರಕರಣದಿಂದ ಕಾಂಗ್ರೆಸ್ಸಿನಲ್ಲಿ ವಿಶೇಷ ಬದಲಾವಣೆಯುಂಟಾಗಿದೆ. ನೂತನ ಪಕ್ಷವಾದ 'ಪ್ರಜಾ ಪಾರ್ಟಿ'ಗೆ ಹೆಚ್ಚುಹೆಚ್ಚು ಜನ ಕಾಂಗ್ರೆಸ್ಸಿಗರು ಸೇರುತ್ತಲಿದ್ದಾರೆ. ಮುಂಬರುವ ಚುನಾವಣೆಯಲ್ಲಿ ಕಾಂಗ್ರೆಸ್ಸಿಗದಿರಾಗಿ ಈ ಪಕ್ಷ ಸ್ಪರ್ಧಿಸಲಿದೆ. ಈ ಬರಿಯ ಪ್ರಕ್ಷುಬ್ಧ ವಾತಾವರಣವನ್ನು ನಿರ್ಮಿಸಿದ ರೆಡ್ಡಿ ಪಂಗಡದವರು ಕಾಂಗ್ರೆಸ್ಸಿನ ಮಾಹತ್ವಕ್ಕೆ ಕೊಡಲಿಯೇಟನ್ನು ಕೊಟ್ಟಂತಾಗಿದೆ. ಮದ್ರಾಸಿಗರ ಈ ಸ್ವೇಚ್ಛಾಪ್ರವೃತ್ತಿಯಿಂದ ಕಾಂಗ್ರೆಸು ದಿನದಿಂದ ದಿನಕ್ಕೆ ತನ್ನ ಅಂತಃ ಸತ್ವವನ್ನುಮಾತ್ರವಲ್ಲದೆ ಜನಾನುರಾಗವನ್ನು ಕಳೆದುಕೊಳ್ಳುತ್ತ ಬರುತ್ತಲಿದೆ. ಬೇರೆಯವರಿಗೆ ಬುದ್ಧಿಹೇಳುವ ಅತಿ ಬುದ್ಧಿವಂತರಾದ ಮದ್ರಾಸಿಗರ ಮಾದರೀ ರಾಜನೀತಿಯಿದು!



Approved from by the Govt, of Mysore
Certificated by the Agent of the Govt of
Cylone & Indian

ನಿರಾಶೆಗೆ ಒಳಗಾಗದಿರಿ.

ಉಬ್ಬಸ,ಕಫ,ಶ್ವಾಸಕೋಶದಿಂದ ನೀವು.ವಿಪರೀತ ಕಷ್ಟಪಡುವಿರಾದರೆ, ಹಲವಾರು ಅನಾಲ್ಯ ಔಷಧಿಗಳ ಸೇವನೆಯಿಂದ ನಿಮಗೆ ಗುಣವಾಗದಿರುವುದಾದರೆ,

ಆಶಾಭಂಗಕ್ಕೊಳಗಾಗದಿರಿ!

ಅಲ್ಪವೆಚ್ಚ-ಅಲ್ಪಾವಧಿಯೊಳಗೆ ನಿಮ್ಮಬಾಧೆಯನ್ನು ಶಮನಮಾಡುವ

ಖಾತ್ರಿ ಔಷಧಿಯು ನಮ್ಮಲ್ಲಿರುವುದು.

ಒಂದೇ ಒಂದು ಸೀಸೆಯನ್ನು ಕೊಂಡು, ಗುಣಪರೀಕ್ಷೆಮಾಡಿರಿ!

ಈ ಹೊಸ ಮದ್ದಿನಿಂದ ನಿಮಗೆ ಅದ್ಭುತ ಗುಣತೋರುವುದೆಂಬುದು ಖಂಡಿತ.

ಕೂಡಲೆ ಬರೆಯಿರಿ:—

ದಿ ನೇಶನಲ್ ಜನರಲ್ ಸ್ಟೋರ್ಸ್

(ಡಿಸ್ಪೆನ್ಸಿಂಗ್ ಕೆಮಿಸ್ಟ್ ಮತ್ತು ಡ್ರಗ್ಗಿಸ್ಟ್)

8-A ಮೆಹರ್ವಾನ್ ಬಿಲ್ಡಿಂಗ್ಸ್, ಸರ್. ಫಿರೋಜ್ ಷಾ ಮೆಹತಾ ರೋಡು,

ಫೋರ್ಟ್, ಬೊಂಬಾಯಿ.

THE NATIONAL GENERAL STORES

Importers, Exporters, Dispensing Chemists & Druggists.

General Merchants & Commission Agents,
8A Mherwan Buildings, Opp: His Master's Voice,
Sir Phirozsha Mehta Road, **Fort, Bombay.**

ಪಂಚಾಯತ ಬೋರ್ಡ,
ಗ್ರಾಮ ಕಮಿಟಿ,ಶಾಲಾ ಕೊಲೇಜು
ಮೊದಲಾದುವುಗಳ

ಲೈಬ್ರರಿಗಳಿಗೆ

ಬೇಕಾಗುವ ಕರ್ನಾಟಕದ ಎಲ್ಲಾ ಭಾಗಗಳ ಕನ್ನಡ ಪುಸ್ತಕಗಳು ನಮ್ಮಲ್ಲಿ ದೊರೆಯುತ್ತವೆ.

ವಿಚಾರಿಸಿ:—

ನವಭಾರತ ಪುಸ್ತಕ ಭಂಡಾರ

ಚಂದಾ ವಿವರ
ವರ್ಷಕ್ಕೆ ರೂ. 5–12—0
6 ತಿಂಗಳಿಗೆ ರೂ. 3—0—0

ಗುರುವಾರ, ಉಡುಪಿ, ೧೯-೪-೫೧

ಘಟನೆಯ ತಿದ್ದುಪಡಿ ಅವಶ್ಯವೆ?

ಒಂದು ರಾಷ್ಟ್ರದ ಅಭ್ಯುದಯ - ಸುವ್ಯವಸ್ಥಿತ ಆಡಳಿತ ಸೂತ್ರ- ಜನತೆಯ ಸ್ವಾತಂತ್ರ್ಯ-ಆ ರಾಷ್ಟ್ರಕ್ಕಿರುವ ಘಟನೆಯನ್ನು ಹೊಂದಿಕೊಂಡಿದೆ. ಘಟನಾಬದ್ಧ ಕಾಯಿದೆಯನ್ನಾಧರಿಸಿ ಸರಕಾರ ನಡೆಯಬೇಕಾಗುತ್ತದೆ. ರಾಜ್ಯ ಘಟನೆಯೆಂದರೆ ಸರಕಾರದ ಭದ್ರವಾದ ಅಸ್ತಿವಾರ. ಈ ಭದ್ರವಾದ ತಳಹದಿಯ ಮೇಲೆ ತನ್ನ ಆದೇಶವನ್ನು ಪ್ರಜೆಗಳ ಮೇಲೆ ಮಾಡಬಹುದಾಗಿದೆ. ತಳಹದಿಯೆ ಅಸ್ಥಿರವಾಗಿದ್ದರೆ ಸರಕಾರದ ಗತಿ ಏನಾಗಬಹುದೆಂದು ನಾವು ಬೇರೆ ಹೇಳಬೇಕಾಗಿಲ್ಲ ಇಂತಹ ವೈಚಿತ್ರ್ಯವೊಂದು ಭಾರತ ಸರಕಾರದ ರಾಜ್ಯ ಘಟನೆಯ ಮೇಲೆ ನಡೆಯುತ್ತಲಿದೆ.

ಸ್ವಾತಂತ್ರ್ಯ ಸಿಕ್ಕಿ ನಮ್ಮದೇ ಸರಕಾರ ಅಧಿಕಾರಕ್ಕೆ ಬಂದ ಮೇಲೆ ಭಾರತೀಯ ಜನಾಂಗಕ್ಕೊಪ್ಪುವ-- ರಾಜ್ಯ ಘಟನೆಯೊಂದನ್ನು ಕಾಯಿದೆ ತಜ್ಞರ ಆಳವಾದ ಸಮಾಲೋಚನೆಯಿಂದಲೂ, ದೀರ್ಘಕಾಲದ ಚರ್ಚೆಯಾದ ಮೇಲೂ ಭಾರತ ಸರಕಾರ ಅಂಗೀಕರಿಸಿತು. ಭಾರತ ರಾಜ್ಯ ಘಟನೆಯಂತೆ ಭಾರತೀಯರಿಗೆ ವ್ಯಕ್ತಿ ಸ್ವಾತಂತ್ರ್ಯ, ವಾಕ್‌ಸ್ವಾತಂತ್ರ್ಯ ಇನ್ನಿತರ ಸ್ವಾತಂತ್ರ್ಯಗಳನ್ನು ಕಲ್ಪಿಸಿಕೊಡಲಾಗಿದೆ. ಸ್ವತಂತ್ರ ಭಾರತದಲ್ಲಿ ಪ್ರತಿಯೊಬ್ಬ ವ್ಯಕ್ತಿಗೆ ನ್ಯಾಯಬದ್ಧ ಹಕ್ಕುಗಳನ್ನು ಕೊಡಲಾಗಿದೆ. ಈ ಬಗೆಯ ಸ್ವಾತಂತ್ರ್ಯ— ಪ್ರಜಾಪ್ರಭುತ್ವವುಳ್ಳಂತಹ ಎಲ್ಲ ರಾಷ್ಟ್ರಗಳಲ್ಲೂ ಇವೆ. ಭಾರತ ಸರಕಾರದ ರಾಜ್ಯಾಂಗ ಘಟನೆಗಳು ಸರ್ವಾನುಮತದಿಂದ ಅಂಗೀಕಾರವಾಗಿ ಇಂದಿಗೆ ಒಂದು ವರ್ಷ ಕಳೆದುಹೋಯಿತು. ಭಿನ್ನಾಭಿಪ್ರಾಯ ಉಳ್ಳಂತಹ ಒಂದೆರಡು ಮಸೂದೆಗಳು ಇನ್ನೂ ಜನತೆಯ ಸಂಪೂರ್ಣ ಬೆಂಬಲದ ಅವಶ್ಯಕತೆಗಾಗಿ ಕಾದಿವೆ. ಅಂತಹದರಲ್ಲಿ ಹಿಂದೂಕೋಡು ಮಸೂದೆಯೊಂದು ವಂಶಪಾರಂಪರ್ಯದಿಂದ ಬಂದ ಸಾಂಪ್ರದಾಯಿಕ ಹಾಗೂ ಸಾಂಸ್ಕೃತಿಕ ವಿಚಾರಗಳನ್ನು ಜನತೆಯ ತೀರ್ಮಾನಕ್ಕೆ ಸರಕಾರ ಬಿಟ್ಟುಕೊಟ್ಟದ್ದು ನ್ಯಾಯವೇ ಆಗಿದೆ. ಇನ್ನು ಸ್ವಲ್ಪ ಸಮಯದಲ್ಲಿ ಜನತೆಯೆ ಅದರ ನಿಷ್ಕರ್ಷೆಯನ್ನು ಮಾಡಲಿದೆ. ಬಲಾತ್ಕಾರವಾಗಿ ಜನತೆಯ ಮೇಲೆ ಯಾವ ಕಾಯಿದೆ ಇಲ್ಲವೆ ಮಸೂದೆಯನ್ನು ಭಾರತ ಸರಕಾರ ಹೇರಿಲ್ಲ. ಉಳಿದೆಲ್ಲ ಘಟನೆಗಳು ಸಾರ್ವಜನಿಕಹಿತರಕ್ಷಣೆಯ ಸಲುವಾಗಿದ್ದು ಜನತೆಯ ಹಕ್ಕುಬಾಧ್ಯತೆಗಳಿಗೆ ವ್ಯತ್ಯಯ ಬರದ ರೀತಿಯಲ್ಲಿ ಕಾರ್ಯಗತವಾಗಿ ಬರತಕ್ಕವುಗಳಾಗಿವೆ. ಬೌದ್ಧಿಕವೂ, ಸತ್ವಪೂರ್ಣವೂ ಆದ ಈ ಕಾಯಿದೆಗಳು ಸ್ವತಂತ್ರ ಭಾರತದ ಜನಜೀವನಕ್ಕೆ ಒಪ್ಪುವಂತವುಗಳಾಗಿವೆ. ಘಟನೆಗಳು ಕಾರ್ಯಗತವಾಗಿ ಬಂದ ಈ ಒಂದು ವರ್ಷದಲ್ಲಿ ಅದರ ಅನುಭವವಾಗಿದೆ.

ಆದರೆ ಈಚೆಗೆ ಹಲವು ಪ್ರಾಂತೀಯ ಸರಕಾರಗಳು ಇಂತಹ ಅಮೂಲ್ಯ ಘಟನೆಗಳಿಗೆ ತಿದ್ದುಪಡಿಯಾಗಬೇಕೆಂದು ಕೇಂದ್ರಸರಕಾರವನ್ನು ಒತ್ತಾಯಿಸುತ್ತಿವೆ. ಅದರಲ್ಲೂ ಮದ್ರಾಸು ಸರಕಾರ ಮುಖ್ಯವಾಗಿದೆ. ಒಂದು ವರ್ಷದಲ್ಲೇ ಘಟನೆಯನ್ನು ಬದಲಿಸುವ ಈ ಪ್ರಸಂಗ ಬಂದದ್ದಕ್ಕೆ ವಿಷಾದಿಸಬೇಕಾಗಿದೆ. ಈ ರೀತಿಯ ತಿದ್ದುಪಡಿಗಳು ಆಯಾಯ ಪ್ರಾಂತೀಯ ಆಡಳಿತೆಗೆ ಹೊಂದಿಕೊಂಡಿದ್ದು ತಮ್ಮ ಮಟ್ಟಿನ ಅನುಕೂಲತೆಗಾಗಿ ಇಡಿಯ ರಾಷ್ಟ್ರದ ಘಟನೆಯನ್ನು ಬದಲು ಮಾಡುವ ಔದಾರ್ಯವನ್ನೀಗ ಕೇಂದ್ರ ಸರಕಾರವು ತೋರಿದರೆ ಮುಂದೆ ಬೇರೆಬೇರೆ ಪ್ರಾಂತಗಳು ತಮ್ಮ ತಮ್ಮ ಆಕ್ಷೇಪಗಳನ್ನು ಮುಂದೆ ಮಾಡಿ ತಿದ್ದುಪಡಿಯನ್ನು ಬಯಸಿಯಾವು ಅಂತಾದರೆ ಭಾರತ ರಾಜ್ಯಾಂಗ ಘಟನೆಯ ಸ್ಥಾನ ಮಾನವೇನು? ಅಸ್ತಿವಾರದ ಒಂದೊಂದೇ ಕಲ್ಲನ್ನು ಕಿತ್ತುದಾದರೆ ಇಲ್ಲವೆ ಬೇರ್ಪಡಿಸುವದಾದರೆ ಆತಳಹದಿಯ ಮೇಲೆ ನಿಂತ ಮನೆಯು ಸ್ಥಿರವಾಗಿ ಉಳಿದೀತೆ? ನಮ್ಮ ಭಾರತ ರಾಜ್ಯಘಟನೆಯ ಅವಸ್ಥೆಯೂ ಹಾಗೆಯೇ ಆಗಿದೆ.

ಈ ತಿದ್ದುಪಡಿಯ ಬೇಡಿಕೆಯು ಇಂದು ಜನತೆಯದಾಗಿರದೆ ಪ್ರಾಂತೀಯ ಸರಕಾರಗಳದ್ದಾಗಿರುತ್ತದೆ. ಜನತೆಯ ಅವಶ್ಯಕತೆಗಿಂತ ಪ್ರಾಂತೀಯ ಸರಕಾರಗಳ ಹಟಸಾಧನೆಯೆ ಮುಖ್ಯವಾಗಿದೆ. ತಿದ್ದುಪಡಿಗಾಗಿ ಬಂದ ಅಂಶಗಳನ್ನೆತ್ತಿಕೊಂಡು ನಾವು ವಿಮರ್ಶೆ ಮಾಡಿದರೆ ಈ ವಿಚಾರ ನಮಗೆ ಚೆನ್ನಾಗಿ ಮನವರಿಕೆಯಾಗದಿರದು.

ಮದ್ರಾಸು ಸರಕಾರ ಜಾತೀಯ ಘೋಷಣೆಯಂತೆ ಕಾಲೇಜುಗಳಲ್ಲಿಯ ಸ್ಥಾನವನ್ನೂ, ಉದ್ಯೋಗದಲ್ಲಿಯ ಸ್ಥಾನಗಳನ್ನೂ ಕಾಯ್ದಿರಿಸಿದೆ. ಭಾರತ ರಾಜ್ಯಘಟನೆಯು ರೂಪುಗೊಂಡದ್ದು ಒಂದು ವರ್ಷದ ಕೆಳಗೆ. ಮದ್ರಾಸ್ ಸರಕಾರದ ಈ ಜಾತೀಯತಾ ಘೋಷಣೆಯು ಅದಕ್ಕಿಂತಲೂ ಹಿಂದಿನದು. ಘಟನೆಯು ಮಂಜೂರುಗೊಳ್ಳುವ ಮೊದಲು ಇವರು ಆಕ್ಷೇಪವೆತ್ತಬಹುದಿತ್ತು. ಭಾರತ ರಾಜ್ಯಘಟನೆಯಲ್ಲಿ ಹಿಂದುಳಿದವರನ್ನು ಮುಂದೆ ತರುವ ಕಲಮೂ ಇದೆ. ಆದರೆ ಜಾತಿಮತ, ಲಿಂಗಭೇದಗಳಿಂದ ವ್ಯಕ್ತಿಯ ಸ್ವಾತಂತ್ರ್ಯವನ್ನು ಕಸಿದುಕೊಳ್ಳಬಾರದೆಂದು ಹೇಳಲಾಗಿದೆ. ಮದ್ರಾಸು ಸರಕಾರವು 'ಹಿಂದುಳಿದವರನ್ನು ಮುಂದೆ ತರುವ' ಧೋರಣೆಯನ್ನು ಹೇತುವಾಗಿಟ್ಟುಕೊಂಡು ವರಿಷ್ಠ ನ್ಯಾಯಾಲಯದ ತೀರ್ಪಿನಲ್ಲೂ ತೃಪ್ತಿಗೊಳ್ಳದೆ ಭಾರತ ಸರಕಾರದ ಘಟನೆಯ ತಿದ್ದುಪಡಿಯಾಗಬೇಕೆಂದು ಪಂಡಿತನ ಹಿಡಿದಿದೆ. 'ಹಿಂದುಳಿದವರು' ಯಾರು? ಎನ್ನುವ ಪ್ರಶ್ನೆಯ ಕುರಿತು ವರಿಷ್ಠನ್ಯಾಯಾಲಯ ಸ್ಪಷ್ಟೀಕರಣ ಕೇಳಿದಾಗ ಸರಕಾರದ ಜಾತೀಯತಾ ಧೋರಣೆಯು ಬೆಳಕಿಗೆ ಬಂತು. ಮದ್ರಾಸು ಸರಕಾರ "ಹಿಂದುಳಿದವರು" ಎಂದು ಹೆಸರಿಸುವ ಬ್ರಾಹ್ಮಣೇತರರು ಮಾತ್ರ ಹಿಂದುಳಿದವರಾಗುವದಾದರೂ ಹೇಗೆ? ಬಡತನ-ದಾರಿದ್ರ್ಯ—ದೇವರದಯೆಯಿಂದ ಎಲ್ಲಾ ಜಾತಿಯಲ್ಲೂ ಇದೆ. ಆಂದರೆ ಮದ್ರಾಸು ಸರಕಾರಕ್ಕೆ ಇಂದು ಬೇಕಾಗಿರುವದು ನಿಜವಾಗಿಯೂ 'ಹಿಂದುಳಿದವರ ಉದ್ಧಾರವೆ' 'ಬ್ರಾಹ್ಮಣ ಬ್ರಾಹ್ಮಣೇತರ ಜಾತಿಯ ಪಕ್ಷಪಾತವೆಂಬ ಖಚಿತವಾಗದೆ? ಇಂದು ಬ್ರಾಹ್ಮಣನಾಗಿದ್ದವನು ನಾಳೆ ಅನ್ಯಮತಸ್ಥನಾಗಿ ಬಂದರೆ ಸರಕಾರ ಏನೂ ತಕರಾರು ಮಾಡದೆ? ಸರಕಾರದ ಈ ಧೋರಣೆಯ ನ್ಯಾಯ ಭಾರತ ರಾಜ್ಯ ಘಟನೆಯೆ ತಿದ್ದುಪಡಿಯಾಗಬೇಕೆನ್ನುವ ಈ ವಾದವನ್ನು ನಾವು ಚೆನ್ನಾಗಿ ಅಭ್ಯಸಿಸಬೇಕು.

ಮದ್ರಾಸು ಸರಕಾರ ಮಧ್ಯಪಾನ ನಿರೋಧದ ಕುರಿತಾಗಿ ತಾನು ವಹಿಸಿದ ಅತಿಬುದ್ಧಿವಂತಿಕೆಯ ಪ್ರದರ್ಶನಕ್ಕಾಗಿ ಮಧ್ಯಪಾನ ನಿರೋಧಕಾಯಿದೆಯನ್ನು ಇನ್ನಷ್ಟು ಕಠಿಣಗೊಳಿಸಿದೆ. ಈ ಕಾಯಿದೆಯನ್ವಯ ಮಧ್ಯರಾತ್ರಿಯಲ್ಲೂ ಸ್ವೇಚ್ಛೆಯಂತೆ ಮನೆ ಜಡತಿಮಾಡಬಹುದಾಗಿದೆ. ಈ ವಿಚಾರದಲ್ಲಿ ತರುಗಿ ನೂತನ ಸಮಸ್ಯೆಗಳು ಹುಟ್ಟಿಕೊಂಡಿವೆ. ಮಧ್ಯಪಾನ ನಿಷೇಧ'ಚಳುವಳಿಯು ಮದ್ರಾಸಿನಲ್ಲಿ ಯಶಸ್ವಿಯಾಗಿದೆ 95% ಪ್ರಗತಿಹೊಂದಿದೆಯೆಂದು ಮಂತ್ರಿಗಳು ಹೇಳುತ್ತಾರೆ. ಆದರೆ ಅಬಕಾರಿ ಇಲಾಖೆ ಅಧಿಕಾರಿಗಳು ಕಳೆದ ತಿಂಗಳಿಂದ ಈ ತಿಂಗಳು ಹೆಚ್ಚಿನ ಕೇಸುಗಳನ್ನು ಪತ್ತೆಹಚ್ಚಲಾಗಿದೆಂದು ತಾನು ಸಾಧಿಸಿದ ಪ್ರಗತಿಯ ವರದಿಯನ್ನು ಮಾಡುತ್ತಾರೆ. ಹಾಗಾದರೆ ಅಬಕಾರಿ ಅಧಿಕಾರಿಗಳು ಪತ್ತೆಹಚ್ಚಿರುವ ಪ್ರಗತಿ ಕೇಸುಗಳು ಯಾವ ಕುರಿತಾಗಿರಬೇಕು? ಮಧ್ಯಪಾನ ನಿಷೇಧ'ಕಾಯಿದೆಯಿಂದ ಯಾವ ಪ್ರಗತಿಯೂ ಕಂಡುಬಂದಿಲ್ಲ. "ಜನತೆಯು ಅದು ತನ್ನ ಅವಶ್ಯಕರ್ತವ್ಯವೆಂದು ತಿಳಿಯುವ ತನಕ ಇದು'ಯಶಸ್ವಿಯಾಗುವಂತಿಲ್ಲ"ವೆಂದು ನ್ಯಾಯಮೂರ್ತಿಗಳು ಅಪ್ಪಣೆಕೊಡಿಸಿದ್ದನ್ನು ಮಾಧವ ಮೆನನ್ನರು "ಆ ಹೇಳಿಕೆ ಬೇಡಿತ್ತು" ಎಂದರೂ ಅದು ಯಥಾರ್ಥವಾದುದೆಂಬುದನ್ನು ವಸ್ತುಸ್ಥಿತಿಯನ್ನರಿತ ಎಲ್ಲರೂ ಒಪ್ಪಿಯೇ ಒಪ್ಪುತ್ತಾರೆ. ಪ್ರಾಂತೀಯ ಸರಕಾರಗಳು ! ಜನತೆಯ ಹಕ್ಕನ್ನಪಹರಿಸುವ ಕಾಯಿದೆಗಳನ್ನು ನಿರ್ಮಿಸಿ ಭಾರತ ರಾಜ್ಯಘಟನೆಯನ್ನು ಅದಕ್ಕೆ ಸರಿಯಾಗಿ ತಿರುಗಿಸಿಕೊಳ್ಳಲೆತ್ನಿಸುವುದು ಖೇದಾವಹ ಸಂಗತಿ. ಇಡಿಯ ರಾಷ್ಟ್ರಕ್ಕೆ ಒಪ್ಪುವಂತಹ ರಾಜ್ಯಘಟನೆಗೆ ವ್ಯತಿರಿಕ್ತವಾಗದ ರೀತಿಯಲ್ಲಿ ತಾವು ನಡೆದುಕೊಳ್ಳುವುದರಲ್ಲೇ ಹೆಚ್ಚಿನ ಶ್ರೇಯಸ್ಸಿದೆ. ನ್ಯಾಯಾಲಯಗಳು ಕೇಂದ್ರದ ಘಟನೆಯನ್ನು ಹೊಂದಿಕೊಂಡೇ ನಡೆಯಬೇಕಾಗುವ ಪ್ರಸಂಗವಿರುವಾಗ ಪ್ರಾಂತೀಯ ಕಾಯಿದೆಗಳಂತೆ ಪ್ರಾಂತಪ್ರಾಂತಕ್ಕೆ ಬೇರೆ ಬೇರೆ ನ್ಯಾಯದಾನ ಮಾಡುವಂತಿಲ್ಲ- ಇಂತಹ ಸನ್ನಿವೇಶದಲ್ಲಿ ವರಿಷ್ಠ ನ್ಯಾಯದ ಮೇಲೆ ಟೀಕೆ ಮಾಡುತ್ತಿರುವುದು ರಾಜಕೀಯ ನೀತಿಯ ಅಜ್ಞಾನದ ಪರಮಾವಧಿಯಾಗಿದೆ.

ಕೇಂದ್ರದ ಪಾರ್ಲಿಮೆಂಟನಲ್ಲಿ "ವರದಕ್ಷಿಣೆ"ಯ ಮಸೂದೆಯೊಂದು ಮುಂದೆ ಬಂದಿದೆ- ಈ ಮಸೂದೆಯಂತೆ 1000 ಕ್ಕಿಂತ ಮೇಲಾದ ವರದಕ್ಷಿಣೆ ತೆಗೆದುಕೊಳ್ಳಕೂಡದೆಂದಿದೆ- ತೆಗೆದುಕೊಂಡಿದ್ದಾರೋ ಇಲ್ಲವೋ ಎಂಬುದನ್ನು ಯಾರು ಲಕ್ಷಿಸಬೇಕು? ಒಂದುಕಡೆಯವರು ಇನ್ನೊಂದು ಕಡೆಯವರ ಮೇಲೆ ದೂರು ತಂದರೆ ಮಾತ್ರ ಇದನ್ನು ವಿಚಾರಿಸಬೇಕೆಂದೂ ಅದರಲ್ಲಿ ಹೇಳಿದೆ. ಮದುವೆಯಾದ ಮೇಲೆ ಇಂತಹ ವಿಚಾರದಲ್ಲಿ ಕೋರ್ಟು ಹತ್ತಿ ಸಂಸಾರದಲ್ಲಿ ಒಡಕು ಹುಟ್ಟುವಂತಹ ಹೀನಕಾರ್ಯವನ್ನು ಯಾರೂ ಮಾಡುವಂತಿಲ್ಲ ಅಲ್ಲದೆ ಇದರಿಂದ ಸರಕಾರ ಇನ್ನಷ್ಟು ಅವಹೇಳನಕ್ಕೆ ಗುರಿಯಾಗಲಿದೆ. ಏಕೆಂದರೆ ವರದಕ್ಷಿಣೆ ರೂಪವಾಗಿ ಐವತ್ತು ಅರುವತ್ತು ಸಹಸ್ರ ರೂಪಾಯಿಯನ್ನು ಈಗಲೂ ಮಂತ್ರಿಯೂ ತೆಗೆದುಕೊಳ್ಳುತ್ತಾರೆ- ಆದರೆ ತೆಗೆದುಕೊಂಡದ್ದನ್ನು ಅವರು ವರದಿಮಾಡುವುದಿಲ್ಲ. ಆಗ ಸರಕಾರ ಏನು ಮಾಡುವಂತೆಯೂ ಇಲ್ಲ.

ಹೀಗೆಯೆ ಕೇಂದ್ರದಲ್ಲೂ; ಪ್ರಾಂತ್ಯದಲ್ಲೂ ದೀರ್ಘಕಾಲ ಬಾಳದ, ತತ್ಕಾಲೋಪಶಮನದ ಕಾಯಿದೆಗಳನ್ನು ರಚಿಸಿ ಮೂಲ ಘಟನೆಯನ್ನು ; ದುರ್ಬಲಗೊಳಿಸಲಾಗುತ್ತದೆ. ಕಾಯಿದೆ ನಿರ್ಮಾಣದಲ್ಲಿ ಅವಸರದ ಧೋರಣೆಸಲ್ಲದು! ಪ್ರಾಂತೀಯ ಸರಕಾರಗಳು ತಿದ್ದುಪಡಿಗಾಗಿ ಒತ್ತಾಯಿಸುತ್ತಿರುವ ಅಂಶವನ್ನು ಭಾರತ ಸರಕಾರವು ಈಗಲೇ ಗಮನಿಸಕೂಡದು. ಮುಂಬರುವ ಚುನಾವಣೆಯ ನಂತರದ ಜನತೆಯ ಬಹುಮತಾಭಿಪ್ರಾಯದ ಮೇಲೆ ಹಲವು ಮುದ್ದೆಗಳನ್ನು ತಿದ್ದುಪಡಿಮಾಡುವ ಮನಸ್ಸು ಮಾಡಬಹುದೇ ಹೊರತು ಈಗಿಂದೀಗಲೇ ತಿದ್ದುಪಡಿ ಮಾಡುತ್ತಾ ಹೋದರೆ ಹೊಸ ಹೊಸ ಘಟನೆಗಳೇ ಆಗಬೇಕಾಗಬಹುದು.

ಸ್ವತಂತ್ರಭಾರತದಲ್ಲಿ ಪ್ರತಿಯೊಬ್ಬ ವ್ಯಕ್ತಿಯೂ ಕಾಯಿದೆಯನ್ನು ಸದ್ಭಾವನೆಯಿಂದ ಕಾಣುವಂತಾಗಬೇಕೆ ಹೊರತು ಬಲಾತ್ಕಾರದಿಂದಲ್ಲ! ಘಟನೆಗಳಾಗಲೀ ಕಾಯಿದೆಗಳಾಗಲಿ ವ್ಯಕ್ತಿಸ್ವಾತಂತ್ರ್ಯಾಪಹರಣ ಮಾಡುವಂತಾದರೆ ಸ್ವಾತಂತ್ರ್ಯ ಸರಕಾರಕ್ಕೆ ಜನತೆಗಲ್ಲವೆಂದಾಯಿತು! ಸದ್ಯ ತಲೆದೋರುತ್ತಿರುವ ಪ್ರಾಂತೀಯ ಮತಭೇದಗಳು ಘಟನೆಯ ತಿದ್ದುಪಡಿಗರ್ಹವಾದವುಗಳೆಂದು ನಮಗನ್ನಿಸುವುದಿಲ್ಲ. ಹಾಗೆ ಬದಲಿಸುವದಾದರೆ ಮೂಲ ಘಟನೆಗಳು ಸಾರ್ವಜನಿಕರ ದೃಷ್ಟಿಯಲ್ಲಿ ಗೌರವವನ್ನು ಪಡೆಯಲಾರವೆಂದೇ ನಮ್ಮ ಸೂಚನೆ.

ಶ್ರೀ ಎ- ಎಸ್- ಕಾರಟರ ನಿಧನ

ಉಡುಪಿಯ ಕ್ರಿಶ್ಚಿಯನ್ ಹೈಸ್ಕೂಲಿನ ಮಾಜೀ ಮುಖ್ಯೋಪಾಧ್ಯಾಯರಾದ ಶ್ರೀ. ಎ. ಎಸ್. ಕಾರಟರು ಮದ್ರಾಸಿನಲ್ಲ ನಿಧನಹೊಂದಿದ ದುಃಖಕರ ವಾರ್ತೆಬಂದಿರುತ್ತದೆ. ಉಡ್ಪಿ ಕ್ರಿಶ್ಚಿಯನ್ ಹೈಸ್ಕೂಲಿನ ಮುಖ್ಯೋಪಾಧ್ಯಾಯರಾಗಿದ್ದುಕೊಂಡು ಶಿಸ್ತು—ಸಂಘಟನೆಯ ಮೂಲಕ ಆಡಳಿತ ಕ್ರಮವನ್ನು ಸುವ್ಯವಸ್ಥಿತ ರೀತಿಯಲ್ಲಿ ನಡೆಸಿಕೊಂಡಿದ್ದರು. ಉಜ್ವಲ ಕನ್ನಡಾಭಿಮಾನಿಗಳೂ, ಭಾಷಣಕರ್ತರೂ ಆಗಿದ್ದರು. ಕ್ರಿಶ್ಚಿಯನ್ ಹೈಸ್ಕೂಲಿನ ಗೋಲ್ಡನ್ ಜುಬ್ಲಿಯು ಅವರ ಆಡಳಿತ ಕಾಲದಲ್ಲಿ ವಿಜೃಂಭಣೆಯಿಂದ ನಡೆದಿತ್ತು. ಕ್ರಿಶ್ಚಿಯನ್ ಹೈಸ್ಕೂಲಿನಲ್ಲಿ ಮುಖ್ಯೋಪಾಧ್ಯಾಯ ವೃತ್ತಿಯಿಂದ ನಿವೃತ್ತಿಗೊಂಡ ಮೇಲೆ ಮದ್ರಾಸ್ ಕ್ರಿಶ್ಚಿಯನ್ ಕಾಲೇಜಿನ ಟ್ಯೂಟರಾಗಿದ್ದರು- ಈಚೆಗೆ ಆರು ತಿಂಗಳಿಂದ ಅವರ ಆರೋಗ್ಯ ಚೆನ್ನಾಗಿದ್ದಿಲ್ಲ. ಈಗ ಅವರು ದೈವಾಧೀನಗೊಂಡ ದುಃಖಕರ ವಾರ್ತೆಬಂದಿದೆ. ಪ್ರೀತಿ- ವಿಶ್ವಾಸ-ನಿಸ್ಪೃಹವಾದ ಮನೋವೃತ್ತಿ- ವಿಶಾಲಾಂತಃಕರಣ-ಮೊದಲಾದ ವಿಶಿಷ್ಟ ಗುಣಗಳಿಗಾಗಿ ಮೆಚ್ಚಿದ ಅವರ ಶಿಷ್ಯ ಲೋಕವೂ ಇತರ ಮಿತ್ರವೃಂದವೂ ಅಪಾರ ದುಃಖಕ್ಕೊಳಗಾಗಿದೆ. ದೇವರು ಶ್ರೀಯುತರ ಆತ್ಮಕ್ಕೆ ಚಿರಶಾಂತಿಯನ್ನೀಯಲಿ.

ಹಾರುವ ಕಿಡಿಗಳು

ಹಾರುವ ಕಿಡಿಗಳಿಗೆ ಹಾರುವವರುಂಟಂತೆ! ಹಾರವ ಕಿಚ್ಚಿಗೂ ಗಾಳಿಹಾಕುವವರುಂಟಂತೆ!

೦೦೦ ೦೦೦

ತೆಂಕಣ ಗಾಳಿ ಬೀಸುತ್ತಿದೆ; ವೇದನ, ಛೇದನ, ರೋದನವಾಗುತ್ತಿದೆ.

೦೦೦ ೦೦೦

ಪರರ ದೂಷಣೆ, ಸುಧಾರಣೆಗಳಿಗೆ ಹಟ ಸಾಧನೆಯಂತೆ; ತಮ್ಮ ಚಟ-ಗಟ ಬಿಡಬಾರದಂತೆ.

೦೦೦ ೦೦೦

ಇಗ್ದವರ 'ಸೇವೆ' ಮಾಡಿದ್ದಾಯಿತು; ಸತ್ತವರನ್ನು ಕೆಲವರು ಎತ್ತಿ ಹಿಡಿಯಹತ್ತಿದ್ದಾರೆ.

೦೦೦ ೦೦೦

ಇದ್ದಾಗ, ಬಿದ್ದಾಗ ಗುದ್ದಿದರೆಲ್ಲ; ಹೋದಾಗ, ಸತ್ತಾಗ ಮುದ್ದಿಸುವವರುಂಟಲ್ಲ!

೦೦೦ ೦೦೦

ಮಾತಿನ ಮುದ್ದೊ! ಹದ್ದಿನ ಮುದ್ದೊ! ಸ್ವಾರ್ಥದ ಸೋಗೊ– ನೋಡಲುಂಟು.

೦೦೦ ೦೦೦

ಕುಗ್ಗಿ ನಡೆವವರಿಗೆ ಸುಗ್ಗಿ ಹೋಗಬೇಕೆನ್ನುತ್ತಾರೆ; ಸುಗ್ಗಿ ಹೋಗುವವರನ್ನು ಬಗ್ಗಿಸಿ ಬಿಡಬೇಕೆನ್ನುತ್ತಾರೆ.

೦೦೦ ೦೦೦

'ಸಿಕ್ಕು'ವವರೊಡನೆ ನಕ್ಕು ನಲಿದಾಟ! ಸಿಕ್ಕಲಾರದವರೊಡನೆ ಸೊಕ್ಕು ಸೆಣಸಾಟ!

೦೦೦ ೦೦೦

ಅನ್ಯರು ಸಂಪಾದಿಸಿದ ಕುರ್ಚಿಯ ಮೇಲೆ ಕಾಕದೃಷ್ಟಿ! ಖುರ್ಚಿಗೆ ಇನ್ನೊಬ್ಬರ ಚೀಲದ ಮೇಲೆ ಕಣ್ಣು!

೦೦೦ ೦೦೦

ಮರ ಕಡಿಯಬೇಕಾದರೂ ಕೊಡಲಿಗೆ ಮರದ ಹಿಡಿಯೇ ಬೇಕು; ತಮ್ಮವನನ್ನು ಕ್ಲೋಡ್'ಬೇಕಾದರೂ ತಮ್ಮವನೊಬ್ಬನೆ 'ಮುಂದಾಗಬೇಕು.

೦೦೦ ೦೦೦

'ಹೋಗುವ' ಹೊತ್ತಿಗೆ ಪಕ್ಷಹಿಡಿಯುವುದು ಹೋಗುವವನ ಉದ್ಧಾರಕ್ಕಲ್ಲ; ಆಗದ ಎದುರಾಳಿಯನ್ನು ಬಾಗಿಸಲಿಕ್ಕೆ!

೦೦೦ ೦೦೦

ಮಾತಿಗೆ ಮರುಳಾಗುವ ಮಂದಿ ಕೃತಿಯನ್ನು ಕಣ್ಣುಬಿಟ್ಟು ನೋಡುವುದುಂಟೆ?

೦೦೦ ೦೦೦

ಸತ್ಕಾರ್ಯ ಸಾಧನೆಗೆ ಸಹಾಯವಿಲ್ಲ; ವಿಪತ್ತೊಡ್ಡಲಿಕ್ಕೆ ಜನ ಸೂಡಿಕಟ್ಟೆದಿಲ್ಲ.

೦೦೦ ೦೦೦

ಏನಾದರೂ ಹೊಸತಿನ ಮೇಲೆ ಆಕರ್ಷಣೆಗೊಳ್ಳುವವರಿದ್ದಾರೆ 'ಹೊಲಸಿನಲ್ಲಿ'ಯೂ ಆಸಕ್ತಿಪಡುವವರುಂಟು.

೦೦೦ ೦೦೦

'ಯುಗಾದಿ' ಬರುವುದು ನಿಲ್ಲುವುದಿಲ್ಲ; 'ತಗಾದಿ' ಎಂಬುದು ತಪ್ಪುವುದೂ ಇಲ್ಲ.

೦೦೦ ೦೦೦

ಜನರ ಶಕ್ತಿ ಕುಗ್ಗುತ್ತಿದೆಯಾದರೂ ಜನನ ಸಂಖ್ಯೆ ಏರುತ್ತಲೇ ಇದೆ

೦೦೦ ೦೦೦

ಟಿಕೇಟು ಸಿಗಲಿಲ್ಲವೆಂದು ತಾನೇ ಬಸ್ ಕಂಪೆನಿ ಹೊರಡಿಸಿದವರುಂಟೆ? ಊಟಸಿಗಲಿಲ್ಲವೆಂದು ತಾನೇ ಹೋಟೇಲ್ ಇಟ್ಟವರುಂಟೆ?

೦೦೦ ೦೦೦

ಕಾಂಗ್ರೆಸಿನ ಮಟ್ಟ ಏರಬೇಕಂತೆ! ಕಾಂಗ್ರೆಸಿಗೆ ಅಂಟಿಕೊಂಡಿರುವ ಜಿಗಣೆಗಳು ದೂರವಾಗಬೇಕಲ್ಲ!

ಉಡುಪಿ

ರೈತರಿಗೆ ಸರ್ಟಿಫಿಕೇಟು— ಸುಧಾರಿತ ಸಾಗುವಳಿ ಕ್ರಮಗಳನ್ನು ಅನುಸರಿಸಿ ಕಾರ್ತಿಬೆಳೆಯಲ್ಲಿ 2400 ರಾತ್ತಲುಗಳಿಗಿಂತಲೂ ಜಾಸ್ತಿ ಉತ್ಪತ್ತಿಯನ್ನು ಮಾಡಿಕೊಂಡಿರುವ ಉಡುಪಿ ತಾಲೂಕಿನ ಹತ್ತುಮಂದಿ ರೈತರಿಗೆ ಸರಕಾರದ ಕಡೆಯಿಂದ ಪ್ರೋತ್ಸಾಹ ರೂಪದ ಸರ್ಟಿಫಿಕೇಟುಗಳನ್ನು ಹಂಚುವ ಸಮಾರಂಭವು ಇದೇ ತಾ. 11ರಲ್ಲು ತಾಲೂಕು ಕಚೇರಿಯಲ್ಲಿ ಸಬ್ ಕಲೆಕ್ಟರ್ ಶ್ರೀ ಪಿ ಎಸ್ ತಿಮ್ಮಪ್ಪ ಸೆಟ್ಟಿರ ಅಧ್ಯಕ್ಷತೆಯಲ್ಲಿ ಜರಗಿತು.

ಪ್ರೊಹಿಬಿಶನ್ ಎಡ್ವ್ಯಾಯಸರಿ ಕಮಿಟಿ ಸಭೆಯು—ದಿನಾಂಕ 11ರಂದು ಸಬ್ ಕಲೆಕ್ಟರ್ ಶ್ರೀ ಪಿ. ಎಸ್. ಟಿ. ಸೆಟ್ಟರ ಅಧ್ಯಕ್ಷತೆಯಲ್ಲಿ ಜರಗಿತು. ಆ ಪ್ರೊಹಿಬಿಶನ್ ಆಫೀಸರರು ಮಾರ್ಚ ತಿಂಗಳಲ್ಲಿ ಈ ತಾಲೂಕಿನಲ್ಲಿ ಪಾನನಿರೋಧ ತಕ್ಸೀರು ಜಾಸ್ತಿಯಾಗಿದ್ದುವೆಂದು ಹೇಳಿದರು. ಕಾಪು ಕೇಂದ್ರದ ಐದುಮೈಲು ವ್ಯಾಪ್ತಿಕಾರದ ಹಳ್ಳಿಗಳಲ್ಲಿ ಬೆಲ್ಲ ತಯಾರಿಕೆಗಾಗಿ ತೆಂಗಿನ ಮರಗಳಿಂದ ಸಿಹಿ ಹೆಂಡವನ್ನು ತೆಗೆಯಬಹುದಾಗಿ ಸೂಚಿಸಿದ ಸರಕಾರಿ ಆರ್ಡರನ್ನು ರಿಕಾರ್ಡು ಮಾಡಲಾಯಿತು. ಬಳಿಕ ಆಹಾರ ಉತ್ಪಾದನಾ ಕಮಿಟಿ ಸಭೆಯು ಜರುಗಿತು. ಆಹಾರ ಬೆಳ್ಳುಬೆಳೆಸುವ ಕುರಿತು ಸಬ್ ಕಲೆಕ್ಟರರು ಮಾತನಾಡಿದರು. ಕೃಷಿ ಇಲಾಖಾ ಅಧಿಕಾರರು ಬೀಜ ವಿತರಣೆಯ ಕುರಿತು ವಿವರಿಸಿದರು. ಆಯಾಯ ಫಿರ್ಕಾದ ಮಣೆಗಾರ್ ಮೊದಲಾದವರು ತಮ್ಮ ಕ್ಷೇತ್ರದಲ್ಲಾದ ಆಹಾರ ಉತ್ಪಾದನಾ ಅಭಿವೃದ್ಧಿ ಅಂಕೆ ಸಂಖ್ಯೆಗಳನ್ನು ವರದಿ ಮಾಡಿದರು.

ಉಪಾಹಾರ ಸಮಾರಂಭ—ಉಡುಪಿಯ ಜನಪ್ರಿಯ ಡಾ। ಕೆ. ಎಲ್. ಐತಾಳರು ಕಟ್ಟಿಸಿದ 'ಹಂಸನಿವಾಸ' ಎಂಬ ನೂತನ ಗೃಹದ ಪ್ರವೇಶೋತ್ಸವದ ಸಂಬಂಧ ತಾ 11ನೇ ಸಂಜೆ ಉಪಾಹಾರ ಕೂಟವನ್ನೇರ್ಪಡಿಸಿದರು

ಪುನರ್ರಚನಾ ಸಭೆ—ಉಡುಪಿಯ ಹೆಂಗಸರ ಸಹಕಾರಿ ಗುಡಿಕೈಗಾರಿಕೆ ಸಂಘವನ್ನು ಪುನರ್ರಚಿಸುವ ಸಭೆಯು ದಿನಾಂಕ 10 ಸಂಜೆ ಬಡಗಬೆಟ್ಟು ಸಹಕಾರ ಸಂಘದ ಕಟ್ಟಡದಲ್ಲಿ ಶ್ರೀಮತಿ ಎಲ್. ಫರ್ನಾಂಡೀಸರ ಅಧ್ಯಕ್ಷತೆಯಲ್ಲಿ ಜರಗಿತು. ದ. ಕ. ಜಿಲ್ಲಾ ಸೆಂಟ್ರಲ್ ಸಹಕಾರೀ ಬೇಂಕಿನ ಅಧ್ಯಕ್ಷ ಶ್ರೀ ಮೊಳಹಳ್ಳಿ ಶಿವರಾಯರು, ಪುತ್ತೂರಿನ ಶ್ರೀಮತಿಗಳಾದ ಸುನಂದಾಬಾಯಿ ಬಾಳಿಗ ಮತ್ತು ಶಾರದಾ ಬಾಯಿಯವರು ಸಂಘವನ್ನು ಬಳಕೆಯಲ್ಲಿ ತರುವ ಕುರಿತು ಭೋದಪರವಾತುಗಳನ್ನಾಡಿದರು ಕೆಲವು ಮಹಿಳೆಯರು ಸಭೆಯಲ್ಲಿ ಸಂಘದ ಸದಸ್ಯರಾಗಿ ಸೇರಿದರು. ಸಂಘದ ಮಹಾಸಭೆಯು ಇದೇ ತಾ 27ರಂದು ಸಂಜೆ ಬಡಗಬೆಟ್ಟು ಸಂಘದ ಕಾರ್ಯಾಲಯದಲ್ಲಿ ಕರೆಯಲ್ಪಟ್ಟಿದೆ.

ಶಿರ್ವಹಳ್ಳಿ ಪರಿಷತ್ತು—ದಕ್ಷಿಣ ಕನ್ನಡ ಜಿಲ್ಲಾ ಕುಷ್ಠರೋಗ ನಿವಾರಣಾ ಕೆಲಸಗಾರರ ಪರಿಷತ್ತು ಇದೇ ತಾ 29ರಲ್ಲು ಶಿರ್ವದಲ್ಲಿ ಜರಗಲಿರುವುದು. ಅಖಿಲಭಾರತ ಕುಷ್ಠರೋಗ ನಿವಾರಣಾ ಸಂಘದ ಮದ್ರಾಸು ಶಾಖೆಯ ಕಾರ್ಯದರ್ಶಿ ಶ್ರೀ ಟಿ. ಎನ್. ಜಗದೀಶನ್, ಅವರು ಅಧ್ಯಕ್ಷತೆ ವಹಿಸಲಿರುವರು. ಶ್ರೀ ಎಲ್. ಸಿ. ಪಾಯಸ್, ಎಮ್. ಎಲ್. ಎ. ಅವರು ಸ್ವಾಗತ ಕಮಿಟಿ ಚೇರ್ಮೇನರಾಗಿಯೂ ಶ್ರೀ ಯು. ಶಿವರಾಯರು ಕಾರ್ಯದರ್ಶಿಯಾಗಿಯೂ ಆರಿಸಲ್ಪಟ್ಟಿರುವರು.

ಹವಾಮಾನ - ದಿನೇ ದಿನೇ ಸೆಕೆ ಜಾಸ್ತಿ ಯಾಗುತ್ತಲಿದೆ. ಕಳೆದ ವಾರಾಂತ್ಯದಲ್ಲಿ ಧಾರಾಕಾರವಾಗಿ ಮಳೆ ಬಂದಿರುವುದು.

ವಕೀಲ್ ಶ್ರೀ ಕೆ. ಸದಾಶಿವ ಸೆಟ್ಟರ ನಿಧನ—ಇತ್ತೀಚೆಗೆ ಅನಾರೋಗ್ಯದಲ್ಲಿದ್ದ ಸ್ಥಳೀಯ ವಕೀಲ್ ಶ್ರೀ ಕೆ. ಸದಾಶಿವ ಸೆಟ್ಟರು ಇದೇ ತಾ 12ನೆ ಮಧ್ಯಾಹ್ನ ತನ್ನ 50ನೇ ವರ್ಷದಲ್ಲಿ ಅಕಾಲನಿಧನ ಹೊಂದಿದರೆಂದು ತಿಳಿಸಲು ವಿಷಾದವೆನಿಸುತ್ತದೆ. ಅವರ ಶವಮೆರವಣಿಗೆಯು ಸಂಜೆ ಐದುತಾಸಿಗೆ ಜಾತಿ, ಪರಜಾತಿ ಸದ್ಗೃಹಸ್ಥರಿಂದೊಡಗೂಡಿಕೊಂಡು ನಡೆಯಿತು. ದಿವಂಗತರು ಕ್ರಿಮಿನಲ್ ಮತ್ತು ಲಿವಿಸ್ಕು ಉತ್ಸಾಹಿ ವಕೀಲರಾಗಿದ್ದರಲ್ಲದೆ ಹನುಮಾನ್ ಟ್ರಾನ್ಸ್‌ಪೋರ್ಟ ಕಂಪೆನಿಯ ಡ್ಯಾರೆಕ್ಟರರೂ ಜಿಲ್ಲಾ ಬೋರ್ಡಿನ ಸದಸ್ಯರೂ ಆಗಿದ್ದರು.

ವಿವಾಹ ಸಮಾರಂಭಗಳು—ದಿ ಬಾಂಗಾಳ ನಾಯಕ್ ಬೇಂಕಿನ ಕಾರ್ಯದರ್ಶಿಗಳಾದ ಶ್ರೀ ಲಕ್ಷ್ಮಣ ನಾಯ್ಕರ ಪುತ್ರಿ ಸೌ। ಮಾಲತಿ ಬಾಯಿ ಮತ್ತು ಕಾರ್ಕಳ ಶ್ರೀ ಗಣಪತಿ ರಾಮಹೆಗ್ಡೆಯವರ ಪುತ್ರ ಶ್ರೀ ರಾಮದಾಸರಾಯರ ವಿವಾಹವು ತಾ 12ರಲ್ಲಿ ಕಟಪಾಡಿ ನಿವಾಸದಲ್ಲಿ ಜರಗಿತು.

ತೀರ್ಥಹಳ್ಳಿ ಸಾಹುಕಾರ್ ದಿವಂಗತ ಮತ್ಯಮಪ ಅವರ ತೀನಪ್ಪಯ್ಯನವರ ಪುತ್ರ ಶ್ರೀ ಜನಾರ್ಧನರಾವ್ ಮತ್ತು ಕೆನರಾ ಬ್ಯಾಂಕಿನ ಜನರಲ್ ಮೆನೇಜರ್ ಶ್ರೀ ಕೆ. ಸರ್ವೋತ್ತಮ ನಾಯ್ಕರ ದ್ವಿತೀಯ ಪುತ್ರಿ ಸೌ। ಬಿಮಲಾಬಾಯಿ ಇವರ ವಿವಾಹ ಸಮಾರಂಭವು ಇದೇ 12ರಲ್ಲು ನಡೆಯಿತು. ಶ್ರೀ ಪಿ, ಗೋಪಾಲ ನಾಯ್ಕರ ನಿವಾಸದಲ್ಲಿ ಮರುದಿನ ಉಪಹಾರ ಕೂಟ ನಡೆಯಿತು.

ಕಟಪಾಡಿ:—ಎಪ್ರಿಲ್ ತಿಂಗಳ ತಾ 15ನ್ನು ಕೃಷಿಕ ದಿನವಾಗಿ ಆಚರಿಸಲು ತಾ 1-4-51ಲ್ಲು ಸಭೆಯಲ್ಲಿ ನಿರ್ಣಯವಾದಂತೆ ತಾ 15-4-51ಲ್ಲು ಕಟಪಾಡಿ "ಬ್ರಹ್ಮ ಶ್ರೀನಾರಾಯಣಗುರು ಸ್ವಾಮಿ ಸೇವಾ ಸಮಿತಿಯ ಮಂದಿರದಲ್ಲಿ ತಾಲೂಕಿನ ಎಲ್ಲ ಗ್ರಾಮಗಳ ಕೃಷಿಕ ಮಹಾಜನರು ವಿಶ್ವಂಭಕೆಯಿಂದ ಕಟಪಾಡಿಗೆ ನೆರೆದು ಬಂದು ಶ್ರೀ. ಕೆ. ಮುದ್ದು ಸುವರ್ಣ ಇವರ ಅಧ್ಯಕ್ಷತೆಯಲ್ಲಿ ಸಭೆ ಜರಗಿ, ಮದ್ರಾಸು ಸರಕಾರವು ಈ ತಿಂಗಳ ಅಂತ್ಯದೊಳಗೆ ಸ್ಟೇ ಕಾನೂನು, ಅಥವಾ ರೈತ ರಕ್ಷಣಾ ಮಸೂದೆಯನ್ನು ಕೂಡಲೇ ಜಾರಿಗೆ ತರುವೇವೆಂದು ಹಾಗೆ ತರದಿದ್ದರೆ ಜಿಲ್ಲೆಯಲ್ಲಿ ಚಳವಳ ಹೂಡುವ ನಿರ್ಧಾರವನ್ನು ಮಾಡಬೇಕೆಂದೂ ನಿರ್ಣಯವಾಗಿ ಸಂಬಂಧಪಟ್ಟವರಿಗೆ ತಂತಿಕೊಡಲಾಯಿತು.

ಪ್ರಕಟಣೆ

ಕಾರ್ಕಳ ದಿ ಮು- ಕೋರ್ಟಿನಲ್ಲಿ

O. S, No- 156/1950

R- E. P. No. 752/1950

R- E- A- 812/1950

ಬುಕ್ಕ ಶೆಟ್ಟಿ — ವಾದಿ, ಅರ್ಜಿದಾರ

ಮತ್ತು

1. ಮಹಾಬಲ ಶೆಟ್ಟಿ–ನಾಗಿ ಶೆಟ್ಟಿ ಸಂಗ 2. ಶಾಂತಾರಾಮ ಶೆಟ್ಟಿ 3. ಸಾವಿತ್ರಿಶೆಟ್ಟಿ 4. ಶ್ಯಾಮಲ 5. ಸುಗುಣ 6. ಸರ್ಜ ' 7. ಸದಾನಂದ (4ರಿಂದ 7ರವರೆಗಿನವರು ಮ್ಯಾನರರು) ರುಕ್ಮಿಣಿ ಶೆಟ್ಟಿ ಮಕ್ಕಳು,

ಇವರ ಗಾರ್ಡಿಯನ ಅರ 2ನೇ ಎದ್ರಿ

ಕಾರ್ಕಳ ತಾಲ್ಲೂ ಕುಕ್ಕುಂದೂರು ಗ್ರಾಮದ ಜಡ್ಡಿಸಲ್ಪಡುತ್ತಾರೆ.

—ಪ್ರತಿವಾದಿರು, ಎದ್ರಿರು.

ಈ ಮೂಲಕ 2ರಿಂದ 7ನೆ ಹರೇಗಿನ ಎದ್ರಿಂಗೆ ತಿಳಿಯಪಡಿಸುವದೇನಂದ್ರೆ–

ಮೇಲ್ಕಂಡ ಡಿಕ್ರಿ ಅಮಲ್ದಾರಿಯಲ್ಲಿ ಎದ್ರಿರ ಕುಟುಂಬದ ಹಕ್ಕಿನ ಸ್ಥಿರಾಸ್ತಿಗಳ ಯೇಲಂ ಬಗ್ಗೆ ಅರ್ಜಿದಾರನು ಇಸ್ತಿಹಾರು ದಾಕ್ಲು ಮಾಡಿ ಮತ್ತು ಯೇಲಂ ಸಮಯ ಬಿಡ್ ಮತ್ತು ಸೆಟ್‌ಆಫ್ ಕೂಡಾ ಪರ್ಮಿಶನ್ ಕೇಳಿ ಕೂಡಾ ದಾಕ್ಲು ಮಾಡಿದ ಸದ್ರಿ ಅಮಲ್ದಾರಿ ಮತ್ತು ಅರ್ಜಿ ಕೂಡಾ ನಿಮ್ಮ ಹಾಜರಾತಿ ಬಗ್ಗೆ ತಾರೀಖು 28-5-1951ಕ್ಕೆ ಇಟ್ಟಿದೆ. ಸದ್ರಿದಿನ ಬೆಳಗ್ಗೆ 11ಗಂಟೆಗೆ ಮೇಲ್ಕಂಡ ಕೋರ್ಟಿನಮುಂದೆ ನೀವು ಸ್ವತಹಾ ಯಾ ವಕೀಲರ ದ್ವಾರಾ ಹಾಜರಾಗಿ ಉಪಸಂಸಕಕ್ಕದ್ದು. ತಪ್ಪಿದ್ದಲ್ಲಿ ನಿಮ್ಮನ್ನು ಶಿವಾಯ ಮಾಡಲಾಗುದೀತು ಎಂತ ಈ ಮೂಲಕ ತಿಳಿಸೋಣಾಗಿದೆ.

(By order of the Court)

N. M. Adyanthaya

Advocate for petitioner

Camp: KARKALA
Deted 16—4—1951

"ಅಂತರಂಗ"ವನ್ನು

ತಪ್ಪದೆ ಓದಲು ಮರೆಯದಿರಿ

ಮುಂಬಯಿ ಕನ್ನಡಿಗರಲ್ಲಿ ವಿನಂತಿ

ಬೇರೆ ಬೇರೆ ವ್ಯಾಪಾರ, ಉದ್ಯೋಗಗಳನ್ನು ಸುಸೂತ್ರವಾಗಿ ನಿರ್ವಹಿಸುತ್ತ ಮುಂಬಯಿಯಲ್ಲಿ ನೆಲೆನಿಂತಿರುವ ದಕ್ಷಿಣ ಕನ್ನಡಿಗರು 'ನವಯುಗ'ಕ್ಕೆ ಮೊದಲಿನಿಂದಲೂ ನೀಡುತ್ತಿರುವ ಪ್ರೋತ್ಸಾಹವು ಅಭಿನಂದನೀಯವಾದುದು. 'ನವಯುಗ'ದ ಪ್ರತಿನಿಧಿಗಳಾಗಿ ಶ್ರೀ ಕೆ. ಜಗನ್ನಾಥ ಶೆಟ್ಟರು ಕೆಲವು ವರ್ಷಗಳಿಂದ ವರ್ಷಂಪ್ರತಿ ಮುಂಬಯಿಗೆ ಬರುತ್ತಿದ್ದರು. ಆದರೆ ಕಾರಣಾಂತರದಿಂದ ಕಳೆದ ವರ್ಷ ಬರಲಿಲ್ಲ. ಇದೀಗ ಅವರು ನವಯುಗದ ವ್ಯಾಪಕತೆಗಾಗಿ ಮುಂಬಯಿಗೆ ಬಂದಿರುತ್ತಾರೆ. ಅವರಿಗೆ ಮುಂಬಯಿ ಕನ್ನಡಿಗರು, ಮುಖ್ಯತಃ ಅಲ್ಲಿಯ ದಕ್ಷಿಣ ಕನ್ನಡಿಗರು ಸರ್ವಸಹಕಾರ, ಪ್ರೋತ್ಸಾಹಗಳನ್ನು ಕೊಟ್ಟು ನವಯುಗದ ಅಭಿವೃದ್ಧಿಗೆ ನೆರವಾಗಬೇಕಾಗಿ ವಿನಂತಿ.

ನವಯುಗ ಆಫೀಸು, ಉಡುಪಿ — ಕೆ. ಹೊನ್ನಯ್ಯ ಶೆಟ್ಟಿ, ಸಂಚಾಲಕ, ಸಂಪಾದಕ

ಶ್ರೀ ರಾಮಕೃಷ್ಣ ಥಿಯೇಟರ್ ಲಿಮಿಟೆಡ್. ಉಡುಪಿ.

ತಾರೀಖು. 20–4–51ರಿಂದ

ರಣಜಿತ್ ರವರ

ಕರನ್ ದಿವಾನ್, ಮೀನಾ, ಆಗಾ ಉಷಾ ಮೊದಲಾದವರು ನಟಿಸಿರುವ

ಪಿಯಾ ಘರ್ ಆಜಾ

ಮುಂದಿನ ಚಿತ್ರಗಳು

ರಾಮಅವತಾರ್, ಶವಾ, ದಿಲ್ಲಗಿ, ದುಲಾರಿ ಇತ್ಯಾದಿ.

ಶ್ರೀ ಮಾರ್ಸೆಲ್ ಮೆಂಡೋನ್ಸರು.

ಬಾಲ್ಯದಲ್ಲಿಯೇ ತನ್ನ ಹುಟ್ಟೂರಾದ ದ. ಕನ್ನಡದ ಬೆಳ್ಮಣ್ಣು ಬಿಟ್ಟು, ಭಾರತದ ಪ್ರಖ್ಯಾತ ನಗರವಾದ ಬೊಂಬಾಯಿಗೆ ತೆರಳಿ, ಅಲ್ಲಿ ತಮ್ಮ ಸತತ ಉದ್ಯೋಗ, ಪರಿಶ್ರಮಗಳಿಂದ ಪ್ರಸಿದ್ಧಿ ಮತ್ತು ಪ್ರಗತಿ ಪಡೆದು ಇಂದೀಗ ಹೆಸರಾಂತ ದೊಡ್ಡ ವ್ಯಾಪಾರಿ ಸಂಸ್ಥೆಯಾದ **ನೇಶನಲ್ ಜನರಲ್ ಸ್ಟೋರ್ಸ್,** ಮುಂಬಯಿ-; ಇದರ ಮಾಲಿಕರಾಗಿ ಗಣ್ಯ ವ್ಯಕ್ತಿಗಳಲ್ಲೊಬ್ಬರಾಗಿದ್ದಾರೆ. ತನ್ನ ಉದ್ಯಮಶೀಲ, ಸರಳ, ಪರೋಪಕಾರಾದಿ ಗುಣಗಳಿಂದ ಜನಸಾಮಾನ್ಯರ ಮೆಚ್ಚಿಕೆಗೂ ಪಾತ್ರರಾಗಿದ್ದಾರೆ. ನ್ಯೂ ಕರ್ನಾಟಕ ಪ್ರೊವಿಡೆಂಟ್ ಇನ್ಶೂರೆನ್ಸ್ ಕಂಪೆನಿಯ ಡೈರೆಕ್ಟರರಲ್ಲೊಬ್ಬರಾಗಿ ಬೊಂಬಾಯಿಯಲ್ಲಿ ಕಂಪೆನಿಯ ಅಭಿವೃದ್ಧಿಗಾಗಿ ದುಡಿಯುತ್ತಿದ್ದಾರೆ.

ಮಂಗಳೂರು

ಕರ್ನಾಟಕ ಏಕೀಕರಣ ನಿಯೋಗ—ಕರ್ನಾಟಕದ ಏಕೀಕರಣವು ತ್ವರಿತದಲ್ಲೇ ಆಗಬೇಕಾದ ಆವಶ್ಯಕತೆಯನ್ನು ನಿವೇದಿಸಿಕೊಳ್ಳುವ ಬಗ್ಗೆ ಕರ್ನಾಟಕ ಪ್ರಾಂತೀಯ ಕಾಂಗ್ರೆಸಿನ ಅಧ್ಯಕ್ಷ ಶ್ರೀ ಎಸ್. ನಿಜಲಿಂಗಪ್ಪನವರ ಮುಂದಾಳುತನದಲ್ಲಿ ಒಂದು ಶಿಷ್ಟಮಂಡಳಿಯು ಕಳೆದ ತಾ. 30ನೆ ಶನಿವಾರ ರಾತ್ರಿ ಒಂಭತ್ತು ಗಂಟೆಗೆ ಕರ್ನಾಟಕದಲ್ಲಿ ಪ್ರವಾಸಮಾಡುತ್ತಿದ್ದ ರಾಷ್ಟ್ರಾಧ್ಯಕ್ಷ ಡಾ| ರಾಜೇಂದ್ರ ಪ್ರಸಾದರನ್ನು ಧಾರವಾಡ ಕಲೆಕ್ಟರರ ಬಂಗ್ಲೆಯಲ್ಲಿ ಭೇಟಿಯಿತ್ತು ಕರ್ನಾಟಕದ ಜನಾಭಿಪ್ರಾಯವನ್ನು ಅಧ್ಯಕ್ಷರಿಗೆ ಮುಂದಿಟ್ಟು ಮಾಡಿತು. ಈ ಶಿಷ್ಟಮಂಡಲದಲ್ಲಿ ಮುಂಬಯಿ ಕೃಷಿ ಇಲಾಖಾ ಸಚಿವ, ಶ್ರೀ ಎಮ್. ಪಿ. ಪಾಟೀಲ್, ಕೇಂದ್ರ ವ್ಯಾಪಾರ ವಹಿವಾಟು ಉಪಮಂತ್ರಿ ಶ್ರೀ ಡಿ. ಪಿ. ಕರಮರಕರ ಶ್ರೀಗಳಾದ ಕೆ. ಕೆ.ಎಫ್. ಪಾಟೀಲ್, ಬಿ. ಡಿ. ಜತ್ತಿ, ಎಸ್. ಕಾಂತಿ ಮೊದಲಾದವರು ಭಾಗವಹಿಸಿದ್ದರು. ದ. ಕ. ಜಿಲ್ಲೆಯಿಂದ ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಡಾ| ಕೆ. ನಾಗಪ್ಪ ಆಳ್ವ, ಕಾರ್ಯದರ್ಶಿಗಳಾದ ಶ್ರೀ ಕೆ. ಕೆ. ಶೆಟ್ಟಿ ಮತ್ತು ಶ್ರೀ ಬಿ. ಆರ್. ಕರ್ಕೇರ ಮತ್ತು ಶ್ರೀ A. S. ಮಹಾಬಲಯ್ಯಗಳು ಭಾಗವಹಿಸಿದ್ದರು ಈ ಸಂದರ್ಭದಲ್ಲಿ ಮುಂಬಯಿಯ ಮುಖ್ಯ ಸಚಿವರಾದ ಶ್ರೀ ಬಿ. ಜಿ. ಖೇರರು ಹಾಜರಿದ್ದು ಕರ್ನಾಟಕ ಪ್ರಾಂತ ರಚನೆಗೆ ಮುಂಬಯಿ ಸರಕಾರದ ಬೆಂಬಲವಿರುವುದೆಂದರು.

ತೀರ್ಪು ಶಿಕ್ಷೆ—ತಾ 23-9-50ರಂದು ರಾತ್ರಿ ಕಾಪೂರಿನ ಮನೆಯೊಂದನ್ನು ಹೊಕ್ಕು ಶ್ರೀ ಪದ್ಮನಾಭ ಶೆಣೈ ಎಂಬವರಿಗೆ ಉಳಿಯಿಂದ ಮರಣಾಂತಿಕ ಗಾಯಗೊಳಿಸಿ ತಂದೆಯ ಸಹಾಯಕ್ಕೆ ಧಾವಿಸಿದ ಮಗಳಿಗೂ ಅವರ ಹೆಂಡತಿಗೂ ಗಾಯಗೊಳಿಸಿದ ಅಪರಾಧಿಗೆ ಜಿಲ್ಲಾ ಸೆಶನ್ಸ್ ಜಡ್ಜರಾದ ಶ್ರೀ ಸಿ. ಕೃಷ್ಣಮೂರ್ತಿಯವರು ಜೀವಾವಧಿ ಶಿಕ್ಷೆಯನ್ನು ವಿಧಿಸಿದರು.

ಅಭಿವೃದ್ಧಿ ಮಂತ್ರಿಗಳ ಸಂಚಾರ—ಮದ್ರಾಸು ಸರಕಾರದ ಗ್ರಾಮಾಭಿವೃದ್ಧಿ ಮತ್ತು ಹರಿಜನೋದ್ಧಾರ ಮಂತ್ರಿಗಳೂ ಆದ ಶ್ರೀ ಪರಮೇಶ್ವರನ್ ಇವರು ಈ ವಾರದಲ್ಲಿ ಮಂಗಳೂರಿಗೆ ಬರಲಿರುವರು.

ಲೆವಿಸಂಗ್ರಹ—ಬೇಸಾಯಗಾರರ ಊಟದ ಮತ್ತು ಬೇಸಾಯದ ಖರ್ಚು ಹಾಗೂ ಅಧಿಕ ಬೇಸಾಯಗಾರರೂ ಆಗಿದ್ದವರಾದರೆ ತೋಟದ ಕೂಲಿಗಳಿಗೆ ಬೇಕಾಗುವ ಮಿತಿಯನ್ನು ಸರಿಯಾಗಿ ಲೆಖ್ಖಹಾಕಿ ಮಿಗುವುದರ ಬಗ್ಗೆ ಮಾತ್ರ ಲೆವಿಸಂಗ್ರಹದ ಬಗ್ಗೆ ನೋಟೀಸು ಕೊಡಬೇಕೆಂದು ಸಂಗ್ರಹಣಾಧಿಕಾರಿಗಳಿಗೆ ಜಿಲ್ಲಾ ಕಲೆಕ್ಟರರು ಸೂಚಿಸಿರುವರಾಗಿ ತಿಳಿದುಬರುತ್ತದೆ

ಕೈದು—ಉಳ್ಳಾಲದಲ್ಲಿ ಪಾನನಿರೋಧ ರಕ್ಷಕನ ಕೊಲೆಯಾದ ಸಂತರ ಈ ತನಕ ಏಳು ಮಂದಿಯು ಬಂಧನಗಳಾಗಿವೆ. ಇದೇ ತಾ. 4ರಲ್ಲು ಸಂಜೆ ನತಾಲ ಡಿ'ಸೋಜ ಎಂಬಾಕೆಯನ್ನು ಬಂಧಿಸಿ, ಮರುದಿನದಿಂದ ಆಕೆಗೆ ರಿಮಾಂಡು ಕೊಡಲಾಗಿದೆ.

ಸುವರ್ಣೋತ್ಸವ—ಮಂಗಳೂರಿನ ಥಿಯೊಸಾಫಿಕಲ್ ಸಂಸ್ಥೆಯ ಸುವರ್ಣೋತ್ಸವವು ಇದೇ ತಾ. 8ರಂದು ಸಂಜೆ ಸಂಸ್ಥೆಯ ಕಟ್ಟಡವಾದ ಬೆಸೆಂಟ್ ಮಂದಿರದಲ್ಲಿ ಕಲ್ಲಿಕೋಟೆಯ ವಕೀಲರಾದ ರಾ| ಬ| ಸೂರ್ಯನಾರಾಯಣ ಅಯ್ಯರರ ಅಧ್ಯಕ್ಷತೆಯಲ್ಲಿ ಜರಗಿತು. ಸಂಸ್ಥೆಯ ಅಧ್ಯಕ್ಷರಾದ ಡಾ| ಸಿ. ಆರ್. ಕಾಮತರು ಸ್ವಾಗತ ಭಾಷಣದಲ್ಲಿ ಇಂದಿನ ದ್ವೇಷಮಯ ವಾತಾವರಣವನ್ನು ಹೋಗಲಾಡಿಸುವುದು ಪ್ರತಿಯೊಬ್ಬ ವಿದ್ಯಾವಂತನ ಕರ್ತವ್ಯವಾಗಿದೆ ಎಂದರು. ಕಾರ್ಯದರ್ಶಿ ಶ್ರೀ ಬಿ. ಅನಂತರಾಯರು ಉತ್ಸವಕ್ಕೆ ಬಂದ ಶುಭ ಸಂದೇಶಗಳನ್ನು ಓದಿ, ಸಹಾಯ ನೀಡಿದವರ ಹೆಸರುಹೇಳಿ ಆಭಾರಮನ್ನಿಸಿದರು ಅಧ್ಯಕ್ಷರ ಭಾಷಣವಾಗಲು ಶ್ರೀ ಎಮ್. ವೆಂಕಟೇಶ ಪೈಗಳು ವಂದನೋಕ್ತಿಗಳನ್ನರ್ಪಿಸಿದರು.

ವಸಂತೋತ್ಸವ—ಮಂಗಳೂರಿನ ಬೆಸೆಂಟ್ ಬಾಲಿಕಾ ಪಾಠಶಾಲೆಯ ವಸಂತೋತ್ಸವವು ಇದೇ ತಾ. 9 ಮತ್ತು 10ರಂದು ಸಂಗೀತ, ನೃತ್ಯ, ನಾಟಕ ಪ್ರದರ್ಶನಾದಿಗಳಿಂದ ರಾ| ಬ| ಕೆ. ಸೂರ್ಯನಾರಾಯಣ ಅಯ್ಯರರ ಅಧ್ಯಕ್ಷತೆಯಲ್ಲಿ ಜರಗಿತು. ಶಾಲಾಡಳಿತ ಸಮಿತಿಯ ಉಪಾಧ್ಯಕ್ಷರಾದ ಡಾ| ಸಿ. ಆರ್. ಕಾಮತರು ಸ್ವಾಗತ ಭಾಷಣ ಮಾಡಿದ ಮೇಲೆ ಆಟ ಮತ್ತು ಹಗಲು ವೇಷದ ಸ್ಪರ್ಧೆಯಲ್ಲಿ ಗೆದ್ದವರಿಗೆ ಬಹುಮಾನ ವಿತರಣೆಯಾಯಿತು. ಅಧ್ಯಕ್ಷರು ತಮ್ಮ ಭಾಷಣದಲ್ಲಿ ಡಾ| ಬೆಸೆಂಟರವರು ದೇಶದ ಸ್ತ್ರೀಯರಿಗಾಗಿ ಮಾಡಿದ ಸೇವೆ, ಅವರಲ್ಲಿ ಹುದುಗಿದ್ದ ಸ್ತ್ರೀತ್ವ—ಇತ್ಯಾದಿಗಳನ್ನು ವಿವರಿಸಿ ಶಾಲೆಗಳಲ್ಲಿ ವಸಂತೋತ್ಸವದಂತಹ ಕಾರ್ಯಕ್ರಮವಿರುವುದು ವಿಶೇಷವೆಂದರು. ಶಾಲಾ ವಿದ್ಯಾರ್ಥಿ ನಾಯಕಿ ಕುಮಾರಿ ಕೆ. ಅನಸೂಯಾ ಅಭಿನಂದಿಸಿದಳು. ಆ ಮೇಲೆ ಅಧ್ಯಕ್ಷರು ಇತರ ಶಿಕ್ಷಣಕ್ಕೆ ಸಂಬಂಧಿಸಿದ ಪ್ರದರ್ಶನ ಲಕ್ಕೀಡಿಪ್ ಮೊದಲಾದುವುಗಳನ್ನು ನೋಡಿಕೊಂಡು ಬಂದು ಆಮೇಲೆ ಈ ಬಾಲಾ ವಿದ್ಯಾರ್ಥಿನಿಯರಾದ ಬಿ. ತಾರಾ ಮತ್ತು ಬಿ. ಸುಗುಣಾ ಅವರು ಡಿ. ವಿ. ಗುಂಡಪ್ಪನವರ ಚಿನ್ನಕೇಶವನ 'ಅಂತಃಪುರ ಗೀತೆ' ಗಳಿಂದ ವಸಂತ ಕೇಳಿಕೆ, ಕ್ರೀಡಾವಾಣಿ, ಕೊಳಲನೂದುವ ನಾರಿ—ಎಂಬ ಗೀತೆಗಳನ್ನು ಹಾಡಿದ ಮೇಲೆ ಶ್ರೀಮತಿ ಕಮಲಾ ಪಡುಬಿದ್ರಿಯವರೂ ಕೆಲವು ಭಕ್ತಿಪರ ಗೀತೆಗಳನ್ನು ಹಾಡಿದರು. ಮರುದಿನ ಸಂಜೆ ಹಳೆ ಹಾಗೂ ಹೊಸ ವಿದ್ಯಾರ್ಥಿಗಳಿಂದ 'ಬುಡುಬುಡಿಕೆ' ಎಂಬ ಪ್ರಹಸನವೂ 'ಪ್ರತೀಕಾರ'ವೆಂಬ ಪೌರಾಣಿಕ ನಾಟಕವೂ ಕುಮಾರಿ ನಳಿನಿಯವರ ವಸಂತ ನೃತ್ಯವೂ ಯಶಸ್ವಿಯಾಗಿ ಜರಗಿದುವು ಶ್ರೀ ಪಿ. ಕೆ. ನಾರಾಯಣ ಅವರು ಅಭಿನಂದಿಸಿದರು.

ಟಪ್ಪಾಲಿನ ದರಬದಲಾವಣೆ:—ಇದೇ ಮೇ ತಿಂಗಳ ತಾ|1ರಿಂದ ಟಪ್ಪಾಲು ದರಗಳಲ್ಲಿ ಬದಲಾವಣೆಗಳಾಗುವವು: ಪತ್ರ: ಬರೆದ ಊರಲ್ಲೆ ಬಟವಾಡೆಯಾಗುವ ಒಂದಾಣೆ ಪತ್ರಗಳು ರದ್ದಾಗಿ, ಎರಡಾಣೆ ಕವರೇ ಜ್ಯಾರಿಗೆ ಬರುವದು; ಆದರೆ 0-1-6 ಮೌಲ್ಯದ ಲೆಟರ್ ಕಾರ್ಡ್ ಉಪಯೋಗಿಸಬಹುದು ಒಂದು ವಸ್ತುವಿಗೆ ಇದ್ದ ರಿಜಿಸ್ಟ್ರೇಶನ್ ಫೀ ನಾಲ್ಕಾಣೆಯ ಬದಲಾಗಿ ನಾಲ್ಕೂವರೆ ಆಣೆ.

ರಿ| ಲಕೋಟೆ- ರಜಿಸ್ಟರ್ ಪತ್ರಗಳ ಬಗ್ಗೆ ಇರುವ (ಒಳಗೆ ವಸ್ತು ಅಂಟಿಸಿರುವ) ಕವರಿನ ಬೆಲೆಯು ಅರ್ಧಾಣೆಯಿಂದ 0-1-6ಗೆ ಹೆಚ್ಚಿಸಲ್ಪಡುವುದು.

ವಿ. ಪಿ.—ರೂ. 25ಕ್ಕೆ ಮೇಲ್ಪಟ್ಟ ಎಲ್ಲಾ ವಿ. ಪಿ. ಪಾರ್ಸೆಲನ್ನು ಕಡ್ಡಾಯವಾಗಿ, ವಿಳಾಸದಾರರಿಂದ ವಸೂಲಾಗಬೇಕಾದ ಮೌಲ್ಯಕ್ಕೆ ಇನ್ಶೂರ್ ಮಾಡಿಸಲೇ ಬೇಕು. ಇದಲ್ಲದೆ ವಿ. ಪಿ. ಯು 25-ರೊಳಗಾದರೆ ಒಂದಾಣೆ ಮತ್ತು ರೂ. 25ಕ್ಕೆ ಮಿಕ್ಕಿದರೆ ಎರಡಾಣೆ ಅಧಿಕ ಫೀ ತೆರಬೇಕು. (ಈವರೆಗೆ ರೂ. 3000ದ ಪರಿಮಿತಿವರೆಗೆ ಇನ್ಶೂರ್ ಮಾಡಬಹುದೆಂದಿತ್ತು; ಇನ್ನು ಮುಂದೆ ರೂ. 5000ದ ವರೆಗೆ ಇನ್ಶೂರ್ ಮಾಡಬಹುದು.)

ಮನಿಯಾರ್ಡರ್ ಫೀ—ಈ ತನಕ ಪ್ರತಿ ಹತ್ತು ರೂಪಾಯಿಗಳಿಗೆ ಅಥವಾ ಅದರ ಅಂಶಕ್ಕೆ ಎರಡಾಣೆ ಮನಿಯಾರ್ಡರ್ ಫೀ ಇತ್ತು; ಮೇ ತಾ. 1ರಿಂದ ರೂ. 5ರ ವರೆಗೆ 0-2-0 ಫೀ; ಐದು ರೂಪಾಯಿಗೆ ಮೇಲ್ಪಟ್ಟು ರೂ. 10ರ ವರೆಗೆ 0-3-0; ರೂ. 10ಕ್ಕೆ ಮೇಲ್ಪಟ್ಟು ರೂ. 15ರ ವರೆಗೆ 0-4-0; ರೂ. 15ಕ್ಕೆ ಮೇಲ್ಪಟ್ಟು ರೂ 25ರ ವರೆಗೆ 0-6-0 ರೂ. 25ಕ್ಕೆ ಮಿಕ್ಕಿದರೆ ಪ್ರತಿ ರೂ. 25ಕ್ಕೆ ಆರಾಣೆ; ಮತ್ತು ಮಿಕ್ಕಿದ ಅಂಶಗಳಿಗೆ ರೂ. 5, 10, 15ರ ಫೀ ಕ್ರಮದಲ್ಲಿ.

ಟೆಲಿಫೋನ್ ಟ್ರಂಕ್‌ಕಾಲ್—350 ಮೈಲು ಅಂತರದೊಳಗೆ ದರದಲ್ಲಿ ಬದಲಾವಣೆಯಿಲ್ಲ; 350ಮೈಲಿಗಳಿಗೆ ಮಿಕ್ಕಿ 500 ಮೈಲುಗಳೊಳಗೆ, ಪ್ರತಿ ಇಪ್ಪತ್ತೈದು ಮೈಲುಗಳಿಗೆ ನಾಲ್ಕಾಣೆ, 500 ಮೈಲುಗಳಿಗೆ ಮಿಕ್ಕಿದ ಪ್ರತಿ 50 ಮೈಲುಗಳಿಗೆ ಆರಾಣೆ, (ಟ್ರಂಕ್ ಕಾಲ್‌ಗಳಿಗೆ ಪರಮಾವಧಿ ದರ ಮೊದಲಿನಂತೆಯೇ ರೂ. 12ಮಾತ್ರ.

ಪ್ರಕಟಣೆ

ಉಡುಪಿ ತಾಲೂಕು ನಾಲ್ಕೂರು ಗ್ರಾಮದ ಕೊಳಕುಂಬ್ರಿ ಸಿಂಪ್ಸನ್ ಶ್ರೀನಿವಾಸ ಪ್ರಭುಗಳ ಮಗ ಇಮ್ಮನುವೇಲ್ ಭಾಸ್ಕರ ಪ್ರಭುವು ಈ ಮೂಲಕ ಸರ್ವಜನರಿಗೂ ತಿಳಿಯಪಡಿಸುವದೇನೆಂದರೆ—

ನಾಲ್ಕೂರು ಗ್ರಾಮದ ಖಾತಾನಂಬ್ರ27ನೇಗೆ ಒಳಪಟ್ಟ ನಮ್ಮ ಮೂಲಗೇಣಿಹಕ್ಕಿಗೆ ಒಳಪಟ್ಟ ಆಸ್ತಿಯ ಕುರಿತು ನನ್ನ ತಂದೆಯವರು ತಾ. 3-11-1945ರಲ್ಲಿ 5 ಪಾಲುಗಳನ್ನು ಮಾಡಿ ಗೃಹಸ್ಥರ ಸಮಕ್ಷಮ ಒಂದುಪಾಲು ಅವರು ಇಟ್ಟುಕೊಂಡು ನಾಲ್ಕು ಪಾಲುಗಳನ್ನು ಅವರ ಗಂಡುಮಕ್ಕಳ ಸ್ವಾಧೀನ ಒಪ್ಪಿಸಿಕೊಟ್ಟಿರುವ ಪ್ರಕಾರ ಅವರವರ ಅಂಶವನ್ನು ಪ್ರತ್ಯಪ್ರತ್ಯೇಕವಾಗಿ ಸ್ವಾಧೀನ ಹೊಂದಿಕೊಂಡು ಅನುಭವಿಸಿ ಬರುತ್ತಿದ್ದೇವೆ. ಸದ್ರಿ ತಾರೀಕಿಗೆ ಬರಹ ಮೂಲಕ ಪಾಲುಪಟ್ಟಿ ಕೂಡಾ ಆಗಿರುತ್ತದೆ. ಆದುದರಿಂದ ಸದ್ರಿ ಆಸ್ತಿಯಲ್ಲಿ ನನ್ನ ತಂದೆಯವರಿಗೆ 3-11-1945ರ ಬಳಿಕ ಯಾವ ತರದ ಎಷ್ಟಾದರೂ ಹಕ್ಕು ಸಮ್ಮಂಧ ಇರುವದಿಲ್ಲ ಸದ್ರಿ ಪಾಲುಪಟ್ಟಿ ತಾರೀಕಿಗೆ 4ನೇ ಪಾಲುಗಾರನಾದ ನಾನು ವ್ಯಸನನಾದ ಸಂಬಂಧ ನನಗೆ ನನ್ನ ಪಾಲನ್ನು ತಾರೀಕು 13-4-1949ರಲ್ಲಿ ನನ್ನ ಸ್ವಾಧೀನಕ್ಕೆ ನನ್ನ ತಂದೆಯವರು ಒಪ್ಪಿಸಿಬಿಟ್ಟಿರುತ್ತಾರೆ, ಆ ಬಗ್ಗೆ ಬರಹಮೂಲಕ ಅವರ ಸ್ವಹಸ್ತ ಬರಹದಿಂದ ರಿಕಾರ್ಡ್ ಕೂಡಾ ಮಾಡಿಕೊಟ್ಟಿರುತ್ತಾರೆ. ನಮ್ಮ ಕುಟುಂಬಕ್ಕೆ ಎಷ್ಟಾದರೂ ಕುಟುಂಬಾತ್ಮಕವಾದ ಸಾಲ ಇರಲಿಲ್ಲ. ಇನ್ನು ಮಾಡುವ ಆವಶ್ಯ ಕೂಡಾ ಇರುವದಿಲ್ಲ ಇತ್ಯಾಗೆ ನನ್ನ ತಂದೆಯವರು ತನ್ನ ಹೆಣ್ಣು ಮಕ್ಕಳ ಪೈಕಿ ಇಬ್ಬರ ಮತ್ತು ಅವರ ಗಂಡಂದಿರ ದುರ್ಬೋಧನೆಗೊಳಪಟ್ಟು, ಸದ್ರಿ ಆಸ್ತಿ ಕುರಿತು ನಮ್ಮ ಹಕ್ಕಿಗೆ ವಿರೋಧವಾಗಿ ರಿಜಿಸ್ಟ್ರ ದಸ್ತವೇಜು ಮಾಡಲಿಕ್ಕೆ ಪ್ರಯತ್ನ ಮಾಡುತ್ತಾರಾಗಿ ನಾನು ತಿಳಿಯುತ್ತೇನೆ. ಈ ಕುರಿತು ನಾನು ಬ್ರಹ್ಮಾವರ ಸಬ್‌ರಿಜಿಸ್ಟ್ರಾರರ ಕೂಡೆ ನನ್ನ ಆಕ್ಷೇಪಣೆ ಕೂಡಾ ಕೊಟ್ಟಿರುತ್ತೇನೆ ನನ್ನ ತಂದೆಯವರಿಗೆ ಈಗ ಪ್ರಾಯ ಸುಮಾರು 73 ವರುಷ ಆಗಿದ್ದು ಬುದ್ಧಿಸ್ವಾಸ್ಥತೆ ಕೂಡಾ ಇರುವದಿಲ್ಲ. ನಮ್ಮ ಹಕ್ಕಿಗೆ ವಿರೋಧವಾಗಿ ಯಾವ ದಸ್ತವೇಜು ಮಾಡಲಿಕ್ಕೂ ನಮ್ಮ ತಂದೆಯವರಿಗೆ ಹಕ್ಕಿರುವದಿಲ್ಲ ಮಾಡಿದರೆ ಅದು ಸಿಂಧು ಆಗಲಿಕ್ಕೂ ಇಲ್ಲ ಎಂತ ಈ ಮೂಲಕ ಸರ್ವಜನರಿಗೆ ತಿಳಿಯಪಡಿಸಿದ್ದೇನೆ. ಮೊಕ್ಕಾಂ: ಉಡುಪಿ.

K. E Bhaskara Prabhu.

ತಾ. 16-4-'51.

"ಬೇರೆ ಶಾಸ್ತ್ರಗಳನ್ನೋದದಿದ್ದರೇನು? ಗೀತೆಯನ್ನು ಚೆನ್ನಾಗಿ ಓದಬೇಕು"—(ವರಾಹ ಪುರಾಣ)

ಗೀತೆಯ ಕೈಗನ್ನಡಿ

(ಭಗವದ್ಗೀತೆಯ ಮೂಲ ಶ್ಲೋಕ ಮತ್ತು ಕನ್ನಡ ಅನುವಾದ)

● ಅನುವಾದಕರು—ದಿ| ಹೊಸಕೆರೆ ಚಿದಂಬರಯ್ಯನವರು ●

ಈ ಗ್ರಂಥದಲ್ಲಿ ಗೀತೆಯ ಮೂಲವೆಲ್ಲ ಇರುವುದಲ್ಲದೆ ಮೂಲದಲ್ಲಿ ಸಹಜವಾಗಿ ಕಾಣಬರುವ ಅರ್ಥವೂ ಮಾತುಗಾರಿಕೆಯು ಮಾತುಗಳ ರೂಪದಲ್ಲಿಳಿದ ಥಟ್ಟನೆಯಾಗಿ ಎದ್ದು ಕಾಣುವುದು.

400ಕ್ಕೂ ಮಿಕ್ಕ ಪುಟಗಳು! . ಬೆಲೆ 0—12—0.

ಒಂದು ರೂಪಾಯಿಯನ್ನು ಕಳುಹಿಸಿದರೆ ಒಂದು ಪ್ರತಿಯನ್ನು ಬುಕ್‌ಪೋಸ್ಟಿನಿಂದ ಕಳಿಸಲಾಗುವುದು.

ಪ್ರತಿಗಳು ಸಿಗುವ ಮುಖ್ಯ ಸ್ಥಳ:—

ನವಯುಗ ಪ್ರೆಸ್, ಉಡುಪಿ ದ. ಕನ್ನಡ

ಪ್ರಸಿದ್ಧ ಪುಸ್ತಕ ವ್ಯಾಪಾರಿಗಳಲ್ಲೆಲ್ಲ ದೊರೆಯುತ್ತದೆ.

1951 ಮಾರ್ಚ್ ತಿಂಗಳಲ್ಲಿ ಜರಗಿದ ಮುಖ್ಯ ಕೆಲಸಗಳ ಸಾರಾಂಶ-

ಕುಂಬಳೆ ಫಿರ್ಕಾ—3 ಬಾವಿಗಳ ಕೆಲಸವು ಮುಗಿಸಲ್ಪಟ್ಟಿತು. 2. 50-51 ವರ್ಷದಲ್ಲಿ ಮಾರ್ಗ ಕಾಲುಸಂಕ, ಇಂತಹ ಆಗತ್ಯವಾದ ಸಣ್ಣ ಸಣ್ಣ ಕೆಲಸಗಳು ಮಾಡಲ್ಪಟ್ಟು ಇದಕ್ಕೆ ತಗಲಿದ ರೂ 8543/- ಖರ್ಚಿನಲ್ಲಿ ರೂ. 2400/- ಸರಕಾರವು ಕೊಟ್ಟಿರುತ್ತದೆ. 3. ಕೊಯಿಪಾಡಿ ಗ್ರಾಮಸೇವಾ ಸಂಘದ ನೇತೃತ್ವದಲ್ಲಿ ಒಂದು ಸ್ತ್ರೀಯರ ಅಭಿವೃದ್ಧಿ ಕೇಂದ್ರವು ಮಂಗಳೂರಿನ ಭಗಿನಿ ಸಮಾಜದ ಕಾರ್ಯದರ್ಶಿಗಳಾದ ಶ್ರೀಮತಿ ಕಲ್ಯಾಣಿ. ಶೆಟ್ಟಿ ಇವರಿಂದ ತೆರೆಯಲ್ಪಟ್ಟಿತು. 4. ಕುಂಬಳೆಯಲ್ಲಿ ಗ್ರಾಮಸೇವಾ ಸಂಘದವರು ಕಟ್ಟಿಸುವ ಸಾರ್ವಜನಿಕ ಕೇಂದ್ರದ ಅಡಿಗಲ್ಲು ಜಿಲ್ಲಾ ಕಲೆಕ್ಟರ್ ಶ್ರೀ ರಾಜರತ್ನಮ್- ಇವರಿಂದ ಇಡಲ್ಪಟ್ಟಿತು. ಈಬಗ್ಗೆ ಸೇವಾ ಸಂಘದವರು ಪುತ್ತೂರು ರೆವಿನ್ಯೂ ಡಿವಿಜನಲ್ ಆಫೀಸರರ ಮತ್ತು ಕಾಸರಗೋಡು ತಹಸಿಲ್ದಾರರ ಸಹಾಯದಿಂದ ಸುಮಾರು ರೂ. 2000/-ವನ್ನು ಊರಿನವರಿಂದ ವಂತಿಗೆ ಪಡೆದಿರುತ್ತಾರೆ. ಕಟ್ಟೋಣದ ಕೆಲಸವು ಭರದಿಂದ ನಡೆಯುತ್ತಿದೆ. 5. ಜಿಲ್ಲಾ ಎಗ್ರಿಕಲ್ಚರ್ ಆಫೀಸರರ ಸಹಾಯದಿಂದ 50 ಎಕ್ರೆ111ನೇ ಬೆಳೆಯ ಭತ್ತದ ಪೈರನ್ನು ಉಳಿಸಲಾಯಿತು. ಈಬಗ್ಗೆ ಕುಂಬಳೆಯಲ್ಲಿ ನಡೆದ ರೂರಲ್ ವೆಲ್ಫೇರ್ ಸಭೆಗೆ ರೈತರು ತಮ್ಮ ಕೃತಜ್ಞತೆಯನ್ನು ಸೂಚಿಸಿದರು.

ಮಂಜೇಶ್ವರ ಫಿರ್ಕಾ—51ನೇ ಮಾರ್ಚಿಗೆ ಅಂತ್ಯವಾಗುವ ವರ್ಷದಲ್ಲಿ ರೂ. 16,67,200 ಬೆಲೆ ಬಾಳುವ 26 ಸಣ್ಣ ಸಣ್ಣ ಕೆಲಸಗಳನ್ನು ಮಾಡಲಾಯಿತು. ಈಬಗ್ಗೆ ಸರಕಾರವು ರೂ. 8000/- ಗ್ರೇಂಟನ್ನು ಕೊಟ್ಟದ್ದು ಉಳಿದ ಖರ್ಚು ಗ್ರಾಮಸ್ಥರಿಂದಲೇ ಮಾಡಲಾಯಿತು 2. ರೈತರ ಒಂದು ಪಂಗಡವನ್ನು ನೀಲೇಶ್ವರ ತೆಂಗಿನ ಫಾರ್ಮಿಗೆ ಕೃಷಿ ಸಂದರ್ಶನದ ಬಗ್ಗೆ ಕರೆದುಕೊಂಡು ಹೋಗಲಾಯಿತು. 3. ಒಂದು ಬಿಕಾರ್ಟಿಂಗ್ ಮಿಂಟನ್ ಟೂರ್ನಮೆಂಟನ್ನು ನಡೆಸಲಾಯಿತು.

ಮೂಲ್ಕಿ ಫಿರ್ಕಾ—1950-51ರಲ್ಲಿ ಸಣ್ಣ ಮಾರ್ಗ, ಕಾಲುಸಂಕ, ಇಂತಹ 26 ಕೆಲಸಗಳು ಮಾಡಲಾಯಿತು. ಇವುಗಳಿಗೆ ರೂ 37948-0-0 ಖರ್ಚುಗಳಿದ್ದರಲ್ಲಿ ರೂ. 7945/-ನ್ನು ಸರಕಾರವು ಗ್ರೇಂಟ್ ಕೊಟ್ಟಿರುತ್ತದೆ. 2. ಕೃಷಿ ಸಂದರ್ಶನ ಬಗ್ಗೆ ರೈತರ ಒಂದು ಪಂಗಡವನ್ನು ಶಂಕನಾಡಿ ರಿಸರ್ಚ್ ಫಾರ್ಮಿಗೂ, ಕಾಸರಗೋಡು ತೆಂಗಿನ ಫಾರ್ಮಿಗೂ ಕರೆದೊಯ್ಯಲಾಯಿತು.

ಕುಂಬಳೆ—ತಾ ೧೫ರಿಂದು ಒಳ್ಳೇ ನೆಲೆಯಲ್ಲಿ ಮಳೆ ಬಂದಿರುತ್ತದೆ. ಸಿಡಿಲೂ ಮಿಂಚೂ ವಿಶೇಷವಾಗಿತ್ತು.

ಹಳ್ಳಿಗಳ ರೇಶನ್ ರದ್ದತಿಯಿಂದ ಹಳ್ಳಿಗಾರರ ಸ್ಥಿತಿಯು ದಿನೇ ದಿನೇ ಕೆಡುತ್ತಾ ಬಂದಿದೆ. ಈ ಕಾರಣದಿಂದಾಗಿ ಶಾಲೆಗಳಲ್ಲಿ ನಿತ್ಯ ಹಾಜರಿಯೂ ಕಡಿಮೆಯಾಗುತ್ತಾ ಬರುತ್ತದೆ.

ಹಳೆತರಬೇತಾದ ಉಪಾಧ್ಯಾಯರುಗಳಿಗೆ ತಾ ೧೩ರಿಂದಾರಂಭವಾಗುವಂತೆ ೩ ತಿಂಗಳ ಅಲ್ಪಕಾಲ ತರಬೇತಿ ಕ್ಲಾಸು ಮಾಯಿಪಾಡಿಯಲ್ಲಿ ತೆರೆಯಲು ಹುಕುಮಾಗಿರುತ್ತದೆ

ಅಳಿಯ ಸಂತಾನ ಕಾನೂನು

ಇದರ ಪ್ರತಿಗಳು ದೊರೆಯುತ್ತವೆ,

ಕನ್ನಡ ಪ್ರತಿಗೆ 0-8-0

ಇಂಗ್ಲಿಷ್ ಪ್ರತಿಗೆ 0-8-0

ಟಪ್ಪಾಲು ಖರ್ಚು 0-1-0 ಪ್ರತ್ಯೇಕ.

0-9-0 ಕಳುಹಿಸಿದರೆ ಒಂದು ಪ್ರತಿ ಕಳುಹಿಸಲ್ಪಡುವುದು.

ನವಯುಗ ಪ್ರೆಸ್, ಉಡುಪಿ.

ದಕ್ಷಿಣ ಕನ್ನಡ ಜಿಲ್ಲಾ ವಿಧಾಯಕ ಕಾರ್ಯಕರ್ತರ ಪರಿಷತ್ತು—ತಾ 6-5-1951ನೇ ಆದಿತ್ಯವಾರ ಜರಗಲಿರುವ ದಕ್ಷಿಣ ಕನ್ನಡ ಜಿಲ್ಲಾ ವಿಧಾಯಕ ಕಾರ್ಯಕರ್ತರ ಪರಿಷತ್ತಿನ ಸ್ವಾಗತ ಸಮಿತಿಯ ಸದಸ್ಯರನ್ನಾಗಿ ಮಂಗಳೂರು ತಾಲೂಕಿನವರನ್ನು ಮಾತ್ರ ಸೇರಿಸಲಾಗುವುದು. ಸದಸ್ಯತನದ ವರ್ಗಣಿ ರೂಪಾಯಿ ಐದು.

ಜಿಲ್ಲೆಯ ವಿವಿಧ ಭಾಗಗಳಿಂದ ಬರುವ ಕಾರ್ಯಕರ್ತರಿಗಾಗಿ ಉಚಿತ ಊಟ ಮತ್ತು ವಸತಿಯ ವ್ಯವಸ್ಥೆ ಮಾಡಲಾಗುವುದು. ಪರಿಷತ್ತಿಗೆ ಬರುವ ಪ್ರತಿನಿಧಿಗಳು ಮೊದಲಾಗಿ ತಮ್ಮ ಹೆಸರನ್ನು ಕೆಳಗಿನ ವಿಳಾಸಕ್ಕೆ ಬರೆದು ತಿಳಿಸಬೇಕಾಗಿ ವಿನಂತಿ, ಏರ್ಯ ಲಕ್ಷ್ಮೀನಾರಾಯಣ ಆಳ್ವ ಜತೆ ಕಾರ್ಯದರ್ಶಿ. ಸ್ವಾಗತ ಸಮಿತಿ ಜಿಲ್ಲಾ ವಿಧಾಯಕ ಕಾರ್ಯಕರ್ತರ ಪರಿಷತ್ತು. ಬಂಟವಾಳ ದ. ಕ.

ನೀಲಾವರ-ಮಹಿಷಮರ್ದಿನಿ ಅಮ್ಮನವರ ರಥೋತ್ಸವಾದಿಗಳು ತಾ 20-4-51 ರಿಂದ ತಾ 26-4-51ರ ವರೆಗೆ ಜರಗಿಸಲ್ಪಡುವುವು.

ಬೆಳ್ಳಾರೆ—ತಾ 7-4-51ರಲ್ಲಿ ಸ್ಥಳೀಯ ಸಹಕಾರಿ ಸಂಘದ ಕಟ್ಟಡದಲ್ಲಿ "ಜನತಾ ವಾಚನ ಮಂದಿರ' ಎಂಬ ವಾಚನಾಲಯವು ಶ್ರೀ ಕೆ. ನಾರಾಯಣ ಐತಾಳ, ಹಿಂದೀ ಪ್ರವೀಣ, ಪುತ್ತೂರು, ಇವರಿಂದ ಉದ್ಘಾಟಿಸಲ್ಪಟ್ಟಿತು ಶ್ರೀ ಕೆ. ನಾರಾಯಣರಾಯರು ಅಧ್ಯಕ್ಷತೆ ವಹಿಸಿದ್ದರು. ಶ್ರೀ ಕೆ. ಶಂಕರರಾಯರು ವಂದನೋಕ್ತಿಗಳನ್ನರ್ಪಿಸಿದರು—

ವಸಂತ ಸಾಹಿತ್ಯೋತ್ಸವ.

ಕನ್ನಡ ಸಾಹಿತ್ಯ ಪರಿಷತ್ತು, ಶ್ರೀಕೃಷ್ಣರಾಜೇಂದ್ರ ಪರಿಷನ್ಮಂದಿರ, ಚಾಮರಾಜ ಪೇಟೆ, ಬೆಂಗಳೂರು—ಇದರ ನೇತೃತ್ವದಲ್ಲಿ ವಸಂತಸಾಹಿತ್ಯೋತ್ಸವವು ಮೇ ತಿಂಗಳ ತಾ. 13ರಿಂದ 19ರ ವರೆಗೆ ಜರಗಲಿದ್ದು ಇದರ ಅಂಗವಾಗಿ ಇತಿಹಾಸ ಮತ್ತು ಗ್ರಂಥ ಪ್ರದರ್ಶನವು ಮೇ 13ನೆ ತಾರೀಕಿನಿಂದ 19ರ ತನಕ ನಡೆಯಲಿರುವುದು. ಈ ಪ್ರದರ್ಶನದಲ್ಲಿ 1947ನೆ ಆಗೋಸ್ತು ತಾ. 15ರಿಂದ 1951ನೆ ಏಪ್ರಿಲ್ ತಾ. 30ರೊಳಗೆ ಪ್ರಕಟವಾದ ಎಲ್ಲ ಕನ್ನಡ ಪುಸ್ತಕಗಳಿಗೂ ಸ್ಥಳವಿದೆ. ಪದ್ಯಕಾವ್ಯ, ನಾಟಕ, ಸಣ್ಣಕಥೆ, ಕಾದಂಬರಿ, ಚರಿತ್ರೆ, ಜೀವನ ಚರಿತ್ರೆ, ಪ್ರಕೃತಿ ವಿಜ್ಞಾನ, ಸಮಾಜ ವಿಜ್ಞಾನ, ಹುಡುಗರ ಸಾಹಿತ್ಯ ವಿಮರ್ಶೆ, ಶಾಲಾ ಪುಸ್ತಕಗಳು, ಸಂಕೀರ್ಣ ವರ್ಗ— ಈ ಪುಸ್ತಕಗಳನ್ನು ಕಳುಹಬಹುದಾಗಿದೆ. ಪ್ರತಿಯೊಂದು ಪುಸ್ತಕದ ಜೊತೆಯಲ್ಲಿಯೂ ಈ ಕೆಳಗಿನ ಮಾಹಿತಿ ಬಟ್ಟೆಯೊಂದಿರತಕ್ಕದ್ದು:— ಪುಸ್ತಕದ ಹೆಸರು, ಪುಸ್ತಕದ ಅಡ್ಡ ಹೆಸರೇನಾದರೂ ಇದ್ದರೆ ಅದು, ವಿಷಯ, ಗ್ರಂಥಕರ್ತ, ಗ್ರಂಥ ಲೇಖಕರ ಹೆಸರು, ವಿಳಾಸ, ಗ್ರಂಥ ಪ್ರಕಟಿಸಿದ ಕರ್ತರ ಹೆಸರು, ವಿಳಾಸ, ಮೊದಲು ಪ್ರಕಟನವಾದ ತಾರೀಕು, ಈಗಿನದು ಎಷ್ಟನೆಯ ಆವೃತ್ತಿ, ಈಗಿನ ಆವೃತ್ತಿಯ ತಾರೀಕು ಬೆಲೆ- ಉತ್ತಮ ಪ್ರತಿ, ಬೆಲೆ- ಸಾಮಾನ್ಯ ಪ್ರತಿ, ವಿಶೇಷಾಂಶಗಳು (ಪುಸ್ತಕಕ್ಕೆ ದೊರೆತಿರುವ ಬಹುಮಾನ ಇತ್ಯಾದಿ ಏನಾದರೂ ಇದ್ದರೆ ಅದು) ಎಲ್ಲಾ ಪುಸ್ತಕಗಳೂ ಇದೇ ಏಪ್ರಿಲ್ 30 ರೊಳಗಾಗಿ ಪರಿಷತ್ತಿನ ಕಾರ್ಯಾಲಯಕ್ಕೆ ತಲ್ಪಬೇಕು.

ಮೂಡಬಿದ್ರೆ—ದ. ಕ. ಜಿಲ್ಲಾ ಬೋರ್ಡ ಪ್ರೆಸಿಡೆಂಟ್ ಶ್ರೀ ಬಿ. ಮಂಜಯ್ಯ ಹೆಗ್ಗಡೆಯವರು ಶ್ರೀ ಟಿ. ಮಾಧವ ಪೈ ಮುಕ್ತೇಸರ ಸ್ಥಳೀಯ ಮಹನೀಯರ ವಿನಂತಿಮೇರೆಗೆ ಮೂಡಬಿದ್ರೆ ಕೇಂದ್ರವನ್ನು ಇದೇ ತಾ 7ರಲ್ಲು ಸಂದರ್ಶಿಸಿ ಜಿಲ್ಲಾ ಮೆಡಿಕಲ್ ಆಫೀಸರರೊಂದಿಗೆ ಅಲ್ಲಿಯ ಆಸ್ಪತ್ರೆಗೆ ಭೆಟ್ಟಿಯಿತ್ತರು ಅಸಿಸ್ಟೆಂಟ್ ಎಂಜಿನಿಯರರೂ, ಹ್ಯಾವೇಸ್ ಸುಪರ್‌ವೈಜರರೂ ಹಾಜರಿದ್ದರು. ಆಸ್ಪತ್ರೆ ಪಟಾಂಗದಲ್ಲಿ ಹೆಂಗಸರಿಗಾಗಿ ಕಟ್ಟೋಣ ಕಟ್ಟುವರೆ ಸ್ಥಳ ಚುನಾಯಿಸಲಾಯಿತು ಜೈನ್ಮೈಸ್ಕೂಳ ಶಾಲೆಯಲ್ಲಿ ಕೂಡಿದ ಸ್ಥಳೀಯ ಮಹನೀಯರ ಸಭೆಯಲ್ಲಿ ಶ್ರೀ ಹೆಗ್ಗಡೆಯವರು ಹೆರಿಗೆವಾರ್ಡಿನ ಕುರಿತು ಮಾತನಾಡುತ್ತಾ ಸರಕಾರವಾಗಲೀ ಬೋರ್ಡಾಗಲಿ ವೆಚ್ಚಮಾಡಿ ಕಟ್ಟುವ ಕಟ್ಟೋಣದ ಉಪಯೋಗವನ್ನು ಸ್ಥಳೀಯರು ಪಡೆಯುವ ಆಶ್ವಾಸನೆ ದೊರಕಬೇಕೆಂದೂ ಆ ಬಗ್ಗೆ ಸ್ಥಳೀಯರೇ ಮುಂದಾಗಿ ಬರಬೇಕೆಂದೂ ಸೂಚಿಸಿದರು ಇಲ್ಲವಾದರೆ ಸಾರ್ವಜನಿಕ ಹಣದ ದುರುಪಯೋಗವಾದಂತಾಗುವುದೆಂದರು ನಂತರ ಕಟ್ಟಡ ವಿಸ್ತರಣದ ಬಗ್ಗೆ ಉಪ ಸಮಿತಿಯೊಂದು ರಚಿಸಲಾಯಿತು

ಕೆನರಾ ಬೇಂಕಿಗೆ

ಇನ್ನೊಂದು

ಗಣ್ಯ ವರುಷ

ಪ್ರಗತಿಯ 45ನೆ ವರ್ಷ—ತಾ. 31-12-1950ಕ್ಕೆ ಅಂತ್ಯವಾಗುವ ತನ್ನ ಪ್ರಗತಿಯ 45ನೆ ವರ್ಷದಲ್ಲಿ ಕೆನರಾ ಬೇಂಕು ಗಮನೀಯವಾದ ಸರ್ವ ವಿಧದ ಪ್ರಗತಿಯನ್ನು ತೋರಿಸಿರುತ್ತದೆ ಎರಡು ಮುಖ್ಯ ಸಂಗತಿಗಳ ಹಿನ್ನೆಲೆಯಲ್ಲಿ ಇದೊಂದು ಲಕ್ಷ್ಯದಲ್ಲಿಡತಕ್ಕ ಕಾರ್ಯ ಸಿದ್ಧಿಯಾಗಿದೆ- ಒಂದನೆಯದು ದೇಶದಲ್ಲಿರತಕ್ಕ ಸಾರ್ವತ್ರಿಕ ವ್ಯಾಪಾರ ಪರಿಸ್ಥಿತಿಯ ಹಿಂಜರಿಯುವಿಕೆ- ಎರಡನೆಯದು 1950ರಲ್ಲಿ ಬೇಂಕುಗಳು ನಿರ್ವಹಿಸಬೇಕಾಗಿ ಬಂದ ಏರಿತದ ಖರ್ಚುಗಳು.

ಠೇವಣಾತಿಗಳಲ್ಲಿ ಹೆಚ್ಚಳ—ಬೇಂಕಿನಲ್ಲಿರುವ ಠೇವಣಾತಿಗಳು 42 74 ಲಕ್ಷದಷ್ಟು ಏರಿ ರೂ. 7 49 ಕೋಟಿಗೆ ಬಂದಿರುತ್ತವೆ. ಪಾಲುದಾರರಿಗಿರುವ ಫಂಡುಗಳು ರೂ. 27 01 ಲಕ್ಷದಷ್ಟು ಏರಿ ರೂಪಾಯಿ 77 62 ಲಕ್ಷಕ್ಕೆ ಬಂದಿರುತ್ತದೆ

ಜಾಗ್ರತೆಯ ಧನವಿನಿಯೋಗ—ಮೂಲಗಳ ಕಡೆಯಲ್ಲಿ ಸರಕಾರಿ ಭದ್ರತೆಗಳ ಮೇಲೆ ಹಣಹಾಕಿದ್ದು 2 82 ಲಕ್ಷದಷ್ಟು ಏರಿರುತ್ತದೆ ಮತ್ತು ಈಗ 2 21 ಕೋಟಿ ಆಗಿರುತ್ತದೆ. ಇವುಗಳ ಪೈಕಿ ಶೇಕಡಾ 94ರಷ್ಟು ಇದೇ ಬರುವ 10 ವರುಷಗಳೊಳಗಾಗಿ ಪಾವತಿಯಾಗುವ ಸರಕಾರಿ ಭದ್ರತೆಗಳ ಮೇಲೆ ಹಾಕಲ್ಪಟ್ಟಿವೆ; ಅಲ್ಲದೆ ಪುಸ್ತಕಗಳ ಮೌಲ್ಯಕ್ಕಿಂತ 1-91 ಲಕ್ಷದಷ್ಟು ಹೆಚ್ಚಿನ ಬಜಾರ ಧಾರಣೆಯು ಇವಕ್ಕೆ ಇವೆ. ಭದ್ರತೆಗಳ ಮೇಲೆ ಕೊಟ್ಟ ಸಾಲಗಳಲ್ಲಿ ರೂ. 34 87 ಲಕ್ಷದಷ್ಟು ಏರಿತವಿದೆ, ಆಡಳಿತದ ದೂರದರ್ಶಿತವು ಅಭಿನಂದನೀಯ.

ಹಣದ ಅನುಕೂಲತೆ—ನಗದಿ ಶಿಲ್ಕುಗಳು 2.16 ಕೋಟಿ ಇದೆ. ಈ ಅನುಕೂಲ್ಯತೆಯು (ಕೈಯಲ್ಲಿರುವ ನಗದಿ ಶಿಲ್ಕು ಮತ್ತು ಸರಕಾರಿ ಭದ್ರತೆ ಇವು ರಹಿತ ಬೇಂಕರರ ಕೂಡೆ ಇರುವಂತಾದ್ದು) ಎಲ್ಲಾ ಠೇವಣಾತಿಗಳ 60 9ರಷ್ಟು ಅಂಶ ಇರುತ್ತದೆ ಎಂಬುದನ್ನು ಗಮನಿಸಲು ಸಮಾಧಾನಕರವಾಗಿದೆ.

ಗಣ್ಯ ಮುನಾಫೆ—ಹಣಗಳನ್ನು ಪರಿಣಾಮಕಾರಿಯಾಗಿ ಉಪಯೋಗಿಸಿದ್ದು ಮುನಾಫೆಯ ವೃದ್ಧಿಗೆ ಕಾರಣವಾಗಿದೆ. 1949ರಲ್ಲು 3 58 ಲಕ್ಷ ಇದ್ದ ಮುನಾಫೆಯು 1950ರಲ್ಲಿ 6-98 ಲಕ್ಷ ಆಗಿದೆ ಅಂದರೆ 1 40 ಲಕ್ಷದಷ್ಟು ಏರಿರುತ್ತದೆ.

ಹೆಚ್ಚಿನ ಎರಡು ಶಾಖೆಗಳು—ಮುಖ್ಯವಾದ ವ್ಯಾಪಾರ ಕೇಂದ್ರಗಳಲ್ಲಿ ಎರಡು ಹೆಚ್ಚಿನ ಶಾಖೆಗಳನ್ನು ವರದಿ ವರ್ಷದಲ್ಲಿ ತೆರೆಯುವ ಪ್ರಗತಿಶೀಲ ಧೋರಣೆಯನ್ನು ಬೇಂಕು ನಿರ್ವಹಿಸಿತು ಒಂದು ಹೈದರಾಬಾದ (ದಕ್ಷಿಣ)ದಲ್ಲಿ ಮತ್ತು ಎರಡನೆಯದು ಬೆಂಗಳೂರಲ್ಲಿರುವ ಮಲ್ಲೇಶ್ವರದಲ್ಲಿ. ದೊಡ್ಡ ಪಟ್ಟಣವಾದ ಬೆಂಗಳೂರಿನಲ್ಲಿ ಈಗ ಮೂರು ಶಾಖೆಗಳಿವೆ

ಭವಿಷ್ಯದ ಕುರಿತು ವಿಶ್ವಾಸ—ಬೇಂಕು ಎಷ್ಟಾದರೂ ಜಾರಿಗೆ ಬರಿದಿರುವುದಾದರೂ ಹೆಚ್ಚಿನ ಖರ್ಚನ್ನು ನೌಕರರ ಕಾರ್ಯದಕ್ಷತೆಯ ವೃದ್ಧಿಯಿಂದಲೂ ಮತ್ತು ಬೇಂಕಿನ ರಾಯಭಾರಿಗಳ ಆಂಪರೆ ಗಿರಾಕಿಗಳ ಮತ್ತು ಹಿತೈಷಿಗಳ ಹಿತಚಿಂತನೆಯಿಂದಲೂ ಸರಿಪಡಿಸಲಾಗುವುದೆಂದು ಡೈರೆಕ್ಟರರು ವಿಶ್ವಾಸವುಳ್ಳವರಾಗಿದ್ದಾರೆ.

THE PANGAL NAYAK BANK LIMITED

Head Office] (Incorporated in 1920.) [Udipi S K

SEASON DEPOSITS are received and accepted on the following terms'—

For three, four or five months deposits at 3% p. a

For six, seven or eight months deposits at 3½% p a

These are to be terminable by the 30th June 1951

Interest is payable along with the principal at maturity.

Our THREE YEAR CASH CERTIFICATES bring to You a fair yeild. For particulars please ask for copy of Rules

Nambiar's

ARYA VAIDYA SALA

UDIPI

Ideal House for Ayurvedic Treatment.

T. N. Kelu Nambiar,

Vaidya.

ಸುಲಭ ದರದಲ್ಲಿ

ಅಚ್ಚುಕಟ್ಟಾದ

ಮುದ್ರಣಕ್ಕೆ

ನವಯುಗ ಪ್ರೆಸ್,

ಉಡುಪಿ.

ಮೂಲ್ಕಿ ಬೇಂಕ್,

ಲಿಮಿಟೆಡ್, ಮೂಲ್ಕಿ.

1929ರಲ್ಲಿ ಸ್ಥಾಪಿತವಾಗಿ 21 ವರುಷಗಳಿಂದ ಊರ ಜನರ ಹಿತಕ್ಕಾಗಿ ಡಿಪೋಸಿಟ್ ಹಣಕ್ಕೆ ನ್ಯಾಯವಾದ ಬಡ್ಡಿಯಿಂದಲೂ, ಸಾಲದ ಹಣಕ್ಕೆ ಅತೀ ಕಡಿಮೆ ದರದ ಬಡ್ಡಿಯಿಂದಲೂ ಜನ ಹಿತಸಾಧನೆಯನ್ನು ಮಾಡುತ್ತಿರುವುದು

The Moolky Bank Ltd.,

Moolky, S. K.

ಸ್ವೀಕಾರ-ವಿಮರ್ಶೆ

ಲೀಲೂ ಗಂಡ

(ಸಾಮಾಜಿಕ ಚಿತ್ರ) ಲೇಖಕರು: ಶ್ರೀ ಟಿ. ಸದಾಶಿವಯ್ಯ, ಪ್ರಕಾಶಕರು ಆನಂದ ಬ್ರದರ್ಸ್, ಪಬ್ಲಿಷರ್ಸ್, ಬೆಂಗಳೂರು ೨. ಬೆಲೆ ರೂ. ೧—೦—೦

ಇದು ಸಂಸಾರವನ್ನೇ ಹಾಳುಗೆಡವಿದ ಹೆಣ್ಣುಮಗಳೊಬ್ಬಳ ದುರಂತ ಚಿತ್ರವಿದು. ಲೀಲೂ ರಾಮಚಂದ್ರ ಮೂರ್ತಿಯ ಒಬ್ಬಳೇ ಮಗಳು. ಲೀಲು ವಿದ್ಯಾಭ್ಯಾಸದಲ್ಲಿ ಮೊದಲನೆಯವಳಾಗಿ ತೇರ್ಗಡೆ ಹೊಂದಿ ಕಾಲೇಜು ಓದಿ ಡಿಗ್ರಿ ಪಡೆಯಬೇಕೆಂಬ ಹಂಬಲವುಳ್ಳವಳು. ತಾಯಿ ಮಗಳ ಇಚ್ಛೆಯನ್ನು ಒಪ್ಪಿ ಗಂಡನೊಡನೆ ವಾದಿಸಿದರೂ ರಾಮಚಂದ್ರ ಕಲಿತ ಹೆಣ್ಣುಮಕ್ಕಳ ಬಾಳುವೆಯನ್ನು ತನ್ನ ಅಂತಸ್ಥನೊಡನೆ ನೆನೆದು ಲೀಲೂಗೆ ಹೆಚ್ಚಿನ ಓದು ಅನವಶ್ಯಕವೆಂದು ಭಾವಿಸಿದ್ದ. ಲೀಲೂ ತಂದೆಯ ಮನೋಗತವನ್ನು ಮೀರಿಯೇ ಕಾಲೇಜು ಕಲಿಯುತ್ತಾಳೆ. ರಾಮಚಂದ್ರ ಮೂರ್ತಿ ಮಗಳ ವರ್ತನೆಯಿಂದ ದುಃಖಿತನಾಗುವುದು ಮಾತ್ರವಲ್ಲದೆ ಹೆಂಡತಿಯು ಹಾಸಿಗೆ ಹಿಡಿದಂದಿನಿಂದ ಅರ್ಧಕರ್ಧ ಇಳಿದುಹೋದ. ಶೀತಮ್ಮನಿಗೂ ಮಗಳ ಮದುವೆಯೊಂದೇ ಕೊನೆಯ ಇಚ್ಛೆಯಾಗಿತ್ತು. ರಾಮಚಂದ್ರ ನಿಶ್ಚಯಿಸಿದ ಗಂಡನ್ನು ಲೀಲೂ ತಿರಸ್ಕರಿಸಿ, ಅನ್ಯಜಾತಿಯ ಕಾಲೇಜು ವಿದ್ಯಾರ್ಥಿಯನ್ನು ವರಿಸುವ ವಿಚಾರವನ್ನು ಶೀತಮ್ಮ ಕೇಳಿ ಎದೆಯೊಡೆದು ಸಾಯುವರು. ರಾಮಚಂದ್ರ ಅಂದಿನಿಂದ ತೀರ ಹುಚ್ಚನೇ ಆದ. ಜವಡಲ್ಲಿ ವಾರಾಹ್ನ ಉಂಡು, ಬೊಂಬಾಯಿನಲ್ಲಿ ಉದ್ಯೋಗಸ್ಥರಿರುವ ವೆಂಕಟೇಶನು ರಾಮಚಂದ್ರನನ್ನು ಕರೆದುಕೊಂಡುಹೋಗಿ ತಂದೆಯ ಹಾಗೆಯೆ ಶುಶ್ರೂಷೆಮಾಡುತ್ತಾನೆ. ಲೀಲೂ ಊರಲ್ಲಿಯೇ ಡಿಗ್ರಿಪಡೆಯುತ್ತೇನೆಂದು ಕುಳಿತಳು. ಆದರೆ ಆಕೆಯ ಸಹಪಾಠಿಗಳೊಡನೆ ಅತಿ ಸಲಿಗೆಯಿಂದ ವರ್ತಿಸುವುದು ವೆಂಕಟೇಶನಿಗೆ ಹೆಚ್ಚೆಂದು ತೋರುತ್ತಿತ್ತು. ಆಕಸ್ಮಿಕವಾಗಿ ಲೀಲೂನಿಂದ ವೆಂಕಟೇಶನಿಗೆ ಕಾರು ಬಂತು. ಊರಿಗೆ ಬಂದಾಗ ಲೀಲೂ ಐದು ತಿಂಗಳ ಬಸುರಿಯೆಂದು ತಿಳಿದು ಬಂತು. ಮದುವೆಯಾಗುವೆನೆಂದು ಭರವಸೆ ಕೊಟ್ಟ ವಿದ್ಯಾರ್ಥಿ, ಅರವಿಂದನು ಅವಳನ್ನು ವಂಚಿಸಿದನು. ಲೀಲೂವನ್ನು ವೆಂಕಟೇಶ ಬೊಂಬಾಯಿಗೆ ಕರೆತಂದನು. ಹೆಂಗೆಯಾಗಿ ಹೆಣ್ಣು ಮಗುವನ್ನು ಹೆತ್ತಳು. ವೆಂಕಟೇಶನು ಹೊಸ ಬಂಗಲೆಯಲ್ಲಿ ವಾಸಮಾಡುವ ಸಿದ್ಧತೆ ನಡೆಸುತ್ತಿದ್ದನು. ವೆಂಕಟೇಶನ ಕೃತಜ್ಞತಾಪೂರ್ಣ ಕೆಲಸವನ್ನು ಕಂಡು ಲೀಲೂ ಮುಪ್ಕಲ ಮರುಗಿದಳು. ತನ್ನ ಅಚಾತುರ್ಯದಿಂದ ಸಂಸಾರ ಹಾಳಾಯಿತು; ಇನ್ನು ವೆಂಕಟೇಶನ ಬದುಕೂ ಕೆಡುತ್ತದೆಂದು ತಿಳಿದು ಸಮುದ್ರ ಪಾಲಾಗುವಳು ಇಮುಳತೆ.

ಕಲಿತ ಹೆಣ್ಣಿನ ಬಾಳ್ವೆಯು ವ್ಯರ್ಥವೆಂದು ಈ ಕತೆಯ ನೀತಿಯಲ್ಲವಾದರೂ ಕಲಿತದ್ದರ ಉಪಯೋಗವೇನೂ ಆಗುವುದಿಲ್ಲವೆಂಬುದು ಸಹಜವಾದ ಮಾತೇ. ಹೆಚ್ಚಾಗಿ ಕಲಿತರೆ ಹುಡುಗರು "ಅಷ್ಟು ಕಲಿತವಳನ್ನು ಹಿಡಿದುಕೊಂಡೇನು ಮಾಡುವುದು?" ಎಂದು ತಿರಸ್ಕರಿಸುತ್ತಾರೆ. ಹೆಣ್ಣು ಮಗಳು ಅಕ್ಷರದಿಂದ ಕಲಿತು ಡಿಗ್ರಿ ಪಡೆದ ಮೇಲೆ ಏನು ಮಾಡಬೇಕು? ಮದುವೆಯಾದ ಮೇಲೆ ಕೈಹಿಡಿದ ಹೆಂಡತಿ ಕೆಲಸವಿಲ್ಲದವಳಾಗಲೀ— ಆ ವಿದ್ಯೆಯ ಸದುಪಯೋಗವನ್ನು ಪಡೆಯುವಂತಹದನ್ನಾಗಲೀ— ಗಂಡನು, ತನಗೆ ಅವಮಾನವೆಂದು ಅವಳ ಹಕ್ಕನ್ನು ಅಪಹರಿಸಿಕೊಂಡಿರುವಷ್ಟು ಕಾಲ ಈ ಪ್ರಶ್ನೆ ಇದ್ದದ್ದೇ! ವಿದ್ಯಾಬುದ್ಧಿಯನ್ನು ಕೊಟ್ಟು ಸುಧಾರಕರನ್ನಾಗಿ ಕಾಲೇಜು ನಿರ್ಮಾಣಮಾಡಿದರೂ, ವಯಸ್ಸಿನ ಗುಣವಾದ ವಿಲಾಸ ಜೀವನವನ್ನು ಅದು ತಡೆಯಲಾರದು. ದಿನದಿಂದ ದಿನಕ್ಕೆ ಕಲಿತವರ ಬಾಳುವೆಗಾಗಿ ಗಂಡಿಸುವ ಹಿರಿಯರು ನಮ್ಮಲ್ಲಿ ಹೆಚ್ಚಾಗಿದ್ದಾರೆ, ಆದರ್ಶವಾಗಿ ಶ್ರೀ ಟಿ. ಸದಾಶಿವಯ್ಯನವರ ಈ ಚಿತ್ರವನ್ನು ಒಪ್ಪದೇ ಹೋದರೂ, ಯಥಾರ್ಥವಾದ ಚಿತ್ರವೆಂಬುದನ್ನು ನಾವು ಅಲ್ಲಗಳೆಯುವಂತಿಲ್ಲ. ರಾಮಚಂದ್ರ, ಶೀತಮ್ಮ, ವೆಂಕಟೇಶ ಈ ಮೂರು ವ್ಯಕ್ತಿಗಳೂ ಸಾಂಪ್ರದಾಯವಾದಿಗಳಾಗಿರುವಂತೆ ಸುಸಂಸ್ಕೃತರೂ ಆಗಿರುತ್ತಾರೆ. ಲೀಲೂ ಬೆಳ್ಳಗಿದ್ದದ್ದೆಲ್ಲಾ ಹಾಲೆಂದು ನಂಬಿ, ಈ ಮೂರು ವ್ಯಕ್ತಿಗಳಿಗೆ ಹಾಲಾಹಲವನ್ನುಣ್ಣಿಸಿದಳು! "ಲೀಲೂ ಗಂಡ" ಈಗಿನ ಸುಧಾರಿತ ಜನಾಂಗದ ಸತ್ಯ ಸುಂದರ ಚಿತ್ರ!

ಕುಸುಮಹಿಯ

(೧೫ ಕತೆಗಳ ಸಂಗ್ರಹ) ಲೇಖಕರು: ಶ್ರೀ ಬಿ. ಡಿ. ಗಣಪತಿ, ಕೊಡಗು ಪ್ರೆಸ್, ಮಡಕೇರಿ. ಬೆಲೆ ರೂ. ೨—೦—೦

'ಅಸ್ಪೃಶ್ಯೆ' 'ಕಳಾವಿದ' 'ಬಾಲಗುರು' 'ಮುಗಿಯದ ಕಥೆ' 'ಹೆಣ್ ಹೃದಯ' ಈ ಐದು ಕತೆಗಳು ಉತ್ತಮವಾದಂಥವುಗಳು. ಮಿಕ್ಕ ಕತೆಗಳಲ್ಲಿ ಕತಾವಸ್ತುಗಳು ಸಾಮಾನ್ಯವಾಗಿದ್ದು ಅಸಹಜತೆಗಳು ಕಂಡುಬರುತ್ತವೆ. ಲೇಖಕರಿಗೆ ಕಥನ ಶೈಲಿ ಸಿದ್ಧಿಸಿದೆಯಾದರೂ ನಿರ್ಜೀವಕತಾ ವಸ್ತುವಿನ ನಿರೂಪಣೆಯಿಂದ ಕತೆಗಳು ನಪ್ಪೆಯಾಗಿವೆ ಕತೆಗಳು ಕಾವ್ಯಮಯವಾಗಿವೆ; ಭಾವನಾತ್ಮಕವಾಗಿವೆ. ಆದರೆ ಎಲ್ಲ ಕತೆಯಲ್ಲೂ ಒಂದೇ ತರಹದ ಕಾವ್ಯಶೈಲಿ, ಭಾವನೆಗಳು ಕಾಣುತ್ತವೆ. ಹಲವು ಕತೆಗಳು ಅಸ್ವಾಭಾವಿಕವಾಗಿದ್ದರೆ ಇನ್ನು ಕೆಲವು ತೀರ ನಿಕಟವರ್ತಿಯಾಗಿರುವಂತೆ ಕಾಣುತ್ತಲಿವೆ. ಅಂತೂ ಹದಿನೈದು ಕತೆಗಳಲ್ಲಿ ಮೇಲೆ ಹೇಳಿದ ಐದು ಕತೆಗಳು ಓದಬೇಕಾದಂಥವುಗಳು. 'ಅಸ್ಪೃಶ್ಯೆ' ಇದಿಯ ಕತಾಸಂಗ್ರಹಕ್ಕೆ ತಿಲಕಪ್ರಾಯವಾದ ಕತೆ. ಉತ್ತಮ ಅಥವ ಟಿಯ ಕತೆಯನ್ನು ಬರೆಯಬಲ್ಲ ಸಾಹಿತ್ಯಸಂಪತ್ತು ಲೇಖಕರಲ್ಲಿದೆ. ಅಂತಲೆ ಉತ್ತಮ ಸಾಹಿತ್ಯವನ್ನು ನಾವು ಅವರಿಂದ ನಿರೀಕ್ಷಿಸಬಹುದಾಗಿದೆ.

ಸಮಾಜವಾದಕ್ಕಾಗಿ ಹೋರಾಡುವವರೆಲ್ಲರಿಗೆ

ಬರೆದವರು: 'ಸಮಾಜವಾದಿ' ಕಾರಂತ, ಸಮಾಜವಾದಿ ಪಕ್ಷ (ಕರ್ನಾಟಕ) ಧಾರವಾಡ. ಪ್ರಕಾಶಕರು: ಬಾಲಚಂದ್ರ ಘಾಣೇಕರ ಸಮಾಜ ಪುಸ್ತಕಾಲಯ ಧಾರವಾಡ. ಬೆಲೆ 0—4—0

ಸಮಾಜವಾದದ ಪುನರುತ್ಥಾನದ ಸಲುವಾಗಿ ಸಮಾಜವಾದೀ ಪಕ್ಷದವರು ಮಾಡಬೇಕಾದ ಮಹತ್ವದ ಕಾರ್ಯಗಳ ಕುರಿತು ಶ್ರೀ ಕಾರಂತರು ಇಲ್ಲಿ ವಿಚಾರ ವಿಮರ್ಶೆ ನಡೆಸಿದ್ದಾರೆ. ಸ್ವಪಕ್ಷ ಸಮರ್ಥನ ಮಾಡುವಲ್ಲಿ ಬೇರೆಯ ಪಕ್ಷ ಸಂಗಡಗಳನ್ನು ಟೀಕಿಸುವದು ಮುಖ್ಯವಾಗಿರುತ್ತದೆ. ತನ್ನ ಪಕ್ಷದ ಧ್ಯೇಯಗಳನ್ನು ಹೇಳುವದಕ್ಕಿಂತ ಬೇರೆಯವರನ್ನು ಟೀಕಿಸಿ ತನ್ನ ಪಕ್ಷ ಶ್ರೇಷ್ಠವೆನ್ನುವ ರೂಢಿ ನಮ್ಮಲ್ಲಿ ಬೆಳೆದಿದೆ. ಆದರೆ ಸಮಾಜವಾದಿ ಕಾರಂತರ ಈ ಕಿರಿಯ ಹೊತ್ತಿಗೆ ಇತರರನ್ನು ಟೀಕೆಗೆ ಗುರಿಮಾಡದೆ ಸ್ವಪಕ್ಷ ಸಮರ್ಥನೆಯನ್ನಷ್ಟೇ ಮಾಡಿದೆ. ಸಮಾಜವಾದಿ ಪಕ್ಷದ ಗೊತ್ತುಗುರಿಗಳನ್ನು ಚುಟುಕಾಗಿಯೂ ಸ್ವಾರಸ್ಯವಾಗಿ ಬರೆದಿದ್ದಾರೆ ಕಾರಂತರು.

—ಎಸ್ಸೆಲ್

ಹಕ್ಕೀ ನೋಟ

ಜಯಹಿಂದ — (ಯುಗಾದಿ ವಿಶೇಷಾಂಕ) ಸಂಪಾದಕರು: ಶ್ರೀ ಶಂ. ಬಾ. ವ. ನಗೋಳಿ. ಸಂಸ್ಥಾಪಕ ಮತ್ತು ಸಂಚಾಲಕರು ಶ್ರೀ ಡಾ. ನಾ. ಸು. ಹರ್ಡಿಕರ ಬೆಲೆ ರೂ: 0—12—0

ಯುಗಾದಿಯ ಸವಿಪಿನಹಿಗಾಗಿ 'ಜಯಹಿಂದ'ದವರು ಹೊರಡಿಸಿದ ಈ ವಿಶೇಷಾಂಕ ಸರ್ವಾಂಗ ಸುಂದರವಾಗಿದೆ. ಸುಪ್ರಸಿದ್ಧ ಬರಹಗಾರರೊಂದಿಗೆ ಇತರ ಬರಹಗಾರರ ಬರಹವೂ ಸಮಾನ ಯೋಗ್ಯತೆಯುಳ್ಳವುಗಳಾಗಿ ತೋರುತ್ತವೆ. ಇಂತಹ ಅಮೂಲ್ಯ ಕೃತಿಯನ್ನು ನೀಡಿದ್ದಕ್ಕೆ 'ಜಯಹಿಂದ'ವನ್ನು ಮನಸಾರೆ ಅಭಿನಂದಿಸುತ್ತೇವೆ.

ಜ್ಯೋತಿ— (ಪಕ್ಷಪತ್ರಿಕೆ) ಸಂಪಾದಕರು: ಶ್ರೀ ಬಿ. ಎಸ್. ಭಾಸ್ಕರ ರೈ, ಬಿ. ಎ., ಎಲ್ಎಲ್ ಬಿ, ಜ್ಯೋತಿ ಕಾರ್ಯಾಲಯ ಮಂಗಳೂರು. ವಾ. ಚಂದಾ ರೂ. 3-8-0 ಬಿಡಿ ಸಂಚಿಕೆ ?

ಸ್ಥಳೀಯ ರಾಜಕೀಯ ಹಾಗೂ ಪ್ರಚಲಿತ ವಿಚಾರಗಳ ವಿಮರ್ಶೆ-ಟೀಕೆ ಟಿಪ್ಪಣಿಗಳಿಗಿಯೇ ಈ ಪತ್ರಿಕೆ ಹೊರಟಿಂತಿದೆ. ಸಂಪಾದಕರೂ ಆದೇಧಾಟಿಯ ಧೋರಣೆಯನ್ನು ಸಂಪಾದಕೀಯದಲ್ಲೂ ಇನ್ನಿತರ ತನ್ನ ಆದ ಬಾಹಗೀ ಬರಹಗಳಲ್ಲೂ ವ್ಯಕ್ತಪಡಿಸಿದ್ದಾರೆ. ಸಾರ್ವಜನಿಕರ ಪ್ರೀತಿವಿಶ್ವಾಸಗಳ ಜ್ಯೋತಿಗಳೆನಿಸುವಂತಾದರೆ ಶ್ರೀ ರೈಗಳ ಮನಸಾರ್ಥಕ.

The Canara Mutual Assurance Company, Limited.
Head office: UDIPI, S. India.

NOTICE.

Notice having been given by the claimant under Policy No. 12193 issued by the Company on the life of Late Sri B. Karia Poojary, S/o Sri B. Kuppa Poojary, Farmer, Udyavar, S K., that the said Policy is not available, the Company will dispose off the claim thereunder unless valid objections are received at this office within 30 days from the date hereof.

T. R A Pai,
Managing Director.
UDIPI, 3rd April, 1951.

NOTICE

Before the Rent Controller Puttur
H. R. C. P. No. 10/1951

Ahmad Kunnil —Petitioner
Vs
Boniphas Bernard Louis, —Respondent

Please take notice that the petitioner above named has filed a petition against the Respondent and the said petition now stands posted to 27-4-51 at Kasargod for hearing. should you fail to appear on that day either in person or by a Pleader the petition will be heard in your absence.

(By order of the Court)
(Sd-) C Abdulla
Advocate for Petitioner
KASARAGOD, 12—4—51

ವಿವಿಧ ಪಾತ್ರೆಗಳು



ಯಾವತ್ತೂ ... ದ ಬೆಳ್ಳಿ ... ಹಿತ್ತಾಳೆ ... ಮೊದಲಾದ ... ಳ ವಿವಿಧ ... ಗಳೂ ಸಾವ... ಗಳೂ ರಖ...
ಯಾಚಿಲ್ಲರೆಯಾಗಿಯೂ ದೊರೆಯು...
ಕಲ್ಯಾಣಿ ವ್ಯಾಸಾಚಾರ
ರಥಬೀದಿ, ಉಡುಪಿ

'ಕಿರಿಯರ ಪ್ರಪಂಚ'ದ ಪ್ರಕಟಣೆಗಳು

ಕೊಗದ್ದಲ್ ಶ್ರೀನಿವಾಸರಾಯರಿಂದ—

- ನಂದಾದೀಪ [ಸಣ್ಣ ಕತೆಗಳು] 0—14—0
- ಭಾರತೀಯ ಕತೆಗಳು 0—14—0
- ಮೂರು ಪ್ರಹಸನಗಳು 0—14—0

ಎಸ್. ವೆಂಕಟರಾಜರಿಂದ—

- ರಂಗಭೂಮಿ [ನಾಟಕ] 0— 8—0
- ಆಕಾಶ ಗಂಗೆ [ಸಣ್ಣ ಕತೆಗಳು] 1—12—0
- ಕವಿತಾಕಾಮಿನಿ [ಕವನಗಳು] 2— 0—0
- ಸಪ್ತಸಾಗರ [ಸಣ್ಣ ಕತೆಗಳು] 0—12—0

ಕೆ. ಕೆ. ಶೆಟ್ಟಿರಿಂದ—

- ಸಂಶಯ ಪಿಶಾಚಿ [ನಾಟಕ] 0— 8—0
- ಕುಶಲವ [ನಾಟಕ] 0— 6—0
- ವೃಥಚಾಂಡಾಲ [ನಾಟಕ] 1— 0—0
- ಹೆಂಡ್ತಿಗಂಡನಾದರೆ [ಪ್ರಹಸನ] 0— 4—0
- ಪುರುಷವಧು [ಪ್ರಹಸನ] 0— 4—0
- ದೇಶಭಕ್ತ [ನಾಟಕ] 1— 4—0
- ಪ್ರೇಮವಿಜಯ [ನಾಟಕ] 1— 0—0
- ಸನ್ಯಾಸಿಯ ಸೋಗಿನಲ್ಲಿ [ಕಾದಂಬರಿ] 0—8—0

ಇತರ ಪುಸ್ತಕಗಳು

- ಕಾವ್ಯ ಸಾಮ್ರಾಜ್ಯ [ಕವನ ಸಂಗ್ರಹ] 1—
- ಮಧುವನ [ಕಥಾಸಂಗ್ರಹ] 3—
- ನಾಟಕತೆಗಳು [ಕತಾಸಂಗ್ರಹ] 0—
- ಸೇವಾಪಥ [ನಾಟಕ] 0—
- ನಗೆನೋಟಗಳು [ಕೆ. ವಿ. ಶೆಟ್ಟಿ] 0—1
- ಅನ್ನದೇವರು ಮತ್ತು ಇತರಕತೆಗಳು [ಕೆ. ಕೆ. ರೈ] 1—
- ಭಾರತದಲ್ಲಿ ಬಾಪೂಜೀ 1—
- ವಿಷ್ಣುವಿನ ದಶಾವತಾರಗಳು [ಎಂ. ವಿ ಹೆಗ್ಡೆ] 0—
- ಸ್ವಾತಂತ್ರ್ಯ ವೀರಸಾವರಕರ [ಇಂದಿರಾ ಬಾಯಿ] 1—
- ಜೀವನ ಸಂಗ್ರಾಮ [ಪಿ. ಶೀನ ಶೆಟ್ಟಿ] 1—
- ಕದಂಬ [ಸರಸ್ವತಿಬಾಯಿ ರಾಜವಾಡೆ] 1—
- ಪ್ರಕಾಶ [,,] 2—
- ಜಮೀನ್ದಾರ [ಹೊಸಮನಿ ಗುಡ್ಡಪ್ಪ] 1—
- ಸ್ವತಂತ್ರ ಜೀವನೋಪಾಯ 0—

ನವಭಾರತ ಪುಸ್ತಕ ಭಂಡಾರ, ಉಡುಪಿ

ವಾರದ ಹರಟೆ

ಪುರಾತನ ಕಾಲದಲ್ಲಿ ಒಮ್ಮೆ ಜನರೆಲ್ಲರೂ ಒಟ್ಟುಸೇರಿ ದೇವಲೋಕಕ್ಕೆ ಹೋಗಬೇಕೆಂದು ನಿಶ್ಚಯಿಸಿ ಅದಕ್ಕಾಗಿ ಒಂದು ಎತ್ತರವಾದ ಗೋಪುರವನ್ನು ಕಟ್ಟಲಿಕ್ಕೆ ಪ್ರಾರಂಭಿಸಿದರಂತೆ ಅಂತಸ್ತಿನ ಮೇಲೆ ಅಂತಸ್ತು ಕಟ್ಟುತ್ತಾ ಗೋಪುರ ಬಹಳ ಮೇಲಿನವರೆಗೆ ಹೋಯಿತಂತೆ ದೇವರು ಕೆಳಗೆ ನೋಡಿ-ಸ್ವಲ್ಪ ಗಾಬರಿಯಾದರಂತೆ. ಇವರನ್ನು ಹೀಗೆ ಮುಂದುವರಿಸಲು ಬಿಟ್ಟರೆ ಸ್ವಲ್ಪ ಸಮಯದಲ್ಲಿ ಇವರು ದೇವ ಲೋಕವನ್ನು ಸೇರಬಹುದೆಂದು ಹೆದರಿ ಇನ್ನು ಕಟ್ಟಕೊಂಡು ಮೇಲೆ ಬಾರದಂತೆ ಅವರಲ್ಲಿ ಒಬ್ಬನು ಮಾತನಾಡುವ ಭಾಷೆ ಇನ್ನೊಬ್ಬನಿಗೆ ಅರ್ಥವಾಗದಿರಲಿ ಎಂದು ಶಾಪ ಕೊಟ್ಟರಂತೆ. ಅದರ ಪರಿಣಾಮವಾಗಿ ಒಬ್ಬ ಹೇಳಿದಂತೆ ಇನ್ನೊಬ್ಬ ನಡೆಯಲಾರದೆ ಗೋಪುರದ ಕೆಲಸ ಅಲ್ಲಿಯೇ ನಿಂತು ಹೋಯಿತಂತೆ. ಇದೊಂದು ಬೈಬಲಿನ ಕತೆ.

ಈ ಕತೆಯ ಆಧಾರದಿಂದಲೋ ಏನೋ ಬ್ರಿಟಿಷರು ಒಂದೇ ಭಾಷೆಯ ಪ್ರಾಂತ್ಯಗಳನ್ನು ಒಡೆದು ಅನೇಕ ಭಾಷೆಗಳನ್ನಾಡುವ ಜನರನ್ನು ಒಟ್ಟುಸೇರಿಸಿ ಪ್ರಾಂತ್ಯಗಳನ್ನು ಕಟ್ಟಿರಬೇಕು. ಇಲ್ಲದಿದ್ದರೆ ನಮ್ಮ ಮದ್ರಾಸು ಪ್ರಾಂತ್ಯ ಎಷ್ಟು ಭಾಷೆಯ ಜನರಿಂದ ಕೂಡಿದೆ ನೋಡಿರಿ. ಒಂದು ಕಡೆ ತಮಿಳರು, ಒಂದು ಕಡೆ ತೆಲುಗರು, ಇನ್ನೊಂದು ಕಡೆ ಮಲೆಯಾಳಿಗಳು, ಮತ್ತೊಂದು ಕಡೆ ಕನ್ನಡಿಗರು-ಹೀಗೆ ಒಬ್ಬರ ಭಾಷೆ ಇನ್ನೊಬ್ಬನಿಗೆ ಅರ್ಥವಾಗದ ನಾಲ್ಕು ಭಾಷೆಯ ಜನರ ಪ್ರಾಂತ್ಯವಿದು. ಇದನ್ನು ಆಳುವವರು ಇಂಗ್ಲಿಷ್ ಭಾಷೆಯನ್ನು ಮಾತ್ರ ಅರಿತ ಕೆಲವರು. ಇದರಿಂದಾಗಿ ಪ್ರತಿಯೊಂದು ಕ್ಷೇತ್ರದಲ್ಲಿಯೂ ಈ ಭಾಷೆಗಳ ಗೊಂದಲವಿದೆ. ಉದಾಹರಣೆಗಾಗಿ ಮಲೆಯಾಳ ಭಾಷೆಯನ್ನಾಡುವ ಜಡ್ಜರು. ಕನ್ನಡ ಮಾತಾಡುವ ಕಕ್ಷಿಗಾರರು ಅವರ ವಿಚಾರಣೆ ಕನ್ನಡದಲ್ಲಿ. ವಕೀಲರು ಪ್ರಶ್ನೆ ಕನ್ನಡದಲ್ಲಿ ಕೇಳುವ ಮೊದಲು ಪ್ರಶ್ನೆ ಜಡ್ಜರಿಗೆ ಅರ್ಥವಾಗುವಂತೆ ಅದನ್ನೊಮ್ಮೆ ಇಂಗ್ಲಿಷ್‌ನಲ್ಲಿ ವಕೀಲರು ಹೇಳಬೇಕು. ಅದನ್ನು ಕನ್ನಡದಲ್ಲಿ ತರ್ಜುಮೆ ಮಾಡಲಿಕ್ಕೆ ಒಬ್ಬ ಕ್ಲಾರ್ಕನಿದ್ದಾನೆ ಅವನು ಕನ್ನಡದಲ್ಲಿ ಕೇಳುತ್ತಾನೆ. ಕಕ್ಷಿಗಾರ ಕನ್ನಡದಲ್ಲಿ ಉತ್ತರ ಕೊಡುತ್ತಾನೆ ಉತ್ತರವನ್ನು ಇಂಗ್ಲಿಷ್‌ನಲ್ಲಿ ತರ್ಜುಮೆಮಾಡಿದ ನಂತರ ಅದನ್ನು ಜಡ್ಜರು ಇಂಗ್ಲಿಷ್‌ನಲ್ಲಿ ಬರೆದುಕೊಳ್ಳಬೇಕು. ಪ್ರಶ್ನೋತ್ತರಗಳು ಎರಡು ಸಲ ಇಂಗ್ಲಿಷ್‌ನಿಂದ ಕನ್ನಡಕ್ಕೆ ಕನ್ನಡದಿಂದ ಇಂಗ್ಲಿಷ್‌ಗೆ ತರ್ಜುಮೆಯಾಗುವಾಗ ಏನೆಲ್ಲಾ ಗಂಡಾಂತರಗಳಾಗಬಹುದೆಂದು ನೀವೇ ಆಲೋಚಿಸಿರಿ. ಜನರಿಗೆ ಮೂಲ ಆಧಾರವಾದ ದಾಖಲೆಗಳು ಎಲ್ಲಾ ಕನ್ನಡದಲ್ಲಿವೆ. ಇವುಗಳ ತಲೆ ಬುಡ ಜಡ್ಜರಿಗೆ ಆಗುವುದಿಲ್ಲ ಅವುಗಳ ಅಭಿಪ್ರಾಯವನ್ನು ಎರಡು ಕಡೆ ವಕೀಲರು ಅವರಿಗೆ ಬೇಕಾದಂತೆ ಜಡ್ಜರಿಗೆ ವಿವರಿಸಿ ಹೇಳುತ್ತಾರೆ. ಕೊನೆಗೆ ತರ್ಜುಮೆಗುಮಾಸ್ತನು ಅವನಿಗೆ ತಿಳಿದಂತೆ ಬರೆದ ಅಭಿಪ್ರಾಯ ಜಡ್ಜರಿಗೆ ಹೇಳುತ್ತಾನೆ. ಇದನ್ನು ಜಡ್ಜರು ನಂಬಿಕೊಂಡು ತೀರ್ಮಾನ ಮಾಡಬೇಕು.

ಜಡ್ಜರ ತೀರ್ಮಾನ ಸರಿಯಲ್ಲವೆಂದು ಕಕ್ಷಿಗಾರ ಮದ್ರಾಸು ಹೈಕೋರ್ಟಿಗೆ ಅಪೀಲು ಮಾಡುತ್ತಾನೆ ಅಲ್ಲಿಯ ಜಡ್ಜರು ತಮಿಳು ಅಥವಾ ತೆಲುಗು ಬಲ್ಲವರು. ಹೇಗೂ ಕನ್ನಡ ಬಲ್ಲವರು ವಿರಳ, ತಾವು ಆಧರಿಸುವ ದಾಖಲೆಗಳು ಕಕ್ಷಿಗಾರರ ಖರ್ಚಿನಿಂದ ಇಂಗ್ಲಿಷ್‌ಗೆ ತರ್ಜುಮೆಯಾಗುವುದು. ಅದಕ್ಕೊಬ್ಬ ಕ್ಲಾರ್ಕ ಅಲ್ಲಿ ಬೇರೆ ಇದ್ದಾನೆ, ಈ ತರ್ಜುಮೆಯನ್ನು ನಂಬಿಕೊಂಡು ಮದ್ರಾಸಿನ ಜಡ್ಜರು ತೀರ್ಮಾನ ಮಾಡಬೇಕು ಅಪೀಲಿನ ಅನೇಕ ಖರ್ಚುಗಳೊಡನೆ ಈ ತರ್ಜುಮೆ ಖರ್ಚನ್ನೂ ಕಕ್ಷಿಗಾರನು ಸಹಿಸಿಕೊಂಡರಾಯಿತು.

ಇನ್ನು ವಿದ್ಯಾ ಇಲಾಖೆಯ ಕಷ್ಟ ಯೋಚಿಸಿದ್ದೀರಾ? ಕನ್ನಡ, ಮಲೆಯಾಳ, ತೆಲುಗು ತಮಿಳು ಭಾಷೆಗಳ ವಿದ್ಯಾರ್ಥಿಗಳು ಒಂದೇ ಯುನಿವರ್ಸಿಟಿಯ ಆಡಳಿತೆಯಲ್ಲಿ ಇರಬೇಕಾಗಿದೆ ತಮಿಳು ಯಾ ತೆಲುಗು ಸ್ವಂತ ಭಾಷೆಯಾಗಿದ್ದು ಇಂಗ್ಲಿಷ್ ಬಲ್ಲ ಪ್ರಾಂತ್ಯದ ವಿದ್ಯಾ ಇಲಾಖೆಯ ಡೈರೆಕ್ಟರು ಮಲೆಯಾಳಿ ಭಾಷೆಯ ಜಿಲ್ಲಾ ವಿದ್ಯಾಧಿಕಾರಿಗಳು. ಕನ್ನಡ ಭಾಷೆಯ ಶಾಲೆಗಳು ಪೂರಾ ಕನ್ನಡದಲ್ಲಿ. ಕನ್ನಡ ಅರಿಯದ ಮೇಲ್ದರಗತಿಯ ಅಧಿಕಾರಿಗಳು ಇನ್ಸ್‌ಪೆಕ್ಷನ್ ಮಾಡಿ ತಮ್ಮ ಅಭಿಪ್ರಾಯವನ್ನು ಇಂಗ್ಲಿಷಿನಲ್ಲಿ "ನೋಟ" ಬರೆಯುತ್ತಾರೆ. ಅದನ್ನು ನೋಡಿಕೊಂಡು ಕನ್ನಡ ಪಂಡಿತರು ತಾವು ಕಲಿಸುವ ವಿಧಾನವನ್ನು ತಿದ್ದಿಕೊಳ್ಳಬೇಕು. ಇಂತಹ ಸಂಕಷ್ಟಗಳು ಅನೇಕ ಇವೆ ಕೇಳುವವರಾರು?

ಆಡಳಿತೆ ವಿಚಾರದಲ್ಲಿ ಜಿಲ್ಲಾ ಕಲೆಕ್ಟರರು ಕನ್ನಡ ಗಂಧಗಾಳಿಯನ್ನರಿಯದ ತಮಿಳರು ಅಥವಾ ಮಲೆಯಾಳಿ ಬಡಕಕ್ಷಿಗಾರ ಕನ್ನಡದಲ್ಲಿ ತನಗೆ ತಿಳಿದಂತೆ ಅರ್ಜಿ ಬರೆದುಕೊಂಡು ಕಲೆಕ್ಟರರ ಮುಂದೆ ಹೋಗುತ್ತಾನೆ. ತನ್ನ ಸಂಕಷ್ಟಗಳನ್ನು ತನ್ನ ಭಾಷೆಯಲ್ಲಿ ವಿವರಿಸುತ್ತಾನೆ. ಕಲೆಕ್ಟರರು ಅವನನ್ನು ಕಣ್ಣುಬಿಟ್ಟು ನೋಡುತ್ತಾರೆ. ಅರ್ಥವಾಯಿತು ಎಂದು ತಲೆ ಅಲ್ಲಾಡಿಸುತ್ತಾರೆ. ನಿಮ್ಮ ಅರ್ಜಿಗೆ ಸಧ್ಯದಲ್ಲಿ ಉತ್ತರ ಕಳುಹಿಸಲಾಗುವುದೆಂದು ಕ್ಲಾರ್ಕ ಭರವಸೆ ಹೇಳುತ್ತಾನೆ. ಒಂದೆರಡು ತಿಂಗಳ ನಂತರ ಕನ್ನಡದ ಅರ್ಜಿ ಕಲೆಕ್ಟರರ ಮುಂದೆ ಬರುತ್ತದೆ. ನಾಲ್ಕು ಪುಟದ ಅರ್ಜಿ, ಅದರ ಮಾರ್ಜಿನ್‌ನಲ್ಲಿ ಕ್ಲಾರ್ಕ ನಾಲ್ಕು ಪಂಕ್ತಿಯಲ್ಲಿ ಅರ್ಜಿಯ ಅಭಿಪ್ರಾಯ ಇಂಗ್ಲಿಷ್‌ನಲ್ಲಿ ಬರೆದಿಟ್ಟಿದ್ದನ್ನು ನೋಡಿಕೊಂಡು ಕಲೆಕ್ಟರರು ಎರಡು ಶಬ್ದದ ಹುಕುಂ ಇಂಗ್ಲಿಷ್‌ನಲ್ಲಿ ಬರೆಯುತ್ತಾರೆ. ನಂತರ ಕಕ್ಷಿಗಾರನಿಗೆ ಇಂಗ್ಲಿಷ್‌ನ ಹುಕುಂ ಬರುತ್ತದೆ ಅದನ್ನು ಅವನು ಇಂಗ್ಲಿಷ್ ಬಲ್ಲವರಿಂದ ಓದಿಸಿಕೊಂಡು ತಿಳಿಯುತ್ತಾನೆ ಕೆಲವು ವೇಳೆ ಅವನ ಹಾಲ್ ಹವಾಲೆಗೂ ಅದಕ್ಕೆ ಬಂದ ಉತ್ತರಕ್ಕೂ ಏನೊಂದೂ ಸಂಬಂಧವಿರುವದಿಲ್ಲ. ತನ್ನ ಅರ್ಜಿಯನ್ನು ಕಲೆಕ್ಟರು ಓದಲಾರದೆ ತನಗಾದದು ರವಸ್ಥೆಯೋ ಎಂದು ನೊಂದುಕೊಳ್ಳುತ್ತಾರೆ.

ಮೊನ್ನೆಯ ವರೆಗೆ ಪರಕೀಯರ ಸರಕಾರವಿತ್ತು. ಅನೇಕ ಭಾಷೆಗಳ ಜನರನ್ನು ಒಟ್ಟುಸೇರಿಸಿ ಪರಕೀಯರು ಆಡಳಿತೆ ನಡೆಸುವುದು ಕೇವಲ ಅನ್ಯಾಯವೆಂದು ಮೊನ್ನೆ ನಾವೆಲ್ಲರೂ ಬೊಬ್ಬಿಡುತ್ತಿದ್ದೆವು. ಬ್ರಿಟಿಷರ ಆಡಳಿತೆಯನ್ನು ಟೀಕಿಸುವ ಸಮಯ ನಾವು ಒಮ್ಮತದಲ್ಲಿದ್ದೆವು. ಒಕ್ಕಟ್ಟಿನಲ್ಲಿದ್ದೆವು. ಬ್ರಿಟಿಷರು ಬೇಸತ್ತು ಆಡಳಿತೆಯನ್ನೆಲ್ಲಾ ನಮ್ಮ ತಲೆಯ ಮೇಲೆ ಹಾಕಿ ಹೊರಟುಹೋದರು. ಆಡಳಿತೆಯನ್ನು ವಹಿಸಿಕೊಂಡವರು ಬ್ರಿಟಿಷರ ಕ್ರಮವನ್ನೇ ಅನುಸರಿಸಿಕೊಂಡಿದ್ದಾರೆ. ಈಗ ಅವರು ಅನೇಕ ಭಾಷೆಗಳ ಜನರು ಒಂದೇ ಆಡಳಿತೆಯಲ್ಲಿರುವುದೇ ಸರಿ. ಅದರಿಂದಲೇ ನಮ್ಮ ದೇಶದ ಐಕ್ಯ ಸಾಧನೆ ಆಗುವುದು ಎಂದು ಹೇಳುತ್ತಿದ್ದಾರೆ "ಮಾವನ ಆಡಳಿತೆ ಸರಿಯಲ್ಲ. ಅವನಿಗೆ ನಾವೆಲ್ಲ ಎದುರು ನಿಲ್ಲಬೇಕು" ಎಂದು ಕುಟುಂಬದವರೆಲ್ಲರೂ ಒಟ್ಟಾಗಿದ್ದರು ಮಾವ ಬೇಸತ್ತು ಆಡಳಿತೆಯನ್ನು ಹಿರೇ ಅಳಿಯನಿಗೆ ಬಿಟ್ಟುಕೊಟ್ಟ. ಮಾವನಿಗೆ ಎದುರು ನಿಲ್ಲುವುದರಲ್ಲಿ ಮುಂದಾಳಾಗಿದ್ದ ಅಳಿಯ ಈಗ ಆಡಳಿತೆ ನಡೆಸುತ್ತಿದ್ದಾನೆ. ಕುಟುಂಬದ ಕಿರಿಮೆಂಬರರ ಅವಸ್ಥೆ ಮೊದಲಿನಂತೆಯೇ ಇದೆ. ಅಳಿಯ ಮಾವನ ಕ್ರಮಕ್ಕೇನು ಬಿಟ್ಟು ಕೊಡುವವನಲ್ಲ. ಮಾವನಿಗಿಂತಲೂ ಒಂದು ತೂಕ ಬಲವೇ ಎನ್ನಬೇಕು. ಅರಸ ಯಾರಾದರೂ; ಗೋಧಿ ಬೀಸುವ ಕೆಲಸ ತನಗೆ ತಪ್ಪೀತೇ? ಎಂದಿದ್ದಂತೆ ಒಬ್ಬ ಕೂಲಿ ಹೆಂಗಸು. ಹಾಗಾಗಿದೆ ನಮ್ಮ ಅವಸ್ಥೆ. ಯಾವ ಸಮಸ್ಯೆಗೂ ಸರ್ವ ಸರಕಾರದವರು "ಸಮರ್ಪಕ" ಉತ್ತರ ಕೊಡುತ್ತಿದ್ದಾರೆ ನಡೆಯುವುದು ಮಾತ್ರ ಅವರಿಗೆ ಇಷ್ಟಬಂದಂತೆಯೋ

ಒಬ್ಬ ಪಂಡಿತನು ಉದ್ಯೋಗಕ್ಕಾಗಿ ಒಬ್ಬ ಸಾಮಾನ್ಯನೊಡನೆ ಒಂದು ಪ್ರಶ್ನೆ ಕೇಳಿದನಂತೆ;-ಸೂರ್ಯನು ಭೂಮಿಗಿಂತ 192 ಮಿಲಿಯಮೈಲು ದೂರ ಇರುವುದಾದರೆ, ರೈಲು ತಾಸಿಗೆ 50 ಮೈಲು ಓಡುವುದಾದರೆ ನನ್ನ ಪ್ರಾಯವೆಷ್ಟು?" ಎಂದು ಸಾಮಾನ್ಯನು ಈ ಪ್ರಶ್ನೆ ಕೇಳಿ ತಲೆತುರಿಸಿಕೊಂಡ. ಸ್ವಲ್ಪ ಸಮಯದಲ್ಲಿ ಉತ್ತರಿಸಿದ— "ಸ್ವಾಮಿ! ನಿಮ್ಮ ಪ್ರಾಯ 44 ವರ್ಷ". ಉತ್ತರ ಕೇಳಿ ಪಂಡಿತ ಬಹಳ ಚಕಿತನಾದ, ಏಕೆಂದರೆ ಅವನ ಪ್ರಾಯ ನಿಜವಾಗಿ 44 ಆಗಿತ್ತು. ಪಂಡಿತ ಪ್ರಶ್ನಿಸಿದ-"ಅಹಿರಲಿ, ಮಹಾರಾಯಾ! ನನ್ನ ಪ್ರಾಯ ನಿಜವಾಗಿ ನಿನಗೆ ಹೇಗೆ ತಿಳಿಯಿತು ಹೇಳುವೆಯಾ? ಎರಡನೆಯ— ಅದು ಬಹಳ ಸುಲಭವಿದೆ ಸ್ವಾಮಿ. ನನಗೊಬ್ಬ ಭಾವನಿದ್ದಾನೆ ಅರೆ ಮರುಳ. ಅವನ ಪ್ರಾಯ ಇಪ್ಪತ್ತೆರಡು ವರ್ಷ ಎಂದು ಉತ್ತರ ಹೇಳಿದನಂತೆ ಇದು ಸಮರ್ಪಕ ಉತ್ತರವಲ್ಲವೇ? ಬರುವ ವಾರದ ಹರಟೆ ಏನೆಂದು ಇನ್ನೂ ಯೋಚಿಸಲಿಲ್ಲ. ದೇವರು ನಡೆಯಿಸಲಿ,

ನಮಸ್ಕಾರ.

— "ಯು. ವಿ."

ಋತುಸ್ರಾವ ನಿಂತಿತು

"ಉವಮಾರ್" ಬಿಲ್ಲೆಗಳನ್ನು ಉಪಯೋಗಿಸಿದರೆ ಹದತಪ್ಪಿ ಋತುಸ್ರಾವವಾಗುವುದು, ಹೊಟ್ಟೆಗೆ ಬರುವುದು, ಈ ಔಷಧ ಸೇವನೆಯಿಂದ ತೀವ್ರ ಗುಣಹೊಂದಬಹುದು, ಯಾವ ಬಾಧಕವೂಯಿಲ್ಲ. ಸಾವಿರಾರು ಮಂದಿಗೆ ಖಾತ್ರಿ ಗುಣವಾಗಿದೆ- ಬೆಲೆ; ರೂ. 3-ಃ ಸ್ಪೆಶಲ್ ರೂ. 5- ಅಧಿಕಾಧಿಕ ಸ್ಪೆಶಲ್ ರೂ. 8- [ವಿ. ಪಿ. ಹನ್ನೆರಡಾಣೆ ಪ್ರತ್ಯೇಕ.]

IS D. DEVEE, F. DS (N. J.)
Tollygunge CALCUTTA
ಪ್ರತಿನಿಧಿಗಳು ಕಂಪೆನಿ, ಮಂಗಳೂರು

THE PANGAL NAYAK BANK LIMITED.

Head Office] (Incorporated in 1920.) [Udipi S. K.

SEASON DEPOSITS are received and accepted on the following terms:—

For three, four or five months deposits at 3% p. a

For six, seven or eight months deposits at 3½% p. a

These are to be terminable by the 30th June 1951.

Interest is payable along with the principal at maturity.

Our THREE YEAR CASH CERTIFICATES bring to You a fair yeild: For particulars please ask for copy of Rules

Nambiar's

ARYA VAIDYA SALA

UDIPI

Ideal House for Ayurvedic Treatment.

T. N. Kelu Nambiar,
Vaidya

ನಿಮಗೆ ಇಂಗ್ಲಿಷ್ ಕಲಿಯಬೇಕೆ? ಹಾಗಿದ್ದರೆ

ಕೊರಡ್ಕಲ್ ಶ್ರೀನಿವಾಸ ರಾವ್ ವಿರಚಿತ

ಸುಲಭದಲ್ಲಿ ಇಂಗ್ಲಿಷ್

English Made Easy

ಎಂಬ ಇಂಗ್ಲಿಷ್ ಸ್ವಯಂಬೋಧಿನಿ ಪುಸ್ತಕ ಅತ್ಯುಪಯುಕ್ತವಾದುದು.

ಬೆಲೆ ರೂ. 1-8-0.
ವಿ. ಪಿ. ದ್ವಾರ ರೂ 1-14-0.

ಪ್ರತಿಗಳು ನಿಮ್ಮೂರ ಪುಸ್ತಕ ವ್ಯಾಪಾರಿಗಳಲ್ಲಿ ಸಿಗದಿದ್ದರೆ, ಕೆಳಗಿನ ವಿಳಾಸಕ್ಕೆ ಬರೆಯಿರಿ

ನವಭಾರತ ಪುಸ್ತಕ ಭಂಡಾರ,
ಉಡುಪಿ

ಉಡುಪಿಗೆ ಹೋಗಬೇಕು! ಆದರೆ ಉಳಿದುಕೊಳ್ಳುವುದೆಲ್ಲಿ?

ರಾಯಲ್ ಮಹಾಲಿನಲ್ಲಿ

ಬಸ್ ಸ್ಟೇಂಡಿಗೆ ಅತಿ ಸಮೀಪ! ಕೃಷ್ಣಮಠಕ್ಕೆ ದೂರವಿಲ್ಲ!

ವ್ಯಾಪಾರವ್ಯವಹಾರ ವಿಹಾರಸ್ಥಳಗಳಿಗೆಲ್ಲ ಕೇಂದ್ರ!

ನಿಮ್ಮ ಸ್ನಾನ, ಊಟ, ಉಪಹಾರ, ಬೈಠಕ್, ಶಯನ ಇದಕ್ಕೆಲ್ಲ ಉತ್ತಮ ವ್ಯವಸ್ಥೆ ಕರೆದರೆ ಓಗೊಡುವ ನೌಕರರ ವರ್ಗ!

ಮೇಲಾಗಿ ಉಡುಪಿ ಬ್ರಾಹ್ಮಣರ ಅಡಿಗೆ,ತಿಂಡಿ ತಿನಸು, ಇವುಗಳ ರುಚಿರುಚಿ ಬೇಕಬೇಕೇ?

ಪ್ರೊಪ್ರೈಟರ್:— ಕೆ. ವೆಂಕಟ್ರಮಣಭಟ್.

For up-to-date Lodging & Boarding

ROYAL MAHAL,

UDIPI S. Kanara.

ಮೇಷ—ಕೇವಲ ಆತ್ಮಶಕ್ತಿಯಿಂದಾಗಿ ಪ್ರತಿಯೊಂದು ಕಾರ್ಯವನ್ನು ನಿರ್ವಹಿಸಲು ನೀವು ಶಕ್ತರಿರುವಿರಿ. ಆದರೆ ನಿಮ್ಮ ಪ್ರಯತ್ನಕ್ಕೆ ತಕ್ಕುದಾದ ಫಲವು ಲಭಿಸುಬೊಲ್ಲದು. ವ್ಯಾಪಾರೀ ವೃಂದಕ್ಕೆ ಮತ್ತು ಭೃತ್ಯ ಜನರಿಗೀ ಕಾಲವು ಅನುಕೂಲವಿದೆ. ಸದಾ ಕಾಲ ಪರ್ಯಟನದಿಂದಾಗಿ ದೇಹದ ಆರೋಗ್ಯಕ್ಕೆ ಧಕ್ಕೆಯುಂಟಾದೀತು. ವ್ಯವಹಾರದಲ್ಲಿ ಕಲಹ ನಿಷ್ಠುರಗಳು ಹೆಚ್ಚಲಿವೆ. ವಾರಾದಿಯ 5 ದಿನಗಳು ಮನಶ್ಶಾಂತಿ ಸುಖಲಾಭಕಾರಿಗಳಾಗಿವೆ.

ವೃಷಭ—ಸದ್ಯ ನಿಮ್ಮ ಉದ್ಯೋಗದಲ್ಲಿ ಒಳ್ಳೇ ಪ್ರಗತಿಯಿದೆ. ಯಾವ ಕಾರ್ಯದಲ್ಲೂ ಪರಾಭವವುಂಟಾಗದು. ಆದಾಯವು ಉತ್ತಮ ತರನಾಗಿದ್ದರೂ ಭೂಸಂಬಂಧವಾಗಿ ಹೆಚ್ಚಿನ ನಷ್ಟವಾಗುವ ಯೋಗವಿದೆ. ಗೃಹ ತಾಪತ್ರಯಗಳು ಹೆಚ್ಚುವವು. ಸ್ತ್ರೀಜನರೊಡನೆ ಕಲಹ ಪಿತ್ತದೋಷದಿಂದಾಗಿ ನಿದ್ರಾಭಂಗ ದೇಹಾಲಸ್ಯಗಳು ಕಾಣಿಸಿಕೊಳ್ಳುವವು. ತಾ. 21 ರಿಂದ 25ರ ವರೆಗಿನ ದಿನಗಳು ವಾಂಛಿತಾರ್ಥವನ್ನು ಕೈಗೂಡಿಸುವವು.

ಮಿಥುನ—ಇತರ ಗ್ರಹಬಲವು ಚೆನ್ನಾಗಿದ್ದರೂ ಸುಖಸ್ಥಾನದಲ್ಲಿರುವ ಶನೈಶ್ಚರನು ನಿಮ್ಮನ್ನು ಚಪಲ ಚಿತ್ತರನ್ನಾಗಿ ಮಾಡಿರುವನು. ಮಾತ್ರವಲ್ಲ ವಿಷಯಾದಿಗಳಿಗೆ ಸಿಲುಕಿ ಕಷ್ಟನಷ್ಟಗಳಿಗೀಡುಮಾಡುವನು. ಉದ್ಯೋಗ ನೌಕರಿ ವ್ಯಾಪಾರ ವ್ಯವಹಾರಗಳಲ್ಲಿ ಒಳ್ಳೆಯ ಪ್ರಗತಿಯಿದೆ. ಇತರ ತಾಪತ್ರಯಗಳಿಂದ ಮುಕ್ತರಾಗಿ ಸುಖದಿಂದ ಕಾ

ವಾರದ ಭವಿಷ್ಯ

ತಾರೀಕು 19-4-51 ರಿಂದ — ತಾರೀಕು 25-4-51ರವರೆಗೆ

ಲಯಾಪನೆ ಮಾಡತಕ್ಕ ನಿಮಗೆ ತಾ. 24, 25 ಅತ್ಯುತ್ತಮವಿದೆ.

ಕರ್ಕಾಟಕ—ಗೃಹವೃಂದವೇ ನಿಮಗನುಕೂಲವಾಗಿ ನಿಂತಿರುವುದು. ಕೇವಲ ದೈವವೊಂದರಿಂದ ಯಾವ ಕಾರ್ಯವು ನೆರವೇರದು. ಪೌರುಷವು ಅದರೊಂದಿಗೆ ಸೇರಿದರೇನೇ ಫಲ ಸಿದ್ಧಿಯಾದೀತು. ಆದಕಾರಣ ನೀವು ಆಲಸಿಗರಾಗದೆ ಕಾರ್ಯದಲ್ಲಿ ಪ್ರವೃತ್ತರಾಗಿರಿ. ನಿಮ್ಮ ಸಕಲ ಬಯಕೆಗಳೂ ಯಾವೊಂದು ತರದ ವಿಘ್ನಗಳಿಲ್ಲದೆ ನೆರವೇರುವವು. ವಾರಾದಿಯ 2 ದಿನಗಳು ಅತ್ಯುತ್ತಮವಾಗಿರುವವೆಂದರೆ ಅತಿಶಯೋಕ್ತಿಯಾಗದು.

ಸಿಂಹ—ತಾನೊಂದೆಣಿಸಿದರೆ ದೈವವೊಂದೆಣಿಸಿತೆಂಬಂತೆ ಈವಾರದಲ್ಲಿ ನಿಮ್ಮ ಸಂಕಲ್ಪಗಳೆಲ್ಲವೂ ವಿಫಲಗಳಾಗುವವು. ಇಲ್ಲಸಲ್ಲದ ಆರೋಪ ಅಪವಾದಗಳಿಗೆ ಸಿಲುಕುವಿರಿ. ಅಧಿಕ ಪರ್ಯಟನದಿಂದಾಗಿ ಆರೋಗ್ಯ ಕೆಟ್ಟು ವಿಶೇಷ ಹಾನಿಗೀಡುಮಾಡೀತು. ಧನ ನಿಮಿತ್ತ ಕಲಹವಾಗಲಿದೆ ತಾ. 19, 20, 21, 24, 25 ಈ ದಿನಗಳು ಅನಿಷ್ಟಕಾರಿಗಳಿವೆ.

ಕನ್ಯಾ—ನಿಮ್ಮ ಧನಭಾಗ್ಯಪತಿಯಾದ ಶುಕ್ರನು ಭಾಗ್ಯದಲ್ಲೇ ನಿಂತಿರುವ ಕಾರಣ ಈ ವಾರದಲ್ಲಿ ನಿಮ್ಮ ಆರ್ಥಿಕ ಭಾಗವು ಅತ್ಯುತ್ತಮವಾಗಲಿದೆ. ಮಾತ್ರವಲ್ಲ ಸುಖಸಮೃದ್ಧಿಯಾದ ಗುರುವೂ ಸ್ವಕ್ಷೇತ್ರಗತನಾಗಿ ಪೂರ್ಣದೃಷ್ಟಿಯಿಂದ ನೋಡುತ್ತಿರುವ ಕಾರಣ ನಿಮ್ಮ ತನುಮನಗಳಿಗೆ ಸುಖಶಾಂತಿಯು ಲಭಿಸುವದು. ರವಿಕುಜರಿಂದಾಗಿ ತಾ. 21, 22, 23 ರಲ್ಲಿ ಅರ್ಧಾಂಗಿಯೊಡನೆ ಕಲಹ ಶತ್ರುಗಳಿಂದ ಪೀಡೆಯುಂಟಾದೀತು.

ತುಲಾ—ಶುಕ್ರಾಚಾರ್ಯನ್ನು ಬಿಟ್ಟು ಮಿಕ್ಕೆಲ್ಲಾ ಗ್ರಹರೂ ಪ್ರತಿಕೂಲರಾದ್ದರಿಂದ ಈ ವಾರದಲ್ಲಿ ನಾನಾ ತರದ ವಿಪತ್ತುಗಳು ಪ್ರಾಪ್ತವಾಗಲಿವೆ. ಕಫಪಿತ್ತದೋಷಗಳಿಂದ ದೇಹದಾರೋಗ್ಯವು ಕೆಡುವುದು. ವಿನಾಕಾರಣ ಕಲಹವಾದೀತು. ಗುರುಹಿರಿಯರೊಡನೆ ಮನಸ್ತಾಪವುಂಟಾಗಲಿದೆ. ಹಿಡಿದ ಕಾರ್ಯಗಳೊಂದೂ ಮುಂದುವರಿಯಲಾರವು. ವಿಶೇಷತಃ ಆರ್ಥಿಕ ಬಿಕ್ಕಟ್ಟಿನಿಂದ ಪೀಡಿತರಾದ ನಿಮಗೆ ತಾ. 21, 22ರಲ್ಲಿ ಸ್ವಲ್ಪ ಮನಶ್ಶಾಂತಿ ಲಭಿಸೀತು.

ವೃಶ್ಚಿಕ—ಗ್ರಹದೃಷ್ಟಿಯ ಸಕಲ ಪರಿಮಾಣಗಳಲ್ಲೂ ಯಾವ ತರದ ನ್ಯೂನತೆಯೂ ಕಾಣಿಸದು. ಸಾಮಾಜಿಕ ರಾಜಕೀಯ ಕ್ಷೇತ್ರಗಳಲ್ಲಿ ನೀವು ಹೇಳಿದ್ದೇ ನ್ಯಾಯ ಮಾಡಿದ್ದೇ ಕಾರ್ಯವೆಂದಾದೀತು. ಪ್ರಬಲರಾದ ವಿರೋಧಿಗಳೂ ಕೂಡ ನಿಮ್ಮ ಪಾದಾಕ್ರಾಂತರಾಗುವರು. ಹಲವಾರು ವಿಧದಿಂದ ಧನವು ನಿಮ್ಮ ಕೈಸೇರಲಿವೆ ತಾ. 21, 22, 23 ಬಿಟ್ಟು ಉಳಿದ ದಿನಗಳು ಸರ್ವೋತ್ಕೃಷ್ಟಗಳಾಗಿವೆ.

ಧನು—ಸದ್ಯ ನಿಮ್ಮ ದುರ್ದೈವವು ಪ್ರಬಲವಾಗಿ ಪೀಡಿಸುತ್ತಿರುವುದು. ಸರ್ವತ್ರ ನಿರಾಶೆಯೇ ಕಾಣಿಸಲಿದೆ. ಆಪ್ತೇಷ್ಟರಲ್ಲೂ ಬಂಧು ಜನತೆಯೊಡನೆಯೂ ಪರಸ್ಪರ ವೈಮನಸ್ಸುಂಟಾಗುವದು. ಗೃಹತಾಪತ್ರಯದಿಂದ ಪೀಡಿತರಾದ ನಿಮಗೆ ಹಣದ ಅಡಚಣೆಯು ಹೆಚ್ಚಾಗಿ ಪೀಡಿಸಲಿದೆ. ಸ್ತ್ರೀಜನರೊಡನೆ ವಿರೋಧವುಂಟಾಗಲಿದೆ. ಆದರೂ ಆರೋಗ್ಯಕ್ಕೆ ಹಾನಿ ಕಾಣಿಸದು. ವಾರಾದಿಯ 4 ದಿನಗಳು ಇದ್ದುದರಲ್ಲಿ ಉತ್ತಮ.

ಮಕರ—ಬಂಧು ಮಿತ್ರರ ಸಹಕಾರದಿಂದಾಗಿ ಹೆಚ್ಚಿನ ಕಾರ್ಯಗಳಲ್ಲಿ ವಿಜಯಿಗಳಾದೀರಿ. ಆದರೂ ಆತಿವ್ಯಯದಿಂದಾಗಿ ಹಣದ ತಾಪತ್ರಯವುಂಟಾಗಲಿದೆ. ದುರ್ಜನರ ಸಹವಾಸದಿಂದ ಕಷ್ಟನಷ್ಟ ಅಪವಾದಾದಿಗಳುಂಟಾಗುವವು. ಶ್ರಮಜೀವಿಗಳಿಗೆ ಕಾಲವು ಕಷ್ಟತರವಾದೀತು. ಇದ್ದ ವಸ್ತುಗಳ ಪ್ರಯೋಜನವೂ ಸಕಾಲಕ್ಕೆ ಲಭಿಸದು. ವಾರಾಂತ್ಯದ 5 ದಿನಗಳು ಅನುಕೂಲವಿವೆ.

ಕುಂಭ—ಧನವಿಕ್ರಮ ಸುಖಭಾಗ್ಯಪತಿಗಳು ಸ್ವಸ್ಥಾನದಲ್ಲಿ ಅನುಕೂಲರಾಗಿ ನಿಂತಿರುವ ಕಾರಣ ಈ ವಾರದಲ್ಲಿ ನಿಮ್ಮ ಸುಖಸಂಪತ್ತುಗಳು ದಿನೇ ದಿನೇ ಅಭಿವೃದ್ಧಿ ಹೊಂದಲಿವೆ. ಮಣ್ಣನ್ನು ಮುಟ್ಟಿದರೂ ಹೊನ್ನಾಗುವ ಸುಸಂದರ್ಭವಿದು. ಸಕಲ ಉದ್ಯಮಗಳಲ್ಲೂ ನಿರೀಕ್ಷೆಗಿಂತ ಅಧಿಕ ಫಲಪ್ರಾಪ್ತಿಯಿದೆ. ಪ್ರಿಯಜನರ ವಿರಹದಿಂದಾಗಿ ಪರಿತಪಿಸುವ ನಿಮಗೆ ತಾ, 23; 24, 25 ಸುದಿನಗಳಾಗಿರುವವು.

ಮೀನ—ದೈಹಿಕ ಸುಖ ಮತ್ತು ಆರ್ಥಿಕ ಭಾಗಕ್ಕೆ ಹೆಚ್ಚಿನ ಹಾದಿ ಕಾಣಿಸದು. ಆದರೆ ನಿಮ್ಮಿಚ್ಛೆಯಂತೆ ಕಾರ್ಯವು ಫಲಿಸಲಾರದು. ಶತ್ರು ಜನರು ವಿಶೇಷವಾಗಿ ಪೀಡಿಸಲಿರುವರು. ಜನತೆಯ ಬೆಂಬಲ ಸಾಕಷ್ಟಿದ್ದರೂ ಅಧಿಕಾರಿಗಳ ಪೀಡೆಯು ಅಧಿಕವಾಗುವುದು. ಅನಿರೀಕ್ಷಿತವಾಗಿ ಪರ್ಯಟನವೊದಗಲಿದೆ. ಕೆಲವೊಮ್ಮೆ ಆಪ್ತಜನರಲ್ಲಿ ಅವಿಶ್ವಾಸವುಂಟಾದೀತು. ತಾ. 19, 20 ಇದ್ದುದರಲ್ಲಿ ಅನುಕೂಲ ದಿನಗಳು

ಲಕ್ಷ್ಮೀ ಸೆಂಟಾಲ್ ಮಾತ್ರೆ

ಇದರ ಉಪಯೋಗದಿಂದ ಬಹುಕಾಲದ ಮೇಹ, ಪ್ರಮೇಹ, ಮೂತ್ರದ ಉರಿ, ಮೂತ್ರ ಕೃಚ್ಛ್ರ, ಮೂತ್ರದೊಡನೆ ಯಾ ಮುಂದಾಗಿ ಬಿಳುಪು, ಅರಸಿನ, ಕೆಂಪು ಈ ವರ್ಣಗಳಲ್ಲಿ ಕೀವು ಹೋಗುವುದು, ತೊಡೆ ಸಂದಿನಲ್ಲಿ ನೋವು, ಕಾಲ ಗಂಟುಗಳಲ್ಲಿ ವೇದನೆ, ಕಣ್ಣಿನಲ್ಲಿ ಕೀವು ಬರುವುದು, ಶರೀರದಲ್ಲಿ ಉಷ್ಣತೆ, ಸ್ಪರ್ಶೇಂದ್ರಿಯ ಇವೆಲ್ಲಾ ಖಾತ್ರಿಯಾಗಿ ಗುಣಹೊಂದುವುದು.

ಡಬ್ಬಿ ಒಂದಕ್ಕೆ ರೂ. 2—0—0

ಏಜಂಟ್:—

ಶಾ ಕಂಪೆನಿ, ಮಂಗಳೂರು

ಗೊನೋರಿಯಾ ಪರಮಾರೋಗ ಉಷ್ಣ ರೋಗಕ್ಕೆ ಔಷಧ

೭ ದಿವಸಗಳಲ್ಲಿ ಈ ರೋಗ ಗುಣ ಹೊಂದುವದು ಗ್ಯಾರಂಟೀ

ಶರೀರದಿಂದ ಕೀವು ಬರುತ್ತಿದ್ದರೆ, ಧೋತರಕ್ಕೆ ಹಳದೀ ಡಾಗು ಹತ್ತುತ್ತಿದ್ದರೆ, ಶರೀರದಿಂದ ಬಾವು, ಶರೀರದ ತೊಗಲು ಹಿಂದಕ್ಕೆ ಸರಿಯದಿದ್ದರೆ, ಶರೀರದ ಸುತ್ತ ಘಾಯವಾಗಿದ್ದರೆ,.....ಚಟ್ಟೆ ಬಿದ್ದಿದ್ದರೆ, ಉಷ್ಣದಿಂದ ಚೇರು ಇಳಿದಿದ್ದರೆ, ಉಡುಚು ಆಗಿದ್ದರೆ, ಮೂಲವ್ಯಾಧಿ, ಭಗೇಂದ್ರ, ಗಂಡುಮಾಲಿ, ಕೈಕಾಲು ಶೂಲಿ, ಅರ್ಧಾಂಗವಾಯು ನಡುನೋಯುವದು ಸ್ತ್ರೀಯರ ಬಿಳಿಕೆಂಪು ಸೆರಗು ಹೋಗುತ್ತಿದ್ದರೆ, ಕೊಲಿಕುಟು ಗರ್ಭಯಿಂದ ಗರ್ಭಕೋಶ ನಾಶಹೊಂದಿದ್ದರೆ, ಸರಿಯಾಗಿ ಭೇದಿಯಾಗದಿದ್ದರೆ, ಮೂತ್ರ ಉರಿಯುತ್ತಿದ್ದರೆ, ಈ ಎಲ್ಲಾ ಬೇನೆಗಳಿಗೆ ಈ ನಮ್ಮ ಔಷಧವು ಇರುವುದು. ಮೊದಲ ದಿವಸ ಬೆಳಿಗ್ಗೆ ೧ ಗುಂಜಿ ಪ್ರಮಾಣ ಔಷಧ ಅರ್ಧತೊಲೆ ತುಪ್ಪದಲ್ಲಿ ತಕ್ಕೊಳ್ಳಬೇಕು ಮೊದಲ ದಿವಸ ಮಾತ್ರ ಮುಂಜಾನೆ ಸಂಜೆ ಎರಡು ಸಾರೆ ತಕ್ಕೊಳ್ಳಬೇಕು. ಮುಂದೆ ದರ ದಿವಸ ಬೆಳಗ್ಗೆ ಒಂದೇ ಸಾರೆ ೭ ದಿವಸ ಸೇವಿಸಬೇಕು. ಈ ಔಷಧವನ್ನು ಬೇಸಿಗೆಯಲ್ಲಿ ತುಪ್ಪದಲ್ಲಿ, ಥಂಡಿ ಮಳೆಗಾಲದಲ್ಲಿ ಜೇನತುಪ್ಪದಲ್ಲಿ ತಕ್ಕೊಳ್ಳಬೇಕು. ಪಥ್ಯ: ಹುಳಿಖಾರ, ಕಾಯಿಬಳಕಾಯಿ, ಒಳ್ಳೆಣ್ಣೆ ಬಿಡಬೇಕು.

ಡಾಟ್ಲಿ ಒಂದಕ್ಕೆ ೫ ರೂ. ಪೋಸ್ಟ ಚಾರ್ಜ ೮ ಆಣೆ

ಏಜೆಂಟರು:—ಗದಗ:—ಗದಗ ಫಾರ್ಮಸಿ, ಹುಬ್ಬಳ್ಳಿ:—ಹುಬ್ಬಳ್ಳಿ ಫಾರ್ಮಸಿ ಬಾಗಲಕೋಟಿ:-ಬಾಗಲಕೋಟಿ ಫಾರ್ಮಸಿ, ಧಾರವಾಡ:-ಧಾರವಾಡ ಫಾರ್ಮಸಿ, ದಾವಣಗೇರಿ: ದಾವಣಗೇರಿ ಪ್ರೆಸ್. ನಂಜುಡೇಶ್ವರ ಮೂರ್ತಿ ದಾವಣಗೇರಿ.

ಪತ್ರವ್ಯವಹಾರ ಮಾಡತಕ್ಕ ಮಾಲಕರ ವಿಳಾಸ

ರೇವಣಸಿದ್ಧಪ್ಪ ಹಾಲಪ್ಪ ದಾವಣಗೇರಿ,

ಆಯುರ್ವೇದ ಔಷಧಾಲಯ, ಗದಗ.

"ಗೋಪಾಲ ಭೇಷಜಾಶ್ರಮ" ಮಂಗಳೂರು.

(ಸ್ಥಾಪನೆ 1910)

ಸ್ಥಾಪಕರು:-ಆಯುರ್ವೇದ ಭೂಷಣ ಯಂ. ವಿ. ಶಾಸ್ತ್ರೀ,

ಬಾಣಂತಿಯರ ಸಲುವಾಗಿಯೇ ದೇಶ ಮತ್ತು ಪ್ರಕೃತದೇಹಸ್ಥಿತಿಯನ್ನು ನಿರ್ಣೈಸಿ ತಯಾರಿಸಲ್ಪಟ್ಟ ಅಮೋಘವಾದ ಮಧುರದ್ರವ ರಸಾಯನ. ಅಲ್ಪ ಮೌಲ್ಯದಿಂದ ಬಡವರಿಗೂ, ಭಾಗ್ಯಶಾಲಿಗಳಿಗೂ ಸುಲಭವಾಗಿರುವುದು.

ಇವರ ನವಜೀವಾತು ಎಂಬ ಸೂತಿಕಾ ರಸಾಯನ

ಹೆಚ್ಚಿನ ಮಾಹಿತಿಗೆ—ಡಾ| ಯಂ. ಸಿ. ಶಾಸ್ತ್ರೀ, ಯಲ್. ಐ.

ಕೊಡಿಯಾಲಬೈಲ ಪೋಸ್ಟು, (ಮಂಗಳೂರು)

ಸ್ಟಾಕಿಸ್ಟರು:—ಡಾ| ಬಿ. ಕೆ. ಶಿವರಾಮರಾವ್, ಕುಂಜಿಬೆಟ್ಟು, ಉಡುಪಿ.

— ಮಕ್ಕಳನ್ನು ಹಡೆಯುವುದು ಸಾಕು —

ಅಶಕ್ತ ಸ್ತ್ರೀಯರಿಗೆ **ಬರ್ಥ ಕಂಟ್ರೋಲ** ರೋಗ ಗ್ರಹಸ್ತ ಹೆಣ್ಣು ಮಕ್ಕಳಿಗೆ

ಏಳು ದಿವಸ ಈ ಮಾತ್ರೆಗಳನ್ನು ಸೇವನ ಮಾಡಿದರೆ ಮುಂದೆ ಖಂಡಿತವಾಗಿ ಮಕ್ಕಳಾಗುವದಿಲ್ಲ. ಸ್ತ್ರೀಯರು ಪ್ರತಿತಿಂಗಳು ಸರಿಯಾಗಿ ಮುಟ್ಟಾಗುತ್ತಾರೆ. ಅಲ್ಲದೆ ಸ್ತ್ರೀಯರ ಬಿಳೀ ಸೆರಗು, ಪ್ರದರರೋಗ, ಹೊಲಿಕುಟ್ಟು ಗುಣವಾಗಿ ಸ್ತ್ರೀಯು ಗರ್ಭಿಣಿಯಾಗುವದಿಲ್ಲ. ಈ ಔಷಧವನ್ನು ಸೇವಿಸುವ ಕ್ರಮ: ಪ್ರತಿದಿವಸ ಮುಂಜಾನೆ ೧ ಗುಳಿಗೆ ಮಧ್ಯಾಹ್ನಕ್ಕೆ ೧ ಗುಳಿಗೆ, ಸಂಜೆಗೆ ೧ ಗುಳಿಗೆಯಂತೆ ಊಟದ ಮೊದಲು ತಕ್ಕೊಳ್ಳಬೇಕು. ಏಳುದಿವಸ ಈ ಔಷಧವನ್ನು ಬಿಸಿನೀರಿನಲ್ಲಿ ಸೇವಿಸಬೇಕು.

ಪಥ್ಯ:—ಹರಮೀಪಲ್ಲಿ ಬಿಡಬೇಕು. ೭ ದಿವಸ ಸಂಪೂರ್ಣ ಔಷಧದ ಕಿಮ್ಮತ್ತು ರೂಪಾಯಿ 5—0—0. ಪೋಸ್ಟ ಚಾರ್ಜ ೧೨ ಆಣೆ.

ಮಾಲಕರು:—ಹಾಲಪ್ಪಾ ಫಕೀರಪ್ಪಾ ದಾವಣಗೇರಿ

ಆಯುರ್ವೇದ ಔಷಧಾಲಯ ಗದಗ-ಸಿಟಿ.

ಏಜಂಟರು:—ಹುಬ್ಬಳ್ಳಿ ಫಾರ್ಮಸಿ,—ಹುಬ್ಬಳ್ಳಿ, ಗದಗ, ಬಾಗಲಕೋಟಿ ಧಾರವಾಡ ವಿಜಾಪುರ—ಚಾನಪ್ಪ ಸಿದ್ಧಲಿಂಗಪ್ಪ ಧಾರವಾಡಕರ ವಿಜಾಪುರ ನಂಜುಡೇಶ್ವರ ಮೂರ್ತಿ ದಾವಣಗೇರಿ ದಾವಣಗೇರಿ:—ದಾವಣಗೇರಿ ಪ್ರೆಸ್ ... ಎಲ್ ... , ... , ಹಾವೇರಿ, ಬ್ಯಾಡಗಿ

EDITED, PRINTED & PUBLISHED BY K. H. SHETTY AT THE NAVAYUGA PRESS, UDIPI, S.INDIA

Regd. No M. 3610 | Estd. 1921 ಸ್ಥಾಪನೆ | 26—4—1951
LICENCE No. 31
Licensed to Post without Prepayment
31ನೇ ವರ್ಷ
Founder Sri A. B. Shetty,
Minister for Agriculture & Veterinary.

ವರ್ಷ ೩೦
ವಾರ ೪೪
NAVAYUGA
WEEKLY
POST BOX NO. 22
UDIPI, S. K.
Vol 31
No · 33

ಪಕ್ಷಗಳೂ-ನಾಯಕರೂ

ಒಬ್ಬರನ್ನೊಬ್ಬರು ಪ್ರೀತಿಸುವದಕ್ಕೂ ಜನಾನುರಾಗಕ್ಕೂ ವ್ಯತ್ಯಾಸವಿದೆ. ಜನಾನುರಾಗಕ್ಕೆ ಪಾತ್ರನಾಗಬೇಕಾದರೆ ವ್ಯಕ್ತಿಯು ಸ್ವಾರ್ಥರಹಿತನಾಗಿದ್ದುಕೊಂಡು ಸಾರ್ವಜನಿಕ ಹಿತಕಾರ್ಯಕ್ಕೆ ತನ್ನ ಜೀವನವನ್ನು ಮೀಸಲಾಗಿಟ್ಟವನಾಗಿರಬೇಕು. ತಾನು ತನ್ನದು ಎನ್ನುವ ಸಂಕುಚಿತ ಮನೋವೃತ್ತಿಯುಳ್ಳವ ಸಾರ್ವಜನಿಕರ ಪ್ರೀತಿಗೆ ಪಾತ್ರನಾಗಲಾರ.

ಹೀಗೆ ಸಾರ್ವಜನಿಕ ರಂಗದಲ್ಲಿ ಪ್ರಕಾಶಮಾನರಾದ ಧುರೀಣರು ನಮ್ಮಲ್ಲಿ ತುಂಬ ಜನ ಆಗಿಹೋದರು. ಈಗಲೂ ಒಬ್ಬರು ಇದ್ದಾರೆ. ಹಲವಾರು ಪಕ್ಷಪಂಗಡಗಳುಳ್ಳ ನಮ್ಮ ಪ್ರಾಂತದಲ್ಲಿ ಸಾರ್ವಜನಿಕ ಸೇವೆಗೆಂದು ದುಡಿಯುವ ಧುರೀಣರು ಬಹಳ ಇದ್ದಾರೆ. ಎಲ್ಲರೂ ದೇಶೋದ್ಧಾರದ ಸೊಲ್ಲನ್ನೇ ಹಾಡುತ್ತಾರೆ. ಆಳುವ ಸರಕಾರವನ್ನು ದೂರಿ ಮುಂಬರುವ ತಮ್ಮ ಸರಕಾರದಲ್ಲಿ ರಾಮ ರಾಜ್ಯವಾಗುತ್ತದೆ; ಸುಖಸಮೃದ್ಧಿಯುಂಟಾಗುತ್ತದೆ— ಹಾಲ್ಜೇನು ಸುರಿಯುತ್ತದೆ ಎನ್ನುತ್ತಾರೆ. ಎಲ್ಲ ಸಂಘ ಸಂಸ್ಥೆಗಳೂ ಇಂತಹ ಸುಂದರ ಚಿತ್ರವನ್ನು ಜನತೆಯ ಮುಂದಿಡುತ್ತವೆ. ಆದರೆ ಜನತೆ ಯಾವುದರ ಕುರಿತು ಆಸ್ಥೆ ವಹಿಸಬೇಕೆಂಬುದೇ ಇಂದಿನ ದೊಡ್ಡ ಸಮಸ್ಯೆ. ಯಾರಿಂದ ಸುಖ ಬಂದೀತೆನ್ನುವುದರಲ್ಲಿ ಇನ್ನೂ ನಂಬಿಕೆಯಿಲ್ಲ! ಆದರೆ ಎಂತಹವಾದಿಗಳಾದರೂ—ಎಂತಹ ನಿಷ್ಠಾವಂತರಾದರೂ— ತಮ್ಮ ಹೃದಯಸಾಕ್ಷಿಯನ್ನು ಹೊಂದಿಕೊಂಡು ತಮ್ಮ ಮೆಚ್ಚಿನ ನಾಯಕನಾರೆಂದು ನಿರ್ಧರಿಸದೇ ಇಲ್ಲ. ಎಷ್ಟೋ ಬಾರಿ ಪಕ್ಷ ಪಂಗಡಗಳ ನಾಯಕನ ಮೇಲೆ ಮೇಲೆ ವಿಶ್ವಾಸ—ಭಕ್ತಿ ಪ್ರದರ್ಶನ ಮಾಡಿ, ಪಕ್ಷಕ್ಕೆ ವಿರೋಧ ಮಾಡುವ ಪ್ರಸಂಗಗಳನ್ನು ಕೇಳುತ್ತೇವೆ. ಪಕ್ಷ—ಧ್ಯೇಯಗಳು ಸಾಮಾನ್ಯವಾಗಿದ್ದು ಅದರ ಸೂತ್ರವನ್ನು ಹಿಡಿದು ನಡೆಯುವವನ ವ್ಯಕ್ತಿತ್ವವಾಗಲಿ ಕ್ರಿಯಾಶೀಲತ್ವದ ಮೇಲೆ ಜನಾನುರಾಗ ಪ್ರೀತಿ-ವಿಶ್ವಾಸ-ತ್ಯಾಗ ಮನೋವೃತ್ತಿಯ ಬುದ್ಧಿ ಹುಟ್ಟುತ್ತದೆ. ಇಂದು ಹುಟ್ಟುತ್ತಿರುವ ಸಮಸ್ಯೆಗಳ ನಿವಾರಣಕಾರರೆಂದರೆ ಸ್ವಾರ್ಥವನ್ನು ಸಾಧಿಸುವ ದುರುದ್ದೇಶವನ್ನಿಟ್ಟುಕೊಂಡ ಧುರೀಣರು. ಜನತೆಯ ಒಲವು ಯಾವ ಕಡೆಗೆ ವಾಲುತ್ತದೋ ಆ ಕಡೆಗೆ ವಾಲುವದು ಬಳಿ ಮನೋವೃತ್ತಿಯು ನಾಯಕತ್ವಕ್ಕಿಂದು ನಮ್ಮಲ್ಲಿ ಹೆಚ್ಚಾಗಿದೆ. ಹಿಂದಿನಿಂದ ಬಂದುದನ್ನು ಸ್ಥಿರಗೊಳಿಸುವ ಮನಸ್ಸಿಲ್ಲದೆ ಹೂವಿಂದಹೂವಿಗೆ ಹಾರುವ ನೊಣದ ನಾಯಕರುಗಳಲ್ಲಿ ಕಾಣುತ್ತಿವೆ. ಈ ಎಲ್ಲ ಕುರುಹುಗಳ ಅರ್ಥವೇನು? ಅಂತಹ ಜನಕ್ಕೆ ತಮ್ಮ ಸ್ವಾರ್ಥಕ್ಕೆ—ಸ್ವಕಾರ್ಯ ವ್ಯಾಪಕತೆಗೆ ಅಲ್ಲಿ ಎಡೆಯಿಲ್ಲವೆಂಬುದೇ. ಬ್ರಿಟಿಷರಾಳುತ್ತಿರುವಾಗ ಎಲ್ಲರೂ ಕಾಂಗ್ರೆಸ್ಸಿಗರಾದರು. ಕಾಂಗ್ರೆಸ್ಸು ಆಳುತ್ತಿರುವಾಗ—ಸೋಶಾಲಿಸ್ಟೋ--ಕಮ್ಯೂನಿಸ್ಟೋ ಆಗುವ ಇಚ್ಛೆಯನ್ನು ವ್ಯಕ್ತಪಡಿಸುತ್ತಲಿದ್ದಾರೆ. ಹೀಗಾಗಲಿಕ್ಕೆ ಎರಡು ಕಾರಣ: ಒಂದನೆಯದಾಗಿ ಸ್ವಾರ್ಥಸಾಧಿಸುವದು. ಎರಡನೆಯದಾಗಿ ಆಳುವ ಪಕ್ಷದಲ್ಲಿ ಪಕ್ಷಗಳಧ್ಯೇಯ ಧೋರಣೆಗಳು ಸಾಯುತ್ತಿರುವುದು. ಈ ಎರಡು ಕಾರಣಗಳಿಂದ ನಮ್ಮ ರಾಜಕೀಯರಂಗ ಕಲುಷಿತವಾಗಿದೆ; ಅರಾಜಕತೆಯ ಕಂಡು ಬರುತ್ತಲಿದೆ.

ಕಾಂಗ್ರೆಸ್ಸಿನ ಉಚ್ಚಾದರ್ಶಗಳು ನಮ್ಮ ಬದುಕನ್ನು ಸುಗಮವಾಗಿಸಬಲ್ಲವೆಂಬುದನ್ನರಿತೇ ಗಾಂಧೀಜಿಯ ಭಕ್ತರಾದೆವು. ಆದರಿಂದು ಅದರಲ್ಲಿ ಸುಖವಿಲ್ಲವೆಂದೋ--ಅಥವಾ ಉಳಿದ ಪಕ್ಷಗಳ ತತ್ವದಿಂದ ಸುಖ ಸಿಕ್ಕೀತೆನ್ನುವ ಭ್ರಾಮಕ ಕಲ್ಪನೆಯಿಂದಲೂ ಕಾಂಗ್ರೆಸ್ಸನ್ನು ಮರೆಯುತ್ತಲಿದ್ದೇವೆ. ನಮ್ಮ ದೇಶಕ್ಕೊಪ್ಪುವ ರಾಜಕೀಯ ನೀತಿಯನ್ನು ಮರೆತು ಕ್ರಾಂತಿಯ ರೂಪದ ಆಡಳಿತ ಬೇಕೆನ್ನುತ್ತೇವೆ. ರಷ್ಯಾದ ಆದರ್ಶ ನಮ್ಮದಾಗಲೆನ್ನುತ್ತೇವೆ. ಈ ಎಲ್ಲ ಬಯಕೆಗಳು ಸ್ವಾತಂತ್ರ್ಯ ಸಿಕ್ಕ ಮೇಲೆ ಇನ್ನಷ್ಟು ಬೆಳೆದುವು. ಅತ್ಯವಸರ ಬದಲಾವಣೆಯಿಂದ ಜನತೆಯನ್ನು ಬೇಡಾದ ಕಡೆಗೆಳೆಯುತ್ತಿರಲು ಯಾರು ಕಾರಣ? ಎಂಬುದಕ್ಕೆ ಮೊದಲು ಹೇಳಿದ ಎರಡು ಕಾರಣಗಳೇ ಉತ್ತರವಾಗಿವೆ.

ಜನತೆ ದಾರಿತಪ್ಪಿತೆಂದು ದೂರುವದು ಯೋಗ್ಯವಲ್ಲ; ಧುರೀಣರಲ್ಲಿ ತತ್ವಶೂನ್ಯವಾಗಿ ವರ್ತಿಸುವ ಸ್ವೇಚ್ಛಾನುವೃತ್ತಿ ಬೆಳೆದುದರಿಂದಲೇ ಹೀಗಾಯಿತು. ಬೇರೊಂದು ಪಕ್ಷ ಬರಲೆಂದು ಹಾರೈಸುವಲ್ಲಿ—ಬೆಂಬಲವನ್ನೀಯುವಲ್ಲಿ— ಆ ಪಕ್ಷ ಬೇಕೆನ್ನುವ ಆತುರಕ್ಕಿಂತ ಈ ಪಕ್ಷ ಸಾಕೆನ್ನುವ ತಾತ್ಸಾರವೇ ಜಾಸ್ತಿ.

ಪಕ್ಷ ಪಂಗಡಗಳು ತಮ್ಮ ತತ್ವಗಳ ಮೂಲಕ ಜನತೆಯೊಡನಿಟ್ಟುಕೊಂಡಿರುವ ಪ್ರಾಮಾಣಿಕ ವರ್ತನೆಯೊಂದೇ ಅವುಗಳನ್ನು ರಕ್ಷಿಸಬಲ್ಲವು. ಮೂರು ನಾಲ್ಕು ವರ್ಷಗಳ ಹಿಂದೆ ಕಾಂಗ್ರೆಸ್ ಜನಾನುರಾಗವನ್ನು ಗಳಿಸಿಕೊಂಡಷ್ಟು- ಜನತೆಯನ್ನು ಪ್ರತಿನಿಧಿಸಿದಷ್ಟು ಇಂದು ಪ್ರತಿನಿಧಿಸುತ್ತಿಲ್ಲ. ಆಗ ಗಾಂಧೀಜೀ ಇದ್ದರು. ಅವರ ಆದೇಶಕ್ಕೆ ಭಾರತ ಜನಾಂಗ ತಲೆಬಾಗುತ್ತಿತ್ತು. ತನ್ನ ಅಚಾತುರ್ಯವನ್ನು ತಿದ್ದಿಕೊಳ್ಳುತ್ತಿತ್ತು. ಏಕೆ? ಗಾಂಧೀಜೀ ತಪ್ಪಿಗಳಿಗಾಗಿ- ಆದರ್ಶಕ್ಕಾಗಿ—ಜನತೆಗಾಗಿ— ತನ್ನ ಜೀವನವನ್ನರ್ಪಿಸಿದವರು. ನಿಷ್ಕಾಮಪ್ರೇಮಿಗಳಾಗಿದ್ದರು. ಇಡಿಯ ದೇಶದ ಸುಖದುಃಖಗಳನ್ನು ತನ್ನದನ್ನಾಗಿ ತಿಳಿದುಕೊಂಡಿದ್ದರು. ಆತ್ಮಿಕ ಶಕ್ತಿಯ ಬಲವಿನಿಂದ ಮಾನವ ಕೋಟಿಯನ್ನೆ ಪ್ರೇಮಪಾಶದಿಂದ ಗೆದ್ದುಕೊಂಡಿದ್ದರು! ಅವರ ನಾಯಕತ್ವದಲ್ಲಿ ಕಾಂಗ್ರೆಸು ಪರಮಪೂಜ್ಯ ಸಂಸ್ಥೆಯೆಂದು ಜನತೆ ಭಾವಿಸಿಕೊಂಡಿತ್ತು. ಅದರಿಂದು ಪರಿಸ್ಥಿತಿ ಹಿಂದುಮುಂದಾಗಿದೆ. ಅಂದಿಗೂ ಇಂದಿಗೂ ಇರುವ ಹೋಲಿಕೆಯನ್ನು ನೋಡಿದರೆ ಪಕ್ಷದ ನಾಯಕನಲ್ಲಿ ಪ್ರಾಮಾಣಿಕತನ—ನಿಸ್ಸೀಮ ದೇಶಸೇವಾ ಕಾಂಕ್ಷೆ— ಸಾರ್ವಜನಿಕ ಪ್ರೀತಿ ಇವಿಷ್ಟು ಇರಬೇಕೆಂದು ಮನವರಿಕೆಯಾಗುವುದಿಲ್ಲವೇ? ಕಾಂಗ್ರೆಸ್ಸಿನ ಉಚ್ಚಾದರ್ಶಗಳು— ನೈತಿಕತೆಯು ಕ್ಷಯಿಸುತ್ತಿರುವುದು ಅಂತಹ ನಾಯಕತ್ವದ ಅಭಾವದಿಂದಲೆಂದು ಬೇರೆ ಹೇಳಬೇಕಾಗಿಲ್ಲ. ಪ್ರಾಮಾಣಿಕತನ—ಕರ್ತವ್ಯನಿಷ್ಠೆ ನಾಯಕನಾದವನಲ್ಲಿ ಇಲ್ಲದೆ ಯಾವ ತತ್ವವೂ ಬದುಕಲಾರದು. ಜನಾನುರಾಗವನ್ನು ಗಳಿಸುವಲ್ಲಿ ಹಣ-ವಿದ್ಯೆಗಿಂತಲೂ ಪ್ರಾಮಾಣಿಕತನ ಮುಖ್ಯವಾಗಿದೆ. ಈ ಹೊತ್ತು ಅಂತಹ ಲೋಕಪ್ರೀತಿಯನ್ನು ಗಳಿಸಿಕೊಂಡ ಹಲವು ಕಾಂಗ್ರೆಸಿಗರು ಜನಾಂಗದೊಡನೆಯೂ ಸರಕಾರದೊಡನೆಯೂ ಇರುವದರಿಂದಲೇ ಇನ್ನೂ ಸಾರ್ವಜನಿಕರಿಗೆ ಅದರಲ್ಲಿ ವಿಶ್ವಾಸ ಉಳಿಯುವಂತಾಗಿದೆ. ಕಾಂಗ್ರೆಸ್ಸಿನ ಅಮರ ಸಂದೇಶವನ್ನು ಸಾರಬೇಕಾದರೆ ನಮ್ಮ ಧುರೀಣ ಕಳೆದುಹೋದ ದಿನಗಳನ್ನು ನೆನೆದುಕೊಳ್ಳಬೇಕು.

ಗಾಂಧೀಜಿಯವ್ರು 'ತನ್ನ ಮಗ'ನೆಂದು ಕರೆದ ಪಂಡಿತ ನೆಹರೂ ನಮಗೆಲ್ಲ ಆಕರ್ಷಣವಾಗಿದ್ದಾರೆ. ನೆಹರೂರವರ ಅಂತರಂಗದ ಧೋರಣೆಯ ಮೇಲೆ ನಮ್ಮಲ್ಲಿ ಹಲವರಿಗೆ ಮತಭೇದವಿದ್ದರೂ— ಜಾತೀಯವಾದಿಗಳ ಶತ್ರುವೆನಿಸಿದ್ದರೂ—ಅವರ ನಿಃಸ್ವಾರ್ಥ ದೇಶಸೇವೆಯ ಬಗ್ಗೆ ಎಲ್ಲ

ಪ್ರಧಾನ ಕಾರ್ಯಾಲಯ: ಉಡುಪಿ. ಸ್ಥಾಪನೆ: ೧೯೩೫

ದಿ ಕೆನರಾ ಮ್ಯೂಚುವಲ್
ಎಶ್ಶೂರೆನ್ಸ್ ಕಂಪೆನಿ, ಲಿಮಿಟೆಡ್,
ಇದುವೇ
ಪಾಲಿಸಿದಾರರ ನಂಬಿಕೆ ಹೆಚ್ಚಿಸುವ ಹೆಸರು
ಅಲ್ಲದೆ ಸ್ಥಾಪಿತವಾದಂದಿನಿಂದಲೂ
ಲಾಭ (ಬೋನಸ್) ಹಂಚಿದ ಕಂಪೆನಿ.

The Canara Mutual Assurance Co. Ltd.
H. O. UDIPI. (SOUTH INDIA) ESTD 1935.

ಶಿಕ್ಷಣದಲ್ಲಿ ಹೊಸ ದಾರಿ.

ಲೇಖಕರು: ಕೆ. ಗುರುರಾಜ ಉಡುಪ, ಬಿ. ಎಸ್‌ಸಿ

(ಕಳೆದ ಸಂಚಿಕೆಯಿಂದ)

ಪ್ರೌಢ ಶಿಕ್ಷಣದಲ್ಲಿಯಂತೂ (High School Education) ಹೆಚ್ಚಿನ ಪ್ರಗತಿಯು ನಮಗೆ ತೋರುತ್ತ ಬಂದಿದೆಯಾದರೂ ಇನ್ನೂ ಎಷ್ಟೋ ಆಗತಕ್ಕವುಗಳಿವೆ. ಇದರಲ್ಲೂ ಶಿಕ್ಷಣ ಕ್ರಮದಲ್ಲಿ ಸ್ವತಂತ್ರ ಜೀವನೋಪಾಯವನ್ನು ಕೈಕೊಳ್ಳುವವರು, ಕೈಗಾರಿಕೆ ಉದ್ಯಮಗಳ ಅಭ್ಯಾಸ ಮಾಡುವವರೆಂದು ವಿವಿಧ ವಿಭಾಗಗಳಿಗೆ ವಿವಿಧ ರೀತಿಯ ಶಿಕ್ಷಣ ದೊರಕಿಸುವ ಯೋಜನೆಯೂ ಕಾರ್ಯರೂಪಕ್ಕೆ ಬರುತ್ತಾ ಇದೆ. ಈ ಹಂತದಲ್ಲಿ ಆರ್ಥಿಕ ಕ್ಷೋಭದಷ್ಟು ಮಂದಿ ಅಭ್ಯಾಸವನ್ನು ನಿಲ್ಲಿಸಿ ಉದ್ಯೋಗಕ್ಕಾಗಿ ದೂರ ದೂರ ಸೇರುವವರೇ. ಅಂತಹವರನ್ನು ಊರಲ್ಲಿಯೇ ನಿಲ್ಲಿಸಿ ಹೆಚ್ಚಿನ ಪ್ರಯೋಜನವನ್ನು ಪಡೆಯಲಿಕ್ಕಾಗಿ ಆಧುನಿಕ ಕೃಷಿ ಕ್ಷೇತ್ರಗಳು, ಸಣ್ಣ ಪುಟ್ಟ ಉದ್ಯಮಗಳೂ ಆರಂಭವಾದರೆ ಒಂದೇ ಸವನೆ ನಗರಗಳಿಗೆ ನುಗ್ಗುವ ಜನಸಂಖ್ಯೆ ಕಡಿಮೆಯಾಗಿ ನಗರದ ಆರೋಗ್ಯವೂ, ನಗರವಾಸಿಗಳ ಸುಖವೂ ಹೆಚ್ಚುತ್ತ ಹೋಗಬಹುದಾಗಿದೆ. ಅದೂ ಅಲ್ಲದೆ ಈ ಹಂತದಲ್ಲಿ ಪಾಶ್ಚಾತ್ಯ ದೇಶಗಳಂತೆ ಯುಕ್ತ ಸಂದರ್ಭಗಳಲ್ಲಿ ದೃಶ್ಯಾತ್ಮಕ ವಿದ್ಯಾಭ್ಯಾಸ (Visual education) ಕ್ರಿಯಾತ್ಮಕ ವಿದ್ಯಾಭ್ಯಾಸ ಕ್ರಮವನ್ನು ಅನುಸರಿಸಿದಲ್ಲಿ ಹೆಚ್ಚಿನ ಪ್ರಯೋಜನ ಲಾಭವನ್ನು ಪಡೆಯಬಹುದು. ಉದಾಹರಣೆಗೆ ವಿಜ್ಞಾನದಲ್ಲಿ ರೋಗಾಣುಗಳ ಪಾಠವನ್ನು ಮಾಡುವಾಗ ಅವುಗಳ ರೂಪ, ದೇಹವನ್ನು ಅವು ಪ್ರವೇಶಿಸುವ ರೀತಿ ಮೊದಲಾದವನ್ನು ಬಹು ಸುಲಭವಾಗಿ ಚಲನಚಿತ್ರಗಳ ಮೂಲಕವಾಗಲೀ ಮಾಯಾಲಾಂದ್ರಗಳ ಉಪಯೋಗದಿಂದಾಗಲೀ ವಿವರಿಸುವುದು ಅತಿ ಸುಲಭವಲ್ಲದೆ ವಿಷಯವು ಚೆನ್ನಾಗಿ ಮನದಟ್ಟಾಗುವುದು. ಹಾಗೆಯೇ ಆಧುನಿಕ ಕೃಷಿಯು ಕ್ರಮ ಪಾಶ್ಚಾತ್ಯ ರಾಷ್ಟ್ರಗಳಲ್ಲಿ ಹೇಗಾಗುವುದೆಂಬುದನ್ನು ಅಲ್ಲಲ್ಲಿನ ಚಲನಚಿತ್ರಗಳ ಪ್ರದರ್ಶನದ ಮೂಲಕ ಪ್ರದರ್ಶಿಸಬಹುದಾಗಿದೆ. ಚರಿತ್ರೆಯ ಪಾಠದಲ್ಲಿ ಪ್ರಾಚೀನ ಸ್ಮಾರಕಗಳು, ಸುಂದರ ಕಟ್ಟಡಗಳು ಮೊದಲಾದವನ್ನು ತೋರಿಸಬಹುದು. ಈ ತೆರನ ಸಣ್ಣ ಯೋಜನೆಯೊಂದು ನಿಧಾನವಾಗಿ ನಮ್ಮ ಶಾಲೆಗಳಲ್ಲೂ ಬಳಕೆಯಲ್ಲಿ ಬರುತ್ತಾ ಇದೆ. ಇದರ ವೇಗ ಇನ್ನಷ್ಟು ಹೆಚ್ಚಬೇಕು. ಪ್ರತಿ ಶಾಲೆಯೊಂದಕ್ಕೆ ಇಂತಹ ಚಲನಚಿತ್ರ ಯಂತ್ರವಾಗಲೀ ಮಾಯಾಲಾಂದ್ರವಾಗಲೀ ಇರಲೇಬೇಕು. ಇದೇ ರೀತಿ ಇನ್ನೊಂದು ರೇಡಿಯೋ ಸೆಟ್. ಬ್ರಾಡ್ ಕಾಸ್ಟಿಂಗ್ ಸ್ಟೇಶನ್‌ಗಳಲ್ಲಿ ವಿದ್ಯಾರ್ಥಿಗಳಿಗಾಗಿ ಸಾಮಾನ್ಯ ವಿಷಯಗಳನ್ನು ಪ್ರಸಾರ ಮಾಡುವ ಕಾರ್ಯಕ್ರಮವನ್ನು ಕೈಕೊಳ್ಳಬಹುದು. ಉದಾಹರಣೆಗೆ ಮದ್ರಾಸು ಪ್ರಾಂತದ ಮೆಟ್ರಿಕ್ ತರಗತಿಯ ವಿದ್ಯಾರ್ಥಿಗಳಿಗೆ ಅವರು ಪರೀಕ್ಷೆಯಲ್ಲಿ ವ್ಯವಹರಿಸುವ ರೀತಿ, ಮುಖ್ಯ ಪರೀಕ್ಷೆಯ ವಿಷಯಗಳನ್ನೂ ಒಂದೆಡೆಯಿಂದಲೇ ಆಂಗ್ಲ ಭಾಷೆಯಲ್ಲಿಯೇ ಚರ್ಚಿಸುತ್ತ ಹೋಗಬಹುದು ಹಾಗೆಯೇ ಇನ್ನಿತರ ವಿಷಯಗಳನ್ನೂ ಚರ್ಚಿಸಬಹುದು ಇದೇ ಕ್ರಿಯಾತ್ಮಕ ವಿದ್ಯಾಭ್ಯಾಸ.

ಕಾಲೇಜು ಶಿಕ್ಷಣದಲ್ಲಿ ಆಳ ಅಭ್ಯಾಸವು ಸಾಗುತ್ತ ಹೋಗುವುದು ಅಲ್ಲಿ ಪ್ರತಿಯೊಂದು ವಿಭಾಗದ ಸವಿವರ ವೃತ್ತಾಂತವನ್ನು ಗಳಿಸಬಹುದು. ಇಲ್ಲಿ ಹೆಚ್ಚಿನ ಪ್ರಾಮುಖ್ಯತೆಯನ್ನು ಸಂಶೋಧನಾ ದೃಷ್ಟಿಯಿಂದ ಅಭ್ಯಾಸವನ್ನು ಮುಂದುವರಿಸುವಂತಾಗಬೇಕು. ಸಾಹಿತ್ಯದಲ್ಲಿ ವಿಮರ್ಶಾತ್ಮಕ ಅಭ್ಯಾಸ ಇಲ್ಲಿಯಂತೂ ದೃಶ್ಯಾತ್ಮಕ ಹಾಗೂ ಕ್ರಿಯಾತ್ಮಕ ಅಭ್ಯಾಸಗಳ ಅತ್ಯಧಿಕ ಪ್ರಯೋಜನವನ್ನು ಪಡೆಯಬೇಕಾಗಿದೆ. ಇಲ್ಲಿಯೇ ದೇಶದ ನಾಯಕರ ತರಬೇತಿಯೂ ಆಗಬೇಕಾಗಿದೆ. ಅದಕ್ಕಾಗಿ ಪ್ರಜಾಪ್ರಭುತ್ವ ತತ್ವಗಳು, ಸಾಮಾನ್ಯ ಅರ್ಥಶಾಸ್ತ್ರ, ರಾಜಕಾರಣ ಇವೆಲ್ಲವುಗಳನ್ನೂ ಎಲ್ಲರೂ ಕಡ್ಡಾಯವಾಗಿ ಅಭ್ಯಾಸ ಮಾಡುವಂತಿರಬೇಕು.

ಕಾಲೇಜು ವಿದ್ಯಾಭ್ಯಾಸದಲ್ಲಿ ಕಂಡುಬರುವ ಇನ್ನೊಂದು ಮುಖ್ಯತೆಯೆಂದರೆ ವಿದ್ಯಾರ್ಥಿಗಳಿಗೆ ಸಮಾನಾದ ಅವಕಾಶದ (Seat) ಅಭಾವ. ತನಗೆ ಅಭಿರುಚಿ ಇರುವ ವಿಭಾಗದಲ್ಲಿಯೇ ಅಭ್ಯಾಸವನ್ನು ಮುಂದರಿಸುವುದರಿಂದ ಆ ವಿಭಾಗದಲ್ಲಿ ಸ್ವಾಭಾವಿಕವಾಗಿ ಅತ ನೈಪುಣ್ಯತೆಯನ್ನು ಸುಲಭದಲ್ಲಿ ಪಡೆಯಬಹುದಾಗಿದೆ. ಆದರೆ ಸರಿಯಾದ ಸಂದರ್ಭವು ಸಿಗದೆ ಅತಿ ಒತ್ತಾಯಪೂರ್ವಕ ಅಭ್ಯಾಸ ಮಾಡಿದರೆ ಹೇಗಾದೀತು? ವೈದ್ಯಕೀಯ ವಿಭಾಗಲ್ಲಿ ಅಭಿರುಚಿ ಇರುವ ವ್ಯಕ್ತಿ ಕಾಲೇಜಿನಿಗನಾಗುವ ಸಂದರ್ಭ ಬಂದರೆ ಆ ವಿಭಾಗದ ಒಬ್ಬ ಮೇಧಾವಿಯೇ ಕಡಿಮೆ ಆದಂತಾಗಿಲ್ಲವೆ? ಈ ಒತ್ತಾಯಕ್ಕೆ ಮುಖ್ಯ ಕಾರಣ ಕಾಲೇಜಿನಲ್ಲಿ ಸಾಕಷ್ಟು ಸ್ಥಳ ಅವಕಾಶಗಳಿಲ್ಲದುದು. ಹಾಗಾಗಿ ದೇಶದ ಸ್ವಾಭಾವಿಕ ಶಕ್ತಿಯೇ ಕುಡಿಯಲ್ಲಿಯೇ ಮುರಿದಂತಾಗುವುದು. ಕಾಲೇಜುಗಳ ಸಂಖ್ಯೆ ಬೆಳೆಯುತ್ತ ಹೋಗಬೇಕು. ಯಾವ ವಿಭಾಗದಲ್ಲಿ ಅಭ್ಯಾಸ ಮಾಡುವವನಿಗೂ ಸಮನಾಗಿ ಅವಕಾಶ ಸಿಗುವಂತಾಗಬೇಕು. ಇಲ್ಲದಿದ್ದಲ್ಲಿ ಆ G. O. ಈ G. O. ಎಂದು ಹೈಕೋರ್ಟ್, ಸುಪ್ರೀಮ್ ಕೋರ್ಟುಗಳಲ್ಲಿ ವೃಥಾ ಜಗಳಾಡಿ ವೈಮನಸ್ಸನ್ನು ಹೆಚ್ಚಿಸುವುದಷ್ಟೇ ಆದೀತು.

ಇದಕ್ಕಿಂತಲೂ ಮುಂದಿನ ಅಭ್ಯಾಸದಲ್ಲಿ (Post Graduate courses) ಪೂರ್ಣವಾಗಿ ಸಂಶೋಧನೆಗೇ ಅವಕಾಶ ಕೊಡಬೇಕಾಗಿದೆ. ಇಂತಹ ಸಂಶೋಧನ ಕ್ಷೇತ್ರಗಳ ಮೇಲ್ವಿಚಾರವನ್ನು ಕೇಂದ್ರ ಸರಕಾರವೇ ಕೈಗೊಳ್ಳಬೇಕಾಗಿದೆ. ಉದ್ಯಮ ವಿಭಾಗ, ಕೃಷಿ ವಿಭಾಗ, ಹವಾವಿಭಾಗ ಹೀಗೆ ವಿವಿಧರಂಗಗಳಲ್ಲಿ ನಮ್ಮದೇ ಆದ ಪ್ರಗತಿಯನ್ನು ನಾವು ಸಾಧಿಸಬೇಕಾಗಿದೆ. ಇಂತಹ ಪ್ರಯೋಗ ಶಾಲೆಗಳಲ್ಲಿ. ಮೈಸೂರಿನಲ್ಲಿರುವ ಆಹಾರದ ಸಂಶೋಧನಾಲಯ (Food Technological Institute) ಬೆಂಗಳೂರಿನ Indian Institute of Science, ಕಾನ್ಪುರದ Sugar Technological Institute, ಇದಕ್ಕೆ ಕೆಲವು ಉದಾಹರಣೆಗಳು. ಇಂತಹವು ಇನ್ನಷ್ಟು ಹೆಚ್ಚು ಬೆಳೆದು ಬರುವಂತಾದರೆ ವಿಜ್ಞಾನ ಕ್ಷೇತ್ರದಲ್ಲಿ ನಮ್ಮದೇ ಆದ ವೈಶಿಷ್ಟ್ಯವನ್ನು ನಾವು ಪ್ರದರ್ಶಿಸಬಹುದಾಗಿದೆ.

ಭಾರತೀಯರೆಂದರೆ ಬರಿಯ ತತ್ವಜ್ಞಾನಿಗಳು ಮಾತ್ರವಲ್ಲ, ಶುದ್ಧ ವ್ಯವಹಾರವಾದಿಗಳೂ ಕಾರ್ಯದಕ್ಷರೂ ಆಗಿದ್ದಾರೆಂಬುದನ್ನು ಜಗತ್ತಿಗೆ ನಾವು ಎತ್ತಿ ತೋರಿಸಬೇಕಾದರೆ ನಮ್ಮ ಶಿಕ್ಷಣ ರಂಗದಲ್ಲಿ ಯೋಗ್ಯ ವ್ಯವಸ್ಥೆಯು ಆಗಬೇಕಾಗಿದೆ. ಉತ್ತಮ ಯೋಜನೆಯಂತೆ ನಡೆಯುವುದವಶ್ಯಕ. La Carriere auverte aux talents ಎಂಬುದು ಜರ್ಮನರ ನಿಶ್ಚಿತ ಸಿದ್ಧಾಂತ. ಅರ್ಥಾತ್ ಪ್ರಾಧ್ಯಾಪಕನಾಗುವ ಯೋಗ್ಯತೆಯು ಪ್ರತಿಯೊಬ್ಬನಲ್ಲೂ ಇದ್ದೇ ಇದೆ. ಅದನ್ನು ಬೆಳೆಸಿಕೊಂಡು ಹೋಗುವುದು ಮಾತ್ರ ವ್ಯಕ್ತಿಯ ಪಾಲಿದ್ದಾಗಿದೆ. "Every soldier marches with Commanders gown in his knapsack" ಎಂಬ ತತ್ವವೇ ನೆಪೋಲಿಯನನ್ನು ಅರ್ಧ ಯೂರೋಪಿನ ಅಧಿಪತಿಯನ್ನಾಗಿ ಮಾಡಿತು. ಹಾಗಾಗಿ ಕೆಳಮಟ್ಟದ ಅಭ್ಯಾಸದಲ್ಲಿ ಕೈಗಾರಿಕೆಗೆ ಹೆಚ್ಚು ಪ್ರಾಮುಖ್ಯತೆಯನ್ನೂ ಮೇಲ್ಮಟ್ಟದ್ದರಲ್ಲಿ ಸಂಶೋಧನೆಗೆ ಹೆಚ್ಚು ಪ್ರಾಮುಖ್ಯತೆಯನ್ನೂ ಕೊಡುತ್ತ ಹೋದಲ್ಲಿ ನಮ್ಮ ಶಿಕ್ಷಣ ವಿಧಾನವು ಆದರ್ಶವಾಗುವುದರಲ್ಲಿ ಸಂದೇಹವಿಲ್ಲ.

ರಿಗೂ ಸದಭಿಮಾನಗಳಿವೆ. ಪರಂಪರೆಗಳಲ್ಲಿ ಹಿಂದೂದೇಶದ ಖ್ಯಾತಿ ಮತ್ತು ಅಭ್ಯುದಯದ ಕಲ್ಪನೆಯಿರುವದಾದರೆ ಅದು ನೆಹ್ರೂ ವ್ಯಕ್ತಿತ್ವದಿಂದ! 'ಗಾಂಧೀಜಿ ಗುಂಡಿನಿಂದ ಮಡಿದರೆಂಬ ಸುದ್ದಿಯನ್ನು ರೇಡಿಯೋ ಸಾರಿದಾಗ ಅನೇಕರಿಯಲ್ಲಿಯ ಜನ ನಂಬಲಿಲ್ಲ. "ನೆಹ್ರೂ ಇರುವಾಗ ಅಂತಹ ಪ್ರಮಾದ ನಡೆಯದು" ಎಂದರು ಪಲ್‌ರ್ಬರ್! ಈಗಲೂ ಭಾರತ ಸರಕಾರವನ್ನು 'ನೆಹ್ರೂ ಸರಕಾರ' ವೆಂದು ಕರೆಯುವುದುಂಟು! 'ಹಿಟ್ಲರ್ ಸರಕಾರ' 'ಸ್ಟಾಲಿನ್ ಸರಕಾರ' 'ಮುಸ್ಸೊಲೋನಿ ಸರಕಾರ' ಎಂದಹಾಗಲ್ಲ! ಅಲ್ಲಿ ನಿರಂಕುಶ ಪ್ರಭುತ್ವದ ಧ್ವನಿಯಿದೆ. ಆದರೆ 'ನೆಹ್ರೂ ಸರಕಾರ' ಎಂದಾಗ 'ನಾವೆಲ್ಲವೊಂದು' ಎನ್ನುವ ಐಕ್ಯತೆಯ ಭಾವಕಾಣುತ್ತದೆ. ನೆಹ್ರೂ ಲೋಕಪ್ರಿಯ ನಾಯಕ! ಗಾಂಧೀಜಿಯನ್ನು ನಾವೆಲ್ಲ 'ತಂದೆ'ಎಂದು ಕರೆದೆವು. ಗಾಂಧೀಜಿ ನೆಹರೂರವರನ್ನು ತನ್ನ ಮಗನೆಂದರು. ಗಾಂಧೀಜಿ ತಮ್ಮನ್ನಗಲಿ ಹೋಗಿಬಿಟ್ಟರು. ಉತ್ತರಾಧಿಕಾರಿಯಾಗಿ ನೆಹ್ರೂ ನಿಂತಿದ್ದಾರೆ. ಗಾಂಧೀಜೀಯ ತತ್ವದ ಪ್ರತಿಮೂರ್ತಿ ಅವರು. ಅಂತಲೇ ನಮಗೆ ನೆಹ್ರೂ ಮೇಲೆ ಎಣ್ಣಿಲ್ಲದ ಆದರಾಭಿಮಾನಗಳು! ನಾವು ನಮ್ಮ ನೆಚ್ಚಿನ ನಾಯಕನ ತುಂಬು ಜೀವನದ ಈ ಕಾಲದಲ್ಲಿ ಸಂಪೂರ್ಣ ಸಹಕಾರವನ್ನು ನೀಡಿದರೆ ನಾವು ಸತ್ಪ್ರಜೆಗಳ ಕರ್ತವ್ಯವನ್ನು ಮಾಡಿದಂತೆಯೇ ಆಯಿತು! ಸದಾ ಲೋಕದ ಸುಖ ಚಿಂತಿಸುವ ಈ ರಾಜಕಾರಣಿಗೆ ನಾವು ಅಷ್ಟನ್ನಾದರೂ ಮಾಡಬಹುದಲ್ಲವೇ?

ಬೇಂಕಿಂಗ್ ಸಂಬಂಧದ ಎಲ್ಲಾ ಸಮಸ್ಯೆಗಳಿಗೆ

ದಿ ವಿಜಯಾ ಬೇಂಕ್ ಲಿಮಿಟೆಡ್

ಇವರ ಸಲಹೆ ಕೇಳಿರಿ

ಹೆಡ್ ಆಫೀಸು . . : : ಮಂಗಳೂರು

ಮಡಿಕೇರಿಯಲ್ಲಿ ಒಂದು ಶಾಖೆಯೂ ಬೊಂಬಾಯಿಯಲ್ಲಿ ಒಂದು ಶಾಖೆಯೂ ಜಿಲ್ಲೆಯೊಳಗೆ ಹಲವು ಶಾಖೆಗಳೂ ಇವೆ.

ನಿರಖು ಠೇವಣಾತಿಗಳ ಮೇಲೆ ಆಕರ್ಷಕವಾದ ದರದ ಬಡ್ಡಿಯು ಕೊಡಲ್ಪಡುವುದು.	ತಕ್ಕುದಾದ ಜವಾಬ್ದಾರಿಗಳ ಮೇಲೆ ಸುಲಭವಾದ ಶರ್ತಗಳಲ್ಲಿ ಸಾಲಗಳು ಕೊಡಲ್ಪಡುವುವು.

ಸಾಲಿಯನ್ ಸೇಕಡಾ 4½ರ ಬಡ್ಡಿ ಗಳಿಸುವ ಮೂರು ವರ್ಷದ ಅವಧಿಯ ವಿಜಯಾ ಕೇಶ್ ಸರ್ಟಿಫಿಕೇಟುಗಳ ಮೇಲೆ

ಹಣವನ್ನು ಹಾಕಿರಿ

THE VIJAYA BANK, LTD.,

ಬಿ. ಮಂಜಯ್ಯ ಹೆಗ್ಗಡೆ,
(ದ. ಕ. ಜಿಲ್ಲಾ ಬೋರ್ಡ್ ಪ್ರೆಸಿಡೆಂಟ್)
ಡೈರೆಕ್ಟರ್ ಬೋರ್ಡಿನ ಅಧ್ಯಕ್ಷರು.

ಋತುಸ್ರಾವ ನಿಂತಿತು

'ಕುಮಾರಿ' ಪಿಲ್ಲುಗಳನು ಉಪಯೋಗಿಸಿದರೆ ಹದಕಟ್ಟ ಋತುಸ್ರಾವವಾಗುವುದು, ಹಕೋಟೆಗೆ ಬರುವುದು, ಈ ಔಷಧ ಸೇವನೆಯಿಂದ ತೀವ್ರ ಗುಣಹೊಂದಬಹುದು, ಯಾವ ಬಾಧಕವೂಯಿಲ್ಲ. ನಾವಿರಾರು ಮಂದಿಗೆ ಖಾತ್ರಿ ಗುಣವಾಗಿದೆ- ಬೆಲೆ: ರೂ. 3-; ಸ್ಪೆಶಲ್ ರೂ. 5- ಅಧಿಕಾಧಿಕ ಸ್ಪೆಶಲ್ ರೂ. 8-[ಬಿ. ಪಿ ಮನ್ನೆರಡಾಣೆ ಪ್ರತ್ಯೇಕ.]

MRS. P. DEVEE, P. DB. (N. J.)
Tollygunge CALCUTTA.
ಸ್ಟಾಕಿಸ್ಟರು ದಯಾಕರಪೆನಿ, ಮಂಗಳೂರು

ವಿವಿಧ ಪಾತ್ರೆಗಳು



ಯಾವತರ್ರು ವಿದ ಬೆಳ್ಳಿ ತಾಮ್ರ ಹಿತ್ತಾಳೆ, ಕಂಚು ಮೊದಲಾದುವುಗಳ ವಿವಿಧ ಪಾತ್ರೆಗಳೂ ಸಾಮಾನುಗಳೂ ರಖಂ ಆಯೂ ಚಿಲ್ಲರೆಯಾಗಿಯೂ ದೊರೆಯುತ್ತವೆ

ಕಲ್ಯಾಣಪ ವ್ಯಾಸಾಚಾರ್ಯ,
ರಥಬೀದಿ, ಉಡುಪಿ

ವೀರಯೋಧ ಮೆಕಾರ್ಥರ್

ಕಳೆದ ವಾರ ಜನರಲ್ ಮೆಕಾರ್ಥರರಿಗೆ ಅಮೆರಿಕೆಯಲ್ಲಿ ನಡೆದ ಸ್ವಾಗತ ಸಮಾರಂಭವು ಅಭೂತಪೂರ್ವವಾಗಿತ್ತು. ತನ್ನ ಜೀವಮಾನವನ್ನೆಲ್ಲ ಯೋಧನಾಗಿ ಕಳೆದು ಯುದ್ಧರಂಗದಲ್ಲಿ ನೂತನ ಪವಾಡವೊಂದನ್ನು ನಿರ್ಮಿಸಿದ ಸರ್. ಮೆಕಾರ್ಥರರ ಕುರಿತು ಅಲ್ಲಿಯ ಜನ ಮತ್ತು ಉನ್ನತಾಧಿಕಾರಿಗಳು ತೋರಿದ ನಿಷ್ಠೆಯು ಪ್ರದರ್ಶನ ಟ್ರೂಮನರ ಆದೇಶವೂ ಭಿನ್ನಾಭಿಪ್ರಾಯಗಳಿಗೆ ಎಡೆಮಾಡಿಗೊಟ್ಟಿದೆ. ಯುದ್ಧ ನಿಂತ ಮೇಲೆ ವಿಜಯಿಯಾದವನಿಗೆ ಕೊಡಬಹುದಾದ ಸ್ವಾಗತವನ್ನು ಸರ್. ಮೆಕಾರ್ಥರರಿಗೆ ಕೊಡಲಾಯಿತು.

ಸ್ವಾಗತ ಸಮಾರಂಭದಲ್ಲಿ ಎರಡು ಮೂರು ಲಕ್ಷ ಜನ ಕೂಡಿ ವೀರಯೋಧನನ್ನು ಬರಮಾಡಿಕೊಂಡರು. ಮೆಕಾರ್ಥರ ಗುಣಗಾನದೊಡನೆ "ಮೆಕಾರ್ಥರ ಅಧ್ಯಕ್ಷನಾಗಲಿ" "ಟ್ರೂಮನ್ ಹೋಗಲಿ" ಎಂದು ಘೋಷಮಾಡಿದರು. ತನ್ನ ಮಡದಿ ಮತ್ತು ಹದಿಮೂರು ವರ್ಷದ ಮಗನೊಂದಿಗೆ ತಾಯ್ನಾಡಿಗೆ ಬಂದರು. ಇಡಿಯ ಅಮೆರಿಕೆಯು ಹೊಸ ಉತ್ಸಾಹ ಹುರುಪುಗಳಿಂದ ಸ್ವದೇಶದ ವೀರನನ್ನು ಕಾಣುವುದಕ್ಕಾಗಿ ಕಾದಿತ್ತು. ಅಧ್ಯಕ್ಷ ಟ್ರೂಮನ್ ಮಾತ್ರ ಅಂದು ಸಿನೇಮಾ ನೋಡಲು ಹೋಗಿದ್ದರಂತೆ!

ಮೆಕಾರ್ಥರ ಎಂತಹ ಮನುಷ್ಯನೆಂಬುದಕ್ಕೆ ನಮ್ಮಲ್ಲಿ ಬಹಳ ಭಿನ್ನಾಭಿಪ್ರಾಯವಿದೆ. ಹಲವರು 'ಅವರು ಯುದ್ಧಪ್ರಿಯ'ನೆನ್ನುತ್ತಾರೆ. ಇನ್ನು ಹಲವರು "ಕಮ್ಯುನಿಜಮದ ಕಡು ವೈರಿ" "ಚರ್ಚಿಲರ ಸಹಚಾರಿ" ಎಂದು ಹೇಳುವುದುಂಟು. ಇತ್ತೀಚಿನ ಟ್ರೂಮನ್ ಆದೇಶ ಹಾಗೂ ಪ್ರಚಾರದ ಫಲವಾಗಿ ಮೆಕಾರ್ಥರ್ ನಿರಂಕುಶವಾದಿಯೆಂದು ಹಲವರು ಭಾವಿಸಿಕೊಂಡಿದ್ದಾರೆ ಆದರೆ ಮೆಕಾರ್ಥರರು ಮೇಲಿನ ಟೀಕೆಗೆ ಅರ್ಹರಾಗಲಾರರು. ಅವರ ಕಾರ್ಯೋನ್ಮುಖತೆಯನ್ನೂ— ಸಮರದ ಮುನ್ನೋಟವನ್ನು ಬಲ್ಲ ಬುದ್ಧಿಶಾಲಿಗಳಿಗೆ ಮಾತ್ರ ಅವರ ವ್ಯಕ್ತಿತ್ವದ ಪರಿಚಯವಾದೀತು. ದೀರ್ಘ ಕಾಲದ ಯುದ್ಧ ಪರಿಶ್ರಮದಿಂದ ಅವರು ಗಳಿಸಿಕೊಂಡ ಯೋಧ ಜ್ಞಾನ ಇನ್ನಾವ ಸೈನ್ಯಾಧಿಪತಿಯಲ್ಲೂ ಇರಲಾರದು. ಎಪ್ಪತ್ತೊಂದು ವರ್ಷದ ತನ್ನ ಯೋಧ ಜೀವನದಲ್ಲಿ ಅವರೆಂದೂ ಸೋಲನ್ನಪ್ಪಿಕೊಂಡವರಲ್ಲ. ಸೈನ್ಯ ಪಡೆಗಳನ್ನು ಮಕ್ಕಳಂತೆ ಇಲ್ಲವೆ ಬಂಧುಗಳಂತೆ ವಿಶ್ವಾಸಪೂರ್ವಕ ನೋಡಿಕೊಂಡದ್ದರಿಂದಲೇ ಅವರ ಆದೇಶಪಾಲನೆಯಲ್ಲಿ ಒಳ್ಳೆಯ ನಿಷ್ಟೆಗಳು ಕಂಡುಬರುತ್ತಲಿದ್ದವು!

ಹದಿನಾಲ್ಕು ವರ್ಷಗಳಲ್ಲಿ ತನ್ನ ಹುಟ್ಟೂರನ್ನು ಕಾಣುವ ಮನಸ್ಸು ಅವರು ಮಾಡಿದ್ದಿಲ್ಲ. ಸೈನಿಕರೊಡನಿರುವುದೇ ಅವರಿಗೆ ಬೇಕಾಗಿತ್ತು. ದ್ವಿತೀಯ ಮಹಾಯುದ್ಧಾನಂತರ ಜಾಪಾನಿನ ಒಡೆತನವನ್ನು ವಹಿಸಿದ ಮೆಕಾರ್ಥರ ಕಾರ್ಯದಕ್ಷತೆಯನ್ನು ಎಷ್ಟು ಕೊಂಡಾಡಿದರೂ ಸಾಲದು! ಯುದ್ಧದಲ್ಲಿ ತನ್ನ ಸಾಹಸಫಲದಿಂದ ಸಹಸ್ರಾರು ಜನರನ್ನು ಕೊಂದಾಗ ಸೇನಾಧಿಕಾರಿಯು ಕೆಟ್ಟ ಮನುಷ್ಯನೆಂದು ಹೇಳುವುದು ಮೂರ್ಖತನದ್ದಾಗುತ್ತದೆ. ಯುದ್ಧರಂಗದಲ್ಲಿ ಔದಾರ್ಯ—ದಯೆ—ಸಲ್ಲದು! ಆದೇಶ ಕೊಡುವ ಮುನ್ನ ಆದರ ಸಮಾಲೋಚನೆ ನಡೆಯಬೇಕೆ ಹೊರತು ಅಭಿಯೋಗ ಮಾಡಿದ ಮೇಲಲ್ಲ ಹಾಗೆ ಆದೇಶವನ್ನು ತಾನಾಗಿ ಉಪಯೋಗಿಸುವುದು ಸೇನಾಧಿಕಾರಿಯ ಕೈಯಲ್ಲೂ ಇಲ್ಲವೆಂಬುದನ್ನು ನಾವು ಮರೆಯಬಾರದು. ಜಾಪಾನಿನ ಮೇಲೆ ಆಟಂಬಾಂಬು ಧಾಳಿಯಾದ ಬಳಿಕ ಜಾಪಾನಿನಲ್ಲಿ ಪ್ರಕ್ಷುಬ್ಧ ವಾತಾವರಣ ಉಂಟಾಯಿತು. ಒಂದಲ್ಲ ಒಂದು ದಿನ ಸರ್. ಮೆಕಾರ್ಥರರನ್ನು ಶೋಕಪೀಡಿತ ಜನ ಇತಿ ಶ್ರೀ ಮಾಡಿಯೆ ಮಾಡುವರೆಂಬ ಸುದ್ದಿ ಹಬ್ಬಿತು. ಮೆಕಾರ್ಥರ ಯುದ್ಧಪ್ರಿಯನಿದ್ದ ಹಾಗೆ ಜನಪ್ರಿಯನೆಂದು ತಿಳಿದ ಮೇಲೆ ಜಾಪಾನದ ಮೈತ್ರಿ ಗಾಢವಾಯಿತು. ಮೊನ್ನೆ ಪದಚ್ಯುತಿಯ ಸುದ್ದಿ ಜಾಪಾನರಿಗೆ ಸಖೇದಾಶ್ಚರ್ಯವನ್ನುಂಟುಮಾಡಿತು. ಮೆಕಾರ್ಥರು ಸ್ವದೇಶಕ್ಕೆ ಮರಳಿ ಬರುವಾಗ ಜಾಪಾನಿನರಸನಾದ ಹಿರೋ ಹಿಟೋ ಜಪಾನಿನ ಜನತೆಯ ಪರವಾಗಿ ಮೆಕಾರ್ಥರರನ್ನು ಬೀಳ್ಕೊಡುವ ಸಮಾರಂಭವನ್ನು ನಡೆಸಿದ್ದರು. ಇದು ಮೆ ಮೆಕಾರ್ಥರ ವ್ಯಕ್ತಿತ್ವದ ಮೇಲೆ ಜಾಪಾನಿನವರಿಗಿರುವ ಅಭಿಮಾನವನ್ನು ವ್ಯಕ್ತಪಡಿಸುತ್ತದೆ.

ಸದ್ಯ ಅಮೆರಿಕೆಯು ಸಾರ್ವಜನಿಕ ಹಾಗೂ ಪ್ರತಿಷ್ಠಿತ ಅಧಿಕಾರಿಗಳ ವಿಶೇಷಾದರಾಭಿಮಾನಗಳಿಗೊಳಗಾಗಬೇಕಾದರೆ ಅತನಲ್ಲಿರುವ ವಿಚಾರ ವೈಶಿಷ್ಟ್ಯವೇನೆಂಬುದನ್ನು ನಾವು ವಿವೇಚಿಸಬೇಕಾಗಿದೆ. ಟ್ರೂಮನ್ನರ ಪದಚ್ಯುತಿಯ ಧೋರಣೆಯು ಬಹುಮಂದಿ ಅಮೆರಿಕಾನರ ವಿಕೋಪಕ್ಕೆ ಕಾರಣವಾಗಿದೆ. ಮೆಕಾರ್ಥರರು ಅಧಿಕಾರವನ್ನು ದುರುಪಯೋಗ ಮಾಡಿದರೆನ್ನುವ ಮಾತು ಬಹಳ ಸಣ್ಣದೆಂದು ಜನತೆ ಅಭಿಪ್ರಾಯಪಟ್ಟಂತಿದೆ. ಈ ಸನ್ನಿವೇಶದಿಂದ ಟ್ರೂಮನ್ನರು ಹೆಚ್ಚು ಜನರ ಅವಿಶ್ವಾಸಕ್ಕೆ ಕಾರಣರಾಗಿದ್ದಾರೆ. ಅವರ ಮೇಲೆ ಅವಿಶ್ವಾಸವನ್ನು ತರುವ ಯೋಚನೆಯೂ ನಡೆದಿದೆ. ಇವೆಲ್ಲಾ ಮೆಕಾರ್ಥರರ ಕಡೆಗೆ ಜನತೆಗಿರುವ ಒಲವನ್ನು ವ್ಯಕ್ತಪಡಿಸುತ್ತದೆ.

ಹೀಗಿದ್ದೂ ಟ್ರೂಮನ್ ವರ್ಗದವರು ಮೆಕಾರ್ಥರ ಇಚ್ಛೆಯಂತೆ ಯುದ್ಧವನ್ನು ಮುಂದುವರಿಸುತ್ತಿದ್ದರೆ ಅಮೇರಿಕಾ ರಷ್ಯದೊಡನೆ ಹೋರಾಡಿ ಭಯಂಕರ ಹಾನಿಗೆ ತುತ್ತಾಗಬೇಕಾಗಿತ್ತೆಂದು ಟ್ರೂಮನ್ ವಾದವನ್ನು ಸಮರ್ಥಿಸುತ್ತಾರೆ. ಮೆಕಾರ್ಥರರು ಆಜ್ಞೋಲ್ಲಂಘನ ಮಾಡಿದ್ದನ್ನು ಯು. ರಾ. ಸಂಘವು ತೀವ್ರವಾಗಿ ವಿರೋಧಿಸಿಯದೆ. ಪರಿಸ್ಥಿತಿ ಹೀಗಿರುತ್ತಾ, ಯಾರು ತಪ್ಪಿತಸ್ಥರೆಂದು ನಿರ್ಧರಿಸಿ ಹೇಳುವುದು ದುಸ್ತರವಾದರೂ ಮೆಕಾರ್ಥರ್ ನಿಲುವು ಸಮರ್ಪಕವೆಂಬುದನ್ನು ಒಪ್ಪಬೇಕಾಗುತ್ತದೆ. ಏಕೆಂದರೆ ಈಗಲೋ ಇನ್ನೊಂದು ಕ್ಷಣದಲ್ಲೋ ಎನುವ ಹಾಗೆ ಯುದ್ಧ ಸಿದ್ಧತೆ ಶತ್ರುವು ನಡೆಸುತ್ತಿರುವಾಗ ಅದನ್ನು ಪ್ರತಿಭಟಿಸುವ ಮುಂಜಾಗ್ರತೆಯನ್ನು ಸೈನ್ಯಾಧಿಪತಿವಹಿಸುವದು ಮುಖ್ಯವಾಗಿರುತ್ತದೆ. ಸಂ. ರಾ ಸಂಘದ ದೀರ್ಘ ಸಮಾಲೋಚನೆಯು ಕಾಲವಿಳಂಬದಲ್ಲಿ ಶತ್ರು ದಳವು ಸುಸಂಘಟಿತವಾಗಿ ಸಂ. ರಾ. ಹಾಗೂ ಕಾಮನವೆಲ್ತ್ ಸೈನ್ಯದ ವಿರುದ್ಧ ಧಾಳಿ ನಡೆಸಿದ್ದ ದಾಖಲೆಗಳಿವೆ. ಇಂತಹ ಗಂಡಾಂತರ ಪರಿಸ್ಥಿತಿಯಲ್ಲಿ ಮೆಕಾರ್ಥರರು ಮೇಲಿನವರ ಆದೇಶವನ್ನು ನಿರೀಕ್ಷಿಸುತ್ತಿರಲಿಲ್ಲ. ಶತ್ರುಗಳನ್ನು ಸದೆಬಡಿಯುವ ಧಾರ್ಷ್ಟ್ಯ ಕ್ರಮವನ್ನು ಸೂಕ್ತ ವೇಳೆಯಲ್ಲಿ ಅವರು ಕೈಗೊಳ್ಳುತ್ತಿದ್ದರು. ಅಂತೆಯೇ ಮಂಚೂರಿಯ ಮೇಲೆ ಬಾಂಬು ಧಾಳಿಯನ್ನು ಮಾಡದೆ ಹೋದರೆ ಶತ್ರುಗಳ ಶಕ್ತಿ ಚಾಲನೆಗೆ ಅವಕಾಶ ನೀಡಿದಂತಾಗುತ್ತದೆಂಬುದನ್ನು ಜನರಲ್ ರಿಜವೆಯರೂ ಒಪ್ಪಿರುತ್ತಾರೆ. ಅಲ್ಲದೆ ಸದ್ಯದ ಪರಿಸ್ಥಿತಿಯಲ್ಲಿ ಕಮ್ಯೂನಿಸ್ಟರು ಯಾವ ಕ್ಷಣದಲ್ಲಿ ಭಯಂಕರ ಯುದ್ಧ ಹೂಡಬಹುದೆಂದು ರಿಜ್ವೆಯವರು ಹೇಳಿಕೆ ಕೊಟ್ಟಿರುತ್ತಾರೆ. ಸಾವಧಾನ ಧೋರಣದಿಂದ ಫಾರ್ಮೋಸಾ ಕೈಬಿಟ್ಟು ಹೋಗಬಹುದು. ಫಾರ್ಮೋಸಾ ಕಮ್ಯುನಿಸ್ಟರ ವಶವಾಯಿತೆಂದರೆ ಬುಕ್ತಿ ಗೆಲ್ಲುವುದು ದುಃಸ್ತರದ ಸಂಗತಿಯೇ ಸರಿ. ಯುದ್ಧರಂಗದ ಮಾಹಿತಿಯಿಲ್ಲದವರು ನಿಧಾನವಾಗಿ ತಮ್ಮ ಆದೇಶವನ್ನು ಕಳಿಸುತ್ತ ಬಂದುದರಿಂದಲೇ ಶತ್ರುಗಳ ವಿಜಯಿಗಳಾಗುವ ಲಕ್ಷಣ ಕಂಡು ಬಂದಿದೆ.

ಮೊದಲಿಗೆ ಸರ್. ಮೆಕಾರ್ಥರ ಅಧಿಕಾರ ವ್ಯಾಪ್ತಿಯನ್ನು ಹೆಚ್ಚಿಸಿದ ಸಂ. ರಾ. ಸಂಘವು ಮತ್ತೆ ಆಕ್ಷೇಪಿಸಿದ್ದು ತೀರಾ ಅನುಚಿತವಾದ್ದು. ಮೆಕಾರ್ಥರ ಯುದ್ಧ ಧೋರಣೆಗೆ ಅಡ್ಡಿಯಾಗದೆ ಸ್ವೇಚ್ಛಾಚಾರಿಯನ್ನಾಗಿ ಮಾಡಿ ಈಗ ತಡೆ ಹಾಕುವದಿದ್ದರೆ ಅದು ಯು. ರಾ. ಸಂಘದ ತಪ್ಪೇ ಆದೀತು ವಿನಹ ಮೆಕಾರ್ಥರರದ್ದಾಗದು. ಸರ್. ಮೆಕಾರ್ಥರರು ತನ್ನ ಕಾರ್ಯದಲ್ಲಿ ವಿಫಲಗೊಂಡಿದ್ದರೆ ಅದು ಯು. ರಾ. ಸಂಘದ ಅರ್ಥಶೂನ್ಯ ನಿರ್ಬಂಧದಿಂದ. ಶತ್ರುಗಳು ತ್ವರಿತ ಗತಿಯಿಂದ ಭೀಕರ ಕದನವನ್ನು ಕೈಗೊಳ್ಳುವಾಗ ನಾವೇಕೆ ನಿಧಾನಿಸಬೇಕೆಂದು ಸರ್. ಮೆಕಾರ್ಥರರನ್ನು ಅವರ ಸೈನಿಕರು ಕೇಳಿದಾಗ ಅವರು ಅರ್ಥಶೂನ್ಯವಾದ ಆದೇಶದ ಮೇಲೆ ನಿರುತ್ತರರಾಗಬೇಕಾಗಿತ್ತು. ಪ್ರತಿಯೊಂದು ವಿಚಾರದಲ್ಲೂ ಯು. ರಾ. ಸಂಘದ ನಿಷ್ಕ್ರಿಯವಾದ ಸೂಚನೆಗಳು ಅವರ ಯುದ್ಧಗತಿಯನ್ನು ಸ್ಥಗಿತಗೊಳಿಸುತ್ತಿದ್ದವು.

ಕಮ್ಯೂನಿಸ್ಟ ಚೀನವು ಕೊರಿಯದಲ್ಲಿ ಶಕ್ತಿ ಸಂಘಟಿಸಿ ಬಲಪ್ರಯೋಗವನ್ನು ಕಣ್ಣಾರೆ ಕಂಡ ಮೇಲೂ—ವಿಕಟಕಾಲದಲ್ಲಿ ಅದು ಯುದ್ಧಕ್ಕೆ ಇಳಿದರೆ ಮೇಲಿನವರ ಆಜ್ಞೆ ಬರುವ ತನಕ ಕಾದರೆ ಮುಕ್ತಿ

ನಿರಾಶೆಗೆ ಒಳಗಾಗದಿರಿ.

ಉಬ್ಬಸ,ಕಫ,ಶ್ವಾಸಕೋಶದಿಂದ ನೀವು.ವಿಪರೀತ ಕಷ್ಟಪಡುವಿರಾದರೆ, ಹಲವಾರು ಅಮೌಲ್ಯ ಔಷಧಿಗಳ ಸೇವನೆಯಿಂದ ನಿಮಗೆ ಗುಣವಾಗದಿರುವುದಾದರೆ,

ಆಶಾಭಂಗಕ್ಕೊಳಗಾಗದಿರಿ!

ಅಲ್ಪವೆಚ್ಚ—ಅಲ್ಪಾವಧಿಯೊಳಗೆ ನಿಮ್ಮಬಾಧೆಯನ್ನು ಶಮನಮಾಡುವ

ಖಾತ್ರಿ ಔಷಧಿಯು ನಮ್ಮಲ್ಲಿರುವುದು.

ಒಂದೇ ಒಂದು ಸೀಸೆಯನ್ನು ಕೊಂಡು, ಗುಣಪರೀಕ್ಷೆಮಾಡಿರಿ!

ಈ ಹೊಸ ಮದ್ದಿನಿಂದ ನಿಮಗೆ ಅದ್ಭುತ ಗುಣತೋರುವುದೆಂಬುದು ಖಂಡಿತ.

ಕೂಡಲೆ ಬರೆಯಿರಿ:—

ದಿ ನೇಶನಲ್ ಜನರಲ್ ಸ್ಟೋರ್ಸ್

(ಡಿಸ್ಪೆನ್ಸಿಂಗ್ ಕೆಮಿಸ್ಟ್ ಮತ್ತು ಡ್ರಗ್ಗಿಸ್ಟ್)

8-A ಮೆಹರ್ವಾನ್ ಬಿಲ್ಡಿಂಗ್ಸ್, ಸರ್. ಫಿರೋಜ್ ಶಾ ಮೆಹತಾ ರೋಡು,

ಫೋರ್ಟ್, ಬೊಂಬಾಯಿ.

THE NATIONAL GENERAL STORES

Importers, Exporters, Dispensing Chemists & Druggists,

General Merchants & Commission Agents,
8A Mherwan Buildings, Opp: His Master's Voice,
Sir Phirozsha Mehta Road, **Fort, Bombay.**

Nambiar's

ARYA VAIDYA SALA

UDIPI

Ideal House for Ayurvedic Treatment.

T. N. Kelu Nambiar,
Vaidya.

ಮೂಲ್ಕಿ ಬೇಂಕ್,

ಲಿಮಿಟೆಡ್, ಮೂಲ್ಕಿ.

1929ರಲ್ಲಿ ಸ್ಥಾಪಿತವಾಗಿ 21 ವರುಷಗಳಿಂದ ಊರ ಜನರ ಹಿತಕ್ಕಾಗಿ ಡಿಪೋಸಿಟ್ ಹಣಕ್ಕೆ ನ್ಯಾಯವಾದ ಬಡ್ಡಿಯಿಂದಲೂ, ಸಾಲದ ಹಣಕ್ಕೆ ಅತೀ ಕಡಿಮೆ ದರದ ಬಡ್ಡಿಯಿಂದಲೂ ಜನ ಹಿತಸಾಧನೆಯನ್ನು ಮಾಡುತ್ತಿರುವುದು

The Moolky Bank Ltd.
Moolky, S. K.

ಪಶ್ಚಾತ್ತಾಪ ಪಡಬೇಕೆಂದು ಮೆಕಾರ್ಥರು ಪ್ರಸಂಗಾನುಸರಣ ಧೋರಣವನ್ನು ಕೈಗೊಂಡರು. ಇದನ್ನು ನಿರಂಕುಶ ಪ್ರವೃತ್ತಿಯೆನ್ನಲಾಗುವುದಿಲ್ಲ. ಚರ್ಚಿಲ್ಲರ ಮನೋವೃತ್ತಿಗೆ ಸರಿಸಾಟಿಯೆಂದು ಹೇಳಿಸಲಾಗದು. ಚರ್ಚಿಲ್ ಮಹಾಕುತಂತ್ರಿ, ಅತ್ಯಂತ ಜಾತೀಯವಾದಿ, ಹಟಮಾರಿತನ ಅವರ ವೈಶಿಷ್ಟ್ಯ! ಆದರೆ ಮೆಕಾರ್ಥರ ಅತ್ಯಂತ ಪ್ರಾಮಾಣಿಕ ಯೋಧ! [ಇಂದು ತಪ್ಪು ಹೆಜ್ಜೆ ಹಾಕಿದರೆಂದು ಹೇಳುವ ಅವರ ಹೇಳಿಕೆಯಾಗಲೀ, ಯುದ್ಧಗತಿಯಾಗಲೀ, ಅಜು ಸಮರವನ್ನು ಶೀಘ್ರದಲ್ಲಿ ಮುಗಿಸುವ ಮುನ್ನೋಟ ಹಾಗೂ ಮಹತ್ವದ ಉದ್ದೇಶವನ್ನಿಟ್ಟುಕೊಂಡದ್ದಾಗಿರುತ್ತದೆ. ಧೀರ ಸೈನಿಕನಿಗೆ ಯುದ್ಧದಲ್ಲಿ ಗೆಲುವುದೇ ಮುಖ್ಯ ಗುರಿ! ಅದನ್ನು ತಪ್ಪೆಂದು ಹೇಳುವವರು ಅದಕ್ಕಿಂತಲೂ ಬಹುದೊಡ್ಡ ತಪ್ಪನ್ನು ಕಮ್ಯೂನಿಷ್ಟ ಚೀನಾ ಆಕ್ರಮಕ ರಾಷ್ಟ್ರವೆಂದು ಸಾರುವಲ್ಲಿ ಮಾಡಿರುತ್ತಾರೆ. 38ನೇ ಅಕ್ಷಾಂಶವನ್ನು ದಾಟುವ ಮೊದಲು ಮತ್ತೊಮ್ಮೆ ಚಿಂತಿಸಬೇಕಾಗಿತ್ತು. ಅಲ್ಲಿಯೂ ಟ್ರೂಮನ್ ಮೆಕಾರ್ಥರರ ಬೆನ್ನು ಚಪ್ಪರಿಸಿದರು; ಮತ್ತೆ ಕೊನೆಯ ಕ್ಷಣದಲ್ಲಿ ಬ್ರಿಟನ್ ಮತ್ತಿತರ ಸಂ. ರಾ. ಸದಸ್ಯ ರಾಷ್ಟ್ರಗಳು ನಿದ್ರಾವೇಶದಿಂದ ಎಚ್ಚೆತ್ತರಂತೆ ಯುದ್ಧ ವಿರೋಧ ಸೂಚನೆ ತಂದರು. ತಕ್ಷಣ ಟ್ರೂಮನ್ ಮೆಕಾರ್ಥರರನ್ನು ಹಿಂದೆ ಕರೆಸಿದರು.

ಮೆಕಾರ್ಥರರ ಮೇಲೆ ಇಂದು ಹೊರಿಸಲಾಗುವ ಅಪವಾದಗಳು ಕೇವಲ ನಾಟಕೀಯವಾದವುಗಳು. ಸೇನಾಧಿಪತಿಯಾಗಿದ್ದವನು ಮಾಡಬೇಕಾಗಿರುವ ಮುಂಜಾಗ್ರತೆಯನ್ನು ಅವರು ಚೆನ್ನಾಗಿ ಮಾಡಿದ್ದಾರೆ. ಮೆಕಾರ್ಥರ ಯಥಾರ್ಥವಾದಿ. ಯೋಧನ ವೀರೋಚಿತ ಗುಣಗಳು ಅವರಲ್ಲಿ ಮೈಗೂಡಿಬಂದಿವೆ. [ಇಂದು ಅವರ ಕೀರ್ತಿಗೆ ಕಳಂಕ ಬಂದಿದ್ದರೆ ಅದು ಅವರ ಯುದ್ಧ ಧೋರಣೆಯಿಂದಲ್ಲ; ಸಂ. ರಾ. ಸಂಘದ ಅಪಕ್ವ ಮನೋವೃತ್ತಿಯಿಂದ. "ನನ್ನ ಜೀವಮಾನದಲ್ಲಿ ಸಾಧಿಸಬೇಕಾದ ಮಹತ್ವದ ಕಾರ್ಯಗಳೇನೆಂಬುದು ಬಯಲಾದುವು. ದೈವದತ್ತವಾದ ಯೋಧನ ಶಕ್ತಿಸಾಹಸಗಳು ಸದುಪಯೋಗಗೊಂಡಾವೆಂದು ಬಯಸಿದ್ದೆ. ಆದರೆ ಅವು ಈ ಹಳೆಯ ಯೋಧನೊಂದಿಗೆ ನಾಶವಾಗುತ್ತಿವೆ" ಎಂದು ಶೂರಸೇನಾಪತಿ ಮೆಕಾರ್ಥರ್ ಗದ್ಗದಿತ ಕಂಠದಿಂದ ತುಂಬಿದ ಸಭೆಯೆದುರು ಹೇಳುವಾಗ ಅವರ ನಿರ್ಮಲಾಂತಃಕರಣದ ಬಗ್ಗೆ ಕನಿಕರ ಉಂಟಾಗುತ್ತದೆ; ಅಂತೆಯೇ ಸಂ. ರಾ. ಸಂಘದ ಅನುಚಿತ ಧೋರಣೆಗೆ ವಿಷಾದವಾಗುತ್ತದೆ.



Approved from by the Govt. of Mysore
Certificated by the Agent of the Govt of Cylone & Indian.

ಅಮೆರಿಕೆಯಿಂದ ನಾವು ಕಲಿಯಬೇಕಾದ ಪಾಠ

ಎರಡು ಮಿಲಿಯ ಟನ್ ಆಹಾರ ಧಾನ್ಯಕ್ಕಾಗಿ ಅಮೆರಿಕೆಯನ್ನು ಕೇಳಿದ ಮೂರು ತಿಂಗಳ ಮೇಲೆ ಸಿನೇಟದವರು ಹಲವು ಶರ್ತಗಳ ಮೇಲೆ ತಮ್ಮ ಕೊಡುಗೆಯನ್ನು ಮುಂದೆ ಮಾಡಿರುತ್ತಾರೆ. ಇಷ್ಟು ದೀರ್ಘಕಾಲದ ಚರ್ಚೆ ನಡೆದು ಈಗ ಸರ್ವಾನುಮತದಿಂದ ಮಂಜೂರಾಗಿದೆ. ಡೀನ್ ಅಚಿನ್‌ಸನ್ನರೇ ಮೊದಲಾದ ಪ್ರತಿಷ್ಠಿತ ಅಧಿಕಾರಿಗಳು ಎರಡು ಮಿಲಿಯ ಟನ್ ಆಹಾರವನ್ನು ಕಾಣಿಕೆಯನ್ನಾಗಿ ಭಾರತಕ್ಕೆ ನೀಡಬೇಕೆಂದು ವಾದಿಸಿದ್ದರು. ಆದರೆ ಇದಕ್ಕೆ ಹೆಚ್ಚಿನ ವಿರೋಧ ಬಂದುದರಿಂದ ಒಂದು ಮಿಲಿಯ ಟನ್ ಕಾಣಿಕೆಯ ರೂಪದಲ್ಲೂ ಇನ್ನೊಂದು ಮಿಲಿಯ ಟನ್ ಸಾಲದ ರೂಪದಲ್ಲೂ ಕೊಡುವ ನಿರ್ಧಾರ ಸಿನೇಟದವರು ಮಾಡಿದ್ದಾರೆ.

ಭಾರತ ವಿದೇಶಾಂಗ ನೀತಿಯ ಧೋರಣೆಯಿಂದಾಗಿ ಅಮೆರಿಕೆಯು ಭಾರತದ ಅಗ್ನಿಪರೀಕ್ಷೆ ನಡೆಸಿತು. ಈ ನಡುವೆ ಚೈನಾ, ರಷ್ಯಾ, ಥಾಯಿಲೆಂಡ್, ಪಾಕಿಸ್ತಾನ್, ಬರ್ಮಾ, ಮುಂತಾದ ರಾಷ್ಟ್ರಗಳು ಭಾರತಕ್ಕೆ ಸಹಕಾರ ನೀಡಿದವು. ಈಗ ಬರ್ಮಾದೊಡನೆ ದೀರ್ಘವ್ಯಾಪಾರ ಸಂಬಂಧದ ಮಾತುಕತೆ ನಡೆಯುತ್ತಲಿದೆ. ಈ ಮಾತುಕತೆಯ ಫಲವಾಗಿ ಭಾರತವು ಬರ್ಮಾದ ಅಕ್ಕಿಯನ್ನು ಪಡೆದುಕೊಂಡು ಕಠಿಣ ಪರಿಸ್ಥಿತಿಯನ್ನು ಪರಿಹರಿಸಿಕೊಳ್ಳಬಹುದಾಗಿದೆ. ಸದ್ಯದ ಭೀಕರ ಪರಿಸ್ಥಿತಿಯಲ್ಲಿ ಅಮೆರಿಕೆಯ ಕೊಡುಗೆ ಉಪಯೋಗಕ್ಕೆ ಬೀಳುವಂತಿಲ್ಲ. ಜೂನ ತಿಂಗಳ ಸುಮಾರಿಗೆ ಅದನ್ನು ನಾವು ಪಡೆಯಬಹುದಾಗಿದೆ.

ಈ ಕೊಡುಗೆಯ ಕುರಿತು ಅಮೆರಿಕೆಯ ರಾಜಕೀಯ ವರ್ಗಗಳಲ್ಲಿ ವಿಶೇಷ ಮತಭೇದವೆದ್ದಿದೆ, ಕೆಲವೇ ರಾಜಕೀಯ ವ್ಯಕ್ತಿಗಳ ಹಾಗೂ ಪ್ರತಿಷ್ಠಿತ ಪತ್ರಿಕೆಗಳು ಈ ಕೊಡುಗೆಯನ್ನು ವತ್ಕಾಯಿಸಿವೆ ಯಾದರೂ ಹೆಚ್ಚಿನ ಜನರು ವಿರೋಧಾಭಿಪ್ರಾಯ ಉಳ್ಳವರಾಗಿದ್ದಾರೆ. ಈಚೆಗೆ ಅಲ್ಲಿನ ವಿದ್ಯಾರ್ಥಿಗಳು ಭಾರತಕ್ಕೆ ಆಹಾರ ಧಾನ್ಯವನ್ನು ಕಳಿಸಲೇಬೇಕೆನ್ನುವ ಚಳುವಳಿಯನ್ನು ಹೂಡುವ ಯೋಜನೆಯನ್ನು ಕೈಗೊಳ್ಳುವ ಅಂಶವನ್ನು ಶ್ರೀ ಜವಾಹರಲಾಲ ನೆಹ್ರೂರವರಿಗೆ ತಿಳಿಸಿದ್ದಾರೆ. ಜಾಗತಿಕ ರಂಗದಲ್ಲಿ ಭಾರತದ ನಿಲುಮೆ ಹೆಚ್ಚಿನವರ ವಿಶ್ವಾಸಕ್ಕೆ ಪಾತ್ರವಾಗಿರುವುದರಿಂದಲೂ ಭಾರತದ ಶಾಂತಿ ಸೂಚನೆಗೆ ಹೆಚ್ಚಿನ ಮಹತ್ವಕೆ ಬರುತ್ತಿರುವುದರಿಂದಲೂ ಅಮೆರಿಕೆಯು ಇಂದು ಭಾರತದ ಬೇಡಿಕೆಯನ್ನು ಮನ್ನಿಸಿಯದೆ. ಅದರಲ್ಲೂ ರಷ್ಯಾ, ಕಮ್ಯೂನಿಸ್ಟ ಚೀನಾ ಶೀಘ್ರ ಆಹಾರ ಧಾನ್ಯವನ್ನು ಕಳಿಸಿದ್ದರಿಂದ ತಾವೊಂದು ತೀರ್ಮಾನಕ್ಕೆ ಬರಲೇಬೇಕಾಯಿತು.

ಈ ಕೊಡುಗೆ ಉಪಕಾರ ದೃಷ್ಟಿಯಿಂದ ಬಂದುದಲ್ಲವೆಂಬುದಕ್ಕೆ ದೀರ್ಘಕಾಲದ ವಿರೋಧ ಪ್ರತಿಸೂಚನೆ-ತಡೆಗಳೇ ಸಾಕ್ಷಿಯಾಗಿವೆ. ಈಗಲಾದರೂ ಇದು ಸದುದ್ದೇಶಪೂರಿತವಾದುದೆಂಬುದನ್ನು ನಾವು ಎಷ್ಟು ಮಾತ್ರಕ್ಕೂ ಕಟ್ಟಿಕೊಳ್ಳುವಂತಿಲ್ಲ. ಸ್ವಾರ್ಥವನ್ನು ಸಾಧಿಸುವ ಒಂದು ಉದ್ದೇಶ ಅದರಲ್ಲಡಗಿದೆ. ಹಸಿದಾಗ ಅನ್ನ ನೀಡಿ ಆಪದ್ಬಾಂಧವರಾಗುವ ಮನಸ್ಸು ಅವರಲ್ಲಿರುತ್ತಿದ್ದರೆ ಇಷ್ಟು ಸಮಯ ತಡವರಿಸಬೇಕೇ? ಹೊತ್ತಾಗಿ ಕೊಡುವ ಈ ಕೊಡುಗೆಯನ್ನು ಅಮೆರಿಕೆಯ ಮಹಾ ಔದಾರ್ಯವೆಂದು ನಾವು ತಿಳಿಯುವುದು ಬೇಡ. ಈ ಔದಾರ್ಯದ ಉರುಳಿನಲ್ಲಿ ಸಿಲುಕಿಕೊಳ್ಳುವಂತೆ ಅಮೆರಿಕೆಯು ತಂತ್ರ ಹೂಡಿಯೇ ಕೊಡುಗೆಯನ್ನು ಮುಂದೆ ಮಾಡಿದೆ. ಹತ್ತು ಲಕ್ಷ ಟನ್ ಆಹಾರವನ್ನು ಸಾಲರೂಪವಾಗಿ ಕೊಡುವ ಶರ್ತ ಹಾಕಿದೆ. ಹತ್ತು ಲಕ್ಷ ಟನ್ ಆಹಾರದ ಮೌಲ್ಯದ ರೂಪದಲ್ಲಿ ಭಾರತವು ಹಣವನ್ನಾಗಲೀ ಇತರ ಸಾಮಗ್ರಿಯನ್ನಾಗಲೀ ಕೊಡಬಹುದೆನ್ನುವ ಸೂಚನೆಯಿದೆ. ಇದು ತೋರಿಕೆಯ ಮಟ್ಟಿನ ಸೂಚನೆ. ಆದರೆ ಅದರ ಉದ್ದೇಶ ಅಣುಶಕ್ತಿಗೆ ಆವಶ್ಯಕವಾದ ಖನಿಜಸಂಪತ್ತನ್ನು ಪಡೆದುಕೊಳ್ಳುವುದೇ ಆಗಿರುತ್ತದೆ. ಇಂತಹ ಅಮೂಲ್ಯ ಖನಿಜ ವಸ್ತುವು ಭಾರತದಲ್ಲಿ ಹೇರಳವಾಗಿದೆಂಬುದನ್ನು ಅಮೆರಿಕೆಯು ಮನಗಂಡಿದೆ. ಅಲ್ಲದೆ ಆ ಉದ್ದೇಶ ಸಾಧನೆಗಾಗಿಯೆ ಔದಾರ್ಯದ ಉರುಳನ್ನು ಭಾರತಕ್ಕೆ ನೀಡಿದೆ. ಭಾರತವು ಸದ್ಯದ ಭೀಕರ ಪರಿಸ್ಥಿತಿಯನ್ನು ಎದುರಿಸಬೇಕಾದರೆ ಅಮೆರಿಕೆಯ ಕೊಡುಗೆಯನ್ನು ಆತ್ಮಾಭಿಮಾನವನ್ನು ತೊರೆದಾದರೂ ಒಪ್ಪಿಕೊಳ್ಳಬೇಕಾಗುತ್ತದೆ. "ಅನ್ನದೇವರ ಮುಂದೆ ಅನ್ಯದೇವರಿಲ್ಲ" ಎನ್ನುವ ಹಾಗೆ ಹಸಿವೆಯ ಕೂಗು ಹೆಚ್ಚಾಗಿರುವ ಸಮಯದಲ್ಲಿ ಮನಸ್ಸಿಲ್ಲದ ಮನಸ್ಸಿನಿಂದ ಒಪ್ಪಿಕೊಳ್ಳಬೇಕಾಗುತ್ತದೆ. ಹೀಗೆ ಒಪ್ಪಿಕೊಂಡರೆ ಇನ್ನೊಂದು ನೂತನ ಸಮಸ್ಯೆ ಉದ್ಭವವಾಗಲಿದೆಯಿದೆ. ಭಾರತದಲ್ಲಿರುವ ಅಣುಶಕ್ತಿಯ ಮೇಲೆ ರಷ್ಯಾವು ಕಣ್ಣಿಟ್ಟಿದೆ. ಭಾರತದೊಡನೆ ತಾನು ಇಟ್ಟುಕೊಂಡಿರುವ ಸಹಕಾರಗಳಿಗಾಗಿ ರಷ್ಯಾವು ಕೂಡಾ ಈ ಖನಿಜದ ವಸ್ತುವನ್ನು ಬಯಸುತ್ತಲಿದೆ. ಆದುದರಿಂದ ನೂತನ ಸಮಸ್ಯೆ ಏಳಲಿದೆಯಿದೆ.

ಅಮೆರಿಕೆಯ ಕೊಡುಗೆಯನ್ನು ಭಾರತವು ಒಪ್ಪುತ್ತಿರುವಂತಹದು ಆತ್ಮಗೌರವಕ್ಕೆ ಕುಂದು: ಅಮೆರಿಕೆ ಹಂಗಿಸಿ ಹಂಗಿಸಿ, ಹೆಮ್ಮೆ ತೋರಿಸಿದ ವಿಚಾರವನ್ನು ನೆನೆಸಿದರೆ ಯಾವ ದೇಶಾಭಿಮಾನಿಯೂ ಇಂತಹ ಕೊಡುಗೆಯನ್ನು ಸ್ವೀಕರಿಸಲಾರ! ಆದರೆ ಭಾರತವಿಂದು ಅನಾಥವಾಗಿದೆ. ಬರಗಾಲದ ಭೀಕರ ಸನ್ನಿವೇಶಗಳು ಕಣ್ಮುಂದಿರುವಾಗ ಸೋಲನೊಪ್ಪಿಕೊಳ್ಳದೆ ಗತ್ಯಂತರವಿಲ್ಲ. ಇದರಿಂದಾಗಿ ನಾವು ಮುಂದಾದರೂ ಸ್ವಾವಲಂಬನ ಧೋರಣೆಕ್ಕೆ ಹೆಚ್ಚು ಹೆಚ್ಚು ಮನಸ್ಸು ಕೊಡಬೇಕು. ಆತ್ಮಸಾಕ್ಷಿಗೆ ವಿರೋಧವಾಗಿ ವರ್ತಿಸುವ ದಾಕ್ಷಿಣ್ಯಕ್ಕೆ ಕಟ್ಟು ಬೀಳುವ ಪ್ರಸಂಗವನ್ನು ಆಹಾರ ವಿಚಾರದಲ್ಲಿ ಸ್ವಾವಲಂಬಿಗಳಾಗುವ ಮೂಲಕ ನೀಗಿಕೊಳ್ಳಬೇಕು. ದ್ರೋಹಿಯೆಂದಾಗ ಎಂತೆಂತಹ ಮಾತುಗಳು ಬರುತ್ತವೆಂಬುದು ಅಮೆರಿಕೆಯ ಧೋರಣೆಯಿಂದ ನಮಗೆ ಮನದಟ್ಟಾಗಿದೆ. ಸರಕಾರದ ದೀರ್ಘಾವಧಿ ಯೋಜನೆಯಿಂದ ಭಾರತವು ಸ್ವಾವಲಂಬಿಯಾಗಬಹುದಾದರೂ ಆತನ ಕಜನ ಹೆಚ್ಚಿನ ತ್ಯಾಗ ಸಹನೆಯನ್ನು ತೋರುವುದು ಸಮುಚಿತವಾಗಿದೆ. ಅಮೆರಿಕೆಯು ಕಲಿಸಿಕೊಟ್ಟ ಪಾಠವನ್ನು ಯಾರೂ ಮರೆಯದಿರೋಣ.

THE BOMBAY LIFE ASSURANCE COMPANY, LTD.

ದಿ ಬೊಂಬೆ ಲ್ಯಾಫ್ ಎಷ್ಯೂರೆನ್ಸ್ ಕೋ., ಲಿಮಿಟೆಡ್

(ಸ್ಥಾಪನೆ: 1908)

ಅತ್ಯಲ್ಪ ಖರ್ಚಿನಿಂದ ಅತ್ಯಧಿಕ ಲಾಭವನ್ನೀಯುವ
ಅಗ್ರಗಣ್ಯ ವಿಮಾ ಸಂಸ್ಥೆಗಳಲ್ಲೊಂದು

ಪ್ರಧಾನ ಏಜಂಟರು:

ಕೊಚ್ಚಿಕಾರ್ ಬ್ರದರ್ಸ್, ಲಿಮಿಟೆಡ್ ಉಡುಪಿ.

ಇವರ ಶಾಖಾ ಕಚೇರಿಗಳು:-

ಬೊಂಬಾಯಿ, ಮದ್ರಾಸು, ಬೆಂಗಳೂರು, ಕೊಯಮುತ್ತೂರು, ತ್ರಿವೆಂಡ್ರಮ್,
ಕಲ್ಲಿಕೋಟೆ ಮತ್ತು ಮಂಗಳೂರು.

ಕಳೆದ ಮುವತ್ತೆಂಟು ವರುಷಗಳಿಂದ ವಿಮಾ ಕ್ಷೇತ್ರದಲ್ಲಿ ಸತತ ದುಡಿದವರಾದ
ನಾವು ಜನಾಂಗದ ಶ್ರೇಯೋಭಿವೃದ್ಧಿಯ ಕಡೆಗೆ ನಮ್ಮ ನಮ್ರ ಸೇವೆಯನ್ನು
ಸಲ್ಲಿಸಿರುತ್ತೇವೆಂಬುದೇ ನಮ್ಮ ಹೆಗ್ಗಳಿಕೆಯ ಮಾತು.

ವಿಮಾ ಮಾಡಲಿಕ್ಕಾಗಲೀ, ಪ್ರಾತಿನಿಧ್ಯ ಪಡೆಯಲಿಕ್ಕಾಗಲೀ
ದಯಮಾಡಿ ನಮಗಾಗಲೀ ಅಥವಾ ನಮ್ಮ ಶಾಖೆಗಳಿಗಾಗಲೀ ಬರೆಯಿರಿ.



ಕತ್ತಲೆಯಲ್ಲಿ ನಿಮ್ಮ ಮಾರ್ಗದರ್ಶಿ

ಲೋಕಾಂತ

ಕೊರಿಯಾರಂಗ

ಮಧ್ಯ ಕೊರಿಯದ ಹಾನಜಾನ ಜಲಾಶಯದ ದೇಶದಲ್ಲಿ ಕಮ್ಯೂನಿಸ್ಟರಿಗೂ ಸಂ. ರಾ. ಸೈನಿಕರಿಗೂ ಆದ ಭೀಕರ ಕದನದಲ್ಲಿ ಕಮ್ಯೂನಿಸ್ಟರು ಸೋತು ಹಿಮ್ಮೆಟ್ಟಿರುತ್ತಾರೆ. ಇತ್ತೀಚಿನ ವರದಿಯಂತೆ ಆ ಸ್ಥಳವನ್ನು ಕಮ್ಯೂನಿಸ್ಟರು ತೆರವುಮಾಡಿ ಹಿಮ್ಮೆಟ್ಟಿದಂತೆ ತೋರುತ್ತದೆ. ಆದರೂ ಶತ್ರು ಸಂಘಟನೆ ಪ್ರಬಲವಾಗಿಯೇ ನಡೆಯುತ್ತಲಿದೆ

ಟ್ರಿಗ್ವಿಲೀಯವರು

ಸಂ. ರಾ. ಸಂಘದ ಕಾರ್ಯದರ್ಶಿಗಳಾದ ಟ್ರಿಗ್ವಿಲೀಯವರು ಭಾರತಕ್ಕೆ ಬರುವರೆಂಬ ಸುದ್ದಿ ಹಬ್ಬಿದೆ. ಅಧಿಕೃತವಾಗಿ ಏನೂ ತಿಳಿದುಬಂದಿಲ್ಲ. ಕಾಶ್ಮೀರ ಪ್ರಶ್ನೆಯ ವಿಚಾರದಲ್ಲಿ ಇವರು ಉತ್ಸುಕತೆಯುಳ್ಳವರಾಗಿರುವರೆಂದು ಹಲವರ ಅಭಿಪ್ರಾಯವಿರುತ್ತದೆ.

ಬ್ರಹ್ಮದೇಶದಿಂದ ಅಕ್ಕಿ

ಬ್ರಹ್ಮದೇಶದೊಡನೆ ಅಕ್ಕಿಯನ್ನು ತರಿಸಿಕೊಳ್ಳುವ ಸದುದ್ದೇಶದಿಂದ ಕೇಂದ್ರದ ಆಹಾರಮಂತ್ರಿ ಕೆ. ಎಂ. ಮುನ್ಷಿಯವರು ಮತ್ತಿನ್ನಿತರ ಹಲವು ಪ್ರತಿನಿಧಿಗಳೊಡನೆ ಈ ತಿಂಗಳಾಂತ್ಯಕ್ಕೆ ಅಲ್ಲಿಗೆ ಪ್ರಯಾಣ ಬೆಳೆಸುವವರಿದ್ದಾರೆ. ಜೂನ ತಿಂಗಳೊಳಗಾಗಿ 170000 ಟನ್ನು ಅಕ್ಕಿಯನ್ನು ಬ್ರಹ್ಮದೇಶವು ಕೊಡುವದೆಂದು ಒಪ್ಪಂದವಾಗಿದೆ. ತಿರುಗಿ 120000 ಟನ್ನು ಹೆಚ್ಚಿಗೆ ಕೊಡುವ ಮಾತೂ ನಡೆದಿದೆ. ಹೆಚ್ಚು ಅಕ್ಕಿಯನ್ನು ಆದಷ್ಟು ಕಡಿಮೆ ದರದಲ್ಲಿ ತರಿಸಿಕೊಳ್ಳುವದೇ ಈ ಮಂಡಳದ ಉದ್ದೇಶವೆಂದು ತಿಳಿದುಬರುತ್ತದೆ.

ಫ್ರೆಂಚ ವಸಾಹತು ನಿರೀಕ್ಷಕರು

ದ. ಭಾರತದ ಫ್ರೆಂಚ ವಸಾಹತುಗಳ ಪರಿಶೀಲನೆಗಾಗಿ ಅಂತರ್ ರಾಷ್ಟ್ರೀಯ ನ್ಯಾಯಾಲಯವು ನೇಮಕ ಮಾಡಿದ ತ್ರಯಸ್ಥರು ತಾವು ಅಲ್ಲಿಯ ಪರಿಸ್ಥಿತಿಯನ್ನು ಚೆನ್ನಾಗಿ ಅಭ್ಯಸಿಸಿ ಸಂಯುಕ್ತ ವರದಿಯನ್ನು ಒಪ್ಪಿಸುವರಾಗಿ ತಿಳಿದಿದೆ.

ಝೆಕ್ ಅಧಿಕಾರಿಯ ಕಣ್ಮರೆ

ಪಾಕಿಸ್ಥಾನದ ಝೆಕ್ ಪ್ರತಿನಿಧಿಯಾದ ವಿ. ಕೋಕರವರು ಪತ್ನಿ ಹಾಗೂ ಇಬ್ಬರು ಮಕ್ಕಳೊಂದಿಗೆ ಕಣ್ಮರೆಯಾಗಿದ್ದು ಈಗ ಆಸ್ಟ್ರೇಲಿಯದಲ್ಲಿದ್ದಾರೆಂದು ತಿಳಿದುಬರುತ್ತದೆ. ಝೆಕ್ ಸರಕಾರಕ್ಕೆ ಅವರ ರಾಜೀನಾಮೆಯು ಅಂಚೆ ಚೀಟಿಲ್ಲದ ಕವರಿನಲ್ಲಿ ಬಂದಿರುತ್ತದಂತೆ

ಕಾಶ್ಮೀರ ಮಧ್ಯಸ್ಥಗಾರ

ಕಾಶ್ಮೀರ ಸಮಸ್ಯೆಯನ್ನು ಬಗೆಹರಿಸುವದರ ಸಲುವಾಗಿ ಮಧ್ಯಸ್ಥಗಾರನಾಗಿಯು. ರಾ. ಸಂಘವು ಫ್ರಾಂಕ್ ಗ್ರಾಹಮರನ್ನು ನೇಮಿಸಿದೆ. ಗ್ರಾಹಮರು ಇಂಡೋನೇಶಿಯಕ್ಕೆ ಸಂ. ರಾ. ಸಂಘವು ಕಳಿಸಿದ ಸದ್ಭಾವ ಸಮಿತಿಯ ಸದಸ್ಯರಲ್ಲೊಬ್ಬರಾಗಿದ್ದರು. ಕಾಶ್ಮೀರದ ಪ್ರಧಾನಿ ಶ್ರೀ! ಅಬ್ದುಲ್ಲಾರವರು ಸ. ರಾ. ಸಂಘದ ಪ್ರತಿನಿಧಿಗೆ ಸಹಕಾರ ನೀಡಬೇಕೇ-ಅಥವಾ ತಟಸ್ಥ ಧೋರಣೆಯನ್ನು ವಹಿಸಬೇಕೋ ಹೇಗೆಂದು ಭಾರತಸರಕಾರದೊಡನೆ ವಿಚಾರ ವಿನಿಮಯಮಾಡುವದಕ್ಕಾಗಿ ದಿಲ್ಲಿಗೆ ಪ್ರಯಾಣಬೆಳೆಸಿದ್ದಾರೆ.

ಚೀನಾದ ಅಕ್ಕಿ

ಕೇಂದ್ರ ಆಹಾರ ಮತ್ತು ಕೃಷಿ ಇಲಾಖಾ ಕಾರ್ಯದರ್ಶಿಗಳಾದ ಶ್ರೀ ಕೆ. ಆರ್. ದಾಮ್ಲೆಯವರು ಚೀನಿ ಸರಕಾರವು ಒಂದು ಮಿಲ್ಲಿಯ ಟನ್ ಅಕ್ಕಿಯನ್ನು ಕೊಡಲು ಒಪ್ಪಿದೆಂದು ಹೇಳಿದರು. 50,000 ಟನ್ ಅಕ್ಕಿಯನ್ನು ಈಗಾಗಲೇ ಭಾರತ ಸರಕಾರವು ಪಡೆದಾಗಿದೆ.

ಮುದ್ರಾಸ್ ಸರಕಾರದ ಒತ್ತಾಯ

ಬರಗಾಲದ ಮಾತುಕತೆಯ ಪ್ರತಿನಿಧಿ ಮಂಡಳಿಯೊಡನೆ ದ. ಭಾ ರದವನ್ನೊಬ್ಬನನ್ನು ಸೇರಿಸಿಕೊಳ್ಳಬೇಕೆಂದು ಕೇಂದ್ರ ಸರಕಾರವನ್ನು ಮುದ್ರಾಸ ಸರಕಾರ ಒತ್ತಾಯಿಸಿದೆ. ಆಹಾರ ಧಾನ್ಯಗಳಲ್ಲಿ ಒಂದು ಲಕ್ಷ ಟನ್ ಹೆಚ್ಚಿಸಬೇಕೆಂದು ಕೇಳಿಕೊಳ್ಳಲಾಗಿದೆ. ಈ ತನಕ ಕೇಂದ್ರದಿಂದ ಯಾವ ರೀತಿಯಪ್ರತಿಕ್ರಿಯೆಯೂ ಕಂಡುಬಂದಿಲ್ಲ.

ಬರೋಡೆಯ ಮಹಾರಾಜರ ಕ್ಷಮಾಯಾಚನೆ?

ಬರೋಡೆಯ ಮಹಾರಾಜರು ಮತ್ತು ಮಹಾರಾಣಿಯವರು ದಿಲ್ಲಿಯಲ್ಲಿದ್ದು ರಾಷ್ಟ್ರಾಧ್ಯಕ್ಷರೊಡನೆ ತನ್ನ ಪದಚ್ಯುತಿಯ ವಿಚಾರವಾಗಿ ಪುನರ್ವಿಮರ್ಶಿಸಲು ಮನ ಒಲಿಸುತ್ತಿದ್ದಾರೆ. ರಾಜೇಂದ್ರ ಪ್ರಸಾದ್, ಜವಾಹರಲಾಲ್ ನೆಹರು, ಸಂಸ್ಥಾನ ಮಂತ್ರಿ ಮೊದಲಾದವರ ಭೇಟಿಯನ್ನು ಬಯಸಿದ್ದಾರೆ! ಮಹಾರಾಣಿ ಹಾಗೂ ಪ್ರತಾಪಸಿಂಗರು ವಿಶೇಷ ರಾಜರ ಸ್ಥಾನಮಾನ ಉಳಿಸುವದಕ್ಕಾಗಿ ತುಂಬ ಪ್ರಯತ್ನಿಸುತ್ತಿದ್ದಾರೆಂದು ತಿಳಿದುಬರುತ್ತದೆ. ಪ್ರತಾಪಸಿಂಗರು ತನ್ನ ಅಚಾತುರ್ಯಕ್ಕೆ ಪಶ್ಚಾತ್ತಾಪ ಪಟ್ಟು ಕ್ಷಮಾಯಾಚಿಸಬಹುದೆಂದೂ ನಂಬಲರ್ಹವಾದ ಕಡೆಯಿಂದ ವಾರ್ತೆಯಿದೆ.

ಚುನಾವಣೆ ಮುಂದೂಡಬೇಕಂತೆ

ಮುದ್ರಾಸು ಸರಕಾರದ ಶಾಸನ ಸಭಾ ಸದಸ್ಯರು ಮುದ್ರಾಸು ಪ್ರಾಂತದ ಚುನಾವಣೆಯನ್ನು ದಸೆಂಬರ ತಿಂಗಳಿಂದ 1950 ಫೆಬ್ರುವರಿ ತಿಂಗಳವರೆಗೆ ಮುಂದೂಡಬೇಕೆಂದು ಕೇಂದ್ರ ಸರಕಾರವನ್ನು ಒತ್ತಾಯಿಸುವ ಗೊತ್ತುವಳಿಯೊಂದನ್ನು ಸ್ವೀಕರಿಸಿಯದೆ.

ಉಪವಾಸದ ಮುಕ್ತಾಯ

ದ. ಆಫ್ರಿಕೆಯ ವರ್ಣದ್ವೇಷ ಮಸೂದೆಯ ನಿಷೇಧಾರ್ಥವಾಗಿ ಮಹಾತ್ಮಾಗಾಂಧಿಯವರ ಸುಪುತ್ರ ಶ್ರೀ ಮಣಿಲಾಲ್ ಗಾಂಧಿಯವರು ಕೈಗೊಂಡ 14ದಿನದ ಉಪವಾಸವ್ರತವು ಕೊನೆಗೊಂಡಿತು.

12 ಲಕ್ಷ ರೂಪಾಯಿಯ ಅಪಹರಣ

ಕಳೆದವಾರ ಮುಂಬಯಿಯಲ್ಲಿ 12 ಲಕ್ಷ ರುಪಾಯಿಯ ಅಪಹರಣ ನಡೆಯಿತು. ಲಾಯಿಡ್ಸ್ ಬ್ಯಾಂಕಿನ 12 ಲಕ್ಷ ರುಪಾಯಿಯನ್ನು ನೌಕರರು ಟ್ಯಾಕ್ಸಿಯಲ್ಲಿರಿಸಿಕೊಂಡೊಯ್ಯುವಾಗ ಡ್ರೈವರನನ್ನು ಗುಂಡಿಟ್ಟುಕೊಂದು ಉಳಿದ ಮೂರು ಜನ ಬ್ಯಾಂಕಿನ ನೌಕರರನ್ನು ಗಾಯಗೊಳಿಸಿ ಆಧುನಿಕ ವೇಷಧಾರಿಗಳಾದ ಐವರು ಅಪಹರಿಸಿಕೊಂಡು ಹೋದರು. ಅವರು ಟ್ಯಾಕ್ಸಿಯನ್ನು ಬ್ಯಾಂಕಿನ ಅರ್ಧಮೈಲಿನಾಚೆಯ ಥಿಯೇಟರೊಂದರ ಹತ್ತಿರದಲ್ಲಿ ಬಿಟ್ಟು ಪಲಾಯನ ಕೈಗೊಂಡಿದ್ದರು ಸಿ. ಐ.ಡಿ. ಹಾಗೂ ಪೋಲಿಸ ಇಲಾಖೆಯವರು ರೈಲ್ವೆ, ವಿಮಾನ, ನೌಕಾ ಮುಂತಾದ ಪ್ರಯಾಣ ಸ್ಥಳದ ಕಡೆಯಲ್ಲಿ ಪಹರೆಗಾವಲಿಟ್ಟಿದ್ದಾರೆ. ಇಡಿಯ ಮುಂಬಯಲ್ಲಿ ಶೋಧಕ್ಕಾಗಿ ವಿಶೇಷ ಜಾಗ್ರತೆಯನ್ನು ತೆಗೆದು ಕೊಳ್ಳಲಾಗಿದೆ. ಸಂಶಯದಲ್ಲಿ ಇಷ್ಟರಲ್ಲಿ, ಹಲವರನ್ನು ಬಂಧಿಸಲಾಗಿದೆ. ಇನ್ನೂ ಹಲವು ರೀತಿಯ ಶೋಧಗಳು ನಡೆಯುತ್ತಲಿವೆ.

ಎ. ಕೆ. ಗೋಪಾಲನ್ನರ ದಾವೆ ವರಿಷ್ಠ ಕಾರ್ಯಾಲಯಕ್ಕೆ

ಕಮ್ಯೂನಿಸ್ಟ ಮುಖಂಡರಾದ ಶ್ರೀ ಎ. ಕೆ. ಗೋಪಾಲನ್ನರನ್ನು ದೀರ್ಘಕಾಲದಿಂದ ಮುದ್ರಾಸ್ ಸರಕಾರ ಬಂಧನದಲ್ಲಿಟ್ಟದ್ದನ್ನು ಮುದ್ರಾಸು ಹೈಕೋರ್ಟು ತಪ್ಪೆಂದು ತೀರ್ಮಾನಿಸಿ ಎ. ಕೆ. ಗೋಪಾಲನ್ನರನ್ನು ಬಿಡುಗಡೆ ಮಾಡಿತ್ತಷ್ಟೆ. ಈಗ ತಿರುಗಿ ಮುದ್ರಾಸು ಸರಕಾರ ವರಿಷ್ಠ ನ್ಯಾಯಾಲಯಕ್ಕೆ ತನ್ನ ದೂರನ್ನು ಒಯ್ಯುವ ನಿರ್ಧಾರವನ್ನು ಮಾಡಿದೆಯೆಂದು ತಿಳಿದುಬರುತ್ತದೆ.

ಹುತಾತ್ಮರ ಸ್ಮಾರಕ

ಜಾಲಿಯನವಾಲಾದ ಚಾರಿತ್ರಿಕ ಘಟನೆಯಲ್ಲಿ ಮಡಿದವರ ಸ್ಮಾರಕಾರ್ಥವಾಗಿ ಟ್ರಸ್ಟಿಯೊಂದು ನೇಮಕವಾಗಿತ್ತು. ಕಾಂಗ್ರೆಸ್ಸಿನ ನಿರ್ಣಯದಂತೆ ಅದಕ್ಕೆ ಕೂಡಿಸಲಾದ ಹತ್ತುಲಕ್ಷ ರೂಪಾಯಿಗಳಿಗೆ ಕ್ರಮಬದ್ಧ ಸ್ವರೂಪವನ್ನು ಕೊಡಬೇಕೆನ್ನುವ ಒಂದು ಮಸೂದೆಯು ಪಾರ್ಲಿಮೆಂಟಿನ ಮುಂದೆ ಬಂದಿದೆ.

ಹಸಿದವರಿಗೆ ಗುಂಡು

ಕೂಚಬಿಹಾರಿನ 5000 ಜನರು, ಆಹಾರವಿಲ್ಲದ ಪರಿಸ್ಥಿತಿಯ ನಿಷೇಧಾರ್ಥವಾಗಿಯೂ ಹಲವು ಜಿಲ್ಲೆಗಳಲ್ಲಿ ಮುಡಿಗೆ 70 ರೂಪಾಯಿಯಂತೆ ಧಾರಣೆಯನ್ನು ಏರಿಸಿದುದರ ನಿಷೇಧಿಸುವದರ ಸಲುವಾಗಿ ಸೆಕ್ರೆಟರಿಯೇಟಿನ ಮುಂದೆ ಮೊರವಣಿಗೆ ತೆಗೆದರು. ಪೋಲಿಸರಿಗೂ ಇವರಿಗೂ ಆದ ಘರ್ಷಣೆಯ ಸಲುವಾಗಿ ಆರುಜನರು ಮಡಿದರು. 32 ಜನ ಗಾಯಗೊಂಡರು. 24 ಪೋಲಿಸರೂ ನಾಲ್ಕು ಜನ ಮುಖ್ಯ ಅಧಿಕಾರಿಗಳೂ ಗಾಯಗೊಂಡಿರುವರು. ಗಾಯಗೊಂಡವರ ಪೈಕಿ 12ಜನರು 2 ಪೋಲೀಸ್ ಕಾನ್ಸ್ಟೇಬಲ್‌ರ ಸ್ಥಿತಿಯೂ ಚಿಂತಾಜನಕವಾಗಿದೆ.

S. V. S HIGH SCHOOL,
KATAPADI, S. Kanara.

Wanted with effect from 1st June, 1951:—

2 Mathematics and 1 Science B T's

1 Qualified Drawing Master.

1 Secondary Grade Trained Lady Teacher—Preference will be given to one who has undergone Homecraft Training.

Salary.- Local Board Scale with Dearness allowance at Government Rate.

A Higher Start will be offered to teachers with experience

Ladies may also apply.

Apply immediately to:-

The Correspondent,— with a copy to the District Educational Officer, South Kanara

ಸಹಕಾರಿ ಸಂಘಗಳಿಗೆ— —
ಮ್ಯುನ್ಸಿಪಲ್ ಕೋರ್ಟುಗಳಿಗೆ—
ವರ್ಗದಾರರಿಗೆ—ಶಾಲೆಗಳಿಗೆ-
ಬೇಕಾಗುವ ರಿಜಿಸ್ಟ್ರಗಳು,
ರಶೀದಿ ಪುಸ್ತಕಗಳು,
ಫಾರ್ಮುಗಳು, ಎಕೌಂಟ್
ಪುಸ್ತಕಗಳು ದೊರೆಯುತ್ತವೆ.

ನವಯುಗ ಪ್ರೆಸ್ ಉಡುಪಿ.

ಚಂದಾ ವಿವರ
ವರ್ಷಕ್ಕೆ ರೂ. 5-12-0
6 ತಿಂಗಳಿಗೆ ರೂ. 3-0-0

ಗುರುವಾರ, ಉಡುಪಿ, ೨೬-೪-೫೧

ಮೆಕಾರ್ಥರ ಪ್ರಕರಣ

ಮೆಕಾರ್ಥರ ಪದಚ್ಯುತಿಯಿಂದಾಗಿ ಉಂಟಾದ ಪರಿಸ್ಥಿತಿಯನ್ನವಲೋಕಿಸುವಾಗ ಕೊರಿಯಾ ಯುದ್ಧದ ಪರಿಣಾಮವು ಗಂಭೀರವಾಗಬಹುದೋ ಎನುವ ಶಂಕೆ ಮೂಡುತ್ತದೆ. ಮೆಕಾರ್ಥರ ಪದಚ್ಯುತಿಯು ತಾತ್ಕಾಲಿಕ-ಸಂದಿಗ್ಧ ಪರಿಸ್ಥಿತಿಯಲ್ಲಿ ಅವರ ಸ್ಥಾನಾಪಹರಣ ತೀರಾ ಅನುಚಿತ-ಎನುವ ವಾದ ಹಲವು ರಾಜಕೀಯ ವರ್ಗಗಳಲ್ಲಿ ಕಂಡುಬರುತ್ತದೆ. ಮೆಕಾರ್ಥರರನ್ನು ಸರಿಗಟ್ಟಬಲ್ಲ ಯುದ್ಧರಂಗದ ಪರಿಪೂರ್ಣ ಜ್ಞಾನವುಳ್ಳ ಮೇಧಾವಿ ಬೇರೊಬ್ಬನಿಲ್ಲ! ಗೆಲವನ್ನು ಸಾಧಿಸುವಲ್ಲಿ ಅವರ ದೂರದರ್ಶಿತ್ವ ಅತ್ಯಂತ ಉಪಯುಕ್ತವಾದುದು. ಸದ್ದಿಲ್ಲದೆ ಧ್ಯೇಯ ಸಾಧಿಸುವ ವೀರ ವ್ಯಕ್ತಿತ್ವವವರದು. ಇಂತಹ ಅನುಭವಿಕ ವ್ಯಕ್ತಿಯನ್ನೂ ಗಂಭೀರ ಪರಿಸ್ಥಿತಿಯಿರುವಾಗಲೇ ಪದಚ್ಯುತಿಗೊಳಿಸಿದ್ದರಿಂದ 'ಪರಿಸ್ಥಿತಿಯು ಹತೋಟಿಗೆ ಬರುವ ಬದಲು ಇನ್ನಷ್ಟು ಗಂಭೀರವಾಗುವ ಲಕ್ಷಣ ಕಂಡುಬರುತ್ತಲಿದೆ. ಕಮ್ಯೂನಿಸ್ಟರು ಭೀಕರ ಧಾಳಿಯನ್ನು ಮಾಡುವ ಪೂರ್ವ ಸಿದ್ಧತೆಯಲ್ಲಿ ಮಗ್ನರಾಗಿರುವದನ್ನು ಸರ್. ಮೆಕಾರ್ಥರರು ಅರಿತುಕೊಂಡೇ ಅದಕ್ಕೆ ಪ್ರತೀಕಾರ ಮಾರ್ಗ ಹುಡುಕಿದರು. ಸಂ. ರಾ. ಸೈನ್ಯಗಳು ಕಮ್ಯೂನಿಸ್ಟರ ಭೀಕರ ಕದನವನ್ನೆದುರಿಸಲು ಶಕ್ತವಾಗಲಾರವು. ಅಂತಲೇ ಫಾರ್ಮೋಸಾದ ಚಿಯಾಂಗ್ ಕೈಶೇಕರ ಸೈನ್ಯವನ್ನು ಬಳಸಿಕೊಳ್ಳ ಬಯಸಿದರು. ಅದಕ್ಕೆ ತೀವ್ರವಾದ ವಿರೋಧ ಸೂಚನೆ ಬಂದಿತು. ಮಂಚೂರಿಯದಲ್ಲಿ ಶತ್ರುವು ತಾನು ಯುದ್ಧ ಸಿದ್ಧತೆಯ ಫಲವಾಗಿ ಇಂದಲ್ಲ ಒಂದು ದಿನ ಭಯಾನಕ ಯುದ್ಧವನ್ನು ಹೂಡಬಹುದು. ಅಂತಹ ದುರ್ದೈವ ಬರಬಾರದೆಂದೇ ಮಂಚೂರಿಯದಲ್ಲಿ ಶತ್ರು ಸಂಘಟನೆಯನ್ನು ಮುರಿಯಬೇಕೆಂಬ ಇಚ್ಛೆಯನ್ನು ಮೆಕಾರ್ಥರು ಮಾಡಿದರು. ಇದನ್ನು ನಿರಂಕುಶ ಪ್ರವೃತ್ತಿಯೆನ್ನಲಾಗದು. ಯುದ್ಧ ವಿಚಕ್ಷಣ ನೀತಿಯೆ ಇದಾಗಿರುತ್ತದೆ. ರಾಷ್ಟ್ರೀಯ ಚೀನಾದ ಸೈನ್ಯವನ್ನು ಉಪಯೋಗಿಸಕೂಡದೆನ್ನುವ ನಿರೋಧವೂ—ಮಂಚೂರಿಯದ ಮೇಲೆ ಬಾಂಬು ಧಾಳಿಯನ್ನು ಮಾಡಕೂಡದೆನ್ನುವ ಪ್ರತಿಭಟನೆಯೂ—ಮೆಕಾರ್ಥರನ್ನು ವಿವಂಚನೆಗೆ ಗುರಿಮಾಡಿದೆ. ಈ ರೀತಿಯ ಆದೇಶದಿಂದ ಕಟ್ಟಿ ಅವರ ಯುದ್ಧ ಪ್ರಗತಿಯನ್ನು ವಿರೋಧಿಸಿದ ಯು. ರಾ. ಸಂಘವು ಸರ್. ಮೆಕಾರ್ಥರರ ಕೀರ್ತಿಗೆ ಕಳಂಕವನ್ನು ತಂದಿದೆ.

ಮೆಕಾರ್ಥರರು ಮೇಲಿನ ಆಜ್ಞೆಯನ್ನು ಕಡೆಗಣಿಸಿ ಸ್ವೇಚ್ಛಾನುವೃತ್ತಿಯನ್ನು ಪ್ರದರ್ಶಿಸಿದರೆಂದು ಹೇಳುವ ಕಾರಣಗಳು ಅರ್ಥಶೂನ್ಯವಾದ್ದು! ಶಾಂತಿಕವಾದ ಮಾರ್ಗವನ್ನು ಯು. ರಾ. ಸಂಘವೇ ಮರೆಯುತ್ತ ಬಂದು, ಅತಂತ್ರವಾದ ಆದೇಶವನ್ನು ಕೊಟ್ಟು ಈಗ ಶತ್ರೋಪದೇಶವನ್ನು ಮಾಡುತ್ತಿರುವುದು ನಿಂದಾಸ್ಪದ ವಿಚಾರ. ತಾತ್ವಿಕ ರೀತಿಯಲ್ಲಿ ನಡೆದುಕೊಳ್ಳುವ ಮನಸ್ಸು ಇರುತ್ತಿದ್ದರೆ ಯು. ರಾ. ಸಂಘಕ್ಕೆ ಏಷ್ಯಾದ ರಾಷ್ಟ್ರಗಳ ಸಂಧಾನ ಸೂಚನೆ ಪಥ್ಯವಾಗುತ್ತಿತ್ತು. ಕಮ್ಯೂನಿಸ್ಟ ಚೀನಾವನ್ನು ಆಕ್ರಮಕ ರಾಷ್ಟ್ರವೆಂದು ಕರೆಯುವಲ್ಲಿ ಸ್ವಾರ್ಥ ನಿರಂಕುಶಮತಿಯ ಧೋರಣೆಯನ್ನು ಸಂ. ರಾ. ವಹಿಸಿತ್ತು. ಆ ಮೇಲೆ 38ನೆಯ ಅಕ್ಷಾಂಶವನ್ನು ದಾಟುವಾಗಲೂ ಶಾಂತಿ ಸಂಧಾನಗಳ ಸೋಪಾನವನ್ನು ಸಂ. ರಾ. ಸಂಘವು ಮುಚ್ಚಿಬಿಟ್ಟಿತು. ತಕ್ಕ ನೀತಿ ಆದರ್ಶ ಯಾವುದೂ ಅದಕ್ಕೆ ಬೇಕಾಗಿರಲಿಲ್ಲ. ಅದಕ್ಕೆ ಬೇಕಾಗಿದ್ದುದು ಕಮ್ಯೂನಿಸ್ಟ ಚೀನಾವನ್ನು ಮಣ್ಣುಮುಕ್ಕಿಸುವಂತಹದು. ಆ ಉದ್ದೇಶವನ್ನು ಸಾಧಿಸುವದಕ್ಕೆ ಬೇಕಾದ ಅಧಿಕಾರ ಸವಲತ್ತುಗಳನ್ನು ಮೆಕಾರ್ಥರರಿಗೆ ಕೊಟ್ಟಿತು. ಅಂತಲೇ ಮೆಕಾರ್ಥರ್ ತನ್ನ ಪಾಲಿನ ಕೆಲಸವನ್ನು ಮುಂದುವರಿಸಿದರು. ಅಮೆರಿಕೆಯ ಔದಾರ್ಯದ ಉರುಳಿಗೆ ಟ್ರೂಮನ್ ಪಾದಕ್ಕೆ ಸೈಗೊಟ್ಟ ರಾಷ್ಟ್ರಗಳು ಎಚ್ಚೆತ್ತು ಮುಂದಾಗಬಹುದಾದ ಪರಿಸ್ಥಿತಿಯಲ್ಲಿ ತಾವು ಚೇತರಿಸಿಕೊಳ್ಳಲಾರೆವೆಂದು ಅರ್ಥ ಮಾಡಿಕೊಂಡವು. ಅಮೇರಿಕೆಯ ಧೋರಣೆಯಿಂದ ತಾವು ಅಧಃಪತನ ಹೊಂದುತ್ತೇವೆಂದು ದೃಢಮಾಡಿಕೊಂಡು ಮಂಚೂರಿಯದ ಮೇಲೆ ಬಾಂಬು ಧಾಳಿ ನಡೆಸುವದನ್ನೂ—ಚೀನಾದ ಸೈನ್ಯಗಳನ್ನು ಬಳಸಿಕೊಳ್ಳುವುದನ್ನೂ ವಿರೋಧಿಸಿದವು. ಇಂತಹ ಋಣ ಪ್ರತಿಷ್ಠೆಯಿಂದ ಯುದ್ಧದ ಪರಿಣಾಮ ತಿರುವು ಮುರುವು ಆಗಬಹುದೆಂಬುದನ್ನು ಮೆಕಾರ್ಥರರೊಬ್ಬರೇ ಬಲ್ಲರು. ಈ ಸಾವಧಾನ ಧೋರಣೆಯಿಂದ ಉದ್ದೇಶವೇ ಕೆಟ್ಟು ಹೋಗಬಹುದೆಂದು ಮೆಕಾರ್ಥರರ ಸಂದರ್ಭೋಚಿತ ಯುದ್ಧ ಧರ್ಮವನ್ನು ಕೈಗೊಂಡರು. ಆ ಧೋರಣೆಯನ್ನು ಮೆಕಾರ್ಥರರ ಅಧಿಕಾರದ ದುರುಪಯೋಗವೆಂದು ಮೆಕಾರ್ಥರರನ್ನು ಪದಚ್ಯುತಿಗೊಳಿಸಲಾಯಿತು.

ಮುಂದಾದರೂ ಮೆಕಾರ್ಥರ ಮಾರ್ಗವನ್ನು ತುಳಿಯುವುದಕ್ಕಿಂತ ಅನ್ಯ ಮಾರ್ಗವಿಲ್ಲ. ಜನರಲ್ ರಿಜ್‌ವೇಯವರೂ ಅದನ್ನೇ ಒಪ್ಪಿ ಹೇಳಿದ್ದಾರೆ. ಈಗಲೀಗ ಯುದ್ಧರಂಗದಿಂದ ಬಂದ ಸುದ್ದಿಯಿಂದ ಮೆಕಾರ್ಥರ ಹೇಳಿಕೆಯ ಫಲಶ್ರುತಿ ಕಂಡುಬರುತ್ತಲಿದೆ. ಒಮ್ಮೆಲೇ ಗಂಭೀರವಾದ ಯುದ್ಧ ಕ್ರಮವನ್ನು ಕೈಗೊಂಡದ್ದು ಕಂಡುಬಂದಿದೆ. ಇಷ್ಟು ಸಮಯ ಪೂರ್ವ ಸಿದ್ಧತೆಯಲ್ಲೇ ಅವರು ಕಾಲಹರಣ ಮಾಡಿದ್ದರು. ಇಮ್ಜಿನ ಹೊಳೆಯ ಬದಿಯಲ್ಲಿ ನಡೆದ ಈ ಕದನದಲ್ಲಿ ಈ ಹಿಂದೆಂದೂ ತೋರಿಸದ ಅಂತಿಮ ಸಾಹಸವನ್ನು ಕಮ್ಯೂನಿಸ್ಟರು ತೋರಿಸಿರುವರೆಂದು ಹೇಳಲಾಗಿದೆ.

ಮುಂದೇನು ಮಾಡಬೇಕೆಂಬುದೇ ಬಹು ದೊಡ್ಡ ಪ್ರಶ್ನೆ. ಕೆಟ್ಟ ಮೇಲೆ ಬುದ್ಧಿ ಬರುವದೆನ್ನುವದನ್ನು ಯು. ರಾ. ಸಂಘ ಹಾಗೂ ಅಮೆರಿಕೆಗಳ ಶೋಚನೀಯ ಪರಿಸ್ಥಿತಿಯಿಂದ ಅರಿತಂತಾಯಿತು. ಏಷ್ಯಾದ ರಾಷ್ಟ್ರಗಳು ಸೂಚಿಸಿದ ಅಂಶವನ್ನು ಯು. ರಾ. ಸಂಘ ಒಪ್ಪುತ್ತಿದ್ದರೆ ಈ ಗಂಭೀರ ಪರಿಸ್ಥಿತಿಯೇ ಉಂಟಾಗುತ್ತಿರಲಿಲ್ಲ. ಆದರೆ ಈಗ ಮುಂದಿಟ್ಟ ಹೆಜ್ಜೆಯನ್ನು ಹಿಂತೆಗೆಯುವುದಕ್ಕೆ ಆತ್ಮಾಭಿಮಾನ ಬಿಡದು; ಸೋಲಾಗಲೀ—ಗೆಲುವಾಗಲೀ ಕೊರಿಯದಲ್ಲಿ ಕಮ್ಯೂನಿಸ್ಟರ ವಿರುದ್ಧ ಕಾದಾಡಲೇ ಬೇಕಾಗಿದೆ. ಇಂತಹ ಸನ್ನಿವೇಶ ಮೆಕಾರ್ಥರ ಪದಚ್ಯುತಿಯಿಂದ ಬದಲಾಗದು. ಯುದ್ಧವೇ ಶರಣೆಂದು ಭಾವಿಸಿದ ಮೇಲೆ ಮೆಕಾರ್ಥರನ್ನು ಪದಚ್ಯುತಿಗೊಳಿಸಿದ್ದು ಮೂರ್ಖತನದ್ದಾಗಿದೆ. ಕೊರಿಯದ ಈ ಸಮಸ್ಯೆ ಹೇಗೆ ಪರಿಹರಿಸಿತೆನ್ನುವುದು ಚರ್ಚಾಸ್ಪದ ವಿಚಾರ. ಮುಂದೆ ಸಂಧಾನಮಾರ್ಗದಿಂದ ಬಗೆಹರಿದೀತೆನ್ನುವದರಲ್ಲಿ ಯಾವ ಯಥಾರ್ಥವೂ ಇರುವುದಿಲ್ಲ. ಅಂತೂ ಯು. ರಾ. ಸಂಘ ಹಾಗೂ ಅಮೆರಿಕೆಗಳ ದುರಹಂಕಾರ, ಕುಟಿಲ ರಾಜಕೀಯ ನೀತಿಯಿಂದ ಈ ನರಮೇಧ ಉಂಟಾಯಿತು. ಅವರು ಮಾಡಿದ ಅನುಚಿತ ಹಾಗೂ ಅಕ್ಷಮ್ಯ ಅಪರಾಧದ ಫಲವನ್ನು ಇಂದು ಉಣ್ಣಲೇಬೇಕಾಗಿದೆ.

ಹಾರುವ ಕಿಡಿಗಳು

'ತಾನು ಮೇಲೆ' 'ತನ್ನ ಅಧಿಕಾರ ಹೆಚ್ಚು' ಎಂಬುದಕ್ಕಾಗಿಯೇ ಎಲ್ಲೆಲ್ಲಿಯೂ 'ಜಟಾಪಟಿ' ನಡೆಯುವಂತೆ ತೋರುತ್ತದೆ, ಉಡುಪಿ ನಗರಸಭೆಯಾದರೂ ಇದಕ್ಕೆ ಅಪವಾದವಾಗಿಲ್ಲ.

೦೦

ತಾ 20ರಲ್ಲಿ ಬರಿಯ 'ಜಟಾಪಟಿ'ಯಿಂದಲೇ ನಗರಸಭೆ ಮುಕ್ತಾಯಗೊಂಡು ಮುಂದುವರಿಸಲ್ಪಟ್ಟಿತು. ಹೊಸ ಕಮಿಶನರು ಬಂದಂದಿನಿಂದ ವಾತಾವರಣವೇ ಬದಲಾದಂತಿದೆ.

೦೦

ಕೌನ್ಸಿಲು ಸಭಾಕಟ್ಟಡದಲ್ಲಿ ರಾಷ್ಟ್ರಧ್ವಜವನ್ನಿಡದಕ್ಕಾಗಿ ಸದಸ್ಯರೊಬ್ಬರು ನಿಲುವಳಿ ಸೂಚನೆ ತಂದರು, ಪ್ರಶ್ನೋತ್ತರಗಳ ವಿಚಾರ ಬಂದಾಗ ಬರಹ ಮೂಲಕ ಉತ್ತರಗಳು ಸಿಕ್ಕದ್ದರಿಂದ ಇತರ ಕೌನ್ಸಿಲುಗಳಲ್ಲಿ ಈ ಪದ್ಧತಿ ಇಲ್ಲವೆಂದು ಕಮಿಶನರು ಉತ್ತರಿಸಿದರೂ ಅದು ಸರಿಯಲ್ಲವೆಂದು ಸಭೆಯೇ ಮುಂದರಿಸಲ್ಪಟ್ಟಿತು.

೦೦

ಆ ಸಭೆಯಲ್ಲಿ ಕೌನ್ಸಿಲರ ಹಾಜರಿ ಕಡಿಮೆಯೇ ಇದ್ದರೂ ನಿರ್ಣಯ ಒಮ್ಮತದಿಂದಲೇ ಆಯಿತು. ತಿಕ್ಷ್ಣವಿಲ್ಲದಿದ್ದರೂ ಒಮ್ಮತವಿದೆಯಲ್ಲ,

೦೦

ಗಾಂಧೀ ತತ್ವ ಗಾಳಿಯಲ್ಲಿ ತೂರಿ ಹೋದರೂ ಗಾಂಧೀಪಟ ಗೋಡೆಯಲ್ಲಿ ತೂಗಬಿಟ್ಟರಾಯಿತು.

೦೦

ಉಡುಪಿಗೆ ಕೃಷ್ಣನಿಂದ ಪ್ರಸಿದ್ಧಿಯಾದರೆ ಕಾರ್ಕಳಕ್ಕೆ ಗೋಮಟೇಶ್ವರನಿಂದ ಖ್ಯಾತಿಯೆನ್ನಬಹುದು. ಇದೀಗ ಗೋಮಟೇಶ್ವರ ಮಹಾಮಸ್ತಕಾಭಿಷೇಕದಿಂದಾಗಿ ಎಲ್ಲರ ದೃಷ್ಟಿ ಮುಖ್ಯವಾಗಿ ಸಮಸ್ತ ಭಾರತದ ಜೈನರ ದೃಷ್ಟಿ ಕಾರ್ಕಳದ ಕಡೆಗೆ ಹೊರಳಿದೆ.

೦೦

ಹನ್ನೊಂದು ಲಕ್ಷ ಜೈನರಲ್ಲಿ ನಾಲ್ಕು ಲಕ್ಷ ಜೈನರು. ಕಾರ್ಕಳಕ್ಕೆ ಆಗಮಿಸಬಹುದೆಂದಾಗಿ ನಿರೀಕ್ಷಿಸಲಾಗಿದೆಯಂತೆ.

೦೦

ಮಸ್ತಕಾಭಿಷೇಕವು ಮೂವತ್ತು ವರ್ಷಗಳಿಗೊಮ್ಮೆ ಜರಗುತ್ತದೆ. ಈ ಮೊದಲು 1921ರಲ್ಲಿ ಜರಗಿತ್ತು. ಇನ್ನು ಈ ಅವಧಿಯನ್ನು ಕಡಿಮೆ ಮಾಡಿದರೂ ಮಾಡಬಹುದಂತೆ.

೦೦

5-6ಶತಮಾನಗಳ ಹಿಂದೆ 650ಅಡಿ ಎತ್ತರದ ಬೆಟ್ಟದಲ್ಲಿ 40ಅಡಿ ಎತ್ತರದ ಗೋಮಟೇಶ್ವರನ ನಿರ್ಮಾಣವಾಯಿತೆಂದು ಹೇಳಲಾಗಿದೆ.

೦೦

ಸ್ವಜಾಹೀರಾತಿನ ಕೆಟಲಾಗಿಗೂ ಖಾಯಿಷ ಇದೆ; ಸ್ವಕಾರ್ಯಸಾಧನೆ ಮಾಡಿಕೊಳ್ಳುವಾಗಲೂ ಸಾರ್ವಜನಿಕ ಕೆಲಸದ ಸೋಗು ಇದೆ.

೦೦

ಮಾಡುವುದು 'ಡಿಕ್ಟೇಟರಶಾಯಿ'; ಆಡುವುದು ಜನಾಭಿಪ್ರಾಯ;

೦೦

ಎದ್ದ ಜಗಳವನ್ನು ನಿಲ್ಲಿಸಿ ಕೀರ್ತಿಪಡೆವವರುಂಟು, ಜಗಳವನ್ನು ಎಬ್ಬಿಸಿಯೂ 'ಕೀರ್ತಿ' ಪಡೆವವರುಂಟು,

೦೦

ಮಾತುಮಾತಿನಲ್ಲಿ ಕಾಸು ದೇಹಸ್ಥಿತಿಯಲ್ಲಿ ಚಿಕ್ಕಾಸೂ ಬಿಡ.

೦೦

ವೇಷಾಂತರ ಹೊಂದಬಲ್ಲ; ದೇಶಾಂತರ ಹೋಗ ಬಲ್ಲ.

೦೦

'ಪ್ರಾಕ್ಟೀಸು' ಹೆಚ್ಚಿದೊಡನೆ ಜನ ಮೆಚ್ಚಿದಂತಲ್ಲ; ಹಣ ಹೆಚ್ಚಿದೊಡನೆ ಮಾನ ಹೆಚ್ಚಿದಂತಲ್ಲ!

೦೦

ಕೆರೆಯ ಅಮಲಿರುವವ ಎಷ್ಟು ಸೆರಗೊಡ್ಡಿದರೇನು? ಹರಿದ ಅರಿವೆಗೆ ಎಷ್ಟು ತೇಪ ಹಾಕಿದರೇನ?

೦೦

ಮುನಿವ ಮಾರಿಗಾದರೆ ಪೂಜೆ ಇದೆ; ಒಲಿವ ನಾರಿಗಾದರೆ ಒದೆಯೂ ಬೀಳಬಹುದು.

ನವಯುಗದ

ಚಂದಾದಾರರಲ್ಲಿ ವಿನಂತಿ

ಇತ್ತೀಚಿಗೆ ವೃತ್ತಪತ್ರಿಕೆಗಳಿಗೆ ಉಪಯೋಗಿಸಲಾಗುತ್ತಿರುವ ಕಾಗದದ ಅಭಾವ ಮತ್ತು ವಿಪರೀತ ಬೆಲೆಯಿಂದಾಗಿ ತಯಾರಿಕೆಯ ವೆಚ್ಚವೂ ಹೆಚ್ಚಾಗಿರುತ್ತದೆ. ಇಂತಹ ಪರಿಸ್ಥಿತಿಯಲ್ಲಿ ನಮ್ಮ ಚಂದಾದಾರರು ದಯಮಾಡಿ ತಮ್ಮ ತಮ್ಮ ಚಂದಾ ಹಣವನ್ನು ಮುಂದಾಗಿ ಕಳುಹಿಸಿಕೊಟ್ಟು ಪ್ರೋತ್ಸಾಹಿಸಬೇಕಾಗಿ ಬಿನ್ನಹಿಸುತ್ತೇವೆ. ಅಲ್ಲದೆ ಚಂದಾಹಣ ಬಾಕಿ ಮಾಡಿಕೊಂಡಿರುವ ಮಹನೀಯರಂತೂ ಬಾಕಿಯನ್ನು ಜಾಗ್ರತೆಯಾಗಿ ಕಳುಹಿಸಿಕೊಡುವಂತೆ ಕಳಕಳಿಯ ವಿನಂತಿ ಇದೆ. ಪತ್ರಿಕೆ ಬೇಡವೆಂದಿರುವವರೂ, ವಿಳಾಸ ಬದಲಾದವರೂ ಸಕಾಲದಲ್ಲಿ ತಿಳಿಸುವಂತೆ ಕೇಳಿಕೊಳ್ಳುತ್ತೇವೆ.

—ಮೆನೇಜರ್

ಉಡುಪಿ

ಕಾಂಗ್ರೆಸ್ ಕಮಿಟಿ ಸಭೆ—ಉಡುಪಿ ಕಾಂಗ್ರೆಸ್ ಕಮಿಟಿಯ ಕಾರ್ಯನಿರ್ವಾಹಕ ಮಂಡಳಿಯ ಸಭೆಯು ಇದೇ ತಾ 18ರಲ್ಲು ಸಂಜೆ ಶ್ರೀ ಬಾಳ್ಕಟ್ಟ ಬೀಡು ಕೃಷ್ಣಯ್ಯ ಹೆಗ್ಡೆರ ಅಧ್ಯಕ್ಷತೆಯಲ್ಲಿ ಜರಗಿತು. ಕೃಷಿಕರಲ್ಲದವರಿಗೆ ಗ್ರಾಮಗಳಲ್ಲಿ ಅಕ್ಕಿ ಸಿಕ್ಕುವಂತೆ ರಿಲೀಫ್ ಅಂಗಡಿಗಳನ್ನು ಗ್ರಾಮಕೇಂದ್ರಗಳಲ್ಲಿ ಬೇಗನೆ ತೆರೆಯುವಂತೆಯೂ ನಿರುದ್ಯೋಗೀ ನೇಕಾರರಿಗೆ ಸಾಕಷ್ಟು ಪ್ರಮಾಣದಲ್ಲಿ ನೂಲು ಸಿಗುವಂತಹ ವ್ಯವಸ್ಥೆ ಮಾಡುವಂತೆಯೂ ಜಿಲ್ಲಾ ಕಲೆಕ್ಟರರನ್ನು ವಿನಂತಿಸಲಾಯಿತು. ಆಹಾರ ಪ್ರಶ್ನೆಯನ್ನು ಬಗೆಹರಿಸುವ ಸರಕಾರೀ ಯೋಜನೆಗೆ ಬೆಂಬಲವಿತ್ತು ವರ್ತಕರು, ಜಮೀನ್ದಾರರು ತಮ್ಮಲ್ಲಿರುವ ಉಳಿತಾಯ ಅಕ್ಕಿಯನ್ನು ತಂತಮ್ಮ ಗ್ರಾಮ ಕೇಂದ್ರದ ರಿಲೀಫ್ ಅಂಗಡಿಗಳಿಗೆ ಒಪ್ಪಿಸಿ ಸಹಕರಿಸಬೇಕಾಗಿ ಅವರೆಲ್ಲರನ್ನೂ ವಿನಂತಿಸುವ ನಿರ್ಧಾರವಾಯಿತು.

ಉಡುಪಿ ರೈತ ಹಿಂದ್ ಕಿಸಾನ್ ಸಮ್ಮೇಳನವು—ಇದೇ ತಾ. 18ರಲ್ಲು ಸ್ಥಳೀಯ ಬೋರ್ಡ್ ಹೈಸ್ಕೂಲಿನ ಪೀಪಲ್ಸ್ ಹಾಲಿನಲ್ಲಿ ಕುಂದಾಪುರ ವಕೀಲ್ ಶ್ರೀ ಪಿ. ಶ್ರೀನಿವಾಸ ಸೆಟ್ಟರ ಅಧ್ಯಕ್ಷತೆಯಲ್ಲಿ ಜರಗಿತು. ರೈತರ ಪರಿಸ್ಥಿತಿಯ ಕುರಿತು ಶ್ರೀಗಳಾದ ಎನ್. ಶಿಕಲದಾಸ್, ಮರ್ಣೆ ಗೋವಿಂದ ಸೆಟ್ಟಿ, ರಾಮಕೃಷ್ಣರಾವ್, ಬಾಳಪ್ಪ, ಸಂಜೀವನಾಥ, ಸಂಜೀವ ಸೆಟ್ಟಿ, ರಾಜೀವ ಮೊದಲಾದವರು ಭಾಷಣ ಮಾಡಿದರು. ಭೂಮಿಯ ಮೇಲಿನ ಗೇಣಿಯು ಶೀರ್ವೆಯ ಎರಡು ಪಾಲಿಗೆ ಮಿಗದಷ್ಟು ಇರತಕ್ಕದ್ದು. ಬೇಸಾಯಗಾರರಿಗೆ ಭೂಮಿಯ ಮೇಲೆ ಶಾಶ್ವತ ಹಕ್ಕು ದೊರೆತು, ಅವರೂ ಸ್ವತಂತ್ರ ಪ್ರಜೆಗಳೆಂದು ಪರಿಗಣಿಸಲ್ಪಡಬೇಕು. ಒಕ್ಕಲುತನ ಸುಧಾರಣಾ ಮಸೂದೆಯನ್ನು ಮದ್ರಾಸು ಸರಕಾರವು ಬೇಗನೇ ಜಾರಿಗೆ ತರತಕ್ಕದ್ದು. ಇಂತಹ ಶಾಸನ ಜಾರಿಗೆ ಬರುವವರೆಗೆ ಬೇಸಾಯಗಾರರನ್ನು ಒಕ್ಕಲೆಬ್ಬಿಸುವ ಸಲುವಾಗಿ ದಕ್ಷಿಣಕನ್ನಡ ಜಿಲ್ಲೆಯ ಬೇರೆಬೇರೆ ಕೋರ್ಟುಗಳಲ್ಲಿ ನಡೆಯುತ್ತಿರುವ ದಾವೆಗಳನ್ನು ಒಂದು 'ಸ್ಟೇ ಆರ್ಡರು' ಮೂಲಕ ಸರಕಾರ ಕೂಡಲೇ ತಡೆಹಿಡಿಯತಕ್ಕದ್ದು ಇತ್ಯಾದಿ ನಿರ್ಣಯಗಳಾದುವು.

ಶಾಲಾ ವರ್ಧಂತಿ—ಕಡಿಯಾಳಿ ಶ್ರೀ ಮಹಿಷಮರ್ದಿನಿ ಹಾ! ಎ! ಶಾಲೆಯ ವರ್ಧಂತಿಯು ಕುಂದಾಪುರ ಸಬ್‌ಕಲೆಕ್ಟರ್ ಶ್ರೀ ಪಿ. ಎಸ್. ತಿಮ್ಮಪ್ಪ ಸೆಟ್ಟರ ಅಧ್ಯಕ್ಷತೆಯಲ್ಲಿ ಜರಗಿತು. ಬಾಲಿಕೆಯರ ಪ್ರಾರ್ಥನೆಯ ಬಳಿಕ ಶಾಲಾ ಮುಖ್ಯೋಪಾಧ್ಯಾಯ ಶ್ರೀ ನಿವಾಸ ಭಟ್ಟರು ಶಾಲಾವರದಿಯನ್ನೋದಿದರು. ಶ್ರೀ ಕುಮಾರ ಸ್ವಾಮಿಯವರು ಶಾಲಾ ಪುಸ್ತಿವಾಚನ ಮಾಡಿದರು. ಬಹುಮಾನ ವಿತರಣೆಯಾದನಂತರ ಅಧ್ಯಕ್ಷರು ಮಕ್ಕಳಲ್ಲಿರಬೇಕಾದ ಶಿಸ್ತು, ನಿಯಮಗಳ ಕುರಿತು ನಾಲ್ಕು ಮಾತುಗಳನ್ನಾಡಿ ಹೆಚ್ಚು ಆಹಾರೋತ್ಪಾದ ಯೋಜನೆ, ಮುಂಬರುವ ಚುನಾವಣೆ ಕುರಿತು ಪ್ರಸ್ತಾಪಿಸಿದರು. ಶಾಲಾ ಬಾಲಬಾಲಿಕೆಯರ ವಿನೋದಾವಳಿಗಳಾಗಿ ಸಭಾಂತ್ಯವಾಯಿತು. ಮರುದಿನ ಶಾಲಾ ಅಧ್ಯಾಪಕರಿಂದ 'ಬ್ರಹ್ಮಚಾರಿ' ಸಾಮಾಜಿಕ ನಾಟಕವು ಅಭಿನಯಿಸಲ್ಪಟ್ಟಿತು.

ಅರ್ಜಂಟ್ ಸಭೆ— ತಾ. ೭೦ಕ್ಕೆ ಮುಂದುವರಿಸಲ್ಪಟ್ಟ ಮುನಿಸಿಪಲ್ ಕೌನ್ಸಿಲಿನ ಅರ್ಜಂಟ್ ಸಭೆಯು ಇದೇ ತಾ. 23ರಲ್ಲು ಬೆಳಗ್ಗೆ ಶ್ರೀ ಯು. ಎಸ್. ನಾಯ್ಕರ ಅಧ್ಯಕ್ಷತೆಯಲ್ಲಿ ಜರಗಿತು. ಮುನಿಸಿಪಲ್ ಹುಡುಗಿಯರ ಶಾಲಾ ಕಟ್ಟಡ ಪೂರ್ಣತೆಯ ಸಾಧ್ಯಾಸಾಧ್ಯತೆಯ ಕುರಿತು ಚರ್ಚೆ ನಡೆಯಿತು. ರೂ. 10,500/-ನ್ನು ಕೌನ್ಸಿಲಿನಿಂದ ಕಟ್ಟಡ ನಿರ್ಮಾಣ ಕಮಿಟಿಗೆ ಕೇಳುವುದೆಂದಾಯಿತು

ಮಲ್ಪೆಯಲ್ಲಿ ಭದ್ರತೆ—ಕಳೆದ ವಾರ ಮುಂಬಯಿಯಿಂದ ಬಂದ ಸ್ಟೀಮರು ಸಮುದ್ರದಲ್ಲಿ ತುಫಾನು ಇದ್ದುದರಿಂದ ತಾ. 19ನೆ ರಾತ್ರಿ ಮಂಗಳೂರಲ್ಲಿ ಪ್ರಯಾಣಿಕರನ್ನು ಇಳಿಸಲಿಕ್ಕಾಗದೆ ಪುನಹ ಮಲ್ಪೆಗೆನೇ ಹಿಂದೆ ಬಂದು ಭದ್ರತೆಪಡೆದು ನಿರಾಪಾಯವಾಗಿ ಪ್ರಯಾಣಿಕರನ್ನು ಇಳಿಸಬೇಕಾಯಿತೆಂದು ತಿಳಿದು ಬರುತ್ತದೆ. ಮಲ್ಪೆಯ ಯೋಗ್ಯತೆಯನ್ನು ತಿಳಿಯಲಾರದವರು ಇದುವೇ ಪ್ರಬುದ್ಧ ಬಂದರವಾಗಲು ಅರ್ಹತೆಯುಳ್ಳದೆಂಬುದನ್ನು ಇನ್ನಾದರೂ ತಿಳಿಯಲಿ.

ಹಿಂದೂ ಕೋಡ್—ಅಳಿಯ ಸಂತಾನ ಸಮಿತಿ ಸಭೆಯು ಇದೇ ತಾ. 28ಕ್ಕೆ ತಿಲ್ಲಿಗೆ ಕೇಂದ್ರ ಸರಕಾರಕ್ಕೆ ನಿಷ್ಕ ಮಂಡಲಿ ಕಳುವುದು. ಈ ಸಮಿತಿಯ ಸಭೆಯು ಇದೇ ತಾ. ೧೫ರಲ್ಲು ಶ್ರೀ ಎ. ಶಂಕರಾಳ್ವರ ಅಧ್ಯಕ್ಷತೆಯಲ್ಲಿ ಕೆನರಾ ಛಾಪಖಾನೆಯಲ್ಲಿ ನಡೆದು ಈ ಕೆಳಗಿನ ನಿರ್ಣಯಗಳು ಮಂಜೂರಾದುವು. ಹಿಂದೂ ಕೋಡು ಮಸೂದೆಗೆ ಅಳಿಯ ಸಂತಾನಿಗರನ್ನು ಯಾವ ರೀತಿ ಸೇರಿಸುವುದೆಂಬ ಕುರಿತು ಸರಿಯಾದ ವಿಚಾರ ಮಾಡಿ ಸೂಚನೆಗಳನ್ನು ತಯಾರಿಸಲು ಶ್ರೀಗಳಾದ ಎ. ಶಂಕರಾಳ್ವ, ಪಿ. ಯಂ ಹೆಗ್ಡೆ, ಬಿ. ಬಿ. ಶೆಟ್ಟಿ, ಬಿ. ಎಸ್. ಭಾಸ್ಕರ ರೈ, ಬಿ. ಆರ್. ಕರ್ಕೇರ, ಕೆ. ಕೆ. ಸೆಟ್ಟಿ, ಬಿ. ಟಿ. ಸೆಟ್ಟಿ, ಎಚ್. ಕೆ. ತಿಂಗಳಾಯ, ಕೆ. ಸಂಜೀವ ಶೆಟ್ಟಿ, ಎ. ಮಹಾಬಲ ರೈ, ಎಮ್. ಗಿರಿಯಪ್ಪ, ಎಮ್. ಕೆ. ದೇವರಾಜ್, ಬಿ. ಹಿರಿಯಣ್ಣ ಹೆಗ್ಡೆ, ಕೊಕ್ಕೈಲು ಸಂಜೀವ ಸೆಟ್ಟಿ ಮತ್ತು ಕ್ಯಾಪ್ಟನ್ ತಿಮ್ಮಪ್ಪ ಸೆಟ್ಟಿಯವರಿಂದ ಕೂಡಿದ ಉಪಸಮಿತಿಯೊಂದನ್ನು ರಚಿಸಲಾಯಿತು. ತಿಷ್ಕಮಂಡಳಿಯವರು ಕೇಂದ್ರ ಸರಕಾರಕ್ಕೊಪ್ಪಿಸಲಿರುವ ನಿಶ್ಚಿತ ಸೂಚನೆಗಳನ್ನು ಇದೇ ತಾ. 26ನೆ ಸಂಜೆ ಐದುತಾಸಿಗೆ ದಕ್ಷಿಣಕನ್ನಡ ಜಿಲ್ಲಾ ಕಾಂಗ್ರೆಸ್ ಕಮಿಟಿಯ ಆಫೀಸಿನಲ್ಲಿ ಜರಗಲಿರುವ ಹಿಂದೂ ಕೋಡು-ಅಳಿಯ ಸಂತಾನ ಸಮಿತಿಯ ಮಹಾಸಭೆಯ ಮುಂದಿಟ್ಟು ಸಮ್ಮತಿ ಪಡೆಯಬೇಕೆಂದು ನಿರ್ಣಯಿಸಲಾಯಿತು.

ಕಾಂಗ್ರೆಸ್ ಪ್ರಚಾರ ಸಭೆಗಳು—ಕುಂದಾಪುರ ತಾಲೂಕು ಕಾಂಗ್ರೆಸ್ ಕಮಿಟಿಯ ಆಶ್ರಯದಲ್ಲಿ ತಾ 19-4-51ರಂದು ತೀರ್ಥಹಳ್ಳಿ ಶ್ರೀ ಶ್ರೀಧರಸುಬ್ರಾಯ ಕಾಮತರು ಅಧ್ಯಕ್ಷತೆಯಲ್ಲಿಯೂ ತಾ 20-4-51ರಲ್ಲಿ ಬೈಂದೂರಲ್ಲಿ ಶ್ರೀ ಕೃಷ್ಣ ಭಟ್ಟರ ಅಧ್ಯಕ್ಷತೆಯಲ್ಲಿಯೂ ಪ್ರಚಂಡ ಸಭೆಗಳು ಜರಗಿದವು ಇಂದಿನ ಕಾಂಗ್ರೆಸು ಸರಕಾರ. ಆದರ ಮುಂದಿರುವ ಕಠಿಣ ಸಮಸ್ಯೆಗಳು ಅಪಾರದ ಬಿಕ್ಕಟ್ಟು. ಅದರ ನಿವಾರಣೋಪಾಯ. ಜನತೆಯ ಕರ್ತವ್ಯ ಪಕ್ಕಲು ಹಿತಕ್ಕಾಗಿ ಸರಕಾರವು ಅನುಸರಿಸಬೇಕಾದ ರೀತಿ ನೀತಿ, ದೇಶದ ಅಭಿವೃದ್ಧಿಗಾಗಿ ಸರಕಾರವು ಅವಿಶ್ರಾಂತವಾಗಿ ಪಡುವ ಪರಿಶ್ರಮ ಇವನ್ನು ಸುರಸವೂ ಮನೋರಂಜಕವೂ ಆಗಿ ಶ್ರೀ ಎನ್. ಎಸ್. ಪರಮೇಶ್ವರಯ್ಯ ಶ್ರೀ. ಎಚ್ಚರೆ ಮಂಜಯ್ಯ ಶೆಟ್ರು ಶ್ರೀ ಕೊಕ್ಕೈಲು ಸೂರಪ್ಪ ಶೆಟ್ರು. ಶ್ರೀ ಎನ್. ಎಸ್. ಕಿಲ್ಲೆಯವರು ಭಾಷಣವಿತ್ತರು. ಎರಡೂ ಕಡೆಗಳಲ್ಲಿ ಧನಿವಾಹಕ ಯಂತ್ರದ ವ್ಯವಸ್ಥೆಯೂ ಇದ್ದಿತು. ಇದೇ ರೀತಿ ಬೇರೆ ಬೇರೆ ಕೇಂದ್ರಗಳಲ್ಲಿ ಸಭೆಗಳನ್ನು ಜರಗಿಸಿ ಕಾಂಗ್ರೆಸು ಪ್ರಚಾರ ಮಾಡಿ ಜನ ಜಾಗ್ರತಿಗೊಳಿಸುವ ಏರ್ಪಾಡು ಮಾಡುತ್ತಿರುವರಾಗಿ ತಿಳಿದುಬಂದಿದೆ.

ಹಿಂದುಸ್ಥಾನದಲ್ಲಿ ಬ್ಯಾಟರಿ ಕೈಗಾರಿಕೆಯಲ್ಲಿ ಎಸ್ಟ್ರೇಲಾ ಬೆಟರಿಸ್, ಸಂಸ್ಥೆಯ ಸ್ಥಾನ.

ಬ್ಯಾಟರಿ ಕೈಗಾರಿಕೆಯು ಹಿಂದೂಸ್ಥಾನದಲ್ಲಿ ಕಳೆದ ಹತ್ತುವರುಷಗಳಿಂದ ಪ್ರಗತಿಯನ್ನು ಹೊಂದುತ್ತಲಿದ್ದು ಎಸ್ಟ್ರೆಲಾ ಬೆಟರೀಸ್ ಲಿಮಿಟೆಡ್ ಈ ಸಂಸ್ಥೆಯವರು ಅದರ ಅಭ್ಯುದಯಕ್ಕೆ ಹೆಚ್ಚಿನ ಸೇವೆಯನ್ನು ಸಲ್ಲಿಸಿರುವರು. ಎಸ್ಟ್ರೆಲಾ ಕಂಪೆನಿಯು ಅಲ್ಪನಿಧಿಯಿಂದ ಸ್ಥಾಪಿಸಲ್ಪಟ್ಟು ಈಗ ಬೊಂಬಾಯಿಯ ಧಾರಾವಿಯಲ್ಲಿ ಆಧುನಿಕ ಕಾರ್ಖಾನೆಯೊಂದನ್ನು ಎಂಟುಲಕ್ಷ ರೂಪಾಯಿಗಳ ವೆಚ್ಚದಿಂದಲೇ ಮುಂದೆ ತಂದಿರುವುದು. ಈ ಕಾರ್ಖಾನೆಯಲ್ಲಿ ಸಾಧಾರಣ 1200 ಕೆಲಸಗಾರರು ದಿನಾಲೂ ಕೆಲಸಮಾಡುತ್ತಿರುವರು. ಫ್ಲಾಶ್‌ಲೈಟ್, ಮೋಟಾರ್ ಕಾರ್, ರೇಡಿಯೋಸ್ ಇತ್ಯಾದಿಗಳಿಗೆ ಬೇಕಾಗುವ ಒಂದನೆ ನಂಬರು ಬ್ಯಾಟರಿಗಳು ಈ ಕಾರ್ಖಾನೆಯಲ್ಲಿ ಸಾವಿರಗಟ್ಟಲೆ ತಯಾರಾಗುತ್ತಿರುವವು. ಆದರೆ ಪ್ರತಿಯೊಂದು ತಯಾರಿಕೆಯಲ್ಲಿ ತಕ್ಕ ನಿಗಾ ಕೊಡಲಾಗುತ್ತದೆ ಎಂಬುದನ್ನು ಮರೆಯಲಾಗದು. ಗ್ಯಾಸ್ ಲ್ಯಾಂಪುಗಳಿಗೆ ಹೆಚ್ಚು ಪವರಿನ ಮೆಂಟಲುಗಳು ಈಗತಾನೆ ತಯಾರಾಗಿವೆ. ಎಸ್ಟ್ರೇಲಾ ಕಂಪೆನಿಯಲ್ಲಿ ತಯಾರಾಗುತ್ತಿರುವ ಸಾಮಗ್ರಿಗಳಿಗೇನೇ ಜಾಸ್ತಿ ಸಂಖ್ಯೆಯಿಂದ ಬೇಡಿಕೆಗಳು ಬರುತ್ತಿರುವುದೇ ಆ ಕಂಪೆನಿಯ ವೈಶಿಷ್ಟ್ಯಕ್ಕೆ ಸಾಕ್ಷಿಯಾಗಿದೆ. ಹಳ್ಳಿಗಾಡಿನ ಜನ ಈ ಕಂಪೆನಿಯ ಸೆಲ್ಲುಗಳನ್ನೇ ಅಪೇಕ್ಷಿಸುವನು. ಈ ಕಾರಣದಿಂದಲೇ ಎಸ್ಟ್ರೆಲಾ ಕಂಪೆನಿಯು ಉತ್ತಮ ತಯಾರಿಕೆಗಳನ್ನೇ ಮಾಡಿ ಕಡಿಮೆ ಕ್ರಯದಲ್ಲಿ ಮಾರಾಟಮಾಡಬೇಕೆಂಬುದೇ ಅದರ ಹಿರಿಯಾಸೆ.

ನೋಟೀಸು
ಉಡುಪಿ ಡಿ. ಮು. ಕೋರ್ಟಿನಲ್ಲಿ
O. P. 21/1951

1 ಕೆ. ಪ್ರೇಮಾನಂದ ಪೈ, 2 ಕೆ. ಗೋಕುಲದಾಸ ಪೈ (ಮೈ.), 3 ರೋಹಿದಾಸ ಪೈ (ಮೈ.), 4 ಗಿರಿಜಾ ಯಾನೆ ರತ್ನಾಬಾಯಿ ಅರ್ಜಿದಾರರು—

1ರಿಂದ 3ನೇ ವರೇಗಿನವರು- ಕೆ. ನಾರಾಯಣ ಪೈಗಳ ಮಕ್ಕಳು 4ನೇಯವಳು ಕೆ. ನಾರಾಯಣ ಪೈರ ವಿಧವೆ, ಉಡುಪಿ ಕಸಬಾ

1 ರಿಂದ 3ನೇ ಅರ್ಜಿದಾರರ ತಂದೆ ವ 4ನೇ ಅರ್ಜಿದಾರಳ ಗಂಡ- ಮೃತಪಟ್ಟ ಕೆ. ನಾರಾಯಣ ಪೈಗಳು ಪಡೆದಿದ್ದ ಜವಾಹರ ಮಿಲ್ಸ್ ಲಿಮಿಟೆಡ್, ಸೇಲಂ ಇದರ ಪಾಲು 28 ಶೇರ್ಸುಗಳು- ಯಜಮಾನನಾದ 1ನೇ ಅರ್ಜಿದಾರರ ಹೆಸರಿಗೆ ಟ್ರಾನ್ಸ್‌ಫರ್ ಆಗುವರೆ ಮತ್ತು ಆ ಪಾಲು ಡಿವಿಡೆಂಟ್ ವಸೂಲು ಮಾಡುವರ ಅನುಕೂಲ ಆಗುವ ಹಾಗೆ 1ನೇ ಅರ್ಜಿದಾರನ ಹೆಸರಲ್ಲಿ ಸಕ್ಸೇಶನ್ ಸರ್ಟಿಫಿಕೇಟು ಅಪೇಕ್ಷಿಸಿ ಅರ್ಜಿದಾರರು ಬರಕೊಂಡ ಸದರಿ ಅರ್ಜಿಯು ತಾರೀಕು 2 6-1951ಕ್ಕೆ ತನಿಖೆ ಬಗ್ಗೆ ಇಡೋಣಾಗಿಯದೆ. ಈ ಬಾಬಿನಲ್ಲಿ ಆಕ್ಷೇಪಿಸುವವರು ಯಾರಾದರೂ ಇದ್ದರೆ ಅವರು ಸದರಿ ತಾರೀತಿನ ದಿವಸ ಮೇಲ್ಕಂಡ ಕೋರ್ಟಿನ ಮುಂದೆ ಹಾಜರಾಗಿ ತಮ್ಮ ಆಕ್ಷೇಪಗಳನ್ನು ಜಾಹೀರು ಮಾಡಿಕೊಳ್ಳತಕ್ಕಾದೆಂತ್ತ ಈ ಮೂಲಕ ಸರ್ವರಿಗೂ ತಿಳಿಯಪಡಿಸೋಣಾಗಿಯದೆ.

M. Damadar Kamath
Advocate for Petitioner

ತಾರೀಕು 22-4-1951
ಉಡುಪಿ, ದ. ಕನ್ನಡ.

ಮುಂಬಯಿ ಕನ್ನಡಿಗರಲ್ಲಿ ವಿನಂತಿ

ಬೇರೆ ಬೇರೆ ವ್ಯಾಪಾರ, ಉದ್ಯೋಗಗಳನ್ನು ಸುಸೂತ್ರವಾಗಿ ನಿರ್ವಹಿಸುತ್ತ ಮುಂಬಯಿಯಲ್ಲಿ ನೆಲೆನಿಂತಿರುವ ದಕ್ಷಿಣ ಕನ್ನಡಿಗರು 'ನವಯುಗ'ಕ್ಕೆ ಮೊದಲಿನಿಂದಲೂ ನೀಡುತ್ತಿರುವ ಪ್ರೋತ್ಸಾಹವು ಅಭಿನಂದನೀಯವಾದುದು. 'ನವಯುಗ'ದ ಪ್ರತಿನಿಧಿಗಳಾಗಿ ಶ್ರೀ ಕೆ. ಜಗನ್ನಾಥ ಶೆಟ್ಟರು ಕೆಲವು ವರ್ಷಗಳಿಂದ ವರ್ಷಂಪ್ರತಿ ಮುಂಬಯಿಗೆ ಬರುತ್ತಿದ್ದರು. ಆದರೆ ಕಾರಣಾಂತರದಿಂದ ಕಳೆದ ವರ್ಷ ಬರಲಿಲ್ಲ. ಇದೀಗ ಅವರು ನವಯುಗದ ವ್ಯಾಪಕತೆಗಾಗಿ ಮುಂಬಯಿಗೆ ಬಂದಿರುತ್ತಾರೆ. ಅವರಿಗೆ ಮುಂಬಯಿ ಕನ್ನಡಿಗರು, ಮುಖ್ಯತಃ ಅಲ್ಲಿಯ ದಕ್ಷಿಣ ಕನ್ನಡಿಗರು ಸರ್ವಸಹಕಾರ, ಪ್ರೋತ್ಸಾಹಗಳನ್ನು ಕೊಟ್ಟು ನವಯುಗದ ಅಭಿವೃದ್ಧಿಗೆ ನೆರವಾಗಬೇಕಾಗಿ ವಿನಂತಿ.

ನವಯುಗ ಆಫೀಸು, ಉಡುಪಿ	ಕೆ. ಹೊನ್ನಯ್ಯ ಶೆಟ್ಟಿ, ಸಂಚಾಲಕ, ಸಂಪಾದಕ

ಶ್ರೀ ರಾಮಕೃಷ್ಣ ಥಿಯೇಟರ್ ಲಿಮಿಟೆಡ್. ಉಡುಪಿ.

ತಾರೀಕು. 27-4-51ರಿಂದ

ಶೊರಬ್ ಮೋದಿಯವರ ಸ್ಫೂರ್ತಿಯ ಚಿತ್ರ

ಶಮಾ

ಮೆಹತಬ್ ಮತ್ತು ವಾಸ್ತಿ

ಬರುವ ಚಿತ್ರ

ದಿಲ್ಲಗಿ

ನಿಮಗೆ
ಇಂಗ್ಲಿಷ್ ಕಲಿಯಬೇಕೆ? ಹಾಗಿದ್ದರೆ

ಕೊರಡ್ಕಲ್ ಶ್ರೀನಿವಾಸ ರಾವ್ ವಿರಚಿತ

ಸುಲಭದಲ್ಲಿ ಇಂಗ್ಲಿಷ್

English Made Easy

ಎಂಬ
ಇಂಗ್ಲಿಷ್ ಸ್ವಯಂಬೋಧಿನಿ ಪುಸ್ತಕ ಅತ್ಯುಪಯುಕ್ತವಾದುದು.
ಬೆಲೆ ರೂ. 1-8-0.
ವಿ. ಪಿ ದ್ವಾರ ರೂ 1-14-0.
ಪ್ರತಿಗಳು ನಿಮ್ಮೂರ ಪುಸ್ತಕ ವ್ಯಾಪಾರಿಗಳಲ್ಲಿ ಸಿಗದಿದ್ದರೆ, ಕೆಳಗಿನ ವಿಳಾಸಕ್ಕೆ ಬರೆಯಿರಿ.

ನವಭಾರತ ಪುಸ್ತಕ ಭಂಡಾರ,
ಉಡುಪಿ

ಮಂಗಳೂರು

ದ. ಕ. ಜಿಲ್ಲಾ ಕಾಂಗ್ರೆಸ್ ಕಾರ್ಯಕಾರಿಗಳ ಸಭೆಯು— ಇದೇ ತಾ. 16 ರ ರಲ್ಲು ಸಂಜೆ ಡಾ। ಕೆ. ನಾಗಪ್ಪ ಆಳ್ವರ ಅಧ್ಯಕ್ಷತೆಯಲ್ಲಿ ಜರಗಿತು ಈವರೆಗೆ ಚುನಾವಣೆ ನಡೆಯದಿರುವ ಸರ್ಕಲ್ ಕಾಂಗ್ರೆಸ್ ಕಮಿಟಿಗೇ ಚುನಾವಣೆಯನ್ನು ಆದಷ್ಟು ಬೇಗ ನಡೆಸುವ ವ್ಯವಸ್ಥೆಯನ್ನು ಆಫೀಸಿನಿಂದ ಮಾಡಬೇಕಾಗಿ ನಿರ್ಧರಿಸಲಾಯಿತು.

ಕಿಹಸಾಗೆ ಕಿಗೆದು ಹಾಕಲ್ಪಟ್ಟಿರುವ ಪ್ರದೇಶದ ಕೃಷಿಕೇತರ ಬಡಜನರ ಆಹಾರ ಧಾನ್ಯಗಳ ತೀವ್ರ ಕೊರತೆ ಮತ್ತು ಬೆಲೆಯ ವಿಪರೀತ ಹೆಚ್ಚಳದಿಂದ ಈಗಲೇ ಬಹಳ ಸಂಕಷ್ಟಕೀಡಾಗಿ ಅಲ್ಲಲ್ಲಿ ಲೂಟಿ ನಡೆಯುತ್ತಿರುವುದರಿಂದ ಮತ್ತು ಇನ್ನು ಮುಂದೆ ಮಳೆಗಾಲದಲ್ಲಿ ಪರಿಸ್ಥಿತಿಯು ಅತ್ಯಂತ ಗಂಭೀರಸ್ಥಿತಿಗೆ ಮುಟ್ಟುವ ಸಂಭವವಿರುವುದರಿಂದ ಮದ್ರಾಸು ಸರಕಾರವು ಈ ಜಿಲ್ಲೆಗೆ ಕೂಡಲೇ ಹೆಚ್ಚಿನ ಆಹಾರಧಾನ್ಯಗಳನ್ನು ಕಳುಹಿಸಿ ರಿಲೀಫ್ ಶೋಪುಗಳು ಜಿಲ್ಲೆಯಲ್ಲಿ ಅತ್ಯಗತ್ಯಕಂಡುಬಂದಲ್ಲಿ ಹೆಚ್ಚು ಬೇಗ ತೆರೆಯಲ್ಪಡುವಂತೆ ನೆರವಾಗಬೇಕಾಗಿ ಈ ಸಭೆಯು ಒತ್ತಾಯಪಡಿಸುತ್ತದೆ—ಎಂದು ನಿರ್ಣಯಿಸಲಾಯಿತು ಹಸಾಗೆ ಕಿಗೆದು ಹಾಕಲ್ಪಟ್ಟಿರುವುದರಿಂದ ಪರಿಸ್ಥಿತಿಯು ಹದಗೆಟ್ಟು ಮತ್ತಷ್ಟು ಕೆಡುವಂತಾದರೆ ಫುಡ ರೇಶನ್ ಮತ್ತು ಪ್ರೊಕ್ಯೂರ್‌ಮೆಂಟನ್ನು ಹಳ್ಳಿಗಳಲ್ಲಿ ಜಾರಿಗೆ ತರಬೇಕಾಗುವ ಪರಿಸ್ಥಿತಿಯುಂಟಾಗಬಹುದೆಂದು ಈ ಸಭೆಯು ರೈತರನ್ನು ಎಚ್ಚರಿಸುತ್ತದೆ. ಆದುದರಿಂದ ರೈತರೆಲ್ಲರೂ ಸರಕಾರದೊಡನೆ ಸಹಕರಿಸಿ ಕಳ್ಳವ್ಯಾಪಾರ ಮೊದಲಾದುವುಗಳನ್ನು ನಿವಾರಿಸಲು ಪ್ರಯತ್ನಿಸಬೇಕಾಗಿ ಕೇಳಿಕೊಳ್ಳುತ್ತದೆ.

ಬಿಡುಗಡೆ—ಜಿಲ್ಲೆಯ ಕಮ್ಯೂನಿಸ್ಟ ಮುಂದಾಳುಗಳಾದ ಶ್ರೀ ಬಿ. ವಿ. ಕಕ್ಕಿಲ್ಲಾಯ ಮತ್ತು ಕೃಷ್ಣ ಶೆಟ್ಟರನ್ನು ಸ್ಥಾನಬದ್ಧತೆಯಿಂದ ಬಿಡುಗಡೆಮಾಡಲಾಗಿದೆ.

ರಾಷ್ಟ್ರೀಯ ವಿಶ್ವಬ್ರಾಹ್ಮಣ ಸಮಾಜದ ಸಭೆಯು—ಇದೇ ತಾ 14 ರಲ್ಲು ಕಾಳಿಕಾಂಬಾ ದೇವಸ್ಥಾನದಲ್ಲಿ ನ್ಯೂಸೂರ್ ಏಕ್ಸ್‌ಪ್ರೆಸ್, ಪ್ರತಿಕಾ ಸಂಪಾದಕ ಶ್ರೀ ಗಂಗಾಧರ ಮೂರ್ತಿಯವರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀ ಕೆ. ಬಾಲಕೃಷ್ಣರಾಯರು ದಿವಂಗತರಾದ ಎ. ನಾರಾಯಣಾಚಾರ್ ಮತ್ತು ಆರ್ಕಳ ಸುಬ್ರಾಯಾಚಾರ್ಯರ ಭಾವಚಿತ್ರದ ಅನಾವರಣ ನಡೆಸಿದರು. ಶ್ರೀ ಎಸ್ ಶಿಲ್ಪೆಯವರು ಸಮಾಜೋತ್ಕ್ರಷ್ಟಿಯ ಕುರಿತು ಉಪನ್ಯಾಸವಿತ್ತರು. ಅದಿನ ರಾತ್ರಿ ಯಕ್ಷಗಾನ ಕೂಟವಿತ್ತು.

ಜಿಲ್ಲೆಯಲ್ಲಿ ಗ್ರಾಮಾಂತರಗಳ ರದ್ದಾದ—ಬೆಳಕೆ ಮೂಡಬಿದ್ರೆ ಬಂಟ್ವಾಳ, ಕುಂದಾಪುರ, ಪುತ್ತೂರು, ಪಕ್ಕಲಕ್ಕ, ಉದ್ಯಾವರ, ಮೂಲ್ಕಿ, ಕಾರ್ಕಳ ಮತ್ತು ಮೆಲ್ಕಿಗಳಲ್ಲಿ ನ್ಯಾಯಬೆಲೆಯ ಅಕ್ಕಿ ಅಂಗಡಿಗಳು ತೆರೆಯಲ್ಪಟ್ಟಿವೆ. ಗಂಗೊಳ್ಳಿ, ಬೈಂದೂರು, ಶಿರೂರು, ಫಳನೀರು, ಬಜ್ಪೆ (ವಿಮಾನ ನಿಲ್ದಾಣ ಕೆಲಸಗಾರರಿಗಾಗಿ) ಶಕ್ಕಿಲ (ಸೇತುವೆ ಕೆಲಸಗಾರರಿಗಾಗಿ) ಗಳಲ್ಲಿ ಈ ವಾರದಲ್ಲಿ ತೆರೆಯಲಾಗುವುದು. ಜಿಲ್ಲೆಯ ಇತರ ತಾಲೂಕುಗಳಿಂದ ಕಾಸರಗೋಡಿಗೆ ಅಕ್ಕಿ ಸಾಗುವುದನ್ನು ನಿರ್ಬಂಧಿಸುವ ಆಜ್ಞೆಯೊಂದು ಹೊರಟಿದೆ.

ಮಂಜೇಶ್ವರದಲ್ಲಿ 14 ಮುಡಿ ಅಕ್ಕಿ ಕುಂಬಳೆ ಕಾಸರಗೋಡಿಗೆ ಒಯ್ಯುತ್ತಿದ್ದುದನ್ನು ತಾ. 11 ರಲ್ಲು ಪತ್ತೆಹಚ್ಚಲಾಗಿದೆ.

ಭಾಷಣ—ಅಖಿಲ ಭಾರತ ಸಮಾಜವಾದಿ ಪಕ್ಷದ ಮಂಗಳೂರು ಶಾಖೆಯ ನೇತೃತ್ವದಲ್ಲಿ ಸಾರ್ವಜನಿಕ ಸಭೆಯೊಂದು ಇದೇ ತಾ. 16 ರಲ್ಲು ಕುಂದಾಪುರದ ವಕೀಲ್ ಶ್ರೀ ಪಿ. ಶ್ರೀನಿವಾಸ ಶೆಟ್ಟರ ಅಧ್ಯಕ್ಷತೆಯಲ್ಲಿ ಜರಗಿತು. ದಕ್ಷಿಣ ಭಾರತದ ಸಮಾಜವಾದಿ ಮುಖಂಡರಾದ ಶ್ರೀ ಶಿವಸ್ವಾಮಿಯವರು ಇಂದಿನ ಸಮಸ್ಯೆಗಳ ಕುರಿತು ಭಾಷಣವಿತ್ತರು. ಕೊನೆಯಲ್ಲಿ ಮುಂಬರುವ ಚುನಾವಣೆ ಕುರಿತು ಮಾತನಾಡಿದರು.

ಜಿಲ್ಲಾ ಬಿಲ್ಲವ ವಿದ್ಯಾಸಮಿತಿಗೆ ಸಹಾಯ—ಮಂಗಳೂರಲ್ಲಿ ಈಗ್ಗೆ ಸಾಧಾರಣ ಎರಡು ತಿಂಗಳುಗಳಿಂದ ನಡೆಯುತ್ತಿದ್ದ ಅಖಿಲ ಭಾರತ ಕೃಷಿ ಮತ್ತು ಫರ್ನ್‌ಫೇರ್ ಪ್ರದರ್ಶನದ ವ್ಯವಸ್ಥಾಪಕರು ಇದೇ ತಾ 12 ರಲ್ಲು ಜಿಲ್ಲಾ ಕಲೆಕ್ಟರರ ಅಧ್ಯಕ್ಷತೆಯಲ್ಲಿ ಜರಗಿದ ಸಭೆಯಲ್ಲಿ ಹತ್ತು ಸಾವಿರ ರೂಪಾಯಿಗಳನ್ನು ಮಂಗಳೂರು ಭಗಿನೀ ಸಮಾಜಕ್ಕೆ ಒಪ್ಪಿಸಿದರು ಗಿರಿಯಪ್ಪನವರು ಸ್ವಾಗತಭಾಷಣ ಮಾಡಿದ ಮೇಲೆ ಶ್ರೀಗಳಾದ ಎಸ್. ನರ್ಸಪ್ಪಯ್ಯ, ಬಿ. ಮಂಜಯ್ಯ ಹೆಗ್ಡೆ, ಪಿ ಆರ್. ಪೂಂಜ, ಡಾ। ಯು ಪಿ ಮಲ್ಯ, ಬಿ. ವೈಕುಂಠ ಬಾಳಿಗ, ಕೆ. ಸೂರ್ಯನಾರಾಯಣ ಅಡಿಗ ಮೊದಲಾದವರು ಸಂದರ್ಭೋಚಿತವಾಗಿ ಮಾತನಾಡಿದರು ಶ್ರೀ ಎಸ್. ಎಸ್. ಸುವರ್ಣರವರೂ ಭಗನೀ ಸಮಾಜದ ಪರವಾಗಿ ಶ್ರೀಮತಿ ಕಲ್ಯಾಣಿ ಬಿ. ಸೆಟ್ಟಿಯವರೂ ಅಭಿನಂದಿಸಿದರು.

ಸಂಗೀತ ಮತ್ತು ನೃತ್ಯ—ದಕ್ಷಿಣ ಭಾರತದ ಸುಪ್ರಸಿದ್ಧನಟಿ ಕುಮಾರಿ ವೈಜಯಂತಿಮಾಲಾ ಇವರ ಸಂಗೀತ ಮತ್ತು ನೃತ್ಯ ಕಾರ್ಯಕ್ರಮವು ಕಳೆದವಾರ ಮಂಗಳೂರಿನಲ್ಲಿ ನಡೆಯಿತು.

ಸಮಾನ್ಯಮಂತ್ರಿ ಶ್ರೀ ಎ ಬಿ. ಶೆಟ್ಟಿ, ರ ಜಿಲ್ಲಾ ಸಂಚಾರ ಕಾರ್ಯಕ್ರಮ—ಮದ್ರಾಸು ಸರಕಾರದ ಕೃಷಿ ಇಲಾಖೆಯ ಮಂತ್ರಿಗಳಾದ ಶ್ರೀ ಎ. ಬಿ ಶೆಟ್ಟರು ಇದೇ ತಾ. 20 ರಲ್ಲು ಸಂಜೆ ಮಡಿಕೇರಿಯಿಂದ ಮಂಗಳೂರಿಗೆ ಬಂದರು. ತಾ 21 ರಲ್ಲು ಕರ್ನಾಟಕ ಪೊಲಿಟೆಕ್ನಿಕ್ ಶಾಲಾ ವರ್ಧಂತಿಯ ಅಧ್ಯಕ್ಷತೆ ವಹಿಸಿದರು. ತಾ. 22 ರಲ್ಲು ಮೂಡುಗೆರೆಯಲ್ಲಿ ಕ್ಷಯರೋಗಿಗಳ ಆಸ್ಪತ್ರೆಯ ಕಟ್ಟಡ ಕೆಲಸವನ್ನೂ ಪರಿಶೀಲಿಸಿಕೊಂಡು ಗಾಡುಪುರವನ್ನು ಸಂದರ್ಶಿಸಿದರು. ತಾ. 23 ರಲ್ಲು ಬೆಳಗ್ಗೆ 8–50ಕ್ಕೆ ನಿಲೇಶ್ವರಕ್ಕೆ ಹೋಗಿ ಅದೇ ದಿನ ಸಂಜೆ ಹಿಂದಿರುಗಿದರು. 24 ರಲ್ಲು ಮೂಡಬಿದ್ರೆ, 25 ರಲ್ಲು ಬ್ರಹ್ಮಾವರ ಕುಂದಾಪುರ, ತಾ. 26 ರಲ್ಲು ಕಾರ್ಕಳ ಕೇಂದ್ರಗಳನ್ನು ಸಂದರ್ಶಿಸಿ, ತಾ. 28 ರಂದು ಪುತ್ತೂರು ತಾಲೂಕಿನ ಕೊಯಿಲದಲ್ಲಿ ಗ್ರಾಂತೀಯ ಜಾನುವಾರು ಅಭಿವೃದ್ಧಿ ಬೋರ್ಡಿನ ಸಭೆಯಲ್ಲಿ ಭಾಗವಹಿಸಿ ತಾ. 30 ರಂದು ಬೆಳಗ್ಗೆ ಎಂಟು ಗಂಟೆಗೆ ಕಾರಿನಲ್ಲಿ ಮಡಿಕೇರಿ ಮಾರ್ಗವಾಗಿ ಮೈಸೂರಿಗೆ ಹೋಗುವರು.

ಕಾರ್ಕಳದ ಗೋಮಟೇಶ್ವರ.



ಗಾಳಿ ಮಳೆ ಬಿಸಿಲುಗಳ ।
ಪೇಗೆಯನು ಸಹಿಸುತ್ತ
ಏನ ಧ್ಯಾನಿಪೆ ಯೋಗಿ ಬೆಟ್ಟದಲ್ಲಿ? ॥
ಕ್ಷಮಿಸು! ತಿಳಿದೆನು ಜಗವು ।
ಮಾಯೆಯೆಂದರಿವುತ್ತ ।
ಹಗಲಿರುಳು ತಪಸ್ಗೈದೆ ಮೋಕ್ಷಕಾಗಿ ।

—ಟಿ ಚಂದ್ರರಾಜ ಸೆಟ್ಟಿ.

ಕಾರ್ಕಳ ಬಾಹುಬಲಿಸ್ವಾಮಿ ಮಹಾಮಸ್ತಕಾಭಿಷೇಕ—ಇದೇ ತಾ 20 ರಂದು ಪ್ರಾರಂಭವಾಗಿ 30 ರ ವರೆಗೆ ಕಾರ್ಕಳದಲ್ಲಿ ನಡೆಯುವ ಮಹಾಮಸ್ತಕಾಭಿಷೇಕ ಕಾಲದಲ್ಲಿ ಉಪನ್ಯಾಸ ಮಾಲೆಯೊಂದನ್ನೂ ಏರ್ಪಡಿಸಲಾಗಿದೆ ಉಪನ್ಯಾಸಗಳು ಮಧ್ಯಾಹ್ನದ ನಂತರ 3 ಗಂಟೆಯಿಂದ 5 ರ ತನಕ ನಡೆಯುವವು. ಮಹಾವೀರ ಜಯಂತಿಯು ಶ್ರೀ ಟಿ. ಎಚ್. ಎಮ್. ಸದಾಶಿವಯ್ಯನವರ ಅಧ್ಯಕ್ಷತೆಯಲ್ಲಿ ತಾ 20 ರಲ್ಲು ಜರಗಿತು. ವಸ್ತುಪ್ರದರ್ಶನ ಮತ್ತು ಕಲಾ ವಿಭಾಗದ ಉದ್ಘಾಟನೆಯನ್ನು ಜಿಲ್ಲಾ ಜಡ್ಜ ಶ್ರೀ ಕೃಷ್ಣ ಮೂರ್ತಿಯವರು ನೆರವೇರಿಸಿದರು. ರಾಷ್ಟ್ರಕವಿ ಗೋವಿಂದ ಪೈ ಶ್ರೀಗಳಾದ ಎ. ಸುಬ್ಬಯ್ಯ ಶಾಸ್ತ್ರಿ, ಬಿ. ಶಾಂತಿರಾಜ ಶಾಸ್ತ್ರಿ, ಕೆ. ಬಿ. ಜಿನರಾಜ ಹೆಗ್ಡೆಯವರು ಉಪನ್ಯಾಸಕರಾಗಿದ್ದರು ನಂತರದ ಉಪನ್ಯಾಸಗಳಲ್ಲಿ ಶ್ರೀಗಳಾದ ಮಿರ್ಜಿ ಅಣ್ಣಾರಾವ್, ಕೆ. ಶಂಕರ ಭಟ್, ಕೆ. ಎಸ್ ಧರಣೇಂದ್ರಯ್ಯ, ಕೆ. ಶಿವರಾಮ ಕಾರಂತ ಮೊದಲಾದವರು ಭಾಗವಹಿಸಲಿರುವರು.

ಕಟಪಾಡಿ—ಇಲ್ಲಿಯ ಕೃಷಿಕ ಸಂಘದ, ತಾತ್ಕಾಲಿಕ ಪ್ರತಿನಿಧಿ ಕಮಿಟಿಯ ಸಭೆಯು ತಾ 29-4 51ನೇ ಆದಿತ್ಯವಾರ ಅಪರಾಹ್ನ ಗಂಟೆ 2ಕ್ಕೆ ಸ್ಥಳೀಯ ಬ್ರಹ್ಮಶ್ರೀ ನಾರಾಯಣ ಗುರುಸ್ವಾಮಿ ಸೇವಾ ಸಮಿತಿಯ ಆಶ್ರಯದಲ್ಲಿ ಜರಗಲಿರುವುದೆಂದೂ ಸದಸ್ಯರು ಸಭೆಗೆ ಬರಬೇಕೆಂದೂ ಸಂಚಾಲಕರಾದ, ಶ್ರೀ ಕೆ. ರಂಗನವರು ವಿನಂತಿಸುತ್ತಾರೆ.

ದಕ್ಷಿಣ ಕನ್ನಡ ಜಿಲ್ಲಾ ವಿಧಾಯಕ ಕಾರ್ಯಕರ್ತರ ಪರಿಷತ್ತು—ಇದೇ ತಾ 6-5-1951ನೇ ಆದಿತ್ಯವಾರ ಬಂಟವಾಳ ವೆಂಕಟರಮಣ ಸ್ವಾಮಿ ಹೈಸ್ಕೂಲಿನ ಮಂದಿರದಲ್ಲಿ ಜರಗಲಿದೆ. ಜಿಲ್ಲೆಯ ಎಲ್ಲಾ ಕಾರ್ಯಕರ್ತರು ಇದನ್ನೇ ಆಮಂತ್ರಣವೆಂದು ತಿಳಿದು ಪರಿಷತ್ತಿಗೆ ಆಗಮಿಸಬೇಕಾಗಿ ವಿನಂತಿ ಮುಂಚಿನ ದಿನ ರಾತ್ರಿ ವಿಷಯನಿಯಾಮಕ ಸಮಿತಿ ಸಭೆಸೇರುವುದು, ಪರಿಷತ್ತಿನಲ್ಲಿ ಚರ್ಚಿಸಲಿರುವ ವಿಷಯಗಳನ್ನು ತಾ 4-5-51 ರೊಳಗೆ ಕಳಿಸಬಹುದು.

ಕುಂಬಳೆ—ಮಕ್ಕಳ ಆಟದ ಹಬ್ಬವು ಅಂಗಡಿಮೊಗರು ಕೇಂದ್ರದಲ್ಲಿ ತಾ. ೧೫ರಲ್ಲಿ ಜನಾಬ್ ಎ. ಕೆ. ಕರೂಲರ ಅಧ್ಯಕ್ಷತೆಯಲ್ಲಿ ಜರಗಿತು. ಸಾರ್ವಜನಿಕ ಖಾತೆಯ ಸುಪ್ರೈಜರ್ ಶ್ರೀ. ಬಿ. ಮಿತ್ರ ರೈಯವರು ಪತಾಕೆಯನ್ನೇರಿಸಿದರು. ಜನಾಬ್ ಎನ್. ಅಬ್ದುಲ್ಲನವರು ಸದ್ರಿ ಉತ್ಸವವನ್ನು ಉದ್ಘಾಟಿಸಿದರು. ಶ್ರೀ ಕೆ. ವಾಸುದೇವ ಮೂಡಿತ್ತಾಯರು ಧನ್ಯವಾದವನ್ನರ್ಪಿಸಿದರು.

ಬುನಾದಿ ಶಿಕ್ಷಣದಲ್ಲಿ ಹಳೇ ತರಬೇತಿ ಅನಿವರಿಗೆ ತಾ ೧೬ರಂದು ಮಾಯಿಪಾಡಿಯಲ್ಲಿ ಕ್ಲಾಸನ್ನು ತೆರೆಯಲಾಗಿದೆ ಸದ್ರಿ ಕ್ಲಾಸಿಗೆ ಸರಕಾರಿ, ಬೋರ್ಡ್, ಮ್ಯುನಿಸಿಪಾಲಿಟಿ, ಹರಿಜನ ವೆಲ್ಫೇರ್ ಶಾಲೆಗಳ ೩೫ ಮಂದಿ ಉಪಾಧ್ಯಾಯರು ಈಗ ಸೇರಲಿರುವರು.

ಕುಂಬಳೆ ಕೇಂದ್ರದ ಉಪಾಧ್ಯಾಯರ ಸಭೆಯೊಂದು ತಾ. ೨೧ರಂದು ಶ್ರೀ ಕೆ. ರಾಮಚಂದ್ರ ಭಟ್ಟರ ಅಧ್ಯಕ್ಷತೆಯಲ್ಲಿ ಜರಗಿ ಬದ್ಧತೆ ಮಾಡಿದ ಪ್ರದೇಶಗಳಲ್ಲಿ ರೇಶನ್ ಜಾರಿಗೆ ತರಬೇಕೆಂದು ಠರಾಯಿಸಲಾಯಿತು.

ಹರಿಜನ ಮಹಾಸಭೆ— ಉಡುಪಿ ತಾಲ್ಲೂ ಹರಿಜನರ ಮಹಾಸಭೆಯೊಂದು 15 4-51 ರಲ್ಲು ದೊಡ್ಡನಗುಡ್ಡೆಯಲ್ಲಿ ದ. ಕ ಜಿಲ್ಲಾ ಶಿವ ಸಮಾಜ (ರಿಜಿಸ್ಟರ್ಡ್) ಇದರ ವತಿಯಿಂದ ಶಿವಸಮಾಜದ ಅಧ್ಯಕ್ಷರ ಅಧ್ಯಕ್ಷತೆಯಲ್ಲಿ ಜರಗಿತು. ದೊಡ್ಡನಗುಡ್ಡೆಯಲ್ಲಿ ಸರಕಾರದಿಂದ ದೊರೆತ ಸ್ಥಳದಲ್ಲಿ ಒಂದು ಕಟ್ಟಡವನ್ನು ಕಟ್ಟಿಸಬೇಕೆನ್ನುವ, ಅಲ್ಲಿ ಹರಿಜನ ಬಂಧುಗಳ ಸಭೆ ಜರಗಿಸಿ ಅವರ ಒಗ್ಗಟ್ಟನ್ನು ಸಾಧಿಸಬೇಕೆನ್ನುವ, ಒಂದು ವಿದ್ಯಾರ್ಥಿ ನಿಲಯವನ್ನು ಸಮಾಜದ ವತಿಯಿಂದ ಸ್ಥಾಪಿಸಬೇಕೆನ್ನುವ ಕುರಿತು ಚರ್ಚಿಸಲಾಯಿತು.

ಬ್ರಹ್ಮಾವರ—ಶ್ರೀ ಮಹಾಲಿಂಗೇಶ್ವರ ದೇವಸ್ಥಾನದಲ್ಲಿ ವಾಡಿಕೆಯಂತೆ ಜರಗುವ ರಥೋತ್ಸವವು ತಾ 21-4-51 ರಿಂದ ತಾ 28-4-51 ರ ವರೆಗೆ ನಡೆಯಲಿರುವುದೆಂದು ದೇವಸ್ಥಾನಕ್ಕೆ ಸಂಬಂಧಪಟ್ಟವರು ತಿಳಿಸುತ್ತಾರೆ.

ದಿ ಕರ್ನಾಟಕ ಬ್ಯಾಂಕ್ ಲಿಮಿಟೆಡ್, ಉಡುಪಿ.
The Karntaka Bank Limited, UDIPI.

ಏಲಂ ನೋಟಿಸು.

ಈ ಮೂಲಕ ಸರ್ವರಿಗೂ ತಿಳಿಯಪಡಿಸುವುದೇನೆಂದರೆ,—

ಈ ಕೆಳಗೆ ಹೆಸರು ಕಾಣಿಸಿದವರು ಸದ್ರಿ ಬೇಂಕಿನಿಂದ ಚಿನ್ನಾಭರಣಗಳ ಆಧಾರದ ಮೇಲೆ ಪಡೆದ ಸಾಲಗಳ ಮೊಬಲನ್ನಾಗಲೀ, ಬಡ್ಡಿಯನ್ನಾಗಲೀ, ವಾಯಿದೆಗೆ ಕೊಡದಿದ್ದುದರಿಂದ ಸದ್ರಿಯವರಿಗೆ ಕ್ರಮದಂತೆ ರಿಜಿಸ್ಟ್ರೆ ನೋಟೀಸುಗಳನ್ನು ಕೊಟ್ಟಾಗ್ಯೂ ಕೂಡಾ ಪಾವತಿ ಮಾಡದಿದ್ದುದರಿಂದ ಬೇಂಕಿಗೆ ಬರತಕ್ಕ ಅಸಲು, ಬಡ್ಡಿ, ಖರ್ಚು ಮತ್ತು ಖರ್ಚು ವಗೈರೆಯನ್ನು ಇದೇ ತಾ. 1 5-1951 ನೇ ಮಂಗಳವಾರ ಬೇಂಕಿಗೆ ಪಾವತಿಮಾಡಿ ಈಡಿಟ್ಟ ನಗಗಳನ್ನು ಬಿಡಿಸಿಕೊಂಡು ಹೋಗುವರೆ ತಪ್ಪಿದ್ದಲ್ಲಿ ಸದ್ರಿ ಆಭರಣಗಳನ್ನು ತಾ. 9 5-1951 ನೇ ಬುಧವಾರ ಮಧ್ಯಾಹ್ನ 1 ಗಂಟೆಗೆ ಸದರಿ ಬ್ಯಾಂಕಿನ ಆಫೀಸಿನಲ್ಲಿ ಬಹಿರಂಗವಾಗಿ ಏಲಂ ಮಾಡಲಾಗುವುದು ಅಗತ್ಯಬಿದ್ದಲ್ಲಿ ಏಲಂ ಮಾಡುವ ತಾರೀಕನ್ನು ಪುನಃ ನೋಟೀಸು ಕೊಡದೇನೇ ಮುಂದರಿಸಲಾಗುವುದು. ತಿಳಿದಿರುವುದು.

ಲೋನಿನ ನಂಬ್ರ	ಅಸಾಮಿಗಳ ಹೆಸರು ಮತ್ತು ವಿಳಾಸ	ಬ್ಯಾಂಕಿಗೆ ಬರತಕ್ಕ ಮೊಬಲಗು
318/49	ಅಣ್ಣಯ್ಯ ಸೆಟ್ಟಿ, ಮಂಜುನಾಥ ಸೆಟ್ಟಿಯ ಮಗ, ಚಿತ್ತರಂಜನ ಬಿಲ್ಡಿಂಗ್ಸ್ ಬಳಿ ಎಕ್ಸ್‌ಟನ್ಷನ್, ಮಾರುಪೇಟೆ, ಉಡುಪಿ, ದ. ಕ.	ಅಸಲು ರೂ 35/ ಮತ್ತು ಇದರ ಮೇಲಣ ತಾ. 21 6 49 ರಿಂದ ಸೇಕಡಾ 9 ರ ಸಲೆಯಲ್ಲಿ ವಸೂಲು ವರೆಗಿನ ಬಡ್ಡಿ
539/49	ಬಿ. ಎಸ್. ಕಾಮತ್, ಬಿ. ಅಣ್ಣಪ್ಪ ಕಾಮತರ ಮಗ, ಪ್ರೊಪ್ರೈಟರ್, ಕೇದಾರ್ ಮಿಲ್ಸ್, ಬಾರಕೂರು, ದ. ಕ.	ಅಸಲು ರೂ. 150/- ಮತ್ತು ಇದರ ಮೇಲಣ ತಾ. 13-10-49 ರಿಂದ ಸೇಕಡಾ 8 ರ ಸಲೆಯಲ್ಲಿ ವಸೂಲು ವರೆಗಿನ ಬಡ್ಡಿ
5/50	ಅನಂತಯ್ಯ ಸೇಟ್, ರಾಘವ ಶೇಟರ ಮಗ, ಸರಾಫ್, ಕೋಳದಪೇಟೆ, ಉಡುಪಿ, ದ. ಕ.	ಅಸಲು ರೂ. 40/- ಮತ್ತು ಇದರ ಮೇಲಣ ತಾ. 4-1-50 ರಿಂದ ಸೇಕಡಾ 9 ರ ಸಲೆಯಲ್ಲಿ ವಸೂಲು ವರೆಗಿನ ಬಡ್ಡಿ

ಬೇಂಕಿನ ಆಫೀಸು: ತೆಂಕಪೇಟೆ, ಉಡುಪಿ, ದ. ಕ.
ತಾ, 18-4-1951

P. Madhava Rao
Agent.

ಜನಮತ

ಈ ಅಳಿಯ ಸಂತಾನ— ಇನ್ನೊಂದು ಪಾಕಿಸ್ತಾನವಲ್ಲವೆ?

ಬರೆದವರು: ಜಿ. ಎಸ್. ಶೆಟ್ಟಿ, ಬಿ. ಎ., ಮೂಲ್ಕಿ.

ಹಿಂದುಗಳಿಗೆಲ್ಲಾ ಒಂದೇ ರೀತಿಯಾಗಿ ಅನ್ವಯಿಸುವ ಕೋಡು ಬರುವುದೆಂದು ನಾವು ನಂಬಿದ್ದೆವು. ಆದರೆ ಹಿಂದೂಕೋಡಿನಲ್ಲಿ ಅಳಿಯಸಂತಾನ ಉಳಿದಿರುವುದು ನೋಡುವಾಗ ಹಿಂದುಗಳಲ್ಲೊಂದು ಪಾಕಿಸ್ತಾನವಾದಂತಾಗದೆ? ಹಿಂದೂಕೋಡಿಗೆ ಬಹಳ ಬೆಂಬಲ ನೀಡುತ್ತಿದ್ದವರು ಇದಕ್ಕೊಪ್ಪಿದರೇ? ಬದಲಾವಣೆಯ ಈ ಯುಗದಲ್ಲಿ ಸಂಪ್ರದಾಯಕ್ಕೆ ತಲೆಬಗ್ಗಿಸಲಾಗದು.

ಭೂಪಾಳಪಾಂಡ್ಯನ ಕಥೆಯು ಕಟ್ಟುಕತೆ ಎಂಬುದು ನಿರ್ವಿವಾದ. ವಿವಾಹವೆಂಬುದು ಎರಡು ಭೌತಿಕ ಶರೀರಗಳ ಮಿಲನವಲ್ಲವಾದರೆ ಅದು ಎರಡು ಮನಸ್ಸು, ಎರಡು ಪ್ರಾಣ, ಎರಡು ಆತ್ಮಗಳ ಸಮ್ಮಿಲನವಾದರೆ ಅಂತಹ ವಿವಾಹಗಳು ನಮ್ಮಲ್ಲಿ ಆಗುವದಿದ್ದರೆ ಇಂತಹ ಕಟ್ಟುಕತೆಗಳಿಗೆ ಎಡೆಯುಂಟೆ?

ಹಳ್ಳಿಯ ಕಡೆಗೆ ದೃಷ್ಟಿಯನ್ನೀಯುವ ಅಳಿಯಸಂತಾನದ ಸಮಾಜವನ್ನು ಪರಿಶೀಲಿಸುವ ಆಳಿಯಮಾವಂದಿರೆಂದರೆ ಆಫೀಸ್ ಕೃಷ್ಣಶಂಕರರು. ಅದೆಷ್ಟು ಕ್ರಿಮಿನಲ್ ಕೇಸುಗಳು, ಎಷ್ಟು ಸಿವಿಲ್ ವ್ಯಾಜ್ಯಗಳು!

ಅಳಿಯಸಂತಾನಿಗಳಲ್ಲಿ ಜವಾಬ್ದಾರಿಕೆಯು ವಿಭಾಗಿಸಲ್ಪಟ್ಟಿರುವುದರಿಂದ ಮಕ್ಕಳ ವಿದ್ಯಾಭ್ಯಾಸ ಮುಂತಾದುವುಗಳಿಗೆ ತೊಂದರೆಯುಂಟಾದ ಉದಾಹರಣೆಗಳೂ ಉಂಟು. 'ಅವರಿಗೇನು, ಮಾವನ ಮನೆಯಲ್ಲಿ ಸಾವಿರಮುಡಿ ಇರುತ್ತದೆ' ಎಂದು ತಂದೆಯು ಅವರ ವಿಷಯ ಅಲಕ್ಷ್ಯಮಾಡುವನು. ಅಳಿಯಂದಿರೊಡನೆ, ತನ್ನ ಮಕ್ಕಳಷ್ಟು ಮಮತಾ ಸ್ವಾಭಾವಿಕವಾಗಿ ಇರುವುದೇ ಇಲ್ಲ. ಹಿರಿಯರ ಅನಾದರಣೆಯಿಂದ ಈ ಮಕ್ಕಳೂ ದಾರಿತಪ್ಪುತ್ತಾರೆ. ತರುಣರು ಬೇಜವಾಬ್ದಾರಿ ವ್ಯಕ್ತಿಗಳಾಗುತ್ತಾರೆ. ಆದುದರಿಂದ ಅವರ ಭಾವೀ ಜೀವನವನ್ನು ಕ್ರಮಪಡಿಸಲು ತಂದೆಯ ಪ್ರಮುಖವಾದ ಜವಾಬ್ದಾರಿಕೆಯು ಅವಶ್ಯವಾಗಿರುತ್ತದೆ.

'ಮರಮುಗುಟಿತು, ಹಕ್ಕಿ ಹಾರಿತು' ಎಂಬ ಗಾದೆಯಂತೆ, ತಂದೆಯು ಮನೆಯಲ್ಲಿರುವಷ್ಟು ಕಾಲ ತಿಂದು ಮುಗಿಸಿದರೆ ಸಾಕೆನ್ನುವರು. ಅವರು ತಮ್ಮ ಬಾಳುಭಂಡಾರ ಕಟ್ಟಿಕೊಂಡು ಹೋಗುವಾಗ, ಮನೆಯ ಮಾಡು ಜಾರುವುದಲ್ಲದೆ, ಗೋಡೆ ಬೀಳುವುದಲ್ಲದೆ; 'ಸುಣ್ಣ ಬೋಳು ಬೆಟ್ಟ, ತೋಟ ಬಂಜರು ಸ್ಥಳ. ತಮ್ಮ ಮಾವನ ಮನೆಯನ್ನು ಹೊಕ್ಕಾಗ ಅಲ್ಲಿಯ ಪಾಡೂ ಅಷ್ಟೆ.

ಜಂಟಿಕುಟುಂಬಗಳಲ್ಲಿ ಬಲವಂತರು ಬಲಹೀನರ ಸುಲಿಗೆಯನ್ನು ಮಾಡುತ್ತಿದ್ದಾರೆ. 1949ನೇ ಅಳಿಯಸಂತಾನ ಸುಧಾರಣಾ ಶಾಸನದಂತೆ, ಪಂಚಾಯತರ ಸಹಾಯದಿಂದ ಆಸ್ತಿ ಪಾಲುಮಾಡಿಕೊಳ್ಳಬಹುದು. ಅಲ್ಲದೆ, ಈ ಪಂಚಾಯತರ ವ್ಯವಸ್ಥಾಪತ್ರದ ಸಲಹೆಗಳನ್ನು ಅನುಲಕ್ಷಿಸಿ ಕೋರ್ಟಿನಲ್ಲಿ ತೀರ್ಮಾನ ಕೊಡುವರು. ಪಕ್ಷಪಾತಿಗಳಾದ, ಸ್ವಾರ್ಥಿ ಪಂಚಾಯತರಿಂದ ಅನ್ಯಾಯಗಳೂ ಸಂಭವಿಸಲು ಆಸ್ಪದವಿರುತ್ತದೆ.

ಈ ಅವಿಭಕ್ತ ಕುಟುಂಬಗಳಲ್ಲಿ ಮನೆತನದ ಮಹತ್ವ, ಆಸ್ತಿಯ ದೊಡ್ಡಸ್ತಿಕೆ ಇವೆಲ್ಲ ಮೃಗಜಲಭಾವದಂತಿವೆ. 'ನನಗೇನು ಮನೆಯಲ್ಲಿ ಸಾವಿರ ಮುಡಿ ಇದೆ' ಎನ್ನುವವನೂ ಪಾಲಾದಾಗ ತನಗೆ ಸಿಗುವುದು ಹತ್ತೇಮುಡಿ ಎಂಬುದನ್ನು ಮರೆಯುತ್ತಾನೆ. ಜೀವನಕ್ಕಾಗಿ ದುಡಿಯಬೇಕು. ವ್ಯಕ್ತಿತ್ವವನ್ನು ಬೆಳೆಸಲು ಪ್ರಯತ್ನಿಸಬೇಕು, ಎಂಬ ಭಾವನೆಯು ಆತನಲ್ಲಿ ಬರಬೇಕಾದರೆ ಈ ದಿಸಿಲ್ಗದುರಿಯ ಭಾವನೆಯು ಮೊದಲು ಮಾಯವಾಗಬೇಕು.

ಗಂಡನು ಯಜಮಾನನಲ್ಲದವನು ಬರಿಯ ಅಶನಾರ್ಥಿಯಾಗಿ ಬದುಕಬೇಕಾಗಿರುತ್ತದೆ. ಹೆಣ್ಣು ಇಚ್ಛಾನುಸಾರ ತಲೆಮಾರು ಪಾಲಿನ ಹಕ್ಕುದಾರಳು. ಅಲ್ಲದೆ ಒಂದು ಕಡೆ ಸಹೋದರಿಯರು, ಇನ್ನೊಂದು ಕಡೆ ಹೆಂಡತಿ ಮಕ್ಕಳು ಅವನ ಎರಡು ಕಣ್ಣುಗಳಂತಿರುವರು. ಎರಡು ದೋಣಿಗೆ ಕಾಲಿಟ್ಟಿರುವ ಈ ಸಂದರ್ಭ ಅದೆಷ್ಟೋ ಸಲ ಅಶಾಂತಿಯ ವಾತಾವರಣಕ್ಕೆ ಎಡೆಯನ್ನುಂಟುಮಾಡುತ್ತಿದೆ.

ಬಾಲಕಿಯರ ವಿವಾಹಕ್ಕೆ ಆತಂಕವನ್ನೊದಗಿಸುವ ಕಂಟಕವಾಗಿರುವ ವರದಕ್ಷಿಣೆಗೆ ಕಾರಣ ಈ ಜಂಟಿಕುಟುಂಬಗಳೇ. ಆಸ್ತಿಯು ಇಚ್ಛಾನುಸಾರ ನೇರಾಗಿ ಪಾಲಾಗಲಿ. ಹೆಣ್ಣು ಮದುವೆಯಾದೊಡನೆ ಮನೆಯಲ್ಲಿ ತನಗೆ ಸಿಗತಕ್ಕ ಆಸ್ತಿಯ ಅಂಶವನ್ನು ಪಡೆಯುವಂತಾಗಲಿ. ಈ ಮನುಷ್ಯತ್ವವನ್ನು ಮಾರುವ ಬಳುವಳಿಯ ಕ್ರಮವು, ಕ್ರಮಕ್ರಮವಾಗಿ ನಿಂತುಬಿಡುವುದು. ವಿವಾಹವಾದ ಬಳಿಕ ಗಂಡನನ್ನೇ ಹೊಂದಿರುವಾಗ, ಮನೆಯ ಆಸ್ತಿಯ ಅಂಶವನ್ನು ಅನುಭವಿಸುವವರು ಬೇರೆಯೇ ಇರುವಾಗ, ಮದುವೆಯಾಗಿ ಹೋಗುವಾಗ ಏಕಗಂಟಿನಲ್ಲಿ ವರದಕ್ಷಿಣೆಯ ರೂಪದಲ್ಲಿ ಹಣಕೊಡುವುದು ಅನ್ಯಾಯವಾಗದು. ಆದರೆ ಈ ಪದ್ಧತಿಯೊಂದಿಗೆ ಒಂದು ಮನೆಯಲ್ಲಿ ಹತ್ತೆಂಟು ಹೆಣ್ಣು ಮಕ್ಕಳು ಇದ್ದರೆ ಬಳುವಳಿಗೆ ಹಣವೆಲ್ಲಿಂದ ಬರಬೇಕು. ಹೀಗಾಗಿ ಆ ಬಾಲಿಕೆಯರು ಚಿರಕುಮಾರಿಯರಾಗಿ ಉಳಿಯುವ ಸಂದರ್ಭಗಳೂ ಇಲ್ಲದೆ ಇಲ್ಲ. ಹಣಕ್ಕಾಗಿ ಆಗುವ ದಾವೆಗಳು ನಿಲ್ಲಬೇಕು. ಅಳಿಯಸಂತಾನ ಮತ್ತು ಈ ಜಂಟಿಕುಟುಂಬದ ಪದ್ಧತಿಗಳು ಅಳಿಯಬೇಕು. ಅಲ್ಲದೆ, ಕಟ್ಟಳೆಗಳ ಸಮಾನತೆಯು ಸಾಧುವಾದ ಅಂತರ್ಜಾತೀಯ ವಿವಾಹಕ್ಕೆ ಹೆಚ್ಚು ಆಸ್ಪದ ಕೊಡುತ್ತದೆ.

ಅಳಿಯ ಮಾವನ 'ಮನೆಯಳಿಯ'ನಾಗಬೇಕಾದ ಪ್ರಸಂಗಗಳೂ ಬರುತ್ತವೆ. ವಿದ್ಯಾಭ್ಯಾಸಕ್ಕೆ ಮಾವನು ಹಣಕೊಡಬೇಕಾದರೆ ಆತನ ಮಗಳ ದಾಕ್ಷಿಣ್ಯದ ವಿವಾಹಕ್ಕೆ ಒಳಗಾಗಬೇಕಾಗುತ್ತದೆ ತಪ್ಪಿದರೆ ಅಶಾಂತಿಯ ಕೋಲಾಹಲ. ಅಂತೂ ದಾಕ್ಷಿಣ್ಯದ ಮದುವೆ ಎಂದರೆ ಜೀವನವನ್ನು ದಾಕ್ಷಿಣ್ಯಕ್ಕೆ ಮಾರುವ ಮದುವೆ; ಅಲ್ಲದೆ ಹತ್ತಿರದ ಜನಾಂಗವನ್ನು ದುರ್ಬಲಗೊಳಿಸುವ ಮದುವೆ.

ಯಾರ ದಾಕ್ಷಿಣ್ಯದಕ್ಕೊ ಒಳಗಾಗದೆ, ತಂದೆಯ ಕುಟುಂಬದ ಪಾಪಕ್ಕೊ ಬಲಿಯಾಗದೆ ಇದ್ದು, ಭೂಮಿಯ ಅಭಿವೃದ್ಧಿ, ಮನೆಯ ದುರಸ್ತಿ ಮಾಡಿಕೊಂಡು ಜೀವನದಲ್ಲಿ ಶಾಂತಿಯಿಂದ, ಸ್ಥಿರವಾದ ನೆಲೆಯಿಂದ ಇರಬೇಕಾದರೆ ಮಕ್ಕಳ ಸಂತಾನವು ಜಾರಿಗೆ ಬರಬೇಕು. ತನ್ನದೆಂಬ ಭಾವನೆಯಿಂದ, ಬಂಜರು ಭೂಮಿಯೂ ಲಕ್ಷ್ಮಿಯು ವಾಸಿಸುವ ನಂದನವಾಗಬಲ್ಲುದು.

ತಂದೆಯು ಬದುಕಿರುವಷ್ಟು ಕಾಲ—ಮಕ್ಕಳಿಗೆ ಎರಡು ಮನೆಯ ಹಕ್ಕು. ಕೆಲವು ದಿನ ತಂದೆಯ ಮನೆಯಲ್ಲಿ ಮತ್ತು ಕೆಲವು ದಿನ ಮಾವನ ಮನೆಯಲ್ಲಿ ಹೀಗೆ ತಿರುಗುತ್ತಾ ಇರುವುದರಿಂದ ಪ್ರಾಥಮಿಕ ಶಾಲೆಗಳಲ್ಲಿ ಮಕ್ಕಳ ಗೈರುಹಾಜರಿಗೆ ಇದೊಂದು ಮುಖ್ಯ ಕಾರಣವಿರುತ್ತದೆ. ಆದಕ್ಕೆ ಕಾರಣ ಈ ಕಟ್ಟಳೆಯೋ ಎಂದು ಬೇರೆ ಹೇಳಬೇಕಾಗಿಲ್ಲ.

ಯಜಮಾನನಾದವನು ಗರ್ಜಿಯ ಕಾರಣ ತೋರಿಸಿ ಸಾಲಮಾಡಿ ಅಳಿಯನಿಗೆ ಹೊಂದಕೊಡಲು ಆಸ್ಪದವಿದೆ. ಅಲ್ಲದೆ 'ತಿಂದದ್ದು ಬಂತು' ಎಂಬ ಯಜಮಾನನ ಮಕ್ಕಳಿಗೆ ತಂದೆಯು ಅಳಿಯಂದಿರ ಕಣ್ಣುಕಟ್ಟಿ ಏನಾದರೂ ಗಂಟುಕಟ್ಟಿಕೊಡುವನು. ಹೀಗಾಗುವಾಗ ಅಳಿಯಂದಿರು ಅವನೊಡನೆ ಹಗೆಸಾಧಿಸಲು ಪ್ರಾರಂಭಿಸುವರು. ಹಣದ ಅಧಿಕಾರವೂ ಇಲ್ಲದ ಮಕ್ಕಳಿಗೆ. ತಂದೆಯ ಕೊನೆಗಳಲ್ಲಿ ಆತನನ್ನು ಅಳಿಯಂದಿರ ಹಂಗಿಗೆ ಒಳಪಡಿಸಬೇಕಾಗುತ್ತದೆ. ತನ್ನ ಮನೆಯಲ್ಲಿಯೇ ಸಾಯುದೇಕೆಂದು ಸ್ವಾಭಾವಿಕವಾಗಿ ಕೆಲವರಿಗೆ ಅನಿಸಿರುತ್ತದೆ. ಅಂತ್ಯಕಾಲದಲ್ಲಿ ಜನಕ ಸೇವೆಯನ್ನು ಮಾಡಲು ತನ್ನ ಮಕ್ಕಳಿಗೆ ಆಸ್ಪದವೆಲ್ಲಿ? ಮಕ್ಕಳ ಆಶ್ರಯದಲ್ಲಿಯೇ ತನ್ನ ಕೊನೆಯ ದಿನಗಳನ್ನು ದೂಡಬಹುದು, ಶವಸಂಸ್ಕಾರದ ಸಮಯದಲ್ಲಾದರೂ ಅಳಿಯಂದಿರು ತಮ್ಮ ಹಕ್ಕುಸಾಧಿಸಿಯೇ ಬಿಡುವರು. ಹೀಗಿರುವಾಗ ಮಕ್ಕಳ ಸಂತಾನ ಬೇಡವೆನ್ನುವವರಾರು?

ಬದಲಾಗುತ್ತಿರುವ ಮಧ್ಯ ಸಮಯ (tiausitian period) ದಲ್ಲಿ ಯಾರಿಗೂ ತೊಂದರೆಯಾಗಬಾರದು. ಪ್ರತಿಯೊಬ್ಬನೂ ತನ್ನ ನ್ಯಾಯವಾದ ಹಕ್ಕನ್ನು ಪಡೆಯುವಂತಿರಬೇಕು. ತಂದೆಯು ಮೃತಪೊಂದಿದ್ದರೂ ನಿರ್ದಿಷ್ಟ ಅವಧಿಯ ವರೆಗೆ ಈ ಹಕ್ಕಿನ ಆಸ್ಪದವಿರಬೇಕು. ಯಾರಿಗೆ ಭಾವನಾಗಿಯೂ ಅನ್ಯಾಯವಾಗುತ್ತಿದೆಯೋ ಅಂತಹವರಿಗೆ ನ್ಯಾಯವಾದ ಪರಿಹಾರಕ್ಕೆ ದಾರಿ ಇರಬೇಕು.

ಸಾರ್ವತ್ರಿಕ ಸುಧಾರಣೆಯಲ್ಲಿ ವೈಯಕ್ತಿಕ ಲಾಭನಷ್ಟಗಳನ್ನು ಎಣಿಸಲಾಗದು. ಸಮಾಜಕ್ಕೆ ಇದರಿಂದಾಗುವ ಲಾಭನಷ್ಟಗಳನ್ನು ಲಕ್ಷಿಸಬೇಕಾಗುತ್ತದೆ. ಹಿಂದುತ್ವದ ಐಕ್ಯತೆಯ ಭದ್ರತಳಹದಿಯು ನಮ್ಮ ಸಮಾಜಸ್ವಾಸ್ಥ್ಯದ ತಳಹದಿಯು.

ಸಾರ್ವಜನಿಕರ ಅಭಿಪ್ರಾಯ ಪಡೆದು ನಾವು ಯಾವುದೇ ಕಾನೂನನ್ನು ಜಾರಿಗೆ ತರಬೇಕಾಗಿರುತ್ತದೆ. ಹಳ್ಳಿಯ ಜನಜೀವನದ ಚಿತ್ರಗಳನ್ನು ಪರಿಶೀಲಿಸಬೇಕಾಗಿರುತ್ತದೆ. ಒಂದು ಕಡೆ ಹೆಣ್ಣಿಗೆ ಹಕ್ಕೆಂದು ಬರಿಯ ಆಶೆತೋರಿಸಿ, ಆಕೆಯು ಸಮಾಜಕ್ಕೆ ಭಾರವಾಗತೊಡಗಿದ್ದಾಳೆ. ಇನ್ನೊಂದು ಕಡೆ ಗಂಡನು ಗೂಡು ಊಟದ ಅಶನಾರ್ಥಿಯಾಗಿರುತ್ತಾನೆ. ಸಮಾಜದಲ್ಲಿ ಸುಖಶಾಂತಿಗಳು ನೆಲೆಯಾಗಬೇಕು. ಹೆತ್ತವರಿಗೆ ತಮ್ಮ ಮಕ್ಕಳ ಕಡೆಗೆ ಪ್ರಮುಖವಾಗಿ ಜವಾಬ್ದಾರಿಯು ಬೇಕು.

ಅಳಿಯಸಂತಾನದ ಈ ಕಟ್ಟನ್ನು ಹೋಗಲಾಡಿಸಿ, ನಮ್ಮ ಜಿಲ್ಲೆಯಲ್ಲಿ ನಮ್ಮ ಸಮಾಜದಲ್ಲಿ ಈ ಹೊಸಸುಧಾರಣೆಯ ಹೊಸಬೆಳಕು ಹರಿಯುವಂತಾಗಲಿ. ಈ ವಿಷಯದಲ್ಲಿ ಮಾಡತಕ್ಕ ಎಲ್ಲಾ ಪ್ರಯತ್ನಗಳಿಗೆ ಜಯವಾಗಲಿ.

ಪ್ರಕಟಣೆ

ಉಡುಪಿ ತಾಲೂಕು ಶಿವಳ್ಳಿ ಗ್ರಾಮದ ಮಂಚಿ ಕೋಡಿಯಲ್ಲಿರುವ ಗೋವಿಂದಪ್ರಭುಗಳ ಮಗ ಅಪ್ಪಯ್ಯ ಪ್ರಭುವು ಈ ಮೂಲಕ ತಿಳಿಸುವುದೇನೆಂದರೆ— ಉಡುಪಿ ತಾಲೂಕು ಉಪ್ಪೂರು ಗ್ರಾಮದ ಹರಾರಿಯಲ್ಲಿರುವ ಶ್ರೀನಿವಾಸ ಭಟ್ಟರ ಮಗ ಲಕ್ಷ್ಮೀನಾರಾಯಣ ಭಟ್ಟರು ಉಡುಪಿ ತಾಲೂಕು ಶಿವಳ್ಳಿ ಗ್ರಾಮದಲ್ಲಿರುವ ತಮ್ಮ ಮೂಲಿಕಕ್ಕಿನ ಸಂಪೂರ್ಣ ಆಸ್ತಿಯನ್ನು ರೂ. 2100-0-0ಕ್ಕೆ ನನಗೆ ಖಂಡಿತ ಕ್ರಯಕ್ಕೆ ಕೊಡುವುದಾಗಿ ಒಪ್ಪಿ ನನ್ನಿಂದ ರೂ. 100-0-0 ತಾ. 12-4-51ರಲ್ಲಿ ಮುಂಗಡವನ್ನು ಪಡಕೊಂಡು ರಶೀದಿಕೊಟ್ಟಿರುತ್ತಾರೆ. ಅಲ್ಲದೆ ಸಂಬಂಧಪಟ್ಟ ರಿಕಾರ್ಡು ಕೂಡ ನನ್ನ ವಶಕೊಟ್ಟಿರುತ್ತಾರೆ. ಕರಾರು ಪ್ರಕಾರ ತಾ. 20-4-51ರೊಳಗೆ ಸದ್ರಿ ಲಕ್ಷ್ಮೀನಾರಾಯಣ ಭಟ್ಟರು ಕ್ರಯಚೀಟು ಮಾಡಿಕೊಡಬೇಕಿತ್ತು. ಆಪ್ರಕಾರ ಅವರು ನಡಕೊಳ್ಳದ್ದರಿಂದ ಆಸ್ತಿಯನ್ನು ಬೇರೆಯವರಿಗೆ ಕೊಟ್ಟು ನನಗೆ ಮೋಸಪಡಿಸುವ ಇರಾದೆಯಲ್ಲಿರುವುದಾಗಿ ನಾನು ಅನುಮಾನಿಸುತ್ತೇನೆ. ಸದ್ರಿ ಆಸ್ತಿಯನ್ನು ಕೂಡಲೇ ನನಗೆ ಕ್ರಯಚೀಟು ಬರಸಿಕೊಡಬೇಕಾಗಿ ನಾನು ಅವರಿಗೆ ಲಾಯರ್ ನೋಟೀಸು ಕೊಟ್ಟಿರುತ್ತೇನೆ. ಸದ್ರಿ ಆಸ್ತಿಯನ್ನು ಯಾರೂ ಈ ತಾರೀಕಿನಿಂದ ಸದ್ರಿ ಲಕ್ಷ್ಮೀನಾರಾಯಣ ಭಟ್ಟರಿಂದ ಪರಾಧೀನ ಮಾಡಿಕೊಂಡದ್ದೇ ಆದರೆ ಅಂಥಾ ಪರಾಧೀನಗಳು ನನ್ನನ್ನು ಬದ್ಧೀಕರಿಸತಕ್ಕದ್ದಲ್ಲ— ತಿಳಿವಳಿಕೆ.

ಈ ಎಡ ಹೆಬ್ಬೆಟ್ಟಿನ ಗುರುತು ಅಪ್ಪಯ್ಯ ಪ್ರಭುವಿನ ರುಜುವಾಗಿರುತ್ತದೆ. ಉಡುಪಿ ಕಸ್ಬ ಕೆಳಕೊಪ್ಪಲದಲ್ಲಿರುವ ನರಸಿಂಹ ಭಟ್ಟರ ದತ್ತದ ಮಗ ಕೆ. ಗೋವಿಂದ ಕೃಷ್ಣಭಟ್ಟನ ಸಾಕ್ಷಿ.

ಮಂಚಿ, ತಾ. 24—4—51

'ಕಿರಿಯರ ಪ್ರಪಂಚ'ದ ಪ್ರಕಟಣೆಗಳು

ಕೊರಡ್ಕಲ್ ಶ್ರೀನಿವಾಸರಾಯರಿಂದ—

ನಂದಾದೀಪ [ಸಣ್ಣ ಕತೆಗಳು]	0—14—0
ಭಾರತೀಯ ಕತೆಗಳು	0—14—0
ಮೂರು ಪ್ರಹಸನಗಳು	0—14—0

ಎಸ್. ವೆಂಕಟರಾಜರಿಂದ—

ರಂಗಭೂಮಿ [ನಾಟಕ]	0—8—0
ಆಕಾಶ ಗಂಗೆ [ಸಣ್ಣ ಕತೆಗಳು]	1—12—0
ಕವಿತಾಕಾಮಿನಿ [ಕವನಗಳು]	2—0—0
ಸಪ್ತಸಾಗರ [ಸಣ್ಣ ಕತೆಗಳು]	0—12—0

ಕೆ. ಕೆ. ಶೆಟ್ಟರಿಂದ—

ಸಂಶಯ ಪಿಶಾಚಿ [ನಾಟಕ]	0—8—0
ಕುಶಲವ [ನಾಟಕ]	0—6—0
ವ್ಯಭಿಚಾರಿಣಿಯಾರು [ನಾಟಕ]	1—0—0
ಹೆಂಡ್ತಿ ಗಂಡನಾದರೆ [ಪ್ರಹಸನ]	0—4—0
ಪುರುಷವಧು [ಪ್ರಹಸನ]	0—4—0
ದೇಶಭಕ್ತ [ನಾಟಕ]	1—4—0
ಪ್ರೇಮವಿಜಯ [ನಾಟಕ]	1—0—0
ಸನ್ಯಾಸಿಯ ಸೋಗಿನಲ್ಲಿ [ಕಾದಂಬರಿ]	0—8—0

ಇತರ ಪುಸ್ತಕಗಳು

ಕಾವ್ಯ ಸಾಮ್ರಾಜ್ಯ [ಕವನ ಸಂಗ್ರಹ]	1—4—0
ಮಧುವನ [ಕಥಾಸಂಗ್ರಹ]	3—0—0
ನಾಡಕತೆಗಳು [ಕಥಾಸಂಗ್ರಹ]	0—3—0
ಸೀಮಾಪಥ [ನಾಟಕ]	9—8—0
ನಗೆನೋಟಗಳು [ಕೆ. ವಿ. ಶೆಟ್ಟಿ]	0—14—0
ಅನ್ನದೇವರು ಮತ್ತು ಇತರಕತೆಗಳು [ಕೆ. ಕೆ. ರೈ]	1—0—0
ಭಾರತದಲ್ಲಿ ಜಾತಿಭೇದ	1—0—0
ವಿಷ್ಣುವಿನ ದಶಾವತಾರಗಳು [ಎಂ. ವಿ. ಹೆಗ್ಡೆ]	0—12—0
ಸ್ವಾತಂತ್ರ್ಯ ವೀರಸಾವರಕರ [ಇಂದಿರಾ ಬಾಯಿ]	1—4—0
ಜೀವನ ಸಂಗ್ರಾಮ [ಪಿ. ಶೀನ ಶೆಟ್ಟಿ]	1—8—0
ಕದಂಬ [ಸರಸ್ವತಿಬಾಯಿ ರಾಜವಾಡೆ]	1—4—0
ಪ್ರಕಾಶ [,,]	2—0—0
ಜಮೀನ್ದಾರ [ಹೊಸಮನಿ ಗುಂಡಪ್ಪ]	1—8—0
ಸ್ವತಂತ್ರ ಜೀವನೋಪಾಯ	0—3—0

ನವಭಾರತ ಪುಸ್ತಕ ಭಂಡಾರ, ಉಡುಪಿ

ಒಕ್ಕಲತನ ಖಾತೆ ಮತ್ತು ಆಧುನಿಕ ಒಕ್ಕಲತನ

ಒಂದು ವಿಧಾಯಕ ಯೋಜನೆ

ಬರೆದವರು: ವೈದ್ಯ ವಿನಾಯಕರಾವ್ ಬಾಪಟ

ಭಾರತವು ಒಕ್ಕಲತನ ಪ್ರಧಾನವಾದ ದೇಶ. ಹಿಂದೆ ನಮ್ಮ ದೇಶದಲ್ಲಿ, ನಮಗೆಲ್ಲರಿಗೂ ಸಾಕಾಗಿ ಮಿಗುವಷ್ಟು ಆಹಾರ ಧಾನ್ಯವನ್ನು ಬೆಳೆಯುತ್ತಿದ್ದೆವು. ಆದರೆ ಈಗ; ನಾನಾಕಾರಣಗಳ ಪರಿಣಾಮವಾಗಿ, ನಾವು ನಮ್ಮ ನಿತ್ಯದ ಆಹಾರಕ್ಕಾಗಿ ಇನ್ನೊಂದು ದೇಶದವರನ್ನು ಬೇಡುವಂತಹ ಹೀನಪರಿಸ್ಥಿತಿ ಒದಗಿದೆ. ಇದೇ ಸ್ಥಿತಿಯನ್ನು ಇನ್ನೂ ಉಳಿಯಗೊಡುವುದು ಅಪಾಯಕರ. ನಾವು ಆಹಾರ ದೃಷ್ಟಿಯಿಂದಲಾದರೂ ಸ್ವಾವಲಂಬಿಗಳಾಗಿರುವುದು ಅತೀವ ಅವಶ್ಯಕವಾಗಿದೆ. ಸುತ್ತಲೂ ಯುದ್ಧದ ಕಾರ್ಮೋಡಗಳು ಹರಡುತ್ತಿರುವ ಈ ಸಮಯದಲ್ಲಂತೂ ನಾವು ಇನ್ನೂ ಹೆಚ್ಚು ಕಾರ್ಯದಕ್ಷರಾಗಿ ನಮ್ಮ ಗುರಿಯನ್ನು ಜಾಗ್ರತೆಯಾಗಿ ಮುಟ್ಟುವ ಪ್ರಯತ್ನವನ್ನು ಮಾಡಬೇಕು. ದುರ್ದೈವದಿಂದ ಇನ್ನೊಂದು ಮಹಾ ಯುದ್ಧವೊದಗಿದರೆ, ಹೊರಗಿನಿಂದ ಆಹಾರ ಧಾನ್ಯಗಳನ್ನು ತರಿಸಿಕೊಳ್ಳುವುದು ಎಷ್ಟು ಕಠಿಣ ಹಾಗೂ ಅಸಾಧ್ಯವಾಗುತ್ತದೆಂಬುದೂ, ದೇಶದ ಒಳಗಡೆ ಬೆಳೆಯುವ ಆಹಾರದ ಬಹುದೊಡ್ಡ ಭಾಗವು ಮಿಲಿಟರಿಯವರ ಉಪಯೋಗಕ್ಕಾಗಿ ಸಂಗ್ರಹಿಸಲ್ಪಡಬೇಕಾಗುವುದೆಂಬುದೂ, ಹಿಂದಿನ ಯುದ್ಧದ ಅನುಭವದಿಂದ ಗೊತ್ತಾಗಿದೆ.

ಈ ದೃಷ್ಟಿಯಿಂದಲೇ ನಮ್ಮ ಸರ್ಕಾರದವರು ಆಹಾರ ಸ್ವಾವಲಂಬನವನ್ನು ಸಾಧ್ಯವಿದ್ದಷ್ಟು ಜಾಗ್ರತೆಯಾಗಿ ಸಾಧಿಸುವ ಉದ್ದೇಶದಿಂದ ವಿವಿಧ ಯೋಜನೆಗಳನ್ನು ಕೈಗೊಂಡಿದ್ದಾರೆ ಇವುಗಳಲ್ಲಿ, ದೀರ್ಘಾವಧಿ ಯೋಜನೆಗಳಲ್ಲಡಕವಾದ ದೊಡ್ಡ ದೊಡ್ಡ ನೀರಾವರಿ ಕಾಮಗಾರಿಗಳೂ, ಮತ್ತು ಸುಧಾರಿಸಿದ ಒಕ್ಕಲತನ ಇವೆರಡೂ ಪ್ರಮುಖ್ಯಸಾಧನಗಳಾಗಿವೆ ದೀರ್ಘಾವಧಿ ಯೋಜನೆಗಳಿಗೆ ಹಣ ಮತ್ತು ಕಾಲದ ಅವಶ್ಯಕತೆಯಿರುವುದರಿಂದ, ಅಲ್ಲಿಯ ವರೆಗೆ ಶೀಘ್ರಫಲಕಾರಿಯಾದ ಅಲ್ಪಾವಧಿ ಯೋಜನೆಗಳನ್ನು ಕೈಗೊಳ್ಳಬೇಕು. ಇದಕ್ಕೆ ರೈತರು "ಸುಧಾರಿಸಿದ ಒಕ್ಕಲತನ ವಿಧಾನ"ಗಳನ್ನು ಅಶ್ರಯಿಸಿ, ಈಗಿನಷ್ಟೇ ಶ್ರಮದಿಂದ, ಇದೇ ಭೂಮಿಯಲ್ಲಿ, ಹೆಚ್ಚು ಪೈರನ್ನು ಬೆಳೆಯುವುದೇ ಸರಿಯಾದ ವಿಧಾನವಾಗಿದೆ. ಅನೇಕ ತಜ್ಞರೂ, ಅನುಭವಿಕರೂ ಇದೇ ಮಾತನ್ನು ಒತ್ತಿ ಹೇಳುತ್ತಿದ್ದಾರೆ. ಸರಕಾರದ ಒಕ್ಕಲತನ ಖಾತೆಯವರು ಸಹ ಇದರ ಶ್ರೇಷ್ಠತೆಯನ್ನು ರೈತರಿಗೆ ಮನಗಾಣಿಸಲು ನಾನಾ ಮುಖವಾಗಿ ಪ್ರಯತ್ನಮಾಡುತ್ತಿದ್ದಾರೆ

ನಮ್ಮ ದೇಶದ ಬಹುಶಃ ಎಲ್ಲಾ ಪ್ರಾಂತ ಮತ್ತು ಸಂಸ್ಥಾನಗಳಲ್ಲಿಯೂ, ಸರ್ಕಾರದವರು ವಿಶೇಷ ತಜ್ಞ ಸಿಬ್ಬಂದಿಯನ್ನಿಟ್ಟು ಸುಧಾರಿಸಿದ ಕೃಷಿವಿಧಾನದ ಪ್ರಚಾರವನ್ನು ಮಾಡುತ್ತಿದ್ದಾರೆ. ಹಾಗೂರೈತರಿಗೆ ವಿಶೇಷ ಸೌಕರ್ಯಗ ಕೊಡುತ್ತಿದ್ದಾರೆ ಆದರೆ ಅದು ಇನ್ನೂ ಅಪೇಕ್ಷಿಸಿದ ಫಲವನ್ನು ಕೊಟ್ಟಿರುವುದಿಲ್ಲ. ರೈತರು ಸಹ ಈ ಹೊಸ ಪದ್ಧತಿಯನ್ನು ಜಾರಿಗೆ ತರಲು ಒಪ್ಪುತ್ತಿಲ್ಲವೆಂಬುದು, ರೈತರೊಡನೆ ಒಡನಾಡಿದ ಕಾರ್ಯಕರ್ತರೆಲ್ಲರಿಗೂ ಗೊತ್ತಿದೆ.

ಹೊಸ ಪದ್ಧತಿಯನ್ನು ಜನರು ಒಪ್ಪಿಕೊಳ್ಳದಿರುವ ಕಾರಣಗಳು.

ಬಹಳ ಕಾಲದಿಂದಲೂ ರೂಢಿಯಲ್ಲಿ ಬಂದ ಯಾವುದೇ ಪದ್ಧತಿಯನ್ನು ಬಿಟ್ಟು ಹೊಸ ಪದ್ಧತಿಯನ್ನು ಅಪ್ಪಿಕೊಳ್ಳಲು ಜನರು ಸುಲಭವಾಗಿ ಒಪ್ಪುವುದಿಲ್ಲ. ಸುಧಾರಿಸಿದ ಒಕ್ಕಲತನವು ಇದಕ್ಕೆ ಅಪವಾದವೇನೂ ಅಲ್ಲ, ಸಾಮಾನ್ಯವಾಗಿ ಎಲ್ಲಾ ಹೊಸ ಪದ್ಧತಿಗಳನ್ನೂ ಸಂಶಯದೃಷ್ಟಿಯಿಂದ ನೋಡುವುದು ಜನರ ಸ್ವಭಾವ ಭಾರತದ ಜನರ ಅಜ್ಞಾನ, ಅವಿದ್ಯೆ, ಇತ್ಯಾದಿಗಳು ಹೊಸ ಪದ್ಧತಿಯ ಪ್ರಚಾರಕ್ಕೆ ದೊಡ್ಡ ತಡೆಯಾಗಿವೆ ಅಕಸ್ಮಾತ್ತಾಗಿ ಹಳ್ಳಿಯಲ್ಲಿ ಒಬ್ಬಿಬ್ಬರು ಹೊಸಪದ್ಧತಿಯನ್ನು ಆಚರಣೆಗೆ ತಂದು, ಅದರಿಂದ ಹಾನಿಯೇನಾದರೂ ಸಂಭವಿಸಿದರಂತೂ ತೀರಿಯೇ ಹೋಯಿತು. ಆ ಸುದ್ದಿಯು ಸುತ್ತಮುತ್ತಲೂ ವಿಷದಂತೆ ಜಾಗ್ರತೆಯಾಗಿ ಹರಡಿ ಹೊಸ ಪದ್ಧತಿಯ ಬಗ್ಗೆ ಜನರಿಗೆ ತಾತ್ಸಾರವಾಗುತ್ತದೆ. ಇದರಲ್ಲಿ ಕೇವಲ ರೈತರನ್ನು ಮಾತ್ರ ದೂಷಿಸುವಂತಿಲ್ಲ. ಸುಧಾರಿಸಿದ ಒಕ್ಕಲತನವು ಸಾಕಷ್ಟು ಫಲಕಾರಿಯಾಗದಿರುವುದಕ್ಕೂ, ಜನರಿಗೆ ಇದರ ಬಗ್ಗೆ ಆಕರ್ಷಣೆಯಾಗದಿರುವುದಕ್ಕೂ, ಸರ್ಕಾರದ ಆಡಳಿತ ವಿಧಾನ, ಅಧಿಕಾರಿಗಳು ಹಾಗೂ ತಜ್ಞರ ದೋಷಗಳು ಸಹ ಕಾರಣವಾಗಿವೆ.

ನಮ್ಮ 'ತಜ್ಞರು' ಸುಧಾರಿಸಿದ ಹೊಸಪದ್ಧತಿಯನ್ನು ಜನರಿಗೆ ಉಪದೇಶಿಸುವಾಗ, ಅದು ನಿಜವಾಗಿಯೂ ನಮ್ಮ ದೇಶಕ್ಕೆ-ಹಾಗೂ ಉಪದೇಶಿಸುವ ಬೇರೆಬೇರೆ ಭಾಗಗಳಿಗೆ- ಉಪಯುಕ್ತವಹುದೋ ಅಲ್ಲವೋ ಎಂಬುದನ್ನು ಖಚಿತವಾಗಿ ತಿಳಿದುಕೊಳ್ಳದೆ, ಅಂದರೆ ಇದರ ಉಪಯುಕ್ತತೆಯನ್ನು ಪ್ರತ್ಯಕ್ಷ ಅನುಭವದಿಂದ ಕಂಡುಕೊಳ್ಳದೆ, ಕೇವಲ ಪಾಶ್ಚಾತ್ಯ ದೇಶಗಳಲ್ಲಿ ತಾವುಕಂಡ ಅನುಭವ ಹಾಗೂ ಧೋರಣೆಯ ಮೇಲೆ ವಿಶ್ವಾಸವನ್ನಿಟ್ಟು ಹೊಸ ಪದ್ಧತಿಯನ್ನು ಜಾರಿಗೆ ತರುತ್ತಿದ್ದಾರೆಂದು ಇದುವರೆಗೆ ನಡೆದ ಕಾರ್ಯದಿಂದ ಊಹಿಸಬೇಕಾಗಿದೆ. ಇವರ ಕೈಕೆಳಗಿನ ಅಧಿಕಾರಿಗಳು ತಮಗೆ ಒಪ್ಪಿತವಿರಲಿ ಇಲ್ಲದಿರಲಿ, ಮೇಲಧಿಕಾರಿಗಳ ಆಜ್ಞೆಯನ್ನು ಜಾರಿಯಲ್ಲಿ ತರಲೇಬೇಕು. ಒಕ್ಕಲತನದ ತಜ್ಞರು ಕೆಲವು ವಿಧಾನಗಳನ್ನು- ಈ ರೀತಿಯಾಗಿ ಜಾರಿಯಲ್ಲಿ ತಂದು ಮುಂದೆ ಅದರಿಂದ್ದಾಗುವ ಹಾನಿಯನ್ನು ಮನಗಂಡ ನಂತರ ತಮ್ಮ ಧೋರಣೆಯನ್ನು ಸಲಹೆಯ ವಿಧಾನಗಳನ್ನು-ಬದಲಿಸಲು ಪ್ರಾರಂಭಿಸಿದರು. ಹೀಗೆ ತಜ್ಞರಿಗೇ ಸ್ಪಷ್ಟ ಜ್ಞಾನವಿಲ್ಲದುದರಿಂದಲೂ, ಅನೇಕ ಅಧಿಕಾರಿಗಳು ರೈತರಿಗೆ ಸರಿಯಾದ ಸೂಚನೆಯನ್ನು ಕೊಡದೆ ಇದ್ದುದರಿಂದಲೂ ಅಲ್ಲಲ್ಲಿ ಕೆಲವು ಸ್ಥಳೀಯ ಮುಖಂಡರು ಈ ಹೊಸ ವಿಧಾನಗಳನ್ನು ಆಚರಣೆಗೆ ತಂದು ಹಾನಿಪಟ್ಟುದನ್ನು ಸುತ್ತಮುತ್ತಲಿನ ರೈತರು ಕಂಡದ್ದರಿಂದಲೂ ಈ ಹೊಸಪದ್ಧತಿಯ ಬಗ್ಗೆ ರೈತರಿಗೆ ವಿಶ್ವಾಸವೇ ಹುಟ್ಟದಂತಾಗಿದೆ. ಹೀಗಾಗಿ ಅಧಿಕಾರಿಗಳು ಎಷ್ಟೇ ಪ್ರಚಾರಮಾಡಿದರೂ ಜನರು ಸುಲಭವಾಗಿ ಒಪ್ಪುವುದಿಲ್ಲ. ಸರ್ಕಾರದವರು ಕೊಡಮಾಡಿದ ಸವಲತ್ತುಗಳನ್ನು ಮಾತ್ರ ಉಪಯೋಗಿಸಿಕೊಳ್ಳುತ್ತಿದ್ದಾರೆಯೇ ಹೊರತು ಹೊಸವಿಧಾನಗಳನ್ನು ಜಾರಿಗೆ ತರುತ್ತಿಲ್ಲ. (ಹೊಸ ವಿಧಾನಗಳು ಹೆಚ್ಚುಹೆಚ್ಚು ಜನಾದರಣೀಯವಾಗುತ್ತಿವೆ ಎಂಬುದನ್ನು ಸಿದ್ಧಪಡಿಸಲು ಅಧಿಕಾರಿಗಳು ಅಂಕೆಸಂಖ್ಯೆಗಳನ್ನು ಮುಂದೊಡಬಹುದಾದರೂ ಸ್ವಲ್ಪ ಸೂಕ್ಷ್ಮವಾಗಿ ವಿಚಾರಮಾಡಿದರೆ ಅದರಲ್ಲಿಯ ದೋಷಗಳನ್ನು ಕಾಣಬಹುದು)- ತಜ್ಞರು ತಮ್ಮ ಹೊಸ ವಿಧಾನಗಳ ಉಪಯುಕ್ತತೆಯನ್ನು ಪ್ರತ್ಯಕ್ಷಾದಿ ಪ್ರಮಾಣಗಳಿಂದ ಮನಗಾಣದೆ, ಜಾರಿಯಲ್ಲಿ ತಂದು ನಂತರ ತಮ್ಮ ಧೋರಣೆಯನ್ನು ಬದಲಿಸಿದ ಒಂದೆರಡು ಉದಾಹರಣೆಗಳನ್ನು ತಿಳಿಸಿದರೆ ಈ ವಿಷಯವು ಸ್ಪಷ್ಟವಾಗಿ ವ್ಯಕ್ತವಾಗುತ್ತದೆ.

ಕೊಳೆರೋಗದ ಔಷಧಿ

ಉತ್ತರ ಕನ್ನಡ ಜಿಲ್ಲೆಯ ಸಿದ್ದಾಪುರ ತಾಲ್ಲೂಕಿನಲ್ಲಿ ಅಡಿಕೆತೋಟವು ವಿಶೇಷವಾಗಿದೆ. ಅಡಿಕೆ ಪೈರಿಗೆ ಬರುವ "ಕೊಳೆ"ರೋಗವನ್ನು ತಡೆಗಟ್ಟಲು ರೈತರು ಬಹಳ ಹಿಂದಿನಿಂದಲೂ 'ಕೊಟ್ಟೆ' ಮತ್ತು 'ಕರಡ'ಗಳನ್ನು ಕಟ್ಟುತ್ತಿದ್ದಾರೆ. ಒಕ್ಕಲತನ ಅಧಿಕಾರಿಗಳು ಇದನ್ನು ಬಿಟ್ಟು 'ಕೊಳೆಮದ್ದನ್ನು' ಹೊಡೆಯಬೇಕೆಂದು ಪ್ರಚಾರ ಮಾಡಿದರು. (ಈ ಕೊಳೆಮದ್ದನ್ನು ತಯಾರಿಸುವಾಗ ಅದು ಅಂಟಿ ಹಿಡಿದುಕೊಳ್ಳುವಂತೆ ಮಾಡಲು ಕೆಲವು ಕಡೆ ಮೊದಮೊದಲು ರಾಳವನ್ನು ಸೇರಿಸುತ್ತಿದ್ದರು. ಅನಂತರ ಕ್ರಮೇಣ ಇದರ ಬದಲು 'ಕೇಸಿನ್'ಎಂಬ ದ್ರವ್ಯವನ್ನು ಸೇರಿಸಲು ಪ್ರಾರಂಭಿಸಿದರು) ಕೆಲವು ದೊಡ್ಡ ದೊಡ್ಡ ಜಮೀನ್ದಾರರು ಅಧಿಕಾರಿಗಳ ಮಾತನ್ನು ನಂಬಿ 4-6 ವರ್ಷಗಳಗಳ ವರೆಗೂ ಈ ಔಷಧಿಯನ್ನು ಹೊಡಿಸಿದರು. ಕೊಳೆರೋಗವು ತಡೆಹಿಡಿಯಲ್ಪಟ್ಟಿತು. ಇದನ್ನು ನೋಡಿ ಇತರ ರೈತರು ಸಹ ಕೊಟ್ಟೆ, ಕರಡುಗಳನ್ನು ಬಿಟ್ಟು ಇದನ್ನು ಉಪಯೋಗಿಸಲು ಪ್ರಾರಂಭಿಸಿದರು. ಆದರೆ ಮುಂದೆ ಈ ಔಷಧಿಯನ್ನು ಹೊಡೆದ ತೋಟದ ಮರಗಳು ಸುಟ್ಟಂತಾಗಿ ಸಿಂಗೆಗಳು ಒಣಗಲು ಪ್ರಾರಂಭವಾದುವು, ಔಷಧಿಯು ಜಾರಿ ಮರದ ಮೇಲೆ ಇಳಿದ ಭಾಗವು ಕ್ರಮೇಣ ಲಡ್ಡಾಗುತ್ತಾ ಬಂದಿತು. ಎಷ್ಟೋಸಾರಿ ಮರದ ಮೇಲೆ ಕೆಲಸಗಾರರು ಹತ್ತಿದಾಗ ಮಧ್ಯದಲ್ಲಿಯೇ ಮರವು ಮುರಿದು ಬಿದ್ದ ಉದಾಹರಣೆಗಳೂ ಉಂಟು, ಹೀಗೆ ಕ್ರಮೇಣ ಇಡೀ ತೋಟವೇ ಹಾಳಾಗುತ್ತಾ ಬಂದಿತು. ಒಮ್ಮೆ ಒಬ್ಬ ದೊಡ್ಡ ಉತ್ಸಾಹೀ ಜಮೀನ್ದಾರರ ಜೊತೆಗೆ ನಾನು ಈ ವಿಷಯದಲ್ಲಿ ಮಾತೆತ್ತಿದಾಗ ಅವರು ನನ್ನನ್ನು ತಮ್ಮ ತೋಟದ ಮೇಲು ಭಾಗದ ಗುಡ್ಡಕ್ಕೆ ಕರೆದುಕೊಂಡು ಹೋಗಿ ಔಷಧಿಯ ಪರಿಣಾಮವಾಗಿ "ಸುಟ್ಟುಹೋದ" ತೋಟವನ್ನೂ, ಅದರೊಳಗೆ ಹೊಸದಾಗಿ ನೆಟ್ಟ ಸಸಿಗಳನ್ನೂ ತೋರಿಸಿ, ಅದರೊಡನೆ ಅದರ ಪಕ್ಕದಲ್ಲಿದ್ದ, ಅದೇ ವಯಸ್ಸಿನ ಆದರೆ ಔಷಧಿ ಹೊಡೆಯದಿದ್ದುದರಿಂದ ಸೊಂಪಾಗಿ ಬೆಳೆದು ನಿಂತ ತೋಟವನ್ನೂ ತೋರಿಸಿದರು. ವ್ಯತ್ಯಾಸವನ್ನು ನೋಡಿ ನನ್ನ ಮಾತು ಕಟ್ಟಿಹೋಯಿತು. ಈಗ ಸಿದ್ದಾಪುರ ತಾಲೂಕಿನಲ್ಲಿ ಕೊಳೆರೋಗದ ಔಷಧಿಯನ್ನು ಹೊಡೆಸುವವರ ಸಂಖ್ಯೆಯು ಶೂನ್ಯವೆಂದರೂ ಒಪ್ಪುವಷ್ಟು ಕಡಿಮೆಯಾಗಿದೆ.

ಗೊಬ್ಬರ

ರಾಸಾಯನಿಕ ಗೊಬ್ಬರದ ವಿಷಯದಲ್ಲಿ ಸಹ ಇದೇ ಗೋಳು. ಮೊದಮೊದಲು ರಾಸಾಯನಿಕ ಗೊಬ್ಬರ ಮತ್ತು ಎಲುಬಿನ ಹುಡಿಯ ಮಿಶ್ರಣವನ್ನು ಉಪಯೋಗಿಸುವಂತೆ ಪ್ರಚಾರವಾಗುತಿತ್ತು. ಮುಂದೆ ಅದರಿಂದಾಗುವ ಹಾನಿಯನ್ನು ಕಂಡು ಇದರ ಜೊತೆಗೆ ಶೇಂಗಾಹಿಂಡಿಯನ್ನು ಬೆರೆಸಲು ಪ್ರಾರಂಭಿಸಿದರು. ಈಗ ಈ ಮಿಶ್ರಗೊಬ್ಬರದ ಜೊತೆಗೆ ಕಂಪೋಸ್ಟ್ ಗೊಬ್ಬರವನ್ನು ಹಾಕಬೇಕೆಂದು ಹೇಳುತ್ತಾ ಈಗೀಗ ಕಂಪೋಸ್ಟ್ ಗೊಬ್ಬರಕ್ಕೆ ಹೆಚ್ಚು ಪ್ರಾಮುಖ್ಯತೆಯನ್ನು ಕೊಡುತ್ತಿದ್ದಾರೆ ಇದೇ ಸರಿಯಾದುದೆಂದು ಕಾಣುತ್ತದೆ. ಈ ವಿಷಯದಲ್ಲಿ ಸಾಧಕಬಾಧಕಗಳನ್ನು ಪ್ರತ್ಯಕ್ಷ ಪ್ರಯೋಗದಿಂದ ಮೊದಲೇ ತಿಳಿದುಕೊಂಡು ಅನಂತರ ಜನರಿಗೆ ಬೋಧಿಸಿದ್ದರೆ ಚನ್ನಾಗಿರುತ್ತಿತ್ತು ಹಾಗೂ ಒಕ್ಕಲತನ ಖಾತೆಯ ಅಧಿಕಾರಿಗಳ ಮಾತಿನಲ್ಲಿ ಜನರಿಗೆ ವಿಶ್ವಾಸಕೂಡುತ್ತಿತ್ತು.

(ಮುಂದರಿಯುವುದು)

ನೋಟೀಸು

ಕುಂದಾಪುರ ಡಿ. ಮು. ಕೋರ್ಟಿನಲ್ಲಿ

S. C 896/50

ವೆಂಕಟ್ರಮಣ ಶೇರೆಗಾರ —ವಾದಿ.

ಹನುಮಂತ ಶೇರೆಗಾರ —ಪ್ರತಿವಾದಿ.

ವಾದಿ ಕಡೆಯಿಂದ ಈ ಮೂಲಕ ತಿಳಿಯಪಡಿಸುವದೇನಂದ್ರೆ

ಪ್ರತಿವಾದಿ ಹನುಮಂತ ಶೇರೆಗಾರ, ದೊಂಬೆ ಮಂಜಯ್ಯ ಶೇರೆಗಾರನ ಮಗ, ಪಡುವರಿ ಗ್ರಾಮ, ಹಾಲಿ ದಿ ಕೆನರಾ | ಇಂಡಸ್ಟ್ರಿಯಲ್ ಬ್ಯಾಂಕಿಂಗ್ ಸಿಂಡಿಕೇಟ್, ಸಿಸಿ, ಇದರಲ್ಲಿರುವವ.

ವಾದಿಗೆ ಪ್ರತಿವಾದಿಯು ತಾ. 29-11-48 ರಲ್ಲಿ ಬರಕೊಟ್ಟ ಡಿಮಾಂಡ್ ನೋಟಿನ ಅಸಲು ಬಡ್ಡಿ ಕೂಡಾ ರೂ 106-2-8 ಬರಮಾಡಿಕೊಳ್ಳುವರೆ ಮಾಡಿದ ದಾವೆಯು ತಾ 29-5-51ಕ್ಕೆ ತನ್ಕಿಗೆ ಇಟ್ಟಿದೆ. ಆತಂದಿತು ನಿಮ್ಮದೇನಾದ್ರೂ ಉದಾಹರಣೆಯಿದ್ರೆ ಸದ್ರಿ ದಿವ್ಸ ಹಗ್ಲು 11ಗಂಟೆಗೆ ಮೇಲ್ಕಂಡ ಕೋರ್ಟಿನ ಮುಂದೆ ಸ್ವತಾ ವ ವಕೀಲರ ದ್ವಾರಾ ಹಾಜ್ರಾಗಿ ಜಾಹೀರು ಮಾಡಿಕೊಳ್ಳತಕ್ಕದ್ದು ತಪ್ಪಿದ್ರೆ ನಿಮ್ಮ ಗೈರಹಾಜರಿಯಲ್ಲಿ ಏಕಪಕ್ಷವಾಗಿ ತೀರ್ಮಾನಿಸಲ್ಪಡುವುದೆಂಬ ಸಂಗ್ತಿ ಈ ಮೂಲಕ ವಾದಿಕಡೆಯಿಂದ ತಿಳಿಯ ಪಡ್ಸಿಯದೆ.

G. Sanjiva Rao
P. L. L. for Plff
Goondapoor Date 13-4-51

ಉಡುಪಿಗೆ ಹೋಗಬೇಕು! ಆದರೆ ಉಳಿದುಕೊಳ್ಳುವುದೆಲ್ಲಿ?

ರಾಯಲ್ ಮಹಾಲಿನಲ್ಲಿ

ಬಸ್ ಸ್ಟೇಂಡಿಗೆ ಅತಿ ಸಮೀಪ! ಕೃಷ್ಣಮಠಕ್ಕೆ ದೂರವಿಲ್ಲ!

ವ್ಯಾಪಾರವ್ಯವಹಾರ ವಿಹಾರಸ್ಥಳಗಳಿಗೆಲ್ಲ ಕೇಂದ್ರ!

ನಿಮ್ಮ ಸ್ನಾನ, ಊಟ, ಉಪಹಾರ, ಬೈಠಕ್, ಶಯನ ಇವಕ್ಕೆಲ್ಲ ಉತ್ತಮ ವ್ಯವಸ್ಥೆ

ಕರೆದರೆ ಓಗೊಡುವ ನೌಕರ ವರ್ಗ!

ಮೇಲಾಗಿ ಉಡುಪಿ ಬ್ರಾಹ್ಮಣರ ಅಡಿಗೆ, ತಿಂಡಿತಿನಸು, ಇವುಗಳ ರುಚಿರುಚಿ ಹೇಳಬೇಕೆ?

ಪ್ರೊಪ್ರೈಟರ್:— ಕೆ. ವೆಂಕಟ್ರಮಣಭಟ್.

For up-to-date Lodging & Boarding

ROYAL MAHAL,

UDIPI, S. Kanara.

ಅಮೃತಾಂಜನ

ತಲೆನೋವು, ಶಿರೋವೇದನೆ, ಉಳುಕು ಕುತ್ತಿಗೆ, ಭುಜ ಹಲ್ಲು ವೇದನೆಗಳಿಗೂ, ಎದೆನೋವು, ಗಾಯಗಳು, ಬಾತುಕೊಳ್ಳುವುದು, ಚೇಳುವಿಷಮುಂತಾದವು, ಪಕ್ಷವಾತ, ಮೊಡವೆ, ಮೊದಲಾದ ಎಲ್ಲಾ ರೋಗಗಳಿಗೂ ಸಿದ್ಧೌಷಧ

REGD

ಹುಳು ಕಡ್ಡಿ ಮುದ್ದು ನಮ್ಮಲ್ಲಿ ಸಿಕ್ಕುತ್ತದೆ

ಅಮೃತಾಂಜನ ಲಿಮಿಟೆಡ್

ಮದರಾಸು.

ಬೊಂಬಾಯಿ ಮತ್ತು ಕಲ್ಕತ್ತ-

ನಮ್ಮ ಜಿಲ್ಲೆಯ ರಸ್ತೆಗಳನ್ನು ಹೈವೇ ಇಲಾಖೆಯು ವಹಿಸಿಕೊಂಡಂದಿನಿಂದ ಅವುಗಳಿಗೆ ಯಾವ ರೀತಿಯ ದುರ್ಗತಿಯೊದಗಿದೆ ಎಂಬುದು ಸರ್ವವಿದಿತವಾಗಿದೆ. ಜಿಲ್ಲೆಯ ಜನಾಭಿಪ್ರಾಯವನ್ನು ಪ್ರತಿಫಲಿಸುವ ಎಲ್ಲ ಪತ್ರಿಕೆಗಳೂ ನ್ಯಾಯಪೂರ್ವಕವಾದ ಟೀಕೆಯನ್ನು ಮಾಡಿ ಸದರಿ ಡಿಪಾರ್ಟ್‌ಮೆಂಟ್ ಇಲಾಖೆಯನ್ನು ಎಚ್ಚರಿಸುವ ಯತ್ನ ಮಾಡಿದ್ದುಂಟು. ಹೈವೇ ಬಗ್ಗೆ ಮೊದಲು, ರಸ್ತೆಗಳು ಜಿಲ್ಲಾ ಬೋರ್ಡಿನ ವಶ ಇದ್ದಾಗ, ಜಿಲ್ಲೆಯ ಮುಖ್ಯ ಮಾರ್ಗಗಳ ಸ್ಥಿತಿ ಇಂದಿಗಿಂತ ಉ

ಉಡುಪಿಯಲ್ಲಿ ಹೈವೇ ಕಾಟ.

ತ್ತಮವಾಗಿತ್ತೆಂದು ಧಾರಾಳವಾಗಿ ಹೇಳಬಹುದು. ಹಾಗಾದರೆ ಈ ಹೊತ್ತಿನ ದುಃಸ್ಥಿತಿಗೆ ಯಾರು ಕಾರಣ? ಎಂಬುದನ್ನು ಎಲ್ಲರೂ ವಿಚಾರಿಸತಕ್ಕದು. ಅಶೋಕ ಸಮ್ರಾಟನ ಕಾಲದಿಂದ ಲಾಗಾಯ್ತು ರಸ್ತೆ, ರಾಜಮಾರ್ಗ ಮೊದಲಾದವು ಸರಕಾರದ ಜವಾಬುದಾರಿ ಎಂದು ಎಣಿಸಲ್ಪಡುವಂಥವು. ನಾಲ್ಕು ಜನಸೇರಿ ಮಾಡುವ ಕೆಲಸ ಇದಲ್ಲ, ಜನತೆಯ ಪ್ರತಿನಿಧಿಗಳಾಗಿ ಶಾಸನ ಸಭೆಗೆ ತೆರಳಿದ ಮಹಾತ್ಮರು ತಮ್ಮ ಮತದಾರ ಸಂಘ (constituenay) ಕ್ಕೆ ಮಾಡಬೇಕಾದ ಕರ್ತವ್ಯ ಏನೆಂಬುದನ್ನು ಇನ್ನೂ ಅರಿತಹಾಗಿಲ್ಲವೆಂಬುದು ಶೋಚನೀಯ. ಜಿಲ್ಲೆಯ ಮೂಲೆ ಮೂಲೆಗೂ ಆಹಾರ ಸರಬರಾಯಿ ಮಾಡಲನುಕೂಲವಾದ ರಾಜಮಾರ್ಗಗಳ ದುರಸ್ತಿ ಸರಿ ಇಲ್ಲದಲ್ಲಿ ಅದನ್ನು ಚರ್ಚಿಸಿ ಮಾಡುವ ಹೊಣೆಗಾರಿಕೆ ನಮ್ಮ ಪ್ರತಿನಿಧಿಗಳದು ಇರುತ್ತಾ ಅವರು ಬಹಳ ಕಾಲದಿಂದ ಈ ಬಗ್ಗೆ ಮೌನದಿಂದಿರುವುದು ಜನಹಿತಾಕಾಂಕ್ಷೆಯ ಲಕ್ಷಣವು ನಿಜವಾಗಿಯೂ ಅಲ್ಲ. ಅಂತರ ರಾಷ್ಟ್ರೀಯ ಸಮಸ್ಯೆಗಳನ್ನೂ, ದೇಶದ ಯಾ ಪ್ರಾಂತ್ಯದ ಪುನರ್-ನಿರ್ಮಾಣದ ಮಹಾ ಮಹಾ ಪ್ರಶ್ನೆಗಳನ್ನೂ ಜನತೆಯ ಮುಂದಿಟ್ಟು ಉಪಯೋಗವಿಲ್ಲ. ಜನಜೀವನಕ್ಕೆ ಅತ್ಯಾಗತ್ಯವಾದ ಇಂಥ ಚಿಕ್ಕ ಪುಟ್ಟ ಸಂಗತಿಗಳ ಕಡೆಗೆ ನಮ್ಮೀ ಪ್ರತಿನಿಧಿಗಳು ಉಚಿತವಾದ ಗಮನವಿತ್ತಾಗಲೇ ದೇಶದ ಉದ್ಧಾರವಾಗುವುದಲ್ಲದೆ, ಭಾರತೀಯ ಆಕಾಶವಾಣಿಯ ... ಗಟ್ಟಿಯಾಗಿ ಭಾಷಣಗಳನ್ನು ಊದುವುದರಿಂದಲೂ ಅಲ್ಲ ಎಂಬುದನ್ನು ನಮ್ಮನ್ನಾಳುವವರು ಯಾವಾಗ ಒಂದು ಮೂಲಭೂತ ಪ್ರವೃತ್ತಿ (basic atlifede) ಯಾಗಿ ಸ್ವೀಕರಿಸುವರೋ ತಿಳಿಯದು.

ಕಳೆದ ಯುದ್ಧದಿಂದ ತೊಡಗಿ ಉಡುಪಿಯ ಜನಸಂಖ್ಯೆ ಅಪರಿಮಿತವಾಗಿ ಏರಿದೆ ಇದ್ದಲ್ಲದೆ, ವ್ಯಾಪಾರ ವಹಿವಾಟು ಅಧಿಕವಾಗಿ ಸರಕನ್ನು ಸಾಗುವ ಲಾರಿಗಳ ಸಂಖ್ಯೆ ಮೂರು ಪಟ್ಟು ನಾಲ್ಕು ಪಟ್ಟು ಬೆಳೆದಿರಬಹುದು. ಅಲ್ಲದೆ ಇತ್ತೀಚೆಗೆ ಮಲ್ಪೆಯಲ್ಲಿ ಮೀನಿನ ವ್ಯವಸಾಯವೂ ಚೆನ್ನಾಗಿ ನಡೆಯುತ್ತಿರುವಂತೆ ಕಾಣುತ್ತದೆ. ಜನಸಾಮಾನ್ಯರು ಊರಿಂದೂರಿಗೆ ಅಲೆಯುವುದೂ ಅಧಿಕವಾಗಿದೆ. ಹೀಗಾಗಿ ನಮ್ಮೀ ಬಡರಸ್ತೆಗಳಿಗೆ ವಾಹನಗಳ ನಿರಂತರ ಆಘಾತವನ್ನು ಹೊರುವ ತ್ರಾಣ ಇಲ್ಲದೆ ಹೋಗಬಹುದು. ಅದರೂ ದಿಲ್ಲಿ ಎಷ್ಟು ಮುಸ್ಸೋರಿ ಪಳ್ಳಿಯೂ ಅಷ್ಟೇ ಮುಖ್ಯ, ಚುನಾವಣೆಯ ಕಾಲಕ್ಕೆ ಹಳ್ಳಿಗರೂ ಬರಬೇಕಲ್ಲವೆ? ಎಂಬ ಎಚ್ಚರವಿದ್ದ ಮಂದಿ ಈ ಎಲ್ಲ ಹೆಚ್ಚಳಗಳನ್ನು ಗಮನಿಸಿ ರಸ್ತೆಗಳಿಗೆ ಹೆಚ್ಚು ವೆಚ್ಚಮಾಡಿ ಸುಧಾರಣೆ ಮಾಡುವುದು ಅಗತ್ಯವಾಗಿದೆ. ಬುದ್ಧಿಯಿಲ್ಲದವರ ಮೇಲೆ ಕರಭಾರವನ್ನು ಮತ್ತೂ ಮತ್ತೂ ಹೇರುವ ಸರಕಾರ, ಜನತೆಗೆ ಪ್ರತಿಫಲವಾಗಿ ಕಷ್ಟದಿಂದ ಎಂಟು ಔನ್ಸು ಅಕ್ಕಿ, ಕುಟ್ಟಿಯಾದ ವಸ್ತ್ರ, ನಿರಕೆಯ ಧವಸಧಾನ್ಯ, ದಯಪಾಲಿಸಿದೆ.

ಹೈವೇಯವರು ರಸ್ತೆ ದುರಸ್ತಿ ಮಾಡಿದರೂ ಉಪಯೋಗವಿಲ್ಲದಂತಾಗಿದೆ. ಗುಡ್ಡದ ಮುರಕಲ್ಲಿನ ತುಂಡನ್ನು ಮೇಲು ಮೈಗೆ ಹರಡುತ್ತಿದ್ದಾಗ ರಸ್ತೆಗಳಲ್ಲಿ ಹೊಂಡ ಕಡಿಮೆಯಿದ್ದುದು, ಈಗ ರಸ್ತೆಯೇ ಕಾಣದಷ್ಟು ಪದೇ ಪದೇ ಹೊಂಡಗಳೇ ಕಾಣುವಷ್ಟು, ಊರ್ಜಿತ ಬಂದಿದೆ. ಆಗರ್ಭಶ್ರೀಮಂತರಾದ ಸರಕಿನ ಲಾರಿಗಳು ಹೋಗುವಾಗ ತಾರುವಾರಿಯ ಮೇಲೆ ನೂರು ಲಾರಿ ಓಡಿದಷ್ಟು ಮಧ್ಯೆ ಹೊಂಡಗಳನ್ನು ಮುಚ್ಚಲು ಹೈವೇಯವರ ಹತ್ತಿರ ಒಂದು ಉಪಾಯವಿದೆ. ಅಲ್ಲೇ ಹತ್ತಿರದ ಮಣ್ಣನ್ನು ತೆಗೆದು ಒಂದೆರಡು ಇಂಚು ಹಾಸಿದರೆ ನಾಲ್ಕು ದಿನ ಹೇಗೂ ದೂಡಬಹುದು.

ನಮ್ಮೂರಿನೊಳಗೆ ಈ ರೀತಿ ರಸ್ತೆದುರಸ್ತಿ ಮಾಡುವಾಗ ನಮ್ಮ ನಗರಸಭೆಯ ನಿಗಾಕ್ಕೆ ತರಬೇಕಾದ ಎರಡು ಅ ಪಗಳಿವೆ. ೧ ಈ ಮಣ್ಣನ್ನು ಹೈವೇಯ ಕಂಟ್ರ್ಯಾಕ್ಟುದಾರರು ಯಾವ ಗುಡ್ಡದಿಂದಲೂ ತರುವುದಿಲ್ಲ. ರಸ್ತೆಯ ಇಕ್ಕಡೆಯಲ್ಲಿ ಒಂದಾನೊಂದು ಕಾಲದಲ್ಲಿ ನಾಲ್ಕು ಮುಂಗಳಿಕ್ಕಲ್ಲಿ ಇರುವ ಚಾಲಿಕ್ಕಲ್ಲವನ್ನು ಕಡಿಕಡಿದು ಅದನ್ನೂ ಹಳ್ಳವಾಗುವನ್ನಾಗಿ ಮಾಡಿ ಮಣ್ಣು ಹೊರುತ್ತಾರೆ. ಇದರಿಂದ ನಮ್ಮ ಪಟ್ಟಣಗಳ ಅಳಿದುಳಿದ ಸೌಂದರ್ಯವೂ ಕೆಡುವುದಲ್ಲದೆ, ಮಳೆಗಾಲದಲ್ಲಿ ಈ ಹಳ್ಳಗಳಲ್ಲಿ ನಿಂತ ಕೊಳಕುನೀರು ಆರಲು ಬಹಳ ಸಮಯ ತಗಲುವುದು. ಅದಲ್ಲದೆ, ಎಲ್ಲಿಗೂ ಚರಂಡಿಯ ಬಳಿಯೇ ಮನೆಮಾಡಿಕೊಂಡಿರುವುದು ಅಸಾಧ್ಯವಾದರಿಂದ ನಗರದಲ್ಲಿ ಒಳನಾಡಿಗರು ಅವರವರ ಮನೆಗಳಿಗೆ ಹೋಗಲು ಕಷ್ಟವಾಗುವುದು. ೨ ಪೇಟೆಯ ಒಳಗೆ ರಸ್ತೆದುರಸ್ತಿಯ ಕ್ರಮ ಇನ್ನಷ್ಟು ಘೋರವಾಗಿದೆ, ಅಲ್ಲೇ ಸಕಲಕೊಳಕು ಪದಾರ್ಥಗಳನ್ನೂ ಒಳಗೊಂಡಿರುವ ಚರಂಡಿಯ ಮಣ್ಣನ್ನೇ ತೆಗೆದು ಹಾಗಾಗಿ ರಸ್ತೆಯ ಮೇಲೆ ಹರಡಿ, ಆ ಮಣ್ಣಿನ ಸಮುಪಯೋಗವನ್ನು ಚರಂಡಿಯ ಕೆಲಸದಲ್ಲಿ ಹೋಗುವ ಪ್ರಾಣಿಗಳಿಗೆ ಮಾತ್ರವಲ್ಲದೆ ಅದರತ್ತ ಹೋಗುವ ಮನುಷ್ಯವರ್ಗಕ್ಕೂ ಕಲಿಸುವುದುಂಟು.

ಹೈವೇಯವರು ಸಾಧ್ಯವಾದಲ್ಲಿ ಈ ಎರಡು ವಿಷಯಗಳನ್ನು ತಿದ್ದಿಕೊಳ್ಳಬೇಕು. ನಗರಸಭೆ ಅವರನ್ನೇ ಒತ್ತಾಯಿಸಬೇಕು. ಅಲ್ಲದೆ ಧೂಳು ಸರ್ವವ್ಯಾಪಿಯಾಗಿ ಹರಡುವ ಹಾಗೆ ಊರಿನೊಳಗೆ ವಾಹನಗಳನ್ನು ಬದೇ ವೈಲು ವೇಗದಲ್ಲಿ ಓಡಿಸುವಂತೆ ನಗರಸಭೆ ವಿನಾಯಿತಿಸಬೇಕು; ಮಾತ್ರವಲ್ಲ; ಊರಿನಲ್ಲಿ ನೀರುಸಿಗುವವರು ಕಾಲ ರಸ್ತೆಯ ಮೇಲೆ ದಿನಕ್ಕೆ ರಡು ...

— ಅಜಾತಶತ್ರು

ಪ್ರತ್ಯುತ್ತರ

ಉಡುಪಿ ತಾಲೂಕು ನಾಲ್ಕೂರು ಗ್ರಾಮದ ತೊಳಕುಂಬ್ರಿ ಸಿಂಪ್ಸನ್ ಶ್ರೀನಿವಾಸ ಪ್ರಭುವು, ತನ್ನ ಮಗ ಇಮ್ಯಾನುವೇಲ್ ಭಾಸ್ಕರ ಪ್ರಭುವು, ತಾ. 19-4-1951ರ ಈ ಪತ್ರಿಕೆಯಲ್ಲಿ ಕೊಡಲ್ಪಟ್ಟ ಪ್ರಕಟಣೆಗೆ ಕೊಡುವ ಜವಾಬು:—

ಸದರೀ ಪ್ರಕಟಣೆಗೆ ಕಾರಣವಾದ ಸ್ಥಿರ ಆಸ್ತಿಗಳು ನನ್ನ ಸ್ವಂತ ಮೂಲಗೇಣಿ ಹಕ್ಕಿನವುಗಳಾಗಿರುವ ಕಾರಣ, ಅವುಗಳನ್ನು ನನ್ನ ಇಷ್ಟದ ಮೇರೆಗೆ ವಿಲೆವಾರಿ ಮಾಡಲು ನಾನು-ಸಂಪೂರ್ಣ ಹಕ್ಕುದಾರನಾಗಿರುತ್ತೇನೆ, ಅವುಗಳನ್ನು ಆಕ್ಷೇಪಿಸಲಿಕ್ಕಾಗಲೀ, ವಿರೋಧಿಸಲಿಕ್ಕಾಗಲೀ, ನನ್ನ ಮಕ್ಕಳಿಗಾಗಲೀ, ಇತರರಿಗಾಗಲೀ, ಯಾವ ತರದ ಎಷ್ಟಾದರೂ ಹಕ್ಕು ಸಮ್ಬಂಧವಿಲ್ಲ. ಸದರೀ ಪ್ರಕಟಣೆಯಲ್ಲಿ ನನಗೆ 73 ವರುಷ ಪ್ರಾಯವಾಗಿರುತ್ತ ಬುದ್ಧಿಸ್ವಸ್ಥತೆಯಿಲ್ಲವಾಗಿಯೂ, ನನ್ನ ಹೆಂಡತಿ ಮಕ್ಕಳೇ ವರ್ಗದ ಸದರೀಯವರ ... ಭೋಧನೆಗೆ ಒಳಪಟ್ಟು ಸದರೀ ಆಸ್ತಿಗಳನ್ನು ಹಿಲಾಕು, ಪರಾಧೀನ ಮಾಡುವ ಯೋಚನೆಯಲ್ಲಿರುತ್ತೇನಾಗಿಯೂ, ಕಾಣ್ಸಿರುವ ವಿಷಯವು ತೀರಾ ಸುಳ್ಳು ನನಗೆ ಈಗ 71 ವರುಷ ಪ್ರಾಯ; ಬುದ್ಧಿ ಸಂಪೂರ್ಣ ಸ್ವಸ್ಥತೆಯಿರುತ್ತದೆ; ಜ್ಞಾಪಕಶಕ್ತಿ ಸರಿಯಾಗಿರುತ್ತದೆ. ಮತ್ತು ಯಾರೊಬ್ಬರ ದುರ್ಬೋಧನೆಗೆ ಒಳಪಟ್ಟವನಲ್ಲ. ನ ಯಾರು ದುರ್ಭೋದನೆ ಕೊಟ್ಟದ್ದು ಇಲ್ಲ, ಸದರೀ ಪ್ರಕಟಣೆಯಲ್ಲಿ ಹೇಳಿದಂತೆ ತಾ 3-11-1945ರಲ್ಲೂ ನನ್ನ ಬಾಬ್ತು ಸದ್ರಿ ಆಸ್ತಿಗಳನ್ನು ಯಾವ ವಿಧದಿಂದಲಾದರೂ ರೂಪು ಪಟ್ಟಿಮಾಡಿ ಕೊಟ್ಟದ್ದಾಗಲೀ, ತಾ. 13-4-1949ರಲ್ಲಿ ಸದರೀ ಇಮ್ಯಾನುವೇಲ್ ಭಾಸ್ಕರ ಪ್ರಭುವಿಗೆ ಕುರಿತಾಗಿ ಯಾವದಾದರೂ ವಂದು ವಿಭಕ್ತ ಅಂಶವನ್ನು ಸ್ವಾಧೀನ ಬಿಟ್ಟುಕೊಟ್ಟದ್ದು ಇಲ್ಲ. ಕೊಡಲು ಕಾರಣವೂ ಇಲ್ಲ. ಸದರೀ ಹೇಳಿಕೆಗಳು ತೀರಾ ಸುಳ್ಳು. ತತ್ಕಾಲದ ಅನುಭೋಗದ ಬಗ್ಗೆ ಮಾತ್ರ ನನ್ನ ಸದ್ರಿ ಆಸ್ತಿಗಳಲ್ಲಿ ಸ್ವಲ್ಪ ಅಂಶವನ್ನು ನನ್ನ ಗಂಡುಮಕ್ಕಳಿಗೆ ಬಿಟ್ಟುಕೊಟ್ಟದ್ದಾಗಿರುತ್ತದೆ. ಹಾಗೆ ಬಿಟ್ಟುಕೊಟ್ಟ ಆಸ್ತಿಗಳಲ್ಲಿ ಸದರೀಯವರಿಗೆ ಯಾವ ತರದ ಎಷ್ಟಾದರೂ ಹಕ್ಕು ಸಂಬಂಧವಿಲ್ಲ. ತಾ. 13-1-1945ರ ಮಾಡಿದ್ದೆಂಬ ವಿಲೆವಾರಿಯು ರಿಜಿಸ್ಟ್ರಿ ಆಲ್ಲವಾದ ಕಾರಣ ಅದು ಕಾನೂನು ಪ್ರಕಾರ ಸಿಂಧುವಲ್ಲ ನ ಜ್ಯಾರಿಗೆ ಬಂದದ್ದಲ್ಲ, ನ ಆದನ್ನು ಅಧರಿಸಲು ನನ್ನ ಮಗಂದಿರ ಪೈಕಿ ಯಾರೊಬ್ಬರಿಗೂ ಹಕ್ಕಿಲ್ಲ. ಸದ್ರಿ ಆಸ್ತಿಗಳೆಲ್ಲವೂ ಈ ವರೆಗೆ ನಾನೇ ಮಯವರಿಗೆ ಗೇಣಿ ಸಲ್ಲಿಸಿ, ರಶೀದಿಗಳನ್ನು ಪಡೆದು ಬಂದಿರುವ ಪ್ರಯುಕ್ತ ನನ್ನ ಸಂಪೂರ್ಣ ಮೂಲಗೇಣಿ ಹಕ್ಕಿಗೆ ಒಳಪಟ್ಟವುಗಳಾಗಿರುತ್ತವೆಂತಲೂ, ನನಗೆ ಯುಕ್ತ ತೋರುವ ರೀತಿಯಲ್ಲಿ ನ ಸಮಯದಲ್ಲಿ ವಿಲೆವಾರಿ ಮಾಡಲು ನನ್ನ ಸ್ವತಂತ್ರಕ್ಕೆ ಒಳಪಟ್ಟವುಗಳಾಗಿರುತ್ತವೆಂತಲೂ, ಸದರೀ ಪ್ರಕಟಣೆಯು ನನ್ನನ್ನು ಬಲಾತ್ಕರಿಸುವ ಉದ್ದೇಶದಿಂದ ಜಾರಿಮಾಡಿದ್ದಾಗಿರುತ್ತದೆಂತಲೂ ಈ ಮೂಲಕ ತಿಳಿಸಿರುತ್ತೇನೆ.

ಮೊಕ್ಕಾಂ: ನಾಲ್ಕೂರು.

ಸಿಂಪ್ಸನ್ ಶ್ರೀನಿವಾಸ ಪ್ರಭು.

ತಾರೀಖು 21-4-'51

THE PANGAL NAYAK BANK LIMITED

Head Office] (Incorporated in 1920.) [Udipi S K

SEASON DEPOSITS are received and accepted on the following terms:—

For three, four or five months deposits at 3% p. a

For six, seven or eight months deposits at 3½% p. a

These are to be terminable by the 30th June 1951.

Interest is payable along with the principal at maturity.

Our THREE YEAR CASH CERTIFICATES bring to You a fair yeild: For particulars please ask for copy of Rules

"ಬೇರೆ ಶಾಸ್ತ್ರಗಳನ್ನೋದದಿದ್ದರೇನು? ಗೀತೆಯನ್ನು ಚೆನ್ನಾಗಿ ಓದಬೇಕು"—(ವರಾಹ ಪುರಾಣ)

ಗೀತೆಯ ಕೈಗನ್ನಡಿ

(ಭಗವದ್ಗೀತೆಯ ಮೂಲ ಶ್ಲೋಕ ಮತ್ತು ಕನ್ನಡ ಅನುವಾದ)

● ಅನುವಾದಕರು-ದಿ। ಹೊಸಕೆರೆ ಚಿದಂಬರಯ್ಯನವರು ●

ಈ ಗ್ರಂಥದಲ್ಲಿ ಗೀತೆಯ ಮೂಲವೆಲ್ಲ ಇರುವುದಲ್ಲದೆ ಮೂಲದಲ್ಲಿ ಸಹಜವಾಗಿ ಕಾಣಬರುವ ಅರ್ಥವೂ ಮಾತುಗಾರಿಕೆಯ ಮಾತುಗಳ ರೂಪದಲ್ಲೇ ಸ್ಪಷ್ಟವಾಗಿ ಎದ್ದು ಕಾಣುವುದು.

400ಕ್ಕೂ ಮಿಕ್ಕ ಪುಟಗಳು! ಬೆಲೆ 0—12—0.

ಒಂದು ರೂಪಾಯಿಯನ್ನು ಕಳುಹಿಸಿದರೆ ಒಂದು ಪ್ರತಿಯನ್ನು ಬುಕ್‌ಪೋಸ್ಟಿನಿಂದ ಕಳಿಸಲಾಗುವುದು.

ಪ್ರತಿಗಳು ಸಿಗುವ ಮುಖ್ಯ ಸ್ಥಳ:—

ನವಯುಗ ಪ್ರೆಸ್, ಉಡುಪಿ ದ. ಕನ್ನಡ

ಪ್ರಸಿದ್ಧ ಪುಸ್ತಕ ವ್ಯಾಪಾರಿಗಳಲ್ಲೆಲ್ಲ ದೊರೆಯುತ್ತದೆ

ಪ್ರಕಟಣೆ

ಉಡುಪಿ ತಾಲೂಕು ಪರ್ಕಳದಲ್ಲಿರುವ ಶೇಷಪ್ಪ ಪ್ರಭುಗಳು ಪರ್ಕಳದಲ್ಲಿರುವ ತನ್ನ ಸ್ಥಿರಚರಾಸ್ತಿಗಳನ್ನು ಸಂಪೂರ್ಣ ತನ್ನ ದ್ವಿತೀಯ ಮಡದಿ ರುಕ್ಮಿಣಿ ಯಾನೆ ಸುಂದರಿಯ ಹೆಸರಲ್ಲಿ 1944ನೇ ಇಸವಿಯಲ್ಲಿ ವೀಲುನಾಮೆ ರಿಜಿಸ್ತ್ರಿ ಮಾಡಿರುವರು. ಈ ಆಸ್ತಿಯು ಸದ್ರಿಯವರ ಪ್ರಥಮ ಮಡದಿಯ ಕಾಲದಲ್ಲಿ ತನ್ನ ಹಿರೀ ಮಕ್ಕಳ ಸಹಕಾರದಿಂದಲೇ ಸಂಪಾದಿಸಿದ ಹಣದಿಂದ ಪಡೆದದ್ದಾಗಿರುತ್ತದೆ. ಅದ್ದರಿಂದ ಸದ್ರಿ ವೀಲು ಧರ್ಮದೃಷ್ಟಿಯಿಂದ ನ್ಯಾಯಬದ್ಧವಾಗಿರುವುದಿಲ್ಲ. ಆದನ್ನು ರದ್ದು ಪಡಿಸಿ ಕುಟುಂಬದ ಹಿತದೃಷ್ಟಿಯಿಂದ ನ್ಯಾಯ ರೀತಿಯಲ್ಲಿ ವರ್ತಿಸಬೇಕಾಗಿ ಈ ಮೂಲಕ ಕೇಳಿಕೊಳ್ಳುತ್ತೇನೆ.

ಎ. ಅಣ್ಣಪ್ಪ ಪ್ರಭು.

ನೋಟೀಸು

ಕುಂದಾಪುರ ೨ ನೇ ಮುನ್ಸೀಫ್ ಕೋರ್ಟಿನಲ್ಲಿ

O. S. 44/1951

ವಾದಿ—ಮಣೂರು ಮಂಜುನಾಥಯ್ಯ.

ಪ್ರತಿವಾದಿ—ನರಸಪ್ಪ ನಾವುಡ

ಕುಂದಾಪುರ ತಾಲ್ಲೂಕು ಮರೀರ ಹೋಬಳಿ ಗ್ರಾಮದಲ್ಲಿರುವ ಗಣಪಯ್ಯ ನಾವುಡರ ಮಗ ನರಸಪ್ಪ ನಾವುಡರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ,

ಪ್ರತಿವಾದಿಯು ವಾದಿಗೆ ತಾ. 12-4-47 ರಲ್ಲಿ ಬರೆಕೊಟ್ಟ ಡಿಮಾಂಡು ನೋಟಿನ ಅಸಲು ಬಡ್ಡಿ ಹಣಗಳನ್ನು ಬರಮಾಡಿಕೊಳ್ಳುವರೆ ವಾದಿಯು ಪ್ರತಿವಾದಿಯ ಮೇಲೆ ದಾವೆ ಮಾಡಿದ ಮೇಲಿನ ದಾವೆಯು ತಾ. 25-5-51 ಕ್ಕೆ ಮೇಲಿನ ಕೋರ್ಟಿನಲ್ಲಿ ತನ್ನಿಗೆ ಇಟ್ಟಿರುತ್ತದೆ. ಆ ತಾರೀಕು ವಿನ ದವೂ ಆಕ್ಷೇಪಣೆಗಳಿದ್ದರೆ ಸದ್ರಿ ದಿವಸ ಮೇಲಿನ ಕೋರ್ಟಿಗೆ ಮುಂದೆ ಹಗಲು 11 ಗಂಟೆಗೆ ಹಾಜರಾಗಿ ಜವಾಬು ಮಾಡಿಕೊಳ್ಳತಕ್ಕದ್ದು. ಎಂಬ ಸಂಗ್ತಿ ಈ ಮೂಲಕ ತಿಳಿಯಪಡಿಸಲಾಗಿದೆ.

(By order)

H Laxminarayanayya,

Advocate for Pltf

Coondapoor, Date 17-4-51

ತಾರೀಕು 26-4-51 ರಿಂದ

ವಾರದ ಭವಿಷ್ಯ

ತಾರೀಕು 2-5-51ರ ವರೆಗೆ

ಮೇಷ— ಇನ್ನು ನಿಮ್ಮ ಪರಿಸ್ಥಿತಿಯಲ್ಲಿ ಏನೊಂದೂ ಸುಧಾರಣೆಯ ಲಕ್ಷಣಗಳು ಕಂಡುಬರುವುದಿಲ್ಲವು ಪಕ್ಷಿ ಪಾಲಿಂದ ದುಡಿಯುವಿಂದಲೂ ಅನಿರೀಕ್ಷಿತ ಖರ್ಚು ವೆಚ್ಚಗಳೂ ಶತ್ರುಜನರ ಪೀಡೆಯೂ ವಿನಾಕಾರಣ ಕಲಹಗಳೂ ದೇಹಾಲಸ್ಯವುಕೂಡ ನಿಮ್ಮನ್ನು ತುಂಬಾ ಚಿಂತೆಗೀಡುಮಾಡಲಿವೆ. ಸಾಮಾಜಿಕ ರಾಜಕೀಯ ಕ್ಷೇತ್ರಗಳಲ್ಲಿ ಪರಾಭವ ಪ್ರುಂಟಾದೀತು. ತಾ. 28ರಿಂದ 1ರ ವರೆಗಿನ ದಿನಗಳು ಇದ್ದುದರಲ್ಲಿ ತೃಪ್ತಿಕರವಿವೆ.

ವೃಷಭ— ಗೃಹಬಾಧತ್ರಯಗಳು ದಿನೇ ದಿನೇ ಹೆಚ್ಚುತ್ತಾ ಬರುವವು. ನಿಮ್ಮ ದುಡಿಮೆಯ ಬಹ್ವಂಶವನ್ನು ಪ್ರಯಾಣದ ಸಲುವಾಗಿ ವ್ಯಯಿಸುವಿರಿ. ಉಷ್ಣಪಿತ್ತದೋಷದಿಂದಾಗಿ ನೇತ್ರಪೀಡೆ ಶಿರೋವೇದನೆ ನಿದ್ರಾಭಂಗಾದಿಗಳುಂಟಾಗುವವು. ಆದರೂ ಹಿಡಿದ ಕಾರ್ಯದಲ್ಲಿ ವಿಜಯವನ್ನು ಸಂಪಾದಿಸುವಿರಿ. ಖರ್ಚಿಗೆ ಸಾಕಷ್ಟು ಉತ್ಪತ್ತಿಯಿರೋಣದ ಅಡಚಣೆಯುಂಟಾಗದು. ವಾರಾಂತ್ಯದ 3 ದಿನಗಳಲ್ಲಿ ಸುಖ ಇಷ್ಟಪ್ರಾಪ್ತಿಗಳಿವೆ.

ಮಿಥುನ— ಸದುದ್ಯಮವನ್ನು ಕೈಕೊಂಡ ನಿಮಗೆ ನಿರೀಕ್ಷೆಗಿಂತಲೂ ಅಧಿಕವಾದ ಫಲವು ಲಭಿಸುವದು ಮಾತ್ರವಲ್ಲ ಹಲವಾರು ಕಡೆಯಿಂದ ಧನವು ನಿಮ್ಮ ಕೈಸೇರಲಿದೆ. ಮಿತ್ರ ಬಂಧುಗಳ ನೆರವಿನಿಂದಾಗಿ ಪ್ರತಿಯೊಂದು ಕಾರ್ಯಗಳಲ್ಲೂ ವಿಜಯಿಗಳಾಗುವಿರಿ. ಜನತೆಯಿಂದ ಮನ್ನಣೆಯನ್ನು ಪಡೆಯುವಿರಿ. ಇಷ್ಟಿದ್ದರೂ ನಿಮ್ಮ ಮನಸ್ಸಿಗೆ ನೆಮ್ಮದಿಯು ದುರ್ಲಭವೆನಿಸುವದು. ತಾ. 26, 27, 2 ಸಕಲ ಕಾರ್ಯಸಿದ್ಧಿಯ ದಿನಗಳು.

ಕರ್ಕಾಟಕ— ಈ ವಾರವು ನಿಮ್ಮ ಭಾಗಕ್ಕೆ ಅತ್ಯುತ್ತಮವಾಗಿರುವದು. ಭಾಗ್ಯಪತಿಯಾದ ಗುರುವು ಭಾಗ್ಯದಲ್ಲೂ, ಧನಪತಿಯಾದ ರವಿಯು ಉಚ್ಚನಾಗಿ ಕರ್ಮದಲ್ಲೂ ಲಾಭಪತಿಯಾದ ಶುಕ್ರನು ಲಾಭದಲ್ಲೂ ಇರುವುದರಿಂದ ನಿಮ್ಮ ಸಕಲ ಉದ್ಯಮಗಳೂ ನಿರಾತಂಕವಾಗಿ ನೆರವೇರುವವಲ್ಲದೆ ಸಂಪದ್ಭಾಗವು ಅತ್ಯುತ್ತಮಸ್ಥಿತಿಗೆ ಬರಲಿದೆ. ಯಾವೊಂದು ಭಾಗದಲ್ಲೂ ಕೊರತೆಯು ಕಾಣಿಸಲಾರದು. ವಾರಾದಿಯ 4 ದಿನಗಳು ಸುಖ ಸಮಾನಲಾಭದಾಯಿಗಳಾಗಿವೆ.

ಸಿಂಹ— ಸಕಲ ಗ್ರಹಮಂಡಲವೇ ನಿಮ್ಮ ಭಾಗಕ್ಕೆ ಮುನಿದಿರುವುದರಿಂದ ಮೇಲೆ ಈ ವಾರದಲ್ಲಿ ನಾನಾತರದ ಕಷ್ಟನಿಷ್ಟುಗಳು ಪ್ರಾಪ್ತವಾಗಲಿವೆ. ಆಪ್ತೇಷ್ಟ ಬಂಧುವರ್ಗದವರೊಡನೆ ಕಲಹವಾಗುವದು ಅನಿರೀಕ್ಷಿತ ಪ್ರವಾಸ ದೇಹಾಲಸ್ಯಗಳಿಂದ ಪೀಡಿತರಾದ ನಿಮಗೆ ಆರ್ಥಿಕ ತಗಾದೆಯು ಅತೀವವಾಗುವದು. ಶತ್ರುಜನರು ಪ್ರತೀಕಾರಾಸಕ್ತರಾಗುವರು ಯಾವ ಕಾರ್ಯದಲ್ಲೂ ಫಲಕ್ಕಿಂತ ಅಧಿಕವ್ಯಯ ಶ್ರಮಗಳುಂಟಾಗುವವು. ತಾ. 26, 27, 2 ಈ ದಿನಗಳು ಹೆಚ್ಚಿನ ಅನಿಷ್ಟಕಾರಿಗಳಿವೆ ಜಾಗ್ರತರಾಗಿರಿ

ಕನ್ಯಾ— ವಿರೋಧಿಗಳ ಪೀಡೆಯಿಂದಾಗಿ ನಿಮ್ಮ ಧನಮಾನಾದಿಗಳಿಗೆ ಧಕ್ಕೆಯುಂಟಾಗುವದು. ಗೃಹದಲ್ಲಿನ ಅವ್ಯವಸ್ಥೆಯಿಂದಾಗಿ ಸೇವಾದರರೊಳು ಜಗಳವಾಗುವದು. ಆದರೂ ಬೃಹಸ್ಪತ್ಯಾಚಾರ್ಯರು ಪೂರ್ಣದೃಷ್ಟಿಯಿಂದ ನಿಮ್ಮನ್ನು ನೋಡುತ್ತಿರುವಕಾರಣ ಸಮಾಜದಲ್ಲಿ ಮಾನಮನ್ನಣೆ ವಿವಿಧ ವಸ್ತುಗಳ ಲಾಭ ಕೈಗೊಂಡ ಕಾರ್ಯಗಳಲ್ಲಿ ವಿಜಯವು ಲಭಿಸುವದು. ವಾರಾಂತ್ಯದ 3 ದಿನಗಳಲ್ಲಿ ಮಿತ್ರಸಮಾಗಮ ಧನಲಾಭ ಮಾನಮಾನಾದಿಗಳು ಲಭಿಸುವವು

ತುಲಾ— ಲಗ್ನಪತಿಗಳಾದ ಶುಕ್ರಾಚಾರ್ಯರನ್ನುಳಿದು ಮಿಕ್ಕೆಲ್ಲಾ ಗ್ರಹರೂ ಪ್ರತಿಕೂಲರಾಗಿರುವುದರಿಂದ ಈ ವಾರದಲ್ಲಿ ನಿಮಗೆ ಶೋಕಪರಂಪರೆಗಳೂ ಅನರ್ಥಕಗಳೂ ಪ್ರಾಪ್ತವಾಗಲಿವೆ. ದೇಹಾಲಸ್ಯಕ್ಕಿಂತಲೂ ಮನೋರೋಗವು ಅಧಿಕವಾಗುವದು. ಹೆಚ್ಚಿನ ಸಮಯವನ್ನು ಪರ್ಯಟನದಲ್ಲಿ ಕಳೆಯಬೇಕಾಗುವದು. ನೇತ್ರಪೀಡೆ ಉದರಶೂಲೆ ಕಳತ್ರಕಲಹಾದಿಗಳಿಂದ ಚಿಂತಾಕುಲರಾದ ನಿಮಗೆ ತಾ. 26, 27, 2 ಈ ದಿನಗಳಲ್ಲಿ ಕೊಂಚ ಮನಶ್ಶಾಂತಿ ವಿಜಯವು ಲಭಿಸೀತು.

ವೃಶ್ಚಿಕ— ನಿಮ್ಮ ಧೈರ್ಯವು ಅತ್ಯುತ್ತಮವಿರುವದು, ಸಾಂಸಾರಿಕ ತಾಪತ್ರಯಗಳಿಂದ ಮುಕ್ತರಾದ ನಿಮಗೆ ಗೃಹಸೌಖ್ಯವು ಉತ್ತಮವಾಗಿ ಲಭಿಸಲಿದೆ. ರಾಜಕೀಯ ಸಾರ್ವಜನಿಕ ಕಾರ್ಯಗಳಲ್ಲಿ ವಿಜಯಶ್ರೀಯು ನಿಮ್ಮ ಭಾಗಕ್ಕೆ ಕಟ್ಟಿಟ್ಟ ಗಂಟಿನಂತಿರುವುದು. ಮಹತ್ಕಾರ್ಯವನ್ನು ಅಲ್ಪಾಯಾಸದಿಂದ ಸಾಧಿಸುವ ಶಕ್ತಿ ಯುಕ್ತಿ ಸಂಪನ್ನರಾದ ನಿಮಗೆ ಶತ್ರುಜನರೂ ಶರಣುಬರುವರು. ತಾ. 26, 27, 30, 1, 2 ಈ ದಿನಗಳಲ್ಲಿ ಸ್ತ್ರೀಸಹಿತ ಕಲಹ ಅನಿಷ್ಟಗಳಿಗವಕಾಶವಿದೆ.

ಧನು— ಅದೃಷ್ಟವು ಬಹಳ ದುರ್ಬಲವಾಗಿರುವದು. ಬಂಧುಮಿತ್ರರೂ ಕೂಡ ನಿಮ್ಮ ಭಾಗಕ್ಕೆ ಶತ್ರುಗಳಂತಾಗುವರು. ಆರ್ಥಿಕ ದಿಕ್ಕಟ್ಟಿನಿಂದಾಗಿ ಮರ್ಯಾದೆಯುಳಿಸಿಕೊಳ್ಳುವದು ದುರ್ಲಭವಾಗುವದು. ಮಾತ್ರವಲ್ಲ ದಿನಯಾಪನೆಯು ಅತೀವ ದುಸ್ತರವಾಗುವದು. ಹೆಂಡತಿ ಮಕ್ಕಳೊಡನೆಯೂ ಸೋದರರೊಳಗೂ ಮನಸ್ತಾಪದಿಂದಾಗಿ ಕಲಹವಾದೀತು, ಕಡಿವಾಣವಿಲ್ಲದ ಕುದುರೆಯಂತಾದ ನಿಮ್ಮ ದುರ್ಮನಸ್ಸಿಗೆ ತಾ. 26, 27, 30, 1 ಈ ದಿನಗಳು ಸ್ವಲ್ಪ ನೆಮ್ಮದಿಯನ್ನೀಯುವವು

ಮಕರ— ಶ್ರಮಪಟ್ಟು ನೀವು ದುಡಿಯುವಿರಾದರೂ ನಿಮ್ಮ ಪರಿಶ್ರಮಕ್ಕುಚಿತವಾದ ಫಲವು ಲಭಿಸಲೊಲ್ಲದು. ವಾತದೋಷದಿಂದಾಗಿ ಸಂದು ನೊಂದುಗಳಲ್ಲಿ ನೋವು ಕಾಣಿಸೀತು. ದುರ್ಜನರ ಸ್ನೇಹದಿಂದಾಗಿ ಜನಾಪವಾದ ಅನಿಷ್ಟಗಳಿಗೆ ಗುರಿಯಾದೀರಿ ದೈವದೇವರುಗಳಲ್ಲೂ ಗುರುಹಿರಿಯರಲ್ಲೂ ತಿರಸ್ಕಾರಭಾವನೆಯೂ ಹೆಚ್ಚಲಿದೆ ದೈನಂದಿನದ ಖರ್ಚಿಗಾಗಿ ಹೆರವರ ಮುಖನೋಡುವ ಪ್ರಸಕ್ತಿ ಬರಲಾರದು. ತಾ. 28, 29, 2, ಕಿಂಚಿದುತ್ತಮ

ಕುಂಭ— ನೀವೀವಾರದಲ್ಲಿ ಮಹತ್ಕಾರ್ಯವನ್ನು ಸಾಧಿಸಿ ಜನತೆಯ ವಿಶ್ವಾಸಾದರಗಳಿಗೆ ಪಾತ್ರರಾಗುವಿರಿ. ನಿರುದ್ಯೋಗದಿಂದ ಬಳಲುತ್ತಿರುವವರು ಕೂಡ ಒಳ್ಳೆಯ ಉದ್ಯೋಗದಲ್ಲಿ ಪ್ರವೃತ್ತರಾಗಿ ಸಸೂತ್ರದಿಂದ ಜೀವನಸಾಗಿಸುವರು, ಯಾವ ಉದ್ಯಮದಲ್ಲೂ ಮುಂದಿಟ್ಟ ಹೆಜ್ಜೆಯನ್ನು ಹಿಂದಿಡುವ ಪ್ರಸಂಗಬರಲಾರದು. ಕೆಲವೊಮ್ಮೆ ಪತ್ನೀಪುತ್ರರ ವಿರಹಕ್ಕೊಳಗಾಗುವ ಯೋಗವಿದೆ. ತಾ. 28, 29ರಲ್ಲಿ ವ್ಯರ್ಥ ಖರ್ಚುಗಳು ಹೆಚ್ಚುವವು.

ಮೀನ— ನಿಮ್ಮ ಮನೋಧೈರ್ಯವು ಹಿಂಗುವದು ಕಾರ್ಯಾಕಾರ್ಯ ವಿಮರ್ಶೆ ಮಾಡದೆ ಹಿಂದುಮುಂದಿನ ಯೋಚನೆಯಿಲ್ಲದೆ ದುಡುಕಿ ವ್ಯರ್ಥಶ್ರಮ ನಷ್ಟಕ್ಕೆ ಗುರಿಯಾಗಲಿರುವಿರಿ. ಪಿತ್ತೋಷ್ಣ ವಿಕಾರದಿಂದಾಗಿ ದೇಹಾರೋಗ್ಯ ಕೆಡುವದು, ಅಧಿಕಾಂಗಳ ಪೀಡೆಗೆ ಸಿಲುಕುವಿರಿ. ಸ್ಥಾನಚ್ಯುತಿಯ ಯೋಗವು ಕಂಡುಬರುವುದು. ಆದರೂ ಹಣದ ಅಡಚಣೆಯು ನಿಮ್ಮನ್ನು ಪೀಡಿಸದು. ತಾ. 30, 1 ಈ ದಿನಗಳಲ್ಲಿ ಖರ್ಚು ಪ್ರವಾಸಗಳ ಯೋಗವಿದೆ.

ಲಕ್ಷ್ಮೀ ಸೆಂಟಾಲ್ ಮಾತ್ರೆ

ಇದರ ಉಪಯೋಗದಿಂದ ಬಹುಕಾಲದ ಮೇಹ, ಪ್ರಮೇಹ, ಮೂತ್ರದ ಉರಿ, ಮೂತ್ರ ಕೃಚ್ಛ್ರ, ಮೂತ್ರದೊಡನೆ ಯಾಮುಂದಾಗಿ ಬಿಳುಪು, ಅರಸಿನ, ಕೆಂಪು ಈ ವರ್ಣಗಳಲ್ಲಿ ಕೀವು ಹೋಗುವುದು, ತೊಡೆ ಸಂದಿನಲ್ಲಿ ನೋವು, ಕಾಲ ಗಂಟುಗಳಲ್ಲಿ ವೇದನೆ, ಕಣ್ಣಿನಲ್ಲಿ ಕೀವು ಬರುವುದು, ಶರೀರದಲ್ಲಿ ಉಷ್ಣತೆ, ಸ್ವಪ್ನೇಂದ್ರಿಯ ಇವೆಲ್ಲಾ ಖಾತ್ರಿಯಾಗಿ ಗುಣಹೊಂದುವುದು.

ಡಬ್ಬಿ ಒಂದಕ್ಕೆ ರೂ. 2—0—0

ಏಜಂಟ್ಸ್:—

ಶಾ ಕಂಪೆನಿ, ಮಂಗಳೂರು

ಗೊನೋರಿಯಾ ಪರಮಾರೋಗ ಉಷ್ಣ ರೋಗಕ್ಕೆ ಔಷಧ

೭ ದಿವಸಗಳಲ್ಲಿ ಈ ರೋಗ ಗುಣ ಹೊಂದುವದು ಗ್ಯಾರಂಟೀ

ಶರೀರದಿಂದ ಕೀವು ಬರುತ್ತಿದ್ದರೆ, ಧೋತರಕ್ಕೆ ಹಳದೀ ಡಾಗು ಹತ್ತುತ್ತಿದ್ದರೆ. ... ಶರೀರದ ಸುತ್ತ ಘಾಯವಾಗಿದ್ದರೆ,.... ಚಟ್ಟೆ ಬಿದ್ದಿದ್ದರೆ, ಉಷ್ಣದಿಂದ ಚೀರು ಇಳಿದಿದ್ದರೆ, ಉಡುಚು ಆಗಿದ್ದರೆ, ಮೂಲವ್ಯಾಧಿ, ಭಗೇಂದ್ರ, ಗಂಡುಮಾಲಿ, ಕೈಕಾಲು ಶೂಲಿ, ಅರ್ಧಾಂಗವಾಯು ನಡುನೋಯುವದು ಸ್ತ್ರೀಯರ ಬಿಳಿಕೆಂಪು ಸೆರಗು ಹೋಗುತ್ತಿದ್ದರೆ, ಕೊಲಿಕ. ಟಿ. ಗರ್ಮಿಯಿಂದ ಗರ್ಭಕೋಶ ನಾಶಹೊಂದಿದ್ದರೆ, ಸರಿಯಾಗಿ ಭೇದಿಯಾಗದಿದ್ದರೆ, ಮೂತ್ರ ಉರಿಯುತ್ತಿದ್ದರೆ, ಈ ಎಲ್ಲಾ ಬೇನೆಗಳಿಗೆ ಈ ನಮ್ಮ ಔಷಧವು ಇರುವುದು. ಮೊದಲ ದಿವಸ ಬೆಳಗ್ಗೆ ೧ ಗುಂಜಿ ಪ್ರಮಾಣ ಔಷಧ ಅರ್ಧತೊಲೆ ತುಪ್ಪದಲ್ಲಿ ತಕ್ಕೊಳ್ಳಬೇಕು ಮೊದಲ ದಿವಸ ಮಾತ್ರ ಮುಂಜಾನೆ ಸಂಜೆ ಎರಡು ಸಾರೆ ತಕ್ಕೊಳ್ಳಬೇಕು. ಮುಂದೆ ದರ ದಿವಸ ಬೆಳಗ್ಗೆ ಒಂದೇ ಸಾರೆ ೭ ದಿವಸ ಸೇವಿಸಬೇಕು. ಈ ಔಷಧವನ್ನು ಜೇನಿಗೆಯಲ್ಲಿ ತುಪ್ಪದಲ್ಲಿ, ಥಂಡಿ ಮಳೆಗಾಲದಲ್ಲಿ ಜೇನತುಪ್ಪದಲ್ಲಿ ತಕ್ಕೊಳ್ಳಬೇಕು. ಪಥ್ಯ: ಹುಳಿಖಾರ, ಕುಂಬಳಕಾಯಿ, ಬದನೆ ಬಿಡಬೇಕು.

ಬಾಟ್ಲಿ ೧ಕ್ಕೆ ೫ರೂ. ಪೋಸ್ಟ ಚಾರ್ಜ ೮ ಆಣೆ

ಏಜೆಂಟರು:—ಗದಗ:—ಗದಗ ಫಾರ್ಮಸಿ, ಹುಬ್ಬಳ್ಳಿ:—ಹುಬ್ಬಳ್ಳಿ ಫಾರ್ಮಸಿ ಬಾಗಲಕೋಟೆ:-ಬಾಗಲಕೋಟೆ ಫಾರ್ಮಸಿ, ಧಾರವಾಡ:-ಧಾರವಾಡ ಫಾರ್ಮಸಿ, ದಾವಣಗೇರಿ: ದಾವಣಗೇರಿ ಪ್ರೆಸ್. ನಂಜುಡೇಶ್ವರ ಮೂರ್ತಿ ದಾವಣಗೇರಿ.

ಪತ್ರವ್ಯವಹಾರ ಮಾಡತಕ್ಕ ಮಾಲಕರ ವಿಳಾಸ,

ರೇವಣಸಿದ್ಧಪ್ಪ ಹಾಲಪ್ಪ ದಾವಣಗೇರಿ,

ಆಯುರ್ವೇದ ಔಷಧಾಲಯ, ಗದಗ.

— ಮಕ್ಕಳನ್ನು ಹಡೆಯುವುದು ಸಾಕು —

ಅಶಕ್ತ ಸ್ತ್ರೀಯರಿಗೆ **ಬರ್ಥ ಕಂಟ್ರೋಲ** ರೋಗ ಗೃಹಸ್ಥ ಹೆಚ್ಚು ಮಕ್ಕಳಿಗೆ

ಏಳು ದಿವಸ ಈ ಮಾತ್ರೆಗಳನ್ನು ಸೇವನ ಮಾಡಿದರೆ ಮುಂದೆ ಖಂಡಿತವಾಗಿ ಮಕ್ಕಳಾಗುವದಿಲ್ಲ. ಸ್ತ್ರೀಯರು ಪ್ರತಿತಿಂಗಳು ಸರಿಯಾಗಿ ಮುಟ್ಟಾಗುತ್ತಾರೆ. ಅಲ್ಲದೆ ಸ್ತ್ರೀಯರ ಬಿಳಿಸೆರಗು, ಪ್ರದರರೋಗ, ಹೊಲಿಕಟ್ಟು, ಗುಣವಾಗಿ ಸ್ತ್ರೀಯು ಗರ್ಭಿಣಿಯಾಗುವದಿಲ್ಲ. ಈ ಔಷಧವನ್ನು ಸೇವಿಸುವ ಕ್ರಮ: ಪ್ರತಿದಿವಸ ಮುಂಜಾನೆ ೧ಗುಳಿಗೆ ಮಧ್ಯಾಹ್ನಕ್ಕೆ ೧ಗುಳಿಗೆ, ಸಂಜೆಗೆ ೧ಗುಳಿಗೆಯಂತೆ ಊಟದ ಮೊದಲು ತಕ್ಕೊಳ್ಳಬೇಕು. ಏಳುದಿವಸ ಈ ಔಷಧವನ್ನು ಬಿಸಿನೀರಿನಲ್ಲಿ ಸೇವಿಸಬೇಕು.

ಪಥ್ಯ:—ಹರವೀಪಲ್ಲೆ ಬಿಡಬೇಕು. ೭ ದಿವಸ ಸಂಪೂರ್ಣ ಔಷಧದ ಕಿಮ್ಮತ್ತು ರೂಪಾಯಿ 5—0—0. ಪೋಸ್ಟ ಚಾರ್ಜು ೧೨ ಆಣೆ.

ಮಾಲಕರು:—ಹಾಲಪ್ಪಾ ಫಕೀರಪ್ಪಾ ದಾವಣಗೇರಿ

ಆಯುರ್ವೇದ ಔಷಧಾಲಯ ಗದಗ-ಸಿಟಿ.

ಏಜಂಟರು:—ಹುಬ್ಬಳ್ಳಿ ಫಾರ್ಮಸಿ,—ಹುಬ್ಬಳ್ಳಿ, ಗದಗ, ಬಾಗಲಕೋಟೆ ಧಾರವಾಡ ವಿಜಾಪುರ— ಕಾಸಪ್ಪ ಸಿದ್ಧಲಿಂಗಪ್ಪ ಧಾರವಾಡಕರ ವಿಜಾಪುರ ನಂಜುಡೇಶ್ವರ ಮೂರ್ತಿ ದಾವಣಗೇರಿ ದಾವಣಗೇರಿ.—ದಾವಣಗೇರಿ ಪ್ರೆಸ್ಸ್ ಆರ್ ಎಲ್ ಕರ್ನಾಟಕ, ಕೆಮಿಸ್ಟ್, ಹಾನೇರಿ, ಬ್ಯಾಡಗಿ

"ಗೋಪಾಲ ಭೇಷಜಾಶ್ರಮ" ಮಂಗಳೂರು.

(ಸ್ಥಾಪನೆ 1910)

ಸ್ಥಾಪಕರು:-ಆಯುರ್ವೇದ ಭೂಷಣ ಯಂ. ವಿ. ಶಾಸ್ತ್ರೀ,

ಬಾಣಂತಿಯರ ಸಲುವಾಗಿಯೇ ದೇಶ ಮತ್ತು ಪ್ರಕೃತದ್ಯದೇಹಸ್ಥಿತಿಯನ್ನು ನಿರ್ಣೈಸಿ ತಯಾರಿಸಲ್ಪಟ್ಟ ಅಮೋಘವಾದ ಮಧುರದ್ರವ ರಸಾಯನ. ಅಲ್ಪ ಮೌಲ್ಯದಿಂದ ಬಡವರಿಗೂ, ಭಾಗ್ಯಶಾಲಿಗಳಿಗೂ ಸುಲಭಸಾಧ್ಯವಾಗಿರುವುದು.

ಇವರ **ನವಜೀವಾತು** ಎಂಬ **ಸೂತಿಕಾ ರಸಾಯನ**

ಹೆಚ್ಚಿನ ಮಾಹಿತಿಗೆ—ಡಾ। ಯಂ. ಪಿ. ಶಾಸ್ತ್ರೀ, ಯಲ್. ಐ. ಕೊಡಿಯಾಲಬೈಲ ಪೋಸ್ಟು, (ಮಂಗಳೂರು)

ಸ್ಥಾನಿಕರು:—ಡಾ। ಬಿ. ಕೆ. ಶಿವರಾಮರಾವ್, ಕುಂಜಿಬೆಟ್ಟು, ಉಡುಪಿ.

EDITED, PRINTED & PUBLISHED BY K. H. SHETTY AT THE NAVAYUGA PRESS, UDIPI, S.INDIA.

Regd. No M 3618 | Estd 1921 ಸ್ಥಾಪನೆ 31ನೇ ವರ್ಷ | 3–5–1951

LICENCE No. 31
Licensed to Post without Prepayment

Founder Sri A. B Shetty,
Minister for Agriculture & Veterinary.

ವರ್ಷ ೩೧ ವಾರ ೩೪
NAVAYUGA WEEKLY
POST BOX NO. 22 UDIPI, S. K.
Vol 31 No. 34

ಪ್ರಜಾಪ್ರಭುತ್ವದ ಕನಸುಗಳು!

ಇಪ್ಪತ್ತನೆಯ ಶತಮಾನದ ನಾಗರಿಕರಾದ ನಾವೆಲ್ಲ ಪ್ರಜಾಪ್ರಭುತ್ವವನ್ನು ಬಹಳವಾಗಿ ಮೆಚ್ಚುತ್ತೇವೆ. ಲೋಕದ ಕಲ್ಯಾಣ ಅದರಿಂದಲೇ ಸಾಧ್ಯವೆಂದು ಭಾವಿಸಿದ್ದೇವೆ. ಪ್ರಜಾಪ್ರಭುತ್ವ ಸರಕಾರ ಸ್ಥಾಪನೆಗಾಗಿ ಜಗತ್ತಿನ ಎಲ್ಲ ರಾಷ್ಟ್ರಗಳೂ ಹೋರಾಟ ನಡೆಸಿವೆ. ಅರಸರ ನಿರಂಕುಶ ಪ್ರಭುತ್ವದ ನಿರ್ಮೂಲನಕ್ಕಾಗಿ ರಕ್ತಪಾತವೇ ಆಯಿತು. ಆ ರೀತಿಯ ಹೋರಾಟ– ಜನಹಿತ ಕಲ್ಪನೆ- ಅಖಂಡವಾದ ರಾಷ್ಟ್ರಪ್ರೇಮ ಆದರ ಸುಖವನ್ನನುಭವಿಸುವ ನಮ್ಮಲ್ಲಿಲ್ಲ. ಯಾರ ತ್ಯಾಗ ಪುಣ್ಯ ಫಲದಿಂದ ನಾವು ಸ್ವತಂತ್ರರಾದೆವೋ- ಅಂತಹರ ಮೇಲೆ ಪೂಜ್ಯ ಭಾವನೆಯನ್ನು ತೋರಿಸುವ ಬದಲು ಅವರ ಮೂಲ ಉದ್ದೇಶಕ್ಕೇ ಕೊಡಲಿಯಿಟ್ಟಿದ್ದೇವೆ. ಆದರ್ಶ ಅವರದಾದರೆ ವಿರುದ್ಧ ಕೃತಿ ನಮ್ಮದಾಯಿತು.

"ರಾಜಾ ಪ್ರತ್ಯಕ್ಷ ದೇವತಾ' ಎಂದು ರಾಜನಿಷ್ಠೆಯನ್ನು ತೋರಿಸುವ ಕಾಲವೊಂದಿತ್ತು. ಜಗತ್ತಿನ ಪ್ರತಿಯೊಂದು ರಾಷ್ಟ್ರಕ್ಕೂ ಒಬ್ಬ ರಾಜ ಬೇಕೇಬೇಕು! ಸರಕಾರವೆಂದರೆ ರಾಜ, ರಾಜನೆಂದರೆ ಸರಕಾರ. ರಾಜನ ನಿರಂಕುಶ ಪ್ರಭುತ್ವಕ್ಕೊಳಪಟ್ಟು ಜನ ಬದುಕಬೇಕಿತ್ತು! ಎಲ್ಲರೂ ತನ್ನನ್ನು ದೇವರಂತೆ ಪೂಜಿಸುವಾಗ ತನ್ನಲ್ಲಿ ಪೂಜಾರ್ಹನಾದ ರಾಜಗಾಂಭೀರ್ಯವಿರಬೇಕು– ಜನತೆಯ ಹಿತವನ್ನು ಬಯಸಿ ಅವರಿಂದ ಕೃತಜ್ಞತೆಯನ್ನು ಪಡೆಯಬೇಕು– ಎಲ್ಲರೂ ತನ್ನನ್ನು ಕೊಂಡಾಡಬೇಕು– ತನ್ನ ಕಾಲದಲ್ಲಿ ಸಕಲ ಪ್ರಜೆಗಳೆಲ್ಲರೂ ಸುಖಸಮೃದ್ಧಿಗೊಳ್ಳಬೇಕು– ಕಲೆಗಳಿಗೆ ಪ್ರೋತ್ಸಾಹ ಕೊಡಬೇಕು– ಎನ್ನುವ ಆತ್ಮಜಾಗೃತಿ ಹುಟ್ಟುತ್ತಿತ್ತು. ಆಗಿನ ಕಾಲದ ರಾಜರುಗಳು ಸಾರ್ವಜನಿಕರಿಗಾಗಿ ನಿಷ್ಪಕ್ಷ ಮನೋವೃತ್ತಿಯಿಂದ ಕಟ್ಟಿಸಿದ ಧರ್ಮಶಾಲೆಗಳೋ– ವಿಶ್ರಾಂತಿಗೃಹಗಳೋ– ಇನ್ನಿತರ ಸೌಲಭ್ಯಗಳೋ–ಅಪರಿಮಿತವಾಗಿವೆ. ಪ್ರತಿಯೊಬ್ಬ ಅರಸನ ಆಸ್ಥಾನದಲ್ಲಿ ಕವಿಗಳೂ, ಪಂಡಿತಮಾನ್ಯರೂ, ಸಂಗೀತಗಾರರೂ, ಚಿತ್ರಕಾರರೂ, ಇಲ್ಲದೇಯಿಲ್ಲ. ಕಲಾವಂತರ ಜೀವನ ನಿರ್ವಹಣೆ ರಾಜನಿಂದಲೇ ನಡೆಯುತ್ತಿದ್ದುದರಿಂದ ಅವರ ಜೀವನವೆಲ್ಲಾ ಕಲಾ ನಿರ್ಮಾಣಕ್ಕಾಗಿಯೇ ನಡೆಯಿತು. ಇಂದಿನ ಉತ್ತಮ ಕಲೆಗಳೂ–ಸಾಹಿತ್ಯಗಳೂ- ಜಗತ್ತಿನ ಶ್ರೇಷ್ಠ ಕೃತಿಗಳಾಗಿರುವದನ್ನು ಈಗಲೂ ಕಾಣಬಹುದಾಗಿದೆ. ಆದರೆ ಪ್ರಜಾಪ್ರಭುತ್ವವುಳ್ಳ ಸರಕಾರದಲ್ಲಿ ಅಂತಹ ಸಾಹಿತ್ಯವೂ ಇಲ್ಲ, ಕವಿಗಳೂ ಇಲ್ಲ, ಚಿತ್ರಕಲೆಯೂ ಇಲ್ಲ. ಸ್ವಯಂಸ್ಫೂರ್ತಿ ಕಲಾಗಾರನಿಗೆ ಸ್ವಲ್ಪ ಹುಟ್ಟಿಗೆ ಕಾರಣವಾದರೂ ಬೇರೆಯವರ ಪ್ರೋತ್ಸಾಹ - ಪುರಸ್ಕಾರಗಳು ವಿಶೇಷ ಸ್ಫೂರ್ತಿಯನ್ನು ಕೊಡಬಲ್ಲವು. ಆದರೆ ಇಂದು ನಮಗೆ ಬೇಕಾಗಿರುವುದು ಹೇಳ ಮುಗಿಸದ ಒಂದ್ವಿಲ್ಲದ ಬಡಾಯಿಗಳು! ಪ್ರಜಾಪ್ರಭುತ್ವದಲ್ಲಿ ಎಲ್ಲರಿಗೂ ಅನ್ನಬಟ್ಟೆ ಒದಗಿಸುವ ವ್ಯಕ್ತಿ ಮಾತ್ರ ತಿಳಿವು, ಕಲೆ, ಜ್ಞಾನದ ಮಾತೇ ಇಲ್ಲ! ಇದ್ದರೆ [illegible] ವಲ್ಲ! ಸಕಾಲಿಕವಲ್ಲ

ರಾಜರ ಆಡಳಿತೆಯ ಕಾಲದಲ್ಲಿ ನಾವು ಇಂದು ಕನಸು ಕಾಣುತ್ತಿರುವ ಸುಖಶಾಂತಿಗಳೂ— ಸಂತುಷ್ಟವಾದ ಜೀವನವೂ ಇತ್ತು. ಒಬ್ಬನೇ ರಾಜನು ಇಡಿಯ ದೇಶದ ರಾಜಕೀಯ ಸೂತ್ರವನ್ನು ಬಿಗಿಯಾಗಿ ಹಿಡಿದು ನಡೆಸುತ್ತಿದ್ದ. ಅವನೇ ಸರ್ವಾಧಿಕಾರಿಯಾಗಿದ್ದರೂ ಸರಿಯಾದ ನ್ಯಾಯದಾನವಾಗುತ್ತಿತ್ತು! ಏಕೆಂದರೆ ಅವನಿಗೆ ಲಂಚ ತೆಗೆದುಕೊಳ್ಳುವ—ಹಸ್ತಕ್ಷೇಪ ನಡೆಸುವ ಅವಶ್ಯಕತೆಯಿರಲಿಲ್ಲ. ಅದರಿಂದ ಸರಿಯಾದ ದಂಡನೆ ವಿಧಿಸುತ್ತಿದ್ದ. ಪ್ರಜೆಗಳೂ ಭಯಭೀತರಾಗಿದ್ದರು. ಆಜ್ಞಾ ಪಾಲನೆಯ ವಿಚಾರದಲ್ಲೂ ಅತ್ಯಂತ ಜಾಗರೂಕರಾಗಿದ್ದರು. ಏಕೆಂದರೆ ಪ್ರಜಾಪ್ರಭುತ್ವದ ಹಾಗೆ ಹಣದ ಸಾಮರ್ಥ್ಯದಿಂದಲೋ ಪ್ರತಿಷ್ಠಿತ ವ್ಯಕ್ತಿಗಳ ವರ್ಚಸ್ಸನ್ನುಪಯೋಗಿಸಿಯೋ—ತಮ್ಮ ಬೇಳೆಯನ್ನು ಬೇಯಿಸಿಕೊಳ್ಳಬಹುದೆನ್ನುವ ಧೈರ್ಯ ಅವರಲ್ಲಿರಲಿಲ್ಲ! ಆದುದರಿಂದಲೆ ಕಾಯಿದೆ ಕಾನೂನುಗಳನ್ನು ಜನ ಗಂಭೀರವಾಗಿ ನೋಡುತ್ತಿದ್ದರು; ಮರ್ಯಾದ [illegible] ಆದರಿಸುತ್ತಿದ್ದರು.

"ತಾನೇ ಸರ್ವಾಧಿಕಾರಿ"ಯಾಗಿದ್ದರೂ ಪ್ರಜೆಗಳ ವಿಶ್ವಾಸವನ್ನು ಗಳಿಸಬೇಕೆಂಬ ವಿಶ್ವಾಸ— ಛಲ ರಾಜರಲ್ಲಿತ್ತು. ಹಿಂದಿನ ರಾಜರ ಅಂದರೆ ಒಬ್ಬೊಬ್ಬರ ಕಾಲದಲ್ಲಿ ಜನರ ಬಲವನ್ನು ಗಳಿಸಿಕೊಳ್ಳುವ ದೇಶಸುಧಾರಣೆಗಳ ಸ್ಪರ್ಧೆಗಳು ನಡೆಯುತ್ತಿದ್ದವು! ತನ್ನ ದೇಶದಲ್ಲಿ ಅರಾಜಕತೆ ನಡೆದರೆ—ಪ್ರಜೆಗಳು ಬಡತನ ದಾರಿದ್ರ್ಯ– ರೋಗರುಜನಗಳಿಂದ ಪೀಡಿತರಾದರೆ ತನಗೆ ಅಗೌರವವೆಂದು ತಿಳಿದು ಜಾಗರೂಕತೆಯನ್ನು ವಹಿಸುತ್ತಿದ್ದರು. ಆದರೆ ಪ್ರಜಾಪ್ರಭುತ್ವದಲ್ಲಿ ಯಾರು ಯಾರನ್ನು ಸಂತೈಸಬೇಕು? ಪ್ರಜೆಗಳದೇ ರಾಜ್ಯವೆಂದ ಮೇಲೆ ಪ್ರಜೆಗಳೇ ಹಿತಚಿಂತಕರು.

ಸಾರ್ವಜನಿಕ ಹಣವನ್ನು ಸುಖಲೋಲುಪತೆಗೆ ಬಳಸಿಕೊಂಡು ಸ್ವೇಚ್ಛಾನುವೃತ್ತಿಯಿಂದ ರಾಜರು ನಡೆದುಕೊಂಡದ್ದರಿಂದ ಸಂಕಷ್ಟಕ್ಕೊಳಗಾದ ಪ್ರಜಾವರ್ಗ "ನಮಗೆ ರಾಜ ಬೇಡ" ಎಂದಿತು. ಎಲ್ಲೆಡೆಯಲ್ಲೂ ರಾಜರುಗಳ ವಿಷಯಾಸಕ್ತರಾಗಿ ಪ್ರಜೆಗಳ ಸುಖದುಃಖಗಳನ್ನು ಮರೆಯುವದು ಕಂಡುಬಂತು. ಜನಸಂಘಟಿತರಾಗಿ ರಾಜರನ್ನು ಉರುಳಿಸಿದರು. ನಿರಂಕುಶ ಪ್ರಭುತ್ವದ ನಿರ್ಮೂಲನಕ್ಕಾಗಿ ಭಯಾನಕ ಹೋರಾಟ ನಡೆಸಿದರು. ಈ ಆದರ್ಶವನ್ನು ಎಲ್ಲ ರಾಷ್ಟ್ರಗಳೂ ಅನುಸರಿಸಿದವು. ಪ್ರಜಾಪ್ರತಿನಿಧಿಗಳ ಸರಕಾರದಲ್ಲಿ ಸಾರ್ವಜನಿಕ ಬೇಡಿಕೆಯಂತೆ ನಡೆದುಕೊಳ್ಳಬೇಕೆನ್ನುವ ಕೂಗು ಕ್ರಾಂತಿಯನ್ನೇ ಉಂಟುಮಾಡಿತು. ಪ್ರಜೆಗಳ ಹಿತವನ್ನು ಮನಮುಟ್ಟಿ ಚಿಂತಿಸುವ ಪ್ರಜಾಪಕ್ಷಪಾತಿ ಧುರೀಣರೇ ಅಧಿಕಾರವನ್ನು ತೆಗೆದುಕೊಳ್ಳುವದರಿಂದ ದೇಶದಲ್ಲಿ ಸರ್ವಸಮ್ಮತ ರಾಜಕೀಯ ನ್ಯಾಯ ದೊರಕಿ ಎಲ್ಲರಿಗೂ ಪ್ರಜಾಪ್ರಭುತ್ವದ ಲಾಭ ದೊರಕೀತೆಂದು ಅಭಿಪ್ರಾಯಪಟ್ಟರು. ಅಭಿಪ್ರಾಯವೇನೂ ಕೆಟ್ಟದಲ್ಲ! ಉದ್ದೇಶ ಕೂಡಾ ಉತ್ತಮವಾದುದು. ಆದರೆ ಯಥಾರ್ಥವಾಗಿ ಅದರಿಂದ ಜನತೆಗಿಂದಾಗುತ್ತಿರುವ ಲಾಭವೆಷ್ಟೆಂಬುದನ್ನು ನಾವು ವಿವೇಚಿಸಬೇಕಾಗಿದೆ.

ಯುದ್ಧಪ್ರಿಯ ರಾಷ್ಟ್ರಗಳೂ, ಶಾಂತಿಯನ್ನು ಬಯಸುವ ರಾಷ್ಟ್ರಗಳೂ ಪ್ರಜಾಪ್ರಭುತ್ವ ಸರಕಾರದ ಉತ್ಕಂಠತೆಗಳು. ಜನತೆ ವಿಶ್ವಾಸದಿಂದ ಆರಿಸಿ ಕಳಿಸಿದ ಪ್ರತಿನಿಧಿಗಳೇ ಅಧಿಕಾರ ಚಾಲು ಮಾಡುತ್ತಿದ್ದರೆ ಪ್ರಜಾಹಿತ ಕಾರ್ಯವನ್ನೆಷ್ಟು ಮಾಡಬಹುದು. ಪ್ರಜೆಗಳದೇ ಸರಕಾರವೆಂದ ಮೇಲೆ ಸರಕಾರವನ್ನು ದೂರುವಂತಿಲ್ಲ, ಆದರೆ ನಮ್ಮ ದುರ್ದೈವದಿಂದ ಪ್ರಜಾಪ್ರಭುತ್ವದಲ್ಲೂ ಭಿನ್ನಾಭಿಪ್ರಾಯಗಳೂ- ರಾಜಕೀಯ ಭಾಂಗಲೆಗಳೂ ಸಂಕುಚಿತ ಸ್ವಾರ್ಥಗಳೂ ಯಥೇಚ್ಛ ನಡೆಯುತ್ತಲಿವೆ. ಪ್ರಜೆಗಳ ದೂರು ಸರಕಾರದ ಕಿವಿಗೆ ಮುಟ್ಟುತ್ತಿಲ್ಲ. ಒಬ್ಬ ರಾಜನಾದರೆ ಅವನನೇ ತೀರ್ಮಾನ ಒಂದು ನಿರ್ದಿಷ್ಟ ಆದೇಶವನ್ನು ಮಾಡಬಹುದಿತ್ತು. ಆದರೆ ಪ್ರಜಾಪ್ರಭುತ್ವ ಸರಕಾರದಲ್ಲಿ ಹಾಗಿಲ್ಲ ಅಂದು ಒಬ್ಬ ರಾಜ ತನ್ನ ಮರಿಗಾಗಿ

ಪ್ರಧಾನ ಕಾರ್ಯಾಲಯ: ಉಡುಪಿ ಸ್ಥಾಪನೆ: ೧೯೩೫

ದಿ ಕೆನರಾ ಮ್ಯೂಚುವಲ್

ಎಶ್ಶೂರೆನ್ಸ್ ಕಂಪೆನಿ, ಲಿಮಿಟೆಡ್,

ಇದುವೇ

ಪಾಲಿಸಿದಾರರ ನಂಬಿಕೆ ಹೆಚ್ಚಿಸುವ ಹೆಸರು

ಅಲ್ಲದೆ ಸ್ಥಾಪಿತವಾದಂದಿನಿಂದಲೂ

ಲಾಭ (ಬೋನಸ್) ಹಂಚಿದ ಕಂಪೆನಿ.

The Canara Mutual Assurance Co. Ltd.

H. O. UDIPI (SOUTH INDIA) ESTD 1935.

ಗೃಹಲಕ್ಷ್ಮಿ

ಲೇಖಕರು: ಐರ್ಯ ಲಕ್ಷ್ಮೀನಾರಾಯಣ ಆಳ್ವ

"ನ ಗೃಹಂ ಗೃಹ ಮಿತ್ಯಾಹು ಗೃಹಿಣಿ ಗೃಹಮುಚ್ಯತೇ ಗೃಹವಾಗುವುದು ಕಟ್ಟಡದಿಂದಲ್ಲ ಗೃಹಿಣಿಯಿಂದ ಎಂದು ಒಬ್ಬ ಸಂಸ್ಕೃತ ಕವಿ ಹೇಳುತ್ತಾನೆ. ಅದೆಷ್ಟು ನಿಜ. ಬಿಸಿಲು, ಮಳೆ, ಚಳಿ, ಗಾಳಿಯಿಂದ ರಕ್ಷಿಸುವ ಮನೆಯನ್ನು ಪರೀಕ್ಷಿಸುವುದು ಅದರ ಉತ್ತಮವಾದ ಆಧಾರಸ್ತಂಭದಿಂದಲ್ಲ; ಅದರ ಆಧಾರ ಮತ್ತು ಜೀವಾಳವಾದ ಸ್ತ್ರೀಯ ಸ್ಫೂರ್ತಿ ಸ್ತಂಭದಿಂದ" ಎಂದು ಸ್ವಾಮಿ ವಿವೇಕಾನಂದರು ಒಮ್ಮೆ ಬರೆದುದರಲ್ಲಿ ಸತ್ಯವೇ ಮೂರ್ತಿಭವಿಸಿದೆ. ಸ್ತ್ರೀಯ ಪರಿಶುದ್ಧ ಚಾರಿತ್ರ್ಯದಿಂದ ಗೃಹವೇ ನಿತ್ಯಾನಂದದ ನಿಜನೆಲೆಯಾಗಬಲ್ಲುದು. ಅಂತಹ ಹಿರಿದಾದ ಶಕ್ತಿ ಆಕೆಯಲ್ಲಿ ಹುಟ್ಟಾ ಇದೆ. ಗೃಹದೊಡತಿಯ ನಡೆನುಡಿಗಳಲ್ಲಿ ಸತ್ಯಪ್ರೇಮಗಳು ತುಂಬಿ ಸೂಸಿದರೆ ಸೌಂದರ್ಯದ ಹೊಳೆಯೇ ಹರಿದು ಆ ಗೃಹವೇ ಶಿವಧಾಮವಾಗಬಲ್ಲುದು. ಆರ್ಥಿಕ ಕ್ಷೇತ್ರದಲ್ಲಂತೂ ಆಕೆ ಎಂತು ಗಳಿಸಬೆಯೂ ಉಳಿಸಬಲ್ಲಳು ಎಂಬುದನ್ನು ಎಲ್ಲರೂ ಬಲ್ಲರು. ಆದರಿಂದಲೇ ಹೆಣ್ಣನ್ನು ಗೃಹಲಕ್ಷ್ಮಿ ಎನ್ನುವುದು ಎಲ್ಲಾ ದೃಷ್ಟಿಯಿಂದಲೂ ಎಷ್ಟು ಸಮಂಜಸವಾಗಿದೆ.

ಹೆಣ್ಣಾಗಿ ಹುಟ್ಟಿದೊಡನೆ ಒಂದು ಗೃಹದ ಒಡತಿಯಾದೊಡನೆ ನಾರಿ ಗೃಹಲಕ್ಷ್ಮಿಯಾಗುವಳೆಂದು ಯಾರು ತಿಳಿಯಲಾರರು. ಆಡ್ಡದಾದಿ ಹಿಡಿದ ನಾರಿ ಗೃಹನಾಶಿನಿಯೂ ಆಗಬಲ್ಲಳು. ಹೆಣ್ಣು ಗೃಹಲಕ್ಷ್ಮಿಯಾಗಬೇಕಾದರೆ ಮೊತ್ತಮೊದಲು ಆಕೆಯಲ್ಲಿ ತನ್ನ ಮೂಲರೂಪವನ್ನು ಹೊಂದುವ ಹಂಬಲ ಮೂಡಬೇಕು. ನಂತರ ಆ ಹಂಬಲವನ್ನು ಕಾರ್ಯಕಾರಿ ಮಾಡುವುದಕ್ಕಾಗಿ ಬಹಳಷ್ಟು ದುಡಿಯಬೇಕು; ತಪಸ್ಸುಮಾಡಬೇಕು. ಆಕೆ ಹಳೆಕಾಲದ ಅಂಧವಿಶ್ವಾಸಗಳನ್ನು ತೊರೆದು, ಹೊಸಕಾಲದ ಬೆಡಗು ಬಿನ್ನಾಣಗಳಿಗೆ ಮಾರುಹೋಗದೆ—ಬಾಹ್ಯ ಪ್ರತಿಕ್ರಿಯೆಗಳಿಂದ ತನ್ನನ್ನು ರೂಪಿಸಿಕೊಳ್ಳದೆ ತನ್ನ ಆತ್ಮಶಕ್ತಿಯಿಂದಲೇ ಬೆಳೆಸಿಕೊಳ್ಳಬೇಕು. ಆಕೆ ತನ್ನ ದಿವ್ಯ ಚಕ್ಷುವಿನಿಂದ ಸ್ಥೂಲ ಆವರಣವನ್ನು ಭೇದಿಸಿ, ಸೂಕ್ಷ್ಮ ಆತ್ಮಸ್ಥ ಭಾವವನ್ನೂ, ವಾಸ್ತವಿಕ ಸತ್ಯವನ್ನೂ ಅಂತರ್ನಿಹಿತ ಗೂಢತತ್ವವನ್ನೂ ಅರಿತು ತನ್ನನ್ನು ಆದರ್ಶಾನುಗುಣವಾಗಿ ಬೆಳೆಯಿಸಿಕೊಂಡು, ತನ್ನ ಹೃದಯದ ಬಟ್ಟಲಲ್ಲಿ ತುಂಬಿದ ಪ್ರೇಮದ ಅಮೃತವನ್ನು ಸಿಂಪಡಿಸಿ ಗೃಹದಲ್ಲೇ ನಿತ್ಯಾನಂದದ ನೆಲೆಯೊಡೆಯುವಂತೆ ಮಾಡಿದರೆ ಮಾತ್ರ ಆಕೆ ನಿಜವಾದ ಗೃಹಲಕ್ಷ್ಮಿಯಾಗಬಲ್ಲಳು.

ಇಂದು ನಾರಿಯರಲ್ಲಿ ಪ್ರಗತಿಶೀಲರೆನಿಸಿಕೊಂಡು ಹೆಂಗಳೆಯರ ಹಕ್ಕುಗಳಿಗಾಗಿ ಹೋರಾಡುತ್ತಿರುವ ಹೆಚ್ಚಿನ ಮಹಿಳೆಯರಿಗೆ ಗಂಡಸರ ಸ್ಥಾನಮಾನಗಳನ್ನು ಕಂಡು ಉಂಟಾದ ಮತ್ಸರವೇ ಸ್ಫೂರ್ತಿ. ಆದರೆ ಈ ಮನೋಭಾವದಿಂದ ಹೋರಾಡ ಹೊರಟರೆ ನಾರಿಯರ ಉನ್ನತಿಯಾಗುತ್ತದೆ ಎಂದು ಯಾರಾದರೂ ಭಾವಿಸಿದರೆ ಅದು ಮೂರ್ಖತನವಾದೀತು. ಸತ್ಯನ್ಯಾಯಗಳ ಗಾಢ ವಿಧಾಯಕರೀತಿಯಿಂದ ಪ್ರಯತ್ನಿಸುವದನ್ನು ಬಿಟ್ಟು ಮೇಲಾಟಕ್ಕಾಗಿಯೇ ಹೋರಾಟಕ್ಕಿಳಿದರೆ ಅದರಿಂದ ಯಾರದೂ ಹಿತವಾಗಲಾರದು, ಸುಗುಣಗಳಿಗಾಗಲೀ ದುರ್ಗುಣಗಳಿಗಾಗಲೀ ವಿಶಿಷ್ಟ ಶಕ್ತಿಯೊಂದಿದೆ. ಅವು ಎಲ್ಲಿ ತಲೆಯೆತ್ತುತ್ತವೋ ಅಲ್ಲೇ ಮೊದಲು ತಮ್ಮ ಪ್ರತಿಕ್ರಿಯೆಯನ್ನುಂಟುಮಾಡಿ ಮುಂದೆ ಹೊರಪ್ರಪಂಚದಲ್ಲಿ. ಆದ್ದರಿಂದ ಮತ್ಸರದಿಂದ ನಾರಿಯರು ಹೋರಾಟಕ್ಕಿಳಿದರೆ ಅದರಿಂದ ಅವರ ಅವನತಿಯೇ ಆದೀತು. ಬಸವಣ್ಣನವರು ಒಮ್ಮೆ ಹೇಳಿದ್ದಾರೆ, "ಮನೆಯ ಕಿಚ್ಚು ಮನೆಯ ಸುಟ್ಟಲ್ಲದೆ ನೆರೆಮನೆಯ ಸುಡದು" ಎಂದು. ಹೆಣ್ಣು ಇದನ್ನರಿತು ಸಾತ್ವಿಕ ಹಾದಿಯಿಂದ ಮುಂದುವರಿಯುವುದು ಒಳಿತು. ಅದರಲ್ಲೇ ಆಕೆಯ ಉನ್ನತಿಯಿದೆ.

ಆತ್ಮಿಕವಾಗಿ ಅಲ್ಲದಿದ್ದರೂ ದೈಹಿಕ ಮತ್ತು ಮಾನಸಿಕವಾಗಿ ಹೆಣ್ಣು ಗಂಡುಗಳಲ್ಲಿ ಕೆಲವು ಭೇದಗಳಿವೆ ಎಂಬುದನ್ನು ನಾವೆಂದೂ ಮರೆಯಬಾರದು. ಆದ್ದರಿಂದಲೇ ಹೆಣ್ಣು ಗಂಡಿನ ಪ್ರತಿರೂಪವಾಗಬೇಕೆಂದು ಬಯಸುವುದು ನ್ಯಾಯವಲ್ಲ. ಅವರವರ ಪ್ರಕೃತಿಗೆ ಹೊಂದಿಕೆಯಾಗುವಂತಹ ಕಾರ್ಯಗಳನ್ನೇ ಅವರವರು ಕೈಕೊಳ್ಳಬೇಕು. ಇದನ್ನೇ ಗೀತೆಯಲ್ಲಿ "ಸ್ವಧರ್ಮವೇ ಶ್ರೇಷ್ಠ ಮತ್ತು ಅದರಿಂದಲೇ ವ್ಯಕ್ತಿಯ ಉನ್ನತಿ. ಪರಧರ್ಮವು ಸುಖ ಮತ್ತು ಸುಲಭವಾಗಿ ಕಂಡರೂ ಅದರಿಂದ ವ್ಯಕ್ತಿಯ ಉನ್ನತಿಯಾಗದು" ಎಂದಿದೆ. ಇದನ್ನೇ ಆಚಾರ್ಯ ವಿನೋಬಾ ಭಾವೆಯವರು "ಸ್ವಧರ್ಮದ ವಿನಾ ಬೇರಾವ ಆಶ್ರಯವೂ ನಮಗಿಲ್ಲ ಸ್ವಧರ್ಮವನ್ನು ತಪ್ಪಿಸ ಹೊರಟರೆ ತನ್ನನ್ನೇ ಕಳೆದುಕೊಂಡಂತೆ, ಆತ್ಮಘಾತಕತನ. ಸ್ವಧರ್ಮದ ಆಸರೆಯಲ್ಲೇ ನಾವು ಮುಂಬರಿಯಲು ಸಾಧ್ಯ. ಅಂತೇ ಅದನ್ನು ಯಾರೂ ಯಾವಾಗಲೂ ಬಿಡಬಾರದು. ಇದು ಒಂದು ಜೀವನದ ಮೂಲ ಸೂತ್ರ" ಎಂದಿದ್ದಾರೆ. ಇದನ್ನರಿತು ಮಾನವರು ತಮ್ಮ ಬುದ್ಧಿ, ಮನಸ್ಸು, ದೇಹಗಳಿಗೆ ಹೊಂದಿಕೆಯಾಗುವಂತ ಕಾರ್ಯಗಳನ್ನೇ ಕೈಕೊಳ್ಳಬೇಕು. ಬಾಳಿನ ಈ ಮೂಲಸೂತ್ರ ನಮ್ಮ ನಾರಿಯರ ಚಿತ್ತದ ಭಿತ್ತಿಯಿಂದ ಎಂದೂ ಅಳಿಸಿಹೋಗದಿರಲಿ.

ಹೀಗೆನ್ನುವಾಗ ಹೆಣ್ಣು-ಗಂಡಿನ ತೊತ್ತಾಗಿ ಮನೆಯೊಳಗೇ ಬಾಳಬೇಕೆಂದು ನಮ್ಮ ಭಾವನೆಯೆಂದು ಯಾರೂ ಭಾವಿಸದಿರಲಿ. ಅದನ್ನು ನಾವು ಈ ಮೊದಲೇ ಸ್ಪಷ್ಟಪಡಿಸಿದ್ದೇವೆ. ಹೆಣ್ಣಿಗೆ ಸ್ವಾತಂತ್ರ್ಯ ಬೇಕು. ಆಕೆ ಗಂಡಿನ ಸಮಾನಳಾಗಿ ಬಾಳಬೇಕು ಎಂದು ನಮ್ಮ ಮತ. ಆದರೆ ಆ ಸ್ವಾತಂತ್ರ್ಯ ಸ್ವೇಚ್ಛೆಯಾಗಬಾರದು ಎಂದೇ ನಮ್ಮ ಅಭಿಲಾಷೆ. ಸ್ತ್ರೀಯು ಸ್ವೇಚ್ಛಾಚಾರಕ್ಕಿಳಿದರೆ ಜಗತ್ತು ಒಮ್ಮೆಲೇ ಅವನತಿಗಿಳಿದಂತೆಯೇ. ಹೆಣ್ಣು ಸ್ವಾತಂತ್ರ್ಯದ ಹೆಸರಿನಲ್ಲಿ ಅಡ್ಡಹಾದಿಗಿಳಿದು ತನ್ನ ಸ್ತ್ರೀತನವನ್ನು ಕಳೆದುಕೊಂಡು ಮನೆಯ ಸುಖಶಾಂತಿಗಳನ್ನು ತನ್ನ ಕಾಲತುಳಿತಕ್ಕೆ ಬಲಿಕೊಡಬಾರದು. ಹೆಣ್ಣು ತನ್ನ ಬಾಳಿನ ಆಸರೆ ಎಂಬ ಅರಿವು ಗಂಡಿಗಿರಬೇಕಾದಂತೆ ಗಂಡೇ ತನ್ನ ಜೀವನದ ಆಧಾರ ಎಂಬ ನೆನಹು ಹೆಣ್ಣಿನಿಂದಲೂ ಮರೆತು ಹೋಗಬಾರದು.

ಗಂಡಿನ ಸಹಕಾರದಿಂದ ಹೆಣ್ಣು ತಾನು ಇಂದಿರುವ ಸಂಕುಚಿತ ಕ್ಷೇತ್ರವನ್ನು ತೊರೆದು ಹೊರಬರಬೇಕು. ಜಗತ್ತನ್ನೇ ಅರಿಯುವ ಸಾಹಸಮಾಡಬೇಕು. ಹೀಗೆ ಅಪಾರವಾದ ಲೋಕಾನುಭವದಿಂದ ವಿರಾಟ್ ಜ್ಞಾನವನ್ನು ಸಂಪಾದಿಸಿ, ತೀಕ್ಷ್ಣ ದೃಷ್ಟಿಯನ್ನು ಪಡೆದು ಆ ಮೂಲಕ ಸತ್ಯನ್ಯಾಯಗಳನ್ನು ಅರಿತು ಆಚರಿಸಿ ತನ್ನ ನೈತಿಕ ಮತ್ತು ಮಾನಸಿಕ ಮಟ್ಟವನ್ನು ಎತ್ತರಿಸಿಕೊಳ್ಳಬೇಕು. ಆದರೆ ಹೀಗೆ ಲೋಕಾನುಭವವನ್ನು ಪಡೆಯುವ ಲವಲವಿಕೆಯಲ್ಲಿ ಆಕೆ ಮನೆಯನ್ನೆಂದೂ ಮರೆಯಬಾರದು. ಮನೆಯೇ ಆಕೆಯ ಉತ್ತಮ ಶಿಕ್ಷಣಶಾಲೆ ಮತ್ತು ಪವಿತ್ರ ಕಾರ್ಯಕ್ಷೇತ್ರ. ಜ್ಞಾನಾರ್ಜನೆಯೂ ದೇಶಸೇವೆಯೂ ಅಲ್ಲಿಯೂ ಆಗಬಲ್ಲುದು.

ಜನಸೇವೆ, ದೇಶಸೇವೆಗಳ ಭರದಲ್ಲಿ ಕೆಲವು ಮಹಿಳೆಯರು ಮನೆಯನ್ನೇ ಮರೆತುಬಿಡುತ್ತಾರೆ. ಅವರು ತಮ್ಮ ಮಕ್ಕಳ ಲಾಲನೆ ಪಾಲನೆಗಳನ್ನು ಕೂಲಿಯಾಳುಗಳ ಕೈಯಿಂದ ಮಾಡಿಸುತ್ತಾರೆ. ಇನ್ನು ಅನೇಕ ಮಹಿಳೆಯರು ಮಕ್ಕಳಾದರೆ ತಮ್ಮ ಸೌಂದರ್ಯ ಹಾಳಾಗಬಹುದೆಂದು ಚಿಕ್ಕಪ್ರಾಯದಲ್ಲೇ ಮಕ್ಕಳಿಗೆ ಮೊಲೆಹಾಲು ನಿಲ್ಲಿಸಿಬಿಡುತ್ತಾರೆ. ಈ ಪರಿಯ ದೇಶಸೇವೆ ಮತ್ತು ಸೌಂದರ್ಯಾಭಿಲಾಷೆಗಳಿಂದ ಹೆಣ್ಣು ತನ್ನನ್ನು ಮಾತ್ರವಲ್ಲದೆ ಇಡೀ ಸಮಾಜವನ್ನೇ ಅವನತಿಗೆ ನೂಕುತ್ತಾಳೆ. ಮಾತ್ರವಲ್ಲ ಮುಂದಿನ ಜನಾಂಗವು ಅಸಂಸ್ಕೃತವೂ ಅಬಲವೂ ಆಗಲು ಕಾರಣಳಾಗುತ್ತಾಳೆ. ಅಂತೆಂದೇ ಗಂಡು ಹಾದಿ ತಪ್ಪುವದಕ್ಕಿಂತ ಎಷ್ಟೋ ಹೆಚ್ಚಿನ ಅನರ್ಥ ಹೆಣ್ಣು ಹಾದಿತಪ್ಪಿದರೆ ಸಂಭವಿಸುತ್ತದೆ. ಇಂದಿನ ವರೆಗೆ ಹೆಣ್ಣು ಬಂಧನದಲ್ಲಿದ್ದು ಸಮಾಜದ ಪ್ರಗತಿ ಕುಂಠಿತವಾಗಿದ್ದರೆ ಇನ್ನು ಆಕೆ ಜ್ಞಾನಸಂಪನ್ನಳಾಗದೆ ಗಡಿಬಿಡಿ ನಡೆಯುವುದರಿಂದ ಸಮಾಜವು ಅವನತಿ ಹೊಂದುವ ಭಯವು ಇದೆ. ಈ ನೆನಹು ನಮ್ಮ ನಾರಿಯರ ಹೃದಯದಲ್ಲಿ ಜಾಗೃತಿದಂತಿರಬೇಕು.

ಹೆಣ್ಣು ತನ್ನ ಹಕ್ಕನ್ನು ಪಡೆಯಲು ಗಂಡಿನೊಡನೆ ಎಂದೂ ತಾಮಸಿಕ ಹೋರಾಟ ಹೂಡಬಾರದು. ಅಂತಾದರೆ ಊಹಾತೀತ ಅನರ್ಥ ಸಂಭವಿಸೀತು. ಹೃದಯ ಹೃದಯಗಳ ಒಂದಾಗುವ ದಾರಿಯಲ್ಲಿ ಅಭೇದ್ಯಗೋಡೆಯೊಂದು ಎದ್ದುನಿಂತೀತು. ಆದರೆ ಮುಂದೆ ಎಲ್ಲವೂ ಕೊನೆಗೊಂಡತೆಯೇ ಸರಿ. ಇಬ್ಬರಬಾಳುವೆಯೂ ನರ

ಸರಕಾರದ ಹಣವನ್ನು ದುರುಪಯೋಗಗೊಳಿಸಿದರೆ ಇಂದು ಪ್ರಜಾಪ್ರಭುತ್ವ ಸರಕಾರದಲ್ಲಿ ಪ್ರತಿಯೊಬ್ಬ ಮುಖ್ಯಾಧಿಕಾರಿಯೂ ತನ್ನವರಿಗಾಗಿ ದುರುಪಯೋಗ ಮಾಡುವ ದಾಖಲೆಗಳು ಕಂಡು ಬರುತ್ತಲಿವೆ. ರಾಜರ ಕಾಲದಲ್ಲಿ ಪ್ರಜಾ 'ಸ್ವಾತಂತ್ರ್ಯವಿರಲಿಲ್ಲವೆನುವ ಕೂಗಿತ್ತು. ಆದರೆ ಇಂದು ಇಲ್ಲಿ ಕಾಣುತ್ತಿರುವ ಸ್ಥಾನ ಗದ್ದುಗೆಗಳ ಸ್ಪರ್ಧೆಯನ್ನು ನೋಡುವಾಗ ಪ್ರಜಾಪ್ರಭುತ್ವವಿದೆಯೆ? ಎಂದು ಶಂಕೆ ಮೂಡುತ್ತದೆ.

ತನ್ನ ಶಕ್ತಿಸಾಮರ್ಥ್ಯಗಳ ಪ್ರದರ್ಶನಕ್ಕಾಗಿ ಒಬ್ಬರಾಜನು ತನಗಿಂತ ದುರ್ಬಲನಾದ ಅರಸನ ರಾಜ್ಯಾಪಹರಣ ಮಾಡುವದನ್ನು ಕೇಳಿದ್ದೇವೆ. ಆದರೆ ಇಪ್ಪತ್ತನೆಯ ಶತಮಾನದ ನಾಗರಿಕರಾದ ನಾವು ಪ್ರಜಾಪ್ರಭುತ್ವ ಸರಕಾರದ ಮುಖೇನ ಅದೇ ಧೋರಣೆಯನ್ನು \ ನಡೆಸುತ್ತಲಿದ್ದೇವೆ. ಇಂದಿನ ಯುದ್ಧ ಗತಿ ರಾಜರುಗಳ ಕಾಲದ ಯುದ್ಧನೀತಿಯಿಂದಲೂ ಅಧಮ ತರದ್ದಾಗಿರುತ್ತದೆ. ಪ್ರಜಾಪ್ರಭುತ್ವ ಸರಕಾರದಲ್ಲಿ ಯಾರು ಉಚ್ಚಾಸನಗೊಳ್ಳಬೇಕಾಗಿತ್ತೋ ಅವರಿಂದು ಅದಕ್ಕಿಂತಲೂ ಹೀನ ಸ್ಥಿತಿಯಲ್ಲಿದ್ದಾರೆ. ಯಾರ ವರ್ಚಸ್ಸು ಕಡಿಮೆಯಾಗಬೇಕಿತ್ತೋ ಅವರಿಂದು ಅಧಿಕಾರಿಗಳ ಕೈವಾರಿಗಳಾಗಿದ್ದಾರೆ.

ಲೋಕವೇ ಹೀಗೆ! ಇದನ್ನೆಲ್ಲ ಲಕ್ಷ್ಯಪೂರ್ವಕ ನೋಡಿದರೆ 'ನಿರಂಕುಶ ಪ್ರಭುತ್ವ'ವೇ ಆಗಬಹುದೆನ್ನುವ ವಿಚಾರ ಹೊಳೆಯುತ್ತದೆ. ಎಲ್ಲರಿಗೂ ಮಂಡೆಯೂರಿ ಸಲಾಮು ಹೊಡೆಯುವ ದಾಸ್ಯತ್ವಕ್ಕಿಂತ ಒಬ್ಬ ರಾಜನಿಗೆ ಸಲಾಮು ಹೊಡೆಯುವುದು ಎಷ್ಟೋ ಮೇಲೆಂದು ಭಾಸವಾಗುತ್ತದೆ!

ಈ ಎಲ್ಲ ಕುತ್ತಗಳು ಪರಿಹಾರವಾಗದೆ ಪ್ರಜಾಪ್ರಭುತ್ವದ ಫಲ ಜನಕ್ಕೆ ಸಿಗದು; ಈಗ ನಾವು ಕಾಣುತ್ತಿರುವದು ಪ್ರಜಾಪ್ರಭುತ್ವದ ಕನಸನ್ನೇ ಹೊರತು ಪ್ರಜಾಪ್ರಭುತ್ವದ ಯಥಾರ್ಥ ರಾಜಸೂತ್ರವನ್ನಲ್ಲ!

ಬೇಂಕಿಂಗ್ ಸಂಬಂಧದ ಎಲ್ಲಾ ಸಮಸ್ಯೆಗಳಿಗೆ

ದಿ ವಿಜಯಾ ಬೇಂಕ್ ಲಿಮಿಟೆಡ್

ಇವರ ಸಲಹೆ ಕೇಳಿರಿ

ಹೆಡ್ ಆಫೀಸು : : : : ಮಂಗಳೂರು

ಮಡಿಕೇರಿಯಲ್ಲಿ ಒಂದು ಶಾಖೆಯೂ ಬೊಂಬಾಯಿಯಲ್ಲಿ ಒಂದು ಶಾಖೆಯೂ ಜಿಲ್ಲೆಯೊಳಗೆ ಹಲವು ಶಾಖೆಗಳೂ ಇವೆ.

ನಿರಖು ಠೇವಣಾತಿಗಳ ಮೇಲೆ ಆಕರ್ಷಕವಾದ ದರದ ಬಡ್ಡಿಯು ಕೊಡಲ್ಪಡುವುದು.	ತಕ್ಕುದಾದ ಜವಾಬ್ದಾರಿಗಳ ಮೇಲೆ ಸುಲಭವಾದ ಶರ್ತಗಳಲ್ಲಿ ಸಾಲಗಳು ಕೊಡಲ್ಪಡುವುವು.

ಸಾಲಿಯನ್ ಸೇಕಡಾ 4½ರ ಬಡ್ಡಿ ಗಳಿಸುವ ಮೂರು ವರ್ಷದ ಅವಧಿಯ ವಿಜಯಾ ಕೇಶ್ ಸರ್ಟಿಫಿಕೇಟುಗಳ ಮೇಲೆ

ಹಣವನ್ನು ಹಾಕಿರಿ

THE VIJAYA BANK, LTD.,

ಬಿ. ವಾಂಜಯ್ಯ ಹೆಗ್ಗಡೆ,
(ದ. ಕ. ಜಿಲ್ಲಾ ಬೋರ್ಡ್ ಪ್ರೆಸಿಡೆಂಟ್
ಡೈರೆಕ್ಟರ್ ಬೋರ್ಡಿನ ಅಧ್ಯಕ್ಷರು,

ವೇ. ಹೋರಾಟವೇ ಬಾಳಿನ ದಿನಚರಿ. ತಾನಾಗಿ ಮಾಗಬೇಕಾದ ಹಣ್ಣನ್ನು ಒತ್ತಾಯದಿಂದ ಮಾಗಿಸಿದರೆ ಅದು ಕೊಳೆತು ಹೋದೀತು! ಇಲ್ಲದಿದ್ದರೆ ಹುಳಿಯಾದೀತು! ಹೆಣ್ಣಿಗೆ ಗಂಡನ್ನು ತನ್ನ ಪಾವಿತ್ರ್ಯದಿಂದ ಗೆಲ್ಲುವ ಶಕ್ತಿ ಹುಟ್ಟಬೇಕು. ಆಕೆ ತನ್ನ ಕರ್ತವ್ಯದಿಂದ ಗಂಡಿಗೆ ಸತ್ಯವನ್ನು ಮನಗಾಣಿಸಿ ಆತನನ್ನೇ ತನ್ನ ಕಡೆಯ ವಕೀಲನನ್ನಾಗಿ ಮಾಡಿಕೊಳ್ಳಬೇಕು. ಅಂತಾದರೆ ಬಾಳಿನಲ್ಲಿ ನಲಿವು ಸಂತಸಗಳ ಬುಗ್ಗೆ ಚಿಮ್ಮಿ ಬಂದೀತು.

ಸಂಸಾರದಲ್ಲಿ ಹೆಣ್ಣಿನ ಹೊಣೆ ಹೆಚ್ಚು. ಅಂತೆಯೇ ಆಕೆ ಕೈಬಿಟ್ಟರೆ ಮನೆಯೇ ನೆಲಕಚ್ಚೀತು—ನಾವಿಕನಿಲ್ಲದ ನಾವೆಯಂತೆ. ಆಕೆ ಮನೆಮಠಗಳನ್ನು ನಿರ್ಮಲವಾಗಿರಿಸಿ, ಪತಿಯನ್ನು ಸದಾ ಸಂತಸದಲ್ಲಿಟ್ಟು, ಮಕ್ಕಳನ್ನು ಭಾವೀ ಜನಾಂಗದ ಉತ್ತಮ ಪ್ರಜೆಗಳಾಗುವಂತೆ ಬೆಳೆಯಿಸಿ, ಹಿರಿಯರನ್ನು ಸೇವಿಸಿ, ಬಂಧು ಬಳಗದವರನ್ನು ತಕ್ಕೈಸಿ, ನೆಂಟರಿಷ್ಟರನ್ನು ಸನ್ಮಾನಿಸಿ, ಆಳುಕಾಳುಗಳನ್ನು ಮಾತೆಯಂತೆ ಸಲಹಿ ಇಡೀ ಸಂಸಾರವೇ ಏಕೀಭಾವದಿಂದ ಏಕಮುಖವಾಗಿ ಸಾಗುವಂತೆ ಮಾಡಿದರೆ ಮಾತ್ರ ಗೃಹಲಕ್ಷ್ಮಿ ಎಂಬ ತನ್ನ ನಾಮವನ್ನು ಅನ್ವರ್ಥವಾಗಿಸುತ್ತಾಳೆ.

ಇಂದಿನ ಉನ್ಮಾದಿತ ಜಗತ್ತಿನ ಆಕ್ರೋಲ ಕಲ್ಲೋಲಗಳಲ್ಲಿ ಬಿದ್ದು ದೆಸೆ ತಪ್ಪಿದ ಜನ "ಮುಂದಿನ ಪೀಳಿಗೆಯಾದರೂ ಸುಖಶಾಂತಿಗಳ ತೊಟ್ಟಿಲಲ್ಲಿ ತೂಗಲಿ" ಎಂದು ಹಾರೈಸುತ್ತಿದೆ. ಆ ಜನತೆ ತನ್ನ ಹಾರೈಕೆಯ ಪೂರೈಕೆಗಾಗಿ ಹೆಣ್ಣಿನ ಕಡೆಗೆ ಆತುರ ದೃಷ್ಟಿಯಿಂದ ದಿಟ್ಟಿಸುತ್ತಿದೆ. ಹೆಣ್ಣು ತನ್ನ ನೈತಿಕ ಮತ್ತು ಮಾನಸಿಕ ಮಟ್ಟವನ್ನು ಎತ್ತರಿಸಿ ಉತ್ತಮ ಮಕ್ಕಳನ್ನು ಹಡೆದು ಅವರಿಗೆ ಯೋಗ್ಯ ಸಂಸ್ಕಾರವನ್ನಿತ್ತು ಬೆಳೆಯಿಸಿದರೆ ಇಂದಿನ ಮಂದಿಯ ಆಶೆ ಫಲಿಸುವುದರಲ್ಲಿ ಸಂದೇಹವೇನು? ಶಾಂತಿ ಪುಷ್ಟಿತುಷ್ಟಿಗಳ ತವರುಮನೆಯಾದೀತು ಬರುವ ಜಗತ್ತು. ಅದರಿಂದಲೇ ನಮ್ಮ ಇಂದಿನ ಕನಸನ್ನು ಮುಂದಿನ ನನಸಾಗಿಸುವ ಹೊಣೆ ಹೆಣ್ಣಿನ ಮೇಲಿದೆ.

ಜಗತ್ತಿನ ಶಾಂತಿದೂತಿಯಾಗಬಲ್ಲ ಯೋಗ್ಯತೆ ಹೆಣ್ಣಿಗಲ್ಲದೆ ಮತ್ತಾರಿಗಿದೆ? ಅಂತೆಂದೇ ಹೆಣ್ಣು ಜಗತ್ತಿನ ಶಾಂತಿದೂತೆಯಾಗಿ ಹೊರಬರಬೇಕು ಎಂದು ನನ್ನ ಆಶೆ. ಜಗತ್ತಿನಲ್ಲಿ ಶಾಂತಿ ನೆಲೆಗೊಳ್ಳಬೇಕಾದರೆ ಮನೆಮನೆಯಲ್ಲಿ ಸುಖಸಂತೃಪ್ತಿಗಳು ಮನೆಮಾಡಬೇಕು. ಇಲ್ಲದಿದ್ದರೆ ಜಗತ್ತಿನ ಶಾಂತಿ ಕನ್ನಡಿಯೊಳಗಿನ ಗಂಟು. ಏಕೆಂದರೆ ಮನೆಯಿಂದ ಸಿಡಿದ ಆ ಶಾಂತಿಯ ಕಿಡಿಯೇ ಸಮಾಜವನ್ನು ವ್ಯಾಪಿಸಿ ಮುಂದೆ ದೇಶವನ್ನು ತುತ್ತುಗೊಂಡು ಕೊನೆಗೆ ಪ್ರಪಂಚವನ್ನೇ ಆಹುತಿಗೊಳ್ಳುತ್ತದೆ. ಆದುದರಿಂದಲೇ ಉತ್ತಮ ಗೃಹಿಣಿಯಾಗಿಯೇ ಹೆಣ್ಣು ಜಗತ್ತಿನ ಶಾಂತಿಯನ್ನು ಸಾಧ್ಯವಾಗಿಸಬಲ್ಲಳು. 'ಗೃಹಲಕ್ಷ್ಮಿಯೇ ಜಗತ್ ಲಕ್ಷ್ಮಿ' ಎಂಬ ಸತ್ಯವನ್ನು ನಮ್ಮ ಮಹಿಳೆಯರು ಎಂದೂ ಮರೆಯದಿರುವರೆಂದು ಹಾರೈಸೋಣ.

ಲೋಕಾಂತ

ಇತ್ತ ಹುಲಿ, ಅತ್ತ ದರಿ

ಕೊರಿಯದಿಂದ ನಮಗೆ ಬರುತ್ತಿರುವ ಪರಸ್ಪರ ವಿರುದ್ಧ ಸುದ್ದಿಗಳಿಂದ ನಾವು ಸಂತೋಷಿಸಬೇಕೋ, ದುಃಖಿಸಬೇಕೋ, ತಿಳಿಯುವುದಿಲ್ಲ. ಕಾನೂನು ಪ್ರಕಾರವೇನೋ ಯುಕ್ತ ರಾಷ್ಟ್ರ ಸಂಘದ ಸದಸ್ಯರಾದ ಭಾರತೀಯರು ಯು. ರಾ. ಸೇನೆಗಳ ವಿಜಯವನ್ನು ಬಯಸುವುದೂ, ಅದು ದೊರೆತಾಗ ಹರ್ಷಿಸುವುದೂ ಯುಕ್ತವೆನಿಸಿದರೂ ಕೊರಿಯದ ಜನತೆಯ ಪಾಡನ್ನು ಅವಲೋಕಿಸುವ ಕಣ್ಣುಳ್ಳ ದಯಾಳು ಜನಗಳು ಈ ನಿರಂತರವಾಗಿ ಸಾಗುತ್ತಿರುವ ಕೊಲೆಯ ಪ್ರಕರಣದಿಂದ ಉಬ್ಬುವುದಂತಿರಲಿ ಪಾಪಪಟುಕ್ತರಾಗುವುದೂ ಕನಿಕರವಿದೆ. ಎಪ್ರಿಲ್ ೨೪ರ ಸುದ್ದಿಯಂತೆ ಚೀನರು ಮರಳಿ ೩೮ನೆಯ ಅಕ್ಷಾಂಶರೇಖೆಯನ್ನು ದಾಟಿ ಮುಂದೆ ಒತ್ತರಿಸಿದ್ದಾರೆ; ೨೬ನೆಯ ಸುದ್ದಿಯಂತೆ ಯು. ರಾ. ಸೇನೆಗಳು ಚೀನೀ ಸೇನೆಯ ೮೦೦೦ ಯೋಧರನ್ನು ಕೊಂದು ಕೇಂದ್ರ ಭಾಗದಲ್ಲಿ ಚೀನರಿಗೆ ಅಪಜಯವನ್ನು ತಂದಿವೆ. ಕೊರಿಯದ ಜನತೆಯ ದೃಷ್ಟಿಯಲ್ಲಿ ಈಗ ನಡೆಯುತ್ತಿರುವ ಯುದ್ಧ ನಿರರ್ಥಕವಾದುದು; ಮಾತ್ರವಲ್ಲ ಆ ನಿತ್ಯದಂದ್ವ ಜನಾಂಗವನ್ನು ಭೂಮಿಯಿಂದ ನಿರ್ನಾಮ ಮಾಡಿಸುವಂತಹುದು. ಸೈನ್ಯಕ್ಕೆ ಸೇರಿರುವವರು ಮಾತ್ರವೇ ಅಲ್ಲದೆ ನಿಬೋಧ ಜನತೆಯೂ ಮರಣಕ್ಕೆ ತುತ್ತಾಗುವುದು ಅರ್ವಾಚೀನ ಯುದ್ಧ ರೀತಿಯ ಒಂದು ಪ್ರಾಮುಖ್ಯ ಅಂಗವಷ್ಟೇ. ಇಂತು ಲೆಕ್ಕ ಹಾಕಬೇಕೆಂದರೆ ಕೊರಿಯದಲ್ಲಿ ಸತ್ತ ಜನರ ಸಂಖ್ಯೆ ಎಷ್ಟಾದೀತೆಂದು ಹೇಳಲಸದಳ. ಯುದ್ಧ ಜರ್ಜರಿತವಾದ ಕೊರಿಯನರು ಇತ್ತಂಡಗಳ ಮೇಲೂ ಬಾಂಬಿನ ಮಳೆಗರೆಯಲಶಕ್ತರಾಗಿದ್ದರೂ, ಶಾಪದ ಮಳೆಗರೆಯಬಲ್ಲರು. ದೀರ್ಘಾವಧಿಯಲ್ಲಿ ನ್ಯಾಯಪೂರ್ವಕವಾದ ಇಂಥಾ ಶಾಪವೃಷ್ಟಿಯಿಂದ ಕೊರಿಯದ ನಾಶಕ್ಕೆ ಕಾರಣರಾದವರೆಲ್ಲರೂ ಬನ್ನಪಡುವರೆಂಬುದರಲ್ಲಿ ಸಂದೇಹವಿಲ್ಲ.

ತುತ್ತಿನ ಚೀಲ

ಭಾರತದ ತುತ್ತಿನ ಚೀಲ ಬಂದೋ ಬಂದ, ತೆರಪೋ ತೆರವು. ಅಮೇರಿಕದಿಂದ ಧಾನ್ಯ ಬರುವ ಹಾರೈಕೆಯೊಂದು ಕಡೆ, ಚೀನದಿಂದ ಅಕ್ಕಿ ಪಡೆಯುವ ಹಂಬಲೊಂದು ಕಡೆ, ಬರ್ಮದಲ್ಲಿ ಈ ಬಾರಿ ನಡೆಯುವ ಮಾತುಕತೆಗಳ ಫಲಿತಾಂಶ ಮತ್ತೊಂದು ಕಡೆ-- ಅಂತೂ ಭಾರತಕ್ಕೆ 'ಭವತಿ ಭಿಕ್ಷಾಂ ದೇಹಿ' ಎಂಬ ಸನ್ಯಾಸ ಮಂತ್ರವು ಬಾಯಿಪಾಠವಾಗಿ ಹೋಯಿತು. ಬೇಡುವವರು ಕೆಲಸ ಮಾಡಲೊಲ್ಲರು ಎಂಬುದು ಒಂದು ಹಳೆಯ ಪಾಠ ತಾನೇ. ಇಡೀ ರಾಷ್ಟ್ರವೇ ಇಂದು ಸಿಕ್ಕಿದ ಬಾಯಿ ಎಂಜಲಿಗಾಗಿ ಕಾತರಿಸುತ್ತಿರುವುದು ನಮ್ಮ ದೇಶದ ಭೂಷಣವೂ, ಗೌರವವೂ ಯೋಗ್ಯವಲ್ಲ. ಅಂತರರಾಷ್ಟ್ರೀಯ ರಂಗದಲ್ಲಿ ಆಧ್ಯಾತ್ಮಿಕ ದೃಷ್ಟಿಗಾಗಿ ಹೋರಾಡುವವರೂ, ಆ ಬಗ್ಗೆ ಬಾಯಿ ಬಡಿದಾಟ ಮಾಡುವವರೂ, ತಾಳ್ಳು ಕಾಳು ಅನ್ನಕ್ಕಾಗಿ ಪರರ ಮನೆ ಬಾಗಿಲನ್ನೂ, ಸಿನೇಟ್ ಮನೆ ಬಾಗಿಲನ್ನೂ ಕಾಯುವ ಪ್ರಸಂಗ ಒದಗಿರುವುದನ್ನು ಗಮನಿಸಿ ಇನ್ನು ಮುಂದಾದರೂ ತಮ್ಮ ಭಿಕ್ಷಾಪಾತ್ರೆಗೆ ಉಚಿತವಾದ ವರ್ತನೆಯನ್ನೂ, ಧೋರಣೆಯನ್ನೂ ಅನುಸರಿಸುವುದು ಅಗತ್ಯವಿದೆ. ಅಲ್ಲವಾದಲ್ಲಿ ಅಮೇರಿಕದವರ ವರದ ಹಸ್ತವೂ ಸಂಕುಚಿತವಾಗಿ, ರಶಿಯದವರೂ ಚೀನರೂ ವಿಮುಖರಾದಲ್ಲಿ ಬರ ಸಂವತ್ಸರದಲ್ಲಿ ಎಷ್ಟೆಷ್ಟು ಬಿಹಾರಗಳೂ, ಎಷ್ಟೆಷ್ಟು ಬಂಗಾಳಗಳೂ ನಡೆಯುವವೋ ಬಲ್ಲವರಾರು!

ಸವ್ವಾಸೇರಿಗೆ ಸೇರು

ನಮ್ಮ ದೇಶದ ರಾಜನೀತಿಯ ಮುತ್ಸದ್ದಿಗಳ ದಿವಾಳಿತನವು ದಿನೇ ದಿನೇ ಬಯಲಿಗೆ ಬರುತ್ತಿದೆ. ಗಾಂಧೀಜಿ ಜೀವದಿಂದಿದ್ದಾಗ ಅಂದು ಪಾಕಿಸ್ತಾನಕ್ಕೆ ಧರ್ಮಾರ್ಥವಾಗಿ ಐದು ಕೋಟಿ ರುಪಾಯಿ ಕೊಡಿಸಿ ಅವರಿಗೆ ಉಪಕಾರ ಮಾಡಿದರು. ಬಾಪೂಜಿಯ ಹೆಜ್ಜೆಯಲ್ಲಿ ತನಗನುಕೂಲವಾದಾಗಲೆಲ್ಲ ಅಡಿ ಇಡುತ್ತಿರುವ ಭಾರತೀಯ ಸರಕಾರವು ಪಾಕಿಸ್ತಾನವು ನಮಗೆ ಇನ್ನೂ ಕೊಡಬೇಕಾಗಿರುವ ಸಾಲವನ್ನು ನಮ್ಮ ರುಪಾಯಿ ಧಾರಣೆಯಲ್ಲೇ ಪಡೆಯುವ ವಿಶಾಲ ಹೃದಯವನ್ನು ತೋರಿಸಿದೆ. ಪಾಕಿಸ್ತಾನದ ರೂಪಾಯಿಯ ಅಂತರರಾಷ್ಟ್ರೀಯ ಬೆಲೆ ಹೆಚ್ಚು; ನಮ್ಮದು ಕಡಿಮೆ. ಅವರ ನೂರು ರುಪಾಯಿ ಪಡೆಯಬೇಕಾದರೆ ನಾವು ನಮ್ಮ ೧೪೪ ರುಪಾಯಿಗಳನ್ನು ತೆರಬೇಕು. ನಮ್ಮ ಸಾಮಾನಿಗೆ ಅವರು ಬೆಲೆ ಕೊಡುವುದು ನಮ್ಮ ರುಪಾಯಿಯಲ್ಲಿ; ಅಲ್ಲದೆ ಸಾಲ ತೀರಿಸುವುದೂ ನಮ್ಮ ರುಪಾಯಿಯಲ್ಲೇ. ಅಂದರೆ ನಮಗೆ ಸವ್ವಾಸೇರಿಗೆ ಸೇರು ದೊರೆತಂತಾಯಿತು. ಇದು ನಮ್ಮ ಆರ್ಥಿಕ ಧೋರಣೆಯ ಮಹಾನಾಟ್ಯದ ವಿಚಿತ್ರ ಭಂಗಿ. ಇಂಥ ಲೇವಾದೇವಿ ಕೆಲವು ವರ್ಷಗಳ ವರೆಗೆ ನಡೆದರೆ ಭಾರತವು ಬದುಕುವ ಲಕ್ಷಣ ಇನ್ನಷ್ಟು ದೂರವಾಗಲಡ್ಡಿ ಇಲ್ಲ.

ಇರಾಣೀ ರಾಷ್ಟ್ರೀಯ ಚಳುವಳಿ

ಮನೆಯೊಳಗೆ ಸಮತಾವಾದವನ್ನು ಪ್ರಚಾರಮಾಡುವ ಬ್ರಿಟಿಶ ಸಮತಾವಾದಿಗಳು ವಿದೇಶಗಳಲ್ಲಿ ತಮ್ಮ ಗುತ್ತಿಗೆಗಾಗಿ ಹೋರಾಡುವುದನ್ನು ಅವಲೋಕಿಸುವಾಗ ಅವರ ಸಮತಾವಾದದ ಬಣ್ಣ ಯಾವುದು? ಎಂದು ನಮಗೆ ಸಂದೇಹ ಉದಿಸಿದರೆ ಆಶ್ಚರ್ಯವಿಲ್ಲ. ಇರಾಣದಲ್ಲಿ ಯಾವುದೋ ಒಂದು ಸರಕಾರ ಇದ್ದಾಗ ಆಂಗ್ಲೋ-ಇರಾಣಿ ಎಣ್ಣೆ ಕಂಪೆನಿಯವರು ಅಬಾದಾನ ಎಣ್ಣೆಗಣಿಯನ್ನು ೬೦ ವರ್ಷದ ಮಟ್ಟಿಗೆ ಆಳುವಿಗೆ ಪಡೆದಿದ್ದರು. ಈಗ ಆ ಸರಕಾರ ಇಲ್ಲ. ಇಡಿ ಇರಾಣಿ ಲೋಕಸಭೆಯೂ, ಜನಾಂಗವೂ ಒಕ್ಕೊರಲಿನಿಂದ ಎಣ್ಣೆಗಣಿಗಳ ರಾಷ್ಟ್ರೀಕರಣಕ್ಕೆ ಒಪ್ಪಿಗೆ ಕೊಟ್ಟಿರುವಾಗ ಬ್ರಿಟಿಷರು ಅಲ್ಲಿಂದ ತಮ್ಮ ಹಕ್ಕನ್ನು ಕೀಳುವುದಕ್ಕೆ ಸಿದ್ಧರಾಗಿಲ್ಲ. ಇಷ್ಟು ವರ್ಷಗಳ ಕಾಲ ಸುಲಭವಾದ ಕರಾರಿನ ಪ್ರಕಾರ ದೇಶದ ಹೆಚ್ಚು ಎಣ್ಣೆಯನ್ನು ಮನೆಗೆ ಸಾಗಿಸಿದ್ದು ಸಾಲದೆ, ಈಗ ಇರಾಣಿಯವರ ನ್ಯಾಯಬದ್ಧ, ನ್ಯಾಯತತ್ಪರ ಸರಕಾರದೊಡನೆ ಜಗಳಕ್ಕೆಳೆಯುವ ಬಿಳಿಯರ ವಿದೇಶಾಂಗ ಧೋರಣೆಯನ್ನು ಅಮೂಲಾಗ್ರವಾಗಿ ಪರಿವರ್ತಿಸಲು ಏಶಿಯದ ಜನಾಂಗಗಳ ಐಕ್ಯವೊಂದೇ ಉಪಾಯವೋ ಎಂದೆನಿಸುತ್ತದೆ.

ಅರವಿಂದ ಅಂತರರಾಷ್ಟ್ರೀಯ ವಿಶ್ವವಿದ್ಯಾಲಯ

ಇನ್ನೂ ಫ್ರೆಂಚರ ಕೈವಶವಾಗಿಯೇ ಇರುವ ಪಾಂಡಿಚೇರಿಯಲ್ಲಿ ಮಹರ್ಷಿ ಅರವಿಂದರ ಸ್ಮಾರಕವಾಗಿ ಒಂದು ಅಂತರರಾಷ್ಟ್ರೀಯ ವಿಶ್ವವಿದ್ಯಾಲಯವನ್ನು ಸಂಘಟಿಸುವ ಸಲುವಾಗಿ ಒಂದು ಸಮಿತಿ ಮೊನ್ನೆ ಆರಂದು ಡಾ| ಮುಖರ್ಜಿ (ಮಾಜಿ ಕೇಂದ್ರ ಮಂತ್ರಿ)ಯವರ ಅಧ್ಯಕ್ಷತೆಯಲ್ಲಿ ಸಭೆ ಸೇರಿತು. ಕಾರಕೂನರನ್ನು ಸೃಷ್ಟಿಸುವ ವಿದ್ಯಾಪದ್ಧತಿಯನ್ನು ಹೀಗಳೆದು, ಮನುಷ್ಯ ಜನಾಂಗವನ್ನೇ ಉನ್ನತಿಕೆಯ ಮಟ್ಟಕ್ಕೇರಿಸುವ ಮಹೋದ್ದೇಶವನ್ನು ಈ ವಿದ್ಯಾಲಯವು ಇಟ್ಟುಕೊಳ್ಳುವುದೆಂದೂ, ಇದರಿಂದ ಹಿಂದುಸ್ತಾನದ ಶಾಂತಿ ಪಾಠವು ಜಗದ್ಧಿತವಾಗುವುದೆಂದೂ ಅಧ್ಯಕ್ಷರು ಅಪ್ಪಣೆಕೊಡಿಸಿದರು. ಆದರೆ ಈ ಶಾಂತಿಪಾಠಕರು ಕಲಿಯುವಾಗಲೂ, ಕಲಿತಮೇಲೂ ಯಾರ ಬೆವರಿನ ಅನ್ನ ಉಣ್ಣುತ್ತಾ ಇರಬೇಕೋ? ಎಂಬುದನ್ನು ಅಧ್ಯಕ್ಷರು ಸ್ಪಷ್ಟವಾಗಿ ಹೇಳಲಿಲ್ಲ.

ಮಾನ್ಯ ರಾಜನ್ ಅವರು ಮರಳಿ ಹಾಸಿಗೆ ಹಿಡಿದರು

ಮದರಾಸು ಮಂತ್ರಿ ರಾಜನ್ ಅವರು ರಾಜ್ಯದ ಸೇವೆಯನ್ನು ಹಾಸಿಗೆ ಹಿಡಿದರೂ ಬಿಡಲೊಲ್ಲರು. ಹಿಂದೊಮ್ಮೆ ಮದರಾಸಿನಿಂದ ಮುನ್ನೂರು ಮೈಲು ದೂರದ ತಿರುಚಿಯಲ್ಲಿ ರುಗ್ಣರಾದರೂ ನಮ್ಮ ರಾಜ್ಯಭಾರ ನಡೆಸಿದರು. ಈಗ ಮರಳಿ ಹಾಸಿಗೆಯಿಂದಲೇ ನಮ್ಮನ್ನು ನಡೆಯಿಸುವ ಕೃಪೆಮಾಡಿದ್ದಾರೆ. ಇಂಗ್ಲೆಂಡಿನ ಸ್ಟ್ಯಾಫೋರ್ಡ್ ಕ್ರಿಪ್ಸ್, ಬೆವಿನ್ ಮುಂತಾದ ಮಹಾಮಹಾ ನಾಯಕರೂ ಅಸ್ವಸ್ಥರಾದಾಗ ರಾಜೀನಾಮೆ ಕೊಟ್ಟು ತಮ್ಮ ಸ್ವಾರ್ಥ ಸಾಧಿಸಿಕೊಳ್ಳಲು ಹವಣಿಸುವುದುಂಟು. ಅಂದರೆ ಸ್ವಂತ ಆರೋಗ್ಯದ ಕಡೆ ಗಮನಿಸುವುದುಂಟು. ಆದರೆ ಮದರಾಸು ಮಂತ್ರಿಗಳು ಹಾಗಲ್ಲ— ತಮ್ಮ ಆರೋಗ್ಯ ಕೆಟ್ಟರೂ ಚಿಂತಿಲ್ಲ. ದೇಶ ಉಳಿಯಬೇಕು ಎನ್ನುವವರು. ಧನ್ಯ ಭಾರತ!

ಕುಂದಾಪುರ ರೆಂಟ್ ಕಂಟ್ರೋಲರ ಕೋರ್ಟಿನಲ್ಲಿ

H. R. C. O. P. No. 25/1951

ಲಕ್ಷ್ಮೀನಾರಾಯಣ ಉಪಾಧ್ಯಾಯ-

ಅರ್ಜಿದಾರ.

1 ಅಪ್ಪಣ್ಣ ಸೆಟ್ಟಿ, ಕಡಕಾರು ಗ್ರಾಮಸ್ಥ

2 ಶ್ರೀನಿವಾಸ ಭಟ್ಟ, ಪದ್ಮನಾಭ ಭಟ್ರ ಮಗ- ಉಡುಪಿ ತಾಲ್ಲೂಕು ಅಂಬಲಪಾಡಿ ಗ್ರಾಮದವರು —ಎದುರು.

1ನೇ ಎದುರಿಯು ಅರ್ಜಿದಾರನಿಂದ ಅಂಬಲಪಾಡಿ ವಾರ್ಡಿನ Door ನಂಬ್ರ 3-3-100 ನೇ ಕಟ್ಟೋಣವನ್ನು ಬಾಡಿಗೆಗೆ ಪಡೆಕೊಂಡು 2ನೆ ಎದುರಿಯನ್ನು ಒಳವಕ್ಕಾಗಿ ಇಟ್ಟಿದ್ದ ಸದ್ರಿ ಕಟ್ಟೋಣ ಸ್ವಾಧೀನತೆ ಬಗ್ಗೆ ಅರ್ಜಿದಾರನು ಮೇಲ್ಕಂಡ ಅರ್ಜಿ ದಾಖಲು ಮಾಡಿರುತ್ತಾನೆ. ಅದಕ್ಕೇನಾದರೂ ಆಕ್ಷೇಪಣೆಯಿದ್ದರೆ 2ನೆ ಎದುರಿಯು ತಾ. 15-5-51ಕ್ಕೆ ಸದ್ರಿ ಕೋರ್ಟಿನ ಮುಂದೆ ಬೆಳಿಗ್ಗೆ 11 ಗಂಟೆಗೆ ಹಾಜರಾಗಿ ಹಾಜರು ಮಾಡಿಕೊಳ್ಳಬಹುದು. ತಪ್ಪಿದ್ದ ಅವರ ಗೈರ್ಹಾಜರಿಯಲ್ಲಿ ತೀರ್ಮಾನಿಸಲಾಗುವುದು.

ವಿ. ಲಕ್ಷ್ಮೀನಾರಾಯಣ ಉಪಾಧ್ಯ

ಉಡುಪಿ, ತಾ. 29-4-51

ಅವರು ಹೇಳಿದ್ದೇನು?

- ಬ್ರಿಟನ್ನಿಗೆ ಬಿವಾನ್ ಹಾಕಿದ ಎಚ್ಚರಿಕೆ
- ಯುದ್ಧಸಿದ್ಧತೆಯಿಂದ ದೇಶದ ಸತ್ವನಾಶ.
- ಅಮೇರಿಕದ ಬಂಡವಾಳ ಶಾಹಿಯ ಬಾಲ ಹಿಡಿಯುವುದು ಯುಕ್ತವಲ್ಲ.

ನಮ್ಮ ಕಾಮನ್‌ವೆಲ್ತ್ ಬಂಧುವಾದ ಗ್ರೇಟಬ್ರಿಟನ ಈ ವರ್ಷದ ತನ್ನ ಬಜೆಟನ್ನು ಪಾರ್ಲಿಮೆಂಟಿನ ಮುಂದೆ ತಂದ ಕೂಡಲೇ ಬ್ರಿಟಿಷ ರಾಜನೀತಿಯ ರಂಗದಲ್ಲಿ ದೊಡ್ಡ ಬಿರುಗಾಳಿಯೆದ್ದು ಬೀಸಿ, ಬ್ರಿಟಿಷ ಸಮಾಜವಾದಿ ಸರಕಾರವನ್ನೇ ಉರುಳಿಸಿ ಬಿಡುವ ಅಂಜಿಕೆದೋರಿತು. ಯುದ್ಧಾನಂತರ ಬ್ರಿಟನಿನ ಆರ್ಥಿಕ ಸ್ಥಿತಿಯು ಬಹು ಸೂಕ್ಷ್ಮವಾದ ಹಂತವನ್ನು ಹಿಡಿದು ಮುನ್ನಡೆದಿದೆ. ಕಳೆದ ವರ್ಷದ ಆಖೈರಿಗೆ ಮಾರ್ಶಲ್ ಯೋಜನೆಯ ನೆರವನ್ನು ಬಿಟ್ಟುಬಿಡುವಷ್ಟು ಪ್ರಗತಿಯನ್ನು ಸಂಪಾದಿಸಿದುದು ಆರ್ಥಿಕ ಕ್ಷೇತ್ರದಲ್ಲಿ ದುಡಿದ ಬ್ರಿಟಿಷ ಮುತ್ಸದ್ದಿಗಳ ಕಾರ್ಯಕ್ಷಮತೆಯನ್ನೂ, ದಕ್ಷತೆಯನ್ನೂ ಪ್ರತಿಪಾದಿಸುತ್ತದೆ. ಈ ವರ್ಷದ ಬಜೆಟು ಲೇಬರ್ ಪಕ್ಷವನ್ನು ಇಬ್ಭಾಗವಾಗಿ ವಿಭಜಿಸಿದುದು ಮಾತ್ರವೇ ಅಲ್ಲ ಲೇಬರ್ ಕೂಟದಲ್ಲಿ ಕನ್ಸರ್ವೇಟಿವ ಚರ್ಚಿಲ್ಲರಿಗೆ ಸಮಶಕ್ತಿಯಾದ ಬಿವಾನ್ ಅವರನ್ನು ಮಂತ್ರಿಮಂಡಲದಿಂದ ಕಳಚುವ ಹಾಗೆ ಮಾಡಿತು. ಅಂತೆಯೇ ಬೋರ್ಡ್ ಒಫ್ ಟ್ರೇಡಿನ ತರುಣ ಮಂತ್ರಿ ಹೆರೊಲ್ಡ್ ವಿಲ್ಸನ್ ಕೂಡ ರಾಜೀನಾಮೆ ಕೊಟ್ಟರು. ಬ್ರಿಟಿಷ ಲೇಬರ ಪಕ್ಷ ಎಡ–ಬಲ ಎಂದು ಎರಡು ಭಾಗವಾಗಿ ಒಡೆದುದರ ಸಂಪೂರ್ಣ ಲಕ್ಷಣ ಈಗ ತೋರಿ ಬಂದಿತು. ತನ್ನ ರಾಜೀನಾಮೆಗಳ ಕಾರಣ ಕೊಡುತ್ತ ಬಿವಾನ್ ಪಾರ್ಲಿಮೆಂಟಿನಲ್ಲಿ ಹೀಗೆ ಹೇಳಿದರು:

"ಬ್ರಿಟನ್ನಿನ ಸದ್ಯದ ಬಜೆಟಿನಲ್ಲಿ ಸೇರಿಸಿಕೊಂಡಿರುವ ಮಹಾ ಯುದ್ಧಸಿದ್ಧತೆಯು ಸ್ವದೇಶದ ಮತ್ತು ಅಖಿಲ ಜಗತ್ತಿನ ಆರ್ಥಿಕ ಉನ್ನತಿಗೆ ದೊಡ್ಡ ಧಕ್ಕೆಯನ್ನು ತಂದಲ್ಲದೆ ಖಂಡಿತವಾಗಿಯೂ ಯಶಸ್ವಿಯಾಗಲಾರದೆಂದು ನಾನು ಹೇಳಬಲ್ಲೆ. ಅಲ್ಲದೆ ಈ 6266 ಕೋಟಿ ರುಪಾಯಿಗಳ ಯುದ್ಧಸನ್ನಾಹಕ್ಕೆ ಮರಣವು ಕಟ್ಟಿಟ್ಟದ್ದೆಂದೂ ನನಗೆ ವಿಶ್ವಾಸವಿದೆ. ಅಮೇರಿಕಾನರ ಯುದ್ಧಸಿದ್ಧತೆಯಿಂದ ಜಗತ್ತಿನಲ್ಲೆಲ್ಲ ಸರ್ವ ಸಾಮಗ್ರಿಗೂ ಬೆಲೆಯು ಏರಿ ಒಂದು ಹುಚ್ಚು ಉಬ್ಬರದ ಸನ್ನಿವೇಶ ಒದಗಿದೆ. ಅದರ ಬಿಸಿಗಾಳಿ ಪಡುವಣ ಯುರೋಪಿಗೂ ತಗಲಿದೆ. ಇದು ಇನ್ನು ಕೆಲವು ಕಾಲ ನಡೆದಲ್ಲಿ ಅಮೇರಿಕಾನರ ಚಂಚಲ ರಾಜಕೀಯ ಧೋರಣೆಯ ಫಲವಾಗಿ ಪಶ್ಚಿಮ ಯುರೋಪಿನ ಆರ್ಥಿಕ ಸತ್ವನಾಶವು ಯಾರ ಅಂಜಿಕೆಯನ್ನು ಇದಿರಿಸಲು ಈಗ ಯುದ್ಧ ಸನ್ನದ್ಧತೆ ನಡೆಯುತ್ತಿದೆಯೋ (ರಶಿಯಾ) ಅವರಿಂದಲೂ ಮಾಡಲಾಗದಷ್ಟು ಅಧಿಕಪ್ರಮಾಣದಲ್ಲಿ ಜರಗುವುದು. ಅಮೇರಿಕದ ಬಂಡವಾಳ ಶಾಹಿಯ ಅರಾಜಕ ನೀತಿಯನ್ನು ನಮ್ಮ ದೇಶ ಹಿಂಬಾಲಿಸಕೂಡದು. ಅಮೇರಿಕದ ಯುದ್ಧಸಿದ್ಧತೆ ಎಂದರೇನು ಸಾಮಾನ್ಯವೇ! ಅದು ಕ್ಷೇತ್ರದಲ್ಲೇ ಉತ್ಪಾದನೆಯು ಹೆಚ್ಚುವುದರಿಂದ ಜರಗಬಲ್ಲುದು. ಆದರೆ ಪಶ್ಚಿಮ ಯುರೋಪದ ಬಡರಾಷ್ಟ್ರಗಳು ತಮ್ಮ ಅನುಭೋಗದಲ್ಲಿ ಕಡಿತಮಾಡಿಕೊಂಡು, ನರಳಿ ನರಳಿ ಯುದ್ಧ ಸಾಮಗ್ರಿಗಳ ತಯಾರಿಗೆ ಮನಸ್ಸು ಮಾಡಬೇಕಾಗಿದೆ. ಅಮೇರಿಕದಲ್ಲಿ ಕಚ್ಚಾ ಸರಕಿನ ಬೇಡಿಕೆಯು ಅಧಿಕವಾಗುತ್ತ ಹೋದಂತೆ ಪಡುಯುರೋಪಿಗೆ ಈ ಮಹತ್ವವೇರಿದ ಸರಕುಗಳ ಸರಬರಾಯಿ ಕಡಮೆಯಾಗಿ ಔದ್ಯಮಿಕ ಕ್ಷೇತ್ರವು ಹಾಳು ಬೀಳುವುದು, ನಿರುದ್ಯೋಗವು ಬೆಳೆಯುವುದು. ಈಗಾಗಲೇ ಬೇಕಷ್ಟು ಉದ್ಯೋಗವಿಲ್ಲದೆ ಎಷ್ಟೋ ಕಡೆ ಕೆಲಸವು ಕಡಮೆ ಸಮಯ ನಡೆಯುತ್ತ ಇದೆ. ಇನ್ನು ಅನೇಕ ಮುಖ್ಯ ಕೇಂದ್ರಗಳಲ್ಲಿ ಕೈಗಾರಿಕೆಯು ನಿಂತರೆ ನಿರುದ್ಯೋಗವು ಮೇಲ್ಮುಖವಾಗಿ ಪುಟಿಯುತ್ತದೆ.

ಜನರ ಜೀವನದ ಮಟ್ಟವೂ, ನಮ್ಮ ರಕ್ಷಣಾಸಿದ್ಧತೆಯೂ ಜತೆಜತೆಯಾಗಿ ನಡೆಯಬೇಕೆಂಬುದು ನನ್ನ ಹೆಬ್ಬಯಕೆ. ಜನರ ಜೀವನದ ಮಟ್ಟವನ್ನು ಕುಂದಿಸುವ ಯಾವುದೇ ಸಂರಕ್ಷಣಾ ಯತ್ನವನ್ನು ನಮ್ಮೀ ಸರಕಾರವು ಕೈಕೊಂಡ ಪಕ್ಷಕ್ಕೆ ಅಂಥ ಸರಕಾರದಿಂದ ನಾನು ಹೊರಬೀಳದೆ ಗತ್ಯಂತರವಿಲ್ಲ. ಈ ರೀತಿ ನಾನು ಅಕಸ್ಮಾತ್ ರಾಜೀನಾಮೆ ಕೊಡುವುದರಿಂದ ನಮ್ಮ ಅಮೇರಿಕಾನ ಮಿತ್ರರೂ ಕೊಂಚ ಕಣ್ಣು ತೆರೆದಾರೆಂದು ನನಗಾಸೆ ಇದೆ. ಸಮಯ ಇರುವಾಗಲೇ ಅವರಿಗೆ ಎಚ್ಚರವಾಗಲಿ. ಪಡುವಣ ಯುರೋಪಿನ ಆರ್ಥಿಕ ಮಂಡಲವು ಭಗ್ನವಾದರೂ, ಜೀವನದ ಮಟ್ಟವು ಪತನೋನ್ಮುಖವಾದರೂ, ಔದ್ಯಮಿಕ ತೊಂದರೆಗಳುದ್ಭವಿಸಿದರೂ, ರಶಿಯಾದ ಕಮ್ಯೂನಿಸ್ಟರಿಗೆ ಪ್ರತಿಯೊಂದು ರಾಷ್ಟ್ರದಲ್ಲಿಯೂ ಪಂಚಮದಳಗಳನ್ನು ರಚಿಸುವುದಕ್ಕೆ ಅತ್ಯಂತ ಅನುಕೂಲ್ಯವನ್ನು ಕಲ್ಪಿಸಿದಂತಾಗುವುದಲ್ಲದೆ ಬೇರಲ್ಲ.

ಆರ್ಥಿಕ ಮಂತ್ರಿ ಮಾನ್ಯ ಗೆಯಿಟ್ಸ್ಕೆಲ್ ಅವರು ಅತಿ ಪ್ರಸರಣವನ್ನು ತಡೆಗಟ್ಟುವ ಆಸೆಯನ್ನೇ ಕಟ್ಟಿಕೊಂಡ ಹಾಗಿಲ್ಲದಿರುವುದು ಶೋಚನೀಯ. ಬದುಕಿನ ವೆಚ್ಚವು ಏರಿದಂತೆ ಔದ್ಯಮಿಕ ಕ್ಷೇತ್ರದಲ್ಲಿ ನೂರಾರು ಕುರುಕ್ಷೇತ್ರಗಳೊದಗುವುದರಿಂದ ಲೇಬರ್ ಪಕ್ಷದ ರಾಜಕೀಯ ಶತ್ರುಗಳು ಹರ್ಷಿತರಾಗುವರು. ಅವರದರಿಂದ ಲಾಭ ಪಡೆಯಲು ಯತ್ನಿಸುವರು.

ಬಜೆಟಿನ ದೆಸೆಯಿಂದ ಲಂಡನಿನ ವ್ಯಾಪಾರಿ, ದಳ್ಳಾಳಿಗಳು ವಿಶೇಷ ಸಂತೃಪ್ತರಾಗಿದ್ದಾರೆ, ನಮ್ಮ ಶತ್ರುಪಕ್ಷಕ್ಕೆ (ಕನ್ಸರ್ವೇಟಿವ್) ಮಹದಾನಂದವಾಗಿದೆ, ಲೇಬರ್ ಪಕ್ಷವು ಒಡೆದು ಹೋಗಿದೆ. ಈ ದುಷ್ಪರಿಣಾಮಗಳಿಗೆಲ್ಲ ಕಾರಣವೇನು? ಒಂದೇ ಒಂದು. ಅಮೇರಿಕದ ಮುತ್ಸದ್ದಿಗಳ ಬಾಲ ಹಿಡಿದದ್ದು. ಈ ನಮ್ಮ ರಾಷ್ಟ್ರ ದೊಡ್ಡದು. ಅಮೇರಿಕ, ಸೋವಿಯಟ್ ರಾಷ್ಟ್ರಗಳಷ್ಟೇ ದೊಡ್ಡ ಸಂದೇಶವನ್ನು ಜಗತ್ತಿಗೆ ಸಾರಬಲ್ಲ ರಾಷ್ಟ್ರ ಇತರರ ಅಪಾಯಾನುಯಾಯಿಯಾಗಿ ಬಾಳುವುದು ಉಚಿತವಲ್ಲ.

ಎಲ್ಲರಿಗೂ ಪುಕ್ಕಟೆ ಮದ್ದು ಕೊಡುವ ದೃಷ್ಟಿಚಕ್ರ ಒದಗಿಸುವ ರಾಷ್ಟ್ರೀಯ ಆರೋಗ್ಯ ರಕ್ಷಣಾ ಯೋಜನೆಯನ್ನು ತಿರಸ್ಕರಿಸಿದುದರಿಂದ ನನಗೆ ಅತೀವ ಖೇದವಾಗಿದೆ. ಇದು ಬ್ರಿಟಿಷ ಸಮಾಜವಾದಕ್ಕೆ ಲೇಬರ್ ಪಕ್ಷ ಮಾಡಿದ ದೊಡ್ಡ ದ್ರೋಹವಲ್ಲವೆ?"

ಬರುವ ವರ್ಷ ಹೊಸ ಕರ ಬಹುಶಃ ಇಲ್ಲ!

ಭಾರತದ ಹಣಕಾಸಿನ ಮಸೂದೆಯು ಸಿಲೆಕ್ಟ್ ಕಮಿಟಿಯ ತಿದ್ದುಪಡಿಯ ಅನುಸಾರವಾಗಿ ತಾ. ೨೬ರಂದು ಪಾರ್ಲಿಮೆಂಟಿನ ಮಂಜೂರಾತಿಯನ್ನು ಪಡೆಯಿತು. ಹುಕ್ಕದ ಹೊಗೆಸೊಪ್ಪಿನ ತೆರಿಗೆ ಪೌಂಡಿಗೆ 7 ಆಣೆಯಿಂದ ಆರಾಣೆಗೆ ಇಳಿದದ್ದರಿಂದ ಹುಕ್ಕಾವಾಲರು ತೃಪ್ತರಾದಾರೆಂದು ಅರ್ಥ ಮಂತ್ರಿಗಳು ಭಾವಿಸಿದರು. ಮುಂದುವರಿಯುತ್ತ ಅರ್ಥಸಚಿವರು ಭವಿಷ್ಯದ ಬಗ್ಗೆ ಆಶ್ವಾಸನೆ ಈಯುತ್ತ ಹೇಳಿದುದೇನೆಂದರೆ:

"ನಮ್ಮ ದೇಶದಲ್ಲಿ ಸರಕಾರವು ಕೈಗೊಂಡಿರುವ ದೊಡ್ಡ ದೊಡ್ಡ ಯೋಜನೆಗಳಿಗೆ ಹಣ ಒದಗಿಸುವ ಸಲುವಾಗಿ ಬರುವ ವರ್ಷ ಹೊಸ ಕಂದಾಯ ತೋರಿಸುವ ಪ್ರಸಂಗ ಬಹುಶಃ ಬರಲಾರದು. ಏಕೆಂದರೆ ವರ್ಷಾರಂಭ್ಯದಲ್ಲಿ ನಮ್ಮ ನಗದು ಅಂದಾಜಿಗಿಂತಲೂ ಹೆಚ್ಚಾಗುವುದೆಂಬ ಭರವಸೆ ನನಗಿದೆ. ರೈಲ್ವೆ ಚಾರ್ಜಿನ ಬಗ್ಗೆ ನಾವು ವಹಿಸಿದ ಮಾರ್ಗವನ್ನು ಬಿಟ್ಟು ನಾವು ಹಿಂತಿರುಗುವಂತಿಲ್ಲ. ಈ ವರ್ಷದ ಬಜೆಟನ್ನು ತುಸು ದೀರ್ಘದೃಷ್ಟಿಯಿಂದ ಅವಲೋಕಿಸುವುದು ಅಗತ್ಯವಾಗಿದೆ. ಈ ವರ್ಷ ಕೊಲಂಬೋ ಯೋಜನೆ ಆರಂಭವಾಗುತ್ತದೆ. ಇನ್ನಾರು ವರ್ಷಗಳಲ್ಲಿ ನಮ್ಮ 'ಯೋಜನಾ ಸಮಿತಿ'ಯು ಶಿಫಾರಸು ಮಾಡುವ ಬೇರೆ ಯೋಜನೆಗಳೂ ಜಾರಿಗೆ ಬರಬಹುದು. ದೇಶದ ಆರ್ಥಿಕ ಶಕ್ತಿ ಬೆಳೆಯಬೇಕೆನ್ನುವವರು ದಿನದಿಂದ ದಿನ ಹೇಗೂ ದಿನ ನೂಕುವ ಮಾತನ್ನು ಬದಿಗೊತ್ತಿ ವಿಶಾಲಾಕ್ಷರಾಗಬೇಕು. ಆ ಆರು ವರ್ಷಗಳಲ್ಲಿ ದೇಶದ ಬೆಳವಣಿಗೆ ನಡೆಯುವ ಪರಿಯನ್ನು ಗಮನಿಸಬೇಕು.

"ಆಹಾರ ಪ್ರಶ್ನೆಯು ನಮ್ಮ ರಾಜಕೂಲ ಪಂದಿಟ್ಟುಕೊಳ್ಳಬಹುದು. ಇದು ಕೂಡ ಜೂನ್ ಸುಮಾರಿಕ್ಕೆ ಸ್ವಲ್ಪ ಮಟ್ಟಿಗೆ ಸುಧಾರಿಸಬಹುದು. ಅತಿಪ್ರಸರಣದ ಬಗ್ಗೆಯೂ, ಧಾರಣೆ ಮಾಸಿಯ ಬಗ್ಗೆಯೂ ಸದಸ್ಯರು ವಚಿಸಿದ ಚಿಂತೆಗಳಲ್ಲಿ ಅರ್ಥವು ಬಹಳ ಇದೆ ಎಂದು ನಾನು ತಿಳಿಯುವುದಿಲ್ಲ. ಇಂದು ನಮ್ಮ ದೇಶದಲ್ಲಿ ಧಾರಣೆ ಮಾಸಿ ಏರಿಕೆಯಲ್ಲಿದ್ದರೆ ಅದಕ್ಕೆ ನಮ್ಮ ದೇಶದ ಹಣ ಕಾಸಿನ ನೀತಿಗಿಂತಲೂ, ಅಂತರರಾಷ್ಟ್ರೀಯ ಶಕ್ತಿಗಳು ಕಾರಣವೆಂದು ಎಲ್ಲರೂ ತಿಳಿಯಬೇಕು. ಸರಕಾರವು ನಾಲವತ್ತು ಪದರಲ್ಲಿ ಯಶಸ್ವಿಯಾಗಿಲ್ಲ ಎನ್ನುವುದು ಸುಳ್ಳು. ಜನರ ವಿಶ್ವಾಸವನ್ನು ಅದು ಗಳಿಸಿಲ್ಲವೆಂಬುದೂ ಸುಳ್ಳು. ಖಾಸಗಿ ಉದ್ಯಮಗಳನ್ನು ಹೊರಡಿಸುವ ಬಗ್ಗೆ ಜನರು ಸರಕಾರದ ಧೋರಣೆಯನ್ನು ನಂಬದೆ ಹೋದರೂ, ಸರಕಾರವು ನಾಲವತ್ತಾಗ ಅವರ ಸಹಕಾರ ಯಾವಾಗಲೂ ದೊರೆತೇ ಇದೆ.

ಲೇಖಕರ ಘೋಷಣೆ

ಯುದ್ಧವನ್ನು ನಿಲ್ಲಿಸುವ ಯತ್ನದಲ್ಲಿ ತಮ್ಮನ್ನು ಇತರ ಬರೆಹಗಾರರು ಸಹಕರಿಸಬೇಕೆಂದು ೧೩ ಪ್ರಖ್ಯಾತ ಬ್ರಿಟಿಷ ಲೇಖಕರು ಬಿನ್ನವಿಸಿಕೊಂಡಿದ್ದಾರೆ. ಕಾಂಪ್ಟನ್, ಮೆಕೆನ್ಜೀ, ಕ್ರಿಸ್ಟೊಫರ್ ಫ್ರೈ ಮುಂತಾದ ಖ್ಯಾತನಾಮ ಲೇಖಕರು ಒಂದು ಸ್ವಹಸ್ತಾಕ್ಷರ ಪೂರಿತ ಘೋಷಣೆ ಹೊರಡಿಸಿ ಅದರಲ್ಲಿ ಹೇಳಿದುದೇನೆಂದರೆ:

"ನಾವು, ಲೇಖಕರು, ನವಿನ್ನು ಪ್ರಪಂಚವು ಇನ್ನೊಂದು ಮಹಾಯುದ್ಧದ ಭಾರವನ್ನು ಹೊರಲಶಕ್ಯವಾಗಿದೆ ಎಂದು ನಂಬಿದ್ದೇವೆ. ಶಾಂತಿಪೂರ್ವಕವಾದ ಮಾತುಕತೆಯ ಮೂಲಕವಾಗಿ ಪರಸ್ಪರ ವಿರುದ್ಧ ರಾಜಕೀಯ ಹಾಗೂ ಆರ್ಥಿಕ ತತ್ವಗಳು ನೆರೆಕರೆಯವರಂತೆ ಬಾಳಬಲ್ಲವು ಎಂದೂ ನಾವು ನಂಬಿದ್ದೇವೆ."

ನಿರಾಶೆಗೆ ಒಳಗಾಗದಿರಿ!

ಉಬ್ಬಸ, ಕಫ, ಶ್ವಾಸಕೋಶದಿಂದ ನೀವು ವಿಪರೀತ ಕಷ್ಟಪಡುವಿರಾದರೆ, ಹಲವಾರು ಅಮೂಲ್ಯ ಔಷಧಿಗಳ ಸೇವನೆಯಿಂದ ನಿಮಗೆ ಗುಣವಾಗದಿರುವುದಾದರೆ,

ಆಶಾಭಂಗಕ್ಕೊಳಗಾಗದಿರಿ!

ಅಲ್ಪವೆಚ್ಚ–ಅಲ್ಪಾವಧಿಯೊಳಗೆ ನಿಮ್ಮ ಬಾಧೆಯನ್ನು ಶಮನಮಾಡುವ

ಖಾತ್ರಿ ಔಷಧಿಯು ನಮ್ಮಲ್ಲಿರುವುದು.

ಒಂದೇ ಒಂದು ಸೀಸೆಯನ್ನು ಕೊಂಡು, ಗುಣಪರೀಕ್ಷೆಮಾಡಿರಿ!

ಈ ಹೊಸ ಮದ್ದಿನಿಂದ ನಿಮಗೆ ಅದ್ಭುತ ಗುಣತೋರುವುದೆಂಬುದು ಖಂಡಿತ.

ಕೂಡಲೆ ಬರೆಯಿರಿ:—

ದಿ ನೇಶನಲ್ ಜನರಲ್ ಸ್ಟೋರ್ಸ್

(ಡಿಸ್ಪೆನ್ಸಿಂಗ್ ಕೆಮಿಸ್ಟ್ಸ್ ಮತ್ತು ಡ್ರಗ್ಗಿಸ್ಟ್ಸ್)

8-A ಮೆಹರ್ವಾನ್ ಬಿಲ್ಡಿಂಗ್ಸ್, ಸರ್. ಫಿರೋಜ್ ಷಾ ಮೆಹತಾ ರೋಡು,

ಫೋರ್ಟ್, ಬೊಂಬಾಯಿ.

THE NATIONAL GENERAL STORES

Importers, Exporters, Dispensing Chemists & Druggists,

General Merchants & Commission Agents,

8A Mherwan Buildings, Opp: His Master's Voice,

Sir Phirozsha Mehta Road, Fort, Bombay.

ಅಳಿಯ ಸಂತಾನ ಕಾನೂನು

ಇದರ ಪ್ರತಿಗಳು ದೊರೆಯುತ್ತವೆ,

ಕನ್ನಡ ಪ್ರತಿಗೆ 0–8–0

ಇಂಗ್ಲಿಷ್ ಪ್ರತಿಗೆ 0–8–0

ಟಪ್ಪಾಲು ಖರ್ಚು 0–1–0 ಪ್ರತ್ಯೇಕ.

0–9–0 ಕಳುಹಿಸಿದರೆ ಒಂದು ಪ್ರತಿ ಕಳುಹಿಸಲ್ಪಡುವುದು.

ನವಯುಗ ಪ್ರೆಸ್, ಉಡುಪಿ.

ವಿಶೇಷ ಲೇಖ

ಐಗುಪ್ತ ದೇಶದ ಬೇಸಾಯ

ಬರೆದವರು: ಶ್ರೀ ಕು. ಶಿ. ಹರಿದಾಸ ಭಟ್ಟ

ಐಗುಪ್ತ ದೇಶದ ಬೇಸಾಯದ ಕುರಿತು ಕೆಲವೊಂದು ಮಾಹಿತಿಗಳನ್ನು ಭಾರತದಲ್ಲಿರುವ ಅವರ ರಾಯಭಾರ ಕಚೇರಿಯವರು ಹೊರಡಿಸಿದ ಒಂದು ಚಿಕ್ಕ ಪುಸ್ತಿಕೆಯಿಂದ ತೆಗೆದು ಈ ಕೆಳಗೆ ನಮೂದಿಸಲಾಗಿದೆ:

ನೀರಾವರಿ

ಐಗುಪ್ತಕ್ಕೆ ಸೇರಿರುವ ೧೦ ಲಕ್ಷ ಚದರ ಮೈಲು ಭೂಭಾಗದ ಪೈಕಿ ಕೇವಲ ೩.೫% ಪ್ರದೇಶದಲ್ಲಿ ಜನವಸತಿ ಇದೆ. ಅಷ್ಟರಲ್ಲಿ ೮೫ ಲಕ್ಷ ಫೆಡ್ಡನ್ (೧ ಫೆಡ್ಡನ್ = ೧.೦೩ ಎಕರೆ) ಕೃಷಿಯೋಗ್ಯವಾದ ಜಮೀನು. ಅದರಲ್ಲೂ ಇದುವರೆಗೆ ೫೮ ಲಕ್ಷ ಫೆಡ್ಡನ್ ಮಾತ್ರವೇ ಬೇಸಾಯಕ್ಕಾಗಿ ಉಪಯೋಗಿಸಲಾಗುತ್ತಿದೆ.

ಈಚೆಗೆ ಕೆಲವು ಸಮಯದಿಂದ ಶಾಶ್ವತ ನೀರಾವರಿಯ ದೊಡ್ಡ ದೊಡ್ಡ ಯೋಜನೆಗಳನ್ನು ಕೈಗೊಳ್ಳಲು ಸರಕಾರವು ಮುಂದೆ ಬಂದಿರುವುದು ಸಂತೋಷಕರವಾಗಿದೆ. ಅಂಥ ಯೋಜನೆಗಳಲ್ಲಿ ಕೆಲವು ಯಾವುವೆಂದರೆ: (೧) ಅಸ್ವಾನ ಅಣೆಕಟ್ಟನ್ನು ೯ ಮೀಟರುಗಳಷ್ಟು ಎತ್ತರಕ್ಕೆ ಹೆಚ್ಚಿಸಿರುವುದು ಇದರ ಫಲವಾಗಿ ಅಸ್ವಾನ ನದಿಯ ಜಲಾಶಯದಲ್ಲಿ ಹಿಂದಿಗಿಂತ ಎರಡು ಪಾಲು ನೀರು ನಿಲ್ಲುವುದು. ಆರು ಲಕ್ಷ ಫೆಡ್ಡನ್ ಭೂಮಿಗೆ ಹೊಸತಾಗಿ ನೀರಾವರಿ ಒದಗಿರುವುದು. (೨) ಜೆಬೆಲ್ ಎಲ್. ಓಲಿಯಾ ಎಂಬಲ್ಲಿ ಕಟ್ಟಿದ ನವ ಜಲಾಶಯವೊಂದರಲ್ಲಿ ೨ ಮಿಲಿಯ ಘನ ಅಡಿ ನೀರು ನಿಂತು, ಅಸ್ವಾನ ಅಣೆಕಟ್ಟಿನ ಬೆಂಗಡೆಯ ಜಲಾಶಯದಲ್ಲಿ ಎಂಥ ಕೊರತೆಯ ಕಾಲದಲ್ಲಿಯೂ ನೀರು ತುಂಬಿಸುವುದು.

ಅಲ್ಲದೆ ಅಸ್ವಾನ ಅಣೆಕಟ್ಟಿನಲ್ಲಿ ಜಲವಿದ್ಯುತ್ತನ್ನು ತಯಾರಿಸುವ ಕೆಲಸವೂ ನಡೆದಿರುವುದರಿಂದ ನೀರಾವರಿಯಾಗುತ್ತಿರುವ ಸ್ಥಳಗಳಲ್ಲೆಲ್ಲ ವಿದ್ಯುತ್ತಿನ ಲಾಭ ಪಡೆಯಲು ಅವಕಾಶ ಉಂಟಾಗಿದೆ. ಇನ್ನು ಕೆಲ ನೀರಾವರಿ ಯೋಜನೆಗಳ ಪರಿಶೀಲನೆ ನಡೆಯುತ್ತಾ ಇದೆ.

ಬೇಸಾಯ

ವರ್ಷ ವರ್ಷ ಹೆಚ್ಚುತ್ತಿರುವ ನೀರಿನ ಸೌಲಭ್ಯದ ಪರಿಣಾಮವನ್ನು ಐಗುಪ್ತದ ಸಾಗುವಳಿಯಲ್ಲಿ ಸ್ಪಷ್ಟವಾಗಿ ಗುರುತಿಸಬಹುದಾಗಿದೆ.

ವರ್ಷ	ಬೆಳೆಯ ವಿಸ್ತೀರ್ಣ (ಫೆಡ್ಡನ್)	ಸೂಚಕ ಸಂಖ್ಯೆ	ಸಾಗುವಳಿ ಮಾಡಿದ ವಿಸ್ತೀರ್ಣ (ಫೆಡ್ಡನ್)	ಸೂಚಕ ಸಂಖ್ಯೆ
೧೯೦೦	7,291,267	100	5,267,391	100
೧೯೩೮	8,411,070	115.3	5,317,968	101
೧೯೪೮	9,165,274	125.7	5,822,000	110.5
೧೯೪೯	9,164,035	125.7	5,822,000	110.5

ಮೇಲಿನ ಅಂಕೆಸಂಖ್ಯೆಗಳಿಂದ ತಿಳಿಯುವ ಸಂಗತಿ ಏನೆಂದರೆ, ಕಳೆದ ೫೦ ವರ್ಷಗಳಲ್ಲಿ ಸಾಗುವಳಿಗೆ ಬಂದ ಭೂಮಿ ನೂರಕ್ಕೆ ೧೦ರಷ್ಟು ಮಾತ್ರ ಏರಿದರೂ ಬೆಳೆಯ ಪ್ರಮಾಣವು ನೂರಕ್ಕೆ ೨೫ರಷ್ಟು ಏರಿದೆ.

ಕೃಷಿರಂಗದಲ್ಲಿ ಐಗುಪ್ತವು ತನ್ನ ಸ್ಥಾನಮಾನಗಳನ್ನು ಕಾಯ್ದುಕೊಂಡಿರುವುದಲ್ಲದೆ ತಲೆ ಎತ್ತಿ ಬಾಳಲೂ ಸಮರ್ಥವಾಗಿದೆ.

(೧) ಹೊಸ ಬಗೆಯ, ಹೆಚ್ಚು ಶರ್ಕರಾಂಶ ಉಳ್ಳ ಕಬ್ಬನ್ನು ಈಗ ಬೆಳೆಸುವರು. ಸರಾಸರಿ ಹುಟ್ಟುವಳಿಯು ಅಧಿಕವಾಗಿದೆ. ಪ್ರಪಂಚದಲ್ಲಿನ ೪೧ ಸಕ್ಕರೆ ಉತ್ಪಾದಿಸುವ ರಾಷ್ಟ್ರಗಳಲ್ಲಿ ಐಗುಪ್ತ ಎರಡನೆಯ ಸ್ಥಾನ ಗಳಿಸಿದೆ (ಸರಾಸರಿ ಹುಟ್ಟುವಳಿಯ ದೃಷ್ಟಿಯು ಹವಾಯಿದ್ವೀಪ ಮೊದಲನೆಯದು, ಐಗುಪ್ತ ಎರಡನೆಯದು)

(೨) ಹೊಸ ಬಗೆಯ ಮೆಕ್ಕೆ ಜೋಳದ ಬೆಳೆಯಿಂದಾಗಿ ಐಗುಪ್ತದಲ್ಲಿ ಮೆಕ್ಕೆ ಜೋಳದ ಉತ್ಪಾದನೆ ೨೫% ಹೆಚ್ಚಾಗಿ ಸರಾಸರಿ ಹುಟ್ಟುವಳಿಯ ದೃಷ್ಟಿಯಿಂದ ಐಗುಪ್ತ ಪ್ರಪಂಚದ ೭೨ ಮೆಕ್ಕೆ ಜೋಳ ಉತ್ಪಾದನೆಯ ರಾಷ್ಟ್ರಗಳ ಪೈಕಿ ತೃತೀಯ ಸ್ಥಾನವನ್ನು (ಪ್ರಥಮ: ಅರ್ಜೆಂಟಿನಾ) ಗಳಿಸಿ ಕೊಟ್ಟಿದೆ.

(೩) ನವವಿಧಾನದ ಅಕ್ಕಿಯ ಬೆಳೆಯಿಂದ ಅಕ್ಕಿಯ ಬೆಳೆಯೂ ಅಧಿಕವಾಗಿದೆ. ಇಲ್ಲಿಯೂ ಸರಾಸರಿ ಹುಟ್ಟುವಳಿಯ ದೃಷ್ಟಿಯಿಂದ ಐಗುಪ್ತ ನಾಲ್ಕನೆಯದು.

(೪) ಬಾರ್ಲಿಯ ಹೊಸ ಬೀಜದಿಂದಾಗಿ ಐಗುಪ್ತಕ್ಕೆ ಬಾರ್ಲಿಯಲ್ಲಿ ಸಪ್ತಮ ಸ್ಥಾನ ದೊರಕಿದೆ

(೫) ಗೋಧಿಯ ಉತ್ಪಾದನೆಯ ಕುರಿತು ಐಗುಪ್ತವು ತುಂಬಾ ಆಸಕ್ತಿ ವಹಿಸಿದುದರ ಫಲವಾಗಿ ಬಾಲಾದಿ ೧೧೬ ರಂಥ ಹೊಸ ಮಾದರಿಯ ಬೀಜಗಳು ಹುಟ್ಟಿಕೊಂಡು ಐಗುಪ್ತಕ್ಕೆ ಏಳನೆಯ ಸ್ಥಾನ ಒಂದಿತು.

(೬) ಹಣ್ಣು ಬೆಳೆಸುವ ತೋಟಗಾರಿಕೆಯು ವೃದ್ಧಿಯಾಗಿ, ೯೪,೫೩೬ ಫೆಡ್ಡನ್ ಜಮೀನನ್ನಾವರಿಸಿ ನಿಂಬೆ, ಕಿತ್ತಳೆ, ಮಾವು, ದ್ರಾಕ್ಷೆ, ಅಂಜೂರಗಳ ಸಮೃದ್ಧಿಯಾಗಿದೆ.

(೭) ಸಸಿ ನೆಡುವುದರಿಂದ, ತರಕಾರಿ ಕೃಷಿಯೂ ಹಿಂದಿಗಿಂತ ಎರಡು ಪಾಲು ಮಿಗಿಲಾಗಿದೆ

(೮) ಹಣ್ಣು, ತರಕಾರಿಗಳನ್ನು ಸುರಕ್ಷಿತವಾಗಿಡಲು ಸಂಗೋಪನ ವ್ಯವಸ್ಥೆಯು ಉದ್ಯಮವೂ ಬೆಳೆದಿದೆ

(೯) ಜಾನುವಾರು ಸಂರಕ್ಷಣೆಯ ಕಡೆಗೆ ಹೆಚ್ಚು ನಿಗಾ ಕೊಡಲಾಗಿದೆ. ಹಿಂದೆ ವರ್ಷಕ್ಕೆ ೨೦೦೦ ಪೌಂಡು ಹಾಲು ಕೊಡುತ್ತಿದ್ದ ದನ ಎಮ್ಮೆಗಳು ಈಗ ೪೦೦೦ ಪೌಂಡು ಕೊಡಬಲ್ಲವು.

ಐಗುಪ್ತದ ಬೆಳೆಯ ಹೋಲಿಕೆ (ವಿಸ್ತೀರ್ಣದಲ್ಲಿ)

ಉತ್ಪನ್ನ	೧೯೩೪–೩೮ (ಸರಾಸರಿ ಫೆಡ್ಡನ್)	೧೯೪೯ (ಸರಾಸರಿ ಫೆಡ್ಡನ್)	೧೯೪೯ (% ವ್ಯತ್ಯಾಸ)
ಹತ್ತಿ	1,754,338	1,689,498	−3.8
ಕಬ್ಬು	66,583	84,725	+27.2
ನೀರುಳ್ಳಿ	35,210	36,000	+2.2
ಗೋಧಿ	1,410,251	1,417,160	+0.5
ಮೆಕ್ಕೆ ಜೋಳ	1,540,026	1,493,677	−3.0
ಬಾರ್ಲಿ	266,066	168,310	−36.7
ಅವರೇಕಾಳು	393,204	424,013	+7.8
ಅಕ್ಕಿ	445,637	702,983	+57.7
ನೆಲಗಡಲೆ	22,433	25,791	+15.0
ಬಟಾಟೆ	9,518	31,857	+266.2
ಹಣ್ಣು	72,931	84,235	+15.5



Approved from by the Govt. of Mysore
Certificated by the Agent of the Govt of Cylone & Indian.

ವಿವಿಧ ಪಾತ್ರೆಗಳು



ಯಾವತ್ತೂ ವಿಧದ ಬೆಳ್ಳಿ, ತಾಮ್ರ, ಹಿತ್ತಾಳೆ, ಕಂಚು ಮೊದಲಾದುವುಗಳ ವಿವಿಧ ಪಾತ್ರೆಗಳೂ ಸಾಮಾನುಗಳೂ ರಖಂ ಆಗಿಯೂ ಚಿಲ್ಲರೆಯಾಗಿಯೂ ದೊರೆಯುತ್ತವೆ.

ಕಲ್ಯಾಣಿ ನ್ಯಾಸಾಚಾರ್ಯ,
ರಥಬೀದಿ, ಉಡುಪಿ

IN THE SERVICE OF THE COUNTRY

Bank your Savings with
THE CANARA INDUSTRIAL & BANKING SYNDICATE Ltd

ನಿಮ್ಮ ಉಳಿತಾಯವನ್ನು ಇರಿಸಲಿಕ್ಕೆ
ದಿ ಕೆನರಾ ಇಂಡಸ್ಟ್ರಿಯಲ್ ಎಂಡ್
ಬ್ಯಾಂಕಿಂಗ್ ಸಿಂಡಿಕೇಟ್ ಲಿಮಿಟೆಡ್

ನಿಮಗೆ
ಇಂಗ್ಲಿಷ್ ಕಲಿಯಬೇಕೆ?
ಹಾಗಿದ್ದರೆ

ಕೊರಡ್ಕಲ್ ಶ್ರೀನಿವಾಸ ರಾವ್ ವಿರಚಿತ

ಸುಲಭದಲ್ಲಿ ಇಂಗ್ಲಿಷ್

English Made Easy

ಎಂಬ ಇಂಗ್ಲಿಷ್ ಸ್ವಯಂಬೋಧಿನಿ ಪುಸ್ತಕ ಅತ್ಯುಪಯುಕ್ತವಾದುದು.
ಬೆಲೆ ರೂ. 1-8-0.
ವಿ. ಪಿ. ದ್ವಾರ ರೂ. 1-14-0.
ಪ್ರತಿಗಳು ನಿಮ್ಮೂರ ಪುಸ್ತಕ ವ್ಯಾಪಾರಿಗಳಲ್ಲಿ ಸಿಗದಿದ್ದರೆ, ಕೆಳಗಿನ ವಿಳಾಸಕ್ಕೆ ಬರೆಯಿರಿ.

ನವಭಾರತ ಪುಸ್ತಕ ಭಂಡಾರ
ಉಡುಪಿ

ಮಾನ್ಯ ಮಂತ್ರಿ ಶ್ರೀ ಎ. ಬಿ. ಶೆಟ್ಟರ ಜಿಲ್ಲಾ ಸಂಚಾರ



ಜಿಲ್ಲಾ ಆಹಾರೋತ್ಪಾದನಾ ಸಭೆಯು— ತಾ. ೨೩ರಲ್ಲಿ ಮಾನ್ಯ ಮಂತ್ರಿ ಶ್ರೀ ಎ. ಬಿ. ಶೆಟ್ಟರ ಅಧ್ಯಕ್ಷತೆಯಲ್ಲಿ ಕಲೆಕ್ಟರರ ಕಚೇರಿಯಲ್ಲಿ ಜರಗಿದಾಗ ಶ್ರೀ ಶೆಟ್ಟರು ಆಹಾರೋತ್ಪಾದನೆಯಲ್ಲಿ ಜನತೆಯು ಸಹಕರಿಸಬೇಕೆಂದು ಕೇಳಿಕೊಂಡರು. ಸಭಾರಂಭದಲ್ಲಿ ಕಲೆಕ್ಟರರು ಮಂತ್ರಿಗಳನ್ನು ಸ್ವಾಗತಿಸಿ, ಜಿಲ್ಲೆಯ ಆಹಾರಪರಿಸ್ಥಿತಿಯನ್ನು ವಿವರಿಸಿದರು. ಬಳಿಕ ಆಹಾರೋತ್ಪಾದನೆ ಮೊದಲಾದ ವಿಚಾರಗಳಲ್ಲಿ ಚರ್ಚೆಗಳಾದುವು. ರಾಸಾಯನಿಕ ಗೊಬ್ಬರವನ್ನು ಕೃಷಿ ಇಲಾಖೆಯ ಮೂಲಕ ಹಂಚಬೇಕೆಂಬ ಡಾ। ಅಡಪ್ಪರ ಸೂಚನೆಗೆ ಉತ್ತರವಾಗಿ ಕೃಷಿಖಾತೆಯ ಡಿಪೋಗಳಿಗಿಂತಲೂ ಸಹಕಾರಿ ಸಂಘಗಳು ಹೆಚ್ಚಿರುವುದರಿಂದ ಹೀಗೆ ಮಾಡಿದೆ ಎಂದೂ, ಅದನ್ನು ಬದಲಾಯಿಸಲು ಸಾಧ್ಯವಿಲ್ಲವೆಂದೂ ಮಂತ್ರಿಗಳು ತಿಳಿಸಿದರು. ಈ ಜಿಲ್ಲೆಗೆ ಹೆಚ್ಚಿನ ಪಂಪುಗಳನ್ನು ಒದಗಿಸಬೇಕೆಂದೂ ಪ್ರತಿ ಕೇಂದ್ರದಲ್ಲಿ ಎರಡೆರಡು ಪಂಪುಗಳಿರಬೇಕೆಂದೂ ನಂತರ ಸೂಚಿಸಲಾಯಿತು. ಮಾನ್ಯ ಮಂತ್ರಿಗಳು ಮಾತನಾಡುತ್ತ ಕೇಂದ್ರ ಸರಕಾರವು ನಮ್ಮ ಪ್ರಾಂತಿಕ ಸರಕಾರಕ್ಕೆ ಐದು ಸಾವಿರ ಹೆಚ್ಚಿಗೆ ಪಂಪುಗಳನ್ನು ಕೊಳ್ಳುವ ಅಧಿಕಾರ ಕೊಟ್ಟಿರುವುದಾಗಿ ಸೂಚಿಸಿದರು. ಕೃಷಿ ಖಾತೆಯ ಡೆಪ್ಯುಟಿ ಡೈರೆಕ್ಟರರು ಈ ಜಿಲ್ಲೆ ಸಂಚಾರಗೈದವರು ಇಲ್ಲಿ ಇನ್ನೂ ಒಂದು ನೂರು ಪಂಪುಗಳನ್ನು ಹಾಕಲು ಸಾಧ್ಯವಿದೆಯೆಂದು ತಿಳಿಸಿರುವರೆಂದು ಕೃಷಿ ಖಾತೆಯ ಜಿಲ್ಲಾಧಿಕಾರಿಗಳು ತಿಳಿಸಿದರು. ಆ ಮೇಲೆ ಅಕ್ಕಿಯ ಬೆಲೆಯನ್ನು ಮುಡಿಗೆ ರೂಪಾಯಿ 21ಕ್ಕೇರಿಸಬೇಕೆಂಬ ಸೂಚನೆ ಬಂತು. ಅದು ಕೇಂದ್ರ ಸರಕಾರಕ್ಕೆ ಸಂಬಂಧಿಸಿದ ವಿಚಾರವೆಂದು ಮಂತ್ರಿಗಳು ಉತ್ತರವಿತ್ತರು. ಆ ಮೇಲೆ ಮಾತನಾಡುತ್ತಾ ಸರಕಾರವು ಬೇಸಾಯಗಾರರಿಗೆ ಬಡ್ಡಿಯಿಂದ ಸಾಲ ಕೊಡುವ ವ್ಯವಸ್ಥೆ ಮಾಡಿರುವುದನ್ನೂ, ಈ ಯೋಜನೆಯಂತೆ ಆರುವತ್ತು ಲಕ್ಷ ರೂಪಾಯಿ ಹಂಚಿದೆಯೆಂದೂ ಮುಂದೆ ಒಂದು ಲಕ್ಷ ರೂಪಾಯಿ ಹಂಚಲು ಮಂಜೂರು ಮಾಡಿದೆಯೆಂದೂ ತಿಳಿಸಿದರಲ್ಲದೆ ಎಲ್ಲರೂ ಸಹಕರಿಸಬೇಕೆಂದು ಕೇಳಿಕೊಂಡರು.

ಕ್ಷಯರೋಗ ಆಸ್ಪತ್ರೆ— ಮಂಗಳೂರಿನ ಸಮೀಪದ ಮೂಡಶೆಡ್ಡೆಯಲ್ಲಿರುವ ಕ್ಷಯರೋಗ ಆಸ್ಪತ್ರೆಯ ಕಟ್ಟಡಗಳ ಕೆಲಸವನ್ನು ತಾ 22ರಲ್ಲು ಪೂರ್ವಾಹ್ನ ಶ್ರೀ ಎ.ಬಿ. ಶೆಟ್ಟರು ಆಸ್ಪತ್ರೆಯ ಸಮಿತಿಯ ಕಾರ್ಯಕರ್ತರೇ ಮೊದಲಾದವರೊಂದಿಗೆ ನೋಡಿಕೊಂಡು ಬಂದರು. ಆ ಮೊದಲು ಶ್ರೀ ಎಮ್. ವೆಂಕಟೇಶ ಪೈಯವರ ರಂಗ ಭವನ್ ದಲ್ಲಿ ಜರಗಿದ ಆಸ್ಪತ್ರೆ ಸಮಿತಿಯ ಸಭೆಯಲ್ಲಿ ಮಂತ್ರಿಗಳು ಭಾಷಣವಿತ್ತರು.

ವಾರ್ಷಿಕೋತ್ಸವ— ಮಂಗಳೂರಿನ ಕರ್ನಾಟಕ ಪೊಲಿಟೆಕ್ನಿಕ್ ಶಾಲೆಯ ವಾರ್ಷಿಕೋತ್ಸವವು ತಾ. 21ರಲ್ಲು ಸಂಜೆ ಮಾನ್ಯ ಮಂತ್ರಿ ಶ್ರೀ ಎ. ಬಿ. ಶೆಟ್ಟರ ಅಧ್ಯಕ್ಷತೆಯಲ್ಲಿ ಜರಗಿತು. ಕಲಾಶಾಲೆಯ ಪ್ರಿನ್ಸಿಪಾಲ್ ಶ್ರೀ ಸಿ. ಎಚ್. ಎನ್. ಬಿ. ಶರ್ಮರು ಮಂತ್ರಿಗಳನ್ನು ಸ್ವಾಗತಿಸುತ್ತಾ, ಶಾಲೆಯ ಚಟುವಟಿಕೆಗಳನ್ನು ತಿಳಿಸಿದರು. ಇಲ್ಲಿ ಎಲ್ಲ ವಿಭಾಗಗಳಲ್ಲೂ ಈಗ 326 ವಿದ್ಯಾರ್ಥಿಗಳಿದ್ದು ಸರಕಾರವು ರೂಪಾಯಿ 84,000 ಗಳ ವೆಚ್ಚ ಮಾಡುತ್ತಿದೆ. ಶ್ರೀ. ಪಿ ಎಮ್. ಸಂಜೀವರಾಯರ ಸ್ವಸ್ತಿವಾಚನ, ಶ್ರೀ ಎಸಿ. ಎಮ್. ಒಳ್ಳೆಯವರ ಉತ್ತರದ ಬಳಿಕ ಅಧ್ಯಕ್ಷರು ತಮ್ಮ ಭಾಷಣದಲ್ಲಿ ಈ ಸಂಸ್ಥೆಯ ಸ್ಥಾಪನೆಗೆ ಕಾರಣರಾದ ಜಿಲ್ಲಾಭಿವೃದ್ಧಿ ಸಂಘ ಮತ್ತು ವಾಣಿಜ್ಯ ಸಂಘಗಳನ್ನು ಅಭಿನಂದಿಸಿ ಇದರ ಮುಂದಿನ ವಿಚಾರವನ್ನು ತಿಳಿಸಿದರು. ಈ ಸಂಸ್ಥೆಗೆ ಸರಕಾರವು ರೂಪಾಯಿ ಮತ್ತೊಂದು ಲಕ್ಷವನ್ನು ಕಟ್ಟಡಗಳಿಗಾಗಿ ಇತ್ತಿದ್ದಲ್ಲದೆ ಮುಂದೆ ವರ್ಷವರ್ಷದ ವೆಚ್ಚಕ್ಕಾಗಿ ಮೂರು ಲಕ್ಷ ನೀಡುವುದೆಂದೂ ತಿಳಿಸಿ ಸಂಸ್ಥಾನದಲ್ಲಿ ಐದು ಕೈಗಾರಿಕಾ ಶಾಲೆಗಳೂ ಎಂಟು ಇಂತಹ ಟೆಕ್ನಿಕಲ್ ಶಾಲೆಗಳೂ ಇವೆಯೆಂದೂ ಸರಕಾರವು 1950 51ರಲ್ಲಿ 41 ಲಕ್ಷವನ್ನು ಈ ವರ್ಷ ಒಂದು ಕೋಟಿಯನ್ನು ಸಂಸ್ಥಾನದ ಕೈಗಾರಿಕೆಗಳ ಮತ್ತು ಗುಡಿಕೈಗಾರಿಕೆಗಳ ಅಭಿವೃದ್ಧಿಗಾಗಿ ವೆಚ್ಚ ಮಾಡಲು ಮಂಜೂರು ಮಾಡಿರುವುದೆಂದೂ ತಿಳಿಸಿದರು. ಶ್ರೀ ಎಮ್. ಎಸ್. ಶೆಟ್ಟಿಯವರ ವಂದನೆಗಳಾದ ಮೇಲೆ ವಿನೋದಗಳೊಂದಿಗೆ ಸಮಾರಂಭವು ಕೊನೆಗೊಂಡಿತು.

ತೆಂಗು ಸಂಶೋಧನಾ ಕೇಂದ್ರ— ತಾ. 22ರಲ್ಲು ಮಧ್ಯಾಹ್ನ ಮಾನ್ಯ ಮಂತ್ರಿ ಶ್ರೀ ಎ ಬಿ ಶೆಟ್ಟರು ಪಿಲೀಕೋಡಕ್ಕೆ ಹೋಗಿ ಅಲ್ಲಿ ಮದ್ರಾಸು ಸರಕಾರದಿಂದ ನಡೆಸಲ್ಪಡುವ ತೆಂಗು ಸಂಶೋಧನಾ ಕ್ಷೇತ್ರವನ್ನು ಸಂದರ್ಶಿಸಿ ಇಲ್ಲಿ ನಡೆಯುವ ಕಾರ್ಯಕ್ರಮವನ್ನು ಪರಿಶೀಲಿಸಿದರು. ಬಳಿಕ ನೀಲೇಶ್ವರ ರಾಜಾಸ್ ಹೈಸ್ಕೂಲಿನಲ್ಲಿ ಸಾರ್ವಜನಿಕ ಸಭೆ ನಡೆಯಿತು. ಇಲ್ಲಿ ಗ್ರಾಮ ಸಂಘ ... ಮಹಾಜನರ ಪರವಾಗಿ ಮಾನಪತ್ರ ... ಮಂತ್ರಿಗಳಿಗೆ ಅರ್ಪಿಸಲ್ಪಟ್ಟವು. ಈ ವರ್ಷದಲ್ಲಿ ಕೈಕೊಳ್ಳಬಹುದಾದ ಕೆಲವು ನೀರಾವರಿ ಯೋಜನೆಗಳನ್ನು ಕೈಕೊಳ್ಳುವಂತೆಯೂ ನೀಲೇಶ್ವರಕ್ಕೆ ಒಂದು ಆಸ್ಪತ್ರೆ ಬೇಕೆಂದೂ ಸೂಚಿಸಲಾಗಿತ್ತು. ಮಂತ್ರಿಗಳು ತಮ್ಮ ಉತ್ತರದಲ್ಲಿ ನೀರಾವರಿ ಯೋಜನೆಗಳನ್ನು ಪರೀಕ್ಷೆ ಮಾಡುವುದಾಗಿಯೂ ಆಸ್ಪತ್ರೆ ಕುರಿತು ಕೂಡಾ ವಿಚಾರಿಸುವುದಾಗಿಯೂ ಹೇಳಿದರು.

ಪೊಳಲಿ- ಮೂಡಬಿದ್ರೆಯಲ್ಲಿ

ತಾ. 24ನೆ ಬೆಳಗ್ಗೆ ಶ್ರೀ ಎ ಬಿ ಶೆಟ್ಟರು ಜಿಲ್ಲಾ ಕಲೆಕ್ಟರ್ ಶ್ರೀ ಎ ಆರ್ ರಾಜರತ್ನಂ, ಜಿಲ್ಲಾ ಕೃಷಿ ಅಫೀಸರ್ ಶ್ರೀ ಎ. ರಾಮಣ್ಣ ರೈ, ಡಾ। ಯು. ಪಿ. ಮಲ್ಯ, ಎಮ್. ಎಲ್. ಎ. ಮೊದಲಾದವರೊಡನೆ ಪೊಳಲಿಯನ್ನು ಸಂದರ್ಶಿಸಿದರು. ಇಲ್ಲಿ ನಡೆದ ಸಾರ್ವಜನಿಕ ಸಭೆಯಲ್ಲಿ ಶ್ರೀ ಪತಪ್ಪ ಪೂಂಜರು ಸಾರ್ವಜನಿಕ ಆವಶ್ಯಕತೆಗಳನ್ನು ವಿವರಿಸುವ ಮನವಿ ಅರ್ಪಿಸಿದರು. ಉತ್ತರ ಕೊಡುತ್ತ ಮಂತ್ರಿಗಳು ಕೃಷಿ ಉತ್ಪತ್ತಿ ಹೆಚ್ಚಿಸಲು ಸರಕಾರದವರು ಕೈಕೊಂಡ ಯೋಜನೆಗಳ ಪೂರ್ಣ ಪ್ರಯೋಜನವನ್ನು ರೈತರು ಮಾಡಿಕೊಳ್ಳಬೇಕೆಂದು ವಿನಂತಿ ಮಾಡಿದ್ದಲ್ಲದೆ ಸ್ಥಳೀಯ ಆವಶ್ಯಕತೆಗಳ ಸೂಚನೆಗಳನ್ನು ಪರಿಶೀಲಿಸುವದಾಗಿ ಆಶ್ವಾಸನೆಕೊಟ್ಟರು.

ಅದೇ ದಿನ ಸಾಯಂಕಾಲ ಮಾನ್ಯ ಮಂತ್ರಿಯವರು ಮೂಡುಬಿದ್ರೆಗೆ ಹೋಗಿ ಅಲ್ಲಿಯ ಬೋರ್ಡ್ ಶಾಲೆಯಲ್ಲಿ ನಡೆದ ಸಾರ್ವಜನಿಕ ಸಭೆಯಲ್ಲಿ ಭಾಗವಹಿಸಿದರು. ಕೃಷಿ ಅಭಿವೃದ್ಧಿ ಬಗ್ಗೆ ಸರಕಾರದವರು ಮಂಜೂರು ಮಾಡಿರುವ ಹಲವು ಯೋಜನೆಗಳನ್ನು ಮಂತ್ರಿಯವರು ವಿವರಿಸಿದರು. ಕುಂದಾಪುರ ರೆವಿನ್ಯೂ ಡಿವಿಜನಲ್ ಆಫೀಸರರೂ ಶ್ರೀ ಕೆ ಎಸ್ ತಿಮ್ಮಪ್ಪ ಸೆಟ್ಟರು ಬೆಳೆ ಹೆಚ್ಚಿಸುವ ಕೆಲಸವನ್ನು ವಿವರಿಸಿ ಈ ಬಗ್ಗೆ ಕೆಲಸ ಕೈಗೊಳ್ಳುವಂತೆ ರೈತ ಜನರಿಗೆ ಮುಂದಟ್ಟಾಗುವಂತೆ ಭಾಷಣ ಮಾಡಿದರು. ಕೃಷಿಯ ಸುಧಾರಿತ ಕ್ರಮಗಳನ್ನು ಜಿಲ್ಲಾ ಕೃಷಿ ಅಧಿಕಾರಿ ಶ್ರೀ ರಾಮಣ್ಣ ರೈಗಳು ವಿವರಿಸಿದರು. ಶ್ರೀ ಜಗೋಪಾಲ ಪೈಗಳು ಧನ್ಯವಾದಗಳನ್ನರ್ಪಿಸಿದ ನಂತರ ಸಭೆಯು ಮುಕ್ತಾಯವಾಯಿತು.

ಬ್ರಹ್ಮಾವರದಲ್ಲಿ ಮಂತ್ರಿಗಳು ತಾ 25ರಲ್ಲು ಪೂರ್ವಾಹ್ನ ಬ್ರಹ್ಮಾವರಕ್ಕೆ ಆಗಮಿಸಿದರು. ಪ್ರವಾಸಿಗರ ಬಂಗ್ಲೆಯಲ್ಲಿ ನೆರೆದ ರೈತರ ಕಡೆಯಿಂದ ಮನವಿಗಳು ಅರ್ಪಿಸಲಾದುವು. ನಂತರ ಕೃಷಿ ಬೇಸಾಯಕ್ಕೆ ಸಂಬಂಧಿಸಿದ ಹಲವಾರು ವಿಷಯಗಳಲ್ಲಿ ಮಂತ್ರಿಗಳೊಡನೆ ಪ್ರಶ್ನೋತ್ತರಗಳಾದುವು. ಶ್ರೀಗಳಾದ ಬಿ ವಾಸುದೇವರಾವ್, ಕೆ. ತೇಜಪ್ಪ ಸೆಟ್ಟಿ, ಪಿ ರಾಮರಾಯ ಸೆಟ್ಟಿ ಮೊದಲಾದವರು ರೈತರ ಕಡೆಯಿಂದ ಮಾತನಾಡಿದರು. ಕುಂದಾಪುರ ಸಬ್ ಕಲೆಕ್ಟರ್ ಶ್ರೀ ಪಿ ಎಸ್ ತಿಮ್ಮಪ್ಪ ಸೆಟ್ಟರು ಆಹಾರ ಉತ್ಪಾದನಾ ಕಾರ್ಯವನ್ನು ಜಾಸ್ತಿ ಮಾಡಬೇಕೆಂದು ಸೂಚಿಸಿದರು. ಜಿಲ್ಲಾ ಕೃಷಿ ಇಲಾಖೆಯ ಅಫೀಸರ್ ಶ್ರೀ ರಾಮಣ್ಣ ರೈಗಳವರು ಕೆಲವು ಸಮಸ್ಯೆಗಳ ಕುರಿತು ಮಾತನಾಡಿದರು. ವಿಚಾರ ವಿನಿಮಯದ ಈ ಕೂಟದಲ್ಲಿ ಮಂತ್ರಿಗಳು ಸರಕಾರದ ಆಹಾರೋತ್ಪಾದನೆ ಮೊದಲಾದ ಯೋಜನೆಗಳನ್ನು ಮುಂದೊತ್ತುವರೆ ಜನತೆಯ ಸಹಕಾರವನ್ನೀಯಬೇಕೆಂದರು.

ಕುಂದಾಪುರದಲ್ಲಿ ತಾ. 25-4-51 ರಂದು ಮಧ್ಯಾಹ್ನ ಟ್ರಾವಲರ್ಸ್ ಬಂಗಲೆಯಲ್ಲಿ ಮೊದಲೇ ನೆರೆದಿದ್ದ ತಾಲೂಕು ಕಾಂಗ್ರೆಸು ಕಮಿಟಿಯವರೂ ಇತರ ಪಟ್ಟಣಿಗರೂ ಮಾನ್ಯ ಮಂತ್ರಿಗಳನ್ನು ಸ್ವಾಗತಿಸಿದರು. ನಂತರ ತಾಲೂಕು ಆಫೀಸಿನಲ್ಲಿ ನೆರೆದ ರೈತರ ಸಭೆಯಲ್ಲಿ ಮಾನಪತ್ರ ಸ್ವೀಕರಿಸಿ ಕೃಷಿ ಸುಧಾರಣೆ ನೀರಾವರಿ ಯೋಜನೆ ಕೃಷಿಕರ ಸಂಕಷ್ಟ ನಿವಾರಣೆಯೇ ಮೊದಲಾದ ವಿಷಯಗಳ ಮೇಲೆ ಮಾನ್ಯ ಮಂತ್ರಿಗಳು ಭಾಷಣವಿತ್ತರು. ಆ ಮೇಲೆ ಸಂಜೆ 6 ಗಂಟೆಗೆ ಕೋಟೇಶ್ವರದಲ್ಲಿ ತಾಲೂಕು ಕಾಂಗ್ರೆಸು ಕಮಿಟಿಯವರು ಏರ್ಪಡಿಸಿದ ಸಾರ್ವಜನಿಕ ಸಭೆಗೆ ಚಿತ್ತೈಸಿದರು. ಶ್ರೀ ಎನ್ ಎಸ್. ಹಂಪೇರಯ್ಯರವರ ಸ್ವಾಗತ ಭಾಷಣ, ಶ್ರೀ ಕೊಳಬೈಲು ಸೂರಪ್ಪ ಶೆಟ್ಟರಿಂದ ಮಾನಪತ್ರ ಸಮರ್ಪಣೆ ಮಾಡಿದ ಬಳಿಕ ಶ್ರೀ ಕೇಶವರ ಶ್ರೀ ಸಂದರ್ಗಳವರ ಸಮಯೋಚಿತ ಭಾಷಣ, ಶ್ರೀ ಕೋಟೇಶ್ವರ ... ದ ಹುಡುಗರ ... ವಂದನಾರ್ಪಣ ನಡೆದ ತರುವಾಯ ಅಧ್ಯಕ್ಷರು ಕಾಂಗ್ರೆಸು ಸರಕಾರದಿಂದ ನಮ್ಮ ಜಿಲ್ಲೆಗೆ ದೊರೆತ ವಿವಿಧ ಪ್ರಯೋಜನಗಳನ್ನು ವಿವರಿಸಿ ಭಾಷಣವನ್ನಿತ್ತರು. ಆ ಮೇಲೆ ಶ್ರೀ ಎ ದ್ಯಾರೆ ಮಂಜಯ್ಯ ಶೆಟ್ಟರು ಕಾಂಗ್ರೆಸು ಸರಕಾರದಿಂದ ಜನರಿಗೂ ದೇಶಕ್ಕೆ ಸಿಕ್ಕಿದ ಪ್ರಯೋಜನಗಳ ಅರಿವು ಇಲ್ಲದೆ ಅಲ್ಲಲ್ಲಿ ಕಾಂಗ್ರೆಸನ್ನು ಟೀಕಿಸುವವರಿಗೆ ಸಮರ್ಪಕ ಉತ್ತರಕೊಟ್ಟು ಬಳಿಕ ಧನ್ಯವಾದವನ್ನಿತ್ತರು. ನಂತರ ರಾಷ್ಟ್ರಗೀತ ಹಾಡಿ ಸಭೆಯು ಮುಕ್ತಾಯವಾಯಿತು.

ತಾ. 26-4 51ರಂದು ಬೆಳಗ್ಗೆ 9 ಘಂಟೆಗೆ ಸೋಮೇಶ್ವರ ಮಾರ್ಗವಾಗಿ ಮಾನ್ಯ ಮಂತ್ರಿಗಳು ಕಾರ್ಕಳಕ್ಕೆ ತೆರಳಿದರು.

ಕಾರ್ಕಳದಲ್ಲಿ ಜೈನಧರ್ಮ ವಿದ್ಯೋದ್ಧಾರಕ ಸಂಘದವರು ಶ್ರೀ ಧರ್ಮಸ್ಥಳ ಮಂಜಯ್ಯ ಹೆಗ್ಗಡೆಯವರಿಗೆ ಸ್ವಾಗತೋಪಚಾರ, ಮಾನಪತ್ರ ಸಮರ್ಪಣೆ ಮಾಡಲು ಏರ್ಪಡಿಸಿದ ಸಭೆಯ ಅಧ್ಯಕ್ಷತೆ ವಹಿಸಿದರು.

ತಾ 24ನೇ ರಾತ್ರಿ ಕೊಯ್ಲ (ಉಪ್ಪಿನಂಗಡಿ ಸಮೀಪ) 'ಜಾನುವಾರು ಕ್ಷೇತ್ರ'ದ ಪ್ರಾರಂಭೋತ್ಸವ ಜರಗಿ, ತಾ 30ರಲ್ಲಿ ಮಡಿಕೇರಿಗಾಗಿ ಮದ್ರಾಸಿಗೆ ತೆರಳಿದರು.

ಬಹುಕಾಲ ಬಾಳಿಕೆ ಬರುವಂತೆ ಅಸಾಧಾರಣವಾದ ಶಕ್ತಿ ಇದೆ.

ಎಸ್ಟ್ರೆಲಾ ಬ್ಯಾಟರಿಗಳು ದೀರ್ಘಕಾಲ ಬಾಳಿಕೆ ಬರುವವುಗಳೆಂದು ಪ್ರಸಿದ್ಧಿಯಾಗಿವೆ ಹಾಗೂ ಹಿಡಿಯದಂತೆ ತಡೆಯುವುದು ಪ್ರಕಾಶಮಾನವಾದ ಬೆಳಕು, ಇವೇ ಇವುಗಳ ವೈಶಿಷ್ಟ್ಯ.

ESTRELA

ಎಸ್ಟ್ರೆಲಾ

ಕತ್ತಲೆಯಲ್ಲಿ ನಿಮ್ಮ ಮಾರ್ಗದರ್ಶಿ

ಎಸ್ಟ್ರೆಲಾ ಬ್ಯಾಟರೀಸ್ ಲಿ.

ಬೊಂಬಾಯಿ-19

ಮಂಗಳೂರು

ದ. ಕ. ಜಿಲ್ಲಾ ಬೀಡಿ ಮಜೂರ ದ್ವಿತೀಯ ಸಮ್ಮೇಳನದ ಬಹಿರಂಗಾಧಿವೇಶನವು ಕಳೆದ ತಾ. 23ರಲ್ಲಿ ಕೇಂದ್ರ ಮೈದಾನಿನಲ್ಲಿ ಡಾ. ಎಮ್. ಎಸ್. ಶಾಸ್ತ್ರಿಯವರ ಅಧ್ಯಕ್ಷತೆಯಲ್ಲಿ ಜರಗಿತು. ಕೇರಳದ ಮಜೂರ ಮುಖಂಡ ಶ್ರೀ ಸಿ. ಕಣ್ಣನ್, ಅವರು ಸಮ್ಮೇಳನ ಉದ್ಘಾಟನೆ ಮಾಡಿದರು. ಹಿಂದಿನ ದಿನ ಮತ್ತು ಆದಿನ ಪ್ರತಿನಿಧಿ ಸಭೆಯು ಜರಗಿ ಮಜೂರರಿಗೆ ಸಂಬಂಧಿಸಿದ ಹಲವು ವಿಚಾರಗಳು ಚರ್ಚಿಸಲ್ಪಟ್ಟು ನಿರ್ಣಯಗಳಾದುವು. ಅವುಗಳನ್ನು ಬಹಿರಂಗ ಅಧಿವೇಶನದ ಮುಂದಿಟ್ಟು ವಿವರಿಸಲಾಯಿತು.

ಮೊತ್ತಮೊದಲು ಈಗ್ಗೆ ಮೂರು ವರುಷಗಳಿಂದ ವ್ಯಾಪಾರದವರಿಗಾಗಿ ಸಂತಾಪ ಸೂಚಿಸುವ ಗೊತ್ತುವಳಿಯು ಸ್ವೀಕರಿಸಲ್ಪಟ್ಟಿತು. ಆಮೇಲೆ 1946ರಲ್ಲಿ ನೇಮಿಸಲ್ಪಟ್ಟ ಶ್ರೀ ನಾರಾಯಣ ಸ್ವಾಮಿ ನಾಯ್ಡುರವರ ಸಮಿತಿಯ ಸೂಚನೆಯಂತೆ ಸಂಬಳ ಇತ್ಯಾದಿ ಸಿಗಬೇಕೆನ್ನುವ, ರಾಜಕೀಯ ಕೆಲಸಗಾರರಾಗಿ ದಿಗ್ಬಂಧಗೊಂಡವರ ಬಿಡುಗಡೆಯಾಗಬೇಕೆನ್ನುವ, ರಾಜಕೀಯ ಕೆಲಸಗಾರರ ಮೇಲಿನ ಮೊಕದ್ದಮೆಗಳನ್ನು ಹಿಂತೆಗೆಯ ಬೇಕೆಂಬವುಗಳ, ಸಭೆ, ಪ್ರದರ್ಶನಾದಿಗಳನ್ನು ನಡೆಸಲು ಸ್ವಾತಂತ್ರ್ಯವಿತ್ತು ಮುಂದಿನ ಚುನಾವಣೆಯಲ್ಲಿ ಎಲ್ಲ ಪಕ್ಷಗಳಿಗೂ ಭಾಗವಹಿಸುವಂತೆ ಮಾಡಬೇಕೆನ್ನುವ, ಜೈಲುಗಳ ಹೊರಗೂ ಒಳಗೂ ಆದ ಗೋಳಿಬಾರು ಪ್ರಕರಣಗಳ ತನಿಖೆ ನಡೆಸಲು ಸಾರ್ವಜನಿಕರ ವಿಚಾರಣಾ ಸಮಿತಿಗಳನ್ನು ನೇಮಿಸಿ ಅವುಗಳ ವರದಿಯನ್ನು ಪ್ರಕಟಿಸಬೇಕೆನ್ನುವ ವಿಚಾರವಾಗಿ ಠರಾವುಗಳಾದುವಲ್ಲದೆ, ನೂಲಿನ ಮತ್ತು ರೇಶನ್ ವಿಚಾರದಲ್ಲಿಯೂ ರಿಲೀಫ್ ಅಂಗಡಿಗಳನ್ನು ತೆರೆಯಬೇಕೆಂಬ ವಿಚಾರವಾಗಿಯೂ ಠರಾವುಗಳಾದುವು.

ಭಾಷಣ—'ಮಹಾತ್ಮಾಜಿಯವರ ಸರ್ವೋದಯ ಮತ್ತು ಮಧ್ಯಮ ವರ್ಗದವರು' ಎಂಬ ವಿಚಾರವಾಗಿ ಕಲ್ಕತ್ತದ ವಿದ್ಯಾಭಿವೃದ್ಧಿ ಪರಿಶೋಧನಾಲಯದ ಆಚಾರ್ಯರಾದ ಶ್ರೀ ಎನ್. ಸಿ. ಚಂದ್ರರವರು ಕಳೆದ ತಾ. 20ರಂದು ಕೆನರಾ ಬೇಂಕಿನ ಮಹಡಿಯಲ್ಲಿ ಭಾಷಣವಿತ್ತರು. ಶ್ರೀ ಎಚ್. ನಾರಾಯಣರಾಯರು ಅಧ್ಯಕ್ಷರಾಗಿದ್ದರು. ಭಾಷಣಕರ್ತರು ಮಧ್ಯಮ ವರ್ಗದವರ ಕಂಗೆಟ್ಟ ಪರಿಸ್ಥಿತಿಯನ್ನು ವಿವರಿಸಿ ಇದನ್ನು ಗಾಂಧೀಜಿಯವರ ಸರ್ವೋದಯ ಪದ್ಧತಿಯಂತೆ ನಿವಾರಿಸುವುದು ಎಂತೆಂಬುದನ್ನು ತಿಳಿಸಿದರು. ಬೇಂಕಿನ ಕಾರ್ಯದರ್ಶಿ ಶ್ರೀ ಎಮ್. ಕೆ ಶೆಣೈಯರು ಅಭಿನಂದಿಸಿದರು.

ಜಿಲ್ಲಾ ಪಾನನಿರೋಧ ಸಮಿತಿ ಸಭೆಯು—ಜಿಲ್ಲಾ ಕಲೆಕ್ಟರರ ಅಧ್ಯಕ್ಷತೆಯಲ್ಲಿ ಸೇರಿದಾಗ ಪಾನ ಪ್ರತಿಬಂಧಕ ಖಾತೆಯ ಜಿಲ್ಲಾಧಿಕಾರಿ ಶ್ರೀ ಆರ್. ಕೃಷ್ಣ ಅಯ್ಯರ್‌ರವರು ಫೆಬ್ರವರಿ ಮತ್ತು ಮಾರ್ಚಿ ತಿಂಗಳುಗಳ ವರದಿಯನ್ನೊಪ್ಪಿಸಿದರು. ಇದರೊಂದಿಗೆ ಗ್ರಾಮಾಭ್ಯುದಯ ಶಾಖೆಯ ಕಾರ್ಯಕಲಾಪಗಳನ್ನು ಸಭೆಯ ಮುಂದಿಡಲಾಯಿತು.

ಋತುಸ್ರಾವ ನಿಂತಿತು

'ಕುಮಾರಿ' ಪಿಲ್ಲುಗಳನು ಉಪಯೋಗಿಸಿದರೆ ಹದಕಪ್ಪಿ ಋತುಸ್ರಾವವಾಗುವುದು, ಹೊಟ್ಟೆಗೆ ಬರುವುದು, ಈ ಔಷಧ ಸೇವನೆಯಿಂದ ತೀವ್ರ ಗುಣಹೊಂದಬಹುದು, ಯಾವ ಬಾಧಕವೂ ಇಲ್ಲ. ನಾವಿರಾರು ಮಂದಿಗೆ ಖಾತ್ರಿ ಗುಣವಾಗಿದೆ—ಬೆಲೆ; ರೂ. 3-; ಸ್ಪೆಶಲ್ ರೂ. 5- ಅಧಿಕಾಧಿಕ ಸ್ಪೆಶಲ್ ರೂ. 8- [ವಿ. ಪಿ ಖರ್ಚು ಪ್ರತ್ಯೇಕ.]

Mrs. P. DEVEE, F. DS. (N. J.)
Tollygunge CALCUTTA,
ಸ್ಥಾನಿಕರು ಶಹಾ ಕಂಪೆನಿ, ಮಂಗಳೂರು

ನಿಧನ—ಬಿಜೈ ಇಗರ್ಜಿ ಸಮೀಪ ಇರುವ ಡಾ. ಸಿ. ಪಿ. ಲೋಬೋರವರು ತಮ್ಮ 63ನೆ ವಯಸ್ಸಿನಲ್ಲಿ ತಾ. 17ರಲ್ಲಿ ಕಂಕನಾಡಿ ಆಸ್ಪತ್ರೆಯಲ್ಲಿ ಸ್ವರ್ಗಸ್ಥರಾದರು. ಮೃತರು ಸಾರ್ವಜನಿಕ ಸಂಸ್ಥೆಗಳಲ್ಲಿ ಉತ್ಸಾಹದಿಂದ ಕೆಲಸಮಾಡಿದವರಾಗಿದ್ದಾರೆ.

ಟೀಪಾರ್ಟಿ—ಕಾರ್ಸ್ಟ್ರೀಟಿನ ಡಾ. ವಿ ವಿ ಕಾಮತರ ಪುತ್ರಿ ಶ್ರೀಮತಿ ಮಾಲತಿಯೊಡನೆ ತನ್ನ ಪುತ್ರ ಟಿ. ನರಸಿಂಹರಾಯರು ತಾ. 22ರಲ್ಲಿ ವಿವಾಹವಾದ ಸಂತೋಷ ಸೂಚನಾರ್ಥವಾಗಿ ಪೊಪ್ಯುಲರ್ ಇನ್ಶೂರೆನ್ಸ್ ಕಂಪೆನಿಯ ಮೆನೇಜಿಂಗ್ ಡೈರೆಕ್ಟರ್ ಶ್ರೀ ಟಿ. ವಿಠಲರಾಯರು ತಮ್ಮ ನಿವಾಸದಲ್ಲಿ ತಾ. 24ರಲ್ಲಿ ಟೀಪಾರ್ಟಿಯನ್ನಿತ್ತರು.

ವಿವಾಹ ಸಮಾರಂಭ: ಮುಂಡ್ಕೂರು ಡಾ. ರಾಮಣ್ಣ ಸೆಟ್ರ ಪುತ್ರಿ ಶ್ರೀಮತಿ ಸುಶೀಲಾ, ಬಿ ಎಸ್‌ಸಿ. ಅವರು ಕೊಡಿಯಾಲಗುತ್ತು ಕೀರ್ತಿಶೇಷ ರಾಮಯ್ಯ ಆಳ್ವರ ಪುತ್ರ ಶ್ರೀಮಾನ್ ಬಿ ಸಿ. ಆಳ್ವ, ಬಿ. ಎ; ಬಿ. ಇ. ಅವರ ಕೈ ತಾ 26ರಲ್ಲಿ ವಿವಾಹವಾದರು. ಸಮಾರಂಭವು ಎಸ್. ಆರ್. ಎಸ್. ಹೋಮಿನಲ್ಲಿ ಜರಗಿದ್ದು ಸ್ವಜನ ಸಮಾಜದವರು ತುಂಬಾ ನೆರೆದಿದ್ದರು.

ಮುದ್ದಣ್ಣ ಕವಿ—ಕನ್ನಡ ಕವಿಕುಲಕ ಮುದ್ದಣ್ಣ ಕವಿಗಳು ದಕ್ಷಿಣ ಕನ್ನಡ ಜಿಲ್ಲಾ ಕಾರ್ಕಳ ತಾಲೂಕಿನ ನಂದಳಿಕೆ ಗ್ರಾಮದಲ್ಲಿ ಕ್ರಿ. ಶ. 1869ರಲ್ಲಿ ಜನ್ಮವೆತ್ತಿದರು. ಅವರ ಹುಟ್ಟೂರು ನಂದಳಿಕೆ ಗ್ರಾಮವೆಂಬುದು ಇದೀ ಕನ್ನಡ ನಾಡಿನಲ್ಲಿಯೇ ಜನಜನಿತವಾಗಿರುವಾಗ ಮಂಗ್ಳೂರು ತಾಲೂಕಿನ ಮೂಲ್ಕಿ ಬೊ. ಶ್ರೀನಿವಾಸಮೂರ್ತಿಯವರು ತಮ್ಮ 1951ನೇ ಶಾಲಾಪಠದಿಯಲ್ಲಿ ಮುದ್ದಣ್ಣನ ಜನ್ಮಸ್ಥಳವು ಮೂಲ್ಕಿ ಎಂಬುದಾಗಿ ಉಲ್ಲೇಖಿಸಿದ್ದನ್ನು ನೋಡಿ ನಂದಳಿಕೆ ಗ್ರಾಮಸ್ಥರಾದ ನಾವೆಲ್ಲರೂ ತುಂಬಾ ವಿಷಾದ ಪಡುತ್ತೇವೆ. ಒಂದು ಊರಲ್ಲಿ ಹುಟ್ಟಿದ ಒಬ್ಬ ಮಹಾ ವ್ಯಕ್ತಿಯನ್ನು ತಮ್ಮ ಊರಿನಲ್ಲಿ ಹುಟ್ಟಿದವನೆಂದು ಬರೆದಾಕ್ಷಣ ಆ ಊರಿನ ಮಹತ್ವಿಕೆ ಎಷ್ಟು ಹೆಚ್ಚಾಗುವುದೋ ನಾವರಿಯೆವು! ನಂದಳಿಕೆ ಗ್ರಾಮಸ್ಥರು.

ಬಂಟಕಲ್ಲು—ಶ್ರೀ ದುರ್ಗಾ ಪರಮೇಶ್ವರಿ ದೇವಸ್ಥಾನದ ವಾರ್ಷಿಕೋತ್ಸವವು ತಾ 17ರಿಂದ 19ರ ತನಕ ವಿಜೃಂಭಣೆಯಿಂದ ಜರಗಿತು.

ಹಂಗಾರಕಟ್ಟೆ—ಬೆಂಗ್ರೆ ಗ1 ಹಿಕ್ರೀಕ್ ಶಾಲೆಯ ವರ್ಧಂತಿಯು ತಾ29-4-51ರಲ್ಲಿ ಶ್ರೀ ಮುಕುಂದನ್ ಉನ್ನಿ, ಎಂ ಎ. ಪಿಶ್ಶರೀಸ್ ಅಸಿಸ್ಟಂಟ್ ಡೈರೆಕ್ಟರ್, ಸೌತ್ ಕೆನರಾ ಇವರ ಅಧ್ಯಕ್ಷತೆಯಲ್ಲಿ ಜರಗಿತು. ಹೆಡ್ಮಾಸ್ಟರ್‌ರು. ಚಂದ್ರಶೇಖರ ವರದಿ ಓದಿದರು. ಶ್ರೀ ಬಿ ರಾಮಣ್ಣ ಶೆಟ್ಟರು ಭಾಷಣ ಮಾಡಿದರು, ಬೇಗ್ಗೆ ಹೊಸಕಟ್ಟಿದ ಪ್ರವೇಶ ಕಾರ್ಯ ನೆರವೇರಿತ್ತು.

ಬೈಲೂರು—(ಉಡುಪಿ) ಇಲ್ಲಿಯ ಶ್ರೀ ಮಹಿಷಾಸುರ ಮರ್ದಿನಿ ಭಜನಾ ಮಂಡಳಿಯ ನೇತೃತ್ವದಲ್ಲಿ ವರ್ಷಂಪ್ರತಿ ನಡೆಯುವ ಭಜನೆಯು ತಾ. 16ರಿಂದ 26ರ ತನಕ ಶ್ರೀ ದೇವಿಸನ್ನಿಧಿಯಲ್ಲಿ ಸಾಂಗವಾಗಿ ಜರುಗಿತು. ಕೊನೆಯ ದಿವಸ ಮಂಗಳೋತ್ಸವ ನಿಮಿತ್ತ ಜರಗಿದ ಸಭೆಯಲ್ಲಿ ಅಧ್ಯಕ್ಷ ಸ್ಥಾನವಹಿಸಿದ ಪಂಡಿತ ಕೆ ದೇವದಾಸರು ಮಹಿಷಾಸುರ ಮರ್ದಿನಿಯ ಅವತಾರ ಕಥೆಯನ್ನು ವಿವರಿಸುತ್ತಾ ಭಗವದ್ಭಜನೆಯನ್ನು ಸಾಮೂಹಿಕವಾಗಿ ಮಾಡುತ್ತಿರುವುದು ಶ್ರೇಯಸ್ಕರವೆಂದೂ ಹೇಳಿದರು. ಭಜನಾಮಂಡಳಿ ಕಾರ್ಯದರ್ಶಿ ಶ್ರೀ ಬಿ. ವಾಸು ಸೆಟ್ಟರು ಧನ್ಯವಾದಗಳನ್ನರ್ಪಿಸಿದರು.

ಬಸ್ರೂರು:—ಶ್ರೀಪರಮಹಂಸ ಪ್ರೌಢ ಪ್ರಾಥಮಿಕ ಶಾಲೆಯ ವರ್ಧಂತ್ಯುತ್ಸವವು ತಾ 18ರಲ್ಲಿ ಕುಂದಾಪುರ ಸಬ್ ಕಲೆಕ್ಟರ್ ಶ್ರೀ ಸಿ. ಎಸ್. ತಿಮ್ಮಪ್ಪ ಸೆಟ್ಟರ ಅಧ್ಯಕ್ಷತೆಯಲ್ಲಿ ಜರಗಿತು. ಪ್ರೇಕ್ಷಕ ವರ್ಗವು ಬಹುಸಂಖ್ಯೆಯಲ್ಲಿ ಕೂಡಿತ್ತು. ಶಾಲಾ ಡಿಪ್ಯೂಟಿ ಇನ್ಸ್‌ಪೆಕ್ಟರ್ ಶ್ರೀ ರಾಮಚಂದ್ರನ್ ಮೊದಲಾದವರು ಶಾಲಾಭಿವೃದ್ಧಿಯನ್ನೆತ್ತಿ ಮಾತನಾಡಿದರು. ಬಹುಮಾನ ವಿತರಣೆಯಾದ ಬಳಿಕ ಅಧ್ಯಕ್ಷರು ಶಾಲಾ ವ್ಯವಸ್ಥಾಪಕ ಶ್ರೀ ಬಿ. ಸುಬ್ಬಣ್ಣ ಹೆಗ್ಡೆಯವರ ವಿದ್ಯಾಭಿಮಾನವನ್ನು ಪ್ರಶಂಸಿಸಿ ಮಾತನಾಡಿ ಅಧಿಕ ಅಭಿವೃದ್ಧಿಯ ಕುರಿತು ಸಲಹೆ ಸೂಚನೆಗಳನ್ನಿತ್ತರು. ಶಾಲಾ ಮಕ್ಕಳಿಂದ ವಿವಿಧ ವಿನೋದಗಳಾಗಿ ಶ್ರೀ ಸುಬ್ಬಣ್ಣ ಹೆಗ್ಡೆಯವರಿಂದ ವಂದನಾರ್ಪಣೆಯಾಗಿ ಸಭಾಂತ್ಯವಾಯಿತು.

ಮಣೂರು—ಎಯ್ಡೆಡ್ ಎಲಿಮೆಂಟರಿ ಶಾಲೆಯ ವರ್ಧಂತಿಯು ಶ್ರೀ ಉಗ್ರಾಣ ಕೃಷ್ಣರಾವ್, B. A. L. T. ಇವರ ಅಧ್ಯಕ್ಷತೆಯಲ್ಲಿ ನೆರವೇರಿತು. ಮುಖ್ಯೋಪಾಧ್ಯಾಯರು ವರದಿ ಓದಿದ ಮೇಲೆ ಶ್ರೀ ಎಮ್. ಸಂಜೀವ ಸೆಟ್ಟರು ಸ್ವಸ್ತಿ ವಾಚನ ಮಾಡಿದರು. ನಾಟಕ ವಿವಿಧ ವಿನೋದಾವಳಿಗಳಾದ ತರುವಾಯ ಶ್ರೀಗಳಾದ । ಎ. ಭುಜಂಗರಾವ್. ದಾಂತಿ. ಯಮ್. ಅಚ್ಯುಣ್ಣ ಸೆಟ್ಟಿ. ಮೊದಲಾದವರು ಸಂದರ್ಭೋಚಿತ ಮಾತುಗಳಾಡಿದರು. ಅಧ್ಯಕ್ಷರು ಮಕ್ಕಳ ಚಟುವಟಿಕೆಗಳನ್ನು ಕೊಂಡಾಡಿ ಈ ಶಾಲೆಯು ಮುಂದೆ ಹಾಯರ್ ಎಲಿಮೆಂಟರಿ ಶಾಲೆಯಾಗಲೆಂದು ಹಾರೈಸಿ, ಭಾಷಣವಿತ್ತರು.

ಜಿಲ್ಲಾ ಕುಷ್ಠರೋಗ ನಿವಾರಣಾ ಕೆಲಸಗಾರರ ಪರಿಷತ್ತು—ಕಳೆದ ತಾ 29ರಲ್ಲಿ ಶಿರ್ವ ಇಗರ್ಜಿ ಶಾಲಾಮಟಾರದಲ್ಲಿ ಶ್ರೀ ಎನ್ ರಾಮಕೃಷ್ಣನ್ ವೆಲ್‌ಫೇರ್ ಆಫೀಸರ್ ಗವರ್ನಮೆಂಟ್ ಲೇಡಿ ವಿಲ್ಲಿಂಗ್ಡನ್ ಲೆಪ್ರಸಿ ಸೆನಿಟೋರಿಯಮ್ ಮದ್ರಾಸು ಅವರ ಅಧ್ಯಕ್ಷತೆಯಲ್ಲಿ ಜರಗಿತು, ಶ್ರೀ ಸೋದೆ ಮಠದ ಶ್ರೀ ವಿಶ್ವೋತ್ತಮ ತೀರ್ಥಸ್ವಾಮಿಗಳವರು ರಾಷ್ಟ್ರಧ್ವಜವನ್ನು ಹಾರಿಸಿದರು, ಸ್ವಾಗತ ಸಮಿತಿ ಅಧ್ಯಕ್ಷ ಶ್ರೀ ಎಮ್ ಸಿ. ಬಾಯಸ್, ಅವರು ಸ್ವಾಗತ ಭಾಷಣ ಮಾಡಿದರು ಜಿಲ್ಲಾ ಕಲೆಕ್ಟರ್ ಶ್ರೀ ಎ. ಆರ್. ರಾಜರತ್ನಂ, ಅವರು ಪರಿಷತ್ತನ್ನು ಉದ್ಘಾಟಿಸುತ್ತಾ ಜಿಲ್ಲಾ ಹಿಂದ್ ಕುಷ್ಠರೋಗ ನಿವಾರಣಾ ಸಮಿತಿ ಮಾಡಿದ ಕಾರ್ಯಕಲಾಪಗಳನ್ನು ವಿವರಿಸಿದರು. ಅಧ್ಯಕ್ಷರು ತಮ್ಮ ಭಾಷಣದಲ್ಲಿ ಕುಷ್ಠ ರೋಗದ ಸವಿವರ ವೃತ್ತಾಂತವನ್ನು ವಿವರಿಸಿ ಇದರ ಹಾವಳಿಯನ್ನು ತಡೆಗಟ್ಟುವರೆ ಸರಕಾರವು ಮುಂದೆ ಬರುವಂತೆ ಜನತೆಯು ಚಳವಳಿಸಬೇಕಾಗಿದೆ ಎಂದರು.

ಕುಷ್ಠರೋಗಿಗಳ ನಿವಾಸಕ್ಕಾಗಿ ಕಟ್ಟಡಗಳನ್ನು ಬಂಟಕಲ್ಲಿನಲ್ಲಿ ಕಟ್ಟಿಸಿಕೊಡುವೆನಾಗಿ ವಚನವಿತ್ತ ಬಗ್ಗೆ ಶ್ರೀ ಸೋದೆ ಸ್ವಾಮಿಗಳವರನ್ನು ಅಭಿನಂದಿಸುತ್ತ ಆ ಬಗ್ಗೆ ಬೇಕಾಗುವ ಸ್ಥಳವನ್ನು ಶಿರ್ವ ಕಮಿಟಿಗೆ ಕೊಡಬೇಕೆಂದು ಸರಕಾರವನ್ನು ಕೇಳಿಕೊಳ್ಳುವ, ಕುಷ್ಠರೋಗಕ್ಕೆ ಸಂಬಂಧಿಸಿದ ಕ್ಲಿನಿಕ್ಕುಗಳನ್ನು ತೆರೆಯಬೇಕೆನ್ನುವ, ಕುಷ್ಠರೋಗ ನಿವಾರಣೆಯ ಸರ್ವೆ ಮಾಡಲು ಸ್ಪೆಶಲ್ ಹೆಲ್ತ್ ಇನ್ಸ್‌ಪೆಕ್ಟರರನ್ನು ಈ ಕೇಂದ್ರಕ್ಕೆ ಕೊಟ್ಟ ಬಗ್ಗೆ ಸರಕಾರದ ಉಪಕಾರ ಸ್ಮರಣೆ ಮಾಡುವ ಕುಷ್ಠರೋಗ ನಿವಾರಣಾ ಸೆನಿಟೋರಿಯಮ್ ಸ್ಥಾಪಿಸಬೇಕೆನ್ನುವ, ಶ್ರೀ ಆರ್ ಆರ್. ಕುಂಜೂರು ಅವರು ಗೌರವ ವೆಲ್‌ಫೇರ್ ಕೆಲಸಗಾರರಾಗಿ ಸೇವೆಸಲ್ಲಿಸಲು ಮುಂದಾದ ಬಗ್ಗೆ ಅವರನ್ನು ಅಭಿನಂದಿಸುವ ಮತ್ತು ಅವರ ಸೇವೆಯನ್ನು ಜಿಲ್ಲಾ ಸಂಘವು ಪಡೆಯಬೇಕೆನ್ನುವ ಇತ್ಯಾದಿ ನಿರ್ಣಯಗಳಾದುವು. ಪರಿಷತ್ತಿನ ಕಾರ್ಯ ಕಲಾಪಗಳಲ್ಲಿ ಡಾ! ಕೆ. ಕೆ. ಪೈ, ಡಾ! ಯು. ಕೇಶರಾವ್, ಶ್ರೀ ಯು. ಎಸ್. ನಾಯಕ್, ಮುನಿಸಿಪಲ್ ಚೇರ್‌ಮೆನ್, ಉಡುಪಿ, ಶ್ರೀಗಳಾದ ಆರ್. ಆರ್. ಕುಂಜೂರು, ವೇಣು ಗೋಪಾಲರಾವ್ ಮೊದಲಾದವರು ಭಾಗವಹಿಸಿದ್ದರು.

ಸ್ವಾಗತ ಸಮಿತಿ ಉಪಾಧ್ಯಕ್ಷ ರೆ! ಫಾ! ಎಚ್. ಗೋನ್ಸಾಲ್ವಿಸ್, ಅವರು ಧನ್ಯವಾದಗಳನ್ನರ್ಪಿಸಿದ ನಂತರ ಪರಿಷತ್ತು ಕೊನೆಗೊಂಡಿತು.

ಉಡುಪಿಗೆ ಹೋಗಬೇಕು! ಆದರೆ ಉಳಿದುಕೊಳ್ಳುವುದೆಲ್ಲಿ?

ರಾಯಲ್ ಮಹಾಲಿನಲ್ಲಿ

ಬಸ್ ಸ್ಟೇಂಡಿಗೆ ಅತಿ ಸಮೀಪ! ಕೃಷ್ಣಮಠಕ್ಕೆ ದೂರವಿಲ್ಲ!
ವ್ಯಾಪಾರವ್ಯವಹಾರ ವಿಹಾರಸ್ಥಳಗಳಿಗೆಲ್ಲ ಕೇಂದ್ರ!
ವಿಶ್ರಾಂತಿ, ಸ್ನಾನ, ಊಟ, ಉಪಹಾರ, ಬೈಠಕ್, ಶಯನ ಇವಕ್ಕೆಲ್ಲ ಉತ್ತಮ ವ್ಯವಸ್ಥೆ
ಕರೆದರೆ ಓಗೊಡುವ ನೌಕರರ ವರ್ಗ!
ಮೇಲಾಗಿ ಉಡುಪಿ ಬ್ರಾಹ್ಮಣರ ಅಡಿಗೆ,ತಿಂಡಿತಿನಸು, ಇವುಗಳ ರುಚಿರುಚಿ ಹೇಳಬೇಕೆ?
ಪ್ರೊಪ್ರೈಟರ್:— ಕೆ. ವೆಂಕಟ್ರಮಣಭಟ್.

For up-to-date Lodging & Boarding
ROYAL MAHAL,
UDIPI. S. Kanara.

Nambiar's
ARYA VAIDYA SALA
UDIPI
Ideal House for Ayurvedic Treatment.
T. N. Kelu Nambiar,
Vaidya.

ಮೂಲ್ಕಿ ಬೇಂಕ್,
ಲಿಮಿಟೆಡ್, ಮೂಲ್ಕಿ.

1929ರಲ್ಲಿ ಸ್ಥಾಪಿತವಾಗಿ 21 ವರುಷಗಳಿಂದ ಊರ ಜನರ ಹಿತಕ್ಕಾಗಿ ಡಿಪೋಸಿಟ್ ಹಣಕ್ಕೆ ನ್ಯಾಯವಾದ ಬಡ್ಡಿಯಿಂದಲೂ, ಸಾಲದ ಹಣಕ್ಕೆ ಅತೀ ಕಡಿಮೆ ದರದ ಬಡ್ಡಿಯಿಂದಲೂ ಜನ ಹಿತಸಾಧನೆಯನ್ನು ಮಾಡುತ್ತಿರುವುದು

The Moolky Bank Ltd.,
Moolky, S. K

ಒಕ್ಕಲತನ ಖಾತೆ ಮತ್ತು ಆಧುನಿಕ ಒಕ್ಕಲತನ

ಒಂದು ವಿಧಾಯಕ ಯೋಜನೆ

ಬರೆದವರು: ನ್ಯೆದ್ಯವಿಧಾಯಕ ರಾವ್ ಬಾಪಟ

[ಕಳೆದ ಸಂಚಿಕೆಯಿಂದ]

ಒಡ್ಡಿನ ಯೋಜನೆ

ವಿಜಾಪುರಜಿಲ್ಲೆಯಲ್ಲಿನಗೆದ ಒಡ್ಡಿನಯೋಜನೆಯು ಒಂದು ಬಹುದೊಡ್ಡ ದುರಂತವೆಂದೇ ಹೇಳಬಹುದು. ವಿದೇಶಗಳಲ್ಲಿ ಆಚರಣೆಯಲ್ಲಿದ್ದ ವಿಧಾನಗಳನ್ನು ತಮ್ಮ ತಜ್ಞರು ಹೇಗೆ ಕಣ್ಣುಮುಚ್ಚಿಕೊಂಡು ಆಚರಣೆಯಲ್ಲಿ ತಂದು ಬಿಡುತ್ತಾರೆಂಬುದಕ್ಕೆ ಇದೊಂದು ಪ್ರತ್ಯಕ್ಷ ಪುರಾವೆ. ಈ ಯೋಜನೆಯ ಬಗ್ಗೆ ಇಲಾಖೆಯ ತಜ್ಞರ ಆಗಿನ ಅಭಿಪ್ರಾಯವೇನಿದೆಯೋ ತಿಳಿಯದು. ಆದರೆ ಇದರ ಸಂಕಟಗಳನ್ನು ಅನುಭವಿಸಿದ ರೈತರು ಹಾಗೂ ಜಮೀನ್ದಾರರು ಮಾತ್ರ ಇದನ್ನೊಂದು ದೊಡ್ಡ ದುರಂತವೆಂದು ಕರೆಯುತ್ತಿರುವಂತೆ ಕಾಣುತ್ತದೆ. ಇಲಾಖೆಯ ಅಧಿಕಾರಿಗಳು ನಿಜಸ್ಥಿತಿಯನ್ನು ಮರೆಮಾಚಿ ಕೇವಲ ಸರ್ಕಾರದ ಮತ್ತು ಇಲಾಖೆಯ ಧೋರಣೆಯನ್ನು ಪ್ರತಿಪಾದಿಸಬೇಕಾಗುತ್ತದೆ ನಾವು ಒಬ್ಬ ಅಧಿಕಾರಿಗಳೊಡನೆ ಮಾತನಾಡುತ್ತಿದ್ದಾಗ ಅವರು ಈ ಒಡ್ಡಿನ ಯೋಜನೆಯ ವಿವರಗಳನ್ನು ಸುಂದರವಾಗಿ ವರ್ಣಿಸಿ ಇದು ಬಯಲು ಸೀಮೆಯ ಕಾಮಧೇನುವೆಂದು ಹೇಳಿದ್ದರು ಮುಂದೆ ಸುಮಾರು ಒಂದು ವರ್ಷದ ನಂತರ ಈ ಯೋಜನೆಯ ಕಹಿ ಅನುಭವವುಳ್ಳ ಬಿಜಾಪುರದ ಜಮೀನ್ದಾರ ಮಿತ್ರರ ಭೆಟ್ಟಿಯಾದಾಗ್ಯೆ ನಿಜಸ್ಥಿತಿಯು ತಿಳಿಯಿತು. ಈ ವಿಷಯವನ್ನು ಒಕ್ಕಲತನ ಅಧಿಕಾರಿಗಳಿಗೆ ಮನಸು ತಿಳಿಸಲು ಅವರು ಮಾತನಾಡದೆ ಮೌನವಾದರು. ಮುಂದೆ ತಮ್ಮ ಇಲಾಖೆಯ ಧೋರಣೆಕ್ಕನುಗುಣವಾಗಿ ನಾವು ವರ್ತಿಸಬೇಕಾಗುವುದೆಂದು ವ್ಯಥೆಪಟ್ಟರು.

ಪಾಶ್ಚಾತ್ಯ ದೇಶಗಳ ಅಂಧಾನುಕರಣೆ ಬೇಡ.

ಹೀಗೆ ದೋಷಗಳನ್ನು ತೋರಿಸಿದ ಮಾತ್ರಕ್ಕೆ 'ಸುಧಾರಿಸಿದ' ಒಕ್ಕಲತನ ಪದ್ಧತಿಯು ತೀರ ನಿರುಪಯುಕ್ತವೆಂದು ಸಾಧಿಸಲು ಹೊರಟಿದ್ದೇವೆಂದು ಯಾರೂ ತಿಳಿಯಬಾರದು. ಆದರೆ ನಾವು ಹೊಸ ಸುಧಾರಣೆಗಳನ್ನು ಮಾಡುವಾಗ, ಕೇವಲ ಪಾಶ್ಚಾತ್ಯ ದೇಶಗಳ ಅಂಧಾನುಕರಣೆಯನ್ನು ಮಾಡದೆ ತಮ್ಮ ದೇಶಕ್ಕೆ–ಅದರಲ್ಲಿಯ ವಿವಿಧಭಾಗಗಳಿಗೆ–ಅದು ಎಷ್ಟರಮಟ್ಟಿಗೆ ಉಪಯುಕ್ತವಾಗುತ್ತದೆ ಎಂಬುದನ್ನು ಪ್ರತ್ಯಕ್ಷ ಅನುಭವ ಹಾಗೂ ವಿವೇಕಗಳ ಒರೆಗಲ್ಲಿಗೆ ಹಚ್ಚಿ ನೋಡಿ ಹಲವು ವರ್ಷಗಳ ಪ್ರಯೋಗದ ನಂತರ ಫಲದಾಯಕವೆಂದು ಕಂಡುಬಂದ ವಿಧಾನಗಳನ್ನು ಮಾತ್ರ ಪ್ರಚಾರ ಮಾಡಬೇಕು. ಎಲ್ಲಾ ಪ್ರಾಂತಿಕ ಸರ್ಕಾರಗಳವರೂ ಅಲ್ಲಲ್ಲಿ ಇಂತಹ ಪ್ರಯೋಗಶಾಲೆಗಳನ್ನೇನೋ ನಡೆಸುತ್ತಿದ್ದಾರೆ. ಆದರೆ ಇಲ್ಲಿ, ಮೊದಲೇ ಒಪ್ಪಿದ ತತ್ವಗಳನ್ನು ಸಿದ್ಧಪಡಿಸಲು, ಕೇವಲ ದಾಖಲೆಗಳ ಸಂಗ್ರಹ ಮಾತ್ರ ಆಗುತ್ತಿದೆಯೇ ಹೊರತು, ನಿರ್ದಿಷ್ಟ ಬುದ್ಧಿಯಿಂದ ಫಲನಿರೀಕ್ಷಣೆಯಾಗುತ್ತಿಲ್ಲವೆಂಬ ಆರೋಪವು ಕೇಳಬರುತ್ತಿದೆ. ಇದರ ಸತ್ಯಾಸತ್ಯತೆಯನ್ನು ತಜ್ಞರು ನಿರ್ಬಂಧನೆಯಿಂದ ವಿಮರ್ಶಿಸಬೇಕು. ಮೇಲಾಗಿ ಈ ಪ್ರಯೋಗ ಶಾಲೆಗಳಲ್ಲಿ ಉತ್ಪನ್ನಕ್ಕಿಂತ ವೆಚ್ಚವೇ ಹೆಚ್ಚಾಗುತ್ತಿರುವುದರಿಂದ ಇದನ್ನು ನೋಡಿದ ರೈತರು ಈ ತರಹದ ಕೃಷಿಪದ್ಧತಿಯನ್ನು ಅವಲಂಬಿಸುವುದರಿಂದ ತಮಗೆ ಲಾಭಕ್ಕಿಂತ ನಷ್ಟವೇ ಆಗುತ್ತದೆಂದು ತೀರ್ಮಾನಿಸಿ ಬಿಡುತ್ತಾರೆ.

ಹೊಸಮಾರ್ಗ

ಹಿಂದೆ ತಿಳಿಸಿದ ಕಾರಣಗಳಿಗಾಗಿ ರೈತರು ಪ್ರಚಾರಕ್ಕೆ ಬಲಿಬೀಳಲಾರರೆಂಬುದೂ, ಅವರನ್ನು ಕೇವಲ ಪ್ರಚಾರದಿಂದ ತಿದ್ದಲು ಸಾಧ್ಯವಿಲ್ಲನೆಂಬುದೂ ಸಿದ್ಧವಾಗುತ್ತದೆ. ಅನೇಕ ಅಧಿಕಾರಿಗಳ ಅನುಭವವೂ ಹೀಗೆಯೇ ಇದೆ ಆದರೆ ಅವರು ದಾಖಲೆಗಳನ್ನು ಮಾತ್ರ ಹಾಗೆ ತೋರಿಸುತ್ತಿಲ್ಲ. ಈಗಿರುವ ಪ್ರಯೋಗಶಾಲೆಗಳಿಂದ ಹೊಸಪದ್ಧತಿಯನ್ನು ಜಾರಿಗೆ ತರಲು ರೈತನ ಮನವೊಲಿಸುವುದೂ ಸಾಧ್ಯವಿಲ್ಲ. ಆದರೆ ನಾವು ಈ ಹೊಸಪದ್ಧತಿಯನ್ನು ಬಿಟ್ಟರೆ ಸದ್ಯಕ್ಕೆ ಬೇರೆ ಮಾರ್ಗವೇ ಇಲ್ಲ. ಯಾವ ಮಾರ್ಗದಿಂದಲೂ ಆಧುನಿಕ ಕೃಷಿಪದ್ಧತಿಯನ್ನು ಕೃತಿಗಿಳಿಸಿ ಎಲ್ಲಾ ರೈತರೂ ಅದನ್ನೊಪ್ಪಿಕೊಳ್ಳುವಂತೆ ಮಾಡಲೇಬೇಕು. ಇದನ್ನು ಸಾಧಿಸಲು ಇಲ್ಲಿ ಒಂದು ಯೋಜನೆಯನ್ನು ಮಂಡಿಸಲಾಗಿದೆ. ಒಕ್ಕಲತನದ ಮುಖ್ಯಾಧಿಕಾರಿಗಳೂ, ಸರ್ಕಾರದವರೂ, ಈ ಯೋಜನೆಯ ಉಪಯುಕ್ತತೆಯ ಬಗ್ಗೆ ಕೂಲಂಕಷವಾಗಿ ವಿಚಾರಮಾಡಿ ಸೂಕ್ತಮಾರ್ಗವನ್ನು ಕೈಕೊಳ್ಳುವರೆಂದು ಆಶಿಸಲಾಗಿದೆ. ಯೋಜನೆಯ ಸೂಕ್ಷ್ಮ ವಿವರಗಳು, ಹಣ ಒದಗಿಸುವ ವಿಧಾನ, ಇತ್ಯಾದಿಗಳ ಬಗ್ಗೆ ಯೋಜನೆಯು ಉಪಯುಕ್ತವೆಂದು ಕಂಡ ನಂತರ ವಿಚಾರಮಾಡಬಹುದು ಇದರಲ್ಲಿ ಅಲ್ಪಸ್ವಲ್ಪ ಮಾರ್ಪಾಟವನ್ನು ಮಾಡಿದರೆ ಇದನ್ನು ಭಾರತದ ಎಲ್ಲಾ ಭಾಗಗಳಿಗೂ ಹೊಂದಿಸಿಕೊಳ್ಳಲು ಬರುತ್ತದೆ.

ಫೀಲ್ಡ್‌ಮನ್ ಅಥವಾ ಅಗ್ರಿಕಲ್ಚರಲ್ ಅಸಿಸ್ಟೆಂಟ್

ಯೋಜನೆಯ ರೂಪರೇಷೆಯನ್ನು ತಿಳಿಸುವ ಮೊದಲು ಈಗಿನ ಅಗ್ರಿಕಲ್ಚರಲ್ ಅಸಿಸ್ಟೆಂಟ್ ಅಥವಾ ಫೀಲ್ಡ್‌ಮನ್ ಎಂಬ ಅಧಿಕಾರಿಗಳು ಮಾಡಬೇಕಾದ(ಮಾಡುತ್ತಿರುವ) ಕೆಲಸಗಳೇನು ಎಂಬುದನ್ನು ತಿಳಿದುಕೊಳ್ಳುವುದು ಅನುಕೂಲ. ಅದನ್ನು ಪಟ್ಟಿಮಾಡಿ ಕೆಳಗೆ ಕೊಡಲಾಗಿದೆ.

1 ಉತ್ತಮಜಾತಿಯ ಬೀಜಗಳನ್ನು (ಧಾನ್ಯಗಳ) ತರಿಸಿ ರೈತರಿಗೆ ಹಂಚುವುದು ಯಾ ಮಾರುವುದು.

2 'ಸರಕಾರಿ ಗೊಬ್ಬರ'ವನ್ನು ಮಾರುವುದು. (ಗೊಬ್ಬರವನ್ನು) ಮಾರಲು ಬಹುಶಃ ಎಲ್ಲಾ ಗ್ರಾಮಗಳಲ್ಲಿಯೂ ಈಗ ಸ್ಥಾನಿಕ ಏಜಂಟರಿದ್ದಾರೆ.)

3 ತಿಪ್ಪೆ ಗೊಬ್ಬರವನ್ನು ಸುಧಾರಿಸಿದ ರೀತಿಯಲ್ಲಿ ಸಂಗ್ರಹಿಸಿಡುವ ವಿಧಾನದ ಪ್ರಚಾರ ಮಾಡುವುದು.

4 ಕಂಪೋಸ್ಟ ಗೊಬ್ಬರದ ಪ್ರಚಾರ.

5 ಹಣ್ಣಿನ ಗಿಡಗಳು, ತೆಂಗಿನ ಮರಗಳು, ತರಕಾರಿ, ಗೆಣಸು, ಇತ್ಯಾದಿಗಳನ್ನು ಬೆಳೆಸುವಂತೆ ಪ್ರಚಾರಮಾಡುವುದು.

6 ಒಡ್ಡುಹಾಕಿ ಎರಡನೆಯ ಪೈರನ್ನು ಬೆಳೆಸಲು ಸಲಹೆ ಕೊಡುವುದು–ಕೆಲವು ಭಾಗಗಳಲ್ಲಿ ಮಾತ್ರ–ಈಚೆಗೆ ಒಡ್ಡಿನ ಯೋಜನೆಯ ಬಗ್ಗೆ ಲಕ್ಷ್ಯ ಕಡಿಮೆಯಾಗುತ್ತಿದೆ.

7 ಕೆರೆ ಮತ್ತು ಭಾವಿ–ರೈತಾಪಿ ಉಪಯೋಗಕ್ಕಾಗಿ ಕೆರೆ ಮತ್ತು ಭಾವಿಗಳನ್ನು ತೋಡಲು ಇಲ್ಲವೆ ರಿಪೇರಿ ಮಾಡಲು ಸರ್ಕಾರದವರು ಕೊಡಮಾಡಿದ ಸವಲತ್ತುಗಳ ಲಾಭವು ರೈತರಿಗೆ ಸಿಕ್ಕುವಂತೆ ಸಹಾಯ, ಸಲಹೆಗಳನ್ನು ನೀಡುವುದು.

8 ನೇಗಿಲು, ಕುಳ, ಕಂತಿಬೇಲಿ, ಹಲಿಪಟ್ಟಿ, ಸಿಮೆಂಟ್ ಇತ್ಯಾದಿ ವಸ್ತುಗಳನ್ನು ಮಾರುವುದು.

9 ಕೃಷಿಯ ಬಗ್ಗೆ ವೈಜ್ಞಾನಿಕ ಸಲಹೆಯನ್ನು ಕೊಡುವುದು.

10 ರೂರಲ್ ಡೆವಲಪ್‌ಮೆಂಟ್ ಕೆಲಸ.

ಈ ಎಲ್ಲಾ ಕೆಲಸಗಳನ್ನು ನಾಲ್ಕು ಗುಂಪುಗಳಾಗಿ ವಿಂಗಡಿಸಬಹುದು. (1) ಬೀಜ ನೇಗಿಲು ಇತ್ಯಾದಿ ವಸ್ತುಗಳನ್ನು ಮಾರುವುದು, (2) ಸುಧಾರಿಸಿದ ಕೃಷಿ ವಿಧಾನಗಳ ಪ್ರಚಾರ ಮತ್ತು ವೈಜ್ಞಾನಿಕ ಸಲಹೆಕೊಡುವುದು, (3) ಸರ್ಕಾರದವರು ಕೊಡಮಾಡಿದ ಸವಲತ್ತುಗಳು ರೈತರಿಗೆ ಮುಟ್ಟುವಂತೆ ಮಾಡುವುದು ಮತ್ತು (4) ರೂರಲ್ ಡೆವಲಪ್‌ಮೆಂಟ್ (ಗ್ರಾಮ ಸುಧಾರಣೆ) ಕೆಲಸ.

ವಿವೇಚನೆ

(1) ಬೀಜ, ಗೊಬ್ಬರ ಇತ್ಯಾದಿಗಳನ್ನು ಮಾರುವುದು ತಜ್ಞರೇ ಮಾಡಬೇಕಾದ ಮಹತ್ವದ ಕೆಲಸವಲ್ಲ (2) ಕೇವಲ ಪ್ರಚಾರದಿಂದ ಜನರ ಮನಸ್ಸನ್ನು ತಿರುಗಿಸುವುದು ಯಾ ಒಲಿಸಿಕೊಳ್ಳುವುದು ಹೇಗೆ ಅಸಾಧ್ಯವೆಂಬುದನ್ನು ಹಿಂದೆ ತೋರಿಸಲಾಗಿದೆ. (3) ಸರ್ಕಾರದವರು ಕೊಡಮಾಡಿದ ಸವಲತ್ತುಗಳು ರೈತರಿಗೆ ಮುಟ್ಟುವ ಮಧ್ಯದಲ್ಲಿ ನಾನಾತರಹದ ವ್ಯವಹಾರಿಕ ತೊಂದರೆಗಳು ಉದ್ಭವಿಸುತ್ತವೆ. ಬಹುಶಃ ಎಲ್ಲಾ ಸವಲತ್ತುಗಳ ಲಾಭವೂ ಊರಿನ ವಿದ್ಯಾವಂತ ಮುಖಂಡರಿಗೆ ಸಿಕ್ಕುತ್ತಿದೆಯೇ ಹೊರತು ಸಾಮಾನ್ಯ ರೈತನಿಗೆ ಸಿಕ್ಕುತ್ತಿಲ್ಲ. ಉದಾಹರಣೆಗಾಗಿ ಹೇಳುವುದಾದರೆ ಸರ್ಕಾರದವರು ಪ್ರತಿ ತಾಲೂಕ್ ಅಥವಾ ಜಿಲ್ಲೆಗಳಲ್ಲಿ ಹಂಚಲಾಗಿದೆ ಎಂದು ಹೇಳುವ ಸಿಮೆಂಟು, ಗಾಡಿಹಳಿ, ತಗಡು, ಸರಳು, ಮುಟ್ಟುಗಳು ಇತ್ಯಾದಿ ವಸ್ತುಗಳನ್ನು ಕೊಂಡುಕೊಂಡ ಮಹನೀಯರ ಹೆಸರುಗಳನ್ನೂ ಅವರ ಸ್ಥಾನಮಾನ ಹಾಗೂ ವಾರ್ಷಿಕ ವರಮಾನಾದಿಗಳನ್ನು ವಿವರವಾಗಿ ಪರಿಶೀಲಿಸಿದರೆ ಗುಟ್ಟು ಹೊರಬೀಳುತ್ತದೆ. (ಈ ವಿಷಯದಲ್ಲಿ ಅಧಿಕಾರಿಗಳಿಗೆ ಸಂದೇಹವಿದ್ದರೆ, ಇದೇ ಪ್ರಾಂತ್ಯದಲ್ಲಿಯ ಯಾವ ಜಿಲ್ಲೆಯನ್ನಾದರೂ ಆರಿಸಿ ವಿವರಗಳನ್ನು ಪರಿಶೀಲಿಸಿ ನೋಡಲಿ.) ಇಂತಹ ದೋಷಗಳನ್ನು ತಪ್ಪಿಸುವ ಮಾರ್ಗವನ್ನು ಇನ್ನು ಕಂಡುಹಿಡಿಯಬೇಕಾಗಿದೆ ಹಿಂದೆ ತಿಳಿಸಿದ ಸಾಮಾನುಗಳನು ಕೊಂಡವರ ಹೆಸರು, ವಾರ್ಷಿಕ ಉತ್ಪನ್ನ ಹಾಗೂ ಅವರುಕೊಂಡ ಸಾಮಾನುಗಳ ವಿವರಗಳನ್ನು ಸಾರ್ವಜನಿಕರ ಅವಗಾಹನೆಗಾಗಿ ಪ್ರಕಟಿಸುವ ಏರ್ಪಾಟಿನ ವಿಚಾರಮಾಡಬಹುದು. (4) ರೂರಲ್ ಡೆವಲಪ್‌ಮೆಂಟ ಕೆಲಸವು ಒಂದು ಸಮುದ್ರದಂತಿದೆ. ಇದರಲ್ಲಿ ಎಲ್ಲಾ ಖಾತೆಗಳ ಕೆಲಸವೂ ಐಕ್ಯವಾಗುವುದಾದರೂ ಯಾವ ಕೆಲಸವೂ ತೃಪ್ತಿಕರವಾಗಿ ನಡೆಯುತ್ತಿಲ್ಲ. ಈ ಬಾಬಿಗಾಗಿ ಖರ್ಚಾಗುತ್ತಿರುವ ಹಣದ ಸದುಪಯೋಗವಾಗುವಂತಹ ವಿಧಾನವನ್ನೂ, ದಕ್ಷ ಕೆಲಸಗಾರರನ್ನೂ ಇನ್ನು ಹುಡುಕಬೇಕಾಗಿದೆ. ಇದುವರೆಗಿನ ಅನುಭವದಿಂದ ಫೀಲ್ಡ್‌ಮನ್ ಅಥವಾ ಅಗ್ರಿಕಲ್ಚರಲ್ ಅಸಿಸ್ಟೆಂಟ್ ಎಂಬ ಅಧಿಕಾರಿಗಳಿಂದ ಈ ಬಾಬಿನಲ್ಲಿ ಹೇಳಿಕೊಳ್ಳುವಂತಹ ಕೆಲಸವೇನೂ ಆಗುತ್ತಿಲ್ಲವೆಂಬುದು ಸ್ಪಷ್ಟವಾಗುತ್ತದೆ.

(ಮುಂದುವರಿಯುವುದು)

ಕಿರಿಯರ ಪ್ರಪಂಚ'ದ ಪ್ರಕಟಣೆಗಳು

ಕೊರಡ್ಕಲ್ ಶ್ರೀನಿವಾಸರಾಯರಿಂದ –		**ಇತರ ಪುಸ್ತಕಗಳು**	
ನಂದಾದೀಪ [ಸಣ್ಣ ಕಥೆಗಳು]	0—14—0	ಕಾವ್ಯ ಸಾಮ್ರಾಜ್ಯ [ಕವನ ಸಂಗ್ರಹ]	1—4—0
ಭಾರತೀಯ ಕಥೆಗಳು	0—14—0	ಮಧುವನ [ಕಥಾಸಂಗ್ರಹ]	3—0—0
ಮೂರು ಪ್ರಹಸನಗಳು	0—14—0	ನಾಡಕಥೆಗಳು [ಕಥಾಸಂಗ್ರಹ]	0—3—0
ಎಸ್. ವೆಂಕಟರಾಜರಿಂದ –		ಸೇವಾಪಥ [ನಾಟಕ]	0—8—0
ರಂಗಭೂಮಿ [ನಾಟಕ]	0—8—0	ನಗೆನೋಟಗಳು [ಕೆ. ಬಿ. ಶೆಟ್ಟಿ]	0—14—0
ಆಕಾಶ ಗಂಗೆ [ಸಣ್ಣ ಕಥೆಗಳು]	1—12—0	ಅನ್ನದೇವರು ಮತ್ತು ಇತರಕಥೆಗಳು [ಕೆ. ಕೆ. ರೈ]	1—0—0
ಕವಿತಾಕಾಮಿನಿ [ಕವನಗಳು]	2—0—0	ಭಾರತದಲ್ಲಿ ಜಾತಿಭೇದ	1—0—0
ಸಪ್ತಸಾಗರ [ಸಣ್ಣ ಕಥೆಗಳು]	0—12—0	ವಿಷ್ಣುವಿನ ದಶಾವತಾರಗಳು [ಎಂ. ವಿ ಹೆಗ್ಡೆ]	0—12—0
ಕೆ. ಕೆ. ಶೆಟ್ಟರಿಂದ–		ಸ್ವಾತಂತ್ರ್ಯ ವೀರಸಾವರಕರ [ಇಂದಿರಾ ಬಾಯಿ]	1—4—0
ಸಂಶಯ ಪಿಶಾಚಿ [ನಾಟಕ]	0—8—0	ಜೀವನ ಸಂಗ್ರಾಮ [ಪಿ. ಶೀನ ಶೆಟ್ಟಿ]	1—8—0
ಕುಶಲವ [ನಾಟಕ]	0—6—0	ಕದಂಬ [ಸರಸ್ವತಿಬಾಯಿ ರಾಜವಾಡೆ]	1—4—0
ವೃದ್ಧಚಾಂಡಿಯಾರು [ನಾಟಕ]	1—0—0	ಪ್ರಕಾಶ [„]	2—0—0
ಹೆಂಡ್ತಿ ಗಂಡನಾದರೆ [ಪ್ರಹಸನ]	0—4—0	ಜಮೀನ್ದಾರ [ಹೊಸಮನಿ ಗುಂಡಪ್ಪ]	1—8—0
ಪುರುಷವಧು [ಪ್ರಹಸನ]	0—4—0	ಸ್ವತಂತ್ರ ಜೀವನೋಪಾಯ	0—3—0
ದೇಶಭಕ್ತ [ನಾಟಕ]	1—4—0		
ಪ್ರೇಮವಿಜಯ [ನಾಟಕ]	1—0—0		
ಸನ್ಯಾಸಿಯ ನೋಗಿನಲ್ಲಿ [ಕಾದಂಬರಿ]	0—8—0		

ನವಭಾರತ ಪುಸ್ತಕಭಂಡಾರ, ಉಡುಪಿ

ಅಮೃತಾಂಜನ

ತಲೆನೋವು, ಶಿರೋವೇದನೆ, ಉಳುಕು ಕುತ್ತಿಗೆ, ಭುಜ ಹಲ್ಲು ವೇದನೆಗಳಿಗೂ, ಎದೆನೋವು, ಗಾಯಗಳು, ಚಳುಕೊಳ್ಳುವುದು, ಚೇಳುವಿಷಮುಂತಾದವು, ಪಕ್ಷವಾತ, ಮೊಡವೆ. ಮೊದಲಾದ ಎಲ್ಲಾ ರೋಗಗಳಿಗೂ ಸಿದ್ಧೌಷಧ

REGD

ಹುಳು ಕಡ್ಡಿ ಮತ್ತು ನಮ್ಮಲ್ಲಿ ಸಿಕ್ಕುತ್ತದೆ

ಅಮೃತಾಂಜನ ಲಿಮಿಟೆಡ್

ಮದರಾಸು.

ಬೊಂಬಾಯಿ ಮತ್ತು ಕಲ್ಕತ್ತ.

ಸ್ವೀಕಾರ-ವಿಮರ್ಶೆ

ಶ್ರೀ ಟಿ. ಸದಾಶಿವಯ್ಯನವರ ಆರು ನಾಟಕಗಳು

ಶಾಂತಿ, ಜಯಶ್ರೀ ರಹಸ್ಯ, ಸ್ವಾತಂತ್ರ್ಯ ಘರ್ಜನೆ, ಅಮ್ಮ, ಶಿವಾಜಿಯ ಬಾಲ್ಯ.

ಪ್ರಕಾಶಕರು.- ಆನಂದ ಬ್ರದರ್ಸ್, ಬೆಂಗಳೂರು ೨.

ನಾಟಕ ರಚನೆಯಲ್ಲಿ ಅತ್ಯಂತ ನಿಪುಣರಾದ ಶ್ರೀ ಟಿ ಸದಾಶಿವಯ್ಯನವರ ಆರು ನಾಟಕಗಳೂ ವಿಷಯ- ಸನ್ನಿವೇಶಗಳ ದೃಷ್ಟಿಯಿಂದ ಬೇರೆಯಾದವುಗಳು. ಕೊನೆಯ ಎರಡು ನಾಟಕಗಳು ಮಕ್ಕಳಿಗಾಗಿ ಬರೆದಂಥವುಗಳು.

ಶಾಂತಿ

ಉತ್ತಮ ಸಂಸ್ಕೃತಿ ಹಾಗೂ ಆಧ್ಯಾತ್ಮಿಕವಾದದ ಬೆಳಕು 'ಶಾಂತಿ' ನಾಟಕದ ಮೇಲೆ ಚೆನ್ನಾಗಿ ಬಿದ್ದಿದೆ. ಸರ್ವತತ್ವಗಳ ಸಮ್ಮಿಲನದಿಂದ ಲಿಂಗಪ್ಪನಯ್ಯನವರ ಮನಸ್ಸು ಪರಿಪಕ್ವಗವಾಗಿದೆ. ಆಧ್ಯಾತ್ಮದ ದಿವ್ಯಜ್ಞಾನ ಅವರಲ್ಲಿ ಮೈಗೂಡಿಬಂದಿದೆ. ಮನಸ್ಸು ಪರಿಪಕ್ವವಾಗಿದೆ ನಂಜುಂಡನಂತಹ ಮಗನ ನಿರ್ದಯ ಮನೋವೃತ್ತಿಯ ಮುಂದೆ ಲಿಂಗಪ್ಪನವರ ಶಾತ್ವಿಕ ಬೋಧೆ ಸ್ಪರ್ಧೆಗೆ ನಿಲ್ಲುವ ದೃಶ್ಯ ಅತ್ಯಂತ ಪರಿಣಾಮಕಾರಿಯಾಗಿದೆ. ಬದುಕಿನಲ್ಲಿ ಬೇರೆಯವರಿಗೆ ಸಾಧ್ಯವಾದರೆ ಸಹಕಾರನೀಡಬೇಕು ಇಲ್ಲವೆ ಸಹಾನುಭೂತಿಯನ್ನಾದರೂ ತೋರಿಸಬೇಕೆನ್ನುವುದೇ ಲಿಂಗಪ್ಪನವರ ತತ್ವ. ಮನಸ್ಸು ಆತ್ಮಶಕ್ತಿಯಿಂದ ಒಂದು ಸ್ಥಿತಿಗೆ ಬಂದಮೇಲೆ ಬಂಧುತ್ವ ಹೇಗೆ ಬೆಳೆಯುತ್ತದೆನುವುದಕ್ಕೆ ಲಿಂಗಪ್ಪನವರು ಸಿಂಗ್ರಿಯನ್ನು ನಡೆಸಿಕೊಂಡ ರೀತಿಯಲ್ಲಿ ಚೆನ್ನಾಗಿ ಅರ್ಥವಾಗುತ್ತದೆ ಶಾಂತಿ ಉತ್ತಮ ಅಭಿರುಚಿಯುಳ್ಳಂತಹ ನಾಟಕ. ತಾತ್ವಿಕವೂ, ನೀತಿಪ್ರದವೂ ಆದ ನಾಟಕ. ಆದರೆ ಇಂತಹ ಉತ್ತಮವ ಆದರ್ಶವುಳ್ಳ 'ಶಾಂತಿ'ಯ ಸವಿಯನ್ನುಣ್ಣಬೇಕಾದರೆ ಓದುಗರಾಗಲೀ, ಪ್ರೇಕ್ಷಕರಾಗಲೀ ಕೊಂಚಮಟ್ಟಿಗೆ ಸುಸಂಸ್ಕೃತರೇ ಆಗಬೇಕಾಗುತ್ತದೆ ಆದುದರಿಂದ ರಂಗದ ಮೇಲೆ ಜನಪ್ರೀತ ಎನ್ನಿಸಿಕೊಳ್ಳುವುದು ಕಷ್ಟವಿದೆ. ಆದರೂ ಶಾಂತಿ ಸದಾಶಿವಯ್ಯನವರ ಉತ್ತಮ ಕಲಾಕೃತಿಯೆಂದೇ ಹೇಳಬೇಕು.

ಜಯಶ್ರೀ

ಜಯಶ್ರೀ ಒಂದು ಮನರಂಜನೆಯ ದೃಶ್ಯ ರಂಗದ ಮೇಲೆ ಇದು ಹೆಚ್ಚು ಪ್ರಭಾವಿಯಾಗಬಲ್ಲುದೆಂಬುದಕ್ಕೆ ಯಾವ ಸಂದೇಹವೂ ಇರಲಾರದು ಕಥಾವಸ್ತು ಅಸ್ವಾಭಾವಿಕವಾಗಿದ್ದರೂ ಸತ್ವಪೂರ್ಣ ಸಂಭಾಷಣೆಗಳಿಂದಲೂ ಸ್ವಾರಸ್ಯಮಯ ಸನ್ನಿವೇಶಗಳಿಂದಲೂ ಮೊದಲಿಂದ ಕುದಿಯುತನಕವೂ ನಮ್ಮ ಕುತೂಹಲವನ್ನು ಕೆರಳಿಸುತ್ತವೆ. ಸಾಂಪ್ರದಾಯದ ಮುಸುಕನ್ನು ಹಾಕಿಕೊಂಡು ಅನೀತಿಯ ಕಾರ್ಯವನ್ನು ಮಾಡುವ ಆಷಾಢಭೂತಿಗಳನ್ನು ಬಯಲಿಗೆಳೆಯುವಲ್ಲಿ ರಾಜಶೇಖರ ಒಳ್ಳೆಯ ನೀತಿಪಾಠವನ್ನು ಕಲಿಸುತ್ತಾನೆ. ಯೋಗೀಶ್ವರ ರಾಯರಂತಹ ಕಾಮುಕ ಜೀವಿಗಳು ದುಡ್ಡಿನ ಬಲಾತ್ಕಾರದಿಂದ ಹೆಣ್ಣುಮಕ್ಕಳ ಜೀವನವನ್ನು ಹಾಳುಮಾಡುವುದು ಹೊಸತೇನೂ ಅಲ್ಲ. ಜಯಶ್ರೀ ನಮ್ಮ ಜನದ ನಡುವೆ ಇರುವ ಹೊಲಸು ಮನೋವೃತ್ತಿಯನ್ನು ಬಯಲಿಗೆಳೆಯುವ ಕಾರ್ಯವನ್ನು ಚೆನ್ನಾಗಿ ಮಾಡಿದೆ. ಇದೊಂದು ವಿಚಾರ ಮತ್ತು ವಿನೋದಗಳ ಮಿಶ್ರದೃಶ್ಯ! ಮನರಂಜನೆಯ ಕಾರ್ಯದಲ್ಲಿ ಜಯಶ್ರೀಗೆ ಯಶಸ್ಸು ಕಟ್ಟಿಟ್ಟಿದ್ದು!

ರಹಸ್ಯ

ರಹಸ್ಯವನ್ನೋದುವಾಗ ದಿ। ಟಿ. ಪಿ. ಕೈಲಾಸಂರವರ ಟೊಳ್ಳುಗಟ್ಟಿಯ ಜ್ಞಾಪಕ ಬರುತ್ತದೆ. ವಿದ್ಯೆಯೂ ಬೇಕು, ಜೊತೆಗೆ ಕೊಂಚ ಬುದ್ಧಿಯೂ ಇದ್ದರೊಳ್ಳಿತೆನ್ನುವ ನೀತಿಯನ್ನು ರಹಸ್ಯಸಾರುತ್ತದೆ. ಕಲಿತವನಾದ ರಾಜಕುಮಾರನ ಅಹಂಕಾರ-ಇಂಗ್ಲಿಷಿನ ಅತಿಮೋಹ ಗುರುಹಿರಿಯರನ್ನು ಧಿಕ್ಕರಿಸಿ ಕಾಲಿಕ ಸುಖಮೋಹದ ಕಡೆಗೆ ಎಳೆಯುವಂತೆ ಮಾಡುತ್ತದೆ ವಸಂತಕುಮಾರನ ವ್ಯಕ್ತಿತ್ವ ಅಗಾಧವಾದ ದೇಶಪ್ರೇಮ ಮಾತೃಪಿತೃ ಪ್ರೇಮ-ಬಂಧುಬಾಂಧವರ ಪ್ರೇಮ ಮೈಗೂಡಿಬಂದಿದೆ ಲಕ್ಷ್ಮೀಪತಿರಾಯ, ಅವರ ಮಗಳು, ರಾಜಕುಮಾರ ಈ ಮೂರು ಜನರ ಮರ್ಜಿಯೂ ಸ ಬಂಧುಗಳ ಮೇಲೆ ತೇಲಾಡುವಂತಹದು ಲಕ್ಷ್ಮೀಪತಿರಾಯರು ದವಳಿಯ ಮೇಲೆ ಮಾನವೀಯತೆ ಅರಿತುಕೊಂಡು ಹೇಡಿಯಾಗುತ್ತಾನೆ ರಹಸ್ಯ ಒಂದುರೀತಿಯ ಸಮಸ್ಯಾತ್ಮಕ ನಾಟಕ ಕಥಾವಸ್ತುವಿನಲ್ಲಿ ವಾಸ್ತವತೆಯಿದೆ, ರಂಗದ ಮೇಲೂ ಇದು ಯಶಸ್ವಿಯಾಗಬಲ್ಲುದು. ನಾಟಕದ ಕೊನೆಯು ಒಳ್ಳೆಯ ಪರಿಣಾಮಕಾರಿಯಾಗಿದೆ.

ಸ್ವಾತಂತ್ರ್ಯ ಘರ್ಜನೆ

ಬ್ರಿಟಿಷರ ಆಡಳಿತದಲ್ಲಿ ಭಾರತ ಜನಾಂಗ ತನ್ನ ಪುರುಷತ್ವವನ್ನೂ, ಆಂತಃಸ್ಸತ್ವವನ್ನೂ ಕಳೆದುಕೊಂಡು ನಿರ್ವೀರ್ಯರಾಗಿದ್ದ ಬಗೆಯನ್ನು ಇಲ್ಲಿ ಚೆನ್ನಾಗಿ ಚಿತ್ರಿಸಲಾಗಿದೆ. ಹೊರಗಿನ ಶತ್ರುವಿಗೆ ಒಳಗಿನವರೇ ಪುರಸ್ಕರ್ತರೆಂಬುದನ್ನು ಇಲ್ಲಿ ಚೆನ್ನಾಗಿ ಕಾಣಬಹುದಾಗಿದೆ. ಆದರೂ ದೇಶಕ್ಕಾಗಿ ಹೋರಾಡಿದ ಧೀರ ಪುರುಷರೂ ನಮ್ಮಲ್ಲಿದ್ದಾರೆ ಗುಂಡಿಗೆದೆಗೊಟ್ಟು ಸ್ವಾತಂತ್ರ್ಯವನ್ನು ಗಳಿಸಿದ ಹುತಾತ್ಮನ ನೆನಪನ್ನು ಈ ನಾಟಕ ತರುತ್ತದೆ. ಪರಾಧೀನತದಿಂದ ಸಂಸ್ಕೃತಿ, ಕಲೆ, ಆದರ್ಶಗಳೆಲ್ಲವು ಮಣ್ಣು ಮುಕ್ಕಿಹೋದವು ನಮ್ಮ ದೇಶಕ್ಕೆ ಬಂದು ನಮ್ಮನ್ನು ಗುಲಾಮನಂತೆ ನಡೆಸಿಕೊಳ ದುಷ್ಟಪದ್ಧತಿಗೆ ವಿರೋಧವಾಗಿ ಭಾರತಸಿಂಹ ಕೆರಳುತ್ತಾನೆ. ಆ ಪರಾಧೀನತದಿಂದ ಮುಕ್ತಗೊಂಡು ಸ್ವತಂತ್ರರಾಗುವುದೇ ಮುಖ್ಯ ಧರ್ಮವೆಂದು ತಿಳಿದು ಸ್ವಾತಂತ್ರ್ಯಕ್ಕಾಗಿ ಹೋರಾಟನಡೆಸಿ ತನ್ನ ಪ್ರಾಣವನ್ನೇ ಮುಕ್ತಿಶಕ್ತಿಗೆ ಪಣವಾಗಿಕೊಡುತ್ತಾನೆ ನಮ್ಮ ಜನತೆಯ ಸ್ವಾತಂತ್ರ್ಯ ಕಾಂಕ್ಷೆಯನ್ನೂ, ಬ್ರಿಟಿಷರ ಮರ್ದನೀಯ ನೀತಿಯನ್ನೂ ಸ್ವಾತಂತ್ರ್ಯ ಘಟನೆಯಲ್ಲಿ ಚೆನ್ನಾಗಿ ಚಿತ್ರಿಸಿದ್ದಾರೆ ನಾಟಕಕಾರರು.

ಅಮ್ಮ

ಕಿರಿಯರಿಗಾಗಿ ಬರೆದ ನಾಟಕದಲ್ಲಿ ಒಳ್ಳೆಯ ಬೋಧನಾತ್ಮಕ ನೀತಿಯನ್ನು ತೋರಿಸಲಾಗಿದೆ. ಆದರೆ ಹಲವು ಸನ್ನಿವೇಶಗಳು ಭಾವನಾತ್ಮಕವಾಗಿದ್ದು ಕಿರಿಯರ ಬುದ್ಧಿಶಕ್ತಿಗೆ ಹೆಚ್ಚಾಗಬಹುದೋ? ಎಂದು ಶಂಕೆಮೂಡುತ್ತದೆ. ಮಾತುಗಾರಿಕೆಯೂ ಹಲವೆಡೆಗಳಲ್ಲಿ ಗಂಭೀರವಾಗುತ್ತವೆ. ಅಂತೂ 'ಅಮ್ಮ' ಸಾಮಾನ್ಯ ರೀತಿಯ ನಾಟಕ ರಂಗದ ಮೇಲೆ ಅಷ್ಟೊಂದು ಪರಿಣಾಮಕಾರಿಯಾಗದು.

ಶಿವಾಜಿಯ ಬಾಲ್ಯ

ಇದು ಕೂಡಾ ಕಿರಿಯರಿಗಾಗಿಯೇ ಬರೆದುದಾಗಿದೆ. ಸಂಭಾಷಣೆಗಳಲ್ಲಿ ಮಕ್ಕಳ ಮನಸ್ಸನ್ನು ಅರಳಿಸುವ ಸತ್ವವಿದೆ. ಸಣ್ಣ ಸಣ್ಣ ವಿಚಾರದಲ್ಲಿ ಜಿಜ್ಞಾಸೆ ನಡೆಸುವದು ವಿಷಯಸಂಗ್ರಹಕ್ಕೆ ಮುಖ್ಯವಾಗಿದೆ, ಸಂಭಾಷಣೆಗಳು ಕೊಂಚ ದೀರ್ಘವೆನಿಸಿದರೂ ಕುತೂಹಲಪೂರ್ಣವಾಗಿರುತ್ತವೆ. ಅಂತೂ ಕಿರಿಯರು ಅಭಿನಯಿಸಿ ಆನಂದಿಸಬಹುದಾದ ನಾಟಕವಿದು.

ಇತರ ಸಾಹಿತ್ಯವನ್ನು ರಚಿಸುವವನಿಗಿಂತ ನಾಟಕಕರ್ತನ ಹೊಣೆ ಹೆಚ್ಚಾಗಿರುತ್ತದೆ. ಉಭಯ ಪಾತ್ರಗಳ ಸಂಭಾಷಣೆಯಲ್ಲೂ ಆತನು ಸತ್ವವನ್ನು ತುಂಬಬೇಕು, ಮಾತು ಹೆಚ್ಚಾದರೆ ಪ್ರೇಕ್ಷಕರು ಆಕಳಿಸುತ್ತಾರೆ. ಚಪ್ಪಾಳೆ ಹೊಡೆಯುತ್ತಾರೆ, ಕೊನೆಗೆ ನಾನಾರೀತಿಯ ಪ್ರತೀಕಾರವನ್ನು ಮಾಡುತ್ತಾರೆ ಇಂತಹ ಸನ್ನಿವೇಶದಲ್ಲಿ ಸಂಭಾಷಣೆ ಹಿತಮಿತವಾಗಿರುವಂತೆ ನೋಡಿಕೊಳ್ಳಬೇಕು ಇದಕ್ಕೆ ಹೊಂದಿಕೊಂಡು ದೃಶ್ಯಯೋಜನೆಯನ್ನು ಮಾಡಬೇಕು ಭಾವನಾತ್ಮಕವಾಗಿ ಬರೆಯುತ್ತಹೋದರೆ ಅದು ರಂಗಭೂಮಿಯ ಮೇಲೆ ಯಶಸ್ವಿಯಾಗದು ಕಥಾವಸ್ತುವೂ, ಸಂಭಾಷಣೆಯೂ ಕೇವಲ ನಾಟಕೀಯವಾದರೂ ಜನಮೆಚ್ಚದು, ದೇಶಕಾಲಪರಿಸ್ಥಿತಿಯ ಬೆಳಕು ಕತ್ತೆಯಲ್ಲೂ ವ್ಯಕ್ತಿ ಸಂಸ್ಕೃತಿಯಲ್ಲೂ ಬರಬೇಕು ಈ ಎಲ್ಲ ದೃಷ್ಟಿಯಿಂದ ಆತನು ಬರೆಯುವದಾದರೆ ನಾಟಕವನ್ನು ಅಭಿನಯಿಸುವವರಿಗೂ ನೋಡುವವರಿಗೂ ಸುಖವಿದೆ. ಶ್ರೀ ಟಿ ಸದಾಶಿವಯ್ಯನವರಿಗೆ ಮೇಲೆ ಹೇಳಿದ ಕಲೆ ಸಿದ್ಧಿಸಿದೆ. ಬರಹಗಾರನು ನಟನೇ ಆಗಿದ್ದರೆ ನಾಟಕವು ಹೇಗೆ ರಸವತ್ತಾಗುತ್ತದೆನ್ನುವುದಕ್ಕೆ ಸದಾಶಿವಯ್ಯನವರ ದೃಶ್ಯಗಳು ಉತ್ತಮ ಉದಾಹರಣೆ. ಪ್ರತಿಯೊಂದು ನಾಟಕದಲ್ಲೂ ತಾತ್ವಿಕ ವಿಚಾರವಿದೆ-ವಿನೋದವಿದೆ-ವಿಡಂಬನೆಯಿದೆ, ಈ ಬಗೆಯ ವೈವಿಧ್ಯತೆಗೊಪ್ಪುವ ಲಲಿತವೂ ಭಾವನಾತ್ಮಕವೂ ಆದ ಮಾತು ಪ್ರತಿಮಾತುಗಳಿವೆ. ಒಂದೊಂದು ನಾಟಕದಲ್ಲಿ ಒಂದೊಂದು ಬಗೆಯ ರಸಾನುಭವವನ್ನು ನಾವು ಸವಿಯಬಹುದಾಗಿದೆ. ಈ ನಾಟಕಗಳ ಯಶಸ್ವೀ ಪ್ರಯೋಗಕ್ಕೆ ಶ್ರೀ ಟಿ. ಸದಾಶಿವಯ್ಯನವರ ಉತ್ತಮ ಕಲಾಭಿರುಚಿಯೇ ಕಾರಣ ಈ ಬಗೆಯ ಕಲಾಕೃತಿಯನ್ನು ರಚಿಸಿ ಕನ್ನಡ ರಂಗಭೂಮಿಯನ್ನವರು ಬೆಳಗುವಂತಾಗಲಿ ಆ ಕಾರ್ಯದಲ್ಲಿ ಪ್ರಕಾಶಕರಾದ ಶ್ರೀ ಆನಂದ ಬ್ರದರ್ಸ್‌ನವರ ಸಾಹಸ ಶ್ಲಾಘನೀಯ. ಕನ್ನಡದ ಜನ ಪ್ರೇಕ್ಷಕರಾಗಿ ನೋಡುವ ಹಾಗೂ ಅಭಿನಯಿಸುವ ಪರಿಪಾಠ ಮಾತ್ರವಲ್ಲದೆ ದುಡ್ಡುಕೊಟ್ಟು ಪುಸ್ತಕಕೊಳ್ಳುವದರ ಮೂಲಕ ತಮ್ಮ ತಮ್ಮ ಕಲಾಭಿಮಾನವನ್ನು ವ್ಯಕ್ತಪಡಿಸಬೇಕು.

—ಎಸ್ಸೆಲ್.

THE PANGAL NAYAK BANK LIMITED.

Head Office] Incorporated in 1920.) [Udipi S K

SEASON DEPOSITS are received and accepted on the following terms:—

For three, four or five months deposits at 3% p. a

For six, seven or eight months deposits at 3½% p. a

These are to be terminable by the 30th June 1951.

Interest is payable along with the principal at maturity.

Our THREE YEAR CAH CERTIFICATE b [illegible] to You a fair yeild: For particulars please ask for copy of Rules

"ಬೇರೆ ಶಾಸ್ತ್ರಗಳನ್ನೋದಿದರೇನು? ಗೀತೆಯನ್ನು ಚೆನ್ನಾಗಿ ಓದಬೇಕು"—(ವರಾಹ ಪುರಾಣ)

ಗೀತೆಯ ಕೈಗನ್ನಡಿ

(ಭಗವದ್ಗೀತೆಯ ಮೂಲ ಶ್ಲೋಕ ಮತ್ತು ಕನ್ನಡ ಅನುವಾದ)

● ಅನುವಾದಕರು-ದಿ। ಹೊಸಕೆರೆ ಚಿದಂಬರಯ್ಯನವರು ●

ಈ ಗ್ರಂಥದಲ್ಲಿ ಗೀತೆಯ ಮೂಲವಲ್ಲಿ ಇರುವುದಲ್ಲದೆ ಮೂಲದಲ್ಲಿ ಸಹಜವಾಗಿ ಕಾಣಬರುವ ಅರ್ಥವೂ ಸಾಹಿತ್ಯಗಾರಿಕೆಯ ಮಾತುಗಳ ರೂಪದಲ್ಲಿಯೇ ಥಟ್ಟನೆಯಾಗಿ ಎದ್ದು ಕಾಣುವುದು

400ಕ್ಕೂ ಮಿಕ್ಕ ಪುಟಗಳು! ಬೆಲೆ 0—12—0.

ಒಂದು ರೂಪಾಯಿಯನ್ನು ಕಳುಹಿಸಿದರೆ ಒಂದು ಪ್ರತಿಯನ್ನು ಬುಕ್‌ಪೋಸ್ಟಿನಿಂದ ಕಳಿಸಲಾಗುವುದು.

ಪ್ರತಿಗಳು ಸಿಗುವ ಮುಖ್ಯ ಸ್ಥಳ:—

ನವಯುಗ ಪ್ರೆಸ್, ಉಡುಪಿ ದ. ಕನ್ನಡ

ಪ್ರಸಿದ್ಧ ಪುಸ್ತಕ ವ್ಯಾಪಾರಿಗಳಲ್ಲೆಲ್ಲ ದೊರೆಯುತ್ತದೆ

ಟೆಂಡರು ನೋಟೀಸು

ಉಡುಪಿ ತಾಲೂಕು ಹೆಗ್ಗುಂಜ ಗ್ರಾಮದ ಸ್ಥಾಪನಾ ನಂಬ್ರ 521ನೇ ಮಂದಾರ್ತಿ ಶ್ರೀ ದುರ್ಗಾ ಪರಮೇಶ್ವರಿ ಅಮ್ಮನವರ ದೇವಸ್ಥಾನದ ಟ್ರಸ್ಟೀಗಳಾಫೀಸಿನಿಂದ ಎಲ್ಲಾ ಜನರಿಗೆ ತಿಳಿಯಪಡಿಸುವುದೇನೆಂದರೆ—

ಸದ್ರಿ ದೇವಸ್ಥಾನದ ಜೀರ್ಣೋದ್ಧಾರದ ಬಾಬಿನಲ್ಲಿ ಎಸ್ಟಿಮೇಟಿನಲ್ಲಿ ತೋರುವ ಬಿಲ್ಡಿಂಗ ಕಾಮಗಾರಿಗಳನ್ನು ನಡೆಸುವ ಬಗ್ಗೆ ಮೊಹರು ಹಾಕಿದ ಟೆಂಡರುಗಳನ್ನು ಅಗತ್ಯ ಉಳ್ಳವರು ತಾ. 14-6 1951ನೆ ಸಾಯಂಕಾಲ 5 ಗಂಟೆಯೊಳಗೆ ಹಾಜರುಪಡಿಸತಕ್ಕದ್ದು. ಟೆಂಡರುಗಳನ್ನು ತಾ. 15-6-51ನೇ ಸಾಯಂಕಾಲ 3 ಗಂಟೆಗೆ ತೆರೆಯಲಾಗುವುದು.

ಟೆಂಡರುಗಳನ್ನು ಅಪೇಕ್ಷಿಸುವವರು ಅನುಸರಿಸತಕ್ಕ ಶರ್ತಗಳು:-

1 ದೇವಸ್ಥಾನದ ಟ್ರಸ್ಟಿಗಳ ಆಫೀಸಿನಿಂದ ಪ್ರತಿ ಟೆಂಡರಿಗೆ ಒದಗಿಸಲಾಗುವ ಕೆಲಸಗಳ ವಿವರಪತ್ರಿಕೆಯನ್ನು ಪಡೆಕೊಳ್ಳತಕ್ಕದ್ದು.

2 ಪ್ರತಿಯೊಬ್ಬ ಟೆಂಡರನು ಟೆಂಡರಿನೊಂದಿಗೆ ದೇವಸ್ಥಾನದ ಲೆಕ್ಕಕ್ಕೆ ಬ್ರಹ್ಮಾವರ ಸಿಂಡಿಕೇಟ್ ಬ್ಯಾಂಕಿನ S. B. ಎಕೌಂಟಿನಲ್ಲಿ ರೂಪಾಯಿ 200/ರನ್ನು ಅಮಾನತು ಠೇವಣಿಯನ್ನು ಇಡತಕ್ಕದ್ದು.

3 ಮೇಲೆ ಕಾಣಿಸಿದಂತೆ ಬ್ರಹ್ಮಾವರ ಸಿಂಡಿಕೇಟ್ ಬ್ಯಾಂಕಿನ ರಶೀದಿಯಿಲ್ಲದೆ ಬಂದ ಟೆಂಡರುಗಳನ್ನು ಸ್ವೀಕರಿಸಲಾಗಲಿಕ್ಕಿಲ್ಲ.

4 ಎಲ್ಲರಿಗಿಂತಲೂ ಕಡಿಮೆ ಮೊಬಲಗಿನ ಟೆಂಡರನ್ನು ಮಂಜೂರು ಮಾಡಲಾಗುವುದು. ಮತ್ತು ಮಂಜೂರಾದ ಟೆಂಡರನಿಗೆ ತಿಳಿಸಲಾಗುವುದು. ಆತನು ತಿಳಿಸಿದ ಎಂಟು ದಿನಗಳೊಳಗಾಗಿ ಮೊಬಲ್ಗು ಜಮಿ ರೂಪಾಯಿ 200/- ಅಲ್ಲದ ರೂಪಾಯಿ 150/-ನ್ನು ಜಾಮೀನು ಕ್ರಮವಾಗಿ ಕರಾರು ಬರೆಕೊಡತಕ್ಕದ್ದು.

5 ಮಂಜೂರಾದ ಟೆಂಡರನ ಲೆಕ್ಕಕ್ಕೆ ಮೇಲ್ಕಾಣಿಸಿದಂತೆ ಜಾಮೀನಾಗಿ ರೂಪಾಯಿ 350/ನ್ನು ಆತನ ಕೆಲಸವು ಸಂಪೂರ್ಣವಾಗಿಯೂ ತೃಪ್ತಿಕರವಾಗಿಯೂ ಇರುವದೆಂದು ಇಂಜಿನಿಯರ್ ಸರ್ಟಿಫಿಕೇಟು ಕೊಟ್ಟನಂತರ ವಾಪಾಸು ಕೊಡಲಾಗುವುದು

6 ಕೆಲಸವನ್ನು ತಾ 30-11-1951ರೊಳಗೆ ಪೂರೈಸಿ ಕೊಡತಕ್ಕದ್ದು.

7 ಮೇಲಿನ 2ನೆ ಕಲಮಿನಲ್ಲಿ ಹೇಳಿದಂತೆ ಮಂಜೂರಾಗದ ಟೆಂಡರುಗಳ ಹಣವನ್ನು ಕೂಡಲೇ ವಾಪಾಸು ಕೊಡಲಾಗುವುದು.

ಎಚ್ ಶೇಷ ಹೆಗ್ಡೆ.
ಮೆನೇಜಿಂಗ್ ಟ್ರಸ್ಟಿ.

ಶ್ರೀ ಮಂದಾರ್ತಿ ದೇವಸ್ಥಾನ,
ತಾ. 26-4 51

ಒಡ್ಡಿನ ಯೋಜನೆ

ಜಹಾಂಗೀರ ಜಿಲ್ಲೆಯಲ್ಲಿನ ಜಗಳಿನ ಒಡ್ಡಿನ ಯೋಜನೆಯು' ಒಂದು ಬಹುದೊಡ್ಡ ಪ್ರಯೋಗವೆಂದೇ ಹೇಳಬಹುದು. ವಿದೇಶಗಳಲ್ಲಿ ಆಚರಣೆಯಲ್ಲಿದ್ದ ವಿಧಾನಗಳನ್ನು ತಮ್ಮ ತಜ್ಞರು ಹೇಗೆ ಅಳವಡಿಸಿಕೊಂಡು ಆಚರಣೆಯಲ್ಲಿ ತಂದು ಜಯಶಾಲಿಗಳಾದರೆಂಬುದಕ್ಕೆ ಇದೊಂದು ಪ್ರತ್ಯಕ್ಷ ಪುರಾವೆ. ಈ ಯೋಜನೆಯ ಬಗ್ಗೆ ಇಲಾಖೆಯವರ ಈಗಿನ ಅಭಿಪ್ರಾಯವೇನಿದೆಯೋ ತಿಳಿಯದು. ಆದರೆ ಇದರ ಸುಖದುಃಖಗಳನ್ನು ಅನುಭವಿಸಿದ ರೈತರು ಹಾಗೂ ಜಮೀನ್ದಾರರು ಮಾತ್ರ ಇದನ್ನೊಂದು ದೊಡ್ಡ ದುರಂತವೆಂದು ಕರೆಯುತ್ತಿರುವಂತೆ ಕಾಣುತ್ತದೆ. ಇಲಾಖೆಯ ಅಧಿಕಾರಿಗಳು ಪರಿಸ್ಥಿತಿಯನ್ನು ಮರೆಮಾಚಿ ಕೇವಲ ಸರ್ಕಾರದ ಯಾ ಇಲಾಖೆಯ ಧೋರಣೆಯನ್ನು ಪ್ರತಿಪಾದಿಸಬೇಕಾಗುತ್ತದೆ. ನಾನು ಒಬ್ಬ ಅಧಿಕಾರಿಗಳೊಡನೆ ಮಾತನಾಡುತ್ತಿದ್ದಾಗ ಅವರು ಈ ಒಡ್ಡಿನ ಯೋಜನೆಯ ವಿವರಗಳನ್ನು ಸುಂದರವಾಗಿ ವರ್ಣಿಸಿ ಇದು ಬಯಲು ಸೀಮೆಯ ಕಾಮಧೇನುವೆಂದು ಹೇಳಿದ್ದರು. ಮುಂದೆ ಸುಮಾರು ಒಂದು ವರ್ಷದ ನಂತರ ಈ ಯೋಜನೆಯ ಕಹಿ ಅನುಭವವುಳ್ಳ ಜಹಾಂಗೀರದ ಜಮೀನ್ದಾರ ಮಿತ್ರರ ಭೆಟ್ಟಿಯಾದಾಗ್ಯೆ ನಿಜಸ್ಥಿತಿಯು ತಿಳಿಯಿತು. ಈ ವಿಷಯವನ್ನು ಒಕ್ಕಲತನ ಅಧಿಕಾರಿಗಳಿಗೆ ಮನದಟ್ಟು ತಿಳಿಸಲು ಅವರು ಮಾತನಾಡದೆ ಮೌನವಾದರು. ಮುಂದೆ ತಮ್ಮ ಇಲಾಖೆಯ ಧೋರಣೆಕ್ಕನುಗುಣವಾಗಿ ನಾವು ವರ್ತಿಸಬೇಕಾಗುವುದೆಂದು ಸ್ಪಷ್ಟಪಡಿಸಿದರು.

ಪಾಶ್ಚಾತ್ಯ ದೇಶಗಳ ಅಂಧಾನುಕರಣೆ ಬೇಡ

ಹೀಗೆ ದೋಷಗಳನ್ನು ತೋರಿಸಿದ ಮಾತ್ರಕ್ಕೆ 'ಸುಧಾರಿಸಿದ' ಒಕ್ಕಲತನ ಪದ್ಧತಿಯು ತೀರ ನಿರುಪಯುಕ್ತವೆಂದು ಸಾಧಿಸಲು ಹೊರಟಿದ್ದೇನೆಂದು ಯಾರೂ ತಿಳಿಯಬಾರದು. ಆದರೆ ನಾವು ಹೊಸ ಸುಧಾರಣೆಗಳನ್ನು ಮಾಡುವಾಗ, ಕೇವಲ ಪಾಶ್ಚಾತ್ಯ ದೇಶಗಳ ಅಂಧಾನುಕರಣೆಯನ್ನು ಮಾಡದೆ ನಮ್ಮ ದೇಶಕ್ಕೆ-ಅದರಲ್ಲಿಯ ವಿವಿಧ ಭಾಗಗಳಿಗೆ—ಅದು ಎಷ್ಟರಮಟ್ಟಿಗೆ ಉಪಯುಕ್ತವಾಗುತ್ತದೆ ಎಂಬುದನ್ನು ಪ್ರತ್ಯಕ್ಷ ಅನುಭವ ಹಾಗೂ ವಿವೇಚನೆಗಳ ಒರೆಗಲ್ಲಿಗೆ ಹಚ್ಚಿ ನೋಡಿ ಹಲವು ವರ್ಷಗಳ ಪ್ರಯೋಗದ ನಂತರ ಫಲದಾಯಕವೆಂದು ಕಂಡುಬಂದ ವಿಧಾನಗಳನ್ನು ಮಾತ್ರ ಪ್ರಚಾರ ಮಾಡಬೇಕು. ಎಲ್ಲಾ ಪ್ರಾಂತಿಕ ಸರ್ಕಾರಗಳವರೂ ಅಲ್ಲಲ್ಲಿ ಇಂತಹ ಪ್ರಯೋಗಶಾಲೆಗಳನ್ನೇನೋ ನಡೆಸುತ್ತಿದ್ದಾರೆ. ಆದರೆ ಇಲ್ಲಿ, ಮೊದಲೇ ಒಪ್ಪಿದ ತತ್ವಗಳನ್ನು ಸಿದ್ಧಪಡಿಸಲು, ಕೇವಲ ದಾಖಲೆಗಳ ಸಂಗ್ರಹ ಮಾತ್ರ ಆಗುತ್ತಿದೆಯೇ ಹೊರತು, ನಿರ್ದಿಷ್ಟ ಬುದ್ಧಿಯಿಂದ ಫಲನಿರೀಕ್ಷಣೆಯಾಗುತ್ತಿಲ್ಲವೆಂಬ ಆರೋಪವು ಕೇಳಬರುತ್ತಿದೆ. ಇದರ ಸತ್ಯಾಸತ್ಯತೆಯನ್ನು ತಜ್ಞರು ನಿರ್ದಾಕ್ಷಿಣ್ಯದಿಂದ ವಿಮರ್ಶಿಸಬೇಕು. ಮೇಲಾಗಿ ಈ ಪ್ರಯೋಗ ಶಾಲೆಗಳಲ್ಲಿ ಉತ್ಪನ್ನಕ್ಕಿಂತ ವೆಚ್ಚವೇ ಹೆಚ್ಚಾಗುತ್ತಿರುವುದರಿಂದ ಇದನ್ನು ನೋಡಿದ ರೈತರು ಈ ತರಹದ ಕೃಷಿಪದ್ಧತಿಯನ್ನವಲಂಬಿಸುವುದರಿಂದ ತಮಗೆ ಲಾಭಕ್ಕಿಂತ ನಷ್ಟವೇ ಆಗುತ್ತದೆಂದು ತೀರ್ಮಾನಿಸಿ ಬಿಡುತ್ತಾರೆ.

ಒಕ್ಕಲತನ ಖಾತೆ ಮತ್ತು ಆಧುನಿಕ ಒಕ್ಕಲತನ

ಒಂದು ವಿಧಾಯಕ ಯೋಜನೆ

ಬರೆದವರು: ವೈದ್ಯ ವಿನಾಯಕ ರಾವ್ ಬಾಪಟ

[ಕಳೆದ ಸಂಚಿಕೆಯಿಂದ]

ಹೊಸಮಾರ್ಗ

ಹಿಂದೆ ತಿಳಿಸಿದ ಕಾರಣಗಳಿಗಾಗಿ ರೈತರು ಪ್ರಚಾರಕ್ಕೆ ಬಲಿಬೀಳಲಾರರೆಂಬುದೂ, ಅವರನ್ನು ಕೇವಲ ಪ್ರಚಾರದಿಂದ ತಿದ್ದಲು ಸಾಧ್ಯವಿಲ್ಲವೆಂಬುದೂ ಸಿದ್ಧವಾಗುತ್ತದೆ. ಅನೇಕ ಅಧಿಕಾರಿಗಳ ಅನುಭವವೂ ಹೀಗೆಯೇ ಇದೆ ಆದರೆ ಅವರು ದಾಖಲೆಗಳನ್ನು ಮಾತ್ರ ಹಾಗೆ ತೋರಿಸುತ್ತಿಲ್ಲ. ಈಗಿರುವ ಪ್ರಯೋಗ ಶಾಲೆಗಳಿಂದ ಹೊಸಪದ್ಧತಿಯನ್ನು ಜಾರಿಗೆ ತರಲು ರೈತನ ಮನವೊಲಿಸುವುದೂ ಸಾಧ್ಯವಿಲ್ಲ. ಆದರೆ ನಾವು ಈ ಹೊಸಪದ್ಧತಿಯನ್ನು ಬಿಟ್ಟರೆ ಸದ್ಯಕ್ಕೆ ಬೇರೆ ಮಾರ್ಗವೇ ಇಲ್ಲ. ಯಾವ ಮಾರ್ಗದಿಂದಲೂ ಆಧುನಿಕ ಕೃಷಿಪದ್ಧತಿಯನ್ನು ಕೃತಿಗಿಳಿಸಿ ಎಲ್ಲಾ ರೈತರೂ ಅದನ್ನಪ್ಪಿಕೊಳ್ಳುವಂತೆ ಮಾಡಲೇಬೇಕು. ಇದನ್ನು ಸಾಧಿಸಲು ಇಲ್ಲಿ ಒಂದು ಯೋಜನೆಯನ್ನು ಮಂಡಿಸಲಾಗಿದೆ. ಒಕ್ಕಲತನದ ಮುಖ್ಯಾಧಿಕಾರಿಗಳೂ, ಸರ್ಕಾರದವರೂ, ಈ ಯೋಜನೆಯ ಉಪಯುಕ್ತತೆಯ ಬಗ್ಗೆ ಕೂಲಂಕಷವಾಗಿ ವಿಚಾರಮಾಡಿ ಸೂಕ್ತಮಾರ್ಗವನ್ನು ಕೈಕೊಳ್ಳುವರೆಂದು ಆಶಿಸಲಾಗಿದೆ. ಯೋಜನೆಯ ಸೂಕ್ಷ್ಮ ವಿವರಗಳು, ಹಣ ಒದಗಿಸುವ ವಿಧಾನ, ಇತ್ಯಾದಿಗಳ ಬಗ್ಗೆ ಯೋಜನೆಯು ಉಪಯುಕ್ತವೆಂದು ಕಂಡ ನಂತರ ವಿಚಾರಮಾಡಬಹುದು. ಇದರಲ್ಲಿ ಅಲ್ಪಸ್ವಲ್ಪ ಮಾರ್ಪಾಟನ್ನು ಮಾಡಿದರೆ ಇದನ್ನು ಭಾರತದ ಎಲ್ಲಾ ಭಾಗಗಳಿಗೂ ಹೊಂದಿಸಿಕೊಳ್ಳಲು ಬರುತ್ತದೆ.

ಫೀಲ್ಡ್‌ಮನ್ ಅಥವಾ ಅಗ್ರಿಕಲ್ಚರಲ್ ಅಸಿಸ್ಟೆಂಟ್

ಯೋಜನೆಯ ರೂಪರೇಷೆಯನ್ನು ತಿಳಿಸುವ ಮೊದಲು ಈಗಿನ ಅಗ್ರಿಕಲ್ಚರಲ್ ಅಸಿಸ್ಟೆಂಟ್ ಅಥವಾ ಫೀಲ್ಡ್‌ಮನ್ ಎಂಬ ಅಧಿಕಾರಿಗಳು ಮಾಡಬೇಕಾದ(ಮಾಡುತ್ತಿರುವ) ಕೆಲಸಗಳೇನು ಎಂಬುದನ್ನು ತಿಳಿದುಕೊಳ್ಳುವುದು ಅನುಕೂಲ. ಅದನ್ನು ಪಟ್ಟಿಮಾಡಿ ಕೆಳಗೆ ಕೊಡಲಾಗಿದೆ.

1 ಉತ್ತಮಜಾತಿಯ ಬೀಜಗಳನ್ನು (ಧಾನ್ಯಗಳ) ತರಿಸಿ ರೈತರಿಗೆ ಹಂಚುವುದು ಯಾ ಮಾರುವುದು.

2 'ಸರಕಾರಿ ಗೊಬ್ಬರ'ವನ್ನು ಮಾರುವುದು. (ಗೊಬ್ಬರವನ್ನು ಮಾರಲು ಬಹುಶಃ ಎಲ್ಲಾ ಗ್ರಾಮಗಳಲ್ಲಿಯೂ ಈಗ ಸ್ಥಾನಿಕ ಏಜಂಟರಿದ್ದಾರೆ)

3 ತಿಪ್ಪೆ ಗೊಬ್ಬರವನ್ನು ಸುಧಾರಿಸಿದ ರೀತಿಯಲ್ಲಿ ಸಂಗ್ರಹಿಸಿಡುವ ವಿಧಾನದ ಪ್ರಚಾರ ಮಾಡುವುದು.

4 ಕಂಪೋಸ್ಟ ಗೊಬ್ಬರದ ಪ್ರಚಾರ.

5 ಹಣ್ಣಿನ ಗಿಡಗಳು, ತೆಂಗಿನ ಮರಗಳು, ತರಕಾರಿ, ಗೆಣಸು, ಇತ್ಯಾದಿಗಳನ್ನು ಬೆಳೆಸುವಂತೆ ಪ್ರಚಾರಮಾಡುವುದು.

6 ಒಡ್ಡುಹಾಕಿ ಎರಡನೆಯ ಪೈರನ್ನು ಬೆಳೆಸಲು ಸಲಹೆ ಕೊಡುವುದು—ಕೆಲವು ಭಾಗಗಳಲ್ಲಿ ಮಾತ್ರ—ಈಚೆಗೆ ಒಡ್ಡಿನ ಯೋಜನೆಯ ಬಗ್ಗೆ ಲಕ್ಷ್ಯ ಕಡಿಮೆಯಾಗುತ್ತಿದೆ.

7 ಕೆರೆ ಮತ್ತು ಭಾವಿ—ರೈತಾಪಿ ಉಪಯೋಗಕ್ಕಾಗಿ ಕೆರೆ ಮತ್ತು ಭಾವಿಗಳನ್ನು ತೋಡಲು ಇಲ್ಲವೆ ರಿಪೇರಿ ಮಾಡಲು ಸರ್ಕಾರದವರು ಕೊಡಮಾಡಿದ ಸವಲತ್ತುಗಳ ಲಾಭವು ರೈತರಿಗೆ ಸಿಕ್ಕುವಂತೆ ಸಹಾಯ, ಸಲಹೆಗಳನ್ನು ನೀಡುವುದು.

8 ನೇಗಿಲು, ಕುಳ, ತಂತಿಬೇಲಿ, ಹಳಿಪಟ್ಟಿ, ಸಿಮೆಂಟ್ ಇತ್ಯಾದಿ ವಸ್ತುಗಳನ್ನು ಮಾರುವುದು.

9 ಕೃಷಿಯ ಬಗ್ಗೆ ವೈಜ್ಞಾನಿಕ ಸಲಹೆಯನ್ನು ಕೊಡುವುದು.

10 ರೂರಲ್ ಡೆವಲಪ್‌ಮೆಂಟ್ ಕೆಲಸ.

ಈ ಎಲ್ಲಾ ಕೆಲಸಗಳನ್ನು ನಾಲ್ಕು ಗುಂಪುಗಳಾಗಿ ವಿಂಗಡಿಸಬಹುದು. (1) ಬೀಜ ನೇಗಿಲು ಇತ್ಯಾದಿ ವಸ್ತುಗಳನ್ನು ಮಾರುವುದು, (2) ಸುಧಾರಿಸಿದ ಕೃಷಿ ವಿಧಾನಗಳ ಪ್ರಚಾರ ಮತ್ತು ವೈಜ್ಞಾನಿಕ ಸಲಹೆಕೊಡುವುದು. (3) ಸರ್ಕಾರದವರು ಕೊಡಮಾಡಿದ ಸವಲತ್ತುಗಳು ರೈತರಿಗೆ ಮುಟ್ಟುವಂತೆ ಮಾಡುವುದು ಮತ್ತು (4) ರೂರಲ್ ಡೆವಲಪ್‌ಮೆಂಟ್ (ಗ್ರಾಮ ಸುಧಾರಣೆ) ಕೆಲಸ.

ವಿವೇಚನೆ

(1) ಬೀಜ, ಗೊಬ್ಬರ ಇತ್ಯಾದಿಗಳನ್ನು ಮಾರುವುದು ತಜ್ಞರೇ ಮಾಡಬೇಕಾದ ಮಹತ್ವದ ಕೆಲಸವಲ್ಲ (2) ಕೇವಲ ಪ್ರಚಾರದಿಂದ ಜನರ ಮನಸ್ಸನ್ನು ತಿರುಗಿಸುವುದು ಯಾ ಒಲಿಸಿಕೊಳ್ಳುವುದು ಹೇಗೆ ಅಸಾಧ್ಯವೆಂಬುದನ್ನು ಹಿಂದೆ ತೋರಿಸಲಾಗಿದೆ. (3) ಸರ್ಕಾರದವರು ಕೊಡಮಾಡಿದ ಸವಲತ್ತುಗಳು ರೈತರಿಗೆ ಮುಟ್ಟುವ ಮಧ್ಯದಲ್ಲಿ ನಾನಾತರಹದ ವ್ಯವಹಾರಿಕ ತೊಂದರೆಗಳು ಉದ್ಭವಿಸುತ್ತವೆ. ಬಹುಶಃ ಎಲ್ಲಾ ಸವಲತ್ತುಗಳ ಲಾಭವೂ ಊರಿನ ವಿದ್ಯಾವಂತ ಮುಖಂಡರಿಗೆ ಸಿಕ್ಕುತ್ತಿದೆಯೇ ಹೊರತು ಸಾಮಾನ್ಯ ರೈತನಿಗೆ ಸಿಕ್ಕುತ್ತಿಲ್ಲ. ಉದಾಹರಣೆಗಾಗಿ ಹೇಳುವುದಾದರೆ ಸರ್ಕಾರದವರು ಪ್ರತಿ ತಾಲೂಕ್ ಅಥವಾ ಜಿಲ್ಲೆಗಳಲ್ಲಿ ಹಂಚಲಾಗಿದೆ ಎಂದು ಹೇಳುವ ಸಿಮೆಂಟು, ಗಾಡಿಹಳಿ, ತಗಡು, ಸರಳು, ಮುಟ್ಟುಗಳು ಇತ್ಯಾದಿ ವಸ್ತುಗಳನ್ನು ಕೊಂಡುಕೊಂಡ ಮಹನೀಯರ ಹೆಸರುಗಳನ್ನೂ ಅವರ ಸ್ಥಾನಮಾನ ಹಾಗೂ ವಾರ್ಷಿಕ ವರಮಾನಾದಿಗಳನ್ನು ವಿವರವಾಗಿ ಪರಿಶೀಲಿಸಿದರೆ ಗುಟ್ಟು ಹೊರಬೀಳುತ್ತದೆ. (ಈ ವಿಷಯದಲ್ಲಿ ಅಧಿಕಾರಿಗಳಿಗೆ ನಂಬಿಕೆಯಿದ್ದರೆ, ಇಡೀ ಪ್ರಾಂತ್ಯದಲ್ಲಿಯ ಯಾವ ಜಿಲ್ಲೆಯನ್ನಾದರೂ ಆರಿಸಿ ವಿವರಗಳನ್ನು ಪರಿಶೀಲಿಸಿ ನೋಡಲಿ.) ಇಂತಹ ದೋಷಗಳನ್ನು ತಪ್ಪಿಸುವ ಮಾರ್ಗವನ್ನು ಇನ್ನು ಕಂಡುಹಿಡಿಯಬೇಕಾಗಿದೆ ಹಿಂದೆ ತಿಳಿಸಿದ ಸಾಮಾನುಗಳನ್ನು ಕೊಂಡವರ ಹೆಸರು, ವಾರ್ಷಿಕ ಉತ್ಪನ್ನ ಹಾಗೂ ಅವರುಕೊಂಡ ಸಾಮಾನುಗಳ ವಿವರಗಳನ್ನು ಸಾರ್ವಜನಿಕರ ಅವಗಾಹನೆಗಾಗಿ ಪ್ರಕಟಿಸುವ ವಿಷಯ ಟಿನ ವಿಚಾರಮಾಡಬಹುದು. (4) ರೂರಲ್ ಡೆವಲಪ್‌ಮೆಂಟ ಕೆಲಸವು ಒಂದು ಸಮುದ್ರದಂತಿದೆ. ಇದರಲ್ಲಿ ಎಲ್ಲಾ ಖಾತೆಗಳ ಕೆಲಸವೂ ಐಕ್ಯವಾಗುವುದಾದರೂ ಯಾವ ಕೆಲಸವೂ ತೃಪ್ತಿಕರವಾಗಿ ನಡೆಯುತ್ತಿಲ್ಲ. ಈ ಬಾಬಿಗಾಗಿ ಖರ್ಚಾಗುತ್ತಿರುವ ಹಣದ ಸದುಪಯೋಗವಾಗುವಂತಹ ವಿಧಾನವನ್ನೂ, ದಕ್ಷ ಕೆಲಸಗಾರರನ್ನೂ ಇನ್ನು ಹುಡುಕಬೇಕಾಗಿದೆ. ಇದುವರೆಗಿನ ಅನುಭವದಿಂದ ಫೀಲ್ಡ್‌ಮನ್ ಅಥವಾ ಅಗ್ರಿಕಲ್ಚರಲ್ ಅಸಿಸ್ಟೆಂಟ್ ಎಂಬ ಅಧಿಕಾರಿಗಳಿಂದ ಈ ಬಾಬಿನಲ್ಲಿ ಹೇಳಿಕೊಳ್ಳುವಂತಹ ಕೆಲಸವೇನೂ ಆಗುತ್ತಿಲ್ಲವೆಂಬುದು ಸ್ಪಷ್ಟವಾಗುತ್ತದೆ.

(ಮುಂದುವರಿಯುವುದು)

ಕಿರಿಯರ ಪ್ರಪಂಚ'ದ ಪ್ರಕಟಣೆಗಳು

ಕೊರಡ್ಕಲ್ ಶ್ರೀನಿವಾಸರಾಯರಿಂದ—

ನಂದಾದೀಪ [ಸಣ್ಣ ಕತೆಗಳು]	0—14—0
ಭಾರತೀಯ ಕತೆಗಳು	0—14—0
ಮೂರು ಪ್ರಹಸನಗಳು	0—14—0

ಎಸ್. ವೆಂಕಟರಾಜರಿಂದ—

ರಂಗಭೂಮಿ [ನಾಟಕ]	0— 8—0
ಆಕಾಶ ಗಂಗೆ [ಸಣ್ಣ ಕತೆಗಳು]	1—12—0
ಕವಿತಾಕಾಮಿನಿ [ಕವನಗಳು]	2— 0—0
ಸಪ್ತಸಾಗರ [ಸಣ್ಣ ಕತೆಗಳು]	0—12—0

ಕೆ. ಕೆ. ಶೆಟ್ಟರಿಂದ—

ಸಂಶಯ ಪಿಶಾಚಿ [ನಾಟಕ]	0— 8—0
ಕುಶಲವ [ನಾಟಕ]	0— 6—0
ವ್ಯಭಿಚಾರಿಣಿಯಾರು [ನಾಟಕ]	1— 0—0
ಹೆಂಡ್ತಿ ಗಂಡನಾದರೆ [ಪ್ರಹಸನ]	0— 4—0
ಪುರುಷವಧು [ಪ್ರಹಸನ]	0— 4—0
ದೇಶಭಕ್ತ [ನಾಟಕ]	1— 4—0
ಪ್ರೇಮವಿಜಯ [ನಾಟಕ]	1— 0—0
ಸನ್ಯಾಸಿಯ ಸೋಗಿನಲ್ಲಿ [ಕಾದಂಬರಿ]	0—8—0

ಇತರ ಪುಸ್ತಕಗಳು

ಕಾವ್ಯ ಸಾಮ್ರಾಜ್ಯ [ಕವನ ಸಂಗ್ರಹ]	1— 4—0
ಮಧುವನ [ಕಥಾಸಂಗ್ರಹ]	3— 0 - 0
ನಾಡಕತೆಗಳು [ಕಥಾಸಂಗ್ರಹ]	0— 3— 0
ಸೇವಾಪಥ [ನಾಟಕ]	0— 8—0
ನಗೆನೋಟಗಳು [ಕೆ. ವಿ. ಶೆಣೈ]	0—14—0
ಅನ್ನದೇವರು ಮತ್ತು ಇತರಕತೆಗಳು [ಕೆ. ಕೆ. ರೈ]	1— 0—0
ಭಾರತದಲ್ಲಿ ಜಾತಿಭೇದ	1— 0—0
ವಿಷ್ಣುವಿನ ದಶಾವತಾರಗಳು [ಎಂ. ವಿ. ಹೆಗ್ಡೆ]	0—12—0
ಸ್ವಾತಂತ್ರ್ಯ ವೀರಸಾವರಕರ [ಇಂದಿರಾ ಬಾಯಿ]	1— 4 - 0
ಜೀವನ ಸಂಗ್ರಾಮ [ಪಿ. ಶೀನ ಶೆಟ್ಟಿ]	1— 8—0
ಕದಂಬ [ಸರಸ್ವತಿಬಾಯಿ ರಾಜವಾಡೆ]	1— 4 0
ಪ್ರಕಾಶ [,,]	2— 0—0
ಜಮೀನ್ದಾರ [ಹೊಸಮನಿ ಗುಡ್ಡಪ್ಪ]	1— 8—0
ಸ್ವತಂತ್ರ ಜೀವನೋಪಾಯ	0— 3—0

ನವಭಾರತ ಪುಸ್ತಕಭಂಡಾರ, ಉಡುಪಿ

ಅಮೃತಾಂಜನ

ತಲೆವೇದನೆ, ಶಿರೋವೇದನೆ, ಉಳುಕು ಕುತ್ತಿಗೆ, ಭುಜ ಹಲ್ಲು ವೇದನೆಗಳಿಗೂ, ಎದೆನೋವು, ಗಾಯಗಳು, ಬಾತುಕೊಳ್ಳುವುದು, ಚೇಳುವಿಷಮುಂತಾದವು, ಸನ್ನಿವಾತ, ಮೊಡವೆ. ಮೊದಲಾದ ಎಲ್ಲಾರೋಗಗಳಿಗೂ ಸಿದ್ಧೌಷಧ

REGD

ಹಾಳು ಕಡ್ಡಿ ಮದ್ದು ನಮ್ಮಲ್ಲಿ ಸಿಕ್ಕುತ್ತದೆ

ಅಮೃತಾಂಜನ ಲಿಮಿಟೆಡ್

ಮದರಾಸು.

ಬೊಂಬಾಯಿ ಮತ್ತು ಕಲ್ಕತ್ತ.

ಸ್ವೀಕಾರ-ವಿಮರ್ಶೆ

ಶ್ರೀ| ಟಿ. ಸದಾಶಿವಯ್ಯನವರ ಆರು ನಾಟಕಗಳು

ಶಾಂತಿ, ಜಯಶ್ರೀ ರಹಸ್ಯ, ಸ್ವಾತಂತ್ರ್ಯ ಘರ್ಜನೆ, ಅಮ್ಮ, ಶಿವಾಜಿಯ ಬಾಲ್ಯ.

ಪ್ರಕಾಶಕರು:-

ಆನಂದ ಬ್ರದರ್ಸ್, ಬೆಂಗಳೂರು ೨.

ನಾಟಕ ರಚನೆಯಲ್ಲಿ ಅತ್ಯಂತ ನಿಪುಣರಾದ ಶ್ರೀ| ಟಿ. ಸದಾಶಿವಯ್ಯನವರ ಆರು ನಾಟಕಗಳೂ ವಿಷಯ- ಸನ್ನಿವೇಶಗಳ ದೃಷ್ಟಿಯಿಂದ ಬೇರೆಯಾದವುಗಳು, ಕೊನೆಯ ಎರಡು ನಾಟಕಗಳು ಮಕ್ಕಳಿಗಾಗಿ ಬರೆದಂಥವುಗಳು.

ಶಾಂತಿ

ಉತ್ತಮ ಸಂಸ್ಕೃತಿ ಹಾಗೂ ಆಧ್ಯಾತ್ಮಿಕವಾದದ ಬೆಳಕು 'ಶಾಂತಿ' ನಾಟಕದ ಮೇಲೆ ಚೆನ್ನಾಗಿ ಬಿದ್ದಿದೆ. ಸರ್ವತತ್ವಗಳ ಸಮ್ಮಿಲನದಿಂದ ಲಿಂಗಪ್ಪನಯ್ಯನವರ ಮನಸ್ಸು ಪರಿಪಕ್ವಗವಾಗಿದೆ. ಅಧ್ಯಾತ್ಮದ ದಿವ್ಯಜ್ಞಾನ ಅವರಲ್ಲಿ ಮೈಗೂಡಿಬಂದಿದೆ. ಮನಸ್ಸು ಪರಿಪಕ್ವವಾಗಿದೆ. ನಂಜುಂಡನಂತಹ ಮಗನ ನಿರ್ದಯ ಮನೋವೃತ್ತಿಯ ಮುಂದೆ ಲಿಂಗಪ್ಪನವರ ಸಾತ್ವಿಕ ಬೋಧೆ ಸ್ಪರ್ಧೆಗೆ ನಿಲ್ಲುವ ದೃಶ್ಯ ಅತ್ಯಂತ ಪರಿಣಾಮಕಾರಿಯಾಗಿದೆ. ಬದುಕಿನಲ್ಲಿ ಬೇರೆಯವರಿಗೆ ಸಾಧ್ಯವಾದರೆ ಸಹಕಾರ ನೀಡಬೇಕು ಇಲ್ಲವೆ ಸಹಾನುಭೂತಿಯನ್ನಾದರೂ ತೋರಿಸಬೇಕೆನ್ನುವುದೇ ಲಿಂಗಪ್ಪನವರ ತತ್ವ. ಮನಸ್ಸು ಆತ್ಮಶಕ್ತಿಯಿಂದ ಒಂದು ಸ್ಥಿತಿಗೆ ಬಂದಮೇಲೆ ಬಂಧುತ್ವ ಹೇಗೆ ಬೆಳೆಯುತ್ತದೆನ್ನುವುದಕ್ಕೆ ಲಿಂಗಪ್ಪನವರು ಸಿಂಗ್ರಿಯನ್ನು ನಡೆಸಿಕೊಂಡ ರೀತಿಯಲ್ಲಿ ಚೆನ್ನಾಗಿ ಅರ್ಥವಾಗುತ್ತದೆ. ಶಾಂತಿ ಉತ್ತಮ ಅಭಿರುಚಿಯುಳ್ಳಂತಹ ನಾಟಕ. ತಾತ್ವಿಕವೂ, ನೀತಿಪ್ರದವೂ ಆದ ನಾಟಕ. ಆದರೆ ಇಂತಹ ಉತ್ತಮವಾದ ಆದರ್ಶವುಳ್ಳ 'ಶಾಂತಿ'ಯ ಸವಿಯನ್ನುಣ್ಣಬೇಕಾದರೆ ಓದುವವರಾಗಲೀ, ಪ್ರೇಕ್ಷಕರಾಗಲೀ ಕೊಂಚಮಟ್ಟಿಗೆ ಸುಸಂಸ್ಕೃತರೇ ಆಗಬೇಕಾಗುತ್ತದೆ ಆದುದರಿಂದ ರಂಗದ ಮೇಲೆ ಜನಪ್ರಿಯ ಎನ್ನಿಸಿಕೊಳ್ಳುವುದು ಕಷ್ಟವಿದೆ. ಆದರೂ ಶಾಂತಿ ಸದಾಶಿವಯ್ಯನವರ ಉತ್ತಮ ಕಲಾಕೃತಿಯೆಂದೇ ಹೇಳಬೇಕು.

ಜಯಶ್ರೀ

ಜಯಶ್ರೀ ಒಂದು ಮನರಂಜನೆಯ ದೃಶ್ಯ. ರಂಗದ ಮೇಲೆ ಇದು ಹೆಚ್ಚು ಪ್ರಭಾವಿಯಾಗಬಲ್ಲುದೆಂಬುದಕ್ಕೆ ಯಾವ ಸಂದೇಹವೂ ಇರಲಾರದು. ಕಥಾವಸ್ತು ಅಸ್ವಾಭಾವಿಕವಾಗಿದ್ದರೂ ಸತ್ವಪೂರ್ಣ ಸಂಭಾಷಣೆಗಳಿಂದಲೂ ಸ್ವಾರಸ್ಯವಯ ಸನ್ನಿವೇಶಗಳಿಂದಲೂ ಮೊದಲಿಂದ ಕಾದಿಯತನಕವೂ ನಮ್ಮ ಕುತೂಹಲವನ್ನು ಕೆರಳಿಸುತ್ತವೆ. ಸಾಂಪ್ರದಾಯದ ಮುಸುಕನ್ನು ಹಾಕಿಕೊಂಡು ಅನೀತಿಯ ಕಾರ್ಯವನ್ನು ಮಾಡುವ ಅಸಾಧುಭೂತಿಗಳನ್ನು ಬಯಲಿಗೆಳೆಯುವಲ್ಲಿ ರಾಜಶೇಖರ ಒಳ್ಳೆಯ ನೀತಿಪಾಠವನ್ನು ಕಲಿಸುತ್ತಾನೆ. ಯೋಗೀಶ್ವರ ರಾಯರಂತಹ ಕಾಮುಕ ಜೀವಿಗಳು ದುಡ್ಡಿನ ಬಲಾತ್ಕಾರದಿಂದ ಹೆಣ್ಣುಮಕ್ಕಳ ಜೀವನವನ್ನು ಹಾಳುಮಾಡುವುದು ಹೊಸತೇನೂ ಅಲ್ಲ. ಜಯಶ್ರೀ ನಮ್ಮ ಜನದ ನಡುವೆ ಇರುವ ಹೊಲಸು ಮನೋವೃತ್ತಿಯನ್ನು ಬಯಲಿಗೆಳೆಯುವ ಕಾರ್ಯವನ್ನು ಚೆನ್ನಾಗಿ ಮಾಡಿದೆ. ಇದೊಂದು ವಿಚಾರ ಮತ್ತು ವಿನೋದಗಳ 'ಮಿಶ್ರದೃಶ್ಯ' ಮನರಂಜನೆಯ ಕಾರ್ಯದಲ್ಲಿ ಜಯಶ್ರೀಗೆ ಯಶಸ್ಸು ಕಟ್ಟಿಟ್ಟದ್ದು!

ರಹಸ್ಯ

ರಹಸ್ಯವನ್ನೋದುವಾಗ ದಿ| ಟಿ. ಪಿ. ಕೈಲಾಸಂರವರ ಟೊಳ್ಳುಗಟ್ಟಿಯ ಜ್ಞಾಪಕ ಬರುತ್ತದೆ. ವಿದ್ಯೆಯೂ ಬೇಕು, ಜೊತೆಗೆ ಕೊಂಚ ಬುದ್ಧಿಯೂ ಇದ್ದರೊಳ್ಳೆತೆನ್ನುವ ನೀತಿಯನ್ನು ರಹಸ್ಯ ಸಾರುತ್ತದೆ. ಕಲಿತವನಾದ ರಾಜಶೇಖರನ ಅಹಂಕಾರ-ಇಂಗ್ಲಿಷಿನ ಅತಿಮೋಹ ಗುರುಹಿರಿಯರನ್ನು ಧಿಕ್ಕರಿಸಿ ತಾತ್ಕಾಲಿಕ ಸುಖಮೋಹದ ಕಡೆಗೆ ಎಳೆಯುವಂತೆ ಮಾಡುತ್ತದೆ. ವಸಂತನೆಂಬುವನ ವ್ಯಕ್ತಿತ್ವದಲ್ಲಿ ಅಗಾಧವಾದ ದೇಶಪ್ರೇಮ ಮಾತಾಪಿತೃ ಪ್ರೇಮ-ಬಡಬಾಧುಗಳ ಪ್ರೇಮ ಮೈಗೂಡಿಬಂದಿದೆ ಲಕ್ಷ್ಮೀಪತಿರಾಯ, ಆತನ ಮಗಳು, ರಾಜಶೇಖರ ಈ ಮೂರು ಜನದ ಮರ್ಜಿಯೂ ಸ ಖರಾಲಸೆಗಳ ಮೇಲೆ ತೇಲಾಡುವಂತಹದು ಲಕ್ಷ್ಮೀಪತಿರಾಯ ಮದನಿಕೆ ಮೇಲೆ ಮಾನವೀಯತೆ ಅಂತಃಕರಣದ ಮೇಲೆಬಿದ್ದಿದ್ದಾನೆ ರಹಸ್ಯ ಒಂದುರೀತಿಯ ಸಮಸ್ಯಾತ್ಮಕ ನಾಟಕ ಕಥಾವಸ್ತುವಿನಲ್ಲಿ ವಾಸ್ತವತೆಯಿದೆ. ರಂಗದ ಮೇಲೂ ಇದು ಯಶಸ್ವಿಯಾಗಬಲ್ಲುದು. ನಾಟಕದ ಕೊನೆಯು ಒಳ್ಳೆಯ ಪರಿಣಾಮಕಾರಿಯಾಗಿದೆ.

ಸ್ವಾತಂತ್ರ್ಯ ಘರ್ಜನೆ

ಬ್ರಿಟಿಷರ ಆಡಳಿತದಲ್ಲಿ ಭಾರತ ಜನಾಂಗ ತನ್ನ ಪೌರುಷತ್ವವನ್ನೂ, ಅಂತಃಸ್ಸತ್ವವನ್ನೂ ಕಳೆದುಕೊಂಡು ನಿರ್ವೀರ್ಯರಾಗಿದ್ದ ಬಗೆಯನ್ನು ಇಲ್ಲಿ ಚೆನ್ನಾಗಿ ಚಿತ್ರಿಸಲಾಗಿದೆ. ಹೊರಗಿನ ಶತ್ರುವಿಗೆ ಒಳಗಿನವರೇ ಪುರಸ್ಕರಿಸುವುದನ್ನು ಇಲ್ಲಿ ಚೆನ್ನಾಗಿ ಕಾಣಬಹುದಾಗಿದೆ ಆದರೂ ದೇಶಕ್ಕಾಗಿ ಹೋರಾಡಿದ ಧೀರ ಪುರುಷರೂ ನಮ್ಮಲ್ಲಿದ್ದಾರೆ ಗುಂಡಿಗೆದೆಗೊಟ್ಟು ಸ್ವಾತಂತ್ರ್ಯವನ್ನು ಗಳಿಸಿದ ಹುತಾತ್ಮನ ನೆನಪನ್ನು ಈ ನಾಟಕ ತರುತ್ತದೆ. ಪರಾಧೀನತದಿಂದ ಸಂಸ್ಕೃತಿ, ಕಲೆ, ಆದರ್ಶಗಳೆಲ್ಲವು ಮಣ್ಣು ಮುಕ್ಕಿಹೋದವು. ನಮ್ಮ ದೇಶಕ್ಕೆ ಬಂದು ನಮ್ಮನ್ನು ಗುಲಾಮನಂತೆ ನಡೆಸಿಕೊಳ ದುಷ್ಟಪದ್ಧತಿಗೆ ವಿರೋಧವಾಗಿ ಭಾರತಸಿಂಹ ಕೆರಳುತ್ತಾನೆ. ಆ ದಬ್ಬಾಳಿಕೆದಿಂದ ಮುಕ್ತಗೊಂಡು ಸ್ವತಂತ್ರರಾಗುವದೇ ಮನುಷ್ಯಧರ್ಮವೆಂದು ತಿಳಿದು ಸ್ವಾತಂತ್ರ್ಯಕ್ಕಾಗಿ ಹೋರಾಟನಡೆಸಿ ತನ್ನ ದೇಹವನ್ನೇ ಮಾತೃಶಕ್ತಿಗೆ ಬಲಿಯಾಗಿಕೊಡುತ್ತಾನೆ. ನಮ್ಮ ಜನತೆಯ ಸ್ವಾತಂತ್ರ್ಯ, ಶಾಂತಿಯನ್ನೂ, ಬ್ರಿಟಿಷರ ಮರ್ದನನೀತಿಯನ್ನೂ, ಸ್ವಾತಂತ್ರ್ಯ ಘಟನೆಯಲ್ಲಿ ಚೆನ್ನಾಗಿ ಚಿತ್ರಿಸಿದ್ದಾರೆ ನಾಟಕಕಾರರು.

ಅಮ್ಮ

ಕಿರಿಯರಿಗಾಗಿ ಬರೆದ ನಾಟಕದಲ್ಲಿ ಒಳ್ಳೆಯ ಬೋಧನಾತ್ಮಕ ನೀತಿಯನ್ನು ತೋರಿಸಲಾಗಿದೆ. ಆದರೆ ಹಲವು ಸನ್ನಿವೇಶಗಳು ಭಾವನಾತ್ಮಕವಾಗಿದ್ದು ಕಿರಿಯರ ಬುದ್ಧಿಶಕ್ತಿಗೆ ಹೆಚ್ಚಾಗಬಹುದೋ? ಎಂದು ಶಂಕೆಮಾಡುತ್ತದೆ. ಮಾತುಗಾರಿಕೆಯೂ ಹಲವೆಡೆಗಳಲ್ಲಿ ಗಂಭೀರವಿರುತ್ತವೆ. ಅಂತೂ 'ಅಮ್ಮ' ಸಾಮಾನ್ಯ ರೀತಿಯ ನಾಟಕ ರಂಗದ ಮೇಲೆ ಅಷ್ಟೊಂದು ಪರಿಣಾಮಕಾರಿಯಾಗದು.

ಶಿವಾಜಿಯ ಬಾಲ್ಯ

ಇದು ಕೂಡಾ ಕಿರಿಯರಿಗಾಗಿಯೇ ಬರೆದುದಾಗಿದೆ. ಸಂಭಾಷಣೆಗಳಲ್ಲಿ ಮಕ್ಕಳ ಮನಸ್ಸನ್ನು ಅರಳಿಸುವ ಸತ್ವವಿದೆ. ಸಣ್ಣ ಸಣ್ಣ ವಿಚಾರದಲ್ಲಿ ಜಿಜ್ಞಾಸೆ ನಡೆಸುವದು ವಿಷಯ ಸಂಗ್ರಹಕ್ಕೆ ಮುಖ್ಯವಾಗಿದೆ, ಸಂಭಾಷಣೆಗಳು ಕೊಂಚ ದೀರ್ಘವೆನಿಸಿದರೂ ಕುತೂಹಲಪೂರ್ಣವಾಗಿರುತ್ತವೆ. ಅಂತೂ ಕಿರಿಯರು ಅಭಿನಯಿಸಿ ಆನಂದಿಸಬಹುದಾದ ನಾಟಕವಿದು.

ಇತರ ಸಾಹಿತ್ಯವನ್ನು ರಚಿಸುವವನಿಗಿಂತ ನಾಟಕಕರ್ತನ ಹೊಣೆ ಹೆಚ್ಚಾಗಿರುತ್ತದೆ. ಉಭಯ ಪಾತ್ರಗಳ ಸಂಭಾಷಣೆಯಲ್ಲೂ ಆತನು ಸತ್ವವನ್ನು ತುಂಬಬೇಕು, ಮಾತು ಹೆಚ್ಚಾದರೆ ಪ್ರೇಕ್ಷಕರು ಆಕಳಿಸುತ್ತಾರೆ. ಚಪ್ಪಾಳೆ ಹೊಡೆಯುತ್ತಾರೆ, ಕೊನೆಗೆ ನಾನಾರೀತಿಯ ಪ್ರತೀಕಾರವನ್ನು ಮಾಡುತ್ತಾರೆ. ಇಂತಹ ಸನ್ನಿವೇಶದಲ್ಲಿ ಸಂಭಾಷಣೆ ಹಿತಮಿತವಾಗಿರುವಂತೆ ನೋಡಿಕೊಳ್ಳಬೇಕು ಇದಕ್ಕೆ ಹೊಂದಿಕೊಂಡು ದೃಶ್ಯಯೋಜನೆಯನ್ನು ಮಾಡಬೇಕು ಭಾವನಾತ್ಮಕವಾಗಿ ಬರೆಯುತ್ತಹೋದರೆ ಅದು ರಂಗಭೂಮಿಯ ಮೇಲೆ ಯಶಸ್ವಿಯಾಗದು ಕಥಾವಸ್ತುವೂ, ಸಂಭಾಷಣೆಯೂ ಕೇವಲ ನಾಟಕೀಯವಾದರೂ ಜನಮೆಚ್ಚದು. ದೇಶಕಾಲಸಂಸ್ಕೃತಿಯ ಬೆಳಕು ಕಲ್ಪನೆಯಲ್ಲೂ ವ್ಯಕ್ತಿ ಸಂಸ್ಕೃತಿಯಲ್ಲೂ ಬರಬೇಕು ಈ ಎಲ್ಲ ದೃಷ್ಟಿಯಿಂದ ಅವನು ಬರೆಯುವದಾದರೆ ನಾಟಕವನ್ನು ಅಭಿನಯಿಸುವವರಿಗೂ ನೋಡುವವರಿಗೂ ಸುಖವಿದೆ. ಶ್ರೀ| ಟಿ ಸದಾಶಿವಯ್ಯನವರಿಗೆ ಮೇಲೆ ಹೇಳಿದ ಕಲೆ ಸಿದ್ಧಿಸಿದೆ. ಬರಹಗಾರನು ನಟನೇ ಆಗಿದ್ದರೆ ನಾಟಕವು ಹೇಗೆ ರಸವತ್ತಾಗುತ್ತದೆನ್ನುವುದಕ್ಕೆ ಸದಾಶಿವಯ್ಯನವರ ದೃಶ್ಯಗಳು ಉತ್ತಮ ಉದಾಹರಣೆ. ಪ್ರತಿಯೊಂದು ನಾಟಕದಲ್ಲೂ ತಾತ್ವಿಕ ವಿಚಾರವಿದೆ-ವಿನೋದವಿದೆ-ವಿಡಂಬನೆಯಿದೆ. ಈ ಬಗೆಯ ವೈವಿಧ್ಯತೆಗೊಪ್ಪುವ ಲಲಿತವೂ ಭಾವನಾತ್ಮಕವೂ ಆದ ಮಾತು ಪ್ರತಿಮಾತುಗಳಿವೆ. ಒಂದೊಂದು ನಾಟಕದಲ್ಲಿ ಒಂದೊಂದು ಬಗೆಯ ರಸಾನುಭವವನ್ನು ನಾವು ಸವಿಯಬಹುದಾಗಿದೆ. ಈ ನಾಟಕಗಳ ಯಶಸ್ವೀ ಪ್ರಯೋಗಕ್ಕೆ ಶ್ರೀ| ಟಿ ಸದಾಶಿವಯ್ಯನವರ ಉತ್ತಮ ಕಲಾಭಿರುಚಿಯೇ ಕಾರಣ. ಈ ಬಗೆಯ ಕಲಾಕೃತಿಯನ್ನು ರಚಿಸಿ ಕನ್ನಡ ರಂಗಭೂಮಿಯನ್ನವರು ಬೆಳಗುವಂತಾಗಲಿ. ಆ ಕಾರ್ಯದಲ್ಲಿ ಪ್ರಕಾಶಕರಾದ ಶ್ರೀ| ಆನಂದ ಬ್ರದರ್ಸನವರ ಸಾಹಸ ಶ್ಲಾಘನೀಯ. ಕನ್ನಡದ ಜನ ಪ್ರೇಕ್ಷಕರಾಗಿ ನೋಡುವ ಹಾಗೂ ಅಭಿನಯಿಸುವ ಪರಿಂದ ಪಾತ್ರವಹಿಸಿ ಮುದ್ದುಕೊಟ್ಟು ಕೊಳ್ಳುವದರ ಮೂಲಕ ತಮ್ಮ ತಮ್ಮ ಕಲಾಭಿಮಾನವನ್ನು ವ್ಯಕ್ತಪಡಿಸಬೇಕು.

—ಎಸ್ಸೆಲ್.

THE PANGAL NAYAK BANK LIMITED.

Head Office] Incorporated in 1920.) [Udipi S K

SEASON DEPOSITS are received and accepted on the following terms:—

For three, four or five months deposits at 3% p. a

For six, seven or eight months deposits at 3½% p. a

These are to be terminable by the 30th June 1951.

Interest is payable along with the principal at maturity.

Our THREE YEAR CAH CERTIFICATE b ... to You a fair yeild: For particulars please ask for copy of Rules

"ಬೇರೆ ಶಾಸ್ತ್ರಗಳನ್ನೋದಿದರೇನು? ಗೀತೆಯನ್ನು ಚೆನ್ನಾಗಿ ಓದಬೇಕು"—(ವರಾಹ ಪುರಾಣ)

ಗೀತೆಯ ಕೈಗನ್ನಡಿ

(ಭಗವದ್ಗೀತೆಯ ಮೂಲ ಶ್ಲೋಕ ಮತ್ತು ಕನ್ನಡ ಅನುವಾದ)

● ಅನುವಾದಕರು-ಮಿ| ಹೊಸಕೆರೆ ಚಿದಂಬರಯ್ಯನವರು ●

ಈ ಗ್ರಂಥದಲ್ಲಿ ಗೀತೆಯ ಮೂಲದಲ್ಲಿ ಇರುವುದಲ್ಲದೆ ಮೂಲದಲ್ಲಿ ಸಹಜವಾಗಿ ಕಾಣಬರುವ ಅರ್ಥವೂ ಮಾತುಗಾರಿಕೆಯ ಮಾತುಗಳ ರೂಪದಲ್ಲಿಯೇ ಛಟ್ಟಿಯಾಗಿ ಎದ್ದು ಕಾಣುವುದು.

400ಕ್ಕೂ ಮಿಕ್ಕ ಪುಟಗಳು! ಬೆಲೆ 0—12—0.

ಒಂದು ರೂಪಾಯಿಯನ್ನು ಕಳುಹಿಸಿದರೆ ಒಂದು ಪ್ರತಿಯನ್ನು ಬುಕ್‌ಪೋಸ್ಟಿನಿಂದ ಕಳಿಸಲಾಗುವುದು.

ಪ್ರತಿಗಳು ಸಿಗುವ ಮುಖ್ಯ ಸ್ಥಳ:—

ನವಯುಗ ಪ್ರೆಸ್, ಉಡುಪಿ ದ. ಕನ್ನಡ

ಪ್ರಸಿದ್ಧ ಪುಸ್ತಕ ವ್ಯಾಪಾರಿಗಳಲ್ಲೆಲ್ಲ ದೊರೆಯುತ್ತದೆ

ಟೆಂಡರು ನೋಟೀಸು

ಉಡುಪಿ ತಾಲೂಕು ಹೆಗ್ಗುಂಜೆ ಗ್ರಾಮದ ಸ್ಥಾಪನಾ ನಂಬ್ರ 521ನೇ ಮಂದಾರ್ತಿ ಶ್ರೀ ದುರ್ಗಾ ಪರಮೇಶ್ವರಿ ಅಮ್ಮನವರ ದೇವಸ್ಥಾನದ ಟ್ರಸ್ಟೀಗಳಾಧೀನದಿಂದ ಎಲ್ಲಾ ಜನರಿಗೆ ತಿಳಿಯಪಡಿಸುವುದೇನಂದರೆ—

ಸದ್ರಿ ದೇವಸ್ಥಾನದ ಜೀರ್ಣೋದ್ಧಾರದ ಬಾಬಿನಲ್ಲಿ ಎಸ್ಟಿಮೇಟಿನಲ್ಲಿ ತೋರುವ ಬಿಲ್ಡಿಂಗ್ ಕಾಮಗಾರಿಗಳನ್ನು ನಡೆಸುವ ಬಗ್ಗೆ ಮೊಹರು ಹಾಕಿದ ಟೆಂಡರುಗಳನ್ನು ಅಗತ್ಯ ಉಳ್ಳವರು ತಾ. 14-6 1951ನೆ ಸಾಯಂಕಾಲ 5 ಗಂಟೆಯೊಳಗೆ ಹಾಜರುಪಡಿಸತಕ್ಕದ್ದು. ಟೆಂಡರುಗಳನ್ನು ತಾ. 15-6-51ನೇ ಸಾಯಂಕಾಲ 3 ಗಂಟೆಗೆ ತೆರೆಯಲಾಗುವುದು.

ಟೆಂಡರುಗಳನ್ನು ಅಪೇಕ್ಷಿಸುವವರು ಅನುಸರಿಸತಕ್ಕ ಶರ್ತಗಳು:-

1 ದೇವಸ್ಥಾನದ ಟ್ರಸ್ಟಿಗಳ ಆಫೀಸಿನಿಂದ ಪ್ರತಿ ಟೆಂಡರಿಗೆ ಒದಗಿಸಲಾಗುವ ಕೆಲಸಗಳ ವಿವರಪತ್ರಿಕೆಯನ್ನು ಪಡಕೊಳ್ಳತಕ್ಕದ್ದು.

2 ಪ್ರತಿಯೊಬ್ಬ ಟೆಂಡರನು ಟೆಂಡರಿನೊಂದಿಗೆ ದೇವಸ್ಥಾನದ ಲೆಕ್ಕಕ್ಕೆ ಬ್ರಹ್ಮಾವರ ಸಿಂಡಿಕೇಟ್ ಬ್ಯಾಂಕಿನ S. B. ಎಕೌಂಟಿನಲ್ಲಿ ರೂಪಾಯಿ 200/ರನ್ನು ಜಮಾ ಮಾಡಿ ರಶೀದಿಯನ್ನು ಇಡತಕ್ಕದ್ದು.

3 ಮೇಲೆ ಕಾಣಿಸಿದಂತೆ ಬ್ರಹ್ಮಾವರ ಸಿಂಡಿಕೇಟ್ ಬ್ಯಾಂಕಿನ ರಶೀದಿಯಿಲ್ಲದೆ ಬಂದ ಟೆಂಡರುಗಳನ್ನು ಸ್ವೀಕರಿಸಲಾಗಲಿಕ್ಕಿಲ್ಲ.

4 ಎಲ್ಲರಿಗಿಂತಲೂ ಕಡಿಮೆ ಮೊಬಲಗಿನ ಟೆಂಡರನ್ನು ಮಂಜೂರುಮಾಡಲಾಗುವುದು. ಮತ್ತು ಮಂಜೂರಾದ ಟೆಂಡರನಿಗೆ ತಿಳಿಸಲಾಗುವುದು. ಆತನು ತಿಳಿಸಿದ ಎಂಟು ದಿನಗಳೊಳಗಾಗಿ ಮೇಲ್ಕಾಣಿಸಿದ ರೂಪಾಯಿ 200/ ಅಲ್ಲದೆ ರೂಪಾಯಿ 150/-ನ್ನು ಹಾಜರುಪಡಿಸಿ ಕ್ರಮವಾಗಿ ಕರಾರು ಬರೆಕೊಡತಕ್ಕದ್ದು.

5 ಮಂಜೂರಾದ ಟೆಂಡರನ ಲೆಕ್ಕಕ್ಕೆ ಮೇಲ್ಕಾಣಿಸಿದಂತೆ ಬಾಕಿಯಾಗುವ ರೂಪಾಯಿ 350/ನ್ನು ಆತನ ಕೆಲಸವು ಸಂಪೂರ್ಣವಾಗಿಯೂ ತೃಪ್ತಿಕರವಾಗಿಯೂ ಆಗುವದೆಂದು ಇಂಜಿನಿಯರ್ ಸರ್ಟಿಫಿಕೇಟು ಕೊಟ್ಟ ನಂತರ ವಾಪಾಸು ಕೊಡಲಾಗುವುದು

6 ಕೆಲಸವನ್ನು ತಾ 30-11-1951ರೊಳಗೆ ಪೂರೈಸಿ ಕೊಡತಕ್ಕದ್ದು.

7 ಮೇಲಿನ 2ನೆ ಕಲಮಿನಲ್ಲಿ ಹೇಳಿದಂತೆ ಮಂಜೂರಾಗದ ಟೆಂಡರುಗಳ ಹಣವನ್ನು ಕೂಡಲೇ ವಾಪಾಸು ಕೊಡಲಾಗುವುದು.

ಎಚ್ ಶೇಷ ಹೆಗ್ಡೆ.
ಮೆನೇಜಿಂಗ್ ಟ್ರಸ್ಟಿ.

ಶ್ರೀ ಮಂದಾರ್ತಿ ದೇವಸ್ಥಾನ,
ತಾ 26-4 51

ತಾರೀಕು 3-5-51 ರಿಂದ

ವಾರದ ಭವಿಷ್ಯ

ತಾರೀಕು 9-5-51ರ ವರೆಗೆ

ಮೇಷ— ನೀಚೀವಾರದಲ್ಲಿ ಆರೋಗ್ಯದ ಭಾಗಕ್ಕೆ ಹೆಚ್ಚಿನ ದೃಷ್ಟಿಯುಡಿರಿ. ಆಹಾರದೋಷದಿಂದಾಗಿ ಉದರಶೂಲೆ ಜ್ವರಾದಿಗಳು ಪ್ರಾಪ್ತವಾಗಬಹುದು. ಕಷ್ಟಪಟ್ಟು ದುಡಿದ ನಿಮ್ಮ ಹಣದ ಹೆಚ್ಚಿನ ಭಾಗವು ಸದ್ವಿನಿಯೋಗವಾಗುವುದು. ವಾಹನಾದಿಗಳ ಪ್ರಯಾಣವು ದೇಹಾಪಾಯಕಾರಿಯಾಗುವದು. ವೃಥಾ ವಾಕ್ಕಲಹಕ್ಕೆ ಗುರಿಯಾದೀರಿ. ತಾ. 5, 6, 9 ಈ ದಿನಗಳಲ್ಲಿ ಸುಖಭೋಜನ ಪಾನೀಯ ಸ್ತ್ರೀಸುಖ ವಸನಾದಿಗಳ ಲಾಭವಿದೆ.

ವೃಷಭ— ನಿಮ್ಮ ಪ್ರಯತ್ನಕ್ಕೆ ಉಚಿತವಾದ ಫಲಪ್ರಾಪ್ತಿಯು ಲಭಿಸುವದಾದರೂ ಅನಿರೀಕ್ಷಿತ ಖರ್ಚುಗಳು ನಿಮ್ಮನ್ನು ದಿಗ್ಭ್ರಮೆಗೊಳಿಸಲಿವೆ. ಮನೆಯಲ್ಲಿನ ಜನರು ನಿಮ್ಮ ಮಾತನ್ನತಿಕ್ರಮಿಸಿ ವರ್ತಿಸುವದರಿಂದ ವಿಶೇಷ ಚಿಂತೆಗೊಳಗಾಗುವಿರಿ. ಪಿತ್ತ ಪ್ರಕೋಪದಿಂದಾಗಿ ಆರೋಗ್ಯ ಕೆಡಲಿದೆ. ಶ್ರಮಜೀವಿಗಳಿಗೀವಾರವು ಕಷ್ಟದಾಯಿಯಾಗಿರವುದು. ತಾ. 3, 4, 7, 8 ಈ ದಿನಗಳು ಸುಖಸಂತೋಷಕಾರಿಗಳಿವೆ.

ಮಿಥುನ— ಚಂಚಲವಾದ ನಿಮ್ಮ ಮನಸ್ಸನ್ನು ಬಿಗಿಹಿಡಿಯಿರಿ. ವಿಷಯಾದಿಗಳ ಕಡೆಗೆ ಸಿಲುಕಿ ವ್ಯರ್ಥ ನಷ್ಟ-ಕಷ್ಟಗಳಿಗೆ ಗುರಿಮಾಡೀತು. ಇಂದಿನ ನಿಮ್ಮ ಆದಾಯವು ನಿಮ್ಮ ಪರಿಶ್ರಮಕ್ಕಿಂತ ದ್ವಿಗುಣವಾಗಿ ಪರಿಣಮಿಸುವದು. ಸಾರ್ವಜನಿಕರ ಮಾನಾದರಗಳಿಗೆ ಪಾತ್ರರಾಗುವಿರಿ. ನಿಮ್ಮ ದೈಹಿಕ ಸುಖಭೋಗಗಳು ವಿಪುಲವಾಗಿ ಲಭಿಸುವವು. ತಾ. 7, 8 ಬಿಟ್ಟು ಇತರ ದಿನಗಳು ನಿಮ್ಮ ಉನ್ನತಿ ಸಾಧಕಗಳಾಗಿವೆ.

ಕರ್ಕಾಟಕ— ಗೃಹಮಾನವು ಅನುಕೂಲ ಪರಿಸ್ಥಿತಿಗೆ ಬಂದಿರುವದು. ಇಂತಹ ಸುಸಂದರ್ಭವು ನಿಮಗೆ ಸದ್ಯ ಲಭಿಕಲೊಲ್ಲದು. ಆದಕಾರಣ ಅಲಕ್ಷ್ಯ ಮಾಡದೆ ನಿಮ್ಮ ಪೌರುಷವನ್ನು ಪ್ರದರ್ಶಿಸಿ ಈ ಇಷ್ಟಾರ್ಥವನ್ನು ಪಡೆಯಿರಿ. ಗೃಹಸ್ಥರಿಗೆ ಸುಕುಮುಖ ದರ್ಶನಲಾಭದ ಯೋಗವಿದೆ. ಶತ್ರುಜನರು ಮೃಗರಾಜನಂ ಕಂಡ ಹರಿಣಗಳಂತೆ ಮರೆಯಾಗುವರು. ತಾ. 3, 9 ಈ ದಿನಗಳನ್ನು ಬಿಟ್ಟುಳಿದ ದಿನಗಳು ವಿಜಯಲಾಭ ಸುಖದಾಯಿಗಳಿವೆ.

ಸಿಂಹ— ಕಳೆದ ಒಂದೆ ತಿಂಗಳಿನಿಂದಲೂ ನಾನಾ ಕಷ್ಟ-ನಷ್ಟಗಳನ್ನನುಭವಿಸುತ್ತಿದ್ದ ನಿಮಗೆ ಈ ವಾರದಲ್ಲಿ ಸ್ವಲ್ಪ ಅಹಾಕರಣವು ಕಾಣಿಸುತ್ತಿರುವುದು. ಕೈಕೆಸರಾದರೆ ಬಾಯಿ ಮೊಸರಾದೀತೆಂಬ ಗಾದೆಯು ನೆನಪಿಗೆ ಬರಬಹುದು. ಪ್ರವಾಸದಲ್ಲಿ ಕಷ್ಟ-ನಷ್ಟಗಳು ಪ್ರಾಪ್ತವಾಗುವ ಯೋಗವಿದ್ದುದರಿಂದ ಪ್ರಕೃತ ಕೈಬಿಡುವುದೊಳ್ಳಿತು. ಅನಾರೋಗ್ಯದಿಂದಾಗಿ ದೇಹಕ್ಕೆ ದೌರ್ಬಲ್ಯವುಂಟಾದೀತು. ವಾರಾಂತ್ಯದ 3 ದಿನಗಳು ಕೊಂಚ ಉತ್ತಮ.

ಕನ್ಯಾ— ಇಷ್ಟಕ್ಕಿಂತ ದ್ವಿಗುಣವಾಗಿ ಅನಿಷ್ಟಗಳು ಪ್ರಾಪ್ತವಾಗುವ ಯೋಗವಿರುವದಾದ ಕಾರಣ ಬಹಳ ಜಾಗರೂಕತೆಯಿಂದಿರಬೇಕಾಗುವದು. ವಿದ್ಯೋಪಜೀವೀ ನೌಕರಿವರ್ಗಕ್ಕೀವಾರವು ಪ್ರಶಸ್ತವಿರುವದು. ಅನಿರೀಕ್ಷಿತವಾಗಿ ಧನಲಭಿಸುವದು. ಚರ್ಮರೋಗಗಳು ಶಸ್ತ್ರಾದಿಗಳಿಂದ ಗಾಯಗಳೂ ಉಂಟಾಗಬಹುದು. ವಿನಾಕಾರಣ ವಾಕ್ಕಲಹಕ್ಕೆ ಸಿಲುಕಲಿರುವುದರಿಂದ ಆದಷ್ಟು ಮೌನತಾಳುವದುತ್ತಮ. ವಾರದ ಆದ್ಯಂತದಿನಗಳುತ್ತಮವಿವೆ.

ತುಲಾ— ಕಫದೋಷದಿಂದಾಗಿ ಆರೋಗ್ಯ ಕೆಡುವುದು. ಮಾತ್ರವಲ್ಲ ಮನೋರೋಗವು ಅಧಿಕವಾಗಲಿದೆ. ಶತ್ರುಜನರ ಪೀಡೆಯಿಂದಾಗಿ ಹಿಡಿದ ಕಾರ್ಯವನ್ನು ಅರ್ಧದಲ್ಲೇ ಕೈಬಿಡಬೇಕಾಗುವುದು. ಗೃಹತಾಪತ್ರಯಗಳಿಂದ ಸಂತತಪೀಡಿತರಾದ ನಿಮಗೆ ಆರ್ಥಿಕಬಿಕ್ಕಟ್ಟು ಹೆಚ್ಚಲಿದೆ. ಅನಿರೀಕ್ಷಿತವಾದ ಆಪತ್ತುಗಳು ಕಡಲತೆರೆಗಳಂತೆ ಮೇಲಿಂದ ಮೇಲೆ ಬರುವವು. ಆದರೂ ದೈವಾಚಾರ್ಯ ರಕ್ಷಣೆಯಿಂದ ವಾರಾದಿಯ 4ದಿನಗಳು ಕಿಂಚಿತ್ಸುಖಕಾರಿಗಳಾದಾವು.

ವೃಶ್ಚಿಕ — ಸದ್ಯ ಸುಪ್ರೈವಿಗಳೆಂದರೆ ನೀವೇ ಸರಿ. ಎಲ್ಲಾ ಗ್ರಹರೂ ನಿಮ್ಮ ಮೇಲೆ ಅನುಗ್ರಹವನ್ನಿಟ್ಟಿರುವ ಕಾರಣ ಮನದಲ್ಲಿ ನೆನೆದ ಕಾರ್ಯಗಳೂ ಅನಾಯಾಸದಿಂದ ಯಾವೊಂದು ತರದ ವಿಘ್ನ ವಿಡಂಬನೆಗಳಿಲ್ಲದೆ ಕಾರ್ಯರೂಪಕ್ಕೆ ಬರಲಿವೆ. ಯಾವೊಂದು ತರದ ನ್ಯೂನಾತಿರೇಕಗಳೂ ನಿಮ್ಮ ಜೀವನದಲ್ಲಿ ಕಾಣಿಸಲಾರವು. ಜನತೆಯಲ್ಲಿ ಗಣ್ಯಸ್ಥಾನವನ್ನು ಗಳಿಸಿದ ನಿಮಗೆ ತಾ. 4, 5, 6, 7. ಈ ದಿನಗಳು ಅತೀವ ಪ್ರಶಸ್ತಗಳಾಗಿವೆ.

ಧನು— ದೈವಬಲ ವಿಮುಖನಾದ ನರಗೆ ಹುಲ್ಲು ಕಡ್ಡಿಯು ಕೂಡ ವಜ್ರಸದೃಶವಾಗಿ ಕಾಣಿಸುವದೆಂದು ಪ್ರಾಜ್ಞರು ಹೇಳಿರುವರು. ಅಂತೆಯೇ ಈ ವಾರದಲ್ಲಿ ನಿಮಗೆಲ್ಲಾ ಗ್ರಹರೂ ಪ್ರತಿಕೂಲರಾದ್ದರಿಂದ ಯಾವ ಕಾರ್ಯವನ್ನು ಸಾಧಿಸಲೂ ಆಗಲೊಲ್ಲದು. ತನುಮನಗಳಿಗೆ ಎಳ್ಳಷ್ಟು ಸುಖಶಾಂತಿಯು ಲಭಿಸದು. ದಿನಯಾಪನೆಯು ಬಹಳ ಕಷ್ಟಸಾಧ್ಯವಾಗುವದು. ಬಂಧುವರ್ಗದವರೊಡನೆ ವಿರೋಧವುಂಟಾದೀತು. ವಾರಾದಿಯ 4ದಿನಗಳು ಅನಿಷ್ಟಕಾರಿಗಳಾಗಿರುವುವು.

ಮಕರ— ದಿನಗಳೆದಂತೆ ಕಷ್ಟನಷ್ಟಗಳಧಿಕವಾಗುತ್ತಾ ಬರುತ್ತಿವೆ. ಕ್ಷಣಗಾಲವೂ ನಿಂತಲ್ಲಿ ನಿಲ್ಲಲವಕಾಶ ಲಭಿಸದು. ಜನತೆಯಿಂದ ನಿಷ್ಠುರ ಮಾತುಗಳನ್ನು ಕೇಳಬೇಕಾಗುವದು. ಕೆಲವೊಮ್ಮೆ ಬಂಧನದಲ್ಲಿದ್ದಂತೆ ಕಾಲಕಳೆವ ಪ್ರಸಂಗವೂ ಬರಬಹುದು. ದೇಹದ ಆರೋಗ್ಯವು ಕೂಡ ವಾತ ಕಫ ದೋಷದಿಂದ ಕೆಡುವ ಸಂಭವವಿದೆ. ಕೈಯಲ್ಲಿನ ತುತ್ತು ಬಾಯಿಗಿಲ್ಲವೆಂಬಂತಹ ಪರಿಸ್ಥಿತಿಯೊದಗೀತು. ತಾ. 3, 9 ಅಷ್ಟೊಂದು ಕಠಿಣವಾಗದು.

ಕುಂಭ— ಹಿಂದಿನ ಸಾಲಗಳಿಂದ ಇಂದು ಮುಕ್ತರಾಗಿ ಕೈಯಲ್ಲಿ ಸ್ವಲ್ಪ ಹಣವನ್ನೂ ಸಂಗ್ರಹಿಸುವಿರಿ. ಇಷ್ಟೊಬ್ಬರ ಹಂಗು ದಾಕ್ಷಿಣ್ಯಗಳಿಗೆ ಸಿಲುಕದೆ ಹಿಡಿದ ಕಾರ್ಯವನ್ನು ಕೊನೆಗಾಣಿಸುವಿರಿ. ನಿಮಗಿಂತ ಅಧಿಕ ಬಲಶಾಲಿಯಾದ ಶತ್ರುವೂ ಕೂಡ ಇಂದು ನಿಮ್ಮ ದುರಿಗೆ ಬರಲಾರನು. ಕೋರ್ಟುಕಚೇರಿಗಳ ವ್ಯವಹಾರದಲ್ಲಿ ನಿಮ್ಮ ಪಂಥವೇ ಮೇಲಾಗುವದು ತಾ 4, 5, 6, ಈ ದಿನಗಳು ಲಾಭ ಸುಖದಾಯಿಗಳು.

ಮೀನ— ತಾನೊಂದು ಬಗೆದರೆ ದೈವ ಪೊಂದೆಣಿಸಿತೆಂಬಂತೆ ನಿಮ್ಮ ಇಂದಿನ ಕಾರ್ಯ ಫಲವಾಗುವದು. ಆದಾಯದ ಇಮ್ಮಡಿ ವೆಚ್ಚದ ಮಾರ್ಗಗಳಿರುವುದರಿಂದ ಸಾಲ ಮಾಡಬೇಕಾಗುವದು. ಮನಸ್ಸೀನೆಮ್ಮದಿಗೆ ಪದೇ ಪದೇ ವಿಘ್ನಗಳುಂಟಾಗುವವು. ಜನರ ಸಹಕಾರ ಬೆಂಬಲಾದಿಗಳು ಲಭಿಸದ ನಿಮಗೆ ಹೆಚ್ಚಿನ ಕಾರ್ಯಗಳಲ್ಲಿ ಶತ್ರುಗಳಿಂದಾಗಿ ಪರಾಭವವುಂಟಾಗುವದು. ತಾ. 3, 7, 8, ಈ ದಿನಗಳು ಇತರ ದಿನಗಳಷ್ಟು ಅನಿಷ್ಟಕಾರಿಗಳಾಗಲಾರವು.

ಲಕ್ಷ್ಮಿ ಸೆಂಟಾಲ್ ಮಾತ್ರೆ

ಇದರ ಉಪಯೋಗದಿಂದ ಬಹುಕಾಲದ ಮೇಹ, ಪ್ರಮೇಹ, ಮೂತ್ರದ ಉರಿ, ಮೂತ್ರ ಕೃಚ್ಛ್ರ, ಮೂತ್ರದೊಡನೆ ಯಾ ಮುಂದಾಗಿ ಬಿಳುಪು, ಅರಸಿನ, ಕೆಂಪು ಈ ವರ್ಣಗಳಲ್ಲಿ ಕೀವು ಹೋಗುವುದು, ತೊಡೆ ಸಂದಿನಲ್ಲಿ ನೋವು, ಕಾಲ ಗಂಟುಗಳಲ್ಲಿ ವೇದನೆ, ಕಣ್ಣಿನಲ್ಲಿ ಕೀವು ಬರುವುದು, ಶರೀರದಲ್ಲಿ ಉಷ್ಣತೆ, ಸ್ವಪ್ನೇಂದ್ರಿಯ ಇವೆಲ್ಲಾ ಖಾತ್ರಿಯಾಗಿ ಗುಣಹೊಂದುವುದು

ಡಬ್ಬಿ ಒಂದಕ್ಕೆ ರೂ. 2—0—0

ಏಜಂಟ್:—

ಶಾ ಕಂಪೆನಿ, ಮಂಗಳೂರು

ಗೊನೋರಿಯಾ ಪರಮಾರೋಗ ಉಷ್ಣ ರೋಗಕ್ಕೆ ಔಷಧ

೭ ದಿವಸಗಳಲ್ಲಿ ಈ ರೋಗ ಗುಣ ಹೊಂದುವದು ಗ್ಯಾರಂಟೀ

ಶರೀರದಿಂದ ಕೀವು ಬರುತ್ತಿದ್ದರೆ, ಧೋತರಕ್ಕೆ ಹಳದೀ ಡಾಗು ಹತ್ತುತ್ತಿದ್ದರೆ ಶರೀರದಿಂದ ಬಾವು. ಶರೀರದ ತೊಗಲು ಹಿಂದಕ್ಕೆ ಸರಿಯದಿದ್ದರೆ, ಶರೀರದ ಸುತ್ತ ಘಾಯವಾಗಿದ್ದರೆ,....ಚಟ್ಟೆ ಬಿದ್ದಿದ್ದರೆ, ಉಷ್ಣದಿಂದ ಜೇರು ಇಳಿದಿದ್ದರೆ, ಉಷ್ಣ ಆಗಿಸ್ತರೆ ಮೂಲವ್ಯಾಧಿ, ಭಗೇಂದ್ರ, ಗಂಡುಮಾಲಿ, ಕೈಕಾಲು ಶೂಲಿ, ಅರ್ಧಾಂಗ ವಾಯು ನಡುನೋಯುವದು ಸ್ತ್ರೀಯರ ಬಿಳಿಪಿಂಪು ಸೆರಗು ಹೋಗುತ್ತಿದ್ದರೆ, ಹೊಲಿಕಟ್ಟು ಗರ್ಮಿಯಿಂದ ಗರ್ಭಕೋಶ ನಾಶಹೊಂದಿದ್ದರೆ, ಸರಿಯಾಗಿ ಭೇದಿಯಾಗದಿದ್ದರೆ, ಮೂತ್ರ ಉರಿಯುತ್ತಿದ್ದರೆ, ಈ ಎಲ್ಲಾ ಬೇನೆಗಳಿಗೆ ಈ ನಮ್ಮ ಔಷಧವು ಇರುವುದು. ಮೊದಲ ದಿವಸ ಬೆಳಗ್ಗೆ ೧ ಗುಂಜಿ ಪ್ರಮಾಣ ಔಷಧ ಅರ್ಧತೊಲೆ ತುಪ್ಪದಲ್ಲಿ ತಕ್ಕೊಳ್ಳಬೇಕು ಮೊದಲ ದಿವಸ ಮಾತ್ರವ ಮುಂಜಾನೆ ಸಂಜೆ ಎರಡು ಸಾರೆ ತಕ್ಕೊಳ್ಳಬೇಕು. ಮುಂದೆ ಪರ ದಿವಸ ಬೆಳಗ್ಗೆ ಒಂದೇ ಸಾರೆ ೭ ದಿವಸ ಸೇವಿಸಬೇಕು. ಈ ಔಷಧವನ್ನು ಬೇಸಿಗೆಯಲ್ಲಿ ತುಪ್ಪದಲ್ಲಿ, ಥಂಡಿ ಮಳೆಗಾಲದಲ್ಲಿ ಜೇನತುಪ್ಪದಲ್ಲಿ ತಕ್ಕೊಳ್ಳಬೇಕು. ಪಥ್ಯ: ಹಸೀಖಾರ, ಹುಂಚಿಕಾಯಿ, ಒಳ್ಳೆಣ್ಣೆ ಬಿಡಬೇಕು.

ದಾಟ್ಲಿ ಡಬ್ಬಿ ಹ ರೂ. ಪೋಸ್ಟ ಚಾರ್ಜ ೮ ಆಣೆ

ಏಜೆಂಟರು:—ಗದಗ:—ಗದಗ ಫಾರ್ಮಸಿ, ಹುಬ್ಬಳ್ಳಿ:—ಹುಬ್ಬಳ್ಳಿ ಫಾರ್ಮಸಿ ಬಾಗಲಕೋಟೆ:-ಬಾಗಲಕೋಟೆ ಫಾರ್ಮಸಿ, ಧಾರವಾಡ:-ಧಾರವಾಡ ಫಾರ್ಮಸಿ, ದಾವಣಗೇರಿ: ದಾವಣಗೇರಿ ಪ್ರೆಸ್. ನಂಜುಡೇಶ್ವರ ಮೂರ್ತಿ ದಾವಣಗೇರಿ.

ಪತ್ರವ್ಯವಹಾರ ಮಾಡತಕ್ಕ ಮಾಲಕರ ವಿಳಾಸ.

ರೇವಣಸಿದ್ಧಪ್ಪ ಹಾಲಪ್ಪ ದಾವಣಗೇರಿ,

ಆಯುರ್ವೇದ ಔಷಧಾಲಯ, ಗದಗ-

"ಗೋಪಾಲ ಭೇಷಜಾಶ್ರಮ" ಮಂಗಳೂರು-

(ಸ್ಥಾಪನೆ 1910)

ಸ್ಥಾಪಕರು.-ಆಯುರ್ವೇದ ಭೂಷಣ ಯಂ. ವಿ. ಶಾಸ್ತ್ರೀ,

ಬಾಣಂತಿಯರ ಸಲುವಾಗಿಯೇ ದೇಶ ಮತ್ತು ಪ್ರಕೃತದ ದೇಹಸ್ಥಿತಿಯನ್ನು ನಿರ್ಣೈಸಿ ತಯಾರಿಸಲ್ಪಟ್ಟ ಅಮೋಘವಾದ ಮಧುರದ್ರವ ರಸಾಯನ. ಅಲ್ಪ ಮೌಲ್ಯದಿಂದ ಬಡವರಿಗೂ, ಭಾಗ್ಯಶಾಲಿಗಳಿಗೂ ಸುಲಭವಾಗಿರುವುದು.

ಇವರ ನವಜೀವಾತು ಎಂಬ ಸೂತಿಕಾ ರಸಾಯನ

ಹೆಚ್ಚಿನ ಮಾಹಿತಿಗೆ—ಡಾ। ಯಂ. ಪಿ. ಶಾಸ್ತ್ರೀ, ಯಲ್. ಐ.

ಕೊಡಿಯಾಲಬೈಲ ಪೋಸ್ಟು, (ಮಂಗಳೂರು)

ಸ್ಥಾನಿಕರು:—ಡಾ। ಐ. ಕೆ. ಶಿವರಾಮರಾವ್, ಕುಂಜಿಬೆಟ್ಟು, ಉಡುಪಿ.

— ಮಕ್ಕಳನ್ನು ಹಡೆಯುವುದು ಸಾಕು —

ಅಶಕ್ತ ಸ್ತ್ರೀಯರಿಗೆ **ಬರ್ಥ ಕಂಟ್ರೋಲ** ರೋಗ ಗ್ರಹಸ್ಥ ಹೆಣ್ಣು ಮಕ್ಕಳಿಗೆ

ಏಳು ದಿವಸ ಈ ಮಾತ್ರೆಗಳನ್ನು ಸೇವನ ಮಾಡಿದರೆ ಮುಂದೆ ಖಂಡಿತವಾಗಿ ಮಕ್ಕಳಾಗುವದಿಲ್ಲ. ಸ್ತ್ರೀಯರು ಪ್ರತಿತಿಂಗಳು ಸರಿಯಾಗಿ ಮುಟ್ಟಾಗುತ್ತಾರೆ. ಅಲ್ಲದೆ ಸ್ತ್ರೀಯರ ಬಿಳಿಸೆರಗು, ಪ್ರದರರೋಗ, ಹೊಲಿಕಟ್ಟು ಗುಣವಾಗಿ ಸ್ತ್ರೀಯು ಗರ್ಭಿಣಿಯಾಗುವದಿಲ್ಲ. ಈ ಔಷಧವನ್ನು ಸೇವಿಸುವ ಕ್ರಮ: ಪ್ರತಿದಿವಸ ಮುಂಜಾನೆ ೧ಗುಳಿಗೆ ಮಧ್ಯಾಹ್ನಕ್ಕೆ ೧ಗುಳಿಗೆ, ಸಂಜೆಗೆ ೧ಗುಳಿಗೆಯಂತೆ ಊಟದ ಮೊದಲು ತಕ್ಕೊಳ್ಳಬೇಕು. ಏಳುದಿವಸ ಈ ಔಷಧವನ್ನು ಬಿಸಿನೀರಿನಲ್ಲಿ ಸೇವಿಸಬೇಕು.

ಪಥ್ಯ:—ಹರವೀಪಲ್ಲೆ ಬಿಡಬೇಕು. ೭ ದಿವಸ ಸಂಪೂರ್ಣ ಔಷಧದ ಕಿಮ್ಮತ್ತು ರೂಪಾಯಿ 5—0—0. ಪೋಸ್ಟ ಚಾರ್ಜ ೧೨ ಆಣೆ.

ಮಾಲಕರು:—ಹಾಲಪ್ಪಾ ಫಕೀರಪ್ಪಾ ದಾವಣಗೇರಿ

ಆಯುರ್ವೇದ ಔಷಧಾಲಯ ಗದಗ-ಸಿಟಿ-

ಏಜಂಟರು:—ಹುಬ್ಬಳ್ಳಿ ಫಾರ್ಮಸಿ,—ಹುಬ್ಬಳ್ಳಿ, ಗದಗ, ಬಾಗಲಕೋಟೆ ಧಾರವಾಡ ವಿಜಾಪೂರ— ಮಹಪ್ಪ ಸಿದ್ಧಲಿಂಗಪ್ಪ ಧಾರವಾಡಕರ ವಿಜಾಪೂರ ನಂಜುಡೇಶ್ವರ ಮೂರ್ತಿ ದಾವಣಗೇರಿ ದಾವಣಗೇರಿ:—ದಾವಣಗೇರಿ ಪ್ರೆಸ್ ಆರ್ ಎಲ್ ಕಮಲಪಾಟ ಕೆಮಿಸ್ಟ, ಹಾವೇರಿ, ಬ್ಯಾಡಗಿ

EDITED, PRINTED & PUBLISHED BY K. H. SHETTY AT THE NAVAYUGA PRESS, UDIPI, S.INDIA

Regd No. M 3618
LICENCE No. 31
Licensed to Post without Prepayment

Estd. 1921 ಸ್ಥಾಪನೆ

10-5-1951

Founder: Sri A. B. Shetty,
Minister for Agriculture & Veterinary

ಅಂತರಂಗ
ಪುಸ್ತಕ ಪತ್ರಿಕೆ
ಚಂದಾ ವಿವರ
ವರ್ಷಕ್ಕೆ ರೂ. 4-8-0
6 ತಿಂಗಳಿಗೆ ರೂ 2-8-0
(ಮುಂಗಡ)
ಜಾಹೀರಾತಿಗೆ ಉತ್ತಮ ಸಾಧನ
ಅಂತರಂಗ, ಉಡುಪಿ

ನವಯುಗ
ಚಂದಾ ವಿವರ:
(ಮುಂಗಡ)
ವರ್ಷಕ್ಕೆ ರೂ 5-12-0
6 ತಿಂಗಳಿಗೆ ,, 3- 0-0
ಬಿಡಿಪ್ರತಿ ,, 0- 2-0
6 ತಿಂಗಳಿಗಿಂತ ಕಡಿಮೆ ಚಂದಾ ಸ್ವೀಕರಿಸುವುದಿಲ್ಲ.
ನವಯುಗ, ಉಡುಪಿ.

ವರ್ಷ ೩೧
ವಾರ ೩೫

NAVAYUGA WEEKLY Post Box No. 22 UDIPI.

Vol. 31
No. 35

ಜನತೆಯ ಹೊಣೆ

ಸರಕಾರದ ಕುರಿತಾಗಿ ಆಡುವ ವೇಳೆ ಜನತೆಯು ತಮ್ಮ 'ಹೊಣೆಯೇನೆಂಬುದನ್ನು ಮರೆತೇ ಬಿಡುತ್ತದೆ. ಟೀಕೆಟಿಪ್ಪಣಿ ವಾಗ್ಬಾಣಗಳು ನಮ್ಮ ಬತ್ತಳಿಗೆಯಲ್ಲಿ ಸಾಕಷ್ಟಿವೆ. ಆದರೆ ನಮ್ಮ ನಮ್ಮ ಅಜಾಗರೂಕತೆಯನ್ನು-ಹೊಣೆಗಾರಿಕೆಯೇನೆಂಬುದನ್ನು ಅರಿತುಕೊಳ್ಳುವ ಬುದ್ಧಿವಂತಿಕೆ ನಮ್ಮಲ್ಲಿಲ್ಲ.

ದೇಶದಲ್ಲಿಂದು ಹಲವಾರು ಜೀವನಾವಶ್ಯಕ ವಸ್ತುಗಳ ಕೊರತೆಯಿದೆ; ಅದರಲ್ಲೂ ಆಹಾರಾಂಶದ್ದು ಬಹಳ ಮುಖ್ಯವಾದುದು. ಪರದೇಶಗಳೊಡನೆ ಸಂಧಾನ ಮಾತುಕತೆ-ವ್ಯಾಪಾರೀ ಒಪ್ಪಂದ ಒಂದು ಕಡೆ ನಡೆಯುತ್ತಲೇ ಇದೆ. ಆಹಾರವೂ ಸರಾಗವಾಗಿ ಬರುತ್ತಲಿದೆ. ಆದರೆ ಬಂದದ್ದು ನಮ್ಮ ಜನತೆಯ ಹಸಿವನ್ನು ನೀಗುತ್ತಿಲ್ಲ. ರಾವಣನ ಹೊಟ್ಟೆಗೆ ರಾಶಿನ ಮಜ್ಜಿಗೆ ಎನ್ನುವಂತಾಗಿದೆ.

ಅಮೇರಿಕೆಯ ಕೊಡುಗೆಯನ್ನು ಸ್ವೀಕರಿಸುವುದು ಆತ್ಮಾಭಿಮಾನಕ್ಕೆ ಕುಂದು ಎಂದು ಹಲವರು ಟೀಕೆ ಮಾಡುತ್ತಾರೆ. ಸರಕಾರದ ಆಡಳಿತ ಕ್ರಮದಲ್ಲಿ ಅಸ್ಥಿರತೆ ಕಂಡು ಬಂದುದರಿಂದಲೇ ಹೀಗಾಯಿತೆಂದು ಹಲವರು ತಮ್ಮ ಬಾಯಿಚಪಲವನ್ನು ತೀರಿಸಿಕೊಂಡರು. ಇಂತಹ ಗಂಭೀರ ಪರಿಸ್ಥಿತಿಯನ್ನು ಪರಿಹರಿಸುವುದು ಸರಕಾರದ ಕರ್ತವ್ಯವೆಂದು ತಿಳಿದು ತಮ್ಮ ಹೊಣೆಗಾರಿಕೆಯನ್ನು ಜನತೆ ಸಂಪೂರ್ಣ ಮರೆದಿದೆ. ಇತರ ಪಕ್ಷಪಂಗಡಗಳ ನಾಯಕರೂ ಸರಕಾರವನ್ನು ದೂರುವದರಲ್ಲೂ-ಜನತೆಯಲ್ಲಿ ಕಳವಳವನ್ನು ಹುಟ್ಟಿಸುವದರಲ್ಲೂ ತಮ್ಮ ಬುದ್ಧಿ ಚಾತುರ್ಯವನ್ನು ಉಪಯೋಗಿಸಿದರೇ ವಿನಹ ಹಸಿದವರಿಗೆ ಪರಿಹಾರ ಮಾರ್ಗವನ್ನೇನೂ ಮಾಡಲಿಲ್ಲ. ಅಮೇರಿಕೆಯ ಆಹಾರವನ್ನು ಸ್ವೀಕರಿಸುವದು ಆತ್ಮಾಭಿಮಾನಕ್ಕೆ ಕುಂದೆನ್ನುವವರು ಹಸಿವಿನಿಂದ ಸಾಯುತ್ತಿರುವ ನಮ್ಮ ಜನಕ್ಕೆ ಆಹಾರವನ್ನು ನೀಡುವ ಔದಾರ್ಯವನ್ನು ತೋರುತ್ತಿಲ್ಲ. ಉಪದೇಶ ಮಾಡುವವರೂ-ದೇಶಪ್ರೇಮಿಗಳೆಂದು ರಾಜಕೀಯ ರಂಗದಲ್ಲಿ ವರ್ಚಸ್ಸನ್ನು ಬೀರುವವರೇ ಆಹಾರ ಧಾನ್ಯಗಳನ್ನು ಗಡಿಮೀರಿದ ಬೆಲೆಗೆ ವಿಕ್ರಯಿಸಿ ಸ್ವಾರ್ಥವನ್ನು ಸಾಧಿಸಿಕೊಳ್ಳುವ ಉದಾಹರಣೆಗಳೆಷ್ಟೋ ಕಂಡುಬಂದಿವೆ. ನಮ್ಮ ಪ್ರಾಂತ್ಯದ ಮುಖ್ಯರಾದವರೊಬ್ಬರ ಮನೆಯಲ್ಲಿ ನೂರಾರು ಮುಡಿಯ ಅಕ್ಕಿ ಶೋಧದ ಪ್ರಕರಣವೊಂದು ಜನತೆಯ ಕುತೂಹಲವನ್ನು ಕೆರಳಿಸಿದೆ. ಹೀಗೆ ದೇಶಾದ್ಯಂತ ಪರಿಸ್ಥಿತಿಯ ಲಾಭವನ್ನು ಪಡೆಯಲು ಯತ್ನಿಸುತ್ತಿರುವ ಗೋಮುಖ ವ್ಯಾಘ್ರರು ತುಂಬಿರುವಾಗ ಸರಕಾರವಾದರೂ ಏನು ಮಾಡೀತು?

ಅಮೇರಿಕೆಯ ಆಹಾರ ಬೇಡ-ಪಾಕಿಸ್ತಾನದ ಅಕ್ಕಿ ಧಾರಣೆ ವಿಪರೀತ--ಬರ್ಮಾದ ಆಹಾರ ಅತಿಧಾರಣೆ-ಎಂದು ಟೀಕಿಸುವವರೇ ಅಕ್ಕಿನಿಂದ ಸರಕಾರ ಜನತೆಯ ಹಸಿವನ್ನು ತೀರಿಸಲಶಕ್ತವಾಗಿದೆಯೆಂದು ದೂರುತ್ತಾರೆ. ಇಂತಹ ವಿಘಾತುಕ ಪ್ರಚಾರ ನಿಲ್ಲಬೇಕು. ನಾವು ನಮ್ಮ ಜನತೆಯನ್ನು ವಂಚಿಸಿದಷ್ಟು-ಕಷ್ಟಕ್ಕೆ ಗುರಿಮಾಡಿದಷ್ಟು-ಪರದೇಶದ ರಾಷ್ಟ್ರಗಳು ಮಾಡಿಲ್ಲ. ಸ್ವಾವಲಂಬನೆ ಧೋರಣೆಯನ್ನು ಸರಕಾರ ವಹಿಸುವಷ್ಟು ಕಾಲ ಈ ದೇಶದ್ರೋಹಿಗಳು ಒಂದಲ್ಲ ಒಂದು ರೀತಿಯಿಂದ ಜನತೆಯನ್ನು ವಂಚಿಸಿಯೇ ವಂಚಿಸುತ್ತಾರೆ.

ಆಹಾರದ ಕೊರತೆಯು ಕಾರಣವೊಂದನ್ನು ಹಿಡಿದುಕೊಂಡು ಜನತೆ ಗಾಂಭೀರ್ಯವನ್ನು ಬಿಟ್ಟು ಆಡುವುದು ಶೋಚನೀಯ ವಿಚಾರ ಅಲ್ಲದಿಲ್ಲ-ಎನ್ನುವ ಬೊಬ್ಬೆ ಜಗದ್ವ್ಯಾಪಿಯಾದಷ್ಟಕ್ಕೆ ಬರಗಾಲ ಬಂತೆಂದೇ ಭಾವಿಸಲಾಗದು. ಸರಕಾರದ ಮುನ್ನದೃಷ್ಟಿತನದಿಂದ ಅತಿರಂಜಿತವಾಗಿ ಬಣ್ಣಿಸಲ್ಪಟ್ಟ ಗಂಭೀರ ಪರಿಸ್ಥಿತಿ ನಮ್ಮಲ್ಲುಂಟಾಗಿಲ್ಲ. ಈ ರೀತಿಯ ಕೊರತೆಯ ಕೂಗು ದ್ವಿತೀಯ ಯುದ್ಧಾರಂಭದಲ್ಲಾಗಿಯೂ ಕೇಳುತ್ತಲೇ ಇತ್ತು. ಆದರೆ ದೈವದಿಂದ ಜನತೆ ತಪ್ಪಾಗಿ ತಿಳಿದುಕೊಂಡಷ್ಟು ಭೀಕರ ಪರಿಸ್ಥಿತಿ ಈವರೆಗೆ ಒಂದಿಲ್ಲ. ಇದ್ದವರೂ ಇಲ್ಲದವರೂ ಎಲ್ಲರೂ "ಗೋವಿಂದಾ ಗೋವಿಂದಾ" ಎನ್ನುವುದರಲ್ಲಿ ಅರ್ಥವಿಲ್ಲ!

"ಹುಟ್ಟಿಸಿದ ದೇವ ಹುಲ್ಲು ಮೇಯಿಸಿಯಾನೆ?" ಎಂದು ಉದರ ವೈರಾಗ್ಯವನ್ನು ಹಾಡುವ ಸೋಮಾರಿಗಳ ಸಂಖ್ಯೆ ನಮ್ಮಲ್ಲಿ ಬೆಳೆಯುತ್ತಲಿದೆ. ಆಹಾರದ ಅಭಾವದಿಂದ ಜನ ಹಸಿವಿನಿಂದ ಬಳಲುವ ಪರಿಸ್ಥಿತಿಯನ್ನು ಸರಕಾರ ಎಚ್ಚರಿಸಿದರೂ ಮುಂಜಾಗ್ರತೆಯನ್ನು ಹೇಳಿದರೂ, ಹಲವರು ತಮ್ಮ ಅಣಪ್ರತಿಷ್ಠೆಯ ಪ್ರದರ್ಶನಕ್ಕಾಗಿ ಸಮಾರಂಭವನ್ನೋ-ಸಮಾರಾಧನೆಯನ್ನೋ--ನಡೆಸುವುದು, ಎಂತಹ ಘಾತುಕ ವಿಚಾರವೆಂಬುದನ್ನು ವಿಚಾರವಂತರು ಆಲೋಚಿಸಬೇಕು. ಇದ್ದವರು ಆಹಾರವನ್ನು ಜಾಗ್ರತೆಯಿಂದ ಉಪಯೋಗಿಸಿಕೊಂಡರೆ ಎಷ್ಟೋ ಸಂಸಾರದ ಅನ್ನ ಉಳಿದೀತು. ಆದರೆ ಆ ರೀತಿಯ ಔದಾರ್ಯವನ್ನು ಯಾರೂ ತೋರುತ್ತಿಲ್ಲ. ಮಾನ್ಯ ಮುಖ್ಯಮಂತ್ರಿ ನೆಹ್ರೂರವರು ತನ್ನ ಹೃದಯಸ್ಪರ್ಶಿ ಮಾತುಗಳ ಮೂಲಕ ಒಪ್ಪೊತ್ತಿನ ಊಟವನ್ನಾದರೂ ಕಡಿಮೆ ಮಾಡಿ ಆಹಾರ ಸಮಾನವಾಗಿ ಹಂಚಿಕೊಂಡು ಭೀಕರ ಪರಿಸ್ಥಿತಿಯಿಂದ ದೇಶವನ್ನು ಪಾರಾಗಿಸೋಣವೆಂದು ಕಳಕಳಿಯಿಂದ ಜನತೆಯನ್ನು ಕೇಳಿಕೊಂಡಿದ್ದಾರೆ. ಪ್ರಜೆಗಳ ಹಿತಚಿಂತನೆಯಲ್ಲಿ ಸರಕಾರ ಆಸ್ಥೆವಹಿಸಿದ್ದನ್ನು ನಾವು ಪೂರ್ತಿ ಮರೆತಿದ್ದೇವೆ. ಸರಕಾರ ಸೂಕ್ತ ಕ್ರಮವನ್ನು ಕೈಗೊಂಡು ಜನಹಿತವನ್ನು ಬಯಸಿದರೂ ಲೋಕ ಸರಕಾರದ ಮೇಲೆ ಕೃತಜ್ಞತೆಯನ್ನು ಸಲ್ಲಿಸುತ್ತಿಲ್ಲ! ಆಲಸಿಗತನದಿಂದಲೂ-ಆತ್ಮಸಾಕ್ಷಿಗೆ ವಿರೋಧವಾದ ವರ್ತನೆಯಿಂದಲೂ--ನಶಿಸುತ್ತಿದೆ. ನಮ್ಮ ದೇಶ--ನಮ್ಮ ಜನ ಎನ್ನುವ ಮಾನವೀಯ ಗುಣಕ್ಷಯಿಸುತ್ತಲಿದೆ. ದೇಶಹಿತಕಾರ್ಯವೆಲ್ಲ ಸರಕಾರದಿಂದಾಗಬೇಕು. ಸ್ವಾರ್ಥಕ್ಕೆ ಕಡೆಯಾದ ಬಾರದಿಸುವ ಈ ಧೋರಣೆ ದೇಶಾಭಿಮಾನ ಉಳ್ಳವರ ಲಕ್ಷಣವಲ್ಲ! ಸರಕಾರದ ಮೇಲೆ ನಿಷ್ಠೆ ಇಲ್ಲದೆ ಹೋದರೂ ನಮ್ಮ ಜನತೆಯ ಮೇಲೆ ವಿಶ್ವಾಸವನ್ನಾದರೂ ತಮ್ಮ ಹೊಣೆಗಾರಿಕೆಯ ಮೂಲಕ ಇಲ್ಲವೆ ಕೃತಿಯಿಂದ ತೋರಿಸಬೇಡವೇ?

ಹಾಗೆ ಹೃದಯ ಪರಿವರ್ತನೆ ಹೊಂದಿದರೇನೇ ಜನತೆ ತನ್ನ ಹೊಣೆಯನ್ನರಿತುಕೊಂಡೀತು. ತಮ್ಮ ಹೊಣೆಯನ್ನು ಮರೆತು ತಪ್ಪಾಭಿಪ್ರಾಯ ಸರಕಾರವನ್ನು ಲೂಟಿ ಮಾಡಿ ತೋರಿಸುವುದರಿಂದ ಜೀವನ ಏಳಿಗೆ ಎಂದೆಂದಿಗೂ ಆಗದು, ತಮ್ಮ ಹೊಣೆಗಾರಿಕೆಯ ಅರಿವೇ ದೇಶೋನ್ನತಿಯ ಮೂಲವೆಂಬುದನ್ನು ನಾವು ಮರೆಯದಿರೋಣ!

ಪ್ರಧಾನ ಕಾರ್ಯಾಲಯ: ಉಡುಪಿ. ಸ್ಥಾಪನೆ: ೧೯೩೫

ದಿ ಕೆನರಾ ಮ್ಯೂಚುವಲ್

ಎಶ್ಯೂರೆನ್ಸ್ ಕಂಪೆನಿ, ಲಿಮಿಟೆಡ್,

ಇದುವೇ

ಪಾಲಿಸಿದಾರರ ಸಂಬಿಕೆ ಹೆಚ್ಚಿಸುವ ಹೆಸರು

ಅಲ್ಲದೆ ಸ್ಥಾಪಿತವಾದಂದಿನಿಂದಲೂ

ಲಾಭ (ಬೋನಸ್) ಹಂಚಿದ ಕಂಪೆನಿ.

The Canara Mutual Assurance Co, Ltd.

H. O. UDIPI (SOUTH INDIA) ESTD 1935.

ವಿಮಾರಂಗದ ಸೇವಾಮುಖ

ಈ ಇಪ್ಪತ್ತನೇ ಶತಮಾನದಲ್ಲಿ ಅನೇಕ ಬಗೆಯ ಶೋಧಗಳು ನಡೆದಿವೆ. ದಿನದಿಂದ ದಿನಕ್ಕೆ ಈ ಶೋಧಗಳ ಪ್ರಚಾರ ಹೆಚ್ಚು ವ್ಯಾಪಕವಾಗುತ್ತ ಬಂದಿದೆ. ಶೋಧಗಳೆಂದೊಡನೆಯೇ ವಿಜ್ಞಾನಿಗಳ ರಾಕೆಟು, ಅಣುಬಾಂಬು ಎಂದು ಹೆದರುವ ಅಗತ್ಯವಿಲ್ಲ. ಇನ್ನಿತರ ಕ್ಷೇತ್ರಗಳಲ್ಲೂ ಜನ ಮುಂದುವರಿದಿದ್ದಾರೆ. ಹೊಸ ಸಂಪ್ರದಾಯಗಳನ್ನು, ಹೊಸ ಉದ್ದಿಮೆಗಳನ್ನು ಶೋಧಿಸಿ ತೆಗೆದು ಅವನ್ನು ಜನತೆಗೆ ಪ್ರಿಯವಾಗುವ ರೀತಿಯಲ್ಲಿ ಕಾರ್ಯಕ್ಕೆ ಅಳವಡಿಸುತ್ತಿದ್ದಾರೆ. ಹೀಗೆ ವ್ಯಾಪಾರದ್ದೇ ಒಂದು ತಿದ್ದಿದ ಬಗೆಯಾಗಿರುವ ಬ್ಯಾಂಕಿಂಗ್, ಇನ್‌ಶೂರೆನ್ಸ್ ಮುಂತಾದ ನವೀನ ಏರ್ಪಾಡುಗಳಿಂದ ಇಂದು ತನ್ನ ಅನುಕೂಲತೆಗಳನ್ನೂ ಸೌಕರ್ಯಗಳನ್ನೂ ಹೆಚ್ಚಿಸಿಕೊಂಡಿದೆ.

ರಾಷ್ಟ್ರಾಭಿವೃದ್ಧಿಗೆ ಸಹಾಯಕ

ವಿಮಾ ಪ್ರತಿನಿಧಿ, ಬೇಕಾದರೆ ಎಲ್ಲರೂ ಸುಲಭದಲ್ಲಿ ತಿಳಿಯುವ ಇನ್‌ಶೂರೆನ್ಸ್ ಏಜಂಟ—ಸಮಾಜದ ಒಬ್ಬ ಗಣನೀಯ ಸೇವಕನೆಂಬ ಭಾವನೆ, ಅವನಲ್ಲಿಯೇ ಇಲ್ಲವೋ; ಅಂತೂ ಜನತೆಯಲ್ಲಿ ಈಗ ಸಾಕಷ್ಟು ಪ್ರಮಾಣದಲ್ಲಿ ಬಿಂಬಿತವಾಗಿಲ್ಲ. ವಿಮಾ ಪ್ರತಿನಿಧಿ ಜನರ ನೆತ್ತರು ಹೀರುವ ಜಿಗಣೆ ಎಂಬ ತುಚ್ಛ ಮನೋವೃತ್ತಿ ಸಾಮಾನ್ಯ ಜನತೆಯಲ್ಲಿ ಅಂಟಿಕೊಂಡಿದೆ. ವಿಮಾ ಪ್ರತಿನಿಧಿ ವೈಯಕ್ತಿಕವಾಗಿ ಕುಟುಂಬಕ್ಕೂ, ಸಾರ್ವಜನಿಕವಾಗಿ ರಾಷ್ಟ್ರದ ಏಳಿಗೆಗೂ ಹೇಗೆ ನೆರವಾಗುತ್ತಾನೆ ಎಂಬುದನ್ನು ಕೂಲಂಕುಷವಾಗಿ ಮನನಮಾಡಿಕೊಂಡಿರುವ ಜನ ಕಡಿಮೆ. ರಾಷ್ಟ್ರದ ಉದ್ಧಾರಕ್ಕಾಗಿ ಶ್ರಮಿಸಬೇಕಾಗಿರುವ ಈ ಗಳಿಗೆಯಲ್ಲಿ ವೈಯಕ್ತಿಕ ಭದ್ರತೆಯ ಕೆಲಸವನ್ನು ಉತ್ತಮ ಹಾಗೂ ಸುವ್ಯವಸ್ಥ ವಿಧಾನದಿಂದ ನಾವು ಮಾಡಿಕೊಳ್ಳಬೇಕು. ಜನ ವಿಮೆಗಾಗಿ ವ್ಯಯಿಸುವ—ಈ ಮಾತು ಪೂರ್ಣ ಸರಿಯಾಗಲಾರದು; "ತೆಗೆದಿಡುವ" ಎಂಬುದೇ ಸರಿಯೇನೋ—ಹಣವು ದೇಶದ ಜನರ ಉಳಿತಾಯವಾಗಿ ತಿಳಿಯಲ್ಪಡುತ್ತದೆ. ದೇಶದಲ್ಲಿ ಕೂಡಿಡುವ ಹಣವು ಹೆಚ್ಚಿದಂತೆ, ಅದರ ಉಪಯೋಗವನ್ನು ತಕ್ಷಣ ಸರಕಾರ ಮಾಡಿಕೊಳ್ಳಲು ಅವಕಾಶವೂ ದೊರಕುವುದು. ಹೀಗೆ ರಾಷ್ಟ್ರಾಭಿವೃದ್ಧಿಗೆ ಸಹಾಯಕವಷ್ಟೇ ಅಲ್ಲ; ಅಗತ್ಯವೇ ಇರುವ ರಚನಾತ್ಮಕ ಕಾರ್ಯಕ್ರಮಗಳಿಗೆ, ತುರ್ತಿನಲ್ಲಿ ಪೂರ್ಣವಾಗಬೇಕಾಗಿರುವ ಮಹಾಯೋಜನೆಗಳಿಗೆ, ಹಣದ ನೆರವು ಲಭಿಸುವುದು. ತನಗೆ ಈ ರೀತಿ ಸಹಾಯದೊರೆಯುತ್ತಿರುವುದನ್ನು ಮನಗಂಡೇ, ಸರಕಾರವು ಆದಾಯದ ಮೇಲೆ ತೆರಿಗೆ ಹೊರಿಸುವಾಗ ವಿಮಾ ಚಂದಾದ (Insurance Premium) ಮಟ್ಟಿಗೆ ಕರವನ್ನು ಮಾಫಿ ಮಾಡಿದೆ.

ಜನ ಪ್ರಿಯತೆಯ ಮಾರ್ಗ

ಆದರೆ ವಿಮೆ ಕೇವಲ ಹಣ ಒದಗಿಸಿಕೊಡುವ ರಾಷ್ಟ್ರೀಯ ಕಾರ್ಯವಾಗಿ, ವ್ಯಕ್ತಿಯ ಮರಣದ ಬಳಿಕ ಅವನ ಕುಟುಂಬಗಳ ನೆರವಿನ ಕೈಯಾಗುವ ಆಕರ್ಷಕ ಯೋಜನೆಯಾಗಿಯೇ ಉಳಿಯಬೇಕೆ? ಅದನ್ನು ಇನ್ನೂ ಹೆಚ್ಚು ಸೇವಾತತ್ಪರವಾಗುವಂತೆ ಮಾಡುವುದು ಸಾಧ್ಯವಿಲ್ಲವೆ? ಸಾಮಾಜಿಕ ಸಮಸ್ಯೆಗಳ ಪರಿಹಾರಕ್ಕಾಗಿ ವಿಮೆಯನ್ನು ಹೇಗೆ ಜನಪ್ರಿಯವಾಗಿ ಹೊಂದಿಸಿಕೊಳ್ಳಬಹುದು?—ಎಂಬಿವೇ ವಿಚಾರಗಳು ಈಗೀಗ ಅಧಿಕ ಪ್ರಾಶಸ್ತ್ಯವನ್ನು ಪಡೆಯುತ್ತವೆ. ವಿಮಾವ್ಯಾಪಾರ ಉಚ್ಛ್ರಾಯ ಸ್ಥಿತಿಯಲ್ಲಿರುವ ಅಮೇರಿಕೆಯಂತಹ ನಾಡುಗಳಲ್ಲಿ ವಿಮಾಯೋಜನೆಯನ್ನು ಬಹುವಿಧವಾಗಿ ಅಭಿವೃದ್ಧಿಗೊಳಿಸಿ, ಅದನ್ನು ಕೂಲಂಕುಷವಾಗಿ ಸಂಘಟಿತಗೊಳಿಸಿ, ಸಮಾಜ ಸೇವಕನ ಗೌರವ ಸ್ಥಾನದಲ್ಲಿ ವಿಮೆಯನ್ನು ಪ್ರತಿಷ್ಠಿಸಿದ್ದಾರೆ. ಮಕ್ಕಳಿಗೆ ಶಿಕ್ಷಣಕ್ಕಾಗಿ ವಿಮಾ ಸಂಸ್ಥೆಗಳ ಶಾಲೆಗಳಿವೆ; ವಸತಿಗಾಗಿ ಮನೆಗಳ ನಿರ್ಮಾಣವನ್ನು ವಿಮಾ ಸಂಸ್ಥೆಗಳೇ ಕೈಕೊಂಡಿವೆ; ರೋಗಿಗಳಿಗೆ ಸಲಹೆ ಹಾಗೂ ಅವಶ್ಯ ಬಿದ್ದಲ್ಲಿ ಸಹಾಯ ನೀಡಲು ಡಾಕ್ಟರರ ಹಾಗೂ ಆಸ್ಪತ್ರೆಗಳ ಸೌಕರ್ಯವನ್ನು ತೆರೆಯಲಾಗಿದೆ. ಅಲ್ಲದೆ ಕೃಷಿಯ ಮಹತ್ವ ಅರಿತವರು ವಿಶಾಲ ಹೊಲನೆಲ ಮತ್ತು ತತ್ಪೂರಕ ವೃತ್ತಿಶಾಲೆಗಳ ಅನುಕೂಲತೆಯನ್ನೂ ಏರ್ಪಡಿಸಿರುವರು—ಎಂಬುದಾಗಿ ಕೇಳುತ್ತೇವೆ. ಈ ಬಗೆಯ ಸಹ-ಸಂಸ್ಥೆಗಳು ವಿಮಾ ಕಂಪೆನಿಗಳ ಮೇಲ್ವಿಚಾರದಲ್ಲಿ, ಅವುಗಳ ಕಾರ್ಯಕಲಾಪಗಳ ಪೂರಕವೆಂಬ ರೀತಿಯಲ್ಲಿ, ಕೆಲಸ ಮಾಡುತ್ತವೆ. ವಿಮಾ ಕಂಪೆನಿಗಳು ಸಾಮಾನ್ಯತಃ ಜನಸಾಧಾರಣರಿಗಾಗಿ, ಮುಖ್ಯತಃ ತನ್ನಲ್ಲಿ ವಿಮೆ ಇಳಿಸಿ, ಅದರ ಪ್ರಯೋಜನ ಪಡೆಯುತ್ತಿರುವ ಮಹನೀಯರ ಹಾಗೂ ಅವರ ಕುಟುಂಬಿಕರ ಯೋಗಕ್ಷೇಮಕ್ಕಾಗಿ, ಈ ವಿಶೇಷ ಅನುಕೂಲತೆಗಳನ್ನು ಕಲ್ಪಿಸಿರುವುವು.

ಜನಸೇವೆಯೇ ಪ್ರಗತಿ ಸೋಪಾನ

ಜನರ ನಡುವೆ ಸೇವೆಯ ಕೈ ನೀಡಿ, ಅವರ ಆವಶ್ಯಕತೆಗಳ ಪೂರೈಕೆಮಾಡಿ, ಅವರ ಬಲವನ್ನು ಸಂಪಾದಿಸಿ, ತನ್ನ ಮೂಲ ಉದ್ದೇಶವನ್ನು ಯಶಸ್ವಿಯಾಗಿ ಸಾಧಿಸಿಕೊಂಬ ಈ ಮಾರ್ಗ ಸಾಮಾನ್ಯ ಪ್ರಚಾರದ ದಾರಿಗಿಂತ ಸುವ್ಯವಸ್ಥಿತವೂ ಬಹುಕಾಲ ಬಾಳುವಂತಹದೂ ಹೌದು! ಈಗೀಗ ನಮ್ಮ ದೇಶದಲ್ಲೂ ಕೆಲ ಕಂಪೆನಿಗಳು ನಾಡಿನ ಪ್ರಚಲಿತ ಸಮಸ್ಯೆಗಳ ಗಂಭೀರತೆಯನ್ನು ಮನಗಂಡು ಅವುಗಳ ನಿವಾರಣೆಗೆ ತಮ್ಮ ಬಲವನ್ನು ಉಪಯೋಗಿಸುತ್ತಿರುವುದು ಕಂಡುಬರುತ್ತದೆ. ಅಲ್ಲಲ್ಲಿ ವಸತಿಗೃಹಗಳನ್ನು, ವೈದ್ಯಕೀಯ ಸಲಹೆಯನ್ನು, ಶಿಕ್ಷಣ ಸೌಕರ್ಯವನ್ನು ನೀಡುವ ಯಶಸ್ವಿ ಪ್ರಯೋಗಗಳು ಇಲ್ಲಿ ಈಗ ನಡೆಯುತ್ತಿವೆ. ದೇಶದಲ್ಲಿ ಅಕ್ಷರಸ್ಥರ ಸಂಖ್ಯೆ ತೀರ ಹಿಂದಿರುವಾಗ ಸಾಕ್ಷರತಾ ಪ್ರಚಾರದಲ್ಲಿ ವಿಮಾ ಕಂಪೆನಿಗಳು ತುಂಬ ಕೆಲಸ ಮಾಡಬಲ್ಲುವು. ಅನ್ನದ ಅಧಿಕ ಉತ್ಪಾದನೆಗಾಗಿ ಜನರನ್ನು ತರಬೇತಿಗೊಳಿಸಲು ಹೇಗೆ ಕೆಲ ಕಂಪೆನಿಗಳು ತಮ್ಮ ಕಡೆಯಿಂದ "ಅಧಿಕ ಆಹಾರ ಬೆಳೆಸಿರಿ" ಎಂದು ಪತ್ರಿಕೆಗಳಲ್ಲಿ ಪ್ರಚಾರಮಾಡಿ ಕೊಡುತ್ತಿವೆಯೋ ಹಾಗೆಯೇ ವಿಮಾ ಕಂಪೆನಿಗಳೂ ರಚನಾತ್ಮಕ ಕಾರ್ಯದಲ್ಲಿ ಅಮೂಲ್ಯ ಅಭಿರುಚಿಯನ್ನು ತೋರಿಸಿ ಸಾಮಾಜಿಕ ಏಳಿಗೆಗೆ ತಮ್ಮ ಪೂರ್ಣ ಸಹಕಾರವನ್ನು ಪ್ರದರ್ಶಿಸಲೂ ಸಾಧ್ಯವಿದೆ. ಪತ್ರಿಕೆಗಳಲ್ಲಿ ಜಾಹೀರಾತುಗಳನ್ನಿತ್ತು, ಅಲ್ಲಲ್ಲಿ ಬೋರ್ಡುಗಳನ್ನು ತಗಲಹಾಕಿ, ಇತರ ಪರಿಚಯ ಪತ್ರಗಳನ್ನು ಹೊರಡಿಸಿ, ಕಂಪೆನಿಗಳು ಜನಪ್ರಿಯತೆ ಗಳಿಸಲು ಪ್ರಯತ್ನಿಸುವುದು ಈಗ ತೀರ ಸಾಧಾರಣದ ದಾರಿಯಾಗಿದೆ. ಆದರೆ ಅದಕ್ಕೂ ಹೆಚ್ಚಿನ ಮಟ್ಟದ ಸೇವಾಯೋಗ್ಯತೆ ಪಡೆದಿರುವ ವಯಸ್ಕರ ಶಿಕ್ಷಣ, ವಸತಿಗಳ ಸೌಕರ್ಯ, ರೋಗಿಗಳಿಗೆ ಸಲಹೆ—ಸಹಾಯ, ಅಧಿಕ ಅನ್ನದ ಉತ್ಪಾದನೆ, ಜನತೆಯ ಸಾಂಸ್ಕೃತಿಕ—ಹಾಗೂ ಸಾಮಾಜಿಕ ಉನ್ನತಿಗೆ ಪೋಷಕವಾಗುವ ಇತರ ಚಟುವಟಿಕೆಗಳು—ಇವುಗಳಲ್ಲಿ ನಮ್ಮ ವಿಮಾ ಕಂಪೆನಿಗಳು ತೊಡಗಿದರೆ ಒಂದು ಕಡೆ ಕಂಪೆನಿಯ ಪ್ರಗತಿಯೂ, ಇನ್ನೊಂದೆಡೆ ಸಮಾಜದ ಹಾಗೂ ರಾಷ್ಟ್ರದ ಉನ್ನತಿಯೂ ಸಾಧಿಸಿದಂತಾಗುವುದು. ಉಡುಪಿಯ "ಕೆನರಾ ಮ್ಯೂಚುವಲ್" ಊರಿನ ಆಗಕ್ಕಗಳಲ್ಲಿ ಒಂದಾದ ಓದುಮನೆ (Free Reading Room) ಯನ್ನು ತೆರೆದೂ, ಪಂಚಾಯಿತಿಗಳಿಗೆ ತನ್ನ ಕಡೆಯ ಬಹುಮಾನ ಕೊಡುತ್ತಿಯೂ ಸಾಮಾನ್ಯ ಜನತೆಯನ್ನು ಕಂಪೆನಿಯ ಕಡೆಗೆ ಆಕರ್ಷಿಸುವ ಆದರಣೀಯ ಹಂಚಿಕೆ ಹೂಡಿದೆ; ಅದರಲ್ಲಿ ಸಾಕಷ್ಟು ಜಯ ಸಂಪಾದಿಸಿದೆ. ಕಣ್ಣೆದುರು ಕಾಣಬಹುದಾದ ಮಾದರಿಯಾಗಿ ನಾವಿದನ್ನು ನಿರ್ದೇಶಿಸುವುದು; ಅಷ್ಟೆ!

ವೃಷ್ಟಿಯಿಂದ ಸಮಷ್ಟಿ

ಎಲ್ಲ ಕಂಪೆನಿಗಳು ಎಲ್ಲ ಕಡೆ ಇಂತಹ ಸಹಾಯಕ ಚಟುವಟಿಕೆಗಳನ್ನು ಕೈಕೊಳ್ಳಲಾರವು; ಹೀಗಿದ್ದರೂ ಅವುಗಳ ಪ್ರೋತ್ಸಾಹ ಬಲದಿಂದ ವಿಮಾ ವ್ಯಾಪಾರದಲ್ಲಿ ಆಸಕ್ತಿಯುಳ್ಳ ಏಜಂಟ ವರ್ಗ ಈ ದಿಸೆಯಲ್ಲಿ ಅಗತ್ಯವಾಗಿ ಮುಂದಡಿಯಿಟ್ಟು ಮಾದರಿಯಾಗಬಹುದು. ಸನ್‌ಲೈಫ್ ಆಫ್ ಕೆನಡಾದ ಜನಾಬ್ ಶಮಶೇರ್...
ಲಿಯಂತಹ ಉತ್ಕೃಷ್ಟ ವರ್ಗದ ವಿಮಾ
ಪ್ರತಿನಿಧಿಗಳ ಯಶಸ್ಸಿಗೆ ಅವರ ಜನತಾ
ಸೇವೆಯ ಮಹತ್ವವೇ ಕಾರಣ. ನವ...
ವ್ಯಕ್ತಿಯಿಂದ ಪ್ರತಿಫಲ ದೊರೆಯಲಿ, ಇ...
ದಿರಲಿ, ಅವರ ಪರಿಚಯ ಬೆಳೆಸಿ ನಮ್ಮ...
ದಾದ ಮಟ್ಟಿಗೆ ಸೇವೆ ಸಲ್ಲಿಸುವುದು ಕ...
ವ್ಯರ್ಥವಲ್ಲ ಎಂಬ ಭಾವನೆ ಉದಿಸಿದ...
ಈ ಮಾರ್ಗಕ್ರಮಣ ಸುಲಭವೆನಿಸುವುದ...
ವೈಯಕ್ತಿಕ ಸೇವೆಯಲ್ಲಿ ಆಸಕ್ತಿ ವಹಿ...
ದುದರಿಂದ, ಅದೇ ಮಾತ್ರವೇ ಸಮಾಜ...
ಸೇವೆಯಾಗಿ ಗಣನೀಯವಾಗುವುದು ನಿ...
ಯ ಅಲ್ಲವೆ? ಸೇವೆಯಲ್ಲಿ ಯಶಸ್ಸು ಗಳಿ...
ದ ಜನ ಸಮಾಜದಲ್ಲಿ ಉತ್ತಮರೆಂದು
ರಿಗಣಿತರಾಗುತ್ತಾರೆ. ಅವರ ಮಾ...
ಬಲ; ಕೃತಿಗೆ ಮತ್ತು ಬೆಲೆ ಆಗ ಬರು...
ದೆ. ಹೀಗೆ ತಮ್ಮ ಕಂಪೆನಿಗಳನ್ನು ಏ...
ಟು ಬಲಗೊಳಿಸಿದರೆ ಮತ್ತೆ ಕಂಪೆನಿ...
ತನ್ನ ಸ್ಥಿತಿಯಿಂದ ಮಹಾ ಸೇವಾಕಾರ್ಯ...
ದಲ್ಲಿ ಪ್ರವೃತ್ತವಾಗಲು ಸುಲಭಸಾಧ್ಯ...
ಗುತ್ತದೆ. ಭಾರತದ ಅರೆವಾಸಿ ಜನ...
ದರೆ 17 ಕೋಟಿ ಜನರಾದರೂ ಪ್ರತಿ...
ವರ್ಷಕ್ಕೆ ಒಂದು ಸಾವಿರ ರೂಪಾಯಿ...
ಮೆ ಮಾಡಿಕೊಳ್ಳುವುದಾದರೆ, ಅಧ...
ಕ್ ವಿಮಾ ವರ್ಷಕ್ಕೆ ನಲ್ವತ್ತು ರೂಪಾ...
ಯ ಉಳಿತಾಯ ಮಾಡಲು ಶಕ್ತರಾ...
ಆಗ ಸರಕಾರದ ಮಹಾಯೋಜನೆಗ...
ವರ್ಷಂಪ್ರತಿ ಎಂಟುನೂರು ಅರವತ್ತು ಕೋ...
ಟಿ ರೂಪಾಯಿಗಳ ಬಂಡವಲು ದೊರೆ...
ವುದು, ಇಷ್ಟೇ ಅಷ್ಟೇ ಪ್ರಮಾಣದ
ಬಂಗಾರ ಅರೆವಾಸಿಯಷ್ಟಾದರೂ ವಿ...
ಕಂಪನಿ ಸ್ವಂತದ ಕಡೆಯಿಂದ ಜನ...
ಯ ಕೆಲಸಗಳಲ್ಲಿ ವಿನಿಯೋಗಿಸಿ ...
ವನ್ನೂ ಪಡೆಯಬಹುದು. ಆದರೆ ಭಾ...
ದ ಜನರ ಸರಾಸರಿ ಆದಾಯವನ್ನು
ಗಿ ನೋಡಿದರೆ ಹೀಗಾಗುವುದು ಈ...
ದ ಅವಧಿ ಮೀರಿದ ಮಾತು ಎಂದು ...
ರೀತಿ, ಇಷ್ಟಿದ್ದರೂ ಜನರನ್ನು ವಿಮೆ...
ಪರಿಚಯಿಸುವುದಕ್ಕಾಗಿ ಮಾಡಿ...
ಕಂಪೆನಿಗಳು ಹೆಣಗಬೇಕು; ಏಕೆ...
ಎಷ್ಟಾದರೂ ಇದೂ ವ್ಯಾಪಾರವೇ ಅ...

—ಕಾರ್ತಿಕೇ...



ಬರಗಾಲದ ಭೂತವನ್ನು ಎದುರಿಸೋಣ

ಭಾರತ ದೇಶದ ಇಂದಿನ ಕಠಿಣ ಆಹಾರ ಪರಿಸ್ಥಿತಿಯ ಕುರಿತು ಪ್ರಧಾನ ಮಂತ್ರಿ ಜವಾಹರಲಾಲರು ಜನತೆಯ ಪರವಾಗಿ ಕೇಳಿಕೊಂಡ ಹೃದಯಸ್ಪರ್ಶಿ ಆಕಾಶವಾಣಿ ಭಾಷಣದ ಸಾರಾಂಶವನ್ನು ಇಲ್ಲಿ ಕೊಡಲಾಗಿದೆ. ದೇಶದಲ್ಲಿಂದು ಆಹಾರದ ಕೊರತೆಯಾಗಿ ಗೊಂದಲವೆದ್ದಿದೆ, ಇಂತಹ ಪರಿಸ್ಥಿತಿಯಲ್ಲೂ ಹಲವು ಸ್ವಾರ್ಥಿಗಳು ಪರಿಸ್ಥಿತಿಯ ಲಾಭವನ್ನು ಪಡೆಯಲೆಳಸಿದ್ದು ವಿಷಾದಕರ. ಆಹಾರ ಪರಿಸ್ಥಿತಿಯ ಯಥಾರ್ಥ ಜ್ಞಾನವಿಲ್ಲದವರೂ, ಸರಕಾರದ ಮೇಲೆ ವೃಥಾ ಟೀಕೆಮಾಡಬಯಸುವವರೂ, ಬಂಗಾಳದ ಬರಗಾಲದಂತಹ ಭೀಕರ ಚಿತ್ರದ ಮೂಲಕ ತಮ್ಮ ಲಾಭಕೋರತನವನ್ನು ಹೆಚ್ಚಿಸಿಕೊಳ್ಳುವವರೂ ಸದ್ಯದ ಆಹಾರ ಕೊರತೆಯನ್ನು ಅತಿರಂಜಿತವಾಗಿ ವರ್ಣಿಸಿ ಗೊಂದಲಮಯ ವಾತಾವರಣವನ್ನುಂಟುಮಾಡಿದ್ದಾರೆ. ಜವಾಹರಲಾಲರು ... ಆಹಾರದ ಯಥಾರ್ಥ ಚಿತ್ರವೊಂದನ್ನು ನಮ್ಮ ಕಣ್ಣ ಮುಂದಿಟ್ಟಿದ್ದಾರೆ. ಮೊದಲಾಗಿ ಮುಂದಾಲೋಚನೆಯಿಲ್ಲದೆ ಸ್ವಲ್ಪ ಅವ್ಯವಸ್ಥೆ ಕಂಡುಬಂದರೂ ಈಗಿನ ಸರಬರಾಯಿ, ಆಯಾತ ಕ್ರಮ, ಯಶಸ್ವಿಯಾಗಿ ನಡೆದಿದೆ. ಹಸಿವಿನಿಂದ ಸಾಯುವ ಕಠಿಣ ಪರಿಸ್ಥಿತಿಯನ್ನು ಸರಕಾರ ಒಳ್ಳೆಯ ಮುತ್ಸದ್ದಿತನದಿಂದ ಎದುರಿಸಿದೆ. ಜನತೆಯೂ ಆ ಕಾರ್ಯದಲ್ಲಿ ಹೃತ್ಪೂರ್ವಕವಾಗಿ ಸಹಕರಿಸಿದರೆ ಬರಗಾಲವನ್ನು ಸುಲಭವಾಗಿ ಪರಿಹರಿಸಬಹುದೆಂಬುದೇ ಶ್ರೀ ಜವಾಹರಲಾಲರ ಭಾಷಣದ ಮುಖ್ಯಾಂಶವಾಗಿದೆ.

“ನಮ್ಮ ಕಷ್ಟಗಳನ್ನು ಇತರರಿಗೆ ನಿವೇದಿಸಿಕೊಳ್ಳುವದರಿಂದ ಬೇರೆಯವರ ಸಹಕಾರ ಸಹಾನುಭೂತಿಯಿಂದ ಅವು ಪರಿಹಾರವಾಗಬಲ್ಲವೆನ್ನುವದಕ್ಕೆ ಉತ್ತರ ಪ್ರದೇಶದಲ್ಲಿ ನಾ ಕೈಗೊಂಡ ಸಂಚಾರಾನುಭವ ಉತ್ತಮ ಉದಾಹರಣೆಯಾಗಿದೆ. ಬಿಹಾರ ಮದ್ರಾಸುಗಳಲ್ಲಿ ಅನ್ನವಿಲ್ಲದೆ ಜನ ಹಸಿದಿರುವ ಚಿಂತಾಜನಕ ಪರಿಸ್ಥಿತಿಯನ್ನು ನಾನು ಹೇಳಿದಾಗ ಅವರು ತಾವಾಗಿಯೇ ತಮ್ಮ ಆಹಾರದ ಕೊಡುಗೆಯನ್ನು ಮುಂದೆ ತಂದರು. ಆಹಾರದ ಅಭಾವದಿಂದ ಕಂಗೆಟ್ಟಿರುವ ಸ್ಥಿತಿಗಾಗಿ ಕನಿಕರಗೊಂಡರು ಇದನ್ನು ಕಂಡು, ನನಗೆ ಹೃದಯ ತುಂಬಿಬಂತು. ಹೃದಯಂಗಮವಾದ ನಮ್ಮ ಕೇಳಿಕೆಗೆ ಜನ ಓಗೊಡುತ್ತಾರೆ. ಕಷ್ಟದಲ್ಲಿ ತಾವು ಪಾಲ್ಗೊಳ್ಳುತ್ತಾರೆ, ಹಲವು ವೇಳೆ ತ್ಯಾಗಮಾಡಲೂ ಸಿದ್ಧರಾದರೆನ್ನುವುದಕ್ಕೆ ಇದು ಸಾಕ್ಷಿ.

ಪರಿಸ್ಥಿತಿಯು ವಿಷಮತೆಗೆ ಹೋಗುತ್ತಿರುವುದನ್ನು ನಾವು ನೋಡುತ್ತ ಕೂಡಿರುವುದು ಸಾಧ್ಯವಿಲ್ಲ. ಅನ್ನದ ಭೂತ ಸಾವಿನೊಡನೆ ಸರಸವಾಡುತ್ತಾ ನಮ್ಮ ಜನ ಅಧೋಗತಿಗಿಳಿಯುತ್ತಿರುವುದನ್ನು ನಾವು ಸಹಿಸಲಾಗದು. ಪ್ರಾಮುಖ್ಯ ವಿಚಾರಗಳೂ ಜೀವನಾವಶ್ಯ ಅಂಗಗಳು ಬಹಳವಿವೆ. ಆದರೆ, ಆಹಾರದ ಪ್ರಶ್ನೆ ಅತ್ಯಂತಾವಶ್ಯಕವಾದದು. ಬರಗಾಲದಂತಹ ಭೀಕರ ಪರಿಸ್ಥಿತಿಯನ್ನೆದುರಿಸುವದಕ್ಕಿಂತ ಮುಖ್ಯ ವಿಚಾರವೇರಿರಲಾರದು. ಮೃತ್ಯುವಿನ ದವಡೆಯಿಂದ ನಮ್ಮ ಜನರನ್ನು ರಕ್ಷಿಸುವ ಸಲುವಾಗಿ ಅವಿರತ ಹೆಣಗಾಡುವುದು ನಮ್ಮ ಮುಖ್ಯ ಕರ್ತವ್ಯವಲ್ಲವೇ? ಈ ಹಿಂದಿನ ಸನ್ನಿವೇಶಗಳನ್ನೆದುರಿಸಿದ ರೀತಿಯನ್ನು ಜ್ಞಾಪಕಕ್ಕೆ ತಂದುಕೊಳ್ಳಬೇಕಾಗಿದೆ. ಅಂತೆಯೆ ಬರಗಾಲದ ಇದಿರಾಗಿ ಯುದ್ಧ ಹೂಡಲು ನಾವೆಲ್ಲ ಸಿದ್ಧರಾಗೋಣ.

ಪರದೇಶದಿಂದ ಆಹಾರವನ್ನು ತರಿಸಿಕೊಳ್ಳುವಲ್ಲಿ ಶಕ್ತಿಮೀರಿ ಯತ್ನಮಾಡಿದೇವೆ. ಅಂತೆಯೆ ಸಕಾಲಿಕವಾಗಿ ಆಹಾರವನ್ನು ಪಡೆದುದೂ ಆಗಿದೆ. ಆದರೆ ನಮ್ಮ ಹಸಿವನ್ನು ಪೂರೈಸುವಷ್ಟು ಆಹಾರ ನಮಗೆ ಸಿಗಲಿಲ್ಲ. ಅವಶ್ಯಕವಾದ ಹಾಗೂ ಸಂದಿಗ್ಧ ಪರಿಸ್ಥಿತಿಯಲ್ಲಿ ಆಹಾರ ಧಾನ್ಯವನ್ನಿತ್ತ ರಷ್ಯಾ, ಚೀನಾ, ಅಮೇರಿಕಾ ಬ್ರಿಟನ್, ಮುಂತಾದ ರಾಷ್ಟ್ರಗಳನ್ನು ನಾನು ಶ್ಲಾಘಿಸದಿರಲಾರೆ. ರಾಜಕೀಯ ಪಕ್ಷವಲ್ಲದೆ ವೈಯಕ್ತಿಕವಾಗಿ ನಮ್ಮ ಕುರಿತು ಸಹಾನುಭೂತಿಯನ್ನು ವ್ಯಕ್ತಪಡಿಸಿದವರನ್ನು ಹೃದಯಿಕವಾಗಿ ಅಭಿನಂದಿಸುತ್ತೇನೆ. ಅಮೇರಿಕೆಯ ಸರಕಾರೇತರ ವರ್ಗದವರು ಈ ಬಗ್ಗೆ ಕೈಗೊಂಡ ಕಾರ್ಯವು ಅಸಾಧಾರಣವಾದುದು.

ಬೇರೆಯವರ ಕೊಡುಗೆಯನ್ನು ಸ್ವಾಗತಿಸುವೆವಾದರೂ ರಾಜಕೀಯ ಬಂಧನದಿಂದ ಆತ್ಮಾಭಿಮಾನವನ್ನು ಕಳೆದುಕೊಂಡು ಆಹಾರವನ್ನು ಬಯಸೆವು. ಪರಿಸ್ಥಿತಿ ಎಷ್ಟೇ ಕಠಿಣವಾದರೂ ಆತ್ಮಗೌರವಕ್ಕೆ ಹಾನಿಬರುವ ಪ್ರಸಂಗವನ್ನು ನಾವು ಸ್ವಾಗತಿಸುವುದಿಲ್ಲ.

ವಿಶಾಲವಾದ ನಮ್ಮ ದೇಶದಲ್ಲಿ ಕೊರತೆಯ ಪ್ರದೇಶ ಇದ್ದಹಾಗೆಯೆ ಉಳಿತಾಯದ ಪ್ರದೇಶವೂ ಇದೆ. ಇಡಿಯ ದೇಶದ ಆಹಾರದ ಪರಿಸ್ಥಿತಿಯು ನಾವು ಯೋಚಿಸಿದಷ್ಟು ನಿಕೃಷ್ಟವಾಗಿಲ್ಲ. ನಮ್ಮ ಸಂಪತ್ತನ್ನು ಸಮನಾಗಿ ಹಂಚಿಕೊಳ್ಳುವದರಿಂದ ಮಾತ್ರ ನಮ್ಮ ಕಷ್ಟವನ್ನು ಪರಿಹರಿಸಿಕೊಳ್ಳಬಹುದಾಗಿದೆ. ಆಹಾರದಭಾವದಿಂದ ಒಂದು ಪ್ರಾಂತದವರು ಬಳಲುತ್ತಿರುವಾಗ ಉಳಿತಾಯ ಉಳ್ಳಂಥ ಪ್ರಾಂತದವರು ಇತರರ ದುಃಖದಲ್ಲಿ ಸಹಭಾಗಿಗಳಾಗದೇ ಸ್ವಸುಖವನ್ನಷ್ಟೇ ಬಯಸುವದು ವಿಷಾದದ ಸಂಗತಿ! ಈ ರೀತಿಯ ಪ್ರಾಂತೀಯ ಸಂಕುಚಿತ ಮನೋವೃತ್ತಿಯನ್ನು ಇರಗೊಳಿಸಲಾಗದು. ಇದ್ದವರೂ ಇಲ್ಲದವರೂ ಒಂದೇರೀತಿಯ ಆಹಾರಧೋರಣೆಯನ್ನು ತಾಳುವದರಿಂದಮಾತ್ರ ಇಂದಿನ ಪರಿಸ್ಥಿತಿಯನ್ನು ಪರಿಹರಿಸಬಹುದಾಗಿದೆ. ಹೊರಗಿನಿಂದ ಆಹಾರ ಬರಲಿ; ಬರದೆ ಹೋಗಲಿ ಪರಿಹಾರೋಪಾಯದ ಹೊಣೆಗಾರಿಕೆಯನ್ನು ನಾವು ಹೊರಲೇಬೇಕಾಗಿದೆ. ದೇಶದ ಯಾವ ಒಂದು ಪ್ರಾಂತ ಬರಗಾಲದಿಂದ ಬಳಲಿದರೂ ಅದರ ದುಷ್ಪರಿಣಾಮ ಇಡಿಯ ದೇಶಕ್ಕೆ ಆಗುತ್ತದೆನ್ನುವದನ್ನು ನಾವು ಮರೆಯಬಾರದು. ಆದುದರಿಂದ ನಾವೆಲ್ಲ ಒಂದೇರೀತಿಯ ಧೋರಣೆಯನ್ನು ಅನುಸರಿಸಿ ಸಂಘಟಿತರಾಗಬೇಕು.

ಹಲವರು ಎತ್ತುವಳಿಯ ಕಾರ್ಯವನ್ನು ಬಲವಾಗಿ ಟೀಕೆಮಾಡಿದ್ದಾರೆ. ಇಂತಹ ಸಂದರ್ಭಗಳಲ್ಲಿ ಟೀಕೆಮಾಡುವವರು ಕಾರ್ಯದಲ್ಲಿ ಪ್ರಗತಿಸಾಧಿಸಿ, ಮಾರ್ಗದರ್ಶನ ಮಾಡಲವಕಾಶವಿದೆ. ಆದರೆ ಹಿಂದುಮುಂದಿನ ಪರಿವೆ ಇಲ್ಲದೆ ವ್ಯರ್ಥಾಲಾಪವನ್ನು ಮಾಡುವುದನ್ನು ನೋಡಿ ನನಗೆ ವಿಷಾದವಾಗಿದೆ. ವಸ್ತುಸ್ಥಿತಿಗೆ ವಿರೋಧವಾದ ಈ ಬಗೆಯ ಪ್ರಚಾರಗಳು ಬರಗಾಲವನ್ನು ಬಹಿಷ್ಕರಿಸುವ ಬದಲು ಬರಮಾಡಿಕೊಳ್ಳುವಂತೆ ಮಾಡುತ್ತವೆಯೆಂದು ಬೇರೆ ಹೇಳಬೇಕಾಗಿಲ್ಲ. ನಮಗೆ ಪ್ರಾಪ್ತವಾದ ಆಹಾರಧಾನ್ಯದ ಸದುಪಯೋಗ ಮಾಡಿಕೊಳ್ಳೋಣ. ದಗಾರೆ, ಸ್ವಾರ್ಥಸಾಧನೆ, ಲಂಚಗುಳಿತನ, ಇವೆಲ್ಲ ತಲೆಹಾಕದಿರಲಿ.

ನಮ್ಮ ದೇಶದ ವೀರಯೋಧರು ಆಹಾರ ಹಂಚುವಿಕೆಯಲ್ಲಿ ತಾವು ಸಹಾಯನೀಡುವದಾಗಿ ಮುಂದೆ ಬಂದಿರುವದನ್ನು ಶ್ಲಾಘಿಸುತ್ತೇನೆ. ಶಿಸ್ತು ಸಂಘಟನೆಯುಳ್ಳಂತಹ ನಮ್ಮ ಸೈನಿಕರು ಇಷ್ಟುಮಾತ್ರವಲ್ಲದೆ ಇನ್ನೂ ಹಲವಾರು ವಿಚಾರಗಳಲ್ಲಿ ದೇಶಸೇವಾದೃಷ್ಟಿಯಿಂದ ಉತ್ಸಾಹಿಗಳಾಗಿ ಮುಂದೆ ಬರಬೇಕೆಂದು ಆಹ್ವಾನಿಸುತ್ತೇನೆ. ನಮ್ಮ ದೇಶದ ಸೈನಿಕರ ಸಂಘಟನಾಶಕ್ತಿಯು ಇಷ್ಟರಲ್ಲೇ ನಮ್ಮೆಲ್ಲರ ಪ್ರೀತಿವಿಶ್ವಾಸಕ್ಕೆ ಪಾತ್ರವಾಗಿದೆ.

ಮದ್ರಾಸು ಮತ್ತು ಬಿಹಾರ ಪ್ರಾಂತಗಳಲ್ಲಿಯ ಸ್ಥಿತಿಯು ಶೋಚನೀಯವಾಗಿರುತ್ತದೆ. ಒಂದು ವೇಳೆ ಆಹಾರ ದೊರಕುವದಾದರೂ ಅದನ್ನು ಕೊಳ್ಳಲು ಹಣವಿಲ್ಲದೆ ಬಡತನದಿಂದ ಕಷ್ಟಪಡುವವರೆಷ್ಟೋ ಮಂದಿ ಇದ್ದಾರೆ. ಇಂತಹ ಪ್ರದೇಶದಲ್ಲಿ ಸಾರ್ವಜನಿಕ ಉದ್ಯೋಗವನ್ನು ಕಲ್ಪಿಸಿಕೊಡುವ ಯೋಜನೆಯನ್ನು ಕೂಡಲೇ ಕೈಗೊಳ್ಳಬೇಕಾಗಿದೆ.

ಹೆಚ್ಚು ಆಹಾರ ಉತ್ಪಾದನೆಗಾಗಿ ನಾನಾರೀತಿಯ ಕಾರ್ಯಕ್ರಮವನ್ನು ಕೈಗೊಂಡಿದ್ದೇವೆ. ಎಲ್ಲರೂ ತಮ್ಮ ಶಕ್ತಿಮೀರಿ ಆಹಾರವನ್ನು ಹೆಚ್ಚಾಗಿ ಬೆಳೆಸುವದರಲ್ಲಿ ಆಸ್ಥೆವಹಿಸಬೇಕು; ಪಾರ್ಕಿನಲ್ಲೂ, ಹೂದೋಟದಲ್ಲಿ, ಮನೆಯ ಸುತ್ತಮುತ್ತ ಎಲ್ಲೆಡೆಯಲ್ಲಿ ಆಹಾರ ವಸ್ತುಗಳನ್ನು ಬೆಳೆಸಬೇಕು.

ಯುವಕರು ಅದರಲ್ಲೂ ಕಾಲೇಜು ಮತ್ತು ಹೈಸ್ಕೂಲು ವಿದ್ಯಾರ್ಥಿಗಳು ಈ ವಿಚಾರದಲ್ಲಿ ಹೆಚ್ಚಿನ ನಿಗಾ ತೆಗೆದುಕೊಳ್ಳುವುದು ಅವಶ್ಯವಿದೆ. ಇತರ ಐಚ್ಛಿಕ ವಿಚಾರಗಳನ್ನು ಕಡ್ಡಾಯವಾಗಿ ಕಾಲೇಜುಗಳಲ್ಲಿ ಹೇಗೆ ಕಲಿಸಲಾಗುತ್ತದೋ ಅಂತೆಯೆ ಆಹಾರೋ



ತ್ಪಾದನೆಯ ವಿಚಾರದಲ್ಲೂ ಕಡ್ಡಾಯವಿರಬೇಕು. ಡಿಗ್ರಿಗಳನ್ನು ಪಡೆದುಬರುವಾಗ ಅವರು ದೇಶದ ಅವಶ್ಯಕತೆಗಳಲ್ಲೊಂದಾದ ಆಹಾರದ ವಿಚಾರದಲ್ಲೂ ಪರಿಪೂರ್ಣರಾಗುವಂತೆ ಶಾಲಾಕಾಲೇಜುಗಳು ತರಬೇತುಗೊಳಿಸಲಿ.

ಗ್ರಾಮಕಮಿಟಿಯ ಮೂಲಕ ಹಳ್ಳಿಗಳಿಂದ ದಾನರೂಪದಲ್ಲಿ ಸಿಗಬಹುದಾದ ಆಹಾರಧಾನ್ಯವನ್ನು ಸಂಗ್ರಹಿಸುವ ಯೋಜನೆಯನ್ನು ಮಾಡಿದ್ದೇವೆ. ನೆರೆಯ ಬರಗಾಲ ಪೀಡಿತ ಜನಕ್ಕೆ ತಮ್ಮ ಉಳಿಕೆಯಲ್ಲಿ ಹೃತ್ಪೂರ್ವಕವಾಗಿ ದಾನಮಾಡುವ ಉದಾರಿಗಳು ನೀವಾಗಬೇಕು. ಕೊಡುಗೆಯು ಎಷ್ಟೇ ಸಣ್ಣದಾಗಿದ್ದರೂ ಅದನ್ನು ಅತ್ಯಂತ ಪ್ರೀತಿಯಿಂದ ಸ್ವೀಕರಿಸಿ ಹಸಿದವರಿಗೆ ಧರ್ಮಾರ್ಥವಾಗಿ ಹಂಚಲಾಗುತ್ತದೆ. ಇಂತಹ ಸತ್ಕಾರ್ಯದಲ್ಲಿ ಸಹೃದಯರಾದ ನನ್ನ ಹಳ್ಳಿಯ ಬಂಧುಗಳು ಸಹಕರಿಸಿಯಾರೆಂಬ ಭಾವನೆ ನನಗಿದೆ.

ಬರಗಾಲವನ್ನೆದುರಿಸುವ ಸಲುವಾಗಿ ಹಲವು ವಿಚಾರಗಳನ್ನು ತಮ್ಮ ಮುಂದಿಟ್ಟಿದ್ದೇನೆ. ಅದನ್ನು ಕಾರ್ಯಗತ ಮಾಡುವುದು ತಮ್ಮ ಕೈಯಲ್ಲಿದೆ. ಈ ನಡುವೆ ವಾರದಲ್ಲೊಂದು ಊಟವನ್ನು ಬಿಟ್ಟು ಹಸಿದ ನಮ್ಮ ಬಂಧುಗಳಿಗೆ ಆಹಾರವನ್ನು ದಾನ ಮಾಡಿರೆಂದು ನಿಮ್ಮನ್ನು ಕಳಕಳಿಯಿಂದ ಕೇಳಿಕೊಳ್ಳಲೇ? ಇದು ಬಹುದೊಡ್ಡ ತ್ಯಾಗವೇನೂ ಅಲ್ಲ. ಆದರೆ ಅದರಿಂದ ಕಡಿಮೆ ಪ್ರಮಾಣದಲ್ಲಾದರೂ ಆಹಾರದ ಉಳಿತಾಯವಾಗಿ ಎಷ್ಟೋ ಜನರ ಹಸಿವನ್ನು ನೀಗಬಹುದು. ಮಹತ್ವದ ಯೋಜನೆಯೊಡನೆ ಈ ಚಿಕ್ಕ ಪುಟ್ಟ ತ್ಯಾಗಗಳೂ ನಮ್ಮ ಸಂಕಟಗಳನ್ನು ದೂರ ಮಾಡಬಲ್ಲವು.

ದೇಶದ ಮುಂದಿರುವ ಈ ಆಹಾರ ಬಿಕ್ಕಟ್ಟಿಗೆ ಚಿಕ್ಕದೆಂದು ಭಾವಿಸಬೇಡಿರಿ. ಅತ್ಯಂತ ಆತ್ಮೀಯತೆಯಿಂದ ಈ ಪರಿಸ್ಥಿತಿಯ ಕಡೆಗೆ ತಾವು ಗಂಭೀರವಾಗಿ ಆಲೋಚಿಸಬೇಕೆಂದು ಕೇಳಿಕೊಳ್ಳುವೆ. ಒಂದು ಅಥವಾ ಕೆಲವು ಪ್ರಾಂತಗಳಿಗೆ ಮಾತ್ರವೆಂದು ಕಡೆಗಣಿಸದೆ ಇಡಿಯ ದೇಶಕ್ಕೆ ಬಂದ ಆಪತ್ತೆಂದು ಭಾವಿಸಬೇಕು, ನಾವೆಲ್ಲ ಒಂದೇ ತಾಯಿಯ ಮಕ್ಕಳಾಗಿದ್ದೇವೆ. ತನ್ನ ಮಕ್ಕಳ ಪಾಡಿಗಾಗಿ ನೊಂದುಕೊಂಡ ತಾಯಿಯ ದುಃಖವನ್ನು ಪರಿಹಾರ ಮಾಡುವುದು ಭಾರತ ಮಾತೆಯ ಸುಪುತ್ರರಾದ ನಮ್ಮೆಲ್ಲರ ಮುಖ್ಯ ಕರ್ತವ್ಯವಲ್ಲವೆ? ಅಂತಲೇ ನಮ್ಮ ಸರ್ವಶಕ್ತಿ ಸಂಘಟನೆಯಿಂದ ಬರಗಾಲದ ಭೂತವನ್ನೆದುರಿಸೋಣವೆನ್ನುತ್ತೇನೆ!



ಕತ್ತಲೆಯಲ್ಲಿ ನಿಮ್ಮ ಮಾರ್ಗದರ್ಶಿ.

ಇದು ತಿಳಿದವರು ಮಾಡುವ ಅಪರಾಧ.

ಭಾರತ ಪಾಕಿಸ್ತಾನಗಳ ಪ್ರಸವಕಾಲದಲ್ಲುಂಟಾದ ಕಾಶ್ಮೀರ ತಂಟೆಯು ಈತನಕವೂ ಬಗೆಹರಿಯದೆ ಸಮಸ್ಯೆ ಇನ್ನಷ್ಟು ಕಠಿಣವಾಗುತ್ತ ಬಂದಿದೆ. ಸಂ. ರಾ. ಸಂಘವು ಸರಿಯಾದ ನ್ಯಾಯದಾನ ಮಾಡೀತೆಂದು ಭಾವಿಸಿದ್ದು ವ್ಯರ್ಥವೇ ಆಗಿದೆ. ಅಮೆರಿಕಾ ಹಾಗೂ ಬ್ರಿಟಿಷ್ ಪ್ರತಿನಿಧಿಗಳು ತಮ್ಮ ಜಾತೀಯ ಕುಬುದ್ಧಿಯ ಪ್ರದರ್ಶನವನ್ನು ಇಲ್ಲಿಯೂ ಮಾಡಿರುತ್ತಾರೆ. ಅಮೆರಿಕೆಯ ದುರಹಂಕಾರ– ಹಟಸಾಧನೆ ಜಗತ್ತಿಗೇ ಅಸಹ್ಯವಾಗಿರುವ ಸಂದರ್ಭದಲ್ಲಿ ಬ್ರಿಟನೂ ಅದರೊಂದಿಗೆ ಸೇರಿ ಆತ್ಮಹತ್ಯೆ ಮಾಡಿಕೊಳ್ಳುವ ಸ್ಥಿತಿಯನ್ನು ನಾವಿಂದು ಕಾಣುತ್ತಲಿದ್ದೇವೆ. ಲಾರ್ಡ್ ಮೌಂಟ್ ಬೇಟನ್ನರು ಗವರ್ನರ್ ಜನರಲ್ಲರಾಗಿರುವಾಗಲೇ ಕಾಶ್ಮೀರ ಯುದ್ಧ ನಡೆದು ಅದರಲ್ಲಿ ಪಾಕಿಸ್ತಾನ ಪ್ರತ್ಯಕ್ಷ ಆಕ್ರಮಣ ನಡೆಸಿದೆಯೆಂಬುದನ್ನು ಅವರೂ ಅರಿತಿದ್ದಾರೆ. ಆ ಬಳಿಕ ಮಧ್ಯಸ್ಥಗಾರನಾಗಿ ಬಂದ ಆಟಿನ್‌ಸನ್ನರು ಪಾಕಿಸ್ತಾನ ಆಕ್ರಮ ರಾಷ್ಟ್ರವೆಂದು ಸಾರಿದ್ದಾರೆ. ಪಾಕಿಸ್ತಾನದ ತಪ್ಪು, ಬೆಳದಿಂಗಳಿನಷ್ಟು ಸತ್ಯವಾಗಿದ್ದರೂ ಅದನ್ನು ಮರೆಸಿ ಭಾರತಕ್ಕೆ ವಿರುದ್ಧವಾದ ಧೋರಣೆಯನ್ನು ಈ ಎರಡು ರಾಷ್ಟ್ರಗಳು ವಹಿಸಿದ್ದು ಶೋಚನೀಯ ಸಂಗತಿ. ಇಂಗ್ಲಂಡಿನ ಮುಖ್ಯ ಮಂತ್ರಿಗಳ ಸಭೆಯಲ್ಲಿ ಶ್ರೀ ಜವಾಹರಲಾಲರು ಕಾಶ್ಮೀರ ಪ್ರಕರಣದಲ್ಲಿ ಭಾರತದ ನಿಲುಮೆಯೇನೆಂದು ಸ್ಪಷ್ಟೀಕರಿಸಿದ್ದಾರೆ. ತಿರುಗಿ ಯು. ರಾ. ಸಂಘದಲ್ಲಿ ಭಾರತದ ಪ್ರತಿನಿಧಿ ತನ್ನ ಅಭಿಪ್ರಾಯವನ್ನು ಸ್ಪಷ್ಟೀಕರಿಸಿ ಆಂಗ್ಲೋ ಅಮೆರಿಕಾನರ ಗೊತ್ತುವಳಿಯನ್ನು ನಿರಾಕರಿಸಿದ್ದಾರೆ. ಭಾರತವು ಸಂ. ರಾ. ಸಂಘದ ಮಾರ್ಚ್ ತಿಂಗಳ ಗೊತ್ತುವಳಿಯನ್ನು ಸಂಪೂರ್ಣ ವಿರೋಧಿಸಿದರೂ ಪಾಕಿಸ್ತಾನದ ಪ್ರೀತ್ಯರ್ಥವಾಗಿಯೂ, ಅಮೇರಿಕಾ ಬ್ರಿಟನುಗಳು ಭಾರತವು ಕಮ್ಯೂನಿಸ್ಟ ಪಕ್ಷಪಾತಿಯಾಗಿ ವರ್ತಿಸಿದ್ದರ ಸೇಡು ತೀರಿಸಿಕೊಳ್ಳುವದಕ್ಕಾಗಿಯೂ ಭಾರತದ ನಿರಾಕರಣೆಯನ್ನು ಕಡೆಗಣಿಸಿ ಪಾಕಿಸ್ತಾನಕ್ಕೆ ಅನುಕೂಲವಾಗುವಂತೆ ಏಕಪಕ್ಷೀಯವಾಗಿ ವರ್ತಿಸಿವೆ. ಅಂತಲೇ ಫ್ರಾಂಕ್ ಗ್ರಾಹಮರು ಮಧ್ಯಸ್ಥಗಾರನಾಗಿ ನೇಮಕಗೊಂಡಿದ್ದಾರೆ. ಭಾರತ ಸರಕಾರವು ಈ ಮಧ್ಯಸ್ಥಗಾರನಿಗೆ ತನ್ನ ಸಹಕಾರವನ್ನು ನೀಡುವಂತಿಲ್ಲ. ನಿಶ್ಶಸ್ತ್ರೀಕರಣವು ಆತನ ಮೊದಲ ಕರ್ತವ್ಯವಾಗಿದ್ದರೆ ಭದ್ರತೆಯು ಹಲವು ಕಾರಣದ ಮೇಲೆ ಭಾರತವು ಅದರ ವಿರುದ್ಧವಾಗಿದೆ. ತೋರಿಕೆಯ ಮಟ್ಟಿಗೆ ಸಾರ್ವಜನಿಕ ಮತಗಣನೆಯಿಂದ ಕಾಶ್ಮೀರವು ಯಾವ ರಾಷ್ಟ್ರಕ್ಕೆ ಸೇರಬೇಕೆಂಬುದನ್ನು ಅಲ್ಲಿಯ ಜನತೆಯಿಂದಲೇ ತೀರ್ಮಾನಿಸುವುದು ಮಧ್ಯಸ್ಥಗಾರನ ಮುಖ್ಯ ಕರ್ತವ್ಯವೆಂದು ಹೇಳಲಾಗಿದೆ. ಕಾಶ್ಮೀರ ಜಮ್ಮುಗಳ ಪ್ರಜೆಗಳು ಈಗಾಗಲೇ ಈ ಮಧ್ಯಸ್ಥಗಾರನನ್ನು ಬಹಿಷ್ಕರಿಸಬೇಕೆ,– ಕಪ್ಪು ನಿಶಾನೆಯನ್ನು ಹಿಡಿದು ಹಿಂದೋಗುವಂತೆ ಕೂಗಬೇಕೆ,– ಯಾವುದೇ ರೀತಿಯ ಸಹಕಾರ ಇಲ್ಲವೆ ಸತ್ಕಾರಗಳನ್ನು ನೀಡಬಾರದೆಂದು ನಿಶ್ಚಯಿಸಿದ್ದಾರೆ. ಭಾರತವೂ ಆತನೊಡನೆ ಸಹಕರಿಸುವ ಲಕ್ಷಣವನ್ನು ತೋರಿಸದೇ ಇರುವಾಗ ಪಾಕಿಸ್ತಾನದ ಒಪ್ಪಿಗೆಯೊಂದರಿಂದಲೇ ಆತನು ಏನು ಸಾಧಿಸಿಯಾನೆಂಬುದು ಸ್ವಾರಸ್ಯದ ವಿಷಯವಾಗಿದೆ.

ಕಾಶ್ಮೀರವನ್ನು ಏನಕೇನ ಪ್ರಕಾರೇಣ ಪಾಕಿಸ್ತಾನಕ್ಕೆ ಸೇರಿಸಿಬಿಡಬೇಕೆಂದು ಜಾತೀಯವಾದಿ ಮುಸಲ್ಮಾನರು ಈಗಾಗಲೇ ನಾನಾ ರೀತಿಯ ಅಪಪ್ರಚಾರ ನಡೆಸಿದ್ದಾರೆ. ಕರಾಚಿಯಲ್ಲಿ ಇತ್ತೀಚೆಗೆ ತಲೆಯೆತ್ತಿರುವ "ಹಿಂದೂಸ್ತಾನ ಹಮಾರಾ" ಪಕ್ಷವು ಪಾಕಿಸ್ತಾನದ ಮುಸಲ್ಮಾನರನ್ನು ಮಾತ್ರವಲ್ಲದೆ ಭಾರತದ ಮುಸಲ್ಮಾನರನ್ನು ಕೆರಳಿಸಿ ಭಾರತದ ವಿರುದ್ಧವಿರುವ ಹಾಗೆ ಪ್ರೇರೇಪಿಸಿದೆ. "ಭಾರತದಲ್ಲಿಯ ಅಲ್ಪಸಂಖ್ಯಾಕರಾದ ಮುಸಲ್ಮಾನರ ಪರಿಸ್ಥಿತಿಯೂ ಚಿಂತಾಜನಕವಾಗಿದೆ-ಅಲ್ಲಿಯ ಹಿಂದೂ ಮಹಾಸಭೆಯವರು ಮುಸಲ್ಮಾನರನ್ನು ಹಿಂದುಗಳನ್ನಾಗಿ ಮಾಡುವುದೇ ತಮ್ಮ ಉದ್ದೇಶವೆಂದು ಸಾರಿದ್ದನ್ನು ಭಾರತಸರಕಾರ ಸಹಿಸಿಕೊಂಡು ಇಂತಹ ಜಾತೀಯವಾದಿಗಳಿಗೆ ಪ್ರೋತ್ಸಾಹನೀಡಿದಂತಾಗಿದೆ. ಮುಸಲ್ಮಾನರ ಪರಿಸ್ಥಿತಿ ದೇಶಸ್ವಾತಂತ್ರವಾಗಿದ್ದರೂ ಬ್ರಿಟಿಶರ ಕಾಲಕ್ಕಿಂತಲೂ ಭಯಭೀತವಾಗಿರುತ್ತದೆ ಆದುದರಿಂದ ವಿಚಾರವಿನಿಮಯದಿಂದಾಗಲೀ-ನಾಗರಿಕ ಮನೋಧರ್ಮದಿಂದಾಗಲೀ ಇಂತಹ ಪ್ರಮಾದಗಳನ್ನು ತಡೆಗಟ್ಟುವುದು 'ಹಿಂದೂಸ್ಥಾನ ಹಮಾರಾ'ದ ಮುಖ್ಯ ಕರ್ತವ್ಯವಾಗಿರುತ್ತದೆ. ಅದು ಸಾಧ್ಯವಾಗದೇ ಹೋದರೆ ಕೊನೆಗೆ ಶಸ್ತ್ರದಿಂದಲಾದರೂ ನಮ್ಮ ಹಕ್ಕುಬಾಧ್ಯತೆಗಳನ್ನು ಕಾಯ್ದುಕೊಳ್ಳಬೇಕು ಈ ರೀತಿಯ ಘೋಷಣೆಯೊಂದನ್ನು 'ಹಿಂದೂಸ್ಥಾನ ಹಮಾರ ಸಂಘವು ಕರಾಚಿಯಿಂದ ಮೊನ್ನೆ ಸಾರಿತು. ಪಾಕಿಸ್ತಾನದಲ್ಲಿ ಕೂತು ಹಿಂದೂಸ್ತಾನ ನಮ್ಮದೆನ್ನುವ ಹೆಸರನ್ನು ಇಟ್ಟುಕೊಂಡು ಮುಂದಕ್ಕೆ ಹಿಂದೂಸ್ಥಾನ ನಮಗೆ ಸಿಗಲೇಬೇಕೆಂದು ಈ ಜಾತಿಯವಾದಿಗಳು ಹೋರಾಟ ನಡೆಸಿದರೂ ನಡೆಸಬಹುದು. ನೆಹ್ರೂಲಿಯಾಖತ್ ಒಪ್ಪಂದಕ್ಕೆ ಈರೀತಿಯ ಅಸಂಬದ್ಧ ಪ್ರಲಾಪಕ್ಕೆ ಏನರ್ಥ? ಉಭಯ ರಾಷ್ಟ್ರಗಳೂ ಪರಸ್ಪರ ತಪ್ಪು ತಿಳುವಳಿಕೆಯನ್ನು ಕಿತ್ತೊಗೆದು ಸೋದರತ್ವದಿಂದ ಬಾಳಬೇಕೆಂದು ಹಾರೈಸಿದ್ದು ಹಾರೈಸಿದ್ದೇ. ದ್ವೇಷಕಾರಕ ಪ್ರಚಾರವನ್ನು ವಿರೋಧ ಅಭಿಪ್ರಾಯಗಳನ್ನು ವ್ಯಕ್ತಮಾಡಬಾರದೆಂದು ಸೂಚಿಸಿದ್ದು ಸೂಚಿಸಿದ್ದೇ. ಆದರೆ ಇಂದು ಪಾಕಿಸ್ತಾನಿಗಳೇ ಇನ್ನೊಂದು ಪ್ರಮಾದಕ್ಕೆ ಮೂಲಪುರುಷರಾಗುತ್ತಲಿದ್ದಾರೆ. "ಹಿಂದೂಸ್ತಾನ ಹಮಾರಾ" "ಆಜಾದ್ ಕಾಶ್ಮೀರ" ಮುಂತಾದ ಮುಸಲ್ಮಾನ ಜಾತೀಯ ಹಾಗೂ ಸ್ವಧರ್ಮೀಯ ಸಂಸ್ಥೆಗಳು ಕ್ರಾಂತಿಯ ಮೂಲಕ ಅರಾಜಕತೆಯನ್ನುಂಟುಮಾಡುವ ಕಾರ್ಯಕ್ಕೆ ತೊಡಗಿವೆ ಸದ್ಯಕ್ಕೆ ಪಾಕಿಸ್ತಾನದ ಮುಖ್ಯ ಗುರಿ ಕಾಶ್ಮೀರವನ್ನು ಯಾವ ಪ್ರಯತ್ನದಿಂದಲಾದರೂ ಪಡೆಯಬೇಕೆಂಬುದೇ. ಪಾಕಿಸ್ತಾನದ ರಾಜಕೀಯ ಸೂತ್ರಗಳೆಲ್ಲ ಇದನ್ನವಲಂಬಿಸಿಕೊಂಡೇ ಇರುತ್ತದೆ. ಸಾರ್ವಜನಿಕ ಚುನಾವಣೆಯ ಪ್ರಚಾರದಲ್ಲಿ ಕಾಶ್ಮೀರವೇ ಮುಖ್ಯ ಪ್ರಚಾರ ಸಾಧನವಾಗಿದೆ ಅಂತಲೇ ಎಲ್ಲ ಮುಸ್ಲಿಮರನ್ನು ಕೆರಳಿಸಿ ಕಾಶ್ಮೀರವನ್ನು ಪಡೆದೇ ತೀರಬೇಕೆಂಬ ಪಿತೂರಿಯನ್ನು ಹೂಡಿಕೊಂಡಿರುವ ಹಾಗಿದೆ.

"ಹಿಂದೂಸ್ಥಾನ ಹಮಾರಾ"ದ ಘೋಷಣೆಯನ್ನು ಅ.ಭಾ.ಮುಸ್ಲಿಮ ಪರಿಷತ್ತು ಸಂಪೂರ್ಣ ಅಲ್ಲಗಳೆದು ಭಾರತದಲ್ಲಿ ಮುಸ್ಲಿಮರು ಸುರಕ್ಷಿತವಾಗಿ ಜೀವನ ನಡೆಸುತ್ತಿದ್ದಾರೆ. ನೆಹ್ರೂರವರ ಧುರೀಣತ್ವದಲ್ಲಿ ಭಾರತೀಯ ಮುಸಲ್ಮಾನರಿಗೆ ಯಾವುದೇ ರೀತಿಯ ತೊಂದರೆಗಳಿರುವುದಿಲ್ಲ; ಭಾರತದಲ್ಲಿ ನಾವೆಲ್ಲ ಒಳ್ಳೆಯ ನಿಷ್ಠೆಯನ್ನು ಪ್ರದರ್ಶಿಸಿ, ಅದರ ಅಸ್ತಿವಾರದ ಸಲುವಾಗಿ ಕೊನೆಯ ತನಕವೂ ಹೋರಾಟ ನಡೆಸಲು ನಾವು ಸಿದ್ಧರಿದ್ದೇವೆಂದು ತನ್ನ ಎಚ್ಚರಿಕೆಯನ್ನು ಅನಿಷ್ಟಕಾರಕ ಅಪಪ್ರಚಾರಗಳನ್ನು ಕೈಗೊಂಡ ಪಾಕಿಸ್ತಾನಿಗಳಿಗೆ ಉತ್ತರಿಸಿಯದೆ. ಕಾಶ್ಮೀರದ ಪ್ರಶ್ನೆಯು ಪಾಶ್ಚಿಮಾತ್ಯ ರಾಷ್ಟ್ರಗಳ ಆದೇಶದಂತೆ ಬಗೆಹರಿಯದು. ಅದನ್ನು ಪರಿಹರಿಸುವಲ್ಲಿ ಜವಾಹರಲಾಲರೂ, ಲಿಯಾಖತ್ ಅಲೀಖಾನರೂ ಸಮರ್ಥರಿದ್ದಾರೆ. ಅವರೇ ಅದನ್ನು ಪರಿಹರಿಸಲಿ; ಎಂದು ಅ. ಭಾ. ಮುಸ್ಲಿಮ ಪರಿಷತ್ತು ಅಭಿಪ್ರಾಯಪಟ್ಟಿದೆ.

ಇತ್ತ ಅ. ಭಾ. ಕಾಂಗ್ರೆಸ್ ಸಮಿತಿಯು ಕಾಶ್ಮೀರ ಪ್ರಕರಣದ ಕುರಿತು ಒಂದು ಗೊತ್ತುವಳಿಯನ್ನು ಮಾಡಿಯದೆ. ಆಂಗ್ಲೋ ಅಮೆರಿಕಾನರ ಗೊತ್ತುವಳಿಯನ್ನು ನಿರಾಕರಿಸಿ ಸಂ. ರಾ. ಸಂಘವು ನೇಮಿಸಿದ ಮಧ್ಯಸ್ಥಗಾರನೊಡನೆ ಸಹಕರಿಸತಕ್ಕದ್ದಲ್ಲ. ಭಾರತ ಸರಕಾರದ ನಕಾರಾತ್ಮಕ ಉತ್ತರವೂ ನಿಲುಮೆಯೂ ಸಂ. ರಾ. ಸಂಘಕ್ಕೆ ಸರಿಯಾದ ಪ್ರತಿಕ್ರಿಯೆಯೆಂದು ಅಭಿಪ್ರಾಯವನ್ನು ವ್ಯಕ್ತಪಡಿಸಿ ಈ ಸಮಸ್ಯೆ ಸೌಹಾರ್ದದಿಂದ ಬಗೆಹರಿಯಲೆಂದು ಆಶಿಸಿದೆ.

ಅಂತೂ ಕಾಶ್ಮೀರವು ಅತ್ಯಂತ ಕುತೂಹಲದಾಯೀ ಪ್ರಕರಣ. ದ. ಕೋರಿಯದ ಪ್ರಕರಣವು ಹೇಗೆ ಪ್ರಬಲ ರಾಷ್ಟ್ರಗಳ ಮುಯ್ಯಕ್ಕೆ ಮುಯ್ಯ ತೀರಿಸಿಕೊಳ್ಳುವ ರಂಗವಾಯಿತೋ ಕಾಶ್ಮೀರವೂ ಅದೇ ಮಾ

THE BOMBAY LIFE ASSURANCE COMPANY, LTD.

ದಿ ಬೊಂಬೆ ಲೈಫ್ ಎಶ್ಯೂರೆನ್ಸ್ ಕೋ., ಲಿಮಿಟೆಡ್

(ಸ್ಥಾಪನೆ: 1908)

ಅತ್ಯಲ್ಪ ಖರ್ಚಿನಿಂದ ಅತ್ಯಧಿಕ ಲಾಭವನ್ನೀಯುವ ಅಗ್ರಗಣ್ಯ ವಿಮಾ ಸಂಸ್ಥೆಗಳಲ್ಲೊಂದು.

ಪ್ರಧಾನ ಏಜಂಟರು:

ಕೊಚ್ಚಿಕಾರ್ ಬ್ರದರ್ಸ್, ಲಿಮಿಟೆಡ್ ಉಡುಪಿ.

ಇವರ ಶಾಖಾ ಕಚೇರಿಗಳು:-

ಬೊಂಬಾಯಿ, ಮದ್ರಾಸು, ಬೆಂಗಳೂರು, ಕೊಯಮುತ್ತೂರು, ತ್ರಿವೆಂಡ್ರಮ್, ಕಲ್ಲಿಕೋಟೆ ಮತ್ತು ಮಂಗಳೂರು.

ಕಳೆದ ಮುವತ್ತೆಂಟು ವರುಷಗಳಿಂದ ವಿಮಾ ಕ್ಷೇತ್ರದಲ್ಲಿ ಸತತ ದುಡಿದವರಾದ ನಾವು ಜನಾಂಗದ ಶ್ರೇಯೋಭಿವೃದ್ಧಿಯ ಕಡೆಗೆ ನಮ್ಮ ನಮ್ರ ಸೇವೆಯನ್ನು ಸಲ್ಲಿಸಿರುತ್ತೇವೆಂಬುದೇ ನಮ್ಮ ಹೆಗ್ಗಳಿಕೆಯ ಮಾತು.

ವಿಮಾ ಮಾಡಲಿಕ್ಕಾಗಲೀ, ಪ್ರಾತಿನಿಧ್ಯ ಪಡೆಯಲಿಕ್ಕಾಗಲೀ ದಯಮಾಡಿ ನಮಗಾಗಲೀ ಅಥವಾ ನಮ್ಮ ಶಾಖೆಗಳಿಗಾಗಲೀ ಬರೆಯಿರಿ.

ಬೇಂಕಿಂಗ್ ಸಂಬಂಧದ ಎಲ್ಲಾ ಸಮಸ್ಯೆಗಳಿಗೆ

ದಿ ವಿಜಯಾ ಬೇಂಕ್ ಲಿಮಿಟೆಡ್

ಇವರ ಸಲಹೆ ಕೇಳಿರಿ

ಹೆಡ್ ಆಫೀಸು : : : : ಮಂಗಳೂರು

ಮಡಿಕೇರಿಯಲ್ಲಿ ಒಂದು ಶಾಖೆಯೂ ಬೊಂಬಾಯಿಯಲ್ಲಿ ಒಂದು ಶಾಖೆಯೂ ಜಿಲ್ಲೆಯೊಳಗೆ ಹಲವು ಶಾಖೆಗಳೂ ಇವೆ.

ಸಿರಿಮ ಠೇವಣಾತಿಗಳ ಮೇಲೆ ಆಕರ್ಷಕವಾದ ದರದ ಬಡ್ಡಿಯು ಕೊಡಲ್ಪಡುವುದು.

ತಕ್ಕುದಾದ ಜವಾಬ್ದಾರಿಗಳ ಮೇಲೆ ಸುಲಭವಾದ ಶರ್ತಗಳಲ್ಲಿ ಸಾಲಗಳು ಕೊಡಲ್ಪಡುವುವು.

ಸಾಲಿಯನ್ ಶೇಕಡಾ 4½ರ ಬಡ್ಡಿ ಗಳಿಸುವ ಮೂರು ವರ್ಷದ ಅವಧಿಯ ವಿಜಯಾ ಕೇಶ್ ಸರ್ಟಿಫಿಕೇಟುಗಳ ಮೇಲೆ

ಹಣವನ್ನು ಹಾಕಿರಿ

THE VIJAYA BANK, LTD,

ಬಿ. ಮಂಜಯ್ಯ ಹೆಗ್ಗಡೆ,

(ದ. ಕ. ಜಿಲ್ಲಾ ಬೋರ್ಡ್ ಪ್ರೆಸಿಡೆಂಟ್) ಡೈರೆಕ್ಟರ್ ಬೋರ್ಡಿನ ಅಧ್ಯಕ್ಷರು.

ಜೀಯ ರಂಗವು ಗಬಹದೋ ಎನುವರೂ ಕ ಮಾಡುತ್ತಲಿದೆ. ಅ ಬಾ ಪ್ಪು ಕೈಲ ಪರಿಷತ್ತಿನ ಅಧ್ಯಕ್ಷರಿಂದ ಹೀಗೆ ಈ ಸಮಸ್ಯೆಯನ್ನು ಉಭಯ ರಾಷ್ಟ್ರಗಳ ಮುಖ್ಯ ಮಂತ್ರಿಗಳಿಗೆ ಬಿಟ್ಟುಕೊಡುವುದು ಒಳ್ಳೆಯ ಮುತ್ಸದ್ದಿತನದ ಕಾರ್ಯವೆಂಬುದು ಸಹಜವೇ. ಏಕೆಂದರೆ ಪರ ಮಾರ್ಗದ ಶಿಕ್ಷಣದಲ್ಲಿ ಉಭಯ ರಾಷ್ಟ್ರಗಳಿಗೂ ಸಖ್ಯವಿಲ್ಲ. ಈಗ ಪಾಕಿಸ್ತಾನವನ್ನು ಎತ್ತಿಹಿಡಿದು ತಮ್ಮ ಸ್ವಾರ್ಥವನ್ನು ಸಾಧಿಸಿಕೊಳ್ಳುವ ಹಂಚಿಕೆಯನ್ನು ಆಂಗ್ಲೋ ಅಮೇರಿಕನರು ಮಾಡಿರುತ್ತಾರೆ. ಅವರ ಹಂಚಿಕೆಯು ಪಾಕಿಸ್ತಾನಕ್ಕೆ ಸಂಪೂರ್ಣ ಅನುಕೂಲ ಪರಿಸ್ಥಿತಿಯನ್ನು ಒದಗಿಸಿ ಕೊಡುವುದರಿಂದ ಪಾಕಿಸ್ತಾನವು ವಿಶೇಷ ಆಸ್ಥೆ ವಹಿಸಿದೆ; ಮಾತ್ರವಲ್ಲ ಪಾಕಿಸ್ತಾನದ ಪಾಲಿಗೆ ಇದು ಒಳ್ಳೆಯ ಸುಸಂಧಿ! ಆದರೆ ಸದ್ಯದ ಮಧ್ಯಸ್ಥಗಾರರ ನೇಮಕದಿಂದ ಯಾವ ಸಮಸ್ಯೆಯೂ ಬಗೆಹರಿಯಲಾರದು. ಭಾರತದ ಅಭಿಪ್ರಾಯವನ್ನು ಕಡೆಗಣಿಸಿ ಏಕಪಕ್ಷೀಯವಾಗಿ ತಮ್ಮ ಠರಾವನ್ನು ಮುಂದೆ ಸಾಗಿಸಿದ ಸಂ. ರಾ. ಸಂಘದ ಕಾರ್ಯ ತೀರ ಅನುಚಿತ; ಮಾತ್ರವಲ್ಲ ಖಂಡನೀಯ. ಈ ರೀತಿಯ ನಿರಂಕುಶ ಪ್ರಭುತ್ವದಿಂದ ಸಂ. ರಾ. ಸಂಘವು ದಿನದಿಂದ ದಿನಕ್ಕೆ ನೈತಿಕ ಮಟ್ಟವನ್ನು ಕಳೆದುಕೊಂಡು ಅಧೋಗತಿಗಿಳಿಯುತ್ತಿದೆ. ಪಕ್ಷಪಾತತನ ಆಂಗ್ಲೋ ಅಮೇರಿಕನರ ಹುಟ್ಟು ಗುಣ; ಆ ಧರ್ಮವನ್ನು ಇಲ್ಲಿಯೂ ಚೆನ್ನಾಗಿ ಪ್ರದರ್ಶಿಸಿದರು. ಆಂಗ್ಲೋ ಅಮೇರಿಕನರ ಬಲವನ್ನಷ್ಟೆ ಸಾಧಿಸುವ ಸಂ. ರಾ. ಸಂಘವು ದಿನದಿಂದ ದಿನಕ್ಕೆ ತನ್ನ ಆತ್ಮಿಕ ಶಕ್ತಿಯನ್ನು ಕಳೆದುಕೊಂಡು ನಿರ್ವೀರ್ಯವಾಗುತ್ತಲಿದೆ. ಜಗತ್ತಿಗೇ ನ್ಯಾಯದಾನ ಮಾಡುವ ಮಹಾ ಸಂಸ್ಥೆಯೊಂದು ಇಂತಹ ಮೋಹಕ್ಕೆ ಬಿದ್ದು ಆತ್ಮಹತ್ಯೆ ಮಾಡಿಕೊಳ್ಳುತ್ತಿರುವುದು ದುಃಖದ ಸಂಗತಿ. ಕೊರಿಯದ ಪ್ರಕರಣವನ್ನು ಕೈಕೊಂಡ ಮೋಹಿತರಾಗಿ ಕಾಶ್ಮೀರವನ್ನು ದ್ವಿತೀಯ ಕೊರಿಯವನ್ನಾಗಿ ನಿರ್ಮಿಸಲೆತ್ನಿಸಿದ್ದು ವಿಘಾತುಕ ಕಾರ್ಯ; ಇದು ತಿಳಿದವರು ಮಾಡುವ ಮಹಾಪರಾಧ!

AUCTION NOTICE

Notice is given that the sale of Progressive Technical and Commercial Institute with its goodwill, furniture, Typewriters and other equipment will be sold in one lot on 27th May, 1951 at 11 A. M. at the premises of the Institute opposite church Udipi The intending purchaser may examine the equipment etc., a list of which will be found in the premises of the Institute The successful bidder will have to pay the entire price before taking delivery. Every bidder has to deposit Rs. 250 as earnest money before biddy. The said amount will be returned immediately in the case of unsuccessful bidder. In the case of successful bidder the balance amount of bid will be recovered

(1) U Shrinivasa Rao,
(2) P. Sarvothama Rao.

ಲೋಕಾಂತ

ಕೊರಿಯಾ ರಂಗ

ಕಳೆದ ವಾರದಲ್ಲಿ ಒಮ್ಮೆಲೆ ಯುದ್ಧವನ್ನೆಸಗಿದ ಕಮ್ಯೂನಿಸ್ಟರು ಈಚೆಗೆ ಸ್ತಬ್ಧರಾಗಿಯಲ್ಲಿದ್ದು ಸದ್ಯ ಸಿಯೋಲದ ಪಶ್ಚಿಮ ಭಾಗದಲ್ಲಿ ಯುದ್ಧಸನ್ನಾಹ ನಡೆಸುವುದು ಕಂಡು ಬಂದಿದೆ. ಪೂರ್ವಯುದ್ಧರಂಗದಲ್ಲಿ ಸಂ. ರಾ. ಸೈನಿಕರು ಸುಮಾರು 800 ಕಮ್ಯೂನಿಸ್ಟರೊಡನೆ ಕಾದಾಡಿದ ವರದಿಯೂ ಬಂದಿರುತ್ತದೆ.

ಇರಾಣಿ ಎಣ್ಣೆಯ ಕಂಪೆನಿ

ಇರಾಣದ ಆಂಗ್ಲೋ ಇರಾಣಿಯನ ಎಣ್ಣೆಕಂಪೆನಿಯ ಗಲಭೆಯ ಪ್ರಕರಣ ಶಾಂತವಾಗಿದ್ದು ಎಣ್ಣೆ ಉದ್ದಿಮೆ ರಾಷ್ಟ್ರೀಕರಣದ ಶಾಸನಕ್ಕೆ ಪರ್ಶಿಯದ ಶಹಾರು ಅಂಕಿತಹಾಕಿದರು. ಆಂಗ್ಲೋ ಇರಾಣಿಯನ್ ಎಣ್ಣೆಕಂಪೆನಿಯಲ್ಲಿ ಬ್ರಿಟಿಶರ ಪಾಲು ಬಂಡವಳದ ಪರಿಹಾರದ ಕುರಿತು ಇನ್ನೂ ಚರ್ಚೆನಡೆದಿದೆ.

ಅಮೇರಿಕೆಯ ಆಹಾರ

ಭಾರತಕ್ಕೆ ಅಮೇರಿಕೆಯು ಒಂದು ಮಿಲಿಯ ಟನ್ ದಾನರೂಪವಾಗಿಯೂ ಒಂದು ಮಿಲಿಯ ಟನ್ ಸಾಲದ ರೂಪದಲ್ಲಿಯೂ ಕೊಡಮಾಡಿದ ಆಹಾರಧಾನ್ಯವನ್ನು ತಿರುಗಿ ಒಂದು ವಾರ ಮುಂದೂಡಿದೆ. ಜವಾಹರಲಾಲ ನೆಹ್ರೂರವರು ಆಕಾಶವಾಣಿ ಭಾಷಣದಲ್ಲಿ "ರಾಜಕೀಯ ಸ್ವರೂಪದ ಬಂಧನಕ್ಕೆ ಕಟ್ಟುಬಿದ್ದ ಯಾತ ಕೊಡುಗೆಯನ್ನು ನಾವು ಒಯಸೆವು." ಎಂದದ್ದೇ ಸಿನೇಟದವರ ಅಸಂತೃಪ್ತಿಗೆ ಕಾರಣವಾಯಿತಂತೆ.

ಜಾಫ್ರುಲ್ಲಖಾನರ ದೂರು

ಕಾಶ್ಮೀರದಲ್ಲಿ ಘಟನಾ ಸಮಿತಿಯನ್ನು ರಚಿಸಿ ಕಾಶ್ಮೀರದ ಭವಿತವ್ಯದ ಕುರಿತಾಗಿ ಕಾರ್ಯಕ್ಕೆಗೊಂಡದನ್ನು ವಿರೋಧಿಸಿ ಪಾಕಿಸ್ತಾನದ ವಿದೇಶ ಮಂತ್ರಿ ಸರ್. ಜಫ್ರುಲ್ಲಾಖಾನರು ಯು. ಎನ್. ಓಗೆ ದೂರಿಟ್ಟಿದ್ದಾರೆ. ಮಾರ್ಚ 30ರಲ್ಲಿಯ ಯು. ರಾ. ಸಂಘದ ಗೊತ್ತುವಳಿಗೆ ಇದು ವಿರುದ್ಧವಾಗಿದೆಯೆಂದು ಅವರು ಆಕ್ಷೇಪವೆತ್ತಿರುತ್ತಾರೆ

ಬರ್ಮಾದ ಅಕ್ಕಿ

ಕೇಂದ್ರದ ಆಹಾರ ಮಂತ್ರಿ ಶ್ರೀ ಕೆ ಎಮ್. ಮುನ್ಶಿಯವರ ಮುಂದಾಳ್ತನದಲ್ಲಿ ಬರ್ಮಾಕ್ಕೆ ತೆರಳಿದ ಶಿಷ್ಟಮಂಡಳವು ಸದ್ಯ ನಡೆಸಿದ ಮಾತುಕತೆ ಹಾಗೂ ಒಪ್ಪಂದದಂತೆ ಎರಡೂವರೆ ಲಕ್ಷಟನ್ ಆಹಾರಧಾನ್ಯವು ಭಾರತಕ್ಕೆ ಸಿಗುವಂತಾಗಿದೆ. ಮುಂದಕ್ಕೆ ಪ್ರತಿವರ್ಷವೂ ಬರ್ಮಾವು ಭಾರತಕ್ಕೆ ಅಕ್ಕಿ ಕೊಡುವ ವಿಚಾರವಾಗಿ ಮಾತುಕತೆ ನಡೆದಿದೆ. ಇದಕ್ಕೆ ಪ್ರತಿಯಾಗಿ ಭಾರತವು ಗೋಣಿಚೀಲ, ಎಣ್ಣೆ, ರಬ್ಬರ ಸರಕುಗಳನ್ನು ಒದಗಿಸಿ ಕೊಡಬೇಕಾಗುವುದು.

ಸಿರಿಯ ಇಸ್ರಾಯೆಲ್ ಜಗಳ

ಸಿರಿಯಾ ಇಸ್ರಾಯೇಲರೊಳಗೆ ಗಡಿಯಲ್ಲಿ ನಡೆದ ಕಾದಾಟವಿಂದು ಸಂ. ರಾ. ಸಂಘದ ತಾತ್ಕಾಲಿಕ ಚೇರಮ್ಯಾನರ ಅಧ್ಯಕ್ಷತೆಯಲ್ಲಿ ಉಭಯ ಪಕ್ಷದ ಧುರೀಣರ ಸಂಧಾನ ಒಪ್ಪಿಗೆಯ ಮೂಲಕ ಕೊನೆಗೊಂಡಿತು. ಯುದ್ಧ ಬಹಿಷ್ಕಾರದ ಸಂಧಾನವಾದಂದಿನಿಂದ ತಿರುಗಿ ಜಗಳ ನಡೆದ ಸುದ್ದಿಯೇನೂ ಬಂದಿರುವುದಿಲ್ಲ.

ಸಿರಿಯಾ ಭಾರತ ಒಪ್ಪಂದ

ಸಿರಿಯಾ ಭಾರತದೊಳಗೆ ಮಿತ್ರತ್ವದ ಒಪ್ಪಂದದ ಕರಾರು ಸಿದ್ಧವಾಗಿದ್ದು ಕೂಡಲೇ ಅಂಕಿತ ಬೀಳಲಿದೆ. ಸಿರಿಯಾದಲ್ಲಿ ಹೇರಳ ಹತ್ತಿ ಬೆಳೆಯುವದರಿಂದ ಭಾರತಕ್ಕೆ ಆದು ಸಿಗುವ ಆಶೆಯಿದೆ.

ಭಾರತದ ರಾಷ್ಟ್ರೀಯ ಆದಾಯ

1948–49ರಲ್ಲಿ ಭಾರತದ ರಾಷ್ಟ್ರೀಯ ಆದಾಯವು 1710 ಕೋಟಿ ರೂಪಾಯಿಯೆಂದು ರಾಷ್ಟ್ರೀಯ ಆದಾಯ ಸಮಿತಿಯು ಪಾರ್ಲಿಮೆಂಟಿಗೆ ವರದಿ ಮಾಡಿದೆ.

ತೆಲಗಾಣ ಕೈದಿಗಳಿಗೆ ಜೀವದಾನ

ತೆಲಂಗಣದಲ್ಲಿ ಆರು ಹಳ್ಳಿಗರನ್ನು ಕೊಲೆಮಾಡಿದ ಹನ್ನೆರಡು ಕಮ್ಯೂನಿಸ್ಟರಿಗೆ ಮರಣದಂಡನೆ ವಿಧಿಸಲಾಗಿತ್ತು. ಸುಪ್ರೀಮ್ ಕೋರ್ಟಿನ ವರೆಗೆ ಅವರು ಹೋಗಿದ್ದರೂ ಅವರ ಶಿಕ್ಷೆಯಲ್ಲಿ ಬದಲಾವಣೆಯಾಗಲಿಲ್ಲ. ಈಗ ರಾಷ್ಟ್ರಾಧ್ಯಕ್ಷರು ಮುಂದೆ ಜೀವದಾನದ ಬೇಡಿಕೆ ಬಂದಿದ್ದು ದೇಶ ವಿದೇಶ ರಾಷ್ಟ್ರಗಳಿಂದಲೂ ಜೀವದಾನ ಮಾಡಬೇಕೆಂಬ ಪ್ರಾರ್ಥನೆ ಬಂದಿದ್ದರಿಂದ ರಾಷ್ಟ್ರಾಧ್ಯಕ್ಷರು ಅವರ ಮರಣದಂಡನೆಯನ್ನು ರದ್ದುಗೊಳಿಸಿ ಜೀವಾವಧಿ ಕಾರಾಗೃಹವಾಸ ಶಿಕ್ಷೆಯನ್ನು ವಿಧಿಸಿರುವರು

ಚೆಂಗಲಪೇಟೆಯ ಸಮೀಪ ವಿಮಾನಾಘಾತ

ಶ್ರೀ ರಾಜಾರಾವ್ ಎಂಬವರು ವಿಮಾನವನ್ನು ನಡೆಸಿಕೊಂಡು ಪೋರ್ಟನೋವೋಕ್ಕೆ ಪ್ರಾತಃ ೯-೩೦ಕ್ಕೆ ಮದ್ರಾಸದಿಂದ ಹೊರಟದ್ದು ಕಣ್ಮರೆಯಾಗಿದ್ದಾರೆ ಕಣ್ಮರೆಯಾದ ವಿಚಾರ ತಿಳಿದಕೂಡಲೇ ಪೋರ್ಟನೋವೋದ ಸುತ್ತ ಪರಿಶೀಲನೆ ನಡೆಸಲು ಇನ್ನೊಂದು ವಿಮಾನವು ತೆರಳಿತು. ಆದರೆ ಅದರ ಸುಳಿವು ಹತ್ತಲಿಲ್ಲ. ಕೊನೆಗೆ ಚೆಂಗಲಪೇಟೆಯ ಹತ್ತಿರ ಸುಮಾರು ಏಳುಮೈಲುದೂರದಲ್ಲಿ ವಿಮಾನವು ಅಪಘಾತಕ್ಕೆ ತುತ್ತಾಗಿರುವುದು ತಿಳಿದುಬಂತು. ವೈಮಾನಿಕರಾದ ಶ್ರೀ ರಾಜಾರಾಯರೂ ಮತ್ತು ಅವರ ಜೊತೆಗಿದ್ದ ಇನ್ನೊಬ್ಬರೂ ಮಡಿದಿರುವರು. ರಾಜಾರಾಯರು ಬೆಂಗಳೂರು ಹಿಂದೂಸ್ಥಾನ ವಿಮಾನ ಕಾರ್ಖಾನೆಯಲ್ಲಿ ರೇಡಿಯೋ ಆಫೀಸರರಾಗಿದ್ದರು.

ಡಿಸೆಂಬರದೊಳಗಾಗಿ ಚುನಾವಣೆ

ಭಾರತ ಚುನಾವಣೆಗಳನ್ನು ಇದೇ ಬರುವ ನವಂಬರ ದಿಶಂಬರ ತಿಂಗಳೊಳಗಾಗಿ ಮುಗಿಸಿಬಿಡಬೇಕೆಂದು ಭಾರತ ಸರಕಾರದ ಅಭಿಪ್ರಾಯವಾಗಿರುತ್ತದೆ. ಮದ್ರಾಸು ಸರಕಾರವು ಫೆಬ್ರುವರಿ 1952ರವರೆಗೆ ಮುಂದೂಡಬೇಕೆಂದು ಕೇಳಿಕೊಂಡದ್ದರಲ್ಲಿ ಬಲವತ್ತರವಾದ ಕಾರಣ ಯಾವುದೂ ಇರುವುದಿಲ್ಲವೆಂದು ಕಾಯಿದೆ ಮಂತ್ರಿ ಅಂಬೇಡ್ಕರರು ಪಾರ್ಲಿಮೆಂಟಿನಲ್ಲಿ ತಿಳಿಸಿದರು.

ಜಸ್ಟಿಸ್ ಪಾರ್ಟಿಯ ಜನನ

ಬಹಳ ಕಾಲದ ಮೇಲೆ ಜಸ್ಟಿಸ್ ಪಾರ್ಟಿಯು ತಲೆಯೆತ್ತಿದೆ. ಮುಂಬರುವ ಚುನಾವಣೆಯಲ್ಲಿ ಈ ಪಾರ್ಟಿಯು ಭಾಗವಹಿಸಲಿದೆ ಮದ್ರಾಸು ಹೈಕೋರ್ಟು ಹಾಗು ಸುಪ್ರೀಮ್ ಕೋರ್ಟುಗಳು ಕಮ್ಯೂನಲ್ ಜಿ. ಓ. ಅಕ್ರಮವೆಂದು ಸಾರಿದ್ದರಿಂದ ಜಸ್ಟಿಸ್ ಪಾರ್ಟಿಯು ತಿರುಗಿ ಸಂಘಟಿಸಬೇಕಾಯಿತೆಂದು ಎಸ್. ಮುತ್ತಯ್ಯನವರು ಹೇಳಿದರು. ಜಾತೀಯವಾದಿಗಳಾದ ದ್ರಾವಿಡ ಮುನ್ನೇತ್ರ ಕಳಗದವರನ್ನು ಪಾರ್ಟಿಯ ಜೊತೆಗೆ ಸೇರಬೇಕೆಂದು ಆಹ್ವಾನವನ್ನೀಯಲಾಗಿದೆ.

ಕೇಂದ್ರ ಚುನಾವಣಾ ಸಮಿತಿ

ಅ. ಭಾ. ಕಾಂಗ್ರೆಸ್ ಸಮಿತಿಯು ಕೇಂದ್ರ ಚುನಾವಣಾ ಸಮಿತಿಗೆ ಡಾ। ಬಿ. ಸಿ. ರಾಯ್, ಶ್ರೀ। ಗೋವಿಂದ ವಲ್ಲಭ ಪಂತ್, ಶ್ರೀ। ಎಸ್. ನಿಜಲಿಂಗಪ್ಪ, ಶ್ರೀ। ಮುರಾರಜಿ ದೇಸಾಯಿ. ಮತ್ತು ಕಾಮರಾಜ ನಾಡರ ಈ ಐವರನ್ನು ನೇಮಿಸಿದೆ. ಈ ಎರಡು ಸ್ಥಳಗಳಿಗಾಗಿ ೧೪ ಜನರು ಉಮೇದುವಾರರಾ ನಿಂತಿದ್ದರು. ಶ್ರೀ। ಕೃಪಲಾನಿ, ಕಿದ್ವಾಯಿ, ಶಿವನಬಾಲ ಸಕ್ಸೇನಾ, ಸುಚೇತಾ ಕೃಪಲಾನಿ ಮೊದಲಾದವರು ತಮ್ಮ ಉಮೇದುವಾರಿಕೆಯನ್ನು ಹಿಂತೆಗೆದುಕೊಂಡರು

ನಿರಾಶೆಗೆ ಒಳಗಾಗದಿರಿ!

ಉಬ್ಬಸ,ಕಫ,ಶ್ವಾಸಕೋಶದಿಂದ ನೀವು ವಿಪರೀತ ಕಷ್ಟಪಡುತ್ತಿರುವಿರಾ, ಹಲವಾರು ಅಮೌಲ್ಯ ಔಷಧಿಗಳ ಸೇವನೆಯಿಂದ ನಿಮಗೆ ಗುಣವಾಗದಿರುವುದಾದರೆ,

ಆಶಾಭಂಗಕ್ಕೊಳಗಾಗದಿರಿ!

ಅಲ್ಪವೆಚ್ಚ-ಅಲ್ಪಾವಧಿಯೊಳಗೆ ನಿಮ್ಮಬಾಧೆಯನ್ನು ಶಮನಮಾಡುವ

ಖಾತ್ರಿ ಔಷಧಿಯು ನಮ್ಮಲ್ಲಿರುವುದು

ಒಂದೇ ಒಂದು ಸೀಸೆಯನ್ನು ಕೊಂಡು. ಗುಣಪರೀಕ್ಷೆಮಾಡಿರಿ!

ಈ ಹೊಸ ಮದ್ದಿನಿಂದ ನಿಮಗೆ ಅದ್ಭುತ ಗುಣತೋರುವುದೆಂಬುದು ಖಂಡಿತ.

ಕೂಡಲೆ ಬರೆಯಿರಿ:—

ದಿ ನೇಶನಲ್ ಜನರಲ್ ಸ್ಟೋರ್ಸ್

(ಡಿಸ್ಪೆನ್ಸಿಂಗ್ ಕೆಮಿಸ್ಟ್ ಮತ್ತು ಡ್ರಗ್ಗಿಸ್ಟ್)

8 A ಮೆರವಾನ್ ಬಿಲ್ಡಿಂಗ್ಸ್, ಸರ್, ಫಿರೋಜ್ ಶಾ ಮೆಹತಾ ರೋಡು, ಫೋರ್ಟ್, ಮುಂಬಾಯಿ.

THE NATIONAL GENERAL STORES

Importers Exporters, Dispersing Chemists & Druggists.

General Merchants & Commission Agents
8A Mherwan Buildings. Opp: His Master's Voice
Sir Phirozsha Mehta Road, Fort, Bombay.

ನವಯುಗ

ಚಂದಾ ವಿವರ.
ವರ್ಷಕ್ಕೆ ರೂ. 5-12—0
6 ತಿಂಗಳಿಗೆ ರೂ. 3—0—0

ಗುರುವಾರ ಉಡುಪಿ, ೧೦-೫-೫೧

ಕಾಂಗ್ರೆಸ್ಸಿಗರ ಹೊಣೆ

ಚುನಾವಣಾ ಕಾಲ ಹತ್ತಿರ ಬಂದಹಾಗೆ ಕಾಂಗ್ರೆಸ್ಸಿನಲ್ಲಿ ಒಣಗಳಾಗುತ್ತಿರುವುದೂ, ಭಿನ್ನಾಭಿಪ್ರಾಯಗಳು ತಲೆದೋರುತ್ತಿರುವುದೂ ವಿಷಾದದಸಂಗತಿ. ಸದ್ಯ ಆಡಳಿತ ಕಾಂಗ್ರೆಸ್ಸಿನಕೈಯಲ್ಲಿರುವದರಿಂದ ಕಾಂಗ್ರೆಸ್ಸಿಗರ ಮೇಲೆ ಹೆಚ್ಚಿನ ಹೊಣೆಯಿದೆಯೆಂಬುದನ್ನು ಯಾರೂ ಮರೆಯುವಂತಿಲ್ಲ. ಎಲ್ಲ ಪಕ್ಷಸಂಗಡಗಳು ತಮ್ಮ ಅಸ್ತಿತ್ವವನ್ನು ಭದ್ರಗೊಳಿಸುವದಕ್ಕಾಗಿ ಕಾಂಗ್ರೆಸ್ಸನ್ನು ಟೀಕಿಸುತ್ತಿರುವ ವೇಳೆ ಉಚ್ಚ ಕಾಂಗ್ರೆಸ್ಸಿಗರೇ ಕಾಂಗ್ರೆಸ್ಸನ್ನು ತ್ಯಜಿಸಿ ನೂತನ ಪಕ್ಷಗಳನ್ನು ರಚಿಸುವದರಲ್ಲಿ ಮನಸ್ಸು ಹಾಕಿರುವದರಿಂದ ಕಾಂಗ್ರೆಸ್ ಇನ್ನಷ್ಟು ದುರ್ಬಲಗೊಳ್ಳುವುದು ಖಂಡಿತ. ಸದ್ಯ ಕಾಂಗ್ರೆಸ್ಸನ್ನು ಪರಿಶುದ್ಧಗೊಳಿಸಿ ತನ್ಮೂಲಕ ಸರಕಾರವನ್ನು ಭದ್ರವಾದ ತಳಹದಿಯ ಮೇಲೆ ನಿಲ್ಲಿಸುವುದು ಪ್ರತಿಯೊಬ್ಬ ದೇಶಪ್ರೇಮಿಯ ಮುಖ್ಯ ಕರ್ತವ್ಯವಾಗಿರುತ್ತದೆ. ಸ್ವಾತಂತ್ರ್ಯಸಿಕ್ಕ ನಾಲ್ಕು ವರ್ಷದೊಳಗೆಯೆ ಸ್ವಾರ್ಥಿಗಳ ಕೈಯಲ್ಲಿ ಆಡಳಿತವನ್ನು ಕೊಟ್ಟು ದೇಶವನ್ನು ಅನಾಥಗೊಳಿಸುವುದು ನ್ಯಾಯವಲ್ಲ. ದೇಶವನ್ನು ಆಳಬಲ್ಲ ಸಾಮರ್ಥ್ಯವಿರುವುದು ಕಾಂಗ್ರೆಸ್ಸಿನಲ್ಲಿ ಮಾತ್ರ!

ಇಂದು ಕಾಂಗ್ರೆಸಿಗರಲ್ಲೇ ಭಿನ್ನಾಭಿಪ್ರಾಯಗಳು ಎದ್ದಿರುವುದಕ್ಕೆ ಎರಡು ಕಾರಣ. ಒಂದು, ಕಾಂಗ್ರೆಸ್ಸಿನ ಉಚ್ಚಾದರ್ಶಗಳನ್ನು ಮರೆತು ಕಾಂಗ್ರೆಸ್ಸಿಗರು ತಮ್ಮ ಸ್ವಾರ್ಥವನ್ನು ಸಾಧಿಸಲೆಳಸಿದ್ದು. ಇನ್ನೊಂದು, ಅಧಿಕಾರ ಲಾಲಸೆಯಿಂದ ತಾವು ಧುರೀಣರಾಗಬೇಕೆಂಬ ದುರಾಶೆಗೆ ಕಟ್ಟುಬಿದ್ದುದ್ದು! ಪ್ರಜಾಸತ್ತಾತ್ಮಕ ರಂಗದ ನಿರ್ಮಾಣವು ಕಾಂಗ್ರೆಸ್ಸಿಗರ ಅನೀತಿಯನ್ನು ಪ್ರತಿಭಟಿಸಲೋಸುಗ ತಲೆಯೆತ್ತಿದ್ದಾಗಿರುತ್ತದೆ. ಆಚಾರ್ಯ ಕೃಪಲಾನಿಯವರು ಕಾಂಗ್ರೆಸ್ಸಿನ ಹುಳುಕನ್ನು ಎತ್ತಿ ಹೇಳುವಲ್ಲಿ ಮೊದಲಿಗರಾಗಿದ್ದಾರೆ. ಕಾಂಗ್ರೆಸ್ಸು ತತ್ವಬಾಹಿರವಾಗಿ ವರ್ತಿಸುವದನ್ನು ನಿರ್ಭಯವಾಗಿ ಪದೇ ಪದೇ ಎಚ್ಚರಿಸುತ್ತ ಬಂದವರು ಅವರೊಬ್ಬರೇ. "ಕಾಂಗ್ರೆಸ್ಸಿನ ತತ್ವಗಳ ಮೇಲೆ ನನ್ನ ಆಗ್ರಹವಲ್ಲ. ತತ್ವವನ್ನು ದುರುಪಯೋಗಗೊಳಿಸುವವರ ಮೇಲೆ ನನಗೆ ಸಹನೆಯಿಲ್ಲ"ಎಂದು ಕೃಪಲಾನಿಯವರು ಸ್ಪಷ್ಟವಾಗಿ ಹೇಳಿದ್ದಾರೆ. ಜವಾಹರಲಾಲ ನೆಹ್ರೂ ಹಾಗೂ ಮೌಲಾನಾ ಅಬ್ದುಲ್ ಕಲಂ ಆಜಾದರು ಅವರ ಮನ ಒಲಿಸಲು ಪ್ರಯತ್ನಿಸಿದ್ದು ವ್ಯರ್ಥವಾದರೂ ನೆಹ್ರೂ ಆಜಾದರ ಮೇಲೆ ಕೃಪಲಾನಿ ಹಾಗೂ ಅವರ ಮಿತ್ರ ವರ್ಗದವರಿಗೆ ವಿಶೇಷಾದರಾಭಿಮಾನಗಳಿವೆ. ಪ್ರಜಾಸತ್ತಾತ್ಮಕ ರಂಗದ ವಿಸರ್ಜನೆ ಅವರ ದ್ಯೋತಕವಾಗಿದೆ. ಆದರೆ ಕಾಂಗ್ರೆಸ್ಸಿನಲ್ಲಿಯ ಹಲವು ಶಿಸ್ತಿನ ವಿಚಾರಗಳಿಗಾಗಿ ಕೃಪಲಾನಿಯವರು ವಿಶೇಷ ನೊಂದಿದ್ದಾರೆ. "ನೆಹ್ರೂ ಆಜಾದರಿಂದಲೂ ಅದನ್ನು ಬಗೆಹರಿಸಲಾಗದ ಮೇಲೆ ನಾನು ಕಾಂಗ್ರೆಸ್ಸಿನಲ್ಲಿದ್ದು ಕೊಂಡು ಅದನ್ನು ಬಗೆಹರಿಸಲು ಸಾಧ್ಯವಿಲ್ಲ"ವೆಂದು ಅವರಭಿಪ್ರಾಯವಿರುತ್ತದೆ. ಕೇಂದ್ರ ಚುನಾವಣಾ ಸಮಿತಿಯಲ್ಲಿ ಕೃಪಲಾನಿ ಮತ್ತು ಕಿದ್ವಾಯಿಯವರ ಹೆಸರು ಬಂದಿದ್ದು ಕೊನೆಯ ಕ್ಷಣದಲ್ಲಿ ಕೃಪಲಾನಿ ಮತ್ತು ಕಿದ್ವಾಯಿಯವರು ತಮ್ಮ ಹೆಸರನ್ನು ಹಿಂತೆಗೆದುಕೊಂಡು ಬಿಟ್ಟರು. "ನನ್ನ ಹಾಗೂ ಮಿತ್ರರ ವಿಚಾರಗಳಿಗೆ ತಕ್ಕ ಅವಕಾಶ ಸಿಗದ್ದರಿಂದ ಹೊರಬರುವುದು ಅನಿವಾರ್ಯವಾಯಿತೆಂದು ಅವರು ಹೇಳಿದರು. ಶ್ರೀ ಜವಾಹರಲಾಲ ನೆಹ್ರೂರವರು ಆಚಾರ್ಯ ಕೃಪಲಾನಿ ಹಾಗೂ ಕಿದ್ವಾಯಿಯವರ ಮನವೊಲಿಸುವುದಕ್ಕಾಗಿ ತುಂಬ ಯತ್ನಮಾಡಿ ಕೊನೆಗೂ ವಿಫಲರಾದರೆಂದು ತಿಳಿಯುತ್ತದೆ. ಇಂತಹ ಸನ್ನಿವೇಶ ಬಂದದ್ದಕ್ಕಾಗಿ ನಿಜವಾಗಿಯೂ ವಿಷಾದಪಡಬೇಕಾಗಿದೆ. ನೆಹ್ರೂಕ್ಕಿಂತಲೂ ನಿಷ್ಠಾವಂತ ಕಾಂಗ್ರೆಸ್ಸಿಗನಾಗಲೀ—ನಿಸ್ವಾರ್ಥ ದೇಶಪ್ರೇಮೀ ಧುರೀಣನಾಗಲೀ ಬೇರೊಬ್ಬರಿದ್ದಾರೆಂಬುದನ್ನು ನಾವು ನಂಬುವುದಿಲ್ಲ. ಇಂತಹ ಸಂದಿಗ್ಧ ಪರಿಸ್ಥಿತಿಯಲ್ಲಿ ಕಾಂಗ್ರೆಸ್ಸಿನಲ್ಲಿ ಸಂಘಟನೆಯಾಗಬೇಕೆಂಬುದು ಆಹರ್ನಿಶಿ ದುಡಿದ ಅವರ ಉತ್ಕಟಾಪೇಕ್ಷೆಗಾದರೂ ಇವರು ಮನ್ನಣೆಕೊಡಬೇಕಾಗಿತ್ತು. ಈಗ ಗಡಿಮಾರಿ ಒಬ್ಬ ವ್ಯಕ್ತಿಗಾಗಿ ನೆಹ್ರೂ ಸಂಧಾನಬಯಸಿದ್ದು ತೀರ ಅಪರೂಪ. ಆಚಾರ್ಯ ಕೃಪಲಾನಿಯವರ ಉಜ್ವಲ ರಾಷ್ಟ್ರಪ್ರೇಮ ಹಾಗೂ ನಿಷ್ಪಕ್ಷ ಮನೋವೃತ್ತಿಯನ್ನು ನೆಹ್ರೂ ಚೆನ್ನಾಗಿ ಬಲ್ಲರು. ಅಲ್ಲದೆ ಕೃಪಲಾನಿಯವರ ಬಗೆಗೆ ಜನತೆಯ ಒಲವು ಹೇಗಿದೆಂಬುದನ್ನೂ ಅವರು ಬಲ್ಲರು. ಇಂತಹ ವ್ಯಕ್ತಿ ಕಾಂಗ್ರೆಸ್ಸಿನಿಂದ ಬೇರಾಗುವದರಿಂದ ಕಾಂಗ್ರೆಸ್ಸಿಗೆ ತುಂಬ ಹಾನಿಯಿದೆ ಎಂಬುದನ್ನರಿತೇ ನೆಹ್ರೂ ಅವರ ಮನಒಲಿಸಲೆತ್ನ ಮಾಡಿದರು. ಕೃಪಲಾನಿಯವರು ನೆಹ್ರೂರವರ ಹಿತಸೂಚನೆಯನ್ನು ಮಾನ್ಯಮಾಡಿಯಾರೆಂಬ ಭರವಸೆ ಎಲ್ಲರಿಗೂ ಇತ್ತು. ಆದರೆ ಪರಿಸ್ಥಿತಿ ವಿರುದ್ಧವೇ ಆಯಿತು.

ಈಗಲಾದರೂ ಕೃಪಲಾನಿಯವರು ಯಾವುದೇ ಸ್ವಾರ್ಥಕ್ಕೆ ಬಂದೆ ಪರಿಹಾರಮಾರ್ಗವನ್ನು ಹುಡುಕುತ್ತಲಿದ್ದಾರೆ. ಗಾಂಧೀಜೀಯ ಅನುಯಾಯಿಯಾಗಿದ್ದು ಕಾಂಗ್ರೆಸ್ಸಿನ ಹಿರಿಯ ತತ್ವಗಳಿಗಾಗಿ ಅವಿಂತ ಹೋರಾಡಿ ಈಗ ಸಂಪೂರ್ಣ ಅದನ್ನು ತ್ಯಜಿಸುವುದು ಅವರ ಮನಸ್ಸಾಕ್ಷಿಗೆ ವಿರೋಧವಾದ ಕಷ್ಟಪ್ರಸಂಗವಿದು. ಪಕ್ಷದಿಂದ ಹೊರಬಿದ್ದು ತನ್ನ ಕಾರ್ಯವನ್ನು ಸಾಧಿಸಬಹುದೇ ಎನ್ನುವ ಕಂಚಿದಾಶೆಯೂ ಇದೆ. ಅ. ಭಾ. ಕಾಂಗ್ರೆಸ್ಸಿನ ಹಾಗೂ ನೆಹ್ರೂರವರ ಒತ್ತಾಯಕ್ಕಾಗಿ ಪ್ರಜಾಸತ್ತಾತ್ಮಕ ರಂಗವನ್ನು ವಿಸರ್ಜಿಸಿದುದರಿಂದ ಇಲ್ಲಿಯೂ ತನ್ನ ಧೋರಣೆಯನ್ನು ಒದಲಿಸಿ ಕಾಂಗ್ರೆಸ್ಸಿನಲ್ಲಿದ್ದುಕೊಂಡೇ ಅದರ ಶುದ್ಧೀಕರಣಕ್ಕಾಗಿ ಹೋರಾಡುವುದು ಕಾಂಗ್ರೆಸ್ಸಿಗೂ ಅವರಿಗೂ ಶ್ರೇಯಸ್ಕರವೆಂದು ನಂಬಿದೇವೆ.

ಕಾಂಗ್ರೆಸ್ಸಿನ ಅಧ್ಯಕ್ಷರಾದ ತಂಡನರು "ಕಾಂಗ್ರೆಸ್ಸಿನ ಐಕ್ಯತೆಗಾಗಿ ನಾವು ಶಕ್ತಿಮೀರಿ ದುಡಿದೆವು ಆದರೆ ಹಲವರು ನಮ್ಮ ಪ್ರಾರ್ಥನೆಗೆ ಕಿವಿಗೊಡದೆ ಇದ್ದದ್ದು ವಿಷಾದದ ಸಂಗತಿ" ಎಂದಿದ್ದಾರೆ. ಇಂದು ಕಾಂಗ್ರೆಸ್ಸಿನಲ್ಲಿ ಇಬ್ಬಣವಾಗುವ ಪ್ರಸಂಗ ಬಂದದ್ದು ಮುಖ್ಯವಾಗಿ ಕೇಂದ್ರ ಹಾಗೂ ಮದ್ರಾಸದಲ್ಲಿ. ಕೇಂದ್ರದ ಪ್ರಜಾಸತ್ತಾತ್ಮಕ ಪಕ್ಷದ ವಿಸರ್ಜನೆಯಾದರೂ ಮದ್ರಾಸದ ಪ್ರೊ. ರಂಗಾ ಹಾಗೂ ಪ್ರಕಾಶಮ್ ರ "ಪ್ರಜಾಪಾರ್ಟಿ"ಯ ವಿಸರ್ಜನೆಯಾಗಿಲ್ಲ. ಎಷ್ಟೋ ಜನ ಕಾಂಗ್ರೆಸ್ಸಿಗರು ಇನ್ನೂ ಆ ಪಕ್ಷಕ್ಕೆ ಸೇರುತ್ತಲಿದ್ದಾರೆ.

ಎರಡು ಬಣಗಳ ವ್ಯಕ್ತಿಗಳು ಕಾಂಗ್ರೆಸ್ಸಿನಲ್ಲಿ ಕಂಡುಬಂದ ಕುಂದುಕೊರತೆಗಳಿಂದ ನೊಂದುಕೊಂಡು ತಮ್ಮ ಪಕ್ಷವನ್ನು ಕಟ್ಟುವ ಸಾಹಸವನ್ನು ಮಾಡಿರುತ್ತಾರೆ. ಕಾಂಗ್ರೆಸ್ಸಿಗರ ಶುದ್ಧೀಕರಣಕ್ಕಾಗಿ ಅವರು ಮಾಡಿದ ಪ್ರತಿಯೊಂದು ಯತ್ನವೂ ವಿಫಲಗೊಂಡದ್ದರಿಂದಲೇ ಅವರು ಕಾಂಗ್ರೆಸ್ಸನ್ನು ಬಹಿಷ್ಕರಿಸುವ ಪ್ರಸಂಗ ಬಂದಿತು. ತಂಡನರು ಆಂಧ್ರಪ್ರಾಂತದ ಅಧ್ಯಕ್ಷ ಚುನಾವಣೆಯಲ್ಲಿ ಶ್ರೀ| ಸಂಜೀವರೆಡ್ಡಿಯವರು ಪ್ರೊ|| ರಂಗಾರವರಿಗೆ ಔದಾರ್ಯವನ್ನು ತೋರಿಸಿದ್ದರೂ ಅವರು ಕಾಂಗ್ರೆಸ್ಸನ್ನು ಬಹಿಷ್ಕರಿಸಿದ್ದು ಶೋಚನೀಯ ವಿಚಾರವೆಂದು ಹೇಳಿರುತ್ತಾರೆ. ವಸ್ತುಸ್ಥಿತಿಯನ್ನರಿತ ಯಾವ ಕಾಂಗ್ರೆಸ್ಸಿಗನೂ ಆಂಧ್ರಪ್ರಾಂತಾಧ್ಯಕ್ಷ ಚುನಾವಣೆ ಕಾಂಗ್ರೆಸ್ಸಿನ ತತ್ವದಂತೆ ನಡೆದಿದೆಯೆನ್ನುವದನ್ನು ಒಪ್ಪಲಾರನು. ಅಡಿಗೆಬಿದ್ದರೂ ಮೂಗುಮೇಲು ಎನ್ನುವಹಾಗೆ ತಪ್ಪನ್ನು ಮರೆಮಾಚುವ ಪ್ರಯತ್ನವನ್ನು ಯಾರೂ ಮಾಡಕೂಡದು. ತಪ್ಪಾದುದನ್ನು ವಿನಯದಿಂದ ಒಪ್ಪಿಕೊಳ್ಳೋಣ. ಮುಂದೆ ಹಾಗಾಗದಂತೆ ಜಾಗ್ರತೆ ವಹಿಸೋಣ. ಪರಿಸ್ಥಿತಿಗೆ ವಿರೋಧವಾಗಿ ವರ್ತಿಸುವದರಿಂದ ಯಾವದನ್ನೂ ಸಾಧಿಸುವಂತಿಲ್ಲ.

ಅಂತೂ ಇಂತಹಸಂದಿಗ್ಧ ಪರಿಸ್ಥಿತಿಯಲ್ಲಿ ತಿರುಗೊಮ್ಮೆ ಕಾಂಗ್ರೆಸ್ಸಿಗರು ಕಾಂಗ್ರೆಸ್ಸಿನ ಗಾಂಧಿಜಿಯವರ ಆದೇಶವನ್ನು ನೆನೆದುಕೊಳ್ಳಬೇಕಾಗಿದೆ. ತಮ್ಮ ಹೃದಯಸಾಕ್ಷಿಗೆ ಸರಿಯಾಗಿ ನಡೆದುಕೊಳ್ಳುವದರಿಂದಲೇ ಕಾಂಗ್ರೆಸ್ಸಿನ ಉಚ್ಚ ತತ್ವಗಳು ಬದುಕಬಲ್ಲವು. ಸದ್ಯದ ಅಸಂತುಷ್ಟ—ಅಸಹಕಾರದ ಸಂದರ್ಭಗಳು ಬೆಳೆಯುತ್ತ ಹೋದರೆ ಕಾಂಗ್ರೆಸ್ಸು ಜನತೆಯ ವಿಶ್ವಾಸವನ್ನು ಸಂಪೂರ್ಣ ಕಳೆದುಕೊಳ್ಳುವುದು. ಕಾಂಗ್ರೆಸ್ಸಿನ ವರ್ಚಸ್ಸು ಕುಂದಿದರೆ ಸ್ವಾತಂತ್ರ್ಯದ ಲಾಭವನ್ನು ನಾವು ಪಡೆಯುವಂತಿಲ್ಲ. ಆದುದರಿಂದ ಕಾಂಗ್ರೆಸ್ಸಿಗರು ತಿರುಗಿ ಗಾಂಧೀಜಿಯ ಆದರ್ಶಪಾಲನೆಗಾಗಿ ತಮ್ಮ ಶಕ್ತಿ ಸಂಘಟನೆಗಳಿಂದ ಬದ್ಧಕಂಕಣರಾಗಬೇಕು; ಹಾಗಾಗಲೆಂದು ಆಶಿಸುತ್ತೇವೆ.

ಹಾರುವ ಕಿಡಿಗಳು

ಕಾಂಗ್ರೆಸಿಗೆ ಸೇರಿ ಸರ್ವ ಕಳೆಕೊಂಡವರುಂಟು; ಕಾಂಗ್ರೆಸ್ ಸೇರಿ ಜೀವ ಬದುಕಿಕೊಂಡವರೂ ಉಂಟು.

oo oo

ಪಾಕಿಸ್ಥಾನಕ್ಕೆ ಹೋದೊಡನೆ 'ಜಿನ್ನಾ' ನಾದಂತಲ್ಲ; ಕಾಂಗ್ರೆಸ್ ಕಮಿಟಿಗೆ ನುಗ್ಗಿದೊಡನೆ ಕಾಂಗ್ರೆಸ್ ಆದಂತಲ್ಲ.

oo oo

ತಲೆ ಇದೆ, ನೆಲೆ ಇಲ್ಲ; ಕಲೆ ಇದೆ, ಬೆಲೆ ಇಲ್ಲ.

oo oo

ಪಡುಬಿದ್ರಿಯ 'ದೆವ್ವ'ದ 'ಕಾರಣಿಕ' ಮೂಡಬಿದ್ರೆಯ ಅಮ್ಮಂದಿರಿಗೆ ಮಾತ್ರ ಗೊತ್ತಂತೆ.

oo oo

ಬಾವಿಯ ನೀರು ತನ್ನಷ್ಟಕ್ಕೆ ಬಾಯಿಗೆ ಬಾರದು; ಬೆವರಿಳಿಸದೆ ಉತ್ಪತ್ತಿಯಾಗದು.

oo oo

ತಮ್ಮ ಸ್ಥಿತಿ, ಗತಿ, ಮತಿಯರಿಯದವರ ಸಹವಾಸದಿಂದ ಅವಹೇಳನ, ಅಧಃಪತನ ತಪ್ಪದು.

oo oo

ಹುಚ್ಚರ ಕೂಟದಲ್ಲಿ ಸಭ್ಯನೆನಿಸುವ ಹುಚ್ಚತನ ಬೇಡ.

oo oo

ಭಕ್ತಿ—ವಿಶ್ವಾಸಗಳಿಂದ ಕುಚೇಲ ಕುಬೇರನಾದುದುಂಟು; ಅನವರತ ದುಡಿತ, ಸಾಹಸಗಳಿಂದ ಪ್ರಗತಿಯಾಗಲುಂಟು.

oo oo

'ಭೂಭಾರ' ಜನರ ಸಂಖ್ಯೆ ಹೆಚ್ಚಿದಾಗ ಆಹಾರದ ಅಭಾವ ಮಿತಿಮೀರುತ್ತದಂತೆ.

oo oo

ಮಾತೇ ಹೆಚ್ಚಂತೆ; ಕೃತಿ ಕಡಿಮೆಯಂತೆ.

oo oo

ಮಂಗಳೂರಲ್ಲೊಂದು ಕಪಟ ನಾಟಕ ಮಂಡಳಿಯಂತೆ; ಸೂತ್ರಧಾರಿಯನ್ನು ನಂಬಿದ ನಟರೀಗ 'ಪೇಚಿ'ನಲ್ಲಿ ಬಿದ್ದಿರುವರಂತೆ.

oo oo

ಅಕ್ಕಿ, ಬಟ್ಟೆ ಸರಿಯಾಗಿ ದೊರೆಯಲಾರದು; ಅಂಕೆ, ಸಂಖ್ಯೆ ಓದುವುದು ತಪ್ಪಲಾರದು.

oo oo

ಹನಿಕೂಡಿ ಹಳ್ಳವಾಗುತ್ತದೆ; ಸ್ವಲ್ಪ ಸ್ವಲ್ಪವನ್ನಾದರೂ ಉಳಿಸುತ್ತ ಬಂದರೆ ಅದೇ ದೊಡ್ಡ ಗಂಟಾಗುತ್ತದೆ.

oo oo

ಸಿಕ್ಕಿದ್ದನ್ನೆಲ್ಲಾ ಮುಕ್ಕುವ ಗುಣಬೇಡ; ಚಿಂತ್ಯಾಸನ್ನಾದರೂ ಕೂಡಿಡುವ ಅಭ್ಯಾಸವಿರಲಿ.

oo oo

ಹೆಚ್ಚು ವಾಗ್ದಾನಗಳನ್ನು ಮಾಡಬೇಡ; ಮಾಡಿದ ಒಂದೇ ವಾಗ್ದಾನವನ್ನಾದರೂ ನೆರವೇರಿಸದೆ ಬಿಡಬೇಡ.

oo oo

ತಮಗೆ ಶ್ರಮವೇ ಹೆಚ್ಚು ಬೆಲೆ ಕಟ್ಟಿಕೊಂಡಾಗಲೂ ಪರರಿಗೆ ಕಡಿಮೆ ತೂಕ ಕೊಟ್ಟಾಗಲೂ ಹದಗೆಡುತ್ತದೆ.

ಉಡುಪಿ

ಬೋರ್ಡ್ ಶಾಲಾ ಟೀಚರ್ಸ್ ಯೂನಿಯನ್ ಮಹಾಸಭೆ:— ಉಡುಪಿ ತಾಲೂಕು ಬೋರ್ಡ್ ಎಲಿಮೆಂಟರಿ ಶಾಲಾ ಟೀಚರ್ಸ್ ಯೂನಿಯನ್ನಿನ ಮಹಾ ಸಭೆಯು ಕಳೆದ ತಾ. 29ರಲ್ಲಿ ಮೋಡರ್ನ್ ಹಾ| ಎ| ಶಾಲಾ ಮಠಾರದಲ್ಲಿ ಜರಗಿತು. ಗವರ್ನಮೆಂಟ್ ಟ್ರೈನಿಂಗ್ ಶಾಲಾ ಹೆಡ್ಮಾಸ್ಟರ್ ಶ್ರೀ ಎಚ್. ಸಂಜೀವರಾಯರು ಅಧ್ಯಕ್ಷತೆ ವಹಿಸಿದ್ದರು.

ಶಾಲಾ ಪಠ್ಯ ಪುಸ್ತಕಗಳ ಪಟ್ಟಿಯು ಎಲ್ಲಾ ಬೋರ್ಡ್ ಎಲಿಮೆಂಟರಿ ಶಾಲೆಗಳಿಗೆ ಈ ವರುಷದ ಮಟ್ಟಿಗೆ ಮೇ ತಿಂಗಳೊಳಗೂ ಮುಂದಿನ ವರುಷಗಳಲ್ಲಿ ಎಪ್ರಿಲ್ ತಿಂಗಳೊಳಗೂ ಸಿಕ್ಕುವಂತಾಗಬೇಕು ಮತ್ತು ಉಪಾಧ್ಯಾಯರ ಮಾಸಿಕ ವೇತನವು ಪ್ರತಿ ತಿಂಗಳ ಐದನೆ ತಾರೀಕಿಗೆ ಬಟವಾಡೆಯಾಗಬೇಕೆಂದು ದ. ಕ. ಜಿಲ್ಲಾ ಬೋರ್ಡ್ ಅಧ್ಯಕ್ಷರನ್ನೂ ವಿನಂತಿಸುವ ನಿರ್ಣಯಗಳಾದುವು. ಶಾಲಾ ಮಾಸ್ತರುಗಳಿಗೆ ಜಾಸ್ತಿ ತುಟ್ಟಿಭತ್ತೆ ಸಿಗಬೇಕೆನ್ನುವ, ಬುನ್ಯಾದಿ ಶಿಕ್ಷಣ ಕೇಂದ್ರಗಳಲ್ಲಿಯ ಬಡ ವಿದ್ಯಾರ್ಥಿಗಳಿಗೆ ಮಧ್ಯಾಹ್ನ ಧರ್ಮಾರ್ಥ ಊಟದ ವ್ಯವಸ್ಥೆಯಾಗಬೇಕೆನ್ನುವ, ಎಲಿಮೆಂಟರಿ ಶಾಲೆಗಳಲ್ಲಿಯ ಸೆಕೆಂಡರಿ ಗ್ರೇಡ್ ಟ್ರೈಂಡ್ ಮಾಸ್ತರರನ್ನು ಸರಕಾರಿ ಸೆಕೆಂಡರಿ ಶಾಲೆಗಳಲ್ಲಿಯ ಅದೇ ಯೋಗ್ಯತೆಯ ಮಾಸ್ತರರ ಸ್ಥಾನಮಾನಕ್ಕೆ ಸರಿಯಾಗಿರಿಸಬೇಕೆನ್ನುವ, ಕ್ರಾಫ್ಟ್ ಟ್ರೈನಿಂಗ್ ಅವಧಿಯನ್ನು ಇನ್ನೆರಡು ವರುಷ ಮುಂದರಿಸಬೇಕೆನ್ನುವ, ಬೋರ್ಡ್ ಎಲಿಮೆಂಟರಿ ಶಾಲೆಗಳನ್ನು ರಾಷ್ಟ್ರೀಕರಣ ಮಾಡಬೇಕೆನ್ನುವ, ಸೆಂಟರ್ ಕ್ಲಾಸ್ ಮೀಟಿಂಗುಗಳಿಗೆ ಹಾಜರಾದ ದಿವಸಗಳನ್ನು ಶಾಲಾ ಕೆಲಸದ ದಿನಗಳಾಗಿ ಪರಿಗಣಿಸಲ್ಪಡಬೇಕೆನ್ನುವ ಇತ್ಯಾದಿ ನಿರ್ಣಯಗಳಾಗಿ ಅವನ್ನು ಮದ್ರಾಸು ಸರಕಾರದ ಗಮನಕ್ಕೆ ತರಬೇಕೆಂದು ಠರಾವುಗಳಾದುವು.

ಚಾಲ್ತಿ ವರುಷಕ್ಕೆ ಇಪ್ಪತ್ತೊಂದು ಮಂದಿಯಿರುವ ಕಾರ್ಯಕಾರೀ ಮಂಡಳಿಯು ರಚನೆಯಾಗಿ ಶ್ರೀಗಳಾದ ಎಚ್. ಸುಬ್ಬಣ್ಣ ಸೆಟ್ಟಿ, ಎಮ್. ಅನಂತಪ್ಪ ಕಿಣಿ, ಕೆ. ಬೋಜರಾಜ ಸೆಟ್ಟಿ ಮತ್ತು ಎಚ್. ಎ. ಪಿ. ಕೆದ್ಲಾಯರು ಅನುಕ್ರಮವಾಗಿ ಅಧ್ಯಕ್ಷ, ಉಪಾಧ್ಯಕ್ಷ, ಖಜಾಂಚಿ, ಕಾರ್ಯದರ್ಶಿಯಾಗಿ ಆರಿಸಲ್ಪಟ್ಟರು.

ಪುರಾಣ ಮಂಗಳ— ಕಳೆದ ತಿಂಗಳ ತಾ. 22ರಲ್ಲಿ ಶ್ರೀ ಮಧ್ವನಂತೇಶ್ವರ ಸ್ವಾಮಿ ಸನ್ನಿಧಿಯಲ್ಲಿ ಶ್ರೀ ಅಡ್ಡ ವೇದ ವ್ಯಾಸಾಚಾರ್ಯರಿಂದ ಪ್ರಾರಂಭಿಸಲ್ಪಟ್ಟ 'ಜಲಂಧರ-ವೃಂದಾವನ' ಪುರಾಣ ವಾಚನಕ್ಕೆ ಇದೇ ತಾ. 5ರಲ್ಲು ಮಂಗಳಾಚರಣೆ ನಡೆಯಿತು. ಪುರಾಣಿಕರಿಗೆ ಯಥೋಚಿತ ಸಂಭಾವನೆ, ಸ್ವಾಮಿಯ ಭಕ್ತಮಂಡಳಿಯಿಂದ ಕೊಡೋಣಾಯಿತು.

ಆಹಾರ ಸಮಸ್ಯೆ ಸಭೆ — ಕಳೆದ ತಾ. 26ರಲ್ಲು ಕಡೆಕಾರು ಎಸ್. ಜಿ. ಶಾಲೆಯಲ್ಲಿ ಶ್ರೀ ಬಿ. ಎಸ್. ಶಿವರಾಮಜೆಯವರ ಅಧ್ಯಕ್ಷತೆಯಲ್ಲಿ ನಾಗರೀಕರ ಮಹಾಸಭೆ ಜರಗಿತು. ಆಹಾರದ ಕೊರತೆಯು ಕುರಿತಾಗಿ ಜನತೆಯು ಪಾಲಿಸಬೇಕಾದ ಕ್ರಮಗಳನ್ನು ಕಳೆದ ನಾಲ್ಕು ತಿಂಗಳ ಅನುಭವಕ್ಕೆ ಸಂಬಂಧಪಟ್ಟ ಅಧಿಕಾರಿಗಳಿಗೆ ಶಿಷ್ಟಮಂಡಲಗಳ ಮೂಲಕ ತಿಳಿಸಿದಾಗ್ಯೂ ಅದು ಈ ತನಕವೂ ಜಾರಿಗೆ ಬಾರದೆ ಇರುವುದರಿಂದ ವಿಷಾದ ಸೂಚಿಸಲಾಯಿತು. ಬೇಸಾಯದ ಸಮಯವು ಬಹಳ ಸಮೀಪಿಸುತ್ತಿರುವುದರಿಂದ ಶ್ರಮಜೀವಿಗಳಿಗೆ ಆಹಾರ ಧಾನ್ಯಗಳು ರಿಲೀಫ್ ಅಂಗಡಿಗಳ ಮೂಲಕ ಸಿಗುವಂತಾಗಬೇಕೆಂದು ಪುನಃ ಜಿಲ್ಲಾಧಿಕಾರಿಗಳನ್ನು ವಿನಂತಿಸಲಾಯಿತು.

ತಾಲೂಕು ಸೋಲ್ಜರ್ಸ್ ಕಮಿಟಿ ಸಭೆಯು ಇದೇ 5ರಂದು ತಾಲೂಕು ಕಚೇರಿಯಲ್ಲಿ ತಹಸಿಲ್ದಾರ್ ಶ್ರೀ ಕೆ. ವೆಂಕಪ್ಪನವರ ಅಧ್ಯಕ್ಷತೆಯಲ್ಲಿ ಜರಗಿದಾಗ ಶ್ರೀಗಳಾದ ಡಬ್ಲ್ಯು. ಎ. ಸಾಂಚೇತಾ ಮತ್ತು ಎಲ್. ಶೇಷಗಿರಿ ಶೇಟ್ ಇವರು ಉಪಾಧ್ಯಕ್ಷ ಮತ್ತು ಕಾರ್ಯದರ್ಶಿಯಾಗಿ ಆರಿಸಲ್ಪಟ್ಟರು. ಮಾಜಿ ಸೈನಿಕರಿಗೆ ಭೂದಾನ ಮಾಡುವ ಕುರಿತು ಮುಂದಿನ ಸಭೆಯಲ್ಲಿ ತೀರ್ಮಾನಿಸುವುದೆಂದಾಯಿತು.

ಬೀಡಿ ಲೇಬರ್ ಯೂನಿಯನಿನ— ಮಹಾ ಸಭೆಯು ಶ್ರೀ ಪಿ. ಎಸ್. ನಾಯ್ಕರ ಅಧ್ಯಕ್ಷತೆಯಲ್ಲಿ ತಾ. 6-5-51ರಂದು ಜರಗಿತು. ಲೆಕ್ಕಪತ್ರ ಮಂಜೂರಾದ ಮೇಲೆ ಹೊಸವರ್ಷದ ಆಡಳಿತ ಕಮಿಟಿಗೆ ಈ ಕೆಳಗಿನವರನ್ನೊಳಗೊಂಡು 10 ಮಂದಿಯನ್ನು ಚುನಾಯಿಸಲಾಯಿತು. ಕೆ. ದಾಸ ಸೇರಿಗಾರ (ಅಧ್ಯಕ್ಷ) ಕೆ. ದಾಮೋದರ (ಉಪಾಧ್ಯಕ್ಷ) ಬಿ. ... (ಕಾರ್ಯದರ್ಶಿ) ಟಿ. ... (ಜತೆ ಕಾರ್ಯದರ್ಶಿ) ಕೆ. ಜಗನ್ನಾಥ ... (ಖಜಾಂಚಿ) ಕೆ. ದಾಸ ಸೇರಿಗಾರ, ಜಿ. ... ಬಿ. ನಾರಾಯಣ ಸೇರಿಗಾರ ಮೊದಲಾದವರು ಮಾತಾಡಿದರು.

ರಾಷ್ಟ್ರಭಾಷಾ ಶಿಕ್ಷಣ ಶಿಬಿರದಲ್ಲಿ- ತಾ. 8 5 51ರಿಂದ 'ರಾಷ್ಟ್ರಭಾಷಾ' ವರ್ಗವು ಹೊಸತಾಗಿ ತೆರೆಯಲ್ಪಟ್ಟಿದೆ.

ಎಕ್ಸ್‌ರೇ ಚಿತ್ರದ ಸೌಕರ್ಯ — ಇತ್ತೀಚೆಗೆ ಡಾ| ಬಿ. ಬಾಲಕೃಷ್ಣ ಶೆಟ್ಟರು ದೊಡ್ಡ ಎಕ್ಸ್‌ರೇ ಚಿತ್ರ ಗ್ರಾಹಿಯಂತ್ರವನ್ನು ತರಿಸಿದ್ದು ಈಗಾಗಲೇ ಅದರ ಸಂಯೋಜನೆಗೊಳಿಸಿ ಎಕ್ಸ್‌ರೇ ಚಿತ್ರಗಳನ್ನು ತೆಗೆವ ವ್ಯವಸ್ಥೆ ಮಾಡಿರುವರು.

ಹವಾಮಾನ— ಆಗಾಗ ಮೋಡ ಕವಿಯುತ್ತಿದ್ದು, ಸೆಖೆ ಏರುತ್ತಿದೆ, ಸೆಖೆ ವಿಪರೀತವಾಗಿದೆ. ಈಗಾಗಲೇ 2-3 ಸಲ ವಿಶೇಷ ಮಳೆ ಬಿದ್ದಿರುವುದು.

ಕಾಂಗ್ರೆಸು ಪ್ರಚಾರ ಸಭೆಗಳು— ಕುಂದಾಪುರ ತಾಲೂಕು ಕಾಂಗ್ರೆಸು ಕಮಿಟಿಯ ಆಶ್ರಯದಲ್ಲಿ ತಾ. 2-5-51ರಂದು ಗುಡ್ಡೆಅಂಗಡಿಯಲ್ಲಿ ಶ್ರೀ ರಾಮಕೃಷ್ಣ ಹೆಬ್ಬಾರರ ಅಧ್ಯಕ್ಷತೆಯಲ್ಲಿಯೂ, ತಾ. 4-5-51ರಂದು ಮಂಡಿಸೆ ಪೇಟೆಯಲ್ಲಿ ಶ್ರೀ ಚಿಕ್ಕಾಲು ಹಿರಿಯಣ್ಣ ಶೆಟ್ಟರ ಅಗ್ರಾಸನದಲ್ಲಿಯೂ ತಾ. 5 5 51ರಂದು ಬಸರೂರು ದೇವಸ್ಥಾನದ ಎದುರು ರಥಬೀದಿಯಲ್ಲಿ ಶ್ರೀ ಎಚ್. ಕೋಟಿಯಣ್ಣ ಶೆಟ್ಟರ ಅಧ್ಯಕ್ಷತೆಯಲ್ಲಿಯೂ ಸಭೆಗಳು ಜರಗಿದವು. ಕಾಂಗ್ರೆಸಿನ ಇತಿಹಾಸ ಅದರ ತ್ಯಾಗಸೇವೆ ಅದು ಗಳಿಸಿದ ಸ್ವಾತಂತ್ರ್ಯ, ಕಾಂಗ್ರೆಸು ಸರಕಾರ ಆದರ ಮುಂದಿರುವ ಕಠಿಣ ಸಮಸ್ಯೆ ಮತ್ತು ಆಹಾರಾಭಾವ, ಬಡವರ ಸಂಕಷ್ಟ ಇವುಗಳ ನಿವಾರಣೋಪಾಯ ಮೊದಲಾದ ವಿಷಯಗಳ ಮೇಲೆ, ಶ್ರೀ ಎನ್. ಎಸ್. ಕಿಲ್ಲೆ, ಶ್ರೀ ಕೊಳ್ಕೆ ಬೈಲು ಸೂರಪ್ಪ ಸೆಟ್ಟಿ, ಶ್ರೀ ಎಡ್ಮರಿ ಮಂಜಯ್ಯ ಶೆಟ್ಟಿ, ಶ್ರೀ ಎಮ್. ಎಸ್. ಹೆಗ್ಡೆ, ಶ್ರೀ ಕೆ. ಶಂಕರ ಶೆಟ್ಟಿ, ಇವರು ಭಾಷಣವಿತ್ತರು. ಈ ಪ್ರಚಾರದಿಂದಾಗಿ ಜನಜಾಗ್ರತಿ ಉಂಟಾದುದಲ್ಲದೆ ಕಾಂಗ್ರೆಸು ವಿರೋಧಿಗಳ ಅಪಪ್ರಚಾರ, ಟೀಕೆ ಟಿಪ್ಪಣಿಗಳಿಗೆ ಸರಿಯಾದ ಉತ್ತರ ನೀಡಿದಂತಾಗಿದೆ ಎಂದರೆ ಅತಿಶಯೋಕ್ತಿಯಾಗಲಾರದು.

ವಿವಾಹ ಸಮಾರಂಭಗಳು— ಶ್ರೀ ಬಸ್ರೂರು ಶೀನಪ್ಪ ಸೆಟ್ಟರ ಪುತ್ರ ಶ್ರೀ ಎಸ್. ಸುಬ್ಬಣ್ಣ ಸೆಟ್ಟರು (ಡಿ| ಮುನ್ಸೀಫ) ಕುಂದಾಪುರ ವಕೀಲ್ ಶ್ರೀ ಬಿ. ಶಿವರಾಮ ಸೆಟ್ಟರ ಪುತ್ರಿ ಶ್ರೀಮತಿ ಸುಶೀಲೆಯನ್ನೂ, ಬಿ. ಮೋನಪ್ಪ ಸೇರೆಗಾರರ ಪುತ್ರ ಡಾ| ವೇಣುಗೋಪಾಲ ಶೆಟ್ಟರು ಶ್ರೀ ಶಿವರಾಮ ಶೆಟ್ಟಿ ಪುತ್ರಿ ಸೌ| ಹೇಮಲತೆಯನ್ನೂ, ಇದೇ ತಾ. 3ರಲ್ಲಿ ಕುಂದಾಪುರದ ಎಸ್. ಆರ್. ಎಸ್. ಹೋಮಿನಲ್ಲೂ; ಶ್ರೀ ಬನ್ನಂಜೆ ಆನಂದ ಹೆಗ್ಡೆರ ಅಳಿಯ ಶ್ರೀ ಶಂಭುಶಂಕರ ಹೆಗ್ಡೆರು ಶಿರ್ವ ನಡಿಬೆಟ್ಟು ಶ್ರೀ ವಿಠಲ ಸೆಟ್ಟರ ಪುತ್ರಿ ಶ್ರೀಮತಿ ವನಜಾಕ್ಷಿಯನ್ನು ಇದೇ ತಾ. 9ರಲ್ಲು ಕಾರ್ಕಳ ಜೈಹಿಂದ್ ಟಾಕೀಸಿನಲ್ಲೂ; ಕಲ್ಯಾಣಪುರ ಶ್ರೀ ವಾಮನ ಶೇಷಗಿರಿ ಕಾಮತರ ಪುತ್ರ ಶ್ರೀ ರಾಮಚಂದ್ರ ಕಾಮತರು ಕಟಪಾಡಿ ಹ್ಯಾಸ್ಕೂಲ್ ಮಾಸ್ತರ್ ಶ್ರೀ ಕೆ. ಆರ್. ಶೆಣೈಯವರ ಪುತ್ರಿ ಶ್ರೀಮತಿ ಸುಶೀಲೆಯನ್ನು ದಿನಾಂಕ 9ರಲ್ಲು ಉಡುಪಿ ಕೋರ್ಟುರಸ್ತೆಯ ಶ್ರೀ ಕೆ. ಜಯಪ್ಪ ಪ್ರಾನುಭಾಗರ ನಿವಾಸದಲ್ಲೂ; ಶ್ರೀ ಪೇಜಾವರ ಸಂಜೀವರಾಯರ ಪುತ್ರ ಶ್ರೀ ರತ್ನಾಕರ ರಾಯರು ದಿವಂಗತ ಶ್ರೀ ಸಿ. ರಾಘವೇಂದ್ರ ರಾಯರ ಪುತ್ರಿ ಶ್ರೀಮತಿ ಪ್ರಫುಲ್ಲಾ ದೇವಿಯನ್ನು ದಿನಾಂಕ 9ರಲ್ಲು ಉಡುಪಿಯ 'ಶಾಮಲೆ ಹೌಸ್'ನಲ್ಲೂ ವಿವಾಹವಾದರು. ನೂತನ ದಂಪತಿಗಳಿಗೆ ಶುಭಾಶಯಗಳು.

ಬೊಂಬಾಯಿ— ಉತ್ತರ ಬೊಂಬಾಯಿ ಹೋಟೆಲ್ ಕಾಮಗಾರ ಯೂನಿಯನ್ನಿನ ನೇತೃತ್ವದಲ್ಲಿ ಇದೇ ತಾ. 15ರಲ್ಲು ಪರೇಲ್ ಕಾಮಗಾರ್ ಮೈದಾನಿನಲ್ಲಿ ಸಾರ್ವಜನಿಕ ಸಭೆ ಜರಗಲಿರುವುದೆಂದೂ ಈ ಸಭೆಯಲ್ಲಿ ಕೆಲಸಗಾರರ ಹಿತಸಾಧಿಸುವ ಮೊದಲಾದ ನಿರ್ಣಯಗಳಾಗಲಿರುವುದರಿಂದ ಕೆಲಸಗಾರರೆಲ್ಲರೂ ಬರಬೇಕಾಗಿಯೂ ಯೂನಿಯನ್ ಕಾರ್ಯದರ್ಶಿಯು ವಿನಂತಿಯಿದೆ.

ನವಯುಗದ

ಚಂದಾದಾರರಲ್ಲಿ ವಿನಂತಿ

ಇತ್ತೀಚೆಗೆ ವೃತ್ತಪತ್ರಿಕೆಗಳಿಗೆ ಉಪಯೋಗಿಸಲಾಗುತ್ತಿರುವ ಕಾಗದದ ಅಭಾವ ಮತ್ತು ವಿಪರೀತ ಬೆಲೆಯಿಂದಾಗಿ ತಯಾರಿಕೆಯ ವೆಚ್ಚವೂ ಹೆಚ್ಚಾಗಿರುತ್ತದೆ. ಇಂತಹ ಪರಿಸ್ಥಿತಿಯಲ್ಲಿ ನಮ್ಮ ಚಂದಾದಾರರು ದಯಮಾಡಿ ತಮ್ಮ ತಮ್ಮ ಚಂದಾ ಹಣವನ್ನು ಮುಂದಾಗಿ ಕಳುಹಿಸಿಕೊಟ್ಟು ಪ್ರೋತ್ಸಾಹಿಸಬೇಕಾಗಿ ವಿನ್ನೈಸುತ್ತೇವೆ. ಅಲ್ಲದೆ ಚಂದಾಹಣ ಬಾಕಿ ಮಾಡಿಕೊಂಡಿರುವ ಮಹನೀಯರಂತೂ ಬಾಕಿಯನ್ನು ಜಾಗ್ರತೆಯಾಗಿ ಕಳುಹಿಸಿಕೊಡುವಂತೆ ಕಳಕಳಿಯ ವಿನಂತಿ ಇದೆ. ಪತ್ರಿಕೆ ಬೇಡವೆಂದಿರುವವರೂ, ವಿಳಾಸ ಬದಲಾವಣೆಯಾದವರೂ ಸಕಾಲದಲ್ಲಿ ತಿಳಿಸುವಂತೆಯೂ ಕೇಳಿಕೊಳ್ಳುತ್ತೇವೆ.

ಮೆನೇಜರ್.

ಶ್ರೀ ರಾಮಕೃಷ್ಣ ಥಿಯೇಟರ್ ಲಿಮಿಟೆಡ್ ಉಡುಪಿ

ತಾರೀಕು. 12-5-51ರಿಂದ

ಮೋತಿಲಾಲ್, ಮಧುಬಾಲ, ಗೋಪ್;

ಇವರೆಲ್ಲರೊಂದಾಗಿ ಕೊಡುವ ಆನಂದಭಿಷ್ಪನೇ

ಹಸ್ತೇ ಆಂಸು

ಬರುವ ಚಿತ್ರ— ಜಯರಾಜ್, ಪ್ಯಾರಿ, ರೆಹನಾ ನಟಿಸಿದ

ಚಂದಾ - ಕಿ - ಚಾಂದನಿ.

ಕುಲವಿಲ್ಲದ ಹೆಣ್ಣು

ತೆಲುಗಿನಿಂದ ಅನುವಾದಿತ ಕಾದಂಬರಿ.

ಅನುವಾದಕರು:- ಶ್ರೀ. ಪಿ. ವೆಂಕೋಬಾಚಾರ್ಯರು, ಬಿ. ಎ. ಬಿ. ಟಿ, ಹುಬ್ಬಳ್ಳಿ.

"ಮಿತ್ರಸಂತತಿಯ ಹೆಣ್ಣೊಂದು ಧರ್ಮದ ಸೋಗಿನ ಜಾಲ, ಧನದ ಜಾಲ ವೃದ್ಧರ ಕಾಮಜಾಲದಿಂದ ಪಾರಾಗಿ ಆಧುನಿಕ ಯುವಕ ಸಂತತಿಯ ಉದಾರತೆಯ ಕೈಹಿಡಿದು ಸುಖವಾಗಿ ಬಾಳತೊಡಗುವುದನ್ನು ಸೂಚಿಸುವ ಈ ಕಾದಂಬರಿಯಲ್ಲಿ ಪ್ರಾಸಂಗಿಕವಾಗಿ ನಾಟಕ ಕಲೆಯ ಮೇಲೆಯೂ ಕೆಲವು ಅಭಿಪ್ರಾಯಗಳನ್ನು ಸೂಚಿಸಿದ್ದಾರೆ

ಕುಲವಿರಲಿ ಇಲ್ಲದಿರಲಿ, ವೈಯಕ್ತಿಕ ಶೀಲಮುಖ್ಯವಿದೆ; ಅದರ ಬೆಳಕಿನಲ್ಲಿ ವ್ಯಕ್ತಿಯು ಎಂತಹ ಸಾಮಾಜಿಕ, ಧಾರ್ಮಿಕ ಎಡರು ತೊಡರುಗಳನ್ನೂ ದಾಟಿ ಮನಮೆಚ್ಚಿದ ಶಾಂತಿಸುಖ ಸಮಾಧಾನಗಳ ಬಾಳನ್ನು ಬಾಳಬಲ್ಲುದು ಎಂಬುದೇ ಈ ಕಾದಂಬರಿಯ ನೀತಿ"— ಜೈಹಿಂದ್.

ಓದಲೇ ಬೇಕಾದ ಸಾಮಾಜಿಕ ಕಾದಂಬರಿ— ಬೆಲೆ ರೂ. 1 ೮-0

ಪ್ರತಿಗಳಿಗೆ—

ಅಂತರಂಗ ಕಾರ್ಯಾಲಯ, ಉಡುಪಿ.

ನವಭಾರತ ಪುಸ್ತಕ ಭಂಡಾರ, ಉಡುಪಿ.

ಇದೀಗ ಪ್ರಕಟವಾಗಿದೆ.

ವೀರಪ್ಪ ಯಗಟಿ, ಹಾವೇರಿ ಇವರ

ನೀತಿ ವಿನೋದ ಕತೆಗಳು

ನೀತಿ ಮತ್ತು ವಿನೋದಪರವಾದ 35 ಕತೆಗಳ ಸಂಗ್ರಹ

ಮುಖ್ಯವಾಗಿ ಸ್ತ್ರೀಯರಿಗೂ, ಮಕ್ಕಳಿಗೂ ಬೋಧಪ್ರದವಾದ ಕತೆಗಳಿಂದೊಡಗೂಡಿವೆ

ಬೆಲೆ: 0 12 0

ಪ್ರತಿಗಳಿಗಾಗಿ ಬರೆಯಿರಿ

ಅಂತರಂಗ ಕಾರ್ಯಾಲಯ, ಉಡುಪಿ.

ಮಂಗಳೂರು

ಮೇ ದಿನಾಚರಣೆಯು— ಮಂಗಳೂರಲ್ಲಿ ಇದೇ 1 ರಲ್ಲು ಕಮ್ಯುನಿಸ್ಟ್ ಮತ್ತು ಸೋಶಿಯಲಿಸ್ಟ್ ಪಕ್ಷಗಳ ನೇತೃತ್ವದಲ್ಲಿ ಜರಗಿತು. ಕಮ್ಯುನಿಸ್ಟರ ನೇತೃತ್ವದ ಸಭೆಯು ಕೇಂದ್ರ ಮೈದಾನದಲ್ಲಿ ಶ್ರೀ ಎಮ್. ಎಸ್. ಕೃಷ್ಣಪ್ಪನವರ ಅಧ್ಯಕ್ಷತೆಯಲ್ಲಿ ಜರಗಿತು ಶ್ರೀಗಳಾದ ಬಿ. ವಿ. ಕಕ್ಕಿಲ್ಲಾಯ, ಕೆ. ಮೋಹನ ಸೆಟ್ಟಿ, ಬಿ. ಕೆ. ಮೋಹನ ರಾವ್, ಬಿ. ರಾಮಪ್ಪ ಸುವರ್ಣ, ಬಿ. ಆರ್. ರಾಧಾಕೃಷ್ಣ, ಸಂಕಪ್ಪ, ಕೆಂಪಣ್ಣ ಮೊದಲಾದವರು ಭಾಷಣವಿತ್ತರು. ಸೋಶಿಯಲಿಸ್ಟರು ಎಡ ಪಕ್ಷದ ಐಕ್ಯಸಾಧನೆಗಾಗಿ ವಿರೋಧ ತಂದೊಡ್ಡುತ್ತಿದ್ದಾರೆಂದೂ ತಿಳಿಸಿದರು. ಬೀಡಿ ಮಜೂರರು, ನೇಕಾರರು, ಮುನಿಸಿಪಲ್ ಕೆಲಸಗಾರರು, ಬಂದರು ಕೆಲಸಗಾರರೇ ಮೊದಲಾದವರು ಭಾಗವಹಿಸಿದ್ದರು. ಸೋಶಲಿಸ್ಟರ ನೇತೃತ್ವದಲ್ಲಿ ಜರಗಿದ ಸಭೆಯಲ್ಲಿ ಶ್ರೀ ಸಿ. ಗೋವಿಂದನ್ ಅಧ್ಯಕ್ಷತೆ ವಹಿಸಿದ್ದರು. ಶ್ರೀಗಳಾದ ಎ. ಬಾಲಪ್ಪ, ಎಮ್. ರಾಜೀವ, ಡಾ। ಸಂಜೀವನಾಥ, ಯು ಜನಾರ್ಧನ, ಎಸ್. ಎಮ್. ರಾಮಕೃಷ್ಣರಾವ್ ಮೊದಲಾದವರು ಭಾಷಣವೀಯುತ್ತಾ ಕಮ್ಯುನಿಸ್ಟರಿಂದು ರಷ್ಯದ ಕೈಗೊಂಬೆಗಳಾಗಿ ಕುಣಿಯುತ್ತಿದ್ದಾರೆಂದೂ ತಿಳಿಸಿದರು. ಈ ಸಭೆಯಲ್ಲಿ ಮೋಟರ್ ಕೆಲಸಗಾರರ ಸಂಘ, ಹೋಟೆಲ್ ಮಜೂರರ ಸಂಘ, ವಿದ್ಯುತ್ ಮಜೂರರ ಸಂಘ, ಕಾಮನ್ವೆಲ್ತ್ ಇಂಜಿನಿಯರಿಂಗ್ ಕೆಲಸಗಾರರ ಸಂಘ ಮತ್ತು ಸಿನಿಮಾ ಕೆಲಸಗಾರರ ಸಂಘಗಳು ಭಾಗವಹಿಸಿದ್ದವು.

ಸರಕಾರಿ ಗಾಡಿಪಟ್ಟಿಗಳ ಕಳ್ಳಸಂತೆಯ ಆರೋಪದಲ್ಲಿ ಆರುವರಿಂದಿಗೆ ಸರಿಯಾಗಿ ಇಬ್ಬರ ಬಿಡುಗಡೆಯಾಗಿದೆ. ಪುತ್ತೂರು ಕೃಷಿ ಇಲಾಖೆಯ ಆಫೀಸಿನಿಂದ ಈ ಪಟ್ಟಿಗಳನ್ನು ಕಳ್ಳಸಂತೆಯಲ್ಲಿ ಮಾರಲಾಗಿತ್ತೆಂದೂ ಆ ಆರೋಪಕ್ಕೊಳಗಾದವರನ್ನು ಅದಕ್ಕಾಗಿಯೇ ನೇಮಿಸಲ್ಪಟ್ಟ ನ್ಯಾಯಾಲಯದವರು ತನ್ನಿಖಾಧಿ ಸೆಷನ್ಸ್ ಕೋರ್ಟಿಗೆ ಕಳುಹಿಸಿದರು. ಅಲ್ಲಿ ಅವರು ವಿಚಾರಿಸಿ, ಮಂಗಳೂರಿನ ಕಟ್ಟಿಣ-ಉಕ್ಕು ವ್ಯಾಪಾರಿ ಇಸ್ಮಾಯಿಲ್ ಅಹಮ್ಮದನಿಗೆ ಎರಡು ವರುಷ ಕಠಿಣ ಸಜೆ, ಮತ್ತು ಐದುನೂರು ರೂಪಾಯಿ ಜುಲ್ಮಾನೆ, ಮಂಗಳೂರಿನ ಕಮ್ಮಾರ ವಾಮನ, ರಾಜೀವ ಸುವರ್ಣ, ಪುತ್ತೂರು ಕೃಷಿ ಆಫೀಸಿನ ಪೇದೆ, ಶಿವಪ್ಪ ಗೌಡ, ಮೋಸ್ಟ್ ಐತಪ್ಪ ಸೆಟ್ಟಿ, ಕಾವಲುಗಾರ ಫಾಸ್ಟಿನ್ ಸಿಕ್ವೇರ- ಇವರಿಗೆ ಎರಡೆರಡು ವರುಷ ಕಠಿಣ ಸಜೆವಿಧಿಸಿದ್ದಾರೆ. ಅದೇ ಆಫೀಸಿನ ರಾಮಮೋಹನ ರೈ ಮತ್ತು ಅಚ್ಯುಯಾನೆ ವೈದಿಸಬ್ಬ ಎಂಬಿಬ್ಬರಲ್ಲಿ ಅಪರಾಧವಿಲ್ಲವೆಂದು ಬಿಡುಗಡೆಮಾಡಿದ್ದಾರೆ.

ದ. ಕ. ನಿ. ಭಾ. ವೈದ್ಯಸಂಘದ– ವಾರ್ಷಿಕ ಮಹಾಸಭೆಯು ಕಳೆದ ತಾ. 29 ರಲ್ಲು ಜರಗಿ, ವೈದ್ಯರುಗಳಾದ ಎಮ್. ಕೆ. ಗೋಪಾಲನ್, ಮಾಳ ನಾರಾಯಣ ಭಟ್, ಬಿ. ಆರ್. ಹರಿದಾಸ್, ಎ. ವೆಂಕಪ್ಪಯ್ಯ ಮತ್ತು ಎಂ. ಆರ್. ಜೋಶಿ- ಇವರುಗಳನ್ನು ಅಧ್ಯಕ್ಷ, ಉಪಾಧ್ಯಕ್ಷ, ಖಜಾಂಚಿ ಮತ್ತು ಜತೆಕಾರ್ಯದರ್ಶಿಗಳನ್ನಾಗಿಯೂ ಶ್ರೀ ಪಿ. ರಾಮರಾಯರನ್ನು ಗೌರವ ಲೆಖ್ಖಪರಿಶೋಧಕರನ್ನಾಗಿಯೂ ಆರಿಸಲಾಯಿತು.

ಅಕ್ಕಿ ಭತ್ತ ಉತ್ಪಾದಕರಲ್ಲದವರು— ಒಂದು ತಿಂಗಳ ಆವಶ್ಯಕತೆಗಿಂತ ಹೆಚ್ಚಿನ ಆಹಾರ ಧಾನ್ಯಗಳನ್ನು ಸ್ವಾಧೀನದಲ್ಲಿ ಇಟ್ಟುಕೊಳ್ಳಕೂಡದೆಂದು 1947 ನೆ ಇಸವಿ ಲಾಗಾಯಿತು ಜಾರಿಯಲ್ಲಿದ್ದ ಕಾನೂನನ್ನು ಮದ್ರಾಸು ಸರಕಾರದವರು ಈ ತಿಂಗಳಲ್ಲಿ ತಿದ್ದುಪಡಿ ಮಾಡಿರುವರು. ಈ ತಿದ್ದುಪಡಿ ಮೇರೆಗೆ ಕ್ರಯಕ್ಕೆ ಪಡಕೊಂಡ ಆಹಾರ ಧಾನ್ಯಗಳನ್ನು ಹಸುಗೆ ಇಲ್ಲದ ಪ್ರಾಂತಗಳಲ್ಲಿ ಆರು ತಿಂಗಳ ಖರ್ಚಿಗೆ ಸಾಕಷ್ಟು ಇಟ್ಟುಕೊಳ್ಳಬಹುದು. ಆದರೆ ಬೇಸಾಯಗಾರರು ಕೂಲಿಯಾಳುಗಳಿಗೆ ಕೊಡಲು ಅಕ್ಕಿ ಭತ್ತ ಇಟ್ಟುಕೊಳ್ಳ ಬೇಕಾದಲ್ಲಿ ಡಿಸ್ಟ್ರಿಕ್ಟ್ ಕಮಿಶನರ್ ಆಫ್ ಸಿವಿಲ್ ಸಪ್ಲೈಸ್ ಆಫೀಸಿನಿಂದ Foodgrain ಲೈಸೆನ್ಸು ಪಡೆದು ಧಾನ್ಯಗಳನ್ನು ಇಟ್ಟುಕೊಳ್ಳತಕ್ಕದ್ದು.

ಪುತ್ತೂರು

ಮಾನಪತ್ರ ಅರ್ಪಣ— ಎಪ್ರಿಲ್ ತಿಂಗಳು ತಾ 28ರಲ್ಲು ಮದ್ರಾಸು ಕೃಷಿಮಂತ್ರಿ ಶ್ರೀ ಎ. ಬಿ. ಶೆಟ್ಟರು ಬಂದು ಸಂಚಾರದಲ್ಲಿರುತ್ತಾ ಪುತ್ತೂರಿಗೆ ಬಂದಾಗ ತಾಲೂಕಿನ ಕೃಷಿಕರ ಸಂಘದವರಿಂದ ಮಾನಪತ್ರದ ಕೇಳಲಾಗಿದೆ. ಮಂತ್ರಿಗಳು ಸಭೆ ಜರಗಿದ ಸ್ಥಳಕ್ಕೆ ಬಂದಾಗ ಅವರಿಗೆ ಹೂಮಾಲೆ ಹಾಕಿ ಸ್ವಾಗತಿಸಲಾಯಿತು. ಆ ವೇಳೆ ಪುತ್ತೂರು ತಾಲೂಕು ಕೃಷಿಕರ ಸಂಘದ ಪರವಾಗಿ ಕಾರ್ಯದರ್ಶಿ ಶ್ರೀ ಕೆ. ಐತ್ತಪ್ಪ ರೈಗಳೊಂದು ಮಾನಪತ್ರವನ್ನು ಓದಿ ಮಂತ್ರಿಗಳಿಗೊಪ್ಪಿಸಿದರು.

ಮಾನಪತ್ರದಲ್ಲಿ ನಮ್ಮವರೇ ಆದ ಮಂತ್ರಿಗಳನ್ನು ಸ್ವಾಗತಿಸಿ, ರೈತರ ಸಂಕಷ್ಟಗಳೊಂದಿಗೆ ಹೀಗೆ ಹೇಳಲಾಗಿದೆ. 'ಈಗ ನಮ್ಮ ಪ್ರಾಂತದ ಮುಖ್ಯ ಸಮಸ್ಯೆ ಆಹಾರದ ಅಭಾವ. ಆದರೆ ನಮ್ಮ ಕರ್ತವ್ಯ ನಿರ್ವಹಣಕ್ಕೆ ಪ್ರಬಲ ತೊಡಕು ನಮ್ಮ ಸರಕಾರದ ಆಹಾರ ಧೋರಣೆ ಮತ್ತು ಅದನ್ನು ಜಾರಿಗೆ ತರುವ ನೌಕರರ ವರ್ತನೆ ಎಂಬುದನ್ನೂ ವಿನಯಪೂರ್ವಕ ನಿವೇದಿಸುವೆವು. ಕೃಷಿಕರು ಸರಕಾರದೊಡನೆ ಸಹಕರಿಸುವುದಿಲ್ಲವೆಂದು ಅಧಿಕಾರಿಗಳು ಕೆಲವೊಮ್ಮೆ ವೃಥಾ ಆರೋಪಿಸುವಾಗ ಅವರ ಅಪೇಕ್ಷೆಯಂತೆ ಸಹಕರಿಸಲು ಸಾಧ್ಯವಿಲ್ಲದಂತೆ ಅವರ ವರ್ತನೆಯಾಗಿದೆ ಎಂಬುದನ್ನು ಅಧಿಕಾರಿಗಳಲ್ಲಿ ಅನೇಕರು ಅರಿತಂತೆ ತೋರುವುದಿಲ್ಲ. ಸರಕಾರವು ಕೃಷಿಕನ ಉಪಯೋಗಕ್ಕಾಗಿ ಏನಾದರೂ ಸಹಾಯ ಸಲಕರಣೆಗಳನ್ನು ಕೊಟ್ಟರುವುದಾದರೆ ಅದು ಅವನಿಗೆ ಮುಟ್ಟಲ್ಲ.

ಆಹಾರ ಉತ್ಪಾದನೆಗೆ ಕೆಲವೊಂದು ಸೂಚನೆಗಳನ್ನು ಸೂಚಿಸಿ ಕ್ರಯನಿಯಂತ್ರಣ ತೆಗೆಯಲು ಸಾಧ್ಯವಿಲ್ಲವಾದರೆ ಅಕ್ಕಿ ಭತ್ತದ ಬೆಲೆಯನ್ನು ಮುಡಿಗೆ ರೂ 25 ಮತ್ತು 11ಕ್ಕಾದರೂ ಏರಿಸಬೇಕೆಂದು..... ಈ ಜಿಲ್ಲೆಯನ್ನು ಕೊರತೆ ಜಿಲ್ಲೆಯಾಗಿ ಮಾಡಬೇಕು- ಧಾನ್ಯಗಳನ್ನು ಹೊರಗಿನಿಂದ ಆಯಾತಗೊಳಿಸಿ ಬಿಟ್ಟಿ ಕೋಠಿಗಳನ್ನು ತೆರೆದು ಜನತೆಯಲ್ಲಿ ಅನ್ನಕ್ಷಾಮದಿಂದ ಪಾರುಗೊಳಿಸಬೇಕಾಗಿ ಪ್ರಾರ್ಥಿಸಲಾಯಿತು.

ಕೃಷಿ ಇಲಾಖೆಯ ಡೈರೆಕ್ಟರರು ಶ್ರೀ ಕಾಂತರಾಜರು ಸಹಾಯನಾಡುತ್ತಾ ಮನವಿಯಲ್ಲಿ ಕೆಲವು ನ್ಯಾಯವಾದ ಬೇಡಿಕೆಗಳಿರುವುದೆಂದೂ ಕೆಲವು ತಮ್ಮ ವಿಚಾರಗಳವೆಯೆಂದೂ ತಿಳಿಸಿದರು.

ಮಂತ್ರಿಗಳು ಮಾತನಾಡುತ್ತ ಜನರು .... ಮನೋಭಾವವನ್ನು ಬಿಟ್ಟು ನಮ್ಮದೇ ಸರಕಾರವೆಂಬ ಪ್ರೇಮದಿಂದ ಸಹಕರಿಸಬೇಕೆಂದು ..... ಅದನ್ನು ಮಂತ್ರಿಗಳನ್ನೂ ಅಧಿಕಾರಿಗಳನ್ನೂ ಅತಿಥಿಗಳನ್ನು ಪುತ್ತೂರು ತಾಲೂಕು ಕೃಷಿಕ ಸಂಘದವರು ಉಪಹಾರಗಳಿಂದ ಸತ್ಕರಿಸಿದರು.

ಪುತ್ತೂರು ಪಂಚಾಯತ ಬೋರ್ಡಗಳ ಪರಿಷತ್ತು—ಇದೇ ತಿಂಗಳ ತಾ 15ನೆ ಮಂಗಳವಾರ ಪುತ್ತೂರು ಕೋಆಪರೇಟಿವ್ ಟೌನ್ ಬೇಂಕ್ ಕಟ್ಟಡದಲ್ಲಿ ಶ್ರೀ ಧರ್ಮಸ್ಥಳ ಮಂಜಯ್ಯ ಹೆಗ್ಗಡೆಯವರ ಅಧ್ಯಕ್ಷತೆಯಲ್ಲಿ ಜರಗುವುದು ಮದ್ರಾಸು ಸರಕಾರದ ಸ್ಥಳೀಯ ಆಡಳಿತ ಸಂಸ್ಥೆಗಳ ಮತ್ತು ಸಹಕಾರಿ ಸಂಸ್ಥೆಗಳ ಮಾನ್ಯ ಮಂತ್ರಿ ಕೆ. ಚಂದ್ರಮೌಳಿಯವರು ಪರಿಷತ್ತನ್ನು ಉದ್ಘಾಟನೆ ಮಾಡುವರು.

ಮೂಲ್ಕಿ ಬೇಂಕ್,

ಲಿಮಿಟೆಡ್, ಮೂಲ್ಕಿ

1929ರಲ್ಲಿ ಸ್ಥಾಪಿತವಾಗಿ 21 ವರುಷಗಳಿಂದ ಊರ ಜನರ ಹಿತಕ್ಕಾಗಿ ಡಿಪೋಸಿಟ್ ಹಣಕ್ಕೆ ನ್ಯಾಯವಾದ ಬಡ್ಡಿಯಿಂದಲೂ, ಸಾಲದ ಹಣಕ್ಕೆ ಅತೀ ಕಡಿಮೆ ದರದ ಬಡ್ಡಿಯಿಂದಲೂ ಜನ ಹಿತಸಾಧನೆಯನ್ನು ಮಾಡುತ್ತಿರುವುದು

The Moolky Bank Ltd.,
Moolky, S. K.

ವಿವಿಧ ಪಾತ್ರೆಗಳು



ಯಾವತ್ತೂ ವಿಧದ ಬೆಳ್ಳಿ, ತಾಮ್ರ, ಹಿತ್ತಾಳೆ, ಕಂಚು ಮೊದಲಾದುವುಗಳ ವಿವಿಧ ಪಾತ್ರೆಗಳೂ ಸಾಮಾನುಗಳೂ ಕಡಿಮೆ ಬೆಲೆಯಲ್ಲಿ ರಿಯಾಗಿಯೂ ದೊರೆಯುತ್ತವೆ.

ಕಲ್ಯಾಣಪುರ ವ್ಯಾಸಾಚಾರ್ಯ,
ರಥಬೀದಿ, ಉಡುಪಿ



Approved from by the Govt. of Mysore
Certificated by the Agent of the Govt of Cylone & Indian.

ನೋಟೀಸು

ಉಡುಪಿ ತಾಲೂಕು ನಂಬ್ರ 76ನೇ ಬಡಗಬೆಟ್ಟು ಗ್ರಾಮದಲ್ಲಿರುವ ಕ್ರಿಸ್ತೋಫರ ಅಲ್ಬರ್ಟರ ಹೆಂಡತಿ ಜೆ. ಎಮ್. ಅಲ್ಬರ್ಟಳು ಸ್ವತಹಾ ವ ಪ್ರಕೃತ ಪರಮೂರಲ್ಲಿರುವ ತನ್ನ ಗಂಡ ಸದ್ರಿ ಕ್ರಿಸ್ತೋಫರ ಅಲ್ಬರ್ಟರ ಪರವಾಗಿ ಸಹಾ ಸರ್ವ ಜನರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದ್ರೆ:—ಸದ್ರಿ ನನ್ನ ಗಂಡನ ತಿರಿತಾಯಿ ಮಾರ್ತಾ ಅಲ್ಬರ್ಟರ ಮೇಲೆ ತನಗಿದ್ದ ಪ್ರೀತಿ ವ ಅಭಿಮಾನದ ದೆಸೆಯಿಂದ, ತನ್ನ ಸ್ವಂತ ಸಂಪಾದನೆಯ ಹಣಗಳಿಂದ ಸದ್ರಿ ಗ್ರಾಮದ ಸ. ನ 166/1D2 ಬಾಗ್ಯಾತು 0–36 ಸೆಂಟ್ಸು ಸ್ಥಳವನ್ನು ಸದ್ರಿ ಮಾರ್ತಾ ಅಲ್ಬರ್ಟರ ಹೆಸರಿನಲ್ಲಿ ಬಿನಾಮಿಯಾಗಿ ಪಡದು, ಸದ್ರಿ ಸ್ಥಳದಲ್ಲಿ ತನ್ನ ಸ್ವಂತ ಸಂಪಾದನೆಯಿಂದಲೇ ಹಂಚು ಛಾವಣಿ ಮನೆ, ಬಚ್ಚಲು ಕೊಟ್ಟಿಗೆ ಭಾವಿ, ಹಲಸು, ಮಾವು ತೆಂಗು ವಗೈರೆ ಮರಮಟ್ಟು ಕೂಡ ಕೃತಗಳನ್ನು ಮಾಡ್ಸಿ, ನನ್ನನ್ನು ಸದ್ರಿ ಮಾರ್ತಾ ಅಲ್ಬರ್ಟ ಮತ್ತು ಮಕ್ಕಳ ಸಮೇತ ಸದ್ರಿ ಸ್ಥಳದಲ್ಲಿ ವ ತನ್ನ ಹೆಸರಿನಲ್ಲಿರುವ ಸದ್ರಿ ಸ್ಥಳಕ್ಕೆ ತಾಗಿರುವ ಸ ನ 166/1 B ನೇ ಸ್ಥಳದಲ್ಲಿ ಕೂಡ ಇರ್ಸಿ ಅನುಭವ್ಸಿ ಬರುತ್ತಿರುವಲ್ಲಿ, ವಯೋವೃದ್ಧರಾದ ಜ್ಞಾಪಕ ಶಕ್ತಿ ಬಹಳ ಕಡಿಮೆಯಾದ ವ ಬುದ್ಧಿ ಸ್ಥಿರ ಇಲ್ಲದಿರುವ ಸದ್ರಿ ಮಾರ್ತಾ ಅಲ್ಬರ್ಟರು ಸದ್ರಿ ಸ್ಥಳದ ಪಟ್ಟೆಯು ತನ್ನ ಹೆಸರಿನಲ್ಲಿ ಉಂಟೆಂಬ ಒಂದೇ ಆಧಾರದಿಂದ ನಮ್ಮ ದ್ವೇಷಿಕರ ದುರ್ಬೋಧನೆ ವ ಪಿತೂರಿ ಮೇರೆಗೆ ಸುಳ್ಳು ಸಾಲಗಳನ್ನು ಕಲ್ಪಿಸಿಕೊಂಡು, ಸದ್ರಿ ಆಸ್ತಿಯನ್ನು ಪರಾಧೀನ ಮಾಡುವ ಅಭಿಪ್ರಾಯದಲ್ಲಿದ್ದಾರಾಗಿ ನನಗೆ ತಿಳಿದುಬಂದದೆ. ಈ ಪ್ರಕಾರ ಸದ್ರಿಯವರು ಮಾಡಿರಬಹುದಾದ ವ ಮಾಡಬಹುದಾದ ಸಾಲಗಳು ನಮ್ಮ ಮೇಲಾಗಲೀ, ಸದ್ರಿ ಆಸ್ತಿಯ ಮೇಲಾಗಲೀ ಬಾಧ್ಯವಾಗ ತಕ್ಕವುಗಳಲ್ಲ. ವ ಸದ್ರಿ ಆಸ್ತಿಯ ವಿಷಯದಲ್ಲಿ ಮಾಡಬಹುದಾದ ಪರಾಧೀನಗಳು ಕೂಡ ನಮ್ಮ ಹಕ್ಕಿಗೆ ವಿರೋಧವಾಗಿ ಸಿಂಧುವಾಗತಕ್ಕವುಗಳಲ್ಲ.

J M. Alberts

ಉಡುಪಿ, ತಾ 7 5 51

ದೇಶ, ಭಾಷಾಸೇವಕರಾದ
ದಿ। ಕೊರಡ್ಕಲ್ ಶ್ರೀನಿವಾಸರಾಯರ
ನೆನಪಿಗಾಗಿ ಪ್ರಕಟಿಸಲ್ಪಟ್ಟ ಮೋಸ್ತರಗತಿಯ ಸ್ಮಾರಕಗ್ರಂಥ

ನೆನಪಿಗಾಗಿ

ಇದರಲ್ಲಿ ರಾಷ್ಟ್ರಕವಿ ಎಂ. ಗೋವಿಂದ ಪೈ, ಅ. ನ ಕೃಷ್ಣರಾವ್, ಗೊರೂರು, ಪ್ರೊ ಕೆ. ಎಸ್. ಸವಣೂರು, ಕಡೆಂಗೋಡ್ಲು, ಪ್ರೊ ರಂ. ಶ್ರೀ ಮುಗಳಿ, ಕೆ. ವಿ. ಶೆಣೈ, ಎಸ್. ಎಲ್. ನಾರಾಯಣ ಭಟ್, ಎಂ. ಪಿ ಹೆಗ್ಡೆ, ಕು. ಶಿ. ಹರಿದಾಸ ಭಟ್, ಹುರುಳಿ, ಕೊರಡ್ಕಲ್ ಮೊದಲಾದವರ ವೈವಿಧ್ಯಪೂರ್ಣ ಪ್ರಬಂಧಗಳಿವೆ.

ಪುಸ್ತಕದ ಬೆಲೆ ಬರೇ ರೂ. **2—0—0.**

ಪ್ರತಿಗಳನ್ನು ಪಡಕೊಂಡು ಕೊರಡ್ಕಲ್ ಸ್ಮಾರಕ ನಿಧಿಗೆ ಸಹಾಯ ನೀಡಿರಿ.

ಪ್ರತಿಗಳು ನಿಮ್ಮೂರ ಪುಸ್ತಕವ್ಯಾಪಾರಿಗಳಲ್ಲಿ ಸಿಗದಿದ್ದರೆ
ನವಭಾರತ ಪುಸ್ತಕಭಂಡಾರ, ಉಡುಪಿ,
ಇವರಿಗೆ ಬರೆಯಿರಿ.

ಅಳಿಯ ಸಂತಾನ ಕಾನೂನು

ಇದರ ಪ್ರತಿಗಳು ದೊರೆಯುತ್ತವೆ,

ಕನ್ನಡ ಪ್ರತಿಗೆ 0–8–0

ಇಂಗ್ಲಿಷ್ ಪ್ರತಿಗೆ 0–8–0

ಟಪ್ಪಾಲು ಖರ್ಚು 0–1–0 ಪ್ರತ್ಯೇಕ.

0–9 0 ಕಳುಹಿಸಿದರೆ ಒಂದು ಪ್ರತಿ ಕಳುಹಿಸಲ್ಪಡುವುದು.

ನವಯುಗ ಪ್ರೆಸ್, ಉಡುಪಿ.

ಶಂಕರನಾರಾಯಣ— ಇಲ್ಲಿಯ ಬೋರ್ಡ್ ಹೈಯರ್ ಎಲಿಮೆಂಟರಿ ಶಾಲೆಯ ವರ್ಧಂತಿ ಉತ್ಸವವು ತಾ. 29-4-51ರಲ್ಲಿ ಶ್ರೀ ಹಿ. ಎನ್. ತಿಮ್ಮಪ್ಪ ಶೆಟ್ಟಿ (ರೇವಿನ್ಯು ಡಿವಿಜನಲ್ ಆಫೀಸರ್ ಕುಂದಾಪುರ,) ಇವರ ಅಧ್ಯಕ್ಷತೆಯಲ್ಲಿ ವಿಜೃಂಭಣೆಯಿಂದ ಜರಗಿತು. ಬಂದ ಅತಿಥಿಗಳಿಗೆಲ್ಲಾ ಊಟ, ಉಪಹಾರದ ಏರ್ಪಾಟು ಚೆನ್ನಾಗಿತ್ತು. ಕಾರ್ಯಕ್ರಮದಂತೆ ದೇವರ ಪ್ರಾರ್ಥನೆ, ಶ್ರೀ ಎ. ಮಹಾಬಲ ಶೆಟ್ಟರಿಂದ ಸ್ವಾಗತವಾಚನ, ವರದಿವಾಚನ, ಬಹುಮಾನವಿತರಣೆ ನಡೆದು ತರುವಾಯ, ಶಾಲಾ ಬಾಲಕರ ಕೋಲಾಟ, ಲೆಜಿಮ್, ನರ್ತನ, ಹಾಸ್ಯ ಮುಂತಾದ ಚಟುವಟಿಕೆಗಳು ಸೊಗಸಾಗಿ ಪ್ರದರ್ಶಿಸಲ್ಪಟ್ಟವು. ಆ ಮೇಲೆ ನೆರೆದ ಮಹನೀಯರಲ್ಲಿ ಶ್ರೀ ಕೊಳ್ಕೆಬೈಲು ಸೂರಪ್ಪ ಶೆಟ್ರು ಮತ್ತು ಶ್ರೀ ಎಡ್ತರೆ ಮಂಜಯ್ಯ ಶೆಟ್ರು (ಇವರೀರ್ವರು ಡಿ. ಬೊ. ಮೆಂಬರರು.) ಇವರು ಶಾಲೆಯ ಚಟುವಟಿಕೆಗಳನ್ನು ಕೊಂಡಾಡಿ ಶಾಲೆಯ ಶ್ರೇಯಸ್ಸು ಬಯಸಿ, ಭಾಷಣವಿತ್ತರು. ಮತ್ತು ಈ ಊರಿಗೆ ಹೈಸ್ಕೂಲಿನ ಅವಶ್ಯಕತೆಯನ್ನು ಒತ್ತಿ ಹೇಳಿದ್ದಲ್ಲದೆ, ನೆರೆಕರೆಯ ಊರಿನವರು ಆ ಬಗ್ಗೆ ತನು, ಮನ, ಧನವನ್ನಿತ್ತು ಸಹಾಯಮಾಡಿ ಪ್ರಯತ್ನಿಸಬೇಕಾಗಿ ವಿನಂತಿಸಿದರು. ನಂತರ ಶ್ರೀ ನಾರಾಯಣರಾವ್ ಮತ್ತು ಶ್ರೀ ಬಿ ಕೃಷ್ಣ ಅಡಿಗ ಇವರು ಸಾಲೋಚಿತ ಭಾಷಣವಿತ್ತರು. ಸಭಾಧ್ಯಕ್ಷರು ಶಾಲೆಯ ಚಟುವಟಿಕೆಗಳನ್ನು ಕೊಂಡಾಡಿ ಉಪಾಧ್ಯಾಯರ ಉತ್ಸಾಹವನ್ನು ಪ್ರಶಂಸಿಸಿ, ಶ್ರೇಯಸ್ಸು ಬಯಸಿ, ಸುಂದರ ಭಾಷಣವನ್ನಿತ್ತರು. ನಂತರ ಚಿಕ್ಕ ಬಾಲಕ ಬಾಲಿಕೆಯರು ಸಂಗೀತ ನಾಟಕವನ್ನು ಜಯಶೀಲವಾಗಿ ಅಭಿನಯಿಸಿದರು. ಆ ಮೇಲೆ ಧನ್ಯವಾದ ರಾಷ್ಟ್ರಗೀತ, ನಡೆದ ತರುವಾಯ ಸಭೆಯು ಚದರಿತು

ಕಟಪಾಡಿ— ತಾ. 23-4-51ನೇ ಸೋಮವಾರ. ಶ್ರೀ ಗುಡ್ಡೆ ತೋಮ ಪೂಜಾರಿಯವರು ಅಕಾಲ ಮರಣಕ್ಕೆ ತುತ್ತಾದರೆಂದು ತಿಳಿಸುವರೆ, ವಿಷಾದ ಪಡುತ್ತೇವೆ. ಶ್ರೀಯುತರು, ಬಡವರ ಬಂಧುವೂ, ಬ್ರಹ್ಮಶ್ರೀ ನಾರಾಯಣ ಗುರುಸ್ವಾಮಿ ಸೇವಾ ಸಮಿತಿಯ ಆಜೀವ ಸದಸ್ಯರೂ ಆಗಿದ್ದರು. ಮೃತಾತ್ಮರ ಕುಟುಂಬ ಬಳಗದವರ ದುಃಖದಲ್ಲಿ ಸೇವಾ ಸಮಿತಿಯೂ ಭಾಗಿಯಾಗಿ, ಅವರ ಆತ್ಮಕ್ಕೆ ಚಿರಶಾಂತಿ ದೊರಕಲೆಂದು ಪ್ರಾರ್ಥಿಸುತ್ತದೆ.

ಸುರತ್ಕಲ್— ಇಲ್ಲಿಯ ಮುಕ್ಕ ಮಿತ್ರ ಪಟ್ಟಣ ಗಂಗಯ್ಯ ಸ್ಮಾರಕ ಫಂಡಿನ ಎಂಟನೆ ವಾರ್ಷಿಕೋತ್ಸವವು ಕಳೆದ ತಾ 30ರಲ್ಲಿ ಶ್ರೀ ಎಚ್. ನಾರಾಯಣ ಎಮ್. ಕಾಂಚನರ ಅಧ್ಯಕ್ಷತೆಯಲ್ಲಿ ವಿವಿಧ ಕಾರ್ಯ ಕ್ರಮಗಳಿಂದ ಜಯಶೀಲವಾಗಿ ಜರಗಿತು.

ಇನ್ನಂಜೆ— ಸ್ಥಳೀಯ ಹೈಸ್ಕೂಲಿನ ಹಳೆ ವಿದ್ಯಾರ್ಥಿ ಸಂಘದ ವಾರ್ಷಿಕೋತ್ಸವವು ಇದೇ ತಾ 12ನೇ ಶನಿವಾರ ಶಿರ್ವ ಹಿಂದೂ ಹೈಸ್ಕೂಲಿನ ಮುಖ್ಯೋಪಾಧ್ಯಾಯ ಶ್ರೀ ಯು. ಶಿವರಾಮಯ್ಯರ ಅಧ್ಯಕ್ಷತೆಯಲ್ಲಿ ಜರಗಲಿರುವುದು

ಹಂಗಾರಕಟ್ಟೆ— ಕಳೆದ ತಾ 28ರಲ್ಲಿ ಇಲ್ಲಿಯ ಯುವಕರಿಂದ 'ವ್ಯಭಿಚಾರಿಣಿಯಾರು' ಎಂಬ ನಾಟಕವು ಪ್ರದರ್ಶಿಸಲ್ಪಟ್ಟಿತು. ಈ ನಾಟಕದ ಉತ್ಪತ್ತಿಯನ್ನು ನಾರಾಯಣ ಹಂದಾಸರ ಕಣ್ಣಿನ ಚಿಕಿತ್ಸೆಗಾಗಿ ವಿನಿಯೋಗಿಸಲಾಗಿದೆ.

ಕುಂದಾಪುರ— ಇದೇ ತಾ 1ರಲ್ಲಿ ಮೆ ದಿನಾಚರಣೆಯು ಕುಂದಾಪುರದಲ್ಲಿ ಮೊತ್ತ ಮೊದಲನೆಯದಾಗಿ ಜರಗಿತು. ಅಂದು ಬೆಳಿಗ್ಗೆ ಪ್ರಭಾತ ಭೇರಿ, ಸೈಕಲ್ ಮೆರವಣಿಗೆ ಸಂಜೆ ಗಾಂಧಿ ಮೈದಾನಿನಲ್ಲಿ ಶ್ರೀ ಪಿ. ಎಸ್. ನಾಯ್ಕರ ಅಧ್ಯಕ್ಷತೆಯಲ್ಲಿ ಸಾರ್ವಜನಿಕ ಸಭೆ, ಭಾಷಣಗಳಾದವು.

ಪೆರ್ಡೂರು— ಬಿ. ಇ. ಎಂ. ಹಾಯರ್ ಎಲಿಮೆಂಟರಿ ಶಾಲೆಯ ವಾರ್ಷಿಕೋತ್ಸವವು ತಾ 28-4-51ರಲ್ಲಿ ಉಡುಪಿಯ ಮಹಾತ್ಮ ಗಾಂಧಿ ಮೆಮೋರಿಯಲ್ ಕಾಲೇಜಿನ ಉಪನ್ಯಾಸಕರಾದ ಶ್ರೀ ಕು. ಶಿ. ಹರಿದಾಸ ಭಟ್ B. A. (Hons) ಇವರ ಅಧ್ಯಕ್ಷತೆಯಲ್ಲಿ ಜರಗಿತು. ಶಾಲಾ ಮುಖ್ಯೋಪಾಧ್ಯಾಯರಾದ ಶ್ರೀ ಎಫ್. ಎಸ್. ಕೋಟ್ಯಾನರಿಂದ ವರದಿ ವಾಚನವಾದ ಬಳಿಕ ಶ್ರೀಯುತ ಎ. ಕೃಷ್ಣಯ್ಯ ಹೆಗ್ಡೆಯವರು ಸ್ವಾಗತ ವಾಚನ ಮಾಡಿದರು ಶ್ರೀ ಸುಬ್ರಹ್ಮಣ್ಯ ಶಾಸ್ತ್ರಿಗಳು ಭಾಷಣವಿತ್ತ ಬಳಿಕ ಮಕ್ಕಳು 'ಶ್ಯಾಂಪ ಮೊಣ್ಣರ ಕಾಳಗ' ಎಂಬ ನೂತನ ಯಕ್ಷಗಾನವನ್ನು ಅಭಿನಯಿಸಿದ ನಂತರ, ಅಧ್ಯಕ್ಷರು ವಿದ್ಯೆಯ ಮಹತ್ವ ಹಾಗೂ ಉಪಾಧ್ಯಾಯರ ಪರಿಸ್ಥಿತಿ, ಕರ್ತವ್ಯಗಳ ಕುರಿತು ಸಂಕ್ಷಿಪ್ತ ಭಾಷಣವಿತ್ತರು. ಆ ಬಳಿಕ ಶಾಲಾ ಬಾಲಕಿಯರಿಂದ "ಸಮ್ರಾಟ್ ಪುರು" ಎಂಬ ಐತಿಹಾಸಿಕ ಸಂಗೀತ ನಾಟಕವು ಮನೋರಂಜಕವಾಗಿ ಅಭಿನಯಿಸಲ್ಪಟ್ಟಿತು.

ಅಲ್ಲದೆ ತಾ 29-4-51ರಂದು ಈ ವಾರ್ಷಿಕೋತ್ಸವದ ಅಂಗವಾಗಿ ಪೆರ್ಡೂರಿನ ಕಲಾಮಂಡಳಿಯವರಿಂದ ನೂತನ ಸಾಮಾಜಿಕ ನಾಟಕವೂ ಹಿಂದೀ ಪ್ರೇಮಿ ಮಂಡಳಿಯವರಿಂದ 'ಪಶ್ಚಲನ್ನ' ಎಂಬ ಹಿಂದೀ ನಾಟಕವೂ ಪ್ರೇಕ್ಷಣೀಯವಾಗಿ ಅಭಿನಯಿಸಲ್ಪಟ್ಟವು,

ಕುಂಬಳೆ— ಪರ್ಮಿಟು ಪ್ರಕಾರ ಅಕ್ಕಿ ಕೊಂಡವರು ಇಲ್ಲಿನ ಪಂಚಾಯತ್ ಬೋರ್ಡಿನವರು ಹಳೇ ರೇಶನ್ ಕಾರ್ಡಿಗೆ ಬದಲು ಚೀಟಿನ್ನು ಹಚ್ಚಿಕೊಟ್ಟ ಪ್ರಕಾರ ಮೊಗ್ರಾಲ್, ಕೊಯ್ಪಾಡಿ, ಆರಿಕ್ಕಾಡಿ ಈ ಗ್ರಾಮದವರಿಗೆ ಬಂದ ಅಕ್ಕಿ ಮುಗಿಯುವವರೇಗೆ ಕೊಡಲಾಗಿದೆ.

ಅಖಿಲ ಭಾರತ ಗ್ರಾಮ ಸೇವಾ ಸಂಘದ ಮುಖಂಡರಲ್ಲೊಬ್ಬರಾದ ಶ್ರೀ ಜಿ. ರಾಮಚಂದ್ರನವರು ತಾ. ೪ರಂದು ಇಲ್ಲಿಗೆ ಬಂದಾಗ ರೈಲ್ವೆ ನಿಲ್ದಾಣದಲ್ಲಿ ಅವರನ್ನು ರೂರಲ್ ವೆಲ್ಫೇರ್ ಆಫೀಸರ್ ಶ್ರೀ ಕೆ. ಯಂ. ಬಾಬು ಶೆಟ್ಟಿ, ಬಿ ಜಗನ್ನಾಥ ರೈ, ಎನ್. ಅಬ್ದುಲ್ಲ, ಮುಂತಾದವರು ಸ್ವಾಗತಿಸಿದರು. ಅವರು ನಿಟ್ಟೆಗೆಯಲ್ಲಾಗುವ ನಿರ್ಮಾಣಕಾರ್ಯಕರ್ತರ ಶಿಬಿರವನ್ನು ಸಂದರ್ಶಿಸಿದರು.

ಕೊಯ್ಲಾದಲ್ಲಿ ಜಾನುವಾರು ಸಾಕಣೆಯ ಕ್ಷೇತ್ರದ ಸಮಾರಂಭ—

ಮಂಗಳೂರಿನಿಂದ ಸಾಧಾರಣ 37 ಮೈಲು ಉಪ್ಪಿನ ಅಂಗಡಿಯಿಂದ ಸುಮಾರು 5 ಮೈಲು ದೂರವಿರುವ ಕೊಯ್ಲದ ಜಾನುವಾರು ಸಾಕಣೆಯ ಕ್ಷೇತ್ರದ ಹೊಸ ಕಟ್ಟಡಗಳ ಆರಂಭೋತ್ಸವವು ಕಳೆದ ತಾ 28ರಂದು ಸಂಜೆ ಜಿಲ್ಲಾ ಜಾನುವಾರು ಅಭಿವೃದ್ಧಿ ಸಂಘದ ಆಶ್ರಯದಲ್ಲಿ ಕೃಷಿ ಇಲಾಖಾ ಸಚಿವ ಶ್ರೀ ಎ. ಬಿ. ಸೆಟ್ಟಿರ ಹಸ್ತದಿಂದ ಜರಗಿತು. ಈ ಸಮಾರಂಭಕ್ಕೆ ಜಿಲ್ಲಾ ಕಲೆಕ್ಟರ್, ಡಾ| ಯು. ಪಿ. ಮಲ್ಯ, ಮೊದಲಾದವರು ಆಗಮಿಸಿದ್ದರು. ಶ್ರೀ ಕೆ. ಬಿ ಸೆಟ್ಟರವರೂ ಮಂತ್ರಿಗಳಿಗೆ ಪುಷ್ಪಾಹಾರವನ್ನಿತ್ತು ಶುಭಸಂದೇಶಗಳನ್ನೋದಿದರು. ಡಾ| ಬಿ| ಕೆ. ಟಿ. ಆಳ್ವರು ಸ್ವಾಗತ ಭಾಷಣ ಮಾಡಿದರು.

ಅಂದು ಅಲ್ಲಿ ಕೃಷಿ ಮಂತ್ರಿ ಶ್ರೀ ಎ. ಬಿ. ಸೆಟ್ಟರ ನೇತೃತ್ವದಲ್ಲಿ ಮದ್ರಾಸು ಸಂಸ್ಥಾನದ ಜಾನುವಾರು ಅಭಿವೃದ್ಧಿ ಬೋರ್ಡಿನ ಮೆಂಬರರ ಸಭೆ ಜರಗಿ ಅನಂತರ ನೆರೆದ ಮಹಾಸಭೆಯಲ್ಲಿ ಜಿಲ್ಲಾ ಜಾನುವಾರ ಸಂಘದ ಸಭೆ ಜರಗಿದಾಗ ಈ ಸಂಸ್ಥೆಯ ಸುಪರಿಂಟೆಂಡೆಂಟ್ ಶ್ರೀ ಕೆ. ತಾಮಸ್ ಬೆಂಜಮಿನ್ ಅವರು ತಯಾರಿಸಿದ್ದ ಇಂಗ್ಲಿಷ್ ವರದಿಯನ್ನೂ ಪುತ್ತೂರು ವಕೀಲ್ ಶ್ರೀ ಸದಾಶಿವ ರಾಯರ ಕನ್ನಡದಲ್ಲಿ ವಿವರಿಸುತ್ತ— ಇಲ್ಲಿ ಪಡೆದಿರುವ 760 ಎಕ್ರೆ ಭೂಮಿಯಲ್ಲಿ 100 ಎಕ್ರೆ ಕೃಷಿಗೂ, 500 ಎಕ್ರೆ ಹುಲ್ಲು ಬೆಳೆಸುವುದಕ್ಕೂ ಉಪಯೋಗವಾಗುತ್ತಿದೆ. ಇದರ ವೃದ್ಧಿಗಾಗಿ ಕಳೆದ ಮಾರ್ಚ ತಿಂಗಳ ವರೆಗೆ ರೂಪಾಯಿ 2,58,417/- ಖರ್ಚಾಗಿದೆ. ಅಲ್ಲಿರುವ ಸಿಂಧಿದನ ಜೋಡಿ ಮತ್ತು ಥಿಲ್ಲಿ ಮೊದಲಾದ ಕಡೆಗಳಿಂದ ತರಿಸಿದ ಮುರ್ರಾ ಕೋಣ ಎಮ್ಮೆಗಳು ಹಾಲಿನ ವಿತರಣೆ ಅಲ್ಲದೆ ಕೋಳಿಸಾಕಣೆಯ ಕೇಂದ್ರ ಇತ್ಯಾದಿಗಳ ಕುರಿತೂ ಪ್ರಕಟಪಡಿಸಿದರು. ಇಲ್ಲಿ ದಿನಕ್ಕೆ ದೊರೆಯುವ ಹಾಲು 500ಪೌಂಡು, ಪೌಂಡಿಗೆ ಆರಾಣೆ. ಜಿಲ್ಲಾ ವೆಟರ್ನರಿ ಆಫೀಸರ್ ಡಾ| ಎಸ್. ಎ. ಶಾಸ್ತ್ರಿಗಳು ನಮ್ಮ ಜಿಲ್ಲೆಯ ಜಾನುವಾರುಗಳ ಕನಿಷ್ಠಾವಸ್ಥೆ, ಅವುಗಳ ಉನ್ನತಿಗಾಗಿ ಮದ್ರಾಸು ಸರಕಾರದವರು ಕಲ್ಪಿಸಿಕೊಟ್ಟ ಹಲವಾರು ಸೌಕರ್ಯಗಳು— ಉದಾಹರಣೆಗಾಗಿ ಬೀಜದ ಹೋರಿ, ತಲಚೇರಿಯ ಆಡುಗಳು — ಇತ್ಯಾದಿಗಳ ವಿಚಾರ ಹೇಳಿ, ಅವುಗಳ ಮತ್ತು ಈ ಸಂಸ್ಥೆಯ ಪ್ರಯೋಜನವನ್ನು ನಮ್ಮ ಜನರು ಪಡೆಯಬೇಕಾದ ಅವಶ್ಯಕತೆಯನ್ನು ಮನಗಾಣಿಸಿದರು. ಶ್ರೀ ಸೆಟ್ಟರು, ಇಷ್ಟು ವಿಶಾಲಭೂಮಿ ನಮ್ಮ ಸಂಸ್ಥಾನದಲ್ಲೊಂದು ಉತ್ಕೃಷ್ಟ ಕ್ಷೇತ್ರವಾಗಿದೆ, ಹತ್ತು ತಿಂಗಳಲ್ಲಿ ಇಷ್ಟೊಂದು ಕೆಲಸಗಳನ್ನು ಮಾಡಿ ಪೂರೈಸಿದ ಸಂಸ್ಥೆಯ ಸುಪರಿಂಟೆಂಡೆಂಟ್ ಮತ್ತು ಅವರ ಸಹಾಯಕರ ಪ್ರಯತ್ನವನ್ನು ಕೊಂಡಾಡಿ ಈ ಸಂಸ್ಥೆ ಬೆಳೆಯುವಂತೆ ಜನತೆ ಪ್ರೋತ್ಸಾಹಿಸಬೇಕೆಂದು ನುಡಿದರು. ಇಲ್ಲಿನ ಕಟ್ಟಡಗಳನ್ನು ಬರೇ ಹತ್ತು ತಿಂಗಳಲ್ಲಿ ಅಂದವಾಗಿ ಕಟ್ಟಿಸಿದ ಕಂಟ್ರಾಕ್ಟರರಿಗೂ ಅವರ ಸಹಾಯಕರೊಬ್ಬರಿಗೂ ಮಾನ್ಯ ಮಂತ್ರಿಗಳ ಹಸ್ತದಿಂದ ಬಹುಮಾನದ ಪದಕಗಳನ್ನು ಕೊಡಿಸಲಾಯಿತು.

ಈ ಕ್ಷೇತ್ರವು ಬಹು ವಿಸ್ತಾರವಾಗಿದ್ದು ಇದರ ಮುಂದಿನ ವಿದ್ಯಮಾನಗಳು ಬೇಗನೆ ಉತ್ತಮಗೊಳ್ಳಲಿವೆ. ಇಲ್ಲಿ 7ಮೈಲು ರಸ್ತೆಗಳ ಸೌಕರ್ಯ ನೀರು, ವಿದ್ಯುಚ್ಛಕ್ತಿಯ ಸರಬರಾಯಿ, ಹುಲ್ಲು, ನೆಲ್ಲು, ತರಕಾರಿಗಳ ಬೆಳೆ ಹಚ್ಚಿಕೆ ಹಾಲುಬೆಣ್ಣೆಯ ವಿತರಣೆ ಮೊದಲಾದವು ವಿಶಾಲಕ್ರಮದಲ್ಲಿ ನಡೆಸಬೇಕೆನ್ನುವ ಮಹತ್ವಯೋಜನ ಈ ಸಂಸ್ಥೆಯದು.

ಟೆಂಡರು ನೋಟೀಸು

ಉಡುಪಿ ತಾಲೂಕು ಹೆಗ್ಗುಂಜೆ ಗ್ರಾಮದ ಸ್ಥಾಪನಾ ನಂಬ್ರ 52ನೇ ಮಂದಾರ್ತಿ ಶ್ರೀ ದುರ್ಗಾ ಪರಮೇಶ್ವರೀ ಅಮ್ಮನವರ ದೇವಸ್ಥಾನದ ಟ್ರಸ್ಟೀಗಳಾಫೀಸಿನಿಂದ ಎಲ್ಲಾ ಜನರಿಗೆ ತಿಳಿಯಪಡಿಸುವುದೇನಂದರೆ—

ಸದ್ರಿ ದೇವಸ್ಥಾನದ ಜೀರ್ಣೋದ್ಧಾರದ ಬಾಬಿನಲ್ಲಿ ಎಸ್ಟಿಮೇಟಿನಲ್ಲಿ ತೋರುವ ಟಿಲ್ಲೈ ಕಾಮಗಾರಿಗಳನ್ನು ನಡೆಸುವ ಬಗ್ಗೆ ಮೊಹರು ಹಾಕಿದ ಟೆಂಡರುಗಳನ್ನು ಅಗತ್ಯವುಳ್ಳವರು ತಾ. 14-6-1951ನೇ ಸಾಯಂಕಾಲ 5 ಗಂಟೆಯೊಳಗೆ ಹಾಜರುಪಡಿಸತಕ್ಕದ್ದು. ಟೆಂಡರುಗಳನ್ನು ತಾ. 15-6-51ನೇ ಸಾಯಂಕಾಲ 3 ಗಂಟೆಗೆ ತೆರೆಯಲಾಗುವುದು.

ಟೆಂಡರುಗಳನ್ನು ಅಪೇಕ್ಷಿಸುವವರು ಅನುಸರಿಸತಕ್ಕ ಶರ್ತಗಳು:—

1 ದೇವಸ್ಥಾನದ ಟ್ರಸ್ಟಿಗಳ ಆಫೀಸಿನಿಂದ ಪ್ರತಿ ಟೆಂಡರಿಗೆ ಒದಗಿಸಲಾಗುವ ಕೆಲಸಗಳ ವಿವರ ಪತ್ರಿಕೆಯನ್ನು ಪಡಕೊಳ್ಳತಕ್ಕದ್ದು.

2 ಪ್ರತಿಯೊಬ್ಬ ಟೆಂಡರನು ಟೆಂಡರಿನೊಂದಿಗೆ ದೇವಸ್ಥಾನದ ಲೆಕ್ಕಕ್ಕೆ ಬ್ರಹ್ಮಾವರ ಸಿಂಡಿಕೇಟ್ ಬ್ಯಾಂಕಿನ S. B. ಅಕೌಂಟಿನಲ್ಲಿ ರೂಪಾಯಿ 200ರನ್ನು ಜಮಾಮಾಡಿ ರಶೀದಿಯನ್ನು ಇಡತಕ್ಕದ್ದು.

3 ಮೇಲೆ ಕಾಣಿಸಿದಂತೆ ಬ್ರಹ್ಮಾವರ ಸಿಂಡಿಕೇಟ್ ಬ್ಯಾಂಕಿನ ರಶೀದಿಯಿಂದ ಬಂದ ಟೆಂಡರುಗಳನ್ನು ಸ್ವೀಕರಿಸಲಾಗಲಿಕ್ಕಿಲ್ಲ.

4 ಎಲ್ಲರಿಗಿಂತಲೂ ಕಡಿಮೆ ಮೊಬಲಗಿನ ಟೆಂಡರನ್ನು ಮಂಜೂರುಮಾಡಲಾಗುವುದು. ಮತ್ತು ಮಂಜೂರಾದ ಟೆಂಡರಿಗೆ ತಿಳಿಸಲಾಗುವುದು. ಆತನು ತಿಳಿಸಿದ ಎಂಟು ದಿನಗಳೊಳಗಾಗಿ ಮೇಲ್ಕಾಣಿಸಿದ ರೂಪಾಯಿ 200/- ಅಲ್ಲದೆ ರೂಪಾಯಿ 150/ನ್ನು ಹಾಜರುಪಡಿಸಿ ಕ್ರಮವಾಗಿ ಕರಾರು ಬರೆಕೊಡತಕ್ಕದ್ದು.

5 ಮಂಜೂರಾದ ಟೆಂಡರನ ಲೆಕ್ಕಕ್ಕೆ ಮೇಲ್ಕಾಣಿಸಿದಂತೆ ಬಾಕಿಯಾಗುವ ರೂಪಾಯಿ 350/-ನ್ನು ಆತನ ಕೆಲಸವು ಸಂಪೂರ್ಣವಾಗಿಯೂ ತೃಪ್ತಿಕರವಾಗಿಯೂ ಇರುವದೆಂದು ಇಂಜಿನಿಯರ್ ಸರ್ಟಿಫಿಕೇಟು ಕೊಟ್ಟ ನಂತರ ವಾಪಾಸು ಕೊಡಲಾಗುವುದು.

6 ಕೆಲಸವನ್ನು ತಾ. 30-11-1951ರೊಳಗೆ ಪೂರೈಸಿಕೊಡತಕ್ಕದ್ದು.

7 ಮೇಲಿನ 2ನೆ ಕಲಮಿನಲ್ಲಿ ಹೇಳಿದಂತೆ ಮಂಜೂರಾಗದ ಟೆಂಡರುಗಳ ಹಣವನ್ನು ಕೂಡಲೇ ವಾಪಾಸು ಕೊಡಲಾಗುವುದು.

ಎಚ್. ಶೇಷ ಹೆಗ್ಡೆ,
ಮೆನೇಜಿಂಗ್ ಟ್ರಸ್ಟಿ.

ಶ್ರೀ ಮಂದಾರ್ತಿ ದೇವಸ್ಥಾನ,
ತಾ. 26-4-51

THE PANGAL NAYAK BANK LIMITED.
Head Office] (Incorporated in 1920.) [Udipi S K
SEASON DEPOSITS are received and accepted on the following terms:—
For three, four or five months deposits at 3% p. a
For six, seven or eight months deposits at 3½% p. a
These are to be terminable by the 30th June 1951.
Interest is payable along with the principal at maturity.
Our THREE YEAR CASH CERTIFICATE bring to You a fair yeild: For particulars please ask for copy of Rules

ಆದರ್ಶ ರೀತಿಯಲ್ಲಿ ಪ್ರಕಟಿಸಲ್ಪಟ್ಟ ಅಖಿಲ ಕರ್ನಾಟಕದ
ಪ್ರಾತಿನಿಧಿಕ ಕಥಾಸಂಕಲನವೆಂದು ಪ್ರಶಂಸಿಸಲ್ಪಟ್ಟ
ಮಧುವನ
ಕತೆಗಳೊಂದಿಗೆ ಕತೆಗಾರರ ಮತ್ತು ಕತೆಗಾರ್ತಿಯರ
ಪರಿಚಯ ಪಡೆಯಬಹುದಾಗಿದೆ.
ಅಂತರಂಗ, ಬಹಿರಂಗ ಸುಂದರವಾಗಿ ಪ್ರಕಟಿಸಲ್ಪಟ್ಟ
25 ಕತೆಗಳ ಅತ್ಯಪೂರ್ವ ಸಂಗ್ರಹ
ಬಿಳಿ-ದಪ್ಪ ಕಾಗದ! 230 ಪುಟಗಳು! ಬೆಲೆ ರೂ 3-0-0
ವಿಳಾಸ: ಕಿರಿಯರ ಪ್ರಪಂಚ, ಉಡುಪಿ
ವಿಕ್ರಯಾಧಿಕಾರಿಗಳು: ನವಭಾರತ ಪುಸ್ತಕ ಭಂಡಾರ, ಉಡುಪಿ.

ತಾರೀಖು 10-5-51 ರಿಂದ

ವಾರದ ಭವಿಷ್ಯ

ತಾರೀಖು 16-5-51 ರವರೆಗೆ

ಮೇಷ— ಸದ್ಯದ ದಿನಗಳು ನಿಮಗೆ ಬಹಳ ಪ್ರತಿಕೂಲವಿರುವುದರಿಂದ ಸದಾ ತಾಪತ್ರಯಗಳು ನಿಮ್ಮನ್ನು ಬಾಧಿಸಲಿವೆ. ದೇಹಾಲಸ್ಯದಿಂದ ಪೀಡಿತರಾದ ನಿಮಗೆ ಆಗಾಗ ಪ್ರಾಪ್ತವಾಗುವ ಶತ್ರುಪೀಡೆ ಹಣದ ಅಡಚಣೆ ಪ್ರವಾಸಾದಿಗಳು ಮನೋರೋಗಕ್ಕೂ ಗುರಿಮಾಡುವವು ಅಪ್ತೇಷ್ಟವರ್ಗದವರೊಡನೆ ಮನಸ್ತಾಪವುಂಟಾದೀತು. ಆದರೂ ಕಷ್ಟಸಹಿಷ್ಣುಗಳಿಂದ ನಿಮಗೆ ತಾ. 10, 11, 16 ಈ ದಿನಗಳಲ್ಲಿ ಧನವಸನಾದಿಗಳ ಲಾಭವೂ ಗೃಹಸುಖವೂ ಲಭಿಸಲಿದೆ.

ವೃಷಭ—ಬಂದದ್ದೆಲ್ಲಾ ಬರಲಿ ಗೋವಿಂದನ ದಯೊವೊಂದಿರಲಿ ಎಂಬ ಸ್ಥಿರಚಿತ್ತದಿಂದ ನೀವು ಕಾರ್ಯಕ್ಷೇತ್ರದಲ್ಲಿ ಪ್ರವೃತ್ತರಾಗಿರಿ. ಜನ್ಮಸ್ಥ ರವಿ ಶುಕ್ರರೂ ಪಂಚಮದ ಶನಿಯೂ ನಿಮ್ಮನ್ನು ಆಕಸ್ಮಿಕ ಅಪಘಾತ, ಭಯ, ಉದರಶೂಲೆ, ಪುತ್ರ ಭೃತ್ಯರ ದಿಂದ ಜನಕಿಯೊಡನೆ ಕಲಹ ಇತ್ಯಾದಿ ಅನೇಕವಿಧವಾದ ಅನರ್ಥಗಳಿಗೆ ಗುರಿಪಡಿಸಲಿರುವರಾದರೂ ಲಾಭದಲ್ಲಿರುವ ಗುರುಗಳು ನಿಮ್ಮನ್ನು ಅನರ್ಥಕರಗಳಿಂದ ಪಾರುಮಾಡಲಿರುವರು. ತಾ. 12, 13, ಕೊಂಚ ಅನುಕೂಲ.

ಮಿಥುನ—ನೆನೆದಂತೆ ಕಾರ್ಯವು ನೆರವೇರದಿರುವುದರಿಂದ ನಿಮ್ಮ ಉತ್ಸಾಹವು ಕುಂಠಿತವಾಗುವದು. ನೌಕರಿ ವ್ಯಾಪಾರ ಇತ್ಯಾದ್ಯುದ್ಯಮಗಳಲ್ಲಿ ಫಲವು ತೃಪ್ತಿಕರವಿದ್ದರೂ ಖರ್ಚು ಒಂದೇಸವನೆ ಏರುತ್ತಿರುವುದರಿಂದ ಅನುದಿನದ ಆಗುಹೋಗುಗಳನ್ನು ಪೂರೈಸಿಕೊಳ್ಳಲು ಕಷ್ಟಸಾಧ್ಯವಾಗುವದು. ರಾಜಕೀಯದಲ್ಲಿ ಪರಾಭವ ಭೂಸಂಬಂಧವಾದ ನಷ್ಟಗಳೂ ಕಂಡುಬರಬಹುದು. ತಾ. 10, 11, 14, 15 ಈ ದಿನಗಳು ಇತರ ದಿನಗಳಿಗಿಂತ ಉತ್ತಮವಾಗಿ ಪರಿಣಮಿಸುವವು.

ಕರ್ಕಾಟಕ— ಇಂದಿನ ದಿನಗಳಲ್ಲಿ ಸುದೈವಿಗಳೆಂದರೆ ನೀವೇ, ಸರಿ, ಎಲ್ಲಾ ಗ್ರಹರೂ ನಿಮ್ಮ ಮೇಲೆ ಕೃಪಾದೃಷ್ಟಿಯುಳ್ಳವರಾಗಿರುವರು, ಆದಕಾರಣ ನಿಮ್ಮ ಸಂಕಲ್ಪಗಳೆಲ್ಲವೂ ಇಂದು ಅನಾಯಾಸದಿಂದ ಕಾರ್ಯರೂಪಕ್ಕೆ ಬರಲಿವೆ. ಅಸಹಾಯಶೂರರಾದ ನಿಮಗೆ ಸಕಲರೂ ಬೆಂಬಲಿಗರಾಗುವರು. ದುಡ್ಡಿದ್ದವನೇ ದೊಡ್ಡಪ್ಪ ಎಂಬ ನಾಣ್ಣುಡಿಯು ನಿಮ್ಮ ಅನುಭವಕ್ಕೆ ಬರಲಿದೆ. ತಾ. 12, 13, 16ರಲ್ಲಿ ಸುಖಭೋಗ ಲಾಭಗಳು ವಿಪುಲವಾಗಿ ಲಭಿಸುವವು.

ಸಿಂಹ—ನಿಮ್ಮ ಆರೋಗ್ಯದ ಸಲುವಾಗಿ ಕೊಂಚ ಜಾಗರೂಕರಾಗಿರಬೇಕಾಗಿದೆ. ಕಫದೋಷವು ಅಧಿಕವಾದೀತು. ಕೃಷಿಗೆ ತಕ್ಕುದಾದ ಫಲಲಾಭವಾಗದಿರುವುದರಿಂದ ಆರ್ಥಿಕ ಅಡಚಣೆಯು ತಲೆದೋರುವುದು. ಪ್ರವಾಸಿಕರಿಗೆ ಕಷ್ಟನಷ್ಟಗಳು ಹೆಚ್ಚುವವು ಗೃಹತಾಪತ್ರಯಗಳಿಂದ ಚಿಂತಾಕುಲಿತರಾದ ನಿಮಗೆ ತಾ. 10, 11, 14, 15 ಈ ದಿನಗಲ್ಲಿ ಮಿತ್ರಜನರಿಂದ ಸಹಾಯ ಸುಖಭೋಜನಾದಿಗಳು ಲಭಿಸುವವು.

ಕನ್ಯಾ— ಆರ್ಥಿಕ ಸಮಸ್ಯೆಯಿಂದ ಮುಕ್ತರಾದರೂ ಮನಸ್ಸಿಗೆ ಶಾಂತಿಯಿರಲಾರದು. ವಿಷಾಗ್ನಿ ಜನ್ಯವಾದ ದೋಷಗಳಿಂದ ದೇಹಕ್ಕೆ ಸುಖವಿರದು. ಸಜ್ಜನರ ಸಹವಾಸದಿಂದ ಸಮಾಜದಲ್ಲಿ ಸ್ಥಾನಮಾನಗಳಿಗೆ ಪಾತ್ರರಾಗುವಿರಿ. ಹೆಚ್ಚಿನ ಕಾರ್ಯಗಳು ನಿಮ್ಮಂತೆ ನೆರವೇರುವವು. ಆಕಸ್ಮಿಕವಾಗಿ ಧನಲಭಿಸಲಿದೆ. ಕೆಲವೊಮ್ಮೆ ಪ್ರಯಾಣದಲ್ಲಿ ಅಪಘಾತಾದಿಗಳುಂಟಾಗಬಹುದು. ತಾ. 12, 15ರಲ್ಲಿ ವ್ಯರ್ಥ ಧನವ್ಯಯವಾದೀತು.

ತುಲಾ—ಇಂದಿನ ಗ್ರಹಸ್ಥಿಯಲ್ಲಿ ನಿಮ್ಮ ಪರಿಸ್ಥಿತಿಯು ತೀರಾ ಕೆಟ್ಟುಹೋಗಿರುವದು. ಸಿಕ್ಕಸಿಕ್ಕವರೊಡನೆ ಕಲಹವಾದೀತು. ಶತ್ರುಜನರ ಪೀಡೆಯಿಂದಾಗಿ ಆವಾವ ಕಾರ್ಯದಲ್ಲೂ ವಿಜಯ ಲಭಿಸದು. ಚರ್ಮರೋಗದಿಂದ ಪೀಡಿತರಾದ ನಿಮಗೆ ಹಣದ ಮುಗ್ಗಟ್ಟು ಅನರ್ಥ ಪರಂಪರೆಗಳಿಂದ ಮನೋರೋಗವು ಕೂಡ ಅಧಿಕವಾಗಲಿದೆ ಧಾತುದೌರ್ಬಲ್ಯ, ದೇಹಕ್ಷೀಣತೆಗಳು ಕಾಣಿಸಬಹುದು. ತಾ. 12, 13, 14 15 ಇದ್ದುದರಲ್ಲಿ ಸ್ವಲ್ಪ ಉತ್ತಮವಿವೆ.

ವೃಶ್ಚಿಕ—ನಿಮ್ಮ ಉದ್ಯಮಕ್ಕಿಂತ ಅಧಿಕವಾದ ಫಲವನ್ನು ಪಡೆಯುವಿರಿ. ಉದ್ಯೋಗದಲ್ಲ ಉನ್ನತ ಸ್ಥಾನವನ್ನು ಹೊಂದುವ ಯೋಗವಿದೆ. ಗೃಹಸುಖ, ವ್ಯಾಪಾರ ವ್ಯವಹಾರಗಳಲ್ಲಿ ವಿಜಯಾದಿಗಳು ಪ್ರಾಪ್ತಗುವವು. ಇಷ್ಟಿದ್ದರೂ ಮನೆಯಾಳಿನೊಡನೆ ಒಂದಲ್ಲೊಂದು ನೆವನದಿಂದ ದಿನನಿತ್ಯ ಕಲಹವಾದೀತು. ಅಜೀರ್ಣ ಸಂಬಂಧವಾದ ಜಠರಶೂಲೆ ಮತ್ತು ನೇತ್ರಪೀಡೆಯೂ ಕಾಣಿಸಲಿವೆ ವಾರಾಂತ್ಯದ 3ದಿನಗಳು ಸುಖದಾಯಿಗಳಿವೆ.

ಧನು—ನೀವೀಗ ಅದ್ವಿತೀಯ ಸಾಹಸಿಗಳಿರುವಿರಿ. ಎಂತಹ ಕಾರ್ಯವನ್ನಾದರೂ ಪರಾಪೇಕ್ಷೆಯಿಲ್ಲದೆ ಕೊನೆಗಾಣಿಸುವೆನೆಂಬ ಭರವಸೆಯು ನಿಮಗಿದೆ. ಆದರೆ ಅದೃಷ್ಟವು ಮಾತ್ರ ತೃಪ್ತಿಕರವಿಲ್ಲದ್ದರಿಂದ ತಾನೊಂದು ಬಗೆದರೆ ದೈವವೊಂದೆಣಿಸಿತೆಂಬ ಗಾದೆಯಂತೆ ಕಾರ್ಯದಲ್ಲಿ ಫಲವು ವಿಪರೀತವಾಗಿ ಪರಿಣಮಿಸೀತು. ಸ್ತ್ರೀಜನರಿಂದ ಕಲಹ ಅಪಮಾನಾದಿಗಳು ಪ್ರಾಪ್ತವಾಗುವ ಸಂಭವವಿದೆ. ತಾ. 10, 11, 16 ಈ ದಿನಗಳಲ್ಲಿ ಧನಲಾಭ ಮಾನಸುಖಾದಿಗಳು ಲಭಿಸುವವು.

ಮಕರ—ದಿನೇ ದಿನೇ ಖರ್ಚುವೆಚ್ಚಗಳು ಹೆಚ್ಚುತ್ತಹೋಗುವವು. ಆ ಖರ್ಚನ್ನು ಪೂರೈಸುವಂತಹ ಆದಾಯವು ನಿಮಗಿರದು, ಆದ್ದರಿಂದ ಹೆರವರ ಕೂಡೆ ಸಾಲಮಾಡಬೇಕಾಗುವದು, ಹಿಂತಲ್ಲಿ ನಿಲ್ಲಲು ಅವಕಾಶದೊರೆಯದು. ನಿಮ್ಮ ಭಾಗವಲ್ಲಿ ಬಂಧುಗಳಿಗೆ ಮಾತ್ರವಲ್ಲ. ಮನೆಯವರಿಗೂ ಮನಸ್ಸಮಾಧಾನವಿರದು. ವಾರಾದಿಯ 4 ದಿನಗಳು ಕೊಂಚಮಟ್ಟಿಗೆ ಉತ್ತಮವಾಗಿರುವವು.

ಕುಂಭ— ಸಂಸರ್ಗದೋಷದಿಂದಾಗಿ ಮನಸ್ಸಾಕ್ಷಿಗೆ ವಿರೋಧವಾಗಿ ವರ್ತಿಸಿ ಜನರನಿಂದೆಗೂ ಅಧಿಕಾರಿಗಳ ಪ್ರಕೋಪಕ್ಕೂ ಗುರಿಯಾಗುವಿರಿ, ವಿಶೇಷತಃ ನೌಕರವರ್ಗದವರು ತಮ್ಮ ನಡತೆಯನ್ನು ತಿದ್ದಿಕೊಳ್ಳತಕ್ಕದ್ದು. ಖರ್ಚಿಗೆ ತಕ್ಕುದಾದ ಆಯವಿರುವುದರಿಂದ ಹಣದ ತಗಾದೆಯಿರದು. ಗುರುಹಿರಿಯರಲ್ಲಿನ ಪೂಜ್ಯಭಾವನೆಯು ದೂರವಾಗುವದು. ತಾ. 12, 13, 14, 15 ಅನುಕೂಲ.

ಮೀನ— ಸುದಿನವು ಸಮೀಪಿಸಿರುವದು ನಿಮ್ಮ ಉದ್ಯಮ ವ್ಯವಹಾರಗಳು ಒಳ್ಳೆಯ ಫಲವನ್ನೀಯುವವು. ಸಮಾಜದಲ್ಲಿ ಸ್ಥಾನಮಾನಗಳು ಲಭಿಸುವವು ರಾಜಕೀಯರಂಗದಲ್ಲಿನ ನಿಮ್ಮ ಪ್ರತಿಯೊಂದು ಕಾರ್ಯಗಳೂ ನಿಮ್ಮಂತೆಯೇ ಫಲವೀಯುವವು. ಆರೋಗ್ಯ ಮತ್ತು ಆರ್ಥಿಕಭಾಗದಲ್ಲಿ ನಿಶ್ಚಿತರಾಗಿರುವಿರಿ. ಗೃಹತಾಪತ್ರಯಗಳು ತಾವಾಗಿ ದೂರವಾಗುವವು. ವಾರಾಂತ್ಯದ 3ದಿನಗಳಲ್ಲಿ ಸಾಹಸ ಕಾರ್ಯಗಳಲ್ಲಿ ಕೀರ್ತಿಪಡೆವಿರಿ.

ಪ್ರಕಟಣೆ

ಉಡುಪಿ ತಾಲೂಕು ಶಿರ್ವ ಗ್ರಾಮದ ಪಣಿಜೆಟ್ಟು ಮೂಡು ಮನೆ ಗೊಳ್ಳು ಸೆಟ್ಟಿ ಮಕ್ಕಳು, ಅಪ್ಪಿ ಸೆಟ್ಟಿ, ಕಿಟ್ಟಿ ಸೆಟ್ಟಿ, ನೇತ್ರು ಸೆಟ್ಟಿ ಕೂಡಾ ಈ ಮೂರು ಜನರು ತಮ್ಮ ಗರ್ಜಿಯ ಬಗ್ಗೆ ಸಾಲ ಮಾಡಿದ ಪಕ್ಷದಲ್ಲಿ ಆ ಸಾಲಕ್ಕೆ ನಮ್ಮ ಕುಟುಂಬದ ಆಸ್ತಿಯು ಜವಾಬ್ದಾರಿಯಾಗಲಿಕ್ಕಿಲ್ಲವೆಂಬ ಸಂಗತಿಯನ್ನು ಕುಟುಂಬದಲ್ಲಿ ಹಿರಿಮೆಂಬರಾದ ನಾವು ಸಮಸ್ತ ಜನರಿಗೂ ತಿಳಿಯಪಡಿಸುತ್ತೇವೆ.

ಸಂಜೋಟಿ ಸೆಟ್ಟಿ
ವಿಶಾಲಾಕ್ಷಿ ಸೆಟ್ಟಿ
ಸದಾನಂದ ಸೆಟ್ಟಿ

ತಾ 5-5-51

ಅಮೃತಾಂಜನ

ತಲೆವೇದನೆ, ಶಿರೋವೇದನೆ, ಉಳುಕು ಕುತ್ತಿಗೆ, ಭುಜ ಹಲ್ಲು ವೇದನೆಗಳಿಗೂ, ಎದೆ ನೋವು, ಘಾಯಗಳು, ಬಾತುಕೊಳ್ಳುವುದು, ಚೇಳವಿಷಮುಂತಾದವು, ಪಕ್ಷವಾತ, ಮೊದಿಷಿ, ಮೊದಲಾದ ಎಲ್ಲಾರೋಗಗಳಿಗೂ ಸಿದ್ಧೌಷಧ

REGD

ಹುಳು ಕಡ್ಡಿ ಮದ್ದು ಸಬ್ಬುಲ್ಲಿ ಸಿಕ್ಕುತ್ತದೆ

ಅಮೃತಾಂಜನ ಲಿಮಿಟೆಡ್
ಮದರಾಸು.

ಬೊಂಬಾಯಿ ಮತ್ತು ಕಲ್ಕತ್ತ.

"ಬೇರೆ ಶಾಸ್ತ್ರಗಳನ್ನೋದಿದರೇನು? ಗೀತೆಯನ್ನು ಚೆನ್ನಾಗಿ ಓದಬೇಕು"—(ವರಾಹ ಪುರಾಣ)

ಗೀತೆಯ ಕೈಗನ್ನಡಿ

(ಭಗವದ್ಗೀತೆಯ ಮೂಲ ಶ್ಲೋಕ ಮತ್ತು ಕನ್ನಡ ಅನುವಾದ)

● ಅನುವಾದಕರು–ಡಿ। ಹೊಸಕೆರೆ ಚಿದಂಬರಯ್ಯನವರು ●

ಈ ಗ್ರಂಥದಲ್ಲಿ ಗೀತೆಯ ಮೂಲವಲ್ಲ ಇರುವುದಲ್ಲದೆ ಮೂಲದಲ್ಲಿ ಸಹಜವಾಗಿ ಕಾಣಬರುವ ಅರ್ಥವೂ ಮಾತುಗಾರಿಕೆಯ ಮಾತುಗಳ ರೂಪದಲ್ಲೇದ ಛಟ್ಟಿಯಾಗಿ ಎದ್ದು ಕಾಣುವುದು.

400ಕ್ಕೂ ಮಿಕ್ಕ ಪುಟಗಳು! ಬೆಲೆ 0—12—0.

ಒಂದು ರೂಪಾಯಿಯನ್ನು ಕಳುಹಿಸಿದರೆ ಒಂದು ಪ್ರತಿಯನ್ನು ಬುಕ್‌ಪೋಸ್ಟಿನಿಂದ ಕಳಿಸಲಾಗುವುದು.

ಪ್ರತಿಗಳು ಸಿಗುವ ಮುಖ್ಯ ಸ್ಥಳ:—

ನವಯುಗ ಪ್ರೆಸ್, ಉಡುಪಿ ದ. ಕನ್ನಡ

ನವಭಾರತ ಪುಸ್ತಕ ಭಂಡಾರ, ಉಡುಪಿ, ಇಲ್ಲಿಯೂ ದೊರೆಯುತ್ತವೆ.

ಗೊನೋರಿಯಾ ಪರಮಾರೋಗ ಉಷ್ಣ ರೋಗಕ್ಕೆ ಔಷಧ

೭ ದಿವಸಗಳಲ್ಲಿ ಈ ರೋಗ ಗುಣ ಹೊಂದುವದು ಗ್ಯಾರಂಟೀ

ಶರೀರದಿಂದ ಕೀವು ಬರುತ್ತಿದ್ದರೆ, ಘೋರತರಕ್ಕೆ ಹೇಳದೇ ಹಾಗು ಹತ್ತುತ್ತಿದ್ದರೆ, ಶರೀರದಿಂದ ಬಾವು, ಶರೀರದ ಹೊಗಲು ಒಂದಕ್ಕೆ ಸರಿಯದಿದ್ದರೆ, ಶರೀರದ ಸುತ್ತು ಘಾಯವಾಗಿದ್ದರೆ,.... ಚಟ್ಟೆ ಬಿದ್ದಿದ್ದರೆ, ಉಷ್ಣದಿಂದ ಚೀರು ಇಳಿದಿದ್ದರೆ, ಉದುರು, ಆಗಿದ್ದರೆ, ಮೂಲವ್ಯಾಧಿ, ಭಗೇಂದ್ರ, ಗಂಡುಮಾಲಿ, ಕೈಕಾಲು ಶೂಲಿ, ಅರ್ಧಾಂಗವಾಯು ನಡುನೋಯುವದು ಸ್ತ್ರೀಯರ ಬಿಳಿಕೆಂಪು ಸೆರಗು ಹೋಗುತ್ತಿದ್ದರೆ, ಶೂಲಿಕುಟು ಗರ್ಭಿಯಿಂದ ಗರ್ಭಕೋಶ ನಾಶಹೊಂದಿದ್ದರೆ, ಸರಿಯಾಗಿ ಭೇದಿಯಾಗದಿದ್ದರೆ, ಮೂತ್ರ ಉರಿಯುತ್ತಿದ್ದರೆ, ಈ ಎಲ್ಲಾ ಬೇನೆಗಳಿಗೆ ಈ ನಮ್ಮ ಔಷಧವು ಇರುವುದು. ಮೊದಲ ದಿವಸ ಬೆಳಿಗ್ಗೆ ೧ ಗುಂಜಿ ಪ್ರಮಾಣ ಔಷಧ ಅರ್ಧತೊಲೆ ತುಪ್ಪದಲ್ಲಿ ತಕ್ಕೊಳ್ಳಬೇಕು ಮೊದಲ ದಿವಸ ಮಾತ್ರ ಶೆ ಮುಂಜಾನೆ ಸಂಜೆ ಎರಡು ಸಾರೆ ತಕ್ಕೊಳ್ಳಬೇಕು. ಮುಂದೆ ದರ ದಿವಸ ಬೆಳಿಗ್ಗೆ ಒಂದೇ ಸಾರೆ ೭ ದಿವಸ ಸೇವಿಸಬೇಕು. ಈ ಔಷಧವನ್ನು ಬೇಸಿಗೆಯಲ್ಲಿ ತುಪ್ಪದಲ್ಲಿ, ಥಂಡಿ ಮಳೆಗಾಲದಲ್ಲಿ ಜೇನತುಪ್ಪದಲ್ಲಿ ತಕ್ಕೊಳ್ಳಬೇಕು. ಪಥ್ಯ: ಹುಳಿಖಾರ, ಕುಂಬಳಕಾಯಿ, ಬಳ್ಳೊಳ್ಳಿ ಬಿಡಬೇಕು.

ಬಾಟ್ಲಿ ೧ಕ್ಕೆ ೫ರೂ. ಪೋಸ್ಟ ಚಾರ್ಜ ೮ ಆಣೆ

ಏಜೆಂಟರು:—ಗದಗ:—ಗದಗ ಫಾರ್ಮಸಿ, ಹುಬ್ಬಳ್ಳಿ:—ಹುಬ್ಬಳ್ಳಿ ಫಾರ್ಮಸಿ ಬಾಗಲಕೋಟೆ:–ಬಾಗಲಕೋಟೆ ಫಾರ್ಮಸಿ, ಧಾರವಾಡ:–ಧಾರವಾಡ ಫಾರ್ಮಸಿ, ದಾವಣಗೇರಿ: ದಾವಣಗೇರಿ ಪ್ರೆಸ್. ನಂಜುಡೇಶ್ವರ ಮೂರ್ತಿ ದಾವಣಗೇರಿ.

ಪತ್ರವ್ಯವಹಾರ ಮಾಡತಕ್ಕ ಮಾಲಕರ ವಿಳಾಸ

ರೇವಣಸಿದ್ದಪ್ಪ ಹಾಲಪ್ಪ ದಾವಣಗೇರಿ,

ಆಯುರ್ವೇದ ಔಷಧಾಲಯ, ಗದಗ-

ಲಕ್ಷ್ಮೀ
ಸೆಂಟಾಲ್ ಮಾತ್ರೆ

ಇದರ ಉಪಯೋಗದಿಂದ ಬಹುಕಾಲದ ಮೇಹ, ಪ್ರಮೇಹ, ಮೂತ್ರದ ಉರಿ, ಮೂತ್ರ ಕೃಚ್ಛ್ರ, ಮೂತ್ರದೊಡನೆ ಯಾಮುಂದಾಗಿ ಬಿಳುಪು, ಅರಸಿನ, ಕೆಂಪು ಈ ವರ್ಣಗಳಲ್ಲಿ ಕೀವು ಹೋಗುವುದು, ತೊಡೆ ಸಂದಿನಲ್ಲಿ ನೋವು, ಕಾಲ ಗಂಟುಗಳಲ್ಲಿ ವೇದನೆ, ಕಣ್ಣಿನಲ್ಲಿ ಕೀವು ಬರುವುದು, ಶರೀರದಲ್ಲಿ ಉಷ್ಣತೆ, ಸ್ವಪ್ನೇಂದ್ರಿಯ ಇವೆಲ್ಲಾ ಖಚಿತ್ರಿಯಾಗಿ ಗುಣಹೊಂದುವುದು

ಡಬ್ಬಿ ಒಂದಕ್ಕೆ ರೂ. 2—0—0

ಏಜಂಟ್:—

ಶಾ ಕಂಪೆನಿ, ಮಂಗಳೂರು.

ಒಕ್ಕಲತನ ಖಾತೆ ಮತ್ತು ಆಧುನಿಕ ಒಕ್ಕಲತನ

ಒಂದು ವಿಧಾಯಕ ಯೋಜನೆ

ಬರೆದವರು : ವೈದ್ಯ ವಿನಾಯಕ ರಾವ್ ಬಾಪಟ

[ಕಳೆದ ಸಂಚಿಕೆಯಿಂದ]

ಯೋಜನೆ

ಈ ಯೋಜನೆಯನ್ನು ಮುಂಬಯಿ ಪ್ರಾಂತದ ಉತ್ತರ ಕನ್ನಡ ಜಿಲ್ಲೆಯ ಅಂಕೆ ಸಂಖ್ಯೆಗಳಿಗನುಸಾರವಾಗಿ ತಯಾರಿಸಲಾಗಿದೆ. ಆಯಾಯ ಸ್ಥಿತಿಗತಿಗಳಿಗನುಸಾರವಾಗಿ ಅಲ್ಪಸ್ವಲ್ಪ ಮಾರ್ಪಾಟು ಮಾಡಿಕೊಂಡರೆ ಇದನ್ನೇ ಭಾರತದ ಎಲ್ಲಾ ಭಾಗಗಳಿಗೂ ಅನ್ವಯಿಸಿಕೊಳ್ಳಬಹುದು.

ಈಗಿರುವ ಅಗ್ರಿಕಲ್ಚರಲ್ ಅಸಿಸ್ಟಂಟ್ ಅಥವಾ ಫೀಲ್ಡ್‌ಮನ್ ಎಂಬ ಹುದ್ದೆಯನ್ನು (ಈ ಲೇಖದಲ್ಲಿ ಎ. ಎ. ಎಂದು ಕರೆಯಲಾಗಿದೆ) ರದ್ದುಮಾಡಿ, ಇವರು ಪ್ರತಿಯೊಬ್ಬರೂ ಕನಿಷ್ಠ ಪಕ್ಷ ನಾಲ್ಕು ಎಕರೆ ತರಿಜಮೀನನ್ನು ಆಧುನಿಕ ರೀತಿಯಲ್ಲಿ ಕೃಷಿಮಾಡುವಂತೆ ಒತ್ತಾಯ ಮಾಡಬೇಕು ಇಲ್ಲವೆ ಪ್ರೋತ್ಸಾಹಿಸಬೇಕು. ಈಗ ಹಂಗಾಮಿ ನೌಕರಿಯಲ್ಲಿರುವ A. A. ಗಳಿಗೆ ಮೊಟ್ಟಮೊದಲಿನ ಪ್ರಾಶಸ್ತ್ಯವನ್ನು ಕೊಟ್ಟು ಜಮೀನನ್ನು ಕೃಷಿ ಮಾಡಲು ಮುಂದೆ ತಿಳಿಸಲಾಗುವ ಸೌಕರ್ಯಗಳನ್ನು ಕೊಡಬೇಕು. ಈ ಯೋಜನೆಯಲ್ಲಿ ಸೇರಿಕೊಳ್ಳಲು ಇಷ್ಟವಿಲ್ಲದ ಹಂಗಾಮಿ ನೌಕರರನ್ನು ಕೆಲಸದಿಂದ ಮುಕ್ತಮಾಡಬಹುದು. ಪ್ರಾರಂಭದಲ್ಲಿ ಪ್ರತಿ ತಾಲೂಕಿಗೆ ಇಂತಹ ಹತ್ತು ಕೇಂದ್ರಗಳನ್ನು ಪ್ರಾರಂಭಿಸಿ, ಮುಂದೆ ಪ್ರತಿವರ್ಷವೂ ಹತ್ತು ಹೊಸ ಕೇಂದ್ರಗಳನ್ನು ತೆರೆಯಬೇಕು. ಪ್ರತಿ ಐದು ಮೈಲುಗಳಿಗೆ ಒಂದು ಕೇಂದ್ರವಾದನಂತರ, ಅಂದರೆ ತಾಲ್ಲೂಕಿಗೆ ಸುಮಾರು 40 ಕೇಂದ್ರಗಳಾದ ನಂತರ ಹೊಸಕೇಂದ್ರಗಳ ತೆರೆಯುವಿಕೆಯನ್ನು ನಿಲ್ಲಿಸಿ ಆಹಾರವನ್ನು ಸಂಶೋಧನಾ ಕಾರ್ಯಕ್ಕಾಗಲೀ ಇಲ್ಲವೆ ಇತರ ಉಪಯುಕ್ತ ಕಾರ್ಯಗಳಿಗಾಗಲೀ ವಿನಿಯೋಗಿಸಬಹುದು.

ಕೊಡಬಹುದಾದ ಸವಲತ್ತುಗಳು

1 ಈಗ ಬಹುಶಃ ಎಲ್ಲಾ ಪ್ರಾಂತಗಳಲ್ಲಿಯೂ ತಾಲೂಕಿಗೆ 5-6 ರಂತೆ ಪ್ರತಿಜಿಲ್ಲೆಗೆ 50-60 A. A. ಗಳಿದ್ದಾರೆ. ಪ್ರತಿಯೊಬ್ಬ A. A. ಗೆ ಮುಂಬೈ ಪ್ರಾಂತದಲ್ಲಿ ತಿಂಗಳಿಗೆ 150-130 ರೂಪಾಯಿಗಳು ಖರ್ಚಾಗುತ್ತವೆ. (ಪಗಾರ, ಕುಟ್ಟಿ, ಭತ್ಯ, ಬಾಡಿಗೆ, ಪ್ರವಾಸಭತ್ತೆ ಇತ್ಯಾದಿಗಳ ಬಗ್ಗೆ) ತಾಲೂಕಿನೊಳಗಿನ ಈ ಐದು ಸ್ಥಳಗಳನ್ನು ಹತ್ತು ಕಾರ್ಯಕ್ರಮ ಕೇಂದ್ರಗಳಾಗಿ ಮಾರ್ಪಡಿಸಿ ಈಗ ಒಬ್ಬೊಬ್ಬರಿಗೆ ಖರ್ಚಾಗುತ್ತಿರುವ ಹಣವನ್ನು ಇಬ್ಬರಿಗೆ ಹಂಚಿಕೊಡಬೇಕು. ಅಂದರೆ ಪ್ರತಿಯೊಂದು ಕೇಂದ್ರ ಚಾಲಕನಿಗೆ ತಿಂಗಳಿಗೆ 75/- ರೂಪಾಯಿಗಳಾಗುತ್ತವೆ. ಇದನ್ನು ಪಗಾರವೆಂದು ತಿಳಿಯದೆ ಸಹಾಯಧನವೆಂದು ಪರಿಗಣಿಸಬೇಕು. (ಕೆಲವು ಪ್ರಾಂತ ಮತ್ತು ಸಂಸ್ಥಾನಗಳಲ್ಲಿ A. A. ಗಳಿಗೆ ಖರ್ಚಾಗುತ್ತಿರುವ ಹಣವು ಇದಕ್ಕಿಂತ ಕಡಿಮೆ ಇದೆ. ಇಂತಹ ಕಡೆಗಳಲ್ಲಿ ಸಹ ಒಬ್ಬರಿಗೆ ಖರ್ಚಾಗುತ್ತಿರುವ ಹಣವನ್ನು ಎರಡು ಕೇಂದ್ರ ಚಾಲಕರಿಗೆ ಸಮನಾಗಿ ಹಂಚಿಕೊಡಬೇಕು) ಈ ರೀತಿ ಸಹಾಯಧನವನ್ನು ಐದುವರ್ಷಗಳವರೆಗೆ ಮಾತ್ರಕೊಟ್ಟು ಅನಂತರ ನಿಲ್ಲಿಸಬೇಕು.

2 ಪ್ರತಿಯೊಬ್ಬ ಕೇಂದ್ರಚಾಲಕನಿಗೆ ವಾಸದ ಮನೆ, ಎತ್ತು, ಬೀಜ, ಗೊಬ್ಬರ, ಉಪಕರಣಗಳು ಇತ್ಯಾದಿಗಳ ಬಗ್ಗೆ ಪ್ರಾರಂಭಿಕ ಖರ್ಚೆಂದು 1500/- ರೂಪಾಯಿಗಳನ್ನು ಬಿಬ್ಬಡ್ಡಿ ಸಾಲರೂಪದಲ್ಲಿ ಕೊಡಬೇಕು. ಸಹಾಯಧನವನ್ನು ನಿಲ್ಲಿಸಿದ ನಂತರ ನಿಯಮಿತ ಕಾಲದವರೆಗೆ ಆತನು ಆ ಸ್ಥಳದಲ್ಲಿಯೇ ನೆಲಸುವುದಾದರೆ ಆ ಹಣವನ್ನು ಮುಫತ್ತಾಗಿ ಬಿಡುವ ಆಕರ್ಷಣೆಯನ್ನು ತೋರಿಸುವ ಯೋಜನೆ ಮಾಡಬಹುದು

3 ಪ್ರತಿತಾಲೂಕಿನಲ್ಲಿ ಯಾವುದಾದರೊಂದು ಹಳ್ಳಿಯ ಸಮೀಪದಲ್ಲಿ ಹಾಗೂ ಗಾಡಿರಸ್ತೆಗೆ ಸಮೀಪದಲ್ಲಿರುವಂತಹ 10-15 ಎಕರೆ ಪಡಜಮೀನನ್ನು ಆರಿಸಿಕೊಂಡು (ಇದರಲ್ಲಿ 4-5 ಎಕರೆ ತರಿ, 3-4 ಎಕರೆ ಬುಷ್ಕಿ, ಮತ್ತು ಉಳಿದ ಭಾಗ ಹುಲ್ಲುಬೇಣ) ಸರಕಾರಿ ಖರ್ಚಿನಿಂದ ಮೊಟ್ಟಮೊದಲು ರೂಢಿಕೊಟ್ಟು, ಆ ಜಾಗದಿಂದ ಹತ್ತಿರದ ರಸ್ತೆಗೆ ಸೇರುವಂತೆ ಗಾಡಿರಸ್ತೆಯನ್ನು ಮಾಡಿಸಿ ಕೊಡಬೇಕು ಮೊದಲನೆಯವರ್ಷದಲ್ಲಿ ಪ್ರತಿ ತಾಲ್ಲೂಕಿಗೆ ಇಂತಹ ಹತ್ತು ಕೇಂದ್ರಗಳನ್ನು ತೆರೆಯಬೇಕು (ಮುಂದೆ ಪ್ರತಿವರ್ಷ ಹತ್ತು ಕೇಂದ್ರಗಳನ್ನು ತೆರೆಯುವ ಪಂಚವಾರ್ಷಿಕ ಯೋಜನೆಯಿರಬೇಕು.) ಮುಂದೆ ಇಂತಹ ಪಡುಬಿದ್ದ ಜಮೀನು ಹತ್ತಿರ ಸಿಗದಿದ್ದರೆ, ಆರಿಸಿದ ಹಳ್ಳಿಯ ಹತ್ತಿರದ, ಹಾಗೂ ಕೃಷಿಗೆ ಅನುಕೂಲವಿರುವ ಕಾಡನ್ನು ಕಡಿಸಿ, ಕೃಷಿಗೆ ಅನುಕೂಲವಾಗುವಂತೆ ಸರಕಾರಿ ಖರ್ಚಿನಿಂದ ರೂಢಿಸಿ ಕೊಡಬೇಕು.

4 ಮೊದಲಿನ ಎರಡುವರ್ಷ ಕಂದಾಯವನ್ನು ಸೂಟುಬಿಟ್ಟು ಮುಂದಿನ ಮೂರು ವರ್ಷಗಳವರೆಗೆ ಅರ್ಧಕಂದಾಯವನ್ನೂ ಆ ನಂತರ ಪೂರ್ಣಕಂದಾಯವನ್ನು ಆಕಾರಣೆಮಾಡಬೇಕು

5 ಐದು ವರ್ಷಗಳ ನಂತರ ಆ ಜಮೀನನ್ನು ಕೇಂದ್ರಚಾಲಕನ ಹೆಸರಿಗೆ ಖಾತೆಮಾಡಿ ಕೊಡಬೇಕು.

6 ಚಾಲಕನು ಜೀವಿಸಿರುವವರೆಗೂ ಆ ಜಮೀನನ್ನು ಮಾರಕೂಡದೆಂಬ ಶರ್ತಹಾಕಬಹುದು.

7 ವೆಟರ್ನರಿ [ಪಶುವೈದ್ಯ] ಅಧಿಕಾರಿಗಳು ಈ ಕೇಂದ್ರಗಳಿಗೆ ನಿಯಮಿತ ಕಾಲಗಳಲ್ಲಿ ಭೆಟ್ಟಿಕೊಟ್ಟು, ಅಲ್ಲಿಯ ದನಕರುಗಳ ಆರೋಗ್ಯ, ವ, ಪೋಷಣೆಯ ಬಗ್ಗೆ ಉಚಿತವಾಗಿ ಸಲಹೆ ಚಿಕಿತ್ಸೆಗಳನ್ನು ಒದಗಿಸಬೇಕು.

ಆಡಳಿತ ಹಾಗೂ ಮೇಲ್ವಿಚಾರಣೆ

ಆಡಳಿತ ಹಾಗೂ ಮೇಲ್ವಿಚಾರಣೆಯ ಸಿಬ್ಬಂದಿಯನ್ನು ಸಾಧ್ಯವಿದ್ದಷ್ಟು ಕಡಿಮೆಮಾಡಬೇಕು. ಆದರೆ ದಕ್ಷತೆಯು ಮಾತ್ರ ಕಡಿಮೆಯಾಗಬಾರದು. ಇದಕ್ಕೆ ಸೂಕ್ತವಾದ ವಿಧಾನಗಳನ್ನು ಕಂಡುಹಿಡಿಯಬೇಕು. ಕೇಂದ್ರಚಾಲಕನು ಮಾಡಿದ ಕೆಲಸಗಳ ವರದಿಯನ್ನು ಕಾಲಕಾಲಕ್ಕೆ ತಾಲೂಕಿನ ಮಾಮಲೇದಾರರಿಗೆ ಕಳುಹಿಸುವ ಹಾಗೂ ಸರ್ಕಲ ಇನ್ಸ್‌ಪೆಕ್ಟರ್ ಮತ್ತು ಮಾಮಲೆದಾರರು ನಡೆದ ಕಾರ್ಯಗಳನ್ನು ಪರೀಕ್ಷಿಸುವಂತೆ ಏರ್ಪಾಟು ಮಾಡುವ ಸಾಧಕ ಬಾಧಕಗಳ ಬಗ್ಗೆ ವಿಚಾರ ಮಾಡಬಹುದು. ಈ ಏರ್ಪಾಟಿನಿಂದ ಹಣದ ಉಳಿತಾಯವಾಗುತ್ತದೆ ಇಡೀಜಿಲ್ಲೆಗೆ ಎರಡರಿಂದ ನಾಲ್ಕು ತಜ್ಞ ಅಧಿಕಾರಿಗಳನ್ನು [ಗಜೆಟೆಡ್ ಅಧಿಕಾರಿಗಳು] ನೇಮಿಸಿ ಅವರು ಈ ಕೇಂದ್ರಗಳನ್ನು ಶಾಸ್ತ್ರೀಯ ದೃಷ್ಟಿಯಿಂದ ನಿರೀಕ್ಷಿಸಿ ಸೂಕ್ತ ಸಲಹೆಗಳನ್ನು ಕೊಡಬೇಕು. ಇಂತಹ ಅಧಿಕಾರಿಗಳಿಗೆ ವಾಹನ [ಮೋಟಾರು] ಸೌಕರ್ಯವನ್ನು ಒದಗಿಸಿ, ಅಧಿಕಾರಿಗಳ ಸಂಖ್ಯೆಯನ್ನು ದಕ್ಷತೆಯು ಕಡಿಮೆಯಾಗದಂತೆ ಸಾಧ್ಯವಿದ್ದಷ್ಟು ಕಡಿಮೆಮಾಡುವ ವಿಚಾರ ಮಾಡಬೇಕು.

ಕೇಂದ್ರಚಾಲಕನು ಮಾಡಬೇಕಾದ ಕಾರ್ಯಗಳು

ಇಂತಹ ಕೇಂದ್ರಗಳಲ್ಲಿ ಕೃಷಿಮಾಡುವ ಉಮೇದುವಾರನು, ತಾನು ಆ ಸ್ಥಳದಲ್ಲಿಯೇ ಕಾಯಂ ಆಗಿ ನೆಲಸುವುದಾಗಿಯೂ, ಸರಕಾರದವರು ಸಹಾಯ ಧನವನ್ನು ನಿಲ್ಲಿಸಿದ ಐದು ಯಾ ಹತ್ತು ವರ್ಷಗಳವರೆಗಾದರೂ ತಾನು ಆ ಜಮೀನನ್ನು ಕೃಷಿಮಾಡುವುದಾಗಿಯೂ, ಒಪ್ಪಿಗೆಯನ್ನು ಕೊಡಬೇಕು. ಮತ್ತು ಅಲ್ಲಿ ಸುಧಾರಿತ ಪದ್ಧತಿಯಂತೆ ಕೃಷಿಯನ್ನು ಮಾಡುವುದರ ಜೊತೆಗೆ ಸುತ್ತುಮುತ್ತಲಿನ ನಿರ್ದಿಷ್ಟಗ್ರಾಮಗಳ ರೈತರಿಗೆ, ಈಗಿನ A. A. ಗಳು ಮಾಡುವ ಗೊಬ್ಬರ, ಬೀಜ ಇತ್ಯಾದಿಗಳನ್ನು ಮಾಡುವುದು, ಸರಕಾರದಿಂದ ಸಿಗುವ ಸವಲತ್ತುಗಳನ್ನು ಪಡೆಯುವ ವಿಧಾನಗಳನ್ನು ತಿಳಿಸಿ ಹೇಳುವುದು, ಸುಧಾರಿಸಿದ ಕೃಷಿಯ ಬಗ್ಗೆ ಪ್ರಚಾರ ಮಾಡುವುದು [ಖಾಸಗಿ ಚರ್ಚೆಯ ರೂಪದಲ್ಲಿ] ಇತ್ಯಾದಿ ಕಾರ್ಯಗಳನ್ನು ಮಾಡಬೇಕು. ಈತನಿಗೆ ಬರವಣಿಗೆ ಹಾಗೂ ಪತ್ರವ್ಯವಹಾರದ ಕೆಲಸವನ್ನು ಸಾಧ್ಯವಿದ್ದಷ್ಟು ಕಡಿಮೆಮಾಡುವಂತೆ ಆಡಳಿತ ವಿಧಾನದ ಯೋಜನೆ ಮಾಡಬೇಕು. ಜಮೀನನ್ನು ಕೃಷಿಮಾಡುವ ಎಲ್ಲಾ ಖರ್ಚನ್ನೂ ಆತನೇ ವಹಿಸಿಕೊಂಡು ವಾರ್ಷಿಕ ಉತ್ಪನ್ನವನ್ನು ಸಹ ಆತನೇ ಅನುಭವಿಸಬೇಕು.

ಐದುವರ್ಷಗಳ ನಂತರಸಹಾಯ ಧನವನ್ನು ಪೂರ್ತಿಯಾಗಿ ನಿಲ್ಲಿಸಬೇಕು. ಅನಂತರ ಸಹಾ ಈತನು ಸಲಹೆ, ಗೊಬ್ಬರ, ಬೀಜ, ಇತ್ಯಾದಿಗಳನ್ನು ಮಾರುವುದು ಮೊದಲಾದ ಕೆಲಸಗಳನ್ನು ಅವಶ್ಯ ಮಾಡಲೇಬೇಕು. ಇದಕ್ಕೆ ಆತನಿಗೆ ಮಾರಾಟವಾದ ವಸ್ತುವಿನ ಮೇಲೆ ಯೋಗ್ಯ ಕಮಿಶನ್ ಕೊಡಬಹುದು. ಈ ಐದು ವರ್ಷಗಳಲ್ಲಿ ನಿವೃತ್ತ ಚಾಲಕನು ಆ ಗ್ರಾಮದಲ್ಲಿಯೇ ನೆಲೆಸಿ, ಮನೆ, ದನಕರುಗಳು ಇತ್ಯಾದಿ ರೂಪದಲ್ಲಿ ಆಸ್ತಿಯನ್ನು ಸಂಪಾದಿಸಿ, ತಾನೂ ಸಹ ಆ ಗ್ರಾಮದ ಒಬ್ಬ ರೈತನೆಂದೇ ಭಾವಿಸಿ ಸುತ್ತುಮುತ್ತಲಿನ ಜನರೊಡನೆ ಆತ್ಮೀಯತೆಯಿಂದ ಇರುತ್ತಾನೆ, ಹೀಗಾಗಿ ಆತನು ಸ್ವಸಂತೋಷದಿಂದ ಸುತ್ತಲಿನ ರೈತ ಬಾಂಧವರಿಗೆ ಸುಧಾರಿಸಿದ ಕೃಷಿಯ ಬಗ್ಗೆ ತನ್ನ ಅನುಭವದ ಸಾರವನ್ನು ತಿಳಿಸುತ್ತಾನೆ. ರೈತರು ಅಧಿಕಾರಿಗಳ ಮಾತಿಗಿಂತಲೂ, ತಮ್ಮ ಕಸುಬನ್ನೇ ಮಾಡುತ್ತಿರುವ ಊರಿನವರ ಮಾತಿನಲ್ಲಿ ಹೆಚ್ಚು ವಿಶ್ವಾಸವನ್ನಿಡುತ್ತಾರೆ. ಅಲ್ಲದೆ ಚಾಲಕನು ಹೊಸ ಪದ್ಧತಿಯಿಂದ ಹೆಚ್ಚು ಲಾಭವನ್ನು ಪಡೆದುದನ್ನು ಪ್ರತ್ಯಕ್ಷವಾಗಿ ಕಂಡ ಅವರು ತಾವಾಗಿಯೇ ಈ ಪದ್ಧತಿಯ ವಿವರಗಳನ್ನು ತಿಳಿದುಕೊಳ್ಳಲು ಉತ್ಸುಕರಾಗಿ ಚಾಲಕನಿಂದ ಸೂಕ್ತ ಸಲಹೆಗಳನ್ನು ಪಡೆಯುತ್ತಾರೆ. ಪಂಚವಾರ್ಷಿಕ ಯೋಜನೆಯನ್ನು ಹಾಕಿಕೊಂಡು ಪ್ರತಿವರ್ಷವೂ ತಾಲ್ಲೂಕಿನಲ್ಲಿ ಹತ್ತು ಹತ್ತು ಹೊಸಕೇಂದ್ರಗಳನ್ನು ತೆರೆಯುವ ಸಾಹಸ ಮಾಡುವುದರಿಂದ ಸುಧಾರಿಸಿದ ಕೃಷಿ ವಿಧಾನದ ತೀವ್ರ ಪ್ರಚಾರವಾಗುವುದರ ಜೊತೆಗೆ ಮೊದಲನೆಯ ವರ್ಷವೇ ಜಿಲ್ಲೆಗೆ 400-500 ಟನ್ನು ಮುಖ್ಯ ಧಾನ್ಯಗನ್ನೂ, ಮುಂದೆ ಪ್ರತಿವರ್ಷವೂ ಇಷ್ಟೇ ಪ್ರಮಾಣದಷ್ಟು ಹೆಚ್ಚು ಧಾನ್ಯವನ್ನೂ ಬೆಳೆಯಬಹುದು. ಐದನೆಯ ವರ್ಷದ ಕೊನೆಗೆ ಪ್ರತಿಜಿಲ್ಲೆಗೆ 1600 ರಿಂದ 2000 ಟನ್ನಿನಷ್ಟು ಹೆಚ್ಚಿಗೆ ಮುಖ್ಯಧಾನ್ಯವನ್ನು ಬೆಳೆಯಬಹುದು.

ಪಂಚವಾರ್ಷಿಕ ಯೋಜನೆಯಂತೆ ಪ್ರತಿವರ್ಷವೂ ಹತ್ತು ಹತ್ತು ಹೊಸಕೇಂದ್ರಗಳನ್ನು ತೆರೆಯುವುದು ಉತ್ತಮ ಕಾರಣಾಂತರದಿಂದ ಇದು ಸಾಧ್ಯವಾಗದಿದ್ದರೆ, ಮೊದಲಿನ ಹತ್ತು ಕೇಂದ್ರಗಳನ್ನು ಮುಚ್ಚಿದ ನಂತರ [ಐದು ವರ್ಷಗಳ ನಂತರ] ಅದೇ ಖರ್ಚಿನಿಂದ ಹೊಸ ಹತ್ತು ಕೇಂದ್ರಗಳನ್ನು ತೆರೆಯುವ ಯೋಜನೆಯನ್ನಾದರೂ ಮಾಡಬಹುದು. ಏನೂ ಮಾಡದಿರುವುದಕ್ಕಿಂತ ಇದು ಒಳ್ಳೆಯದಷ್ಟೆ.

ಹೀಗೆ ನಿಶ್ಚಿತ ಪ್ರಮಾಣದ ಕೇಂದ್ರಗಳನ್ನು [ತಾಲ್ಲೂಕಿಗೆ 40 ರಂತೆ] ತೆರೆದ ನಂತರ ಮುಂದೆ ಹೊಸಕೇಂದ್ರಗಳನ್ನು ತೆರೆಯಬೇಕಾಗಿಲ್ಲ. ಆ ಹಣವನ್ನು ಉಳಿಸಿ ಅದನ್ನು ಸಂಶೋಧನೆಯ ಬಗ್ಗೆ, ಕೆರೆಕಾಲುವೆ ಬಗ್ಗೆ ಇಲ್ಲವೆ ಇತರ ಉಪಯುಕ್ತ ಕಾರ್ಯಗಳ ಬಗ್ಗೆ ವಿನಿಯೋಗ ಮಾಡಬಹುದು. ಹೀಗೆ ಮಾಡುವುದರಿಂದ ಈಗಿನ ಸಿಬ್ಬಂದಿಯಲ್ಲಿ ದೊಡ್ಡ ಪ್ರಮಾಣದ ಕಡಿತವನ್ನು ಮಾಡಿದಂತಾಗುವುದರ ಜೊತೆಗೆ ತರಬೇತಿ ಹೊಂದಿದ ಶಿಸ್ತಿನ ಒಕ್ಕಲತನ ಸೈನಿಕರ ಬಹು ದೊಡ್ಡ ತಂಡವನ್ನೇ ಸೃಷ್ಟಿಸಿದಂತಾಗುತ್ತದೆ. ಇಂತಹ ಸೈನಿಕರ ಸಹಾಯದಿಂದ ಅಲ್ಪವೆಚ್ಚದಲ್ಲಿಯೇ ಮುಂದಿನ ಕಾರ್ಯವನ್ನು ಸಾಧಿಸುವುದಕ್ಕೂ ಹೊಸ ವಿಧಾನಗಳನ್ನು ಸುಲಭವಾಗಿ ಕಾರ್ಯರೂಪಕ್ಕಿಳಿಸುವುದಕ್ಕೂ, ಪ್ರಚಾರ ಕಾರ್ಯವನ್ನು ಸುಗಮವಾಗಿ ಸಾಗಿಸುವುದಕ್ಕೂ ಅನುಕೂಲವಾಗುತ್ತದೆ. ಐದೈದು ಮೈಲುಗಳ ಅಂತರದಲ್ಲಿ ಒಂದೊಂದು ಕೇಂದ್ರವಿರುವುದರಿಂದ ಯಾವ ಮೂಲೆಯ ಹಳ್ಳಿಗೂ ಇಂತಹ ಕೇಂದ್ರವು

ನಿಮಗೆ
ಇಂಗ್ಲಿಷ್ ಕಲಿಯಬೇಕೆ?
ಹಾಗಿದ್ದರೆ

ಕೊರಡ್ಕಲ್ ಶ್ರೀನಿವಾಸ ರಾವ್ ವಿರಚಿತ

ಸುಲಭದಲ್ಲಿ ಇಂಗ್ಲಿಷ್

English Made Easy

ಎಂಬ

ಇಂಗ್ಲಿಷ್ ಸ್ವಯಂಬೋಧಿನಿ ಪುಸ್ತಕ ಅತ್ಯುಪಯುಕ್ತವಾದುದು.

ಬೆಲೆ ರೂ. 1-8-0.

ವಿ. ಪಿ ದ್ವಾರ ರೂ 1-14-0.

ಪ್ರತಿಗಳು ನಿಮ್ಮೂರ ಪುಸ್ತಕ ವ್ಯಾಪಾರಿಗಳಲ್ಲಿ ಸಿಗದಿದ್ದರೆ, ಕೆಳಗಿನ ವಿಳಾಸಕ್ಕೆ ಬರೆಯಿರಿ.

ನವಭಾರತ ಪುಸ್ತಕ ಭಂಡಾರ,
ಉಡುಪಿ

ಉಡುಪಿಗೆ ಹೋಗಬೇಕು! ಆದರೆ ಉಳಿದುಕೊಳ್ಳುವುದೆಲ್ಲಿ?

ರಾಯಲ್ ಮಹಾಲಿನಲ್ಲಿ

ಬಸ್ ಸ್ಟೇಂಡಿಗೆ ಅತಿ ಸಮೀಪ! ಕೃಷ್ಣಮಠಕ್ಕೆ ದೂರವಿಲ್ಲ!

ವ್ಯಾಪಾರವ್ಯವಹಾರ ವಿಹಾರಸ್ಥಳಗಳಿಗೆಲ್ಲ ಕೇಂದ್ರ!

ನಿಮ್ಮ ಸ್ನಾನ, ಊಟ, ಉಪಹಾರ, ಬೈಠಕ್, ಶಯನ ಇವಕ್ಕೆಲ್ಲ ಉತ್ತಮ ವ್ಯವಸ್ಥೆ ಕರೆದರೆ ಓಗೊಡುವ ನೌಕರರ ವರ್ಗ!

ಮೇಲಾಗಿ ಉಡುಪಿ ಬ್ರಾಹ್ಮಣರ ಅಡಿಗೆ, ತಿಂಡಿತಿನಸು, ಇವುಗಳ ರುಚಿರುಚಿ ಹೇಳಬೇಕೆ?

ಪ್ರೊಪ್ರೈಟರ್:— ಕೆ. ವೆಂಕಟ್ರಮಣಭಟ್

For up-to-date Lodging & Boarding

ROYAL MAHAL,

UDIPI, S. Kanara.

-3 ಮೈಲುಗಳಿಗಿಂತ ದೂರವಿರುವುದಿಲ್ಲ. ಇಷ್ಟು ಹತ್ತಿರದಲ್ಲಿ ತಜ್ಞ ಕೃಷಿಕರಿಂದ ನಡೆಸಲ್ಪಡುವ ಇಂತಹ ಕೇಂದ್ರಗಳಲ್ಲಿ ಆರೋಗ್ಯದಾಯಕವಾದ ಸ್ಪರ್ಧೆಯೂ ಕಾರ್ಯಕ್ಷಮತೆಯೂ ಬೆಳೆಸಲ್ಪಡಬಹುದಾದ ಅನುಕೂಲಗಳು ಹೆಚ್ಚಾಗಿವೆ.

ಕೇಂದ್ರ ಪಾಲಕರ ಶಿಕ್ಷಣ ಮತ್ತು ಆಯ್ಕೆ

ಇಂತಹ ಕೇಂದ್ರ ಪಾಲಕರ ಸಾಮಾನ್ಯ ವಿದ್ಯಾಜ್ಞಾನವು ಪ್ರಾದೇಶಿಕ ಭಾಷೆಯ ಮುಲ್ಕಿ ಪರೀಕ್ಷೆಗಿಂತ ಕಡಿಮೆ ಇರಕೂಡದು. ಈಗಿನ ಹೊಸ ಶಿಕ್ಷಣದಂತೆ ಒಕ್ಕಲತನವನ್ನು ಪ್ರಧಾನವಿಷಯವನ್ನಾಗಿ ತೆಗೆದುಕೊಂಡು ಮುಲ್ಕಿ ಪಾಸಾದವರನ್ನು ನೇಮಿಸಿಕೊಳ್ಳಬಹುದು. ಆವಶ್ಯಕಂಡರೆ ಇವರಿಗೆ ಅಲ್ಪಕಾಲದ ವಿಶೇಷ ಶಿಕ್ಷಣವನ್ನು ಕೊಡಬಹುದು. ಈ ದೃಷ್ಟಿಯಿಂದ ಮುಲ್ಕಿಯ ಒಕ್ಕಲತನದ ಶಿಕ್ಷಣದಲ್ಲಿ ಸೂಕ್ತ ಬದಲಾವಣೆಗಳನ್ನು ಮಾಡಬಹುದು. ಪ್ರತಿತಾಲ್ಲೂಕಿನಲ್ಲಿ ಒಕ್ಕಲತನವನ್ನು ಕಲಿಸುವ ಒಂದೊಂದು ಪ್ರಾಥಮಿಕ ಶಾಲೆಯನ್ನಾದರೂ ಸ್ಥಾಪಿಸಬೇಕು. ಇದಕ್ಕೆ ಪೂರಕವಾಗಿ ಮುಲ್ಕಿಪಾಸಾದ ನಿರುದ್ಯೋಗಿ ಉತ್ಸಾಹಿ ತರುಣರನ್ನು ಆರಿಸಿ ಅವರಿಗೆ ಒಕ್ಕಲತನ ಶಾಲೆಯಲ್ಲಿ ಒಂದುವರ್ಷದ ಶಿಕ್ಷಣವನ್ನು ಕೊಟ್ಟು ಅವರನ್ನಾದರೂ ನೇಮಿಸಿಕೊಳ್ಳಬಹುದು. ಇದುವರೆಗೆ ಒಕ್ಕಲತನವಿದ್ಯೆಯನ್ನು ಕಲಿತು ನಿರುದ್ಯೋಗಿಗಳಾಗಿರುವವರಿಗೆ ಮೊಟ್ಟ ಮೊದಲಿನ ಪ್ರಾಶಸ್ತ್ಯವನ್ನು ಕೊಡಬೇಕು. ಶಿಕ್ಷಣವನ್ನು ಕೊಡುವಾಗ ವಿದ್ಯಾರ್ಥಿಗಳಿಗೆ ಕೃಷಿಯ ಎಲ್ಲಾ ಬಾಬುಗಳಲ್ಲಿಯೂ ಪ್ರತ್ಯಕ್ಷ ಅನುಭವವು ಬರುವಂತೆ ಏರ್ಪಾಟು ಮಾಡಬೇಕು. ಗದ್ದೆ ಹೂಡುವುದು, ಬಿತ್ತುವುದು, ಇತ್ಯಾದಿ ಕೆಲಸಗಳನ್ನು ಮಾಡುವಾಗ 8-10 ವಿದ್ಯಾರ್ಥಿಗಳನ್ನು ಒಟ್ಟಾಗಿ ನೇಮಿ

ಒಟ್ಟಾಗಿ ನೇಮಿಸುವುದಕ್ಕಿಂತ ಎರಡೆರಡೇ ವಿದ್ಯಾರ್ಥಿಗಳನ್ನು ನೇಮಿಸುವುದು ಒಳ್ಳೆಯದು. ಅಂದರೆ ಯಾರೂ ಕಳ್ಳತಪ್ಪಿಸಿಕೊಳ್ಳಲು ಆಸ್ಪದವಾಗುವುದಿಲ್ಲ. ಶಿಕ್ಷಣ ಕಾಲದಲ್ಲಿ ಪ್ರತಿಯೊಬ್ಬ ವಿದ್ಯಾರ್ಥಿಯೂ ಸರಾಸರಿ ಕಷ್ಟಪ್ರಮಾಣದಲ್ಲಿ ಅರ್ಧ ಎಕರೆ ಭೂಮಿಯನ್ನಾದರೂ ಕೃಷಿಮಾಡುವಂತೆ ಏರ್ಪಾಡಿರಬೇಕು. ಒಟ್ಟಿನಲ್ಲಿ ಈಗ ನೌಕರಿಯಲ್ಲಿರುವ A. A ಗಳು, ಒಕ್ಕಲುತನ ಶಿಕ್ಷಣವನ್ನು ಪಡೆದು ನಿರುದ್ಯೋಗಿಗಳಾಗಿರುವವರು, ಒಕ್ಕಲತನವನ್ನು ತೆಗೆದುಕೊಂಡು ಮುಲ್ಕಿಪಾಸಾದವರು ಇವರಿಂದಲೂ; ಒಕ್ಕಲತನವನ್ನು ಕಲಿಸುವ ಪ್ರಾಥಮಿಕ ಶಾಲೆಗಳು, ಮತ್ತು ಕೇವಲ ಒಕ್ಕಲುತನವನ್ನೇ ಕಲಿಸುವ ಶಾಲೆಗಳು ಇವುಗಳಿಂದಲೂ, ಪ್ರತಿವರ್ಷವೂ ಸಾಕಷ್ಟು ಸಂಖ್ಯೆಯಲ್ಲಿ ತಜ್ಞ ಪಾಲಕರನ್ನು ಪಡೆಯಬಹುದು.

ಇಂತಹ ಪಾಲಕರನ್ನು ನೇಮಿಸಿಕೊಳ್ಳುವಾಗ ವಹಿಸಬೇಕಾದ ಧೋರಣೆಯ ಬಗ್ಗೆ ಕೆಲವು ಸೂಚನೆಗಳನ್ನು ಹೇಳಬಹುದು. ಸಾಕಷ್ಟು ಸ್ವಂತಭೂಮಿ ಇರುವವರಿಗೂ, ಇರುವ ಭೂಮಿಯನ್ನು ಪಡಕೆಡವಿದವರಿಗೂ ಈ ಸವಲತ್ತುಗಳನ್ನು ಎಂದಿಗೂ ಕೊಡಬಾರದು. ಸ್ವಲ್ಪವೂ ಭೂಮಿಯಿಲ್ಲದವರಿಗೂ, ಬಡವರಾದ ಉತ್ಸಾಹಿತರುಣರಿಗೂ ಮೊಟ್ಟಮೊದಲಿನ ಪ್ರಾಶಸ್ತ್ಯವನ್ನು ಕೊಡಬೇಕು. ಕೇಂದ್ರ ಪಾಲಕ ಸಾಧ್ಯವಿದ್ದಮಟ್ಟಿಗೂ ಅವರು ವಾಸಮಾಡುವ ಹಳ್ಳಿಗೆ ಹತ್ತಿರವಿರುವ ಕೇಂದ್ರದಲ್ಲಿ ನೇಮಿಸಿಕೊಳ್ಳಬೇಕು. ಇಲ್ಲವೆ ಅವರು ಅಪೇಕ್ಷಿಸುವ ಕೇಂದ್ರದಲ್ಲಿ ನೇಮಿಸಿಕೊಳ್ಳಬೇಕು. ಆಯಾಯಾ ತಾಲೂಕಿನ ಪಾಲಕರನ್ನು ಆಯಾಯಾ ತಾಲೂಕಿನಲ್ಲಿಯೇ ನೇಮಿಸುವುದು ಒಳ್ಳೆಯದು. ಅವರಾಗಿಯೇ ಅಪೇಕ್ಷಿಸಿದ ಹೊರತು, ಅವರನ್ನು ಬೇರೆ ತಾಲೂಕಿಗೆ ನೇಮಿಸಬಾರದು. ಮಲೆನಾಡು, ಬಯಲುಸೀಮೆ, ಮತ್ತು ಸಮುದ್ರ ತೀರದ ಕೇಂದ್ರಗಳಿಗೆ ಆಯಾಯಾ ಭಾಗದ ಜನರನ್ನೇ ನೇಮಿಸಬಹುದು. ಅಂದರೆ ಮಲೆನಾಡಿನವರಿಗೆ ಬಯಲುಸೀಮೆಯ ಕೇಂದ್ರ, ಬಯಲುಸೀಮೆಯವರಿಗೆ ಮಲೆನಾಡಿನ ಕೇಂದ್ರ ಸಿಕ್ಕದಂತೆ ಎಚ್ಚರಿಕೆಯನ್ನು ತೆಗೆದುಕೊಳ್ಳಬೇಕು. ಹೀಗೆ ಮಾಡಿದರೆ ಪಾಲಕರು ಆಯಾಯಾ ಭಾಗಗಳಿಗೆ ಹೊಂದಿಕೊಂಡು ಅಲ್ಲಿ ಕಾಯಂ ಆಗಿ ಉಳಿಯುತ್ತಾರೆ. ಸರ್ಕಾರದಲ್ಲಿ ನೌಕರಿಯು ಸಿಕ್ಕದ ವರ್ಗದ ಜನರಿಗೆ ಯಾ, ಇಂತಿಷ್ಟೇ ಪ್ರಮಾಣದಲ್ಲಿ [ಕಡಿಮೆಯಿರುವವರ] ನೌಕರಿಯನ್ನು ಕೊಡಬೇಕೆಂಬ ನಿರ್ದಿಷ್ಟ ಪಡಿಸಿದ ವರ್ಗದ ಜನರಿಗೆ ಈ ಯೋಜನೆಯಲ್ಲಿ ಪ್ರಾಶಸ್ತ್ಯವನ್ನು ಕೊಡಬಹುದು.

ಈ ಯೋಜನೆಯ ಲಾಭಗಳು

ಒಕ್ಕಲತನ ಖಾತೆಯಲ್ಲಿ ಈಗಿರುವ A. A. ಗಳಿಂದ, ಹೆಚ್ಚಿನ ವೆಚ್ಚವೇನೂ ಇಲ್ಲದೆ ಪ್ರತಿ ಜಿಲ್ಲೆಗೆ ಕನಿಷ್ಠ ಪ್ರಮಾಣ 400 ಎಕರೆ ಭೂಮಿಯನ್ನು ಹೊಸದಾಗಿ ಸಾಗುವಳಿ, 400 ಖಣ್ಣಿಸಷ್ಟು ಮುಖ್ಯ ಧಾನ್ಯವನ್ನು, ಇದರ ಅರ್ಧದಷ್ಟು ಉಪಧಾನ್ಯವನ್ನು ಬೆಳೆಯಿಸಬಹುದು. ಅಲ್ಲದೆ ಪ್ರತಿ ವರ್ಷದ ಉತ್ಪನ್ನವು ಕ್ರಮಶಃ ಇಷ್ಟೇ ಪ್ರಮಾಣದಲ್ಲಿ ಹೆಚ್ಚುತ್ತಾ ಹೋಗುತ್ತದೆ.

ಆಧುನಿಕ ಒಕ್ಕಲತನವು ವ್ಯವಹಾರ ಹಾಗೂ ಆರ್ಥಿಕ ದೃಷ್ಟಿಯಿಂದ ಲಾಭಕರವಹುದೋ ಅಲ್ಲವೋ ಎಂಬುದನ್ನು ಪ್ರತ್ಯಕ್ಷವಾಗಿ ಕಂಡು ತಜ್ಞರ ಅಭಿಪ್ರಾಯವನ್ನು ಸ್ವೀಕರಿಸುವುದಕ್ಕೂ ಹಾಗೂ ಟೀಕಾಕಾರರ ಬಾಯಿ ಮುಚ್ಚುವುದಕ್ಕೂ, ಸಹಾಯವಾಗುತ್ತದೆ.

3 ದೇಶದ ಎಲ್ಲಾ ಭಾಗಗಳಲ್ಲಿ ನಡೆಯುವ ಈ ಪ್ರಯೋಗದಿಂದ, ಯಾವ ಯಾವ ಭಾಗಗಳ ಈ ಪದ್ಧತಿಯು ನಿಜವಾಗಿಯೂ ಲಾಭಕರ ಹಾಗೂ ಯಾವ ಭಾಗಗಳಲ್ಲಿ ಲಾಭಕರವಲ್ಲ ಎಂಬುದನ್ನು ತಿಳಿದುಕೊಳ್ಳುವುದಕ್ಕೂ, ಮುಂದಿನ ಸಂಶೋಧನೆಗೂ, ಮತ್ತು ತಜ್ಞರ ಅಭಿಪ್ರಾಯವನ್ನು ಒರೆಗೆ ಹಚ್ಚಿ ನೋಡಿ ಸತ್ಯ ಸ್ಥಿತಿಯನ್ನು ಕಂಡು ಹಿಡಿಯುವುದಕೂ ಸಹಾಯವಾಗುತ್ತದೆ.

4. ಹೊಸದಾಗಿ ತಜ್ಞ ಕಾರ್ಯಕ್ಷಮ ಕೃಷಿಕರ ಒಂದು ಹೊಸ ಸೈನ್ಯವನ್ನೇ ನಿರ್ಮಾಣ ಮಾಡಿದಂತಾಗಿ, ಕೂಡಲೆ ಹೆಚ್ಚು ಆಹಾರವನ್ನು ಬೆಳೆಯುವುದರ ಜೊತೆಗೆ, ಪ್ರತ್ಯಕ್ಷ ರೂಪದಲ್ಲಿ ಸುತ್ತು ಮುತ್ತಲಿನ ರೈತರಿಗೆ ಆಕರ್ಷಕ ರೀತಿಯಲ್ಲಿ ಪ್ರಚಾರ ಮಾಡಿದಂತಾಗಿ ಅವರೂ ಇದರ ಲಾಭವನ್ನು ಪಡೆಯುವಂತೆ ತಾವಾಗಿಯೇ ಉತ್ಸಾಹದಿಂದ ಮುಂದೆ ಬರುವಂತೆ ಮಾಡಲು ಸಾಧ್ಯವಾಗುತ್ತದೆ. ಈ ತಜ್ಞ ಕೃಷಿಕರು ಆಯಾ ಗ್ರಾಮದ ರೈತರೇ ಆಗಿಬಿಡುವುದರಿಂದ ಅವರು ತಮ್ಮ ಅನುಭವವನ್ನೂ, ಕೃಷಿವಿಚಾರದಲ್ಲಿ ಸಲಹೆಯನ್ನೂ ಹೆಮ್ಮೆಯಿಂದ ನೀಡುತ್ತಾರೆ. ರೈತರು ಸಹ ತಮ್ಮವರೇ ಆದ ಈ ತಜ್ಞರ ಸಲಹೆಯಂತೆ ಮನಃಪೂರ್ತಿಯಾಗಿ ವರ್ತಿಸುತ್ತಾರೆ. ಈಗಿನ ಫೀಲ್ಡ್‌ಮನ್ ಅಥವಾ A. A. ಗಳು ಮಾಡುವ ಬಹುದೇ ಎಲ್ಲಾ ಕೆಲಸಗಳನ್ನೂ ಈ ಯೋಜನೆಯನ್ನು ಕಾರ್ಯಕ್ರಮಕೇಂದ್ರ ಪಾಲಕರಿಗೆ ಒಪ್ಪಿಸುವುದರಿಂದ ಸರ್ಕಾರದ ಆಡಳಿತ ಯಂತ್ರವು ಕುಂಠಿತವಾಗುವುದಿಲ್ಲ. ಈ ಯೋಜನೆಯು 5ರಿಂದ 10 ವರ್ಷಗಳ ವರೆಗೆ ಇರುವುದರಿಂದ ಇಷ್ಟು ಕಾಲದಲ್ಲಿ ಮುಂದಿನ ವ್ಯವಸ್ಥೆಗೆ ಅನುಕೂಲವಾಗುವಂತೆ ಆಡಳಿತ ವಿಧಾನವನ್ನು ಬದಲಾಯಿಸಿ ಕೊಳ್ಳಬಹುದು.

6 ಈ ಯೋಜನೆಯು ಸಂಪೂರ್ಣವಾಗಿ ಜಾರಿಗೆ ಬಂದನಂತರ ಈಗಿರುವ A. A. ಗಳನ್ನು ತೆಗೆದು ಹಾಕಿ ದೊಡ್ಡ ಪ್ರಮಾಣದಲ್ಲಿ ಹಣದ ಉಳಿತಾಯ ಮಾಡಬಹುದು. ಈ ಹಣವನ್ನು ಮುಂದೆ ಒಡ್ಡು, ಕೆರೆ, ಸಂಶೋಧನೆ ಇತ್ಯಾದಿ ಕಾರ್ಯಗಳಿಗೆ ವಿನಿಯೋಗಿಸಬಹುದು.

7 5 6 ವರ್ಷಗಳೊಳಗಾಗಿ ದೇಶದ ಪ್ರತಿಯೊಂದು ಮೂಲೆಯಿಂದಲೂ 2-3 ಮೈಲುಗಳ ಅಂತರದಲ್ಲಿ ಒಂದೊಂದು ಇಂತಹ ಕಾರ್ಯಕ್ರಮ ಕೇಂದ್ರವನ್ನು ಸ್ಥಾಪಿಸಲಾಗುದರಿಂದಲೂ, ಸುತ್ತಲಿನ ರೈತರು ಕೃಷಿವಿಧಾನವನ್ನು ಪ್ರತ್ಯಕ್ಷವಾಗಿ ಕಂಡು ಅನುಭವಪಟ್ಟು ಕೇಂದ್ರ ಪಾಲಕರಿಂದ ಸೂಕ್ತ ಸಲಹೆಗಳನ್ನು ತಾವಾಗಿಯೇ ಪಡೆಯುವುದರಿಂದಲೂ, ಮುಂದೆ ಪ್ರತ್ಯೇಕವಾಗಿ ಪ್ರಚಾರ ಮಾಡಬೇಕಾದ ಅವಶ್ಯಕತೆಯೇ ಉಳಿಯುವುದಿಲ್ಲ. ಈ ಬಾಬಿನ ಹಣ ಹಾಗೂ ಶ್ರಮದ ಉಳಿತಾಯವಾಗುತ್ತದೆ.

8. 2-3 ಮೈಲುಗಳ ಅಂತರದಲ್ಲಿ ಒಂದೊಂದು ಕೇಂದ್ರವಿರುವುದರಿಂದ ಈ ಪಾಲಕರಲ್ಲಿ ಒಂದು ತಥವಾದ ಸ್ಪರ್ಧೆಯುಂಟಾಗಿ ಅವರು ಮನಃಪೂರ್ತಿಯಾಗಿ ದುಡಿಯಲು ಆಸ್ಪದವಾಗುತ್ತದೆ.

9. ಹೀಗೆ ದೇಶದಲ್ಲಿ ತಜ್ಞ ಕೃಷಿಕರ ಬಹು ದೊಡ್ಡ ಸೈನ್ಯವೇ ನಿರ್ಮಾಣವಾಗುವುದರಿಂದ ಮುಂದೆ ಹೊಸ ಸಂಶೋಧನೆಗಳಿಂದ ಕಂಡುಬಂದ ಅಂಶಗಳನ್ನು ಹೊಸ ವೆಚ್ಚವೇನೂ ಇಲ್ಲದೆ ಕಾರ್ಯರೂಪಕ್ಕೆ ಇಳಿಸುವುದಕ್ಕೂ ಅದನ್ನು ಜನರಿಗೆ ಪ್ರತ್ಯಕ್ಷವಾಗಿ ತಿಳಿಸುವುದಕ್ಕೂ ಅನುಕೂಲವಾಗುತ್ತದೆ.*

* Note. ಗೆಳೆಯ ಶ್ರೀ ಎಸ್. ಎಸ್. ಕಾದಯ್ಯನ ಮಠದವರ ಇವರು ಈ ಲೇಖವನ್ನು ಬರೆಯಲು ಒದಗಿಸಿದ ಕೆಲವು ಮಾಹಿತಿಗಳನ್ನು ಕೃತಜ್ಞತೆಯಿಂದ ಉಪಯೋಗಿಸಿಕೊಳ್ಳಲಾಗಿದೆ.

Nambiar's
ARYA VAIDYA SALA
UDIPI
Ideal House for Ayurvedic Treatment.
T. N. Kelu Nambiar,
Vaidya

ಋತುಸ್ರಾವ ನಿಂತಿತು

'ಕುಮಾರಿ' ಪಿಲ್ಸ್‌ಗಳನು ಉಪಯೋಗಿಸಿದರೆ ಹಠಾತ್ತಿ ಋತುಸ್ರಾವವಾಗುವುದು. ಹೊಟ್ಟೆಗೆ ಬರುವುದು, ಈ ಔಷಧ ಸೇವನೆಯಿಂದ ತೀವ್ರ ಗುಣಹೊಂದಬಹುದು, ಯಾವ ಬಾಧಕವೂ ಇಲ್ಲ. ಸಾವಿರಾರು ಮಂದಿಗೆ ಖಾತ್ರಿ ಗುಣವಾಗಿದೆ. ಬೆಲೆ: ರೂ. 3-; ಸ್ಪೆಶಲ್ ರೂ. 5 ಅಧಿಕಾಧಿಕ ಸ್ಪೆಶಲ್ ರೂ. 8- [ವಿ. ಪಿ ಹಸ್ತ್ಯಂತರಾಣ ಪ್ರತ್ಯೇಕ.]

MRS. D. DEVEE, F. DS. (N. J.)
Tollygunge CALCUTTA.
ಸ್ಟಾಕಿಸ್ಟರು ರಹಾಕಂಪನಿ, ಮಂಗಳೂರು

"ಗೋಪಾಲ ಭೇಷಜಾಶ್ರಮ" ಮಂಗಳೂರು.
(ಸ್ಥಾಪನೆ 1910)
ಸ್ಥಾಪಕರು:-ಆಯುರ್ವೇದ ಭೂಷಣ ಯಂ. ವಿ. ಶಾಸ್ತ್ರೀ,
ಇವರ
ನವಜೀವಾತು
ಎಂಬ
ಸೂತಿಕಾ ರಸಾಯನ

ಬಾಣಂತಿಯರ ಸಲುವಾಗಿಯೇ ದೇಶ ಮತ್ತು ಪ್ರಕೃತದ ದೇಹಸ್ಥಿತಿಯನ್ನು ನಿರೀಕ್ಷಿಸಿ ತಯಾರಿಸಲ್ಪಟ್ಟ ಅಮೋಘವಾದ ಮಧುರದ್ರವ ರಸಾಯನ. ಅಲ್ಪ ಮೌಲ್ಯದಿಂದ ಬಡವರಿಗೂ, ಭಾಗ್ಯಶಾಲಿಗಳಿಗೂ ಸುಲಭವಾಗಿರುವುದು.



ಹೆಚ್ಚಿನ ಮಾಹಿತಿಗೆ—ಡಾ! ಯಂ. ಸಿ. ಶಾಸ್ತ್ರೀ, ಯಲ್. ಐ.
ಕೊಡಿಯಾಲಬೈಲ ಪೋಸ್ಟು, (ಮಂಗಳೂರು)
ಸ್ಟಾಕಿಸ್ಟರು:—ಡಾ! ಬಿ. ಕೆ. ಶಿವರಾಮರಾವ್, ಕುಂಜಿಬೆಟ್ಟು, ಉಡುಪಿ.

— ಮಕ್ಕಳನ್ನು ಹಡೆಯುವುದು ಸಾಕು —

ಅಶಕ್ತ ಸ್ತ್ರೀಯರಿಗೆ **ಬರ್ಥ ಕಂಟ್ರೋಲ** ರೋಗ ಗ್ರಹಸ್ತ ಹೆಣ್ಣು ಮಕ್ಕಳಿಗೆ

ಏಳು ದಿವಸ ಈ ಮಾತ್ರೆಗಳನ್ನು ಸೇವನ ಮಾಡಿದರೆ ಮುಂದೆ ಖಂಡಿತವಾಗಿ ಮಕ್ಕಳಾಗುವದಿಲ್ಲ ಸ್ತ್ರೀಯರು ಪ್ರಕೃತಿಗಳು ಸರಿಯಾಗಿ ಮುಟ್ಟಾಗುತ್ತಾರೆ. ಅಲ್ಲದೆ ಸ್ತ್ರೀಯರ ಬಿಳೀರಗು, ಪ್ರದರರೋಗ, ಹೊಲಿಕುಟ್ಟು ಗುಣವಾಗಿ ಸ್ತ್ರೀಯು ಗರ್ಭಿಣಿಯಾಗುವದಿಲ್ಲ. ಈ ಔಷಧವನ್ನು ಸೇವಿಸುವ ಕ್ರಮ: ಪ್ರತಿದಿವಸ ಮುಂಜಾನೆ ೧ ಗುಳಿಗೆ ಮಧ್ಯಾಹ್ನಕ್ಕೆ ೧ ಗುಳಿಗೆ, ಸಂಜೆಗೆ ೧ ಗುಳಿಗೆಯಂತೆ ಊಟದ ಮೊದಲು ತಕ್ಕೊಳ್ಳಬೇಕು. ಏಳುದಿವಸ ಈ ಔಷಧವನ್ನು ಬಿಸಿನೀರಿನಲ್ಲಿ ಸೇವಿಸಬೇಕು.

ಪಥ್ಯ:—ಹರವೀಪಲ್ಲೆ ಬಿಡಬೇಕು. ೭ ದಿವಸ ಸಂಪೂರ್ಣ ಔಷಧದ ಕಿಮ್ಮತ್ತು ರೂಪಾಯಿ 5—0—0. ಪೋಸ್ಟ ಚಾರ್ಜು ೧೨ ಆಣೆ.

ಪಾಲಕರು:—ಹಾಳಪ್ಪಾ ಫಕೀರಪ್ಪಾ ಹಾವಣಗೇರಿ
ಆಯುರ್ವೇದ ಔಷಧಾಲಯ ಗದಗ ಸಿಟಿ.

ಏಜಂಟರು:—ಹುಬ್ಬಳ್ಳಿ ಧಾರವಾಡ,—ಹುಬ್ಬಳ್ಳಿ, ಗದಗ, ಬಾಗಲಕೋಟೆ ಧಾರವಾಡ ...
... ಸಂಜೀವೇಶ್ವರ ಮೆಡಿಕಲ್ ಹಾವನಗೇರಿ
ದಾವಣಗೇರಿ:—ದಾವಣಗೇರಿ ಪ್ರೆಸ್ ... ಕೆಮಿಸ್ಟ್, ...

EDITED, PRINTED & PUBLISHED BY K. H. SHETTY AT THE NAVAYUGA PRESS, UDIPI, S.INDIA

Regd No M. 3618

LICENCE No. 31
Licensed to post without prepayment

Estd 1921 ಸ್ಥಾಪನೆ

17—5—1951

Founder: Sri A. B Shetty,
Minister for Agriculture & Veterinary

ನವಯುಗ

ವರ್ಷ ೩೧ | NAVAYUGA WEEKLY | Post Box No 22 | UDIPI. | Vol. 31
ವಾರ ೩೬ | | | | No. 36

ಅಂತರಂಗ
ಪುಸ್ತಕ ಪತ್ರಿಕೆ
ಚಂದಾ ವಿವರ
ವರ್ಷಕ್ಕೆ ರೂ 4-8-0
೬ ತಿಂಗಳಿಗೆ ರೂ 2-8 0
(ಮುಂಗಡ)
ಜಾಹೀರಾತಿಗೆ ಉತ್ತಮ ಸಾಧನ
ಅಂತರಂಗ, ಉಡುಪಿ

ನವಯುಗ
ಚಂದಾ ವಿವರ:
(ಮುಂಗಡ)
ವರ್ಷಕ್ಕೆ ರೂ 5-12-0
೬ ತಿಂಗಳಿಗೆ ,, 3- 0-0
ಬಿಡಿಪ್ರತಿ ,, 0- 2-0
6 ತಿಂಗಳಿಗಿಂತ ಕಡಿಮೆ ಚಂದಾ ಸ್ವೀಕರಿಸಲ್ಪಡದು
ನವಯುಗ, ಉಡುಪಿ

ಅಮೆರಿಕೆಯ ಅಹಂಬುದ್ಧಿ

ಜಗತ್ತಿನ ಶಾಂತಿಗೆ ಭಂಗತರುವಂತಹ ಪ್ರಮಾದವನ್ನು ಅಮೆರಿಕೆಯು ಕೊರಿಯಾ ಯುದ್ಧದಮೂಲಕ ಮಾಡಿತು. ಕೊರಿಯಾ ಯುದ್ಧದಮೂಲಕ ಏಶ್ಯಾಟಿಕ್ ರಾಷ್ಟ್ರಗಳ ಮೇಲೆ ತನ್ನ ಪ್ರಭುತ್ವವನ್ನು ಸ್ಥಾಪಿಸಬೇಕೆಂಬ ಹಂಬಲವನ್ನದು ಇಟ್ಟುಕೊಂಡಿತ್ತು. ತನ್ನ ಶಕ್ತಿಸಾಮರ್ಥ್ಯದ ಮುಂದೆ ತಡೆಯಾಗಿ ನಿಂತಿರುವ ರಾಷ್ಟ್ರವೆಂದರೆ ರಷ್ಯಾವೆಂಬುದು ಅದಕ್ಕೆ ಚೆನ್ನಾಗಿ ಗೊತ್ತಿತ್ತು. ದ್ವಿತೀಯ ಮಹಾಯುದ್ಧದಲ್ಲಿ ತಾನು ವಿಶೇಷ ಹಾನಿಗೊಳಗಾಗದೆ ಯುದ್ಧ ವಿಜಯ ಗಳಿಸಿಕೊಂಡ ಅಮೆರಿಕೆಗೆ ಇಡೀ ಜಗತ್ತನ್ನೇ ತನ್ನ ಮಂಗಮುಷ್ಟಿಯಲ್ಲಿ ಹಿಡಿದುಕೊಳ್ಳಬಲ್ಲೆ ಎನುವ ಅಹಂಕಾರ ದುರಾಶೆಯುಂಟಾಯಿತು. ಜಪಾನದ ಲಕ್ಷೋಪ ಲಕ್ಷ ನಿರುಪದ್ರವೀ ಜನಗಳ ಮೇಲೆ ಅಟಂಬಾಂಬನ್ನು ಸುರಿದು ನಾಶಹತ್ಯೆಯಿಂದ ಅದಕ್ಕೆ ಜಗತ್ತನ್ನೇ ಗೆಲುವ ಮಹಾ ಅಸ್ತ್ರವೊಂದು ನಮ್ಮೊಳಗಿದೆಯೆಂಬ ಹೆಮ್ಮೆಯಾಯಿತು. ಅಂತಲೇ ರಷ್ಯಾವನ್ನು ಅಟಂಬಾಂಬಿನಿಂದ ಸೋಲಿಸಿ ಕಮ್ಯೂನಿಸಮದ ನಿರ್ನಾಮಮಾಡಬಹುದೆಂದು ಬಯಸಿತು. ಅನಿರೀಕ್ಷಿತವಾಗಿ ತಲೆದೋರಿದ ಕೊರಿಯದ ಪ್ರಕರಣ ಈ ದುರ್ಬುದ್ಧಿಯ ಮೂಲಪೀಠಿಕೆಯಾಗಿದೆ. ಒಂದುಕಡೆಯಿಂದ ಯುದ್ಧ ನಡೆಸಿ ಇನ್ನೊಂದು ಕಡೆಯಿಂದ ನ್ಯಾಯ ತಂತ್ರಗಳ ಯಾಚನೆಯ ನಟನೆಯನ್ನು ಸಂಯುಕ್ತರಾಷ್ಟ್ರ ಸಂಘದೆದುರು ನಡೆಸಿತು. ಅಲ್ಲಿ ಅಮೆರಿಕೆಗೆ ಬೇಕಾಗಿದ್ದುದು ನ್ಯಾಯದಾನವಲ್ಲ, ತಾನು ತುಳಿದ ತಪ್ಪುಮಾರ್ಗವನ್ನು ಸನ್ಮಾರ್ಗವೆಂದು ಹೇಳಿಸಿಕೊಳ್ಳಬೇಕಾಗಿತ್ತು ಅಷ್ಟೆ. ಆದರೆ ಏಶ್ಯಾದ ರಾಷ್ಟ್ರಗಳು ಯುದ್ಧವನ್ನು ವಿರೋಧಿಸಿದವು. ಯುದ್ಧಪರಿಹಾರಕಮಾರ್ಗವನ್ನು ಸೂಚಿಸಿದವು. ಅಮೆರಿಕೆಗೆ ಅಂದು ಬೇರೆಯವರ ಉಪದೇಶ ಬೇಕಾಗಿರಲಿಲ್ಲ, ತನ್ನ ಉದ್ದೇಶ ಸಾಧನೆಗೆ ಸೈತಾನರೀತಿಯ ಬೆಂಬಲವಷ್ಟೆ! ಆರ್ಥಿಕ ಸಂಸ್ಕೃತಿಕ ಹಂಗಿನ ರಾಷ್ಟ್ರಗಳು ಅಮೆರಿಕೆಯ ಇಚ್ಛೆಗೆ ವಿರುದ್ಧವಾದವೆ ಆತ್ಮಹತ್ಯೆಮಾಡಿಕೊಂಡವು. ಅಂತಲೇ ಸಂ. ರಾ. ಸಂಘವು ಕೊರಿಯಾಯುದ್ಧದಲ್ಲಿ ಕಾದುದು ಅಮೆರಿಕೆಯ ಕರ್ತವ್ಯವಲ್ಲದೆ ಎಲ್ಲ ರಾಷ್ಟ್ರಗಳ ಮುಖ್ಯ ಕರ್ತವ್ಯವೆಂದ ಸಾರಿತು. ಆ ಮೇಲೆ ಯುದ್ಧವನ್ನು ಶಾಂತರೀತಿಯಿಂದ ಬಗೆಹರಿಸಲು ಒಂದ ಸಂದರ್ಭಗಳನ್ನುಪಯೋಗಿಸಲು ಅಮೆರಿಕೆಯು ಅತ್ಯಭಿಮಾನ ಬಿಡಲಿಲ್ಲ. ಅಂತಲೆ ಬೇರೆಯವರ ಇಷ್ಟಾನಿಷ್ಟಗಳ ಪರಿವೆಯಿಲ್ಲದೆ ಅಮೆರಿಕೆ ತನ್ನ ಕಾರ್ಯವನ್ನು ಮುಂದುವರಿಸಿತು

ರಷ್ಯಾ, ಅಮೆರಿಕೆಯ ಕುಟಿಲ ರಾಜನೀತಿಯನ್ನು ಹಿಂದಿನಿಂದಲೂ ಅರಿತಿದೆ. ರೂಸ್‌ವೆಲ್ಟರ ವಿಶಾಲ ಮನೋವೃತ್ತಿಯನ್ನು ಸ್ಟಾಲಿನ್ ಮೆಚ್ಚಿದರಾದರೂ ದ್ವಿತೀಯ ಮಹಾಯುದ್ಧದಲ್ಲಿ ಒಂದೇ ಧೋರಣೆಯನ್ನನುಸರಿಸಿದರೂ, ಅಮೆರಿಕೆಯ ಬಂಡವಲಶಾಹೀ ಜನತೆ, ಕಮ್ಯೂನಿಸಮದ ಕಡುವಿರೋಧಿಗಳೆಂಬುದನ್ನು ಅದು ಚೆನ್ನಾಗಿ ಬಲ್ಲಿ. ಈಗಿನ ಅಧ್ಯಕ್ಷ ಟ್ರೂಮನನಂತೂ ತೀರ ಜಾತೀಯವಾದಿ; ಬಂಡವಲಶಾಹಿಗಳ ಕೈಗೊಂಬೆ. ಕಮ್ಯೂನಿಸಮದ ಬದ್ಧವಿರೋಧಿಯೆಂಬುದು ರಷ್ಯಾಕ್ಕೆ ಮನವರಿಕೆಯಾಗಿದೆ. ಒಂದಲ್ಲ ಒಂದು ದಿನ ಇವರಿಂದ ನಮಗೆ ಕೇಡಿದೆಯೆಂಬುದನ್ನು ರಷ್ಯಾ ತಿಳಿದಿತ್ತು. ಅಂತಲೇ ಈಗ ಅಮೆರಿಕೆಯ ಸೊಕ್ಕನ್ನು ಮುರಿಯಲು ಅಟಂಬಾಂಬು ರಷ್ಯದೊಡನೆಯೂ ಇದ್ದವಿದೆ. ಅಟಂಬಾಂಬನ್ನು ಮೀರಿಸುವ ಪ್ರಬಲ ಅಸ್ತ್ರದ ನಿರ್ಮಾಣದಲ್ಲಿ ರಷ್ಯಾ ಚಿಂತಿಸುತ್ತಲಿದೆ. ರಷ್ಯಾಕ್ಕೆ ಉಳಿದೆಲ್ಲ ರಾಷ್ಟ್ರಗಳ ಮೇಲೆ ಸಹಾನುಭೂತಿಯಿದೆ—ಏಕೆಂದರೆ ಎಲ್ಲ ರಾಷ್ಟ್ರಗಳಲ್ಲೂ ಕಮ್ಯೂನಿಸಮದ ವ್ಯಾಪಕತೆ ಹೆಚ್ಚಾಗಿದೆ. ಜಗತ್ತಿನಲ್ಲಿ ಅತಿ ಕಡಿಮೆ ಸಂಖ್ಯೆಯಲ್ಲಿ ಕಮ್ಯೂನಿಸ್ಟರಿರುವ ದೇಶವೆಂದರೆ ಅಮೆರಿಕಾ. ರಷ್ಯಾ ಹಾಗೂ ಕಮ್ಯೂನಿಸಮದ ಮೇಲೆ ಅವರಿಗಿರುವ ದ್ವೇಷಭಾವ ಬೇರಾರಿಗೂ ಇರಲಾರದು. ಪ್ರಕೋಪಕ್ಕೆ ಬಂದಿರುವ ಕೊರಿಯ ಪ್ರಕರಣ ಒಂದುವೇಳೆ ಶಾಂತರೀತಿಯಿಂದ ಕೊನೆಗೊಂಡರೂ ಬಂಡವಲಶಾಹೀ ಹಾಗೂ ಕಮ್ಯೂನಿಸಮದ ವೈರಬುದ್ಧಿ ಎಂದೂ ಅಳಿಯದು. ಒಂದಲ್ಲ ಒಂದು ದಿನ ಈ ಜ್ವಾಲಾಮುಖಿ ಸಿಡಿದು ಸ್ಫೋಟಿಸಲಿದೆ.

ಅಮೆರಿಕೆಯ ಹಟಮಾರಿತನಕ್ಕೆ ಅತಿ ಮನಸ್ಸಿನಿಂದ ಒಪ್ಪಿದ ರಾಷ್ಟ್ರಗಳೆಲ್ಲ ಕೊರಿಯದಲ್ಲಾಗುವ ಸಂಕಟದಿಂದಲೂ ವಿಶೇಷ ಹಾನಿಯಿಂದಲೂ ತುಂಬ ನೊಂದುಕೊಂಡಿವೆ ಮಾತ್ರವಲ್ಲದೆ ಅಂದು ತೋರಿದ ವಿಶ್ವಾಸ-ಸಹಕಾರ ಸಹಾನುಭೂತಿಗಳನ್ನು ಇಂದು ತೋರುತ್ತಿಲ್ಲ. ಅಮೆರಿಕೆಯ ಬಲಗೈಯಂತಿರುವ ಬ್ರಿಟನ್ ಅಮೆರಿಕೆಯ ಕುರಿತು ಎರಡೆಣಿಸಿದೆ. ಅಮೆರಿಕೆಯ ಅತಿಆಕಾಂಕ್ಷೆಗಳಿಗೆ ತನ್ನ ಆತ್ಮಬಲಿಯನ್ನು ಕೊಡಬೇಕೆ? ಕಮ್ಯೂನಿಸ್ಟರ ವಿರುದ್ಧವೆಂಬ ಯುದ್ಧಕ್ಕೆಗೊಂಡು ನಾವೇಕೆ ನಿಷ್ಠುರಕಟ್ಟಿಕೊಳ್ಳಬೇಕು? ರಶ್ಯದ ವಿರುದ್ಧ ಹೋರಾಡುವದರಿಂದ ಅಮೆರಿಕೆಗಿಂತ ಮೊದಲು ನಾವೇ ವಿಶೇಷ ಹಾನಿಗೆ ತುತ್ತಾಗಬೇಕು ಎಂದಮೇಲೆ ನಾವೇಕೆ ಯುದ್ಧಮಾಡಬೇಕ? ಎನುವ ಹಲವಾರು ಪ್ರಶ್ನೆಗಳು ಬ್ರಿಟನದ ತಲೆ ತಿನ್ನುತ್ತಿವೆ. ಕೂಲಿಗಾರ ಸರಕಾರ ಬಂದಮೇಲಂತೂ ಕಮ್ಯೂನಿಸಮದ ವರ್ಚಸ್ಸು ದಿನದಿಂದ ದಿನಕ್ಕೆ ಅಲ್ಲಿ ವರ್ಧಿಸುತ್ತಲಿದೆ. ಇಂದು ಜನತೆಯ ಒಲವು ಆ ಕಡೆಗೆ ಹರಿಯುತ್ತಿರುವಾಗ ಬ್ರಿಟನ್ ಬಹಳವಾಗಿ ಅಮೆರಿಕೆಯ ತಾಳಕ್ಕೆ ಸರಿಯಾಗಿ ಕುಣಿಯುವಂತಿಲ್ಲ. ಜ| ಮೆಕಾರ್ಥರನ್ನು ಹಿಂದೆ ಕರೆಸಿಕೊಳ್ಳುವದಕ್ಕೆ ಬ್ರಿಟನವೇ ಮುಖ್ಯವಾಗಿದೆ. ಬ್ರಿಟನದ ತೀವ್ರ ಪ್ರತಿಭಟನೆಯಿಂದಲೇ ಜ| ಮೆಕಾರ್ಥರನ್ನು ಹಿಂದೆ ಕರೆಸಿಕೊಳ್ಳಲಾಗಿದೆ ಅಲ್ಲದೆ ಕಮ್ಯೂನಿಸ್ಟ ಚೀನಾದ ಮೇಲೆ ಬ್ರಿಟನು ತೋರುತ್ತಿರುವ ಔದಾರ್ಯವನ್ನು ಅಮೆರಿಕೆ ಸಹಿಸುತ್ತಿಲ್ಲ. ಕಮ್ಯೂನಿಸ್ಟ ಚೀನಾಕ್ಕೆ ಬ್ರಿಟನು ಕಳಿಸುತ್ತಿರುವ ಸರಕು ಸರಂಜಾಮುಗಳ ಮೇಲೆ ತೀವ್ರವಾದ ವಿರೋಧ ಸೂಚನೆ ಅಮೆರಿಕೆ ಮಾಡಿರುತ್ತದೆ. ತನ್ನ ಏಕಮಾತ್ರ ಗೆಳೆಯನೆಂತಿದ್ದ ಬ್ರಿಟನದ ಕೂಡಾ ಅಮೆರಿಕೆಯು ಕುರಿತು ಎರಡೆಣಿಸುವಂತಾಗಿದೆ. ಬ್ರಿಟನು ಅಮೆರಿಕೆಯೊಳಗಣ ಆಂತರಿಕ ವಿಚಾರಗಳು ತೀರ ವಿರಸಕ್ಕೆಳೆದಿವೆ. ಅದುದರಿಂದ ಅಮೆರಿಕೆಯ ನಿಲುಮೆ ಬಹು ಗಂಡಾಂತರದ್ದಿದೆ. ಅಮೆರಿಕೆಯು ದುಡುಕತನ-ದುರಹಂಕಾರ ಅಲ್ಲಿಸುತ್ತಿದ್ದರೆ ಭಾರತವು ಆದೇಶ ಮಾಡಿದ ವಿಚಾರಗಳನ್ನು ಮಾನ್ಯಮಾಡಿ ನಿಶ್ಚಿಂತತೆಯಲ್ಲಿರಬಹುದಾಗಿತ್ತು. ಆದರೆ ಜಾತೀಯ ಸಂಕುಚಿತ ಬುದ್ಧಿ

[೩ನೇ ಪುಟ ನೋಡಿರಿ.]

ಪ್ರಧಾನ ಕಾರ್ಯಾಲಯ: ಉಡುಪಿ. ಸ್ಥಾಪನೆ: ೧೯೩೫

ದಿ ಕೆನರಾ ಮ್ಯೂಚುವಲ್

ಎಶ್ಯೂರೆನ್ಸ್ ಕಂಪೆನಿ, ಲಿಮಿಟೆಡ್,

ಇದುವೇ

ಪಾಲಿಸಿದಾರರ ನಂಬಿಕೆ ಹೆಚ್ಚಿಸುವ ಹೆಸರು

ಅಲ್ಲದೆ ಸ್ಥಾಪಿತವಾದಂದಿನಿಂದಲೂ

ಲಾಭ (ಬೋನಸ್) ಹಂಚಿದ ಕಂಪೆನಿ.

The Canara Mutual Assurance Co, Ltd.

H O UDIPI (SOUTH INDIA) ESTD. 1935.



ಕತ್ತಲೆಯಲ್ಲಿ ನಿಮ್ಮ ಮಾರ್ಗದರ್ಶಿ.

ಪ್ರವಾಸಿಯ ಪತ್ರಗಳು ೧.

ಶ್ರೀ ಕೆ. ಆರ್. ಕಾರಂತರಿಂದ, ಮಾಜಿ ಆದಾಯ ಮಂತ್ರಿಗಳು

ಅನೇಕ ವರ್ಷಗಳಿಂದಲೂ ಪಶ್ಚಿಮ ದೇಶಗಳನ್ನು, ಅದರಲ್ಲಿಯೂ ಇಂಗ್ಲೆಂಡನ್ನು ನೋಡಬೇಕೆಂಬುದು ನನ್ನ ಆಸೆಯಾಗಿತ್ತು. ಇಂಗ್ಲಿಷ್ ಭಾಷೆಯನ್ನು ಅಭ್ಯಾಸ ಮಾಡಿ, ಅಲ್ಲಿನ ರಾಜಕೀಯ, ಇತಿಹಾಸಗಳನ್ನು ಓದಿದ ಮೇಲೆ, ಅಲ್ಲಿನ ಜನಜೀವನ ಹೇಗಿದೆ ಎಂದು ನೋಡಬೇಕೆಂದು ಅಪೇಕ್ಷೆಯಾಗುವುದು ಸ್ವಾಭಾವಿಕ. ಅದರಲ್ಲಿಯೂ ಅವರ ಸಂಘ ಸಂಸ್ಥೆಗಳ ನಡವಳಿಕೆಯನ್ನು ಪ್ರತ್ಯಕ್ಷ ಪರಿಶೀಲಿಸಬೇಕೆಂಬುದು ಮುಖ್ಯ ಉದ್ದೇಶ. ನಮ್ಮ ದೇಶದ ರಾಜ್ಯಾಂಗವನ್ನು, ಆಡಳಿತ ಕ್ರಮವನ್ನೂ ಇಂಗ್ಲೆಂಡಿನ ಮಾದರಿಯಲ್ಲಿ ರಚಿಸಿದ ಕಾರಣ ಅವರ ಪಾರ್ಲಿಮೆಂಟ್ ಹೇಗಿದೆ, ಪಂಗಡಗಳ ಪದ್ಧತಿ ಹೇಗಿದೆ, ಪ್ರಜಾಪ್ರಭುತ್ವ ಜೀವನ ಯಾವ ಬಗೆಯದು ಎಂದು ತಿಳಿಯುವ ಕುತೂಹಲ. ಈ ವಿಚಾರದಲ್ಲಿ ಎಷ್ಟೇ ಓದಿಕೊಂಡರೂ ಪ್ರತ್ಯಕ್ಷ ನೋಡಿ ತಿಳಿದ ಹಾಗಾಗದಷ್ಟೆ. ಈ ಆಸೆಯ ಜತೆಗೆ ಇಂಗ್ಲೆಂಡಿನಲ್ಲಿ ಒಂದು ಶತಮಾನದ ಬಳಿಕ ನಡೆಯುತ್ತಿರುವ "ಫೆಸ್ಟಿವಲ್ ಓಫ್ ಬ್ರಿಟನ್" ಎಂಬ ಕಲೆ, ಶೃಂಗಾರಿಕೆ ಮೊದಲಾದ ವಿಷಯಗಳಿಗೆ ಸಂಬಂಧಿಸಿದ ಮಹಾ ಉತ್ಸವವೂ ಅನುಕೂಲವಾಗಿ ಒದಗಿ ಬಂದಿದೆ. ಇಂಥ ಸಂದರ್ಭ ಆಯುಷ್ಯಕ್ಕೊಮ್ಮೆ ಬರುವಂಥದು.

ಸ್ವಂತ ವೆಚ್ಚಮಾಡಿಕೊಂಡು, ಇಂಥ ದೂರ ದೇಶದ ಪ್ರಯಾಣವನ್ನು ಒಮ್ಮೆ ಮಾಡಬಹುದಾದರೂ ತಿರುತಿರುಗಿ ಮಾಡಲಾರೆನಷ್ಟೆ. ಆದುದರಿಂದ ಇಂಗ್ಲೆಂಡಿಗೆ ಹೋದವನು ಸಮೀಪದ ಪ್ರಜಾಪ್ರಭುತ್ವ ರಾಜ್ಯಗಳಾದ ಫ್ರಾನ್ಸ್, ಜರ್ಮನಿ, ಇಟಲಿ, ಸ್ವಿಜರ್‌ಲೇಂಡ್ - ಮುಂತಾದ ದೇಶಗಳನ್ನು ನೋಡಿಕೊಂಡು ಬರಬೇಕೆಂದು ಎಣಿಸಿದ್ದೇನೆ. ವಾರಕ್ಕೊಮ್ಮೆ ನನಗೆ ದೊರೆಯುತ್ತಿರುವ ಮುಖ್ಯವಾದ ಅನುಭವಗಳನ್ನು ವಿಚಾರವಾಣಿಯ ವಾಚಕರ ಮುಂದೆ ಇರಿಸಲು ಬಯಸುತ್ತಿದ್ದೇನೆ.

ಇಂಥ ಪ್ರಯಾಣವನ್ನು ಸಕ್ಕನೆ ಅಂದರೆ ಇಂದು ಯೋಚಿಸಿ ನಾಳೆ ಹೊರಡುವಂತೆ ಮಾಡುವುದು ಸಾಧ್ಯವಿಲ್ಲ. ಆರು ತಿಂಗಳ ಹಿಂದೆಯೇ ಹಡಗಿನಲ್ಲಿ ಜಾಗವನ್ನು ಕಾದಿರಿಸಬೇಕು. ೧೯೫೨ರಲ್ಲಿ ಪ್ರಯಾಣ ಮಾಡುವವರು ಈಗಲೇ ಸ್ಥಳ ಕಾದಿರಿಸುತ್ತಿದ್ದಾರೆ. ಹೀಗಾಗಿ ನಾನು ಆರು ತಿಂಗಳಿನಿಂದಲೂ ಮದ್ರಾಸಿನ ಥಾಮಸ್ ಕುಕ್ ಕಂಪೆನಿಯವರೊಡನೆ ಪತ್ರ ವ್ಯವಹಾರ ಮಾಡುತ್ತಿದ್ದೆ—ಯಾವ ಯಾವ ಹಡಗಿನಲ್ಲಿ ಜಾಗ ಖಾಲಿ ಇದೆ ಎಂದು ತಿಳಿದುಕೊಳ್ಳುವ ಪ್ರಯತ್ನಮಾಡುತ್ತಿದ್ದೆ. ಕೊನೆಗೆ ನಾನು ಈಗ ಪ್ರಯಾಣಮಾಡುತ್ತಿರುವ ಹಡಗಿನಲ್ಲಿ ಒಂದು ಸ್ಥಳ ನನಗೆ ದೊರೆಯಿತು. ಹೀಗೆ ಮರಳಿ ಬರುವುದಕ್ಕೂ ಸ್ಥಳವನ್ನೂ, ಅಲ್ಲಲ್ಲಿ ಉಳಿದುಕೊಳ್ಳುವುದಕ್ಕೂ ಸ್ಥಳವನ್ನು ಕಾದಿರಿಸುವ ಏರ್ಪಾಡು ಮಾಡಬೇಕು. ನಮ್ಮ ದೇಶದಲ್ಲಿ ಹಾಗಿಲ್ಲ. ಎಲ್ಲಿಯೂ ಸಂಚರಿಸಬಹುದು. ಒಂದು ಹೋಟೇಲಿನಲ್ಲಿ ಜಾಗ ಸಿಗದಿದ್ದರೆ ಇನ್ನೊಂದರಲ್ಲಿ ಹೋಗಿ ಇರಬಹುದು. ಏನಿಲ್ಲವಾದರೆ ರೈಲ್ವೆ ಸ್ಟೇಶನಿನಲ್ಲಿ ತಗಣೆಗಳಿಂದ ಕಡಿಸಿಕೊಂಡು ಅಲ್ಲಿನ ಬೆಂಚುಗಳಲ್ಲಾದರೂ ಮಲಗಬಹುದು. ಇದು ಹಾಗಲ್ಲ. ಚಳಿಯ ನಾಡುಗಳು, ಇಷ್ಟ ಬಂದಲ್ಲಿ ನಾವು ಮಲಗುವಂತಿಲ್ಲ. ಪ್ರಾಯಶಃ ಹಾಗೆ ಮಲಗಿದರೆ-ದೇಶಾಂತರಿ ಎಂದು ನಮ್ಮನ್ನು ಕಾಯಿದೆಗೆ ಗುರಿಪಡಿಸಿ ಪೋಲೀಸರು ಕರೆದೊಯ್ದರೂ ಒಯ್ದಾರೇ. ಅಲ್ಲದೆ ನನ್ನ ವಯಸ್ಸು ಸಹ ಆ ಬಗೆಯ ಸಾಹಸಕ್ಕೆ ಎಂದೂ ತಕ್ಕುದಾಗಿಲ್ಲ.

ನನ್ನ ಈ ಪ್ರವಾಸ ಈ ತಿಂಗಳ ಆರಂಭದಿಂದಲೇ ತೊಡಗಿತು. ೨ನೆಯ ತಾರೀಕಿನ ದಿನ ಮಂಗಳೂರಿಂದ ನನ್ನ ಕಾರಿನಲ್ಲಿಯೆ ಹೊರಟು ಬೆಳಗ್ಗಿನ ೮-೪೫ಕ್ಕೆ ೬೦ ಮೈಲು ಪ್ರಯಾಣ ಮುಗಿಸಿ ಚಾರ್ಮಾಡಿಗೆ ಬಂದೆ. ನಮ್ಮ ದಕ್ಷಿಣ ಕನ್ನಡದ ರಸ್ತೆಗಳು ಮೊದಲಿಗಿಂತ ಎಷ್ಟೋ ಹಾಳಾಗಿವೆ. ಆದರೆ ಮೈಸೂರಿನ ಈಗಿನ ರಸ್ತೆಗಳನ್ನು ನೋಡುವಾಗ ಅದಕ್ಕಿಂತ ನಮ್ಮ ರಸ್ತೆಗಳು ನೂರು ಪಾಲು ವಾಸಿ ಎಂದೆನಿಸುತ್ತದೆ. ಗಡಿಗೆ ಬಂದವನೇ ೬೦ ಮೈಲು ದೂರದ ಕಡೂರಿಗೆ ಹೊರಟು ಬರುವಾಗ ಮಧ್ಯಾಹ್ನದ ಒಂದೂವರೆ ಘಂಟೆಯಾಗಿತ್ತು. ರಸ್ತೆಗಳ ಉದ್ದಕ್ಕೂ ಹೊಂಡಗಳೇ. ಹತ್ತು ವರ್ಷಗಳಿಂದ ಕಲ್ಲು ಹಾಕಿ ಸಮನಾಗಿ ಈ ರಸ್ತೆಗಳನ್ನು ದುರಸ್ತಿಮಾಡಿರಲಾರರು. ನಾನು ಕಳೆದ ತಿಂಗಳಷ್ಟೆ ಕಾರಿನಲ್ಲಿ ಶಿವಮೊಗ್ಗೆಗೆ ಹೋದಾಗ ಇಂಥದೇ ಅನುಭವವಾಗಿತ್ತು. ಮೈಸೂರು ಬೆಂಗಳೂರು-ಚಿತ್ರದುರ್ಗ ರಸ್ತೆಯೊಂದನ್ನು ಬಿಟ್ಟರೆ ಮೈಸೂರಿನಲ್ಲಿ ಕಾರಿನಲ್ಲಿ ಪ್ರಯಾಣ ಮಾಡುವವನ ಗೋಳು ಹೇಳತೀರದು. ಮೈಸೂರನ್ನು ಆಳುತ್ತಿರುವ ಮಹನೀಯರು ಇನ್ನಾದರೂ ಈ ವಿಚಾರದಲ್ಲಿ ಗಮನ ಹರಿಸಿದರಾಗುತ್ತಿತ್ತು. ಹಿಂದೆ ನಾನು ಎರಡು ಮೂರು ವರ್ಷಗಳ ಕಾಲ ಅವರಿಗೆ ಪತ್ರ ಬರೆದಿದ್ದೆ. ಆದರೆ ಪ್ರಯೋಜನವೇನೂ ಆಗಲಿಲ್ಲ

ಕಡೂರಲ್ಲಿ ರೈಲಿನಲ್ಲಿ ಕುಳಿತು ತಾ. ೩ರ ರಾತ್ರಿ ೧೧ ಗಂಟೆಗೆ ನಾನು ಮುಂಬಯಿಯನ್ನು ಸೇರಿದೆ. ತಾ. ೪ರ ದಿನ ಅಲ್ಲಿದ್ದು, ೫ರ ಬೆಳಗ್ಗೆ ಸುಮಾರು ಹತ್ತು ಗಂಟೆಗೆ 'ಸ್ಟ್ರಾತ್‌ನೇವರ್' ಎಂಬ ಈ ಹಡಗನ್ನು ಸೇರಿದೆ. ಹಡಗು ಮಧ್ಯಾಹ್ನ ಒಂದು ಗಂಟೆಗೆ ಹೊರಟಿತು. ಹಡಗೇರುವ ಮೊದಲು ಕೆಲವೊಂದು ಅಂತಾರಾಷ್ಟ್ರೀಯ ಪ್ರವಾಸ ನಿಯಮಗಳನ್ನು ಅನುಸರಿಸಬೇಕು. ದಾಕು ಹಾಕಿಸಿಕೊಳ್ಳಬೇಕು. ಕಾಲರಾ ಇಂಜಕ್ಷನ್ ಮಾಡಿಸಿಕೊಂಡು ಆರೋಗ್ಯಖಾತೆಯವರ ಸರ್ಟಿಫಿಕೇಟ್ ತೋರಿಸಿಕೊಳ್ಳಬೇಕು. ಅವೆಲ್ಲವೂ ಇಲ್ಲದೆ ಹೊರಡುವುದು ಅಸಾಧ್ಯ. ಬೆಳಗ್ಗೆ ೯ ಗಂಟೆಗೆ ಬೆಲ್ಲಾರ್ಡ್ ಪಿಯರ್‌ಗೆ ಬಂದು ಸೇರಿದರೆ ಅಲ್ಲಿ ತಿರುಗಿ ಡಾಕ್ಟರು ನಮ್ಮನ್ನು ಪರೀಕ್ಷೆಮಾಡಿ ಬಿಡುತ್ತಾರೆ. ಅನಂತರ ನಮ್ಮ ಜತೆಗೆ ಒಯ್ಯುವ ಸಾಮಾನಿನ ಜಡತಿ ನಡೆಯಬೇಕಾಗುತ್ತದೆ. ಇವೇನೂ ತೊಂದರೆಯ ಕೆಲಸಗಳಲ್ಲ. ಒಂಬತ್ತರಿಂದ ಹತ್ತೂವರೆ ಗಂಟೆಯ ಒಳಗೆ ಆ ಕೆಲಸಗಳೆಲ್ಲವೂ ಮುಗಿದು ಮಧ್ಯಾಹ್ನ ಒಂದು ಗಂಟೆಗೆ ಸಮನಾಗಿ ನಮ್ಮ ಹಡಗು ಹೊರಟಿತು.

ಈ ಹಡಗಿನಲ್ಲಿ ಎರಡು ವರ್ಗಗಳಿವೆ. ಫಸ್ಟ್‌ಕ್ಲಾಸ್ ಮತ್ತು ಟೂರಿಸ್ಟ್‌ವರ್ಗವೆಂದು. ಫಸ್ಟ್‌ಕ್ಲಾಸಿಗೆ ಮುಂಬಯಿಂದ ಲಂಡನಿಗೆ ೭೦-೧೫೦ ಪೌಂಡ್ ಚಾರ್ಜ್ ಆಗುತ್ತದೆ. ಟೂರಿಸ್ಟ್‌ವರ್ಗಕ್ಕೆ ೪೮-೬೦ ಪೌಂಡಿನ ತನಕ ಚಾರ್ಜಿದೆ. ಈ ಹಡಗು ಇಂಗ್ಲೆಂಡಿಂದ ಆಸ್ಟ್ರೇಲಿಯಕ್ಕೆ ಹೋಗಿ ಬರುತ್ತದೆ. ಪಿ. ಎಂಡ್ ಓ. ಕಂಪೆನಿಗೆ ಸೇರುವ ಈ ಹಡಗಿನ ತೂಕ ೨೪,೦೦೦ ಟನ್. ಇದೊಂದು ತೇಲಾಡುವ ಪಟ್ಟಣವೇ ಸರಿ. ಹಡಗಿನ ಉದ್ದವೇ ೨೦೦ ಗಜ; ಅಗಲವು ೬೦ ಗಜವಷ್ಟಿದೆ. ಹಡಗಿನಲ್ಲಿ ಅನೇಕ ಅಂತಸ್ತುಗಳಿವೆ. ಅವುಗಳಲ್ಲೆಲ್ಲ ಪ್ರಯಾಣಿಕರು ಕುಳಿತುಕೊಳ್ಳುವ ಕೋಣೆಗಳು. ಸಾಮಾನು ಹಾಕುವ ಕೋಣೆಗಳು, ಮಲಗುವ ಮನೆಗಳು ಎಲ್ಲವೂ ಇವೆ. ಟೂರಿಸ್ಟ್ ತರಗತಿಯ ಕೋಣೆಗಳಿಗಿಂತ ಮೊದಲನೆ ತರಗತಿಯ ಜನಗಳಿಗೆ ಇನ್ನೂ ಹೆಚ್ಚಿನ ಸೌಕರ್ಯಗಳಿವೆ. ಮಲಗುವ ಮನೆಗಳಲ್ಲಿ ಹಾಸಿಗೆಗಳಿವೆ. ಕೈತೊಳೆಯುವ ಪಾತ್ರೆಗಳಿವೆ, ಕುಡಿಯುವ ನೀರಿದೆ, ದೀಪವಿದೆ. ಗಾಳಿಯನ್ನು ಹೊಕ್ಕಿಸಿ ಕೊಡುವಿಕೆಯನ್ನು ತಂಪಾಗಿ ಮಾಡುವ ಇತರ ಅನುಕೂಲತೆಗಳಿವೆ. ಜಲಮಟ್ಟಕ್ಕಿಂತ ಕೆಳಗೆ ಇರುವ ಅಂತಸ್ತುಗಳಲ್ಲಿ ಸೆಕೆ ಸ್ವಲ್ಪ ಹೆಚ್ಚಾಗಿ ಇರುವುದರಿಂದ, ಜನ ಹೆಚ್ಚಾಗಿ ಮೇಲಿನ ಹೊರಗಿನ ಡೆಕ್ಕುಗಳಿಗೆ ಬಂದು ಮಲಗುತ್ತಾರೆ. ಈ ಹಡಗಿನಲ್ಲಿ ಸುಮಾರು ೫೦೦ ಮಂದಿ ಫಸ್ಟ್‌ಕ್ಲಾಸ್ ಪ್ರವಾಸಿಗಳು, ೫೦೦ ಮಂದಿ ಟೂರಿಸ್ಟ್ ಪ್ರವಾಸಿಗಳು. ಇನ್ನು ೫೦೦ರಷ್ಟು ಜನ ಹಡಗಿನ ಕೆಲಸಗಾರರೂ, ಹೀಗೆ ೧೫೦೦ ಮಂದಿಗೆ ವಸತಿಯ ಸೌಕರ್ಯವಿದೆ. ಹಡಗಿನ ಯಾವತ್ತು ಕೆಲಸಗಳನ್ನು ವಿದ್ಯುಚ್ಛಕ್ತಿಯಿಂದ, ಗಡಿಯಾರದ ನಿಯಮಿತತೆಯಿಂದ ನಡೆಸುತ್ತಾರೆ.

ನಮ್ಮ ಹಡಗಿನ ಪ್ರವಾಸಿಗಳಲ್ಲಿ ಮೂರನೇ ಎರಡಂಶದಷ್ಟು ಜನ ಆಸ್ಟ್ರೇಲಿಯಾ ಮತ್ತು ನ್ಯೂಜಿಲೇಂಡಿನಿಂದ ಬಂದವರಾಗಿದ್ದಾರೆ. ಆ ದೇಶಗಳಿಂದ ಗಂಡಸರು, ಹೆಂಗಸರು, ಮಕ್ಕಳು ಬ್ರಿಟನಿನ ಉತ್ಸವ ನೋಡುವುದಕ್ಕೆ ಹೊರಟಿದ್ದಾರೆ. ಹಲವರು ಅವರಲ್ಲಿ ಇಂಗ್ಲೆಂಡಿನಿಂದ ಆಸ್ಟ್ರೇಲಿಯಕ್ಕೆ ವಲಸೆ ಹೋಗಿ ನೆಲೆನಿಂತು ಈಗ ತಮ್ಮ ಬಂಧುವರ್ಗವನ್ನು ನೋಡಲು ಹೊರಟಿದ್ದಾರೆ. ಹೆಚ್ಚಿನ ಪ್ರವಾಸಿಗರು ೫೦-೬೦ ವರ್ಷ ಪ್ರಾಯದವರು. ಸಿಲೋನಿನಿಂದ ಹಡಗನ್ನೇರಿದವರು ಬಹಳ ಕಡಿಮೆ. ಮುಂಬಯಿಯಿಂದ ಕೆಲವೊಂದು ಇಂಗ್ಲಿಷ್ ಜನರು ಹತ್ತಿದ್ದಾರೆ. ಈ ಹಡಗಿನಲ್ಲಿರುವ ಟೂರಿಸ್ಟ್ ದರ್ಜೆಯ ಪ್ರಯಾಣಿಕರಲ್ಲಿ ಬರಿಯ ೧೦, ೧೫ ಮಂದಿ ಮಾತ್ರ ಹಿಂದೀಯರು. ಉಳಿದವರೆಲ್ಲರು ವಿದೇಶೀಯರೇ. ಆದರೆ ಜನಗಳು ಯಾವ ಭೇದಭಾವವೂ ಇಲ್ಲದೆ ಒಡನಾಡುತ್ತಾರೆ. ಈ ಜನಗಳಲ್ಲಿ ಅನೇಕ ಸ್ತ್ರೀಯರು ಸಹ ರಾಜಕೀಯದಲ್ಲಿ ಆಸಕ್ತಿ ಉಳ್ಳವರಾಗಿದ್ದಾರೆ.

ಮುಂಬಯಿಯನ್ನು ಬಿಟ್ಟ ಮೇಲೆ ನಮ್ಮ ಹಡಗು ತಾಸಿಗೆ ೨೦ ಮೈಲಿನ ವೇಗದಿಂದ ಒಂದೇ ಸಮನೆ ಚಲಿಸುತ್ತಲಿದೆ. ಈಗಾಗಲೇ ನಾವು ಮುಂಬಯಿಯನ್ನು ಬಿಟ್ಟು ೧೪೦೦ ಮೈಲುದೂರ ಬಂದಿದ್ದೇವೆ. ನಾಳೆ ದಿನ ಬೆಳಗ್ಗೆ ೭ ಗಂಟೆಗೆ ಇಲ್ಲಿಂದ ೨೦೦ ಮೈಲು ದೂರವಿರುವ ಅರೇಬಿಯದ ಏಡನ್ ನಗರವನ್ನು ಸೇರುತ್ತೇವೆ.

ಇಷ್ಟೆಲ್ಲ ಜನಗಳ ಸೌಕರ್ಯಕ್ಕಾಗಿ ಈ ಹಡಗಿನಲ್ಲಿ ಪ್ರತಿಯೊಂದು ಬಗೆಯ ಏರ್ಪಾಟೂ ಇದೆ. ಮಕ್ಕಳ ಸಲುವಾಗಿ ಆಟದ ಸಾಮಾನುಗಳುಳ್ಳ ಒಂದು ದೊಡ್ಡ ಕೊಟಡಿಯೇ ಇದೆ. ಅವರನ್ನು ನೋಡಿಕೊಳ್ಳುವುದಕ್ಕಾಗಿ ಒಬ್ಬ ಗವರ್ನೆಸ್ ಇದ್ದಾಳೆ. ತಾಯಂದಿರು ತಮ್ಮ ಮಕ್ಕಳನ್ನು ಅವಳ ವಶಕ್ಕೆ ಬಿಟ್ಟುಬಿಡಬಹುದು. ಸಮಯ ಕಳೆಯುವುದಕ್ಕೆ ಆಟ, ವಿನೋದಗಳ ಏರ್ಪಾಟು ವಿಧವಿಧವಾಗಿದೆ—ಈಜುವ ಕೊಳವಿದೆ ಡೆಕ್‌ಟೆನ್ನಿಸ್, ಡೆಕ್‌ಕ್ವಾಯಿಟ್ಸ್, ಟೇಬಲ್‌ಟೆನ್ನಿಸ್, ಇನ್ನು ಹಾಗೆಯೇ ಸಿನೆಮಾ, ಫೇನ್ಸಿ ಡ್ರೆಸ್, ನರ್ತನ, ಸಂಗೀತಗಳ ಏರ್ಪಾಟಿವೆ. ಪುಸ್ತಕಾಲಯವಿದೆ, ವಾಚನಾಲಯವಿದೆ. ಇವುಗಳನ್ನೆಲ್ಲ ನೋಡಿಕೊಳ್ಳುವುದಕ್ಕೆ ಪ್ರಯಾಣಿಕರ ಕಮಿಟಿಗಳು ಇವೆ.

ಮುಂಬಯಿಯನ್ನು ಬಿಟ್ಟ ಮೇಲೆ—ನಾಲ್ಕು ಸುತ್ತಲೂ ಸಮುದ್ರವೇ. ಭೂಮಿಯೇ ಕಾಣಿಸದು, ಉತ್ತಮವಾದ ಹವೆ. ತೆರೆಗಳು ಇಲ್ಲದ ಶಾಂತವಾದ ಸಮುದ್ರ. ಈ ಸಾಗರದ ಭಾಗ ಕಳೆದು ಏಡನ್ ಕೊಲ್ಲಿಯನ್ನು ಸಮೀಪಿಸಿದ ಹಾಗೆಲ್ಲ ಸೆಕೆ ಹೆಚ್ಚುವುದು ಕಾಣಿಸುತ್ತದೆ. ಇದು ಅರೇಬಿಯಾ ಸಮೀಪಿಸುತ್ತಿದೆ ಎಂಬ ಸೂಚನೆ. ನಾಳೆ ದಿನ ಏಡನ್ ಸೇರಿದೆನೆಂದರೆ ಅಲ್ಲೊಂದು ಅರ್ಧ ದಿನ ಸಂಚಾರಮಾಡಿ, ಕೆಂಪು ಸಮುದ್ರದ ಮೂಲಕ ಮುಂದೆ ಪ್ರಯಾಣ ಮಾಡಬಹುದು.

—'ವಿಚಾರವಾಣಿ'

ಆದರ್ಶ ರೀತಿಯಲ್ಲಿ ಪ್ರಕಟಿಸಲ್ಪಟ್ಟ ಅಖಿಲ ಕರ್ನಾಟಕದ
ಪ್ರಾತಿನಿಧಿಕ ಕಥಾಸಂಕಲನವೆಂದು ಪ್ರಶಂಸಿಸಲ್ಪಟ್ಟ

ಮಧುವನ

ಕತೆಗಳೊಂದಿಗೆ ಕತೆಗಾರರ ಮತ್ತು ಕತೆಗಾರ್ತಿಯರ
ಪರಿಚಯ ಪಡಿಯಚ್ಚುಗಳಿವೆ
ಅಂತರಂಗ, ಬಹಿರಂಗ ಸುಂದರವಾಗಿ ಪ್ರಕಟಿಸಲ್ಪಟ್ಟ

25 ಕತೆಗಳ ಅತ್ಯಪೂರ್ವ ಸಂಗ್ರಹ

ಬಿಳಿ-ದಪ್ಪ ಕಾಗದ! 230 ಪುಟಗಳು! ಬೆಲೆ ರೂ. 3-0-0
ವಿಳಾಸ: ಕಿರಿಯರ ಪ್ರಪಂಚ, ಉಡುಪಿ.
ವಿಕ್ರಯಾಧಿಕಾರಿಗಳು: ನವಭಾರತ ಪುಸ್ತಕ ಭಂಡಾರ, ಉಡುಪಿ.

ರೂಪರಂಗದ ಕಲಾ ಕೌತುಕ

ಚಿತ್ರ ನಿರ್ಮಾಣದ ವಿಹಂಗಮ ನೋಟ.

೧

ಒಂದು ಚಿತ್ರ ನಿರ್ಮಾಣದ ಹಿಂದೆ ಎಷ್ಟು ಕುಶಲ ಶಿಲ್ಪಿಗಳ ಕೈವಾಡವಿದೆ ಎಂಬುದನ್ನು ನಾವು ಸುಲಭದಲ್ಲಿ ಗ್ರಹಿಸುವುದಿಲ್ಲ; ಪುರೋದರ್ಶಕವು ತೋರಿಸುವ ಬೆಳಕಿನಾಟವನ್ನು ಸಿನೆಮಾ ಮಂದಿರದಲ್ಲಿ ಕುಳಿತು ರಜತ ಪರದೆಯ ಮೇಲೆ ಕಂಡು ವಿಸ್ಮಿತರಾಗುತ್ತೇವೆ; ಪುಳಕಿತರಾಗುತ್ತೇವೆ; ನಕ್ಕುನಲಿಯುತ್ತೇವೆ; ಅತ್ತು ಕಣ್ಣೀರು ಕರೆಯುತ್ತೇವೆ. ಅಪೂರ್ವ ದೃಶ್ಯ-ಸಂಯೋಜನೆಗಳು, ಮಾಧುರ್ಯ ತುಂಬಿತುಳುಕುವ ಸಂಗೀತ-ನೃತ್ಯದ ಸೊಬಗು, ಚೇತೋಹಾರಿಯಾದ ಕಥಾ ಸಂವಿಧಾನ ಹಿಮ್ಮೇಳದ ಸ್ವರಸೃಷ್ಟಿ ಇವೆಲ್ಲವುಗಳು ಪರಿಷ್ಕೃತರೂಪ ಧರಿಸಿ ಪ್ರೇಕ್ಷಕರು ಧಾರಾವಾಹಿಯಾಗಿ ಕಾಣಲಾಗುವಂತೆ ಶ್ರಮಿಸುವ ತಂತ್ರಜ್ಞರ ಕೌಶಲ್ಯವನ್ನು ತಿಳಿಯಬಯಸುವವರು ತೀರ ಕಡಿಮೆ. ಜನ ಸುರೈಯಾಳ ಸಂಗೀತ ಸುಧೆಯನ್ನೋ, ದಿಲೀಪ ಕುಮಾರನ ನಟನಾ ಚಾತುರ್ಯವನ್ನೋ, "ಚಂದ್ರಲೇಖ"ದ ಅದ್ಭುತ ದೃಶ್ಯಗಳನ್ನೋ, "ನಿಶಾನ"ದ ಜೋಡು ಪಾತ್ರದ ಮಾಯೆಯನ್ನೋ ಕಂಡು ದಂಗುಬಡೆದು ನಿಲ್ಲುವವರ್. ಅದರ ನಿಗೂಢ ಮರ್ಮವೇನೆಂದು ತಿಳಿಯರು.

ಶಿಕ್ಷಣಪ್ರದವಾದ ಮನೋರಂಜನೆಯ ಸಾಧನವಾಗಿ ಇಂದು ಸಿನೆಮಾಕ್ಕೆ ಉಜ್ವಲ ಪ್ರಾಶಸ್ತ್ಯ ಪ್ರಾಪ್ತವಾಗಿದೆ. ಹಿಂದಿನ-ಇಂದಿನ ಎಲ್ಲಕಾಲಕ್ಕೂ ಪಕ್ಕಂತೆ ಒಪ್ಪುವ ಸಮಯ ಕತೆಗಳಿಂದ, ಸತ್ಯದೃಶ್ಯಗಳಿಂದ ಸಜೀವವಾಗಿ ಓಡಾಡುವ ಹಾಗೂ ಮಾತನಾಡುವ ಚಿತ್ರಗಳಿಂದ ಸಿನೆಮಾವು ಎಲ್ಲರ ಮೇಲೂ ಅಚ್ಚಳಿಯದ ಪ್ರಭಾವ ಬೀರಿದೆ. ಸಿನೆಮಾದ ಕಥಾ ಸಂವಾದವನ್ನು ಸಾಹಿತ್ಯ ಪ್ರತಿಭೆಯುಳ್ಳ ಲೇಖಕನು ಬರೆಯುವನು. ಕುಶಲಶಿಲ್ಪ ಕಲಾನಿರ್ದೇಶಕನು ವಿಶಾಲವಾದ ಭವನಗಳು, ಬೀದಿಗಳು, ಕಾಡುಗಳು ಇವುಗಳ "ಸೆಟ್ಟಿಂಗು" ತಯಾರಿಸುವನು. ಚಿತ್ರದ ವೈಜ್ಞಾನಿಕರು ಬಿಂಬಗ್ರಹಣ, ಧ್ವನಿ, ಮುದ್ರಣ, ಸಂಪಾದನಾ ಪುರೋದರ್ಶನಗಳ ಮೂಲಕ ಅಭಿನಯಿಸಲಾದ ದೃಶ್ಯಗಳನ್ನು ಚಿತ್ರಪಟಲದ ಮೇಲೆ ಅಂಕಿತಗೊಳಿಸಿ, ರಜತ ಪರದೆಯ ಮೇಲೆ ಪ್ರದರ್ಶಿಸುವರು. ಉಚ್ಚವರ್ಗದ ಸಾಹಿತ್ಯಿಕ, ಕಲಾತ್ಮಕ ಹಾಗೂ ವೈಜ್ಞಾನಿಕ ಪ್ರತಿಭೆಯ ಫಲವಾಗಿ ಒಂದು ಸಿನೆಮಾದ ನಿರ್ಮಾಣವಾಗುವುದು. ಮುಂದೆ ಪ್ರಬಲ ಪ್ರಚಾರದ ಹಾಗೂ ವ್ಯಾವಹಾರಿಕ ಚಾತುರ್ಯದಿಂದ ಚಿತ್ರದ ವಿತರಣೆ ನಡೆಯುವುದು.

೨

ಚಿತ್ರ ನಿರ್ಮಾಣದ ಕೆಲಸ ಗುರುತರ ಹೊಣೆಯುಳ್ಳದ್ದು. ಅದಕ್ಕೆ ತಕ್ಕಂತೆ ದುಡ್ಡು ಚೆಲ್ಲುವ ನಿರ್ಮಾಪಕನ ಅವಶ್ಯವಿದೆ. ಸಾಧಾರಣ ಚಿತ್ರಗಳಿಗೆ ೪-೬ ಲಕ್ಷ ರೂಪಾಯಿ ಖರ್ಚಾಗುವಾಗ ಕೆಲವೊಮ್ಮೆ ೩೫-೫೦ ಲಕ್ಷ ರೂಪಾಯಿಯನ್ನು ಒಂದೇ ಚಿತ್ರಕ್ಕೆ ಸುರಿಯುವುದೂ ಉಂಟು. ಚಿತ್ರ ಸಫಲವಾದರೆ ಹಣದ ಮಹಾಪೂರವನ್ನೇ ತಂದೀತು; ಇಲ್ಲದೇ ಹೋದರೆ ನಿರ್ಮಾತೃವಿಗೆ ಭಿಕ್ಷಾ ಪಾತ್ರೆಯು ಸ್ಥಿರ! ಜೆಮಿನಿಯ ವಾಸನರು ತಮ್ಮ ಅಮೋಘ ಕೃತಿ "ಚಂದ್ರಲೇಖ"ಕ್ಕೆ ಹಣಸುರಿಯುವಾಗ "ಇದೂ ಒಂದು ಜೂಜು" ಎಂಬುದನ್ನು ಎಳ್ಳಷ್ಟೂ ಮರೆತಿರಲಿಲ್ಲ. ಈ ನಿರ್ಮಾಪಕನು ಚಿತ್ರ ನಿರ್ದೇಶಕನನ್ನು ನಿಶ್ಚಯಿಸುವನು. ಕಥಾ ಲೇಖಕ, ನಿರ್ದೇಶಕ ಹಾಗೂ ನಿರ್ಮಾಪಕರು ಕೂಡಿಯೇ ಚಿತ್ರಕತೆಯ ರೂಪರೇಷ ಹಾಕುವರು. ಮುಂದೆ ಚಿತ್ರದ ದೃಶ್ಯ ಸಂವಿಧಾನ ರಚಿಸಿ, ಸಂವಾದವನ್ನು ಬರೆಸಲಾಗುವುದು. ಹಾಗೆಯೇ ಎಲ್ಲೆಲ್ಲಿ ಗೀತೆಗಳು ಬೇಕೆಂಬುದನ್ನು ನಿರ್ಧರಿಸಿ, ಸಂದರ್ಭೋಚಿತ ಗೀತೆಗಳನ್ನು ಬರೆಸುವರು. ಇಷ್ಟು ಕಾಗದದ ಕೆಲಸಕ್ಕಾಗಿಯೇ ೫೦-೬೦ ಸಾವಿರ ರೂಪಾಯಿ ವ್ಯಯವಾಗುವುದು. ಇದರ ನಡುವೆ ನಿರ್ಮಾಪಕನು ಚಿತ್ರದ ನಟನಟಿಯರನ್ನು ಗೊತ್ತು ಮಾಡುವನು. ಅವರಿಗೊಪ್ಪುವ, ಕಚೇಳುವ, ಉಡುಪು-ತೊಡುಪುಗಳ ವ್ಯವಸ್ಥೆ ಮಾಡುವನು. ಚಿತ್ರ ಪೂರ್ತಿಗೆ ಬೇಕಾದ ಇತರ ತಂತ್ರಜ್ಞರು ಸಹಾಯಕ ನಿರ್ದೇಶಕರು ಎಲ್ಲರನ್ನೂ ಮುಖ್ಯ ನಿರ್ದೇಶಕನ ಸಲಹೆಯಂತೆ ನಿಯುಕ್ತಗೊಳಿಸುವನು.

ಈಗಿನ ಸಿನೆಮಾಗಳಿಗೆ ಸಂಗೀತದ ಬಲವೇ ಬಲ. ಹೀಗಾಗಿ, ಇದರ ಕಡೆ ವಿಶೇಷ ಗಮನವನ್ನು ಕೊಡುವರು. ಚಿತ್ರದ ಶೂಟಿಂಗಿಗೆ ಮೊದಲೇ ಸಂಗೀತ ನಿರ್ದೇಶಕನು ಚಿತ್ರದ ಗೀತೆಗಳಿಗೆ ರಾಗ ನಿರ್ಮಿಸಿ, ಹಿಂಬದಿ ಗಾಯನದ ವಿಧಿಯಂತೆ ಸಂಗೀತವನ್ನು ಧ್ವನಿ ಪಟಲದ ಮೇಲೆ ಅಂಕಿತ ಮಾಡಿಸುವನು. ನಟ-ನಟಿಯರಲ್ಲಿ ಹಾಡಬೇಕಾದವರಿಗೆ ಯೋಗ್ಯ ಕಂಠಮಾಧುರ್ಯವಿಲ್ಲದೆ ಹೋದರೆ, ಅಥವಾ ಅವರ ಕಂಠ ಧ್ವನಿಯು ಧ್ವನಿವರ್ಧಕದೊಂದಿಗೆ ಕೂಡುವುದಿಲ್ಲವಾದರೆ ಇತರ ಉತ್ತಮ ಹಾಡುಗಾರರನ್ನು ಕೇವಲ ಸಂಗೀತಕ್ಕಾಗಿ ಉಪಯೋಗಿಸುವರು. ಚಿತ್ರದ ಶೂಟಿಂಗು ನಡೆವಾಗ, ನಟನಟಿಯರು ಬರೇ ಬಾಯಿಯಿಂದ- ಕಂಠಮಾಧುರ್ಯವಿಲ್ಲದಿದ್ದರೂ- ಹಾಡಬೇಕು, ಆದರೆ ಆಗ ಕೇವಲ ಬಿಂಬಗ್ರಹಣದ ಕಾರ್ಯವು ಮಾತ್ರ ನಡೆಯುವುದು; ಜೊತೆಗೆ ಧ್ವನಿಮುದ್ರಣವು ನಡೆಯುವುದಿಲ್ಲ.

೩

ಮುಂದೆ ನಿರ್ದೇಶಕನು ಕಲಾ ನಿರ್ದೇಶಕನಕೂಡೆ ಚಿತ್ರಕತೆಗೆ ಅಗತ್ಯವಿರುವ ಹಾಗೂ ತನ್ನ ನಿರ್ದೇಶನ ಚಮತ್ಕಾರಕ್ಕೆ ಅನುಕೂಲವಾಗಿರುವ ಸೆಟ್ಟಿಂಗು ರಚಿಸಲು ಹೇಳುವನು. ಮರ, ಪ್ಲಾಯಿವುಡ್, ಕ್ಯಾನವಾಸ್, ಲಿನೋಲಿಯಂ ಮುಂತಾದವುಗಳಿಂದ ಕಂಭಗಳು, ಕೋಣೆಗಳು, ಭವನಗಳು, ಬೀದಿಗಳು ಎಲ್ಲವೂ ಸೃಷ್ಟಿಯಾಗುತ್ತವೆ. ಅಂದಕ್ಕಾಗಿ ನುಣುಪು ಮಣ್ಣಿನ ಹೂಬಳ್ಳಿಗಳನ್ನೂ, ರಾತ್ರಿ ಅಥವಾ ದಿನದ ಸಮಯ ಸೂಚಿಸಲು ಹಿಂಬದಿ ಪರದೆಯಲ್ಲಿ ಸುಯೋಗ್ಯ ಚಿತ್ರಗಳನ್ನೂ ಬರೆಯುವರು. ಚಂದ್ರ, ನಕ್ಷತ್ರಗಳನ್ನು ಹೊಳಪು ಕಾಗದಗಳಿಂದ, ಗಾಜಿನ ಬಾಗಿಲುಗಳನ್ನು ಮಸುಕು ಕಾಗದದಿಂದ ಮಾಡುವರು. ಸ್ವಾಭಾವಿಕತೆ ಬರಲು ಮರಗಳನ್ನು ಕಡಿದು ತಂದು ಅಲ್ಲಲ್ಲಿ ನಿಲ್ಲಿಸುವರು, ಎಲೆಗಳನ್ನು ಅಲ್ಲಿ ಇಲ್ಲಿ ಬಿಸಾಡುವರು.

ಸೆಟ್ಟಿಂಗುಗಳ ರಚನೆಯಾದ ಬಳಿಕ ನಿರ್ದೇಶಕನು ಶೂಟಿಂಗು ಆರಂಭಿಸುವನು. ಚಿತ್ರದ ಪಾತ್ರಗಳು "ಮೇಕ್-ಅಪ್" ರೂಮಿನಲ್ಲಿ ಚಿತ್ರಕತೆಗೆ ಬೇಕಾದ ರೀತಿಯಲ್ಲಿ ವೇಷಭೂಷಗಳನ್ನು ಧರಿಸುವರು. ನಿರ್ದೇಶಕನು ಅವರಿಗೆ ತಮ್ಮ ತಮ್ಮ ಪಾತ್ರನಿರ್ವಹಣೆಯ ಕರ್ತವ್ಯ ಧರ್ಮವನ್ನು ಚೆನ್ನಾಗಿ ತಿಳಿಸಿ ಹೇಳುವನು, ಬಳಿಕ ಸುಸಜ್ಜಿತ ಸೆಟ್ಟುಗಳಲ್ಲಿ ಪಾತ್ರವರ್ಗದವರು-ಸಮೀಪದಲ್ಲೇ ನಿಂತಿರುವ ನಿರ್ದೇಶಕನ ಆಜ್ಞಾನುಸಾರ-ಅಭಿನಯಿಸುವರು. ಸೆಟ್ಟಿಂಗುಗಳ ದೃಶ್ಯವು ಬಾಹ್ಯ ಪ್ರಕೃತಿಯೊಡನೆ ಕೂಡಬೇಕಿದ್ದಲ್ಲಿ ವಿಶಾಲವಾದ ಸುರಮ್ಯ ಭೂಮಿಯಲ್ಲಿ ಶೂಟಿಂಗು ನಡೆಯುವುದು.

ದೊಡ್ಡ ದೊಡ್ಡ ಚಿತ್ರ ನಿರ್ಮಾಣ ಸಂಸ್ಥೆಗಳು, ಚಿತ್ರದ ಶೂಟಿಂಗಿಗೂ ಮೊದಲೇ ಪತ್ರಿಕೆಗಳಲ್ಲಿ ಪ್ರಚಾರ ಪ್ರಾರಂಭಿಸುವುವು. ಈ ಜಾಹೀರಾತುಗಳು ಪ್ರಮುಖವಾಗಿ ಚಿತ್ರವಿತರಕರನ್ನು ಆಕರ್ಷಿಸುವ ಸಲುವಾಗಿ ಪ್ರಚುರವಾಗುತ್ತವೆ; ಜೊತೆಗೆ ಪ್ರೇಕ್ಷಕರ ಮನಮೋಹಿಸಲಿಕ್ಕಿಲ್ಲ.

೪

ಚಲಚ್ಚಿತ್ರದ ನಿರ್ಮಾಣದಲ್ಲಿ ಒಂದು ವಿಶೇಷ ಮಾದರಿಯ "ಬಿಂಬಗ್ರಾಹಿ"ಯನ್ನು ಉಪಯೋಗಿಸುವರು. ಒಂದು ಮಿನಿಟಿಗೆ ೬೦ ಅಡಿ ಉದ್ದದ ಪಟಲದ ಮೇಲೆ ಚಿತ್ರವನ್ನು ಅಂಕಿತಮಾಡುವ ಯೋಗ್ಯತೆ ಇದಕ್ಕಿದೆ. ಚಿತ್ರಪಟಲದ ಒಂದೊಂದು ಚೌಕವು ಮಸೂರದ ಎದುರಿಗೆ ಬಂದಾಗ, ಅದರ ಎದುರಿರುವ ವಸ್ತುಗಳವು ತೀರ,

---

[೧ನೇ ಪುಟದಿಂದ]

ಮೊದಲು ಹಿತೈಷಿ ದೇಶಗಳು ನಿಲ್ಲಲಾರವು. ಆದುದರಿಂದಲೇ ಅಮೇರಿಕೆಯು ಯಥಾರ್ಥವಾಗಿ ಅನಾಥವಾಗಿದೆ. ಒಂದು ಕಡೆ ಆತ್ಮಾಭಿಮಾನಕ್ಕೆ ಚ್ಯುತಿಬರುವ ಸಂಭವ-ಇನ್ನೊಂದು ಕಡೆ ತನ್ನ ಅಸಮರ್ಥತೆಯ ಪ್ರದರ್ಶನ.

ಹತ್ತು ಜನರಿಗಾಗಿ ಅಹಂಕಾರ ಮಾಡಿದರೆ ಏಕಾಂಗಿಯಾಗಿರುವಾಗ ಆತ್ಮಹತ್ಯೆ ಮಾಡಿಕೊಳ್ಳುವ ಪ್ರಸಂಗ ಬರುವುದುಂಟು. ತಾನು ಕೈಗೊಂಡ ಅಕೃತ್ಯದ ಫಲವನ್ನು ಅಮೇರಿಕೆ ತಾನೇ ಉಣಬೇಕಾಗಿದೆ. ಪರಿಸ್ಥಿತಿಯನ್ನೆದುರಿಸಲು ಅಸಮರ್ಥವಾದ ಅಮೇರಿಕವಿಂದು ಅಪ್ರಶ್ಯಕ್ಕಾಗಿ ತತ್ಕಾಲ ಯುದ್ಧನಿಲ್ಲಿಸುವದನ್ನು ಇಚ್ಛಿಸುತ್ತದೆ. ಆದರೆ ಯಾವ ಕಾರಣದ ಮೇಲೆ ಯುದ್ಧ ನಿಲ್ಲಿಸುವುದೆಂಬುದೇ ಸಮಸ್ಯೆಯಾಗಿದೆ. ಯುದ್ಧ ಸಂಭವಿಸಿದರೆ ಅಮೇರಿಕೆಯು ಹಿಂದೆ ಸರಿಯದು ಎಂದು ಟ್ರೂಮನರು ಹೇಳುವದಾದರೂ ರಷಿಯ ಯುದ್ಧದಲ್ಲಿ ಮನಸ್ಸು ಹಾಕದಿದ್ದರೆ ನಮಗೆ ಯುದ್ಧ ಬೇಕಿಲ್ಲವೆಂದ ಮಾತನ್ನೂ ನಾವು ಲಕ್ಷಿಸಬೇಕು. ಎಲ್ಲ ರೀತಿಯಿಂದಲೂ ಅಮೇರಿಕೆಯು ಹಣ್ಣಾಗಿದೆ. ಕೊರಿಯ ಯುದ್ಧದಲ್ಲಿ ಲೆಕ್ಕವಿಲ್ಲದಷ್ಟು ಮಡಿದ ವೀರಯೋದ್ಧರ ಸಂಖ್ಯೆ ಅಪರಿಮಿತವಾಗಿದೆ. ಇತರ ಕಷ್ಟನಷ್ಟಗಳೂ ಬಹಳವಾಗಿವೆ. ಅಂತಲೇ ಅಮೇರಿಕೆಯಿಂದು ಯುದ್ಧಪರಿಹಾರಾರ್ಥ ನೂತನಮಾರ್ಗವನ್ನು ಹುಡುಕುತ್ತಲಿದೆ.

ಅಮೇರಿಕೆಯ ಅಹಂಕಾರಕ್ಕೆ ಇಂದಾಗುತ್ತಿರುವ ತಕ್ಕಶಾಸ್ತಿಯನ್ನು ನೆನೆದುಕೊಂಡು ಸದ್ಯ ಹೊರಗಿನಿಂದ ಪ್ರೇರಿತವಾದ ತಾತ್ಕಾಲದ ಬೆಂಬಲದಿಂದ ರಾಜ್ಯವನ್ನು ಉಳಿಸುತ್ತೇವೆ—ಹೊಸ ಸರಕಾರವನ್ನು ಕಟ್ಟುತ್ತೇವೆ ಎನ್ನುವವರು ಚೆನ್ನಾಗಿ ಚಿಂತಿಸಬೇಕು. ಉದ್ದೇಶ ಕೆಟ್ಟದಾದರೆ ಎಂತಹ ಬೆಂಬಲ ಆರ್ಥಿಕ ಬಲವಿದ್ದರೂ ಆತ್ಮನಾಶ ನಿಶ್ಚಿತ. ಅಮೇರಿಕೆಯ 'ಅಹಂಬುದ್ಧಿ'ಯೇ ಅದಕ್ಕೆ ಉತ್ತಮ ಉದಾಹರಣೆ.



ಬೆಳಕುಳಿಂದು, ದೃಶ್ಯವು ಚಿತ್ರಪಟಲದಲ್ಲಿ ಅಂಕಿತವಾಗುವುದು. ಈ ಚೌಕ ಕೆಳಸಂದು ಇನ್ನೊಂದು ಹೊಸಚೌಕ ಆಸ್ಥಾನದಲ್ಲಿ ಬರುವವರೆಗೆ ಮುಚ್ಚಳ ಮುಚ್ಚಿರುವುದು. ಹೀಗೆ ಒಂದು ಮಿನಿಟಿನ ಅವಧಿಯಲ್ಲಿ ಮುಚ್ಚಳವು 220ಬಾರಿ ತೆರೆದು, ಮುಚ್ಚುವುದು.

ಬಿಂಬಗ್ರಾಹಕನು ತನಗೆ ಅನುಕೂಲವಾಗುವ ರೀತಿಯಲ್ಲಿ ತ ರಾಗಣದ ಮೇಲೆ, ದೃಶ್ಯದ ಮೇಲೆ ಬೆಳಕುಚೆಲ್ಲುವ ವ್ಯವಸ್ಥೆ ಮಾಡುವನು. ಐದು ಸಾವಿರ "ವಾಟ್ಸ್"ಗಿಂತಲೂ ಅಧಿಕ ಪ್ರವಾಹದ ವಿದ್ಯುದ್ದೀಪಗಳ ಪ್ರಭೆಯಿಂದ ಇಡೀ ಸೆಟ್ಟಿಂಗು ಜಗಮಗಿಸುವುದು ಈ ರೀತಿ ನೆರಳು—ಬೆಳಕಿನ ಅಪೂರ್ವ ಲಾಸ್ಯದಿಂದ ಪಾತ್ರಗಳನ್ನೂ, ಸೆಟ್ಟಿಂಗನ್ನೂ ಬಿಂಬಗ್ರಾಹಕನು ತನ್ನ ಬುದ್ಧಿ ಹಾಗೂ ಇಚ್ಛೆಯಂತೆ ಅಣಿಗೊಳಿಸಿ ಬಿಂಬಗ್ರಹಣಕ್ಕೆ ತೊಡಗುವನು. ದೃಶ್ಯಗಳ ಮನೋಹರತೆ, ನಟ—ನಟಿಯರ ಸೌಂದರ್ಯವೆಂಬುದು ಬಹಳಷ್ಟು ಮಟ್ಟಿಗೆ ಬಿಂಬಗ್ರಹಣದ ಚಮತ್ಕಾರ ಮತ್ತು ಕಲಾವಂತಿಕೆಯನ್ನೇ ಹೊಂದಿಕೊಂಡಿದೆ. ಬಿಂಬಗ್ರಾಹಕನೇ ಈ ಮಟ್ಟಿಗೆ ಹೊಣೆಗಾರನೆನ್ನಬಹುದು.

ಹೀಗೆ ಪಾತ್ರಗಳು ಅಭಿನಯಿಸುತ್ತಿರುವಾಗಲೇ ಅವರ ಸಂಭಾಷಣೆಯ ಧ್ವನಿಮುದ್ರಣ ಕಾರ್ಯವು ಇನ್ನೊಂದ ಕಡೆ ನಡೆಯುತ್ತದೆ. ಅಭಿನಯ ಕಾಲದಲ್ಲಿ ಸೆಟ್ಟಿಂಗಿನ ಮೇಲುಗಡೆ ಧ್ವನಿವರ್ಧಕವನ್ನು ತೂಗಾಡಿಸುತ್ತಾರೆ. ಈ ಧ್ವನಿವರ್ಧಕದ ನೆರಳೂ ಕಾಣದಷ್ಟು ಚಮತ್ಕಾರದಿಂದ ಬಿಂಬಗ್ರಹಣ ಕಾರ್ಯ ನಡೆಯುವುದರಿಂದ, ಪ್ರೇಕ್ಷಕರು ಇದನ್ನು ಚಿತ್ರದಲ್ಲಿ ಕಾಣುವಂತಿಲ್ಲ. ಧ್ವನಿವರ್ಧಕದಿಂದ ಗ್ರಹಿಸಲ್ಪಟ್ಟ ನಾದದ ಅಲೆಗಳು ವಿದ್ಯುತ್ ಪ್ರವಾಹವಾಗಿ ಮೊದಲು ರೂಪಾಂತರಗೊಂಡು ಸಾಗುವುವು. ಧ್ವನಿ ಮುದ್ರಣಯಂತ್ರವು ಈ ವಿದ್ಯುತ್ ಪ್ರವಾಹವನ್ನು ಬೆಳಕಿನ ಅಲೆಗಳಾಗಿ ಪರಿವರ್ತಿಸಿ, ಧ್ವನಿಪಟಲದಮೇಲೆ ಈ ಬೆಳಕಿನ ಚಿತ್ರವನ್ನು ಅಂಕಿತಗೊಳಿಸುವುದು.

ನೃತ್ಯದ ದೃಶ್ಯದಲ್ಲಿ ಕೇವಲ ಬಿಂಬಗ್ರಹಣದ ಕೆಲಸವಷ್ಟೇ ನಡೆಯುತ್ತದೆ. ನೃತ್ಯ ಸಂಗೀತ ಮೊದಲೇ ಮುದ್ರಿತವಾಗಿರುತ್ತದೆ. ಸೆಟ್ಟಿಂಗಿನ ಮೇಲೆ ನರ್ತನಮಾಡುವವರು ಈ ಮುದ್ರಿತ ಸಂಗೀತದ ಧ್ವನಿಗೆ ತಕ್ಕಂತೆ ನಾಟ್ಯವಾಡಬೇಕು.

[ಬರುವ ಸಂಚಿಕೆ ನೋಡಿರಿ]

ಲಕ್ಷ್ಮೀ ಸೆಂಟಾಲ್ ಮಾತ್ರೆ

ಇದರ ಉಪಯೋಗದಿಂದ ಬಹುಕಾಲದ ಮೇಹ, ಪ್ರಮೇಹ, ಮೂತ್ರದ ಉರಿ, ಮೂತ್ರ ಕೃಚ್ಛ್ರ, ಮೂತ್ರದೊಡನೆ ಯಾ ಮುಂದಾಗಿ ಬಿಳುಪು, ಅರಸಿನ, ಕೆಂಪು ಈ ವರ್ಣಗಳಲ್ಲಿ ಕೀವು ಹೋಗುವುದು, ತೊಡೆ ಸಂದಿನಲ್ಲಿ ನೋವು, ಕಾಲು ಗಂಟುಗಳಲ್ಲಿ ವೇದನೆ, ಕಣ್ಣಿನಲ್ಲಿ ಕೀವು ಬರುವುದು, ಶರೀರದಲ್ಲಿ ಉಷ್ಣತೆ, ಸ್ಪರ್ಶೇಂದ್ರಿಯ ಇವೆಲ್ಲಾ ಖಾತ್ರಿಯಾಗಿ ಗುಣಹೊಂದುವುದು

ಡಪ್ಪಿ ಒಂದಕ್ಕೆ ರೂ. 2—0—0

ಏಜಂಟ್ಸ್—

ಶಾ ಕಂಪೆನಿ, ಮಂಗಳೂರು

ಗತವೈಭವದ ಸವಿ ನೆನಹು

ಇತಿಹಾಸ ಪ್ರಸಿದ್ಧವಾದ ಸೋಮನಾಥ ಜ್ಯೋತಿರ್ಲಿಂಗದ ಪ್ರತಿಷ್ಠೆಯ ಕಾರ್ಯವು ತಾ. ೧೧ನೇ ಶುಕ್ರವಾರ ಮುಂಜಾನೆ 9-17 ರಾಷ್ಟ್ರಾಧ್ಯಕ್ಷ ಶ್ರೀ ರಾಜೇಂದ್ರಪ್ರಸಾದರವರಿಂದ ನಡೆಯಿತು. ಈ ಸಮಾರಂಭಕ್ಕೆ ಸುಮಾರು ಹತ್ತುಲಕ್ಷ ಜನ ನೆರೆದಿದ್ದರು. ಸೋಮನಾಥ ದೇವಾಲಯವು ಭಾರತದ ಪ್ರಖ್ಯಾತ ಹಾಗೂ ಅಗರ್ಭ ಸಂಪತ್ತಿನಿಂದ ಕೂಡಿದ ದೇವಸ್ಥಾನವಾಗಿತ್ತು. ಈ ದೇವಾಲಯಕ್ಕೆ ಚಾರಿತ್ರಿಕ ವೈಭವಪೂರ್ಣ ಹಿನ್ನೆಲೆಯಿದ್ದ ಹಾಗೆಯೆ, ರಾಜಕೀಯ ಸ್ವರೂಪದ ಮಹತ್ವವೂ ಇರುತ್ತದೆ. ಸೋಮನಾಥ ದೇವಾಲಯದ ರತ್ನವೈಡೂರ್ಯಾದಿಗಳನ್ನು ಕೊಳ್ಳೆಹೊಡೆಯಲು ಮುಸಲ್ಮಾನರು ಹಲವು ಬಾರಿ ಯತ್ನಮಾಡಿ ಹಾಳುಗೆಡಹಿದ್ದು ಘಜನಿ ಮಹಮ್ಮದನು ಅದನ್ನು ಸಂಪೂರ್ಣ ಹಾಳುಕೆಡವಿ ಅತ್ಯಂತ ಬೆಲೆಬಾಳುವ ರತ್ನಾಭರಣಗಳನ್ನು ಸೂರೆಗೊಂಡು ಹೋಗಿರುವದು ಇತಿಹಾಸ ಪ್ರಸಿದ್ಧ ವಿಚಾರ. ಈಗ ರೂಪುಗೊಳ್ಳುತ್ತಿರುವದು ಏಳನೇಬಾರಿ. ಆರುಬಾರಿ ಜೀರ್ಣೋದ್ಧಾರಕ್ಕೆಂದು ಆರುಬಾರಿಯೂ ಬೇರೆಯವರಿಂದ ಹಾಳುಗೆಡವಿದ ದೇವಾಲಯವು ತಿರುಗಿ ಏಳನೇಬಾರಿ ರೂಪುಗೊಂಡು ಸ್ಥಿರವಾಗಿ ನಿಲ್ಲಿಸುವ ಕಾರ್ಯವನ್ನು ಸರಕಾರ ಹಾಗೂ ದೇವಾಲಯದ ಟ್ರಸ್ಟಿಗಳು ಇಂದು ಮಾಡಿದ್ದಾರೆ

ಈ ದೇವಾಲಯವನ್ನು ಸಂಪೂರ್ಣವಾಗಿ ಕಟ್ಟಿ ಪೂರೈಸಬೇಕಾದರೆ ಕನಿಷ್ಠ ಪಕ್ಷ ಎಂಟು ಹತ್ತು ವರ್ಷಗಳಾದರೂ ಬೇಕಾದೀತೆಂದು ತಜ್ಞರ ಅಭಿಪ್ರಾಯವಿದೆ. ಒಟ್ಟಿಗೆ ಅರುವತ್ತು ಅರುವತ್ತೈದು ಲಕ್ಷ ರೂ. ತಗಲಬಹುದಾಗಿದೆ. ಈಗಾಗಲೇ ಟ್ರಸ್ಟಿಗಳು ಮೂವತ್ತು ಲಕ್ಷ ರೂಪಾಯಿಗಳನ್ನು ಸಂಗ್ರಹಿಸಿದ್ದಾರೆ

ಗರ್ಭಗೃಹ ೨೮ ಅಡಿ ಎತ್ತರವಾಗಿದ್ದು ಅದರ ಮೇಲೆ ಕಲಾಪೂರ್ಣ ಕೆತ್ತನೆಯ ಕೆಲಸವನ್ನು ಮಾಡಲಾಗಿದೆ. ಸ್ಥಾಪನೆಗೊಳ್ಳುವ ಜ್ಯೋತಿರ್ಲಿಂಗವು ೧೧ ಎತ್ತರ ೭॥ ಅಗಲವಾಗಿದ್ದು ಶಿಲೆಯಲ್ಲಿ ಕೆತ್ತಲ್ಪಟ್ಟದ್ದಾಗಿರುತ್ತದೆ. ೭॥ ಅಡಿ ಎತ್ತರದಲ್ಲಿ ಕೇವಲ ೩॥ ಅಡಿ ಮಾತ್ರ ಭಕ್ತಾದಿಗಳಿಗೆ ಕಾಣಿಸುತ್ತದೆ ಉಳಿದಂಶ ಭೂಮಿಯಲ್ಲೇ ಉಳಿಯುತ್ತದೆ. ಲಿಂಗದ ಹಿಂಬದಿಯಲ್ಲಿ ಅಮೃತಶಿಲೆಯಲ್ಲಿ ಕೆತ್ತಿದ ಪಾರ್ವತೀ ಸುಂದರಮೂರ್ತಿಯನ್ನು ಎದುರಾಗಿ ಇರಿಸಲಾಗಿದೆ. ಮುಂದಕ್ಕೆ ಗರ್ಭಗೃಹದ ಮೇಲೆ ಗುಡಿಮಂಟಪ, ನೃತ್ಯಗೃಹ, ಗೋಪುರಗಳನ್ನು ಕಟ್ಟಿ ಹಿಂದಿನ ಮಹಾವೈಭವದಂತೆ ಕಂಗೊಳಿಸುವ ರೀತಿಯಲ್ಲಿ ಕಟ್ಟಲಾಗುವದು. ಕಲಾಪೂರ್ಣ ಕೆತ್ತನೆಯ ಚಿತ್ರಕಲೆಯ ಮಹಾಕಾರ್ಯವನ್ನು ಸೋಮನಾಥದ ಪಾಲಿಟಾನಾದಲ್ಲಿ ವಾಸವಾಗಿರುವ ೫೫ ವರ್ಷದ ಶ್ರೀ ಪ್ರಭಾಶಂಕರ ಎಂಬ ಶಿಲ್ಪಕಲಾ ನಿಪುಣರು ವಹಿಸಿಕೊಂಡಿರುವರು. ಈ ಹಿಂದೆ ಸೋಮನಾಥ ದೇವಾಲಯವನ್ನು ಕಟ್ಟುವಲ್ಲಿ ಅವರು ನೆರವಾಗಿದ್ದರಂತೆ.

ಸೋಮನಾಥ ದೇವಾಲಯದ ಮುಂದಿನ ಕಾರ್ಯನಿರ್ವಹಣಕ್ಕಾಗಿ ಅಲ್ಲಿಂದ ೫೦ ಮೈಲು ದೂರದಲ್ಲಿರುವ ಮಾಸೋಜದ ಹತ್ತಿರದ ೧೫೦ ಎಕರೆ ಭೂಮಿಯನ್ನು ಅದರೊಂದಿಗೆ ೩೮೧ ಎಕರೆ ಸಾಗುವಳಿ ಯೋಗ್ಯ ಪಡುಭೂಮಿಯನ್ನೂ ಟ್ರಸ್ಟಿಗೆ ಹಸ್ತಾಂತರ ಮಾಡಲು ಸೌರಾಷ್ಟ್ರ ಸರಕಾರವು ನಿರ್ಧರಿಸಿದೆ. ಸಂಸ್ಕೃತ ವಿಶ್ವವಿದ್ಯಾಲಯವೇ ಮೊದಲಾದ ಮಹೋದ್ದೇಶಗಳನ್ನಿಟ್ಟುಕೊಂಡಿರುವ ದೇವಾಲಯ ಟ್ರಸ್ಟಿಗೆ ದೇಹೋತ್ಸರ್ಗದ ಉಸುಕಿನ ಬಯಲನ್ನೂ ಸೌರಾಷ್ಟ್ರ ಸರಕಾರವು ಕೊಡಲೊಪ್ಪಿದೆ.

ಅಂತೂ ಸೋಮನಾಥ ದೇವಾಲಯದ ಜೀರ್ಣೋದ್ಧಾರದ ಮಹಾಕಾರ್ಯ ಸ್ವತಂತ್ರ ಭಾರತದ ಒಂದು ಮಹತ್ಕಾರ್ಯವೆಂದೇ ಹೇಳಬೇಕು. ಪ್ರತಿಷ್ಠೆಯ ಕಾಲದಲ್ಲಿ ಅಧ್ಯಕ್ಷ ರಾಜೇಂದ್ರ ಪ್ರಸಾದರು "ಈ ಜೀರ್ಣೋದ್ಧಾರವನ್ನು ಹಿಂದಿನ ಕಹಿ ಅನುಭವದ ಪರಿಹಾರಕ್ಕಾಗಿ ಯಾಗಲೀ— ಆ ದಿನ ಮಾನಸಿಕ ಯಾತನೆಯನ್ನು ತೀರಿಸಿಕೊಳ್ಳುವದಕ್ಕಾಗಿಯಾಗಲೀ ಕಟ್ಟಿಸುತ್ತಿಲ್ಲ. ಚಾರಿತ್ರಿಕವೂ, ಅತ್ಯಂತ ಧಾರ್ಮಿಕವೂ ಆದ ದೇವಸ್ಥಾನದ ಜೀರ್ಣೋದ್ಧಾರ ಮಾಡಿ ತನ್ಮೂಲಕ ಸತ್ಯನಿಷ್ಠೆ–ದೈವಿಕ ಭಕ್ತಿ ಜನತೆಯಲ್ಲಿ ಮೂಡಲೆಂದೇ ನಾವು ಆಶಿಸಿದ್ದೇವೆ. ಇದರಿಂದಾಗಿ ಸರದಾರ ಪಟೇಲರ ಇಚ್ಛೆಯೂ ಪರಿಪೂರ್ಣವಾದಂತಾಯಿತು" ಎಂದು ರಾಜೇಂದ್ರಪ್ರಸಾದರು ಅಪ್ಪಣೆಕೊಡಿಸಿದ್ದಾರೆ.

ಸರದಾರ ಪಟೇಲರು ಮಾಗಲೇ ಈ ಸೋಮನಾಥ ದೇವಾಲಯದ ಜೀರ್ಣೋದ್ಧಾರಕ್ಕಾಗಿ ಯತ್ನ ಮಾಡಿದ್ದರು. ಅವರ ಬಲವಾದ ಇಚ್ಛೆಯಿಂದಲೇ ಇಂದು ಸೋಮನಾಥ ಲಿಂಗವ ಪ್ರತಿಷ್ಠೆಗೊಂಡು ಮುಂದೆ ಮುಂದೆ ಸೋಮನಾಥ ದೇವಾಲಯವು ವೈಭವಪೂರ್ಣವಾದ ತನ್ನ ಚಾರಿತ್ರಿಕ ಹಿನ್ನೆಲೆಯನ್ನು ಗಳಿಸಿಕೊಳ್ಳುವಂತಾಗಿದೆ. ಉಳಿದ ದೇವಾಲಯಕ್ಕಿಂತ ಮಹತ್ವಕೆ ಸೋಮನಾಥ ದೇವಾಲಯಕ್ಕಿದೆ. ದೇವಸ್ಥಾನದ ಒಂದು ಕಡೆ ವಿಶಾಲವಾದ ಅಂಭೋಸಮುದ್ರ ಇನ್ನೊಂದೆಡೆ ಪ್ರಕೃತಿ ಸೌಂದರ್ಯ ಸ್ಥಳಮಹಾತ್ಮೆಯನ್ನು ಹೆಚ್ಚಿಸಿದೆ ಹಿಂದಿನ ಕಲಾಪೂರ್ಣ ಅವಶೇಷಗಳನ್ನು ಕಂಡರೆ ಎಂತಹ ಕಲ್ಲೆದೆಯವನಿಗೂ ಮನ ಕರಗದಿಲಾರದು. ಕಲಾಪೂರ್ಣ ವೈಭವವನ್ನು ಉಳಿಸಿಕೊಳ್ಳುವುದರಲ್ಲಿ ಭಾರತ ಹಾಗೂ ಸೌರಾಷ್ಟ್ರ ಸರಕಾರವು ಮುಂದಾದ್ದಕ್ಕೆ ಜನತೆ ಕೃತಜ್ಞವಾಗಿದೆ. ಟ್ರಸ್ಟಿಯವರ ಅಪೂರ್ವ ಸಾಹಸವನ್ನು ನಾವು ಎಷ್ಟು ಕೊಂಡಾಡಿದರೂ ಸಾಲದು. ಈ ಎಲ್ಲ ಪುಣ್ಯಕಾರ್ಯದ ಫಲವಾಗಿ ರಾಷ್ಟ್ರಾಧ್ಯಕ್ಷರೆನ್ನುವಂತೆ ಭಾರತದ ಜನತೆ ಭಯಭಕ್ತಿ–ಸತ್ಯನಿಷ್ಠೆ ದೈವಿಕ ಭಕ್ತಿಯುಳ್ಳ ಆದರ್ಶಜನಾಂಗವಾಗಿ ಬಾಳಲೆಂದು ಹಾರೈಸುತ್ತೇವೆ.

ನಿರಾಶೆಗೆ ಒಳಗಾಗದಿರಿ!

ಉಬ್ಬಸ, ಕಫ, ಶ್ವಾಸಕೋಶದಿಂದ ತೀವ್ರ ವಿಪರೀತ ಕಷ್ಟಪಡುತ್ತೀರಾ? ಪಲವಾರು ಅಮೌಲ್ಯ ಔಷಧಿಗಳ ಸೇವನೆಯಿಂದ ನಿಮಗೆ ಗುಣವಾಗದಿರುವುದೇ?

ಆಶಾಭಂಗಕ್ಕೊಳಗಾಗದಿರಿ!

ಅಲ್ಪವೆಚ್ಚ-ಅಲ್ಪಾವಧಿಯೊಳಗೆ ನಿಮ್ಮಬಾಧೆಯನ್ನು ಶಮನಮಾಡುವ

ಖಾತ್ರಿ ಔಷಧಿಯು ನಮ್ಮಲ್ಲಿರುವುದು.

ಒಂದೇ ಒಂದು ಸೀಸೆಯನ್ನು ಕೊಂಡು, ಗುಣಪರೀಕ್ಷೆಮಾಡಿರಿ

ಈ ಹೊಸ ಮದ್ದಿನಿಂದ ನಿಮಗೆ ಅದ್ಭುತ ಗುಣತೋರುವುದೆ ಖಂಡಿತ.

ಕೂಡಲೆ ಬರೆಯಿರಿ:—

ದಿ ನೇಶನಲ್ ಜನರಲ್ ಸ್ಟೋರ್ಸ್

(ಡಿಸ್ಪೆನ್ಸಿಂಗ್ ಕೆಮಿಸ್ಟ್ಸ್ ಮತ್ತು ಡ್ರಗ್ಗಿಸ್ಟ್ಸ್)

8-A ಮೆಹರ್ವಾನ್ ಬಿಲ್ಡಿಂಗ್ಸ್, ಸರ್. ಫಿರೋಜ್ ಷಾ ಮೆಹತಾ ರೋಡು,

ಫೋರ್ಟ್, ಬೊಂಬಾಯಿ.

THE NATIONAL GENERAL STORES

Importers Experters, Dispensing Chemists & Druggists,

General Merchants & Commission Agents,

8A Mherwan Buildings, Opp: His Master's Voice,

Sir Phirozsha Mehta Road, **Fort, Bombay.**

ಕಾಸರಗೋಡು ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ

ಕ್ರಮ ಸಂಖ್ಯೆ 115/50

ಗಂಗಮ್ಮ —ವಾದಿ

ಮತ್ತು

ನಾರಾಯಣ ಭಟ್ಟ ಕೂಡಾ — ಪ್ರತಿವಾದಿಗಳು

ಇವರೊಳಗೆ

1 ನೇ ಪ್ರತಿವಾದಿಗೆ ನೋಟೀಸು:—ನಾರಾಯಣ ಭಟ್ಟ, ವೆಂಕಟೇಶ್ವರ ಭಟ್ಟರ ಮಗ, ಮುಳಿಯಾರು ಗ್ರಾಮದ ಕಾತವಡ್ಕದಲ್ಲಿ ವಾಸ ಇರು—

ವಾದಿಯು ನಿಮ್ಮ ಮೇಲೆ ಕೂಡಾ ಜೀವನಾಂಶ ವಸೂಲಾತಿ ಬಗ್ಗೆ ವ್ಯಾಜ್ಯ ದಾಖಲು ಮಾಡಿದ್ದಾರೆ ಸದ್ರಿ ವ್ಯಾಜ್ಯವು ನಿಮ್ಮ ಹಾಜರಿ ಬಗ್ಗೆ ಮತ್ತು ಪ್ರತ್ಯುತ್ತರ ಹೇಳುವದಕ್ಕಾಗಿ ತಾರೀಖು 25 5 1951ಕ್ಕೆ ವಾಯಿದೆ ಇಟ್ಟಿರುತ್ತದೆ ಅದ್ದರಿಂದ ಮೇಲೆ ನಮೂದಿಸಿದ ದಿವಸದಲ್ಲಿ ನೀವು ಹಾಜರಾಗದಿದ್ದರೆ ನಿಮ್ಮನ್ನು ಏಕಪಕ್ಷಮಾಡಿ ನಿಮ್ಮ ಗೈರು ಹಾಜರಿಯಲ್ಲಿ ವ್ಯಾಜ್ಯವು ತೈಸಲು ಮಾಡಲಾಗುವದೆಂತ ನೀವು ತಿಳಿಯತಕ್ಕದ್ದು.

[By order of Court]

N. Venkatramana Bhat,
Advocate for Plaintiff.
Kasaragod, 9-5-1951

ಕಮ್ಯೂನಿಸ್ಟ ಚೀನದ ಮೇಲೆ ಇನ್ನೊಂದು ಪೆಟ್ಟು

ಕೊರಿಯಾ ಯುದ್ಧರಂಗದಲ್ಲಿ ಕಮ್ಯೂನಿಷ್ಟರ ಹಾವಳಿಯನ್ನು ತಡೆಗಟ್ಟಲು ಅಮೇರಿಕೆಯು ಇನ್ನೊಂದು ರೀತಿಯ ಆರ್ಥಿಕ ದಿಗ್ಬಂಧನವನ್ನು ಹೇರುವ ನಿರ್ಧಾರ ಮಾಡಿದೆ. ಯುದ್ಧರಂಗದ ಸಂಭವನೇ ಇದಕ್ಕೆ ಮುಖ್ಯ ಕಾರಣವೆನ್ನಬೇಕು. ಕಮ್ಯೂನಿಸ್ಟ ಚೀನಾಕ್ಕೆ ಯುದ್ಧ ಸಾಮಾಗ್ರಿಗಳನ್ನು ಕಳಿಸುತ್ತಿರುವುದನ್ನು ನಿಲ್ಲಿಸಬೇಕೆನ್ನುವ ಅಮೇರಿಕೆಯ ವಾದ ಬ್ರಿಟಿಷ್ ಅಮೇರಿಕೆಯೊಳಗಿನ ಮೈತ್ರಿಯಲ್ಲಿ ಬಿಕ್ಕಟ್ಟುಂಟುಮಾಡಿದೆ. ಬ್ರಿಟನು ಯುದ್ಧದಲ್ಲಿ ತೊಡಗಿದ್ದು ಅಲ್ಲಿಂದ ಕಮ್ಯೂನಿಸ್ಟ ಚೀನಕ್ಕೆ ಯುದ್ಧ ಸಾಧನಗಳನ್ನು ಕಳಿಸುತ್ತಿರುವುದನ್ನು ಅಮೇರಿಕೆ ಪ್ರತಿಭಟಿಸಿಯದೆ. ಈಗಲಂತೂ ಪ್ರತ್ಯಕ್ಷವಾಗಿ ಬ್ರಿಟನಿಗೆ ಎಚ್ಚರಿಸಿಯದೆ. ಕಮ್ಯೂನಿಸ್ಟ ಚೀನವನ್ನು ಬ್ರಿಟನ ಸಂತೃಪ್ತಿಗೊಳಿಸುತ್ತಿದೆಯೆಂಬ ಆಪವಾದ ಅಮೇರಿಕೆಯ ರಾಜಕೀಯ ವರ್ಗಗಳಲ್ಲಿ ಎದ್ದಿದೆ. ಅಮೇರಿಕೆಯು ಬ್ರಿಟನದ ಮನವೊಲಿಸಿ ಕಮ್ಯೂನಿಸ್ಟ ಚೀನದ ಮೇಲೆ ಅದ ಕಳಿಸುತ್ತಿರುವ ಯುದ್ಧ ಸಾಮಾಗ್ರಿಗಳ ದಿಗ್ಬಂಧನವನ್ನು ಹಾಕುವ ನಿರ್ಧಾರ ಮಾಡಿದೆ. ಅಮೇರಿಕೆಯಿಂದ ಆರ್ಥಿಕ ಸಹಾಯ ಪಡೆಯುತ್ತಿರುವ ಯಾವ ರಾಷ್ಟ್ರವು ಕಮ್ಯೂನಿಸ್ಟ ಚೀನಕ್ಕೆ ಯುದ್ಧ ಸಾಮಾನುಗಳನ್ನು ಕಳಿಸುತ್ತಿದೆಯೋ ಅದಕ್ಕೆ ಸಹಾಯವನ್ನು ಕೊಡಕೂಡದೆಂದಿದೆ. ಈ ತಂತ್ರಕ್ಕೆ ಮುಖ್ಯವಾಗಿ ಬ್ರಿಟನು ಒಪ್ಪಿಗೆ ಕೊಟ್ಟುದರಿಂದ ಉಳಿದ ರಾಷ್ಟ್ರಗಳ ಒಪ್ಪಿಗೆಗೆ ಹೆಚ್ಚು ಕಷ್ಟವಾಗದು. ಸಂ. ರಾ. ಸಂಘದಲ್ಲಿ ಈ ಕುರಿತು ಅತ್ಯವಸರದ ಚರ್ಚೆ ನಡೆಯಲಿದೆ. ಬ್ರಿಟನು ಅಮೇರಿಕೆಯ ಇಚ್ಛೆಗೆ ಸಂಖ್ಯೆಯಾಗಿ ನಡೆದ ಕೊಳ್ಳುವುದು ಮಾತ್ರವಲ್ಲದೆ ಇನ್ನಿತರ ರಾಷ್ಟ್ರಗಳಿಗೆ ಅಮೇರಿಕೆಯ ಧೋರಣೆಯನ್ನನುಸರಿಸುವಂತೆ ಸೂಚಿಸಿದೆ. ಕಮ್ಯೂನಿಸ್ಟ ಚೀನಕ್ಕೆ ರಬ್ಬರುಗಳನ್ನು ನಿರ್ಯಾತಮಾಡುವ ಸಿಂಗಾಪುರ ಹಾಗೂ ಮಲಯಾ ರಾಷ್ಟ್ರಗಳಿಗೆ ಬ್ರಿಟನು ನಿರ್ಯಾತವನ್ನು ಮುಂದಕ್ಕೆ ನಿಲ್ಲಿಸುವಂತೆ ಈಗಾಗಲೇ ಸೂಚಿಸಿದೆ. ಆ ಎರಡು ರಾಷ್ಟ್ರಗಳು ಆ ಕುರಿತು ಸದ್ಯವೇ ಒಂದು ನಿರ್ಧಾರಕ್ಕೆ ಬರಲಿವೆ. ಭಾರತ ಸರಕಾರವೂ ಕಮ್ಯೂನಿಸ್ಟ ಚೀನದೊಡನೆ ಆಹಾರ ಧಾನ್ಯವನ್ನು ಪಡೆದ ಕೊಳ್ಳುವ ವ್ಯವಹಾರ ನಡಸುತ್ತಲಿದ್ದು ಅದಕ್ಕೆ ಪ್ರತಿಯಾಗಿ ಗೋಣಿನಾರು, ಸೆಣಬುಗಳನ್ನು ಕಳಿಸಿಕೊಡಬೇಕಾಗಿದೆ. ಸದ್ಯ ಯುದ್ಧ ಸರಕಿನ ಮೇಲೆ ಪ್ರತಿಬಂಧ ಹಾಕಿದರೂ ಮತ್ತೆ ಉಳಿದೆಲ್ಲ ಕಚ್ಚಾ ವಸ್ತುಗಳ ಮೇಲೂ ನಿರ್ಯಾತ ಪ್ರತಿಬಂಧ ಅಮೇರಿಕೆಯು ಹೇರುವದರಲ್ಲಿ ಸಂದೇಹವಿಲ್ಲ. ಈ ರೀತಿಯ ಆರ್ಥಿಕ ದಿಗ್ಬಂಧನದಿಂದ ಭಾರತವೇ ಮೊದಲಾದ ರಾಷ್ಟ್ರಗಳಿಗೆ ಅತ್ಯಾವಶ್ಯಕ ವಸ್ತುಗಳ ಕೊರತೆಯ ಭೀತಿಯುಂಟಾಗಬಹುದು. ವಿಶೇಷವಾಗಿ ಆಹಾರ ಧಾನ್ಯವನ್ನು ಭಾರತ ಕಳೆದುಕೊಳ್ಳಬೇಕಾದೀತು. ಕಮ್ಯೂನಿಸ್ಟ ಚೀನವನ್ನು ಹಣ್ಣಾಗಿಸಿ ಯುದ್ಧವನ್ನು ನಿಲ್ಲಿಸಿಬಿಡಬೇಕೆಂಬ ಆಂಗ್ಲೋ ಅಮೇರಿಕನರ ಈ ತಂತ್ರದಿಂದ ಚೀನವು ಸ್ವಲ್ಪವೂ ಹೆದರದೆ ಇನ್ನಷ್ಟು ಗಂಭೀರ ಪರಿಸ್ಥಿತಿಯೇ ಇದರಿಂದ ಉದ್ಭೂತವಾಗಲಿಡಯಿದೆ.

ಆಹಾರದಲ್ಲಿ ಪ್ರಗತಿ

ಕೇಂದ್ರದ ಆಹಾರ ಮಂತ್ರಿ ಕೆ.ಎಂ. ಮುನ್ಷಿಯವರ ಧುರೀಣತ್ವದಲ್ಲಿ ಬರ್ಮಾಕ್ಕೆ ತೆರಳಿದ ಶಿಷ್ಟಮಂಡಳವು ತನ್ನ ಕಾರ್ಯದಲ್ಲಿ ಒಳ್ಳೆಯ ಪ್ರಗತಿಯನ್ನು ಸಾಧಿಸಿಯದೆ. ಬರ್ಮಾದೊಡನೆ ಪಂಚವಾರ್ಷಿಕ ಒಪ್ಪಂದವನ್ನು ಮಾಡಿಕೊಂಡಿರುತ್ತದೆ. ಆ ಒಪ್ಪಂದದಂತೆ ಬರ್ಮಾವು ಬರುವ ಆರು ತಿಂಗಳೊಳಗಾಗಿ 240000 ಟನ್ ಅಕ್ಕಿಯನ್ನು ಭಾರತಕ್ಕೆ ಕಳಿಸಿಕೊಡುತ್ತದೆ. ಮುಂದಕ್ಕೆ ವರ್ಷಕ್ಕೆ 350000 ಟನ್ ಅಕ್ಕಿಯ ಸರಬರಾಯಿ ಮಾಡಬೇಕಾಗುತ್ತದೆ. ಬರ್ಮಾದ ಕೊಡುಗೆಯಿಂದ ಭಾರತ ಸರಕಾರವು ಆಹಾರದ ಕೊರತೆಯುಳ್ಳ ಪ್ರದೇಶಗಳಿಗೆ ಹೆಚ್ಚಿನ ಆಹಾರ ಕಳಿಸಿಕೊಡಲು ಸಮರ್ಥವಾಗಿದೆ. ಕೇಂದ್ರ ಸರಕಾರವು ಮದ್ರಾಸು ಪ್ರಾಂತಕ್ಕೆ ಕೊಡಮಾಡಿದ 57000 ಟನ್ ಆಹಾರ ಧಾನ್ಯವನ್ನು 67000 ಟನ್ನಿನ ವರೆಗೆ ಹೆಚ್ಚಿಸಿದೆ. ಹಾಗೆಯೆ ಬಿಹಾರ, ಹೈದರಾಬಾದ ಮುಂತಾದ ಕಡೆಗಳಿಗೆ ಹೆಚ್ಚಿಸಲಾಗಿದೆ. ಮದ್ರಾಸಿನ ಆಹಾರ ಸಂಗ್ರಹವು ತೃಪ್ತಿಕರವಾಗಿದ್ದು ಜುಲೈ ತಿಂಗಳ 15ರೊಳಗೆ 12000 ಟನ್ ಬರ್ಮಾದ ಅಕ್ಕಿ ಮದ್ರಾಸಕ್ಕೆ ಬರಲಿದೆ.

ರಷ್ಯವು ಕೊಡಮಾಡಿದ 500000 ಟನ್ ಗೋದಿಯಲ್ಲಿ 50000 ಟನ್ ಗೋದಿಯನ್ನು ಭಾರತಕ್ಕೆ ಈಗಾಗಲೇ ಕಳಿಸಿರುತ್ತದೆ. ಜುಲೈ ತಿಂಗಳಾಂತ್ಯದೊಳಗೆ ಭಾರತಕ್ಕೆ ತಲುಪುವ ನಿರೀಕ್ಷೆಯದೆ.

ಅಮೇರಿಕೆಯ ಆಹಾರ ಕಾಣಿಕೆಯು ಹಲವು ಕಾರಣಗಳಿಂದ ಈ ವರೆಗೆ ತಡೆದಿದ್ದರೂ ಶೀಘ್ರದಲ್ಲೇ ಕಳಿಸಿಕೊಡಬೇಕೆನ್ನುವ ಒತ್ತಾಯ ರಾಜಕೀಯ ಪಕ್ಷಗಳಲ್ಲಿ ಉಂಟಾಗಿದೆ. ಕೊನೆಗೆಯಲ್ಲಿ ಈಗಾಗಲೇ ಹಲವು ತಿದ್ದುಪಡಿಗಳು ಬಂದಿವೆ. ಎರಡು ಮಿಲಿಯ ಟನ್ ಆಹಾರ ಧಾನ್ಯಗಳ ಪೈಕಿ ಅರ್ಧಾಂಶ ಮಾಫಿಯಾಗಿಯೂ ಇನ್ನರ್ಧಾಂಶ ಸಾಲದ ರೂಪವಾಗಿಯೂ ಕೊಡಬೇಕೆಂದು ನಿಶ್ಚಯವಾದದ್ದನ್ನು ಪ್ರತಿನಿಧಿ ಸಭೆ ಎಲ್ಲವನ್ನೂ ಸಾಲದ ರೂಪದಲ್ಲೇ ಕೊಡಬೇಕೆಂದೂ, ಅದನ್ನು 5 ಅಥವಾ 8 ವರ್ಷಗಳಲ್ಲಿ ವಸೂಲು ಮಾಡಿಕೊಳ್ಳಬಹುದೆಂದೂ ಸೂಚಿಸಿದೆಯಂತೆ. ಆದರೆ ಇನ್ನೆರಡು ವಾರಗಳಲ್ಲೇ ಅಮೇರಿಕೆಯು ಭಾರತದ ಕೊಡುಗೆಯ ವಿಚಾರದಲ್ಲಿ ನಿರ್ದಿಷ್ಟವಾದ ಧೋರಣೆಯನ್ನು ತಳೆಯಬಹುದೆಂದು ತಿಳಿದು ಬರುತ್ತದೆ.

ಪಾಕಿಸ್ತಾನವು ಈ ವರೆಗೆ 60 ಸಾವಿರ ಟನ್ನು ಅಕ್ಕಿಯನ್ನು ಭಾರತಕ್ಕೆ ಕಳಿಸಿದ್ದು ಜೂನಾಂತ್ಯದೊಳಗೆ 3 ಲಕ್ಷ ಟನ್ ಅಕ್ಕಿಯನ್ನು ಭಾರತ ಪಾಕಿಸ್ತಾನ ಒಪ್ಪಂದದನ್ವಯ ಅದು ಪೂರೈಸಲಿದೆ.

ಹಾಗೆಯೆ ಇನ್ನೂ ಹಲವು ರಾಷ್ಟ್ರಗಳು ಭಾರತಕ್ಕೆ ಆಹಾರ ಧಾನ್ಯವನ್ನು ಕೊಡುವ ಆಶ್ವಾಸನೆಯನ್ನಿತ್ತಿರುವದರಿಂದ ಆಹಾರ ಬಿಕ್ಕಟ್ಟು ಅತಿಯಾಗದು. ಆದರೆ ಭಾರತ ಅಮೇರಿಕೆಗಳೊಳಗೆ ರಾಜಕೀಯ ತೊಡಕುಗಳು ತಲೆದೋರಿದ್ದರಿಂದ ಅದು ಹೇಗಾಗಬಹುದೆಂದು ಊಹಿಸಲು ಬರುವಂತಿಲ್ಲ. ಜವಾಹರಲಾಲರು ಪರದೇಶಗಳಿಂದ ತರಿಸಲಾಗುವ ಆಹಾರ ಧಾನ್ಯಗಳಿಗೆ ಪ್ರತಿಯಾಗಿ ಭಾರತವು ಯುದ್ಧೋಪಯೋಗೀ ವಸ್ತುಗಳನ್ನು ಕಳಿಸುವುದಿಲ್ಲವೆಂದು ಸ್ಪಷ್ಟವಾಗಿ ಹೇಳಿರುತ್ತಾರೆ. ಆದರೆ ಅಮೇರಿಕೆಗೆ ಭಾರತದಿಂದ ಅಲ್ಕೋಹಾಲ್ ಕಳಿಸಿಕೊಡುವ ಏರ್ಪಾಡೂ ನಡೆದಿದೆ. ಅಲ್ಕೋಹಾಲನ್ನು ಗುಪ್ತ ಸ್ಫೋಟಕಗಳಿಗಾಗಿ ಬಳಸಿಕೊಳ್ಳಲಾಗುವದೆಂದು ಹೇಳಲಾಗುತ್ತದೆ. ಹಾಗಾದರೆ ಅಲ್ಕೋಹಾಲವು ಯುದ್ಧೋಪಯೋಗೀ ವಸ್ತುವೇ ಆಗಲಿಲ್ಲವೆ? ಅಣು ಬಾಂಬಿಗೆ ಅತ್ಯವಶ್ಯಕವಾದ ವಸ್ತುಗಳು ಭಾರತದೊಡನೆ ಇರುವದರಿಂದ ಅಮೇರಿಕೆಯು ಅದರ ಮೇಲೆ ವಿಶೇಷ ಆಸ್ಥೆ ತಾಳಿದೆ. ಅಂತೂ ಅಮೇರಿಕೆ ಭಾರತಗಳೊಳಗಿನ ಆಹಾರ ಒಪ್ಪಂದ ಕೊನೆಗೂ ಸಮಸ್ಯೆಯ ವಿಚಾರವಾಗಿದೆ.

ಭಾರತ ಸರಕಾರವು ಆಹಾರ ವಿಚಾರವಾಗಿ ವಿಶೇಷ ಆಸ್ಥೆ ವಹಿಸಿದ್ದರಿಂದ ಬರಗಾಲದ ಭೀತಿಯು ದೂರಾದಂತಾಗಿದೆ.

ಕಾಂಗ್ರೆಸಿನಲ್ಲಿ ಐಕ್ಯತೆ

ಕಾಂಗ್ರೆಸ್ಸಿನಲ್ಲುಂಟಾದ ಒಕ್ಕಟ್ಟನ್ನು ಸಂಹರಿಸಬೇಕೆಂದು ಸರಕಾರೇತರ 75 ಮಂದಿಯ ಸಹಿಪತ್ರವೊಂದು ಕೂಡಲಿದೆ. ಆಚಾರ್ಯ ಕೃಪಲಾನಿ, ಅಜಮ್ಮದ ಕಿದ್ವಾಯಿಯವರು ಮೊದಲಾದವರು ಕಾಂಗ್ರೆಸ್ಸಿನಿಂದ ಹೊರಬಿದ್ದು ನೂತನ ಪಕ್ಷವೊಂದನ್ನು ರಚಿಸುವದರಿಂದ ಕಾಂಗ್ರೆಸ್ಸಿಗೆ ವಿಶೇಷ ಹಾನಿಯದೆಯೆಂಬುದನ್ನರಿತು ಈ ಸದಸ್ಯರು ಅವರನ್ನೊಂದಾಗಿಸಲು ಜವಾಹರಲಾಲ ನೆಹರೂರವರು ಮಾಡಿದ ಸಂಧಾನ ಪ್ರಯತ್ನದ ಯಶಸ್ಸಿಗೆ ಯತ್ನಿಸುತ್ತಿರಾಗಿ ತಿಳಿದುಬರುತ್ತದೆ. ಕಾಂಗ್ರೆಸ್ಸಿಗರ ಅನೀತಿಗಾಗಿ ವಿಶೇಷವಾಗಿ ನೊಂದು ಕೊಂಡ ಆಚಾರ್ಯ ಕೃಪಲಾನಿಯವರು ನೂತನ ಪಕ್ಷ ರಚನೆಯನ್ನು ಮಾಡುವ ಉದ್ದೇಶದಿಂದಿದ್ದಾರೆ. ಉಚ್ಚ ಕಾಂಗ್ರೆಸ್ಸಿಗರಿಂದ ಸರಿಯಾದ ನ್ಯಾಯದಾನ ಸಿಕ್ಕೀತೆಂದು ತಾನು ಬಯಸಿದ್ದು ವ್ಯರ್ಥವಾಯಿತೆಂದು ಹೇಳಿರುವದಾದರೂ "ಸಂಧಾನದ ಮಾರ್ಗವಿನ್ನೂ ತೆರೆದಿದೆ" ಎಂದಿರುವ ಪ್ರಯುಕ್ತ ಹೆಚ್ಚು ಜನ ಕಾಂಗ್ರೆಸ್ಸಿಗರು ಕೃಪಲಾನಿ ಮತ್ತು ಅನುಯಾಯಿಗಳನ್ನು ಕಾಂಗ್ರೆಸ್ಸಿನಲ್ಲೇ ಉಳಿಯುವಂತೆ ಪ್ರಯತ್ನ ನಡೆಸುವವರಿದ್ದಾರೆ. ಕೃಪಲಾನಿಯವರ ನೂತನ ಪಕ್ಷ ರಚನೆಯಾದರೆ ಕಾಂಗ್ರೆಸ್ಸಿನ ಹಲವು ಪ್ರತಿಷ್ಠಿತ ವ್ಯಕ್ತಿಗಳು ಕಾಂಗ್ರೆಸ್ಸನ್ನು ತ್ಯಜಿಸಬಹುದು. ಮದ್ರಾಸಿನಲ್ಲಿ ಪ್ರಕಾಶಂ ಪಕ್ಷ ಬೆಳೆಯುತ್ತಲಿದ್ದು ಸುಮಾರು 35 ಉಚ್ಚ ಆಂಧ್ರ ಕಾಂಗ್ರೆಸ್ಸಿಗರು ಕಾಂಗ್ರೆಸ್ಸಿಗೆ ರಾಜಿನಾಮೆಯನ್ನು ಸಲ್ಲಿಸಿರುತ್ತಾರೆ. ಕೇರಳದ ಕೇಳಪ್ಪನ್‌ರವರೂ ಕೃಪಲಾನಿ ಪಕ್ಷಕ್ಕೆ ಸೇರುವ ನಿರ್ಧಾರವನ್ನು ಮಾಡಿ ಜನತೆಯ ಒಲವುಗಳಿಸಲು ಕೇರಳಕ್ಕೆ ಹೋಗಿರುತ್ತಾರೆ. ಇಂತಹ ಕಠಿಣ ಸಮಯದಲ್ಲೇ ಕಾಂಗ್ರೆಸಿನೊಳಗಿರುವ ಭಿನ್ನಾಭಿಪ್ರಾಯವನ್ನು ಬಿಡಿಸಿ ಕಾಂಗ್ರೆಸ್ಸಿನಲ್ಲಿ ಐಕ್ಯತೆಯನ್ನುಂಟುಮಾಡುವ ಮಹೋದ್ದೇಶವನ್ನು ಸರದಾರೇತರ ಪಕ್ಷವು ಇಟ್ಟುಕೊಂಡಿದೆ. ಸದುದ್ದೇಶ ಪೂರಕವೂ—ಅತ್ಯಂತಾವಶ್ಯಕವೂ ಆದ ಈ ಕಾರ್ಯದಲ್ಲಿ ಪಕ್ಷಕ್ಕೆ ಯಶಸ್ಸು ದೊರಕಲೆಂದು ಹಾರೈಸುತ್ತೇವೆ.

ಬೇಕಾಗಿದ್ದಾರೆ.

ಎರಡು ಜನ ಸೆಕೆಂಡಗ್ರೇಡ್ ತರಬೇತಾದ, ಎರಡು ಜನ ಜೂನಿಯರ್ ಗ್ರೇಡ್ ತರಬೇತಾದ ಶಿಕ್ಷಕ ಶಿಕ್ಷಕಿಯರು ಬೇಕಾಗಿದ್ದಾರೆ

ವಿವರಗಳಿಗಾಗಿ ವಿಚಾರಿಸಿರಿ,

ಮೆನೇಜರ್.

ಕಡಿಯಾಳಿ ಹಾ. ಎ. ಶಾಲೆ,

ಉಡುಪಿ.

ಬೇಂಕಿಂಗ್ ಸಂಬಂಧದ ಎಲ್ಲಾ ಸಮಸ್ಯೆಗಳಿಗೆ

ದಿ ವಿಜಯಾ ಬೇಂಕ್ ಲಿಮಿಟೆಡ್

ಇವರ ಸಲಹೆ ಕೇಳಿರಿ

ಹೆಡ್ ಆಫೀಸು : : : : ಮಂಗಳೂರು

ಮಡಿಕೇರಿಯಲ್ಲಿ ಒಂದು ಶಾಖೆಯೂ ಬೊಂಬಾಯಿಯಲ್ಲಿ ಒಂದು ಶಾಖೆಯೂ ಜಿಲ್ಲೆಯೊಳಗೆ ಹಲವು ಶಾಖೆಗಳೂ ಇವೆ.

ಸಿರಮ ರೇವಣಾತಿಗಳ ಮೇಲೆ ಆಕರ್ಷಕವಾದ ದರದ ಬಡ್ಡಿಯು ಕೊಡಲ್ಪಡುವುದು.	ತಕ್ಕುದಾದ ಜವಾಬ್ದಾರಿಗಳ ಮೇಲೆ ಸುಲಭವಾದ ಶರ್ತಗಳಲ್ಲಿ ಸಾಲಗಳು ಕೊಡಲ್ಪಡುವುವು.

ಸಾಲಿಯನ್ ಸೇಕಡಾ 4½ರ ಬಡ್ಡಿ ಗಳಿಸುವ ಮೂರು ವರ್ಷದ ಅವಧಿಯ **ವಿಜಯಾ ಕೇಶ್ ಸರ್ಟಿಫಿಕೇಟುಗಳ ಮೇಲೆ**

ಹಣವನ್ನು ಹಾಕಿರಿ

THE VIJAYA BANK, LTD,

ಬಿ. ಮಂಜಯ್ಯ, ಹೆಗ್ಗಡೆ,

(ದ. ಕ. ಜಿಲ್ಲಾ ಬೋರ್ಡ್ ಪ್ರೆಸಿಡೆಂಟ್)

ಡೈರೆಕ್ಟರ್ ಬೋರ್ಡಿನ ಅಧ್ಯಕ್ಷರು.



A proved from by the Govt. of Mysore Certificated by the Agent of the Govt of Cyloce & Indian.

ನವಯುಗ

ಚಂದಾ ವಿವರ
ವರ್ಷಕ್ಕೆ ರೂ. 5-12—0
6 ತಿಂಗಳಿಗೆ ರೂ. 3—0—0

ಗುರುವಾರ ಉಡುಪಿ, ೧೭-೫-೫೧

ಕಾಂಗ್ರೆಸ್ಸಿನ ಶುದ್ಧೀಕರಣಕ್ಕೆ ನೂತನ ಪಕ್ಷ ಬೇಕೇ?

ಆಚಾರ್ಯ ಕೃಪಲಾನಿ ಹಾಗೂ ಕಾಂಗ್ರೆಸ್ ಅಧ್ಯಕ್ಷ ಪುರುಷೋತ್ತಮದಾಸ ಟಂಡನರೊಳಗಾದ ಪತ್ರವ್ಯವಹಾರವು ಈಗ ಪ್ರಕಟಗೊಂಡಿದೆ. ಈ ಪತ್ರಗಳ ದ್ವಂದ್ವ ಯುದ್ಧದಲ್ಲಿ ಕಾಂಗ್ರೆಸ್ಸಿನಲ್ಲಿ ಇಬ್ಬಣವಾಗುವದಕ್ಕೆ ಕಾರಣವೇನೆಂಬುದು ನಮಗೆ ಚೆನ್ನಾಗಿ ಮನವರಿಕೆಯಾಗುತ್ತದೆ. ಕಾಂಗ್ರೆಸ್ ಗಾದಿಗೆ ಬರುವ ಮುನ್ನ ಟಂಡನರೂ ಕಾಂಗ್ರೆಸ್ಸಿನ ಮೇಲೆ ಬಲವಾದ ಟೀಕೆ ಮಾಡಿದವರೇ. ಕಾಂಗ್ರೆಸ್ಸಿನ ಜಾತ್ಯತೀತ ಧೋರಣೆಯ ಮೇಲೂ, ಇನ್ನು ಹಲವು ವಿಚಾರಗಳ ಮೇಲೂ ಅವರು ಟೀಕೆ ಮಾಡಿದ್ದರು. ಆದರೆ ಸ್ವತಃ ತಾನೇ ಗಾದಿಗೆ ಬಂದ ಮೇಲೆ ಅದೇ ದೋಷಗಳು ಈಗಲೂ ಕಾಂಗ್ರೆಸಿನಲ್ಲಿರುವದನ್ನು ಅವರು ಹೇಗೆ ಸಹಿಸುತ್ತಾರೋ! ಕಾಂಗ್ರೆಸ್ಸಿನ ಅಧ್ಯಕ್ಷರಾಗಿದ್ದುಕೊಂಡು ಇಂತಹ ಅವ್ಯವಸ್ಥೆಯನ್ನು ಪರಿಹರಿಸಲಾಗಲಿಲ್ಲವೆಂಬುದಕ್ಕೆ ಆ ಪತ್ರಗಳು ಸಾಕ್ಷಿಯಾಗಿರುತ್ತವೆ. ಆಚಾರ್ಯ ಕೃಪಲಾನಿಯವರು ಆರೋಪಿಸಿದ ಅಂಶದ ಸ್ಪಷ್ಟೀಕರಣಕ್ಕೆ ಟಂಡನರು ಸ್ಪಷ್ಟೀಕರಣ ಕೊಡುವ ಬದಲು ಹಾರಿಕೆಯ ಉತ್ತರವನ್ನು ಬರೆದಿದ್ದಾರೆ. ಮದ್ರಾಸದ ಪ್ರಕಾಶಮರು ಆಪಾದನೆಗಳನ್ನು ಕೇಳಿಕೊಳ್ಳುವಲ್ಲಿ ಶಂಕರರಾವ್ ಅದೇ ರೀತಿಯ ನಿವೇದನೆ ಮಾಡಿದ್ದನ್ನು ನಾವು ಮರೆಯುವಂತಿಲ್ಲ. ಪಟ್ಟಾಭಿಯವರು ನಿಸ್ಸಿಯರಾಗಿ ಪ್ರಾಂತಾಭಿಮಾನಕ್ಕೆ ಕಟ್ಟು ಬಿದ್ದುದು ಪ್ರತಿಯೊಬ್ಬ ಕಾಂಗ್ರೆಸಿಗರಿಗೂ ತಿಳಿದಿದೆ. ಅಪವಾದಗಳನ್ನು ಹಾರಿಸಿ ಅಸತ್ಯಪೂರ್ಣವಾದ ಕಾರಣಗಳನ್ನು ಕೊಡುವದು ಕಾಂಗ್ರೆಸ್ಸಿನ ಹಿರಿಯರ ವೈಶಿಷ್ಟ್ಯವೆಂಬಂತಾಗಿದೆ. ಪ್ರಾಂತೀಕರಣ ವಿಚಾರದಲ್ಲೂ ತ್ರಿಮೂರ್ತಿಗಳು ಮಾಡಿದ ವರದಿಯು ಎಷ್ಟು ಸ್ವಾರ್ಥಮಯವಾಗಿತ್ತೆಂಬುದನ್ನು ಜನತೆ ಅರಿತಿದೆ. ಆಗಲೂ ಪಟ್ಟಾಭಿಯವರು ಸ್ವಪ್ರಾಂತೀಯ ರಚನೆಗಾಗಿ ಅಸ್ಥೆವಹಿಸಿದ್ದೂ ತ್ರಿಮೂರ್ತಿಗಳನ್ನು ಅದನ್ನು ಒಪ್ಪಿದ್ದೂ ಒಂದು ಜಾದು! ಹೀಗೆ ಸ್ವೇಚ್ಛಾಪ್ರವೃತ್ತಿ ಕಾಂಗ್ರೆಸ್ಸಿನ ಹಿರಿಯರಲ್ಲಿ ಹೆಚ್ಚುತ್ತಿರೆ ಮಾಗ-ಅಧಿಕಾರಿ ವರ್ಗಗಳಲ್ಲಿ ಲಂಚಗುಳಿತನ, ಅವ್ಯವಹಾರ ಸಾಗುತ್ತಿರುವಾಗ—ಕಾಂಗ್ರೆಸ್ಸಿನ ಮೇಲೆ ಜನತೆಗೆ ನಿಷ್ಠೆ ಉಳಿಯುವದಾದರೂ ಹೇಗೆ? ಅದನ್ನು ಬಯಲಿಗೆಳೆದಾಗ ಕಾಂಗ್ರೆಸ್ಸಿಗರು ಹಾರಿಕೆಯ ಯತ್ನ ಮಾಡಿದರೆ ಈ ಬಗೆಯ ತೊಡಕುಗಳು ಉದ್ಭವಿಸುವದು ಸ್ವಾಭಾವಿಕ.

ಈ ಮೂರು ವರ್ಷಗಳಲ್ಲಿ ಕಾಂಗ್ರೆಸು ಬೆಳೆಸಿಕೊಂಡು ಬಂದ ಈ ವಿಷವೃಕ್ಷವು ಈಗ ಫಲಕೊಡುತ್ತಲಿದೆ. ಈ ವರೆಗೆ ಎಚ್ಚರಿಸಿದ್ದೂ ಆಯಿತು; ಮನವಿ ಮಾಡಿಕೊಂಡದ್ದೂ ಆಯಿತು; ಟೀಕಿಸಿದ್ದೂ ಆಯಿತು; ಪ್ರತಿಭಟಿಸಿದ್ದೂ ಆಯಿತು; ಆದರೆ ಸ್ವಾತಂತ್ರ್ಯ ಸಿಕ್ಕ ಈ ನಾಲ್ಕು ವರ್ಷಗಳಲ್ಲಿ ಕಾಂಗ್ರೆಸ್ಸಿಗರಲ್ಲಿ ತಮ್ಮನ್ನು ತಾವು ತಿದ್ದಿಕೊಳ್ಳುವ ಸೌಜನ್ಯ ಮೂಡಲಿಲ್ಲ. ಈಗ ಅದರ ಪ್ರತಿಫಲವನ್ನುಣ್ಣುವ ದುಃಖಪ್ರಸಂಗ ಬಂದಿದೆ. ನೆಹ್ರೂರಂತಹ ಹಿತವಾದವನ್ನು-ಹೃದಯಕವಾದ ಒತ್ತಾಸೆಯನ್ನು ನಿರಾಕರಿಸುವಷ್ಟು ಕಠಿಣ ಮನಸ್ಸು ಉಚ್ಚ ಕಾಂಗ್ರೆಸ್ಸಿಗರಲ್ಲಿ ಹುಟ್ಟಿರುವ ಗಂಭೀರಪರಿಸ್ಥಿತಿಯೇ ಕಾಂಗ್ರೆಸ್ಸಿನ ಸತ್ವಪರೀಕ್ಷೆಯ ಮುನ್ನದಂಡವಾಗಿದೆ. ಇಂದು ಎಲ್ಲರಿಕ್ಕಿಂತಲೂ ಪರಿಸ್ಥಿತಿಯ ಕುರಿತು ವ್ಯಥೆಪಡುವವರೆಂದರೆ ನೆಹ್ರೂರವರು. ಕಾಂಗ್ರೆಸ್ಸಿನ ಉಜ್ವಲ ಕರಗಳಿಂದ ಭಾರತದ ಭವ್ಯ ಕಲ್ಪನೆಯನ್ನು ಕಟ್ಟಿಕೊಂಡಿದ್ದರು. ಆದಿಂದು ಅವರ ಕನಸು ನನಸಾಗುವದರಲ್ಲಿ ಅನೇಕ ಅಡ್ಡಿ ವಿಘ್ನಗಳು ಬಂದು ನಿಂತಿವೆ. ಸ್ವಾರ್ಥಮಯ ಜಗತ್ತಿನಲ್ಲಿ ಅದು ಹೇಗೆ ನಿರ್ವಾಹಗೊಂಡೀತೆನ್ನುವದರಲ್ಲಿ ನಾವಾವ ರೀತಿಯ ಅತಿಶಯೋಕ್ತಿಗಳನ್ನು ಕಟ್ಟಿಕೊಳ್ಳುವಂತಿಲ್ಲವಾದರೂ ಹಲವು ಸರಕಾರೇತರ ಕಾಂಗ್ರೆಸ್ಸಿಗರು ನೆಹ್ರೂರವರ ಧುರೀಣತ್ವಕ್ಕೆ ಹೃತ್ಪೂರ್ವಕ ಬೆಂಬಲವನ್ನು ನೀಡಿ ಕಾಂಗ್ರೆಸ್ಸಿಗರ ಐಕ್ಯಕ್ಕಾಗಿ ಸಂಘಟಿತರಾಗಿರುವದರಿಂದ ಕಲುಷಿತ ವಾತಾವರಣ ತಿಳಿಯಾದೀತೇನೋ ಎಂಬಷ್ಟು ಆಶೆಯೂ ಇದೆ.

ಕೃಪಲಾನಿಯವರ ನಿಷ್ಪಕ್ಷ ಧೋರಣೆಯ ಕುರಿತು ನಾವು ಮೆಚ್ಚಿಗೆಯನ್ನು ವ್ಯಕ್ತಮಾಡಿದ್ದರೂ ಈಚೀಚೆ ಅವರು ಭಾವಪರವಶರಾಗಿ ಆಡುತ್ತಿರುವ ಅಸಂಬದ್ಧ ವಿಚಾರಗಳಿಗೆ ವಿಷಾದಪಡಬೇಕಾಗಿದೆ. ಕಾಂಗ್ರೆಸ್ಸಿನ ಕುರಿತು ಹೇಳಬೇಕಾದುದನ್ನು ಹೇಳಿ ಮುಗಿಸಿದ ಮೇಲೆ-ಹೊಸಪಕ್ಷವನ್ನು ಕಟ್ಟುವ ಬೆದರಿಕೆಯನ್ನು ಹಾಕಿದ ಮೇಲೆ-ತಿರುತಿರುಗಿ ಅದೇ ಪಕ್ಷದಲ್ಲಿ ಮುಂದಿನ ತನ್ನ ಕಾರ್ಯಕ್ರಮದ ಕುರಿತು ಅಸ್ಪಷ್ಟವಾದ ಘೋಷಣೆಯನ್ನು ವ್ಯಕ್ತಪಡಿಸುವುದು ಭೂಷಣವಲ್ಲ. ಕೃಪಲಾನಿಯವರಿಗೆ ಇರುವಷ್ಟೇ ದೇಶಪ್ರೇಮ—ಅಂತಃಕರಣೆಯ ಅಂಶ—ಅವರಿಕ್ಕಿಂತಲೂ ಹಿರಿಯರಾದ ಕಾಂಗ್ರೆಸ್ಸಿಗರಿಗಿದೆ. ನೆಹ್ರೂ ಅದನ್ನರಿಯದವರಲ್ಲ! ಆದರೆ ಇಂತಹ ಸಾಮಾನ್ಯ ವಿಚಾರಗಳನ್ನು ತೆಗೆದುಕೊಂಡು ಅರ್ಧಶತಮಾನದಿಂದ ಸ್ವಾತಂತ್ರ್ಯ ಸಂಗ್ರಾಮಕ್ಕಾಗಿ ಹೋರಾಡಿದ ಕಾಂಗ್ರೆಸ್ಸಿನಂತಹ ಉಚ್ಚ ಸಂಸ್ಥೆಗಿದಿರಾಗಿ ಸ್ವತಂತ್ರ ಪಕ್ಷವನ್ನು ಕಟ್ಟುತ್ತೇವೆನ್ನುವದು ಹುಚ್ಚುತನವೇ ಸರಿ. ಹೊಸಪಕ್ಷದ ಪರಿಪೂರ್ಣ ಕಲ್ಪನೆಯಿಲ್ಲದೇನೇ ಕಾಂಗ್ರೆಸ್ಸಿನಂತಹ ಸಂಸ್ಥೆಯನ್ನು ಹಳಿಯುವುದು ತರ್ಕಶುದ್ಧವಾದವಾಗಲ್ಲ. ಚುನಾವಣೆಯ ಕಾಲಕ್ಕೆ ಕಾಂಗ್ರೆಸ್ಸಿಗರು ಸಂಘಟಿತರಾಗಿ ಕಾಂಗ್ರೆಸ್ಸಿನ ಧವಳ ಕೀರ್ತಿಯನ್ನು ಉಳಿಸಿಕೊಳ್ಳುವುದರಲ್ಲೇ ಮುತ್ಸದ್ದಿತನವನ್ನು ತೋರಿಸಬೇಕು. ಪಕ್ಷದಲ್ಲಿದ್ದುಕೊಂಡು ಅದರ ಶುದ್ಧೀಕರಣಕ್ಕಾಗಿ ಹೋರಾಡುವದರಲ್ಲೇ ಪೌರುಷವಿದೆ. ಪಕ್ಷಪಂಗಡಗಳ ಮೂಲಕ ಆ ಕಾರ್ಯವನ್ನು ಮಾಡುವದೆಂದರೆ ಕಾಂಗ್ರೆಸ್ಸಿಗೆ ಕೇಡು ಬಗೆದಂತೆಯೆ. ಕಾಂಗ್ರೆಸ್ ಐಕ್ಯಸಾಧಕ ಸಮಿತಿಯು ಈ ಬಗೆಯ ತೊಡಕನ್ನು ಪರಿಹರಿಸುವಲ್ಲಿ ಯಶಸ್ವಿಗಳಾಗಲೆಂದು ಹಾರೈಸುತ್ತೇವೆ.

ಹಾರುವ ಕಿಡಿಗಳು

ರಸ್ತೆಯ ಜಲ್ಲಿಕಲ್ಲು ಎದ್ದರೆ ಪಕ್ಕದ ಚರಂಡಿ ನಿರ್ಮಲವಾಗುತ್ತದೆ; ಅಂದರೆ ಚರಂಡಿಯ ಹೊಲಸು ಮಣ್ಣೆಲ್ಲ ರಸ್ತೆಯ ಮೇಲೆ ಹಂಚಲ್ಪಡುತ್ತದೆ.

೦೦೦

ಚರಂಡಿಯ ಮಣ್ಣು ಎಂದರೆ ಅದರಲ್ಲಿ ಏನಿದೆ, ಏನಿಲ್ಲವೆಂದು ಹೇಳುವುದು ಕಷ್ಟ. ಗ್ಲಾಸಿನ ಚೂರು, ಮೊಳೆ, ಕಬ್ಬಿಣದ ಚೂರು, ಹಂಚಿನ ತುಂಡು ಕೂಡಾ ಇಲ್ಲದಿಲ್ಲ. ಹೀಗಿದ್ದರೂ ಚರಂಡಿಯ ಮಣ್ಣನ್ನು ರಸ್ತೆಗೆ ಹಾಕದಿಲ್ಲ.

೦೦೦

ಅದರಲ್ಲಿ ನಡೆಯುವವರ ಗೋಳನ್ನು ಕೇಳುವವರಿದ್ದಾರೆಯೆ? ಹಾರುವ ಧೂಳನ್ನು ನೋಡುವ ಅಧಿಕಾರಿಗಳಿದ್ದಾರೆಯೇ?

೦೦೦

ಧೂಳು ಕಡಿಮೆಯಾಗಬೇಕೆಂಬ ಬೊಬ್ಬೆ "ಹೆಚ್ಚಾದಂತೆ ಧೂಳೂ ಹೆಚ್ಚಾಗುತ್ತಲೇ ಇದೆ.

೦೦೦

ಹೀಗಿದ್ದರೂ ಮೋಟಾರು, ಕಾರುಗಳ ಓಟದ ಮಿತಿಯಾದರೂ ಕಡಿಮೆಯಾದೆಯೆ? ಉಡುಪಿ ನಗರದೊಳಗೆ 'ಸ್ಪೀಡ' ಲಿಮಿಟ್ ಉಂಟೋ ಇಲ್ಲವೊ ಎಂದು ತಿಳಿಯುವುದು ಕೂಡ ಕಷ್ಟವಾಗಿದೆ

೦೦೦

ಬೊಂಬಾಯಿ ಎಂದರೆ ಬಾಯಿ ಬಿಡದವರಿಲ್ಲ; ಬರೇ ಬಾಯಿಯಿಂದಲೇ ಬದುಕುವವರೂ ಉಂಟಲ್ಲಿ.

೦೦೦

ನಮ್ಮ ಜಿಲ್ಲೆಯ ಅರ್ಧ ಜೀವವಿಂದು ಬೊಂಬಾಯಿ ಎಂದಾಗಿದೆ; ಅಲ್ಲಿಂದ ಲಕ್ಷಗಟ್ಟಲೆ ಹಣ ಇಲ್ಲಿಗೆ ಬರುತ್ತಿದೆ.

೦೦೦

ಆದರೆ ಬೊಂಬಾಯಿಯಲ್ಲಿರುವ ನಮ್ಮವರಿಗೆ ಇಲ್ಲಿಂದ ಬೇರೆ ಬೇರೆ ಉದ್ದೇಶಗಳ ನೆಪಕಟ್ಟಿಕೊಂಡು ಹೋಗಿ ಹಣ ವಸೂಲಿ ಮಾಡಿಕೊಂಡು ಬರುವವರ ಕಾಟ ಸದಾ ತಪ್ಪಿದ್ದಲ್ಲ.

೦೦೦

ಹೇಗಾದರೂ ಮಾಡಿ ಎಂದಾದರೊಮ್ಮೆ ಬೊಂಬಾಯಿ ನೋಡಿ ಬಿಡೋಣವೆಂದು ಹೋದವನೂ ಹಿಂದೆ ಬರಲಿಕ್ಕೆಂದು ಸಹಾಯ ಯಾಚಿಸಲು ಹೊರಡುತ್ತಾನೆ

೦೦೦

ಮಗನ ವಿದ್ಯಾಭ್ಯಾಸಕ್ಕೆಂದು, ಮಗಳ ವಿವಾಹಕ್ಕೆಂದು ಸಹಾಯ ಬೇಡುತ್ತಾನೊಬ್ಬ.

೦೦೦

ದೇವಸ್ಥಾನ,ದೈವಸ್ಥಾನ ಜೀರ್ಣೋದ್ಧಾರವೆಂದು ಒಬ್ಬ ಹೊರಟರೆ, ಮತ್ತೊಬ್ಬ ಭಜನಸ್ಥಾನ, ಗರಡಿ, ಕಂಬಳದ ಉದ್ಧಾರವೆಂದು ಸಹಾಯ ಯಾಚಿಸುತ್ತಾನೆ.

೦೦೦

ಸೀರೆ ಸೋಡಿ, ಕೋಣ ಸೋಡಿ, ಎತ್ತಿನಗಾಡಿ ಸೋಡಿ, ವಾಚ್ ಸೋಡಿ ಎಂದೆಲ್ಲಾ ಟಿಕೇಟು ಪುಸ್ತಕ ಹಿಡಕೊಂಡೂ ಬೊಂಬಾಯಿಗೆ ಹೋಗುತ್ತಾರೆ.

೦೦೦

ಶಾಲೆಗೆಂದು, ಹೈಸ್ಕೂಲಿಗೆಂದು, ಹೊಸ್ಟೆಲಿಗೆಂದು, ಹೊಸ್ಪಿಟಲಿಗೆಂದು ಕಲೆಕ್ಷನ್ ಮಾಡಲಿಕ್ಕೆ ಹೋಗುವವರುಂಟು.

೦೦೦

ಪ್ರೆಸ್ ಮಾಡಲಿಕ್ಕೆಂದು, ಪೇಪರ್ ಹೊರಡಿಸಲಿಕ್ಕೆಂದು, ಪುಸ್ತಕ ಪ್ರಕಟಿಸಲಿಕ್ಕೆಂದು ಸಹಾಯ ಕೇಳಿಯೂ ಹೋಗುತ್ತಾರೆ

೦೦೦

ಮದುವೆ, ಉಪನಯನ, ಬಯಕೆ, ಉತ್ತರಕ್ರಿಯೆಗೆಂದು ಕೂಡಾ ಸಹಾಯ ಬೇಡುವವರೂ ಉಂಟಲ್ಲಿ.

೦೦೦

ದೇವರ ಪ್ರಸಾದ, ದೇವೀ ಪ್ರಸಾದ ಹಿಡಕೊಂಡು ಕಾಸು ಕೇಳುವವರೂ ಇದ್ದಾರೆ

೦೦೦

ಅಂತೂ ಬೊಂಬಾಯಿಯಲ್ಲಿರುವ ದಕ್ಷಿಣ ಕನ್ನಡಿಗರಿಗೆ ಇಂತಹ 'ನ್ಯೂಸೆನ್ಸ್'ಗಳು ತಪ್ಪುವುದೆಂದಿಲ್ಲ.

Karnatak Unification Sangha

There will be a general body meeting of the above Sangha at Haveri on 26-5-1951 at 5 p. m. in the premises set up to hold the Non-party Karnatak Unification Conference.

The members are cordially invited to attend.

K. B. Jinaraja Hegde,
President

ನವಯುಗದ

ಚಂದಾದಾರರಲ್ಲಿ ವಿನಂತಿ

ಇತ್ತೀಚೆಗೆ ವೃತ್ತಪತ್ರಿಕೆಗಳಿಗೆ ಉಪಯೋಗಿಸಲಾಗುತ್ತಿರುವ ಕಾಗದದ ಅಭಾವ ಮತ್ತು ವಿಪರೀತ ಬೆಲೆಯಿಂದಾಗಿ ತಯಾರಿಕೆಯ ವೆಚ್ಚವೂ ಹೆಚ್ಚಾಗಿರುತ್ತದೆ. ಇಂತಹ ಪರಿಸ್ಥಿತಿಯಲ್ಲಿ ನಮ್ಮ ಚಂದಾದಾರರು ದಯವಿಟ್ಟು ತಮ್ಮ ತಮ್ಮ ಚಂದಾಹಣವನ್ನು ಮುಂದಾಗಿ ಕಳುಹಿಸಿಕೊಟ್ಟು ಪ್ರೋತ್ಸಾಹಿಸಬೇಕಾಗಿ ಭಿನ್ನವಿಸುತ್ತೇವೆ. ಅಲ್ಲದೆ ಚಂದಾಹಣ ಬಾಕಿ ಮಾಡಿಕೊಂಡಿರುವ ಮಹನೀಯರಂತೂ ಬಾಕಿಯನ್ನು ಜಾಗ್ರತೆಯಾಗಿ ಕಳುಹಿಸಿಕೊಡುವಂತೆ ಕಳಕಳಿಯ ವಿನಂತಿ ಇದೆ. ಪತ್ರಿಕೆ ಬೇಡವೆಂದಿರುವವರೂ, ವಿಳಾಸ ಬದಲಾವಣೆಯಾದವರೂ ಸಕಾಲದಲ್ಲಿ ತಿಳಿಸುವಂತೆಯೂ ಕೇಳಿಕೊಳ್ಳುತ್ತೇವೆ.

ಮೆನೇಜರ್.

ಕೊರಿಯದಲ್ಲಿ

ಕಮ್ಯೂನಿಸ್ಟ್ ಚೀನವು ಸುಮಾರು 500 ವಿಮಾನಗಳನ್ನು 300000 ಸೈನಿಕರನ್ನೂ ಸಂಘಟಿಸಿ ಯುದ್ಧ ರಂಗವನ್ನು ಹೆಚ್ಚಿಸುತ್ತಿದೆಯೆಂದು ತಿಳಿಯುತ್ತದೆ. ಸಂ. ರಾ. ಸಂಘದ ಸೈನ್ಯಗಳ ರಾದಾಟಕ್ಕಾಗಿಯೋ— ರಾಷ್ಟ್ರೀಯ ಚೀನೀಯರನ್ನು ಪ್ರತಿಭಟಿಸುವದಕ್ಕಾಗಿಯೋ ಈ ರೀತಿಯ ಪ್ರಬಲ ಸನ್ನಾಹ ನಡೆಯುತ್ತಿದೆಯೆಂದು ಹೇಳಲಾಗುತ್ತಿದೆ.

ಮುಖ್ಯ ಮಂತ್ರಿಗಳ ಜೀವ ಭೀತಿ

ಪರ್ಶಿಯಾದ ಮುಖ್ಯ ಮಂತ್ರಿಗಳೂ, ಆಂಗ್ಲೋ ಇರಾಣಿಯನ್ ಆಯಲ್ ಕಂಪೆನಿಯ ರಾಷ್ಟ್ರೀಕರಣದ ಧುರೀಣರೂ ಆದ 70 ವರ್ಷದ ಮಹಮ್ಮದ ಮುಸಾದಿಕರು "ಹಲವು ಅಪಾಯ"ದಿಂದ ತನ್ನ ಜೀವಾಪಹರಣ ಮಾಡಬಹುದೆಂಬ ಹೆದರಿಕೆಯಿಂದ ನನಗೆ ಪಾರ್ಲಿಮೆಂಟು ಭವನದಲ್ಲಿಯೇ ಆನುಮತಿಯನ್ನೀಯಬೇಕೆಂದು ಪಾರ್ಲಿಮೆಂಟಿನ ಮುಂದೆ ಕೇಳುತ್ತಾ ಮುಂದೆ ಹೋಗಿಬಿಟ್ಟರು. ಸದ್ಯ ಪಾರ್ಲಿಮೆಂಟು ಭವನದಲ್ಲೇ ಅವರ ವಾಸವಾಗಿರುತ್ತದೆ.

ಯು. ರಾ. ಸಿಬ್ಬಂದಿಗಳ ಸಹಾನುಭೂತಿ

ಭಾರತಕ್ಕೆ ಸಹಾಯ ಸಲ್ಲಿಸಬೇಕೆಂದು ಯುಕ್ತ ರಾಷ್ಟ್ರ ಸಂಘದ ಸಿಬ್ಬಂದಿ ಸಮಿತಿಯು ಹದಿನೈದು ದಿನಗಳ ಹಿಂದೆ ಬಿನ್ನವಿಸಿಕೊಂಡಿದ್ದು ಇಷ್ಟರಲ್ಲೇ ಸುಮಾರು 11000 ಡಾಲರುಗಳು ಕೂಡಿವೆಯೆಂದು ತಿಳಿದುಬರುತ್ತದೆ.

ನೇಪಾಳದ ಬಿಕ್ಕಟ್ಟು

ನೇಪಾಳ ಕಾಂಗ್ರೆಸ್ ಹಾಗೂ ರಾಣಾ ಗುಂಪಿನೊಳಗೆ ಮತಭೇದ ಹುಟ್ಟಿರುವದರಿಂದ ನೇಪಾಳ ಸರಕಾರದಲ್ಲಿ ಬಿಕ್ಕಟ್ಟು ಉಂಟಾಗಿದೆ. ನೇಪಾಳ ಸರಕಾರದ ಮಂತ್ರಿಮಂಡಳದ ಪುನರ್ಘಟನೆಯ ಅವಶ್ಯಕತೆಯು ಕಂಡುಬರುತ್ತಲಿದೆ. ಎರಡು ಪಕ್ಷದವರು ನೆಹ್ರೂರವರೊಡನೆ ಬಿಕ್ಕಟ್ಟು ಪರಿಹಾರಕ್ಕಾಗಿ ಮಾತುಕತೆ ನಡೆಸಿರುವರು.

ಅಮೆರಿಕೆಯ ಆಕಾಶವಾಣಿಯಲ್ಲಿ ಹಿಂದೀ ಕಾರ್ಯಕ್ರಮ

ಈ ತಿಂಗಳ 15ರಿಂದ ಅಮೆರಿಕೆಯ ಆಕಾಶವಾಣಿಯು ಹಿಂದೀ ಕಾರ್ಯಕ್ರಮವನ್ನು ಇಟ್ಟುಕೊಂಡಿರುತ್ತದೆ. ಭಾರತದ ಸಾಯಂ ಘಂ 6-30ರಿಂದ ರಾತ್ರಿ 9-00 ತನಕ ಇದು ಇದೆಯೆಂದು ತಿಳಿದು ಬರುತ್ತದೆ.

ಕಾಶ್ಮೀರೀ ಪ್ರತಿನಿಧಿ

ಸಂ. ರಾ. ಸಂಘದ ಹೊಸ ಕಾಶ್ಮೀರೀ ಮಧ್ಯಸ್ತಗಾರ ಇನ್ನವ ಪ್ರತಿನಿಧಿ ಡಾ| ಫ್ರಾಂಕ್ ಗ್ರಾಹಂ ಜೂನ ತಿಂಗಳ ಪ್ರಾರಂಭದಲ್ಲಿ ತಮ್ಮ ಪರಿವಾರದೊಂದಿಗೆ ಬಂದು ಕಾರ್ಯಕ್ಕೆ ತೊಡಗಲಿರುವರು.

80000 ಜನರಿಗೆ ಉದ್ಯೋಗ

ಪಶ್ಚಿಮ ಬಂಗಾಳ ಪೀಡಿತ ಭಾಗಗಳಲ್ಲಿ ಸರಕಾರ ಆರಂಭಿಸುವ ಪರಿಹಾರ ಕೆಲಸಗಳ ಫಲವಾಗಿ ಎಂಬತ್ತು ಸಾವಿರ ಜನ ಉದ್ಯೋಗ ನಿರತರಾಗಲಿದ್ದಾರೆ.

ಭಾರತಕ್ಕೆ 50 ಲಕ್ಷ ಸೈನ್ಯ!

ಭಾರತದ ಸ್ವಾತಂತ್ರ್ಯವನ್ನು ಕಾಪಾಡಿಕೊಳ್ಳುವದಕ್ಕೂ— ದೇಶದ ಭದ್ರತೆಗಾಗಿಯೂ ಕನಿಷ್ಠ ಪಕ್ಷ 50 ಲಕ್ಷ ಸುಶಿಕ್ಷಿತ ಸೈನಿಕರು ಬೇಕೆಂದು ಭಾರತ ಮುಖ್ಯ ಸೇನಾಪತಿ ಜನರಲ್ ಕಾರ್ಯಪ್ಪನವರು ಪತ್ರಿಕಾ ಪ್ರತಿನಿಧಿಗಳೊಡನೆ ಹೇಳಿದರು.

ರಾಜ್ಯ ಘಟನೆಗೆ ತಿದ್ದುಪಡಿ

ಭಾರತ ರಾಜ್ಯ ಘಟನೆಯ ಹಲವು ತಿದ್ದುಪಡಿಗಳನ್ನು ವಿಷಯ ಸ್ಪಷ್ಟೀಕರಣವನ್ನು ಪ್ರಧಾನ ಮಂತ್ರಿಯವರು ಪಾರ್ಲಿಮೆಂಟಿನ ಮುಂದೆ ಮಂಡಿಸಿದರು. ಈ ತಿದ್ದುಪಡಿಯಿಂದ ಮುಖ್ಯವಾಗಿ ಜಮೀನ್ದಾರಿ ನಿರ್ಮೂಲನ ಕಾಯಿದೆಗೂ ಮದ್ರಾಸು ಸರಕಾರದ ಜಾತೀಯ ಕಾಯಿದೆಗೆ ಅನುಕೂಲವಾಗಲಿದೆಯೆಂದು ಹೇಳಲಾಗಿದೆ.

ಸಕ್ಕರೆ ಕಾರ್ಖಾನೆಗಳಿಗೆ ಸಹಾಯ

ಉ. ಪ್ರಾಂತದಿಂದ ದ. ಭಾರತಕ್ಕೆ ಸಕ್ಕರೆ ಕಾರ್ಖಾನೆಗಳನ್ನು ಸ್ಥಳಾಂತರಿಸುವ ದಾದರೆ ಲೈಸನ್ಸನ್ನು ಅವಶ್ಯ ಕಂಡರೆ ಹಣವನ್ನೂ ಭಾರತ ಸರಕಾರ ನೀಡುವದಾಗಿ ಆಹಾರ ಮಂತ್ರಿ ಮುನ್ಷಿಯವರು ಪಾರ್ಲಿಮೆಂಟಿನಲ್ಲಿ ಹೇಳಿದರು.

ಬಿಹಾರ ಮುದ್ರಣಗಳಿಗೆ ಸಹಾಯ

ಬಿಹಾರ ಮುದ್ರಣಗಳಲ್ಲಿ ಬರಗಾಲ ಪೀಡಿತ ಜನಕ್ಕೆ ಕಾಶ್ಮೀರೀ ಜನತೆ ತಮ್ಮ ಸೀದಾದಲ್ಲಿ ಹಲವಂಶವನ್ನು ಸ್ವೇಚ್ಛೆಯಿಂದ ಕೊಡಬೇಕೆಂದು ಕಾಶ್ಮೀರದ ಮುಖ್ಯ ಮಂತ್ರಿ ಶೇಕ್ ಅಬ್ದುಲ್ಲರವರು ಬಿನ್ನವಿಸಿಕೊಂಡರು.

ಉಡುಪಿ

ಮುನಿಸಿಪಲ್ ಕೌನ್ಸಿಲು ಸಭೆಯು.— ಇದೇ ತಾ. 12ರಲ್ಲಿ ಸಾಹೆಬ್ ಬಹದ್ದೂರ್ ಕೆಯೂರ್ ಮೆನ್ ಶ್ರೀ ಎ. ಬಿ. ಕೃಷ್ಣರಾವ ಅಧ್ಯಕ್ಷತೆಯಲ್ಲಿ ಜರಗಿತು. ಎಂಟುಮಂದಿ ಸದಸ್ಯರು ಹಾಜರಿದ್ದರು. ಶಾಲಾಕಟ್ಟಡ ಕಛೇರಿಯ ಸಮಾಜಟಿಕಾ ಕ್ಯಾಂಟೀನ್ ಒಂದನ್ನು ಕಟ್ಟುವ ಯೋಜನೆ ಮುಂದರಿಸಲಾಗಿದೆ ಎಂದು ಶ್ರೀ ಆರ್. ಎ. ಸ್ವಾಮಿನಾಥರ ಪ್ರಶ್ನೆಗೆ ಉತ್ತರ ದೊರೆಯಿತು. ಇಷ್ಟಲ್ಲದೆ ಸರಕಾರ ಅರ್ಜಿಗಳು ಕೇಂದ್ರೀಕರಣವಾಗಲಾದುದು ಸೆಂಟ್ರಲ್ ನಾರ್ತ್ ಟೌನ್ ಪ್ಲಾನಿಂಗ್ ಸ್ಕೀಮನ್ನು ನಿಷ್ಕಲ ಅಸಾಧ್ಯವೆಂದು ತಿಳಿಸಿದ ಸರಕಾರಿ ಆರ್ಡರನ್ನು ಓದಲಾಗಿ ಮುಂದಿನ ಕೆಲಸದ ವಿವರಗಳನ್ನು ತಯಾರಿಸುವಂತೆ ಕಮಿಶನರನ್ನು ಕೇಳಿಕೊಳ್ಳಲಾಯಿತು. ಕಮಿಶನರ ದೈಂದಿನ ಬಾಕಿಯಲ್ಲಿ ತುಂಬಾ ಚರ್ಚೆಯ ವಿಷಯವಾಗಿ ಆದರಲ್ಲಿ ಕಂಡುಬಂದ ಸ್ಥಾನಿಕ ಬಗ್ಗೆ ಮುಂದಿನ ಸಭೆಯಲ್ಲಿ ಕಮಿಶನರು ಬರಹ ಮೂಲಕ ಉದಾಹರಿಸಬೇಕೆಂದಾಯಿತು. ಸರ್ಚಾರ್ಜನ್ನು ಸೇಕಡಾ 50ರಷ್ಟು ಕಡಿಮೆ ಮಾಡಿದುದರಿಂದ ಹಿಂದಿನ ಕರಗಳನ್ನು ಮನ್ನಿಸಿ ಸ್ಥಳೀಯ ಇಲೆಕ್ಟ್ರಿಕ್ ಕಂಪೆನಿಯವರು ವಿದ್ಯುದ್ದೀಪಗಳನ್ನು ಕೊಡಲು ಒಪ್ಪಿದರೆ ಕೂಡಲೇ ಗ್ಯಾಸ್ ದೀಪಗಳನ್ನು ರದ್ದುಗೊಳಿಸ ಬೇಕೆಂದಾಯಿತು. ಮುಂದಿನ ದಿನಗಳಲ್ಲಿ ಸರಕಾರವು ಕಂಪೆನಿಯನ್ನು ರಾಷ್ಟ್ರೀಕರಣ ಮಾಡುವಾಗಲಾದರೂ ಸಂಪೂರ್ಣ ಸರ್ ಚಾರ್ಜನ್ನು ತೆಗೆದುಹಾಕುವಂತೆ ಮದ್ರಾಸು ಸರಕಾರವನ್ನು ವಿನಂತಿಸಲಾಯಿತು.

ಮಂತ್ರಿ ಚಂದ್ರಮೌಳಿಯವರ ಆಗಮನ— ಸ್ಥಾನಿಕ ಮತ್ತು ಸಹಕಾರಿ ಸಂಸ್ಥೆಗಳ ಮಂತ್ರಿಗಳಾದ ಚಂದ್ರಮೌಳಿಯವರು ಜಿಲ್ಲಾ ಬೋರ್ಡ ಅಧ್ಯಕ್ಷ ಶ್ರೀ ಧನಂಜಯ್ಯ ಹೆಗ್ಡೆಯವರೊಂದಿಗೆ ತಾ. 15ರಲ್ಲು ಉಡುಪಿಗೆ ಆಗಮಿಸಿದಾಗ ಸ್ಥಳೀಯ ಕಾಂಗ್ರೆಸ್ ಕಮಿಟಿಯ ಅಧ್ಯಕ್ಷ ದಿ. ಕೃಷ್ಣಯ್ಯ ಹೆಗ್ಡೆ, ಕಾರ್ಯದರ್ಶಿ ನರಹರಿ ಕಾಮತ್, ನಗರಾಧ್ಯಕ್ಷ ಪಿ. ಉಪೇಂದ್ರ ನಾಯಕ್ ಸಬ್ ಕಲೆಕ್ಟರ್ ಪಿ. ಎಸ್. ತಿಮ್ಮಪ್ಪ ಶೆಟ್ಟಿ ಮೊದಲಾದವರು ಸ್ವಾಗತಿಸಿದರು. ಬಳಿಕ ಶ್ರೀ ಕೃಷ್ಣ ದೇವಸ್ಥಾನವನ್ನು ಮಂತ್ರಿಗಳು ಸಂದರ್ಶಿಸಿದರು. ಮರುದಿನ ಸಹಕಾರಿ ಸಂಘದಲ್ಲಿ ಉಪಾಹಾರ ಸತ್ಕಾರ ಗಳೆದರು 9 ಘಂಟೆಗೆ ಕಾಂಗ್ರೆಸ್ ಕಮಿಟಿ ಆಫೀಸಿನಲ್ಲಿ ಕಮಿಟಿಯ ಬಿನ್ನವತ್ತಳೆಯನ್ನು ಸ್ವೀಕರಿಸಿದರು. ಅಧ್ಯಕ್ಷ ಬಾಳ್ಕಟ್ಟ ಕೃಷ್ಣಯ್ಯ ಹೆಗ್ಡೇರು ಆಹಾರ ಪರಿಸ್ಥಿತಿ, ಉದ್ಯಾವರ ಹೊಳೆಗೆ ಸಂಕದ ಆವಶ್ಯಕತೆ ಮೊದಲಾದ ವಿಷಯಗಳುಳ್ಳ ಬಿನ್ನವತ್ತಳೆಯನ್ನು ಓದಿ ಅರ್ಪಿಸಿದರು. ಸಬ್ ಕಲೆಕ್ಟರ್ ಪಿ. ಎಸ್. ತಿಮ್ಮಪ್ಪ ಶೆಟ್ಟಿಯು ಅಧಿಕ ಆಹಾರ ಉತ್ಪತ್ತಿಯ ಕುರಿತು ಮಾತನಾಡಿದರು. ಮಂತ್ರಿಗಳು ಬಿನ್ನವತ್ತಳೆಗೆ ಸಮರ್ಪಕ ಉತ್ತರವಿತ್ತ ಬಳಿಕ ಮುನ್ಸಿಪಲ್ ಹುಡುಗಿಯರ ಶಾಲೆ, ಎಂ. ಜಿ. ಎಂ. ಕಾಲೇಜ್ ಮೊದಲ ಕಟ್ಟಡಗಳನ್ನು ಸಂದರ್ಶಿಸಿ, ಮಧ್ಯಾಹ್ನ ಭೋಜನ ತೀರಿಸಿ ಮಂಗಳೂರಿಗೆ ಹಿಂತೆರಳಿದರು.

ಹಂಗಾರಕಟ್ಟೆ ಬಾಳೆಕುದುರು ಮಠದ— ಶ್ರೀ ಮದಾನಂದತೀರ್ಥ ಸ್ವಾಮಿಗಳವರ ನೇತೃತ್ವದಲ್ಲಿ ಇದೇ ತಾ. 10 ಮತ್ತು 11ರಲ್ಲು ಶ್ರೀ ಶಂಕರ ಜಯಂತಿ ಮಹೋತ್ಸವವು ವಿವಿಧ ಕಾರ್ಯ ಕ್ರಮಗಳಿಂದ ಸಾಂಗವಾಗಿ ಜರಗಿತು. ಪ್ರಾರಂಭ ದಿವಸ ಶಂಕರಭಾಷ್ಯ ಮೊದಲಾದ ಗ್ರಂಥಗಳಲ್ಲಿ ವಿದ್ಯಾರ್ಥಿಗಳಿಗೆ ಪರೀಕ್ಷೆ ನಡೆದುದಲ್ಲದೆ ಉಪನ್ಯಾಸ ಹರಕಥಾ ಕಾಲಕ್ಷೇಪಗಳಾದುವು. ಮರುದಿವಸ ವೇಳಗ್ಗೆ ಎಚ್. ಗಣೇಶರಾಯರ ಅಧ್ಯಕ್ಷತೆಯಲ್ಲಿ ಸಭೆ ಜರಗಿ "ಭಕ್ತಿ ಮಾರ್ಗ"ದ ಮೇಲೆ ಕೆಲವರ ಭಾಷಣಗಳಾದುವು. ಶ್ರೀ ಶಂಕರ ಜಯಂತಿಯು ಹಾಗೂ ಸಭೆಯು ವೈಕುಂಠ ಸ್ಥಾಯೀ ನಿರ್ಮಿಸಿದ ಶ್ರೀ ಪಾಟ್ಟೀಕರ್ ಚಂದ್ರಶೇಖರ ಭಟ್ಟರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀ ಮದಾನಂದ ತೀರ್ಥ ಸ್ವಾಮಿಗಳವರು ಸಭೆಯ ಉದ್ದೇಶವನ್ನು ಹಾಗೂ ಧರ್ಮ ಜಾಗೃತಿಗೆ ಇಂತಹ ಸಭೆಗಳು ಅಗತ್ಯವೆಂದರು. ಬಳಿಕ ಸಭಾ ಕಾರ್ಯದರ್ಶಿ ಶ್ರೀ ಬಿ. ಆರ್. ಉಪಾಧ್ಯರು ಗತಸಭಾ ವರದಿಯನ್ನೋದಿದರು. ಮೈಸೂರು ಕಾಲೇಜು ಪ್ರೊಫೆಸರ್ ಶ್ರೀ ರಾಮಚಂದ್ರ ಸೋಮಯಾಜಿ, ಶ್ರೀ ಕೆದ್ಲಾಯ ಮೊದಲಾದವರು ಭಾಷಣ ಮಾಡಿದರು. ಅಧ್ಯಕ್ಷರು 'ವೇದಾಂತ ಮತ್ತು ಜನ ಜೀವನ' ವಿಷಯದಲ್ಲಿ ಉಪನ್ಯಾಸ ವಿತ್ತರು. ಮಂಗಳಾಚರಣೆಯಾದ ನಂತರ ಸ್ವಾಮಿಗಳವರು ಪಂಡಿತ, ವಿದ್ಯಾರ್ಥಿಗಳಿಗೂ ಭಕ್ತವೃಂದಕ್ಕೆ ಸಂಭಾವನೆ, ಮಂತ್ರಾಕ್ಷತೆಗಳನ್ನಿತ್ತರು. ಶ್ರೀ ವೆಂಕಟ ಕೃಷ್ಣ ಸೋಮಯಾಜಿಗಳು ಸರ್ವರಿಗೂ ಧನ್ಯವಾದ ಗಳನ್ನರ್ಪಿಸಿದರು.

ನೋಟೀಸು

ಉಡುಪಿ ಡಿ ಮು ಕೋರ್ಟಿನಲ್ಲಿ

O S 4/1951

R. 1 A 124/1951

ಶೀನಪ್ಪ ನನಯ ಕಾಂತಪ್ಪ ನನಯನ ಮನ್ನಾಗ ಪಾಂಗಾಳ ಗ್ರಾಮ	ವಾದಿ.
ಶ್ಯಾಮಸೆಟ್ಟಿ ಬೀಬಾಡಿ ಕುಕ್ಕವಾ ಯ ಬಾಬುಸೆಟ್ಟಿ ಮಗ ನಾಬೂರು ಗ್ರಾಮದ ಕಲೆವಾಡಿ	ಪ್ರತಿವಾದಿ.

ಸಮಾವಳ ಜ್ಯೂಡಿ. ಸ ಪೋಕ್ಷಸ ದೇವರಿಗೆ ಪ್ರತಿವಾದಿಯಿಂದ 30 6 1950ಕ್ಕೆ ಬರತಕ್ಕ ಕಸ್ ದೀಕು ರೂಪಾಯಿ 26 0 5 ಬಡ್ಡಿ 0-9-7ಕ್ಕೆ ರೂ. 27 0 0 ಕ್ಕೆ ವಾದಿಯು ಮಾಡಿದ ಸದರಿ ವ್ಯಾಜ್ಯವು ತಾ. 24-5 51ಕ್ಕೆ ಪ್ರತಿವಾದಿಯ ಉದಾಹರಣೆಬಗ್ಗೆ ಇಟ್ಟಿದೆ. ಆಕ್ಷೇಪಣೆ ಯದ್ದರೆ ಆ ತಾರೀಕಿನ ಬೆಳಗ್ಗೆ 10 ಗಂಟೆಗೆ ಕದಡ್ಡಾಗಿ ಹಾಜರಾಗೆ ಜ್ಯಾಹಿರು ಮಾಡಿಕೊಳ್ಳತಕ್ಕದ್ದು.

K L. Aithal.
Vakil for Plaintiff

UDIPI, 14-5-1951

ANNOUNCEMENT

Mr. R. Ramanathan Chettiar, Mayor of Madras,
Will declare open the "POPULAR BUILDINGS"
at 5 p m on Monday, 21st May 1951,
at K. S. R. Road, Mangalore.

The Directors of the Company cordially invite you to the Function.

THE POPULAR INSURANCE COMPANY LIMITED

Head Office Mangalore, India

"Grams: POPULAR Estd. 1929

ನೋಟೀಸು

ತಾರೀಕು 10-5-1951ನೇ ನವಯುಗದಲ್ಲಿ ಕ್ರಿಸ್ತೋಫರ್ ಅಲ್ಬುಕರ್ ಹೆಂಡ್ತಿ ಜೆ. ಎಮ್. ಅಲ್ಬುಕ್ ಎಂಬವರು ಪ್ರಕಟಿಸಿದ ನೋಟೀಸಿಗೆ ನಂಬ್ರ 76ನೇ ಬಡಗಬೆಟ್ಟು ಗ್ರಾಮದ ಕುಕ್ಕಿಕಟ್ಟೆಯಲ್ಲಿರುವ ರಾಮನಾರಾಯಣ್ ರಾಜಪ ಜೋಕಿಮ್ ಅಲ್ಬುಕರ ವಿಧವೆ ಮಾರ್ಗರೆಟ್ ಅಲ್ಬುಕರ್ ಕೊಡುವ ಜವಾಬು:— ಸದ್ರಿ ನೋಟೀಸಿನಲ್ಲಿ ಕಾಣುವ ಸರ್ವೆನಂಬ್ರ 166/1D2ನೇ ಆಸ್ತಿಯನ್ನು ನಾನು ನನ್ನ ಸ್ವಂತ ಹಣದಿಂದ ಕ್ರಯಕ್ಕೆ ಪಡೆದು ಕೃಷಿಗಳು ಮಾಡುವುದರ ಮೂಲಕ ರೂಪಿಸಿಕೊಂಡಿರುತ್ತೇನೆ. ಸದ್ರಿ ಆಸ್ತಿಯಲ್ಲಿ ನನಗೆ ಹೊರತು ಮೇಲೆ ಹೆಸರು ಕಾಣಿಸಿದ ಕ್ರಿಸ್ತೋಫರ ಅಲ್ಬುಕರರಿಗಾಗಲೀ ಅವರ ವಾರೀಸುಗಳಿಗಾಗಲೀ ಎಳ್ಳಷ್ಟಾದರೂ ಹಕ್ಕು ಇರುವುದಿಲ್ಲ. ಸದ್ರಿ ಕ್ರಿಸ್ತೋಫರ ಅಲ್ಬುಕರರು ಸದ್ರಿ ಆಸ್ತಿಯನ್ನು ನನ್ನ ಹೆಸ್ರಿಗೆ ಬೇನಾಮೆಯಾಗಿ ಮಾಡಿಟ್ಟದ್ದೆಂಬುದು ಸುಳ್ಳು ಮತ್ತು ಹಾಗೆ ಮಾಡುವದಕ್ಕೆ ಯಾವ ತರದ ಎಷ್ಟನ್ನಾದರೂ ಕಾರಣವಿದ್ದದ್ದಿಲ್ಲ. ನನ್ನ ಗಂಡನ ಸ್ವಂತ ಪಟ್ಟಾದ್ದು ಆದ ಸದ್ರಿ ನೋಟೀಸಿನಲ್ಲಿ ಕಾಣುವ ಸದ್ರಿಗ್ರಾಮದ ಸರ್ವೆನಂಬ್ರ 166/1Bನೇ ಸ್ಥಳದ ಆಸ್ತಿಯಲ್ಲಿರುವ ಕೃಷಿಗಳಲ್ಲಿ ನನಗಿರುವ ಹಕ್ಕನ್ನು ತಿಂಗಳಿನ ನನ್ನ ಅಂಶವನ್ನು ನನ್ನ ಸ್ವಾಧೀನ ಬಿಟ್ಟು ಕೊಡಬೇಕಾಗಿ ಸದ್ರಿ ಕ್ರಿಸ್ತೋಫರ ಅಲ್ಬುಕರ ಕೂಡೆ ನಾನು ವ್ಯಾಜ್ಯ ಮಾಡುತ್ತಿರುವಲ್ಲಿ ಹಿತ ಕೇಳದವಾಗಿ ನನ್ನನ್ನು ಬೆದರಿಸಿ ಸುಮ್ಮಗೆ ಕೂರಿಸುವ ಉದ್ದೇಶದಿಂದ ನನ್ನಮೇಲೆ ಕೆಲವು ಸುಳ್ಳು ಆರೋಪಗಳನ್ನು ಕಲ್ಪಿಸಿಕೊಂಡು ಸದ್ರಿ ನೋಟೀಸಿನಲ್ಲಿ ಕಾಣುವ ಸರ್ವೆನಂಬ್ರ 166/1D2ನೇ ಆಸ್ತಿಯು ಸದ್ರಿ ಕ್ರಿಸ್ತೋಫರ ಅಲ್ಬುಕರನ ಹಕ್ಕಿನದ್ದೆಂತ ಶ್ರೀ ಸದ್ರಿ ಜೆ. ಎಮ್. ಅಲ್ಬುಕರ ಅನುಭವದ ಮೇಲೆ ನನಗೆ ಒಂದು ಲೀಗಲ್ ನೋಟೀಸು ಬಂದಿದೆ. ಸದ್ರಿ ನೋಟೀಸಿಗೆ ನಾನು ಸತ್ಯಸಂಗ್ತಿ ಕಾಣ್ಸಿ ಸಮರ್ಪಕವಾದ ಜವಾಬನ್ನು ನನ್ನ ವಕೀಲರ ಮೂಲಕ ಕೊಟ್ಟಿರುತ್ತೇನೆ. ಸದ್ರಿ ಸರ್ವೆನಂಬ್ರ 166/1D2ನೇ ಆಸ್ತಿಯನ್ನು ನಾನು ಸ್ವಾಧೀನ ವಿನಾಯಿಸುವ ಮಾರುವ ಆಲೋಚನೆಯನ್ನು ಈ ವರೆಗೂ ಮಾಡಿಲ್ಲವಾದರೂ, ಅದನ್ನು ನನ್ನ ಇಚ್ಛಾನುಸಾರ ವಿನಿಯೋಗಿಸಲಿಕ್ಕೆ ನನಗೆ ಯಾರಿಂದಲೂ ಯಾವ ತರದ ಪ್ರತಿಬಂಧಕ ಇರುವುದಿಲ್ಲ. ಎಂಬ ಸಂಗ್ತಿ ಈ ಮೂಲಕ ಪ್ರಕಟಿಸುವುದಲ್ಲದೆ ಸದ್ರಿ ನೋಟೀಸಿನಲ್ಲಿ ನನಗೆ ವಿರೋಧವಾಗಿರುವ ಇತರ ಯಾವತ್ತೂ ವಕ್ತವ್ಯಗಳನ್ನು ನಾನು ಈ ಮೂಲಕ ನಿರಾಕರಿಸುತ್ತೇನೆ.

ಮಾರ್ಗರೆಟ್ ಅಲ್ಬುಕರ್ ರುಜು.

ತಾ. 15-5-1951

ಮಂಗಳೂರು

ಶ್ರೀ ಎ. ಕೆ. ಗೋಪಾಲನ್‌ರವರು– ದಿನಾಂಕ 10ರಲ್ಲಿ ಮಂಗಳೂರಿಗೆ ಆಗಮಿಸಿದಾಗ ಹಲವು ಮಜೂರರ ಸಂಘಗಳು ಸ್ವಾಗತ ನೀಡಿದವು. ಶ್ರೀ ಎ. ಕೃಷ್ಣ ಸೆಟ್ಟರ ಅಧ್ಯಕ್ಷತೆಯಲ್ಲಿ ಜರಗಿದ ಮಹಾಜನ ಸಭೆಯಲ್ಲಿ ಶ್ರೀಯುತರು ಭಾಷಣಮಾಡುತ್ತಾ ಹೀಗೆಂದರು :ಕಾಂಗ್ರೆಸ್ ಸರಕಾರದ ಮೂರು ವರ್ಷದ ಆಡಳಿತೆಯನ್ನು ನೋಡಿದರೆ, ಈ ಸರಕಾರವು ಜನತೆಯ ಸರಕಾರವಲ್ಲ. ಇದರಿಂದ ಇಂದಿನ ಆಹಾರ ಸಮಸ್ಯೆಯನ್ನಾಗಲೀ ಇತರ ಸಮಸ್ಯೆಗಳನ್ನಾಗಲೀ ಬಗೆಹರಿಸಲು ಸಾಧ್ಯವಿಲ್ಲ ಎಂಬುದು ಖಚಿತವಾಗುತ್ತದೆ. ಆದ್ದರಿಂದ ದೇಶದಲ್ಲಿನ ಪ್ರಜಾಪ್ರಭುತ್ವವಾದಿ ಪಕ್ಷಗಳೆಲ್ಲಾ ಒಂದುಗೂಡಿ ಈ ಸರಕಾರವನ್ನು ಬದಲಾಯಿಸಬೇಕಾಗಿದೆ. ಇಂದು ಸರಕಾರವು ಪರದೇಶೀಯ ಹಾಗೂ ದೇಶೀಯ ಬಂಡವಳಗಾರರ ಕೈಗೊಂಬೆಯಾಗಿದೆ. ಆದುದರಿಂದ ಮಜೂರರು, ಮಧ್ಯಮ ವರ್ಗದವರು ಚಿಕ್ಕ ಚಿಕ್ಕ ಉದ್ದಿಮೆ ಕೈಗಾರಿಕೆಗಳವರೆಲ್ಲ ಕಷ್ಟಪಡುವಂತಾಗಿದೆ. ಇಂದು ಯಾವ ಕೆಲಸವಾಗಬೇಕಾದರೂ ಲಂಚವೀಯ ಬೇಕಾಗಿದೆ. ನಾಲ್ಕು ಸೇರು ಮಾರಿದ ಬಡವನನ್ನು ಮಾತ್ರ ಹಿಡಿದು ಪೀಡಿಸುತ್ತಾರೆ, ಕಳ್ಳಸಂತೆಯಲ್ಲಿ ಸಾವಿರಾರು ಮುಡಿ ಅಕ್ಕಿ ಮಾರುವವರನ್ನು ಇವರು ಹಿಡಿಯುವುದಿಲ್ಲ. ಒಂದು ವೇಳೆ ಹಿಡಿದರೆ ಹಿಡಿದ ಅಧಿಕಾರಿಗಳ ಕೆಲಕ್ಕೆ ಸಂಚಕಾರವಾಗುತ್ತದೆ. ಇಂತಹ ಸರಕಾರವು ಅಧಿಕಾರದಲ್ಲಿರಬಾರದು' ಎಂದರು. ಸಭಾಧ್ಯಕ್ಷರು ಮಾತನಾಡುತ್ತಾ ಶ್ರೀ ಗೋಪಾಲನ್ನರಿಗೆ ಅರ್ಪಿಸಲಿರುವ ನಿಧಿಗೆ ಎಲ್ಲರೂ ಸಹಾಯ ನೀಡಬೇಕೆಂದು ವಿನಂತಿಸಿದರು. ಜನತೆಯು ಕಮ್ಯೂನಿಸ್ಟ್ ಪಾರ್ಟಿಗೆ ಬೆಂಬಲ ವೀಯಬೇಕೆಂದು ಶ್ರೀ ಬಿ. ವಿ. ಕಕ್ಕಿಲ್ಲಾಯರು ಆಪೇಕ್ಷಿಸಿದರು.

ಪಾಟೆನಾಟೆ ನಾಸ್ತಿಕ ಕೇಂದ್ರದ– ಶ್ರೀ ರಾಮಚಂದ್ರರಾಯರು ಇದೇ 11ರಂದು ಮಂಗಳೂರಿನ ಪ್ರಗತಿ ಮಂಡಳಿಯ ಆಶ್ರಯದಲ್ಲಿ ತಮ್ಮ ಕೇಂದ್ರದ ಕಾರ್ಯಕಲಾಪಗಳನ್ನೂ, ಜನತಾ ಸೇವೆಯಲ್ಲಿ ನಾಸ್ತಿಕವಾದವು ಅವರಿಗೆ ಸಹಾಯವಾಗುವ ರೀತಿಯನ್ನೂ ವಿವರಿಸುತ್ತ ಹೈದರಾಬಾದಿನಲ್ಲಿ ನಡೆದ ಸರ್ವೋದಯ ಕಾರ್ಯಕರ್ತರ ಸಭೆಯಲ್ಲಾದ ನಿರ್ಣಯಗಳನ್ನೂ ನಿವರಿಸಿದರು. ಮುಂದಿನ ಚುನಾವಣೆಯಲ್ಲಿ ಕಾಂಗ್ರೆಸ್ಸೇ ಅಧಿಕಾರಕ್ಕೆ ಬರಬೇಕೆಂಬುದು ತನ್ನ ಆಶೆಯೆಂದೂ ಅದಕ್ಕೆ ತಕ್ಕ ವಾತಾವರಣವನ್ನು ನಾವು ಕಲ್ಪಿಸಬೇಕೆಂದೂ ತಿಳಿಸುತ್ತ ಮಂತ್ರಿಗಳು ಮತ್ತೂ ಎಮ್. ಎಲ್. ಎ. ಗಳಲ್ಲಿರುವ ದೋಷಾದಿಗಳನ್ನು ತಿದ್ದುವ ರೀತಿಯನ್ನೂ ಹೇಳಿದರು.

ಶ್ರೀ ಶಂಕರ ಜಯಂತ್ಯುತ್ಸವವು– ಇದೇ ತಾ. 11ರಂದು ಮಂಗಳೂರಿನ ಬಿಜೈರಸ್ತೆ ಬಳಿಯಿರುವ ಶ್ರೀ ಸುಬ್ರಹ್ಮಣ್ಯ ಸಭಾಮಂದಿರದಲ್ಲಿ ದ. ಕ. ಅದ್ವೈತ ಸಮಿತಿಯ ಆಶ್ರಯದಲ್ಲಿ ಶ್ರೀ ಶೃಂಗೇರಿ ಮಠದ ಧರ್ಮಾಧಿಕಾರಿ ಶ್ರೀ ಕೆ. ಶೇಷ ಶಾಸ್ತ್ರಿಗಳವರ ಅಧ್ಯಕ್ಷತೆಯಲ್ಲಿ ಜರಗಿತು. ಅಧ್ಯಕ್ಷರು ಪೂರ್ಣ ಪೀಠಿಕಾ ಭಾಷಣಮಾಡಿ ಶ್ರೀ ಶೃಂಗೇರಿ ಮಠದ ಹಿಂದಿನ ಧರ್ಮಾಧಿಕಾರಿ ದಿವಂಗತ ಶ್ರೀ ಕಂಠ ಶಾಸ್ತ್ರಿಗಳ ಭಾವಚಿತ್ರದ ಅನಾವರಣ ಮಾಡಿದರು. ಶ್ರೀಗಳಾದ ನೇಡಿಯೂರು ಕೃಷ್ಣ ಭಟ್, ದ್ವಿವೇದಿ ಸೀತಾರಾಮ ಶಾಸ್ತ್ರಿ ಮೊದಲಾದವರು ಶ್ರೀ ಶಂಕರಾಚಾರ್ಯರ ಸಂದೇಶ, ಅವರು ಹಿಂದೂ ಸಮಾಜಕ್ಕೆ ಸಲ್ಲಿಸಿದ ಸೇವೆ ಇತ್ಯಾದಿಗಳನ್ನು ವಿವರಿಸಿ ಭಾಷಣಮಾಡಿದರು.

ಚುನಾವಣಾ ಸಭೆ– ಈಚೆಗೆ ಕಂಕನಾಡಿ ಎಕ್ಸೆಲ್ಸಿಯರ್ ಯಂಗ್‌ಮೆನ್ಸ್ ಎಸೋಸಿಯೇಶನಿನ ಆಫೀಸಿನಲ್ಲಿ ಸಭೆಯು ಜರಗಿ, ಮುಂಬರುವ ನ್ಯಾಯವಿಧಾಯಕ ಸಭೆಗಳ ಚುನಾವಣೆ ಸಂಬಂಧ ಸಾರ್ವಜನಿಕರು ವಹಿಸಬೇಕಾದ ಜಾಗ್ರತೆಗಳ ಕುರಿತು ಚರ್ಚಿಸಲಾಯಿತು. ಡಾ। ಎಮ್. ಎಸ್. ಎ. ಶರ್ಮ, ಶ್ರೀಗಳಾದ ಎನ್. ಜಿ. ಸಾಲಿನ್ಸ್, ಜೆ. ಬಿ. ಡಿಸೋಜಾ, ಕೆ. ನಾರಾಯಣ ರಾವ್, ಎ. ಎಸ್. ಭಕ್ತ ಮೊದಲಾದವರು ಮಾತನಾಡಿದರು.

ದ ಕ ಜಿಲ್ಲೆಗೆ 1500 ಟನ್ನು ಹೊರಗಿನ ಅಕ್ಕಿ –ಮೇ ತಿಂಗಳ ಕೋಟಾ. ಎಂಬುದಾಗಿ ಮದ್ರಾಸು ಸರಕಾರವು ನಮ್ಮ ಜಿಲ್ಲೆಗೆ ಈಗಾಗಲೇ 1500 ಟನ್ನು ಅಕ್ಕಿಯನ್ನು ಮಂಜೂರು ಮಾಡಿದರು ಇದು ಇನ್ನು ಮೂರುವಾರಗಳೊಳಗೆ ಹಡಗು ಮಾರ್ಗದಿಂದ ಬರಲಿದೆ. ಇದೇ ತಿಂಗಳ ಅಖೈರು ತನಕ ಈಗ ಜಿಲ್ಲೆಯಲ್ಲಿರುವ ಧಾನ್ಯಗಳ ದಾಸ್ತಾನು ಸಾಕಾಗಬಹುದೆಂಬುದಾಗಿ ತಿಳಿದು ಬರುತ್ತದೆ.

ಜಿಲ್ಲಾ ಕಲೆಕ್ಟರರು ಹೊಸತಾಗಿ ಇನ್ನೂ ಕೆಲವು ಕಡೆಗಳಲ್ಲಿ ಕ್ಲಪ್ತದರದ ಧಾನ್ಯದಂಗಡಿಗಳನ್ನು ತೆರೆಯುವ ಏರ್ಪಾಡು ಮಾಡಿರುವರೆಂದು ತಿಳಿದಿದೆ. ಈ ಅಂಗಡಿಗಳು ಕಾಸರಗೋಡು ತಾಲೂಕಿನ ಉಪ್ಪಳ, ಕುಂಬಳೆ ಮತ್ತು ಅರಿಕ್ಕಾಡಿ, ಮಂಗಳೂರು ತಾಲೂಕಿನ ಕಾವೂರು, ಉಡುಪಿ ತಾಲೂಕಿನ ಶಿರ್ವ, ಪುತ್ತೂರು ತಾಲೂಕಿನ ಬೆಳ್ತಂಗಡಿ ಮತ್ತು ಕುಂದಾಪುರ ತಾಲೂಕಿನ ಶೀರೂರು ಎಂಬಲ್ಲಿ ತೆರೆಯಲ್ಪಟ್ಟಿವೆ.

ಜಿಲ್ಲಾ ಬೋರ್ಡ್ ಸಭೆಯು– ಈ ಬಾರಿ ಇದೇ ತಿಂಗಳ ತಾ 19ನೆ ಶನಿವಾರ ಪೂರ್ವಾಹ್ನ 11 ಗಂಟೆಗೆ ಕೋಟೇಶ್ವರ ಬೋರ್ಡ್ ಹೈಸ್ಕೂಲಲ್ಲಿ ಜರಗಲಿರುವುದು.

ಬಪ್ಪು ಮಹಾತ್ಮಾ ಗ್ರಾಮಸಂಘ. ಇದರ ಸಹಾಯಾರ್ಥವಾಗಿ ಈಚೆಗೆ ಪಾಲಸಿದ್ಧೇಶ್ವರ ನಾಟಕ ಮಂಡಳಿಯವರು "ಪಾಂಚಾಲಿ"ಯೆಂಬ ಸಂಗೀತ ನಾಟಕವನ್ನು ಜಿಲ್ಲಾ ಕಲೆಕ್ಟರ್ ಎ ಆರ್. ರಾಜಶೇಷಂ ಅವರ ಅಧ್ಯಕ್ಷತೆಯಲ್ಲಿ ಪ್ರದರ್ಶಿಸಿದರು. ಅಧ್ಯಕ್ಷರು ತಮ್ಮ ಭಾಷಣದಲ್ಲಿ ಈ ಗ್ರಾಮ ಸಂಘವು ತನ್ನ ವಾಚನಾಲಯ ಗ್ರಂಥಾಲಯ, ರಾತ್ರಿ ಶಾಲೆ ಮತ್ತಿತರ ಜನಸೇವಾ ಕಾರ್ಯಗಳಿಂದ ಗ್ರಾಮ ಪುನರುಜ್ಜೀವನವನ್ನು ಉತ್ತಮವಾಗಿ ಸಾಧಿಸುತ್ತಿದೆ–ಎಂದು ತಿಳಿಸಿದರು.

ರಚನಾತ್ಮಕ ಕಾರ್ಯಕರ್ತರ ದ್ವಿತೀಯ ಸಮ್ಮೇಳನ– ಇದೇ ತಾರೀಖು 6ರಲ್ಲಿ ಬಂಟ್ವಾಳದ ಶ್ರೀ ವೆಂಕಟ್ರಮಣ ಸ್ವಾಮಿ ಹೈಸ್ಕೂಲಲ್ಲಿ ಶ್ರೀ ಎಚ್. ರಾಮರಾಯ ಮಲ್ಯರ ಅಧ್ಯಕ್ಷತೆಯಲ್ಲಿ ಜರಗಿತು. ಅಂದು ಪ್ರಾತಃಕಾಲ ಅರುಣೋದಯದ ಪ್ರಾರ್ಥನೆಯಾದ ಮೇಲೆ ಏಳುಗಂಟೆಗೆ ಧ್ವಜವಂದನೆಯಾಯಿತು. ಧ್ವಜಾರೋಹಣ ಮಾಡಿದ ಶ್ರೀ ಪುಂಡಲೀಕ ಪೈ ಕೊಡ್‌ಗಿಯವರು ಅದರ ಮಹತ್ವವನ್ನು ವಿವರಿಸುತ್ತ ರಚನಾತ್ಮಕ ಕಾರ್ಯ ಪ್ರವರ್ತನೆಯು ಪ್ರಯೋಜನಕರವೆಂದರು. ಅನಂತರ ಒಂದು ತಾಸಿನವರೆಗೆ ಸೂತ್ರಯಜ್ಞವಾಗಿ ಪರಿಷತ್ತಿನ ಸಭಾಕಾರ್ಯ ಪ್ರಾರಂಭವಾಯಿತು. ಸ್ವಾಗತ ಸಮಿತಿಯ ಅಧ್ಯಕ್ಷರಾದ ದಾನಾಪೂರು ಧರ್ಮಪಾಲಸೆಟ್ಟರು ಸ್ವಾಗತಭಾಷಣಮಾಡುತ್ತಾ ಜಿಲ್ಲೆಯ ಕಾರ್ಯಕರ್ತರ ಮುಂದಿರುವ ಸಮಸ್ಯೆಗಳನ್ನು ಈ ಪರಿಷತ್ತು ಬಿಡಿಸುವಂತಾಗಿ, ರಚನಾತ್ಮಕ ಕೆಲಸಗಳು ಅಭಿವೃದ್ಧಿ ಹೊಂದಲೆಂದು ಆಶಿಸಿದರು. ಬಳಿಕ ಶ್ರೀ ಕೊಡ್‌ಗಿಯವರು ಪರಿಷತ್ತಿನ ಉದ್ಘಾಟನೆಮಾಡಿದ ಮೇಲೆ ಅಧ್ಯಕ್ಷರಾದ ಶ್ರೀ ಎಚ್. ರಾಮರಾಯ ಮಲ್ಯರು ತಮ್ಮ ಭಾಷಣದಲ್ಲಿ ರಚನಾತ್ಮಕ ಕಾರ್ಯಗಳನ್ನು ನಮ್ಮ ಜಿಲ್ಲೆಯಲ್ಲಿ ಯಶಸ್ವಿಯಾಗಿ ಜರಗಿಸುವುದರ ಕುರಿತು ಸದ್ಯ ಕಾರ್ಯಕರ್ತರು ಕೈಗೊಳ್ಳಬೇಕಾದ ಕೆಲಸಗಳ ಕುರಿತೂ ತಿಳಿಸಿದರು.

ನವಂಬರ ಜರಗಿದ ಭಾಷಣಮಾಲೆಯಲ್ಲಿ ಈ ಕೆಳಗಿನವರು ಭಾಗವಹಿಸಿದರು: ಸಹಕಾರದ ವಿಚಾರವಾಗಿ ಶ್ರೀ ಎನ್. ಎಮ್. ಪಿ. ಕಾಮತರೂ, ಕೃಷಿಸಂಶೋಧನೆಯ ಕುರಿತು ಶ್ರೀ ಹನುಮಂತರಾಯರೂ, ಕೃಷಿಖಾತೆಯ ಕೆಲಸದ ಕುರಿತು ಶ್ರೀ ಯು. ಆನಂದನ್‌ರವರೂ, ಜೇನುಸಾಕಣೆ ಕುರಿತು ಶ್ರೀ ಪೈಲೂರು ಲಕ್ಷ್ಮೀನಾರಾಯಣರಾಯರೂ, ಆರೋಗ್ಯ ವಿಚಾರವಾಗಿ ಡಾ। ಯು. ಪಿ. ಮಲ್ಯರೂ ಭಾಷಣಮಾಡಿದ ನಂತರ ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷರಾದ ಡಾ। ಕೆ. ನಾಗಪ್ಪ ಆಳ್ವರು ರಚನಾತ್ಮಕ ಕಾರ್ಯಕರ್ತರಿಗೆ ಕೆಲವು ಉಪದೇಶದ ಮಾತುಗಳನ್ನು ಹೇಳಿದರು. ನಂತರ [1] ಜಿಲ್ಲೆಯ ರಚನಾತ್ಮಕ ಕಾರ್ಯಕರ್ತರು ಲೋಕ ಸೇವಾ ಸಂಘವನ್ನು ತಮ್ಮ ಸಂಸ್ಥೆಯನ್ನಾಗಿ ಅಂಗೀಕರಿಸಿ ಅದರ ಘಟನೆ ನಿಬಂಧನೆಗಳನ್ನು ಮಂಜೂರುಮಾಡುವ [2] ಜಿಲ್ಲೆಯಲ್ಲಿ ಮುಂದಿನ ವರ್ಷದಲ್ಲಿ ಅರುವತ್ತು ಕತಾಯಿ ಮಂಡಳಿಗಳನ್ನು ನಿರ್ಮಾಣ ಮಾಡಬೇಕೆನ್ನುವ [3] ದಕ್ಷಿಣ ಕನ್ನಡ ಜಿಲ್ಲಾ ಗ್ರಾಮ ಕೈಗಾರಿಕೆಯ ಸಂಘದವರು ವ್ಯವಸ್ಥೆಗೊಳಿಸಿದ ರೂ. 5000 –ದ ಹತ್ತಿನಿಧಿಯನ್ನು ಮುಕ್ತಿಗೊಳಿಸ ಬೇಕೆನ್ನುವ ಮತ್ತು ಜಿಲ್ಲೆಯಲ್ಲಿ ಕಡಬುಗದ್ದೆ ಮತ್ತು ಈ ಜಾತಿಯ ಇತರ ಹತ್ತಿ ಬೆಳೆಯಿಸಬೇಕೆನ್ನುವ [4] ದೈತಹಿತ ಮಸೂದೆಯೂ ಜಾರಿಯಾಗಿ ರೈತರ ಜಟಿಲ ಸಮಸ್ಯೆಗಳನ್ನು ಸಾಧಿಸುವಂತಾಗಲು ರಚನಾತ್ಮಕ ಕಾರ್ಯಕರ್ತರು ರೈತರ ಸಂಘಟನೆ ಮಾಡಬೇಕೆನ್ನುವ ನಿರ್ಣಯಗಳಾದುವು. ಸಮ್ಮೇಳನದ ಕಾರ್ಯದರ್ಶಿ ಶ್ರೀ ಪರ್ರ ಲಕ್ಷ್ಮೀನಾರಾಯಣ ಅಕ್ಕರು ಧನ್ಯವಾದಗಳನ್ನರ್ಪಿಸಿದರು. ಅದೇ ದಿನ ಸಂಜೆ ಶ್ರೀ ಕಾರ್ಲೆ ಶೆಟ್ಟಿ ಶ್ರೀನಿವಾಸ ಪೈಗಳ ಅಧ್ಯಕ್ಷತೆಯಲ್ಲಿ ಜರಗಿದ ಸಾರ್ವಜನಿಕ ಸಭೆಯಲ್ಲಿ ಶ್ರೀ ಕೊಡ್‌ಗಿಯವರು ಭಾಷಣಮಾಡಿದರು.

ನೋಟೀಸು

ಕಾಸರಗೋಡು ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ

ಕ್ರಮನಂಬ್ರ 38/1951

ಅಬ್ದುಲ್ಲ ರಹಿಮಾನ್ ಬ್ಯಾರಿ —ವಾದಿ

ಮುಹಮ್ಮದ ಬ್ಯಾರಿ ಸಹಾ —ಪ್ರತಿವಾದಿರು

2ನೇ ಪ್ರತಿವಾದಿ, ಮುಕ್ರಿ ಮೊಯ್ದಿಂ ಕುಂಞ ಅಬ್ದುಲ್ಲ ಖಾದರ ಬ್ಯಾರಿ ಮಗ. Chali No.19 Thandal Street, Bombay 9. ವಾದಿಯು ಪ್ರತಿವಾದಿರ ಮೇಲೆ ದಾಖಲುಮಾಡಿದ ಮೇಲ್ಕಂಡ ಸದರಿ ವ್ಯಾಜ್ಯವು ತಾರೀಖು 30-5-1951ಕ್ಕೆ ತನಿಖೆಗೆ ಇಟ್ಟಿರುವ ಸಂಗ್ತಿ ತಿಳಿಸೋಣಾಗಿರುತ್ತದೆ.

Sd/ P. Ahmad,
Advocate for Plaintiff

ಕಾಸರಗೋಡು 14-5-51

ಅಮೃತಾಂಜನ

ತಲೆನೋವು, ಶಿರೋವೇದನೆ, ಉಳುಕು ಕುತ್ತಿಗೆ, ಭುಜ ಹಲ್ಲು ವೇದನೆಗಳಿಗೂ, ಎದೆನೋವು, ಗಾಯಗಳು, ಬಾತುಕೊಳ್ಳುವುದು, ಚೇಳುವಿಷಮುಂತಾದವು, ಪಕ್ಷವಾತ, ಮೊಡವೆ. ಮೊದಲಾದ ಎಲ್ಲಾ ರೋಗಗಳಿಗೂ ಸಿದ್ಧೌಷಧ

REGD

ಎಲ್ಲಾ ಕಡೆ ನಮ್ಮಲ್ಲಿ ಸಿಕ್ಕುತ್ತದೆ

ಅಮೃತಾಂಜನ ಲಿಮಿಟೆಡ್

ಮದರಾಸು.

ಬೊಂಬಾಯಿ ಮತ್ತು ಕಲ್ಕತ್ತ.

ವಿಜಯ ಬ್ಯಾಂಕ್, ಲಿಮಿಟೆಡ್, ಬ್ರಹ್ಮಾವರ. ದ. ಕ.

ಕೆಳಗೆ ಕಾಣಿಸಿದ ಮಹನೀಯರಿಗೆ ರಿಜಿಸ್ಟ್ರಿ ನೋಟೀಸು ಕೊಟ್ಟಾಗ್ಯೂ, ನಗಗಳನ್ನು ಬಿಡಿಸಿಕೊಂಡು ಹೋಗದೆ ಇರುವುದರಿಂದ, ಸದ್ರಿಯವರು ಬ್ಯಾಂಕಿನಲ್ಲಿ ಪಡೆದ ಲೋನಿನ ಮೇಲೆ ಇಡಿಯುವ ಚಿನ್ನಾಭರಣಗಳನ್ನು ಇದೇ ತಾ 31ರ ಒಳಗೆ ಹಣಪಾವತಿಮಾಡಿ ಬಿಡಿಸಿಕೊಂಡು ಹೋಗದಿದ್ದಲ್ಲಿ, ಜೂನ 9ನೇ ಶನಿವಾರ ಅಪರಾಹ್ನ ಗಂಟೆ 3–30ಕ್ಕೆ ಅಥವಾ ಅನಂತರ ಯುಕ್ತಕಂಡ ಇತರ ದಿನಗಳಲ್ಲಿ ಬೇಂಕಿನ ಆಫೀಸಿನಲ್ಲಿ ಬಹಿರಂಗವಾಗಿ ಏಲಂ ಮಾಡಲ್ಪಡುವುದೆಂದು ಈ ಮೂಲಕ ತಿಳಿಸಲಾಗಿದೆ.

ಲೋನು ನಂಬ್ರ.	ಹೆಸರು.	ಮೊಬಲಗು ರೂ ಅ. ಪೈ.
231/7 8.	ಅಬ್ಬಾಸ್ ಸಾಹೇಬ್, ದಿಲ್ ಕಲೆಕ್ಟರ್, ಡಿಸ್ಟ್ರಿಕ್ಟ ಬೋರ್ಡ್ ಬಾರಕೂರು	10-0-0
265/7 8	ಅಲ್ಬರ್ಟ್ ಮಿಂಗಲ್ ಲೂವಿಸ್, S/o. ಅಂತೋನಿ ಫ್ರಾನ್ಸಿಸ್ ಲೂವಿಸ್ ಬಾಲ್ಕುದ್ರು ಗ್ರಾಮ, ಹಂಗಾರಕಟ್ಟೆ	10-0-0
354/7.8	ಶೇಶಪ್ಪ ಹೆಗ್ಡೆ. N/o. ಶೀನಪ್ಪ ಹೆಗ್ಡೆ. ನೆಡೂರು ಗ್ರಾಮ. ಕಾಪಾಡಿ.	30-0-0
737/7 8.	ಪಾಡುದಾಸ S/o ರಂಗದಾಸ. ವಾರಂಬಳ್ಳಿ ಗ್ರಾಮ. ಬ್ರಹ್ಮಾವರ	20-0-0
257/8.9.	ಬುಡಾನ್ ಬಾಷಾ ಸಾಹೇಬ್. S/o. ಕಾಜಿ ಮೈದಿನ್ ಸಾಹೇಬ್, ಬಾರಕೂರು.	135-0-0
350/8.9	ಶೀನಪ್ಪ ಶೆಟ್ಟಿ. N/o. ವೀರಣ್ಣ ಶೆಟ್ಟಿ. ಮುಕ್ಕಾರಕಟ್ಟೆ. ಕುಮ್ರಗೋಡು ಗ್ರಾಮ. ಬ್ರಹ್ಮಾವರ.	30-0-0
368/8.9.	ಬಸವ ಮರಕಾಲ S/o. ಕೊರಗ ಮರಕಾಲ್ತಿ. ಬ್ರಹ್ಮಾವರ.	170-0-0
529/8 9.	ಮಂಜಯ್ಯ ಶೆಟ್ಟಿ. N/o. ಅನಂತ ಶೆಟ್ಟಿ. ಮಟ್ಪಾಡಿ ಹಾರ್ದಳ್ಳಿಮನೆ. ಹಂದಾಡಿ ಗ್ರಾಮ. ಬ್ರಹ್ಮಾವರ.	23-0-0

Brahmavar
Date 12-5-51

K. Bhujanga Hegde
Agent



ಕಾಂಗ್ರೆಸು ಪ್ರಚಾರ ಸಭೆಗಳು— ಕುಂದಾಪುರ ತಾಲೂಕು ಕಾಂಗ್ರೆಸು ಕಮಿಟಿಯ ಆಶ್ರಯದಲ್ಲಿ ತಾ 6 5 51ರಂದು ಕಂಡ್ಲೂರು ಪೇಟೆಯಲ್ಲಿ ಶ್ರೀ ಸೌಕೂರು [illegible] ಶೆಟ್ಟಿ ಅಧ್ಯಕ್ಷತೆಯಲ್ಲಿಯೂ, ತಾ 7 5-51ರಂದು ಮುಂಜಾನೆ [illegible] ಆಸ್ಪತ್ರೆಯ ಬಳಿ ಶ್ರೀ ಕಾಪು ಸಂಜೀವ [illegible] ಅಧ್ಯಕ್ಷತೆಯಲ್ಲಿಯೂ ಅದೇ ದಿನ [illegible] ಶ್ರೀ ನಾರಾಯಣ [illegible] ಮಹಾಬಲ ಶೆಟ್ಟಿ ಇವರ ಅಧ್ಯಕ್ಷತೆಯಲ್ಲಿಯೂ ತಾ 8 5 51 ರಂದು ಉಪ್ಪುಂದ ಶ್ರೀ ದುರ್ಗಾ ಪರಮೇಶ್ವರಿ ಅಮ್ಮನವರ ದೇವಸ್ಥಾನದಲ್ಲಿಯೂ ಪ್ರಚಾರ ಸಭೆಗಳು ಯಶಸ್ವಿಯಾಗಿ ಜರಗಿದವು. ಧ್ವನಿವರ್ಧಕ ಯಂತ್ರದ ಏರ್ಪಾಡೂ ಇದ್ದಿತು. ಸಭೆಯಲ್ಲಿ ಕಾಂಗ್ರೆಸು ಸರಕಾರ ಅದರ ಮುಂದಿರುವ ಕಠಿಣ ಸಮಸ್ಯೆಗಳು ಅವುಗಳ ನಿವಾರಣೋಪಾಯ, ಆಹಾರಾಭಾವ ಅದಕ್ಕೆ ಕಾರಣ ಜನತೆಯಲ್ಲಿ ಅತೃಪ್ತಿ ಟೀಕೆ ಕಾಂಗ್ರೆಸು ವಿರೋಧಿಗಳ ಕುಟಿಲ ತಂತ್ರ, ಜನರಿಗೆ ತೋರಿಸುವ ಆಸೆ [illegible] ತಪ್ಪು ಮಾರ್ಗ ನ ಧೋರಣೆ ಇವಕ್ಕೆ ಪ್ರತ್ಯುತ್ತರವಾಗಿ ಶ್ರೀ ಎಸ್ ಎಸ್. ಕೊಲ್ಲೆ, ಶ್ರೀ ಕೊಳ್ಕೆ[illegible] ಸೂರಪ್ಪ ಶೆಟ್ಟಿ, ಶ್ರೀ ಎಡ್ತರೆ ಮಂಜಯ್ಯ ಶೆಟ್ಟರು, ಸುದೀರ್ಘ ಹಾಗೂ ಸುಂದರ ಭಾಷಣಗಳಿಂದ ಜನತೆಗೆ ಬೋಧಿಸಿದರು.

ಅಲ್ಲಲ್ಲಿ ಸಭೆಯಲ್ಲಿ [illegible] ಇತರ ಮಹನೀಯರೆಲ್ಲ ಕಾಂಗ್ರೆಸಿನವರಿಗೆ ಸಹಕಾರ ಸಹಾಯವಿತ್ತಿತ್ತು. ಎಲ್ಲಾ ಮಹನೀಯರಿಗೂ ಅಲ್ಲಲ್ಲಿ ಸಭೆ ಜರಗಿಸಲು ನೆರವಿತ್ತವರಿಗೂ ಕುಂದಾಪುರ ತಾಲ್ಲೂಕು ಕಾಂಗ್ರೆಸ್ಸು ಕಮಿಟಿಯು ಋಣಿಯಾಗಿರುತ್ತದೆ.

ಕುಂದಾಪುರ— ಈ ಪಟ್ಟಣಕ್ಕೆ ಸೇರಿದ ಕೋಡಿಯಲ್ಲಿ ತಾ 6 5 51 ರಂದು ಸಾಯಂ 4-30ರ ಸಮಯ ಒಂದು ಕ್ರೈಸ್ತ ಹೆಂಗಸಿನ ಶವವು ರಕ್ತಮಯವಾಗಿ ಬಿದ್ದಿರುವುದು ಕಾಣಸಿತು. ಅದು ಇಕ್ಷಯ ಹೆಲ್ತ್ ಇನ್ಸಪೆಕ್ಟರ ಹೆಂಡತಿಯ ಕಳೇಬರವೆಂದು ಹೇಳಲಾಗಿದೆ. ಅಂದು 2 ಘಂಟೆಯ ಸಮಯ ಈ ಹೆಂಗಸು ಒಬ್ಬ ಕ್ರೈಸ್ತ ತರುಣನೊಂದಿಗೆ ಕೋಡಿ ಕಡವು ದಾಟಿ ಸಮುದ್ರ ತೀರಕ್ಕೆ ವಿಹಾರಕ್ಕಾಗಿ ಹೋಗಿ ಒಂದೆಡೆ ಕುಳಿತು ತಿಂದು, ಕುಡಿದು ನಂತರ ಅವರೊಳಗೆ ಏನೋ ತಕರಾರು ಹುಟ್ಟಿ ಹುಡುಗನ ಚೂರಿಯ ಇರಿತದಿಂದ ಹೆಂಗಸು ಮೃತಳಾಗಿರಬೇಕೆಂದೂ, ಹುಡುಗನ ವಸ್ತ್ರವು ರಕ್ತದಿಂದ ತೊಯ್ದಿದ್ದಿತೆಂದೂ [illegible] ಮೃತಳ ಚಿನ್ನದ ನಗಗಳು ಸಿಕ್ಕಿಲ್ಲವಾದರೆ [illegible] ಬಳೆ, ಬಾಳೆಹಣ್ಣು, ಮಾವು, ಬೊಟ್ಟಿ, [illegible] [illegible] ಸಿಕ್ಕಿರುವುವಂತೆ. ಹುಡುಗನು [illegible] ತಾ 9. 5 51ರಂದು ದಾಕ್ಟರರು ಶವದ ಪರೀಕ್ಷೆ ನಡಿಸಿ ತಾ 10 5 51ರಂದು ಬೆಳಗ್ಗೆ ಶವದ ದಹನ ಕ್ರಿಯೆ ನಡಿಯಿತು. ಪೋಲೀಸು ತನಿಖೆ ನಡಿಯುತ್ತಲಿದೆ.

ಕುಂಬಳೆ— ಇಲ್ಲಿನ ಬೀಡಿ ಲೇಬರ್ ಯೂನಿಯನಿನ ಆಶ್ರಯದಲ್ಲಿ ತಾ. [illegible]ರಂದು ಇತ್ತೀಚೆಗೆ ಒಂದನೆಯಾಗಿ ಬಂದ ಶ್ರೀ [illegible] ಅಧ್ಯಕ್ಷತೆಯಲ್ಲಿ [illegible] ಸಭೆಯು, ಪಿ. [illegible], ಕೆ. ಕೃಷ್ಣ ಭಟ್ಟ, [illegible] ಕೃಷ್ಣನ ವಿಷಯವಾಗಿ [illegible] ಲೇಬರ್ [illegible] ಮಾಡಲಾಯಿತು.

[illegible] ಶೆಟ್ಟಿ ಬಿ, ಪೋರ್ಚುಗಲ್ ಈ ಗ್ರಾಮಕ್ಕೆ [illegible] ಬೇರೆ [illegible] ದಿನವನ್ನು ತರೆಯಲಾಗುತ್ತದೆ ಎಂದು ತಿಳಿಯುತ್ತದೆ. ಪೋರ್ಚುಗಲ್ ಗ್ರಾಮಸ್ಥರು ಅಲ್ಲಿ ಅಹಾರದ ಕಷ್ಟ ಸ್ಥಿತಿಯನ್ನು ಅಧಿಕಾರಸ್ಥರಿಗೆ ತಿಳಿಸುವ [illegible] ತಿಳಿಸಲಾಯಿತು. ತಾ. ೧೧ರಂದು ಜಿಲ್ಲಾ ಕಲೆಕ್ಟರ್ [illegible] ಆರ್ ರಾಜರತ್ನಂ [illegible] ಯವರು ಪೋರ್ಚುಗಲ್ ಸಂದರ್ಶಿಸಿದಾಗ ಆಹಾರದ ಕಷ್ಟ ಪರಿಸ್ಥಿತಿಗೆ ಬೇಗನೇ ನಿವಾರಣೆಯಾಗಬೇಕೆಂದು ಮನವಿ ಮಾಡಲಾಯಿತು.

ಮಲಬಾರಿನ ಕಮ್ಯೂನಿಸ್ಟ್ ಮುಖಂಡರಾದ ಶ್ರೀ ಎ ಕೆ ಗೋಪಾಲನವರು ಶ್ರೀ ಬಿ ವಿ ಕಕ್ಕಿಲ್ಲಾಯರ ಅಧ್ಯಕ್ಷತೆಯಲ್ಲಿ ತಾ [illegible]ರಂದು ಕಾಸರಗೋಡಿನಲ್ಲಿ ಸೇರಿದ ಸಭೆಯಲ್ಲಿ ಕಾಂಗ್ರೆಸ್ ಸರಕಾರವನ್ನು ಟೀಕಿಸಿ ಭಾಷಣ ಕೊಟ್ಟರು. [illegible] ಅವರಿಗೆ [illegible] ಯ ಹಾರ [illegible] ಅರ್ಪಿಸಲಾಯಿತು.

ಬೆಳ್ಳೂರು — ಪೇರ್ದೂರ ಬುನಾದಿ [illegible] ತಾ 5 5 51ರಲ್ಲಿ ಮೈಸೂರಿನ ಹರಿದಾಸರಾದ ಶ್ರೀ ಸುಬ್ರಾಯ ಶಾಸ್ತ್ರಿಗಳವರಿಂದ "ಭೂಕೈಲಾಸ"ವೆಂಬ ಹರಿಕಥೆಯು ನಡೆಯಿತು. ಕಥಾ ಭಾಗವು ಮುಗಿದ ಕೂಡಲೆ ಪ್ರಸಿದ್ಧ ರಚನಾತ್ಮಕ ಕಾರ್ಯಕರ್ತರಾದ [illegible] ಶ್ರೀ ರಾಮಚಂದ್ರರಾವ್ ಪಾದೆಮಾರ್ M A ರವರೂ, ಕುಂಬಳೆ ರೇಂಜ್ ವೆಲ್ ಫೇರ್ ಆಪೀಸರ್ ಕೆ. ಯಂ. ಬಾಬು ಶೆಟ್ಟರೂ ಮತ್ತು ದ ಕ ಜಿಲ್ಲಾ ಬೋರ್ಡ್ ಮೆಂಬರ್ ದೇವಪ್ಪ ಆಳ್ವರೂ ಭಾಷಣ ಮಾಡಿದರು. [illegible] ಸಮಾರಂಭವಾಗಿ ಸಭೆಯು [illegible]. ರಾತ್ರಿ ಕಾಸರಗೋಡು ತಾಲೂಕಿನ ಪ್ರಸಿದ್ಧ ಅರ್ಥದಾರಿಗಳಿಂದ ಯಕ್ಷಗಾನವು ನಡೆಯಿತು.

19[illegible]ನೇ ಎಪ್ರಿಲಲ್ಲಿ ಫಿರ್ಕಾಭಿವೃದ್ಧಿ ಕಾರ್ಯಗಳ ಸಾರಾಂಶ—(1) 1000 ರಾತಲು ಉತ್ತಮಜಾತಿಯ ಬತ್ತದ ಬೀಜವನ್ನು 12 ಗ್ರಾಮಗಳಲ್ಲಿ 15 ರೈತರಿಗೆ ಕೊಡಲಾಗಿದೆ (2) ಎರಡು ಎಕ್ರೆ ಜಾಗೆಯನ್ನು ಬುಲ್‌ಡೋಜರಿಂದ ಸಮತಟ್ಟು ಮಾಡಲಾಗಿದೆ (3) [illegible]ದಲ್ಲಿ ಒಂದು ಪ್ರದರ್ಶನವನ್ನು ಏರ್ಪಡಿಸಲಾಗಿದೆ (4) [illegible] ಹೊಸ [illegible] 8 ಜನ ಕೊರಗರ [illegible] ಸ್ಥಾಪಿಸಲಾಗಿದೆ ಶ್ರೀ ಕೆ ಎಲ್ ಎನ್ ರಾಯರ ಅಧ್ಯಕ್ಷತೆಯಲ್ಲಿ ಜರಗಿದ ಸಭೆಯಲ್ಲಿ ಅವರಿಗೆ ಬಟ್ಟೆಗಳನ್ನು ಹಂಚಲಾಯಿತು (5) 2 ಕಲ್ಲಿನ ಆಣೆಕಟ್ಟು ಮತ್ತು ಒಂದು ಸುರಂಗವನ್ನು ಕಟ್ಟಿಸಲಿಕ್ಕೆ ಆಯಾ ವರ್ಗದಾರರಿಗೆ ಕಲೆಕ್ಟರರು ಅನುಮತಿಯನ್ನು ಕೊಟ್ಟಿದ್ದಾರೆ (6) [illegible] ಕಟ್ಟಕ್ಕೆ ರೂ 40/ ಮಂಜೂರು ಮಾಡಲಾಗಿದೆ. (7) ಮೂರು ಫರ್ಲಾಂಗು ಮಾರ್ಗದ ಕೆಲಸವು ಆಗಿದೆ.

ಮಂಜೇಶ್ವರ ಫಿರ್ಕಾ—(1) ಸಾಧಾರಣ ರೂ. 20,000 - ಅಂದಾಜಿನ 20 ಕೆಲಸಗಳನ್ನು ರೂ 8,000-ಕ್ಕೆ ನಿರ್ಣಯಿಸಲಾಗಿದೆ. (2) ಕೃಷಿಕರಿಗೆ ಉತ್ತಮ ಜಾತಿಯ ಪಶುಗಳನ್ನು ಕೊಡಲ್ಪಟ್ಟಿವೆ (3) ಐದು ಬಾವಿಗಳ ಕೆಲಸವು ಜರಗುತ್ತಲಿವೆ.

ಮೂಲ್ಕಿ ಫಿರ್ಕಾ — (1) ನಾಲ್ಕು ಫರ್ಲಾಂಗು ಮಾರ್ಗದ ಕೆಲಸವು ಮಾಡಲ್ಪಟ್ಟಿದೆ (2) ಆರು ಬಾವಿಗಳ ಕೆಲಸವು ಮುಂದುವರಿಯುತ್ತಿದೆ (3) ಒಂದು ಗ್ರಾಮಸೇವಾ ಸಂಘವು ಸ್ಥಾಪಿಸಲ್ಪಟ್ಟಿತು 4) ಸಾಧಾರಣ ರೂ 20,000 ಬೆಲೆಯ 20 ಕೆಲಸಗಳು ರೂ 8,000/ ಕ್ಕೆ ನಿರ್ಣಯಿಸಲ್ಪಟ್ಟಿವೆ (5) ಹರಿಜನ ದಿನಾಚರಣೆಯು ಆಚರಿಸಲ್ಪಟ್ಟಿತು.

ಬಂಟಕಲ್ಲು— ಶ್ರೀ ದುರ್ಗಾ ಪರಮೇಶ್ವರೀ ಹಾಯರ್ ಎಲಿಮೆಂಟರಿ ಶಾಲಾ ವಾರ್ಷಿಕೋತ್ಸವವು ತಾ. 6 5 51ರಲ್ಲಿ ಡಾಕ್ಟರ್ ಯು ಕೇಶವರಾವ್ ಯಲ್; ಸಿ, ಪಿ, ಯಂ.ಡ್ ,ಯಸ್ (ಬೊಂಬಾಯಿ) ಇವರ ಸನ್ನಿಧ್ಯ ಅಧ್ಯಕ್ಷತೆಯಲ್ಲಿ, ವಿಜೃಂಭಣೆಯಿಂದ ಜರಗಲ್ಪಟ್ಟಿತು ವಿವಿಧ ವಿನೋದಗಳಾದ ಮೇಲೆ ಶಾಲೆ ಅಭಿವೃದ್ಧಿಯ ಕುರಿತು, ಪಿ. ಗೋವಿಂದನಾಯಕ್, ಯುವರ್ ಪಾಂಡುರಂಗ ಜೋಯಿಸ್; ಯುಸ್. ವಿಠಲದಾಸ್, ರತ್ನಾಕರ ಶೆಟ್ಟಿ, ಮೊದಲಾದವರು ಮಾತನಾಡಿದರು.

ಮುಂಬಯಿ ದಕ್ಷಿಣ ಕನ್ನಡ ಜಿಲ್ಲೆಯಿಂದ ಆಳಿಯಸಂತಾನ ಕಟ್ಟಿನ ಸಮಾಜದ ಕಡೆಯಿಂದ ಅದರ ಬದಲಾವಣೆಯ ಕುರಿತು ಭಾರತಸರಕಾರದ ಮುಖ್ಯ ಮಂತ್ರಿ ಮತ್ತು ಕಾಯಿದೆ ಮಂತ್ರಿಗಳೊಡನೆ ವಿಚಾರ ವಿನಿಮಯಗೊಡಲು ಶ್ರೀ! ಶಂಕರ ಆಳ್ವರ ಮುಂದಾಳುತನದಿಂದ ಹೊರಟ ಶಿಷ್ಟಮಂಡಳಿ ಮುಂಬಯಿಗೆ ಬಂದಿತ್ತು ಮುಂಬಯಿಯಲ್ಲಿರುವ ಈ ಕಟ್ಟಿನ ಆಸರೆಯುಳ್ಳ ಬಿಲ್ಲವ ಸಮಾಜದೊಡನೆ ಈ ವಿಷಯದ ಕುರಿತು ಬೇಕಾದ ಸಲಹೆ ಸಹಕಾರಗಳನ್ನು ಪಡೆದು ಶಿಷ್ಟಮಂಡಳಿ ತಾ. 3 5 51ರಲ್ಲಿ ಡಿಲ್ಲಿಗೆ ಹೊರಟಿದೆ.

ಶಿಷ್ಟಮಂಡಳಿಯ ಸದಸ್ಯರಿಗೆ ಶ್ರೀ! ಮಹಾಬಲ್ ಮೆಂಡೋನಸರು ಒಂದು ಸತ್ಕಾರಕೂಟವನ್ನೇರ್ಪಡಿಸಿದ್ದರು.

ಕಲ್ಲಮುಡ್ಕೂರಿನಲ್ಲಿ ಭೂತಪ್ರೇತ— ಪಂಚಾಡಿ ಎಂಬಲ್ಲಿ ಭೂತದ ಕೋಲವೊಂದು ಇತ್ತೀಚೆಗೆ ನಡೆದಾಗ ಆ ಮನೆಯಲ್ಲಿ ಒಬ್ಬ ಹೆಂಗಸಿಗೆ ಪ್ರೇತಭಾದೆ ಇದ್ದುದನ್ನು ಭೂತಕ್ಕೆ ಅರಿಕೆಮಾಡಿಕೊಂಡರು. ಆಗ ಭೂತವು ಆಕೆಯನ್ನು ಬರಮಾಡಿ ಆ ಪ್ರೇತವೊಡನೆ ಬಲಾಬಲ ಪರೀಕ್ಷೆಯ ಪಂಥವಾಡಿ ಎರಡು ಬೆಂಕಿಯ ದೊಂದಿಗಳನ್ನು ಆಕೆಯ ಕೈಯ್ಯಲ್ಲಿ ಕೊಟ್ಟಿತು. ಪ್ರೇತಗ್ರಸ್ತ ಹೆಂಗಸು ಅದರಲ್ಲಿ ಒಂದನ್ನು ನುಂಗಿ ಮತ್ತೊಂದನ್ನು ಮನೆಯ ಮಾಳಿಗೆಯಲ್ಲಿನ ಮಾಡಿಗೆ ಎಸೆಯಲು ಮನೆಗೆ ಬೆಂಕಿ ಹತ್ತಿತು. ಸ್ವಲ್ಪ ಹೊತ್ತು ಭೂತವು ತನ್ನ ಶಕ್ತಿಯಿಂದ ನಂದಿಸುವುದೆಂದು ನಂಬಿ ಮನೆಯವರು ಬೆಂಕಿಯನ್ನು ನಂದಿಸುವ ಗೋಜಿಗೆ ಹೋಗಲಿಲ್ಲ ಕಡೆಗೆ ಬೆಂಕಿಯನ್ನು ನಂದಿಸಲು ಮನೆಯವರು ಓಡಿದಾಗ ಭೂತಕೋಲ ಕಟ್ಟಿದವನು ಭೂತದ ವೇಷದೊಂದಿಗೆನೇ ಅಲ್ಲಿಂದ ಪಲಾಯನವಾಡಿದನೆಂದೂ ಮನೆಯು ಸಂಪೂರ್ಣ ನಾಶವಾಗಿ ಸುಮಾರು ಎರಡು ಸಾವಿರ ರೂಪಾಯಿ ನಷ್ಟಸಂಭವಿಸಿರುವುದೆಂದೂ ವರದಿಯಾಗಿದೆ.

ಸುಬ್ರಹ್ಮಣ್ಯ—ಇಲ್ಲಿಯ ಶ್ರೀ ಸಂಪುಟ ನರಸಿಂಹ ಸ್ವಾಮಿ ಮಠದಲ್ಲಿ ವರ್ಷಂಪ್ರತಿ ನಡೆಯುವ ಶ್ರೀ ನರಸಿಂಹ ಜಯಂತಿ ಮಹೋತ್ಸವವು ಶ್ರೀ ವಿದ್ಯಾಪ್ರಜ್ಞ ತೀರ್ಥ ಶ್ರೀಪಾದಂಗಳವರ ನೇತೃತ್ವದಲ್ಲಿ ಇದೇ ತಾ. 18ರಲ್ಲು ಪ್ರಾರಂಭವಾಗಿ ತಾ. 22ರಲ್ಲು ಅವಭೃತೋತ್ಸವ, ವಸಂತ ಪೂಜಾದಿಗಳಿಂದ ಮುಕ್ತಾಯವಾಗಲಿರುವುದು.

ಡಾ| ಗಿರಿಯವರ ನಿಧನ— ಸುಪ್ರಸಿದ್ಧರೂ ಜನಪ್ರಿಯರೂ ಆದ ಡಾ| ಕಡಮುನ್ನೂರು ವೆಂಕಟಗಿರಿ ಅವರು ತಮ್ಮ 66ನೆಯ ವರ್ಷ ಪ್ರಾಯದಲ್ಲಿ ಕೆಲವೇ ಕಾಲದ ಅನಾರೋಗ್ಯದಿಂದ ಮದ್ರಾಸಿನಲ್ಲಿ ನಿಧನ ಹೊಂದಿದರೆನ್ನಲು ವಿಷಾದವೆನಿಸುತ್ತದೆ.

ಹೆಮ್ಮಕ್ಕಳ ವಿಶಿಷ್ಟ ರೋಗ ಚಿಕಿತ್ಸೆಯಲ್ಲಿಯೂ ಪ್ರಸವವಿಜ್ಞಾನ ಶಾಸ್ತ್ರದಲ್ಲಿಯೂ ಮದ್ರಾಸಿನಲ್ಲಿ ಡಾಕ್ಟರ್ ವೆಂಕಟಗಿರಿ, ಎಮ್. ಬಿ. ಎಮ್. ಆರ್ ಸಿ ಪಿ ಜಿ ಇವರದು ಪಳಗಿದ ಕೈ. ಡಾ| ಗಿರಿಗಳು ಮದ್ರಾಸಿನಲ್ಲಿ ಅಸಿಸ್ಟೆಂಟ್ ಸರ್ಜನರಾಗಿ ಸೇವೆಯನ್ನಾರಂಭಿಸಿ, ಎಗ್ಮೋರಿನ ಸ್ತ್ರೀಯರ ಮತ್ತು ಮಕ್ಕಳ ಆಸ್ಪತ್ರೆಯಲ್ಲಿದ್ದರು. ಬಳಿಕ ರಾಜಾ ಸರ್ ರಾಮಸ್ವಾಮಿ ಮುದಲಿಯಾರ್ ಆಸ್ಪತ್ರೆಯಲ್ಲಿ ಸುಪರಿಂಟೆಂಡೆಂಟರಾಗಿ ಕೊನೆಗೆ ಸ್ಟಾನ್ಲಿ ಮೆಡಿಕಲ್ ಶಾಲೆಯಲ್ಲಿ ಮಿಡ್‌ವೈಫರಿ ಪ್ರೊಫೆಸರರಾಗಿದ್ದು ಉದ್ಯೋಗದಿಂದ ನಿವೃತ್ತರಾದರು.

[illegible] ವಿಶಾಲಹೃದಯ ಡಾ| ಗಿರಿಯವರು [illegible] ಜನತಾ ಜನಾರ್ದನನ ಸೇವೆಯನ್ನು ಮಾಡಿ ಅಗಾಧ ಬಂಧುಗಳೆನಿಸಿದ್ದರು. ಇವರ ನಿಧನದಿಂದ ವೈದ್ಯ ಜಗತ್ತಿಗೂ ದ. ಕ ಜಿಲ್ಲೆಗೂ ಅಪಾರ ನಷ್ಟ ಪ್ರಾಪ್ತಿಸಿತು. ಜಗದೀಶ್ವರನು ಅವರ ಆತ್ಮಕ್ಕೆ ಚಿರಶಾಂತಿಯನ್ನೀಯಲಿ.

THE PANGAL NAYAK BANK LIMITED

Head Office Incorporated in 1920 [Udipi S K

SEASON DEPOSITS are received and accepted on the following terms —

For three, four or five months deposits at 3 p a

For six, seven or eight months deposits at 3½% p a

These are to be terminable by the 30th June 1951

Interest is payable along with the principal at maturity

Our THREE YEAR CASH CERTIFICATE bring to You a fair yield For particulars please ask for copy of Rules

ಮೂಲ್ಕಿ ಬೇಂಕ್,

ಲಿಮಿಟೆಡ್, ಮೂಲ್ಕಿ.

1929ರಲ್ಲಿ ಸ್ಥಾಪಿತವಾಗಿ 21 ವರುಷಗಳಿಂದ ಊರ ಜನರ ಓವರ್ಡ್ರಾಫ್ಟಿಗೆ? [illegible] ಡಿಪೋಸಿಟ್ ಹಣಕ್ಕೆ ನ್ಯಾಯವಾದ ಬಡ್ಡಿಯಿಂದಲೂ, ಸಾಲದ ಹಣಕ್ಕೆ ಅತೀ ಕಡಿಮೆ ದರದ ಬಡ್ಡಿಯಿಂದಲೂ ಜನ ಹಿತಸಾಧನೆಯನ್ನು ಮಾಡುತ್ತಿರುವುದು

The Moolky Bank Ltd.,
Moolky, S. K.

ಉಡುಪಿಗೆ ಹೋಗಬೇಕು! ಆದರೆ ಉಳಿದುಕೊಳ್ಳುವುದೆಲ್ಲಿ?

ರಾಯಲ್ ಮಹಾಲಿನಲ್ಲಿ

ಬಸ್ ಸ್ಟೇಂಡಿಗೆ ಅತಿ ಸಮೀಪ! ಕೃಷ್ಣಮಠಕ್ಕೆ ದೂರವಿಲ್ಲ!

ವ್ಯಾಪಾರವ್ಯವಹಾರ ವಿಹಾರಸ್ಥಳಗಳಿಗೆಲ್ಲ ಕೇಂದ್ರ!

ನಿಮ್ಮ ಸ್ನಾನ, ಊಟ, ಉಪಹಾರ, ಬೈಠಕ್, ಶಯನ ಇವಕ್ಕೆಲ್ಲ ಉತ್ತಮ ವ್ಯವಸ್ಥೆ

ಕರೆದರೆ ಓಗೊಡುವ ನೌಕರರ ವರ್ಗ!

ಮೇಲಾಗಿ ಆ ರುಚಿ ಬ್ರಾಹ್ಮಣರ ಅಡಿಗೆ, ತಿಂಡಿತಿನಸು, ಇವುಗಳ ರುಚಿರುಚಿ ಹೇಳಬೇಕೆ?

ಪ್ರೊಪ್ರೈಟರ್:— ಕೆ. ವೆಂಕಟ್ರಮಣಭಟ್.

For up-to-date Lodging & Boarding

ROYAL MAHAL,

UDIPI. S. Kanara.

ಸ್ವೀಕಾರ-ವಿಮರ್ಶೆ

ದೇಶಾಂತರದ ಕಥೆಗಳು

ಸಂಗ್ರಾಹಕರು: ಶ್ರೀ ದೇವುಡು. ಪ್ರಕಾಶಕರು: ಆನಂದ್ ಬ್ರದರ್ಸ್, ಕೆಂಪೇಗೌಡರಸ್ತೆ, ಬೆಂಗಳೂರು ೨. ಬೆಲೆ ರೂ. ೧-೮-೦.

ಕಿರಿಯರಿಗಾಗಿ ಬರೆದ ಈ ಕತೆಗಳು ಹಿರಿಯರಿಗೂ ಅತ್ಯಂತ ಪ್ರಿಯವಾಗುವುದರಲ್ಲಿ ಸಂದೇಹವಿಲ್ಲ. ಈ ಕಥಾ ಸಂಕಲನದಲ್ಲಿರುವ ಹದಿನಾರು ಕತೆಗಳು ಹಲವು ರೀತಿಯ ವೈವಿಧ್ಯತೆಗಳಿಂದ ಕೂಡಿವೆ. ದೇಶಾಂತರದ ಉತ್ತಮಕತೆಗಳನ್ನು ಆಯ್ದು ಲಲಿತವಾದ ಶೈಲಿಯಿಂದಲೂ-ಕುತೂಹಲಪೂರ್ಣ ಕಥನ ವೈಖರಿಯಿಂದಲೂ ಹಿರಿಯಕಿರಿಯರೀರ್ವರ ಮನಮೆಚ್ಚುವ ರೀತಿಯಲ್ಲಿ ದೇವುಡು ಅವರು ಕನ್ನಡದಲ್ಲಿ ಹೆಣೆದಿದ್ದಾರೆ. ಮೂರನೆಯ ಬಾರಿ ಮುದ್ರಣಗೊಳ್ಳುತ್ತಿರುವುದೇ 'ದೇಶಾಂತರದ ಕಥೆಗಳ' ಜನಪ್ರಿಯತೆಯ ಸಾಕ್ಷಿಯಾಗಿರುತ್ತದೆ. ಕನ್ನಡ ಜನಕ್ಕೆ ಇದೇ ಬಗೆಯ ಸಾಹಿತ್ಯವನ್ನು ಶ್ರೀ ದೇವುಡು ಅವರು ನೀಡುತ್ತಿರಲೆಂದು ಹಾರೈಸುತ್ತೇವೆ.

—ಎಸ್ಸೆಲ್

ಹೊಸ ಮತ್ತು ವಿಶೇಷ ಸಂಚಿಕೆಗಳು.

೧ ವಿಜಯ

(ಮಹಾಮಸ್ತಕಾಭಿಷೇಕ ವಿಶೇಷಸಂಚಿಕೆ)

ಸಂಪಾದಕ: ಶ್ರೀ. ಧರ್ಮಪಾಲ ಬಿ. ವಿಜಯ ಕಾರ್ಯಾಲಯ, ಕಾರ್ಕಳ.

ಬೆಲೆ ರೂ. 0—8—0

ವಿಜಯದ ದ್ವಿತೀಯಾಂಕವನ್ನೇ ವಿಶೇಷ ಸಂಚಿಕೆಯಾಗಿ ಹೊರಡಿಸಿದ ಸಂಪಾದಕರ ಸಾಹಸವನ್ನು ಮೆಚ್ಚಬೇಕು. ಜೈನಸಂಬಂಧೀ ವಿಚಾರದಲ್ಲಿ ವಿದ್ವತ್ಪೂರ್ಣವೂ, ಬೋಧನಾತ್ಮಕವೂ ಆದ ಹಲವು ಬರಹಗಳು ಸಂಚಿಕೆಯ ಉದ್ದೇಶವನ್ನು ಚೆನ್ನಾಗಿ ಸಾಧಿಸಿವೆ. ಸಂಚಿಕೆಯ ಹಲವು ಲೇಖನಗಳಲ್ಲಿ ಅಚ್ಚು ದೋಷ ತುಂಬಿದ್ದು ವಿರುದ್ಧಾಭಿಪ್ರಾಯಗಳನ್ನು ವ್ಯಕ್ತಪಡಿಸುತ್ತವೆ ಇದು ದೊಡ್ಡ ಪ್ರಮಾದವೇ ಸರಿ. ಉತ್ಸಾಹಿಗಳಾದ ಸಂಪಾದಕರು ಮುಂದಕ್ಕೆ ಈ ವಿಚಾರದಲ್ಲಿ ಹೆಚ್ಚಿನ ನಿಗಾ ತೆಗೆದುಕೊಳ್ಳಲೆಂದು ಸೂಚಿಸುತ್ತೇವೆ. ವಿಜಯನನ್ನು ಆತ್ಮಾದರದಿಂದ ಸ್ವಾಗತಿಸುತ್ತೇವೆ.

೨ ತರುಣ—(ಮಾಸಪತ್ರಿಕೆ) ಸಂಪಾದಕರು: ಶ್ರೀ ರಾ. ಕೃ. ನಾಯಕ, ಭವಂತೀ ರಸ್ತೆ, ಮಂಗಳೂರು ೧. ವಾ. ಚಂದಾ ರೂ. ೩-೦-೦ ಬಿಡಿಸಂಚಿಕೆ ಆಣೆ ೦-೪-೦

ಘನಘನವಾದ ಉದ್ದೇಶಗಳನ್ನಿಟ್ಟುಕೊಂಡು ತರುಣ ಹೊರಟಿದ್ದಾನೆ. ಮಾಮೂಲಿನಂತೆ ವನಿತಾ ವಿಭಾಗ-ಮಕ್ಕಳ ವಿಭಾಗ-ಇನ್ನೂ ಹಲವುರೀತಿಯ ವೈವಿಧ್ಯತೆಗಳು ಕಂಡುಬರುತ್ತವೆ. ತರುಣನನ್ನು ಆದರ್ಶರೀತಿಯ ತರುಣನನ್ನಾಗಿ ಮಾಡಬೇಕೆಂದು ಸಂಪಾದಕರು ಬಲವಾದ ಆಶೆ ಇಟ್ಟುಕೊಂಡಿದ್ದಾರೆ. ಇಂತಹ ಸಂದರ್ಭದಲ್ಲಿ ನಾವು, ಅವರ ಆಶೆ ಈಡೇರಲೆಂದು ಹಾರೈಸುವದಕ್ಕಿಂತ ಹೆಚ್ಚೇನೂ ಹೇಳಲಾರೆವು.

೩ ಕಂದ— (ಆಂಗ್ಲಮತ್ತುಕನ್ನಡ) ಮಕ್ಕಳ ಮಾಸಪತ್ರಿಕೆ. ಸಂಪಾದಕರು: ಆರ್. ಎಸ್. ವೈಲಾಯ, ಡಿ. ಆರ್. ನಾಥ್ ಪ್ರಕಾಶಕರು: ಅಮೃತಲಾಲ್ ಜೆ. ಕೆ. ವಾ. ಚಂದಾ ರೂ. ೨ ೦-೦, ಬಿಡಿ ಸಂಚಿಕೆ ಆಣೆ ೦-೩-೦.

ಹಲವು ಪತ್ರಿಕೆಗಳ ಜನ್ಮಸ್ಥಾನವಾದ ಉಡುಪಿಯಲ್ಲಿ ಮಕ್ಕಳ ಪತ್ರಿಕೆಯ ಕೊರತೆಯಿದ್ದುದರಿಂದ ಆ ಕೊರತೆಯನ್ನು ನೀಗಿಸಲಿಕ್ಕೆ ಕಂದ ಜನ್ಮತಾಳಿದ್ದಾನೆ. ಕಂದನ ಮಾತು, ಗಾಂಭೀರ್ಯವನ್ನು ನೋಡುವಾಗ ಉಳಿದ ಕಂದರುಗಳ ತಿಳಿವು-ಮನೋಮಟ್ಟವೆಷ್ಟೆಂಬುದು ಅವನಿಗೆ ತಿಳಿದಂತಿಲ್ಲ. ಮಕ್ಕಳ ಮನಸ್ಸನ್ನು ಕೆಣಕುವ ಕುತೂಹಲ ಪೂರ್ಣ ಬರಹಗಳಾವುವು ಅದರಲ್ಲಿ ಕಾಣುವುದಿಲ್ಲ. ಇಂಗ್ಲಿಷಿಗೂ ನಾಲ್ಕಾರು ಪುಟಗಳನ್ನು ಮೀಸಲಾಗಿದೆ. ಅಂತೂ ಕನ್ನಡ ಕಂದರುಗಳಿಗೆ ಇದರಲ್ಲೇನೂ ಆಹಾರವಿಲ್ಲ. ಮಕ್ಕಳಿಗೆ ಒಗ್ಗದ ಹಿರಿಯರಿಗೆ ರುಚಿಸದ ಬಾಲಲಿಪಾಕಿಗೆ ಸೇರಿದ ಈ ಕಂದನ ಸ್ಥಿತಿಗೆ ನಿಜವಾಗಿಯೂ ಕನಿಕರ ಪಡುತ್ತೇವೆ.

"ಅಂತರಂಗ"ವನ್ನು ತಪ್ಪದೆ ಓದಲು ಮರೆಯದಿರಿ

— ಮಕ್ಕಳನ್ನು ಹಡೆಯುವುದು ಸಾಕು —

ಅಶಕ್ತ ಸ್ತ್ರೀಯರಿಗೆ **ಬರ್ಥ ಕಂಟ್ರೋಲ** ರೋಗ ಗ್ರಸ್ತ ಹೆಣ್ಣು ಮಕ್ಕಳಿಗೆ

ಏಳು ದಿವಸ ಈ ಮಾತ್ರೆಗಳನ್ನು ಸೇವನ ಮಾಡಿದರೆ ಮುಂದೆ ಖಂಡಿತವಾಗಿ ಮಕ್ಕಳಾಗುವದಿಲ್ಲ. ಸ್ತ್ರೀಯರು ಪ್ರತಿತಿಂಗಳು ಸರಿಯಾಗಿ ಮುಟ್ಟಾಗುತ್ತಾರೆ. ಅಲ್ಲದೆ ಸ್ತ್ರೀಯರ ಬಿಳಿಸೆರಗು, ಪ್ರದರರೋಗ, ಹೊಲಿಕುಟ್ಟು ಗುಣವಾಗಿ ಸ್ತ್ರೀಯು ಗರ್ಭವತಿಯಾಗುವದಿಲ್ಲ. ಈ ಔಷಧವನ್ನು ಸೇವಿಸುವ ಕ್ರಮ: ಪ್ರತಿದಿವಸ ಮುಂಜಾನೆ ೧ಗುಳಿಗೆ ಮಧ್ಯಾಹ್ನಕ್ಕೆ ೧ಗುಳಿಗೆ, ಸಂಜೆಗೆ ೧ಗುಳಿಗೆಯಂತೆ ಊಟದ ಮೊದಲು ತಕ್ಕೊಳ್ಳಬೇಕು. ಏಳುದಿವಸ ಈ ಔಷಧವನ್ನು ಬಿಸಿನೀರಿನಲ್ಲಿ ಸೇವಿಸಬೇಕು.

ಪಥ್ಯ:—ಹರವೀವಲ್ಲಿ ಬಿಡಬೇಕು. ೭ ದಿವಸ ಸಂಪೂರ್ಣ ಔಷಧದ ಕಿಮ್ಮತ್ತು ರೂಪಾಯಿ 5—0—0. ಪೋಸ್ಟ ಚಾರ್ಜು ೧೨ ಆಣೆ.

ಮಾಲಕರು:—ವೀರಭದ್ರಪ್ಪಾ ಫಕೀರಪ್ಪಾ ದಾವಣಗೇರಿ

ಆಯುರ್ವೇದ ಔಷಧಾಲಯ ಗದಗ-ಸಿಟಿ-

ಏಜಂಟರು:—ಹುಬ್ಬಳ್ಳಿ ಘಾಮರ್ಸಿ,—ಹುಬ್ಬಳ್ಳಿ, ಗದಗ, ಬಾಗಲಕೋಟೆ ಧಾರವಾಡ ವಿಜಾಪುರ—ಚನ್ನಪ್ಪ ಸಿದ್ಧಲಿಂಗಪ್ಪ ಧಾರವಾಡಕರ ವಿಜಾಪುರ ಸಂಜುದೇಶ್ವರ ಮೆಡಿಕಲ್ ದಾವಣಗೇರಿ ದಾವಣಗೇರಿ:—ದಾವಣಗೇರಿ ಪ್ರೆಸ್ ಆರ್ ಎಸ್ ಕಮಲಾಪುರ, ಕೆವಿನ್ಸ್, ಹಾವೇರಿ, ಬ್ಯಾಡಗಿ

ಕುಲವಿಲ್ಲದ ಹೆಣ್ಣು

ತೆಲುಗಿನಿಂದ ಅನುವಾದಿತ ಕಾದಂಬರಿ

ಅನುವಾದಕರು:- ಶ್ರೀ ಪಿ. ವೆಂಕೋಬಾಚಾರ್ಯರು, ಬಿ ಎ ಬಿ. ಟಿ, ಹುಬ್ಬಳ್ಳಿ.

"ಮಿಶ್ರಸಂತತಿಯ ಹೆಣ್ಣೊಂದು ಧರ್ಮದ ಸೋಗಿನ ದಾಂಭಿಕರ, ಜಾಲ ವೃದ್ಧರ ಕಾಮಜಾಲದಿಂದ ಪಾರಾಗಿ ಆಧುನಿಕ ಯುವಕ ಸಂತತಿಯ ಉದಾರತೆಯ ಕೈಹಿಡಿದು ಸುಖವಾಗಿ ಬಾಳತೆಂಬುದನ್ನು ಸೂಚಿಸುವ ಈ ಕಾದಂಬರಿಯಲ್ಲಿ ಪ್ರಾಸಂಗಿಕವಾಗಿ ನಾಟ್ಯ ಕಲೆಯ ಮೇಲೆಯೂ ಕೆಲವು ಅಭಿಪ್ರಾಯಗಳನ್ನು ಸೂಚಿಸಿದ್ದಾರೆ

ಕುಲವಿರಲಿ ಇಲ್ಲದಿರಲಿ, ವ್ಯಕ್ತಿತ್ವ ಶೀಲವೇ ಮುಖ್ಯ; ಅದರ ಬೆಳಕಿನಲ್ಲಿ ವ್ಯಕ್ತಿಯು ಎಂತಹ ಸಾಮಾಜಿಕ, ಧಾರ್ಮಿಕ ಎಡರು ತೊಡರುಗಳನ್ನೂ ದಾಟಿ ಮನಮೆಚ್ಚಿದ ಶಾಂತಿಸುಖ ಸಮಾಧಾನಗಳ ಬಾಳನ್ನು ಬಾಳಬಲ್ಲುದು ಎಂಬುದೇ ಈ ಕಾದಂಬರಿಯ ನೀತಿ"—ಜೈಹಿಂದ್.

ಓದಲೇ ಬೇಕಾದ ಸಾಮಾಜಿಕ ಕಾದಂಬರಿ—ಬೆಲೆ ರೂ. 1-8-0

ಪ್ರತಿಗಳಿಗೆ—

ಅಂತರಂಗ ಕಾರ್ಯಾಲಯ, ಉಡುಪಿ.

ನವಭಾರತ ಪುಸ್ತಕ ಭಂಡಾರ, ಉಡುಪಿ.

ಜನಮತ

ನಗರಸಭೆಯವರ ಗಮನಕ್ಕೆ

ಮಾನ್ಯ ಸಂಪಾದಕರೇ,

ಉಡುಪಿ ಮುನ್ಸಿಪಾಲ್ಟಿಯೊಳಗಣ ರಸ್ತೆಗಳ ಹಾಗೂ ಧೂಳಿನ ಕುರಿತು ಈ ಮೊದಲು ನಿಮ್ಮ ಸಂಚಿಕೆಯಲ್ಲಿ ಪ್ರಕಟಗೊಂಡಿರುವದನ್ನು ನೋಡಿಯಾದರೂ ಆ ಇಲಾಖೆಯವರಿಗೆ ಜ್ಞಾನೋದಯವಾದೀತೆಂದು ಭಾವಿಸಿದ್ದೆ; ಆದರೆ ಇಂದಿನ ಪರಿಸ್ಥಿತಿಯನ್ನು ನೋಡಿದರೆ ನಮ್ಮ ನಗರಸಭೆಯವರು ನಾಗರಿಕರಿಗಾಗುವ ಅನ್ಯಾಯ ತೊಂದರೆಗಳನ್ನು ಕೇಳುವದರಲ್ಲಿ ತಮ್ಮ ಆತ್ಮಗೌರವಕ್ಕೆ ಕುಂದು ಎಂದು ಭಾವಿಸಿಕೊಂಡಂತೆ ಭಾಸವಾಗುತ್ತದೆ. ನಗರದೊಳಗಿನ ರಸ್ತೆಗಳಿಗೆ ನೀರಿಲ್ಲದೆ ಸದಾ ಧೂಳನ್ನು ಮುಕ್ಕಿ ಜನ ಸೋತುಹೋದರು. ಹೊಸ ಕಮಿಶನರು ಬಂದ ಬಳಿಕ ದಿನಕ್ಕೊಮ್ಮೆಯಾದರೂ ನೀರು ಚಿಮುಕಿಸುವ ಶಾಸ್ತ್ರಾರಂಭವಾಯಿತು. ಅದೂ ಕೂಡಾ ಪ್ರಾಮುಖ್ಯ ಹಾಗೂ ಪ್ರಮುಖರಿರುವ ರಸ್ತೆಗಳಿಗೇ ಆಗುತ್ತಿತ್ತು! ಈ ರೀತಿಯ ಪ್ರೋತ್ಸಾಹ ಕ್ರಮದಿಂದ ಜನತೆಗೆ ಯಾವ ಲಾಭವೂ ಆಗದಿದ್ದರೂ ನಗರಸಭೆಯವರಿಗೆ ತಮ್ಮ ಕೃತಕೃತ್ಯತೆಯ ಪ್ರದರ್ಶನವನ್ನು ತೋರಿಸಲನುಕೂಲವಾಗುತ್ತಿತ್ತು. ಇದ್ದ ರಸ್ತೆಗಳ ಹಣೆಬರಹವೇ ಹೀಗಾಗಿರುವಾಗ- ಜನತೆಯ ಮೇಲೆ ಬೆಟರ್‌ಮೆಂಟು ಟ್ಯಾಕ್ಸನ್ನು ಏರಿಸಿ ಹೊಸರಸ್ತೆಗಳನ್ನು ನಿರ್ಮಿಸುವದು ಹಾಸ್ಯಾಸ್ಪದ ವಿಚಾರ. ಉಡುಪಿ ನಗರಸಭೆಗಿಂತ ನಿಕೃಷ್ಟವಾದ ಸಣ್ಣಸಣ್ಣ ಪಂಚಾಯತ ಬೋರ್ಡುಗಳೂ ಸಹ ನಗರವನ್ನು ಇದಕ್ಕಿಂತ ಸ್ವಚ್ಛತೆಯಲ್ಲಿಯೂ ಸುಸಜ್ಜಿತವಾಗಿಯೂ ಇರಿಸಿಕೊಳ್ಳುತ್ತಿವೆ. ಸಾವಿರಾರು ವಾಹನಗಳು ದಿನವಿಡೀ ಓಡುತ್ತಿರುವಾಗ ಧೂಳು ಹಾರಾಡುತ್ತಲೇ ಇರುತ್ತದೆ. ಸದ್ಯ ಇಷ್ಟು ಮಾತ್ರವಲ್ಲದೆ ನಗರದ ಆಚೀಚಿನ ರಸ್ತೆಗಳಿಗೆ ಕೆಂಪು ಮಣ್ಣನ್ನು (ಯಾವ ಪುರುಷಾರ್ಥಕ್ಕೋ-ತಿಳಿಯದು) ರಸ್ತೆಗೆ ಹಾಕಿ ಇನ್ನಷ್ಟು ಪರಿಷ್ಕಾರವಾಗಿ ಧೂಳೇಳುವಂತೆ ಮಾಡಿರುತ್ತಾರೆ. ಮುಂಬಯಿ, ಕಲ್ಕತ್ತಾ ಮುಂತಾದ ಕಡೆಯಲ್ಲಿ ಟೀಯರ್‌ಗ್ಯಾಸಿಗೆ ಬೆದರಿದ್ದಕ್ಕಿಂತಲೂ ಹೆಚ್ಚಾಗಿ ಉಡುಪಿ ನಾಗರಿಕರು ಈ ಧೂಳಿಗೆ ಹೆದರಿ ವಾಹನಗಳು ಬರುವಾಗ ರಸ್ತೆಯಿಂದ ದೂರ ಓಡುತ್ತಲಿದ್ದಾರೆ. ನಡುವೆ ಒಂದುವೇಳೆ ಸಿಕ್ಕಿ ಬಿದ್ದರೆ ಮೂಗು ಹಿಡಿದು ಕಣ್ಣು ಮುಚ್ಚಿ—ಪ್ರಾಣಾಯಾಮ ಮಾಡಲೇ ಬೇಕು. ಈ ಪ್ರಯೋಗದಿಂದ ನಾಗರಿಕರ ಆರೋಗ್ಯವು ಸಂಪೂರ್ಣ ಕೆಡುತ್ತದೆ. ಕ್ಷಯರೋಗಕ್ಕೆ ಇದು ಉತ್ತಮ ಪ್ರಯೋಗವೆಂದು ಬೇರೆ ಹೇಳಬೇಕಾಗಿಲ್ಲ. ಮುನಿಸಿಪಾಲಿಟಿಯುಳ್ಳಂತಹ ಯಾವ ನಗರದಲ್ಲಾದರೂ ಈ ರೀತಿಯ ಅವ್ಯವಸ್ಥೆ—ಅನಾದರ—ಇರಲಿಕ್ಕಿಲ್ಲ. ಸಾರ್ವಜನಿಕ ಹೆಲ್ತ್ ಆಫೀಸರರೂ, ಮಾನ್ಯ ಕೌನ್ಸಿಲರೂ, ನಗರಾಧ್ಯಕ್ಷರೂ ಇನ್ನಾದರೂ ಉಡುಪಿಯ ನಾಗರಿಕರ ಈ ಗೋಳನ್ನು ಪರಿಹರಿಸುವ ಕೃಪೆಮಾಡಬೇಕು ರಾತ್ರಿಯಂತೂ ಕತ್ತಲಲ್ಲಿ ತಿರುಗುವುದನ್ನು ನಾವು ಚೆನ್ನಾಗಿ ಅಭ್ಯಸಿಸಿದ್ದೇವೆ. ಹಗಲಿಗೂ ಕಣ್ಣುಮುಚ್ಚಿ—ಯೋಗಾಭ್ಯಾಸವನ್ನು ಕೈಗೊಳ್ಳುವ ಈ ದುರವಸ್ಥೆಯನ್ನು ಕೂಡಲೇ ಪರಿಹರಿಸಬೇಕೆಂದು ಹಾರೈಸುತ್ತೇನೆ.

—ನಾಗರಿಕ.

ವಿವಿಧ ಪಾತ್ರೆಗಳು

ಯಾವತ್ತೂ ವಿಧದ ಬೆಳ್ಳಿ, ತಾಮ್ರ, ಹಿತ್ತಾಳೆ, ಕಂಚು ಮೊದಲಾದುವುಗಳ ವಿವಿಧ ಪಾತ್ರೆಗಳೂ ಸಾಮಾನುಗಳೂ ರಖಂ ಆಗಿಯೂ ಚಿಲ್ಲರೆಯಾಗಿಯೂ ದೊರೆಯುತ್ತವೆ.

ಕಲ್ಯಾಣಪುರ ಮ್ಯಾನುಫಾಕ್ಚರ್, ರಥಬೀದಿ, ಉಡುಪಿ

Notice

In the Court of the Rent Controller and Revenue Divisional Officer Coondapoor Division

H. R. C. O. P. No. 33/1951.

Between

A. Achuthan, nephew of Atoyi Govindan, residing at Brahmagiri of Mudanidamboor Village, Udipi Town.

--Petitioner

and

K. Srinivasa Prabhu, Accountant at Messrs. Kochikar Brothers Ltd., Ajjarakad, Udipi, residing at Kadbet of Udipi Town.

—Respondent

Please take Notice that the above petition filed by the petitioner against the respondent for circtíon under section 7 (2) (V) and 7 (2) (III) of the Madras Buildings (Lease and Rent Control) Act, 1949 has been posted to 28-5-1951 at Udipi at 11 A.M. The respondent should be present before the Court, failing which orders will be passed exparte.

(By order of the Court)

K. Varadaraya Pai,

Advocate for Petitioner.

UDIPI Dated 9-5-1951

ಚರಿತ್ರಾಕರ್ತರು ಅಥವಾ ಮಹಾವ್ಯಕ್ತಿಗಳು.

ಬರೆದವರು: ಸಿ. ಎಚ್. ಶೆಟ್ಟಿ, ಬಿ. ಎ.

ಎಲ್ಲಾ ದೇಶಗಳಲ್ಲಿಯೂ ಆಗಾಗ ಮಹಾ ವ್ಯಕ್ತಿಗಳು ಮತ್ತು ಧಾರ್ಮಿಕ ಪುರುಷರು ಜನನಕ್ಕೆ ಬಂದು ನಾನಾ ಬಗೆಯಲ್ಲಿ ಇತಿಹಾಸವನ್ನು ಬದಲಾಯಿಸಿ ಮಾನವಕೋಟಿಯನ್ನುದ್ಧರಿಸಿರುವುದನ್ನು ನಾವು ತಿಳಿದಿರುವೆವು. ಆಯಾಯ ಕಾಲಕ್ಕೆ ಸರಿಯಾದ ಪ್ರಗತಿಯನ್ನು ಹೊಂದಿ ಮಹಾವ್ಯಕ್ತಿಗಳು ಹುಟ್ಟಿ ಮಾನವರನ್ನು ಈಗಿರುವ ಉನ್ನತ ಸ್ಥಿತಿಗೆ ತಂದಿರುವರೆಂಬ ಭಾವನೆಯು ನಮ್ಮಲ್ಲಿ ತಲೆದೋರಿದೆ. ಕಾಲಚಕ್ರವು ತನಗನುಕೂಲವಾದ ವ್ಯಕ್ತಿಗಳನ್ನು ಜನನಕ್ಕೆ ತರುವದೇ ಹೊರತು ವ್ಯಕ್ತಿಗಳಿಂದೇನಾಗತಕ್ಕದ್ದಿಲ್ಲವೆಂಬ ಅಭಿಪ್ರಾಯ ಈಗಲೂ ಕೆಲವರಲ್ಲಿದೆ. ಸಮಾಜವು ಜಡಸ್ಥಿತಿಗೆ ಬಂದು ಕೊಳೆತಾಗ ಇಲ್ಲವೆ ನಾಶವಾಗುವ ಸಂಭವ ಒದಗಿದಾಗ ಅಂಥಾ ಗಂಡಾಂತರಗಳಿಂದ ಪಾರು ಮಾಡಲು ದೇವರು ಆಗಾಗ ಮಹಾ ಪುರುಷರನ್ನು ಜನನಕ್ಕೆ ತರುವರೆಂಬ ಇತಿಹಾಸದ ತಪ್ಪು ಅನುಭವ ಕೆಲವರು ಮಾಡಿರುವರೆಂದರೆ ತಪ್ಪಾಗದು.

ಮಾನವರ ಇತಿಹಾಸದಲ್ಲಿ ಆಗಾಗಲಾದ ಬದಲಾವಣೆ ಮತ್ತು ಮಾರ್ಪಾಟುಗಳಿಗೆ ಮೂರು ತರದ ಅಭಿಪ್ರಾಯಗಳನ್ನು ತಿಳಿದವರು ಕೊಟ್ಟಿರುವರು. ಒಂದನೇಯದು ಅಗಸ್ಟಿನ್ ಎಂಬೊಬ್ಬ ಸಂತರ ಗುರುಗಳ ಹೆಸರಿನಲ್ಲಿ ಪ್ರಚಾರಕ್ಕೆ ಬಂದಿರುವದು. ಎರಡನೇಯದು ಇತಿಹಾಸದ ದೊಡ್ಡ ಬರಹಗಾರರಾದ ಬಕ್ಲೆ ಎಂಬವರ ಹೆಸರಿನಲ್ಲಿ ಚಾಲ್ತಿಯಾಗಿರುವದು. ಇನ್ನು ಮೂರನೇಯದು ಕಾರ್ಲ್ ಮಾರ್ಕ್ಸ್ ಎಂಬ ಸಮತಾವಾದದ ಧುರೀಣನ ಹೆಸರಿನಲ್ಲಿ ಮೆರೆಯುವದು. ಈ ಮೂವರ ತತ್ವಗಳಲ್ಲಿ ಭೇದಗಳಿವೆ. ಅಗಸ್ಟಿನ್ ಎಂಬವರ ತತ್ವದ ಮೇರೆಗೆ ಸರ್ವವೂ ವಿಶ್ವಮಯ, ಜಗತ್ತೇ ದೇವರ ಆಟದ ಲೀಲೆಯಾದ್ದರಿಂದ ಯುದ್ಧ ಕ್ಷಾಮ ಮತ್ತು ರೋಗ ಇತ್ಯಾದಿ ನಾನಾ ತರದ ಕಷ್ಟಗಳನ್ನು ಮಾನವರು ಅನುಭವಿಸಲೇಬೇಕು. ದೇವರು ಮೋಕ್ಷ ಕೊಡುವ ತನಕ ಮಾನವರು ಈ ತರದ ಪೀಡೆಗಳಿಗೊಳಗಾಗಬೇಕು. ಆತನ ಲೀಲೆಯು ಪೂರ್ಣ ಮುಗಿದ ಮೇಲೆ ಅಂದ್ರೆ ಅಂತ್ಯವಾದ ಅಖೈರ ದಿವಸಕ್ಕೆ(Day of Judgement) ಮಾನವರು ತಮ್ಮ ಕಷ್ಟ ಪರಂಪರೆಗಳಿಂದ ಪಾರಾಗುವರು ಎಂದಿದಲ್ಲದೇನೂ ಆಗತಕ್ಕದ್ದಿಲ್ಲ. ಸರ್ವವೂ ದೈವಪ್ರೇರಣೆಯಂತೆ ನಡೆಯುವದು. ವ್ಯಕ್ತಿಗಳ ಇಚ್ಛೆಯಂತೆ ನಡೆಯುವದೊಂದೂ ಇಲ್ಲವೆಂಬುದೇ ಈ ತತ್ವದ ಮೂಲಾಧಾರವಾಗಿದೆ. ದೇವರ ಈ ನಾಟಕದಲ್ಲಿ ಮನುಷ್ಯನೇ ಒಂದು ಗೊಂಬೆಯಾಗಿ ತೋರುವನು. ಈ ಮತವನ್ನು ವಿಜ್ಞಾನಿಗಳು ದೈವಜ್ಞರು ಮತ್ತು ಗುರುಗಳು ಹೊರತು ಅನ್ಯರ್ಯಾರೂ ಅಂಗೀಕರಿಸುವಂತೆ ಕಂಡು ಬರುವದಿಲ್ಲ. ಬಕ್ಲೆ ಎಂಬವರ ಅಭಿಪ್ರಾಯದ ಮೇರೆಗೆ ಇತಿಹಾಸವು ವ್ಯಕ್ತಿಗಳನ್ನು ಹೊಂದಿರುವದಿಲ್ಲ. ಭೌಗೋಲಿಕ ಮತ್ತು ವಸ್ತುಸ್ಥಿತಿ ಹೊಂದಿರುವದು. ಪ್ರತಿಯೊಂದು ದೇಶದಲ್ಲಿಯೂ ಅದರ ಪರಿಸ್ಥಿತಿಗನುಸಾರವಾದ ಜನರೇ ಹುಟ್ಟಿ ಆ ದೇಶದ ಇತಿಹಾಸವನ್ನು ಮುಂದುವರಿಯುವದೇ ಹೊರತು ವ್ಯಕ್ತಿಗಳಿಂದೇನಾಗುವದಿಲ್ಲವೆನ್ನುವರು. ಆಯಾಯ ದೇಶದ ವಾತಾವರಣ ಅಥವಾ ಪರಿಸ್ಥಿತಿಯನ್ನು ಹೊಂದಿರುವದೆನ್ನುವರು. ಕಾರ್ಲ್ ಮಾರ್ಕ್ಸ್ ಎಂಬವರು ಇತಿಹಾಸವು ಆರ್ಥಿಕ ಸ್ಥಿತಿಯನ್ನು ಹೊಂದಿರುವದಲ್ಲದೆ ಬೇರಾವ ಶಕ್ತಿಗಳಿಂದಲ್ಲವೆನ್ನುವರು. ಇವರೆಲ್ಲರ ತತ್ವಗಳಲ್ಲಿ ಸ್ವಲ್ಪ ಹುಟ್ಟಿನ ಸತ್ಯಾಂಶವಿರುವದಾದರೂ ಇವು ಅಪೂರ್ಣವಾಗಿರುವವು. ಅವ್ಯಕ್ತಿಕ ಮತ್ತು ನಿರ್ಜೀವನ ಶಕ್ತಿಗಳಿಂದಲೇ ಇತಿಹಾಸವು ಬೆಳೆಯುವುದು ಚೈತನ್ಯಶಕ್ತಿಯಾದ ಮಾನವರಿಂದಲೇನೂ ಆಗುವದಿಲ್ಲವೆಂದು ಕಡೆಗಣಿಸುವದು ತಪ್ಪು. ಅವ್ಯಕ್ತಿಕ ಮತ್ತು ಭೌತಿಕ ಶಕ್ತಿ ಇತಿಹಾಸದ ಆಧಾರವಾದರೂ ಅವುಗಳನ್ನುಪಯೋಗಿಸಿ ನಾಗರೀಕತೆ, ಸಂಸ್ಕೃತಿ ಮತ್ತು ಕಲೆಗಳನ್ನು ವೃದ್ಧಿ ಮಾಡಿ ಚರಿತ್ರೆಯನ್ನೇ ಬೆಳೆಸುವವರಾಗಲೀ ಬದಲಾಯಿಸುವವರಾಗಲೀ ಅನಾದಿಯಿಂದಲೂ ಮಾನವರೇ ಎಂಬುದನ್ನು ನಾವು ಮರೆಯಬಾರದು. ಬೆಂಕಿಯನ್ನು ತಯಾರಿಸುವ ಕ್ರಮ ಪ್ರಥಮತಃ ಕಂಡುಹಿಡಿದಂದಿನಿಂದ ಕೃಷಿ, ವ್ಯವಸಾಯ ಮತ್ತು ಕೈಗಾರಿಕೆಗಳ ಸಾಧನ ವಗೈರೆ ಆಯುಧಗಳನ್ನು ತಯಾರಿಸುವ ವರೆಗೆ ಮಾನವರೇ ಆಗತ್ಯವೆಂಬುದನ್ನು ನಾವು ಮನಗಂಡಿದ್ದೇವೆ. ವ್ಯಕ್ತಿಗಳ ಸಾಹಸದಿಂದಲ್ಲದೆ ಅವ್ಯಕ್ತಿಕ ಶಕ್ತಿಗಳಿಂದಲೇ ಸಮಾಜದ ಬೆಳವಣಿಗೆಯು ಮತ್ತು ಇತಿಹಾಸವು ರೂಪುಗೊಳ್ಳುವದೆಂಬುದು ನಂಬಲಾರದ ವಿಷಯ.

ಸಾಮಾಜಿಕ ಇತಿಹಾಸದಲ್ಲಿ ವಿವಿಧ ಮಾರ್ಗ ರೂಪದ ಅವಸ್ಥೆಗಳು ಬಂದೊದಗುತ್ತವೆ. ಕೆಲವು ಸಮಯ ಸಮಾಜದ ಶಕ್ತಿಯು ಕುಂದಿ ಹೋಗಿ ಸಮಾಜದ ವೃದ್ಧಿಯೇ ಮಂದಗತಿಯನ್ನು ಹೊಂದುತ್ತದೆ. ಇನ್ನು ಕೆಲವು ಸಮಯ ಸರ್ವವೂ ನಾಶವಾಗುವ ಸಂಭವ ತೋರಿ ಬರುತ್ತದೆ. ಈ ರೀತಿ ಕೆಳತು ಪ್ರೇರಿಸುವ ಪರಿಸ್ಥಿತಿ ಪ್ರತಿಯೊಂದು ಮತ, ಪಕ್ಷ, ಸಂಘ ಮತ್ತು ಸಂಸ್ಥೆಗಳಿಗೆ ಅವುಗಳ ಇತಿಹಾಸದಲ್ಲಿ ಬಂದಿಲ್ಲದಿಲ್ಲ. ಕಾಲ ಬಂದೇ ಬರುತ್ತದೆ. ಯಾವ ಸಮಾಜವಾದರೂ ಆದಿಯಿಂದಲೂ ಸಮಬಲದಿಂದಲೇ ಬಾಳಿ ಬೆಳೆದದ್ದು ಅಪೂರ್ವ. ಜಡಸ್ಥಿತಿಗೆ (Decay) ಬರುವ ಕಾಲವು ಅಥವಾ ನಾಶವಾಗುವ (Destruction) ಹಂತಗಳಿಗಳು ಬರುವ ಭಾವನೆ ಇದ್ದೇ ಇವೆ. ಸಮಾಜವು ಮುಂದುವರಿಯುವ ಬದಲಿಗೆ, ಇದ್ದ ಸ್ಥಿತಿಗಿಂತಲೂ ಕನಿಷ್ಠ ತರಗತಿಗೆ ಬರುವದು ಅದರ ನಾಡಿಯೇ ಬಂದಾದಂತೆ ತೋರುವುದು. ಯುವಕರಲ್ಲಿ ಹುರುಪು ಮತ್ತು ಉತ್ಸಾಹವಿಲ್ಲದೇ, ಮೂರ್ಢತ್ವದಿಂದ ಜ್ಞಾನವಿಲ್ಲದಿರುವುದು; ಮುದುಕರು ಕಲ್ಪನಾಶಕ್ತಿ ಇಲ್ಲದೇ ಮುಂದಿನ ಕನಸನ್ನು ಕಾಣಲಾರದೇ ಹೊಸ ದಾರಿಯನ್ನು ಹುಡುಕಲಾರದೆ ಹಳೆ ರೀತಿಯ ಪದ್ಧತಿಯನ್ನೇ ಸ್ಥಿರಗೊಳಿಸುವ ಪ್ರಯತ್ನ ಮಾಡುವುದು ಇವೇ ಮೊದಲಾದವುಗಳು ಅಂಥಾ ಕಾಲದ ಚಿಹ್ನೆಯಾಗಿವೆ.

ರಾಜಕೀಯ ವಿಚಾರದಲ್ಲಿ ಈ ರೀತಿ ಜಡಸ್ಥಿತಿ ಪ್ರಾಪ್ತವಾದರೆ ಅದಕ್ಕೆ ಬೂರ್ಬನಿಸಮು (Boorbanism) ಎನ್ನುವರು. ಈ ಬೂರ್ಬನ ಎಂಬ ವಂಶದ ಅರಸರು ಫ್ರಾನ್ಸ ದೇಶದಲ್ಲಿ ಆಳುತ್ತಿರುವ ವೇಳೆಯಲ್ಲಿ ಜ್ಞಾನದಲ್ಲಿಟ್ಟುಕೊಳ್ಳದೆ ಹೊಸ ರೀತಿ ನೀತಿಗಳಿಗೆ ಸ್ವಾಗತ ನೀಡಿಯದೆ ಹಳೆಯ ಕ್ರಮವನ್ನೇ ನಡೆಸಿ ಆಳುತ್ತಿದ್ದವರು. ರಾಜ್ಯವು ಅಕ್ಷಮಿಸದಾಗಿ ಅರಾನ ಖುರ್ಚಿ (Aron chair) ಎಂಬುವಂತೆ ಆಗಿದ್ದರ ಪರಿಣಾಮವಾಗಿ ಸಮಾಜವು ಮುಂದಿನ ಗತಿ ಮತ್ತು ಪ್ರಗತಿಗೆ ಬರುವುದು ಬದಲಿಗೆ ನಾಶವಾಗುವ ಸಂಭವ ಒದಗಿ ಒದವು ಮುಂದೆ ರಾಷ್ಟ್ರದಲ್ಲಿ ದೊಡ್ಡ ಕ್ರಾಂತಿ ಮತ್ತು ಅನರ್ಥಗಳೊದಗಿದಾಗ ಇಂಥಾ ಸಂದರ್ಭದಲ್ಲಿ ಇದೇ ಕಾಲದ ಹಳೇ ರೀತಿಗಳು ಉದ್ಧರಿಸಲಾರವು. ಹೊಸ ದಾರಿಯನ್ನು ಕಂಡು ಹಿಡಿಯದಿದ್ದರೆ, ಸಮಾಜವು ಉಳಿಯುವುದೇ ಅಸಂಭವ. ಇದಕ್ಕೆ ಕಾರಣ ವೇನೆಂದರೆ ಆಲ್ಡಸ ಹಕ್ಸಲೆ ಎಂಬ ದೊಡ್ಡ ವಿಜ್ಞಾನಿಯು ಹೀಗೆ ಹೇಳಿರುವರು "ನಾವು ಯಾವ ಸಮಯವನ್ನು ದೂರುವುದು ಅನಾವಶ್ಯಕ. ನಿಜವಾದ ಯೋಗ್ಯನೂ, ನಿಸ್ವಾರ್ಥನೂ, ವಿವೇಚನಾಶಕ್ತಿಯುಳ್ಳ ನಿಜ ದಾರಿ ಹಿಡಿದು ಮುಂದೆ ಮಾರ್ಗದರ್ಶನ ಮಾಡಿ ಹೋಗುವ ಮಹಾ ಪುರುಷನನ್ನು ಕಂಡು ಹಿಡಿಯಲು ಅಸಾಧ್ಯವಾದುದೇ ಹೀಗಾಗಲು ಕಾರಣ. ಅಂದಾ ವ್ಯಕ್ತಿಗಳನ್ನು ನಾವು ಹುಡುಕಿ ಅವನ್ನಾಶಿಸಿ ನಮ್ಮ ಕಷ್ಟಗಳಿಂದ ಪಾರಾಗಬಹುದೆಂದರು." ಕಾಲವು ನಮಗೆ ಬೇಕಾದ ಹೊಸ ದಾರಿಯನ್ನು ಸೂಚಿಸಬಹುದು. ಆ ಮಾರ್ಗವನ್ನು ಹಿಡಿದು ಮುಂದುವರಿಯುವ ರೀತಿಗೆ ಬುದ್ಧಿವಂತರಾದ ಪುರುಷರು ಬೇಕು. ಇತಿಹಾಸದ ಬೆಳವಣಿಗೆಗೆ ಮಾನವನೇ ಮುಖ್ಯ ಕರ್ತ. ಭೌತಿಕ ಅಥವಾ ವಾತಾವರಣದ ಶಕ್ತಿ (Environmental forces) ಅವ್ಯಕ್ತಿಕವಾಗಲೀ, ಸಾಮಾಜಿಕವಾಗಲೀ ಪ್ರಧಾನಸ್ಥಾನದಲ್ಲಿದ್ದರೂ ಅವುಗಳೇ ಮುಖ್ಯವೆಂದು ತಿಳಿಯಬಾರದು.

ಚರಿತ್ರಾಕರ್ತರಾದ ಕಾರಣೀಕ ಪುರುಷರು ಯಾರು? ಅವರನ್ನು ಎಲ್ಲಿರುವರೆಂದು ಕಂಡುಹಿಡಿಯುವುದೇ ಕಷ್ಟ. ಯುದ್ಧದಲ್ಲಿ ಮಹಾ ಪರಾಕ್ರಮವನ್ನು ತೋರಿಸಿ ವಿಜಯಗಳಾದವರೆಲ್ಲರೂ ಎಣಿಕೆಗೆ ತರುವಂತಾದರೆ ಅವರು ತಮ್ಮ ಜಯದಿಂದ ಜನರನ್ನು ಆಕರ್ಷಿತರನ್ನಾಗಿ ಮಾಡುವರೇನೋ ನಿಶ್ಚಯವಾದರೂ ಅವರ ಕಾರಣದ ಪರಿಣಾಮವು ನಾಶ ಬಹಳ ಜನಜೀವನದಾಗಿ ಕೊನೆಗೆ ಕಾಣುವದು. ಅವರು ಗೆದ್ದ ರಾಷ್ಟ್ರಗಳೆಲ್ಲ ಸ್ವಲ್ಪ ಸಮಯದಲ್ಲಿ ಕೈತಪ್ಪಿಹೋಗಿ ಚಿಕ್ಕದಾಗುವುವು. ಹನ್ನಿಬಾಲ್, ಅಲೆಕ್ಸಾಂಡರ್, ಜೂಲಿಯಸ್ ಸೀಜರ್ ಮತ್ತು ನಾಪೋಲಿಯನ್ ಇವರೆಲ್ಲರ ಹೆಸರು ಈಗ ಚರಿತ್ರೆಯಲ್ಲಿ ಮಾತ್ರ ಕಾಣುವವಾಗಿವೆ. ನೆಪೋಲಿಯನ್ ಎಂಬ ಮಹಾವೀರನು ತನ್ನ ಗೆಲುವಿನಿಂದ ಜಗತ್ತನ್ನೇ ವಿಸ್ಮಯಗೊಳಿಸಿದರೂ ಫ್ರಾನ್ಸ್ ದೇಶವು ಆತನು ಆಳ್ವಿಕೆಗೆ ಬಂದಾಗ ಇದ್ದದಕ್ಕಿಂತ ಸಣ್ಣದಾಗಿ ಚಿಕ್ಕದಾಗಿರುವದು. ಇವರ ಜಯಗಳು ನಮಗೆ ವಿಚಿತ್ರವಾದರೂ ಸಮಾಜದ ಮೇಲೆ ಯಾವ ಶಾಶ್ವತ ಪರಿಣಾಮವೂ ಕಂಡುಬರಲಿಲ್ಲ. ಯುದ್ಧರಂಗವನ್ನು ಪರೀಕ್ಷೆ ಮಾಡಿದ ರೀತಿಯಿಂದಲೇ ಇವರನ್ನು ನಿರ್ಣಯಿಸುವದು ತಪ್ಪು ಮತ್ತು ಸರಿಯಲ್ಲ.

ಇವರನ್ನು ಗುರುತಿಸುವದು ಕಷ್ಟ ಮತ್ತು ಸರಿಯಲ್ಲ. ಅವರ ಒಳ್ಳೇ ಪರೀಕ್ಷೆಗಳೇ ಅಗತ್ಯವಿರುವುದರಿಂದ ಒಬ್ಬೊಬ್ಬರು ಒಂದೊಂದು ತರದ ಅಭಿಪ್ರಾಯಗಳನ್ನು ಕೊಟ್ಟಿರುವರು. ಮಹಾವ್ಯಕ್ತಿಯು ಸ್ವಾಭಾವಿಕವಾದ ನಿಷ್ಕಪಟಿಯಾಗಬೇಕೆಂದು ಕಾರ್ಲೈಲ ಎಂಬವರು ಹೇಳಿರುವರು. ಯಾವ ವ್ಯಕ್ತಿಗಾದರೂ ಪ್ರಾಮಾಣಿಕತೆಯು ಮುಖ್ಯವಾದ ಗುಣವಾಗಿದೆ-ಲೋರ್ಡ್ ರೋಸಬರಿ ಎಂಬವರು ಇನ್ನೊಂದು ತರದ ಪರೀಕ್ಷೆಯನ್ನು ಹೇಳಿರುವರು. ಮಹಾಪುರುಷನೆನಿಸಬೇಕಾದರೆ ನೈತಿಕ ಮತ್ತು ಜ್ಞಾನಶಕ್ತಿ ಮುಖ್ಯವೆಂತಾದರೆ ನೆಪೋಲಿಯನ್ ದೊಡ್ಡ ವ್ಯಕ್ತಿಯಲ್ಲವೆಂದೇ ಹೇಳಬೇಕು. ವಿಶೇಷ ಮತ್ತು ಅಧಿಕ ಗುಣವುಳ್ಳವನಾದರೆ ಆತನು ಮಹಾವ್ಯಕ್ತಿ ಎಂಬುದು ನಿಜ. ಅಧಿಕ ಶ್ರೇಷ್ಠತ್ವ, ಪ್ರಾಬಲ್ಯ ಮತ್ತು ಸರ್ವ ಸಾಮಾನ್ಯಜನರಿಗಿಂತ ಹೆಚ್ಚಿನ ವ್ಯಕ್ತಿತ್ವ ಇವೇ ಮೊದಲಾದ ಸ್ವಭಾವ ಗುಣಗಳು ಮಹತ್ವವನ್ನು ಹೊಂದಿರುವದಾದ್ರೆ ನೆಪೋಲಿಯನ್ ನಿಶ್ಚಯವಾಗಿಯೂ ಮಹಾವ್ಯಕ್ತಿ. ವಿವರಿಸಲಾರದಂತ ಪ್ರತಿಭೆಯು ಕಡಿ ಅಲ್ಲದೆ ಅಧಿಕ ಸಾಹಸ ಪೌರುಷಗಳಲ್ಲಿ ಆತನನ್ನು ಮೀರಿದವರಿಂತೂ ಇಲ್ಲ. ಸರಿಸಮಾನರು ಸದಾ ಇಲ್ಲ. ತತ್ವಜ್ಞಾನಿಗಳು ಮತ್ತು ದೈವಜ್ಞರು ಅಂದರೆ ಸರ್ವವೂ ದೈವಪ್ರೇರಣೆಯಂತೆ ನಡೆಯುವದೆಂದು ನಂಬಿದವರು ಮಹಾವ್ಯಕ್ತಿಗಳ ಬಗ್ಗೆ ಇನ್ನೊಂದು ರೀತಿಯ ಊಹನೆಯನ್ನು ಹೇಳುವರು. ಲೋಕದಲ್ಲಿ ಧರ್ಮವು ಕೆಟ್ಟು ಅಧರ್ಮವು ಪ್ರವರ್ತಿಸಿದರೆ ಅಂಥಾ ಕಾಲಕನ್ನೆಲ್ಲಾ ತೊಳೆದು ಸ್ವಚ್ಛಮಾಡಿ ಮಾನವರ ರಕ್ಷಣೆಮಾಡುವ ಗೋಸ್ಕರ ಅದ್ಭುತ ಶಕ್ತಿಯುಳ್ಳ ಮಹಾವ್ಯಕ್ತಿಯನ್ನು ದೇವರು ಆಗಾಗ ಜನನಕ್ಕೆ ತರುವನೆಂದು ಹೇಳುವರು.

ಮೇಲೆ ಹೇಳಿದ ಪ್ರತಿಯೊಂದು ಪರೀಕ್ಷೆಯಲ್ಲಿ ಕೆಲವು ಹುಟ್ಟಿನ ಸತ್ಯಾಂಶವಿರುವದಾದರೂ ಇದು ಪೂರ್ಣವೆಂದು ಹೇಳಲಾಗುವದಿಲ್ಲ. ಮಹಾವ್ಯಕ್ತಿಗಳಿಗೆ ನೈತಿಕ ಬಲವನ್ನು ಕೊಡುವದಕ್ಕಾಗಿ ಪ್ರಾಮಾಣಿಕತೆಯು ಅಗತ್ಯ. ಈ ಗುಣವಿಲ್ಲದವರು ಮಹಾವ್ಯಕ್ತಿಗಳಾಗಲಾರರು. ಕ್ಲೆಮೆಂಕೊ ಎಂಬ ಫ್ರೆಂಚ್ ರಾಜಕಾರಣಿಯೋರ್ವರು ಲೋಕದಲ್ಲಿರುವ ರಾಜನೀತಿ ನಿಪುಣರೆಲ್ಲರೂ ದೊಡ್ಡ ಠಕ್ಕರೆಂದಿರುವರು. ಅಮೇರಿಕದ ಹಿಂದಿನ ಪ್ರೆಸಿಡೆಂಟರಾದ ಅಬ್ರಹಾಮ ಲಿಂಕನ್‌ರು ರಾಜಮುತ್ಸದ್ದಿಗಳೆಲ್ಲಾ ಜನರ ಪ್ರಯೋಜನ ದೃಷ್ಟಿಯೊಂದು ಮತ್ತು ತಮ್ಮ ಸ್ವಾರ್ಥದ ಲಕ್ಷ್ಯ ಮತ್ತೊಂದು ಹೀಗೆ ಎರಡು ತರದ ದೃಷ್ಟಿ ಇರುವುದರಿಂದ ಹೆಚ್ಚಿನವರು ಸತ್ಯವಂತರು ಎಂದು ಹೇಳಲು ಬರುವುದಿಲ್ಲವೆಂದಿರುವರು. ಒಬ್ಬನು ನಿಷ್ಕಪಟಿಯಾಗಿರಬಹುದು ಆದರೆ ಮೂರ್ಖನಂತೆ ವರ್ತಿಸಬಹುದು. ಆದ್ದರಿಂದ ಇದೊಂದೇ ಗುಣ ಸಾಲದು. ಒಬ್ಬನು ತನ್ನ ಬುದ್ಧಿಸೂಕ್ಷ್ಮತೆಯಿಂದ ಸಮಾಜವನ್ನು ಅಪಘಡದಿಂದ ಪಾರುಮಾಡಿ ಹೊಸ ದಾರಿತೋರಿಸಬಹುದು ಆದರೆ ಇದೇ ಸಾಲದು. ಈ ಗುಣಗಳಿಂದ ಒಬ್ಬನು ದೊಡ್ಡ ಮನುಷ್ಯನೆನ್ನಿಸಿಕೊಳ್ಳಬಹುದೇ ಹೊರತು ಮಹಾವ್ಯಕ್ತಿಯಾಗಲಾರನು. ಸಮಾಜದ ಧ್ಯೇಯ ಮತ್ತು ಹಿತವನ್ನು ತನ್ನ ಅತ್ಯದೃಷ್ಟಿಯಿಂದ ತಿಳಿದು ಮುಂದುವರಿಯತಕ್ಕವನಾಗಿಯೂ, ಅದರ ಕೊಳಕನ್ನೆಲ್ಲಾ ತೆಗೆಯುವ ತೋಟಿಯಾಗಿಯೂ ಚಬುಕು ಹಿಡಿದು ಸಮಾಜದ ಅಂಕುಡೊಂಕುಗಳನ್ನೆಲ್ಲಾ ತಿದ್ದಿ ಸರಿಪಡಿಸುವವನೇ ಮಹಾ ವ್ಯಕ್ತಿಯೆನಿಸಿಕೊಳ್ಳುವನು.

ನಿಮಗೆ
ಇಂಗ್ಲಿಷ್ ಕಲಿಯಬೇಕೆ?
ಹಾಗಿದ್ದರೆ

ಕೊರಡ್ಕಲ್ ಶ್ರೀನಿವಾಸ ರಾವ್ ವಿರಚಿತ

ಸುಲಭದಲ್ಲಿ ಇಂಗ್ಲಿಷ್

English Made Easy

ಎಂಬ

ಇಂಗ್ಲಿಷ್ ಸ್ವಯಂಬೋಧಿನಿ ಪುಸ್ತಕ ಅತ್ಯುಪಯುಕ್ತವಾದುದು.

ಬೆಲೆ ರೂ. 1–8–0.

ವಿ. ಪಿ ದ್ವಾರ ರೂ. 2–0–0.

ಪ್ರತಿಗಳು ನಿಮ್ಮೂರ ಪುಸ್ತಕ ವ್ಯಾಪಾರಿಗಳಲ್ಲಿ ಸಿಗದಿದ್ದರೆ, ಕೆಳಗಿನ ವಿಳಾಸಕ್ಕೆ ಬರೆಯಿರಿ.

ನವಭಾರತ ಪುಸ್ತಕ ಭಂಡಾರ, ಉಡುಪಿ

ಸಹಕಾರಿ ಸಂಘಗಳಿಗೆ— —
ಮುನ್ಸಿಫ್ ಕೋರ್ಟುಗಳಿಗೆ—
ವರ್ತಕರಿಗೆ—ಶಾಲೆಗಳಿಗೆ—
ಬೇಕಾಗುವ ರಿಜಿಸ್ಟ್ರಗಳು,
ರಶೀದಿ ಪುಸ್ತಕಗಳು,
ಫಾರ್ಮುಗಳು, ಎಕೌಂಟ್ ಪುಸ್ತಕಗಳು ದೊರೆಯುತ್ತವೆ.

ನವಯುಗ ಪ್ರೆಸ್ ಉಡುಪಿ.

ಮೇಷ— ಭಾಗ್ಯಪತಿಗಳಾದ ಗುರು ಗಳು ವ್ಯಯಗತರಾಗಿದ್ದರೂ ಸ್ವಕ್ಷೇತ್ರವೇ ಆಗಿರುವುದರಿಂದ ನಿಮಗೀವಾರದಲ್ಲಿ ಉತ್ಪತ್ತಿಗಿಂತ ಖರ್ಚು ಅತಿಕ್ರಮಿಸದು. ಆದರೆ ಪ್ರವಾಸಾದಿಗಳಿಗೆ ಕಾಲವು ಅನುಕೂಲವಿಲ್ಲವು. ಪಿತ್ರಾರ್ಜಿತ ಸಂಬಂಧವಾದ ಕಾಹಿಲೆಗಳು ತಲೆದೋರಬಹುದು. ಕೆಲವೊಮ್ಮೆ ಆಪ್ತೀಯರೊಡನೆ ಜಗಳ, ಕಲಹ, ತಿರಸ್ಕಾರಗಳೂ ಪ್ರಾಪ್ತವಾಗುವ ಸಂಭವವಿದೆ. ವಾರಾದಿಯ 4 ದಿನಗಳಲ್ಲಿ ಧನಲಾಭ ಸುಖಯಾನ ಪಾನಾದಿಗಳು ಲಭಿಸುವವು.

ವೃಷಭ—ದೇಹಸ್ಥ ರವಿಕುಜರಿಂದಾಗಿ ನಿಮ್ಮ ಆರೋಗ್ಯಕ್ಕೆ ಪಿತ್ಥ ಸಂಬಂಧವಾದ ದೋಷವುಂಟಾದೀತು. ವ್ಯರ್ಥಪ್ರವಾಸ ಆದಿರಿಂದಾಗಿ ಕಷ್ಟನಷ್ಟಗಳೂ ಉಂಟಾಗಲಿವೆ. ಈ ವಾರದಲ್ಲಿ ನಿಮ್ಮ ಆದಾಯವು ಉತ್ತಮವಿರುವದು, ಗುರುಹಿರಿಯರ ಬೆಂಬಲಯುಕ್ತರಾದ ನಿಮಗೆ ಹೆಚ್ಚಿನ ಕಾರ್ಯಗಳಲ್ಲಿ ವಿಜಯವು ಲಭಿಸುವದು. ವ್ಯಾಪಾರಿಗಳಿಗೆ ನಿರೀಕ್ಷೆಗಿಂತ ಅಧಿಕವಾದ ಫಲಲಭಿಸಲಿದೆ. ತಾ. 19 ರಿಂದ 22 ರವರೆಗಿನ ದಿನಗಳಲ್ಲಿ ಇಷ್ಟಸಿದ್ಧಿಯಾಗುವದು.

ಮಿಥುನ— ಅನೇಕ ಸಮಯದಿಂದ ನಿಮ್ಮ ಮೇಲೆ ಅನುಗ್ರಹವನ್ನು ಬೀರಿದ್ದ ಗ್ರಹರು ಇಂದೀಗ ಪರಾಙ್ಮುಖರಾಗಿರುವರು. ಆದಕಾರಣ ಒಮ್ಮೆಲೇ ಎಲ್ಲಾ ಕಡೆಯಿಂದಲೂ ಖರ್ಚುವೆಚ್ಚಗಳೂ ಆಪತ್ತುಗಳೂ ಪ್ರಾಪ್ತವಾಗಲಿವೆ. ಶರೀರಾಲಸ್ಯದಿಂದಲೂ, ಮನಶ್ಚಾಂಚಲ್ಯದಿಂದಲೂ ಸದಾ ಚಿಂತಾಸಕ್ತರಾದ ನಿಮಗೆ ವಾರಾಂತ್ಯದ 4 ದಿನಗಳಲ್ಲಿ ಆಪ್ತೇಷ್ಟಜನರಿಂದಾಗಿ ಸಹಾಯ ಸವಲತ್ತುಗಳು ಲಭಿಸುವವು.

ಅಳಿಯ ಸಂತಾನ ಕಾನೂನು

ಇದರ ಪ್ರತಿಗಳು ದೊರೆಯುತ್ತವೆ,

ಕನ್ನಡ ಪ್ರತಿಗೆ 0-8-0

ಇಂಗ್ಲಿಷ್ ಪ್ರತಿಗೆ 0-8-0

ಟಪ್ಪಾಲು ಖರ್ಚು 0-1-0 ಪ್ರತ್ಯೇಕ.

0-9-0 ಕಳುಹಿಸಿದರೆ ಒಂದು ಪ್ರತಿ ಕಳುಹಿಸಲ್ಪಡುವುದು.

ನವಯುಗ ಪ್ರೆಸ್, ಉಡುಪಿ.

ತಾರೀಖು 17-5-51 ರಿಂದ

ವಾರದ ಭವಿಷ್ಯ

ತಾರೀಖು 23-5-51 ರ ವರೆಗೆ

ಕರ್ಕಟ—ಅದೃಷ್ಟವು ಉತ್ತಮವಾಗಿರುವದು. ಯಾವ ಕಾರ್ಯವನ್ನು ಕೈಗೊಂಡರೂ ಅನಾಯಾಸದಿಂದ ಕಾರ್ಯಸಿದ್ಧಿಯಾಗುವದು. ಎಂತಹ ಪ್ರಬಲ ಶತ್ರುವೂ ಕೂಡ ನಿಮ್ಮ ಮುಂದೆ ಬಲಹೀನನು. ನಿಮ್ಮ ಆರ್ಥಿಕ ಪರಿಸ್ಥಿತಿಯು ಬಹುಮಟ್ಟಿಗೆ ಉತ್ತಮವಾಗಲಿದೆ. ಸಮಾಜದಲ್ಲೂ ರಾಜಕೀಯ ರಂಗದಲ್ಲೂ ಕೀರ್ತಿ ವಿಜಯಗಳನ್ನು ಪಡೆವಿರಿ. ಯಾವ ಭಾಗದಲ್ಲೂ ಕೂಡ ನಿಮಗೆ ಕೊರತೆ ಕಾಣಿಸದು. ತಾ. 17, 18, 23 ಈ ದಿನಗಳು ಅತ್ಯುತ್ತಮವಿವೆ.

ಸಿಂಹ— ಸ್ವೇಚ್ಛಾಚಾರಿಯಾಗಿ ವರ್ತಿಸತಕ್ಕ ನಿಮಗೆ ಅಧಿಕಾರವರ್ಗದವರ ಪ್ರಕೋಪವೂ ಶತ್ರುಜನರಿಂದ ಮನೋವ್ಯಥೆಯೂ ಉಂಟಾಗಬಹುದು. ಗೃಹಕೃತ್ಯದಲ್ಲಿ ಪರಸ್ಪರ ಕಲಹ ವೈಮನಸ್ಸು ಇತ್ಯಾದಿಗಳುಂಟಾಗಲಿವೆ. ಆಪ್ತೀಯರ ವಿರಹವಾಗಲಿದೆ. ಆರೋಗ್ಯ ಭಾಗದಲ್ಲಿ ಹೆಚ್ಚಿನ ನಿಗಾ ಇಡಿರಿ. ವೃಥಾ ಜನಾಪವಾದಕ್ಕೆ ಗುರಿಯಾಗಲಿರುವಿರಿ. ತಾ. 19, 20 ಈ ಎರಡು ದಿನಗಳು ಇಷ್ಟದಲ್ಲಿ ಉತ್ತಮವೆನಿಸುವದು.

ಕನ್ಯಾ—ಲೇವಾದೇವಿ ನಿಮಿತ್ತ ಪರಸ್ಪರ ಕಲಹಗಳುಂಟಾಗಿ ಕೋರ್ಟು ಮನೆ ತಿರುಗುವ ಪ್ರಸಂಗ ಬರಬಹುದು. ಆತೀವ ಪೈಶುನ್ಯವೃತ್ತಿಯಿಂದ ದಿನಗಳೆಯಬೇಕಾಗುವದೂ ಮಾತನಾಡಿದವರೊಡನೆ ಕಲಹವಾಗುವದು. ಆದರೂ ಗುರ್ವನುಗ್ರಹವು ಪರಿಪೂರ್ಣವಿರುವುದರಿಂದ ದಿನಯಾಪನೆಯು ಕಷ್ಟವಾಗಲೊಲ್ಲದು. ಅನಿರೀಕ್ಷಿತವಾಗಿ ಹೇರಳವಾದ ಧನಲಭಿಸುವದು, ಒಳ್ಳೇ ವ್ಯಾಪಾರಿಗಳಾದ ನಿಮಗೆ ತಾ. 17, 18, 21, 22 ಈ ದಿನಗಳು ಸುಖದಾಯಿಗಳಾಗಲಿವೆ.

ತುಲಾ— ಕಾಲವು ಬಹ್ವಂಶ ಪ್ರತಿಕೂಲವಾಗಿರುವುದರಿಂದ ನಿಮಗೆ ಇಷ್ಟಕ್ಕೆ ತದ್ವಿರುದ್ಧವಾಗಿ ಅನಿಷ್ಟವು ಕಾಣಿಸಬಹುದು. ಮನೋರೋಗ ಅನಾರೋಗ್ಯಗಳಿಂದ ಪೀಡಿತರಾದ ನಿಮಗೆ ಕಷ್ಟಪಟ್ಟು ದುಡಿಯುವ ಶಕ್ತಿ ಸಾಲದು. ತತ್ಪ್ರತಿ ವಿರೋಧಿ ಜನರ ಉಪಟಳವು ಅಸಹನೀಯವಾಗುವದು. ವಿಪತ್ಪರಂಪರೆಗಳಿಂದ ಪೀಡಾಕುಲಿತರಾದ ನಿಮಗೆ ತಾ. 19, 20, 23 ಈ ದಿನಗಳಲ್ಲಿ ಮಿತ್ರವರ್ಗದವರ ಸಹಾಯ, ವ್ಯಾಪಾರ, ವ್ಯವಹಾರಗಳಲ್ಲಿ ಕೊಂಚ ಅಭಿವೃದ್ಧಿಯುಂಟಾದೀತು.

ವೃಶ್ಚಿಕ—ಈ ವಾರದಲ್ಲಿ ನಿಮ್ಮ ಪರಿಸ್ಥಿತಿಯು ಬಹ್ವಂಶ ಉತ್ತಮವಾಗುವದು. ಆದಕಾರಣ ಪರಾಕ್ರಮಯುಕ್ತರಾದ ನೀವು ಯಾವ ಕಾರ್ಯವನ್ನು ಕೂಡ ಸಾಧಿಸುವ ಶಕ್ತಿಯುಕ್ತಿಗಳು ನಿಮಗೊದಗಲಿವೆ. ಪುತ್ರಭೃತ್ಯಾದಿ ಗೃಹ ಪರಿವಾರವು ಅತ್ಯುತ್ತಮವಾಗಿ ಇರುವುದರಿಂದ ಸುಖದಿಂದ ದಿನಗಳೆವಿರಿ. ಆದರೆ ಉದರಶೂಲೆಯೊಂದು ಸದಾ ನಿಮ್ಮನ್ನು ಬಾಧಿಸಲಿದೆ. ತಾ 19, 20 ಹೊರತಾಗಿ ಉಳಿದ ದಿನಗಳಲ್ಲಿ ನಿಮ್ಮ ಮನೋರಥವು ನಿರ್ವಿಘ್ನದಿಂದ ನೆರವೇರುವದು.

ಧನು — ಬಂಧುಮಿತ್ರರಲ್ಲಿನ ಮನಸ್ತಾಪ, ಸಂಸಾರದಲ್ಲಿನ ಅವ್ಯವಸ್ಥೆ ಇವುಗಳಿಂದುಂಟಾದ ಆ ಪದನಿಷ್ಟ ಅಪವಾದಗಳು ನಿಮ್ಮನ್ನು ಸದಾ ಚಿಂತಾಸಾಗರದಲ್ಲಿ ಕೆಡುವವಾದರೂ ಕಷ್ಟಸಹಿಷ್ಣುಗಳಾದ ನೀವು ಯಾವ ಸಂಗುದಾಕ್ಷಿಣ್ಯಗಳಿಗೆ ಸಿಲುಕದೆ ಸ್ವಕಾರ್ಯದಲ್ಲಿ ನಿರತರಾಗುವಿರಿ, ಸಾಕಷ್ಟು ಫಲವನ್ನೂ ಪಡೆವಿರಿ. ರಾಜಕೀಯಪಕ್ಷ ನೀವು ಅದ್ವಿತೀಯ ಶ್ರೇಯಸ್ಸನ್ನು ಹೊಂದುವಿರಿ ತಾ 21, 22 ದೇಹಾಲಸ್ಯ, ಧನವ್ಯಯಕಾರಿಗಳಿವೆ.

ಮಕರ—ಹಿತಶತ್ರುಗಳ ಸಂಖ್ಯೆಯು ದಿನೇ ದಿನೇ ಹೆಚ್ಚುತ್ತಾ ಬರುತ್ತಿದೆ ಮಾತ್ರವಲ್ಲ; ಅವರ ಉಪಟಳವೂ ಅಧಿಕವಾಗುತ್ತಿದೆ. ಸದಾ ಪರ್ಯಟನ ಮತ್ತು ಮನೋರೋಗದಿಂದ ಆರೋಗ್ಯವೂ ಕೆಡುತ್ತದೆ. ಸಂಸರ್ಗದೋಷದಿಂದಾಗಿ ಕೈಯಲ್ಲಿದ್ದ ಅಲ್ಪಸ್ವಲ್ಪ ಹಣವೂ ಕೂಡ ದುಷ್ಕರ್ಮದ ಸಲುವಾಗಿ ವ್ಯಯಿಸುವಿರಿ. ದಿನಯಾಪನೆಯು ಕಷ್ಟಸಾಧ್ಯವಾಗುವದು. ಸ್ಥಾನಚಲನೆಯು ಯೋಗವಿದೆ. ತಾ. 19, 20, 21, 22 ಈ ದಿನಗಳಲ್ಲಿ ಸುಖ ಇಷ್ಟಸಿದ್ಧಿ, ಮಿತ್ರಭೆಟ್ಟಿ, ಸಂತೋಷಗಳಿವೆ

ಕುಂಭ—ದಿನಗಳು ಸಂದಂತೆ ಪರಿಸ್ಥಿತಿಯೂ ಕೆಡುತ್ತಾ ಬರುತ್ತಿದೆ. ಅಸ್ಥಿರ ಸ್ವಭಾವ ಜನ್ಯ ಚಾಂಚಲ್ಯವು ನಿಮ್ಮಲ್ಲಿ ಮೂರ್ತಿಭವಿಸಿದಂತಿದೆ. ನಿಮ್ಮ ಆದಾಯವು ತೃಪ್ತಿಕರವಾಗಿದ್ದರೂ ಖರ್ಚು ಅಧಿಕವಿರುವುದರಿಂದ ದಿನಾಂತ್ಯದಲ್ಲಿ ರಿಕ್ತಹಸ್ತರಾಗುವಿರಿ. ಗೃಹಶಾಂತಿ ಪತ್ರಯುಗಳಿಂದಾಗಿ ಮನಸ್ಸಿಗೆ ಈ ಸತತ್ರ ಸುಖಶಾಂತಿಯಿಂದಿರದು. ದುರ್ಜನರ ಮೈತ್ರಿಯಿಂದಾಗಿ ಜನತೆಯ ನಿಂದೆಗೆ ಗುರಿಯಾಗುವಿರಿ, ವಾರಾಂತ್ಯದ 3 ದಿನಗಳು ಇದ್ದುದರಲ್ಲಿ ಉತ್ತಮ.

ಮೀನ — ಹಲವು ಸಮಯದಿಂದ ಕಷ್ಟವನ್ನನುಭವಿಸುತ್ತಿದ್ದ ನಿಮಗೆ ಇಂದು ಸುಖವನ್ನು ಕಾಣುವ ಸುಯೋಗವು ಪ್ರಾಪ್ತವಾಗಿರುವದು. ನಿಮ್ಮ ಪ್ರತಿಯೊಂದು ಕೃತಿಯೂ ಸುಖದಿಂದ ಏನೊಂದು ವಿಘ್ನವಿಘ್ನಗಳಿಲ್ಲದೆ ಕೊನೆಗೊಳ್ಳುವುದು. ಹಣದ ತಗಾದೆಯಿಂದ ಮುಕ್ತರಾಗಿ ಕೈಯಲ್ಲಿ ಸಾಕಷ್ಟು ಧನವನ್ನು ಸಂಗ್ರಹಿಸುವಿರಿ. ಕಫವಾತ ದೋಷದಿಂದ ಆರೋಗ್ಯಕ್ಕೆ ಧಕ್ಕೆಯುಂಟಾಗುವ ಸಂಭವವಿದೆ. ತಾ. 17, 18, 23 ಈ ದಿನಗಳು ಸರ್ವಸಿದ್ಧಿಪ್ರದಗಳಾಗಿವೆ.

ಋತುಸ್ರಾವ ನಿಂತಿತು

'ಕುಮಾರಿ' ವಟ್ಟಿಗಳನು ಉಪಯೋಗಿಸಿದರೆ ಪದಕಟ್ಟು ಋತುಸ್ರಾವವಾಗುವುದು, ಹಕೋಟಿಗೆ ಬರುವುದು, ಈ ಔಷಧ ಸೇವನೆಯಿಂದ ತೀವ್ರ ಗುಣಹೊಂದಬಹುದು, ಯಾವ ಬಾಧಕವೂ ಯಿಲ್ಲ. ಸಾವಿರಾರು ಮಂದಿಗೆ ಖಾತ್ರಿ ಗುಣವಾಗಿದೆ— ಬೆಲೆ; ರೂ. 3-; ಸ್ಪೆಶಲ್ ರೂ. 5- ಅಧಿಕಾಧಿಕ ಸ್ಪೆಶಲ್ ರೂ. 6-[ವಿ. ಪಿ ಖರ್ಚು ಪ್ರತ್ಯೇಕ.]

Mis P. DEVEE, F. DS. (N. J.)

Tollygunge CALCUTTA

ಸ್ಥಾನಿಕ ಏಜಂಟರು ಶರಾಕಂಪೆನಿ, ಮಂಗಳೂರು

Nambiar's

ARYA VAIDYA SALA

UDIPI

Ideal House for Ayurvedic Treatment.

T. N. Kelu Nambiar,
Vaidya

ಗೊನೋರಿಯಾ ಪರಮಾರೋಗ ಉಷ್ಣ ರೋಗಕ್ಕೆ ಔಷಧ

೭ ದಿವಸಗಳಲ್ಲಿ ಈ ರೋಗ ಗುಣ ಹೊಂದುವದು ಗ್ಯಾರಂಟೀ

ಶರೀರದಿಂದ ಕೀವು ಬರುತ್ತಿದ್ದರೆ, ಧೋತರಕ್ಕೆ ಹಳದೀ ಡಾಗು ಹತ್ತುತ್ತಿದ್ದರೆ. ಶರೀರದಿಂದ ಬಾವು, ಶರೀರದ ತೊಗಲು ಹಿಂದಕ್ಕೆ ಸರಿಯದಿದ್ದರೆ, ಶರೀರದ ಗುಹ್ಯ ಘಾಯವಾಗಿದ್ದರೆ.....ಚಟ್ಟೆ ಬಿದ್ದಿದ್ದರೆ, ಉಷ್ಣದಿಂದ ಜೇರು ಇಳಿದಿದ್ದರೆ, ಉರುಚು ಆಗಿದ್ದರೆ, ಮೂಲವ್ಯಾಧಿ, ಭಗೇಂದ್ರ, ಗಂಡುಮಾಲೆ, ಕೈಕಾಲು ಶೂಲೆ, ಅರ್ಧಾಂಗ ವಾಯು ನಡುನೋಯುವದು ಸ್ತ್ರೀಯರ ಬಿಳಿಕೆಂಪು ಸೆರಗು ಹೋಗುತ್ತಿದ್ದರೆ, ಹೊಲಿಕಟ್ಟು ಗರ್ಭಿಣಿಯಿಂದ ಗರ್ಭಕೋಶ ನಾಶಹೊಂದಿದ್ದರೆ, ಸರಿಯಾಗಿ ಭೇದಿಯಾಗದಿದ್ದರೆ, ಮೂತ್ರ ಉರಿಯುತ್ತಿದ್ದರೆ, ಈ ಎಲ್ಲಾ ಬೇನೆಗಳಿಗೆ ಈ ನಮ್ಮ ಔಷಧವು ಇರುವುದು. ಮೊದಲ ದಿವಸ ಬೆಳಿಗ್ಗೆ ೧ ಗುಂಜಿ ಪ್ರಮಾಣ ಔಷಧ ಅರ್ಧತೊಲೆ ತುಪ್ಪದಲ್ಲಿ ತಕ್ಕೊಳ್ಳಬೇಕು ಮೊದಲ ದಿವಸ ಮಾತ್ರವ ಮುಂಜಾನೆ ಸಂಜೆ ಎರಡು ಸಾರೆ ತಕ್ಕೊಳ್ಳಬೇಕು. ಮುಂದಿನ ದಿವಸ ಬೆಳಿಗ್ಗೆ ಒಂದೇ ಸಾರೆ ೭ ದಿವಸ ಸೇವಿಸಬೇಕು- ಈ ಔಷಧವನ್ನು ಬೇಸಿಗೆಯಲ್ಲಿ ತುಪ್ಪದಲ್ಲಿ, ಥಂಡಿ ಮಳೆಗಾಲದಲ್ಲಿ ಜೇನತುಪ್ಪದಲ್ಲಿ ತಕ್ಕೊಳ್ಳಬೇಕು. ಪಥ್ಯ: ಹಸೀಖಾರ, ಕೆಂಪುಮೆಣಸು, ಒಳ್ಳೆಣ್ಣೆ ಬಿಡಬೇಕು.

ಬಾಟ್ಲಿ ೧ಕ್ಕೆ ೫ರೂ. ಪೋಸ್ಟ ಚಾರ್ಜ ೮ ಆಣೆ

ಏಜೆಂಟರು:—ಗದಗ:—ಗದಗ ಫಾರ್ಮಸಿ, ಹುಬ್ಬಳ್ಳಿ:—ಹುಬ್ಬಳ್ಳಿ ಫಾರ್ಮಸಿ ಬಾಗಲಕೋಟೆ:-ಬಾಗಲಕೋಟೆ ಫಾರ್ಮಸಿ, ಧಾರವಾಡ:-ಧಾರವಾಡ ಫಾರ್ಮಸಿ, ದಾವಣಗೇರಿ: ದಾವಣಗೇರಿ ಪ್ರೆಸ್. ನಂಜುಡೇಶ್ವರ ಮಾರ್ಕೆಟ ದಾವಣಗೇರಿ.

ಪತ್ರವ್ಯವಹಾರ ಮಾಡತಕ್ಕ ಮಾಲಕರ ವಿಳಾಸ,

ರೇವಣಸಿದ್ದಪ್ಪ ಹಾಲಪ್ಪ ದಾವಣಗೇರಿ,

ಆಯುರ್ವೇದ ಔಷಧಾಲಯ, ಗದಗ-

"ಗೋಪಾಲ ಭೇಷಜಾಶ್ರಮ" ಮಂಗಳೂರು.

(ಸ್ಥಾಪನೆ 1910)

ಸ್ಥಾಪಕರು:-ಆಯುರ್ವೇದ ಭೂಷಣ ಎಂ ವಿ ಶಾಸ್ತ್ರೀ,

ಇವರ ನವೀನಾವಿಷ್ಕಾರ ಸೂತಿಕಾ ರಸಾಯನ

ಬಾಣಂತಿಯರ ಸಲುವಾಗಿಯೇ ದೇಶ ಮತ್ತು ಪ್ರಕೃತಿಯ ದೇಹಸ್ಥಿತಿಯನ್ನು ನಿರೀಕ್ಷಿಸಿ ತಯಾರಿಸಲ್ಪಟ್ಟು ಉಪಯೋಗವಾದ ಮಧುರದ್ರವ ರಸಾಯನ. ಅಲ್ಪ ಮೌಲ್ಯದಿಂದ ಬಡವರಿಗೂ, ಭಾಗ್ಯಶಾಲಿಗಳಿಗೂ ಸುಲಭವಾಗಿರುವುದು.



ಹೆಚ್ಚಿನ ಮಾಹಿತಿಗೆ—ಡಾ। ಎಂ. ಸಿ. ಶಾಸ್ತ್ರೀ, ಯಲ್. ಐ. ಕೊಡಿಯಾಲಬೈಲು ಪೋಸ್ಟು, (ಮಂಗಳೂರು)

ಸ್ಥಾನಿಕರು:—ಡಾ। ಬಿ. ಕೆ. ಶಿವರಾಮರಾವ್, ಕುಂಜಿಬೆಟ್ಟು, ಉಡುಪಿ.

EDITED, PRINTED & PUBLISHED BY K. H. SHETTY AT THE NAVAYUGA PRESS, UDIPI, S.INDIA

Regd No. M. 3613
LICENCE No. 31
L rs d to Post without Prepayment

24-5-1951

Founder Sri A B. Shetty,
Minister for Agriculture & Veterinary

Estd. 1921 ಸ್ಥಾಪನೆ

ಅಂತರಂಗ
ಪುಸ್ತಕ ಪತ್ರಿಕೆ
ಚಂದಾ ವಿವರ
ವರ್ಷಕ್ಕೆ ರೂ 4-8-0
6 ತಿಂಗಳಿಗೆ ರೂ 2-8-0
(ಮುಂಗಡ)
ಜಾಹೀರಾತಿಗೆ ಉತ್ತಮ
ಸಾಧನ
ಅಂತರಂಗ, ಉಡುಪಿ.

ನವಯುಗ
ಚಂದಾ ವಿವರ.
(ಮುಂಗಡ)
ವರ್ಷಕ್ಕೆ ರೂ 5-12-0
6 ತಿಂಗಳಿಗೆ „ 3-0-0
ಬಿಡಿಪ್ರತಿ „ 0-2-0
6 ತಿಂಗಳಿಗಿಂತ ಕಡಿಮೆ
ಚಂದಾ ಸ್ವೀಕರಿಸುವುದಿಲ್ಲ
ನವಯುಗ, ಉಡುಪಿ

ವರ್ಷ ೩೧ | NAVAYUGA WEEKLY | Post Box No 22 | UDIPI. | Vol 31
ವಾರ ೩೭ | No 37

ನಮ್ಮ ಕಲ್ಪನೆಗಳು

ಕಲ್ಪನೆಯಲ್ಲಿಯೇ ತುಯ್ಯುವ ಭಾವುಕರು ನಾವಾಗಿದ್ದೇವೆ. ನಮ್ಮ ಕಲ್ಪನೆಗಳು ಜೀವನಕ್ಕೆ ಹೊಂದಿಕೆಯಾಗದಿರುವಾಗ–ಕಾರ್ಯಗತವಾಗಿ ಬರದಿರುವಾಗ–ಕಲ್ಪಿಸಿಕೊಂಡಾದರೂ ಸುಖಿಸೋಣ ಎನ್ನುವವರೂ ಇದ್ದಾರೆ. ಜೀವನ ಬೇರೆ– ಕಲ್ಪನೆ ಬೇರೆ– ಎಂದು ತಿಳಿಯದೆ ಕಲ್ಪನೆಯನ್ನು ಜೀವನದಲ್ಲಿ ಯಥಾರ್ಥವಾಗಿ ತಿಳಿದುಕೊಂಡು ನಿರಾಶರಾಗುವವರೂ ಇದ್ದಾರೆ.

...ಯಿಂದ ನಮಗೆ ಕಲ್ಪನೆಗಳೇ

ಹೆಚ್ಚಾಗಿ ನಡೆದಿದೆ. ಸ್ವಾತಂತ್ರ್ಯ ಸಿಕ್ಕ ಈ ನಾಲ್ಕು ವರ್ಷಗಳಲ್ಲಿ ಬ್ಲ್ಯಾಕ್‌ಮಾರ್ಕೆಟ್ ಮಾಡಿಯೋ–ಲಂಚ ತೆಗೆದುಕೊಂಡ ಅಪರಾಧಕ್ಕಾಗಿಯೋ– ಗಲ್ಲಿಗೇರಿಸಲ್ಪಟ್ಟ ದಾಖಲೆಗಳಿಲ್ಲ! ಲಾರ್ಡ್ ವೇವೆಲ್ಲರು ವೈಸರಾಯಿಯಾಗಿದ್ದಾಗ ಬಂಗಾಲದಲ್ಲಿ ಬರಗಾಲದಿಂದ ಜನ ಸಾಯುತ್ತಿದ್ದುದನ್ನು ಕಂಡು

ಕೊರತೆಯನ್ನು ನೀಗಿಸುವಲ್ಲಿ ಖಾದಿಯ ವ್ಯವಸಾಯ ಸಹಕಾರಿಯಾಗುತ್ತಿತ್ತು. ಗಾಂಧೀಜೀಯ ಕಲ್ಪನೆಯಂತೆ ಅದು ವೃದ್ಧಿಗೊಳ್ಳುತ್ತಿದ್ದರೆ ಎಲ್ಲ ಜನವೂ ಹೊಟ್ಟೆಯಿಲ್ಲದ ಹೀನ ಸಂಸ್ಥಿತಿಗೆ ತುತ್ತಾಗುವ ಪ್ರಸಂಗ ಬರುತ್ತಿರಲಿಲ್ಲ. ಜನತೆಯೂ ಸರಕಾರವೂ ... ಅಲಕ್ಷಿಸಿವೆ.

ದ ಮೇಲೆ ಸರಕಾರದ ಮೇಲಾಗುವ ಟೀಕೆ ನಿಂತೀತೆಂದು ಕಲ್ಪಿಸಿದೆವು. ಸರಕಾರದ ವಿರುದ್ಧ ಬಂಡು ಹೂಡುವ ಪ್ರಸಂಗಬಂದಿಲ್ಲಾರದೆಂದು ಭಾವಿಸಿದ್ದೆವು, ಆದರೆ ಈಗ ದೇಶದಲ್ಲಿ ಅದರಲ್ಲೂ ಉಚ್ಚ ಕಾಂಗ್ರೆಸ್ಸಿಗರಲ್ಲೇ ಸಿಡಿದು ಬೇರಾಗುವ–ಕಾಂಗ್ರೆಸ್ಸು ಸರಕಾರಕ್ಕೆ ವಿರುದ್ಧ ಪಕ್ಷವನ್ನು ನಿರ್ಮಿಸುವ–ಪರಿಸ್ಥಿತಿಯನ್ನು ನೋಡುವಾಗ ನಮ್ಮ ಕಲ್ಪನೆಗಳೆಲ್ಲ ಗಗನ ಕುಸುಮಗಳೆಂದು ಭಾಸವಾಗುವುದಿಲ್ಲವೇ?

ಬ್ರಿಟಿಷರ ಕಾಲದಲ್ಲಿ ನಮಗೆ ಮಾತಿನ ಸ್ವಾತಂತ್ರ್ಯವಿಲ್ಲ; ಪತ್ರಿಕಾ ಸ್ವಾತಂತ್ರ್ಯ

ವು ಇಲ್ಲದೇ... ಎಂದು ಭಾವಿಸಿದ್ದೆವು. ಸ್ವಾತಂತ್ರ್ಯಕ್ಕಾಗಿ ಅವಿರತ ಹೋರಾಟ ನಡೆಸಿದೆವು. ನಮ್ಮ ಬಡತನಕ್ಕೆ–ಅಸಂತೃಪ್ತಿಗೆ–ಬ್ರಿಟಿಷರ ಆಡಳಿತವೇ ಕಾರಣವೆಂದು ನಮ್ಮ ಕಲ್ಪನೆಯಾಗಿತ್ತು. ಅವರನ್ನು ಸಮುದ್ರದಾಚೆಗೆ ಕಳುಹಿಸಿ ದೇಶವನ್ನು ನಾವು ಆಳತೊಡಗಿದಂದಲೇ ಈ ಕಂಟಕ ಪರಿಹಾರವಾಗಿ ನಮಗೆ ಮುಕ್ತಿಯಾದೀತೆಂದು ಬಯಸಿದೆವು. ಅಂತಲೇ ಗಾಂಧೀಜಿಯ ಶಿಷ್ಯಾನುಯಾಯಿಗಳಾಗಿ ಸ್ವಾತಂತ್ರ್ಯ ಸಂಗ್ರಾಮಕ್ಕೆ ಧುಮುಕಿದೆವು. ಸ್ವಾತಂತ್ರ್ಯವನ್ನೂ ಗಳಿಸಿದೆವು. ದೇಶ ಸಂಪಾದಿತದಿಂದ ಪೂರ್ಣವಾಗಿ ನಮ್ಮ ಅಧೀನಕ್ಕೆ ಬಂದಿತು. ಸ್ವಾತಂತ್ರ್ಯ ಸಿಗುವ ಮುನ್ನ ಗಾಂಧೀಜಿ ಅಂದಿದ್ದರು "ನೀವು ಹೊರಟುಹೋಗಿ ನಾವು ಸೌಹಾರ್ದದಿಂದಿರುತ್ತೇವೆ" ಎಂದು ಆದರೆ ಸ್ವಾತಂತ್ರ್ಯದ ಬೆನ್ನಿಗೆ ಸೋದರ ಹತ್ಯಾಕಾಂಡವಾಗಿ ಹಾಲ್ಜೇನು ಹರಿಯುವ ಬದಲಾಗಿ ರಕ್ತದ ಕಾಲುವೆ ಹರಿಯಿತು. ಆ ಜಾತೀಯ ವಿಷವೃಕ್ಷ ಇನ್ನೂ ಬೆಳೆಯುತ್ತಲಿದೆ. ಗಾಂಧೀಜಿಯ ಕಲ್ಪನೆ ಕೂಡಾ ಯಥಾರ್ಥವಾಗದೆ ಹೋಯಿತು. "ನಾನು ಅಧಿಕಾರಿಯಾಗುತ್ತಿದ್ದರೆ ಲಂಚಕೋರರನ್ನೂ – ಬ್ಲ್ಯಾಕ್ ಮಾರ್ಕೆಟ್ ಮಾಡುವವರನ್ನೂ ಗಲ್ಲಿಗೇರಿಸುತ್ತಿದ್ದೆ" ಎಂದು ನೆಹ್ರೂರವರು ವೀರಘೋಷವಮಾಡಿದ್ದರು. ಈಗ ನೆಹ್ರೂ ಕೈಯಲ್ಲಿ ತನ್ನ ಅಧಿಕಾರ ಬಂದಿದೆ. ಲಂಚಗುಳಿತನ–ಕಳ್ಳಸಂತೆ– ಅದಕ್ಕಿಂತಲೂ ಹಾಲ್ಮಡಟ್ಟು

ಡಿಗೆ 10 30 ಹಾಳಿಯಾರೆಂದು ನಾವು ಭಾವಿಸಿದ್ದೇವೆ? ಸ್ವತಂತ್ರ ಭಾರತದಲ್ಲಿ ನಮ್ಮ ಜನವನ್ನು ಸುಲಿಯುವ ದೇಶೋದ್ಧಾರಕ ಸೋಗಿನಲ್ಲಿದೆ ಘಾತುಕ ಕಾರ್ಯವನ್ನೂ ಈ ಗಾಂಧೀಭಕ್ತರು ಮಾಡಿಯಾರೆಂಬ ಕಲ್ಪನೆ ನಮಗಿತ್ತೇ? ಮುಂದಿನ ದಿನಗಳ ಕುರಿತು ಭವ್ಯಕಲ್ಪನೆಯನ್ನು ಕಟ್ಟಿಕೊಂಡಿದ್ದ ಜನ ವರ್ಷವರ್ಷಕ್ಕೆ ಅವೇ ಕಷ್ಟವನ್ನು ಎದುರಿಸುತ್ತಲಿದ್ದಾರೆ. ಆಹಾರದ ಕೊರತೆ ಇಂದು ನಿನ್ನೆಯದಲ್ಲ, ಸ್ವಾತಂತ್ರ್ಯ ಪ್ರಾಪ್ತಿಯ ಕಾಲದಿಂದಲೂ ದೈನಂದಿನದ ಚಿಂತೆಯಾಗಿದೆ. ಹೊಟ್ಟೆಯ

ಇನ್ನೊಂದು ಸರಕಾರಬರಲೆಂದು ಹಾರೈಸುತ್ತಾರೆ.

1912ರ ಸ್ವಾತಂತ್ರ್ಯ ಚಳುವಳಿಯ ಕಾಲದಲ್ಲಿ ಕಾಂಗ್ರೆಸ್ಸೊಂದೇ ನಮ್ಮ ಇಷ್ಟಾರ್ಥವನ್ನು ಪೂರೈಸಕೊಡಬಲ್ಲ ರಾಜಕೀಯ ಸಂಸ್ಥೆಯೆಂದು ಜನತೆಯ ದೃಢನಂಬಿಕೆಯಾಗಿತ್ತು. ಉಳಿದ ಪಕ್ಷಗಳು ತಲೆಯೆತ್ತುವ ಸಂಭವವಿರಲಿಲ್ಲ, ಬ್ರಿಟಿಷರನ್ನು ಓಡಿಸುವಲ್ಲಿ ಕಾಂಗ್ರೆಸ್ಸೊಂದೇ ಸಮರ್ಥವಾಗಿತ್ತು– ಬ್ರಿಟಿಷರು ಹೋದರು ಕಾಂಗ್ರೆಸ್ಸು ಬಂದಿತು. ಮತ್ತೆ ನಮ್ಮದೇ ಸರಕಾರ ಬಂ

ಯುತ್ತಿದೆ. ... ಜವನ್ನು ನೀರೆರೆದು ಬೆಳೆಸುವ ಯುಕ್ತಿವನ್ನು ಸಾರ್ವಜನಿಕಾಭಿಪ್ರಾಯವನ್ನು ಕಡೆಗಣಿಸುವ ಕಾರ್ಯವನ್ನು–ಪರದೇಶದವರು ಮಾಡುತ್ತಿಲ್ಲ; ನಮ್ಮ ಕಾಂಗ್ರೆಸು ಸರಕಾರ ಮಾಡುತ್ತಲಿದೆ. ಅದಕ್ಕೂ ನಮ್ಮ ನೆಚ್ಚಿನ ನಾಯಕ ನೆಹ್ರೂರವರೇ ಮುಂದಾಳುವೆಂದರೆ ನಮಗಚ್ಚರಿಯಾಗುವುದಿಲ್ಲವೇ? ಜನತೆಯ ಇಚ್ಛೆಗೆ ವಿರುದ್ಧವಾದ ಧೋರಣೆ–ಸಾರ್ವಜನಿಕ ಹಕ್ಕನ್ನು ಮುರಿಯುವ ಪ್ರಮಾದಗಳ ಕಾಂಗ್ರೆಸ್ಸಿನಿಂದಾದೀತೆನ್ನುವ ನಮ್ಮ ಕಲ್ಪನೆಯಿದ್ದಿತ್ತೇ?

ಹೀಗೆಯೇ ನಮ್ಮ ಯೋಜನೆ ಕಲ್ಪನೆಗಳೆಲ್ಲ ಗಾಳಿಯಲ್ಲಿ ತೂರಿಕೊಳ್ಳುತ್ತಿವೆ. ನಮ್ಮ ಎಲ್ಲ ಆದರ್ಶಗಳೂ–ರಾಜ್ಯಸೂತ್ರವೂ ಕಲ್ಪನಾ ರಾಜ್ಯದಲ್ಲೇ ನೆಲೆಸಿವೆ. ಅವು ಯಥಾರ್ಥವಾಗುವವರೆಗೆ ನಮ್ಮ ಬದುಕು ಸುಧಾರಿಸೀತೆಂಬ ಭಾವನೆಯು ಶುದ್ಧ ತಪ್ಪು ಕಲ್ಪನೆ!

ಪ್ರಧಾನ ಕಾರ್ಯಾಲಯ: ಉಡುಪಿ. ಸ್ಥಾಪನೆ: ೧೯೩೫

ದಿ ಕೆನರಾ ಮ್ಯೂಚುವಲ್
ಎಶ್ಯೂರೆನ್ಸ್ ಕಂಪೆನಿ, ಲಿಮಿಟೆಡ್,
ಇದುವೇ
ಪಾಲಿಸಿದಾರರ ನಂಬಿಕೆ ಹೆಚ್ಚಿಸುವ ಹೆಸರು
ಅಲ್ಲದೆ ಸ್ಥಾಪಿತವಾದಂದಿನಿಂದಲೂ
ಲಾಭ (ಬೋನಸ್) ಹಂಚಿದ ಕಂಪೆನಿ.

The Canara Mutual Assurance Co, Ltd.
H. O. UDIPI. (SOUTH INDIA) ESTD. 1935.

ಸಹಕಾರಿ ಸಂಘಗಳಿಗೆ— —
ಮುನ್ಸಿಫ್ ಕೋರ್ಟುಗಳಿಗೆ—
ವರ್ತಕರಿಗೆ—ಶಾಲೆಗಳಿಗೆ-
ಬೇಕಾಗುವ ರಿಜಿಸ್ಟರುಗಳು.
ರಶೀದಿ ಪುಸ್ತಕಗಳು,
ಫಾರ್ಮುಗಳು, ಎಕೌಂಟ್
ಪುಸ್ತಕಗಳು ದೊರೆಯುತ್ತವೆ.
ನವಯುಗ ಪ್ರೆಸ್ ಉಡುಪಿ.

ದಿನದ ಶೂಟಿಂಗ್ ಕೆಲಸವೆಲ್ಲ ಮುಗಿದ ನಂತರ ಈ ಎರಡೂ ಪಟಲಗಳನ್ನು ಪೆಟ್ಟಿಗೆಯಲ್ಲಿ ಭದ್ರವಾಗಿರಿಸಿ ಚಿತ್ರಪ್ರಯೋಗಶಾಲೆಗೆ ಕಳಿಸುವರು. ಅಲ್ಲಿ ಚಿತ್ರಗಳ ಪರಿವರ್ತನ ಕಾರ್ಯ ನಡೆಯುವುದು. ಮುಂದೆ ಧ್ವನಿಪಟಲ ಹಾಗೂ ಚಿತ್ರಪಟಲ ಎರಡನ್ನೂ ಸುಯೋಗ್ಯರೀತಿಯಲ್ಲಿ ಒಂದುಗೂಡಿಸಿ, ಇದ: ಇನ್ನೊಂದು ಚಿತ್ರ ಅಂಕಿತಮಾಡುವರು. ಇದನ್ನು "ಯಥಾಪ್ರತಿ" ಎನ್ನುತ್ತೇವೆ ಈ ಹೊಸ ಚಿತ್ರಪಟಲವನ್ನು ಚಿತ್ರಸಂಪಾದಕನು ದೃಶ್ಯಗಳ ಸಂಯೋಜನೆಗೊಪ್ಪುವ ರೀತಿಯಲ್ಲಿ ಅಲ್ಲಲ್ಲಿ ತುಂಡುಮಾಡಿ ಒಟ್ಟಿಗೆ ಜೋಡಿಸುವನು ಮತ್ತು ಒಂದು ಪರದೆಯಮೇಲೆ ಅದನ್ನು ಪ್ರದರ್ಶಿಸಿ, ನಿರ್ದೇಶಕ, ಧ್ವನಿ ನಿರ್ದೇಶಕ ಇತ್ಯಾದಿ ಸಂಬಂಧಿಸಿದ ಜನರಿಗೆ ತೋರಿಸುವನು. ಈ ಏರ್ಪಾಡಿನಿಂದಾಗಿ, ತೆಗೆದ ಚಿತ್ರ ಹಾಳು ಆಂದರೆ ಮಗುದೊಮ್ಮೆ ಆದೇ ದೃಶ್ಯದ ಶೂಟಿಂಗು ನಡೆಸಲೂ ಅನುಕೂಲ, ಅಲ್ಲದೆ ಹತ್ತಾರು ದಿನಗಳ ಹಿಂದೆ ತೆಗೆದ ದೃಶ್ಯಗಳನ್ನು ಅಗತ್ಯ ಬಂದಾಗ, ಇಂದೇ ನೋಡಿ ಬೇಕಾದಂತೆ ಮುಂದರಿಯಲೂ ಆಗುತ್ತದೆ. ಚಿತ್ರನಿರ್ಮಾಣದಲ್ಲಿ ಚಿತ್ರಸಂಪಾದನ ಕೈವಾಡವೇ ಕೊನೆಯ ಮಹತ್ವಪೂರ್ಣ ಕಾರ್ಯ.

ಇದಿಷ್ಟು ದಿನದ ಯಾಂತ್ರಿಕ ಕೆಲಸ. ನಿರ್ದೇಶಕನು ದೃಶ್ಯಗಳನ್ನು ನಾವು ಕಾಣುವ ಕ್ರಮಾನುಸಾರದಲ್ಲಿಯೇ ಶೂಟಿಂಗು ಮಾಡುವುದಿಲ್ಲ. ತನ್ನ ಅನುಕೂಲತೆ ಹಾಗೂ ಸೆಟ್ಟಿಂಗುಗಳ ಉಪಯೋಗಿತ್ವಕ್ಕೆ ಸರಿಯಾಗಿ ಯಾವ ಕ್ರಮ ನಿಯಮವೂ ಇಲ್ಲದೆ ಒಟ್ಟಾರೆ ಚಿತ್ರತೆಗೆಯುತ್ತಾನೆ. ಕೊನೆಗೆ ಅವೆಲ್ಲವನ್ನು ಕತೆಗೂ ದೃಶ್ಯ ಕ್ರಮದಂತೆ ಜೋಡಿಸಿ ಕತೆಯ ಓಟ ಕೆಡದಂತೆ ನೋಡುವನು.

ಹೀಗೆ ನಾಲ್ಕು ತಿಂಗಳಿಂದ ಒಂದು ವರ್ಷದ ವರೆಗೆ ಅವಿಶ್ರಾಂತವಾಗಿ ದುಡಿದ ಬಳಿಕ ಒಂದು ಚಿತ್ರದ ನಿರ್ಮಾಣವಾಗುವುದು. ಈಗ ಚಿತ್ರವನ್ನು ಸೆನ್ಸಾರ್ ಬೋರ್ಡಿನ ಮಹನೀಯರಿಗೆ ಪ್ರದರ್ಶಿಸಲಾಗುವುದು. ಅವರು ಅದನ್ನು ಪರಿಶೀಲಿಸಿ, ಆಗತ್ಯಕಂಡ ಬದಲಾವಣೆಗಳನ್ನು ಸೂಚಿಸುವರು. ಚಿತ್ರದ ನಡುವಣ ದೃಶ್ಯಗಳನ್ನು ತೆಗೆದುಹಾಕುವುದರಿಂದ ಕತೆಯ ಓಟಕ್ಕೆ

ರೂಪರಂಗದ ಕಲಾ ಕೌತುಕ

ಚಿತ್ರ ನಿರ್ಮಾಣದ ವಿಹಂಗಮ ನೋಟ.

[ಕಳೆದ ಸಂಚಿಕೆಯಿಂದ]

ಭಂಗಬರುವಂತಿದ್ದರೆ, ಬೇರೆಯೇ ಅನುಕೂಲ ದೃಶ್ಯಗಳನ್ನು ಹೊಸತಾಗಿ ತೆಗೆದು ಚಿತ್ರವನ್ನು ಸರಿಗೊಳಿಸಬೇಕಾಗುತ್ತದೆ. ಅಂತೂ ಒಮ್ಮೆ ಬೋರ್ಡಿನ ಅನುಮತಿ ಪತ್ರದೊರೆಯಿತೆಂದರೆ, ಆಗ ನಿರ್ಮಾಪಕನು ಚಿತ್ರದ ಪ್ರದರ್ಶನಾಧಿಕಾರವನ್ನು ಇತರರಿಗೆ ಮಾರಿ, ಹಾಕಿದ ದುಡ್ಡಿನ ಒಂದೂವರೆ ಪಾಲು ಪಡೆಯಲು ನೋಡುತ್ತಾನೆ.

೬

ಸಾಮಾನ್ಯ ಅಭಿನಯಕ್ಕಿಂತಲೂ, ಅದ್ಭುತ, ದೇವಮಾಂತ್ರಿಕ ದೃಶ್ಯಗಳ ಅಭಿನಯದಲ್ಲಿ ಕೃತಕತೆ ಮತ್ತು ಮೋಸ ಹೆಚ್ಚು. ಇವು ಶೀರವೇಗದ ಪ್ರಸಂಗಗಳು ಹೌದು! ಭಯಂಕರ ಬಿರುಗಾಳಿಬೀಸಿ, ಮರಗಳು ಮುರಿದು ಬೀಳುವುದು, ಎಲೆಗಳು ಉದುರುವುದು, ಸಿಡಿಲು-ಮಿಂಚು, ಗುಡುಗು ಇವೆಲ್ಲವನ್ನೂ ತೀರ ಕೃತಕ ರೀತಿಯಿಂದ ಸೃಷ್ಟಿಸುತ್ತಾರೆ ವಿದ್ಯುತ್ ಬೀಸಣಿಗೆಯಿಂದ ಬಲವಾದ ಗಾಳಿ ಎಬ್ಬಿಸಿ, ಇದೇ ಸೆಟ್ಟಿಂಗು ಅಲುಗಾಡಿಸುತ್ತಾರೆ; ಕಡಿದ ತಂದ ಮರಗಳನ್ನು ಬೀಳಿಸಿ, ಅದರ ಚಿತ್ರ ತೆಗೆಯುತ್ತಾರೆ. ಸೆಟ್ಟಿಂಗಿನ ಹೊರಗಡೆಯಿಂದ ಎಲೆಗಳನ್ನು ಬಿಸಾಡುತ್ತಾರೆ. ಮೇಲಿಂದ ನೀರು ಚಿಮುಕಿಸಿ, ಮಳೆಬರಿಸುತ್ತಾರೆ. ವಿದ್ಯುತ್ತಿನ ವಿಶೇಷ ಬಲ್ಬೊಂದನ್ನು ಒತ್ತಿ ಮಿಂಚು ಮಿನುಗಿಸುತ್ತಾರೆ ಹಾಗೆಯೇ ನದಿಯ ಹರಿವು, ಲಕೋಟೆ ಒಡೆದು ಪತ್ರ ಓದುವಾಗಿನ ಸದ್ದು, ಇನ್ನೂ ಇಂತಹ ಹಲವು ಧ್ವನಿಗಳಿಗೆ ಕೃತಕ ಸಾಧನಗಳೇ ಗತಿ

"ಅಪೂರ್ವ ಸಹೋದರರು." ಚಿತ್ರದಲ್ಲಿ ಎಂ. ಕೆ. ರಾಧಾನ ಜೋಡು ಪಾತ್ರಾಭಿನಯವೂ ಒಂದು ನೋಟ. ಬಿಂಬ ಗ್ರಹಣ ಕಾಲದಲ್ಲಿ ಮಸೂರದ ಒಂದು ಬದಿಯನ್ನು ಮುಚ್ಚಿ, ಮೊದಲಿಗೆ ಒಂದು ಪಾತ್ರದ ಚಿತ್ರ ತೆಗೆಯುತ್ತಾರೆ. ಮರುಗಳಿಗೆ ಅದೇ ನಟನನ್ನು ಇನ್ನೊಂದು ಬದಿಗೆ ನಿಲ್ಲಿಸಿ, ಇನ್ನೊಬ್ಬ ಸಹೋದರನ ನಟನೆ ಮಾಡಿಸುತ್ತಾರೆ ಈಗ ಮಸೂರದ ಇನ್ನೊಂದು ಬದಿ ಮುಚ್ಚಿರುತ್ತದೆ; ಮೊದಲು ಮುಚ್ಚಿದ್ದ ಬದಿ ತೆರೆದಿರುತ್ತದೆ. ಹೀಗೆ ಇದೇ ಪಟಲದಲ್ಲಿ ಚಿತ್ರ ಅಂಕಿತವಾಗಿ ಪ್ರದರ್ಶಿಸುವಾಗ ಒಂದೇ ಸಲ ಒಬ್ಬನೇ ಎರಡು ಪಾತ್ರವಾಗಿ ಅಭಿನಯಿಸುವುದು ನೋಡಿ ನಾವು ನಾಲಗೆ ಕಚ್ಚಿಕೊಳ್ಳುತ್ತೇವೆ. ಇಂತಹ ಸಂದರ್ಭಗಳಲ್ಲಿ ನಡುನಡುವೆ ನಕಲಿ ಪಾತ್ರಗಳಿಂದ ಕೆಲಸ ಸಾಗಿಸುವುದೂ ಸಾಮಾನ್ಯವಾಗಿದೆ. ಮುಖ್ಯ ನಟನ ವೇಷಭೂಷಣಗಳನ್ನೇ ಒಬ್ಬ ಸಾಧಾರಣ ಮನುಷ್ಯನಿಗೆ ತೊಡಿಸಿ ಅವನಿಂದ ಪಾತ್ರಾಭಿನಯ ಮಾಡಿಸುತ್ತಾರೆ. ಮುಖ್ಯವಾಗಿ ಹಿಂಬದಿಯ ಚಿತ್ರ ತೆಗೆವಾಗ (ಬೆನ್ನು ಮಾತ್ರ ತೋರುವಂತೆ) ಹಾಗೂ ದೂರದಿಂದ ದೀರ್ಘಚಿತ್ರ ತೆಗೆವಾಗ ಈ ಉಪಾಯ ಫಲಿಸುತ್ತದೆ. "ಕಲ್‌ಚಲ್" ಚಿತ್ರದಲ್ಲಿ ಬೆಂಕಿಯ ಗೋಳ ತೆಗೆದುಕೊಂಡು ಹಾರುವ, ಬೆಂಕಿ ಇಡುವ ದೃಶ್ಯದಲ್ಲಿ ದಿಲೀಪ ಕುಮಾರನ ಪಾತ್ರವನ್ನು ಇಂಥ ಒಬ್ಬ ನಕಲಿ ಮಹಾಶಯನಿಗೆ ಒಪ್ಪಿಸಿದ್ದರು. ಆದರೆ ದೃಶ್ಯದ ನಿಕಟ ದರ್ಶನ ಮಾಡಿಸುವಾಗ ದಿಲೀಪ ಕುಮಾರನ ಬಿಂಬವನ್ನೇ ತೋರಿಸಿ, ಈ ಉಪಾಯದ ಹಿಂದಿನ ಗುಟ್ಟನ್ನು ಮುಚ್ಚಿರುತ್ತಾರೆ. ತೀರವೇಗದ ಕುದುರೆಯೋಟ, ಈಜಾಟ, ಹಾರಾಟ, ಮೇಲಿನಿಂದ ಕೆಳಗೆ ಬೀಳುವುದು, ಇಲ್ಲೆಲ್ಲ ನಕಲಿ ಪಾತ್ರಗಳಿಗೇ ಪ್ರಾಶಸ್ತ್ಯ; ಹೊರತು ನಮ್ಮ ಯಾವ ಶ್ರೇಷ್ಠ ನಟನೂ ಇದರಲ್ಲಿ ಭಾಗವಹಿಸುವುದಿಲ್ಲ.

ಆದರ್ಶ ರೀತಿಯಲ್ಲಿ ಪ್ರಕಟಿಸಲ್ಪಟ್ಟ ಅಖಿಲ ಕರ್ನಾಟಕದ ಪ್ರಾತಿನಿಧಿಕ ಕಥಾಸಂಕಲನವೆಂದು ಪ್ರಶಂಸಿಸಲ್ಪಟ್ಟ

ಮಧುಪಾನ

ಕತೆಗಳೊಂದಿಗೆ ಕತೆಗಾರರ ಮತ್ತು ಕತೆಗಾರ್ತಿಯರ ಪರಿಚಯ ಪಡಿಯಚ್ಚುಗಳಿವೆ.

ಅಂತರಂಗ, ಬಹಿರಂಗ ಸುಂದರವಾಗಿ ಪ್ರಕಟಿಸಲ್ಪಟ್ಟ

25 ಕತೆಗಳ ಅತ್ಯಪೂರ್ವ ಸಂಗ್ರಹ

ಬಿಳಿ-ದಪ್ಪ ಕಾಗದ! 230 ಪುಟಗಳು! ಬೆಲೆ ರೂ. 3-0-0

ವಿಳಾಸ. ಕಿರಿಯರ ಪ್ರಪಂಚ, ಉಡುಪಿ.

ವಿಕ್ರಯಾಧಿಕಾರಿಗಳು: ನವಭಾರತ ಪುಸ್ತಕ ಭಂಡಾರ, ಉಡುಪಿ.

ಮುಲ್ಕಿ ಬೇಂಕ್,
ಲಿಮಿಟೆಡ್, ಮುಲ್ಕಿ.

1929ರಲ್ಲಿ ಸ್ಥಾಪಿತವಾಗಿ 21 ವರುಷಗಳಿಂದ ಊರ ಜನರ ಹಿತಕ್ಕಾಗಿ ಡಿಪೋಸಿಟ್ ಹಣಕ್ಕೆ ನ್ಯಾಯವಾದ ಬಡ್ಡಿಯಿಂದಲೂ, ಸಾಲದ ಹಣಕ್ಕೆ ಅತೀ ಕಡಿಮೆ ದರದ ಬಡ್ಡಿಯಿಂದಲೂ ಜನ ಹಿತಸಾಧನೆಯನ್ನು ಮಾಡುತ್ತಿರುವುದು

The Moolky Bank Ltd.,
Moolky, S K

ನಿರಾಶೆಗೆ ಒಳಗಾಗದಿರಿ!

ಉಬ್ಬಸ, ಕಫ, ಶ್ವಾಸಕೋಶದಿಂದ
ನೀವು ವಿಪರೀತ ಕಷ್ಟಪಡುವಿರಾದರೆ, ಹಲವಾರು
ಅಮೌಲ್ಯ ಔಷಧಿಗಳ ಸೇವನೆಯಿಂದ ನಿಮಗೆ ಗುಣವಾಗದಿರುವುದಾದರೆ.

ಆಶಾಭಂಗಕ್ಕೊಳಗಾಗದಿರಿ!

ಅಲ್ಪವೆಚ್ಚ-ಅಲ್ಪಾವಧಿಯೊಳಗೆ ನಿಮ್ಮಬಾಧೆಯನ್ನು ಶಮನಮಾಡುವ

ಖಾತ್ರಿ ಔಷಧಿಯು ನಮ್ಮಲ್ಲಿರುವುದು.

ಒಂದೇ ಒಂದು ಸೀಸೆಯನ್ನು ಕೊಂಡು, ಗುಣಪರೀಕ್ಷೆಮಾಡಿರಿ!
ಈ ಹೊಸ ಮದ್ದಿನಿಂದ ನಿಮಗೆ ಅದ್ಭುತ ಗುಣತೋರುವುದೆಂಬುದು ಖಂಡಿತ.

ಕೂಡಲೆ ಬರೆಯಿರಿ:—

M. Mendonca,
2nd Floor, Ruby Mansion;
Parsee Bazar Street, Fort,-
Bombay.

ಎಂ. ಮೆಂಡೋನ್ಸ,
ಎರಡನೆ ಮಾಳಿಗೆ, ರುಬಿ ಮೆನ್ಶನ್
ಪಾರ್ಸಿಬಝಾರ್ ಸ್ಟ್ರೀಟ್, ಫೋರ್ಟ್,
ಬೊಂಬಾಯಿ

THE BOMBAY LIFE ASSURANCE COMPANY, LTD
ದಿ ಬೊಂಬೆ ಲ್ಯಾಫ್ ಎಶ್ಯೂರೆನ್ಸ್ ಕೋ., ಲಿಮಿಟೆಡ್

(ಸ್ಥಾಪನೆ: 1908)

ಅತ್ಯಲ್ಪ ಖರ್ಚಿನಿಂದ ಅತ್ಯಧಿಕ ಲಾಭವನ್ನೀಯುವ
ಅಗ್ರಗಣ್ಯ ವಿಮಾ ಸಂಸ್ಥೆಗಳಲ್ಲೊಂದು

ಪ್ರಧಾನ ಏಜಂಟರು:

ಕೊಚ್ಚಿಕಾರ್ ಬ್ರದರ್ಸ್, ಲಿಮಿಟೆಡ್ ಉಡುಪಿ.

ಇವರ ಶಾಖಾ ಕಚೇರಿಗಳು:-

ಬೊಂಬಾಯಿ, ಮದ್ರಾಸು, ಬೆಂಗಳೂರು, ಕೊಯಮುತ್ತೂರು, ತ್ರಿವೆಂಡ್ರಮ್,
ಕಲ್ಲಿಕೋಟೆ ಮತ್ತು ಮಂಗಳೂರು.

ಕಳೆದ ಮುವತ್ತೆಂಟು ವರುಷಗಳಿಂದ ವಿಮಾ ಕ್ಷೇತ್ರದಲ್ಲಿ ಸತತ ದುಡಿದವರಾದ
ನಾವು ಜನಾಂಗದ ಶ್ರೇಯೋಭಿವೃದ್ಧಿಯ ಕಡೆಗೆ ನಮ್ಮ ನಮ್ರ ಸೇವೆಯನ್ನು
ಸಲ್ಲಿಸಿರುತ್ತೇವೆಂಬುದೇ ನಮ್ಮ ಹೆಗ್ಗಳಿಕೆಯ ಮಾತು.

ವಿಮಾ ಮಾಡಲಿಕ್ಕಾಗಲೀ, ಪ್ರಾತಿನಿಧ್ಯ ಪಡೆಯಲಿಕ್ಕಾಗಲೀ
ದಯಮಾಡಿ ನಮಗಾಗಲೀ ಅಥವಾ ನಮ್ಮ ಶಾಖೆಗಳಿಗಾಗಲೀ ಬರೆಯಿರಿ.

ಮೋಟರು, ರೈಲು, ಅಥವಾ ಜೋಡಿ ಪ್ರಯಾಣದ ದೃಶ್ಯಗಳನ್ನು ತೆಗೆಯುವುದು ಇನ್ನೊಂದು ಮೋಸಕೌಶಲ. ಮೋಟರಿನ ಲ್ಲಿಯೋ, ರೈಲಿನಲ್ಲಿಯೋ, ನಾವೆಯಲ್ಲಿಯೋ ಕುಳಿತು ನೋಡಲೇ ಬೇಕಾದ ಪ್ರಾಕೃತಿಕ ದೃಶ್ಯಗಳ ಚಿತ್ರವನ್ನು ಸ್ಟುಡಿಯೋದಲ್ಲಿ ಒದಿ ಯಲ್ಲಿ ನಿಲ್ಲಿಸಿದ ಪರದೆಯ ಮೇಲೆ ಒಡ ತ್ತಾರೆ ಪರದೆಯ ಎದುರಿಗೊಂದು ರೈಲು ಡಬ್ಬಿಯ ಸೆಟ್ಟಿಂಗು ನಿಲ್ಲಿಸಿ, ಅದರಲ್ಲಿ ಪಾತ್ರವರ್ಗವನ್ನು ಕೂಡಿಸಿ ಅಭಿನಯ ಮಾಡಿಸುತ್ತಾರೆ. ಇದೀ ದೃಶ್ಯದ ಚಿತ್ರ ತೆಗೆದಾಗ ಎದುರಿಗೆ ರೈಲುಡಬ್ಬಿಯ ಚಿತ್ರವೂ, ಹಿಂಬದಿ ಪರದೆಯ ಮೇಲೆ ಪ್ರದರ್ಶಿತವಾಗುವ ಪ್ರಾಕೃತಿಕ ದೃಶ್ಯವೂ ಒಂದಾಗಿ ಈಗ ಚಿತ್ರಪಟಲದಲ್ಲಿ ಅಂಕಿತವಾಗುತ್ತದೆ. ನಡುನಡುವೆ ಸ್ವಾಭಾವಿಕತೆ ತರಲು ಸೆಟ್ಟಿಂಗನ್ನು ಅಲ್ಲಸ್ವಲ್ಪ ಅಲುಗಾಡಿಸುವುದುಂಟು.

ಸ್ವಪ್ನಲೋಕದ ಛಾಯಾ ಲೇಖನವನ್ನು ಒಂದೇ ಪಟಲದ ಮೇಲೆ ಎರಡು ದೃಶ್ಯಗಳ ಚಿತ್ರಗಳನ್ನು ಮುದ್ರಿಸಿ, ಮಾಡುತ್ತಾರೆ. ಹೀಗೆ ಪಾತ್ರವು ಒ ದಡ ಪಲ್ಲಂಗದ ಮೇಲೆ ಮಲಗಿ ನಿದ್ರಿಸುತ್ತಿದ್ದಂತೆಯೇ, ಹೂದೋಟದಲ್ಲಿ ಪ್ರಣಯಿಯೊಡನೆ ವಿಹರಿಸಿದ, ನಕ್ಕುನಲಿದು ಹಾಡಿದ, ಕನಸು ಕಾಣಲು ಶಕ್ಯವಾಗುತ್ತದೆ! ಹಾಗೆಯೇ ಒಂದೇ ಬಾರಿಗೆ ಒಬ್ಬಳೇ ನಾಲ್ಕು ಕಡೆ ಕುಣಿದು ನರ್ತಿಸುವ, ಹಲವು ಮಂದಿ ಕೃಷ್ಣ ರ ಏಕಕಾಲಕ್ಕೆ ಕಾಣುವಂಥ ದೃಶ್ಯಗಳನ್ನು 'ಪ್ರಿಜಮ್' ಅಥವಾ ಇತರ ರೀತಿಯಿಂದ ಬಿಂಬಗ್ರಹಣ ನಡೆಯುತ್ತದೆ. "ಸ್ಟಂಟ್" ಚಿತ್ರಗಳಲ್ಲಂತೂ ಬಿಂಬಗ್ರಹಣದ ಚಮತ್ಕಾರವೇ ಆದಿ ಮತ್ತು ಅಂತ್ಯ!

೭

ಸಿನೆಮಾ ಕಂಡು ಉಲ್ಲಸಿತರಾದ ಗಳಿಗೆಯಲ್ಲಿ ನಾವು ನಟನಟಿಯರ ಅಭಿನಯ ಕೌಶಲ್ಯ, ಸೌಂದರ್ಯದ ಸೊಬಗು ಇವನ್ನಷ್ಟೇ ಬಣ್ಣಿಸುತ್ತೇವೆ. ಸಾಮಾನ್ಯರ ತಿಳು



ಪಿ ಕೆ ಟಿ ಸೆನಿಟೋರಿಯಂ ಮೈಸೂರು.

ವಳಿಕೆಯಲ್ಲಿ ನಟನಟಿಯರೇ ಚಿತ್ರದ ಜೀವ ಜೀವಾಳವೆಂಬಂತಿದೆ ಇದು ಸರಿಯಲ್ಲ-ಎಷ್ಟು ಶ್ರೇಷ್ಠ ಕಲಾವಿದನಾದರೂ ಅನನುಭವಿ ನಿರ್ದೇಶಕನ ಕೈಗೆ ಸಿಕ್ಕಿದರೆ, ಅವನ ಇದ್ದ ಕೀರ್ತಿಗೂ ಕಲಂಕ ಒದಗುವುದು ನಿಶ್ಚಯ. ನಟನಟಿಯರ ಕೃತಿಯೊಂದು ಹಾವ ಭಾವ, ಅಳು, ನಗು, ನಡಿಗೆ-ಕುಣಿತ-ಎಲ್ಲದರ ಹಿಂದೆಯೂ ನಿರ್ದೇಶಕನ ಬುದ್ಧಿವಂತಿಗೆ ಇದೆ. ಹಾಗೆಯೇ ನಿರ್ದೇಶಕನ ಚಾತುರ್ಯವನ್ನು ಜಾಣ್ಮೆಯಿಂದ ಸರಿಯಾಗಿ ಬಿಂಬಿಸಲು ಉಳಿದಲ್ಲ ಕಲಾವಿದರ ಅಗತ್ಯವಿದೆ. ಅವನ ಬಯಕೆಯಂತೆ ದೃಶ್ಯಗಳ ಜೋಡಣೆ, ಅವುಗಳ ಬಿಂಬ ಗ್ರಹಣ, ಸಂಭಾಷಣೆಯು ಧ್ವನಿಮುದ್ರಣ ಮುಂತಾದುವನ್ನು ಸಯೋಗ್ಯವಾಗಿ ನಡೆಸಲೂ ಸಂಬಂಧಿಸಿದ ತಂತ್ರ ಕುಶಲಿಗಳಲ್ಲಿ ಅಪೂರ್ವ ಕೌಶಲ್ಯವೂ' ಕ್ಷಮತೆಯೂ, ತ ಳ್ಮೆಯೂ ತೀರ ಅವಶ್ಯಕವಾಗಿವೆ. ಚಿತ್ರ ಕತೆಯು ಸುಂದರವಾಗಿಲ್ಲದೆ ಹೋದರೆ ಚಿತ್ರದ ಯಶಸ್ಸು ಅನಿಶ್ಚಿತವಾಗವುದು. ಉತ್ತಮ ಕತೆ ಇದ್ದರೂ ಅದರ ಸಂಭಾಷಣೆ ಹಾಗೂ ದೃಶ್ಯ ಸಂವಿಧಾನಗಳು ಕೆಟ್ಟರೆ, ನಿರ್ದೇಶಕನ ಚಮತ್ಕಾರವೂ ಅಸಫಲವೆನಿಸುವುದು. ಚಿತ್ರದ ತಂತ್ರವರಿತು ಕಲಸವಾಡುವ ಜಾಣ ಹಾಗೂ ಚತುರ ನಿರ್ದೇಶಕನಿಗೆ ತನ್ನ ಮನಸಿನ ಒಲವನ್ನು ಅರಿತು ಪ್ರವಿಸುವ ಸಹೋದ್ಯೋಗಿಗಳು ದೊರೆಯದೆ ಹೋದರೆ, ಚಿತ್ರವು ನಷ್ಟವೆನಿಸುವುದು. ಎಲ್ಲ ಒಂದುಗೂಡಿ ಛಾಯಾಚಿತ್ರ ನಿರ್ಮಾಣವಾದಾಗ ಅದರ ಹಿಂದೆ ದುಡಿದ ಹತ್ತಾರು ಸಾಮಾನ್ಯ ಕಲೆಗಾರರ ತಂಡವನ್ನು ಮರೆತರೆ ಅದು ರೂಢರಂಗಕ್ಕೆ ದ್ರೋಹ ಬಗೆದಂತೆಯೇ. ಇಪ್ಪತ್ತು-ಮೂವತ್ತು ಸೇರು ತೂಕದ ಬೆಳಕು-ದೀಪಗಳನ್ನು ಮೇಲೆತ್ತಿ ಹಿಡಿಯುವ, ಕೆಳಗೆ ಇಳಿಸುವ ಉದ್ಯಮದಲ್ಲಿ ಒಂದೆರಡು ಜನರನ್ನಾದರೂ ಚಿತ್ರವು ಬಲಿತೆಗೆದು ಕೊಳ್ಳದಿಲ್ಲ.

ನಿರ್ದೇಶಕನ ಹೇಳಿಕೆಗನುಸಾರ ಗೂಂಬೆಯಂತೆ ಕುಣಿವ, ಪ್ರಧಾನ ನಟ-ನಟಿಯರ ಸಂಬಳ ಲಕ್ಷಗಟ್ಟಲೆಯಾದರೆ, ಸ್ವತಃ ನಿರ್ದೇಶಕನಿಗೆ-ಚಿತ್ರದ ಸಾರಸರ್ವಸ್ವಕ್ಕೂ ಕಾರಣಭೂತನಾದ ವ ಹಾಕಯಾನಿಗೆ-ಇಷ್ಟತ್ತು ಸಾವಿರವೂ ಇಲ್ಲ! ಇನ್ನು ಚಿತ್ರ ರಚನೆಯಲ್ಲಿ ಪ್ರಾಣಾಪಾಯದ ಭಯವನ್ನೂ ವಿಚಾರಿಸದೆ ದುಡಿವ ಕೆಲಸಗಾರರಿಗೆ ದಿನಕ್ಕೆ ಎರಡು ರೂಪಾಯಿ ದೊರೆಯುವುದೂ ಸಂಶಯ! ಈ ನಡುವೆ ನಿರ್ಮಾಪಕನ ಹಣಕ್ಕೆ "ಗೋಡೆಯ ಮೇಲಿನ ಬೆಕ್ಕು" ಚಳೋಟಾದ ಉಪವೆ-ಏನಾಗಿತು ಬಂದೀತೋ, ಸಿನೆಮಾ ಮಂದಿರದಲ್ಲಿ ಕುಳಿತು ಚಿತ್ರನೋಡಿ ಅರಳಿಸುವ ನಾವೇ-ನೀವೇ ಹೇಳಬೇಕು!

— ಕಾರ್ತಿಕೇಯ

"ಭಾಗ್ಯಲಕ್ಷ್ಮಿ"ಯನ್ನು ಆಶಿಸದವರಾರು ?

ಓದಿದರ ಉತ್ತಮ ಕಾದಂಬರಿ!
ಅಭಿನಯಿಸಿದರೆ ಬಲೋ ನಾಟಕ!
ಅದುವೇ 'ಅಂತರಂಗ'ದ
ಪ್ರಕಟಣೆ—
ಭಾಗ್ಯಲಕ್ಷ್ಮಿ
(ಶ್ರೀ ಬೆಳ್ತಂಗಡಿ ಲಕ್ಷ್ಮಣ ರಾವ್ ಪುತ್ತೂರು)
ನವರಸಭರಿತವಾದ
ಪ್ರತಿಯೊಬ್ಬರೂ ಓದಲೇಬೇಕಾದ
ಸಾಮಾಜಿಕ ನಾಟಕ
ಪತ್ತೇದಾರಿ ಕಾದಂಬರಿಯಂತೆ
ನಿಮ್ಮ ಮನವನ್ನು ಸೆಳೆದೊಯ್ಯುವ ಕಥಾಸನ್ನಿವೇಶ!
ಬೆಲೆ ಬರೇ ರೂ 1 4 0
? ? ? ? ?

ದೇಶ, ಭಾಷಾಸೇವಕರಾದ
ಕೊರಡ್ಕಲ್ ಶ್ರೀನಿವಾಸರಾಯರ
ನೆನಪಿಗಾಗಿ ಪ್ರಕಟಿಸಲ್ಪಟ್ಟ ಮೇಲ್ಮಟ್ಟದ ಸ್ಮಾರಕಗ್ರಂಥ
ನೆನಪಿಗಾಗಿ
ಮಾಸ್ತಿ ವೆಂಕಟೇಶ ಅಯ್ಯಂಗಾರ್, ಬೆನಗಲ್ ರಾಮರಾವ್, ತಿ ತಾ ಶರ್ಮ, ಕೃಷ್ಣರಾವ್, ಗೊರೂರು
ಪ್ರೊ. ಕೆ ಎಸ್ ಸಪ್ಪಣ್ಣ, ಕಡಂಗೋಡ್ಲು, ಪ್ರೊ. ರಂ ಶ್ರೀ ಮುಗಳಿ,
ಕೆ ವಿ ಶೆಣೈ, ಎಸ್ ಎ ನಾರಾಯಣ ಭಟ್, ಎಂ ವಿ ಹೆಗ್ಡೆ
ಕೆ ಹರಿದಾಸ ಭಟ್, ಕೊರಡ್ಕಲ್ ಮೊದಲಾದವರ
ಲೇಖನ ಪ್ರಬಂಧಗಳಿವೆ
ಪುಸ್ತಕದ ಬೆಲೆ ಬರೇ ರೂ 2-0-0
ಪ್ರತಿಗಳನ್ನು ಪಡೆಯುವುದು ಕೊರಡ್ಕಲ್ ಸ್ಮಾರಕ ನಿಧಿಗೆ ಸಹಾಯ ಮಾಡಿರಿ
ಪ್ರತಿಗಳು ಮುಖ್ಯ ಪುಸ್ತಕ ಭಂಡಾರಗಳಲ್ಲಿ ದೊರೆಯುತ್ತವೆ
ನವಭಾರತ ಪುಸ್ತಕಭಂಡಾರ, ಉಡುಪಿ,
ಇವರಿಗೆ ಬರೆಯಿರಿ
ಈ ಪುಸ್ತಕವು ವಿಶೇಷ ಪ್ರಚಾರವಾಗುವಂತೆ ಕೊರಡ್ಕಲ್ಲರ ಶಿಷ್ಯರು
ವಿಶೇಷತಃ ನೆರವಾಗಬೇಕಾಗಿ ವಿನಂತಿ ಇದೆ
ಒಟ್ಟಿಗೆ ಒಮ್ಮೆಯೇ 4 ಪ್ರತಿಗಳನ್ನು ಕೊಂಡುಕೊಳ್ಳುವ ಕೊರಡ್ಕಲರ
ಶಿಷ್ಯರಿಗೆ 1 ಪ್ರತಿಯನ್ನು ಉಚಿತವಾಗಿಯೂ ಕೊಡಲಾಗುವುದು.

ಅಮೃತಾಂಜನ
ತಲೆನೋವು, ಶಿರೋವೇದನೆ, ಉಳುಕು ಕುತ್ತಿಗೆ, ಭುಜ ಹಲ್ಲು ವೇದನೆಗಳಿಗೂ, ಎದೆನೋವು, ಗಾಯಗಳು, ಬಾತುಕೊಳ್ಳುವುದು, ಚೇಳುವಿಷ ಮುಂತಾದವು, ಶೀತ, ನೆಗಡಿ ಮೊದಲಾದ ಎಲ್ಲಾ ರೋಗಗಳಿಗೂ ಸಿದ್ಧೌಷಧ



RLGD
ಹಳ ಕದ್ದಿ ಮದ್ದು ಸಪ್ಪಲ್ಲಿ ಸಿಕ್ಕುತ್ತದೆ
ಅಮೃತಾಂಜನ ಲಿಮಿಟೆಡ್
ಮದರಾಸು.
ಬೊಂಬಾಯಿ ಮತ್ತು ಕಲ್ಕತ್ತ.

ಕಲುಷಿತ ರಾಜಕೀಯ ವಾತಾವರಣಗಳು

ಪರ್ಶಿಯಾದ ಎಣ್ಣೆಯ ಕಂಪೆನಿಯ ಪ್ರಕರಣವೊಂದು ದ್ವಿತೀಯ ಕೊರಿಯ ಯುದ್ಧರಂಗವಾಗುವದೋ ಎನುವ ಶಂಕೆ ಮಾಡುತ್ತಲಿದೆ. ಆಂಗ್ಲೋ ಇರಾಣಿಯನ್ ಎಣ್ಣೆ ಕಂಪೆನಿಯ ರಾಷ್ಟ್ರೀಕರಣವನ್ನು ಇರಾಣೀ ಪಾರ್ಲಿಮೆಂಟು ಅಂಗೀಕರಿಸಿದೆ. ರಾಷ್ಟ್ರೀಕರಣಕ್ಕಾಗಿ ಇರಾಣೀ ಜನತೆಯು ಸರ್ವವಿಧದ ಹೋರಾಟವನ್ನು ನಡೆಸಲು ಸಿದ್ಧವಾಗಿದೆ. ರಾಷ್ಟ್ರೀಕರಣಕ್ಕೆ ವಿರೋಧವನ್ನು ವ್ಯಕ್ತಪಡಿಸಿದ ಮುಖ್ಯಮಂತ್ರಿಯನ್ನು ಕೊಲೆಮಾಡಲಾಯಿತು. ಪರ್ಶಿಯಾದ ಕೊಲೆಗಾರ ಪಕ್ಷವು ಸಂಘಟಿತವಾಗಿದ್ದು ಆಂಗ್ಲೋ ಇರಾಣಿ ಎಣ್ಣೆಯ ರಾಷ್ಟ್ರೀಕರಣವೇ ನಮ್ಮ ಜೀವನದ ಗುರಿಯೆಂದು ಘೋಷಿಸಿದೆ. ಅರ್ಧಕ್ಕಿಂತಲೂ ಹೆಚ್ಚಿನ ಪಾಲುಗಾರಿಕೆಯುಳ್ಳಂತಹ ಬ್ರಿಟನು ರಾಷ್ಟ್ರೀಕರಣಕ್ಕೆ ವಿರೋಧವನ್ನು ಸೂಚಿಸುತ್ತಲಿದೆ. ಎಣ್ಣೆಯ ಕಂಪೆನಿಯ ಕರಾರು ಮುಗಿದಿಲ್ಲ. ಈಗ ಕಂಪೆನಿಯು ರಾಷ್ಟ್ರೀಕರಣಗೊಳ್ಳುವದರಿಂದ ಮುಂದಕ್ಕೆ ಬ್ರಿಟನ್ನ ಅಸಂಮಿತವಾದ ಲಾಭವನ್ನು ಕಳೆದುಕೊಳ್ಳುವುದು. ಅಗ್ಗದಲ್ಲಿ ಎಣ್ಣೆಯು ಸಿಗದು. ಹಾಕಿದ ಪಾಲು ಬಂಡವಾಳವು ಸಿಗುವಂತಿಲ್ಲ. ಇದರಿಂದ ಬ್ರಿಟನು ಇರಾಣಿ ಸರಕಾರದೊಳಗೆ ಬಿಕ್ಕಟ್ಟು ಉಂಟಾಗಿದೆ. ನಡುವೆ ಅಮೆರಿಕೆಯು ಮಧ್ಯಸ್ಥಗಾರನಾಗಿ ಇರಾಣಿಗೆ ಬುದ್ಧಿ ಹೇಳುವ ಸಾಹಸವನ್ನು ಕೈಗೊಂಡಿದೆ. "ಈ ಸಮಸ್ಯೆಯನ್ನು ಗಂಭೀರಗೊಳ್ಳುವಂತೆ ಮಾಡದೆ ಬ್ರಿಟನು ಮತ್ತು ಇರಾಣೆಯನ ಉಭಯ ರಾಷ್ಟ್ರಗಳೂ ತಾವು ತಾವೇ ತೀರ್ಮಾನಿಸಿಕೊಳ್ಳಬೇಕೆಂದು" ಇರಾಣಕ್ಕೆ ಅಮೆರಿಕೆ ಸೂಚಿಸಿದೆ. ಆದರೆ ಇರಾಣಿಯನ್ನರು ಅದಕ್ಕೆ ಕಿವಿಗೊಡುವಂತಿಲ್ಲ. ಎಣ್ಣೆ ಕಂಪೆನಿಯ ರಾಷ್ಟ್ರೀಕರಣಕ್ಕಾಗಿ ಯಾವ ರೀತಿಯ ಹೋರಾಟವನ್ನು ನಡೆಸಲು ನಾವು ಸಿದ್ಧರೇ! ಎಂಬುದು ಇರಾಣಿಯನ್ನರ ಉತ್ತರವಾಗಿದೆ. ಬ್ರಿಟನು ಬಲಪ್ರಯೋಗ ಮಾಡಿದರೆ ಅತ್ತನಿಂದ ರಶ್ಯವು ಗಡಿಯಲ್ಲಿ ಸೈನ್ಯವನ್ನು ಸಿದ್ಧಗೊಳಿಸಿದೆ. ಇರಾಣ ರಶ್ಯಾದೊಳಗಿನ ಒಪ್ಪಂದದಿಂದ ರಶ್ಯವು ಯುದ್ಧದಲ್ಲಿ ತೊಡಗಬಹುದಾಗಿದೆ. ಅಂತೂ ಪರ್ಶಿಯದ ಪ್ರಕರಣ ಕೂಡಾ ಮೂರನೆಯ ಮಹಾಯುದ್ಧದ ಇನ್ನೊಂದು ಪೀಠಿಕೆಯೆನ್ನುವುದನ್ನು ನಾವು ಮರೆಯಬಾರದು.

ಅಮೆರಿಕೆಯ ಹಟಪ್ರಯೋಗ

ಕಮ್ಯುನಿಸ್ಟ ಚೀನಕ್ಕೆ ಯುದ್ಧ ಸಾಮಾನುಗಳನ್ನು ಕಳಿಸಲಾಗದೆಂದು ಅಮೆರಿಕೆಯು ಹೂಡಿದ ತಂತ್ರವನ್ನಿಂದು ಸಂ. ರಾ. ಸಂಘವು ಒಪ್ಪಿತು. ಕಮ್ಯುನಿಸ್ಟ ಚೀನದ ಮೇಲೆ ಈ ರೀತಿಯ ದಿಗ್ಬಂಧನವನ್ನು ಹಾಕುವುದು ನಾಚಿಕೆಗೇಡಿತನ—ರಾಜಕೀಯ ನೀತಿಗೆ ಇದು ವಿರುದ್ಧವಾದುದು. ಕಮ್ಯುನಿಸ್ಟ ಚೀನಾ ಹಾಗೂ ಉತ್ತರ ಕೊರಿಯದ ಮೇಲೆ ಅನ್ಯಾಯವಾಗಿ ಪ್ರಯೋಗಿಸಲಾದ ಈ ಗೊತ್ತುವಳಿಯ ಚರ್ಚೆ ರಶಿಯಕ್ಕೆ ಬೇಡಾಗಿದೆಯೆಂದ ರಶಿಯದ ಪ್ರತಿನಿಧಿ ಮಲೀಕರು ಹೇಳಿದರು. "ಭಾರತ ಹಾಗೂ ಚೀನದೊಳಗೆ ಯುದ್ಧ ಸರಕುಗಳ ವ್ಯವಹಾರ ಇರದೆ ಕೇವಲ ಆಹಾರಧಾನ್ಯ ಮುಂತಾದವುಗಳೇ ಆಗಿರುತ್ತವೆ, ಕಮ್ಯುನಿಸ್ಟ ಚೀನಾದ ಮೇಲೆ ಭಾರತ ಈ ವರೆಗೆ ತಳೆದ ಧೋರಣೆಯಂತೆ ಈ ಗೊತ್ತುವಳಿಯಲ್ಲಿ ಭಾಗವಹಿಸುವದು ಶಕ್ಯವಿಲ್ಲವೆಂದು ಭಾರತ ತಾನು ಮತದಾನ ಮಾಡದೆ ತಟಸ್ಥ ಧೋರಣೆ ವಹಿಸಿತು. ದಿಗ್ಬಂಧನವನ್ನು ಹೇರುವಲ್ಲಿ ಅಮೇರಿಕಾ ಬ್ರಿಟನಗಳು ವಿಶೇಷ ಮುತುವರ್ಜಿಯನ್ನು ವಹಿಸಿದ್ದವು. 48 ರಾಷ್ಟ್ರಗಳು ಈ ಗೊತ್ತುವಳಿಗೆ ಬೆಂಬಲವನ್ನಿತ್ತವು ಭಾರತ-ಪಾಕಿಸ್ತಾನ, ಅಪಘಾನಿಸ್ಥಾನ್, ಬರ್ಮಾ, ಇಂಡೋನೇಶಿಯಾ, ಇಕ್ವೆಡೋರಾ, ಇಜಿಪ್ತ, ಸ್ವೀಡನ್, ಸೈರಿಯ, ಮೊದಲಾದವು ಮತದಾನ ಮಾಡಲಿಲ್ಲ. ಅಮೆರಿಕೆಯು ಈ ಕುಟಿಲ ನೀತಿಯಿಂದ ಕಮ್ಯುನಿಸ್ಟ ಚೀನವನ್ನು ಯುದ್ಧಕ್ಕೆ ಇನ್ನಷ್ಟು ಮನಸ್ಸು ಮಾಡುವಂತೆ ಪ್ರೇರೇಪಿಸಿದಂತಾಯಿತು. ಕಮ್ಯುನಿಸ್ಟ ಚೀನವನ್ನು ಪಸಕೀನ ಪ್ರಕಾರೀಣ ಹಣ್ಣು ಮಾಡಬೇಕೆಂದು ಅಮೆರಿಕೆಯ ಈ ಚಪಲದಿಂದ ಪರಿಸ್ಥಿತಿ ಇನ್ನಷ್ಟು ಗಂಭೀರವಾದೀತೇ ವಿನಹ ಶಾಂತವಾಗದು. ಬ್ರಿಟನ, ಅಮೆರಿಕೆಗಳ ಮಂದಕ್ಕೆ ಮಣಿಸಾಗುವ ಸಂ. ರಾ. ಸಂಘವು ಇದನ್ನು ಒಪ್ಪಿಕೊಂಡು ಯುದ್ಧವನ್ನು ಇನ್ನಷ್ಟು ವಿಸ್ತಾರಗೊಳಿಸುವಂತೆ ಮಾಡಿದೆ. ಹೋರಾಟದಲ್ಲಿ ಸೋಲುವ ಲಕ್ಷಣ ಕಂಡಾಗ ಈ ರೀತಿಯ ಮಾರ್ಗ ಹಿಡಿದು ತನ್ನ ಛಲ ಸಾಧಿಸುವದು, ರಾಜಕೀಯ ನೀತಿಯಲ್ಲ; ಪೌರುಷವಿಲ್ಲದವರ ಲಕ್ಷಣ; ಧೂರ್ತ ಹೇಡಿಗಳ ವರ್ತನೆ!

ಅಮೆರಿಕೆಯ ಆಹಾರ

ಭಾರತಕ್ಕೆ ಕೊಡಮಾಡಿದ 20 ಲಕ್ಷ ಟನ್ ಆಹಾರಧಾನ್ಯದ ಕುರಿತು ಈ ವರೆಗೆ ವಿನಾ ಮೀನಮೇಷವೆಂದು ಕಾಲಕಳೆದ ಅಮೆರಿಕವಿಂದು ಒಂದು ನಿರ್ಧಾರಕ್ಕೆ ಬಂದಿದೆ. 20 ಲಕ್ಷ ಟನ್ ಆಹಾರಧಾನ್ಯಗಳಲ್ಲಿ ಹತ್ತು ಲಕ್ಷ ಟನ್ ದಾನರೂಪವಾಗಿಯೂ ಕೊಡಬೇಕೆಂದು ನಿಶ್ಚಯಿಸಿದ್ದನ್ನೀಗ ೨೦ ಲಕ್ಷ ಟನ್ ಆಹಾರ ಧಾನ್ಯವನ್ನು ಸಾಲರೂಪವಾಗಿಯೇ ಕೊಡಬೇಕೆಂದು ಸಿನೇಟು ನಿಶ್ಚಯಿಸಿದೆ. ಇದರ ಮೌಲ್ಯವನ್ನು ಭಾರತವು ಹಣದ ರೂಪದಲ್ಲಿ ಸಂದಾಯ ಮಾಡಬೇಕಾಗುತ್ತದೆ. ಇಲ್ಲವೆ ಪ್ರತಿಯಾದ ಸರಕುಗಳನ್ನು ಒದಗಿಸಿ ಕೊಡಬೇಕು. ಅಣು ಶಕ್ತಿಗೆ ಆವಶ್ಯವಾದ ಮೊನಾಯಿಟ್ ಮತ್ತು ಮೆಂಗನೀಸ್‌ಗಳನ್ನು ಅಮೆರಿಕೆಯು ಆಸ್ಥೆಯಿಂದ ನೋಡುತ್ತಲಿದೆ. ಭಾರತ ಪಾರ್ಲಿಮೆಂಟಿನಲ್ಲಿ ನೆಹ್ರೂರವರು ಆಹಾರದ ವಿನಿಮಯಕ್ಕಾಗಿ ವಿದೇಶಗಳಿಗೆ ಯುದ್ಧೋಪಯೋಗಿ ವಸ್ತುಗಳನ್ನು ಕೊಡಲಾರೆವು ಅದು ಭಾರತದ ಧೋರಣೆಗೆ ವಿರುದ್ಧವಾದುದೆಂದು ತನ್ನ ಅಭಿಪ್ರಾಯವನ್ನು ವ್ಯಕ್ತಪಡಿಸಿರುತ್ತಾರೆ. ಒಮ್ಮೆ ಹೀಗೆ ವಚನಕೊಟ್ಟ ಮೇಲೆ ತಿರುಗಿ ತನ್ನ ಧೋರಣೆಯನ್ನು ಬದಲಿಸಲಾರದು. ಒಂದುವೇಳೆ ಬದಲಿಸುವದಾದರೂ ರೀತಿಯು ಸಕಾಲದಲ್ಲಿ ಆಹಾರ ಧಾನ್ಯ ಕಳಿಸಿದೆ. ಆದಾಗ್ಯೂ ಅಂತಹ ಬೇಡಿಕೆಯನ್ನೇ ಮುಂದೊಡ್ಡಿತು. ಸಂದರ್ಭ ಸಾಧಿಸಿ ಭಾರತವನ್ನು ತನ್ನ ಬಂಧನದಲ್ಲಿರಿಸಬೇಕೆಂದು ಅಮೆರಿಕೆಯು ಈ ತಂತ್ರವನ್ನು ಹೂಡಿದೆ. ಕ. ಚೀನದ ಕಡೆಗೆ ಭಾರತದ ಒಲವು ಇರುವದನ್ನು ಅಮೆರಿಕೆ ಸಹಿಸಲಿಲ್ಲ. ಭಾರತದ ಆಹಾರ ಪರಿಸ್ಥಿತಿ ಗಂಭೀರವಾಗುತ್ತಿರುವಾಗ ಭಾರತ ಸರಕಾರ ಅಮೆರಿಕೆಯ ಈ ಕರಾರಿಗೆ ಒಪ್ಪಿತೋ-ಹೇಗೆನ್ನುವದು ಸಂಶಯಾಸ್ಪದ ವಿಚಾರವೆನಿಸಿದೆ. ಭಾರತವನ್ನು ತನ್ನ ಬಗಲೊಳಗೆ ಸೇರಿಸಿಕೊಳ್ಳಲು ಈ ತಂತ್ರ ಹೂಡಿದೆಯೆಂದು ರಶಿಯವು ಟೀಕಿಸಿದಂತದಲ್ಲಿ ತಪ್ಪೆಂತ ವಿಲ್ಲವೆಯಿಲ್ಲ. ಕೇವಲ ವ್ಯಾವಹಾರಿಕವಾದ ವಿಶೇಷ ಕಟ್ಟುನಿಟ್ಟಿನಿಂದ ಕೂಡಿದ— ಈ ಆಹಾರದ ಕೊಡುಗೆಯನ್ನು ಇದಕ್ಕಿದ್ದ ಹಾಗೆಯೇ ಭಾರತ ಒಪ್ಪಿಕೊಳ್ಳದಿರುವ ಸಂಭವವೇ ಹೆಚ್ಚೆಂದು ತೋರುತ್ತದೆ. ಹಾಗೆ ಒಪ್ಪಿಕೊಳ್ಳುವದಾದರೆ ಈ ವರೆಗಿನ ತನ್ನ ವಿದೇಶಾಂಗ ಧೋರಣೆಯಲ್ಲಿ ನೂತನ ಸಮಸ್ಯೆಯನ್ನೆದುರಿಸುವ ದುರ್ಧರ ಪ್ರಸಂಗ ಬಂದಿರಲಾರದು.

ಕೊನೆಗೂ ಕಾಂಗ್ರೆಸ್ಸಿಗೆ ತಿಲಾಂಜಲಿ!

ಆಚಾರ್ಯ ಕೃಪಲಾನಿಯವರೂ ಮತ್ತು, ಅವರ ಇನ್ನಿತರ ಸ್ನೇಹಿತರೂ ಕಾಂಗ್ರೆಸ್ಸನ್ನು ಸಂಪೂರ್ಣ ತ್ಯಜಿಸುವ ನಿರ್ಧಾರ ಮಾಡಿ ಕಾಂಗ್ರೆಸಿಗೆ ರಾಜಿನಾಮೆಯನ್ನಿತ್ತಿರುತ್ತಾರೆ. ಸಂಧಾನ ಸಮಿತಿಯ ಕಾರ್ಯವು ನಿಷ್ಫಲವಾಯಿತು. ನೆಹ್ರೂ ಆಜಾದರ ಆದೇಶಕ್ಕ್ಯಾವ ಬೆಲೆ ಬರಲಿಲ್ಲ. ಕೃಪಲಾನಿಯವರು ರಾಜಿನಾಮೆಯನ್ನಿತ್ತುದರಿಂದ ಹಲವು ಕಾಂಗ್ರೆಸ್ಸಿಗರು ಕಾಂಗ್ರೆಸ್ಸನ್ನು ಸಂಪೂರ್ಣ ತ್ಯಜಿಸಿ ನೂತನ ಪಕ್ಷವೊಂದನ್ನು ರಚಿಸುವ ಪ್ರಥಮ ಸನ್ನಾಹ ಮಾಡಿದ್ದಾರೆ. ಅಹಮ್ಮದ ಕಿದ್ವಾಯಿಯವರೂ ತನ್ನ ರಾಜಿನಾಮೆಯನ್ನು ಸಲಿಸುವ ನಿರ್ಧಾರ ಮಾಡಿದ್ದಾರೆ. ಕೇಳಪ್ಪನ್‌ರವರೂ ಅವರ ಹಲವು ಅನುಯಾಯಿಗಳೂ ರಾಜಿನಾಮೆಯನ್ನು ಸಲ್ಲಿಸಿದ್ದು, ಕೇರಳದ ಜನತೆಯ ಒಲವನ್ನು ತಮ್ಮ ಕಡೆಗೆ ಸೆಳೆದುಕೊಳ್ಳಲು ಪ್ರಯತ್ನ ನಡೆಸುತ್ತಲಿದ್ದಾರೆ. ಹಿಂದೆಂದೂ ಇರದ ಹೃದ್ರಾವಕ ಪರಿಸ್ಥಿತಿ ಕಾಂಗ್ರೆಸ್ಸಿಗಿಂದು ಒದಗಿಬಂದಿದೆ. ನೆಹ್ರೂರಿಂದು ಹಲವು ರೀತಿಯ ಸಮಸ್ಯೆಗಾಗಿ ಚಿಂತಿಸಬೇಕಾಗಿದೆ. ರಾಜ್ಯ ಘಟನೆಯ ತಿದ್ದುಪಡಿಯ ಪ್ರಕರಣವೊಂದು ವಿಶಿಷ್ಟ ಟೀಕೆ— ಅಸಂತೃಪ್ತಿ— ಅಸಹಕಾರಗಳಿಗೆ ಕಾರಣವಾಗಿವೆ ಈ ತಿದ್ದುಪಡಿಯ ಹಟಮಾರಿತನದಿಂದ ಕಾಂಗ್ರೆಸ್ಸಿನ ಒಲವು ಕುಗ್ಗಿದೆಯೆಂದು ನೆಹ್ರೂರವರ ರಾಜಕೀಯ ಇತಿಹಾಸದಲ್ಲಿ ಇದು ದೊಡ್ಡ ಘಟನೆ ಮಾತ್ರವಲ್ಲ; ಪ್ರಮಾದವೆಂದೇ ಹೇಳಬೇಕು. ಕಾಂಗ್ರೆಸ್ಸಿನಿಂದ ಸಿಡಿದು ಹೋದ ಧುರೀಣರು ಮರಳಿಬರುವ ಸಂಭವವಿಲ್ಲ ಕಾಂಗ್ರೆಸ್ಸು ತನ್ನ ಚರಿತ್ರಹೀನ ಕಾರ್ಯಗಳಿಂದ ಉಚ್ಚ ಕಾಂಗ್ರೆಸ್ಸಿಗರನ್ನು ಕಳೆದುಕೊಳ್ಳಬೇಕಾದ ಪ್ರಸಂಗ ಒದಗಿದ್ದಕ್ಕೆ ವಿಷಾದಿಸಬೇಕಾಗಿದೆ. ಈ ಘಟನೆಯಿಂದ ಕಾಂಗ್ರೆಸ್ಸಿಗರು ಇನ್ನಾದರೂ ಒಂದು ಪಾಠ ಕಲಿಯಲಿ.

IN THE SERVICE OF THE COUNTRY



Bank your Savings with

THE CANARA INDUSTRIAL & BANKING SYNDICATE LTD

ನಿಮ್ಮ ಉಳಿತಾಯವನ್ನು ಇರಿಸಲಿಕ್ಕೆ

ದಿ ಕೆನರಾ ಇಂಡಸ್ಟ್ರಿಯಲ್ ಎಂಡ್

ಬ್ಯಾಂಕಿಂಗ್ ಸಿಂಡಿಕೇಟ್ ಲಿಮಿಟೆಡ್

ವಿವಿಧ ಪಾತ್ರೆಗಳು

ಯಾವತ್ತೂ ವಿಧದ ಬೆಳ್ಳಿ, ತಾಮ್ರ, ಹಿತ್ತಾಳೆ, ಕಂಚು ಮೊದಲಾದುವುಗಳ ವಿವಿಧ ಪಾತ್ರೆಗಳೂ ಸಾಮಾನುಗಳೂ ರಖಂ ಆಗಿಯೂ ಚಿಲ್ಲರೆಯಾಗಿಯೂ ದೊರೆಯುತ್ತವೆ.

ಕಲ್ಯಾಂಜಿ ವ್ಯಾಸಾಚಾರ್ಯ,
ರಥಬೀದಿ, ಉಡುಪಿ

ಲೋಕಾಂತ

ಕೊರಿಯದಲ್ಲಿ

ಕೊರಿಯಾ ರಣರಂಗದಲ್ಲಿ ಅಮೇರಿಕನರು ಕಮ್ಯೂನಿಸ್ಟರ ಭಯಂಕರ ದಾಳಿಗವನ್ನು ತಾಳಲಾರದೆ ಹಿಮ್ಮೆಟ್ಟುವ ದಾಖಲೆಗಳು ಬಹಳವಾಗಿ ಕಂಡುಬರುತ್ತಲಿವೆ. ಕಮ್ಯೂನಿಸ್ಟರ ಯುದ್ಧಸಿದ್ಧತೆಯು ಬಹಳ ಭರದಿಂದ ನಡೆಯುತ್ತಿದ್ದು ಸಂ ರಾ. ದಳಕ್ಕೆ ಅದನ್ನು ಹೊಂಚನ್ನು ಕಂಡು ಹಿಡಿಯುವುದೇ ದುಸ್ತರವಾಗಿದೆ.

ಶಾಂತಿ ಒಪ್ಪಂದ

ಜಪಾನದ ಶಾಂತಿ ಒಪ್ಪಂದದ ಮಾತುಕತೆಗಳಲ್ಲಿ ಕಮ್ಯೂನಿಸ್ಟ್ ಚೀನಕ್ಕೂ ಪ್ರಾತಿನಿಧ್ಯವನ್ನು ನೀಡಬೇಕೆಂಬ ರಶಿಯದ ಬೇಡಿಕೆಯನ್ನು ಅಮೇರಿಕೆಯು ನಿರಾಕರಿಸಿರುತ್ತದೆ.

ಅಮೇರಿಕೆಯ ಯುದ್ಧೋಪದೇಶ

ಕಮ್ಯೂನಿಸ್ಟ ಚೀನದ ಮೇಲೆ ಸಂಪೂರ್ಣ ಯುದ್ಧ ಹೂಡಬೇಕೆಂಬ ಅಮೇರಿಕೆಯ ವಾದವನ್ನು ಬ್ರಿಟಿಶ ಯುದ್ಧ ಮಂತ್ರಿ ಪ್ರತಿಭಟಿಸಿದ್ದಾರೆ.

ಭಾರತ ಪಾಕಿಸ್ತಾನಗಳ ಸೈನ್ಯ

ಕೊರಿಯಾದಲ್ಲಿ ಕಾದಾಡಲು ಭಾರತ ಪಾಕಿಸ್ತಾನಗಳ ಸೈನ್ಯವನ್ನು ಕಳಿಸಬೇಕೆಂದು ಅಮೇರಿಕೆಯು ಭಾರತ ಪಾಕಿಸ್ತಾನಗಳನ್ನು ಕೇಳಿಕೊಂಡಿರುತ್ತದೆ. ಪಾಕಿಸ್ತಾನವು ಸೈನ್ಯ ಕಳಿಸಲು ನಿರಾಕರಿಸಿದ್ದು ಭಾರತವೂ ನಿರಾಕರಣೆಯ ಸೂಚನೆಯನ್ನು ಕಳಿಸಲಿದೆಯೆಂದು ತಿಳಿದುಬರುತ್ತದೆ.

ಅಮೇರಿಕೆಯ ಸಂಘಟಿಸಬೇಕು

"ಅಮೇರಿಕೆಯ ಇತಿಹಾಸದಲ್ಲಿ ನಡೆಯದಂತಹ ಗಂಭೀರ ಪರಿಸ್ಥಿತಿ ಈಗ ಉದ್ಭವಿಸಿದೆ. ಇಂತಹ ಕಠಿಣ ಪ್ರಸಂಗವನ್ನು ಹೋಗಲಾಡಿಸುವುದಕ್ಕೆ ಅಮೇರಿಕೆಯ ಸಂಘಟನಾ ಶಕ್ತಿಯೊಂದೇ ಮುಖ್ಯವಾಗಿದೆ" ಎಂದು ಅಧ್ಯಕ್ಷ ಟ್ರೂಮನರು ಸೈನಿಕ ದಿನಾಚರಣೆಯ ಭೋಜನ ವೇಳೆಯಲ್ಲಿ ಹೇಳಿದರು.

ಲಂಡನ ಪತ್ರಿಕೆಗಳ ಸೂಚನೆ

ಭಾರತದ ಬರಗಾಲವನ್ನು ಹೋಗಲಾಡಿಸುವುದಕ್ಕೆ ಕಾಮನವೆಲ್ತ್ ರಾಷ್ಟ್ರಗಳು ಯತ್ನಮಾಡಬೇಕು– ಬಿಹಾರದಲ್ಲಿ ಆಹಾರ ಪರಿಸ್ಥಿತಿಯು ಚಿಂತಾಜನಕವಾಗಿದ್ದು ಜನ ಸಾಯುವ ಗಂಡಾಂತರ ಪ್ರಾಪ್ತವಾಗಬಹುದು. ಆದುದರಿಂದ ಕಾಮನ್‌ವೆಲ್ತ್ ರಾಷ್ಟ್ರಗಳು ಕೂಡಲೇ ಸಭೆಸೇರಿ ಬಿಹಾರಕ್ಕೆ ಆಹಾರ ಕಳಿಸುವ ಯತ್ನ ನಡಿಸಬೇಕೆಂದು ಕನ್ಸರ್ವೇಟಿವ್ ಪಕ್ಷದ ಡೇಲಿ ಮೇಲ್ ಪತ್ರಿಕೆಯು ಅಗ್ರಲೇಖ ಬರೆದಿದೆ.

ಪಾಕ್–ಅಫಘಾನಿಸ್ಥಾನ ಘರ್ಷಣೆ

ಪಾಕ್–ಅಫಘಾನಿಸ್ಥಾನದ ಗಡಿಯಲ್ಲಿ ಪಾಕಿಸ್ತಾನವು 5000 ಸೈನಿಕರನ್ನು ಹೆಚ್ಚಿಸಿದೆ. ಅಫಘಾನಿ ಪಾಕ್ ಸೈನ್ಯಗಳೊಳಗೆ ಘರ್ಷಣೆಯುಂಟಾಗಿ ತಪ್ಪಲವಾಗಿ 28 ಪಾಕ್ ಸೈನಿಕರನ್ನು ಅಫಘಾನಿ ಸರಕಾರವು ಬಂಧನದಲ್ಲಿರಿಸಿವೆ.

ಭಾರತ ನಾವೆಗೆ ಗುಂಡು

ಬಂಗಾಲದ ಸರಹದ್ದಿನಲ್ಲಿ ಹಿಂದೀ ನಾವಿಕರು ತಮ್ಮ ನಾವೆಯನ್ನು ಪಾಕಿಸ್ತಾನ ದಂಡೆಗೆ ತಂಗಿಸಿದ್ದಾರೆ. ಇದ್ದುದರಿಂದ ಪಾಕಿಸ್ತಾನದ ಪೋಲೀಸರು ಗುಂಡು ಹಾರಿಸಿದರು. ತಪ್ಪಲವಾಗಿ ನಾವೆಯು ಮುಳುಗಿ ಒಬ್ಬ ನಾವಿಕ ಒಬ್ಬ ಪ್ರವಾಸಿಯು ಭಾರತ ದಂಡೆಗೆ ಬಂದು ಮುಟ್ಟಿರುತ್ತಾರೆ. ಉಳಿದವರು ಪಾಕಿಸ್ತಾನದ ದಡಕ್ಕೆ ಸೇರಿರಬಹುದೆಂದು ಊಹಿಸಲಾಗಿದೆ.

ಲಾವಣಿಕಾರನಿಗೆ ಅಮೇರಿಕೆಯ ಬಹುಮಾನ

ಅಮೇರಿಕೆಯ ಅರಾಶವಾಣಿ ಕಂಪೆನಿಯು ಕಳೆದ ತಿಂಗಳ ಲಾವಣಿಕಾರರ ಸ್ಪರ್ಧೆ ನಡೆಸಿದ್ದರಲ್ಲಿ ಮುಂಬಯಿಯ ಎಂ. ಟೋಡಿವಾಲಾ ಎಂಬ ಲಾವಣಿಗಾರನಿಗೆ ಆ ಪ್ರಥಮ ಬಹುಮಾನವು ಸಿಕ್ಕಿರುವುದು.

ಕಾನಡಾದ ಶಿಷ್ಯವೃತ್ತಿ

ಕಾನಡಾವು ಭಾರತದ ಕೆಲವು ವಿದ್ಯಾರ್ಥಿಗಳಿಗೆ ಒಕ್ಕಲತನ ಎಂಜನಿಯರಿಂಗ–ವಿಜ್ಞಾನ ಶಾಸ್ತ್ರದಲ್ಲಿ ಹೆಚ್ಚಿನ ವಿದ್ಯಾಭ್ಯಾಸಕ್ಕೆ ಅನುಕೂಲವಾಗುವಂತೆ ಹಲವು ಶಿಷ್ಯವೃತ್ತಿಗಳನ್ನು ಕೊಡಮಾಡಿದ್ದನ್ನು ಭಾರತವು ಸ್ವಾಗತಿಸಿದೆ. ಇದು ಕೊಲಂಬೊ ಯೋಜನೆಗನ್ವಯಿಸಿದೆ.

ಕಾನಡಾದಲ್ಲಿ ಭಾರತದ ಹೈಕಮೀಶನರು

ನ್ಯೂಯಾರ್ಕದಲ್ಲಿ ಭಾರತ ಸರಕಾರದ ಕಾನ್ಸುಲ್ ಜನರಲ್ಲರಾದ ಶ್ರೀ ಆರ್. ಆರ್. ಸಕ್ಸೇನಾರನ್ನು ಕಾನಡಾದ ಭಾರತದ ಹೈಕಮೀಶನರ್‌ನ್ನಾಗಿ ನೇಮಿಸಲಾಗಿದೆ.

ಭಾರತಕ್ಕೆ ನ್ಯೂಸ್‌ಪ್ರಿಂಟ್

ಭಾರತದಲ್ಲಿ ನ್ಯೂಸ್‌ಪ್ರಿಂಟಿನ ಕೊರತೆಯಾಗಿದ್ದು ಪಲ್ಪ ಮತ್ತು ಪೇಪರ ಗುಂಪಿನಿಂದ ಭಾರತಕ್ಕೆ 10000 ಟನ್ ನ್ಯೂಸ್ ಪ್ರಿಂಟ ಸಿಗುತ್ತದೆಂದು ನ್ಯೂಯಾರ್ಕದ ಭಾರತ ಟ್ರೇಡ ಕಮಿಶನರರು ಭಾರತ ಸರಕಾರಕ್ಕೆ ತಂತೀ ಮುಖಾಂತರ ತಿಳಿಸಿದ್ದಾರೆ.

ಆಜಾದರ ಪರದೇಶ ಪ್ರಯಾಣ

ಕೇಂದ್ರದ ವಿದ್ಯಾಸಚಿವರಾದ ಮೌಲಾನಾ ಅಬ್ದುಲ್ ಕಲಾಂ ಆಜಾದರು ಬ್ರಿಟನ್ ಯುರೋಪ್, ಮಧ್ಯಪೂರ್ವ ಪ್ರದೇಶಗಳ ಸಂಚಾರ ಕೈಗೊಳ್ಳಲಿದ್ದಾರೆ. ಸುಮಾರು ಎರಡು ತಿಂಗಳ ಅವಧಿ ಅವರು ಈ ಸಂಚಾರದಲ್ಲಿರಬಹುದೆಂದು ತಿಳಿಯುತ್ತದೆ.

ಅ. ಭಾ. ಸಂಸ್ಕೃತ ಸಮ್ಮೇಲನ

ಸೋಮನಾಥ ದೇವಸ್ಥಾನದ ಪುನರುತ್ಥಾನ ಕಾಲದಲ್ಲಿ ಅ. ಭಾ. ಸಂಸ್ಕೃತ ಸಮ್ಮೇಲನವನ್ನು ಸೋಮನಾಥದಲ್ಲಿ ಜರಗಿಸಲಾಗಿತ್ತು. ಭಾರತದ ಸುಪ್ರಸಿದ್ಧ ಸಂಸ್ಕೃತ ವಿದ್ವಾಂಸರು ಈ ಸಮ್ಮೇಲನಕ್ಕೆ ಆಗಮಿಸಿದ್ದು ಅದರಲ್ಲಿ ಭಾಗವಹಿಸಿದ್ದರು. ಕೊಚ್ಚಿನ್–ತಿರುವಾಂಕೂರ ರಾಜಪ್ರಮುಖರೂ, ಕಾಂಗ್ರೆಸ್ ಅಧ್ಯಕ್ಷ ತಂಡನರೂ ಕೆ. ಎಂ. ಮುನ್ಶಿಯವರೂ ಇದರಲ್ಲಿ ಭಾಗವಹಿಸಿದ್ದರು.

ಪೆಟ್ರೋಲಿನ ಕೊರತೆಯಿಲ್ಲ

"ಭಾರತದಲ್ಲಿ ಪೆಟ್ರೋಲಿನ ಕೊರತೆ ಎಷ್ಟರಲ್ಲು ಆಗಲು ಸಾಧ್ಯವಿಲ್ಲ. ಪೆಟ್ರೋಲಿನ ಕೊರತೆಯ ಭೀತಿಯನ್ನು ಹಬ್ಬಿಸಿ ಜನತೆಯನ್ನು ವಂಚಿಸುವ ಕಾರ್ಯವನ್ನು ಹಲವರು ಕೈಗೊಂಡಿದ್ದಾರೆ–ನಿಜವಾಗಿಯೂ ಪೆಟ್ರೋಲಿನ ಕೊರತೆಯಿರುವುದಿಲ್ಲ —ಸಾಕಷ್ಟು ಪೆಟ್ರೋಲನ್ನು ಸರಕಾರ ಒದಗಿಸುತ್ತದೆ" ಎಂದು ಸರಕಾರ ಸೂಚಿಸಿದೆ.

ಅರವಿಂದ ವಿಶ್ವವಿದ್ಯಾಲಯ

ಪಾಂಡಿಚೇರಿಯ ಶ್ರೀ ಅರವಿಂದ ವಿಶ್ವವಿದ್ಯಾಲಯದ ನಿಧಿಸಂಗ್ರಹಕ್ಕೆ ಆಶ್ರಮದ ತಾಯಿಯವರು 10 ಜನ ಸಮಿತಿಯನ್ನು ನೇಮಿಸಿರುತ್ತಾರೆ. ಅರವಿಂದರ ಸ್ಮಾರಕಾರ್ಥವಾಗಿ ಈ ಕಾರ್ಯವನ್ನು ಕೈಗೊಳ್ಳಲಾಗಿದೆ. ಸಮಿತಿಯಲ್ಲಿ ಪ್ರತಿಷ್ಠಿತ ವ್ಯಕ್ತಿಗಳ ಹೆಸರುಗಳೂ ಇರುತ್ತವೆ.

ಭಾರತದಲ್ಲಿ ಪೆನ್ಸಿಲಿನ್ ಕಾರ್ಖಾನೆ

2 ಕೋಟಿ ರೂಪಾಯಿಗಳ ವೆಚ್ಚದಿಂದ ಪೆನಿಸಿಲಿನ್ ಕಾರ್ಖಾನೆಯನ್ನು ಆರಂಭಿಸುವ ಯೋಜನೆಯನ್ನು ಭಾರತ ಸರಕಾರ ಇಟ್ಟುಕೊಂಡಿದ್ದು ಆ ಕುರಿತು ಸಂ. ರಾ. ಸಂಘದ ಸಹಾಯವನ್ನು ಕೋರಿದೆ.

ಗಾಂಧಿ ಪ್ರದರ್ಶನಾಲಯಗಳು

ಗಾಂಧೀ ವಾದದ ಅಭ್ಯಾಸಕ್ಕನುಕೂಲವಾಗುವಂತೆ ನಾಲ್ಕು ಗಾಂಧೀ ಪ್ರದರ್ಶನಾಲಯಗಳನ್ನು ತೆರೆಯುವ ಯೋಜನೆಯನ್ನು ಮಾಡಿದ್ದು ರಾಜಘಾಟ, ಸಾಬರಮತಿ, ಸೇವಾಗ್ರಾಮ, ಹಾಗೂ ದಕ್ಷಿಣ ಭಾರತದ ಒಂದು ಸ್ಥಳದಲ್ಲಿ ಅದನ್ನು ತೆರೆಯಲಾಗುವದೆಂದು ತಿಳಿದುಬರುತ್ತದೆ.

ನೇಪಾಳದ ಬಿಕ್ಕಟ್ಟು

ನೇಪಾಳದ ರಾಜಕೀಯ ವರ್ಗಗಳಲ್ಲುಂಟಾದ ಬಿಕ್ಕಟ್ಟಿನ ಪರಿಹಾರಾರ್ಥವಾಗಿ ನೆಹರೂರವರೊಡನೆ ಸಮಾಲೋಚನೆಗೆ ಬಂದ ನೇಪಾಳದ ಉಭಯ ಪಕ್ಷದ ಸಮಸ್ಯೆಯು ಬಗೆಹರಿಯಿತೆಂದು ತಿಳಿಯುತ್ತದೆ. ನೆಹರೂರವರು ಸದ್ಯದಲ್ಲೇ ನೇಪಾಳ ಸರಕಾರದ ವಿಶೇಷ ಆಮಂತ್ರಣದ ಮೇಲೆ ಕಾಟ್ಮಾಂಡುವಿಗೆ ಸಂದರ್ಶನ ನೀಯಲಿದ್ದಾರೆ.

ಕ. ಪ್ರಾಂ. ಕಾಂಗ್ರೆಸ್ ಸಮಿತಿ ಸಭೆ

ಹುಬ್ಬಳ್ಳಿಯಲ್ಲಿ ಕಾಂಗ್ರೆಸ್ ಭವನದಲ್ಲಿ ಶ್ರೀ ನಿಜಲಿಂಗಪ್ಪನವರ ಅಧ್ಯಕ್ಷತೆಯಲ್ಲಿ ಜರಗಿದ ಕ. ಪ್ರಾಂ. ಸಮಿತಿಯು ಮಹತ್ವದ ವಿಚಾರಗಳನ್ನು ಚರ್ಚಿಸಿತು. ಸಮಿತಿಯು ಮಾಡಿದ ಗೊತ್ತುವಳಿಗಳಲ್ಲಿ ಭಾಷಾವಾರು ತತ್ವಕ್ಕನುಸಾರವಾಗಿ ಕರ್ನಾಟಕ ಏಕೀಕರಣದ ನಿಶ್ಚಿತ ಆಶ್ವಾಸನೆಯನ್ನು ಚುನಾವಣಾ ಘೋಷಣೆಯಲ್ಲಿ ಕೊಡಬೇಕೆಂಬುದೂ ಒಂದಾಗಿರುತ್ತದೆ.

ನೇಕಾರರಿಗೆ ಲಾಠಿ ಪ್ರಯೋಗ

ಮದ್ರಾಸಿನಲ್ಲಿ ಒಂದು ತಿಂಗಳಿಂದ ನೇಕಾರರ ಸತ್ಯಾಗ್ರಹ ನಡೆದಿದ್ದು ಈಗ ಅವರು ಕಲ್ಲು ಸೋಡಾಬಾಟ್ಲಿಗಳನ್ನು ತೂರಿ ಹಿಂಸಾಮಾರ್ಗ ಹಿಡಿದುದರಿಂದ ಅವರಮೇಲೆ ಪೋಲೀಸರು ಲಾಠಿ ಪ್ರಯೋಗ ಮಾಡಿದರು. ಈ ವರೆಗೆ ಸುಮಾರು 200 ನೇಕಾರ ಸತ್ಯಾಗ್ರಹಿಗಳನ್ನು ಬಂಧಿಸಲಾಗಿದೆ.

ತೆಲಂಗಣದ ಹಳ್ಳಿ ಜನರ ಪಲಾಯನ

ತೆಲಂಗಣದ ಹಲವು ಪ್ರದೇಶಗಳಲ್ಲಿ ಕೊಲೆ, ಸುಲಿಗೆ, ಧರೋಡೆಗಳ ಮೂಲಕ ಗೊಂದಲಮಯ ವಾತಾವರಣವನ್ನು ಮಾಡಿದ ಭಯೋತ್ಪಾದಕರಿಗೂ ಪೋಲೀಸರಿಗೂ ಹೋರಾಟವಾಗಿ ಹಳ್ಳಿಜನ ಭಯೋತ್ಪಾದಕರ ಪೋಲೀಸರ ಗುಂಡಿಗಾಹುತಿಯಾದರೆಂದು ತಿಳಿದುಬರುತ್ತದೆ.



ಕತ್ತಲೆಯಲ್ಲಿ ನಿಮ್ಮ ಮಾರ್ಗದರ್ಶಿ.

ಬೇಂಕಿಂಗ್ ಸಂಬಂಧದ ಎಲ್ಲಾ ಸಮಸ್ಯೆಗಳಿಗೆ

ದಿ ವಿಜಯಾ ಬೇಂಕ್ ಲಿಮಿಟೆಡ್

ಇವರ ಸಲಹೆ ಕೇಳಿರಿ

ಹೆಡ್ ಆಫೀಸು : : : : ಮಂಗಳೂರು

ಮಡಿಕೇರಿಯಲ್ಲಿ ಒಂದು ಶಾಖೆಯೂ ಬೊಂಬಾಯಿಯಲ್ಲಿ ಒಂದು ಶಾಖೆಯೂ ಜಿಲ್ಲೆಯೊಳಗೆ ಹಲವು ಶಾಖೆಗಳೂ ಇವೆ.

ನಿರಖು ಠೇವಣಾತಿಗಳ ಮೇಲೆ ಆಕರ್ಷಕವಾದ ದರದ ಬಡ್ಡಿಯು ಕೊಡಲ್ಪಡುವುದು	ತಕ್ಕದಾದ ಜವಾಬ್ದಾರಿಗಳ ಮೇಲೆ ಸುಲಭವಾದ ಶರ್ತಗಳಲ್ಲಿ ಸಾಲಗಳು ಕೊಡಲ್ಪಡುವುವು.

ಸಾಲಿಯನ್ ನೇಕಡಾ 4½ರ ಬಡ್ಡಿ ಗಳಿಸುವ ಮೂರು ವರ್ಷದ ಅವಧಿಯ ವಿಜಯಾ ಕೇಶ್ ಸರ್ಟಿಫಿಕೇಟುಗಳ ಮೇಲೆ

ಹಣವನ್ನು ಹಾಕಿರಿ

THE VIJAYA BANK, LTD,

ಬಿ. ಮಂಜಯ್ಯ ಹೆಗ್ಗಡೆ,
(ದ. ಕ. ಜಿಲ್ಲಾ ಬೋರ್ಡ್ ಪ್ರೆಸಿಡೆಂಟ್)
ಡೈರೆಕ್ಟರ್ ಬೋರ್ಡಿನ ಅಧ್ಯಕ್ಷರು.

ಅಳಿಯ ಸಂತಾನ ಕಾನೂನು

ಇದರ ಪ್ರತಿಗಳು ದೊರೆಯುತ್ತವೆ,
ಕನ್ನಡ ಪ್ರತಿಗೆ 0-8-0
ಇಂಗ್ಲಿಷ್ ಪ್ರತಿಗೆ 0-8-0
ಟಪ್ಪಾಲು ಖರ್ಚು 0-1-0 ಪ್ರತ್ಯೇಕ.
0-9-0 ಕಳುಹಿಸಿದರೆ ಒಂದು ಪ್ರತಿ ಕಳುಹಿಸಲ್ಪಡುವುದು
ನವಯುಗ ಪ್ರೆಸ್, ಉಡುಪಿ.

ನವಯುಗ

ಚಂದಾ ವಿವರ
ವರ್ಷಕ್ಕೆ ರೂ. 5-12-0
6 ತಿಂಗಳಿಗೆ ರೂ. 3-0-0

ಗುರುವಾರ ಉಡುಪಿ, ೨೪-೫-೫೧

ಸ್ವಾತಂತ್ರ್ಯ ಯಾರಿಗೆ?

ಭಾರತರಾಜ್ಯ ಘಟನೆಯ ತಿದ್ದುಪಡಿಯ ಪ್ರಕರಣದ ಕುರಿತು ಈಹಿಂದೆ ನಾವು ಬರೆದಿದ್ದೆವು. ಹಲವು ಪ್ರಾಂತಗಳ ಸಂಕುಚಿತ ಮನೋವೃತ್ತಿಗನುಗುಣವಾಗಿಯೂ ಅತ್ಯಂತ ಮುಖ್ಯವಲ್ಲದ ವಿಚಾರಗಳಿಗಾಗಿಯೂ ಘಟನೆಯನ್ನು ತಿದ್ದಿ ವಿರೂಪಗೊಳಿಸುವದರಿಂದ ಕಠಿಣ ಸಮಸ್ಯೆ ಉದ್ಭೂತವಾಗಬಹುದೆಂದು ಸೂಚಿಸಿದ್ದೆವು. ಈಗ ಘಟನೆಯ ತಿದ್ದುಪಡಿಯನ್ನು ನೆಹ್ರೂರವರು ಪಾರ್ಲಿಮೆಂಟಿನ ಮುಂದೆ ತಂದು ಜನತೆಯ ತೀಕ್ಷ್ಣಪ್ರತೀಕಾರ-ಟೀಕೆಗಳಿಗೆ ಗುರಿಯಾಗಿದ್ದಾರೆ. ದೇಶದಲ್ಲಿ ಕಾಂಗ್ರೆಸ್ಸಿಗರ ಕುರಿತು ಜನತೆಗಿಂದು ತಾತ್ಸಾರ ಬುದ್ಧಿ ಬೆಳೆಯುತ್ತಿರುವಾಗ ಪ್ರತೀಕಾರ ಮನೋವೃತ್ತಿ ಮೂಡುತ್ತಿರುವಾಗ-ಇಂತಹ ಅನುಚಿತವಾದ ಪ್ರಸಂಗಗಳಿಂದ ಮತ್ತಷ್ಟು ಪ್ರಕೋಪಕ್ಕೆಳಿಸುವ ಸಾಹಸ ಮಾಡಿದ್ದು ನಿಜವಾಗಿಯೂ ಖೇದಾವಹಸಂಗತಿ.

ಪಾರ್ಲಿಮೆಂಟು ಸದಸ್ಯರು ಹಿರಿಯರೆಂದವರಕ್ಕೆಲ್ಲ ಸೈಗುಟ್ಟುವ ಅತಿ ವಿನಯತೋರಿಸದೆ ನಿರ್ದಯೆಯಿಂದ ವಿರೋಧಿಸಿದ್ದಕ್ಕೆ ನಾವು ಅಭಿಮಾನಪಡಬೇಕು. ಅದರಲ್ಲೂ ಡಾ। ಮುಕರ್ಜಿಯವರ ಹೇಳಿಕೆಯು ಅತ್ಯಂತ ಪರಿಣಾಮಕಾರಿಯದಾಗಿತ್ತು. ನೆಹ್ರೂರವರ ಮಂಡನೆ ಅನವಶ್ಯಕವಾದುದೆಂಬುದನ್ನು ಅವರು ಸ್ಪಷ್ಟೀಕರಿಸಿದ್ದಾರೆ. ಸ್ವಾತಂತ್ರ್ಯದ ಹೆಸರಲ್ಲಿ ಜನತೆಯನ್ನು ಹಿಂಸಿಸಬಾರದೆಂದು ವಾಕ್‌ಸ್ವಾತಂತ್ರ್ಯದ ಕುರಿತು ಅವರು ಹೇಳಿದ್ದು ಯೋಗ್ಯವೇ ಆಗಿರುತ್ತದೆ.

ದೇಶದ ಎಲ್ಲೆಡೆಯಲ್ಲೂ ಲಂಚ, ಬ್ಲ್ಯಾಕ್‌ಮಾರ್ಕೆಟು, ಅವ್ಯವಸ್ಥೆ ಬ್ರಿಟಿಷರ ಕಾಲಕ್ಕಿಂತಲೂ ನಾಲ್ಕಾರುಪಟ್ಟು ಹೆಚ್ಚಾಗಿ ನಡೆಯುತ್ತಿರುವಾಗ- ಬಡ ಜನತೆಯ ಕೂಗು ಸರಕಾರದ ಕಿವಿಗೆ ಮುಟ್ಟದೆ ಇರುವಾಗ-ದೇಶದಲ್ಲಿಯ ಅರಾಜಕತೆಯನ್ನು ಯಾರು ಹೇಳಬೇಕು? ಜನತಾ ರಾಜ್ಯದಲ್ಲಿ ಜನತೆಯ ಪರವಾಗಿ ವಾದಿಸು ಪತ್ರಿಕಾಪ್ರತಿನಿಧಿಯೆಂದರೆ ಪತ್ರಿಕೆಯೇ. ಅಲ್ಲವೇ? ಅಂತಹ ಪತ್ರಿಕೆಗಳ ಬಾಯಿ ಮುಚ್ಚಬೇಕೆನ್ನುತ್ತಾರೆ ನೆಹ್ರೂರವರು. ವಾಕ್ ಹಾಗೂ ಪತ್ರಿಕಾ ಸ್ವಾತಂತ್ರ್ಯವನ್ನು ಕಸಿದುಕೊಳ್ಳುವ ಮಸೂದೆಯ ಕುರಿತು ನೆಹ್ರೂರವರು "ಹಲವು ಪತ್ರಿಕೆಗಳ ಸ್ಥಾನಮಾನ ಬಹಳ ಕೀಳ್ಮಟ್ಟದ್ದಾಗಿದ್ದು-ತಪ್ಪು ಗ್ರಹಿಕೆಗಳನ್ನು ಜನತೆಯಲ್ಲಿ ತುಂಬಿ ಕಲುಷಿತ ವಾತಾವರಣವನ್ನುಂಟುಮಾಡುತ್ತಲಿವೆ. ಅಂತಹದಕ್ಕೆ ಮಾತ್ರ ಇದು ಅನ್ವಯಿಸಬಹುದೇ ಹೊರತು; ಉತ್ತಮವಾದರ್ಶ ಉಳ್ಳಂತಹ ಪತ್ರಿಕೆಗಳಿಗಲ್ಲ' ಎಂದಿದ್ದಾರೆ. ಪತ್ರಿಕಾ ಸ್ವಾತಂತ್ರ್ಯಾಪಹರಣದ ಕಾಯಿದೆಯನ್ನು ಹೇರಿದ ಮೇಲೆ ನಾಳೆ ಕೋರ್ಟುಗಳಲ್ಲಿ ಉತ್ತಮ ಅಭಿರುಚಿಯುಳ್ಳ ಪತ್ರಿಕೆ-ಕೀಳ್ಮಟ್ಟದ ಪತ್ರಿಕೆಯೆಂದು ನ್ಯಾಯಮೂರ್ತಿಗಳು ತೀರ್ಮಾನಿಸುವಂತಿಲ್ಲ. ಕಾಯಿದೆಯ ಮುಖವನ್ನಷ್ಟೇ ಅವರು ನೋಡುತ್ತಾರೆ. ಹಲವು ಕೀಳ್ಮನೋವೃತ್ತಿಯ ಪತ್ರಿಕೆಗಳು ಮಾಡಿದ ಅಪರಾಧಕ್ಕೆ ಉತ್ತಮ ಪತ್ರಿಕೆಗಳ ಮೇಲೂ ಗದಾ ಪ್ರಹಾರ ಮಾಡುವುದು ಸರಿಯಾದೀತೇ? ಕಾಂಗ್ರೆಸ್ಸಿಗರಲ್ಲಿ ಎಷ್ಟೋ ಜನ ಅನೀತಿಯಿಂದ ದೇಶದಲ್ಲಿ ಅರಾಜಕತೆಯನ್ನುಂಟುಮಾಡುತ್ತಲಿದ್ದಾರೆ ಅವರು ಮಾಡಿದ ಅಪರಾಧಕ್ಕೆ ಹಿರಿಯ ಕಾಂಗ್ರೆಸ್ಸಿಗರಿಗೂ ಅದೇ ಬಗೆಯ ಆರೋಪವನ್ನು ಹೊರಿಸಿ ಒಂದೇ ಒಗೆಯ ಕಾಯಿದೆಯಿಂದ ಶಿಕ್ಷೆಗೆ ಗುರಿಪಡಿಸಬಹುದೇ?

ಡಾ। ಮುಕರ್ಜಿಯವರೆಂದಂತೆ ಅತ್ಯವಸರದಿಂದ ತಿದ್ದುಪಡಿ ನಡೆಸಬೇಕಾಗುವ ಆವಶ್ಯಕತೆಯೇನೂ ಇಲ್ಲಿ ಕಾಣುತ್ತಿಲ್ಲ. ಎಷ್ಟೇ ತೊಡಕು ಸಂಭವಿಸುವಂತಿದ್ದರೂ ಚುನಾವಣೆಯ ನಂತರ ಅದನ್ನು ವಿಮರ್ಶಿಸಬಹುದಾಗಿತ್ತು. ತಿದ್ದುಪಡಿ ಮಾಡುವ ಮುನ್ನ ಕಾಯಿದೆ ತಜ್ಞರನ್ನೂ ಇನ್ನು ಹಲವರನ್ನೂ ವಿಚಾರಿಸಲಾಗಿತ್ತೆಂದು ನೆಹ್ರೂ ಹೇಳುತ್ತಾರೆ. ಜನತಾ ಪ್ರತಿನಿಧಿಯಾದ ಘಟನಾ ಸಮಿತಿ ಬಹಳ ಕಾಲ ಸಮಾಲೋಚನೆ ನಡೆಸಿ ಹಲವು ದೇಶದ ರಾಜ್ಯ ಸೂತ್ರಗಳನ್ನು ಅಭ್ಯಸಿಸಿ, ಕಾಯಿದೆ ತಜ್ಞರ ಮುಖೇನ ತಯಾರಿಸಿದ್ದನ್ನು ಹೀಗೆ ತಿದ್ದುಪಡಿ ಮಾಡುವುದಾದರೆ, ನಾಳಿನ ದಿವಸ ಘಟನೆಗಳ ಕುರಿತು ಯಾವ ಭರವಸೆಯನ್ನೂ ಕಟ್ಟಿಕೊಳ್ಳಲು ಬರುವಂತಿಲ್ಲ.

ನೆಹ್ರೂರವರ ವಾದವನ್ನು ಸಮರ್ಥಿಸುವಲ್ಲಿ ಡಾ। ಅಂಬೇಡ್ಕರರು ಮಹಾನ್ಯಾಯಾಲಯದ ಕುರಿತು ಅಧಿಕಪ್ರಸಂಗಿತನವನ್ನು ತೋರಿಸಿದ್ದಾರೆ. ಭಾರತ ರಾಜ್ಯಘಟನೆಯನ್ನು ಅಕ್ಷರಶಃ ಪಾಲಿಸುವದಕ್ಕಿಂತ ಬೇರೆ ರೀತಿಯ ಔದಾರ್ಯವನ್ನು ತೋರಿಸಿ ಸರಕಾರೀ ವರಿಷ್ಠ ನ್ಯಾಯದಾನ ಮಾಡಬೇಕೆಂದು ಡಾ। ಅಂಬೇಡ್ಕರರ ವಾದವಾಗಿರಬಹುದೇ? "ವರಿಷ್ಠನ್ಯಾಯಾಲಯಗಳು ನೀಡಿದ ತೀರ್ಪಿಗೆ ನಾನಾಗುತ್ತಿದ್ದರೆ "ನೀವು ಹೇಳಿದ್ದನ್ನು ನಾನು ಒಪ್ಪಿಕೊಳ್ಳುತ್ತೇನೆ. ಆದರೆ ಗೌರವಿಸಲಾರೆ" ಎಂದು ಹೇಳುತ್ತಿದ್ದೆ" ಎಂದು ಡಾ। ಅಂಬೇಡ್ಕರರು ಪಾರ್ಲಿಮೆಂಟಿನ ಪ್ರಮುಖ ನ್ಯಾಯಾಧೀಶರ ಸ್ಥಾನಮಾನ ಹಾಗೂ ವ್ಯಕ್ತಿತ್ವದ ಕುರಿತು ಆಡಿದ ಮಾತು ಗೌರವಾರ್ಹವೇ?

ತಿದ್ದುಪಡಿಯ ಕರಡುಪ್ರತಿಯನ್ನು ಉಗ್ರಟೀಕೆಗೆ ಗುರಿಯಾಗಿ ಈಗ ಪರಿಶೀಲಕ ಸಮಿತಿಗೆ ಒಪ್ಪಿಸಲಾಗಿದೆ. ಆ ಸಮಿತಿಯಲ್ಲೂ ಅದಕ್ಕೆ ಯಾವುದೇ ರೀತಿಯ ಬಾಧಕ ಬರಲಾರದೆಂದು ನಮಗೆ ಚೆನ್ನಾಗಿ ಗೊತ್ತಿದೆ. ನೆಹ್ರೂರವರ ವಾದ ಇಷ್ಟವಾಗಲೀ-ಅನಿಷ್ಟವಾಗಲೀ ಅದು ಜನತೆಯ ಮೇಲೆ ಹೇರಿಯೇ ಹೇರಲ್ಪಡುತ್ತದೆ. ತಿದ್ದುಪಡಿ ಆಗುವ ಮುಂಚೆಯೂ ತಿದ್ದುಪಡಿಯ ಬಳಿಕವೂ ಕಾಯಿದೆ ತಜ್ಞರೂ, ನ್ಯಾಯಾಲಯದ ವಕೀಲ ಬಾರಗಳೂ, ಇನ್ನಿತರ ಸಂಘ ಸಂಸ್ಥೆಗಳೂ ವಿರೋಧ ಸೂಚಿಸಿದ್ದರೂ ಇದನ್ನು ಬಲಾತ್ಕಾರವಾಗಿ ತಿದ್ದುಪಡಿ ಮಾಡಲಾಗಿದೆ. ನಮ್ಮ ನೆಚ್ಚಿನ ನಾಯಕ ನೆಹ್ರೂರವರ ನಿಸ್ಸ್ವಾರ್ಥ ತತ್ವದ ಮೇಲೆ ವಿಶೇಷ-ದರ ಗೌರವಗಳಿರುವದಾದರೂ ಈ ಪಟ್ಟಿನ ಅತಿ ವಿವೇಕವನ್ನು ತೋರಿಸುವುದು ನಮ್ಮ ಆತ್ಮಾಭಿಮಾನಕ್ಕೆ ಕುಂದಲ್ಲವೇ? ಇದು ಅಪಮಾನ್ಯವಾಗುವದಾದರೆ ಇಂದು ಬಂದ ಸ್ವಾತಂತ್ರ್ಯ ಜನತೆಗಲ್ಲ-ನ್ಯಾಯಕ್ಕೂ ಅಲ್ಲ-ಎಂಬುದು ಸ್ಪಷ್ಟವಾಗದೇ?

ಕೆ. ಪಿ. ಸಿ. ಸಿ. ಮೀಟಿಂಗು

ತಾ. 16ರಲ್ಲಿ ಹುಬ್ಬಳ್ಳಿ ಕಾಂಗ್ರೆಸ್ ಕಮಿಟಿಯ ಕಚೇರಿಯಲ್ಲಿ ಪ್ರಾಂತಿಕ ಕಾಂಗ್ರೆಸ್ ಕಮಿಟಿಯ ಸದಸ್ಯರ ಸಭೆ ಜರಗಿ, ಸರದಾರ ವಲ್ಲಭಭಾಯಿ ನಿಧಿ ಸಂಗ್ರಹದ ಬಗ್ಗೆ ಮತ್ತು ಮುಂಬರುವ ಚುನಾವಣೆಗೆ ಕಾಂಗ್ರೆಸ್ ಹುರಿಯಾಳುಗಳನ್ನು ಆರಿಸುವ ಪ್ರಾಂತಿಕ ಪಾರ್ಲಿಮೆಂಟರಿ ಬೋರ್ಡಿಗೆ ಕಮಿಟಿಗಳ ರಚನೆಯಾಯಿತು.

ಸರದಾರ ಪಟೇಲ್ ಸ್ಮಾರಕ ಸಮಿತಿಗೆ ಶ್ರೀಗಳಾದ ಶ್ರೀನಿವಾಸ ಮಲ್ಯ, ಬಳವಂತ ರಾವ್ ದಾತಾರ, ಟಿ. ಯಸ್. ಕೌಜಲಗಿ, ಸರದಾರ ವೀರನಗೌಡರು, ಟಿ. ಯಸ್. ನಾಯ್ಕು, ಫೋಡಕೆ, ಎ. ಚನ್ನಬಸಪ್ಪ, ವೇಲಜಿ ಕಾನಜಿ, ಚತುರದಾಸ ಕಥಾ, ಶಾಂತಪ್ಪಣ್ಣ, ಯಳಮಲಿ, ಪಿಂಟೊ ಮತ್ತು ರಾಮಜಿ ವೇಲಜಿ ಇವರನ್ನು ಆರಿಸಲಾಯಿತು.

ಭಾಷಾನುಗುಣ ಪ್ರಾಂತ ರಚನೆಯ ಬಗ್ಗೆ ಸೂಕ್ತ ಠರಾವು ಮುಂದೆ ಬಂದು ಅಂಗೀಕೃತವಾಯಿತು. ಜೂನ್ ತಿಂಗಳಲ್ಲಿ ಪ್ರಾಂತಕ್ಕೆ ಸಂಬಂಧಪಟ್ಟ ಕಾಂಗ್ರೆಸ್ ಕೆಲಸಗಾರರ ರಚನಾತ್ಮಕ ಕಾರ್ಯಕರ್ತರ ಹಾಗೂ ಎಮ್. ಎಲ್. ಎ.ಗಳ ಮತ್ತು ಮಂತ್ರಿಗಳ ಸಭೆಯೊಂದನ್ನು ಜರಗಿಸಬೇಕೆಂದೂ ನಿಶ್ಚೈಸಲಾಯಿತಲ್ಲದೆ ಘಟನೆಯಲ್ಲಿ ಕೆಲವು ತಿದ್ದುಪಡಿಗಳನ್ನು ಕೂಡಾ ಅಂಗೀಕರಿಸಲಾಯಿತು.

ಕರ್ನಾಟಕ ಪಾರ್ಲಿಮೆಂಟರಿ ಬೋರ್ಡಿನ ಆಯ್ಕೆ

ಮುಂಬರುವ ಮಹಾ ಚುನಾವಣೆಗೆ ಕರ್ನಾಟಕದ ಪ್ರಾಂತದಿಂದ ಕಾಂಗ್ರೆಸ್ ಹುರಿಯಾಳುಗಳನ್ನಾರಿಸುವ ಬಗ್ಗೆ ಕರ್ನಾಟಕ ಪ್ರಾಂತ್ಯಕ್ಕೆ ರಚಿತವಾಗಿರುವ ಪಾರ್ಲಿಮೆಂಟರಿ ಬೋರ್ಡಿಗೆ ಈ ಕೆಳಗಿನ ಸದಸ್ಯರು ಅವಿರೋಧವಾಗಿ ಆರಿಸಿಬಂದಿರುವರೆಂದು ತಿಳಿಯಲಾಗಿದೆ

೧. ಎಸ್. ನಿಜಲಿಂಗಪ್ಪ (ಅಧ್ಯಕ್ಷ ಕೆ. ಪಿ. ಸಿ. ಸಿ.) ೨ ಅಣ್ಣು ಗುರಜಿ (ಬೆಳಗಾಂವ) ೩. ಸಿ. ಮಿ. ಜಂಬಲಿ (ಬಿಜಾಪುರ) ೪. ಟಿ. ಆರ್. ನೇಶ್ವಿ (ಧಾರವಾಡ) ೫. ಗುಂಡಕರ್ (ಕಾರವಾರ) ೬. ಎಸ್. ಎಸ್. ಶೆಟ್ಟಿ (ಮಂಗಳೂರು) ೭ ದೇವಯ್ಯ (ಕೊಡಗು) ೮ ಎ. ಚೆನ್ನಬಸಪ್ಪ (ಬಳ್ಳಾರಿ) ಮತ್ತು ೯. ಬಿ. ಡಿ. ಜತ್ತಿ (ಪಾರ್ಲಿಮೆಂಟರಿ)

ಹಾರುವ ಕಿಡಿಗಳು

ನಿರ್ಮಾಣಕ್ಕಾದರೆ ಜೀವಿತಕಾಲ ಬೇಕು; ನಿರ್ಮೂಲನಕ್ಕಾದರೆ ಕ್ಷಣಕಾಲ ಸಾಕು.

೦೦

ಒಕ್ಕಟ್ಟಿನಲ್ಲಿ ಬಲವಿದೆ ಎಂತಲೇ ಕೆಲವರು ಇಕ್ಕಟ್ಟಾಗಿಸಲು ತಂತ್ರಹೂಡುತ್ತಾರೆ.

೦೦

ಅಂದು ಕಾಂಗ್ರೆಸಿಗನಾಗ ಪೆಟ್ಟುತಿಂದ ಇಂದು ಕಾಂಗ್ರೆಸ್ ಎಂದೇ 'ಟೋಪ್ಪಿ' ಎಂದ.

೦೦

ನಾಲಿಗೆ ಸಡಿಲು ಬಿಟ್ಟರೆ ನಾಳೆಗೆ ಏನಾದರೂ ಆಗುತ್ತದೆನ್ನುವವರುಂಟು.

೦೦

ವ್ಯಾಪಾರಿಗಳು ರಾಜಕೀಯ ರಂಗಪ್ರವೇಶಿಸ ಬಾರದಂತೆ; ರಾಜಕೀಯವೇ ಜೀವನವಾಗಿ ಉಳ್ಳವರು ವ್ಯಾಪಾರ ತೊಡಗಿದರೆ ಆದೀತೆ?

೦೦

ಎಲ್ಲಿಂದ ಎಲ್ಲಿಗೂ ಕೈಚಾಚ ಬಲ್ಲವರು ಮಕ್ಕ ಮದೀನಕ್ಕೂ ಹೋದಾರಂತೆ.

೦೦

ಅಧಿಕಾರ ಹೆಚ್ಚಬೇಕು; ಅದರ ಮದ ಹೆಚ್ಚಬಾರದು.

೦೦

ಮದವೇರಿದ ಅಧಿಕಾರಿಯ ನಿರೀಕ್ಷೆ ತಪ್ಪಿದಾಗ ಮೆದುಳ ಹದವೂ ತಪ್ಪುವುದುಂಟು.

೦೦

ಕಿಂಕರನ ಕಷ್ಟ ಶಂಕರಗೆ ತಿಳಿಯಬಹುದ; ಶಂಕರನ ಘಟೀತಿ ಕಿಂಕರಗೆ ತಿಳಿಯಲುಂಟೆ?

೦೦

'ರೈಲು ಟಿಕ' ಬಲ್ಲನಾದರೆ ವಿಮಾನವನ್ನು ಪಡೆದಾನು.

೦೦

ಕಣಕೂಡಿ ಕಣಜ; ಕಾಸು ಕೂಡಿ ಬೊಕ್ಕಸ.

೦೦

ನವಯುಗದ ಚಂದಾದಾರರಲ್ಲಿ ವಿನಂತಿ

ಇತ್ತೀಚೆಗೆ ವೃತ್ತಪತ್ರಿಕೆಗಳಿಗೆ ಉಪಯೋಗಿಸಲಾಗುತ್ತಿರುವ ಕಾಗದದ ಅಭಾವ ಮತ್ತು ವಿಪರೀತ ಬೆಲೆಯಿಂದಾಗಿ ತಯಾರಿಕೆಯ ವೆಚ್ಚವೂ ಹೆಚ್ಚಾಗಿರುತ್ತದೆ. ಇಂತಹ ಪರಿಸ್ಥಿತಿಯಲ್ಲಿ ನಮ್ಮ ಚಂದಾದಾರರು ದಯುಮಾಡಿ ತಮ್ಮ ತಮ್ಮ ಚಂದಾ ಹಣವನ್ನು ಮುಂದಾಗಿ ಕಳುಹಿಸಿಕೊಟ್ಟು ಪ್ರೋತ್ಸಾಹಿಸಬೇಕಾಗಿ ಭಿನ್ನವಿಸುತ್ತೇವೆ ಅಲ್ಲದೆ ಚಂದಾಹಣ ಬಾಕಿ ಮಾಡಿಕೊಂಡಿರುವ ಮಹನೀಯರಂತೂ ಬಾಕಿಯನ್ನು ಜಾಗ್ರತೆಯಾಗಿ ಕಳುಹಿಸಿಕೊಡುವಂತೆ ಕಳಕಳಿಯ ವಿನಂತಿ ಇದೆ. ಪತ್ರಿಕೆ ಬೇಡವೆಂದಿರುವವರೂ, ವಿಳಾಸ ಬದಲಾವಣೆಯಾದವರೂ ಸಕಾಲದಲ್ಲಿ ತಿಳಿಸುವಂತೆಯೂ ಕೇಳಿಕೊಳ್ಳುತ್ತೇವೆ.

ಮೆನೇಜರ್.

'ನಾನು' ಇದ್ದರೆ ಯಾವುದೂ ಇಲ್ಲ; 'ನಾನು' ಹೋದರೆ ಎಲ್ಲವೂ ಉಂಟು.

೦೦

ನಂಬಿಕೆಯೆಂದು ಕಳ್ಳನ ಕೈಯಲ್ಲಿ ಗಂಟು ಕೊಡಬಹುದೆ? ಇಂಬು ಕೊಟ್ಟವನಿಗಾದರೂ ಕಚ್ಚದೆ ಬಿಟ್ಟವರುಂಟೆ?

೦೦

ಉಗ್ರಾಣ ತುಂಬಿಸಬಹುದು; ಉದರ ತುಂಬಿಸುವುದು ಕಷ್ಟ.

೦೦

ತನ್ನ ಹೊಲಸಿನ ನಾತ ಊರಿಗೇ ಹರಡಿದೆ; ಪರರ ವಿಚಾರ ನಾಲಗೆ ತುದಿಯಲ್ಲಿ.

೦೦

ಹಿತ-ಮಿತವಿದ್ದಲ್ಲಿ ಸುಖವಿದೆ, ಅಧಿಕ ಅತಿರೇಕವಿದ್ದಲ್ಲಿ ದುಃಖವುಂಟು.

೦೦

ಸಾಕಿದ ನಾಯಿನ್ನಾದರೂ ಶಾಠ-ಪೋಕನಾದರೆ ಓಡಿಸಿ ಬಿಟ್ಟಾರು; ಇಟ್ಟ ಸೇವಕನನ್ನಾದರೂ ಮೋಸ-ವಂಚಕನಾದರೆ ದೂಡಿಬಿಟ್ಟಾರು.

೦೦

ಸ್ಥಾನಚ್ಯುತ ಭೂತದ ಚೇಷ್ಟೆ ಸ್ಥಾನ ಗಳಿಸುವ ತನಕ; ಸ್ಥಾನಭ್ರಷ್ಟ ಭೃತ್ಯನ ಕಾಟ ಸ್ಥಾನಪಡೆವ ತನಕ.

೦೦

ವೈದ್ಯರನ್ನು ದೂಷಿಸಲಾಗದು; ನೆರೆಮನೆಯವರನ್ನು ದ್ವೇಷಿಸಲಾಗದು.

೦೦

ಬೆಂಕಿಯೊಡನೆ ಆಟವಲ್ಲ; ಮಂಗನೊಡನೆ ಕೂಟವಲ್ಲ.

೦೦

ಹಿಡಿತವಿಲ್ಲದ ಜೀವನವಲ್ಲ; ನಡತೆ ಇಲ್ಲದ ಜೀವನಸಲ್ಲ.

೦೦

ಉಪಕಾರದ ಉಪದೇಶ; ಕಪಟವಂಚನೆಯ ಕೊರಳು ಕೊಯ್ಯುತನ.

೦೦

ಬೆಂಕಿಯೊಡನೆ ಆಡಿದವನಿಗೆ ಬಿಂಕದವನ ಮಾತೇನು?

೦೦

ಮಾತು ಕಾರ್ಯಕ್ಕಿರದು; ತಿರುಗಾಟಕ್ಕೆ ಕಾರು ಮ್ಯಾಟಲಿಕರದು.

೦೦

ಪರರ ದುಡ್ಡಿನ ಹಾರಾಟ, ಮೆರೆದಾಟವಂತೆ, ಕೊನೆಗೆ ಚೀರಾಟ, ಜರೆದಾಟವಂತೆ.

೦೦

ಬಳಿಟೋಪ್ಪಿಯುಟ್ಟೊಡನೆ ಸ್ವಾರ್ಥ ಬಿಟ್ಟಂತಲ್ಲ; ಕರಿಟೊಪ್ಪಿಯೆಂದೊಡನೆ ಸ್ವಾರ್ಥಿಯೇ ಎಂದಂತಲ್ಲ.

೦೦

ಗಿಡ ಹುಲುಸಾಗಬೇಕಾದರೆ ಗೊಬ್ಬರ; ಶಿಸ್ತುನಿಯಮಕ್ಕಾಗಿ ಶಿಕ್ಷೆ ಅಟ್ಟರ.

೦೦

ಉಚ್ಛನಾಗಿ ಮೆರೆಯುವಾಗ ಜನಮರು ಳಾಗುತ್ತದೆ; ಹುಚ್ಚನಾಗಿ ಕುಣಿಯುವಾಗಲೂ ಜನಸೇರಿ ಆನಂದಿಸುತ್ತದೆ.

ಉಡುಪಿ

ಕ್ರಿಶ್ಚಿಯನ್ ಹೈಸ್ಕೂಲ್ ಹಳೆ ವಿದ್ಯಾರ್ಥಿ ಸಂಘದ— ಪ್ರಥಮ ಮಹಾಸಭೆಯು ಇದೇ ತಾ 19ರಲ್ಲು ಶ್ರೀ ಕೆ. ರಘುರಾಮ ಶೆಟ್ಟಿಗಾರರ ಅಧ್ಯಕ್ಷತೆಯಲ್ಲಿ ಜರಗಿತು. ಬಾಲ್ಡಿನ ವರ್ಷಕ್ಕೆ ಕಾರ್ಯನಿರ್ವಾಹಕ ಮಂಡಳಿಗೆ ಡಾ॥ ಪಿ ರಾಘವೇಂದ್ರ ನಾಯಕ್, ಡಾ॥ ಪಿ. ಜಿ. ಆಚಾರ್, ಡಬ್ಲ್ಯು. ಎಂ. ಸುಬೇಶ್ ಕೆ ಜಿ ಕುಡುವ, ಅನಂತ ಶೆಣೈ ಮೊದಲಾದವರು ಆರಿಸಲ್ಪಟ್ಟರು.

ವಿಠಲ ಮುಖ್ಯ ಮಂಟಪದ ಪ್ರವೇಶೋತ್ಸವ— ಉಡುಪಿಯ ಪುತ್ತಿಗೆ ಮಠದ ಶ್ರೀ ಸುಜ್ಞಾನೇಂದ್ರತೀರ್ಥ ವಿದ್ಯಾಪಕ್ಷಿಕ ಶ್ರೀಪಾದಂಗಳವರು ಕಟ್ಟಿಸಿದ ಶಿಲ್ಪಮಯ ಶ್ರೀ ವಿಠಲ ಮುಖ್ಯಮಂಟಪದ ಪ್ರವೇಶೋತ್ಸವವನ್ನು ಇದೇ ತಾ 27 ಲ್ಲು ಸಂಜೆ 4 ಗಂಟೆಗೆ ಮೈಸೂರು ಸಂಸ್ಥಾನದ ರೆವಿನ್ಯೂ ಮಂತ್ರಿಯಾಯಿ ಸಚಿವರಾದ ಶ್ರೀ ಎಚ್. ಸಿದ್ದಯ್ಯ, ಅವರು ನೆರವೇರಿಸಲಿರುವರು ಅಂದು ಅಪರಾಹ್ನ 3-45 ತಾಸಿಗೆ ಶ್ರೀಕೃಷ್ಣ ಮಠದ ವಸಂತ ಮಹಲಿನಲ್ಲಿ ಮಾನ್ಯ ಮಂತ್ರಿಗಳಿಗೆ ಸ್ವಾಗತ ಹಾಗೂ ಮಾನ ಪತ್ರ ವಿತರಣ ಕಾರ್ಯಕ್ರಮವೂ ಇದೆ.

ನಾಟಕಾಭಿನಯ— ಸ್ಥಳೀಯ ಕೊಂಕ್ಣಿ ನಾಟಕ ಸಂಘದ ನೇತೃತ್ವದಲ್ಲಿ 'ಶುಮನ್ಯಾ ರಾಜೊ ಭಟ್' ಎಂಬ ಕೊಂಕ್ಣಿ ನಾಟಕವೊಂದು ತಾ 13ರಲ್ಲಿ ಪೈವೇಟ್ ಸಹಾಯಕ ಇಂಜನೀಯರ್ ಮಿ। ನಾಲ್ಬರ್ ಸಲ್ಡಾನ, B E ಇವರ ಅಧ್ಯಕ್ಷತೆಯಲ್ಲಿ ಅಭಿನಯಿಸಲ್ಪಟ್ಟಿತು.

ರಸ್ತೆಗಳಿಗೆ ವಿದ್ಯುದ್ದೀಪ— ಸುಮಾರು 50ರಷ್ಟು ಇದ್ದ ಸರ್ಚಾರ್ಜನ್ನು ಉಪ್ಪು ಡಿಪಾಡಿದ್ದು ಸರಿಯಲ್ಲವೆಂಬ ಕಾರಣದಿಂದ ನಗರಸಭೆಯವರು ಇಲೆಕ್ಟ್ರಿಕ್ ಕಂಪೆನಿಯೊಡನೆ ಸ್ಟ್ರೀಟ್ ಲೈಟಿನ ಕರಾರನ್ನು ರದ್ದುಪಡಿಸಿಕೊಂಡಿದ್ದರಷ್ಟೆ! ಈಗ ಇಲೆಕ್ಟ್ರಿಕ್ ಕಂಪೆನಿಯವರು ಮೊದಲಿನ ದರದಲ್ಲೇ ಕೊಡಲೊಪ್ಪಿದುದರಿಂದ ಕಳೆದ ತಾ 16ರಿಂದ ಪುನಃ ಕರಾರನ್ನು ನವೀಕರಿಸಿಕೊಂಡು ರಸ್ತೆಗಳಿಗೆ ಇಲೆಕ್ಟ್ರಿಕ್ ದೀಪಗಳನ್ನು ಕೊಡಹತ್ತಿದ್ದಾರೆ. ಇತರ ಗ್ರಾಹಕರಿಗೂ ಮೊದಲಿನ ದರದಲ್ಲೇ (0-6-0 + 0-3-0) ವಿದ್ಯುತ್ತುಗಳ ಸರಬರಾಯಿ ಸಿಗುತ್ತದೆ.

ಭಜನಾ ಮಂಗಳ— ಕಡಿಯಾಳಿ ಮಹಿಷಮರ್ದಿನೀ ದೇವಸ್ಥಾನದಲ್ಲಿ ಎಂದಿನಂತೆ ನಡೆದು ಬರುತ್ತಿದ್ದ ಭಜನಾ ಸಮಾರಂಭವು ಈ ವರ್ಷವೂ ವಿಜೃಂಭಣೆಯಿಂದ ನಡೆಯಿತೆಂದು ಸಂಬಂಧಿಸಿದವರು ತಿಳಿಸುತ್ತಾರೆ.

ಕೋಟೇಶ್ವರದಲ್ಲಿ ದ. ಕ. ಜಿಲ್ಲಾ ಬೋರ್ಡ್ ಮೀಟಿಂಗು— ಕುಂದಾಪುರ ದ. ಕ ಜಿಲ್ಲಾ ಬೋರ್ಡಿನ ಸಭೆಯು ಜರಗಿ ಇದೇ ತಾ 19ರಲ್ಲು ವೈಸ್ ಪ್ರೆಸಿಡೆಂಟ್ ಶ್ರೀ ಎಫ್. ಎಕ್ಸ್. ಡಿ. ಪಿಂಟೋರವರ ಅಧ್ಯಕ್ಷತೆಯಲ್ಲಿ ಜರಗಿದಾಗ ಈ ಬೋರ್ಡಿನ ಸದಸ್ಯರಾಗಿದ್ದು ಈಚೆಗೆ ಮೃತರಾದ ಶ್ರೀ ಕೆ. ಸದಾಶಿವ ಸೆಟ್ಟರ ನಿಧನದ ಬಗ್ಗೆ ಸಂತಾಪ ಸೂಚಿಸಲಾಯಿತು. ಎರಡು ಸಭೆಗಳಿಗೆ ಗೈರುಹಾಜರಾಗಿದ್ದ ಶ್ರೀಗಳಾದ ಚಪ್ಪಡ್ ಸಾಸಾಹೇಬ್, ಕೆ. ಸುಂದರ ಮತ್ತು ಎಸ್ ನರಸಪ್ಪಯ್ಯನವರ ಮೆಂಬರಿಕೆತನಕ್ಕೆ ಪುನಃ ಜೀವದಾನವಾಗಲಾಯಿತು. ಜಿಲ್ಲಾ ಬೋರ್ಡಿನ ಬಿಲ್‌ಕಲೆಕ್ಟರು ತಮ್ಮ ಟಿಟ್ಟಿಭತ್ತೆ ದರವನ್ನೂ ಏರಿಸಬೇಕಾಗಿ ಮಾಡಿದ ಅರ್ಜಿಯನ್ನು ಮನ್ನಿಸಲಾಯಿತು ರೆವಿನ್ಯೂ ಇನ್ಸ್‌ಪೆಕ್ಟರರು ಟಿಟ್ಟಿ ಭತ್ತೆದರವನ್ನು ಏರಿಸಲಾಯಿತು. ಹಾಸನ ಜಿಲ್ಲಾ ಬೋರ್ಡಿನ ಅಧ್ಯಕ್ಷರೂ ದ. ಕ. ಜಿಲ್ಲಾ ಬೋರ್ಡಿನ ಅಧ್ಯಕ್ಷರೂ ಕೂಡಿಕೊಂಡು ಕೇಂದ್ರ ಸರಕಾರದ ರೈಲ್ವೆ ಮಂತ್ರಿಗಳನ್ನು ಕಂಡು ಹಾಸನ-ಮಂಗಳೂರು ರೈಲ್ವೆ ಮಾರ್ಗದ ಆವಶ್ಯಕತೆಯನ್ನು ತಿಳಿಸುವರೆಂದೂ ... ಗೆ ಭತ್ತೆಯು ದೊರೆಯಬಲ್ಲುದೆಂದು ಸರಕಾರದವನ್ನು ಕೇಳಿಕೊಳ್ಳಲಾಯಿತು ಆನಂದಪುರದಿಂದ ಮಲ್ಪೆಗೆ ಸೀದಾ ರೈಲ್ವೆಲೈನು ಹಾಕುವ ಆವಶ್ಯಕತೆಯ ಕುರಿತು ಶ್ರೀಗಳಾದ ಯು ಎಸ್. ನಾಯಕ್, ವೈ ಮಂಜಯ್ಯ ಸೆಟ್ಟಿ, ಎಸ್. ಎಸ್. ಸರವೋತ್ತಮರನ್ನು ಮೊದಲಾದವರು ಸೂಚಿಸಿದರು ಈ ವಿಷಯ ವಿಚಾರದಲ್ಲಿ ಇಲ್ಲವೆಂದು ಶ್ರೀ ನರಸಪ್ಪಯ್ಯನವರು ಸೂಚಿಸಿದರು. ಈ ಕುರಿತು ಬೇಗನೆ ಬೋರ್ಡಿನ ಅಧ್ಯಕ್ಷರು ರೈಲ್ವೆ ಮಂತ್ರಿಗಳನ್ನು ಕಾಣಬೇಕು ಆನಂದಪುರ ಮಲ್ಪೆ ರೈಲ್ವೆ ಮಾರ್ಗದ ಕುರಿತೂ ಪ್ರಸ್ತಾಪಿಸಬೇಕೆಂದಾಯಿತು. ಕೋಟೇಶ್ವರ ಹೈಸ್ಕೂಲು, ಅಲ್ವಾರ್ ಹೈಸ್ಕೂಲು, ಹಿರಿಯಡ್ಕ ಹೈಸ್ಕೂಲು ಇವುಗಳಲ್ಲಿ ಇದೇ ಜೂನ್ ತಿಂಗಳಿಂದ ಕ್ರಮಪ್ರಕಾರವಾಗಿ VI ಮತ್ತು V ಫಾರಮುಗಳನ್ನು ತೆರೆಯಲು ಬೋರ್ಡಿನ ಮಂಜೂರಾತಿ ದೊರೆಯಿತು. ಈ ಬಗ್ಗೆ ಅಧ್ಯಾಪಕರ ಇಕ್ಕಾಮುಗಳನ್ನು ಸೆಂಕ್ಷನ್ ಮಾಡಲಾಯಿತು ಕಾರ್ಕಳ ಹೈಸ್ಕೂಲು ಕಟ್ಟಡದಲ್ಲಿ ಮಾಜಿ ವಿದ್ಯಾರ್ಥಿಗಳಾಗಿದ್ದು ಈಗ ದಿವಂಗತರಾದ ಕೆ ಪಿ ಎಸ್. ವೆಂಕಟೇಶ ಶೆಣೈ, ಮತ್ತು ಕೆ ಶ್ರೀನಿವಾಸ ಕಿಣಿಯವರ ಭಾವಚಿತ್ರಗಳನ್ನು ಇಡುವರೆ ಬೋರ್ಡಿನ ಒಪ್ಪಿಗೆ ದೊರೆಯಿತು ಸ್ಥಳೀಯ ಧರ್ಮಸ್ಥ ಅಧಿಕಾರಿಗಳ ನಿರ್ಣಯದಂತೆ ನಾರಾವಿ ಬೋರ್ಡ್ ಎಲಿಮೆಂಟರಿ ಶಾಲೆಯನ್ನು ಹಾ। ಪ್ರಾ। ಶಾಲೆಯನ್ನಾಗಿ ಮಾಡಬಹುದೆಂದಾಯಿತು. ಕಾರ್ಕಳ ಬೋರ್ಡ್ ಆಸ್ಪತ್ರೆಯನ್ನು ಸರಕಾರವು ಸ್ವಾಧೀನಪಡಿಸಿಕೊಳ್ಳಬೇಕೆನ್ನುವ ಜನಾಬ್ ಎಫ್. ಕೆ ಮುಕ್ತಾರ್ ಸಾಹೇಬರ ಠರಾವೂ ಮಾನ್ಯವಾಯಿತು. ಈ ಆಸ್ಪತ್ರೆಯನ್ನು ಸರಕಾರೀ ಆಸ್ಪತ್ರೆಯನ್ನಾಗಿ ಮಾಡಲು ಈಗಾಗಲೇ ಸರಕಾರವು ನಿರ್ಧರಿಸಿಯದೆ.

ಜಿಲ್ಲಾ ಬೋರ್ಡಿಗೆ— ಎಲಿಮೆಂಟರಿ ವಿದ್ಯಾಭ್ಯಾಸದ ಬಗ್ಗೆ ಸರಕಾರದಿಂದ ಕೊಡಲ್ಪಡುವ ಸಬ್ ಸಿಡಿ ಹಣವು ಸಕಾಲದಲ್ಲಿ ಸಿಗದಿದ್ದರಿಂದ ಎಲಿಮೆಂಟರಿ ಶಾಲಾ ಉಪಾಧ್ಯಾಯರಿಗೆ 1951ನೇ ಎಪ್ರಿಲ್ ತಿಂಗಳಲ್ಲಿ ಕ್ಲಪ್ತ ಸಮಯದಲ್ಲಿ ಸಂಬಳ ಬಟವಾಡೆ ಮಾಡುವರೆ ಸಾಧ್ಯವಾಗಲಿಲ್ಲ. ಅದೇ ತಾ ೧ರಿಂದಾಗಿ ಎಪ್ರಿಲ್ ತಿಂಗಳ ಸಂಬಳವನ್ನು ತಾ 23-5-1951ರ ನಂತರ ಬೇಗ ಬಟವಾಡೆ ಮಾಡಲು ಸಾಧ್ಯವಾಗಬಹುದೆಂತ ಜಿಲ್ಲಾ ಬೋರ್ಡ ಪ್ರೆಸಿಡೆಂಟರು ತಿಳಿಸುತ್ತಾರೆ.

ಮಂಗಳೂರು

ಪ್ರವೇಶ ಸಮಾರಂಭ.— 8ನೇ ಪುಟದಲ್ಲಿ ಪ್ರಕಟವಾಗಿರುವಂತೆ ಪೊಪ್ಯುಲರ್ ಇನ್ಶ್ಯುರೆನ್ಸ್ ಕಂಪೆನಿಯ ಹೊಸ ಕಟ್ಟಡದ ಪ್ರವೇಶ ಸಮಾರಂಭದ ವೇಳೆ ಅದರ ಚೆಯರ್‌ಮ್ಯಾನ್ ಮೇಜರ್ D R. ಮುಸ್ತಿರೇರಜ್ ಇವರು ಸ್ವಾಗತಭಾಷಣ ಮಾಡಿದರು, ವೈಸ್ ಚೆಯರ್‌ಮ್ಯಾನ ಡಾ। ಯು ಸುಂದರರಾವ್ ಬಗ್ಗೆ ಕಂಪೆನಿಯ ವೃತ್ತವನ್ನು ವಿವರಿಸಿದರು. ಸಭೆಯಲ್ಲಿ ಜಾಟ ಮಾತ್ನಾಡಿದ ಶ್ರೀ ಪಿ. ರಂಗನಾಥ ಪೂಂಜ, ಶ್ರೀ. ಎಂ ಗಿರಿಯಪ್ಪ, ಎಲ್. ಸಿ. ಪಾಯಸ್ ಇವರು ಕಂಪೆನಿಯ ಪ್ರಗತಿಯ ಕುರಿತು ಸಂತೋಷ ವ್ಯಕ್ತಪಡಿಸಿದರು. ಅಧ್ಯಕ್ಷರ ಭಾಷಣ, ಉಪಹಾರಗಳಾದ ಮೇಲೆ, ಡಾ। ಯು. ಪಿ. ಮಲ್ಯರು ಧನ್ಯವಾದಗಳನ್ನಿತ್ತರು.

ಮಂಗಳೂರು ಬಂದರದ ಅಭಿವೃದ್ಧಿ?

ಮಂಗಳೂರಿನ ಚಿಕ್ಕ ಬಂದರವನ್ನು ಅಭಿವೃದ್ಧಿಗೊಳಿಸುವ ಯೋಜನೆಯನ್ನು ಆದಷ್ಟು ಬೇಗ ಗಮನಿಸಬೇಕೆಂದು ಭಾರತ ಸರಕಾರವು ಮದ್ರಾಸು ಸರಕಾರಕ್ಕೆ ಸೂಚಿಸಿರುವುದು.

ಪಾರ್ಲಿಮೆಂಟನಲ್ಲಿ ಪ್ರಶ್ನೋತ್ತರ ಕಾಲದಲ್ಲಿ ಈ ಸಂಬಂಧ ಮಾಹಿತಿ ಕೊಡುತ್ತ ಟ್ರಾನ್ಸ್‌ಪೋರ್ಟ್ ಮಂತ್ರಿ ಶ್ರೀ ಕೆ. ಸಂತಾನಮ್ ಇವರು, "ಪಶ್ಚಿಮ ಕರಾವಳಿಯಲ್ಲಿ ಪ್ರಮುಖ ಬಂದರ ರಚನೆಯ ಬಗ್ಗೆ ನೇಮಕವಾದ ಸಮಿತಿಯು ಪ್ರಮುಖ ಬಂದರಕ್ಕೆ ತಕ್ಕ ಸ್ಥಳವು ಮಲ್ಪೆ ಎಂದು ತೀರ್ಮಾನಿಸಿದರೂ, ಮಲ್ಪೆಯ ಕುರಿತು ಸಮಿತಿಯ ವರದಿಯಲ್ಲಿ ಕೆಲವು ನ್ಯೂನತೆಗಳು ಕಂಡು ಬಂದುದರಿಂದ ಹಾಗೂ ಈಗಿನ ಆರ್ಥಿಕ ಅರ್ಥಿಕ ಅಡಚಣೆಯ ದೆಸೆಯಿಂದ ಆ ವಿಚಾರವನ್ನು ಸದ್ಯ ಬತ್ತಿಟ್ಟಿಗಬೇಕಾಯಿತು, ಆರ್ಥಿಕ ಸ್ಥಿತಿಯು ಉಜ್ಜೀವಗೊಂಡ ಮೇಲೆ ತಿರುಗೊಮ್ಮೆ ಪ್ರಮುಖ ಬಂದರವಾಗಲು ಯಾವ ಸ್ಥಳವು ಅರ್ಹ ಮತ್ತು ಅನುಕೂಲವೆಂಬುದನ್ನು ಇನ್ನಷ್ಟು ಕೂಲಂಕಷ ಪರಿಶೋಧನೆ ನಡೆಸಿ ಪರಿಶೀಲಿಸಲಾಗುವುದು, ಮಲ್ಪೆಯ ಸ್ಥಾನಮಾನಗಳ ಕುರಿತು ಮುಂದಿನ ಪರೀಕ್ಷೆ ನಡೆಯುವ ತನಕ ಸದ್ಯ ಮಂಗಳೂರು ಬಂದರ ಅಭಿವೃದ್ಧಿಗೊಳಿಸುವ ವಿಚಾರ ಲಕ್ಷ್ಯಸತಕ್ಕದ್ದೆಂದು ಮದರಾಸು ಸರಕಾರಕ್ಕೆ ಸೂಚಿಸಲಾಗಿದೆ" ಎಂದು ಹೇಳಿದರು.

WANTED

For St Marys High School Shirva, S. K.

Kannada knowing

1) Maths. and English B. T. or L. T.

2) Science and English B T or L. T.

3) Higer grade Drawing teacher.

Terms handsome apply sharp to the Correspondent

ಉಡುಪಿ ಮುನ್ಸೀಫ ಕೋರ್ಟಿನಲ್ಲಿ

O. P. 14/1951

ವತ್ಸಲಾ ದೇವಿ, ಹಾಂಗಾಳ ಗೋವಿಂದ್ರಾಯರ ವಿಧವೆ ಮನ್ಯಾನರಿಂ ರಕ್ಷಕ ತಂದೆ ನಾರಾಯಣರಾವ್ ಸುಬ್ರಾಯರ ಮಗ, ಉಡುಪಿ ತಾಲ್ಲೂಕು ಬೆಳಪುಗ್ರಾಮದ ಮರೆಯಂಗೋಳಿ—

—ಅರ್ಜಿದಾರಳು.

ಅರ್ಜಿದಾರಳ ಗಂಡ ತಾರೀಕು 8-3-1951 ರಲ್ಲಿ ಉಡುಪಿಕಸಬೆಯಲ್ಲಿ ಮೃತಪಟ್ಟ ಹಾಂಗಾಳ ಗೋವಿಂದ್ರಾಯರಿಗೆ ದಿ. ಜಾರಜ್ ಲ್ಯಾಫ ಎಶ್ಯೂರೆನ್ಸ್ ಕಂಪೆನಿ ಲಿಮಿಟೆಡ್ ಇವರ ನಂಬ್ರ 161183ನೆ ಪೋಲಿಸಿ ಪ್ರಕಾರ ಬರತಕ್ಕ ರೂ. 1000-0-0 ಮತ್ತು ಒರಿಯಂಟಲ್ ಗವರ್ನಮೆಂಟ್ ಸೆಕ್ಯೂರಿಟಿ ಲೈಫ್ ಎಶ್ಯೂರೆನ್ಸ ಕೊ. ಲಿಮಿಟೆಡ್. ಇವರ ನಂಬ್ರ 1267186ನೆ ಪೋಲಿಸಿ ಪ್ರಕಾರ ಬರತಕ್ಕ ರೂಪಾಯಿ 1000-0-0 ಹಣದ ವಸೂಲು ಮಾಡುವ ಬಗ್ಗೆ ಅರ್ಜಿದಾರಳಿಗೆ ವಾರೀಸು ಸರ್ಟಿಫಿಕೇಟು ಕೊಡಬೇಕಾಗಿ ದಾಖಲು ಮಾಡಿದ ಸದ್ರಿ ಅರ್ಜಿಯು ತಾರೀಕು 1-6-51ಕ್ಕೆ ಇಟ್ಟಿದೆ. ಆಕ್ಷೇಪಣೆಯಿದ್ದವರು ಸದರಿ ತಾರೀಕಿನ ಬೆಳಿಗ್ಗೆ 10ಗಂಟೆಗೆ ಈ ಕೋರ್ಟಿನ ಮುಂದೆ ಹಾಜರಾಗಿ ತಾವ್ಯೂ ಆಗಿ ಆಕ್ಷೇಪ ಮಾಡಿಕೊಳ್ಳತಕ್ಕದ್ದು.

K Laxminarayana Aithal
Vakil for plaintiff

ಉಡುಪಿ, ತಾರೀಕು 21-5-1951.

ಮಂಗಳೂರು

ವಿವಾಹ ಸಮಾರಂಭಗಳು— ಶ್ರೀ ಹಾರಾಡಿ ಸುಬ್ರಾಯ ಪೈಗಳ ಪುತ್ರ ಶ್ರೀ ದಾಮೋದರ ಪೈಗಳು [ಸಿಂಡಿಕೇಟ್ ಬ್ಯಾಂಕಿನ ಉಡುಪಿ ಏಜಂಟರು] ಶ್ರೀ ಕೆ. ಕೆ. ಭಟ್ಟರ ಪುತ್ರಿ ಶ್ರೀಮತಿ ಶಾರದೆಯನ್ನು ಇದೇ ತಾ. 16ರಲ್ಲು ಕೆನರಾ ಹೈಸ್ಕೂಲಿನ ಶಾರದಾ ಸದನದಲ್ಲಿ ವಿವಾಹವಾದರು.

ಬ್ರಹ್ಮಾವರ ಮಾಬುಕಳ ಹಂಚು ಕಾರ್ಖಾನೆಯ ಮ್ಯಾನೇಜರ್ ಶ್ರೀ ಡಿ. ಜಗಜ್ಜೀವನ ದಾಸ ಸೆಟ್ಟರ ಪುತ್ರಿ ಶ್ರೀಮತಿ ವತ್ಸಲೆಯನ್ನು ಡಿ. ಜಡ್ಜ ಶ್ರೀ ಬಿ. ಎಲ್. ಎಸ್. ರೈಗಳ ಪುತ್ರ ಶ್ರೀ ರತ್ನಾಕರ ರೈ ಬಿ. ಎ. ಬಿ. ಎಲ್. ಇವರೂ ಶ್ರೀ ಬಿ. ಎಲ್. ಎಸ್. ರೈಗಳ ಪುತ್ರಿ ಶ್ರೀಮತಿ ಶೈಲ ಇವರನ್ನೂ ನಿವೃತ್ತ ಡಿ. ಕಲೆಕ್ಟರ್ ಶ್ರೀ ಎ. ತಿಮ್ಮಪ್ಪ ಪೂಂಜರ ಪುತ್ರ ಶ್ರೀ ಲಕ್ಷ್ಮೀನಾರಾಯಣ ಪೂಂಜ ಎಮ್. ಬಿ. ಬಿ. ಎಸ್. ಇವರೂ ಇದೇ ತಾ. 18ರಲ್ಲು ಎಸ್. ಆರ್. ಎಸ್. ಹೋಮಿನಲ್ಲಿ ಬಹು ವಿಜೃಂಭಣೆಯಿಂದ ವಿವಾಹವಾದರು. ವಧೂವರರಿಗೆ ತುಂಬಾ ಪಾರಿತೋಷಕಗಳು ಬಂದಿದ್ದವು. ವಿವಾಹ ಸಮಾರಂಭದ ನಿಮಿತ್ತ ಅಂದು ಸಂಜೆ ಸತ್ಕಾರ ಸಮಾರಂಭವೊಂದೂ ಮೈಸೂರಿನ ಶ್ರೀಮತಿ ನೀಲಮ್ಮ ಕಡಂಬಿ ಮತ್ತು ಪಾರ್ಟಿಯವರ ಸುಶ್ರಾವ್ಯ ಗಾಯನ ಕಚೇರಿಯೂ ಜರಗಿತು.

ನಿವೃತ್ತ ಡಿಪ್ಯೂಟಿ ಡೈರೆಕ್ಟರ್ ಆಫ್ ಎಗ್ರಿಕಲ್ಚರ್ ರಾ। ಬ। ಕೆ. ಟಿ. ಆಳ್ವರ ಪುತ್ರಿ ಶ್ರೀ ಸಂಜೀವ ಆಳ್ವರು ದಿವಂಗತ ಮಾಲ್ಪೆ ಎಮ್. ಆರ್.। ಪೂಂಜರ ಪುತ್ರಿ ಶ್ರೀಮತಿ ಮಾಲತಿಯನ್ನು ತಾ 21ರಲ್ಲು ಎಸ್. ಆರ್. ಎಸ್. ಹೋಮಿನಲ್ಲಿ ವಿವಾಹವಾದರು. ನೂತನ ದಂಪತಿಗಳಿಗೆಲ್ಲಾ ಶುಭಾಶಯಗಳು.

ದ. ಕ. ಸಿನೆಮಾ ಕೆಲಸಗಾರರ ಯೂನಿಯನ್ ರಚನೆ— ಸಿನೆಮಾ ಕೆಲಸಗಾರರ ಮಹಾ ಸಭೆಯು ತಾ 16ರಲ್ಲು ಪಲಿಕ್ಸ್ ಪೈ ಬಜಾರಿನಲ್ಲಿ ಶ್ರೀ ಎಸ್. ಎಸ್. ಶೆಟ್ಟಿ. ಎಂ. ಎ. ಇವರ ಅಧ್ಯಕ್ಷತೆಯಲ್ಲಿ ಸೇರಿತು. ಬೆಂಗಳೂರಿನ ಸೋಶಲಿಸ್ಟ್ ಮುಖಂಡ ಶ್ರೀ ಪಾದ್ರಿ ಶಾಮಣ್ಣನವರು ದಕ್ಷಿಣ ಭಾರತ ಸಿನೆಮಾ ಕೆಲಸಗಾರರ ಎಸೋಸಿಯೇಶನಿನ ದ. ಕ ಜಿಲ್ಲಾ ಶಾಖೆಯ ಉದ್ಘಾಟನೆ ನಡೆಸಿದರು.

ಶಾಮುವೆಲ್ ಸೋನ್ಸ್ ಅಧ್ಯಕ್ಷ. ವಲ್ಲಿ ಅಹಮ್ಮದ್ ಮತ್ತು ವೇಣುಗೋಪಾಲ್ ಉಪಾಧ್ಯಕ್ಷರು. ಎಸ್. ರಾಜೀವ ಕಾರ್ಯದರ್ಶಿ, ಶಂಕರ ಬೇಕರ್ ಉಪಕಾರ್ಯದರ್ಶಿ. ಮತ್ತು ಲೋಕಯ್ಯ ಶೆಟ್ಟಿ ಮೊದಲಾದ ಇನ್ನು ಏಳು ಮಂದಿಯಿಂದ ಕೂಡಿದ ಕಾರ್ಯಕಾರಿ ಸಮಿತಿಯನ್ನು ರಚಿಸಲಾಯಿತು.

ದಕ್ಷಿಣ ಭಾರತ ಸಿನೆಮಾ ಕೆಲಸಗಾರರ ಎಸೋಸಿಯನ್ನಿನ ಅಧ್ಯಕ್ಷರುಮೊದಲಾದವರಿಂದ ಬಂದ ಸಂದೇಶಗಳನ್ನು ಓದಿ ಹೇಳಿದ ಮೇಲೆ ಡಾ। ಸಂಜೀವನಾಥರು ಕೆಲಸಗಾರರ ಬೇಡಿಕೆಗಳ ಕುರಿತು ಮಾತನಾಡಿದರು. ಅಧ್ಯಕ್ಷರು ಸಿನೆಮಾ ಕೆಲಗಾರರ ಸಂಘಟನೆಯ ಕುರಿತು ಭಾಷಣವಿತ್ತರು.

ಆರ್ಯಸಮಾಜ— ಮಹಾತ್ಮ ಸ್ವಾಮಿ ಶ್ರದ್ಧಾನಂದ ಸೇವಾಶ್ರಮದ ವಾರ್ಷಿಕೋತ್ಸವವು ತಾ. 27-5 51ಕ್ಕೆ ಸ್ವಾಮಿ ವಿಮಲಾನಂದರ ಅಧ್ಯಕ್ಷತೆಯಲ್ಲಿ ಜರಗಲಿದೆ.

ನಿಧನ— ಪ್ರಸಿದ್ಧ ದರ್ಜಿಗಳಾಗಿದ್ದ ಶ್ರೀ॥ ಡಿ. ಪೂವಪ್ಪ ಆಳ್ವರು ತಾ 17ರಂದು ನಿಧನಹೊಂದಿರುವುದು ವಿಷಾದಕರವಿದೆ, ಅವರು ಕೆಲ ಸಮಯದಿಂದ ಕ್ಷಯಪೀಡಿತರಾಗಿದ್ದರೆಂದು ತಿಳಿದುಬರುತ್ತದೆ.

ಹೊಸಪಕ್ಷಪತ್ರಿಕೆ— ಶ್ರೀ ಕೆ ಕೃಷ್ಣರಾವ್, ಬಿ ಎ, ಇವರ ಸಂಪಾದಕತ್ವದಲ್ಲಿ 'ಜನತಾರಾಜ್ಯ' ಎಂಬ ಪಾಕ್ಷಿಕವೊಂದು ಜೂನ್ 30ರಿಂದ ಪ್ರಕಟವಾಗಲಿದೆ ಎಂದು ತಿಳಿದುಬಂದಿದೆ.

ಮಂತ್ರಿಗಳ ಆಗಮನ— ಮದರಾಸ ಸರಕಾರದ ಸ್ಥಳೀಯ ಮತ್ತು ಸಹಕಾರಿ ಸಂಸ್ಥೆಗಳ ಮಂತ್ರಿ ಶ್ರೀ. ಕೆ. ಚಂದ್ರಮೌಳಿಯವರು ತಾ. 14ರಲ್ಲಿ ಮಂಗಳೂರಿಗೆ ಬಂದಾಗ ಜಿಲ್ಲಾಧಿಕಾರಿಗಳೂ ಸಾರ್ವಜನಿಕ ಮುಂದಾಳುಗಳೂ ಅವರನ್ನು ಸ್ವಾಗತಿಸಿದರು. ಶ್ರೀ। ಯು. ಶ್ರೀನಿವಾಸ ಮಲ್ಯ, ಡಾ। ನಾಗಪ್ಪ ಆಳ್ವ, ಡಾ। ಯು ಪಿ. ಮಲ್ಯ ಮೊದಲಾದವರು ರೈಲ್ವೆ ನಿಲ್ದಾಣಕ್ಕೆ ಬಂದಿದ್ದರು.

ಮರುದಿನ ಮಂತ್ರಿಗಳು ಪುತ್ತೂರಿಗೆ ತೆರಳಿ ಅಲ್ಲಿಯ ಪಂಚಾಯತ ಪರಿಷತ್ತನ್ನು ಉದ್ಘಾಟಿಸಿ ಹಿಂತೆ ಬಂದರು. ಮಧ್ಯಾಹ್ನ ಮೂಡಬಿದ್ರೆ, ಉಡುಪಿಯನ್ನು ಸಂದರ್ಶಿಸಿ ಮರುದಿನ ಮಾರಿ ಬಂದು ತಾ. 16ರಲ್ಲಿ ನೀಲೇಶ್ವರಕ್ಕೆ ತೆರಳಿ ತಾ. 17ರಲ್ಲಿ ಅಲ್ಲಿನ ಸಹಕಾರಿ ಸ್ಟೋರಿನ ನೂತನ ಕಟ್ಟಡವನ್ನು ಉದ್ಘಾಟಿಸಿ ಹಿಂದೆ ಬಂದು ಮಂಗಳೂರ ಕಾರ್ಯಕ್ರಮ ಮುಗಿಸಿ ತಾ. 19ರಲ್ಲಿ ಮದ್ರಾಸಿಗೆ ತೆರಳಿದರು.

ಹಳ್ಳಿ ವೈದ್ಯ— ಸರಕಾರಿ ಪರೀಕ್ಷೆಯಲ್ಲಿ ಪಾಸಾಗಿ 'ಹಳ್ಳಿ ವೈದ್ಯ'ದ ಸರ್ಟಿಫಿಕೇಟು ಹೊಂದಿದ ವೈದ್ಯರ ದೇಶೀ ವೈದ್ಯರ ರಿಜಿಸ್ಟರಿಯಲ್ಲಿ ಪ್ರತ್ಯೇಕವಾಗಿ 'ಗುರುವೈದ್ಯ'ರೆಂದು ರಿಜಿಸ್ಟ್ರ ಮಾಡಲಾಗುವುದೆಂದೂ ಅಂಥವರು ಇದ್ದಕ್ಕಿದ್ದ ರಿಜಿಸ್ಟ್ರಿಯಾಗಿದ್ದರೆ ಅವರನ್ನು ಫೀಸು ಇಲ್ಲವೇನೇ ಆ ವಿಭಾಗಕ್ಕೆ ಸೇರಿಸಲಾಗುವುದೆಂದೂ ಗೊತ್ತಾಗಿದೆ.

ಗ್ರಾಮಸಂಘ ಬೋಳೂರು ಇದರ ವರ್ಧಂತಿಯು ತಾ 13ರಲ್ಲು ಶ್ರೀ ಎಂ. ಸಜೀವ ಶಳ್ವರ ಅಧ್ಯಕ್ಷತೆಯಲ್ಲಿ ರೂರಲ್ ಎಲಿಮೆಂಟರಿ ಶಾಲಾ ಕಟ್ಟಡದಲ್ಲಿ ಜರಗಿತು. ರೂರಲ್ ವೆಲ್‌ಫೇರ್ ಆಫೀಸರ್ ಶ್ರೀ ಎಂ. ಶಾಂತಪ್ಪನವರು ಗ್ರಾಮ ಸಂಘದ ಪ್ರಯೋಜನಾದಿಗಳನ್ನು ವಿವರಿಸಿದರೂ ಅಗ್ಯಕ್ಷರು ಈ ಸಂಘದ ಕಾರ್ಯವನ್ನು ಪ್ರಶಂಸಿಸಿ ಶ್ರೇಯೋಭಿವೃದ್ಧಿಯನ್ನು ಹಾರೈಸಿದರು. ತರುವಾಯ ವಿವಿಧ ವಿನೋದಾವಳಿಗಳಾದುವು.

ಶ್ರೀ ಸುಬ್ರಮಣ್ಯ ಸಭಾಭವನದ ಪ್ರವೇಶ ಸಮಾರಂಭವು ತಾ 11ರಲ್ಲಿ ಶ್ರೀ N. D. ಕೃಷ್ಣರಾಯರಿಂದ ನೆರವೇರಿಸಲ್ಪಟ್ಟಿತು. ಸಂಜೆ ಸಭೆಯ ಅಧಿವೇಶನವು ಶ್ರೀ ಎಸ್. ಎಸ್. ಉಪಾಧ್ಯಾಯರ ಅಧ್ಯಕ್ಷತೆಯಲ್ಲಿ ಜರಗಿ ಮಾದಿ ಸ್ವೀಕಾರ, ಅಡಕತ ಮಂಡಳಿಯು ಆಟ್ಟ ನಡೆಯಿತು, ಈ ಸಭಾಸದನವನ್ನು ಕುದ್ರಿ ಪದ್ಮನಾಭಯ್ಯನವರ ಮನೆಯಲ್ಲಿ ಅವರ ಮಕ್ಕಳು ದಾನಮಾಡಿದ ಕುದ್ರಿ ಪದ್ಮನಾಭಯ್ಯ ಗಾರ್ಡನಿನಲ್ಲಿ ಶಿವ ಜಪ್ಪಣ ಗಮಾಜದ ಮಹಾಸಭೆಯಿಂದ ದಾನದಿಂದ ಕಟ್ಟಲಾಗಿದೆ.

ಹರಿಜನ ವಿದ್ಯಾರ್ಥಿ ಗೃಹವು ಮುಚ್ಚುವರೆ—ಸ್ವಾಮಿ ಈಶ್ವರಾನಂದರಿಂದ ಸ್ಥಾಪನೆಗೊಂಡು ಡಿಪ್ರೆಸ್ಡ್ ಕ್ಲಾಸಸ್ ಮಿಶನಿನವರ ದ ಸರ್ವೆಂಟ್ಸ್ ಆಫ್ ಇಂಡಿಯಾ ಸೊಸೈಟಿಯವರು ನಡೆಸಿಕೊಂಡು ಬಂದಿತ್ತು. ಕದ್ರಿಯ ಹರಿಜನ ವಿದ್ಯಾರ್ಥಿಗೃಹವನ್ನು ಬರುವ ಜೂನಿನಿಂದ ಮುಚ್ಚುವದೆಂದು ಸಂಬಂಧಪಟ್ಟವರು ನಿಶ್ಚಯಿಸಿರುವರೆಂದು ತಿಳಿದು ಬರುತ್ತದೆ. ತಾ. 13ರಲ್ಲಿ ದಲಿತವರ್ಗದವರ ಸಭೆಸೇರಿ ಇದನ್ನು ಖಂಡಿಸಿರುದಲ್ಲದೆ ಮುಂದೆ ಅದನ್ನು ಯಾವರೀತಿಯಾದರೂ ನಡೆಸುವ ವ್ಯವಸ್ಥೆ ಮಾಡಬೇಕೆಂದೂ ನಿರ್ಣಯಿಸಲಾಗಿದೆ.

ಕಮ್ಯೂನಿಸ್ಟರ ಬಂಧನ— ಕಮ್ಯೂನಿಸ್ಟ್ ಪ್ರಮುಖ ಶ್ರೀ। ಎಂ ಎಚ್. ಕೃಷ್ಣಪ್ಪನವರನ್ನು ತಾ 14ರಲ್ಲಿ ಬಂಧಿಸಿರುತ್ತಾರೆ.

ಪೊಪ್ಯುಲರ್ ಇನ್ಶ್ಯೂರೆನ್ಸ್ ಕಂಪೆನಿಯ— ನೂತನ ಕಟ್ಟಡದ ಪ್ರವೇಶ ಸಮಾರಂಭವು ಮದ್ರಾಸ್ ಮೇಯರ್ ಶ್ರೀ. ಆರ್. ರಮಣ ಥನ್ ಚೆಟ್ಟಿಯಾರರ ಹಸ್ತದಿಂದ ತಾ. 21ರಲ್ಲಿ ವಿಜೃಂಭಣೆಯಿಂದ ಜರಗಿಸಲ್ಪಟ್ಟಿತು.

ಕಳ್ಳರು— ತಾ 15 ಮತ್ತು 16ರಲ್ಲಿ ನಡೆದ ಮಾರಿ ಪೂಜೆಯ ಯಾವಪ್ರಾಣಬಲಿಯೂ ಇಲ್ಲದೆ ಬರೇ ಹಣ್ಣು ಕಾಯಿಗಳಿಂದ ಜರಗಿಸಲ್ಪಟ್ಟಿರುವುದು ಈ ಬಗ್ಗೆ ಎಗ್ಸಿಕ್ಯೂಟಿವ್ ಆಫೀಸರ್ ಶ್ರೀ ಅಮ್ಮಕೃಷ್ಣ ಮೂರ್ತಿರಾವ್ ಮತ್ತು ಇತರ ಮೊಕ್ತೇಸರರು ಅಭಿನಂದನೀಯರು. ಮೊದಲು ಇಲ್ಲಿ ಮಾರಿಗೆ ಕೋಳಿಗಳನ್ನೂ 3-4 ವರ್ಷಗಳಿಂದ ಆಡು ಕುರಿ, ಹಂದಿ ಕೋಣಗಳನ್ನೂ ಅಮುತಿಕೊಡುತ್ತಿದ್ದರು.

ಪಂಚಾಯತ ಸಮ್ಮೇಳನ, ಪುತ್ತೂರು

ಪುತ್ತೂರು ತಾಲೂಕುಪಂಚಾಯತರುಗಳ ಸಮ್ಮೇಳನವು ತಾ 15ರಲ್ಲಿ ಶ್ರೀ ಧರ್ಮಸ್ಥಳ ಮಂಜಯ್ಯ ಹೆಗ್ಗಡೆಯ ಅಧ್ಯಕ್ಷತೆಯಲ್ಲಿ ಪುತ್ತೂರು ಸಹಕಾರ ಸಂಘದಲ್ಲಿ ನೆರವೇರಿತು. ಮಾನ್ಯ ಮಂತ್ರಿ ಶ್ರೀ ಕೆ. ಚಂದ್ರಮೌಳಿಯವರು ಸಮ್ಮೇಳನದ ಉದ್ಘಾಟನೆ ಮಾಡಿದರು.

ಸ್ವಾಗತ ಕಮಿಟಿಯ ಅಧ್ಯಕ್ಷ ಶ್ರೀ ಎಂ. ಸದಾಶಿವ ರಾಯರು ಅತಿಥಿಗಳನ್ನು ಸ್ವಾಗತಿಸಿ, ಸಮ್ಮೇಳನದ ಉದ್ದೇಶವನ್ನು ವಿವರಿಸಿದರು. ಪುತ್ತೂರು ತಾಲೂಕಿನಲ್ಲಿ 151 ಗ್ರಾಮಗಳಿವೆಯಾದರೂ ಪಂಚಾಯತ ಬೋರ್ಡುಗಳಿರುವುದು ಬರೇ 61 ಇವು ಶ್ರೀ ಮೊಳಹಳ್ಳಿ ಶಿವರಾಯರ ಪ್ರೇರಣೆ ಮತ್ತು ಮಾರ್ಗದರ್ಶನದಿಂದ ಹುಟ್ಟಿಬೆಳೆದವು ಹಳ್ಳಿಗಳ ಉದ್ಧಾರವಾಗಬೇಕಾದರೆ ಬೋರ್ಡಿನಲ್ಲಿ ನಿಸ್ವಾರ್ಥ ಸೇವಕರು ಬರಬೇಕು ಎಂದರು

ತರುವಾಯ ಶ್ರೀ ಕೆ ಚಂದ್ರಮೌಳಿಯವರು ಸಮ್ಮೇಳನವನ್ನು ಉದ್ಘಾಟಿಸುತ್ತ ನಮ್ಮ ದೇಶದಲ್ಲಿ ೭-೮೦-೧೦ ಪ್ರತಿಶತ ಜನರು ವಾಸ ಹಳ್ಳಿಗಳಲ್ಲಿ ಇರುವ ಮೇಲೆ ಹಳ್ಳಿಗಳ ಉದ್ಧಾರವೇ ದೇಶದ ಉದ್ಧಾರ ಹಳೆ ಮತ್ತು ಹೊಸ ಪಂಚಾಯತುಗಳು ಇಂದು ನಿಜವಾಗಿಯೂ ಪ್ರಜಾಪ್ರಭುತ್ವದ ತಳಪಾಯಗಳಾಗಿರುವುದರಿಂದ ಹೊಸಕಾಯಿದೆಯು ಕೆಲವು ನವಾವಕಾಶಗಳನ್ನು ನಮ್ಮ ಹಳ್ಳಿಗರಲ್ಲಿ ಉಂಟು ಮಾಡುವುದು. ಇದರಿಂದ ಹಳ್ಳಿಗರ ಶ್ರೇಯಸ್ಸಾದೀತು. ಇಂದು ಸಾರ್ವಜನಿಕ ಜೀವನವು ನೈತಿಕ ಬಲವಿಲ್ಲದೆ ಕಳೆಗುಂದಿದೆ, ಒಬ್ಬ ನಿಸ್ವಾರ್ಥ ದೇಶಸೇವಕನಿದ್ದರೂ ಹೊಸಕಾಯಿದೆಯಂತೆ ಕೆಲಸ ಮುಂದೊತ್ತಲು ಅಧಿಕಾರವಿದೆ. ಹೊಸಕಾಯಿದೆಯಂತೆ ಹಳ್ಳಿಗರಿಗೆ ಪೂರ್ಣ ಅಧಿಕಾರವಿದ್ದು, ತಮ್ಮ ತಮ್ಮ ಕೆಲಸಗಳನ್ನು ತಾವೇ ಮಾಡಿಕೊಳ್ಳುವುದಾಗಿದೆ. ಎಂದು ಪಂಚಾಯತ ಮತ್ತು ಸಹಕಾರ ಸಂಘಗಳಾದವೋ ಅಂದೇ ನಮ್ಮ ಹಳ್ಳಿಗಳ ಉದ್ಧಾರವಾದ್ದರಿಂದ ಜನತೆ ಈ ಕುರಿತು ವಿಶೇಷ ಆಸಕ್ತಿ ವಹಿಸಬೇಕೆಂದೂ ಹೇಳಿದರು.

ಬಳಿಕ ಅಧ್ಯಕ್ಷರು ಮಂತ್ರಿಗಳನ್ನು ಸಮ್ಮೇಳನದ ವ್ಯವಸ್ಥೆ ಗೊಳಿಸಿದವರನ್ನು ಅಭಿವಂದಿಸಿ "ಹಳ್ಳಿಗಳ ಪುನರ್ನಿರ್ಮಾಣಕ್ಕೆ ಹೊಸಪಂಚಾಯತ ಕಾನೂನು ಬಂದಿದೆ, ಈ ಕಾಯಿದೆಯಿಂದ ಸರಕಾರದ ಜವಾಬ್ದಾರಿ ತುಂಬಾ ಕಡಿಮೆಯಾಗಿದೆ; ಹಳ್ಳಿಗಳ ಜವಾಬ್ದಾರಿ ದೊಡ್ಡದಾಗಿದೆ ಆದರೆ ಸರಕಾರವು ಪಂಚಾಯತಗಳಿಗಿತ್ತ ಹಣ ಮಾತ್ರ ಸಾಲದು. ಎಂದೂ ಸಹಕಾರಿ ಅಧಿಕಾರಿಗಳು ಜನತೆಯ ಹಿತಕ್ಕಾಗಿ ಸೌಹಾರ್ದದಿಂದಿರಬೇಕೆಂದೂ ತಿಳಿಸಿದರು.

ಶ್ರೀ ಎಂ. ಸದಾಶಿವರಾಯರು ಬಂದ ಸಂದೇಶಗಳನ್ನು ಓದಿದ ಬಳಿಕ ಕೆಳಗಿನ ಠರಾವುಗಳು ಮಂಜೂರಾದವು. ಮುಂದಿನ ಚುನಾವಣೆಯಲ್ಲಿ ಆರಿಸಲ್ಪಡುವ ಅಧ್ಯಕ್ಷ ಉಪಾಧ್ಯಕ್ಷರಿಗೆ ಸರಿಯಾದ ಮಾಹಿತಿ ಕೊಡಲು ತರಬೇತಿ ಶಿಬಿರ ತೆರೆಯಬೇಕು; ದ್ವಿತೀಯ ಶ್ರೇಣಿಯ ಪಂಚಾಯತಗಳನ್ನು ಅಧಿಕಾರಿಗಳು ಆರು ತಿಂಗಳಿಗೊಮ್ಮೆ ಸಂದರ್ಶಿಸಿ ಮಾಹಿತಿ ಕೊಡಬೇಕು, ವರ್ಷಂಪ್ರತಿ ಪ್ರಸಂಗ್ರಾಹಕ ಕೇಂದ್ರಗಳನ್ನು ನೇಮಿಸಬೇಕು, ಎರಡನೇ ತರಗತಿಯ ಬೋರ್ಡಿನಲ್ಲಿ ಬರವಣಿಗೆ ಕೆಲಸಕ್ಕೆ ಉಪಾಧ್ಯಾಯರನ್ನು ಕೆಲಸಕ್ಕಿರಿಸುವ ಅಧಿಕಾರವಿರಬೇಕು, ಪಂಚಾಯತಗಳಿಗೆ ಪಕ್ಕಾ ಕಟ್ಟಡಕ್ಕಾಗಿ ಇಂಜಿನಿಯರಿಂಗ್ ಸಿಬಂದಿ ಇರಬೇಕು, ವಿದ್ಯಾ ಇಲಾಖೆಯವರ ವಿಶೇಷ ಸವಲತ್ತಿರಬೇಕು, ಎರಡುಸಾವಿರ ಜನಸಂಖ್ಯೆ ಗ್ರಾಮಗಳಿಗೆ ಮಾತ್ರ ಈ ಕಾಯಿದೆಯನ್ನು ಅನ್ವಯಿಸದೆ ಎಲ್ಲಾಗ್ರಾಮಗಳಲ್ಲೂ ಪಂಚಾಯತಗಳಾಗುವಂತೆ ಮಾಡಬೇಕು, ಕನ್ನಡಬಲ್ಲ ಅಧಿಕಾರಿಗಳನ್ನು ನೇಮಿಸಬೇಕು, ಸರಕಾರಿ ಸ್ಥಳವನ್ನು ಜಿಲ್ಲಾ ಬೋರ್ಡಿನಂತೆ ಪಂಚಾಯತಗಳೂ ಉಪಯೋಗಿಸುವಂತಾಗಬೇಕು. ಇತ್ಯಾದಿ ಬಳಿಕ ಅಧ್ಯಕ್ಷರ ಉಪಸಂಹಾರ ಭಾಷಣವಾಯಿತು., ಶ್ರೀ ಎ. ಪಿ. ಸುಬ್ಬಯ್ಯನವರು ಧನ್ಯವಾದಗಳನ್ನಿತ್ತರು. ಆರ್ಯಾಪು ಲೋ। ಬೋ। ಉಪಾಧ್ಯಕ್ಷ ಶ್ರೀ ವೈನಾರಾಯಣ ರೈಗಳು ಅತಿಥಿಗಳಿಗೆ ಟಿಪಾರ್ಟಿ ಕೊಟ್ಟಿದ್ದರು.

ಮೂತ್ರಸ್ರಾವ ನಿಂತಿತು

'ಕುಮಾರಿ' ಬಿಲ್ಲೆಗಳನು ಉಪಯೋಗಿಸಿದರೆ ಪದೆಪದೆ ಮೂತ್ರಸ್ರಾವವಾಗುವುದು, ಹಠೋಟಿಗೆ ಬರುವುದು, ಈ ಔಷಧ ಸೇವನೆಯಿಂದ ತೀವ್ರ ಗುಣಹೊಂದಬಹುದು, ಯಾವ ಬಾಧಕವೂಯಿಲ್ಲ. ಸಾಧಾರಣ ರೋಗಿಗೆ ಶಾಶ್ವತ ಗುಣವಾಗಿದೆ— ಬೆಲೆ; ರೂ 3; ಸ್ಪೆಶಲ್ ರೂ. 5- ಅಧಿಕಾಧಿಕ ಸ್ಪೆಶಲ್ ರೂ, 8-[ವಿ. ಪಿ ಖರ್ಚುದಾಖಲು ಪ್ರತ್ಯೇಕ.]

Mis D. DEVEE, F. DS. (N. J.)
Tollygunge CALCUTTA.

ಸದ್ಯವೇ ಚುನಾವಣೆ ಇದೆ.
ಆದ್ದರಿಂದ ಚುನಾಯಿಸಿದ ಚಿತ್ರ ಪ್ರದರ್ಶನ
ನ್ಯೂ ಥಿಯೇಟರಿನವರ ತಾರೀಖು 21-5-51ರಿಂದ
ಅಂಜಾನ್ ಪುರ್.
ಸುನಂದ, ರಾಮ ನೆಹರು, ಹೀರಾ ಬಾಯಿ,
ಸಂಗೀತ: ಆರ್. ಸಿ. ಬೋರಲ್
ಶ್ರೀ ರಾಮಕೃಷ್ಣ ಥಿಯೇಟರ್ ಲಿಮಿಟೆಡ್. ಉಡುಪಿ.
ಬರುವುದು:
ಆರ್ಜೂ
ದಿಲೀಪ್ ಕುಮಾರ್, ಕಾಮಿನಿ ಕೌಶಲ್.

ಇದೀಗ ಪ್ರಕಟವಾಗಿದೆ.
ವೀರಪ್ಪ ಗುಂಗಟೆ, ಹಾವೇರಿ
ಇವರ
ನೀತಿ ವಿನೋದ ಕತೆಗಳು
ನೀತಿ ಮತ್ತು ವಿನೋದಪರವಾದ
35 ಕತೆಗಳ ಸಂಗ್ರಹ
ಮುಖ್ಯವಾಗಿ ಸ್ತ್ರೀಯರಿಗೂ, ಮಕ್ಕಳಿಗೂ ಬೋಧಪ್ರದವಾದ ಕತೆಗಳಿಂದೊಡಗೂಡಿದೆ.
ಬೆಲೆ: 0 12 9
ವಿವರದ ಕ್ಯಾಟಲಾಗಿಗೆ ಬರೆಯಿರಿ
ಅಂತರಂಗ ಕಾರ್ಯಾಲಯ,
ಉಡುಪಿ

ನವರತ್ನಹಾರ

ಬರೆದವ– ವಿರಹಿ

ಸಿಂಗಾರದ ಹೂಗಲಿಗಳ |
ಸುಂದರವಾದ ಸಮುಚ್ಚಯ ನಿನ್ನಯ ಜೊತೆಗೆ ||
ದೀಪಿಕೆ ಎನ್ನಯ ಮೆರೆದೆ |
ಅಂಗಣಯಾಗಿಸಿದೆಯು ನಿನ್ನಸಿಯನ
ಮನಕೆ ॥ ೧

ಬಾಗಿರದಲೆಗಳ್ ತೂಗುವ |
ತೋಳಿಗೆ ಬೆದರಿದೆ ಕೆದರಿದೆ ನಡುಗಿದೆ
ಮರುಗಿದೆ |

ಹಗಲಿಗಲು ಹೆಕರತೂ |
ನಗೆ ಹೆದರದೆ ಹೋಗುವ ಅತಿ ಸಾಹಸ.
ಮಾಂತೆ ॥ ೨ |

ಮಾತಾಪಿತರಿಗೆ ಅತಿಶಯು |
ಪ್ರೀತಿಯ ಹಿರಿಯ ಕುವರಿಯಾಗಿಸಿಹಲು|
ನಿನ್ನಾ |

ಪತಿದೇವನಿಗೆ ಪ್ರೀತಿಯ |
ಪತ್ನಿಯು ಸುತನಿಗೆ ಮಾತೆಯು ನೀನಾಗ
ಲೆಂಬಂತಾದೆ ॥ ೩ ॥

ಸೋದರ ಸೋದರಿಂದರ್ಕಳ |
ಮೋದಕೆ ನೀನೆಲಾದೆಯು ಪಥದರ್ಶಿನಿಯೂ |
ಬಾಧಿತ ಬಾಧ್ಯತೆ ಭೂಧಿಸೆ |
ಬೋಧನ ಕಾರ್ಯವ ನೀಗಿದೆ ಎನ್ನಭಿ
ಮತದಿಂ ॥ ೪ ॥

ನಾರತ ಜೀವನ ನೀರಸ |
ನೀಲದ ದಿಡಲವ ಥಡಿಸಿದೆ ನಿನ್ನವರೆಲ್ಲಂ |
ಚರಣಕಿದೇವನ ಮಮತೆಯು |
ಉರುಕೋಮಲ ಕುವರನ ಮಾತಾದಿ
ಗಳೆಲ್ಲಂ ॥ ೫ |

ಸುಮೂಸದ ಪದಿನೇಳನೆ |
ಯಾ ಮೂಡುವಕಾಲಂ ನಿನ್ನಯ ಕಂಠವ
ಕಾಲಾಯುತ್ತಿಂ ॥

ನಮ್ಮೆಲ್ಲರ ಜೀವನಕಿದು |
ದಿನ್ಮನೆ ಕೊರಗುವ ದಿನಗಳ ಮೂಡುವ
ಕಾಲ ॥ ೬ ||

ಬಲು ಕಷ್ಟದ ಸಂಸಾರಕೆ |
ಸಿಲುಕದೆ ಜೀವನ ಬಿಗುಹಿಂ ಪರಿದೋಡಿದೆ
ನೀಂ |

ಸಿಲುಕಲ್ ನಗ್ಗವು ನಿನಗದು |
ಸಲೆಬಾಧಿಸಿನ್ನ ಮುಗುಳದ ನೆಲೆಯನ್
ಅರಿಯಂ ॥ ೭ ॥

ನಮ್ಮಯ ಬಲುದಿನದಾಶೆಯು |
ನೆಪಮ್ಮಿಯ ಬಗೂರಿನ ಸಿರಿಮೊಗವ ಕಂಡು
ತುಂಬಿಂ ॥

ಬಮ್ಮಿಯ ಕಣ್ಣಿನ ಬಿಂದುಗ |
ಳಮ್ಮಯ ಸೌಖ್ಯದ ಬಾಳ್ಗೆ ಸುಡಿಸಿದೆ
ಶಾಕ್ಯಂ ॥ ೮ ॥

ನೊಂದುಂ ಪ್ರೀತಿಯ ಬಿಗುಹಿಂ |
ಒಂದುಂ ಕವನವನಂತ್ಯದಿನದ ನೆನಪಿಂಗೆಂ |
ದೆಂದುಂ ಕುಂದದುದಾಗದೆಯುಂ |
ಇಂದುಂ ನಿನ್ನಯ ಕೊರಳಿಗೆ ನೀಡಿದಿ
ತೊಡಿಸೆಂ ॥ ೯

ಲಕ್ಷ್ಮಿ ಸೆಂಟಾಲ್ ಮಾತ್ರೆ

ಇದರ ಉಪಯೋಗದಿಂದ ಬಹುಕಾಲದ ಮೇಹ, ಪ್ರಮೇಹ, ಮೂತ್ರದ ಉರಿ, ಮೂತ್ರ ಕೃಚ್ಛ್ರ, ಮೂತ್ರದೊಡನೆ ಯಾ ಮುಂದಾಗಿ ಬಿಳುಪು, ಅರಸಿನ, ಕೆಂಪು ಈ ವರ್ಣಗಳಲ್ಲಿ ಕೀವು ಹೋಗುವುದು,ತೊಡೆ ಸಂದಿನಲ್ಲಿ ನೋವು, ಕಾಲ ಗಂಟುಗಳಲ್ಲಿ ವೇದನೆ, ಕಣ್ಣಿನಲ್ಲಿ ಕೀವು ಬರುವುದು, ಶರೀರದಲ್ಲಿ ಉಷ್ಣತೆ, ಸ್ವಪ್ನೇಂದ್ರಿಯ ಇವೆಲ್ಲಾ ಖಾತ್ರಿಯಾಗಿ ಗುಣಹೊಂದುವುದು

ಡಬ್ಬಿ ಒಂದಕ್ಕೆ ರೂ. 2—0—0

ಏಜಂಟ್ಸ್—

ಶಾ ಕಂಪೆನಿ, ಮಂಗಳೂರು

ಕುಂಬಳೆ—ತ್ತಾ. ಒರಂದು ರಾತ್ರಿ ಮೊಗ್ರಾಲಿನಲ್ಲಿ ನಡೆದ ಕಳವು ಸಂಬಂಧ ಕಾಯಿಂಞ, ಅಂದುಞ್ಞ, ಕುಂಞಪ್ಪ ಈ ಮೂವರನ್ನು ಕೈದುಮಾಡಲಾಗಿದೆ.

ಬಂಟ್ವಾಳದಲ್ಲಿ ಕಳೆದ ಆದಿತ್ಯವಾರ ಹೆತ್ತೊಡನೆ ಪಾತಿ ಎಡೆಯಲ್ಲಿ ಬಿಟ್ಟುಹೋದ ಒಂದು ಶಿಶು ಸಿಕ್ಕಿದ್ದು ಅದನ್ನು ಮಂಗಳೂರು ಆರ್ಯಸಮಾಜದವರಿಗೆ ಸಾಕಲು ಕಳುಹಿಸಿರುವುದಾಗಿಯೂ ತಿಳಿದು ಬರುತ್ತದೆ.

ಬೆಳ್ತಂಗಡಿಯ ಮದ್ರಸತ್ತುಲ್ ಇಸ್ಲಾಂ ಶಾಲಾ ವಾರ್ಷಿಕ ಸಭೆಯು ತಾ. ೧೫ರಂದು ಶ್ರೀ ಕೆ ವಾಸುದೇವ ಮಾಡಿತ್ತಾಯರ ಅಧ್ಯಕ್ಷತೆಯಲ್ಲಿ ಜರಗಿತು.

ದಕ್ಷಿಣ ಕನ್ನಡ ಸೋಶಲಿಸ್ಟ್ ಪಾರ್ಟಿಯ ಮಹಾಸಭೆಯು ತಾ. ೧೩ರಂದು ಕಾಸರಗೋಡು ಮಲ್ಲಿಕಾರ್ಜುನ ದೇವಸ್ಥಾನದ ಬಳಿ, ಶ್ರೀ ಎಸ್. ಎಸ್. ಶೆಟ್ಟಿಯವರ ಅಧ್ಯಕ್ಷತೆಯಲ್ಲಿ ಸೇರಿತು ಶ್ರೀ ಗೋವಿಂದನ್, ವಿಟ್ಠಲದಾಸ್ ಉದೂಜ್, ಶ್ಯಾಮಣ್ಣ ಪೌರಶಕ್ತಿ ಸಂಪಾದಕರಾದ, ಶ್ರೀ ಬಿ ಸಿ. ವರ್ಗೀಸ್, ಶ್ರೀನಿವಾಸ ಶೆಟ್ಟಿ ಕೂಡಾ ಪಾರ್ಟಿಯ ಉದ್ದೇಶವನ್ನು ವಿವರಿಸಿ ಭಾಷಣಕೊಟ್ಟರು. ಬರುವ ಚುನಾವಣೆಯಲ್ಲಿ ಸ್ಪರ್ಧಿಸಬೇಕೆಂಬ ಇತ್ಯಾದಿ ಠರಾವುಗಳಾದುವು.

ವಯಸ್ಕರ ಶಿಕ್ಷಣ ತರಬೇತಿ ಶಾಲೆ, ಪಡುಬಿದ್ರಿ—ಸಮ್ಯುಕ-ದಿನ ನಿರಕ್ಷರ ವಯಸ್ಕರ ಶಿಕ್ಷಣಕ್ಕಾಗಿ ಅಧ್ಯಾಪಕರ ತರಬೇತಿ ಶಿಬಿರವು ಇದೇ ತಾ. 18 5-51ರಲ್ಲು ಇಲ್ಲಿ ತೆರೆಯಲ್ಪಡುವುದಾಗಿಯೂ ಎಂಟನೇ ದರ್ಜೆ ಯಾ ಅದಕ್ಕಿಂತ ಮೇಲ್ಪಟ್ಟ ವಿದ್ಯಾಭ್ಯಾಸ ಹೊಂದಿ ಸರ್ಟಿಫಿಕೇಟು ಪಡೆದಿದ್ದ 20ರಿಂದ 45ವರ್ಷಗಳೊಳಗಿನ ಪ್ರಾಯದ ಉಮೇದ್ವಾರರನ್ನು ಈ ತರಬೇತಿಗೆ ತೆಗೆದುಕೊಳ್ಳಲಾಗುವುದೆಂದೂ ತರಬೇತಿ ಅವಧಿಯು 6ವಾರಗಳೆಂದೂ ತರಬೇತಿಹೊಂದಿ ಪ್ರಶಸ್ತಿ ಪತ್ರ ಪಡೆದವರು ವಯಸ್ಕರ ಶಿಕ್ಷಣ ಶಾಲೆಗಳನ್ನು ತೆರೆದು ಸರಕಾರದಿಂದ ಗ್ರಾಂಟು ಪಡೆಯಲು ಅರ್ಹರಾಗುವರೆಂದೂ, ತರಬೇತಿ ಸಮಯ ಉಮೇದ್ವಾರರಿಗೆ ತಿಂಗಳಿಗೆ 22 8 0 ಸ್ಟೈಪೆಂಡ್ ಕೊಡಲಾಗುವುದೆಂದೂ ಪಡುಬಿದ್ರಿಯಲ್ಲಿ ಒಂದಾದ ಬೇಸಿಕ್ ಇನ್ಸ್ಪೆಕ್ಟರಂತೆ ಮೂರು ಶಿಕ್ಷಕರ ತರಬೇತಿವರ್ಗ ಜರಗಿಸಲಾಗುವುದೆಂದೂ ಉಡುಪಿ ಉತ್ತಮ ಶ್ರೇಣಿಯ ಶಾಲಾ ಪರೀಕ್ಷಾಧಿಕಾರಿಗಳೂ ತಿಳಿಸುತ್ತಾರೆ.

ಶಿರ್ವ—ಅಕ್ಷೀಣ ಸಿಡುಬುರೋಗ ಹರಡುವುದಾಗಿಯೂ ವಿಳಂಬವಾಗಿ ದಾಕು ಹಾಕುವ ಕ್ರಮ ಕೈಕೊಂಡಿರುವುದಾಗಿಯೂ ಕೇಳಲಾಗಿದೆ.

ಮೂಯಿಪ್ಪಾಡಿ—ಸರಕಾರಿ ಬುನಾದಿ ತರಬೇತಿ ಶಾಲೆಯ ತರಬೇತಿ ವಿದ್ಯಾರ್ಥಿಗಳು ತಾ. 11ರಲ್ಲಿ ಮಯ್ಯನೂರಿಗೆ ಪ್ರವಾಸ ಹೋಗಿದ್ದು ಅಲ್ಲಿನ ಪ್ರಸಿದ್ಧ ಬಾರಿ ಕೇಂದ್ರವನ್ನು ನೋಡಿ ಮುಂದಿನ ಬೇಕಲಕೋಟೆಯನ್ನು ಸಂದರ್ಶಿಸಿಕೊಂಡು ಬಂದಿರುವರು.

ಕುರುಕ್ಷಾಲು—ಕೋಪರೇಟಿವ್ ಸೊಸೈಟಿಯು 'ಗೋಡೌನು' ವ 'ಕಮ್ಯೂನಿಟಿ ಹೋಲಿನ' ಬಗ್ಗೆ ಕುಂಜಾರುಗಿರಿ ಕೇಂದ್ರದಲ್ಲಿ ಕಟ್ಟಿಸಿದ ನೂತನ ಕಟ್ಟಡದ ಪ್ರವೇಶ ಸಮಾರಂಭವೂ ಸೊಸೈಟಿಯ ರಜತಮಹೋತ್ಸವವೂ ತಾ 27-5 51ಕ್ಕೆ ಜಿಲ್ಲಾ ಬೋರ್ಡ್ ಪ್ರೆಸಿಡೆಂಟರಾದ ಶ್ರೀ ಬಿ. ಮಂಜಯ್ಯ ಹೆಗ್ಡೆ, ಬಿ. ಎ. ಬಿ. ಎಲ್. ಎಡ್ವೋಕೇಟ್ ಮಂಗಳೂರು ಇವರ ಅಧ್ಯಕ್ಷತೆಯಲ್ಲಿ ಜರಗಲಿರುವುದು.

ಪುತ್ತೂರು— ಇದೇ ತಾ. 2ರಲ್ಲು ಪುತ್ತೂರು ಡಿವಿಜನಲ್ ಆಫೀಸರ್ ಶ್ರೀ ಬಿ ನಾರಾಯಣ ಹೆಗ್ಡೆಯವರ ಅಧ್ಯಕ್ಷತೆಯಲ್ಲಿ ಜರಗಿದ ಸಾರ್ವಜನಿಕ ಸಭೆಯಲ್ಲಿ ಕಳೆದ ವರುಷ ಪುತ್ತೂರು ಡಿವಿಜನಿನಲ್ಲಿ ಹೆಚ್ಚು ಸಂಖ್ಯೆಯಲ್ಲಿ ಮರಗಿಡಗಳನ್ನು ವನಮಹೋತ್ಸವ ಕಾಲದಲ್ಲಿ ಬೆಳೆಯಿಸಲು ಕಾರಣರಾದ ಈ ಕೆಳಗಿನ ಗ್ರಾಮ ಉದ್ಯೋಗಸ್ಥರಿಗೆ ರಜತ ಪದಕಗಳನ್ನೂ ಬಹುಮಾನ ಕೊಡಲಾಯಿತು- 1) ಕಾಸರಗೋಡು ತಾಲೂಕಿನ ಬೇಲೂರು ಗ್ರಾಮದ ಪಟೇಲ್ ಶ್ರೀ ಶಂಕರ ಕಡಂಬಳಿತ್ತಾಯ. 2) ಪುತ್ತೂರು ತಾಲೂಕಿನ ಕೊರ್ತಿ(?) ಗ್ರಾಮದ ಪಟೇಲ್ ಶ್ರೀ ವೆಂಕಪ್ಪ ರೈ. 3) ಬೆಳ್ತಂಗಡಿ ಸಬ್ ತಾಲೂಕಿನ ನೆರಿಯ ಗ್ರಾಮದ ಪಟೇಲ್ ಶ್ರೀ ವೆಂಕಟಕೃಷ್ಣ ಹೆಬ್ಬಾರ್. 4) ಬೆಳ್ತಂಗಡಿ ಸಬ್ ತಾಲೂಕಿನ ಪಡುವೆಟ್ನು ಗ್ರಾಮದ ಪಟೇಲ್ ಶ್ರೀ ಕೃಷ್ಣಭಟ್.

ಬಿಲ್ಲವರ ಎಸೋಸಿಯೇಶನ್ ೧೬, ರಘುನಾಥ ದಾದಾಜಿ ರಸ್ತೆ ಕೋಟೆ, ಮುಂಬಯಿ—ವರ್ಷಂಪ್ರತಿ ಕೊಡುವಂತೆ ಈ ಸಲವೂ ಈ ಮೇಲಿನ ಎಸೋಸಿಯೇಶನ್ ಬಿಲ್ಲವ ಜಾತಿಯ ಬಡ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನ ಕೊಡಲಿರುವುದು. ಅದ ಪ್ರಯುಕ್ತ ವೇತನ ಪಡೆಯಬಿಚ್ಛಿಸುವ ವಿದ್ಯಾರ್ಥಿಗಳು ಇದರ ಸಲುವಾಗಿ ತುಂಬುವ ಅರ್ಜಿಪತ್ರಗಳನ್ನು ಎಸೋಸಿಯೇಶನಿನ ಕಾರ್ಯದರ್ಶಿಯವರಿಗೆ ಜೂನ್ ತಿಂಗಳ ತಾರೀಕು 30ರೊಳಗೆ ಬರೆದು ಪಡಕೊಳ್ಳಬಹುದು.

ಬಿಲ್ಲವ ಜಾತಿಯ ವಿದ್ಯಾರ್ಥಿಗಳಲ್ಲಿ ಹೆಚ್ಚಿನ ಶ್ರದ್ಧೆಯಿಂದ ಕಲಿಯುವ ಬಗ್ಗೆ ಉತ್ಸಾಹವನ್ನು ಹುಟ್ಟಿಸುವ ಇರಾದೆಯಿಂದ ಈ ಮೇಲಿನ ಎಸೋಸಿಯೇಶನ್ "ಮೆಟ್ರಿಕ್ ತರಗತಿಯ ಪಬ್ಲಿಕ್ ಪರೀಕ್ಷೆಯಲ್ಲಿ ಉಚ್ಚ ತರಗತಿಯಲ್ಲಿ ಪಾಸಾಗುವ ವಿದ್ಯಾರ್ಥಿಗಳಿಗೆ ಎರಡು ಬಹುಮಾನಗಳನ್ನು ಕೊಡಲು ನಿರ್ಧರಿಸುವುದು. ಈ ಎರಡು ಬಹುಮಾನಗಳಲ್ಲಿ ಒಂದನ್ನು ಮೆಟ್ರಿಕ್ ಯುನಿವರ್ಸಿಟಿಯ ಮುಖೇನ ಕುಳಿತುಕೊಳ್ಳುವ ವಿದ್ಯಾರ್ಥಿಗಳ ಸಲುವಾಗಿಯೂ ಇನ್ನೊಂದನ್ನು ಮುಂಬಯಿ ಯುನಿವರ್ಸಿಟಿಯ ವಿದ್ಯಾರ್ಥಿಗಳ ಸಲುವಾಗಿಯೂ ಕೊಡಲಿರುವುದು. ಅದ ಪ್ರಯುಕ್ತ ಸರ್ವ ಬಿಲ್ಲವ ಜಾತಿಯ ವಿದ್ಯಾರ್ಥಿಗಳು ಕಾರ್ಯದರ್ಶಿಯವರಿಗೆ ವಿದ್ಯಾರ್ಥಿಗಳು ಪಡದಿರುವ ಮಾರ್ಕು ಕಳುಹಿಸಕೊಡಬೇಕಾಗಿ ವಿನಂತಿ

ಬೆಳ್ಳಾರೆ ಹ್ಯೆಸ್ಕೂಲ್ ಬೆಳ್ಳಾರೆ, ದ. ಕ.

ಪ್ರಕಟಣೆ

ಪುತ್ತೂರು ತಾಲೂಕಿನ ಬೆಳ್ಳಾರೆಯಲ್ಲಿ ಹೊಸತಾಗಿ ಕಟ್ಟಿಸಿರುವ ಹೈಸ್ಕೂಲ್‌ನಲ್ಲಿ ಇದೇ ಬರುವ ಜೂನ್ ತಿಂಗಳ ಪ್ರಥಮ ವಾರದಲ್ಲಿ Iರಿಂದ IV ನೇ ಫೋರ್ಮಿನವರೆಗಿನ 4 ಕ್ಲಾಸುಗಳು ತೆರೆಯಲ್ಪಡುವುವು. ಆ ಬಗ್ಗೆ ಜಿಲ್ಲಾ ಬೋರ್ಡಿನವರು ಪ್ರತ್ಯೇಕ ಪ್ರಕಟಣೆ ಕೊಡಲಿರುವರು. ಸೇರಬಯಸುವ ವಿದ್ಯಾರ್ಥಿಗಳು ಈ ಕೆಳಗಿನ ವಿಳಾಸಕ್ಕೆ ಬರೆಕೊಳ್ಳುವುದು

ಬೆಳ್ಳಾರೆ,
18—5—51

ಬಿ. ನಾರಾಯಣ ಶೇಕ
ಅಧ್ಯಕ್ಷ,
ಬೆಳ್ಳಾರೆ ಹ್ಯೆಸ್ಕೂಲ್ ಸಮಿತಿ.

MAHATMA GANDHI MEMORIAL COLLEGE, UDIPI.

The College reopens for admission on June 18, 1951 and for regular work on June 25, 1951 in its own spacious new building at sagri. Instruction is offered in the following languages and subjects of the Intermediate course:—

Part I : English.
Part II : Kannada, Hindi and Sanskrit
Part III (a) Mathematics, Physics & Chemistry
(b) Natural Science, Physics, & Chemistry
(c) Mathematics, Commerce & Accountancy, & Logic
(d) Indian History, Modern History & Phychology
(e) Indian History, Commerce & Accountancy, & logic

Hostel facilities provided Students intending to join the College should Apply to the undersigned as soon as the S. S. L. C. results are out. Well qualified and experienced staff in all subjects and individual attention to students.

H Sunder Rao, M A,
Principal

Notice

In the Court of the Subordinate Judge of South Kanara.

O. S. No 291/1950

Between–

A. R D'Souza ... Plaintiff.

and

S Panduranga Kamath & others ... Defendants.

Notice to the 1st defendant S Panduranga Kamath and to the 4th defendant S. Padmanabha Kamath, sons of Shibrur Vittal Kamath, Merchants, residing near Canara High School, Mangalore Town, is hereby given that the plaintiff has filed the above suit for the recovery of Rs 18,687-0-0 from the defendants and from out of their family assets, due in respect of dealings and a promissory note dated 30-12-1947 executed by defendants 2 to 4 in his favour and that the said suit is posted to 12-6-1951 for hearing.

(By order of Court.)

John Gonsalves, B.A.,LL.B.,
Vakil for Plaintiff.

Court Road, Mangalore,
14—5—1951

ಪ್ರವಾಸಿಯ ಪತ್ರಗಳು ೨

(ಶ್ರೀ ಕೆ. ಆರ್. ಕಾರಂತರಿಂದ)

ಸ್ಟ್ರೆತ್‌ನೇವರ್, ಕೆಂಪು ಸಮುದ್ರ, ...

ನನ್ನ ಹಿಂದಿನ ಪತ್ರವನ್ನು ಬರೆದುದು ಅರೆಬಿಯದ ಏಡನ್‌ನಗರವನ್ನು ಸೇರುವ ಮೊದಲ ದಿನ. ಆ ಪತ್ರದಲ್ಲಿ ಹಡಗನ್ನು ಕುರಿತಾದ ಕೆಲವೊಂದು ಸಂಗತಿಗಳನ್ನು ಬರೆದಿದ್ದೆ. ಇಲ್ಲಿ ಇನ್ನೂ ಸ್ವಲ್ಪ ಹೆಚ್ಚಿನ ವಿಷಯಗಳನ್ನು ಬರೆಯುತ್ತಿದ್ದೇನೆ. ಹಡಗಿನಲ್ಲಿ ಕುಳಿತ ನಮಗೂ ದೂರದ ದೇಶಗಳಿಗೂ ಸಂಚಾರಮಾಡುವಾಗಲೇ ರೇಡಿಯೋ ಮೂಲಕ ತಂತಿಕೊಡಬಹುದಾದ ಸೌಕರ್ಯವಿದೆ. ಒಂದು ಶಬ್ದಕ್ಕೆ ಸುಮಾರು ೧೨ ಆಣೆ ಕೊಟ್ಟಲ್ಲಿ ಹೊಂಕೊಂಗ್ ನ್ಯೂಜಿಲೇಂಡ್, ಆಸ್ಟ್ರೇಲಿಯಾ ಮೊದಲಾದ ಊರುಗಳಿಗೆ ತಂತಿಕೊಡಬಹುದು.

ಹಡಗಿನಲ್ಲಿ ಮಾಂಸಾಹಾರಿಗಳಲ್ಲದವರಿಗೆ ಮೊದಲು ಕಷ್ಟವಾಗುತ್ತವೆ. ಹಾಗೆ ನನ್ನಂಥ ಒಬ್ಬಿಬ್ಬರಿಗೆ ಮೊದಲಿನ ಎರಡು ದಿನ ಕಷ್ಟವಾಯಿತು. ಆದರೆ ನಮ್ಮ ಅನಾನುಕೂಲತೆಗಳೇನೆಂದು ತಿಳಿದ ಬಳಿಕ ತಕ್ಕ ಏರ್ಪಾಟು ಮಾಡಿದರು. ಬೆಳಗ್ಗಿನ ೬ಗಂಟೆಗೆ ಒಂದು ಥಾಲಿ ಕಿತ್ತಳೆಹಣ್ಣಿನ ರಸ ಬರುತ್ತದೆ. ಆ ಮೇಲೆ ನಾವಿರುವಲ್ಲಿಗೆ ಚಾ, ಇಲ್ಲವೆ ಕಾಫಿ ಕೊಡುತ್ತಾರೆ. ಬೆಳಗ್ಗಿನ ೮ಗಂಟೆಗೆ ದೊಡ್ಡದೊಂದು ಭೋಜನಗೃಹದಲ್ಲಿ ಎಲ್ಲರೂ ಕುಳಿತು ಲಘೂಪಹಾರ ಮಾಡುತ್ತಾರೆ. ಅದಕ್ಕೆ ಬ್ರೆಡ್, ಬಿಸ್ಕಿಟು, ಜಾಮ್, ಚಾ ಮೊದಲಾದುವನ್ನು ಒದಗಿಸುತ್ತಾರೆ. ಸಸ್ಯಾಹಾರಿಗಳಲ್ಲದವರಿಗೆ ಇನ್ನೂ ಹೆಚ್ಚಿನ ಆಹಾರಗಳಿವೆ. ಮಧ್ಯಾಹ್ನದ ಊಟ ಹನ್ನೆರಡೂವರೆ ಮತ್ತು ಒಂದೂವರೆ ಗಂಟೆಗೆ. ಭೋಜನ ಗೃಹದಲ್ಲಿ ಎಂಟೆಂಟು ಮಂದಿ ಸುತ್ತು ಕುಳಿತುಕೊಳ್ಳುವ ಮೇಜುಗಳಿರುತ್ತವೆ ಒಂದೊಂದು ಮೇಜಿಗೆ ಒಬ್ಬೊಬ್ಬ ವೈಟರ್ ಇರುತ್ತಾನೆ. ಊಟ ಉಪಹಾರಗಳೆಲ್ಲ ಕ್ಲಪ್ತ ಕಾಲದಲ್ಲಿ ಆಗುವುದು ಅನಿವಾರ್ಯ. ಊಟಕ್ಕೆ ಅನ್ನ, ಬೇಯಿಸಿದ ತರಕಾರಿ, ಹಣ್ಣು, ಗಂಜಿ ಮೊದಲಾದವು ದೊರೆಯುತ್ತವೆ ರುಚಿ ಏನೋ ಹೆಚ್ಚಾಗಿರುವುದಿಲ್ಲ. ಇನ್ನು ಸಂಜೆಯ ನಾಲ್ಕು ಗಂಟೆಗೆ ಇನ್ನೊಮ್ಮೆ ಉಪಹಾರ—ಕಾಫಿ ಟೋಸ್ಟ್ ಮೊದಲಾದವು. ಮತ್ತೆ ರಾತ್ರಿ ಏಳು ಮತ್ತು ಎಂಟೂವರೆಗೆ ಎರಡನೆಯ ಊಟ. ಊಟ ತಿಂಡಿಗಳ ವಿಚಾರದಲ್ಲಿ ಇಲ್ಲಿನ ಸರಬರಾಯಿ ಹೆಚ್ಚೇ ಹೊರತು ನಮಗೆ ಕಡಿಮೆಯಾಗುವಂತಿಲ್ಲ.

ಊಟದ ಮನೆಗೇ ಒಮ್ಮೆ ನಮ್ಮನ್ನು ಕರೆದುಕೊಂಡು ಹೋಗಿದ್ದರು. ಸುಮಾರು ೬೦ ಅಡಿ ಉದ್ದ ೪೦ ಅಡಿ ಅಗಲದ ಅಡುಗೆ ಮನೆಯಲ್ಲಿ ವಿದ್ಯುಚ್ಛಕ್ತಿಯಿಂದಲೇ ಅಡುಗೆಯ ಕೆಲಸ ನಡೆಯುತ್ತಿತ್ತು. ದಿನದಿನಕ್ಕೆ ಬೇಕಾಗುವ ಬ್ರೆಡ್, ಜಾಮ್ ಮೊದಲಾದುವನ್ನು ಆಯಾದಿನವೇ ಮಾಡುತ್ತಾರೆ. ಊಟದ ಬಟ್ಟಲು, ಚಮ್ಚೆಗಳನ್ನು ಬಿಸಿನೀರಿನಲ್ಲೇ ತೊಳೆಯುತ್ತಾರೆ. ಅಡುಗೆಯವರು ಬಿಳಿಜನರೇ. ಅಡುಗೆ ಮನೆ ತುಂಬಾ ಶುಚಿಯಾಗಿದೆ.

ನಮ್ಮ ಕೊಟಡಿಗಳನ್ನೂ ಬಹು ಶುಚಿಯಾಗಿರಿಸುತ್ತಾರೆ. ಮಲಗಲು ಮೆತ್ತಗಿನ ಹಾಸಿಗೆಗಳಿರುತ್ತವೆ. ಅಲ್ಲಿನ ಬಟ್ಟೆ, ಟವೆಲ್ ಮೊದಲಾದುವುಗಳನ್ನು ವಾರಕ್ಕೊಮ್ಮೆ ಬದಲಿಸುತ್ತಾರೆ. ತಣ್ಣೀರು ಮತ್ತು ಬಿಸಿನೀರಿನ ಪೂರೈಕೆ, ಕನ್ನಡಿ, ಕಪಾಟು, ಕುಡಿಯುವ ನೀರು ಮೊದಲಾದಂಥ ನಿತ್ಯಸೌಕರ್ಯಗಳನ್ನು ಟೂರಿಸ್ಟ್ ಕ್ಲಾಸಿನಲ್ಲೂ ಕಲ್ಪಿಸಿದ್ದಾರೆ. ನಮ್ಮ ವಸ್ತ್ರಗಳನ್ನು ಇಷ್ಟವಾದಲ್ಲಿ ಮಡಿಮಾಡಿಕೊಡುತ್ತಾರೆ. ಆದರೆ ಒಂದೊಂದು ಬಟ್ಟೆಗೆ ಹೆಚ್ಚು ಬೆಲೆ ಬೀಳುವುದರಿಂದ ನಮ್ಮ ಕಡೆಗಳ ಜನ ತಂತಮ್ಮ ಬಟ್ಟೆಗಳನ್ನು ತಾವೇ ಒಗೆದುಕೊಳ್ಳುತ್ತಾರೆ. ಹೀಗೆ ಒಗೆಯುವುದಕ್ಕೂ, ಬಟ್ಟೆಗೆ ಇಸ್ತ್ರಿ ಹಾಕುವುದಕ್ಕೂ ಬೇರೆ ಕೊಟಡಿಗಳಿವೆ. ಆಸ್ಟ್ರೇಲಿಯದ ಪ್ರವಾಸಿಗಳು ಗಂಡಸರಾಗಲಿ, ಹೆಂಗಸರಾಗಲಿ ಇಂಥ ಕೆಲಸ ಮಾಡುವುದು ಅಗೌರವವೆಂದು ತಿಳಿಯುವುದಿಲ್ಲ.

ಹಡಗಿನಲ್ಲಿ ಚಿಕ್ಕದೊಂದು ಛಾಪಖಾನೆಯೂ ಇದೆ, ಹಡಗಿನ ಪ್ರಕಟಣೆಗಳನ್ನು ನಮಗೆ ದಿನ ದಿನ ಅಚ್ಚುಮಾಡಿಕೊಡುತ್ತಾರೆ. ಊಟದ ವಿವರ ತಿಳಿಸುತ್ತಾರೆ, ಸಮಾಚಾರ ತಿಳಿಸುತ್ತಾರೆ ಹಡಗು ಬಂದರುಗಳಲ್ಲಿ ಪ್ರಯಾಣಿಕರು ಏನು ಕಾಣಬಹುದು, ಹೇಗೆ ವರ್ತಿಸಬೇಕು—ಎಂಬುದನ್ನೆಲ್ಲ ಪ್ರಕಟಿಸುತ್ತಾರೆ.

ಇಲ್ಲಿನ ಸ್ನಾನಗೃಹವು ತುಂಬ ಆಧುನಿಕವಾದುದು. ಮೊದಲು ಉಪ್ಪುನೀರಿನ ಸ್ನಾನ ತಣ್ಣೀರನ್ನೂ, ಬಿಸಿನೀರನ್ನೂ ನಳ್ಳಿಗಳಿಂದ ಒದಗಿಸಿಕೊಡುತ್ತಾರೆ. ಆ ಸ್ನಾನವಾದ ಮೇಲೆ ಸಿಹಿನೀರಿನಲ್ಲಿ ಬಿಸಿ ಅಥವಾ ತಣ್ಣಗಿನ ಸ್ನಾನ ಮಾಡುವ ಅನುಕೂಲತೆ ಇದೆ.

ಮುಂಬಯಿ ಬಿಟ್ಟ ನಾವು ಏಡನ್‌ಗೆ ಬರುವ ತನಕವೂ ಭೂಮಿಯನ್ನು ಕಂಡಿರಲಿಲ್ಲ. ನಾಲ್ಕನೆಯ ದಿನ ಕೊನೆಗೆ ರಾತ್ರಿ ಕಾಲದಲ್ಲಿ ವಿದ್ಯುದಲಂಕೃತವಾದ ಏಡನ್ ನಗರ ಕಾಣಿಸಿತು. ಬೆಳಗಾಗುವ ಮೊದಲೇನೇ ನಮ್ಮ ಹಡಗಿನ ಬಳಿಗೆ ಅನೇಕ ವ್ಯಾಪಾರಿಗಳು ಚಿಕ್ಕ ದೋಣಿಗಳೊಳಗೆ ಕುಳಿತು ಬಂದರು. ಅವರನ್ನು ನೆಟ್ಟಗೆ ಹಡಗಿಗೆ ಬರುವುದಕ್ಕೆ ಬಿಡುವುದಿಲ್ಲ, ದೋಣಿಗಳಿಂದ ಒಂದು ಹಗ್ಗ ನಮಗೆ ಎಸೆಯುತ್ತಾರೆ. ಅದನ್ನು ನಾವು ಹಿಡಿದುಕೊಂಡು ಬೇಕಾದ ಸಾಮಾನುಗಳನ್ನು ಆ ಹಗ್ಗದ ಮೂಲಕವಾಗಿ ತರಿಸಿಕೊಳ್ಳಬಹುದು.

ಏಡನ್ ದಂಡೆಗೆ ನಮ್ಮ ಹಡಗು ತಾಗುವುದಿಲ್ಲ. ದಂಡೆ ಒಂದು ಫರ್ಲಾಂಗ್ ದೂರವಿರುತ್ತದೆ. ನಾವು ಅಲ್ಲಿಗೆ ಊರು ನೋಡಲೆಂದು ಲಾಂಚಿನಲ್ಲಿ ಹೋದೆವು. ೧೯೩೭ನೇ ಇಸವಿಯ ತನಕವೂ ಈ ನಗರವು ಇಂಡಿಯಾದ ಮುಂಬಯಿ ಪ್ರಾಂತಕ್ಕೆ ಸೇರಿದ್ದಾಗಿತ್ತು. ಆನಂತರ ಬ್ರಿಟಿಷರು ಅದನ್ನು ಪ್ರತ್ಯೇಕಿಸಿ ತಮ್ಮದಾದ ವಸಾಹತನ್ನಾಗಿ ಮಾಡಿಕೊಂಡರು. ಆದರೆ ಹಳೆಯ ಸಂಸ್ಕಾರದಿಂದಾಗಿ, ನಮ್ಮ ದೇಶದ ಹಲವು ಜನ ಅಲ್ಲಿ ನೌಕರಿಯಲ್ಲಿದ್ದಾರೆ. ನಮ್ಮ ದೇಶದ ಮತ್ತು ಬ್ರಿಟನ್ನಿನ ಎರಡೂ ಹಣಗಳು ಅಲ್ಲಿ ಚಲಾವಣೆಯಲ್ಲಿವೆ. ಏಡನ್ ದೊಡ್ಡ ಹಡಗು ನಿಲ್ದಾಣವಾಗಿರುವಂತೆ ವಿಮಾನ ನಿಲ್ದಾಣವೂ ಆಗಿದೆ. ಈ ಊರೋ! ಸಸ್ಯಹೀನವಾದ ಬಂಡೆಗಳ ರಾಜ್ಯ. ನಾಲ್ಕು ಮರಗಳನ್ನು ಬಿಟ್ಟರೆ ಬೇರೊಂದು ಹಸುರಿಲ್ಲ. ಸುಂದರವಾದ ನಗರ. ಡಾಮರು ಬಳಿದ ಅಗಲವೂ, ಸಮಾನಾಂತರವೂ ಆದ ರಸ್ತೆಗಳು. ದೊಡ್ಡ ದೊಡ್ಡ ಅಂಗಡಿಗಳಿವೆ! ಅದು ಹೆಚ್ಚಿನ ವ್ಯಾಪಾರಕೇಂದ್ರ. ಮದ್ಯಗಳಿಗಲ್ಲದೆ ಉಳಿದ ವಸ್ತುಗಳ ಮೇಲೆ ಸುಂಕವಿಲ್ಲದುದರಿಂದ ಅಮೇರಿಕಾ, ಯುರೋಪ್ ದೇಶದ ಸಾಮಾನುಗಳೆಲ್ಲ ಬಹು ಅಗ್ಗವಾಗಿ ಸಿಗುತ್ತವೆ.

ಇಲ್ಲಿನ ಜನಸಂಖ್ಯೆ ಸುಮಾರು ೫೦,೦೦೦. ಅವರಲ್ಲಿ ಹತ್ತರಷ್ಟು ಭಾರತೀಯರಿದ್ದಾರೆ. ಉಳಿದವರು ಆಫ್ರಿಕದ ನೀಲಿಶರೀರಿಗಳಾ ಗುಂಗುರು ಕೂದಲಿದ ಅರಬರು ಮತ್ತು ಕಂದುಬಣ್ಣದ ಅರಬರು. ಏಡನ್ನಿನ ಜನ ಕಂದು ಬಣ್ಣದವರಾಗಿದ್ದಾರೆ. ಇಲ್ಲಿನ ವ್ಯಾಪಾರ ಹೆಚ್ಚಾಗಿ ಮುಂಬಯಿಯ ಗುಜರಾಥಿಗಳ ಕೈಯ್ಯಲ್ಲಿದೆ. ಅನೇಕ ಭಾರತೀಯರು ಶ್ರೀಮಂತರಿದ್ದಾರೆ. ಹತ್ತಿ, ಮೆಣಸು, ಬಟ್ಟೆ, ಕಂಬಳಿ, ಅಮೇರಿಕನ್ ಮತ್ತು ಯುರೋಪಿ ಸಾಮಾನುಗಳು ನಮ್ಮ ದೇಶದಲ್ಲಿ ದೊರೆಯುವುದಕ್ಕಿಂತ ಎಷ್ಟೋ ಕಡಿಮೆ ಬೆಲೆಗೆ ದೊರಕುತ್ತವೆ.

ಕುಲವಿಲ್ಲದ ಹೆಣ್ಣು

ತೆಲುಗಿನಿಂದ ಅನುವಾದಿತ ಕಾದಂಬರಿ.

ಅನುವಾದಕರು:- ಶ್ರೀ ಪಿ. ವೆಂಕೋಬಾಚಾರ್ಯರು, ಬಿ. ಎ. ಬಿ, ಟಿ, ಹುಬ್ಬಳ್ಳಿ

"ಮಿಶ್ರಸಂತತಿಯ ಹೆಣ್ಣೊಂದು ಧರ್ಮದ ಸೋಗಿನ ಜಾಲ,ಧನದ ,ಜಾಲ ವೃದ್ಧರ ಕಾಮಜಾಲದಿಂದ ಪಾರಾಗಿ ಆಧುನಿಕ ಯುವಕ ಸಂತತಿಯ ಉದಾರತೆಯ ಕೈಹಿಡಿದು ಸುಖವಾಗಿ ಬಾಳತೆಂಬುದನ್ನು ಸೂಚಿಸುವ ಈ ಕಾದಂಬರಿಯಲ್ಲಿ ಪ್ರಾಸಂಗಿಕವಾಗಿ ನಾಟಕ ಕಲೆಯ ಮೇಲೆಯೂ ಕೆಲವು ಅಭಿಪ್ರಾಯಗಳನ್ನು ಸೂಚಿಸಿದ್ದಾರೆ.

ಕುಲವಿರಲಿ ಇಲ್ಲದಿರಲಿ, ವೈಯಕ್ತಿಕ ಶೀಲವೊಂದಿದೆ; ಅದರ ಬೆಳಕಿನಲ್ಲಿ ವ್ಯಕ್ತಿಯು ಎಂತಹ ಸಾಮಾಜಿಕ, ಧಾರ್ಮಿಕ ಎಡರು ತೊಡರುಗಳನ್ನೂ ದಾಟಿ ಮನಮೆಚ್ಚಿದ ಶಾಂತಿಸುಖ ಸಮಾಧಾನಗಳ ಬಾಳನ್ನು ಬಾಳಬಲ್ಲುದು ಎಂಬುದೇ ಈ ಕಾದಂಬರಿಯ ನೀತಿ"—ಜೈಹಿಂದ್.

ಓದಲೇ ಬೇಕಾದ ಸಾಮಾಜಿಕ ಕಾದಂಬರಿ—ಬೆಲೆ ರೂ. 1 ೬-೧)

ಪ್ರತಿಗಳಿಗೆ—

ಅಂತರಂಗ ಕಾರ್ಯಾಲಯ, ಉಡುಪಿ.

ನವಭಾರತ ಪುಸ್ತಕ ಭಂಡಾರ, ಉಡುಪಿ.

ಉಡುಪಿಗೆ ಹೋಗಬೇಕು! ಆದರೆ ಉಳಿದುಕೊಳ್ಳುವುದೆಲ್ಲಿ?

ರಾಯಲ್ ಮಹಾಲಿನಲ್ಲಿ

ಬಸ್ ಸ್ಟೇಂಡಿಗೆ ಅತಿ ಸಮೀಪ! ಕೃಷ್ಣಮಠಕ್ಕೆ ದೂರವಿಲ್ಲ!

ವ್ಯಾಪಾರವ್ಯವಹಾರ ವಿಹಾರಸ್ಥಳಗಳಿಗೆಲ್ಲ ಕೇಂದ್ರ!

ನಿಮ್ಮ ಸ್ನಾನ, ಊಟ, ಉಪಹಾರ, ಬೈಠಕ್, ಶಯನ ಇವಕ್ಕೆಲ್ಲ ಉತ್ತಮ ವ್ಯವಸ್ಥೆ ಕರೆದರೆ ಓಗೊಡುವ ನೌಕರರ ವರ್ಗ!

ಮೇಲಾಗಿ ಉಡುಪಿ ಬ್ರಾಹ್ಮಣರ ಅಡಿಗೆ,ತಿಂಡಿತಿನಸು, ಇವುಗಳ ರುಚಿರುಚಿ ಹೇಳಬೇಕೆ?

ಪ್ರೊಪ್ರೈಟರ್:— ಕೆ. ವೆಂಕಟ್ರಮಣಭಟ್.

For up-to-date Lodging & Boarding

ROYAL MAHAL,

UDIPI, S. Kanara.

Nambiar's

ARYA VAIDYA SALA

UDIPI

Ideal House for Ayurvedic Treatment.

T. M. Kelu Nambiar,

Vaidya

ಗೊನೋರಿಯಾ ಪರಮಾರೋಗ ಉಷ್ಣ ರೋಗಕ್ಕೆ ಔಷಧ

೭ ದಿವಸಗಳಲ್ಲಿ ಈ ರೋಗ ಗುಣ ಹೊಂದುವದು ಗ್ಯಾರಂಟೀ

ಶರೀರದಿಂದ ಕೀವು ಬರುತ್ತಿದ್ದರೆ, ಮೂತ್ರದಲ್ಲಿ ಸುಡಿ ಹಾಗು ಹತ್ತುತ್ತಿದ್ದರೆ, ಶರೀರದಿಂದ ಬಾವು ಶರೀರದ ತೊಗಲು ಹಿಂದಕ್ಕೆ ಸರಿಯದಿದ್ದರೆ, ಶರೀರದ ಸುತ್ತು ಘಾಯವಾಗಿದ್ದರೆ,....ಹುಟ್ಟು ಬಿದ್ದರೆ, ಉಷ್ಣದಿಂದ ಬೇರು ಹಿಡಿದಿದ್ದರೆ, ಉಡುಚು ಆಗಿದ್ದರೆ, ಮೂಲವ್ಯಾಧಿ. ಭಗೇಂದ್ರ, ಗಂಡುಮಾಲೆ, ಕೈಕಾಲು ಶೂಲಿ, ಅರ್ಧಾಂಗವಾಯು ಮೊದಲಾದವು. ಮತ್ತು ಸ್ತ್ರೀಯರ ಬಿಳಿಕೆಂಪು ಸೆರಗು ಹೋಗುತ್ತಿದ್ದರೆ, ಹೊಳೆಕಟ್ಟು ಗರ್ಭಕೋಶ ನಾಶಹೊಂದಿದ್ದರೆ, ಸಾಯುವ ಭೀತಿಯಾಗಿದ್ದರೆ, ಮೂತ್ರ ಉರಿಯುತ್ತಿದ್ದರೆ, ಈ ಎಲ್ಲಾ ಬೇನೆಗಳಿಗೆ ಈ ನಮ್ಮ ಔಷಧವು ಉಪಯುಕ್ತ. ಮೊದಲ ದಿವಸ ಬೆಳಗ್ಗೆ ೧ ಗಂಟೆ ಪ್ರಮಾಣ ಔಷಧ ಅರ್ಧತೊಲೆ ತುಪ್ಪದಲ್ಲಿ ತಕ್ಕೊಳ್ಳಬೇಕು ಮೊದಲ ದಿವಸ ಮಾತ್ರ ಮುಂಜಾನೆ ಸಂಜೆ ಎರಡು ಸಾರಿ ತಕ್ಕೊಳ್ಳಬೇಕು. ಮುಂದೆ ದರ ದಿವಸ ಬೆಳಗ್ಗೆ ಒಂದೇ ಸಾರಿ ೭ ದಿವಸ ಸೇವಿಸಬೇಕು. ಈ ಔಷಧವನ್ನು ಬೇಸಿಗೆಯಲ್ಲಿ ತುಪ್ಪದಲ್ಲಿ, ಥಂಡಿ ಮಳೆಗಾಲದಲ್ಲಿ ಜೇನತುಪ್ಪದಲ್ಲಿ ತಕ್ಕೊಳ್ಳಬೇಕು ಪಥ್ಯ: ಹುಳಿ, ಖಾರ, ಕುಂಬಳಕಾಯಿ, ಒಳ್ಳೆಣ್ಣೆ ಬಿಡಬೇಕು.

ಬಾಟ್ಲಿ ೧ಕ್ಕೆ ೩ರೂ. ಪೋಸ್ಟ ಖರ್ಚ ೮ ಆಣೆ

ಏಜೆಂಟರು:—ಗದಗ:—ಗದಗ ಫಾರ್ಮಸಿ, ಹುಬ್ಬಳ್ಳಿ:—ಹುಬ್ಬಳ್ಳಿ ಫಾರ್ಮಸಿ ಬಾಗಲಕೋಟೆ:-ಬಾಗಲಕೋಟೆ ಫಾರ್ಮಸಿ, ಧಾರವಾಡ:-ಧಾರವಾಡ ಫಾರ್ಮಸಿ, ದಾವಣಗೇರಿ: ದಾವಣಗೇರಿ ಪ್ರೆಸ್. ನಂಜುಡೇಶ್ವರ ಮೂರ್ತಿ ದಾವಣಗೇರಿ.

ಪತ್ರವ್ಯವಹಾರ ಮಾಡತಕ್ಕ ಮಾಲಕರ ವಿಳಾಸ,

ರೇವಣಸಿದ್ಧಪ್ಪ ಹಾಲಪ್ಪ ದಾವಣಗೇರಿ,

ಆಯುರ್ವೇದ ಔಷಧಾಲಯ, ಗದಗ-

ಎನೇನೂ ಮಳೆ ಇಲ್ಲದ ದೇಶದಿಂದ ... ಕ್ಕೆ ಒಂದರದಿಂದ ... ಕೆರೆಯಲ್ಲಿ ಸಂಗ್ರಹಿಸಿ ಜೀವನ ... ತುಂಬ ಕಗ್ಗಲ್ಲಿನ ಭೂಮಿ. ... ಕಟ್ಟಿದ ಪೆಟ್ರೋಲ್ ... ಡ್ಡ ಕೆರೆಗಳಿವೆ.

ನನಗೆ ಇಲ್ಲಿನ ಕೆಲವು ಒಂದೇ ... ಸ್ಕರ ಭೇಟಿಯಾಯಿತು ಅವರು ... ಅನೇಕ ತೊಡಕುತೊಂದರೆಗಳನ್ನು ... ಕೊಂಡು, ಭಾರತ ಸರಕಾರಕ್ಕೆ ಇದನ್ನು ... ಸಬೇಕೆಂದು ಹೇಳಿದರು. ತಾವು ... ನೇಕ ಸಾರ್ವಜನಿಕ ಕೆಲಸಗಳಿಗೆ ಹಣ ಕೊಟ್ಟಿದ್ದೇವೆಂದೂ, ಅಸ್ಸಾಮು ... ೪೦,೦೦೦ ರೂಪಾಯಿ ಕೊಟ್ಟಿದ್ದರೂ ಆ ... ಸುದ್ದಿಯನ್ನು ಕೂಡ ಅಖಿಲಭಾರತ ರೇಡಿಯೋ ಹೇಳದೆ ಹೋಯಿತೆಂದೂ ತಾವು ಭಾರತವನ್ನು ಪ್ರೀತಿಸಿದರೂ ಭಾರತ ಸರಕಾರಕ್ಕೆ ತಮ್ಮ ವಿಚಾರದಲ್ಲಿ ಸಹಾನುಭೂತಿ ಇಲ್ಲವೆಂದೂ ಅಂದರು. ಅವರ ಸಂಕಷ್ಟಗಳ ವಿಚಾರದಲ್ಲಿ ಪ್ರತ್ಯೇಕವಾಗಿ ನಮ್ಮ ಸರಕಾರಕ್ಕೆ ತಿಳಿಸುವೆನೆಂದು ಒಪ್ಪಿದೆನೆ. ... ಊರಲ್ಲಿ ಬೇರಾವರ ... ಹನ್ನೆರಡು ಗಂಟೆಯೊಳಗಾಗಿ ... ಮರಳಬಂದೆವು. ಊರಿಗೆ ಹೋದಾಗ ಒಬ್ಬ ವ್ಯಾಪಾರಿಯು ನಮ್ಮನ್ನು ತಮ್ಮ ಮನೆಗೊಯ್ದು ತುಂಬಾ ಆದರೋಪಚಾರ ಮಾಡಿದರು. ಇಲ್ಲಿಗೆ ಬಂದ ಬಳಿಕ ನಮ್ಮ ... ತೊಡಗಿತು. ಸಂಜೆಹೊತ್ತಿಗೆ ... ಮೈಲು ದೂರದ 'ಹಿಲ್‌ಸಟಾ' ಎಂಬ ದ್ವೀಪಕ್ಕೆ ಬಂದೆವು. ಇದು ಬ್ರಿಟಿಷರ ಅಧೀನದ ದ್ವೀಪ. ಇಲ್ಲಿ ಕೆಂಪು ಸಮುದ್ರ ...

ಮೈಲು ... ಕರ್ಗತ ... ದು ... ತ್ರದ ... ದೆ ಹೋದೆನೆ ... ಸಮುದ್ರ ಇದ್ದ ಸಮುದ್ರ ... ಅದು ಆಳವಾದ ... ಮುದ್ರ ... ಸಮುದ್ರದ ... ಯಿಂದ ... ಗಳು ... ಸಮುದ್ರದ ... ತ್ರ ... ರೂ ... ರಾತ್ರಿ ... ಮನೆ ... ಯಾವುದು ... ರಾತ್ರಿ ಕಾಲದಲ್ಲಿ ... ಬರು ... ನಮ್ಮ ... ಇದ ... ರಾತ್ರಿ ... ನೆಲ ...

ಕೆಂಪು ಸಮುದ್ರದ ಮಧ್ಯದಲ್ಲಿ ಎರಡು ... ಮಲೆ ಹಡ ತುಂಬ ... ಆ ... ಪೂರ್ವ ... ಈ ... ಇದೆ ... ಎರಡಾಗಿ ಅಂದರೆ ಉತ್ತರದಿಂದ ... ದಕ್ಷಿಣ ...

ಗಿದೆ ... ಕಡಲು ... ಈ ನಮ್ಮ ... ರೆಗಳನ್ನು ... ಹೋಗುವ ... ದು ... ರಿಗೆ ತಿಮಿಂಗಿಲಗಳೆಂದು ಕಾಣಿಸಿತ್ತಂತೆ, ಹೀಗೆ ಕಾಣಿಸಿಗುವುದು ಅಪೂರ್ವವೆನ್ನುತ್ತಾರೆ ನನಗೆ ಒಂದು ... ಬಳ್ಳಿಯ ... ಜಾತಿಯ ಮೀನಿನ ... ಸಿಕ್ಕಿತು. ಇವು ... ಮೀನನ್ನು ... ಕೊಲ್ಲುವುದುಂಟಂತೆ.

ಸಿನೈಯಿಂದ, ಸೆಪೆಯಿಗೆ ... ಗೊಂಡು, ... ಉತ್ತರದಿಂದ ದಕ್ಷಿಣಕ್ಕೆ ... ಲೇ ಈ ... ತ ... ಕ ನಮ್ಮ ... ವೆ ... ಗುಡಕರೆಗಳು ... ಇದ್ದು ...

ಹೋಗುತ್ತಿತ್ತೆ

ರಾತ್ರಿ ಕಳೆದು ಬೆಳಗಾಯಿತು. ದೂರದಲ್ಲಿ ಬಿಳಿಯ ಕಡಲಿನ್ನು ... ಹೋಗಿ ... ಸಸ್ಯವಿಲ್ಲ ... ನೆಲಗಳು ... ಕರಿ ... ಮಲೆ ... ದು ... ಯಲ್ ... ವನ್ನಿಲ್ಲ ... ಸಮಿ ... ರು ... ರಾ ... ಯ ... ಕಾ ... ಕ ... ಹೋಗಬೇಕು ... ಸು ... ಜು ...

ವಿಚಾರವಾಣಿ

ಮುಖಂಡನಾಗ ಬೇಕಾದರೆ?

ಬರೆದವರ: ಶ್ರೀ ಎ. ರಾಮಣ್ಣ ಶೆಟ್ಟಿ, ಧರ್ಮಸ್ಥಳ

ಪ್ರಜಾ ಸರಕಾರ, ಸ್ವತಂತ್ರ ಭಾರತ, ಸ್ವರಾಜ್ಯವೆಂದು ಹೇಳುವ ಈ ಕಾಲದಲ್ಲಿ ಜನತಾ ಮುಖಂಡನಾಗುವುದು ಬಹಳ ಕಷ್ಟವೆಂದು ಕೆಲವರ ಭಾವನೆ. ಬಹಳ ಸುಲಭವೆಂದು ಕೆಲವರ ಅನುಭವ, ಕಷ್ಟವೆಂದು ಹೇಳುತ್ತಾ ಭಾಷಣ-ಲೇಖನ ಮಾಡುವ ಜನರಿಷ್ಟು ಮಂದಿ, ಸುಲಭ ಎಂದು ಹೇಳುವ ಜನರು ಇಲ್ಲವೆಂದೇ ಕಾಣುತ್ತದೆ. ಇವರ ನಿಜಸ್ಥಿತಿ ತಿಳಿದೋ ತಿಳಿಯದೆಯೋ ದಿನದಿನವೂ ಕಾಣುವ ಚಲನ ವಲನಗಳಿಂದ ಮುಖಂಡನಾಗುವ ಗುಟ್ಟು ತಿಳಿಯಬಹುದಾಗಿದೆ.

ಮಾತಿನಂತೆ ಮನಸ್ಸು, ಮನಸಿನಂತೆ ಕಾರ್ಯವೆಂಬ ಒಂದು ಕಾಲವಿತ್ತು. ಆಗ ಮುಖಂಡನಾದವನು ಎಲ್ಲರಿಗಿಂತ ಒಳ್ಳೆಯ ನಡತೆ, ಗುಣ, ಸ್ವಭಾವ ಇರುವವನಾಗಿದ್ದನು. ಕಾಲಚಕ್ರದ ತಿರುಗಾಟದಲ್ಲಿ ಆವಸ ಕಾಲ ಹೋಗಿ ಈಗ ಒಳ್ಳೆಯ ಕಾಲ ಬಂದಿದೆ. ಗಾಂಧೀಜಿಯ ಮರಣವೇ ಈ ಎರಡು ಕಾಲಗಳ ಸಂಧಿಕಾಲ ಸಂಕ್ರಾಂತಿಯ ಸೂಚನೆ.

ಧಾರ್ಮಿಕ, ರಾಜಕೀಯ, ಸಾಹಿತ್ಯ, ಕಲೆ ವಿಜ್ಞಾನ, ಮುಂತಾದ ವಿವಿಧ ರಂಗಗಳಲ್ಲಿ ಬಹಳ ಮಂದಿ ಮುಖಂಡರುಯರು ಕೀರ್ತಿಶಾಲಿಗಳಾಗಿ ಮೆರೆದಿರುವ ದೇಶ ನಮ್ಮದು. ಅಗಿ ಹೋದವರ ಕುರಿತು ನಾವು ಕೊರತೆ ಹುಡುಕುವಾಗ ಅವರ ಜೀವನದ ಸರ್ವಕಾರ್ಯಗಳಲ್ಲಿ ನೂರರಲ್ಲಿ ನಾಲ್ಕರು ಭಾಗಗಳು ಅಪೂರ್ಣವಾಗಿರಬಹುದು. ಚಂದ್ರನಲ್ಲಿ ಕಲೆಗಳಿದ್ದರೂ ಭೂಮಿಗೆ ಬೆಳಕನ್ನು ಕೊಡುವಂತೆ ಅವರ ಮಹಾಗುಣಗಳ ಇದಿರಲ್ಲಿ ಕೊರತೆಗಳು ಕಾಣಿಸದೆ ಹೋಗಿರಬಹುದು. ಅವರ ಇಂದಿನ ಸ್ಥಿತಿ ಬೇರೆ. ಅದಕ್ಕೆ ಕೀರ್ತಿ ನಿರುತ್ತ, ಮುಖಂಡನಾಗಬೇಕಾದರೆ ಮೊದಲು ಅವನು ಅಮಿಂತವಾಗಿರಬೇಕು. ಯಾರ ಶಕ್ತಿ, ಕೋಪ, ಅಂತಿಗಳಿಗೂ ತುಂಬಾಗದ ಅಮಿಂತ

"ಬೇರೆ ಶಾಸ್ತ್ರಗಳನ್ನು ಪ್ರೋದಿದರೇನು ಗೀತೆಯನ್ನು ಚೆನ್ನಾಗಿ ಓದಬೇಕು"—(ವರಾಹ ಪುರಾಣ)

ಗೀತೆಯ ಕೈಗನ್ನಡಿ

(ಭಗವದ್ಗೀತೆಯ ಮೂಲ ಶ್ಲೋಕ ಸಹಿತ ಕನ್ನಡ ಅನುವಾದ)

● ಅನುವಾದಕರು—ದಿ। ಹೊಸಕೆರೆ ಚಿದಂಬರಯ್ಯನವರು ●

ಈ ಗ್ರಂಥದಲ್ಲಿ ಗೀತೆಯ ಮೂಲವಿಲ್ಲ ಇರುವುದಲ್ಲದೆ ಮೂಲದಲ್ಲಿ ಸಹಜವಾಗಿ ಕಾಣಬರುವ ಅರ್ಥವೂ ಮನಸ್ಸಿಗಾರಿಕೆಯ ಮಾದರಿಗಳ ರೂಪದಲ್ಲಿಯೂ ಛಪ್ಪಿಯಾಗಿ ಎದ್ದು ಕಾಣುವುದು

400 ಕ್ಕೂ ಮಿಕ್ಕಿ ಪುಟಗಳು! ಬೆಲೆ 0-12-0

ಒಂದು ರೂಪಾಯಿಯನ್ನು ಕಳುಹಿಸಿದರೆ ಒಂದು ಪ್ರತಿಯನ್ನು ಬುಕ್‌ಪೋಸ್ಟಿನಿಂದ ಕಳಿಸಲಾಗುವುದು

ಪ್ರತಿಗಳು ಸಿಗುವ ಮುಖ್ಯ ಸ್ಥಳ—

ನವಯುಗ ಪ್ರೆಸ್, ಉಡುಪಿ ದ ಕನ್ನಡ

ನವಭಾರತ ಪುಸ್ತಕ ಭಂಡಾರ, ಉಡುಪಿ. ಇಲ್ಲಿ ... ದೊರೆಯುತ್ತವೆ.

THE PANGAL NAYAK BANK LIMITED.

Head Office, (Incorporated in 1920.) [Udipi S K

SEASON DEPOSITS are received and accepted on the following terms:—

For three, four or five months deposits at 3% p. a

For six, seven or eight months deposits at 3½% p. a

These are to be terminable by the 30th June 1951.

Interest is payable along with the principal at maturity.

Our THREE YEAR CASH CERTIFICATE brings to You a fair yield For particulars please ask for copy of Rules

— ಮಕ್ಕಳನ್ನು ಹಡೆಯುವುದು ಸಾಕು —

ಅತಿ ಪ್ರೀಯಂಗ **ಬರ್ಥ್ ಕಂಟ್ರೋಲ್** ರೋಗ ಗ್ರಸ್ತ ಸ್ತ್ರೀಯರು ಮಕ್ಕಳಿಗೆ

ಏಳು ದಿವಸ ಈ ಮಾತ್ರೆಗಳನ್ನು ಸೇವನೆ ಮಾಡಿದರೆ ಮುಂದೆ ಖಂಡಿತವಾಗಿ ಮಕ್ಕಳಾಗುವದಿಲ್ಲ. ಸ್ತ್ರೀಯರು ಪ್ರತಿತಿಂಗಳು ಸರಿಯಾಗಿ ಮುಟ್ಟಾಗುತ್ತಾರೆ. ಅಲ್ಲದೆ ಸ್ತ್ರೀಯರ ಬಲಹೀನತೆ, ಪ್ರದರರೋಗ, ಹೊಟ್ಟೆಕಟ್ಟು ಗುಣವಾಗಿ ಸ್ತ್ರೀಯರು ಗರ್ಭಿಣಿಯಾಗುವದಿಲ್ಲ. ಈ ಔಷಧವನ್ನು ಸೇವಿಸುವ ಕ್ರಮ. ಪ್ರತಿದಿವಸ ಮುಂಜಾನೆ ಗುಳಿಗೆ ಮಧ್ಯಾಹ್ನಕ್ಕೆ ಗುಳಿಗೆ, ಸಂಜೆಗೆ ಗುಳಿಗೆಯಂತೆ ಊಟದ ಮೊದಲು ತಕ್ಕೊಳ್ಳಬೇಕು ಏಳುದಿವಸ ಈ ಔಷಧವನ್ನು ಬಿಸಿನೀರಿನಲ್ಲಿ ಸೇವಿಸಬೇಕು

ಪಥ್ಯ:—ಹುಳಿಯನ್ನಲ್ಲ ಬಿಡಬೇಕು. ೭ ದಿವಸ ಸಂಪೂರ್ಣ ಔಷಧದ ಕಿಮ್ಮತ್ತು ರೂಪಾಯಿ 5—0—0. ಪೋಸ್ಟ ಚಾರ್ಜ ಬೇರೆ.

ಮಾಲಕರು:—ಹಾಲಪ್ಪಾ ಫಕೀರಪ್ಪಾ ಹಾವನಾಗೇರಿ

ಆಯುರ್ವೇದ ಔಷಧಾಲಯ, ... ಗ ಡಿ.

ಏಜಂಟರು:—ಮುಲ್ಕಿ ಕಾಮತ್, —ಮುಲ್ಕಿ, ... ಬಸವ ... ಕೊಡಿ ... ಖಾಸಗಿ ... ಬಂಗಳೂರು ... ಸಂಜೀವನಿ ಸ್ಟೋರ್ಸ ... ಹಾವನಗೇರಿ.

ಏಜಂಟರು:—ಹಾವನಗೇರಿ ಬ್ರದರ್ಸ್, ... ಶೆಟ್ಟ್ ... ಕೆಂಡ್ ... ಉಡುಪಿ

"ಗೋಪಾಲ ಭೇಷಜಾಶ್ರಮ" ಮಂಗಳೂರು.

(ಸ್ಥಾಪನೆ 1910)

ಸ್ಥಾಪಕರು.-ಆಯುರ್ವೇದ ಭೂಷಣ ಯಂ. ವಿ. ಶಾಸ್ತ್ರೀ,

ಬಾಣಂತಿಯರ ಸಲು ಇವರ ನವಜೀವಾತು ಎಂಬ ಸೂತಿಕಾ ರಸಾಯನ

ವಾಗಿಯೇ ದೇಶ ಮತ್ತು ಪ್ರಕೃತದ ದೇಹಸ್ಥಿತಿಯನ್ನು ನಿರೀಕ್ಷಿಸಿ ತಯಾರಿಸಲ್ಪಟ್ಟ ಅಮೋಘವಾದ ಮಧುರದ್ರವ ರಸಾಯನ ಅಲ್ಪ ಮಾಲ್ಯದಿಂದ ಬಡವರಿಗೂ, ಭಾಗ್ಯಶಾಲಿಗಳಿಗೂ ಉಪಯೋಗವಾಗಿರುವುದು.



ಚಿಲ್ಲರೆ ಮಾರಾಟಗಾರರು—ಡಾ। ಯಂ. ಸಿ ಶಾಸ್ತ್ರೀ, ಎಲ್. ಐ. ಕೊಡಿಯಾಲಬೈಲು ಪೋಸ್ಟ್, (ಮಂಗಳೂರು)

ಪ್ರತಿನಿಧಿ:—ಡಾ। ಬಿ. ಕೆ ಶಿವರಾಮರಾವ್, ಕುಂಜಿಬೆಟ್ಟು, ಉಡುಪಿ.

ನಾಗಿರಬೇಕು. ಅಂದರೆ ಅಷ್ಟು ಗಟ್ಟಿ ಎಂತಲೇ ಅರ್ಥವಲ್ಲ, ಸ್ವಂಚನಂತೆ ಮಿಟುಕನಾಗಿ, ಸಾರಾಗಿದ್ದರೂ ಆಗಬಹುದು. ಹದವಾಗಿ ಎರಡು ಹೊಟ್ಟೆ ಸಾಮಾನಿನಂತಿದ್ದರೂ ಆಗಬಹುದು. ಅಂತೂ ಅಖಂಡನಾಗಬೇಕು. ಆ ಮೇಲೆ ಉಳಿದ ಹಾಕರಗಳನ್ನು ಹೊಂದಿಸಿಕೊಳ್ಳಬೇಕು. ಊರಿನಲ್ಲಿ ಬಹುಮಂದಿ ಸೇರಿರುವ ಕಾಂಗ್ರೆಸ್‌ನಂಥಾ ಸಂಸ್ಥೆಯ ಮೆಂಬರನಾಗಬೇಕು. ಅದಕ್ಕೆ ಒಪ್ಪುವ ವೇಷಭೂಷಣಗಳು ಅಚ್ಚುಕಟ್ಟಾಗಿರಬೇಕು. ಪ್ರತಿದಿನವೂ ಮಡಿಮಾಡಿದ ಬಟ್ಟೆಗಳನ್ನೇ ಹಾಕಿಕೊಂಡು, ಪ್ರತಿದಿನವೂ ಮುಖಕ್ಷೌರ, ಮುಖಾಲಂಕಾರ ಮಾಡಿಸಿಕೊಂಡು, ಸುಖ ವಾಹನಾರೂಢನಾಗಿ, ಸುಖಜೀವಿಯಾಗಿ, ಗಟ್ಟಿಯಾದ ದನಿಯುಳ್ಳವನಾಗಿರಬೇಕು, ಕೈಯಲ್ಲಿ ನಾಲ್ಕಾರು ಇಂಗ್ಲಿಷ್ ಪತ್ರಿಕೆಗಳು, ಜತೆಯಲ್ಲಿ ನಾಲ್ಕಾರು ಮಂದಿ 'ತಪಭಾಸ'ಅನ್ನುವ ಮಂದಿ ಮಾಸಧರು ಇರಬೇಕು. ಅಲ್ಲಲ್ಲಿ ಸಭೆಗಳಿಗೆ ಹೋಗಿ, ಉದ್ದುದ್ದ ಭಾಷಣ ಮಾಡಿ, ದೇಶ-ಭಾಷೆ-ಸಮಾಜದ ಸೇವೆಯ ಕುರಿತು ತಾನು ಮಾಡತಕ್ಕ ಕಾರ್ಯ ಕಲಾಪಗಳನ್ನು ವಿವರಿಸಿ, ಇತರರು ಮಾಡತಕ್ಕ ಸಣ್ಣ ತಪ್ಪುಗಳನ್ನು ದೊಡ್ಡದಾಗಿ ಮಾಡಿ ವರ್ಣಿಸಿ, ಜನರನ್ನು ನಂಬಿಸಬೇಕು. ನಾಲ್ಕಾರು ಪತ್ರಿಕೆಗಳನ್ನು ಹೊರಡಿಸಿ, ಅಥವಾ ಊರಿನ ನಾಲ್ಕಾರು ಮುಖ್ಯ ಪತ್ರಿಕೆಯ ಸಂಪಾದಕರನ್ನು ಒಲಿಸಿ ಹೊಗಳಿಸಿಕೊಳ್ಳಬೇಕು. ದೂರದೂರದ ಪಂಡಿತರಿಗೆ, ವಿದ್ವಾಂಸರಿಗೆ, ಕಲಾವಿದರಿಗೆ ಧಾರಾಳ ಉಪಚಾರ ಮಾಡಿ, ಅವರು ಹೋದಲ್ಲೆಲ್ಲಾ ತನ್ನನ್ನು ಹೊಗಳುವಂತೆ ಮಾಡಿಬಿಡಬೇಕು. ತನ್ನ ಊರಿನಲ್ಲಿ ಇರುವವರನ್ನೆಲ್ಲಾ ಒಂದಲ್ಲ ಒಂದು ವಿಧವಾಗಿ ತಲೆಯೆತ್ತದಂತೆ ಒತ್ತಿಹಿಡಿಯಬೇಕು. ತನ್ನ ಹಿರಿಯರು ಮಾಡಿಟ್ಟ ಸಂಪತ್ತು ಧಾರಾಳವಾಗಿದ್ದರೂ, ಇಲ್ಲದಿದ್ದರೂ ತನ್ನ ಖರ್ಚಿಗೆ ಸಾಕಾಗುವಷ್ಟು ಹಣವು ಹಿಂದಿನ ಬಾಗಿಲಿನಿಂದ ಸದಾ ಬರುವಂತೆ ಮಾಡಿಕೊಳ್ಳಬೇಕು; ಅದನ್ನು B.M. ಅಥವಾ ಲಂಚ, ಇಲ್ಲವೇ ಕಾಣಿಕೆ, ಯಾ ಲಾಭ ಏನೇ ಹೇಳಲಿ. ಅದನ್ನೆಲ್ಲಾ ಲಕ್ಷಿಸಬಾರದು. ತನ್ನನ್ನು ಟೀಕಿಸುವವರನ್ನು ಅವರವರ ಸ್ಥಿತಿಗೆ ತಕ್ಕ ಕಪ್ಪ ಕೊಟ್ಟು ಬಾಯಿ ಮುಚ್ಚಿಸಬೇಕು ಅಥವಾ ರುಂಡವನ್ನು ಚೆಂಡಾಡಬೇಕು. ಊರಿನ ಬೇರೆ ಬೇರೆ ಸಂಘ-ಸಂಸ್ಥೆಗಳಿಗೆ ಭೇಟಿಕೊಟ್ಟು ತಾನು ಅದರ ಹಿತಚಿಂತಕನೆಂದು ತೋರಿಸಿಕೊಳ್ಳಬೇಕು. ಒಮ್ಮೊಮ್ಮೆ ಇದಕ್ಕಾಗಿ ಸ್ವಲ್ಪ ಹಣವನ್ನು ಕೈಬಿಡಬೇಕು. ತನ್ನ ಬಲವನ್ನು ಪರೀಕ್ಷಿಸುವ ಸಮಾಜದ ತೀಕ್ಷ್ಣ ದೃಷ್ಟಿಯವರ ನೋಟಕ್ಕೆ ಸಿಗದಂತೆ ತನ್ನ ವ್ಯವಹಾರಗಳ ಸೂಕ್ತ ಸರ್ಜನಾವಲು ಇಡಬೇಕು. ಬಹು ಮಂದಿಗಳಾದ ಬಡವರ, ರೈತರ, ಕೂಲಿಗಳ, ನೌಕರರ ಹಿತವನ್ನೇ ಲೇಖನ-ಭಾಷಣಗಳಿಂದ ಪ್ರಕಟಿಸಬೇಕು. ಶ್ರೀಮಂತರಿಗೆ ವ್ಯಾಪಾರಿಗಳಿಗೆ, ಸರಕಾರದ ಹಿರಿಯ ಅಧಿಕಾರಿಗಳಿಗೆ, ಬೇರೆ ಮುಖಂಡರಿಗೆ, ಒಳಗಿಂದೊಳಗೆ ಧಾರಾಳವಾಗಿ ಲಂಚ-ಕಪ್ಪ-ಕಾಣಿಕೆ-ಸಂಭಾವನೆ ಕೊಡುತ್ತಿರಬೇಕು. ತನ್ನ ಕುಟುಂಬದ, ಜಾತಿಯ, ಊರಿನ, ಸ್ನೇಹಿತರ ಬಗ್ಗೆ ಸರ್ವ ವಿಧದ ಸಹಾಯ ಸಲ್ಲಿಸುತ್ತಿರಬೇಕು. ಕಡೆಗೆ ಎಲ್ಲರಿಗೂ ಏನೂ ಮಾಡುವ ಹಕ್ಕಾಗದಿದ್ದರೂ ತನ್ನ ಹೆಂಡತಿ ಮಕ್ಕಳಿಗೆ ತಾನು ಸತ್ತು ನೂರು ವರ್ಷಗಳ ವರೆಗೆ ಬೇಕಾಗುವಷ್ಟು ಸೊತ್ತನ್ನು ಯಾರೂ ತಿಳಿಯದಂತೆ ಸಂಗ್ರಹಿಸಿಡಬೇಕು. ಧರ್ಮ, ದೇವರು, ಭಕ್ತಿ, ಜ್ಞಾನ, ಸತ್ಯಗಳ ಕುರಿತು ಉದ್ದವಾಗಿ ಮಾತಾಡಲು ಬಾಯಿಪಾಠ ಕಲಿತುಕೊಂಡು, ಎಲ್ಲಾ ಮತ ಧರ್ಮದಲ್ಲಿಯೂ ಸಮಾನ ದೃಷ್ಟಿಯುಳ್ಳವ ತೋರಿಸಿಕೊಂಡು, ತನ್ನ ಮತವನ್ನು ಮಾತ್ರ ಚೆನ್ನಾಗಿ ಬಲಿಸುವದಕ್ಕಾಗಿ, ಇತರ ಮತಗಳನ್ನೆಲ್ಲಾ ಗುಪ್ತವಾಗಿ ಟೀಕಿಸಿ, ಸುಳಿದು, ಹಿಂಸಿಸಿ ಒದೆಯುತ್ತಿರಬೇಕು. ಸಮಾಜದಿಂದ ಹಲವು ದಾರಿಗಳಿಂದ ಗುಪ್ತವಾಗಿ ಧಾರಾಳ ಸಂಪಾದನೆ ಮಾಡಿ, ಸರ್ವ ಹಿತಕಾರಿಯಾದ ಒಂದೆರಡು ಕೆಲಸಗಳನ್ನು ಮಾಡುವಾಗ ಅದು ದೇಶವಾಷ್ಟ್ರಕ್ಕವೂ ತಿಳಿಯುವಂತೆ ಬಲವಾಗಿ ಪ್ರಕಟಿಸುತ್ತಿರಬೇಕು. ಇದರಿಂದ ಪ್ರತಿಯೊಬ್ಬನೂ ಮುಂದಾಳುವಾಗಿ, ಓಟನಲ್ಲಿ ಗೆದ್ದು, ಎಲ್ಲರ ಮೇಲೂ ಅಧಿಕಾರ ಮಾಡಬಹುದು.

ತಾರೀಕು 24-5-51 ರಿಂದ

ವಾರದ ಭವಿಷ್ಯ

ತಾರೀಕು 30-5-51ರವರೆಗೆ

ಮೇಷ—ಈ ವಾರದಲ್ಲಿ ಶೀಘ್ರ ಕಪಟಿಗಳ ಬಲೆಗೆ ಸಿಲುಕಿ ಮೋಸಹೋಗಲಿರುವಿರಿ. ವಿಶೇಷತಃ ಆರ್ಥಿಕ ಭಾಗಕ್ಕೆ ಹಾನಿಯಿದೆ. ವಿನಾಕಾರಣ ಜನರೊಡನೆ ಕಲಹ ನಿಷ್ಠುರ ತಿರಸ್ಕಾರಗಳನ್ನು ಹೊಂದುವಿರಿ. ದೇಹದ ಆರೋಗ್ಯವು ಉತ್ತಮವಿರಲಾರದು. ಮನಸ್ಸಿಗೂ ನೆಮ್ಮದಿಯಿರಲೊಲ್ಲದು. ಆದರೂ ಪರರಿಗೆ ತಿಳಿಯಾಗದ ಸ್ವಯಮೇವ ದುಡಿಯತಕ್ಕ ನಿಮಗೆ ತಾ. 25ರಿಂದ 28ರ ವರೆಗಿನ ದಿನಗಳಲ್ಲಿ ಮಿತ್ರಜನರಿಂದ ಅನುಕೂಲ್ಯ ಬಂಧುಗಳ ನೆರವು ಲಭಿಸುವದು. ಮನೋರಥವು ನೆರವೇರಲಿದೆ.

ವೃಷಭ—ನಿಮ್ಮ ಪರಿಸ್ಥಿತಿಯು ಒಂದೇ ಕ್ರಮವಾಗಿರುವದು. ನಿಮ್ಮ ಕ್ರಮಕ್ಕಿಂತ ಅಧಿಕವಾದ ಧನವು ಲಭಿಸುವದಾದರೂ ಕೈಯಲ್ಲಿ ಕಾಸೊಂದೂ ಉಳಿಯಲೊಲ್ಲದು. ಸದಾ ಪ್ರಯಾಣದಲ್ಲೆ ಕಾಲಕಳೆವ ಪ್ರಸಂಗವು ಹೆಚ್ಚುವದು. ಗೃಹಕೃತ್ಯದಲ್ಲಿ ಮನೋವ್ಯಥವುದಿಂದಾಗಿ ಪರಸ್ಪರ ಕಲಹಕಚ್ಚಾಟಗಳವಕಾಶದೊರೆಯಲಿದೆ. ನಿಮ್ಮ ಹೆಚ್ಚಿನ ಕಾರ್ಯಗಳು ವಿರೋಧಿಗಳ ಪ್ರತಿರೋಧದಿಂದಾಗಿ ಯಶಸ್ವಿಯಾಗಲಾರವು. ಉಷ್ಣ ಕಟ್ಟು ಇತ್ಯಾದಿ ದೇಹಾಲಸ್ಯಗಳು ಕಾಣಿಸಲಿವೆ. ವಾರಾಂತ್ಯದ 4 ದಿನಗಳು ಪ್ರಗತಿದಾಯಕಗಳಿವೆ.

ಮಿಥುನ—'ಕರ್ಮಣ್ಯೇವಾಧಿಕಾರಸ್ತೇ' ಎಂಬ ಗೀತೋಕ್ತಿಯಂತೆ ನಿಮ್ಮ ಕರ್ತವ್ಯವನ್ನು ನೀವು ನಿರ್ವಹಿಸಿರಿ. ಫಲವು ಒಂದಲ್ಲೊಂದು ರೂಪದಿಂದ ನಿಮಗೆ ಫಲಿಸಿಯೇ ಸಿಗುವದು. ವ್ಯಾಪಾರ ವ್ಯವಹಾರಾದಿಗಳಲ್ಲಿ ಒಳ್ಳೆಯ ಪ್ರಗತಿ ಕಾಣಿಸಲಿದೆ. ರಾಜಕೀಯದಲ್ಲಿ ಮಾತ್ರ ಸಧ್ಯಕ್ಕೆ ಇಳಿಯಬೇಡಿ. ನೀಚಜನರಿಂದಾಗಿ ಆಗಾಗ ಮನೋರೋಗಕ್ಕೀಡಾಗಿರುವಿರಿ. ವಿನಾಕಾರಣ ಸ್ತ್ರೀಜನರೊಡನೆ ನಿಷ್ಠುರವಾದೀತು. ತಾ. 24, 29, 30 ಈ ದಿನಗಳಲ್ಲಿ ಬೇಕಾದ ಸುಖಭೋಗಗಳು ಅನಾಯಾಸದಿಂದ ಲಭಿಸುವವು.

ಕರ್ಕಾಟಕ—ಬಲಿಸಿಗರಿಗೆ ಅನ್ನವೆತ್ತೊ ವಿಷವಾಗಿ ಪರಿಣಮಿಸುವದೆಂದು ಆರ್ಯರು ಹೇಳಿರುವರು. ಇಂದು ನಿಮ್ಮ ದೈವವು ಸಂಪೂರ್ಣ ಅನುಕೂಲವಾಗಿ ಪರಿವರ್ತಿಸಿರುವುದರಿಂದ ಯಾವ ಉದ್ಯೋಗವನ್ನೇ ಕೈಗೊಂಡರೂ ಉತ್ತಮವಾದ ಫಲವು ನಿಮಗೆ ಲಭಿಸುವದು. ಇಂತಹ ಸುಸಂಧಿಯನ್ನು ಕಳಕೊಳ್ಳದೆ ಕರ್ತವ್ಯವು ಮನುಜನ ಜನ್ಮಗತವಾದ ಹಕ್ಕೆಂಬುದನ್ನು ಕಾರ್ಯದಲ್ಲಿ ತೋರಿಸಿರಿ. ನಿಮ್ಮ ಅದೃಷ್ಟವು ನಿಮ್ಮನ್ನು ಪೂರ್ಣ ಮನೋರಥನನ್ನಾಗಿ ಮಾಡಲಿದೆ. ವಾರಂದಿಯ 3 ದಿನಗಳು ಅತೀವ ಸುಖೋದಯಗಳಿವೆ.

ಸಿಂಹ—ಇಂದಿನ ನಿಮ್ಮ ಪರಿಸ್ಥಿತಿಯು ಸ್ವಲ್ಪ ಮಟ್ಟಿಗೆ ಕೆಟ್ಟಿರುವದು ಕ್ರಮಕ್ಕುಚಿತವಾದ ಫಲಪ್ರಾಪ್ತಿಯಿರುವದಾದರೂ ಆಕಸ್ಮಿಕ ಪ್ರವಾಸ ದೇಹಾಲಸ್ಯ ವ್ಯರ್ಥವ್ಯಯಗಳು ಹೆಚ್ಚಿ ನಿಮ್ಮನ್ನು ಕಾಲಕ್ಕೆ ಗುರಿಮಾಡಲಿವೆ. ಉದ್ಯೋಗಸ್ಥಜೀವಿಗಳಿಗೂ ಪ್ರೇಮಜೀವಿಗಳಿಗೂ ಈ ವಾರವು ಏನೂ ಉತ್ತಮವಿಲ್ಲವು. ಗುರುಹಿರಿಯರೊಡನೆ ಮನಸ್ತಾಪ ತಂದೆ ಮಕ್ಕಳೊಳು ಕಲಹಗಳೂ ಉತ್ಪನ್ನವಾದಾವು. ತಾ. 24, 29, 30 ಈ ದಿನಗಳಲ್ಲಿ ಕಾರ್ಯಭಂಗ ಭಯವ್ಯಯಗಳು ಹೆಚ್ಚುವವು.

ಕನ್ಯಾ—ಮಾತುಬಲ್ಲವನಿಗೆ ಜಗಳವಿಲ್ಲವೆಂದು ಲೋಕೋಕ್ತಿಯಿದ್ದರೂ ಈ ವಾರದಲ್ಲಿ ಅದು ಹುಸಿಯಾಗುವ ಸಂಭವವಿದೆ. ವಾಗ್ಮಿಗಳೂ ಕೂಡ ವಾಕ್ಕಲಹಕ್ಕೆ ಗುರಿಯಾಗುವರು. ಅಪೇಕ್ಷ್ಯವರ್ಗದವರಲ್ಲಿ ವಿರಹವುಂಟಾಗುವದು. ವ್ಯಾಪಾರ ವ್ಯವಹಾರಗಳಲ್ಲಿ ನಷ್ಟವಧಿಕ. ರಾಜಕೀಯದಲ್ಲಿ ಪರಾಭವ ಆದರೂ ಜನರಿಂದ ಗೌರವಾದರಗಳನ್ನು ಪಡೆವಿರಿ. ಆಸ್ತಿಕ ಧನಪ್ರಾಪ್ತಿಯ ಯೋಗವಿದೆ. ವಾರಾಂತ್ಯದ 4 ದಿನಗಳು ಉತ್ತಮವಾಗಿ ಪರಿಣಮಿಸುವವು.

ತುಲಾ—ತಾನೊಂದು ಬಗೆದರೆ ದೈವವೊಂದೆಣಿಸಿತೆಂಬಂತೆ ಈ ವಾರದಲ್ಲಿ ನಿಮ್ಮ ಸಂಕಲ್ಪಗಳು ಬಹುತೇಕ ವಿಫಲವಾಗಲಿವೆ. ಆಧಿವ್ಯಾಧಿಗಳಿಂದ ಪೀಡಿತರಾದ ನಿಮಗೆ ಶತ್ರುಗಳಿಂದಾಗಿ ಧನಹಾನಿ, ಮಾನಭಂಗಗಳೊದಗಲಿವೆ. ಲೋಕಾಪವಾದಗಳು ನಿಮ್ಮನ್ನು ಕಿಂಕರ್ತವ್ಯತಾಮೂಢರನ್ನಾಗಿ ಮಾಡಲಿರುವವು. ವಣಿಗ್ವರ್ಗದವರೊಂದನ್ನುಳಿದು ಇತರ ಜನಾಂಗಕ್ಕೆ ಈ ಕಾಲವು ಉತ್ತಮವಾಗಿರದು. ವಾರದ ಅಂತ್ಯದ ದಿನಗಳು ಇದ್ದುದರಲ್ಲಿ ಉತ್ತಮವೆನಿಸುವವು.

ವೃಶ್ಚಿಕ—ನಿಮ್ಮ ಅದೃಷ್ಟವು ಉತ್ತಮವಾಗಿರುವದು. ಸಾಂಸಾರಿಕ ತಾಪತ್ರಯಗಳಿಂದ ಮುಕ್ತರಾದ ನಿಮಗೆ ಸ್ಥಾನಮಾನಾದಿಗಳು ಲಭಿಸುವವು. ಆರ್ಥಿಕಭಾಗವು ಉತ್ತಮಸ್ಥಿತಿಗೆ ಬರಲಿದೆ. ಉದ್ಯೋಗದಲ್ಲಿ ಪ್ರಗತಿಹೊಂದುವಿರಿ. ಸ್ತ್ರೀ ಸಂಬಂಧವಾದ ಧನ ಲಭಿಸುವ ಯೋಗವಿದೆ. ಕೆಲವೊಮ್ಮೆ ಪರ್ಯಟನಗಳು ಹೆಚ್ಚಿ ತನು ಮಿತ್ರ ಕಿಂಚಿದ್ದೇಹಾಲಸ್ಯ ಕಾಣಿಸುವ ಸಂಭವವಿದೆ. ತಾ. 25, 26 ಇತರ ದಿನಗಳಿಗಿಂತ ಉತ್ತಮವೆನಿಸುವದು.

ಧನು—ಒಳ್ಳೇ ಸಾಹಸಿಗಳೂ ಶೂರರೂ ಆದ ನಿಮಗೆ ಹೆಚ್ಚಿನ ಕಾರ್ಯಗಳಲ್ಲಿ ತತ್ಕಾಲಿ ರಾಜಕೀಯ ವಿಭಾಗದಲ್ಲಿ ಒಳ್ಳೆ ಫಲಪ್ರಾಪ್ತಿಯಿದೆ. ಆದರೆ ಗೃಹಕೃತ್ಯದಲ್ಲಿನ ದೋಷದಿಂದಾಗಿ ಗಂಡಹೆಂಡಿರಲ್ಲೂ ತಂದೆ ಮಕ್ಕಳಲ್ಲೂ ಅನೈಕ್ಯವು ಕಾಣಿಸುವದು. ಚಂಚಲ ಮನಸ್ಸಿನಿಂದ ನಿಮಗೆ ಸ್ತ್ರೀಯರಿಂದಾಗಿ ಅನಿಷ್ಟ ಅಪವಾದಗಳಿಗವಕಾಶ ಉಂಟಾಗುವದು. ಬಂಧು ಜನರೊಡನೆ ವಿರೋಧವುಂಟಾಗುವದು. ತಾ. 24, 27, 28ರಲ್ಲಿ ವಿಜಯ ಲಾಭ ಸುಖಪ್ರಾಪ್ತಿಯಾದೀತು.

ಮಕರ—ಅದೃಷ್ಟವು ತೀರ ಕೆಟ್ಟಿರುವದು. ಯಾವ ಭಾಗದಲ್ಲೂ ನಿಮಗೆ ಸುಖ ಪ್ರಗತಿಗಳು ಕಾಣಿಸಲೊಲ್ಲವು. ಗುರುಹಿರಿಯರೊಡನೆ ಮನಸ್ತಾಪ ಧರ್ಮಕರ್ಮಗಳಲ್ಲಿ ಅನಾದರ ಸಾಂಸಾರಿಕ ತಾಪತ್ರಯಗಳಿಂದ ವ್ಯಥಿತರಾದ ನಿಮಗೆ ಹೆಚ್ಚಿನ ಕಾಲವನ್ನು ಮಾರ್ಗದಲ್ಲಿ ಕಳೆವ ಪ್ರಸಕ್ತಿಯುಂಟಾಗುವದು. ಆದರೂ ಕುಟುಂಬಿಕರ ಸಹಕಾರವು ಉತ್ತಮವಾಗಿರುವುದರಿಂದ ದಿನಯಾಪನೆಯು ಕಠಿಣವಾಗಲಾರದು. ತಾ. 25, 26, 30 ಈ ದಿನಗಳಲ್ಲಿ ಸುಖಭೋಜನ ಮಿತ್ರಸಮಾಗಮವಾಗಲಿದೆ.

ಕುಂಭ—ಸ್ತ್ರೀ ಮಿತ್ರರ ದೆಸೆಯಿಂದಾಗಿ ನೀವು ನಷ್ಟಕಷ್ಟಗಳನ್ನನುಭವಿಸಬೇಕಾಗಿ ಬರುವದು. ವಾತಪ್ರಕೋಪದಿಂದ ಆರೋಗ್ಯ ಕೆಡುವದು. ಸಾಮಾಜಿಕ ಕಾರ್ಯಗಳಲ್ಲೂ ವ್ಯಾಪಾರ ವ್ಯವಹಾರಗಳಲ್ಲೂ ಒಳ್ಳೆಯ ಯಶಸ್ಸಿರುವದು. ಖರ್ಚಿಗಿಂತ ಅಧಿಕವಾದ ಧನಾಗಮವಿರುವುದರಿಂದ ಕಾಲಯಾಪನೆಯು ಕಷ್ಟವಾಗಲೊಲ್ಲದು ಆತ್ಮೀಯ ವಿರಹದಿಂದ ಪೀಡಿತರಾದ ನಿಮ್ಮ ಮನಸ್ಸಿಗೆ ತಾ. 24, 27, 28ರಲ್ಲಿ ನೆಮ್ಮದಿಸಿಗುವದು.

ಮೀನ—ಯಾವ ಕಾರ್ಯವೇ ಇರಲಿ ಎಂತಹ ಪ್ರಬಲ ಶತ್ರುಗಳೇ ಇದಿರಾಗಲಿ ನೀವು ಬೆದರಬೇಕಾದ ಸಂಭವವೇ ಇಲ್ಲ. ಅಸಹಾಯ ಶೂರರಿಂದ ನಿಮಗೆ ಸರ್ವತ್ರ ವಿಜಯವು ಲಭಿಸುವದು. ಶತ್ರುಜನರೂ ನಿಮ್ಮ ಮೈತ್ರಿಯನ್ನು ಬಯಸುವರು ದೈಹಿಕ ಮಾನಸಿಕ ಸುಖಶಾಂತಿಯಿಂದೊಡಗೂಡಿದ ನಿಮ್ಮ ಆರ್ಥಿಕ ಸಂಪತ್ತು ಅಭಿವೃದ್ಧಿಯಾಗಲಿದೆ. ತಾ. 26, 27,ರಲ್ಲಿ ಪರ್ಯಟನ ವ್ಯರ್ಥ ಖರ್ಚುಗಳು ಕಾಣಿಸಬಹುದು.

Approved from by the Govt. of Mysore Certificated by the Agent of the Govt of Cylone & Indian.

ನಿಮಗೆ
ಇಂಗ್ಲಿಷ್ ಕಲಿಯಬೇಕೆ?
ಹಾಗಿದ್ದರೆ

ಕೊರಡ್ಕಲ್ ಶ್ರೀನಿವಾಸ ರಾವ್ ವಿರಚಿತ

ಸುಲಭದಲ್ಲಿ ಇಂಗ್ಲಿಷ್

English Made Easy

ಎಂಬ
ಇಂಗ್ಲಿಷ್ ಸ್ವಯಂಬೋಧಿನಿ ಪುಸ್ತಕ
ಅತ್ಯುಪಯುಕ್ತವಾದುದು.
ಬೆಲೆ ರೂ. 1-8-0.
ವಿ. ಪಿ ದ್ವಾರ ರೂ 2-0-0.
ಪ್ರತಿಗಳು ನಿಮ್ಮೂರ ಪುಸ್ತಕ ವ್ಯಾಪಾರಿಗಳಲ್ಲಿ ಸಿಗದಿದ್ದರೆ, ಕೆಳಗಿನ ವಿಳಾಸಕ್ಕೆ ಬರೆಯಿರಿ.

ನವಭಾರತ ಪುಸ್ತಕ ಭಂಡಾರ,
ಉಡುಪಿ

EDITED, PRINTED & PUBLISHED BY K. H. SHETTY AT THE NAVAYUGA PRESS, UDIPI, S. INDIA

Regd No M. 3618

LICENCE No. 31
Licensed to Post without Prepayment

Estd. 1921 ಸ್ಥಾಪನೆ

31—5—1951

Founder: Sri A. B. Shetty,
Minister for Agriculture & Veterinary

ಅಂತರಂಗ
ಪುಸ್ತಕ ಪತ್ರಿಕೆ
ಚಂದಾ ವಿವರ
ವರ್ಷಕ್ಕೆ ರೂ. 4-8-0
6 ತಿಂಗಳಿಗೆ ರೂ 2-8 0
(ಮುಂಗಡ)
ಜಾಹೀರಾತಿಗೆ ಉತ್ತಮ
ಸಾಧನ
ಅಂತರಂಗ, ಉಡುಪಿ.

ನವಯುಗ

ನವಯುಗ
ಚಂದಾ ವಿವರ:
(ಮುಂಗಡ)
ವರ್ಷಕ್ಕೆ ರೂ 5-12-0
6 ತಿಂಗಳಿಗೆ „ 3- 0-0
ಬಿಡಿಪ್ರತಿ „ 0- 2-0
6 ತಿಂಗಳಿಗಿಂತ ಕಡಿಮೆ
ಚಂದಾ ಸ್ವೀಕರಿಸುವುದಿಲ್ಲ.
ನವಯುಗ, ಉಡುಪಿ.

ವರ್ಷ ೩೧ | NAVAYUGA WEEKLY | Post Box No. 22 | UDIPI. | Vol. 31
ವಾರ ೩೮ | | | | No. 38

ಕರ್ತವ್ಯನಿಷ್ಠೆ

ಸಂಸ್ಥೆ ಕಾರ್ಖಾನೆಗಳಲ್ಲಿ ಬಹಳ ಕಾಲದಿಂದ ಮುಖ್ಯಾಧಿಕಾರಿಗಳಾಗಿಯೋ—ವ್ಯವಸ್ಥಾಪಕರಾಗಿಯೋ ಉಳ್ಳವರ ಶ್ರೀಮದ್ಗಾಂಭೀರ್ಯವನ್ನು ಇಲ್ಲವೆ ಖಂಡತುಂಡವಾದ ಧೋರಣೆಯನ್ನು ಕಂಡು ಅಂತಹರನ್ನು 'ಬಂಡವಳಶಾಹಿಯ ಮದಸೇರಿದೆ' 'ಕೆಳವರಮೇಲೆ ಕರುಣೆಯಿಲ್ಲದ ಕಠಿಣಹೃದಯಿ' ಎಂದು ಟೀಕೆ ಮಾಡುವುದುಂಟು. ಒಳಗೆ ಕಪಟ ಯೋಚನೆಯನ್ನಿಟ್ಟುಕೊಂಡು ಹೊರಗೆ ಕುಶಲವಾಗಿ ಮಾತನಾಡಿದಾಕ್ಷಣ 'ಬಹಳ ಉದಾರಿ'—ಎಂದು ಉದ್ಗರಿಸುವುದುಂಟು. ಕಷ್ಟ ದುಃಖ—ತ್ಯಾಗಗಳನ್ನು ಸಹಿಸದ ನಮ್ಮ ಜನ ಮಾನವನ ಮನೋಮಟ್ಟವನ್ನು ಹೇಗೆ ತಿಳಿದೀತು ಹೊರಾಚರಣೆಯಿಂದ ಮನುಷ್ಯ ಕಠಿಣನಾಗಿದ್ದರೂ—ಮಾತಿನಲ್ಲಿ ಬಿಗುತನವಿದ್ದರೂ ಹೃದಯತಃ ಅತನು ನಿಗರ್ವಿಯಾಗಿರುತ್ತಾನೆ. ಅಡಿಯಾಳಾಗಿರುವವನು ಅಧಿಕಾರಿಯು ಪಡೆಯುತ್ತಿರುವ ಸ್ಥಾನಮಾನದ ಮೇಲೂ—ಲಾಭದ ಮೇಲೂ ಕಣ್ಣಿಡುತ್ತಾನೆಯೆ ಹೊರತು ಆತನು ಆ ಸಂಸ್ಥೆಯ ಪುರೋಭಿವೃದ್ಧಿಗಾಗಿ ತ್ಯಾಗ ಮಾಡಿದ್ದನ್ನು ಎಣಿಸುವುದಿಲ್ಲ. ವ್ಯಾಪಾರಕನಾದವನು ಗ್ರಾಹಕರ ಹಿತವನ್ನು ಬಯಸಿಯೇ ನುಡಿದರೂ ಆತನು ದುರುದ್ದೇಶದಿಂದ ಹಾಗನ್ನುತ್ತಾನೆಂದು ತಪ್ಪು ತಿಳಿಯುತ್ತಾರೆ. ತನ್ನ ಅಭಿಪ್ರಾಯವನ್ನು ಯಾರು ನೇರಾಗಿಯೂ ಚುರುಕಾಗಿಯೂ ಹೇಳುತ್ತಾನೋ ಅಂತಹ ವ್ಯಾಪಾರಕನು ಸತ್ಯನಿಷ್ಠನಿರುತ್ತಾನೆ. ಪ್ರಾಮಾಣಿಕತನ ಹಾಗೂ ಕರ್ತವ್ಯ ನಿಷ್ಠೆಯುಳ್ಳವನಿಗೆ ಹೆಚ್ಚಿನ ಮಾತು ಬೇಡಾಗದೆ. ಆತನು ಸಾಧಿಸುವ ಮಾದದಲ್ಲಿ ಮುಂದಿನ ಸುಖದುಃಖಗಳ ಕಲ್ಪನೆಗಳಿರುತ್ತವೆ. ಅನುಭವಿಕರ ತೀರ್ಮಾನ ಸದಾ ಚಿಕ್ಕದಾಗಿಯೂ, ಚೊಕ್ಕದಾಗಿಯೂ ಕುಸುಗಂಭೀರವಾಗಿಯೂ ಇರುತ್ತದೆ. ಇದನ್ನು ಸಾವಧಾನವಾಗಿ ಲಕ್ಷಿಸುವ ಮನಸ್ಸು ಅಡಿಯಾಳಾಗಿರುವವರಲ್ಲಿ—ಇಲ್ಲವೇ ಹೊಸಬರಲ್ಲಿ ಅವಶ್ಯವಾಗಿ ಇರಬೇಕು!

ಪ್ರಧಾನಮಂತ್ರಿ ನೆಹ್ರೂರವರಂತಹ ನಿಸ್ವಾರ್ಥ ದೇಶಪ್ರೇಮಿ—ಉಜ್ವಲ ರಾಜಕೀಯ ವ್ಯಕ್ತಿ ಜಗತ್ತಿನಲ್ಲೇ ಅಪೂರ್ವವೆಂದು ಹೇಳಿದರೂ ಒಪ್ಪಬಹುದೋ ಏನೋ! ಹಲವರಲ್ಲಿ "ತಾನು ತನ್ನದು" ಎನ್ನುವ ಸ್ವಭಾವವಾನ ಇರುವಂತೆ ನೆಹ್ರೂರವರಲ್ಲಿ "ತಪ್ಪು ವರು" ಎಂಬ ಅಭಿಮಾನವಿದೆ. ಆದರೆ ಅದು ತನ್ನ ಪರಿವಾರದವರ ಇಲ್ಲವೇ ಪ್ರಾಂತದವರೆಂಬ ಸಂಕುಚಿತತೆಯಿಂದ ಕೂಡಿದ್ದಲ್ಲ! 'ಭಾರತ ದೇಶದ ಜನ ನಮ್ಮವರು ಅವರ ಹಿತಚಿಂತನೆಗಾಗಿ ಅಹರ್ನಿಶಿ ಚಿಂತಿಸುವುದೇ ಅವರ ಸ್ವಾಭಾವಿಕವಾಗಿರುತ್ತದೆ. ಈ ಸ್ವಾರ್ಥ ರಾಹಿತ್ಯ ಆಂಬಿಕವಾದುದಲ್ಲ; ವಿಶ್ವಕುಟುಂಬಿಯಾದುದು! ಸ್ವಾತಂತ್ರ್ಯಸಿದ್ಧಿಗಾಗಿ ಅವಿರತ ಹೋರಾಟ ನಡೆಸಿದ ಗಾಂಧೀ ಅನುಯಾಯಿಗಳಲ್ಲಿ ಇವರೂ ಒಬ್ಬರು! ಭಾರತ ಜನತೆಯ ತ್ಯಾಗದ ಫಲವಾಗಿ ಸ್ವಾತಂತ್ರ್ಯವೇನೋ ಲಭಿಸಿತು; ಆದರೆ ಬಂದ ಸ್ವಾತಂತ್ರ್ಯ ಅವರು ಬಯಸಿದ್ದನ್ನು ತಂದಿಲ್ಲವೆಂಬುದನ್ನು ನೆಹ್ರೂ ಅರಿತಿದ್ದಾರೆ. ಅಂತಲೇ ನಮ್ಮ ಜನದ ಸುಖದುಃಖಗಳಿಗಾ ಅವರು ಹಲವು ರೀತಿಯ ಕಷ್ಟನಿಷ್ಠುರಗಳನ್ನೂ ಇಂದು ಮುಖ್ಯ ಮಂತ್ರಿಯಾಗಿ ಎದುರಿಸಬೇಕಾಗಿದೆ.

ನೆಹ್ರೂರವರ ಕರ್ತವ್ಯನಿಷ್ಠೆಯಲ್ಲಿ ಎಲ್ಲರಿಗೂ ಅತ್ಮವಿಶ್ವಾಸವಿದೆ. ನೆಹ್ರೂವ್ಯಕ್ತಿತ್ವದ ಮೇಲೆ ಗೌರವಾದರಗಳಿವೆ ಆದರೆ ಹಲವು ವೇಳೆ ಅವರ ವಾದದ ಕುರಿತೂ ರಾಜಕೀಯ ಧೋರಣೆಯ ಕುರಿತೂ ಭಿನ್ನಾಭಿಪ್ರಾಯವೇಳುವುದುಂಟು. ನೆಹ್ರೂ ಛಲವಾದಿ ತನ್ನ ವಾದವನ್ನು ಮೇಲಾಗಿಸುವ ಹಟವಾದಿತನವನ್ನೇ ಹಲವರು 'ನಿರಂಕುಶ ಪ್ರಭುತ್ವ'ವೆಂದು ಟೀಕೆ ಮಾಡುತ್ತಾರೆ. ಇಂತಹ ಘರ್ಷಣೆಗಳು ರಾಜಕೀಯ ರಂಗದಲ್ಲಿ ನಾವು ಆಗಾಗ ಕಾಣಬಹುದು. ಹಲವು ಸಂದರ್ಭದಲ್ಲಿ ಅವರು ತಳೆಯುವ ಅವಸರ ಧೋರಣೆಯನ್ನು ಕಂಡು 'ದಡಬಡ ಸ್ವಭಾವಿ' 'ಉದ್ಧಟತನ' ಎನ್ನುವುದೂ ಉಂಟು. ಈ ಮುಂಗೋಪೀ ಸ್ವಭಾವಗಳಲ್ಲಿ ಸ್ವಾರ್ಥವುಂಟೆಂದು ಕಲ್ಪಿಸುವವರೂ ಇದ್ದಾರೆ ಆದರೆ ಯಥಾರ್ಥವಾಗಿಯಾದರೂ ನೆಹ್ರೂರವರಿಗೆ ಬೇಕಾಗಿರುವದು ತನ್ನ ವಾದ ಮೇಲಾಗಬೇಕೆಂಬ ಛಲವಲ್ಲ; ಅದರಿಂದ ಮುಂದಕ್ಕೆ ಜನತೆಗಾಗುವ ಸತ್ಪರಿಣಾಮ! ಈಗ ಪಾರ್ಲಿಮೆಂಟಿನಲ್ಲಿ ಅವರು ತಿದ್ದುಪಡಿಗಾಗಿ ಮುಂದೆ ತಂದಿರುವ ರಾಜ್ಯಘಟನೆಯ. ಅದಕ್ಕೆ ಉತ್ತಮ ಉದಾಹರಣೆ.

ರಾಜ್ಯಘಟನೆಯ ತಿದ್ದುಪಡಿಯನ್ನು ನೆಹ್ರೂಗಳು ಸ್ವತಃ ಮುಂದೆ ತಂದು ವಿಶೇಷ ಟೀಕೆ ಟಿಪ್ಪಣಿಗಳಿಗೆ ಗುರಿಯಾಗಿದ್ದಾರೆ ರಾಯಿತ ತಜ್ಞರೂ ಕೂಡಾ ಇದು ಕೀ... ಅಸಂಗತವಾದುದೆಂದು ತೀರ್ಮಾನಿಸಿದರೂ ನೆಹ್ರೂ ತನ್ನ ಛಲವನ್ನು ಬಿಡಲಾರರು. ನೆಹ್ರೂರವರ ವಾದದ ಕುರಿತು ಅಸಂತೃಪ್ತರಾದವರೂ ಕೂಡಾ ಅವರ ಅಂತರ್ಯವನ್ನು ಚೆನ್ನಾಗಿ ಬಲ್ಲರು! ಜಮೀನ್ದಾರೀ ನಿವಾರಣೆಯ ಕುರಿತು ಯಾರದೂ ಭಿನ್ನಾಭಿಪ್ರಾಯವಿಲ್ಲ; ಉಳಿದ ವಿಚಾರಗಳಲ್ಲಿ ಅವರು ದೇಶದ ಪ್ರಗತಿಯನ್ನೂ- ಜನಜೀವನದ ಸುಧಾರಣೆಯನ್ನೂ—ಸಾಂಸ್ಕೃತಿಕ ಉಚ್ಛ್ರಾಯ ಸ್ಥಿತಿಯನ್ನೂ ಅವರು ಕಲ್ಪಿಸಿಕೊಂಡು ನಾಳಿನ ಶುಭದಿನಗಳಿಗಾಗಿ ಅದಕ್ಕೆ ಜೀವದಾನ ಮಾಡಲೆತ್ನಿಸಿದ್ದಾರೆ. ಅವರ ಮನಸ್ಸಿನಲ್ಲಿದ್ದುದು ಕಾಯಿದೆರೂಪದಲ್ಲಿ ಜನತೆಯ ಮೇಲೆ ಹೇಗೆ ಪರಿಣಾಮ ಮಾಡುತ್ತದೆಂಬುದು ಸಮಸ್ಯೆಯಾದರೂ "ಹೀಗಾದರೆ ದೇಶಕ್ಕೆ ಒಳ್ಳಿತಿದೆ" ಎನ್ನುವ ಕಲ್ಪನೆ ಅವರಲ್ಲಿದೆ ಈ ರೀತಿಯ ವಿಶ್ವಪ್ರೇಮದ ದೂರದೃಷ್ಟಿಯನ್ನಿಟ್ಟುಕೊಂಡು ಅವರು ವಾದಿಸುತ್ತಿದ್ದಾರೆ. ಕರ್ತವ್ಯನಿಷ್ಠೆಯುಳ್ಳಂತಹ ಪ್ರತಿಯೊಬ್ಬ ವ್ಯಕ್ತಿಯೂ ಹೀಗೆಯೆ. ಆದರೆ ಅಂತರ್ಯವನ್ನು ತಿಳಿಯಬಲ್ಲ ವಿಶಾಲ ಮನಸ್ಸು ಪ್ರಜೆಗಳದ್ದಾಗಿರಬೇಕು ಅಷ್ಟೆ!

ಮಹಾತ್ಮಾ ಗಾಂಧಿಯವರಲ್ಲೂ ಈ ಹಟ ಸಾಧಿಸುವ ಛಲ ಕಂಡು ಬಂದಿತ್ತು. ಭಾರತ ಜನಕ್ಕೆ ಆದರ್ಶ ಹಾಗೂ ಉಪಯುಕ್ತವೆಂದು ಕಂಡು ಬಂದ ವಿಚಾರಗಳಲ್ಲಿ ತನಗಿರುವ ದೂರದೃಷ್ಟಿಯ ಸಹಾಯದಿಂದ ಬೇರೆಯವರ ಅಭಿಪ್ರಾಯಗಳನ್ನು ಅವರು ಮನ್ನಿಸುತ್ತಿರಲಿಲ್ಲ. ಎಷ್ಟೋ ಸಲ ಅವರ ನಿಕಟವರ್ತಿಗಳಾಗಿದ್ದ ಸುಪ್ರಸಿದ್ಧ ವ್ಯಕ್ತಿಗಳಿಗೂ ಅವರಿಗೂ ಮಾತಿನ ಯುದ್ಧವೇ ನಡೆದುದಿದೆ. ಇದರ ಪರಿಣಾಮವಾಗಿ "ಹಟಮಾರಿ" "ಹಟಸ್ವಭಾವಿ" "ಕನಿಕರವಿಲ್ಲದ ಮನಸ್ಸು" ಎಂದು ಅವರನ್ನು ಹೆಸರಿಸಿದ್ದುಂಟು. ಬಹಳ ಕಾಲ ಮುಖ ಗಂಟಿಟ್ಟುಕೊಂಡವರೂ ಉಂಟು ಆದರೆ ಕೊನೆಗೆ ಗಾಂಧೀಜಿಯ ಹಟ ಫಲಿಸಿದಾಗ ಹಿಂದಿನ ಘರ್ಷಣೆಯ ಮರೆಸು ದೂರಾಗುತ್ತಿತ್ತು. ಗಾಂಧೀಜಿಯ ವ್ಯಕ್ತಿತ್ವದ ಮೇಲೆ ಜನತೆಗಿರುವ ದೈವಿಕ ಭಾವನೆ ಅವರಲ್ಲಿರುವ ಪ್ರಾಮಾಣಿಕತನಕ್ಕೆ ಹಾಗೂ ಕರ್ತವ್ಯನಿಷ್ಠೆಗೆ ಸಾಕ್ಷಿ ತಾನೆ!

ಕೊರಿಯಾ ಯುದ್ಧರಂಗದಿಂದ ಛಾಯೆ,
3ನೇ ಪುಟ ನೋಡಿರಿ.

ಸತ್ತವ್ರು ಮಾತೆತ್ತೋದಿಲ್ಲ ಖರೆ,—
ಆದ್ರೆ ಅವ್ರ ಹೆಂಡ್ತಿಮಕ್ಳು?
"ಯಜಮಾನ್ರು ಇನ್ಶೂರ್ ಮಾಡಿರ್ಲಿಲ್ಲಾ" ಎಂಬೊಂದೇ ಮಾತು ಉಳಿದವ್ರು ಸಂಕಷ್ಟ ತಿಳಿಸ್ತೆ.
ಪ್ರತೀ ಗೃಹಸ್ಥರು, ತಮ್ಮ ನಂತ್ರ ಇಂಥಾ ಸ್ಥಿತಿ ಬಾರದಂತೆ ಮುಂಚಿತವಾಗಿ ನೋಡಿಕೊಳ್ಳಿರಿ.
ದಿ ಕೆನರಾ ಮ್ಯೂಚುವಲ್
ಎಶ್ಯೂರೆನ್ಸ್ ಕಂಪೆನಿ, ಲಿಮಿಟೆಡ್,
ಪ್ರಧಾನ ಕಾರ್ಯಾಲಯ: ಉಡುಪಿ. ಸ್ಥಾಪನೆ: ೧೯೩೫
The Canara Mutual Assurance Co, Ltd.
H. O. UDIPI (SOUTH INDIA) Estd 1935.

'ಧರ್ಮಂ ಶರಣಂ ಗಚ್ಛಾಮಿ'

ಲೇಖಕರು:- ಏರ್ಯ ಲಕ್ಷ್ಮಿನಾರಾಯಣ ಆಳ್ವ.

ಕಾಂಗ್ರೆಸ್ಸಿನೊಳಗೆ ಇಂದು ಅನೇಕಾನೇಕ ಬಣಗಳು ತಲೆಯೆತ್ತಿವೆ. ಇನ್ನು ಹಲವಾರು ಗುಂಪುಗಳು ತಲೆದೋರಬಹುದು ಇಂದು ಎಲ್ಲರೂ ಹೇಳುವವರೇ- ಮುಂದಾಳುಗಳೇ ಕೇಳುವವರಾರೂ- ಅನುಯಾಯಿಗಳಾರೂ ಇಲ್ಲ. ಈ ಪರಿಸ್ಥಿತಿಗೆ ಪ್ರಬಲ ಕಾರಣ ಕಾಂಗ್ರೆಸ್ಸು ವ್ಯಕ್ತಿನಿಷ್ಠ ಮಾತ್ರವಾಗಿದ್ದು ತತ್ವನಿಷ್ಠವಾಗದೆ ಹೋದುದು.

ಮೇಧಾವಿಗಳೂ ಪ್ರತಿಭಾಶಾಲಿಗಳೂ ಆದ ನೂರಾರು ಹಿರಿಯ ವ್ಯಕ್ತಿಗಳೇನೂ ಕೊರತೆಯಿದ್ದಿಲ್ಲವಾದರೂ ಕಾಂಗ್ರೆಸ್ಸು ಸಾಧಾರಣ ಕಳೆದ ಕಾಲು ಶತಮಾನದಿಂದ ಮಹಾತ್ಮಾ ಗಾಂಧಿಯವರನ್ನೇ ತನ್ನ ಮುಂದಾಳುವಾಗಿ ಅಂಗೀಕರಿಸಿಕೊಂಡಿತ್ತು. ಅವರು ಹೇಳಿದಂತೆ ಸಾಗುವುದೇ ಅದರ ಕೆಲಸವಾಗಿತ್ತು. ಹೀಗೆನ್ನುವಾಗ ಕಾಂಗ್ರೆಸ್ಸಿಗೆ ನಿಶ್ಚಿತ ಧ್ಯೇಯಧೋರಣೆಗಳಿದ್ದಿರಲಿಲ್ಲವೆಂದಾಗಲೀ, ಮಹಾತ್ಮರು ಕಾಂಗ್ರೆಸ್ಸು ತನ್ನ ಹೇಳಿಕೆಯಂತೆಯೇ ಮುನ್ನಡೆಯಬೇಕೆಂಬ ದುರಾಶೆಗೊಳಗಾಗಿದ್ದರೆಂದಾಗಲೀ ಅರ್ಥವಲ್ಲ. ಕಾಂಗ್ರೆಸ್ಸಿಗೆ ನಿರ್ದಿಷ್ಟ ಗುರಿಯೂ ಇತ್ತು, ನಿಶ್ಚಿತ ಹಾದಿಯೂ ಇತ್ತು. ಆದರೆ ಸಾಧ್ಯವನ್ನು ಸೇರಲು ಸಾಧನವನ್ನು ಬಳಸುವುದು ಹೇಗೆ ಮತ್ತು ಯಾವಾಗ ಎಂಬುದನ್ನು ಮಹಾತ್ಮರೇ ಹೇಳಕೊಡಬೇಕಾಗುತ್ತಿತ್ತು. ಇನ್ನು ಮಹಾತ್ಮರಿಗೆ ಕಾಂಗ್ರೆಸ್ಸು ತನ್ನನ್ನೇ ನಂಬಿ ನಡೆದರೆ ಅದರಿಂದ ಮುಂದೆ ಆಗಬಹುದಾದ ಅನರ್ಥದ ಅರಿವು ಇಲ್ಲದೆಯೂ ಇರಲಿಲ್ಲ. ಆದ್ದರಿಂದಾಗಿಯೇ ಅವರು ಕಾಂಗ್ರೆಸ್ಸನ್ನು ಅದರ ಕಾಲಲ್ಲೇ ನಡೆಯಬಿಟ್ಟರು. ತಾನು ಅದರ ನಾಲ್ಕಾಣೆ ಸದಸ್ಯತ್ವದಿಂದಲೂ ಜಾರಿಕೊಂಡರು. ಆದರೆ ಕಾಂಗ್ರೆಸ್ಸು ಮಾತ್ರ ಅವರ ಕೈಬಿಡಲಿಲ್ಲ. ಹೀಗೆ ಕಾಂಗ್ರೆಸ್ಸು ಅವರನ್ನು ಪಟ್ಟುಹಿಡಿದಾಗ ಅವರು ಮಾರ್ಗದರ್ಶನವನ್ನೇನೋ ಮಾಡಿದರು. ಆದರೆ ಅವರು ಕಾಲಕಾಲಕ್ಕೆ ಕಾಂಗ್ರೆಸ್ಸಿನ ಈ ರೀತಿಯನ್ನು ಖಂಡಿಸದಿರಲಿಲ್ಲ. ಅದು ಅತಿ ವ್ಯಕ್ತಿ ನಿಷ್ಠೆಯನ್ನು ತೊರೆದು ಸಂಘನಿಷ್ಠೆಯ ಹಾದಿಯಾಗಿ ತತ್ವನಿಷ್ಠೆಯ ಕಡೆಗೆ ಸಾಗದಿದ್ದರೆ ಅದರ ಅವನತಿ ನಿಶ್ಚಿತ ಎಂದು ಅವರು ಆಗಾಗ ಎಚ್ಚರಿಸುತ್ತಿದ್ದರು. ಅವರು ಹೇಳಿದ್ದೇ ಬಂತು. ಯಾರೂ ಕೇಳಲಿಲ್ಲ. ಸಾಮಾನ್ಯ ಜನತೆಯಿಂದ ಹಿಡಿದು ಹಿರಿಯ ಮುಂದಾಳುಗಳ ವರೆಗೂ ಯಾರೂ ಅಂದು ಆ ಮಾತಿನ ಸತ್ಯವನ್ನರಿತುಕೊಳ್ಳಲಿಲ್ಲ. ಅಥವಾ ಅರಿತೂ ವ್ಯಕ್ತಿ ನಿಷ್ಠೆಯ ಮೋಹವನ್ನು ತೊರೆಯಲಾಗಲಿಲ್ಲವೋ ಏನೋ ಅವರಿಂದ. ಅಂತೂ ಕಾಂಗ್ರೆಸ್ಸಿಗರ ಆ ದೌರ್ಬಲ್ಯ- ಅಜ್ಞಾನವೋ? ಮೋಹವೋ?- ಮಧ್ಯಗಾಣದ ಉತ್ಕಟವಾಗಿ ಪರಿಣಮಿಸಿದೆ. ಕಾಂಗ್ರೆಸ್ಸು ಪಕ್ಷ ಪಂಗಡಗಳಾಗಿ ಒಡೆದು ನಾಮಾಶೇಷವಾಗಿ ಹೋಗುವುದೋ ಎಂಬ ಭಯವು ತಲೆದೋರಿದೆ.

ವ್ಯಕ್ತಿನಿಷ್ಠೆಯಿಂದಲೇ ಮುಂದೆ ಸಾಗಿ ತತ್ವನಿಷ್ಠೆಯನ್ನು ಅರಿಯದಿದ್ದರೆ ಅದರಿಂದ ಆಗುವ ಅನಾಹುತವನ್ನ ನಾವು ಮಹಾಭಾರತದಲ್ಲಿ ಯಾದವರಿಂದ ಕಲಿಯಬಹುದಾಗಿದೆ. ಕೃಷ್ಣನು ಯಾದವರನ್ನು ಒಂದು ಧನೋದ್ದೇಶಕ್ಕಾಗಿ ಒಂದುಗೂಡಿಸಿದ ಮುಂದೆ ನಡೆಸಿದ. ಆದರೆ ಆತನನ್ನೇ ನಚ್ಚಿ ಉದ್ದೇಶವನ್ನು- ತತ್ವವನ್ನು- ಅರಿಯದ ಆ ಮಂದಿ ಕೃಷ್ಣನ ಮರಣಾನಂತರ ತಮ್ಮತಮ್ಮೊಳಗೇ ಹೊಯ್ಯಾಡಿಕೊಂಡು ತಮ್ಮ ನಾಶವನ್ನು ತಾವೇ ಬಪ್ಪಾಯಿಸಿಕೊಂಡರು.

ಬುದ್ಧನ ಅನುಯಾಯಿಗಳ ಕತೆಯಾದರೂ ಇಷ್ಟೆ. "ನನ್ನ ಮಾತಿಗೆ ನಿಮ್ಮ ಮತಿಯನ್ನು ಎಂದೂ ಮಾರಿಕೊಳ್ಳಬೇಡಿ. ನಾನು ಹೇಳುವುದನ್ನು ನಿಮ್ಮ ಮತಿಯ ಒರೆಗಲ್ಲಿಗೆ ಒರೆದು ನೋಡಿ, ಅಲ್ಲಿ ಅದು ಬಣ್ಣದೋರಿದರೆ ಮಾತ್ರ ಸ್ವೀಕರಿಸಿ' ಎಂದು ಬುದ್ಧ ಸಾರಿಹೇಳುತ್ತಿದ್ದ. ಆದರೆ ಆತನ 'ಅನುಯಾಯಿಗಳಲ್ಲಿ ಹೆಚ್ಚಿನವರು ಆತನ ತತ್ವಗಳನ್ನು ವಿಮರ್ಶಿಸಿ ಸತ್ಯವೆಂದರಿತು ಸ್ವೀಕರಿಸಲಿಲ್ಲ ಬುದ್ಧ ಹೇಳಿದನೆಂದೇ ಸ್ವೀಕರಿಸಿದರು. ಪರಿಣಾಮವಾಗಿ ಬುದ್ಧನ ಮರಣಾನಂತರ ಆತನ ಅನುಯಾಯಿಗಳೊಳಗೇ ಮನಸ್ತಾಪ ತಲೆದೋರಿತು. ಸಂಘದಲ್ಲಿ ಒಡಕು ಉಂಟಾಯಿತು

ಈ ಜಗತ್ತಿನಲ್ಲಿ ಯಾವುದಕ್ಕಾದರೂ ಒಂದು ಮಿತಿಯುಂಟು. ಆ ಮಿತಿಯನ್ನು ಅತಿಕ್ರಮಿಸಿದ ಕೂಡಲೇ ಯಾವಾಗಲೂ ಅನಾಹುತಗಳು ಘಟಿಸುತ್ತವೆ. ಯಾವುದು ಆಗಬೇಕಾಗಿತ್ತೋ ಅದರ ವಿಪರೀತವು ಜರಗುತ್ತದೆ. ಅತಿ ವ್ಯಕ್ತಿನಿಷ್ಠೆಯ ಕತೆಯಾದರೂ ಇಷ್ಟೇ. ಆದರೆ ಇಲ್ಲಿ "ಅತಿ" ಎಂಬುದರೊಡನೆ "ಕುರುಡು" ಎಂಬ ಭಾವವು ಸೇರಿಕೊಂಡಿದೆ ಎಂಬುದನ್ನು ಯಾರೂ ಮರೆಯದಿರಬೇಕು. ಯಾರ ಮೇಲೆ ಸಮಾಜ ಅತಿನಿಷ್ಠೆಯನ್ನಿಡುತ್ತದೋ ಆ ವ್ಯಕ್ತಿ ಗೋಮುಖ ವ್ಯಾಘ್ರನಾಗಿದ್ದರಂತೂ ಅದರಿಂದ ಯಾವ ಅನಿಷ್ಟಗಳು ತಲೆದೋರಬಹುದು ಎಂಬುದಕ್ಕೆ ಇತಿಹಾಸವೇ ಸಾಕ್ಷಿ. ಉತ್ತಮನಾಗಿದ್ದರೂ ಆತನಿರುವವರೆಗೆ ಸಮಾಜಕ್ಕೆ ಹಿತವಾದರೂ ಆತನ ನಂತರ ಅಹಿತವೇ ಆದೀತು ಎಂಬುದನ್ನು ಇತಿಹಾಸ ಸಾರುತ್ತದೆ.

ಅತಿ ವ್ಯಕ್ತಿನಿಷ್ಠೆಯ ಗತಿ ಇಂತಾದರೆ ಅತಿ ಸಂಘನಿಷ್ಠೆಯದು ಇನ್ನೊಂದು ತರ. ಅತಿ ಸಂಘನಿಷ್ಠೆಯ ಅಮಲು ತಲೆಗೇರಿದ ವ್ಯಕ್ತಿಗೆ ತನ್ನ ಸಂಘದ ಹೊರಗಿನದೇನೂ ಕಾಣುವುದಿಲ್ಲ ತನ್ನ ಸಂಘದ ಹೊರತಾದುದೆಲ್ಲ ಅಸತ್ಯ, ಅನ್ಯಾಯಗಳಿಂದೊಡಗೂಡಿದುದು ಎಂದು ಭಾವಿಸುತ್ತಾನೆ ಆತ. ತನ್ನ ಸಂಘದ ಹೊರಗಿನದನ್ನು ತಿಳಿಯಲು ಕೂಡಾ ಇಚ್ಛಿಸುವುದಿಲ್ಲ ಆತ. ತನ್ನ ಸಂಘದ ಹೊರಗಿನದರಲ್ಲಿ ತಿಳಿಯಬೇಕಾದುದೇನೂ ಇಲ್ಲ ಎಂದು ಆತನ ತಿಳುವಳಿಕೆ. ಸತ್ಯವು ತನ್ನ ಸಂಘದಲ್ಲೇ ಪರಿಮಿತವಾಗಿದೆ ಎಂದು ತಿಳಿಯುವುದು ಮಾತ್ರವಲ್ಲ ಹಾಗೆಂದು ಬೊಬ್ಬಿಟ್ಟು ಸೀಮಾತೀತ ಸತ್ಯಕ್ಕೆ ಸೀಮೆ ಹಾಕುವ ಹುಚ್ಚು ಸಾಹಸಮಾಡುತ್ತಾನೆ.

ಈ ಅತಿಸಂಘನಿಷ್ಠೆಯ ಕಾಮುಕ್ಕೆ ಬಲಿಯಾದವನಲ್ಲಿ ಲೋಭ ಕ್ರೋಧಗಳ ತಾಂಡವ ನಡೆದಿರುತ್ತದೆ. ತನ್ನ ಸಂಘಕ್ಕೆ ಜನ ಸೇರುತ್ತಾ ಹೋಗಬೇಕು ಎಂಬ ಲೋಭ. ಸೇರದಿದ್ದವರ ಮೇಲೆ ಕ್ರೋಧ, ಹೀಗೆ ಸಾಗುತ್ತದೆ ಈ ಮನಸ್ಸಿನ ಗತಿ. ಇಂದು ಮತಗಳಿಂದ ಹಿಡಿದು ರಾಜಕೀಯ ಪಕ್ಷಪಂಗಡಗಳ ವರೆಗೆ ಇದೇ ಈ ಅತಿ ಸಂಘನಿಷ್ಠೆಯ ಗ್ರಹಣ ಹಿಡಿದುದು ಕಂಡು ಬರುತ್ತಿದೆ. ಮತಗಳೆಲ್ಲವೂ ತಮ್ಮದೊಂದೇ ದಾರಿ ಸ್ವರ್ಗಕ್ಕೆ ಎಂದು ಸಾರಿದರೆ ರಾಜಕೀಯ ಪಕ್ಷಗಳೆಲ್ಲವೂ ತಮದೊಂದೇ ಹಾದಿ ಸುಖ ಶಾಂತಿಗಳ ಬೀಡಿಗೆ ಎಂದು ಬೊಬ್ಬಿಡುತ್ತಿವೆ. ಈ ಸಂಕುಚಿತ ಮನೋಭಾವದಿಂದಾಗಿಯೇ ಮಾನವ ಜೀವನವು ಕಡೆಗಣಿಸಲ್ಪಟ್ಟಿದೆ ಮತ ಪಕ್ಷ ಪಂಗಡಗಳ ಬಾಯಿಯಲ್ಲಿ ಸಿಕ್ಕಿ ವಿಲಿವಿಲಿ ಒದ್ದಾಡುತ್ತಿದೆ ಮಾನವನ ಬಾಳು. ಒಮ್ಮೆ ಮಾನವನ ಉನ್ನತಿಗಾಗಿ ತಲೆಯೆತ್ತಿದ ಈ ಮತ ಪಕ್ಷ ಪಂಗಡಗಳೇ ಇಂದು ಆತನನ್ನು ಕಬಳಿಸತೊಡಗಿವೆ. ಎಲ್ಲರಿಗೂ ಸುಖ, ಶಾಂತಿ, ಸ್ವರ್ಗಗಳೆಂಬ ಘೋಷಣೆಯ ಒಳಗಿರುವ ಸ್ವಾರ್ಥ ಧೋರಣೆಯಿಂದಾಗಿ ಎಲ್ಲರಿಗೂ ಅಸುಖ, ಅಶಾಂತಿ, ನರಕಗಳು ಬಂದೊದಗಿವೆ. ಸಮಾಜದ ವೃಕ್ಷಕ್ಕೆ ಹಿಡಿದ ರೋಗಾಣು ಸ್ವರೂಪಿ ಈ ಅತಿಸಂಘನಿಷ್ಠೆಯು ನಾಶವಾಗದ ವರೆಗೆ ಸುಖ, ಶಾಂತಿ, ಸ್ವರ್ಗಗಳು ಕನಸಿನ ಸೌಧ ಮಾತ್ರ.

ವ್ಯಕ್ತಿಯ ನಿಜವಾದ ಹಿರಿಮೆ ಆತ ತತ್ವನಿಷ್ಠನಾಗುವುದರಲ್ಲಿದೆ. ಮತ್ತು ಅದರಿಂದಲೇ ಆತನಿಗೆ ಸುಖ, ಶಾಂತಿ, ಸ್ವರ್ಗಗಳು ದೊರಕುತ್ತವೆ. ವ್ಯಕ್ತಿಗೆ ಒಮ್ಮೆಲೇ ತತ್ವನಿಷ್ಠನಾಗುವುದು ಕಷ್ಟವೇನೋ ಸಹಜ. ಅದಕ್ಕಾಗಿಯೇ ಆತ ವ್ಯಕ್ತಿನಿಷ್ಠೆ ಸಂಘನಿಷ್ಠೆಗಳ ಮೆಟ್ಟಲುಗಳನ್ನು ಹತ್ತಿ ಬರಬೇಕು. ಆಗ ಕೂಡಾ ವ್ಯಕ್ತಿನಿಷ್ಠೆ ಸಂಘ ನಿಷ್ಠೆಗಳಿಗೆ ಒಂದು ಮಿತಿ ಬೇಕು. ಹೀಗೆ ನಡೆದು ವ್ಯಕ್ತಿ ತತ್ವನಿಷ್ಠನಾದಲ್ಲಿ ಆತನು ಜತೆಗೆ ಆತನಿರುವ ವಾತಾವರಣ ಎಲ್ಲವೂ ಪರಿಶುದ್ಧಗೊಂಡು ಸುಖಶಾಂತಿಗಳು ಅಲ್ಲೇ ತಲೆಯೆತ್ತಿಯಾವು.

ಬುದ್ಧ ಧರ್ಮದಲ್ಲಿ ಮೂರು ಶರಣಾಗತಿಗಳಿವೆ. "ಬುದ್ಧಂ ಶರಣಂ ಗಚ್ಛಾಮಿ", "ಸಂಘಂ ಶರಣಂ ಗಚ್ಛಾಮಿ", ಧರ್ಮಂ ಶರಣಂ ಗಚ್ಛಾಮಿ" ಎಂಬವು ಆ ಮೂರು. ಕ್ರಮಶಃ ನಾವು ಬುದ್ಧನಿಂದ ಸಂಘಕ್ಕೆ, ಸಂಘದಿಂದ ಧರ್ಮಕ್ಕೆ ಸಾಗಬೇಕು. (ಇಲ್ಲಿ ಬುದ್ಧ ಎಂಬುದನ್ನು ವ್ಯಕ್ತಿ ಎಂಬ ಅರ್ಥದಲ್ಲಿ ಉಪಯೋಗಿಸಿದೆ. ಮತ್ತು ಧರ್ಮ ಎಂಬುದನ್ನು ಮತ ಎಂಬ ಸಂಕುಚಿತ ಅರ್ಥದಲ್ಲಿ ಬಳಸದೆ ಯಾವುದು ನಮ್ಮನ್ನು ಧಾರಣೆ ಮಾಡುತ್ತದೋ ಅದು ಧರ್ಮ ಎಂಬ ವಿಶಾಲ ಅರ್ಥದಲ್ಲಿ ಉಪಯೋಗಿಸಿದೆ) ಕೊನೆಗೆ ಧರ್ಮವೇ ನಮ್ಮ ಬಾಳ ಉಸಿರಾಗಬೇಕು. ಹೀಗೆ ನಾವು ಧರ್ಮನಿಷ್ಠರಾದರೆ- ನಮ್ಮನ್ನು ಧಾರಣೆಮಾಡುವ ತತ್ವಗಳನ್ನು ಬಾಳಿನಲ್ಲಿ ಅರಗಿಸಿಕೊಂಡರೆ ಮಾತ್ರ "ಸ್ವರ್ಗದಲ್ಲಿಯ ದೇವರ ರಾಜ್ಯ" ಭೂಮಿಗೆ ಇಳಿದೀತು. "ರಾಮರಾಜ್ಯ" ನೆಲೆಗೊಂಡೀತು.

ಬೇಂಕಿಂಗ್ ಸಂಬಂಧದ ಎಲ್ಲಾ ಸಮಸ್ಯೆಗಳಿಗೆ

ದಿ ವಿಜಯಾ ಬೇಂಕ್ ಲಿಮಿಟೆಡ್

ಇವರ ಸಲಹೆ ಕೇಳಿರಿ

ಹೆಡ್ ಆಫೀಸು : : : : ಮಂಗಳೂರು

ಮಡಿಕೇರಿಯಲ್ಲಿ ಒಂದು ಶಾಖೆಯೂ ಬೊಂಬಾಯಿಯಲ್ಲಿ ಒಂದು ಶಾಖೆಯೂ ಜಿಲ್ಲೆಯೊಳಗೆ ಹಲವು ಶಾಖೆಗಳೂ ಇವೆ.

ಸಿರಮ್ ಡೇಪಾಜಿಟ್‍ಗಳ ಮೇಲೆ ಆಕರ್ಷಕವಾದ ದರದ ಬಡ್ಡಿಯು ಕೊಡಲ್ಪಡುವುದು.

ತಕ್ಕುದಾದ ಜವಾಬ್ದಾರಿಗಳ ಮೇಲೆ ಸುಲಭವಾದ ಶರ್ತಗಳಲ್ಲಿ ಸಾಲಗಳು ಕೊಡಲ್ಪಡುವುವು.

ಸಾಲಿಯನ್ ಸೇಕಡಾ 4½ರ ಬಡ್ಡಿ ಗಳಿಸುವ ಮೂರು ವರ್ಷದ ಅವಧಿಯ ವಿಜಯಾ ಕೇಶ್ ಸರ್ಟಿಫಿಕೇಟುಗಳ ಮೇಲೆ

ಹಣವನ್ನು ಹಾಕಿರಿ

THE VIJAYA BANK, LTD,

ಬಿ. ಮಂಜಯ್ಯ ಹೆಗ್ಗಡೆ,
(ದ. ಕ. ಜಿಲ್ಲಾ ಬೋರ್ಡ್ ಪ್ರೆಸಿಡೆಂಟ್
ಡೈರೆಕ್ಟರ್ ಬೋರ್ಡಿನ ಅಧ್ಯಕ್ಷರು.

ನಿಮಗೆ
ಇಂಗ್ಲಿಷ್ ಕಲಿಯಬೇಕೆ?
ಹಾಗಿದ್ದರೆ

ಕೊರಡ್ಕಲ್
ಶ್ರೀನಿವಾಸ
ರಾವ್
ವಿರಚಿತ

ಸುಲಭದಲ್ಲಿ ಇಂಗ್ಲಿಷ್

English Made Easy

ಆಂಗ್ಲ ಸ್ವಯಂಬೋಧಿನಿ ಪುಸ್ತಕ
ಅತ್ಯುಪಯುಕ್ತವಾದುದು.

ಬೆಲೆ ರೂ. 1-8-0.

ವಿ. ಪಿ. ದ್ವಾರ ರೂ. 2-0-0.

ಪ್ರತಿಗಳು ನಿಮ್ಮೂರ ಪುಸ್ತಕ ವ್ಯಾಪಾರಿಗಳಲ್ಲಿ ಸಿಗದಿದ್ದರೆ, ಕೆಳಗಿನ ವಿಳಾಸಕ್ಕೆ ಬರೆಯಿರಿ.

ನವಭಾರತ ಪುಸ್ತಕ ಭಂಡಾರ, ಉಡುಪಿ.

ಭಾಷಾವಾರು ಪ್ರಾಂತರಚನೆ

ನಮ್ಮ ದೇಶವು ಬ್ರಿಟಿಷರ ಆಳ್ವಿಕೆಯೊಳಗಿರುವದನ್ನು ತಪ್ಪಿಸಿ ಸ್ವತಂತ್ರವಾಗುವರೆ ಕೋಂಗ್ರೆಸ್ಸು ಬಹುತರದ ಹೋರಾಟ ನಡೆಸಿದೆ. ಆ ಕಾಲದಲ್ಲಿ ಅನೇಕ ಪಾರ್ಟಿಗಳಿದ್ದರೂ ಕೋಂಗ್ರೆಸ್ಸಿನ ಧೋರಣೆ ಬಹಳ ಮುಂದುವರಿದಿರುವುದರಿಂದ ಹಲವು ತರದ ಯೋಜನೆಗಳನ್ನು ಜನರ ಮುಂದಿಟ್ಟ ಕಾರಣ ಮತ್ತು ನಾನಾ ರೀತಿಯ ಭರವಸೆಯನ್ನು ಜನರಿಗೆ ಕೊಟ್ಟಿರುವದರಿಂದ ಕೋಂಗ್ರೆಸಿನ ವರ್ಚಸ್ಸೇ ದೇಶವಲ್ಲ ಬೆಳೆಯಿತು. ಪಾರ್ಟಿಗಳು ಚಳವಳದ ಬಗ್ಗೆ ಜನರನ್ನು ಹುರಿದುಂಬಿಸುವದಕ್ಕಾಗಿ ಈ ತರದ ಭರವಸೆ ಕೊಡಬೇಕಾಗಿ ಬಂತು; ಭರವಸೆ ಕೊಟ್ಟ ಮೇಲೆ ಒಪ್ಪಿಗೆ ಕೊಡಬೇಕಾಗುತ್ತದೆ; ಒಪ್ಪಿಗೆ ಕೊಟ್ಟ ಮೇಲೆ ಅದಕ್ಕನುಸಾರವಾಗಿ ನಡೆಕೊಳ್ಳಬೇಕಾಗುತ್ತದೆ. ಭಾಷಾವಾರು ಪ್ರಾಂತ ರಚನೆಯ ಕುರಿತ ಕೋಂಗ್ರೆಸ್ಸು ಒಪ್ಪಿಗೆ ಕೊಟ್ಟದ್ದು ಇಂಥಾದ್ದೇ ಒಂದು ಪ್ರಸಂಗ. ಇದು ಚಳವಳಕ್ಕೆ ಜನರ ಪ್ರೋತ್ಸಾಹ ಪಡೆಯುವರೆ ಪ್ರಚಾರಕ್ಕಾಗಿ ಸಾರಿದುದೋ ಅಥವಾ ಆಡಳಿತೆಯ ಸುವ್ಯವಸ್ಥೆಯ ಬಗ್ಗೆ ಹೇಳಿದುದೋ ಎಂಬುದನ್ನು ತಿಳಿಯಬೇಕಾಗಿಯದೆ.

ನಾವು ಸ್ವತಂತ್ರಪಡೆದಂದಿನಿಂದ ಇಂದಿನ ವರೇಗೆ ಭಾಷಾವಾರು ಪ್ರಾಂತರಚನೆಯ ಕೂಗು ಹಲವು ಕಡೆಗಳಿಂದ ಕೇಳಿಬರುತ್ತಾ ಇದೆ. ಈ ಹೊಸ ಚುನಾವಣೆಯು ಸಮೀಪಿಸುತ್ತಾ ಬರುವದಾದ್ದರಿಂದ ಇದನ್ನೇ ಒಂದು ತತ್ವವನ್ನಾಗಿ ಉಚರಿಸುವ ಅಭಿಪ್ರಾಯವು ಕೆಲವು ಮುತ್ಸದ್ದಿಗಳಲ್ಲ ತೋರಿಬರುತ್ತಿದೆ. ಈ ಕುರಿತು ಹಲವರು ಭಿನ್ನಾಭಿಪ್ರಾಯಪಟ್ಟಿರುವರು. ಭಾಷಾವಾರು ಪ್ರಾಂತರಚನೆಯ ಒಗ್ಗೆ ಜನರು ವಾದಿಸುವ ತಿರುಳೇನೆಂಬುದನ್ನು ನಾವು ಇಲ್ಲಿ ಚರ್ಚಿಸಬೇಕಾಗಿದೆ. ಈಗಿರುವ ಕೆಲವು ಪ್ರಾಂತಗಳಲ್ಲಿ ಮೂರು ಯಾ ನಾಲ್ಕು ಭಾಷೆಗಳನ್ನಾಡುವ ಜನಾಂಗಗಳು ಸೇರಿರುವದುಂಟು. ಉದಾಹರಣೆಗಾಗಿ ಹೇಳುವದಾದರೆ ನಮ್ಮ ಮದ್ರಾಸು ಪ್ರಾಂತದಲ್ಲಿ ತೆಲುಗರು, ತಮಿಳರು, ಮಲೆಯಾಳಿಗಳು, ಕನ್ನಡಿಗರು ಸೇರಿರುವರು. ಇಂಥಾ ಪ್ರಾಂತದಲ್ಲಿ ಯಾವುದಾದರೊಂದು ಭಾಷೆಯವರು ಬಹುಸಂಖ್ಯಾಕರಿದ್ದಲ್ಲಿ ಪ್ರಾಂತಾಡಳಿತೆಯ ವ್ಯವಸ್ಥೆಯು ಅವರ ಪರವಾಗಿಯೇ ಅವರ ಉನ್ನತಿ ಮತ್ತು ಹಿತಕ್ಕಾಗಿಯೇ ಸರಕಾರವು ಗುರಿ ಇಟ್ಟು ಹೆಚ್ಚಿನ ಗಮನಕೊಡುವದೆಂದೂ ಅಲ್ಪಸಂಖ್ಯಾಕರಿಗಾಗಿಯೂ ಯಾವ ದೊಡ್ಡ ಯೋಜನೆಯನ್ನು ಕೈಕೊಳ್ಳಲಿಲ್ಲವೆಂಬ ಬಲವಾದ ಆರೋಪವಿದೆ. ಭಾಷಾ ವಾತ್ಸಲ್ಯದಿಂದ ಹೀಗಾಗಿದೆ ಎಂದು ನಂಬಲು ಆಸ್ಪದ ಕಾಣುವದಿಲ್ಲ. ಸರಕಾರದ ಕಾರ್ಯಕಾರೀ ಮಂಡಳಿಯ ಕೆಲವು ವ್ಯಕ್ತಿಗಳು ಮತ್ತು ಇಲಾಖೆಯ ದೊಡ್ಡ ಆಫೀಸರು ಸ್ವಾರ್ಥದೃಷ್ಟಿಯಿಂದ ತಮ್ಮ ತಮ್ಮ ಜಿಲ್ಲೆಗಳಿಗಾಗಿ ಕೆಲವು ಕಾರ್ಯಗಳನ್ನೆಸಗಿ ಈ ಅಪವಾದಕ್ಕೆ ಎಡೆಕೊಟ್ಟಿರಬಹುದೇ ಹೊರತು ನಿಜಾಂಶವೇನೂ ಕಂಡುಬರುವುದಿಲ್ಲ. ಇದು ವ್ಯಕ್ತಿಗಳ ದೋಷವಾದ್ದರಿಂದ ಪ್ರಚಾರಕ್ಕಾಗಿ ಅಥವಾ ಉಪನ್ಯಾಸಕ್ಕಾಗಿ ಉಪಯೋಗಿಸಬಹುದು ಹೊರತು ಬೇರೇನೂ ಪ್ರಯೋಜನವಿಲ್ಲ. ಈ ಆರೋಪದಲ್ಲಿ ಸತ್ಯಾಂಶವಿದ್ದಿದ್ದರೆ ವೈಶಮ್ಯ, ದ್ವೇಷ, ಮತ್ತು ಅಸೂಯೆ ಯಾವಾಗಲೇ ಹುಟ್ಟಿ ಐಕ್ಯತೆ ಹಾಳಾಗುತ್ತಿತ್ತು.

ಇನ್ನು ಕೆಲವರು ಬೇರೆ ಕಾರಣಗಳನ್ನು ತಂದೊಡ್ಡುವರು. ಭಾಷೆ, ಕಲೆ, ವಿದ್ಯೆ ಮತ್ತು ಜ್ಞಾನವನ್ನು ಮುಂದೊತ್ತುವರೆ ಭಾಷಾಪ್ರಾಂತವನ್ನು ಕೇಳುವುದಾಗಿದೆ. ಹೊರತು ಇದು ರಾಜಕೀಯ ಚಳವಳವೆನ್ನುವರು. ಇದಕ್ಕೆ ಕೋಂಗ್ರೆಸ್ಸು ಮೊದಲೇ ಒಪ್ಪಿಗೆ ಕೊಟ್ಟಿದೆ. ಈಗಲೇ ಕೆಲವು ಭಾಷಾವಾರು ಪ್ರಾಂತಗಳಿವೆ. ಇವುಗಳಿಂದ ಐಕ್ಯತೆ ಹಾಳಾದುದಾಗಲೀ ದೇಶವು ಚೂರುಚೂರಾಗಿ ಬೇರಾದುದಾಗಲೀ ಕಂಡುಬರಲಿಲ್ಲ. ಇದು ಭಾವನಾವಶನಾಗಿ ಹೇಳುವದಲ್ಲ (sentimental) ನ್ಯಾಯಬದ್ಧವಾದ ಎನ್ನುವರು. ಇದರಲ್ಲಿ ಸ್ವಲ್ಪ ಮಟ್ಟಿನ ಸತ್ಯಾಂಶ ಉಂಟು. ಕನ್ನಡಿಗರೆಂಬ ಒಂದು ಜನಾಂಗವು ಬತ್ತಿ ಹೋದಲ್ಲಿ ಅವರ ಸಂಸ್ಕೃತಿ ಬೆಳೆಯುವ ದಾರಿಯನ್ನೇ ಅಡ್ಡಗಟ್ಟಿದಂತಾಗುತ್ತದೆ. ಪ್ರಜಾಸತ್ತೆಯ ಸರಕಾರವು ಬೆಳೆಯಬೇಕಾದರೆ ಜನರು ಒಂದೇ ಭಾಷೆಯಲ್ಲಿ ವಿಚಾರ ವಿನಿಮಯ ವಿಮರ್ಶೆ ಮಾಡುವುದು ಒಳ್ಳೇದು. ಪ್ರಜಾಸತ್ತೆಯ ಸರಕಾರದಲ್ಲಿ ಪ್ರತಿಯೊಬ್ಬ ವ್ಯಕ್ತಿಯೂ ಕೈಹಾಕಬೇಕಾದರೆ ಹಲವು ಭಾಷೆಯ ಪ್ರಾಂತಕ್ಕಿಂತ ಒಂದೇ ಭಾಷೆಯ ಪ್ರಾಂತ ಇರುವುದು ಒಳ್ಳೇದು. ಇದರಿಂದ ವ್ಯವಹಾರಕ್ಕೆ ಸುಖ. ಕೆಲವರು ಪಾಕಿಸ್ತಾನವನ್ನು ನೆನಪಿಗೆ ತಂದುಕೊಂಡು ವಿಭಾಗವೆಂದರೆ ಹೆದರುತ್ತಾರೆ. ಇದು ಪಾಕಿಸ್ತಾನದಂತೆ ವಿಭಕ್ತವಾಗಿ ಬೇರಾಗುವುದಲ್ಲ, ಕೇಂದ್ರ ಸರಕಾರದ ಸಾರ್ವಭೌಮತ್ವಕ್ಕೆ ಒಳಪಟ್ಟು ಪ್ರಜಾಸತ್ತೆಯ ರಾಜ್ಯಘಟನೆಗೆ ಒಪ್ಪಿಕೊಂಡು ನಡೆಯುವದಾಗಿದೆ. ಇನ್ನು ಕೆಲವರು ಭಾಷಾ ಇಂಪೀರಿಯಲಿಸಮ್ ಎಂದರೆ ಭಾಷಾಸಾರ್ವಭೌಮತ್ವವನ್ನು ತಡೆಗಟ್ಟುವುದಕ್ಕಾಗಿ ಈ ತರದ ಪ್ರಾಂತರಚನೆಯನ್ನು ಕೇಳುವದೆನ್ನುವರು. ಹಿಂದೀ ಭಾಷೆಯು ಪ್ರಭುತ್ವವನ್ನು ಸ್ಥಾಪಿಸಲು ಅನೇಕರು ಪ್ರಯತ್ನ ಮಾಡುತ್ತಾರೆ. ಇತರ ಭಾಷೆಗಳ ಬೆಳವಣಿಗೆಗೆ ಇದರಿಂದ ತೊಡಕು ಉಂಟೆಂತ ಕೆಲವರು ಅಭಿಪ್ರಾಯ ಪಡುವರು.

ಭಾಷಾವಾರು ಪ್ರಾಂತರಚನೆಯ ಚಳವಳವು ಒಂದು ತರದ ಸ್ವಾರ್ಥಸಾಧನೆಯ ಭಾವನೆಯಿಂದುದ್ಭವಿಸುದಾದುದರಿಂದ ಅಲ್ಪಸಂಖ್ಯಾಕರ ವಿಷಯ ಮೊದಲಾಗಿ ಆಲೋಚಿಸಬೇಕಾಗಿದೆ. ಪ್ರಜಾಸತ್ತೆಯ ಸರಕಾರವು ಯಾವ ರೀತಿಯಲ್ಲಿ ಅಲ್ಪಸಂಖ್ಯಾಕರ ಮೂಲಭೂತ ಹಕ್ಕುಗಳನ್ನು ಕಾಪಾಡುವುದೆಂಬುದೇ ಅದರ ಮುಖ್ಯ ಪರೀಕ್ಷೆಯಾಗಿರುವುದು. ಭಾಷೆ ಮತ್ತು ಕಲೆಯ ಬೆಳವಣಿಗೆಗೆ ಒಗ್ಗಾಗಿ ಈ ತರದ ರಾಜಕೀಯ ಪ್ರಾಂತರಚನೆಯನ್ನು ಕೇಳುವದು ಅನಾವಶ್ಯಕವೆಂದು ಕೆಲವರೆನ್ನುವರು. ಭಾಷೆ ಮತ್ತು ಕಲೆಯ ಬೆಳವಣಿಗೆ ರಾಜಕೀಯ ಪ್ರಾಂತವಿಲ್ಲದೆ ಆಗಬಹುದು. ಈಗಲೇ ಕೆಲವು ಭಾಷಾವಾರು ಪ್ರಾಂತಗಳಿವೆ ಎಂಬುದು ನಿಜ. ಆದರೆ ಅವುಗಳು ಸ್ವಾಭಾವಿಕವಾಗಿ ಉಂಟಾದವುಗಳೇ ಹೊರತು ಭಾಷಾವಾರು ಆಗಬೇಕೆಂಬ ಇಚ್ಛೆಯಿಂದ ಉಂಟಾದವುಗಳಲ್ಲ. ಉದರೂ ಬಂಗಾಳವೆಂಬುದು ಒಂದು ತರದ ಬ್ರಿಟಿಷ್ನ ಸಮಸ್ಯೆಯ ಪ್ರಾಂತವಾಗಿ ಕಂಡುಬಂದದೆ. ಭಾಷಾಪ್ರಾಂತರಚನೆಯ ಕಾಲದಲ್ಲಿ ವಿಭಾಗದ ವಿಷಯ ನಾನಾ ಬಗೆಯ ಚರ್ಚೆಯು ಮತ್ತು ಪ್ರಶ್ನೆಗಳು ಇದಿರು ಬರುತ್ತವೆ. ಪ್ರಾಂತ ರಚನೆಯಾದ ಮೇಲೆ ನಾವು ಮೇಲಾಗಬೇಕು ತಾವು ಮೇಲಾಗಬೇಕೆಂಬ ಸ್ಪರ್ಧೆಯು ಬಂದೇ ಬರುತ್ತದೆ. ಅಗ ದ್ವೇಷ, ಅಸೂಯೆ, ಮತ್ತು ವೈಷಮ್ಯ ಬೆಳೆಯುವುದು.

ಭಾಷಾ ಪ್ರಾಂತಗಳನ್ನು ಯಾವ ರೂಪದಿಂದ ನಿರ್ಮಿಸಬಹುದೆಂದು ತಿಳಿಯುವದಕ್ಕಾಗಿ ಪ್ರೊಫೆಸರ್ ಧಾರರವರನ್ನು ಅಧ್ಯಕ್ಷರನ್ನಾಗಿ ಮಾಡಿ ಒಂದು ವಿಚಾರ ಸಮಿತಿಯನ್ನು ನೇಮಿಸಿದರು. ಆ ಸಮಿತಿಯವರು ತಮ್ಮ ವರದಿಯಲ್ಲಿ ಭಾಷಾ ಪ್ರಾಂತ ರಚನೆಗೆ ಪೂರ್ಣ ಬಲ ಕೊಡಲಿಲ್ಲ. ಭಾಷಾ ಪ್ರಾಂತರಚನೆಯಾಗಬೇಕಾದ್ದೆ ಸರ್ವಾನುಮತದ ಒಪ್ಪಿಗೆ ಆರ್ಥಿಕ ಮತ್ತು ವ್ಯಾವಹಾರಿಕ ಸುಸ್ಥಿತಿ ಇವೇ ಮೊದಲಾದ ಶರ್ತಗಳನ್ನು ಹಾಕಿರುವರು. ಕೆಲವರು ಈ ಸಮಿತಿಯವರ ಸೂಚನೆಗೆ ತಿರಸ್ಕಾರ ಭಾವ ತೋರಿಸಿದ ಕಾರಣ ಪಂಡಿತ ನೆಹರು ವಲ್ಲಭಾಯಿ ಪಟೇಲರು ಮತ್ತು ಡಾ। ಪಟ್ಟಾಭಿ ಸೀತಾರಾಮಯ್ಯನವರು ಕೂಡಿ ಈ ವರದಿಯನ್ನು ಮತ್ತು ಇದಕ್ಕೆ ಜನರು ಕೊಟ್ಟಿರುವ ಅಭಿಪ್ರಾಯಗಳನ್ನು ಪರಿಶೀಲಿಸಿ ತಮ್ಮ ಸೂಚನೆಯನ್ನು ಕೊಟ್ಟರು. ಈ ಮೂವರ ವರದಿಗೆ ಜೆ ವಿ ಪಿ. ರಿಪೋರ್ಟ್ ಎಂದು ಕರೆಯುವರು. ಇವರ ಸೂಚನೆಯಲ್ಲಿ ಸಹಾ ಧಾರಾ ಕಮಿಟಿಯವರ ಅಭಿಪ್ರಾಯವನ್ನೇ ಉಲ್ಲೇಖಿಸಿರುವರು. ಈ ಎರಡು ಕಮಿಟಿಯವರ ವರದಿಯಲ್ಲಿಯೂ ಭಾಷಾ ಪ್ರಾಂತರಚನೆಗೆ ಕೆಲವು ಬಲವಾದ ತೊಡಕುಗಳಿವೆ ಎಂಬುದು ನಿಜ. ಭಾಷಾ ಪ್ರಾಂತವಾದರೆ ಕೆಲವು ಪ್ರಾಂತಗಳು ಬಹು ಚಿಕ್ಕವುಗಳಾಗುತ್ತವೆ. ಅವುಗಳ ಉತ್ಪತ್ತಿಯು ಬಹಳ ಕಡಿಮೆಯಾಗುವದಾದ್ದರಿಂದ ಮತ್ತು ಪ್ರಾಂತಗಳ ಖರ್ಚುಗಳು ಎಷ್ಟೋ ಜಾಸ್ತಿಯಾಗುವದಾದ್ದರಿಂದ ಆದಾಯ ಕಡಿಮೆ ವೆಚ್ಚ ಹೆಚ್ಚುವದು. ಇದಕ್ಕೆ ಹಣದ ಕೊರತೆಯ (deficit) ವೆನ್ನುವರು. ದೊಡ್ಡ ಪ್ರಾಂತವು ಮೊತ್ತವಾದರೂ ಲಾಭವಂತ ಆಗುವದು. ಸಣ್ಣ ಪ್ರಾಂತಗಳಿಗೆ ನಿತ್ಯಕಟ್ಟಲೆ ಆಡಳಿತೆಯೇ ಕಷ್ಟವಾದ್ದರಿಂದ ದೊಡ್ಡ ಯೋಜನೆಗಳನ್ನು ಕೊಳ್ಳುವ ಶಕ್ತಿಯೇ ಇರುವದಿಲ್ಲ. ದೊಡ್ಡ ಯೋಜನೆಗಳಿಗೆ ಧನಸಹಾಯ ಮಾಡುವದು ಕೇಂದ್ರ ಸರಕಾರವಾದರೂ ಮತ್ತು ಭಾಷೆಯನ್ನು ಹೊಂದಿ ಮಾಡುವದಿಲ್ಲವಾದ್ದರಿಂದ ಯೋಜನೆಗಳನ್ನೆಲ್ಲ ಜಾಸ್ತಿಗೆ ತರುವದು ಪ್ರಾಂತಗಳನ್ನೇ ಹೊಂದಿರುವದರಿಂದ ಹಣ ಮತ್ತಿತರ ಅಭಾವದಿಂದ ಯೋಜನೆಗಳೆಲ್ಲಾ ಮಂದುವರಿಯುವ ಸಂಭವ ಹೆಚ್ಚಿಗೆ. ಭಾಷೆಯ ಅನಾನುಕೂಲತೆಯು ಕೇಂದ್ರ ಸರಕಾರದಲ್ಲಿಯೂ ಉಂಟು. ಭಾಷೆಯು ಒಂದುಗೂಡಿಸಲೂ ಬಹುದು ಬೇರೆಯಾಗಿ ಮಾಡಲೂ ಬಹುದು. ರಾಗಭಾವ ಮತ್ತಿತರ ರಾಜಕೀಯ ಕಾರಣಗಳು ಬಲವಾಗಿ ಪ್ರಶ್ನೆಗಳ ವಿಮರ್ಶೆ ಸರಿಯಾಗಿ ನಡೆಯುವದು ಅಸಂಭವ. ಈಗ ದಕ್ಷಿಣ ಪಶ್ಚಿಮದ ಎಲ್ಲಾ ಭಾಗದಲ್ಲಿ ಆಯಾಯ ಭಾಷೆಯನ್ನು ಮುಂದೆ ತರುವ ಪ್ರಯತ್ನ ನಡೆಯುತ್ತಿದೆ. ಮೊದಲನೆ ಶಾಸ್ತ್ರವನ್ನು ತಮ್ಮ ಭಾಷೆಯಲ್ಲೇ ಉಪಯೋಗಿಸುವರೆ ಯತ್ನಿಸುತ್ತಾರೆ. ಭಾಷಾಪ್ರಾಂತವು ಸಂಸ್ಕೃತಿಯ ಬಗ್ಗೆ ಆದರೆ ಸಂಸ್ಕೃತಿಯ ಬೆಳವಣಿಗೆಯು ಶಾಸ್ತ್ರ ಮತ್ತು ವಿದ್ಯೆಯನ್ನು ಹೊಂದಿ ಇದೆ. ಇದಕ್ಕೆ ಪಠ್ಯಪುಸ್ತಕಗಳು ಬೇಕು. ಹಿಂದುಳಿದ ಭಾಷೆಗಳಲ್ಲಿ ಕೆಲವು ವಿಶಿಷ್ಟ ಶಬ್ದಗಳಿಲ್ಲದಿರುವ ಕಾರಣ ಶಾಸ್ತ್ರವು ಯಾವ ಭಾಷೆಯಲ್ಲಿ ಬೆಳೆದಿದೆಯೋ ಅದರ ಪರಿಚಯವಿಲ್ಲದೆ ಭಾಷಾಂತರಿಸುವದು ಕಷ್ಟ. ಅದ್ದರಿಂದ ಭಾಷೆಯನ್ನು ಮುಂದೆ ತಂದ ಮೇಲೆ ಈ ಕಾರ್ಯಕ್ಕೆ ಕೈಹಾಕುವುದು ಲೇಸು. ರಾಜಕೀಯ ವಿಚಾರದಲ್ಲಿ ಒಂದರಕ್ಕೊಂದು ಸಂಬಂಧವಿರುವುದರಿಂದ ಸಾಂಘಿಕ ರೀತಿಯಿಂದ ಎಲ್ಲಾ ಪ್ರಾಂತಗಳ ವಿಷಯ ತೀರ್ಮಾನಿಸಬೇಕೇ ಹೊರತು ಒಂದೊಂದನ್ನೇ ಪ್ರತ್ಯೇಕ ತೀರ್ಮಾನಿಸುವದು ಸರಿಯಲ್ಲ. ಈಗ ಆರ್ಥಿಕ ದುಸ್ಥಿತಿಯಲ್ಲಿ ಮತ್ತಿದರಿಂದುಂಟಾಗುವ ಅಲ್ಲೋಲಕಲ್ಲೋಲಗಳಿಂದ ಭಾಷಾ ಪ್ರಾಂತರಚನೆಗೆ ಇದು ಸುಸಮಯವೆನ್ನಲು ಬರುವದಿಲ್ಲ. ಪ್ರಚಾರಕ್ಕಾಗಿ ಪಾರ್ಟಿಗಳು ಹಲವು ಸಂಗತಿಗಳನ್ನು ಹೇಳಬಹುದು; ಸ್ವತಂತ್ರದ ಹೋರಾಟದ ಕಾಲದಲ್ಲಿ ಕೋಂಗ್ರೆಸ್ಸು ಹೇಳಿದುದೆಲ್ಲಾ ಈಗ ಕಾರ್ಯರೂಪಕ್ಕೆ ಬರುವದು ಕಷ್ಟ. ದೇಶದ ಆರ್ಥಿಕ ಮತ್ತು ರಾಜಕೀಯ ಪರಿಸ್ಥಿತಿಗಳನ್ನರಿತು ತೀರ್ಮಾನಿಸಬೇಕಾಗಿದೆ.

ಪಿ. ಎಚ್. ಶೆಟ್ಟಿ.

(1ನೇ ಪುಟದಿಂದ ಮುಂದರಿಸಿದ್ದು)

ರಿಕೆಯು ಹಿಂದಕ್ಕೆ ಕರಿಸಿಕೊಂಡ ಜ। ಮೆಕಾರ್ಥರ ಯುದ್ಧ ನೀತಿಯ ಕುರಿತು ನಾನಾ ರೀತಿಯ ಟೀಕಟಿಪ್ಪಣಿಗಳು ನಡೆದಿವೆ. ಅವರ ಧೋರಣೆಯನ್ನು ಕಂಡ ಹಲವರು ಕಮ್ಯೂನಿಸ್ಟರ ಕಡುವೈರಿಯೆನ್ನುವರು; ಇನ್ನು ಹಲವರು ಬಂಡವಳಶಾಹಿಗಳ ಕೈಗೊಂಬೆಯೆಂದೂ ಮೆಕಾರ್ಥರನ್ನು ಈಗಲೂ ಜರೆಯುವುದುಂಟು. ಬಂಡವಳಶಾಹಿಗಳ ಕೈಗೊಂಬೆಯೆಂದು ಹೇಳಲಾಗದು. ನಾಳಿನದಿನ ಬ್ರಿಟನಿನೊಡನೆ ಕಾದಾಡುವ ಪ್ರಸಂಗ ಬಂದರೂ ಮೆಕಾರ್ಥರ ಶತ್ರುನಿಗ್ರಹಕ್ಕೆ ಬೇಕಾಗುವ ಸೂಕ್ತ ಕಾರ್ಯಕ್ರಮ ತೆಗೆದುಕೊಳ್ಳದಿರಾರೇ ಹೊರತು ಬ್ರಿಟನರು, ಬಂಡವಳಶಾಹಿಗಳು, ಕಮ್ಯೂನಿಸ್ಟರೆಂದೂ ಬಿಟ್ಟಿಟ್ಟಲಾರರು! ಯುದ್ಧದಲ್ಲಿ ಪ್ರಗತಿಯನ್ನು ಸಾಧಿಸುವದಷ್ಟೇ ಅವರ ಗುರಿ. ಇದು ವೀರ ಯೋಧನಾದವನ ಮುಖ್ಯ ಲಕ್ಷಣ. ತನ್ನ ಕರ್ತವ್ಯ ತನಗಿರುವ ಅಚಲವಾದ ಶ್ರದ್ಧೆಯೇ ಅತನನ್ನು ಕಾರ್ಯಪ್ರವೃತ್ತನನ್ನಾಗಿಸುತ್ತದೆ. ಶತ್ರುವನ್ನು ಪ್ರತಿಭಟಿಸಿ ಯುದ್ಧದಲ್ಲಿ ಗೆಲುವನ್ನು ಸಂಪಾದಿಸುವ ಅವರ ಮುಖ್ಯೋದ್ದೇಶಕ್ಕೆ ರಾಜಕೀಯ ಅಡ್ಡಿ ಬಂದಾಗ ಮೆಕಾರ್ಥರ ನಿರಂಕುಶಮತಿಯಾಗಿ ಮುಂದುವರಿದರು. ಇದು ಸ್ವಾರ್ಥಪರ ಕಾರ್ಯವಲ್ಲ ಕೈಕೊಂಡ ಕಾರ್ಯದ ಪರಿಪೂರ್ಣತೆಯ ಆಕಾಂಕ್ಷೆ.

ಹೀಗೆಯೆ ತನ್ನದೇ ದೃಷ್ಟಿಕೋನದಿಂದ ಬೇರೆಯವರ ಹಿತೋಪದೇಶವನ್ನು ಕೇಳದೆ ಮುನ್ನಡೆಯುವ ನಿರಂಕುಶಮತಿ ಹಲವು ಧುರೀಣರಲ್ಲಿ ಕಂಡುಬರುತ್ತಿದೆ; ಇದು ಸ್ವಾರ್ಥದ ಕುರುಹಲ್ಲ; ಕಾರ್ಯದಸಿದ್ಧಿಯ ಮಾರ್ಗ! ಕರ್ತವ್ಯನಿಷ್ಠೆಯ ಕುರುಹು!

ಮೂರನೇ ಮಹಾಯುದ್ಧದ ಪುರಸ್ಕರ್ತರಾರು?

ತೃತೀಯ ಮಹಾಯುದ್ಧವಾದರೆ ಜಗತ್ತಿಗೆ ಮಹಾ ಹಾನಿಯಿದೆಯೆಂದೂ— ಅದನ್ನು ತಪ್ಪಿಸುವದರಲ್ಲೇ ನಮ್ಮ ಜಾಣತನವಿದೆಯೆಂದೂ ಅಧ್ಯಕ್ಷ ಟ್ರೂಮನರು ಹೇಳಿರುವದನ್ನು ನೋಡುವಾಗ ಬೆಕ್ಕು ಸನ್ಯಾಸಿಯಾದ ಕತೆ ಜ್ಞಾಪಕಕ್ಕೆ ಬರುತ್ತದೆ. ತಾವು ಮಾಡಿದ ಅಪರಾಧಕ್ಕೆ ಇತರರನ್ನು ಬಲಿಗೊಳ್ಳುವ ಚತುರ ನೀತಿಯೇ ಆಂಗ್ಲೋ–ಅಮೇರಿಕನರ ರಾಜನೀತಿಯಾಗಿರುತ್ತದೆ. ತೃತೀಯ ಮಹಾಯುದ್ಧವಾದರೆ ಪ್ರಳಯವಾದೀತೆಂದು ತಪ್ಪು ಹೇಳುವ ಟ್ರೂಮನರು ಯುದ್ಧವನ್ನು ಪರಿಹರಿಸುವ ಸಂದರ್ಭ ಬಂದಾಗಲೆಲ್ಲ ತಪ್ಪಿಸಿಕೊಂಡು ಯುದ್ಧ ಪ್ರಚೋದಕ ಕಾರ್ಯವನ್ನು ನಿರ್ವಹಿಸಿದ್ದೇಕೆ? ಏಷ್ಯಾದ ರಾಷ್ಟ್ರಗಳು ಸಂಧಾನದ ಮಾತುಕತೆಯನ್ನು ನಡೆಸಿದಾಗ ಕಮ್ಯೂನಿಸ್ಟ್ ಚೀನಾವನ್ನು ಆಕ್ರಮಕ ರಾಷ್ಟ್ರವೆಂದು ಸಾರುವ ಹವ್ಯಾಸ ಶಾಂತಿಪ್ರಿಯರಿಗೇಕೆ ಬೇಕಿತ್ತು? 38ನೆಯ ಅಕ್ಷಾಂಶವನ್ನು ದಾಟುವಾಗ ಲೊಮ್ಮೆ ಸಂಧಿಸನ್ನಾಗೇಕಿತ್ತು! ಆಗಲೂ ಯುದ್ಧ ಝೇಂಕಾರ ಬಿಡಲಿಲ್ಲ. ಯುದ್ಧರಂಗದಲ್ಲಿ ಸೋಲಿನ ಮೇಲೆ ಸೋಲು ಪ್ರಾಪ್ತವಾಗುತ್ತಲಿರುವಾಗ ಕಮ್ಯೂನಿಸ್ಟ್ ಚೀನವನ್ನು ಸದೆ ಬಡಿಯುವ ಯತ್ನ ನಡೆಸಿದ್ದು ಶಾಂತಿಯ ಬಯಕೆಯಿಂದಲ್ಲ! ಬೇರೆ ಬೇರೆ ರಾಷ್ಟ್ರಗಳ ಸಹಕಾರ ಪಡೆದು ಕಮ್ಯೂನಿಸಮದ ನಿರ್ಮೂಲಕ್ಕೆ ಪಣತೊಟ್ಟು ಈಗ ಆಗುವ ಸೋಲಿನ ಪರಂಪರೆಯಿಂದ ಸ್ಮಶಾನವೈರಾಗ್ಯ ಟ್ರೂಮನರು ಮಾತನಾಡುವಂತಿದೆ. ಕಮ್ಯೂನಿಸ್ಟ್ ಚೀನದ ಯುದ್ಧ ಸರಕುಗಳ ದಿಗ್ಬಂಧ ಹಾಕಲಾಯ್ತು! ಅತ್ತಸಿಂದ ಪರ್ಶಿಯಾ ಎಣ್ಣೆಯ ಕಲಹದಲ್ಲಿ ಬ್ರಿಟನವನ್ನು ಉಳಿಸುವದಕ್ಕೆ ಮಧ್ಯಸ್ಥಿಕೆಯ ಅಧಿಕಪ್ರಸಂಗಿತನಕ್ಕೆ ಕೈ ಹಾಕಿ ಅಲ್ಲಿಯೂ ಕಮ್ಯೂನಿಸಮದ ವಿರೋಧವನ್ನು ಗಟ್ಟಿಗೊಳ್ಳುತ್ತಲಿದೆ. ಅಮೇರಿಕಾ ಭಾರತದ ಆಹಾರಪರಿಸ್ಥಿತಿಯು ತೀರ ನಿರಾಶಾಜನಕವಾಗುತ್ತಿರುವಾಗ ಮ ಆರುನಾಲ್ಕು ತಿಂಗಳಿಂದ ಆ ಸಭೆ—ಕಾಂಗ್ರೆಸ್—ಸಿನೇಟದ ಒಪ್ಪಿಗೆಯ ಕಾಲಹರಣ ಮಾಡುತ್ತಾ ಈಗ 'ಭಾರತ ಕಮ್ಯೂನಿಸಮದ ಪುರಸ್ಕರ್ತ ರಾಷ್ಟ್ರವಾಗಿದೆ. ನೆಹ್ರೂರವರು ರಷ್ಯಾದ ಒಲವಿಗೆ ದಿನ ದಿನಕ್ಕೆ ಹೆಚ್ಚಾಗಿ ಅಂಟಿಕೊಳ್ಳುತ್ತಲಿದ್ದಾರೆ—ನಾವು ಅಂತಹರಿಗೆ ಆಹಾರ ಕೊಡುವುದು ಶಕ್ಯವಿಲ್ಲವೆಂದು' ಸಿನೇಟದ ಹಲವು ಸದಸ್ಯರು ಅಣಕವಾಡಿದ್ದನ್ನು ಭಾರತದ ಹಸಿದ ಜನ ಮರೆಯಲಾರರು! ಇಡಿಯ ವಿಶ್ವದಲ್ಲೇ ತನ್ನ ಸಾಮ್ರಾಜ್ಯಶಾಹಿತ್ವದ ಕರಿ ಛಾಯೆಯನ್ನು ಹರಡಿ, ಯುದ್ಧ ಪುರಸ್ಕರ್ತರಾಗಿದ್ದುಕೊಂಡು 'ಶಾಂತಿ' 'ಸಂಧಾನ'ವೆಂದು ಟ್ರೂಮನರು ವೇದಾಂತವಾಡುವುದು ನಾಚಿಕೆಗೇಡಿತನ! ಜಗತ್ತಿನಲ್ಲಿ ಅರಾಜಕತೆಯನ್ನು ಹುಟ್ಟಿಸಿ ಬೇರೆಯವರನ್ನು ದೆಟ್ಟು ಮಾಡಿ ತೋರಿಸುವುದು ಕುಚೋದ್ಯದ ಸಂಗತಿಯೇ ಸರಿ! ಜಾಗತಿಕ ಶಾಂತಿಯನ್ನು ಬಯಸುವ ಟ್ರೂಮನರ ಹೃದಯಸ್ಪರ್ಶಿ ಭಾಷಣವೆಂದು ಕರೆಯಲಾದ ಶಾಂತಿಯಾಚನೆಯು ರಂಕ ಕಲ್ಲಿ ದೊಣ್ಣೆ ಕೈಯಲ್ಲಿ ಶರಣ ಥಿಗ್' ಎಂದ ಹಾಗೆಯೇ ಆಯಿತು.

ಪರಿಶೀಲನ ಸಮಿತಿಯ ಸೂಚನೆಗಳು

ಭಾರತ ರಾಜ್ಯ ಘಟನಾ ತಿದ್ದುಪಡಿಯ ಪ್ರಕರಣವು ವಿಶೇಷ ಟೀಕೆ ಹಾಗೂ ಪ್ರತಿಭಟನೆಗೊಳಗಾಗಿದ್ದು ಪರಿಶೀಲಕ ಸಮಿತಿಗೊಪ್ಪಿಸಿತ್ತಷ್ಟೆ. ಈಗ ಪರಿಶೀಲಕ ಸಮಿತಿಯೂ ತನ್ನ ಸೂಚನೆಗಳನ್ನು ಒಪ್ಪಿಸಿದೆ. ಪರಿಶೀಲಕ ಸಮಿತಿಯು ತಿದ್ದುಪಡಿಯಲ್ಲಿ ವಿಶೇಷ ಬದಲಾವಣೆ ಕಂಡು ಬರದಿದ್ದರೂ ಆಶಾದಾಯಕವಾದ ಹಲವು ಬದಲಾವಣೆಗಳಾಗಿವೆ. ಜಮೀನ್ದಾರೀ ನಿರ್ಮೂಲನ ಕಾಯಿದೆಯು ಕೋರ್ಟಿನ ವಿಚಾರಣೆಗೆ ಒಳಪಡಲಾರದೆಂಬ ಘಟನಾ ತಿದ್ದುಪಡಿಯು ಅಂತದಲ್ಲಿ ರಾಷ್ಟ್ರಾಧ್ಯಕ್ಷರ ಅನುಮತಿಗಾಗಿ ಕಾಯ್ದಿಟ್ಟಿರುವ ಮತ್ತು ಅವರ ಸಮ್ಮತಿ ಪಡೆಯುವ ಪ್ರಾಂತಿಕ ಕಾಯಿದೆಗಳು ಮಾತ್ರ ಕೋರ್ಟಿನ ವಿಚಾರಣೆಯ ಕಡೆಯಿಂದ ಹೊರಗಿರಬೇಕು" ಎಂದು ಸೂಚಿಸಿದೆ. 15ನೇ ಕಲಮಿನ ಹಿಂದುಳಿದ ವರ್ಗದವರ ಸಂರಕ್ಷಣೆಯ ಮಸೂದೆಯಲ್ಲಿ 15(4) ಹೊಸ ಕಲಮನ್ನು ಸೇರಿಸಿ 29(2)ನೇ ಕಲಮಿಗೆ ಅನ್ವಯವಾಗಬೇಕೆಂದು ಸಮಿತಿ ಸೂಚಿಸಿದೆ. ಅಲ್ಲದೆ ಹಿಂದಿನ ತಿದ್ದುಪಡಿಯ ಮಸೂದೆಯಲ್ಲಿ 'ನಾಗರಿಕರಲ್ಲಿ ಹಿಂದುಳಿದ ವರ್ಗಗಳ ಶೈಕ್ಷಣಿಕ ಸಾಮಾಜಿಕ ಆರ್ಥಿಕ ಪ್ರಗತಿ' ಎಂಬುದನ್ನು ಬದಲಿಸಿ 'ಸಾಮಾಜಿಕವಾಗಿ ಅಥವಾ ಶೈಕ್ಷಣಿಕವಾಗಿ ಹಿಂದುಳಿದ ನಾಗರಿಕ ವರ್ಗಗಳು' ಎಂಬ ಬದಲಾವಣೆಯನ್ನು ಸೂಚಿಸಲಾಗಿದೆ. ಈ ಘಟನೆಯ ವಿಚಾರವಾಗಿ ಪರಿಶೀಲಕ ಸಮಿತಿಯು ಘಟನಾಬದ್ಧ ತತ್ವಕ್ಕೆ ವಿರುದ್ಧವಾಗಿ ಯಾವುದೇ ಪ್ರಾಂತೀಯ ಸರಕಾರವು ಜಾತೀಯತೆ—ವರ್ಗ ಭೇದವನ್ನುಂಟುಮಾಡಿಕೊಳ್ಳಲು ಉಪಯೋಗಿಸಲಾಗದೆಂದು ಸ್ಪಷ್ಟೀಕರಿಸಿರುತ್ತದೆ. ೧೯(೨) ಕಲಮಿನಲ್ಲಿ ಸೂಚಿಸಲಾದ (೨) ಉಪಕಲಮಿನಲ್ಲಿ "ನಿರ್ಬಂಧಗಳು" ಎನ್ನುವ ಬದಲಾಗಿ "ಯೋಗ್ಯ" ಎಂಬ ಶಬ್ದವನ್ನಾಗಿಸಿಕೊಳ್ಳಲಾಗಿದೆ. 19ನೆಯ ಘಟನೆಯಂತೆ ಭಾಷಣ—ಅಭಿಪ್ರಾಯವನ್ನು ಪ್ರಕಟೀಕರಿಸುವ ಸ್ವಾತಂತ್ರ್ಯಗಳ ಮೇಲೆ ನಿರ್ಬಂಧ ಹೇರುವ ಅಂಶದಲ್ಲಿ ಸದಸ್ಯರಲ್ಲಿ ಭಿನ್ನಾಭಿಪ್ರಾಯ ಹಾಗೂ ಚರ್ಚೆ ನಡೆದವೆಂದು ತಿಳಿದು ಬರುತ್ತದೆ. ಪರಿಶೀಲಕ ಸಮಿತಿಯ ಸದಸ್ಯರುಗಳಲ್ಲೊಬ್ಬರಾದ ಶ್ರೀಮತಿ ದುರ್ಗಾಬಾಯಿಯವರು ಅಂತಹ ನಿರ್ಬಂಧವನ್ನು ಹೇರುವ ಅಧಿಕಾರವು ಪ್ರಾಂತೀಯ ಸರಕಾರದ ಶಾಸನ ಸಭೆಗಳಿಂದ ಪಾರ್ಲಿಮೆಂಟಿಗೆ ಮಾತ್ರವಿರಬೇಕೆಂದು ಅಭಿಪ್ರಾಯ ವ್ಯಕ್ತಪಡಿಸಿರುವರು. ಪರಿಶೀಲಕ ಸಮಿತಿಯ ಸೂಚನೆಯ ನಂತರವೂ ಘಟನೆಯ ತಿದ್ದುಪಡಿಯ ಆವಶ್ಯಕತೆಯ ಕುರಿತು ಪಾರ್ಲಿಮೆಂಟು ಆಸ್ಥೆ ವಹಿಸಿದಂತಿಲ್ಲ. ಈಗ ದುಡುಕುವುದಕ್ಕಿಂತ ಚುನಾವಣಾ ನಂತರವೇ ಆ ವಿಚಾರವನ್ನು ಚಿಂತಿಸುವುದು ಯೋಗ್ಯವೆಂದು ಹೆಚ್ಚು ಸದಸ್ಯರ ಅಭಿಪ್ರಾಯವಾಗಿರುತ್ತದೆ.

ಬಿಹಾರದ ಸಂಕಷ್ಟ ಪರಿಹಾರ

ಬಿಹಾರದ ಬರಗಾಲ ಪರಿಸ್ಥಿತಿಯನ್ನು ನೀಗಲು ಸರಕಾರ ಶೀಘ್ರ ಕಾರ್ಯಕ್ರಮ ಕೈಗೊಂಡಿರುತ್ತದೆ. 1950ನೇ ಇಸವಿಯಲ್ಲಿ ಕಳಿಸಿದ್ದಕ್ಕಿಂತ ಹೆಚ್ಚಿನ ಆಹಾರ ಧಾನ್ಯವನ್ನು ಏಪ್ರಿಲ್ ತಿಂಗಳೊಂದರಲ್ಲೇ ಬಿಹಾರಕ್ಕೆ ರೈಲ್ವೆಯಿಂದಲೂ, ಜಲಮಾರ್ಗದಿಂದಲೂ, ಕಳಿಸಲಾಗಿದೆ. ಮಳೆಗಾಲದ ಸಂಗ್ರಹವನ್ನು ಈಗಲೇ ಮಾಡಲಾಗಿದೆ. ನಿರುದ್ಯೋಗಿಗಳಿಗೂ, ಭೂಮಿಯಿಲ್ಲದೆ ಅನಾಥರಾಗಿರುವವರಿಗೂ ಪರಿಹಾರ ಯೋಜನೆ ಕೈಗೊಳ್ಳಲಾಗಿದೆ. ಆಹಾರ ಧಾನ್ಯ ವಿತರಣೆಯ ಕಾರ್ಯದಲ್ಲಿ ಗ್ರಾಮ ಪಂಚಾಯಿತಿಗಳು, ಸರಕಾರೀತರ ಕೆಲಸಗಾರರು, ನಾಗರಿಕರು ಸರಕಾರದೊಡನೆ ಸಹಕರಿಸುತ್ತಿದ್ದು ಕೆಲಸವು ಸುಸೂತ್ರವಾಗಿ ಸಾಗುತ್ತಲಿದೆ. ಪ್ರಾಂತದಲ್ಲಿ ಒಟ್ಟಿಗೆ 5000 ರೇಶನ್ ಅಂಗಡಿಗಳನ್ನು ತೆರೆಯಲಾಗಿದೆ. ವಾರಕ್ಕೆ 15000 ಟನ್ ಹಂಚುತಿದ್ದುದನ್ನು 20000 ಟನ್ ವರೆಗೆ ಹೆಚ್ಚಿಸಲಾಗಿದೆ. ಜೂನ್ ತಿಂಗಳ ಮಧ್ಯದಲ್ಲಿ 25000 ದ ವರೆಗೆ ಹೆಚ್ಚಾಗುವ ನಿರೀಕ್ಷೆಯಿದೆ.

ನೂರು ಜನ ಮ್ಯಾಜಿಸ್ಟ್ರೇಟರೂ ಇತರ ರೆವಿನ್ಯೂ ಅಧಿಕಾರಿಗಳು ಬಿಹಾರ ಪ್ರಾಂತದ ರಾಣಾದಲ್ಲಿ ಪರಿಹಾರ ಕಾರ್ಯಕ್ರಮವನ್ನು ಕೈಗೊಂಡಿರುವರು. ಆರೋಗ್ಯ ರಕ್ಷಣೆಯ ವಿಚಾರ—ಸಾಲ ನೀಡುವದು—ಮುಂತಾದ ಕಾರ್ಯದಲ್ಲವರು ನಿರತರಾಗಿದ್ದಾರೆ. ಕಡಿಮೆ ಬಡ್ಡಿ ದರದಲ್ಲಿ ಸಾಲಕೊಡಲು ಎರಡೂವರೆಕೋಟಿ ರೂಪಾಯಿಯನ್ನು ಸರಕಾರವು ಕಾಯ್ದಿಟ್ಟಿರುವದರಿಂದ ಕಷ್ಟಕ್ಕಾಗಿ ಭೂಮಿಯನ್ನು ವಿಕ್ರಯಿಸುವ ಪ್ರಕರಣಗಳು ಕಡಿಮೆಯಾಗಿವೆ. ಪ್ರಾಂತೀಯ ಸರಕಾರವು ಪರಿಹಾರದ ಯೋಗ್ಯ ಯೋಜನೆಯನ್ನು ನಿರಾಕರಿಸದೆ ಅದರ ಸದುಪಯೋಗವನ್ನು ಪಡೆಯಬೇಕೆಂದು ಸೂಚಿಸಿದೆ. ಸದ್ಯದ ಸರಕಾರದ ತಾತ್ಕಾಲಿಕವಾದ ಕಾರ್ಯಕ್ರಮದಿಂದ ಬಿಹಾರವು ಬರಗಾಲದ ಭೀಕರ ಪರಿಸ್ಥಿತಿಯಿಂದ ದೂರಾಗುವಂತಾಗಿದೆ.



ನಿಮ್ಮ ಉಳಿತಾಯವನ್ನು ಇರಿಸಲಿಕ್ಕೆ
ದಿ ಕೆನರಾ ಇಂಡಸ್ಟ್ರಿಯಲ್ ಎಂಡ್
ಬ್ಯಾಂಕಿಂಗ್ ಸಿಂಡಿಕೇಟ್ ಲಿಮಿಟೆಡ್

'ಭಾಗ್ಯಲಕ್ಷ್ಮಿ'ಯನ್ನು ಆಶಿಸದವರಾರು?
ಓದಿದರೆ ಉತ್ತಮ ಕಾದಂಬರಿ!
ಅಭಿನಯಿಸಿದರೆ ಚೆಲೋ ನಾಟಕ!
ಅದುವೇ 'ಅಂತರಂಗ'ದ
ಪ್ರಕಟಣೆ—
ಭಾಗ್ಯಲಕ್ಷ್ಮಿ
(ಶ್ರೀ ಬೆಳ್ತಂಗಡಿ ಲಕ್ಷ್ಮಣ ರಾವ್, ಪುತ್ತೂರು.)
ನವರಸಭರಿತವಾದ
ಪ್ರತಿಯೊಬ್ಬರೂ ಓದಲೇಬೇಕಾದ
ಸಾಮಾಜಿಕ ನಾಟಕ
ಪತ್ತೇದಾರಿ ಕಾದಂಬರಿಯಂತೆ
ನಿಮ್ಮ ಮನವನ್ನು ಸೆಳೆದೊಯ್ಯುವ ಕಥಾಸನ್ನಿವೇಶ!
ಬೆಲೆ ಬರೇ ರೂ. 1 4 0
ಅಂತರಂಗ ಕಾರ್ಯಾಲಯ, ಉಡುಪಿ
ನವಭಾರತ ಬುಕ್ ಡಿಪೋ, ಉಡುಪಿ.

ಲೋಕಾಂತ

ಕೊರಿಯಾ ರಣರಂಗ

ಕೊರಿಯಾ ರಣರಂಗದಲ್ಲಿ ಈ ಬಾರಿ ಕಮ್ಯೂನಿಸ್ಟರಿಗೆ ವಿಶೇಷ ಸೋಲು ಪ್ರಾಪ್ತವಾಗುತ್ತಲಿವೆ. ಸಂ. ರಾ. ಹಾಗೂ ಅಮೇರಿಕೆಯ ಸೈನಿಕರು ಮಧ್ಯರಂಗದಲ್ಲಿ ಹಾನ್‌ಚಾನ ಆಕ್ರಮಿಸಿ ಚುನಚಾನದ ಉತ್ತರದಲ್ಲಿಯ ಕಮ್ಯೂನಿಸ್ಟರ ರೆಜಿಮೆಂಟನ್ನು ಸ್ವಾಧೀನಪಡಿಸಿಕೊಳ್ಳುವ ಮಹಾಪ್ರಯತ್ನವನ್ನು ಮಾಡುತ್ತಲಿದ್ದಾರೆ. ಸಂ. ರಾ. ಸಂಘದ ಅಪಾರ ಸೈನ್ಯಗಳ ಪ್ರತಿಭಟನೆಯನ್ನು ತಾಳಲಾರದೆ ಕಮ್ಯೂನಿಸ್ಟರು ಓಡುತ್ತಿರುವದು ಕಂಡುಬಂದಿವೆ. ಮಧ್ಯ ಮತ್ತು ಪೂರ್ವ ರಣರಂಗದಿಂದ ಸುಮಾರು 15000 ಸಾವಿರ ಕಮ್ಯೂನಿಸ್ಟರನ್ನು ಸಂ ರಾ.ದಳದವರು ವೀರೋಚಿತ ಯುದ್ಧಕ್ರಮಗಳಿಂದ ಹಿಮ್ಮೆಟ್ಟಿಸಿರುತ್ತಾರೆ. ಅಮೇರಿಕನ ಸೈನ್ಯಗಳು ಚುಂಚಾನ ಹಾಡೋನ ರಸ್ತೆಯಿಂದ ಉತ್ತರ ಕೊರಿಯಕ್ಕೆ ಸಾಗುತ್ತಲಿವೆ. ಕೊರಿಯಾ ಯುದ್ಧದಲ್ಲಿ ಸಂ. ರಾ. ದಳಗಳ ಈ ರೀತಿಯ ಉಗ್ರ ಪ್ರತಿಭಟನೆಯನ್ನು ಕಮ್ಯೂನಿಸ್ಟರು ಅನುಭವಿಸಿರಲಿಲ್ಲ. ತಮ್ಮ ಮೇಲೆ ಬೀಳುತ್ತಿರುವ ಬಲವಾದ ಪೆಟ್ಟನ್ನು ಸಹಿಸಲಾರದೆ ಕಮ್ಯೂನಿಸ್ಟ ಸೈನಿಕರು ಶಸ್ತ್ರಾಯುಧಗಳನ್ನು ಒಗೆದು ಶರಣು ಬಂದಿರುವ ದಾಖಲೆಗಳೂ ಇವೆ.

ಪರ್ಶಿಯ ಎಣ್ಣೆ ರಾಷ್ಟ್ರೀಕರಣ

ಆಂಗ್ಲೋ ಅಮೇರಿಕಾನರ ಕೇಳಿಕೆಯನ್ನು ಧಿಕ್ಕರಿಸಿ ಪರ್ಶಿಯಾದ ಎಣ್ಣೆ ಕಂಪೆನಿಯನ್ನು ರಾಷ್ಟ್ರೀಕರಣ ಮಾಡುವ ಸಿದ್ಧತೆ ಈಗ ಒಂದು ಪೂರ್ತಸ್ವರೂಪಕ್ಕೆ ಬಂದು ಮುಟ್ಟಿರುತ್ತದೆ. ರಾಷ್ಟ್ರೀಕರಣದ ಮಂಡಳದ ಕಾರ್ಯದರ್ಶಿಯವರು ಹುಸೇನ ಮಕ್ಕಿಯವರು ಪ್ರಕಟಣೆಯನ್ನು ಹೊರಡಿಸಿ ರಾಷ್ಟ್ರೀಕರಣದ ನಂತರ ಪರ್ಶಿಯಾದ ಎಣ್ಣೆಗಣಿಯನ್ನು ರಶಿಯಕ್ಕೆ ವಿಕ್ರಯಿಸುವದಿಲ್ಲ ಅಧಿಕಾರವನ್ನೂ ಅವರಿಗೆ ಬಿಟ್ಟು ಕೊಡುವದಿಲ್ಲ. ರಾಷ್ಟ್ರೀಕರಣದ ನಂತರ ಬ್ರಿಟಿಷ ತಾಂತ್ರಿಕ ನೌಕರರನ್ನು ಇಟ್ಟುಕೊಳ್ಳಲಾಗುವುದು— ಅಮೇರಿಕಾನರನ್ನೂ ಕಡೆಗಣಿಸಲಾಗುವುದಿಲ್ಲ. ಎಣ್ಣೆಯ ಉತ್ಪಾದನೆ, ಮಾರಾಟ ಮೊದಲಾದ ಸಕಲ ಕಾರ್ಯಗಳೂ ಸಂಪೂರ್ಣವಾಗಿ ಪರ್ಶಿಯಾದ ನಿಯಂತ್ರಣಗಳಲ್ಲಿ ನಡೆಯುವವು. ಮೊದಲಿನ ಗ್ರಾಹಕರಾದ ಫ್ರಾನ್ಸ, ಇಟಲಿ, ಬೆಲ್ಜಿಯಂ, ಹಾಲಂಡ ತುರ್ಕಿ, ಮೊದಲಾದ ದೇಶಗಳಿಗೂ ಕೆಲ ಏಶಿಯನ್ ರಾಷ್ಟ್ರಗಳಿಗೂ ಎಣ್ಣೆಯನ್ನು ಮಾರಲಾಗುವುದು."ಎಂದು ಹೇಳಿರುತ್ತಾರೆ ದಕ್ಷಿಣದ ಬಂದರದಿಂದ ಎಣ್ಣೆಯನ್ನು ನಿರ್ಯಾತ ಮಾಡುವದನ್ನು ಪ್ರತಿಬಂಧಿಸಲು ಸುಂಕದ ಅಧಿಕಾರಿಗಳಿದ್ದವರು ಬ್ರಿಟಿಶರಾದರೂ ಪ್ರತಿಭಟಿಸಿದಲ್ಲಿ ಅವರ ನಿವಾಸ ಅಪ್ಪಣೆಯನ್ನು ರದ್ದುಗೊಳಿಸಿ ಅವರನ್ನು ಗಡೀಪಾರು ಮಾಡಲಾಗುವದೆಂದೂ ಅವರು ಹೇಳಿರುವರು



ಕತ್ತಲೆಯಲ್ಲಿ ನಿಮ್ಮ ಮಾರ್ಗದರ್ಶಿ.

ಭಾರತಕ್ಕೆ ಚೀನದ ಜೋಳ

ಪೇಕಿಂಗದಲ್ಲಿ ನಡೆದ ಇಂಡೋ ಚೀನ ಒಪ್ಪಂದದಂತೆ ಚೀನವು ಭಾರತಕ್ಕೆ ಮತ್ತೆ ನಾಲ್ಕು ಲಕ್ಷ ಟನ್ ಕೆಂಪು ಜೋಳ ಕಳಿಸುವದು. ನಾಲ್ಕೈದು ತಿಂಗಳೊಳಗಾಗಿ ಭಾರತಕ್ಕೆ ಇನ್ನು ಬರಲಿವೆ.

ಮದ್ರಾಸಕ್ಕೆ ಅಧಿಕಾದಾಯ

1950-51ರಲ್ಲಿ ಮದ್ರಾಸು ಸರಕಾರಕ್ಕೆ ನಿರೀಕ್ಷಿಸಿದ್ದಕ್ಕಿಂತ 1030000 ರೂ ಹೆಚ್ಚು ಆದಾಯವಾಗಿರುತ್ತದೆ. ಇದರಲ್ಲಿ 44 ಲಕ್ಷ ರೂ ಕಂದಾಯ, 41 ಲಕ್ಷ ರೂ ಸ್ಟ್ಯಾಂಪು ಮತ್ತು 23 ಲಕ್ಷ ರೂ ಮಾರಾಟಕರದಿಂದ ಬಂದಿರುತ್ತದೆ.

ಎಣ್ಣೆಯ ಶೋಧ

ದಿಗ್ಬೋಯಿನಾಗ ಪರ್ವತದಲ್ಲಿ ಎಣ್ಣೆ ಶೋಧನೆಯ ಕಾರ್ಯವು ಬಹಳ ಪ್ರಗತಿ ಹೊಂದಿದೆಯೆಂದು ಆಸಾಮ ಎಣ್ಣೆ ಕಂಪೆನಿಯವರು ಪ್ರಕಟಿಸಿರುತ್ತಾರೆ.

ಚೀನ ರಶಿಯದ ಆಹಾರ ಬೆಲೆ

ಭಾರತವು ಪರದೇಶಗಳಿಂದ ತರಿಸಿಕೊಳ್ಳುವ ಆಹಾರ ಧಾನ್ಯಗಳಲ್ಲಿ ಚೀನ–ರಶಿಯದ ಆಹಾರ ಬೆಲೆಯು ಕಡಿಮೆಯಿರುತ್ತದೆಂದು ಅಧಿಕೃತ ವರ್ಗದಿಂದ ತಿಳಿದು ಬರುತ್ತದೆ.

ಸಂ. ರಾ. ಸಂಘದ ಗೋಧಿ

ಭಾರತದ ಬರಗಾಲ ಪೀಡಿತ ಜನಕ್ಕೆ ಆಹಾರವನ್ನು ಕಳಿಸುವದಕ್ಕೆ ಸಂ. ರಾ. ಸಂಘದ ನೌಕರ ವರ್ಗದ ದೇಣಿಗೆಯಿಂದ ಪಡಕೊಂಡ ಗೋಧಿಯ ಮೊದಲ ಹಡಗವು ನ್ಯೂಯಾರ್ಕಿನಿಂದ ಜೂನ ತಿಂಗಳ 10ಕ್ಕೆ ಹೊರಡುವದು.

ವೀರಗಂಜದಲ್ಲಿ ಗಲಭೆ

ನೇಪಾಳ ಬಿಹಾರ ಗಡಿಯಲ್ಲಿರುವ ವೀರಗಂಜ ನಗರದಲ್ಲಿ ದಿನಾಂಕ ೩೦ರಂದು ನಡೆದ ಗಲಭೆಯಲ್ಲಿ ಮೂವರು ಸತ್ತಿದ್ದು 60 ಜನರು ಗಾಯಗೊಂಡಿರುವರು. ರಸ್ತೆ ಮತ್ತು ಸಂದಿನಲ್ಲಿ ಪೋಲಿಸರ ಬಲವಾದ ಸರ್ಪಕಾವಲಿದ್ದು ಪರಿಸ್ಥಿತಿ ಗಂಭೀರವಾಗಿರುತ್ತದೆ.

ಕಮ್ಯುನಿಸ್ಟ ಪಕ್ಷದ ಪರಿಷತ್ತು

ಚುನಾವಣೆ ಕಾರ್ಯಕ್ರಮವನ್ನು ಚರ್ಚಿಸಿ ಘೋಷಣೆ ಪತ್ರಿಕೆಯನ್ನು ತಯಾರಿಸುವದಕ್ಕಾಗಿ ಕೇರಳದ ಕಮ್ಯುನಿಸ್ಟ ಪಕ್ಷದ ಪರಿಷತ್ತು ಜೂನ ತಿಂಗಳ 10 ಮತ್ತು 11ನೆಯ ದಿನಾಂಕ ಕಲಕತ್ತದಲ್ಲಿ ಸೇರಲಿರುವದು.

ಹಿಂದೀ ನೌಕಾಪಡೆಗೆ ಅಧ್ಯಕ್ಷ ಧ್ವಜದ ಅರ್ಪಣೆ

ಭಾರತ ಪ್ರಜಾರಾಜ್ಯದ ಒಳಿತ ಇದೇ ಮೊದಲನೆಯದಾಗಿ ಹಿಂದೀ ನೌಕಾದಳವು ಭಾರತ ಪ್ರಜಾರಾಜ್ಯದ ಅಧ್ಯಕ್ಷರ ಧ್ವಜವನ್ನು ಹಾರಿಸುವ ಗೌರವವನ್ನು ಹೊಂದಿತು. ಮುಂಬಯಿಯ ಕ್ರಿಕೆಟ್ ಕ್ರೀಡಾಂಗಣದಲ್ಲಿಯ ಈ ಸಮಾರಂಭದಲ್ಲಿ ಸುಮಾರು 30000 ಜನ ಕೂಡಿದ್ದರು. ಈ ಅಧ್ಯಕ್ಷ ಧ್ವಜವನ್ನು ರಾಷ್ಟ್ರಾಧ್ಯಕ್ಷರಾದ ರಾಜೇಂದ್ರ ಪ್ರಸಾದರು ನೀಡಿದರು. ಧ್ವಜದಾನ ಕಾಲದಲ್ಲಿ ರಾಷ್ಟ್ರಾಧ್ಯಕ್ಷರು ನೌಕಾದಳದವರನ್ನು ಕುರಿತು "ನಮ್ಮ ಸುಖ ಮತ್ತು ಶಾಂತಿಗಳನ್ನು ಸಾಧಿಸಲಿಕ್ಕಿದ್ದ ವೀರರ ಕೀರ್ತಿ ಸಂಪಾದನೆ ನಿಮ್ಮ ಗುರಿಯಾಗಬೇಕು. ನಮ್ಮ ದೇಶದ ಶತ್ರುಗಳ ಎದುರಿಗೆ ನೀವು ಅಭೇದ್ಯವಾದ ಉಕ್ಕಿನ ಕವಚವಾಗಿ ರಾಷ್ಟ್ರ ಸಮಾಜದಲ್ಲಿ ನಮ್ಮ ಯಾದಳಕವನ್ನು ಎತ್ತಿ ಹಿಡಿಯಬೇಕು. ನೀವಂಥ ಕಾರ್ಯ ಸಾಧಿಸಬಲ್ಲಿರೆಂಬ ವಿಶ್ವಾಸ ನನಗಿದೆ" ಎಂದಿದ್ದಾರೆ.

ದಾಮೋದರ ಕಣಿವೆಯ ಯೋಜನೆ

ದಾಮೋದರ ಕಣಿವೆಯ ಯೋಜನೆಯ ಸಲಹೆ ಮಂಡಳದ ಜನರನ್ನು ಹೆಚ್ಚಿಸುವ ವಿಚಾರದಲ್ಲಿ ಕಾರ್ಪೊರೇಶನದೊಡನೆ ಮಾತುಕತೆ ನಡೆದಿದ್ದು ಸಲಹೆಗಾರ ಮಂಡಳದಲ್ಲಿ ಒಬ್ಬ ಹಿಂದೀಯನ ನೇಮಕವಾಗುವ ನಿರೀಕ್ಷೆಯಿದೆ ಈ ವರೆಗೆ ಅಮೇರಿಕೆಯ ತಜ್ಞರು ಮಾತ್ರ ಅದರಲ್ಲಿದ್ದರು.

ಕಾಂಗ್ರೆಸ್ಸು ಮಂತ್ರಿಗಳ ಸ್ವಾರ್ಥ ರಂಗವಾಗಿದೆ

ಬಿಹಾರದ ಅರುವತ್ತಾರು ವರ್ಷದ ಪಾರ್ಲಿಮೆಂಟ ಸದಸ್ಯರಾದ ಬಾಬು ರಾಮ ನಾರಾಯಣ ಸಿಂಗರು ತಾವು ಕಾಂಗ್ರೆಸ್ಸಿಗಿತ್ತ ರಾಜಿನಾಮೆಯಲ್ಲಿ 'ಬ್ರಿಟಿಷರನ್ನು ಓಡಿಸುವದಕ್ಕಾಗಿ ಕಾಂಗ್ರೆಸ್ಸು ಮಹಾತ್ಮಾ ಗಾಂಧಿಯವರ ನೇತೃತ್ವದಲ್ಲಿ ನಡೆಸಿದ ಹೋರಾಟದ ಮೂಲ ಉದ್ದೇಶವನ್ನು ಮರೆತು ಇಂದು ಸ್ವಚ್ಛಂದವೃತ್ತಿಯಿಂದ ನಡೆದ. ಕಾಂಗ್ರೆಸ್ಸಿನ ಧವಳ ಕೀರ್ತಿಗೆ ಕಳಂಕ ತಂದಿದೆ. ಮಂತ್ರಿಗಳೆಲ್ಲ ಕಾಂಗ್ರೆಸ್ಸನ್ನು ತಮ್ಮ ಸ್ವಾರ್ಥ ಸಾಧನೆಯ ಸಾಧನವಾಗಿ ಸಂಸ್ಥೆಯನ್ನಾಗಿ ಮಾಡಿಕೊಂಡಿದ್ದಾರೆ. ನನ್ನ ಸ್ವಾಭಿಮಾನದ ಗೌರವಕ್ಕಾಗಿಯೂ, ಹೃದಯಸಾಕ್ಷಿಗೆ ಸರಿಯಾಗಿಯೂ ಕಾಂಗ್ರೆಸ್ಸನ್ನು ನಾನಿಂದು ತ್ಯಜಿಸುವ ನಿರ್ಧಾರ ಮಾಡಿರುತ್ತೇನೆ" ಎಂದು ಹೇಳಿರುತ್ತಾರೆ

ಹೃದಯ ಪರಿವರ್ತನೆ

ಮಾರಾಟಕರವನ್ನು ತಪ್ಪಿಸಿಕೊಂಡ ಅನಾಮಧೇಯರಿಂದ ಸ್ವಸ್ಫೂರ್ತವಾಗಿ 30651 ಬಂದಿರುತ್ತದೆಂದೂ ಅವುಗಳಲ್ಲಿ 550 ನಗದು ಗಳೂ 101 ಚೆಕ್ಕಿನ ರೂಪದಲ್ಲಿಯೂ 30000 ಬೇರೆ ಡ್ರಾಫ್ಟುಗಳ ರೂಪದಲ್ಲಿಯೂ ಬಂದಿರುತ್ತದೆಂದು ಪಾರ್ಲಿಮೆಂಟನಲ್ಲಿ ಉತ್ತರಿಸುತ್ತಾ ಮಹಾವೀರ ತ್ಯಾಗಿಗಳು ತಿಳಿಸಿದರು.

ವಿಶಾಖ ಪಟ್ಟಣದಲ್ಲಿ ಅಕ್ಕಿಯ ಅತಿಧಾರಣೆ

ವಿಶಾಖಾಪಟ್ಟಣ ಮತ್ತು ಶ್ರೀಕಾಕುಲಂ ಪಟ್ಟಣಗಳಲ್ಲಿ ಅಕ್ಕಿಯ ಧಾರಣೆ ವಿಪರೀತವಾಗಿದ್ದು ಕಂಟ್ರೋಲ್ ದರದ ಮೂರು ನಾಲ್ಕು ಪಟ್ಟಿನ ದರದಲ್ಲಿ ಮಾರುವದರಿಂದ ಬಡಜನತೆ ತುಂಬ ಕಷ್ಟಕ್ಕೀಡಾಗಿದೆ. ಆಹಾರ ಕಮಿಶನರಾದ ಶ್ರೀ ಎಂ. ವಿ. ಸುಬ್ರಮಣ್ಯರು ಆ ಜಿಲ್ಲೆಗಳನ್ನು ಸಂಚರಿಸಿ ಅಲ್ಲಿಯ ವಿದ್ಯಮಾನಗಳನ್ನು ಪರಿಶೀಲಿಸಿ ಕೂಡಲೇ ರೇಶನ್ ಅಂಗಡಿಗಳನ್ನು ತೆರೆಯುವಂತೆ ಜಿಲ್ಲಾ ಕಲೆಕ್ಟರರಿಗೆ ಸೂಚಿಸಿರುತ್ತಾರೆ.

ಭಾರತ ಪಾಕಿಸ್ತಾನ್ ಆರ್ಥಿಕ ಪರಿಷತ್ತು

ಭಾರತ ಪಾಕಿಸ್ತಾನ ಆರ್ಥಿಕ ಪರಿಷತ್ತು ಡಿಲ್ಲಿಯಲ್ಲಿ ನಡೆಯಿತು. ಎರಡೂ ರಾಷ್ಟ್ರಗಳ ಅಧಿಕಾರಿ ಹಾಗೂ ಆರ್ಥಿಕ ಮಂತ್ರಿಗಳೂ ರಿಝರ್ವ ಬೇಂಕಿನ ಗವರ್ನರರೂ ಭಾರತದಲ್ಲಿಯ ಪಾಕಿಸ್ತಾನದ ರಾಯಭಾರಿಯೂ ಈ ಪರಿಷತ್ತಿನಲ್ಲಿ ಭಾಗವಹಿಸಿದ್ದರು.

ನಿರಾಶೆಗೆ ಒಳಗಾಗದಿರಿ!

ಉಬ್ಬಸ, ಕಫ, ಶ್ವಾಸಕೋಶದಿಂದ
ನೀವು ವಿಪರೀತ ಕಷ್ಟಪಡುವಿರಾದರೆ, ಹಲವಾರು
ಅಮೌಲ್ಯ ಔಷಧಿಗಳ ಸೇವನೆಯಿಂದ ನಿಮಗೆ ಗುಣವಾಗದಿರುವುದಾದರೆ,

ಆಶಾಭಂಗಕ್ಕೊಳಗಾಗದಿರಿ!

ಅಲ್ಪವೆಚ್ಚ–ಅಲ್ಪಾವಧಿಯೊಳಗೆ ನಿಮ್ಮಬಾಧೆಯನ್ನು ಶಮನಮಾಡುವ

ಖಾತ್ರಿ ಔಷಧಿಯು ನಮ್ಮಲ್ಲಿರುವುದು.

ಒಂದೇ ಒಂದು ಸೀಸೆಯನ್ನು ಕೊಂಡು, ಗುಣಪರೀಕ್ಷೆಮಾಡಿರಿ'
ಈ ಹೊಸ ಮದ್ದಿನಿಂದ ನಿಮಗೆ ಅದ್ಭುತ ಗುಣತೋರುವುದೆಂಬುದು ಖಂಡಿತ.

ಕೂಡಲೆ ಬರೆಯಿರಿ:—

M. Mendonca,
2nd Floor, Ruby Mansion,
Parsee Bazar Street, Fort.-
Bombay.

ಎಂ. ಮೆಂಡೋನ್ಸ,
ಎರಡನೆ ಮಾಳಿಗೆ, ರುಬಿ ಮೆನ್ಶನ
ಪಾರ್ಸಿಬಝಾರ ಸ್ಟ್ರೀಟ್, ಫೋರ್ಟ್,
ಬೊಂಬಾಯಿ

ಸಹಕಾರಿ ಸಂಸ್ಥೆಗಳಿಗೆ— —
ಮುನ್ಸಿಫ್ ಕೋರ್ಟುಗಳಿಗೆ—
ವರ್ತಕರಿಗೆ—ಶಾಲೆಗಳಿಗೆ–
ಬೇಕಾಗುವ ರಜಿಸ್ಟರಗಳು,
ರಶೀದಿ ಪುಸ್ತಕಗಳು,
ಫಾರಮುಗಳು, ಎಕೌಂಟ್
ಪುಸ್ತಕಗಳು ದೊರೆಯುತ್ತವೆ.
ನವಯುಗ ಪ್ರೆಸ್ ಹುಬ್ಬಳ್ಳಿ.

ನವಯುಗ

ಚಂದಾ ವಿವರ
ವರ್ಷಕ್ಕೆ ರೂ. 5-12—0
6 ತಿಂಗಳಿಗೆ ರೂ. 3—0—0

ಗುರುವಾರ' ಉಡುಪಿ, ೩೧-೫-೫೧

ಕರ್ನಾಟಕ ಏಕೀಕರಣ

ಭಾಷಾವಾರು ಪ್ರಾಂತ್ಯರಚನೆಯ ತತ್ವಕ್ಕನುಸಾರವಾಗಿ ಕರ್ನಾಟಕ ಪ್ರಾಂತರಚನೆಯ ಆವಶ್ಯಕತೆಯ ಕೂಗು ಅಲ್ಲಿ ಇಲ್ಲಿ ಕೇಳಿಸುತ್ತಲಿದೆ. ಕೆ. ಪಿ ಸಿ ಸಿಯ ಇತ್ತೀಚಿನ ಸಭೆಯಲ್ಲಿ ಕರ್ನಾಟಕ ಪ್ರಾಂತರಚನೆಯ ಭರವಸೆಯನ್ನು ಚುನಾವಣಾ ಘೋಷಣೆಯಲ್ಲಿ ಸೇರಿಸಬೇಕೆಂಬ ಬೇಡಿಕೆಯೂ ಬಂದಿತ್ತು. ಕಳೆದ ವಾರ ಹಾವೇರಿಯಲ್ಲಿ ನಡೆದ ಪರಿಷ್ಕೃತ ಸಭೆಯಲ್ಲಿ ಈ ಕ್ಷೋಭೆ ಸ್ವರೂಪದ ಗೊತ್ತುವಳಿಯೊಂದು ಮಂಡಿಸಲ್ಪಟ್ಟಿತು. ಈ ಹಿಂದೆ ಕರ್ನಾಟಕ ಪ್ರಾಂತ ರಚನೆಗಾಗಿ ಹಲವು ಕರ್ನಾಟಕದ ಎಂ. ಎಲ್. ಎ.ಗಳೂ ಸದಸ್ಯರೂ ರಾಜೀನಾಮೆ ಸಲ್ಲಿಸಿ ಕಾರ್ಯರೂಪಕ್ಕೆ ತರದೆ ಹಿಂತೆಗೆದುಕೊಂಡದ್ದನ್ನು ನಿಷೇಧಿಸುವ—ಈಗಲಾದರೂ ರಾಜೀನಾಮೆ ಕೊಟ್ಟು ಹೋಬಂಬೇಕೆಂದು ಒತ್ತಾಯಿಸುವದೇ ಈ ಗೊತ್ತುವಳಿಯ ವಿಚಾರವಾಗಿತ್ತು. ಹಲವು ರೀತಿಯ ಟೀಕೆ ಟಿಪ್ಪಣಿ—ಪ್ರತಿಭಟನೆಗಳು ಇದರಿಂದ ಸಭೆಯಲ್ಲುಂಟಾಯಿತು. ಏಕೀಕರಣದ ಹೆಸರಲ್ಲಿ ಕಾಂಗ್ರೆಸನ್ನು ಹಳಿಯುವ ಕಾರ್ಯವೇ ಪರಿಷ್ಕೃತ ಪರಿಷತ್ತಿನ ಮುಖ್ಯ ಉದ್ದೇಶವೆನುವಂತೆ ತೋರುತ್ತಿತ್ತು. ಒಮ್ಮೆಲೆ ಕಾಂಗ್ರೆಸನ್ನು ತ್ಯಜಿಸಿ ಕರ್ನಾಟಕ ಪ್ರಾಂತದ ರಚನೆಗಾಗಿ ಬೇರೆ ವಿಧಾನದಿಂದ ಹೋರಾಟ ನಡೆಸಬೇಕೆಂಬುದನ್ನು ಹಲವು ಕಾಂಗ್ರೆಸ್ಸಿಗರು ಒಪ್ಪಲಿಲ್ಲ. ಕಾಂಗ್ರೆಸ್ಸಿನ ಮೇಲಾದ ಅವಹೇಳನವನ್ನು ಸಹಿಸದೆ ಸುಮಾರು 25 ಜನ ಕಾಂಗ್ರೆಸ್ಸಿಗರು ಸಭಾತ್ಯಾಗ ಮಾಡಿದರು. ಅದರಲ್ಲಿ ಎಂ.ಎಲ್.ಎ.ಗಳೂ ಇದ್ದರು.

ಕರ್ನಾಟಕ ಏಕೀಕರಣಕ್ಕಾಗಿ ಕರ್ನಾಟಕ ಜನತೆಯಲ್ಲಿ ವಿಶೇಷ ಕಳಕಳಿಯಿದೆ. ಕಾಂಗ್ರೆಸ್ಸಿನ ಘಟನೆ ಹಾಗೂ ಭರವಸೆಯಂತೆ ಕರ್ನಾಟಕ ಪ್ರಾಂತ ದೇಶ ಸ್ವತಂತ್ರವಾದ ಮೇಲಾದರೂ ಆದೀತೆಂದು ಕನ್ನಡಿಗರ ಕಲ್ಪನೆಯಿತ್ತು. ಕಳೆದವರ್ಷ ಕೆ. ಪಿ ಸಿ ಸಿ. ಯು ತೀವ್ರ ತರದ ಉಗ್ರಕಾರ್ಯ ಕೈಗೊಂಡಿತ್ತಾದರೂ ಕೊನೆಯ ಕ್ಷಣದಲ್ಲಿ ಹಿರಿಯ ಕಾಂಗ್ರೆಸ್ಸಿಗರ ಪ್ರಕೋಪದಿಂದ ಆ ಉತ್ಸಾಹ ಅಲ್ಲಿಗೇ ಕುಂದಿ ಹೋಯಿತು. ಕರ್ನಾಟಕದ ಪರವಾಗಿ ಹಿರಿಯ ಕಾಂಗ್ರೆಸ್ಸಿಗರು ಆಡಿದ ಮಾತು ತುಂಬ ನಿರಾಶಾಜನಕವಾಗಿತ್ತು. ಆ ಬಳಿಕ ಆಂಧ್ರ ಪ್ರಾಂತ ರಚನೆಯ ಚಳವಳಿಯು ನಡೆದು ನಮ್ಮ ಹಿರಿಯ ಕಾಂಗ್ರೆಸ್ಸಿಗರ ಅನುಮತಿ ಪಡೆಯಿತು. ಗಡಿನಿರ್ಣಯ ಆರ್ಥಿಕ ಪ್ರಶ್ನೆಗಳಿಂದ ಆಂಧ್ರ ಪ್ರಾಂತ ರಚನೆಯು ಮುಂದೆ ಹೋಯಿತು.

ಕಾಂಗ್ರೆಸ್ಸಿಗರಿಂದ ಕಡೆಗಣಿಸಲ್ಪಟ್ಟ ಕರ್ನಾಟಕದ ವಾದ ದಿನದಿಂದ ದಿನಕ್ಕೆ ಹೀನವಾಗುತ್ತಲಿದೆ. ಕಾಂಗ್ರೆಸ್ಸು ಸರಕಾರದ ಆಡಳಿತ ಕಾಲದಲ್ಲೇ ಕರ್ನಾಟಕಕ್ಕೆ ಹೆಚ್ಚಿನ ಹಾನಿ ತಟ್ಟಬಹುದೋ ಎನುವ ಭೀತಿ ತಲೆಯೆತ್ತಿದೆ. ಆಂಧ್ರ ಪ್ರಾಂತರಚನೆಯ ಕಾಲದಲ್ಲಿ ಬಳ್ಳಾರಿ, ಕಡಪಾ, ಕರ್ನೂಲು, ಅನಂತಪುರ ನಮ್ಮದೆಂದು ಆಂಧ್ರರು ವಾದಿಸಿದರು. ಕೇಳಪ್ಪನವರೂ ಕಾಸರಗೋಡಿನವರೆಗೆ ನಮ್ಮದೆಂದರು. ಕಾರವಾರ, ಬೆಳಗಾಂವ, ಸತಾರಾ ನಮ್ಮದೆಂದು ಮಹಾರಾಷ್ಟ್ರೀಯರು ಘಣಕ್ಕೆ ನಿಂತರು. ಆಗ ಕಾಂಗ್ರೆಸ್ಸು ಯಾವ ನ್ಯಾಯದಾನವನ್ನೂ ಮಾಡಿಲ್ಲ ಸಾಕೇಕಾಗಿ ಪ್ರಾಂತರಚನೆಯ ಪ್ರಶ್ನೆ ಬಂದಾಗ ಅದೇ ಹಟ—ಅದೇ ಛಲ ತೀವ್ರತರಾಗಿ ನಿಲ್ಲಲಿವೆ. ಈಗ ಕಾರವಾರದಲ್ಲಿ ಮಹಾರಾಷ್ಟ್ರೀಯರು ನಾನಾರೀತಿಯ ಚಟುವಟಿಕೆ—ಹಗರಣ ಕುತಂತ್ರಗಳಿಂದ ಸ್ವಾಹಾ ಮಾಡುವ ಯತ್ನ ನಡೆಸುತ್ತಲಿದ್ದಾರೆ. ಉಳಿದ ಗಡಿ ಪ್ರದೇಶದ ಕನ್ನಡದ ವಿಭಾಗಗಳಲ್ಲಿ ಏಕೀಕರಣದ ಬಗ್ಗೆ ತಕ್ಕ ಜನಜಾಗೃತಿಯನ್ನು ಹುಟ್ಟಿಸುವವರಿಲ್ಲದೆ ಪರಕೀಯರ ವರ್ಚಸ್ಸೇ ಹೆಚ್ಚಾಗಿದೆ.

ಮುಂಬರುವ ಚುನಾವಣೆಯಲ್ಲಿ ಕನ್ನಡಿಗರಿಗೆ ಮತದಾನ ವಿಚಾರದಲ್ಲಿ ಮಹದನ್ಯಾಯ ನಡೆಯಲಿದೆ ಬೆಳಗಾಂವ ಸಾಲೆಗಳಲ್ಲಿ ಮತದಾರ ಸಂಘದಿಂದ ಕನ್ನಡಿಗರಿಗಾದ ವಂಚನೆಯನ್ನು ಮುಖ್ಯ ಮಂತ್ರಿ ಕಾಯಿದೆ ಮಂತ್ರಿ, ಅಧ್ಯಕ್ಷರಿಗೆ ತಿಳಿಸಿದ್ದರೂ ಅನಾದಾಯಕವಾದ ಉತ್ತರವಿನ್ನೂ ಬಂದಿಲ್ಲ. ಬೇರೆಬೇರೆ ಪ್ರಾಂತಗಳಲ್ಲಿ ಹರಿದು ಹಂಚಿ ಹೋಗಿರುವ ಕರ್ನಾಟಕದ ಸ್ಥಿತಿಯೂ ಚಿಂತಾಜನಕವಿದೆ ಅಲ್ಲಿಯೂ ಇತರ ಜಾತೀಯ ಪಂಗಡಗಳು ಕನ್ನಡ ಸಂಸ್ಕೃತಿಯನ್ನು ತಲೆಯೆತ್ತಲು ಬಿಡುವಂತಿಲ್ಲ. ಕನ್ನಡಿಗರ ಆತ್ಮಾಭಿಮಾನವನ್ನು ಕುಗ್ಗಿಸುವ ಇಂತಹ ಹಲವು ಸಮಸ್ಯೆಗಳು ಇನ್ನೂ ಅಪರಿಹಾರ್ಯವಾಗಿರುತ್ತವೆ. ಕೇಂದ್ರ ಸರಕಾರವು ಕರ್ನಾಟಕದ ಬೇಡಿಕೆಯನ್ನು ಕಡೆಗಣಿಸುತ್ತ ಕಾಲಹರಣ ಕೈಕೊಳ್ಳುವಾಗ, ಆರ್ಥಿಕ ತೊಡಕು, ಕನ್ನಡಿಗರ ಅನೈಕ್ಯತೆ— ಮುಂತಾದ ಕಾರಣಗಳನ್ನು ಮುಂದೆ ಮಾಡಿರುತ್ತದೆ. ದೇವರ ದಯೆಯಿಂದ ಈ ಕಾತ್ರಗಳು ತಪ್ಪಿದರೂ ಕನ್ನಡಿಗರ ಪಾಲಿಗೆ ತಡೆಹೇಳಲಿಕ್ಕೆ ಬೇರೆ ಹೊಸ ಬಗೆಯ ಸಮಸ್ಯೆಗಳು ಮುಂದೆ ಬಂದಾವೆಂದು ನಾವು ಊಹಿಸಿದರೆ ತಪ್ಪಾಗದು. ಮೈಸೂರಿಗರು ಏಕೀಕರಣಕ್ಕೆ ವಿರೋಧಿಗಳಲ್ಲವಾದರೂ ತಮ್ಮ ಸ್ವಾರ್ಥವನ್ನು ಸಾಧಿಸಿಕೊಳ್ಳುವದಕ್ಕೆ ಇದುವೇ ಸುವರ್ಣಸಂಧಿಯೆಂದು ಅವರು ಭಾವಿಸಿದ ಹಾಗಿದೆ. ಏಕತಂತ್ರ ಕರ್ನಾಟಕವಾಗುವದರಲ್ಲಿ ಅವರ ಸ್ಥಾನಮಾನಕ್ಕೆ ಚ್ಯುತಿ ಬರಬಹುದೆಂಬ ಭೀತಿ ಬೇರೆ! ಮೈಸೂರಿಗರ ಮೈಗಳ್ಳತನಕ್ಕೆ ಕೇಂದ್ರ ಸರಕಾರ ಪ್ರತೀಕಾರ ಹೂಡಬಹುದು. ಆದರೆ ಕೇಂದ್ರಕ್ಕೆ ಆ ಮನಸ್ಸಿಲ್ಲ. ಆರುನೂರು ಸಂಸ್ಥಾನಗಳನ್ನು ತನ್ನ ಅಂಕಿತದಲ್ಲಿ ತಂದುಕೊಂಡ ಸರಕಾರಕ್ಕೆ ಒಂದು ಸಂಸ್ಥಾನವನ್ನು ಸಂತೈಸಲು ಸಾಧ್ಯವಿಲ್ಲವೆನ್ನುವದು ನಂಬಲಿಕ್ಕರ್ಹವಾದ ಮಾತಲ್ಲ! ಕೇಂದ್ರದ ಒಲವಿನಿಂದಲೇ ಮೈಸೂರಿಗರು ಏಕೀಕರಣಕ್ಕೆ ಅಡ್ಡಿ ಹೇಳುತ್ತಲಿದ್ದಾರೆ. ಮೈಸೂರನ್ನು ಹೊರತುಪಡಿಸಿ ಕನ್ನಡ ಪ್ರಾಂತರಚನೆಯಾಗಲಿ ಎನ್ನುವದು ತರ್ಕಶುದ್ಧವಾದ ವಿಚಾರವಲ್ಲ. ಮೈಸೂರನ್ನು ಹೊರತು ಕರ್ನಾಟಕ ಪ್ರಾಂತರಚನೆ ಅದು ಅಪೂರ್ಣ ಮಾತ್ರವಲ್ಲ. ಅಭಾಸ ಕೂಡಾ ಹೌದು. ಮುಖ್ಯವಾಗಿ ಕೇಂದ್ರ ಸರಕಾರದವರು ಮನಸ್ಸುಮಾಡಬೇಕು. ಕಾಂಗ್ರೆಸ್ಸಿನ ತತ್ವದಂತೆ ವಚನವನ್ನು ಕಾಪಾಡುವ ಮನಸ್ಸು ಹಿರಿಯ ಕಾಂಗ್ರೆಸ್ಸಿಗರಿಗೆ ಬರದೆ ಹೋದುದು ನಿಜವಾಗಿಯೂ ದುರ್ದೈವವೆಂದೇ ಹೇಳಬೇಕು.

ಹಾವೇರಿಯ ಪರಿಷ್ಕೃತ ಪರಿಷತ್ತಿನಲ್ಲಿ ಗಂಭೀರ ಸ್ವರೂಪದ ಗೊತ್ತುವಳಿಯೂ, ಕಾಂಗ್ರೆಸ್ಸಿನ ಮೇಲಿನ ವಿಶೇಷ ಟೀಕೆಯೂ ಬಂದಿದ್ದರೆ—ಈ ಎಲ್ಲ ನಿರಾಶಾಜನಕ ಪರಿಸ್ಥಿತಿಗಳೇ ಅದಕ್ಕೆ ಕಾರಣವೆನ್ನಬೇಕು. ಆದರೆ ಕಾಂಗ್ರೆಸ್ಸಿಗೆ ರಾಜಿಯನ್ನಿತ್ತು ಹೊರಬರುವದರಿಂದ ಕಾರ್ಯ ಸಾಧಿಸಿತೆಂದು ಭಾವಿಸುವದು ಶುದ್ಧ ತಪ್ಪು ಕಲ್ಪನೆ! ಕೆ.ಪಿ.ಸಿ.ಸಿ. ಯ ಸದಸ್ಯರು ಮುಂದಿಟ್ಟ ಹೆಜ್ಜೆಯನ್ನು ಹಿಂದಿಡದೆ ಕಾರ್ಯ ಪ್ರವೃತ್ತರಾಗಿದ್ದರೆ ಏನಾದರೂ ಒಂದು ಬಗೆಯ ಮಾರ್ಪಾಟು ಆಗಬಹುದಿತ್ತೋ ಏನೋ! ಬದಲಾಗಿ ಆ ಪ್ರಕರಣ ವಿಪರ್ಯಾಸದಲ್ಲೇ ಪರ್ಯಾವಸಾನಹೊಂದಿತು. ಇಂದು ಆ ರೀತಿಯ ದುಡುಕುತನವನ್ನು ತೋರಿಸುವದರಲ್ಲಿ ಅರ್ಥವಿಲ್ಲ. ಹಾವೇರಿ ಪರಿಷ್ಕೃತ ಪರಿಷತ್ತಿನ ಏಕೀಕರಣಾಕಾಂಕ್ಷೆಯಲ್ಲಿ ಯಾವುದೋ ರಾಜಕಾರಣಿಗಳ ಕ್ರಾಂತಿಯ ವಿಕೃತಿ ಕೇಳಿಬಂತಿದೆ. ಉದ್ಘಾಟನದಿಂದ ಕರ್ನಾಟಕ ಪ್ರಾಂತೀಕರಣದ ಅಸ್ತಿವಾರಕ್ಕೆ ಗಂಡಾಂತರವಿದೆಯೆಂಬುದನ್ನು ನಾವು ಮರೆಯಲಾಗದು ಪರಿಷತ್ತಿನ ಉದ್ಘಾಟಕರಾದ ಸುಬ್ರಹ್ಮಣ್ಯರೂ ಅಧ್ಯಕ್ಷರಾದ ಶ್ರೀ ಜನರಾಜ ಹೆಗ್ಡೆಯವರೂ ಸರಿಯಾದ ಮಾರ್ಗದರ್ಶನ ಮಾಡಿದ್ದನ್ನು ನಾವು ಶ್ಲಾಘಿಸದಿರಲಾರೆವು.

ಕರ್ನಾಟಕ ಪ್ರಾಂತರಚನೆ ಆಗಬೇಕಾದ ಕಾರ್ಯ. ಕನ್ನಡ ಜನತೆಯ ಆರ್ಥಿಕ—ಸಾಂಸ್ಕೃತಿಕ ಸ್ಥಿತಿಗಳು ಉಚ್ಚ್ರಾಯ ಸ್ಥಿತಿಯನ್ನು ಹೊಂದಬೇಕಾದರೆ ಏಕತಂತ್ರ ಕರ್ನಾಟಕ ರಚನೆಯೇ ಉತ್ತಮ ಸಾಧನವಾಗಿದೆ. ಕರ್ನಾಟಕದ ಜೀವಾಳವಾದ ಈ ಪ್ರಶ್ನೆಯನ್ನು ಸರಕಾರ ಅಲಕ್ಷಿಸಬಾರದು. ನಿರ್ದಿಷ್ಟವಾದ ಗೊತ್ತುಗುರಿಯನ್ನಿಟ್ಟುಕೊಂಡು ಕರ್ನಾಟಕದಲ್ಲಿ ಕನ್ನಡ ಏಕೀಕರಣದ ಕುರಿತು ಜಾಗೃತಿಯನ್ನು ಹುಟ್ಟಿಸುವ ಹಾಗೂ ಐಕ್ಯತೆಯನ್ನುಂಟುಮಾಡುವ ಕಾರ್ಯವನ್ನು ಕರ್ನಾಟಕದ ಪ್ರತಿನಿಧಿಗಳು ಮಾಡಲಿ. ಪರಿಸ್ಥಿತಿಯನ್ನು ವಿಕೋಪಕ್ಕೆ ಹೋಗಗೊಡದೆ ಸಾವಧಾನದಿಂದ ಕೇಂದ್ರ ಸರಕಾರದ ಮನಸ್ಸನ್ನು ಒಲಿಸಿಕೊಳ್ಳುವದರಲ್ಲೇ ಜಾಣತನವಿದೆ. ಎಲ್ಲದಕ್ಕೂ ಸತತ ಪ್ರಯತ್ನ—ಸಹನೆ—ಸಾವಧಾನ ಧೋರಣ ಅವಶ್ಯವೆಂಬುದನ್ನು ನಮ್ಮ ಧುರೀಣರು ಮರೆಯದಿರಲಿ.

೧೮ ಕೋಟಿ ಮತದಾರರು

೪೯೭೦ ಜನರನ್ನು ಚುನಾಯಿಸಬೇಕಾಗಿದೆ

ಭಾರತದ ಮಹಾಚುನಾವಣೆಯ ಬಗ್ಗೆ ಈ ಕೆಳಗಿನ ಮಹತ್ವದ ಮಾಹಿತಿಯು ಮೊನ್ನೆ ಸೀಮಾ ಸಮಿತಿಗಳ ಸೀಮಾಕರ ಸಂದರ್ಭದಲ್ಲಿ ಕಾಯಿದೆ ಸಚಿವರು ಪಾರ್ಲಿಮೆಂಟಿನ ಎದುರಿಟ್ಟ ವರದಿಯಿಂದ ಹೊರಬಿದ್ದಿದೆ.

ಮತದಾನದಲ್ಲಿ ಭಾಗವಹಿಸುವ ಒಟ್ಟು 18 ಕೋಟಿ ಜನರು ಪಾರ್ಲಿಮೆಂಟ ಮತ್ತು ಪ್ರಾಂತ ಶಾಸನ ಸಭೆಗಳಿಗೆ ಒಟ್ಟು 3970 ಜನರನ್ನು ಆರಿಸಿ ಕಳುಹಿಸಬೇಕಾಗಿದೆ.

ಪಾರ್ಲಿಮೆಂಟಿನಲ್ಲಿ 496 ಚುನಾಯಿತ ಸದಸ್ಯರಿರುವರು, ಇವರಲ್ಲಿ 374 ಜನರು ಎ ವರ್ಗದ ಪ್ರಾಂತಗಳಿಂದಲೂ 96 ಜನರು ಬಿ ವರ್ಗದ ಪ್ರಾಂತಗಳಿಂದಲೂ 76 ಜನರು ಸಿ ವರ್ಗದ ಪ್ರಾಂತಗಳಿಂದಲೂ ಆರಿಸಿ ಬರುವರು.

ಘಟನೆಯನ್ವಯ ಆಂಗ್ಲೋ ಇಂಡಿಯನ ಜನಾಂಗದಿಂದ, ಪ್ರಾತಿನಿಧ್ಯ ಸಾಲದೆಂದು ರಾಷ್ಟ್ರಾಧ್ಯಕ್ಷರಿಗೆ ಅನ್ನಿಸಿದರೆ ಇಬ್ಬರನ್ನು ನಾಮಕರಣ ಸದಸ್ಯರೆಂದು ತೆಗೆದುಕೊಳ್ಳಬಹುದು

ಇದರ ಜೊತೆ ' ಕಾಶ್ಮೀರಕ್ಕೆ ಆರು ಜಾಗೆಗಳೂ ಅಂಡಮಾನ, ನಿಕೋಬರ ದ್ವೀಪಗಳಿಗೆ ನಾಮನೇಶನ ಮೂಲಕ ಒಂದು ಜಾಗೆ ಇರುವುದು. ಘಟನೆಯ 81 ನೇ ಕಲಮಿನನ್ವಯ ಪಾರ್ಲಿಮೆಂಟಿನಲ್ಲಿ ಐದು ನೂರು ಜನರಿಗಿಂತ ಹೆಚ್ಚು ಸದಸ್ಯರಿರಬಾರದೆಂಬ ನಿಯಮವಿದೆ ಆದರೆ ಇತ್ತೀಚಿನ ಜನಗಣತಿಯು ಮೇಲಿನಿಂದ ಜನಸಂಖ್ಯೆ ಹೆಚ್ಚಾಗಿರುವುದು ಕಂಡುಬರುವುದರಿಂದ ಇನ್ನು ಒಂದೆರಡು ವರುಷಗಳಲ್ಲಿ ಈ ಮಿತಿಯನ್ನು ಹೆಚ್ಚಿಸಲು ಘಟನೆಯ ಕಲಮುವನ್ನು ತಿದ್ದಬೇಕು.

ಶಾಸನ ಸಭೆಗಳಲ್ಲಿ

ಪ್ರಾಂತ ಶಾಸನ ಸಭೆಗಳಲ್ಲಿ ಒಟ್ಟು ಎಲ್ಲಾ ಸಭೆಗಳೂ ಸೇರಿ 3055 ಸದಸ್ಯರು ಇರಬೇಕು. ಇದರಲ್ಲಿ 2294 ಜನರು ಎ ವರ್ಗದ ರಾಜ್ಯಗಳಿಂದಲೂ, 791 ಜನರು ಬಿ ವರ್ಗದ ರಾಜ್ಯಗಳಿಂದಲೂ ಇರಬೇಕು. ವಿಂಧ್ಯ ಪ್ರದೇಶ ಮತ್ತು ಹಿಮಾಚಲದ ಪ್ರದೇಶಗಳಲ್ಲಿ ಶಾಸನ ಸಭೆಗಳು ರಚಿತವಾದಾಗ ಅಲ್ಲಿ ಒಂದೊಂದು ಸಭೆಗೆ ಅರವತ್ತು ಸದಸ್ಯರು ಇರುವರು.

ಬಿಹಾರ, ಮುಂಬೈ, ಮದ್ರಾಸು, ಪಂಜಾಬು, ಉತ್ತರ ಪ್ರದೇಶ, ಪ. ಬಂಗಾಲ, ಮೈಸೂರು— ಈ ರಾಜ್ಯಗಳಲ್ಲಿ ವಿಧಿಮಂಡಲಗಳಿರುವವು. ಇವುಗಳ ಒಟ್ಟು ಸಂಖ್ಯೆಯು 419 ಇರುವುದು. ಇವರಲ್ಲಿ 139 ಜನರನ್ನು ಸ್ಥಳೀಯ ಅಧಿಕಾರಿಗಳು ನಡೆಸುವ ಚುನಾವಣೆಯಿಂದಲೂ, 38 ಪದವೀಧರರಿಂದಲೂ, 3[illegible] ಶಿಕ್ಷಕರಿಂದಲೂ (ಮಾಧ್ಯಮಿಕ ದರ್ಜೆಗೆ [illegible]ದಿಮೆ ಇಲ್ಲದವರು) ಪ್ರಾಂತ ಶಾಸನ ಸಭೆಯಿಂದ ಪ್ರತ್ಯಕ್ಷ ಚುನಾವಣೆಯ ಮೂಲಕ 139 ಜನರು. ಗವರ್ನರರು ಮತ್ತು ರಾಜಪ್ರಮುಖರಿಂದ 73 ಜನರು ನಾಮಕರಣಗೊಳ್ಳುವರು. ಆಂಗ್ಲೋ ಇಂಡಿಯನ್ನರಿಂದ [illegible] ಗವರ್ನರರು ಸಹಿತ ಯೋಗ್ಯ ಪ್ರಾತಿನಿಧ್ಯಕ್ಕಾಗಿ ಸಾಕಷ್ಟು ಜನರನ್ನು ನೇಮಿಸಕೊಳ್ಳಬಹುದು.

ಮೂವರು ಮಾತ್ರ ಆರಿಸಿ ಬರುವ ಒಂದೇ ಒಂದು ಚುನಾವಣಾ ಕ್ಷೇತ್ರವೊಂದು ಇರುವುದು. ಇದು ಜಲಪೈಗುರಿ ಮತ್ತು ಕೂಚಬಿಹಾರ.

ಚುನಾವಣಾ ಕಮಿಷನ್ನರಿಗೂ ಕೆಲವು ಪ್ರಾಂತದ ಪ್ರತಿನಿಧಿಗಳಿಗೂ ಸೀಮಾ ಸಮಿತಿಯ ಬಗ್ಗೆ ಬಂದಿದ್ದ ಮತಭೇದಗಳು ಬಗೆಹರಿಸಲ್ಪಟ್ಟವು. ಪರಿಶಿಷ್ಟ ವರ್ಗದವರ ಪ್ರಾತಿನಿಧ್ಯದ ಬಗೆಗೂ ಮುಖ್ಯವಾಗಿ ಭೇದಬಂದಿದ್ದಿತು. ಪರಿಶಿಷ್ಟ ವರ್ಗದವರನ್ನು ಜನಸಂಖ್ಯೆಯ ಪ್ರಮಾಣದ ಮೇಲೆ ಆರಿಸಿಕೊಳ್ಳಬೇಕೆಂದು ಸರಕಾರವು ತೀರ್ಮಾನಿಸಿರುವುದು

ಪಂಜಾಬದ ಸದಸ್ಯತ್ವದ ಸಂಖ್ಯೆಯ ಬಗ್ಗೆ ಮತಭೇದ ಇನ್ನೂ ಹಾಗೆಯೇ ಇರುವುದು. ಉತ್ತರ ಪ್ರದೇಶದ ಎರಡು ಜಾಗೆಗಳು ಡೆಹ್ರಾಡೂನ ಜಿಲ್ಲೆಯ ಒಂದು ಪ್ರದೇಶದ ಬಗ್ಗೆ ವಾದವಿವಾದವೆದ್ದಿದೆ. ಪಾರ್ಲಿಮೆಂಟು ಈ ವಿವಾದಾಸ್ಪದ ಪ್ರದೇಶದ ಸೀಮಾ ಸಮಿತಿಯ ವರದಿಯನ್ನು ಪರಿಶೀಲಿಸುವಾಗ, ನಿರ್ಬಂಧವಿಲ್ಲದ ಮತದಾನಕ್ಕೆ ಅವಕಾಶ ಕೊಡಲಾಗುವುದೆಂದು ಸದ್ಯಕ್ಕೆ ಒಪ್ಪಿಗೆಯಾಗಿದೆ.

ಉಡುಪಿ

ಮೈಸೂರು ರೆವಿನ್ಯೂ ಮಂತ್ರಿಗಳಾದ ಶ್ರೀ ಎಚ್. ಸಿದ್ದಯ್ಯನವರು ಇದೇ ತಾ. 27ರಲ್ಲು ಮಧ್ಯಾಹ್ನ ಉಡುಪಿಗೆ ಆಗಮಿಸಿದರು. ಸಂಜೆ ನಾಲ್ಕು ತಾಸಿಗೆ ಮಹಾತ್ಮಾಗಾಂಧಿ ಮೆಮೋರಿಯಲ್ ಕಾಲೇಜಿನಲ್ಲಿ ಮಾನ್ಯ ಮಂತ್ರಿಗಳಿಗೆ ಉಡುಪಿ ಮುನಿಸಿಪಲ್ ಕೌನ್ಸಿಲಿನ ಮಾನಪತ್ರವನ್ನು ಶ್ರೀ ಟಿ. ರಮೇಶ ಪೈಗಳು ಒಪ್ಪಿಸಿದರು. ಇದೇ ಸಂದರ್ಭದಲ್ಲಿ ಮಲ್ಪೆ ಪೋರ್ಟ್ ಡೆವಲಪ್‌ಮೆಂಟ್ ಕಮಿಟಿಯ ಪರವಾಗಿ ಶ್ರೀ ಟಿ. ಅನಂತ ಪೈಗಳವರು ನಿವೇದನಾ ಪತ್ರವೊಂದನ್ನು ಓದಿ ಅರ್ಪಿಸಿದರು. ಪಶ್ಚಿಮ ಕರಾವಳಿಯಲ್ಲಿ ಪ್ರಬುದ್ಧ ಬಂದರವಾಗಲು ಮಲ್ಪೆಗೆ ಎಷ್ಟರಮಟ್ಟಿನ ಅರ್ಹತೆಯಿದೆ ಎಂಬ ವಿಷಯವು ಸವಿಸ್ತಾರವಾಗಿ ನಿವೇದನಾ ಪತ್ರದಲ್ಲಿ ಹೇಳಲಾಗಿತ್ತು. ಮಾನ್ಯ ಮಂತ್ರಿಗಳು ಪ್ರಥಮತಃ ನಗರ ಸಭೆಯ ತನಿಗೆ ಗೌರವಪೂರ್ವಕ ಆಭಾರ ಸಲ್ಲಿಸಿದರು. ಉಡುಪಿಯ ವೈಶಿಷ್ಟ್ಯವನ್ನು ಶ್ಲಾಘಿಸುತ್ತಾ ಕೈಗಾರಿಕೆ, ಶಿಕ್ಷಣ, ಬ್ಯಾಂಕಿಂಗ್, ಇನ್ಶೂರೆನ್ಸ್ ಮೊದಲಾದ ಕ್ಷೇತ್ರಗಳಲ್ಲಿ ಉಡುಪಿಯು ಅಗ್ರಸ್ಥಾನಿಯವಾಗಿದೆ ಎಂದರು. ಪ್ರಬುದ್ಧ ಬಂದರ ನಿರ್ಮಾಣದ ಕುರಿತು ಮಾತನಾಡುತ್ತಾ, ನಿವೇದನಾ ಪತ್ರದಲ್ಲಿ ಹೇಳಿದ ಮಲ್ಪೆಯ ಅರ್ಹತೆಯು ಒಪ್ಪತಕ್ಕದ್ದೆಂದರು. ಆದರೆ ಮಂಗಳೂರು ಮುಖಂಡರು ಮಂಗಳೂರ ಅರ್ಹತೆಯನ್ನು ಸೂಚಿಸುತ್ತಾ ದಿಲ್ಲಿ, ಮದ್ರಾಸು, ಬೆಂಗಳೂರು ಕಡೆಗಳಲ್ಲೂ ಜನಜಾಗೃತಿಯನ್ನುಂಟುಮಾಡುತ್ತಲೇ ಇದ್ದಾರೆ. ಪ್ರಬುದ್ಧ ಬಂದರ ಚುನಾವಣಾ ಸಮಿತಿಯು ವರದಿಯನ್ನೊಪ್ಪಿಸಿದರು. ಮಲ್ಪೆ ಬಂದರವೇ ಚುನಾಯಿಸಲ್ಪಡಬಹುದೆಂದು ಅನ್ನುತ್ತಿದ್ದಾರೆ. ಸಮಿತಿಯ ತೀರ್ಮಾನವು ರಹಸ್ಯವಿರುವುದರಿಂದ ಆ ಕುರಿತು ಹೆಚ್ಚು ಹೇಳುವುದು ಅಪರಾಧವಾಗುವುದು. ಮಲ್ಪೆಯ ಅರ್ಹತೆಯ ಬಗ್ಗೆ ತನಗೆ ಸಮಾಧಾನವಿದೆ. ಮಲ್ಪೆಯು ಪ್ರಬುದ್ಧ ಬಂದರವಾಗಿ ಉಡುಪಿಯು ದೊಡ್ಡ ಉಡುಪಿಯಾಗಲೆಂದು ಆಶಿಸುತ್ತೇನೆ ಎಂದು ಕೊನೆಯದಾಗಿ ಹೇಳಿದರು. ಸಭಾಧ್ಯಕ್ಷತೆಯನ್ನು ವಹಿಸಿದ ಶ್ರೀಮತಿ ಲೀಲಾ ಬಾಯಿ ಕಾಮತರು ಧನ್ಯವಾದಗಳನ್ನರ್ಪಿಸಿದರು. ಮಾನ್ಯ ಮಂತ್ರಿಗಳು ನಂತರ ಮಲ್ಪೆ ಬಂದರವನ್ನು ನೋಡಿಕೊಂಡು ಹಿಂತಿರುಗಿದರು.

ಶ್ರೀ ಕೃಷ್ಣ ಮಠದಲ್ಲಿ — ಪರ್ಯಾಯ ಶ್ರೀ ಕಾಣಿಯೂರು ಮಠದ ಕಡೆಯಿಂದ ಮಾನ್ಯ ಮಂತ್ರಿಗಳನ್ನು ಮೆರವಣಿಗೆಯಿಂದ ಸಂಸ್ಕೃತ ಕಾಲೇಜು ಹೊಸಕಟ್ಟಡದ ಬಳಿ ಸ್ವಾಗತೀಕರಿಸಲಾಯಿತು. ಶ್ರೀ ಚಂದ್ರೇಶ್ವರ-ಅನಂತೇಶ್ವರ- ಶ್ರೀ ಕೃಷ್ಣ ಮಠಗಳನ್ನು ಸಂದರ್ಶಿಸಿ ಮಂತ್ರಿಗಳು ಪರ್ಯಾಯ ಮಠಕ್ಕೆ ಆಗಮಿಸಿದರು. ಪರ್ಯಾಯ ಕಾಣಿಯೂರು, ಪುತ್ತಿಗೆ, ಸೋದೆ, ಅದಮಾರು ಮಠದ ಶ್ರೀ ಪಾದಂಗಳೆಲ್ಲರೂ ಮಂತ್ರಿಗಳಿಗೆ ಸ್ವಾಗತ ಬಯಸಿ ಫಲಮಾಲಿಕೆಗಳನ್ನರ್ಪಿಸಿದರು. ಪರ್ಯಾಯ ಕಾಣಿಯೂರು ಸ್ವಾಮಿಗಳವರು ಫಲಮಂತ್ರಾಕ್ಷತೆಯನ್ನಿತ್ತರು ಶಾಲು ಉಡುಗೆರೆಯಿತ್ತರು. ಎಂಟು ಮಠಗಳ ಪರವಾಗಿ ಪರ್ಯಾಯ ಮಠದ ಕಡೆಯಿಂದ ಶ್ರೀ ಬಿ. ಅನಂತಾಚಾರ್ಯರು ಮಾನಪತ್ರವೊಂದನ್ನು ಮಂತ್ರಿಗಳಿಗೆ ಒಪ್ಪಿಸಿದರು. ಉಡುಪಿಯ ಮಹಾತ್ಮೆ, ಸ್ವಾಮಿಗಳ ಪರ್ಯಾಯ, ಶ್ರೀ ಕೃಷ್ಣನಿಗೆ ಮೈಸೂರು ಮನೆತನದ ಹಾಗೂ ಸರಕಾರದ ಧನಕನಕ ಸಂಪತ್ತಿನ ಸಹಾಯಾದಿಗಳನ್ನು ಎತ್ತಿ ಹೇಳಿ ಮಂತ್ರಿಗಳು ತಮ್ಮ ಭಾಷಣಗಳನ್ನು ಕೊನೆಗಾಣಿಸಿದರು.

ಅಲ್ಲಿಂದ ಮಾನ್ಯ ಮಂತ್ರಿಗಳು ಶ್ರೀ ಪುತ್ತಿಗೆ ಮಠಕ್ಕೆ ಹೋಗಿ ಅಲ್ಲಿ ಹೊಸತಾಗಿ ನೇಮಿಸಲಾದ ಶ್ರೀ. ವಿಠಲ ಮುಖ ಮಂಟಪದ ಪ್ರವೇಶೋತ್ಸವವನ್ನು ಜರಗಿಸಿದರು. ಈ ನೂತನ ಕಟ್ಟಡವು ಭಕ್ತಾದಿಗಳಿಗೂ ಧರ್ಮಜಾಗೃತಿಗೂ ಆದರ್ಶ ಸ್ಥಳವಾಗಿ ಪರಿಣಮಿಸಲೆಂದು ಅಪೇಕ್ಷಿಸಿದರು. ಶ್ರೀ ಪುತ್ತಿಗೆ ಮಠ ಚಿಕ್ಕ ಪೀಠಾಧಿಕಾರಿ ಶ್ರೀ ಸುಜ್ಞಾನೇಂದ್ರ ತೀರ್ಥ ವಿದ್ಯಾವಲ್ಲಭಸ್ವಾಮಿಗಳವರು ತಮ್ಮ ಆಶ್ರಯ ಗುರುಗಳಾದ ಶ್ರೀ ಸುಧೀಂದ್ರ ತೀರ್ಥ ಶ್ರೀ ಪಾದಂಗಳವರ ಹಸ್ತದಿಂದ ಮಾನ್ಯ ಮಂತ್ರಿಗಳಿಗೆ ಪಟ್ಟೆ ಶಾಲನ್ನು ಕೊಡಿಸಿದರು. ಅತಿಥಿ, ಅಭ್ಯಾಗತರ ವಂದನಾರ್ಪಣೆಗಳಾಗಿ ಸಭೆಯು ಕೊನೆಗೊಂಡಿತು. ಅಂದು ಪೂರ್ವಾಹ್ನ ಮುಖಮಂಟಪದ ಪ್ರವೇಶ ಉತ್ಸವದ ಸಲುವಾಗಿ ಪೂಜೆ, ಅನ್ನಸಂತರ್ಪಣೆ ನಡೆದಿತ್ತು.

ತಾಲೂಕು ಸೋಲ್ಜರ್ಸ್ ಕಮಿಟಿ ಸಭೆಯು— ಇದೇ ತಾ. 25ರಲ್ಲಿ ತಹಶಿಲ್ದಾರ್ ಶ್ರೀ ಕೆ. ವೆಂಕಪ್ಪ, ಅವರ ಅಧ್ಯಕ್ಷತೆಯಲ್ಲಿ ಜರಗಿತು. ಸೇನಾಪಡೆಯಲ್ಲಿದ್ದು ಈಗ ನಿವೃತ್ತರಾದವರ ಹಾಲ ಪಾಡುಗಳ ಅರ್ಜಿಗಳನ್ನು ಪರಿಶೀಲಿಸಿ ಅವನ್ನು ಸಂಬಂಧಪಟ್ಟ ಅಧಿಕಾರಿಗಳಿಗೆ ಕಳುಹಿಸುವುದೆಂದಾಯಿತು. ಕಮಿಟಿಯ ಉಪಾಧ್ಯಕ್ಷ ಶ್ರೀ ಡಬ್ಲ್ಯು. ಎ. ಸುಟೀಕರು ಮಾಜಿ ಸೈನಿಕರ ಕಲ್ಯಾಣಗಳ ಕಡೆಗಾಗಿ ಕಮಿಟಿ ಮೆಂಬರರು ಕೈಕೊಳ್ಳತಕ್ಕ ಕಾರ್ಯಕ್ರಮಗಳ ಸೂಚನೆಗಳನ್ನಿತ್ತನಂತರ ಕಾರ್ಯದರ್ಶಿಯರ ಧನ್ಯವಾದಾರ್ಪಣೆಯೊಂದಿಗೆ ಸಭಾಂತ್ಯವಾಯಿತು.

ಮುನಿಸಿಪಲ್ ಕೌನ್ಸಿಲು ಮೀಟಿಂಗು — ತಾ. 26ರಲ್ಲಿ ಚೇರ್‌ಮನ್ ಶ್ರೀ ಯು. ಎಸ್. ನಾಯ್ಕರ ಅಧ್ಯಕ್ಷತೆಯಲ್ಲಿ ಜರಗಿತು ಕಮಿಶನರು ಡ್ರೈನ್ ಬರೆಯುವಾಗ ತಪ್ಪುಗಳಾಗದಂತೆ ಹಿತಸೂಚನೆಗಳನ್ನು ಕೊಡಲಾಯಿತು. ಕೆಲವು ಬಿಲ್ಲುಗಳು ಮಂಜೂರಾದುವು.

ಕರ್ನಾಟಕ ಸಂಘ (ರಿಜಿಸ್ಟರ್ಡ್) ಉಡುಪಿ ಈ ಸಂಸ್ಥೆಯ ವಾರ್ಷಿಕ ಮಹಾಧಿವೇಶನವು ತಾ. [illegible] ರವಿವಾರ ಸಂಜೆ ಕಾಲು ಗಂಟೆಗೆ [illegible] ಪರಿಷತ್ತಿನ [illegible] ಗುಪ್ತಮತದ ಸಂಘದ ಸದಸ್ಯರು ಬರಬೇಕೆಂದು, ಕಾರ್ಯದರ್ಶಿಗಳು ಭಿನ್ನವಿಸಿಕೊಳ್ಳುತ್ತಾರೆ.

ಟೀಪಾರ್ಟಿ—ಶ್ರೀ P. K. ಶೇಷಗಿರಿ ರಾವ್ ಕಲ್ಯಾಣಿಯವರು ಇದೇ ತಾ 30ನೇ ಸಂಜೆ ತನ್ನ ಪುತ್ರ ಶ್ರೀ ಶ್ರೀನಿವಾಸನಿಗೆ ಬೆಳಗ್ಗೆ 9-30ಕ್ಕೆ ಜರಗಿದ ಉಪನಯನದ ಸಲುವಾಗಿ ಊರಿನಾಗರಿಕರನೇಕರಿಗೆ ಉಪಾಹಾರದ ವ್ಯವಸ್ಥೆ ಮಾಡಿದ್ದರು

ವಿವಾಹ ಸಮಾರಂಭಗಳು— ಶ್ರೀ ಕುಂದಾಪುರದ ವಕೀಲ್ ಕೆ ಸೂರಪ್ಪ ಸೆಟ್ಟಿ ಪುತ್ರಿ ಶ್ರೀಮತಿ ಯಮುನಳನ್ನು ಶ್ರೀ ಯನ್. ತಿಮ್ಮಪ್ಪ ಹೆಗ್ಗಡೆಯವರ ಪುತ್ರ ಶ್ರೀ ಸುಂದರರಾಮ ಹೆಗ್ಗಡೆಯವರು ಉಡುಪಿ ಶ್ರೀ ರಾಮಕೃಷ್ಣ ಥಿಯೇಟರಿನಲ್ಲಿ ತಾ. 30-5 51ನೇ ಬುಧವಾರ ಬೆಳಗ್ಗೆ ಗಂಟೆ 8 30ಕ್ಕೂ,

ಶ್ರೀ ಯೋಣಗುಡ್ಡೆ ಹೊಸಮನೆ ತಿಮ್ಮಪ್ಪ ಹೆಗ್ಗಡೆಯವರ ಪುತ್ರ ಶ್ರೀ ನಾರಾಯಣ ಸೆಟ್ಟಿ ಮಂದ್ರಾರು ನಡಿಗುತ್ತು ರಾಜ ಸೆಟ್ರ ಪುತ್ರಿ ಸೌ। ಲೀಲಳನ್ನು ಮತ್ತು ಹೆಬ್ರಿ [illegible] ಕಟ್ಟದಮನೆ ಬಲ್ಲಾಳರ ಪುತ್ರಿ ಸೌ। ಜೋಡಾಬಾಯಿಯನ್ನು ಕೊಕ್ಕರ್ಣೆ ಶಿವರಾಮ ಹೆಗ್ಗಡೆಯವರ ಪುತ್ರ ಶ್ರೀ ಭವಾನಿಶಂಕರ ಹೆಗ್ಗಡೆಯವರು ತಾ 30ನೇ ಬೆಳಗ್ಗೆ ಗಂಟೆ 9-15ಕ್ಕೆ ಯೋಣಗುಡ್ಡೆ ದೊಡ್ಡ ಮನೆಯಲ್ಲಿಯೂ

ಅದಮಾರುಗುತ್ತು ಮುಗ್ಗಪ್ಪ ರೈಗಳ ಪುತ್ರಿ ಸೌ। ರಾಜೀವಿಯನ್ನು ನೆಕ್ಲಾಜೆ ಕೊರಗಪ್ಪ ಆಳ್ವರ ಪುತ್ರ ಶ್ರೀಧರ ಆಳ್ವರು ತಾ. 30-5-51ನೇ 9-15ಕ್ಕೆ ಮುಕ್ಕಾರು ಅರುಣಾ ಥಿಯೇಟರಿನಲ್ಲಿಯೂ

ಶ್ರೀ ಹಿರೇಬೆಟ್ಟು ಸಿದ್ದಯ್ಯ ಹೆಗ್ಗಡೆಯವರ ಪುತ್ರ ಶ್ರೀ ಸುಬ್ಬಯ್ಯ ಹೆಗ್ಗಡೆಯವರು ಶ್ರೀ ಕೀಳಂಜೆ ವಿಠಲದಾಸ ಹೆಗ್ಗಡೆಯವರ ಪುತ್ರಿ ಸೌ। ಲೀಲಾವತಿಯನ್ನು ಮತ್ತು ಸದ್ರಿ ವಿ. ವಿಠಲದಾಸ ಹೆಗ್ಗಡೆಯವರ ಪುತ್ರ ಶ್ರೀ ಬಾಲಕೃಷ್ಣ ಹೆಗ್ಗಡೆಯವರು ಶ್ರೀ ಬಸ್ರೂರು ಮಂಜಯ್ಯ ಸೆಟ್ರ ಪುತ್ರಿ ಸೌ। ಸಂಜೀವಿಯನ್ನು ತಾ. 30ನೇ ಬೆಳಗ್ಗೆ 11-35ಕ್ಕೆ ಉಡುಪಿ ಬೋರ್ಡ್ ಹೈಸ್ಕೂಲಿನ ಪೀಸ್ಲೈ ಹಾಲಿನಲ್ಲಿಯೂ

ಶ್ರೀ ಕೀಳಂಜೆ ಲಕ್ಷ್ಮೀನಾರಾಯಣ ಪಾಟೀಲರ ಪುತ್ರ ಶ್ರೀ ಜಿತ್ರಾತ್ರೀಯರು ಕುಂಜಾಲು ಸ್ವದೇಶೀ ಔಷಧಿ ಭಂಡಾರದ ಧನ್ವಂತರಿ ಶ್ರೀಧರ ಪ್ರಭುಗಳ ಪುತ್ರಿ ಸೌ। ಮನೋರಮಾ ಬಾಯಿಯನ್ನು ತಾ 30 5-51ನೇ ಬುಧವಾರ ರಾತ್ರಿ 12 ಗಂಟೆಗೆ ಕುಂಜಾಲು ರಘುನಾಥ ಶ್ರೀ ಭಟ್ಟ ಪೈಗಳ ಮನೆಯಲ್ಲಿಯೂ ವಿಜೃಂಭಣೆಯಿಂದ ವಿವಾಹವಾದರು. ನೂತನ ವಧೂವರರಿಗೆ ನ ಭಾಶಯಗಳು.

ಕುರುಕಾಲು — ಕುರುಕಾಲು ಸಹಕಾರದ ಸಂಘದ ನೂತನ ಕಟ್ಟಡದ ಉದ್ಘಾಟನೆಯು ತಾ 27ನೇ ಆದಿತ್ಯವಾರ ಶ್ರೀ ಮೊಳಹಳ್ಳಿ ಶಿವರಾಯರಿಂದಲೂ ರಜತ ಮಹೋತ್ಸವವು ದ. ಕ. ಜಿಲ್ಲಾ ಬೋರ್ಡ್ ಅಧ್ಯಕ್ಷ ಶ್ರೀ ಮಂಜಯ್ಯ ಹೆಗ್ಗಡೆಯವರ ಸನ್ಮಾನ್ಯ ಅಧ್ಯಕ್ಷತೆಯಿಂದಲೂ ಜರಗಿತು ಸಂಘದ ಅಧ್ಯಕ್ಷ ಶ್ರೀ ಕುರುಕಾಲು ಗಣಪಯ್ಯ ಸೆಟ್ಟರ ವರದಿ ವಾಚನ. ಬಳಿಕ ಸಂಘದ ಏಳ್ಗೆಯ ಬಗೆಯು ಚಟುವಟಿಕೆಯ ಕುರಿತು ಶ್ರೀ ಶಿವರಾವ್, ವಕೀಲ್ ಕೆ. ಜೆ ಬಲ್ಲಾಳ್ ವಕೀಲ ನರಸಪ್ಪಯ್ಯ, ಡಿಸ್ಟ್ರಿಕ್ಟ್ ರಿಜಿಸ್ಟ್ರಾರ್, ಕೆ. ಕೃಷ್ಣಯ ಸೆಟ್ಟಿ, ಡಾ। ಶಿವ ಮೊದಲಾದವರು ಮಾತನಾಡಿದರು. ಶ್ರೀ ಶಿವರಾಯರು 1909 ರಿಂದ ಈ ತನಕ 600 ಸಹಕಾರಿ ಸಂಘಗಳು ಹುಟ್ಟಿಗಿದ್ದು ಜನತೆಯ ಸೇವಾಕಾರ್ಯದಲ್ಲಿ ನಿರತವಾಗಿವೆ ಕುರುಕಾಲು ಸಂಘವು ಕ್ರಿಯಾಶೀಲಿಯಾಗಿದ್ದು ಸುಂದರವಾದ ಕಟ್ಟಡವನ್ನು ಕಟ್ಟಿಸಿಕೊಂಡಿದೆ. ಈ ಕಟ್ಟಡದ ಸಲುವಾಗಿ ಎರಡು ಸಹಸ್ರ ರೂಪಾಯಿ ಸಾಲವಾದುದನ್ನು ಸಂಘವು ಕೂಡಲೇ ತೀರಿಸಬೇಕೆಂದು ಹೇಳಿದರು. ಸಭಾಧ್ಯಕ್ಷರಾದ ಶ್ರೀ ಮಂಜಯ್ಯ ಹೆಗ್ಗಡೆಯವರು ಸಹಕಾರ ಸಂಘಗಳು ಹಳ್ಳಿಯ ಜನಜೀವನಕ್ಕೆ ಅತ್ಯಾವಶ್ಯಕವಾಗಿವೆ ಸಹಕಾರ ತತ್ವಗಳೇ ನಮ್ಮ ದೇಶದ ಆದರ್ಶವೆಂಬುದನ್ನು ಸಾರುವರು. [illegible] ಪ್ರಾಮಾಣಿಕತನದಿಂದ ಎಂತಹ ಕೆಲಸವನ್ನೂ ಸಾಧಿಸಬಹುದೆನ್ನುವ ಪಕ್ಕೆ ಈ ಸಂಘದ ಬಗ ಮುಖ ಕಾರ್ಯಕರ್ತರೇ ಸಾಕ್ಷಿಯಾಗಿವೆ. ಸಹಕಾರ ಸಂಘಗಳ ಮೂಲಕವೇ ಅಧಿಕ ಸಹಕಾರ ಗಳ ಬೆಳೆ ಕೃಷಿ, ಕೈಗಾರಿಕೆಗಳ ಸುಧಾರಣೆಗಳನ್ನು ಮಾಡಬೇಕೆಂದು ಸೂಚಿಸಿದರು. ಕೊನೆಗೆ ಸಂಘದ ಕಾರ್ಯದರ್ಶಿಯವರ ಧನ್ಯವಾದದೊಂದಿಗೆ ಸಭೆ ಮುಕ್ತಾಯ. ಗೊಂಡಿತು ಆ ದಿನ ರಾತ್ರಿ ನಾಟಕ, ಮಂಗಳೂರು ಬಾಲಗೋಪಾಲರ ಅತ್ಯಂತಾಹ್ಲಾದಕರವಾದ ಹಾಸ್ಯಪ್ರದರ್ಶನ ಹಾಗೂ ಸಂಘದವರ ಯಕ್ಷಗಾನ ಮುಂತಾದ ಮನೋರಂಜನೆಯ ಕಾರ್ಯಕ್ರಮಗಳೂ ಇದ್ದುವು.

ಉಪಾಧ್ಯಾಯರು ಬೇಕಾಗಿದ್ದಾರೆ.

ವಿಷ್ಣುಮೂರ್ತಿ ಎಲಿಮೆಂಟರಿ ಶಾಲೆ, ಬೆಳ್ಳರ್ಪಾಡಿ. ಹಿರಿಯಡಕ

ಹಾಯರ್ ಗ್ರೇಡ್ ತರಬೇತಾದ ಉಪಾಧ್ಯಾಯ, ಅಥವಾ ಉಪಾಧ್ಯಾಯನಿಯೊಬ್ಬರು ಬೇಕಾಗಿದ್ದಾರೆ. ಸ್ಕೇಲ್ ಪ್ರಕಾರ ಸಂಪೂರ್ಣ ಸಂಬಳ ಕೊಡಲ್ಪಡುವುದು. ವಸತಿ ವಗೈರೆ ಧರ್ಮಾರ್ಥ, ಹೆಚ್ಚಿನ ಮಾಹಿತಿಗೆ ವಿಚಾರಿಸಬಹುದು.

ಬಿ. ವಾಸುದೇವ ಉಪಾಧ್ಯ,
ಟೀಚರ್ ಮೆನೇಜರ್

ಏಜನ್ಸಿ ಪಡೆಯಿರಿ ಮತ್ತು ತುಂಬ ಕಮಿಶನ್ ಗಳಿಸಿರಿ.

ಶೈಯಾದ್ರಿ ಇನ್ಶೂರೆನ್ಸ್ ಕಂಪೆನಿ ಲಿಮಿಟೆಡ್, ನಾಸಿಕ.

ಇದರ ಮುಖ್ಯ ಅಥವಾ ಉಪವೃತ್ತಿಯಾಗಿ ಏಜನ್ಸಿ ಪಡಕೊಳ್ಳಿರಿ. ಆಕರ್ಷಕ ಮತ್ತು ಉದಾರ ಶರ್ತಗಳು. ಮೇಲ್ದರಗತಿಯ ಜೀವ ವಿಮಾ ಸಂಸ್ಥೆಯಿದು.

G. G. Soundankar,
Managing Director.
The Sahyadri Insurance Co Ltd., NASIK.

ಶ್ರೀ ರಾಮಕೃಷ್ಣ ಥಿಯೇಟರ್ ಲಿಮಿಟೆಡ್. ಉಡುಪಿ

ರಾತ್ರಿ ಬರುವುದು ಹೋಗುವುದು.

ಆದರೆ ಇಂದು ಬಂದ ಈ ರಾತ್ರಿ ನೋಡಿ ಇದೊಂದು ಉತ್ತಮ ಚಿತ್ರವೆಂದ ಖಾತ್ರಿ ಮಾಡಿಕೊಳ್ಳಿ.

ಆಜ್ -ಕಿ- ರಾತ್

ಸುರೈಯ್ಯಾ ಮೋತಿಲಾಲ್

ತಾ. 2-6-51ರಿಂದ

ಬರುವ ಚಿತ್ರಗಳ . ರೇಣಿಕ, ಸಿಂಗಾರ್, ಸಿಪಾಯಿಯ, ಪರಾಸ್ ಇತ್ಯಾದಿ

ನೋಟೀಸು

ಕಾಸರಗೋಡು ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ

R. I. A. 2487/1950
in O. P. 792/47

ವಾದಿ—ಅಬ್ದುಲ್ಲರಹಿಮಾನ್ ಬ್ಯಾರಿ, ತಂದೆ ಮಹಮ್ಮದ ಬ್ಯಾರಿ ಮಗ, ಕಳಂಗಟ್ಟೆ ಗ್ರಾಮದ ತಲವಣ್ಯಂ ಒಳ್ಳಿ ವಾಸ

—ಅರ್ಜಿದಾರ

ಮತ್ತು

1) ಇಸ್ಮಾಯಿ. ಮೃತ್ಯು ಪಟ್ಟ 1ನೇ ಪ್ರತಿವಾದಿ ಮಹಮ್ಮದ ಬ್ಯಾರಿ ಪತ್ನಿ. 2) ಕುಂಜಪಾನಾ 3) ಕುಂಜಮ್ಮ 4) ಜೈನಬ 5) ಅಬ್ದುಲ್ ರಹಿಮಾನ 6) ಅಬ್ದುಲ್ಲ. ಇವರು ಮೃತಪಟ್ಟ 1ನೇ ಪ್ರತಿವಾದಿ ಮಹಮ್ಮದ್ ಬ್ಯಾರಿ ಮಕ್ಕಳು ಎಲ್ಲರೂ ತಳಂಗರೆ ಗ್ರಾಮದಲ್ಲಿರುವವರು

—ಪ್ರತಿವಾದಿಗಳು

ಖಬರುದಾರಿ

ಅರ್ಜಿದಾರ ಅಬ್ದುಲ್ಲರಹಿಮಾನರು ಗುದಸ್ತ ತಾರೀಕು 22 6 1950ರಲ್ಲು ಅದಪ್ರತಿವಾದಿ ಡಿಕ್ರಿ ಪ್ರಕಾರ ಅಕ್ರಿಮಾಂಟಿನ ಕುರಿತು ಫೈನಲ್ ಡಿಕ್ರಿ ಕೊಡಿಸಬೇಕಾಗಿ ಅರ್ಜಿಕೊಟ್ಟಿರುತ್ತಾನೆ. ಸದ್ರಿ ಅರ್ಜಿಯು ತಪ್ಪಿ ಬಗ್ಗೆ ತಾ. 5 6 1951ಕ್ಕೆ ಇಟ್ಟಿರುತ್ತದೆ ಇದಕ್ಕೆ ಆಕ್ಷೇಪ ಮುನ್ಸಿಫ ದಿಮ್ಮಕ್ಕೆ ಹಾಜರಾಗತಕ್ಕದ್ದು

K. Narayana Nayak
Advocate for Petitioner
Kasaragod, 25-5-51

ಮಂಗಳೂರು

ಅವಲಕ್ಕಿ, ಹುರಿಯಕ್ಕಿ ಮತ್ತು ಅರಳು— ಇವುಗಳ ವ್ಯಾಪಾರ ಮತ್ತು ಸಾಗಾಟದ ಈಗಿನ ಕ್ರಮಗಳು ಹೀಗಿವೆ 10 ಮಣಕ್ಕಿಂತ ಹೆಚ್ಚಿನ ಪ್ರಮಾಣದಲ್ಲಿ ಈ ವಸ್ತುಗಳನ್ನು ವ್ಯಾಪಾರಕ್ಕಾಗಿ ಅಥವಾ ಉಪಯೋಗಕ್ಕಾಗಿ ದಾಸ್ತಾನು ಮಾಡಿಟ್ಟುಕೊಳ್ಳುವವರು ಆ ಬಗ್ಗೆ ಕಮರ್ಶಿಯಲ್ ಟ್ಯಾಕ್ಸ್ ಆಫೀಸರರಿಂದ ರೂಪಾಯಿ 24ತೆತ್ತು ಲೈಸನ್ಸು ಪಡಕೊಳ್ಳಬೇಕು. ಸ್ವಂತ ಉಪಯೋಗಕ್ಕಾಗಿ ಇರಿಸಿಕೊಳ್ಳುವವರು ಒಂದು ತಿಂಗಳಿಗೆ ಬೇಕಾಗುವಷ್ಟನ್ನೇ ಇರಿಸಿಕೊಳ್ಳಬೇಕು. ಒಂದು ಜಿಲ್ಲೆಯಿಂದ ಇನ್ನೊಂದು ಜಿಲ್ಲೆಗೆ ಈ ಪದಾರ್ಥಗಳ ಸಾಗಾಟವನ್ನು ನಿರ್ಬಂಧಿಸಲಾಗಿದೆ. ಆದರೆ 10ಮಣಕ್ಕೆ ಮಿಗದಷ್ಟನ್ನು ಜಿಲ್ಲೆಯೊಳಗೆ ಸಾಗಿಸಲು ನಿರ್ಬಂಧವಿಲ್ಲ

ರೈತರ ಸಮ್ಮೇಳನ—ಮಂಗಳೂರ ತಾಲೂಕು ಹಿಂದ್ ಕಿಸಾನ್ ಪಂಚಾಯತದ ವಾರ್ಷಿಕ ಸಮ್ಮೇಳನವು ಇದೇ ತಾ 20ರಲ್ಲು ಶ್ರೀ ಯೋಗೀಶ್ವರ ಜೋಶ್ಯರ ಅಧ್ಯಕ್ಷತೆಯಲ್ಲಿ ಜರಗಿತು ಪಕ್ಷಾಹಿತ ಮಸೂದೆ ಬರಬೇಕು, ರೇಶನ್ ಜಾರಿಯಲ್ಲಿ ಬರಬೇಕು, ಜಪಾನೀ ನಿಸಾಚರಿಸಬೇಕು, ತಾ 30ರಲ್ಲು ಕಲೆಕ್ಟರರಿಗೆ ಜಾಥಾ ಒಯ್ಯಬೇಕು ಎಂಬ ನಿರ್ಣಯಗಳಾದುವು ಈ ಸಮ್ಮೇಳನದ ಅಂಗವಾಗಿ ಕೇಂದ್ರ ಮೈದಾನದಲ್ಲಿ ಸಂಜೆ ಸಾರ್ವಜನಿಕ ಸಭೆ ಜರಗಿದಾಗ ಶ್ರೀ ಆ ಬಾಳಪ್ಪ, ಡಾ। ಸಂಜೀವನಾಥ, ಅಬ್ದುಲ್ ಖಾದರ್ ಮುಂತಾದವರ ಭಾಷಣಗಳಾದುವು.

ಕೆನರಾ ಗರ್ಲ್ಸ್ ಹೈಸ್ಕೂಲನ್ನು ಇದೇ ಜೂನ್ ತಿಂಗಳಾರಂಭದಿಂದ ತೆರೆಯಲಾಗುವುದು. ಹೀಗೆ ತೆರೆಯುವ ಬಾಲಿಕೆಯರ ಶಾಲೆಯಲ್ಲಿ ಗೃಹ ವಿಜ್ಞಾನವು ಎಸ್. ಎಸ್ ಎಲ್. ಸಿ. ಯಲ್ಲಿ ಐಚ್ಛಿಕ ವಿಷಯವಾಗಿದೆ

ವಾರ್ಷಿಕ ಮಹಾಸಭೆ—ವೀರಶೈವ ಸಾಧಾರಣ ಸಮಾಜದ ವಾರ್ಷಿಕ ಮಹಾಸಭೆಯು ತಾ. 20ರಲ್ಲಿ ಮಂಗಳೂರು ಬಸವನ ಗುಡಿ ಪರಿಸರದಲ್ಲಿ ಜರಗಿತು ಸಮಾಜದ ಅಧ್ಯಕ್ಷ ಶ್ರೀ ಕೃಷ್ಣ ತಣ್ಣೀರುಬಾವಿ, ಅವರು ಅಧ್ಯಕ್ಷತೆವಹಿಸಿದ್ದರು ಉಪಾಧ್ಯಕ್ಷರಾದ ಶ್ರೀ ಯಂ ಲಕ್ಷ್ಮಣರವರು ವರದಿಯನ್ನೋದಿದರು. ನಂತರ ಮುಂದಿನ ವರುಷದ ಆಡಳಿತ ಸಮಿತಿಗೆ ಸದಸ್ಯರನ್ನು ಆರಿಸಲಾಯಿತು.

ಮಂತ್ರಿಗಳ ಆಗಮನ— ಮದ್ರಾಸು ಸರಕಾರದ ಗ್ರಾಮಾಭಿವೃದ್ಧಿ ಮಂತ್ರಿಗಳಾದ ಶ್ರೀ ಪರಮೇಶ್ವರನ್, ಅವರು ಇದೇ ತಾ 25ರಲ್ಲಿ ಮಂಗಳೂರಿಗೆ ಆಗಮಿಸಿದಾಗ ರೈಲ್ವೆ ನಿಲ್ದಾಣದಲ್ಲಿ ಜಿಲ್ಲಾ ಕಲೆಕ್ಟರ್, ನಗರ ಸಭೆಯ ಉಪಾಧ್ಯಕ್ಷ ಶ್ರೀ ಬಿ. ಗಂಗಾಧರ ದಾಸ್ ಮೊದಲಾದವರು ಸ್ವಾಗತಿಸಿದರು. ಉಪಾಧ್ಯಕ್ಷರು ತಮ್ಮ ಸ್ವಾಗತ ಭಾಷಣದಲ್ಲಿ ಮದ್ರಾಸು ಸರಕಾರವು ನಗರ ಸಭೆಗೆ ಸಹಾಯಕ್ಕಾಗಿ ಅಭಿನಂದಿಸಿದರು. ಆದರೆ ಇಂದಿನ ಪ್ರಜಾಪ್ರಭುತ್ವದ ರೀತಿಗಾಗಿ ವಿಷಾದ ಸೂಚಿಸುತ್ತ ಈ ನಗರ ಸಭೆಯಲ್ಲಿ ಹಣವಿದ್ದು ನಮ್ಮ ಕೋಟೆಗಳಿಗೆ ಅದರ ಸಂಬಳದಲ್ಲಿ ಒಂದು ರೂಪಾಯಿ ಹೆಚ್ಚಿಗೆ ಕೊಡಲು ಸರಕಾರವು ಅನುಮತಿಕೊಡದಿದ್ದುದು ಶೋಚನೀಯವೆಂದರು. ಮಂತ್ರಿಗಳು ತಮಗಿತ್ತ ಸ್ವಾಗತಕ್ಕಾಗಿ ನಗರ ಸಭೆಯನ್ನು ಅಭಿನಂದಿಸಿದರು. ಈ ವರೆಗೆ ಆಡಳಿತೆಯವರು ಹಳ್ಳಿಗರನ್ನು ಕಡೆಗಣಿಸಿದ್ದರು. ಆದರೆ ಇಂದು ಕಲೆಕ್ಟರರೇ ಮುಂತಾದ ಅಧಿಕಾರಿಗಳು ಗ್ರಾಮಾಂತರಗಳಿಗೆ ಹೋಗಿ ಅಭಿವೃದ್ಧಿ ಕಾರ್ಯದಲ್ಲಿ ಬಹಳ ಆಸಕ್ತಿ ತೋರುತ್ತಿದ್ದಾರೆಂದೂ ಹೊಸ ಪಂಚಾಯತ ಕಾಯಿದೆ ಜಾರಿಗೆ ಬಂದಾಗ ಹಳ್ಳಿಗರಿಗೆ ಹೆಚ್ಚಿನ ಸ್ವಾತಂತ್ರ್ಯ ದೊರೆಯುವುದೆಂದೂ ತಿಳಿಸಿದರು. ದೇಶದ ಅಭಿವೃದ್ಧಿಗಾಗಿ ಗುಡಿ ಕೈಗಾರಿಕೆಯು ಮತ್ತು ಇತರ ಉದ್ಯಮಗಳ ಅಭಿವೃದ್ಧಿಯಾಗಬೇಕೆಂದರು. ಅನಂತರ ಲಘು ಫಲಾಹಾರದೊಂದಿಗೆ ಸ್ವಾಗತ ಸತ್ಕಾರವು ಕೊನೆಗೊಂಡಿತು

ಅಲ್ಲಿಂದ ಮಂತ್ರಿಗಳು ಕಾಂಗ್ರೆಸ್ ಕಚೇರಿಗೆ ಭೇಟಿಯಿತ್ತಾಗ ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಡಾ। ಕೆ ನಾಗಪ್ಪ ಆಳ್ವರು ಮಂತ್ರಿಗಳನ್ನು ಸ್ವಾಗತಿಸಿದರು. ಮಂತ್ರಿಗಳು ಕಾಂಗ್ರೆಸ್ ಕಾರ್ಯಕರ್ತರಿಗೆ ನಾಲ್ಕು ಹಿತೋಕ್ತಿಗಳನ್ನು ಹೇಳಿದರು. 'ಇಂದು ಕೆಲಸ ಮಾಡುವವರಿಲ್ಲ, ಎಲ್ಲರೂ ನಾಯಕರೇ ಆಗಿದ್ದಾರೆ, ಎಲ್ಲರಿಗೂ ಸ್ಥಾನಗಳೇ ಬೇಕಾಗಿವೆ. ಆದರೆ ಇದು ಸಾಧ್ಯವೇ? ಸೇವೆಯೇ ಸರ್ವಸ್ವವೆಂದು ಕೆಲಸಗಾರರು ತೃಪ್ತಿಪಡಬೇಕು' ರಾಷ್ಟ್ರದ ನೆಮ್ಮದಿಗಾಗಿ ವಿರೋಧ ಪಕ್ಷವೊಂದು ಬೇಕೆಂದೂ, ಆದರೆ ದೇಶದ ಯಾವ ವಿರೋಧ ಪಕ್ಷಕ್ಕೂ ಕಾಂಗ್ರೆಸನ್ನು ಅಧಿಕಾರದಿಂದ ಉರುಳಿಸಲು ಸಾಧ್ಯವಾಗದೆಂದೂ ಹೇಳಿದರು. ಮಂತ್ರಿಗಳು ಮಂಗಳೂರು, ಮೂಲ್ಕಿ, ಬಜಪೆ, ಪೆರ್ಮಲ, ಮಾಯಿಪ್ಪಾಡಿ, ಕುಂಬಳೆ ಪಯ್ಯನೂರು ಮುಂತಾದೆಡೆಗಳಿಗೆ ಸಂದರ್ಶನವಿತ್ತು ಮದ್ರಾಸಿನತ್ತ ತೆರಳಿದರು.

ಮದ್ರಾಸಿನ ಮೇಯರ್ ಶ್ರೀ ರಾಮನಾಥ ಚೆಟ್ಟಿಯಾರರು ತಾ 23ರಲ್ಲಿ ಪೂರ್ವಾಹ್ನ ಜಿಲ್ಲಾ ವಾಣಿಜ್ಯ ಸಂಘಕ್ಕೆ ಭೇಟಿಯಿತ್ತರು ವಾಣಿಜ್ಯ ಸಂಘದ ಅಧ್ಯಕ್ಷ ಶ್ರೀ ಎಫ್. ಎಕ್ಸ್. ಡಿ ಪಿಂಟೋರವರು ಮೇಯರರಿಗೆ ಸ್ವಾಗತ ಬಯಸಿದರು. ಮಂಗಳೂರಿನ ವ್ಯಾಪಾರದ ಕುರಿತು ಮಾತನಾಡುತ್ತ 'ಮಂಗಳೂರು ಹಿಂದುಳಿದ ವ್ಯಾಪಾರ ಕೇಂದ್ರವಾಗಿದೆ ದಕ್ಷಿಣ ಕನ್ನಡವು ಕರ್ನಾಟಕಕ್ಕೆ ಸೇರದೆ ಗತ್ಯಂತರವಿಲ್ಲ' ಎಂದರು. ಮೇಯರರು ತಮಗಿತ್ತ ಸ್ವಾಗತಕ್ಕಾಗಿ ಅಭಿನಂದಿಸಿ ರಾಷ್ಟ್ರದ ಬೆಳವಣಿಗೆಗೆ ವ್ಯಾಪಾರ ವ್ಯವಹಾರವೂ ಮುಖ್ಯವೆಂದು ಇಲ್ಲಿನ ವ್ಯಾಪಾರಿಗಳ ಜಾಣ್ಮೆಯನ್ನು ಪ್ರಶಂಸಿಸಿದರು

ಅದೇ ದಿನ ಅಪರಾಹ್ನ 3½ ಗಂಟೆಗೆ ಮೇಯರರು ಜಿಲ್ಲಾ ಬೋರ್ಡ್ ಆಫೀಸಿಗೆ ಸಂದರ್ಶನವಿತ್ತಾಗ ಜಿಲ್ಲಾ ಬೋರ್ಡ್ ಅಧ್ಯಕ್ಷ ಕಾರ್ಯದರ್ಶಿಗಳೂ ಅವರನ್ನು ಸ್ವಾಗತಿಸಿ ಆಫೀಸನ್ನು ತೋರಿಸಿದರು. ಜಿಲ್ಲೆಯ ನೀರಿನ ಸಮಸ್ಯೆಯ ಕುರಿತು ಅವರೊಡನೆ ವಿಚಾರ ವಿನಿಮಯ ಮಾಡಿದರು.

ನಗರಸಭೆಯಲ್ಲಿ ಮೇಯರರಿಗೆ ಮಾನಪತ್ರವೊಂದನ್ನು ಅರ್ಪಿಸಲಾಯಿತು. ನಗರಾಧ್ಯಕ್ಷ ಶ್ರೀ. ಎಲ್. ಸಿ ಪಾಯಸರು ಮಾನಪತ್ರವನ್ನೋದುತ್ತ, ಮದ್ರಾಸಿನ ಕಾರ್ಪೋರೇಶನಿನ ಆಡಳಿತೆಯು ಎಲ್ಲಾ ಸ್ಥಳೀಯ ಸಂಸ್ಥೆಗಳಿಗೂ ಆದರ್ಶಪ್ರಾಯವಾಗಿದೆ ಎಂದರು. ಅತಿ ಎಳೆಯ ಪ್ರಾಯದಲ್ಲೇ ಮೇಯರರಾದ ಶ್ರೀ ಚೆಟ್ಟಿಯಾರರಿಗೆ ಉಜ್ವಲ ಭವಿಷ್ಯವಿದೆ ಎಂದರು. ಮೇಯರರು ತಕ್ಕ ಉತ್ತರವಿತ್ತ ಬಳಿಕ ಲಘು ಉಪಹಾರವಾಗಿ ಕಾರ್ಯಕ್ರಮ ಕೊನೆಗೊಂಡಿತು.

ಸಂಗೀತ ಕಚೇರಿ— ಬೆಂಗಳೂರು ಕಾರ್ಪೋರೇಶನಿನ ಸದಸ್ಯೆ ಶ್ರೀಮತಿ ಲಲಿತಾ ಉಭಯಕರ—ಅವರು ಮಂಗಳೂರಿಗೆ ಬಂದಿದ್ದು, ಅವರ ಕೆಲವು ಹಿಂದೂಸ್ಥಾನಿ ಸಂಗೀತ ಕಚೇರಿಗಳು ಜರಗಲಿವೆ ಎಂದು ತಿಳಿದು ಬರುತ್ತದೆ. ಶ್ರೀಮತಿ ಲಲಿತಾ ಉಭಯಕರರು ಮಂಗಳೂರಿನ ಶ್ರೀ ಉಳ್ಳಾಲ ಸುಂದರ ರಾವ್, ಬಿ. ಎ., ಬಿ ಎಲ್. ಅವರ ಪುತ್ರಿ, ಬೆಂಗಳೂರಿನ ದಿ। ಶ್ರೀ। ದೇವರಾವ್ ಶಿವರಾಂರವರ ತೃತೀಯ ಪುತ್ರ ಶ್ರೀ। ಶಿವರಾಂ ದೇವ ರಾವ್ ರವರ ಧರ್ಮಪತ್ನಿ.

ನೋಟೀಸು

ಕುಂದಾಪುರ ಡಿ ಮು. ಕೋರ್ಟಿನಲ್ಲಿ

S C 168/51

ರಿಸೀವರ್ ವೈ ಮಂಜೈ ಶೆಟ್ಟಿ - ವಾದಿ

ಜೋಗೀರ ಬಚ್ಚಪೆಂಗ್ಸು ಹಳೆಯಮ್ಮನ ಮಗಳು ಕುಂದಾಪುರ ತಾಲ್ಲೂಕು ಬೇಳೂರು ಗ್ರಾಮ -ಪ್ರತಿವಾದಿ

ವಾದಿಕಡೆಯಿಂದ ಈ ಮೂಲಕ ತಿಳಿಯಪಡಿಸುವದೇನೆಂದ್ರೆ-

ವಾದಿ ರಿಸೀವರ್ ಹಕ್ಕಿನ ಬಾಬ್ತು ಕೆಲವು ಆಸ್ತಿಯನ್ನು ಪ್ರತಿವಾದಿಯು ಚಾಲಗೇಣಿಗೆ ವಹಿಸಿಕೊಂಡು ಆ ಕುರಿತು ಸರ್ಜಿತು ಸಂಬಂಧ ಗೇಣಿಬಾಕಿ ಬಗ್ಗೆ ಮಾಡಿದ ದಾವೆಯು ತಾ 11-6-51ಕ್ಕೆ ತನಿಖೆಗೆ ಇಟ್ಟಿದೆ ಆ ಕುರಿತು ನಿಮ್ಮದೇನಾದ್ರು ಉಜಾರಣೆ ಇದ್ರೆ ಸದ್ರಿದಿವ್ಸ ಮೇಲ್ಕಂಡ ಕೋರ್ಟಿನಲ್ಲಿ ಸ್ವತಹಾ ವ, ವಕೀಲರ ದ್ವಾರಾ ಹಾಜ್ರಾಗಿ ಜಾಹೀರುಮಾಡಿಕೊಳ್ಳತಕ್ಕದ್ದು. ತಪ್ಪಿದ್ರೆ ನಿಮ್ಮ ಗೈರು ಹಾಜರಿಯಲ್ಲಿ ಏಕಪಕ್ಷವಾಗಿ ತೀರ್ಮಾನಿಸಲ್ಪಡುವದೆಂಬ ಸಂಗ್ತಿ ವಾದಿಕಡೆಯಿಂದ ಈ ಮೂಲಕ ತಿಳಿಯಪಡಿಸಿದೆ.

M Anthaya Shetty,
Advocate for Plaintiff

Kundapur,
Date, 3—5—51

Notice

ಉಡುಪಿ ಡಿ. ಮು. ಕೋರ್ಟಿನಲ್ಲಿ

O. S. No. 47/1951

ದೇಜ ಸೆಟ್ಟಿ —ವಾದಿ

ಮತ್ತು

ಚೀಂಕ ಸೆಟ್ಟಿ ಕೂಡಾ ಪ್ರತಿವಾದಿರು

ಮೇಲ್ಕಂಡ ವ್ಯಾಜ್ಯದ ಪ್ರತಿವಾದಿರು (5) ಮಹಾಬಲ ಶೆಟ್ಟಿ, (7) ಸುಂದರ ಸೆಟ್ಟಿ, ಶೀತು ಸೆಟ್ರಿರ ಮಕ್ಕಳು ಉಡುಪಿ ತಾಲ್ಲೂಕು ವರ್ಕಾಡ ನಿಶಂಬೂರು ಗ್ರಾಮದಲ್ಲಿರುವವರು - ಇವರಿಗೆ ಈ ಮೂಲಕ ತಿಳಿಸುವುದೇನೆಂದ್ರೆ

ಮೇಲ್ಕಂಡ ವ್ಯಾಜ್ಯದ ವಾದಿಯು ಪ್ರತಿವಾದಿರ ಮೇಲೆ ಹಿಸೇಕೇಳಿ ದಾಖಲ್ಮಾಡಿದ ಮೇಲ್ಕಂಡ ವ್ಯಾಜ್ಯವು ತಾ. 14-6-51ಕ್ಕೆ ನಿಮ್ಮ ನೋಟೀಸು ಬಗ್ಗೆ ಇಟ್ಟಿದೆ- ಆ ಕುರಿತು ಉಜಾರಣೆ ಕೊಟ್ಟು ವ್ಯವಹರಿಸುವದಿದ್ದಲ್ಲಿ ಸದ್ರಿ ತಾ. 14-6 51ನೇ ದಿವ್ಸ ಬೆಳಗ್ಗೆ 10 ಗಂಟೆಗೆ ಈ ಕೋರ್ಟಿನ ಮುಂದೆ ಸ್ವತಹಾ ವ ವಕೀಲರ ಮುಖಾಂತರ ಹಾಜ್ರಾಗಿ ಜಾಹೀರುಮಾಡಿಕೊಳ್ಳತಕ್ಕದ್ದು. ತಪ್ಪಿದರೆ ನಿಮ್ಮ ಗೈರುಹಾಜರಿಯಲ್ಲಿ ವ್ಯಾಜ್ಯವು ಫೈಸಲು ಮಾಡಲ್ಪಡುತ್ತದೆಂಬುದನ್ನು ನೀವು ತಿಳಿಯತಕ್ಕದ್ದು.

P. V. Acharya
Vakil for Plaintiff

ಉಡುಪಿ, ತಾ. 24—5—51

ವಿವಿಧ ಪಾತ್ರೆಗಳು



ರಾಪಕ್ಕೊ, ಪಿಧದ ಬೆಳ್ಳಿ ತಾಮ್ರ ಹಿತ್ತಾಳೆ, ಕಂಚು ಮೊದಲಾದುವುಗಳ ವಿವಿಧ ಪಾತ್ರೆಗಳೂ ಸಾಮಾನುಗಳೂ ರಖಂ ಆಗಿಯೂ ಚಿಲ್ಲರೆಯಾಗಿಯೂ ದೊರೆಯುತ್ತವೆ.

ಕಲ್ಯಾಣಿ ವ್ಯಾಸಾಚಾರ್ಯ,
ರಥಬೀದಿ, ಉಡುಪಿ



Approved from by the Govt. of Mysore Certificated by the Agent of the Govt of Cylone & Indian.

Nambiar's

ARYA VAIDYA SALA
UDIPI

Ideal House for Ayurvedic Treatment.

T. N. Kelu Nambiar,
Vaidya.

NOTICE

The Bombay Life Assurance Company, Limited

Notice having been given of the Loss of Policy No. 8506 on the Life of H Venkatesh Laxuman Kamath a duplicate policy will be issued unless objection is lodged with us within one month from this date.

K. Balasubrahmanyam
Manager & Actuary

Date 31–5–51

WANTED

For St Mary's High School Shirva, S. K.

Kannada knowing

1) Maths. and English B. T. or L. T.

2) Science and English B. T. or L. T

3) Higer grade Drawing teacher.

Terms handsome apply sharp to the Correspondent.

ಇದೀಗ ಪ್ರಕಟವಾಗಿದೆ.

ವೀರಪ್ಪ ಯಂಗಟಿ, ಹಾವೇರಿ ಇವರ

ನೀತಿ ವಿನೋದ ಕತೆಗಳು

ನೀತಿ ಮತ್ತು ವಿನೋದಪರವಾದ 35 ಕತೆಗಳ ಸಂಗ್ರಹ

ಮುಖ್ಯವಾಗಿ ಸ್ತ್ರೀಯರಿಗೂ, ಮಕ್ಕಳಿಗೂ ಬೋಧಪ್ರದವಾದ ಕತೆಗಳಿಂದೊಡಗೂಡಿದೆ.

ಬೆಲೆ: 0 12 0

ವಿವರದ ಕ್ಯಾಟಲಾಗಿಗೆ ಬರೆಯಿರಿ.

ಅಂತರಂಗ ಕಾರ್ಯಾಲಯ,
ಉಡುಪಿ

ಬೆಳೆಗಳಿಗೆ ಕ್ರಿಮಿಗಳ ಹಾವಳಿ ಮತ್ತು ಉಪಶಮನ

ಕೃತ್ತಿಕಾ ಮಹಾ ನಕ್ಷತ್ರದಲ್ಲಿ ಮಳೆಯು ಬಂದಿರುವ ಕಾರಣ ಪೈರುಗಳಿಗೆ ಅಂದರೆ ಮುಖ್ಯವಾಗಿ ಬತ್ತಕ್ಕೆ ಕ್ರಿಮಿಕೀಟ ಮತ್ತು ರೋಗಗಳಿಂದ ಬಾಧೆಬರುವ ಸಂಭವವಿರುವುದರಿಂದ ಅಂಥಾ ಬಾಧೆಗಳನ್ನು ಪ್ರತಿಬಂಧಿಸುವರೇ ಅಗತ್ಯಪಟ್ಟ ಕಾರ್ಯಕ್ರಮಗಳನ್ನು ರೈತ ಬಂಧುಗಳು ಸಕಾಲದಲ್ಲಿ ಕೈಗೊಳ್ಳುವರೆಂದು ನಿರೀಕ್ಷಿಸಲಾಗಿದೆ. ವ್ಯವಸಾಯ ಇಲಾಖಾ ಆಫೀಸುಗಳಲ್ಲಿ ಈ ಪ್ರಯುಕ್ತ ಎಲ್ಲಾ ವಿಧದ ಕ್ರಿಮಿ ರೋಗ ಇತ್ಯಾದಿಗಳ ನಿವಾರಣೆಗೆ ಉಪಯೋಗಿಸಲ್ಪಡುತ್ತಿರುವ ಔಷಧಿಗಳನ್ನು ರೈತರಿಗೆ ಒದಗಿಸುವುದಕ್ಕಾಗಿ ದಾಸ್ತಾನು ಮಾಡಿರುತ್ತದೆ.

ಪೈರುಗಳಿಗೆ ರೋಗಬಾಧೆ ತಲೆದೋರಿದ ಪ್ರಥಮ ಸೂಚನೆಗಳು ತಿಳಿದುಬಂದ ಕೂಡಲೇ ಸಂಬಂಧಪಟ್ಟ ತಾಲೂಕಿನ ಡಿಪೋಗಳಿಂದ ಆಯಾ ಡೆಮೋನ್‌ಸ್ಟ್ರೇಟರವರ ಸಲಹೆ ಪಡೆದು ಅವಶ್ಯಪಟ್ಟ ಔಷಧಿಗಳನ್ನು ಒದಗಿಸಿ ಕೊಳ್ಳುವುದರ ಮೂಲಕ ಚಿಕಿತ್ಸಾಕ್ರಮಗಳನ್ನು ಅನುಸರಿಸಿ ತಮ್ಮ ಪೈರುಗಳನ್ನು ಕ್ರಿಮಿಬಾಧೆಯಿಂದ ಸುರಕ್ಷಿತಗೊಳಿಸುವರೆಂದು ಹಾರೈಸಲಾಗಿದೆ.

ಹೆಚ್ಚಿನ ವಿವರಗಳಿಗೆ ಆಯಾ ತಾಲೂಕಿನ ಕೃಷಿ ಡೆಮೋನ್‌ಸ್ಟ್ರೇಟರನ್ನು ವಿಚಾರಿಸಿದಲ್ಲಿ ಸಲಹೆ ಕೊಡುವರು

(ಸಹಿ) ಕೆ ಯಸ್. ರಾಮಣ್ಣ ರೈ
ಡಿಸ್ಟ್ರಿಕ್ಟ್ ಎಗ್ರಿಕಲ್ಚರಲ್ ಆಫೀಸರರು
ಮಂಗಳೂರು

ಕುಂಬ್ಳೆ— ಉಪ್ಪಂಗಳಕೋಡಿ ಶ್ರೀ ಯು. ಶಂಭು ಭಟ್ಟರು ನೂತನವಾಗಿ ಕಟ್ಟಿಸಿರುವ ಬ್ರಾಂಚ್ ಪೋಸ್ಟ್ ಆಫೀಸಿನ ಉದ್ಘಾಟನಾ ಸಮಾರಂಭವು ತಾ. 23-5-51ರಲ್ಲಿ ಶ್ರೀ ಕೆ. ಸಾಂತಾಳ್ತರವರಿಂದ ನೆರವೇರಲಾಯಿತು. ಊರ ಮಹನೀಯರುಗಳ ಪೈಕಿ, ಶ್ರೀ ಕೆ. ವಿಠಲ ರಾಮಚಂದ್ರ ಭಕ್ತರು, ಶ್ರೀ ವೈ. ಕೇಶವ ಭಟ್ಟರು, ಶ್ರೀ ಕೆ. ಶ್ರೀಧರ ಸೆಟ್ಟಿರು, ಹಾಗೂ ಪೋಸ್ಟುಮಾಸ್ಟರ್ ಶ್ರೀ ಬಿ. ನಾರಾಯಣ ಭಟ್ಟರು, ಮೊದಲಾದವರು ಸಂದರ್ಭೋಚಿತ ಭಾಷಣಕೊಟ್ಟರು. ಶಾಲಾ ಮಕ್ಕಳಿಗೆ ಮತ್ತು ನೆರೆದ ಸಭಿಕರಿಗೆ ಸಿಹಿತಿಂಡಿ ಪಾನಕ ವಿತರಣೆಯಾದೊಡನೆ ಮಂಗಲಗೀತೆಯೊಂದಿಗೆ ಸಭೆಯು ಮುಕ್ತಾಯವಾಯಿತು.

ನೋಟೀಸು
ಕಾಸರಗೋಡು ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ

S. C. No 7/1951

A. ಶ್ರೀಧರ — ವಾದಿ

ಮತ್ತು

ಸೈಯದ್ ಕಾಸಿಂ ಸಾಬ- ಸೈಯದ್ ಇಬ್ರಾಹಿಮ್ ಸಾಹೇಬರ ಮಗ ಉಪ್ಪಳ ಗ್ರಾಮದ ಬಪ್ಪಯತೊಟ್ಟಿಯಲ್ಲಿರುವವ — ಪ್ರತಿವಾದಿ

ಇವರೊಳಗೆ

ಸದ್ರಿ ಪ್ರತಿವಾದಿಗೆ ತಿಳಿಯಪಡಿಸುವದೇನೆಂದ್ರೆ:-

ವಾದಿಗೆ ಪ್ರತಿವಾದಿಯು ತಾ 12 1 1948 ರಲ್ಲಿ ರೂಪಾಯಿ 78 0 0ಕ್ಕೆ ಬರೆಕೊಟ್ಟ ಡಿ. ಪ್ರೋ. ನೋಟಿನ ಅಸಲು ಬಡ್ಡಿ ಎವಜನ್ನು ವಸೂಲು ಮಾಡುವರೆ ವಾದಿಯು ದಾಖಲು ಮಾಡಿದ ಮೇಲ್ಕಂಡ ವ್ಯಾಜ್ಯದ ಪ್ರತಿವಾದಿಯ ಹಾಜರಾತಿ ಬಗ್ಗೆ ತಾರೀಕು 4 6-1951 ಕ್ಕೆ ಇಟ್ಟಿರುತ್ತದೆ ಆ ದಿವಸ ಸದ್ರಿ ಪ್ರತಿವಾದಿಯು ಕೋರ್ಟಿನ ಮುಂದೆ ಹಾಜರಾಗುವರೆ ತಪ್ಪಿದ್ರೆ ಗೈರು ಹಾಜರಿಯಿಂದ ತೀರ್ಮಾನಿಸಲಾಗುವದೆಂಬ ಸಂಗ್ತಿ ಈ ಮೂಲಕ ತಿಳಿಸಲಾಗಿಯದೆ.

Sd/. M. G Ganesh Narayana Rai
Advocate for plaintiff.
ಕಾಸರಗೋಡು, 24-5-1951

ಕೋಟೇಶ್ವರ— ತಾ ೧೯-೫-೫೧ರಂದು ಸ್ಥಳೀಯ ವಿದ್ಯಾ ಸಂಸ್ಥೆಗಳ ವಾರ್ಷಿಕೋತ್ಸವವು ಮಾನ್ಯ ಜಿಲ್ಲಾ ಬೋರ್ಡು ಉಪಾಧ್ಯಕ್ಷ ಡಾ। ಪಿಂಟೋರವರ ಅಧ್ಯಕ್ಷತೆಯಲ್ಲಿ ಜರಗಿತು ಶ್ರೀ ಕೆ, ಸೀತಾರಾಮ ಐತಾಳರು ಮಾನ್ಯ ಸಭಿಕರನ್ನು ಸ್ವಾಗತಿಸಿದ ನಂತರ ಹೈಸ್ಕೂಲ್ ಸಮಿತಿ, ಹಿರಿಯ ಪ್ರಾಥಮಿಕ ಶಾಲೆ ಹಳೇ ವಿದ್ಯಾರ್ಥಿ ಸಂಘಗಳ ವರದಿಗಳು ಓದಲ್ಪಟ್ಟವು ಎಂಜಿನಿಯರ್ ವಿದ್ಯಾರ್ಥಿ ಶ್ರೀ ಎಮ್. ಸುಬ್ಬಣ್ಣ ಸೆಟ್ಟರು ಶ್ರೀಯ ಪ್ರಾರ್ಥನೆಯನ್ನು ಮಾಡಿದರು. ಹೈಸ್ಕೂಲ್ ಸ್ಥಾಪನೆ ಆದಂದಿನಿಂದ ಊರ ಸರ್ವತೋಮುಖ ಏಳಿಗೆ ಉದಾರಿಗಳಿಂದ ಒದಗಿದ ಸಹಾಯಗಳು ಹೈಸ್ಕೂಲ್ ಮುಂದಿರುವ ನಿರ್ಮಾಣ ಕಾರ್ಯಗಳ ಕುರಿತು ವಿಮರ್ಶೆ ಮತ್ತು ಶ್ಲಾಘನೆಗಳು ಶ್ರೀ ಎನ್. ಎಸ್. ಪರಮೇಶ್ವರಯ್ಯ, ಶ್ರೀ ಯಡ್ತರೆ ಮಂಜಯ್ಯ ಸೆಟ್ಟಿ, ಮೊದಲಾದವರಿಂದ ಮಾಡಲ್ಪಟ್ಟ ನಂತರ ಮಾನ್ಯ ಸಭಾಧ್ಯಕ್ಷರು ತಮ್ಮ ಸಂತೋಷವನ್ನು ವ್ಯಕ್ತಪಡಿಸಿ ತಮ್ಮ ಶಕ್ತಿಮೀರಿ ಊರವರು ಹೈಸ್ಕೂಲಿಗಾಗಿ ಹಣಗಾದುವುದನ್ನು ಶ್ಲಾಘಿಸಿ ಜಿಲ್ಲಾ ಬೋರ್ಡು ತನ್ನಿಂದಾದ ಸಹಾಯವನ್ನು ಆ ಬಗ್ಗೆ ಆಗಾಗ ನೀಡುವ ಭರವಸೆಯನ್ನಿತ್ತರು ವಂದನಾರ್ಪಣಾ ನಂತರ ಹಳೇ ವಿದ್ಯಾರ್ಥಿಗಳಿಂದ ಚಿತ್ರಾಂಗದಾ ನಾಟಕವು ಸೊಗಸಾಗಿ ಅಭಿನಯಿಸಲ್ಪಟ್ಟಿತು.

ಕಾಸರಗೋಡು— ಬೆಳ್ಳೂರು ಬೋರ್ಡು ಬುನಾದಿ ಎಲಿಮೆಂಟರಿ ಶಾಲೆಯಲ್ಲಿ ಹೆತ್ತವರ ಕೂಟದ ಸಭೆಯು ಮಡಿಕೇರಿ ಸೆಂಟ್ರಲ್ ಹೈಸ್ಕೂಲಿನ ಕನ್ನಡ ಮತ್ತು ಸಂಸ್ಕೃತ ಪಂಡಿತರಾದ ನಾರಾಯಣ ಆಚಾರ್ಯರ ಅಧ್ಯಕ್ಷತೆಯಲ್ಲಿ ಜರಗಿತು. ಶಾಲಾ ಏಳಿಗೆಯ ಕುರಿತು ಭಾಸ್ಕರ ರಾವ್ ಬಿ ಎ ಮತ್ತು ಪ್ರಭಾಕರ ಸಂಪಿಗೆತ್ತಾಯರು ಮಾತಾಡಿದ ನಂತರ ಶಾಲಾ ಮುಖ್ಯೋಪಾಧ್ಯಾಯರು ಬುನಾದಿ ಶಿಕ್ಷಣದ ಕುರಿತು ಭಾಷಣ ಮಾಡಿದ ನಂತರ ಅಧ್ಯಕ್ಷರು ಹೆತ್ತವರ ಕೂಟದ ಸದಸ್ಯರ ಕಾರ್ಯಕರ್ತವ್ಯದ ಕುರಿತು ಉಕ್ತವಾಗಿ ತಿಳಿಸಿಕೊಟ್ಟ ಬಳಿಕ ಮಂಗಲಗೀತೆಯೊಂದಿಗೆ ಸಭೆ ಮುಕ್ತಾಯಗೊಂಡಿತು

ಕುಂಬಳೆ ಇಲ್ಲಿನ ಮತ್ತು ಆಸುಪಾಸಿನ ಜನರ ಆಹಾರ ಸ್ಥಿತಿ ತುಂಬ ಬಿಗಡಾಯಿಸುತ್ತಾ ಹೋಗುತ್ತಿದೆ ಮೊಗ್ರಾಲ್ ಪುತ್ತೂರಿನ ಕಷ್ಟಾವಸ್ಥೆಗೆ ಪರಿಹಾರದೊರೆಯಬೇಕೆಂದು ಮದ್ರಾಸ್ ಮುಖ್ಯಮಂತ್ರಿ, ಆಹಾರಮಂತ್ರಿ ಫುಡ್ ಕಮಿಶ್ಯನರ್, ಜಿಲ್ಲಾ ಕಲೆಕ್ಟರ್ ಮುಂತಾದವರಿಗೆ ತಂತಿಮೂಲಕವೂ ಅರ್ಜಿಗಳ ಮೂಲಕವೂ ಅಲ್ಲಿನವರು ತಿಳಿಸಿರುವರು.

ಹಳ್ನಾಡ— ಕಂಡ್ಲೂರು— ಇಲ್ಲಿಯ ನೇತಾಜಿ ಹಿರಿಯ ಪ್ರಾಥಮಿಕ ಶಾಲೆಯ ಹೊಸ ಕಟ್ಟೋಣದ ಉದ್ಘಾಟನಾ ಸಮಾರಂಭವು ತಾ. 23 5 51ರಂದು ಜಿಲ್ಲಾ ಕಲೆಕ್ಟರ್ ಶ್ರೀ ಎ. ಆರ್ ರಾಜರತ್ನಂ, ಬಿ ಎ. ಇವರ ಸನ್ಮಾನ್ಯ ಅಧ್ಯಕ್ಷತೆಯಲ್ಲಿ ಬಹು ವಿಜೃಂಭಣೆಯಿಂದ ಜರಗಿತು. ಪ್ರಾರ್ಥನೆ, ಅನಾವರಣ ಉತ್ಸವ; ಸ್ವಾಗತ ಭಾಷಣ (ಮುಖ್ಯ ಉಪಾಧ್ಯಾಯರಿಂದ) ಸ್ವಸ್ತಿವಾಚನ (ಶ್ರೀ ಬಿ ಶಂಕರರಾಯರಿಂದ) ನಂತರ ಹಗಲು ವೇಷ, ಬಹುಮಾನ ವಿತರಣೆ, ವಿನೋದಾವಳಿ ನಡೆದ ತರುವಾಯ ಶ್ರೀ ಸೌಕೂರು ಅಂತಯ್ಯ ಶೆಟ್ರು ಮಾನ್ಯ ಜಿಲ್ಲಾ ಕಲೆಕ್ಟರರವರ ಪರಿಚಯ ಭಾಷಣವನ್ನಿತ್ತರು ನೆರೆದ ಮಹನೀಯರಲ್ಲಿ ಶ್ರೀ ಎನ್. ಎಚ್ ಕಿಲ್ಲೆಯವರು, ಶ್ರೀ ಕೃಷ್ಣಯ್ಯರು, ಶ್ರೀ ಎಡ್ತರೆ ಮಂಜಯ್ಯ ಶೆಟ್ಟರೇ ಮೊದಲಾದವರು ಈ ಕಾಲದಲ್ಲಿ ವಿದ್ಯಾಪ್ರಚಾರದ ಅವಶ್ಯಕತೆ, ಹಳ್ನಾಡ ಕರ್ತವ್ಯ, ಇಲ್ಲಿಯ ಚರಿತ್ರೆ ಶ್ರೀ ಕೊಳ್ಕೆಬೈಲು ಮಹಾಬಲ ಶೆಟ್ಟರ ಸಾಹಸ, ವಿದ್ಯಾಪ್ರೇಮಾದಿಗಳನ್ನು ಕೊಂಡಾಡಿದರು. ಶಾಲೆಯ ಶ್ರೇಯಸ್ಸು ಬಯಸಿ ಭಾಷಣವಿತ್ತರು ಆ ಮೇಲೆ ಸಭಾಧ್ಯಕ್ಷರಾದ ಮಾನ್ಯ ಕಲೆಕ್ಟರರು ಈ ಶಾಲೆಯ ಉತ್ಸಾಹೀ ಕರುಣಾಮಯಿ ಜಮೀನ್ದಾರರಾದ ಶ್ರೀ ಕೊಳ್ಕೆಬೈಲು ಮಹಾಬಲ ಶೆಟ್ರು ಅವಿಶ್ರಾಂತ ಪರಿಶ್ರಮದಿಂದ ಕಟ್ಟಿಸಿದ ಈ ಸುಂದರ ಕಟ್ಟೋಣವನ್ನು ಉದ್ಘಾಟಿಸಲು ಸಂತೋಷದಿಂದ ಬಂದಿರುತ್ತೇನೆ ಇದರ ಉಪಯೋಗವನ್ನು ಈ ಗ್ರಾಮದವರು ಚೆನ್ನಾಗಿ ಪಡೆಯಲಿ ಇದು ಕೆಲವು ವರುಷಗಳಲ್ಲಿ ಹೈಸ್ಕೂಲ್ ಆಗುವಂತೆ ಹರಸಿ ಭಾಷಣವನ್ನಿತ್ತರು (ಇದರ ಇಂಗ್ಲಿಷ್ ಭಾಷಣವನ್ನು ಶ್ರೀ ಕಿಲ್ಲೆಯವರು ಕನ್ನಡದಲ್ಲಿ ಭಾಷಾಂತರಿಸಿದರು) ನಂತರ ಶ್ರೀ ಕೆ ಮಹಾಬಲ ಶೆಟ್ರು, ಶ್ರೀ ಸೌಕೂರು ಅಂತಯ್ಯ ಶೆಟ್ರು ತಮ್ಮ ಕಂಡ್ಲೂರು ಗ್ರಾಮಚಾವಡಿಯಲ್ಲಿ ದೂರದಿಂದ ಬಂದ ಅತಿಥಿಗಳಿಗೆ ಯೋಗ್ಯ ಊಟ, ಉಪಹಾರಗಳಿಂದ ಸತ್ಕರಿಸಿದರು

ಅಂದು ರಾತ್ರಿ ಶಾಕುಂತಲಾ ಯಕ್ಷಗಾನ ನಾಟಕ (ಬಾಲಕರಿಂದ) ಸ್ಪೇಶಲ್ ಮಾಸ್ಟರ್ ಸಂಗೀತ ನಾಟಕ (ಯುವಕರಿಂದ ಯಶಸ್ವಿಯಾಗಿ ಅಭಿನಯಿಸಲ್ಪಟ್ಟಿತು

ಕುಂದಾಪುರ ತಾಲೂಕು ಕಾಂಗ್ರೆಸು ಕಮಿಟಿಯವರ ಸ್ತುತ್ಯಕಾರ್ಯ— ಅಲ್ಲಲ್ಲಿ ಆಹಾರಾಭಾವದಿಂದ ಸಂಕಷ್ಟಕ್ಕೆ ಗುರಿಯಾದ ಬಡಜನರಿಗಾಗಿ ಸರಕಾರದ ಮೋರೆಯನ್ನೇ ನೋಡಿ ಕೂತುಕೊಳ್ಳದೆ ಆಯಾ ಗ್ರಾಮದ ಶ್ರೀಮಂತರು ಕಡಿಮೆ ದರದಲ್ಲಿ ಬಡವರಿಗೆ ಅಕ್ಕಿ ಒದಗಿಸಿ ಕೊಟ್ಟು ಬಡವರನ್ನು ಬದುಕಿಸಬೇಕಾಗಿ ವಿನಂತಿಸಿಕೊಂಡರು.

ಬಸರೂರು— ಇಲ್ಲಿಯ ಹಲವು ಬಡಜನರು ಸೇರಿ ಶ್ರೀ ಬಿ. ಎನ್. ಸೂರಪ್ಪ ಶೆಟ್ರ ಮುಂದಾಳ್ತನದಲ್ಲಿ ತಾ. 23-5 51ರಂದು ಮಾನ್ಯ ಜಿಲ್ಲಾ ಕಲೆಕ್ಟರರಿಗೆ ಮನವಿ ಕೊಟ್ಟು ಕೂಡಲೇ ರಿಲೀಫ್ ವರ್ಕ್ ತೆರೆದು ಬಡವರಿಗೆ ಆಹಾರ ಸಿಗುವಂತಾಗದಿದ್ದರೆ ಬಲು ಕಷ್ಟವಾಗುವದೆಂದೂ ಈಗ ಅಕ್ಕಿಯೇ ಸಿಕ್ಕುವುದಿಲ್ಲವೆಂದೂ ಕ್ರಯ ವಿಪರೀತ ಏರಿದೆ ಎಂದೂ ವಿನಂತಿಸಿಕೊಂಡರು.

ಮಾನ್ಯ ಜಿಲ್ಲಾ ಕಲೆಕ್ಟರರು ಜನರ ಕರುಣಾಜನಕ ಸ್ಥಿತಿಯನ್ನು ಕೇಳಿತಿಳಿದು ಕೂಡಲೇ ರೇಶನ್ ಅಂಗಡಿಗಳನ್ನು ತೆರೆಯುವ ಏರ್ಪಾಡು ಮಾಡುವದಾಗಿ ಆಶ್ವಾಸನೆಯನ್ನಿತ್ತರು

ಕಂಡ್ಲೂರು— ಇಲ್ಲಿಯ ನೂರಾರು ಬಡಜನರು ಶ್ರೀ ಕೊಳ್ಕೆಬೈಲು ಮಹಾಬಲ ಶೆಟ್ರು ಬಿ. ಸಿ. ಇವರ ಮುಂದಾಳುತನದಲ್ಲಿ ತಾ 23 5-51ರಂದು ಮಾನ್ಯ ಜಿಲ್ಲಾ ಕಲೆಕ್ಟರರವರಿಗೆ ಮನವಿಯನ್ನು ಅರ್ಪಿಸಿ ಕೂಡಲೇ ಬಡಜನರಿಗೆ ಕಡಿಮೆ ಬೆಲೆಯಲ್ಲಿ ಅಕ್ಕಿ ಕೊಡುವ ಅಂಗಡಿಗಳನ್ನು ತೆರೆಯಬೇಕಾಗಿ ವಿನಂತಿಸಿಕೊಂಡರು.

ಬೆಳ್ಳಾರೆ ಹೈಸ್ಕೂಲ್ ಬೆಳ್ಳಾರೆ, ದ. ಕ.
ಪ್ರಕಟಣೆ

ಪುತ್ತೂರು ತಾಲೂಕಿನ ಬೆಳ್ಳಾರೆಯಲ್ಲಿ ಹೊಸತಾಗಿ ಕಟ್ಟಿಸಿರುವ ಹೈಸ್ಕೂಲ್‌ನಲ್ಲಿ ಇದೇ ಬರುವ ಜೂನ್ ತಿಂಗಳ ಪ್ರಥಮ ವಾರದಲ್ಲಿ Iರಿಂದ IV ನೇ ಫೋರ್ಮಿನವರೆಗಿನ 4 ಕ್ಲಾಸುಗಳು ತೆರೆಯಲ್ಪಡುವುವು ಆ ಬಗ್ಗೆ ಜಿಲ್ಲಾ ಬೋರ್ಡಿನವರು ಪ್ರತ್ಯೇಕ ಪ್ರಕಟಣೆ ಕೊಡಲಿರುವರು ಸೇರಬಯಸುವ ವಿದ್ಯಾರ್ಥಿಗಳು ಈ ಕೆಳಗಿನ ವಿಳಾಸಕ್ಕೆ ಬರಕೊಳ್ಳುವದು

ಬೆಳ್ಳಾರೆ,
18—5—51

ಬಿ ನಾರಾಯಣ ಶೇಕ
ಅಧ್ಯಕ್ಷ,
ಬೆಳ್ಳಾರೆ ಹೈಸ್ಕೂಲ್ ಸಮಿತಿ

ದೇಶ, ಭಾಷಾಸೇವಕರಾದ
ದಿ। ಕೊರಡ್ಕಲ್ ಶ್ರೀನಿವಾಸರಾಯರ
ನೆನಪಿಗಾಗಿ ಪ್ರಕಟಿಸಲ್ಪಟ್ಟ ಮೋಲ್ಮರಗತಿಯ ಸ್ಮಾರಕಗ್ರಂಥ

ನೆನಪಿಗಾಗಿ

ಇದರಲ್ಲಿ ರಾಷ್ಟ್ರಕವಿ ಎಂ ಗೋವಿಂದ ಪೈ, ಅ. ನ ಕೃಷ್ಣರಾವ್, ಗೊರೂರು, ಪ್ರೊ ಕೆ ಎಸ್ ನವಣೂರು, ಕಡೆಂಗೋಡ್ಲು, ಪ್ರೊ ರಂ ಶ್ರೀ ಮುಗಳಿ ಕೆ. ವಿ ಶೆಣೈ, ಎಸ್ ಎಲ್ ನಾರಾಯಣ ಭಟ್, ಎಂ. ವಿ ಹೆಗ್ಡೆ, ಕು. ಶಿ. ಹರಿದಾಸ ಭಟ್, ಹುರುಳಿ, ಕೊರಡ್ಕಲ್ ಮೊದಲಾದವರ ವೈವಿಧ್ಯಪೂರ್ಣ ಪ್ರಬಂಧಗಳಿವೆ.

ಪುಸ್ತಕದ ಬೆಲೆ ಬರೇ ರೂ 2—0—0

ಪ್ರತಿಗಳನ್ನು ಪಡೆಕೊಂಡು ಕೊರಡ್ಕಲ್ ಸ್ಮಾರಕ ನಿಧಿಗೆ ಸಹಾಯಮಾಡಿರಿ

ಪ್ರತಿಗಳು ಸಮೀಪದ ಪುಸ್ತಕವ್ಯಾಪಾರಿಗಳಲ್ಲಿ ಸಿಗದಿದ್ದರೆ

ನವಭಾರತ ಪುಸ್ತಕಭಂಡಾರ, ಉಡುಪಿ,
ಇವರಿಗೆ ಬರೆಯಿರಿ

ಈ ಪುಸ್ತಕವು ವಿಶೇಷ ಪ್ರಚಾರವಾಗುವಂತೆ ಕೊರಡ್ಕಲ್ಲರ ಶಿಷ್ಯರು ವಿಶೇಷತ. ನೆರವಾಗಬೇಕಾಗಿ ವಿನಂತಿ ಇದೆ.

ಅಲ್ಲದೆ ಒಮ್ಮೆಯೇ 4 ಪ್ರತಿಗಳನ್ನು ಕೊಂಡುಕೊಳ್ಳುವ ಕೊರಡ್ಕಲ್ಲರ ಶಿಷ್ಯರಿಗೆ 1 ಪ್ರತಿಯನ್ನು ಉಚಿತವಾಗಿಯೂ ಕೊಡಲಾಗುವದು

ಋತುಸ್ರಾವ ನಿಂತಿತು

"ಕುಮಾರಿ" ಪಿಲ್ಲ್ಸ್‌ಗಳನ್ನು ಉಪಯೋಗಿಸಿದರೆ ಪದತಪ್ಪಿ ಋತುಸ್ರಾವವಾಗುವುದು ಸಕಾಲಿಕೆ ಬರುವುದು, ಈ ಔಷಧ ಸೇವನೆಯಿಂದ ಶೀಘ್ರ ಗುಣಹೊಂದಬಹುದು, ಯಾವ ಬಾಧಕವೂ ಇಲ್ಲ. ಸಾವಿರಾರು ಮಂದಿಗೆ ಖಾತ್ರಿ ಗುಣವಾಗಿದೆ— ಬೆಲೆ, ರೂ. 3-; ಸ್ಪೆಶಲ್ ರೂ. 5- ಅಧಿಕಾಧಿಕ ಸ್ಪೆಶಲ್ ರೂ, 8- [ವಿ. ಪಿ. ಖರ್ಚು ಪ್ರತ್ಯೇಕ.]

Mrs P. DEVEE, F ?? (S. J.)
Tollygunge CALCUTTA.
ಸ್ಟಾಕಿಸ್ಟರು [illegible], ಮಂಗಳೂರು

ಪ್ರವಾಸಿಯ ಪತ್ರಗಳು ೩

ನನ್ನ ಕಳೆದ ಪತ್ರದಲ್ಲಿ, ತಾ. ೧೧ರ ತನಕ ಅಂದರೆ ನಮ್ಮ ಹಡಗು ಸುಯೆಜ್ ಪಟ್ಟಣವನ್ನು ಸಮೀಪಿಸುವ ತನಕ, ವಿವರಗಳನ್ನು ಬರೆದಿದ್ದೆ. ಹಡಗು ೮ ರೇವನ್ನು ಮಧ್ಯಾಹ್ನ ಸೇರಿದ್ದು ಸಂಜೆಯ ತನಕವೂ ಅಲ್ಲೇ ನಿಲ್ಲಬೇಕಾಯಿತು. ಅನಂತರ ಬಂದರದ ಬಳಿಗೆ ಬಂದು, ಅಲ್ಲಿಂದ ಸುಯೆಜ್ ಕಾಲುವೆಯನ್ನು ಪ್ರವೇಶಿಸಿತು. ಸುಯೆಜ್ ಕಾಲುವೆ ೧೮೬೯ರಲ್ಲಿ ಕೆಲಸ ಮುಗಿಸಿದ ಒಂದು ಮಹಾ ಸಾಹಸವನ್ನಬೇಕು. ಸುಮಾರು ೧೦೦ ಮೈಲು ಉದ್ದದ ಈ ಕಾಲುವೆಯು ಫ್ರಾನ್ಸಿನ ಎಂಜಿನಿಯರು ಫರ್ಡಿನೆಂಡ್ ಡಿ ಲೆಸೆಪ್ಸ್‌ನ ಕನಸಿನ ಫಲವಾಗಿದೆ. ಏಸ್ಯ ಮತ್ತು ಆಫ್ರಿಕ ಭೂಖಂಡಗಳನ್ನು, ೧೦೦ ಮೈಲು ಉದ್ದದ ಈ ಕಾಲುವೆಯು ಬೇರೆಮಾಡಿ, ಸಾಗರ ಯಾನವನ್ನು ಸುಲಭವಾಗಿ ಮಾಡಿಕೊಟ್ಟಿದೆ. ಈ ಕಾಲುವೆ ೨೦೦ ಅಡಿಯಷ್ಟು ಅಗಲವಾಗಿದ್ದು, ಸುಮಾರು ೬೦ ಅಡಿ ಆಳವಾಗಿದೆ. ಇಕ್ಕೆಡೆಗಳಲ್ಲಿಯೂ ಕಲ್ಲಿನ ದಂಡೆಗಳಿವೆ. ನಡುವೆ ಒಂದೆರಡು ಸರೋವರಗಳು ಸಿಗುತ್ತವೆ. ಈ ಕಾಲುವೆಯು ಸ್ವಾಮಿತ್ವ ಒಂದು ಕಂಪೆನಿಯ ಅಧೀನವಾಗಿದ್ದು, ಬ್ರಿಟಿಷ್ ಬಂಡವಳವೇ ಅದರಲ್ಲಿ ಹೆಚ್ಚಿದೆ. ಹಿಂದೊಂದು ಕಾಲದಲ್ಲಿ ಫ್ರಾನ್ಸಿನ ಹಣ ಇದರಲ್ಲಿ ಹೆಚ್ಚಾಗಿತ್ತು.

ಕಾಲುವೆಯ ದಕ್ಷಿಣ ತುದಿಯಲ್ಲಿ ಸುಯೆಜ್ ಬಂದರು ಇದ್ದರೆ, ಭೂಮಧ್ಯ ಸಮುದ್ರದ ಉತ್ತರ ತುದಿಯಲ್ಲಿ ಪೋರ್ಟ್ ಸಯಿದ್ ಎಂಬ ಬಂದರಿದೆ. ಸುಯೆಜ್ ನಗರ ಸುಮಾರು ಒಂದು ಮೈಲು ವಿಸ್ತರಿಸಿದ ಸುಂದರವಾದ ಪಟ್ಟಣ. ಡಾಮರು ಬಳಿದ ಬೀದಿಗಳೂ, ಚೆಲುವಿನ ಮನೆಗಳೂ ಇಲ್ಲಿ ಕಾಣಸಿಗುತ್ತವೆ. ನಮ್ಮ ಪಯಣದ ಮೊದಲಿನ ೧೫ ಮೈಲು ದೂರ ಬಲು ಸುಂದರವಾದ ನೋಟ ಕಾಣಸುತ್ತಿತ್ತು; ಕತ್ತಲಾಗಿತ್ತು. ಮೊದಲು ಸುಯೆಜ್ ನಗರದ ದೀಪ ರಾಜಿಗಳು, ಅನಂತರ ಬಹುದೂರದ ತನಕ ಕಾಲುವೆಯ ಎಡಬದಿಯ ಬ್ರಿಟಿಷ್ ಸೈನಿಕರ ವಸತಿಗಳ ದೀಪರಾಜಿಗಳು ನೋಟದ ಬೆಡಗನ್ನು ಹೆಚ್ಚಿಸುತ್ತಿದ್ದುವು. ನಡುವೆ ಆಕಾಶದಲ್ಲಿ ಹಾರಾಡುವ ವಿಮಾನಗಳ ಹಸುರು, ಕೆಂಪು ಬೆಳಕುಗಳು ಬೇರೆ!

ಸುಯೆಜ್ ಕಾಲುವೆ 'ಕಹಿ ಸರೋವರ' (Bitter Lake) ಎಂಬ ೨೫ ಮೈಲು ಉದ್ದದ ಜಲಾಶಯವನ್ನೂ 'ಟಿಮ್ಸಾ' ಎಂಬ ಎಂಟು ಮೈಲು ಉದ್ದದ ಜಲಾಶಯವನ್ನೂ ಹಾದು ಹೋಗುತ್ತದೆ. ಆದರೆ ಹಡಗಿನ ದಾರಿಯು ಕಾಲುವೆಯಂತೆ ನೇರಾಗಿ ಹೋಗಬೇಕಾದುದರಿಂದ ಆ ದಾರಿಯನ್ನು ಸರೋವರದ ಮೇಲೆ ವಿದ್ಯುದ್ದೀಪಗಳಿಂದ ಗುರುತಿಸಿದ್ದಾರೆ. ಇಲ್ಲಿ ಹಡಗನ್ನು ನಡೆಸುವುದಕ್ಕೆ ಸುಯೆಜ್ ಕಾಲುವೆ ಕಂಪೆನಿಯ ನಾವಿಕರೇ ಬರುತ್ತಾರೆ. ತಾಸಿಗೆ ೧೦ ಮೈಲಿಗಿಂತ ಹೆಚ್ಚು ವೇಗವಾಗಿ ಚಲಿಸಿದರೆ ದಂಡೆಗಳು ಕುಸಿದು ಬೀಳುವ ಸಂಭವವಿದೆ. ರಾತ್ರಿ ಬೆಳಗಾಗುವ ತನಕ ನಮ್ಮ ಹಡಗು ಸಂಚರಿಸಿದ ದೂರ ಬರಿಯ ೪೫ ಮೈಲು. ರಾತ್ರಿಯೆಲ್ಲ ಉತ್ತರದಿಂದ ಶೀತ ಗಾಳಿಯು ಬೀಸುತ್ತಲೇ ಇತ್ತು.

ಬೆಳಗಾಗುವಾಗ ಕಾಲುವೆಯ ಮೂಡಣಕ್ಕೆ ಬಂಜರು ಭೂಮಿಯೂ, ಪಡುವಣಕ್ಕೆ ಕಾಡುಗಳು ಬಿಡಾರುವ ಹಾದಿಯೂ ಕಾಣಿಸಿತು. ಮುಂದೆ ದಾರಿಯುದ್ದಕ್ಕೂ ಗಿಡಗಳನ್ನು ನೆಟ್ಟು, ಬೆಳೆಸಿ ದಂಡೆಮಾಡಿದ್ದರು—ಅದಕ್ಕೆ ಸಮಾನಾಂತರವಾಗಿ ರೈಲ್ವೆ ಹಾದಿಯೂ ಹೋಗುತ್ತದೆ. ಅಲ್ಲಿಂದ ಮುಂದೆ ಈಜಿಪ್ತ್ ಸರಕಾರದ ರಸ್ತೆಗಳು, ವಾಹನ ಸಂಚಾರವೂ ಕಾಣಿಸುತ್ತದೆ. ಅನಂತರ 'ಮಂಜಾಳ' ಎಂಬ ಒಂದು ಸರೋವರವನ್ನು ಸಂಧಿಸುತ್ತೇವೆ. ಅಲ್ಲಿ ನೂರಾರು ಹಾಯಿ ಹಡಗುಗಳನ್ನು ಕಾಣಬಹುದು.

ಅಂತು ಬೆಳಗಿನ ೮ ಗಂಟೆಗೆ ನಮ್ಮ ಹಡಗು ಸಯಿದ್ ಬಂದರನ್ನು ಸೇರಿತು. ನಗರ ಕಾಲುವೆಯ ಪಡುವಣ ಕೈತ್ತು ಪೂರ್ವಕ್ಕೆ ಧಕ್ಕೆಗಳೂ, ಬಹಳ ದೊಡ್ಡ ಕಟ್ಟಡಗಳೂ, ಅನೇಕ ವಿದೇಶೀಯ ಕಂಪನಿಗಳ ಶಿರೋನಾಮೆಗಳೂ ಕಾಣಿಸತೊಡಗಿದುವು. ದಾರಿಯುದ್ದಕ್ಕೂ ಹಲವಾರು ಸಣ್ಣ ದೊಡ್ಡ ಹಡಗುಗಳು ನಿಂತಿದ್ದುವು, ಸಂಚರಿಸುತ್ತಿದ್ದುವು.

ನಮ್ಮ ಹಡಗು ಬಂದರಾಗುತ್ತಲೇ ಈಜಿಪ್ತ್ ಸರಕಾರದ ಕೆಂಪು ಟರ್ಕಿ ಟೊಪ್ಪಿ ಹಾಕಿದ ಆಳುಗಳು, ಹಡಗಿನಿಂದ ಇಳಿಯುವವರನ್ನು ವಿಚಾರಣೆ ಮಾಡಿ, ಅಪ್ಪಣೆ ಚೀಟು ಕೊಟ್ಟ ಬಳಿಕ, ನಾವು ಈ ನಗರವನ್ನು ನೋಡಲು ಹೋದೆವು. ಇಲ್ಲಿಯೂ ಸುಂಕದ ಬಾಧೆ ಕಡಿಮೆಯಾದುದರಿಂದ, ಇಲ್ಲಿನ ಅಂಗಡಿಗಳೆಲ್ಲ ಸಾಮಾನಿನಿಂದ ತುಂಬಿ ತುಳುಕಾಡುತ್ತವೆ. ಹೆಚ್ಚಾಗಿ ಭಾರತೀಯರಿಗಿಂತಲೂ ಬೆಳ್ಳಗಾಗಿ ಕಾಣಿಸುವ, ದೀರ್ಘಕಾಯರಾಗಿರುವ ಚೂಪವಾದ ಮುಖದ ಈಜಿಪ್ತಿನ ಪ್ರಜೆಗಳೇ ಕಾಣಸಿಗುತ್ತಾರೆ. ಅವರಿಗೆಲ್ಲ ಪಾಶ್ಚಾತ್ಯ ಉಡುಗೆ. ಅಂಗಡಿಗಳಲ್ಲಿ ಪಾಶ್ಚಾತ್ಯ ಉಡುಗೆಯಲ್ಲಿರುವ ಈಜಿಪ್ತ್ ಮಹಿಳೆಯರೂ ಇದ್ದಾರೆ. ಸಾಮಾನುಗಳ ಬೆಲೆ ಮಾತ್ರ ಮದ್ರಾಸಿಗಿಂತಲೂ ಹೆಚ್ಚಿಗೆ. ದಾರಿಯುದ್ದಕ್ಕೂ ಬೀದಿಯಲ್ಲಿ ಸಾಮಾನನ್ನು ಹೊತ್ತು ಮಾರುವ ವ್ಯಾಪಾರಿಗಳೂ ಇದ್ದಾರೆ. ಒಂದಕ್ಕೆ ಹತ್ತು ಬೆಲೆ ಹೇಳುವುದು ಅವರ ವಾಡಿಕೆ. ತೊಗಲು ಚೀಲಗಳು, ಬಟ್ಟೆಗಳು, ಗಾಜಿನ ಬಳೆಗಳು, ಇನ್ನನೇಕ ಅಲಂಕಾರಿಕ ಸಾಮಾನುಗಳು ಅವರಲ್ಲಿ ದೊರೆಯುತ್ತವೆ. ಸಾಕಷ್ಟು ಹೊತ್ತು ನಿಂತು ಚೌಕಾಸಿ ಮಾಡುವವರಿಗೆ ಮಾತ್ರ ಅವರೊಡನೆ ವ್ಯಾಪಾರ.

ಊರನ್ನು ನೋಡಲು ಹೋದ ನಾವು ಹಲವಾರು ಮಂದಿ ಬೇಕಾದವನ್ನು ಒಡವೆಗಳನ್ನು ಕೊಂಡು, ಮಧ್ಯಾಹ್ನ ೧೨ ಗಂಟೆಯೊಳಗಾಗಿ ನಮ್ಮ ಹಡಗಿಗೆ ಬಂದೆವು. ಅನಂತರ ಎರಡು ಗಂಟೆಗಳೊಳಗೆ ನಮ್ಮ ಹಡಗು ಚಲಿಸತೊಡಗಿತು. ಅಲ್ಲಿಂದ ಬಂದರದ ತೀರ ಉತ್ತರಕ್ಕೆ ಬರುವಾಗ, ದಂಡೆಯ ಮೇಲೆ ನಟ್ಟಿದ್ದ ಫರ್ಡಿನೆಂಡ್ ಡಿ ಲೆಸೆಪ್ಸ್‌ನ ಭವ್ಯವಾದ ಕಂಚಿನ ಪ್ರತಿಮೆಯು ಕಾಣಸಿಕ್ಕಿತು. ನಾವೀಗ ಬಂದುದು ಭೂಮಧ್ಯ ಸಮುದ್ರಕ್ಕೆ. ಈ ಭಾಗದ ನೀರು ಎಳೆ ಹಸುರಾಗಿ ಕಾಣಿಸುತ್ತದೆ. ಅಲ್ಲಿಗೆ ನೈಲ್ ನದಿಯ ನೀರು ಬಂದು ಸೇರುವುದೇ ಕಾರಣವೆನ್ನುತ್ತಾರೆ. ನಾವು ಆ ರೇವಿನ ತನಕ ಉತ್ತರಕ್ಕೆ ಪ್ರಯಾಣಮಾಡಿ ಅನಂತರ ವಾಯವ್ಯಕ್ಕೆ ಸಂಚರಿಸತೊಡಗಿದೆವು. ಪ್ರತಿ ದಿನವೂ ೫೦೦ ಮೈಲುಗಳಂತೆ ನಮ್ಮ ಪಯಣ ಸಾಗಿತು. ಮೊದಲು ನಮಗೆ ಕಾಣಸಿಕ್ಕಿದ್ದು—ಅಂದರೆ ನಾವು ಹೊರಟ ಮರುದಿನ, ಗ್ರೀಸಿನ ದಕ್ಷಿಣಕ್ಕಿರುವ ಕ್ರೀಟ್‌ನ ಸಮೀಪದ 'ಕೆಪ್ಸೊ' ಎಂಬ ದ್ವೀಪ. ಅಲ್ಲೊಂದು ಸಸ್ಯಶೂನ್ಯವಾದ ಪರ್ವತ ಮಾತ್ರ ಕಾಣಿಸುತ್ತಿತ್ತು. ಸುಮಾರು ೧೫ ಮೈಲು ಉದ್ದದ ಆ ದ್ವೀಪದಲ್ಲಿ ಮನೆ ಮರಗಳಾಗಲೀ ಗಿಡ ಮರಗಳಾಗಲೀ ಇದ್ದಂತೆ ಕಾಣಿಸಲಿಲ್ಲ.

ನಮ್ಮ ಭೂಮಧ್ಯ ಸಮುದ್ರದ ಮೂರನೆ ದಿನದ ಪಯಣ ತುಂಬ ರಮ್ಯವಾಗ ತೊಡಗಿತು. ಆದಿತ್ಯವಾರ ದಿನ ಬೆಳಗ್ಗೆ ೧೦ ಗಂಟೆ ಸುಮಾರಿಗೆ ನಾವು ಇಟಲಿಯ ಅತಿ ದಕ್ಷಿಣ ತುದಿಯನ್ನು ನೋಡಿದೆವು. ದೂರಕ್ಕೆ ಕಡಲಿನಲ್ಲಿ ಚಾಚಿದ ಭೂಶಿರ; ಅದರಲ್ಲಿ ಪರ್ವತಾದಿಗಳು. ಅದರ ತುದಿಯಲ್ಲಿ ಹಿಮ! ನಾವು ಈ ಪ್ರದೇಶವನ್ನು ಸಮೀಪಿಸಿದಂತೆ ಅಲ್ಲಿನ ಪರ್ವತದ ಸಾಲುಗಳು ಬೇರೆ ಬೇರೆಬೇರೆಯಾಗಿ ಕಾಣತೊಡಗಿದುವು. ಒಂದು ಹ-ದಾರಿ ದೂರದಿಂದ ಕುನೂರಿನಂತೆ ಗುಡ್ಡಬೆಟ್ಟಗಳ ಮಗ್ಗುಲಲ್ಲಿ ಹಂಚು ಹಾಕಿದ ಮನೆಗಳು ಕಾಣತೊಡಗಿದುವು. ಹಂಚು ಇನ್ನಷ್ಟು ಕೆಂಪು ಬಣ್ಣದ್ದು. ಕಡಲು ದಂಡೆಗೆ ಸಮೀಪವಾಗಿ, ಅಲ್ಲಿನ ಗುಡ್ಡಗಳನ್ನು ಕಡಿದು ಮಾಡಿದ ರೈಲುದಾರಿಯು

ಗೊನೋರಿಯಾ ಪರಮಾರೋಗ ಉಷ್ಣ ರೋಗಕ್ಕೆ ಔಷಧ

೭ ದಿವಸಗಳಲ್ಲಿ ಈ ರೋಗ ಗುಣ ಹೊಂದುವದು ಗ್ಯಾರಂಟೀ

ಶರೀರದಿಂದ ಕೀವು ಬರುತ್ತಿದ್ದರೆ, ಘೋರಕ್ಕೆ ಹಳದೀ ಡಾಗು ಹತ್ತುತ್ತಿದ್ದರೆ, ಶರೀರದಿಂದ ಬಾವು ಶರೀರದ ತೊಗಲು ಹಿಂದಕ್ಕೆ ಸರಿಯದಿದ್ದರೆ, ಶರೀರದ ಸುತ್ತ ಕ್ಷಾಯವಾಗಿದ್ದರೆ, ...ಚಟ್ಟು ಬಿದ್ದಿದ್ದರೆ, ಉಷ್ಣದಿಂದ ಚೀರು ಇಳಿದಿದ್ದರೆ, ಉಡುಚ ಆಗಿದ್ದರೆ, ಮೂಲವ್ಯಾಧಿ, ಭಗೇಂದ್ರ, ಗಂಡುಮಾಲಿ, ಕೈಕಾಲು ಶೂಲಿ, ಅರ್ಧಾಂಗವಾಯು ನಡುನೋಯುವದು ಸ್ತ್ರೀಯರ ಬಿಳಿಕೆಂಪು ಸೆರಗು ಹೋಗುತ್ತಿದ್ದರೆ, ಹೊಲಿಕಟ್ಟು ಗರ್ಮಿಯಿಂದ ಗರ್ಭಕೋಶ ನಾಶಹೊಂದಿದ್ದರೆ, ಸರಿಯಾಗಿ ಭೇದಿಯಾಗದಿದ್ದರೆ, ಮೂತ್ರ ಉರಿಯುತ್ತಿದ್ದರೆ, ಈ ಎಲ್ಲಾ ಬೇನೆಗಳಿಗೆ ಈ ನಮ್ಮ ಔಷಧವು ಇರುವದು. ಮೊದಲ ದಿವಸ ಬೆಳಿಗ್ಗೆ ೧ ಗುಂಜಿ ಪ್ರಮಾಣ ಔಷಧ ಅರ್ಧತೊಲಿ ತುಪ್ಪದಲ್ಲಿ ತಕ್ಕೊಳ್ಳಬೇಕು. ಮೊದಲ ದಿವಸ ಮಾತ್ರವೆ ಮುಂಜಾನೆ ಸಂಜೆ ಎರಡು ಸಾರೆ ತಕ್ಕೊಳ್ಳಬೇಕು. ಮುಂದೆ ದರ ದಿವಸ ಬೆಳಿಗ್ಗೆ ಒಂದೇ ಸಾರೆ ೭ ದಿವಸ ಸೇವಿಸಬೇಕು. ಈ ಔಷಧವನ್ನು ಬೇಸಿಗೆಯಲ್ಲಿ ತುಪ್ಪದಲ್ಲಿ, ಥಂಡಿ ಮಳೆಗಾಲದಲ್ಲಿ ಜೇನತುಪ್ಪದಲ್ಲಿ ತಕ್ಕೊಳ್ಳಬೇಕು. ಪಥ್ಯ: ಹಸೀಖಾರ, ಕಾಂಬಳರಾಯಿ, ಒಳ್ಳೆಣ್ಣೆ ಬಿಡಬೇಕು.

ಡಾಟ್ಲಿ ೧ಕ್ಕೆ ೫ರೂ. ಪೋಸ್ಟ ಚಾರ್ಜ ೮ ಆಣೆ

ಏಜೆಂಟರು:—ಗದಗ:—ಗದಗ ಫಾರ್ಮಸಿ, ಹುಬ್ಬಳ್ಳಿ:—ಹುಬ್ಬಳ್ಳಿ ಫಾರ್ಮಸಿ ಬಾಗಲಕೋಟೆ:—ಬಾಗಲಕೋಟೆ ಫಾರ್ಮಸಿ, ಧಾರವಾಡ:—ಧಾರವಾಡ ಫಾರ್ಮಸಿ, ದಾವಣಗೇರಿ: ದಾವಣಗೇರಿ ಪ್ರೆಸ್. ನಂಜುಡೇಶ್ವರ ಮೂರ್ತಿ ದಾವಣಗೇರಿ.

ಪತ್ರವ್ಯವಹಾರ ಮಾಡತಕ್ಕ ಮಾಲಕರ ವಿಳಾಸ,

ರೇವಣಸಿದ್ಧಪ್ಪ ಹಾಲಪ್ಪ ದಾವಣಗೇರಿ,

ಆಯುರ್ವೇದ ಔಷಧಾಲಯ, ಗದಗ.

ಮೂಲ್ಕಿ ಬೇಂಕ್,

ಲಿಮಿಟೆಡ್, ಮೂಲ್ಕಿ

1929ರಲ್ಲಿ ಸ್ಥಾಪಿತವಾಗಿ 21 ವರುಷಗಳಿಂದ ಊರ ಜನರ ಹಿತಕ್ಕಾಗಿ ಡಿಪೋಸಿಟ್ ಹಣಕ್ಕೆ ನ್ಯಾಯವಾದ ಬಡ್ಡಿಯಿಂದಲೂ, ಸಾಲದ ಹಣಕ್ಕೆ ಅತೀ ಕಡಿಮೆ ದರದ ಬಡ್ಡಿಯಿಂದಲೂ ಜನ ಹಿತಸಾಧನೆಯನ್ನು ಮಾಡುತ್ತಿರುವುದು

The Moolky Bank Ltd.,
Moolky, S K

— ಮಕ್ಕಳನ್ನು ಹಡೆಯುವುದು ಸಾಕು —

ಅಶಕ್ತ ಸ್ತ್ರೀಯರಿಗೆ **ಬರ್ಥ ಕಂಟ್ರೋಲ** ರೋಗ ಗ್ರಸ್ತ ಹೆಣ್ಣು ಮಕ್ಕಳಿಗೆ

ಏಳು ದಿವಸ ಈ ಮಾತ್ರೆಗಳನ್ನು ಸೇವನ ಮಾಡಿದರೆ ಮುಂದೆ ಖಂಡಿತವಾಗಿ ಮಕ್ಕಳಾಗುವದಿಲ್ಲ. ಸ್ತ್ರೀಯರು ಪ್ರತಿತಿಂಗಳು ಸರಿಯಾಗಿ ಮುಟ್ಟಾಗುತ್ತಾರೆ. ಅಲ್ಲದೆ ಸ್ತ್ರೀಯರ ಬಿಳಿಸೆರಗು, ಪ್ರದರರೋಗ, ಹೊಲಿಕಟ್ಟು ಗುಣವಾಗಿ ಸ್ತ್ರೀಯು ಗರ್ಭಿಣಿಯಾಗುವದಿಲ್ಲ. ಈ ಔಷಧವನ್ನು ಸೇವಿಸುವ ಕ್ರಮ: ಪ್ರತಿದಿವಸ ಮುಂಜಾನೆ ೧ಗುಳಿಗೆ ಮಧ್ಯಾಹ್ನಕ್ಕೆ ೧ಗುಳಿಗೆ, ಸಂಜೆಗೆ ೧ಗುಳಿಗೆಯಂತೆ ಊಟದ ಮೊದಲು ತಕ್ಕೊಳ್ಳಬೇಕು. ಏಳುದಿವಸ ಈ ಔಷಧವನ್ನು ಬಿಸಿನೀರಿನಲ್ಲಿ ಸೇವಿಸಬೇಕು.

ಪಥ್ಯ:—ಹೆರವೀಪಲ್ಲೆ ಬಿಡಬೇಕು. ೭ ದಿವಸ ಸಂಪೂರ್ಣ ಔಷಧದ ಕಿಮ್ಮತ್ತು ರೂಪಾಯಿ 5—0—0. ಪೋಸ್ಟ ಚಾರ್ಜು ೧೨ ಆಣೆ.

ಮಾಲಕರು:—ಹಾಲಪ್ಪಾ ಫಕೀರಪ್ಪಾ ದಾವಣಗೇರಿ

ಆಯುರ್ವೇದ ಔಷಧಾಲಯ ಗದಗ-ಸಿಟಿ.

ಏಜಂಟರು:—ಹುಬ್ಬಳ್ಳಿ ಫಾರ್ಮಸಿ,—ಹುಬ್ಬಳ್ಳಿ, ಗದಗ, ಬಾಗಲಕೋಟೆ ಧಾರವಾಡ ವಿಜಾಪುರ—ಚಾನಪ್ಪ ಸಿದ್ಧಲಿಂಗಪ್ಪ ಧಾರವಾಡಕರ ವಿಜಾಪುರ ನಂಜುಡೇಶ್ವರ ಮೂರ್ತಿ ದಾವಣಗೇರಿ ದಾವಣಗೇರಿ:—ದಾವಣಗೇರಿ ಪ್ರೆಸ್ಸ್ ಆರ್ ಎಲ್ ಕಮಲಾಪುರ ,ಕೆಮಿಸ್ಟ, ಹಾವೇರಿ, ಬ್ಯಾಡಗಿ

"ಗೋಪಾಲ ಭೇಷಜಾಶ್ರಮ" ಮಂಗಳೂರು.

(ಸ್ಥಾಪನೆ 1910)

ಸ್ಥಾಪಕರು:-ಆಯುರ್ವೇದ ಭೂಷಣ ಯಂ. ವಿ. ಶಾಸ್ತ್ರೀ,

ಇವರ **ನವಜೀವಾತು** ಎಂಬ **ಸೂತಿಕಾ ರಸಾಯನ**

ಬಾಣಂತಿಯರ ಸಲುವಾಗಿಯೇ ದೇಶ ಮತ್ತು ಪ್ರಕೃತದ ದೇಹಸ್ಥಿತಿಯನ್ನು ನಿರ್ಣೈಸಿ ತಯಾರಿಸಲ್ಪಟ್ಟ ಅಮೋಘವಾದ ಮಧುರದ್ರವ ರಸಾಯನ. ಅಲ್ಪ ಮೌಲ್ಯದಿಂದ ಬಡವರಿಗೂ, ಭಾಗ್ಯಶಾಲಿಗಳಿಗೂ ಸುಲಭವಾಗಿರುವುದು.



ಹೆಚ್ಚಿನ ಮಾಹಿತಿಗೆ—ಡಾ। ಯಂ ಸಿ ಶಾಸ್ತ್ರೀ, ಯಲ್. ಐ

ಕೊಡಿಯಾಲಬೈಲ ಪೋಸ್ಟು, (ಮಂಗಳೂರು)

ಸ್ಥಾನಿಕರು:—ಡಾ। ಬಿ. ಕೆ. ಶಿವರಾಮರಾವ್, ಕುಂಜಿಬೆಟ್ಟು, ಉಡುಪಿ.

ಗುಡ್ಡಗಳ ತಪ್ಪಲಲ್ಲಿ ಊರು ಕೇರಿಗಳು ತೋಟತೋಪುಗಳೂ ಕಾಣಸತೊಡಗಿದವು. ಕಂಬವಳಿಗೆ ಸಮೀಪವಾಗಿ ನಾವು ಹೋಗುತ್ತಿರುವಾಗ, ಬೆಟ್ಟಗಳ ಎಡೆಯಿಂದ ಹರಿಯುವ, ನಾವು ನೋಡುವಾಗ ಬತ್ತಿದ ನದಿಗಳು ಕಡಲು ಸೇರುವುದನ್ನು, ಅವುಗಳ ಮೇಲೆ ಹಾಕಿದ ಸೇತುವೆಗಳನ್ನು ನೋಡಿದೆವು. ಊರುಗಳ ಸುತ್ತು ಮುತ್ತಲು ಹಲವಾರು ಇಪ್ಪೆ ಮರದ ತೋಟಗಳನ್ನು ಕಂಡೆವು. ಇಪ್ಪೆ ಎಣ್ಣೆಯು ಈ ಪ್ರದೇಶದ ಒಂದು ಮುಖ್ಯ ಉತ್ಪನ್ನವಂತೆ.

ನಮ್ಮ ಹಡಗು ಒಂದೆರಡು ಗಂಟೆ ಸಂಚರಿಸಿ 'ಇಟಲಿ ಭೂಶಿರ'ಕ್ಕೂ, ಸಿಸಿಲಿ ದ್ವೀಪಕ್ಕೂ ನಡುವಣ ಮೆಸ್ಸೀನಾ ಜಲಸಂಧಿಯನ್ನು ದಾಟತೊಡಗಿತು. ಸಿಸಿಲಿ ದ್ವೀಪದ ದೃಶ್ಯವು ನಾವಿರುವ ೧೫ ಮೈಲುಗಳ ದೂರದಿಂದಲೂ ಮನೋಹರವಾಗಿ ಕಾಣಿಸುತ್ತಿತ್ತು. ಆ ದ್ವೀಪದ ನಡುವಣ ಪರ್ವತ ೧೦,೭೪೦ ಅಡಿ ಉನ್ನತವಾಗಿದೆ, ಅದರ ಶಿಖರದಲ್ಲೇ ಜಗತ್ಪ್ರಸಿದ್ಧವಾದ 'ಎಟ್ನಾ' ಜ್ವಾಲಾಮುಖಿ ಇರುವುದು. ಎಟ್ನಾದ ಬಾಯಿಯಿಂದ ಬಿಳಿಯ ಉಗಿ ಹೊರಡುತ್ತಿರುವುದು ನಮಗೆ ಕಾಣಿಸುತ್ತಿತ್ತು. ಈ ಪರ್ವತಾವಳಿಯ ಮೇಲೆ ಅಲ್ಲಲ್ಲಿ ಒಟ್ಟು ಚೆಲ್ಲಿದಂತೆ ಹಿಮದ ಹಾಳೆಗಳು ಹೊಳೆಯುತ್ತಿದ್ದುವು.

ಈ ದ್ವೀಪದ ಬೆಟ್ಟದ ತಪ್ಪಲನ್ನು ಅಂತರ ಅಂತರವಾಗಿ ಕಡಿದು ಸೋಪಾನ ಸದೃಶವಾಗಿ ಮಾಡಿದ ಹೊಲಗದ್ದೆಗಳನ್ನು ಬಹು ದೂರದ ತನಕವೂ ಕಾಣಬಹುದು. ಅದರಂತೆಯೇ ಘಟ್ಟಘಟ್ಟವಾಗಿ ಅಲ್ಲಿನ ಬೀದಿಗಳು ಕಾಣಿಸುತ್ತವೆ. ಮೆಸ್ಸೀನಾ ನಗರದ ನೋಟ ಇನ್ನಷ್ಟು ರಮಣೀಯವಾಗಿದೆ. ನಾಲ್ಕೈದು ಮೈಲು ಉದ್ದವಾದ ಈ ಪಟ್ಟಣವು ದ್ವೀಪದ ಮೂಡಣಕ್ಕೆ ರಮಣೀಯವಾಗಿ ಕಂಗೊಳಿಸುತ್ತದೆ. ಹಲವಾರು ಭಾರಿಯ ಕಟ್ಟಡಗಳೂ ನಮಗೆ ಕಾಣಿಸುತ್ತವೆ. ಈ ನಗರಕ್ಕೆ ಬರಿಯ ಎರಡು ಮೈಲು ದೂರದೊಳಗೇನೆ, ನಮ್ಮ ಹಡಗು ಸಂಚರಿಸಿ ಹೋಗುವುದರಿಂದ, ಊರು ಬಹು ಚೆನ್ನಾಗಿ ಕಾಣಿಸುತ್ತದೆ. ಇಟೆಲಿಯ ಭೂಭಾಗ ಕೆಲ ಮೈಲು ದೂರದಲ್ಲಿದೆ. ನಮ್ಮ ಹಡಗು ಹಾಗೆ ಮುಂದುವರಿದಂತೆ 'ಸಿಲ್ಲಾ' ಎಂಬ ಇನ್ನೊಂದು ನಗರ ಕಾಣಸಿಕ್ಕಿತು. ಇಂಗ್ಲಿಷಿನಲ್ಲಿ 'ಸಿಲ್ಲಾ ಮತ್ತು ಕೆಂಬೆಡಿಸ್‌ಗಳ ನಡುವೆ' ಎಂಬುದೊಂದು ಗಾದೆಯಿದೆ. ಈ ಎರಡು ಬೆಟ್ಟದ ಊರುಗಳ ನಡುವೆ ಕಡಲಿನ ಭಾಗ ಅತಿ ಕಿರಿದಾಗುತ್ತದೆ. 'ಎರಡು ಗಂಡಾಂತರಗಳ ನಡುವೆ' ಎಂಬುದೇ ಈ ಮಾತಿನ ತಾತ್ಪರ್ಯ.

ಇಲ್ಲಿಂದ ಸುಮಾರು ೫೦ ಮೈಲು ಪ್ರಯಾಣ ಮಾಡಿದ ಬಳಿಕ, ನಮ್ಮ ಎಡ ಮಗ್ಗುಲಿಗೆ ಸ್ಟ್ರೊಂಬೋಲಿ ಎಂಬ ದ್ವೀಪ ಕಾಣಸಿಗುತ್ತದೆ. ಈ ದ್ವೀಪವೆಲ್ಲ ಅಖಂಡವೂ, ಉನ್ನತವೂ ಆದ ಒಂದು ಬಂಡೆಯಂತೆ ಕಾಣುತ್ತದೆ. ದ್ವೀಪದ ಉದ್ದಗಲ ಒಂಬತ್ತು, ಒಂದೂವರೆ ಹರದಾರಿ ಇರಬಹುದು. ಎತ್ತರ ೩೦೦೦ ಅಡಿ ಇರಬಹುದು. ಇದು ಸಹ ಒಂದು ಹೆಸರಾದ ಅಗ್ನಿಪರ್ವತವಾಗಿದೆ. ನಾವು ನೋಡುವಾಗ ಅದು ಹೊಗೆಯನ್ನು ಕಾರುತ್ತಿತ್ತು. ರಾತ್ರಿ ಕಾಲದಲ್ಲಿ ಹೊಗೆಯ ಬದಲು ಬೆಂಕಿಯ ನಾಲಿಗೆಗಳು ಕಾಣಿಸುವುದುಂಟಂತೆ. ಅದರ ಒಂದು ಮಗ್ಗುಲಿನಿಂದ ಲಾವಾ ಹರಿದು ಬರುತ್ತಲಿತ್ತು. ಈ ಜ್ವಾಲಾಮುಖಿ ದ್ವೀಪದ ಆಕೃತಿಯು ತುಂಬ ವಿಚಿತ್ರವಾಗಿದೆ. ನಾಲ್ಕು ಮಗ್ಗುಲಿನಿಂದಲೂ ಒಂದೇ ಬಗೆಯಲ್ಲಿ ಇಳಿಜಾರಾಗಿಯೂ, ನಯವಾಗಿಯೂ ಇರುವ ಈ ಪರ್ವತ ಶಿಖರದಿಂದ ಲಾವಾ ರಸ ಹರಿದು ಸಮುದ್ರವನ್ನು ಸೇರುತ್ತದೆ. ಹಾಗೆ ಸೇರುವಾಗ ಅಪಾರ ಉಗಿ ಉಂಟಾಗಿ, ಆ ಉಗಿ ಮೇಲೇಳುತ್ತದೆ. ಈ ಪರ್ವತದ ಪಶ್ಚಿಮೋತ್ತರ ದಿಕ್ಕಿನಲ್ಲಿ ೪೦, ೫೦ ಮನೆಗಳೂ ಕಾಣುತ್ತಿವೆ. ಆದರೆ ಈಗ ಪ್ರಾಯಶಃ ಅಲ್ಲಿ ಯಾರೂ ವಾಸಮಾಡುತ್ತಿರಲಾರರು. ನಮ್ಮ ಹಡಗು ಈ ದ್ವೀಪವನ್ನು ದಾಟಿದ ಮೇಲೆ, ಆಚೀಚಿನ ನೆಲಭಾಗಗಳು ಅದೃಶ್ಯವಾಗಿ, ವಿಶಾಲವಾದ ಸಾಗರವನ್ನೇ ನಾವು ಹೊಕ್ಕಂತಾಯಿತು. ಹಾಗೊಂದು ದಿನವೆಲ್ಲ ಪಯಣಮಾಡಿ ಕಳೆದ ಮೇಲೆ ಮರುದಿನ ಬೆಳಗ್ಗೆ ಕಡಲಿನ ನೀಲಬಣ್ಣದ ನಡುವೆ ಕೊರ್ಸಿಕಾ ಮತ್ತು ಸಾರ್ಡೀನಿಯಾ ದ್ವೀಪಗಳು ಕಾಣಿಸಿದುವು. ಕೊರ್ಸಿಕಾದಲ್ಲಿ ಒಂದು ಕಾಲದಲ್ಲಿ ನೆಪೋಲಿಯನನನ್ನು ಸೆರೆಯಲ್ಲಿಟ್ಟಿದ್ದರಷ್ಟೆ. ನಮ್ಮ ಹಡಗು ಈ ದ್ವೀಪದಿಂದ ದೂರದಲ್ಲಿ ಸರಿದು ಹೋದುದರಿಂದ ನಮಗೆ ಹೆಚ್ಚಿಗೇನೂ ಕಾಣಸಿಗಲಿಲ್ಲ. ನಮ್ಮ ಹಡಗು ಆ ಸಂಜೆಯೇ ಫ್ರಾನ್ಸ್ ಭೂಖಂಡದ ಕಡಲ ತೀರದಲ್ಲಿರುವ ಮಾರ್ಸೆಲಿಸ್ ನಗರವನ್ನು ಸೇರಿತು. ಇದು ಪ್ಯಾರಿಸ್ಸನ್ನು ಬಿಟ್ಟರೆ ಫ್ರಾನ್ಸಿನಲ್ಲಿ ಅತಿ ಹೆಚ್ಚಿನ ಜನಸಂಖ್ಯೆಯುಳ್ಳ ಪಟ್ಟಣ. ಇಲ್ಲಿ ಬರುವಾಗ ಹವೆ ಸಂಪೂರ್ಣ ಬದಲಾಗಿ ಅತಿ ಚಳಿಯಾಗಿ ಕಾಣತೊಡಗಿತು. ಪ್ರತಿಯೊಬ್ಬರೂ ಉಣ್ಣೆಯ ಬಟ್ಟೆ ಹಾಕುವುದು ಅನಿವಾರ್ಯವಾಯಿತು. ಪೋರ್ಟ್‌ಸಯ್ಯದ್ ಬಂದರದಿಂದ ನಾವು ೧,೭೦೦ ಮೈಲು ದೂರ ಪ್ರಯಾಣ ಮಾಡಿದ್ದಾಯಿತು. ನಾವು ಯಾನಮಾಡಿ ಬಂದ ಭೂಮಧ್ಯ ಸಮುದ್ರದ ಆಳವು ಸಾಧಾರಣ ೧,೩೦೧ರಿಂದ ೧೪೦೦ ಮುಂಡಿಗೆಗಳಷ್ಟಾಗಬಹುದು.

— ಕೆ. ಆರ್ ಕಾರಂತ

ಸ್ಟ್ರಾತ್‌ನೇವರ್, ಭೂಮಧ್ಯ ಸಮುದ್ರ.
೧೫ - ೪ - ೫೧.

ರಸನಿಮಿಷ

ಸ್ಥಾನಿಕರಿಗೂ ಓಟಿದೆ, ಸ್ಥಾನಬದ್ಧರಿಗೂ ಓಟಿದೆ, ಸ್ಥಾನಾಂತರಗೊಂಡ ಭಾರತೀಯರಿಗೂ (ವಿದೇಶೀ ಪಾಕ್) ಜಂಟಿಯ ಮೂಲಕವಾದ ಓಟಿದೆ. (ಭಾಷಣ)

ರಾಮರಾಜ್ಯದಲ್ಲಿಯೂ ಓಟಿತ್ತೊ ಇಲ್ಲವೋ ಆದರೆ ಅನ್ನ ಇತ್ತೆಂದು ಕೇಳಿದ್ದೇವೆ.

೦೦

ಊಟವಾದ ಮೇಲೆ ಒಂದು ಮೈಲು ನಡೆ, ಎಂದರು, ಇಂಗ್ಲಿಷರು — ಅದನ್ನು ಕರಗಿಸಿಕೊಳ್ಳಲು (ಆರೋಗ್ಯಸೂತ್ರ)

— ಊಟಕ್ಕೆ ಮೊದಲೇ ನಾಲ್ಕು ಮೈಲು ನಡೆದು ಅಕ್ಕಿ ಸಂಪಾದಿಸಬೇಕಾದ ಭಾರತೀಯರು ಹಾಗೆ ನಡೆಯಬೇಕಾಗಿಲ್ಲವಷ್ಟೆ?

೦೦

ಕಾಂಗ್ರೆಸಿಂದ ಕೃಪಲಾನಿ ಹೊರಬಿದ್ದರು, ಕಿದ್ವಾಯಿ ಬೀಳಲಿಲ್ಲ (ಸಂತೋಷಸೂಚನೆ)

— ಹೊರಗಿನವರಿಗಿಂತಲೂ ಒಳಗಿನವರ ಮೇಲೆ ಕಣ್ಣಿಡುವುದು ಬುದ್ಧಿವಂತರ ಲಕ್ಷಣ.

೦೦

ಇರಾಣದಲ್ಲಿ ಎಣ್ಣೆಗಾಗಿ ರಣವಾಗುವುದೆ? (ತಲೆಬರಹ)

— ಹಿಂದಿನ ಕಾಲದಲ್ಲಿ ಹೊನ್ನು ಮಣ್ಣು ಹೆಣ್ಣಿಗಾಗಿ ಮಾತ್ರ ರಣ ಕಾದಾಡುತ್ತಿದ್ದರು; ಈಗ ಎಣ್ಣೆಯನ್ನೂ ಅವುಗಳೊಡನೆ ಸೇರಿಸಬೇಕಾಯಿತು.

೦೦

ಮಾವಿನ ಕಾಯಿ ಗೊರಟನ್ನು ಎಲ್ಲರೂ ಒಟ್ಟು ಮಾಡಿ ನಮಗೆ ಕಳಿಸಿ ಎಂದು ಮಶ್ರುವಾಲರ 'ಹರಿಜನ' ಪ್ರಕಟಿಸಿದೆಯಂತೆ.

— ಸರಿಯೆ, ಗೊರಟಿನ ಹೊರಗಿನದು, ದಿಲ್ಲೀ ಕಾಂಗ್ರೆಸಿಗರ ಹತ್ತಿರ ಇದೆ ಗೊರಟು ಬರೆ ಗೊರಟು!

೦೦

ಬಾಕುರ್ ಬ್ಯಾಂಕಿನ ಕಳ್ಳರನ್ನು ೧೫ ದಿನಗಳೊಳಗೆ ಅಖಿಲ ಭಾರತದ ಬೇಟೆಯಲ್ಲಿ ಹುಡುಕಿ ತೆಗೆದ ಸರಕಾರಕ್ಕೆ ಆದಾಯ ತೆರಿಗೆ ತಪ್ಪಿಸಿದ ಹಸಿಕಳ್ಳರನ್ನು ಹಿಡಿಯುವುದು ಇನ್ನೂ ಸಾಧ್ಯವಾಗಲಿಲ್ಲ. (ಸಂಪಾದಕೀಯ)

— ಹೇಗಾದೀತು? ಮನೆಯವರೇ ಕಳ್ಳರಾದರೆ ಪೋಲೀಸಿಗೆ ತಿಳಿಸುವುದು ಹೇಗೆ?

೦೦

ನಾ ಮುಂದೋ, ನೀ ಮುಂದೋ? ಎಂಬ ಪ್ರತಿಭಟನೆ ಇದಿರಾದಾಗ ಮಹಾ ಸಭೆಯು.... ನಾ ಹಿಂದು ಎಂದಿತಂತೆ.

೦೦

ಕೃಪಲಾನಿ ಪಕ್ಷದ ನಾಮಕರಣ 'ಜನತಾ ಕಾಂಗ್ರೆಸು' ಆಗಬಹುದಂತೆ.

— ನೇಣು ಹಾಕಿಕೊಳ್ಳಲು ಹಳೆಯ ಉರುಳಲ್ಲದಿದ್ದರೂ ಹಗ್ಗವಾದರೂ ಸಾಕು ಎಂಬಂತಿದೆ.

೦೦

ಬಾವನಗರದ ಮಹಾರಾಜರು ನಮ್ಮ ಮದರಾಸು ರಾಜ್ಯದ ವಯಸ್ಕರ ಶಿಕ್ಷಣದ ಪ್ರಗತಿಯನ್ನು ಅವಲೋಕಿಸಿ ಸಂತೋಷಭರಿತರಾಗಿದ್ದಾರೆ.

— ಅಷ್ಟು ಕಲಿಸಿಯೂ ಚುನಾವಣೆಯ ಕಾಲಕ್ಕೆ ಹೆಚ್ಚಿನ ವಯಸ್ಕರು ಮನೆಬಿಟ್ಟು ಕದಲುವುದಿಲ್ಲ.

೦೦

ಬಿಹಾರದಲ್ಲಿ ಆಹಾರದ ರೇಶನ್ ಪ್ರಮಾಣ ವರ್ಧಿಸಿದೆ ಎಂದು ಮದರಾಸು ರಾಜ್ಯದಲ್ಲಿ ಹರಡಿದ ಹುಚ್ಚು ಭ್ರಮೆಯನ್ನು ಕೇಂದ್ರ ಆಹಾರ ಖಾತೆ ನಿರಾಕರಿಸಿದೆ.

— ಅಹಾ! ಒಳ್ಳೆಯ ಸುದ್ದಿ ಕೇಳುವ ಭಾಗ್ಯವೂ ನಮಗಿಲ್ಲವಾಯಿತೆ!

೦೦

ಇಂಡಿಯಾಕ್ಕೆ ಇಪ್ಪತ್ತರ ಟನ ಗೋಧಿ ಹಡಗೊಂದು ದೇಶಕ್ಕೆ ಬಂದಿದೆ

— ಅಂದ ಮೇಲೆ ನಾವೆಲ್ಲ ಜಯಸೋಮನಾಥರಾದೆವು.

— ಕು. ಶಿ.

ಅಳಿಯ ಸಂತಾನ ಕಾನೂನು

ಇದರ ಪ್ರತಿಗಳು ದೊರೆಯುತ್ತವೆ,
ಕನ್ನಡ ಪ್ರತಿಗೆ 0-8-0
ಇಂಗ್ಲಿಷ್ ಪ್ರತಿಗೆ 0-8-0
ಟಪ್ಪಾಲು ಖರ್ಚು 0-1-0 ಪ್ರತ್ಯೇಕ.
0-9-0 ಕಳುಹಿಸಿದರೆ ಒಂದು ಪ್ರತಿ ಕಳುಹಿಸಲ್ಪಡುವುದು.
ನವಯುಗ ಪ್ರೆಸ್, ಉಡುಪಿ.

THE PANGAL NAYAK BANK LIMITED

Head Office] (Incorporated in 1920.) [Udipi S K

SEASON DEPOSITS are received and accepted on the following terms:—

For three, four or five months deposits at 3% p. a
For six, seven or eight months deposits at 3½% p. a
These are to be terminable by the 30th June 1951.
Interest is payable along with the principal at maturity.
Our THREE YEAR CASH CERTIFICATE bring to You a fair yeild: For particulars please ask for copy of Rules

"ಬೇರೆ ಶಾಸ್ತ್ರಗಳನ್ನೋದಿದರೇನು? ಗೀತೆಯನ್ನು ಚೆನ್ನಾಗಿ ಓದಬೇಕು"—(ವರಾಹ ಪುರಾಣ)

ಗೀತೆಯ ಕೈಗನ್ನಡಿ

(ಭಗವದ್ಗೀತೆಯ ಮೂಲ ಶ್ಲೋಕ ಮತ್ತು ಕನ್ನಡ ಅನುವಾದ)

● ಅನುವಾದಕರು—ದಿ। ಹೊಸಕೆರೆ ಚಿದಂಬರಯ್ಯನವರು ●

ಈ ಗ್ರಂಥದಲ್ಲಿ ಗೀತೆಯ ಮೂಲವೆಲ್ಲ ಇರುವುದಲ್ಲದೆ ಮೂಲದಲ್ಲಿ ಸಹಜವಾಗಿ ಕಾಣಬರುವ ಅರ್ಥವೂ ಮಾತುಗಾರಿಕೆಯು ಮಾತುಗಳ ರೂಪದಲ್ಲೇ ಅಚ್ಚಾಗಿ ಎದ್ದು ಕಾಣುವುದು.

400ಕ್ಕೂ ಮಿಕ್ಕ ಪುಟಗಳು! ಬೆಲೆ 0—12—0.

ಒಂದು ರೂಪಾಯಿಯನ್ನು ಕಳುಹಿಸಿದರೆ ಒಂದು ಪ್ರತಿಯನ್ನು ಬುಕ್‌ಪೋಸ್ಟಿನಿಂದ ಕಳಿಸಲಾಗುವುದು.

ಪ್ರತಿಗಳು ಸಿಗುವ ಮುಖ್ಯ ಸ್ಥಳ:—

ನವಯುಗ ಪ್ರೆಸ್, ಉಡುಪಿ ದ. ಕನ್ನಡ

ನವಭಾರತ ಪುಸ್ತಕ ಭಂಡಾರ, ಉಡುಪಿ, ಇಲ್ಲಿಯೂ ದೊರೆಯುತ್ತವೆ.

ಉಡುಪಿಗೆ ಹೋಗಬೇಕು! ಆದರೆ ಉಳಿದುಕೊಳ್ಳುವುದೆಲ್ಲಿ?

ರಾಯಲ್ ಮಹಾಲಿನಲ್ಲಿ

ಬಸ್ ಸ್ಟೇಂಡಿಗೆ ಅತಿ ಸಮೀಪ! ಕೃಷ್ಣಮಠಕ್ಕೆ ದೂರವಿಲ್ಲ!

ವ್ಯಾಪಾರವ್ಯವಹಾರ ವಿಹಾರಸ್ಥಳಗಳಿಗೆಲ್ಲ ಕೇಂದ್ರ!

ನಿಮ್ಮ ಸ್ನಾನ, ಊಟ, ಉಪಹಾರ, ಬೈಠಕ್, ಶಯನ ಇವಕ್ಕೆಲ್ಲ ಉತ್ತಮ ವ್ಯವಸ್ಥೆ

ಕರೆದರೆ ಓಗೊಡುವ ನೌಕರರ ವರ್ಗ!

ನೇರಾಗಿ ಉಡುಪಿ ಬ್ರಾಹ್ಮಣರ ಅಡಿಗೆ, ತಿಂಡಿತಿನಸು, ಇವುಗಳ ರುಚಿರುಚಿ ಹೇಳಬೇಕೆ?

ಪ್ರೊಪ್ರೈಟರ್:— ಕೆ. ವೆಂಕಟ್ರಮಣಭಟ್.

For up-to-date Lodging & Boarding

ROYAL MAHAL,

UDIPI. S. Kanara.

ತಾರೀಕು 31-5-51 ರಿಂದ

ವಾರದ ಭವಿಷ್ಯ

ತಾರೀಕು 6-6-51ರ ವರೆಗೆ

ಮೇಷ—ಏನ.ಕಾರಣ ಜನತೆಯೊಡನೆ ಕಲಹವಾಗುವ ಸಂಭವವಿರುವುದರಿಂದ ಈ ವಾರದಲ್ಲಿ ನಾಲಿಗೆಯನ್ನು ಎಷ್ಟು ಬಿಗಿಹಿಡಿದರೂ ಸಾಲದು, ಮಾತ್ರವಲ್ಲ ಗುರು ಹಿರಿಯರು ಬಂಧುವರ್ಗದವರು ಮತ್ತು ಸೋದರರೊಡನೆ ಮನಸ್ತಾಪವುಂಟಾಗಲಿದೆ. ಅಧಿಕಾರಿಗಳ ಪೀಡೆಯು ಹೆಚ್ಚುವದು. ಶ್ರಮಪಟ್ಟು ದುಡಿದ ಧನದಲ್ಲಿ ಬಹ್ವಂಶ ಸ್ಪರ್ಧರ ಕೈಸೇರಲಿದೆ. ಆಕಸ್ಮಿಕ ಪ್ರವಾಸವು ಪ್ರಾಪ್ತವಾಗುವದು. ಆದರೂ ತಾ. 1, 2, 6 ಈ ದಿನಗಳಲ್ಲಿ ಮನಸ್ಸಿಗೆ ನೆಮ್ಮದಿ ಕಾರ್ಯದಲ್ಲಿ ನಿರೀಕ್ಷಿಸಿದ ಫಲಲಾಭ, ಸ್ಥಾನಮಾನಾದಿಗಳು ಲಭಿಸುವವು.

ವೃಷಭ—ಧನಪತಿಯಾದ ಬುಧನು ವ್ಯಯಗತನಾದರೂ ಲಾಭಸ್ಥಾನದ ಅಧಿಪನಾದ ಗುರುವು ಲಾಭದಲ್ಲಿರುವುದರಿಂದ ನಿಮ್ಮ ದೈನಂದಿನದ ಖರ್ಚುವೆಚ್ಚಗಳಿಗಾಗಿ ಚಿಂತಿಸುವ ಸಂದರ್ಭವೊದಗಲಾರದು. ಆಕಸ್ಮಿಕ ಅಪಘಾತದ ಯೋಗವಿರುವುದರಿಂದ ವಾಹನಾದಿಗಳಲ್ಲಿನ ಪ್ರಯಾಣವನ್ನು ಸದ್ಯಕ್ಕೆ ದಿಯುವದೊಳ್ಳಿತು. ಗೃಹಸ್ಥರಿಗೆ ಸಂಸಾರದ ತಾಪತ್ರಯವಧಿಕ ಆಗಲಿದೆ. ಕೈಗೊಂಡ ಕಾರ್ಯಗಳಿಗೆ ವಿರೋಧಿ ಜನರಿಂದ ಮೇಲಿಂದ ಮೇಲೆ ವಿಘ್ನಗಳು ಬರಲಿವೆಯಾದರೂ ತಾ. 31, 3, 4, 5ರಲ್ಲಿ ನಿಮ್ಮ ಇಷ್ಟಾರ್ಥವು ನೆರವೇರುವದು.

ಮಿಥುನ—ಈ ವಾರದಲ್ಲಿ ನಿಮ್ಮ ಆಯಕ್ಕಿಂತ ದ್ವಿಗುಣ ವ್ಯಯವಾಗಲಿದೆ. ನೌಕರಿ ವರ್ಗದವರಿಗೂ ವಣಿಕ್ ಜನರಿಗೂ ಕೂಡ ಜೀವನಯಾಪನೆಯು ಹೆಚ್ಚಿನ ಕಷ್ಟಕರವಾಗಲಾರದು. ಕೋರ್ಟು ಕಚೇರಿಗಳ ಕಾರ್ಯಗಳಲ್ಲಿ ಪರಾಭವವುಂಟಾದೀತು. ಚಂಚಲವಾದ ಮನಸ್ಸು ಕುಮಾರ್ಗ ಪ್ರವೃತ್ತವಾಗಿ ಹೆಚ್ಚಿನ ಕಷ್ಟನಷ್ಟ ಅಪವಾದಗಳಿಗೆ ನಿಮ್ಮನ್ನು ಗುರಿಮಾಡೀತು. ಸಾಂಸಾರಿಕ ತಾಪತ್ರಯಗಳಿಂದ ಹೆಚ್ಚಿನಂಶ ಮುಕ್ತರಾಗುವಿರಿ. ತಾ. 3, 4, 5 ಈ ದಿನಗಳು ನಿಮಗೆ ದೇಹಾಲಸ್ಯ ಮತ್ತು ವ್ಯರ್ಥ ಖರ್ಚನ್ನುಂಟುಮಾಡಲಿವೆ.

ಕರ್ಕಟ—ಕೆಲವೊಂದು ವಾರಗಳಿಂದ ನಿಮ್ಮ ಅದೃಷ್ಟವು ಅತ್ಯುಚ್ಚಸ್ಥಿತಿಗೆ ಬಂದಿರುವದು, ಅನಾಯಾಸದಿಂದ ಅಲ್ಪಾವಕಾಶದಲ್ಲಿ ಎಂತಹ ಮಹತ್ಕಾರ್ಯವನ್ನೂ ಸಾಧಿಸುವ ಶಕ್ತಿಯುಕ್ತಿ ಸಹಾಯ ಸಲಕರಣೆಗಳು ನಿಮಗೆ ಲಭಿಸುವವು. ಜನತೆಯಲ್ಲಿ ಗಣ್ಯಸ್ಥಾನಮಾನಗಳನ್ನು ಪಡೆವಿರಿ. ಯಾವುದೇ ಉದ್ಯಮವಿರಲಿ ಕರ್ಮಕರರಿಗೆ ಪ್ರಗತಿಯು ಕಟ್ಟಿಟ್ಟ ಗಂಟೆನಿಸುವದು. ವಾರದ ಆದ್ಯಂತ ದಿನಗಳನ್ನು ಬಿಟ್ಟು ಉಳಿದ ದಿನಗಳು ಅತ್ಯುತ್ತಮಗಳಾಗಿವೆ.

ಸಿಂಹ—ಈ ವಾರದಲ್ಲಿ ನಿಮ್ಮ ಪರಿಸ್ಥಿತಿಯು ಕಳೆದ ದಿನಗಳಷ್ಟು ಉತ್ತಮವಾಗಿರದು, ಆದರೂ ಮಿತ್ರಜನರ ಸಹಕಾರದಿಂದ ಹೆಚ್ಚಿನ ಕಾರ್ಯಗಳನ್ನು ಸಾಧಿಸುವಿರಿ. ದಿನಯಾಪನೆಯು ಅಷ್ಟೊಂದು ಕಷ್ಟವಾಗಲೊಲ್ಲದು. ಆರೋಗ್ಯ ವಿಚಾರದಲ್ಲಿ ಮಾತ್ರ ಬಹಳ ಜಾಗರೂಕರಾಗಿರತಕ್ಕದ್ದು. ಶ್ರಮಜೀವಿಗಳಿಗೆ ಕಾಲವು ಅನುಕೂಲವಾಗಿಲ್ಲವು ಮಾತ್ರವಲ್ಲ ವಿದ್ಯಾರ್ಥಿಗಳಿಗೂ ವಿದ್ಯೋಪಜೀವಿ ಜನರಿಗೂ ತಾಪತ್ರಯಗಳು ಹೆಚ್ಚುವವು. ವಾರಾಂತ್ಯದ 4 ದಿನಗಳಲ್ಲಿ ಮಿತ್ರರ ಸಮಾಗಮದಿಂದ ಸುಖ, ಲಾಭಗಳನ್ನು ಪಡೆವಿರಿ.

ಕನ್ಯಾ—ನಿಸರ್ಗತಃ ಶುಭ್ರರಾದ ಬುಧ ಗುರು ಶುಕ್ರರು ನಿಮ್ಮ ಮೇಲೆ ಅನುಗ್ರಹದೃಷ್ಟಿಯನ್ನು ಬೀರಿರುವ ಕಾರಣ ಈ ವಾರದಲ್ಲಿ ಸತ್ಯಮಾರ್ಗಗಳಲ್ಲಿ ನಿಯಮೋಚಿತ ಪ್ರಗತಿಯನ್ನು ಹೊಂದುವುದರಲ್ಲಿ ಸಂದೇಹವಿಲ್ಲ ನಿಮ್ಮ ಪಾಕ್ಷಟುತ್ವಕ್ಕೆ ಶತ್ರುವು ಕೂಡ ಈ ಕಾಲದಲ್ಲಿ ಮಿತ್ರನಾದಾನು. ಅನಿರೀಕ್ಷಿತದಲ್ಲಿ ಧನ ಲಭಿಸುವ ಯೋಗವಿದೆ. ವಾತ ಸಂಬಂಧವಾದ ದೋಷವು ದೇಹದಲ್ಲಿ ಕಾಣಿಸಿದರೂ ಅಲ್ಪ ಯತ್ನದಿಂದ ನಿವಾರಿತವಾಗುವುದು. ತಾ. 31-6 ಈ ದಿನಗಳಲ್ಲಿ ನಿಮ್ಮ ಮನೋರಥವು ಸಿದ್ಧಿಸಲಿದೆ.

ತುಲಾ—ಸವ.ಸ್ವಗ್ರಹ ಮಂಡಲವೇ ಈ ವಾರದಲ್ಲಿ ನಿಮಗೆ ಪ್ರತಿಕೂಲವಾಗಿ ನಿಂತಿರುವುದರಿಂದ ಹೆಚ್ಚಿನ ನಿಮ್ಮ ಬಯಕೆಗಳು ವ್ಯರ್ಥವಾಗುವವು ಕಷ್ಟಪಟ್ಟು ಮಾಡಿದರೂ ಇಷ್ಟಾರ್ಥವು ಸಿದ್ಧಿಸದು ಆತ್ಮೀಯರ ವಿರಹದಿಂದಲೂ ಮನೋಧಾವಾಕ್ಕಲಹದಿಂದಲೂ ಚಿಂತೆಗೀಡಾದ ನಿಮಗೆ ವಿರೋಧಿಗಳ ಪೀಡೆಯು ಅಸಹನೀಯವಿರುವದು, ಆರ್ಥಿಕ ಬಿಕ್ಕಟ್ಟಿನಿಂದಾಗಿ ಮರ್ಯಾದೆಯನ್ನುಳಿಸಿಕೊಳ್ಳುವದು ಕಷ್ಟವೆನಿಸುವದು. ಆದರೂ "ವಿಪದಿ ಧೈರ್ಯಂ" ಎಂಬ ಪ್ರಾಜ್ಞರ ಉಕ್ತಿಯಂತೆ ಆಪತ್ಕಾಲದಲ್ಲಿ ಧೈರ್ಯವಂತರಾಗಿರಿ. ವಾರಾದಿಯ 3 ದಿನಗಳು ಅಷ್ಟೊಂದು ಹಾನಿಕಾರಿಗಳಾಗಲಾರವು

ವೃಶ್ಚಿಕ—ನಿಮ್ಮ ಅದೃಷ್ಟವು ಸಾಕಷ್ಟು ಉತ್ತಮ ಸ್ಥಿತಿಯಲ್ಲಿರುವದು. ರಾಜಕೀಯ ಕ್ಷೇತ್ರವೊಂದನ್ನುಳಿದು ಇತರ ಎಲ್ಲಾ ಕಡೆಗಳಲ್ಲೂ ನಿಮ್ಮ ಮನೋರಥವು ಏನೊಂದು ವಿಘ್ನ ವಿಚ್ಛಿದ್ರಗಳಿಲ್ಲದೆ ನೆರವೇರುವದು. ಜನರ ಬೆಂಬಲವು ಮಿತ್ರಜನರ ಸಹಕಾರವು ಚೆನ್ನಾಗಿರುವುದರಿಂದ ಸುಖದಿಂದ ಕಾಲಕಳೆವಿರಿ, ಅರ್ಧಾಂಗಿಯು ಕೂಡೆ ಕಲಹ, ಉದರಶೂಲೆ ಇತ್ಯಾದಿ ದೋಷಗಳುದ್ಭವಿಸಿದರೂ ತಾ. 1, 2, 3, 4, 5 ಉತ್ತಮವಿರುವದು.

ಧನು—ಹಲವಾರು ನಿಮ್ಮ ಸಾಂಸಾರಿಕ ತಾಪತ್ರಯಗಳು ನಿವೃತ್ತವಾಗಲಿವೆ. ಈ ವಾರದಲ್ಲಿ ಉದ್ಯೋಗದಲ್ಲಿ ಪ್ರಗತಿಯೂ ವ್ಯಾಪಾರದಲ್ಲಿ ಲಾಭವೂ ವಿಶೇಷತಃ ನೀಚ ಜನರಿಂದಾಗಿ ಧನಲಾಭವೂ ಆಗಲಿದೆ. ಆದರೆ ಮಿತ್ರಜನರಲ್ಲಿ ಮನಸ್ತಾಪ ಬಂಧುವರ್ಗದವರೊಡನೆ ಕಲಹ ಜನರಿಂದ ಕಟ್ಟ ಮಾತುಗಳನ್ನು ಕೇಳುವ ಸಂಭವವಿದೆ. ನಿಮ್ಮ ಆದಾಯವು ಎಷ್ಟೇ ಉತ್ತಮವಿದ್ದರೂ ಖರ್ಚುಗಳು ಮಾತ್ರ ನಿಮ್ಮ ಕೈಯಲ್ಲಿ ಕಾಸನ್ನೂ ಉಳಿಸಲಾರವು. ವಾರಾಂತ್ಯದ 4 ದಿನಗಳು ಹಿತಕರಗಳಾಗಿವೆ.

ಮಕರ—ಮೇಲಿಂದ ಮೇಲೆ ಪ್ರಾಪ್ತವಾಗತಕ್ಕ ಅನಿಷ್ಟಪರಂಪರೆಗಳು ನಿಮ್ಮನ್ನು ತಲೆಯೆತ್ತದಂತೆ ಮಾಡುವವು. ಶತ್ರುವರ್ಗದವರಂತೂ ಪ್ರತೀಕಾರ ಕರ್ಮದಿಂದ ತೃಪ್ತರಾಗುವರು. ಮಕ್ಕಳು ಮರಿಗಳ ಅನಾರೋಗ್ಯ ವಿರಹಗಳಿಂದಾಗಿ ದುಃಖಭಾಗಿಗಳಾಗಲಿರುವಿರಿ. ಮಾತ್ರವಲ್ಲ ನಿಮ್ಮ ಆರೋಗ್ಯತ್ತ ಕೂಡ ನೆಟ್ಟಗಿರಲಾರದು. ಹಾಗೆಂದಲ್ಲೇ ಹೆಚ್ಚಿನ ಸಮಯವನ್ನು ವ್ಯಯಿಸಬೇಕಾಗಿ ಬರುವದಾದರೂ ವಾರದ ಆದ್ಯಂತ ದಿನಗಳಲ್ಲಿ ಸ್ವಲ್ಪ ಸುಖಲಾಭಗಳಿವೆ.

ಕುಂಭ—ಧನಲ-ಭಪರನಾದ ಗುರುವು ಮಾತ್ರ ನಿಮಗನುಕೂಲನಾಗಿರುವುದರಿಂದ ನೀವು ಕೈಗೊಂಡ ಕಾರ್ಯಗಳಲ್ಲಿ ಯಶಸ್ಸು ಪ್ರಯತ್ನ ಉಚಿತವಾದ ಫಲವೂ ಲಭಿಸಲಿದೆ. ಎಷ್ಟೆಂದರೂ ಆರ್ಥಿಕ ಭಾಗದಲ್ಲಿ ಕೊರತೆಯುಂಟಾಗದು, ಆದರೆ ಕೈಯಲ್ಲಿನ ತುತ್ತೂ ಬಾಯಿಗಿಲ್ಲವೆಂಬಂತಹ ಹಲವಾರು ಪ್ರಸಂಗಗಳುಜರಗುವದು. ವಣಿಗ್ವರ್ಗದವರ ಪರಿಶ್ರಮವು ವ್ಯರ್ಥವಾದೀತು. ತಾ. 1, 2, ಈ ದಿನಗಳಲ್ಲಿ ವಿಜಯ ಲಾಭ ಸುಖಗಳುಂಟಾಗುವವು.

ಮೀನ—ಆತ್ಮೀಯರ ಬೆಂಬಲವಿಲ್ಲದ ನಿಮ್ಮ ಮನಸ್ಸು ಹದಿಂದೆ ಹುಲ್ಲಿಯಂತೆ ಬಹಳ ಚಂಚಲವಾಗುವದು ಆದರೂ ನಿಮ್ಮ ಖರ್ಚಿನ ದ್ವಿಗುಣವಾದ ಲಾಭಪ್ರಾಪ್ತಿಯಿರುವುದರಿಂದ ಏನೊಂದು ತಾಪತ್ರಯಗಳಿಗೆ ಸಿಲುಕದೆ ಸುಖದಿಂದ ಕಾಲಯಾಪನೆ ಮಾಡುವಿರಿ. ರಾಜಕೀಯ ಕ್ಷೇತ್ರದಲ್ಲಿ ನಿಮ್ಮ ಆಕಾಂಕ್ಷೆಗಳು ನಿರ್ವಿಘ್ನದಿಂದ ನೆರವೇರುವವು. ವೈದ್ಯವರ್ಗದವರಿಗೂ ಕೃಷಿಕರಿಗೂ ಕಾಲವು ಅನುಕೂಲವಾಗಿದೆ ತಾ. 1, 3, 4, 5, ಇಷ್ಟಪ್ರದಗಳವು.

ಲಕ್ಷ್ಮಿ ಸೆಂಟಾಲ್ ಮಾತ್ರೆ

ಇದರ ಉಪಯೋಗದಿಂದ ಬಹುಕಾಲದ ಮೇಹ, ಪ್ರಮೇಹ, ಮೂತ್ರದ ಉರಿ, ಮೂತ್ರ ಕೃಚ್ಛ್ರ, ಮೂತ್ರದೊಡನೆ ಯಾ ಮುಂದಾಗಿ ಬಿಳುಪು, ಅರಸಿನ, ಕೆಂಪು ಈ ವರ್ಣಗಳಲ್ಲಿ ಕೀವು ಹೋಗುವುದು, ತೊಡೆ ಸಂದಿನಲ್ಲಿ ನೋವು, ಕಾಲ ಗಂಟುಗಳಲ್ಲಿ ವೇದನೆ, ಕಣ್ಣಿನಲ್ಲಿ ಕೀವು ಬರುವುದು, ಶರೀರದಲ್ಲಿ ಉಷ್ಣತೆ, ಸ್ಪರ್ಷೇಂದ್ರಿಯ ರಾವೆ ಲ್ಲಾ ಖಾತ್ರಿಯಾಗಿ ಗುಣಹೊಂದುವುದು

ಡಪ್ಪಿ ಒಂದಕ್ಕೆ ರೂ. 2—0—0

ಏಜಂಟ್:—

ಶಾ ಕಂಪೆನಿ, ಮಂಗಳೂರು

ಅಮೃತಾಂಜನ

ತಲೆವೇದನೆ, ಶಿರೋವೇದನೆ, ಉಳುಕು ಕುತ್ತಿಗೆ, ಭುಜ ಹಲ್ಲು ವೇದನೆಗಳಿಗೂ, ಎದೆ ನೋವು, ಗಾಯಗಳು, ಚಾಕುಕೊಳ್ಳುವುದು, ಚೇಳುವಿಷಮುಂತಾದವು, ಪಕ್ಷವಾತ, ಮೊಡವೆ. ಮೊದಲಾದ ಎಲ್ಲಾ ರೋಗಗಳಿಗೂ ಸಿದ್ಧೌಷಧ

REGD

ಹುಳುಕಡ್ಡಿ ಮದ್ದು ನಮ್ಮಲ್ಲಿ ಸಿಕ್ಕುತ್ತದೆ

ಅಮೃತಾಂಜನ ಲಿಮಿಟೆಡ್

ಮದರಾಸು.

ಬೊಂಬಾಯಿ ಮತ್ತು ಕಲ್ಕತ್ತ.

MAHATMA GANDHI MEMORIAL COLLEGE, UDIPI.

The College reopens for admission on June 18, 1951 and for regular work on June 25, 1951 in its own spacious new building at sagri. Instruction is offered in the following languages and subjects of the Intermediate course:—

Part I : English.
Part II · Kannada, Hindi and Sanskrit
Part III (a) Mathematics, Physics; & Chemistry
(b) Natural Science, Physics; & Chemistry
(c) Mathematics; Commerce & Accountancy; & Logic
(d) Indian History; Modern History & Phychology
(e) Indian History, Commerce & Accountancy, & logic.

Hostel facilities provided. Students intending to join the College should Apply to the undersigned as soon as the S. S. L. C. results are out. Well qualified and experienced staff in all subjects and individual attention to students.

H. Sunder Rao, M. A.,
Principal.

ಆದರ್ಶ ರೀತಿಯಲ್ಲಿ ಪ್ರಕಟಿಸಲ್ಪಟ್ಟ ಅಖಿಲ ಕರ್ನಾಟಕದ ಪ್ರಾತಿನಿಧಿಕ ಕಥಾಸಂಕಲನವೆಂದು ಪ್ರಶಂಸಿಸಲ್ಪಟ್ಟ

ಮಧುವನ

ಕತೆಗಳೊಂದಿಗೆ ಕತೆಗಾರರ ಮತ್ತು ಕತೆಗಾರ್ತಿಯರ ಪರಿಚಯ ಪಡೆಯಬಹುದು

ಅಂತರಂಗ, ಬಹಿರಂಗ ಸುಂದರವಾಗಿ ಪ್ರಕಟಿಸಲ್ಪಟ್ಟ

25 ಕತೆಗಳ ಅಪೂರ್ವ ಸಂಗ್ರಹ

ಬಿಳಿ-ದಪ್ಪ ಕಾಗದ! 230 ಪುಟಗಳು! ಬೆಲೆ ರೂ. 3-0-0

ವಿಳಾಸ: ಕಿರಿಯರ ಪ್ರಪಂಚ, ಉಡುಪಿ.

ವಿಕ್ರಯಾಧಿಕಾರಿಗಳು: ನವಭಾರತ ಪುಸ್ತಕ ಭಂಡಾರ, ಉಡುಪಿ.

EDITED, PRINTED & PUBLISHED BY K. H. SHETTY AT THE NAVAYUGA PRESS, UDIPI, S. INDIA

Regd No. M. 3618

LICENCE No. 31
Licensed to Post without Prepayment

Estd. 1921 ಸ್ಥಾಪನೆ

7—6—1951

Founder: Sri A. B. Shetty,
Minister for Agriculture & Veterinary

ಅಂತರಂಗ
ಪುಸ್ತಕ ಪತ್ರಿಕೆ
ಚಂದಾ ವಿವರ
ವರ್ಷಕ್ಕೆ ರೂ. 4-8-0
6 ತಿಂಗಳಿಗೆ ರೂ 2-8 0
(ಮುಂಗಡ)
ಜಾಹೀರಾತಿಗೆ ಉತ್ತಮ
ಸಾಧನ
ಅಂತರಂಗ, ಉಡುಪಿ.

ನವಯುಗ
ಚಂದಾ ವಿವರ:
(ಮುಂಗಡ)
ವರ್ಷಕ್ಕೆ ರೂ. 5-12-0
6 ತಿಂಗಳಿಗೆ ,, 3- 0-0
ಬಿಡಿಪ್ರತಿ ,, 0- 2 0
6 ತಿಂಗಳಿಗಿಂತ ಕಡಿಮೆ
ಚಂದಾ ಸ್ವೀಕರಿಸುವುದಿಲ್ಲ.
ನವಯುಗ, ಉಡುಪಿ.

ವರ್ಷ ೩೧
ವಾರ ೩೯

NAVAYUGA WEEKLY

Post Box No. 22 UDIPI.

Vol. 31
No 39

TEL. 40592

Watsons hygienically prepared Aerated Waters are the Drinks of the day.

Our Orange, Rose, Pine-apple, Raspbery, Gingerbeer, Tonic, Pick-me-up and Lemon are drinks of health and pleasure.

We accept orders to supply functions etc., in any parts of the City

14 Parel Road, Cross Lane, BOMBAY 12.

ಆರೋಗ್ಯಶಾಸ್ತ್ರರೀತ್ಯಾ ತಯಾರಿಸಿದ ವಾಟ್ಸನ್ನರ ಸೋಡಾ ದ್ರಾವಕಗಳೇ ಇಂದಿಗೆ ಬೇಕಾದ ಪಾನೀಯಗಳು.

ನಮ್ಮ ಒರೇಂಜ್, ರೋಸ್, ಪೈನ್ ಎಪ್ಲ್, ರಾಸ್ಬರಿ, ಜಿಂಜರ್ ಬೀರ್, ಟೊನಿಕ್, ಪಿಕ್-ಮಿ-ಅಪ್, ಮತ್ತು ಲಿಮನ್ ಪಾನೀಯಗಳು ಆರೋಗ್ಯಕರ ಮತ್ತು ಆಹ್ಲಾದಕರ.

ನಗರದ ಯಾವದೇ ಭಾಗದಲ್ಲಾಗುವ ಸಮಾರಂಭಾದಿಗಳಿಗೆ ನಾವು ಆರ್ಡರುಗಳನ್ನು ಸ್ವೀಕರಿಸುತ್ತೇವೆ.

ಮಹಾನಗರ ಮುಂಬಯಿಯಲ್ಲಿ ಕನ್ನಡಿಗರಿಂದ ನಡೆಸಲ್ಪಡುವ ಮಹಾಸಂಸ್ಥೆ—

14, ಪರೇಲ್ ರೋಡು, ಕ್ರೋಸ್ ಲೇನ್, ಬೊಂಬಾಯಿ 12.
(ಟೆಲಿಫೋನ್: 40592)

ದಕ್ಷಿಣ ಆಫ್ರಿಕದಲ್ಲಿ ವರ್ಣಭೇದ

ಬರೆದವರು—ಶ್ರೀ ಸಿ ಎಚ್. ಶೆಟ್ಟಿ

ಕಳೆದ ಒಂದನೇ ಮಹಾಯುದ್ಧ ಸಮಯ ಮತ್ತು ಅನಂತರ ನಡೆದ ಕೆಲವು ವಿದ್ಯಮಾನಗಳಿಂದ ಬ್ರಿಟಿಷ್ ಸಾಮ್ರಾಜ್ಯವು ಒಡೆದು ವಿಂಗಡವಾಗುವ ಅನುಮಾನವು ಕೆಲವು ಮುತ್ಸದ್ದಿಗಳಲ್ಲಿ ತಲೆದೋರಿತು. ಅಂಥಾ ಪ್ರಸಂಗವನ್ನು ಹೋಗಲಾಡಿಸಲು ಅದಕ್ಕೆ ಕಾರಣವಾದ ಹೇತುಗಳನ್ನು ಕಂಡುಹಿಡಿಯತಕ್ಕ ಸೂಚನೆಯನ್ನು ಕೊಡುವರೆ ಬಾಲ್‌ಫರ್ ಎಂಬ ಸುರಿತ ರಾಜಕಾರಣಿಯನ್ನು ಅಧ್ಯಕ್ಷನನ್ನಾಗಿ ಮಾಡಿ ಒಂದು ಸಮಿತಿಯನ್ನು ನೇಮಿಸಿದರು. ಬ್ರಿಟನ್ ಸಾಮ್ರಾಜ್ಯವೆಂಬುದೊಂದು ಸಮಾನ ಸಮಾಜ (Commonwealth) ಸ್ವತಂತ್ರ ಸ್ಥಾಪನೆಯೇ ಇದರ ಜೀವಾಳ, ಇದೊಂದು ನಿಯಮಬದ್ಧ ಧ್ಯೇಯದ ಮೇಲೆ ನಿಶ್ಚಿತವಾಗಿಯಲ್ಲವಾದರೂ ಅವಶ್ಯಕವಾಗಿರುವುದು, ಪರಸ್ಪರ ಸಹಾಯವೇ ಇದರ ಸಾಧನ, ಶಾಂತಿ, ಪ್ರಗತಿ ಮತ್ತು ಭದ್ರತೆ ಇವೇ ಮೊದಲಾದವುಗಳು ಇದರ ಗುರಿಯಾಗಿರಬೇಕೆಂದು ಈ ಸಮಿತಿಯವರು ಸೂಚಿಸಿದರು. ಸಾಮ್ರಾಜ್ಯದೊಳಗೆ ಆ ಕಾಲದಲ್ಲಿ ಸ್ವಾತಂತ್ರ್ಯವಿಲ್ಲದ ಸಾಮಂತ ರಾಷ್ಟ್ರಗಳನೇಕವಿದ್ದು ಕೇವಲ ಬಿಳಿ ಜನಾಂಗದ ಈ ಕೂಟಕ್ಕೆ ಅಷ್ಟು ಸಂಭ್ರಮದ ಹೆಸರು ಹಾಕಿದುದು ವೇಷದ ನುಡಿಯಾಗಿ ಹಾಸ್ಯಾಸ್ಪದವಾಗಿದೆ. ಆದರೆ ಆ ಬಳಿಕ ಇದುವರೆಗೆ ಕೆಲವು ಪ್ರಾಮುಖ್ಯ ಬದಲಾವಣೆಗಳು ನಡೆದಿವೆ. ಬರ್ಮಾ, ಇಂಡಿಯಾ, ಸಿಲೋನ್ ಮತ್ತು ಪಾಕಿಸ್ತಾನ ಇವುಗಳೆಲ್ಲಾ ಸ್ವತಂತ್ರವಾದವು. ಈ ಪೈಕಿ ಕಡೆಗೆ ಹೇಳಿದ ಮೂರು ರಾಷ್ಟ್ರಗಳು ಈ ಸಂಸ್ಥೆಯು ನಿಜವಾದ ಸಮಾನ ಸಮಾಜವಾಗುವಂತೆ ಮಾರ್ಪಾಟಾಗಬೇಕೆಂದು ಈ ಕೂಟಕ್ಕೆ ಸೇರಿ ಇದರ ಹೆಸರನ್ನೇ ಬದಲಾಯಿಸಿದರು. ಜಾತಿ ಮತ್ತು ವರ್ಣಭೇದಗಳಿಲ್ಲದೆ ನಾನಾ ರೀತಿಯ ರಾಜಕೀಯ, ಆರ್ಥಿಕ ಮತ್ತು ಸಂಸ್ಕೃತಿಯ ಜನರು ಸಮಸಮಾನರಾಗಿ ಇದರೊಳಗೆ ಉಳಕೊಳ್ಳಬಹುದು. ಇದಕ್ಕೆ ಸೇರಿದ ಎಲ್ಲಾ ರಾಷ್ಟ್ರಗಳು ಸಹಕರಿಸಿ ನಡೆಯುವಾಗ ದಕ್ಷಿಣ ಆಫ್ರಿಕವು ಮಾತ್ರ ತನ್ನ ಕುದುರೆಗೆ ಮೂರೇ ಕಾಲು ಎಂಬಂತೆ ವರ್ತಿಸಿ ಒಂದು ಬಿಡಿ ಸ್ವರ ತೆಗೆದು ಇತರರ ಪ್ರಯತ್ನಗಳನ್ನು ನಿಷ್ಫಲವಾಗುವಂತೆ ಮಾಡುತ್ತಿರುವುದು ವಿಷಾದಕರ ಮತ್ತು ಚಿಂತಾಜನಕ ವಿಚಾರ.

ದಕ್ಷಿಣ ಆಫ್ರಿಕದ ಒಟ್ಟು ಜನಸಂಖ್ಯೆ ಸುಮಾರು 11,258,858 ಇರುವುದು. ಇವರ ಪೈಕಿ 7,735,809 ಜನರು ಆಫ್ರಿಕನರೇ ಆದ ಮೂಲನಿವಾಸಿಗಳು (Natives) ಜನಾಂಗದವರು. 2,385,460 ಜನರು ಐರೋಪ್ಯದವರು; 905,050 ಜನರು ವರ್ಣೀಯರು (Coloured people) ಮತ್ತು 282,539 ಜನರು ಏಷ್ಯಾದವರು. ಇವರ ಪೈಕಿ ಶೇಕಡ 90ರಷ್ಟು ಇಂಡಿಯಾದವರೇ ಆಗಿರುವರು. ಐರೋಪ್ಯದವರ ಪೈಕಿ ಪ್ರತಿ ಆರ ಬೋಯರು ಜನಾಂಗ ನಾಲ್ಕು ಬ್ರಿಟಿಷ ದಾಯಾದಿಯ ದಲ್ಲಿರುವರು. ದಕ್ಷಿಣ ಆಫ್ರಿಕದ ಆಳ್ವಿಕೆಯಾದ ಲಾಗಾಯ್ತು ಬೋಯರರಿಗೂ ಬ್ರಿಟಿಷರಿಗೂ ಸ್ವದೇಶೀಯರ ಮತ್ತು ಇತರ ವರ್ಣೀಯರ ಸಂಬಂಧ ಮತಭೇದಗಳುಂಟಾಗಿ ಆಗಾಗ ಬಿಕ್ಕಟ್ಟು ಬಂದಿತ್ತು. ಹುಟ್ಟಿನವರು ತಮ್ಮ ಸಾರ್ವಭೌಮತ್ವಕ್ಕೆ ಒಳಪಟ್ಟವರು ತಮಗಿರುವ ಆ ನಿರಂಕುಶ ಪ್ರಭುತ್ವವನ್ನು ಬ್ರಿಟಿಷರು ಕಾಯಿದೆ, ಕಾನೂನು, ನಿಬಂಧನೆಗಳಿಂದ ಪ್ರತಿಬಂಧಿಸುವುದು ಅವರಿಗೆ ಸರಿತೋರದೆ ಸುಮಾರು 1830–1840ನೇ ಇಸವಿಗಳ ಸಮಯ ಬೋಯರು ಕುಟುಂಬ ಸಮೇತರಾಗಿ ಪೂರ್ವ ಉತ್ತರ ಆಫ್ರಿಕದ ಪ್ರದೇಶಗಳಿಗೆ ಸ್ಥಾನಾಂತರಿಸಿದರು. ಈ ಯಾತ್ರೆಯಲ್ಲಿ ತಮಗೆ ತಡೆಯಾಗಿ ಇದಿರುಬಂದ ಜುಲು ಜನರನ್ನು ಬ್ಲಡ್ ನದಿಯ ದಡದಲ್ಲಿ ಸೋಲಿಸಿ ನೇಟಾಲ್, ಟ್ರಾನ್ಸ್‌ವಾಲ್, ಮತ್ತು ಆರೇಂಜ್ ಫ್ರೀ ಸ್ಟೇಟ್ ಎಂಬ ಪ್ರಾಂತಗಳನ್ನು ಸ್ಥಾಪಿಸಿದರು. ಬ್ಲಡ್ ನದಿಯ ದಡದಲ್ಲಿ ಆದ ವಿಜಯದ ಸ್ಮರಣಾರ್ಥವಾಗಿ ಪ್ರತಿ ವರುಷದ ಡಿಸೆಂಬರ 16ನೇ ದಿನವನ್ನು ಹಬ್ಬದ ದಿನವಾಗಿ ಆಚರಿಸುತ್ತಿದ್ದರು. ಇದೇ ಒಂದು ತರದ ಆಂತರ ಜಾತಿಯ ಕಲಹಕಾರಣವಾಗಿದೆ. ತಾವು ಉತ್ಕೃಷ್ಟರ (Master Race) ಎಂಬ ಅಹಂಭಾವವು ಬೋಯರಲ್ಲಿ ತುಂಬಿದೆ. ಹಿಂದುಳಿದ ಜನರನ್ನು (Backward people) ಮತ್ತು ವಿಧರ್ಮಿಗಳನ್ನು (Heathens) ಆಳಿ ನಡಿಸುವರೆ ದೇವರಿಂದ ತಾವು ಆರಿಸಲ್ಪಟ್ಟ ಜನರು (Chosen people) ಎಂಬ ಅಹಂಕಾರವು ಅವರಲ್ಲಿ ಬೇರೂರಿದೆ. ಕೂಪಮಂಡೂಕದಂತೆ ತಮ್ಮದೇ ಆದ ಒಂದು ರಾಜ್ಯಸ್ಥಾಪನೆ ಮಾಡಿಕೊಂಡು ಭೂಲೋಕದ ಇತರ ಕಡೆಗಳಲ್ಲಿ ನಡೆಯುವ ವಿದ್ಯಮಾನದ ಮತ್ತು ಪ್ರಗತಿಯ ಅರಿವೇ ಅವರಿಗಿಲ್ಲ. 1910ರಲ್ಲಿ ದಕ್ಷಿಣ ಆಫ್ರಿಕದ ನಾಲ್ಕು ಪ್ರಾಂತಗಳು ಒಂದಾಗುವರೆ ಬ್ರಿಟನ ಪಾರ್ಲಿಮೆಂಟಿನಲ್ಲಿಯೂ ಸೈಟ್ರಿಡ್ ಆಕ್ಟು ಪಾಸು ಮಾಡುವಾಗ ಲಿಬರಲ್ ತಂಗಡದ ಮುಖ್ಯಸ್ಥರು ವರ್ಣಭೇದದ ವಿಷವನ್ನು ಇಡೀ ದಕ್ಷಿಣ ಆಫ್ರಿಕಕ್ಕೆ ಬೋಯರು ಬಿತ್ತುವರೋ ಎಂದು ಎಚ್ಚರಿಸಿದ ಭೀತಿಯು ಈಗ ದೃಷ್ಟಾಂತಕ್ಕೆ ಬಂತು. ಈ ಭೇದವನ್ನು ದಕ್ಷಿಣ ಆಫ್ರಿಕದ ರಾಜಕೀಯ ಆರ್ಥಿಕ ಮತ್ತು ಸಾಮಾಜಿಕ ವಿಷಯಗಳಲ್ಲೆಲ್ಲಾ ಬಿತ್ತಿದರು. ದಕ್ಷಿಣ ಆಫ್ರಿಕದ ಸರಕಾರ ಮತ್ತು ಸಂಸ್ಕೃತಿಯು ವರ್ಣಭೇದದ ಅಡಿಗಲ್ಲ ಮೇಲೆ ಕಟ್ಟಲ್ಪಟ್ಟಿದೆ. ಅಲ್ಲಿ ಬಿಳಿ ಜನರಿಗೊಂದು ನೀತಿ ಇತರರಿಗಿನ್ನೊಂದು ತರಹದ ಕಾನೂನು ಜಾರಿಯಲ್ಲಿದೆ.

ರಾಜಕೀಯ ವಿಚಾರದಲ್ಲಿ ದಕ್ಷಿಣ ಆಫ್ರಿಕವು ಪ್ರಜಾಸತ್ತೆಯ ಕ್ರಮದ್ದಾದರೂ ಅಲ್ಪಸಂಖ್ಯಾತರಾದ ಬಿಳಿ ಜನರ ಬಗ್ಗೆಯೇ ಅವರ ಪ್ರಭುತ್ವಕ್ಕೆ ಒಳಪಟ್ಟದ್ದಾಗಿದೆ. ಕೇಪು ಪ್ರಾಂತದಲ್ಲಿ ಮಾತ್ರ ಸ್ವದೇಶೀಯರಿಗೆ (Natives) ಮತ ಕೊಡುವ ಹಕ್ಕಿದೆ. ಅಲ್ಲಿ ಸಹಾ ಅವರ ಪರವಾಗಿ ಮೂರು ಬಿಳಿ ಜನರನ್ನೇ ಆರಿಸಬೇಕಾಗಿದೆ. ಉದ್ಯೋಗದ ಹೆಸರು, ವೃತ್ತಿ ಮತ್ತು ವಿಳಾಸ ಬರೆದು ಸಹಿಹಾಕಲು ಸಾಧ್ಯವಿದ್ದವರು, ವರುಷಕ್ಕೆ 50 ಪವನುಗಳನ್ನು ಕಲಬು ದುಡಿಯುವವರು ಅಥವಾ 75 ಪವನುಗಳಷ್ಟು ಭೂಮಿಯ ಉತ್ಪತ್ತಿ ಅಥವಾ ಉದ್ಯೋಗದ ಸಂಪಾದನೆ ಇರುವವರಿಗೆ ಮಾತ್ರ ಸಾರ್ವಜನಿಕ ಓಟಿನ ಪಟ್ಟಿಯಲ್ಲಿ ಹೆಸರು ಕಾಣುವುದು. ನೇಟಲಿನಲ್ಲಿ ಇದಕ್ಕಿಂತ ಹೆಚ್ಚಿನ ಅರ್ಹತೆಬೇಕು. ಟ್ರಾನ್ಸ್‌ವಾಲ್ ಮತ್ತು ಆರೇಂಜು ಫ್ರೀ ಸ್ಟೇಟಿನಲ್ಲಿ ಇವರಿಗೆ ಮತಕೊಡುವ ಹಕ್ಕೇ ಇಲ್ಲ. ಏಷ್ಯದ ಜನರಿಗೆ ಕೇಪು ಪ್ರಾಂತದಲ್ಲಿ ಸ್ವದೇಶೀಯರಿಗಿರುವಷ್ಟೆ ಮತದಾನದ ಅರ್ಹತೆ ಇದೆ. ಟ್ರಾನ್ಸ್‌ವಾಲ್ ಮತ್ತು ನೇಟಾಲಿನಲ್ಲಿ ಹೆಚ್ಚಿನ ಅರ್ಹತೆ ಬೇಕಾಗಿದೆ ಮತ್ತು ಇವರು ಓಟಿನ ಪಟ್ಟಿಯೇ ಬೇರಾಗಿದೆ. ಏಷ್ಯಾದವರು ಬಿಳಿ ಜನರನ್ನೇ ಆರಿಸಬೇಕಾಗಿದೆ. ಆರೇಂಜು ಪ್ರಾಂತದಲ್ಲಿ ಇವರಿಗೂ ಮತಕೊಡುವ ಹಕ್ಕಿಲ್ಲ. ಹೆಂಗಸರು ಎಷ್ಟು ವಿದ್ಯಾವಂತೆಯಾದರೂ ದಕ್ಷಿಣ ಆಫ್ರಿಕದ ಯಾವ ಪ್ರಾಂತದಲ್ಲೂ ಮತಕೊಡುವ ಹಕ್ಕಿಲ್ಲ. 156 ಸದಸ್ಯರುಳ್ಳ ಶಾಸನ ಸಭೆಯಲ್ಲಿ 150 ಸ್ಥಾನಗಳನ್ನು ತಮ್ಮ ಪಾಲಿಗೆ ಕಾದಿಟ್ಟುಕೊಂಡು ಪ್ರಾಬಲ್ಯ ಪಡೆದುದು ಸಾಲದೆ ಸ್ವದೇಶೀಯರಿಗಿರುವ ಪ್ರಾತಿನಿಧ್ಯವನ್ನೆ ತೆಗೆದುಹಾಕುವ ಹಂಚಿಕೆಯನ್ನು ಇತ್ತೀಚೆಗೆ ತಂದಿರುವರು. 1910ನೇ ಇಸವಿಯ ಯೂನಿಯನ್ ಆಕ್ಟು ಮೇರೆಗೆ ಶಾಸನ ಸಭೆಯ ⅔ನೇ ಬಹುಪಕ್ಷದಿಂದ ಮಾತ್ರ ಶಾಸನವನ್ನು ಬದಲಾಯಿಸುವದೆಂತಿರುವುದಾದರೂ ಬರೇ ಬಹುಪಕ್ಷದಿಂದ (Simple majority) ಬದಲಾಯಿಸುವದೆಂತ ಮಲಾನರ ಸರಕಾರವು ನಿಶ್ಚೈಸಿತು. ಜನರಲ್ ಸ್ಮಟ್ಸರು ಈ ವಿಷಯ ಎಚ್ಚರಿಸಿದರೂ ಗಮನಕ್ಕೆ ತಂದುಕೊಳ್ಳಲಿಲ್ಲ.

ಆರ್ಥಿಕ ಮತ್ತು ಶೈಕ್ಷಣಿಕ ವಿಚಾರದಲ್ಲಿ ಬಿಳಿ ಜನರು ಇತರರ ಶುಶ್ರೂಗೆಯನ್ನು ಹಿಸುಕುವರು. ಬಿಳಿ ಜನರ ಪೈಕಿ ಯಾವನೊಬ್ಬನೂ ಇವರ ಕೈಕೆಳಗೆ ಕೆಲಸ ಮಾಡಬಾರದು ಮತ್ತು ಯಾವ ತರದಲ್ಲೂ ಹಂಗೀಕನಾಗಬಾರದು. ಕೆಲವು ಕಡೆಗಳಲ್ಲಿ ಇವರು ಸ್ಥಳವನ್ನು ಕೊಂಡುಕೊಳ್ಳಬಾರದು. ಕಟ್ಟಡಕಟ್ಟಬಾರದು ಮತ್ತು

ಬೇಂಕಿಂಗ್ ಸಂಬಂಧದ ಎಲ್ಲಾ ಸಮಸ್ಯೆಗಳಿಗೆ

ದಿ ವಿಜಯಾ ಬೇಂಕ್ ಲಿಮಿಟೆಡ್

ಇವರ ಸಲಹೆ ಕೇಳಿರಿ

ಹೆಡ್ ಆಫೀಸು : : : : ಮಂಗಳೂರು

ಮಡಿಕೇರಿಯಲ್ಲಿ ಒಂದು ಶಾಖೆಯೂ ಬೊಂಬಾಯಿಯಲ್ಲಿ ಒಂದು ಶಾಖೆಯೂ ಜಿಲ್ಲೆಯೊಳಗೆ ಹಲವು ಶಾಖೆಗಳೂ ಇವೆ.

ಸಿರಿಮು ಲೇವಣಾತಿಗಳ ಮೇಲೆ ಆಕರ್ಷಕವಾದ ದರದ ಬಡ್ಡಿಯು ಕೊಡಲ್ಪಡುವುದು.

ತಕ್ಕುದಾದ ಜವಾಬ್ದಾರಿಗಳ ಮೇಲೆ ಸುಲಭವಾದ ಶರ್ತಗಳಲ್ಲಿ ಸಾಲಗಳು ಕೊಡಲ್ಪಡುವುವು.

ಸಾಲಿಯನ್ ಸೇಕಡಾ 4½ರ ಬಡ್ಡಿ ಗಳಿಸುವ ಮೂರು ವರ್ಷದ ಅವಧಿಯ ವಿಜಯಾ ಕೇಶ್ ಸರ್ಟಿಫಿಕೇಟುಗಳ ಮೇಲೆ

ಹಣವನ್ನು ಹಾಕಿರಿ

THE VIJAYA BANK, LTD,

ಬಿ. ಮಂಜಯ್ಯ ಹೆಗ್ಗಡೆ,
(ದ. ಕ. ಜಿಲ್ಲಾ ಬೋರ್ಡ್ ಪ್ರೆಸಿಡೆಂಟ್)
ಡೈರೆಕ್ಟರ್ ಬೋರ್ಡಿನ ಅಧ್ಯಕ್ಷರು.

THE BOMBAY LIFE ASSURANCE COMPANY, LTD.

ದಿ ಬೊಂಬೆ ಲೈಫ್ ಎಶ್ಯೂರನ್ಸ್ ಕೋ., ಲಿಮಿಟೆಡ್

(ಸ್ಥಾಪನೆ: 1908)

ಅತ್ಯಲ್ಪ ಖರ್ಚಿನಿಂದ ಅತ್ಯಧಿಕ ಲಾಭವನ್ನೀಯುವ ಅಗ್ರಗಣ್ಯ ವಿಮಾ ಸಂಸ್ಥೆಗಳಲ್ಲೊಂದು

ಪ್ರಧಾನ ಏಜಂಟರು:

ಕೊಚ್ಚಿಕಾರ್ ಬ್ರದರ್ಸ್, ಲಿಮಿಟೆಡ್ ಉಡುಪಿ.

ಇವರ ಶಾಖಾ ಕಚೇರಿಗಳು:-

ಬೊಂಬಾಯಿ, ಮದ್ರಾಸು, ಬೆಂಗಳೂರು, ಕೊಯಮುತ್ತೂರು, ತ್ರಿವೇಂದ್ರಮ್, ಕಲ್ಲಿಕೋಟೆ ಮತ್ತು ಮಂಗಳೂರು.

ಕಳೆದ ಮುವತ್ತೆಂಟು ವರುಷಗಳಿಂದ ವಿಮಾ ಕ್ಷೇತ್ರದಲ್ಲಿ ಸತತ ದುಡಿದವರಾದ ನಾವು ಜನಾಂಗದ ಶ್ರೇಯೋಭಿವೃದ್ಧಿಯ ಕಡೆಗೆ ನಮ್ಮ ನಮ್ಮ ಸೇವೆಯನ್ನು ಸಲ್ಲಿಸಿರುತ್ತೇವೆಂಬುದೇ ನಮ್ಮ ಹೆಗ್ಗಳಿಕೆಯ ಮಾತು.

ವಿಮಾ ಮಾಡಲಿಕ್ಕಾಗಲೀ, ಪ್ರಾತಿನಿಧ್ಯ ಪಡೆಯಲಿಕ್ಕಾಗಲೀ ದಯವಿಟ್ಟು ನಮಗಾಗಲೀ ಅಥವಾ ನಮ್ಮ ಶಾಖೆಗಳಿಗಾಗಲೀ ಬರೆಯಿರಿ.

ವಾಸಿಸಲೂ ಬಾರದು. ಇವರನ್ನು ಯಾವ ಉದ್ಯೋಗದಲ್ಲಿಯೂ ಸೇರಿಸಿಕೊಳ್ಳುವದಿಲ್ಲ ಯಾವ ವ್ಯಕ್ತಿಗಳಿಗೂ ಅಧಿಕಾರ ಸ್ಥಾನವನ್ನು ಇವರಿಗೆ ಕೊಡುವುದಿಲ್ಲ. ಇವರು ನೌಕರಿ ಕಂಡರೆ ಸೇರಬೇಕು ಮತ್ತು ಸಾರ್ವಜನಿಕ ನೌಕರಿಯಲ್ಲಿ ಸೇರಲು ಇವರಿಗೆ ಅವಕಾಶವೇ ಇಲ್ಲ. ಕಾರಖಾನೆಯಲ್ಲಿ ಕೆಲಸ ಮಾಡಲು ಎಡೆಯೇ ಇಲ್ಲ. ಕುಶಲಕರ್ಮಿಗಳಾಗಿ (Artisans) ತರಬೇತು ಕೊಡಬಾರದೆಂದು ನಿಬಂಧನೆಯಿದೆ. ತನ್ನ ಕೂಲಿಕಾರ ಸಂಘದ ಸಹಾಯದಿಂದ ಬಿಳಿ ಜನರಿಗೆ ದಿನಕ್ಕೆ 15 ಶಿಲ್ಲಿಂಗ್ ವರ್ಣೀಯರಿಗೆ 7½ ಶಿಲ್ಲಿಂಗ್ ಮತ್ತು ಸ್ವದೇಶೀಯರಿಗೆ 2½ ಶಿಲ್ಲಿಂಗ್ ಕೂಲಿಯ ದರ ನಿಶ್ಚಯಿಸಿದರು. ಇಂಡಿಯನರು ಕಡೆಗೆ ಹೇಳಿದ ಎರಡರಲ್ಲೊಂದನ್ನು ತೆಕ್ಕೊಳ್ಳಬೇಕು. ಬಿಳಿಜನರಿಗೆಂತಿರುವ ವಿಶ್ವವಿದ್ಯಾಲಯದಲ್ಲಿ ಸೇರದಂತೆ ಕಟ್ಟಾಜ್ಞೆ ಇದೆ, ಇವರಿಗೆ ಕೊಡುವ ಶಿಕ್ಷಣದಲ್ಲೂ ಬೇರೆ ರೂಪಗಳಿವೆ. ಬುದ್ಧಿಪೂರ್ವಕವಾಗಿ ಇವರಿಗೆ ಪ್ರೌಢ ಶಿಕ್ಷಣ ದೊರೆಯದಂತೆ ಮಾಡಿದವರು. ಮಿಸ್. ಎಲ್. ಟೋಟ್ಸಿ (Miss L. Totsi) ಎಂಬ ಆಫ್ರಿಕನ ವಿದ್ಯಾರ್ಥಿನಿಗೆ ಹಿಂದುಸ್ಥಾನದ ಯಾವುದಾದರೊಂದು ವಿಶ್ವವಿದ್ಯಾಲಯದಲ್ಲಿ ಪ್ರೌಢ ಶಿಕ್ಷಣ ನಡೆಯುವರೆ ನಮ್ಮ ಸರಕಾರವು ಅನುಕೂಲತೆಯನ್ನು ಕೊಟ್ಟರೂ ಮಲಾನ್ ಸರಕಾರ ಆಕೆಗೆ ಇಲ್ಲಿ ಬರುವರೆ ಪಾಸಪೋರ್ಟ ಕೊಡದೆ ತೊಂದರೆ ಮಾಡಿತು. ಶಾಲೆ ಹುಡುಗರಿಗೆ ಕೊಡುವ ಊಟ ಮತ್ತು ಸೌಕರ್ಯದ ಧನಸಹಾಯವನ್ನು ಬಿಳಿ ಜನರಿಗೆ ಎಂಟು ಪಾಲಷ್ಟು ಏರಿಸಿ ಇತರರಿಗೆ ಇದ್ದುದಕ್ಕಿಂತ ಕಡಿಮೆ ಮಾಡಿದರು. ಕೆಲಸವಿಲ್ಲದಾಗ ಸಿಕ್ಕತಕ್ಕ ಹಿತಧನ(Unemployment Benefit) ಸಿಕ್ಕದು.

ಇನ್ನೂ ಸಾಮಾಜಿಕ ಪ್ರತಿಬಂಧಕಗಳೆಷ್ಟೋ ಇವೆ. ಹೋಟೆಲ್, ಸಿನೇಮಾ ಥಿಯೇಟರ್, ಪಾರ್ಕ್, ಮೋಟರುಗಾಡಿ ರೈಲುಬಂಡಿ ಮತ್ತು ಪೋಸ್ಟಾಫೀಸುಗಳಲ್ಲಿ ಬಿಳಿಜನರಿಗೊಂದು ರೀತಿ ಇತರರಿಗಿನ್ನೊಂದು ತರಹ ರೀತಿ. 1946ರಲ್ಲಿ ಮಂಜೂರು ಮಾಡಿದ ಲ್ಯಾಂಡು ಟೆನ್ಯೂರು ಆಕ್ಟು ಮತ್ತು ಇಂಡಿಯನ್ ರಿಪ್ರೆಜಂಟೇಶನ್ ಆಕ್ಟು ಇವುಗಳು ಬಂಡವಾಳಶಾಹಿಯ ಭೇದದ ಕಾನೂನುಗಳ ಪೈಕಿ ಅತಿ ಇರಿಗಾದವು ಮತ್ತು ಹೊಸವು. ವಿಕ್ರಮದುವೆಯನ್ನು ರದ್ದುಗೊಳಿಸಿದರು. ಮಿಶ್ರ ಮದುವೆಯು ಆಕ್ಷೇಪವೇರಿಗೆ ಒಂದು ಕಡೆಯುವರ ಹುಟ್ಟಿನ ಮೂಲವನ್ನು ಇತರರಿಗೆ ಬಣ್ಣದಿಂದ ಗುರುತಿಸಬಹುದಾದರೆ ಅಂಥಾ ಮದುವೆ ಒಟ್ಟಿಗೆ ವಿರೋಧ ಸೂಚಿಸಿದರು. ಒಂದು ನೇಶನಲ್ ರಿಜಿಸ್ಟರನ್ನು ಇಟ್ಟರು.

ಆವಶ್ಯವುಳ್ಳ ಎಲ್ಲಾ ಮಾಹಿತಿಯನ್ನೊಳಗೊಂಡ ಉತ್ತಮತರದ

ಮಗ್ಗಿ ಪುಸ್ತಕಗಳು

ಚಿಲ್ಲರೆಯಾಗಿಯೂ ರಖಂ ಆಗಿಯೂ ದೊರೆಯುತ್ತವೆ

ಬೆಲೆ 0—1—0

ವ್ಯಾಪಾರಿಗಳಿಗೆ ಧಾರಾಳ ಕಮಿಷನ್ ಇದೆ

ನವಯುಗ ಪ್ರೆಸ್, ಉಡುಪಿ.

ವರ ಆದರ್ಶ ಪ್ರತಿಯೊಬ್ಬನು ತನ್ನ ಜಾತಿ, ವರ್ಣ ಮತ್ತು ಹುಟ್ಟಿನ ಅನುಸಾರವನ್ನು ದಕಲು ಮಾಡಬೇಕೆಂತ ನಿಬಂಧನೆಯಿದೆ. ಆದರೆ ಈ ಬಾಶಿಸ್ಟರ(?) ಪ್ಲೆಡ್ ಕ್ಲಾಸ ಹೇಳುವ ಮಂಜಾವಳಿಯನ್ನು ವಿರೋಧಿಸಿದಲ್ಲಿ ಅವರಲ್ಲಿನೇಕರ ವಿಶ್ವಾಸಿತನ ಹೊಸ ಸ್ವದೇಶೀಯರ ಹುಟ್ಟಿನವರೆಂದು ಪತ್ರಿಕೆಯಲ್ಲಿ ಒಪ್ಪಿದಂಬದನ್ನು ಮರೆತಿರುವರು.

1948ಕ್ಕೆ ದಕ್ಷಿಣ ಆಫ್ರಿಕದ ರಾಷ್ಟ್ರೀಯ ಪಕ್ಷದ ಡಾಕ್ಟರ್ ಮಲಾನರ ಮಂದಾಳತ್ವದಲ್ಲಿ ಒಹುಮತ ಪಡೆದು ಚುನಾಯಿಸಲ್ಪಟ್ಟಿತು. ಬಿಳಿಜನರ ಪ್ರಾಬಲ್ಯವು ಇವರ ಮೂಲತತ್ವವಾದ್ದರಿಂದ ಇವರು ಸರಕಾರ ಸ್ಥಾಪಿಸಿದೊಡನೆಯೇ ತಮ್ಮ ಈ ಎಪ್ಪರ್ ಹೀಡ್ (Appertheid) ತತ್ವವನ್ನು ಮುಂದ ವರಿಸಿದರು. ಕೇಪ್‌ಪ್ರಾಂತ್ಯದಲ್ಲಿರ ಮತ ತರ್ಗಾನದ ಹಕ್ಕನ್ನು ತೆಗೆದರು. ಗ್ರೂಪುಗಳಿಯ ಆಕ್ಟನ್ನು ಮುಂದೆ ತಂದರು. ಕಾರ್ಮಿಕರ ಸಂಘವನ್ನು (Trudeunior) ಸ್ಥಾಪಿಸದಂತೆ ಮಾಡಿದರು. ಅಮಿತ ಜಾತ್ಯಾಭಿಮಾನಿಗಳಾದ ರಾಷ್ಟ್ರೀಯ ಪಕ್ಷದವರ ಪೈಕಿ ಕೆಲವರಿಗೆ ಇತರ ಜನಾಂಗದವರನ್ನು ಅದರಲ್ಲಿಯೂ ಏಶ್ಯಾದವರನ್ನು ಸಂಯುಕ್ತ ಆಫ್ರಿಕದಿಂದ ಹೊರದೂಡುವುದೇ ಇಂಗಿತವಿದ್ದಾಗ್ಯೂ ಇವರಿಲ್ಲದಿರುವಲ್ಲಿ ದೇಶದ ಆರ್ಥಿಕ ವೃದ್ಧಿಗೆ ದಕ್ಕೆ ಬರಬಹುದೆಂಬ ಭೀತಿಯಿಂದ ಅಷ್ಟೊಂದು ಮುಂದೊತ್ತಲಿಲ್ಲ. ಹೇಗಾದರೂ ಇವರನ್ನು ಹೀನತರಗತಿಯಲ್ಲೇ ಇಟ್ಟುಕೊಳ್ಳಬೇಕೆಂಬ ಸಾಹಸಮಾಡುತ್ತಿರುವರು. ಏಶ್ಯಾದವರು ಒಹಳ ಕಡಿಮೆ ಸಂಖ್ಯೆಯಲ್ಲಿರುವುದರಿಂದ ಮತ್ತು ಚಳವಳ ಹೂಡುವರೆ ಮುಂದಾಳುಗಳಿಲ್ಲವದರಿಂದ ಅವರನ್ನು ಅವರವರ ದೇಶಕ್ಕೆ ಪುನಹ ಕಳುಹಿಸಲು(Repatriate) ತಯಾರಿದ್ದರು. ತಮ್ಮ ಕೋರಿಕೆಯನ್ನು ನೆರವೇರಿಸುವ ಉದ್ದಿಶ್ಯ ಬಿಳಿಜನರು ನಾನಾರೂಪದ ಪ್ರಚಾರ ಮತ್ತು ಅನಪ್ರಚಾರವಾಡಿ ಆಫ್ರಿಕನರಿಗೂ ಏಶ್ಯಾದವರಿಗೂ ಪರಸ್ಪರ ವಿರೋಧ ಮತ್ತು ದ್ವೇಷ ಬೆಳೆಸಿ 1949ನೇ ಇಸವಿ ಜನವರಿಯಲ್ಲಿ ಅವರೊಳಗೆ ದೊಡ್ಡ ದೊಂಬಿಯಾಗುವಂತೆ ಪಿತೂರಿ ನಡೆಸಿದರು. ರಾಷ್ಟ್ರೀಯ ಪಕ್ಷದವರ ಈ ವರ್ತನೆಯು ಅತಿರೇಕವಾದರೂ ಯುನೈಟೆಡ್ ಪಕ್ಷದವರು ಇವರಿಗಿಂತ ಒಹಳ ಸಲವು ತರಗತಿಯವರೆಂದು ತೋರಿದರೂ ಅವರು ಸಹ ಇದೇ ತತ್ವವನ್ನು ಅಂದರೆ ಬಿಳಿಜನರು ಶ್ರೇಷ್ಠರೆಂಬ ಭಾವನೆಯನ್ನು ಅಚರಿಸುವವರು.

ಈ ರೀತಿ ಭೇದದಿಂದ ಆಳುವ ತತ್ವವನ್ನು (Divide and Rule Principle) ತರುಗಟ್ಟಲು ಇತ್ತೀಚೆಗೆ ಏಶ್ಯಾದವರೂ ಆಫ್ರಿಕನರೂ ಮತ್ತು ವರ್ಣೀಯರೆಲ್ಲರೂ ಒಂದುಗೂಡುವುದರಲ್ಲಿದ್ದಾರೆ. ತಮಗೆ ಬೇಕಾದ ಸುಧಾರಣೆಯನ್ನು ಶಾಂತಿಯುತ ಹಾದಿಯಿಂದ ಪಡೆಯಲು ಸಾಧ್ಯವೆಂದು ತಿಳಿದು ಕ್ರಾಂತಿರೂಪದ ಮಾರ್ಗವನ್ನು ಹಿಡಿಯ ಹೊರಟಿದ್ದಾರೆ. ಬಿಳಿಜನರು ಬಿರ್‌ನದಿಯ ವಿಜಯದ ಸ್ಮರಣಾರ್ಥವಾಗಿ ವರ್ಷಂಪ್ರತಿ ಆಚರಿಸುವ ಹಬ್ಬದ ದಿನವೇ 1949ನೇ ದಶಂಬ್ರ 16 ಇವರು ಬ್ಲೂಮ ಫೋಂಟೇನಿನಲ್ಲಿ ಸಭೆಸೇರಿ ಅಸಹಕಾರ ಚಳವಳವನ್ನು ಹೂಡುವವೆಂಬ ನಿರ್ಧಾರಕ್ಕೆ ಬಂದರು.

ಬಂಡವಳಗಾರರ ಪ್ರಭುತ್ವ ಒಂದೆಡೆ ಸಾಮ್ಯವಾದದವರ ಬಟಾಪಟಿ ಇನ್ನೊಂದೆಡೆ ಇರುವ ಲೋಕಕ್ಕೆ ಒಂದು ಮಾದರಿಯು ಮಧ್ಯಗಾಮಿಯಾಗಿ ತೋರುವ ಸಂಯೋಗವನ್ನು ದಕ್ಷಿಣ ಆಫ್ರಿಕದ ಬಿಳಿಜನರು ಕಲಕೊಂಡರೆಂದೇ ಹೇಳಬೇಕು. ಸರ್ವಶಕ್ತಿ ಮತ್ತು ಒಲಿಯುತಂದ ಈ ಅಲ್ಪಸಂಖ್ಯಾಕರ ಬಹುಪಕ್ಷದವರ ಚಳವಳವನ್ನು ಅಡಗಿಸಬಹುದಾದರೂ ಕೊನೆಗೆ ಬಹುಪಕ್ಷದವರಿಗೆ ಜಯಸಿಕ್ಕುವದೆಂಬುದು ನಿಶ್ಚಯ. ದೇಶದ ಒಳಆಡಳಿತೆಯಲ್ಲಿ ತನ್ನ ದರ್ಪವನ್ನು ತೋರಿಸುವದು ಮಾತ್ರವಲ್ಲದೆ ತನ್ನ ಸಂರಕ್ಷಣೆಗೆ ಒಪ್ಪಿಸಿಕೊಟ್ಟ ದಕ್ಷಿಣ ಪಶ್ಚಿಮ ಆಫ್ರಿಕ ಪ್ರಾಂತಗಳನ್ನು ಮತ್ತು ಬ್ರಿಟಿಷರ ಆಳ್ವಿಕೆಯೊಳಗಿರುವ ಹೈಕಮಿಶನರ ಪ್ರಾಂತಗಳನ್ನು ತನ್ನ ಅಧಿಕಾರದೊಳಗೆ ಕೇಂದ್ರೀಕರಿಸುವ ಹಂಚಿಕೆ ಹಾಕಿರುವರು. 1948ರಲ್ಲಿ ೩೦ ನಿಬಂಧನೆಗಳುಳ್ಳ ಮಾನವರ ಮೂಲಭೂತ ಹಕ್ಕನ್ನು ಸ್ಥಾಪಿಸುವ ಠರಾವನ್ನು ಸಂಯುಕ್ತ ರಾಷ್ಟ್ರಸಂಘದವರು ಮಂಜೂರುಮಾಡಿರುವರು. ದಕ್ಷಿಣ ಆಫ್ರಿಕದ ಸರಕಾರವು ಅದರಲ್ಲಿರುವ ಪ್ರತಿಯೊಂದು ನಿಬಂಧನೆಯನ್ನು ಉಲ್ಲಂಘಿಸಿರುವದು.

ನಿರಾಶೆಗೆ ಒಳಗಾಗದಿರಿ!

ಉಬ್ಬಸ, ಕಫ, ಶ್ವಾಸಕೋಶದಿಂದ

ತೀವ್ರ ವಿಪರೀತ ಕಷ್ಟಪಡುವಿರಾದರೆ ಹಲವಾರು

ಅನಾರೋಗ್ಯ ಔಷಧಿಗಳ ಸೇವನೆಯಿಂದ ನಿಮಗೆ ಗುಣವಾಗದಿರುವುದಾದರೆ,

ಆಶಾಭಂಗಕ್ಕೊಳಗಾಗದಿರಿ!

ಅಲ್ಪವೆಚ್ಚ-ಅಲ್ಪಾವಧಿಯೊಳಗೆ ನಿಮ್ಮ ಬಾಧೆಯನ್ನು ಶಮನಮಾಡುವ

ಖಾತ್ರಿ ಔಷಧಿಯು ನಮ್ಮಲ್ಲಿರುವುದು.

ಒಂದೇ ಒಂದು ಸೀಸೆಯನ್ನು ಕೊಂಡು, ಗುಣಪರೀಕ್ಷೆಮಾಡಿರಿ

ಈ ಹೊಸ ಮದ್ದಿನಿಂದ ನಿಮಗೆ ಅದ್ಭುತ ಗುಣವಾಗುವುದೆಂಬುದು ಖಂಡಿತ

ಕೂಡಲೆ ಬರೆಯಿರಿ:—

M. Mendonca, 2nd floor Ruby Mansion, Parsee Bazar Street, Fort - Bombay.

ಎಂ. ಮೆಂಡೋನ್ಸ, ಎರಡನೆ ಮಾಳಿಗೆ, ರೂಬಿ ಮೆನ್ಶನ್ ಪಾರ್ಸಿಬಜಾರ ಸ್ಟ್ರೀಟ್ ಫೋರ್ಟ, ಬೊಂಬಾಯಿ



ಎಸ್ಟ್ರೇಲಾ ಬ್ಯಾಟರಿಗಳು.

ಎಸ್ಟ್ರೇಲಾ ಬ್ಯಾಟರೀಸ್ ಲಿಮಿಟೆಡ್,

ಬೊಂಬಾಯಿ ೧೯.

ನಮ್ಮ ದುರದೃಷ್ಟ

ಭಾರತ ಜನಾಂಗದ ಆಯುಷ್ಯವು ಉಳಿದೆಲ್ಲ ರಾಷ್ಟ್ರಕ್ಕಿಂತ ಕಡಿಮೆಯಾಗುತ್ತಿದೆ ವಿಪುಲವಾಗಿ ಬೆಳೆಸುತ್ತಿರುವ ನಮ್ಮ ಜನಸಂಖ್ಯೆ ಅಷ್ಟೇ ಬಹಳವಾದ ಸಂಖ್ಯೆಯಲ್ಲಿ ರೋಗರುಜಿನಗಳಿಂದಲೂ— ಬಡತನ ದಾರಿದ್ರ್ಯ— ದುರ್ವ್ಯಸನದಿಂದಲೂ ಸಾಯುತ್ತಾರೆ. ಜನಸಂಖ್ಯೆ ಬೆಳೆಯುತ್ತ ಬಂದಹಾಗೆ ಸಂಕಷ್ಟಗಳೂ ವೃದ್ಧಿಗೊಳ್ಳುತ್ತಲಿವೆ. ಮುಂದಿನ ಜೀವನದ ಕುರಿತು ಕಲ್ಪಿಸಿಕೊಂಡದ್ದೆಲ್ಲ ಗಗನ ಕುಸುಮವೇ ಆಯಿತು. ಹೀಗೇಕಾಗುತ್ತದೆ ಎನ್ನುವುದು ಒಂದು ಸಮಸ್ಯೆಯೆ ಆಗಿದೆ. ಹಿಂದೆಯಾದರೋ ಎಲ್ಲವಿಚಾರಕ್ಕೂ "ಬ್ರಿಟಿಷರು ಕಾರಣ" ವೆಂದು ಹೇಳುತ್ತಿದ್ದೆವು. ಆದರಿಂದು ಹಾಗೆ ಹೇಳುವಂತಿಲ್ಲ. ಸ್ವಾತಂತ್ರ್ಯ ಸಿಕ್ಕಿ ನಾಲ್ಕು ವರ್ಷ ಕಳೆಯುತ್ತ ಬಂದ ಮೇಲೂ ಹಾಗೆ ಹೇಳುವುದು ಯೋಗ್ಯವಲ್ಲ ಈ ದುರ್ಧರಪ್ರಸಂಗಕ್ಕೆ ಈಗಿನ ಸರಕಾರವೇ ಕಾರಣವೆನ್ನುತ್ತಾರೆ ಬಹುಮಂದಿ. ಸ್ವಮತದ ಉದ್ಧಾರಕ್ಕಾಗಿ ಇಂತಹ ಪರಿಸ್ಥಿತಿಯನ್ನು ಟೀಕಿಸಿ ಸರಕಾರವೇ ಕಾರಣವೆಂದು ಹೇಳುತ್ತಾರೆ ಹಲವು ಪಂಗಡದವರು. ಸಹಜವಾಗಿಯಾದರೂ ಸರಕಾರ ಕಾರಣವಲ್ಲ. ಉಣ್ಣುವ ಜನ ಹೆಚ್ಚಾಗಿದ್ದಾರೆ; ದುಡಿಯುವ ಜನ ಕಡಿಮೆಯಾಗಿದ್ದಾರೆ ಯಥಾರ್ಥ ಜೀವನವನ್ನು ಮರೆತು ಯಾವುದೋ ದೇಶದ ಆದರ್ಶಗಳಿಗೆ ಮೋಹಿಸಿ ದುಃಖಪಡುತ್ತಿದ್ದಾರೆ ನಮ್ಮ ಜನ ಕಲಿಯಬೇಕು; ವಿದ್ಯಾವಂತರ ಸಂಖ್ಯೆ ಬಹಳ ಕಡಿಮೆ ನಮ್ಮ ದೇಶದಲ್ಲಿ— ಎನ್ನುವುದೂ ಸರಿ. ಆದರೆ ಕಲಿತೇ ಉದ್ಯೋಗವನ್ನು ಸಂಪಾದಿಸಿಕೊಳ್ಳಬೇಕೆನ್ನುವುದು ಸರಿಯಲ್ಲ. ವರ್ಷದಿಂದ ವರ್ಷಕ್ಕೆ ಕಲಿಯುವವರ ಸಂಖ್ಯೆ ಹೆಚ್ಚುತ್ತಲಿದೆ. ಹೈಸ್ಕೂಲು ಕಾಲೇಜುಗಳು ಎಲ್ಲೆಡೆಯಲ್ಲೂ ಸಾಕಷ್ಟಾಗಿವೆ. ಆದರೆ ಅವು ವಿದ್ಯಾದಾನ ಮಾಡಿ ತಯಾರಿಸಿದವರು ನಿರುದ್ಯೋಗಿಗಳಾಗಿ ಅಲೆದಾಡುವ ಚಿಂತಾಜನಕ ಪರಿಸ್ಥಿತಿಯನ್ನು ನಾವಿಂದು ಕಾಣುತ್ತಲಿದ್ದೇವೆ ಕಲಿತವನ ಬಾಳು ಬಹಳ ನಿಕೃಷ್ಟ. ಕಲಿತವರೆಲ್ಲ ಪೇಟೆಯ—ತಾಲೂಕು ಕಚೇರಿಗಳೇ—ತಮ್ಮ ಉದ್ಯೋಗರಂಗವೆಂದು ತಿಳಿದಿದ್ದಾರೆ. ಹಳ್ಳಿಯೇ ಹೆಚ್ಚಾಗಿರುವ ನಮ್ಮದೇಶದ ಹಳ್ಳಿಯ ಪುನರುತ್ಥಾನಕ್ಕಾಗಿ ಯಾರೂ ಮನಸ್ಸು ಮಾಡುವುದಿಲ್ಲ ಇಂದಿನ ಆಹಾರ ಸಮಸ್ಯೆ ರಾಜಕೀಯ ಆರ್ಥಿಕ ಸಾಂಸ್ಕೃತಿಕ ವಿಚಾರಗಳನ್ನು ಕೆಡಿಸಿಬಿಟ್ಟಿದೆ. ಸರಕಾರವೇನೋ "ವನಮಹೋತ್ಸವ" "ಹೆಚ್ಚು ಆಹಾರ ಬೆಳೆಸಿರಿ" ಮುಂತಾದ ಪ್ರಚಾರಗಳ ಮೂಲಕ ಆಹಾರೋತ್ಪಾದನೆಯ ಆವಶ್ಯಕತೆಯನ್ನು ಒತ್ತಿ ಒತ್ತಿ ಹೇಳುತ್ತಲಿದೆ ಈ ಪ್ರಚಾರ ಪೈಪೋಟಿ ನಗರಗಳಲ್ಲಿ ಮಾತ್ರ ನಡೆಯುತ್ತದೆ ಆದರೆ ನಿಜವಾದ ಪ್ರಯೋಗ ನಡೆಯಬೇಕಾದುದು ಹಳ್ಳಿಯಲ್ಲಿಯೆ ಹೊರತು ಪೇಟೆ ಪಟ್ಟಣಗಳಲ್ಲಲ್ಲ! ಪೇಟೆಯಲ್ಲಿ ಅಲ್ಲಿ ಇಲ್ಲಿ ಆಚರಣೆಗೆಂದು ನೆಟ್ಟ ಸಸಿಗಳಿಂದಾಗಲೀ ಇತರ ಸಸಿಸಪ್ತಾಹದಿಂದಾಗಲೀ ಮಿಲಿಯಗಟ್ಟಲೆ ಜನದ ಹೊಟ್ಟೆ ತುಂಬುವಂತಿಲ್ಲ. ಹಳ್ಳಿಯಲ್ಲಿ ಹಲವಾರು ಭೂಮಿಯು ದುಡಿಯುವ ರೈತನಿಲ್ಲವೆ ಹಾಳುಬೀಳುವಾಗ ಪೇಟೆಯ ಊಟ ಭೂಮಿ ಏನ ಆಹಾರಕೊಟ್ಟೀತು? ದುಡಿಯಲಿಕ್ಕಾಗಿಯೇ ಹುಟ್ಟಿದ ಹಲವು ಹೊಲದ ರೈತರು ಪೇಟೆಯ ಜನದ ಹಸಿವನ್ನು ಹಿಂಗಿಸಬೇಕೆಂದರೆ ಅದು ಹೇಗಾದೀತು? ಹಳ್ಳಿಯಲ್ಲಿ ಹಿಂದಿಗಿಂತಲೂ ಹೆಚ್ಚಿನಂಶದಲ್ಲಿ ಸಾಗುವಳಿ ನಡೆಯಬೇಕು. ಇರುವ ಬರು ಬೂರು ಗದ್ದೆಗಳಲ್ಲಿ ಬಹಳವಾಗಿ ಬೆಳೆಯುತ್ತಿರುವ ಜನತೆಗೆ ಬೇಕಾದ ಆಹಾರವನ್ನು ಒದಗಿಸಲು ಸಾಧ್ಯವಿಲ್ಲ ಹಾಳುಬಿದ್ದಿರುವ ಭೂಮಿಯನ್ನು ಕಡಿದು ಒಡೆದು ಕೃಷಿಗೆ ಉಪಯೋಗಿಸುವ ಕಾರ್ಯ ನಡೆಯಬೇಕು. ಇಂತಹ ಕಾರ್ಯಕ್ಕೆ ಕಲಿತವರು ಮುಂದೆ ಬರಬೇಕು. ನವೀನ ಗೊಬ್ಬರದ ಪ್ರಯೋಗದಿಂದಲೂ—ನೂತನ ಬೀಜದ ಪ್ರಯೋಗದಿಂದಲೂ ಆಹಾರೋತ್ಪಾದನೆಯ ಕಾರ್ಯವನ್ನು ನಡೆಸಬೇಕು. ಇತರ ದೇಶಗಳಲ್ಲಿ ಎಲ್ಲ ಜನರೂ ಸ್ವಾವಲಂಬಿಗಳಾಗಿದ್ದುಕೊಂಡು ನವನೀತ ಮೇಲಿಂದ ಜೀವನ ನಡೆಸುತ್ತಿರುವ ಔಚಿತ್ಯವೆಂದರೂ ಇದೇ ಎಂಬುದನ್ನು ನಾವು ಮರೆಯದಿರೋಣ!

ಈ ಬಗೆಯ ಆದರ್ಶ ಹೊಸತೇನೂ ಅಲ್ಲ. ಮಹಾತ್ಮಾ ಗಾಂಧೀಜಿಯವರು ಈ ಆದರ್ಶವನ್ನು ಮೊದಲೇ ಹೇಳಿದ್ದರು ನಗರಗಳು ವೃದ್ಧಿಗೊಳ್ಳುವದರಲ್ಲಿ ಅವರಿಗೆ ಆಸಕ್ತಿಯಿರಲಿಲ್ಲ ಹಳ್ಳಿಗಳು ಮೇಲೆ ಬರುತ್ತಿರುವುದನ್ನು ಕಂಡ ಅವರು ಹಿಗ್ಗುತ್ತಿದ್ದರು. ಕಲಿತ ತರುಣರು ಹಳ್ಳಿಯಲ್ಲಿ ಮಾಡಬೇಕಾದ ಕೆಲಸಗಳು ಬಹಳವಿವೆ ಎಂದು ಅವರು ಬಹಳಸಲ ಹೇಳಿದ್ದರು. ವಾರ್ಧಯೋಜನೆಯು ಭಾರತದ ಮಟ್ಟಿಗೆ ಕಾಮಧೇನು ಕಲ್ಪವೃಕ್ಷದಹಾಗೆ! ಅಂದು ಪರರ ಆಡಳಿತದಲ್ಲಿ ನಾವು ದಾಸಾನುದಾಸರಾಗಿದ್ದರೆ ಇಂದು ಪರರಾಷ್ಟ್ರಗಳೊಡನೆ ಆಹಾರವನ್ನು ಬೇಡುವ ಭಿಕ್ಷುಕರಾಗಿದ್ದೇವೆ. ಅಮೇರಿಕೆಯು ಆಹಾರವನ್ನು ಕೊಡುವಲ್ಲಿ ನಮ್ಮ ಆತ್ಮಾಭಿಮಾನ ಕೆಣಕಿದ್ದನ್ನು ನಾವು ಲಕ್ಷಿಸಿದರೆ ನಮ್ಮಸ್ಥಿತಿಗೆ ನಿಜವಾಗಿಯೂ ದುಃಖವಾಗದಿರದು ನಮ್ಮ ಹೊಣೆಯನ್ನು ನಾವರಿಯದೆ ಸರಕಾರದ ಅಜಾಗ್ರತೆಯನ್ನು ತೇವೆ. ಹತ್ತನೆಯ ಶತಮಾನದ ಕಾಲವನ್ನು ನೆನಸಿ ಕೂತಲ್ಲಿಗೇ ಸರಕಾರ ಆಹಾರ ಸರಬರಾಯಿ ಮಾಡಬೇಕೆನ್ನುತ್ತೇವೆ. ಕರ್ತವ್ಯ ಶೂನ್ಯರಾದ ನಮ್ಮಪಾಲಿಗೆ ದೇವರೇ ಪ್ರತ್ಯಕ್ಷವಾಗಿ ಭಿಕ್ಷೆ ನೀಡಿದರೂ ನಮ್ಮ ಮೇಲೆ ದಯೆತೋರಿಸಲಾರ. ಸೋಶಲಿಸ್ಟರೂ, ಕಮ್ಯೂನಿಸ್ಟರೂ ಇಂದು 'ರೈತರು ಕಾರ್ಮಿಕರು' ಎಂದು ಕೂಗಾಡುವುದೇ ಹೊರತು ಹಸಿದವರಿಗೆ—ಅನ್ನನೀಡುವ ಮುಖ್ಯ ಉದ್ದೇಶದಲ್ಲಿ ಅವರು ಆಸಕ್ತರಾಗಿಲ್ಲ. ಎಲ್ಲರೂ ಬೋಧಿಸುವವರೇ, ಎಲ್ಲರೂ ಆದರ್ಶ ಹೇಳುವವರೇ! ಎಲ್ಲರೂ ಟೀಕೆ ಮಾಡುವವರೇ!

ಸರಕಾರದ ಯೋಜನೆಯಂತೆ ಕೃಷಿಯ ಅಭಿವೃದ್ಧಿಗಾಗಿ ಕೈಗೊಂಡ ಸುವ್ಯವಸ್ಥಿತ ಕಾರ್ಯಕ್ರಮವು ಕಾರ್ಯರೂಪದಲ್ಲಿ ಬಂದರೆ ನಮ್ಮ ಸ್ಥಿತಿ ಎಷ್ಟೋ ಸುಧಾರಿಸಬಹುದು. ಆದರೆ ಅದನ್ನು ದುರುಪಯೋಗಗೊಳಿಸಿ ಸ್ವಾರ್ಥಕ್ಕೆ ಮನಸ್ಸು ಮಾಡಿ ಜನತೆಗೆ ವಂಚನೆ ಮಾಡುವ ಜನತಾದ್ರೋಹಿಗಳು ಬೇರೆ ಇದ್ದಾರೆ. ಇಂತಹ ದ್ರೋಹಿಗಳಲ್ಲಿ ಕಾಂಗ್ರೆಸ್ಸಿಗರೂ ಇದ್ದಾರೆ—ಕಮ್ಯೂನಿಸ್ಟರೂ ಇದ್ದಾರೆ—ಸೋಶಲಿಸ್ಟರೂ ಇದ್ದಾರೆಯೆಂಬುದನ್ನಾರೂ ಮರೆಯಬಾರದು!

ತಮ್ಮ ಆಲಸಿಗತನದಿಂದ— ಬೆವರು ಸುರಿಸಿ ದುಡಿಯುವ ಮನಸ್ಸು ಇಲ್ಲದೆಯೇ ತೋರಿಕೆಗೆ ಒಂದು ಪಕ್ಷ ಕಟ್ಟಿಕೊಂಡು ಅನ್ನವಿಲ್ಲ; ಬಟ್ಟೆಯಿಲ್ಲವೆಂದು ರೇಗಾಡುವವರೇ ಬಹುಮಂದಿ. ಪರದೇಶಗಳಲ್ಲಿಯ ವಿಲಾಸಮಯ ಜೀವನವನ್ನು ಕಂಡು ಬಾಯಿಬಿಡುವ ನಾವು ಅವರ ಪ್ರಾಮಾಣಿಕತನದಿಂದಲೂ ವಿಶೇಷ ಶ್ರಮದಿಂದಲೂ ದುಡಿಯುವುದನ್ನು ಮರೆತಿದ್ದೇವೆ. ಕಷ್ಟಬಿಟ್ಟರೇನೇ ಇಷ್ಟ ಪಡೆಯಬಹುದು. ಚಿಕ್ಕದಾದ ನಮ್ಮ ಆಯುಷ್ಯಕಾಲವನ್ನು ಅತಿ ಮಹತ್ವದ್ದೆಂಬುದಾಗಿ ತಿಳಿದು ದುರ್ವ್ಯಸನದಿಂದ ದೂರಾಗಿರುವಷ್ಟುಕಾಲ ಸ್ವಾವಲಂಬಿಗಳಾಗಲು ಯತ್ನಿಸಬೇಕು. ದೇಶಹಿತಕಾರ್ಯದಲ್ಲಿ ಸಾಧ್ಯವಾದರೆ ನಾವು ಭಾಗಿಗಳಾಗಬೇಕು; ಹೊರತು ಎಲ್ಲರೊಟ್ಟಿಗೆ 'ಗೋವಿಂದಾನುಗೋವಿಂದ' ಎನುವ ಅಪಕ್ವಮನೋವೃತ್ತಿಯನ್ನು ಪ್ರದರ್ಶಿಸದೆ ವಿವೇಕಪೂರ್ಣ ವಿಮರ್ಶೆ ಮಾಡಬೇಕು ಆಗ ನಮ್ಮ ದುರದೃಷ್ಟಕ್ಕೆ ಯಾರು ಹೊಣೆ ಸರಕಾರವೋ—ಜನತೆಯೋ ಎಂಬುದು ಸ್ಪಷ್ಟವಾಗುತ್ತದೆ!

ACKNOWLEDGEMENT

Mr. K. S. Kamath of M. G. M. College, Udipi thanks all his friends who have been good enough to send him their good wishes on the occasion of his recent marriage and requests to be excused for his inability to acknowledge them individually.

IN THE SERVICE OF THE COUNTRY

1925 – 1950



Bank your Savings with

THE CANARA INDUSTRIAL & BANKING SYNDICATE LTD.

ನಿಮ್ಮ ಉಳಿತಾಯವನ್ನು ಇರಿಸಲಿಕ್ಕೆ

ದಿ ಕೆನರಾ ಇಂಡಸ್ಟ್ರಿಯಲ್ ಎಂಡ್ ಬ್ಯಾಂಕಿಂಗ್ ಸಿಂಡಿಕೇಟ್ ಲಿಮಿಟೆಡ್

ವಿವಿಧ ಪಾತ್ರೆಗಳು



ಯಾವತ್ತೂ ವಿಧದ ಬೆಳ್ಳಿ, ತಾಮ್ರ, ಹಿತ್ತಾಳೆ, ಕಂಚು ಮೊದಲಾದುವುಗಳ ವಿವಿಧ ಪಾತ್ರೆಗಳೂ ಸಾಮಾನುಗಳೂ ರಖಂ ಆಗಿಯೂ ಚಿಲ್ಲರೆಯಾಗಿಯೂ ದೊರೆಯುತ್ತವೆ.

ಕಲ್ಯಾಂಜೆ ವ್ಯಾಸಾಚಾರ್ಯ,
ರಥಬೀದಿ, ಉಡುಪಿ

ಶಾಲೆ, ಕಾಲೇಜುಗಳಿಗೂ
ಸಹಕಾರಿ ಸಂಘ, ಮುನ್ಸಿಫ್
ಕೋರ್ಟುಗಳಿಗೂ ಕೃಷಿಕ,
ವರ್ಗದಾರ, ವ್ಯಾಪಾರಿಗಳಿಗೂ
ಬೇಕಾಗುವ ಉತ್ತಮ ಕಾಗದದಲ್ಲಿ
ತಯಾರಿಸಿದ
ತರತರದ ಫಾರ್ಮುಗಳು,
ರಶೀದಿ ಪುಸ್ತಕಗಳು, ಎಕೌಂಟ್
ಪುಸ್ತಕಗಳು, ಮಗ್ಗಿ ಪುಸ್ತಕಗಳು
ದೊರೆಯುತ್ತವೆ.

ನವಯುಗ ಪ್ರೆಸ್, ಉಡುಪಿ.

ಭಾರತಕ್ಕೆ ಬ್ರಿಟನದ ಸಹಾಯವೇನು?

"ಭಾರತದಲ್ಲಿಯ ಆಹಾರದ ಅಭಾವಕ್ಕೆ ಬ್ರಿಟನು ಯಾವ ರೀತಿಯ ಸಹಾಯ ನೀಡಬಲ್ಲುದು?" ಎಂದು ಮಾನ್ಯ ಸದಸ್ಯರೊಬ್ಬರು ಪ್ರಶ್ನಿಸಿದ್ದರು. ಭಾರತದ ಬಗ್ಗೆ ಬ್ರಿಟನಿನ ಧೋರಣೆಯೇನೆಂಬುದನ್ನು ಬರುವ ವಾರದಲ್ಲಿ ಸ್ಪಷ್ಟೀಕರಿಸಲಾಗುವದೆಂದು ಉತ್ತರಬಂದಿತ್ತು. ಈಗ ಬ್ರಿಟನು ನೀಡಬಹುದಾದ ಸಹಾಯವೇನೆಂಬುದು ಸ್ಪಷ್ಟವಾಗಿದೆ. ನಾನಾಪಕ್ಷಗಳ ಸದಸ್ಯರ ಪ್ರಶ್ನೆಗೆ ಉತ್ತರವನ್ನೀಯುತ್ತ ಕಾಮನವೆಲ್ತ್ ಶಾಖೆಯ ಮಂತ್ರಿಗಳಾದ ಪ್ಯಾಟ್ರಿಕ್ ಗಾರ್ಡನ್ ವಾಕರರು "ಭಾರತಕ್ಕೆ ಆಹಾರಧಾನ್ಯವನ್ನು ಕಳಿಸುವದಕ್ಕೆ ಬ್ರಿಟನ್ ತೀರ ಅಸಮರ್ಥವಾಗಿದೆ. ನಮಗೆ ಆಹಾರದ ಕೊರತೆಯಿದ್ದು ನಾವು ಪರರಾಷ್ಟ್ರದಿಂದ ಆಯಾತ ಮಾಡಿಕೊಳ್ಳುತ್ತಲಿದ್ದೇವೆ. ನಮಗೆ ಬರುವಂತಹ ಅಕ್ಕಿಯು ಬ್ರಿಜಲಿನದ್ದು. ಅದು ಭಾರತದ ಉಪಯೋಗಕ್ಕೆ ಬೀಳಲಾರದು. ಧಾರಣೆಯೂ ಅತಿಯಾಗಿದೆ. ಇತರ ಕಾಮನವೆಲ್ತ್ ರಾಷ್ಟ್ರಗಳನ್ನು ಭಾರತದ ಬರಗಾಲಕ್ಕೆ ಸಹಾಯವನ್ನು ಕೇಳಿಕೊಳ್ಳಲಾಗಿದೆ. ಅದರಲ್ಲಿ ಆಸ್ಟ್ರೇಲಿಯಾ ಕೆನಡಾ ಮತ್ತು ಪಾಕಿಸ್ತಾನಗಳು ತಾವು ಸಾಧ್ಯವಿದ್ದಷ್ಟು ಸಹಾಯನೀಡುವೆವೆಂದು ತಿಳಿಸಿರುವವು. ಈ ವರ್ಷದಲ್ಲಿ ಉತ್ತರ ಅಮೆರಿಕಾ ಮತ್ತು ಆಸ್ಟ್ರೇಲಿಯಾದಿಂದ ಬರಬೇಕಾದ 60 ಹಡಗುಗಳನ್ನು ಭಾರತಕ್ಕೆ ಬಿಟ್ಟುಕೊಡಲಾಗಿದೆ. ಚೀನದಿಂದ ಅಕ್ಕಿ ತರಿಸಲು ಮತ್ತೆ 21 ಹಡಗುಗಳನ್ನು ಬಿಟ್ಟುಕೊಡಲಾಗಿದೆ. ಆಸ್ಟ್ರೇಲಿಯದಿಂದ ಬ್ರಿಟನಿಗೆ ಬರಬೇಕಾಗಿದ್ದ 43 ಸಾವಿರಟನ್ ಗೋದಿಯನ್ನು ಭಾರತಕ್ಕೆ ಕೊಟ್ಟದ್ದು ಇದರ ಮರುಪಾವತಿಯನ್ನು ಭಾರತದ ಆಹಾರ ಪರಿಸ್ಥಿತಿ ಸುಧಾರಿಸುವವರೆಗೆ ಮುಂದೂಡಲಾಗಿದೆ. ಸಧ್ಯ ನಾವು ಭಾರತದ ಬರಗಾಲದ ನಿವಾರಣೆಗೆಂದು 7-8 ಲಕ್ಷಟನ್ ಆಹಾರಧಾನ್ಯಸಾಗಿಸಲು ಹಡಗುಗಳನ್ನು ಭಾರತಕ್ಕೆ ಒದಗಿಸಿದ್ದೇವೆ. ಭಾರತದ ಮುಖ್ಯ ಮಂತ್ರಿ ನೆಹ್ರೂರವರು ನಮ್ಮ [illegible] ನ್ನರಿತುಕೊಂಡು ನಾವು ನೀಡಿದ ಸಹಕಾರವನ್ನು ಶ್ಲಾಘಿಸಿದ್ದಾರೆ. ಈಚೆಗೆ ಭಾರತ ಆಹಾರ ಮಂತ್ರಿ ಭಾರತದ ಆಹಾರ ಪರಿಸ್ಥಿತಿ ಸುಧಾರಿಸಿದೆ ಎಂದು ಹೇಳಿರುತ್ತಾರೆ. ಈ ಸಂದರ್ಭದಲ್ಲಿ ಭಾರತದ ಭೀಕರ ಪರಿಸ್ಥಿತಿಯು ದೂರಾಗಲೆಂದು ಸಹಾನುಭೂತಿಪರ ನಾವು ಪ್ರಾರ್ಥಿಸುವದಕ್ಕಿಂತ ಬೇರೇನೂ ಮಾಡುವಂತಿಲ್ಲ" ಎಂದಿರುತ್ತಾರೆ.

ನೆಹ್ರೂ ಭರವಸೆಗಳು

ಭಾರತ ರಾಜ್ಯಘಟನಾ ತಿದ್ದುಪಡಿಯ ಚರ್ಚೆಯು ಪಾರ್ಲಿಮೆಂಟಿನಲ್ಲಿ ನಡೆಯುತ್ತಲಿದೆ. ತಿದ್ದುಪಡಿಯ ಕುರಿತು ಮಾತನಾಡಿದ ಹೆಚ್ಚಿನ ಸದಸ್ಯರಲ್ಲಿ ತಿದ್ದುಪಡಿಯಲ್ಲಿ ಸರಿಯಾದ ಸ್ಪಷ್ಟೀಕರಣ ಕಂಡುಬರುತ್ತಿಲ್ಲವೆಂದು ಸಾಧಿಸಿದ್ದಾರೆ. ಪ್ರೊ. ಟಿ. ಕೆ. ಶಾಹರವರೂ ಈ ತಿದ್ದುಪಡಿಯಿಂದ ಉಪಕಾರವಾಗದೆ ಮುಂದಕ್ಕೆ ಉಪದ್ರವೇ ಆದೀತೆಂದು ನನಗನ್ನಿಸುತ್ತದೆ ಎಂದಿದ್ದಾರೆ. ಈ ತಿದ್ದುಪಡಿಯಿಂದ ಜನತಾ ಹಕ್ಕನ್ನು ಕಸಿದುಕೊಂಡು ಹಿಂದಿನಿಂದ ಅವರನ್ನು ಇರಿಯುವಂತೆ ಮಾಡಲಾಗಿದೆ ಎಂದು ದಾ। ಮುಖರ್ಜಿಯವರು ಹೇಳಿರುತ್ತಾರೆ. ಫ್ರಾಂಕ್ ಅಂಥೋನಿಯವರ "ಭಾರತಕ್ಕೆ ಪ್ರಜಾಪ್ರಭುತ್ವವೇ ಬೇಡವೆಂದು ಇದರಿಂದ ಸಿದ್ಧವಾಗುತ್ತದೆ. ನೆಹ್ರೂರವರು ಕೊಡುತ್ತಿರುವ ಸಮಾಧಾನಗಳು ಯಥಾರ್ಥವಾದವುಗಳಾದರೂ ಪ್ರಾಂತಿಕ ಸರಕಾರಗಳು ಅದರ ಸದುಪಯೋಗವನ್ನು ಪಡೆದಾವೆನ್ನುವದರಲ್ಲಿ ನನಗೇನು ಭರವಸೆಯಿಲ್ಲ. ನೆಹ್ರೂರೊಬ್ಬರಿಗೇ ಆ ಅಧಿಕಾರ ಬಿಟ್ಟುಕೊಡುವದಾದರೆ ನಾನು ಒಪ್ಪಬಲ್ಲೆ. ಅವರ ಇಂಗಿತದ ಬಗ್ಗೆ ನನಗೆ ಸಂಪೂರ್ಣ ವಿಶ್ವಾಸವಿದೆ" ಎಂದಿರುತ್ತಾರೆ. ಹೆಚ್ಚಿನ ಸದಸ್ಯರು ಕೊನೆಗೆ ಒಪ್ಪಿಗೆಯನ್ನಿತ್ತರೂ ಅರೆಮನಸ್ಸಿನ ಧೋರಣೆಯನ್ನು ವ್ಯಕ್ತಪಡಿಸಿದ್ದು ಕಂಡುಬರುತ್ತದೆ. ಮುಖ್ಯವಾಗಿ ಪತ್ರಿಕಾ ಸ್ವಾತಂತ್ರ್ಯದ ವಿಚಾರದ ತಿದ್ದುಪಡಿಯಲ್ಲಿ ತೀವ್ರವಾದ ವಿರೋಧ ಕಂಡುಬಂದಿದೆ. ಪರಿಶೀಲನ ಸಮಿತಿಯಲ್ಲೂ ಒಮ್ಮತದ ಅಭಿಪ್ರಾಯ ಕಂಡುಬರಲಿಲ್ಲ. ಪತ್ರಿಕಾ ಸ್ವಾತಂತ್ರ್ಯದ ವಿಚಾರವಾಗಿ ಮಾತನಾಡುತ್ತಾ ಸಿ. ರಾಜಗೋಪಾಲಾಚಾರ್ಯರು "ಪತ್ರಿಕೆಗಳ ನ್ಯಾಯುವಾದ ಹಕ್ಕುಭದ್ರತೆಗಳನ್ನು ಕಸಿದುಕೊಳ್ಳುವ ಇಚ್ಛೆ ಸರಕಾರಕ್ಕಿಲ್ಲ'ವೆಂದಿದ್ದಾರೆ. ನೆಹ್ರೂರವರು ಮಾನ್ಯ ಸದಸ್ಯರ ಸಂಶಯಾಸ್ಪದ ಟೀಕೆಗಳಿಗೆ ಸಮರ್ಪಕವಾಗಿ ಉತ್ತರವನ್ನಿತ್ತಿರುವದಾದರೂ ಕಾಯಿದೆ ರೂಪದಲ್ಲಿ ಅದಕ್ಕೆ ಯಾವರೀತಿಯ ಬಿಡುಗಡೆ ಪೂರ್ಣ ಕಂಡುಬರುವದಿಲ್ಲ. ಈ ವಿಚಾರದಲ್ಲಿ ಫ್ರಾಂಕ್ ಅಂಥೋನಿಯವರು "ನೆಹ್ರೂರವರ ವಾದ ಅವರಮಟ್ಟಿಗೆ ಸರಿ. ಆದರೆ ಪ್ರಾಂತೀಯ ಸರಕಾರಗಳು ನ್ಯಾಯುವನ್ನು ನೋಡುವುದು ಕಾಯಿದೆಯ ಮೂಲಕವೇ. ಆದುದರಿಂದ ಇದರ ಹಕ್ಕನ್ನು ಪ್ರಾಂತೀಯ ಸರಕಾರಕ್ಕೆ ಬಿಟ್ಟುಕೊಡದೆ ಪಾರ್ಲಿಮೆಂಟು ಅಥವಾ ರಾಷ್ಟ್ರಾಧ್ಯಕ್ಷರೇ ಇಟ್ಟುಕೊಳ್ಳಬೇಕೆಂದು' ಹೇಳಿರುವದು ಯೋಗ್ಯವಾಗಿದೆ. ಮದ್ರಾಸದ ಹಿಂದುಳಿದವರ ಶಿಕ್ಷಣಿಕ-ಆರ್ಥಿಕ ಸಾಮಾಜಿಕಾಭಿವೃದ್ಧಿಯನ್ನು ಬಯಸುವಲ್ಲಿ ಯಾವ ಜಾತಿಗೂ ಅನ್ಯಾಯವಾಗಲಾರದೆಂದು ಮದ್ರಾಸು ಮುಖ್ಯಮಂತ್ರಿಯಿತ್ತ ಭರವಸೆಯನ್ನಷ್ಟೇ ನೆಹ್ರೂರವರು ಪಾರ್ಲಿಮೆಂಟಿಗೆ ಕೊಟ್ಟಿರುತ್ತಾರೆ. ಒಂದು ವೇಳೆ ಭರವಸೆ ಬುಡಮೇಲಾದರೆ ಸ್ವತಃ ನೆಹ್ರೂರವರಿಗೇ ಕಾಯಿದೆ ರಕ್ಷಣೆ ಕೊಡಲಾರದು! 19ನೆಯ ಘಟನೆಯಂತೆ ಪತ್ರಿಕಾ ಸ್ವಾತಂತ್ರ್ಯವನ್ನೂ ವಾಕ್ ಸ್ವಾತಂತ್ರ್ಯವನ್ನೂ ಕೊಟ್ಟಿರುವೆವೆಂದು ಹೇಳಿ ಹಲವು ಸಂದರ್ಭಗಳಲ್ಲಿ ಮೂಲೆಗಿಟ್ಟು ಪತ್ರಿಕೆಗಳು ತಮ್ಮ ಅಭಿಪ್ರಾಯಗಳನ್ನು ಪ್ರಕಟಿಸಿ ಸರಕಾರಕ್ಕೆ ಗಂಡಾಂತರ ಪ್ರಸಂಗವನ್ನು ತಂದೊಡ್ಡುವಲ್ಲಿ ಅಂತಹ ಪ್ರಯೋಗವನ್ನು ಕೈಗೊಳ್ಳಬೇಕಾದೀತೆಂದು ಹೇಳಲಾಗಿದೆ. [illegible] ದಿನ ಪತ್ರಿಕೆಗಳು ಹೊರಗೆಡುವ ವಿಚಾರ "ಪ್ರಮಾಣಬದ್ಧವಾದುದೋ- ಅಕ್ರಮ ಪ್ರೇರಿತವೋ- ಎಂಬುದನ್ನು ಕೋರ್ಟೇ ನಿಶ್ಚಯಿಸಬೇಕು. ಆಗ ಈ ಕಾಯ್ದೆಯೇ ಗತ್ಯ, ಸತ್ಯಾಸತ್ಯತೆಯ ಪ್ರಶ್ನೆಯೇ ಉಳಿಯಲಾರದು. ಆದರಾಗ ಪ್ರಾಂತದ ಸರಕಾರಗಳು ತಮಗೆ ಬೇಡಾದ ಪತ್ರಿಕೆಗಳ ಮೇಲೆ ನಿರ್ಬಂಧ ಹೇರಬಹುದಾಗಿದೆ. ನೆಹ್ರೂರವರ ಭರವಸೆ-ಆಶ್ವಾಸನೆ ಅಭಯವನ್ನು ನೀಡುವಂತಿಲ್ಲ. ಅಂತಹದೇ ಮಾನ್ಯ ಸದಸ್ಯರು ಆ ಅಧಿಕಾರವನ್ನು ಕೊನೆಯದಾಗಿ ಅಧ್ಯಕ್ಷರಿಗೆ ಬಿಟ್ಟುಕೊಡಬೇಕೆಂದು ಸೂಚಿಸಿದ್ದು ಯೋಗ್ಯವೇ ಆಗಿದೆ. ಈ ತಿದ್ದುಪಡಿಗಳು ಜನತೆಯ ಸಮಸ್ಯೆಗಳನ್ನು ತಂದೊಡ್ಡುತ್ತವೋ- ರಾಜ್ಯಪಾಲನೆಗೆ ಹೊಸ ಕೊಲೆಯಾಗುತ್ತವೋ ಹೇಗೆಂಬುದನ್ನು ಮುಂದೆ ಕಾರ್ಯರೂಪದಲ್ಲೇ ನೋಡಬೇಕಾಗಿದೆ.

ಮುನ್ಷಿಯವರ ಮಂತ್ರ

ಕೇಂದ್ರ ಸರಕಾರದ ಆಹಾರ ಮಂತ್ರಿ ಶ್ರೀ ಮುನ್ಷಿಯವರು ಆಹಾರದ ಕುರಿತಾಗಿ ಜಾರಿಕೆಯ ಹೇಳಿಕೆಯನ್ನು ಕೊಟ್ಟಂತಿದೆ. ಬಿಹಾರ ಮದ್ರಾಸುಗಳ ಆಹಾರ ಪರಿಸ್ಥಿತಿಯು ದಿನದಿಂದ ದಿನಕ್ಕೆ ಕೆಡುತ್ತಲಿದ್ದು ಬಿಹಾರದಲ್ಲಿ ಜನ ಎಲೆಗಳನ್ನೋ ಇನ್ನಿತರ ಕಾಡುಪದಾರ್ಥಗಳನ್ನೋ ತಿಂದು ಜೀವಿಸುತ್ತಿರುವದನ್ನು ಪತ್ರಿಕೆಗಳು ವಿವರಿಸಿದ್ದಾರೆ. ಮೊನ್ನೆ ಮೊನ್ನೆ ಮದ್ರಾಸಿನಲ್ಲಿ ಆಹಾರವಿಲ್ಲದೆ ಸತ್ತಿರುವ [illegible] ಒಪ್ಪಿದ-ತಿಲ್ಲ. ಶ್ರೀ ಮುನ್ಷಿಯವರು "ದೇಶದ ಯಾವ ಪ್ರಾಂತವಾಗಲೀ-ಭಾಗವಾಗಲೀ ಬರಗಾಲ ಪೀಡಿತ ಪ್ರದೇಶವೆಂದು ಸಾರಿಬಿಟ್ಟಿದ್ದು ಇರುವದಿಲ್ಲ. ಆಹಾರ ಸರಬರಾಯು ಸುಸೂತ್ರವಾಗಿ ಜರುಗುತ್ತಲಿದೆ" ಎಂದು ಪಾರ್ಲಿಮೆಂಟಿನಲ್ಲಿ ಹೇಳಿರುತ್ತಾರೆ. ಬಿಹಾರದ ಪರಿಸ್ಥಿತಿ ಕಂಡಂತೆ ಸುಧಾರಿಸಿ ಮಳೆಗಾಲದ ಆಹಾರ ಸಂಗ್ರಹವು ತಕ್ಕಮಟ್ಟಿಗೆ ಆಗಿದೆಯೆಂದು ತಿಳಿದುಬರುತ್ತದೆ. ಮದ್ರಾಸದ ಗತಿಯೇನು? ಎಂಬುದೇ ದೊಡ್ಡ ಸಮಸ್ಯೆ. ಮದ್ರಾಸದ ಹಲವು ಜಿಲ್ಲೆಗಳಲ್ಲಿ ಆಹಾರದ ಅಭಾವದಿಂದ 'ಹಾಹಾಕಾರ' ವೆದ್ದಿದೆ. ಮೊದಲಿಗೆ 50-60ರ ವರೆಗೆ ಧಾರಣೆ ಹೆಚ್ಚಿರುತ್ತ ಬರಗಾಲದ ಭೀತಿ ಹತ್ತಿರ ಬಂದಂತಿದೆ. ಮದ್ರಾಸವು ಕೇಂದ್ರ ಸರಕಾರದೊಡನೆ 1951ರ 4 ಲಕ್ಷ ಟನ್ ಆಹಾರದ ಕೊಡುಗೆಯನ್ನು 5 ಲಕ್ಷ ಹೆಚ್ಚಿಸಬೇಕೆಂದು ಕೇಳಿಕೊಂಡಿದ್ದರೂ ಕೇಂದ್ರದ ಕಾರ್ಯಕ್ರಮ ಪರ್ಯಾಲೋಚನೆಯಲ್ಲೇ ಬಿದ್ದಿದೆ. ಜನವರಿ ವರೆಗೆ ಮದ್ರಾಸಕ್ಕೆ ಕೇಂದ್ರದಿಂದ ಆಹಾರಧಾನ್ಯ ಕೇವಲ 2 ಲಕ್ಷ 19 ಸಾವಿರ ಟನ್ ಬಂದಿರುತ್ತದೆ. ಹೆಚ್ಚಾಗಬೇಕಾದ ಆಹಾರಧಾನ್ಯವು ಇತರ ರಾಷ್ಟ್ರಗಳಿಂದ ಬರುವದರ ವೇಳೆ ಹೊಂದಿಕೊಂಡಿದೆಯೆಂದು ಮಾನ್ಯ ಮುನ್ಷಿಯವರು ಹೇಳುತ್ತಾರೆ. ಈ ಮಂತ್ರಿಗಳು ಕೊಡುವ ಭರವಸೆಗೂ- ಹೇಳಿಕೆಗೂ ವಸ್ತುಸ್ಥಿತಿಗೂ ತಾಳಮೇಳವೇ ಇರುವುದಿಲ್ಲ'. ಹಿಂದಿನ ದಿನಗಳಲ್ಲಿ ಮದ್ರಾಸದ ಸ್ಥಿತಿಯು ಬಿಹಾರಕ್ಕಿಂತಲೂ ಭೀಕರವಾಗುವ ಪರಿಸ್ಥಿತಿಯಿದೆ. [illegible] ದುಷ್ಪರಿಣಾಮ [illegible] ಸಂದೇಹವಿಲ್ಲ.

Do You Know?

Do you know that within about 2 hours you can know whether you will be a success in life insurance selling or not? There are to-day many able, educated, young men who will give serious consideration to life insurance selling as a career if they have convincing evidence regarding their actual chances of success. Very few people know the success that can be attained by an Insurance Agent. There are life Insurance Agents in India whose average earning per month varies from Rs 500/- to Rs 5,000/- and one of them even got an address from a very big Municipality in recognition of his services as an Insurance Agent. There is scope for hundreds of such Insurance Agents to-day in India and we want to build up a field force consisting of such men because it is only those that can add to the prestige of the profession and disabuse the public-mind of its ill-conceived notions regarding the vocation of an Insurance Agent. To enable one and all concerned to know in advance the chances of one's success, we can administer to an applicant the approved American psychological test. This test has proved to be an accurate guide both in America and in Europe. We wellcome interested young educated candidates to our Head Office to undergo the test. Time taken to administer the test is only 2 hours and immediately you can know your chance of success.

After the test is administered if the candidate is found fit for the profession, the Company will be glad to give him the necessary training for a fortnight.

The Canara Mutual Assurance Co., Ltd.

H. O. UDIPI (SOUTH INDIA) Estd. 1935.

ಚಂದಾ ವಿವರ
ವರ್ಷಕ್ಕೆ ರೂ. 5-12—0
6 ತಿಂಗಳಿಗೆ ರೂ 3—0—0

ಗುರುವಾರ' ಉಡುಪಿ, ೭-೬-೫೧

ಕೊರಿಯಾ ಯುದ್ಧ ಮುಕ್ತಾಯದ ಸೂಚನೆ?

ಕೊರಿಯಾ ಯುದ್ಧವನ್ನು ಮುಗಿಸಿಬಿಡುವ ಪ್ರಯತ್ನಗಳು ಬಹಳವಾಗಿ ಕೇಳುತ್ತಲಿವೆ. ಬ್ರಿಟನ್ ಅಮೇರಿಕಾಗಳು ಯುದ್ಧ ಮುಕ್ತಾಯ ವಿಚಾರದಲ್ಲಿ ವಿಶೇಷಾಸಕ್ತಿ ವಹಿಸಿದಂತಿದೆ. ಕಳೆದವಾರ ಕಮ್ಯೂನಿಸ್ಟರ ಹಾಗೂ ಸಂ. ರಾ. ಸಂಘದೊಳಗಾದ ಭೀಕರ ಕದನದಲ್ಲಿ ಕಮ್ಯೂನಿಸ್ಟರು ಈ ಹಿಂದೆಂದೂ ಅನುಭವಿಸದ ಸಾವು ನೋವುಗಳಿಗೆ ತುತ್ತಾಗಿರುತ್ತಾರೆ. 10ಸಾವಿರ ಕಮ್ಯೂನಿಸ್ಟ ಸೈನಿಕರನ್ನು ಸೆರೆಹಿಡಿಯಲಾಗಿದೆಂದು ತಿಳಿದು ಬರುತ್ತದೆ. ಪಸಂತಕಾಲದ ಭೀಕರಧಾಳಿಯಲ್ಲಿ ಕಮ್ಯೂನಿಸ್ಟರೇ ಸೋಲನ್ನಪ್ಪಿಕೊಳ್ಳಬೇಕಾಯ್ತು. ಈಗ ಕಮ್ಯೂನಿಸ್ಟರನ್ನು ಸಂ. ರಾ ದಳಗಳು ಬೆನ್ನಟ್ಟಿ ಕೊಂಡುಹೋಗಿ ಕಾದಾಡುವ ಪ್ರಸಂಗವನ್ನು ಬಿಟ್ಟುಕೊಟ್ಟಿರುತ್ತಾರೆ. ಕೊರಿಯದಲ್ಲಿ ಎಂಟನೆಯ ಸೈನ್ಯಪಡೆಯು ಕಮ್ಯುನಿಸ್ಟರನ್ನು ಹಿಂಬಾಲಿಸಿಕೊಂಡು ಹೋಗುವದನ್ನು ಪ್ರತಿಬಂಧಿಸಲಾಗಿದೆಂದು ಲೆ ಜನರಲ್ ವಾನಪ್ಲೀಟರು ಹೇಳಿದುದರಿಂದ ಯುದ್ಧವನ್ನು ನಿಲ್ಲಿಸುವ ಯೋಚನೆಯಿದೆಯೆಂದು ಸ್ಪಷ್ಟವಾಗುತ್ತದೆ. ಕಮ್ಯೂನಿಸ್ಟರನ್ನು ಉತ್ತರ ಕೊರಿಯಕ್ಕೆ ಹಿಂದೂಡಿ ಮುಂದೆ ದಕ್ಷಿಣಕೊರಿಯಕ್ಕೆ ಕಾಲಿಡಲಾಗದಂತ ಜಾಗ್ರತೆವಹಿಸುವದಷ್ಟೇ ನಮ್ಮ ಕರ್ತವ್ಯವೆಂದು ಜ. ವಾನಪ್ಲೀಟರು ಹೇಳಿರುತ್ತಾರೆ. ಏರನೇ ಅಕ್ಷಾಂಶದ ಮೇಲೆ ಯುದ್ಧ ಮುಗಿಸಿಬಿಡುವದು ಸಂ. ರಾ. ಸಂಘಕ್ಕೆ ಇಷ್ಟವಾಗಿರುವದರಿಂದ ಟ್ರೂಮನ್ನರು ಜನರಲ್ ರಿಜವೆಯವರಿಗೆ 38ನೇ ಅಕ್ಷಾಂಶದಲ್ಲಿ ಯುದ್ಧ ನಿಲ್ಲಿಸುವಂತೆ ಆದೇಶಕೊಟ್ಟಿರುತ್ತಾರೆಂದು ಹಲವು ರಾಜಕೀಯ ವರ್ಗಗಳಿಂದ ತಿಳಿದುಬರುತ್ತದೆ.

ಬ್ರಿಟನವೂ ಯುದ್ಧ ಸಂಧಾನದ ಮಾತುಕತೆಗಾಗಿ ಮಿತ್ರರಾಷ್ಟ್ರಗಳ ಅಭಿಪ್ರಾಯವನ್ನು ಕೇಳುತ್ತಲಿದೆ. ಕಮ್ಯೂನಿಸ್ಟ ಚೀನದೊಡನೆ ಸಂಧಾನನಡೆಸಲು ಒಂದು ಯೋಜನೆ ನಡೆಸಿದ್ದು ಕಾಮನವೆಲ್ತ ರಾಷ್ಟ್ರಗಳ ಹಾಗೂ ಅಮೆರಿಕೆಯ ಸಲಹೆಯನ್ನು ಪಡೆಯುವ ಕಾರ್ಯ ನಡೆಯುತ್ತಲಿದೆ. ತನ್ನ ಯೋಜನೆಯಂತೆ ಯುದ್ಧ ಮುಕ್ತಾಯದ ಕರಾರನ್ನು ಭಾರತ ಸರಕಾರದ ಮೂಲಕ ಕಮ್ಯೂನಿಸ್ಟ ಚೀನಕ್ಕೆ ಕಳಿಸುವದೇ ಹಾರ್ಬರ್ಟ ಮಾರಿಸನ್ನರ ಉದ್ದೇಶವಿದೆಂದು ತಿಳಿದುಬರುತ್ತದೆ. ಅಮೆರಿಕಾದ ವಿದೇಶಾಂಗ ಮಂತ್ರಿ ಡೀನ್ ಆಚೆಸನ್ನರಿಗೆ ಸಿನೇಟದಲ್ಲಿ "ಕೊರಿಯದಲ್ಲಿ ಯುದ್ಧ ನಿಲ್ಲಿಸುವ ಸೂಚನೆ ಕಳಿಸಲಾಗಿದೆಯೆ?" ಎಂದು ಕೇಳಿದಕ್ಕೆ ಅವರು ಉತ್ತರಿಸಲು ನಿರಾಕರಿಸಿದ್ದನ್ನು ನೋಡುವಾಗ ಸಂ. ರಾ. ಸಂಘವು ಶೀಘ್ರದಲ್ಲಿಯೇ ಚೀನಕ್ಕೆ ಯುದ್ಧ ನಿಲ್ಲಿಸುವ ಸೂಚನೆ ಕಳಿಸುವದೆಂದು ಊಹಿಸಲಾಗುತ್ತದೆ.

ಅಸಿಸ್ಟೆಂಟ್ ಈ ಸಂಧಾನದ ಬಗ್ಗೆ ತಿಳಿಯಲು [illegible] ವರ್ಗಗಳಲ್ಲಿ ವಿಶೇಷ ಕುತೂಹಲವನ್ನುಂಟುಮಾಡಿದೆ. ಇಂದಿನ ಪರಿಸ್ಥಿತಿಯ ಅಕಸ್ಮಿಕ ಸಂದರ್ಭ ಘೋರಣೆಯನ್ನು ಜಾರಿ ಮಾಡಿದರೆ ಇಂದು ಶಾಂತಿ ಸಂಧಾನಗಳು ಯಾರಿಗೆ ಬೇಕಾಗಿದೆ? ಎಂಬುದು ಸ್ವಾರ್ಥ ಸ್ವಭಾವದ ಪ್ರಶ್ನೆಗಳೇ ಸರಿ. ಕಮ್ಯೂನಿಸ್ಟರ ಮೇಲೆ ವಿಜಯವನ್ನು ತೋರಿಸುವ ಮಹಾ ಪುಣ್ಯಕಾರ್ಯವನ್ನು ಇಲ್ಲಿ ಯಾರೂ ಮಾಡಿಲ್ಲ. ತನ್ನ ಆತ್ಮಗೌರವವನ್ನು ಉಳಿಸಿಕೊಳ್ಳುವುದಕ್ಕಾಗಿ ಅಮೇರಿಕೆಯಿಂದು ಹೂಡಿದ ಹಂಚಿಕೆ ಇದು. ವಿನಹ ಬೇರೇನೂ ಅಲ್ಲ. ಸಂ.ರಾ. ಸಂಘದಲ್ಲಿ ಭಾರತದ ಪ್ರತಿನಿಧಿ ಶ್ರೀ ಬಿ. ಎನ್. ರಾಯರು ತಮ್ಮ ಅಭಿಪ್ರಾಯವನ್ನು ನೀಡಿದೆ ಯುದ್ಧವನ್ನು ನಿಲ್ಲಿಸುವುದು ಉತ್ತಮ ಪರಿಹಾರ ಮಾರ್ಗವೆಂದು ಸೂಚಿಸಿದ್ದರು. ಮತ್ತೆ ಕಮ್ಯುನಿಸ್ಟ ಚೀನ ಆಕ್ರಮಣಕಾರಿ ರಾಷ್ಟ್ರವೆಂದು ಸಾರ್ವಜನಿಕವಾಗಿಯೂ ಭಾರತ ಸರಕಾರದಿಂದ ಪರಿಸ್ಥಿತಿ ಇನ್ನಷ್ಟು ಗಂಭೀರವಾಗುವದು ಖಚಿತವೆಂದು ಪ್ರತಿಭಟಿಸಿತ್ತು. ಮೊನ್ನೆ ಕಮ್ಯುನಿಸ್ಟ ಚೀನದ ಮೇಲೆ ಯುದ್ಧ ಸಾಮಗ್ರಿಗಳ ಮೊದಲಾದ ಆರ್ಥಿಕ ದಿಗ್ಬಂಧನ ಹೇರಲು ಭಾರತ ನಿಷೇಧ ಸೂಚಿಸಿತು. ಅದರಿಂದ ಯಾವ ಪ್ರಯೋಜನವನ್ನು ಪಡೆಯುವ ಪ್ರಸಂಗದಲ್ಲಿ ತಮ್ಮ ಹೋರಾಟವನ್ನು ನಡೆಸಿದ ಕಮ್ಯುನಿಸ್ಟರ ವಿಷಯ ಲಕ್ಷ್ಯ ಕೊಟ್ಟ ಸಂ. ರಾ. ಸಂಘದ ಅರ್ಥಹೀನ ಅಮೇರಿಕೆಯ ಪ್ರಭಾವಕ್ಕೆ ಇಚ್ಛೆಗೆ ಹಲವು ರಾಷ್ಟ್ರಗಳು ಕೈಗೂಡಿದ್ದವು. ಯುದ್ಧದಲ್ಲಿ ಕಾದಾಡುವ ಭಾವನೆಯನ್ನಿಟ್ಟರೂ ಯಥಾರ್ಥವಾಗಿ ಸಹಕರಿಸಿದವರ ಸಂಖ್ಯೆ ಬಹಳ ಅಲ್ಪ! ಪರಿಸ್ಥಿತಿ ವಿಷಮಕ್ಕೆ ಬಂದ ಹಾಗೆಲ್ಲ ಮಿತ್ರರಾಷ್ಟ್ರಗಳು ಹಿಂದೆಸರಿದವು. ಅಮೆರಿಕೆಯೊಂದೇ ಹೋರಾಟ ನಡೆಸಬೇಕಾಯ್ತು. ಕೊರಿಯಾ ಕದನದಿಂದ ಅಮೆರಿಕೆಯು ವಿಶೇಷ ಜೀವಹಾನಿ ಹಾಗೂ ಕಷ್ಟನಷ್ಟಗಳಿಗೆ ತುತ್ತಾದುದರಿಂದಲೇ ಇಂದು ಸಂಧಾನಯಾಚನೆಯ ಮಾತು ಮುಂದೆ ಬಂದಿವೆ. ಅಮೆರಿಕೆಯ ಬಾಗ್ಗೆ ಸಹಾನುಭೂತಿಸುವ ಬ್ರಿಟನು ಕೂಡಾ ಅಮೆರಿಕೆಯ ಯುದ್ಧ ನೀತಿಯನ್ನು ತಾತ್ವಿಕವಾಗಿ ಒಪ್ಪಿದರೂ ಕಮ್ಯುನಿಸ್ಟರ ವಿರುದ್ಧ ಮನಸಾ ಹೋರಾಡಲು ಹಿಂಜರಿಯುತ್ತಿದೆ. ಅದರ ಮುಖ್ಯ ಸಮಸ್ಯೆವೆಂದರೆ ಹಾಂಕಾಂಗ್, ಮಲಯಾ ಹಾಗೂ ಉಪನಿವೇಶಗಳೇ ಸರಿ! ಈ ಎಲ್ಲ ಪರಿಸ್ಥಿತಿ ಅಮೆರಿಕೆಗೆ ಹೊಸ ಪಾಠಕಲಿಸಿದೆ. ರಾಷ್ಟ್ರಗಳ ಅನೇಕ ಅಭಿಪ್ರಾಯವನ್ನು ಕೇಳದೆ ಟ್ರೂಮನ್ನರೆಂದು ಭಾರತದ ಹಾಗೂ ನಿಷ್ಪಕ್ಷ ರಾಷ್ಟ್ರಗಳ ಸೂಚಿತ ಆದರ್ಶವನ್ನು ಕರವಾಳಿಸಲೇ ಬೇಕಾಗಿದೆ. ಅಂತಲೇ ಏರನೆ ಅಕ್ಷಾಂಶದಲ್ಲಿ ಯುದ್ಧ ನಿಲ್ಲಿಸುವ ಅಂದರೆ ಉತ್ತರಕೊರಿಯದಲ್ಲಿ ಕಮ್ಯುನಿಸ್ಟರನ್ನು ಹಿಂಬಾಲಿಸುವದನ್ನು ನಿಲ್ಲಿಸುವ ಆದೇಶವನ್ನು ಟ್ರೂಮನ್ನರು ಕಳಿಸಿರಬಹುದು. ಈ ಮಾತುಕತೆಯ ಫಲವಾಗಿ ಯುದ್ಧ ನಿಲ್ಲಬಹುದೋ ಕೆರಳುವುದೋ ಎಂಬುದನ್ನು ಈಗ ಹೇಳಲು ಬರುವಂತಿಲ್ಲ. ಕಮ್ಯೂನಿಸ್ಟರು ಬಹಳ ಸಂಖ್ಯೆಯಿಂದ ಸಂಘಟಿತರಾಗಿ ಅಂತಿಮ ಹೋರಾಟವನ್ನು ನಡೆಸುವ ಸಿದ್ಧತೆ ಹಿಂದಿನಿಂದ ನಡೆಸುತ್ತಿರುವ ದಾಖಲೆಗಳು ಇರುವಾಗ ಸಂಧಾನಕ್ಕೆ ಸುಲಭವಾಗಿ ಒಪ್ಪುವ ಸಂಭವವಿಲ್ಲ. ಬ್ರಿಟನು ಮುಂದೆ ಮಾಡಬಹುದಾದ ಒಪ್ಪಂದದ ಕರಾರು ಯಾವ ಸ್ವರೂಪದ್ದೆಂಬುದು ಕುತೂಹಲದಾಯಿ ವಿಚಾರ. ಅಂತೂ ಆತ್ಮನ ರಕ್ತ ಹರಿಸಿದಂಗಳಾದರೂ ಅಮೇರಿಕೆಗೆ ಈಗಲಾದರೂ ಜ್ಞಾನೋದಯವಾದುದಕ್ಕೆ ಅಭಿನಂದಿಸಬೇಕು.

ಉಡುಪಿ

ಮಹಾತ್ಮಾ ಗಾಂಧಿ ಮೆಮೋರಿಯಲ್ ಕಾಲೇಜಿನಿಂದ ಈ ವರ್ಷ ಇಂಟರ್ ಮೀಡಿಯೆಟ್ ಪರೀಕ್ಷೆಗೆ ಕುಳಿತ 80 ವಿದ್ಯಾರ್ಥಿಗಳಲ್ಲಿ 61ಜನರು (76%) ಪಾಸಾಗಿರುತ್ತಾರೆ. ಇವರಲ್ಲಿ 16 ಪ್ರಥಮ ಶ್ರೇಣಿಯಲ್ಲಿ ಪಾಸಾಗಿದ್ದಾರೆ. ಫಲಿತಾಂಶವು ಸಂತೋಷಕರವಾಗುತ್ತದೆ. ಪ್ರಥಮ ಭಾಗ ಇಂಗ್ಲಿಷಿನಲ್ಲಿ 75 (94%) ದ್ವಿತೀಯ ಭಾಗ ಕನ್ನಡದಲ್ಲಿ 77 (96%) ಸಂಸ್ಕೃತದಲ್ಲಿ 16 (100%) ಹಿಂದಿಯಲ್ಲಿ 6 (100%) ತೃತೀಯ ಭಾಗದಲ್ಲಿ 61 (76%) ಪಾಸಾಗಿದ್ದಾರೆ.

ಕಾಲೇಜ್ ಕಟ್ಟಡದ ಕೆಲಸವು ಪೂರ್ತಿಯಾಗುತ್ತಿರುವ ಅವಸರದಲ್ಲಿ ಈ ವರ್ಷವೇ ಕ್ಲಾಸುಗಳು ತೆರೆಯಲ್ಪಡುವವು. ಆ ಬಗ್ಗೆ ಸಿದ್ಧತೆಗಳು ನಡೆಯುತ್ತಿವೆ. ಈ ವರ್ಷ ವಿಜ್ಞಾನ ತರಗತಿಗಳೂ ಪ್ರಾರಂಭವಾಗುವವು.

ಇದೇ ತಾ. 5ರಲ್ಲಿ ಸಂಜೆ ಉಡುಪಿ ಮುನಿಸಿಪಲ್ ಕಛೇರಿಯೊಂದು ಕಾಂಗ್ರೆಸ್ ಕಛೇರಿ [illegible] ಅಧ್ಯಕ್ಷತೆಯಲ್ಲಿ [illegible] ಕಾಲೇಜಿನಲ್ಲಿ ಹೆಣ್ಣು ಮಕ್ಕಳಿಗೂ ಪ್ರವೇಶ ದೊರೆಯಬೇಕೆಂದು [illegible] ಕೇಳಿಕೊಳ್ಳುವ [illegible] ಇಲ್ಲಿ ಒಂದೇ ಕಾಲೇಜು [illegible] ಹೆಣ್ಣು ಮಕ್ಕಳಿಗೆ ಪ್ರವೇಶ ದೊರೆಯದ ದೊಡ್ಡ ಕೊರತೆ ದೆಂದು ತಿಳಿಸಿದ ಮುದ್ರಾಸು ಯುನಿವರ್ಸಿಟಿಯ ಹುಕುಮನ್ನು ನಿಷೇಧಿಸಲಾಯಿತು.

ಮಳೆ—ಕಳೆದ ತಾ. 31ನೇ ರಾತ್ರಿಯಿಂದ ಆಗಾಗ ವಿಶೇಷ ಮಳೆ ಬರುತ್ತಿದೆ.

ಕರ್ನಾಟಕ ಸಂಘದ ಮಹಾ ಸಭೆ ಯು ಇದೇ ತಾ 1ರಂದು ಸಂಜೆ ಮದಿಸಿದಾಸರಲ್ಲಿ ಶ್ರೀ ಕೆ ಎಲ್. [illegible] ಅಧ್ಯಕ್ಷತೆಯಲ್ಲಿ ಸೇರಿತು. ಶ್ರೀ ಕು. ಶಿ. ಹರಿದಾಸ ಭಟ್ಟರು ಸಂಘದ ಗತವರ್ಷದ ವರದಿಯನ್ನೂ ಪರಿಶೋಧಿಸಲ್ಪಟ್ಟ ಲೆಖ್ಖಪತ್ರಗಳನ್ನೂ ಓದಿದರು "ಬಹಳ ಹಲವು ವರ್ಷಗಳಿಂದ ಉಡುಪಿಯ ಕ್ರಿಶ್ಚಿಯನ್ ಹೈಸ್ಕೂಲಿನಲ್ಲಿ ಅಧ್ಯಾಪಕ ವೃತ್ತಿಯನ್ನು ಕೈಕೊಂಡು ವಿದ್ಯಾರ್ಥಿವರ್ಗದ ಹಾಗೂ ಉಡುಪಿಯ ನಾಗರಿಕರ ಪ್ರೀತಿ ವಿಶ್ವಾಸಗಳಿಗೆ ಪಾತ್ರರಾದ ಶ್ರೀ ಪುಂಡಲೀಕ ಶೆಣೈ ಬಿ. ಎ. ಎಲ್. ಟಿ ಇವರು ಮಜೇಶ್ವರ ಹೈಸ್ಕೂಲಿನ ಪ್ರಾಧ್ಯಾಪಕರಾಗಿ ನೇಮಕಗೊಂಡದ್ದಕ್ಕಾಗಿ ಸಂಘವು ಅಭಿನಂದನೆಯನ್ನು ಸಲ್ಲಿಸುತ್ತದೆ" ಎಂಬ ಅಭಿನಂದನಾ ಗೊತ್ತುವಳಿಯು ಸರ್ವಾನುಮತದಿಂದ ಸ್ವೀಕೃತವಾಯಿತು.

ನಂತರ ಕಾರ್ಯನಿರ್ವಾಹಕ ಸಮಿತಿಗೆ ಹನ್ನೆರಡು ಮಂದಿ ಸದಸ್ಯರ ಚುನಾವಣೆ ನಡೆಯಿತು. ಸಭೆ ಜರಗಲು ಸ್ಥಳವನ್ನು ಕೊಟ್ಟು ಮತ್ತು ಸದಸ್ಯರಿಗೆ ಉಪಹಾರ ಕೊಟ್ಟ ಬಗ್ಗೆ ಅಧ್ಯಕ್ಷರನ್ನು ಅಭಿನಂದಿಸಲಾಯಿತು.

ಕಾಂಗ್ರೆಸ್ ಕಮಿಟಿ ಸಭೆಯು—ಇದೇ ತಾ. 1ರಲ್ಲಿ ಅಧ್ಯಕ್ಷ ಶ್ರೀ ಕೆ ಎಸ್. ಪೈಗಳ ಅಧ್ಯಕ್ಷತೆಯಲ್ಲಿ ಜರಗಿತು. ಈ ತಿಂಗಳ ತಾ 13, 14ರಲ್ಲಿ ಉಡುಪಿಯಲ್ಲಿ ಮೊಕ್ಕಾಂ ಮಾಡಿ ಸ್ಥಳೀಯ ಸಂಸ್ಕೃತ ಕಾಲೇಜಿನ ನೂತನ ಕಟ್ಟಡವನ್ನು ಉದ್ಘಾಟಿಸಲಿರುವ ಬೊಂಬಾಯಿ ಮುಖ್ಯ ಮಂತ್ರಿ ಶ್ರೀ ಬಿ. ಜಿ. ಖೇರರಿಗೆ ಮಾನಪತ್ರ ನೀಡಬೇಕೆಂದು ನಿರ್ಧರಿಸಲಾಯಿತು. ಮುಂಬರುವ ಚುನಾವಣೆಯಲ್ಲಿ ಯೋಗ್ಯ ಹುರಿಯಾಳುಗಳನ್ನೇ ಆರಿಸುವ ಸಲುವಾಗಿ ಪ್ರಕ್ರಿಯೆಯು ಮಂಗಳೂರು, ಕುಂದಾಪುರ ವಿಭಜನೆಗೊಂಡ ಜಿಲ್ಲಾ ಕಾಂಗ್ರೆಸ್ ಕಮಿಟಿ ಸದಸ್ಯರಾಗಿರುವವರು ಮತ್ತು ಜಿಲ್ಲಾ ಕಾಂಗ್ರೆಸ್ ಪ್ರೆಸಿಡೆಂಟ್ ಮತ್ತು ಶ್ರೀ ಎನ್. ಎಸ್. ಕಿಲ್ಲೆಯವರಿರುವ ಚುನಾವಣಾ ಉಪಸಮಿತಿಯೊಂದನ್ನು ರಚಿಸುವಂತೆ ಜಿಲ್ಲಾ ಕಾಂಗ್ರೆಸ್ ಕಮಿಟಿ ಅಧ್ಯಕ್ಷರನ್ನು ಕೇಳಿಕೊಳ್ಳಲು ಶ್ರೀ ಕೆ ನಾರಾಯಣ ಕಾಮತರಿಗೆ ಅಧಿಕಾರವೀಯಲಾಯಿತು. ಈ ಉಪಸಮಿತಿಯು ಜಿಲ್ಲಾ ಸಂಚಾರವನ್ನು ಕೈಗೊಂಡು ಜನತೆಯ ಅಭಿಪ್ರಾಯವನ್ನು ಕೂಡಾ ಸಂಗ್ರಹಿಸಬೇಕೆಂದಾಯಿತು.

ಸಂಸ್ಕೃತ ಕಾಲೇಜಿನ ಹೊಸಕಟ್ಟಡದ — ಉದ್ಘಾಟನಾ ಸಮಾರಂಭವನ್ನು ಇದೇ ತಾ. 14ರಲ್ಲಿ ಬೊಂಬಾಯಿ ಸರಕಾರದ ಮುಖ್ಯಮಂತ್ರಿ ಶ್ರೀ ಬಿ. ಜಿ. ಖೇರರು ನೆರವೇರಿಸಲಿರುವರು. ಮಾನ್ಯ ಖೇರರಿಗೆ ನಗರಸಭೆಯ ಮಾನಪತ್ರ ಕೊಡುವ ವ್ಯವಸ್ಥೆ ನಡೆದಿದೆ.

ಹಳೆ ವಿದ್ಯಾರ್ಥಿ ಸಂಘ—ಉಡುಪಿ ಕ್ರಿಶ್ಚಿಯನ್ ಹೈಸ್ಕೂಲಿನ ಹಳೆವಿದ್ಯಾರ್ಥಿ ಸಂಘದ [illegible] ವಾರ್ಷಿಕ ಸಭೆಯು ಕಳೆದ ತಾ. 31ರಲ್ಲಿ ಡಾ. ಟಿ. ಬಿ. [illegible] ಅಧ್ಯಕ್ಷತೆಯಲ್ಲಿ ಜರಗಿತು. [illegible] ಇವರು ಅಧ್ಯಕ್ಷರು, [illegible] ಉಪಾಧ್ಯಕ್ಷರು [illegible] ಶ್ರೀ ಎಲ್ ಎಸ್ [illegible] [illegible] ಆರಿಸಲ್ಪಟ್ಟರು.



WANTED
'Wanted immediately a trained Mathematics Graduate'
Apply to
Correspondant,
Christian High School
UDIPI, S. I.

ಲೋಕಾಂತ

ಕೊರಿಯಾದ ಮಾತುಕತೆ

ಕೊರಿಯಾದಲ್ಲಿ ಕಮ್ಯೂನಿಸ್ಟರ ಸಂಭವಗಳು ವಿಶೇಷವಾಗಿ ಕಂಡು ಬಂದಿವೆ. 38 ಅಕ್ಷಾಂಶದಲ್ಲಿ ಯುದ್ಧ ನಿಲ್ಲಿಸುವ ಮನಸ್ಸು ಅಮೇರಿಕೆಗೆ ಇದೆಯೆಂದೂ, ಕಮ್ಯೂನಿಸ್ಟ ಚೀನವು ಹೃತ್ಪೂರ್ವಕವಾಗಿ ಈ ಒಪ್ಪಂದವನ್ನು ಒಪ್ಪುತ್ತದಾದರೆ ಮಾತ್ರ ಇದು ಸಾಧ್ಯವೆಂದೂ ಚೀನ ಅಚಿನಸೆನ್ನರು ಹೇಳಿದರು ಬ್ರಿಟನವು ಕೊರಿಯಾದಯುದ್ಧವನ್ನು ನಿಲ್ಲಿಸುವುದಕ್ಕೆ ಕಾಮನವೆ ರಾಷ್ಟ್ರಗಳೊಡನೆ ಮಾತುಕತೆ ನಡಸುತ್ತಲಿದೆ. ಭಾರತವನ್ನು ಪರಿಹಾರ ಸೂಚಿಸುವಂತೆ ಕೇಳಿಕೊಳ್ಳಲಾಗಿ ಸಂಧಾನದ ಮಾತುಕತೆಗೆ ಯಶಸ್ಸಿಗುವ ಸಂಭವ ಕಂಡು ಬರುತ್ತದೆ

ಪರ್ಶಿಯಾದ ಬಿಕ್ಕಟ್ಟು

ಆಂಗ್ಲೋ ಇರಾಣಿಯನ್ ಎಣ್ಣೆ ಕಂಪೆನಿಯ ಬಿಕ್ಕಟ್ಟನ್ನು ಬ್ರಿಟನು ಮತ್ತು ಪರ್ಶಿಯಾ ಸರಕಾರಗಳು ಸೌಹಾರ್ದದಿಂದ ಬಗೆಹರಿಸಿಕೊಳ್ಳಬೇಕೆಂದು , ಅಧ್ಯಕ್ಷ ಟ್ರೂಮನ್ನರು ಬರೆದ ಪತ್ರವನ್ನು ಪರ್ಶಿಯವು ನಿರಾಕರಿಸಿತು. ಕಂಪೆನಿಯೊಡನೆ ಸಂಧಾನದ ಮಾತುಕತೆಗೆ ನಾವು ಸಿದ್ಧವಿರುವದಾದರೂ ಬ್ರಿಟನದೊಡನೆ ಮಾತುಕತೆ ನಡೆಸಲು ನಾವು ಸಿದ್ಧರಿಲ್ಲವೆಂದು ಪರ್ಶಿದ ಮುಖ್ಯ ಮಂತ್ರಿ ಮುಸಾದಿಕರು ಪಾರ್ಲಿಮೆಂಟಿನಲ್ಲಿ ಹೇಳಿದರು.

ಭಾರತಕ್ಕೆ ನಾರ್ವೆಯ ಸಹಾಯ

ನಾರ್ವೆ ಪಾರ್ಲಿಮೆಂಟಿನ ಒಂದು ಪಂಗಡದವರು ಭಾರತದ ಬರಗಾಲಪೀಡಿತ ಜನಕ್ಕೆ ಪರಿಹಾರನೀಡಲು ಒಂದು ಸೂಚನೆಯನ್ನು ಮಂಡಿಸಿದ್ದರು. ಈ ಸೂಚನೆಯನ್ನ ನಾರ್ವೆಯ ಮಜದೂರರ ಸಂಘವು ವಿಶೇಷ ಆಸ್ಥೆಯಿಂದ ವಿಮರ್ಶಿಸಿ ಅಮೇರಿಕೆಯಿಂದ ಭಾರತಕ್ಕೆ ಆಹಾರಧಾನ್ಯ ಸಾಗಿಸಲು ಹಡಗುಗಳನ್ನು ನೀಡುವ ಯೋಚನೆಮಾಡುತ್ತಿದೆಯಂತೆ.

ಬಿಹಾರಕ್ಕೆ ನೆಹ್ರೂನಿಧಿಯ ಕಾಣಿಕೆ

ಬಿಹಾರದ ಪರಿಹಾರಕ್ಕೆಂದು ಶ್ರೀ ಜವಾಹರಲಾಲನೆಹ್ರೂರವರು ಪ್ರಧಾನ ಮಂತ್ರಿಗಳ ಪರಿಹಾರ ನಿಧಿಯಿಂದ 50 ಸಹಸ್ರ ರೂಪಾಯಿಗಳನ್ನು ಬಿಹಾರದ ಮುಖ್ಯ ಮಂತ್ರಿಗಳಿಗೆ ಕಳಿಸಿರುತ್ತಾರೆ. ತೀರ ಬಡವರಿಗೆ ಪುಕ್ಕಟೆಯಾಗಿ ಆಹಾರವನ್ನು ಹಂಚಲು ಈ ಹಣವನ್ನು ವಿನಿಯೋಗಿಸಲಾಗುತ್ತದೆಂದು ತಿಳಿಯಲಾಗುತ್ತದೆ.

ಹಳ್ಳಿ ಮಾರ್ಗಸುಧಾರಣೆಗಳು

ಕೇಂದ್ರ ಸರಕಾರ ಹಳ್ಳಿಗಳ ಮಾರ್ಗ ಸುಧಾರಣೆ ಹಾಗೂ ವಿಸ್ತರಣೆಯ ಬಗ್ಗೆ ಒಂದು ಯೋಜನೆಯನ್ನು ತಯಾರಿಸಿದ್ದು ಕೇಂದ್ರ ಮಾರ್ಗನಿಧಿಯ ಕಾಯ್ದಿಟ್ಟ ಧನದಿಂದ 15 ಲಕ್ಷ ರೂಪಾಯಿಗಳನ್ನು ಇದಕ್ಕಾಗಿ ವಿನಿಯೋಗಿಸಲಿವೆ. ಆಯಾಯ ಹಳ್ಳಿಗರು ತಮ್ಮ ಹಳ್ಳಿಯ ಮಾರ್ಗ ಸುಧಾರಣೆಯನ್ನ ಮಾಡಬಯಸುವುದಾದರೆ ಗ್ರಾಮಸ್ಥರು ⅓ನ್ನು ಕೂಡಿಸಬೇಕು. ಅದಕ್ಕೆ ಕೇಂದ್ರಸರಕಾರವು ⅓ವನ್ನೂ ಪ್ರಾಂತಿಕ ಸರಕಾರವು ⅓ವನ್ನೂ ಕೊಡುತ್ತದೆ. ಈ ಯೋಜನೆಯು ಸದ್ಯದಲ್ಲೇ ಪಾರ್ಲಿಮೆಂಟಿನ ಮಂಜೂರಾತಿ ಪಡೆದು ಕಾರ್ಯರೂಪದಲ್ಲಿ ಬರಲಿದೆಯೆಂದು ತಿಳಿದುಬರುತ್ತದೆ.

ಇರಾಕ ವಾಣಿಜ್ಯ ಒಪ್ಪಂದ

ಭಾರತವು ಇರಾಕದೊಡನೆ ವಾಣಿಜ್ಯ ಒಪ್ಪಂದ ಮಾಡಿಕೊಂಡಿದ್ದು ಆ ಒಪ್ಪಂದದಂತೆ ಇರಾಕವು ಭಾರತಕ್ಕೆ ಖರ್ಜೂರಗಳಿಸುವದೆಂದೂ ಅದಕ್ಕೆ ಪ್ರತಿಯಾಗಿ ಭಾರತವು ಇರಾಕಕ್ಕೆ ಜವಳಿ ಹಾಗೂ ಸಣಬನ್ನು ಕಳಿಸುವದೆಂದೂ ತಿಳಿದುಬರುತ್ತದೆ.

ಭಾರತ ಸರಕಾರದ ಪ್ರತಿಭಟನೆ

ಪಾಕಿಸ್ತಾನದಲ್ಲಿ 'ಹಿಂದೂಸ್ತಾನ ಹಮಾರಾ' ಪಕ್ಷವು ತಲೆಯೆತ್ತಿ ಜಾತೀಯ ದ್ವೇಷವನ್ನು ಹೆಚ್ಚಿಸುತ್ತಿರುವುದನ್ನು ಲಕ್ಷಿಸಿ ಭಾರತಸರಕಾರವು 'ಹಿಂದೂ ಹಮಾರಾ' ಪಕ್ಷದ ಮೇಲೆ ಉಗ್ರಕ್ರಮ ತೆಗೆದುಕೊಳ್ಳಬೇಕೆಂದು ಪಾಕಿಸ್ತಾನ ಸರಕಾರಕ್ಕೆ ಸೂಚಿಸಿರುತ್ತದೆ.

ಮಂತ್ರಿಗಳ ಖಾಸಗೀ ಸಂಚಾರಕ್ಕೆ ಭತ್ತೆಯಿಲ್ಲ

ಕೇಂದ್ರ ಹಾಗೂ ಪ್ರಾಂತಿಕ ಸರಕಾರದ ಮಂತ್ರಿಗಳು ಖಾಸಗಿ ಹಾಗೂ ವಿಶ್ರಾಂತಿಗಾಗಿ ಕೈಗೊಳ್ಳುವ ಸಂಚಾರಕ್ಕೆ ಭತ್ತೆ ಸಿಗಲಾರದು. ಸಾರ್ವಜನಿಕ ಕೆಲಸದ ನಿಮಿತ್ತ ಹೇಳಿ ಖಾಸಗೀ ಸಮಾರಂಭಗಳಲ್ಲಿ ಭಾಗವಹಿಸುವ ದಾಖಲೆಗಳು ಈ ಹಿಂದೆ ನಡೆದದ್ದಿದೆ. ಆದರೆ ಮುಂದೆ ಆ ರೀತಿಯ ಸಂಚಾರ ಭತ್ತೆಗೆ ಸಂಚಕಾರ ಬಿತ್ತೆಂದು ತಿಳಿಯಬರುತ್ತದೆ.

ರಾಷ್ಟ್ರಗೀತೆಯ ಪ್ರಯೋಗ

ರಾಷ್ಟ್ರೀಯ ಗೀತೆಯಾದ 'ಜನಗಣ'ವನ್ನು ಖಾಸಗೀ ಸಮಾರಂಭಗಳಲ್ಲಿ ಉಪಯೋಗಿಸಿ ಅಗೌರವಿಸಲಾಗದೆಂದು ಸಿ. ರಾಜಗೋಪಾಲಾಚಾರ್ಯರು ಪಾರ್ಲಿಮೆಂಟಿನಲ್ಲಿ ಹೇಳಿದರು. ನಾಟಕ ಸಮಾರಂಭಗಳಲ್ಲೂ ಅದನ್ನು ಹಾಡಲಾಗದೆಂದು ಹೇಳಿರುತ್ತಾರೆ. ಕೆಲವು ವಿಶೇಷ ಸಮಾರಂಭಗಳಲ್ಲಿ ಮಾತ್ರ ಅದನ್ನು ಹಾಡಬಹುದಾಗಿದೆ.

ಕಾಶ್ಮೀರಕ್ಕೆ ಬೇರೆಯವರ ಆದೇಶ ಬೇಡ

ಕಾಶ್ಮೀರೀ ಜನತೆಗೆ ಸರಿಯಾದ ನ್ಯಾಯದಾನವಾದೀತೆಂದು ನಾವು ಸ ರಾ. ಸಂಘದ ಕಡೆಗೆ ಕಾದದ್ದು ವ್ಯರ್ಥವಾಯಿತೆಂದೂ, ಈಗ ನಮ್ಮ ಅಸ್ತಿತ್ವಕ್ಕೇ ಗಂಡಾಂತರವನ್ನು ತರುವಂತಹ ಚಿನ್ನಾಟವನ್ನಾಡುತ್ತಿದ್ದಾರೆಂದೂ, ಆದುದರಿಂದ ನಾವಿಂದು ಯಾರ ಆದೇಶವನ್ನು ಲಕ್ಷಿಸದೆ ಕಾಶ್ಮೀರೀ ಭವಿತವ್ಯವನ್ನು ನಿರ್ಧರಿಸಲು ಕಾಶ್ಮೀರ ಘಟನಾಸಮಿತಿಯನ್ನು ಸಪ್ಟೆಂಬರದಲ್ಲಿ ನಡೆಸುವ ದೃಢನಿರ್ಧಾರ ಮಾಡಿರುತ್ತೇವೆಂದೂ ಕಾಶ್ಮೀರದ ಮುಖ್ಯ ಮಂತ್ರಿ ಶೇಖ ಅಬ್ದುಲ್ಲಾರು ರಾಷ್ಟ್ರೀಯ ಪರಿಷತ್ತಿನಲ್ಲಿ ಹೇಳಿದರು

ಭಾರತದಲ್ಲಿ ಲಿಯಾಕತರ ಆಸ್ತಿ

ಭಾರತದಲ್ಲಿ ಪಾಕಿಸ್ತಾನದ ಪ್ರಧಾನ ಮಂತ್ರಿ ಲಿಯಾಕತ್ ಅಲಿ ಖಾನರ ಪಾಲಿಗೆ ಬರುವ ಆಸ್ತಿಯ ಬೆಲೆಯು 3,70,532 ರೂ. ಆಗಿರುತ್ತದೆ. ಅದರ ವಾರ್ಷಿಕ ಆದಾಯ 7500 ರೂಪಾಯಿ. ವಿಭಜನೆಯಾದ ನಂತರ ಇದರ ಯಾವ ಆದಾಯವನ್ನೂ ಲಿಯಾಕತರು ಪಡೆಯುವುದಿಲ್ಲ.

ಸಮಾಜವಾದಿಗಳ ಮೆರವಣಿಗೆ

ಸುಮಾರು 20 ಸಾವಿರ ಜನರಿಂದೊಡಗೂಡಿದ ಸಮಾಜವಾದಿಗಳ ಮೆರವಣಿಗೆ ದಿಲ್ಲಿಯಲ್ಲಿ ನಡೆಯಿತು. ಈ ಮೆರವಣಿಗೆಯು 10 ಮೈಲು ವಿಸ್ತೀರ್ಣವಾಗಿತ್ತು! ಶ್ರೀ ಜಯಪ್ರಕಾಶ ನಾರಾಯಣ, ಡಾ। ಲೋಹಿಯಾ, ಶ್ರೀ ರಾಮಾನಂದನ ಮಿಶ್ರ ಮುಂತಾದ ಸಮಾಜವಾದಿ ಧುರೀಣರು ಮೊದಲಾದ ಸಮಾಜವಾದೀ ಧುರೀಣರೇ ಇದರ ಮಾರ್ಗದರ್ಶಿಗಳಾಗಿದ್ದರು. 'ಈ ಸರಕಾರ ಬದಲಾಗುವ ವರೆಗೆ ನಮಗೆ ಪ್ರಗತಿಯಿಲ್ಲ' 'ಅನ್ನಬಟ್ಟೆಗಳ ಬರಗಾಲದಿಂದ ಭಾರತ ಬಡವಾಗಿದೆ' 'ಕಳ್ಳಸಂತೆ ಲಂಚಗುಳಿತನವನ್ನು ನಿಲ್ಲಿಸಲಾಗದ ಸರಕಾರ ಆಳಲು ಅಸಮರ್ಥವಾಗಿದೆ' ಎಂದೆಲ್ಲ ಜನರು ಕೂಗುತ್ತಿದ್ದರು. ರಾಜಧಾನಿಯತ್ತ ತೆರಳಿ ರಾಷ್ಟ್ರಾಧ್ಯಕ್ಷ ರಾಜೇಂದ್ರಪ್ರಸಾದರಿಗೆ "ಜನತಾ ತಾಮ್ರಪಟ"ವನ್ನು ಅರ್ಪಿಸಲಾಯಿತು. ರಾಜಧಾನಿಯ ಹತ್ತಿರ 5 ಜನಕ್ಕಿಂತ ಹೆಚ್ಚಾಗಿ ಜನ ಕೂಡಬಾರದೆಂದಿದ್ದ ಸರಕಾರೀ ಕಾಯ್ದೆಯನ್ನು ಮೀರದೆ ಮುಖ್ಯರಾದ 5 ಮಂದಿ ಧುರೀಣರು ಮಾತ್ರ ರಾಜ್ಯಾಂಗಣಕ್ಕೆ ಹೋಗಿ ಸರಕಾರೀ ಭವನದಲ್ಲಿ ಅರ್ಪಿಸಿದರು ತಾಮ್ರಪಟದಲ್ಲಿ ಜಮೀನ್ದಾರೀ ನಿರ್ಮೂಲನ — ಭೂಮಿ ಹಂಚಣಿಯೇ ಮುಂತಾದ ವಿಚಾರಗಳನ್ನು ನಮೂದಿಸಲಾಗಿತ್ತು.

ಡಿಸ್ಟ್ರಿಕ್ಟ್ ಬೋರ್ಡ್ ಉಪಾಧ್ಯಾಯರ ಅವಗಾಹನೆಗೆ

ಕೆಲವು ಮಂದಿ ಉಪಾಧ್ಯಾಯರಲ್ಲಿ ಡಿಸ್ಟ್ರಿಕ್ಟ್ ಬೋರ್ಡು ಪ್ರಾಥಮಿಕ ಶಿಕ್ಷಣ ಫಂಡಿನ ಕುರಿತು ತಪ್ಪು ಅಭಿಪ್ರಾಯಗಳು ಇದ್ದಂತೆ ಕಂಡು ಬರುತ್ತದೆ. ಇತ್ತಲಾಗಿ ಕಳೆದ ಏಪ್ರಿಲು ಮತ್ತು ಮೇ ತಿಂಗಳಲ್ಲಿ ಸಂಬಳ ಬಟವಾಡೆ ಕುರಿತು ವಿಳಂಬ ಆದುದರಿಂದ ಕೆಲವು ಮಂದಿ ಉಪಾಧ್ಯಾಯರು ಡಿಸ್ಟ್ರಿಕ್ಟ ಬೋರ್ಡಿನಲ್ಲಿ ಕೆಲಸಮಾಡುವ ಅಧಿಕಾರಿ . . . ಅಧ್ಯಕ್ಷರ ಮೇಲೆ ಆರೋಪನೆ ಮಾಡಿರುವುದಾಗಿ ತಿಳಿದು ಬಂದಿದೆ. ಅಲ್ಲದೆ ಸಂಗತಿಗಳನ್ನು ತಾವು ಬೇರೆ ಆಗಿ [illegible] ಈ ಬಗೆಯಲ್ಲಿ ತಪ್ಪುತ್ತದೆ.

ಉಪಾಧ್ಯಾಯ ವರ್ಗದವರು ಪ್ರಾಥಮಿಕ ಶಿಕ್ಷಣದ [illegible] ಅರಿತು ತಿಳಿದುಕೊಳ್ಳುವುದು ಅತಿ ಅಗತ್ಯ. ಅದಕ್ಕಾಗಿ ಅವರು ತಿಳಿದುಕೊಂಡದ್ದು ಪ್ರತಿ ತಿಂಗಳಲ್ಲಿಯೂ ಸಂಬಳವನ್ನು ಉಪಾಧ್ಯಾಯ ವರ್ಗದವರಿಗೆ ಬಟವಾಡೆ ಮಾಡುವ ಡಿಸ್ಟ್ರಿಕ್ಟ್ ಬೋರ್ಡ್ ಆಫೀಸಿನಲ್ಲಿ ಯಾವ ರೀತಿಯಿಂದ ನೋಡಬೇಕು ಎಂದು ಮಾಡುತ್ತದೆ ಎಂಬ ಸಂಗತಿ ಅವರಿಗೆ ತಿಳಿದಿರಬೇಕು.

ಪ್ರಾಥಮಿಕ ಶಿಕ್ಷಣ ಫಂಡಿನ ಖಾತೆಯಲ್ಲಿ ಉಪಾಧ್ಯಾಯರ ಸಂಬಳ ಬಟವಾಡೆ ಮಾಡುವ [illegible] ಇಲ್ಲದೆ [illegible] ಇವೆ. ಬರೇ ಸಂಬಳವನ್ನು ಮಾತ್ರ ಬಟವಾಡೆ ಮಾಡುವದಕ್ಕೆ ತಿಂಗಳಿಗೆ ಸುಮಾರು ರೂಪಾಯಿ 1,15000 ಬೇಕಾಗುತ್ತದೆ. ಈ ಹಣವು ಸರಕಾರದ ಗ್ರಾಂಟು, ಪ್ರಾವಿಡೆಂಟ್ ಫಂಡಿಗೆ ಕಂಟ್ರಿಬ್ಯೂಶನ್ ಮುಂತಾದ ವರ್ಗಗಳಿಂದ ವರ್ಷಂಪ್ರತಿ ಸುಮಾರು ರೂಪಾಯಿ 2,00,000 ಬೇಕಾಗುವುದು. ಈ ಎಲ್ಲಾ ಖರ್ಚುಗಳೂ ತೆರಿಗೆ ರೂಪವಾಗಿ ಬರುವ ಹಣ 3 ಪ್ರಕಾರ ಮೊದಲನೆಯ ಎಜ್ಯುಕೇಶನ್ ಸೆಸ್ಸು, ಸರಕಾರದಿಂದ ಬರುವ ಎಜ್ಯುಕೇಶನ್ ಗ್ರಾಂಟು [illegible] ಮತ್ತು ಸರಕಾರದಿಂದ [illegible] ಗ್ರಾಂಟುಗಳಿಂದ ನಡೆಯಬೇಕಾಗಿದೆ. ಏಪ್ರಿಲ್ ತಿಂಗಳಲ್ಲಿ ಪ್ರಾಥಮಿಕ ಶಿಕ್ಷಣ ಫಂಡಿನಲ್ಲಿ ಹಣವಿಲ್ಲದೆ, ಓವರ್ ಡ್ರಾಫ್ಟ್ ಪಡೆದು ಆ ಖಾತೆಗೆ ಹಾಕಿ ಸಂಬಳ ಬಟವಾಡೆ ಮಾಡಬೇಕಾಗಿ ಬಂತು. ಆ ಮೇಲೆ ಮೇ ತಿಂಗಳಲ್ಲಿ ಓವರ್ ಡ್ರಾಫ್ಟ್ ಫಂಡಿನಲ್ಲಿ ಹಣವಿಲ್ಲದೆ ಸಂಬಳ ಬಟವಾಡೆ ಮಾಡುವದಕ್ಕೆ ವಿಳಂಬವಾದದ್ದಾಗಿರುತ್ತದೆ. [illegible] 3 5 1951ರಲ್ಲಿ ಮಂಜೂರು ಮಾಡಿರುತ್ತದೆ, ಆದರೆ ಸರಕಾರದಿಂದ ಸಕಾಲದಲ್ಲಿ ಬರುವದೆ ವಿಳಂಬವಾಗಿ ಸ್ವಲ್ಪ ಸಮಯದಲ್ಲಿ ಬಟವಾಡೆ ಮಾಡುವದಕ್ಕೆ ಎಲ್ಲಾ ಪ್ರತಿಯೊಂದು ತಿಂಗಳಲ್ಲಿಯೂ ಹಣದ ಅಭಾವವಿದೆಯೆಂಬ ಸಂಗತಿ ಸರ್ವರಿಗೂ ತಿಳಿದುಕೊಳ್ಳುವುದು ಅವಶ್ಯ. ಆದೂ ಅಲ್ಲದೆ ಪ್ರಾಥಮಿಕ ಶಿಕ್ಷಣ ಫಂಡು ಯಾವಾಗಲೂ ಡೆಫಿಸಿಟ್ ಖಾತೆಯೆಂದು ಎಲ್ಲರಿಗೂ ತಿಳಿದ ವಿಷಯವೇ. ಹೀಗಿರುತ್ತಾ ಅನಾವಶ್ಯಕ ಆರೋಪಣೆ ಮಾಡುವುದು ಯುಕ್ತವಲ್ಲ. ಉಪಾಧ್ಯಾಯ ವರ್ಗದವರಿಗೆ ಇರುವ ಕಷ್ಟ ತಿಳಿಯದೆ ಇದ್ದ ವಿಷಯವಲ್ಲ. ಅದನ್ನು ತಿಳಿದ ಕಾರಣವೇ ಅದಷ್ಟು ಬೇಗನೆ ಸಂಬಳ ಬಟವಾಡೆ ಮಾಡುತ್ತಾ ಇದೆ ಕೆಲವು ತಿಂಗಳಲ್ಲಿ [illegible] ಬಟವಾಡೆ ಮಾಡಲು ಸ್ವಲ್ಪ ವಿಳಂಬವಾದರೆ ಆ ಕುರಿತು ಪತ್ರಿಕೆಗೆ ಹಾಕಿ ಹೊರಡಿ ತಮ್ಮ ಉದ್ಯೋಗವನ್ನು ಅಲಕ್ಷ್ಯ ಮಾಡಿ [illegible] ಸ್ವಲ್ಪ ಸಮಯದಲ್ಲಿ ಕಷ್ಟವನ್ನು ಸಹಿಸಿ ಒಂದಿನಂತೆ ಕ್ರಮವಾಗಿ ಕೆಲಸ ಮಾಡಬೇಕಾಗಿ ಉಪಾಧ್ಯಾಯ ವರ್ಗದವರೊಡನೆ ವಿನಂತಿ.

ಬಿ ಮಂಜಯ್ಯ ಹೆಗ್ಡೆ,
ಪ್ರೆಸಿಡೆಂಟ್.

ದ. ಕ. ಜಿಲ್ಲಾ ಬೋರ್ಡ್ ಆಫೀಸು,
ಮಂಗಳೂರು, ತಾ 30 5 51

ಶ್ರೀ ರಾಮಕೃಷ್ಣ ಥಿಯೇಟರ್ ಲಿಮಿಟೆಡ್ ಉಡುಪಿ

ಪ್ರತಿ ಒಂದು ಚಿತ್ರಕ್ಕೆ ಮುಕುಟದಂತಿರುವ

ರಾಜ ಮುಕುಟ

ನಿಮ್ಮಿ, ಪ್ರೇಮನಾಥ್, ಸಪ್ರು, ವೀಣಾ, ರಾಮಸಿಂಘ ಮೊದಲಾದವರು.

ತಾ. 9-6-51ರಿಂದ

ಬರುವ ಚಿತ್ರಗಳು..-

ಸಿಂಗಾರ್, ದೇವರ್ ಇತ್ಯಾದಿ

ಡಿ. ಕೆ. ಭಾರದ್ವಾಜರ

ಇಂಗ್ಲಿಷ್ - ಇಂಗ್ಲಿಷ್ ಕನ್ನಡ ಡಿಕ್ಷನೆರಿ

ವಿದ್ಯಾರ್ಥಿಗಳಿಗೆ ಅತ್ಯುಪಯುಕ್ತವಾದ ದೊಡ್ಡ ಹೊಸ ಆವೃತ್ತಿ.

ಬೆಲೆ ರೂ 5-1-0

ನವಭಾರತ ಬುಕ್ ಡಿಪ್ಪೊ ಉಡುಪಿ.
ನವಯುಗ ಪ್ರೆಸ್, ಉಡುಪಿ.

ಮಂಗಳೂರು

ಜಿಲ್ಲೆಯಲ್ಲಿ ಈವರೆಗೆ ತೆರೆದ ಯೋಗ್ಯ ಬೆಲೆಯ ಅಂಗಡಿಗಳು— ಜಿಲ್ಲೆಯಲ್ಲಿ ವಿವಿಧ ಭಾಗಗಳಲ್ಲಿ ಈಗಾಗಲೇ ಸರಕಾರದವರು ೪೦ ಯೋಗ್ಯ ಬೆಲೆಯ ಅಕ್ಕಿ ಅಂಗಡಿಗಳನ್ನು ತೆರೆದಿರುವರು. ಅವುಗಳಲ್ಲಿ ಕುಂದಾಪುರ ಮೇಜರ್ ಪಂಚಾಯತ್ ವಿಭಾಗದಲ್ಲಿ ೭, ಬೈಂದೂರು ೧; ಸಿರೂರು ೧; ಗಂಗೊಳ್ಳಿ ೨; ಉಡುಪಿ ತಾಲೂಕಿನ ಮಲ್ಪೆ ೧ ಉದ್ಯಾವರ ೧; ಕಾರ್ಕಳ ಮೂಡಬಿದ್ರೆ, ಮೂಲ್ಕಿಗಳ ಮೇಜರ್ ಪಂಚಾಯತಿಗಳಲ್ಲಿ (ಪ್ರತಿಯೊಂದರಲ್ಲಿ) ೪ರಂತೆ, ಬಜಪೆ ೧; ಕಾಪು ೧; ಪಕ್ಷಿಕೆರೆ ೧; ಬಂಟ್ವಾಳ ಮತ್ತು ಪುತ್ತೂರು ಮೇಜರ್ ಪಂಚಾಯತಿಗಳಲ್ಲಿ (ಪ್ರತಿಯೊಂದರಲ್ಲಿ) ೪ರಂತೆ. ಬಾಡೂರ ೧; ಕೆಕ್ಕಿಲ್ ೧; ಮತ್ತು ಉದ್ಯ ೨.

ಇನ್ನು ತೆರೆಯಲಿರುವ ಸ್ಥಳಗಳು- ಕಲ್ಯಾಣಪುರ, ಕೋಟೇಶ್ವರ, ವಿಠಲ, ಅರಿಕ್ಕಾಡಿ, ಕೆಯ್ಯಾರು, ಪೈವಳಿಕೆ, ಉಪ್ಪಳ, ಮಂಗಲ್ಪಾಡಿ, ಬೆಳ್ತಂಗಡಿ, ಶಿರ್ತಾಡಿ, ಪಣಂಬೂರು, ಬೆಂಗ್ರೆ, ಉದ್ಯಾವರ (ಕಾಸರಗೋಡು ತಾಲೂಕು) ಬಂಗ್ರ, ಮಂಜೇಶ್ವರ ಈ ಪ್ರತಿಯೊಂದಕ್ಕೆ ಒಂದೊಂದರಂತೆ ೧೫ ಅಂಗಡಿಗಳನ್ನು ತೆರೆಯಲಾಗುವುದು.

ಕ್ಯಾನ್ಸರ್ ರೋಗದ ಕುರಿತು ಭಾಷಣ ಮದ್ರಾಸಿನ ಒನ್ಕಾರ್ಡ್ ಇನ್ಸ್ಟಿಟ್ಯೂಟ್ ಓಫ್ ರೇಡಿಯೋಲೊಜಿನ ಡೈರೆಕ್ಟರರಾದ ಡಾ। ಕೆ. ಮಂಜುನಾಥ ರೈಗಳು ಕಳೆದ ತಾ. 28ರಲ್ಲಿ ಕ್ಯಾನ್ಸರ್ ರೋಗದ ವಿಚಾರವಾಗಿ ಭಾರತ ವೈದ್ಯಕೀಯ ಸಂಘದ ಮಂಗಳೂರು ಜಿಲ್ಲಾ ಶಾಖೆಯ ಆಶ್ರಯದಲ್ಲಿ ಶ್ರೀ ಎಲ್. ಸಿ. ಪಾಯಸ್ ಇವರ ಅಧ್ಯಕ್ಷತೆಯಲ್ಲಿ ಭಾಷಣವಿತ್ತರು ಡಾ. ಎ. ಎಫ್. ಕ್ಯೊಲೋಸರವರು ಸ್ವಾಗತ ಭಾಷಣ ಮಾಡಿದರು. ಆಯ ಸಂಘದ ಕಾರ್ಯದರ್ಶಿ । ಡಾ. ಉಪೇಂದ್ರರಾಯರು ಡಾ. ರೈಗಳ ಪರಿಚಯ ಮಾಡಿಕೊಟ್ಟರು. ಶ್ರೀ ಪಾಯಸರು ತನ್ನ ಪ್ರಾರಂಭಿಕ ಭಾಷಣದಲ್ಲಿ ಅಂದಿನ ಸಭಾ ವ್ಯವಸ್ಥಾಪಕರನ್ನು ಉಪನ್ಯಾಸಕರನ್ನು ಅಭಿನಂದಿಸಿದರು. ಡಾ. ರೈಗಳು ಕ್ಯಾನ್ಸರ್ ರೋಗದ ಕಾರಣ ಮತ್ತು ಅದರ ನಿವಾರಣೋಪಾಯಗಳನ್ನು ಬೋಧಪ್ರದವಾಗಿಯೂ, ವಿಚಾರಪೂರ್ಣವಾಗಿಯೂ ವಿವರಿಸಿದರು. ಪ್ರಾರಂಭದಲ್ಲೇ ಅದರೆ ಕ್ಯಾನ್ಸರನ್ನು ಶಾಶ್ವತವಾಗಿ, ವಿಳಂಬವಾದರೆ ತಾತ್ಕಾಲಿಕವಾಗಿ ಗುಣಗೊಳಿಸಬಹುದು ಇದು ಮಕ್ಕಳಿಗೆ, ಯುವಕರಿಗೆ, ಮುದುಕರಿಗೆ ವಿಶೇಷತಃ ಹೆಂಗಸರಿಗೆ ಯಾವ ಪ್ರಾಯದಲ್ಲಿಯೂ ಬರಬಹುದು. ಮದ್ರಾಸ್ ಪ್ರಾಂತ್ಯದಲ್ಲಿ 50ಸಾವಿರಕ್ಕೂ ಮಿಕ್ಕಿ ಜನರು ಇದಕ್ಕೆ ತುತ್ತಾಗಿದ್ದಾರೆ. ಹಲ್ಲು ಸರಿ ಇಲ್ಲದಿರುವುದು, ತಂಬಾಕು ಜಗಿದು ದವಡೆಯಲ್ಲಿಟ್ಟುಕೊಳ್ಳುವಿಕೆ, ಸದಾ ಸಿಗರೇಟ್ ಸೇವನೆ, ಬಿಸಿಬಿಸಿ ಆಹಾರ ತಿನ್ನುವುದು, ಕೆಟ್ಟ ವಾತಾವರಣ ವಾಸ ಮೊದಲಾದುವು ಈ ರೋಗದ ಕಾರಣಗಳು. ಮಕ್ಕಳು ಜನಿಸುವಾಗಲೂ ಈ ರೋಗ ಇರುವುದೂ ಉಂಟು. ಹಲ್ಲುಗಳ ನಡು ಸದಾ ಬಾತಿರುವಿಕೆ, ದೇಹದಲ್ಲಿ ಗುಳ್ಳೆಗಳು ಏಳುವಿಕೆ, ಅವು ಆರಂಭದಲ್ಲಿ ನೋವಾಗದ ಕಡೆಗೆ ನೋವಾಗುವುದು. ಇದನ್ನು ಸಕಾಲದಲ್ಲಿ ವೈದ್ಯರಿಗೆ ತೋರಿಸಬೇಕು. ವಿಳಂಬಿಸಿದರೆ ಅನಿಷ್ಟವಿದೆ ಎಂದರು. ಮದ್ರಾಸು ಸರಕಾರವು ಪ್ರಾಂತ್ಯದಲ್ಲಿ 17 ಕ್ಯಾನ್ಸರ್ ಚಿಕಿತ್ಸಾ ಕೇಂದ್ರಗಳನ್ನು ತೆರೆಯಲಿರುವುದೆಂದೂ ತಿಳಿಸಿದರು. ಬಳಿಕ ಅಧ್ಯಕ್ಷರ ಮುಕ್ತಾಯ ಭಾಷಣವಾಗಿ ಜತೆಕಾರ್ಯದರ್ಶಿ ಡಾ। ಬಿ. ಆರ್. ಹೆಗ್ಡೆಯವರು ಆಭಾರ ಸೂಚಿಸಿದರು. ಡಾ। ರೈಗಳು ನಮ್ಮ ಜಿಲ್ಲೆಗೆ ಬಂದಿದ್ದು ಪುತ್ತೂರು, ಉಡುಪಿ ಮೊದಲಾದ ಕಡೆಗಳನ್ನು ಸಂದರ್ಶಿಸಿರುವರು. ಇದೇ ತಾ. 2ರಲ್ಲಿ ಮಂಗಳೂರಿನಿಂದ ಹೊರಟು ಮದ್ರಾಸಿಗೆ ತೆರಳಿರುವರು.

ಅವಘಾತ— ಕಳೆದ ತಾ. ೨೮ರಲ್ಲಿ ಕೇಟಿಗುಡ್ಡೆ ನಾಲ್ಕುರಸ್ತೆ ಕೂಡುವಲ್ಲಿ ಮೋಟಾರು ಬಸ್ಸಿಗೆ ಒಂದು ಸೈಕಲ್ಲು ಡಿಕ್ಕಿಹೊಡೆದು ಸೈಕಲ್ ಸವಾರನು ಗಾಯಗೊಂಡು ಆಸ್ಪತ್ರೆಗೆ ಒಯ್ಯಲ್ಪಟ್ಟಿರುವನು.

ಹಿಂದುಳಿದ ವರ್ಗಗಳ ಸಭೆಯ ಉದ್ಘಾಟನೆಯನ್ನು ಗ್ರಾಮಾಭಿವೃದ್ಧಿ ಮಂತ್ರಿ ಶ್ರೀ। ಪರಮೇಶ್ವರನ್ ಅವರು ಕಳೆದ ತಾ. 20ರಲ್ಲಿ ನೆರವೇರಿಸಿದರು. ಹಿಂದುಳಿದ ವರ್ಗಗಳು ಒಂದುಗೂಡಿ ಸಂಘಟಿತರಾಗಬೇಕೆಂದೂ, ಅವರು ಕಾಂಗ್ರೆಸಿನೊಂದಿಗೆ ಇರುವುದು ಉಚಿತವೆಂದೂ ಹೇಳಿದರು.

ತಾ. 27ರಲ್ಲಿ ಮಂತ್ರಿಗಳು ಕಲೆಕ್ಟರರ ಕಚೇರಿಯಲ್ಲಿ ಕೆಲವರೊಡನೆ ವಿಚಾರವಿನಿಮಯ ಮಾಡಿದರು. ಅವರು ಕಾಂಗ್ರೆಸ್ ಕಚೇರಿಗೆ ಬಂದಾಗ ಅವರನ್ನು ಹಿಂದುಳಿದ ವರ್ಗಗಳ ಮುಖಂಡರು ಸ್ವಾಗತಿಸಿದರು. ಶ್ರೀ। ಎಂ. ಗಿರಿಯಪ್ಪನವರು ಮಂತ್ರಿಗಳ ಪರಿಚಯ ಭಾಷಣಮಾಡಿದ ಮೇಲೆ, ಹಿಂದುಳಿದ ವರ್ಗಗಳ ಸಂಘಟನೆಯ ಅತ್ಯಾವಶ್ಯಕತೆಯನ್ನು ವಿವರಿಸಿದರು. ಮುಂದುವರಿದವರ ಹೃದಯ ಮಾರ್ಪಾಟವೇನೋ ಇನ್ನೂ ಆಗಲಿಲ್ಲ. ದೇವಸ್ಥಾನ ಪ್ರವೇಶ, ಕಾಯಿದೆ ಶಾಸನವು ಇದ್ದರೂ ದೇವಸ್ಥಾನದ ಬಾಗಿಲು ಇನ್ನು ತೆರೆಯಲ್ಪಟ್ಟಿಲ್ಲ ಜಿಲ್ಲೆಯ ದೇವಾಲಯಗಳಿಗೆ ಇನ್ನು ಎಲ್ಲರಿಗೂ ಪ್ರವೇಶ ದೊರೆಯಲಿಲ್ಲ ಎಂದು ಹೇಳಿದ ಮೇಲೆ ಸಮಿತಿಯ ಕಾರ್ಯದರ್ಶಿ ಶ್ರೀ। ಎಸ್. ಎನ್. ಸುವರ್ಣರು ಓದಿದ ವರ್ಗಗಳ ಬೇಡಿಕೆಗಳ ಮನವಿಯನ್ನು ಓದಿ ಹೇಳಿದರು. ಹಿಂದುಳಿದವರಿಗೆ ಶಾಸನ ಸಭೆಯಲ್ಲಿ, ನೌಕರಿಯಲ್ಲಿ ಸ್ಥಾನಗಳನ್ನು ಕಾಯ್ದಿರಿಸಬೇಕು ಶಿಕ್ಷಣದಲ್ಲಿ ವಿಶೇಷ ಪ್ರೋತ್ಸಾಹನ ಸವಲತ್ತು ದೊರೆಯಬೇಕು ಸಮಗ್ರ ಹಿಂದುಳಿದವರಿಗೆ ಹಿಂದುಳಿದವರನ್ನು ಸೇರಿಸಿಕೊಳ್ಳತಕ್ಕದ್ದು ಅವರ [illegible] ಗುವಂತೆ ಕಾಣುತ್ತಿದ್ದ ಎಂದಿತ್ಯಾದಿ ಮನವಿಯಲ್ಲಿ ಹೇಳಲ್ಪಟ್ಟಿದ್ದುವು. ಮಂತ್ರಿಗಳು ಮನವಿಗೆ ಉತ್ತರ ಕೊಟ್ಟು ಸಂಘವನ್ನು ಉದ್ಘಾಟಿಸಿದರು. ದೇವಾಲಯದವರು ದೇವಸ್ಥಾನದ ಬಾಗಿಲು ತೆರೆದು ಕರೆಯುವ ದಿನ ಬಂದೇ ಬರುತ್ತದೆ, ಎಂದು ಹೇಳಿ ಸಮಿತಿಗೆ ಶುಭಹಾರೈಸಿ ಕೊಂಡರು. ಶ್ರೀ ಸುವರ್ಣರು ಧನ್ಯವಾದಗಳನ್ನಿತ್ತರು. ಮಂತ್ರಿಗಳು ತಾ 27ನೇ ಸಜೆ ಪಡುಬಿದ್ರೆ ಕುಂಬಳೆ ಮೊದಲಾದ ಸ್ಥಳಗಳನ್ನು ನೋಡಿ ಪಯ್ಯನೂರಿಗೆ ಹೋಗಿ ಅಲ್ಲಿಂದ ಮರುದಿನ ಮದ್ರಾಸಿಗೆ ತೆರಳಿದರು

ಜಿಲ್ಲಾ ಆಹಾರೋತ್ಪತ್ತಿ ಸಮಿತಿಯ ಸಭೆ— ಕಳೆದ ತಾ. 26ರಲ್ಲಿ ಜಿಲ್ಲಾ ಕಲೆಕ್ಟರ ಅಧ್ಯಕ್ಷತೆಯಲ್ಲಿ ಜರಗಿ ಆಹಾರೋತ್ಪತ್ತಿ ಯೋಜನೆಯ ಕೆಲಸವು ಪರಿಶೀಲಿಸಲ್ಪಟ್ಟಿತು. ಜಿಲ್ಲೆಯಲ್ಲಿ ಕೃಷಿಯ ದುವ ಉದ್ದೇಶದಿಂದ ೧೪೨ ಕೃಷಿಗಳಲ್ಲಿ 135 ಸರಕಾರಿ ಸಂಘಗಳು ಸ್ಥಾಪನೆಗೊಂಡು ಅವುಗಳ 146 ಸಂಘಗಳ ಸ್ವಾಧೀನ ಕಾರ್ಯಗಳು ನಡೆಯುತ್ತಿವೆ 73 ಸಂಘಗಳಿಂದ ಕೃಷಿಗಾಗಿ ಸುಮಾರು 10,5235 ಎಕ್ರೆ ಭೂಮಿಗಾಗಿ ಅರ್ಜಿ ಬಂದಿದೆ.

NOTICE

Notice having been giv.n of the loss of Policy No. 41610 issued by this Company on the life of Mr Vonthibettu Jayakara Hegde of Shirva a duplicate policy will be issued unless any objection is lodged with us within one month from the date hereof-

S. H. Thaker,
Managing Director.

Date 5-6 51

Wardern Insurance Co., Ltd.,
Sir Phirozshah Metha Road,
Fort, BOMBAY

ಸಶಸ್ತ್ರ ಕೂಟ— ಕಳೆದ ತಾ 21ರಲ್ಲಿ ಮದ್ರಾಸಿನ ಮೇಯರ್ ಶ್ರೀ ರಾಮನಾಥನ್ ಚೆಟ್ಟಿಯಾರರಿಗೆ ಎಸ್. ಆರ್. ಎಸ್ ಹೋಮಿನಲ್ಲಿ ಶ್ರೀ ಕೆ ಟಿ. ಆಳ್ವರ ಅಧ್ಯಕ್ಷತೆಯಲ್ಲಿ ಸತ್ಕಾರ ಕೂಟವೊಂದು ಜರಗಿತು ಪಬ್ಲಿಕ್ ಪ್ರಾಸಿಕ್ಯೂಟರ್ ಶ್ರೀ ಕೆ. ಸದಾನಂದ ಹೆಗ್ಡೆಯವರು ಅತಿಥಿಗಳನ್ನು ಸ್ವಾಗತಿಸಿದರು ಶ್ರೀ ಪಿ. ಆರ್. ಆರ್ ಪೂಂಜರು ತಮಿಳರಿಗೂ ದಕ್ಷಿಣ ಕನ್ನಡಿಗರಿಗೂ ಇರುವ ನಿಕಟ ಸಂಬಂಧಾದಿಗಳನ್ನು ವಿವರಿಸಿದರು. ಅತಿಥಿಗಳು ಪ್ರಕೃತದ ರಾಜಕೀಯ ಪರಿಸ್ಥಿತಿಯ ಕುರಿತು ಭಾಷಣವಿತ್ತರು ಡಾ। ನಾಗಪ್ಪ ಆಳ್ವರು ಧನ್ಯವಾದಗಳನ್ನಿತ್ತರು.

ವಿಮಾನ ನಿಲ್ದಾಣ — ಡಿಲ್ಲಿಯಿಂದ ಭಾರತ ಸರಕಾರದ ಸಿವಿಲ್ ಏವಿಯೇಶನ್ ವಿಮಾನ ಪ್ರಯಾಣ ಡೈರೆಕ್ಟರ್ ಜನರಲರು ಕೆನರಾ ಚೇಂಬರ್ ಓಫ್ ಕೋಮರ್ಸಿಗೆ ತಿಳಿಸಿದಂತೆ, ಮಂಗಳೂರಲ್ಲಿ ವಿಮಾನ ನಿಲ್ದಾಣ ರಚನಾ ಕಾರ್ಯವು ಈಗಾಗಲೇ ಆರಂಭವಾಗಿದೆ ನಿಲ್ದಾಣದ ಅಧಿಕಾಂಶ ಕೆಲಸವು ೧೯೫೨ರಲ್ಲಿ ಮುಗಿಯಬಹುದು

ಬೈಲೂರು- ಗಾಂಧಿ ಸ್ಮಾರಕ— ೫೦ ಸಾವಿರ ರೂ. ಹೊಸತಾಗಿ ಕಟ್ಟಿಸಿದ ಭವನದ ಪ್ರವೇಶೋತ್ಸವವು ತಾ. 12 6 51ರಂದು ಡಾಕ್ಟರ್ ಯು ಎಲ್ ನಾರಾಯಣರಾವ್, ಮದ್ರಾಸು ಇವರ ಹಸ್ತದಿಂದ ಶ್ರೀ ಬಿ ವೈಕುಂಠ ಬಾಳಿಗ ಬಿ. ಎ. ಬಿ ಎಲ್. ಮಂಗಳೂರು ಇವರ ಸನ್ಮಾನ್ಯ ಅಧ್ಯಕ್ಷತೆಯಲ್ಲಿ ಜರಗಲಿರುವುದು.

ಶ್ರೀ। ಪುಂಡೂರು ಲಕ್ಷ್ಮೀನಾರಾಯಣ ಪುಣಿಂಚಿತ್ತಾಯರ ನಿಧನ - ಬಾಲಗಂಗಾಧರಸ್ತವ ರಾಷ್ಟ್ರಗೀತ ರತ್ನಾಕರ ಮೊದಲಾದ ರಾಷ್ಟ್ರೀಯ ಗೀತೆಗಳನ್ನು ಬರೆದು ಪ್ರಸಿದ್ಧರಾದ ಶ್ರೀ। ಪುಣಿಂಚಿತ್ತಾಯರು ಇತ್ತೀಚೆಗೆ ನಿಧನ ಹೊಂದಿರುವುದು ವಿಷಾದಕರವಿದೆ ಇವರು ರಸಿಕರೂ ಉತ್ತಮ ವಾಗ್ಮಿಗಳೂ ಆಗಿದ್ದರಲ್ಲದೇ 1947ರಲ್ಲಿ ಕಾಸರಗೋಡಿನಲ್ಲಿ ಜರಗಿದ ಸಾಹಿತ್ಯಗೋಷ್ಠಿಯ ಸ್ವಾಗತಾಧ್ಯಕ್ಷರಾಗಿದ್ದರು.

ಮೂಲ್ಕಿ— ಜಿಲ್ಲೆಯ ಸಮಾಜ ಸೇವಾ ಸಂಘದ ವಾರ್ಷಿಕ ಮಹಾಸಭೆಯು ಕಳೆದ ತಾ ೨7ರಲ್ಲಿ ಶ್ರೀ। ಎಂ. ಬಾಡಪ್ಪನವರ ಅಧ್ಯಕ್ಷತೆಯಲ್ಲಿ ವಿಜೃಂಭಣೆಯಿಂದ ಜರಗಿತು. ಲೆಕ್ಕಪತ್ರ ವರದಿ ಮಂಜೂರಾತಿಯಾದ ಮೇಲೆ ಹಲವರ ಭಾಷಣಗಳಾದುವು. ಅಧ್ಯಕ್ಷ ಭಾಷಣವಾದ ಮೇಲೆ ಧನ್ಯವಾದಗಳೊಂದಿಗೆ ಸಭಾಂತ್ಯವಾಯಿತು.

ಫಲಿಮಾರು— ಡಾ ಟಿ. ಎನ್. ಶಮಾ [illegible] ನಡೆಸುತ್ತಿರುವ ನೂತನವಾಗಿ ಕಟ್ಟಿಸಿದ "ಕೃಷ್ಣ ನರ್ಸಿಂಗ್ ಹೋಮಿ"ನ ಪ್ರಾರಂಭೋತ್ಸವವು ಕಳೆದ ತಾ 26ರಲ್ಲಿ ಜಿಲ್ಲಾ ಬೋರ್ಡ್ ಅಧ್ಯಕ್ಷರಾದ ಶ್ರೀ। ಬಿ. ಮಂಜಯ್ಯ ಹೆಗ್ಡೆ ಅಧ್ಯಕ್ಷತೆಯಲ್ಲಿ ನೆರವೇರಿತು. ಇದೇ ಸಮಯದಲ್ಲಿ ಫಲಿಮಾರು ಗ್ರಾಮವನ್ನು ಒಂದು ಆದರ್ಶ ಕೇಂದ್ರವನ್ನಾಗಿ ಪರಿವರ್ತಿಸಿದ ಫಲಿಮಾರು ಮಠದ ಶ್ರೀಪಾದರ ಶ್ರೀಮದ್ ರಘುವರ್ಯತೀರ್ಥ ಶ್ರೀಪಾದಂಗಳವರ ತೈಲಚಿತ್ರವು ಡಾ। ಟಿ. ಮಾಧವ ಪೈಗಳವರಿಂದ ಅನಾವರಣ ಮಾಡಲ್ಪಟ್ಟಿತು.



Approved from by the Govt of Mysore Certificated by the Agent of the Govt of Cylone & Indian.

ಕಾರ್ಕಳ— ಇಲ್ಲಿಯ ಪ್ರಸಿದ್ಧ ವಕೀಲ್ ಜನಾಬ್, ಎಚ್. ಎಸ್. ಹುಸೇನ್ ಎಂ ಎಲ್. ಇವರ ಪುತ್ರಿ ಆಜೀಜಾ ಅವರ ವಿವಾಹವು ಜನಾಬ್ ಮುನೀರ್ ಅಹಮ್ಮದ್ ಅವರೊಡನೆಯೂ, ಮರುದಿನ ತನ್ನ ಪುತ್ರ ಬಶೀರ್ ಅಹಮ್ಮದ್‌ರವರ ವಿವಾಹವು ನೂರ್ ಜಹಾನ್ ಅವರೊಡನೆಯೂ ವಿಜೃಂಭಣೆಯಿಂದ ಜರಗಿತು ಊರ ಪರವೂರ ಸಕಲ ಜಾತಿ ಮತಗಳ ಸದ್ಗೃಹಸ್ಥರು ಈ ಎರಡು ವಿವಾಹಗಳಿಗೂ ಆಮಂತ್ರಿತರಾಗಿದ್ದರು.

ಬೆಳ್ಮಣ್— ಇಲ್ಲಿ ನೂತನವಾಗಿ ತೆರೆಯಲ್ಪಡಲಿರುವ ಹೈಸ್ಕೂಲಿನ ಹೊಸ ಕಟ್ಟಡದ ಉದ್ಘಾಟನಾ ಸಮಾರಂಭವು ತಾರೀಕು 5-6-51ನೇ ಬೆಳಿಗ್ಗೆ ಜಿ. ಬೋ. ಅಧ್ಯಕ್ಷ ಶ್ರೀ ಬಿ ಮಂಜಯ್ಯ ಹೆಗ್ಡೆಯಿಂದ ಶ್ರೀ. ಬೊಳಸ್ಪಳ್ಳಿ ಶಿವರಾಯರ ಅಧ್ಯಕ್ಷತೆಯಲ್ಲಿ ವಿಜೃಂಭಣೆಯಿಂದ ನೆರವೇರಿಸಲ್ಪಟ್ಟಿತು.

ಮುಂಬಾಯಿಯಲ್ಲಿ ಅಧಮಾರು ಮಠದ ಸ್ವಾಮಿಜಿಯವರು— ಉಡುಪಿ ಶ್ರೀ ವಿಬುಧೇಶತೀರ್ಥ ಶ್ರೀ ಪಾದಂಗಳವರು ದಿಗ್ವಿಜಯಕ್ಕೆ ಹೊರಟವರು ಇತ್ತೀಚೆಗೆ ಮುಂಬಾಯಿಗೆ ಬಂದು ಬಾನು ಗಂಗಾದಲ್ಲಿರುವ ಕಾಶೀ ಮಠದ ಚಿತ್ರೈಸಿ ಮುಂಬಾಯಿ ಕನ್ನಡಿಗರಿಗೆ ದರ್ಶನಲಾಭ ಕೊಡುತ್ತಿರುವರು ಕಳೆದ ತಾ 27ರಲ್ಲಿ ದಕ್ಷಿಣ ಕನ್ನಡದ ಎಲ್ಲಾ ಜಾತಿ ಮತಗಳವರು ಶ್ರೀ ಸ್ವಾಮಿಜಿಯವರಿಗೆ ಅತ್ಯಪೂರ್ವ ಸ್ವಾಗತವನ್ನಿತ್ತು ಬೇಂಕ್ ಓಫ್ ಇಂಡಿಯಾ ಕಟ್ಟಡದಲ್ಲಿ ಮಾನಪತ್ರವನ್ನು ಅರ್ಪಿಸಿದರು ಫೋರ್ಟಿನ ಪ್ರಮುಖ ಬೀದಿಗಳಲ್ಲಿ ಶ್ರೀ ಪಾದಂಗಳವರನ್ನು ಮೆರವಣಿಗೆಯಿಂದ ಕರೆತರಲಾಯಿತು. ವಿಶೇಷ ಜನಸಂದಣಿಯಿಂದ ಕೂಡಿದ ಸಭೆಯಲ್ಲಿ ಮಾನಪತ್ರವನ್ನೂ ಹಿಂದುಸ್ಥಾನದಲ್ಲಿ ವಿಶಿಷ್ಟ ಸ್ಥಾನವನ್ನು ಪಡೆದಿರುವ ಉಡುಪಿ ಸಂಸ್ಕೃತ ಕಾಲೇಜಿನ ಕಟ್ಟಡಕ್ಕಾಗಿ ಒಂದು ನಿಧಿಯನ್ನು ಅರ್ಪಿಸಲಾಯಿತು. ಈ ಸಂಸ್ಕೃತ ಕಾಲೇಜಿನ ನೂತನ ಕಟ್ಟಡದ ಆರಂಭೋತ್ಸವವು ಮುಂಬಾಯಿಯ ಪ್ರಧಾನಿ ಶ್ರೀ ಬಿ. ಜಿ ಖೇರರಿಂದ ನೆರವೇರಿಸಲ್ಪಡುವುದು.

ಕಳೆದ ತಾ 20ರಲ್ಲಿ ಬೊಂಬಾಯಿಯ ದಕ್ಷಿಣ ಕನ್ನಡ ಬ್ರಾಹ್ಮಣ ಸಂಘದ ಸದಸ್ಯರು ಸಂಘದ ಅಧ್ಯಕ್ಷ ಶ್ರೀ ಕೆ ಭುಜಂಗರಾಯರ ನಿವಾಸದಲ್ಲಿ ಸ್ವಾಗತವನ್ನಿತ್ತು 12000 ರೂಪಾಯಿಗಳ ನಿಧಿಯನ್ನು ಸಂಸ್ಕೃತ ಕಾಲೇಜು ಕಟ್ಟಡಕ್ಕೆ ಕೊಟ್ಟರು. ಉಪಾಧ್ಯಕ್ಷರಾದ ಡಾ। ಯು ಜಿ ನಾರಾಯಣರಾಯರು ಸಂಘದ ಧ್ಯೇಯ ಧೋರಣೆಗಳನ್ನು ಹೇಳಿ ಸ್ವಾಮಿಜಿಯವರು ಕೈಕೊಂಡ ಉತ್ತಮ ಕಾರ್ಯಕ್ಕಾಗಿ ಅವರನ್ನು ಅಭಿನಂದಿಸಿದರು.

ಚಿಕ್ಕ ಮಕ್ಕಳ ಅಕ್ಕರೆಯ
ಸಚಿತ್ರ ಪದ್ಯ ಪುಸ್ತಕ—
ಕೆ ಹೊನ್ನಯ್ಯ ಶೆಟ್ಟರಿಂದ
ರಚಿತವಾದ

ಮುಗುಳು

ಒಂದರಿಂದ ಐದನೆ ತರಗತಿ ವರೆಗಿನ
ಮಕ್ಕಳಿಗೆ ಓದಲಿಕ್ಕೂ,
ಅಭಿನಯಿಸಲಿಕ್ಕೂ, ಅನುಕೂಲವಾಗಿದೆ,
ಮಂಜೂರಾತಿ ಪಡೆದು, ಕೆಲವು
ವರ್ಷಗಳಿಂದ ಜಿಲ್ಲೆಯ ಮತ್ತು ಹೊರಗಿನ
ಶಾಲೆಗಳಲ್ಲೆಲ್ಲಾ ಪ್ರಚಾರದಲ್ಲಿದೆ.
ಬೆಲೆ: 0—5—0
ಸಿಗುವ ಮುಖ್ಯ ಸ್ಥಳ:—
ನವಭಾರತ ಬುಕ್ ಡಿಪೋ ಉಡುಪಿ.

ಕೇಂದ್ರ ಸರಕಾರಕ್ಕೆ ಅಳಿಯ ಸಂತಾನಿಗರ ಶಿಷ್ಟಮಂಡಲಿ.

ಡಾ॥ ಅಂಬೇಡ್ಕರ್ ಮತ್ತು ಪಂಡಿತ ನೆಹರುಗಳೊಡನೆ ಮಾತುಕತೆ

ಈ ನೊಡನೆಲೇ ಪ್ರಕಟವಾದಂತೆ ಶ್ರೀಗಳಾದ ಎ. ಶಂಕರಾಳ್ವ, ವಕೀಲ್ ಮಂಗಳೂರು. (ಅಧ್ಯಕ್ಷ) ಕೆ.ಕೆ. ಶೆಟ್ಟಿ (ಕಾರ್ಯದರ್ಶಿ) ಬಿ ಆರ್. ಕರ್ಕೇರ, ಬಿ. ಬಿ. ಶೆಟ್ಟಿ, ವಕೀಲ್ ಎಚ್ ಕೆ. ಶಿಂಗಳಾಯ ಮತ್ತು ಬಿ ಎಸ್. ಬಾಸ್ಕರ ರೈ ವಕೀಲ್, ಇವರು ದಕ್ಷಿಣಕನ್ನಡ ಜಿಲ್ಲಾ ಹಿಂದೂಕೋಡು ಅಳಿಯ ಸಂತಾನ ಸಮಿತಿಯ. ಪರವಾಗಿ ಕೇಂದ್ರ ಸರಕಾರಕ್ಕೆ ಶಿಷ್ಟಮಂಡಲಿಯನ್ನೊಯ್ದು, ಹಿಂದೂಕೋಡಿಗೆ ಅಳಿಯಕಟ್ಟಿನವರನ್ನು ಸಂಪೂರ್ಣವಾಗಿ ಸೇರಿಸಬೇಕೆಂದು ಮನವಿಯನ್ನೊಪ್ಪಿಸಿದರು.

ಶ್ರೀ ಶ್ರೀನಿವಾಸ ಮಲ್ಯರೊಂದಿಗೆ ಶಿಷ್ಟಮಂಡಲಿಯವರು ತಾ. ೬ನೇ ಸೂರ್ವಾಹ್ನ ಡಾ॥ ಅಂಬೇಡ್ಕರರನ್ನು ಅವರ ಆಫೀಸಿನಲ್ಲಿ ಕಂಡು ತಮ್ಮ ಮನವಿಯನ್ನೊಪ್ಪಿಸಿ ದೀರ್ಘ ಚರ್ಚೆ ನಡೆಸಿದರು. ಶ್ರೀಗಳಾದ ಎ. ಶಂಕರಾಳ್ವ, ಬಿ. ಬಿ ಶೆಟ್ಟಿ ಮತ್ತು ಕೆ. ಕೆ. ಶೆಟ್ಟಿ ಈ ಚರ್ಚೆಯಲ್ಲಿ ಮುಖ್ಯಭಾಗ ವಹಿಸಿದರು. ಶಿಷ್ಟಮಂಡಳಿಯ ಉದ್ದೇಶದ ಕುರಿತು ಡಾ॥ ಅಂಬೇಡ್ಕರರು ಸಂಪೂರ್ಣ ಒಪ್ಪಿಗೆ ಸೂಚಿಸಿದರು ಮತ್ತು ಹಿಂದೂ ಕೋಡಿಗೆ ಪ್ರಬಲ ವಿರೋಧವಿರುವುದೆಂದು ಕೂಡ ತಿಳಿಸಿದರು. ಹಿಂದೂ ಕೋಡು ಪಾರ್ಲಿಮೆಂಟಿನ ಮುಂದೆ ಬರುವ ಸಂದರ್ಭದಲ್ಲಿ ಅಳಿಯ ಸಂತಾನಿಗರ ಕುರಿತು ಯಾವ ರೀತಿಯ ವಿನಾಯಿತಿಯನ್ನೂ ಮಾಡದೆ ಸಂಪೂರ್ಣವಾಗಿ ಅದರೊಂದಿಗೆ ಸೇರಿಸಬೇಕೆಂದು ಶಿಷ್ಟಮಂಡಳಿಯವರು ಹೇಳಿಕೊಂಡರು. ಯಾವ ಹಿಂದುಗಳಿಗೂ ವಿನಾಯಿತಿ ಇರಬಾರದೆಂಬುದೇ ತನ್ನ ಉದ್ದೇಶ. ಆದರೆ ಹಿಂದೂ ಕೋಡಿಗಿಂತಲೂ ತನ್ನ ಸ್ವಂತ ಉತ್ತರವನ್ನಾದ್ದರಿಂದ ಮಲಬಾರಿನವರ, ಹೇಳಿದ ದರಿಂದ ನಾನು ಮರು ಮಕ್ಕತ್ತಾಯಿಗಳ ಕುರಿತು ಕೆಲವು ಬಿಟ್ಟಿನ ವಿನಾಯಿತಿ ತೋರಿಸಿದ್ದೆಂದು ಡಾ. ಅಂಬೇಡ್ಕರರೆಂದರು. ಇದಕ್ಕೆ ಅಳಿಯ ಸಂತಾನಿಗರ ಆಕ್ಷೇಪ ವಿದೆಯೆಂದು ತನಗೆ ಗೊತ್ತೇ ಇಲ್ಲವೆಂದು ಶಿಷ್ಟಮಂಡಳಿಯವರು ಅಳಿಯಸಂತಾನಿಗರಿಗೂ ಮರುಮಕ್ಕತ್ತಾಯಿಗಳಿಗೂ ಇರುವ ಭೇದವನ್ನು ತಿಳಿಸಿ ಅಳಿಯ ಕಟ್ಟಿನವರ ಮಟ್ಟಿಗೆ ಯಾವ ವಿನಾಯಿತಿಯೂ ಬೇಕಿಲ್ಲವೆಂದು ಪ್ರತಿಪಾದಿಸಿದರು, ಮತ್ತು ಹಾಗೆ ವಿನಾಯಿತಿ ಮಾಡುವುದರಿಂದ ಆಗುವ ದುಷ್ಪರಿಣಾಮವನ್ನೂ ಡಾ॥ ಅಂಬೇಡ್ಕರರ ಮನಗಾಣಿಸಿದರು.

ತಾ. ೭ನೇ, ಸೂರ್ವಾಹ್ನ ಶಿಷ್ಟಮಂಡಳಿಯವರು ಶ್ರೀ ನಿಜಲಿಂಗಪ್ಪನವರೊಂದಿಗೆ ಪ್ರಧಾನ ಮಂತ್ರಿ ನೆಹರುಗಳನ್ನು ಪಾರ್ಲಿಮೆಂಟಿನ ವರ ನಿವಾಸದಲ್ಲಿ ಕಂಡು ಮನವಿಯನ್ನೊಪ್ಪಿಸಿದರು.

ಶಿಷ್ಟಮಂಡಲಿಯ ಉದ್ದೇಶವನ್ನು ಶ್ರೀ ನಿಜಲಿಂಗಪ್ಪನವರು ತಿಳಿಸಿದರು. ಶ್ರೀ ಕೆ. ಕೆ ಶೆಟ್ಟಿಯವರು ಮಂಡಳಿಯ ಸದಸ್ಯರ ಪರಿಚಯ ಮಾಡಿಕೊಟ್ಟು ಮನವಿಯನ್ನೊಪ್ಪಿಸಿದರು. ಶ್ರೀ ಶಂಕರಾಳ್ವ ಮತ್ತು ಬಿ. ಬಿ ಶೆಟ್ಟಿ ಅಳಿಯ ಸಂತಾನಿಗರನ್ನು ಸಂಪೂರ್ಣವಾಗಿ ಹಿಂದೂ ಕೋಡಿಗೆ ಸೇರಿಸುವ ಅವಶ್ಯಕತೆಯನ್ನು ಪಂಡಿತಜೀಯವರಿಗೆ ಮನಗಾಣಿಸಿದರು. ಅಳಿಯ ಕಟ್ಟಿನವರನ್ನು ಹಿಂದೂಕೋಡಿಗೆ ಸೇರಿಸುವುದು ಮಾತ್ರವಲ್ಲ, ಸನಾತನಿ ಹಿಂದುಗಳ ವಿರೋಧಕ್ಕೆ ಅಂಜದೆ ಧೈರ್ಯದಿಂದ ಹಿಂದೂಕೋಡನ್ನು ಈ ಸಲವೇ ಮಂಜೂರು ಮಾಡಿಸಬೇಕೆಂದು ಶ್ರೀ ಕೆ. ಕೆ. ಶೆಟ್ಟಿ ಕೇಳಿಕೊಂಡರು "ಸನಾತನಿಗಳಿಗೆ ಅಂಜುವ ಪ್ರಶ್ನೆಯಿಲ್ಲ; ಆದರೆ ನಮ್ಮವರೇ ಕೆಲವರು ವಿರುದ್ಧವಿದ್ದಾರೆ ನಿಮ್ಮ ಮನವಿಯ ಕುರಿತು ನಾನು ವಿಚಾರಿಸುತ್ತೇನೆ" ಎಂದರು ಪಂಡಿತ್‌ಜೀಯವರು.

ಆ ವೇಳೆ ಶಿಷ್ಟಮಂಡಲಿಯು ಕರ್ನಾಟಕದ ಹಲವು ಮುಖಂಡರನ್ನು ಕಂಡು, ಪ್ರೇಕ್ಷಣೀಯ ಸ್ಥಳಗಳನ್ನು ಸಂದರ್ಶಿಸಿ ತಾ. 10ರಲ್ಲಿ ಡಿಲ್ಲಿಯಿಂದ ಹೊರಟುಬಂದರು.

ಕೆ. ಕೆ. ಶೆಟ್ಟಿ, ಕಾರ್ಯದರ್ಶಿ
ಹಿಂದೂಕೋಡು ಅಳಿಯಸಂತಾನ ಸಮಿತಿ.
ಮಂಗಳೂರು, ತಾ 28 5 51

— —

ರಾಮತೀರ್ಥ ಬ್ರಾಹ್ಮಿ ತೈಲ

ನಾನು ಮತ್ತು ನನ್ನ ಪತ್ನಿ

ಕಳೆದ ವರ್ಷ ನಾನು ಮತ್ತು ನನ್ನ ಪತ್ನಿ ತಲೆನೂಲೆಯಿಂದ ಪೀಡಿತರಾಗಿದ್ದೆವು ನಾವು ಈ ರೋಗದಿಂದ ಮುಕ್ತವಾಗುವುದಕ್ಕೆ ಅನೇಕ ತರದ ತೈಲವನ್ನು ಉಪಯೋಗಿಸಿವೆವು.ಆದರೆ ಅದರಲ್ಲಿ ಹೆಸರು,ಪ್ರಶಂಸ ಮತ್ತು ಗುಣದ ಜಾಹೀರಾತು ಮಾತ್ರ ಬರೆದಿತ್ತು ಈ ಎಣ್ಣೆಯಿಂದ ಗುಣವಾಗುವ ಬದಲು ನಮ್ಮ ತಲೆಕೂದಲು ಒಂದೇ ಸವನೆ ಬಿಳುಪಾದುವು.

ಒಂದು ದಿನ ಪ್ರಸಿದ್ಧ ವರ್ತಮಾನ ಪತ್ರದಲ್ಲಿ ಅರ್ಧ ಪುಟದ ಜಹೀರಾತನ್ನು ನಾನು ಓದಿದೆ. ಅದು ಬ್ರಾಹ್ಮೀ ತೈಲದ್ದಾಗಿತ್ತು ಆ ತೈಲದ ಪ್ರಶಂಸೆಯನ್ನು ಓದಿ ನಾನು ಆಕರ್ಷಿತನಾದೆ. ಮತ್ತು ಕೂಡಲೆ ಒಂದು ಬಾಟ್ಲಿ ಎಣ್ಣೆಯನ್ನು ಖರೀದಿ ಮಾಡುವುದಕ್ಕೋಸ್ಕರ ನಾನು ಬಜಾರಕ್ಕೆ ಹೋದ

ಆ ಜಾಹೀರಾತು ರಾಮತೀರ್ಥ ಯೋಗಾಶ್ರಮ, ದಾದರ್, (ಜಿ ಐ. ಪಿ) ಮುಂಬಯಿ ೧೪ ಇವರ ಔಷಧಿಯ ರಿಜಿಸ್ಟರ್ಡ್ ರಾಮ ತೀರ್ಥ ಬ್ರಾಹ್ಮಿ ತೈಲ (ಸ್ಪೆಶಲ್ ನಂ 1) ಇದರದ್ದಾಗಿತ್ತು. ನಾನು ಇಪ್ಪತ್ತೈದು ಬಾಟ್ಲಿ ಖರೀದಿ ಮಾಡಿ ಉಪಯೋಗಮಾಡಿದೆ ಹೇಗೆ ಏನೆಂದು ತಿಳಿಯಿರಿ? ಮತ್ತು ರಾಮತೀರ್ಥ ಬ್ರಾಹ್ಮಿ ತೈಲ (ಸ್ಪೆಶಲ್ ನಂ 1) ಪ್ರಥಮ ಮೂರು ಬಾಟ್ಲಿಯ ವ್ಯವಹಾರ ಮಾಡುವಾಗ ನಮ್ಮ ಇಬ್ಬರದು ತಲೆನೂಲೆ ಕೂಡ ಒಂದೇ ಸವನೇ ಗುಣವಾಗಿ ನಿಂತು ಬಿಟ್ಟಿತು ನಮ್ಮ ತಲೆಕೂದಲು ಕಪ್ಪಗೆ ಕಠ್ರಗೆ ಆಗುತ್ತ ಬಂತು

ಇದರಿಂದ ಕೇವಲ ನನ್ನ ಪತ್ನಿ ಮತ್ತು ಮಕ್ಕಳಿಗೆ ಮಾತ್ರವಲ್ಲ. ನಮ್ಮ ಸ್ನೇಹಿತ ಮಿತ್ರ ವ ಕ.ಟುಂಬಕ್ಕೂ ಕೂಡ ರಾಮತೀರ್ಥ ಬ್ರಾಹ್ಮಿ ತೈಲ ಸ್ಪೆಶಲ್ 1ರ ವ್ಯವಹಾರ ಮಾಡಬೇಕಾಗಿ ಶಿಫಾರಸ್ ಮಾಡುವೆವು

(ಸಹಿ) ಮಹಮ್ಮದ್ ಕಾರಿಯಾವಾಡಿ,
ಕೊಟನ್ ಎಕ್ಸ್‌ಚೇಂಜ್, ಬರೋದಾ.

ಸ್ಪೆಶಲ್ ನಂ ೧] [ಮೆಡಿಕೇಟೆಡ್

ಸ್ಮರಣೆ ಹೆಚ್ಚುತ್ತದೆ , ಶಾಂತನಿದ್ರೆ ಬರುತ್ತದೆ, ಕಣ್ಣಿನ ದೃಷ್ಟಿ ಹೆಚ್ಚುತ್ತದೆ, ಬಕ್ಕಿ ವಾಸಿಯಾಗುತ್ತದೆ, ಕೂದಲು ಕಪ್ಪಾಗುತ್ತದೆ ಬೆಳೆಯುತ್ತವೆ ಮತ್ತು ನೆತ್ತಿಯಲ್ಲಿ ಕೂದಲು ಬರುತ್ತವೆ. ಎಲ್ಲಾ ಋತುಗಳ್ಳ ಎಲ್ಲರಿಗೂ ಅನುಕೂಲವಿದೆ ಎಲ್ಲಾ ಕಡೆಯಲ್ಲಿಯೂ ದೊರೆಯುತ್ತದೆ

ಸ್ಥಾನಿನ ಕ್ರಯ: ದೊಡ್ಡ ಬಾಟ್ಲಿಗೆ ರೂ. 3–8–0 ಸಣ್ಣ ಬಾಟ್ಲಿಗೆ ರೂ. 2–0–0

ಶ್ರೀ ರಾಮತೀರ್ಥ ಯೋಗಾಶ್ರಮ,

ದಾದರ್ (ಜಿ ಐ ಪಿ.) ಮುಂಬಯಿ ೧೪

ಕುಂಬಳೆ—ಕೊಯ್ಯಾಡಿ ಮತ್ತು ಮೊಗ್ರಾಲ್ ಈ ಗ್ರಾಮಗಳಿಗೆ ಕುಂಬಳೆಯಲ್ಲಿ ಆರಿಶ್ಯಾಡಿ ಗ್ರಾಮಕ್ಕೆ ಆರಿಶ್ಯಾಡಿಯಲ್ಲೂ, ಇಕ್ಬಾಲ್ ಸಾಹೇಬರ ಸ್ಮೋರಿನ ಅಧ್ಯಕ್ಷದಲ್ಲಿ ಜಿಲ್ಲಾ ಕಲೆಕ್ಟರರ ಹುಕುಂ ಪ್ರಕಾರ ತಾ. ೩ರಂದು, ಇಲ್ಲಿನ ಪಂಚಾಯತ್ ಬೋರ್ಡ್ ಪ್ರೆಸಿಡೆಂಟ್ ಶ್ರೀ ಬಾಬುರಾಯ ಭಟ್ಟರು ಶರೀಕ್ ರೇಶನ್ ಅಂಗಡಿಗಳನ್ನು ಉದ್ಘಾಟಿಸಿದರು. ಕಲಾ ಒಂದಕ್ಕೆ ೪ ಔನ್ಸ್ ಪ್ರಕಾರ ರೇಶನ್ ಅಕ್ಕಿ ಕೊಡುವುದಾಗಿದೆ.

ಅಂಗಡಿಕೆಲಸಗಳು ಎಚ್. ಇ ರಾಜಾ ಪುತ್ರನ ಕೂಟ ತಾ ೭ರಂದು ಶಾಲಾ ಡೆಪ್ಯುಟಿ ಇನ್ಸ್‌ಪೆಕ್ಟರ್ ಶ್ರೀ ಪಿ. ಚಂದ್ರಶೇಖರ ರಾಯರ ಅಧ್ಯಕ್ಷತೆಯಲ್ಲಿ ಸೇರಿತು. ಶಾಲಾಭಿವೃದ್ಧಿಯ ದಾರಿಯನ್ನು ಸೂಚಿಸಿ, ಮೆಸ್ಸರ್ಸ್ ಎ. ಕೆ ಕೆದೂರ್, ಸಂಕಪ್ಪ ರೈ, ಅಬ್ದುಲ್ ಜಲಾಲ್, ಬಿ ಕೆ. ಕುಂಬ್ಳಾಳಿ, ವಾಸುದೇವ ಮೂಡಿತ್ತಾಯ ಮುಂತಾದವರು ಭಾಷಣ ಕೊಟ್ಟರು, ಜನಾಬ್ ಎ. ಕೆ. ಕೆದೂರ್ ಅಧ್ಯಕ್ಷರಾಗಿಯೂ, ಮೆಸ್ಸರ್ಸ್ ಎ. ಎ. ಕೆದೂರ್, ಸಂಕಪ್ಪ ರೈ, ಮುಹಮ್ಮದ್, ಶಂಬಾರ್, ಬಿ. ಕೆ. ಕುಂಬ್ಳಾಳಿ ಇರುವ ಒಂದು ಶಾಲಾ ಕಮಿಟಿಯನ್ನು ಕೂಡಾ ನಿಶ್ಚಯಿಸಲಾಯ್ತು.

ತಾ. ೯ರಂದು ಮೊಗ್ರಾಲಿನಿಂದ ಒಂದು ಲಾರಿಯಲ್ಲಿ ಮಂಗಳೂರಿಗೆ ಹೋಗುವ ರೇಶನ್ ಕಾರ್ಡಿಲ್ಲದೆ ತಂದ ಅಕ್ಕಿಭತ್ತವನ್ನು ತಾಲೂಕು ಸಪ್ಲೈ ಆಫೀಸರ್ ಶ್ರೀ ಗಂಗಾಧರ ಮೇನೋನ್ ರವರೂ, ಇನ್ಸ್‌ಪೆಕ್ಟರ್ ಶ್ರೀ ನಾರಾಯಣ ಸವಿಲ್ಲಾರ್ ಕೂಡಿ ಹಿಡಿದಿದ್ದಾರೆ.

ಫಿರ್ಕಾ ಡೆವಲಪ್‌ಮೆಂಟ್ ಮತ್ತು ಪರಿಜನ್ ಖಾತೆಯ ಮಂತ್ರಿವರ್ಯರಾದ ಶ್ರೀ ಪಿ. ಪರಮೇಶ್ವರನವರು ತಾ. ೭ರಂದು ಜಿಲ್ಲಾ ಕಲೆಕ್ಟರ್ ಶ್ರೀ ವಾಜಂಗ್ಯ, ಪತ್ನಿಯರು ಶ್ರೀ ಜಿ ಡಿ ಪಿ ಶ್ರೀ ನಾರಾಯಣ ಶೆಟ್ಟಿ, ಮುಂತಾದವರೊಡನೆ ಸಂದರ್ಶಿಸಿದ್ದರು. ಸರಕಾರದ ಬ್ರಾಂಚ್‌ಮೆಂಟ್ ಸೆಟ್ಲ್‌ಮೆಂಟ್ ಪ್ರೆಮಿಸಿನಲ್ಲಿ ನಡೆಸಿದ್ದ ಸಾಮಗ್ರಿಗಳ ಪ್ರದರ್ಶನವನ್ನು ಸಚಿವರು ನೋಡಿದರು.

ಪ್ರವಾಸಿಯ ಪತ್ರಗಳು ೪

ಕಳೆದ ಸೋಮವಾರ (ತಾ. ೧೬ ೪ ೫೧) ಸಂಜೆಗೆ ನಾವು ಫ್ರಾನ್ಸ್ ದೇಶದ ಪ್ರಸಿದ್ಧ ಪಟ್ಟಣವೂ, ಬಂದರವೂ, ಆದ ಮಾರ್ಸೇಲ್ಸ್ ನಗರವನ್ನು ಸೇರಿ, ಆ ರಾತ್ರಿ ಮತ್ತು ಮರು ದಿನ ಬೆಳಗುಗಳನ್ನು ಅಲ್ಲಿಯೇ ಕಳೆದೆವು. ಫ್ರೆಂಚ್ ಇತಿಹಾಸದಲ್ಲಿ ಮಾರ್ಸೇಲ್ಸ್ ನಗರಕ್ಕೆ ಪೌರಾಣಿಕ ಪ್ರಸಿದ್ಧಿಯಿದೆ. ಕ್ರಿ. ಪೂ. ೬೦೦ ರಷ್ಟು ಹಿಂದೆ ಈ ನಗರದ ನಿರ್ಮಾಣವಾಯಿತು. ಕ್ರಿ. ಶಕ. ಮೊದಲನೆಯ ಶತಮಾನದ ತನಕ ಇದು ಗ್ರೀಕರ ಅಧೀನವಾಗಿತ್ತು. ಅನಂತರ ರೋಮನರ ಮತ್ತಿತ್ತರ ಅರಸು ಮನೆತನಗಳ ಅಧೀನವಾಗಿತ್ತು.

ಕಡಲು ದಂಡೆಯ ಈ ಪಟ್ಟಣ, ಇಲ್ಲಿನ ಸಮುದ್ರತೀರದ ಅರ್ಧಚಂದ್ರಾಕಾರಕ್ಕೆ ಸಮನಾಗಿ ಸುಮಾರು ೩ ಹ..ರ ಉದ್ದವೂ, ಒಂದು ಹರದಾರಿ ಅಗಲವೂ ಆಗಿದೆ. ಹಡಗುಗಳು ಲೇವಾಗುವ ಸ್ಥಳ-ಪಟ್ಟಣದ ನಡುವೆ ಕರೆಯುಂತಿರುವ ಒಂದು ಸಾಗರದ ಭಾಗವಾಗಿದೆ. ಹಡಗುಗಳ ಕಂಗುವ ಧಕ್ಕೆಗಳ ಉದ್ದವೇ ೧೭ ಮೈಲಿನಷ್ಟು ದೊಡ್ಡದಿದೆ. ಸುಮಾರು ನೂರು ಕಡೆಗಳಲ್ಲಿ ಹಡಗುಗಳು ಬಂದು ದಂಡೆಗೆ ತಾಗಿ ನಿಲ್ಲಬಹುದು. ೧೯೪೯ರಲ್ಲಿ ಈ ರೇವಿಗೆ ೧೨,೦೦೦ ಹಡಗುಗಳು ಬಂದಿದ್ದುವಂತೆ. ೧೯೩೮ರಲ್ಲಿ ಬಂದ ಹಡಗುಗಳ ಸಂಖ್ಯೆ ೧೮,೦೦೦ ಅಂದರೆ ಕಳೆದ ಮಹಾಯುದ್ಧದಿಂದ ಈ ನಗರಕ್ಕಾದ ನಷ್ಟವನ್ನು ನಾವು ಸುಲಭದಲ್ಲಿ ಊಹಿಸಬಹುದು. ಯುದ್ಧದಲ್ಲಿ ಈ ನಗರ ೧೯೪೦ರ ಕೊನೆಗೆ, ಜರ್ಮನರ ಆಕ್ರಮಣದಿಂದಾಗಿ ೪೪ ರ ತನಕವೂ ಕೈತಪ್ಪಿತ್ತು. ಅವರ ಅಧೀನತೆಯಲ್ಲಿ ಈ ನಗರ ಪಟ್ಟಣ ಹಾನಿಗೆ ಗುರಿಯಾಯಿತು. ಯುದ್ಧಕಾಲದಲ್ಲಿ ಸಿಡಿದ ಗುಂಡುಗಳಿಂದಾಗಿ ೩,೦೦೦ ಜನ ಸತ್ತರು, ೫,೦೦೦ ಮಂದಿ ಗಾಯಗೊಂಡರು, ೪,೦೦೦ ಮನೆಗಳು ಪೂರ್ಣ ನಾಶವಾದುವು, ೧೪,೦೦೦ ಮನೆಗಳು ಜಖಮಾದುವು. ಒಂದು ಲಕ್ಷ ಜನರಷ್ಟು ಮನೆ ಮಠ ಇಲ್ಲದವರಾದರು. ಈಗ ಹಾಳುಬಿದ್ದ ಸ್ಥಳಗಳು ಅನೇಕ ಹೊಸ ಕಟ್ಟಡಗಳಿಗೆ ಎಡೆಕೊಟ್ಟಿವೆ. ಹಿಂದಿನ ಇಟ್ಟಿಗೆಗಾರೆಗಳ ಮನೆಗಳ ಬದಲು, ಸಿಮೆಂಟ್ ಕಾಂಕ್ರೀಟಿನ ಮನೆಗಳು ನಿಲ್ಲುತ್ತಿವೆ. ಈಗ ಇಲ್ಲಿನ ಜನಸಂಖ್ಯೆ ೧೫ ಲಕ್ಷ.

ಜರ್ಮನರು ಈ ನಗರವನ್ನು ಬಿಟ್ಟು ಹೋಗುವಾಗ ತೀರಿಸಿದ ಸೇಡು ಅತ್ಯಂತ ಕ್ರೂರವಾಗಿತ್ತು. ಮಿತ್ರರಾಷ್ಟ್ರ ಸೈನ್ಯಗಳು ಬಂದರನ್ನು ಉಪಯೋಗಿಸದಂತೆ ಅದನ್ನು ನಾಶಮಾಡಿದ್ದರು. ಜರ್ಮನರು ಪ್ರತೀಕಾರವಾಗಿ, ಊರು ಬಿಡುವ ಮೊದಲು, ಬಂದರಿನಲ್ಲಿ ನೂರು ಅಡಿಗಳಿಗೊಂದರಂತೆ ಬಾಂಬುಗಳನ್ನಿಟ್ಟು, ಧ್ವಂಸಮಾಡಿದ್ದಲ್ಲದೆ, ರೇವಿನಲ್ಲಿದ್ದ ೨೫೦ ಹಡಗುಗಳನ್ನು ಮುಳುಗಿಸಿಯೇ ಬಿಟ್ಟರು.

ಇಲ್ಲಿನ ಕಡಲುದಂಡೆಯಲ್ಲಿ ಎರಡು ಹರದಾರಿ ತನಕ ವಿಹಾರಕ್ಕೆ ಹೋಗಬಹುದಾದ ವಿಶಾಲ ಮಾರ್ಗವಿದೆ. ಈ ದಾರಿ ಮಾತ್ರ ಕಿರಿದಾದದ್ದು. ಜನರು ಅಷ್ಟೊಂದು ತಿರುಗಾಡುವುದೂ ಕಾಣುತ್ತಿಲ್ಲ. ಇದಕ್ಕಿಂತಲೂ ಮುಂಬಯಿಯ ಮೆರಿನಾ ವಿಹಾರ ಮಾರ್ಗ ಇನ್ನೆಷ್ಟೊ ಸುಂದರವಾಗಿ ಕಾಣುತ್ತದೆ. ಈ ನಗರದ ಮುಖ್ಯ ಬೀದಿಯಲ್ಲಿ ನಡುವಣಕ್ಕೆ 'ಕೆನಬೆರೆ' ಎಂಬೊಂದು ಬೀದಿಯಿದೆ. ಈ ಬೀದಿ ತೊಡಗುವಲ್ಲಿ, ಈ ದೇಶಕ್ಕೇ ಪ್ರಾಚೀನವಾದ, ಅಂದರೆ ೩೫೧ ವರ್ಷದಷ್ಟು ಪೂರ್ವದ ವಾಣಿಜ್ಯ ಸಂಘದ ಕಟ್ಟಡವಿದೆ. ಈ ಕಟ್ಟಡದ ಎದುರೇನೆ ೧೯೩೪ರಲ್ಲಿ ಯುಗೋಸ್ಲಾವಿಯದ ದೊರೆ ಅಲೆಗ್ಸಾಂಡರನನ್ನು ಗುಂಡು ಹಾಕಿ ಕೊಂದ ಸ್ಥಳವಿದೆ. ಇಲ್ಲಿನ ಬೀದಿಯ ಅಂಗಡಿಗಳಲ್ಲಿ, ಮನೆಗಳಲ್ಲಿ, ವ್ಯಾಪಾರ ಇರಲಿ, ಇಲ್ಲದಿರಲಿ-ವಿದ್ಯುದ್ದೀಪಗಳು ಉರಿಯುತ್ತಿರುತ್ತವೆ. ಇಲ್ಲಿನ ಅಂಗಡಿಕಾರರೆಲ್ಲರೂ ವ ಕಲಾತ್ಮಕವಾಗಿ ಅವರ ಅಂಗಡಿಗಳಲ್ಲಿ ವಸ್ತುಗಳನ್ನು ಪ್ರದರ್ಶಿಸುವ ವಿಧಾನದಿಂದಲೇ ತಿಳಿಯ ಬರುವುದು ಬಹಳ. ಎಲ್ಲೆಲ್ಲೂ ಹೂಹಿನ ಅಂಗಡಿಗಳನ್ನೂ, ಸಿನೆಮಾ ಮಂದಿರಗಳನ್ನೂ, ಮದ್ಯಪಾನ ಗೃಹಗಳನ್ನೂ, ಉಪಾಹಾರ ಗೃಹಗಳನ್ನೂ ಕಾಣಬಹುದು. ದ್ರಾಕ್ಷಾರಸ ಇಲ್ಲಿ ಬಹು ಅಗ್ಗವಾಗಿ ದೊರೆಯುತ್ತದೆ. ಆದುದರಿಂದಲೇ ಊರಿನ ಗಂಡಸರು, ಹೆಂಗಸರು ಉಪಾಹಾರ ಗೃಹದ ಹೊರಗೆ ಕುಳಿತು ಅದನ್ನು ಸೇವಿಸುತ್ತಿರುತ್ತಾರೆ. ಹಾಗೆ ಉಪಾಹಾರ ಗೃಹಗಳಲ್ಲಿ ಒಳ್ಳೆಯ ಕಾಫಿಯೂ ದೊರೆಯುತ್ತದೆ. ಒಂದು ಕಪ್ಪಿಗೆ೧೦ ಆಣೆ ಬೆಲೆ. ಒಂದು ಥಾಲಿ ನ್ಯಾನಿಗೆ ಅದಕ್ಕೂ ಕಡಿಮೆ ಬೆಲೆ. ಸುಮಾರು ೮ ಆಣೆಯಷ್ಟು.

ಇಲ್ಲಿಯ ಫ್ರೆಂಚ್ ಜನರು ಪ್ರತ್ಯೇಕ ಒಂದು ಜನಾಂಗದವರಂತೆ ಕಾಣುತ್ತಾರೆ. ಬಿಳಿಯ ಮೈ ಬಣ್ಣ, ಉರುಟಾದ ಮೈ ಮುಖ, ಕಪ್ಪಾದ ತಲೆಕೂದಲು ಉಳ್ಳವರು. ಜನರ ವರ್ತನೆಯಲ್ಲಿ ಶಾಂತ ಸ್ವಭಾವವೂ, ಸೌಜನ್ಯವೂ ನೆಲೆಸಿರುತ್ತದೆ.

ನಗರದಲ್ಲೆಲ್ಲಾ ಅಲೆದಾಡಿದರೂ ಅಲ್ಲಲ್ಲಿ ಪ್ರಸಿದ್ಧ ಪುರುಷರ ಪ್ರತಿಮೆಗಳನ್ನು ಕಾಣುತ್ತೇವೆ. ಇಲ್ಲಿನ ಪ್ರಸಿದ್ಧವಾದ ಒಂದು ರಸ್ತೆ 'ಪ್ರಾಡೊ' ಎಂಬುದು ಇದು ನಾಲ್ಕು ಮೈಲಷ್ಟು ಉದ್ದವಾಗಿ ೧೫೦ ಅಡಿ ಅಗಲವಾದ ದಾರಿ. ದಾರಿಯುದ್ದಕ್ಕೂ ಸುಂದರವಾದ ಸಾಲು ಮರಗಳಿರುವುದರಿಂದ ಬಲು ಮನೋಹರವಾಗಿ ಕಾಣುತ್ತದೆ. ಈ ದಾರಿಯು ಇಕ್ಕೆಡೆಗಳಲ್ಲಿ ಪುರಾತನ ಕಾಲದ ಚಿಕ್ಕಪುಟ್ಟ ಮನೆಗಳೇ ಇಟ್ಟಿಗೆ ಪ್ರತಿ ಮನೆಗೂ ತೋಟವಿದೆ. ಒಂದೊಂದು ಮನೆಗೆ ನೂರು ವರ್ಷವಾದರೂ ಪ್ರಾಯವಿರಬಹುದು. ಈ ದಾರಿಯನ್ನು ಬಿಟ್ಟು ಉಳಿದ ಹಾದಿಗಳಲ್ಲಿ ಇರುವ ಆಧುನಿಕ ಮನೆಗಳು ಮುಂಬಯಿಯಲ್ಲಿ ಕಾಣುವ ಐದಾರು ಅಂತಸ್ತಿನ ಉಪ್ಪರಿಗೆಯ ಮನೆಗಳು.

ಈ ನಗರದಲ್ಲಿ ಅನೇಕ ಪ್ರೇಕ್ಷಣೀಯ ಸ್ಥಳಗಳಿವೆಯಾದರೂ, ಬರಿಯ ಒಂದೆರಡನ್ನು ಕುರಿತಾಗಿ ಹೇಳಬಹುದಷ್ಟೆ. ಅವುಗಳಲ್ಲಿ ಒಂದು ಗುಡ್ಡದ ತುದಿಯಲ್ಲಿರುವ ನೊಟರ್ ಡೆಮ್-ಡಿ-ಲಾ-ಗರ್ಡ್ ಎಂಬ ಇಗರ್ಜಿ. ಅಲ್ಲಿ ನಿಂತರೆ ಊರಿಗೆ ಊರೇ ಕಾಣಸುತ್ತದೆ. ಆ ಚರ್ಚಿನ ಶಿಖರದ ಮೇಲೆ ಸ್ವರ್ಣಾಚ್ಛಾದಿತವಾದ ಒಂದು ಪ್ರತಿಮೆ ಇದೆ. ಈ ಸ್ಥಳಕ್ಕೆ ಸಮೀಪವಾಗಿ ಮೂರನೇ ನೆಪೋಲಿಯನ್ ತನ್ನ ರಾಣಿಗಾಗಿ ಕಟ್ಟಿಸಿದ 'ಫೆರೊ' ಎಂಬ ಅರಮನೆ ಇದೆ. ಈಗ ಈ ಸ್ಥಳದಲ್ಲಿ ಮೆಡಿಕಲ್ ಕಾಲೇಜು ನಡೆಯುತ್ತಿದೆ. ಈ ಪ್ರದೇಶದಿಂದ ನೇರವಾಗಿ ದಕ್ಷಿಣಕ್ಕೆ ಹೋದರೆ ಕಡಲಿನೊಳಗೆ ಒಂದು ದ್ವೀಪ ಕಾಣಸುತ್ತದೆ. ಮೊಂಟಿಕ್ರಿಸ್ಟೋ ಎಂದು ಆ ದ್ವೀಪದ ಹೆಸರು. 'ಕೌಂಟ್ ಓಫ್ ಮೊಂಟಿಕ್ರಿಸ್ಟೊ' ಎಂಬ ಕಾದಂಬರಿಯ ದೆಸೆಯಿಂದ ಸೆರೆಮನೆಯಾಗಿ ಬಳಸುತ್ತಿದ್ದ ಈ ದ್ವೀಪದ ಹೆಸರು ಅನೇಕರಿಗೆ ತಿಳಿಯುವಂತಾಗಿದೆ.

Notice

In the court of the District Judge of South Kanara

O. P. No. 45/1951.

In the matter of the guardianship of minors

1) Ravi, aged about 9 years,
2) Jaya, aged about 6 years

Between:

Kanthappa Hegde-Petitioner and

Sheenappa Hegde Respondent.

Notice to all concerned

Please take notice that the above petitioner has applied to this court that he may be appointed as the guardian of the property and person of the above minors and the same stands posted to 18—6—1951 for hearing. Any person who has got objection for the said petition may appear before the above court at 10 A. M. on the said date and file their objections. Failing which the above petition will be heard and decided in your absence.

Sd/K. S. Hegde,

Advocate for petitioner.

Mangalore, Dated 25-5-1951.

— ಮಕ್ಕಳನ್ನು ಹಡೆಯುವುದು ಸಾಕು —

ಅಶಕ್ತ ಸ್ತ್ರೀಯರಿಗೆ **ಬರ್ಥ್ ಕಂಟ್ರೋಲ** ರೋಗ ಗೃಹಸ್ಥ ಹೆಚ್ಚು ಮಕ್ಕಳಿಗೆ

ಏಳು ದಿವಸ ಈ ಮಾತ್ರೆಗಳನ್ನು ಸೇವನ ಮಾಡಿದರೆ ಮುಂದೆ ಖಂಡಿತವಾಗಿ ಮಕ್ಕಳಾಗುವದಿಲ್ಲ. ಸ್ತ್ರೀಯರು ಪ್ರತಿತಿಂಗಳು ಸರಿಯಾಗಿ ಮುಟ್ಟಾಗುತ್ತಾರೆ. ಅಲ್ಲದೆ ಸ್ತ್ರೀಯರ ಬೆಳೆಸೆರಗು, ಪ್ರದರರೋಗ, ಹೊಟ್ಟೆಕುಟ್ಟು ಗುಣವಾಗಿ ಸ್ತ್ರೀಯು ಗರ್ಭಿಣಿಯಾಗುವದಿಲ್ಲ. ಈ ಔಷಧವನ್ನು ಸೇವಿಸುವ ಕ್ರಮ: ಪ್ರತಿದಿವಸ ಮುಂಜಾನೆ ೧ಗುಳಿಗೆ ಮಧ್ಯಾಹ್ನಕ್ಕೆ ೧ಗುಳಿಗೆ, ಸಂಜೆಗೆ ೧ಗುಳಿಗೆಯಂತೆ ಊಟದ ಮೊದಲು ತಕ್ಕೊಳ್ಳಬೇಕು. ಏಳುದಿವಸ ಈ ಔಷಧವನ್ನು ಋತುಸ್ರಾವದಲ್ಲಿ ಸೇವಿಸಬೇಕು

ಪಥ್ಯ:—ಹೆರವೀವಲ್ಲ ಬಿಡಬೇಕು. ೭ ದಿವಸ ಸಂಪೂರ್ಣ ಔಷಧದ ಕಿಮ್ಮತ್ತು ರೂಪಾಯಿ 5—0—0. ಪೋಸ್ಟ ಚಾರ್ಜು ೧೨ ಆಣೆ.

ಮಾಲಕರು:—ಬಾಳಪ್ಪಾ ಫಕೀರಪ್ಪಾ ದಾವಣಗೇರಿ

ಆಯುರ್ವೇದ ಔಷಧಾಲಯ ಗದಗ-ಸಿಟಿ.

ಏಜಂಟರು:—ಹುಬ್ಬಳ್ಳಿ ಧಾರವಾಡ,—ಹುಬ್ಬಳ್ಳಿ, ಗದಗ, ಬಾಗಲಕೋಟೆ ಧಾರವಾಡ ವಿಜಾಪುರ—ಮಲ್ಲಪ್ಪ ಸಿದ್ಧಲಿಂಗಪ್ಪ ಧಾರವಾಡಕರ ವಿಜಾಪುರ ವಂಜುಂಡೇಶ್ವರ ಮೆಡಿಕಲ್ ದಾವಣಗೇರಿ ದಾವಣಗೇರಿ.— ದಾವಣಗೇರಿ ಪ್ರೆಸ್ಸ ಆರ್ ಎಲ್ ಶೆಟ್ಟಿ ,ಶಿವಮೊಗ್ಗ, ಹಾವೇರಿ, ಬ್ಯಾಡಗಿ

"ಬೇರೆ ಶಾಸ್ತ್ರಗಳನ್ನೆಷ್ಟೋದಿದರೇನು ಗೀತೆಯನ್ನು ಚೆನ್ನಾಗಿ ಓದಬೇಕು"—(ವರಾಹ ಪುರಾಣ)

ಗೀತೆಯ ಕೈಗನ್ನಡಿ

(ಭಗವದ್ಗೀತೆಯ ಮೂಲ ಶ್ಲೋಕ ಮತ್ತು ಕನ್ನಡ ಅನುವಾದ)

ಅನುವಾದಕರು—ದಿ। ಮೊಸಳೆಕೆರೆ ಚಿದಂಬರಯ್ಯನವರು

ಈ ಗ್ರಂಥದಲ್ಲಿ ಗೀತೆಯ ಮೂಲಶ್ಲೋಕಕ್ಕೆ ಮೂಲದಲ್ಲಿ ಸಹಜವಾಗಿ ಕಾಣಬರುವ ಅರ್ಥವೂ ಮಾತುಗಾರಿಕೆಯು ಮಾತುಗಳ ರೂಪದಲ್ಲಿಯೇ ಥಟ್ಟನೆಯಾಗಿ ಎದ್ದು ಕಾಣುವುದು.

400 ಕ್ಕೂ ಮಿಕ್ಕಿ ಪುಟಗಳು! ಬೆಲೆ 0—12—0.

ಒಂದು ರೂಪಾಯಿಯನ್ನು ಕಳುಹಿಸಿದರೆ ಒಂದು ಪ್ರತಿಯನ್ನು ಬುಕ್‌ಪೋಸ್ಟಿನಿಂದ ಕಳಿಸಲಾಗುವುದು.

ಪ್ರತಿಗಳು ಸಿಗುವ ಮುಖ್ಯ ಸ್ಥಳ:—

ನವಯುಗ ಪ್ರೆಸ್, ಉಡುಪಿ ದ. ಕನ್ನಡ

ನವಭಾರತ ಪುಸ್ತಕ ಭಂಡಾರ, ಉಡುಪಿ, ಇಲ್ಲಿಯೂ ದೊರೆಯುತ್ತವೆ.

ಲಕ್ಷ್ಮೀ

ಸೆಂಟಾಲ್ ಮಾತ್ರೆ

ಇದರ ಉಪಯೋಗದಿಂದ ಬಹುಕಾಲದ ಮೇಹ, ಪ್ರಮೇಹ, ಮೂತ್ರದ ಉರಿ, ಮೂತ್ರ ಕೃಚ್ಛ್ರ, ಮೂತ್ರದೊಡನೆ ಯಾ ಮುಂದಾಗಿ ಬಿಳುಪು, ಅರಸಿನ, ಕೆಂಪು ಈ ವರ್ಣಗಳಲ್ಲಿ ಕೀವು ಹೋಗುವುದು,ತೊಡೆ ಸಂದಿನಲ್ಲಿ ನೋವು, ಕಾಲ ಗಂಟುಗಳಲ್ಲಿ ವೇದನೆ, ಕಣ್ಣಿನಲ್ಲಿ ಕೀವು ಬರುವುದು, ಶರೀರದಲ್ಲಿ ಉಷ್ಣತೆ, ಸ್ವಪ್ನೇಂದ್ರಿಯ ಇವೆಲ್ಲಾ ಖಾತ್ರಿಯಾಗಿ ಗುಣಹೊಂದುವುದು

ಡಬ್ಬಿ ಒಂದಕ್ಕೆ ರೂ. 2—0—0

ಏಜಂಟ್:—

ರಾ ಕಂಪೆನಿ, ಮಂಗಳೂರು

ಅಮೃತಾಂಜನ

ತಲೆನೋವು, ಶಿರೋವೇದನೆ, ಉಳುಕು ಕುತ್ತಿಗೆ, ಭುಜ ಹಲ್ಲು ವೇದನೆಗಳಿಗೂ, ಎದೆ ನೋವು,ಗಾಯಗಳು, ಚಾಕುಕೊಳ್ಳುವುದು, ಚೇಳುವಿಷಮುಂತಾದವು, ಪಕ್ಷವಾತ,ನೆಗಡಿ, ಮೊದಲಾದ ಎಲ್ಲಾ ರೋಗಗಳಿಗೂ ಸಿದ್ಧೌಷಧ

REGD

ಹುಗು ಶಡ್ಡಿ ಮದ್ದು ನಮ್ಮಲ್ಲಿ ಸಿಕ್ಕುತ್ತವೆ

ಅಮೃತಾಂಜನ ಲಿಮಿಟೆಡ್

ಮದರಾಸು.

ಬೊಂಬಾಯಿ ಮತ್ತು ಕಲ್ಕತ್ತ.

ಇಲ್ಲಿನ ಹಳೆಯ ಬಂದರೆಕ್ಕೆ ಸಮೀಪವಾಗಿ, ಸುಮಾರು ೨೦೦ ವರ್ಷಗಳ ಪೂರ್ವದ ಕಟ್ಟದ ಪ್ರಸಿದ್ಧವಾದ ಕೆಥೆಡ್ರಲ್ ಒಂದಿದೆ. ಬೈಜಂಟೈನ್ ಮಾಕ್ಸು ಶೈಲಿಯಲ್ಲಿ ರಚಿತವಾದ ಈ ಮಂದಿರ ೭೦೦ ಅಡಿ ಎತ್ತರವೂ, ೪೦೦ ಅಡಿ ಉದ್ದವೂ ಆಗಿದೆ. ಇದು ಪ್ರಪಂಚದ ಪ್ರಸಿದ್ಧ ಚರ್ಚುಗಳಲ್ಲಿ ಐದನೇ ಸ್ಥಾನವನ್ನು ಪಡೆಯುತ್ತದಂತೆ. ಬಣ್ಣದ ಗಾಜುಗಳ ಚಿತ್ರಾಲಂಕಾರಗಳಿಂದ ಈ ಮಂದಿರ ಶೋಭಿಸುತ್ತಿದೆ.

ಮಾರ್ಸೇಲ್ಸ್‌ನಲ್ಲಿ ಹಲವಾರು ಔದ್ಯೋಗಿಕ ಕಾರ್ಖಾನೆಗಳಿವೆ. ಅವನ್ನೆಲ್ಲ ನಾನಿಲ್ಲಿ ಬಣ್ಣಿಸ ಬೇಕಾಗಿಲ್ಲ. ಈ ನಗರದಲ್ಲಿ ಸಂಚರಿಸುವ ನಮಗೆ ಥಕ್ಕನೆ ಹೊಳೆಯುವ ಅಂಶ-ವಸ್ತುಗಳ ಬೆಲೆ, ಇಲ್ಲಿನ ಮುಖ್ಯ ನಾಣ್ಯ ಫ್ರಾಂಕ್. ಈಗ ಫ್ರಾಂಕಿನ ಬೆಲೆ ಎಷ್ಟು ತಗ್ಗಿದೆಯೆಂದರೆ ಇಂಗ್ಲೆಂಡಿನ ಒಂದು ಪವನಿಗೆ ಸಾವಿರ ಫ್ರಾಂಕುಗಳಷ್ಟಾಗುತ್ತದೆ. ಹಣದ ಉಬ್ಬರದಿಂದ ಪ್ರತಿಯೊಂದಕ್ಕೂ ಮಿತಿಮೀರಿದ ಬೆಲೆ ಹೇರುತ್ತಾರೆ. ಒಂದು ಜತೆ ಬೂಟ್ಸುಗಳಿಗೆ ೪,೦೦೦ ಫ್ರಾಂಕ್. ಒಬ್ಬನಿಗೆ ಸಾಕಾಗುವಷ್ಟು ಅಂಗಿಯ ಬಟ್ಟೆಗೆ ೨೦,೦೦೦ ಫ್ರಾಂಕ್. ನಮ್ಮೂರಲ್ಲಿ ೧೫ರೂಗೆ ದೊರೆಯುವ ಒಂದು ಕೈಚೀಲಕ್ಕೆ ೪,೦೦೦ ಫ್ರಾಂಕ್. ಹೀಗಾಗಿ ಮಹಾಯುದ್ಧದ ಬಳಿಕ ಇಲ್ಲಿನ ಹಣ; ಕೊಳ್ಳುವ ಶಕ್ತಿಯನ್ನೇ ಕಳಕೊಂಡಿದೆ. ಫ್ರಾನ್ಸ್‌ದೇಶದ ಮೂಲಕ ಮೂರು ಬಾರಿ ೧೮೭೦, ೧೯೧೪, ೧೯೩೯ರಲ್ಲಿ ಜರ್ಮನರೊಡನೆ ಸಂಗ್ರಾಮಕ್ಕೆ ಗುರಿಯಾಗಿ ಕಷ್ಟಕ್ಕೀಡಾಯಿತು. ಒಂದು ರೀತಿಯಿಂದ ಫ್ರೆಂಚರ ಪಾಡನ್ನು ನೋಡಿ ನಮಗೆ ಕನಿಕರ ಉಂಟಾಗುತ್ತದೆ. ಇಲ್ಲಿನ ಜನರ ಉಡುಗೆ, ತೊಡಿಗೆ, ಹಳ್ಳಿಯ ಜನರನ್ನು ಕಾಣುವಾಗ ಸಾರ್ವತ್ರಿಕ ಬಡತನವೇ ಕಾಣುತ್ತದೆ. ಅದರೂ ನಮ್ಮ ನಗರಗಳಲ್ಲಿ ಕಾಣಿಸುವ ಗುಡಿಸಲು ಜೋಪಡಿಗಳಿಲ್ಲ. ಇಲ್ಲಿನ ದಾರಿಗಳು ಅಗಲಕಿರಿದಾದುವು. ದೊಡ್ಡ ಮೋಟರು ವಾಹನಗಳ ಸಂಚಾರಕ್ಕೆ ಅನುಕೂಲವಾಗಿಲ್ಲ. ನಗರದ ಡೈಸಿಲ್ ಬಸ್ ಮತ್ತು ಟ್ರೇಮ್‌ಗಳನ್ನು ಬಿಟ್ಟರೆ ಉಳಿದ ಮೋಟಾರು ವಾಹನಗಳು ಫ್ರೆಂಚ್ ನಿರ್ಮಾಣವಾದ ರಿನಾಲ್ಟ್ ಮತ್ತು ಸಿಟ್ರೊವನ್ ಗಾಡಿಗಳು. ಇಲ್ಲಿನ ಬಸ್ಸುಗಳಲ್ಲಿ ೪ ಮೈಲು ದೂರ ಹೋದರೆ ಸುಮಾರು ೩೦ ಫ್ರಾಂಕ್ ಅಥವಾ ೧೫ ಆಣೆ ವೆಚ್ಚವಾಗುತ್ತದೆ.

ನಾವು ಹೋದ ದಿನ ರಾತ್ರಿ, ಮರುದಿನ ಬೆಳಗಿನ ಊರೆಲ್ಲ ತಿರುಗಾಡಿಕೊಂಡು ಮಧ್ಯಾಹ್ನದೊಳಗೆ ನಮ್ಮ ಹಡಗನ್ನು ಸೇರಿದೆವು. ಹಡಗಿನ ನೌಕರರು ವೇಳೆಗೆ ಸರಿಯಾಗಿ ಬರಬೇಕೆಂದು ನಮ್ಮನ್ನು ಮೊದಲೇನೆ ಎಚ್ಚರಿಸಿದ್ದರು. ಹಡಗು ಹೊರಟಿತು. ಹೊರಡುವಾಗ ಇನ್ನೂ ಮೂರು ನಾಲ್ಕು ಮಂದಿ ಪ್ರಯಾಣಿಕರು ವೇಳೆಗೆ ಬಂದಿರಲಿಲ್ಲ. ಹಡಗು ಹೊರಟಮೇಲೆ ಅವರು ಲಾಂಚಿನಲ್ಲಿ ಧಾವಿಸಿ ಬಂದರು. ಹಡಗು ನಿಲ್ಲಲಿಲ್ಲ. ಅವರು ಹಿಂದಕ್ಕೆ ಉಳಿಯಬೇಕಾಯಿತು. ತಮ್ಮ ಪಾಸ್‌ಪೋರ್ಟು, ಹಣ ಯಾವುದೊಂದೂ ಕೈಯಲ್ಲಿರಿಸಿಕೊಳ್ಳದೆ, ಹಾಗೇ ಹಿಂದೆ ಉಳಿದ ಆ ಪ್ರವಾಸಿಗಳ ಗತಿಯೇನೋ!

ನಮ್ಮ ಹಡಗಿನ ಎಷ್ಟೋ ಜನರು ಮಾರ್ಸೇಲ್ಸ್‌ನಲ್ಲೇ ಇಳಿದು, ಇಂಗ್ಲೆಂಡ್ ನೋಡ ಬಯಸುವವರಿಗೆ ನೆಲಮಾರ್ಗವಾಗಿಯೇ ಹೋದರು. ರೈಲಿನ ಮುಖಾಂತರ ಹೋಗುವುದಾದರೆ ಲಂಡನ್ ನಗರವನ್ನು ೩೬ ತಾಸಿನಲ್ಲಿ ತಲುಪಬಹುದು. ರೋಮ್ ಇಲ್ಲಿಂದ ೫೦೦ ಮೈಲು ದೂರ. ನಾವು ನಾಲ್ಕು ದಿನ ಹಿಡಿಯುವ ಇನ್ನೂ ೩,೦೦೦ ಮೈಲು ದೂರ ಪ್ರಯಾಣ ಮಾಡಬೇಕಾದ ಕಡಲು ಹಾದಿಯನ್ನು ಆರಿಸಿದ್ದೆವು. ಅಂದರೆ ನಮ್ಮ ಹಡಗು ದಕ್ಷಿಣಕ್ಕಿಳಿದು ಜಿಬ್ರಾಲ್ಟರ್ ಜಲಸಂಧಿ ಮೂಲಕ ದಾಟಿ, ಎಟ್ಲಾಂಟಿಕ್ ಸಾಗರವನ್ನು ಹಾದು, ಇಂಗ್ಲೆಂಡಿಗೆ ಹೋಗಬೇಕು. ಭೂಮಧ್ಯ ಸಮುದ್ರದಿಂದ ಎಟ್ಲಾಂಟಿಕ್ ಸಮುದ್ರವನ್ನು ಸೇರಿದ ಮೇಲೆ ಒಮ್ಮೆ ಮೋಡಗಳಿಂದ ತುಂಬಿರುತ್ತಲೇ ಇತ್ತು. ತಾ. ೧೭ರಿಂದ ೨೧ರ ತನಕ ಫ್ರಾನ್ಸ್ ಭೂತೀರಗಳನ್ನು ಸುತ್ತಿಕೊಂಡು ನಾವು ೨೧ನೆಯ ತಾರೀಕಿನ ಬೆಳಿಗ್ಗೆ ಇಂಗ್ಲೆಂಡಿನ ದಕ್ಷಿಣ ಕರಾವಳಿಯಾದ 'ಟಿಲ್ಬರಿ' ಎಂಬ ಬಂದರನ್ನು ಬಂದು ಸೇರಿದೆವು. ಇಲ್ಲಿಂದ ಲಂಡನಿಗೆ ೩೦ ಮೈಲು ದೂರ. ಇಷ್ಟು ದೂರಕ್ಕೇನೇ ಇಂಗ್ಲೆಂಡಿನಲ್ಲಿ ಇಳಿಯುವವರ ಸಲುವಾಗಿ ಇಲ್ಲಿನ ಕರಾವಳಿಯ ಇಮಿಗ್ರೇಶನ್ ಇಲಾಖೆಯವರು ಬಂದು, ನಮ್ಮ ಪಾಸ್‌ಪೋರ್ಟ್ ಮೊದಲಾದ ಪತ್ರಗಳ ತನಿಖೆ ನಡೆಸಿ ಹೋದರು. ಅಂತವನ್ನು ಸೇರುವ ಮೊದಲು ಜನರ ತೊಡಕು ತೊಂದರೆಗಳು ನಮಗಿಲ್ಲ. ನಮ್ಮ ಕಡಗ ಈ ದೇಶವನ್ನು ಬಿಟ್ಟಮೇಲೆ, ಮುಂದುವರಿದು ಇಂಗ್ಲಿಷ್ ಚಾನಲನ್ನು ಸೇರಿತು. ಆ ರಾತ್ರಿ ... ಸುಮಾರಿಗೆ ನಾವು ಡೋವರ್ ನಗರವನ್ನು ಸಮೀಪಿಸಿದೆವು. ಡೋವರಿನ ಸೀಮೆ ಸುಣ್ಣದ ಗುಡ್ಡಗಳು ಬಲು ಪ್ರಸಿದ್ಧವಷ್ಟೆ. ಆ ಗುಡ್ಡದಲ್ಲಿನ ಮನೆಗಳೂ, ವಿದ್ಯುದ್ದೀಪಗಳೂ ಒಳ್ಳೆ ಸುಂದರವಾಗಿ ಕಾಣಿಸುತ್ತಿದ್ದುವು. ಹಡಗಿನ ಮೇಲಿನ ನಮಗೆ ೩೦ ಮೈಲು ದೂರದಲ್ಲಿದ್ದ ಫ್ರಾನ್ಸಿನ ಕರಾವಳಿಯ ದೀಪಗಳೂ ಕಾಣಿಸುತ್ತಿದ್ದುವು. ಇಲ್ಲಿಂದ ನಮ್ಮ ಹಡಗು ಥೇಮ್ಸ್ ನದಿಯ ಸಂಗಮವನ್ನು ಸೇರಿತು. ರಾತ್ರಿಯೆಲ್ಲ ಅಂದರೆ ಬೆಳಗ್ಗಿನ ೬ನಿಟ ಪ್ರಯಾಣ ಮಾಡಿ ಬೆಳಗ್ಗಿನ ಆರುಗಂಟೆಗೆ ಲಂಡನಿನ ಒಂದು ಭಾಗವಾದ ಟಿಲ್‌ಬರಿ ಧಕ್ಕೆಗೆ ನಮ್ಮ ಹಡಗು ಬಂದು ಸೇರಿತು. ಅಲ್ಲಿ ಸುಂಕದ ಕಛೇರಿಯವರ ತನಿಖೆ ನಡೆಯಿತು. ಕೇವಲ ಪ್ರಶ್ನೋತ್ತರದಲ್ಲಿ ನಡೆದದ್ದು 'ಆಕ್ಷೇಪಕರವಾದ ವಸ್ತುಗಳೇನಾದರೂ ಅವೆಯೋ?' ಎಂದು ಕೇಳುತ್ತಿದ್ದರು. ನಾವು 'ಇಲ್ಲ' ಎಂದರೆ, ಆ ಮಾತಿನ ಮೇಲಿನ ಭರವಸೆಯಿಟ್ಟು ಬಿಟ್ಟುಬಿಡುತ್ತಿದ್ದರು. ಇದು ಇಲ್ಲಿನ ಸಾರ್ವಜನಿಕ ನಡತೆಯ ಹಿರಿಮೆಯನ್ನು ಕಾಣಿಸುತ್ತದೆ. ಆನಂತರ ನಮಗಾಗಿ ಸ್ಪೆಶಲ್ ಟ್ರೈನುಗಳು ಅರ್ಧ ಗಂಟೆಗೆ ಒಂದರಂತೆ ಬಿಟ್ಟುದರಿಂದ, ನಾವು ಅವುಗಳಲ್ಲಿ ಕುಳಿತು ಲಂಡನ್ ನಗರವನ್ನು ಸೇರಿದೆವು.

ಕೆ. ಆರ್. ಕಾರಂತ

(ಮುಗಿಯಿತು)

ಯಕೃತ್ಸಂಬಂಧ ನಿಂತಿತು

'ಕುಮಾರ' ಬಿಲ್ಲೆಗಳನು ಉಪಯೋಗಿಸಿದರೆ ಹದತಪ್ಪಿ ಋತುಸ್ರಾವವಾಗುವುದು, ಹತೋಟಿಗೆ ಬರುವುದು, ಈ ಔಷಧ ಸೇವನೆಯಿಂದ ತೀವ್ರ ಗುಣಹೊಂದಬಹುದು, ಯಾವ ಬಾಧಕವೂ ಇಲ್ಲ. ಸಾವಿರಾರು ಮಂದಿಗೆ ಶಾಶ್ವತ ಗುಣವಾಗಿದೆ- ಬೆಲೆ; ರೂ. 3-; ಸ್ಪೆಶಲ್ ರೂ. 5- ಅಧಿಕಾಧಿಕ ಸ್ಪೆಶಲ್ ರೂ. 8- [ವಿ. ಪಿ ಖರ್ಚು ಪ್ರತ್ಯೇಕ.]

Mis D. DEVEE, F DB (N. J.)
Tollygunge CALCUTTA
ಸ್ಟಾಕಿಸ್ಟರು ಕರ್ನಾಟಕ ಫಾರ್ಮಸಿ, ಮಂಗಳೂರು

UDIPI MUNICIPALITY
Tender Notice

Sealed Tenders will be received by the Commissioner, Udipi Municipality upto 4 p m on 22—6—51 for the construction of 2 sheds of 20' x 12' each at a cost of Rs 3050/- in the City Bus stand site. Furthers Particulars regarding conditions of contract etc , may be obtained from the Municipal Office during Office hours on working days.

Municipal Office, Udipi } (Sd) A. S. D' Souza,
Dated: 31-5-1951 } Commissioner

THE PANGAL NAYAK BANK LIMITED

Head Office] (Incorporated in 1920.) [Udipi S K

SEASON DEPOSITS are received and accepted on the following terms:—

For three, four or five months deposits at 3% p. a
For six, seven or eight months deposits at 3½% p. a
These are to be terminable by the 30th June 1951.
Interest is payable along with the principal at maturity.
Our THREE YEAR CASH CERTIFICATE bring to You a fair yeild: For particulars please ask for copy of Rules

ಕನ್ನಡ ಗ್ರಂಥಗಳಿಗೆ ಉತ್ತಮವೆಂದು ನಿರ್ಣಯಿಸಲ್ಪಟ್ಟ ಪ್ರತಿ ಗ್ರಂಥಕ್ಕೆ ರೂಪಾಯಿ 500 ರ ಬಹುಮಾನ

ಮದ್ರಾಸು ಸರಕಾರವು ಕನ್ನಡದಲ್ಲಿ ಉತ್ತಮ ಗ್ರಂಥಗಳಿಗೆ 1951ರಲ್ಲಿ ಕೊಡುವ ಬಹುಮಾನದ ಬಗ್ಗೆ ಗ್ರಂಥಗಳನ್ನು ಕಳುಹಿಸುವುದು ತಾ 15 10 51 ರ ಒಳಗಾಗಿ ಕೆಳಗಿನ ವಿಳಾಸಕ್ಕೆ ಕಳುಹಿಸಬೇಕಾದ ದಿನಾಂಕ. ಪುಸ್ತಕಗಳು 1945ರಲ್ಲಿ ಅಥವಾ ಆ ಮೇಲೆ ಪ್ರಕಟವಾದವುಗಳಾಗಬೇಕು. ಕೈಬರಹದ ಪ್ರತಿಗಳನ್ನು ಕಳುಹಿಸಬಹುದು.

ವಿಷಯ: 1) ನಾಟಕ 2) ಕಾದಂಬರಿ 3) ಗದ್ಯ ಕೃತಿಗಳು.

ನಿಯಮಗಳು:- ಮದ್ರಾಸು ಸಂಸ್ಥಾನದ ಲೇಖಕರ ಗ್ರಂಥಕರ್ತರು ಮಾತ್ರ ಪುಸ್ತಕಗಳನ್ನು ಕಳುಹಿಸತಕ್ಕದ್ದು.

ಅಚ್ಚಾದ ಪುಸ್ತಕಗಳಾದರೆ ನಾಲ್ಕು ಪ್ರತಿಗಳನ್ನು ಕಳುಹಿಸಬೇಕು, ಕೈಬರಹದ ಪುಸ್ತಕವಾದರೆ ಒಂದೇ ಪ್ರತಿ ಕಳುಹಿಸಿದರೆ ಸಾಕು. ಆದರೆ ಬಹುಮಾನಕ್ಕಾಗಿ ಕಳುಹಿಸಿದ ಪ್ರತಿಗಳನ್ನು ಹಿಂದೆ ಕಳುಹಿಸಲಾಗುವುದಿಲ್ಲ.

ಪುಸ್ತಕಗಳನ್ನು ಕಳುಹಬೇಕಾದ ವಿಳಾಸ

ಕಾರ್ಯದರ್ಶಿ, ಕರ್ನಾಟಕ ಸಂಘ,
10 ಮೀರ್‌ಸಾಹೇಬ್ ಪೇಟ್ಸ್ಟ್ರೀಟ್,
ಎಗ್ಮೋರ್, ಮದ್ರಾಸು 8

WANTED

"Wanted immediatly 1) a trained B (m or D Com with type writing and short hand 2) Y. M. C. A. trained Physical Instructress 3 A trained and Qualified book binding ins tructor Kannada knowing preperable"

Apply to the Correspondant,
Christian High School
UDIPI S Kanara

ಉಡುಪಿಗೆ ಹೋಗಬೇಕು! ಆದರೆ ಉಳಿದುಕೊಳ್ಳುವುದೆಲ್ಲಿ?

ರಾಯಲ್ ಮಹಾಲಿನಲ್ಲಿ

ಬಸ್ ಸ್ಟೇಂಡಿಗೆ ಅತಿ ಸಮೀಪ! ಕೃಷ್ಣ ಮಠಕ್ಕೆ ದೂರವಿಲ್ಲ!
ವ್ಯಾಪಾರವ್ಯವಹಾರ ವಿಹಾರಸ್ಥಳಗಳಿಗೆಲ್ಲ ಕೇಂದ್ರ!
ಶಿಮ್ಮ ಸ್ನಾನ, ಊಟ, ಉಪಹಾರ, ಟೈಲೆಟ್, ಶಯನ ಇವಕ್ಕೆಲ್ಲ ಉತ್ತಮ ವ್ಯವಸ್ಥೆ ಕರೆದರೆ ಓಗೊಡುವ ನೌಕರರ ವರ್ಗ!
ಮೇಲಾಗಿ ಉಡುಪಿ ಬ್ರಾಹ್ಮಣರ ಅಡಿಗೆ, ತಿಂಡಿತಿನಸು, ಇವುಗಳ ರುಚಿರುಚಿ ಹೇಳಬೇಕೆ?
ಪ್ರೊಪ್ರೈಟರ್:— ಕೆ. ವೆಂಕಟ್ರಮಣಭಟ್

For up-to-date Lodging & Boarding
ROYAL MAHAL,
UDIPI S. Kanara.

"ಗೋಪಾಲ ಭೇಷಜಾಶ್ರಮ" ಮಂಗಳೂರು.

(ಸ್ಥಾಪನೆ 1910)

ಸ್ಥಾಪಕರು:-ಆಯುರ್ವೇದ ಭೂಷಣ ಯಂ. ವಿ. ಶಾಸ್ತ್ರೀ,

ಬಾಣಂತಿಯರ ಸಲುವಾಗಿಯೇ ದೇಶ ಮತ್ತು ಪ್ರಕೃತದ ದೇಹಸ್ಥಿತಿಯನ್ನು ನಿರ್ಣೈಸಿ ತಯಾರಿಸಲ್ಪಟ್ಟ ಅಮೋಘವಾದ ಮಧುರವಾದ ರಸಾಯನ. ಅಲ್ಪ ಮೌಲ್ಯದಿಂದ ಬಡವರಿಗೂ, ಭಾಗ್ಯಶಾಲಿಗಳಿಗೂ ಸುಲಭವಾಗಿರುವುದು.

ಇವರ ನವಜೀವಾತು ಎಂಬ ಸೂತಿಕಾ ರಸಾಯನ

ಚಿಟ್ಟನ ಸಮಾಪಕ— ಡಾ| ಯಂ ವಿ ಶಾಸ್ತ್ರೀ, ಯಲ್. ಐ ಕೋಡಿಯಾಲಬೈಲ ಪೋಸ್ಟು, (ಮಂಗಳೂರು)
ಸ್ಟಾಕಿಸ್ಟರು— ಡಾ| ಎ. ಕೆ. ಶಿವರಾಮರಾವ್, ಕುಂದಾಪುರ ...

ತಾರೀಕು 7-6-51 ರಿಂದ

ವಾರದ ಭವಿಷ್ಯ

ತಾರೀಕು 13-6-51 ರವರೆಗೆ

ಮೇಷ—ಹಿಂದಿನ ಪರಿಸ್ಥಿತಿಗಿಂತ ಉತ್ತಮ ಸ್ಥಿತಿಗೆ ಬರಲಿರುವಿರಿ. ನೀವೀ ವಾರದಲ್ಲಿ ಯಾರು ಈ ಹಿಂದೆ ನಿಮ್ಮನ್ನು ಅನಾದರದಿಂದ ಕಾಣುತ್ತಿದ್ದರೋ ಇಂದು ಅವರೇ ಕರೆದು ನಿಮ್ಮನ್ನು ಆದರಿಸುವರು. ಆಯವ್ಯಯಗಳು ಸಮತೂಕದಲ್ಲಿ ಬರುವುದರಿಂದ ದಿನಪಾಲನೆಯು ಕಷ್ಟವಾಗಲಾರದು. ಆದರೆ ಪರ್ಯಟನ ನಿಮಿತ್ತವಾದ ಕಷ್ಟನಷ್ಟಗಳೂ ಹೆಚ್ಚುವವು. ವಾರದ ಅದ್ಯಂತಗಳು ಇಷ್ಟಸಾಧಕಗಳಿವೆ.

ವೃಷಭ—ನಿಮ್ಮ ಜನ್ಮರಾಶಿಯಿಂದ ಗ್ರಹತ್ರಯರು ನಿಮ್ಮ ಮಾನಸಿಕ ಧೈರ್ಯಸ್ಥೈರ್ಯಗಳನ್ನು ಹಾಳುಗೆಡಿಸುವದಲ್ಲದೆ ದೇಹಾರೋಗ್ಯವನ್ನೂ ಕೂಡ ಕೆಡಿಸಲಿರುವರು. ವಿನಾ ಕಾರಣ ವಾಕ್ಕಲಹಕ್ಕೆ ಗುರಿಯಾಗುವಿರಿ. ಮನೆಯೊಳಗಿನ ಜನರಲ್ಲೇ ಪರಸ್ಪರ ವಿರೋಧಭಾವವು ಹೆಚ್ಚುವದು. ಆದರೆ ನಿಮ್ಮ ಉದ್ಯೋಗದಲ್ಲಿ ಉಚಿತವಾದ ಫಲಪ್ರಾಪ್ತಿಯಾದೀತು. ವ್ಯಾಪಾರವ್ಯವಹಾರಗಳಲ್ಲಿ ವಿಜಯಿಗಳಾಗುವಿರಿ. ತಾ 8, 9 ಈ ದಿನಗಳಲ್ಲಿ ಗೃಹಸುಖ ಸ್ಥಾನಮಾನ ವಿಜಯಗಳು ಲಭಿಸುವವು.

ಮಿಥುನ—ಶುಕ್ರಾಚಾರ್ಯರೊಬ್ಬರನ್ನುಳಿದು ಮಿಕ್ಕೆಲ್ಲಾ ಗ್ರಹರೂ ಈ ವಾರದಲ್ಲಿ ನಿಮಗೆ ವಿಮುಖರಾಗಿರುವರು. ನಿಮ್ಮ ವ್ಯಯಸ್ಥಾನದಲ್ಲಿಯೂ ಗ್ರಹತ್ರಯರು ಸೇರಿರುವುದರಿಂದ ಉತ್ಪತ್ತಿಗಿಂತ ತ್ರಿಗುಣವಾಗಿ ಖರ್ಚು ಪ್ರಾಪ್ತವಾಗಲಿದೆ. ವಿರೋಧಿ ವರ್ಗವು ಹೆಚ್ಚಿ ನಿಮ್ಮ ಕಾರ್ಯಕಲಾಪಗಳಿಗೆ ಹೆಚ್ಚಿನ ಅಡೆತಡೆಗಳನ್ನು ಮಾಡಲಿರುವರು. ಆಪ್ತೇಷ್ಟರ ವಿರಹದಿಂದ ಚಂಚಲವಾದ ನಿಮ್ಮ ಮನಸ್ಸು ದುರ್ಮಾರ್ಗದತ್ತ ಓಡಲಿದೆ. ತಾ 8, 9, 10, 13 ಈ ದಿನಗಳಲ್ಲಿ ಹೆಚ್ಚಿನ ಜಾಗ್ರತೆಯಿಂದಿರತಕ್ಕದ್ದು.

ಕರ್ಕಾಟಕ—ಅನೇಕ ಸಮಯದಿಂದ ಅವ್ಯವಸ್ಥದ ಪರಾಕಾಷ್ಠೆಯನ್ನೇರಿರುವಿರಿ. ನಿಮ್ಮ ಸಂಕಲ್ಪಗಳು ಅಲ್ಪಯತ್ನದಿಂದ ಅಧಿಕ ಫಲವನ್ನೀಯಲಿವೆ. ಹಲವಾರು ತೆರದಿಂದ ಧನಾಗಮವಾಗುವುದರಿಂದ ನಿಮ್ಮ ಸಂಪದ್ಭಾಗವು ಅತ್ಯುತ್ತಮಗೊಳ್ಳುವದು. ಪ್ರಬಲರಾದ ಶತ್ರುವೃಂದವೂ ಕೂಡ ನಿಮ್ಮ ಕಾರ್ಯಕೌಶಲ್ಯಕ್ಕೆ ಬೆಚ್ಚಿ ಶರಣು ಬರಲಿರುವರು. ಯಾವ ಭಾಗದಲ್ಲೂ ಕೊರತೆ ಕಾಣಿಸದು. ನಿಮಗೆ ತಾ 7, 11, 12 ರಲ್ಲಿ ಕೊಂಚ ಧನಮಾನಗಳಿಗೆ ಧಕ್ಕೆ ತಗಲೀತು.

ಸಿಂಹ—ಅನಿಷ್ಟ ಸ್ಥಾನವಾದ ಅಷ್ಟಮದಲ್ಲಿ ಶುಭಗ್ರಹಗಳಿರುವುದಾದರೂ ಈ ವಾರದಲ್ಲಿ ಅವರ ಪ್ರಭಾವವೇನೂ ಸಾಗದು. ಪರಾಪೇಕ್ಷೆಯಿಲ್ಲದೆ ಸ್ವಯಂ ಕಾರ್ಯಗೈವ ನಿಮಗೆ ಉಚಿತವಾದ ಫಲವು ಲಭಿಸುವದು. ಬಂಧುಗಳೂ ಮಿತ್ರರೂ ಇವರ ಕೆಡುಗೈ ಸಹಕಾರವು ನಿಮಗಿರುವದರಿಂದ ಹೆಚ್ಚಿನ ನಿಮ್ಮ ಕಾರ್ಯಗಳು ಸಫಲವಾಗುವವು. ಎಷ್ಟೇ ದುಡಿದರೂ ದಿನಾಂತ್ಯದಲ್ಲಿ ಕೈಯಲ್ಲಿ ಕಾಸೊಂದೂ ಉಳಿಯದು. ತಾ 7, 11, 12 ಈ ದಿನಗಳಲ್ಲಿ ಸುಖಭೋಗ ಲಾಭಗಳಿವೆ

ಕನ್ಯಾ—ಈ ವಾರದಲ್ಲಿ ನಿಮ್ಮ ದೇಹಸುಖಕ್ಕೂ ಆರ್ಥಿಕ ಭಾಗಕ್ಕೂ ಏನೂ ಕೊರತೆಯಾಗದು ನೌಕರಿ ವ್ಯಾಪಾರಾದಿ ಉದ್ಯಮಗಳಲ್ಲಿ ಪ್ರಮಾಣಾಧಿಕವಾದ ಫಲ [illegible] ಯಾವುದು ವ್ಯವಹಾರ ನಿಮಿತ್ತವಾಗಿ [illegible] ಜಗಳವುಂಟಾದಾವು, ಮನೋನೆಮ್ಮದಿಗೆ ಭಂಗ ಬರಲಿದೆ, ಗುರು ಜನರ ಅನುಗ್ರಹವು ಸಾಕಷ್ಟಿದ್ದರೂ ವಿರೋಧಿಗಳ ಉಪಟಳವು ಅಸಹನೀಯವಾಗುವದು, ಆಗಾಗ ಪ್ರಯಾಣ ಮಾಡುವ ಪ್ರಸಂಗ ಒದಗೀತು ತಾ 11, 12 ಈ ದಿನಗಳು ದುಃಖವ್ಯಯಕಾರಿಗಳು.

ತುಲಾ—ಕಳೆದ ವಾರಕ್ಕಿಂತ ಕೊಂಚ ಉತ್ತಮ ಸ್ಥಿತಿಗೆ ಬರಲಿರುವಿರಿ. ಆಧಿವ್ಯಾಧಿಗಳು ಪ್ರಬಲವಾಗಿ ಪೀಡಿಸುವವು ನೀವೆಷ್ಟೇ ಪರಿಶ್ರಮಿಗಳಾಗಿದ್ದರೂ ವಾಗ್ವಿಮುಕ್ತ ಕಲಹವಾಗಲಿದೆ. ಶೋಕಪರಂಪರೆಗಳು ಸಮುದ್ರದಲೆಗಳಂತೆ ಮೇಲಿಂದ ಮೇಲೆ ಬರುವವು ಶರೀರದಲ್ಲಿ ಹುಣ್ಣು ಕಜ್ಜಿ ಗಾಯಗಳು ಕಾಣಿಸಲಿದೆ. ವೈರಿ ಜನರಿಂದಾಗಿ ವಿಶೇಷತಃ ಧನಮಾನಗಳಿಗೆ ಧಕ್ಕೆಯುಂಟಾಗುವದು ಆದ ಕಾರಣ ವಾರದ ಅದ್ಯಂತ ದಿನಗಳಲ್ಲಿ ಬಹಳ ಜಾಗರೂಕರಾಗಿರಿ.

ವೃಶ್ಚಿಕ—ಗುಣದೋಷಗಳು ಸಮಬಲಗಳಾಗಿರುವ ಈ ವಾರದಲ್ಲಿ ನಿಮ್ಮ ಗೃಹತಾಪತ್ರಯಗಳು ನಾಶವಾಗಿ ಪುತ್ರಭೃತ್ಯಾದಿ ವರ್ಗದಿಂದ ಕೂಡಿ ಸುಖದಿಂದಿರುವಿರಿ, ನಿಮ್ಮ ಪರಿಶ್ರಮಕ್ಕಿಂತ ಅಧಿಕವಾದ ಫಲವು ಲಭಿಸುವದು. ಕೆಲವೊಮ್ಮೆ ಸಿಟ್ಟಿನ ಭರದಿಂದಾಗಿ ಯುಕ್ತಾಯುಕ್ತ ವಿಮರ್ಶೆ ಮಾಡದೆ ಕಲಹಗೈವಿರಿ ವಿಶೇಷ ಪ್ರವಾಸದಿಂದಾಗಿ ಉದರಶೂಲೆ ಪಿತ್ತದೋಷಾದಿಗಳು ಕಾಣಿಸಬಹುದು ವಾರಾಂತ್ಯದ 3 ದಿನಗಳು ಇತರ ದಿನಗಳಿಗಿಂತ ಉತ್ತಮವಿವೆ.

ಧನು—ಅನೇಕ ಸಮಯದಿಂದ ಕಷ್ಟಪರಂಪರೆಗಳನ್ನನುಭವಿಸುತ್ತಿದ್ದ ನಿಮಗೆ ಈ ವಾರದಲ್ಲಿ ಸುಖಸೌಲಭ್ಯಗಳು ಹೆಚ್ಚುವವು ನಿಮ್ಮ ಸಂಕಲ್ಪಗಳು ಕೇವಲ ಅಲ್ಪಯತ್ನದಿಂದ ಸಫಲಗಳಾಗಿ ಅಧಿಕ ಫಲವನ್ನೀಯುವವು. ಕಡಿವಾಣವಿಲ್ಲದ ಕುದುರೆಯಂತೆ ಮಾರ್ಗತಪ್ಪಿ ಚಲಿಸುವ ಮನಸ್ಸನ್ನು ಬಿಗಿಹಿಡಿದು ಸನ್ಮಾರ್ಗದಲ್ಲಿ ಮುಂದರಿಯಿರಿ. ನಿಮ್ಮ ಕಾರ್ಯ ಕೌಶಲಕ್ಕೆ ಬಂಧುಗಳು ಮಿತ್ರರು ಶತ್ರುಗಳೂ ಕೂಡ ಮೂಗಿನ ಮೇಲೆ ಬೆರಳಿಡುವರು, ವಾರದ ಅದ್ಯಂತ ದಿನಗಳು ಅತ್ಯುತ್ತಮವಿವೆ.

ಮಕರ—ಸ್ವಬಲವಿಲ್ಲದವಗೆ ಹುಲ್ಲು ಕಡ್ಡಿಯೂ ಕೂಡ ವಜ್ರಾಯುಧ ಸಮಾನವಾಗುವದೆಂದು ಹಿರಿಯರೆಂದಿರುವರು. ಈ ವಾರದಲ್ಲಿ ಸಕಲ ಗ್ರಹಮಂಡಲವೇ ನಿಮಗೆ ಪ್ರತಿಕೂಲವಾಗಿರುವುದರಿಂದ ಯಾವ ಭಾಗದಲ್ಲಿ ನೋಡಿದರೂ ನಿಮಗೆ ಶ್ರೇಯಸ್ಸು ಕಾಣದು. ಜನತೆಯಲ್ಲಿ ವಿರೋಧ ಆಪ್ತೇಷ್ಟರ ವಿರಹ ಗೃಹಕೃತ್ಯದ ಅವ್ಯವಸ್ಥೆ ಆರ್ಥಿಕ ತಗಾದೆ ಇವುಗಳಿಂದ ಪೀಡಿತರಾದ ನಿಮಗೆ ದೇಹಾರೋಗ್ಯವು ಕೆಡುವದು. ವಾರಾದಿಯ 3 ದಿನಗಳು ಇತರ ದಿನಗಳಷ್ಟು ಹೀನಗಳಾಗಿರವು.

ಕುಂಭ—ಗುರುಹಿರಿಯರ ಅನುಗ್ರಹವೂ ಬಂಧುಗಳೂ ಕುಟುಂಬಿಕರೂ ಇವರ ನೆರವೂ ನಿಮಗೆ ಚೆನ್ನಾಗಿರುವುದರಿಂದ ಈ ವಾರವು ನಿಮಗೆ ಸುಖದಾಯಿಯಾಗಲಿದೆ. ಎಷ್ಟೇ ಖರ್ಚುವೆಚ್ಚಗಳಿದ್ದರೂ ಧನಕ್ಕಾಗಿ ನೀವು ಚಿಂತಿಸಬೇಕಾಗಿಲ್ಲ, ದುರ್ಜನರ ಸಹವಾಸದಿಂದ ವೃಥಾಪವಾದ ಖರ್ಚುಗಳು ಹೆಚ್ಚಬಹುದು ಆರೋಗ್ಯವು ಕೂಡ ವಾತ ಕಫದೋಷದಿಂದಾಗಿ ಕೆಡಲಿದೆ. ಕೆಲವೊಮ್ಮೆ ಪತ್ನೀಪುತ್ರವಿರಹತಾಪಕ್ಕೊಳಗಾದೀರಿ, ತಾ 8ರಿಂದ 12ರ ವರೆಗಿನ ದಿನಗಳಲ್ಲಿ ಇಷ್ಟಸಿದ್ಧಿ ದ್ರವ್ಯಲಾಭ ಸುಖ ಸಂತೋಷಗಳಿವೆ

ಮೀನ—ನಿಮ್ಮಲ್ಲಿನ ಸಾಹಸ ಧೈರ್ಯ ಶಕ್ತಿಗನುಗುಣವಾದ ಯುಕ್ತಿಯ ಕೊರತೆಯಿರುವದು. ಕಾರ್ಯಾರಂಭಿಸುವಾಗ ಪೂರ್ವಾಪರ ವಿಮರ್ಶಿಸದೆ ದುಡುಕಬೇಡಿ ನಿಮ್ಮ ಪ್ರಯತ್ನಕ್ಕೆ ತಕ್ಕ ಫಲ ಸಿಗುವದು. ಆರೋಗ್ಯವು ಉತ್ತಮವಾಗಿರುವುದು, ವ್ಯಾಪಾರ ಸಾಹಸಜನ್ಯ ಕ್ರಿಯೆಗಳಲ್ಲಿ ಫಲವು ಉತ್ತಮವಿದೆ ವಿದ್ಯಾರ್ಥಿಗಳಿಗೂ ತದುಪಜೀವಿ ನೌಕರವರ್ಗಕ್ಕೂ ಈ ವಾರವು ಅಷ್ಟೊಂದು ಚೆನ್ನಾಗಿಲ್ಲವು. ವಾರಾಂತ್ಯದ 3 ದಿನಗಳು ಇತರ ದಿನಗಳಿಗಿಂತ ಉತ್ತಮವಿವೆ.

ಮೂಲ್ಕಿ ಬೇಂಕ್,
ಲಿಮಿಟೆಡ್, ಮೂಲ್ಕಿ

1929ರಲ್ಲಿ ಸ್ಥಾಪಿತವಾಗಿ 21 ವರುಷಗಳಿಂದ ಊರ ಜನರ ಹಿತಕ್ಕಾಗಿ ಡಿಪೋಸಿಟ್ ಹಣಕ್ಕೆ ನ್ಯಾಯವಾದ ಬಡ್ಡಿಯಿಂದಲೂ, ಸಾಲದ ಹಣಕ್ಕೆ ಅತೀ ಕಡಿಮೆ ದರದ ಬಡ್ಡಿಯಿಂದಲೂ ಜನ ಹಿತಸಾಧನೆಯನ್ನು ಮಾಡುತ್ತಿರುವುದು

The Moolky Bank Ltd.,
Moolky, S. K

Nambiar's
ARYA VAIDYA SALA
UDIPI
Ideal House for Ayurvedic Treatment.
T. N. Kelu Nambiar,
Vaidya

ಗೊನೋರಿಯಾ ಪರಮಾರೋಗ ಉಷ್ಣ ರೋಗಕ್ಕೆ ಔಷಧ

೩ ದಿವಸಗಳಲ್ಲಿ ಈ ರೋಗ ಗುಣ ಹೊಂದುವದು ಗ್ಯಾರಂಟೀ

ಶರೀರದಿಂದ ಕೀವು ಬರುತ್ತಿದ್ದರೆ, ಧೋತರಕ್ಕೆ ಹಳದೀ ಡಾಗು ಹತ್ತುತ್ತಿದ್ದರೆ, ಶರೀರದಿಂದ ಬಾವು, ಶರೀರದ ತೊಗಲು ಹಿಂದಕ್ಕೆ ಸರಿಯದಿದ್ದರೆ, ಶರೀರದ ಸುತ್ತ, ಘಾಯವಾಗಿದ್ದರೆ,.... ಚಟ್ಟಿ ಬಿದ್ದಿದ್ದರೆ, ಉಷ್ಣದಿಂದ ಜೇರು ಇಳಿದಿದ್ದರೆ, ಉಜುಜು. ಆಗಿದ್ದರೆ, ಮೂಲವ್ಯಾಧಿ, ಭಗೇಂದ್ರ, ಗಂಡುಮಾಲಿ, ಕೈಕಾಲು ಶೂಲಿ, ಅರ್ಧಾಂಗವಾಯು ನಡುನೋಯುವದು ಸ್ತ್ರೀಯರ ಬಿಳಿಕೆಂಪು ಸೆರಗು ಹೋಗುತ್ತಿದ್ದರೆ, ಹೊಲಿಕುಟು ಗರ್ಮೀಯಿಂದ ಗರ್ಭಕೋಶ ನಾಶಹೊಂದಿದ್ದರೆ, ಸರಿಯಾಗಿ ಭೇದಿಯಾಗದಿದ್ದರೆ, ಮೂತ್ರ ಉರಿಯುತ್ತಿದ್ದರೆ, ಈ ಎಲ್ಲಾ ಬೇನೆಗಳಿಗೆ ಈ ನಮ್ಮ ಔಷಧವು ಇರುವುದು. ಮೊದಲ ದಿವಸ ಬೆಳಿಗ್ಗೆ ೧ ಗುಂಜಿ ಪ್ರಮಾಣ ಔಷಧ ಅರ್ಧತೊಲೆ ತುಪ್ಪದಲ್ಲಿ ತಕ್ಕೊಳ್ಳಬೇಕು ಮೊದಲ ದಿವಸ ಮಾತ್ರ ಮುಂಜಾನೆ ಸಂಜೆ ಎರಡು ಸಾರೆ ತಕ್ಕೊಳ್ಳಬೇಕು. ಮುಂದೆ ದರ ದಿವಸ ಬೆಳಿಗ್ಗೆ ಒಂದೇ ಸಾರೆ ೭ ದಿವಸ ಸೇವಿಸಬೇಕು. ಈ ಔಷಧವನ್ನು ಬೇಸಿಗೆಯಲ್ಲಿ ತುಪ್ಪದಲ್ಲಿ, ಥಂಡಿ ಮಳೆಗಾಲದಲ್ಲಿ ಜೇನತುಪ್ಪದಲ್ಲಿ ತಕ್ಕೊಳ್ಳಬೇಕು. ಪಥ್ಯ: ಹುಳಿಖಾರ, ಕೆಂಬುಳಕಾಯಿ, ಒಳ್ಳೆಣ್ಣೆ ಬಿಡಬೇಕು.

ಬಾಟ್ಲಿ ೧ಕ್ಕೆ ೫ರೂ. ಪೋಸ್ಟ ಚಾರ್ಜ ೮ ಆಣೆ

ಏಜೆಂಟರು:—ಗದಗ:—ಗದಗ ಫಾರ್ಮಸಿ, ಹುಬ್ಬಳ್ಳಿ:—ಹುಬ್ಬಳ್ಳಿ ಫಾರ್ಮಸಿ ಬಾಗಲಕೋಟೆ:-ಬಾಗಲಕೋಟೆ ಫಾರ್ಮಸಿ, ಧಾರವಾಡ:-ಧಾರವಾಡ ಫಾರ್ಮಸಿ, ದಾವಣಗೇರಿ: ದಾವಣಗೇರಿ ಪ್ರೆಸ್. ನಂಜುಡೇಶ್ವರ ಮೂರ್ತಿ ದಾವಣಗೇರಿ.

ಪತ್ರವ್ಯವಹಾರ ಮಾಡತಕ್ಕ ಮಾಲಕರ ವಿಳಾಸ,
ರೇವಣಸಿದ್ಧಪ್ಪ ಹಾಲಪ್ಪ ದಾವಣಗೇರಿ,
ಆಯುರ್ವೇದ ಔಷಧಾಲಯ, ಗದಗ.

ಆದರ್ಶ ರೀತಿಯಲ್ಲಿ ಪ್ರತಿಷ್ಟಿಸಲ್ಪಟ್ಟ ಅಖಿಲ ಕರ್ನಾಟಕದ ಪ್ರಾತಿನಿಧಿಕ ಕಥಾಸಂಕಲನವೆಂದು ಪ್ರಶಂಸಿಸಲ್ಪಟ್ಟ

ಮಧುವನ

ಕತೆಗಳೊಂದಿಗೆ ಕತೆಗಾರರ ಮತ್ತು ಕತೆಗಾರ್ತಿಯರ ಪರಿಚಯ ಪಡಿಯಚ್ಚುಗಳಿವೆ

ಅಂತರಂಗ, ಬಹಿರಂಗ ಸುಂದರವಾಗಿ ಪ್ರಕಟಿಸಲ್ಪಟ್ಟ
25 ಕತೆಗಳ ಅಪೂರ್ವ ಸಂಗ್ರಹ

ಬಿಳಿ-ದಪ್ಪ ಕಾಗದ! 230 ಪುಟಗಳು! ಬೆಲೆ ರೂ 3-0-0

ವಿಳಾಸ: ಕಿರಿಯರ ಪ್ರಪಂಚ, ಉಡುಪಿ
ವಿಕ್ರಯಾಧಿಕಾರಿಗಳು: ನವಭಾರತ ಪುಸ್ತಕ ಭಂಡಾರ, ಉಡುಪಿ.

Edited, Printed & Published By K. H. Shetty At The Navayuga Press, Udipi, S. India

Regd No. M. 3618

LICENCE No. 31
Licensed to Post without Prepayment

Estd 1921 ಸ್ಥಾಪನೆ

14-6-1951

Founder Sri A B Shetty,

ಅಂತರಂಗ
ಪುಸ್ತಕ ಪತ್ರಿಕೆ
ಚಂದಾ ವಿವರ
ವರ್ಷಕ್ಕೆ ರೂ 4-9-0
6 ತಿಂಗಳಿಗೆ ರೂ 2-8-0
(ಮುಂಗಡ)
ಜಾಹೀರಾತಿಗೆ ಉತ್ತಮ ಸಾಧನ
ಅಂತರಂಗ, ಉಡುಪಿ

ನವಯುಗ
ಚಂದಾ ವಿವರ.
(ಮುಂಗಡ)
ವರ್ಷಕ್ಕೆ ರೂ 5 12 0
6 ತಿಂಗಳಿಗೆ ,, 3 0 0
ಬಿಡಿಪ್ರತಿ ,, 0-2-0
6 ತಿಂಗಳಿಗಿಂತ ಕಡಿಮೆ ಚಂದಾ ಸ್ವೀಕರಿಸಲ್ಪಡುವದಿಲ್ಲ
ನವಯುಗ, ಉಡುಪಿ

ವರ್ಷ ೩೧ ವಾರ ೪೦

NAVAYUGA WEEKLY

Post Box No 22 UDIPI.

Vol 31 No 40

TEL 40592

14 Parel Road, Cross Lane, BOMBAY 12.

- *Watsons hygienically prepared Aerated Waters are the Drinks of the day*
- *Our Orange, Rose, Pine-apple, Raspbery, Gingerbeer, Tonic, Pick-me-up and Lemon are drinks of health and pleasure.*

We accept orders to supply functions etc., in any parts of the City.

- ಆರೋಗ್ಯ ಶಾಸ್ತ್ರರೀತ್ಯಾ ತಯಾರಿಸಿದ ವಾಟ್ಸನ್ನರ ಸೋಡಾ ದ್ರಾವಕಗಳೇ ಇಂದಿಗೆ ಬೇಕಾದ ಪಾನೀಯಗಳು.
- ನಮ್ಮ ಒರೇಂಜ್, ರೋಜ್, ಪೈನ್ಆಪಲ್, ರಾಸ್ಪರಿ, ಜಿಂಜರ್‌ಬೀರ್, ಟೋನಿಕ್, ಪಿಕ್-ಮಿ-ಅಪ್, ಮತ್ತು ಲೇಮನ್ ಪಾನೀಯಗಳು ಆರೋಗ್ಯಕರ ಮತ್ತು ಆಹ್ಲಾದಕರ.

ನಗರದ ಯಾವದೇ ಭಾಗದಲ್ಲಾಗುವ ಸಮಾರಂಭಾದಿಗಳಿಗೆ ನಾವು ಆರ್ಡರುಗಳನ್ನು ಸ್ವೀಕರಿಸುತ್ತೇವೆ.

ಮಹಾನಗರ ಮುಂಬಯಿಯಲ್ಲಿ ಕನ್ನಡಿಗರಿಂದ ನಡೆಸಲ್ಪಡುವ ಮಹಾಸಂಸ್ಥೆ—

14, ಪರೇಲ್ ರೋಡು, ಕ್ರೋಸ್ ಲೇನ್, ಬೊಂಬಾಯಿ 12.



ನಮ್ಮ ಪ್ರಾಂತದಲ್ಲಿ ಬಾಣಂತಿಯರ ಸಂರಕ್ಷಣೆ ಹಾಗು ಶಿಶು ಸಂಗೋಪನೆ

ಡಾ। ಕೆ. ಮಂಜುನಾಥ ರೈ, ಎಂ. ಬಿ. ಬಿ. ಎಸ್., ಎಫ್. ಆರ್. ಸಿ. ಎಸ್. (E)
ಡಿ. ಎಂ. ಆರ್. (Lond

ಇವರು ತಾ ೮-6-1951ರಲ್ಲಿ ಮದ್ರಾಸ್ ಸ್ಟೇಶನಿನಿಂದ
ಮಾಡಿದ ರೇಡಿಯೋ ಭಾಷಣ.

ರಾಷ್ಟ್ರದ ಆರೋಗ್ಯ ಯೋಜನೆಯಲ್ಲಿ ಮಗುವನ್ನೂ ಬಾಣಂತಿ ತಾಯಿಯನ್ನೂ ಸಮುಚಿತ ರೀತಿಯಲ್ಲಿ ಸಂರಕ್ಷಿಸುವುದಕ್ಕೆ ಆದ್ಯಸ್ಥಾನವಿರುತ್ತದೆ. ರಾಷ್ಟ್ರವು ನಡೆಯಿಸುವ ಸರ್ವತೋಮುಖವಾದ ಆರೋಗ್ಯ ಸೇವೆಯಲ್ಲಿ ಇದು ಒಂದು ಮುಖ್ಯ ಅಂಗ. ವ್ಯಕ್ತಿಯ ಬಾಳುವೆಯ ಸ್ಥಿತಿಯೊಂದು, ಅವಸ್ಥಾಂತರಗಳಲ್ಲಿ ಅವನೊಳಗಿರುವ ಕಾರ್ಯಸಾಮರ್ಥ್ಯವು ಅವನ ಆಜೀವ ಪರ್ಯಂತದ ಪುರೋಭಿವೃದ್ಧಿಯ ಮೇಲೆ ಪರಿಣಾಮ ಮಾಡುವುದಷ್ಟೇ ಅಲ್ಲ ಅವನ ಕುಟುಂಬಕ್ಕೂ ಏಕೆ, ಅವನ ತರುವಾಯದ ಸಂತಾನಕ್ಕೂ ಸನ್ನಿವೇಶವೂ ಒಳ್ಳೆಯ ಬದುಕಿನ ಮಾರ್ಗವೂ ಮಾಡವಷ್ಟೇ ಪ್ರಭಾವಶಾಲಿ ಪರಿಣಾಮ ಇದರಿಂದ ಆಗಬೇಕು ಎಂದು ಯಾವತ್ತು ಪ್ರಗತಿಶೀಲ ಆರೋಗ್ಯ ಇಲಾಖೆಗಳು ಬಯಸುತ್ತವೆ.

ಜನತೆಯ ಆರೋಗ್ಯವನ್ನಳೆಯಲು ಶಿಶುಮರಣದ ಪ್ರಮಾಣವೇ ಅಳತೆಗೋಲು. ಶಿಶುಮರಣವಿರುವಲ್ಲಿ ಜನರ ಆರೋಗ್ಯವೂ ಸಾಮಾಜಿಕ ಸ್ಥಿತಿಗಳೂ ಅತೀ ಹೀನದೆಶೆಯಲ್ಲಿರುವುದೆಂದರ್ಥ. ನಮ್ಮ ದೇಶದಲ್ಲಾಗಲೀ, ಅಥವಾ ನಮ್ಮ ಮದರಾಸು ಪ್ರಾಂತ್ಯದಲ್ಲಾಗಲೀ ಹೊಸ ಜೀವಗಳ ಹುಟ್ಟುವಳಿಗೇನೂ ಕೊರತೆ ಇಲ್ಲ. ಜನನ ಸಂಖ್ಯೆ ಬೇಕಷ್ಟು ಅಧಿಕವಾಗಿದ್ದರು ಕೂಡ ಮಾನವ ಜೀವನದ ಶೋಚನೀಯ ಅಪವ್ಯಯವನ್ನು ಕಂಡು ಕನಿಕರವಾಗುವುದು. ಸಾಮಾಜಿಕ ಪರಿಸ್ಥಿತಿಯು ಉತ್ತಮವಾಗಿದ್ದರೆ ಅನಾವಶ್ಯಕ ಸಾವು ಕಮ್ಮಿಯಾಗಿರುತ್ತದೆ. ಈಗ್ಗೆ ಐದು ವರುಷಗಳನ್ನು ನಾವು ಅವಲೋಕಿಸಿದರೆ ವರ್ಷವೊಂದಕ್ಕೆ ಹುಟ್ಟಿದ ಸರಾಸರಿ ಹದಿನಾರು ಲಕ್ಷ ಶಿಶುಗಳ ಪೈಕಿ ಬದುಕಿನ ಮೊದಲ ವರ್ಷವನ್ನು ನೂಕುವುದಕ್ಕು ಅಸಮರ್ಥವಾದ ಮಕ್ಕಳೆಷ್ಟೋ ಇವೆ. ೧೯೪೮ರಲ್ಲಿ ಹುಟ್ಟಿದ ಸಾವಿರ ಮಕ್ಕಳ ಪೈಕಿ ಒಂದು ವರ್ಷ ಪ್ರಾಯವಾಗುವ ಮೊದಲೇ ಸಾವಿಗೀಡಾದವುಗಳ ಸಂಖ್ಯೆ ೧೧೨, ಅಲ್ಲದೆ ೮೦ ಗರ್ಭದಲ್ಲೇ ಮರಣಹೊಂದಿದವು. ಆದಾಗ್ಯೂ ಕಳೆದ ದಶಕದಲ್ಲಿ ಶಿಶು ಮರಣ ಸಂಖ್ಯೆಯ ಪ್ರಮಾಣವು ಇಳಿಮುಖವಾಗುತ್ತ ಬಂದು ಕಳೆದ ವರ್ಷಾಂಕ್ಯದಲ್ಲಿ ೧೩೦ಕ್ಕೆ ಇಳಿದುದು ಸಂತೋಷಕರವೇ ಸರಿ.

ಶಿಶು ಜನನವಾಗುವಾಗಲೂ, ಗರ್ಭಿಣಿಯಾಗಿರುವಾಗ ಬಂದ ಕಾಯಿಲೆಗಳಿಂದಲೂ, ಕಳೆದವರ್ಷ ೧೨, ೫೦೦ ತಾಯಂದಿರು ಮರಣಕ್ಕೀಡಾದರು. ಗರ್ಭಿಣಿ ತಾಯಂದಿರ ಮರಣದ ಪ್ರಮಾಣವನ್ನಷ್ಟೇ ಅಲ್ಲ, ಶಿಶು ಜನನವಾದ ಬಳಿಕ ಅವರ ಆರೋಗ್ಯವು ಕೆಟ್ಟಿರುವುದನ್ನೂ ನಾವು ಗಮನಿಸಬೇಕು. ಇದರಿಂದುಂಟಾಗುವ ನಿರಂತರ ನರಳಿಕೆಯನ್ನೂ ಸತತ ದೌರ್ಬಲ್ಯವನ್ನೂ ಮರೆಯದಿರಬೇಕು. ೧೦೦ ತಾಯಂದಿರಲ್ಲಿ ೩೦ ಮಂದಿ ಮಗು ಹುಟ್ಟಿದ ಮೇಲೆ ಯಾವುದಾದರೊಂದು ಅಸ್ವಾಸ್ಥ್ಯಕ್ಕೆ ಪಕ್ಕಾಗುವರೆಂದು ಲೆಕ್ಕಹಾಕಲಾಗಿದೆ. ಇಂಥ ಸಾವು ನೋವುಗಳಿಂದಲೂ, ರೋಗರುಜಿನಗಳಿಂದಲೂ, ಕುಟುಂಬದ ಕ್ಷೇಮಕ್ಕೆ ಹಾನಿಯಾಗುವುದು ಅಲ್ಲದೆ ಶಿಶುಗಳ ಸಂಗೋಪನೆಗೂ ತೊಂದರೆ ಬರುವುದು.

ಹೆಂಡಿರಾದರೇನು, ಮಕ್ಕಳಾದರೇನ — ಸಾಯುವುದೆಂದರೆ ಒಂದು ಹೃದಯ ವಿದ್ರಾವಕ ದೃಶ್ಯ ತಾನೆ? ತುಂಬಿ ಬರದಂಥ ಸಾಂಸಾರಿಕ ದುರಂತ ತಾನೆ?

ಜನನ ಪೂರ್ವದಲ್ಲಿ ತಾಯಿಯ ಮರಣವೂ, ಜನನಾಂತರದಲ್ಲಿ ಶಿಶುವಿನ ಮರಣವೂ ಕೇವಲ ಕಣ್ಣೀರಿಡುವ ಪ್ರಸಂಗಗಳೆಂದು ತಿಳಿಯುವಂಥದಲ್ಲ ಗಂಭೀರವಾದ ಆರ್ಥಿಕ ಸಮಸ್ಯೆಗಳು ಈ ವಸ್ತುಸ್ಥಿತಿಯಲ್ಲಿ ಅಡಕವಾಗಿದ್ದು ನಮ್ಮ ಬುದ್ಧಿಯನ್ನು ಕೆಣಕುತ್ತವೆ.

ಹೀಗೆ ಅತೀ ಹೆಚ್ಚು ಮರಣಸಂಖ್ಯೆ ಏತಕ್ಕೆಂದು? ಎಂಬುದನ್ನು ಪರಿಶೀಲಿಸಲು ಹೊರಟರೆ ಕಾರಣಗಳ ಪರಂಪರೆಯೇ ನಮ್ಮ ಕಣ್ಣಮುಂದೆ ಹಾಯುವುದು. ಮುಖ್ಯವಾಗಿ ನಿರಕ್ಷರತೆ, ಅಜ್ಞಾನ, ಮೂಢನಂಬಿಕೆ, ಬಡತನ, ಹೀನವಾದ ಬದುಕಿನ ಮಟ್ಟ, ಗಾಳಿ ಬೆಳಕು ಸರಿಯಾಗಿ ಬೀಳದಂಥಾ ವಾಸದ ಮನೆಗಳು, ಒಂದೇ ಮನೆಯಲ್ಲಿ ಅನೇಕಜನ ಗುಂಪಾಗಿ ವಾಸಿಸುವುದು, ಅತಿಶ್ರಮ, ಸತ್ವಹೀನವೂ, ಸಮತೂಕವಿಲ್ಲದುದೂ ಆದ ಆಹಾರಕ್ರಮ, ಸ್ತ್ರೀಪುರುಷರ ಗುಹ್ಯರೋಗಗಳು, ಬಾಲ್ಯ ವಿವಾಹ, ಪದೇ ಪದೇ, ಗರ್ಭತಳೆಯುವುದು, ಗರ್ಭಿಣಿ ತಾಯಿಯ ಆರೋಗ್ಯದ ಕಡೆಗೆ ಅನಾದರ, ಅಪೂರ್ಣ ವೈದ್ಯಕೀಯ ಸಹಾಯ, ಜನನಕಾಲದಲ್ಲಿ ನಮ್ಮ ಗ್ರಾಮದಲ್ಲಿರುವ ಸ್ವದೇಶಿ "ಮಿಡ್ ವೈಫ್"ಗಳು, ನೈರ್ಮಲ್ಯವನ್ನು ಬಿಟ್ಟು, ನಿಷ್ಕರುಣೆಯಿಂದ ದೊರಕಿಸುವ ಅವೈಜ್ಞಾನಿಕವಾದ ಸಹಾಯಕ್ರಮ ಮುಂತಾದುವನ್ನು ಎತ್ತಿ ಹೇಳಬೇಕಾಗಿದೆ. ಇನ್ನೂ ಎಷ್ಟೋ ಇವೆ ಆದರೆ ಇವೆಲ್ಲಕ್ಕೂ ಒಟ್ಟಾಗಿ "ಆರೋಗ್ಯ ಪರಿಜ್ಞಾನದ ಅಭಾವ" ಎಂದು ಒಂದೇ ಹೆಸರಿನಿಂದ ಕರೆಯಬಹುದು

ತಾಯಿ ಮತ್ತು ಶಿಶುವಿನ ಸಂರಕ್ಷಣೆ ಮಾಡುವುದು ಸಾರ್ವಜನಿಕ ಆರೋಗ್ಯದ ಪ್ರಮುಖ ಅಂಗ. ಸಾರ್ವಜನಿಕ ಆರೋಗ್ಯ ರಕ್ಷಣೆಯ ಭಾರವನ್ನು ಹೊತ್ತ ಅಧಿಕಾರಿ ವರ್ಗಕ್ಕೆ ಸಮಾಜಾಂತರ್ಗತವಾಗಿರುವ ವ್ಯಕ್ತಿಯ ಕಡೆಗೇ ಗಮನವಿರುವುದರಿಂದ ಪ್ರತಿಯೊಂದು ವಿಶಿಷ್ಟ ಕಾರ್ಯಕ್ರಮವನ್ನು ಕೈಕೊಳ್ಳುವಾಗಲೂ ಸಾಮೂಹಿಕ ಆರೋಗ್ಯ ರಕ್ಷಣೆಯ ಮೇಲೆ ಅದರಿಂದಾಗಿ ಯಾವ ಪರಿಣಾಮವಾಗಬಹುದೆಂಬುದನ್ನು ಯೋಚಿಸುವ ಅಗತ್ಯವಿದೆ. ತಾಯಿಗೂ ಮಗುವಿಗೂ ರಾಷ್ಟ್ರದ ಆರೋಗ್ಯ ಸೇವೆಯನ್ನು ಪಡೆಯುವ ಹಕ್ಕಿದೆ, ನಿಜ ಆದರೆ ಇಂಡಿಯಾದ ರಾಜ್ಯಗಳ ಪೈಕಿ ಗರ್ಭಿಣಿ ತಾಯಂದಿರು ಹಾಗೂ ಮಕ್ಕಳಿಗೆ ಸಂರಕ್ಷಣೆಯನ್ನೂ, ಸಹಾಯವನ್ನೂ, ಒದಗಿಸಬೇಕೆಂದು ಶಾಸನರಚಿಸವುದು ಮದರಾಸು ಪ್ರಾಂತ್ಯ ಒಂದೇ. ನಮ್ಮ ಪಬ್ಲಿಕ್ ಹೆಲ್ತ್ ಆಕ್ಟಿನಲ್ಲಿ ಇಂಥ ಸಹಾಯವು ಅಡಕವಾಗಿದೆ. ಗರ್ಭಿಣಿಯಾಗಿರುವ ಹತ್ತು ಮಾಸಗಳೂ, ಹೆರಿಗೆಯ ಕಷ್ಟಕಾಲವೂ ಹೆರಿಗೆಯ ಮೇಲಿನ ಆರು ವಾರಗಳೂ, ಮಾತ್ರವೇ 'ತಾಯ್ತನ'ದ ಅವಧಿಯಲ್ಲ. ಜೀವನದಲ್ಲಿ ನಡೆಯುವ ಒಂದೊಂದು ವಿಷಯವೂ ತಾಯಿಗೆ ಸಂಬಂಧಿಸಿದುದು. ಆದುದರಿಂದ ಆಕೆಯ ಶುಚಿ ರುಚಿ, ಮಕ್ಕಳ ಕಡೆಗೂ, ಕುಟುಂಬದ ಕಡೆಗೂ ಇರುವ ಆಕೆಯ ಮನೋವೃತ್ತಿ, ತಂದೆತಾಯಿಗಳ ಪರಸ್ಪರ ಸಂಬಂಧ ಮತ್ತು ಆರ್ಥಿಕ ಹಿನ್ನೆಲೆಗಳನ್ನು ನಮ್ಮ ದೃಷ್ಟಿಪಥದಲ್ಲಿರಿಸಿಕೊಳ್ಳಬೇಕು. ತಕ್ಕ ಪ್ರಾಯಕ್ಕೆ ಬರುವವರೆಲ್ಲರಿಗೂ ಶಿಶು ಜನನ, ಶಿಶು ಸಂಗೋಪನೆಯ ಬಗ್ಗೆ ಮಾಹಿತಿಕೊಡುವ ಆರೋಗ್ಯ ಶಿಕ್ಷಣವನ್ನು ಸಾಕಷ್ಟು ಬೇಗನೆ—ಅಂದರೆ ತಾರುಣ್ಯದಲ್ಲೇ ಒದಗಿಸುವುದು ನಮ್ಮ ಉದ್ದೇಶವಾಗಿದೆ. ವೈದ್ಯಕೀಯ ಸಂಶೋಧನೆಯ ಪ್ರಕಾರ ಶಿಶುಮರಣಕ್ಕೆ ಗರ್ಭಿಣಿಯ ಸಂಗೋಪನೆ ಚೆನ್ನಾಗಿ ನಡೆಯದಿರುವುದೇ ಹೆಚ್ಚು ಮಟ್ಟಿಗೆ ಕಾರಣವೆಂದೂ ಹುಟ್ಟಿದ ನಿಶ್ಶಕ್ತ ಶಿಶು ಬದುಕುವ ಭಾಗ್ಯ ಪಡೆಯುವುದೇ ಜನನಕ್ಕೆ ಬರುವುದೆಂದೂ ನಿರ್ಣಯಿಸಲಾಗಿದೆ. ಅಲ್ಲದೆ ಸತ್ವಪೂರ್ಣವಾದ ಆಹಾರದ ಅಭಾವವೂ ನೈರ್ಮಲ್ಯರಹಿತವಾದ ವಸತಿ ಸೌಕರ್ಯವೂ, ಅಜ್ಞಾನ ಮೂಢ ನಂಬಿಕೆಗಳೂ ಎಳೆತಾಯಿಯ ಮೇಲೆ ಪರಿಣಾಮಬೀರುವವು ಗರ್ಭಿಣಿ ತಾಯಂದಿರ ಸಂಗೋಪನೆಯಲ್ಲಿ ತಾಯಿ ಗರ್ಭಿಣಿಯಾಗಿರುವಾಗಲೂ, ಮಗುವಿನ ಜನನಾನಂತರವೂ ಕೈಕೊಳ್ಳಬೇಕಾದ ಜಾಗ್ರತೆ ಒಟ್ಟೊಟ್ಟಾಗಿ ಸೇರಿರುತ್ತದೆ. ಶಿಶು ಸಂಗೋಪನೆಯಲ್ಲಿ ಶಿಶುವು ಶಾಲೆಗೆ ಹೋಗುವ ತನಕ ಅದರ ದೇಹವನ್ನೂ ಮನಸ್ಸನ್ನೂ ತಿದ್ದುವ ಎಲ್ಲಾ ಕಾ

IN THE SERVICE OF THE COUNTRY



Bank your Savings with
THE CANARA INDUSTRIAL & BANKING SYNDICATE LTD

ನಿಮ್ಮ ಉಳಿತಾಯವನ್ನು ಇರಿಸಲಿಕ್ಕೆ
ದಿ ಕೆನರಾ ಇಂಡಸ್ಟ್ರಿಯಲ್ ಎಂಡ್
ಬ್ಯಾಂಕಿಂಗ್ ಸಿಂಡಿಕೇಟ್ ಲಿಮಿಟೆಡ್

ಆವಶ್ಯವುಳ್ಳ ಎಲ್ಲಾ ಮಾಹಿತಿ
ಯನ್ನೊಳಗೊಂಡ ಉತ್ತಮತರದ
ಮಗ್ಗಿ ಪುಸ್ತಕಗಳು
ಚಿಲ್ಲರೆಯಾಗಿಯೂ ರಖಂ ಆಗಿಯೂ
ದೊರೆಯುತ್ತವೆ.
ಬೆಲೆ: 0—1—0
ವ್ಯಾಪಾರಿಗಳಿಗೆ ಧಾರಾಳ ಕಮಿಷನ್ ಇದೆ
ನವಯುಗ ಪ್ರೆಸ್, ಉಡುಪಿ.

ರ್ಯಭಾರಗಳನ್ನೂ ಸೇರಿಸಬೇಕು. ಸಾರ್ವಜನಿಕ ಆರೋಗ್ಯ ಕಾರ್ಯಕ್ರಮವು ಯಶಸ್ವಿಯಾಗಲು ಶಿಶುವನ್ನೂ, ಬಾಲಕನನ್ನೂ ಸಂರಕ್ಷಿಸುವುದು ಹೇಗೆ ಅಗತ್ಯವೋ, ಹಾಗೆಯೇ ಶಿಶುಸಂಗೋಪನೆಗೆ ಪೂರ್ವಭಾವಿಯಾಗಿ "ಮಾತೃಸಂಗೋಪನೆ" ಯು ಬಂದೇ ತೀರಬೇಕು.

ಗರ್ಭಿಣಿ ತಾಯಂದಿರ ಹಾಗೂ ಶಿಶುಗಳ ಸಂಗೋಪನೆಯ ಕಾರ್ಯಕ್ರಮದ ಉದ್ದೇಶಗಳು ನಾಲ್ಕು—

(ಅ) ಗ್ರಾಮ ಅಥವಾ ಪಟ್ಟಣವು ತಾಯಿ ಮಕ್ಕಳ ವಸತಿಗೆ ಯೋಗ್ಯವಾಗಿರುವಂತೆ ನೋಡಿಕೊಳ್ಳುವುದು.

(ಬ) ಶಿಶು ಸಂಗೋಪನೆಯ ಬಗ್ಗೆ ಹೆತ್ತವರಿಗೆ ಯಾ, ಹುಟ್ಟುವವರಿಗೆ ಉಚಿತ ಶಿಕ್ಷಣಕೊಡುವುದು.

(ಕ) ತಾಯಿ, ಮಕ್ಕಳ ಆರೋಗ್ಯದ ಕಡೆಗೆ ಸರಿಯಾಗಿ ಕಾಲಕಾಲಕ್ಕೆ ಗಮನವಿಡುವುದು.

(ಡ) ನಮ್ಮ ನಮ್ಮ ಕುಟುಂಬವನ್ನು ಬುದ್ಧಿವಂತಿಕೆಯಿಂದಲೂ ಯೋಜನಾತ್ಮಕವಾಗಿಯೂ ರಚಿಸಿಕೊಳ್ಳುವುದು ಹೇಗೆಂಬುದರ ಬಗ್ಗೆ ಉಪದೇಶಿಸುವುದು.

ಇಂಥ ಜಾಗ್ರತೆ ವಹಿಸಿದರೆ ದಾಕುಹಾಕುವುದು, ಜನನದಾಖಲೆ ಮುಂತಾದ ಯೋಗ್ಯ ಆರೋಗ್ಯ ಕಾರ್ಯಕ್ರಮಗಳಿಗೆ ನೆರವಾಗುವುದು ಗ್ರಾಮಗಳಲ್ಲಿ ೮೦ ಕೇಂದ್ರಗಳಲ್ಲಿ ಖಾಸಗಿ ಸಂಸ್ಥೆಗಳ ಮೂಲಕವಾಗಿ ತಯಾರಿಸಲಾದ ಗರ್ಭಿಣಿ ಹಾಗೂ ಶಿಶು ಸಂಗೋಪನೆಯ ಯೋಜನೆಯು ಬೆಳೆಯಿಂದಾಗಿ, ಇಂದು ನಮ್ಮ ರಾಜ್ಯದ ಸುಮಾರು ೨೪ ಕೋಟಿ ತಾಯಿ ಮಕ್ಕಳಿಗೆ ಸಹಾಯ ಒದಗಿಸಲು "ಗರ್ಭಿಣಿ ಹಾಗೂ ಶಿಶು ಆರೋಗ್ಯ ಕೇಂದ್ರ"ಗಳು ಅಸ್ತಿತ್ವಕ್ಕೆ ಬಂದು ಕೆಲಸಮಾಡುತ್ತಿವೆ. ಇವುಗಳ ಪೈಕಿ ೬೫೦ ಗ್ರಾಮಾಂತರಗಳಲ್ಲಿ ಯೂ ೧೭೮ ಪಟ್ಟಣಗಳಲ್ಲಿಯೂ ಇವೆ. ಗರ್ಭಿಣಿ ತಾಯಂದಿರ ರಕ್ಷಣೆಮಾಡಲು ಕೆಲವು ಸಂಸ್ಥೆಗಳು ನೆರವಾಗುತ್ತಿವೆ. ಎಷ್ಟೋ ಗ್ರಾಮಾಂತರ ಕೇಂದ್ರಗಳಲ್ಲಿ ಅವಸರದ ಹೆರಿಗೆಗಾಗಿ ಬೇಕಾದ ಸೌಕರ್ಯಗಳಿವೆ. ಶಿಶುಜನನ ಹಾಗೂ ಜನನಾನಂತರದ ಕಾಲದಲ್ಲಿ ಉತ್ತಮವಾದ ವಾತಾವರಣವನ್ನು ಕಲ್ಪಿಸುವಂಥ ಹೆರಿಗೆಯ ಮನೆ—Meternity Homsಗಳೂ ಇವೆ. ಇಲ್ಲಿ ಸಾಮಾನ್ಯವಾಗಿ ಅವಸರ ರಹಿತವಾದ ಹೆರಿಗೆಗಳನ್ನು ನಡೆಯಿಸುತ್ತಾರೆ. ದುಡ್ಡಿದ್ದವರಿಗೆ ಧರ್ಮಾರ್ಥವಾಗಿ ಆಹಾರವನ್ನೂ ಒದಗಿಸುತ್ತಾರೆ. ಇಷ್ಟಾಗಿಯೂ ಮಾತೃ ಶಿಶುಸಂಗೋಪನೆಯ ಬೃಹತ್ ಸಮಸ್ಯೆಯು ಎಳ್ಳಷ್ಟೂ ಬಗೆಹರಿದಂತಾಗಲಿಲ್ಲ. ಸ್ಥಾನಿಕ ಸಂಸ್ಥೆಗಳವರೂ, ಖಾಸಗಿ ಉಪಕಾರಿಗಳೂ ಹೆಚ್ಚು ಆಸಕ್ತಿವಹಿಸಿ ಸೌಕರ್ಯಗಳನ್ನು ಜಾಸ್ತಿಮಾಡುವಂತೆ ಸರಕಾರವು ಪ್ರಯತ್ನಿಸುತ್ತಿದೆ. ಕಟ್ಟಡಗಳ ಖರ್ಚಿನಲ್ಲಿ ಸಮವಾದ ಅರ್ಧಾಂಶವನ್ನು ಇತರ ವೆಚ್ಚಗಳ ಪೈಕಿ ಒಂದು ನಿರ್ದಿಷ್ಟ ಅಂಶವನ್ನೂ ಸರಕಾರವು ಕೊಡಲು ಸಿದ್ಧವಾಗಿದೆ.

ಈ ಕೇಂದ್ರಗಳ ಮುಖ್ಯ ಚಟುವಟಿಕೆಗಳು ಯಾವುವೆಂದರೆ—

1 ಗರ್ಭಿಣಿ ತಾಯಂದಿರ ರಕ್ಷಣೆ ಹಾಗೂ ಮೇಲ್ವಿಚಾರ.

2 ಅವರವರ ಮನೆಗಳಲ್ಲಿ ಅಥವಾ ಹೆರಿಗೆಯ ಮನೆಗಳಲ್ಲಿ ಹೆರಿಗೆಯ ಸಮಯ 'ಮಿಡ್ ವೈಫ್'ಗಳು ಮಾಡುವ ಧರ್ಮಾರ್ಥ ಸಹಾಯ.

3 ಹೆರಿಗೆ ಆದ ವೇಳೆ ತಾಯಿ ಮತ್ತು ಶಿಶುವಿನ ರಕ್ಷಣೆ.

4 ಶಿಶುವನ್ನೂ, ಶಾಲೆಗೆ ಹೋಗುವ ವರೆಗಿನ ಮಕ್ಕಳನ್ನೂ ರಕ್ಷಿಸುವುದು.

5 ತಾಯಂದಿರಿಗೆ ಅವರವರ ಮನೆಗಳಲ್ಲಿಯೂ, ಹೆರಿಗೆ ಆಸ್ಪತ್ರೆಗಳಲ್ಲಿಯೂ ಒಬ್ಬರಿಗೆ ಅಥವಾ ಸಾಮೂಹಿಕವಾಗಿ ಆರೋಗ್ಯದ ಬಗ್ಗೆ ಹಿತೋಪದೇಶ ಮಾಡುವುದು.

6 ಆಸ್ಪತ್ರೆಯ ಮದ್ದಿನಿಂದಲೂ, ಜಾಗ್ರತೆಯಿಂದಲೂ ಲಾಭಹೊಂದಬಹುದಾದ ಕೇಸುಗಳನ್ನು ಶೀಘ್ರಕಾಲದಲ್ಲಿ ಆಸ್ಪತ್ರೆಗೆ ಕಳುಹಿಸುವುದು.

7. ಮಕ್ಕಳಿಗೆ ೫ ವರ್ಷ ಪ್ರಾಯವಾಗುವ ತನಕ ತಾಯಿಗೂ ಮಕ್ಕಳಿಗೂ ಬರಬಹುದಾದ ಚಿಕ್ಕಪುಟ್ಟ ಕಾಯಿಲೆಗಳನ್ನು ಗುಣಪಡಿಸುವುದು.

8. ಶಾಲೆಗೆ ಹೋಗುವ ವಯಸ್ಸಾಗದ ಶಿಶುಗಳಿಗೂ ಅವುಗಳ ತಾಯಂದಿರಿಗೂ ಹಾಲು, ಕಾಡ್ ಲಿವರ್ ಎಣ್ಣೆ, ಮತ್ತು ವಿವಿಧ ವಿಟಮಿನುಗಳುಳ್ಳ ಮಾತ್ರೆಗಳನ್ನು ಒದಗಿಸುವುದು.

(ಮುಂದಿನ ಸಂಚಿಕೆ ನೋಡಿರಿ.)

ರಾಮತೀರ್ಥ ಬ್ರಾಹ್ಮಿ ತೈಲ

ಆಶ್ಚರ್ಯದ ಸಂಗತಿ

ಅಧಿಕ ಜ್ಞಾಪಕ ಶಕ್ತಿಯಿಂದ ಕಲಿಯುವಿಕೆಗೆ ಸಹಾಯವಾಗುತ್ತದೆ ಸಹಜವಾಗಿ ತಿಳಿಯುವಿಕೆಗೆ ಉತ್ಪನ್ನವಾಗುತ್ತದೆ ಇದಕ್ಕೋಸ್ಕರ ನಾನು ಒಂದು ಸಲ **ರಾಮತೀರ್ಥ ಯೋಗಾಶ್ರಮ, ದಾದರ್ (ಜಿ. ಐ. ಪಿ) ಮುಂಬಯಿ ೧೪** ಇವರ **"ರಾಮತೀರ್ಥ ಬ್ರಾಹ್ಮಿ ತೈಲ" (ಸ್ಪೆಶಲ್ ನಂ ೧)**ರ ಉಪಯೋಗಕ್ಕೆ ಪ್ರಾರಂಭಮಾಡಿದೆ ಸ್ವಲ್ಪ ಸಮಯದ ನಂತರ ನನಗೆ ಆಶ್ಚರ್ಯವಾಗಿ ತೋರಿತೇನಂದರೆ ನನ್ನ ತಲೆನೋವು, ಚಕ್ಕರ್ ಬರುವುದು, ಕಣ್ಣು ಕೆಂಪಾಗುವುದು ಇವೆಲ್ಲವನ್ನು ತನ್ನ ವಿಶೇಷ ಗುಣದಿಂದ ಅದು ದೂರ ಮಾಡಿತು **ರಾಮತೀರ್ಥ ಬ್ರಾಹ್ಮಿ ತೈಲ** (ಸ್ಪೆಶಲ್ ನಂ ೧) ಉಪಯೋಗ ಮಾಡುವುದರಿಂದ ಯಾವತರದ ಒಡಕೂ ಇಲ್ಲದೆ ಅದರ ಬದಲಾಗಿ ಇದರ ವಿಶೇಷ ಗುಣದಿಂದ ತಲೆಕೂದಲು ಕಪ್ಪು, ಉದ್ದ ಮತ್ತು ಕಾಂತಿಯುತವಾಗುತ್ತದೆ, ಹೆಚ್ಚಾಗಿ ಬೇರೆ ತೈಲವು ತಲೆಕೂದಲನ್ನು ಬಿಳುಪಾಗಿ ಮಾಡುತ್ತದೆ ಇವನ್ನು ಎಷ್ಟು ಆಶ್ಚರ್ಯಕರವೆಂದು ನೆನಸಲಿ! ತಲೆಕೂದಲಿನ ಸೌಂದರ್ಯವನ್ನು ಯಾವಾಗಲೂ ಕಾಪಾಡುವ ತೈಲದ ವ್ಯವಹಾರ ಮಾಡುವುದು ಉಚಿತವಾಗಿದೆ. ಮನಸ್ಸನ್ನು ಶಾಂತವಾಗಿಡುವ, ಗಾಢ ನಿದ್ದೆಯನ್ನು ತರುವ, ಪ್ರಶಾಂತತಾ ಮತ್ತು ಆರಾಮ ಕೊಡುವ ವಸ್ತುಗಳ ಗುಣವು ರಾಮತೀರ್ಥ ಬ್ರಾಹ್ಮಿ ತೈಲ (ಸ್ಪೆಶಲ್ ನಂ ೧)ದಲ್ಲಿರುವುದರಿಂದ ರಾಮತೀರ್ಥ ಯೋಗಾಶ್ರಮದ ಸಂಚಾಲಕರಿಗೆ ಸದೈವ ಆಶೀರ್ವಾದ ಕೊಟ್ಟು ಜನತೆಯು ತೈಲದ ವ್ಯವಹಾರ ಮಾಡಲಿ ಸುಗಂಧ ತೈಲದ ಉಪಯೋಗ ಪ್ರತಿಯೊಂದು ಮನೆಯಲ್ಲೂ ನಾನು ನೋಡಿದೆ.

ಆದರೆ ಅದರ ಬದಲು **ರಾಮತೀರ್ಥ ಬ್ರಾಹ್ಮಿ** ತೈಲ (ಸ್ಪೆಶಲ್ ನಂ 1)ರ ಉಪಯೋಗ ಮಾಡುವುದರಿಂದ ಎಷ್ಟೋ ಪ್ರಯೋಜನವಾಗುವುದು. ನಾನು ಇಷ್ಟು ಚಮತ್ಕಾರ ಗುಣಗಳನ್ನು ನೋಡಿದೆ. ವಿಶೇಷವಾಗಿ ಗೃಹಿಣಿ ವಿದ್ಯಾರ್ಥಿ ವರ್ಗವು ಈ ತೈಲದ ಉಪಯೋಗ ಮಾಡಿ ನೋಡಲಿ ಸ್ಮರಣಶಕ್ತಿ ತೀವ್ರವಾಗಿ ಬರುವುದರಿಂದ ಅಭ್ಯಾಸದಲ್ಲಿ ಸಹಾಯವಾಗುವುದು.

(ಸಹಿ) **ಕುಮಾರಿ ಕಮಲ ಸಿಯೊನ್‌ಕರ,**
ನಾಗ್‌ಪೂರ್

ಸ್ಪೆಶಲ್ ನಂ. ೧] [ಮೆಡಿಕೇಟೆಡ್

ಸ್ಮರಣೆ ಹೆಚ್ಚುತ್ತದೆ, ಶಾಂತನಿದ್ದೆ ಬರುತ್ತದೆ, ಕಣ್ಣಿನ ದೃಷ್ಟಿ ಹೆಚ್ಚುತ್ತದೆ, ಬಕ್ಕೆ ನಾಶವಾಗುತ್ತದೆ, ಕೂದಲು ಕಪ್ಪಾಗುತ್ತದೆ ಬೆಳೆಯುತ್ತವೆ ಮತ್ತು ನೆತ್ತಿಯಲ್ಲಿ ಕೂದಲು ಬರುತ್ತವೆ. ಎಲ್ಲಾ ಋತುಗಳಲ್ಲಿ ಎಲ್ಲರಿಗೂ ಅನುಕೂಲವಿದೆ ಎಲ್ಲಾ ಕಡೆಯಲ್ಲಿಯೂ ದೊರೆಯುತ್ತದೆ

ಸ್ಥಾನಿಕ ಕ್ರಯ: ದೊಡ್ಡ ಬಾಟ್ಲಿಗೆ ರೂ. 3—8—0 ಸಣ್ಣ ಬಾಟ್ಲಿಗೆ ರೂ 2—0—0

ಶ್ರೀ ರಾಮತೀರ್ಥ ಯೋಗಾಶ್ರಮ,
ದಾದರ್ (ಜಿ. ಐ. ಪಿ.) **ಮುಂಬಯಿ ೧೪**

ಚಿಕ್ಕ ಮಕ್ಕಳ ಅಕ್ಕರೆಯ
ಸಚಿತ್ರ ಪದ್ಯ ಪುಸ್ತಕ—
ಕೆ. ಪೊನ್ನಯ್ಯ ಶೆಟ್ಟರಿಂದ
ರಚಿತವಾದ

ಮುಗುಳು

ಒಂದರಿಂದ ೫ನೇ ದರಗತಿ ವರೆಗಿನ
ಮಕ್ಕಳಿಗೆ ಬಾಯಿಪಾಠಕ್ಕೂ,
ಅಭಿನಯಕ್ಕೂ, ಅನುಕೂಲವಾಗಿದೆ.
ಮುಂಜೂರಾತಿ ಪಡೆದು, ಅಲ್ಪ
ವರ್ಷಗಳಿಂದ ...ತ್ತು ಹೊರಗಿನ
ಶಾಲೆಗಳಲ್ಲಿ ಪ್ರಚಾರದಲ್ಲಿದೆ.
ಬೆಲೆ 0—5—0
ಸಿಗುವ ಸ್ಥಳ.
ನವಭಾರತ ಬುಕ್ ಡಿಪ್ಪೋ ಉಡುಪಿ.

ನಿಮ್ಮ ಓಟು ಯಾರಿಗೆ?

ಕಾಂಗ್ರೆಸ್ಸಿಗೋ– ಸೋಶಿಯಲಿಸ್ಟ್ ಪಾರ್ಟಿಗೋ– ಕಮ್ಯೂನಿಸ್ಟರಿಗೋ– ಪ್ರಜಾಪಾರ್ಟಿಗೋ– ಹಿಂದೂಮಹಾಸಭೆಗೋ– ಎಂಬುದು ಕೇಳುವವರಿಗಿಂತ ಹೇಳುವವರಿಗೇ ದೊಡ್ಡ ಸಮಸ್ಯೆಯಾಗಿದೆ. ಈ ಬಾರಿಯ ಪ್ರೌಢ ಮತದಾನ ಪದ್ಧತಿಯ ಕ್ರಮದಿಂದ ಯಾವ ಪಾರ್ಟಿ ಗೆಲ್ಲಬಹುದೆಂಬುದೇ ಇನ್ನೊಂದು ಕುತೂಹಲಪೂರ್ಣವಾದ ವಿಚಾರ. ಭಾರತ ಇತಿಹಾಸದಲ್ಲಿಯೇ ಈ ಚುನಾವಣೆ ಮಹತ್ವದ್ದೆನ್ನಬೇಕು. ಹಣದ ಬಲದಿಂದಲಾಗಲೀ– ವೈಯಕ್ತಿಕ ಪ್ರಭಾವದಿಂದಾಗಲೀ—ಈ ಬಾರಿ ಗೆಲ್ಲುವ ಸಂದರ್ಭ ಬಹಳ ಕಡಿಮೆ. ಬಿಸಿರಕ್ತದ ತರುಣರ ಒಲವು ಯಾವ ಕಡೆಗೆ ಹರಿಯಬಹುದೆಂಬುದನ್ನು ನಾವು ಊಹಿಸುವದು ಕಷ್ಟಸಾಧ್ಯವಾಗಿದೆ. ದೇಶದಲ್ಲಿ ನಿರುದ್ಯೋಗ ಹೆಚ್ಚಾಗಿರುವದರಿಂದ ದೇಶದ ತರುಣ ಜನಾಂಗ ಬಡತನ— ದಾರಿದ್ರ್ಯಗಳಿಗೆ ಸರಕಾರವೇ ಕಾರಣವೆಂದೂ, ನಮಗೆ ಕಮ್ಯೂನಿಸ್ಟ ಸರಕಾರ ಬರಲಿ ಎನ್ನುತ್ತಾರೆ. ಕಮ್ಯೂನಿಸ್ಟ ಸರಕಾರ ಬಂದರೆ ಸರ್ವರಿಗೂ ಉದ್ಯೋಗ ದೊರಕಿ ಸರ್ವರಿಗೂ ಉಣಲು ಅನ್ನ, ಉಡಲು ಬಟ್ಟೆ ದೊರಕಬಹುದೆಂದು ಅವರ ಕಲ್ಪನೆಯಾಗಿದೆ. ಹಳ್ಳಿಯಲ್ಲಿ ದುಡಿಯುವ ಬಡ ರೈತರಲ್ಲೂ ಒಂದು ಬಗೆಯ ಅಸಂತೃಪ್ತಿ– ಕ್ರಾಂತಿಯ ಭಾವನೆ ಮೂಡಿದೆ. ಸೋಶಲಿಸ್ಟ ಪಾರ್ಟಿ ಬಂದರೆ ಹೊಲಭೂಮಿಯೆಲ್ಲ ತಮ್ಮ ಸ್ವಾಧೀನಕ್ಕೆ ಬಂದು ತಾವೇ ಮಾಲಕರಾಗಬಹುದೆನ್ನುವ ಆಶಾವಾದಿಗಳಾಗಿದ್ದಾರೆ. ಸೋಶಾಲಿಸ್ಟರು ಕೊಡುವ ಭರವಸೆ ಆಶೆಗಳಿಂದ ಕಾಂಗ್ರೆಸ್ಸಿನಿಂದ ತಮಗೆ ಸುಖವಿಲ್ಲವೆಂಬ ಅಭಿಪ್ರಾಯ ಹುಟ್ಟಿದೆ. ಇಂದು ದೇಶದ ಹಲವು ಕಡೆಗಳಲ್ಲಿ ಹೊಲದೊಡೆಯರಿಗೂ–ರೈತರಿಗೂ ಆದ ಜಗಳದಲ್ಲಿ ಸೋಶಾಲಿಸ್ಟರೇ ಮುಖ್ಯ ಪಾತ್ರಧಾರಿಗಳು. ಕೂಲಿಕಾರ ಹಾಗೂ ಕಾರ್ಮಿಕ ವರ್ಗಗಳ ಸಂಘಟನೆಯಲ್ಲಿ ಕಮ್ಯೂನಿಸ್ಟ ಹಾಗೂ ಸೋಶಾಲಿಸ್ಟ ಪಕ್ಷಗಳ ಕೈವಾಡವೇ ಹೆಚ್ಚು! ಧರ್ಮನಿಷ್ಠರೂ, ಹಿಂದೂ ಮತಾಭಿಮಾನಿಗಳೂ, ಅಖಂಡ ಹಿಂದೂಸ್ಥಾನಕ್ಕಾಗಿ ಹೋರಾಡುವವರೂ ಹಿಂದೂಮಹಾಸಭೆಯ ಬಾಲ ಹಿಡಿಯುತ್ತಾರೆ. ಹಿಂದೂ ಮಹಾಸಭೆಯ ಧೋರಣೆಯ ಭರವಸೆಗಳೆಲ್ಲ ರಾಜಕೀಯ ಭರವಸೆಗಳಾಗಿರದೆ ಸಾಂಸ್ಕೃತಿಕ– ಧಾರ್ಮಿಕ ಪುನರುತ್ಥಾನದ ಭರವಸೆಗಳಿಂದ ಕೂಡಿದಂತವುಗಳಾಗಿವೆ. ಜಾತೀಯ ವಾದಿಗಳಿಗೆ ಹಿಂದೂ ಮಹಾಸಭೆಯೊಂದೇ ಆಧಾರ ಸ್ತಂಭ. ಹಿಂದೂ ಮಹಾಸಭೆಯೊಳಗೆ ಆರ್. ಎಸ್. ಎಸ್., ರಾಮರಾಜ್ಯ ಪರಿಷತ್, ಮುಂತಾದ ಜಾತೀಯ ಸಂಸ್ಥೆಗಳು ಅಂತರ್ಗತವಾಗುವದರಿಂದ ಅದರ ಶಕ್ತಿಯೇನೂ ಕಡಿಮೆಯಾಗಲಾರದು. ಈಚಿನ ಕಾಂಗ್ರೆಸ್ಸಿನ ಧೋರಣೆಯಿಂದ ಅಸಂತುಷ್ಟರಾದ ಸನಾತನಿಗಳು ತಮ್ಮ ಓಟುಗಳನ್ನು ಕಾಂಗ್ರೆಸ್ಸಿಗೆ ಹಾಕಿ ಅಪವಿತ್ರಗೊಳಿಸಲಾರೆವೆಂದು ಪಣ ತೊಟ್ಟಿದ್ದಾರೆ. ಸುಧಾರಿತ ಕಾಲದಲ್ಲೂ ಈ ಜಾತೀಯ ಪಕ್ಷಗಳಿಗೆ ಜಯ ಸಿಕ್ಕೀತೇ? ಎನ್ನುವ ಅನಾದರ ಹಲವರಲ್ಲಿದೆ. ಆದರೆ ಬಗರ್ಭ ಶ್ರೀಮಂತರೂ, ಶ್ರೀಮಂತ ವ್ಯಾಪಾರಿಗಳೂ, ಆರ್. ಎಸ್. ಎಸ್, ಹಿಂದೂ ಮಹಾಸಭೆಯ ಹಿನ್ನಲೆಯಲ್ಲಿದ್ದಾರೆನ್ನುವುದನ್ನು ಮರೆಯಬಾರದು. ಆರ್. ಎಸ್. ಎಸ್. ವಾದಿಗಳ ಸಾಂಘಿಕ ಶಕ್ತಿ–ಶಿಸ್ತು ಸಂಘಟನೆ ನಮ್ಮ ದೇಶದ ಇನ್ನಾವ ಪಕ್ಷಗಳಲ್ಲೂ ಇರುವುದಿಲ್ಲ. ಪ್ರತ್ಯಕ್ಷವಾಗಿಯೂ ಅಪ್ರತ್ಯಕ್ಷವಾಗಿಯೂ ಜನರು ಕಡೆ ಒಲಿಯುತ್ತಿದ್ದಾರೆ. ಪಾಕಿಸ್ತಾನದೊಡನೆ ಭಾರತ ಬೆಳಸುತ್ತಿರುವ ಅತಿ ಮೈತ್ರಿ– ಹಿಂದೂ ಕೋಡು ಮಸೂದೆ– ಮೊದಲಾದ ಕಾಂಗ್ರೆಸ್ಸಿನ ವಿಚಾರಗಳು ಆದೊಂದು ಪಂಗಡದ ರೋಷಕ್ಕೆ ಕಾರಣವಾಗಿ ಆ ಪಂಗಡವು ಹಿಂದೂ ಮಹಾಸಭೆಯಲ್ಲಿ ಐಕ್ಯಗೊಳ್ಳುವ ಧೃಡ ಮನಸ್ಸು ಮಾಡಿದೆ. ಹಿಂದೂ ಮಹಾಸಭೆ ಬಹುಮತವನ್ನು ಗಳಿಸಿ ರಾಜ್ಯದ ಆಡಳಿತವನ್ನು ನಡೆಸಲು ಅಸಮರ್ಥವಾದರೂ ಇಂಗ್ಲಂಡಿನ ಕಾನ್ಸರ್ವೆಟಿವ್ ಪಕ್ಷ ಕೂಲಿಗಾರ ಸರಕಾರಕ್ಕೆ ಕೊಡುವ ಕಷ್ಟಪರಂಪರೆಗಳಷ್ಟೇ ಕಠಿಣವಾಗಬಹುದಾಗಿದೆ!

ಇನ್ನು ಸ್ವತಂತ್ರ ಪಕ್ಷ, ಪ್ರಜಾಪಾರ್ಟಿ ಮುಂತಾದವುಗಳು ಚುನಾವಣೆಯಲ್ಲಿ ಸ್ಪರ್ಧಿಸಲಿರುವವು. ಪ್ರಜಾಪಾರ್ಟಿ ಕಾಂಗ್ರೆಸ್ಸಿನಲ್ಲಿಯ ಕೆಲ ದೋಷವನ್ನು ಕಂಡು ತಾವು ಆ ಪಕ್ಷದಲ್ಲಿದ್ದು ಅದರ ಶುದ್ಧೀಕರಣ ಅಸಾಧ್ಯವೆಂದು ಮನಗಂಡು ಕಾಂಗ್ರೆಸ್ಸಿನಿಂದ ಸಿಡಿದು ಬೇರಾದವರ ಪಕ್ಷ. ಕೃಪಲಾನಿ, ಟಿ. ಪ್ರಕಾಶಮ್, ಮುಂತಾದ ಪ್ರಭಾವೀ ಕಾಂಗ್ರೆಸ್ ವ್ಯಕ್ತಿಗಳು ಸೇರಿಕೊಂಡಿದ್ದಾರೆ. ಇನ್ನೂ ಹಲವು ಉಚ್ಚ ಕಾಂಗ್ರೆಸ್ಸಿಗರು ಆ ಪಕ್ಷಕ್ಕೆ ಸೇರುವ ಪೂರ್ವಸಿದ್ಧತೆಯಲ್ಲಿದ್ದಾರೆ. ದಿನದಿಂದ ದಿನಕ್ಕೆ ಕಾಂಗ್ರೆಸ್ಸನ್ನು ತ್ಯಜಿಸಿ ಈ ನೂತನ ಪಕ್ಷವನ್ನು ಸೇರುವ ಸುದ್ದಿಗಳು ಹೆಚ್ಚುತ್ತಿರುವುದನ್ನು ನೋಡುತ್ತಲಿದ್ದೇವೆ. ಕಾಂಗ್ರೆಸ್ಸಿಗರು ತಮ್ಮ ಹೊಣೆಯನ್ನರಿತುಕೊಳ್ಳದೆ ಸ್ವೇಚ್ಛಾಚಾರಿಗಳಾಗಿ ವ್ಯವಹಾರವನ್ನು ಹಿಡಿದುದರಿಂದ ಈ ಪಕ್ಷ ಹುಟ್ಟುವುದು ಅನಿವಾರ್ಯವಾಯಿತೆಂದು ಕೃಪಲಾನಿಯವರು ಹೇಳುತ್ತಲಿದ್ದಾರೆ. ತತ್ವನಿಷ್ಠ ಕಾಂಗ್ರೆಸ್ಸಿಗರು ಈ ನೂತನ ಪಕ್ಷದ ಮೂಲಕ ದೇಶೋದ್ಧಾರ ಮಾಡುವ ಪ್ರತಿಜ್ಞೆ ತೊಟ್ಟಿರುವರಾದರೂ ಸ್ವಾರ್ಥದ ದೃಷ್ಟಿಯಿಂದ ಪಕ್ಷದಲ್ಲಿ ಭಾಗವಹಿಸುವ ಸಾಹಸ ಮಾಡಿದವರಿಲ್ಲವೆಂದು ಹೇಳಲು ಬರುವಂತಿಲ್ಲ. ಜನತೆಯ ಒಲವನ್ನು ನೋಡಿ ಗೆದ್ದ ಎತ್ತಿನ ಬಾಲವನ್ನು ಹಿಡಿಯುವ ಧೋರಣೆವಹಿಸಿದ್ದನ್ನು ನಾವಿಂದು ಕಾಣಬಹುದಾಗಿದೆ.

ಅಂತೂ ಈ ಪಕ್ಷಗಳು ಊದುವ ಶಂಖವನ್ನಾದಿ ಕಿವಿಗಳಿಗೆ ಕೊಡುವದಕ್ಕಿಂತ ಹೆಚ್ಚಿನದನ್ನೇನೂ ಮಾಡಲಾರವು! ಒಟ್ಟಿಗೆ ಹೇಳುವದಾದರೆ ಎಲ್ಲ ಪಕ್ಷಗಳೂ ಸ್ವಾರ್ಥದ ದೃಷ್ಟಿಯಿಂದಲೇ ಮೇಲಾಟ ನಡೆಸುವಂಥವುಗಳಾಗಿವೆ. ಈ ಘನ ಘನವಾದ ಉದ್ದೇಶಗಳೂ ಭರವಸೆಗಳೂ ಕಾರ್ಯರೂಪದಲ್ಲಿಂದೂ ಬರುವಂತಿಲ್ಲ. ಸದ್ಯ ಚುನಾವಣೆಯ ಪ್ರಚಾರ ಸಾಧನಗಳಾದಾವೇ ಹೊರತು. ಬೇರೇನೂ ಅವುಗಳಿಂದ ಆಗದಿದೆ. ಕಾಂಗ್ರೆಸ್ಸನ್ನು ಹೊರತು ಈಗಿಂದೀಗಲೇ ಯಾವ ಪಕ್ಷಕ್ಕೆ ಆಡಳಿತವನ್ನು ಒಪ್ಪಿಸಿಕೊಟ್ಟರೂ ಸಂಕ್ರಾಂತವನ್ನು ನಡೆಸಬಲ್ಲ ಸಾಮರ್ಥ್ಯ ಅವುಗಳಿಗಿರುವುದಿಲ್ಲವೆಂಬುದು ಖಂಡಿತ. ಸ್ವಾತಂತ್ರ್ಯ ಸಿಕ್ಕಿ ಈ ನಾಲ್ಕು ವರ್ಷಗಳಲ್ಲಿ ಸಾಧಿಸಬೇಕಾದ ಕೆಲಸ ಬಹಳವಿರುತ್ತವೆ ಎಂಬುದನ್ನು ನಾವು ಒಪ್ಪುವದಾದರೂ ದೇಶದ ಹಲವಾರು ಕಠಿಣ ಪರಿಸ್ಥಿತಿಯನ್ನೆದುರಿಸಿ, ಸಾಧಿಸಿದ ಪ್ರಗತಿಯನ್ನು ನಾವು ಮರೆಯಲಾರೆವು. ಹಗಲುಗನಸುಗಳನ್ನೇ ಭರವಸೆಯಾಗಿ ಹೇಳುತ್ತಿರುವ ಸೋಶಾಲಿಸ್ಟ್, ಕಮ್ಯೂನಿಸ್ಟ್ ಮೊದಲಾದ ಯಾವುದೇ ಪಕ್ಷವಾಗಿದ್ದರೂ ಒಂದೇ ವರುಷದಲ್ಲಿ ಆತ್ಮಹತ್ಯೆ ಮಾಡಿಕೊಳ್ಳುತ್ತಿತ್ತು! ಹೇಳುವದೇನೋ ಬಹಳವಿದ್ದಾರೆ. ಆದರೆ ಆಳುವ ಗುಣ—ಕರ್ತೃತ್ವಶಕ್ತಿಯಿರುವದು ಕೆಲವರಲ್ಲಿ ಮಾತ್ರ!

ಮಹಾಚುನಾವಣೆ ಹತ್ತಿರ ಬರುತ್ತಿರುವ ವೇಳೆ ಕಾಂಗ್ರೆಸ್ಸಿಗರು ಪಕ್ಷವನ್ನು ತ್ಯಜಿಸಿ ಬೇರೆ ಪಕ್ಷಗಳಿಗೆ ಸೇರುವ ಸಾಹಸವನ್ನು ಮಾಡಿದ್ದು ನಿಜವಾಗಿಯೂ ವಿಷಾದಕರ ಸಂಗತಿ! ಯಾವ ಸರಕಾರವೇ ಬರಲಿ; ಕಾಂಗ್ರೆಸ್ಸು ಬೇಡ ಎನ್ನುವ ಮಾತು ಜನತೆಯಿಂದ ಕೇಳುತ್ತಲಿದೆ. ಇಂತಹ ವಾದ ತೀರ ಅಜ್ಞಾನದ ಪರಮಾವಧಿಯಾಗಿದೆ. ಕಾಂಗ್ರೆಸ್ಸಿಗರಲ್ಲಿ ತಪ್ಪಿದೆ; ದೇಶ ವಂಚಕ ಕಾರ್ಯ ನಡೆದಿದೆ ಸ್ವಾರ್ಥದ ದುರುಪಯೋಗ ನಡೆದಿದೆ ಎನ್ನುವದನ್ನು ಒಪ್ಪೋಣ! ಆದರೆ ಇಂತಹ ಪ್ರಮಾದಗಳು ಪಕ್ಷಕ್ಕೆ ಸೇರಿದ ಹಲವರಿಂದ ಆಗಿದೆ. ಅಂತಹರನ್ನು ಹೊರದೂಡಿ ನಿಜವಾದ ಪ್ರತಿನಿಧಿಗಳಾರೆಂಬುದನ್ನು ಜನತೆ ನಿಷ್ಕರ್ಷಿಸುವದರಲ್ಲೇ ಜಾಣತನವಿದೆ. ಹಿರಿಯ ಕಾಂಗ್ರೆಸ್ಸಿಗರು ಸ್ವಾತಂತ್ರ್ಯಕ್ಕಾಗಿ ತಾವು ನಡೆಸಿದ ಹೋರಾಟ ತ್ಯಾಗ ಫಲವಾಗಿ ಇಂದೂ ನಿಸ್ವಾರ್ಥ ಬುದ್ಧಿಯಿಂದ ಸೇವಾತತ್ಪರರಾಗಿರುವದನ್ನು ನಾವು ಮರೆಯದಿರೋಣ. ನೆಹ್ರೂರವರ ಮುತ್ಸದ್ದಿತನ ಪ್ರಭಾವೀ ಧುರೀಣತ್ವ ಜಾಗತಿಕ ರಂಗದಲ್ಲಿ ಭಾರತಕ್ಕೆ ಕೀರ್ತಿ ತಂದಿದೆ. ವಿಪುಲವಾಗಿ ಬೆಳೆಯುತ್ತಿರುವ ನಮ್ಮ ಜನಕ್ಕೆ ಅನ್ನ, ಬಟ್ಟೆ, ಉದ್ಯೋಗಗಳನ್ನು ಒದಗಿಸಿಕೊಡುವುದು ಸುಲಭದ ಕೆಲಸವೇನಲ್ಲ. ಈಗ ಬಂದೊದಗಿದ ಆಹಾರದ ಬಿಕ್ಕಟ್ಟನ್ನು ಭಾರತದ ಯಾವ ಪಕ್ಷವೂ ಎದುರಿಸಲು ಸಮರ್ಥವಿಲ್ಲ. ವಿದೇಶಗಳಿಂದ ಬರುತ್ತಿರುವ ಆಹಾರ ಧಾನ್ಯಕ್ಕೆ ಕಾಂಗ್ರೆಸ್ಸು ಸರಕಾರದ ನೀತಿಯೇ ಮುಖ್ಯ ಕಾರಣವಾಗಿದೆ. ಮತದಾನ ಕೊಡುವವರು ಇದನ್ನು ಚೆನ್ನಾಗಿ ಲಕ್ಷಿಸಬೇಕು. ಮತದಾನ ಮಾಡುವದೆಂದರೆ ಹುಡುಗಾಟಿಕೆಯಲ್ಲವೆ ಮೋಜಿನ ವಿಚಾರವಲ್ಲ, ಪಾತ್ರಾಪಾತ್ರ ವಿಚಾರಣೆಯಿಂದ ವಿಮರ್ಶೆಯಿಂದಲೇ ನಮ್ಮ ರಾಷ್ಟ್ರದ ಭವಿತವ್ಯವನ್ನು ನಾವು ನಿಶ್ಚಯಿಸಬಲ್ಲೆವು. ಕಾಂಗ್ರೆಸ್ಸು ಹೇಗಿದ್ದರೂ ನಾಲ್ಕು ವರ್ಷದ ಅನುಭವವನ್ನು ಪಡೆದ ಹಿರಿಯ ಸಂಸ್ಥೆ. ತಾನು ಕೈಗೊಂಡಿರುವ ಮಹೋದ್ದೇಶಗಳು ಫಲಿಸಬೇಕಾದರೆ ಇನ್ನೂ ಸ್ವಲ್ಪ ಕಾಲ ಆ ಸಂಸ್ಥೆಗೆ ನಾವು ಅವಕಾಶ ಒದಗಿಸಿಕೊಡಬೇಕು.

ಸ್ಪರ್ಧಾಳುಗಳ ಮೇಲಾಟ ಈಗಾಗಲೇ ಆರಂಭವಾಗಿದೆ. ಕಾಂಗ್ರೆಸ್ಸಿನ ಟಿಕೇಟಿನಿಂದ ಸ್ಥಾನಮಾನವನ್ನು ಗಳಿಸುವ ಚಪಲ ಹಲವರಲ್ಲಿ ಕಾಣುತ್ತಲಿದೆ. ತಾವು ಜನತಾ ಪ್ರತಿನಿಧಿಗಳಾಗಿ ಸಾಧಿಸಬಹುದಾದ ಕಲ್ಪನೆ ಕೂಡ ಇಲ್ಲದೆ ಏನಕೇನ ಪ್ರಕಾರೇಣ ಸ್ಥಾನಗಳಿಸಿಕೊಳ್ಳಬೇಕೆಂಬ ಛಲ ತೊಟ್ಟಂತಿದೆ. ಇಂತಹ ಸಂದರ್ಭದಲ್ಲಿ ಜನತೆಯನ್ನು ನಾವು ಕೇಳಿಕೊಳ್ಳುವದಕ್ಕಿಂತ ಕಾಂಗ್ರೆಸ್ಸಿನ ಟಿಕೇಟನ್ನು ಕೊಡುವವರನ್ನೇ ಎಚ್ಚರಿಸಬೇಕಾಗಿದೆ. ಪ್ರಜಾಪ್ರತಿನಿಧಿತ್ವವನ್ನು ಸಾಧಿಸುವ ನಿಃಸ್ವಾರ್ಥ ವ್ಯಕ್ತಿಯನ್ನೇ ಆರಿಸಬೇಕು. ವ್ಯಕ್ತಿ ವೈಶಿಷ್ಟ್ಯ—ಭ್ರಾಂತಿಯ ಪಕ್ಷಪಾತ—ಮುಂತಾದವುಗಳಿಗೆ ಮನಸೋತು ಕಾಂಗ್ರೆಸ್ಸಿನ ಸ್ಥಾನಮಾನಕ್ಕೆ ಚ್ಯುತಿ ಬರುವಲ್ಲಿ ತಮ್ಮ ಒಲವನ್ನು ಉಪಯೋಗಿಸಬಾರದು. ಆಗಿಹೋದ ದಿನಗಳ ಅನುಭವದಿಂದಲಾದರೂ ಭವಿಷ್ಯದ ಕುರಿತು ಗಂಭೀರವಾಗಿ ಯೋಚಿಸಬೇಕು.

ಭವ್ಯ ಭಾರತದ ಸುಂದರ ಕಲ್ಪನೆಯ ಸೃಷ್ಟಿಸಿಕೊಂಡವರು ತಮ್ಮ ಅಮೂಲ್ಯವಾದ ಓಟನ್ನು ಯಾರಿಗೆ ಕೊಡಬಹುದೆನ್ನುವದನ್ನು ಮೊದಲಾಗಿ ಚಿಂತಿಸಬೇಕು. ತಮ್ಮ ಕಲ್ಪನೆ ಅಯಥಾರ್ಥವಾಗಿದ್ದರೆ ಉದ್ದೇಶವೆಲ್ಲ ವ್ಯರ್ಥವಾದೀತು. ವಿಚಾರ ಮನಸ್ಸಿನಿಂದ ವಿವೇಚನೆ ಮಾಡಬೇಕು. ಪ್ರತಿಯೊಬ್ಬ ಮತದಾರನೂ ತನ್ನ ಓಟಿನ ಮಹತ್ವವನ್ನರಿತು ರಾಷ್ಟ್ರಕ್ಕೆ ಭದ್ರವಾದ ತಳಹದಿಯ ಮೇಲೆ ನಿಲ್ಲಿಸಲೆತ್ನಿಸಬೇಕು. "ತನ್ನ ಒಂದು ಓಟಿನಿಂದೇನಾದೀತು?" ಎಂದು ಕಡೆಗಣಿಸಲಾಗದು. ನಮಗೀಗ ಪಕ್ಷಗಳ ಕೊರತೆಯಿಲ್ಲ; ರಾಷ್ಟ್ರವನ್ನು ಉಚ್ಛ್ರಾಯ ಸ್ಥಿತಿಗೆ ತರಬಲ್ಲ ಏಕಮಾತ್ರ ಪಕ್ಷ ಯಾವುದೆಂಬುದನ್ನು ಚಿಂತಿಸುವ ವಿಚಾರವಂತರ ಕೊರತೆಯಿದೆ. ತಮ್ಮ ಅಮೂಲ್ಯ ಮತದಾನದ ಮೂಲಕ ಜನತೆ ಆ ಕೊರತೆಯು ನೀಗಿಸುವಂತಾಗಲಿ!

ಸತ್ತವ್ರು ಮಾತೆತ್ತೋದಿಲ್ಲ ಸರಿ,—
ಆದ್ರೆ ಅವ್ರ ಹೆಂಡ್ತಿ ಮಕ್ಳು?
"ಯಜಮಾನ್ರು ಇನ್ಶೂರ್ ಮಾಡಿರ್ಲಿಲ್ಲಾ" ಎಂಬೊಂದೇ ಮಾತು ಉಳಿದವ್ರ ಸಂಕಷ್ಟ ತಿಳಿಸ್ತೆ.
ಪ್ರತೀ ಗೃಹಸ್ಥ್ರೂ, ತಮ್ಮ ನಂತ್ರ ಇಂಥಾ ಸ್ಥಿತಿ ಬಾರದಂತೆ ಮುಂಚಿತವಾಗಿ ನೋಡಿಕೊಳ್ಬೇಕ್ರೀ.
ದಿ ಕೆನರಾ ಮ್ಯೂಚುವಲ್
ಶ್ರೀ
ಎಶ್ಯೂರೆನ್ಸ್ ಕಂಪೆನಿ, ಲಿಮಿಟೆಡ್,
ಪ್ರಧಾನ ಕಾರ್ಯಾಲಯ: ಉಡುಪಿ ಸ್ಥಾಪನೆ: ೧೯೩೫
The Canara Mutual Assurance Co, Ltd.
H. O. UDIPI (SOUTH INDIA) ESTD: 1935.

ಯುದ್ಧ ಯಾರಿಗೂ ಬೇಡ; ಆದರೆ......?

“ಆದರೆ....?” ಎನ್ನುವಲ್ಲೇ ಎಲ್ಲ ಅಡಗಿದೆ. ಜಗತ್ತಿನಲ್ಲಿ ಯುದ್ಧ ಯಾರಿಗೂ ಬೇಡವಾಗಿದೆ. ಆದರೆ ಸ್ವಾರ್ಥ ಸಾಧಿಸಬೇಕು; ತಮ್ಮ ಅಧಿಕಾರ ನಡೆಯಬೇಕು, ಪ್ರಭುತ್ವ ಸ್ಥಾಪನೆಯಾಗಬೇಕು. ಇದಕ್ಕೆ ಬೇರೆಯವರು ಒಪ್ಪಬೇಕು; ಇಲ್ಲವೆ ಹೋದರೆ ಯುದ್ಧವಾಗುವದು ಅನಿವಾರ್ಯ! ಅರ್ಥಾತ್ ಪರಿಸ್ಥಿತಿಗಳೇ ಯುದ್ಧ ಮಾಡಿಸುತ್ತವೆ. ರಾಷ್ಟ್ರಗಳಲ್ಲವೆ ರಾಜಕಾರಣಿಗಳು ಅದಕ್ಕೆ ಕಾರಣರಲ್ಲ. ಜಗತ್ತು ಇಂದು ಮೂರು ಮುಖದಲ್ಲಿ ಪರಿಸ್ಥಿತಿಯ ಮೂಲಕ ಯುದ್ಧವನ್ನು ನಿರೀಕ್ಷಿಸಬಹುದಾಗಿದೆ. ಕೊರಿಯಾ, ಕಾಶ್ಮೀರ, ಪರ್ಶಿಯಾ ಇವು ಮೂರೂ ಯುದ್ಧಪ್ರೇರಕ ವಿಸ್ಫೋಟನಗಳೆಂದ ಕಾಣಿವೆ.

ಕೊರಿಯದಲ್ಲಿ....

ಕೊರಿಯಾದಲ್ಲಿ ಯುದ್ಧ ನಡೆಯುತ್ತಿದ್ದು ಈಗ ಶಾಂತಿ ಸಂಧಾನಗಳ ಮಾತುಕತೆಗಳು ನಡೆಯುವ ಲಕ್ಷಣಗಳು ಕಂಡು ಬರುತ್ತಿವೆ. ಆಂಗ್ಲೋ ಅಮೇರಿಕನರು ೩೮ನೇ ಅಕ್ಷಾಂಶದಲ್ಲಿ ಯುದ್ಧವನ್ನು ನಿಲ್ಲಿಸುವ ಮಹಾಪ್ರಯತ್ನದಲ್ಲಿ ತೊಡಗಿದ್ದಾರೆ. ಸಂ. ರಾ. ಸಂಘದ ಕಾರ್ಯದರ್ಶಿಯು ದೂತಕರ್ತರೂ ನೆಹ್ರೂರವರೊಡನೆ ಸಮಾಲೋಚನೆ ನಡೆಸಲು ದಿಲ್ಲಿಗೆ ಬಂದಿರುತ್ತಾರೆ “ತಮ್ಮ ಭೇಟಿಗೆ ಕೊರಿಯದ ಪ್ರಕರಣವೊಂದೇ ಕಾರಣವಲ್ಲ” ವೆಂದು ಅವರು ಹೇಳಿದ್ದವರಾದರೂ ಉದ್ದೇಶ ಕೊರಿಯದ ಸಂಧಾನದ ಮಾರ್ಗವೇ ಆಗಿರುತ್ತದೆ. ಆಂಗ್ಲೋ ಅಮೇರಿಕಾನರ ಆತ್ಮಾಭಿಮಾನಕ್ಕೆ ಕುಂದು ಬರದ ಹಾಗೆ ವರ್ತಿಸುವುದು ಅವರಿಗ ಬೇಕಾಗಿದೆ. ಕಮ್ಯೂನಿಸ್ಟ ಚೀನವನ್ನು ಒಲಿಸಲು ಭಾರತವು ಮಧ್ಯಸ್ಥಿಕೆ ವಹಿಸುವದರಿಂದಲೇ ಸಾಧ್ಯವೆಂಬದು ಅವರಿಗೆ ಮನವರಿಕೆಯಾಗಿದೆ. ಈ ವರೆಗೆ ಅಮೇರಿಕೆಯು ತೋರಿದ ಔದಾರ್ಯದಿಂದ ಇಲ್ಲವೆ ಸಂಧಾನದ ಮಾತುಕತೆಗಳಿಂದ ಯಾವ ಪ್ರಗತಿಯೂ ಕಂಡು ಬಂದಂತಿಲ್ಲ. ಕಮ್ಯೂನಿಸ್ಟ ಚೀನದ ಪ್ರತಿಭಟನೆಯೇನೂ ಕಂಡುಬಂದಿದ್ದರೂ ಅಮೇರಿಕೆ ತಳೆದ ಧೋರಣೆಯು ಕಠಿಣ ಹಾಗೂ ತಟಸ್ಥ ಧೋರಣೆಯನ್ನು ವಹಿಸಿವೆ ೩೮ನೆ ಅಕ್ಷಾಂಶದಲ್ಲಿ ಯುದ್ಧ ನಿಲ್ಲಿಸುವ ವಿಚಾರದಲ್ಲಿ ಎಲ್ಲ ರಾಷ್ಟ್ರಗಳೂ ಉತ್ಸುಕತೆಯನ್ನು ತಾಳಿವೆ ಆದರೆ ಕೆಂಪು ಚೀನದ ಮನಸ್ಸು ಹೇಗಿದೆಯೋ ಹೇಳಲು ಬರುವಂತಿಲ್ಲ. ಯುದ್ಧ ಯಾರಿಗೂ ಬೇಡ ನಿಜ; ಆದರೆ ಪರಿಸ್ಥಿತಿ ತಿಳಿಯಾಗದ್ದರಿಂದ ಸಂಧಾನದ ದಿನದ ಕುರಿತು ಭವಿಷ್ಯ ನುಡಿಯುವ ಹಾಗಿಲ್ಲ.

ಕಾಶ್ಮೀರದ ಪಾಡೂ ಅಷ್ಟೆ!

ಮೂರು, ನಾಲ್ಕು ವರ್ಷಗಳಿಂದ ನರಳುತ್ತಿರುವ ಕಾಶ್ಮೀರದ ಪಾಡೂ ಅಷ್ಟೆ! ಭಾರತ ಪಾಕಿಸ್ತಾನಗಳೊಳಗೆ ಮಹಾ ತೊಡಕಾಗಿ ನಿಂತು ಆಂತರಿಕ ಶಾಂತಿಗೆ ಭಂಗ ತರುತ್ತಿರುವದನ್ನು ನಾವು ಕಾಣುತ್ತಲಿದ್ದೇವೆ. ಉಭಯತರೂ ಕೂಡಿ ಹಲವು ರೀತಿಯ ಒಪ್ಪಂದ ಕರಾರುಗಳನ್ನು ಮಾಡಿಕೊಂಡರೂ ಅವು ಕಾರ್ಯರೂಪದಲ್ಲಿ ಬಹಳ ಕಾಲದವರೆಗೆ ಬಂದ ಇರಲು ಈ ಕಾಶ್ಮೀರ ತಂಟೆಯೆ ಕಾರಣವಾಗಿದೆ. ಪಾಕಿಸ್ತಾನಿಗಳೊಳಗೇನೇ ಭಿನ್ನಾಭಿಪ್ರಾಯ ಹುಟ್ಟಿ ಅರಾಜಕತೆಯ ಸುರುಹುಗಳು ಕಂಡು ಬಂದಿವೆ. ಉಚ್ಚ ಮಿಲಿಟರಿ ಅಧಿಕಾರಿಗಳ ಬಂಧನವಾಗಿದ್ದು ಈಗ ವಿಚಾರಣೆಗೆ ಗುರಿಪಡಿಸಲ್ಪಟ್ಟ ಈ ಸನ್ನಿವೇಶವು ಕಾಶ್ಮೀರದಿಂದಾಗಿಯೇ ಹುಟ್ಟಿತೆಂದು ಬ್ರಿಟನಿನ ಪತ್ರಿಕೆ ಬರೆದಿದೆ. ಕಾಶ್ಮೀರವನ್ನು ಬಲಾತ್ಕಾರದಿಂದ ಪಡೆಯಬೇಕೆಂಬ ತೀವ್ರಗಾಮೀ ಪಕ್ಷಗಳು ಪಾಕಿಸ್ತಾನದ ಸಾವಧಾನದ ಧೋರಣೆಯನ್ನು ಸಹಿಸುತ್ತಿಲ್ಲ. ಅಂತಲೇ ಪಾಕಿಸ್ತಾನದೊಳಗೂ ಭಿನ್ನಾಭಿಪ್ರಾಯ ಉಂಟಾಗಿದೆ.

ಸಂ. ರಾ ಸಂಘವು ಸರಿಯಾದ ನ್ಯಾಯದಾನ ಮಾಡೀತೆಂದು ಭಾವಿಸಿ, ಕಾಶ್ಮೀರೀ ಜನತೆ ಹಾಗೂ ಭಾರತ ಸರಕಾರ ಈ ವರೆಗೆ ಸಹಿಸಿತಾದರೂ ಇನ್ನು ಮುಂದೆ ಸಂ. ರಾ. ಸಂಘದ ಆದೇಶವನ್ನು ಅನುಪಾಲಿಸುವಂತಿಲ್ಲ. ಸಂ ರಾ. ಸಂಘದ ಆದೇಶವು ನ್ಯಾಯತತ್ಪರವಾಗಿರದೆ ಏಕ ಪಕ್ಷೀಯವಾಗಿದೆ ದು ಭಾರತ ಹಾಗೂ ಕಾಶ್ಮೀರದ ಅಭಿಪ್ರಾಯವಿರುತ್ತದೆ. ಭಾರತದ ವಿರೋಧವನ್ನು ಕಡೆಗಣಿಸಿ ಸಂ. ರಾ. ಸಂಘ ಮಧ್ಯಸ್ಥಗಾರನನ್ನ ನೇಮಿಸಿದೆ. ಈ ಮಧ್ಯಸ್ಥಗಾರನನ್ನು ಪಾಕಿಸ್ತಾನವು ಗೌರವಪೂರ್ವಕ ಸ್ವಾಗತಿಸುವದು.. ಆದರೆ ಭಾರತ ಅವನೊಡನೆ ಸಹಕರಿಸುವದು ಶಕ್ಯವಿಲ್ಲನೆಂದು ಸ್ಪಷ್ಟ ಹೇಳಿರುತ್ತದೆ. ನೆಹ್ರೂ ಕಾಶ್ಮೀರದಲ್ಲಿ ರಾಷ್ಟ್ರೀಯ ಪರಿಷತ್ತಿನಲ್ಲಿ ಶೇಖ ಅಬ್ದುಲ್ಲಾರು ಕೂಡಾ ಸಂ. ರಾ. ಸಂಘವು ಕಳಿಸಿಕೊಡುವ ಮಧ್ಯಸ್ಥಗಾರನನ್ನು ನಾವು ಸ್ವಾಗತಿಸಲಾರೆವು ಸಪ್ಟಂಬರದೊಳಗೆ ನಾವು ಘಟನಾ ಸಮಿತಿಯನ್ನು ನಡೆಸುವ ನಿರ್ಧಾರ ಮಾಡಿರುತ್ತೇವೆ. ಇದಕ್ಕೆ ವಿರುದ್ಧವಾಗಿ ಯಾರು ಹೇಳಿದರೂ ನಾವು ಸಹಿಸುತ್ತಿಲ್ಲವೆಂದು ಸ್ಪಷ್ಟೀಕರಿಸಿದ್ದಾರೆ ಪಂಡಿತ ನೆಹ್ರೂರವರು “ಸಂ. ರಾ. ಸಂಘದ ಪ್ರತಿನಿಧಿ ಬರುವದಕ್ಕೆ ನಮ್ಮ ಅಭ್ಯಂತರವೇನೂ ಇರುವುದಿಲ್ಲ—ಆದರೆ ಸಂ. ರಾ. ಸಂಘದ ಆದೇಶವನ್ನು ಮಾನ್ಯ ಮಾಡಿ ಆತನೊಡನೆ ಸಹಕರಿಸುವದು ಶಕ್ಯವಿಲ್ಲವೆಂದು ಸ್ಪಷ್ಟವಾಗಿ ಹೇಳಿರುತ್ತಾರೆ. ಕಾಶ್ಮೀರ ಹಾಗೂ ಭಾರತವು ಮಧ್ಯಸ್ಥಗಾರನನ್ನು ನಿರಾಕರಿಸಿದ ಮೇಲೆ ಈ ತಂಟೆಯು ಏಕ ಪಕ್ಷೀಯವಾಗಿ ತೀರ್ಮಾನವಾಗುವದು ಸಾಧ್ಯವಿಲ್ಲ ಕಾಶ್ಮೀರದಲ್ಲಿ ಘಟನಾ ಸಮಿತಿಯನ್ನು ನಿರ್ಮಿಸುವದನ್ನು ಪಾಕಿಸ್ತಾನ ಹಾಗೂ ಸಂ. ರಾ. ಸಂಘ ನಿಷೇಧಿಸಿದೆ. ಆದರೆ ಸಪ್ಟಂಬರದೊಳಗಾಗಿ ಅದು ಆಗಿಯೇ ತೀರುವದೆಂದು ಶೇಖ ಅಬ್ದುಲ್ಲಾ ಹೇಳುತ್ತಾರೆ ಸಂ ರಾ. ಪ್ರತಿನಿಧಿ ಗ್ರಾಹಮರು ಇಷ್ಟರಲ್ಲೇ ಕಾಶ್ಮೀರಕ್ಕೆ ಬರಬೇಕಾಗಿತ್ತು. ಬರುವರೆಂದು ಪ್ರಚಾರವಾಯಿತು ಆದರೆ ಭಾರತ ಕಾಶ್ಮೀರಗಳ ಅಸಹಕಾರ ಧೋರಣೆಯ ಫಲವಾಗಿ ಅವರು ಬರುವದು ಅಸಂಭವವೆಂದೂ ಹಲವು ರಾಜಕೀಯ ವರ್ಗಗಳು ಊಹಿಸುತ್ತಿವೆ. ಪಾಕಿಸ್ತಾನವೂ ಸಂ. ರಾ. ಸಂಘವನ್ನು ತೀಕ್ಷ್ಣ ಕಾರ್ಯ ಕೈಗೊಳ್ಳಬೇಕೆಂದು ಒತ್ತಾಯಿಸುತ್ತಿದೆಯಂತೆ. ಕಾಶ್ಮೀರ ತಂಟೆಯು ಬಗೆಹರಿಯದ ಸಮಸ್ಯೆಯಾಗಿ ಉಳಿದಿದೆ ರಕ್ತಪಾತವಿಲ್ಲದೆ ಇದು ಸಾಧ್ಯವೇ? ಎಂಬದು ಎಲ್ಲರಲ್ಲೂ ಭೀತಿಯನ್ನು ಹುಟ್ಟಿಸಿದೆ. ಕಾಶ್ಮೀರ, ಪಾಕಿಸ್ತಾನ, ಭಾರತ ಈ ಮೂರು ರಾಷ್ಟ್ರದ ಮುಖ್ಯ ಮಂತ್ರಿಗಳೂ “ನಮಗೆ ಯುದ್ಧ ಬೇಕಾಗಿಲ್ಲ. ಸಂಧಾನದಿಂದ ಬಗೆಹರಿಯುವದನ್ನೇ ನಾವು ಇಚ್ಛಿಸುತ್ತೇವೆ. ಆದರೆ ಬೇರೆಯವರು ನಮ್ಮ ಮೇಲೆ ಧಾಳಿ ಮಾಡುವದನ್ನು ಸಹಿಸಲಾರೆವು” ಎನ್ನುತ್ತಾರೆ. ಅರ್ಥಾತ್ ಯುದ್ಧವಾಗುವುದು ತಪ್ಪಿದ್ದಿಲ್ಲ; ಪರಿಸ್ಥಿತಿಯಿಂದ ಎಂಬದೆ ಅವರಿಗೂ ತಿಳಿದಿರಬೇಕು

ಪರ್ಶಿಯದ ಪ್ರಕರಣ

ಪರ್ಶಿಯ ಆಂಗ್ಲೋ ಇರಾನಿಯನ್ ಎಣ್ಣೆ ಕಂಪನಿಯ ಪ್ರಕರಣ ಇನ್ನೊಂದು ಸ್ವಾರಸ್ಯವಾದ ಘಟನೆಯೆಂದೇ ಹೇಳಬೇಕು. ಈ ಎಣ್ಣೆಯ ತಂಟೆಯಲ್ಲಿ ಜಾಗತಿಕ ಶಾಂತಿ ಧಕ್ಕೆ ಬರುವ ಸಂಭವವುಂಟು. ಈಚೆಗೆ ನಡೆದ ಘಟನೆಗಳನ್ನು ಅವಲೋಕಿಸುವಾಗ ಕಮ್ಯೂನಿಸ್ಟರ ಕೈವಾಡ ಇದರಲ್ಲಿ ಡಂತೆ ಎದ್ದು ಖಚಿತವಾಗುತ್ತದೆಯೆಂದು ಬ್ರಿಟನದ ಅಧಿಕಾರಿಗಳು ವಾದಿಸುತ್ತಾರೆ. ಸ್ಥಳೀಯರ ತಂಟೆ ಎಂದು ಬಗೆಹರಿಸುವದಾದರೂ ತನ್ನ ಸ್ವಾಮಿತ್ವದ ಹಕ್ಕನ್ನು ಸಂಪೂರ್ಣ

([illegible]ನೇ ಪುಟ ನೋಡಿರಿ)



ನೋಟೀಸು

ಉಡುಪಿ ಡಿಸ್ಟ್ರಿಕ್ಟ್ ಮುನ್ಸೀಫ್ ಕೋರ್ಟಿನಲ್ಲಿ
O. S. No 243 1951.
R. I. A. No 527/1951

ರಕ್ಷಂಮ ಸೆಟ್ಟಿ ಕೂಡಾ 10 ಜನರು— ವಾದಿಗಳು (ಅರ್ಜಿದಾರರು)

ಮತ್ತು

ಬೊಮ್ಮಯ್ಯ ಸೆಟ್ಟಿ— ಪ್ರತಿವಾದಿ ಎದ್ರಿ ಇವರೊಳಗೆ—

ಮೇಲ್ಕಂಡ ಅರ್ಜಿಯಲ್ಲಿ ಪ್ರತಿವಾದಿಯು ಮೇಲೆ ಸ್ವತಹಾ ವಾದಿ ಪ್ರತಿವಾದಿರ ಕುಟುಂಬದ ಪರವಾಗಿಯೂ ಮತ್ತು ದಾವಾ ಕುಟುಂಬದ ಎಲ್ಲಾ ಮೆಂಬರರ ಪರವಾಗಿ ಸಹಾ ಮೇಲ್ಕಂಡ ವ್ಯಾಜ್ಯವನ್ನು ದಾಖಲು ಮಾಡಿ ಆ ಬಗ್ಗೆ ಪರ್ಮಿಶನ್ ಕೊಡಿಸುವಂತೆ ಕೇಳಿ ಅರ್ಜಿದಾರರು (ವಾದಿಗಳು) ದಾಖಲು ಮಾಡಿರುವ ಮೇಲ್ಕಂಡ ಅರ್ಜಿ ಮತ್ತು ಸದ್ರಿ ವ್ಯಾಜ್ಯವು ತಾ. 31-7-51ಕ್ಕೆ ಯಿಟ್ಟಿದೆ. ಈ ಕುರಿತು ಆಕ್ಷೇಪ ಹೇಳ ಉಳ್ಳವರು ಸದ್ರಿ ತಾ. 31 7-51 ನೇ ದಿವಸ ಹಗಲು 10 ಘಂಟೆಗೆ ಈ ಕೋರ್ಟ ಮುಂದೆ ಹಾಜರಾಗಿ ಜ್ಯಾಹೀರು ಮಾಡಿಕೊಳ್ಳತಕ್ಕದ್ದು.

ಉಡುಪಿ ತಾ. 9-6-51 — P. V. Acharya, Vakil for Petitioners (Plffs.)

ಬೇಂಕಿಂಗ್ ಸಂಬಂಧದ ಎಲ್ಲಾ ಸಮಸ್ಯೆಗಳಿಗೆ
ದಿ ವಿಜಯಾ ಬೇಂಕ್ ಲಿಮಿಟೆಡ್
ಇವರ ಸಲಹೆ ಕೇಳಿರಿ
ಹೆಡ್ ಆಫೀಸು : : : : ಮಂಗಳೂರು
ಮಡಿಕೇರಿಯಲ್ಲಿ ಒಂದು ಶಾಖೆಯೂ ಬೊಂಬಾಯಿಯಲ್ಲಿ ಒಂದು ಶಾಖೆಯೂ ಜಿಲ್ಲೆಯೊಳಗೆ ಹಲವು ಶಾಖೆಗಳೂ ಇವೆ.
ಸಿರಹು ಠೇವಣಾತಿಗಳ ಮೇಲೆ ಆಕರ್ಷಕವಾದ ದರದ ಬಡ್ಡಿಯು ಕೊಡಲ್ಪಡುವುದು
ಶಕ್ಯವಾದ ಜವಾಬ್ದಾರಿಗಳ ಮೇಲೆ ಸುಲಭವಾದ ಶರ್ತಗಳಲ್ಲಿ ಸಾಲಗಳು ಕೊಡಲ್ಪಡುವುವು.
ಸಾಲಿಯನ್ ಸೇಕಡಾ 4½ರ ಬಡ್ಡಿ ಗಳಿಸುವ ಮೂರು ವರ್ಷದ ಅವಧಿಯ ವಿಜಯಾ ಕ್ಯಾಶ್ ಸರ್ಟಿಫಿಕೇಟುಗಳ ಮೇಲೆ
ಹಣವನ್ನು ಹಾಕಿರಿ
THE VIJAYA BANK, LTD,
ಬಿ ಮಂಜಯ್ಯ ಹೆಗ್ಗಡೆ,
(ದ. ಕ. ಜಿಲ್ಲಾ ಬೋರ್ಡ ಪ್ರೆಸಿಡೆಂಟ್) ಡೈರೆಕ್ಟರ್ ಬೋರ್ಡಿನ ಅಧ್ಯಕ್ಷರು

ಇದೀಗ ಪ್ರಕಟವಾಗಿದೆ
ವೀರಪ್ಪ ಯುಗಟಿ, ಹಾವೇರಿ
ಇವರ
ನೀತಿ ವಿನೋದ
ಕತೆಗಳು
ನೀತಿ ಮತ್ತು ವಿನೋದಪರವಾದ
35 ಕತೆಗಳ ಸಂಗ್ರಹ
ಮುಖ್ಯವಾಗಿ ಸ್ತ್ರೀಯರಿಗೂ, ಮಕ್ಕಳಿಗೂ ಬೋಧಪ್ರದವಾದ ಕತೆಗಳಿಂದ ಕೂಡಿದೆ
ಬೆಲೆ. 0 12 0
ವಿವರದ ಪಟ್ಟಿಗಾಗಿ ಬರೆಯಿರಿ.
ಅಂತರಂಗ ಕಾರ್ಯಾಲಯ
[illegible]

ನವಯುಗ

ಚಂದಾ ವಿವರ
ವರ್ಷಕ್ಕೆ ರೂ. 5-12-0
6 ತಿಂಗಳಿಗೆ ರೂ. 3-0-0

ಗುರುವಾರ, ಉಡುಪಿ, ೧೪-೬-೫೧

ಆಚಾರ್ಯ ವಿನೋಬಾ

ತತ್ವನಿಷ್ಠೆ, ಪ್ರಾಮಾಣಿಕತನದಿಂದ ಎಂತಹ ಕಾರ್ಯವನ್ನೂ ಸಾಧಿಸಬಹುದೆನ್ನುವದಕ್ಕೆ ಆಚಾರ್ಯ ವಿನೋಬಾ ಭಾವೆಯವರೇ ಸಾಕ್ಷಿ. ಮಹಾತ್ಮಾಗಾಂಧೀಜಿಯ ತತ್ವಗಳನ್ನು ಜನ ಎಷ್ಟು ಆದರಿಸುತ್ತಾರೆ–ಕಾರ್ಯಾಚರಣೆಯಲ್ಲಿ ತರಲು ಇಚ್ಛಿಸಿರುತ್ತಾರೆನ್ನುವದಕ್ಕೆ ಭಾವೆಯವರ ಪಾದಸಂಚಾರದಲ್ಲಿ ಅವರು ಸಾಧಿಸಿದ ಪ್ರಗತಿ ಉತ್ತಮ ಉದಾಹರಣೆಯಾಗಿದೆ. ಇಂದು ಗಾಂಧೀಜಿಯ ಆದೇಶದಂತೆ ಕಾಂಗ್ರೆಸ್ಸಿಗರು ಹಳ್ಳಿಗೆ ನಡೆದು ಅಲ್ಲಿಯ ಜನರೊಡನೆ ಬೆರತ ಅವರ ಸಂಕಷ್ಟವನ್ನು ಕೇಳಿಕೊಳ್ಳುವದಕ್ಕೆ ಆಸಕ್ತಿ ಉಳ್ಳವರಾಗಿಲ್ಲ. ಅಧಿಕಾರ–ಅಗ್ರಸ್ಥಾನಗಳಿಗಾಗಿ ಹೋರಾಟನಡೆಸುತ್ತಾ ಪೇಟೆ ಪಟ್ಟಣಗಳಲ್ಲಿ ಭಾಷಣಕೊಡುವದರಲ್ಲಿ ಕಾಲಹರಣ ಮಾಡುತ್ತಲಿದ್ದಾರೆ. ತೆಲಂಗಾಣದಲ್ಲಿಯ ಕಮ್ಯೂನಿಸ್ಟರ ಹಾವಳಿಯನ್ನು ತಡೆಹಿಡಿಯಲು ಸರಕಾರ ಈ ವರೆಗೆ ಕೈಗೊಂಡ ಉಗ್ರಕಾರ್ಯಕ್ರಮದಿಂದ ವಿಶೇಷ ಪ್ರಗತಿಯೇನೂ ಕಂಡುಬಂದಿರುವುದಿಲ್ಲ. ಕೊಳ್ಳೆ, ಸುಲಿಗೆ, ದರೋಡೆ, ಜೀವಾಪಹರಣ ನಡೆಯುತ್ತಲೇ ಇದೆ. ನಾವು ಆಗಿಂದಾಗ್ಗೆ ಈ ಪೈಶಾಚಿಕ ವೃತ್ತಿಯ ಅತ್ಯಂತ ದುಃಖದಾಯೀ ವಿಚಾರವನ್ನು ಕೇಳುತ್ತಲಿದ್ದೇವೆ.

ಆಚಾರ್ಯ ವಿನೋಬಾ ಭಾವೆಯವರು ತೆಲಂಗಾಣದ ಸಂತ್ರಸ್ತ ಪ್ರದೇಶದಲ್ಲಿ ಪಾದಚಾರಿಗಳಾಗಿ ಸಂಚರಿಸಿ ಜನರ ಹಿತಚಿಂತನೆ ಕೇಳಿಕೊಂಡರು. ಅವರೊಳಗಿನ ಮತಭೇದವನ್ನು ಹೋಗಲಾಡಿಸಿ ಪರಿಸ್ಥಿತಿ ಶಾಂತವಾಗುವಂತೆ ಯತ್ನಮಾಡಿದರು. ಕಮ್ಯೂನಿಸ್ಟರ ಒಲವನ್ನು ಗಳಿಸುವದು ದುಬ್ಬಟತನವೇ ಸರಿಯೆಂದು ಆಚಾರ್ಯ ವಿನೋಬಾರವರು ಖಚಿತ. ಅಣಕಮಾಡಿದವರುಂಟು! ಆದರೆ ಅವರು ಇಂದು ಸಾಧಿಸಿದ ಪ್ರಗತಿಯನ್ನು ನೋಡಿ ಅಂತಹವರಿಗೆ ಆಶ್ಚರ್ಯವಾಗಬಹುದು. ತೆಲಂಗಾಣ ಪಾದಸಂಚಾರದಲ್ಲಿ ವಿನೋಬಾರವರು ಸುಮಾರು ಇನ್ನೂರು ಹಳ್ಳಿಗಳನ್ನು ಸಂಚರಿಸಿ ಜನತೆಯ ಯೋಗಕ್ಷೇಮವನ್ನು ಕಂಡುಕೊಂಡರು. 500ಕ್ಕಿಂತಲೂ ಮಿಗಿಲಾದ ಜಗಳ ತಕರಾರು ವಿಚಾರಗಳನ್ನು ಬಗೆಹರಿಸಿದರು. ಜನತೆ ಅವರು ನೀಡಿದ ನ್ಯಾಯ ದಾನವನ್ನು ಒಪ್ಪಿ, ತಮ್ಮಲ್ಲಿಯ ತಪ್ಪು ಗ್ರಹಿಕೆಯನ್ನು ದೂರಮಾಡಿಕೊಂಡರು. ಎಷ್ಟೋ ಜನರು ತಾವಾಗಿಯೇ ಮುಂದೆ ಬಂದು ವಿನೋಬಾರವರ ಕಾರ್ಯದಲ್ಲಿ ತಾವು ಅಂತಃಕರಣಪೂರ್ವಕ ಸಹಕರಿಸುವುದಾಗಿ ವಚನವಿತ್ತರು. ಭೂಮಿಗಳನ್ನು ಸಂತ್ರಸ್ತರಿಗೆ ಹಂಚುವದಕ್ಕೆ ವಿನೋಬಾ ಭಾವೆಯವರಿಗೆ ಒಪ್ಪಿಸಿದರು.

ಜನತೆಯಲ್ಲಿ ಉತ್ತಮವಾದ ವಿಚಾರವನ್ನು ತುಂಬುವದರಿಂದ ಅವರು ತಮ್ಮ ತಮ್ಮ ತಪ್ಪುಗಳನ್ನು ತಿದ್ದಿಕೊಳ್ಳಬಲ್ಲರು. ಈ ಅನುಭವ ನೌಕಾಲಿಯಲ್ಲಿ ಮಹಾತ್ಮಾ ಗಾಂಧೀಜಿಯವರ ಪಾದಸಂಚಾರದಿಂದ ದೃಢವಾಗಿದೆ. ಜನರಿಗೆ ತಿಳಿ ಹೇಳುವವರಿದ್ದರೆ ನಮ್ಮಲ್ಲಿಯ ಎಷ್ಟೋ ಪ್ರಮಾದಗಳು ದೂರಾಗಬಹುದು. ಆಚಾರ್ಯ ವಿನೋಬಾರವರು "ನನ್ನ ಹಾಗೆಯೇ 20 ಜನರು ಉತ್ಸಾಹೀ ಕೆಲಸಗಾರರು ಪಾದಸಂಚಾರ ಕೈಗೊಂಡರೆ ನನ್ನ ಕಾರ್ಯವು ಸಂಪೂರ್ಣವಾಗಿ ಫಲಿಸೀತೆಂದು ನನಗೆ ಭರವಸೆಯಿದೆ" ಎಂದಿರುವರು. ಗಾಂಧೀಜಿ ನಮ್ಮನ್ನಗಲಿ ಹೋದ ನಂತರ ಹಳ್ಳಿಯ ಸುಧಾರಣೆ–ಚಿಂತನೆ–ಎಲ್ಲ ಆದರ್ಶದಲ್ಲಿಯೇ ಉಳಿಯಿತು. ಇಂದು ಅಧಿಕಾರ ಪ್ರಾಪ್ತಿಯ ದುರಾಶೆಯಿಂದ ಓಟುಗಳನ್ನೊಟ್ಟು ಟೀಕಿಸುವದರಲ್ಲೇ ಕಾಲಹರಣ ಮಾಡುತ್ತಿದ್ದಾರೆಯೇ ಹೊರತು ತಮ್ಮ ಕಾರ್ಯದಲ್ಲಿರುವ ಕುಂದುಕೊರತೆಯನ್ನು ಅವರು ನೋಡುತ್ತಿಲ್ಲ. "ಕಾಂಗ್ರೆಸಿನಲ್ಲಿದ್ದು ಕಾಂಗ್ರೆಸ್ಸಿನ ಶುದ್ಧೀಕರಣ ಸಾಧ್ಯವೋ ಎಂದು ನೋಡಿದೆವು. ಆದರೆ ಈಗದು ಅಸಾಧ್ಯವೆಂದು ಖಚಿತವಾದ ಮೇಲೆ ಕಾಂಗ್ರೆಸ್ಸಿನಿಂದ ಹೊರಬಂದು ಜನತಾ ಸೇವೆಯ ನಿರತರಾಗುವ ಮನಸ್ಸು ಮಾಡಿದ್ದೇವೆ." ಎಂದು ಕಾಂಗ್ರೆಸ್ಸಿನಿಂದ ಹೊರಬಂದವರು ನುಡಿಯುತ್ತಲಿದ್ದಾರೆ. ಆದರೆ ಕಾಂಗ್ರೆಸ್ಸಿನಲ್ಲಿದ್ದುಕೊಂಡೇ ಮಾಡಬಹುದಾದ ಜನತಾ ಸೇವೆಯ ಕಾರ್ಯಗಳೂ ಇವೆಯೆಂಬುದನ್ನು ಈ ಧುರೀಣರು ಮರೆತಿದ್ದಾರೆ. ರಾಜಕೀಯ ಟೀಕೆ–ಟಿಪ್ಪಣಿ ತದ ಏಮರ್ಶೆ–ಸ್ಥಾನಮಾನದ ಹೋರಾಟಗಳೇ ಕಾಂಗ್ರೆಸ್ಸಿಗರ ಮಹತ್ವದ ಉದ್ದೇಶಗಳಲ್ಲ; ದೇಶೋದ್ಧಾರಕ್ಕೆ ಅದೊಂದೇ ಮಾರ್ಗವಲ್ಲ. ಜನತೆಯ ಒಲವನ್ನು ಪ್ರಾಮಾಣಿಕ ಕಾರ್ಯಗಳ ಮೂಲಕ ಗಳಿಸಲಾರದವರು ಮಾತಿನ ಮಲ್ಲತನದಿಂದ ಗೆಲ್ಲಲು ಯತ್ನಿಸುತ್ತಿದ್ದಾರೆ. ಆಚಾರ್ಯ ವಿನೋಬಾ ಭಾವೆಯವರು ಸಂಚಾರ ಭಾಷಣದಲ್ಲಿ 'ಕಾಂಗ್ರೆಸ್ಸಿಗರಿಂದ ಸ್ಥಾನಮಾನಗಳಿಗಾಗಿ–ಅಧಿಕಾರಕ್ಕಾಗಿ ದಿಲ್ಲಿಯವರೆಗೂ ಹೋರಾಡುತ್ತಾರೆ. ಹಳ್ಳಿಗಳು ಯಾರಿಗೆ ಬೇಕಾಗಿವೆ' ಎಂದಿದ್ದಾರೆ. ಈ ಮಾತು ಅಕ್ಷರಶಃ ನಿಜ. ಮಹಾತ್ಮಾಗಾಂಧೀಯವರ ಉತ್ತಮಾದರ್ಶಗಳನ್ನು ಹಿಡಿದುಕೊಂಡು ದೇಶಸೇವಾ ದೃಷ್ಟಿಯಲ್ಲಿ ದುಡಿಯುವ ಕಾರ್ಯಕರ್ತರು ನಮಗೆ ಬೇಕಾಗಿದ್ದಾರೆ. ಆಚಾರ್ಯ ವಿನೋಬಾ ಭಾವೆಯವರು ಗಾಂಧೀಜಿಯ ಆದೇಶದಂತೆ ಸ್ವಂತ ಸ್ಫೂರ್ತಿಯಲ್ಲಿ ಪಾದಸಂಚಾರಿಗಳಾಗಿ ತೆಲಂಗಾಣದ ಕಾರ್ಯಕ್ರಮವನ್ನು ಮುಗಿಸಿದರು. ಅಲ್ಲದೆ ಪ್ರಗತಿಯನ್ನೂ ಸಾಧಿಸಿದರು. ಇದೇ ರೀತಿಯ ವಿಧಾಯಕ ಕಾರ್ಯಕ್ರಮಗಳು ಕಾಂಗ್ರೆಸ್ ಕಾರ್ಯಕರ್ತರಿಂದ ಅವಶ್ಯವಾಗಿ ಜರಗಬೇಕು. ಕಾಂಗ್ರೆಸ್ಸು ತಿರುಗಿ ಒಮ್ಮೆ ಜನತೆಯ ವಿಶ್ವಾಸ ಪ್ರೀತಿಯನ್ನು ಗಳಿಸುವಂತಾಗಬೇಕು. ಅದು ಮಾತಿನಿಂದಲ್ಲ; ಕೃತಿಯ ಮೂಲಕ ಕಾಂಗ್ರೆಸ್ಸಿಗರು ತೋರಿಸಬೇಕು. ಆಚಾರ್ಯ ವಿನೋಬಾ ಭಾವೆಯವರ ಆದರ್ಶ ಎಲ್ಲ ಕಾಂಗ್ರೆಸ್ಸಿಗರಿಗೆ ಸ್ಫೂರ್ತಿದಾಯಕವಾಗಲಿ ಮಾರ್ಗದರ್ಶಕವಾಗಲಿ!

ಲೋಕಾಂತ

ಅಮೆರಿಕಾ ವಿಸ್ಮಯಕಾರಕ ವಿಮಾನಾಘಾತ

ಪ್ರಯೋಗಾರ್ಥವಾಗಿ ವಿಮಾನ ಹಾರಾಟಕ್ಕೆಗೊಂಡಿದ್ದ 34 ವಿಮಾನಗಳಲ್ಲಿ ಎಂಟು ವಿಮಾನಗಳು ಮುರಿದುಬಿದ್ದವು. ಈ ಬಗೆಯ ವಿಚಿತ್ರ ಘಟನೆ ಹಿಂದೆಂದೂ ನಡೆದಿರುವುದಿಲ್ಲ. ಎಂಟು ವಿಮಾನಗಳು ರಿಚಮಂಡದ ಹತ್ತಿರ ಏಕಕಾಲದಲ್ಲಿ ಮುರಿದ ಬಿದ್ದುವು. ಹಲವು ವಿಮಾನಗಳು ಅರ್ಧದಲ್ಲಿ ಬೆಂಕಿಗಾಹುತಿಯಾದವು. ಈ ರೀತಿಯ ಘಟನೆಗೆ ವಿಧ್ವಂಸಕ ಕಾರ್ಯವೇ ಕಾರಣವಾಗಿರಬಹುದೆಂದು ಊಹಿಸಲಾಗಿದೆ. ಈ ಅಪಘಾತದಿಂದ ಒಟ್ಟಿಗೆ ಏಳು ಜನ ಮಡಿದಿರುವರು. ಹಲವು ವೈಮಾನಿಕರು ವಿಮಾನ ಕೊಡೆಯ ಮೂಲಕ ಪ್ರಾಣ ಉಳಿಸಿಕೊಂಡರು. ಒಂದೆರಡು ವಿಮಾನಗಳ ಇಂಜಿನು ಸ್ಫೋಟವಾದಕೂಡಲೇ ಅವುಗಳನ್ನು ಕೆಳಗಿಳಿಸಲಾಗಿದೆ. ಆ ವಿಮಾನಗಳನ್ನು ಪರೀಕ್ಷಿಸುವ ಉದ್ದೇಶದಿಂದ ಪೋಲೀಸರ ಸರ್ಪಕಾವಲಿನಿಂದ ಕಾದಿರಿಸಲಾಗಿದೆ.

ಮೆಕ್ಸಿಕೋ ನಿರ್ಣಯ

ಮೆಕ್ಸಿಕೋ ಪರಿಷತ್ತಿನಲ್ಲಿ ಸೇರಿರುವ ಒಕ್ಕಲತನ ಉತ್ಪಾದಕರ ಮಂಡಳದ ಅಂತರರಾಷ್ಟ್ರೀಯ ಪರಿಷತ್ತಿನ ಪ್ರತಿನಿಧಿಗಳು ಭಾರತದ ಬರಗಾಲ ನಿವಾರಣೆಗೆ ದಾನರೂಪವಾಗಿ ಇಲ್ಲವೆ ಸಾಲರೂಪದಲ್ಲಿ ಧಾನ್ಯವನ್ನು ಕೊಡಬೇಕೆಂದು ಒತ್ತಾಯಿಸಲಿವೆಯಂತೆ. ಬ್ರಿಟನ್, ಅಮೇರಿಕಾ ಮೊದಲಾದ ಹನ್ನೆರಡು ರಾಷ್ಟ್ರಗಳ ಪ್ರತಿನಿಧಿಗಳ ಇದರಲ್ಲಿ ಭಾಗವಹಿಸಲಿದ್ದಾರೆ.

ಭಾಷಾವಾರು ಪ್ರಾಂತರಚನೆ

ಭಾಷಾವಾರು ಪ್ರಾಂತರಚನೆ ಶೀಘ್ರದಲ್ಲಿ ರಚಿಸುವಂತೆ ನೆಹ್ರೂರವರನ್ನ ಒಲಿಸಲು ಪಾರ್ಲಿಮೆಂಟು ಶಿಷ್ಟಮಂಡಳಿಯೊಂದು ಅವರನ್ನು ಭೆಟ್ಟಿಯಾಗಿ ನಿವೇದಿಸಿಕೊಂಡಿತು. ಈ ಶಿಷ್ಟಮಂಡಳದಲ್ಲಿ ಕರ್ನಾಟಕದ ಬಗ್ಗೆ ಶ್ರೀ| ನಿಜಲಿಂಗಪ್ಪನವರೂ ಶ್ರೀ| ಬಿ. ಎನ್. ಮುನವಳ್ಳಿ ಮತ್ತು ಶ್ರೀ| ಯು. ಶ್ರೀನಿವಾಸ ಮಲ್ಯ ಮಹಾರಾಷ್ಟ್ರದ ಪರವಾಗಿ ಶ್ರೀ ಬಿ ಎಸ್. ಹಿರೆ, ಶ್ರೀಶಂಕರರಾವ್ ದೇವ್ ಮತ್ತು ದೇವಗಿರಿಕರ್, ಆಂಧ್ರದ ಕಡೆಯಿಂದ ಶ್ರೀ| ಕಲಾ ವೆಂಕಟರಾಯ ಮೊದಲಾದ ಸದಸ್ಯರು ಇದ್ದರು. ಮುಂಬರುವ ಜುಲಿ ನೆಂಟಿನ ಅಧಿವೇಶನದೊಳಗಾಗಿ ಒಂದು ಸ್ಪಷ್ಟ ತೀರ್ಮಾನಕ್ಕೆ ಬರುವ ಅವಶ್ಯಕತೆಯನ್ನು ಶಿಷ್ಟಮಂಡಳಿಯು ನೆಹ್ರೂರವರಿಗೆ ತಿಳಿಸಿತು. ಹಲವು ನಿರ್ದಿಷ್ಟ ಸೂಚನೆಗಳನ್ನು ಪರಿಪೂರ್ಣಗೊಳಿಸಿಕೊಂಡು ಬರಬೇಕೆಂದು ನೆಹ್ರೂರವರು ಮಂಡಳಿಗೆ ಸೂಚಿಸಿದರು. ಶಿಷ್ಟಮಂಡಳಿಯ ಸದಸ್ಯರು ಅಂತಹ ಸಮಸ್ಯೆಯನ್ನು ಈಗಾಗಲೇ ತಮ್ಮ ತಮ್ಮೊಳಗೆ ವಿಮರ್ಶೆಮಾಡುತ್ತಿರುವದಾಗಿ ತಿಳಿದುಬರುತ್ತದೆ.

ಸುಶಿಕ್ಷಿತರೂ ಭೂಮಿಸೇನೆಯೂ

ಸುಶಿಕ್ಷಿತರಾದ ತರುಣರು ಒಕ್ಕಲಿಗರೊಡನೆ ಸೇರಿ ದುಡಿದರೆ ದೇಶವು ಆಹಾರ ಬಿಕ್ಕಟ್ಟಿನಿಂದ ಪಾರಾಗಿ ಸ್ವಾವಲಂಬಿಯಾಗ ಬಹುದು, ಎಂದು ರಾಷ್ಟ್ರಾಧ್ಯಕ್ಷ ರಾಜೇಂದ್ರ ಪ್ರಸಾದರು ಭೂಮಿಸೇನೆಯ ಘಟಕವನ್ನು ಉದ್ಘಾಟನೆ ಮಾಡುತ್ತ ಹೇಳಿದರು. ಭೂಮಿಸೇನೆಯ ಸದಸ್ಯರು ಮಿಕ ನರಿಗಳ ಉತ್ಸಾಹದಿಂದ ಕೆಲಸ ಮಾಡಿ ಒಕ್ಕಲತನ ಸುಧಾರಿಸಬೇಕು ಎಂದೂ ಹೇಳಿದರು. ದಿಲ್ಲಿ ವಿಶ್ವ ವಿದ್ಯಾಲಯದ ಮುವತ್ತು ವಿದ್ಯಾರ್ಥಿಗಳುಮತ್ತು ಇತರ ಶಾಲಾ ಶಿಕ್ಷಕರು ಈ ಭೂಮಿ.ಸೇನೆಯಲ್ಲಿ ಸೇರಿರುವರು.

ವಿದೇಶಗಳಲ್ಲಿ ಭಾರತ ರಾಯಭಾರಿಗಳು

ಜಗತ್ತಿನ 30 ರಾಷ್ಟ್ರಗಳಲ್ಲಿ ಭಾರತ ಸರ್ಕಾರದ ರಾಯಭಾರಿಗಳಿದ್ದಾರೆ. ಭಾರತದಲ್ಲಿ ೨೬ ದೇಶದ ರಾಯಭಾರಿಗಳಿರುವರು.

ಪ್ಯಾರಿಸಕ್ಕೆ ಭಾರತ ಶಿಷ್ಟಮಂಡಲ

ಯುನೈಟೆಡ್ ರಾಷ್ಟ್ರ ಸಂಘದ ಶೈಕ್ಷಣಿಕ, ವೈಜ್ಞಾನಿಕ ಸಾಂಸ್ಕೃತಿಕ ಸಂಸ್ಥೆಯ ಅಧಿವೇಶನವು ಜೂನ್ 18ರಂದು ಪ್ಯಾರಿಸದಲ್ಲಿ ನಡೆಯಲಿದೆ. ಈ ಅಧಿವೇಶನಕ್ಕೆ ಭಾರತದ ಶಿಕ್ಷಣ ಮಂತ್ರಿ ಮೌಲಾನಾ ಆಜಾದರ ಧುರೀಣತ್ವದಲ್ಲಿ ಶಿಷ್ಟಮಂಡಳವೊಂದು ತೆರಳಲಿರುವುದು. ಆ ಮಂಡಳಿಯಲ್ಲಿ ಡಾ| ಎಸ್. ರಾಧಾಕೃಷ್ಣನ್, ಸರದಾರ್ ಎಚ್. ಎಸ್. ಮಲ್ಲಿಕ್, ಡಾ| ಎ. ಎಲ್. ಮೊದಲಿಯಾರ ಮೊದಲಾದವರು ಇರುವರು.

ಮದ್ರಾಸ್ ವೀವರ್‍ಸದವರ ಜಗಳ

ವೀವರ್‍ಸ್ ಕೆಲಸಗಾರರು ಹಾಗೂ ಮದ್ರಾಸು ಸರಕಾರದೊಡನೆ ನಡೆದ ವಿವಾದವನ್ನು ಪರಿಹರಿಸಲಿಕ್ಕೆ ಕೇಂದ್ರ ಸರ್ಕಾರದ ಪರಿಶೀಲಕ ಮೆಹತಾರವರು ಮದ್ರಾಸಕ್ಕೆ ಬರುವವರಿದ್ದಾರೆ. ವೀವರ್‍ಸದವರ ಸಂಕಷ್ಟ ಪರಿಹಾರಕ್ಕೆ ಸರಕಾರ ವಿಶೇಷ ಆಸಕ್ತಿ ವಹಿಸುವದೆಂದು ತಿಳಿದುಬರುತ್ತದೆ.

ಹಾರುವ ಕಿಡಿಗಳು

ಮಾತಿನಲ್ಲಿ ಅಪಾರ; ಸಾಧ್ಯತೆಯಲ್ಲಿ ಕಾರ್ ಭಾರ.

೦೦೦

ಭಾರತವಂದು ಕಾಮಧೇನುವಂತೆ; ಇಂದು ಆಹಾರಕ್ಕೆ ತತ್ವಾರವಂತೆ.

೦೦೦

ಇಲೆಕ್ಷನ್ ಆಗುವವರೆಗೆ ಗೌಜಿಗದ್ದಲ ಆಮೇಲೆ ಸದ್ದಿ–ಸದ್ದಿಲ್ಲ.

೦೦೦

ಉಮೇದ್ವಾರರಾಗುವುದು ಅವರವರ ಇಷ್ಟವಿರಬಹುದು; ಆರಿಸಿ ಕಳುಹಿಸುವುದು ಮತದಾರರ ಇಷ್ಟ.

೦೦೦

'ಬೇಕಾ'ದವರು ಆರಿಸಿ ಬರುತ್ತಾರೆ; 'ಬೇಡಾ'ದವರು ಸೋಲಿಸಲ್ಪಡುತ್ತಾರೆ.

೦೦೦

ಯಾರಾದೀತು, ಯಾರು ಬೇಡ ಎಂಬ ತಿಳಿವು ಮತದಾರರಲ್ಲಿ ಉಂಟಾಗುತ್ತಿದೆ.

೦೦೦

ಯಾವ ಸರಕಾರ ಬಂದರೂ ದುಡಿಯದೆ ಹೊಟ್ಟೆತುಂಬದು; ಯಾರು ಪ್ರತಿನಿಧಿಯಾದರೂ ವ್ಯಕ್ತಿಯ ಸ್ಥಿತಿ ಬದಲಾಯಿಸದು.

೦೦೦

ಒಬ್ಬರು ಹಾಲು ಸಂಗ್ರಹಿಸುತಿದ್ದಾರಂತೆ; ಮತ್ತೊಬ್ಬರು ಹೊಟ್ಟೆ ತುಂಬಿಸಿಕೊಳ್ಳುತ್ತಿದ್ದಾರಂತೆ

೦೦೦

ಹೊಟ್ಟೆ ಉಬ್ಬಿಸಿಕೊಳ್ಳುವುದೂ ಒಂದು ಉದ್ಯೋಗವಾಗಬಹುದೇನೋ!

ಉಡುಪಿ

ಟೆಲಿಪ್ರಿಂಟರ್ ತರಬೇತಿಗಾಗಿ ಇಂಗ್ಲೆಂಡಿಗೆ ಪ್ರಯಾಣ—ಶ್ರೀ ವೈ. ಗೋಪಾಲಕೃಷ್ಣ ಹೆಗ್ಡೆ, ಬಿ. ಎ (ಆನರ್ಸ್) ಡಿವಿಜನಲ್ ಅಸಿಸ್ಟಂಟ್ ಇಲೆಕ್ಟ್ರಿಕಲ್ ಇಂಜಿನಿಯರ್ (ಟೆಲಿಗ್ರಾಫಿಕ್ ಇಲಾಖೆ) ಜಬಲ್‌ಪುರ, ಇವರು ಎಂಟು ತಿಂಗಳ ಟೆಲಿಪ್ರಿಂಟರ್ ತರಬೇತಿ ಬಗ್ಗೆ ಇಂಡಿಯಾ ಸರಕಾರದಿಂದ ಆರಿಸಲ್ಪಟ್ಟ ಮೂರು ಜನರಲ್ಲಿ ಒಬ್ಬರಾಗಿದ್ದು ಸರಕಾರಿ ವೇತನದಿಂದ ಇದೇ ಜೂನ್ ತಿಂಗಳ ತಾ. 1ರಲ್ಲು ಇಂಗ್ಲೆಂಡಿಗೆ ಪ್ರಯಾಣ ಬೆಳೆಸಿರುವರು. ಇವರು ಉಡುಪಿ ತಾಲೂಕಿನ ಕಟಪಾಡಿ ಬೀಡು ಲಿಂಗಪ್ಪ ದೊಡ್ಡ ಬಲ್ಲಾಳರ ತೃತೀಯ ಪುತ್ರ ಶ್ರೀ ಯೋಗ ಗುಡ್ಡೆ ತಿಮ್ಮಪ್ಪ ಹೆಗ್ಡೆಯರ ಅಳಿಯ. ಇವರು ವಿದ್ಯಾರ್ಥಿ ದೆಸೆಯಲ್ಲಿದ್ದಾಗಲೇ ಪ್ರತಿಭಾಸಂಪನ್ನರಾಗಿದ್ದರು. ಇವರೊಡನೆ ಇವರ ಧರ್ಮಪತ್ನಿ ಶ್ರೀಮತಿ ರತ್ನ ಹೆಗ್ಡೆಯವರೂ ತೆರಳಿರುವರು. ಇವರು ಶ್ರೀ ಶಂಕರ ಆಳ್ವರ ಪ್ರಥಮ ಪುತ್ರಿ (ದಿ| ಬಿ| ಪಂಜಾಲ ಹೆಗ್ಡೆಯರ ಮೊಮ್ಮಗಳು). ಹೆಗ್ಡೆ ದಂಪತಿಗಳ ವಿದೇಶ ಪ್ರಯಾಣವು ಸುಖಪ್ರದವಾಗಲೆಂದು ಹಾರೈಸುತ್ತೇವೆ.

ಮುನಿಸಿಪಲ್ ಕೌನ್ಸಿಲು ಮೀಟಿಂಗು—ಇದೇ ತಾ. 9 ರಲ್ಲು ಚೇರ್‌ಮೆನ್ ಶ್ರೀ ಯು. ಎಸ್. ನಾಯ್ಕರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀಮತಿ ಲೀಲಾ ಬಾಯಿ ಕಾಮತರು ಮುನಿಸಿಪಲ್ ಹೆಂಗಳ ಹಾ. ಎ. ಶಾಲಾ ಮಕ್ಕಳಿಗಾಗಿ "Water filter" ನ್ನು ಕೊಟ್ಟ ಬಗ್ಗೆ ಅವರನ್ನು ಅಭಿನಂದಿಸಲಾಯಿತು. ಮುನಿಸಿಪಲ್ ಕ್ಷೇತ್ರದಲ್ಲಿ ಇಲೆಕ್ಟ್ರಿಕ್ ದೀಪಗಳನ್ನು ಉರಿಸುವುದಕ್ಕಾಗಿ ಒಂದು ವರುಷದ ತನಕ 1950ರ ಶರ್ತಗಳಿಗನುಸಾರವಾಗಿ ಹೊಸ ಕಂಪೆನಿಯ ಅಧಿಕಾರಿಗಳೊಂದಿಗೆ ಕರಾರು ಮಾಡುವುದೆಂದಾಯಿತು. ಮೂರು ತಿಂಗಳ ಅವಧಿಯಲ್ಲಿ ಕೌನ್ಸಿಲಿನಿಂದ ಸೆಂಕ್ಷನ್ ಆದ ಕೆಲಸಗಳ ಪಟ್ಟಿ, ಅವುಗಳಲ್ಲಿ ಪೂರ್ಣವಾದವುಗಳ ಸಂಖ್ಯೆ, ಬಾಕಿ ಉಳಿದರೆ ಆ ಬಗ್ಗೆ ಕಾರಣಗಳೇನೆಂಬುದನ್ನು ತಿಳಿಸುವ ವರದಿಯನ್ನು ಪ್ರತಿ ಮೂರು ತಿಂಗಳಿಗೊಮ್ಮೆ ಕೌನ್ಸಿಲಿನ ಮುಂದೆ ಕಮಿಶನರರು ಇಡಬೇಕೆನ್ನುವ ಶ್ರೀ ಟಿ. ಉಮೇಶ ಪೈಗಳ ನಿರ್ಣಯವು ಪಾಸಾಯಿತು. ಪಟ್ಟಿಗಳಿಗೆ ಸಂಬಂಧಿಸಿದ ವೌಚರುಗಳು ಸಭೆಯ ಮುಂದಿರಿಸದಿದ್ದ ಬಗ್ಗೆ ಅವನ್ನು ಮುಂದಿನ ಸಭೆಗೆ ಬದಿಗಿರಿಸಲಾಯಿತು.

ಕರ್ನಾಟಕ ಸಂಘದ ಕಾರ್ಯನಿರ್ವಾಹಕ ಸಮಿತಿಯ ಸಭೆಯು ಇದೇ ತಾ. 7ರಲ್ಲು ಡಾ। ಕೊರಡ್ಕಲ್ಲರ ಫಾರ್ಮಸಿಯಲ್ಲಿ ಜರಗಿತು. ಶ್ರೀ ಪಿ ನಾರಾಯಣ ಅಯ್ಯಂಗಾರ, ಇವರು ಅಧ್ಯಕ್ಷರಾಗಿಯೂ, ಡಾ। ಕೆ ಎಲ್. ಐತಾಳರು ಉಪಾಧ್ಯಕ್ಷರಾಗಿಯೂ, ಶ್ರೀ ಕು. ಶಿ. ಹರಿದಾಸ ಭಟ್ಟರು ಪ್ರಧಾನ ಕಾರ್ಯದರ್ಶಿಗಳಾಗಿಯೂ, ಶ್ರೀ ಗೋಳಿಯವ ಕೆ. ಶಂಕರನಾರಾಯಣ ಉಪಾಧ್ಯಾಯ ಮತ್ತು ಎಸ್. ಎಲ್. ನಾರಾಯಣ ಭಟ್ಟರು ಸಹಕಾರ್ಯದರ್ಶಿಗಳಾಗಿಯೂ ಆರಿಸಲ್ಪಟ್ಟರು. ಕಳೆದ ವರುಷ ಬಲು ಆಸಕ್ತಿ, ಶ್ರದ್ಧೆಯಿಂದ ಅಧ್ಯಕ್ಷ ಉಪಾಧ್ಯಕ್ಷರಾಗಿದ್ದು ದುಡಿದ ಡಾ। ಕೆ ಎಲ್. ಐತಾಳ ಮತ್ತು ಶ್ರೀ ಪುಂಡಲೀಕ ಹೆಗ್ಡೆಯವರಿಗೂ ಸಂಘದ ಕಡೆಯಿಂದ ಕೃತಜ್ಞತೆಯನ್ನು ಅರ್ಪಿಸಲಾಯಿತು.

ತಾಲೂಕು ಆಹಾರ ಉತ್ಪಾದನಾ ಸಮಿತಿಯ ಸಭೆಯು ಇದೇ ತಾ. 8ರಲ್ಲು ತಾಲೂಕು ಕಚೇರಿಯಲ್ಲಿ ರೆವಿನ್ಯೂ ಡಿವಿಜನಲ್ ಆಫೀಸರ್ ಶ್ರೀ ಐಬ್. ನರೋನ ಅವರ ಅಧ್ಯಕ್ಷತೆಯಲ್ಲಿ ಜರಗಿತು. ತಾಲೂಕು ಸಪ್ಲೈ ಆಫೀಸರ್, ತಾಲೂಕು ತಹಶೀಲ್ದಾರ್ ಮೊದಲಾದವರು ತಾಲೂಕಿನಲ್ಲಿ ಆಹಾರ ಧಾನ್ಯ ಹೆಚ್ಚುವಳಿಯ ಕುರಿತು ಗತತಿಂಗಳಲ್ಲಿ ಆದ ವಿವಿಧ ಕಾರ್ಯಗಳ ವರದಿಯನ್ನೋದಿದರು. ಅದೇ ದಿನ ವನಮಹೋತ್ಸವ ಸಮಿತಿಯ ಸಭೆಯೂ ಜರಗಿತು. ಕುಕ್ಕಾಲು ಗ್ರಾಮ ಸಂಘವು ವನಮಹೋತ್ಸವ ಅಧಿಕಾರಿಗಳಿಗೆ ಸಹಾಯ ಮಾಡುತ್ತಿರುವುದನ್ನು ತಿಳಿದು ಈ ಸಮಿತಿಯು ಸಂತೋಷವನ್ನು ವ್ಯಕ್ತಪಡಿಸಿತು.

ವಿವಾಹ ಸಮಾರಂಭಗಳು—ಮೊಳಹಳ್ಳಿ ಶ್ರೀ ಸೀನಪ್ಪ ಹೆಗ್ಡೆಯರ ಪುತ್ರ ಶ್ರೀ ಕೆ. ಶಿವರಾಮ ಹೆಗ್ಡೆಯವರು ವೈಲಾಡಿ ಶ್ರೀ ಶೀನಪ್ಪ ಶೆಟ್ಟರ ಪುತ್ರಿ ಶ್ರೀಮತಿ ಪ್ರೇಮಾವತಿಯನ್ನೂ ಕೋಟೇಶ್ವರ ಶ್ರೀ ಕೋಟಿಲಿಂಗೇಶ್ವರ ದೇವಸ್ಥಾನದಲ್ಲಿ ಕಳೆದ 31ರಲ್ಲೂ, ವಕೀಲ್ ಶ್ರೀ ಕೆ. ಜೆ ಬಲ್ಲಾಳರ ಪುತ್ರ ಶ್ರೀ ದಯಾನಂದ ಹೆಗ್ಡೆಯವರು ಸೂರಗುಡ್ಡೆ ಶ್ರೀ ರಾಮ ಹೆಗ್ಡೆಯರ ಪುತ್ರಿ ಶ್ರೀಮತಿ ಶಾರದೆಯನ್ನು ಶ್ರೀ ರಾಮಕೃಷ್ಣ ಥಿಯೇಟರಿನಲ್ಲಿ ದಿನಾಂಕ 8ರಲ್ಲೂ, ಮುನಿಸಿಪಲ್ ಡಾ। ಯು. ಕೃಷ್ಣ ಅವರ ಸಹೋದರ ಶ್ರೀ ಚಂದ್ರಶೇಖರ ರವರು ಮುದ್ರಾಡಿ ಶ್ರೀ ಕೃಷ್ಣಯ್ಯ ಶೆಟ್ಟರ ಪುತ್ರಿ ಶ್ರೀಮತಿ ಇಂದಿರಳನ್ನು ದಿನಾಂಕ 11ರಲ್ಲೂ ಶ್ರೀ ರಾಮಕೃಷ್ಣ ಥಿಯೇಟರಿನಲ್ಲಿಯೂ, ಕಾಪು ಕೊಪ್ಪಲಂಗಡಿ ಶ್ರೀ ದೇಜು ಶೆಟ್ಟರ ಪುತ್ರ ಶ್ರೀ ಗೋವಿಂದ ಶೆಟ್ಟರು ಕಾಪು ಉಳಿಯಾರಗೋಳಿ ಶ್ರೀ ಚೆನ್ನಣ್ಣ ಶೆಟ್ಟರ ಪುತ್ರಿ ಶ್ರೀಮತಿ ಸರೋಜಿನಿಯನ್ನು ದಿನಾಂಕ 13ರಲ್ಲು ಶ್ರೀ ರಾಮಕೃಷ್ಣ ಥಿಯೇಟರಿನಲ್ಲೂ ವಿವಾಹವಾದರು. ನೂತನ ದಂಪತಿಗಳಿಗೆ ಶುಭಾಶಯಗಳು.

—

(೩ನೇ ಪುಟದಿಂದ ಮುಂದರಿಸಿದ್ದು)

ಇದೆ. ಬ್ರಿಟನಿನ ಸರ್ವವಿಧದ ಕೇಳಿಕೆಗಳನ್ನು ಲೆಕ್ಕಿಸದೆ ಎಣ್ಣೆ ಕಂಪೆನಿಯ ರಾಷ್ಟ್ರೀಕರಣ ಕಾರ್ಯ ಸಾಗಿಸಿದ್ದರಿಂದ ಬ್ರಿಟನನ್ನು ಬೇಕೆಂತಲೇ ಅವಮಾನಿಸಿದ ಹಾಗೆ ಆಗಿದೆ. ಹೆಚ್ಚಿನ ಬಂಡವಲುಳ್ಳ ಬ್ರಿಟನವು ತಾನು ಯಾವ ರೀತಿಯ ಪ್ರತೀಕಾರವನ್ನು ಕೈಗೊಳ್ಳಬಹುದೆಂಬುದು ದೊಡ್ಡ ಸಮಸ್ಯೆ. ಬಲಪ್ರಯೋಗವಮಾಡುವ ಮನಸ್ಸುಮಾಡಿದರೆ ಪಕ್ಕದಲ್ಲೇ ರಶಿಯದ ಸೇನೆ ತನ್ನ ಗಡಿಯಲ್ಲಿ ಸುಸಜ್ಜಿತವಾಗಿದೆ. ಅದನ್ನರಿತುಕೊಂಡೇ ಅಧ್ಯಕ್ಷ ಟ್ರೂಮನ್ ಮಧ್ಯಸ್ಥಗಾರನಾಗಿ ಪರ್ಶಿಯಕ್ಕೆ ಬುದ್ಧಿ ಹೇಳಿದರು. ಆದರೆ ಪರ್ಶಿಯ ಅವರ ಮಾತಿಗೆ ಮನ್ನಣೆಕೊಡದೆ ತನ್ನ ಕಾರ್ಯವನ್ನು ಮುಂದೆ ಸಾಗಿಸಿತು. ಬ್ರಿಟನಿನ ಯಾವ ಸೂಚನೆಯೂ ಫಲಕ್ಕೆ ಬರಲಿಲ್ಲ. ಬ್ರಿಟನವು ಬರೆದ ಪತ್ರಕ್ಕೆ ಉತ್ತರವನ್ನು ಕೊಡದೆ ರಾಷ್ಟ್ರೀಕರಣದ ಮೊದಲನೆಯ ಕರ್ತವ್ಯವೆಂದು ಪರ್ಶಿಯವು ಒಂದು ಮಂಡಳಿಯನ್ನು ಸಿದ್ಧಗೊಳಿಸಿದೆ. ಮಂಡಳಿಯ ಮೂವರು ಸದಸ್ಯರು ಎಣ್ಣೆ ಕಂಪೆನಿಯೊಡನೆ ಸ್ವಾಧೀನತೆಯ ಮಾತುಕತೆಯನ್ನಾಡಲು ಹೋಗುವವರಿದ್ದಾರೆ. ಅಂತೂ ಈ ಕಾರ್ಯವು ಅತ್ಯವಸರದ್ದಾಗಿದೆ. ಇದರಲ್ಲಿ ಬ್ರಿಟನವು ಉಭಯ ಸಂಕಟಕ್ಕೆ ಸಿಲುಕಿಕೊಂಡಿದೆ. ಬ್ರಿಟನದ ಬಂಡವಲ ಕರಾರು ಇವೇ ಮೊದಲಾದವುಗಳ ರಾಷ್ಟ್ರೀಕರಣವಿಲ್ಲದೆ ಎಣ್ಣೆ ಕಂಪೆನಿಯ ರಾಷ್ಟ್ರೀಕರಣ ಮಾಡಲೆಳಸಿದ್ದು ಪರ್ಶಿಯದ ದುಡುಕುತನವೇ ಸರಿ. ಬೇರೆಯವರ ಬಲವು ಸಂಪೂರ್ಣ ಶಕ್ತಿ ಹಿನ್ನಲೆಯಲ್ಲಿದೆಯೆನ್ನುವದು ಪರ್ಶಿಯದ ನಿರ್ದಾಕ್ಷಿಣ್ಯ, ನಿರ್ದಯ ಧೋರಣೆಯಿಂದ ವ್ಯಕ್ತವಾಗುತ್ತದೆ. ಬ್ರಿಟನು ಸಿಟ್ಟಾಗಿ ಬಲಪ್ರಯೋಗವನ್ನು ಮಾಡಿದರೆ ಯುದ್ಧವೇ. ಪರಿಸ್ಥಿತಿಗೆ ತಲೆಬಾಗಿದರೆ ಯುದ್ಧವಾಗದು. ಆತ್ಮಗೌರವದ ಪ್ರಶ್ನೆ ಇರುವುದರಿಂದ ಪರಿಸ್ಥಿತಿ ಭಯಾವಹವಾಗ ತೊಡಗಿದೆ.

—

WANTED

For St Cecily's Girls High School, Udipi

A Mathematics B T., A Science B. T., A Physical Training Instrctor All with a knowledge of English and Kannada.



ಕಣ್ಣು ಮಕ್ಕಳು ಹಣ್ಣು ಮುದುಕರೊದನೆ ಮಾತನಾಡುತ್ತಿದ್ದರೂ,
ಅವಕೊಬ್ಬೊಂದು ಬಣ್ಣಬಳಿಯುವ ಈ ಕಾಲದಲ್ಲಿ
ಕಣ್ಣೀರು ಸುರಿಸುವ ಕಥೆಗಳೇ ವಿಶೇಷವಾಗಿವೆ.

ಸಿಪಾಹಿಯಾ

ಮಧುಬಾಲ, ಶ್ಯಾಮ್‌ಕುಮಾರ್, ಆಗಾ, ಮುಕ್ರಿಖಾನು
ಮೊದಲಾದವರು

ತಾ 11-6-51ರಿಂದ
ಶ್ರೀ ರಾಮಕೃಷ್ಣ ಥಿಯೇಟರ್ ಲಿಮಿಟೆಡ್, ಉಡುಪಿ

ಬರುವ ಚಿತ್ರ—
ಸಿಂಗಾರ್,
ಜಯರಾಜ್, ಮಧುಬಾಲ ಮತ್ತು ಸುರೈಯ

ಪ್ರಕಟಣೆ

ಉಡುಪಿ ಪಡುಪೇಟೆಯಲ್ಲಿ ಉದಾರಹೃದಯದಿಂದ ಪರ್ಕಳ ಡಾ. ಯು ರಾಮರಾಯರವರು ದಾನಮಾಡಿರುವ ಸ್ಥಳದಲ್ಲಿ ಉಡುಪಿ ಅಷ್ಟಮಠಾಧಿಪತಿಗಳ ಮುಖ್ಯ ಬೆಂಬಲದಿಂದಲೂ, ಹಾಗೆ ಇತರ ಊರ ಪರವೂರ ಅನೇಕ ಮಹನೀಯರ ನೆರವಿನಿಂದಲೂ, ಶೀರೂರು ಶ್ರೀ ಫಲಿಮಾರು ಮಠದ ಶ್ರೀಪಾದಂಗಳವರ ಸಾಹಸದ ಪ್ರಯತ್ನದಿಂದ ಆರಂಭಿಸಿ ಮುಂದುವರಿಸಲ್ಪಟ್ಟು ಈಗ ಅವರ ಉತ್ತಮ ಶಿಷ್ಯ ಶ್ರೀ ಅದಮಾರು ಮಠದ ಶ್ರೀಪಾದಂಗಳವರಿಂದ ಗುರು ಭಕ್ತಿ, ಸಮಾಜ ಸೇವೆ, ಇವುಗಳ ಉದಾರ ಭಾವನೆಯ ಸಾಹಸ ಕಾರ್ಯದಿಂದಾಗಿ, ಪೂರೈಸಿರುವ ಉಡುಪಿ ಶ್ರೀ ಮಧ್ವಸಿದ್ಧಾಂತ ಪ್ರಬೋಧಿನೀ ಸಂಸ್ಕೃತ ಮಹಾ ಪಾಠಶಾಲೆಯ ನೂತನ ಭವನದ ಪ್ರವೇಶ ಸಮಾರಂಭವನ್ನು ಜರಗಿಸುವದೇ ಇದೇ ತಾ 13ನೇ ಬುಧವಾರ ಸಾಯಂಕಾಲ ಬರಲಿರುವ ಮುಂಬಯಿ ಸಂಸ್ಥಾನದ ಮುಖ್ಯ ಮಂತ್ರಿಗಳಾದ ಸನ್ಮಾನ್ಯ ಶ್ರೀ ಬಾಲಗಂಗಾಧರ ಖೇರರವರನ್ನು ಅಡಿಸ್ಥಾಳಿಯಲ್ಲಿ ಸಾಯಂ ಘಂ 6 30ಕ್ಕೆ ಇದಿರುಗೊಂಡು ಅಲ್ಲಿಂದ ಮೆರವಣಿಗೆಯಲ್ಲಿ ಬರಲು ಪೇಟೆ ಮಾರ್ಗವಾಗಿ ಶ್ರೀ ಕೃಷ್ಣ ಮಠಕ್ಕೆ ಕರೆತರಲಾಗುವುದು. ತಾ 14ನೇ ಗುರುವಾರ ಬೆಳಗ್ಗೆ ಗಂಟೆ 8ಕ್ಕೆ ಶ್ರೀಕೃಷ್ಣ ಮಠದಿಂದ ಶ್ರೀ ಕೃಷ್ಣದೇವರನ್ನು ಸನ್ಮಾನ್ಯ ಅತಿಥಿಗಳಾದ ಮುಖ್ಯ ಮಂತ್ರಿಗಳೊಂದಿಗೆ, ಶ್ರೀಪಾದಂಗಳವರ ಸಮೇತ ವಾದ್ಯಘೋಷ ವೈಭವದ ಮೆರವಣಿಗೆಯಲ್ಲಿ ಹೊರಡಿಸಿಕೊಂಡು ಸಂಸ್ಕೃತ ಮಹಾ ಪಾಠಶಾಲೆಯ ನೂತನ ಭವನಕ್ಕೆ ಬಂದು ಘಂಟೆ 9 45ರ ಲಗ್ನ ಸುಮುಹೂರ್ತದಲ್ಲಿ ಸನ್ಮಾನ್ಯ ಮುಖ್ಯ ಮಂತ್ರಿ ಶ್ರೀ ಬಾಲಗಂಗಾಧರ ಖೇರರವರ ಹಸ್ತದಿಂದ ಉದ್ಘಾಟನೆಯ ಪೂರ್ವಕ ಪ್ರವೇಶೋತ್ಸವವನ್ನು ಜರಗಿಸಿ, ಶ್ರೀಕೃಷ್ಣ ದೇವರ ಪೂಜಾದಿ ಕಾರ್ಯಕ್ರಮಗಳನ್ನೂ ಜರಗಿಸುವದೆಂದು ನಿಶ್ಚಯಿಸಿಯದೆ.

ಈ ಶುಭ ಭವನ ಪ್ರವೇಶ ಮಹೋತ್ಸವದಿಂದ ಧನಸಹಾಯ ಮಾಡಿದ ಮಹನೀಯರಿಗೂ, ಇತರ ವಿದ್ಯಾಭಿಮಾನಿಗಳಾದವರಿಗೂ, ಪ್ರತ್ಯೇಕ ಆಮಂತ್ರಣಪತ್ರಗಳನ್ನು ಅದಷ್ಟು ಶೀಘ್ರದ ರೀತಿಯಲ್ಲಿ ಕಳುಹಿಸಿರುವೆವು. ಸಂದರ್ಭವಶಾತ್ ಆಮಂತ್ರಣ ಪತ್ರಗಳು ಕೈಸೇರದಿದ್ದರೂ ಮಹಾಜನರು ಬೇಸರಿಸದೆ ಅವಶ್ಯವಾಗಿ ಬಂದು ಸಹಕರಿಸಿ, ತಮ್ಮದೇ ಆದ ಈ ಸಂಸ್ಥೆಯ ಪ್ರವೇಶೋತ್ಸವವನ್ನು ಯಶಸ್ವಿಗೊಳಿಸಬೇಕಾಗಿ ಆದರದ ವಿನಂತಿ.

ಶ್ರೀ ಮಧ್ವಸಿದ್ಧಾಂತ
ಪ್ರಬೋಧಿನೀ ಸಭೆಯವರು

ಉಡುಪಿ, ತಾ. 10 6-51

ನೋಟೀಸು

ಕುಂದಾಪುರ ಡಿ. ಮು. ಕೋರ್ಟಿನಲ್ಲಿ

O. S. 28/1951

ಶಾಂತಾ ಬ್ಯಾ. ಬಸ್ರೂರು ರಾಮರಾಯರ ವಿಧವೆ. ಕುಂದಾಪುರ ಕಸಬಾ ಗ್ರಾಮ ವಾದಿ—

1 ಬುದ್ಧಿವಂತ ಶೆಟ್ಟಿ, 2 ಗೋಪಾಲ ಕಾಮತ, 3 ಗೋಪಾಲ್ ರಾವ್ ಶಿರಾಲಿ, ಲ್ಯಾಂಡ್ ಬೇಂಕ್ ಲಿಮಿಟೆಡ್ ಮ್ಯಾನೇಜರ್ ರೋಡು ಮುಂತಾದವರು,

ಪ್ರತಿವಾದಿ ೦.

ಸದ್ರಿ 3ನೇ ಪ್ರತಿವಾದಿಗೆ ಈ ಮೊಕದ್ದಮೆ ತಿಳಿಸುವುದೇನೆಂದರೆ ವಾದಿಯು 1ನೇ ಪ್ರತಿವಾದಿಯಿಂದ ಬರತಕ್ಕ ಮೂಲಗೇಣಿ ಬಾಕಿಯನ್ನು ವಸೂಲಾತಿ ಕೊಳ್ಳುವದೆ ನಿಮ್ಮ ಮೇಲೆ ಈ ದಾವಾ ವಾದಿಯು ದಾಖಲುಮಾಡಿದ ಮೇಲಿನ ದಾವೆಯು ತಾರೀಖು 20-6-1951ಕ್ಕೆ ತನಿಖೆಗೆ ಇಟ್ಟಿರುತ್ತದೆ. ಆ ಕುರಿತು ನಿಮ್ಮ ಆಕ್ಷೇಪವಿದ್ದರೆ ಸದ್ರಿ ದಿವಸ 11 ಗಂಟೆಗೆ ಮೇಲ್ಕಂಡ ಕೋರ್ಟಿನ ಮುಂದೆ ಹಾಜರಾಗಿ ಹೇಳಿಕೊಳ್ಳತಕ್ಕದ್ದು. ತಪ್ಪಿದ್ದಲ್ಲಿ ನಿಮ್ಮ ಗೈರುಹಾಜರಿಯಿಂದ ತೀರ್ಮಾನವಾಗುತ್ತದೆ ಎಂದು ಕೋರ್ಟಿನ ಹುಕುಂ ಪ್ರಕಾರ ತಿಳಿಸಿರುತ್ತದೆ.

V S Shetty.
Advocate for Plaintiff.

ಕುಂದಾಪುರ, ತಾ. 10 6 51

ಮಂಗಳೂರು

ಉದ್ಘಾಟನಾ ಸಮಾರಂಭ— ಕಂಕನಾಡಿಯಲ್ಲಿ ಕುಷ್ಠರೋಗಿಗಳ ಚಿಕಿತ್ಸೆಗಾಗಿ ಕಟ್ಟಿಸಿದ ಆಸ್ಪತ್ರೆಯ ಉದ್ಘಾಟನಾ ಸಮಾರಂಭವು ಇದೇ ತಾ 2ರಲ್ಲಿ ಮಂಗಳೂರಿನ ಬಿಶೋಪರ ಅಧ್ಯಕ್ಷತೆಯಲ್ಲಿ ಜರಗಿತು. ಒಂದು ಲಕ್ಷ ರೂಪಾಯಿಯ ಈ ಕಟ್ಟಡ ಕಟ್ಟಲು ಮದ್ರಾಸು ಸರಕಾರವು ಅರ್ಧಾಂಶ ಸಹಾಯಕೊಟ್ಟಿರುತ್ತದೆ.

ಎಫ್. ಎ ಪರೀಕ್ಷೆಗೆ— ಸೇಂಟ್ ಎಲೋಸಿಯಸ್ ಕಾಲೇಜಿನ 254 ವಿದ್ಯಾರ್ಥಿಗಳಲ್ಲಿ 121 ಮಂದಿ ಪ್ರಥಮಶ್ರೇಣಿಯಲ್ಲಿ ಹಾಗೂ 83 ಮಂದಿ ದ್ವಿತೀಯ ಶ್ರೇಣಿಯಲ್ಲಿ ಉತ್ತೀರ್ಣರಾಗಿದ್ದಾರೆ.

ನಿಧನ—ಜಿಲ್ಲೆಯ ಪ್ರಸಿದ್ಧ ವ್ಯಾಪಾರಿ ನಾರಾಯಣ ಕೃಷ್ಣಪ್ಪ ಭಂಡಾರಿಯವರ ಪುತ್ರ ಶ್ರೀ ಉಮಾನಾಥ ಭಂಡಾರಿಯವರು ಇದೇ ತಾ 8ರಂದು ಸಂಜೆ ಹೃದಯಕ್ರಿಯೆ ನಿಂತು ದಿವಂಗತರಾದುದು ವಿಷಾದಕರವಿದೆ.

ಹಿಂದೀ ಪ್ರಚಾರ— ಮಂಗಳೂರು ಪ್ರಾದೇಶಿಕ ಹಿಂದುಸ್ತಾನೀ ಪ್ರಚಾರ ಸಮಿತಿಯನ್ನು ದ. ಭಾ. ಹಿಂದುಸ್ತಾನೀ ಪ್ರಚಾರ ಸಭೆಯ ಪರೀಕ್ಷಾ ವಿಭಾಗದವರು ಮಂಗಳೂರು ಕೇಂದ್ರದ ಪ್ರತಿನಿಧಿಯನ್ನಾಗಿ ಮಾನ್ಯ ಮಾಡಿರುತ್ತಾರೆ.

ಮೋಸದ ಆರೋಪ—ಕುಂದಾಪುರ ತಾಲೂಕಿನ ಕಂಬದ ಕೋಣೆ ಎಂಬಲ್ಲಿ ಜವಳಿ ವ್ಯಾಪಾರಿಯಾಗಿದ್ದು ದಿವಾಳಿಕೋರರಾಗಿದ್ದ ಕೆ. ಸಂಜೀವರಾವ್ ಎಂಬವರು ಮಂಗಳೂರಿನ ದಯಾನ್ವ್ಯಾಪಾರಿಗಳೊಬ್ಬರಲ್ಲಿ ರೂಪಾಯಿ ಎರಡುಸಾವಿರಕ್ಕೂ ಮಿಕ್ಕಿದ ಜವಳಿಯನ್ನು ತೆಗೆದು ಅವರಿಗೆ ಚೆಕ್ಕು ಕೊಟ್ಟಿದ್ದು ಹಿಂದಿನಿಂದ ಸುಳ್ಳು ಚೆಕ್ಕು ಎಂದು ತಿಳಿದು ಬಂದು ಅವರ ಮೇಲೆ ಮೋಸದ ಆರೋಪಪೂಡಿ ಮಾಡಿದ ಮೊಕದ್ದಮೆಯು ಮಂಗಳೂರು ಸಬ್‌ಡಿವಿಜನಲ್ ಮೆಜಿಸ್ಟ್ರೇಟರಾದ ಶ್ರೀ ಎಸ್. ಯು. ಪರಶುರಾಮ ನಾಯ್ಕರ ಕೋರ್ಟಿನಲ್ಲಿ ವಿಚಾರಣೆಯಾಗಿ ಆರೋಪಿಗೆ ಆರುತಿಂಗಳ ಸಶ್ರಮ ಸಜೆ ಮತ್ತು ಐದುನೂರು ರೂಪಾಯಿ ಜುಲ್ಮಾನೆ ತಪ್ಪಿದರೆ ಆರು ವಾರಗಳ ಅಧಿಕ ಕಠಿನಸಜೆ ಎಂದು ತೀರ್ಪು ಕೊಡಲಾಗಿದೆ.

ಮೂಲ್ಕಿ ಬೇಂಕ್,
ಲಿಮಿಟೆಡ್, ಮೂಲ್ಕಿ

1929ರಲ್ಲಿ ಸ್ಥಾಪಿತವಾಗಿ 21 ವರುಷಗಳಿಂದ ಊರ ಜನರ ಹಿತಕ್ಕಾಗಿ ಡಿಪೋಸಿಟ್ ಹಣಕ್ಕೆ ನ್ಯಾಯವಾದ ಬಡ್ಡಿಯಿಂದಲೂ, ಸಾಲದ ಹಣಕ್ಕೆ ಅತೀ ಕಡಿಮೆ ದರದ ಬಡ್ಡಿಯಿಂದಲೂ ಜನ ಹಿತಸಾಧನೆಯನ್ನು ಮಾಡುತ್ತಿರುವುದು

The Moolky Bank Ltd.,
Moolky, S K

ಮುಟುಸ್ರಾವ ನಿಂತಿತು

'ಕುಮಾರಿ' ಗುಳಿಗೆಗಳನು ಉಪಯೋಗಿಸಿದರೆ ಹದಕೆಟ್ಟ ಮುಟುಸ್ರಾವವಾಗುತ್ತಿದು, ಪಕೋಟಿಗೆ ಬರುವುದು, ಈ ಔಷಧ ಸೇವನೆಯಿಂದ ಶೀಘ್ರ ಗುಣಹೊಂದಬಹುದು, ಯಾವ ಬಾಧಕವೂ ಇಲ್ಲ. ಸಾವಿರಾರು ಮಂದಿಗೆ ಖಾತ್ರಿ ಗುಣವಾಗಿದೆ— ಬೆಲೆ; ರೂ. 3-; ಸ್ಪೆಶಲ್ ರೂ. 5- ಅಧಿಕಾಧಿಕ ಸ್ಪೆಶಲ್ ರೂ. 8- [ಮಿ. ಹಿ ಪತ್ನಿರಹಸ್ಯ ಪ್ರತ್ಯೇಕ.]

Mrs P. DEVEE, F. DS (N. J.)
Tollygunge CALCUTTA
ಸ್ಟಾಕಿಸ್ಟರು ಶರ್ಮಾ ಕಂಪೆನಿ, ಮಂಗಳೂರು

ಉಳ್ಳಾಲದಲ್ಲಿ ಅನಾಥ ಮಕ್ಕಳ ಕೊಲನಿ—ಉದ್ಘಾಟನಾ ಸಮಾರಂಭವು ಕಳೆದ ತಾ 30ರಲ್ಲಿ ಜಿಲ್ಲಾ ಕಲೆಕ್ಟರ್ ಶ್ರೀ ಎಂ ಆರ್. ರಾಜರತ್ನಂ ಅವರ ಅಧ್ಯಕ್ಷತೆಯಲ್ಲಿ ಜರಗಿತು. ಮಂಗಳೂರು ಬಿಶೋಪರಾದ ರೈಟ್ ರೇ. ಡಾ। ಪಿ ತೋಮಸ್ ಅವರು ನೂತನ ಸಂಸ್ಥೆಗೆ ಉತ್ತರೋತ್ತರ ಅಭಿವೃದ್ಧಿಯನ್ನು ಬಯಸಿ ಆಶೀರ್ವದಿಸಿದರು. ಈ ಕೊಲನಿಯ ಕಟ್ಟಡಗಳನ್ನು ಕಟ್ಟಿಸಿ ದಾನವಿತ್ತ ಶ್ರೀ ಫೆಲಿಕ್ಸ್ ಪೈಗಳನ್ನು ಅಭಿನಂದಿಸಲಾಯಿತು ಈ ಕೊಲನಿಯಲ್ಲಿ ನೂರುಮಂದಿ ವಿದ್ಯಾರ್ಥಿಗಳಿಗೆ ವಿದ್ಯಾದಾನವೂ ಕೈಗಾರಿಕೆ ಉಪವೃತ್ತಿಯೂ ಕಲಿಸಲಾಗುತ್ತಿದೆ.

ಆನೆ ಬೇಟೆ—ಪುತ್ತೂರು ತಾಲೂಕಿನ ಪರಿಹರ ಪಳ್ಳತಡ್ಕ, ಸುಬ್ರಹ್ಮಣ್ಯ, ಪನೆಕಲ್ಲು ಸಂದಿನಲ್ಲಿ ಮದದಾನೆಯೊಂದು ತಿರುಗಾಡುತ್ತಿದ್ದು ತೋಟ ಪೈರುಗಳಿಗೆ ಹಾನಿಮಾಡುತ್ತಿದೆಯೆಂದೂ, ಇದನ್ನು ಬೇಟೆಯಾಡಿ ಕೊಲ್ಲಲಿಚ್ಛಿಸುವ ಶಿಕಾರಿ ಲೈಸೆನ್ಸ್ ಧಾರಿಗಳು ಜಿಲ್ಲಾ ಕಲೆಕ್ಟರರಿಂದ ಆ ಬಗ್ಗೆ ಪರ್ಮಿಟ್ ಪಡಕೊಳ್ಳಬೇಕೆಂದೂ ಪ್ರಕಟಿಸಲಾಗಿದೆ.

ಮಲೆನಾಡಿನ ಬೆಳ್ಳಾರೆ, ಪಂಜಗಳಲ್ಲಿ ಹೈಸ್ಕೂಲುಗಳು—ಇದೇ ತಾ 5ರಂದು ಪುತ್ತೂರು ತಾಲೂಕಿನ ಮಲೆನಾಡಾಗಿರುವ ಬೆಳ್ಳಾರೆ ಮತ್ತು ಪಂಜಗಳಲ್ಲಿ ಎರಡು ಹೈಸ್ಕೂಲುಗಳು ಜಿಲ್ಲಾ ಬೋರ್ಡು ಅಧ್ಯಕ್ಷ ಶ್ರೀ ಬಿ. ಮಂಜಪ್ಪ ಹೆಗ್ಡೆಯವರಿಂದ ತೆರೆಯಲ್ಪಟ್ಟವು ಜಿಲ್ಲಾ ಬೋರ್ಡು ಅಧ್ಯಕ್ಷರು ಒಂದೇ ದಿನ ಎರಡು ಹೈಸ್ಕೂಲುಗಳನ್ನು ತೆರೆದುದು ಬೋರ್ಡಿನ ಚರಿತ್ರೆಯಲ್ಲಿ ಮೊತ್ತಮೊದಲಿನದಾಗಿದೆ. ಈ ಎರಡೂ ಶಾಲೆಗಳನ್ನು ತೆರೆಯುವ ಸಮಾರಂಭಗಳ ಅಧ್ಯಕ್ಷತೆಯನ್ನು ಶ್ರೀ ಮೊಳಹಳ್ಳಿ ಶಿವರಾಯರು ವಹಿಸಿ, ಸ್ಪರ್ಧೆ—ಉತ್ಸಾಹಗಳಿಂದ ಹೈಸ್ಕೂಲನ್ನು ಸ್ಥಾಪಿಸಿದ ಮಲೆನಾಡಿನವರಿಗೆ ಅವರ ಮುಂದಿನ ಕರ್ತವ್ಯದ ಕುರಿತು ಎಚ್ಚರಿಗೆಯ ಹಿತೋಕ್ತಿಯನ್ನು ಹೇಳಿದರು.

ಬೆಳ್ಳಾರೆಯಲ್ಲಿ ಉದ್ಘಾಟನಾ ಸಭೆಯು ಪೂರ್ವಾಹ್ನ 9½ ತಾಸಿಗೆ ಬೆಳ್ಳಾರೆಯ ಹಾ। ಪ್ರಾ। ಶಾಲಾ ಕಟ್ಟಡದಲ್ಲಿ ಪ್ರಾರ್ಥನೆಯೊಂದಿಗೆ ಪ್ರಾರಂಭವಾಯಿತು. ಶ್ರೀ ಜಿ ಬಿ. ಸೆಟ್ಟರು ಸ್ವಾಗತ ಭಾಷಣ ಮಾಡುತ್ತಾ ಬೆಳ್ಳಾರೆಯಲ್ಲಿ ಶಿಕ್ಷಣದ ಸೌಕರ್ಯ ಹೆಚ್ಚುತ್ತ ಬಂದುದರ ಚರಿತ್ರೆಯನ್ನು ಸಭೆಯ ಮುಂದಿರಿಸಿದರು. ಶಾಲೆಯನ್ನು ಮುನ್ನಡೆಸುವ ಭಾರವನ್ನು ಹೊತ್ತ ಜಿಲ್ಲಾ ಬೋರ್ಡನ್ನು ಅಭಿನಂದಿಸಿದರು ಅನಂತರ ಬೆಳ್ಳಾರೆ ಹೈಸ್ಕೂಲು ಕಮಿಟಿಯ ಅಧ್ಯಕ್ಷ ಶ್ರೀ ಬಿ. ನಾರಾಯಣ ಶೇಕರು ಅಲ್ಲಿ ಹೈಸ್ಕೂಲು ಆಗಬೇಕೆಂದು ಮಾಡಿದ ಚಳವಳಿ, ಅದಕ್ಕೆ ಊರವರಿಂದ ಮತ್ತು ಪರಊರವರಿಂದ ದೊರೆತ ಸಹಾಯ ಇತ್ಯಾದಿಗಳನ್ನು ತಿಳಿಸಿ, ತೊಂಭತ್ತು ದಿನಗಳಲ್ಲಿ ಈ ಮಹಾಕಾರ್ಯ ಸಾಧಿಸಲು ನೆರವಾದ ಎಲ್ಲರನ್ನೂ ಅಭಿನಂದಿಸಿದರು ಸಮಾರಂಭಕ್ಕೆ ಶುಭವನ್ನು ಕೋರಿ ಬಂದಿರುವ ಸಂದೇಶಗಳನ್ನು ಶ್ರೀ ಬಿ ಗೋವಿಂದ ಪೈಯವರು ಓದಿದ ಮೇಲೆ ಜಿಲ್ಲಾ ಬೋರ್ಡು ಅಧ್ಯಕ್ಷರು ತಮ್ಮ ಉದ್ಘಾಟನಾ ಭಾಷಣವೀಯುತ್ತಾ 'ವಿದ್ಯಾಪ್ರಚಾರದಂತಹ ಕಾರ್ಯದಲ್ಲಿ ಪಾಲ್ಗೊಳ್ಳುವರು ಮುಂದಾಗಿ ಬಂದು ಜಿಲ್ಲಾ ಬೋರ್ಡಿನ ಎಲ್ಲಾ ಶರ್ತಗಳಿಗೂ ಒಪ್ಪಿ ಈ ಹೈಸ್ಕೂಲು ಆಗುವಂತೆ ಮಾಡಿದುದಕ್ಕಾಗಿ ಅವರನ್ನು ಬೋರ್ಡಿನ ಪರವಾಗಿ ಅಭಿನಂದಿಸಿದರು ಇಂದಿನ ಶಿಕ್ಷಣವು ಸಮರ್ಪಕವಲ್ಲವೆಂಬ ಟೀಕೆಯಿದ್ದರೂ ಸರಿಯಾದ ಶಿಕ್ಷಣ ಪದ್ಧತಿಯು ಬರುವ ವರೆಗೆ ಇಂದಿನ ಶಿಕ್ಷಣವನ್ನಾದರೂ ಮಲೆನಾಡಿಗಳು ಒದಗಿಸಿ ಕೊಡುವುದು ನಮ್ಮ ಕರ್ತವ್ಯವೆಂದರಿತು ಬೋರ್ಡು ಈ ನಿರ್ಣಯ ಮಾಡಿತೆಂದು ತಿಳಿಸಿ ಅಧ್ಯಕ್ಷರ ಆಜ್ಞೆಯಂತೆ ಶಾಲೆಯ ಉದ್ಘಾಟನೆ ಮಾಡುತ್ತಿದ್ದೇನೆ" ಎಂದರು.

ಬಳಿಕ ಡಾ। ಕೆ. ಬಾಲಪ್ಪ ಶೆಟ್ಟಿ, ಶ್ರೀ ಎಮ್. ಸದಾಶಿವರಾವ್, ಡಾ। ಬಿ. ಕೃಷ್ಣ ಭಟ್, ಶ್ರೀ ಸಿ. ತಿರುಮಲೇಶ ಮೊದಲಾದವರು ಮಾತನಾಡುತ್ತಾ ಶಾಲೆಗೆ ಶುಭ ಕೋರಿದರು. ಆ ಬಳಿಕ ಅಧ್ಯಕ್ಷರು ತಮ್ಮ ಭಾಷಣದಲ್ಲಿ ತಾವು ಪುತ್ತೂರು ತಾಲೂಕು ಬೋರ್ಡಿನ ಅಧ್ಯಕ್ಷರಾಗಿದ್ದಾಗ ಈ ಸೀಮೆಯವರು ನೀಡುತ್ತಿದ್ದ ಸಹಾಯ ಸಹಕಾರಗಳನ್ನು ಹಿಂದಿನ ಕೆಲಸಗಳನ್ನು ಅಂದಿನ ಕೆಲಸಗಾರರನ್ನು ಸ್ಮರಿಸಿಕೊಂಡರು. ಬೆಳ್ಳಾರೆಯಲ್ಲಿ ಹೈಸ್ಕೂಲು ಆದುದು ಒಳ್ಳೆತೆಂದು ಹೇಳುತ್ತ, ಅದಕ್ಕಾಗಿ ಪ್ರಯತ್ನಿಸಿದವರನ್ನು ಅಭಿನಂದಿಸಿದರು. ಕಟ್ಟಡಕ್ಕಾಗಿ ನಾರಣಾಸಿ ಗಣಪಯ್ಯನವರು ತನ್ನ ಸಹೋದರ ದಿವಂಗತ ಸುಬ್ರಾಯರ ಹೆಸರಲ್ಲಿ ರೂಪಾಯಿ 5000 ದಾನ ವಿತ್ತುದರ ಕುರಿತಾಗಿ ಹೇಳಿ, ಸುಬ್ರಾಯರ ಸಾರ್ವಜನಿಕ ಸೇವಾತತ್ಪರತೆಯನ್ನೂ ಶ್ಲಾಘಿಸಿದರು. ಹೈಸ್ಕೂಲಿನ ವಿನೋದವಾಗಿ ಮಾತನಾಡುತ್ತಾ "ಈಗ ಹುಟ್ಟಿದ ಹಾಗೂ ಸಂಜೆ ಮೂರು ಗಂಟೆಗೆ ಹುಟ್ಟುವ ಶಾಲೆ ಕೂಡಿದರೆ ಜಿಲ್ಲೆಯಲ್ಲಿ ಅರವತ್ತು ಹೈಸ್ಕೂಲುಗಳಾದವು, ಮಲೆನಾಡಿನಲ್ಲಿ ಒಂದು ಶಾಲೆಯಾಗಬೇಕೆಂಬ ಪ್ರಯತ್ನದಲ್ಲಿ ಎರಡು ಶಾಲೆಗಳಾದವು ಅವಳಿ ಜವಳಿ ಮಕ್ಕಳಂತೆ!" ತಿಳಿಸಿ ಈ ಶಾಲೆಗಳು ಅಭಿವೃದ್ಧಿಯಾಗಲೆಂದರು, ಶ್ರೀ ಕೋಟಿ ವೆಂಕಟಸುಬ್ಬರಾಯರು ಅಭಿನಂದಿಸಿದ ಮೇಲೆ ಸಭೆಯೆದ್ದು ಮೆರವಣಿಗೆಯಿಂದ ಹೈಸ್ಕೂಲಿನ ನವೀನ ಕಟ್ಟಡಕ್ಕೆ ಹೋಯಿತು ಅಲ್ಲಿ ಜಿಲ್ಲಾ ಬೋರ್ಡು ಅಧ್ಯಕ್ಷರು ಜಯಘೋಷಗಳೊಂದಿಗೆ ಶಾಲೆಯ ಪ್ರವೇಶ ಸಮಾರಂಭ ಜರಗಿಸಿದರು.

ಅದೇ ದಿನ ಅಪರಾಹ್ನ 3ಗಂಟೆಗೆ ಸರಿಯಾಗಿ ಪಂಜದಲ್ಲಿ ಹೈಸ್ಕೂಲು ಕಟ್ಟಡದ ಉದ್ಘಾಟನೆಯೂ ಜಿಲ್ಲಾ ಬೋರ್ಡು ಅಧ್ಯಕ್ಷರ ಹಸ್ತದಿಂದಾಯಿತು. ಈ ಸಮಾರಂಭಕ್ಕೂ ಶ್ರೀ ಮೊಳಹಳ್ಳಿ ಶಿವರಾಯರೇ ಅಧ್ಯಕ್ಷರಾಗಿದ್ದರು. ಶ್ರೀ ಪಿ. ಎಸ್. ರಾಮಣ್ಣ ಗೌಡರು ಸ್ವಾಗತ ಬಯಸಿದ ಬಳಿಕ ಮಲೆನಾಡು ಶಿಕ್ಷಣಾಭಿವೃದ್ಧಿ ಸಮಿತಿಯ ಅಧ್ಯಕ್ಷ ಡಾ। ಕೆ. ಬಾಲಪ್ಪ ಸೆಟ್ಟರು 'ಶಾಲೆಯ ಅಭಿವೃದ್ಧಿಗಾಗಿ ಊರವರು ಮಾಡುವ ಕೆಲಸ ಇನ್ನೂ ಉಳಿದಿದೆ' ಎಂದರು. ಬಳಿಕ ಶ್ರೀಗಳಾದ ಬಿ. ನಾರಾಯಣ ಶೇಕ ಮತ್ತು ತಿರುಮಲೇಶ ಮೊದಲಾದವರು ಶಾಲೆಗೆ ಶುಭಕೋರಿದರು. ಈ ಶಾಲೆಗೆ ಮುಖ್ಯೋಪಾಧ್ಯಾಯರಾಗಿ ಬಂದಿರುವ ಶ್ರೀ ಕೆ. ರಾಮಕೃಷ್ಣಾಚಾರ್, ಅವರು ಊರವರ ಸಹಕಾರ ಕೋರುತ್ತ 'ನೂರು ತಾಸುಗಳೊಳಗೆ ಹುಟ್ಟಿಕೊಂಡ ಈ ಎರಡು ಶಾಲೆಗಳು ಕೋಟಿ-ಚೆನ್ನಯರಂತೆ ಕೀರ್ತಿಗಳಿಸಲಿ' ಎಂಬರು

ಬಳಿಕ ಅಧ್ಯಕ್ಷರು ತಮ್ಮ ಭಾಷಣದಲ್ಲಿ ಸ್ಪರ್ಧೆಯಿಂದಲಾದರೂ ಮುಂದೆ ಈ ಶಾಲೆಯು ಅಭಿವೃದ್ಧಿಯಾಗಬೇಕೆಂದೂ ಅತಿಸಿ ಕೆಲವು ಹಿತೋಕ್ತಿಗಳನ್ನಿತ್ತರು. ಮಳೆಗಾಲದಲ್ಲಿ ನದಿಗಳಿಂದ ಸುತ್ತುವರಿಯಲ್ಪಡುವ ಈ ಸೀಮೆಗೆ ಹೊರಗಿನಿಂದ ಮಕ್ಕಳು ಬರಬೇಕಾದರೆ ಅಷ್ಟೇ ಸೌಕರ್ಯ ಇಲ್ಲದಬೇಕೆಂದರು. ಇಲ್ಲಿ ಕಲಿತವರಲ್ಲಿ ನೇಕರಾದರೂ ಮುಂದೆ ಈ ಮಲೆನಾಡಿನಲ್ಲೇ ಬಾಳಿ ಬದುಕುವಂತಾಗಬೇಕೆಂದೂ ಸೂಚಿಸಿ ಶಾಲೆಯು ಉತ್ತರೋತ್ತರ ಅಭಿವೃದ್ಧಿಯಾಗಲೆಂದರು. ಶ್ರೀ ಟಿ ಪರಮೇಶ್ವರ ಗೌಡರು ಅಭಿನಂದಿಸಿದ ಮೇಲೆ ಫಲಹಾರದೊಂದಿಗೆ ಸಮಾರಂಭವು ಕೊನೆಗೊಂಡಿತು.

ಪಡುಬಿದ್ರಿ—ತಾ 6-6-51ರಲ್ಲು ಬಿಲ್ಲವರ ಸಮಾಜದಲ್ಲಿ ಶ್ರೀ ಟಿ. ಎ. ಪೈ, ಜನರಲ್ ಮೆನೇಜರ್ ಕೆನರಾ 'ಇಂಡಸ್ಟ್ರಿಯಲ್ ಎಂಡ್ ಬ್ಯಾಂಕಿಂಗ್ ಸಿಂಡಿಕೇಟ್' ಇವರ ಅಧ್ಯಕ್ಷತೆಯಲ್ಲಿ ಪಯಸ್ವರ ಕೂಟವು ತೆರೆಯಲ್ಪಟ್ಟಿತು.

ಪಯಸ್ವರ ಕೂಟದ ಆವಶ್ಯದ ಕುರಿತು. ಮಾನ್ಯ ಟಿ. ಯಲ್. ರಾವ್, ಕೆ. ಕರಿಯಣ್ಣ ಶೆಟ್ಟಿ, M. M. ಪ್ರಭುಗಳು, S. ಹೂವಯ್ಯನವರೂ ಸದಭಿಪ್ರಾಯಗಳನ್ನು ಸೂಚಿಸಲು, ಅಧ್ಯಕ್ಷರು ಸುರಸವಾದ ಭಾಷಣ ಕೊಡಲಾಗಿ, ಜನಗಣಮನ ಮಂಗಲಗೀತೆಯೊಡನೆ ಸಭೆಯು ಚದರಿತು.

ಪಾಕಾರ್ಳ—ಮರಾಟಿ ಸಮಾಜ ಸೇವಾ ಸಂಘದ ಮಹಾಸಭೆಯು ತಾ 2-6-51 ರಲ್ಲಿ ಬಿ. ಇ. ಯಮ್. ಶಾಲಾ ಕಟ್ಟಡದಲ್ಲಿ ಶ್ರೀ ರಾಜೀವ ಕೋಟಿಯಾನರ ಅಧ್ಯಕ್ಷತೆಯಲ್ಲಿ ಜರಗಿತು. ಲೆಕ್ಕಪತ್ರ ವರದಿ ಮಂಜೂರಾತಿ ಯಾದ ಬಳಿಕ ಸಭಿಕರಲ್ಲಿ ಹಲವರು ಸಂಘದ ಕಾರ್ಯ ಕಲಾಪಗಳ ಕುರಿತು ಮಾತಾಡಿದರು. ಸಭಾಧ್ಯಕ್ಷರ ಸಂದರ್ಭೋಚಿತ ಭಾಷಣಾನಂತರ ಕಾರ್ಯದರ್ಶಿಗಳಿಂದ ಧನ್ಯವಾದರ್ಪಣೆಯಾಗಿ ಅಂದಿನ ಸಭೆಯು ಕೊನೆಗೊಂಡಿತು.

ಕಾಂತಾವರ—ತಾ 3-6-51ರಲ್ಲಿ ಪಂಚಾಯತ್ ಬೋರ್ಡು ಎಲಿಮೆಂಟ್ರಿ ಶಾಲೆಯ ವಾರ್ಷಿಕೋತ್ಸವವು ಕಾರ್ಕಳದೇಂಜ ಜೂನಿಯರ್ ಡೆಪ್ಯುಟಿ ಇನ್ಸ್‌ಪೆಕ್ಟರ್ ಶ್ರೀ ಎ. ನರಸಿಂಹಯ್ಯ, ಬಿ ಎ. ಬಿ. ಟಿ. ಯವರ ಅಧ್ಯಕ್ಷತೆಯಲ್ಲಿ ಯಶಸ್ವಿಯಾಗಿ ಜರಗಿತು. ಕಾರ್ಯಕ್ರಮದಂತೆ ವರದಿ ವಾಚನ ಸಭಿಕರ ಭಾಷಣ, ಮಕ್ಕಳಿಗೆ ಇನಾಂ ಹಂಚೋಣ, ಅಧ್ಯಕ್ಷರ ಭಾಷಣ, ಮಕ್ಕಳ ವಿವಿಧ ವಿನೋದಾವಳಿ ಮತ್ತು ಮಂಗಳ ಪದ್ಯವನ್ನು ಹಾಡಿ ಮುಕ್ತಾಯ ಪಡಿಸಲ್ಪಟ್ಟಿತು.

ನೋಟೀಸು

ಕಾಸರಗೋಡು ಡಿ. ಮು ಕೋರ್ಟಿನಲ್ಲಿ
O. S. 650/1947. R. I. A. 130/1951
ಅಬ್ದುಲ್ಲ ರಹಿಮಾನ್ ವಾದಿ ಅರ್ಜಿದಾರ,

1 ಬದುವಾ ರಂಗನ ವಿಧವೆ, 2 ಕುಂಞಾಂಬು 1ನೇ ಯವಳ ಮ್ಯಾನೇಜ ಮಗ, ಗಾರ್ಡಿಯನ್, 1ನೇ ಪ್ರಿವಾಂಡೆಂಟಳು, 3. ಕುಂಞಾಡೆ, ಅಂಬನಾಲ್ಪಡಿ ನೋಕೆ ಮ್ಹೊಕ್ಕ ಮಗಳು, 4 ಅಂಬು 3ನೇ ಯವಳ ಮಗ, 1-2ನೇ ಯವರು ಕಾಸರಗೋಡು ತಾಲೂಕು ಕರಿಂದಳ ಗ್ರಾಮದ ಕಯಂಞಾ ಎಂಬಲ್ಲಿ 3 4ನೇಯವ ಎ ಚಿಮೇನಿ ಗ್ರಾಮದ ಅಂಡೋಳಿಯಲ್ಲಿ ಸಹ ಯಿರುವವರು—ಪ್ರೈವಾಂಡೆಂಟರು.

ಪ್ರಿಲಿಮಿನರಿ ಡಿಕ್ರಿಯನ್ನು ಫೈನಲ್ ಮಾಡುವರೆವಾಕ್ಲು ಮಾಡಿದ ಅರ್ಜಿಯು ತಾರೀಖು 19-6-1951ಕ್ಕೆ ಯಿಟ್ಟಿರುವ ಸಂಗ್ತಿ ತಿಳಿಸೋಣಾಗಿಯಿದೆ.

Sd/ P. Ahmed,
Advocate for Petitioner
Kasaragod, 9 6-51.

ನೋಟೀಸು

ಕುಂದಾಪುರ ಡಿ ಮು, ಕೋರ್ಟಿನಲ್ಲಿ
O. S. 131/1951
ಬಾರ್ಕೂರು ದೇವ ಕಲ್ಕುಡ—ವಾದಿ

1 ಶೇಷಶೆಟ್ಟಿ ಬಾಗಿಮಕ್ಕಿ ವೆಂಕಟಯ್ಯ ಸೆಟ್ಟಿ ಆಳಿಯ, 2 ಮಂಜಪ್ಪ ಸೆಟ್ಟಿ ಬಂದಿಮಕ್ಕಿ ಚೆನ್ನಪ್ಪ ಸೆಟ್ಟಿ ಮಗಳು— ಪ್ರತಿವಾದಿರು

ಉಡುಪಿ ತಾಲ್ಲೂ, ಹಗ್ಗುಂಜೆ ಗ್ರಾಮದ ಕುತ್ತೂರಲ್ಲಿರುವವರು.

ಸದ್ರಿ ಪ್ರತಿವಾದಿರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದ್ರೆ—

ನಿಮ್ಮಿಂದ ವಾದಿಗೆ ಬರಬೇಕಾದ ಹಣಕ್ಕೆ ವಾದಿಯು ಹಾಕಿದ ಮೇಲಿನ ದಾವೆಯನ್ನು ತಾ. 2-7-51ಕ್ಕೆ ತನಿಕೆಗೆ ಯಿಟ್ಟಿದೆ. ಆ ಕುರಿತು ನಿಮ್ಮ ಆಕ್ಷೇಪಯಿದ್ದರೆ ಆ ದಿನ ಹಗಲು 11 ಘಂಟೆಗೆ ಹಾಜರಾಗಿ ಬ್ಯಾನ್ ಹೇಳುವಮಾಡಿಕೊಳ್ಳತಕ್ಕದ್ದು ಎಂಬ ಸಂಗ್ತಿ ತಿಳಿಸಿರುತ್ತದೆ.

By order of Court
Y. Tejappa Shetty.
Advocate for pltf.
Coondapoor, 9-6-1951.

ದಕ್ಷಿಣ ಕನ್ನಡ ಜಿಲ್ಲಾ ಕಾಂಗ್ರೆಸ್ ಕಮಿಟಿಯ ಕಾರ್ಯಕಾರಿ ಸಮಿತಿಯ ಸಭೆ—ಠರಾವುಗಳು

ದಕ್ಷಿಣ ಕನ್ನಡ ಜಿಲ್ಲಾ ಕಾಂಗ್ರೆಸ್ ಕಮಿಟಿಯ ಕಾರ್ಯಕಾರಿ ಮಂಡಲಿಯ ಸಭೆಯು ಇದೇ ಕಳೆದ ತಾ. ೯ರಲ್ಲಿ ಡಾ. ಕೆ. ನಾಗಪ್ಪ ಆಳ್ವರ ಅಧ್ಯಕ್ಷತೆಯಲ್ಲಿ ನಡೆಯಿತು. ಹತ್ತು ಮಂದಿ ಸದಸ್ಯರು ಹಾಜರಿದ್ದರು.

ಜಿಲ್ಲೆಯ ಆಹಾರ ಪರಿಸ್ಥಿತಿಯ ಕುರಿತು ಕೊನೆಗೆ ಈ ಕೆಳಗಿನ ನಿರ್ಣಯವು ಸರ್ವಸಮ್ಮತದಿಂದ ಮಂಜೂರಾಯಿತು:-"ಜಿಲ್ಲೆಯಲ್ಲಿ ಅಕ್ಕಿಯ ತೀವ್ರ ಕೊರತೆಯಿಂದಾಗಿ ಮತ್ತು ಅಕ್ಕಿ ಸಂಗ್ರಹಿಸಿಟ್ಟುಕೊಂಡಿರುವವರು ಅದರ ಬೆಲೆಯನ್ನು ವಿಪರೀತವಾಗಿ ಏರಿಸಿ ರೇಶನ್ ತೆಗೆದುಹಾಕಲ್ಪಟ್ಟಿರುವ ಹಳ್ಳಿಪ್ರದೇಶಗಳಲ್ಲಿ ಬಡಬಗ್ಗರು ಉಪವಾಸಬೀಳಬೇಕಾಗುವಷ್ಟರ ಗಂಭೀರ ಪರಿಸ್ಥಿತಿಯುಂಟಾಗಿರುವುದರಿಂದ, ಕಾಂಗ್ರೆಸ್ ಕಮಿಟಿಯ ಪ್ರತಿನಿಧಿಗಳು ಈ ಮೊದಲೇ ಹಲವು ಬಾರಿ ಒತ್ತಾಯಪಡಿಸಿದಾಗ ತೆರೆಯುವರೆ ಒಪ್ಪಿದ ರಿಲೀಫ್ ಶೋಪುಗಳನ್ನು ಯಾವ ವಿಳಂಬವೂ ಇಲ್ಲದೆ ಕೂಡಲೆ ತೆರೆಯಬೇಕಾಗಿ ಈ ಸಭೆಯು ಒತ್ತಾಯಪಡಿಸುತ್ತದೆ. ಮಾತ್ರವಲ್ಲದೆ, ಅಗತ್ಯವಿದ್ದಲ್ಲೆಲ್ಲ ಇನ್ನೂ ಹೆಚ್ಚಿನ ರಿಲೀಫ್ ಶಾಪುಗಳನ್ನು ಉದಾರವಾಗಿ ಕೂಡಲೆ ತೆರೆಯಬೇಕೆಂದು ಕೇಳಿಕೊಳ್ಳುತ್ತದೆ. ಅಂತಹ ರಿಲೀಫ್ ಶಾಪುಗಳು ಹೆಚ್ಚಿನ ವಿಳಂಬವೇನೂ ಇಲ್ಲದೆ ಶೀಘ್ರವಾಗಿ ಎಲ್ಲೆಲ್ಲಿ ತೆರೆಯಲ್ಪಡಬೇಕೆಂಬುದನ್ನು ನಿಶ್ಚಯಿಸುವುದಕ್ಕೂ ಆ ಕುರಿತು ಅಧಿಕಾರಿಗಳೊಡನೆ ಸಂಪರ್ಕ ಬೆಳೆಸಿ ಅವರಿಗೂ ಜನರಿಗೂ ಬೇಕಾದ ಸಹಾಯ ಮಾಡುವರೆ ಈ ಕೆಳಗಿನ ಆಹಾರ ಸಮಿತಿಯನ್ನು ನೇಮಿಸಲಾಗಿದೆ.

ಆಹಾರ ಸಮಿತಿಯ ಸದಸ್ಯರು

೧ ಡಾ| ಕೆ. ಯಸ್. ಆಳ್ವ, ೨ ಡಾ| ಯು. ಪಿ. ಮಲ್ಯ; ೩ ಕೆ. ಕೆ. ಶೆಟ್ಟಿ; ೪ ಬಿ. ವೈಕುಂಠ ಬಾಳಿಗ; ೫ ಬಿ. ಆರ್. ಕರ್ಕೇರ; ೬ ಎಸ್. ಎಸ್. ಶಿಲ್ಲೆ; ೭ ಡೆನಿಸ್ ಪಿಂಟೊ; ೮ ಬಿ. ಯಸ್. ಭಾಸ್ಕರ ರೈ ಮತ್ತು ೯ ಬಿ. ಅನಂತ ರೈ; ಶ್ರೀ| ವೈಕುಂಠಬಾಳಿಗರು ಈ ಸಮಿತಿಯ ಸಂಚಾಲಕರಾಗಿ ನೇಮಿಸಲ್ಪಟ್ಟಿರುತ್ತಾರೆ

"ಆಹಾರದ ತೀವ್ರ ಅಭಾವದಿಂದ ಜಿಲ್ಲೆಯ ಬಡಬಗ್ಗರೆಲ್ಲ ಗೋಳಿಡುತ್ತಿರುವಾಗಲೂ ಒಂದಿಷ್ಟು ಕನಿಕರವಿಲ್ಲದೆ ಅಲ್ಲಲ್ಲಿ ವೇಸಾಯಗಾರರು ಮತ್ತು ವ್ಯಾಪಾರಿಗಳು ಹಲವರು ಅಕ್ಕಿಯನ್ನು ಅಡಗಿಸಿಟ್ಟುಕೊಂಡು ಮುಡಿಯೊಂದರ ರೂ. ೫೦-೬೦ರ ವರೆಗೆ ಕ್ರಯವೇರಿಸಿ ಕಳ್ಳಪೇಟೆಯಲ್ಲಿ ಮಾರುತ್ತಿರುವುದೂ ಹೊರಗೆ ಕಳುಹಿಸುತ್ತಿರುವುದೂ ಸಮಾಜಘಾತಕ ಪಾತಕಕೃತ್ಯವೆಂದು ಈ ಸಭೆಯು ಅಭಿಪ್ರಾಯಪಟ್ಟು ಆ ಕುರಿತು ತೀವ್ರ ಸಂತಾಪಸೂಚಿಸುತ್ತದೆ. ಇಂತಹ ಅಸಹನೀಯ ಪರಿಸ್ಥಿತಿಯ ದುಷ್ಪರಿಣಾಮವನ್ನು ಇನ್ನಾದರೂ ಈ ಜನರು ಮನಗಂಡು ತಮ್ಮ ಕೈಲಿದ್ದ ಉಳಿತಾಯದ ಅಕ್ಕಿಯನ್ನೆಲ್ಲ ನೆರೆಕರೆಯ ಬಡಬಗ್ಗರಿಗೆ ಮಿತವಾದ ಬೆಲೆಯಲ್ಲಿ ಹಂಚುವ ವಿವೇಕ ಮತ್ತು ಉದಾರತೆ ತೋರಿಸಿ, ಪರಿಸ್ಥಿತಿಯು ಕೈಮೀರಿ ಹೋಗಿ ಸಮಾಜದಲ್ಲಿ ಕ್ಷೋಭೆಯುಂಟಾಗದಂತೆ ನೋಡಬೇಕಾಗಿ ಈ ಸಭೆಯು ಕಳಕಳಿಯಿಂದ ವಿನಂತಿಸಿಕೊಳ್ಳುತ್ತದೆ. ಊರಿನ ಜಿಲ್ಲೆಯ ಶಾಂತಿ ಮತ್ತು ಸುಭಿಕ್ಷೆಯ ದೃಷ್ಟಿಯಿಂದ, ಅಕ್ಕಿಯನ್ನು ಸಂಗ್ರಹಿಸಿಟ್ಟುಕೊಂಡಿರುವವರೆಲ್ಲ, ಹಸಿವಿನಿಂದ ನರಳುತ್ತಿರುವ ನೆರೆಕರೆಯ ಬಡಬಗ್ಗರಿಗೆ ಅದನ್ನು ಹಂಚಿಕೊಟ್ಟು, ಪರಸ್ಪರ ಸಹಕರಿಸಿ ಪ್ರಕೃತದ ಗಂಭೀರ ಪರಿಸ್ಥಿತಿಯನ್ನು ನಿವಾರಿಸಲು ತಮ್ಮಿಂದ ಕೂಡಿದ ಪ್ರಯತ್ನ ನಡೆಸದಿದ್ದಲ್ಲಿ ಸರಕಾರವೂ ಜನತೆಯೂ ಈ ಕಳ್ಳಪೇಟೆಯನ್ನು ಹತ್ತಿಕ್ಕಲು ಉಗ್ರ ಧೋರಣೆ ವಹಿಸುವ ಸಂದರ್ಭ ಬರಬಹುದಾದುದರಿಂದ ಅದಕ್ಕೆ ಜನರು ಆಸ್ಪದ ಕೊಡಬಾರದೆಂದು ಈ ಸಭೆಯು ನಮ್ರ ಪೂರ್ವಕವಾಗಿ ಎಚ್ಚರಿಸುತ್ತದೆ.

ಮಳೆಗಾಲದ ಮುಂದಿನ ಕಾರ್ಥಿ ತಿಂಗಳುಗಳಲ್ಲಿ ಜಿಲ್ಲೆಯಲ್ಲಿ ಅತಿ ಹೆಚ್ಚಿನ ರಿಲೀಫ್ ಶಾಪುಗಳನ್ನು ತೆರೆಯುವುದು ಅತ್ಯಾವಶ್ಯಕವಾದುದರಿಂದ ಅದಕ್ಕೆ ಪ್ರಕೃತ ಜಿಲ್ಲೆಯಲ್ಲಿರುವ ಆಹಾರ ಸಂಗ್ರಹವು ಏನೇನೂ ಸಾಲದೆಂದೂ ಈ ಸಭೆಯು ಅಭಿಪ್ರಾಯಪಡುತ್ತದೆ. ಬರುವ ಅಕ್ಟೋಬರ ತಿಂಗಳವರೆಗೆ ಜಿಲ್ಲೆಯ ಆಹಾರ ಪರಿಸ್ಥಿತಿಯನ್ನು ಕೇವಲ ಹತೋಟಿಯಲ್ಲಿ ಇರಿಸಿಕೊಳ್ಳುವುದಕ್ಕೆ ಕೂಡಾ ಕಡಿಮೆ ಎಂದರೆ ೧೫,೦೦೦ ಟನ್ ಅಕ್ಕಿಯಾದರೂ ಅಗತ್ಯವಿರುವುದರಿಂದ ಅದನ್ನು ಸಕಾಲದಲ್ಲಿ ಈ ಜಿಲ್ಲೆಗೆ ಕಳುಹಿಸುವಂತೆ ಮದ್ರಾಸ್ ಸರಕಾರವು ವ್ಯವಸ್ಥೆ ಮಾಡಬೇಕೆಂದು ಈ ಸಭೆಯು ಆಗ್ರಹ ಪೂರ್ವಕವಾಗಿ ವಿನಂತಿಸಿಕೊಳ್ಳುತ್ತದೆ. ಈ ಕುರಿತು ಆವಶ್ಯವಿದ್ದ ಕೆಲಸವನ್ನೆಲ್ಲ ಮಾಡಲು ಮೇಲಿನ ಆಹಾರ ಉಪಸಮಿತಿಗೆ ಅಧಿಕಾರವೀಯುತ್ತದೆ.

ಡಾ| ಯು. ಪಿ. ಮಲ್ಯರು ವಾಣಿಮಂಗಳೂರು ಸರ್ಕಲ್ ಕಾಂಗ್ರೆಸ್ ಕಮಿಟಿಯ ರಚನೆಯ ಕುರಿತು ಜಿಲ್ಲೆಯ ಕಾಂಗ್ರೆಸ್ ಕೆಲಸಗಾರರೊಡನೆ ಮಾತನಾಡಿ ಸಭೆಗೊಪ್ಪಿಸಿದ ವರದಿಯನ್ನು ಸ್ವೀಕರಿಸಿ ಸದ್ರಿ ಕಾಂಗ್ರೆಸ್ ಕಮಿಟಿಯ ರಚನೆಯ ಪ್ರಶ್ನೆಯನ್ನು ಡಾ| ಯು. ಪಿ. ಮಲ್ಯರು ಮತ್ತು ಡಾ| ಕೆ. ಯಸ್ ಆಳ್ವರ ಕೂಡಿ ಇತ್ಯರ್ಥ ಪಡಿಸಬೇಕೆಂದು ನಿರ್ಧರಿಸಲಾಯಿತು.

ಮಂಗಳೂರಿನ ಸರಕಾರಿ ನೌಕರರೇ ಮೊದಲಾದ ಕನ್ನಡೇತರ ಜನರ ಮಕ್ಕಳ, ಸೌಕರ್ಯಕ್ಕಾಗಿ, ಒಂದೆರಡು ಶಾಲೆಗಳಲ್ಲಾದರೂ ಇಂಗ್ಲಿಷ್ ಮಾಧ್ಯಮವಾಗಿ ಶಿಕ್ಷಣವೀಯುವ ವಿಭಾಗವನ್ನು ಜಾರಿ ವರ್ಷದಿಂದಲೇ ತೆರೆಯುವಂತೆ ಶಿಕ್ಷಣ ಮಂತ್ರಿಗಳನ್ನು ಕೇಳಿಕೊಳ್ಳಬೇಕಾಗಿ, ಶ್ರೀ. ಡೆನಿಸ್ ಪಿಂಟೊರವರು ತಂದ ಠರಾವು ಮಂಜೂರಾಯಿತು ಎಂದು ದ. ಕ. ಜಿಲ್ಲಾ ಕಾಂಗ್ರೆಸ್ ಕಮಿಟಿಯ ಪ್ರಧಾನ ಕಾರ್ಯದರ್ಶಿ ಶ್ರೀ. ಕೆ. ಕೆ. ಶೆಟ್ಟರು ತಿಳಿಸುತ್ತಾರೆ

ಪ್ರಕಟಣೆ

ನಾನು ನನ್ನ ಅಕ್ಕ ಕಲ್ಯಾಣಿ ಹೆಗ್ಗಡ್ತಿಯರ ಮಗಳ ಗಂಡ ಶಾಂತೂರು ಸುಂದರ ಸೆಟ್ರ ಹೆಸ್ರಲ್ಲಿ 1949ನೇ ಇಸವಿ ಎಪ್ರಿಲ್ ತಿಂಗಳಲ್ಲಿ ರೂ. 1900/ಕ್ಕೆ ಒಂದು ಡಿಮಾಂಡ್ ನೋಟನ್ನು ಬರಕೊಟ್ಟಿರುತ್ತೇನೆ. ಸದ್ರಿ ಡಿ। ನೋಟು ಸದ್ರಿ ಸುಂದರ ಸೆಟ್ರ ಹೆಸ್ರಲ್ಲಿರುವದಾದರೂ ಸದ್ರಿ ಡಿ। ನೋಟನ್ನು ಸದ್ರಿ ಸುಂದರ ಸೆಟ್ರ ವರ ನಾನು ಕೊಟ್ಟದಿಲ್ಲ. ಅವರು ಅದನ್ನು ನನ್ನಿಂದ ಪಡದ್ದೂ ಇಲ್ಲ. ಮತ್ತು ಆ ಬಾಬ್ತು ಎಷ್ಟನ್ನಾದರೂ ಪ್ರತಿಫಲ ಪಡೆದು ನಾನು ಅದನ್ನು ಬರಕೊಟ್ಟದ್ದೂ ಅಲ್ಲ ನನ್ನ ಅಕ್ಕ ಕಲ್ಯಾಣಿ ಹೆಗ್ಗಡ್ತಿರಿಗೂ ನನಗೂ ನಮ್ಮ ಕುಟುಂಬದ ಆಡಳಿತೆ ಮತ್ತು ಸದ್ರಿ ಕಲ್ಯಾಣಿ ಹೆಗ್ಗಡ್ತೀರ ಇನ್ನೊಬ್ಬ ಅಳಿಯ ರಘುರಾಮ ಹೆಗ್ಡೇರು ಪಡೆದ ಡಿಕ್ರಿಯನ್ನು ನಾನು ರದ್ದು ಮಾಡ್ಲಿಕೆ ಬಾಬಿನಲ್ಲಿರುವ ವಿವಾದಗಳನ್ನು ಮುಂಡ್ಕೂರು ಕೃಷ್ಣಯ್ಯ ಸೆಟ್ರು ತೀರ್ಮಾನಿಸುವಂತೆ ನಾವು ಉಭಯತರೂ ಒಪ್ಪಿರುವುದರಿಂದ ಅವರ ತೀರ್ಮಾನ ಪ್ರಕಾರ ನಾವು ನಡೆಕೊಳ್ಳುವ ಭದ್ರತೆಯ ಬಗ್ಗೆ ಸದ್ರಿ ಡಿ। ನೋಟನ್ನು ಸದ್ರಿ ಕೃಷ್ಣಯ್ಯ ಸೆಟ್ರು ನನ್ನಿಂದ ಪಡದ್ದಾಗಿರುತ್ತದೆ. ಆ ಪ್ರಕಾರ ಸದ್ರಿ ಕೃಷ್ಣಯ್ಯ ಸೆಟ್ರ ವಶಾಯಿದ್ದಿದ್ದ ಸದ್ರಿ ಡಿ। ನೋಟನ್ನು ಮೇಲ್ನಿಂದ ಕಲ್ಯಾಣಿ ಹೆಗ್ಗಡ್ತೀರು ಮೋಸದಿಂದ ಮೇಲ್ನಿಂದ ಕೃಷ್ಣಯ್ಯ ಸೆಟ್ರಿಂದ ಪಡೆದಿರುತ್ತಾರಾಗಿ ನಾನು ತಿಳಿಯುತ್ತೇನೆ. ಮತ್ತು ನನ್ನನ್ನು ಕಷ್ಟ ನಷ್ಟಗಳಿಗೆ ಗುರಿ ಮಾಡುವ ಕೆಟ್ಟ ಯಿರಾಧೆಯಿಂದ ಅದನ್ನು ಟ್ರಾನ್ಸ್ಫರ್ ವಗೈರೆ ಮಾಡಿ ಅಕ್ರಮ ಲಾಭ ಪಡೆಯುವ ಇರಾಧೆಯಲ್ಲಿರುತ್ತಾರಾಗಿ ಕೂಡಾ ನನ್ನ ತಿಳುವಳಿಕೆಗೆ ಬಂದದೆ. ಅನೇಕ ಕಾರಣಗಳಿಂದ ಸದ್ರಿ ಡಿ। ನೋಟು ಪ್ರತಿಫಲ ಉಳ್ಳದ್ದೂ ಅಲ್ಲ. ಯಾರಿಗೆ ಬಂದದ್ದೂ ಇಲ್ಲ. ಯಾರಿಗೆ ಬರುವಂತಾದ್ದೂ ಅಲ್ಲ. ಆದುದರಿಂದ ಸದ್ರಿ ನೋಟಿನ ಬಾಬ್ತು ಎಷ್ಟನ್ನಾದರೂ ಯಾವಜನ್ನು ತೆರುವರೇ ನಾನು ಬದ್ಧನಲ್ಲ. ಈ ಬಾಬಿನಲ್ಲಿ ನಾನು ಕಲ್ಯಾಣಿ ಹೆಗ್ಗಡ್ತೀರಿಗೂ ಸುಂದರ ಸೆಟ್ರಿಗೂ ತಕ್ಕಸಂಗ್ತಿಗಳನ್ನು ಕಾಣ್ಸಿ ಅಲ್ಯಾದಾ ನೋಟೀಸು ಕೊಟ್ಟಿರುತ್ತೇನೆ. ಇದಕ್ಕೆ ವಿರೋಧವಾಗಿ ಯಾರಾದರೂ ಸದ್ರಿ ನೋಟನ್ನು ಟ್ರಾನ್ಸ್ಫರ್ ವಗೈರೆ ಪಡದ್ದಲ್ಲಿ ಆ ಬಾಬಿನ ನನ್ನ ಖರ್ಚು ನಷ್ಟಗಳನ್ನು ಅವರೇ ತೆರಬೇಕಾಗುವದು.

A. Manjaya Hegde,
12—6—51

ಮುಂಬಯಿ

ಬಿಲ್ಲವರ ಸಂಘದ ಅಧಿಕಾರಿಗಳ ಆಯ್ಕೆ— ಬೊಂಬಾಯಿ ಬಿಲ್ಲವರ ಎಸೋಸಿಯೇಶನಿನ ಆಡಳಿತ ಮಂಡಳಿಯ ಸಭೆಯು ಇದೇ ತಾ. ೩ರಲ್ಲು ಜರಗಿದಾಗ ಈ ಕೆಳಗಿನವರು ಅಧಿಕಾರವರ್ಗಕ್ಕೆ ಆರಿಸಲ್ಪಟ್ಟರು. ಶ್ರೀಗಳಾದ ವೈ. ಐ. ಬಂಗೇರ (ಅಧ್ಯಕ್ಷ), ಯು. ತೌಡಪ್ಪ (ಉಪಾಧ್ಯಕ್ಷ), ಸಿ. ಎ. ಅಮೀನ್ (ಪ್ರಧಾನ ಕಾರ್ಯದರ್ಶಿ), ಟಿ. ತನಿಯ (ಸಹಾಯಕಕಾರ್ಯದರ್ಶಿ), ಜಿ. ಎ. ಕೋಟ್ಯಾನ್ ಮತ್ತು ಎಸ್. ಎಮ್. ಸನಿಲ್(ಜತೆ ಕೋಶಾಧಿಕಾರಿಗಳು) ಬಿ. ಕೆ. ಕೋಟ್ಯಾನ್ ಮತ್ತು ಪಿ. ನಾಗಪ್ಪ (ಜಾಯಿಂಟ್ ಲ್ಯಾಬ್ರರಿಯನ್ಸ್), ಎಮ್. ಕೆ. ಸನಿಲ್,(ಜೆ.ಪಿ.ಸಿ.)

ಬಂಟಮಹಿಳೆಗೆ ಬಿ. ಕಾಮ್. ಡಿಗ್ರಿ—ಮುಂಬಯಿಯ ಪನೆಲ್ ಕಂಪೆನಿಯಲ್ಲಿರುವ ಶ್ರೀ ಕೊರಂಕ್ರಪಾಡಿ ನಾರಾಯಣ ಸೆಟ್ಟರ ಪುತ್ರಿ ಕುಮಾರಿ ಪುಷ್ಪಳು ಮುಂಬಯಿ ಸಿಂಡೆನ್ಹಾಮ್ ಕಾಲೇಜಿನ ವಿದ್ಯಾರ್ಥಿನಿಯಾಗಿದ್ದು ಕಳೆದಬಾರಿ ಜರುಗಿದ ಬಿ. ಕಾಮ್ ಪರೀಕ್ಷೆಯಲ್ಲಿ ಉತ್ತಮ ಶ್ರೇಣಿಯಲ್ಲಿ ತೇರ್ಗಡೆ ಹೊಂದಿರುವುದು ಸಂತೋಷಕರ.

ನಿರಾಶೆಗೆ ಒಳಗಾಗದಿರಿ!

ಉಬ್ಬಸ, ಕಫ, ಶ್ವಾಸಕೋಶದಿಂದ
ನೀವು ವಿಪರೀತ ಕಷ್ಟಪಡುವಿರಾದರೆ, ಹಲವಾರು
ಅಮೌಲ್ಯ ಔಷಧಿಗಳ ಸೇವನೆಯಿಂದ ನಿಮಗೆ ಗುಣವಾಗದಿರುವುದಾದರೆ,
ಆಶಾಭಂಗಕ್ಕೊಳಗಾಗದಿರಿ!
ಅಲ್ಪವೆಚ್ಚ-ಅಲ್ಪಾವಧಿಯೊಳಗೆ ನಿಮ್ಮಬಾಧೆಯನ್ನು ಶಮನಮಾಡುವ
ಖಾತ್ರಿ ಔಷಧಿಯು ನಮ್ಮಲ್ಲಿರುವುದು.
ಒಂದೇ ಒಂದು ಸೀಸೆಯನ್ನು ಕೊಂಡು, ಗುಣಪರೀಕ್ಷೆಮಾಡಿರಿ!
ಈ ಹೊಸ ಮದ್ದಿನಿಂದ ನಿಮಗೆ ಅದ್ಭುತ ಗುಣತೋರುವುದೆಂಬುದು ಖಂಡಿತ.

ಕೂಡಲೆ ಬರೆಯಿರಿ:—

M. Mendonca,
2nd Floor, Ruby Mansion;
Parsee Bazar Street, Fort,-
Bombay.

ಎಂ. ಮೆಂಡೋನ್ಸ,
ಎರಡನೆ ಮಾಳಿಗೆ, ರುಬಿ ಮ್ಯಾನ್ಷನ್
ಪಾರ್ಸಿಬಜ್ಹಾರ್ ಸ್ಟ್ರೀಟ್, ಫೋರ್ಟ್,
ಬೊಂಬಾಯಿ

Approved from by the Govt. of Mysore Certificated by the Agent of the Govt of Cylone & Indian,

ವಿವಿಧ ಪಾತ್ರೆಗಳು



ಯಾವತ್ತೂ ವಿಧದ ಬೆಳ್ಳಿ, ತಾಮ್ರ, ಹಿತ್ತಾಳೆ, ಕಂಚು ಮೊದಲಾದುವುಗಳ ವಿವಿಧ ಪಾತ್ರೆಗಳೂ ಸಾಮಾನುಗಳೂ ರಖಂ ಚಿಲ್ಲರೆಯಾಗಿಯೂ ದೊರೆಯುತ್ತವೆ.

ಕಲ್ಕಂಜೆ ವ್ಯಾಸಾಚಾರ್ಯ,
ರಥಬೀದಿ, ಉಡುಪಿ

ಅಮೃತಾಂಜನ

ತಲೆವೇದನೆ, ಶಿರೋವೇದನೆ, ಉಳುಕು ಕುತ್ತಿಗೆ, ಭುಜ ಹಲ್ಲು ವೇದನೆಗಳಿಗೂ, ಎದೆನೋವು, ಗಾಯಗಳು, ಬಾತುಕೊಳ್ಳುವುದು, ಚೇಳುವಿಷಮುಂತಾದವು, ಪಕ್ಷವಾತ, ನೊಣವೆ. ಮೊದಲಾದ ಎಲ್ಲಾರೋಗಗಳಿಗೂ ಸಿದ್ಧೌಷಧ

REGD
ಮಾರು ಕಟ್ಟೆ ಮತ್ತು ನಮ್ಮಲ್ಲಿ ಸಿಕ್ಕುತ್ತದೆ

ಅಮೃತಾಂಜನ ಲಿಮಿಟೆಡ್
ಮದರಾಸು.
ಬೊಂಬಾಯಿ ಮತ್ತು ಕಲ್ಕತ್ತ.

ಭಾರತದ ಜನತೆಯ ನೂರಕ್ಕೆ 70 ಮಂದಿ ಪ್ರತಿಗಳು ವ್ಯವಸಾಯದಿಂದಲೇ ಜೀವನ ಮಾಡುತ್ತಾರೆ. ಇವರ ಉನ್ನತಿ ಅವನತಿಯು ಕೃಷಿಯ ಉತ್ಪತ್ತಿಯನ್ನೇ ಅನುಸರಿಸುತ್ತದೆ. ವ್ಯವಸಾಯದ ಮತ್ತು ಅದರ ಕ್ರಮದ ಅಭಿವೃದ್ಧಿಯೇ ಇವರ ಅಭಿವೃದ್ಧಿ. ಇವರ ಪ್ರಗತಿಯೇ ಭಾರತದ ಶಕ್ತಿ.

ಇಂದಿನ ಆಹಾರಾಭಾವದ ಸವ ಯುದ್ಧದಲ್ಲಿ ಜೀವನಾವಶ್ಯಕ ವಸ್ತುಗಳ ಬೆಲೆಯು ಯುದ್ಧ ಪೂರ್ವದ ಬೆಲೆಯ ಐದಾರು ಪಾಲಷ್ಟು (ಕಳ್ಳಸಂತೆಯಲ್ಲಿ 10 ಪಾಲಿಗೂ) ಹೆಚ್ಚಾಗಿ ವಾಗ ಕೃಷಿಕರೆಲ್ಲರ ಜೀವನಮಟ್ಟವು ಬಹಳ ಸುಧಾರಿಸಬೇಕಾಯಿತು ಏಕಿದ ಉಬ್ಬು ದಿಂದ ಮತ್ತು ಭಂಡವಾಳಶಾಹಿಗಳ ಭಂಡವಾಳವೂ ಸ್ವಲ್ಪ ಮಟ್ಟಿಗೆ ಕರಗಿ ಕೃಷಿಕರ ಕಿಸೆಯನ್ನು ಸೇರಿದೆಯೆಂದು ತಿಳಿದ ಅರ್ಥಶಾಸ್ತ್ರಜ್ಞರು ಹೇಳುತ್ತಾರೆ ಹಳ್ಳಿಯ ವ್ಯವಹಾರ ಕ್ರಮವನ್ನು ತಿಳಿಯದವರು ಭಾರತದ ಬಹುಸಂಖ್ಯಾತರಾದ ಒಕ್ಕಲಿಗರ ಜೀವನಮಟ್ಟವು ಸುಧಾರಿಸಿಯದೆ ಎಂದು ಸಂತೋಷಪಡಬಹುದು. ಆದರೆ ವಸ್ತುಸ್ಥಿತಿಯು ತೀರಾ ವಿಪರ್ಯಾಸ.

ಸ್ವತಂತ್ರ ಭಾರತದ ಒಕ್ಕಲಿಗರು ಅವರು ಬೆಳೆಸಿದ ಬೆಳೆಯ ವಿಚಾರದಲ್ಲಿ ಅವರು ಸಂಪೂರ್ಣ ಪರತಂತ್ರರು. ಬಿಸಿಲು ಮಳೆಯನ್ನು ಗಣಿಸದೆ ಹಗಲಿಡೀ ಬೆವರು ಸುರಿಸಿ ದುಡಿದು ಮಧ್ಯರಾತ್ರಿಯ ಕಾಲದಲ್ಲೂ ಕನವರಿಕೆಯಾಗಿ ಎಚ್ಚೆತ್ತು ಗದ್ದೆಯ ನೀರನ್ನು ನೋಡಲು ಹೋಗುವ ನಮ್ಮ ಭಾರತದ ಸಂತಾನ ಉತ್ಪಾದಕರಿಗೆ ಅವರು ಬೆಳೆಯಿಸಿದ ಕಾಳನ್ನು ಉಪಯೋಗಿಸುವಲ್ಲಿ ಅವರು ಸಂಪೂರ್ಣ ಪರತಂತ್ರರು! ಸ್ವತಂತ್ರ ಭಾರತದ ಪ್ರಜೆಗಳಿಗೆ ಅತ್ಯುತ್ತಮ ಮತ್ತು ಅವಶ್ಯಕ ವ್ಯಕ್ತಿಸ್ವಾತಂತ್ರ್ಯಗಳನ್ನು ದಯಪಾಲಿಸಿದ ಭಾರತರಾಜ್ಯಘಟನೆಯು ಹಳ್ಳಿಗಳಲ್ಲಿ ಅಸಾಧ್ಯವಾಗಿ ತೋರುವುದು. ಭಾರತ ರಾಜ್ಯಘಟನೆಯ ಸಂವಿಧಾನವು ಹಳ್ಳಿಗಳನ್ನು ಮುಟ್ಟುವಾಗ ತೀರಾ ವಿರುದ್ಧವಾಗಿ ಮುಟ್ಟುವುದು.

ಹುಲ್ಲಿನಿಂದ ಬೇರ್ಪಟ್ಟ ಕಾಳು ಭೂಮಿಯನ್ನು ಮುಟ್ಟುವವರೊಡನೆಯೇ ಧನಿಯ ಚೀಲವನ್ನು ಸೇರುವುದು. "ಗೇಣಿಯು ಹೋದಮೇಲೆ, ಬಡವರ ಮಕ್ಕಳಿಗೆ ಉಳಿಯುವುದು ಹುಲ್ಲೇ" (ಮರಳೆ ಹಾಡ್ದಿಗೆ, ಪುಟ 48) ಎಂದು ಸೂರನು ಸರಸಮ್ಮನಿಗೆ ಬುದ್ಧಿಹೇಳಿದ್ದು ನೂರಕ್ಕೆ ನೂರರಷ್ಟು ಸತ್ಯ. ಬೆಳೆದವನು ಉಣಬೇಕಾದರೆ ಹುಲ್ಲನ್ನು ಹಾಳ್ಮಡೆಗಳಿಂದ ಮೆಟ್ಟಿಸಿ ಸಿಕ್ಕಿದ ಕಾಳನ್ನು ಉಪಯೋಗಿಸಬೇಕು.

ಜನಮತ

ಒಕ್ಕಲಿಗರೂ, ಆಹಾರದ ಅಭಾವವೂ

ಧನಿಯು ಗ್ರಾಮೋದ್ಯೋಗಸ್ಥರನ್ನು ಸಂಬಳದಲ್ಲಿ ಒರಿಸಿಕೊಂಡು ಅದಷ್ಟೂ ಕಡಿಮೆ ಕಾಳನ್ನು ಲೆಯಾಯ ವಕ್ಕಲಿಗರ ಹೆಸರಿನಿಂದ ಯಾವತ್ತು ಮಾಡಿಸಿ ಸರಕಾರಕ್ಕೆ ಕೊಡುವರು ಉಳಿದ ಕಾಳು ಗುತ್ತುಸ್ಥಳಗಳಿಗೆ ರವಾನಿಸಲ್ಪಡುವುದೂ ಉಂಟು ಒಕ್ಕಲಿಗನಬಾಬ್ತು ಧನಿಗೆ ಬರುವ ಗೇಣಿಯನ್ನು ಮೇಲೆ ಹೇಳಿದ ರೀತಿಯಲ್ಲಿ ತಂದ ಕಾಳಿನಲ್ಲಿ ಅವನ ಪುಣ್ಯದಿಂದ ಎಲ್ಲಿಯಾದರೂ ಸ್ವಲ್ಪ ಹೆಚ್ಚಿಗೆ ಕಾಳು ಉಳಿದರೆ ಆ ಕಾಳಿಗೆ ಒಕ್ಕಲು ಧನಿಯಿಂದ ಸರಕಾರವೂ ನಿಶ್ಚಯಿಸಿದ ದರವನ್ನೇ ತೆಗೆದುಕೊಳ್ಳಬೇಕು ಕಡಿಮೆಯಾದರೆ ಅವನು ಬೆಳೆದ ರೊಕ್ಕದ ವಸ್ತುಗಳನ್ನು (Commercial Crops) ಸಾಮಾನ್ಯ ದರಕ್ಕೂ ಸ್ವಲ್ಪ ಮಟ್ಟಿಗೆ ಕಡಿಮೆಯಲ್ಲಿ ಕೊಡಬೇಕು. ಒಕ್ಕಲಿಗರು ಆಹಾರ ಧಾನ್ಯಗಳನ್ನು ಬೆಳೆಸುವ ವಿಚಾರದಲ್ಲಿ ಉದಾಸೀನರಾಗಿರುವುದು ರೊಕ್ಕದ ಬೆಳೆಗಳನ್ನು ಬೆಳೆಸುವ ವಿಚಾರದಲ್ಲಿ ಉತ್ಸಾಹ ತೋರಿಸುವ ಕಾರಣವೇನು?

ಹಳ್ಳಿಗಳಲ್ಲಿ ಈ ರೀತಿಯ ಸುಲಿಗೆಯು ಕ್ರಮವು ಕೊನೆಗೊಳ್ಳುವ ತನಕ "ಹೆಚ್ಚು ಆಹಾರ ಬೆಳೆಯಿರಿ" ಯೋಜನೆಯು ಸಫಲವಾಗಿಯಾಗದು ಒಕ್ಕಲಿಗರು ಉತ್ಸಾಹದಿಂದ ಆಹಾರ ಧಾನ್ಯಗಳನ್ನು ಬೆಳೆಯಿಸಬೇಕಾದರೆ ಅವರು ಕಷ್ಟಪಟ್ಟು ಬೆಳೆಯಿಸಿದ ಕಾಳನ್ನು ಅವರು ಇಚ್ಛಿಸಿದಂತೆ ಯೋಗ್ಯ ಭದ್ರತೆಯನ್ನು ಸರಕಾರವು ಅವರಿಗೆ ಕೊಡಬೇಕು. ಸಾಧಾರಣ ಹತ್ತು ವರ್ಷಗಳಿಂದೀಚೆ ಆಹಾರ ಧಾನ್ಯದ ಬೆಲೆಯು ವಿಪರೀತ ಹೆಚ್ಚಿರುವುದರಿಂದ ಧನಿಯರು ಗೇಣಿಯನ್ನು ವರ್ಷ, ವರ್ಷಕ್ಕೆ ಹೆಚ್ಚಿಸುತ್ತಿರುವುದೂ ಉಂಟು. "ಈ ಗೇಣಿಕೊಟ್ಟು ಗದ್ದೆ ಮಾಡುವುದೆಂದರೆ ಪರಮ ಸಂಕಟ" (ಮರಳೆ ಮಷ್ಣಿಗೆ ಪುಟ 293) ಎಂದು ನಾಗವೇಣಿಯು ತನ್ನ ಮೂಲಗೇಣಿ ಹೊಲದಲ್ಲಿ ಬೆಳೆದ ಐವತ್ತು ಮುಡಿ ಬತ್ತದಲ್ಲಿ ಮೂವತ್ತು ಮುಡಿ ಬತ್ತವನ್ನು ಪಟ್ಟಧಾರನಿಗೆ ಕೊಟ್ಟು ಈ ಉದ್ಗಾರವನ್ನು ತೆಗೆಯಬೇಕಾದರೆ ಸಾಮಾನ್ಯ ಚಾಲಗೇಣಿ ಒಕ್ಕಲಿಗರ ಸ್ಥಿತಿಯು ಹೇಗಿರಬೇಕು?

ಭಾರತದ ಒಕ್ಕೂಟದ ಜನತೆಯಲ್ಲಿ ಗಿರಣಿ, ಗಣಿ, ಕಾರ್ಖಾನೆ, ರೈಲು, ಮೋಟಾರು, ಟೀಂಕು ಮತ್ತು ಬಂದರುಗಳಲ್ಲಿ ಕೆಲಸ ಮಾಡುವವರ ಹಕ್ಕು ಬಾಧ್ಯತೆಗಳನ್ನು ಕಾಪಾಡಲು ಕಾಯಿದೆಗಳಿವೆ. ಅವರಲ್ಲಿ ಯೋಗ್ಯ ಸಂಘಟನೆಯೂ ಇದೆ "ನಿಶ್ಚಿತ ಕೆಲಸ ಹೆಚ್ಚೆಚ್ಚು ಅನುಕೂಲತೆಗಳನ್ನು ಸಾಧಿಸಲು ಮಜೂರರ ಪಕ್ಷಗಳೂ, ರಾಜಕೀಯ ಪಕ್ಷಗಳೂ, ಪ್ರಯತ್ನಿಸುತ್ತವೆ. ಪಟ್ಟಣಗಳಲ್ಲಿ ಪರರ ಅಧೀನದಲ್ಲಿ ಕಾಯಕಪ್ರವಮಾಡುವವರ ಹಕ್ಕು ಬಾಧ್ಯತೆಗಳನ್ನು ಕಾಪಾಡಲು ಲೇಬರ್ ಕಮಿಶನರ್, ಲೇಬರ್ ಆಫೀಸರ್ಸ್ ಮೊದಲಾದವರನ್ನು ಸರಕಾರವು ನೇಮಿಸಿಯದೆ ಆದರೆ ಅವರ ಜೀವನಕ್ಕೂ ನಿಕೃಷ್ಟ ರೀತಿಯಲ್ಲಿ ಜೀವನ ಸಾಗಿಸುವ ಒಕ್ಕಲಿಗರ ವಿಚಾರದಲ್ಲಿ ಯೋಗ್ಯ ಸುಧಾರಣೆಯನ್ನು ಸರಕಾರವು ಮಾಡದಿರುವುದು ವಿಷಾದಕರವಿದೆ. ಒಕ್ಕಲಿಗರ ಭದ್ರತೆಯ ದೃಷ್ಟಿಯಿಂದ ಆಡಳಿತೆಯ ಅನುಕೂಲತೆ ಹೊಂದಿಕೊಂಡು ಒಂದೊಂದು ತಾಲೂಕಿನಲ್ಲಿ ಒಬ್ಬೊಬ್ಬ ಟೆನೆಂಟ್ಸ್ ವೆಲ್‌ಫೇರ್ ಆಫೀಸರನ್ನು ಏಕೆ ನೇಮಿಸಬಾರದು?

ಸರದಾರ ವಲ್ಲಭಭಾಯಿ ಪಟೇಲರ ಅಧ್ಯಕ್ಷತೆಯಿಂದ ರಾಷ್ಟ್ರೀಯ ಕಾಂಗ್ರೆಸಿನ ಕರಾಚಿ ಅಧಿವೇಶನದಲ್ಲಿ ಮಂಜೂರಾದ 'ಉಳುವವನಿಗೆ ಭೂಮಿ' ಎಂಬ ಠರಾವನ್ನು ಕಾಯಿದೆ ರೂಪಕ್ಕೆ ತರಲು ಜನಪ್ರತಿನಿಧಿಗಳಾದ ಕಾಂಗ್ರೆಸ್ ಸರಕಾರವು ಅಳುಕುವ ಕಾರಣವು ತಿಳಿಯುವುದಿಲ್ಲ. ಹಳ್ಳಿಗರ ಸುಖವೇ ಭಾರತದ ಮೋಕ್ಷದ ಮಾರ್ಗವೆಂದು ರಾಷ್ಟ್ರಪಿತನು ಜಗತ್ತಿಗೆ ಸಾರುತ್ತಿದ್ದುದು ಜನಪ್ರತಿನಿಧಿಗಳಾದ ಕಾಂಗ್ರೆಸಿಗರು ಮರೆತಿರಲಾರರು.

ಮಹಾತ್ಮಾ ಗಾಂಧಿಯವರ ಅಭಿಪ್ರಾಯವನ್ನು ಕಾಯಿದೆ ರೂಪಕ್ಕೆ ತರದೆ ಇನ್ನೂ ವಿಳಂಬ ಮಾಡುವುದಾದರೆ ಒಕ್ಕಲಿಗರ ಹಿತದೃಷ್ಟಿಯಿಂದ ಕೆಲವು ಸುಧಾರಣೆಗಳನ್ನು ಮಾಡಬಾರದೇ?

ಧನಿಯರು ವಕ್ಕಲಿಗರಿಂದ ಹತ್ತು ವರ್ಷಕ್ಕೂ ಪೂರ್ವದ ಒಂದು ವರ್ಷದ ಎಮರ್ಜರಿಯಲ್ಲಿ ಕಾಣುವಷ್ಟೇ ಗೇಣಿಯನ್ನು ತೆಗೆದುಕೊಳ್ಳಬೇಕು. ಧನಿಯರು ಗೇಣಿಯನ್ನು ಹಣದ ರೂಪದಿಂದಲೇ ಪಡೆಯುವಂತಾಗಬೇಕು. ಬೇಸಾಯಗಾರರು ಆಹಾರ ಧಾನ್ಯಗಳನ್ನು ಹೆಚ್ಚಿನ ಉತ್ಸಾಹದಿಂದ ಬೆಳೆಯಿಸಬೇಕಾದರೆ (ಅಕ್ಕಿ, ಗೋಧಿ, ಜೋಳ ಮತ್ತು ರಾಗಿ) ಅವಶ್ಯಕ ಆಹಾರ ವಸ್ತುಗಳಾದ ಇವುಗಳ ಬೆಲೆಯನ್ನು 10%ರಷ್ಟಾದರೂ ಹೆಚ್ಚಿಸಬೇಕು. ಧನಿಗೆ ಒಕ್ಕಲಿಗರು ಹಣದ ರೂಪದಲ್ಲಿ ಕೊಡುವ ಗೇಣಿಯ ಹಣದಲ್ಲಿ 25%ರಷ್ಟು ದರದ ಬೋನಸ್ ರೂಪದಲ್ಲಿ ಒಕ್ಕಲಿಗರಿಗೆ ಸಿಗಬೇಕು. ಒಕ್ಕಲಿಗರನ್ನು ಧನಿಗಳ ಹಂಗಿನಿಂದ ರಕ್ಷಿಸಲು ಕಡಿಮೆ ಬಡ್ಡಿಯಲ್ಲಿ "ಟೇಕವಿ" ಸಾಲವನ್ನು ಕೊಡುವ ಕ್ರಮವನ್ನು ಸಾರ್ವತ್ರಿಕವಾಗುವಂತೆ ವಿಸ್ತರಿಸಬೇಕು

—ಕೆ ಶಂಕರ ಶೆಟ್ಟಿ, ಸೌಕೂರು.

— ಮಕ್ಕಳನ್ನು ಹಡೆಯುವುದು ಸಾಕು —

ಅಶಕ್ತ ಸ್ತ್ರೀಯರಿಗೆ **ಬರ್ಥ ಕಂಟ್ರೋಲ** ರೋಗ ಗೃಹಸ್ಥ ಹೆಣ್ಣು ಮಕ್ಕಳಿಗೆ

ಏಳು ದಿವಸ ಈ ಮಾತ್ರೆಗಳನ್ನು ಸೇವನ ಮಾಡಿದರೆ ಮುಂದೆ ಖಂಡಿತವಾಗಿ ಮಕ್ಕಳಾಗುವದಿಲ್ಲ. ಸ್ತ್ರೀಯರು ಪ್ರತಿತಿಂಗಳು ಸರಿಯಾಗಿ ಮುಟ್ಟಾಗುತ್ತಾರೆ. ಅಲ್ಲದೆ ಸ್ತ್ರೀಯರ ಬಿಳಿಸೆರಗು, ಪ್ರದರರೋಗ, ಹೊಟ್ಟೆಕುಟ್ಟು ಗುಣವಾಗಿ ಸ್ತ್ರೀಯು ಗರ್ಭಿಣಿಯಾಗುವದಿಲ್ಲ. ಈ ಔಷಧವನ್ನು ಸೇವಿಸುವ ಕ್ರಮ: ಪ್ರತಿದಿವಸ ಮುಂಜಾನೆ ೧ ಗುಳಿಗೆ ಮಧ್ಯಾಹ್ನಕ್ಕೆ ೧ ಗುಳಿಗೆ, ಸಂಜೆಗೆ ೧ ಗುಳಿಗೆಯಂತೆ ಊಟದ ಮೊದಲು ಸೇವಿಸಬೇಕು. ಏಳುದಿವಸ ಈ ಔಷಧವನ್ನು ಬಿಸಿನೀರಿನಲ್ಲಿ ಸೇವಿಸಬೇಕು.

ಪಥ್ಯ:—ಹರವೀಪಲ್ಲೆ ಬಿಡಬೇಕು. ೭ ದಿವಸ ಸಂಪೂರ್ಣ ಔಷಧದ ಕಿಮ್ಮತು ರೂಪಾಯಿ 5—0—0. ಪೋಸ್ಟ ಚಾರ್ಜು ೧೨ ಆಣೆ.

ಮಾಲಕರು:—ಹಾಲಪ್ಪ ಫಕೀರಪ್ಪ ದಾವಣಗೇರಿ

ಆಯುರ್ವೇದ ಔಷಧಾಲಯ ಗದಗ-ಸಿಟಿ.

ಏಜಂಟರು:—ಹುಬ್ಬಳ್ಳಿ ಫಾರ್ಮಸಿ,—ಹುಬ್ಬಳ್ಳಿ, ಗದಗ, ಬಾಗಲಕೋಟೆ ಧಾರವಾಡ ವಿಜಾಪುರ— ಸಂಜುಡೇಶ್ವರ ಮೂರ್ತಿ ದಾವಣಗೇರಿ ಚನ್ನಪ್ಪ ಸಿದ್ದಲಿಂಗಪ್ಪ ಧಾರವಾಡಕರ ವಿಜಾಪುರ ದಾವಣಗೇರಿ:—ದಾವಣಗೇರಿ ಪ್ರೆಸ್, ಆರ್ ಎಲ್ ಕನಮಲಪಾರ್, ಕಮಿಶನ್, ಏಜೆಂಟ್, ಟ್ಯಾಡಿಗಿ

ಗೊನೋರಿಯಾ ಪರಮಾರೋಗ ಉಷ್ಣ ರೋಗಕ್ಕೆ ಔಷಧ

೭ ದಿವಸಗಳಲ್ಲಿ ಈ ರೋಗ ಗುಣ ಹೊಂದುವದು ಗ್ಯಾರಂಟೀ

ಶರೀರದಿಂದ ಕೀವು ಬರುತ್ತಿದ್ದರೆ, ಧೋತರಕ್ಕೆ ಹಳದೀ ಹಾಗು ಹತ್ತುತ್ತಿದ್ದರೆ, ಶರೀರದಿಂದ ಬಾವು, ಶರೀರದ ತೊಗಲು ಹಿಂದಕ್ಕೆ ಸರಿಯದಿದ್ದರೆ, ಶರೀರದ ಸುತ್ತ ಕ್ಷಯವಾಗಿದ್ದರೆ.... ಚಟ್ಟಿ ಬಿದ್ದಿದ್ದರೆ, ಉಷ್ಣದಿಂದ ಚೀರು ಇಳಿದಿದ್ದರೆ, ಉಡುಚು ಆಗಿದ್ದರೆ, ಮೂಲವ್ಯಾಧಿ, ಭಗೇಂದ್ರ, ಗಂಡುಮಾಲಿ, ಕೈಕಾಲು ಸೂಲಿ, ಅರ್ಧಾಂಗ ವಾಯು ನಡುಸೋಯುವದು ಸ್ತ್ರೀಯರ ಬಿಳಿಕೆಂಪು ಸೆರಗು ಹೋಗುತ್ತಿದ್ದರೆ, ಹೊಟ್ಟೆಕುಟ್ಟು ಗರ್ಮಿಯಿಂದ ಗರ್ಭಕೋಶ ನಾಶಹೊಂದಿದ್ದರೆ, ಸರಿಯಾಗಿ ಭೇದಿಯಾಗದಿದ್ದರೆ, ಮೂತ್ರ ಉರಿಯುತ್ತಿದ್ದರೆ, ಈ ಎಲ್ಲಾ ಬೇನೆಗಳಿಗೆ ಈ ನಮ್ಮ ಔಷಧವು ಇರುವದು. ಮೊದಲ ದಿವಸ ಬೆಳಿಗ್ಗೆ ೧ ಗುಂಜಿ ಪ್ರಮಾಣ ಔಷಧ ಜರ್ದಕೊಲೆ ತುಪ್ಪದಲ್ಲಿ ತಕ್ಕೊಳ್ಳಬೇಕು ಮೊದಲ ದಿವಸ ಮಾತ್ರವೆ ಮುಂಜಾನೆ ಸಂಜೆ ಎರಡು ಸಾರೆ ತಕ್ಕೊಳ್ಳಬೇಕು. ಮುಂದೆ ದರ ದಿವಸ ಬೆಳಿಗ್ಗೆ ಒಂದೇ ಸಾರೆ ೭ ದಿವಸ ಸೇವಿಸಬೇಕು. ಈ ಔಷಧವನ್ನು ಬೇಸಿಗೆಯಲ್ಲಿ ತುಪ್ಪದಲ್ಲಿ, ಥಂಡಿ ಮಳೆಗಾಲದಲ್ಲಿ ಜೇನತುಪ್ಪದಲ್ಲಿ ತಕ್ಕೊಳ್ಳಬೇಕು. ಪಥ್ಯ: ಹುಳಿಖಾರ, ಕುಂಬಳಕಾಯಿ, ಒಕ್ಕಿಟ್ಟ ಬಿಡಬೇಕು.

ಬಾಟ್ಲಿ ೧ಕ್ಕೆ ಹರೂ. ಪೋಸ್ಟ ಚಾರ್ಜ ೮ ಆಣೆ

ಏಜೆಂಟರು:—ಗದಗ:—ಗದಗ ಫಾರ್ಮಸಿ, ಹುಬ್ಬಳ್ಳಿ:—ಹುಬ್ಬಳ್ಳಿ ಫಾರ್ಮಸಿ ಬಾಗಲಕೋಟೆ:-ಬಾಗಲಕೋಟೆ ಫಾರ್ಮಸಿ, ಧಾರವಾಡ:-ಧಾರವಾಡ ಫಾರ್ಮಸಿ, ದಾವಣಗೇರಿ: ದಾವಣಗೇರಿ ಪ್ರೆಸ್. ನಂಜುಡೇಶ್ವರ ಮೂರ್ತಿ ದಾವಣಗೇರಿ.

ಪತ್ರವ್ಯವಹಾರ ಮಾಡತಕ್ಕ ಮಾಲಕರ ವಿಳಾಸ.

ರೇವಣಸಿದ್ಧಪ್ಪ ಹಾಲಪ್ಪ ದಾವಣಗೇರಿ,

ಆಯುರ್ವೇದ ಔಷಧಾಲಯ, ಗದಗ.

Notice

ಕುಂದಾಪುರದ ಮು. ಕೋರ್ಟಿನಲ್ಲಿ

ಕ್ರಮ.ನಂಬ್ರ 90,1951

1 ವಾದಿ- ಕೃಷ್ಣಯ್ಯ ಶೆಟ್ಟಿ ಪಳ್ಳಮನೆ ಸುಬ್ಬಣ್ಣ ಶೆಟ್ಟಿ ಮಗ ಉಡುಪಿ ತಾಲ್ಲೂಕು ಹೊಸಾಳ ಗ್ರಾಮದಲ್ಲಿರುವವ

ಪ್ರತಿವಾದಿ ಅಣ್ಣಯ್ಯ ಪೂಜಾರಿ, ಬಟ್ಟರ ಕಟ್ಟೆ ಕೊರಗ ಪೂಜಾರಿ ಮಗ ಸದ್ರಿ ಹೊಸಾಳ ಗ್ರಾಮ

ಸದ್ರಿ ದಾವೆಯ ವಾದಿಯು ಪ್ರತಿವಾದಿಗೆ ಈ ಮೂಲಕ ತಿಳಿಯಪಡಿಸುವುದೇನಂದರೆ ವಾದಿಯು ಪ್ರತಿವಾದಿಯಿಂದ ಬರತಕ್ಕ ಗೇಣಿ ಬಾಕಿ ಬಾಬ್ತು ರೂಪಾಯಿ 637-0-6ನ್ನು ವಸೂಲು ಮಾಡಿಕೊಳ್ಳುವರೆ ಪ್ರತಿವಾದಿಯ ಮೇಲೆ ದಾಖಲು ಮಾಡಿದ ಮೇಲಿನ ದಾವೆಯು ತಾರೀಕು25-6-51ಕ್ಕೆ ಸದ್ರಿ ಕೋರ್ಟಿನಲ್ಲಿ ತನ್ನಿಗೆ ಬಂದಿರುತ್ತದೆ. ಆ ಕುರಿತು ಆಕ್ಷೇಪ ಇದ್ದರೆ ಮೇಲಿನ ಕೋರ್ಟಿನಲ್ಲಿ ತನ್ನ ದಿವಸ ಹಾಜರಿಯಾಗಿ ಮಾಡಿಕೊಳ್ಳತಕ್ಕದ್ದು ತಿಳಿದಿರುವುದು.

Soorappa Shetty, Kolkebail
Advocate Plantiff

ಮೊಕ್ಕಾಂ ಕುಂದಾಪುರ ತಾ. 7-6-51

ಕಾಸರಗೋಡು ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ

O. S No 15,1951.

M- ಚಾತುಕುಟ್ಟಿ ನಂಬ್ಯಾರ್ ಕೂಡಾ —ವಾದಿಯರು

ಮತ್ತು

ಲಕ್ಷ್ಮೀನಾರಾಯಣ ಕೆದಿಲ್ಲಾಯ ಕೂಡಾ —ಪ್ರತಿವಾದಿಯರು

ಇವರೊಳಗೆ

ಸದ್ರಿ ವ್ಯಾಜ್ಯದ ವಾದೀರ ಕಡೆಯಿಂದ ನೋಟೀಸು.

ಪ್ರತಿವಾದಿಯಿಂದ ವಾದೀರಿಗೆ ಬರತಕ್ಕ ನಷ್ಟದ ಐವಜು ರೂಪಾಯಿ 205-0-0ನ್ನು ವಸೂಲು ಮಾಡಿಕೊಳ್ಳುವರೆ ಸದ್ರಿ ವಾದೀರು ದಾಖಲು ಮಾಡಿದ ಮೇಲ್ಕಂಡ ವ್ಯಾಜ್ಯವು ತಾರೀಕು 18-6-1951ಕ್ಕೆ ತನ್ನಿಗೆ ಇಟ್ಟಿರುವುದರಿಂದ ಆ ದಿವಸ ಹಾಜರಾಗದಿದ್ದರೆ ಎಕ್ಸ್‌ಪಾರ್ಟಿಯಾಗಿ ತೀರ್ಮಾನಿಸಲಾದೀತೆಂಬ ಸಂಗ್ತಿ, ಈ ಮೂಲಕ ತಿಳಿಸಲಾಗಿಯದೆ.

B. Padmanabh.
Advocate for Plainiffs.

Kasaragod 7-6-1951

ಪ್ರವಾಸಿಯ ಪತ್ರಗಳು ೫

ಕಳೆದ ತಿಂಗಳ ೨೨ನೆಯ ದಿನ ಆದಿತ್ಯವಾರ ಈ ನಗರವನ್ನು ಸೇರಿದ್ದಾಯಿತು. ಹಾಗೆ ಸೇರಿ ಎರಡು ವಾರಗಳ ಕಾಲ ಕಳೆದೂ ಆಯಿತು. ಈ ಅವಧಿಯಲ್ಲಿ ಅನೇಕ ಸ್ಥಳಗಳಲ್ಲಿ ಸಂಚರಿಸಿ, ಹಲವಾರು ಸಂಸ್ಥೆಗಳನ್ನು ನೋಡಿದೆನಾದರೂ ನೋಡಿದುದನ್ನೆಲ್ಲ ಬಣ್ಣಿಸುವುದು ತುಸು ಕಷ್ಟದ ಮಾತೇ. ಲಂಡನ್ ಪಟ್ಟಣ ಸಣ್ಣ ನಗರವಲ್ಲ. ನಾನು ನೋಡಿದ ಇನ್ನಾವ ನಗರಕ್ಕಿಂತಲೂ ಬಹು ದೊಡ್ಡದಾಗಿದ್ದು ಹೊಸಬರಿಗೆ ವಿಸ್ಮಯ ಹುಟ್ಟಿಸುತ್ತದೆ. ಹೋಲಿಕೆಗೆ ಹೇಳುವುದಾದರೆ ಮುಂಬಯಿ ನಗರದ ಹಂನಾಲ್ಕರಷ್ಟು ದೊಡ್ಡದಿದೆ ಎನ್ನಬಹುದು. ಇದರ ವಿಸ್ತೃತಿಯೇ ೬೯೩ ಚದರಮೈಲು. ಇದರ ಜನಸಂಖ್ಯೆ ಎಂಟೂವರೆ ಮಿಲಿಯದಷ್ಟಿದ್ದು, ಒಟ್ಟು ಬ್ರಿಟನಿನ ಕಾಲಂಶವಾಗುತ್ತದೆ. ಈ ನಗರದ ಮಧ್ಯಕ್ಕೆ ಥೇಮ್ಸ್ ನದಿ ಅಂಕುಡೊಂಕಾಗಿ ಹರಿಯುತ್ತಿದೆ. ನದಿಯಾದರೂ ಅಷ್ಟು ದೊಡ್ಡದಲ್ಲ. ಟಿಲ್‌ಬರಿಯದಲ್ಲಿ ಅದು ಒಂದು ಫರ್ಲಾಂಗು ಅಗಲವಾಗಿದ್ದರೆ, ನಗರ ಮಧ್ಯದಲ್ಲಿ ನೂರು ಗಜ ಅಗಲವಾಗಿದೆಯೋ ಏನೋ. ಮಂಗಳೂರಿನ ನೇತ್ರಾವತಿ ನದಿ ಇದಕ್ಕಿಂತ ದೊಡ್ಡದು, ಇನ್ನಷ್ಟು ಮನೋಹರವಾದುದು. ಇಲ್ಲಿನ ವಾಹನ ಸಂಚಾರಗಳಿಂದಾಗಿ ನದಿಯ ನೀರು ಸಹ ಕಲಕು ರಾಡಿಯಾಗಿದೆ. ನದಿಯ ಇಕ್ಕಡೆಗಳಲ್ಲೂ ಉದ್ದಕ್ಕೆ ದಂಡೆಗಳೂ, ದಾರಿಗಳೂ ಇವೆ. ಅಲ್ಲಿನ ವಿದ್ಯುದ್ದೀಪಗಳ ದೆಸೆಯಿಂದ ಈ ದಾರಿಗಳು ಮನೋಹರವಾಗಿ ಕಾಣಿಸುತ್ತವೆ.

ನನ್ನ ತಿರುಗಾಟದ ವೇಳೆ ಲಂಡನಿನಲ್ಲಿ ಈ ನಗರಸಂಚಾರದ ಕೆಲಸವನ್ನು ಅನ್ಯರ ಸಹಾಯವಿಲ್ಲದೆ ಒಬ್ಬನೇ ಮಾಡಬೇಕಾಗಿ ಬಂದುದರಿಂದ ಮೊದಲು ನಗರದ ನಕ್ಷೆಯನ್ನು ತೆಗೆದುಕೊಂಡು ಇಲ್ಲಿನ ಪ್ರಾಮುಖ್ಯವಾದ ರಸ್ತೆಗಳನ್ನೂ ಸ್ಥಳಗಳನ್ನೂ ಥೇಮ್ಸ್ ನದಿಯನ್ನು ಗುರುತಿಸಿಕೊಂಡೆ. ಇಲ್ಲಿನ ಮುಖ್ಯ ಬೀದಿಗಳಲ್ಲಿ ಒಕ್ಸ್‌ಫರ್ಡ್ ಬೀದಿ, ನ್ಯೂ ಒಕ್ಸ್‌ಫರ್ಡ್ ಬೀದಿ ಮತ್ತು ಹೊಲ್ಬರ್ನ್ ಎಂಬುವು ಇವಕ್ಕೆ ಸಮಾನಾಂತರವಾಗಿ ಹಿಕೆದಿವೆ; ಅದರ ದಕ್ಷಿಣಕ್ಕೆ ಸಮಾನಾಂತರದಲ್ಲಿ ಮಾಲ್ ಮತ್ತು ಫ್ಲೀಟ್ ಸ್ಟ್ರೀಟುಗಳು ಇರುತ್ತವೆ. ಪ್ರವಾಸಿಯನ್ನು ಬೆರಗುಗೊಳಿಸುವಷ್ಟು ರಸ್ತೆಗಳೂ, ಅಡ್ಡರಸ್ತೆಗಳು! ಹೀಗೆ ಮುಖ್ಯ ಬೀದಿಗಳನ್ನು ಗುರುತಿಸಿ, ಸಂಚರಿಸಲು ಕಲಿತರೂ, ಕೆಲವೊಮ್ಮೆ ಜನಗಳನ್ನು ಕೇಳಬೇಕಾಗುತ್ತದೆ. ಕೇಳಿದರೆ ಅವರು ತುಸು ದೂರ ಜತೆಗೆ ಬಂದು, ಸಮನಾದ ಹಾದಿಯನ್ನು ತೋರಿಸುತ್ತಾರೆ. ಆದರೆ ಹೆಚ್ಚಾಗಿ ಆ ಪ್ರಸಂಗ ಬಂದೊದಗುವುದಿಲ್ಲ. ಏಕೆಂದರೆ ಹಾದಿ ಬೀದಿಗಳ ಹೆಸರನ್ನು ಅಲ್ಲಲ್ಲಿ ಗೋಡೆಗಳ ಮೇಲೆ ಸ್ಪಷ್ಟವಾಗಿ ಅಂಕಿಸಿರುತ್ತಾರೆ.

ಇಲ್ಲಿನ ಕಟ್ಟಡಗಳೆಲ್ಲ ನಮ್ಮ ಮುಂಬಯಿ ನಗರದ ಕಟ್ಟಡಗಳಿಗಿಂತಲೂ ಬಹು ದೊಡ್ಡವಾದುವು. ಹೆಚ್ಚಿನ ಕಟ್ಟಡಗಳು ಆರೆಂಟು ಅಂತಸ್ತು ಉಳ್ಳವು. ನಗರ ಮಧ್ಯವನ್ನು ಬಿಟ್ಟು ದೂರ ಸಂಚರಿಸಿದ ಹಾಗೆ, ಮೂರು ನಾಲ್ಕು ಮಹಡಿಯ ಮನೆಗಳು ಕಾಣಸಿಗುತ್ತವೆ. ಮತ್ತೂ ದೂರಕ್ಕೆ ಸರಿದರೆ ಒಂದೊಂದೇ ಮಹಡಿಯ ಮನೆಯನ್ನು ಕಾಣಬಹುದು. ಈ ನಗರದ ಕೇಂದ್ರ ಭಾಗ ಅಂಗಡಿಗಳಿಂದಲೂ, ಆಫೀಸುಗಳಿಂದಲೂ ತುಂಬಿದ ವ್ಯಾಪಾರದ ಕೇಂದ್ರ. ಒಂದೊಂದು ಅಂಗಡಿ ಒಂದೊಂದು ವಿಶಿಷ್ಟ ತರದ ಸಾಮಾನನ್ನು ಮಾತ್ರ ವಿಕ್ರಯಿಸುತ್ತದೆ. ಗಂಡಸರ ಬಟ್ಟೆ ಮಾರುವವರು ಬೇರೆ. ಹೆಂಗಸರ ಬಟ್ಟೆ ಮಾರುವವರು ಬೇರೆ, ಪಾದರಕ್ಷೆಯ ಅಂಗಡಿಗಳು ಬೇರೆ, ಹಣ್ಣುಗಳ ಅಂಗಡಿ ಬೇರೆ. ಅಲ್ಲಲ್ಲಿ ವಿಶ್ರಾಂತಿ ಗೃಹಗಳು ಕಾಣಸಿಗುತ್ತವೆ. ಇವುಗಳ ಸಂಖ್ಯೆ ಬಹು ಹೆಚ್ಚು. ಈ ವಿಶ್ರಾಂತಿ ಗೃಹಗಳಲ್ಲಿ ತಿಂಡಿ ತಿನಸನ್ನು ಕೊಡುವವರೆಲ್ಲ ಹೆಂಗಸರೇ. ನಗರದಲ್ಲಿಯೂ ಸ್ತ್ರೀಯರ ಸಂಖ್ಯೆ ಹೆಚ್ಚು. ಮೂರನೆಯ ಎರಡಂಶದಷ್ಟು ಅವರೇ ಕಾಣಸುತ್ತಾರೆ. ಬಸ್ಸು ರೈಲುಗಳಲ್ಲೂ ಹಾಗೆ. ಪ್ರಾಯಶಃ ಗಂಡಸರು ಆಫೀಸು ಕಚೇರಿಗಳಲ್ಲಿ ಇರುವುದರಿಂದ, ಹೀಗೆ ಕಾಣಿಸುತ್ತದೆಯೋ ಏನೋ. ಹೆಚ್ಚಿನ ಗುಮಾಸ್ತರೆಲ್ಲ ಸ್ತ್ರೀಯರೇ. ಒಂದು ರೇಡನ್ ಆಫೀಸಿಗೆ ಹೋಗಿದ್ದೆ. ಅಲ್ಲಿನ ಸುಮಾರು ಹದಿನೈದು ಗುಮಾಸ್ತರಲ್ಲಿ ಬರಿಯ ಮೂವರು ನಾಲ್ವರು ಮಾತ್ರ ಗಂಡಸರು.

ನಗರ ಸಂಚಾರಕ್ಕೆ ಬಹು ಹೆಚ್ಚಿನ ವಾಹನ ಸೌಕರ್ಯವಿದೆ. ಪ್ರತಿಯೊಂದು ಕಡೆಯಿಂದಲೂ ಐದೈದು ನಿಮಿಷಗಳಿಗೆ ಒಂದರಂತೆ ಬಸ್ಸುಗಳು ಹೋಗುತ್ತಲಿರುತ್ತವೆ. ಕೆಲವು ಕಡೆ ವಿದ್ಯುತ್ ಬಸ್ಸುಗಳಿವೆ. ನಗರ ಮಧ್ಯದಲ್ಲಿ ಅವು ತಾಸಿಗೆ ೩೦ ಮೈಲು ವೇಗದಿಂದ ಸಂಚರಿಸುತ್ತವೆ. ನನ್ನ ನಿವಾಸ ಪಿಕೆಡಿಲ್ಲಿಯಲ್ಲಿ. ಅಲ್ಲಿಂದ ೫ ಮೈಲು ದೂರವಿರುವ ಪೊಪ್ಲಿ ಎಂಬ ನಗರ ಭಾಗಕ್ಕೆ, ಅರ್ಧ ಘಂಟೆಯಲ್ಲಿ ಹೋಗಿ ಸೇರಬಹುದು. ಸುಮಾರು ೫ ಆಣೆಯ ವೆಚ್ಚ ತಗಲುತ್ತದೆ. ಬೆಳಗ್ಗಿನ ೬ ಗಂಟೆಯಿಂದ ರಾತ್ರಿ ೧೨ ಗಂಟೆಯ ವರೆಗೂ ಬಸ್ಸುಗಳ ಓಡಾಟ ಇದ್ದೇ ಇದೆ. ಈ ನಗರದಲ್ಲಿ ಓಡಾಡುವ ಬಸ್ಸುಗಳ ಸಂಖ್ಯೆಯೇ ೬,೦೦೦ದಂತೆ. ಅವುಗಳಲ್ಲಿ ಕೆಲಸ ಮಾಡುವವರ ಸಂಖ್ಯೆ ೯೦,೦೦೦ ಎಂದ ಮೇಲೆ, ಇದು ಎಷ್ಟು ದೊಡ್ಡ ಪ್ರಮಾಣದ್ದು ಎಂದು ನೀವೇ ಊಹಿಸಬಹುದು. ಇದಲ್ಲದೆ ನಗರದ ಕೆಳಗೆ ಸುಮಾರು ೨೦೦ ಅಡಿ ಆಳದಲ್ಲಿ ಹಾಕಿದ ಸುರಂಗ ಮಾರ್ಗಗಳಿವೆ. ಈ ಮಾರ್ಗಗಳು ಥೇಮ್ಸ್ ನದಿಯ ಕೆಳಗೂ ಇದ್ದು ನಗರದ ಪ್ರತಿಯೊಂದು ಭಾಗಕ್ಕೂ ಹೋಗುತ್ತವೆ. ಈ ಸುರಂಗಗಳಿರುವುದು ರೈಲ್ವೆ ಪ್ರಯಾಣಕ್ಕಾಗಿ. ತಾಸಿಗೆ ೬೦ ಮೈಲಿನ ವೇಗದಿಂದ ಇವು ಸಂಚರಿಸುತ್ತವೆ. ಈ ಸುರಂಗದ ರೈಲ್ವೆ ಠಾಣಗಳಿಗೆ ನೂರಡಿ ಅಥವಾ ಇನ್ನೂರಡಿ ಕೆಳಕ್ಕೆ ಇಳಿಯುವುದಕ್ಕೆ, ಕೆಳಗಿನಿಂದ ಮೇಲೆ ಬರುವುದಕ್ಕೆ, ಎಸ್ಕಲೇಟರುಗಳಿರುತ್ತವೆ ಅಂದರೆ ತನ್ನಂತೆಯೇ ಚಲಿಸುವ ಸೋಪಾನಗಳವು. ಇಷ್ಟೂ ಸಾಲದೆಂಬಂತೆ ನಗರದಲ್ಲಿ ೯,೦೦೦ ಮೋಟರ್ ಟೇಕ್ಸಿಗಳಿವೆ. ಅವುಗಳ ಬಾಡಿಗೆ ಮೈಲಿಗೆ ೧೨ ಆಣೆ ಆಗುವಷ್ಟು, ಅದಕ್ಕಿಂತ ಹೆಚ್ಚಿಲ್ಲ.

ಲಂಡನ್ ನಗರದ ನಾಗರಿಕರ ವಿಶ್ರಾಮಕ್ಕಾಗಿ ಅನೇಕ ಕಡೆಗಳಲ್ಲಿ ಬಹು ಸುಂದರವಾದ ಉದ್ಯಾನಗಳು, ಬಯಲು ಸ್ಥಳಗಳೂ ಇದ್ದಾವೆ. ಅವುಗಳು ಅಲ್ಲಲ್ಲಿ ಹಂಚಿರುವುದರಿಂದ ಸಂಜೆ ವಿಹಾರಕ್ಕೆ ಹೋಗುವವರಿಗೆ ತುಂಬ ಅನುಕೂಲ. ಇವುಗಳಲ್ಲಿ ಎಷ್ಟೋ ಉದ್ಯಾನಗಳು ಬಹು ದೊಡ್ಡವು. ನಗರ ಮಧ್ಯದಲ್ಲಿರುವ ಹೈಡ್ ಪಾರ್ಕ್ ಒಂದೇ ನೂರು ಎಕ್ರೆಗಳಷ್ಟು ವಿಶಾಲವಾಗಿದೆ. ರೀಜೆಂಟ್ ಪಾರ್ಕ್ ಎಂಬುದು ಇದಕ್ಕೂ ದೊಡ್ಡದು. ಇದಲ್ಲದೆ ಥೇಮ್ಸ್ ನದಿಯ ದಂಡೆಗಳಲ್ಲಿಯೂ ಅನೇಕ ಉದ್ಯಾನಗಳಿವೆ.

ಇಂಥ ವಿಹಾರ ಸ್ಥಳಗಳಲ್ಲದೆ—ಜನಗಳು ಆಟ, ವಿನೋದಗಳಲ್ಲಿ ಕಾಲವನ್ನು ಕಳೆಯಲು 'ಬೋಟ್ ಕ್ಲಬ್'ಗಳೂ ಇವೆ. ನಾವು ರಿಚ್‌ಮಂಡ್ ಎಂಬ ಒಂದು ನಗರಭಾಗಕ್ಕೆ ಹೋಗಿ ಅಲ್ಲಿರುವ 'ಬೋಟ್ ಕ್ಲಬ್'ನಿಂದ ದೋಣಿಗಳನ್ನು ಬಾಡಿಗೆಗೆ ಪಡೆಯಬಹುದು. ಬಾಡಿಗೆಗೆ ನಾವೇ ಬಿಡಬಹುದಾದ ಮೋಟರು ಲಾಂಚುಗಳು ಸಿಗುತ್ತವೆ. ಕೆಲವು ನಿಮಿಷಗಳಲ್ಲಿ ಅವುಗಳನ್ನು ನಡೆಯಿಸಲು ಕಲಿಯಬಹುದು. ಅದರಂತೆ ತೊಳೆಯಿಂದ ನಡೆಯಿಸುವ ದೋಣಿಗಳೂ ಸಿಗುತ್ತವೆ.

ಆದಿತ್ಯವಾರ ಬಂತೆಂದರೆ ನಾಗರಿಕರಿಗೆ ಒಂದು ಹಬ್ಬಬಂದ ಹಾಗೆ. ಎಲ್ಲರೂ ಇಂಥ ವಿಹಾರ ಸ್ಥಳಗಳಲ್ಲಿ ಕಳೆಯುತ್ತಾರೆ. ಸೋಮವಾರದಿಂದ ಶುಕ್ರವಾರದ ತನಕ ಜನರು ಆಯಾಯ ಕಾರ್ಯಾಲಯಗಳಲ್ಲಿ ಬೆಳಗ್ಗಿನ ೯ ಗಂಟೆಯಿಂದ ಸಂಜೆಯ ಐದೂವರೆ ಗಂಟೆಯ ತನಕ ದುಡಿಯುತ್ತಾರೆ. ಮಧ್ಯ ಒಂದು ತಾಸಿನ ಕಾಲ ಮಾತ್ರ ವಿರಾಮ. ಶನಿವಾರದಿನ ಮಧ್ಯಾಹ್ನ ಒಂದು ಗಂಟೆಯ ತನಕ ಕೆಲಸ ನಡೆಯುತ್ತದೆ. ಅವರ ಈ ದುಡಿಮೆಗೆ ತಕ್ಕ ಪಾರಿತೋಷಕ ಆದಿತ್ಯವಾರದ ರಜಾದಿನ. ಆ ದಿನ ಸಂತೋಷಾರ್ಥವಾಗಿ ಮನೆಬಿಟ್ಟು ದೂರ ಹೋಗುವುದು ಅವರಲ್ಲೊಂದು ರೂಢಿಯೇ ಆಗಿಬಿಟ್ಟಿದೆ. ದೊಡ್ಡವರು ಸಣ್ಣವರೆನ್ನದೆ, ಬಡವರು ಶ್ರೀಮಂತರೆನ್ನದೆ ಜನ ತಂತಮ್ಮ ಅಂತಸ್ತುಗಳಿಗೆ ಸಮನಾಗಿ ಕಾರು, ಬಸ್ಸು, ಸೈಕಲ್ ಮೊದಲಾದ ವಾಹನಗಳಲ್ಲಿ ನಗರವನ್ನು ಬಿಟ್ಟು ಹೊರಗಿನ ಊರುಗಳಿಗೆ ಹೋಗುತ್ತಾರೆ.

ನಾನು ಈ ನಗರದಲ್ಲಿ ಕಂಡ ಸಂಸ್ಥೆಗಳನ್ನು ಕುರಿತು ಹೇಳುವ ಮೊದಲು, ಇಲ್ಲಿನ ಸಾಮಾನ್ಯ ಜನಸಮುದಾಯವನ್ನು ಕುರಿತು ಹೇಳಬಹುದು. ಈ ಜನತೆಯಲ್ಲಿ ನೇಕಡ ೯೦ರಷ್ಟು ಜನ, ಮುಖ್ಯವಾಗಿ ಶ್ರಮಗಾರರು, ಮೊದಲಿಗಿಂತ ಎಷ್ಟೋ ಸುಖವಾಗಿ ಬಾಳುತ್ತಿದ್ದಾರೆ. ಇಲ್ಲಿ ಲೇಬರ್ ಸರಕಾರ ಅಧಿಕಾರಕ್ಕೆ ಬಂದ ಈ ಸಾಲ್ಕೈದು ವರ್ಷಗಳ ಅವಧಿಯಲ್ಲಿ ಸಾಮಾನ್ಯರ ಸುಖಸೌಕರ್ಯಗಳು ಹೆಚ್ಚಿವೆ. ನಮ್ಮ ಜನರ ಸ್ಥಿತಿಯನ್ನು ಇಲ್ಲಿನ ಜನಗಳ ಸ್ಥಿತಿಯೊಡನೆ ಹೋಲಿಸುವಂತೆಯೇ ಇಲ್ಲ. ಇಲ್ಲಿನ ಒಬ್ಬ ಬಸ್ ಕಂಡಕ್ಟರನ ಒಂದು ವಾರದ ಸಂಬಳ ಐದು ಪೌಂಡುಗಳಷ್ಟು. ಒಬ್ಬ ಕಾನ್ಸ್ಟೇಬಲನಿಗೆ ವಾರಕ್ಕೆ ಆರು ಪೌಂಡುಗಳಷ್ಟು. ವಿಶ್ರಾಂತಿ ಗೃಹಗಳಲ್ಲಿ ಕಾಫಿ ಮೊದಲಾದವುಗಳನ್ನು ತಂದುಕೊಡುವವರಿಗೆ ವಾರಕ್ಕೆ ಕಡಿಮೆ ಕಡಿಮೆ ೫ ಪೌಂಡುಗಳಷ್ಟು ವೇತನ ದೊರೆಯುತ್ತದೆ. ಇದಲ್ಲದೆ ಅವರಿಗೆ ಇನಾಮುಗಳ ಮುಖಾಂತರ ಬೇರೆ ಸಂಪಾದನೆಯೂ ಇದೆ. ಯಾವನೇ ಒಬ್ಬ ಕೆಲಸಗಾರನ ವಾರಿಕ ವೇತನ ೩ ಪೌಂಡುಗಳಷ್ಟಾಗಬಹುದು. ತೀರ ಮುದುಕರು, ಹೆಸರು ಹಸಿದವರು ಇವರಿಗಿಂತ ಬಡವರಾಗಿದ್ದಾರೆ. ಅಂಥವರಿಗೆ ವಾರಕ್ಕೆ ೨ ಪೌಂಡುಗಳಷ್ಟು ಮಾತ್ರ ನಿವೃತ್ತಿ ವೇತನ ದೊರೆಯುವುದರಿಂದ ಜೀವನ ಕಷ್ಟಸಾಧ್ಯವಾಗುತ್ತದೆ. ಜನಗಳ ಸಂಬಳ ಹೆಚ್ಚಿದ್ದರೂ, ವಸ್ತ್ರ, ಒಡವೆಗಳ ಬೆಲೆ, ಬಾಡಿಗೆ, ಸೇವೆಗಳ ಬೆಲೆ ಹೆಚ್ಚಾದದ್ದರಿಂದ ಹೆಚ್ಚಿನ ವೇತನ ಪ್ರಯೋಜನಕಾರಿಯಲ್ಲ. ಆದರೆ ಜೀವನಕ್ಕೆ ಅತ್ಯವಶ್ಯವಾದ ಪ್ರತಿಯೊಂದು ಸಾಮಾನುಗಳೂ, ಊಟ ಉಪಹಾರಗಳಿಗೂ ಸರಕಾರ ಸಹಾಯಧನಕೊಡುವುದರಿಂದ ವಸ್ತುಗಳ ಬೆಲೆ ಕಡಿಮೆ ಎನ್ನಬೇಕು. ೧೯೩೮ನೆಯ ಇಸವಿಯಲ್ಲಿ ನೇಕಡಾ ೧೦೦ರಷ್ಟು ಇದ್ದ ಬೆಲೆ ಈಗ ೨೦೦ರಷ್ಟು ಆಗಿದೆಯಷ್ಟೇ. ಒಂದು ಕಪ್ ಚಾ ಇಲ್ಲವೆ ಕಾಫಿಗೆ ೩-ಇಲ್ಲವೆ ೪ ಆಣೆ ಕೊಟ್ಟರೆ ಸಾಕು. ಉತ್ತಮ ಹಾಲು ಸಿಕ್ಕುತ್ತದೆ. ಬೇಕಷ್ಟು ತರಕಾರಿಗಳು ದೊರೆಯುತ್ತವೆ. ದ್ರವ್ಯಕ್ಕೆ ಕೊರತೆ ಇಲ್ಲ. ಬಾಡಿಗೆ ಸಹ ಹೆಚ್ಚೆಂದು ಹೇಳಲು ಸಾಧ್ಯವಿಲ್ಲ. ಇಂಥ ನಗರಗಳಲ್ಲಿ ಒಂದು ದೊಡ್ಡ ಕೋಣೆ ಬಾಡಿಗೆಗೆ ಪಡೆದು, ಬಾಯಿಂ ಆಗಿ ಎರಡು ಊಟ ಮಾಡುವವನ ವೆಚ್ಚ ವಾರಕ್ಕೆ ಮೂರು ಪೌಂಡ್ ಅಥವಾ ತಿಂಗಳಿಗೆ ೧೬೦ ರೂ. ಬೀಳಬಹುದು. ಇಂಥ ವಸತಿ ಸೌಕರ್ಯ ಇಂದು ಮುಂಬಯಿ ಮದ್ರಾಸುಗಳಲ್ಲಿ ಸಿಗುವುದು ದುರ್ಲಭ. ಇದರಿಂದ ಇಲ್ಲಿನ ಜನಜೀವನವು ಸುಖಮಯವಾಗಿದೆ ಎಂದು ಹೇಳಬಹುದು. ನಾವು ಈ ನಗರದಲ್ಲಿ ಎಲ್ಲಿಗೆ ಹೋದರೂ ತರುಣರ, ಮಕ್ಕಳ ಪುಷ್ಟಿಯಾದ ತುಂಬಿದ ಮುಖಗಳನ್ನು ನೋಡಿ ಸಂತೋಷವಾಗುತ್ತದೆ. ಮಕ್ಕಳಿಗಂತು ವಿಶೇಷವಾದ ಸೌಕರ್ಯವಿದೆ. ಇಲ್ಲಿ ದೊರೆಯುವಷ್ಟು ಉತ್ಕೃಷ್ಟ ಹಾಲು ನಮ್ಮ ನಾಡಿನಲ್ಲಿ ಸಿಗಲಾರದು. ಇಲ್ಲಿನ ಶಾಲೆಗಳಲ್ಲಿ ಮಕ್ಕಳಿಗೆ ಮಧ್ಯಾಹ್ನ ಧರ್ಮಾರ್ಥವಾಗಿ ಹಾಲು ಕೊಡುತ್ತಾರೆ. ಇದು ಒಂದು ನಗರದಲ್ಲಲ್ಲ, ಇಡೀ ದೇಶದಲ್ಲಿ. ಮಕ್ಕಳು ಬಡವರಾದರೆ ಅವರ ಜತೆಗೆ ಚಿಕಿತ್ಸೆ ಪಷ್ಟನ ರಸ, ಮೊದಲಾದ ಆಹಾರ ಸಾಮಾಗ್ರಿಗಳೂ ದೊರೆಯುತ್ತವೆ. ಹೀಗಿರುವುದರಿಂದ ಮಕ್ಕಳೆಲ್ಲರು ಬಲಿಷ್ಠರಾಗಿಯೇ ಬೆಳೆಯುತ್ತಿದ್ದಾರೆ. ಇಲ್ಲಿನ ೧೦ ವರ್ಷದ ಒಬ್ಬ ಬಾಲಕ ನಮ್ಮಲ್ಲಿನ ೧೬ ವರ್ಷದ ಹುಡುಗನಿಗಿಂತ ಪುಷ್ಟಿಯಾದ ಮೈಕಟ್ಟುಳ್ಳವನಾಗಿದ್ದಾನೆ.

ಇಲ್ಲಿನ ಲೇಬರ್ ಸರಕಾರದ ಒಂದು ಹೆಚ್ಚಿನ ಕೆಲಸವೆಂದರೆ ಇಡೀ ದೇಶದ ಪ್ರತಿಯೊಬ್ಬನಿಗೂ ಈ ಕೆಲ ವರ್ಷಗಳ ಅವಧಿಯಲ್ಲಿ, ಧರ್ಮಾರ್ಥವಾಗಿ ವೈದ್ಯಕೀಯ ಸಹಾಯವನ್ನು ಸಾರ್ವಜನಿಕವಾಗಿ ಒದಗಿಸಿಕೊಟ್ಟಿರುವುದು.

ಕೆ. ಆರ್. ಕಾರಂತ

(ಮುಂದರಿಗೆ)

THE DANGAL NAYAK BANK LIMITED.
Head Office] (Incorporated in 1920.) [Udipi S K
SEASON DEPOSITS are received and accepted on the following terms:—
For three, four or five months deposits at 3% p. a
For six seven or eight months deposits at 3½% p a
These are to be terminable by the 30th June 1951.
Interest is payable along with the principal at maturity.
Our THREE YEAR CASH CERTIFICATE bring to You a fair yeild: For particulars please ask for copy of Rules

ಉಡುಪಿಗೆ ಹೋಗಬೇಕು! ಆದರೆ ಉಳಿದುಕೊಳ್ಳುವುದೆಲ್ಲಿ?
ರಾಯಲ್ ಮಹಾಲಿನಲ್ಲಿ
ಬಸ್ ಸ್ಟೇಂಡಿಗೆ ಅತಿ ಸಮೀಪ! ಕೃಷ್ಣಮಠಕ್ಕೆ ದೂರವಿಲ್ಲ!
ವ್ಯಾಪಾರವ್ಯವಹಾರ ವಿಹಾರಸ್ಥಳಗಳಿಗೆಲ್ಲ ಕೇಂದ್ರ!
ನಿಮ್ಮ ಸ್ನಾನ, ಊಟ, ಉಪಹಾರ, ಬೈರ್ಕ್, ಶಯನ ಇವಕ್ಕೆಲ್ಲ ಉತ್ತಮ ವ್ಯವಸ್ಥೆ
ಕರೆದರೆ ಓಗೊಡುವ ನೌಕರ ವರ್ಗ!
ಮೇಲಾಗಿ ಉಡುಪಿ ಬ್ರಾಹ್ಮಣರ ಅಡಿಗೆ, ತಿಂಡಿತಿನಸು, ಇವುಗಳ ರುಚಿರುಚಿ ಹೇಳಬೇಕೆ?
ಪ್ರೊಪ್ರೈಟರ್:— ಕೆ. ವೆಂಕಟ್ರಮಣಭಟ್.
For up-to-date Lodging & Boarding
ROYAL MAHAL,
UDIPI, S. Kanara.

ವಾರದ ಭವಿಷ್ಯ

ತಾರೀಖು 11-6-51 ರಿಂದ ತಾರೀಖು 20-6-51 ರವರೆಗೆ

ಮೇಷ— ನಿಮ್ಮ ಸ್ಥಿತಿಯೊಂದು. ಉದ್ಯಮವೂ ಶತ್ರುಗಳ ಪ್ರತಿಸ್ಪರ್ಧೆಯಿಂದ ನಿಷ್ಫಲವಾಗಬಹುದು. ಶತ್ರುಗಳ ಕಪಟ ತಂತ್ರದಿಂದ ಪೀಡೆ ಉಂಟಾಗುವುದು. ನಿರೀಕ್ಷಿಸಿದ ಫಲ ಲಭಿಸದಿದ್ದರೂ ವಿಜಯಿಗಳಾಗುವುದರಲ್ಲಿ ಸಂದೇಹವಿಲ್ಲ. ವ್ಯಾಪಾರ ಉದ್ಯೋಗ ಮೊದಲಾದುವುಗಳಲ್ಲಿ ಪ್ರಗತಿಯೊಂದುವಿರಿ. ಆರೋಗ್ಯದ ವಿಚಾರದಲ್ಲಿ ಸ್ವಲ್ಪ ಜಾಗ್ರತೆ ವಹಿಸಬೇಕಾದೀತು. ರಾಜಕೀಯ ಕ್ಷೇತ್ರದಲ್ಲಿ ಒಳ್ಳೆಯದಾಗಲಿದೆ. ಬಂಧುಮಿತ್ರರ ಸಹಕಾರಯುತರಾದ ನಿಮಗೆ ತಾ. 14, 15, 16 ಲಾಭ ಮತ್ತು ಸುಖದಾಯಕ ದಿನಗಳಾಗಿವೆ.

ವೃಷಭ— ದೈವವು ಅನುಕೂಲವಿದ್ದರೂ ಆತ್ಮಬಲವು ಸಾಲದಿದ್ದುದರಿಂದ ನಿಮಗೆ ಪ್ರಯತ್ನ ಸಾಧ್ಯವಾದ ಕಾರ್ಯಗಳನ್ನು ಸಾಧಿಸಲು ಶಕ್ಯವಾಗದು. ಆದರೂ ದಿನಮಾನಗಳಿಂದ ಬೇರೆಯವರನ್ನಾಶ್ರಯಿಸುವ ಪ್ರಸಂಗಗಳುಂಟಾಗುವವು. ಆಕಸ್ಮಿಕ ಅಪಘಾತಾದಿಗಳ ಯೋಗವಿದೆ. ಆಪ್ತಜನರಲ್ಲಿ ಮನಸ್ತಾಪ, ಗೃಹಚ್ಛಿದ್ರ ಮುಂತಾದವುಗಳಿಂದ ಮನಸ್ಸಿಗೆ ನೆಮ್ಮದಿಯಿರದು. ವಿನಾಕಾರಣ ವಾಕ್ಕಲಹಕ್ಕೆ ಗುರಿಯಾದೀರಿ. ತಾ. 15, 16, 17, 18 ಮಿಕ್ಕ ದಿನಗಳಿಗಿಂತ ಉತ್ತಮ.

ಮಿಥುನ— ಕಾಲವು ವಿಶೇಷ ಪ್ರತಿಕೂಲವಾಗಿ ನಿಂತಿರುವುದು. ಕೈಕೊಂಡ ಕಾರ್ಯಗಳು ನಿರೀಕ್ಷಿಸಿದ ಫಲಕೊಡಲಾರವು. ಆರ್ಥಿಕ ಬಿಕ್ಕಟ್ಟು ದಿನದಿಂದ ದಿನಕ್ಕೆ ಹೆಚ್ಚಿ ಮರ್ಯಾದೆಯಿಂದ ದಿನಕಳೆವುದು ಕಷ್ಟವಾದೀತು. ಪಿತ್ತಪ್ರಕೋಪದಿಂದಾಗಿ ಆರೋಗ್ಯಕ್ಕೆ ಹಾನಿಯಿದೆ. ನೇತ್ರಪೀಡೆ ಬಾಧಿಸುವದರಿಂದಾಗಿ ಸದಾ ದುಃಖಿಗಳಾದ ನಿಮಗೆ ಅಷ್ಟೇ ಸ್ಪಷ್ಟ ರೀತಿಯ ಶತ್ರುಗಳ ಉಪಟಳದಿಂದಾಗಿ ಮನೋರೋಗವಧಿಕವಾದೀತು. ಮಾಸಾಂತ್ಯದ 4 ದಿನಗಳು ಸ್ವಲ್ಪ ನೆಮ್ಮದಿಯನ್ನೀಯುವವು.

ಕರ್ಕಾಟಕ— ರವಿಯೊಬ್ಬನನ್ನುಳಿದು ಇತರ ಎಲ್ಲಾ ಗ್ರಹಕಟಾಕ್ಷವು ನಿಮಗಿರುವುದರಿಂದ, ಸಾಧಿಸಿದರೆ ಸಬಳ ನುಂಗಬಹುದೆಂಬ ಗಾದೆಯಂತೆ ನೀವು ಯತ್ನಿಸಿದರೆ ಎಂತಹ ಮಹತ್ಕಾರ್ಯವಾದರೂ ನಿಮ್ಮ ಭಾಗಕ್ಕದು ತೃಣಪ್ರಾಯವೆನಿಸೀತು. ಜನಬಲ ಧನಬಲ ಆತ್ಮಬಲ ಇವುಗಳಾವುದರಲ್ಲೂ ಕೊರತೆಯಿಲ್ಲದ ಕಾರಣ ಸರ್ವತ್ರ ವಿಜಯಶ್ರೀಯನ್ನು ಸಂಪಾದಿಸುವಿರಿ. ತಾ. 14, 19, 20 ಈ ದಿನಗಳು ಅತ್ಯುತ್ತಮವಿವೆ

ಸಿಂಹ— ಸುಖದುಃಖ ಇವೆರಡಕ್ಕೂ ನೀವು ಒಳಗಾಗಿಯೇ ಇರುವದರಿಂದ ಈ ವಾರವು ನಿಮ್ಮ ಭಾಗಕ್ಕೆ ಮಿಶ್ರಫಲದಾಯಿಯಾಗಿರುವುದು. ಧನಸ್ಥಾನದಲ್ಲಿರತಕ್ಕ ಶನೀಶ್ವರ ಮತ್ತು ಅಷ್ಟಮಗತನಾದ ಗುರುವು ಅನಿರೀಕ್ಷಿತ ಪ್ರವಾಸದಿಂದ ಕಷ್ಟನಷ್ಟಗಳನ್ನೂ ದೇಹಾಲಸ್ಯ ಆರ್ಥಿಕ ಬಿಕ್ಕಟ್ಟು ಕೋಳಿಜಗಳ ಪರಂಪರೆಗಳನ್ನು ತಂದೊಡ್ಡಲಿರುವವು. ಆದರೂ ನಿಮ್ಮ ಕರ್ತವ್ಯ ನಿಷ್ಠೆ ಸಹನಾಶಕ್ತಿ ಇವುಗಳಿಂದ ಸಾಹಸ್ಯ ಫಲವನ್ನು ಪಡೆವಿರಿ. ಆದರೂ ಗೃಹಸುಖವು ಉತ್ತಮವಿರುವದು. ತಾ. 15, 16 ಇತರ ದಿನಗಳಿಗಿಂತ ಉತ್ತಮವಾಗಿರುವದು.

ಕನ್ಯಾ— ಕೈ ಕೆಸರಾದರೆ ಬಾಯಿ ಮೊಸರಾದೀತು ಎಂಬ ಗಾದೆಯಂತೆ ನೀವೀವಾರದಲ್ಲಿ ಉದಾಸೀನರಾಗಿ ಕುಳಿತರೆ ಫಲವಿಲ್ಲವು. ನಿಮ್ಮ ಶಕ್ತಿಗನುಸಾರವಾಗಿ ಕಾರ್ಯಮಾಡಿದರೆ ಫಲವು ಅನಾಯಾಸವಾಗಿ ಲಭಿಸಲಿದೆ. ಜನತೆಯ ಬೆಂಬಲವು ಉತ್ತಮವಿರುವದು. ಸಮಾಜದಲ್ಲಿ ಗೌರವ ಪುರಸ್ಕಾರಗಳು ದೊರೆಯುವವು. ಆರೋಗ್ಯಕ್ಕೆ ಸ್ವಲ್ಪ ಪಿತ್ತದೋಷದಿಂದ ಹಾನಿಸಂಭವಿಸೀತು. ಅಪ್ರೀತ್ಯರ ವಿವಾದದಿಂದ ಸ್ವಲ್ಪಚಿಂತೆಗೊಳಗಾಗುವಿರಿ ತಾ. 14, 17, 18 ಈ ದಿನಗಳಲ್ಲಿ ಭೋಗ, ಲಾಭ, ಸಿದ್ಧಿಗಳು ಲಭಿಸುವವು.

ತುಲಾ— ಕಷ್ಟಪಟ್ಟು ದುಡಿದರೂ ಇಷ್ಟಾರ್ಥವು ನೆರವೇರದು. ಶತ್ರುಜನರ ಪೀಡೆಯಿಂದಾಗಿ ಧನನಷ್ಟ ಮಾನಗಳಿಗೆ ಧಕ್ಕೆಯುಂಟಾಗುವದು. ಮನೋರೋಗವು ದಿನೇ ದಿನೇ ಹೆಚ್ಚುತ್ತಾ ಹೋಗಲಿದೆ. ಮಾತುಬಲ್ಲವನಿಗೆ ಜಗಳವಿಲ್ಲವೆಂಬ ಗಾದೆಯು ನಿಮ್ಮ ಭಾಗಕ್ಕೆ ಸುಳ್ಳೆಂದು ಕಾಣಬಹುದು. ಲೇವಾದೇವಿ ನಿಮಿತ್ತವಾಗಿ ಪರಸ್ಪರ ಕಲಹವೆದ್ದು ಕೋರ್ಟು ಕಚೇರಿಗಳಿಗೆ ಹೋಗುವ ಪ್ರಸಂಗವುಂಟಾದೀತು. ಒಂದಲ್ಲೊಂದು ಚಿಂತೆಯು ಸದಾ ನಿಮ್ಮನ್ನು ಬಾಧಿಸುತ್ತದೆ. ತಾ. 15, 16, 17, 19, 20 ಈ ದಿನಗಳಲ್ಲಿ ಕೊಂಚ ಧನಾಗಮ ಮಿತ್ರರ ನೆರವು, ಮನಸ್ಸಿಗೆ ಶಾಂತಿ ಲಭಿಸೀತು

ವೃಶ್ಚಿಕ— ಮಿಶ್ರಫಲದಾಯಿಯಾಗಿರತಕ್ಕ ಈ ವಾರದಲ್ಲಿ ನಿಮಗೆ ಬಂಧುಮಿತ್ರರ ಸಹಕಾರವು ಉತ್ತಮವಿರುವದು. ಹೆಚ್ಚಿನ ಕಾರ್ಯಗಳು ನಿಮ್ಮಂತೆ ಜರಗುವವು. ಆದರೆ ಮನೆಯೊಳಗಿನ ಅವ್ಯವಸ್ಥೆಯಿಂದಾಗಿ ನಿಮಗೆ ಕೆಲವೊಮ್ಮೆ ಸಂಸಾರದಲ್ಲಿ ವಿರಕ್ತಿ ತೋರಬಹುದು. ಹೆಂಡತಿಯ ವಿರೋಧವಾಗಿ ವರ್ತಿಸುವಳೆಂದ ನೋಟ ಇತರರದೇನು? ಸಾಮಾಜಿಕ ಕಾರ್ಯಗಳಲ್ಲಿ ಯಶಸ್ಸು ಲಭಿಸಿದರೂ ರಾಜಕೀಯದಲ್ಲಿ ವಿರೋಧವೇ ಹೆಚ್ಚಾದೀತು. ತಾ. 14, 17, 18 ಈ ದಿನಗಳಲ್ಲಿ ಮಿತ್ರ ಸಮಾಗಮ ಸಂತೋಷ ಶುಭಭಾಗಗಳಿವೆ.

ಧನು— ತಮ್ಮಿಂದಾಗಿ ಇಷ್ಟವನ್ನು ಸಾಧಿಸಬೇಕಾಗುವದು ಹೆಚ್ಚಿನವು ವಿರೋಧ ವಿಘ್ನಗಳು ನಿಮಗೆ ಪ್ರಾಪ್ತವಾದಾವು. ಕೀರ್ತಿ ಉತ್ಕೃಷ್ಟತೆಯನ್ನು ಪಡೆಯುವುದರಿಂದ ಕಾಲಯಾಪನೆಯು ಕಷ್ಟಸಾಧ್ಯವಾಗುವದು. ಚಂಚಲವಾದ ಮನಸ್ಸು ಕಡಿವಾಣವಿಲ್ಲದ ಕುದುರೆಯಂತೆ ಹರಿದಾಡುವದು. ಜನಾಪವಾದಕ್ಕೂ ಬಂಧುಗಳ ವಿರೋಧಕ್ಕೂ ಸಿಲುಕುವ ಸಂಭವವಿದೆ. ತಾ. 17, 18 ಈ ದಿನಗಳನ್ನು ಹೊರತಾಗಿ ಇತರ ದಿನಗಳು ನಿಮಗನುಕೂಲವಾಗಿವೆ.

ಮಕರ— ಕ್ಷಣಕಾಲವೂ ಕೂಡ ನಿಂತಲ್ಲಿ ನಿಲ್ಲಲವಕಾಶ ಲಭಿಸದು. ದುಡಿಮೆಗೆ ತಕ್ಕಷ್ಟು ಗುಣವಾದ ವ್ಯಯಗಳು ಉಪಸ್ಥಿತಗಳಾಗಿರುವುದರಿಂದ ದಿನಗಳೆವುದು ದುಸ್ಸಾಧ್ಯವೆನಿಸುವದು. ಮನೆಯಲ್ಲಿಂತೂ ತಂದೆಮಕ್ಕಳ ಮತ್ತು ಗಂಡಹೆಂಡಿರ ವಿರೋಧ ಕಲಹಗಳಿಂದ ಗೃಹಪ್ರವೇಶವೇ ಬೇಡವೆನಿಸೀತು. ಸ್ತ್ರೀಜನ ನಿಮಿತ್ತವಾಗಿ ಕೆಲವು ಅನಿಷ್ಟ ಅಪವಾದಗಳು ಸಂಭವಿಸುವ ಯೋಗವಿದೆ. ತಾ. 14, 19, 20 ಅತೀವ ಅನಿಷ್ಟಕಾರಿಗಳಿವೆ.

ಕುಂಭ— ಧನಪತಿಗಳಾದ ಬೃಹಸ್ಪತ್ಯಾಚಾರ್ಯರು ಧನಸ್ಥಾನದಲ್ಲೇ ಕುಳಿತಿರುವುದರಿಂದ ನಿಮಗೆ ಆರ್ಥಿಕ ಸಂಬಂಧವಾದ ಎಂತಹ ಗಂಡಾಂತರಗಳು ಪ್ರಾಪ್ತವಾಗುವವಾದರೂ ಸಕಾಲದಲ್ಲಿ ಒದಗಿ ಮರ್ಯಾದೆಯನ್ನು ಕಾಪಾಡಲಿರುವರು. ಕುಜನರು ತಮ್ಮ ಮಾಯಾಜಾಲದಲ್ಲಿ ನಿಮ್ಮನ್ನು ಸಿಲುಕಿಸಿ ಕಷ್ಟನಷ್ಟ ಅಪವಾದಾದಿಗಳಿಗೆ ಗುರಿಮಾಡಿಸಲಿರುವರು. ವ್ಯಾಪಾರ ವ್ಯವಹಾರಗಳಲ್ಲಿ ಆಕಸ್ಮಿಕ ನಷ್ಟವುಂಟಾದೀತು. ಆದರೂ ಮಾಸಾಂತ್ಯದ 4 ದಿನಗಳಲ್ಲಿ ನಿಮ್ಮ ಮನೋರಥವು ಬಹ್ವಂಶ ನೆರವೇರಲಿದೆ.

ಮೀನ— ಶ್ರಮಜೀವಿಗಳಿಗೂ ನೌಕರಿ ವರ್ಗದವರಿಗೂ ಈ ವಾರವು ಹಿತಕರವಾಗಿಲ್ಲವು. ಅಪ್ರೀತ್ಯರ ವಿಯೋಗವುಂಟಾದೀತು. ಶತ್ರುಜನರ ಪೀಡೆಯು ದಿನದಿಂದ ದಿನಕ್ಕೆ ಹೆಚ್ಚಬಹುದು. ಸಂಸಾರದಲ್ಲಿ ಅನಾರೋಗ್ಯವು ತಲೆದೋರಿ ತನ್ನಿಮಿತ್ತ ಹೆಚ್ಚಿನ ನಷ್ಟಕಷ್ಟಗಳು ಪ್ರಾಪ್ತವಾಗಬಹುದು. ಹೊಸ ಕಾರ್ಯಾರಂಭಕ್ಕೆ ಕಾಲವು ಚೆನ್ನಾಗಿಲ್ಲವು. ಸಮಾಜದಲ್ಲಿ ಸಿಗತಕ್ಕ ಗೌರವಾದರಗಳಿಗೆ ಭಂಗಬಂದೀತು. ತಾ. 14, 19, 20 ಈ ದಿನಗಳಲ್ಲಿ ಕಷ್ಟಪಟ್ಟು ದುಡಿದರೆ ಇಷ್ಟಾರ್ಥವು ಲಭಿಸೀತು.

ಲಕ್ಷ್ಮೀ ಸೆಂಟಾಲ್ ಮಾತ್ರೆ

ಇದರ ಉಪಯೋಗದಿಂದ ಬಹುಕಾಲದ ಮೇಹ, ಪ್ರಮೇಹ, ಮೂತ್ರದ ಉರಿ, ಮೂತ್ರ ಕೃಚ್ಛ್ರ, ಮೂತ್ರದೊಡನೆ ಯಾವುದಾಗಿ ಬಿಳುಪು, ಅರಸಿನ, ಕೆಂಪು ಈ ವರ್ಣಗಳಲ್ಲಿ ಕೀವು ಹೋಗುವುದು, ತೊಡೆ ಸಂದಿನಲ್ಲಿ ನೋವು, ಕಾಲ ಗಂಟುಗಳಲ್ಲಿ ವೇದನೆ, ಕಣ್ಣಿನಲ್ಲಿ ಕೀವು ಬರುವುದು, ಶರೀರದಲ್ಲಿ ಉಷ್ಣತೆ, ಸ್ವಪ್ನೇಂದ್ರಿಯ ಇವೆಲ್ಲಾ ಖಾತ್ರಿಯಾಗಿ ಗುಣಹೊಂದುವುದು

ಡಬ್ಬಿ ಒಂದಕ್ಕೆ ರೂ. 2—0—0

ಏಜಂಟ್:—

ರಾ ಕಂಪೆನಿ, ಮಂಗಳೂರು

Nambiar's

ARYA VAIDYA SALA

UDIPI

Ideal House for Ayurvedic Treatment.

T. N. Kelu Nambiar,
Vaidya

ಡಿ ಕೆ ಭಾರದ್ವಾಜರ

ಇಂಗ್ಲಿಷ್ × ಇಂಗ್ಲಿಷ್ ಕನ್ನಡ ಡಿಕ್ಷನೆರಿ

ವಿದ್ಯಾರ್ಥಿಗಳಿಗೆ ಅತ್ಯುಪಯುಕ್ತವಾದ ದೊಡ್ಡ ಸೈಜಿನ ನಿಘಂಟು

ಬೆಲೆ ರೂ 5-1-0

ನವಭಾರತ ಬುಕ್ ಡಿಪ್ಪೊ ಉಡುಪಿ
ನವಯುಗ ಪ್ರೆಸ್, ಉಡುಪಿ.

"ಗೋಪಾಲ ಭೇಷಜಾಶ್ರಮ" ಮಂಗಳೂರು.

(ಸ್ಥಾಪನೆ 1910)

ಸ್ಥಾಪಕರು:-ಆಯುರ್ವೇದ ಭೂಷಣ ಯಂ. ವಿ. ಶಾಸ್ತ್ರೀ,

ಬಾಣಂತಿಯರ ಸಲುವಾಗಿಯೇ ದೇಶ ಮತ್ತು ಪ್ರಕೃತದ ದೇಹಸ್ಥಿತಿಯನ್ನು ನಿರ್ದೇಶಿಸಿ ತಯಾರಿಸಲ್ಪಟ್ಟ ಅಮೋಘವಾದ ಮಧುರದ್ರವ ರಸಾಯನ. ಅಲ್ಪ ಮೌಲ್ಯದಿಂದ ಬಡವರಿಗೂ, ಭಾಗ್ಯಶಾಲಿಗಳಿಗೂ ಸುಲಭವಾಗಿರುವುದು.

ಇದರ ನವಜೀವಾತು ಎಂಬ ಸೂತಿಕಾ ರಸಾಯನ



ಹೆಚ್ಚಿನ ಮಾಹಿತಿಗೆ—ಡಾ! ಯಂ. ವಿ. ಶಾಸ್ತ್ರೀ, ಯಲ್. ಐ
ಕೊಡಿಯಾಲಬೈಲ ಪೋಸ್ಟು, (ಮಂಗಳೂರು)
ಸ್ಟಾಕಿಸ್ಟರು:— ಡಾ। ಐ. ಕೆ. ಶಿವರಾಮರಾವ್, ಕುಂಜಿಬೆಟ್ಟು, ಉಡುಪಿ.

ಆದರ್ಶ ರೀತಿಯಲ್ಲಿ ಪ್ರಕಟಿಸಲ್ಪಟ್ಟ ಅಖಿಲ ಕರ್ನಾಟಕದ ಪ್ರಾತಿನಿಧಿಕ ಕಥಾಸಂಕಲನವೆಂದು ಪ್ರಶಂಸಿಸಲ್ಪಟ್ಟ

ಮಧುವನ

ಕತೆಗಳೊಂದಿಗೆ ಕತೆಗಾರರ ಮತ್ತು ಕತೆಗಾರ್ತಿಯರ ಪರಿಚಯ ಪಡೆಯಬಹುದಾಗಿದೆ

ಅಂತರಂಗ, ಬಹಿರಂಗ ಸುಂದರವಾಗಿ ಪ್ರಕಟಿಸಲ್ಪಟ್ಟ

25 ಕತೆಗಳ ಅತ್ಯಪೂರ್ವ ಸಂಗ್ರಹ

ಬಿಳಿ-ದಪ್ಪ ಕಾಗದ! 230 ಪುಟಗಳು! ಬೆಲೆ ರೂ 3-0-0

ವಿಳಾಸ: ಕಿರಿಯರ ಪ್ರಪಂಚ, ಉಡುಪಿ.

ವಿಕ್ರಯಾಧಿಕಾರಿಗಳು: ನವಭಾರತ ಪುಸ್ತಕ ಭಂಡಾರ, ಉಡುಪಿ.

EDITED, PRINTED & PUBLISHED BY K. H. SHETTY AT THE NAVAYUGA PRESS, UDIPI, S.INDIA

Regd No. M. 3618
LICENCE No. 31
Licensed to Post without Prepayment

Estd 1921 ಸ್ಥಾಪನೆ

21-6-1951

Founder: Sri A. B. Shetty,
Minister for Agriculture & Veterinary

ಅಂತರಂಗ
ಪುಸ್ತಕ ಪತ್ರಿಕೆ
ಚಂದಾ ವಿವರ
ವರ್ಷಕ್ಕೆ ರೂ 4-8-0
6 ತಿಂಗಳಿಗೆ ರೂ 2-8-0
(ಮುಂಗಡ)
ಜಾಹೀರಾತಿಗೆ ಉತ್ತಮ ಸಾಧನ
ಅಂತರಂಗ ಉಡುಪಿ

ನವಯುಗ
ಚಂದಾ ವಿವರ
(ಮುಂಗಡ)
ವರ್ಷಕ್ಕೆ ರೂ 5-12-0
6 ತಿಂಗಳಿಗೆ ,, 3-0-0
ಬಿಡಿಪ್ರತಿ ,, 0-2-0
6 ತಿಂಗಳಿಗಿಂತ ಕಡಿಮೆ ಚಂದಾ ಸ್ವೀಕರಿಸಲ್ಪಡುವುದಿಲ್ಲ
ನವಯುಗ, ಉಡುಪಿ.

ವರ್ಷ ೩೧ ವಾರ ೪೧ | NAVAYUGA WEEKLY Post Box No. 22 UDIPI. | Vol 31 No. 41

ವಿಚಾರ-ವಿಮರ್ಶೆ

ಬದುಕಿರುವ ನಾಲ್ಕು ದಿನಗಳಲ್ಲಿ ಸುಖವಾಗಿ ಬೇಕೆಂಬ ಆಶೆ ಎಲ್ಲರಿಗೂ ಇದ್ದೇ ಇದೆ. ಈ ಅಭಿಲಾಷೆ ಯಾರನ್ನೂ ಬಿಟ್ಟಿಲ್ಲ. ಸರ್ವ ಬಿಟ್ಟ ಸನ್ಯಾಸಿಗೂ ಅದು ತಪ್ಪಿದ್ದಲ್ಲ. ಅವರು ಹುಟ್ಟಿದ ಸಂಸ್ಕೃತಿಯನ್ನು ಹೊಂದಿಕೊಂಡು ಇಚ್ಛಿಸಬಹುದಾದ ಆಸೆಗಳೂ ಬೇರೆಬೇರೆ ರೀತಿಯವುಗಳಾಗಿರುತ್ತವೆ. ಈ ಆಶೆಗಳಲ್ಲಿ ತಾನು ತನ್ನವರು ಎನ್ನುವ ಸ್ವಾರ್ಥವೇ ಹೆಚ್ಚು! ದೇಶ, ಜನತೆಯ ಮಾತ —ಬಹಳ ದೂರ ಉಳಿಯುತ್ತದೆ. ಬೇರೆಯವರ ಉದ್ಧಾರಕ್ಕಾಗಿ ಇಲ್ಲವೆ ಪರೋಪಕಾರಕ್ಕಾಗಿ ದುಡಿದು ಅದರಲ್ಲಿ ಸುಖಪಡುವವರು ತೀರ ವಿರಳ. ಅದೂ ವಿಜ್ಞಾನ ಯುಗದಲ್ಲಿ ಮಾನವ ಮಾನವನನ್ನು ಪ್ರೀತಿಸ ಬಯಸುವ ಗುಣಗಳನ್ನು ಮರೆಯುತ್ತಲಿದ್ದಾನೆನ್ನಬಹುದು. ವಿಜ್ಞಾನದಿಂದ ಮಾನವ ಅತುಲವಾದ ಶಕ್ತಿ ಸಂಪಾದಿಸಿದರೂ ದೇಶದ ಕಲ್ಯಾಣಕ್ಕಾಗಿ ಆದರ ಶಕ್ತಿಯನ್ನು ಉಪಯೋಗಿಸಿದ ದಾಖಲೆಗಳಿಗಿಂತ ವಿನಾಶಕ್ಕಾಗಿ ಬಳಸಿಕೊಂಡದ್ದು ಜಾಸ್ತಿಯೆಂದು ತೋರುತ್ತದೆ

ಒಂದು ದೇಶ ಇನ್ನೊಂದು ದೇಶದೊಡನೆ ಬೆಳೆಸಿಕೊಳ್ಳಬೇಕಾದ ರಾಜಕೀಯ ಸ್ನೇಹ ಈ ವಿಜ್ಞಾನ ಶಕ್ತಿಯನ್ನೇ ಹೊಂದಿಕೊಂಡಿದೆ ಅಂದರೆ ಇಲ್ಲಿಯೂ ಕೂಡ. ವಿಚಾರವಂತರ ಆಟ ನಾಲ್ಕು ಜನಕ್ಕೆ ಬೆಲೆಯಿಲ್ಲ. ಅಜ್ಞಾನಿಗಳೂ-ಅಂಧಾನುಕರಣೆಯಿಂದು ಯಾರನ್ನು ನಾವು ದೂಷಿಸುತ್ತಿದ್ದೆವೋ-ಯಾರ ಕಾಲದಲ್ಲಿ ವಿಜ್ಞಾನ ಮಾನವನ ವಿಚಾರಶಕ್ತಿಯನ್ನು ಮೀರಿ ಹೋಗಿರಲಿಲ್ಲವೋ-ಆಗ ಅಂತಹ ಜ್ಞಾನವಂತರ ಆ ದೇಶ ಅನುಭವಗಳೇ ರಾಷ್ಟ್ರವನ್ನಾಳುತ್ತಿದ್ದವು. ರಾಷ್ಟ್ರರಾಷ್ಟ್ರಗಳೊಳಗೆ ಮೈತ್ರಿಯನ್ನು ಸಾಧಿಸುತ್ತಿದ್ದವು. ನ್ಯಾಯ ನೀತಿಗಳೇ ರಾಜ್ಯಾಡಳಿತದ ಮೂಲ ಸೂತ್ರಗಳಾಗಿದ್ದವು. ನೀತಿಪಥದಲ್ಲಿ ನಡೆಯುವುದು ಭೂಷಣವಾಗಿತ್ತು. ವಿಜ್ಞಾನದ ಬಲದಿಂದ ನಾವು ಪಡೆಯುತ್ತಿರುವ ಸೌಲಭ್ಯಗಳು ಅವರಿಗೆ ಸಿಗುತ್ತಿದ್ದಿಲ್ಲವಾದರೂ ಜೀವನದಲ್ಲಿ ಪರಿಪೂರ್ಣತೆ-ಶಾಂತಿ-ಸೌಹಾರ್ದಭಾವ ನವನೀತ ಅವರ ಕಾಲದಲ್ಲೇ ಅಧಿಕವಾಗಿತ್ತು!

ಭಾರತ ಆಧ್ಯಾತ್ಮಿಕವಾದಕ್ಕೆ ಹೆಸರಾದ ದೇಶ. ಮಹಾ ವಿಭೂತಿ ಪುರುಷರ ಜನ್ಮಭೂಮಿ, ಪುಣ್ಯ ತೀರ್ಥಕ್ಷೇತ್ರಗಳ ಆಗರ ತತ್ವಪ್ರಭಾವದಿಂದ ಲೋಕವನ್ನು ಬೆಳಗಿದ ಋಷಿಪುಂಗವರ ಸ್ಥಾನ. ಹಾದು ಇವೆಲ್ಲ ನಮ್ಮ ಗತವೈಭವದ ಸಂಕೇತಗಳು. ಆದರಿಂದು ಅದರ ಸ್ಮರಣೆ ಕೂಡಾ ನಮ್ಮಲ್ಲಿಲ್ಲ. ಬಹಳ ದೂರದ ಮಾತೇಕೆ ಮೂರು ವರ್ಷಗಳ ಹಿಂದೆ ಆಧ್ಯಾತ್ಮಿಕ ಬೆಳಕೊಂದು ನಮ್ಮನ್ನು ಸನ್ಮಾರ್ಗಕ್ಕೆ ಹಚ್ಚುತ್ತಿತ್ತು! ಆಗಾಗ ನಾವು ಅಜ್ಞಾನದಿಂದ ಎಚ್ಚತ್ತು ನಮ್ಮ ತಪ್ಪನ್ನು ತಿದ್ದಿಕೊಳ್ಳುತ್ತಿದ್ದೆವು ಈ ಇಪ್ಪತ್ತನೆಯ ಶತಮಾನದಲ್ಲೂ ಅಂತಹ ಆಧ್ಯಾತ್ಮಿಕ ಶಕ್ತಿ, ನಮ್ಮ ದೇಶದ ಜನಕ್ಕೆ ಸಾಂಸಾರಿಕ-ರಾಜಕೀಯ ಸುಖವನ್ನು ತಂದುಕೊಟ್ಟಿತೆಂದು ಯಾರು ಭಾವಿಸಿದ್ದರು? ಮಹಾತ್ಮಾ ಗಾಂಧೀಜಿ ತೀರಿಕೊಂಡಾಗ ವಿದೇಶೀಯ ಧುರೀಣರೊಬ್ಬರ "ವಿಜ್ಞಾನಯುಗವಾದ ಇಪ್ಪತ್ತನೆಯ ಶತಮಾನದಲ್ಲೂ ಅಹಿಂಸೆಯಿಂದಲೇ ದೇಶದ ಸ್ವಾತಂತ್ರ್ಯವನ್ನು ಗಳಿಸಿದ ವ್ಯಕ್ತಿ ಇದ್ದನೆಂಬುದನ್ನು ಮುಂದಿನ ಜನತೆ ನಂಬುವುದೋ ಇಲ್ಲವೋ" ಎಂದು ಹೇಳಿದ್ದರು. ಮುಂದಿನ ಜನಾಂಗವೇಕೆ ಅವರ ಕಾಲೀನರಾದ ನಾವೇ ಈ ಮೂರು ವರ್ಷಗಳಲ್ಲಿ ಅವರ ಉಜ್ವಲ ಬೋಧೆಯನ್ನೂ-ಆದೇಶವನ್ನು ಮರೆತು ವಿದೇಶೀ ಮಹನೀಯರ ಮಾತಿಗೆ ಸಾಕ್ಷಿಯಾದೆವಲ್ಲಾ!

ದೇಶದಲ್ಲಿಯ ಅನ್ನ-ಬಟ್ಟೆಯ ಅಭಾವವೊಂದೇ ದುಃಖದಾಯಿ. ವಿಚಾರವಿಲ್ಲದ್ದಕ್ಕಿಂತಲೂ ಮಿಗಿಲಾದದ್ದು ನಮ್ಮ ದೇಶದ ಸಂಸ್ಕೃತಿಗೆ ಒಗ್ಗದ ಅಂಧಾನುಕರಣೆಯ ವಿಚಾರ. ವಿಚಾರ ವಿಮರ್ಶೆ ಮಾಡದೆ ವಿವೇಕ ಹುಟ್ಟದು. ಆಶಕ್ತಿಯೇ ನಮ್ಮಲ್ಲಿಲ್ಲ! ಆಧ್ಯಾತ್ಮಿಕ ಶಕ್ತಿಯ ಬೆಳಕು ನಮ್ಮಲ್ಲಿಲ್ಲ. ನಮ್ಮ ದೇಶದ ಇಡಿಯ ಇತಿಹಾಸವೇ ನಮ್ಮ ಹುಟ್ಟು-ಬೆಳವಣಿಗೆಯ ಧರ್ಮ ಯಾವುದೆಂಬುದನ್ನು ಹೇಳುತ್ತದೆ ನಮ್ಮ ನಮ್ಮೊಳಗಿನ ಆಂತರಿಕ ಅಶಾಂತಿಗೆ ಇಲ್ಲವೆ ಅತೃಪ್ತಿಗೆ ಆಳವಾದ ಅನುಭವ ಇಲ್ಲವೆ ಅಭ್ಯಾಸ ಇಲ್ಲದಿರುವುದೇ ಕಾರಣ.

ಗಾಂಧೀಜಿ ತನ್ನ ತಾತ್ವಿಕ ಮಾರ್ಗದಿಂದ ಆದರ್ಶ ರೀತಿಯ ಬಾಳುವೆಯನ್ನು ಸಾಗಿಸಿದರು. ಅಂತಹ ದಿವ್ಯ ಶಕ್ತಿಗೆ ಮುಖ್ಯ ಕಾರಣ ಹಲವು ಮತಧರ್ಮಗಳ ತತ್ವಾನುಭವಗಳೇ ಆಗಿರುತ್ತವೆ. ಒಬ್ಬ ಒಳ್ಳೆಯವನಾದರೆ ಅವನ ಒಳ್ಳೆಯ ನಡತೆಯ ಅನುಕರಣೆಯಿಂದ ಹತ್ತು ಜನ ಒಳ್ಳೆಯವರಾಗುತ್ತಾರೆ. ಅವರಿಗೆ ಬಂದ ಕಷ್ಟಪರಂಪರೆಗಳನ್ನು ಹಸನ್ಮುಖಿಗಳಾಗಿ ಎದುರಿಸಿದ್ದರ ಔಚಿತ್ಯವು ಆಧ್ಯಾತ್ಮಿಕ ಶಕ್ತಿಯಲ್ಲದೆ ಬೇರಿಲ್ಲ ದೇಶದ ಪ್ರೀತಿ—ಜನತಾ ಸೇವೆಯೆಂದರೆ ಅನ್ನಬಟ್ಟೆಯೊಂದೇಯಲ್ಲ ಅದಕ್ಕೂ ಮಿಗಿಲಾದ ವಿಚಾರ ತಿಳುವಳಿಕೆಯನ್ನು ಆತ್ಮೀಯನಾಗಿ ಹೇಳುವುದೂ ಕೂಡ ಆಗಿದೆ. ಪರಸ್ಪರ ತಿಳುವಳಿಕೆಯಿಂದ ಮೈತ್ರಿಯು ಗಾಢವಾಗುತ್ತದೆ.

ಅಂತಹ ಸದ್ಭಾವನೆ ಮೂಡಬೇಕಾದರೆ ಒಂದೋ ನಮ್ಮಲ್ಲಿ ವಿಚಾರಮಾಡುವ ಶಕ್ತಿ ಬೇಕು. ಇಲ್ಲವೆ ಸರಿಯಾದ ಆದೇಶವನ್ನು ನೀಡಬಲ್ಲ ವಿಚಾರಶೀಲರ ಮಾರ್ಗದರ್ಶನ ಬೇಕು. ಅದರ ಹೊರತು ಸದ್ಭಾವನೆ ಬರುವುದು ಅಸಂಭವ.

"ನಮ್ಮನ್ನು ದಾಸ್ಯವೃತ್ತಿಗೆ ತಳ್ಳಿದರು" "ಕ್ರೂರಿಗಳಂತೆ ಕಂಡರು" ಎಂದು, ಬ್ರಿಟಿಷರನ್ನು ದೂರುವ ನಾವು ನಮ್ಮ ಕಾಲ ಬುಡವನ್ನು ನಾವು ನೋಡುವ. ನಾವು ನಮ್ಮ ನೆರೆಕೆರೆಯವರನ್ನು ಯಾವ ರೀತಿಯ ಸೌಹಾರ್ದಭಾವನೆಯಿಂದ ನೋಡುತ್ತೇವೆ? ನೆರೆಕೆರೆಯವರ ಸುಖದುಃಖಕ್ಕಾಗಿ ನಾವೆಷ್ಟು ಕಾತರಿಸುತ್ತೇವೆ? ನೆರಮನೆಯಲ್ಲಿ ಅನ್ನವಿಲ್ಲವೆಂದು ಹಸಿವಿನಿಂದ ಕೂಗುತ್ತಿರುವಾಗ ನಮ್ಮ ಮನೆಯ ಅಕ್ಕಿ ಮುಡಿಗೆ ಅರುವತ್ತಾಗಬೇಕೆನ್ನುತ್ತೇವೆ. ನೆರೆಯವನ ಜೀವ ಉಳಿಸುವುದು ಸರಕಾರದ ಕರ್ತವ್ಯವೆಂದು ಭಾವಿಸುತ್ತೇವೆ. ಹಾಗಾದರೆ ನಮ್ಮಲ್ಲಿ ಮಾನವೀಯ ಲಕ್ಷಣ ಎಷ್ಟು ಇದೆ? ನಾವೇ ಯೋಚಿಸಿಕೊಳ್ಳೋಣ. ನಮ್ಮ ಈಗಿನ ನಿರ್ದಯ ಮನೋವೃತ್ತಿಯು ಕುರಿಗಳಿಗೆ ಹೋಲಿಸುವಷ್ಟು ಯೋಗ್ಯತೆಯುಳ್ಳದ್ದಾಗಿದೆಂದು ಹೇಗೆ ಹೇಳೋಣ?

ಹೀಗೆ ನಮ್ಮ ವೈಯಕ್ತಿಕ ಜೀವನದಲ್ಲೂ ರಾಜಕೀಯ ಜೀವನದಲ್ಲೂ ತಾಳಮೇಳವಿಲ್ಲದಿರುವದಕ್ಕೆ ಪರಸ್ಪರ ತಿಳುವಳಿಕೆ—ಸೌಹಾರ್ದಭಾವ—ಆಧ್ಯಾತ್ಮಿಕದ ಬೆಳಕು ನಮ್ಮಲ್ಲಿ ಶೂನ್ಯವಾಗಿರುವುದೇ ಕಾರಣ. ನಿಜವಾಗಿಯೂ ಇಂದು ಸ್ವಾರ್ಥಿಗಳಿಗೆ ಮೇಲಾಗಿದೆ ಅವರೇ ಸುಖಿಗಳೆಂದು ನವರಿಗೆ ಭಾಸವಾಗುತ್ತದೆ ಈಗ ಆಡಳಿತದ ಭಾರವನ್ನು ವಹಿಸಿರುವ ನಮ್ಮ ಧುರೀಣರಿಗೆ ಸುಖವಿದೆಯೆಂದು ನಮ್ಮಲ್ಲಿ ಹಲವರು ಲೆಕ್ಕ ಹಾಕುತ್ತಾರೆ. ಆದರೆ ವಸ್ತುತಃ ಆಳುವವರಿಗಿಂತ ಆಳಾಗಿರುವವರಿಗೇ ಸುಖವಿದೆ. ಅಧಿಕಾರದಲ್ಲಿರುವವರಿಗಿಂತ ಹೊರಗುಳಿದವರಿಗೆ ಸ್ಪರ್ಧೆ ಕಡಿಮೆ. ಈಗ ಕಾಂಗ್ರೆಸ್ಸಿನಿಂದ ಹೊರಬಂದು ಕಾಂಗ್ರೆಸ್ಸಿಗೆ ವಿರುದ್ಧವಾಗಿ ಪ್ರಚಾರ ನಡೆಸುವ ಹಲವು ಧುರೀಣರ ವಾದವನ್ನು ನಾವು ತುಂಬ ಮೆಚ್ಚುತ್ತೇವೆ. ಆದರಿಂದ ನಮ್ಮ ಬೆಂಬಲ ಸಿಕ್ಕಿತೆಂದು ಅವರಿಗೆ ಸಮಾಧಾನವುಂಟಾಗುವುದು ಸ್ವಾಭಾವಿಕ ಆದರೆ ನಾಳಿನ ದಿನ ಇವರು ಅಧಿಕಾರಕ್ಕೆ ಬಂದರೆ ದುಃಖಕ್ಕೆ ಇವರೂ ಕಾರಣರಾಗುತ್ತೇವೆಂಬುದನ್ನು ಮರೆಯದಿರೋಣ.

ಲೋಕದ ತತ್ವವೇ ಹಾಗೆ! ಹೊಣೆಹೊತ್ತವರಿಗೆ ಸದಾ ವ್ಯಸನಚಿಂತೆಗಳೇ— ಹೊಣೆಯಿಲ್ಲದೆ ಆಡುವವರಿಗೆ ಸದಾ ಗೌರವ—ಮನ್ನಣೆ! ಇದಕ್ಕೆಲ್ಲ ಮೂಲ ಕಾರಣವೆಂದರೆ ಮೊದಲು ಹೇಳಿದ ವಿಚಾರವಂತ ಶಕ್ತಿ ನಮ್ಮಲ್ಲಿ ಶೂನ್ಯವಾಗಿರುವುದೇ ಅದೂ ನಮ್ಮ ದೇಶದ ಹುಟ್ಟಿಗೆ ವಿಜ್ಞಾನಕ್ಕಿಂತಲೂ ವಿಚಾರ ತಿಳುವಳಿಕೆ ಆವಶ್ಯಕ. ಇದು ವೈಯಕ್ತಿಕ ಜೀವನದಿಂದ ಹಿಡಿದು ರಾಜಕೀಯ ರಂಗದವರೆಗೂ ಅನ್ವಯಿಸುತ್ತದೆ. ಹೇಳುವವರಿಗಿಂತ ಕೇಳುವವರು ಬುದ್ಧಿಶಾಲಿಗಳಾಗುವ ಕಾಲಬಂದಾಗ ಜನಜೀವನದಲ್ಲಿ ಸುಖ ಶಾಂತಿ ಸಂಧೀತು. ಅವರಿಗೆ ಸ್ವಾರ್ಥ-ಸ್ವಾಭಿಮಾನ-ಸಂಕುಚಿತತೆಗಳಿಗೆ ಗೆಲುವು!



ಆಯಾ ಕೇಂದ್ರದಲ್ಲಿ ದೊರೆಯುವ ಸೇವೆಯು ಎಷ್ಟರವು ಅಲ್ಲಿನ ತಜ್ಞರಿಂದ–ಅಂದರೆ ಸರಕಾರದಿಂದ ನೇಮಿಸಲ್ಪಟ್ಟ ವೈದ್ಯಕೀಯ ಅಧಿಕಾರಿಗಳು ಮತ್ತು ಸ್ವಾಭಾವಿಕ ಕೆಲಸಗಾರರು ಒದಗಿಸಲಾಗುವ ಉಪದೇಶ, ಸಹಾಯಗಳ ಮೇಲೆ ಅವಲಂಬಿಸಿದೆ. ಶಾಸ್ತ್ರೀಯ ಉಪದೇಶವನ್ನು ಮೇಲ್ವಿಚಾರವನ್ನೂ ಮಾಡಬಲ್ಲ ಸ್ತ್ರೀ ವೈದ್ಯರು (Women Medical officers) ಆರೋಗ್ಯ ಸಂದರ್ಶಕರೂ, ಮಿಡ್‌ವೈಫ್‌ಗಳೂ ಸರಕಾರದ ವತಿಯಿಂದ ನೇಮಿಸಲ್ಪಡುತ್ತಾರೆ. ಆರೋಗ್ಯಾಧಿಕಾರಿ ಆಡಳಿತೆಗೊಳಪಡುವ ಸ್ತ್ರೀವೈದ್ಯರು ಮುಖ್ಯವಾಗಿ ಇದೇ ಕೆಲಸವನ್ನು ಮಾಡುತ್ತಾರೆ– ಇಂಥಾ ಸ್ತ್ರೀ ವೈದ್ಯಕೀಯ ಅಧಿಕಾರಿಗಳು ೧೦ಲ ಇರಬಹುದೆಂದು ಸರಕಾರವು ಅಪ್ಪಣೆಕೊಟ್ಟು ಬಾಣಂತಿ ಹಾಗೂ ಶಿಶುಗಳ ಕ್ಷೇಮಾಭಿವೃದ್ಧಿಯ ಕಾರ್ಯವು ವೈಜ್ಞಾನಿಕ ರೀತ್ಯಾ ನಡೆಯಬೇಕೆಂದು ಅಭಿಪ್ರಾಯಪಟ್ಟಿರುವುದು. ಎಲ್ಲಾ ಮಾರ್ಗಗಳಿಂದಲೂ ಅರ್ಥಾತ್ ಔಷದೋಪಚಾರ, ಚಿಕಿತ್ಸೆ, ಶಿಕ್ಷಣ, ರೋಗ ನಿರೋಧಕ ಉಪಾಯಗಳನ್ನು ಗರ್ಭಿಣಿಯರು ತಿಳಿದಿರುವ ಹಾಗೆ ಕೆಲಸ ನಡೆಯುವುದು ಹುಡುಗಿಯರಿಗೆ ಅವರ ಶಾಲೆಗಳಲ್ಲಿ ಆರೋಗ್ಯ ಶಿಕ್ಷಣವನ್ನೂ ಒದಗಿಸಲಾಗುವುದು ಹೆರಿಗೆ ಕೇಂದ್ರಕ್ಕೆ ಬಂದ ಪ್ರತಿಯೋರ್ವ ಗರ್ಭಿಣಿ ತಾಯಿಯನ್ನೂ ಪರೀಕ್ಷೆಮಾಡಿ ಹೆರಿಗೆಗೆ ಮೊದಲೂ, ಹೆರಿಗೆಯ ಕಾಲಕ್ಕೂ ಬೇಕಾಬೇಕಾದ ಸಲಹೆಗಳನ್ನು ಕೊಡಲಾಗುವುದು. ವಿಶೇಷ ತರಮ್ಮೇನಾದರೂ ಕಂಡುಬಂದಲ್ಲಿ ಆ ಸ್ತ್ರೀಯನ್ನು ಆಸ್ಪತ್ರೆಗೆ ಒಯ್ದು ಮರಳಿ

ಶಾಲೆ, ಕಾಲೇಜುಗಳಿಗೂ
ಸಹಕಾರಿ ಸಂಘ, ಮುನ್ಸಿಫ್
ಕೋರ್ಟುಗಳಿಗೂ ಕೃಷಿಕ,
ವರ್ತಕರು, ವ್ಯಾಪಾರಿಗಳಿಗೂ
ಬೇಕಾಗುವ ಉತ್ತಮ ಕಾಗದದಲ್ಲಿ
ತಯಾರಿಸಿದ
ತರತರದ ಫಾರ್ಮುಗಳು,
ರಶೀದಿ ಪುಸ್ತಕಗಳು, ಎಕೌಂಟ್
ಪುಸ್ತಕಗಳು, ಮುಗ್ಗಿ ಪುಸ್ತಕಗಳು
ದೊರೆಯುತ್ತವೆ.
ನವಯುಗ ಪ್ರೆಸ್, ಉಡುಪಿ.

ನಮ್ಮ ಪ್ರಾಂತ್ಯದಲ್ಲಿ ಬಾಣಂತಿಯರ ಸಂರಕ್ಷಣೆ ಹಾಗು ಶಿಶು ಸಂಗೋಪನೆ.

ಡಾ। ಕೆ ಮಂಜುನಾಥ ರೈ, ಎಂ. ಬಿ. ಬಿ. ಎಸ್., ಎಫ್. ಆರ್. ಸಿ. ಎಸ್. (E)
ಡಿ. ಎಂ. ಆರ್. (Lond)

ಇವರು ತಾ 8-6-1951ರಲ್ಲಿ ಮದ್ರಾಸ್ ಸ್ಟೇಶನಿನಿಂದ
ಮಾಡಿದ ರೇಡಿಯೋ ಭಾಷಣ
(ಕಳೆದ ಸಂಚಿಕೆಯಿಂದ ಮುಂದರಿಸಿದ್ದು)

ಮರಳಿ ಯತ್ನಮಾಡಲಾಗುವುದು. ಆಸ್ಪತ್ರೆಯ ಚಿಕಿತ್ಸೆ ಮುಗಿದ ಮೇಲೂ ಮನೆಗೆ ಬಂದ ತಾಯಿ ಯಾವ ಯಾವ ಮುಂಜಾಗ್ರತೆ ವಹಿಸಬೇಕೆಂಬುದನ್ನು ತಿಳಿಸಿ, ಅವಳ ಅಭ್ಯುದಯವನ್ನು ರಿಜಿಸ್ಟ್ರಿಗಳಲ್ಲಿ ದಾಖಲೆಮಾಡಲಾಗುವುದು. ಇಷ್ಟು ಮಾತ್ರವಲ್ಲದೇ ಮಿಡ್‌ವೈಫ್‌ಗಳು ಖಾಸಗಿ ಮನೆಗಳಲ್ಲಿ ಮಾಡುವ ಕೆಲಸದ ಮೇಲ್ವಿಚಾರವೂ ಈ ಸ್ತ್ರೀವೈದ್ಯಕೀಯ ಅಧಿಕಾರಿಗಳ ಕೈಯಲ್ಲಿದೆ.

ನಮ್ಮ ಪ್ರಾಂತ್ಯದಲ್ಲಿ ೧೬೦ ಮಂದಿ ಆರೋಗ್ಯ ಸಂದರ್ಶಕರು ಇದ್ದಾರೆ. ಅವರ ಪ್ರಾಮುಖ್ಯವಾದ ಕೆಲಸವೆಂದರೆ ಶಿಕ್ಷಣ ಕೊಡುವುದು. ಹೇಗೆಯು ಕೇಂದ್ರಕ್ಕೂ ಖಾಸಗಿ ಮನೆಗಳಿಗೂ ಮಧ್ಯಸ್ಥರಾಗಿ ಒದುಪವರೇ ಆರೋಗ್ಯ ಸಂದರ್ಶಕರು. ಇತರ ಚಿಕ್ಕ ದೊಡ್ಡ ಮಕ್ಕಳಿಂದ ಆವೃತಳಾಗಿರುವ ಗರ್ಭಿಣಿ ತಾಯಿಗೆ ಹೆರಿಗೆಯ ಕಾಲದಲ್ಲಿ ಯಾವ ತೆರನಾಗಿ ವರ್ತಿಸಬೇಕೆಂದು ಉಪದೇಶಿಸುವುದು ಆರೋಗ್ಯ ಸಂದರ್ಶಕರ ಕರ್ತವ್ಯ. ಊಟ, ತಿಂಡಿ ವ್ಯಾಯಾಮ, ನಿದ್ರೆ, ಮಗು ಹುಟ್ಟಿದ ಕೂಡಲೇ ಅದರ ಆರೈಕೆ ಮುಂತಾದ ವಿಷಯಗಳನ್ನು ಅವರು ತಾಯಿಗೆ ಹೇಳಿಕೊಡುವರು, ಡಾಕ್ಟರರು ಸಂದರ್ಶಿಸುವ ದಿನ ಸುತ್ತುಮುತ್ತಲಿನ ಗರ್ಭಿಣಿ ತಾಯಂದಿರನ್ನು ಹೆರಿಗೆ ಕೇಂದ್ರಕ್ಕೆ ಬರಮಾಡಿ ಅವರನ್ನು ಪರೀಕ್ಷೆಮಾಡಿಸುವುದು. ಡಾಕ್ಟರರು ಬಾರದೆ ಹೋದಲ್ಲಿ ತಾನೇ ಪರೀಕ್ಷೆ ಮಾಡುವುದು; ಸ್ತ್ರೀವೈದ್ಯರು ಹೇಳಿದ ವಿಷಯಗಳನ್ನು ತಾಯಂದಿರು ಅವರ ಮನೆಗಳಲ್ಲಿ ಪರಿಪಾಲಿಸುವರೆಂಬುದನ್ನು ಖಾತ್ರಿ ಮಾಡಿಕೊಳ್ಳುವುದು. ವಿಶೇಷ ತರದ ಇಸಮುಗಳನ್ನು ಸ್ವತಃ ತಾವೇ ಆಸ್ಪತ್ರೆಗಳಿಗೆ ಒಯ್ಯುವುದು. ಪ್ರಾಥಮಿಕ ಶಾಲೆಗಳಲ್ಲಿ ಆರೋಗ್ಯ ಸೂತ್ರಗಳನ್ನು ಉಪಯೋಗಿಸುವುದು—ಹೀಗೆ ಅನೇಕ ಮುಖವಾದ ಕೆಲಸ ಆರೋಗ್ಯ ಪ್ರಚಾರಕರೆಂದು ನಾವು ತಿಳಿದುಕೊಳ್ಳಬಹುದು. ಕುಟುಂಬದ ಪ್ರತಿಯೊಬ್ಬ ಸದಸ್ಯನ ಗುರುತು ಪರಿಚಯವೂ ಇರುವುದರಿಂದ ಮನೆಯೊಳಗಿನ ವಿಚಾರಗಳೆಲ್ಲಾ ಅವರಿಗೆ ತಿಳಿಯುವುದು ಮನೆಯಲ್ಲಿನ ಅಂಟುರೋಗಗಳನ್ನು, ಜಾಡ್ಯಗಳನ್ನೂ ಶೀಘ್ರದಲ್ಲಿ ಪತ್ತೆಹಚ್ಚಲು ಅದಕೆ ಅನುಕೂಲವಾಗುವುದು

ಗರ್ಭಿಣಿ ಬಾಣಂತಿಯರ ಹಾಗೂ ಶಿಶುಗಳ ಆರೋಗ್ಯ ಸಂರಕ್ಷಣೆಯಲ್ಲಿ ಮಿಡ್‌ವೈಫ್‌ಗೆ ಒಂದು ಅಗ್ರಸ್ಥಾನ ಸಲ್ಲಬೇಕು, ಆಕೆ ಇಲ್ಲವಾದಲ್ಲಿ ಮನೆಗಳನ್ನು ಪ್ರವೇಶಿಸುವುದೇ ಕಠಿಣವಾದೀತು ಹೆರಿಗೆಯ ಕಾಲದಲ್ಲಿ ಆಕೆ ಕೊಡುವ ಧರ್ಮಾರ್ಥ ವೈದ್ಯಕೀಯ ಸಹಾಯ ಇಲ್ಲವಾದರೆ ಹೆರಿಗೆ ಕೇಂದ್ರಗಳನ್ನೂ; ಶಿಶು ಆರೋಗ್ಯಧಾಮಗಳನ್ನೂ ಯಾರು ಕೇಳುತ್ತಾರೆ? ಒಂದು ನಗರ ಸಭೆಯ ವಲಯದಲ್ಲಿ ಅಥವಾ ಗ್ರಾಮದಲ್ಲಿ ಒಬ್ಬಳು 'ಮಿಡ್‌ವೈಫ್' ಇದ್ದರೆ ಆಕೆ ಇರುವ ಸ್ಥಳದಿಂದ ಮೂರು ಮೈಲು ಸುತ್ತಲಿನ ಹಳ್ಳಿಗೆ ಆಕೆ ಸಹಾಯವದಗಿಸಬೇಕು. ಮನೆಮನೆಯನ್ನು ಸಂದರ್ಶಿಸಿ ಅಲ್ಲಿರುವ ಗರ್ಭಿಣಿ ಮಾತೆಯರ ದಾಖಲೆ ತೆಗೆದುಕೊಂಡು, ಹೆರಿಗೆ ಸುಸೂತ್ರವಾಗಿ ನಡೆಯುವಂತೆ ನೋಡಿಕೊಂಡು ಅಲ್ಲಿಂದ ಹತ್ತು ದಿನಗಳವರೆಗೆ ಬಾಣಂತಿಯನ್ನೂ, ಮಗುವನ್ನೂ ವಿಚಾರಿಸಿಕೊಂಡು ಮಗುವಿಗೆ 5 ವರ್ಷ ಆಗುವ ತನಕ ಅದರ ಮೇಲ್ವಿಚಾರವನ್ನೂ ನಡೆಯಿಸುವಳು. ಗರ್ಭಿಣಿಯರಾದ ಮೊದಲ ದಿವಸಗಳಿಂದ ತೊಡಗಿ ಹೆರಿಗೆ ಮತ್ತು ಹೆರಿಗೆಯ ಅನಂತರದ ಕಾಲಗಳವರೆಗೂ ಮಾತೆಯರ ಮೇಲ್ವಿಚಾರವನ್ನು ನೋಡಿಕೊಳ್ಳುವುದರಿಂದ ಅನೇಕ ತರದ ವೈಪರೀತ್ಯಗಳು (abnormalities) ಮಿಡ್‌ವೈಫ್‌ಗಳಿಗೆ ಕೂಡಾ ಗೋಚರಕ್ಕೆ ಬರುವುದು. ಈ ಪರಿಯಾಗಿ ಎಷ್ಟು ಮಂದಿ ತಾಯಂದಿರಿಗೆ ಸಾಧ್ಯವೋ ಅಷ್ಟು ಜನಕ್ಕೂ ಯೋಗ್ಯ ಸಹಾಯ ದೊರೆಕಂತಾಗುವುದು.

ತಲತಲಾಂತರದಿಂದ ಮಿಡ್‌ವೈಫ್ ಕೆಲಸವನ್ನು ಮಾಡುತ್ತ ಬಂದಿರುವ ನಮ್ಮ ಸ್ವದೇಶಿ ದಾದಿಯರನ್ನು ಒಮ್ಮಿಂದೊಮ್ಮೆ ಬರ್ತರಫು ಮಾಡುವುದು ಒಳ್ಳೆಯದೂ ಅಲ್ಲ; ಅಗತ್ಯವೂ ಇಲ್ಲ. ಅವರ ಕೆಲಸದಲ್ಲಿ ನೈರ್ಮಲ್ಯಕ್ಕೆ ಎಡೆಇಲ್ಲವೇನೋ ನಿಜವೇ. ಆದರೆ ಸಾಧಾರಣವಾದೊಂದು ತರಬೇತಿಯನ್ನು ಕೊಟ್ಟು ಅವರ ಕೆಲಸದ ಮೇಲೆ ನಿಗಾ ಇಟ್ಟುಕೊಂಡಿರುವ ಪಕ್ಷಕ್ಕೆ ಅವರ ಸಹಾಯವೂ ನಮಗೆ ಒದಗುವುದು. ಆಧುನಿಕ ಮಿಡ್‌ವೈಫ್‌ಗಳು ಅವರ ವ್ಯವಹಾರಕ್ಕೆ ವಿಘ್ನಕಾರರಾಗಿ ಅವರ ಸಂಪಾದನೆಗೆ ಅಡ್ಡಬರದಿದ್ದರಾಯಿತು.

ಗರ್ಭಿಣಿ ಮತ್ತು ಶಿಶುಗಳ ರಕ್ಷಣೆಯ ಕೇಂದ್ರವೆಂದರೆ ಹೆಂಗಸರು ಮಕ್ಕಳ ಚಿಕಿತ್ಸಾಮಂದಿರ–ಡಿಸ್ಪೆನ್ಸರಿ–ಅಲ್ಲವೆಂದು ತಿಳಿದಿರತಕ್ಕದ್ದು. ಹಾಗೆ ತಿಳಿದಲ್ಲಿ ಹೆರಿಗೆಯ ಕೇಂದ್ರದ ಬೆಲೆ ಎಷ್ಟೋ ತಗ್ಗುವುದು.

ಗರ್ಭಿಣಿ ಬಾಣಂತಿಯರ ಮತ್ತು ಶಿಶುಗಳ ಕ್ಷೇಮಾಭಿವೃದ್ಧಿಯ ಕೆಲಸವನ್ನು ಮುಂದೊತ್ತಲು ಈಗಾಗಲೇ ಯೋಜನೆಯೊಂದು ಸಿದ್ಧವಾಗಿದೆ. ಅದು ಇನ್ನು ವಿಶಾಲವಾಗಿ ಬೆಳೆಸುವುದರಲ್ಲಿದೆ. ಉದಾಹರಣೆ

ಋತುಸ್ರಾವ ನಿಂತಿತು
'ಕುಮಾರ' ಬಿಲ್ಲೆಗಳನು ಉಪಯೋಗಿಸಿದರೆ ಹದತಪ್ಪಿ ಋತುಸ್ರಾವನಾಗುತ್ತದು, ಹತೋಟಿಗೆ ಬರುವುದು, ಈ ಔಷಧ ಸೇವನೆಯಿಂದ ತೀವ್ರ, ಗುಣಹೊಂದಬಹುದು, ಯಾದ ಬಾಧಕವೂಯಿಲ್ಲ. ಸಾವಿರಾರು ಮಂದಿಗೆ ಖಾತ್ರಿ ಗುಣವಾಗಿದೆ– ಬೆಲೆ; ರೂ. 3। ಸ್ಪೆಶಲ್ ರೂ. 5- ಅಧಿಕಾಧಿಕ ಸ್ಪೆಶಲ್ ರೂ. 8- [ಪಿ. ಪಿ ಹನ್ನೆರಡಾಣೆ ಪ್ರತ್ಯೇಕ.]
Mrs D. DEVEE, P DS (N. J.)
Tollygunge CALCUTTA.
ಸ್ಟಾಕಿಸ್ಟರು ದಯಾಕಂಪೆನಿ, ಮಂಗಳೂರು

ಬೇಂಕಿಂಗ್ ಸಂಬಂಧದ ಎಲ್ಲಾ ಸಮಸ್ಯೆಗಳಿಗೆ
ದಿ ವಿಜಯಾ ಬೇಂಕ್ ಲಿಮಿಟೆಡ್
ಇವರ ಸಲಹೆ ಕೇಳಿರಿ

ಹೆಡ್ ಆಫೀಸು : : : : ಮಂಗಳೂರು
ಮಡಿಕೇರಿಯಲ್ಲಿ ಒಂದು ಶಾಖೆಯೂ ಬೊಂಬಾಯಿಯಲ್ಲಿ ಒಂದು ಶಾಖೆಯೂ ಜಿಲ್ಲೆಯೊಳಗೆ ಹಲವು ಶಾಖೆಗಳೂ ಇವೆ.

ಸ್ಥಿರಮು ಠೇವಣಾತಿಗಳ ಮೇಲೆ ಆಕರ್ಷಕವಾದ ದರದ ಬಡ್ಡಿಯು ಕೊಡಲ್ಪಡುವುದು.

ತಕ್ಕುದಾದ ಜವಾಬ್ದಾರಿಗಳ ಮೇಲೆ ಸುಲಭವಾದ ಶರ್ತಗಳಲ್ಲಿ ಸಾಲಗಳು ಕೊಡಲ್ಪಡುವುವು.

ಸಾಲಿಯನ್ ಸೇಕಡಾ 4½ರ ಬಡ್ಡಿ ಗಳಿಸುವ ಮೂರು ವರ್ಷದ ಅವಧಿಯ **ವಿಜಯಾ ಕೇಶ್ ಸರ್ಟಿಫಿಕೇಟುಗಳ** ಮೇಲೆ
ಹಣವನ್ನು ಹಾಕಿರಿ

THE VIJAYA BANK, LTD,

ಬಿ. ಮಂಜಯ್ಯ ಹೆಗ್ಗಡೆ,
(ದ. ಕ. ಜಿಲ್ಲಾ ಬೋರ್ಡ ಪ್ರೆಸಿಡೆಂಟ್
ಡೈರೆಕ್ಟರ್ ಬೋರ್ಡಿನ ಅಧ್ಯಕ್ಷರು.

ನಿರಾಶೆಗೆ ಒಳಗಾಗದಿರಿ!

ಉಬ್ಬಸ, ಕಫ, ಶ್ವಾಸಕೋಶದಿಂದ
ನೀವು ವಿಪರೀತ ಕಷ್ಟಪಡುವಿರಾದರೆ, ಹಲವಾರು
ಅಮೌಲ್ಯ ಔಷಧಿಗಳ ಸೇವನೆಯಿಂದ ನಿಮಗೆ ಗುಣವಾಗದಿರುವುದಾದರೆ,
ಆಶಾಭಂಗಕ್ಕೊಳಗಾಗದಿರಿ!
ಅಲ್ಪವೆಚ್ಚ–ಅಲ್ಪಾವಧಿಯೊಳಗೆ ನಿಮ್ಮಬಾಧೆಯನ್ನು ಶಮನಮಾಡುವ
ಖಾತ್ರಿ ಔಷಧಿಯು ನಮ್ಮಲ್ಲಿರುವುದು.
ಒಂದೇ ಒಂದು ಸೀಸೆಯನ್ನು ಕೊಂಡು, ಗುಣಪರೀಕ್ಷೆಮಾಡಿರಿ!
ಈ ಹೊಸ ಮದ್ದಿನಿಂದ ನಿಮಗೆ ಅದ್ಭುತ ಗುಣತೋರುವುದೆಂಬುದು ಖಂಡಿತ.

ಕೂಡಲೆ ಬರೆಯಿರಿ:—

M. Mendonca,
2nd Floor, Ruby Mansion;
Parsee Bazar Street, Fort,-
Bombay.

ಎಂ. ಮೆಂಡೋಸ,
ಎರಡನೆ ಮಾಳಿಗೆ, ರುಬಿ ಮೆನ್ಸನ್
ಪಾರ್ಸಿಬಝಾರ್ ಸ್ಟ್ರೀಟ್, ಫೋರ್ಟ್,
ಬೊಂಬಾಯಿ

ಫಿರ್ಕಾ ಅಭಿವೃದ್ಧಿ ಕಾರ್ಯಕ್ರಮದ ಕೆಳಗೆ ವಸತಿಗಳ ಕಾರ್ಯಕ್ರಮವು ಅಂಗೀಕೃತವಾಗಿದೆ.

ಎಲ್ಲಾ ಯೋಜನೆಗಳಲ್ಲಿಯೂ ಪಬ್ಲಿಕ್ ಹೆಲ್ತನ್ನು ಸ್ಮರಿಸುವುದು ಅವಶ್ಯಕವಿದೆ. ಸಾಮಾನ್ಯವಾಗಿ ಯಾವ ಆರೋಗ್ಯ ಯೋಜನೆಯಲ್ಲಿಯೂ ಪ್ರಾಥಮಿಕವಾಗಿ ಗರ್ಭಿಣಿ ಶಿಶುಸಂಗೋಪನೆ ಕೇಂದ್ರಗಳನ್ನು ಅಭಿವೃದ್ಧಿಗೊಳಿಸ ಅವಕಾಶ ಉಂಟು.

ಈ ಕ್ಷೇತ್ರದಲ್ಲಿ ಖಾಸಗಿ ಸಂಸ್ಥೆಗಳು ದಿನಂದಲೋ ಮುಂದಾಳುಗಳಾಗಿ ವಸಿ ಉತ್ತಮೋತ್ತಮವಾದ ಸೇವೆಯು ಸಲ್ಲಿಸುತ್ತಾ ಬಂದಿವೆ. ಸರಕಾರವೂ, ಅಂಥಾ ಸಂಸ್ಥೆಗಳೂ ಒಂದಕ್ಕೊಂದು ಪೂರಕವಾಗಿ ನಿಂತು ಕೆಲಸಮಾಡಬೇಂದೀತು ಸರಕಾರವು ಕೈಗೊಂಡ ಯೋಜನೆಗೆ ಪೂರಕವಾಗಿ ಅವರು ಗಿರಣಿ ಕಾಮಗಾರರು, ರೈಲ್ವೇ ನೌಕರರು, ಗಣಿಯ ಕೆಲಸಗಾರರು, ಮುಂತಾದವರ ಸಲುವಾಗಿ ಗರ್ಭಿಣಿ ಯಾಗೂ ಶಿಶು ಕ್ಷೇಮಾಭಿವೃದ್ಧಿಯ ಕೇಂದ್ರಗಳನ್ನು ತೆರೆದಿದ್ದಾರೆ. ಶಿಶು ಚಿಕಿತ್ಸಾ ಮಂದಿರಗಳನ್ನೂ ಶಿಶುಗೃಹಗಳನ್ನೂ ಶಿಶು ವಿಹಾರಗಳನ್ನೂ ಕಟ್ಟಿಸಿಕೊಟ್ಟಿದ್ದಾರೆ. ಅವರ ಪ್ರಯತ್ನದಲ್ಲಿ ವಿಧಾಯಾತ್ಮಕವಾದ ಕಾರ್ಯ ಭಾಗಗಳಿಗೆ ಪ್ರಾಮುಖ್ಯಕೊಟ್ಟಿರುವುದು ಯುಕ್ತವೇ ಆಗಿದೆ. ಹೀಗೆ ಖಾಸಗೀ ಸಂಸ್ಥೆಗಳೂ ಸರಕಾರವೂ ಜತೆಯಾಗಿ ಆರೋಗ್ಯ ಮತ್ತು ವಿಹಾರದ ಕುರಿತು ಚಿಂತಿಸಿದರೆ ನಮ್ಮ ಮುಂದಾಸಿನ ಆರೋಗ್ಯ ವಿಧಾನದಂಥ ಸಾಮಾಜಿಕ ಜೀವನದ ಕೇಂದ್ರಗಳನ್ನು ನಿರ್ಮಿಸುವುದು ಕಷ್ಟದ ಕೆಲಸವೇನೂ ಅಲ್ಲ.

ಗರ್ಭಿಣಿ ಮಾತೆಯರ ಮತ್ತು ಶಿಶುಗಳ ಸಂಗೋಪನೆಯ ಕುರಿತಾದ ಈ ಸಿಂಹಾವಲೋಕನವನ್ನಾಲಿಸಿದ ಮೇಲೆ ನಮ್ಮ ಪ್ರಾಂತ್ಯದಲ್ಲಿ ಈ ಒಳ್ಳೆಯ ಕೆಲಸ ಇದೀಗ ಪ್ರಾರಂಭವಾಗಿದೆಯೆಂದೂ ಇನ್ನು ಬಹಳ ಕೆಲಸ ಉಳಿದಿದೆ ಎಂದೂ ಗೋಚರವಾಗಬಹುದು. ಸ್ತ್ರೀಯರು ಗರ್ಭದಂದಿನಿಂದ, ಹೆರಿಗೆಯಾಗಿ, ಮಗುವಿಗೆ ಐದು ವರ್ಷ ವಯಸ್ಸಾಗುವ ತನಕ ರಾಷ್ಟ್ರವು ನೀಡುವ ಸಂರಕ್ಷಣೆ, ಸಹಾಯ ಅತ್ಯಂತ ಮಹತ್ವದ್ದಾಗಿದ್ದು, ಶಿಶು ಮರಣಗಳ ಅಧಿಕ್ಯದಿಂದ ಜನಸಂಖ್ಯೆಯು ಹ್ರಾಸವಾಗುವ ಅತ್ಯಂತ ಗಂಡಾಂತರದ ಸನ್ನಿವೇಶ ತಪ್ಪಲೂ ಬಹುದೆಂಬ ಆಸೆ ಉದಿಸಿದೆ.

ನಮ್ಮ ಭರತಖಂಡದ ಬಹುಭಾಗವು ಸಾರ್ವಜನಿಕ ಆರೋಗ್ಯ ಸಿಬ್ಬಂದಿಯು ಸ್ತ್ರೀ ನೌಕರರಿಗೆ ಸಲ್ಲಬೇಕು. ಎಷ್ಟೋ ವಿಷ್ಯಗಳ ನಡುವೆ ಅವರು ಕೆಲಸಮಾಡಿದರೂ ಆಗಿನ ನಮ್ಮ ಸಾಮಾಜಿಕ ಸನ್ನಿವೇಶದಲ್ಲಿ ಅವರಿಗೆ ಯಥಾರ್ಥವಾಗಿ, ಸಲ್ಲಬೇಕಾದ ಗೌರವವೂ, ಸಹಾನುಭೂತಿಯೂ ಅವರಿಗೆ ದೊರೆಯುತ್ತಿಲ್ಲವೆಂದು ದುಃಖದಿಂದ ಒಪ್ಪಿಕೊಳ್ಳಬೇಕಾಗಿದೆ. ಈ ಕಾರ್ಯದ ಜೀವಕೇಂದ್ರವಾಗಿರತಕ್ಕ ಸ್ತ್ರೀ ವೈದ್ಯಕಳ್ಳಿ (Woman medical officer) ವಿಷ್ಣು ವಿಗ್ರಹ ರಗಳಿಗೆ ಸಿಬ್ಬಂದಿಕರ ಮುಂದುವರಿಯುವ ಗುಣವಷ್ಟೇ ಅಲ್ಲ, ಒಂದು ಮಿಶನರಿ ಸ್ಫೂರ್ತಿಯೂ ಸೇವಾಭಾವವೂ ಅತ್ಯಗತ್ಯವಾಗಿ ಇರಲೇಬೇಕು. ಆತಂಕಗಳಿಗೆ ಅಂದರೆ, ನಮ್ಮನ್ನಗ್ಗಿದ ಸಾಹಸಿಗಳ ಬೆಸೆಯಿಂದಾಗಿ ಇಂದಿನ ಈ ಪ್ರಗತಿಯನ್ನು ಕಾಣುವ ಭಾಗ್ಯಶಾಲಿಗಳಾಗಿದ್ದೇವೆ.

ಸಾರ್ವಜನಿಕ ಧರ್ಮಗಾರರಲ್ಲಿಯೂ ಇತ್ತೀಚೆಗೆ ಈ ಬಗ್ಗೆ ಜಾಗೃತಿಯುಂಟಾಗಿದೆ. ಧರ್ಮೋದ್ದೇಶಗಳಾದ ಹಲವಾರು ದಾನಿಗಳು ಗ್ರಾಮಾಂತರಗಳಲ್ಲಿಯೂ ಹೆರಿಗೆಯ ಕೇಂದ್ರಗಳಿಗೆ ಬೇಕಾದ ಕಟ್ಟಡಗಳನ್ನು ರಚಿಸುವುದಕ್ಕೂ, ಸಲಕರಣೆಗಳನ್ನು ಒದಗಿಸುವುದಕ್ಕೂ ಸಹಾಯಮಾಡಿ ನಮ್ಮ ಯೋಜನೆಯು ವಿಶಾಲವಾಗಿ ವ್ಯಾಪಿಸುವದಕ್ಕಾಗಿ ನೆರವು ನೀಡಿದ್ದಾರೆ. ವರ್ಲ್ಡ್ ಹೆಲ್ತ್ ಆರ್ಗನೈಜೇಶನ್, ಯುನಿಸೆಫ್ ಮುಂತಾದ ಅಂತರರಾಷ್ಟ್ರೀಯ ಸಂಸ್ಥೆಗಳ ಮೂಲಕವಾಗಿ ದೇಶವಿದೇಶಗಳ ಪ್ರಗತಿಯ ಆದರ್ಶವನ್ನೂ ಅನುಭವವನ್ನೂ ನಮ್ಮ ಉಪಯೋಗಕ್ಕೆ ತಂದುಕೊಳ್ಳುವ ಯತ್ನ ನಡೆಯುತ್ತಿದೆ. ಎಲ್ಲಾ ಹೆರಿಗೆ ಕೇಂದ್ರಗಳಲ್ಲೂ ಹೊಸ ಮಕ್ಕಳಿಗೆ ಧರ್ಮಾರ್ಥವಾಗಿ ಹಾಲಿನ ಡಬ್ಬನ್ನು ಒಟಿಮಾಡಿ ಮಾಡಿದ ಯುನಿಸೆಫ್ ಸಂಸ್ಥೆಯ ಧರ್ಮಕಾರ್ಯವನ್ನು ಸರ್ವರೂ ಮೆಚ್ಚಿದ್ದಾರೆ.

(ಇಂಗ್ಲಿಷ್ ಮೂಲದ ಅನುವಾದ—ಕು. ಶಿ.)

ರಾಮತೀರ್ಥ ಬ್ರಾಹ್ಮಿ ತೈಲ

ನಾನು ಮತ್ತು ನನ್ನ ಪತ್ನಿ

ಕಳೆದ ವರ್ಷ ನಾನು ಮತ್ತು ನನ್ನ ಪತ್ನಿ ತಲೆಶೂಲೆಯಿಂದ ಪೀಡಿತರಾಗಿದ್ದೆವು. ನಾವು ಈ ರೋಗದಿಂದ ಮುಕ್ತರಾಗುವುದಕ್ಕೆ ಅನೇಕ ತರದ ತೈಲವನ್ನು ಉಪಯೋಗಿಸಿದೆವು. ಆದರೆ ಅದರಲ್ಲಿ ಹೆಸರು, ಪ್ರಶಂಸೆ ಮತ್ತು ಗುಣದ ಜಾಹೀರಾತು ಮಾತ್ರ ಬರೆದಿತ್ತು. ಈ ಎಣ್ಣೆಯಿಂದ ಗುಣವಾಗುವ ಬದಲು ನಮ್ಮ ತಲೆಕೂದಲು ಬಂದೇ ಸವನೆ ಬಿಳುಪಾದುವು.

ಒಂದು ದಿನ ಪ್ರಸಿದ್ಧ ವರ್ತಮಾನ ಪತ್ರದಲ್ಲಿ ಅರ್ಧ ಪುಟದ ಜಹೀರಾತನ್ನು ನಾನು ಓದಿದೆ. ಅದು ಬ್ರಾಹ್ಮೀ ತೈಲದ್ದಾಗಿತ್ತು. ಆ ತೈಲದ ಪ್ರಶಂಸೆಯನ್ನು ಓದಿ ನಾನು ಆಕರ್ಷಿತನಾದೆ, ಮತ್ತು ಕೂಡಲೆ ಒಂದು ಬಾಟ್ಲಿ ಎಣ್ಣೆಯನ್ನು ಖರೀದಿ ಮಾಡುವುದಕ್ಕೋಸ್ಕರ ನಾನು ಬಜಾರಕ್ಕೆ ಹೋದೆ.

ಆ ಜಾಹೀರಾತು ರಾಮತೀರ್ಥ ಯೋಗಾಶ್ರಮ, ದಾದರ್, (ಜಿ. ಐ. ಪಿ.) ಮುಂಬಯಿ ೧೪ ಇವರ ಔಷಧಿಯ ರಿಜಿಸ್ಟರ್ಡ್ ರಾಮತೀರ್ಥ ಬ್ರಾಹ್ಮಿ ತೈಲ (ಸ್ಪೆಶಲ ನಂ. 1) ಇದರದ್ದಾಗಿತ್ತು. ನಾನು ಇಪ್ಪತ್ತೈದು ಬಾಟ್ಲಿ ಖರೀದಿ ಮಾಡಿ ಉಪಯೋಗಮಾಡಿದೆ. ಹೇಗೆ ಏನೆಂದು ತಿಳಿಯಲಿ? ಮತ್ತೂ ರಾಮತೀರ್ಥ ಬ್ರಾಹ್ಮಿ ತೈಲ (ಸ್ಪೆಶಲ್ ನಂ 1) ಪ್ರಥಮ ನೂರು ಬಾಟ್ಲಿಯ ವ್ಯವಹಾರ ಮಾಡುವಾಗ ನಮ್ಮ ಇಬ್ಬರದು ತಲೆಶೂಲೆ ಕೂಡ ಒಂದೇ ಸವನೇ ಗುಣವಾಗಿ ನಿಂತು ಬಿಟ್ಟಿತು ನಮ್ಮ ತಲೆ ಕೂದಲು ಕಪ್ಪಗೆ ಕಪ್ಪಗೆ ಆಗುತ್ತ ಬಂತು.

ಇದರಿಂದ ಕೇವಲ ನನ್ನ ಪತ್ನಿ ಮತ್ತು ಮಕ್ಕಳಿಗೆ ಮಾತ್ರವಲ್ಲ, ನಮ್ಮ ಸ್ನೇಹಿತ ಮಿತ್ರ ಪರಿವಾರ ಕುಟುಂಬಕ್ಕೂ ಕೂಡ ರಾಮತೀರ್ಥ ಬ್ರಾಹ್ಮಿ ತೈಲ ಸ್ಪೆಶಲ್ 1ರ ವ್ಯವಹಾರ ಮಾಡಬೇಕಾಗಿ ಶಿಫಾರಸ್ ಮಾಡುವೆವು

(ಸಹಿ) ಮಹಮ್ಮದ್ ಕಾಠಿಯಾವಾಡಿ.
ಕೊಟನ್ ಎಕ್ಸ್‌ಚೇಂಜ್, ಬಡೋದಾ.

ಸ್ಪೆಶಲ್ ನಂ ೧] [ಮೆಡಿಕೇಟೆಡ್

ಸ್ಮರಣೆ ಹೆಚ್ಚುತ್ತದೆ, ಶಾಂತನಿದ್ರೆ ಬರುತ್ತದೆ, ಕಣ್ಣಿನ ದೃಷ್ಟಿ ಹೆಚ್ಚುತ್ತದೆ, ಬಕ್ಕೆ ನಾಶವಾಗುತ್ತದೆ, ಕೂದಲು ಕಪ್ಪಾಗುತ್ತದೆ ಬೆಳೆಯುತ್ತವೆ ಮತ್ತು ನೆತ್ತಿಯಲ್ಲಿ ಕೂದಲು ಬರುತ್ತವೆ. ಎಲ್ಲಾ ಋತುಗಳಲ್ಲಿ ಎಲ್ಲರಿಗೂ ಅನುಕೂಲವಿದೆ. ಎಲ್ಲಾ ಕಡೆಯಲ್ಲಿಯೂ ದೊರೆಯುತ್ತದೆ.

ಸ್ಥಾನಿಕ ಕ್ರಯ: ದೊಡ್ಡ ಬಾಟ್ಲಿಗೆ ರೂ. 3—8—0 ಸಣ್ಣ ಬಾಟ್ಲಿಗೆ ರೂ. 2—0—0

ಶ್ರೀ ರಾಮತೀರ್ಥ ಯೋಗಾಶ್ರಮ,
ದಾದರ್ (ಜಿ. ಐ. ಪಿ.) ಮುಂಬಯಿ ೧೪

ಇದೀಗ ಪ್ರಕಟವಾಗಿದೆ.

ವೀರಪ್ಪ ಯಂಗಟಿ, ಹಾವೇರಿ
ಇವರ

ನೀತಿ ವಿನೋದ
ಕತೆಗಳು

ನೀತಿ ಮತ್ತು ವಿನೋದಪರವಾದ
35 ಕತೆಗಳ ಸಂಗ್ರಹ

ಮುಖ್ಯವಾಗಿ ಸ್ತ್ರೀಯರಿಗೂ, ಮಕ್ಕಳಿಗೂ
ಬೋಧಪ್ರದವಾದ ಕತೆಗಳಿಂದೊಡ
ಗೂಡಿದೆ

ಬೆಲೆ: 0 12 0

ಹೆಚ್ಚಿನ ಕ್ಯಾಟಲಾಗಿಗೆ ಬರೆಯಿರಿ.

ಅಂತರಂಗ ಕಾರ್ಯಾಲಯ,
ಉಡುಪಿ

ಭಾರತದಲ್ಲಿ ಬರಗಾಲ ಉಂಟಾಗಿ ಜನ ಬಂಗಾಳದಂತಹ ದುರಂತ ಚಿತ್ರಕ್ಕೊಳಗಾಗಬಹುದೆಂಬ ಭೀತಿ ದೇಶಾದ್ಯಂತ ಹಬ್ಬಿತ್ತು. ಕೇಂದ್ರ ಸರಕಾರದ ಆಹಾರ ಮಂತ್ರಿ ಮುನ್ಷಿಯವರ ಆಕಾಶವಾಣೀ ಭಾಷಣ ಆಶಾದಾಯಕವಾದ ಸಂದೇಶವನ್ನು ಕೊಟ್ಟಿರುತ್ತದೆ. ಬಿಹಾರದ ಕಠಿಣ ಪರಿಸ್ಥಿತಿಯು ದೂರಾಗಿ 12 ಔನ್ಸಿನಷ್ಟು ಆಹಾರ ನೀಡುವಷ್ಟು ಸಂಗ್ರಹವನ್ನು ಬಿಹಾರ ಮಾಡಿರುತ್ತದೆ. ಮುಂದಿನ ಕೊರತೆಯ ಪ್ರಾಂತವೆಂದರೆ ಮದ್ರಾಸ. ಕೇಂದ್ರ ಸರಕಾರದವರು ಮದ್ರಾಸದ ಆಹಾರದ ಕೊರತೆಯನ್ನು ನೀಗುವದಕ್ಕೆ ವಿಶೇಷ ಆಸ್ಥೆ ವಹಿಸಿದ್ದಾರೆ. ಮದ್ರಾಸಿನ 1 ಲಕ್ಷಟನ್ ಆಹಾರ ಧಾನ್ಯಗಳ ಮಿತಿಯನ್ನು 10ಲಕ್ಷ ಟನ್ನಿನ ವರೆಗೆ ಏರಿಸಲಾಗಿದೆ. ಮುಂಬಯಿಯ ನಾಗರಿಕರು ಆಹಾರ ಒಟ್ಟಿಗಳನ್ನು ಸಂಗ್ರಹಿಸಿದ್ದು ಅದನ್ನು ಬಿಹಾರದ ಪರಿಹಾರಕ್ಕಾಗಿ ಕಳಿಸಿದ್ದರು. ನೆಹ್ರೂರವರು ಅವರ ಸಕಾಲಿಕವಾದ ಸಹಕಾರವನ್ನು ಅಭಿನಂದಿಸುತ್ತಾ ಮುಂದೆ ನೀವು ಮದ್ರಾಸಕ್ಕೆ ಕಳಿಸಬೇಕೆಂದು ಸೂಚಿಸಿರುವರು. ಅಂತೂ ಮದ್ರಾಸಕ್ಕೆ ಮುಂದೆ ಬರಗಾಲದ ಭೀತಿ ಬರಲಾರದು. ಕೇಂದ್ರ ಸರಕಾರಕ್ಕೆ ಬಿಹಾರದ ಬಿಕ್ಕಟ್ಟು ಪರಿಹಾರವಾದುದರಿಂದ ಮುಂದೆ ಮದ್ರಾಸದ ತೊಡಕನ್ನು ಬಗೆಹರಿಸುವುದೇ ಮುಖ್ಯ ಉದ್ದೇಶವಾಗಿದೆ.

ಎಲ್ಲ ಪ್ರಾಂತಗಳ ಆಹಾರ ಪೂರೈಕೆಯಲ್ಲೂ ಹೆಚ್ಚಳವನ್ನು ಮಾಡಲಾಗಿದೆ. ಬಿಹಾರಕ್ಕೆ 6ಲಕ್ಷ ಟನ್ನಿನಿಂದ 10ಲಕ್ಷ ಟನ್ನಿನ ವರೆಗೂ, ಮುಂಬಯಿಗೆ 7ಲಕ್ಷದಿಂದ 11ಲಕ್ಷ ಟನ್ನಿನವರೆಗೂ, ಮದ್ರಾಸಕ್ಕೆ 4ಲಕ್ಷದಿಂದ 10ಲಕ್ಷದ ವರೆಗೂ ಹೆಚ್ಚಿಸಲಾಗಿದೆ. ಹೀಗೆಯೆ ಪ್ರತಿಯೊಂದು ಪ್ರಾಂತಗಳಿಗೂ ಹೆಚ್ಚಿಸಲಾಗಿದೆ.

ನಮಗೆ ಬೇಕಾದ ಆಹಾರ ಧಾನ್ಯಗಳಲ್ಲಿ ಹೆಚ್ಚಿನಂಶಗಳು ಅಮೇರಿಕೆಯಿಂದ ಬರುವಂಥವುಗಳಾಗಿರುತ್ತವೆ. ಒಟ್ಟಿಗೆ 40ಲಕ್ಷ ಟನ್ ಆಹಾರಧಾನ್ಯವನ್ನು ಭಾರತ ಹೊರಗಿನಿಂದ ತರಿಸಲಿದ್ದು ಅದರಲ್ಲಿ ಅಮೇರಿಕಾದಿಂದ 17ಲಕ್ಷಟನ್‌ಗಳೂ, ಅರ್ಜೆಂಟೈನದಿಂದ 514000ಲಕ್ಷ ಟನ್‌ಗಳೂ ಥಾಯಿಲಾಂಡಿನಿಂದ 343000ಟನ್‌ಗಳೂ, ಬರ್ಮಾದಿಂದ 313000ಟನ್‌ಗಳೂ ರಷ್ಯಾದಿಂದ 100000ಟನ್‌ಗಳೂ ಪಾಕಿಸ್ತಾನದಿಂದ 218000ಟನ್‌ಗಳೂ ಕಾನಡಾದಿಂದ 296000ಟನ್ನುಗಳೂ ಆಸ್ಟ್ರೇಲಿಯಾದಿಂದ 240000ಟನ್ನುಗಳೂ ಉದ್ದಿಯಾದಿಂದ 30000ಟನ್ನುಗಳೂ ಬರಲಿವೆ. ಚೀನಾ ನಮಗೆ ಅವಶ್ಯವಾದವನಂತೆ ಸಕಾಲಕ್ಕೆ ಅತ್ಯಂತ ಕಷ್ಟದ ಸ್ಥಿತಿಯಲ್ಲಿ 517000ಲಕ್ಷಟನ್ನು ಆಹಾರ ಧಾನ್ಯಗಳನ್ನು ಕಳಿಸಿರುತ್ತದೆ.

ಈಗ ಅಮೇರಿಕೆಯ ಆಹಾರ ಕೊಡುಗೆಯನ್ನು ಸಿನೇಟ ಮತ್ತು ಕಾಂಗ್ರೆಸ್ಸ ಸಭೆಗಳು ಮನ್ನಿಸಿ ಅಧ್ಯಕ್ಷ ಟ್ರೂಮನ್ನರ ಅಂಕಿತಕ್ಕಾಗಿ ಕಾಯುತ್ತಲಿದೆ. ಈ ಕೊಡುಗೆ ದಾನರೂಪವಾಗಿ ಸಿಗಬಹುದೆಂತಲೂ, ಅರ್ಧದಾನ ಅರ್ಧಸಾಲರೂಪದಲ್ಲಿ ದೊರಕಬಹುದೆಂತಲೂ, ಕೊನೆಗೆ ಪೂರ್ತ ಸಾಲದಲ್ಲಿ ಮಾತ್ರ ಕೊಡಬಹುದೆಂದು ತೀ ... ಮಾನವಾಗಿ ಅದಕ್ಕೆ ಪ್ರತಿಯಾಗಿ ಅಟಂ ಉಪಯೋಗೀ ವಸ್ತುಗಳನ್ನು ಕಳಿಸಬೇಕೆಂಬ ಒತ್ತಾಯವನ್ನೂ ತೆಗೆದುಹಾಕಲಾಗಿದೆ. ಆದುದರಿಂದ ಭಾರತವು ಇದನ್ನು ಸಂತೋಷದಿಂದ ಸ್ವೀಕರಿಸಬಹುದಾಗಿದೆ. ಅಮೇರಿಕೆಯ ಈ ದೊಡ್ಡ ಪರಿಮಿತಿಯ ಆಹಾರ ಧಾನ್ಯದಿಂದ ಭಾರತದ ಆಹಾರ ಪರಿಸ್ಥಿತಿ ಎಷ್ಟೋ ಸುಧಾರಿಸಬಹುದು. ಮುಂದೆ ಇದರ ಸಾಗಾಟದ ಹೊಣೆಯೂ ಕಠಿಣದ್ದಾಗಿದೆ. ಸಾಗಾಟದಲ್ಲೂ ಅಮೇರಿಕಾ ಮತ್ತು ಬ್ರಿಟನುಗಳು 100 ಹಡಗುಗಳನ್ನು ಬಿಟ್ಟುಕೊಟ್ಟು ಸಹಾಯ ಮಾಡಿವೆ. ಇದರಿಂದ ವಿದೇಶದ ಆಹಾರ ಧಾನ್ಯವು ಶೀಘ್ರದಲ್ಲಿ ಭಾರತವನ್ನು ಮುಟ್ಟಬಹುದು.

ಮದ್ರಾಸಕ್ಕೆ ಹತ್ತುಲಕ್ಷ ಟನ್ ಹೆಚ್ಚು ಆಹಾರ ಧಾನ್ಯ ಪೂರೈಸುವ ಪಕ್ಷದಲ್ಲಿ ಜೂನ್ 24ರಿಂದ 12ಔನ್ಸಿನಂತೆ ಕೊಡಬಹುದೆಂದು ರೋಚ ಪಿಕ್ಚರಿಯಾ ರವರು ಹೇಳಿರುವರು. 130000 ಟನ್ ಆಹಾರವನ್ನು ಪ್ರಾಂತದ ಜಿಲ್ಲೆಗಳಿಗೆ ಶೀಘ್ರದಲ್ಲೇ ಹಂಚುವ ಹಾಗೆ ಸೂಚಿಸಲಾಗಿದೆ. ಭೂಜಲಮಾರ್ಗವಾಗಿ ಅತ್ಯಂತ ಶೀಘ್ರವಾಗಿ ಕಳಿಸುವ ಏರ್ಪಾಟು ಮಾಡಬೇಕೆಂದು ಸಂಬಂಧಪಟ್ಟ ಅಧಿಕಾರಿಗಳಿಗೆ ತಿಳಿಸಲಾಗಿದೆ.

ಇನ್ನು ಬರಗಾಲದ ಭಯವಿಲ್ಲ

ಬೆಂಗಳೂರಲ್ಲಿ ಎ. ಐ. ಸಿ ಸಿ ಅಧಿವೇಶನ

ಜುಲೈ ತಿಂಗಳ ೧೩ಕ್ಕೆ ಬೆಂಗಳೂರಲ್ಲಿ ಅಖಿಲ ಭಾರತ ಕಾಂಗ್ರೆಸ್ ಅಧಿವೇಶನವು ಜರಗುವದೆಂದು ಗೊತ್ತಾಗಿದೆ. ಆ ದಿನಗಳಲ್ಲಿ ಅಧಿವೇಶನ ನಡೆಸಿ ಕಾಂಗ್ರೆಸ್ಸನ್ನು ಭದ್ರಗೊಳಿಸುವ ವಿಚಾರವಾಗಿಯೂ ಇನ್ನಿತರ ಪ್ರಾಮುಖ್ಯ ಸಮಸ್ಯೆಗಳಿಗಾಗಿಯೂ ವಿಶೇಷ ಚರ್ಚೆನಡೆಯಲಿದೆ. ಇತ್ತೀಚೆಗೆ ಕಾಂಗ್ರೆಸ್ಸಿನಲ್ಲುಂಟಾಗಿರುವ ಭಿನ್ನಾಭಿಪ್ರಾಯ ಪಕ್ಷತ್ಯಾಗಗಳ ಕುರಿತು ಕಾಂಗ್ರೆಸ್ಸಿನ ಸಮಾಲೋಚನೆ ನಡೆಸಲಿದೆ. ಕಾಂಗ್ರೆಸ್ಸಿನಿಂದ ಹೊರಬಂದವರ ಕುರಿತು ಸಂಧಾನದ ಮಾತುಕತೆ ನಡೆಸಿ ಒಲಿಸಿಕೊಳ್ಳಬೇಕೆನ್ನುವದು ಕಾಂಗ್ರೆಸ್ಸಿನ ಮಹೇಚ್ಛೆಯಾಗಿರುತ್ತದೆ. ಆದರೆ ಈಗಲೇ ಗಣ್ಯ ಕಾಂಗ್ರೆಸ್ಸಿಗರೇ ಕಾಂಗ್ರೆಸ್ಸನ್ನು ತ್ಯಜಿಸಿ ತಿರುಗಿ ಆ ಪಕ್ಷಕ್ಕೆ ಸೇರಲಾರೆವೆಂದು ನುಡಿದಿದ್ದರಿಂದ ಕಾಂಗ್ರೆಸ್ ಅಧಿವೇಶನದ ಯತ್ನ ಎಷ್ಟರ ಮಟ್ಟಿಗೆ ಫಲಿಸೀತೆಂದು ಹೇಳಲು ಬರುವಂತಿಲ್ಲ. ಕಾಂಗ್ರೆಸ್ಸನ್ನು ಟೀಕಿಸುವುದೂ, ಬೇರೊಂದು ಪಕ್ಷಕ್ಕೆ ಸೇರಿ ಅದಕ್ಕೆ ವಿರುದ್ಧ ಹೋರಾಟ ನಡೆಸುವುದೂ ಒಂದು ಫ್ಯಾಶನ್ನೇ ಆಗಿದೆ. ಆ ರೀತಿಯ ಸೋಲು ಕಾಂಗ್ರೆಸ್ಸಿಗಾದೀತೆಂದು ಯಾರೂ ಭಾವಿಸಲಿಲ್ಲ. ಕಾಂಗ್ರೆಸ್ಸಿಗರ ಭಿನ್ನಾಭಿಪ್ರಾಯಗಳನ್ನು ತೊಡೆದು ಹಾಕಿ ಐಕ್ಯತೆಯನ್ನುಂಟು ಮಾಡಲು ಈ ಮೊದಲೆಷ್ಟೋ ಸಂದರ್ಭಗಳು ಎ. ಐ. ಸಿ ಗಿದ್ದರೂ ... ದು ತನ್ನ ಗಾಂಭೀರ್ಯವನ್ನು ಬಿಟ್ಟು ಜನತೆಯೊಡನೆ ಸಹಕರಿಸದೇ ಹೋದುದು ನಿಜವಾಗಿಯೂ ದುಃಖದಾಯಕ ಸಂಗತಿ. ಈಗಾಗಲೇ 50 ಸಹಸ್ರಕ್ಕೂ ಮೇಲ್ಪಟ್ಟು ಕಾಂಗ್ರೆಸಿಗರು ಕಾಂಗ್ರೆಸ್ಸನ್ನು ತ್ಯಜಿಸಿದ ದಾಖಲೆಗಳು ಕಂಡು ಬಂದಿವೆ. ಯಾರು ಕಾಂಗ್ರೆಸ್ಸಿನೊಳಗಿದ್ದು ಅದರ ಶಕ್ತಿ ಚಾಲನೆಗೆ ಅವಶ್ಯವಾಗಿದ್ದರೋ ಅವರೇ ಇಂದು ಕಾಂಗ್ರೆಸ್ಸನ್ನು ತ್ಯಜಿಸಿ ಹೊರಬಂದಿದ್ದಾರೆ. ಪ್ರಥಮ ವರ್ಗದ ವ್ಯಕ್ತಿಗಳು ಸಂಪೂರ್ಣ ತ್ಯಜಿಸುವ ತನಕ ಮಟ್ಟಿನ ಸಮಾಧಾನ ಧೋರಣವನ್ನು ಎ ಐ. ಸಿ. ಸಿ. ತಾಳಬಾರದಿತ್ತು. ಮೊನ್ನೆ ಆಚಾರ್ಯ ಕೃಪಲಾನಿಯವರು "ಇನ್ನೂ ನನ್ನೊಡನೆ ಸಂಧಾನದ ಮಾತುಕತೆ ನಡಿಸುತ್ತಾ ಕಾಲಹರಣ ಮಾಡುವ ಕುರಿತು ನನಗೆ ಖೇದವಾಗಿದೆ. ಜೇರಿದು ಪಕ್ಷ ನಿರ್ವಹಣ ಕಾರ್ಯದಲ್ಲಿ ನನಗೆ ತೊಂದರೆಯೊಡ್ಡಿದಂತಾಗಿದೆ ಸಂಧಾನ ಮಾತುಕತೆ ಮುಂದಕ್ಕೆ ಯಶಸ್ವಿಯಾಗುತ್ತದೆಂದು ಭಾವಿಸುವವರ ಕುರಿತು ನಾನು ... ವಾದ ವ್ಯಕ್ತಪಡಿಸುತ್ತೇನೆ" ಎಂದಿರುವರು. ಈಚೆಗೆ ಕೃಪಲಾನಿಯವರು ತನ್ನ ಪಕ್ಷದ ಕಾರ್ಯ, ಜನತೆಯ ಬಲವನ್ನು ಸಂಪಾದಿಸುವಲ್ಲಿ ಯಶಗಳಿಸಿದ್ದನ್ನು ನೋಡಿದಾಗ ಒಮ್ಮೆ ಕಾಂಗ್ರೆಸ್ಸನ್ನು ತ್ಯಜಿಸಿ ಹೋದವರು ತಿರುಗಿ ಕಾಂಗ್ರೆಸ್ಸನ್ನು ಸೇರುವ ಮನಸ್ಸು ಮಾಡಲಾರರೆಂದು ಸ್ಪಷ್ಟವಾಗುತ್ತದೆ. ಕಾಂಗ್ರೆಸ್ಸು ಅನ್ಯತರವಾಗಿ ನಡೆದು ಕೊಂಡದ್ದರ ಫಲವನ್ನುಣ್ಣುವ ದುಃಖದಾಯೀ ಪ್ರಸಂಗವಿದು. ಕಾಂಗ್ರೆಸ್ಸನ್ನು ಭದ್ರಗೊಳಿಸುವ ಐಕ್ಯತೆಯನ್ನು ಸಾಧಿಸುವ ಯೋಜನೆಯಲ್ಲಿ ಬೆಂಗಳೂರ ಅಧಿವೇಶನಕ್ಕೆ ಸಾಕಷ್ಟು ಯಶದೊರೆಯಲಾರದಾದರೂ ಕಾಂಗ್ರೆಸ್ಸಿಗರು ತಮ್ಮ ಕರ್ತವ್ಯದೃಷ್ಟಿಯಿಂದ ಆತ್ಮಶೋಧನೆಯನ್ನು ಮಾಡುವುದು ಅವಶ್ಯವಾಗಿದೆ. ಹಿಂದಿನ ಸೊಲ್ಲನ್ನೇ ಹಾಡಿದರೆ ಉಪಯೋಗವಿಲ್ಲ. ಹೃದಯ ಪರಿವರ್ತನೆಗೊಳ್ಳಬೇಕು. ಕಾಂಗ್ರೆಸ್ಸಿನ ಭವಿತವ್ಯದ ಕುರಿತು ದೀರ್ಘ ಮುಂದಾಲೋಚನೆ ನಡೆಸಬೇಕು. ಕಾಂಗ್ರೆಸ್ಸಿನ ಸತ್ವಪರೀಕ್ಷೆಯ ಕಾಲವಿದು. ಬೆಂಗಳೂರು ಅಧಿವೇಶನ ಕಾಂಗ್ರೆಸ್ಸಿಗೆ ನೂತನ ಶಕ್ತಿಯನ್ನು ಕೊಟ್ಟು ಜನತೆಯ ಬಲವನ್ನು ಗಳಿಸುವಂತೆ ಪ್ರಯತ್ನಿಸಲಿ!

ಸತ್ತಿದ್ರೆ ಮಾತ್ರ ಏನಿಲ್ಲ ಖರೆ,—

ಆದ್ರೆ ಅವ್ನ ಹೆಂಡ್ತಿ ಮಕ್ಳು?

"ಯಜಮಾನ್ರು ಇನ್‌ಶೂರ್ ಮಾಡಿರ್ಲಿಲ್ಲಾ" ಎಂಬೊಂದೇ ಮಾತು ಉಳಿದದ್ದು ಸಂಕಷ್ಟ ತಪ್ಪತ್ತೆ

ಪ್ರತೀ ಗೃಹಸ್ಥರೂ ತಮ್ಮ ಸಂತ್ರ ಇಂಥಾ ಸ್ಥಿತಿ ಬಾರದಂತೆ ಮುಂಚಿತವಾಗಿ ನೋಡಿಕೊಳ್ಳಿರಿ

ದಿ ಕೆನರಾ ಮ್ಯೂಚುವಲ್

ಶ್ರೀ

ಎಶ್ಯೂರೆನ್ಸ್ ಕಂಪೆನಿ ಲಿಮಿಟೆಡ್,

ಪ್ರಧಾನ ಕಾರ್ಯಾಲಯ. ಉಡುಪಿ ಸ್ಥಾಪನೆ. ೧೯೩೫

The Canara Mutual Assurance Co, Ltd.

H O UDIPI (SOUTH INDIA) Estd 1935.


BALLBEARING
—THE LIFEBLOOD OF THE INDUSTRY
Dealers in
ROTARY OIL MILLS
FLOUR MILLS
BALL, ROLLER &
THRUST BEARINGS
TELEGRAMS —CHEAPTRADE
A. RAMSON AND CO.
5D MISTRI BUILDING BALARAM St. BOMBAY 7

ಕಾಶ್ಮೀರ ಪ್ರಶ್ನೆಗೆ ಬಿಡುಗಡೆ ...

ಕಾಶ್ಮೀರ ಪ್ರಕರಣದಲ್ಲಿ ಆಂಗ್ಲೋ ಅಮೇರಿಕಾ ನಡೆಸಿದ ಕುಟಿಲ ನೀತಿಯನ್ನು ಭಾರತ ಮಂತ್ರಿ ಜವಾಹರಲಾಲ ನೆಹ್ರೂರವರು ಕಾಮನ್‌ವೆಲ್ತ ಪ್ರತಿನಿಧಿಗಳ ಸಮ್ಮೇಲನದಲ್ಲಿ ಖಂಡತುಂಡವಾಗಿ ಪ್ರಕಟಿಸಿದ್ದಾರೆ. ನೆಹ್ರೂರವರು ಇಷ್ಟು ತೀಕ್ಷ್ಣವಾದ ರೀತಿಯಲ್ಲಿ ಆಂಗ್ಲೋ ಅಮೇರಿಕಾದ ನೀತಿಯನ್ನು ಖಂಡಿಸಲು ಮುಖ್ಯ ಕಾರಣವೆಂದರೆ ಮೂರು ವರ್ಷಗಳಿಂದ ಕಾಶ್ಮೀರ ತಂಟೆಯು ನಡೆದಲ್ಲಿ ಪಾಕಿಸ್ತಾನದ ಅಧಿಕಾರ ಪ್ರವೃತ್ತಿಯನ್ನು

ಹೆಚ್ಚಿಸುತ್ತಾ-ವಿದೇಶಗಳಲ್ಲಿ ಭಾರತದ ವಿರುದ್ಧ ಕುಂಠಿತ ಅಪಪ್ರಚಾರ ನಡೆಸುತ್ತಾ ಅಧಿಕಪ್ರಸಂಗಿತನ ಪ್ರದರ್ಶಿಸಿದ್ದೇ ಆಗಿರುತ್ತದೆ. ಸಂ. ರಾ. ಸಂಘವು ಈಚೆಗೆ ತಳೆದ ಧೋರಣೆಯನ್ನು ಭಾರತವು ಸಂಪೂರ್ಣ ತ್ಯಜಿಸಿದ್ದರೂ ಪಾಕಿಸ್ಥಾನದ ಒಲವಿನಂತೆ ತನ್ನ ಆದೇಶವನ್ನು ಕಾರ್ಯರೂಪದಲ್ಲಿ ತರುವ ಸಾಹಸ ಮಾಡಿದ್ದನ್ನು ಯಾವ ರಾಷ್ಟ್ರವೂ ಸಹಿಸದು. ಅದರ ಬೆನ್ನಲ್ಲೇ ಭಾರತ ಕಾಶ್ಮೀರದಲ್ಲಿ ಅಕ್ರಮ ರಾಷ್ಟ್ರವೆಂದು ಸಿದ್ಧಪಡಿಸುವಲ್ಲಿ ಪಾಕಿಸ್ಥಾನವು ವಿದೇಶಗಳಲ್ಲಿ ನಡೆಸುತ್ತಿರುವ ದ್ವೇಷಾಗ್ನಿಗೆ ಆಂಗ್ಲೋ ಅಮೇರಿಕಾನರು ತುಪ್ಪವನ್ನೆರೆಯುತ್ತಾ ಬಂದಿದ್ದಾರೆ. ಸಹನೆಗೂ ಒಂದು ಮಿತಿಯಿದೆ. ಔದಾರ್ಯದ ಉರುಳಿಗೆ ಸಿಕ್ಕಿ ದೇಶವನ್ನು ಗಂಡಾಂತರಕ್ಕೆ ತುತ್ತಾಗಿಸುವದಕ್ಕಿಂತ ಸಂಧಾನವೋ-ಸಮರವೋ ಎಂಬುದನ್ನು ನಿಷ್ಕರ್ಷಿಸುವುದು ಒಳ್ಳಿತು. ನೆಹ್ರೂರವರ ಹೇಳಿಕೆಯನ್ನು ಪಾಕಿಸ್ಥಾನ ಮುಖ್ಯ ಮಂತ್ರಿ ಹಾಗೂ ವಿದೇಶ ಮಂತ್ರಿಗಳು ಪ್ರತಿಭಟಿಸಿದ್ದಾರೆ. "ಸಂ. ರಾ. ಸಂಘದ ನೀತಿಬೋಧೆಯನ್ನು ತಿರಸ್ಕರಿಸಿ ತನ್ನದೇ ಛಲ ಸಾಧಿಸಬೇಕೆಂದು ಭಾರತ ಹಟ ಹಿಡಿದಿದೆ. ನೆಹ್ರೂ ಯುದ್ಧಪ್ರೇರಕ ಮಾತುಗಳನ್ನು ಆಡುತ್ತ ಬಂದಿರುವರು. ಅದಕ್ಕೆ ನಾವೇನೂ ಹಿಂಜರಿಯಲಾರೆವೆಂಬುದನ್ನು ಅವರು ಇನ್ನಾದರೂ ಅರಿತಿರಲಿ" ಎಂದು ಪಾಕಿಸ್ತಾನ ಮುಖ್ಯ ಮಂತ್ರಿ ಹೇಳಿರುತ್ತಾರೆ. ಲಾಹೋರ ಕಾಶ್ಮೀರ ಜಮ್ಮುಗಳ ಮುಸ್ಲಿಂ ಪಕ್ಷದ ಅಧ್ಯಕ್ಷರು "ಕಾಶ್ಮೀರದ ಭವಿತವ್ಯವು ಯುದ್ಧಭೂಮಿಯಲ್ಲೇ ನಿಷ್ಕರ್ಷೆಯಾಗಬೇಕಾಗಿದೆ. 1947ರಲ್ಲಿ ಮಾತೃಭೂಮಿ ವಿಮೋಚನೆಗಾಗಿ ಆಜಾದ ಕಾಶ್ಮೀರ ಕೈಗೊಂಡಿರುವ ಹೋರಾಟವನ್ನೇ ತಿರುಗೊಮ್ಮೆ ಸ್ವೀಕರಿಸಬೇಕಾಗಿದೆ. ಭಾರತವು ತನ್ನ ಹಟವನ್ನು ಬಿಡಲೊಪ್ಪದ್ದರಿಂದ ಕಾಶ್ಮೀರ ಪ್ರಾಪ್ತಿಗೆ ಇದನ್ನೇ ಗತಿ" ಎಂದು ಹೇಳಿರುವರು. ಶಸ್ತ್ರ ಹಿರಿದೇ ಮಾತಾಡುವ ಪಾಕಿಸ್ಥಾನಿಗಳ ತಿರುಬೊಬ್ಬೆ ಕೇಳಿದವರಿಗೆ ಈ ಬೆದರಿಕೆ ಹೊಸತೇನೂ ಅಲ್ಲ!

ಎಣ್ಣೆ ತಂಟೆ ಗಂಭೀರವಾಗಬಹುದೆ?

ಆಂಗ್ಲೋ ಇರಾನಿಯನ್ ಎಣ್ಣೆ ಕಂಪೆನಿಯ ರಾಷ್ಟ್ರೀಕರಣದ ಪ್ರಕರಣವು ವಿಷಮತೆಗೆ ಬಂದು ಮುಟ್ಟಿರುತ್ತದೆ. ಎಣ್ಣೆ ಕಂಪೆನಿಯ ಲಾಭದಲ್ಲಿ 75% ಪರ್ಶಿಯಕ್ಕೆ ಕೊಡಬೇಕೆಂಬುದಕ್ಕೆ ಬ್ರಿಟನಿನ ಸರಕಾರದ ಉತ್ತರ ಬಂದ ಹೊರತು ಯಾವ ಮಾತುಕತೆಗೂ ತಾವು ಸಿದ್ಧವಿಲ್ಲವೆಂದು ಪರ್ಶಿಯವು ಬ್ರಿಟಿಶ್ ಶಿಷ್ಟಮಂಡಳಕ್ಕೆ ತಿಳಿಸಿದೆ. ಬ್ರಿಟನಿನ ಉತ್ತರ ಮಂಗಳವಾರ ದಿನ ಬರುವ ನಿರೀಕ್ಷೆಯಿದೆ. ಈ ನಡುವೆ ಎಣ್ಣೆ ಕಂಪೆನಿಯಲ್ಲಿ ಬ್ರಿಟಿಶ್ ಕೆಲಸಗಾರರಾದ 2800 ಜನರು ರಾಷ್ಟ್ರೀಕರಣದ ವಿರುದ್ಧ ಚಳುವಳಿ ಹೂಡುವ ನಿರ್ಧಾರ ಮಾಡಿರುತ್ತಾರೆ. ಎಣ್ಣೆ ಕಂಪೆನಿಯ ಪ್ರತಿನಿಧಿಗಳು ಹಾಗೂ ಪರ್ಶಿಯದೊಡನೆ ನಡೆಸಿದ ಮಾತುಕತೆಗಳಿಂದ ಯಾವ ಪ್ರಗತಿಯೂ ಕಂಡುಬಂದಿರುವುದಿಲ್ಲ. ಮೂರು ವಾರದೊಳಗೆ ಬ್ರಿಟನದ ಉತ್ತರ ಬರದೇ ಹೋದರೆ ಬ್ರಿಟನಕ್ಕೆ ಎಣ್ಣೆ ಕಳಿಸುವದನ್ನು ನಿಲ್ಲಿಸಲಾಗುತ್ತದೆಂದು ಪರ್ಶಿಯ ತಿಳಿಸಿರುತ್ತದೆ. ಟೆಹರಾನಿನಲ್ಲಿ ತಿರುಗೊಮ್ಮೆ ರಕ್ತಪಾತವಾಗುವ ಚಿಹ್ನೆ ಕಾಣುತ್ತಲಿದೆ. ಅಮೇರಿಕೆಯ ಅಧಿಕಾರಿಯೊಬ್ಬನ ಕೊಲೆಯ ಪ್ರಕರಣವೂ ಗಂಭೀರ ಸ್ವರೂಪಕ್ಕೆ ಹೋಗುವಂತಿದೆ. ಪರ್ಶಿಯದ ನಕಾರಾತ್ಮಕ ಉತ್ತರಗಳಿಂದ ಬ್ರಿಟನ್ ಕುಪಿತವಾಗುವುದು ಸ್ವಾಭಾವಿಕ. ಅಂತಲೇ 2800 ಜನರು ವಿರುದ್ಧ ಚಳುವಳಿ ಹೂಡಿರುತ್ತಾರೆ. ಇದರ ಪರಿಣಾಮ ಹೇಗೆ ನಿಲ್ಲುತ್ತದೆಂದು ಹೇಳುವುದು ಕಷ್ಟವಾಗಿದೆ. ಪರ್ಶಿಯವು ತನ್ನ ಧೋರಣೆಯಲ್ಲಿ ಔದಾರ್ಯವನ್ನು ತೋರಿಸದೆ ಹೋದರೆ ಪರಿಸ್ಥಿತಿ ಗಂಭೀರವಾಗುವುದು ಖಂಡಿತ!

ಕೊರಿಯ ಸಂಧಾನ ಸದ್ಯ ಇಲ್ಲ!

ಕೊರಿಯ ಸಂಧಾನ ಸೂಚನೆಯನ್ನು ಸಂ. ರಾ. ಸಂಘವು ಮಾಡಬೇಕೆಂದು ಅಮೇರಿಕಾ ಬ್ರಿಟನುಗಳು ಬಯಸಿದ್ದರೂ ನಿರ್ದಿಷ್ಟ ಸಮಯವನ್ನು ಸೂಚಿಸುವಲ್ಲಿ ಭಿನ್ನಾಭಿಪ್ರಾಯ ಹುಟ್ಟಿಕೊಂಡಿವೆ. ಕಮ್ಯೂನಿಸ್ಟರು ಯುದ್ಧ ಸನ್ನಾಹದಲ್ಲಿರುವದರಿಂದ ಈ ಸೂಚನೆಯನ್ನು ಮಾನ್ಯ ಮಾಡುವ ಲಕ್ಷಣವಿರುವುದಿಲ್ಲ. ಕೊರಿಯದ ಸಂ. ರಾ. ಸಂಘದ ಸೇನೆಗಳ ವ್ಯೂಹದ ಹಿಂಬದಿಯಲ್ಲಿ ಕಮ್ಯೂನಿಸ್ಟರ ಚಟುವಟಿಕೆ ನಡೆದಿರುತ್ತದೆ. ಕೊರಿಯದ ದಕ್ಷಿಣ ತುದಿಯಲ್ಲಿರುವ ಪುಸಾನ ಎಂದಲ್ಲದೆ ಅನೇಕ ಕಡೆಗಳಲ್ಲಿ ಕೂಟ ಸೈನಿಕರು ಯುದ್ಧ ನಡೆಸಿರುವ ದಾಖಲೆ ಕಂಡುಬಂದಿವೆ. ಡೀನ್ ಆಚಿಸನ್‌ರೂ ಯುದ್ಧ ಮುಂದರಿಸುವ ಧೋರಣೆಯನ್ನು ವ್ಯಕ್ತಪಡಿಸಿರುವರು. ಅಂತೂ ಸಂಧಾನಕ್ಕೆ ಯಶಸ್ಸಿಗುವದು ಅಸಂಭವವೆಂದು ತೋರುತ್ತದೆ.

ಕಾಶ್ಮೀರೀ ಮಧ್ಯಸ್ಥ

ಸಂ. ರಾ. ಸಂಘದ ಕಾಶ್ಮೀರೀ ಮಧ್ಯಸ್ಥಗಾರರಾದ ಡಾ! ಗ್ರಾಹಮರು ಜೂನ್ 25–26ಕ್ಕೆ ಕರಾಚಿಗೆ ಬರಲಿರುವರು. ಮೊದಲು ಕರಾಚಿಗೆ ಬಂದು ಮತ್ತೆ ದಿಲ್ಲಿಗೆ ಬಂದು ಮಾತುಕತೆ ನಡೆಸುವರೆಂದು ತಿಳಿದುಬರುತ್ತದೆ.

ರೈಲ್ವೆ ಸಂಪಿನಿಂದ ದೇಶದ್ರೋಹ

ದೇಶದಲ್ಲಿ ಆಹಾರದ ಬಿಕ್ಕಟ್ಟಿರುವಾಗ ರೈಲ್ವೆ ಕೆಲಸಗಾರರು ಸಂಪು ಹೂಡುವದರಿಂದ ದೇಶದ್ರೋಹ ಮಾಡಿದಂತಾಗುತ್ತದೆಂದೂ ಈಗ ಸರಕಾರ ಕೊಟ್ಟಿರುವ 5 ರೂ. ತುಟ್ಟಿಭತ್ತೆಯಿಂದ ಸಂಪು ಹೂಡುವ ಧೋರಣೆಯನ್ನು ಹಿಂತೆಗೆದುಕೊಳ್ಳಬೇಕೆಂದೂ ಅಖಿಲ ಭಾರತ ರಾಷ್ಟ್ರೀಯ ಮಜದೂರ ಸಂಘದ ಅಧ್ಯಕ್ಷ ಶ್ರೀ ಖಂಡೂಭಾಯಿ ದೇಸಾಯಿಯವರು ವಿನಂತಿಸಿದ್ದಾರೆ.

ಚುನಾವಣಾ ಸಂಕೇತಗಳು

ಮುಂಬರುವ ಚುನಾವಣೆಯಲ್ಲಿ ಕಾಂಗ್ರೆಸ್ಸು ತನ್ನ ಚುನಾವಣಾ ಸಂಕೇತವನ್ನಾಗಿ ನೇಗಿಲ ಚಿಹ್ನೆಯನ್ನೂ ಹಿಂದೂ ಮಹಾಸಭೆಯ ಉರಿಯುವ ಕೊಳ್ಳಿಯ ಚಿಹ್ನೆಯನ್ನೂ ಉಪಯೋಗಿಸಲಿಕ್ಕಿದೆಯೆಂದು ತಿಳಿದುಬರುತ್ತದೆ.

ತುಟ್ಟಿಭತ್ತೆ ಸಾಲದಂತೆ

ರೈಲ್ವೆ ಕೆಲಸಗಾರರಿಗೆ ರೂ. 5ರಂತೆ ತುಟ್ಟಿಭತ್ತೆಯನ್ನು ಏರಿಸಿದ್ದರಿಂದ ರೈಲ್ವೆ ಕೆಲಸಗಾರರ ಸಂಕಷ್ಟ ಪರಿಹರಿಸಿದಂತಾಗಿಲ್ಲವೆಂದೂ ಇದರಿಂದ ರೈಲ್ವೆ ಕೆಲಸಗಾರರು ಸಂತೃಪ್ತರಾಗಿ ಸಂಪಿನ ಧೋರಣೆಯನ್ನು ಹಿಂತೆಗೆದುಕೊಳ್ಳುವ ಯೋಚನೆ ಮಾಡುವಂತಿಲ್ಲವೆಂದು ರೈಲ್ವೆ ಕೆಲಸಗಾರರ ಯೂನಿಯನ್ನಿನ ಕಾರ್ಯದರ್ಶಿ ಎಸ್. ಗುರುಸ್ವಾಮಿಯವರು ಹೇಳಿರುತ್ತಾರೆ.

ರಜವಿಯ ಚಂಡಿತನ

ಹೈದರಾಬಾದದಲ್ಲಿ ಮಿಲಿಟರಿ ಆಡಳಿತವಿರುವ ಕಾಲದಲ್ಲಿ ತನ್ನ ಬಂಧನವಾಗಿರುವದರಿಂದ ತನ್ನನ್ನು ಯುದ್ಧ ಕೈದಿಯೆಂದು ಭಾವಿಸಿ ಮಿಲಿಟರಿ ನ್ಯಾಯಾಲಯದಲ್ಲಿಯೇ ವಿಚಾರಣೆ ನಡೆಸಬೇಕೆಂದು ವಿಶೇಷ ನ್ಯಾಯಾಧೀಶರನ್ನು ಕೇಳಿಕೊಂಡಿರುವನಂತೆ.

ಸರಕಾರಕ್ಕೆ ವಂಚನೆ ಮಾಡಿದ್ದಕ್ಕೆ ಒಂದೂವರೆ ಲಕ್ಷ ರೂ. ದಂಡ.

ಇಂಗ್ಲೆಂಡಿನ ಕಂಪೆನಿಯೊಂದು ಜಪಾನಿನಿಂದ ಬಿಡಿಸಾಮಾನುಗಳನ್ನು ತರಿಸುವ ನೆವದಿಂದ ಇಡೀ ಯಂತ್ರಗಳನ್ನು ತರಿಸಿ ಸರಕಾರಕ್ಕೆ ಕೊಡಬೇಕಾದ ಸುಂಕಕ್ಕೆ ವಂಚಿಸಿದ್ದರಿಂದ ಭಾರತ ಸರಕಾರವು ಆ ಕಂಪೆನಿಗೆ ಒಂದೂವರೆ ಲಕ್ಷ ರೂ. ದಂಡ ವಿಧಿಸಿರುತ್ತದೆ.

ಪಾನಪ್ರತಿಬಂಧದ ಯಶಸ್ವಿಗೆ ಇನ್ನೊಂದು ಯುಕ್ತಿ

ಮದ್ಯಪಾನ ಪ್ರತಿಬಂಧ ಕಾರ್ಯವನ್ನು ಯಶಸ್ವಿಯಾಗಿಸಲೂ ಕಾಯಿದೆಯನ್ನು ಉಲ್ಲಂಘಿಸಿ ನಡೆಯುವವರ ಅಪರಾಧವನ್ನು ಕಡಿಮೆ ಮಾಡಲೂ ಉಪಾಯಗಳನ್ನು ಸೂಚಿಸಲು ಮದ್ರಾಸ್ ಸರಕಾರವು ಇನ್ನೊಂದು ಸಮಿತಿ ನೇಮಕ ಮಾಡುತ್ತದಂತೆ. ಈ ಸಮಿತಿಯಲ್ಲಿ ಇಬ್ಬರು ಅಧಿಕಾರಿಗಳೂ ಮೂವರು ಅಧಿಕಾರೇತರರೂ ಇರುವರೆಂದು ತಿಳಿದುಬರುತ್ತದೆ.

ನಿಮ್ಮ ಉಳಿತಾಯವನ್ನು ಇರಿಸಲಿಕ್ಕೆ
ದಿ ಕೆನರಾ ಇಂಡಸ್ಟ್ರಿಯಲ್ ಎಂಡ್
ಬ್ಯಾಂಕಿಂಗ್ ಸಿಂಡಿಕೇಟ್ ಲಿಮಿಟೆಡ್

THE BOMBAY LIFE ASSURANCE COMPANY, LTD.
ದಿ ಬೊಂಬೆ ಲೈಫ್ ಎಶ್ಯೂರೆನ್ಸ್ ಕೋ. ಲಿಮಿಟೆಡ್
(ಸ್ಥಾಪನೆ: 1908)
ಅತ್ಯಲ್ಪ ಖರ್ಚಿನಿಂದ ಅತ್ಯಧಿಕ ಲಾಭವನ್ನೀಯುವ
ಅಗ್ರಗಣ್ಯ ವಿಮಾ ಸಂಸ್ಥೆಗಳಲ್ಲೊಂದು
ಪ್ರಧಾನ ಏಜಂಟರು:
ಕೊಚ್ಚಿಕಾರ್ ಬ್ರದರ್ಸ್, ಲಿಮಿಟೆಡ್ ಉಡುಪಿ.
ಇವರ ಶಾಖಾ ಕಚೇರಿಗಳು:
ಬೊಂಬಾಯಿ, ಮದ್ರಾಸು, ಬೆಂಗಳೂರು, ಕೊಯಮುತ್ತೂರು, ತ್ರಿವೇಂದ್ರಮ್, ಕಲ್ಲಿಕೋಟೆ ಮತ್ತು ಮಂಗಳೂರು
ಕಳೆದ ಮೂವತ್ತೆಂಟು ವರುಷಗಳಿಂದ ವಿಮಾ ಕ್ಷೇತ್ರದಲ್ಲಿ ಸತತ ದುಡಿದಂಥ ನಾವು ಜನಾಂಗದ ಶ್ರೇಯೋಭಿವೃದ್ಧಿಯ ಕಡೆಗೆ ನಮ್ಮ ಸೇವೆಯನ್ನು ಸಲ್ಲಿಸುತ್ತೇವೆಂಬುದೇ ನಮ್ಮ ಹೆಗ್ಗಳಿಕೆಯ ಮಾತು.
ವಿಮಾ ಮಾಡಲಿಕ್ಕಾಗಲೀ, ಪ್ರಾತಿನಿಧ್ಯ ಪಡೆಯಲಿಕ್ಕಾಗಲೀ
ದಯಮಾಡಿ ನಮಗಾಗಲೀ ಅಥವಾ ನಮ್ಮ ಏಜಂಟರಿಗಾಗಲೀ ಬರೆಯಿರಿ.

ಚಂದಾ ವಿವರ
ವರ್ಷಕ್ಕೆ ರೂ. 5-12—0
6 ತಿಂಗಳಿಗೆ ರೂ. 3—0—0

ಗುರುವಾರ' ಉಡುಪಿ, ೨೧-೬-೫೧

ಕಿಸಾನ ಮಜದೂರ ಪ್ರಜಾಪಕ್ಷ

ಪಾಟ್ನಾದಲ್ಲಿ ನೆರೆದ ರಾಜಕೀಯ ಬಹಿರಂಗಾಧಿವೇಶನದಲ್ಲಿ ಆಚಾರ್ಯ ಕೃಪಲಾನಿಯವರು ಕಿಸಾನ ಮಜದೂರ ಪ್ರಜಾಪಕ್ಷದ ಸ್ಥಾಪನೆ-ಉದ್ದೇಶಗಳ ರೂಪರೇಷೆಯನ್ನು ವಿವರಿಸಿದರು. ಕಾಂಗ್ರೆಸಿನಿಂದ ಸಿಡಿದುಹೋದ ಶ್ರೀ ಕೃಪಲಾನಿ ಹಾಗೂ ಅವರ ಮಿತ್ರರು ಕಾಂಗ್ರೆಸ್ ಹಾಗೂ ಸರಕಾರವನ್ನು ಟೀಕಿಸುವ ಭರದಲ್ಲಿ ತಮ್ಮ ಪಕ್ಷದ ಗೊತ್ತುಗುರಿಯೇನೆಂಬುದನ್ನು ಮರೆತಂತಿದೆ. ಕಾಂಗ್ರೆಸ್ಸಿನ ಬಗ್ಗೆ ತಮಗಿರುವ ಅಸಹನೆಯನ್ನು ಪ್ರದರ್ಶಿಸುವ ಒಂದು ರಂಗವೇ ಆದಾಗಿತ್ತು. ಸರಕಾರದ ಮೇಲೆ ಅಪವಾದನೆಯನ್ನು ಹೊರಿಸುವದರಲ್ಲೇ ಅಧಿವೇಶನವು ಕಾಲಹರಣ ಮಾಡಿತೆಂದರೆ ತಪ್ಪಾಗದು.

ಒಬ್ಬ ಹೊಣೆಗಾರ ವ್ಯಕ್ತಿಯೇ ವಸ್ತುಸ್ಥಿತಿಗೆ ವಿರೋಧವಾದ ಟೀಕೆಯನ್ನು ಮಾಡಿದ್ದನ್ನು ನೋಡುವಾಗ ಅವರು ಈ ತನಕ ಕಾಂಗ್ರೆಸಿನಲ್ಲಿದ್ದು ಅದರ ಸದುಪಯೋಗವನ್ನು ಪಡೆಯದೆ ಹೋದರಲ್ಲಾ ಎಂದು ವ್ಯಥೆಯಾಗುತ್ತದೆ. "ನಾಲ್ಕು ವರ್ಷಗಳಲ್ಲಿ ಕಾಂಗ್ರೆಸ್ಸು ಏನನ್ನೂ ಸಾಧಿಸದೆ ಬ್ಲ್ಯಾಕ್‌ಮಾರ್ಕೆಟು, ಲಂಚಗುಳಿತನ ಮುಂತಾದ್ದಕ್ಕೆ ಆಸ್ಪದ ಕೊಟ್ಟಿದೆ. ಅನ್ನ ಬಟ್ಟೆ ನೀಡಲಾರದ ಸರಕಾರ ಅಧಿಕಾರದಲ್ಲಿರಲು ಯೋಗ್ಯವಾಗಿಲ್ಲ. ಕಾಂಗ್ರೆಸ್ಸು ಇನ್ನು ತನ್ನ ಸ್ಥಾನಮಾನವನ್ನು ಗಳಿಸುತಿಲ್ಲ." ಎಂದು ಶ್ರೀ ಆಚಾರ್ಯ ಕೃಪಲಾನಿಯವರು ಟೀಕೆಮಾಡಿರುವರು. ಪ್ರಜಾಪಕ್ಷದ ನಿರ್ಮಾಣಕ್ಕೆ ಕಾಂಗ್ರೆಸ್ಸಿನಲ್ಲಿ ತಮ್ಮ ಬೇಳೆ ಬೇಯಲಿಲ್ಲವೆಂಬುದೇ ಕಾರಣವಂತೆ!

ಶ್ರೀ ಕೃಪಲಾನಿ ಹಾಗೂ ಸಹೋದ್ಯೋಗಿಗಳು ಕೂಡಿ ನಿರ್ಮಿಸಿದ ಪ್ರಜಾಪಕ್ಷದ ಉದ್ದೇಶವಾದರೂ ಕಾಂಗ್ರೆಸ್ಸಿನ ತತ್ವಕ್ಕಿಂತ ಬೇರೆಯಾಗಿಲ್ಲ. "ಕೃಷಕನೇ ಹೊಲದೊಡೆಯನಾಗಬೇಕು, "ಜಾತ್ಯತೀತ ಸಮಾನತಾ ರಾಷ್ಟ್ರನಿರ್ಮಾಣ" "ಮದ್ಯಪಾನ ಪೂರ್ಣ ಪ್ರತಿಬಂಧ" ಮುಂತಾದ ಯೋಜನೆಗಳು ಕಾಂಗ್ರೆಸ್ಸಿನ ತತ್ವಕ್ಕಿಂತ ಹೊರತಾಗಿಲ್ಲ. ವಸ್ತುಸ್ಥಿತಿಯನ್ನು ಮರೆಮಾಚಿ ಕಾಂಗ್ರೆಸ್ಸಿನಂತಹ ಉಚ್ಚ ಸಂಸ್ಥೆಯನ್ನು ಟೀಕಿಸುತಲೇ ಅವಮಾನಿಸುವ ದುರುದ್ದೇಶವನ್ನಿಟ್ಟುಕೊಂಡಂತೆ ತೋರುತ್ತದೆ. ಆಹಾರ ಬಟ್ಟೆ ಮುಂತಾದ ವಿಚಾರಗಳನ್ನೆತ್ತಿಕೊಂಡು ಕೃಪಲಾನಿಯವರು ಆಡಿದ ಮಾತು ತೀರ ಅಸಮಂಜಸವೆಂದೇ ಹೇಳಬೇಕು. ಪ್ರತಿಯೊಂದಕ್ಕೂ ಸರಕಾರ-ಮಂತ್ರಿಗಳೆಂದು ನಿಂದಾತ್ಮಕ ಟೀಕೆ ಮಾಡುವಾಗ ದೇಶದಲ್ಲಿನ ಅತ್ಯಂತ ಗಂಡಾಂತರ ಪರಿಸ್ಥಿತಿಗಳ ಕಡೆಗೂ ತಮ್ಮ ದೃಷ್ಟಿಹರಿಸಬೇಕಿತ್ತು. ಗಾಂಧಿಜೀ ಅಂದಂತೆ ನಮ್ಮ ಧುರೀಣರಿಂದು ಮುಳ್ಳಿನ ಮಂಚದಲ್ಲಿದ್ದಾರೆ. ಹಲವರ ಅನ್ಯಾಯ ಅಕೃತ್ಯಗಳಿಗಾಗಿ ದೇಶದ ಆಡಳಿತವನ್ನು ಅರಾಜಕತೆಗೆ ಇಳಿಸುವುದು ಸರಿಯಾಗಲಾರದು. ಕಾಂಗ್ರೆಸ್ಸಿನಲ್ಲಿದ್ದುಕೊಂಡು ಅಂತಹ ಪ್ರಮಾದಗಳನ್ನು ತೊಡೆದು ಹಾಕಬಹುದಿತ್ತು. ಅದಕ್ಕೆ ಪ್ರಜಾಪಕ್ಷದ ನಿರ್ಮಾಣವೇ ಆಗಬೇಕೆಂದಿರಲಿಲ್ಲ.

ಪ್ರಜಾಪಕ್ಷದ ಘೋಷಣೆಯ ಕುರಿತು ಕುತೂಹಲವನ್ನು ತಾಳಿದವರಿಗೆ ನಿಜವಾಗಿಯೂ ನಿರಾಶೆಯೇ ಆಗಿದೆ. ಯಾವುದೇ ರೀತಿಯ ಸ್ಪಷ್ಟ ನಿರ್ದೇಶ ಅದರಲ್ಲಿಲ್ಲ. "ಕಾಂಗ್ರೆಸ್ಸಿನಿಂದ ಇದನ್ನು ಸಾಧಿಸಲಾಗಲಿಲ್ಲ; ಮುಂದಕ್ಕೆ ಅದು ಸಾಧ್ಯವೂ ಇಲ್ಲ. ನಾವು ಸಾಧಿಸಿಯೇ ಸಾಧಿಸುತ್ತೇವೆ" ಎಂದು ಆಚಾರ್ಯರು ಕಾಂಗ್ರೆಸ್ಸಿನ ತತ್ವಗಳಿಗೆ ನೂತನ ಬಣ್ಣ ಬಳೆದಿದ್ದಾರೆ ಅಷ್ಟೆ! ಹಾಡು ಒಂದೇ ರಾಗ ಮಾತ್ರ ಬೇರೆ ಅಷ್ಟೆ! "ತಮ್ಮ ಪಕ್ಷದವರಿಗೆ ಅಧಿಕಾರ ಲಾಲಸೆ ಇಲ್ಲ-ದೇಶೋದ್ಧಾರವೇ ಮೂಲೋದ್ದೇಶ" ಎಂದಿದ್ದಾರೆ ಕೃಪಲಾನಿಯವರು. ಪಕ್ಷಗಳಲ್ಲಿ ಸೇರಿಕೊಂಡವರು ಇಂದು ಗಾಂಭೀರ್ಯವನ್ನು ಬಿಟ್ಟು ಆಡುವ ರೀತಿಯನ್ನು ನೋಡಿದರೆ ಕೃಪಲಾನಿಯವರ ಮಾತಿನಲ್ಲಿ ಅನುಮಾನ ಮೂಡುತ್ತದೆ. ಏನೊಂದು ನೂತನ ಉದ್ದೇಶ-ಕಲ್ಪನೆಗಳಿಲ್ಲದೆ ತಮ್ಮದೇ ಪಕ್ಷವನ್ನು ನಿರ್ಮಿಸಿ ಅಧಿಕಾರವನ್ನು ಪಡೆಯಬೇಕೆಂಬ ತೀವ್ರಾಕಾಂಕ್ಷೆ ಪ್ರತ್ಯಕ್ಷವಾಯಿತೆಂದು ಸ್ಪಷ್ಟವಾಗಿ ಕಾಣುತ್ತದೆ. ದೇಶಸೇವೆ-ಜನತಾಸೇವೆಯೆಂಬುದು ಕೇವಲ ಸೋಗು ಮಾತ್ರ!

ಕಾಂಗ್ರೆಸ್ಸನ್ನೂ ಸರಕಾರವನ್ನೂ ಟೀಕಿಸುವುದೂ ಅಪವಾದ ಹೊರಿಸುವುದೂ ಸದ್ಯ ಒಂದು ಫ್ಯಾಶನ್ನೇ ಆಗಿರುವಂತೆ ಮುಂದಿನ ಚುನಾವಣೆಯ ಪ್ರಚಾರ ಸಾಧನವೂ ಹೌದು!

ಪ್ರಜಾಪಕ್ಷ ಅದೇ ಮಾಲಿಕೆಗೆ ಸೇರುತ್ತದಾದರೂ ಆಚಾರ್ಯ ಕೃಪಲಾನಿಯವರು ತಮ್ಮ ಜೀವಮಾನವನ್ನೆಲ್ಲ ಕಾಂಗ್ರೆಸ್ಸಿನ ಉಚ್ಚಾದರ್ಶಗಳಲ್ಲಿ ಸವೆಸಿ ಅನುಭವಶಾಲಿಗಳಾಗಿದ್ದುಕೊಂಡು ಕಾಂಗ್ರೆಸ್ಸನ್ನು ಈರೀತಿ ಹಳಿದಾರೆಂದು ಯಾರೂ ಭಾವಿಸಿರಲಾರರು! ಒಂದು ಶತಮಾನದಿಂದ ಸ್ವಾತಂತ್ರ್ಯದ ಹೋರಾಟವನ್ನು ನಡೆಸಿದ ಅತ್ಯಂತ ಪ್ರಭಾವೀ ಸಂಸ್ಥೆಯಾದ ಕಾಂಗ್ರೆಸ್ಸಿನ ಭವ್ಯ-- ಘನವಾದ ಉದ್ದೇಶಗಳೇ ರಾಷ್ಟ್ರವನ್ನಾಳಲು ಅಸಮರ್ಥವೆಂದಾದರೆ ನಿನ್ನೆ ಹುಟ್ಟಿದ ಪ್ರಜಾಪಕ್ಷ ಆ ಕಾರ್ಯವನ್ನು ಸಾಧಿಸೀತೆನ್ನುವುದು ಶುದ್ಧ ಹುಚ್ಚು ಕಲ್ಪನೆಯೆ. ಸರಿ! "ನಾವು ಏನು ಮಾಡುತ್ತೇವೆನ್ನುವದನ್ನು ಜನತೆ ಮುಂದೆ ತಿಳಿಯುತ್ತದೆ" ಎಂದು ಪ್ರಜಾಪಕ್ಷದ ಪರವಾಗಿ ಕೃಪಲಾನಿಯವರು ಹೇಳಿದ್ದನ್ನೇ ನಾವೂ ನಿರೀಕ್ಷಿಸುತ್ತೇವೆ. ಈ ರೀತಿಯ ಭವ್ಯ-ದೇಶವನ್ನು ಉಚ್ಚಸ್ತರದ ಸ್ಥಿತಿಗೆ ತರುವಂತಹ ಆದರ್ಶಗಳನ್ನು—ಹೇಳುವಷ್ಟು ಇಲ್ಲವೆ ಕಲ್ಪಿಸುವಷ್ಟು ಬುದ್ಧಿ ಚಾತುರ್ಯ-- ನಮ್ಮಲ್ಲಿಯ ಎಲ್ಲಪಕ್ಷಗಳಿಗೂ ಇದೆ. ಆದರೆ ಸಾಧಿಸುವ ಶಕ್ತಿಯಾರಿಗಿದೆಂಬುದನ್ನು ಮುಂದೆ ಜನತೆ ನೋಡಬೇಕು.

ನಮಗೆ ಕೊರತೆ ಆದರ್ಶಗಳದ್ದಲ್ಲ, ಅದನ್ನು ಬೋಧಿಸುವವರದ್ದೂ ಅಲ್ಲ; ಅದನ್ನು ಪಾಲಿಸುವವರದ್ದು! ಪ್ರಜಾಪ್ರಭುತ್ವದಲ್ಲಿ ಸರಕಾರಕ್ಕಿಂತಲೂ ಪ್ರಜೆಗಳ ಹೊಣೆಯೇ ಹೆಚ್ಚಾಗಿರುತ್ತದೆ. ಭಾರತವಿಂದು ಪ್ರಜಾಪ್ರಭುತ್ವವೆಂದು ಹೇಳಲಾಗಿದ್ದರೂ ತತ್ವತಃ ಪ್ರಜಾಪ್ರಭುತ್ವದ ಹೊಣೆಗಾರಿಕೆಯನ್ನು ಸರಕಾರಕ್ಕಿಂತಲೂ ಹೆಚ್ಚಾಗಿ ಪ್ರಜೆಗಳೇ ಅರಿತಿಲ್ಲವೆಂದು ಹೇಳಬೇಕಾಗಿದೆ. ಈ ತತ್ವವನ್ನು, ಸರಕಾರವನ್ನು ಟೀಕಿಸುವ ಶ್ರೀ. ಕೃಪಲಾನಿ ಇಲ್ಲವೆ ಪ್ರಜಾಪಕ್ಷ ಚೆನ್ನಾಗಿ ಅರಿತುಕೊಂಡರೇನೇ ತಪ್ಪು ಯಾರದು ಕಾಂಗ್ರೆಸ್ಸಿನದೋ-ಸರಕಾರದ್ದೋ — ಪ್ರಜೆಗಳದ್ದೋ ಎಂದು ಸ್ಪಷ್ಟವಾಗುತ್ತದೆ. ಜನತೆಯಲ್ಲಿ ಅವರ ಹೊಣೆಗಾರಿಕೆಯನ್ನು ಚೆನ್ನಾಗಿ ಬಿಂಬಿಸದೆ ಕೃಪಲಾನಿಯವರ ಇಲ್ಲವೇ ಪ್ರಜಾಪಕ್ಷದ ಘನಘನವಾದ ಉದ್ದೇಶಗಳೂ ಬಾಳುವಂತಿಲ್ಲ. ಪರಿಸ್ಥಿತಿಯ ಪರಿಜ್ಞಾನವಿಲ್ಲದೆ ಭಾವನಾಪರವಶತೆಯ ಮಾತಿನ ಬಲದಿಂದ ಯಾವ ಪಕ್ಷವನ್ನು ಎತ್ತಿ ಹಿಡಿದರೂ ಈ ಗೋಳು ತಪ್ಪಿದ್ದಲ್ಲ!

ಉಡುಪಿಯ ಸಂಸ್ಕೃತ ಕಾಲೇಜು

ಸುಮಾರು ಅರ್ಧಶತಮಾನದಿಂದ ನಡೆದುಕೊಂಡು ಬರುತ್ತಿರುವ ಉಡುಪಿಯ ಶ್ರೀಮನ್ಮಧ್ವ ಸಿದ್ಧಾಂತ ಪ್ರಬೋಧಿನೀ ಸಂಸ್ಕೃತ ಪಾಠಶಾಲೆಯ ನೂತನ ಕಟ್ಟಡದ ಉದ್ಘಾಟನಾ ಸಮಾರಂಭವು ಕಳೆದ 14ನೇ ಗುರುವಾರ ಮುಂಬಯಿಯ ಪ್ರಧಾನ ಮಂತ್ರಿ ಬಿ. ಜಿ. ಖೇರರ ದಿವ್ಯ ಹಸ್ತದಿಂದ ನೆರವೇರಿತು. ಕಾಲೇಜು ಮದ್ರಾಸು ಪ್ರಾಂತದಲ್ಲಿ ಪ್ರಥಮ ಶ್ರೇಣಿಯದ್ದಾಗಿ ಪರಿಗಣಿಸಲ್ಪಟ್ಟು ಸಾವಿರಾರು ಪಂಡಿತರನ್ನು ನಿರ್ಮಾಣಮಾಡಿ ಒಳ್ಳೆಯ ಖ್ಯಾತಿಯನ್ನು ಗಳಿಸಿದ್ದರೂ ತನ್ನದೇ ಆದ ಕಟ್ಟಡ ಅದಕ್ಕಿರಲಿಲ್ಲ. ಡಾ. ಯು. ರಾಮರಾಯರು ಪ್ರಶಸ್ತವಾದ ಸ್ಥಳವನ್ನು ದಾನವಾಗಿ ಕೊಟ್ಟು ಸಹಕರಿಸಿದ್ದರಿಂದಲೂ ವೃಂದಾವನಸ್ಥ ಶ್ರೀ ಪಲಿಮಾರು ಶ್ರೀಗಳವರು ಕೈಗೊಂಡ ಉದ್ಯಮವನ್ನು ಈಗಿನ ಅದಮಾರು ಮಠದ ಶ್ರೀಪಾದಂಗಳವರು ಅದನ್ನು ಮಹಾಜನರ ಸಹಕಾರದಿಂದ ಕೊನೆಗಾಣಿಸಲೇಬೇಕೆಂಬ ಛಲತೊಟ್ಟಿದ್ದರಿಂದಲೂ ಇಂತಹ ನೂತನ ಕಟ್ಟಡವೊಂದು ಉಡುಪಿಗೇ ಆದರ್ಶಪ್ರಾಯವಾಗಿ ಇಂದು ನಿರ್ಮಾಣಗೊಂಡಿದೆ.

ಸಾಹಿತ್ಯ, ದ್ವೈತವೇದಾಂತ, ಜ್ಯೋತಿಷ್ಯ, ನ್ಯಾಯ ಮುಂತಾದ ಶಿರೋಮಣಿಗಳು ಕಾಲೇಜಿನಲ್ಲಿರುತ್ತವೆ. ವಿದ್ಯಾಸಂಪನ್ನರೂ, ಘನ ವಿದ್ವಾಂಸರೂ ಅಧ್ಯಾಪಕ ವರ್ಗದಲ್ಲಿರುವುದು ಕಾಲೇಜಿಗೊಂದು ಭೂಷಣ! ಆದರೆ ಶಿರೋಮಣಿಕಲಿತ ವಿದ್ಯಾರ್ಥಿಗಳಿಗೆ ಮುಂದಿನ ಜೀವನದ ಗುರಿಯನ್ನು ಮುಟ್ಟಲು ಈ ಶಿರೋಮಣಿ ಏನೂ ಸಹಾಯಕವಾಗುತ್ತಿಲ್ಲವೆಂದು ವಿಷಾದದಿಂದ ಹೇಳಬೇಕಾಗಿದೆ. ಸಂಸ್ಕೃತ ವಿಶ್ವದ ಶ್ರೇಷ್ಠ ಭಾಷೆಯಾಗಿದ್ದರೂ ಸರಕಾರವಾಗಲೀ—ನಾಗರಿಕರಾಗಲೀ-- ಅದನ್ನು ಕಲಿತವರ ಕುರಿತಾಗಿ ಚಿಂತಿಸುವುದಿಲ್ಲ. ಹೀಗಾಗಿ ಸಂಸ್ಕೃತ ಕಲಿತವರ ಪಾಡು ಶೋಚನೀಯವಾಗಿದೆ. ಉಡುಪಿಯ ಸಂಸ್ಕೃತ ಕಾಲೇಜಿನಲ್ಲಿ ವಿದ್ವಾನ್, ಆಯುರ್ವೇದ ಬಿ. ಓ. ಎಲ್. ಮುಂತಾದವುಗಳನ್ನು ತೆರೆಯುವದರಿಂದ ಸಂಸ್ಕೃತ ಭಾಷೆಯ ಉದ್ಧಾರದೊಂದಿಗೆ ಕಲಿತವರ ಬಾಳುವೆಯ ದಾರಿಗೂ ಬೆಳಕು ನೀಡಿದಂತಾದೀತೆಂದು ಭಾವಿಸುತ್ತೇವೆ. ಮಠಾಧಿಪತಿಗಳು ಕಾಲೇಜಿನಲ್ಲಿ ಕಲಿತ ವಿದ್ಯಾರ್ಥಿಗಳ ಕುರಿತು ತೋರುವ ಔದಾರ್ಯ ವಿಧಾಯಕವಾಗಿದ್ದರೆ ವಿದ್ಯಾರ್ಥಿಗಳಿಗೂ ಕಲಿಯುವಿಕೆಯಲ್ಲಿ ಸಾರ್ಥಕತೆ ಕಂಡೀತು. ಮಠಗಳಲ್ಲಿ ನೌಕರವರ್ಗಕ್ಕೆ ಸೇರಿಸಿಕೊಳ್ಳುವಾಗ ಕಾಲೇಜಿನ ವಿದ್ಯಾವಂತರಿಗೆ ಪ್ರೋತ್ಸಾಹ ಕೊಡಬೇಕು-- ಧಾರ್ಮಿಕ ಹಾಗೂ ವಿಚಾರಾತ್ಮಕ ಓಲೆಯ ಪುಸ್ತಕಗಳು ಮಠಗಳಲ್ಲಿ ಮಣ್ಣುಮುಕ್ಕುತ್ತಿವೆ. ಅದರ ಅಮೂಲ್ಯ ವಿಚಾರದ ಕಡೆಗೆ ಯಾರ ದೃಷ್ಟಿಯೂ ಹರಿಯದಿದ್ದುದು ಶೋಚನೀಯ. ಅದನ್ನು ಶೋಧನಡೆಸಿ ಪ್ರಚಾರ ಕಾರ್ಯ ನಡೆಸಬಹುದು. ಮಧ್ವಮತದ ಪ್ರಚಾರಕ್ಕಾಗಿ ಹಲವು ಪಂಡಿತರನ್ನು ತಯಾರಿಸಿ ದ್ವೈತಮತ ತತ್ವಗಳ ಕುರಿತೂ ಮಧ್ವಾಚಾರ್ಯರ ಜೀವನ ಚರಿತ್ರೆ ಸ್ಥಳಪುರಾಣದ ಕುರಿತೂ ಪ್ರಚಾರಕಾರ್ಯ ನಡೆಸಬೇಕು. ಅವನ್ನೆಲ್ಲ ಅವರು ಮುಖ್ಯ ಗುರಿಯಾಗಿಟ್ಟುಕೊಂಡು ವಿದ್ಯಾದಾನ ಮಾಡಬೇಕು. ಅಷ್ಟಮಠಾಧಿಪತಿಗಳು ಮನಸ್ಸುಮಾಡಿದರೆ ಇದೇನೂ ದೊಡ್ಡ ಕೆಲಸವಲ್ಲ, ಅಲ್ಲದೆ ಇನ್ನು ನಾನಾ ರೀತಿಯ ಕೈಗಾರಿಕೆಯ ಕ್ರಮಗಳನ್ನೋ-ಪ್ರಕಾಶನ ಕಾರ್ಯವನ್ನೋ ಕೈಗೊಳ್ಳಬಹುದು. ಕಾಲೇಜು ಆರಂಭವಾಗಿ ಅರ್ಧಶತಮಾನಕ್ಕೆ ಹತ್ತಿರ ಬರುವವರೆಗೆ ಕಟ್ಟಡದ ಅವಶ್ಯಕತೆಯಲ್ಲಿ ಸಾವಧಾನ ಧೋರಣೆ ವಹಿಸಿದರೂ ಮುಂದಿನ ಯೋಜನೆಯಲ್ಲಿ ವಿಶೇಷಾಸಕ್ತಿಯನ್ನು ವಹಿಸಲು ಮರೆಯಬಾರದು.

ಮಾನ್ಯ ಖೇರರಂದಂತೆ 'ವಿಶ್ವವಿದ್ಯಾಲಯವೇ' ಆಗಬಹುದು ಅಷ್ಟಮಠಾಧಿಪತಿಗಳ ಮನಸು ಕೇಂದ್ರೀಕೃತವಾದರೆ ಅದೇನೂ ದೊಡ್ಡ ವಿಚಾರವಲ್ಲ. ಅಂತಲೆ ಕಾಲೇಜಿನ ಮುಂದಿನ ಭವಿಷ್ಯ ಅವರನ್ನೇ ಹೊಂದಿಕೊಂಡಿದೆಯೆನ್ನುತ್ತೇವೆ.

ಪುತ್ತೂರು ಡಿ ಮು. ಕೋರ್ಟಿನಲ್ಲಿ

O. S. No. 73/1951

J. H. Sprott -ವಾದಿ

ಚಂದ್ರಹಾಸ ರಾವ, ಮುತ್ತಣ್ಣ ರಾವರ ಮಗ, ಕಡೆಶ್ವಾಲ್ಯ ಗ್ರಾಮ ಪಡ್ರಿಲ.

—ಪ್ರತಿವಾದಿ.

ಪ್ರತಿವಾದಿಗೆ ಈ ಮೂಲಕ ತಿಳಿಸುವುದೇನೆಂದ್ರೆ,

ವಾದಿಯು ನಿಮ್ಮ ಮೇಲೆ ದಾಖಲು ಮಾಡಿದ ಮೇಲ್ಕಂಡ ವ್ಯಾಜ್ಯವು ತನ್ಖೆ ಬಗ್ಗೆ ತಾ. 30 6-51ಕ್ಕೆ ಇಟ್ಟಿರುವುದರಿಂದ ಅದಕ್ಕೆ ನಿಮ್ಮದೇನಾದರೂ ಆಕ್ಷೇಪಣೆಗಳಿದ್ದ್ರೆ ಸದ್ರಿ ದಿವಸ ಮಾಜ್ಕೂರು ಕೋರ್ಟು ಮುಂದೆ ನೀವು ಸ್ವತಹ ವ ವಕೀಲರ ದ್ವಾರಾ ಹಾಜರಾಗಿ ಉಜರ್ ಹೇಳಿಕೊಳ್ಳತಕ್ಕದ್ದು. ತಪ್ಪಿದ್ರೆ ನಿಮ್ಮ ಗೈರು ಹಾಜರಿಯಿಂದ ತೀರ್ಮಾನಿಸಲಾದೀತು.

(By order of the Court)
C. S. Shastry,
Vakil for Plff.

ಪುತ್ತೂರು, ತಾ. 4-6-1951

ಉಡುಪಿ

ಹೊಸ ರೇಶನ್ ಕಾರ್ಡುಗಳ ವಿತರಣೆ—ಉಡುಪಿ ರೇಶನಿಂಗ್ ಕ್ಷೇತ್ರದಲ್ಲಿ ಜುಲೈ ತಿಂಗಳ ಆರಂಭದಿಂದ ಹೊಸ ರೇಶನ್ ಕಾರ್ಡುಗಳು ಈ ಕೆಳಗೆ ನಮೂದಿಸಿದ ಸ್ಥಳಗಳಲ್ಲಿ ನಿಶ್ಚಿತ ದಿವಸಗಳಲ್ಲಿ ವಿತರಣೆ ಮಾಡಲಾಗುವುದು. ಯಾರ ಹೆಸರಿನಲ್ಲಿ ರೇಶನ್ ಕಾರ್ಡು ಇದೆಯೋ, ಅಂತವರಿಗೆ ಬರಲು ಅನಾನುಕೂಲವಾದಲ್ಲಿ ಬರಹ ಮೂಲಕ ತಮ್ಮ ಪ್ರತಿನಿಧಿಯನ್ನು ನೇಮಿಸಿ ಕಳುಹಿಸಿದ್ದಲ್ಲಿ ಅಂತಹವರ ವಶ ಕಾರ್ಡುಗಳು ಕೊಡಲಾಗುವುವು. ತಮ್ಮ ಸ್ವಂತ ಹುಟ್ಟುವಳಿಯ ಧಾನ್ಯಾನುಗಾರರೂ ತಂತಮ್ಮ ಹೊಸ ಕಾರ್ಡುಗಳನ್ನು ಆಯಾಯ ಕೇಂದ್ರದಿಂದ ಪಡೆಕೊಳ್ಳಬೇಕಾಗಿದೆ. ವಿತರಣೆಯ ಕೇಂದ್ರ ಮತ್ತು ತಾರೀಕುಗಳ ವಿವರ ಹೀಗಿದೆ:- ಸಂತೆಕಟ್ಟೆ, ಕೋರ್ಟುರಸ್ತೆ, ಕಾಡಬೆಟ್ಟು, ರಥಬೀದಿ ಡಿಪೋಗಳಲ್ಲಿ ಜೂನ್ ತಾ. 24, 25, 26 ಮತ್ತು ಜುಲೈ ತಾ. 1. ಬನ್ನಂಜೆ, ಕುಂಜಿಬೆಟ್ಟು, ಕಲ್ಸಂಕ ಟಿ. ಆರ್. ಪೈ, ಎಸ್. ಕೆ. ಮೂರ್ತಿಯವರ ಡಿಪೋಗಳಲ್ಲಿ ಜೂನ್ ತಾ. 24, 27, 28 ಮತ್ತು ಜುಲೈ ತಾ. 1. ಬಾಬು ಸೆಟ್ಟರ ಡಿಪೋದಲ್ಲಿ ಜೂನ್ ತಾ. ತಾ. 24, 25, 26 ಮತ್ತು ಜುಲೈ ತಾ. 1.

ಯುನಿವರ್ಸಿಟಿ ಕಮಿಶನ್ ಸದಸ್ಯ ಶ್ರೀ ಟಿ. ಬಿ. ಕಣ್ಣೀಶರ್, ಇವರು ಇದೇ ತಾ. 18ರಲ್ಲು ಬೆಳಗ್ಗೆ ಉಡುಪಿಯ ಮಹಾತ್ಮಾ ಗಾಂಧಿ ಮೆಮೋರಿಯಲ್ ಕಾಲೇಜು ಬಿಲ್ಡಿಂಗನ್ನು ಪರೀಕ್ಷಿಸಿದರು. ಸಂಜೆ ಮುಕುಂದ ನಿವಾಸದಲ್ಲಿ ಹೆಣ್ಣು ಮಕ್ಕಳ ಶಿಷ್ಟಮಂಡಳವೊಂದು ವಕೀಲ್ ಶ್ರೀ ಎಮ್. ವಿಠಲ ಕಾಮತರ ಮೂಲಕ ಅವರನ್ನು ಭೇಟಿಯಾಯಿತು. ಈ ಕಾಲೇಜು ಪ್ರಾರಂಭವಾದ ವರುಷ ಹೆಣ್ಣು ಮಕ್ಕಳಿಗೆ ಇಂಟರ್ ಮಿಡಿಯೇಟ್ ಕ್ಲಾಸಿಗೆ ಪ್ರವೇಶ ಕೊಡಲು ಅಪ್ಪಣೆಯಿತ್ತುದನ್ನು ಯುನಿವರ್ಸಿಟಿಯು ರದ್ದು ಮಾಡಿದುದರಿಂದ ಈ ಭಾಗದ ಹೆಣ್ಣು ಮಕ್ಕಳಿಗೆ ಪ್ರೌಢ ವಿದ್ಯಾಭ್ಯಾಸ ಪಡೆಯಲು ಸೌಕರ್ಯ ಇಲ್ಲದಂತಾಗಿದೆ. ಯುನಿವರ್ಸಿಟಿಯ ಶರ್ತಗಳಿಗನುಸಾರವಾಗಿ ಹುಡುಗಿಯರಿಗೆ ಯಾವ್ಯಾವ ವಿಶೇಷ ಸೌಕರ್ಯಗಳನ್ನು ಕಲ್ಪಿಸಬೇಕೋ ಅವೆಲ್ಲವನ್ನೂ ಈ ಕಾಲೇಜು ಟ್ರಸ್ಟಿನವರು ಪೂರೈಸಿರುವರು. ಇಂತಹ ಸಂಸ್ಥಿತಿಯಲ್ಲಿ ಯುನಿವರ್ಸಿಟಿಯವರು ಹುಡುಗಿಯರ ಪ್ರೌಢ ವಿದ್ಯಾಭ್ಯಾಸದ ದೃಷ್ಟಿಯಿಂದ ಹುಡುಗಿಯರ ಪ್ರವೇಶಕ್ಕೆ ಅನುಕೂಲ ವಾತಾವರಣವನ್ನು ಕಲ್ಪಿಸಿಕೊಡಬೇಕಾಗಿದೆ ಎಂಬಿತ್ಯಾದಿ ವಿಷಯಗಳನ್ನು ಸ್ಪಷ್ಟವಾಗಿ ಪ್ರೊಫೆಸರ್ ಪಣೀಕರರಿಗೆ ಮುಂದಿಟ್ಟು ಮಾತಲಾಡಿತು. ಹೆಣ್ಣುಮಕ್ಕಳ ಕೋರಿಕೆಗಳು ನ್ಯಾಯ ಮತ್ತು ಅತ್ಯಗತ್ಯವೆಂದವರು ಅಭಿಪ್ರಾಯಪಟ್ಟರು.

ಬಳಿಕ ಕಾಲೇಜು ಟ್ರಸ್ಟಿನ ಕಡೆಯಿಂದ ಏರ್ಪಡಿಸಲಾದ ಉಪಾಹಾರದಲ್ಲಿ ಭಾಗವಹಿಸಿದರು. ಕಾಲೇಜು ಪ್ರಿನ್ಸಿಪಾಲ್ ಶ್ರೀ ಎಚ್. ಸುಂದರರಾಯರು ಸ್ವಾಗತ ಮಾತುಗಳನ್ನಾಡಿದರು. ಮಾನ್ಯ ಅತಿಥಿಯು ಆಭಾರ ಸೂಚಿಸಿ ಈ ಕಾಲೇಜು ಯುನಿವರ್ಸಿಟಿಯ ಶರ್ತಗಳನ್ನು ಪೂರ್ಣ ಮನ್ನಿಸಿದೆಯೆಂದೂ ಇಂತಹ ಕಟ್ಟಡವನ್ನು ತಾನು ನೋಡಿದ್ದು ಬಹಳ ಅಪರೂಪವೆಂದೂ ಈ ಕಾಲೇಜಿಗೆ ಒಳ್ಳೆಯ ಭವಿಷ್ಯವಿದೆ ಎಂದೂ ಹೇಳಿದರು. ಕಾಲೇಜಿಗೆ ಹೆಣ್ಣು ಮಕ್ಕಳ ಪ್ರವೇಶದ ಕುರಿತು ಸಹಾನುಭೂತಿ ತೋರಿಸುವುದು ಮಾತ್ರವಲ್ಲದೆ ಅದು ಫಲಕಾರಿಯಾಗಲು ತಾನು ಪ್ರಯತ್ನಿಸುವೆನೆಂದು ಆಶ್ವಾಸನೆಯಿತ್ತರು. ಡಾ। ಎಸ್. ಆರ್. ಪೈಗಳು ಧನ್ಯವಾದಗಳನ್ನರ್ಪಿಸಿದರು.

ಉಡುಪಿ ಸಂಸ್ಕೃತ ಕಾಲೇಜಿನ ಫಲಿತಾಂಶ

ಶಿರೋಮಣಿ ಫೈನಲ್ ಪರೀಕ್ಷೆಗೆ ಕುಳಿತ 6 ವಿದ್ಯಾರ್ಥಿಗಳ ಪೈಕಿ ಇಬ್ಬರು ಪ್ರಥಮ ದರ್ಜೆಯಲ್ಲೂ ಉಳಿದವರು ದ್ವಿತೀಯ ದರ್ಜೆಯಲ್ಲೂ ತೇರ್ಗಡೆಯಾಗಿರುತ್ತಾರೆ.

ಪ್ರಿಲಿಮಿನರಿ ಪರೀಕ್ಷೆಗೆ ಕುಳಿತ 10 ಮಂದಿಯೂ ತೇರ್ಗಡೆಯಾಗಿರುತ್ತಾರೆ, ಇಬ್ಬರು ಪ್ರಥಮ ದರ್ಜೆಯಲ್ಲೂ, ಐವರು ದ್ವಿತೀಯ ದರ್ಜೆಯಲ್ಲೂ, ಮೂವರು ತೃತೀಯ ದರ್ಜೆಯಲ್ಲೂ ಉತ್ತೀರ್ಣರಾಗಿದ್ದಾರೆ.

ಶಿರೋಮಣಿ ಫೈನಲ್ ಪರೀಕ್ಷೆಯಲ್ಲಿ ಇಡೀ ಮದ್ರಾಸ್ ಪ್ರಾಂತಕ್ಕೆ ಕೊಟ್ಟಿರುವ 3 ಫಸ್ಟ್‌ಕ್ಲಾಸ್ ಪೈಕಿ ಎರಡು ಉಡುಪಿ ಸಂಸ್ಕೃತ ಕಾಲೇಜಿಗೆ ದೊರಕಿದೆ. ಅಂತೆಯೇ 4 ಪ್ರಿಲಿಮಿನರಿ ಫಸ್ಟ್‌ಕ್ಲಾಸ್ ಪೈಕಿ ಎರಡು ಉಡುಪಿ ಕಾಲೇಜಿಗೆ ದೊರಕಿದೆ. ಫಲಿತಾಂಶ ಶೇಕಡಾ ನೂರು.

ಮಾನ್ಯ ಖೇರರಿಗೆ ಸಂಸ್ಥೆಗಳ ಮನವಿ

ಮಾನ್ಯ ಮಂತ್ರಿ ಖೇರರು ಸಂಸ್ಕೃತ ಕಾಲೇಜಿನ ಪ್ರವೇಶ ಸಮಾರಂಭ ಮುಗಿಸಿ ನೇರ ರಥಬೀದಿಗೆ ಬಂದು ಕನಕನಕಿಂಡಿಯಲ್ಲಿ ಶ್ರೀ ಕೃಷ್ಣನ ದರ್ಶನ ಪಡೆದು ಸರ್ಕಿಟ್ ಬಂಗ್ಲೆಗೆ ತೆರಳಿದರು. ಬಂಗ್ಲೆಯಲ್ಲಿ ಮಧ್ಯಾಹ್ನ ಅಖಿಲ ಭಾರತ ಉತ್ಪಾದಕರ ಸಂಘದ ದಕ್ಷಿಣ ಕನ್ನಡ ಶಾಖೆ, ಕಾಂಗ್ರೆಸ್ ಕಮಿಟಿ, ಕರ್ನಾಟಕ ಸಂಘಗಳ ಕಡೆಯಿಂದ ಮನವಿಗಳನ್ನು ಶ್ರೀಗಳಾದ ಟಿ ಅನಂತ ಪೈ, ಬೀಳ್ಕಟಬೀಡು ಕೃಷ್ಣಯ್ಯ ಹೆಗ್ಡೆ, ನಾರಾಯಣ ಅಯ್ಯಂಗಾರ್ ಮತ್ತು ಕು. ಶಿ. ಹರಿದಾಸ ಭಟ್ಟರು ಕೊಟ್ಟರು. ಕರ್ನಾಟಕ ಪ್ರಾಂತ ರಚನೆ, ಕರ್ನಾಟಕ ಏಕೀಕರಣ, ಪ್ರಬುದ್ಧ ಬಂದರ ಪ್ರಶ್ನೆ, ಕರ್ನಾಟಕ ವಿದ್ಯಾಪೀಠ ಇತ್ಯಾದಿ ಪ್ರಶ್ನೆಗಳು ಮನವಿಯಲ್ಲಿದ್ದವು. ಪ್ರಬುದ್ಧ ಬಂದರದ ವಿಷಯದಲ್ಲಿ ಈ ತನಕ ಬೊಂಬಾಯಿ ಸರಕಾರವು ವಹಿಸಿದ ಧೋರಣೆಯನ್ನೇ ಮುಂದೆಯೂ ಊರ್ಜಿತದಲ್ಲಿಡುವುದೆಂದೂ, ಭಾಷಾವಾರು ಪ್ರಾಂತರಚನೆಗಿಂತಲೂ ಇತರ ಮಹತ್ವದ ವಿಷಯಗಳಿಗೆ ಪ್ರಥಮಸ್ಥಾನ ಕೊಡಬೇಕಾಗಿದೆಯೆಂತಲೂ, ದಕ್ಷಿಣ ಕನ್ನಡ ಜಿಲ್ಲೆಯ ಕಾಲೇಜುಗಳು ಕರ್ನಾಟಕ ವಿದ್ಯಾಪೀಠಕ್ಕೆ ಸೇರಲಪೇಕ್ಷಿಸುವುದು ಸ್ವಾಗತಾರ್ಹವೆಂದೂ ಆ ಬಗ್ಗೆ ಮುಂದಿನ ವ್ಯವಸ್ಥೆ ಮಾಡುವುದು ಮದ್ರಾಸು ಸರಕಾರದ ಕೈಯಲ್ಲಿದೆಯೆಂದೂ ಮಾನ್ಯ ಖೇರರು ಅಭಿಪ್ರಾಯಪಟ್ಟರು. ಮಧ್ಯಾಹ್ನ ಶಿವಮೊಗ್ಗ ಹರಿಹರ ಮಾರ್ಗವಾಗಿ ಬೊಂಬಾಯಿಗೆ ಪ್ರಯಾಣ ಬೆಳೆಸಿದರು.

ಮಂಗಳೂರು

ಅಕಾಲ ನಿಧನ—ದಿವಂಗತ ಡಾ. ಬಿ. ರಾಮಣ್ಣ ಶೆಟ್ಟಿ ಪುತ್ರಿ, ಶ್ರೀ ವಕೀಲ ಕೆ. ಸುಂದರರಾಮ ಶೆಟ್ಟಿ ಪತ್ನಿ ಶ್ರೀಮತಿ ಹೇಮಲತಾ ಶೆಟ್ಟಿಯವರು ಇದೇ ತಾ. 15ನೇ ಸಂಜೆ ಹೃದಯಸ್ತಂಭನದಿಂದ ಅಕಾಲ ಮೃತ್ಯುವಶರಾದರೆಂದು ತಿಳಿಸಲು ಬಹು ವಿಷಾದವಾಗುತ್ತದೆ. ಶ್ರೀಮತಿಯವರು ವಿದ್ಯಾವತಿಯೂ ಸರ್ವಗುಣ ಸಂಪನ್ನೆಯೂ ಆಗಿದ್ದರು. ಗ್ರಾಜ್ಯುವೇಟ್ ಬಂಟ ಮಹಿಳೆಯರಲ್ಲಿ ಇವರು ಮೊದಲಿಗರೆಂದು ತಿಳಿಯಬರುತ್ತದೆ.

ಉಡ್ಪಿ ಡಿ. ಮು. ಕೋರ್ಟಿನಲ್ಲಿ

O. P. ನಂಬ್ರ 26/1951

1 ಚಿಪ್ಪಿ ಮಾರಕಾಲ್ತಿ, 2 ಗೋವಿಂದ ಮಾರಕಾಲ 3 ಮೈನರ ನಾರಾಯಣ 4 ಮೈನರ ಜಗನ್ನಾಥ.

—ಅರ್ಜಿದಾರರು

3 ಮತ್ತು 4ನೇಯವರಿಗೆ ರಕ್ಷಕಳು ತಾಯಿ 1ನೇ ಅರ್ಜಿದಾರಳು.

ಮತ್ತು

ಕೊರಗ ಮಾರಕಾಲ —ಎದ್ರಿ

ಯವರೊಳಗೆ

1ನೆ ಅರ್ಜಿದಾರಳ ಗಂಡ 2, 3, 4ನೇ ಅರ್ಜಿದಾರರ ತಂದೆ ಮೃತ ಶೀನ ಮಾರಕಾಲನ ಬಾಬ್ತು ದಿ ದೀಪಕ ಜನರಲ್ ಇನ್ಶೂರೆನ್ಸು ಕಂಪೆನಿ ಲಿಮಿಟೆಡ್, ಬಾಂಬೆ. ಇವರ ನಂಬ್ರ 4743ನೆ ಪೋಲಿಸಿ ಹಣ ರೂ. 1000 0-0 ಪಡೆಯುವರೆ ಅರ್ಜಿದಾರರ ಬಗ್ಗೆ 1ನೆ ಅರ್ಜಿದಾರಳ ಹೆಸರಿಗೆ ಸಕ್ಸೆಸ್ಸನ್ ಸರ್ಟಿಫಿಕೇಟು ಕೊಡುವಂತೆ ಕೇಳಿ ಮಾಡಿರುವ ಅರ್ಜಿದಾರರ ಅರ್ಜಿ ತಾ. 4—7—51ಕ್ಕೆ ತನಿಖೆಗೆ ಇಡಲ್ಪಟ್ಟಿದೆ. ಆಕ್ಷೇಪವುಳ್ಳವರು ಆ ದಿನ ಬೆಳಗ್ಗೆ 10 ಗಂಟೆಗೆ ಹಾಜರಾಗಿ ಜ್ಯಾಹೀರು ಮಾಡಿಕೊಳ್ಳತಕ್ಕದ್ದು.

Narayana Rao K.
Advocate for Petitioner
Camp, UDIPI 18-5-51

ಉಡ್ಪಿ. ಡಿ. ಮು. ಕೋರ್ಟಿನಲ್ಲಿ

O. S 92/1951

Sri ಬಿ. ವಾಸುದೇವ ರಾವ್—ವಾದಿ

ಮತ್ತು

ಗುಡ್ಡಾಬಾರಿ ಕೊಡಾ—ಪ್ರತಿವಾದಿರು

ಇವರೊಳಗೆ 2ನೇ ಪ್ರತಿವಾದಿ ಲಕ್ಷ್ಮಣಾಬಾರಿ, 1ನೇ ಪ್ರತಿವಾದಿಯ ಮಗ ಉಡುಪಿ ತಾಲ್ಲೂಕು ನಂಬ್ರ 76ನೇ ಬಡಗಬೆಟ್ಟು ಗ್ರಾಮದ ಬೈಲೂರು ಇವನಿಗೆ

ವಾದಿಗೆ ಪ್ರತಿವಾದಿಂದ ಬರಾ ಕಳೆದ ವಿಕೃತಿ ಸಂವತ್ಸರದ ಬಾಲಗೇಣಿಯ ಗೇಣಿ ಬಾಕಿ ಬಗ್ಗೆ ವಾದಿಯು ಮಾಡಿದ ಮೇಲ್ಕಂಡ ವ್ಯಾಜ್ಯದಲ್ಲಿ 2ನೇ ಪ್ರತಿವಾದಿಯ ಉಪಾಹರಣೆ ಇದ್ದರೆ ಆತನು ಸ್ವತಹಾ ಯಾ ವಕೀಲದ್ವಾರಾ ತಾ. 30-6-51ನೇ ದಿವಸ ಹಗಲು ಗಂಟೆ 10ಕ್ಕೆ ಈ ಕೋರ್ಟು ಮುಂದೆ ಹಾಜರಾಗಿ ಜ್ಯಾಹೀರು ಮಾಡಿಕೊಳ್ಳತಕ್ಕದ್ದು. ತಪ್ಪಿದ್ರೆ 2ನೇ ಪ್ರತಿವಾದಿಯನ್ನು ಎಕ್ಸಪಾರ್ಟಿ ಮಾಡಿ ಸದ್ರಿ ವ್ಯಾಜ್ಯ ತೀರ್ಮಾನಿಸಲ್ಪಡುವುದು.

P. V. Acharya
Vakil for plaintiff

ಉಡುಪಿ. 18-6-51

In the Court of the District Munsif of Puttur.

O. S. No. 23 of 1951.

Between—
1. V. Abdul Rahiman, Trader, Boikeri, Shunticoppa,
2. Mukkatria I. Poonacha, Coffee Planter, Mercara
—Plaintiffs.
and
M. Siddalingappa and two others—Defendants.

To
2nd Defendant, Shivachaliananda, Kaveriappa, Napoklu Nadu, Napoklu village, Mercara.

Notice is hereby given to the 2nd defendant that the plaintiffs have instituted the above suit against you and two others for recovery of Rs. 800/- being the value of one and a half candies of pepper which was entrusted to your custody which was picked up from the estate in Hardar village of Shunticoppa (Crop of 1946 1947) as per terms of the salechit executed by 1st defendant in favour of 1st plaintiff for the benefit of 2nd plaintiff and also for court costs and interest on all the amounts claimed.

You are also informed the said suit stands posted to 30-6-1951 before the above court and you must file your written statement either in person or through a pleader on the said date at 11 A. M; failing which you will be declared exparte and the suit will be decided in your absence.

(By Order of Court)
(Sd.) P. Krishna Bhat,
Vakil for plaintiffs.
Puttur, 16-5-51

TEL. 40592

WATSONS AERATED WATERS

14 Parel Road, Cross Lane, BOMBAY 12

- Watsons hygienically prepared Aerated Waters are the Drinks of the day.
- Our Orange, Rose, Pine-apple, Raspbery, Gingerbeer, Tonic, Pick-me-up and Lemon are drinks of health and pleasure.

We accept orders to supply functions etc., in any parts of the City

- ಆರೋಗ್ಯಶಾಸ್ತ್ರರೀತ್ಯಾ ತಯಾರಿಸಿದ ವಾಟ್ಸನ್ಸರ ಸೋಡಾ ವ್ರಾಸಕಗಳೇ ಇಂದಿಗೆ ಬೇಕಾದ ಪಾನೀಯಗಳು.
- ನಮ್ಮ ಒರೇಂಜ್, ರೋಸ್ ಪೈನ್‌ಎಪ್ಲ್, ರಾಸ್ಬರಿ, ಜಿಂಜರ್‌ಬೀರ್, ಟೋನಿಕ್, ಪಿಕ್-ಮಿ-ಅಪ್, ಮತ್ತು ಲೇಮನ್ ಪಾನೀಯಗಳು ಆರೋಗ್ಯಕರ ಮತ್ತು ಆಹ್ಲಾದಕರ.

ನಗರದ ಯಾವದೇ ಭಾಗದಲ್ಲಾಗುವ ಸಮಾರಂಭಾದಿಗಳಿಗೆ ನಾವು ಆರ್ಡರುಗಳನ್ನು ಸ್ವೀಕರಿಸುತ್ತೇವೆ.

ಮಹಾನಗರ ಮುಂಬಯಿಯಲ್ಲಿ ಕನ್ನಡಿಗರಿಂದ ನಡೆಸಲ್ಪಡುವ ಸಂಸ್ಥೆ-

ವಾಟ್ಸನ್ಸ್ ಎರೇಟೆಡ್ ವಾಟರ್ಸ್,

14, ಪರೇಲ್ ರೋಡ್, ಕ್ರೋಸ್ ಲೇನ್, ಬೊಂಬಾಯಿ 12.

(ಟೆಲಿಫೋನ್: 40592)

ಯಕ್ಷಗಾನ ಪ್ರಿಯರಿಗೆ ಉತ್ತಮ ಸಾಹಿತ್ಯ!

ಯಕ್ಷಗಾನ ಪ್ರಪಂಚದಲ್ಲಿ ಪ್ರಸಿದ್ಧರಾದ
ಶ್ರೀ ಕೆ. ಪಿ. ವೆಂಕಪ್ಪ ಶೆಟ್ಟರಿಂದ ರಚಿಸಲ್ಪಟ್ಟ

ಸಾಹಸ ಭೀಮ ವಿಜಯ

(ಗದಾಯುದ್ಧ)

ಎಂಬ ಯಕ್ಷಗಾನ ಪ್ರಸಂಗವು ಇದೀಗ ಪ್ರಕಟವಾಗಿದೆ!
ಯಕ್ಷಗಾನ ಪ್ರಿಯರಿಗೆ ಸುಸಂಧಿ!

ಬೆಲೆ: 0—8—0 ಟಪ್ಪಾಲು ಖರ್ಚು ಪ್ರತ್ಯೇಕ

ವ್ಯಾಪಾರಿಗಳಿಗೆ ಧಾರಾಳ ಕಮಿಶನ್ ಇದೆ.

ಸಿಗುವ ಸ್ಥಳಗಳು:—
(1) ಅಂತರಂಗ ಕಾರ್ಯಾಲಯ, ಉಡುಪಿ
(2) ನವಭಾರತ ಬುಕ್ ಡಿಪೋ, ಉಡುಪಿ.
(3) ನವಯುಗ ಪ್ರೆಸ್, ಉಡುಪಿ.
(4) ಸ್ಕೂಲ್ ಬುಕ್ ಕಂಪೆನಿ, ಮಂಗಳೂರು.

ಮಂಗಳೂರು

ವಾರ್ಷಿಕ ಮಹಾಸಭೆ— ಮಂಗಳೂರು ಪತ್ರಿಕೋದ್ಯೋಗಿಗಳ ವಾರ್ಷಿಕ ಮಹಾ ಸಭೆಯು ಇದೇ ತಾ 10ರಲ್ಲು ಶ್ರೀ ಡಿ. ಪುಟ್ಟ ಸ್ವಾಮಿಯವರ ಅಧ್ಯಕ್ಷತೆಯಲ್ಲಿ ಜರಗಿತು. ಕಾರ್ಯದರ್ಶಿಗಳು ಲೆಕ್ಕ ಪತ್ರಗಳನ್ನೋದಿ ಒಪ್ಪಿಸಿದರು. ಹೊಸ ವರುಷಕ್ಕೆ ಶ್ರೀಗಳಾದ ಡಿ. ಪುಟ್ಟ ಸ್ವಾಮಿಯವರು ಅಧ್ಯಕ್ಷರಾಗಿಯೂ ಕಡೆಂಗೋಡ್ಲು ಶಂಕರ ಭಟ್ಟರು ಉಪಾಧ್ಯಕ್ಷರಾಗಿಯೂ ಯು. ನರಸಿಂಹರಾಯರು ಕಾರ್ಯದರ್ಶಿಗಳಾಗಿಯೂ ಎಚ್. ರಾಮರಾಯ ಮಲ್ಯ, ಎಸ್. ಮುಕುಂದರಾವ್, ಬಿ. ಎಸ್. ಭಾಸ್ಕರ ರೈ, ಕೆ. ಕೃಷ್ಣಯಾಚಾರ್, ನವೀನ ಚಂದ್ರಪಾಲ್ ಮತ್ತು ಮೈಕೇಲ್ ಸಾಲ್ಡಾನರು ಕಾರ್ಯನಿರ್ವಾಹಕ ಸಮಿತಿಗೆ ಆರಿಸಲ್ಪಟ್ಟರು.

ಶ್ರೀ ಮಹಾಸ್ವಿಯವರ ಷಷ್ಟ್ಯಬ್ದಿ ಪೂರ್ತಿ ಸಮಾರಂಭವು— ಇದೇ ತಾ 14ರಲ್ಲು ಶ್ರೀ ಬಿ. ಶಂಕರ ಭಟ್ಟರ ಅಧ್ಯಕ್ಷತೆಯಲ್ಲಿ ಜರಗಿತು. ಕುಮಾರಿಯರುಗಳಾದ ಕೆ. ವಿಮಲಾ ಪೈ, ಕೆ. ಕಮಲಾ, ಕೆ. ಶೀಲಾ, ಬಿ. ಶಾಂತಾ, ಎಮ್. ಸುಮಿತ್ರ, ಎಮ್. ನಳಿನಿ, ಟಿ. ಸುಂದರಿ, ಯು. ಸುಮತಿ, ಬಿ. ಇಂದುಮತಿ, ವಿ. ಶಾಂತಾ ಮೊದಲಾದವರು ಮಹಾಸ್ವಿಯವರ ಕವಿತೆ, ನಾಟಕಗಳನ್ನು ಆಯ್ದು ಓದಿದರು.

ಅವಘಡ— ಮಂಗಳೂರ ಜಯ ಕೇಫೆಯ (ಹಳೆಯ) ಮಾಳಿಗೆಗಳ ಜಗಲಿಗಳು ಇದೇ ತಾ 12ರಲ್ಲು ರಾತ್ರಿ ಕುಸಿದು ಬಿದ್ದವು. ಮೇಲಿನ ಅಂತಸ್ತಿನ ಜಗಲಿಯು ಮೊದಲು ಬಿದ್ದು ಅದರ ಭಾರದ ಜೆಸಿಯಿಂದಲೇ ಇನ್ನೂ ಕೆಳಗಿನ ಎರಡು ಜಗಲಿಗಳೂ ಕುಸಿದಿರುತ್ತವೆ. ಮಂಗಳೂರ ಅಗ್ನಿ ಶಾಮಕ ದಳದವರು ಅವಘಡವಾದಲ್ಲಿಗೆ ಬಂದು ತಕ್ಕ ಸಹಾಯ ನೀಡಿದರು. ಇದರಿಂದಾಗಿ ಯಾರಿಗೂ ಹಾನಿಯಾಗಿಲ್ಲ. ಈಗ ಹೊಟೆಲು ಮುಚ್ಚಲ್ಪಟ್ಟಿದೆ ಎಂದು ತಿಳಿದು ಬರುತ್ತದೆ.

ವನಮಹೋತ್ಸವ— ಮುಂದಿನ ಜುಲೈ ತಿಂಗಳ ತಾ 1ರಿಂದ 17ರ ತನಕ ಭಾರತದಲ್ಲೆಲ್ಲಾ ವನಮಹೋತ್ಸವ ಆಚರಿಸುವಂತೆ ಮಂಗಳೂರಲ್ಲಿಯೂ ವನಮಹೋತ್ಸವ ಕಾರ್ಯಕ್ರಮವನ್ನೂ ಏರ್ಪಡಿಸಲು ಮಂಗಳೂರಿನಸ್ಸ್ ಡಿವಿಜನಲ್ ಆಫೀಸರ್ ಶ್ರೀ ಪರಮಾಸ್ತಾ ಸಾಬ್ಸರ ಅಧ್ಯಕ್ಷತೆಯಲ್ಲಿ ಸಮಿತಿಯೊಂದು ಈಚೆಗೆ ರಚನೆಯಾಯಿತು.

ಕೋರಂ ಇಲ್ಲ— ಇದೇ ತಾ 16 ಲ್ಲು ಸೇರಬೇಕಾಗಿದ್ದ ಮಂಗಳೂರು ನಗರ ಸಭೆಗೆ ಕೋರಂ ಇಲ್ಲದಿದ್ದುದರಿಂದ ಸಭೆ ಮುಂದವಂಸಲ್ಪಟ್ಟಿತು.

ನಳ್ಳಿನೀರು ಮತ್ತು ನೆಲದಡಿಯ ಚರಂಡಿಯೋಜನೆ— ಮಂಗಳೂರು ಮುನಿಸಿಪಲ್ ಕ್ಷೇತ್ರದೊಳಗೆ ರೂಪಾಯಿ 48,40'000 ಖರ್ಚಿನಿಂದ ನಳ್ಳಿನೀರನ್ನು ಪೂರಯಿಸುವ ಯೋಜನೆಗೆ ಮದ್ರಾಸು ಸರಕಾರವು ಮಂಜೂರಾತಿ ಕೊಟ್ಟುದು ಮಾತ್ರವಲ್ಲದೆ ಖರ್ಚಿನ ಹಣದಲ್ಲಿ ಅರ್ಧಾಂಶವನ್ನೂ ಸಹಾಯಧನ ರೂಪದಲ್ಲಿ ಕೊಡಲೊಪ್ಪಿದೆ. ಈ ಯೋಜನೆಯಂತೆ ಫಲ್ಗುಣಿ ನದಿಯ ಬಳಿ ಸೌಕೂರು ಎಂಬಲ್ಲಿ ಗುರುಪುರ ಹೊಳೆಯಲ್ಲಿ ನೀರ ಸಾಗ ರಚನೆಯ ಕಾರ್ಯವು ಈಗಲೇ ಆರಂಭವಾಗಿದೆ.

ಮುನಿಸಿಪಾಲಿಟಿಯ ಸೆಂಟ್ರಲ್ ಮತ್ತು ಬಂದರ ವಾರ್ಡುಗಳಲ್ಲಿ ನೆಲದಡಿಯ ಚರಂಡಿಗಳನ್ನೂ ರಚಿಸುವ ಬಗ್ಗೆ ಒಂಭತ್ತು ಲಕ್ಷ ರೂಪಾಯಿಯ ಇನ್ನೊಂದು ಯೋಜನೆಗೂ ಮದ್ರಾಸು ಸರಕಾರದ ಮಂಜೂರಾತಿ ದೊರೆತಿದೆ. ಈ ಎರಡೂ ಯೋಜನೆಗಳಿಗೆ ಬೇಕಾಗುವ ಖರ್ಚಿನ ಹಣಕ್ಕಾಗಿ, ನೀರುದಾರಿಯ ತೆರಿಗೆಯನ್ನು ಸೇಕಡಾ ಎರಡರಿಂದ ಎಂಟರ ತನಕ ಹೆಚ್ಚಿಸಿ ಜಮೂಯಿಸಲು ಮದ್ರಾಸು ಸರಕಾರವು ಸೂಚಿಸಿದೆ.

ಆಗಮನ— ಮದ್ರಾಸು ಪ್ರಾಂತದ ಅಸಿಸ್ಟಂಟ್ ಫುಡ್ ಕಂಟ್ರೋಲರಾದ ಜನಾಬ್ ಅಬ್ದುಲ್ ಗಫೂರು ಸಾಹೇಬರು ಇದೇ ತಾ 13ರಲ್ಲು ಮದ್ರಾಸಿನಿಂದ ಮಂಗಳೂರಿಗೆ ಆಗಮಿಸಿ ಜಿಲ್ಲೆಯ ಆಹಾರ ಪರಿಸ್ಥಿತಿಯನ್ನು ಪರಿಶೀಲಿಸಿದರು.

ಡಿ ಕೆ. ಭಾರದ್ವಾಜರ

ಇಂಗ್ಲಿಷ್ × ಇಂಗ್ಲಿಷ್ ಕನ್ನಡ ಡಿಕ್ಷನರಿ

ವಿದ್ಯಾರ್ಥಿಗಳಿಗೆ ಅತ್ಯುಪಯುಕ್ತವಾದ ದೊಡ್ಡ ಸೈಜಿನ ನಿಘಂಟು

ಬೆಲೆ ರೂ 5–4–0

ನವಭಾರತ ಬುಕ್ ಡಿಪ್ಪೊ, ಉಡುಪಿ.

ನವಯುಗ ಪ್ರೆಸ್, ಉಡುಪಿ.

ಉಡುಪಿ ಸಂಸ್ಕೃತ ಕಾಲೇಜ್ ಕಟ್ಟಡದ ಪ್ರವೇಶೋತ್ಸವ

ಮುಂಬಯಿ ಪ್ರಧಾನ ಮಂತ್ರಿ ಬಿ.ಜಿ ಖೇರರಿಂದ ಉದ್ಘಾಟನೆ.

ಉಡುಪಿಯ ಸಂಸ್ಕೃತ ಕಾಲೇಜಿನ ಭವ್ಯ ನೂತನ ಕಟ್ಟಡ ಪ್ರವೇಶೋತ್ಸವವು ಇದೇ ತಾ 14ರಂದು ಬೆಳಿಗ್ಗೆ 8–45ಕ್ಕೆ ಬೊಂಬಾಯಿ ಪ್ರಧಾನ ಮಂತ್ರಿ ಶ್ರೀ ಬಿ. ಜಿ. ಖೇರರಿಂದ ವಿಜೃಂಭಣೆಯಿಂದ ನೆರವೇರಿಸಲ್ಪಟ್ಟಿತು. ಈ ಮಹೋತ್ಸವದ ಸಲುವಾಗಿ ಆದಿನ ಬೆಳಿಗ್ಗೆ ಪರ್ಯಾಯ ಕಾಣಿಯೂರು ಮಠದ ಸ್ವಾಮಿಗಳವರು, ಫಲಿಮಾರು ಮಠದ ಶ್ರೀ ಪಾದಂಗಳವರು ವಾದ್ಯಘೋಷ ಮೆರವಣಿಗೆಯಿಂದ ಶ್ರೀ ಕೃಷ್ಣನ ವಿಗ್ರಹವನ್ನು ಚಿನ್ನದ ಪಾಲಕಿಯಲ್ಲಿ ರಿಸಿಕೊಂಡು ಶ್ರೀಕೃಷ್ಣ ಮಠದಿಂದ ನೂತನ ಕಟ್ಟಡಕ್ಕೆ ಪ್ರವೇಶಿಸಿದರು. ಅಲ್ಲಿ ಪೂಜೆಯಾದ ಬಳಿಕ ಶ್ರೀ ಖೇರರ ಅಧ್ಯಕ್ಷತೆಯಲ್ಲಿ ಸಭೆ ಜರಗಿತು. ಪಂಡಿತ ಶ್ರೀ ಬಿ. ನಾರಾಯಣಾಚಾರ್ಯರು ಸಂಸ್ಕೃತದಲ್ಲಿ ಸ್ವಾಗತ ಭಾಷಣ ಮಾಡಿದರು. ಕಾಲೇಜು ಪ್ರಿನ್ಸಿಪಾಲ್ ಶ್ರೀ ಕಾಲಿಗಿ ಶೇಷಾಚಾರ್ಯರು ಸ್ವಾಗತ ಪತ್ರವನೋದಿ, ಮದ್ರಾಸಿನ ಮಾನ್ಯ ಮಂತ್ರಿಗಳು ಶ್ರೀಗಳಾದ ಕುಮಾರ ಸ್ವಾಮಿ ರಾಜ, ಗೋಪಾಲ ರೆಡ್ಡಿ, ಎ. ಬಿ. ಶೆಟ್ಟಿ, ಮಾಧವ ಮೆನನ್, ದ. ಕ. ಜಿಲ್ಲಾ ಬೋರ್ಡು ಪ್ರೆಸಿಡೆಂಟ್ ಶ್ರೀ ಮಂಜಯ್ಯ ಹೆಗ್ಗಡೆ, ಮೊದಲಾದ ಮಹನೀಯರಿಂದ ಬಂದ ಶುಭ ಸಂದೇಶಗಳನ್ನು ಜಾಹೀರು ಮಾಡಿದರು. ಬಳಿಕ ನೂತನ ಕಟ್ಟಡವನ್ನೂ ಶ್ರೀ ಮನ್ಮಧ್ವ ಸಿದ್ಧಾಂತ ಪ್ರಬೋಧಿನಿ ಸಭೆಯವರು ವಹಿಸಿಕೊಳ್ಳುವಂತೆ ಶ್ರೀ ಅಧಮಾರು ಸ್ವಾಮಿಗಳವರು ಸೂಚಿಸಿದರು. ಸಭೆಯ ಪರವಾಗಿ ಶ್ರೀ ಕಿದಿಯೂರು ಲಕ್ಷ್ಮೀನಾರಾಯಣ ರಾಯರು ಅಭಾವ ಸೂಚಿಸಿ ಸ್ವೀಕರಿಸಿದರು. ಅಧ್ಯಕ್ಷರು ತಮ್ಮ ಮನೋಜ್ಞ ಸುದೀರ್ಘ ಭಾಷಣದಲ್ಲಿ ಸಂಸ್ಕೃತ ವಿದ್ಯೆಯ ಸ್ಥಾನಮಾನ, ರಾಜಕೀಯ ದೃಷ್ಟಿಯಿಂದ ಅದರ ಮಹತ್ವ, ಸಂಸ್ಕೃತ ವಿದ್ಯೆಯಲ್ಲಿ ಆಗತಕ್ಕ ಸುಧಾರಣೆ, ಸಕಲ ಜಾತಿಮತದವರಿಗೂ ಕಾಲೇಜಿಗೆ ಪ್ರವೇಶ ಕೊಡುವ ವಿಶಾಲ ಧೋರಣೆಯ ಆವಶ್ಯಕತೆ ಇತ್ಯಾದಿಗಳನ್ನು ಸೂಚಿಸಿ ಈ ಕಾಲೇಜು ಸಂಸ್ಕೃತ ವಿಶ್ವವಿದ್ಯಾಲಯವಾಗಿ ಪರಿಣಮಿಸಲೆಂದು ಹಾರೈಸಿದರು. ಆಬಳಿಕ ಪುತ್ತಿಗೆ ಮಠದ ಹಿರಿಯ ಸ್ವಾಮಿಗಳವರು ನೂತನ ಕಟ್ಟಡವು ಯಶಸ್ವಿಯಾಗಲೆಂದು ಆಶೀರ್ವದಿಸಿದರು. ಮಾನ್ಯ ಖೇರರಿಗೆ ಅಷ್ಟಮಠಗಳ ಕಡೆಯಿಂದ ಪ್ರಶಸ್ತಿ ಪತ್ರವೊಂದನ್ನು ಬೆಳ್ಳಿಯ ಕರಡಿಗೆಯಲ್ಲಿ ಕೊಡಲಾಯಿತು. ಮಾನ್ಯ ಮಂತ್ರಿಗಳು ಅದನ್ನು ಸ್ವೀಕರಿಸಿ ಕರಡಿಗೆಯನ್ನು ಏಲಂ ಹಾಕಿದರು. ಮದ್ರಾಸಿನ ಇಂಜಿನಿಯರ್ ಶ್ರೀ. ಯು. ಆನಂದ ರಾಯರು ಅದನ್ನು ಒಂದು ಸಾವಿರ ರೂಪಾಯಿಗೆ ವಹಿಸಿಕೊಂಡರು. ಏಲಂ ಹಾಕಿದ ಬೆಳ್ಳಿಯ ಬೀಗದ ಕೈಯನ್ನು ಇನ್ನೂರ ಐವತ್ತು ರೂಪಾಯಿಗೆ ಶ್ರೀ ಅಧಮಾರು ಸ್ವಾಮಿಗಳವರು ವಹಿಸಿಕೊಂಡರು. ಡಾ। ಪಿ ಜಿ. ಆಚಾರ್ಯರು ಎಲ್ಲರಿಗೂ ಧನ್ಯವಾದಗಳನ್ನರ್ಪಿಸಿದರು.

ಪ್ರಕಟಣೆ

ಕಾರ್ಕಳ ಡಿ ಮು. ಕೋರ್ಟಿನಲ್ಲಿ

O. S. No 489/1950

R. E. S. No 177/1951

ಅಜ್ಜು ಶೆಟ್ಟಿ-ಹಿರಾರು ಹಿರಿಯ ಶೆಟ್ಟರ ಮಗ. ಹಾಲಿ ಬೊಂಬಾಯಿ ಶಹರದಲ್ಲಿರುವವ. ವಾದಿ ಅರ್ಜಿದಾರ—

ಮತ್ತು

ಬಾಬು ಶೆಟ್ಟಿ-ಅದ್ದ ಬಸಪ್ಪ ಶೆಟ್ಟಿ ಮಗ ಕಾರ್ಕಳ ತಾಲ್ಲೂಕು ನಂದಳ್ಕೆ ಗ್ರಾಮದ ಬೆರಣ ಗುಡ್ಡೆ ಎಂಬಲ್ಲಿರುವವ. —ಪ್ರತಿವಾದಿ ಎದ್ರಿ

ಇವರೊಳಗೆ

ಈ ಮೂಲಕ ಸದ್ರಿ ಎದ್ರಿಗೆ ತಿಳಿಯಪಡಿಸುವದೇನೆಂದ್ರೆ. ಮೇಲ್ಕಂಡ ಅಮಲ್ದಾರಿಯಲ್ಲಿ ರಿಸೀವರ ನೇಮ್ಕ ಮಾಡಬೇಕಾಗಿ ಮಗ್ಗೆ ನಿಮ್ಮಲ್ಲಿ ಅರ್ಜಿದಾರನು ಕೇಳಿ ಸದ್ರಿ ಅಮಲ್ದಾರ ನಿಮ್ಮ ಹಾಜರು ಬಗ್ಗೆ ತಾರೀಕು 26-6-51ಕ್ಕೆ ಇಟ್ಟಿರುವುದರಿಂದ ಸದ್ರಿ ದಿನ ಬೆಳಿಗ್ಗೆ 10 ಗಂಟೆಗೆ ನೀವು ಮೇಲ್ಕಂಡ ಕೋರ್ಟ ಮುಂದೆ ಸ್ವತಹಾ ಯಾ ವಕೀಲು ದ್ವಾರಾ ಹಾಜರಾಗಿ ಉದಮಾಸತಕ್ಕದ್ದು. ತಪ್ಪಿದಲ್ಲಿ ನಿಮ್ಮನ್ನು ಕಿವ್ವಾಮಾಡಿ ಸದ್ರಿ ಅಮಲ್ದಾರಿಯನ್ನು ಮುಂದರಿಸಲಾಗುವುದು.

By Order of The Court

N. Mohandas Adyanthaya
Advocate for Petitioner
Karkala 17-6-51

ದಿ ನ್ಯೂ ಗಾರ್ಡಿಯನ್ ಓಫ್ ಇಂಡಿಯಾ ಲೈಫ್ ಇನ್ಶೂರೆನ್ಸ್ ಕಂಪೆನಿ ಲಿಮಿಟೆಡ್.

ಕೆ. ಎಸ್. ರಾವ್ ರಸ್ತೆಯಲ್ಲಿದ್ದ ನಮ್ಮ ಈಗಿನ ಆಫೀಸು ಕಟ್ಟಡದಲ್ಲಿ ಸ್ಥಳ ಸಂಕೋಚವಾದ ಪ್ರಯುಕ್ತ ನಮ್ಮ ಮಂಗಳೂರು ಶಾಖಾ ಕಚೇರಿಯು ಇದೇ ತಾ. 18-6 51ನೇ ಸೋಮವಾರದಿಂದ ಪಂಪ್ವೆಲ್‌ಕಟ್ಟೆಯ ಕೆ. ಆರ್. ಕೆ. ಥೇಟರ

ಡೈಮಂಡ್ ಬಿಲ್ಡಿಂಗ್ಸಿನ ವಿಶಾಲ ಸ್ಥಳಕ್ಕೆ

ಒಯ್ಯಲ್ಪಟ್ಟಿರುವುದು ಸಂಬಂಧಪಟ್ಟ ಮಹಾಜನರು ಈ ಸ್ಥಳ ಬದಲಾವಣೆಯನ್ನು ಗಮನಿಸಬೇಕಾಗಿದೆ

THE PANGAL NAYAK BANK LIMITED.

Head Office] (Incorporated in 1920.) [Udipi: S K

SEASON DEPOSITS are received and accepted on the following terms:—

For three, four or five months deposits at 3% p. a

For six, seven or eight months deposits at 3½% p. a

These are to be terminable by the 30th June 1951.

Interest is payable along with the principal at maturity.

Our THREE YEAR CASH CERTIFICATE bring to You a fair yeild: For particulars please ask for copy of Rules

The Catholic Bank Ltd., Kallianpur.

ಈ ಕೆಳಗೆ ಹೆಸರು ಕಾಣಿಸಿದ ಮಹನೀಯರು ನಮ್ಮ ಬೇಂಕಿನಲ್ಲಿ ಚಿನ್ನಾಭರಣಗಳ ಈಡಿನ ಮೇಲೆ ಪಡೆದ ಸಾಲದ ಮೊಬಲಗನ್ನಾಗಲೀ, ಅವುಗಳ ಬಡ್ಡಿಯನ್ನಾಗಲೀ ವಾಯಿದೆಗೆ ಸರಿಯಾಗಿ ಕೊಡದೆ ಇರುವುದರಿಂದ ಸದ್ರಿಯವರಿಗೆ ಕ್ರಮ ಪ್ರಕಾರ ರಿಜಿಸ್ಟ್ರಿ ನೋಟೀಸನ್ನು ಕಳುಹಿಸಿದಲ್ಲಿ ಸದ್ರಿಸಾಲದ ಅಸಲು, ಬಡ್ಡಿ ವಗೈರೆ ಐವೇಜನ್ನು ಕೊಡದೆ ಇನ್ನೂ ಬಾಕಿಯಿಟ್ಟುಕೊಂಡಿರುವುದರಿಂದ ಸದ್ರಿಯವರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ:

ನೀವು ನಮ್ಮ ಬೇಂಕಿಗೆ ಸಲಿಸಲಿಕ್ಕಿರುವ ಅಸಲು, ಬಡ್ಡಿ, ನೋಟೀಸು ಖರ್ಚು ವಗೈರೆ ಐವೇಜನ್ನು ಇದೇ ಜೂನ್ ತಿಂಗಳ ತಾರೀಕು 25ರ ಒಳಗೆ ಕೊಟ್ಟು ನಗಗಳನ್ನು ಬಿಡಿಸಿಕೊಳ್ಳದೆ ಇದ್ದಲ್ಲಿ, ಸದ್ರೀ ನಗಗಳನ್ನು ತಾ. 27-6-51ನೇ ಬುಧವಾರ ಅಪರಾಹ್ನ ಗಂಟೆ 2ಕ್ಕೆ ಯಾ ಬೇಂಕಿಗೆ ಯುಕ್ತಕಂಡ ದಿನದಲ್ಲಿ ಬೇಂಕಿನ ವಠಾರದಲ್ಲಿ ಬಹಿರಂಗವಾಗಿ ಏಲಂ ಮಾಡಲಾಗುವುದು. ತಿಳಿದಿರಲಿ.

ಸಾಲದ ನಂಬ್ರ		ಅಸಲು ಮೊಬಲಗು.
24/1674	ದೇಜು ಪೂಜಾರಿ, ಬಾಬ ಪೂಜಾರಿಯ ಅಳಿಯ, ಕೊಲಂಬ ಹಿತ್ತಲು, ಕಲ್ಯಾಣಪುರ ಪೋಸ್ಟ್.	55—0—0
24/1751	ಸೆಲಿನ್ ಲೋಬೊ, ಚೆನ್ನಿಲೋಬರ ಹೆಂಡತಿ, ತೊಟ್ಟಮ್, ತೊಟ್ಟಮ್ ಪೋಸ್ಟ್.	25—0—0
24/1782	ಫಕೀರ್ ಸಾಹೇಬ್, ಇಸ್ಮಾಯಿಲ್ ಸಾಹೇಬರ ಮಗ, ಪಡುತೋನ್ಸೆ, ಕೆಮ್ಮಣ್ಣು ಪೋಸ್ಟ್.	11—0—0

Kallianpur
15-6-1951

S. Rebello
Agent

1951ನೇ ಇಸವಿ ಮೇ ತಿಂಗಳಲ್ಲಿ ಜರಗಿದ ಗ್ರಾಮಾಭಿವೃದ್ಧಿ ಕೆಲಸಗಳ ಸಾರಾಂಶ—

ಕುಂಬಳೆ ಫಿರ್ಕಾ—ತಲ್ಲಂಗಾಯದಲ್ಲಿ ಒಂದು ವಯಸ್ಕರ ಶಾಲೆಯು ಸ್ಥಾಪಿಸಲ್ಪಟ್ಟಿರುವುದು. 2 ಎರಡು ಎಕ್ರೆ ಜಾಗೆಯು ಸಮತಟ್ಟು ಮಾಡಲ್ಪಟ್ಟಿತು. 3 ಒಂದು ನೀರಾವರಿ ಕೆರೆಯು ದುರುಸ್ತಿ ಮಾಡಲ್ಪಟ್ಟಿತು. 42 ಕೊರಗರ ಮಕ್ಕಳನ್ನು ಶಾಲೆ ಸೇರಿಸಲಾಯಿತು. ಮಾನ್ಯ ಮಂತ್ರಿ ಶ್ರೀ ಪರಮೇಶ್ವರನವರಿಂದ ಕೊರಗರ 10 ಮಕ್ಕಳಿಗೂ ಬಟ್ಟೆಗಳನ್ನು ಕೊಡಿಸಲಾಯಿತು. 5 ಒಂದು ಫುಟ್‌ಬಾಲ್ ಪಂದ್ಯಾಟವು ಏರ್ಪಡಿಸಲ್ಪಟ್ಟಿತು. 6 ಪ್ರಾಂತೀಯ ಗ್ರಾಮಾಭಿವೃದ್ಧಿ ಸಮಿತಿಯ ಸದಸ್ಯರಾದ ಶ್ರೀ ಜಿ. ರಾಮಚಂದ್ರರಾವ್ ಇವರ ಅಧ್ಯಕ್ಷತೆಯಲ್ಲಿ ನೆಟ್ಟಣಿಗೆಯಲ್ಲಿ ಒಂದು ರಚನಾತ್ಮಕ ಕಾರ್ಯದರ್ಶಿ ಶಿಬಿರವು ಏರ್ಪಡಿಸಲ್ಪಟ್ಟಿತು. ಅದರ ಸಂಪೂರ್ಣ ಖರ್ಚನ್ನು ಗ್ರಾಮಸೇವಾ ಸಂಘದವರೇ ಮಾಡಿದ್ದಾರೆ. 7 ನೆಟ್ಟಣಿಗೆ ಗ್ರಾಮ ಸೇವಾಸಂಘದ ಪ್ರಯತ್ನದಿಂದ, ಆ ಗ್ರಾಮದಲ್ಲಿ ಸರಕಾರಿ ಸ್ಥಳದಲ್ಲಿ ಎರಡು ಹರಿಜನ ವಸತಿಗಳು ಸ್ಥಾಪಿಸಲ್ಪಟ್ಟಿವೆ. ಪ್ರತಿಯೊಂದರ ಮನೆಗಳಿವೆ. 8 3ಜೇನು ಗೂಡುಗಳು ಇಡಲ್ಪಟ್ಟಿವೆ. 9 ಗುಡಿಕೈಗಾರಿಕೆಗಳ ಪ್ರದರ್ಶನವು ಕುಂಬಳೆಯಲ್ಲಿ ಏರ್ಪಡಿಸಲ್ಪಟ್ಟಿತು.

ಮಂಜೇಶ್ವರ ಫಿರ್ಕಾ—1)6ಎಕ್ರೆ ಜಾಗವು ಸಮತಟ್ಟು ಮಾಡಲ್ಪಟ್ಟು ಕೃಷಿಗೆ ಉಪಯೋಗಿಸಲ್ಪಟ್ಟಿದೆ. (2)3ಗೊಬ್ಬರದ ಮತ್ತು 12 ಮಿಶ್ರಗೊಬ್ಬರದ ಹೊಂಡಗಳು ಮಾಡಲ್ಪಟ್ಟಿವೆ. (3)12ಪಾಯಿಖಾನೆಯ ಸ್ಲೇಬುಗಳನ್ನು ಕೊಡಲಾಗಿದೆ

ಮೂಲ್ಕಿ ಫಿರ್ಕಾ—20ಪಾಯಿಖಾನೆಯ ಸ್ಲೇಬುಗಳನ್ನು ಕೊಡಲಾಗಿದೆ. 2 4ಗೊಬ್ಬರದ 10ಮಿಶ್ರಗೊಬ್ಬರದ ಹೊಂಡಗಳು ಮಾಡಲ್ಪಟ್ಟಿವೆ. 3 ಕೃಷಿ ಮತ್ತು ಗುಡಿ ಕೈಗಾರಿಕೆಗಳ ಪ್ರದರ್ಶನವು ಕಿನ್ನಿಗೋಳಿಯಲ್ಲಿ ಏರ್ಪಡಿಸಲ್ಪಟ್ಟಿತು. 4 ಗೋಳಿಜೋರ ಹರಿಜನ ವಸತಿಯು ಸಾರ್ವಜನಿಕ ಕಟ್ಟಡದ ಸ್ಥಾಪನೆಯು ಮಾನ್ಯ ಮಂತ್ರಿ ಶ್ರೀ ಪಿ. ಪರಮೇಶ್ವರನಿಂದ ಮಾಡಲ್ಪಟ್ಟಿತು. 5 ಒಂದು ಮೈಲು ಮಾರ್ಗದ ಕೆಲಸವು ಮುಗಿಯಲ್ಪಟ್ಟಿತು. 6 ಕಿನ್ನಿಗೋಳಿ ಮತ್ತು ಬಪ್ಪನಾಡಿನ ಗ್ರಾಮ ಸೇವಕರು ಮದ್ಯಪಾನ ನಿರೋಧ ಇಲಾಖೆಗೆ ಸಹಾಯಮಾಡಿ ಕಳ್ಳಭಟ್ಟಿಯಲ್ಲಿ ತಯಾರಿಸುವುದನ್ನು ಮಾಡಲಿಕ್ಕೆ ಸಹಾಯ ಮಾಡಿದ್ದಾರೆ.

ಬೈಲೂರು:—ಸ್ಥಳೀಯ ಗಾಂಧಿಸ್ಮಾರಕ ಸಂಘದವರು ಕಟ್ಟಿಸಿದ ನೂತನ ಭವನದ ಪ್ರವೇಶೋತ್ಸವವು ತಾ. 12-6-51ರಲ್ಲಿ ಮದ್ರಾಸಿನ ಡಾ। ಯು. ಎಲ್. ನಾರಾಯಣರಾಯರ ಹಸ್ತದಿಂದ ವೈಕುಂಠ ಬಾಳಿಗ ಬಿ ಎ ಬಿ. ಎಲ್ ಇವರ ಅಧ್ಯಕ್ಷತೆಯಲ್ಲಿ ವಿವಿಧ ಕಾರ್ಯಕ್ರಮಗಳೊಂದಿಗೆ ಬಹು ಯಶಸ್ವಿಯಾಗಿ ಜರಗಿತು. ಶಾಲಾ ಮಕ್ಕಳಿಗೆ ತಿಂಡಿ ಸಭಿಕರಿಗೆ ಲಘುಪಹಾರಗಳೂ ಇದ್ದುವು, ಕೆಲವು ಮಹನೀಯರು ಸಂಘಕ್ಕೆ ಸಹಾಯವನ್ನು ನೀಡಿದರು

ಮುಂಡ್ಕೂರು—ಇದೇ ತಿಂಗಳಲ್ಲಿ ಒಂದುವಾರದ ವಿಪರೀತ ಮಳೆಯಿಂದಾಗಿ ಶಾಂಭಾವತಿ ಹೊಳೆಯಲ್ಲಿ ನೀರು ತುಂಬಿ ವಿಪರೀತ ನೆರೆಬಂದು ಪಳಿಂಜೆ, ಬಳ್ಕುಂಜೆ, ಉಳೆಪಾಡಿ, ಮುಂಡ್ಕೂರು, ಇನ್ನು ಮೊದಲಾದ ಗ್ರಾಮಗಳ ಬಯಲುಗಳಲ್ಲಿ 8ದಿವಸಗಳಲ್ಲಾಗಾಯ್ತು ನೆರೆ ಇಳಿಯದೆ ಕಾರ್ತಿ ಬೆಳೆಗೆ ಬೇಕಾದ ನೇಜಿಯೆಲ್ಲಾ ನೀರಿನ ಅಡಿಯಲ್ಲಿದ್ದು ಇನ್ನು ಯಾವ ಪ್ರಯೋಜನಕ್ಕೂ ಬಾರದಂತಾಗಿದೆ. ಅದ್ದರಿಂದ ಸದ್ರಿ ನೆರೆಗೆ ತುತ್ತಾದ ಗ್ರಾಮಸ್ಥರು ನೆಡುವರೇ ನೇಜಿ ಇಲ್ಲದೆಯೂ, ಬಿತ್ತುವರೇ ಬೀಜವಿಲ್ಲದೆಯೂ, ಕಂಗಾಲಾಗುವ ಪರಿಸ್ಥಿತಿಯಲ್ಲಿದ್ದಾರೆ ಈ ವಿಚಾರದಲ್ಲಿ ಸರಕಾರವು ಪರಿಶೀಲಿಸಿ, ಸಹಾಯ ನೀಡುವುದು ಅಗತ್ಯ ಇದೆ

ಕುಂಬಳೆ—ಜಿಲ್ಲಾ ಕಲೆಕ್ಟರರ ಹುಕುಂ ಪ್ರಕಾರ ಅಸಿಸ್ಟೆಂಟ್ ರೀಲೀಫ್ ಮುಖಾಂತರ ತಾ ೧೦ರ ಉಗ್ರಾಣು ಮೊಗ್ರಾಲ್ ಪುತ್ತೂರಿನವರಿಗೆ ರೇಶನ್ ಹಂಚಲು ಆರಂಭವಾಗಿದೆ.

ಕಾರ್ಕಳ—ತಾ. 10-6-51ರಲ್ಲು ಶ್ರೀ. ಎಂ ಡಿ. ಅಧಿಕಾರಿಗಳ ಅಧ್ಯಕ್ಷತೆಯಲ್ಲಿ ಜರಗಿದ ಕಾರ್ಕಳ ಸರ್ಕಲ್ ಕಾಂಗ್ರೆಸ್ ಕಮಿಟಿ ಸಭೆಯಲ್ಲಿ ಬಡವಾದ ಆಹಾರ ಸ್ಥಂಭದ ನಿರ್ಣಯ... ಕಾರ್ಕಳ ಪೇಟೆಯಲ್ಲಿಯೂ ಗ್ರಾಮಾಂತರಗಳಲ್ಲಿಯೂ ಆಹಾರ ಧಾನ್ಯಗಳ ಅಭಾವವು ತೀವ್ರವಾಗುತ್ತಿದೆಯೆಂಬ ವಿಚಾರ ಈ ಕಮಿಟಿಯ ಸ್ಪಷ್ಟ ಗಮನಕ್ಕೆ ಬಂದಿದೆ. ಪರಿಸ್ಥಿತಿಯನ್ನು ಸುಧಾರಿಸದಿದ್ದರೆ ಮುಂದಿನ ಮೂರು ತಿಂಗಳ ಕಠಿಣ ಕಾಲದಲ್ಲಿ ಬಡ ಜನತೆ ಕಂಗೆಟ್ಟು ಹೋಗುವುದರಲ್ಲಿ ಸಂಶಯವಿಲ್ಲ ಈ ತರದ ದುಃಸ್ಥಿತಿಗೆ ಸರಕಾರದ ಅದೂರದರ್ಶಿತ್ವ ಮತ್ತು ಹಲವು ಭೂಮಾಲಿಕರು ಹಾಗೂ ವ್ಯಾಪಾರಿಗಳು [illegible] ಷ್ಟದಲ್ಲಿ ತಮ್ಮ ಇಷ್ಟ ಸಾಧಿಸುವ ಮನೋವೃತ್ತಿಯೇ ಕಾರಣವೆಂದು ಈ ಕಮಿಟಿಯು ಅಭಿಪ್ರಾಯಪಡುತ್ತದೆ.

ಒಂದಿಷ್ಟೂ ವಿಳಂಬವಿಲ್ಲದೆ ದುರ್ಗ, ಮಿಯ್ಯಾರು, ನಾರಾವಿ, ನಿಟ್ಟೆ, ಬೈಲೂರು, ಕುಕ್ಕುಂದೂರು, ಅಜೆಕಾರು, ಮುನಿಯಾಲು, ಮುದ್ರಾಡಿ, ಹಿರ್ಗಾ ಮತ್ತು ಸೋಮೇಶ್ವರ ಮೊದಲಾದ ಗ್ರಾಮ ಕೇಂದ್ರಗಳಲ್ಲಿ ಸುಲಭ ಬೆಲೆಯ ಪಡಿತರ ಅಂಗಡಿಗಳನ್ನು ತೆರೆಯಬೇಕೆಂದು ಸರಕಾರವನ್ನು ಈ ಕಮಿಟಿಯು ಆಗ್ರಹಪೂರ್ವಕ ಕೇಳಿಕೊಳ್ಳುತ್ತದೆ. ಅಂತೆಯೇ ಕೊಳ್ಳುವ ಶಕ್ತಿಯುಳ್ಳದ ತೀರಾ ಬಡವರಿಗೆ ಪುಕ್ಕಟೆಯಾಗಿ ಹಂಚಲು ಧರ್ಮಾರ್ಥವಾಗಿಯೂ, ಸುಲಭ ಬೆಲೆಯ ಪಡಿತರದಂಗಡಿಗಳಿಗೆ ಒದಗಿಸಲು ನ್ಯಾಯವಾದ ಬೆಲೆಯಲ್ಲಿಯೂ, ತಮ್ಮಲ್ಲಿ ಅತ್ಯಾವಶ್ಯಕತೆಗಿಂತ ಹೆಚ್ಚಿದ್ದ ಅಕ್ಕಿಯನ್ನು ಕೊಟ್ಟು ಸಹಕರಿಸುವಂತೆ ಭೂಮಾಲೀಕರು ಮತ್ತು ರೈತರನ್ನು ಈ ಕಮಿಟಿಯು ವಿನಂತಿಸುತ್ತದೆ,

ಈ ಸಂಬಂಧ ಮುಂದಿನ ಕಾರ್ಯ ಮಾಡಲು ಶ್ರೀಗಳಾದ ಎಂ. ಡಿ. ಅಧಿಕಾರಿ (ಕನ್ವೀನರ್) ಎಂ. ಎಸ್ ಅಧಿಕಾರಿ, ಕೆ. ನರಸಿಂಹ ಪ್ರಭು, ಕೆ ಪಾಂಡುರಂಗ ಪೈ, ...ನ್ ಭುಜಬಲಿ ಅಧಿಕಾರಿ, ಇವರನ್ನೊಳಗೊಂಡ ಒಂದು ಉಪಸಮಿತಿಯನ್ನು ನೇಮಿಸಲಾಯಿತು.

ನಿಟ್ಟೆ—ಸ್ಕೂಲಿನ ನೂತನ ಕಟ್ಟಡದ ಉದ್ಘಾಟನಾ ಸಮಾರಂಭವು ತಾ ೬ರಲ್ಲಿ ಶ್ರೀ. ಡಿ. ಮಂಜಯ್ಯ ಹೆಗ್ಡೆಯವರಿಂದ ನೆರವೇರಿಸಲ್ಪಟ್ಟಿತು. ಶ್ರೀ. ಮೊಳಹಳ್ಳಿ ಶಿವರಾಯರು ಅಧ್ಯಕ್ಷರಾಗಿದ್ದರು. ಶ್ರೀ. ಹೆಗ್ಡೆಯವರು ಅಧ್ಯಕ್ಷರೂ ಕಟ್ಟಡದ ಕಾರ್ಯಕ್ಕೆ ಪ್ರಾರಂಭಿಸಿದ ಸಮಿತಿಯ ಕೆಲಸವನ್ನು ಶ್ಲಾಘಿಸಿ, ಶಾಲೆಗೆ ಶ್ರೇಯಸ್ಸನ್ನು ಕೋರಿ ಭಾಷಣ ಮಾಡಿದರು, ಜನತೆಯು ಇನ್ನೂ ಉದಾರ ಸಹಾಯ ಮಾಡಬೇಕೆಂದರು, ಶ್ರೀ ಡಿ. ಮಂಜಯ್ಯ ಹೆಗ್ಡೆಯವರಿಗೆ ನಿಟ್ಟೆಯ ನಾಗರಿಕರು ಮಾನಪತ್ರವೊಂದನ್ನು ತಾ ೬ರಲ್ಲಿ ಬೋರ್ಡ್ ಹಾ॥ ಎ॥ ಶಾಲೆಯಲ್ಲಿ ಸಮರ್ಪಿಸಿದರು, ಜಿಲ್ಲಾ ವಿದ್ಯಾಧಿಕಾರಿಗಳಾದ ಶ್ರೀ. ಹೊಸಬೆಟ್ಟು ರಾಮರಾಯರು ಅಧ್ಯಕ್ಷರಾಗಿದ್ದರು. ಶ್ರೀ ಹೆಗ್ಡೆಯವರು ನಿಟ್ಟೆಯಲ್ಲಿ ಜನಿಸಿ, ಅಲ್ಲೇ ಬಾಲ್ಯವನ್ನು ಕಳೆದು 1918ರಲ್ಲಿ ಧರ್ಮಸ್ಥಳದಲ್ಲಿ ಧರ್ಮಾಧಿಕಾರಿಗಳಾಗಿ 33 ವರ್ಷಗಳ ಬಳಿಕ ಇಲ್ಲಿಗೆ ಸಂದರ್ಶನವಿತ್ತಿದ್ದಾರೆ ಎಂದಿತ್ಯಾದಿ ಪ್ರಸ್ತಾಪಿಸಲಾಗಿದೆ. ಮಾನಪತ್ರವನ್ನು ಶ್ರೀ ತಿಮ್ಮಣ್ಣ ಭಟ್ಟರು ಓದಿ ಅರ್ಪಿಸಿದರು.

ನೋಟೀಸು

ದ. ಕ. ಜಿಲ್ಲಾ ಸಬೋರ್ಡಿನೇಟ್ ಜಡ್ಜರ ಕೋರ್ಟಿನಲ್ಲಿ

O. S No 320/1950

ಲಕ್ಷ್ಮಿ ಶೆಡ್ತಿ ಕೂಡಾ—ವಾದಿರು.

ಮತ್ತು

ಹಿರಿಯಣ್ಣ ಶೆಟ್ಟಿ ಕೂಡಾ—ಪ್ರತಿವಾದಿರು

24ನೇ ಪ್ರತಿವಾದಿ, ನಾರಾಯಣ ಶೆಟ್ಟಿ 25ನೇ ಪ್ರತಿವಾದಿ, ರಾಮಣ್ಣ ಶೆಟ್ಟಿ, ಸಂಕಮ್ಮ ಶೆಡ್ತಿ ಮಕ್ಕಳು. ಕುಂದಾಪುರ ತಾಲ್ಲೂಕು ಗುಳ್ವಾಡಿ ಗ್ರಾಮದಲ್ಲಿ ವಾಸವಾಗಿರುವವರು,

ವಾದಿರು ಮದ್ರಾಸು ಅಳಿಯ ಸಂತಾನ ಆಕ್ಟು ಮೇರೆಗೆ ಕೈಸೇರಿಸಲ್ಲಿ ಖಾಣ್ಡದ ಆಸ್ತಿಯ ಪಾಲು ವಗೈರೆ ಸಿಪ್ಪತ್ತಿ ಬಗ್ಗೆ ಮೇಲಿನ ವ್ಯಾಜ್ಯವನ್ನು ದಾಖಲ್ಲು ಮಾಡಿರುತ್ತಾರೆ, ಸದ್ರಿ ವ್ಯಾಜ್ಯದಲ್ಲಿ ನಿಮ್ಮ ಆಕ್ಷೇಪಣೆಯೇನಾದರೂ ಇದ್ದ ಪಕ್ಷದಲ್ಲಿ ನೀವು ವಕೀಲು ದ್ವಾರಾ ವಸ್ತತಃ 1951ನೇ ಮಿಸ್ಸು ಜುಲೈ ತಾರೀಕು 9ರಲ್ಲು ಹಗಲು 10½ ಗಂಟೆಗೆ ಈ ಕೋರ್ಟಿನಲ್ಲಿ ಹಾಜರಾಗತಕ್ಕದ್ದು. ತಪ್ಪಿದಲ್ಲಿ ನಿಮ್ಮ ಗೈರು ಹಾಜರಿಯಿಂದ ವ್ಯಾಜ್ಯವನ್ನು ತೀರ್ಮಾನಿಸಲಾಗುವುದು

(ಕೋರ್ಟು ಹುಕುಂ ಪ್ರಕಾರ)

B M Hegde
Advocate for Plaintiffs

ಮಂಗಳೂರು, ತಾ 11—6—1951

Nambiar's

ARYA VAIDYA SALA

UDIPI

Ideal House for Ayurvedic Treatment.

E. N. Kelu Nambiar,
Vaidya

Notice

ಉಡುಪಿ ಡಿ ಮು. ಕೋರ್ಟಿನಲ್ಲಿ

O. S No 90/1951

Shri K. ನಾರಾಯಣ ರಾವ್ (as receiver) } ವಾದಿ

ಮತ್ತು

ವಾಸುದಾಸ, ರಂಗದಾಸನ ಮಗ, ಉಡುಪಿ ತಾಲ್ಲೂಕು ಪಾರಂಪಳ್ಳಿ ಗ್ರಾಮ.

—ಪ್ರತಿವಾದಿ.

ಇವರೊಳಗೆ

ಪ್ರತಿವಾದಿಗೆ ಈ ಮೂಲಕ ತಿಳಿಸಲ್ಪಡುವುದೇನಂದರೆ:—

ಹಂಪಾಡಿಗ್ರಾಮದ ಶೇಷಮ್ಮ ಹೆಗ್ಗಡ್ತಿರ ಕುಟುಂಬದ, ಪ್ಲೇಟನ್ನು ವಿಮ್ಲಿಡ ಸ್ಥಿರಾಸ್ತಿಗಳ ಬಾಬ್ತು, ಕಳೆದ ಸರ್ವಜಿತು ಸಂ। ದ ಗೇಣಿ... ವಿಕೃತಿ ಸಂ। ದ ವರೇಗಿನ ಬಾಬ್ತು ಗೇಣಿಯ ಗೇಣಿಬಾಕಿ, ಬಡ್ಡಿ ವಗೈರೆ ರುಪ್ಯ 545 4-0ನ್ನು ಬರಮಾಡಿಕೊಳ್ಳುವರೇ ವಾದಿಯು ಮಾಡಿದ ದಾವೆಯು ತಾ. 7-7-51 ಕ್ಕೆ ಮೇಲ್ಕಂಡ ಕೋರ್ಟಿನಲ್ಲಿ ತನಿಖೆಗೆ ಇಟ್ಟಿರುತ್ತದೆ ಪ್ರತಿವಾದಿಯು ಉಪಾಹರಣೆ ಇದ್ದರೆ ಆತನು ಸ್ವತಹಾ ಯಾ ವಕೀಲರ ದ್ವಾರಾ ಹಾಜ್ರಾಗಿ ಸದ್ರಿ ತಾ 7-7-1951ನೇ ದಿವಸ ಹಗಲು ಗಂಟೆ 11ಕ್ಕೆ ಮೇಲ್ಕಂಡ ಕೋರ್ಟು ಮುಂದೆ ಹಾಜ್ರಾಗಿ ವ್ಯಾಜ್ಯ ಹೇಳಿಕೊಳ್ಳತಕ್ಕದ್ದು. ತಪ್ಪಿದ್ರೆ ಪ್ರತಿವಾದಿಯನ್ನು ಎಕ್ಸ್‌ಪಾರ್ಟಿ ಮಾಡಿ ಸದ್ರಿ ದಾವಾ ತೀರ್ಮಾನಿಸಲ್ಪಡುವುದು.

K. J. Ballal
Vakil for plaintiff

Camp: UDIPI, 13-6-51

The United Karnatak Insurance Co., Ltd.
DHARWAR.

ದಿ ಯುನೈಟೆಡ್ ಕರ್ನಾಟಕ ಇನ್ಶೂರೆನ್ಸ್ ಕಂಪೆನಿ ಲಿಮಿಟೆಡ್,
ಧಾರವಾಡ.

ನೋಟೀಸು

ಸರ್ವರಿಗೂ ಈ ಮೂಲಕ ತಿಳಿಯಪಡಿಸುವುದೇನೆಂದರೆ ಶ್ರೀಯುತ ಭದ್ರಗಿರಿ ದೇವದಾಸ ಪಡಿಯಾರ ಎಂಬವರು ಈಗ ನಮ್ಮ ಕಂಪೆನಿಯಲ್ಲಿ ಕೆಲಸಕ್ಕಿಲ್ಲದಿರುವದರಿಂದ ಯಾರೂ ನಮ್ಮ ಕಂಪೆನಿಗೆ ಸಲ್ಲತಕ್ಕ ಹಣವನ್ನು ಸದರಿಯವರ ಕೂಡೆ ಕೊಡಕೂಡದು. ಹಾಗೆ ಕೊಟ್ಟಲ್ಲಿ ಆ ಹಣಕ್ಕೆ ಕಂಪೆನಿಯು ಜವಾಬ್ದಾರಿಯಲ್ಲ.

ತಾ. 14-6-1951 }
ಉಡುಪಿ, ದ ಕ }

(Sd) N S Kini
Director-Secretary.

ಉಡುಪಿಗೆ ಹೋಗಬೇಕೇ! ಆದರೆ ಉಳಿದುಕೊಳ್ಳುವುದೆಲ್ಲಿ?

ರಾಯಲ್ ಮಹಾಲಿನಲ್ಲಿ

ಬಸ್ ಸ್ಟೇಂಡಿಗೆ ಅತಿ ಸಮೀಪ! ಕೃಷ್ಣಮಠಕ್ಕೆ ದೂರವಿಲ್ಲ!

ವ್ಯಾಪಾರವ್ಯವಹಾರ ವಿಹಾರಸ್ಥಳಗಳಿಗೆಲ್ಲ ಕೇಂದ್ರ!

ನಿಮ್ಮ ಸ್ನಾನ, ಊಟ, ಉಪಹಾರ, ವಸತಿ, ಶಯನ ಇವೆಲ್ಲಕ್ಕೆ ಉತ್ತಮ ವ್ಯವಸ್ಥೆ ಕರೆದರೆ ಓಗೊಡುವ ನೌಕರರ ವರ್ಗ!

For up-to-date Lodging & Boarding

ROYAL MAHAL,

UDIPI. S. Kanara

ಇಂಗ್ಲೆಂಡಿನ ಸರಕಾರಕ್ಕೂ, ಜನಸಾಮಾನ್ಯರಿಗೂ ಇರುವ ಅನ್ಯೋನ್ಯ ಸಂಬಂಧಗಳ ವಿಚಾರದಲ್ಲಿ ಕೆಲವೊಂದು ಮಾತುಗಳನ್ನು ಹೇಳಬಹುದು. ಇಲ್ಲಿನ ಸರಕಾರದ ನೌಕರರಾದವರು ಜನಗಳಿಗೆಷ್ಟು ಸಹಾಯ ಮಾಡಬಹುದೋ ಅಷ್ಟೂ ಮಾಡುವುದನ್ನು ಕಾಣಬಹುದು. ಒಂದೆರಡು ಉದಾಹರಣೆಗಳನ್ನು ತಿಳಿಸಿದರೆ ಅದು ಹೇಗೆಂದು ನಿಮಗೆ ಕಂಡೀತು. ಲಂಡನಿನ ಒಂದು ಭಾಗದಲ್ಲಿ, ಕಳೆದ ವಾರ ಒಬ್ಬ ಚಿಕ್ಕ ಹುಡುಗ ಊರಿನ ಮೈದಾನದ ಬಳಿ ಆಟವಾಡಲು ಹೋದ. ಆಗ ಕತ್ತಲಾಗಿತ್ತು. ಮೈದಾನದ ಕಾವಲಿನ ನಾಯಿಗಳು ಬಂದು, ಅವನ ಕಿವಿಯನ್ನು ಕಚ್ಚಿ ತುಂಡು ಮಾಡಿದುವು. ಆ ಹುಡುಗನನ್ನು ಅವನ ತಂದೆಯು ವೈದ್ಯರ ಬಳಿಗೆ ಕರೆದುಕೊಂಡು ಹೋದಾಗ, ಆ ಕಿವಿಯ ತುಂಡನ್ನು ಮೂರು ಗಂಟೆಯೊಳಗಾಗಿ ಹುಡುಕಿತಂದರೆ, ಅದನ್ನು ಸಂಪಡಿಸಬಹುದೆಂದರಂತೆ. ಪೋಲೀಸರಿಗೆ ಆ ಸುದ್ದಿಯನ್ನು ತಿಳಿಸುತ್ತಲೇ ಆ ಕತ್ತಲಲ್ಲಿ ಅವರ ಹಿಂಡೊಂದು, ಕಿವಿಯ ಚೂರಿಗಾಗಿ, ಎಲ್ಲೆಲ್ಲೂ ಸರ್ಚ್‌ಲೈಟ್ ಹಿಡಿದು ಹುಡುಕಾಡಿತು. ತುಂಡೇನೋ ಸಿಗಲಿಲ್ಲ. ಆದರೆ ಜನಕ್ಕೆ ಉಪಕಾರ ಮಾಡಬೇಕೆಂಬ ಅವರ ಆತುರ ಎಷ್ಟು!

ನನ್ನ ವಿಚಾರದ ಕತೆಯೊಂದನ್ನೇ ಹೇಳುತ್ತೇನೆ. ನಾನು ಈ ಪ್ರವಾಸಕ್ಕೆ ಹೊರಡುವಾಗ ರೈಲ್ವೆಯವರಿಂದ ಒಂದು ಸರ್ಕ್ಯುಲರ್ ಟಿಕೆಟ್ ಕೊಂಡಿದ್ದೆ. ಈ ಟಿಕೆಟಿನಿಂದ ಲಂಡನ್ ನಗರವನ್ನು ಬಿಟ್ಟು ಸ್ಕಾಟ್‌ಲೆಂಡ್ ನೋಡಿಕೊಂಡು ತಿರುಗಿ ಲಂಡನ್ ನಗರಕ್ಕೆ ಬರುವ ತನಕ ರಿಯಾಯಿತಿ ದರ, ಅನುಕೂಲತೆಗಳಿವೆ. ಆದರೆ ಇಂಥ ದಾರಿಯಿಂದಲೇ ಹೋಗಬೇಕು, ಬರಬೇಕು-ಎಂದಿದೆ. ಈ ರೈಲುಗಳು ಸರಕಾರಕ್ಕೆ ಸೇರಿದುವು. ನಾನು ಲಂಡನಿನಿಂದ ಒಕ್ಸ್‌ಫರ್ಡಿಗೆ ಹೋಗುವಾಗ ಈ ದಾರಿ ದೂರ ಉಳಿಯುತ್ತದೆ. ಆದುದರಿಂದ ಬೇರೆಯೇ ಒಂದು ಟಿಕೆಟ್ ತೆಗೆದುಕೊಂಡೆ. ಒಕ್ಸ್‌ಫರ್ಡಿನಿಂದ ನಾನು ಸರ್ಕ್ಯುಲರ್ ಟಿಕೆಟಿನಲ್ಲಿ ಹೋಗಬಹುದಾದ ದಾರಿಯನ್ನು ಸೇರಬೇಕು. ಮೊದಲು ನನಗೆ ಹಾಗೆ ಪ್ರತ್ಯೇಕ ಟಿಕೆಟು ಬೇಡ ಎಂದಿದ್ದರು. ಇದರಿಂದ ನನಗೆ ತೊಂದರೆಯಾದೀತೆಂದೆಣಿಸಿ, ಲಂಡನ್ ರೈಲ್ವೆ ನೌಕರರು ತಾವಾಗಿಯೇ-ನನ್ನ ಆಕಾರದ ವರ್ಣನೆಗಳನ್ನೆಲ್ಲ ಕೊಟ್ಟು, ತಂತಿಯ ಮೂಲಕ ಒಕ್ಸ್‌ಫರ್ಡಿನ ರೈಲು ನಿಲ್ದಾಣದವರಿಗೆ ತಿಳಿಸಿದ್ದರು. ಒಬ್ಬ ರೈಲ್ವೆ ನೌಕರ ನಾನಿರುವಲ್ಲಿಗೆ ಹುಡುಕಿ ಬಂದು, ನನ್ನ ಗುರುತನ್ನು ಕಂಡು ಹಿಡಿದು, 'ನೀವು ಇಂಥ ದಾರಿಯಿಂದಲೇ ಹೋಗುವುದು ಅನುಕೂಲ ಎಂದು ತಿಳಿಸಿದ್ದಾರೆ' ಎಂದು, ನನಗೆ ಆ ತಂತಿಯನ್ನು ತೋರಿಸಿದ. ಇಂಥ ನಡತೆ ನಮ್ಮಲ್ಲೆಲ್ಲಾದರೂ ಕಾಣಸಿಗಬಹುದೇ? ಇಂಗ್ಲೆಂಡಿನ ಸರಕಾರಿ ನೌಕರರಲ್ಲಿ 'ತಾವು ಜನಗಳ ಸೇವಕರು' ಎಂಬ ಭಾವನೆ ಚೆನ್ನಾಗಿ ಬೇರೂರಿದೆ

ಲಕ್ಷ್ಮೀ
ಸೆಂಟಾಲ್ ಮಾತ್ರೆ

ಇದರ ಉಪಯೋಗದಿಂದ ಬಹುಕಾಲದ ಮೇಹ, ಪ್ರಮೇಹ, ಮೂತ್ರದ ಉರಿ, ಮೂತ್ರ ಕೃಚ್ಛ್ರ, ಮೂತ್ರದೊಡನೆ ಯಾವುದಾಗಿ ಬಿಳುಪು, ಅರಸಿನ, ಕೆಂಪು ಈ ವರ್ಣಗಳಲ್ಲಿ ಕೀವು ಹೋಗುವುದು, ತೊಡೆ ಸಂದಿನಲ್ಲಿ ನೋವು, ಕಾಲ ಗಂಟುಗಳಲ್ಲಿ ವೇದನೆ, ಕಣ್ಣಿನಲ್ಲಿ ಕೀವು ಬರುವುದು, ಶರೀರದಲ್ಲಿ ಉಷ್ಣತೆ, ಸ್ಪರ್ಶೇಂದ್ರಿಯ ಇವೆಲ್ಲಾ ಖಾತ್ರಿಯಾಗಿ ಗುಣಹೊಂದುವುದು

ಡಬ್ಬಿ ಒಂದಕ್ಕೆ ರೂ. 2—0—0

ಏಜಂಟ್—

ಶಾ ಕಂಪೆನಿ, ಮಂಗಳೂರು

ಪ್ರವಾಸಿಯ ಪತ್ರಗಳು ೬

ಕೆಲವನ್ನು ನಾನು ಲಂಡನಿನ ಕೋರ್ಟುಗಳನ್ನು ನೋಡುವುದಕ್ಕೆ ಹೋಗಿದ್ದೆ. ಇಲ್ಲಿ ಕ್ರಿಮಿನಲ್ ದಾವೆಗಳು ನಡೆಯುವ ಸ್ಥಳವು ಪ್ರಸಿದ್ಧವಾದದ್ದು. ಅದನ್ನು 'ಓಲ್ಡ್ ಬೈಲಿ' ಎಂದು ಕರೆಯುತ್ತಾರೆ. ಹಲವು ಜಡ್ಜುಗಳು ಅಲ್ಲಿ ಕೆಲಸ ಮಾಡುತ್ತಾರೆ. ನಾಲ್ಕಾರು ದಿನಗಳ ತನಕ, ನಾನು ಇಲ್ಲಿಯ ಕೋರ್ಟುಗಳು ಹೇಗೆ ನಡೆಯುತ್ತವೆ-ಎಂಬುದನ್ನು ಪರಿಶೀಲಿಸುವುದಕ್ಕಾಗಿ ಹೋಗಿ ಬರುತ್ತಿದ್ದೆ. ಅದೆಲ್ಲವನ್ನು ಕುರಿತು ಇಲ್ಲಿ ಬಣ್ಣಿಸಲಾರೆನಾದರೂ-ಒಂದೆರಡು ವಿಚಾರಗಳನ್ನು ಮಾತ್ರ ಹೇಳುತ್ತೇನೆ. ಯಾವುದೇ ದಾವೆಗೆ ಸಂಬಂಧಪಟ್ಟ ವಾದಿ, ಪ್ರತಿವಾದಿ, ಸಾಕ್ಷಿಗಾರರು, ಪ್ರೇಕ್ಷಕರು-ಇಲ್ಲಿಯೂ ಕೋರ್ಟಿನ ಒಳ ಬಂದು ಸೇರುತ್ತಾರೆ ಆದರೆ ಯಾವೊಂದು ಕಡೆಯಲ್ಲಿಯೂ-ಒಂದಿಷ್ಟು ಗದ್ದಲವೆಂಬುದಿಲ್ಲ. ನಮ್ಮಲ್ಲಿ ಯಾವಾಗಲೂ 'ಗದ್ದಲ ಮಾಡಬೇಡಿ' ಎಂದು ಹೇಳುತ್ತಲೇ ಇರಬೇಕು. ಕೋರ್ಟುಗಳ ಕೆಲಸಗಳು ಬಹು ಚುರುಕಿನಿಂದ ಸಾಗುತ್ತವೆ. ಇಲ್ಲಿನ ನ್ಯಾಯಾಧೀಶರುಗಳು ಹೇಳಿಕೆಗಳ ಸಾರಾಂಶವನ್ನು ತಾವು ಬರೆದುಕೊಳ್ಳುತ್ತಾರೆ. ಗುಮಾಸ್ತರು ಶೋರ್ಟ್‌ಹೇಂಡಿನಲ್ಲಿ ವಿವರವಾಗಿ ಬರೆದುಕೊಳ್ಳುತ್ತಾರೆ. ಅತಿ ಅಗತ್ಯವಾದ ಸವಾಲು ಅಡ್ಡ ಸವಾಲುಗಳನ್ನು ಮಾತ್ರ ಹಾಕುತ್ತಾರೆ. ಕಾಲಹರಣ ಮಾಡುವ ಸವಾಲುಗಳನ್ನು ಹಾಕುವುದೆಂಬುದೇ ಇಲ್ಲ. ನಾನು ಕಂಡಂಥ ಒಂದು ಕ್ರಿಮಿನಲ್ ದಾವೆಯಲ್ಲಿ, ಎಂಟು ಸಾಕ್ಷಿಗಾರರ ತನಿಖೆಯು ಒಂದೇ ದಿನ ನಡೆಯಿತು. ನಮ್ಮಲ್ಲಿ ಮೂರು ದಿನಗಳಾದರೂ ಅಷ್ಟು ಕೆಲಸಕ್ಕೆ ಹಿಡಿಯುತ್ತಿತ್ತು. ಇಲ್ಲಿಯ ಜನರು ಸುಳ್ಳು ಹೇಳುವುದಿಲ್ಲವೆಂದಲ್ಲ ಆದರೆ ನಮ್ಮಲ್ಲಿಯ ಸಾಕ್ಷಿಗಳಂತೆ, ಅನಾವಶ್ಯಕ ಪ್ರಸಂಗಗಳನ್ನೆಲ್ಲ ಸುಳ್ಳು ಹೇಳುವುದಿಲ್ಲ. ಕ್ರಮ ಸಂಬಂಧಗಳಲ್ಲಿ, ವಕೀಲರು ಕೂಡ ಬಹು ಹೊತ್ತು ವಾದಿಸುವುದಿಲ್ಲ. ಇನ್ನೊಂದು ಸಂಗತಿಯೆಂದರೆ, ತನಿಖೆ ಮಾಡುತ್ತಿರುವ ನ್ಯಾಯಾಧೀಶರು ತನಿಖೆಯ ಪ್ರಾರಂಭದಿಂದಲೇ, ಅದಕ್ಕೆ ಸಂಬಂಧಪಟ್ಟ ವ್ಯಕ್ತಿಯಂತೆ, ಪ್ರತಿಯೊಂದು ವಿಷಯವನ್ನೂ ಕೇಳಿ ತಿಳಿದುಕೊಂಡು, ಕೆಲಸ ಮುಂದುವರಿಸುತ್ತಾರೆ. ನಮ್ಮಲ್ಲಿಯಂತೆ, ಎಷ್ಟೋ ಬಾರಿ ತನಿಖೆ ಮುಗಿಯುವ ತನಕ ಕಿವಿಗೊಡದೆ, ಉದಾಸೀನರಾಗಿದ್ದು, ಕೊನೆಗೆ ಒಡದಿಂದ ವಿಷಯಗಳನ್ನು ಓದಿ ಹೇಳುವ ಸ್ಥಿತಿ ಬರುವುದಿಲ್ಲ. ದಾವೆಗಳ ಹಿಯರಿಂಗ್ ಆದೊಡನೆಯೇ ಅವಕ್ಕೆ ತೀರ್ಪನ್ನು ಕೊಡುತ್ತಾರೆ. ತನಿಖೆ ಮುಗಿಯುತ್ತಲೇ ಹಿಯರಿಂಗ್, ಹಿಯರಿಂಗ್ ಮುಗಿಯುತ್ತಲೇನೆ, ಅಲ್ಲೇನೆ ತೀರ್ಪು ಕೊಡುತ್ತಾರೆಯೇ ಹೊರತು ಹಿಯರಿಂಗ್ ಆದ ಎಷ್ಟೋ ದಿನಗಳ ನಂತರ ತೀರ್ಪು ಕೊಡುವ ವಾಡಿಕೆ ಇಲ್ಲ. ಇದರಿಂದ ಕೆಲಸ ತುಂಬಾ ಚುರುಕಿನಿಂದ ಸಾಗುತ್ತಿದೆ.

ಲಂಡನ್ ನಗರ ಪತ್ರಿಕೋದ್ಯೋಗಕ್ಕೆ ಹೆಸರಾದ ಊರು. ಹೆಚ್ಚಿನ ಪತ್ರಿಕೆಗಳು ಬೆಳಿಗ್ಗೆ ಪ್ರಕಟವಾಗತಕ್ಕವು. ಹೆಚ್ಚಿನವು ಟೋರೀ ಪಕ್ಷದವು. ಡೈಲಿ ಎಕ್ಸ್‌ಪ್ರೆಸ್, ಟೈಮ್ಸ್, ಡೈಲಿ ಟೆಲಿಗ್ರಾಫ್ ಮೊದಲಾದ ಪತ್ರಿಕೆಗಳಿಗೆ ಇಂತ ಕ್ಷಂಥ ಗಿರಾಕಿಗಳ ಸಂಖ್ಯೆ ಅಪಾರ. ಅವುಗಳ ಸಾಂಪತ್ತಿಕ ಸ್ಥಿತಿ ಚೆನ್ನಾಗಿದೆ. ಇಲ್ಲಿನ ಲಿಬರಲ್ ಪಕ್ಷದ ಪತ್ರಿಕೆಗಳಲ್ಲಿ 'ಮೆಂಚೆಸ್ಟರ್ ಗಾರ್ಡಿಯನ್' ಮುಖ್ಯವಾದದ್ದು. ಅದರ ಪ್ರತಿಗಳು ಸಿಗುವುದೂ ಕಷ್ಟ. ಶ್ರಮಗಾರರ ಪಕ್ಷದ ಮತ್ತು ಸಮಾಜವಾದಿ ಪಕ್ಷದ ಪತ್ರಿಕೆಗಳೆಂಬುವು ಕಡಿಮೆ. ಇನ್ನು ಹಾಗೆಯೇ—ಆರೆಂಟು ಪೆನ್ಸ್ ಬೆಲೆಯ ವಾರಪತ್ರಿಕೆಗಳು ಎಷ್ಟೋ ಇವೆ. 'ಸಂಡೇ ಟೈಮ್ಸ್' 'ಮೆಂಚೆಸ್ಟರ್ ಗಾರ್ಡಿಯನ್ ವೀಕ್ಲಿ' 'ಟೈಮ್ ಎಂಡ್ ಟೈಡ್' 'ಇಕೊನೊಮಿಸ್ಟ್' 'ನ್ಯೂ ಸ್ಟೇಟ್ಸ್‌ಮೆನ್ ಎಂಡ್ ನೇಶನ್' ಎಂಬ ಹಲವಾರು ಉತ್ತಮ ವರ್ಗದ ವಾರಪತ್ರಿಕೆಗಳಿವೆ. 'ಪಿಕ್ಚರ್ ಪೋಸ್ಟ್,' 'ಇಲಸ್ಟ್ರೇಟೆಡ್'ನಂಥ ಚಿತ್ರರಂಜಕ ವಾರಪತ್ರಿಕೆಗಳಿವೆ ಇದಲ್ಲದೆ ಸ್ತ್ರೀಪುರುಷರ ಸಲುವಾಗಿ, ಆಟ ವಿನೋದಗಳ ಸಲುವಾಗಿ, ಎಷ್ಟೋ ಪತ್ರಿಕೆಗಳಿವೆ ಪತ್ರಿಕೆ ಮಾರಾಟ ಮಾಡುವ ಅಂಗಡಿಗಳೂ ತುಂಬ. ಜನರೆಲ್ಲ ವಿದ್ಯಾವಂತರಾದುದರಿಂದ ದಿನಪತ್ರಿಕೆ ಕೊಂಡು ಓದದವರೇ ಕಡಿಮೆ; ಇಲ್ಲವೇ ಇಲ್ಲವೆನ್ನಬಹುದು. ಸಾಮಾನ್ಯ ಟ್ಯಾಕ್ಸಿವಾಲರು ಕೂಡ ಪತ್ರಿಕೆಗಳನ್ನು ಕೊಂಡು ಓದುವುದನ್ನು ಕಾಣಬಹುದು. ಇವರುಗಳು ಆಟ ವಿನೋದಗಳ ವಿಷಯದಲ್ಲಿಯೂ, ರಾಜಕೀಯದಲ್ಲಿಯೂ ತುಂಬ ಆಸಕ್ತಿ ವಹಿಸುತ್ತಾರೆ. ತಮ್ಮ ಪಕ್ಷ, ಪ್ರವೃತ್ತಿಗಳಿಗೆ ಅನುಸಾರವಾಗಿ ಸರಕಾರದ ಖಂಡನೆ ಮಂಡನೆಗಳನ್ನು ಪತ್ರಿಕೆಗಳಿಗೆ ಬರೆದು ತಿಳಿಸುತ್ತಾರೆ. ಜನಾಭಿಪ್ರಾಯ ಅನ್ನುವುದು ಇಲ್ಲಿನ ಪತ್ರಿಕೆಗಳಲ್ಲಿ ಸ್ಪಷ್ಟವಾಗಿ ಎದ್ದು ಕಾಣುತ್ತದೆ. ಜನಕ್ಕೆ ಏನಾದರೂ ಸೌಕರ್ಯ ದೊರೆಯದೆ ಹೋದಲ್ಲಿ, ಮರುದಿನವೇ, ಅದು ಪತ್ರಿಕೆಗಳಲ್ಲಿ ಬರುತ್ತದೆ. ಕಳೆದ ವಾರ-ಒಂದು ಮಗುವಿನ ಮೈ ಸುಟ್ಟು, ಆ ಮಗುವನ್ನು ಅದರ ತಾಯಿ ಎರಡು ಆಸ್ಪತ್ರೆಗಳಿಗೊಯ್ದರೂ ಅಲ್ಲಿ ಜಾಗ ಸಿಗದೆ, ಮೂರನೆಯ ಕಡೆಗೆ ಹೋಗುವುದರೊಳಗಾಗಿ ಮಗು ತೀರಿತು. ಈ ವಿಚಾರವನ್ನು-ಇಲ್ಲಿ ಹಲವು ಪತ್ರಿಕೆಗಳು ದೊಡ್ಡ ಶಿರೋನಾಮೆಯ ಕೆಳಗೆ ಪ್ರಕಟಿಸಿದುವು. ಅಧಿಕಾರಿಗಳು, ಮುನ್ಸಿಪಾಲಿಟಿಗಳು ಮಾಡಿದ್ದೇ ನ್ಯಾಯ ಎಂದು ಜನರು ತೆಪ್ಪಗೆ ಕುಳಿತಿರುವುದಿಲ್ಲ. ಪತ್ರಿಕೆಗಳ ಮೂಲಕ ತಮ್ಮ ಹಕ್ಕು ಬಾಧ್ಯತೆಗಳಿಗಾಗಿ ಅವರು ಹೋರಾಡುತ್ತಾರೆ.

ಲಂಡನ್ ನಗರದ ಕೆಲವೊಂದು ಪ್ರಮುಖ ಅಂಗಡಿಗಳನ್ನು ಕುರಿತು ಎರಡು ಮಾತುಗಳನ್ನು ಹೇಳಬಹುದು. ಇಲ್ಲಿನ ಕೆಲವು ವರ್ತಕ ಸಂಸ್ಥೆಗಳು, ಉದಾಹರಣೆಗಾಗಿ 'ವೂಲ್‌ವರ್ತ್' 'ಮಾರ್ಕ್ಸ್ ಎಂಡ್ ಸ್ಪೆನ್ಸರ್' ಮೊದಲಾದುವು ಬಹು ದೊಡ್ಡವು. ಇವುಗಳ ಶಾಖೆಗಳು ಅನೇಕ ನಗರಗಳಲ್ಲಿವೆ. ಇವಕ್ಕೆ ಲಂಡನ್ ಒಂದರಲ್ಲೇ ನಾಲ್ವತ್ತು, ಐವತ್ತು ಶಾಖೆಗಳಿವೆ. ಇಂಥ ಅಂಗಡಿಗಳಲ್ಲಿ ನಿಶ್ಚಿತವಾದ ಮತ್ತು ಮಿತವಾದ ಬೆಲೆ ಹೇಳುವುದು ವಾಡಿಕೆ. ಒಕ್ಸ್‌ಫರ್ಡ್ ಬೀದಿಯಲ್ಲಿರುವ 'ಸೆಲ್ಫರಿಜ್' ಎಂಬ ಒಂದು ಅಂಗಡಿಯನ್ನು ಕುರಿತು ಮಾದರಿಗಾಗಿ ಹೇಳುತ್ತೇನೆ. ಇದು ಸುಮಾರು ೧೦೦ ಗಜ ಉದ್ದ, ೫೦ ಗಜ ಅಗಲವಾದ ೫ ಮಾಳಿಗೆಗಳ ಒಂದು ಭಾರಿ ಅಂಗಡಿ. ಇದಕ್ಕೆ ನೆಲದ ಕೆಳಗಡೆಯೂ ಒಂದು ಮಾಳಿಗೆಯಿದೆ. ಈ ನೆಲ ಮಾಳಿಗೆಯಲ್ಲಿ ಸಂಸಾರಗಳಿಗೆ ಬೇಕಾಗುವಂಥ ಹಾಸಿಗೆ, ಪಾತ್ರೆ ಪರಡಿ, ಮೊದಲಾದ ಯಾವತ್ತು ಗೃಹಕೃತ್ಯದ ಸಾಮಾನುಗಳು ಸಿಗುತ್ತವೆ. ಮೊದಲನೆಯ ಅಂತಸ್ತಿನಲ್ಲಿ-ಬಟ್ಟೆಬರೆಗಳಿವೆ. ಮೊದಲನೆಯ ಮಾಳಿಗೆಯನ್ನೇರಿದ್ದಾದರೆ ಸ್ತ್ರೀಯರ ಉಡಿಗೆ ತೊಡಿಗೆಗಳು. ಎರಡನೆಯ ಮಾಳಿಗೆಯಲ್ಲಿ ಸೈಕಲ್ ಮೊದಲಾದ ಸಾಮಾನುಗಳು; ತೀರ ಮೇಲಿನ ಮಹಡಿಯಲ್ಲಿ ಒಂದು ವಿಶ್ರಾಂತಿ ಗೃಹವೂ ಇದೆ. ಒಂದೊಂದು ಅಂತಸ್ತಿನಲ್ಲಿ ೫೦ಕ್ಕೆ ಮಿಕ್ಕ ಕೆಲಸಗಾರರು. ವಸ್ತುಗಳನ್ನು ತೋರಿಸುವುದಕ್ಕೂ ಹಣ ಕೊಳ್ಳುವುದಕ್ಕೂ ಇದ್ದಾರೆ. ನೀವು ಅಲ್ಲೇನೆ ಕೊಂಡ ವಸ್ತುಗಳನ್ನು, ನಿಮ್ಮ ಊರಿಗೆ ಅಥವಾ ವಿದೇಶಕ್ಕೆ, ಕಳುಹಿಸುವುದಾದರೆ, ಅಲ್ಲಿಂದಲೇ ಆ ಏರ್ಪಾಟು ಮಾಡಬಹುದು. ಹಡಗು, ಇನ್ಶೂರೆನ್ಸ್ ಕಂಪೆನಿಯ ಶಾಖೆಗಳೂ ಅಲ್ಲಿವೆ. ಈ ತೆರನಾಗಿ ವಿದೇಶದ ವ್ಯಾಪಾರಕ್ಕೆ ಪ್ರೋತ್ಸಾಹ ಕೊಡುವುದು ಇಲ್ಲಿನ ಸರಕಾರದ ಧೋರಣೆಯಾಗಿದೆ. ನಾನು ಹಾಗೆಂದು, ಕೆಲವೊಂದು ಸಾಮಗ್ರಿಗಳನ್ನು ಕೊಂಡು, ಮುಂಬಯಿಗೆ ಕಳುಹಿಸುವ ಏರ್ಪಾಟು ಮಾಡಿದೆ. ಈ ಅಂಗಡಿಗೆ ದಿನಕ್ಕೆ ಲಕ್ಷಾಂತರ ಜನ ಬರುತ್ತಾರೆ. ಅವರಿಗಾಗಿ ಆರೆಂಟು ವಿದ್ಯುತ್ ಲಿಫ್ಟುಗಳು ಕೆಲಸಮಾಡುತ್ತಿವೆ.

ಈ ದೇಶದಲ್ಲಿ ಸೇಲ್ಸ್ ಟೆಕ್ಸ್ ಅಥವಾ ಅದಕ್ಕೆ ಇಲ್ಲಿನ ಹೆಸರು 'ಪರ್ಚೇಸ್ ಟೇಕ್ಸ್' ತುಂಬಾ ಜಾಸ್ತಿ. ನಮ್ಮಲ್ಲಿ ಅದು ರೂಪಾಯಿಗೆ ಕಾಲಾಣೆಯಿಂದ ಆಣೆಯ ತನಕ ಇದ್ದರೆ, ಇಲ್ಲಿ ನಾಲ್ಕಾಣೆಯಿಂದ ರೂಪಾಯಿ ತನಕವೂ ಇದೆ. ಸೈಕಲುಗಳಿಗೆ ಸೇಕಡಾ $33\frac{1}{3}$ ರಷ್ಟು ತೆರಿಗೆ. ಮೋಟಾರು ಕಾರುಗಳಿಗೆ ಸೇಕಡಾ $66\frac{2}{3}$ ರಷ್ಟು ತೆರಿಗೆ. ಮೋಟಾರು ಬೇಕಾದರೆ ಹೆಸರು ರಿಜಿಸ್ಟರ್ ಮಾಡಿ, ವರ್ಷ ವರ್ಷ ಕಾಯಬೇಕಾಗುತ್ತದೆ. ಊರವರ ಮೇಲೆ ಅಷ್ಟೆಲ್ಲ ತೆರಿಗೆಯಿದ್ದರೆ ವಿದೇಶಕ್ಕೆ ಹೋಗುವ ಮಾಲುಗಳ ಮೇಲೆ ಅ

"ಬೇರೆ ಶಾಸ್ತ್ರಗಳನ್ನೋದಿದರೇನು? ಗೀತೆಯನ್ನು ಚೆನ್ನಾಗಿ ಓದಬೇಕು"—(ವರಾಹ ಪುರಾಣ)

ಗೀತೆಯ ಕೈಗನ್ನಡಿ

(ಭಗವದ್ಗೀತೆಯ ಮೂಲ ಶ್ಲೋಕ ಮತ್ತು ಕನ್ನಡ ಅನುವಾದ)

● ಅನುವಾದಕರು—ದಿ। ಹೊಸಕೆರೆ ಚಿದಂಬರಯ್ಯನವರು ●

ಈ ಗ್ರಂಥದಲ್ಲಿ ಗೀತೆಯ ಮೂಲವೆಲ್ಲ ಇರುವುದಲ್ಲದೆ ಮೂಲದಲ್ಲಿ ಸಹಜವಾಗಿ ಕಾಣಬರುವ ಅರ್ಥಪೂರ್ಣ ಮಾತುಗಾರಿಕೆಯ ಮಾತುಗಳ ರೂಪದಲ್ಲಿಳಿದ ಛಟ್ಟೆಯಾಗಿ ಎದ್ದು ಕಾಣುವುದು.

400ಕ್ಕೂ ಮಿಕ್ಕ ಪುಟಗಳು! ಬೆಲೆ 0—12—0.

ಒಂದು ರೂಪಾಯಿಯನ್ನು ಕಳುಹಿಸಿದರೆ ಒಂದು ಪ್ರತಿಯನ್ನು ಬುಕ್‌ಪೋಸ್ಟಿನಿಂದ ಕಳಿಸಲಾಗುವುದು.

ಪ್ರತಿಗಳು ಸಿಗುವ ಮುಖ್ಯ ಸ್ಥಳ:—

ನವಯುಗ ಪ್ರೆಸ್, ಉಡುಪಿ ದ. ಕನ್ನಡ

ನವಭಾರತ ಪುಸ್ತಕ ಭಂಡಾರ, ಉಡುಪಿ, ಇಲ್ಲಿಯೂ ದೊರೆಯುತ್ತವೆ.

ಮೂಲ್ಕಿ ಬೇಂಕ್,
ಲಿಮಿಟೆಡ್, ಮೂಲ್ಕಿ

1929ರಲ್ಲಿ ಸ್ಥಾಪಿತವಾಗಿ 21 ವರುಷಗಳಿಂದ ಊರ ಜನರ ಹಿತಕ್ಕಾಗಿ ಡಿಪೋಸಿಟ್ ಹಣಕ್ಕೆ ನ್ಯಾಯವಾದ ಬಡ್ಡಿಯಿಂದಲೂ, ಸಾಲದ ಹಣಕ್ಕೆ ಅತೀ ಕಡಿಮೆ ದರದ ಬಡ್ಡಿಯಿಂದಲೂ ಜನ ಹಿತಸಾಧನೆಯನ್ನು ಮಾಡುತ್ತಿರುವುದು

The Moolky Bank Ltd.,
Moolky, S K

ಷ್ಟಿಲ್ಲ ತೆರಿಗೆಯಿದ್ದರೆ ವಿದೇಶಕ್ಕೆ ಹೋಗುವ ಮಾಲುಗಳ ಮೇಲೆ ಅಂಥ ತೆರಿಗೆ ಇಲ್ಲ. ದೇಶದಿಂದ ಹೊರಗೆ ಸಾಮಾನುಗಳನ್ನು ಮಾರುವುದಕ್ಕೆ ಅಲ್ಲಿನ ಸರಕಾರ ಅತಿ ಹೆಚ್ಚಿನ ಪ್ರೋತ್ಸಾಹಕೊಡುತ್ತದೆ. ಹಾಗೆಂದು ನಮ್ಮ ಕೈಗೇನೂ ಆ ಮಾಲನ್ನು ಕೊಡುವುದಿಲ್ಲ ನೆಟ್ಟಗೆ ಅದನ್ನು ಹಡಗಿಗೆ ಕಳುಹಿಸಿಕೊಡುತ್ತಾರೆ. ನಮ್ಮ ದೇಶದಲ್ಲಿ ಒಂದು ಉದ್ಯಮವನ್ನು ಬೆಳೆಯಿಸುವುದಕ್ಕೆ, ಅದನ್ನು ರಫ್ತುಮಾಡುವುದಕ್ಕೆ, ಇರತಕ್ಕಂಥ ಅಡಚಣೆಗಳು ಅಷ್ಟಿಷ್ಟಲ್ಲ. ನಾನು ಬರುವಾಗ, ನನ್ನ ಜತೆಗೆ ಪ್ರಯಾಣ ಮಾಡಿದ ಒಬ್ಬ ಉದ್ಯಮಿ ಮುಂಬಯಿಯವನು ತನ್ನ ಕಷ್ಟ ನಷ್ಟಗಳನ್ನು ಹೇಳುತ್ತಿದ್ದ. ಆತ ಆಸ್ಟ್ರಿಯಾದಲ್ಲಿದ್ದು, ಗ್ಲುಕೋಸ್ ಮೊದಲಾದ ವಸ್ತುಗಳನ್ನು ಮಾಡಲು ಕಲಿತುಕೊಂಡು ಭಾರತಕ್ಕೆ ಬಂದ. ಮುಂಬಯಿಯ ಸನಿಹ ೬ ಲಕ್ಷ ರೂಪಾಯಿ ವ್ಯಯಿಸಿ, ಒಂದು ಕಾರ್ಖಾನೆ ಕಟ್ಟಿಸಿ, ಒಂದು ವರ್ಷದಿಂದ ತಣ್ಣಗೆ ಕುಳಿತಿದ್ದಾನೆ. ಇನ್ನೂ ವಿದ್ಯುಚ್ಛಕ್ತಿ ಅವನಿಗೆ ಸಿಕ್ಕಿಲ್ಲ. ಅವನ ನಂತರ ಹುಟ್ಟಿದ ಸಂಸ್ಥೆಗಳಿಗೆ ಶಕ್ತಿ ಕೊಟ್ಟರೂ, ಅವನಿಗೆ ಶಕ್ತಿ ಕೊಟ್ಟಿಲ್ಲ. ಯಾವ್ಯಾವ ತರದ್ದೋ ಅಡಚಣೆಗಳನ್ನು ಹಂದೊಡ್ಡುತ್ತಿದ್ದಾರೆ. ಅಂತು ಇನ್ನೂ ಶಕ್ತಿ ದೊರೆಯದೆ, ಕೆಲಸವೂ ಇಲ್ಲದೆ, ಒದ್ದಾಡುತ್ತಿದ್ದಾನೆ. ಸಾರ್ವಜನಿಕರಿಂದ ಪಾಲು ಹಣವನ್ನು ಎತ್ತಿ ಒಂದು ಸಂಸ್ಥೆ ಮಾಡಿದರೆ, ಅಂಥವರ ಪಾಲಿಗೆ ನಮ್ಮ ದೇಶದ ಸರಕಾರಿ ನೌಕರರು ಕೊಡತಕ್ಕಂಥ ಕೀಟಲೆ, ಉಪದ್ರಗಳು ಅಷ್ಟಿಷ್ಟಲ್ಲ. ಆದರೆ ಇಂಗ್ಲೆಂಡಿನಲ್ಲಿ ಅಂಥ ಸ್ಥಿತಿಯನ್ನು ನಾವು ಕಾಣಲಾರೆವು. ಹೊಸ ಉದ್ಯಮ ಮಾಡುವವರಿಗೂ, ಕೆಲಸಗಾರರಿಗೂ ಯಾವೆಲ್ಲ ಸೌಕರ್ಯಗಳು ಬೇಕೋ, ಅವನ್ನೆಲ್ಲ ಒದಗಿಸಿ ಕೊಡುವುದು ಸರಕಾರ, ಮುನ್ಸಿಪಾಲಿಟಿ, ಜಿಲ್ಲಾಬೋರ್ಡು ಮೊದಲಾದ ಸಂಸ್ಥೆಗಳು ತಮ್ಮ ಕರ್ತವ್ಯವೆಂದು ತಿಳಿಯುತ್ತವೆ. ಹಾಗಿರುವುದರಿಂದಲೇ ಇಂಗ್ಲೆಂಡಿನ ಜನಜೀವನದ ಸ್ಥಿತಿ ಎಷ್ಟೋ ಸುಖಮಯವಾಗಿದೆ. ಅವರ ವರ್ತನೆಗಳಿಂದ ನಾವು ಕಲಿಯಬಹುದಾದ ಅಂಶಗಳೆಷ್ಟೋ ಇವೆ.

ಈ ಮೊದಲು ದೊಡ್ಡ ಅಂಗಡಿಯೊಂದನ್ನು ಕುರಿತು ಹೇಳಿದೆ. ಅಂಥ ಅಂಗಡಿಗಳಂತೆ ದೊಡ್ಡ ದೊಡ್ಡ ವಿಶ್ರಾಂತಿ ಗೃಹಗಳಿರುತ್ತವೆ. ಈ ವಿಶ್ರಾಂತಿ ಗೃಹಗಳಿಗೂ ಹಲವಾರು ಶಾಖೋಪಶಾಖೆಗಳಿವೆ. ಇಲ್ಲಿನ ಸಾಮಾನ್ಯ ರೆಸ್ಟೋರಾಂಟ್‍ಗಳಲ್ಲಿ ಕಾಫಿ, ಚಾ, ತಿಂಡಿಊಟ ಮೊದಲಾದುವು ಸಿಗುತ್ತವೆ. ತಿಂಡಿ ಉಪಹಾರಗಳಲ್ಲಿಯೂ ಎರಡು ವರ್ಗಗಳಿರುತ್ತವೆ. ಇವುಗಳ ಹೇಳುವ ಬೆಲೆ ಮಿತವಾದದ್ದು. ಇಷ್ಟೆ ವಿಶ್ರಾಂತಿ ಗೃಹ ನಡೆಸುವವರಲ್ಲಿ 'ಲಾಯನ್ಸ್' ಎಂಬ ಒಂದು ಕಂಪೆನಿ ಬಹು ದೊಡ್ಡದಾದದ್ದು. ಇಂಗ್ಲೆಂಡಿನಲ್ಲೆಲ್ಲ ಇದಕ್ಕೆ ೩೦ ಶಾಖೆಗಳಿವೆ. ಲಂಡನ್ ನಗರ ಒಂದರಲ್ಲೇ ಸುಮಾರು ೫೦ ಉಪಶಾಖೆಗಳಿವೆ. ಇಂಥ ಉಪಹಾರ ಗೃಹಗಳಲ್ಲಿ, ನಾವು ನಾವು ಕುಳಿತಲ್ಲಿಗೆ, ಬೇಕಾದ ತಿಂಡಿತಿನಸು ತಂದುಕೊಟ್ಟರೆ ತುಸು ಹೆಚ್ಚಿಗೆ ಬೆಲೆ. ತಂದು ಕೊಡುವವರಿಗೆ ಇನಾಮು ಕೊಡುವುದೂ ಹಿಂದಿನಿಂದಲೂ ಬಂದ ವಾಡಿಕೆ. ಇನಾಮು ಕೊಡದೆ ಇದ್ದವರನ್ನು ಕಂಡು, ಕೆಲಸಗಾರರು ಮುಖ ಗಂಟಿಕ್ಕುವುದಿಲ್ಲ. ಕಾಫಿ, ಉಪಹಾರ ಮುಗಿಸಿಯಾದ ಮೇಲೆ ಮೇಜಿನ ಮೇಲೆ ೬ ಪೆನ್ಸ್ ಅವರಿಗಾಗಿ ಇಟ್ಟುಹೋಗುವುದು ಮರ್ಯಾದೆಯ ಕ್ರಮ. ಅಲ್ಲಿನ ಕೆಲಸಗಾರರು ಅದಕ್ಕೆ ಪ್ರತಿಯಾಗಿ ಧನ್ಯವಾದಗಳನ್ನು ಅರ್ಪಿಸುತ್ತಾರೆ. ಹೀಗೆ ಮಾಡಲು ಸಾಧ್ಯವಿಲ್ಲದವರು' ಸರ್ವಸಾಮಾನ್ಯರು, ಇಂಥ ದೊಡ್ಡ ಉಪಹಾರ ಗೃಹಗಳಿಗೆ ಹೋಗಬೇಕಾಗಿಲ್ಲ. ಬೇರೆ ತೆರನ ಹೋಟೇಲುಗಳಿವೆ. ಅಂಥಲ್ಲಿ ಕೆಲಸಗಾರರಿಲ್ಲ. ಅಂಗಡಿಯವರಿಗೆ ಅವರ ಸಂಬಳದ ಉಳಿತಾಯವಾಗುತ್ತದೆ. ಅವರ ಬದಲು ಉಪಾಹಾರಕ್ಕೆ ಹೋಗುವ ನಾವು ಸಾಲಾಗಿ ನಿಲ್ಲಬೇಕು. ಮುಂದುವರಿಯುತ್ತ, ಕ್ರಮವಾಗಿ ದೊಡ್ಡದೊಂದು ಪ್ಲೇಟನ್ನು ತೆಗೆದುಕೊಳ್ಳಬೇಕು. ಮತ್ತೂ ಮುಂದೆ ಸರಿದು ಚೂರಿ, ಚಮಚ, ಮೊದಲಾದುವನ್ನು ತೆಗೆದುಕೊಳ್ಳಬೇಕು. ಹಾಗೆ ಹಾಗೆ ಮುಂದುವರಿಯುತ್ತ ಹೋಗಿ, ಒಂದು ಉದ್ದವಾದ ಮೇಜಿನ ಮೇಲೆ ಸಾಲಾಗಿ ಇರಿಸಿದ ತಿಂಡಿಗಳಲ್ಲಿ ನಮಗೆ ಬೇಕಾದುವನ್ನು ತೆಗೆದುಕೊಂಡು, ಮುಂದಕ್ಕೆ ಹೋಗುತ್ತಲೇ ಇರಬೇಕು. ನಮ್ಮ ಹಿಂದೆಯೂ ಮುಂದೆಯೂ ಜನಗಳಿರುವುದರಿಂದ—ಏನು ಕೊಳ್ಳಲಿ, ಬೇಕೊ ಬೇಡವೋ—ಎಂದು ದೀರ್ಘವಾಗಿ ಯೋಚಿಸುವುದಕ್ಕೆ ಅವಕಾಶವಿಲ್ಲ. ನಮ್ಮ ತೀರ ಮುಂದಕ್ಕೆ ಒಬ್ಬಳು ಕೇಶಿಯರ್ ಕುಳಿತಿರುತ್ತಾಳೆ. ನಮ್ಮ ಪ್ಲೇಟನ್ನು ನೋಡುತ್ತಲೇ, ಇಂತಿಷ್ಟು ಬೆಲೆಯೆಂದು ಆಕೆ ಹೇಳುತ್ತಾಳೆ. ಹಣಕೊಟ್ಟು ಅಲ್ಲಿಂದ ಒಂದು ಕೊಟಡಿಯಲ್ಲಿರುವ ನೂರಾರು ಮೇಜುಗಳ ಮುಂದೆ ಕುಳಿತು ತಿಂದರಾಯಿತು. ಊಟ ತಿಂಡಿಗಳ ವಿಚಾರದಲ್ಲಿ ಯಾರೂ ಇಲ್ಲಿ ಅವಸರಮಾಡುವುದಿಲ್ಲ. ಮಧ್ಯಾಹ್ನ ಅರ್ಧ ತಾಸನ್ನಾದರೂ, ರಾತ್ರಿ ಒಂದು ತಾಸನ್ನಾದರೂ ಕುಳಿತು ಊಟ, ಉಪಹಾರ ಮಾಡುತ್ತ, ಮಾತಾಡುತ್ತ ಸಮಯವನ್ನು ಕಳೆಯುತ್ತಾರೆ. ಒಬ್ಬಂಟಿಗರಾಗಿ ಹೋದವರು ಪತ್ರಿಕೆ ಓದುತ್ತ ಕುಳಿತಿರುವುದೂ ಉಂಟು. ಹಿಂದೆ 'ಕ್ಯೂ' ನಿಂತ ಜನ ನಿಂತೇ ಇರಬೇಕಾದೀತು. ಆದರೂ ಉಪಹಾರಕ್ಕೆ ಕುಳಿತವರು ಅವಸರ ಮಾಡುವುದಿಲ್ಲ. ಇದೊಂದು ಇಲ್ಲಿಯ ವಿಶೇಷ. '[illegible] ಹೊತ್ತು ತೆಗೆಯುತ್ತಿದ್ದೀರಿ, ನಮ್ಮ ವ್ಯಾಪಾರ ನಷ್ಟವಾಗುತ್ತಿದೆ' ಎಂದು ಅಂಗಡಿಯವರು ಚಡಪಡಿಸುವುದಿಲ್ಲ. ಮಧ್ಯಾಹ್ನದ ಊಟಕ್ಕೆ ಯಾರೊಬ್ಬರೂ ಮನೆಗೆ ಹೋಗುವುದಿಲ್ಲ. ಯಾವತ್ತು ಜನರೂ ತಮ್ಮ ಕೆಲಸದ ಮನೆಯನ್ನು ಬಿಟ್ಟು, ಸಮೀಪದ ಇಂಥ ಉಪಹಾರಗೃಹಗಳಿಗೆ ಬಂದು ಊಟ ಮಾಡುವುದರಿಂದ, ಈ ರೀತಿಯ [illegible] ಅವರಿಗೆ ಬೇಕಾಗುತ್ತದೆ.

ಮಾಂಸಾಹಾರಿಗಳಲ್ಲದವರು ಈ ದೇಶದಲ್ಲಿ ಜೀವಿಸಲು ಸಾಧ್ಯವೇ ಎಂದು ನಮ್ಮ ಜನಗಳಿಗೆ ಅನಿಸಬಹುದು. ಇದು ತೀರ ಸಾಧ್ಯ. ಮತ್ತು ಇಲ್ಲಿ ದೊರೆಯುವ ಆಹಾರದಿಂದಲೇ ನಾನು ಈ ಒಂದೂವರೆ ತಿಂಗಳು ಚೆನ್ನಾದ ಆರೋಗ್ಯವನ್ನುಳಿಸಿ ಕೊಂಡಿದ್ದೇನೆ. ಇಲ್ಲಿ ದೊರೆಯುವ ಆಹಾರ ವಸ್ತುಗಳು ಚೆನ್ನಾದವು; ಸತ್ವಪೂರಿತವಾದುವು. ಸಾಮಾನ್ಯವಾಗಿ ಇಲ್ಲಿ ಗೋಧಿ, ಇಲ್ಲಿನ ಜೋಳದಿಂದ ತೆಳ್ಳಗಿನ ಗಂಜಿ ಮಾಡುತ್ತಾರೆ. ಇದಕ್ಕೆ ಬೇಕಷ್ಟು ಹಾಲನ್ನು, ಟೊಮೆಟೊ, ಮೊದಲಾದ ತರಕಾರಿಗಳನ್ನೂ ಸೇರಿಸಿಕೊಂಡು ತಿನ್ನಬಹುದು. ವಿವಿಧ ತರಕಾರಿಗಳು, ಹಣ್ಣು ಹಂಪಲುಗಳು, ಬ್ರೆಡ್, ಟೋಸ್ಟ್, ಜೇಮ್ ಮೊದಲಾದವು, ಗಿಣ್ಣು, ಹಾಲು, ಕಾಫಿ ಮೊದಲಾದ ವಸ್ತುಗಳು ದೊರೆಯುವಾಗ, ಆಹಾರಕ್ಕೆ ಯಾವ ಕೊರತೆಯೂ ಕಾಣಿಸುವುದಿಲ್ಲ. ಇಲ್ಲಿಯ ಜನರು ಹೆಚ್ಚಾಗಿ, ತರಕಾರಿಯನ್ನು ಸಪ್ಪೆಯಾಗಿ ಬೇಯಿಸಿಡುತ್ತಾರೆ. ಉಪ್ಪು, ಖಾರ, ಮೆಣಸಿನ ಪುಡಿಯನ್ನು ನಾವು ನಮ್ಮ ರುಚಿಗೆ ಸಮನಾಗಿ ಸೇರಿಸಿ ತಿನ್ನುವುದು ಇಲ್ಲಿನ ಕ್ರಮ.

ಲಂಡನಿನಲ್ಲಿ ನೋಡಿದ ಹೆಸರಾದ ಚಿತ್ರಶಾಲೆಗಳಿಗೆ ನಾನು ಹೋಗಿ ಬಂದೆ. ಟೇಟ್ ಗೇಲರಿ, ನೇಶನಲ್ ಆರ್ಟ್ ಗೇಲರಿ ಮತ್ತು ವಾಲೆಸ್ ಗೇಲರಿ ಎಂಬ ಈ ಮೂರು ಚಿತ್ರಶಾಲೆಗಳು ಅರ್ವಾಚೀನ ಮತ್ತು ಪ್ರಾಚೀನ ಚಿತ್ರಗಳಿಗೆ ಹೆಸರಾದುವು. [illegible] ಸಾವಿರ ವರ್ಷಗಳ ಹಿಂದಿನ ಚಿತ್ರಗಳನ್ನೂ ಕಾಣಬಹುದು. ಬೆಲ್ಜಿಯಮ್, ಫ್ರಾನ್ಸ್, ಇಟಲಿ, ಹೊಲೆಂಡ್, ಬ್ರಿಟನ್ ಮೊದಲಾದ ದೇಶಗಳ ಅನೇಕ ಪ್ರಾಚೀನ ಮತ್ತು ನವೀನ ಶೈಲಿಯ ಕಲಾಕೃತಿಗಳನ್ನು, ದಿನ ನಿತ್ಯ ಸಾವಿರಾರು ಜನರು ಬಂದು, ಧ್ಯಾನಪೂರ್ವವಾಗಿ ನೋಡಿ ಸಂತೋಷಪಡುತ್ತಾರೆ. ಬ್ರಿಟಿಶ್ ಮ್ಯೂಜಿಯಂ ಇಲ್ಲಿನ ಮತ್ತೊಂದು ಪ್ರಸಿದ್ಧವಾದ ಪ್ರೇಕ್ಷಣೀಯ ಸಂಸ್ಥೆ. ಇಲ್ಲಿ ಪ್ರಾಚೀನ ಶಿಲ್ಪಿಗಳ ಮಾದರಿಗಳನ್ನೂ ಕಾಣಬಹುದು. ಇದಲ್ಲದೆ ಹಿರಿಯರೂ ಪ್ರವೇಶ ಕೊಟ್ಟರೆ ನೋಡತಕ್ಕ ಇನ್ನೊಂದು ಶಿಲ್ಪಮಂದಿರವಿದೆ. [illegible] ಯು ಮೇರಿ [illegible] ಎಂಬ ೩೦೦ ವರ್ಷಗಳ ಹಿಂದೆ [illegible] ರಾಣಿ [illegible] ಬೇರೆ [illegible] ಆಕೆ ಸೆರೆಮನೆಯಲ್ಲಿ ಸಮಯ ಕಳೆಯುವುದಕ್ಕೆ [illegible] ಜರಿಗಳ [illegible] ಗಳನ್ನು ನಿರ್ಮಾಣ ಮಾಡಲು ಅಭ್ಯಾಸಮಾಡಿದಳು. ಆಕೆ ಅನಂತರ ಇಂಗ್ಲೆಂಡಿಗೆ ಒಂದು [illegible] ಅಲ್ಲಿ ಅರಗಿನ ಗೊಂಬೆಗಳನ್ನು ಮಾಡಲು ತೊಡಗಿದಳು. 'ತುಸಾಡ್' ಮಂದಿರವು. ಆಕೆ ಮಾಡಿದ ಮಯಣದ ಗೊಂಬೆಗಳ ಜತೆಗೆ, ಹಾಲಿ ಕಾಲ ಕಾಲದಲ್ಲಿ ಮಾಡಿದ ಗೊಂಬೆಗಳನ್ನು ಸೇರಿಸಿ, ಒಂದು ಪ್ರದರ್ಶನಾಲಯವನ್ನು ನಡೆಸುತ್ತ ಬಂದಿದ್ದಾರೆ. ಈ ಸ್ಥಳ, ವಿದೇಶದ ಪ್ರವಾಸಿಗೆ ಒಂದು ಆಕರ್ಷಕ ಕ್ಷೇತ್ರ. ಈ ಎರಡು ಶತಮಾನಗಳಲ್ಲಿ ಅನೇಕ ಪ್ರಸಿದ್ಧ ಪುರುಷರ ಆಕೃತಿಗಳನ್ನು ಮಾಡಿ ಸೇರಿಸಿದ್ದಾರೆ. ಈಗಿನವರ ಪ್ರತಿಮೆಗಳನ್ನು ಸೇರಿಸುತ್ತಲೇ ಇದ್ದಾರೆ. ಲಕ್ಷಾಂತರ ಜನ ಇದನ್ನು ಬಂದು ನೋಡುತ್ತಾರೆ, ಮಯಣದಿಂದ ಮನುಷ್ಯರ ಆಕೃತಿಗಳನ್ನು ಮಾಡಿ, ಅವರ ನಿತ್ಯ ಜೀವನದ ಉಡುಗೆಗಳನ್ನು ತೊಡಿಸಿ, ಜೀವಂತ ವ್ಯಕ್ತಿಗಳ ಹಾಗೆ ಇಲ್ಲಿ ನಿಲ್ಲಿಸಿರುತ್ತಾರೆ. ಇಂಗ್ಲೆಂಡಿನ ಹಿಂದಿನ, ಇಂದಿನ, ಅರಸರು, ಅರಸಿಯರು, ಪ್ರಮುಖ ವ್ಯಕ್ತಿಗಳು, ಪ್ರಸಿದ್ಧ ಸ್ತ್ರೀಪುರುಷರ ಪ್ರತಿಮೆಗಳು ಇವೆ. ನಮ್ಮ ದೇಶದ ಮಹಾತ್ಮಾ ಗಾಂಧಿ ಮತ್ತು ಜವಾಹರಲಾಲರ ಗೊಂಬೆಗಳು ಇವೆ. [illegible] ಮಾತ್ರ ಅಷ್ಟೊಂದು ಸಹಜವಾಗಿ ಕಾಣುತ್ತಲಿಲ್ಲ. ಈ ಪ್ರದರ್ಶನಾಲಯದ ನೆಲಮಾಳಿಗೆಯಲ್ಲಿ ಪ್ರಾಚೀನಕಾಲದ ಜನಗಳು ಬಳಸುತ್ತಿದ್ದಂಥ ನಾನಾ ಬಗೆಯ [illegible] ಶಿಕ್ಷೆಯ ಸಾಧನಗಳನ್ನು ಪ್ರದರ್ಶಿಸಿದ್ದಾರೆ.

ಇಲ್ಲಿಗೆ ಬಂದಮೇಲೆ, ಈ ನಗರದ ಮೃಗಾಲಯವನ್ನು ನೋಡಹೋದೆ. ನಮ್ಮ ಮೈಸೂರಿನ ಮೃಗಾಲಯದಲ್ಲಿರುವುದಕ್ಕಿಂತ ಇಲ್ಲಿ ಹೆಚ್ಚಿನ ಪ್ರಾಣಿಗಳಿವೆಯಾದರೂ, ಸ್ಥಳ ಮೊದಲಾದ ಸೌಕರ್ಯಗಳ ದೃಷ್ಟಿಯಿಂದ, ಮೈಸೂರಿನ ಮೃಗಾಲಯವೇ ಉತ್ತಮವೆಂದು ಹೇಳಬಹುದು. ಇಲ್ಲಿಗೆ ಬರುವ ಜನಗಳಿಗೆ ನಮ್ಮ ದೇಶದ ಆನೆಯೆಂದರೆ ತುಂಬಾ ಪ್ರೀತಿ. ಮಕ್ಕಳು ಅದಕ್ಕೆ ಯಾವಾಗಲೂ ತಿಂಡಿಕೊಡುತ್ತಾರೆ. ನಮ್ಮ ದೇಶದ ಕಪ್ಪು ಆನೆ ಕೂಡ, ಈ ಶೀತ ಹವೆಯಲ್ಲಿ ಬಿಳಿದಾಗಿ ಕಾಣಿಸುವಾಗ, ಜನರು ಬಿಳಿಯರಾಗಿ ಕಾಣಿಸುವುದು ಆಶ್ಚರ್ಯ'

ಮಾದರಿಗಾಗಿ ನೋಡಹೋದೆನೆಂದು ಇಲ್ಲಿನ ನಾಟಕ ಶಾಲೆಯೊಂದಕ್ಕೆ ಹೋಗಿದ್ದೆ. 'ಅಲ್ಲಿ [illegible]' ಎಂದು ಅದರ ಹೆಸರು. ಇದಕ್ಕೆ ಸಾಮಾನ್ಯವಾಗಿ ಪ್ರವೇಶ ದರ [illegible] ಗಳಿಂದ ೧೦ ರೂಪಾಯಿಗಳ ತನಕ. ಮೂರು ನಾಲ್ಕು ಮಂದಿ ಕುಳಿತಿರುವ [illegible] ಕ್ಕೆ ಒಂದು [illegible] ದಿನ ತನಕ [illegible] ತ್ತವೆ. ನಾನು ಹೋಗಿ ನೋಡಿದ ನಾಟಕದ [illegible] ದಿಂದ ಇಂಗ್ಲೆಂಡಿಗೆ ಬಂದ [illegible] ವಿಚಾರವನ್ನು [illegible] ತ್ತದೆ. [illegible] "[illegible]" [illegible] ನಾಟಕ [illegible] ನೋಡಿ [illegible] ತಿಳಿಸಬೇಕಾಗುತ್ತದೆ.

ನನ್ನ [illegible] ಪತ್ರದಲ್ಲಿ ಇತರ [illegible] ಗಳ [illegible] ಬರೆಯುತ್ತೇನೆ.

([illegible] , [illegible] ಎಲ್. ಕಾರಂತ.

ಅಮೃತಾಂಜನ

ತಲೆನೋವು, ಶಿರೋವೇದನೆ, ಉಳುಕು ಕುತ್ತಿಗೆ, ಭುಜ ಹಲ್ಲು ವೇದನೆಗಳಿಗೂ, ಎದೆ ನೋವು, ಗಾಯಗಳು, ಜಾತುಕೊಳ್ಳುವುದು, ಚೇಳುವಿಷಮುಂತಾದವು, ಪಕ್ಷವಾತ, ಮೊಡಿವೆ. ನೊದಲಾದ ಎಲ್ಲಾ ರೋಗಗಳಿಗೂ ಸಿದ್ಧೌಷಧ

REGD

ಹುಳು ಕಡ್ಡಿ ಮದ್ದು ನಮ್ಮಲ್ಲಿ ಸಿಕ್ಕುತ್ತದೆ

ಅಮೃತಾಂಜನ ಲಿಮಿಟೆಡ್

ಮದರಾಸು.

ಬೊಂಬಾಯಿ ಮತ್ತು ಕಲ್ಕತ್ತ.

ಗೊನೋರಿಯಾ ಪರಮಾರೋಗ ಉಷ್ಣ ರೋಗಕ್ಕೆ ಔಷಧ

೭ ದಿವಸಗಳಲ್ಲಿ ಈ ರೋಗ ಗುಣ ಹೊಂದುವದು ಗ್ಯಾರಂಟಿ

ಶರೀರದಿಂದ ಕೀವು ಬರುತ್ತಿದ್ದರೆ, ಧೋತರಕ್ಕೆ ಹಳದಿ ಡಾಗು ಹತ್ತುತ್ತಿದ್ದರೆ, ಶರೀರದಿಂದ ಬಾವು ಶರೀರದ ತೊಗಲು ಹಿಂದಕ್ಕೆ ಸರಿಯದಿದ್ದರೆ, ಶರೀರದ ಸುತ್ತು ಗಾಯವಾಗಿದ್ದರೆ,.... ಚಟ್ಟೆ ಬಿದ್ದಿದ್ದರೆ, ಉಷ್ಣದಿಂದ ಜೇರು ಇಳಿದಿದ್ದರೆ, ಉದುಬು ಆಗಿದ್ದರೆ, ಮೂಲವ್ಯಾಧಿ, ಭಗೇಂದ್ರ, ಗಂಡುಮಾಲಿ, ಕೈಕಾಲು ಕೂಲಿ, ಅರ್ಧಾಂಗ ವಾಯು ನಡುನೋಯುವದು ಸ್ತ್ರೀಯರ ಬಿಳಿಕೆಂಪು ಸೆರಗು ಹೋಗುತ್ತಿದ್ದರೆ, ಹೊಲಿಕಾಟು ಗರ್ಭದಿಂದ ಗರ್ಭಕೋಶ ನಾಶಹೊಂದಿದ್ದರೆ, ಸರಿಯಾಗಿ ಭೇದಿ ಯಾಗದಿದ್ದರೆ, ಮೂತ್ರ ಉರಿಯುತ್ತಿದ್ದರೆ, ಈ ಎಲ್ಲಾ ಬೇನೆಗಳಿಗೆ ಈ ನಮ್ಮ ಔಷಧವು ಇರುತ್ತದು. ಮೊದಲ ದಿವಸ ಬೆಳಗ್ಗೆ ೧ ಗುಂಜಿ ಪ್ರಮಾಣ ಔಷದ ಅರ್ಧತೊಲೆ ತುಪ್ಪದಲ್ಲಿ ತಕ್ಕೊಳ್ಳಬೇಕು ಮೊದಲ ದಿವಸ ಮಾತ್ರ ಮಧ್ಯಾನೆ ಸಂಜೆ ಎರಡು ಸಾರೆ ತಕ್ಕೊಳ್ಳಬೇಕು. ಮುಂದೆ ದರ ದಿವಸ ಬೆಳಗ್ಗೆ ಒಂದೇ ಸಾರೆ ೭ ದಿವಸ ಸೇವಿಸಬೇಕು- ಈ ಔಷಧವನ್ನ ಬೇಸಿಗೆಯಲ್ಲಿ ತುಪ್ಪದಲ್ಲಿ, ಥಂಡಿ ಮಳೆ ಗಾಲದಲ್ಲಿ ಜೇನತುಪ್ಪದಲ್ಲಿ ತಕ್ಕೊಳ್ಳಬೇಕು. ಪಥ್ಯ: ಹುಳಿಖಾರ, ಕೆಂಬಳಕಾಯಿ, ಒಳ್ಳೆಣ್ಣೆ ಬಿಡಬೇಕು.

ಬಾಟ್ಲಿ ೧ಕ್ಕೆ ೫ರೂ. ಪೋಸ್ಟ ಚಾರ್ಜ ೮ ಆಣೆ

ಏಜೆಂಟರು:—ಗದಗ:—ಗದಗ ಫಾರ್ಮಸಿ, ಹುಬ್ಬಳ್ಳಿ:—ಹುಬ್ಬಳ್ಳಿ ಫಾರ್ಮಸಿ ಬಾಗಲಕೋಟೆ:-ಬಾಗಲಕೋಟೆ ಫಾರ್ಮಸಿ, ಧಾರವಾಡ:-ಧಾರವಾಡ ಫಾರ್ಮಸಿ, ದಾವಣಗೇರಿ: ದಾವಣಗೇರಿ ಪ್ರೆಸ್. ನಂಜುಡೇಶ್ವರ ಮೋರ್ ದಾವಣಗೇರಿ.

ಪತ್ರವ್ಯವಹಾರ ಮಾಡತಕ್ಕ ಮಾಲಕರ ವಿಳಾಸ,

ರೇವಣಸಿದ್ದಪ್ಪ ಹಾಲಪ್ಪ ದಾವಣಗೇರಿ,

ಆಯುರ್ವೇದ ಔಷಧಾಲಯ, ಗದಗ.

…ನೀವ ರವು ಬ

ಮೇಷ— ಉತ್ತಮವಿರುವದು. ಯತ್ನಕ್ಕಿಂತ ಅಧಿಕವಾದ ಫಲವು ಲಭಿಸುವದು. ಪ್ರಯತ್ನ ಸಾಧ್ಯವಾದ ಕಾರ್ಯಗಳು ನಿಮ್ಮ ಭಾಗಕ್ಕೆ ತೃಣಪ್ರಾಯವೇ ಸರಿ. ಶ್ರಮಜೀವಿಗಳಿಗೂ ವ್ಯಾಪಾರ ವರ್ಗದವರಿಗೂ ಕಾಲವು ಅತೀವ ಅನುಕೂಲವಿದೆ. ರಾಜಕೀಯ ಕ್ಷೇತ್ರದಲ್ಲಿ ವಿಜಯವು ಕಟ್ಟಿಟ್ಟ ಗಂಟಿನಂತಿರುವದು. ದುಡಿಮೆಯ ಬಹ್ವಂಶವನ್ನು ಸದ್ವಿನಿಯೋಗ ಮಾಡುವಿರಿ. ವಾರಾಂತ್ಯದ 2 ದಿನಗಳಲ್ಲಿ ಕೊಂಚ ದೇಹಾಲಸ್ಯ ವ್ಯರ್ಥ ಖರ್ಚುಗಳೂ ಕಾಣಿಸಬಹುದು

ವಾರದ ಭವಿಷ್ಯ

ತಾರೀಕು 21-6-51 ರಿಂದ — ತಾರೀಖು 27-6-51 ರವರೆಗೆ

ವೃಷಭ— ಕಳೆದ ದಿನಗಳಿಗಿಂತ ಈ ವಾರವು ಹಿತಕರವೆನಿಸುವದು. ಪ್ರಯತ್ನಕ್ಕೆ ತಕ್ಕುದಾದ ಫಲವನ್ನು ಹೊಂದುವಿರಿ. ಸಮಾಜದಲ್ಲಿ ಸ್ಥಾನಮಾನಗಳು ಲೆಸ್ಸಾಗಿ ಲಭಿಸುವವು. ಗೃಹಪರಿವಾರದಲ್ಲಿ ಕೊಂಚ ನ್ಯೂನತೆಗಳು ಕಾಣಿಸಬಹುದು. ಆದರೂ ಆರ್ಥಿಕ ಭಾಗವು ಉತ್ತಮವಿರುವುದರಿಂದ ದಿನಯಾಪನೆಯು ಸುಗಮವಾಗಿ ಆಗುವದು. ಪಿತ್ತೋದ್ರೇಕ ದೋಷದಿಂದ ಆರೋಗ್ಯಕ್ಕೆ ಹಾನಿಯಿದೆ. ವಾರಾದಿಯ 3 ದಿನಗಳು ಒಳ್ಳೆಯವಿಲ್ಲ.

ಮಿಥುನ— ದೈವ ಬಲಹೀನರಾದ ನಿಮಗೆ ಈ ವಾರವು ಅನಿಷ್ಟಕಾರಿಯಾಗಿ ಕಾಣಿಸಬಹುದು. ದೇಹಾರೋಗ್ಯವು ಕೆಡುವುದು ಮಾತ್ರವಲ್ಲ, ಆಕಸ್ಮಿಕ ಪ್ರವಾಸಗಳಿಂದಾಗಿ ಕಷ್ಟನಷ್ಟಗಳು ಹೆಚ್ಚುವವು. ನಿಮ್ಮ ಬಯಕೆಗಳೆಲ್ಲವೂ ಬಹ್ವಂಶ ಗಗನ ಕುಸುಮದಂತಾಗುವವು. ವಿರೋಧಿಗಳ ಪೀಡೆಯಿಂದಾಗಿ ಧನಭಾಗಕ್ಕೆ ಹಾನಿತಟ್ಟಲಿದೆ. ಮನೋದೌರ್ಬಲ್ಯದಿಂದಾಗಿ ನಷ್ಟಕಷ್ಟಗಳಿಗೆ ಗುರಿಯಾದೀರಿ. ವಾರಾಂತ್ಯದ 2 ದಿನಗಳು ಅಷ್ಟೊಂದು ಹಾನಿಕಾರಿಗಳಲ್ಲ.

ಕರ್ಕಟ— ಅನೇಕ ಕಾಲದಿಂದ ಅದೃಷ್ಟದ ಪರಾಕಾಷ್ಠವನ್ನೇರಿದ್ದ ನಿಮಗೆ ಈ ವಾರದಲ್ಲಿ ಒಮ್ಮೆಲೇ ಆಘಾತವಾದಂತಾಗಬಹುದು. ವ್ಯಯಸ್ಥಾನಕ್ಕೆ ಗ್ರಹತ್ರಯದ ಪ್ರವೇಶಿಸುವುದರಿಂದ ಇಲ್ಲಸಲ್ಲದ ಖರ್ಚುಗಳು ಪ್ರಾಪ್ತವಾಗುವವು, ಮಾತ್ರವಲ್ಲ ಸ್ತ್ರೀಯರ ಕೋಪಕ್ಕೆ ಗುರಿಯಾದೀರಿ. ಪಿತ್ತದೋಷದಿಂದಾಗಿ ನಿದ್ರಾಭಾವ ದುಃಸ್ವಪ್ನಾದಿಗಳು ಸಂಭವಿಸುವವು. ಶತ್ರು ಜನರು ಕಾರ್ಯಸಾಧಿಸಲು ಹೊಂಚುಹಾಕುತ್ತಿರುವರು. ವಾರಾಂತ್ಯದ 4 ದಿನಗಳು ಪ್ರತಿಕೂಲಗಳಾಗಿವೆ

ಸಿಂಹ— ಕಾಲವೇನೋ ಉತ್ತಮ ಸ್ಥಿತಿಗೆ ಬಂದಿದೆ. ಇಂದಿನ ಪರಿಸ್ಥಿತಿಯಲ್ಲಿ ಹಲವಾರು ತೆರದಿಂದ ಧನವು ನಿಮ್ಮ ಕೈಸೇರುವದು ಮಾತ್ರವಲ್ಲ ಹಿಂದಿನ ಸಾಲಶೂಲಾದಿಗಳಿಂದ ಮುಕ್ತರಾಗುವಿರಿ. ಹಿಡಿದ ನಿಮ್ಮ ಕಾರ್ಯಗಳು ಏನೊಂದೂ ವಿಘ್ನಾತಂಕಗಳಿಲ್ಲದೆ ನೆರವೇರುವವು. ಕೋರ್ಟುಕಛೇರಿಗಳ ಕಾರ್ಯಗಳಲ್ಲಿ ನಿಮ್ಮ ಕೈಯೇ ಮೇಲಾಗಲಿದೆ. ಗೃಹತಾಪತ್ರಯದಿಂದ ಮುಕ್ತರಾದ ನಿಮಗೆ ವಾರಾದಿಯ 5 ದಿನಗಳು ಸಕಲಾಭೀಷ್ಟ ಸಿದ್ಧಿದಾಯಕಗಳಾಗಿವೆ.

ಕನ್ಯಾ— ನಿಮ್ಮ ಅದೃಷ್ಟವು ಇಂದೀಗ ಶುಕ್ಲಪಕ್ಷದ ಚಂದ್ರನಂತೆ ವೃದ್ಧಿಗೊಳ್ಳುತ್ತಾ ಬರುತ್ತಲಿದೆ. ಯಾವ ಕಾರ್ಯಕ್ಕೆ ಕೈಯಿಕ್ಕಿದರೂ ಅಲ್ಪಾಯಾಸದಿಂದ ಕೊನೆಗಾಣುವದು. ಆರ್ಥಿಕ ಭಾಗವು ವೃದ್ಧಿ ಹೊಂದಲಿದೆ. ಜನತೆಯ ಸಹಕಾರ ಸನ್ಮಾನಗಳು ವಿಪುಲವಾಗಿ ಲಭಿಸುವವು. ಆದರೂ ಆಪ್ತೀಯರ ವಿರಹ ವೇದನೆಯು ನಿಮ್ಮನ್ನು ಸದಾ ಬಾಧಿಸಲಿದೆ. ವಾರಾಂತ್ಯದ 4 ದಿನಗಳಲ್ಲಿ ಧನಲಾಭ ಸುಖಯಾನವಸನಾದಿಗಳೂ ಲಭಿಸುವವು.

ತುಲಾ— ಇಂದೀಗ ದುರ್ದೈವವು ನಿಮ್ಮನ್ನು ಬಲವಾಗಿ ಕಾಡುತ್ತಿರುವುದು. ಸಕಲ ಗ್ರಹರೂ ನಿಮ್ಮ ಭಾಗಕ್ಕೆ ವಿಮುಖರಾಗಿರುವುದರಿಂದ ನಿಮ್ಮ ಪ್ರಯತ್ನಗಳೆಲ್ಲವೂ ನೀರಿನಲ್ಲಿ ಮಾಡಿದ ಹೋಮದಂತೆ ವ್ಯರ್ಥವಾಗುವವು. ಆಪ್ತೇಷ್ಟರು, ಗುರುಹಿರಿಯರು, ಬಂಧುವರ್ಗದವರು ಇವರೆಲ್ಲರಿಂದಲೂ ತ್ಯಕ್ತರಾದ ನಿಮಗೆ ವಾರಾದಿಯ 5 ದಿನಗಳಲ್ಲಿ ಭಯ ಕಲಹ ಪರಸ್ಪರ ಮನಸ್ತಾಪ, ಕಾರ್ಯನಾಶ, ಪ್ರವಾಸಾದ್ಯನಿಷ್ಟಗಳ ಯೋಗವಿದೆ

ವೃಶ್ಚಿಕ— ಶುಭದಿನಗಳು ಸನ್ನಿಹಿತವಾಗಿರುವವು. ನಿಮ್ಮ ಯಾವತ್ತೂ ಗೃಹತಾಪತ್ರಯಗಳು ನಾಶವಾಗಿ ಆಶಾಕಾಂಕ್ಷೆಗಳು ನಿರ್ವಿಘ್ನದಿಂದ ನೆರವೇರುವವು. ನಿಮ್ಮ ಪ್ರಯತ್ನಕ್ಕಿಂತ ಅಧಿಕವಾದ ಫಲವು ಅನಾಯಾಸದಿಂದ ಲಭಿಸುವದು ಮಾತ್ರವಲ್ಲ ಪ್ರಬಲರಾದ ಶತ್ರುಗಳೂ ಕೂಡ ಸದ್ಯಕ್ಕೆ ನಿಮ್ಮ ಕರ್ಮ ಕುಶಲತೆ ಕಾರ್ಯದಕ್ಷತೆ ಇತ್ಯಾದಿಗಳನ್ನು ಕಂಡು ದೂರದೂರ ಸರಿವರು. ವಾರಾದಿಯ 3 ದಿನಗಳು ಸರ್ವೋತ್ಕೃಷ್ಟಗಳಾಗಿವೆ.

ಧನು— ಒಮ್ಮೆಗೇ ನಿಮ್ಮ ಮೇಲೆ ಬಿದ್ದ ಆಘಾತವಾದಂತಾಯಿತು. ಕೆಲವು ದಿನಗಳಿಂದ ನೀವು ಕಟ್ಟಿಕೊಂಡಿದ್ದ ಆಶಾ ಗೋಪುರಗಳಿಗೆ ಸಾಕಷ್ಟು ಬಲದೊರಕಿತ್ತಾದರೂ ಈಗ ಒಮ್ಮಿಂದೊಮ್ಮೆಗೇ ಅದು ಕುಸಿದುಬೀಳುವ ಪರಿಸ್ಥಿತಿಯೊದಗಿದೆ. ಬಂಧುಗಳು ಗೃಹದಾಯಕರು, ಕುಟುಂಬಿಕರು, ಆಪ್ತೇಷ್ಟರು ಇವರೆಲ್ಲರೂ ಸದ್ಯ ನಿಮ್ಮನ್ನು ಅವಗಣಿಸುವ ಯಾ ಮೇಲೆತ್ತುವ ಪರಿಸ್ಥಿತಿಯಲ್ಲಿಲ್ಲ. ಆದಕಾರಣ ಬಹಳ ಜಾಗರೂಕತೆಯಿಂದ ಮುನ್ನಡೆಯಿರಿ. ತಾ. 24, 25 ಹೆಚ್ಚಿನ ಕಠಿಣಗಳಾಗಿಲ್ಲ

ಮಕರ— ಕನಸು ನನಸಾಗುವ ದಿನಗಳು ಬಂದಿವೆ. ಸದುದ್ಯೋಗದಲ್ಲಿ ಒಳ್ಳೆಯ ಫಲಲಾಭವನ್ನು ಪಡೆವಿರಿ. ಸಾರ್ವಜನಿಕ ರಾಜಕೀಯ ಕ್ಷೇತ್ರಗಳಲ್ಲಿ ನಿಮ್ಮ ಬಯಕೆಯಂತೆಯೇ ಫಲಪ್ರಾಪ್ತಿಯಿದೆ. ಇಂದಿನ ನಿಮ್ಮ ಕಾರ್ಯದಕ್ಷತೆಯನ್ನು ಕಂಡು ಶತ್ರುಜನರೂ ನಿಮ್ಮ ವ್ಯಕ್ತಿತ್ವವನ್ನು ಯಾಚಿಸಲು ಮುಂದಾಗುವರು. ಸ್ಥಾನಚಲನೆಯ ಯೋಗವಿದೆ. ವ್ಯಾಪಾರದಲ್ಲಿ ಆಕಸ್ಮಿಕ ನಷ್ಟವೊದಗೀತು. ತಾ 24, 25 ಒಳ್ಳೆಯದಲ್ಲ.

ಕುಂಭ— ದಿನಕಳೆದಂತೆ ಪರಿಸ್ಥಿತಿಯು ಕೆಡುತ್ತಿದೆ. ಸಾಂಸಾರಿಕ ತಾಪತ್ರಯಗಳು ಹೆಚ್ಚುವವು. ದೇಹಾಲಸ್ಯ ಆರ್ಥಿಕ ಬಿಕ್ಕಟ್ಟು ಆತ್ಮೀಯರ ವಿರಹ ಇತ್ಯಾದಿಗಳಿಂದ ಸದಾ ಚಿಂತೆಗೆ ಗುರಿಯಾದೀರಿ. ಅನಿರೀಕ್ಷಿತ ಪರ್ಯಟನವು ಪ್ರಾಪ್ತವಾಗಿ ತನ್ನಿಮಿತ್ತ ಕಷ್ಟನಷ್ಟಾದಿಗಳೂ ಪ್ರಾಪ್ತವಾಗುವ ಸಂಭವವಿದೆ. ಶತ್ರುಜನರ ಪೀಡೆಯಂತೂ ದಿನದಿಂದ ದಿನಕ್ಕೆ ಹೆಚ್ಚುವದು. ಅಂತೂ ಮರ್ಯಾದೆಯಿಂದ ದಿನಗಳೆಯಲು ಕಷ್ಟವಾದೀತು. ತಾ. 21, 22, 23, 26 27 ಈ ದಿನಗಳಲ್ಲಿ ಹಣದ ತಗಾದೆ ಅನಾರೋಗ್ಯಗಳು ಕಾಣಿಸುವವು.

ಮೀನ— ಸದ್ಯದ ಗ್ರಹಸ್ಥಿತಿಯು ನಿಮಗಷ್ಟೊಂದು ಅನುಕೂಲವಲ್ಲದಿದ್ದರೂ ತೆಗೆದುಹಾಕುವಂತಿಲ್ಲ. ಸಂಪದ್ಭಾಗದಲ್ಲಿ ಪ್ರಗತಿಯಿಲ್ಲವು. ಶ್ರಮಕ್ಕೆ ತಕ್ಕ ಫಲ ಫಲಕ್ಕೆ ತಕ್ಕ ವ್ಯಯಗಳು ಕೂಡ ಇರುವವು. ಆದರೆ ಜನತೆಯ ಕಪಟಬಲೆಗೆ ಸಿಲುಕಿದಷ್ಟು ಕಷ್ಟಗಳಿಗೆ ಬಲಿಯಾಗುವ ಸಂಭವವಿದೆ. ಆದ್ದರಿಂದ ತಾ 24, 25ರಲ್ಲಿ ಬಹಳ ಜಾಗರೂಕತೆಯಿಂದ ವರ್ತಿಸತಕ್ಕದ್ದು.

ವಿವಿಧ ಪಾತ್ರೆಗಳು

ಯಾವತ್ತೂ ವಿಧದ ಬೆಳ್ಳಿ, ತಾಮ್ರ, ಹಿತ್ತಾಳೆ, ಕಂಚು ಮೊದಲಾದುವುಗಳ ವಿವಿಧ ಪಾತ್ರೆಗಳೂ ಸಾಮಾನುಗಳೂ ರಖಂ ಆಗಿಯೂ ಚಿಲ್ಲರೆಯಾಗಿಯೂ ದೊರೆಯುತ್ತವೆ.

ಕಲ್ಯಾಣಿ ವ್ಯಾಸಾಚಾರ್ಯ,
ರಥಬೀದಿ, ಉಡುಪಿ

— ಮಕ್ಕಳನ್ನು ಹಡೆಯುವುದು ಸಾಕು —

ಅಶಕ್ತ ಸ್ತ್ರೀಯರಿಗೆ **ಬರ್ಥ ಕಂಟ್ರೋಲ** ರೋಗ ಗ್ರಸ್ತ ಹೆಣ್ಣು ಮಕ್ಕಳಿಗೆ

ಏಳು ದಿವಸ ಈ ಮಾತ್ರೆಗಳನ್ನು ಸೇವನ ಮಾಡಿದರೆ ಮುಂದೆ ಖಂಡಿತವಾಗಿ ಮಕ್ಕಳಾಗುವದಿಲ್ಲ. ಸ್ತ್ರೀಯರು ಪ್ರತಿತಿಂಗಳು ಸರಿಯಾಗಿ ಮುಟ್ಟಾಗುತ್ತಾರೆ. ಅಲ್ಲದೆ ಸ್ತ್ರೀಯರ ಬಿಳಿಸೆರಗು, ಪ್ರದರರೋಗ, ಹೊಟ್ಟೆಶೂಲೆ ಗುಣವಾಗಿ ಸ್ತ್ರೀಯು ಗರ್ಭಿಣಿಯಾಗುವದಿಲ್ಲ. ಈ ಔಷಧವನ್ನು ಸೇವಿಸುವ ಕ್ರಮ: ಪ್ರತಿದಿವಸ ಮುಂಜಾನೆ ಗುಳಿಗೆ ಮಧ್ಯಾಹ್ನಕ್ಕೆ ಗುಳಿಗೆ, ಸಂಜೆಗೆ ಗುಳಿಗೆಯಂತೆ ಊಟದ ಮೊದಲು ತಕೊಳ್ಳಬೇಕು. ಏಳುದಿವಸ ಈ ಔಷಧವನ್ನು ಬಿಸಿನೀರಿನಲ್ಲಿ ಸೇವಿಸಬೇಕು.

ಪಥ್ಯ:— ಹರವೀಪಲ್ಲೆ ಬಿಡಬೇಕು. 7 ದಿವಸ ಸಂಪೂರ್ಣ ಔಷಧದ ಕಿಮ್ಮತ್ತು ರೂಪಾಯಿ 5—0—0. ಪೋಸ್ಟ ಚಾರ್ಜು ೧೨ ಆಣೆ.

ಮಾಲಕರು:— ಬಾಲಪ್ಪಾ ಫಕೀರಪ್ಪಾ ದಾವಣಗೇರಿ

ಆಯುರ್ವೇದ ಔಷಧಾಲಯ ಗದಗ-ಸಿಟಿ.

ಏಜಂಟರು:— ಹುಬ್ಬಳ್ಳಿ ಧಾರವಾಡ,— ಹುಬ್ಬಳ್ಳಿ, ಗದಗ, ಬಾಗಲಕೋಟೆ ಧಾರವಾಡ ವಿಜಾಪುರ— ಬಸಪ್ಪ ಸಿದ್ಧಲಿಂಗಪ್ಪ ಧಾರವಾಡಕರ ವಿಜಾಪುರ ಸಂಗಮೇಶ್ವರ ಮೆಡಿಕಲ್ ದಾವಣಗೇರಿ
ದಾವಣಗೇರಿ:— ದಾವಣಗೇರಿ ಪ್ರೆಸ್ ಆರ್ ಎಲ್ ಕಮಲಬಾಯಿ, ಕೆಮಿಸ್ಟ, ಹಾವೇರಿ, ಬ್ಯಾಡಗಿ

ಅವಶ್ಯವುಳ್ಳ ಎಲ್ಲಾ ಮಾಹಿತಿಯನ್ನೊಳಗೊಂಡ ಉತ್ತಮತರದ

ಮಗ್ಗಿ ಪುಸ್ತಕಗಳು

ಚಿಲ್ಲರೆಯಾಗಿಯೂ ರಖಂ ಆಗಿಯೂ ದೊರೆಯುತ್ತವೆ.

ಬೆಲೆ: 0—1—0

ವ್ಯಾಪಾರಿಗಳಿಗೆ ಧಾರಾಳ ಕಮಿಷನ್ ಇದೆ

ನವಯುಗ ಪ್ರೆಸ್, ಉಡುಪಿ

"ಗೋಪಾಲ ಭೇಷಜಾಶ್ರಮ" ಮಂಗಳೂರು.

(ಸ್ಥಾಪನೆ 1910)

ಸ್ಥಾಪಕರು:- ಆಯುರ್ವೇದ ಭೂಷಣ ಯಂ ವಿ. ಶಾಸ್ತ್ರೀ,

ಬಾಣಂತಿಯರ ಸಲುವಾಗಿಯೇ ದೇಶ ಮತ್ತು ಪ್ರಕೃತದ ದೇಹಸ್ಥಿತಿಯನ್ನು ನಿರ್ಣೈಸಿ ತಯಾರಿಸಲ್ಪಟ್ಟ ಅಮೋಘವಾದ ಮಧುರದ್ರವ ರಸಾಯನ. ಅಲ್ಪ ಮೌಲ್ಯದಿಂದ ಬಡವರಿಗೂ, ಭಾಗ್ಯಶಾಲಿಗಳಿಗೂ ಸುಲಭವಾಗಿರುವುದು.

ಇವರ **ನವಜೀವಾತು** ಎಂಬ **ಸೂತಿಕಾ ರಸಾಯನ**

ಹೆಚ್ಚಿನ ಮಾಹಿತಿಗೆ— ಡಾ। ಯಂ ಸಿ. ಶಾಸ್ತ್ರೀ, ಯಲ್. ಐ
ಕೊಡಿಯಾಲಬೈಲ ಪೋಸ್ಟು, (ಮಂಗಳೂರು)
ಚಿಕಿತ್ಸರು:— ಡಾ। ವಿ. ಕೆ. ಶಿವರಾಮರಾವ್, ಕುಂಜಿಬೆಟ್ಟು, ಉಡುಪಿ.

ಆದರ್ಶ ರೀತಿಯಲ್ಲಿ ಪ್ರಕಟಿಸಲ್ಪಟ್ಟ ಅಖಿಲ ಕರ್ನಾಟಕದ ಪ್ರಾತಿನಿಧಿಕ ಕಥಾಸಂಕಲನವೆಂದು ಪ್ರಶಂಸಿಸಲ್ಪಟ್ಟ

ಮಧುವನ

ಕತೆಗಳೊಂದಿಗೆ ಕತೆಗಾರರ ಮತ್ತು ಕತೆಗಾರ್ತಿಯರ ಪರಿಚಯ ಪಡೆಯಬಲ್ಲಗಳಿವೆ

ಅಂತರಂಗ, ಬಹಿರಂಗ ಸುಂದರವಾಗಿ ಪ್ರಕಟಿಸಲ್ಪಟ್ಟ
25 ಕತೆಗಳ ಅತ್ಯಪೂರ್ವ ಸಂಗ್ರಹ

ಬಿಳಿ-ದಪ್ಪ ಕಾಗದ! 230 ಪುಟಗಳು! ಬೆಲೆ ರೂ 3-0-0

ವಿಳಾಸ: ಕಿರಿಯರ ಪ್ರಪಂಚ, ಉಡುಪಿ.

ವಿಕ್ರಯಾಧಿಕಾರಿಗಳು: ನವಭಾರತ ಪುಸ್ತಕ ಭಂಡಾರ, ಉಡುಪಿ.

EDITED, PRINTED & PUBLISHED BY K. H. SHETTY AT THE NAVAYUGA PRESS, UDIPI, S. INDIA

Regd No M. 3818

LICENCE No. 31
Licensed to Post without Prepayment

Estd 1921 ಸ್ಥಾಪನೆ

28-6-1951

Founder Sri A B Shetty,
Minister for Agriculture & Veterinary

ಅಂತರಂಗ
ಪುಸ್ತಕ ಪತ್ರಿಕೆ
ಚಂದಾಪಟ್ಟಿವಿವರ
ವರ್ಷಕ್ಕೆ ರೂ 4-8-0
6 ತಿಂಗಳಿಗೆ ರೂ 2-8-0
(ಮುಂಗಡ)
ಜಾಹೀರಾತಿಗೆ ಉತ್ತಮ ಸಾಧನ
ಅಂತರಂಗ ಉಡುಪಿ

ನವಯುಗ
ಚಂದಾ ವಿವರ
(ಮುಂಗಡ)
ವರ್ಷಕ್ಕೆ ರೂ 5-12-0
6 ತಿಂಗಳಿಗೆ ,, 3-0-0
ಬಿಡಿಪ್ರತಿ ,, 0-2-0
6 ತಿಂಗಳಿಗಿಂತ ಕಡಿಮೆ
ಚಂದಾ ಸ್ವೀಕರಿಸುವುದಿಲ್ಲ
ನವಯುಗ ಉಡುಪಿ

ವರ್ಷ ೩೧ | NAVAYUGA WEEKLY | Post Box No. 22 | UDIPI. | Vol 31
ವಾರ ೪೨ | | | | No 42

ಮಹಾತ್ಮಾ ಗಾಂಧಿ ಮೆಮೋರಿಯಲ್ ಕಾಲೇಜ್

ಸಗ್ರಿಯಲ್ಲಿ ಕಟ್ಟಲ್ಪಡುತ್ತಿರುವ ಹೊಸ ಕಾಲೇಜು ಕಟ್ಟಡ ಪ್ರವೇಶದ ಧಾರ್ಮಿಕ ಸಮಾರಂಭ

ತಾ 27-6-51ನೇ ಸಾಯಂಕಾಲ 4-30ಕ್ಕೆ ಜರಗಲಿರುವುದು

ಸಂಜೆ 4-15ಕ್ಕೆ ಶ್ರೀಕೃಷ್ಣ ದೇವಸ್ಥಾನದಲ್ಲಿ ಪ್ರಾರ್ಥನೆ
,, 4-30ಕ್ಕೆ ಕಾಲೇಜ್ ಕಟ್ಟಡಕ್ಕೆ ಸ್ವಾಮಿಗಳ ಆಗಮನ
,, 5ಕ್ಕೆ ಸ್ವಾಮಿ ಯವರಿಂದ ಆಶೀರ್ವಚನ
,, 5-30ಕ್ಕೆ ಸಭಿಕರ ಬಿನ್ನಹ
,, 6-15ಕ್ಕೆ ಧನ್ಯವಾದ.
,, 6-21ಕ್ಕೆ ಪ್ರಸಾದ ವಿತರಣೆ

ಉದ್ಯೋಗಪ್ರಿಯರು!

ಡಾ। ಮಾಧವ ಪೈ ಮತ್ತು ಕೆ ರಮಾನಾಥ ಪೈಗಳವರು ಸಿಮೆಂಟುಹೊರುತ್ತಿರುವುದು

"ವಿದ್ಯಾರ್ಥಿಯ ಮನೋಮಟ್ಟವನ್ನು ಏರಿಸುವ ಕಲ್ಲು"
ಪ್ರಿನ್ಸಿಪಾಲ್ ಎಚ್ ಸುಂದರರಾವ್ ಎಂ ಎ

ಉದ್ಯೋಗಪ್ರಿಯರು

"ಕೆಲಸ ಕಷ್ಟವಾದರೂ ದೇಹಕ್ಕೆ [illegible]"
ಪ್ರಿನ್ಸಿಪಾಲರೂ ಶ್ರೀ ಟಿ ಎ. ಪೈಗಳವರೂ

"ಜನತೆಯನ್ನು ಸೇರುತ್ತಿರುವವಾದರೂ ಮನಸ್ಸು ಮೂರ್ತಿಯಲ್ಲೇ ಮಗ್ನವಾಗಿದೆ"
ವಿದ್ಯಾಮಂತ್ರಿ ಮಾನ್ಯ ಮಾಧವ ಮೆನನ್ನರ
(ತಾ 21 [illegible] 51ರಲ್ಲಿ)
ಕಾಲೇಜ್ ದಿನಾಚರಣೆಯ ಅಧ್ಯಕ್ಷ ಭಾಷಣ

ಉದ್ಯೋಗ ಪ್ರಿಯರು

"ಏಕಛತ್ರಾಧಿಪತಿ [illegible] ಅವರ ರಾಜ್ಯದಲ್ಲಿ"
ಪುತ್ತಿಗೆ ಮಠದ ಶ್ರೀ ಶ್ರೀ ಪಾದಂಗಳವರು.

"[illegible] ಸಾಧನ [illegible] ಕಲ್ಪವೃಕ್ಷ"
ಡಾ। ಬಿ ವಿ ಬಾಳಿಗರ (ತಾ 27-6-49ರಲ್ಲಿ)
ಕಾಲೇಜು ಉದ್ಘಾಟನಾ ಭಾಷಣ

"[illegible] ಕಾಲೇಜಿಗೆ [illegible]"
ಡಾ। ಮಾಧವ ಪೈಗಳವರು

"[illegible]"
ಡಾ। ಕೆ ಎಲ್ ಕಾರಂತರು
([illegible])

ಹಳ್ಳಿಗರಲ್ಲಿ ಸಹಕಾರ

ಬರೆದವರು: ಶ್ರೀ ಗುರುರಾಜ ಉಡುಪ ಬಿ. ಎಸ್. ಸಿ.

'ಸಹಕಾರ ತತ್ವ'ದ ಕುರಿತು ಹೇಳುವಾಗಲೆಲ್ಲ ಡೆನ್ಮಾರ್ಕ್ ದೇಶದ ಉದಾಹರಣೆಯನ್ನು ಕೊಡುವುದು ಒಂದು ರೂಢಿಯಾಗಿ ಹೋಗಿದೆ. ನಿಜಕ್ಕೂ ರೈತ ವರ್ಗಗಳಲ್ಲಿ ಈ ತತ್ವವನ್ನು ಸಾಮೂಹಿಕವಾಗಿ ತಮ್ಮ ದೈನಂದಿನ ಜೀವನದಲ್ಲಿ ಉಪಯೋಗಿಸುತ್ತ ಅವರು ವಿಚಿತ್ರವಾದ ಪ್ರಗತಿಯನ್ನು ಸಾಧಿಸಿಬಿಟ್ಟಿದ್ದಾರೆ. ಬೆಳೆಯನ್ನು ಬೆಳೆಸುವಲ್ಲಿ, ಧನಗಳನ್ನು ಸಾಕುವಲ್ಲಿ, ಕೈಗಾರಿಕೆಯಲ್ಲಿ, ಉದ್ಯಮಗಳಲ್ಲಿ ವಿವಿಧ ತೆರನಾದ ಸಹಕಾರ ಸಂಘಗಳನ್ನು ಸ್ಥಾಪಿಸಿ ವಿಶ್ವಕ್ಕೇ ಒಂದು ಹಿರಿಯ ಆದರ್ಶವನ್ನು ಎತ್ತಿ ತೋರಿಸಿದ್ದಾರೆ. ಅನುಕರಣೀಯರಾಗಿದ್ದಾರೆ. ಅವರ ಉದಾಹರಣೆಯನ್ನೇ ಈಗೀಗ ಯುರೋಪಿನ ಇತರ ರಾಷ್ಟ್ರಗಳೂ ಅನುಸರಿಸುವ ಯತ್ನದಲ್ಲಿದ್ದಾರೆ.

ಇರಲಿ ಇದು ಆ ದೇಶದ ಮಾತಾಯಿತು. ನಮ್ಮ ನಾಡು ಪುರಾತನ ಕಾಲದಿಂದಲೂ ಸಂಪತ್ಸಮೃದ್ಧಿಯಿಂದ ತುಂಬಿ ತುಳುಕುವ ದೇಶವಾಗಿತ್ತು. ಹಳ್ಳಿಯೇ ಪ್ರಧಾನವಾಗಿರುವ ನಮ್ಮಲ್ಲಿನ ಪೂರ್ವಕಾಲದ ಏಳಿಗೆ, ಪ್ರಗತಿಗಳಿಗೆ ನಮ್ಮ ಹಳ್ಳಿಗರೂ ತಮ್ಮ ದೈನಂದಿನ ಜೀವನದಲ್ಲಿ ಅನುಸರಿಸುತ್ತಿದ್ದ ಸಹಕಾರ ಪದ್ಧತಿಯೇ ಕಾರಣವಾಗಿದೆ. ಇಂದಿಗೂ ಹಳ್ಳಿಗರ ಜೀವನದ ಕುರಿತು ಕೂಲಂಕುಶವಾಗಿ ವಿಚಾರ ಮಾಡಿದಲ್ಲಿ ಈಗಲೂ ಸಹ ಅವರ ಜೀವನವು ಈ ಸಹಕಾರ ಕ್ರಮದಿಂದಲೇ ಸಾಗುತ್ತಿದೆ ಎಂದು ತಿಳಿದು ಬರುವುದು.

ಹಳ್ಳಿಯಲ್ಲಿ ವಾಸಿಸುವ ಹೆಚ್ಚಿನ ರೈತನು ಅಲ್ಪಸ್ವಲ್ಪ ಗದ್ದೆಯನ್ನು ಗೇಣಿಗೆ ತೆಗೆದುಕೊಂಡು, ಜೋಡೆತ್ತು ಕಟ್ಟಿ ಸಾಗುವಳಿ ಮಾಡುವನು. ಅದಕ್ಕಿಂತ ಹೆಚ್ಚು ಗದ್ದೆಯನ್ನು ಸಾಗುವಳಿ ಮಾಡುವುದಾಗಲೀ, ಹೆಚ್ಚು ಎತ್ತು ಜೋಡನ್ನು ಕಟ್ಟಲಿಕ್ಕೂ ಅವನ ಸಾಮರ್ಥ್ಯಕ್ಕೆ ಮೀರಿದುದು. ಹಾಗಾಗಿ ಅವನ ಗದ್ದೆಯನ್ನು ಉತ್ತು ಬಿತ್ತುವ ಕೆಲಸವು ಸುಮಾರು 7-8 ದಿನಗಳು ನಡೆದು ಹೋಗುವುದು. ಉಳಿದ ಸಮಯಗಳಲ್ಲಿ ತನ್ನ ಎತ್ತನ್ನು ತನ್ನ ನೆರೆಕರೆಯವರ ಸಹಾಯಕ್ಕಾಗಿ ಕೊಡುವನು. ಅವರೂ ಸಹ ಇವನಿಗೆ ಬೇಕಾದ ಸಹಾಯವನ್ನು ನೀಡಿಯೇ ನೀಡುವರು. ತನ್ನ ಒಕ್ಕಲಿನ ಸಂದರ್ಭದಲ್ಲೂ ಹಾಗೆಯೇ ದೊಡ್ಡ ಗದ್ದೆಯಲ್ಲಿನ ಬೆಳೆಯನ್ನು ದೂರದಲ್ಲಿನ ರೈತನ ಮನೆಗೆ ಸಾಗಿಸಲು ಹಲವಾರು ಜನರ ಸಹಕಾರ ಬೇಕಾಗುವುದು. ಆತನು ತನ್ನ ನೆರೆಯವರಿಗೆ ಸಹಾಯವನ್ನು ಬೇಕಾದಾಗ ಸಲ್ಲಿಸುವನಿದ್ದರೆ ಅವನಿಗೆ ಇತರರ ಸಹಾಯ ಸದಾ ಸಿದ್ಧ. ಹಾಗೆಯೇ ಇತರ ಎಲ್ಲ ಕೆಲಸಗಳು. ದೊಡ್ಡ ಮರವನ್ನು ಎಳೆಯುವಾಗಲೋ, ತಪವನ್ನು ಹಾಕುವಾಗಲೋ ಅವನು ಒಬ್ಬನೊಡಗೂಡಿ ಇನ್ನೊಬ್ಬನೂ ತನ್ನ ಕೆಲಸವನ್ನು ಪೂರೈಸುವನು.

ದೊಡ್ಡ ಹೊಳೆಗಳಿಗೆ ಕಟ್ಟನ್ನು ಬೇಸಿಗೆ ಕಾಲದಲ್ಲಿ ಕಟ್ಟಿ ನೀರನ್ನು ಗದ್ದೆಗಳಿಗೆ ಹಾಯಿಸಲಿಕ್ಕಾಗಿ ಉಪಯೋಗಿಸಿ ಹೆಚ್ಚಿನ ಆಹಾರ ಧಾನ್ಯವನ್ನು ಬೆಳೆಸಬೇಕಾಗುವುದು. ಆದರೆ ಇದು ಒಬ್ಬೊಬ್ಬರಿಂದ ಆಗತಕ್ಕ ಕೆಲಸವಲ್ಲ. ನೂರಾರು ಜನ ಹಳ್ಳಿಗರು, ಒಂದೆಡೆ ಕಲೆತು, ಕೂಡಿ ಮಾಡಬೇಕಾದ ಕೆಲಸ. ಅದಕ್ಕಾಗಿ ಗುಂಪಿನವರೆಲ್ಲ ಕೂಡಿ ಇಷ್ಟಿಷ್ಟು ಜನ ಇಷ್ಟು ಜನ ಆಳನ್ನು ಕೊಡಬೇಕೆಂದೂ, ಕಟ್ಟಕಟ್ಟಲು ಬೇಕಾದ ಬೈ ಹುಲ್ಲು ಸೊಪ್ಪನ್ನೂ, ಹೆಡಿಗೆಯನ್ನೂ, ಕೂಲಿಯವರಿಗೆ ಬೇಕಾದ ಗಂಜಿ ಬೇಯಿಸುವ ಅಕ್ಕಿ, ಎಲೆ ಅಡಿಕೆ ಮೊದಲಾದವನ್ನು ಕೊಡಬೇಕೆಂಬುದನ್ನೂ ನಿಶ್ಚಯಿಸುತ್ತಾರೆ. ಅದೇ ಮೇರೆಗೆ ನಿಶ್ಚಿತ ದಿನದಲ್ಲಿ ಅವರೆಲ್ಲರೂ ಒಟ್ಟು ಕೂಡಿ ಕೆಲಸವನ್ನು ಕ್ರಮವಾಗಿ ಸಂತೋಷದಿಂದಲೂ, ಉತ್ಸಾಹದಿಂದಲೂ ಬಹು ಬೇಗನೇ ಮುಗಿಸಿಬಿಡುವರು. ಈ ರೀತಿಯಲ್ಲಿ ಕಟ್ಟನ್ನು ಕಟ್ಟಿ ಸಾಕಷ್ಟು ಬೆಳೆಯನ್ನು ಬೆಳೆಸಿ ಸಂಪತ್ಸಮೃದ್ಧರಾಗುವರು. ಅಂತಹ ಹಳ್ಳಿಗರಲ್ಲಿ ಸಾಮಾನ್ಯವಾಗಿ ಪ್ರತಿ ಎರಡು ಮೂರು ಹಳ್ಳಿಗಳಿಗೆ ಒಂದರಂತೆ ದೇವಸ್ಥಾನಗಳು ಇರುತ್ತವೆ. ಊರಿನವರೆಲ್ಲರೂ ಒಟ್ಟಾಗಿ ಅಲ್ಲಿ ನಡೆಯುವ ಪೂಜಾ ವಿನಿಯೋಗಗಳನ್ನು ಸಾಮೂಹಿಕವಾಗಿ ಮಾಡಬೇಕಾಗುವುದು. ವಾರ್ಷಿಕ ಜಾತ್ರೆಯ ಸಂದರ್ಭದಲ್ಲೂ ತುಂಬಾ ಕೆಲಸಗಳು ಆಗುವುದಿದೆ. ಚಪ್ಪರ ಹಾಕುವುದು, ಮಂಟಪವನ್ನು ಶೃಂಗರಿಸುವುದು, ಊಟ ಉಪಚಾರಗಳ ಏರ್ಪಾಡು, ಇವೆಲ್ಲವನ್ನೂ ಜನರು ತಮ್ಮೊಳಗೆ ಕ್ರಮವಾಗಿ ಹಂಚಿಕೊಂಡು ದೇವರ ಕೆಲಸವೆಂಬ ಭಕ್ತಿಯುಕ್ತವಾಗಿ ಅದನ್ನು ಮಾಡಿ ಮುಗಿಸುವರು. ಊರ ಜಾತ್ರೆಯೆಂದರೆ ಪ್ರತಿಯೊಬ್ಬ ಹಳ್ಳಿಗನಿಗೂ ಸಂತಸದ ದಿನ. ಆ ದಿನವನ್ನು ಬಹಳ ದಿನಗಳಿಂದ ಆತ ಎದುರು ನೋಡುತ್ತಿರುವನು. ದೂರದೂರಿನ ತನ್ನ ನೆಂಟರಿಷ್ಟರನ್ನು ಮನೆಗೆ ಆದರದಿಂದ ಸ್ವಾಗತಿಸಿ ದೇವರ ದರ್ಶನಕ್ಕೆ ಕರೆದುಕೊಂಡು ಹೋಗುವುದೆಂದರೆ ಅವನಿಗೆ ತುಂಬಾ ಹುರುಪು. ಸಂತೋಷ. ಅಲ್ಲಿ ತಾನು ಮಾಡುವ ಯಾವ ಕೆಲಸವೇ ಆಗಲಿ, ಊಟ ಹೊರುವುದಾಗಲೀ, ಎಂಜಲು ತೆಗೆಯುವುದಾಗಲೀ ದೇವರ ಮೂರ್ತಿಯನ್ನು ಹೊರುವುದಾಗಲೀ ಅವನಿಗೆ ಅದೊಂದು ಗೌರವದ ಕೆಲಸವೆಂದು ಆತ ಭಾವಿಸುವನು.

ತಮ್ಮ ಕೈಯಲ್ಲಿ ಕಾಸಿಲ್ಲದಿದ್ದರೂ ಸಾಲಮಾಡಿಯಾದರೂ ಮದುವೆ, ಮುಂಜಿ ಮೊದಲಾದ ಶುಭ ಶೋಭನಾದಿಗಳನ್ನು ಬಹು ವಿಜೃಂಭಣೆಯಿಂದ ನಡೆಸುವುದೆಂದರೆ ಹಳ್ಳಿಗರಿಗೆ ತುಂಬ ಇಷ್ಟ. ಆ ಸಮಯದಲ್ಲಿ ಈ ಕೆಲಸಗಳಿಗೆ ಹಲವು ರೀತಿಯಲ್ಲಿ ಆತನ ನೆರೆಕರೆಯವರು ಅವನಿಗೆ ನೆರವನ್ನು ನೀಡುವರು. ಕಾಯಿಪಲ್ಯಗಳ ಹೊರೆಯನ್ನು ಕಳುಹಿಸುವವರು, ಅಕ್ಕಿ ಮುಡಿಯನ್ನು ಕೊಡುವವರು, ಬಾಳೆ ಎಲೆ ಬಾಳೆ ಹಣ್ಣು ಮೊದಲಾದ ಎಷ್ಟೋ ವಸ್ತುಗಳನ್ನು ಅವನಿಗೆ ಪುಕ್ಕಟೆಯಾಗಿ ಕೊಟ್ಟು ಅವನು ಮಾಡಬೇಕಾದ ಹೆಚ್ಚಿನ ಖರ್ಚಿನ ಭಾರವನ್ನು ಕಡಿಮೆ ಮಾಡುವರು. ಇದೂ ಅಲ್ಲದೆ ಆ ಸಮಾರಂಭದ ಒಂದೆರಡು ದಿನ ಮೊದಲೇ ಅಲ್ಲಿಗೆ ಹೋಗಿ ಅಲ್ಲಿ ಮಾಡಬೇಕಾದ ಕೆಲಸಗಳಲ್ಲಿ ಸಹಾಯ ನೀಡುವರು. ಚಪ್ಪರ ಹಾಕುವುದು, ಅಂಗಳ ಸರಿಮಾಡುವುದು, ಮಂಟಪ ಕಟ್ಟುವುದು, ಅಡಿಗೆಯ ಕೆಲಸ, ಬಂದವರನ್ನು ಸ್ವಾಗತಿಸುವ ಕೆಲಸ, ಅವರ ಊಟೋಪಚಾರ ಮೊದಲಾದ ಎಲ್ಲಾ ಮೇಲ್ವಿಚಾರಗಳನ್ನೂ ಮನೆಯ ಯಜಮಾನನ ಪಾಲಿಗೆಂದು ಬಿಡದೆ ನಾನು ತಾನೆಂದು ಉತ್ಸಾಹಿತರಾಗಿ ಮಾಡಿ ಮುಗಿಸಿ ಯಜಮಾನನ ಹೆಚ್ಚಿನ ಹೊಣೆಯನ್ನು ಕಡಿಮೆ ಮಾಡುವರು. ಊರವರೆಲ್ಲ ಹೇಳಿಕೆಯನ್ನು ಕೊಡುವಾಗ "ಎರಡು ದಿನ ಮುಂಚಿತವಾಗಿ ಒಂದು ಕೆಲಸವನ್ನು ಪೂರೈಸಿಕೊಡಬೇಕೆಂದು" ಹೇಳುವುದು ರೂಢಿ.

ಹೀಗೆ ನಾನಾ ವಿಧವಾಗಿ ಒಬ್ಬರಿಗೊಬ್ಬರು ಸಹಾಯ, ಸಹಾನುಭೂತಿಯನ್ನು ತೋರಿಸುತ್ತಲೇ ಸಾಮೂಹಿಕವಾಗಿ ರೈತರು ದುಡಿಯುತ್ತಿದ್ದುದನ್ನು ನಾವು ಕಾಣಬಹುದು. ಆದರೆ ಈಗೀಗ ನಮ್ಮಲ್ಲಿ ಶೀಘ್ರವಾಗಿ ಬೆಳೆಯುತ್ತಿರುವ ನಗರಗಳ ಕಡೆಗೆ ಉತ್ಸಾಹೀ ನವತರುಣರು ಧನಸಂಪಾದನೆ ಮಾಡುವ ಉದ್ದೇಶದಿಂದ ಹೋಗುವುದರಿಂದ ಹಳ್ಳಿಯಲ್ಲಿ ನಡೆಯಬೇಕಾದ ಕೆಲಸಗಳನ್ನು ಮಾಡುವ ಜನರ ಸಂಖ್ಯೆ ಕಡಮೆಯಾಗಿ, ಎಲ್ಲೆಲ್ಲೂ ನಿರುತ್ಸಾಹವು ತೋರಿಬರುತ್ತಿದೆ ಇದು ಹಳ್ಳಿಗರ ಸಹಕಾರ ಮನೋಬುದ್ಧಿಗೆ ಒಂದು ದೊಡ್ಡ ಆಘಾತವಾಗಿ ಪರಿಣಮಿಸಿ ತಾವು ತಮ್ಮ ಮನೆ ತಮ್ಮ ಜಮೀನು ಎಂಬ ಸಂಕುಚಿತ ಧೋರಣೆಗೆ ಮೊದಲಿಟ್ಟಿದೆ. ಹಳ್ಳಿಗಳ ನಿಜವಾದ ಆರ್ಥಿಕ ಹಾಗೂ ಸಾಮಾಜಿಕ ಬೆಳವಣಿಗೆಯೂ ನಿಂತು ಹೋದಂತಿದೆ.

ರಾಜರುಗಳು ಸೋತರೂ, ರಾಜವಂಶಗಳು ಅಳಿದುಹೋದರೂ ಅವರ ಗೊಡವೆಯೇ ಇಲ್ಲದೆ ಒಂದೇ ಸಮನೆ ದುಡಿಯುತ್ತಿದ್ದುದರಿಂದಲೇ ನಮ್ಮ ಭಾರತದ ನಾಗರೀಕತೆ, ಸಂಸ್ಕೃತಿಗಳು ಇಷ್ಟೊಂದು ಕಾಲದ ತನಕ ಚಿರಸ್ಥಾಯಿಯಾಗಿ ಅಚ್ಚಳಿಯದೆ ಉಳಿಯುತ್ತ ಬಂದಿದೆ. ಈ ನಮ್ಮ ಸಂಸ್ಕೃತಿಯ ಮೂಲಕ್ಕೇ ಕೊಡಲಿ ಏಟನ್ನು ಕೊಡುವ ಈ ನಮ್ಮ ಧೋರಣೆಯತ್ತ ಸರಕಾರವೂ ನಮ್ಮ ಸಮಾಜದ ಮುಂದಾಳುಗಳೂ ದೃಷ್ಟಿಯನ್ನು ಬೀರಿ ಹಳ್ಳಿಗಳ ನಿಜವಾದ ಏಳಿಗೆಯ ದೃಷ್ಟಿಯಲ್ಲಿ ಮುಂದರಿಯಬೇಕಾದರೆ ಅಲ್ಲಿ ಮುರಿದು ಬೀಳುತ್ತಿರುವ ಈ ಸಹಕಾರ ಮನೋಬುದ್ಧಿಯನ್ನು ಗಟ್ಟಿಯಾಗಿ ಕಟ್ಟಲು ಯತ್ನಿಸಬೇಕಾಗಿದೆ.

ಅದಕ್ಕಾಗಿ ನಮ್ಮ ಹಳ್ಳಿಗಳಲ್ಲಿ ಹಲವಾರು ಸಹಕಾರಿ ಸಂಘಗಳನ್ನು ಕಟ್ಟಬೇಕಾಗಿದೆ. ಹಳ್ಳಿಗರಿಗೆ ಆರ್ಥಿಕ ಸಹಾಯವನ್ನು ಕೊಡಲು ಸಹಕಾರಿ ಬ್ಯಾಂಕುಗಳನ್ನೂ ತೆರೆಯುವಂತಾಗಬೇಕು. ಜೀವನದಲ್ಲಿ ಒಬ್ಬರಿಗೊಬ್ಬರು ನೆರವಾಗಿ ಹಳ್ಳಿಯ ಸಾಮೂಹಿಕ ಬೆಳವಣಿಗೆಯತ್ತ ದೃಷ್ಟಿಯನ್ನಿಟ್ಟುಕೊಂಡು ದುಡಿಯುವ ಸಂಘಗಳ ಆವಶ್ಯಕತೆ ಎಷ್ಟಿದೆ ಎಂಬುದು ಅಲ್ಲಿನ ವಿಚಾರವನ್ನು ಸರಿಯಾಗಿ ವಿವೇಚಿಸಿದವರಿಗೆ ತಿಳಿದೀತು. ಹಳ್ಳಿಗರಲ್ಲಿ ಹಾನಿಗೆ ಸರಿಯಾದ ಬೆಲೆ ಬರಲಿಲ್ಲ. ರೋಗರುಜಿಗಳಿಂದ ಪೀಡಿತರಾಗಿ ನರಳುತ್ತಾರೆ ಎಂಬುದನ್ನು ಆ ಸಂಘಗಳವರು ನೋಡಿಕೊಂಡು ಅವರಿಗೆ ಸಾಕಷ್ಟು ಸಹಾಯವನ್ನು ಸಲ್ಲಿಸುವುದು ಅಗತ್ಯ. ಬೆಳೆ ನದಿಯಲ್ಲಿ ಮುಳುಗಿದಾಗ, ನೀರಿಲ್ಲದೆ ಸುಟ್ಟುಹೋದಾಗ ಅದನ್ನು ವಿಚಾರಿಸಿ ದಣಿಗಳಿಂದ ಅವನ ಗೇಣಿಯಲ್ಲಿ ಸ್ವಲ್ಪ ರಿಯಾಯಿತಿಯನ್ನು ತೋರಿಸುವಂತೆ ಮಾಡಬೇಕಾಗುವುದು. ಒಂದು ಮನೆ ಹಾಳಾದರೆ ಎಷ್ಟು ಜನ ಶಕ್ತಿಯು ಹಳ್ಳಿಗೆ ಕಡಿಮೆಯಾದಂತಾಯಿತು. ಹಾಳು ಬಿದ್ದ ಗುಡ್ಡೆ ಜಮೀನುಗಳಿದ್ದಲ್ಲಿ ಅದನ್ನು ಸರಿಯಾಗಿ ಸಾಗುವಳಿ ಮಾಡುವ ಏರ್ಪಾಡುಗಳನ್ನು ಮಾಡಬೇಕು. ಈ ಎಲ್ಲ ಉದ್ದೇಶಗಳನ್ನಿಟ್ಟುಕೊಂಡ ನಮ್ಮ ಪಂಚಾಯತ ಕಾನೂನು ಬೇಗನೇ ಕಾರ್ಯರೂಪಕ್ಕೆ ಬಂದು ಹಳ್ಳಿಗಳು ಸರಿಯಾಗಿ ಸಮೃದ್ಧವಾಗಲಿ! ಸ್ವಾರ್ಥಿಗಳಾದ ಅಧಿಕಾರ ಲಾಲಸೆಯ ಪಿಶಾಚಿಗಳ ಕೈಯಲ್ಲಿ ಹಳ್ಳಿಗಳ ಆಡಳಿತವು ಸಿಕ್ಕಿ ನಾಶ ಹೊಂದದಿರುವಂತೆ ಎಚ್ಚರವಾಗಿರುವ!

ಬ್ಯಾಂಕಿಂಗ್ ಸಂಬಂಧದ ಎಲ್ಲಾ ಸಮಸ್ಯೆಗಳಿಗೆ

ದಿ ವಿಜಯಾ ಬ್ಯಾಂಕ್ ಲಿಮಿಟೆಡ್

ಇವರ ಸಲಹೆ ಕೇಳಿರಿ

ಹೆಡ್ ಆಫೀಸು : . . : ಮಂಗಳೂರು

ಮಡಿಕೇರಿಯಲ್ಲಿ ಒಂದು ಶಾಖೆಯೂ ಬೊಂಬಾಯಿಯಲ್ಲಿ ಒಂದು ಶಾಖೆಯೂ ಜಿಲ್ಲೆಯೊಳಗೆ ಹಲವು ಶಾಖೆಗಳೂ ಇವೆ

ಎಲ್ಲಾ ಠೇವಣಿಗಳಿಗೆ ಯೋಗ್ಯ ಆಕರ್ಷಕವಾದ ದರದ ಬಡ್ಡಿಯೂ ಕೊಡಲ್ಪಡುವುದು | ಯೋಗ್ಯವಾದ ಜವಾಬ್ದಾರಿಗಳ ಮೇಲೆ ಸುಲಭವಾದ ಶರ್ತಗಳಲ್ಲಿ ಸಾಲಗಳು ಕೊಡಲ್ಪಡುವವು

ಸಿಂಪಲ್ ಸೇಕಡಾ 4½ರ ಬಡ್ಡಿ ಗಳಿಸುವ ಮೂರು ವರ್ಷದ ಅವಧಿಯ ವಿಜಯಾ ಕ್ಯಾಶ್ ಸರ್ಟಿಫಿಕೇಟುಗಳ ಮೇಲೆ

ಹಣವನ್ನು ಹಾಕಿರಿ

THE VIJAYA BANK, LTD,

ಬಿ. ಮಂಜಯ್ಯ ಹೆಗ್ಗಡೆ,
(ದ. ಕ. ಜಿಲ್ಲಾ ಬೋರ್ಡ್ ಪ್ರೆಸಿಡೆಂಟ್)
ಡೈರೆಕ್ಟರ್ ಬೋರ್ಡಿನ ಅಧ್ಯಕ್ಷರು.

ರೈಲ್ವೆ ಮುಷ್ಕರದಿಂದ ಬಡವರಿಗೆ ಅನ್ಯಾಯ

ದೇಶದಲ್ಲೆಲ್ಲ ಸತ್ಯಾಗ್ರಹ, ಮುಷ್ಕರಗಳನ್ನು ನಿರ್ಮಿಸುತ್ತಾ, ಸಾರ್ವಜನಿಕರಿಗೆ ತೊಂದರೆಯನ್ನು ತಂದೊಡ್ಡುವ ಕಾರ್ಯಕ್ಕೆ ಸೋಶಾಲಿಸ್ಟರೇ ಮುಂದಾಳಾಗಿ ಬರುತ್ತಿರುವ ಲಕ್ಷಣಗಳು ಕಂಡು ಬರುತ್ತಿವೆ. ಬಾನಾವಣೆಯ ಈ ಕಾಲದಲ್ಲಿ ದೇಶದ ಶುಭ ಕಾಮನೆಯನ್ನು ಬಯಸುವವರಾರೆಂಬುದನ್ನು ನಾವು ಇದರಿಂದ ಅರಿತುಕೊಳ್ಳಬಹುದಾಗಿದೆ. 'ಅನ್ನಬಟ್ಟೆಯನ್ನು ನೀಡಲಾಗದ, ಸರಕಾರ ಅಧಿಕಾರ ತ್ಯಜಿಸಿ ಹೊರಬರಲೆಂದು ಘರ್ಜಿಸುವ ಈ ಸಮಾಜವಾದಿಗಳು ಜನತೆಯ ಹಿತಚಿಂತನೆಯಲ್ಲಿ ಎಷ್ಟರ ಮಟ್ಟಿನ ಆಸ್ಥೆ ವಹಿಸಿರುವರೆಂಬುದಕ್ಕೆ ಈಗ ಅವರು ಮುಷ್ಕರಗಳ ಮೂಲಕ ಸಾರ್ವಜನಿಕರಿಗೆ ತಂದೊಡ್ಡುವ ದೇಶಘಾತುಕ ಕಾರ್ಯಗಳೇ ಸಾಕ್ಷಿಯಾಗಿವೆ.

'ರೇಶನ್ ಹೋಗಲಿ' ಎಂದು ಸರಕಾರವನ್ನು ಟೀಕಿಸಲಾಯಿತು. ಗಾಂಧೀಜಿಯವರು ಕಂಟ್ರೋಲ್ ರೇಶನ್ ಪದ್ಧತಿಯನ್ನು ತಿರಸ್ಕರಿಸುತ್ತಿದ್ದರು. ಕಾಂಗ್ರೆಸ್ಸಿಗರು ಅದನ್ನೇಕೆ ತೆಗೆದು ಹಾಕಬಾರದು? ದೊಡ್ಡವರಿಗೆ ಸುಗ್ಗಿ ಮಾಡಲು ಸಹಾಯ ಮಾಡುತ್ತಿದೆ ಸರಕಾರವೆಂದೂ ಅರೋಪಿಸಿದರು. ಈಗ ರೇಶನ್ ತೆಗೆದು ಒಂದು ವರ್ಷವಾಗುವದರೊಳಗೆ "ರೇಶನ್ ತೆಗೆದು ಬಡವರ ಶೋಷಣೆ ಮಾಡುತ್ತಲಿದೆ ಸರಕಾರ" ಎಂದು ಅದೇ ಸೋಶಾಲಿಸ್ಟರು ಟೀಕಿಸುತ್ತಾರೆ. ಆಹಾರವಿಲ್ಲವೆನ್ನುವಲ್ಲಿ ಸಮಾಜವಾದಿಗಳು ದೇಶದಲ್ಲೆಲ್ಲ ಕಿರುಚಾಟ ನಡೆಸಿದರು. ಪರಿಸ್ಥಿತಿಯನ್ನವಲೋಕಿಸುವ ಗೊಡವೆಗೆ ಅವರು ಹೋಗಲಿಲ್ಲ. "ಉಳುವವನೇ ಹೊಲದೊಡೆಯನಾಗಬೇಕು. ರೈತನೇ ಹೊಲದ ಸರ್ವಾಧಿಕಾರಿ" ಎಂದು ರೈತ ಬಂಧುಗಳ ಸೋಗು ಹಾಕಿದರು. ರೈತನನ್ನು ಪ್ರಾಮಾಣಿಕತನದಿಂದ ದುಡಿದು ಅದರ ಲಾಭವನ್ನು ಪಡೆಯುವ ಆದೇಶವನ್ನವರು ಮಾಡಲಿಲ್ಲ. ತಮ್ಮ ಹಾಗೆಯೆ ಅನ್ನವಿಲ್ಲದೆ ಬಡವರ ಹೊಟ್ಟೆಗೆ ಪಟ್ಟುಬೀಳುತ್ತದೆಂಬುದನ್ನವರಿಗೆ ಹೇಳಲಿಲ್ಲ. ಸತ್ಯಾಗ್ರಹ ಮುಷ್ಕರಗಳ ಮೂಲಕ ಸರಕಾರದ ವಿರುದ್ಧ ಬಂಡು ಕೊಡುವಂತೆ ಹುರಿದುಂಬಿಸಿದರು. ಈಗ ಭಾರತ ಸರಕಾರ ಜಮೀನ್ದಾರೀ ನಿರ್ಮೂಲನ ಕಾಯಿದೆಯನ್ನಿತ್ತು ರೈತರ ಸಹಜ ಪ್ರಶ್ನೆಯನ್ನೆತ್ತಿಕೊಂಡದ್ದಕ್ಕೆ ಸಮಾಜವಾದಿಗಳು ಏನನ್ನುವರೋ?

ಭಾರತ ಸರಕಾರ ಒಳ್ಳೆಯ ಮುತ್ಸದ್ದಿತನದಿಂದ ಕಾರ್ಯಭಾರವನ್ನು ನಡೆಸಿ ಬರಗಾಲದ ಭೀತಿಯನ್ನು ಹೋಗಲಾಡಿಸಿದ್ದು ಮಾತ್ರವಲ್ಲದೆ ಹನ್ನೆರಡು ಔನ್ಸಿನ ವರೆಗೆ ಹೆಚ್ಚು ಮಾಡಿತು. ಈಗ ಸಮಾಜವಾದಿಗಳು ಸರಕಾರಕ್ಕೆ ಕೇಡಲು ಕೊಡಲು ಬೇರೆ ಮಾರ್ಗ ಹಿಡಿದಿದ್ದಾರೆ. ಅಮೇರಿಕಾದಿಂದ ಆಹಾರ ಬರುವದರಿಂದ ಭಾರತ ಬರಗಾಲಕ್ಕೆ ತುತ್ತಾಗದೆಂದು ಅವರಿಗೆ ಮನವರಿಕೆಯಾಯಿತು. ಸರಕಾರ ನೀಡಬಹುದಾದ ಆಹಾರದ ಸರಬರಾಯಿ ಸುಸೂತ್ರವಾಗಿ ಜರಗದಂತೆ ರೈಲ್ವೆ ಮುಷ್ಕರದ ಹೆದರಿಕೆಯನ್ನು ಎಬ್ಬಿಸಲಾಗಿದೆ. ರೈಲ್ವೆ ಕೆಲಸಗಾರರಿಗೆ ತುಟ್ಟಿಭತ್ತೆಯೆಂದು ಸರಕಾರ ೨ ರೂ. ಏರಿಸಿದ್ದರೂ ಸಮಾಜವಾದಿಗಳಿಗೆ ತೃಪ್ತಿಯಿಲ್ಲವಂತೆ. ಕೇಂದ್ರ ಸರಕಾರದ ನೌಕರರಿಗೆ ಅವರು ಬಯಸಿದ ತುಟ್ಟಿಭತ್ತೆ ಕೊಡುವದರಿಂದ ಸರಕಾರಕ್ಕೆ ೪ ಕೋಟಿ ರೂಪಾಯಿ ಹೆಚ್ಚು ಖರ್ಚಾಗುತ್ತದೆ. ಅತಿ ವಿನಿಯೋಗದ ಮಹತ್ವದ ಯೋಜನೆಗಳನ್ನು ಸರಕಾರ ಕೈಗೊಂಡದ್ದು ಆರ್ಥಿಕ ಮುಗ್ಗಟ್ಟಿರುವದನ್ನು ನಾವು ಲಕ್ಷಿಸಿದರೆ ಈ ತುಟ್ಟಿಭತ್ತೆಯಿಂದಲೇ ತೃಪ್ತಿಪಡಬೇಕಾಗಿದೆ. ಈಗಾಗಲೇ ರೈಲ್ವೆಯ ಮುಷ್ಕರದ ಪ್ರಕರಣ ವಿಕೋಪಕ್ಕೆ ಹೋಗುವಂತೆ ಸಮಾಜವಾದೀ ಮುಖಂಡರು ಹವಣಿಸುತ್ತಿದ್ದಾರೆ. ಮೋಹಕವಾದ ಭಾಷೆಯಲ್ಲಿ ಕೂಲಿಗಾರರನ್ನು ವಿವಂಚನೆಗೊಳಪಡಿಸುವದು ಮಾತ್ರವಲ್ಲದೆ ಜನತೆಯ ಕಷ್ಟಕಾಲದಲ್ಲಿ ಅನ್ಯಾಯವೆಸಗದಂತಾಗಬೇಕೆಂದೇ ಹೇಳಬೇಕು.

ಬಡವರ ಪಕ್ಷಪಾತಿಗಳಾರೆಂಬುದನ್ನು ಜನ ಚಿಂತಿಸಬೇಕು! ರೈಲ್ವೆ ಮುಷ್ಕರದಿಂದ ಸರಕಾರ—ಧನಿಗಳಿಗಿಂತ ಬಡವರಿಗೇ ವಿಶೇಷ ಹಾನಿಯಿದೆ. ಸರಕಾರ ಆಹಾರ ಹೆಚ್ಚಿಸುವ ಭರವಸೆಯನ್ನಿತ್ತಿದೆಯಾದರೂ ಆ ಸರಬರಾಯಿ ಕಾರ್ಯ ಈಗಾಗಲೆ ಆರಂಭವಾಗಿದೆ. ನಡುವೆ ರೈಲ್ವೆಯ ಮುಷ್ಕರ ಸರಬರಾಯಿ ಕ್ರಮದಲ್ಲಿ ತಡೆಯಾದರೆ ಬಡವರಿಗೆ ಇಲ್ಲವೆ ಹಸಿದವರಿಗೆ ಇದರಿಂದ ಯಾವ ಉಪಯೋಗವೂ ಆಗಲಾರದ! ಇಂತಹ ವಾಮ ಮಾರ್ಗದಿಂದ ಸ್ವಪಕ್ಷವನ್ನು ಸಮರ್ಥಿಸಿಕೊಳ್ಳುವುದು ಲೋಕಹಿತಚಿಂತಕರ ಕರ್ತವ್ಯವಲ್ಲ. ಸರಕಾರದ ವಿರುದ್ಧ ಸಂಪು ಹೂಡುವಲ್ಲಿ ಜನತೆಗೆ ದ್ರೋಹವಾಗದಂತೆ ವರ್ತಿಸುವುದು ಯೋಗ್ಯವಾಗಿದೆ. ಜನಕ್ಕೆ ಇಂದು ಬೇಕಾಗಿರುವದು ಪಕ್ಷವಲ್ಲ; ಪಕ್ಷದ ಘೋಷಣೆಯಲ್ಲ; ಉಣಲು ಅನ್ನ; ಉಡಲು ಬಟ್ಟೆ; ಅವುಗಳಿಗಾಗಿ ದುಡಿಯಲು ಉದ್ಯೋಗ. ಇವಿಷ್ಟನ್ನು ಅವರು ಬಯಸುತ್ತಾರೆ. ಸಮಾಜವಾದಿಗಳ ಪ್ರತಿಷ್ಠಿತ ಪರಾಕ್ರಮದಿಂದ ಬಡವರ ಅನ್ನಕ್ಕೆ ತತ್ವಾರವಾಗುತ್ತದೆ ಎಂಬುದನ್ನು ನಾವು ಮರೆಯಬಾರದು. ಜನತೆಯನ್ನು ಗಂಡಾಂತರಕ್ಕೀಳಿಸುವದರ ಮೂಲಕ ತಮ್ಮ ಪಕ್ಷದ ಸ್ವಾರ್ಥ ಸಾಧಿಸುವುದು ನ್ಯಾಯವಲ್ಲ. ಜನತೆಯ ಸಂಕಷ್ಟವನ್ನು ಪರಿಹರಿಸುವಲ್ಲಿ ಅಂತಃಕರಣಪೂರ್ವಕ ಎಲ್ಲ ಪಕ್ಷಗಳೂ ಸಹಕರಿಸಬೇಕು. ಸನ್ಮಾರ್ಗದರ್ಶನದಿಂದ ಜನತೆಯ ಒಲವನ್ನು ಗಳಿಸುವದರಿಂದಲೇ ದೇಶದ ಕಲ್ಯಾಣವೆಂಬುದನ್ನು ತಪ್ಪುದಾರಿ ಹಿಡಿದವರೂ—ಹಿಡಿಸುವವರೂ ತಿಳಿಯಲಿ—ಅಂತೆಕೊಳ್ಳಲಿ!

ರಾಮತೀರ್ಥ ಬ್ರಾಹ್ಮಿ ತೈಲ

ಆಶ್ಚರ್ಯದ ಸಂಗತಿ

ಅಧಿಕ ಜ್ಞಾಪಕ ಶಕ್ತಿಯಿಂದ ಕಲಿಯುವಿಕೆಗೆ ಸಹಾಯವಾಗುತ್ತದೆ. ಸಹಜವಾಗಿ ತಿಳಿಯುವಿಕೆಗೆ ಉಪಯೋಗವಾಗುತ್ತದೆ ಇದಕ್ಕೋಸ್ಕರ ನಾನು ಒಂದು ಸಲ **ರಾಮತೀರ್ಥ ಯೋಗಾಶ್ರಮ, ದಾದರ್** (ಜಿ. ಐ. ಪಿ.) **ಮುಂಬಯಿ ೧೪ ಇವರ "ರಾಮತೀರ್ಥ ಬ್ರಾಹ್ಮಿ ತೈಲ" (ಸ್ಪೆಶಲ್ ನಂ. ೧)**ರ ಉಪಯೋಗಕ್ಕೆ ಪ್ರಾರಂಭಮಾಡಿದೆ. ಸ್ವಲ್ಪ ಸಮಯದ ನಂತರ ನನಗೆ ಆಶ್ಚರ್ಯವಾಗಿ ತೋರಿತೇನಂದರೆ, ನನ್ನ ತಲೆನೋವು, ಚಕ್ಕರ್ ಬರುವುದು, ಕಣ್ಣು ಕೆಂಪಾಗುವುದು, ಇವೆಲ್ಲವನ್ನು ತನ್ನ ವಿಶೇಷ ಗುಣದಿಂದ ಅದು ದೂರ ಮಾಡಿತು **ರಾಮತೀರ್ಥ ಬ್ರಾಹ್ಮಿ ತೈಲ** (ಸ್ಪೆಶಲ್ ನಂ ೧) ಉಪಯೋಗ ಮಾಡುವುದರಿಂದ ಯಾವತರದ ಒಡಕೂ ಇಲ್ಲದೆ ಅದರ ಬದಲಾಗಿ ಇದರ ವಿಶೇಷ ಗುಣದಿಂದ ತಲೆಕೂದಲು ಕಪ್ಪು, ಉದ್ದ ಮತ್ತು ಕಾಂತಿಯುತವಾಗುತ್ತದೆ. ಬೇಕಾಗಿ ಬೇರೆ ತೈಲವು ತಲೆಕೂದಲನ್ನು ಬಿಳುಪಾಗಿ ಮಾಡುತ್ತದೆ ಇವನ್ನು ಎಷ್ಟು ಅಪಾಯಕರವೆಂದು ನೆನಸಲಿ! ತಲೆಕೂದಲಿನ ಸೌಂದರ್ಯವನ್ನು ಯಾವಾಗಲೂ ಕಾಪಾಡುವ ತೈಲದ ವ್ಯವಹಾರ ಮಾಡುವುದು ಉಚಿತವಾಗಿದೆ. ಮನಸ್ಸನ್ನು ಶಾಂತವಾಗಿಡುವ, ಗಾಢ ನಿದ್ರೆಯನ್ನು ತರುವ, ಪ್ರಶಾಂತತಾ ಮತ್ತು ಆರಾಮ ಕೊಡುವ ವಗೈರೆ ಗುಣವು ರಾಮತೀರ್ಥ ಬ್ರಾಹ್ಮಿ ತೈಲ (ಸ್ಪೆಶಲ್ ನಂ ೧)ದಲ್ಲಿರುವುದರಿಂದ ರಾಮತೀರ್ಥ ಯೋಗಾಶ್ರಮದ ಸಂಚಾಲಕರಿಗೆ ಸದೈವ ಆಶೀರ್ವಾದ ಕೊಟ್ಟು ಜನತೆಯು ತೈಲದ ವ್ಯವಹಾರ ಮಾಡಲಿ ಸುಗಂಧ ತೈಲದ ಉಪಯೋಗ ಪ್ರತಿಯೊಂದು ಮನೆಯಲ್ಲೂ ನಾನು ನೋಡಿದೆ.

ಆದರೆ ಅದರ ಬದಲು **ರಾಮತೀರ್ಥ ಬ್ರಾಹ್ಮಿ ತೈಲ** (ಸ್ಪೆಶಲ್ ನಂ 1)ರ ಉಪಯೋಗ ಮಾಡುವುದರಿಂದ ಎಷ್ಟೋ ಪ್ರಯೋಜನವಾಗುವುದು. ನಾನು ಎಷ್ಟೋ ಚಮತ್ಕಾರ ಗುಣಗಳನ್ನು ನೋಡಿದೆ. ವಿಶೇಷವಾಗಿ ಗೃಹಿಣಿ ವಿದ್ಯಾರ್ಥಿ ವರ್ಗವು ಈ ತೈಲದ ಉಪಯೋಗ ಮಾಡಿ ನೋಡಲಿ ಸ್ಮರಣಶಕ್ತಿ ತೀವ್ರವಾಗಿ ಬರುವುದರಿಂದ ಅಭ್ಯಾಸದಲ್ಲಿ ಸಹಾಯವಾಗುವುದು.

(ಸಹಿ) **ಕುಮಾರಿ ಕಮಲ ಶಿಯುನ್‌ಕರ್,**
ನಾಗ್‌ಪೂರ್

ಸ್ಪೆಶಲ್ ನಂ. ೧]

[ಮೆಡಿಕೇಟೆಡ್

ಸ್ಮರಣೆ ಹೆಚ್ಚುತ್ತದೆ, ಶಾಂತನಿದ್ರೆ ಬರುತ್ತದೆ, ಕಣ್ಣಿನ ದೃಷ್ಟಿ ಹೆಚ್ಚುತ್ತದೆ, ಬಕ್ಕೆ ವಾಸಿಯಾಗುತ್ತದೆ, ಕೂದಲು ಕಪ್ಪಾಗುತ್ತದೆ ಬೆಳೆಯುತ್ತವೆ ಮತ್ತು ನೆತ್ತಿಯಲ್ಲಿ ಕೂದಲು ಬರುತ್ತವೆ. ಎಲ್ಲಾ ಋತುಗಳಲ್ಲಿ ಎಲ್ಲರಿಗೂ ಅನುಕೂಲವಿದೆ. ಎಲ್ಲಾ ಕಡೆಯಲ್ಲಿಯೂ ದೊರೆಯುತ್ತದೆ

ಸ್ಥಾನಿಕ ಕ್ರಯ: ದೊಡ್ಡ ಬಾಟ್ಲಿಗೆ ರೂ. 3—8—0 ಸಣ್ಣ ಬಾಟ್ಲಿಗೆ ರೂ. 2—0—0

ಶ್ರೀ ರಾಮತೀರ್ಥ ಯೋಗಾಶ್ರಮ,
ದಾದರ್ (ಜಿ ಐ. ಪಿ.) ಮುಂಬಯಿ ೧೪

ಪ್ರಗತಿಪಥದಲ್ಲಿ ಮುನ್ನಡೆಯುತ್ತಿರುವ ಎಂ. ಜಿ. ಎಂ. ಕಾಲೇಜ್

ತಾ. 27-೬-49ನೇ ದಿನ ಸನ್ಮಾನ್ಯ ಡಾ। ಎ. ಪಿ. ಬಾಳಿಗಾರವರ ದಿವ್ಯ ಹಸ್ತದಿಂದ ಉದ್ಘಾಟಿಸಲ್ಪಟ್ಟ ಉಡುಪಿ ಮಹಾತ್ಮಾ ಗಾಂಧಿ ಮೆಮೋರಿಯಲ್ ಕಾಲೇಜು ಎರಡು ವರ್ಷಗಳಲ್ಲಿ ಸಾಧಿಸಿದ ಪ್ರಗತಿಯನ್ನು ಕಂಡು ಯಾರಿಗೆ ಆನಂದವಾಗದೇ ಇದೆ? ಇಷ್ಟು ಶೀಘ್ರದಲ್ಲಿ ಕಾಲೇಜು ಕಮಿಟಿಯವರ ಕನಸು ನನಸಾದೀತೆಂದು ಯಾರೂ ಭಾವಿಸಿದ್ದರ!

1950ರ ಜುಲಾಯಿಗೆ ಕಾಲೇಜು ವಿದ್ಯಾರ್ಥಿಗಳು ಮಿಕ್ಕುತ್ತ ಬಂದರೂ ಕಾಲೇಜು ಪೇಟೆಯ ಒಂದು ಸಣ್ಣ ಕಟ್ಟಡದಲ್ಲಿದ್ದರೂ, ಪರಿಸ್ಥಿತಿಗಳಿಗೆ ಎಲ್ಲಾ ಬದಿಯ ಲಕ್ಷ್ಮಿಗಳು ತೀರ ವಿರುದ್ಧವಾಗಿದ್ದರೂ ವಿದ್ಯಾರ್ಥಿಗಳೂ ಅಧ್ಯಾಪಕರೂ ಕರ್ತವ್ಯನಿಷ್ಠೆಯಿಂದ ತಮ್ಮ ಕೆಲಸವನ್ನು ಸಾಗಿಸಿದರು. ಪ್ರತಿಯೊಂದು ವಿಭಾಗದಲ್ಲೂ ಕಾಲೇಜು ಹಿಂದಾಗಲಿಲ್ಲ.

ಕಾಲೇಜು ಕಮಿಟಿಯವರು ಕಾಲೇಜಿನ ಸ್ವಂತ ಕಟ್ಟಡದ ನಿಮಿತ್ತ ನಡೆಸಿದ ಹೋರಾಟ ಉಡುಪಿಯ ಮಟ್ಟಿಗೆ ಚರಿತ್ರಾರ್ಹವೆಂದೇ ಹೇಳಬೇಕು. ಒಂದು ಕಡೆ ಕಾಲೇಜಿನ ವೆಚ್ಚ—ಇನ್ನೊಂದು ಕಡೆ ಕಟ್ಟಡದ ವೆಚ್ಚ—ಮತ್ತೊಂದು ಕಡೆ ಸರಕಾರದ ಡಿಪಾಜಿಟಿನ ಹೊಣೆ ಈ ಎಲ್ಲ ಜವಾಬುದಾರಿಯನ್ನು ಹೊರುವಷ್ಟು ಸಾಮರ್ಥ್ಯ ಕಾಲೇಜು ಕಮಿಟಿಗಿದೆಯೆ? ಎನುವಷ್ಟು ವಿಸ್ಮಯಕರವಾದ ಪ್ರಸಂಗಬಂದಿತ್ತು. ಆದರೂ ಕಾಲೇಜು ಕಮಿಟಿ “...ಕುರು ಪೌರುಷಮಾತ್ಮಶಕ್ತ್ಯಾ” ಎನುವ ವೀರೋಕ್ತಿಯಂತೆ ತನ್ನ ಕಾರ್ಯವನ್ನು ಸಾಧಿಸಿಯೇ ಬಿಟ್ಟಿತು. ಈ ಕಾಲೇಜಿನ ಮೂಲ ಪುರುಷ ಡಾ। ಮಾಧವ ಪೈ ಎಂದರೆ ಒಪ್ಪಬಹುದೇನೋ! ಏಕೆಂದರೆ ಈ ಕಾಲೇಜಿನ ಕಲ್ಪನೆ ಬಂದದ್ದೂ, ಅದನ್ನು ರೂಪಿಸಿಕೊಂಡು ಹೋಗಿ ಒಂದು ಗುರಿಯನ್ನು ಮುಟ್ಟುವ ದೂರದರ್ಶಿತ್ವ ಇದ್ದದ್ದೂ ಅವರಲ್ಲೇ! ಕಲ್ಪನೆಗಳಿಗೆಲ್ಲ ಜೀವದಾನ ಮಾಡುವ ಮಹಾಶಿಲ್ಪಿ ಮಾಧವ ಪೈ! ಶ್ರೀ ಪೈಗಳ ದೂರದರ್ಶಿತ್ವ—ಅಚಲವಾದ ಶ್ರದ್ಧೆ ಇವೆರಡೇ ಸಿದ್ಧಿಯ ಮೂಲಗಳು.

ಸಾರ್ವಜನಿಕ ಪ್ರೋತ್ಸಾಹಾದರಗಳಿಗೆ ಪಾತ್ರರಾಗಿರುವ ಶ್ರೀ ಟಿ. ಎ. ಪೈಗಳವರ ಉತ್ಸಾಹ ಉದೀಯಮಾನ ಕಾಲೇಜಿಗೆ ಪುಟವಿಟ್ಟಂತಾಗಿದೆ.

ಅಂತೂ ಕಾಲೇಜು ಕಮಿಟಿಯವರ ಅನೋಘವಾದ ಕಾರ್ಯವನ್ನು ಶ್ಲಾಘಿಸಬೇಕಾಗಿದೆ. ಎರಡೇ ವರ್ಷದೊಳಗೆ ನೂತನ ಕಟ್ಟಡ ನಿರ್ಮಾಣವಾಯಿತು. ಉಡುಪಿಯ ನಾಗರಿಕರೂ ಪ್ರತಿ ಆದಿತ್ಯವಾರ ಹಾಗೂ ಇತರ ದಿನಗಳಲ್ಲಿ ತಾವು ತಾವೆ ವಿಶ್ವಾಸಪೂರ್ವಕವಾಗಿ ಸಶ್ರಮ ಕಾರ್ಯವನ್ನು ಕೈಗೊಂಡು ಗಾಂಧೀಜಿಯವರ ಸ್ವಾವಲಂಬನ ತತ್ವಕ್ಕೆ ಆದರ್ಶರಾಗಿದ್ದಾರೆ. ಕಾಲೇಜಿನ ನಿರ್ಮಾಣ ಕಾರ್ಯದಲ್ಲಿ ತಮ್ಮದೇ ಮನೆಯೆಂಬ ಕರ್ತವ್ಯ ದೃಷ್ಟಿಯಿಂದ ನಾಗರಿಕರು ಶ್ರದ್ಧೆವಹಿಸಿದ್ದರಿಂದಲೇ ಈ ಜೂನಿಗೇನೇ ಕಾಲೇಜು ಅಲ್ಲಿ ತೆರೆಯಲು ಸಾಧ್ಯವಾಯಿತು!

“ನಾಳಿನ ಜನಾಂಗವನ್ನು ನಿರ್ಮಿಸುವ ಮಹಾಶಿಲ್ಪಿಗಳು”
ಕಾಲೇಜಿನ ಪ್ರಿನ್ಸಿಪಾಲ್ ಹಾಗೂ ಅಧ್ಯಾಪಕ ವೃಂದ



ಕೇಂದ್ರ ಸರಕಾರದ ಮಂತ್ರಿಗಳಾದ ಶ್ರೀ ತಿರುಮಲ ರಾವ್ ಮತ್ತು ಶ್ರೀ ಕಾಶೀಂದಲಾಲರ
ಕಾಲೇಜು ಕಟ್ಟಡ ನಿರ್ಮಾಣಕಾರ್ಯವನ್ನವಲೋಕಿಸಿದಾಗ

ಫಸ್ಟ್ ಗ್ರೇಡ್ ಕಾಲೇಜ್ ಆಗಬೇಕೆಂಬ ಕಮಿಟಿಯವರ ಮಹತ್ವದ ಉದ್ದೇಶಕ್ಕೆ ಸರ್ವಯೋಗ್ಯತೆ ಅನುಕೂಲತೆಗಳು ಇರುವದಾದರೂ ಆರ್ಥಿಕ ಪರಿಸ್ಥಿತಿಯಿಂದ ಈ ವರ್ಷ ಅದು ಸಾಧ್ಯವಾಗದಿದೆ.

ಕಾಲೇಜಿನ ನಾನಾರೀತಿಯ ಚಟುವಟಿಕೆಗಳು ಉಡುಪಿಯ ಕಲಾಭಿಮಾನಿಗಳ ಕುತೂಹಲವನ್ನು ಕೆರಳಿಸಿಯದೆ. ಆಟ, ಪಾಟಗಳಲ್ಲಿ ವಿದ್ಯಾರ್ಥಿಗಳು ಯಶಗಳಿಸಿದಹಾಗೆಯೆ ನಾಟಕವೇ ಮೊದಲಾದ ಕಲಾತ್ಮಕ ವಿಭಾಗದಲ್ಲೂ ವಿದ್ಯಾರ್ಥಿಗಳು ತುಂಬ ಖ್ಯಾತಿಗಳಿಸಿದ್ದಾರೆ. ಭಾಷಣ, ಲೇಖನ ವ್ಯವಸಾಯಗಳಲ್ಲೂ ವಿದ್ಯಾರ್ಥಿಗಳು ಪ್ರಗತಿಯನ್ನು ಸಾಧಿಸಿರುತ್ತಾರೆ. ವಿದ್ಯಾರ್ಥಿಗಳೂ ಅಧ್ಯಾಪಕರು ಪರಸ್ಪರ ವಿಶ್ವಾಸ ಸೌಹಾರ್ದಗಳಿಂದ ವರ್ತಿಸುತ್ತಲಿದ್ದಾರೆ. ಮಹಾತ್ಮಾ ಗಾಂಧಿ ಕಾಲೇಜಿನ ವಿದ್ಯಾರ್ಥಿಗಳು ಏಲ ಪಕ್ಷೀಯರಾಗದೆ ಆದರ್ಶವಾದಿಗಳಾಗಿರುತ್ತಾರೆ.

ಸುಂದರವೂ ಅತ್ಯಮೂಲ್ಯವೂ ಆದ ಕಾಲೇಜಿನ ವಾರ್ಷಿಕ ಸಂಚಿಕೆಯು ಕೈಗನ್ನಡಿಯಂತೆ ಕಾಲೇಜಿನ ಕಲಾಪ್ರಿಯತೆಯನ್ನು ಬಿಂಬಿಸುತ್ತದೆ. ಅಧ್ಯಾಪಕರಲ್ಲೊಬ್ಬರೂ ಉತ್ತಮ ಕಲಾವಂತರೂ ಆದ ಶ್ರೀ ಕೆ. ಬಿ. ರಾಮಕೃಷ್ಣರಾಯರ ಕಲಾಪೂರ್ಣ ಚಿತ್ರಗಳು ಅವರಲ್ಲಿರ ವಿಶಿಷ್ಟ ಕಲಾವಂತಿಕೆಯ ದ್ಯೋತಕಗಳೇ ಆಗಿವೆ. ಶ್ರೀ ಕು. ಶಿ. ಯವರ ಕನ್ನಡ ಸಾಹಿತ್ಯ ವಾಹಿನಿ ಬಹುಮುಖದಲ್ಲಿ ಹರಿಯುತ್ತಲಿದೆ. ಪ್ರತಿಯೊಬ್ಬ ಅಧ್ಯಾಪಕರೂ ಪ್ರತಿಭಾಸಂಪನ್ನರು ಆಗಿರುವುದು ಕಾಲೇಜಿಗೆ ಭೂಷಣವೆಂದೇ ಹೇಳಬೇಕು!

ವರ್ಷದಿಂದ ವರ್ಷಕ್ಕೆ ವಿದ್ಯಾರ್ಥಿಗಳ ಸಂಖ್ಯೆ ಹೆಚ್ಚುತ್ತಿರುವುದು ಸಂತೋಷದಾಯಕ ವಿಚಾರ. ದಕ್ಷಿಣ ಕನ್ನಡದಲ್ಲಿ ಮಂಗಳೂರನ್ನು ಬಿಟ್ಟರೆ ಮತ್ತೆ ಉಡುಪಿಯಲ್ಲೇ ಕಾಲೇಜು ಇರುವುದು. ಮಂಗಳೂರಿನಂತಹ ಶಹರಿನಲ್ಲಿ ಕಲಿತು ಕ

ಯಾವದೆಂದರೆ ಅದೊಂದು ಬಗೆಯ ಹಟ ಯೋಗವೇ ಸರಿ! ಆದುದರಿಂದ ಉಡುಪಿಯ ಕಾಲೇಜು ವಿದ್ಯಾರ್ಜನೆಗೆ ಯೋಗ್ಯ ನಿಲಯವಾಗುವುದು ಸ್ವಾಭಾವಿಕ. ಈ ವರ್ಷ ಮಾರ್ಚ್ ತಿಂಗಳಲ್ಲಿ ಇಂಟರ್‌ಮೀಡಿಯೇಟಿಗೆ ಸರಕಾರೀ ಪರೀಕ್ಷೆಗೆ ಕೂತ 80 ವಿದ್ಯಾರ್ಥಿಗಳಲ್ಲಿ 61 ವಿದ್ಯಾರ್ಥಿಗಳು (76%) ಉತ್ತೀರ್ಣರಾಗಿರುವರು. ಅದರಲ್ಲೂ 16 ಮಂದಿ ಉತ್ತಮ ಶ್ರೇಣಿಯಲ್ಲಿ ಪಾಸಾಗಿರುವರು, ಇವು ಉಜ್ವಲ ಭವಿಷ್ಯದ ಶುಭ ಚಿಹ್ನೆಗಳಲ್ಲವೇ?

ಮಹಾನ್ ಪ್ರಯತ್ನದಿಂದ ಸಾಯನ್ಸ್ ವಿಭಾಗವನ್ನೂ ತೆರೆದಿರುವದರಿಂದ ಸರ್ವಸಾಮಾನ್ಯ ಹೆಚ್ಚಿನ ವಿದ್ಯಾರ್ಥಿಗಳು ಇಲ್ಲಿಯೇ ವ್ಯಾಸಂಗ ನಡೆಸಬಹುದಾಗಿದೆ. ಇಷ್ಟೆಲ್ಲ ಸೌಕರ್ಯವಿರುವದಾದರೂ, ಹೆಣ್ಮಕ್ಕಳಿಗೆ ಪ್ರವೇಶ ಕೊಡುವ ವಿಚಾರದಲ್ಲಿ ಸರಕಾರ ವಿಚಿತ್ರ ಧೋರಣೆಯನ್ನು ತಾಳಿದೆ. ಉಡುಪಿಯ ಹೈಸ್ಕೂಲಿನಲ್ಲಿ ಕಲಿತ ಹೆಣ್ಮಕ್ಕಳು ಮುಂದಿನ ವಿದ್ಯಾಭ್ಯಾಸಕ್ಕಾಗಿ ಮಂಗಳೂರಿನಂತಹ ಶಹರಿಗೆ ಹೋಗಬೇಕೆನ್ನುವದರಲ್ಲಿ ಯಾವ ಆದರ್ಶವಾಗಲೀ ಪುರುಷಾರ್ಥವಾಗಲೀ ಇರುವುದಿಲ್ಲ. ಊರ ಹೆಣ್ಮಕ್ಕಳು ನೆರೆಯ ಕಾಲೇಜನ್ನು ಬಿಟ್ಟು ದೂರದ ಕಾಲೇಜಿಗೆ ಕಲಿಯಲು ಹೋಗಬೇಕೆನ್ನುವ ಈ ವಾದ ತರ್ಕಶುದ್ಧವಾದುದಲ್ಲ. ಯಾವುದೋ ಒಣ ಆದರ್ಶಕ್ಕೆ ಬೆನ್ನು ಹತ್ತಿ ಹೆಣ್ಮಕ್ಕಳ ಹಕ್ಕು ಭಾದ್ಯತೆಗಳನ್ನು ಕಸಿದುಕೊಳ್ಳುವುದು ಯೋಗ್ಯವಲ್ಲ. ಕಾಲೇಜು ಕಮಿಟಿಯವರೂ, ಉಡುಪಿಯ ನಾಗರಿಕ ಮಹಿಳೆಯರೂ ಸರಕಾರಕ್ಕೆ ಈ ಕುರಿತು ಹಲವು ಬಗೆಯ ಮನವಿಯನ್ನು ಕಳಿಸಿರುವದಾದರೂ ಈ ವರೆಗೂ ಸರಕಾರದಿಂದ ಆಶಾದಾಯಕ ಉತ್ತರ ಬಂದಿರುವುದಿಲ್ಲ!

ಬಹುಮುಖ ಪ್ರಗತಿಯನ್ನು ಶ್ಲಾಘಿಸುವ ಸಂದರ್ಭದಲ್ಲಿ ಕಾಲೇಜು ಕಮಿಟಿಯು ಇನ್ನೂ ಆರ್ಥಿಕ ಬಿಕ್ಕಟ್ಟಿನಲ್ಲಿರುವುದರಿಂದ ಕೊಂಚ ಚಿಂತೆಯೂ ಆಗುತ್ತದೆ. ಈಗಾಗಲೇ ಕಾಲೇಜಿಗಾಗಿ 2,71,910 ರೂಪಾಯಿ ಸಂಗ್ರಹವಾಗಿರುವುದಾದರೂ ಕಡಿಮೆಯೆಂದರೆ 3,75,000 ರೂಪಾಯಿಯಾದರೂ ಕಾಲೇಜಿಗೆ ಅತ್ಯಾವಶ್ಯಕವಿರುತ್ತದೆ. ಕಮಿಟಿಯ ಮಹತ್ವಾಕಾಂಕ್ಷೆಯಂತೆ ಫಸ್ಟ್ ಗ್ರೇಡ್ ಕಾಲೇಜಾಗಬೇಕಾದರೆ ಮತ್ತೆ 6,75,000 ರೂಪಾಯಿ ಬೇಕೇ ಬೇಕು! ಇದುವೆ ಕಮಿಟಿಯ ತಲೆ ತಿನ್ನುವ ಮುಖ್ಯ ಪ್ರಶ್ನೆ ಹಾಗೂ ಸಮಸ್ಯೆಯಾಗಿರುತ್ತದೆ. ಕಾಲೇಜಿನ ನಿರ್ಮಾಣಕ್ಕೆ ಅವಿರತವಾಗಿ ಶ್ರಮ ವಹಿಸಿದ ಕಮಿಟಿಯ ಕರ್ತವ್ಯಪರ ನಿಷ್ಠೆಯನ್ನು ಲಕ್ಷಿಸಿಯಾದರೂ ಜನತೆ ತಮ್ಮ ಔದಾರ್ಯದ ಕೈಯನ್ನು ಮುಂದೆ ಮಾಡಬಹುದಾಗಿದೆ. ಮೊದಲಿಗೆ ಕಾಲೇಜ್ನ ಉದ್ಘಾಟನಾ ಸಮಾರಂಭದಲ್ಲಿ ಡಾ| ಎ. ಪಿ. ಬಾಳಿಗರು ಹೇಳಿದಂತೆ ಉಡುಪಿಯ ಅಷ್ಟಮಠಾಧಿಪತಿಗಳೂ, ಹೇರಳ ಉತ್ಪತ್ತಿಯುಳ್ಳಂತಹ ಇತರ ದೇವಾಲಯ ಧಾರ್ಮಿಕ ಸಂಸ್ಥೆಗಳವರೂ ಸಾರ್ವಜನಿಕರಿಂದ ಸಂಗ್ರಹಿಸಿದ ಹಣವನ್ನು ಇಂತಹ ಸಂಸ್ಥೆಗಳಿಗೆ ಕೊಟ್ಟು ವಿದ್ಯಾದಾನದ ಪುಣ್ಯ ಕಟ್ಟಿಕೊಳ್ಳಬಹುದು. ಮಠಾಧಿಪತಿಗಳೂ, ಇತರರೂ ಹೀಗೆ ಮಾಡಿದರೆ ಇದೇನೂ ದೊಡ್ಡ ಕೆಲಸವಲ್ಲ; ಅವರ ಕರ್ತವ್ಯ ಕೂಡಾ ಹೌದು. ಜನತೆಯೂ ತನ್ನ ಶಕ್ತಿಗನುಸರಿಸಿ ಪ್ರೀತಿವಿಶ್ವಾಸಗಳ ದ್ಯೋತಕವಾಗಿ ತನ್ನ ಕೊಡುಗೆಯನ್ನು ಮುಂದೆ ಮಾಡುವದರ ಮೂಲಕ ಕಾಲೇಜು ಕಮಿಟಿಯವರ ಭಾರವನ್ನು ಪರಿಹರಿಸಬಹುದಾಗಿದೆ. ಹಾಗಾಗಲೆಂದು ನಾವು ಹೃತ್ಪೂರ್ವಕ ಹಾರೈಸುತ್ತೇವೆ.

ಲೋಕಾಂತ

ಕೊರಿಯದಲ್ಲೇನು?

ಕೊರಿಯದ ಯುದ್ಧರಂಗದಲ್ಲಿ ಸಂಧಾನದ ಮಾತುಕತೆ ಮುಂದೆ; ಯುದ್ಧವೇ ಸಾಗುತ್ತಲಿದೆ. ಅಮೇರಿಕೆಯಂತೂ ಪ್ರಬಲ ಧಾಳಿಯಿಂದ ಕಮ್ಯೂನಿಷ್ಟರನ್ನು ಸಂಪೂರ್ಣ ಸೋಲಿಸಿ ಬಿಡುವ ನಿರ್ಧಾರ ಮಾಡಿದಂತಿದೆ. ಆದರೆ ರಶಿಯವು ಸಂಧಾನದ ಅರ್ಥಾತ್ ಯುದ್ಧವನ್ನು ಪರಿಸಮಾಪ್ತಿಗೊಳಿಸುವ ಹಲವು ಸೂಚನೆಗಳನ್ನು ಮುಂದೆ ಮಾಡಿರುತ್ತದೆ. ಬ್ರಿಟನ್ ಹಾಗೂ ಇನ್ನಿತರ ರಾಷ್ಟ್ರಗಳು ರಶಿಯದ ಸೂಚನೆ, ಮಲಿಕರ ಭಾಷಣ ಯಥಾರ್ಥವಾಗಿದ್ದರೆ–ಕಮ್ಯೂನಿಷ್ಟ ಚೀನ ಅದನ್ನು ಒಪ್ಪುವದಾದರೆ–ಯುದ್ಧ ತಂತಾನೇ ನಿಲ್ಲಬಹುದೆಂದು ಅಭಿಪ್ರಾಯಪಟ್ಟಿವೆ.

ಪರ್ಶಿಯದಲ್ಲಿ ಗಂಭೀರ ಪರಿಸ್ಥಿತಿ

ಪರ್ಶಿಯಾ ಸರಕಾರವು ಆಂಗ್ಲೋ ಇರಾಣಿಯನ್ ಎಣ್ಣೆ ಕಂಪೆನಿಯ ರಾಷ್ಟ್ರೀಕರಣದ ಮೊದಲಿನ ಹೆಜ್ಜೆಯಾಗಿ ಕಂಪೆನಿಯ ಹಿಂದಿನ ಬ್ರಿಟಿಷ್ ಮಾನೇಜರರಾದ ಡೆರೆಕ್, ಹಾಬನ್ಸರನ್ನು "ಮುಂದೆ ತಮಗಾವ ಅಧಿಕಾರವೂ ಇರುವುದಿಲ್ಲ" ಎಂದು ಸ್ಥಾನಭ್ರಷ್ಟರನ್ನಾಗಿ ಮಾಡಿರುತ್ತದೆ. ಎಣ್ಣೆಯ ಶುದ್ಧೀಕರಣ ವಿಭಾಗವು ಸಂಪೂರ್ಣ ಮುಚ್ಚಲ್ಪಟ್ಟಿದ್ದು ಪರ್ಶಿಯ ಪೋಲಿಸರ ಕಾವಲಿನಲ್ಲಿರುತ್ತದೆ. ಅಲ್ಲಿನ ತರುಣ ಕೂಟವೊಂದು ಬ್ರಿಟನರ ವಿರುದ್ಧ ಕುಪಿತವಾಗಿರುವರೆಂದು ತಿಳಿದು ಬರುತ್ತದೆ. ಬ್ರಿಟಿಶ ಅಧಿಕಾರಿಗಳು ಕಂಪೆನಿಯೊಡನೆ ಸಹಕರಿಸುವದಾದರೂ, ರಾಜನಾಮೆ ಕೊಡುವದಾದರೂ 32 ತಾಸಿನೊಳಗೆ ತಿಳಿಸಬೇಕೆಂದು ಪರ್ಶಿಯದ ಮುಖ್ಯಮಂತ್ರಿ ಮುಸಾದಿಕರು ತಿಳಿಸಿರುವರು. ಅಲ್ಲಿ ಉದ್ಭೂತವಾಗಿರುವ ಪರಿಸ್ಥಿತಿಯನ್ನು ನೋಡುವಾಗ ಮಾತಿನಿಂದಲೆ ಮುಕ್ತಾಯಗೊಳ್ಳುವ ಲಕ್ಷಣ ಕಾಣುವುದಿಲ್ಲ.

ಪಾಕಿಸ್ತಾನದ ದೂರು

ಕಾಶ್ಮೀರ ಜಮ್ಮುಗಳಲ್ಲಿ ಘಟನಾಸಮಿತಿಯ ರಚನೆಯಾಗುವುದನ್ನು ತೀವ್ರ ಪ್ರತಿಭಟಿಸಿ ಪಾಕಿಸ್ತಾನವು ಸ. ರಾ. ಸಂಘಕ್ಕೆ ತನ್ನ ದೂರನ್ನು ಕೊಟ್ಟಿರುತ್ತದೆ.

ಕಾಶ್ಮೀರ ಪ್ರತಿನಿಧಿ ಗ್ರ್ಯಾಹ್ಯಾಮರು

ಸಂ. ರಾ. ಸಂಘದ ಪ್ರತಿನಿಧಿ ಡಾ| ಗ್ರ್ಯಾಹ್ಯಾಮರು ಕಾಶ್ಮೀರಕ್ಕೆ ಹೋಗುವ ಸಿದ್ಧತೆಯಲ್ಲಿರುವರು. ಪಾಕಿಸ್ತಾನ ಹಾಗೂ ಭಾರತ ಸರಕಾರಗಳಿಗೆ ತನ್ನ ಆಗಮನದ ಸೂಚನೆಯನ್ನು ಮುಂದಾಗಿ ತಿಳಿಸಿದ್ದು ಎರಡೂ ಸರಕಾರದಿಂದ ಉತ್ತರ ಬಂದಿರುತ್ತದೆಯಂತೆ. ಭಾರತದ ಮುಖ್ಯಮಂತ್ರಿ ಯೋಗ್ಯ ಅತಿಥಿಗೆ ನೀಡಬಹುದಾದ ಸರ್ವವಿಧದ ಸೌಲಭ್ಯ ಸಹಕಾರವನ್ನು ನೀಡಬಹುದೆಂದು ತಿಳಿಸಿದ್ದಾರೆ. ಗ್ರ್ಯಾಹ್ಯಾಮರು ಶ್ರೀ ಬಿ. ಎನ್. ರಾಯರನ್ನು ಕಂಡು ಮಾತುಕತೆ ನಡೆಸಿರುವರು. ಇದೇ ಜುಲೈ 2ನೇ ತಾರೀಕಿಗೆ ನೆಹರೂರವರೊಡನೆ ಮಾತುಕತೆ ನಡೆಸಲಿರುವರು.

ಪಾಕಿಸ್ತಾನದಿಂದ ಜೋಳ

ಪಾಕಿಸ್ತಾನವು ಜುಲೈಯಿಂದ ಅಕ್ಟೋಬರದವರೆಗಿನ ಈ ನಾಲ್ಕು ತಿಂಗಳಿಗೆ 1 15,000 ಟನ್ ಜೋಳವನ್ನು ಭಾರತಕ್ಕೆ ಕಳಿಸಲಿರುವದೆಂದು ಸರಕಾರೀ ಪ್ರಕಟಣೆಯಲ್ಲಿ ಹೇಳಲಾಗಿದೆ. ಮುಂದಿನ ಕೊಡುಗೆಯನ್ನು ಅಕ್ಟೋಬರ ತಿಂಗಳಲ್ಲಿ ಬೆಳೆಯ ಪರಿಸ್ಥಿತಿಯನ್ನು ಲಕ್ಷಿಸಿ ಪ್ರಕಟಿಸುವದೆಂದೂ ಪ್ರಕಟಣೆಯಲ್ಲಿ ಹೇಳಲಾಗಿದೆ

ಪತ್ರಿಕಾ ಹಕ್ಕಿನ ಅಪಹರಣ ಪ್ರಶ್ನೆ

ಅ. ಭಾ. ಪತ್ರಿಕಾ ಸಂಪಾದಕರ ಪರಿಷತ್ತು ಮುಂಬಯಿಯಲ್ಲಿ ಕೂಡಿ ಕೇಂದ್ರ ಮತ್ತು ಪ್ರಾಂತಗಳಲ್ಲಿ ಸಲಹಾ, ವಿಚಾರವಿನಿಮಯ ಮಾಡುವ ಹಾಗೂ ಸಹಾಯ ನೀಡುವ ಕೆಲಸ ಮಾಡುತ್ತಿದ್ದ ಪರಿಷತ್ತುಗಳು ತಮ್ಮ ಕಾರ್ಯವನ್ನು ನಿಲ್ಲಿಸಬೇಕೆಂದು ನಿರ್ಣಯಿಸಲಾಗಿದೆ. ಅಧ್ಯಕ್ಷ ಲಾಲಾ ದೇಶಬಂಧು ಗುಪ್ತರು ಪತ್ರಿಕೆಗಳ ಸ್ವಾತಂತ್ರ್ಯದ ಬಳಿಕ ಈ ವರೆಗೆ ಸಲ್ಲಿಸಿದ ಸೇವೆ ಗೌರವಾರ್ಹವಾಗಿದ್ದರೂ ನೂತನ ಘಟನೆಯ ಮೂಲಕ ಅವುಗಳ ಸ್ವಾತಂತ್ರ್ಯವನ್ನು ಅಪಹರಿಸುವ ಧೋರಣೆಯನ್ನೇಕೆ ಸರಕಾರ ವಹಿಸಿತೆಂಬುದು ನಮಗೆ ತಿಳಿಯದಾಗಿದೆ. ಈ ಅತ್ಯವಸರ ಧೋರಣದ ವೈಚಿತ್ರ್ಯವೇ ನಮಗೆ ತಿಳಿಯುವುದಿಲ್ಲ. ಸರಕಾರಕ್ಕೆ ಸಹಕಾರ ನೀಡಿದ ಈ ಮಹಾಸಂಸ್ಥೆಯ ಮೇಲೆ ಗದಾಪ್ರಹಾರ ಮಾಡಿದಂತೆಯೇ ಆಗಿದೆ." ಎಂದು ಹೇಳಿರುವರು. ರಾಜ್ಯ ಘಟನೆಯ ೧೯ (೨) ಕಲಮಿನ ತಿದ್ದುಪಡಿಯನ್ನು ರದ್ದುಗೊಳಿಸಿ ವಿಚಾರ ಸ್ವಾತಂತ್ರ್ಯವನ್ನು ಮರಳಿ ಕೊಡುವವರೆಗೆ ಭಾರತದ ಪತ್ರಿಕೆಗಳು ಕಟುತರ ಧೋರಣೆಯನ್ನು ವಹಿಸಬಾರದೆಂಬ ಗೊತ್ತುವಳಿಯೂ ಪಾಸಾಯಿತು.

ದೇಶಭಕ್ತ ಗಂಗಾಧರ ರಾಯರಿಗೆ ಸತ್ಕಾರ

ದೇಶಭಕ್ತ ಗಂಗಾಧರ ರಾವ ದೇಶಪಾಂಡೆ 'ಕರ್ನಾಟಕದ ಕೇಸರಿ'ಯವರ 81ನೇ ಜನ್ಮದಿನಾಚರಣೆಯ ಸಮಾರಂಭವು ಭಾರತ ಪಾರ್ಲಿಮೆಂಟಿನ ಅಧ್ಯಕ್ಷ ಶ್ರೀ ಮಾವಳಣಕರ ಅಧ್ಯಕ್ಷತೆಯಲ್ಲಿ ಬೆಳಗಾವಿಯ ಪ್ರಕಾಶ ಟಾಕಿ ಹಾಲದಲ್ಲಿ ಜರಗಿತು. ಈ ಸಮಾರಂಭಕ್ಕೆ ಡಾ| ರಾಜೇಂದ್ರ ಪ್ರಸಾದ, ವಿನೋಬಾ ಭಾವೆ, ರಾಜಾಜಿ, ಕೆ. ಜಿ. ಮಶ್ರುವಾಲಾ, ದೇವದಾಸ ಗಾಂಧಿ, ಪಂತಾದವರ ಸಂದೇಶಗಳು ಬಂದಿದ್ದವು! ಕೇಂದ್ರ ಸರಕಾರದ ಸುದ್ದಿಖಾತೆಯ ಸಚಿವ ಶ್ರೀ ಆರ್. ಆರ್. ದಿವಾಕರರೂ, ಶ್ರೀ ಹರ್ಡೀಕರರೂ ದೇಶಪಾಂಡೆಯವರ ಕುರಿತು ಸುದೀರ್ಘ ಭಾಷಣ ಮಾಡಿದರು. ಮಾನ್ಯ ಅಧ್ಯಕ್ಷರು "ಶ್ರೀ ಗಂಗಾಧರರಾಯ ದೇಶಪಾಂಡೆಯವರ ಈ ಸುದೀರ್ಘ ಜೀವನವು ಹಿಂದೂಸ್ಥಾನದ ಇತಿಹಾಸದಲ್ಲಿಯ ಮಹತ್ವದ ಅವಧಿಯಾಗಿದೆ" ಎಂದರು.

ಕೊರತೆ ಪ್ರದೇಶಗಳಿಗೆ ಕೇಂದ್ರದ ಆಹಾರ ಧಾನ್ಯ

ಜೂನು ತಿಂಗಳ 15ಕ್ಕೆ ಕೇಂದ್ರ ಸರಕಾರವು ಕೊರತೆಯ ಪ್ರದೇಶಗಳಿಗೆ 1,19950 ಟನ್ನು ಆಹಾರ ಧಾನ್ಯವನ್ನು ಕಳಿಸಿರುತ್ತದೆ. ಅದರಲ್ಲಿ ಮದ್ರಾಸಕ್ಕೆ 18000 ಟನ್ನು ಬಂದಿರುತ್ತದೆ.

ಪಾಕಿಸ್ತಾನ ಯುದ್ಧವಿರಾಮ ಆಜ್ಞೆಯನ್ನುಲ್ಲಂಘಿಸಿತು

ಜಮ್ಮು ಕಾಶ್ಮೀರಗಡಿಯಲ್ಲಿ ಪಾಕಿಸ್ತಾನೀ ಸೈನಿಕರು ಇಬ್ಬರು ಹಿಂದೀ ಸೈನಿಕರನ್ನು ಕೊಲೆಮಾಡಿದ್ದು ಆ ಸೈನಿಕರ ಶವಸಂಸ್ಕಾರವನ್ನು ಸೈನಿಕ ಗೌರವ ರೀತಿಯಲ್ಲಿ ನಡೆಸಿದರು. ಸಂ. ರಾ. ಸಂಘದ ನಿರೀಕ್ಷಕರು ಇದನ್ನು ಲಕ್ಷ್ಯಕ್ಕೆ ತೆಗೆದುಕೊಂಡಿದ್ದಾರೆ. ಈ ಘಟನೆಯು ಯುದ್ಧವಿರಾಮದ ಆಜ್ಞೋಲ್ಲಂಘನೆಯೆಂದು ಅಧಿಕೃತವಾಗಿ ಹೇಳಲಾಗಿದೆ.

ಸತ್ತವ್ರು ಮಾತೆತ್ತೋದಿಲ್ಲ ಖರೆ,—
ಆದ್ರೆ ಅವ್ರ ಹೆಂಡ್ತಿ ಮಕ್ಳು?
"ಯಜಮಾನ್ರು ಇನ್ಶೂರ್ ಮಾಡಿರ್ಲಿಲ್ಲ" ಎಂಬೋದೇ ಮಾತು ಉಳಿದವ್ರ ಸಂಕಷ್ಟ ತಿಳಿಸ್ತೈತೆ.
ಪ್ರತೀ ಗೃಹಸ್ಥ್ರೂ ತಮ್ಮ ಸಂಸಾರ್ಕ ಇಂಥಾ ಸ್ಥಿತಿ ಬಾರದಂತೆ ಮುಂಚಿತವಾಗಿ ನೋಡಿಕೊಳ್ಬೇಕ್ರೀ.
ದಿ ಕೆನರಾ ಮ್ಯೂಚುವಲ್
ಶ್ರೀ
ಎಶ್ಶೂರೆನ್ಸ್ ಕಂಪೆನಿ ಲಿಮಿಟೆಡ್,
ಪ್ರಧಾನ ಕಾರ್ಯಾಲಯ: ಉಡುಪಿ ಸ್ಥಾಪನೆ: ೧೯೩೫
The Canara Mutual Assurance Co, Ltd.
H. O. UDIPI (SOUTH INDIA) ESTI. 1935.



ಪ್ರಗತಿಪಥದಲ್ಲಿ ಮುನ್ನಡೆಯುತ್ತಿರುವ ಎಂ. ಜಿ. ಎಂ. ಕಾಲೇಜ್

"ನಾಳಿನ ಜನಾಂಗವನ್ನು ನಿರ್ಮಿಸುವ ಮಹಾಶಿಲ್ಪಿಗಳು.........."
ಕಾಲೇಜಿನ ಪ್ರಿನ್ಸಿಪಾಲ್ ಹಾಗೂ ಅಧ್ಯಾಪಕ ವೃಂದ.

ಕೇಂದ್ರ ಸರಕಾರದ ಮಂತ್ರಿಗಳಾದ ಶ್ರೀ ತಿರುಮಲ ರಾವ್ ಮತ್ತು ಶ್ರೀ ಕುಶೋಲರಾಯರು, ಕಾಲೇಜು ಕಟ್ಟಡ ನಿರ್ಮಾಣ ಕಾರ್ಯವನ್ನವಲೋಕಿಸಿದಾಗ.

ತಾ. 27-6-49ನೇ ದಿನ ಸನ್ಮಾನ್ಯ ಡಾ। ಎ. ಪಿ. ಬಾಳಿಗಾರವರ ದಿವ್ಯ ಹಸ್ತದಿಂದ ಉದ್ಘಾಟಿಸಲ್ಪಟ್ಟ ಉಡುಪಿ ಮಹಾತ್ಮಾ ಗಾಂಧಿ ಮೆಮೋರಿಯಲ್ ಕಾಲೇಜು ಎರಡು ವರ್ಷಗಳಲ್ಲಿ ಸಾಧಿಸಿದ ಪ್ರಗತಿಯನ್ನು ಕಂಡು ಯಾರಿಗೆ ಆನಂದವಾಗದೇಡ? ಇಷ್ಟು ಶೀಘ್ರದಲ್ಲಿ ಕಾಲೇಜು ಕಮಿಟಿಯವರ ಕನಸು ನನಸಾದೀತೆಂದು ಯಾರೂ ಭಾವಿಸಿದ್ದರು!

1950ರ ಜುಲಾಯಿಗೆ ಕಾಲೇಜು ವಿದ್ಯಾರ್ಥಿಗಳು ಮಿಕ್ಕುತ್ತ ಬಂದರು. ಕಾಲೇಜು ಪೇಟೆಯ ಒಂದು ಸಣ್ಣ ಕಟ್ಟಡದಲ್ಲಿದ್ದರೂ, ಪಾಠಪ್ರವಚನಗಳಿಗೆ ಎಡರು ಬದಿಯ ದಸ್ತಿಗಳು ತೀರ ವಿರುದ್ಧವಾಗಿದ್ದರೂ ವಿದ್ಯಾರ್ಥಿಗಳೂ ಅಧ್ಯಾಪಕರೂ ಕರ್ತವ್ಯನಿಷ್ಠೆಯಿಂದ ತಮ್ಮ ಕೆಲಸವನ್ನು ಸಾಗಿಸಿದರು. ಪ್ರತಿಯೊಂದು ವಿಭಾಗದಲ್ಲೂ ಕಾಲೇಜು ಹಿಂದಾಗಲಿಲ್ಲ.

ಕಾಲೇಜು ಕಮಿಟಿಯವರು ಕಾಲೇಜಿನ ಸ್ವಂತ ಕಟ್ಟಡದ ನಿಮಿತ್ತ ನಡೆಸಿದ ಹೋರಾಟ ಉಡುಪಿಯ ಮಟ್ಟಿಗೆ ಚಾರಿತ್ರಾರ್ಹವೆಂದೇ ಹೇಳಬೇಕು. ಒಂದು ಕಡೆ ಕಾಲೇಜಿನ ವೆಚ್ಚ—ಇನ್ನೊಂದು ಕಡೆ ಕಟ್ಟಡದ ವೆಚ್ಚ—ಮತ್ತೊಂದು ಕಡೆ ಸರಕಾರದ ಡಿಪಾಜಿಟಿನ ಜೊತೆ ಈ ಎಲ್ಲ ಜವಾಬುದಾರಿಯನ್ನು ಹೊರುವಷ್ಟು ಸಾಮರ್ಥ್ಯ ಕಾಲೇಜು ಕಮಿಟಿಗಿದೆಯೆ? ಎನುವಷ್ಟು ವಿಸ್ಮಯಕರವಾದ ಪ್ರಸಂಗ ಬಂದಿತ್ತು. ಆದರೂ ಕಾಲೇಜು ಕಮಿಟಿ "...ಕುರು ಪೌರುಷಮಾತ್ಮಶಕ್ತ್ಯಾ" ಎನುವ ವೀರೋಕ್ತಿಯಂತೆ ತನ್ನ ಕಾರ್ಯವನ್ನು ಸಾಧಿಸಿಯೇ ಬಿಟ್ಟಿತು. ಈ ಕಾಲೇಜಿನ ಮೂಲಪುರುಷ ಡಾ। ಮಾಧವ ಪೈ ಎಂದರೆ ಒಪ್ಪಬಹುದೇನೋ! ಏಕೆಂದರೆ ಈ ಕಾಲೇಜಿನ ಕಲ್ಪನೆ ಬಂದದ್ದೂ, ಅದನ್ನು ರೂಪಿಸಿಕೊಂಡು ಹೋಗಿ ಒಂದು ಗುರಿಯನ್ನು ಮುಟ್ಟುವ ದೂರದರ್ಶಿತ್ವ ಇದ್ದದ್ದೂ ಅವರಲ್ಲೇ! ಕಲ್ಪನೆಗಳಿಗೆಲ್ಲ ಜೀವದಾನ ಮಾಡುವ ಮಹಾಶಿಲ್ಪಿ ಮಾಧವ ಪೈ! ಶ್ರೀ ಪೈಗಳ ದೂರದರ್ಶಿತ್ವ—ಅಚಲವಾದ ಶ್ರದ್ಧೆ ಇವೆರಡೇ ಸಿದ್ಧಿಯ ಮೂಲಗಳು.

ಸಾರ್ವಜನಿಕ ಪ್ರೋತ್ಸಾಹದಲಗಳಿಗೆ ಪಾತ್ರರಾಗಿರುವ ಶ್ರೀ ಟಿ. ಎ. ಪೈಗಳವರ ಉತ್ಸಾಹ ಉದೀಯಮಾನ ಕಾಲೇಜಿಗೆ ಪುಟವಿಟ್ಟಂತಾಗಿದೆ.

ಅಂತೂ ಕಾಲೇಜು ಕಮಿಟಿಯವರ ಅಮೋಘವಾದ ಕಾರ್ಯವನ್ನು ಶ್ಲಾಘಿಸಬೇಕಾಗಿದೆ. ಎರಡೇ ವರ್ಷದೊಳಗೆ ನೂತನ ಕಟ್ಟಡ ನಿರ್ಮಾಣವಾಯಿತು. ಉಡುಪಿಯ ನಾಗರಿಕರೂ ಪ್ರತಿ ಆದಿತ್ಯವಾರ ಹಾಗೂ ಇತರ ದಿನಗಳಲ್ಲಿ ತಾವು ತಾವೆ ವಿಶ್ವಾಸಪೂರ್ವಕವಾಗಿ ಸಶ್ರಮ ಕಾರ್ಯವನ್ನು ಕೈಗೊಂಡು ಗಾಂಧೀಜಿಯ ಸ್ವಾವಲಂಬನ ತತ್ವಕ್ಕೆ ಆದರ್ಶರಾಗಿದ್ದಾರೆ. ಕಾಲೇಜಿನ ನಿರ್ಮಾಣ ಕಾರ್ಯದಲ್ಲಿ ತಮ್ಮದೇ ಮನೆಯೆಂಬ ಕರ್ತವ್ಯದೃಷ್ಟಿಯಿಂದ ನಾಗರಿಕರು ಶ್ರದ್ಧೆವಹಿಸಿದ್ದರಿಂದಲೇ ಈ ಜೂನಿಗೇನೇ ಕಾಲೇಜು ಅಲ್ಲಿ ತೆರೆಯಲು ಸಾಧ್ಯವಾಯಿತು!

ಫಸ್ಟ್‌ಗ್ರೇಡ್ ಕಾಲೇಜ್ ಆಗಬೇಕೆಂಬ ಕಮಿಟಿಯವರ ಮಹತ್ವದ ಉದ್ದೇಶಕ್ಕೆ ಸರ್ವಯೋಗ್ಯತೆ ಅನುಕೂಲತೆಗಳು ಇರುವದಾದರೂ ಆರ್ಥಿಕ ಪರಿಸ್ಥಿತಿಯಿಂದ ಈ ವರ್ಷ ಅದು ಸಾಧ್ಯವಾಗದಿದೆ.

ಕಾಲೇಜಿನ ನಾನಾರೀತಿಯ ಚಟುವಟಿಕೆಗಳು ಉಡುಪಿಯ ಕಲಾಭಿಮಾನಿಗಳ ಕುತೂಹಲವನ್ನು ಕೆರಳಿಸಿಯದೆ. ಆಟ, ಪಾಟಗಳಲ್ಲಿ ವಿದ್ಯಾರ್ಥಿಗಳು ಯಶಗಳಿಸಿದ ಹಾಗೆಯೆ ನಾಟಕವೇ ಮೊದಲಾದ ಕಲಾತ್ಮಕ ವಿಭಾಗದಲ್ಲೂ ವಿದ್ಯಾರ್ಥಿಗಳು ತುಂಬ ಖ್ಯಾತಿಗಳಿಸಿದ್ದಾರೆ. ಭಾಷಣ, ಲೇಖನ ವ್ಯವಸಾಯಗಳಲ್ಲೂ ವಿದ್ಯಾರ್ಥಿಗಳು ಪ್ರಗತಿಯನ್ನು ಸಾಧಿಸಿರುತ್ತಾರೆ. ವಿದ್ಯಾರ್ಥಿಗಳೂ ಅಧ್ಯಾಪಕರು ಪರಸ್ಪರ ವಿಶ್ವಾಸ ಸೌಹಾರ್ದಗಳಿಂದ ವರ್ತಿಸುತ್ತಲಿದ್ದಾರೆ. ಮಹಾತ್ಮಾ ಗಾಂಧಿ ಕಾಲೇಜಿನ ವಿದ್ಯಾರ್ಥಿಗಳು ವಿಲಾಸಪ್ರಿಯರಾಗದೆ ಆದರ್ಶವಾದಿಗಳಾಗಿರುತ್ತಾರೆ.

ಸುಂದರವೂ ಅತ್ಯಮೂಲ್ಯವೂ ಆದ ಕಾಲೇಜಿನ ವಾರ್ಷಿಕ ಸಂಚಿಕೆಯು ಕೈಗನ್ನಡಿಯಂತೆ ಕಾಲೇಜಿನ ಕಲಾಪ್ರಿಯತೆಯನ್ನು ಬಿಂಬಿಸುತ್ತದೆ. ಅಧ್ಯಾಪಕರಲ್ಲೊಬ್ಬರೂ ಉತ್ತಮ ಕಲಾವಂತರೂ ಆದ ಶ್ರೀ ಕೆ. ಬಿ. ರಾಕೃಷ್ಣರಾಯರ ಕಲಾಪೂರ್ಣ ಚಿತ್ರಗಳು ಪ್ರವರ್ತಕರ ಪತ್ರಿಕೆಯ ಕಲಾವಂತಿಕೆಯ ದ್ಯೋತಕಗಳೇ ಆಗಿವೆ. ಶ್ರೀ ಕು. ಶಿ. ಯವರ ಕನ್ನಡ ಸಾಹಿತ್ಯ ವಾಹಿನಿ ಬಹುಮುಖದಲ್ಲಿ ಹರಿಯುತ್ತಲಿದೆ. ಪ್ರತಿಯೊಬ್ಬ ಅಧ್ಯಾಪಕರೂ ಪ್ರತಿಭಾಸಂಪನ್ನರೇ ಆಗಿರುವುದು ಕಾಲೇಜಿಗೆ ಭೂಷಣವೆಂದೇ ಹೇಳಬೇಕು!

ವರ್ಷದಿಂದ ವರ್ಷಕ್ಕೆ ವಿದ್ಯಾರ್ಥಿಗಳ ಸಂಖ್ಯೆ ಹೆಚ್ಚುತ್ತಿರುವುದು ಸಂತೋಷದಾಯಕ ವಿಚಾರ. ದಕ್ಷಿಣ ಕನ್ನಡದಲ್ಲಿ ಮಂಗಳೂರನ್ನು ಬಿಟ್ಟರೆ ಮತ್ತೆ ಉಡುಪಿಯಲ್ಲೇ ಕಾಲೇಜು ಇರುವುದು. ಮಂಗಳೂರಿನಂತಹ ಶಹರಿನಲ್ಲಿ ಕೂಡ ಕಲ

ಯುವದೆಂದರೆ ಅದೊಂದು ಬಗೆಯ. ಹಟಯೋಗವೇ ಸಂಭವಿಸುದರಿಂದ ಉಡುಪಿಯು ಕಾಲೇಜು ವಿದ್ಯಾರ್ಜನೆಗೆ ಯೋಗ್ಯ ನಿಲಯವಾಗುವುದು ಸ್ವಾಭಾವಿಕ. ಈ ವರ್ಷ ಮಾರ್ಚ್ ತಿಂಗಳಲ್ಲಿ ಇಂಟರ್ ಮೀಡಿಯೇಟಿಗೆ ಸರಕಾರೀ ಪರೀಕ್ಷೆಗೆ ಕೂತ 80 ವಿದ್ಯಾರ್ಥಿಗಳಲ್ಲಿ 61 ವಿದ್ಯಾರ್ಥಿಗಳ (76%) ಉತ್ತೀರ್ಣರಾಗಿರುವರು. ಅದರಲ್ಲೂ 16 ಮಂದಿ ಉತ್ತಮ ಶ್ರೇಣಿಯಲ್ಲಿ ಪಾಸಾಗಿರುವರು. ಇವು ಉಜ್ವಲ ಭವಿಷ್ಯದ ಶುಭ ಚಿಹ್ನೆಗಳಲ್ಲವೇ?

ಮುಂದಿನ ಪ್ರಯತ್ನದಿಂದ ಸಾಯನ್ಸ್ ವಿಭಾಗವನ್ನೂ ತೆರೆದಿರುವದರಿಂದ ಸರ್ವಸಾಮಾನ್ಯ ಹೆಚ್ಚಿನ ವಿದ್ಯಾರ್ಥಿಗಳು ಇಲ್ಲಿಯ ವ್ಯಾಸಂಗ ನಡೆಸಬಹುದಾಗಿದೆ. ಇಷ್ಟೆಲ್ಲ ಸೌಕರ್ಯವಿರುವದಾದರೂ, ಹೆಣ್ಮಕ್ಕಳಿಗೆ ಪ್ರವೇಶ ಕೊಡುವ ವಿಚಾರದಲ್ಲಿ ಸರಕಾರ ವಿಚಿತ್ರ ಧೋರಣೆಯನ್ನು ತಾಳಿದೆ. ಅಸುಪಾಸಿನ ಹೈಸ್ಕೂಲಿನಲ್ಲಿ ಕಲಿತ ಹೆಣ್ಮಕ್ಕಳು ಮುಂದಿನ ವಿದ್ಯಾಭ್ಯಾಸಕ್ಕಾಗಿ ಮಂಗಳೂರಿನಂತಹ ಶಹರಿಗೆ ಹೋಗಬೇಕೆನ್ನುವದರಲ್ಲಿ ಯಾವ ಆದರ್ಶವಾಗಲೀ ಪುರುಷಾರ್ಥವಾಗಲೀ ಇರುವುದಿಲ್ಲ. ಊರ ಹೆಣ್ಮಕ್ಕಳು ನೆರೆಯ ಕಾಲೇಜನ್ನು ಬಿಟ್ಟು ದೂರದ ಕಾಲೇಜಿಗೆ ಕಲಿಯಲು ಹೋಗಬೇಕೆನ್ನುವ ಈ ವಾದ ತರ್ಕಶುದ್ಧವಾದುದಲ್ಲ ಯಾವುದೋ ಒಣ ಆದರ್ಶಕ್ಕೆ ಬೆನ್ನು ಹತ್ತಿ ಹೆಣ್ಮಕ್ಕಳ ಹಕ್ಕು ಬಾಧ್ಯತೆಗಳನ್ನು ಕಸಿದುಕೊಳ್ಳುವುದು ಯೋಗ್ಯವಲ್ಲ. ಕಾಲೇಜು ಕಮಿಟಿಯವರೂ, ಉಡುಪಿಯ ನಾಗರಿಕ ಮಹಿಳೆಯರೂ ಸರಕಾರಕ್ಕೆ ಈ ಕುರಿತು ಹಲವು ಬಗೆಯ ಮನವಿಯನ್ನು ಕಳಿಸಿರುವದಾದರೂ ಈ ವರೆಗೂ ಸರಕಾರದಿಂದ ಆಶಾದಾಯಕ ಉತ್ತರ ಬಂದಿರುವುದಿಲ್ಲ!

ಬಹುಮುಖ ಪ್ರಗತಿಯನ್ನು ಶ್ಲಾಘಿಸುವ ಸಂದರ್ಭದಲ್ಲಿ ಕಾಲೇಜು ಕಮಿಟಿಯು ಇನ್ನೂ ಆರ್ಥಿಕ ಬಿಕ್ಕಟ್ಟಿನಲ್ಲಿರುವುದರಿಂದ ಕೊಂಚ ಚಿಂತೆಯೂ ಆಗುತ್ತದೆ. ಈ ವರೆಗಾಗಲೇ ಕಾಲೇಜಿಗಾಗಿ 2,71,910 ರೂಪಾಯಿ ಸಂಗ್ರಹವಾಗಿರುವುದಾದರೂ ಕನಿಷ್ಠ ಮೊತ್ತವೆಂದರೆ 3,75,000 ರೂಪಾಯಿಯಾದರೂ ಕಾಲೇಜಿಗೆ ಅತ್ಯವಶ್ಯಕವಿರುತ್ತದೆ. ಕಮಿಟಿಯ ಮಹತ್ವಾಕಾಂಕ್ಷೆಯಂತೆ ಫಸ್ಟ್ ಗ್ರೇಡ್ ಕಾಲೇಜಾಗಬೇಕಾದರೆ ಮತ್ತೆ 6,75,000 ರೂಪಾಯಿ ಬೇಕೇ ಬೇಕು! ಇದುವೆ ಕಮಿಟಿಯ ತಲೆ ತಿನ್ನುವ ಮಹಾ ಪ್ರಶ್ನೆ ಹಾಗೂ ಸಮಸ್ಯೆಯಾಗಿರುತ್ತದೆ. ಕಾಲೇಜಿನ ನಿರ್ಮಾಣಕ್ಕೆ ಅವಿರತವಾಗಿ ಶ್ರಮ ವಹಿಸಿದ ಕಮಿಟಿಯ ಕರ್ತವ್ಯಪರ ನಿಷ್ಠೆಯನ್ನು ಲಕ್ಷಿಸಿಯಾದರೂ ಜನತೆ ತಮ್ಮ ಔದಾರ್ಯದ ಕೈಯನ್ನು ಮುಂದೆ ಮಾಡಬಹುದಾಗಿದೆ. ಮೊದಲಿಗೆ ಕಾಲೇಜು ಉದ್ಘಾಟನಾ ಸಮಾರಂಭದಲ್ಲಿ ಡಾ। ಎ. ವಿ. ಬಾಳಿಗರು ಹೇಳಿದಂತೆ ಉಡುಪಿಯ ಅಷ್ಟಮಠಾಧಿಪತಿಗಳೂ, ಹೇರಳ ಉತ್ಪತ್ತಿಯುಳ್ಳಂತಹ ಇತರ ದೇವಾಲಯ ಧಾರ್ಮಿಕ ಸಂಸ್ಥೆಗಳವರೂ ಸಾರ್ವಜನಿಕರಿಂದ ಸಂಗ್ರಹಿಸಿದ ಹಣವನ್ನು ಇಂತಹ ಸಂಸ್ಥೆಗಳಿಗೆ ಕೊಟ್ಟು ವಿದ್ಯಾದಾನದ ಪುಣ್ಯ ಕಟ್ಟಿಕೊಳ್ಳಬಹುದು. ಮಠಾಧಿಪತಿಗಳೂ, ಇತರರೂ ಮನಸ್ಸು ಮಾಡಿದರೆ ಇದೇನೂ ದೊಡ್ಡ ಕೆಲಸವಲ್ಲ; ಅವರ ಕರ್ತವ್ಯ ಕೂಡಾ ಹೌದು. ಜನತೆ

ಲೋಕಾಂತ

ಕೊರಿಯದಲ್ಲೇನು?

ಕೊರಿಯದ ಯುದ್ಧರಂಗದಲ್ಲಿ ಸಂಧಾನದ ಮಾತುಕತೆ ಮುಂದೆ; ಯುದ್ಧವೇ ನಾಗುತ್ತಲಿದೆ. ಅಮೆರಿಕೆಯಂತೂ ಪ್ರಬಲ ದಾಳಿಯಿಂದ ಕಮ್ಯೂನಿಸ್ಟರನ್ನು ಸಂಪೂರ್ಣ ಸೋಲಿಸಿ ಬಿಡುವ ನಿರ್ಧಾರ ಮಾಡಿದಂತಿದೆ. ಆದರೆ ರಶಿಯವು ಸಂಧಾನದ ಆರ್ಥಾತ್ ಯುದ್ಧವನ್ನು ಪರಿಸಮಾಪ್ತಿಗೊಳಿಸುವ ಹಲವು ಸೂಚನೆಗಳನ್ನು ಮುಂದೆ ಮಾಡಿರುತ್ತದೆ. ಬ್ರಿಟನ್ ಹಾಗೂ ಇನ್ನಿತರ ರಾಷ್ಟ್ರಗಳು ರಶಿಯದ ಸೂಚನೆ, ಮಲಿಕರ ಭಾಷಣ ಯಥಾರ್ಥವಾಗಿದ್ದರೆ–ಕಮ್ಯೂನಿಸ್ಟ ಚೀನ ಅದನ್ನು ಒಪ್ಪುವದಾದರೆ–ಯುದ್ಧ ತಂತಾನೇ ನಿಲ್ಲಬಹುದೆಂದು ಅಭಿಪ್ರಾಯಪಟ್ಟಿವೆ.

ಪರ್ಶಿಯದಲ್ಲಿ ಗಂಭೀರ ಪರಿಸ್ಥಿತಿ

ಪರ್ಶಿಯಾ ಸರಕಾರವು ಆಂಗ್ಲೋ ಇರಾಣಿಯನ್ ಎಣ್ಣೆ ಕಂಪನಿಯ ರಾಷ್ಟ್ರೀಕರಣದ ಮೊದಲಿನ ಹೆಜ್ಜೆಯಾಗಿ ಕಂಪನಿಯ ಹಿಂದಿನ ಬ್ರಿಟಿಷ್ ಮನೇಜರರಾದ ಡೆರೇ, ಹಾಬನ್ಸರನ್ನು "ಮುಂದೆ ತಮಗಾವ ಅಧಿಕಾರವೂ ಇರುವುದಿಲ್ಲ" ಎಂದು ಸ್ಥಾನಬದ್ಧರನ್ನಾಗಿ ಮಾಡಿರುತ್ತದೆ. ಎಣ್ಣೆಯ ಶುದ್ಧೀಕರಣ ವಿಭಾಗವು ಸಂಪೂರ್ಣ ಮುಚ್ಚಲ್ಪಟ್ಟಿದ್ದು ಪರ್ಶಿಯ ಪೋಲಿಸರ ಕಾವಲಿನಲ್ಲಿರುತ್ತದೆ. ಅಲ್ಲಿನ ಪರುಣ ಕೂಟವೊಂದು ಬ್ರಿಟನರ ವಿರುದ್ಧ ಕುಪಿತವಾಗಿರುವದೆಂದು ತಿಳಿದು ಬರುತ್ತದೆ. ಬ್ರಿಟಿಶ ಅಧಿಕಾರಿಗಳು ಕಂಪನಿಯೊಡನೆ ಸಹಕರಿಸುವದಾದರೂ, ರಾಜಿನಾಮೆ ಕೊಡುವದಾದರೂ 32 ತಾಸಿನೊಳಗೆ ತಿಳಿಸಬೇಕೆಂದು ಪರ್ಶಿಯದ ಮುಖ್ಯ ಮಂತ್ರಿ ಮುಸಾದಿಕರು ತಿಳಿಸಿರುವರು. ಅಲ್ಲಿ ಉದ್ಭೂತವಾಗಿರುವ ಪರಿಸ್ಥಿತಿಯನ್ನು ನೋಡುವಾಗ ಪಾರ್ಶಿಂದಲೆ ಮುಕ್ತಾಯಗೊಳ್ಳುವ ಲಕ್ಷಣ ಕಾಣುವುದಿಲ್ಲ.

ನಾವು ತನ್ನ ರಕ್ತಿಗನುಸರಿಸಿ ಪ್ರೀತಿವಿಶ್ವಾಸಗಳ ದ್ಯೋತಕವಾಗಿ ತನ್ನ ಕೊಡುಗೆಯನ್ನು ಮುಂದೆ ಮಾಡುವದರ ಮೂಲಕ ಕಾಲೇಜು ಕಮಿಟಿಯವರ ಭಾರವನ್ನು ಪರಿಹರಿಸಬಹುದಾಗಿದೆ. ಹಾಗಾಗಲೆಂದು ನಾವು ಹೃತ್ಪೂರ್ವಕ ಹಾರೈಸುತ್ತೇವೆ.

ಪಾಕಿಸ್ತಾನದ ದಗಲು

ಕಾಶ್ಮೀರ ಜಮ್ಮುಗಳಲ್ಲಿ ಪ್ರಜಾಪ್ರತಿನಿಧಿ ಸಮಿತಿಯ ರಚನೆಯಾಗುವುದನ್ನು ತೀವ್ರ ಪ್ರತಿಭಟಿಸಿ ಪಾಕಿಸ್ತಾನವು ಸ. ರಾ. ಸಂಘಕ್ಕೆ ತನ್ನ ದೂರನ್ನು ಕೊಟ್ಟಿರುತ್ತದೆ.

ಕಾಶ್ಮೀರ ಪ್ರತಿನಿಧಿ ಗ್ರಾಹ್ಯಾಮರು

ಸಂ. ರಾ. ಸಂಘದ ಪ್ರತಿನಿಧಿ ಡಾ। ಗ್ರಾಹ್ಯಾಮರು ಕಾಶ್ಮೀರಕ್ಕೆ ಹೊರಡುವ ಸಿದ್ಧತೆಯಲ್ಲಿರುವರು. ಪಾಕಿಸ್ತಾನ ಹಾಗೂ ಭಾರತ ಸರಕಾರಗಳಿಗೆ ತನ್ನ ಆಗಮನದ ಸೂಚನೆಯನ್ನು ಮುಂದಾಗಿ ತಿಳಿಸಿದ್ದು ಎರಡೂ ಸರಕಾರದಿಂದ ಉತ್ತರ ಬಂದಿರುತ್ತದೆಯಂತೆ. ಭಾರತದ ಮುಖ್ಯಮಂತ್ರಿ ಯೋಗ್ಯ ಅತಿಥಿಗೆ ನೀಡಬಹುದಾದ ಸರ್ವವಿಧದ ಸೌಲಭ್ಯ ಸಹಕಾರವನ್ನು ನೀಡಬಹುದೆಂದು ತಿಳಿಸಿದ್ದಾರೆ. ಗ್ರಾಹ್ಯಾಮರು ಶ್ರೀ ಬಿ. ಎನ್. ರಾಯರನ್ನು ಕಂಡು ಮಾತುಕತೆ ನಡೆಸಿರುವರು. ಇದೇ ಜುಲೈ 2ನೇ ತಾರೀಕಿಗೆ ನೆಹರೂರವರೊಡನೆ ಮಾತುಕತೆ ನಡೆಸಲಿರುವರು.

ಪಾಕಿಸ್ತಾನದಿಂದ ಜೋಳ

ಪಾಕಿಸ್ತಾನವು ಜುಲೈಯಿಂದ ಅಕ್ಟೋಬರದವರೆಗಿನ ನಾಲ್ಕು ತಿಂಗಳಿಗೆ 1,45,000 ಟನ್ ಜೋಳವನ್ನು ಭಾರತಕ್ಕೆ ಕಳಿಸಲಿರುವುದೆಂದು ಸರಕಾರೀ ಪ್ರಕಟಣೆಯಲ್ಲಿ ಹೇಳಲಾಗಿದೆ. ಮುಂದಿನ ಕೊಡುಗೆಯನ್ನು ಅಕ್ಟೋಬರ ತಿಂಗಳಲ್ಲಿ ಬೆಳೆಯ ಪರಿಸ್ಥಿತಿಯನ್ನು ಲಕ್ಷಿಸಿ ಪ್ರಕಟಿಸುವದೆಂದೂ ಪ್ರಕಟನೆಯಲ್ಲಿ ಹೇಳಲಾಗಿದೆ

ಪತ್ರಿಕಾ ಹಕ್ಕಿನ ಅಪಹರಣ ಪ್ರಶ್ನೆ

ಅ. ಭಾ. ಪತ್ರಿಕಾ ಸಂಪಾದಕರ ಪರಿಷತ್ತು ಮುಂಬಯಿಯಲ್ಲಿ ಕೂಡಿ ಕೇಂದ್ರ ಮತ್ತು ಪ್ರಾಂತಗಳಲ್ಲಿ ಸಲಹಾ, ವಿಚಾರ ವಿನಿಮಯ ಮಾಡುವ ಹಾಗೂ ಸಹಾಯ ನೀಡುವ ಕೆಲಸ ಮಾಡುತ್ತಿದ್ದ ಪರಿಷತ್ತಿಗಳು ತಮ್ಮ ಕಾರ್ಯವನ್ನು ನಿಲ್ಲಿಸಬೇಕೆಂದು ನಿರ್ಣಯಿಸಲಾಗಿದೆ. ಅಧ್ಯಕ್ಷ ಲಾಲಾ ದೇಶಬಂಧು ಗುಪ್ತರು ಪತ್ರಿಕೆಗಳ ಸ್ವಾತಂತ್ರ್ಯದ ಬಳಿಕ ಈ ವರೆಗೆ ಸಲ್ಲಿಸಿದ ಸೇವೆ ಗೌರವಾರ್ಹವಾಗಿದ್ದರೂ ನೂತನ ಘಟನೆಯ ಮೂಲಕ ಅವುಗಳ ಸ್ವಾತಂತ್ರ್ಯವನ್ನು ಅಪಹರಿಸುವ ಧೋರಣೆಯನ್ನೇ ಸರಕಾರ ವಹಿಸಿತೆಂಬುದು ನಮಗೆ ತಿಳಿಯಬಾಗಿದೆ. ಈ ಆತ್ಯವಸರ

ಧೋರಣದ ವೈಚಿತ್ರ್ಯವೇ ನಮಗೆ ತಿಳಿಯುವುದಿಲ್ಲ. ಸರಕಾರಕ್ಕೆ ಸಹಕಾರ ನೀಡಿದ ಈ ಮಹಾಸಂಸ್ಥೆಯು ಮೇಲೆ ಗದಾಪ್ರಹಾರ ಮಾಡಿದಂತೆಯೇ ಆಗಿದೆ." ಎಂದು ಹೇಳಿರುವರು. ರಾಜ್ಯ ಘಟನೆಯ ೧೯ (೨) ಕಲಮಿನ ತಿದ್ದುಪಡಿಯನ್ನು ರದ್ದುಗೊಳಿಸಿ ವಿಚಾರ ಸ್ವಾತಂತ್ರ್ಯವನ್ನು ಮರಳಿ ಕೊಡುವವರೆಗೆ ಭಾರತದ ಪತ್ರಿಕೆಗಳು ತಟಸ್ಥ ಧೋರಣೆಯನ್ನು ವಹಿಸಬಾರದೆಂಬ ಗೊತ್ತುವಳಿಯೂ ಪಾಸಾಯಿತು.

ದೇಶಭಕ್ತ ಗಂಗಾಧರ ರಾಯರಿಗೆ ಸತ್ಕಾರ

ದೇಶಭಕ್ತ ಗಂಗಾಧರ ರಾವ ದೇಶಪಾಂಡೆ (ಕರ್ನಾಟಕದ ಕೇಸರಿ)ಯವರ 81ನೇ ಜನ್ಮದಿನಾಚರಣೆಯ ಸಮಾರಂಭವು ಭಾರತ ಪಾರ್ಲಿಮೆಂಟಿನ ಅಧ್ಯಕ್ಷ ಶ್ರೀ ಮಾವಳಣಕರ ಅಧ್ಯಕ್ಷತೆಯಲ್ಲಿ ಬೆಳಗಾವಿಯ ಪ್ರಕಾಶ ಟಾಕೀಜದಲ್ಲಿ ಜರುಗಿತು. ಈ ಸಮಾರಂಭಕ್ಕೆ ಡಾ। ರಾಜೇಂದ್ರ ಪ್ರಸಾದ ವಿನೋಬಾ ಭಾವೆ, ರಾಜಾಜಿ, ಕೆ. ಜಿ. ಮಶ್ರುವಾಲಾ, ದೇವದಾಸ ಗಾಂಧಿ, ಪಂತರಾದವರ ಸಂದೇಶಗಳು ಬಂದಿದ್ದವು! ಕೇಂದ್ರ ಸರಕಾರದ ಸದ್ಯಃಪಾತೆಯ ಸಚಿವ ಶ್ರೀ ಆರ್. ಆರ್. ದಿವಾಕರರೂ, ಶ್ರೀ ಹರ್ಡೀಕರರೂ ದೇಶಪಾಂಡೆಯವರ ಕುರಿತು ಸುದೀರ್ಘ ಭಾಷಣ ಮಾಡಿದರು. ಮಾನ್ಯ ಅಧ್ಯಕ್ಷರು "ಶ್ರೀ ಗಂಗಾಧರರಾಯ ದೇಶಪಾಂಡೆಯವರ ಈ ಸುದೀರ್ಘ ಜೀವನವು ಹಿಂದೂಸ್ಥಾನದ ಇತಿಹಾಸದಲ್ಲಿಯ ಮಹತ್ವದ ಅವಧಿಯಾಗಿದೆ" ಎಂದರು.

ಕೊರತೆ ಪ್ರದೇಶಗಳಿಗೆ ಕೇಂದ್ರದ ಆಹಾರ ಧಾನ್ಯ

ಜೂನು ತಿಂಗಳ 15ಕ್ಕೆ ಕೇಂದ್ರ ಸರಕಾರವು ಕೊರತೆಯ ಪ್ರದೇಶಗಳಿಗೆ 1,19950 ಟನ್ನು ಆಹಾರ ಧಾನ್ಯವನ್ನು ಕಳಿಸಿರುತ್ತದೆ. ಅದರಲ್ಲಿ ಮದ್ರಾಸಕ್ಕೆ 18000 ಟನ್ನು ಬಂದಿರುತ್ತದೆ.

ಪಾಕಿಸ್ತಾನ ಯುದ್ಧವಿರಾಮ ಆಜ್ಞೆಯನ್ನುಲ್ಲಂಘಿಸಿತು

ಜಮ್ಮು ಕಾಶ್ಮೀರಗಡಿಯಲ್ಲಿ ಪಾಕಿಸ್ತಾನೀ ಸೈನಿಕರು ಇಬ್ಬರು ಹಿಂದೀ ಸೈನಿಕರನ್ನು ಕೊಲೆಮಾಡಿದ್ದು ಆ ಸೈನಿಕರ ಶವ ಸಂಸ್ಕಾರವನ್ನು ನಸೈನಿಕರು ಗೌರವ ರೀತಿಯಲ್ಲಿ ನಡೆಸಿದರು. ಸಂ. ರಾ. ಸಂಘದ ನಿರೀಕ್ಷಕರು ಇದನ್ನು ಪ್ರತ್ಯಕ್ಷ ತೆಗೆದುಕೊಂಡಿರುತ್ತಾರೆ. ಈ ಘಟನೆಯು ಯುದ್ಧವಿರಾಮದ ಆಜ್ಞೋಲ್ಲಂಘನೆಯೆಂದು ಅಧಿಕೃತವಾಗಿ ಹೇಳಲಾಗಿದೆ.

ಸತ್ತವ್ರು ಮಾತೆತ್ತೋದಿಲ್ಲ ಖರೆ,—

ಆದ್ರೆ ಅವ್ರ ಹೆಂಡ್ತಿ ಮಕ್ಳು?

"ಯಜಮಾನ್ರು ಇನ್‌ಶೂರ್ ಮಾಡಿರ್ಲಿಲ್ಲಾ' ಎಂಬೊಂದೇ ಮಾತು ಉಳಿದವ್ರ ಸಂಕಷ್ಟ ತಿಳ್ಸುತ್ತೆ.

ಪ್ರತೀ ಗೃಹಸ್ಥ್ರೂ, ತಮ್ಮ ನಂತ್ರ ಇಂಥಾ ಸ್ಥಿತಿ ಬಾರದಂತೆ ಮುಂಚಿತವಾಗಿ ನೋಡಿಕೊಳ್ಬೇಕ್ರೀ

ದಿ ಕೆನರಾ ಮ್ಯೂಚುವಲ್

ಎಶ್ಯೂರೆನ್ಸ್ ಕಂಪೆನಿ ಲಿಮಿಟೆಡ್,

ಪ್ರಧಾನ ಕಾರ್ಯಾಲಯ: ಉಡುಪಿ ಸ್ಥಾಪನೆ: ೧೯೩೫

The Canara Mutual Assurance Co, Ltd.

H. O. UDIPI (SOUTH INDIA) Estd: 1935.



ನವಯುಗ

ಚಂದಾ ವಿವರ
ವರ್ಷಕ್ಕೆ ರೂ. 5-12—0
6 ತಿಂಗಳಿಗೆ ರೂ. 3—0—0

ಗುರುವಾರ ಉಡುಪಿ, ೨೮-೬-'೫೧

ಸಂಧಾನವೂ ಸಮರವೂ

ಮೂರನೆಯ ಮಹಾಯುದ್ಧದ ಭೀತಿ ಜಗತ್ತನ್ನೆಲ್ಲ ಆವರಿಸಿದ್ದು ಕೊರಿಯ ಪ್ರಕರಣದಲ್ಲೇ ಅದು ಆರಂಭವಾಗಬಹುದೆಂದು ಹಲವರು ಭಾವಿಸಿದ್ದರು. ಈ ವರೆಗೆ ಕೊರಿಯದ ಯುದ್ಧ ಪರಿಸಮಾಪ್ತಿಯ ಸೂಚನೆಗಳೆಲ್ಲ ನುಣ್ಣಗೆ ಮುಚ್ಚಿವೆಯಾದರೂ ಈಗ ರಶಿಯವೇ ಸಂಧಾನದ ಸೂಚನೆಯನ್ನು ಮುಂದೆ ಮಾಡಿರುವುದರಿಂದ ಕೊರಿಯದ ದುರಂತ ಇಲ್ಲಿಗೆ ಕೊನೆಗಾಣಬಹುದೇನೋ ಎಂದು ಭಾಸವಾಗುತ್ತದೆ. ಸಂ. ರಾ. ಸಂಘದಲ್ಲಿ ರಶಿಯದ ಪ್ರತಿನಿಧಿಯಾಗಿರುವ ಜಕಬ್ ಮಲ್ಲಿಕರ ರೇಡಿಯೋ ಭಾಷಣ, ಸಂಧಾನ ಮಾರ್ಗ ಹುಡುಕುವವರಿಗೆಲ್ಲ ಆಶಾದಾಯಿಯಾಗಿದೆ. ಅಧ್ಯಕ್ಷ ಟ್ರೂಮನರು ರಶಿಯದ ಹೃದಯತಃ ಯುದ್ಧ ಪರಿಸಮಾಪ್ತಿಯ ಇಚ್ಛೆಯನ್ನು ಮಾಡುತ್ತದಾದರೆ ನಾವು ಸದಾ ಸಿದ್ಧರೇ ಇದ್ದೇವೆ ಎಂದಿರುತ್ತಾರೆ. ನಾಲ್ಕಾರು ವರ್ಷಗಳಿಂದಲೂ ಶಾಂತಿಸಂಧಾನದ ಮಾತುಕತೆಗೆ ಹೆಚ್ಚಿನ ಪ್ರಾಧಾನ್ಯ ಕೊಡುತ್ತ ಬಂದಿರುವದಾದರೂ ರಶಿಯವು ಯುದ್ಧ ಪ್ರೇರಕ ಸನ್ನಿವೇಶಗಳನ್ನು ನಿರ್ಮಿಸುತ್ತ ಬಂದಿದೆಯೆಂದೂ ಹೇಳಿರುವರು. ಎರಡು ವಾರಗಳ ಹಿಂದೆ ಅಮೇರಿಕೆಯ ಕಡೆಯಿಂದಲೂ 38ನೇ ಅಕ್ಷಾಂಶದಲ್ಲಿ ಯುದ್ಧವನ್ನು ನಿಲ್ಲಿಸುವ ಸೂಚನೆ ಗುಪ್ತ ರೀತಿಯಲ್ಲಿ ಸಂ. ರಾ. ಸಂಘದ ರಾಷ್ಟ್ರಗಳ ಅಭಿಪ್ರಾಯಕ್ಕಾಗಿ ಬಂದುದೂ ಉಂಟು! ಆದರೆ ಕಮ್ಯೂನಿಸ್ಟ ಚೀನಾ ಅದರಲ್ಲಿ ಆಸ್ಥೆ ವಹಿಸದ ಕಾರಣ ಆ ಮಾತು ಅಲ್ಲಿಗೆ ಮುರಿದುಬಿತ್ತು. ಈಗ ರಶಿಯ ಮುಂದೆ ಮಾಡಿರುವ ಸೂಚನೆ ಈ ವರೆಗೆ ಕಮ್ಯೂನಿಸ್ಟರು ಮಾಡಿರುವ ಎಲ್ಲ ಸಂಧಾನ ಸೂಚನೆಗಳಿಗಿಂತ ಅತ್ಯಂತ ಪರಿಣಾಮಕಾರಿಯಾದುದೂ, ಯಥಾರ್ಥವಾದುದೂ ಆಗಿರುತ್ತದೆಂದು ಹಲವರ ಅಭಿಪ್ರಾಯವಿರುತ್ತದೆ. ಅಂತಲೇ ಸಂ. ರಾ. ಸಂಘದ ಉಚ್ಚ ಅಧಿಕಾರಿಗಳು 38ನೇ ಅಕ್ಷಾಂಶದಲ್ಲಿ ಯುದ್ಧ ನಿಲ್ಲಿಸುವ ರಶಿಯದ ಸೂಚನೆಯನ್ನು ವಿಶೇಷ ಆತುರದಿಂದ ವಿವರಿಸುತ್ತಲಿದ್ದಾರೆ. ಕೊನೆಗಾದರೂ ಎರಡು ಪ್ರಬಲ ರಾಷ್ಟ್ರಗಳು ಅಂದರೆ ಕೊರಿಯ ರಂಗಕ್ಕೆ ರಾಯಭಾರವು ಹೇಳುವಾಗಿದ್ದವೋ ಅಂತಹ ರಾಷ್ಟ್ರಗಳೇ ಇಂದು ಶಾಂತಿಯನ್ನು ಬಯಸುತ್ತಿರುವುದು ಶುಭಚಿಹ್ನೆಯಾಗಿರುತ್ತದೆ. ಉಭಯ ಪಕ್ಷಗಳಿಗೂ ಆದ ವಿಶೇಷ ಹಾನಿಯೇ ಪರಿಸ್ಥಿತಿಯನ್ನು ತಿಳಿಯಾಗಿಸಿದೆಯೆಂಬುದನ್ನು ನಾವು ಮರೆಯಬಾರದು. ಇಲ್ಲಿ ಯಾರು ಯಾರ ಮೇಲೂ ವಿಜಯವನ್ನು ಹೊಂದಲಿಲ್ಲ. ದೇಶಾಯ ವಿನಾಶವಾದ ಈ ಸಂಧಾನದ ಮಾತುಕತೆ ಈಗ ಯಶಸ್ವಿಯಾದರೂ ಶಾಶ್ವತವಾದ ಶಾಂತಿ ಇದರಿಂದಾಗಿ ಎರಡೂ ರಾಷ್ಟ್ರಗಳಲ್ಲುಂಟಾದೀತೆಂಬುದು ನಾವು ಭಾವಿಸುವಂತಿಲ್ಲ. ಹೇಗೂ ಇರಲಿ, ಯುದ್ಧ ನಿಲ್ಲುವುದು ಜಗತ್ತಿನ ಶಾಂತಿಯ ದೃಷ್ಟಿಯಿಂದ ಯೋಗ್ಯವೇ ಆಗಿದೆ!

"ಶಂಕೆಯಲ್ಲಿ ದೊಣ್ಣೆ ಕೈಯಲ್ಲಿ ಶರಣಾರ್ಥಿ" ಎನ್ನುವ ಮಾತು ರಶಿಯ ಅಮೇರಿಕಾ ಬ್ರಿಟನುಗಳ ರಾಜಕೀಯ ನೀತಿಗೆ ತುಂಬ ಅನ್ವಯಿಸುತ್ತದೆ. ಒಂದು ಕಡೆ ಶಾಂತಿಯ ಮಾತುಕತೆ; ಇನ್ನೊಂದು ಕಡೆ ಯುದ್ಧ ಸನ್ನಾಹ. ಕೊರಿಯದಲ್ಲಿ ಸಂಧಾನ ಬೇಕೆಂದಾದ ಕೂಡಲೇ ಪರ್ಶಿಯದಲ್ಲಿ ಯುದ್ಧ ಅನಿವಾರ್ಯವೆಂದು ಅದೇ ರಾಷ್ಟ್ರಗಳು ಹೇಳುವ ದುರ್ಧರ ಪ್ರಸಂಗ ಬಂದಿರುತ್ತದೆ. ಪರ್ಶಿಯದ ಆಂಗ್ಲೋ ಇರಾಣಿಯನ್ ಎಣ್ಣೆ ಕಂಪೆನಿಯ ರಾಷ್ಟ್ರೀಕರಣದಿಂದ ಗಂಭೀರ ಪರಿಸ್ಥಿತಿಯುಉದ್ಭವಿಸಿಕೊಂಡಿದೆ. 1993ರ ತನಕ ಕರಾರಿದ್ದು ಅರ್ಧಕ್ಕಿಂತಲೂ ಹೆಚ್ಚಿನ ಬಂಡವಾಳವುಳ್ಳ ಬ್ರಿಟನಿನ ಯಾವ ಬೇಡಿಕೆಯನ್ನೂ ಲಕ್ಷಿಸದೆ ಪರ್ಶಿಯ ಸರಕಾರ ಎಣ್ಣೆ ಕಂಪೆನಿಯನ್ನು ವಶಪಡಿಸಿಕೊಂಡಿದೆ. ಎಣ್ಣೆ ಕಂಪೆನಿಯ ಬ್ರಿಟಿಶ ಜನರಲ್ ಮ್ಯಾನೇಜರರನ್ನು ಅವರ ಮನೆಯಲ್ಲೇ ಬಂಧಿಸಲಾಗಿದೆ. ಎಣ್ಣೆಯ ಕಂಪೆನಿಯ ಎಲ್ಲ ಒಡೆತನವನ್ನು ಪರ್ಶಿಯಾ ಅಧಿಕಾರಿಗಳು ಕಸಿದುಕೊಂಡು ಪೋಲಿಸರ ಸರ್ಪಕಾವಲಿನಲ್ಲಿ ಕಾಯುತ್ತಿರುವರು. ಜನರಲ್ ಮೆನೇಜರರಾದ ಡ್ರೇಕರ ಮೇಲೆ ವಿಧ್ವಂಸಕ ಕೃತಿಯ ಆರೋಪ ಹೊರಿಸಿ ಮಿಲಿಟರಿ ನ್ಯಾಯಾಲಯಗಳ ಮೂಲಕ ವಿಚಾರಣೆ ನಡೆಸುವ ನಿರ್ಧಾರವನ್ನೂ ಪರ್ಶಿಯ ಮಾಡಿದೆ. ಇನ್ನಿತರ ಬ್ರಿಟಿಶ ತಾಂತ್ರಿಕರು ವಿಧ್ವಂಸಕ ಆರೋಪಕೃತಿಯಲ್ಲಿ ಬರಬಹುದು. ಪರ್ಶಿಯದ ಎಣ್ಣೆ ಹೊರಗೆ ಹೋಗುವದಕ್ಕೆ ತಡೆಹಿಡಿಯಲಾಗಿದ್ದು ಹೆಚ್ಚು ಸಮಯ ಹೀಗೆ ಉಳಿದರೆ ಶುದ್ಧೀಕರಣದ ಕಾರ್ಯಕ್ಕೆ ಎಡೆಯಿಲ್ಲದಂತಾಗಬಹುದು. ನಿರ್ದಾಕ್ಷಿಣ್ಯವೂ, ನಿರಂಕುಶ ಪ್ರಭುತ್ವದ ಧೋರಣೆಯುದೂ ಆದ ಈ ಕ್ರಮಕ್ಕೆ ಯುದ್ಧ ಹೊರತು ಅನ್ಯಗತಿಯಿಲ್ಲ ಎನ್ನುವಷ್ಟರ ಮಟ್ಟಿಗೆ ಬ್ರಿಟನು ಬಂದಿದೆ. ಬೇರೆ ರೀತಿಯ ಸಂಧಾನದ ಮಾತುಕತೆಗೆ ಪರ್ಶಿಯನ್ನರು ಎಡೆಕೊಡಲಾರರೆಂಬುದು ಅಮೇರಿಕೆಗಿತ್ತ ಉತ್ತರದಲ್ಲಿ ಸ್ಪಷ್ಟವಾಗುತ್ತದೆ. ಕೊರಿಯ ಪ್ರಕರಣದಲ್ಲಿ ತೋರಿಸಿಯ ಮಟ್ಟಿಗಾದರೂ ಪರಸ್ಪರ ವಿಚಾರವಿನಿಮಯ ವಿತ್ತಾದರೂ ಎಣ್ಣೆ ಕಂಪೆನಿಯ ಈ ಪ್ರಕರಣ ಒಂದೇ ಅಭಿಪ್ರಾಯದ ಮೇಲೆ ತೀರ್ಮಾನಗೊಂಡ ಗಂಡಾಂತರ ಸ್ವರೂಪದ್ದಾಗಿರುತ್ತದೆ. ಬ್ರಿಟನು ಅಂತರ್ರಾಷ್ಟ್ರೀಯ ನ್ಯಾಯಾಲಯಕ್ಕೆ ಈ ದೂರನ್ನು ಒಯ್ದಿದೆಯಾದರೂ ಪರ್ಶಿಯಾ ಅಂತರರಾಷ್ಟ್ರೀಯ ನ್ಯಾಯಾಲಯಕ್ಕೆ ವಿಚಾರಿಸಲು ಅಧಿಕಾರವೇ ಇರುವುದಿಲ್ಲವೆಂದು ತನ್ನ ನಿರಾಕರಣೆಯನ್ನು ವ್ಯಕ್ತಪಡಿಸಿದೆ. ಬ್ರಿಟನಿಗೆ ಈಗ ನೇರವಾಗಿ ಯುದ್ಧ ಕೈಗೊಳ್ಳುವದಕ್ಕಿಂತ ತಡವಾಗಿ ಕೈಗೊಳ್ಳುವ ಹಾಗೆ ಅಂ. ನ್ಯಾಯಾಲಯ ಸಹಕಾರಿಯಾದೀತು. ಅಂದರೆ ಅಂ. ನ್ಯಾಯಾಲಯದ ಅಪೇಕ್ಷೆ ಆತ್ಮ ಸಮರ್ಥನೆಯ ಹೇತುಮಾತ್ರವಾದೀತು.

ಪರ್ಶಿಯ ಕೈಗೊಂಡ ಈ ನಿಷ್ಠುರವಾದ ಧೋರಣೆಯ ಹಿನ್ನೆಲೆಯಲ್ಲಿ ರಶಿಯದ ಬೆಂಬಲವಿದೆಯೆಂಬುದು ಸ್ಪಷ್ಟವಾಗುತ್ತದೆ. ಮುಂದೆ ಬರಬಹುದಾದ ಆಪತ್ತುಗಳನ್ನೆದುರಿಸುವ ಸಾಮರ್ಥ್ಯ ಪರ್ಶಿಯಕ್ಕಿಲ್ಲವೆಂಬುದು ವಿದಿತ ವಿಚಾರವೇ. ಹಿನ್ನೆಲೆಯಲ್ಲಿ ನಿಂತವರ ಭರವಸೆಯಿಂದಲೇ ಪರ್ಶಿಯ ನಿರ್ದಾಕ್ಷಿಣ್ಯವಾಗಿ ವರ್ತಿಸಿದೆ.

ಪರ್ಶಿಯದಲ್ಲಿ ಯುದ್ಧ ಕಿಡಿಯನ್ನು ಹಾರಿಸಿ ಸಮರಾಗ್ನಿಗೆ 'ಎಣ್ಣೆ' ಸುರಿಸಬೇಕೆಂಬ ಉದ್ದೇಶಕ್ಕಾಗಿಯೇ ಕೊರಿಯದಲ್ಲಿ ವಿಶ್ರಾಂತಿ ಬಯಸಿದರೋ ಎಂದು ಸಂಶಯ ಮೂಡುತ್ತದೆ. ಪರ್ಶಿಯದಲ್ಲಿ ಯುದ್ಧ ತಲೆದೋರುವ ಪಕ್ಷದಲ್ಲಿ ಅಲ್ಲಿ ಕಾದಾಡುವವರು ಈಗ ಕೊರಿಯದಲ್ಲಿ 'ಶಾಂತಿಸಂಧಾನ'ದ ಸೋಗು ಹಾಕಿಕೊಂಡಿರುತ್ತಾರೆ ಅಂದ ಮೇಲೆ ಈ ಶಾಂತಿಯಾಚನೆಯೂ—ಸಮರಾಕಾಂಕ್ಷೆಯೂ ಕೇವಲ ರಾಜಕೀಯ ತಂತ್ರ—ಇಲ್ಲವೇ ಒಂದು 'ಜಾದು' ಎಂದು ಭಾಸವಾಗುವುದಿಲ್ಲವೇ?

ಕಮ್ಯೂನಿಸ್ಟ ಚೀನವನ್ನು ಸಂ. ರಾ. ಸಂಘದಿಂದ ಹೊರತು ಪಡಿಸುವ ಈ ಭೇದಭಾವ ಹುಟ್ಟಿದಂದಿನಿಂದ ಆಂಗ್ಲೋ ಅಮೇರಿಕನರಿಗೆ ಅದರ ಪ್ರತೀಕಾರಗಳು ಕಂಡುಬರುತ್ತಲೇ ಇವೆ. ಮುಂದಾದರೂ ಕಮ್ಯೂನಿಸ್ಟ ಚೀನಕ್ಕೆ ಸಂ. ರಾ. ಸಂಘದಲ್ಲಿ ಪ್ರಾತಿನಿಧ್ಯಕೊಟ್ಟು ಸಹಕಾರ ಧೋರಣೆಯನ್ನು ವಹಿಸುವ ವರೆಗೆ ಲೋಕದಲ್ಲಿ ಶಾಂತಿಯೆಂಬುದು ಕನಸಿನ ಮಾತೇ ಸರಿ. ರಶಿಯದಂತಹ ಪ್ರಬಲ ಕಮ್ಯೂನಿಸ್ಟ ರಾಷ್ಟ್ರಗಳು ಆಂಗ್ಲೋ ಅಮೇರಿಕನ ರಾಜನೀತಿಯನ್ನು ಬಾರಿಬಾರಿಗೂ ವಿರೋಧಿಸುತ್ತಿ ತಮ್ಮ ಹಕ್ಕು ಸ್ಥಾಪನೆಗಾಗಿ ಹೋರಾಟ ನಡೆಸುತ್ತಾ ತಮ್ಮ ಅಸಂತೃಪ್ತಿಯನ್ನು ವ್ಯಕ್ತಪಡಿಸಿದರೂ ಆಂಗ್ಲೋ ಅಮೇರಿಕನರು ತಮ್ಮ ಗಾಂಭೀರ್ಯವನ್ನು ಬಿಟ್ಟು ಕೊಡಲಿಲ್ಲ. ಕಮ್ಯೂನಿಸ್ಟರ ಕಡೆಗಿರುವ ತಾತ್ಸಾರ ಭಾವನೆ—ವಿರೋಧಭಾವ—ತೀವ್ರ ಸ್ವರೂಪವನ್ನು ತಾಳಿದ್ದರಿಂದಲೇ ಪರ್ಶಿಯದ ಪ್ರಕರಣ ಅಷ್ಟೇ ನಿರ್ದಾಕ್ಷಿಣ್ಯ—ನಿರ್ದಯವಾಗಿದೆ. ಸಂ. ರಾ. ಸಂಘದಲ್ಲಿ ಕಮ್ಯೂನಿಸ್ಟ ಚೀನಕ್ಕೆ ಪ್ರಾತಿನಿಧ್ಯ ಕೊಟ್ಟು ಮರ್ಯಾದಾಪೂರ್ಣ ಹಕ್ಕನ್ನು ಒದಗಿಸಿ ಕೊಡುವದರಿಂದಲೇ ಸಹಜವಾದ ಮೈತ್ರಿ ಮೂಡೀತು! ಅದೊಂದೇ ಯುದ್ಧ ಪರಿಸಮಾಪ್ತಿಯ ಉತ್ತಮ ಮಾರ್ಗ ಕೂಡ!

ಹಾರುವ ಕಿಡಿಗಳು

ಆಗುತ್ತದೆಂದಿದ್ದ ಉಡುಪಿ ಇಲೆಕ್ಟ್ರಿಕ್ ಕಂಪೆನಿಯ ರಾಷ್ಟ್ರೀಕರಣವೆಂತೂ ಇದೇ ಜೂನ್ ತಿಂಗಳಾರಂಭದಿಂದ ಆಗಿಹೋಯಿತು. ಆದರೆ ಸಾಧಾರಣವೇನೂ ಆಗಲಿಲ್ಲ; ಬೇಗನೆ ಆಗುವಂತೆಯೂ ತೋರುವುದಿಲ್ಲ.

ಂಂಂ

ಸಂಧಾರಣೆಯ ಮಾತಿರಲಿ; ಇಲೆಕ್ಟ್ರಿಕ್ ಕಂಪೆನಿ ಪ್ರಾರಂಭವಾದಂದಿನಿಂದ ಈವರೆಗೆ ಆಗದ ಅನುಭವವೂ ಉಡುಪಿಯವರಿಗೆ ಆಗುವಂತಾಯಿತು.

ಂಂಂ

ಕಳೆದ ವಾರ 4-5ದಿವಸದಲ್ಲಿ ರಾತ್ರಿ ಮನೆ, ಅಂಗಡಿ, ಆಫೀಸು, ಸಿನೆಮಾ, ಮೊದಲಾದವುಗಳಿಗೆಲ್ಲಾ 'ಲೈಟೇ' ಇಲ್ಲ! ಕತ್ತಲೆ, ಅರೆಕತ್ತಲೆಯಲ್ಲೆ ದಿನದೂಡಿದರೆಲ್ಲ!

ಂಂಂ

ಇಂಜಿನು ಹಾಳಾದದ್ದೇ ಇದಕ್ಕೆ ಕಾರಣವೆಂದು ಸಾರಲಾಗಿದೆ.

ಂಂಂ

ರಾಷ್ಟ್ರೀಕರಣವಾದೊಡನೆ ದೊಡ್ಡ ಎಂಜಿನ್ ಹಾಕುತ್ತಾರೆ, ಹೊಸ 'ಕನೆಕ್ಷನ್' ಕೊಡುತ್ತಾರೆ, 24ತಾಸೂ 'ಕರೆಂಟ್' ಒದಗಿಸುತ್ತಾರೆ ಎಂದೆಲ್ಲಾ ವರ್ತಮಾನವಿತ್ತು.

ಂಂಂ

ಈಗ ನೋಡಿದರೆ ಪಟ್ಟಣಿಗರು ದಾರ್ಶೆಯಲ್ಲೆ ತೃಪ್ತರಾಗಬೇಕಾಗಿದೆ! ಒಳ್ಳೆತಕ್ಕಿಂತ ಕೆಟ್ಟದನ್ನೇ ಕಾಣುವಂತಾಯಿತು. ಬೆಳಕಿನ ಗುಣವನ್ನು ಮೊಳಕೆಯಲ್ಲಿ ನೋಡುವಂತಾಯಿತು.

ಂಂಂ

ಬೀದಿಗಳಿಗೇನೋ ಸಣ್ಣ ಎಂಜಿನ್ ಚಲಾಯಿಸಿ 'ಮಿಣ ಮಿಣ' ದೀಪ ಕೊಡಲಾಗಿತ್ತು. ಮನೆವಾರ್ತೆ ಗ್ರಾಹಕರ 'ಘಟಕ' ಹೇಳತೀರದು.

ಂಂಂ

ಕಳೆದ ಆದಿತ್ಯವಾರ ರಾತ್ರಿಯಿಂದ ಹೇಗೂ ಪುನಃ 'ಬೆಳಕು' ನೋಡುವಂತಾಯಿತು.

ಂಂಂ

ಇನ್ನಾದರೂ ಸಂಬಂಧಪಟ್ಟವರು ಉಡುಪಿ ಜನತೆಯ ವಿದ್ಯುತ್ತಿನ ಅವಶ್ಯಕತೆಗಳನ್ನೆಲ್ಲಾ ಪೂರೈಸುವಂತೆ ಕಾರ್ಯೋನ್ಮುಖರಾಗುವರೇ ಅದಕ್ಕೆ ಬೇಕಾದ ವ್ಯವಸ್ಥೆಗಳನ್ನೆಲ್ಲಾ ಮಾಡುವರೇ?

ಂಂಂ

ಉಡುಪಿಯಲ್ಲಿ ಕೆಲವು ವರ್ಷಗಳಿಂದ ಮದ್ರಾಸು ಫಯರ್ ಸರ್ವಿಸು (M. F. S) ಇದೆ; ತನ್ನ 'ಸೇವೆ'ಯನ್ನು ಉಡುಪಿಗೆ ನೀಡುತ್ತಿದೆ.

ಂಂಂ

ಈ 'ಸರ್ವಿಸಿ'ನವರ ಸ್ವಾಧೀನದಲ್ಲಿ ಉಡುಪಿಗಾಗಿ 'ಎಂಬುಲೆನ್ಸ್' ವಾಹನವೊಂದಿತ್ತು. ಅದರಿಂದ ತಕ್ಕ ಉಪಯೋಗವೂ ಇತ್ತೆನ್ನಿ.

ಂಂಂ

ಆದರೆ ಇತ್ತೀಚೆಗೆ ಅದನ್ನು ಬೇರೆ ಕಡೆಗೆ ಒಯ್ಯಲಾಗಿದೆ ಎಂಬುದು ವಿಚಿತ್ರ ಹಾಗೂ ವಿಷಾದಕರವಿದೆ.

ಂಂಂ

ಇದು ಉಡುಪಿ ನಾಗರಿಕರ ಅಲಕ್ಷ್ಯವೋ 'ಸರ್ವಿಸಿ'ನವರ ಅಶ್ರದ್ಧೆಯೋ ತಿಳಿಯದಾಗಿದೆ.

ಂಂಂ

ಇನ್ನಾದರೂ ಅದನ್ನು ಉಡುಪಿಗೆ ತಿರುಗಿ ತರುವಂತೆ ಮಾಡುವುದು ಪಟ್ಟಣಿಗರ ಕರ್ತವ್ಯವಲ್ಲವೆ?

ಂಂಂ

ಎಂ ಜಿ ಎಂ ಕಾಲೇಜಿಗೆ ಹಂಗಾಮಿ ಕಟ್ಟಡ ಹೋಗಿ ಸರ್ವಾನುಕೂಲತೆಯ ಸ್ವಂತ ಹೊಸ ಕಟ್ಟಡವಾದ ಮೇಲಾದರೂ ಹುಡುಗಿಯರಿಗೆ ಪ್ರವೇಶ ಸಿಗಬಹುದೆಂಬ ನಿರೀಕ್ಷೆ ಇತ್ತು. ಈಗಿನ ಸುದ್ದಿಯಂತೆ ಅದೂ ಇಲ್ಲವೆಂದು ತೋರುತ್ತದೆ.

ಂಂಂ

ಕಟ್ಟಡದ ಪರಿಶೀಲನೆಗಾಗಿ ಬಂದಿದ್ದ ಓರ್ವ ಮಹನೀಯರ ಕಪಿ ಕನರ ಕೂಡೆ ಕೊಲೇಜ್ ಶಿಕ್ಷಣಾರ್ಥಿ ಹೆಮ್ಮಕ್ಕಳ ಕಡೆಯಿಂದ ಈ ಕುರಿತು ಮನವಿಯೊಂದನ್ನು ಒಪ್ಪಿಸಿಕೊಳ್ಳಲಾಗಿತ್ತು.

ಂಂಂ

ಯುನಿವರ್ಸಿಟಿಯವರು ಸಹ ಶಿಕ್ಷಣದ ಕುರಿತಾದ ತಮ್ಮ ಧೋರಣೆಯನ್ನು ಸಡಿಲಿಸುವಂತೆ ತೋರುವುದಿಲ್ಲ. ಅರ್ಥಾತ್ ಹೆಮ್ಮಕ್ಕಳಿಗೆ ಈ ವರ್ಷವೂ ಪ್ರವೇಶವಿಲ್ಲ.

ಂಂಂ

ಈ ಬಗ್ಗೆ ಚಳವಳಿಸುವರ ಸಮಿತಿಯೊಂದರ ರಚನೆಯಾಗಿ ಅದು ಈಗಾಗಲೇ ಕಾರ್ಯೋನ್ಮುಖವಾಗಿದೆ. ಪೂರ್ವ ಪ್ರಯತ್ನಗಳೆಲ್ಲ ನಿಷ್ಫಲವಾದರೆ ಅದು 'ಕೋರ್ಟ್'ಗೂ ಹೋಗುವುದರಲ್ಲಿದೆ.

ಂಂಂ

ಉಡುಪಿಯ ನೈಜಪರಿಸ್ಥಿತಿಯನ್ನು ಪರ್ಯಾಲೋಚಿಸಿಕೊಂಡು ಯುನಿವರ್ಸಿಟಿಯವರು ತಮ್ಮ ಧೋರಣೆಯನ್ನು ಕೊಂಚ ಸಡಿಲಿಸುವಂತಾದರೆ ಈ ಭಾಗದ ಹೆಮ್ಮಕ್ಕಳ ಶಿಕ್ಷಣಕ್ಕೆ ನೆರವು ನೀಡಿದಂತಾದೀತು.

ಆ| ಕೃಪಲಾನಿಯವರ ಕಿಸಾನ ಮಜದೂರ ಪ್ರಜಾಪಕ್ಷ, ಇತರ ಪತ್ರಿಕೆಗಳ ಅಭಿಪ್ರಾಯ

ರಾಷ್ಟ್ರದ ಉನ್ನತಿಯನ್ನು ಸಾಧಿಸಬೇಕಾದರೆ ಭಾರತೀಯರು ಯಾವ ಮಾರ್ಗದಿಂದ ಸಾಗಬೇಕು, ವಿಧಾಯಕ ಕಾರ್ಯಕ್ರಮಗಳಾವುವು ಮೊದಲಾದ್ದನ್ನೆಲ್ಲ ಗಾಂಧೀಜಿ ಹಲವಾರು ಸಲ ಹೇಳಿದ್ದಾರೆ. ಕೃಪಲಾನಿಯವರ ಅಧ್ಯಕ್ಷತೆಯಲ್ಲಿ ನೇಮಕವಾದ ಹೊಸ ಸಮಿತಿಯು ಗಾಂಧೀಜಿ ಹೇಳಿದುದಕ್ಕಿಂತ ಹೊಸತೇನನ್ನು ಹೇಳಬಲ್ಲುದು?

ರಾಷ್ಟ್ರವಿಂದು ಅನೇಕ ಮಹತ್ವದ ಪ್ರಶ್ನೆಗಳನ್ನು ಬಿಡಿಸಬೇಕಾಗಿದೆ. ದೇವನಿರ್ಮಿತವೋ ಮನುಷ್ಯನಿರ್ಮಿತವೋ ಆದ ಆಹಾರ ಸಮಸ್ಯೆಯನ್ನು ಯಶಸ್ವಿಯಾಗಿ ಬಿಡಿಸಬೇಕಾಗಿದೆ. ಬಟ್ಟೆಯ ಬರವನ್ನು ನಿವಾರಿಸಬೇಕಾಗಿದೆ ಪಾಕಿಸ್ತಾನದೊಡನೆ ಸ್ನೇಹಭಾವದಿಂದ ಎಂತು ಇರಬಹುದೆಂಬುದನ್ನು ಯೋಜಿಸಬೇಕಾಗಿದೆ. ಕಾಶ್ಮೀರ ಸಮಸ್ಯೆಯನ್ನು ಬಿಡಿಸಬೇಕಾಗಿದೆ. ಅಂತಾರಾಷ್ಟ್ರೀಯ ರಂಗದಲ್ಲಿ ಕವಿಯುತ್ತಿರುವ ಕಾರ್ಮೋಡಗಳಿಂದ ರಾಷ್ಟ್ರವನ್ನು ರಕ್ಷಿಸಬೇಕಾಗಿದೆ. ಇಂಥ ಗಂಭೀರ ಪರಿಸ್ಥಿತಿಯಲ್ಲಿ ರಾಷ್ಟ್ರದಲ್ಲಿ ಒಕ್ಕಟ್ಟು ಇರಬೇಕಾದುದು ಅವಶ್ಯವಾಗಿದೆ. ಶೀಘ್ರದಲ್ಲಿಯೆ ನಡೆಯಲಿರುವ ಚುನಾವಣೆಗಳಲ್ಲಿ ಕಾಂಗ್ರೆಸ್ಸು ವಿಜಯವನ್ನು ಪಡೆದು ಅಧಿಕಾರ ಸೂತ್ರಗಳನ್ನು ವಹಿಸಿಕೊಂಡು ಅದರ ಉನ್ನತಿಯನ್ನು ಸಾಧಿಸಬೇಕಾಗಿದೆ. ಹೀಗಾಗಗೊಡಬಾರದೆಂದು ಪ್ರತಿಗಾಮೀ ಶಕ್ತಿಗಳು ಪ್ರಯತ್ನಿಸುತ್ತಿವೆ. ಹಿಂಸಾತ್ಮಕ ಮಾರ್ಗಾವಲಂಬಿಗಳಾದ ಕಮ್ಯೂನಿಸ್ಟರು ಇಂಥ ಅನುಕೂಲ ವಾತಾವರಣವನ್ನೇ ನಿರೀಕ್ಷಿಸುತ್ತಿರುವರು. ನಾಯಿಕೊಡೆಗಳಂತೆ ತಲೆಯೆತ್ತುತ್ತಿರುವ ಮತ್ತು ಎತ್ತುತ್ತಿರುವ ಪಕ್ಷಗಳು ಇದರ ದುರ್ಲಾಭ ಪಡೆಯಲೆಳಸುತ್ತಿವೆ. ಇಂಥ ಸಮಯದಲ್ಲಿ ಆ ಜನ್ಮ ಕಾಂಗ್ರೆಸ್ ಸೇವಕರಾಗಿ ಕಾಂಗ್ರೆಸ್ಸಿನಲ್ಲಿ ಉಚ್ಚ ಸ್ಥಾನಗಳನ್ನು ಪಡೆದು ಅದರ ಘನತೆಗಾಗಿ ದೇಹವನ್ನು ಸವೆಸಿದ ಕೃಪಲಾನಿಯಂಥವರು ಹೊಸಪಕ್ಷ ಸ್ಥಾಪನೆಗೆ ಪ್ರವೃತ್ತರಾದುದು ಯಾವ ಬಗೆಯಿಂದಲೂ ನ್ಯಾಯ ಮತ್ತು ಸಮಂಜಸವಲ್ಲ. ಈ ಪಕ್ಷಸ್ಥಾಪನೆಯಲ್ಲಿ ತಮ್ಮದು ಸದುದ್ದೇಶವೇ ಇದೆಯೆಂದೂ ಯಾವದೇ ಬಗೆಯ ಸ್ವಾರ್ಥದಿಂದ ಪ್ರೇರಿತವಾಗಿ ಕಾಂಗ್ರೆಸ್ಸಿನಿಂದ ಸಿಡಿದು ಹೋದವರನ್ನೆಲ್ಲ ಕಲೆಹಾಕಿ ಒಗ್ಗೂಡಿಸಿ ಕಾಂಗ್ರೆಸ್ಸನ್ನು ವಿರೋಧಿಸುವದರಲ್ಲಿಯೂ ಸ್ನೇಹಭಾವವಿದೆಯೆಂದು ಮುಂತಾಗಿ ಆಚಾರ್ಯರು ಬಹಿರಂಗಪಡಿಸಿರುವರು. ಭಾರತೀಯರು ಅವರ ಈ ತರ್ಕಸರಣಿಯನ್ನೊಪ್ಪಲಾರರು ಕಾಂಗ್ರೆಸ್ಸನ್ನು ವಿಶುದ್ಧಗೊಳಿಸಬಯಸಿದ್ದರೆ ಕಾಂಗ್ರೆಸ್ಸಿನಲ್ಲಿಯೇ ಇದ್ದುಕೊಂಡು ತಮ್ಮ ಬಹುಮತ ಮಾಡಿಕೊಂಡು ಅವರು ಕಾರ್ಯ ಮಾಡಬೇಕಿತ್ತು.

— ಕರ್ಮವೀರ

ಆಚಾರ್ಯ ಕೃಪಲಾನಿಯವರು ತಮ್ಮ ಪಕ್ಷದ ಧ್ಯೇಯ ಹಾಗೂ ಕಾರ್ಯಕ್ರಮಗಳನ್ನು ಪಾಟ್ನಾ ಪರಿಷತ್ತಿನ ಮುಂದಿಟ್ಟು ಅವನ್ನು ಮಂಜೂರುಮಾಡಿದಂತೆ ನಾವು ಅವನ್ನು ಪರಿಶೀಲಿಸಿದರೆ ಇವಕ್ಕೂ ಈಗ ಅಧಿಕಾರದಲ್ಲಿರುವ ಕಾಂಗ್ರೆಸಿನ ಧ್ಯೇಯ ಹಾಗೂ ಕಾರ್ಯಕ್ರಮಗಳಿಗೂ ಮೂಲಭೂತ ಅಥವಾ ತಾತ್ವಿಕ ಭೇದಗಳೇನೂ ಕಂಡುಬರುವುದಿಲ್ಲ. ಇದನ್ನು ಆಚಾರ್ಯ ಕೃಪಲಾನಿಯವರೇ ಒಪ್ಪುವಂತೆ ಕಾಣುತ್ತದೆ. ಈಗ ಅಧಿಕಾರದಲ್ಲಿರುವವರು ಈ ಧ್ಯೇಯ ಹಾಗೂ ಈ ಕಾರ್ಯಕ್ರಮ ಸರಿಯಾಗಿ ಜಾರಿಗೆ ತರುತ್ತಿಲ್ಲವೆಂಬುದೇ ಆಚಾರ್ಯರ ಅತೃಪ್ತಿಯ ಮೂಲ ಕಾರಣವೆಂದು ಅವರೇ ಹೇಳುತ್ತಿದ್ದಾರೆ. ಒಂದೇ ಕಾರ್ಯಕ್ರಮ—ಅದನ್ನು ಅಧಿಕಾರೀ ಪಕ್ಷ ಸರಿಯಾಗಿ ಜಾರಿಮಾಡುತ್ತಿಲ್ಲ—ನಾವು ಸರಿಯಾಗಿ ಜಾರಿಗೆ ತರುವುದಕ್ಕಾಗಿ ದುಡಿಯುತ್ತೇವೆ—ಈ ರೀತಿ ಸರಕಾರಕ್ಕೆ ವಿರುದ್ಧಪಕ್ಷವೊಂದನ್ನು ವ್ಯವಸ್ಥೆಗೊಳಿಸುವುದನ್ನು ನಾವು ಯಾವ ಪ್ರಜಾಸತ್ತಾತ್ಮಕ ಪದ್ಧತಿಯ ರಾಜ್ಯದಲ್ಲಿಯೂ ಕಾಣುತ್ತ ಇಲ್ಲ.

ಆಚಾರ್ಯ ಕೃಪಲಾನಿಯವರ ಹೇಳಿಕೆಗಳ ಒಟ್ಟು ಸಾರಾಂಶವನ್ನು ಪರಿಶೀಲಿಸಿದರೆ ಈಗ ಕಾಂಗ್ರೆಸಿನಲ್ಲಿ ಅಧಿಕಾರದಲ್ಲಿರುವವರು ಹಾಗೂ ಸರಕಾರ ನಡೆಸುವವರು ಇವರೆಲ್ಲರ ಮೇಲೆ ಆಚಾರ್ಯರು ವ್ಯಕ್ತಿಗತವಾಗಿ ಆರೋಪಗಳನ್ನು ಹೊರಿಸುತ್ತಿರುವರೇ ಅಲ್ಲದೆ ಬೇರೇನೂ ಇಲ್ಲವೆಂದು ವಿಚಾರವಂತರಿಗೆ ಸ್ಪಷ್ಟವಾಗದೆ ಇರಲಾರದು. ಹೀಗಾಗಿ ಪ್ರಜಾಸತ್ತಾತ್ಮಕ ಪದ್ಧತಿಯನ್ನು ಯಶಸ್ವಿಗೊಳಿಸಲು ಅಗತ್ಯವೆಂದು ಹೇಳಲಾಗುತ್ತಿರುವ ವಿರುದ್ಧ ಪಕ್ಷದ ವ್ಯವಸ್ಥೆಗೂ ಆಚಾರ್ಯ ಕೃಪಲಾನಿಯವರು ತಯಾರಿಸಿರುವ ವಿರುದ್ಧ ಪಕ್ಷಕ್ಕೂ ಸಾಮ್ಯವಿಲ್ಲವೆಂದೂ ಆಚಾರ್ಯರ ವಿರುದ್ಧ ಪಕ್ಷವು ವ್ಯಕ್ತಿಗತವಿರೋಧದಿಂದುಂಟಾಗಿರುವ ವಿರುದ್ಧ ಪಕ್ಷವೆಂದೂ ನಾವು ಅಭಿಪ್ರಾಯ ಸೂಚಿಸಿದರೆ ಆಚಾರ್ಯರನ್ನು ಮೆಚ್ಚುವಂಥವರು ಕ್ಷಮಿಸಬೇಕು.

ಈ ಬಗೆಯ ಪರಿಸ್ಥಿತಿಯಲ್ಲಿ ಆಚಾರ್ಯರು ಹೊಸ ಪಕ್ಷ ನಿರ್ಮಾಣಕ್ಕೆ ಕೈಕೊಟ್ಟುದಕ್ಕೆ ಹೆಚ್ಚು ಅರ್ಥವಿಲ್ಲವೆನ್ನದೆ ನಿವೃತ್ತಿ ಇಲ್ಲ. ವ್ಯಕ್ತಿಗತ ಅತೃಪ್ತಿಯೇ ಇದರ ಮೂಲವೆಂದು ನಾವು ಊಹಿಸಿದರೆ ಅನುಚಿತವಿಲ್ಲ. ಕಾಂಗ್ರೆಸ್ ಅಧ್ಯಕ್ಷ ಟಂಡನಜೀಯವರು ಹೇಳಿದಂತೆ ಧ್ಯೇಯ ಮತ್ತು ಕಾರ್ಯಕ್ರಮಗಳಲ್ಲಿ ಭಿನ್ನಾಭಿಪ್ರಾಯವಿಲ್ಲದಿರುವಾಗ ಕಾಂಗ್ರೆಸಿನಲ್ಲಿ ದೋಷಗಳು ಕಂಡುಬಂದರೆ ಅವನ್ನು ತಿದ್ದಿ ಸರಿಪಡಿಸಿ ಆ ಸಂಸ್ಥೆಯನ್ನೇ ಸುಧಾರಿಸಲು ಯತ್ನಿಸುವುದು ಆಚಾರ್ಯರಂಥವರ ಸ್ಪಷ್ಟ ಕರ್ತವ್ಯವಿದ್ದಿತು. ಆ ಕಾರ್ಯ ತನ್ನಿಂದ ಸಾಧ್ಯವಾಗುವುದಿಲ್ಲವೆಂದು ಕಂಡುಬಂದರೆ ತನ್ನ ಸಾಮರ್ಥ್ಯದ ಮಿತಿಯಂತೆ ತನಗೆ ಸಾಧ್ಯವಿದ್ದ ಕಾರ್ಯಮಾಡಿ ತನ್ನ ಕರ್ತವ್ಯ ತಾನು ಪೂರೈಸುತ್ತಿದ್ದೇನೆಂಬ ತೃಪ್ತಿಯಲ್ಲಿರಬೇಕಾದುದು ಅವರ ಸ್ಪಷ್ಟ ದಾರಿಯಿತ್ತು. ಆಚಾರ್ಯ ಕೃಪಲಾನಿಯವರು ಗಾಂಧೀಜಿಯವರ ವಿಧಾಯಕ ಕಾರ್ಯಕ್ರಮದಲ್ಲಿ ಹೆಚ್ಚು ಆಸಕ್ತಿಯುಳ್ಳವರೆಂದಾದರೆ ಅವರು ತಮ್ಮ ಪೂರ್ಣ ಸಮಯ ಅದಕ್ಕೇನೇ ಅರ್ಪಿಸಿದರೆ ದೇಶಕ್ಕೆ ಎಷ್ಟೋ ಹೆಚ್ಚಿನ ಉಪಕಾರವಾಗುತ್ತಿತ್ತೆಂದು ನಮಗನ್ನಿಸುತ್ತದೆ. ಆಚಾರ್ಯರಿಂದ ಬೇರೆ ಕೆಲಸ ತನಗೆ ಆಗಬೇಕಾಗಿದೆ ಎಂದು ಗಾಂಧೀಜಿ ಹೇಳಿದ್ದರಂತೆ. ಈ ಬೇರೆ ಕೆಲಸವೆಂದರೆ ವಿಧಾಯಕ ಕಾರ್ಯ ಮುಂದೊತ್ತುವುದೇ ಎಂದು ಆಚಾರ್ಯರು ಸರಿಯಾಗಿ ಅರ್ಥಮಾಡಿಕೊಂಡಿದ್ದರೆ ಒಳ್ಳೆಯದಿತ್ತು.

ಕಾಂಗ್ರೆಸು ತನಗೆ ಬೇಕಾದಂತೆ ವರ್ತಿಸುತ್ತ ಇಲ್ಲವೆಂದು ಕಂಡಾಗ ಗಾಂಧೀಜಿ ಏನು ಮಾಡುತ್ತಿದ್ದರು? ಕಾಂಗ್ರೆಸಿನ ಜವಾಬ್ದಾರಿ ಹೊತ್ತವರ ಮೇಲೆಯೇ ಅದರ ಕಾರ್ಯ ಬಿಟ್ಟುಕೊಟ್ಟು ಸಾಧ್ಯವಿದ್ದ ಸಹಕಾರ ಕೊಡುತ್ತಾ ತಾನು ಪೂರ್ಣವಾಗಿ ವಿಧಾಯಕ ಕಾರ್ಯದ ಕಡೆಗೇನೆ ಗಮನ ಕೊಡುತ್ತಿರಲಿಲ್ಲವೆ? ಆಚಾರ್ಯರಿಗೆ ಈ ಸ್ಪಷ್ಟ ದಾರಿ ಇಂದು ಏತಕ್ಕೆ ಕಾಣುವುದಿಲ್ಲ?

— ಸರ್ವೋದಯ

ಉಡುಪಿ

ನೂಲಿರಿನೆ ಸಲಹಾ ಸಮಿತಿ ಸಭೆ

ಉಡುಪಿ:—ಕಳೆದ ತಾರೀಕು 20ರಂದು ಶ್ರೀ ಟಿ ರಮೇಶ ಪೈಗಳ ಅಧ್ಯಕ್ಷತೆಯಲ್ಲಿ ಜರಗಿ ಸರಕಾರಿ ಸ್ಕೀಮಿನಂತೆ ಯಾವರೂ ಪ್ರತಿಯೊಂದು ಮಗ್ಗಕ್ಕೂ ನೂಲುವಿತರಣೆ ಮಾಡಲು ಅನುಕೂಲವಾಗುವಂತೆ ಸಾಕಷ್ಟು ಪರಿಮಾಣದಲ್ಲಿ ಈ ತಾಲೂಕಿಗೆ ನೂಲು ಸರಬರಾಯಿ ಆಗ ಬೇಕೆಂದು ಜಿಲ್ಲಾ ಕಲೆಕ್ಟರರನ್ನು ವಿನಂತಿಸಲಾಯಿತು. ಟೆಕ್ಸ್‌ಟೈಲ್ ಇನ್ಸ್‌ಪೆಕ್ಟರರು ಶಿಫಾರಸುಮಾಡಿದ ಹೊಸ ಮಗ್ಗದವರಿಗೆ ನೂಲಿನ ಕಾರ್ಡುಗಳನ್ನು ಕೊಡುವರೆ ಅಧ್ಯಕ್ಷರಿಗೆ ಅಧಿಕಾರವೀಯಲಾಯಿತು

ತಾಲೂಕು ಸೋಲ್ಜರ್ಸ್ ಕಮಿಟಿ ಸಭೆಯು:—ಕಳೆದ ತಾರೀಕು. 25ರಲ್ಲಿ ತಹಶಿಲ್ದಾರ ಶ್ರೀ ವೆಂಕಪ್ಪನವರ ಅಧ್ಯಕ್ಷತೆಯಲ್ಲಿ ಜರಗಿತು ಮಾಜಿ ಸೋಲ್ಜರರು ಹಾಗೂ ಅವರ ಕುಟುಂಬದ ಸಂಕಷ್ಟ ನಿವಾರಣೆಯಲ್ಲಿ ಕಮಿಟಿ ಸದಸ್ಯರು ದುಡಿಯಬೇಕೆಂದು ಕಮಿಟಿ ಉಪಾಧ್ಯಕ್ಷ ಶ್ರೀ ಡಬ್ಲ್ಯು. ಎ. ಸುಟೀರ ಅವರು ಅಪೇಕ್ಷಿಸಿದರು. ಶ್ರೀ. ಪಿ. ಶ್ರೀ ಶ್ರೀನಿವಾಸರಾಯರು ಕಮಿಟಿಯ ಸದಸ್ಯರಾಗಿ ಸೇರಿಸಲ್ಪಟ್ಟರು ಮುಂದಿನ ಸಭೆಯು ಜುಲೈ 21ರಲ್ಲಿ ಸಂಜೆ ನಾಲ್ಕು ಗಂಟೆಗೆ ತಾಲೂಕು ಕಚೇರಿಯಲ್ಲಿ ಸೇರಲಿರುವುದು.

ಹವಾಮಾನ— 7–8 ದಿನಗಳಿಂದ ಮಳೆ ಇಲ್ಲದೆ ಬಿಸಿಲು ಕಾಯುತ್ತಿದೆ ಕೆಲ ದಿನಗಳ ಹಿಂದೆ ಅತಿರೇಕ ಮಳೆಬಿದ್ದು ಈಗ ಬಿಸಿಲು ಕಾದೂ ವ್ಯವಸಾಯಕ್ಕೆ ತುಂಬ ಧಕ್ಕೆಯಾಗಿದೆ.

ನೋಟೀಸು

ಕಾಸರಗೋಡು ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ

S. C No 50/1951

ಅಮ್ಮು ಯಾನೆ ಅಮುದಬ್ಬಾರಿ —ವಾದಿ

ಗೋಪಾಲನ್ ನ್ಯಾರಿ, ಅಳ್ಳಂಗಳ ಮೇಲೋತ್ತ ಕುಂಞಿ ರಾಮನಾಯರಿ ಅಳಿಯನ, ಲಕ್ಷ್ಮಿ ಅಮ್ಮನ ಮಗ ಕಾಸರಗೋಡು ತಾಲೂಕು ತೆಕ್ಕಿಲ್ ಗ್ರಾಮದಲ್ಲಿರುವವ.

ಪ್ರತಿವಾದಿಯು ವಾದಿಗೆ ಬರೆಕೊಟ್ಟ ಪ್ರಾಮಿಸರಿ ನೋಟಿನ ಆಸಲುಬಡ್ಡಿ ಒಟ್ಟು ರುಪಾಯಿ 135 11-0ಕ್ಕೆ ವಾದಿಯು ದಾಖಲ್ಲುಮಾಡಿದ ಸದ್ರಿ ವ್ಯಾಜ್ಯವು ತಾರೀಕು 16-7-1951ಕ್ಕೆ ತನ್ನಿಗೆ ಇಟ್ಟಿರುವ ಸಂಗ್ತಿ ತಿಳಿಸೋಣಾಗಿರುವದೆ

Sd/ **P. Ahmad,**
Advocate for Plaintiff

ಕಾಸರಗೋಡು 26 6–51

WANTED

1. A clerk, who has got fair Knowledge of English Accounts for Perdoor Sri Ananthapadmanabha Temple. Perdoor.

2. A Higher Grade Trained Teacher to serve in the Perdoor Sri Ananthapadmanabha Temple School, Perdoor.

For particulars apply to

The Executive Officer,
Sri Ananthapadmanabha
Temple, Perdoor S. K



BALLBEARING
—THE LIFEBLOOD OF THE INDUSTRY'

Dealers in:
ROTARY OIL MILLS
FLOUR MILLS
BALL, ROLLER &
THRUST BEARINGS

TELEGRAMS — CHEAPTRADE

A. RAMSON AND CO.
38 MISTRI BUILDING BALARAM St BOMBAY 7

ಯಕ್ಷಗಾನ ಪ್ರಿಯರಿಗೆ ಉತ್ತಮ ಸಾಹಿತ್ಯ!

ಯಕ್ಷಗಾನ ಪ್ರಸಂಗದಲ್ಲಿ ಪ್ರಸಿದ್ಧರಾದ
ಶ್ರೀ ಕೆ. ಪಿ ವೆಂಕಪ್ಪ ಶೆಟ್ಟರಿಂದ ರಚಿಸಲ್ಪಟ್ಟ

ಸಾಹಸ ಭೀಮ ವಿಜಯ
(ಗದಾಯುದ್ಧ)

ಎಂಬ ಯಕ್ಷಗಾನ ಪ್ರಸಂಗವು ಇದೀಗ ಪ್ರಕಟವಾಗಿದೆ!
ಯಕ್ಷಗಾನ ಪ್ರಿಯರಿಗೆ ಸುಸಂಧಿ!

ಬೆಲೆ: 0—8—0 ಟಪ್ಪಾಲು ಖರ್ಚು ಪ್ರತ್ಯೇಕ

ವ್ಯಾಪಾರಿಗಳಿಗೆ ಧಾರಾಳ ಕಮಿಶನ್ ಇದೆ

ಸಿಗುವ ಸ್ಥಳಗಳು:—
(1) ಅಂತರಂಗ ಕಾರ್ಯಾಲಯ, ಉಡುಪಿ
(2) ನವಭಾರತ ಬುಕ್ ಡಿಪೋ, ಉಡುಪಿ.
(3) ನವಯುಗ ಪ್ರೆಸ್, ಉಡುಪಿ.
(4) ಸ್ಕೂಲ್ ಬುಕ್ ಕಂಪೆನಿ, ಮಂಗಳೂರು

ಡಿ ಕೆ. ಭಾರದ್ವಾಜರ

ಇಂಗ್ಲಿಷ್ × ಇಂಗ್ಲಿಷ್
ಕನ್ನಡ ಡಿಕ್ಷನೆರಿ

ವಿದ್ಯಾರ್ಥಿಗಳಿಗೆ ಅತ್ಯುಪಯುಕ್ತವಾದ
ದೊಡ್ಡ ಸೈಜಿನ ನಿಘಂಟು
ಬೆಲೆ ರೂ 5–1–0

ನವಭಾರತ ಬುಕ್ ಡಿಪೊ, ಉಡುಪಿ.
ನವಯುಗ ಪ್ರೆಸ್. ಉಡುಪಿ

ವಿಜಯಿ ಪಡೆಯಿರಿ
ಮತ್ತು
ತುಂಬ ಕಮಿಶನ್ ಗಳಿಸಿರಿ

ಸೈಯಾದ್ರಿ ಇನ್ಶ್ಯೂರೆನ್ಸ್ ಕಂಪೆನಿ
ಲಿಮಿಟೆಡ್—ನಾಸಿಕ

ಇದರ ಮುಖ್ಯ ಏಜಂಟ ಉಪನ್ಯಾಸಕ್ತಿಯಾಗಿ ವಿಜಯಿ ವಡೆಕೊಳ್ಳಿರಿ ಆಕರ್ಷಕ ಮತ್ತು ಉದಾರ ಶರ್ತಗಳು ಮೇಲ್ದರ್ಜೆಯ ಜೀವವಿಮಾ ಸಂಸ್ಥೆಯಿದು

G G Soundankar
Managing Director
The Sahyadri Insurance Co., Ltd
Nasik

ಮಂಗಳೂರು

ವಿವಾಹ ಸಮಾರಂಭಗಳು:— ಪ್ರಸಿದ್ಧ ಕಾಫಿ ಪ್ಲಾಂಟರ್ ಶ್ರೀ. ಕೆ. ಪಿ. ಶೀನಪ್ಪ ಶೆಟ್ಟಿ ಪುತ್ರಿ ಸೌ. ಪ್ರಭಾವತಿಯ ವಿವಾಹವು ದಿ। ಬಂಬ್ರಾಣ ಮದನ ನಾಯ್ಕರ ಪುತ್ರ ಶ್ರೀ. ಶ್ರೀನಿವಾಸ ನಾಯಕ್ ಇವರೊಡನೆ ತಾ. 14ರಲ್ಲಿ ಜ್ಯೋತಿ ಟಾಕೀಸಿನಲ್ಲಿ ವಿಜೃಂಭಣೆಯಿಂದ ಜರಗಿತು.

ಜಿಲ್ಲಾ ಬೋರ್ಡ್ ಪ್ರೆಸಿಡೆಂಟರಾಗಿದ್ದ ದಿ। ಡಾ। ವಿಠ್ಠಲ ಶೆಟ್ಟಿ ಪುತ್ರಿ ಸೌ। ಸುಮಂಗಲೆಯ ವಿವಾಹವು ಶ್ರೀ ಕೆ. ಲಕ್ಷ್ಮಣ ರೈಗಳ ಪುತ್ರ ಶ್ರೀ ವೆಂಕಪ್ಪ ರೈಗಳೊಡನೆ ತಾ 21ರಲ್ಲಿ ರಾಮಕೃಷ್ಣ ವಿದ್ಯಾರ್ಥಿ ಭವನದಲ್ಲಿ ಸಂಭ್ರಮದಿಂದ ನೆರವೇರಿತು.

ಶ್ರೀ ಕೆ. ಶೀನಪ್ಪ ಸೆರ್ವೆಗಾರರ ಪುತ್ರ ಶ್ರೀ ಮೋನಪ್ಪ ಶೆಟ್ಟಿ, ಇವರ್ಾಡಿ ಇವರು ಶ್ರೀ ಎಂ. ಎಲಿಯಣ್ಣ ರೈಗಳ ಪುತ್ರಿ ಸೌ। ತಾರಾಳನ್ನು ಮತ್ತು ಶ್ರೀ ಕೆ. ಶೀನಪ್ಪ ಸರ್ವೆಗಾರರ ಪುತ್ರಿ ಸುಲೋಚನೆಯನ್ನು ಶ್ರೀ ಎಲಿಯಣ್ಣ ರೈಗಳ ಪುತ್ರ ಶ್ರೀ ಕೃಷ್ಣ ರೈಗಳು ತಾ. 26ರಲ್ಲಿ ರಾಮಕೃಷ್ಣ ವಿದ್ಯಾರ್ಥಿ ಭವನದಲ್ಲಿ ವಿಜೃಂಭಣೆಯಿಂದ ವಿವಾಹವಾದರು. ನೂತನ ವಧೂವರರಿಗೆ ಸನ್ಮಂಗಳವಾಗಲಿ.

ಮಳೆ—5-6 ದಿನ ಬೇಸಿಗೆಯಂತೆ ಬಿಸಿಲು ಮತ್ತು ಸೆಖೆ ಇತ್ತು. ಈ ವರೆಗೆ ಸುಮಾರು 40 ಇಂಚು ಮಳೆ ಬಿದ್ದಿದೆ.

ಹಸುಗೆ ವಿರಿತ.— ತಾ. 24ರಿಂದ ರೇಶನ್ 9 ಔನ್ಸಿನಿಂದ 12ಕ್ಕೆ ಏರಿಸಲ್ಪಟ್ಟಿದೆ. ಶ್ರಮ ಜೀವಿಗಳಿಗೆ 12ರಿಂದ 16ಕ್ಕೆ ಏರಿಸಲ್ಪಟ್ಟಿದೆ ಇದರಲ್ಲಿ ಅಕ್ಕಿ 8 ಔನ್ಸು, ಉಳಿದುದು ಗೋಧಿ ಮತ್ತು ಬೇರೆ ಧಾನ್ಯಗಳು

ಶ್ರೀ. ಹೊಳ್ಳರ ಬಂಧನ— ಮೂರು ವರ್ಷಗಳ ಮೊದಲು ಬಂಧಿಸಲ್ಪಟ್ಟು ಪೋಲಿಸು ಠಾಣೆಯಿಂದ ವೆಲ್ಲೂರು ಜೈಲಿಗೆ ಒಯ್ಯಲ್ಪಡುವಾಗ ಮಂಜೇಶ್ವರದಲ್ಲಿ ಕೆಲವು ಕಮ್ಯೂನಿಸ್ಟರಿಂದ ರೈಲು ಗಾಡಿಯಿಂದಲೇ ತಪ್ಪಿಸಲ್ಪಟ್ಟು, ಈ ವರೆಗೂ ಪತ್ತೆಯಾಗದೆ ತಲ್ಲೆರೆಯಾಗಿದ್ದ ಶ್ರೀ ಎಸ್. ಎನ್. ಹೊಳ್ಳರು ಇತ್ತೀಚೆಗೆ ಹೈದರಾಬಾದಿನಲ್ಲಿ ಬಂಧಿಸಲ್ಪಟ್ಟಿರುವರೆಂದು ತಿಳಿದು ಬರುತ್ತದೆ. ಅವರನ್ನು ಪತ್ತೆ ಹಚ್ಚಿಕೊಟ್ಟವರಿಗೆ ಪಾರಿತೋಷಕ ಕೊಡುವುದಾಗಿಯೂ ಸರಕಾರ ಜಾಹೀರು ಮಾಡಿತ್ತು.

ಶ್ರೀ. ಕೆ. ಆರ್. ಕಾರಂತರು— ಯುರೋಪು, ಇಂಗ್ಲೆಂಡುಗಳ ಪ್ರವಾಸದನ್ನು ಮುಗಿಸಿಕೊಂಡು ತಾ20ರಲ್ಲಿ ಮಂಗಳೂರಿಗೆ ಹಿಂದಿರುಗಿ ಬಂದಿರುವರು. ಜಿಲ್ಲಾ ಪತ್ರಿಕೋದ್ಯೋಗಿ ಸಂಘದ ಸದಸ್ಯರು ಇವರಿಗೆ ತಾ23ರಲ್ಲಿ ಸತ್ಕಾರಕೂಟವೊಂದನ್ನೇರ್ಪಡಿಸಿದರು. ಶ್ರೀ. ಕಾರಂತರು ಈ ಸಂದರ್ಭದಲ್ಲಿ ತಮ್ಮ ಪ್ರವಾಸದ ಅನುಭವದ ಕುರಿತು ಭಾಷಣವಿತ್ತರು.

ಫಿಡ್ಲು ವಾದನ ಕಚೇರಿಯೊಂದು ತಾ17ರಲ್ಲಿ ಭಾರತ ಸಂಗೀತ ಸಮಾಜದ ನೇತೃತ್ವದಲ್ಲಿ ಜರಗಿತು. ಲಖ್ನೋ ಬಟ್ಖಂಡೆ ಸಂಗೀತ ವಿಶ್ವವಿದ್ಯಾನಿಲಯದ ಪಿಟೀಲು ಸಂಗೀತಜ್ಞರಾದ ಆಚಾರ್ಯ ಜೋಗ್‌ರವರ ಫಿಡ್ಲು ವಾದನ, ಮುಂಬಾಯಿ ಸಂಗೀತ ವಿದ್ಯಾಪೀಠದ ತಬ್ಲಾವಾದನ ತಜ್ಞರಾದ ಎಚ್. ತಾರಾನಾಥ ರಾಯರ ತಬ್ಲಾವಾದನ ಯಶಸ್ವಿಯಾಗಿ ಜರಗಿತು. ಸಮಾಜದ ಅಧ್ಯಕ್ಷ ಶ್ರೀ. ಎನ್. ಎಂ. ಅಡ್ಯಂತಾಯರು ಕಲಾವಿದರಿಗೆ ಹಾರವಿತ್ತು ಸ್ವಾಗತವಿತ್ತರು

ಭಾರತ ಸಂಗೀತ ಸಮಾಜವು ತಾ. 14ರಲ್ಲಿ ಮಂಗಳೂರು ಸಂಗೀತ ಪ್ರೇಮಿಗಳ ಸಭೆಯಲ್ಲಿ ನಿರ್ಣಯಿಸಿದಂತೆ ಸ್ಥಾಪಿಸಲ್ಪಟ್ಟಿತು. ರಾ। ಬ। ಅಡ್ಯಂತಾಯರು ಅಧ್ಯಕ್ಷರಾಗಿ ಶ್ರೀ. ಎನ್. ರಾಮರಾಯರು ಉಪಾಧ್ಯಕ್ಷರಾಗಿ ಇರುವ ಕಾರ್ಯನಿರ್ವಾಹಕ ಮಂಡಳಿ ರಚನೆಯಾಗಿದೆ.

ಸಂಗೀತ ಕಚೇರಿ— ತಾ. 18ರಲ್ಲಿ ಲಲಿತ ಕಲಾನಿಲಯ ಮತ್ತು ಪ್ರಗತಿ ಮಂಡಲಿಯ ನೇತೃತ್ವದಲ್ಲಿ ಧಾರವಾಡದ ಅಖಿಲ ಭಾರತ ಭಾನುಲಿ ಕೇಂದ್ರದ ಗಾಯನ ಗಾರರಾದ ಶ್ರೀ ಚಕ್ರಕೋಡಿ ನಾರಾಯಣ ಶಾಸ್ತ್ರಿಗಳ ಸಂಗೀತ ಕಚೇರಿಯೊಂದು ಜರಗಿತು. ಶ್ರೀ ಎಸ್. ಎಸ್. ಕಿಲ್ಲೆಯವರು ಶಾಸ್ತ್ರಿಗಳ ಹಾಡುಗಾರಿಕೆಯನ್ನು ಶ್ಲಾಘಿಸಿ ಮಾತನಾಡಿದರು ಶ್ರೀ ಶ್ರೀನಿವಾಸ ಉಪಾಧ್ಯ ಅಭಿವಂದಿಸಿದರು.

ರೈಲು ನಿಲ್ದಾಣದ— ಮುಂದಿನ ಏರಿನ ಭಾಗವನ್ನು ಸಮತಟ್ಟುಮಾಡಿ ವಾಹನ ಹಾಗೂ ಪ್ರಯಾಣಿಕರ ಚಲಾವಣೆಯ ಸೌಲಭ್ಯವನ್ನು ಒದಗಿಸಲಾಗುವುದೆಂದು ತಿಳಿದು ಬರುತ್ತದೆ.

ಜಿಲ್ಲಾ ಆಹಾರೋತ್ಪತ್ತಿ ಸಮಿತಿ ಸಭೆ— ಯೊಂದು ಇತ್ತೀಚೆಗೆ ಜಿಲ್ಲಾ ಕಲೆಕ್ಟರ್ ಶ್ರೀ. ಎ. ಆರ್. ರಾಜರತ್ನಂ ಇವರ ಅಧ್ಯಕ್ಷತೆಯಲ್ಲಿ ಜರಗಿತು. 1947ರಿಂದ 1951ರ ವರೆಗಿನ ಬಾವಿಗಳ ಸಹಾಯ ಧನಯೋಜನೆಗನುಸಾರವಾಗಿ ತಾ 16ರ ವರೆಗೆ 522 ಕಾಮಗಾರಿಗಳು ಮಂಜೂರಾಗಿ ಅವುಗಳಲ್ಲಿ 169 ಪೂರ್ತಿಯಾಗಿವೆ, ಉಳಿದವು ಈ ತಿಂಗಳೊಳಗಾಗಿ ಪ್ರಾರಂಭವಾಗಬೇಕಾಗಿದೆ, ಪೂರ್ಣವಾದ ಕೆಲಸಗಳ ಸಹಾಯದಿಂದ ತಾ 16ರ ವರೆಗೆ ಸಾಗುವಳಿಗೆ ತೆರವಾದ ಭೂವಿಸ್ತೀರ್ಣ 238 ಎಕ್ರೆ ಉತ್ಪತ್ತಿ 1900 ಮುಡಿ ಎನ್ನಲಾಗಿದೆ.

ಮಿತಬೆಲೆಯ ಅಂಗಡಿಗಳು— ಜಿಲ್ಲೆಯಲ್ಲಿ ಅಲ್ಲಲ್ಲಿ ತೆರೆಯಲಾಗುತ್ತಿದೆ. ಹೀಗೆ ಅಂಗಡಿಗಳನ್ನು ತೆರೆದ ಕಡೆಗಳಲ್ಲಿ ಅಕ್ಕಿಯ ಬೆಲೆಯೂ ಕಡಿಮೆಯಾಗಿದೆ ಎಂದು ತಿಳಿದು ಬಂದಿದೆ.

ದುಃಖಸೂಚನೆ ಸಭೆ— ತಾ. 16ರಲ್ಲು ಕೆನರಾ ಚೇಂಬರ್ ಆಫ್ ಕೋಮರ್ಸಿನ ವಿಶಿಷ್ಟ ಸಭೆಯೊಂದು ಶ್ರೀ ಎಫ್. ಯಸ್. ಡಿ. ಪಿಂಟೋರವರ ಅಧ್ಯಕ್ಷತೆಯಲ್ಲಿ ಜರಗಿ ಚೇಂಬರಿನ ಕೋಶಾಧಿಕಾರಿಯಾಗಿದ್ದ ಮಂಗಳೂರಿನ ಪ್ರಸಿದ್ಧ ವ್ಯಾಪಾರಿ ಜನಪ್ರಿಯ ಶ್ರೀ ಪಿ. ಉಮಾನಾಥ ಭಂಡಾರಿಗಳ ಅಕಾಲ ನಿಧನದ ಬಗ್ಗೆ ದುಃಖ ಸೂಚಿಸಲಾಯಿತು.

ನೋಟೀಸು

ದ. ಕ. ಸಬ್ ಕೋರ್ಟಿನಲ್ಲಿ

O. S No 6/1951

ಅಪ್ಪೆ ಯಾನೆ ಪಾಂತಿರಾಜ –ಅರ್ಜಿದಾರ

ಮತ್ತು

ನೇಮಿರಾಜ ಬಲ್ಲಾಳ ವಗೈರರು–ಕೈಸೊಂಡೆಂಟರು 29ನೇ ರೆಸ್ಪೊಂಡೆಂಟರಾದ ಕಾರ್ಕಳ ತಾಲೂಕು ಪ್ರಾಂತ್ಯ ಗ್ರಾಮದ ಲಾಡಿ ಗುತ್ತು ಮನೆ ಮತ್ತು ಹೆಂಗಸಿನ ಮಗ ಕುಮಾರಯ್ಯ—Laxmi Buildings 4th Floor Room No 74 Bombay ಯವರಿಗೆ––

ಅರ್ಜಿದಾರನು ಕುಟುಂಬದ ಆಸ್ತಿ ವಿಭಾಗದ ಕುರಿತು ಪಾಪರ ಆಗಿ (ಕೋರ್ಟು ಫೀ ಸಲ್ಲಿಸದೇ) ದಾವಾ ತರಲಿಕ್ಕೆ ಹುಕುಂ ಆಗಬೇಕಾಗಿ ದಾಖಲ್ಲ ಮಾಡಿರುವ ಮೇಲ್ಕಂಡ ಅರ್ಜಿಯು ತನ್ನ ಬಗ್ಗೆ ತಾರೀಕು 16 7-1951ಕ್ಕೆ ಇಟ್ಟಿರುವುದರಿಂದ ಅಕುರಿತು ನಿಮ್ಮ ಆಕ್ಷೇಪಣೆಯಿದ್ದರೆ ಆದಿವ್ಸ ಬೆಳಿಗ್ಗೆ 11 ಘಂಟೆಗೆ ಕೋರ್ಟು ಮುಂದೆ ಹಾಜರು ಮಾಡತಕ್ಕದ್ದು.

By order of the court

K. B. Ginaraja Hegde

Advocate for Petitioner

ಮಂಗಳೂರು ತಾ 20-6-1951

ದಿ ಕಥೋಲಿಕ್ ಬೇಂಕ್ ಲಿಮಿಟೆಡ್, ಶಿರ್ವ.

ನೋಟೀಸು

ಈ ಕೆಳಗೆ ಕಾಣಿಸಿದವರು ಸದ್ರಿ ಬೇಂಕಿನಲ್ಲಿ ನಗದು ಈಡಿನ ಮೇಲೆ ಸಾಲ ಪಡಕೊಂಡು ಕ್ಲಪ್ತ ವಾಯಿದೆಗೆ ಅಸಲು ಬಡ್ಡಿ ವಗೈರೆ ಕೊಡದೆ ಬಾಕಿಮಾಡಿರುವುದರಿಂದಲೂ ಸದರಿ ಸಾಲಗಳನ್ನು ಬರಮಾಡಿಕೊಳ್ಳುವರೆ ಅವರಿಗೆ ರಿಜಿಸ್ಟ್ರಿ ನೋಟೀಸು ಬಿಟ್ಟಲ್ಲಿಯೂ, ಸದ್ರಿಯವುಗಳನ್ನು ಬಿಡಿಸಿಕೊಂಡು ಹೋಗುವರೆ ತಪ್ಪಿದ ಕಾರಣ, ಸದರಿಯವರ್ರು ಈಡಿಟ್ಟ ನಗಗಳನ್ನು ಇದೇ 1951ನೇ ಇಸವಿ ಜುಲಾಯಿ ತಿಂಗಳ 2ನೇ ಸೋಮವಾರ ಬೇಂಕಿಗೆ ಸಲ್ಲತಕ್ಕ ಅಸಲು, ಬಡ್ಡಿ, ನೋಟೀಸು ಖರ್ಚು ಇತ್ಯಾದಿಗಳನ್ನು ಸಲಾಯಿಸಿ ಬಿಡಿಸಿಕೊಂಡು ಹೋಗದೆ ಇದ್ದ ಪಕ್ಷದಲ್ಲಿ ಸದರಿಯವರು ಈಡಿಟ್ಟ ನಗಗಳನ್ನು ಇದೇ 1951ನೇ ಇಸವಿ ತಾ. 7-7-1951ಕ್ಕೆ ಪೂರ್ವಾಹ್ನ ಗಂಟೆ 12ಕ್ಕೆ ಯಾ ಅನಂತರ ನಮಗೆ ಯುಕ್ತ ಕಂಡ ತಾರೀಕಿನಲ್ಲಿ ಬೇಂಕಿನ ಆಫೀಸಿನಲ್ಲಿ ಬಹಿರಂಗವಾಗಿ ಏಲಂ ಮಾಡಲಾಗುವುದು

ತಾರೀಕು	ನಂಬ್ರ	ಸಾಲಪಡೆದವರ ಹೆಸರು & ವಿಳಾಸ	ಮೊಬಲಗು
2-3-1949	24/1129	ಅಂತೋನಿ ಕೊಡ್ದ ಲೋರೆನ್ಸ್ ಕೊಡ್ದರ ಮಗ, ನ್ಯಾದಡ್ಡು ಶಿರ್ವ.	ರೂ ಆ. 25 – 0
26-4-1949	1371	ಅಂಗರ ಸೇರಿಗಾರ, ಚಂದು ಸೇರಿಗಾರನ ಅಳಿಯ, ಕುತ್ಯಾರು ಕೊಡ್ಡಟ್ಟು, ಪಿಲಾರು ಪೋಸ್ಟು.	80—0
27-12-194·	25/976	ಎಸ್. ಜನಾರ್ಧನ ಆಚಾರಿ, ರಾಮಪ್ಪ ಆಚಾರಿ ಮಗ, ಜುವೆಲರ್ ಮಂಚಕಲ್ಲು ಶಿರ್ವ	250— 0

SHIRVA
ತಾ 22-6-1951

C D' Souza
ಏಜಂಟ್

ವಿವಿಧ ಪಾತ್ರೆಗಳು



ಯಾವತ್ತೂ ವಿಧದ ಬೆಳ್ಳಿ ತಾಮ್ರ ಹಿತ್ತಾಳೆ, ಕಂಚು ಮೊದಲಾದುವುಗಳ ವಿವಿಧ ಪಾತ್ರೆಗಳೂ ಸಾಮಾನುಗಳೂ ರಖಂ ಆಗಿಯೂ ಚಿಲ್ಲರೆಯಾಗಿಯೂ ದೊರೆಯುತ್ತದೆ.

ಕಲ್ಯಾಂಜಿ ವ್ಯಾಸಾಚಾರ್ಯ,
ರಥಬೀದಿ, ಉಡುಪಿ

TEL: 40592

WATSONS AERATED WATERS

14 Parel Road, Cross Lane, BOMBAY 12

- Watsons hygienically prepared Aerated Waters are the Drinks of the day.
- Our Orange, Rose, Pine-apple, Raspbery, Gingerbeer, Tonic, Pick me-up and Lemon are drinks of health and pleasure.

We accept orders to supply functions etc , in any parts of the City

- ಆರೋಗ್ಯಶಾಸ್ತ್ರರೀತ್ಯಾ ತಯಾರಿಸಿದ ವಾಟ್ಸನ್ಸರ ಸೋಡಾ ದ್ರಾವಕಗಳೇ ಇಂದಿಗೆ ಬೇಕಾದ ಪಾನೀಯಗಳು.
- ನಮ್ಮ ಒರೇಂಜ್, ರೋಸ್ ಪೈನ್‌ಎಪ್ಲ್, ರಾಸ್ಪ್ರಿ, ಜಿಂಜರ್‌ಬೀರ್, ಟೊನಿಕ್, ಪಿಕ್-ಮಿ-ಅಪ್, ಮತ್ತು ಲೇಮನ್ ಪಾನೀಯಗಳು ಆರೋಗ್ಯಕರ ಮತ್ತು ಆಹ್ಲಾದಕರ.

ನಗರದ ಯಾವದೇ ಭಾಗದಲ್ಲಾಗುವ ಸಮಾರಂಭಾದಿಗಳಿಗೆ ನಾವು ಆರ್ಡರುಗಳನ್ನು ಸ್ವೀಕರಿಸುತ್ತೇವೆ.

ಮಹಾನಗರ ಮುಂಬಯಿಯಲ್ಲಿ ಕನ್ನಡಿಗರಿಂದ ನಡೆಸಲ್ಪಡುವ ಸಂಸ್ಥೆ–

ವಾಟ್ಸನ್ಸ್ ಏರೇಟೆಡ್ ವಾಟರ್ಸ್,

14, ಪರೇಲ್ ರೋಡ್, ಕ್ರ್ರಾಸ್ ಲೇನ್, ಬೊಂಬಾಯಿ 12.

(ಟೆಲಿಫೋನ್. 40592)

ನಿರಾಶೆಗೆ ಒಳಗಾಗದಿರಿ!

ಉಬ್ಬಸ, ಕಫ, ಶ್ವಾಸಕೋಶದಿಂದ

ನೀವು ವಿಪರೀತ ಕಷ್ಟಪಡುವಿರಾದರೆ, ಹಲವಾರು

ಅಮೌಲ್ಯ ಔಷಧಿಗಳ ಸೇವನೆಯಿಂದ ನಿಮಗೆ ಗುಣವಾಗದಿರುವುದಾದರೆ,

ಆಶಾಭಂಗಕ್ಕೊಳಗಾಗದಿರಿ!

ಅಲ್ಪವೆಚ್ಚ-ಅಲ್ಪಾವಧಿಯೊಳಗೆ ನಿಮ್ಮಬಾಧೆಯನ್ನು ಶಮನಮಾಡುವ

ಖಾತ್ರಿ ಔಷಧಿಯು ನಮ್ಮಲ್ಲಿರುವುದು.

ಒಂದೇ ಒಂದು ಸೀಸೆಯನ್ನು ಕೊಂಡು, ಗುಣಪರೀಕ್ಷೆಮಾಡಿರಿ!

ಈ ಹೊಸ ಮದ್ದಿನಿಂದ ನಿಮಗೆ ಅದ್ಭುತ ಗುಣತೋರುವುದೆಂಬುದು ಖಂಡಿತ.

ಕೂಡಲೆ ಬರೆಯಿರಿ:—

M. Mendonca,
2nd Floor, Ruby Mansion;
Parsee Bazar Street, Fort,-
Bombay.

ಎಂ. ಮೆಂಡೋನ್ಸ,
ಎರಡನೆ ಮಾಳಿಗೆ, ರುಬಿ ಮೆನ್ಶನ್
ಪಾರ್ಸಿಬಝಾರ್ ಸ್ಟ್ರೀಟ್, ಫೋರ್ಟ್,
ಬೊಂಬಾಯಿ

ಪೆರ್ಡೂರು—ನವಜೀವನ ಹೈಸ್ಕೂಲಿನ ಉಪಾಧ್ಯಾಯರಾದ ಶ್ರೀ ಕೆ. ಕೆ. ರೈ ಮತ್ತು ಶ್ರೀ ಕೆ. ಕೃಷ್ಣರಾವ್ ಇವರನ್ನು ಮೆನೇಜು ಮೆಂಟಿನವರು ಕೆಲವು ಆರೋಪಗಳನ್ನು ಹಾಕಿ ಉದ್ಯೋಗದಿಂದ ತೆಗೆದು ಹಾಕಿದ ಬಗ್ಗೆ, ಅವರು ತಮಗೆ ನ್ಯಾಯ ಸಿಗುವಂತೆ ವಿದ್ಯಾ ಇಲಾಖೆಯ ಡೈರೆಕ್ಟರವರಿಗೆ ಅಪೀಲು ಮಾಡಿದಂತೆ ಜಿಲ್ಲಾ ವಿದ್ಯಾಧಿಕಾರಿಗಳಾದ ಶ್ರೀಮಾನ್ ಟಿ. ರಾಘವನ್ ನಾಯರ್ ಇವರು ಬಂದು ತಾ 6-6-51ರಲ್ಲಿ ತನಿಖೆ ನಡೆಸಿದಲ್ಲಿ ಆ ಉಪಾಧ್ಯಾಯರ ಮೇಲಿನ ಆರೋಪಗಳು ರುಜುವಾಗದೆ ಇದ್ದು ಅನಂತರ ವಿದ್ಯಾಧಿಕಾರಿಗಳ ಹಿತೋಪದೇಶದಂತೆ, ಈ ವಿವಾದವು ರಾಜಿಯಿಂದ ತೀರ್ಮಾನವಾಗಿ ಶ್ರೀ ಕೆ. ಕೆ. ರೈಗಳನ್ನು ಪುನಃ ಕೆಲಸಕ್ಕೆ ಮೆನೇಜು ಮೆಂಟಿನವರು ಸೇರಿಸಿಕೊಂಡಿರುತ್ತಾರೆ. ಶ್ರೀಮಾನ್ ಕೆ. ಕೃಷ್ಣರಾಯರು ಕೆಲಸಕ್ಕೆ ಸೇರುವುದಿಲ್ಲವಾಗಿ ತಿಳಿಸಿರುತ್ತಾರೆ.

ಮುಲ್ಕಿ—ಮುಲ್ಕಿ ಯೂನಿಯನ್ ಕ್ಲಬ್ಬಿನ 36ನೇ ವರ್ಷ ವರ್ಧಂತ್ಯುತ್ಸವವೂ ದಿವಂಗತ ಡಾ। ಬೋಳ ಶ್ಯಾಮರಾಯರ ಜನ್ಮ ದಿನಾಚರಣೆಯೂ 16 6-1951ರಲ್ಲಿ ಶ್ರೀ ಎ ಎಮ್. ಎಲ್. ಡಿ'ಸೋಜರ ಅಧ್ಯಕ್ಷತೆಯಲ್ಲಿ ಜರಗಿತು. ದಿವಂಗತ ಡಾ। ಬೋಳ ಶ್ಯಾಮರಾಯರ ಜೀವನ ವೃತ್ತದ ವಾಚನವನ್ನು ಶ್ರೀ ಯಂ. ಟಿ. ದೇವರಾವ್, ಬಿ ಎ. ಎಲ್. ಟಿ ಯವರು ಮಾಡಿದರು

ಇದೇ ತಾ 20-6-51ರಲ್ಲು ಕೂಡಿದ ಕಾರ್ಯ ನಿರ್ವಾಹಕ ಸಮಿತಿಯ ಸಭೆಯಲ್ಲಿ ಡಾ। ಯಂ ರಾಮಣ್ಣ ಸೆಟ್ಟರು ಅಧ್ಯಕ್ಷರಾಗಿಯೂ, ಶ್ರೀ. ಬಿ. ಜನಾರ್ಧನ ಕಾಮತ್‌ರವರು ಉಪಾಧ್ಯಕ್ಷರಾಗಿಯೂ ಶ್ರೀ ಯಂ. ಉಪೇಂದ್ರರಾಯರು ಕೋಶಾಧಿಕಾರಿಗಳಾಗಿಯೂ ಶ್ರೀ. ಜಿ. ಎಸ್. ಮುಲ್ಕಿಯವರು ಗೌರವ ಕಾರ್ಯದರ್ಶಿಯವರಾಗಿಯೂ ಶ್ರೀ ಎ ತಿಮ್ಮಪ್ಪಯ್ಯನವರು ಸಹಾಯಕ ಕಾರ್ಯದರ್ಶಿಗಳೂ ಕ್ಷೇತ್ರಿಯವರಾಗಿಯೂ ಸರ್ವಾನುಮತದಿಂದ ಆರಿಸಲ್ಪಟ್ಟಿರುವರು

ಕುಂಬಳೆ: ತಾ. ೩೦ರ ಉಪ್ಪಳ ಕಾಸರಗೋಡು ತಾಲೂಕು ಗ್ರಾಮಗಳಿಗಾಗಿ ನಾಯ್ಕಾಪ್ ಎಂಬಲ್ಲಿ ಕುಂಬಳೆ ಸ್ಟೋರ್ಸಿನವರ ಆಶ್ರಯದಲ್ಲಿ ಒಂದು ರಿಲೀಫ್ ಅಂಗಡಿ ತೆರೆಯಲು ಹುಕುಮಾಗಿರುತ್ತದೆ.

ರೂರಲ್‌ವೆಲ್ಫೇರ್ ಕಮಿಟಿ ಸಭೆಯು ತಾ. ೨೩ರಂದು ಎಚ್. ಇ. ಬೋರ್ಡ್ ಶಾಲಾ ಕಟ್ಟಡದಲ್ಲಿ ಸೇರಿತು ಕಲೆಕ್ಟರ್ ಶ್ರೀ. ಎ. ಆರ್. ರಾಜರತ್ನಂ ಬಿ ಎ.ಯವರು ಅಧ್ಯಕ್ಷತೆ ವಹಿಸಿದರು. ರೂರಲ್ ವೆಲ್ಫೇರ್ ಆಫೀಸರರೂ, ಇಲಾಖಾ ಪೇಲುದ್ಯೋಗಸ್ಥರೂ ತಮ್ಮ ತಮ್ಮ ವರದಿಗಳನ್ನೊಪ್ಪಿಸಿದರು. ಜುಲೈ ೧ಂ ರಂದು ಕಾಸರಗೋಡು ವನಮಹೋತ್ಸವವನ್ನು ಒಂದು ವಾರ ಆಚರಿಸುವ ಕುರಿತೂ, ಕುಂಬಳೆಯಲ್ಲಿ ಗುಡಿಕೈಗಾರಿಕಾ ಫೆಡರೇಶನ್ ಸ್ಥಾಪಿಸುವ ವಿಷಯವನ್ನೂ ಆಯಾಯ ಇಲಾಖೋದ್ಯೋಗಸ್ಥರಿಗೆ ಎತ್ತಿ ಹೇಳಲಾಯ್ತು.

ಬಾಡೂರು ಗ್ರಾಮದಲ್ಲಿ ರೇಶನ್ ಕೂಡಲೇ ಕೊಡಿಸಬೇಕೆಂದೂ ಕೂಡಿಸಿ ಮುಖ್ಯಮಂತ್ರಿ, ಆಹಾರಮಂತ್ರಿ, ಆಹಾರ ಕಮಿಷನರ್, ಜಿಲ್ಲಾ ಕಲೆಕ್ಟರ್ ಮುಂತಾದವರಿಗೆ ತಂತಿ ಕಳುಹಿಸಲಾಗಿದೆ.

ಹರಿಜನರಲ್ಲಿ ವಿನಂತಿ ಮಂಗಳೂರು ಹರಿಜನ ಲೇಬರ್ ಲೀಗಿನ ಆಶ್ರಯದಲ್ಲಿ ತೆರೆಯಲ್ಪಟ್ಟ "ಈಶ್ವರಾನಂದ" ಕೈಗಾರಿಕೆ ಶಾಲೆಯಲ್ಲಿ ಮರದ ಕೆಲಸ ಕಲಿಸುವ ಏರ್ಪಾಡು ಮಾಡಲಾಗಿರುವುದು. ಇಷ್ಟ ಇದ್ದವರು ತಮ್ಮ ಅರ್ಜಿಯನ್ನು ಲೀಗಿನ ಕಾರ್ಯದರ್ಶಿಗಳಿಗೆ ಈ ತಿಂಗಳ ಅಖೈರಿಯೊಳಗೆ ಕಳುಹಿಸಿಕೊಡಬೇಕಾಗಿ ವಿನಂತಿ. ಹೆಚ್ಚಿನ ಮಾಹಿತಿ, ಅನುಭವದ ಬಗ್ಗೆ ಕಾರ್ಯದರ್ಶಿಯವರ ಕೂಡೆ ಖುದ್ದು ಮಾತಾಡಿ ತಿಳಕೊಳ್ಳಬಹುದು. ಎಂದು ಕಾರ್ಯದರ್ಶಿಗಳು ವಿನಂತಿಸುತ್ತಾರೆ.

ಬಸ್ರೂರು:—ಇಲ್ಲಿನ ಉತ್ಸಾಹೀ ತರುಣರು ಕೆಲವು ದಿನಗಳಿಂದ "ಕಲಾಮಾಲಾ" ಎಂಬ ಕೈಬರಹದ ಮಾಸಪತ್ರಿಕೆಯೊಂದನ್ನು ನಡೆಸಿಕೊಂಡು ಬರುತ್ತಿದ್ದಾರೆ ಉತ್ತಮವಾದ ಕತೆ, ಕವಿತೆ, ವಿಚಾರಪರ ಲೇಖನಗಳಿಗೆ ಇದರಲ್ಲಿ ಎಡೆಕೊಡಲಾಗುವುದಲ್ಲದೆ ಅತ್ಯುತ್ತಮವೆಂದು ಕಂಡುಬಂದವುಗಳಿಗೆ ಬಹುಮಾನಗಳನ್ನು ಕೊಡಲಾಗುವುದು.

ಹೆತ್ತಿಕ್ಕ— ಸುತ ಮುತ್ತಲಿನ ಗ್ರಾಮಗಳಿಗೆ ರಿಲೀಫ್ ಅಂಗಡಿಗಳಿಲ್ಲದೆ ಬಡ ಜನತೆ ಕಷ್ಟಕ್ಕೊಳಗಾಗಿದೆ ಕೂಡಲೇ ಸಂಬಂಧಿಸಿದವರು, ರಿಲೀಫ್ ಅಂಗಡಿಗಳನ್ನು ತೆರೆಯುವರೆಂದು ನಿರೀಕ್ಷಿಸಲಾಗಿದೆ.

ಪ್ರಕಟಣೆ

ಈ ಪತ್ರಿಕೆಯ ತಾ. 14-6-51ನೇ ಸಂಚಿಕೆಯಲ್ಲಿ ಅಂಚಾರುಬೀಡು ಮೋನಪ್ಪ ಹೆಗ್ಡೇರ ಅಳಿಯ, ಮಂಜ್ಯ ಹೆಗ್ಡೇರು ನನಗೆ ತಾರೀಖು 18-4-49ರಲ್ಲು ಬರಕೊಟ್ಟ ದಿವಾಂಡು ನೋಟಿನ ವಿಷಯದಲ್ಲಿ ಪ್ರಕಟಿಸಿದ ಹೇಳಿಕೆಗಳು ನಿಜವಾದವುಗಳಲ್ಲ. ಸದ್ರಿ ಮಂಜ್ಯ ಹೆಗ್ಡೇರು ನಗದು ಪ್ರತಿಫಲ ಪಡೆದು ನನಗೆ ದಿವಾಂಡು ನೋಟು ಬರಕೊಟ್ಟದ್ದಾಗಿರುತ್ತದೆ. ಸದ್ರಿ ದಿವಾಂಡು ನೋಟಿಗೂ ಮಂಜಯ್ಯ ಹೆಗ್ಡೇರ ಕುಟುಂಬದ ಆಡಳ್ತೆ ವಿವಾದಕ್ಕೂ ಸಂಬಂಧವೇ ಇಲ್ಲ. ಸದ್ರಿ ದಿವಾಂಡು ನೋಟು, ಮುಂಡ್ಕೂರು ಕೃಷ್ಣಯ್ಯ ಶೆಟ್ರ ವಶ ಸಂಬಾಯಿತ್ತೆ ಭದ್ರತೆ ಬಗ್ಗೆ ಇರಗೊಡಿಸಿದ್ದಿಲ್ಲ. ಕಲ್ಯಾಣಿ ಹೆಗ್ಗಡ್ತಿಯರು ಮೋಸದಿಂದ ಸದ್ರಿ ದಿವಾಂಡು ನೋಟನ್ನು ಸ್ವಾಧೀನಪಡಿಸಿಕೊಂಡದ್ದಿಲ್ಲ; ಅದು ಪ್ರಾರಂಭದಿಂದಲೂ ನನ್ನ ಸ್ವಾಧೀನದಲ್ಲಿಯೇ ಇರುತ್ತದೆ. ನಾನು ಸದ್ರಿ ದಿವಾಂಡು ನೋಟಿನ ಐವೇಜನ್ನು ವಸೂಲು ಕೇಳುತ್ತಾ ಬಂದು ಈಗ ವ್ಯಾಜ್ಯಕ್ಕೆ ಉದ್ಯುಕ್ತನಾದುದರಿಂದ ಸದ್ರಿ ಮಂಜ್ಯ ಹೆಗ್ಡೇರು, ದುಸ್ಸಾಧನೆಗೋಸ್ಕರವಾಗಿ ಮುಂದಾಗಿ ಸುಳ್ಳುಸಂಗ್ತಿಗಳನ್ನು ಕಾಣಿಸಿ, ಪ್ರಕಟಣೆ ಮಾಡಿದ್ದಾಗಿರುತ್ತದೆ. ಈ ಎಲ್ಲಾ ವಿಚಾರಗಳನ್ನೂ, ಸ, ದಿವಾಂಡು ನೋಟಿನ ಐವೇಜು ಒಂದು ಹಪ್ತೆಯೊಳಗೆ ವಸೂಲುಕೊಡದಿದ್ದರೆ, ದಾವಾ ಮಾಡುವವನಾಗಿಯೂ, ನನ್ನ ವಕೀಲರ ಮೂಲಕ ಸದ್ರಿ ಮಂಜ್ಯ ಹೆಗ್ಡೇರಿಗೆ ರಿಜಿಸ್ಟ್ರಿ ನೋಟಿಸು ಕೊಟ್ಟಿರುತ್ತೇನೆ.

S. Sundara Shetty

ಸಾಂತೂರು. 20 6-1951

NOTICE

ಕಾರ್ಕಳ ಡಿ. ಮು. ಕೋರ್ಟಿನಲ್ಲಿ

O. S. 84/1951

ಅಚ್ಚು ಹೆಂಗ್ಸು —ವಾದಿಳು

ಮತ್ತು

ವೆಂಕಮ್ಮ ಹೆಂಗ್ಸು ಕೂಡಾ —ಪ್ರತಿವಾದಿರು

ಪ್ರತಿವಾದಿರು:- 3) ನಾರ್ಣ ಪೂಜಾರಿ – ಲಿಂಗು ಹೆಂಗ್ಸಿನ ಮಗ, 12) ಶಿದ್ದಮ್ಮ- ದಾಕು ಹೆಂಗಸಿನ ಮಗಳು– 15) ಚಿನ್ನಮ್ಮ ಪೆರ್ನ ಹೆಂಗ್ಸಿನ ಮಗಳು- 21) ತನಿಯ ಪೂಜಾರಿ ಕೊರಪಳು ಹೆಂಗ್ಸಿನ ಮಗ- ಸದ್ರಿ 3 15ನೇಯವರು ಮೂಡು ಮಾರ್ನಾಡು ಗ್ರಾಮದಲ್ಲಿಯೂ, 12ನೇಯವಳು ಮಾರೂರು ಗ್ರಾಮದಲ್ಲಿಯೂ, 21ನೇಯವನು ಕೆಸರ್ಗೋಡಿ ಗ್ರಾಮದಲ್ಲಿಯೂ ಇರುತ್ತಾರೆ.

ಸದ್ರಿ ಪ್ರತಿವಾದಿಗೆ ಈ ಮೂಲಕ ತಿಳಿಸುವದೇನಂದ್ರೆ.

ಪ್ರತಿವಾದಿರ ಕುಟುಂಬಾರ್ಥದ ಬಗ್ಗೆ 1ರಿಂದ 6ನೇ ವರೆಗಿನ ಪ್ರತಿವಾದಿರು ಕೂಡಾ ಪಡೆದ ರುಪಾಯಿ 800/-ಕ್ಕೆ ತಾ. 29-9-44ರಲ್ಲು ಆದ ಕೋರ್ಚಪಿನ ಬಡ್ಡಿ ಬಾಕಿ ಬಗ್ಗೆ ವಾದಿಳು ಮಾಡಿದ ಸದ್ರಿ ದಾವೆ ತಾ. 17-7-51ಕ್ಕೆ ಮುದ್ದತಾಗಿಯದೆ. ಆ ಕುರಿತು ಆಕ್ಷೇಪವಿದ್ದರೆ ಸದ್ರಿ ದಿನ ಬೆಳಗ್ಗೆ 10ಗಂಟೆಗೆ ಹಾಜರಾಗಿ ಜ್ಯಾಬೀರು ಮಾಡಲು ತಪ್ಪಿದರೆ ಗೈರು ಹಾಜರಿಯಲ್ಲಿ ಸದ್ರಿ ದಾವೆ ತೀರ್ಮಾನವಾಗುವುದು.

(ಕೋರ್ಟಿನ ಹುಕುಂ ಪ್ರಕಾರ)

K. V. Kamath

Advocate for plaintiffs

ಕಾರ್ಕಳ ತಾ. 21-6-51

IN THE SERVICE OF THE COUNTRY

Bank your Savings with

THE CANARA INDUSTRIAL & BANKING SYNDICATE LTD

ನಿಮ್ಮ ಉಳಿತಾಯವನ್ನು ಇರಿಸಲಿಕ್ಕೆ

ದಿ ಕೆನರಾ ಇಂಡಸ್ಟ್ರಿಯಲ್ ಎಂಡ್

ಬ್ಯಾಂಕಿಂಗ್ ಸಿಂಡಿಕೇಟ್ ಲಿಮಿಟೆಡ್

ದಿ ನ್ಯೂ ಗಾರ್ಡಿಯನ್ ಓಫ್ ಇಂಡಿಯಾ ಲೈಫ್ ಇನ್ಶ್ಯೂರೆನ್ಸ್ ಕಂಪೆನಿ ಲಿಮಿಟೆಡ್.

ಕೆ. ಎಸ್ ರಾವ್ ರಸ್ತೆಯಲ್ಲಿದ್ದ ನಮ್ಮ ಈಗಿನ ಆಫೀಸು ಕಟ್ಟಡದಲ್ಲಿ ಸ್ಥಳ ಸಂಕೋಚವಾದ ಪ್ರಯುಕ್ತ ನಮ್ಮ ಮಂಗಳೂರು ಶಾಖಾ ಕಚೇರಿಯು ಇದೇ ತಾ. 18-6-51ನೇ ಸೋಮವಾರದಿಂದ ಹಂಪನಕಟ್ಟೆಯ ಕೆ. ಆರ್. ಕೆ. ಶೇಟರ

ಡಯಮಂಡ್ ಬಿಲ್ಡಿಂಗ್ಸಿನ ವಿಶಾಲ ಸ್ಥಳಕ್ಕೆ

ಒಯ್ಯಲ್ಪಟ್ಟಿರುವುದು ಸಂಬಂಧಪಟ್ಟ ಮಹಾಜನರು ಈ ಸ್ಥಳ ಬದಲಾವಣೆಯನ್ನು ಗಮನಿಸಬೇಕಾಗಿದೆ

WANTED

for **Hindu High School, Shirva.**

I. (a) A Mathematics, (b) A Science, (c) A Social Studies, L. T.'s or B T 's

II. A higher grade Drawing Teacher.

III. qualified Spinning and Weaving Instructor

Apply sharp to Correspondent Send copies to D E O S. Kanara.

Correspondent

Notice

ಉಡ್ಪಿ ಡಿ ಮು ಕೋರ್ಟಿನಲ್ಲಿ

O P No 28/1951

1) ಸುಶೀಲ ಬಾಯಿ, ಕೊಡಂಗಳ ಗೋಪಾಲಕೃಷ್ಣ ಭಟ್ರ ವಿಧವೆ, 2) ಹರಿದಾಸ, ಮೈನರ್. —ಮಗ. ರಕ್ಷಕಳು ತಾಯಿ 1ನೇ ಅರ್ಜಿದಾರಳು- ಉಡ್ಪಿ ತಾಲೂಕು ಬಡಾನಿಡಿಯೂರು ಗ್ರಾಮ-

—ಅರ್ಜಿದಾರರು

ಈ ಮೂಲಕ ಸರ್ವಜನರಿಗೂ ತಿಳಿಯಪಡಿಸುವದೇನಂದ್ರೆ:-

1ನೇ ಅರ್ಜಿದಾರಳ ಗಂಡ 2ನೇ ಅರ್ಜಿದಾರನ ತಂದೆ ತಾ 15 12-50 ರಲ್ಲು ಜನ್ಮಂಚಿ ಎಂಬಲ್ಲಿ ಮೃತಪಟ್ಟ ಕೊಡಂಗಳ ಗೋಪಾಲಕೃಷ್ಣ ಭಟ್ರಿಗೆ ಬರಬೇಕಾದ "The Oriental Government Security life Assurance Co., Ltd. ಇದರ ನಂಬ್ರ 423318ನೇ ಪೋಲಿಸಿ ಬಾಬ್ತು ರೂ. 426-0-0, ನಂಬ್ರ 423319ನೇ ಪೋಲಿಸಿ ಬಾಬ್ತು ರೂ 428-0-0 ಮತ್ತು "The Jamcandi State Central Co-operative Bank, Ltd., Jamcandi ಇದರ Savings Bank Account No 800ರ ಬಾಬ್ತು ರೂ. 325-0-0ನ್ನು ಸದರಿ ವಸೂಲುಮಾಡುವದೆ ಅರ್ಜಿದಾರರೇ ಹಕ್ಕುದಾರರೆಂತಲೂ; ಆ ಬಗ್ಗೆ ಅರ್ಜಿದಾರರಿಗೋಸ್ಕರ 1ನೇ ಅರ್ಜಿದಾರಳ ಹೆಸರಿಗೆ ಸಕ್ಸೆಶನ್ ಸರ್ಟಿಫಿಕೇಟು ಕೊಡಿಸಬೇಕಾಗಿಯೂ ಕೇಳಿ ದಾಖಲು ಮಾಡಿದ ಮೊಕದ್ದಮೆ ಅರ್ಜಿಯು ತಾ. 14 7-51ಕ್ಕೆ ಮುದ್ದತು ಪಡಿಸಿರುವ ಈ ಕುರಿತು ಆಕ್ಷೇಪ ಉಳ್ಳವರು ಸದ್ರಿ ತಾ. 14-7-51ನೇ ದಿವಸ ಬೆಳಗ್ಗೆ 10ಗಂಟೆಗೆ ಖುದ್ದಾಗಲೀ ವಕೀಲ್ ದ್ವಾರಾವಾಗಲೀ ಕೋರ್ಟಿನ ಮುಂದೆ ಹಾಜರಾಗಿ ಜ್ಯಾಬೀರು ಮಾಡಿಕೊಳ್ಳತಕ್ಕದ್ದು.

P. V. Achar

Vakil for Petitioners

ಉಡ್ಪಿ ತಾ 20 6 51

ಪ್ರವಾಸಿಯ ಪತ್ರಗಳು ೭

ನನ್ನ ಈ ಪತ್ರದಲ್ಲಿ ಬ್ರಿಟನಿನ ಇನ್ನಿತರ ನಗರಗಳನ್ನು ಕುರಿತಾಗಿ ಹೇಳುತ್ತೇನೆ. ಲಂಡನಿನಿಂದ ೧೩೦ ಮೈಲು ದೂರವಿರುವ ಸ್ಟ್ಯಾಫರ್ಡ್ ಎಂಬಲ್ಲಿಗೆ ನಾನು ಹೋಗಿದ್ದೆ. ಈ ನಗರ ಬಹು ಪ್ರಸಿದ್ಧವಾದ ಇಂಗ್ಲಿಷ್ ಇಲೆಕ್ಟ್ರಿಕ್ ಕಂಪೆನಿಯವರ ಕಾರ್ಖಾನೆಗಳಿರುವ ಊರು ಇಲ್ಲಿ ವಿದ್ಯುಚ್ಛಕ್ತಿ ಉತ್ಪನ್ನ ಮಾಡುವುದಕ್ಕೆ ಬೇಕಾದಂಥ ಭಾರಿಯ ಯಂತ್ರ ಸಲಕರಣೆಗಳನ್ನು ನಿರ್ಮಿಸುತ್ತಾರೆ. ಮದ್ರಾಸ್ ನಗರದಲ್ಲಿ ವಿದ್ಯುತ್ ಉತ್ಪನ್ನಮಾಡುವ ಕೇಂದ್ರಗಳಲ್ಲಿ ಇಲ್ಲಿಯ ಯಂತ್ರೋಪಕರಣಗಳನ್ನು ಉಪಯೋಗಿಸುತ್ತಿದ್ದಾರೆ. ಈ ಒಂದು ಕಾರ್ಖಾನೆಯಲ್ಲಿ ೭೦೦೦ ಜನ ಕೆಲಸ ಮಾಡುತ್ತಿದ್ದಾರೆ. ಸ್ಟ್ಯಾಫರ್ಡ್ ನಗರದ ಜನಸಂಖ್ಯೆ ೪೮,೦೦೦, ಅಂದರೆ ನಗರದ ಜೀವನವೆಲ್ಲ ಈ ಕಾರ್ಖಾನೆಯನ್ನು ಹೊಂದಿಕೊಂಡಿದ್ದ ಹಾಗೆ. ಸ್ತ್ರೀಯರು ಸಹ ಇಲ್ಲಿ ಕೆಲಸಗಾರರಾಗಿ ದುಡಿಯುತ್ತಿದ್ದಾರೆ. ಯಂತ್ರಗಳ ಹಿಂದೆ ನಿಂತು, ದಿನವೆಲ್ಲ, ಕತ್ತರಿಸುವ ಕೆಲಸವನ್ನೋ, ತೂತುಕೊರೆಯುವ ಕೆಲಸವನ್ನೋ ಮಾಡುತ್ತಾರೆ. ಅದೇ ಅವರ ನಿತ್ಯದ ಕೆಲಸ. ಇದರಿಂದ ವಸ್ತುಗಳನ್ನು ರಾಶಿಗಟ್ಟಲೆಯಲ್ಲಿ ನಿರ್ಮಿಸಲು ಬರುತ್ತದೆ. ಆದರೆ ಮಾಡಿದ್ದನ್ನೇ ಮಾಡುತ್ತಿರುವ ಮನುಷ್ಯ ಕೂಡ ಒಂದು ಯಂತ್ರವಾದಂತೆ.

ಈ ನಗರ ನೋಡಲು ಬಂದಾಗಲೇ ನಾನು ಟೆಲಿವಿಜನ್ ನೋಡುವುದಕ್ಕೂ ಅನುಕೂಲವಾಯಿತು. ನಮ್ಮ ರೇಡಿಯೋ ಪೆಟ್ಟಿಗೆಯಂತಿರುವ ಪೆಟ್ಟಿಗೆಯೊಂದರಲ್ಲಿ ಒಂದಡಿ, ಒಂದೂವರೆ ಅಡಿ ಅಗಲವಿರುವ ಒಂದು ತೆರೆಯ ಮೇಲೆ ಚಿತ್ರ ಕಾಣಿಸುತ್ತದೆ. ಸಿನೇಮಾ ತೆರೆಯಲ್ಲಿ ಕಾಣುವಂತೆ, ಕೇಳಿಸುವಂತೆ ಚಿತ್ರ, ಧ್ವನಿಗಳು ಕೇಳಿಸುತ್ತವೆ. ಈ ದೇಶದಲ್ಲಿ ಈಗೀಗಲಷ್ಟೆ ಟೆಲಿವಿಜನ್ ಪ್ರಚಾರವಾಗುತ್ತಿದೆ. ಆದರೆ ಟೆಲಿವಿಜನ್ ಕಳುಹಿಸುವುದಕ್ಕೂ ಅದನ್ನು ಸ್ವೀಕರಿಸುವುದಕ್ಕೂ ಬೇರೆಯೇ ಏರ್ಪಾಟು ಬೇಕಾಗುತ್ತದೆ. ಒಂದು ಟೆಲಿವಿಜನ್ ಸೆಟ್ಟಿಗೆ ಇಂಗ್ಲೆಂಡಿನಲ್ಲಿ ಸುಮಾರು ೮೦ ಪೌಂಡು ಬೆಲೆಯಾಗುತ್ತದೆ. ಅದರ ಲೈಸೆನ್ಸ್ ಫೀಸ್ ಕೂಡ ಕಡಿಮೆಯೇ. ಆದುದರಿಂದ ಬಹು ಜನಗಳು ಟೆಲಿವಿಜನ್ ಸೆಟ್ಟುಗಳನ್ನು ಕೊಳ್ಳುತ್ತಿದ್ದಾರೆ. ಬ್ರಿಟನಿನಲ್ಲಿ ರೇಡಿಯೋ ಪ್ರಸಾರದ ಸರ್ವಾಧಿಕಾರವುಳ್ಳ ಬಿ. ಬಿ. ಸಿ. ಕಂಪೆನಿಯೇ ಟೆಲಿವಿಜನ್‌ನನ್ನು ನಡೆಸುತ್ತಿದೆ. ಸಂಜೆ ೫ ರಿಂದ ೬ರ ತನಕ ಮಕ್ಕಳಿಗೆ ಉತ್ತಮವಾದ ಟೆಲಿವಿಜನ್ ಕಾರ್ಯಕ್ರಮಗಳಿರುತ್ತವೆ. ಅನಂತರ ೬ರಿಂದ ೯ ಗಂಟೆಯ ತನಕ ದೊಡ್ಡವರಿಗೆ ಕಾರ್ಯಕ್ರಮ. ಟೆಲಿವಿಜನ್ ಮೂಲಕ ಪ್ರಸಾರ ಮಾಡುವುದಕ್ಕಾಗಿ ಫಿಲ್ಮನ್ನು ಕೂಡ ಇಲ್ಲಿ ತಯಾರಿಸುತ್ತಾರೆ. ಸಿನೇಮಾದ ಮಹತ್ವವನ್ನು ಇದು ಕಡಿಮೆ ಮಾಡಿದರೂ ಮಾಡಬಹುದು. ಶೀಘ್ರ ಇದು ನಮ್ಮ ದೇಶಕ್ಕೂ ಬರಬಹುದು.

ಮೇ ತಿಂಗಳ ೭ನೇ ತಾರೀಕಿನ ದಿನ ನಾನು ಲಂಡನಿಗೆ ೩೭ ಮೈಲು ಉತ್ತರಕ್ಕಿರುವ ಲೆಚ್‌ವರ್ತ್ ಎಂಬ ಊರಿಗೆ ಉದ್ದೇಶಪಟ್ಟು ಹೋಗಿದ್ದೆ. ಭಾರತ ಸರಕಾರದ ವಿದೇಶಾಂಗ ಶಾಖೆಯ ಇಂಡಿಯಾ ಆಫೀಸಿದವರು ನನಗೆ ಒಂದು ಸಂಚಾರದ ಕಾರ್ಯಕ್ರಮ ಒದಗಿಸಿದ್ದರು, ಈ ಊರ ಹೆಸರನ್ನು ಅಲ್ಲಿ ಸೂಚಿಸಿದ್ದರು. ಏಕೆಂದರೆ 'ನಗರ ರಚನೆ'ಗೆ ತುಂಬಾ ಹೆಸರಾದುದು. ಒಂದು ಪಟ್ಟಣದ ರೀತಿ ಆರೋಗ್ಯ ದೃಷ್ಟಿಯಿಂದ, ಅಂದದ ದೃಷ್ಟಿಯಿಂದ, ಅನುಕೂಲತೆಯ ದೃಷ್ಟಿಯಿಂದ ಹೇಗೆ ಇರಬೇಕು—ಎಂದು ಮೊದಲೇ ಯೋಚಿಸುವುದು ನಗರನಿರ್ಮಾಣದ ಮುಖ್ಯ ಉದ್ದೇಶ. ಈ ದೇಶದ ಪ್ರಮುಖ ನಗರ ನಿರ್ಮಾಣಕರು ಲಾಭದ ಉದ್ದೇಶವಿಲ್ಲದೆ ೧೯೦೩ರಲ್ಲಿ ಒಂದು ಸಂಸ್ಥೆಯನ್ನು ಮಾಡಿ ಇಲ್ಲಿ ೧೭೦೦ ಎಕ್ರೆ ಜಮೀನನ್ನು ಬೆಲೆಗೆ ಕೊಂಡು ಕೆಲಸ ತೊಡಗಿದರು. ಆಗ ಬರಿಯ ಆರೆಂಟು ಮನೆಗಳಿದ್ದ ಊರದು. ಈಗ ಈ ನಗರದ ಜನಸಂಖ್ಯೆ ೨೦,೦೦೦. ನಗರದ ವಿಸ್ತೀರ್ಣ ೫೦೦೦ ಎಕ್ರೆ. ನನ್ನ ಜತೆಗೆ ಈ ನಗರ ತೋರಿಸುವುದಕ್ಕೆಂದು ಹೈದರಾಬಾದಿನ ನಾಗರಿಕರಾದ ಮಾಧವರಾಯರೆಂಬವರು (ಇಲ್ಲಿನ ಮುನ್ಸಿಪಾಲಿಟಿಯ ಅಧಿಕಾರಿಗಳೊಬ್ಬರು) ಬಂದಿದ್ದರು. ಅವರು ತಮ್ಮ ಕಾರಿನಲ್ಲಿ ನನ್ನನ್ನು ಕರೆದುಕೊಂಡು ಈ ನಗರವನ್ನೆಲ್ಲ ತೋರಿಸಿದರು. ಇಲ್ಲಿನ ಮುನ್ಸಿಪಾಲಿಟಿಯ ಔದಾರ್ಯದಿಂದ ನನಗೆ ಭೋಜನವೂ ಆಯಿತು. ಇಲ್ಲಿ ಅನೇಕ ತರದ ಮುನ್ಸಿಪಲ್ ಚಟುವಟಿಕೆಗಳನ್ನು ನಾವು ಕಾಣಬಹುದಾಗಿದೆ. ಅವುಗಳಲ್ಲಿ—ಒಂದು ಮುಖ್ಯ ಕೆಲಸವೆಂದರೆ ಮುನ್ಸಿಪಾಲಿಟಿ ತಾನೇ ಮನೆ ಕಟ್ಟಿಸಿ, ಜನಕ್ಕೆ ಬಾಡಿಗೆಗೆ ಕೊಡುವುದು.

ಈ ದೇಶದಲ್ಲಿ ಚಳಿ ಹೆಚ್ಚು. ನಮ್ಮ ಊರಿನಂತೆ ರಸ್ತೆಯ ಮಗ್ಗುಲಲ್ಲಿ, ಬಯಲಿನಲ್ಲಿ, ಯಾರೊಬ್ಬರೂ ಮಲಗಿ, ನಿದ್ದೆ ಹೋಗುವುದೆಂದಿಲ್ಲ. ನಿದ್ದೆಹೋದರೆ ಸತ್ತುಹೋಗುವುದೇ ನಿಜ. ಅಲ್ಲದೆ ವರ್ಷವೆಲ್ಲ ಇಲ್ಲಿ ಮಳೆ ಬರುತ್ತದೆ, ಆದುದರಿಂದ ಮನೆಕಟ್ಟುವ ಕೆಲಸ ಬಹು ಪ್ರಾಮುಖ್ಯವಾಗಿದೆ. ಆಹಾರ ಪ್ರಶ್ನೆಯ ನಂತರ ಎರಡನೆಯ ಮಹತ್ವದ ಪ್ರಶ್ನೆಯೆಂದರೆ ನಿವಾಸದ ಪ್ರಶ್ನೆ. ನಾನು ಇಂಗ್ಲೆಂಡಿನ ಅನೇಕ ನಗರಗಳಿಗೆ ಹೋಗಿದ್ದೇನೆ. ಈ ನಗರಗಳ ಮುನ್ಸಿಪಾಲಿಟಿಯವರೇ ಜನರಿಗೆ ಮನೆಗಳನ್ನು ಕಟ್ಟಿಸಿ ಬಾಡಿಗೆಗೆ ಕೊಡುವಂಥ ಸಾಹಸ ಕೈಗೊಂಡಿರುತ್ತಾರೆ. ನಾನು ನೋಡ ಹೋದ ಲೆಚ್‌ವರ್ತ್ ನಗರದ ಸುಮಾರು ೫೦೦೦ ಮನೆಗಳಲ್ಲಿ ಮೂರನೇ ಒಂದಂಶ ಮುನ್ಸಿಪಾಲಿಟಿಗೆ ಸೇರಿದುವು. ಇನ್ನಷ್ಟೇ ಅಂಶ ಕಟ್ಟಡವನ್ನು ಕಟ್ಟಿಸಿಕೊಡುವ ಕೆಲವು ಸಂಸ್ಥೆಗಳಿಗೆ ಸೇರಿದ್ದು. ಅವುಗಳು ಲಾಭದ ಉದ್ದೇಶವನ್ನಿರಿಸಿಕೊಳ್ಳದೆ ದುಡಿಯುತ್ತಿರುವಂಥ ಸಹಕಾರ ಸಂಘಗಳು. ಇಷ್ಟೆಲ್ಲ ವಿಧಾನದಿಂದ ಜನಗಳಿಗೆ ನಿವಾಸ ಒದಗಿಸುವ ಸಾಹಸ ಮಾಡಿದರೂ, ಎಲ್ಲರಿಗೂ ಮನೆ ಒದಗಿಸಿಕೊಡುವ ಕೆಲಸ ಸಾಧ್ಯವಾಗಿಲ್ಲ. ಇಲ್ಲಿ ಖಾಸಗಿ ಜನಗಳ ಮನೆಗಳ ಸಂಖ್ಯೆ ಬರಿಯ ಮೂರನೇ ಒಂದಂಶದಷ್ಟು ಮಾತ್ರ. ನಿವಾಸಗಳಿಗಾಗಿ ಮುನ್ಸಿಪಾಲಿಟಿಯ ಸಹಾಯವನ್ನು ನಿರೀಕ್ಷಿಸುತ್ತಿರುವ ಜನಸಂಖ್ಯೆ ೧,೫೦೦ ರಷ್ಟಿದೆ. ಈಗ ಮನೆ, ಕಟ್ಟಡ ಮೊದಲಾದುವುಗಳಿಗೆ ಸಾಮಾಗ್ರಿಗಳ ಅಭಾವವಿರುವ ಕಾರಣ, ವರ್ಷಕ್ಕೆ ನೂರರಂತೆ ಹೊಸ ಮನೆಗಳು ನಿರ್ಮಾಣವಾಗುತ್ತಿವೆ. ಅವರು ಕಟ್ಟಿಸಿದ ಹಲವು ಮನೆಗಳನ್ನು ಮಾದರಿಗಾಗಿ ನೋಡಿಕೊಂಡು ಬಂದೆನು. ಎರಡು ಮನೆಗಳು ಎಂಟೆರಡು ಕೋಣೆಯ ಚಿಕ್ಕ ಮನೆಗಳು, ಉಳಿದವು ನಾಲ್ಕೈದು ಕೋಣೆಗಳಿರುವ ಉಪ್ಪರಿಗೆಯ ದುಮನೆಗಳು. ಕೆಳಗಡೆ ಊಟದ ಮತ್ತು ಅಡಿಗೆಯ ಕೋಣೆಗಳಿವೆ. ಎದುರುಗಡೆ ಕುಳಿತುಕೊಳ್ಳುವ ಕೋಣೆ, ಮೇಲೆ ಮಲಗುವ ಕೋಣೆಗಳು ಮತ್ತು ಬಚ್ಚಲು. ನಾನು ಡಬ್ಲಿನ್ ನಗರಕ್ಕೆ ಹೋದಾಗಲೂ ಅಲ್ಲಿನ ಮುನ್ಸಿಪಾಲಿಟಿಯವರು ಕಟ್ಟಿದಂಥ ಮನೆಗಳನ್ನು ನೋಡಿದ್ದೆ. ಅವುಗಳ ಮಾದರಿಯೂ ಹೆಚ್ಚು ಕಡಿಮೆ ಹೀಗೆ. ಮುನ್ಸಿಪಾಲಿಟಿಯವರು ೨೦,೩೦ ಮನೆಗಳುಳ್ಳ ಒಂದೊಂದು ಮನೆಗಳ ಗುಂಪನ್ನು ಕಟ್ಟಿಸಿದ್ದಾರೆ. ಈ ಮನೆಗಳು ಶ್ರೀಮಂತರಿಗಾಗಿ ಅಲ್ಲ. ಹೆಚ್ಚಾಗಿ ಮಧ್ಯಮ ತರಗತಿಯ ಕೆಲಸಗಾರರಿಗೆ, ಗುಮಾಸ್ತರಿಗೆ. ವಾರದ ಲೆಕ್ಕದಲ್ಲಿ ಇವುಗಳ ಬಾಡಿಗೆ. ವಾರಕ್ಕೆ ೧೨ರಿಂದ ೨೦ ರೂಪಾಯಿಯ ತನಕ ಬಾಡಿಗೆಯಾಗುತ್ತದೆ. ಎಲ್ಲ ಮನೆಗಳು ಬಹು ಚೊಕ್ಕವಾಗಿವೆ. ಮತ್ತೆ ಮನೆಯ ನಿವಾಸಿಗಳಾದರೂ ಅವುಗಳನ್ನು ಚೊಕ್ಕವಾಗಿರಿಸಿಕೊಂಡಿರುತ್ತಾರೆ. ನಾನು ನೋಡಿದ ಮನೆಗಳಲ್ಲಿ ಒಂದು ಮನೆಯಲ್ಲಿ ಒಬ್ಬಳೇ ಮುದುಕಿ ಜೀವಿಸಿಕೊಂಡಿದ್ದಳು. ಉಪ್ಪರಿಗೆ ಇಲ್ಲದ

"ಬೇರೆ ಶಾಸ್ತ್ರಗಳನ್ನೋದಿದರೇನು? ಗೀತೆಯನ್ನು ಚೆನ್ನಾಗಿ ಓದಬೇಕು"—(ವರಾಹ ಪುರಾಣ)

ಗೀತೆಯ ಕೈಗನ್ನಡಿ

(ಭಗವದ್ಗೀತೆಯ ಮೂಲ ಶ್ಲೋಕ ಮತ್ತು ಕನ್ನಡ ಅನುವಾದ)

● ಅನುವಾದಕರು–ದಿ। ಹೊಸಕೆರೆ ಚಿದಂಬರಯ್ಯನವರು ●

ಈ ಗ್ರಂಥದಲ್ಲಿ ಗೀತೆಯ ಮೂಲವಲ್ಲ ಇರುವುದಲ್ಲದೆ ಮೂಲದಲ್ಲಿ ಸಹಜವಾಗಿ ಕಾಣಬರುವ ಅರ್ಥವೂ ಮಾತುಗಾರಿಕೆಯ ಮಾತುಗಳ ರೂಪದಲ್ಲೀದ ಭಟ್ಟಿಯಾಗಿ ಎದ್ದು ಕಾಣುವುದು.

400ಕ್ಕೂ ಮಿಕ್ಕ ಪುಟಗಳು! ಬೆಲೆ 3—12—0.

ಒಂದು ರೂಪಾಯಿಯನ್ನು ಕಳುಹಿಸಿದರೆ ಒಂದು ಪ್ರತಿಯನ್ನು ಬುಕ್‌ಪೋಸ್ಟಿನಿಂದ ಕಳಿಸಲಾಗುವುದು.

ಪ್ರತಿಗಳು ಸಿಗುವ ಮುಖ್ಯ ಸ್ಥಳ:—

ನವಯುಗ ಪ್ರೆಸ್, ಉಡುಪಿ ದ. ಕನ್ನಡ

ನವಭಾರತ ಪುಸ್ತಕ ಭಂಡಾರ, ಉಡುಪಿ, ಇಲ್ಲಿಯೂ ದೊರೆಯುತ್ತವೆ.

ಮೂಲ್ಕಿ ಬೇಂಕ್,

ಲಿಮಿಟೆಡ್, ಮೂಲ್ಕಿ

1929ರಲ್ಲಿ ಸ್ಥಾಪಿತವಾಗಿ 21 ವರುಷಗಳಿಂದ ಊರ ಜನರ ಹಿತಕ್ಕಾಗಿ ಡಿಪೋಸಿಟ್ ಹಣಕ್ಕೆ ಸ್ವಾಯವಾದ ಬಡ್ಡಿಯಿಂದಲೂ, ಸಾಲದ ಹಣಕ್ಕೆ ಅತೀ ಕಡಿಮೆ ದರದ ಬಡ್ಡಿಯಿಂದಲೂ ಜನ ಹಿತಸಾಧನೆಯನ್ನು ಮಾಡುತ್ತಿರುವುದು

The Moolky Bank Ltd.,
Moolky, S. K

"ಗೋಪಾಲ ಭೇಷಜಾಶ್ರಮ" ಮಂಗಳೂರು.

(ಸ್ಥಾಪನೆ 1910)

ಸ್ಥಾಪಕರು:-ಆಯುರ್ವೇದ ಭೂಷಣ ಯಂ. ವಿ. ಶಾಸ್ತ್ರೀ,

ಬಾಣಂತಿಯರ ಸಲುವಾಗಿಯೇ! ದೇಶ ಮತ್ತು ಪ್ರಕೃತದ ದೇಹಸ್ಥಿತಿಯನ್ನು ನಿರ್ಣೈಸಿ ತಯಾರಿಸಲ್ಪಟ್ಟ ಅಮೋಘವಾದ ಮಧುರದ್ರವ ರಸಾಯನ. ಅಲ್ಪ ಮೌಲ್ಯದಿಂದ ಬಡವರಿಗೂ, ಭಾಗ್ಯಶಾಲಿಗಳಿಗೂ ಸುಲಭವಾಗಿರುವುದು.

ಇವರ **ನವಜೀವಾತು** ಎಂಬ **ಸೂತಿಕಾ ರಸಾಯನ**

ಪೆಟ್ಟಿಗೆ ಮಾಹಿತಿಗೆ—ಡಾ। ಯಂ. ಸಿ. ಶಾಸ್ತ್ರೀ, ಯಲ್. ಐ.
ಕೊಡಿಯಾಲಬೈಲ ಪೋಸ್ಟು, (ಮಂಗಳೂರು)
ಸ್ಥಾನಿಕ ಪ್ರತಿನಿಧಿ:—ಡಾ। ಬಿ. ಕೆ. ಶಿವರಾಮರಾವ್, ಕುಂಜಿಬೆಟ್ಟು, ಉಡುಪಿ.

— ಮಕ್ಕಳನ್ನು ಹಡೆಯುವುದು ಸಾಕು —

ಅಶಕ್ತ ಸ್ತ್ರೀಯರಿಗೆ **ಬರ್ಥ ಕಂಟ್ರೋಲ** ರೋಗ ಗ್ರಹಸ್ಥ ಹೆಣ್ಣು ಮಕ್ಕಳಿಗೆ

ಏಳು ದಿವಸ ಈ ಮಾತ್ರೆಗಳನ್ನು ಸೇವನ ಮಾಡಿದರೆ ಮುಂದೆ ಖಂಡಿತವಾಗಿ ಮಕ್ಕಳಾಗುವದಿಲ್ಲ. ಸ್ತ್ರೀಯರು ಪ್ರತಿತಿಂಗಳು ಸರಿಯಾಗಿ ಮುಟ್ಟಾಗುತ್ತಾರೆ. ಅಲ್ಲದೆ ಸ್ತ್ರೀಯರ ಬಿಳಿಸೆರಗು, ಪ್ರದರರೋಗ, ಹೊಲಿಕುಟ್ಟು ಗುಣವಾಗಿ ಸ್ತ್ರೀಯು ಗರ್ಭಿಣಿಯಾಗುವದಿಲ್ಲ. ಈ ಔಷಧವನ್ನು ಸೇವಿಸುವ ಕ್ರಮ: ಪ್ರತಿದಿವಸ ಮುಂಜಾನೆ ೧ಗುಳಿಗೆ ಮಧ್ಯಾಹ್ನಕ್ಕೆ ೧ಗುಳಿಗೆ, ಸಂಜೆಗೆ ೧ಗುಳಿಗೆಯಂತೆ ಊಟದ ಮೊದಲು ತಕ್ಕೊಳ್ಳಬೇಕು. ಏಳುದಿವಸ ಈ ಔಷಧವನ್ನು ಬಿಸಿನೀರಿನಲ್ಲಿ ಸೇವಿಸಬೇಕು.

ಪಥ್ಯ:—ಹಿರವೀಪಲ್ಲೆ ಬಿಡಬೇಕು. ೭ ದಿವಸ ಸಂಪೂರ್ಣ ಔಷಧದ ಕಿಮ್ಮತ್ತು ರೂಪಾಯಿ 5—0—0. ಪೋಸ್ಟ ಚಾರ್ಜ ೧೨ ಆಣೆ.

ಮಾಲಕರು:—ಹಾಲಪ್ಪಾ ಫಕೀರಪ್ಪಾ ದಾವಣಗೇರಿ

ಆಯುರ್ವೇದ ಔಷಧಾಲಯ ಗದಗ-ಸಿಟಿ-

ಏಜಂಟರು:—ಮುಲ್ಕಿ ಫಾರ್ಮಸಿ,—ಮುಲ್ಕಿ, ಗದಗ, ಬಾಗಲಕೋಟೆ ಧಾರವಾಡ ವಿಜಾಪುರ—ಬಾಪಟ್ಟ ಸಿದ್ಧಲಿಂಗಪ್ಪ ಧಾರವಾಡಕರ ವಿಜಾಪುರ ಸಂಗಮೇಶ್ವರ ಮೂರ್ತಿ ದಾವಣಗೇರಿ ದಾವಣಗೇರಿ:—ದಾವಣಗೇರಿ ಪ್ರೆಸ್ ೮ರ್ ಎಚ್ ಕಮಲಾಪುರ, ಕೆಮಿಸ್ಟ, ಹಾವೇರಿ, ಬ್ಯಾಡಗಿ

ಸಾದಾ ಮನೆಯೂ ಅದಕ್ಕೆ ವರ್ಷಕ್ಕೆ ೮ ರೂಪಾಯಿ ಬಾಡಿಗೆಯಿತ್ತು. ನಮ್ಮಲ್ಲಿನ ಮುನ್ಸಿಪಾಲಿಟಿಗಳು ಸಹ ಈ ತೆರನಲ್ಲಿ ಜನರಿಗಾಗಿ ನಿವಾಸದ ಮನೆಗಳನ್ನು ಕಲ್ಪಿಸಿಕೊಡಬಹುದಲ್ಲ–ಎಂದು ನನಗೆ ತೋರುತ್ತದೆ. ನಾಲ್ಕು ಕೋಣೆಗಳಿರುವ ಹಿಂದೆ ಹೇಳಿದ ಮಾದರಿಯ ಸಾದಾ ಮನೆಗೆ ಇಂಗ್ಲೆಂಡಿನಲ್ಲಿ ಸುಮಾರು ೮೦೦೦ ರೂಪಾಯಿ ವೆಚ್ಚ ಬೀಳುತ್ತದೆ. ಇವುಗಳ ಗೋಡೆಗಳು ಕೇವಲ ೯ ಇಂಚು ದಪ್ಪ. ನಮ್ಮ ದೇಶದಲ್ಲಿ ಇಂಥ ಮನೆಗಳನ್ನು ಸುಮಾರು ೨೦೦೦ ರೂಪಾಯಿ ಬೆಲೆಗೆ ಕಟ್ಟಿಸಬಹುದೋ ಏನೋ. ಇಂಥ ಮನೆಗಳಲ್ಲದೆ, ಯುದ್ಧ ಕಾಲದಲ್ಲಿ ಮನೆಮಾರುಗಳನ್ನು ಕಳೆದುಕೊಂಡವರ ಸಲುವಾಗಿ, ಇಲ್ಲಿನ ಮುನ್ಸಿಪಾಲಿಟಿಯವರು ಪೂರ್ವಸಿದ್ಧವಾದ ಮನೆಗಳನ್ನು ಒದಗಿಸಿಕೊಟ್ಟಿದ್ದಾರೆ. ಅಂಥ ಪೂರ್ವಸಿದ್ಧ ಮನೆಗಳನ್ನು ೧೦೦೦ ರೂಪಾಯಿ ಬೆಲೆಯಲ್ಲಿ ಕಟ್ಟಿಸಬಹುದೋ ಏನೋ. ಇನ್ನೆಷ್ಟೋ ಮನೆಗಳನ್ನು ಅಲ್ಲಿನ ನಿವಾಸಿಗಳಿಗೆ ೨೦, ೩೦ ವರ್ಷಗಳ ವಾಯಿದೆ ಮೇಲೆ, ಕಡಿಮೆ ಬಡ್ಡಿಯಲ್ಲಿ ಸಾಲವಾಗಿ ಕೊಟ್ಟಿದ್ದಾರೆ. ಸಾಲ ತೀರಿದ ನಂತರ ಆ ಮನೆ ಅವರದ್ದು. ಇದರಿಂದಾದ ಒಂದು ಪರಿಣಾಮವೇನೋ ಸಂತೋಷದ್ದಲ್ಲ. ಅದೆಂದರೆ–ಮುನ್ಸಿಪಾಲಿಟಿಯವರು ಕಟ್ಟಿಸುವ ಕಟ್ಟಡಗಳೆಲ್ಲ ಒಂದೇ ತೆರನಾದುದರಿಂದ, ನೋಡುವ ನಮ್ಮ ಕಣ್ಣುಗಳಿಗೆ ಬೇಸರವಾಗುತ್ತದೆ. ಎಲ್ಲ ಕಡೆಗಳಲ್ಲೂ ಹೀಗಿರುವುದಿಲ್ಲ.

ಇನ್ನೊಂದು ವಿಚಿತ್ರವಾದ ಅನುಭವ ನನಗೆ ಬಂದಿತು–ಇಲ್ಲಿನ ಮುನ್ಸಿಪಾಲಿಟಿಗಳಲ್ಲಿ ಬಿಲ್‌ಕಲೆಕ್ಟರ್ ಎಂಬ ಅಧಿಕಾರಿಯೇ ಇಲ್ಲ. ಜನರ ಮನೆಗಳಿಗೆ ತೆರಿಗೆಯ ಹಣ ಕೇಳಲಿಕ್ಕೆ ಹೋಗಬೇಕಾದ ಅವಶ್ಯಕತೆಯೇ ಇಲ್ಲ. ತೆರಿಗೆಯನ್ನು ತಂದುಕೊಡುವುದು ಜನರ ಕರ್ತವ್ಯ. ಲೀಡ್ಸ್ ಎಂಬ ಒಂದು ನಗರದ ಮುನ್ಸಿಪಾಲಿಟಿಗೆ ೨ ಲಕ್ಷ ಪೌಂಡುಗಳ ತೆರಿಗೆಯು ಬರಬೇಕಾಗಿದೆ. (೨೭ ಲಕ್ಷ ರೂಪಾಯಿ) ಅನ್ನೊಂದು ವರಮಾನದಲ್ಲಿ ವಾಯಿದೆಗೆ ತೆರಿಗೆ ಕೊಡದವರು ಕಳೆದ ವರ್ಷದಲ್ಲಿ ಬರಿಯ ಆರುಮಂದಿ ಇದ್ದರು. ಅವರಿಗೆ ಮೆಜಿಸ್ಟ್ರೇಟರುಗಳ ಮುಖಾಂತರ ನೋಟೀಸು ಕೊಡುತ್ತಾರೆ. ಕೊಟ್ಟೊಡನೆ ಅವರೂ ತಂದುಕೊಡುತ್ತಾರೆ.

ಬ್ರಿಟನಿನ ನಗರವಲ್ಲದ ಪ್ರದೇಶಗಳು ನೋಡಲಿಕ್ಕೆ ಬಹು ಸುಂದರವಾದುವು. ಎಲ್ಲೆಲ್ಲಿಯೂ ಸಾಮಾನ್ಯ ಇಳಿಕಲಿನ, ಹಸುರಾಗಿ ಕಾಣುವ ಗುಡ್ಡಗಳು ತುಂಬಿದ್ದು, ಕಣ್ಣಿಗೆ ಸೊಂಪಾಗಿ ಕಾಣುತ್ತವೆ. ವರ್ಷದಲ್ಲಿ ಆಗಾಗ ಮಳೆ ಬೀಳುವುದರಿಂದ ಹುಲ್ಲು ಒಣಗುವುದಿಲ್ಲ. ಅಲ್ಲಲ್ಲಿ ಮರಗಳೂ ಇವೆ. ಇಲ್ಲಿನ ಟೆನ್ನಿಸ್, ಫುಟ್‌ಬೊಲ್ ಮೊದಲಾದ ಆಟಗಳೆಲ್ಲ ಇಂಥ ಮಿದುವಾದ ಹಚ್ಚಗಿನ ಮೈದಾನಗಳ ಮೇಲೆ ನಡೆಯುತ್ತವೆ. ಇಲ್ಲಿನ ಮರಗಳಲ್ಲಿ ಮಲೆನಾಡಿನಲ್ಲಿ ಕಾಣುವಂಥ ದೊಡ್ಡದಂಥ ಮರಗಳಿಲ್ಲ. ಸಾಮಾನ್ಯ ಮರಗಳು ೩೦, ೪೦ ಅಡಿ ಎತ್ತರವಷ್ಟೇ ಬೆಳೆಯುತ್ತವೆ. ಅವುಗಳಲ್ಲಿ ಎಲ್ಮ್, ಪೈನ್, ಸ್ಪ್ರೂಸ್ ಮೊದಲಾದ ಮರಗಳು ಹೆಚ್ಚು. ಹಾಗೆ ಪ್ಲಮ್ ಮತ್ತು ಸೇಬು ಹಣ್ಣಿನ ಮರಗಳೂ ಇವೆ. ಇವುಗಳನ್ನೆಲ್ಲಾ ಹೂಬಿಟ್ಟಾಗ ನೋಡುವುದಕ್ಕೆ ತುಂಬಾ ಸಂತೋಷ.

ಇಲ್ಲಿನ ಬೇಸಾಯದ ವಿಧಾನವು ವಿಚಿತ್ರವಾದುದು. ಇಷ್ಟೊಂದು ಗುಡ್ಡಗಾಡಿದ್ದರೂ ಬೇಸಾಯವಾಗುವ ಭೂಮಿ ನೂರಕ್ಕೆ ಐದೋ, ಹತ್ತೋ. ಇಲ್ಲಿನ ಹೊಲಗದ್ದೆಗಳು ನಮ್ಮಲ್ಲಿಯಂತೆ ಸಮತಟ್ಟಾದವುಗಳಲ್ಲ. ಇದ್ದಕ್ಕಿದ್ದ ಹಾಗೆ ಭೂಮಿಯ ಇಳಕಲು ಸ್ಥಳಗಳಲ್ಲಿ ಬೇಸಾಯ ಮಾಡುವುದನ್ನು ಬೆಳೆಯುತ್ತಾರೆ. ಮಳೆ ಕಡಿಮೆಯಾದುದರಿಂದ ನೆಲ ಕೊರೆಯುವುದು ಕಡಿಮೆ. ಭೂಮಿಯು ನೀಕವಾ ಕಂದನ್ನು ಜವಿಹಿನನ್ನೂ ಉಪ್ಪಿನ ಪೂರ್ವಕವಾಗಿ ಮಣ್ಣಿಗೆ ಬೆಳೆಯಿಸಲು ಉಪಯೋಗಿಸುತ್ತಾರೆ. ಕಸ, ಧನಗಳ ಮೇವಿಗಾಗಿ ಅದನ್ನು ಕಾದಿರಿಸುತ್ತಾರೆ. ಹಾಗೆ ಕಾದಿರಿಸಿ, ೬, ೮ ವಾರಗಳ ತನಕ ಬೆಳೆಯ ಗೊಬ್ಬರ, ಅನಂತರ ಜಾನುವಾರುಗಳನ್ನು ಮೇಯಲು ಬಿಡುತ್ತಾರೆ. ಹೀಗೆ ಮಾಡುವುದೂ ಸಂಸ್ಕಾರದ ಧೋರಣೆಯಾಗಿದೆ. ಇಲ್ಲಿನ ಕೃಷಿಯನ್ನು, ಅಂದರೆ ಗೋಧಿ ಬಟಾಟೆಯನ್ನು ಇನ್ನೂ ವಿಸ್ತರಿಸಬಹುದು. ಆದರೆ ದವಸಧಾನ್ಯಗಳನ್ನು ಅಗ್ಗವಾಗಿ ಹೊರಗಿನ ದೇಶಗಳಿಂದ ತರಿಸಲು ಅನುಕೂಲವಿರುವಾಗ ಅವನ್ನು ಬೆಳೆಸಲು ಅವರು ಹೆಚ್ಚಿನ ಗಮನ ಕೊಡುವುದಿಲ್ಲ. ಹಾಲು ಹಯನಿಗೆ, ಗಿಡ್ಡಿಗೆ ಅವರು ಪ್ರಾಧಾನ್ಯ ಕೊಡುತ್ತಾರೆ. ಹಾಗೆಯೇ ಉಣ್ಣೆಗೆ ಪ್ರಾಧಾನ್ಯ ಕೊಡುತ್ತಾರೆ. ಲಾಭದಾಯಕವಾದ ಕುರಿ ಸಾಕಣೆ, ದನಗಳ ಸಾಕಣೆ ಇಲ್ಲಿ ಮನ್ನಣೆಗೆ ಗುರಿಯಾದ ಉದ್ಯೋಗಗಳು. ನಾನು ಇನ್ನಷ್ಟು ಹಳ್ಳಿಯಲ್ಲಿ ತಿರುಗಾಡಿದರೂ ದಾರಿಯಲ್ಲಿ ಒಂದು ದನವನ್ನಾಗಲಿ, ಕುರಿಯನ್ನಾಗಲೀ ಕಂಡವನಲ್ಲ. ಪ್ರತಿಯೊಬ್ಬನೂ ತನ್ನ ಭೂಮಿಗೆ ಬೇಲಿಹಾಕಬೇಕು. ತನ್ನ ಭೂಮಿಯೊಳಗೇನೇ ಜಾನುವಾರುಗಳನ್ನು ಬಿಟ್ಟು ಮೇಯಿಸಬೇಕು.

ಬ್ರಿಟನಿನಲ್ಲಿ ೨೦–೩೦ ಮನೆಗಳುಳ್ಳ ಬೀದಿಗಳೂ, ಚಿಕ್ಕ ಹಳ್ಳಿಗಳೂ ಇವೆ. ಹಾಗೆಯೇ ದಕ್ಷಿಣಕನ್ನಡ ಜಿಲ್ಲೆಯಲ್ಲಿ ಕಾಣುವಂತೆ ಬಹು ದೂರ ಒಂಟಿಯಾಗಿ ಕಾಣಿಸುವ ರೈತರ ಮನೆಗಳೂ ಇವೆ. ಇಂಥ ರೈತರ ಹೊಲಗಳ ಬಳಿ, ಒಣ ಹುಲ್ಲಿನ ಕುಪ್ಪೆಗಳನ್ನು ಕಾಣಬಹುದು. ರೈತನು ಶ್ರೀಮಂತನಾಗಿದ್ದರೆ, ಮನೆ ದೊಡ್ಡದಾಗಿದ್ದು, ಮನೆಗಳಿಗೆ ಪ್ರಾಕಾರಗಳೂ ಇರುತ್ತವೆ. ಆದರೆ ನಮ್ಮ ದೇಶದ ಮನೆಗಳಂತೆ ಮನೆಯ ಹೊರಗಡೆ ತೆರೆದ ಜಾಗವಿ, ಜಗುಲಿಗಳಿರುವುದಿಲ್ಲ. ಚಳಿಯಿಂದಾಗಿ ಜನ ಮನೆಯೊಳಕ್ಕೇ ಹೋಗಿರಬೇಕು. ಮನೆಗಳ ಕದಗಳೂ ತೆರೆದಿರುವುದೆಂಬುದಿಲ್ಲ. ಇಲ್ಲಿನ ಬೇಸಾಯಗಾರರು ನೇಗಿಲುಗಳಿಗೆ ಕುದುರೆಗಳನ್ನು ಕಟ್ಟುತ್ತಾರೆ. ಇವರ ಉಳುವ ಕುದುರೆಗಳಾಗಲೀ, ಗಾಡಿ ಎಳೆಯುವ ಕುದುರೆಗಳಾಗಲೀ ದೊಡ್ಡದಾದವು, ಬಲಿಷ್ಠವಾದುವು. ಈಗ ಟ್ರಾಕ್ಟರುಗಳಿಂದ ಬೇಸಾಯ ಮಾಡುವ ಕ್ರಮವನ್ನು ನಾವು ಕಾಣಬಹುದು. ಊರಿನ ಬಯಲುಗಳಲ್ಲಿ ದನ ಕುರಿಗಳ ಜತೆಗೆ ಒಂದೆರಡು ಕುದುರೆಗಳೂ ಇರುತ್ತವೆ. ಇನ್ನೊಂದು ವಿಶೇಷವೆಂದರೆ–ಚಿಕ್ಕ ಮಟ್ಟಕರು, ಕಡಸುಗಳನ್ನು ನಾವು ಕಾಣಲಾರೆವು. ಬೀಜಕ್ಕೆ ಬೇಕಾದ ಹೋರಿಗಳನ್ನು, ದನವಾಗಿಯೇ ಇರಿಸಿಕೊಳ್ಳಬೇಕಾಗದ ಕರುಗಳನ್ನು, ಅವರು ಮಾಂಸಕ್ಕಾಗಿ ಉಪಯೋಗಿಸುತ್ತಾರೆ. ಹೊಟ್ಟೆಗಿಲ್ಲದೆ ಒಣಗುತ್ತಿರುವ ಜಾನುವಾರುಗಳನ್ನು ನಾವು ಕಾಣಲಾರೆವು. ಇರುವ ದನಕರುಗಳು ಪುಷ್ಟಿಯಾಗಿಯೂ ಸೊಂಪಾಗಿಯೂ ಇರುತ್ತವೆ.

ನೆಂಸ್ ನಗರದಲ್ಲಿ ಕುಳಿತು ಇಂಗ್ಲೆಂಡಿನ ಹಲವಾರು ಸಂಗತಿಗಳನ್ನು ಆಯರ್ಲೆಂಡ್ ಸ್ಕಾಂಟಲೇಂಡ್‌ನ ವಿಚಾರಗಳನ್ನು ನಾನು ಬರೆಯಬೇಕೆಂದು ಈ ಪತ್ರವನ್ನು ಮುಂದುವರಿಸಿದ್ದೇನೆ. ಹೇಳಬೇಕಾದ ಸಂಗತಿಗಳು ಇನ್ನೂ ಉಳಿದಿವೆ. ನಾನು ಈ ತಿಂಗಳ ೨೩ ರಿಂದ ೨೭ರ ತನಕ ಬ್ರಿಟನಿನ ಔದ್ಯೋಗಿಕ ಪ್ರದರ್ಶನವನ್ನು ನೋಡುವುದಕ್ಕಾಗಿ ಲಂಡನಿನಲ್ಲೇ ಹೋಗಿ ವಾಸವಾಗಿದ್ದೇನೆ. ತೀರ ಸಂಕ್ಷಿಪ್ತವಾಗಿ ಹೇಳುವುದಾದರೂ, ನಾನು ಈ ತನಕ ನೋಡಿದಂತ ಸಂಗತಿಗಳನ್ನು ಕುರಿತು ಬರೆಯುವುದಕ್ಕೆ ನಾಲ್ಕಾರು ಲೇಖನಗಳಾದರೂ ಬೇಕು.

(ವಿಚಾರವಾಣಿ) —ಕೆ ಆರ್. ಕಾರಂತ.

~~~~~~~~~~

ಲಕ್ಷ್ಮಿ
ಸೆಂಟಾಲ್ ಮಾತ್ರೆ

ಇದರ ಉಪಯೋಗದಿಂದ ಬಹುಕಾಲದ ಮೇಹ, ಪ್ರಮೇಹ, ಮೂತ್ರದ ಉರಿ, ಮೂತ್ರ ಕೃಚ್ಛ್ರ, ಮೂತ್ರದೊಡನೆ ಯಾ ಮುಂದಾಗಿ ಬಿಳುಪು, ಅರಸಿನ, ಕೆಂಪು ಈ ವರ್ಣಗಳಲ್ಲಿ ಕೀವು ಹೋಗುವುದು, ತೊಡೆ ಸಂದಿನಲ್ಲಿ ನೋವು, ಕಾಲ ಗಂಟುಗಳಲ್ಲಿ ವೇದನೆ, ಕಣ್ಣಿನಲ್ಲಿ ಕೀವು ಬರುವುದು, ಶರೀರದಲ್ಲಿ ಉಷ್ಣತೆ, ಸ್ವಪ್ನೇಂದ್ರಿಯ ಇವೆಲ್ಲಾ ಖಾತ್ರಿಯಾಗಿ ಗುಣಹೊಂದುವುದು

ಡಬ್ಬಿ ಒಂದಕ್ಕೆ ರೂ 2—0—0

ಏಜಂಟ್ಸ್—

ಶಾ ಕಂಪೆನಿ, ಮಂಗಳೂರು

~~~~~~~~~~

THE PANGAL NAYAK BANK LIMITED.

Head Office] (Incorporated in 1920.) [Udipi S K

SEASON DEPOSITS are received and accepted on the following terms:—

For three, four or five months deposits at 3% p. a

For six, seven or eight months deposits at 3½% p. a

These are to be terminable by the 30th June 1951

Interest is payable along with the principal at maturity

Our THREE YEAR CASH CERTIFICATE bring to You a fair yeild. For particulars please ask for copy of Rules

ಮುತುಸ್ರಾವ ನಿಂತಿತು

'ಕುಮಾರಿ' ಬಿಲ್ಲೆಗಳನು ಉಪಯೋಗಿಸಿದರೆ ಪ್ರತಿತಿಂಗಳು ಋತುಸ್ರಾವವಾಗುವುದು ಹೊಟ್ಟೆಗೆ ಬರುವುದು, ಈ ಔಷಧ ಸೇವನೆಯಿಂದ ತೀವ್ರ ಗುಣಹೊಂದಬಹುದು, ಯಾವ ಬಾಧಕವೂಯಿಲ್ಲ. ಸಾವಿರಾರು ಮಂದಿಗೆ ಖಾತ್ರಿ ಗುಣವಾಗಿದೆ–ಬೆಲೆ; ರೂ. 3-; ಸ್ಪೆಶಲ್ ರೂ. 5-ಅಧಿಕಾಧಿಕ ಸ್ಪೆಶಲ್ ರೂ. ೭ [ವಿ. ಪಿ ಖರ್ಚು ಪ್ರತ್ಯೇಕ.]

Mis P. DEVEE, F. DS. (N. J.)

Tollygunge CALCUTTA.

ಸ್ಟಾಕಿಸ್ಟರು ಶಾ ಕಂಪೆನಿ, ಮಂಗಳೂರು

ಗೊನೋರಿಯಾ ಪರಮಾರೋಗ ಉಷ್ಣ ರೋಗಕ್ಕೆ ಔಷಧ

೭ ದಿವಸಗಳಲ್ಲಿ ಈ ರೋಗ ಗುಣ ಹೊಂದುವದು ಗ್ಯಾರಂಟೀ

ಶರೀರದಿಂದ ಕೀವು ಬರುತ್ತಿದ್ದರೆ, ಧೋತರಕ್ಕೆ ಹಳದೀ ಡಾಗು ಹತ್ತುತ್ತಿದ್ದರೆ, ಶರೀರದಿಂದ ಬಾವು ಶರೀರದ ತೊಗಲು ಒಂದಕ್ಕೆ ಸರಿಯದಿದ್ದರೆ, ಶರೀರದ ಮುಕ್ತ ಘಾಯುವಾಗಿದ್ದರೆ,.... ಚಟ್ಟೆ ಬಿದ್ದಿದ್ದರೆ, ಉಷ್ಣದಿಂದ ಬೇರು ಇಳಿದಿದ್ದರೆ, ಉಡುಚು ಆಗಿದ್ದರೆ, ಮೂಲವ್ಯಾಧಿ, ಭಗೇಂದ್ರ, ಗಂಡುಮಾಲಿ, ಕೈಕಾಲು ಶೂಲಿ, ಅರ್ಧಾಂಗವಾಯು ನಡುನೋಯುವದು ಸ್ತ್ರೀಯರ ಬಿಳಿಕೆಂಪು ಸೆರಗು ಹೋಗುತ್ತಿದ್ದರೆ, ಕೊಲಿಕಟ್ಟು ಗರ್ಭಾಯಿಂದ ಗರ್ಭಕೋಶ ನಾಶಹೊಂದಿದ್ದರೆ, ಸರಿಯಾಗಿ ಭೇದಿಯಾಗದಿದ್ದರೆ, ಮೂತ್ರ ಉರಿಯುತ್ತಿದ್ದರೆ, ಈ ಎಲ್ಲಾ ಬೇನೆಗಳಿಗೆ ಈ ನಮ್ಮ ಔಷಧವು ಇರುವುದು. ಮೊದಲ ದಿವಸ ಬೆಳಗ್ಗೆ ೧ ಗುಂಜಿ ಪ್ರಮಾಣ ಔಷಧ ಅರ್ಧತೊಲಿ ತುಪ್ಪದಲ್ಲಿ ತಕ್ಕೊಳ್ಳಬೇಕು ಮೊದಲ ದಿವಸ ಮಾತ್ರ ಮುಂಜಾನೆ ಸಂಜೆ ಎರಡು ಸಾರೆ ತಕ್ಕೊಳ್ಳಬೇಕು. ಮುಂದೆ ದರ ದಿವಸ ಬೆಳಗ್ಗೆ ಒಂದೇ ಸಾರೆ ೭ ದಿವಸ ಸೇವಿಸಬೇಕು. ಈ ಔಷಧವನ್ನು ಬೇಸಿಗೆಯಲ್ಲಿ ತುಪ್ಪದಲ್ಲಿ, ಥಂಡಿ ಮಳೆಗಾಲದಲ್ಲಿ ಜೇನತುಪ್ಪದಲ್ಲಿ ತಕ್ಕೊಳ್ಳಬೇಕು. ಪಥ್ಯ: ಹಸೀಖಾರ, ಕುಂಬಳಕಾಯಿ, ಒಳ್ಳೆಣ್ಣೆ ಬಿಡಬೇಕು.

ಬಾಟ್ಲಿ ೧ಕ್ಕೆ ರ.೩. ಪೋಸ್ಟ ಚಾರ್ಜ ೮ ಆಣೆ

ಏಜೆಂಟರು:—ಗದಗ:—ಗದಗ ಫಾರ್ಮಸಿ, ಹುಬ್ಬಳ್ಳಿ:—ಹುಬ್ಬಳ್ಳಿ ಫಾರ್ಮಸಿ ಬಾಗಲಕೋಟಿ:–ಬಾಗಲಕೋಟಿ ಫಾರ್ಮಸಿ, ಧಾರವಾಡ:–ಧಾರವಾಡ ಫಾರ್ಮಸಿ, ದಾವಣಗೇರಿ: ದಾವಣಗೇರಿ ಪ್ರೆಸ್. ನಂಜುಡೇಶ್ವರ ಮೂರ್ತಿ ದಾವಣಗೇರಿ.

ಪತ್ರವ್ಯವಹಾರ ಮಾಡತಕ್ಕ ಮಾಲಕರ ವಿಳಾಸ,

ಲೀಮಣಸಿದ್ಧಪ್ಪ ಹಾಲಪ್ಪ ದಾವಣಗೇರಿ,

ಆಯುರ್ವೇದ ಔಷಧಾಲಯ, ಗದಗ-

ಕುಲವಿಲ್ಲದ ಹೆಣ್ಣು

ತೆಲುಗಿನಿಂದ ಅನುವಾದಿತ ಕಾದಂಬರಿ.

ಅನುವಾದಕರು: ಶ್ರೀ ಪಿ ವೆಂಕೋಬಾಚಾರ್ಯರು, ಬಿ. ಎ. ಬಿ. ಟಿ, ಹುಬ್ಬಳ್ಳಿ.

"ಮಿಶ್ರಸಂತತಿಯ ಹೆಣ್ಣೊಂದು ಧರ್ಮದ ಸೋಗಿನ ಜಾಲ, ಧನದ, ಜಾತಿ ಸ್ಪರ್ಧೆಯ ಕಾಮಜಾಲದಿಂದ ಪಾರಾಗಿ ಆಧುನಿಕ ಯುವಕ ಸಂತತಿಯ ಉದಾರತೆಯ ಕೈಹಿಡಿದು ಸುಖವಾಗಿ ಬಾಳುವುದನ್ನು ಸೂಚಿಸುವ ಈ ಕಾದಂಬರಿಯಲ್ಲಿ ಪ್ರಾಸಂಗಿಕವಾಗಿ ನಾಟಕ ಕಲೆಯ ಮೇಲೆಯೂ ಕೆಲವು ಅಭಿಪ್ರಾಯಗಳನ್ನು ಸೂಚಿಸಿದ್ದಾರೆ

ಕುಲವಿಲ್ಲದ ಹೆಣ್ಣಿನಲ್ಲಿ ಸ್ತ್ರೀ ಸ್ವಾತಂತ್ರ್ಯ ಬೇರೂರಿದೆ. ಅವರ ಜೀವನದ ವ್ಯಕ್ತಿಯು ಎಂತಹ ಸಾಮಾಜಿಕ, ಧಾರ್ಮಿಕ ಎಡರು ತೊಡರುಗಳನ್ನೂ ದಾಟಿ ಮನಮೆಚ್ಚಿದ ರೀತಿಯಲ್ಲಿ ಸಮಾಧಾನದಿಂದ ಬಾಳಬಹುದು ಎಂಬುದೇ ಈ ಕಾದಂಬರಿಯ ನೀತಿ"—ಸೈನಿಕ.

ಓದಲೇ ಬೇಕಾದ ಸಾಮಾಜಿಕ ಕಾದಂಬರಿ—ಬೆಲೆ ರೂ 1-8-0

ಪ್ರತಿಗಳಿಗೆ—

ಅಂತರಂಗ ಕಾರ್ಯಾಲಯ, ಉಡುಪಿ.

ನವಭಾರತ ಪುಸ್ತಕ ಭಂಡಾರ, ಉಡುಪಿ.

ತಾರೀಕು 28-6-51 ರಿಂದ

ವಾರದ ಭವಿಷ್ಯ

ತಾರೀಕು 4-7-51ರ ವರೆಗೆ

ಮೇಷ—ಸುರಗುರುಗಳು ವ್ಯಯದಲ್ಲಿದ್ದರೂ ನಿಮಗಾವ ತೆರನಾದ ವಿಪತ್ತೂ ಸದ್ಯ ಸಂಭವಿಸದು. ನಿಮ್ಮ ಉದ್ಯಮದಲ್ಲಿ ವಿಶೇಷವಾದ ಫಲ ಲಭಿಸುವದು, ಶತ್ರುಗಳು ದೂರ ಸರಿವರು. ಆಪ್ತೇಷ್ಟರು ಬಂಧು ಬಳಗದವರಿಂದ ಕೂಡಿದ ನಿಮಗೆ ದಿನಗಳೆದುದು ತಿಳಿಯಲೊಲ್ಲದು. ಸಾಹಸ ಕರ್ಮಗಳಲ್ಲೂ ರಾಜಕೀಯ ಕ್ಷೇತ್ರದಲ್ಲೂ ವಿಶೇಷತಃ ವಿಜಯ ಯಶಸ್ಸುಗಳಿವೆ. ತಾ 28-29. 3 4ಈ ದಿನಗಳಲ್ಲಿ ಧನವಸನ ಅಗಭೋಗಗಳಿಗೆ ಕೊರತೆಯಿಲ್ಲ.

ವೃಷಭ—ಈ ವಾರದಲ್ಲಿ ನಿಮಗೆ ಸದ್ಗ್ರಹರೆಲ್ಲರ ಅನುಗ್ರಹವು ದೊರೆತಿರುವ ಕಾರಣ ಸದುದ್ಯಮಗಳಲ್ಲಿ ನೀವು ಯಶಸ್ವಿಗಳಾಗುವಿರಿ. ನಿರೀಕ್ಷೆಗಿಂತ ಅಧಿಕವಾಗಿ ಧನಲಭಿಸುವದು. ಬಂಧುಮಿತ್ರರ ನೆರವು ಉತ್ತಮವಾಗಿರುವುದು. ನೌಕರಿ ಜನರಿಗೂ ವಿದ್ಯಾರ್ಥಿಗಳಿಗೂ ಕಾಲವು ಅನುಕೂಲವಿದೆ. ಆರೋಗ್ಯ ಭಾಗದಲ್ಲಿ ಸ್ವಲ್ಪ ಜಾಗರೂಕರಾಗಿರಿ ವಾರಾದ್ಯಂತಗಳ ಎರಡೆರಡು ದಿನಗಳು ಅಲ್ಪ ಧನನಾಶಗಳಿಗೆ ಕಾರಣಗಳಾಗಿವೆ.

ಮಿಥುನ—ದುರ್ದೈವವು ಬಲವಾಗಿ ಪೀಡಿಸುವದು. ಈವಾರದಲ್ಲಿ ನಿಮ್ಮ ತನು ಮನಗಳಿಗೆ ಈಷತ್ತೂ ಸುಖಶಾಂತಿಯು ಲಭಿಸಲೊಲ್ಲದು. ಶತ್ರುಜನರ ಪೀಡೆಯಿಂದ ನಿಮ್ಮ ಹಲವಾರು ಉದ್ಯಮಗಳು ವ್ಯರ್ಥಪ್ರಯತ್ನಗಳಾಗುವವು. ಆಪ್ತೇಯರ ಮತ್ತು ಪತ್ನೀಪುತ್ರರ ವಿರಹವುಂಟಾಗಲಿದೆ. ಆರ್ಥಿಕ ದುರವಸ್ಥೆಯಿಂದಾಗಿ ದಿನಯಾಪನೆಯು ಕಷ್ಟವಾದೀತು, ತಾ 30. 1. 2. ವಿಶೇಷತಃ ಅನಿಷ್ಟಕಾರಿಗಳಿವೆ.

ಕರ್ಕಟ—ಕೈಕೆಸರಾದರೆ ಬಾಯಿ ಮೊಸರಾದೀತೆಂಬಂತೆ ಕಷ್ಟಪಟ್ಟರೆ ಕಾರ್ಯ ಸಾಧ್ಯವಾದೀತು. ಗಾಢಸಿಗಳಾದ ನಿಮ್ಮ ಮುಂದೆ ಶತ್ರುಜನರೂ ಬರಲಾರರು. ಹಿಡಿದ ಕಾರ್ಯವು ನಿರ್ವಿಘ್ನದಿಂದ ನೆರವೇರೀತು. ಸಾಮಾಜಿಕ ರಂಗಗಳಲ್ಲಿ ಜನತೆಯ ಬೆಂಬಲವಿದೆಯಾದರೂ ರಾಜಕೀಯ ಕ್ಷೇತ್ರದಲ್ಲಿ ಪರಾಭವವುಂಟಾದೀತು. ವ್ಯಾಪಾರೀ ಜನರಿಗೆ ಕಾಲವು ಅತ್ಯನುಕೂಲವಿದೆ. ವಾರಾಂತ್ಯದ 2ದಿನಗಳೊಳ್ಳೆಯವಲ್ಲ.

ಸಿಂಹ—ನಿಮ್ಮ ಅದೃಷ್ಟವು ಚೆನ್ನಾಗಿರುವದು. ಕಾರಣ ನಿಮ್ಮ ಶ್ರಮಕ್ಕೂ ಮಿಕ್ಕಿದ ಫಲವು ನಿಮಗೆ ಲಭಿಸಲಿದೆ. ಧನಲಾಭ ಸುಖಭಾಗ್ಯ ಪತಿಗಳು ಲಾಭಸ್ಥಾನದಲ್ಲಿ ಒಟ್ಟಿಗೆ ಕಲೆತಿರುವ ಕಾರಣ ಈವಾರದಲ್ಲಿ ನಿಮಗಾವ ತೆರನಾದ ಹಾನಿಯು ಸುಖಲಾಭಗಳಿಗೆ ತಟ್ಟಲಾರದು ಪ್ರಯಾಣಕ್ಕೆ ಕಾಲವು ಉಚಿತವಲ್ಲ ನಿರೀಕ್ಷೆಗಿಂತ ಅಧಿಕವ್ಯಯ ವಾದೀತು ವಾರಾದಿಯ 2 ದಿನಗಳಲ್ಲಿ ದೇಹಾಲಸ್ಯ ರಾಜಭಯಕ್ಕೆಡೆಯಿದೆ.

ಕನ್ಯಾ—ನಿಮ್ಮ ಸಂಕಲ್ಪಗಳು ಯಾವೊಂದು ತೆರನಾದ ವಿಘ್ನವಿಡ್ಡೂರಗಳಿಲ್ಲದೆ ಫಲಿಸುವವು. ಬಂಧುವರ್ಗದವರ ಮತ್ತು ಗುರುಹಿರಿಯರ ಅನುಗ್ರಹವಂಪಡೆದ ನಿಮಗೆ ಯಾವ ಉದ್ಯಮದಲ್ಲೂ ನಿರಾಶೆಗವಕಾಶವುಂಟಾಗದು ಕೆಲವೊಮ್ಮೆ ಆಹಾರ ದೋಷದಿಂದ ದೇಹಾಲಸ್ಯ ಕಾಣಿಸಬಹುದು ಆಪ್ತೇಯರ ವಿರಹವಾದೀತು. ದೇಶಾಟನದ ಪ್ರಸಂಗವು ಒದಗಬಹುದು, ವಾರಾಂತ್ಯದ 2 ದಿನಗಳು ವಾಂಛಿತಾರ್ಥ ಪ್ರದಗಳಿವೆ.

ತುಲಾ—ನಿಮ್ಮ ಅದೃಷ್ಟವು ಅತೀವ ಕ್ಷೀಣ ದೆಸೆಗೆ ಬಂದಿರುವದು, ಸಮುದ್ರದಲ್ಲಿನ ಅಲೆಗಳಂತೆ ಕಷ್ಟಪರಂಪರೆಗಳು ಮೇಲಿಂದ ಮೇಲೆ ಬರಲಿವೆ. ತನುಪೀಡೆ, ಮನೋರೋಗ ಶತ್ರುಜನರ ಕಾಟ ಇವುಗಳಿಂದಾಗಿ ನಿಮಗೆ ಸ್ವಪ್ನದಲ್ಲೂ ಸುಖವಿಲ್ಲೆಂಬರೆ ತಪ್ಪಾಗದು. ಮಾತ್ರವಲ್ಲ ಕೇವಲ ವ್ಯವಹಾರ ನಿಮಿತ್ತ ಕೋರ್ಟುಕಛೇರಿಗಳಿಗೆ ಹೋಗುವ ಪ್ರಸಂಗ ಬರಬಹುದು. ವಾರಾದಿಯ 2 ದಿನಗಳು ಇದ್ದುದರಲ್ಲುತ್ತಮ.

ವೃಶ್ಚಿಕ—ಮೂರಕ್ಕೆ ಹೆಚ್ಚದು ಆರಕ್ಕೆ ಕುಂದದೆಂಬಂತೆ ನಿಮ್ಮ ಪರಿಸ್ಥಿತಿಯಿಹುದು. ರಮ್ಯಂಗಾರಕರು ಅಷ್ಟಮದಲ್ಲಿದ್ದರೂ ದೈವಗುರುಗಳ ಅನುಗ್ರಹವು ಬಲವತ್ತರವಾಗಿರುವುದರಿಂದ ವಿಪತ್ತುಗಳನ್ನು ಸುಖದಿಂದ ಪಾರುಗಾಣದಿರಿ. ಸಾಂಸಾರಿಕ ತಾಪತ್ರಯಗಳು ನಿವೃತ್ತವಾಗುವವು. ಆಕಸ್ಮಿಕ ಧನಾಗಮದ ಯೋಗವಿದೆ ಕೆಲವೊಮ್ಮೆ ಶಸ್ತ್ರಾಸ್ತ್ರಗಳ ಪೆಟ್ಟಿಗೆ ನೀವು ಗುರಿಯಾದೀರಿ. ಜಾಗ್ರತೆ ತಾ 3. 4 ಹೆಚ್ಚಿನ ಪ್ರಶಸ್ತವಲ್ಲ

ಧನು—ಕಾಲವು ಬಹಳ ವಿಪರೀತಾವಸ್ಥೆಗೆ ಬಂದಿದೆ. ಮಿತ್ರ ಜನರೇ ಶತ್ರುಗಳಾಗಿ ಪರಿವರ್ತಿಸುವರು ಹೆಚ್ಚೇಕೆ ಬಂಧುವರ್ಗದವರೇ ನಿಮ್ಮ ಮೇಲೆ ಮುನಿದಿರುವರೆಂದರೆ ತಪ್ಪಾಗದು. ಕೈಹಿಡಿದಾಕೆಯಿಂದ ದಿನನಿತ್ಯ ಕಲಹವಹುದು. ನೇತ್ರಜರ ಪೀಡೆಯಿಂದ ಬಾಧಿತರಾಗುವಿರಿ. ಪ್ರವಾಸಿಗಳಿಂದ ಕಷ್ಟನಷ್ಟಗಳು ಉಂಟಾದಾವು. ಮನಸ್ಸು ಹೆದರಿದ ಹುಲ್ಲೆಯಂತೆ ಅತೀವ ಚಂಚಲವಾಗುವದು. ವಾರಾಂತ್ಯದ 5ದಿನಗಳು ಕೊಂಚ ಉತ್ತಮ.

ಮಕರ—ಸಾಧಿಸಿದರೆ ಸಬಳ ನುಂಗಬಹುದೆಂಬಂತೆ ನೀವು ಪ್ರಕೃತ ಯಾವ ಕಾರ್ಯವನ್ನು ಸಾಧಿಸಲೂ ಶಕ್ತರಿರುವಿರಿ ಶಕ್ತಿಗೆ ತಕ್ಕ ಯುಕ್ತಿಯು ಮಾತ್ರ ನಿಮ್ಮಲ್ಲಿಲ್ಲವಾದರೂ ನಿಮ್ಮ ಯತ್ನಕ್ಕಿಂತ ಅಧಿಕವಾದ ಫಲವು ಅನಾಯಾಸದಿಂದ ಲಭಿಸುವದು. ಕಫ ದೋಷದಿಂದಾಗಿ ಅನಾರೋಗ್ಯಕ್ಕೆಡೆಯಿದೆ. ಕೆಲವೊಮ್ಮೆ ಸ್ಥಾನಾಂತರವನ್ನು ಹೊಂದುವ ಪ್ರಸಂಗ ವುಂಟಾದೀತು. ತಾ3 4. ಇಷ್ಟ ಕಾರ್ಯಸಿದ್ಧಿ.

ಕುಂಭ—ಗುರುಬಲ್ಲನೆಷ್ಟಳಿದು ಇತರ ಎಲ್ಲಾ ಗ್ರಹರೂ ನಿಮಗೆ ವಿಮುಖರಿರುವುದರಿಂದ ಈವಾರದಲ್ಲಿ ನಾನಾ ತರದ ಕಷ್ಟನಷ್ಟಗಳೊದಗುವವು ಸಂಸಾರಿಕ ತಾಪತ್ರಯವು ಅಧಿಕವಾಗುವದು ಪತ್ನಿಪುತ್ರರೊಡನೆ ಕಲಹವಾಗುವದು, ವ್ಯಾಪಾರ ಮೊದಲಾದ ಉದ್ಯಮಗಳಲ್ಲಿ ಅನಿರೀಕ್ಷಿತ ನಷ್ಟವೊದಗಲಿದೆ. ಆದರೂ ದೇವತಾನುಗ್ರಹವಿರುವ ನಿಮಗೆ ತಾ. 28. 29 ಈ ದಿನಗಳಲ್ಲಿ ಮಾತ್ರ ಸಮಾಗಮ ಧನಲಾಭವಾದೀತು.

ಮೀನ—ಯಾವ ಕಡೆನೋಡಿದರೂ ನಿರಾಶೆಯ ಚಿಹ್ನೆಗಳೇ ಕಾಣಿಸುತ್ತಲಿವೆ. ವಿನಾಕಾರಣ ವಾಕ್ಕಲಹ ಸಾಂಸರ್ಗಿಕ ದೋಷದಿಂದ ನಿರಪರಾಧಿಗಳೂ ಒಮ್ಮೆಗೆ ಅಪರಾಧಿಗಳಾಗುವ ಸಂಭವವಿದೆ. ಗೃಹತಾಪತ್ರಯಗಳು ದಿನಗಳೆದಂತೆ ಹೆಚ್ಚುತ್ತಾ ಹೋಗುವವು ವಿಶೇಷತಃ ಮನೋರೋಗಕ್ಕೆ ಸಿಲುಕುವಿರಿ. ವ್ಯಾಪಾರ ವ್ಯವಹಾರಗಳಲ್ಲಿ ನಷ್ಟವೇ ಪ್ರಾಪ್ತವಾಗುವದು ತಾ 30. 1 2 ಇದ್ದುದರಲ್ಲಿ ಉತ್ತಮ

ದಕ್ಷಿಣ ಕನ್ನಡ ಜಿಲ್ಲೆಯ ಕಾಂಗ್ರೆಸಿಗರು ಮತ್ತು ಜನತೆಯಲ್ಲಿ ವಿನಂತಿ

ಈ ವರ್ಷದ ಅಂತ್ಯದಲ್ಲಿ ನಡೆಯಲಿರುವ ಚುನಾವಣೆಯು ಅತ್ಯಂತ ಮಹತ್ವವಾದುದು. ಕಾಂಗ್ರೆಸಿನ ಭವಿಷ್ಯವು ಅದರ ಪರಿಣಾಮವನ್ನು ಹೊಂದಿಕೊಂಡಿರುವುದೆಂದರೆ ಅತಿಶಯೋಕ್ತಿಯಾಗದು.

ಕಾಂಗ್ರೆಸಿನಲ್ಲಿ ಕೆಲವರು ಎಂತಹ ಒಡಕ ನ್ನೆಬ್ಬಿಸಿದರೂ, ಆಚಾರ್ಯ ಕೃಪಲಾನಿಯವರೇ ಮೊದಲಾದ ಕಾಂಗ್ರೆಸ್ ಮುಖಂಡರು ಪ್ರತ್ಯೇಕವಾದ ಯಾವ ಪಕ್ಷ ಕಟ್ಟಿದರೂ, ಕಾಂಗ್ರೆಸಿನ ಪ್ರತಿ ಪಕ್ಷೀಯರು ಅದರ ಕುರಿತು ಜನರಲ್ಲಿ ಎಂತಹ ಅಪಪ್ರಚಾರ ಮಾಡಿ ಬಲ ಕುಗ್ಗಿಸಲೆತ್ನಿಸಿದರೂ, ಕಾಂಗ್ರೆಸು ಬಲಗುಂದದೆ ಹೊಸ ಹುರುಪಿನಿಂದ ಮುಂದೊತ್ತಿ, ಬಲವನ್ನು ಹೆಚ್ಚಿಸುತ್ತ ಹೋಗುವುದೆಂಬುದು ನಿಸ್ಸಂದೇಹ ಮುಂದಿನ ಚುನಾವಣೆಯ ಮಹತ್ವವನ್ನು ತಿಳಿದುಕೊಂಡು, ಅದರಲ್ಲಿ ಕಾಂಗ್ರೆಸು ಸಂಪೂರ್ಣ ಜಯಶೀಲವಾಗುವಂತೆ ಮಾಡುವುದು ದೇಶದ ಹಿತದೃಷ್ಟಿಯಲ್ಲಿ ಜನತೆಯ ಕರ್ತವ್ಯವೆಂದು ನಾವು ಭಾವಿಸುತ್ತೇವೆ.

ಆದರೆ, ಚುನಾವಣೆಯ ಹೋರಾಟದಲ್ಲಿ ನಾನಾ ರೀತಿಯಾದ ವ್ಯಯಕ್ತಿಕ ಮತ್ತು ಜಾತೀಯ ಶಕ್ತಿಗಳು ಕಲಿಯುತ್ತಿ ವಾತಾವರಣವನ್ನು ವಿಷಮಗೊಳಿಸುತ್ತವೆ. 'ಇದಕ್ಕೆ ಕಾಂಗ್ರೆಸಿಗರೂ ಜನರೂ ಕೆಲವೇಳೆ ಬಲಿದೀಳುವುದಿದೆ. ಆದುದರಿಂದ ಜಿಲ್ಲೆಯ ಕಾಂಗ್ರೆಸ್ ಕೆಲಸಗಾರರೆಲ್ಲರೂ ಎಂದಿಗಿಂತಲೂ ಹೆಚ್ಚಿನ ವಿವೇಚನೆ, ಒಕ್ಕಟ್ಟು, ಶಿಸ್ತು ಮತ್ತು ತತ್ವನಿಷ್ಠೆಯಿಂದ ನಡೆದು ಎಚ್ಚರದಿಂದಿರಬೇಕೆಂದು ನಾವು ಈ ಮೂಲಕ ವಿನಂತಿಸಿಕೊಳ್ಳುತ್ತೇವೆ

ಈಗಾಗಲೇ ಕೆಲವು ವ್ಯಕ್ತಿಗಳು ವ್ಯಯಕ್ತಿಕವಾಗಿ ತಮ್ಮ ಉಮೇದ್ವಾರಿಕೆಯ ಕುರಿತು ಕಾಂಗ್ರೆಸಿಗರಲ್ಲಿಯೂ ಜನತೆಯಲ್ಲಿಯೂ ಪ್ರಚಾರ (ಕೆನ್ವಾಸ್) ಮಾಡತೊಡಗಿದ್ದಾರೆ. ಇಂತಹ ಪ್ರಚಾರಕ್ಕೆ ಕಾಂಗ್ರೆಸ್ ಕಮಿಟಿಯವರಾಗಲಿ, ಜನತೆಯಾಗಲಿ ಯಾವ ರೀತಿಯ ಬೆಂಬಲವನ್ನೂ ಕೊಡಕೂಡದೆಂದು ಪ್ರಾರ್ಥಿಸಿಕೊಳ್ಳುತ್ತೇವೆ.

ಇನ್ನು ಮುಂದೆ ಚುನಾವಣೆಗೆ ಪಕ್ಷಗಳ ತಳಹದಿಯ ಮೇಲೆ ಹೋರಾಟ ನಡೆಯುವುದೇ ಹೊರತು ವ್ಯಯಕ್ತಿಕ ಪ್ರತಿ ಸ್ಪರ್ಧೆಯ ದಿನ ಸಂದು ಹೋಯಿತೆಂದು ನಮ್ಮ ಅಭಿಮತ. ಅಂದ ಮೇಲೆ, ಯಾವುದಾದರೊಂದು ಪಕ್ಷಕ್ಕೆ ಉಮೇದ್ವಾರರಾಗಿ ಅರ್ಜಿ ಹಾಕುವ ಪ್ರಶ್ನೆ ಮೊದಲು ಬರುವುದಲ್ಲದೆ, ವ್ಯಯಕ್ತಿಕ ಪ್ರಚಾರಕ್ಕೆ ಅವಕಾಶವೇ ಇಲ್ಲ. ಪಕ್ಷದ ಒಕ್ಕಟ್ಟಿನ ದೃಷ್ಟಿಯಿಂದ ಅದು ದೊಡ್ಡ ತಪ್ಪು. ಆದುದರಿಂದ ಕಾಂಗ್ರೆಸಿಗರೆನಿಸಿಕೊಂಡು ಮತದಾರರಲ್ಲಿ ವ್ಯಯಕ್ತಿಕವಾಗಿ ಪ್ರಚಾರ ಮಾಡುವುದು ಕಾಂಗ್ರೆಸಿನ ಶಿಸ್ತಿಗನೇ ಕುಂದು ತರುವ ವರ್ತನೆ ಅದಕ್ಕೆ ಕಾಂಗ್ರೆಸ್ ಕಮಿಟಿಯವರಾರಾದರೂ ನೆರವಾಗುವುದು ಸರಿಯಲ್ಲವೆಂದು ನಾವು ಈ ಮೂಲಕ ಎಚ್ಚರಿಸಲಿಚ್ಛಿಸುತ್ತೇವೆ.

ಜಿಲ್ಲಾ ಕಾಂಗ್ರೆಸ್ ಕಮಿಟಿಯವರೂ ಪಾರ್ಲಮೆಂಟರಿ ಕಮಿಟಿಯವರೂ ವಿವೇಕಪರ ಜನಮತವನ್ನು ಪಡೆಕೊಂಡು ಇದನ್ನು ಮನ್ನಿಸಿಯೇ ಕಾಂಗ್ರೆಸ್ ಉಮೇದ್ವಾರಿಗಳನ್ನು ಆರಿಸುವ ವ್ಯವಸ್ಥೆ ಮಾಡಲಿರುವರು, ಸಂದರ್ಭಾನುಸಾರ ಗಾಂಗ್ರೆಸ್ ಕಮಿಟಿಗಳ ಮತ್ತು ಕಾರ್ಯಕರ್ತರ ಅಭಿಪ್ರಾಯವನ್ನು ಪಡೆಯದಿರಲಾರರು ಆದುದರಿಂದ ಈ ಕುರಿತು ಯಾರೂ ಈಗಲೇ ಆತುರಪಡುವ ಅವಶ್ಯವಿಲ್ಲ.

ಇಡೀ ಜಿಲ್ಲೆಯ ಹಾಗೂ ಪ್ರಾಂತದ ಮತ್ತು ಸಮಷ್ಟಿ ಜನತೆಯ ಹಿತದೃಷ್ಟಿಯಿಂದ ಯೋಗ್ಯ ಉಮೇದ್ವಾರಿಗಳನ್ನು ಆರಿಸಲೆತ್ನಿಸಲಾಗುವುದು. ಆದರೆ, ಆ ಮೊದಲೇ ನಾನಾ ಸ್ಥಳೀಯ ಪ್ರಶ್ನೆಗಳನ್ನೂ ವ್ಯಯಕ್ತಿಕ ಮತ್ತು ಜಾತೀಯ ಪಾತ್ರಾಪಾತ್ರತೆಯನ್ನೂ ಮುಂದೊಡ್ಡಿ ಜನರಿಂದ ಮಾಗ್ದಾನ ಪಡೆಯಲೆತ್ನಿಸುವುದೂ ಮತದಾರರು ನಿರ್ಧಾರಕ್ಕೆ ಬರುವಂತೆ ಮಾಡುವುದೂ ಪಕ್ಷದ ಹಿತದೃಷ್ಟಿಯಿಂದ ತೀರ ಅನುಚಿತ. ಇದಕ್ಕೆ ಜನತೆ ಯಾವ ರೀತಿಯ ಆಶ್ರಯವನ್ನೂ ಕೊಡದಿರುವುದು ಮಾತ್ರವಲ್ಲದೆ ಪ್ರಬಲವಾಗಿ ವಿರೋಧಿಸಬೇಕೆಂಬುದೇ ನಮ್ಮ ಆಗ್ರಹದ ವಿನಂತಿ.

ಕೆ. ಯಸ್. ಆಳ್ವ, ಕೆ. ಕೆ. ಶೆಟ್ಟಿ,

ಅಧ್ಯಕ್ಷ, ಪ್ರಧಾನ ಕಾರ್ಯದರ್ಶಿ,

ದಕ್ಷಿಣ ಕನ್ನಡ ಜಿಲ್ಲಾ ಕಾಂಗ್ರೆಸ್ ಕಮಿಟಿ,

ಅಮೃತಾಂಜನ

ತಲೆನೋವು, ಶಿರೋವೇದನೆ, ಉಳುಕು ಕುತ್ತಿಗೆ, ಭುಜ ಹಲ್ಲು ನೋವುಗಳಿಗೂ, ಎದೆನೋವು, ಗಾಯಗಳು, ಬಾತುಕೊಳ್ಳುವುದು, ಚೇಳುವಿಷಮುಂತಾದವು, ಪಕ್ಷವಾತ, ಸೊಡಿವೆ. ಮೊದಲಾದ ಎಲ್ಲಾ ರೋಗಗಳಿಗೂ ಸಿದ್ಧೌಷಧ

REGD

ಹುಳು ಕಡ್ಡಿ ಮದ್ದು ನಮ್ಮಲ್ಲಿ ಸಿಕ್ಕುತ್ತದೆ

ಅಮೃತಾಂಜನ ಲಿಮಿಟೆಡ್

ಮದರಾಸು.

ಬೊಂಬಾಯಿ ಮತ್ತು ಕಲ್ಕತ್ತ-

ಉಡುಪಿಗೆ ಹೋಗಬೇಕು! ಆದರೆ ಉಳಿದುಕೊಳ್ಳುವುದೆಲ್ಲಿ?

ರಾಯಲ್ ಮಹಾಲಿನಲ್ಲಿ

ಬಸ್ ಸ್ಟೇಂಡಿಗೆ ಅತಿ ಸಮೀಪ! ಕೃಷ್ಣ ಮಠಕ್ಕೆ ದೂರವಿಲ್ಲ!

ವ್ಯಾಪಾರವ್ಯವಹಾರ ವಿಹಾರಸ್ಥಳಗಳಿಗೆಲ್ಲ ಕೇಂದ್ರ!

ನಿಮ್ಮ ಸ್ನಾನ, ಊಟ, ಉಪಹಾರ, ಬೈಠಕ್, ಶಯನ ಇವಕ್ಕೆಲ್ಲ ಉತ್ತಮ ವ್ಯವಸ್ಥೆ ಕರೆದರೆ ಓಗೊಡುವ ನೌಕರರ ವರ್ಗ!

ಮೇಲಾಗಿ ಉಡುಪಿ ಬ್ರಾಹ್ಮಣರ ಅಡಿಗೆ, ತಿಂಡಿತಿನಸು, ಇವುಗಳ ರುಚಿರುಚಿ ಹೇಳಬೇಕೆ?

ಪ್ರೊಪ್ರೈಟರ್:— ಕೆ. ವೆಂಕಟ್ರಮಣಭಟ್.

For up-to-date Lodging & Boarding

ROYAL MAHAL,

UDIPI, S. Kanara.

Nambiar's

ARYA VAIDYA SALA

UDIPI

Ideal House for Ayurvedic Treatment.

T. N. Kelu Nambiar,

Vaidya.

EDITED, PRINTED & PUBLISHED BY K. H. SHETTY AT THE NAVAYUGA PRESS, UDIPI, S. INDIA.